ಕರ್ನಾಟಕ ವಿಧಾನ ಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಕರ್ನಾಟಕ ರಾಜ್ಯ ಪತ್ರಾಗಾರ,
ಗ್ರಂಥಾಲಯಂ,
ವಿಧಾನ ಸೌಧ, ಬೆಂಗಳೂರು,
ಪ್ರಸಂ [illegible] ದಿನಾಂಕ 31-8-95

ಹನ್ನೆರಡನೆಯ ಅಧಿವೇಶನ
Twelth session

ಸಂಪುಟ ೩ (ಕ್ರಮಾಂಕ ೧ರಿಂದ ೫)

Volume III - (Nos. 1 To 5)

(೧೪ನೇ ಫೆಬ್ರವರಿ ೧೯೯೪ರಿಂದ ೧೭ನೇ ಫೆಬ್ರವರಿ ೧೯೯೪ರವರೆಗೆ
ಮತ್ತು ೨೧ನೇ ಮಾರ್ಚ್ ೧೯೯೪)

ಕರ್ನಾಟಕ ವಿಧಾನ ಮಂಡಲದ ಕಾರ್ಯಾಲಯ ಬೆಂಗಳೂರು
Karnataka Legislature Secretariat, Bangalore

CONTENTS
TO THE

KARNATAKA LEGISLATIVE ASSEMBLY DEBATES

Volume III - (No.s 1 to 5)

೧೪ನೇ ಫೆಬ್ರವರಿ ೧೯೯೪ರಿಂದ ೧೭ನೇ ಫೆಬ್ರವರಿ ೧೯೯೪ ಮತ್ತು ೨೧ನೇ ಮಾರ್ಚ್ ೧೯೯೪ರವರೆಗೆ.

ಸೋಮವಾರ ೧೪ನೇ ಫೆಬ್ರವರಿ ೧೯೯೪

ಮಾಘ ೨೫ ಶಕ ೧೯೧೫

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 1-29
2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 29-60
3. ಕಾರ್ಯದರ್ಶಿಯವರ ವರದಿ. 60
4. ಪ್ರಸ್ತಾವ 60
   "ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಮತ್ತು ವಿದ್ಯುತ್ ನಿಗಮಗಳ ಕಾರ್ಯ ನಿರ್ವಹಣೆ ಮತ್ತು ಆಡಳಿತ ದಕ್ಷತೆಯನ್ನು ಉತ್ತಮ ಪಡಿಸಲು ರಚಿಸಿರುವ ವಿಧಾನ ಮಂಡಲದ ಜಂಟಿ ಸದನದ ಸಮಿತಿಗೆ ವರದಿಯನ್ನು ನೀಡಲು ಮಾರ್ಚ್ 10 1994ರ ವರೆಗೆ ಕಾಲಾವಧಿ ವಿಸ್ತರಣೆ" 60

5. ನಿಲುವಳಿ ಸೂಚನೆ 61
ದಿನಾಂಕ 12-2-94ರಂದು ಧಾರವಾಡ ಜಿಲ್ಲೆಯ ಹಿರೇಕೆರೂರುನಲ್ಲಿ ವಾಲ್ಮೀಕಿ ಸಮ್ಮೇಳನದಲ್ಲಿ ಮುಖ್ಯಮಂತ್ರಿಗಳು ಭಾಗವಹಿಸಲು ಹೆಲಿಕ್ಯಾಪ್ಟೆರ್‌ನಲ್ಲಿ ಬಂದಾಗ ಅದನ್ನು ನೋಡಲು ಕಟ್ಟಡದ ಮೇಲೆ ಮಕ್ಕಳು ಹತ್ತಿದ ಸಮಯದಲ್ಲಿ ಆಗಿರುವ ಅನಾಹುತ. 61-62
6. ಹಕ್ಕು ಚ್ಯುತಿ ನಿರ್ಣಯಗಳು 62
1. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರ ಮೇಲೆ 62-64
2. ದಿನಾಂಕ: 11-2-94ರ ಶುಕ್ರವಾರ ಮಂಡ್ಯದಲ್ಲಿ ನಡೆದ 63ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶಾಸಕರುಗಳಿಗೆ ವೇದಿಕೆಗೆ ಕರೆಯದೆ ಇರುವುದು ಹಾಗೂ ಪೀಠೋಪಕರಣ ಇಲ್ಲದೆ ತೊಂದರೆಯಾಗಿರುವುದು. 64-74
7) ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು 74
1) ಚಾಮರಾಜನಗರ ಭೂ ಸ್ವಾಧೀನಕಛೇರಿ, ಜಪ್ತಿ 74-75
2) ತುಮಕೂರಿನಲ್ಲಿ ಹಾಲು ಉತ್ಪಾದನೆ ಮಾಡತಕ್ಕ ರೈತರಿಗೆ ಹಣ ಕೊಡದೇ ಇರುವುದು. 75-79
3) ಮಂಡಲ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ ಕುರಿತು. 79-82
4) ಮುಧೋಳ್ ಮತ್ತು ಬಿಜಾಪುರದ ಕಬ್ಬು ಬೆಳೆಗಾರರಿಗೆ ಆಗಿರುವ ತೊಂದರೆ. 82
8. ಗಮನ ಸೆಳೆಯುವ ಸೂಚನೆ 83
1. ಶಿವಮೊಗ್ಗ - ಭದ್ರಾವತಿ ನಗರ ಪಾಲಿಕೆಯಿಂದ ಅಕ್ಟಾಯ ಗ್ರಾಂಟ್ 5 ಲಕ್ಷ ರೂಪಾಯಿಗಳನ್ನು ಬಡ್ಡಿ ರೂಪದಲ್ಲಿ ವಸೂಲು ಮಾಡಿಕೊಂಡಿರುವುದರಿಂದ ಆಗಿರುವ ಅನ್ಯಾಯ. 83-86
9. ನಿಯಮ 334ರ ಮೇರೆಗೆ 86
1. ಮಂಗಳೂರಿನಿಂದ ಬೆಂಗಳೂರಿಗೆ ಖಾಸಗಿ ಸುವಿಹಾರಿ ಬಸ್ಸುಗಳು ಸಂಚರಿಸುತ್ತಿರುವುದರಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಆಗುತ್ತಿರುವ ನಷ್ಟ. 86
2. ಶಿವಮೊಗ್ಗ ಗೃಹ ನಿರ್ಮಾಣ ಮಂಡಲಿ ಕಟ್ಟುತ್ತಿರುವ ಮನೆಗಳು ಇನ್ನೂ ಪೂರ್ಣವಾಗದೆ ಇರುವುದು. 86-87
3. ಇಂಡಿ ತಾಲ್ಲೂಕಿನ ಬಳ್ಳೊಳ್ಳಿ ಕ್ಷೇತ್ರದಲ್ಲಿ ಭೂಕಂಪದಿಂದ ನೊಂದವರಿಗೆ ಪರಿಹಾರ. 87-89
4. ... ಗ್ರಾಮಗಳ ಹತ್ತಿರ

5. ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಹಲಕಿ ಕ್ರಾಸ್ನಿಂದ, ಕುಟರನಟಿವರೆಗೆ ರಸ್ತೆ ದುರಸ್ತಿ. 89-90

6. ಹಟ್ಟಿ ಲಕ್ಕಮ್ಮ ವಿದ್ಯಾ ಸಮಿತಿ, ಚನ್ನಪಟ್ಟಣ ಇಲ್ಲಿ ಟಿ.ಸಿ.ಹೆಚ್.ಗೆ ಪ್ರವೇಶ ದೊರಕಿಸಿ ಕೊಡುವಲ್ಲಿ ಸರ್ಕಾರದ ನೀತಿ ನಿಯಮ. 90-91

10. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವ. (ಮುಂದುವರೆದದು) 91-127

11. ಸಂವಿಧಾನ ತಿದ್ದುಪಡಿ ಸ್ಥಿರೀಕರಣ ನಿರ್ಣಯ 127

ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ಭಾರತ ಸಂವಿಧಾನದ 368ನೇ ಅನುಚ್ಛೇದ ಖಂಡಿಕೆ(ಬಿ) ಕಲಮು (2) ರಲ್ಲಿ ಬರುವ 1992ರ ತಿದ್ದುಪಡಿ (ಎಪ್ಪತ್ತೇಳನೆಯೇ ತಿದ್ದುಪಡಿ) ವಿಧೇಯಕವನ್ನು ಸಂವಿಧಾನದ ಉದ್ದೇಶಕ್ಕೆಂದು ಈ ಸದನ ಸ್ಥಿರೀಕರಿಸುತ್ತದೆ. 127

12. (ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು) ಶಾಸನರಚನಾ ಕಾರ್ಯಕಲಾಪಗಳು 127

1. ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ(ತಿದ್ದುಪಡಿ) ವಿಧೇಯಕ 1993. 127-128

ಮಂಗಳವಾರ ೧೫ನೇ ಫೆಬ್ರವರಿ ೧೯೯೪

ಮಾಘ ೨೪, ಶಕ ೧೯೧೫

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 129-196

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 196-252

3. ಪ್ರಕಟಣೆ 252

4. ಪ್ರಸ್ತಾವನೆ 252

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪ್ರಯಾಣ ದರವನ್ನು ಮತ್ತು ಸಂಸ್ಥೆಯ ಕಾರ್ಯ ನಿರ್ವಹಣೆ ಹಾಗೂ ಆಡಳಿತ ದಕ್ಷತೆಯನ್ನು ಉತ್ತಮಪಡಿಸುವ ಸಲುವಾಗಿ ರಚಿಸಲಾಗಿರುವ ಜಂಟಿ ಸದನ ಸಮಿತಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ

5. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲ್ಪಟ್ಟ ವಿಷಯಗಳು. 253
ಅ) ಮುಧೋಳದಲ್ಲಿ ರೈತರಿಗೆ ಆಗುತ್ತಿರುವ ತೊಂದರೆ. 253-254
ಆ) ಗುಲ್ಬರ್ಗಾ ಜಿಲ್ಲೆಯ ಜೀವರ್ಗಿ ತಾಲ್ಲೂಕಿನಲ್ಲಿ ತೊಗರಿ ಬೆಳೆಯ ನಾಶದಿಂದಾಗಿ ನಷ್ಟ ಹೊಂದಿದ ರೈತರಿಗೆ ಪರಿಹಾರ. 254-255
ಇ) ಕೃಷ್ಣ ಕಾವೇರಿ ಬಗ್ಗೆ ಚರ್ಚಿಸಲು ಕಾಲ ನಿಗದಿ ಮಾಡುವ ಬಗ್ಗೆ ಹಾಗೂ ಕಬಿನಿ ಭೂಸ್ವಾಧೀನ ಅಧಿಕಾರಿಗಳ ಕಾರ್ಯಾಲಯವನ್ನು ಜಪ್ತಿ ಮಾಡಿರುವ ಬಗ್ಗೆ. 256
6. ಸಚಿವರಿಂದ ಹೇಳಿಕೆ : 256
ಗ್ರಾಮೀಣ ಪ್ರದೇಶಗಳಿಂದ ಸಹಕಾರಿ ಸಾಲದ ವಸೂಲಾತಿ. 256-271
7. ಗಮನ ಸೆಳೆಯುವ ಸೂಚನೆಗಳು. 272
ಅ) ಬೆಳಗಾಂ ಜಿಲ್ಲೆಯಲ್ಲಿ ಮಲಪ್ರಭಾ ಕಾಡಾ ಅವರ ಸಿಬ್ಬಂದಿ ವೆಚ್ಚವು ಅಭಿವೃದ್ಧಿ ಕೆಲಸಗಳಿಗಿಂತಲೂ ಹೆಚ್ಚಾಗಿದ್ದು ಕಾಡಾ ಕೆಲಸಗಳು ನಿಧಾನವಾಗಿ ಸಾಗಿರುವುದರ ಬಗ್ಗೆ. 272-274
ಆ) ಕ್ಲಾಸಿಕ್ ಕಂಪ್ಯೂಟರ್ ಹಗರಣ. 274-278
8. ನಿಯಮ 334 ರ ಮೇರೆಗೆ 278
ಅ) ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಹೆಚ್ಚಿನ ಸೌಲಭ್ಯ. 278-279
ಆ) ದ.ಕ. ಜಿಲ್ಲೆಯ ವಿಟ್ಲ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ನಿರ್ಮಾಣ. 279-280
ಇ) ಕರ್ನಾಟಕ ರಾಜ್ಯದಲ್ಲಿನ ಕುಮ್ಕಿ ಕಾನಾಬಾಣೆ ಅರಣ್ಯ ಜಮೀನು ಬಗರ್ ಹುಕುಂ ಮಂಜೂರಾತಿಗೆ ಹಾಗೂ ರೈತರಿಗೆ ಅರ್ಜಿ ಸಲ್ಲಿಸಲು ಕಾಲಮಿತಿಯನ್ನು ವಿಸ್ತರಿಸುವ ಬಗ್ಗೆ. 280
ಈ) ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಡಾ ಪ್ರಾಧಿಕಾರದ ನೌಕರರಿಗೆ ಸೇವಾ ಸೌಲಭ್ಯ. 280-281
ಉ) ಶಿವಮೊಗ್ಗ ಕ್ಷೇತ್ರದ ಮತ್ತೂರು ಗ್ರಾಮದ ಕೆರೆ ರಿಪೇರಿಗೆ ಹಣ ಬಿಡುಗಡೆ. 281
ಊ) ತುಮಕೂರು ಜಿಲ್ಲೆಗೆ ಕುಡಿಯುವ ನೀರು ಸರಬರಾಜಿಗಾಗಿ ಹಣ ಬಿಡುಗಡೆ. 281-283
ಋ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆರೆಹಾವಳಿಯಿಂದ ಹಾನಿಗೀಡಾಗಿರುವ ರೈತರಿಗೆ ಪರಿಹಾರ. 283-285
ೠ) ಬೆಳಗಾಂ ಜಿಲ್ಲೆ ಸವದತ್ತಿ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಲೋ ವೋಲ್ಟೇಜ್ನಿಂದ ಐ.ಪಿ. ಸೆಟ್ಟುಗಳು ಸುಡುತ್ತಿರುವುದರ ಬಗ್ಗೆ. 285-286

9. ಮುಖ್ಯಮಂತ್ರಿಗಳ ಹೇಳಿಕೆ. 286
ದಿನಾಂಕ: 12-2-94 ರಂದು ವಾಲ್ಮೀಕಿ ಜಯಂತಿ ಉತ್ಸವದ ನಿಮಿತ್ತ ಮುಖ್ಯಮಂತ್ರಿಗಳ ಕಾರ್ಯಕ್ರಮದ ಕಾಲಕ್ಕೆ ಕಟ್ಟಡ ಕುಸಿದುದರಿಂದ ಉಂಟಾದ ಅನಾಹುತದ ಬಗ್ಗೆ. 286-288

10. ಶಾಸನ ರಚನಾ ಕಾರ್ಯಕಲಾಪಗಳು. 288
ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು. 288

ಅ) 1993ರ ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ. 288-289
ಆ) ವಿಧೇಯಕದ ಮಂಡನೆ 289
1994ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ(ತಿದ್ದುಪಡಿ) ವಿಧೇಯಕ 289
ಇ) 1993ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಮೂರನೇ ತಿದ್ದುಪಡಿ) ವಿಧೇಯಕ. 289-299
ಉ) 1993ರ ಕರ್ನಾಟಕ ಅಬಕಾರಿ(ಮೂರನೇ ತಿದ್ದುಪಡಿ) ವಿಧೇಯಕ 300-307
ಊ) 1993ರ ಕರ್ನಾಟಕ ಪಂಚಾಯತ್‌ರಾಜ್(ತಿದ್ದುಪಡಿ) ವಿಧೇಯಕ 307-310

11. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ. 310-333

12. ಸಚಿವರ ಹೇಳಿಕೆ 333
ಬಿಜಾಪುರ ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿರುವ ಸಮೀರವಾಡಿಯ ಮೆ: ಗೋದಾವರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲಿ ಬೆಳೆಯಲಾದ ಕಬ್ಬನ್ನು ಮಹಾರಾಷ್ಟ್ರ ರಾಜ್ಯಕ್ಕೆ ಸಾಗಾಣಿಕೆ ಮಾಡಲು ಅನುಮತಿ ನೀಡದಿರುವ ಬಗ್ಗೆ. 333-342

13. ಅನುಬಂಧ. 343-353

ಬುಧವಾರ ೧೬ನೇ ಫೆಬ್ರವರಿ ೧೯೯೪
ಮಾಘ ೨೫, ಶಕ ೧೯೧೫

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 355-388

2. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು. 388-389

3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 389-469

4. ವರದಿಯನ್ನೊಪ್ಪಿಸುವುದು. 469

5. ಪ್ರಕಟಣೆ 469
   "ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಗೊ.ರು. ಚನ್ನಬಸಪ್ಪನವರಿಂದ ಬಂದಿರುವ ಪತ್ರ" 469-471

6. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲ್ಪಟ್ಟ ವಿಷಯಗಳು. 471
   1) ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಮುಳುಗಡೆಯಾದ ಜಮೀನಿನಿಂದ ಸಾವಿರಾರು ಕುಟುಂಬಗಳಿಗೆ ಅನ್ಯಾಯವಾಗಿರುವುದು. 471-472
   2) ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಇಂಜಿನಿಯರುಗಳ ನೇಮಕಾತಿ. 472-475
   3) ಬೆಳಗಾಂ ರೈತ ಭವನದಲ್ಲಿ ಬಾರ್ ನಡೆಸುತ್ತಿರುವುದಕ್ಕೆ ವಿರೋಧ. 475-476
   4) ನಾಗಮಂಗಲ ತಾಲ್ಲೂಕಿನಲ್ಲಿ ತೆಂಗಿನ ಮರಗಳಿಗೆ ಕಪ್ಪು ತಲೆ ಹುಳುಗಳ ಕಾಟ 476-479

7. ಕಂದಾಯ ಸಚಿವರಿಂದ ಹೇಳಿಕೆ. .....
   ಮೈಸೂರು ಜಿಲ್ಲೆ ಕಬಿನಿ ಜಲಾಶಯ ಯೋಜನೆಯ ಭೂಸ್ವಾಧೀನಕ್ಕೆ ಪರಿಹಾರ ವಿತರಣೆ. 479-480

8. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ. 481-516

9. ಶಾಸನ ರಚನಾ ಕಾರ್ಯಕಲಾಪಗಳು.
   1994ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ 516
   1994ರ ಕರ್ನಾಟಕ ಉಚ್ಛ ನ್ಯಾಯಾಲಯ(ತಿದ್ದುಪಡಿ) ವಿಧೇಯಕ 516-517
   (ಅ) ಪರ್ಯಾಲೋಚನಾ ಪ್ರಸ್ತಾವ 517-518
   1993ರ ದಂಡ ಪ್ರಕ್ರಿಯಾ ಸಂಹಿತೆ(ಕರ್ನಾಟಕ ತಿದ್ದುಪಡಿ)

ವಿಧೇಯಕ (ಪ್ರರ್ಯಾಲೋಚನಾ ಪ್ರಸ್ತಾವ) 518

1993ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳ ಯೋಜನಾ (ತಿದ್ದುಪಡಿ) ವಿಧೇಯಕ. 518-519

ಪರ್ಯಾಲೋಚನಾ ಪ್ರಸ್ತಾವ 519-524

9. ಅಧಿಕೃತ ನಿರ್ಣಯ 524

"ದಾಂಡೇಲಿ ವನ್ಯಮೃಗದ ವ್ಯಾಪ್ತಿಯನ್ನು ಬದಲಾಯಿಸಲು ನೀಡಿರುವ ಅಧಿಕೃತ ನಿರ್ಣಯ" 524-532

10. ಅನುಬಂಧ I 533-537

ಗುರುವಾರ ೧೭ನೇ ಫೆಬ್ರವರಿ, ೧೯೯೪

ಮಾಘ ೨೮, ಶಕ ೧೯೧೫

1. ಸಂತಾಪ ಸೂಚಕ ನಿರ್ಣಯ 539-543

2. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 543-571

3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 571-578

4. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು. 578

(1) ತಾಲ್ಲೂಕುಗಳಲ್ಲಿ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಸಮಿತಿಗಳಿಗೆ ಶಾಸಕರುಗಳನ್ನು ಅಧ್ಯಕ್ಷರನ್ನಾಗಿ ಮಾಡುವುದು. 578-582

(2) ತೆಂಗಿನ ಮರಗಳಿಗೆ ಕಪ್ಪು ಹುಳು ರೋಗ ಹರಡಿರುವುದು. 583

(3) ಸರಕಾರಿ ಕಾರ್ಯಕ್ರಮಗಳಲ್ಲಿ ಶಾಸಕರುಗಳಿಗೆ ಪ್ರಾಧಾನ್ಯತೆ. 583-584

5. ಶಾಸನ ರಚನಾ ಕಾರ್ಯಕಲಾಪಗಳು.

(ವಿಧೇಯಕಗಳ ಮಂಡನೆ) 584

(1) ಕರ್ನಾಟಕ ರೇಷ್ಮೆ ಹುಳು ತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು ಉತ್ಪಾದನೆ ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ(ತಿದ್ದುಪಡಿ) ವಿಧೇಯಕ 1994. 584-585

(2) ಪರ್ಯಾಲೋಚನಾ ಪ್ರಸ್ತಾವ 585

(1) 1993 ರ ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು

(2) 1994ರ ಕರ್ನಾಟಕ ಸಚಿವರ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ. 594-597
(3) ವಿಧೇಯಕಗಳ ಮಂಡನೆ ಹಾಗೂ ಪ್ರಸ್ತಾವ. 597
(1) 1993ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ. 597-599
6. ವಿತ್ತೀಯ ಕಾರ್ಯಕಲಾಪಗಳು 599
(1) 1985-86ನೇ ಆರ್ಥಿಕ ಸಂಬಂಧಪಟ್ಟ ಹೆಚ್ಚುವರಿ ಅನುದಾನಗಳ ಅಭಿಯಾಚನೆ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು. 599
(2) 1986-87ನೇ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟ ಹೆಚ್ಚುವರಿ ಅನುದಾನಗಳ ಅಭಿಯಾಚನೆ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು. 599-655
7. ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆ ಹಾಗೂ ಮುಖ್ಯ ಮಂತ್ರಿಗಳಿಂದ ಉತ್ತರ. 655
8. ಶಾಸನ ರಚನಾ ಕಾರ್ಯಕಲಾಪಗಳು (ವಿಧೇಯಕಗಳ ಮಂಡನೆ ಹಾಗೂ ಪ್ರಸ್ತಾವ) 655
(1) ಕರ್ನಾಟಕ ಧನ ವಿನಿಯೋಗ ವಿಧೇಯಕ (ಸಂಖ್ಯೆ 5) 1993 656-659
(2) ಕರ್ನಾಟಕ ಧನ ವಿನಿಯೋಗ ವಿಧೇಯಕ (ಸಂಖ್ಯೆ 6) 1993 659-660
9. ಪ್ರಕಟಣೆ 660
10. ಅಧಿಕೃತ ನಿರ್ಣಯ 660
"ದಾಂಡೇಲಿ ವನ್ಯ ಮೃಗಧಾಮದ ವ್ಯಾಪ್ತಿಯನ್ನು ಬದಲಾಯಿಸುವ ಬಗ್ಗೆ"
11. ಅನುಬಂಧಗಳು. I, II, III, IV 661-673

ಸೋಮವಾರ ೨೧ನೇ ಮಾರ್ಚ್ ೧೯೯೪

ಫಾಲ್ಗುಣ, ಶಕ ೧೯೧೫

ವಿತ್ತೀಯ ಕಾರ್ಯಾಕಲಾಪ 1994-95ನೇ ಸಾಲಿನ ಆಯವ್ಯಯ ಮಂಡನೆ 675-804

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ೧೪ನೇ ಫೆಬ್ರವರಿ ೧೯೯೪, ಮಾಘ ೨೫, ಶಕ ೧೯೧೫

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೧೫ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ. ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

1993-94ನೇ ಸಾಲಿನಲ್ಲಿ ರಾಜ್ಯದಲ್ಲಿ ರಸ್ತೆ ಮತ್ತು ಕಟ್ಟಡಗಳ ಅಭಿವೃದ್ಧಿಗಾಗಿ ಮೀಸಲಾಗಿಟ್ಟ ಹಣ

183 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ರಾಜ್ಯದಲ್ಲಿ ರಸ್ತೆ ಮತ್ತು ಕಟ್ಟಡಗಳ ಅಭಿವೃದ್ಧಿಗಾಗಿ (ಸಿ ಅಂಡ್ ಬಿ) ಎಷ್ಟು ಹಣವನ್ನು ಆಯವ್ಯಯದಲ್ಲಿ ಮೀಸಲಾಗಿಡಲಾಗಿತ್ತು. (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಆ ಪೈಕಿ ಬಿಡುಗಡೆ ಮಾಡಲಾದ ಹಣವೆಷ್ಟು ಹಾಗೂ ಖರ್ಚು ಮಾಡಲಾದ ಮೊತ್ತವೆಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಇ) ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ವಿಶೇಷವಾಗಿ ಬೀದರ್ ಜಿಲ್ಲೆಯಲ್ಲಿ ಹಣದ ಅಭಾವವಿರುವುದರಿಂದ ರಸ್ತೆ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವುದು ನಿಜವೇ.

ಈ) ಈ ಪ್ರದೇಶದಲ್ಲಿ ನಿಗಧಿಪಡಿಸಲಾಗಿದ್ದ ಹಣವನ್ನು ಬಿಡುಗಡೆ ಮಾಡದೆ ಪ್ರಯುಕ್ತ ಕೆಲಸವು ಮುಗಿದ್ದರೂ ಸಹ ಗುತ್ತಿಗೆದಾರರಿಗೆ ಹಣವನ್ನು ಪಾವತಿ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಉ) ಆ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ವಿವರಗಳನ್ನು ಲಗತ್ತಿಸಿದ ಅನುಬಂಧದಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಲಗತ್ತಿಸಿದ ಅನುಬಂಧದಲ್ಲಿ ನೀಡಲಾಗಿದೆ.

ಇ) ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹಣದ ಅಭಾವದಿಂದ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿಲ್ಲ.

ಈ) ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮಾಡಿರುವ ಲೋಕೋಪಯೋಗಿ ಕಾಮಗಾರಿಗಳಿಗೆ ಪಾವತಿ ಮಾಡಬೇಕಿರುವ ಒಟ್ಟು 131.20 ಲಕ್ಷ ರೂ.ಗಳ ಉಳಿಕೆ ಬಿಲ್ಲುಗಳು ಮಾತ್ರ ಇರುತ್ತವೆ.

ಉ) ಕಾಮಗಾರಿಗಳ ಪ್ರಗತಿಯು ಸ್ಥಗಿತಗೊಳ್ಳದಂತೆ ನೋಡಿಕೊಳ್ಳಲಾಗುತ್ತಿದೆ. ಹಣ ಭರವಸೆ ಪತ್ರ, ಬಿಡುಗಡೆ ಆದಂತೆ ಉಳಿಕೆ ಬಿಲ್ಲುಗಳನ್ನು ಶೀಘ್ರವಾಗಿ ಪಾವತಿ ಮಾಡಲಾಗುತ್ತಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 183

ಅನುಬಂಧ

ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆ ಮತ್ತು ಕಟ್ಟಡಗಳ ಅಭಿವೃದ್ಧಿಗಾಗಿ ಅನುದಾನ, ವೆಚ್ಚದ ವಿವರಗಳು

(ಲಕ್ಷ ರೂ.ಗಳಲ್ಲಿ)

	ಜಿಲ್ಲೆ	1993-94ರಲ್ಲಿ ನಿಗದಿ ಪಡಿಸಿದ ಅನುದಾನ	ಡಿಸೆಂಬರ್ 93ರವರೆಗೆ ವರೆಗೆ ಬಿಡುಗಡೆ ಆದ ಹಣ ಭರವಸೆ ಪತ್ರದ ಮೊತ್ತ	ಡಿಸೆಂಬರ್ 93ರವರೆಗೆ ವರೆಗೆ ಆಗಿರುವ ವೆಚ್ಚ
1.	ಧಾರವಾಡ	1077.85	531.90	626.71
2.	ಉತ್ತರ ಕನ್ನಡ	718.92	248.00	257.68
3.	ಬೆಳಗಾಂ	933.27	327.36	404.65
4.	ಬಿಜಾಪುರ	852.75	248.77	322.27
5.	ಗುಲ್ಬರ್ಗ ಜಿಲ್ಲೆ	858.53	349.12	361.29
	ಅ) ಲೋಕೋಪಯೋಗಿ ಇಲಾಖೆ			
	ಆ) ಹೆಚ್.ಕೆ.ಡಿ.ಬಿ.	537.00	180.90	180.90
6.	ಬೀದರ್			
	ಅ) ಲೋಕೋಪಯೋಗಿ ಇಲಾಖೆ	334.87	169.19	188.86
	ಆ) ಹೆಚ್.ಕೆ.ಡಿ.ಬಿ.	70.00	139.59	139.59
7.	ಬಳ್ಳಾರಿ			
	ಅ) ಲೋಕೋಪಯೋಗಿ ಇಲಾಖೆ	812.96	237.53	269.55
	ಆ) ಹೆಚ್.ಕೆ.ಡಿ.ಬಿ.	165.00	151.90	151.90
8.	ರಾಯಚೂರು			
	ಅ) ಲೋಕೋಪಯೋಗಿ ಇಲಾಖೆ	1064.02	276.50	312.67
	ಆ) ಹೆಚ್.ಕೆ.ಡಿ.ಬಿ.	180.00	146.84	146.84
9.	ಮೈಸೂರು	1242.70	409.52	540.19
10.	ಮಂಡ್ಯ	621.19	189.77	239.55
11.	ಬೆಂಗಳೂರು	3415.18	876.19	1107.06
12.	ತುಮಕೂರು	751.33	119.54	184.79
13.	ಕೋಲಾರ	661.84	137.53	199.61
14.	ಹಾಸನ	1208.81	334.89	452.41
15.	ಚಿಕ್ಕಮಗಳೂರು	473.40	144.66	193.71
16.	ಶಿವಮೊಗ್ಗ	1240.36	287.10	423.17
17.	ಚಿತ್ರದುರ್ಗ	791.71	155.29	247.59
18.	ದಕ್ಷಿಣ ಕನ್ನಡ	1278.96	210.11	345.65
19.	ಕೊಡಗು	291.37	81.40	130.61
	ಒಟ್ಟು	19582.02	5953.60	7427.25

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಸನ್ಮಾನ್ಯ ಅಧ್ಯಕ್ಷರೆ, ಹೈದರಾಬಾದ್ ಕರ್ನಾಟಕ

ಹಣವೆಷ್ಟು ಎಂದು ಕೇಳಿದ್ದಕ್ಕೆ 131.20 ಲಕ್ಷ ರೂಪಾಯಿಗಳು ಬಾಕಿ ಉಳಿದಿದೆಯೆಂದು ಉತ್ತರಿಸಿದ್ದಾರೆ. ಆದರೆ, ಅದರ ಬಿಲ್ ಕೊಟ್ಟಿಲ್ಲ. ಬಹಳಷ್ಟು ಕಂಟ್ರಾಕ್ಟರ್ಗಳು ತೊಂದರೆಯಲ್ಲಿದ್ದಾರೆ, ತಾವು ಕೊಟ್ಟಂಥ ಚೆಕ್ಕಿನ ದುಡ್ಡು ಅವರಿಗೆ ವಾಪಸ್ ಬರಲಿಲ್ಲ. ಅನಂತರ, ತಾವು ಕೆಲವು ಜಿಲ್ಲಾವಾರು ಅಂಕಿ-ಅಂಶಗಳನ್ನು ಕೊಟ್ಟಿದ್ದೀರಿ. 1993-94ರಲ್ಲಿ ನಿಗದಿ ಪಡಿಸಿದ ಅನುದಾನ ಮತ್ತು ಡಿಸೆಂಬರ್, 93ರವರೆಗೆ ಬಿಡುಗಡೆಯಾದಂಥ ಹಣ ಹಾಗೂ 93ನೇ ಡಿಸೆಂಬರ್ ಅಂತ್ಯದವರೆಗೆ ಆಗಿರುವ ವೆಚ್ಚವನ್ನು ನೋಡಿದರೆ ನಿಗದಿಪಡಿಸಿರುವ ಹಣ 19,582.2ಲಕ್ಷ ರೂಪಾಯಿಗಳು, ಅದರಲ್ಲಿ ಬಿಡುಗಡೆಯಾಗಿರುವುದು 5,953.60ಲಕ್ಷ ರೂಪಾಯಿಗಳು. ಅಂದರೆ, ಇನ್ನೂ 13,626.38 ಲಕ್ಷ ರೂಪಾಯಿಗಳನ್ನು ತಾವು ಬಿಡುಗಡೆ ಮಾಡಿಲ್ಲ. ಅನಂತರ ಖರ್ಚು ಮಾಡಿರತಕ್ಕಂಥಾದ್ದು 5 ಲಕ್ಷ ರೂಪಾಯಿಗಳು ಮಾತ್ರ. ಡಿಸೆಂಬರ್, 93ರವರೆಗೆ ಒಟ್ಟು 7427.25ಲಕ್ಷ ರೂಪಾಯಿಗಳು ಖರ್ಚಾಗಿದ್ದು, ಕೊಟ್ಟಿರುವುದು 5,953ಲಕ್ಷ ರೂಪಾಯಿಗಳು. ಆದ್ದರಿಂದ, ಇನ್ನೂ 1,474 ಲಕ್ಷ ರೂಪಾಯಿಗಳನ್ನು ತಾವು ಕಂಟ್ರಾಕ್ಟ್ದಾರರಿಗೆ ಕೊಡಬೇಕಾಗಿದೆ. ನಮ್ಮ ಭಾಗದಲ್ಲಿ ಮೊದಲೇ ರಸ್ತೆಗಳು ಸರಿಯಿಲ್ಲ, ಬರೀ ಮಣ್ಣು, ಕಲ್ಲುಗಳ ರಸ್ತೆಯಾಗಿದೆ. ಆದುದರಿಂದ ಅಲ್ಲಿ ವಿಶೇಷವಾಗಿ ರಸ್ತೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸರ್ಕಾರವೇನಾದರೂ ಕ್ರಮ ಕೈಗೊಂಡಿದೆಯೇ? ಈಗ ಒಬ್ಬೊಬ್ಬ ಎಂ.ಪಿ.ಗೆ ಅವರವರ ಕ್ಷೇತ್ರಗಳಲ್ಲಿ ರಿಪೇರಿ ಮತ್ತೊಂದು ಮಾಡುವುದಕ್ಕೆ 2 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದೇ ರೀತಿ ಎಂ.ಎಲ್.ಎ. ಗಳಿಗೂ ಎಷ್ಟು ಹಣ ಕೊಡುತ್ತೀರಿ ಅಥವಾ ಎಂ.ಎಲ್.ಎ. ಕ್ಷೇತ್ರಗಳಲ್ಲಿ ಇಷ್ಟು ಕೆಲಸ ಮಾಡುತ್ತೇವೆಂದಾದರೂ ಹೇಳಿ. ಈಗ ಏನಾಗಿದೆಯೆಂದರೆ ಯಾವುದೇ ಸಣ್ಣ ಕೆಲಸ ತೆಗೆದುಕೊಳ್ಳಬೇಕೆಂದರೂ ದುಡ್ಡಿಲ್ಲ. ಆದುದರಿಂದ, ಇದರ ಬಗ್ಗೆ ನಿರ್ದಿಷ್ಟ ನೀತಿ ನಿರೂಪಣೆ ಮಾಡಿದ್ದೀರಾ? ಎಂಬುದನ್ನು ದಯಮಾಡಿ ಸ್ಪಷ್ಟಪಡಿಸಬೇಕು.

ಶ್ರೀ ಕೆ.ಎಚ್. ರಂಗನಾಥ್: ನಾನು ತಮ್ಮ ಕೊನೆಯ ಪ್ರಶ್ನೆಗೆ ಮಾತ್ರ ಉತ್ತರಿಸುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರದವರು ಎಂ.ಪಿ.ಗಳಿಗೆ ಕೋಟಿಗಟ್ಟಳೆ ಹಣ ಕೊಟ್ಟಿದ್ದಾರೆ. ನಾವೇನೂ ಕೊಡುವುದಿಲ್ಲ.

ಶ್ರೀ ಸಿ. ಬೈರೇಗೌಡ: ಎಂ.ಪಿ.ಗಳು ಇಲ್ಲಿಗೆ ಬಂದು ಅವರೂ ಪಟ್ಟಿ ಕೊಡುತ್ತಾರೆ.

ಶ್ರೀ ಕೆ.ಎಚ್. ರಂಗನಾಥ್: ಕಳೆದ ಸಲ 20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೆವು. ತಾವು ಕೇಳಿದ್ದಕ್ಕೆ 5 ಲಕ್ಷ ರೂಪಾಯಿಗಳ ಕೆಲಸವನ್ನು ಕೈಗೆತ್ತಿಕೊಂಡಿದ್ದೇವೆ. ಅದನ್ನು ಪೂರ್ತಿಗೊಳಿಸಿದ ನಂತರ ಮತ್ತೆ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಇದನ್ನು ಸರಿಯಾಗಿ ಗಮನಿಸಿಲ್ಲವೆಂದು ಕಾಣುತ್ತದೆ, ಅವಸರದಲ್ಲಿ ಕಳೆದಿದ್ದಾರೆ. 19 ಕೋಟಿಯಲ್ಲಿ 5 ಕೋಟಿ ಕಳೆದು ಮತ್ತೆ 1 ಕೋಟಿ ಕಳೆದರೆ ಒಂದು ಸಾವಿರವಾಗುತ್ತದೆಂದು ಹೇಳಿದರು. ಆದರೆ, ಹಾಗೆ ಆಗುವುದಿಲ್ಲ. ಪ್ರತಿಯೊಂದರ ಬಗ್ಗೆ ತಾವು ಸರಿಯಾಗಿ ನೋಡುತ್ತಾ ಹೋದರೆ ಅರ್ಥವಾಗುತ್ತದೆ. ತಮಗೆ ಒದಗಿಸಿರುವ ಪಟ್ಟಿಯ ಎರಡನೇ ಕಲಂನಲ್ಲಿ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಎಲ್.ಓ.ಸಿ. ಬಗ್ಗೆ ಕೊಟ್ಟಿದ್ದೇವೆ. ಮೂರನೇ ಕಲಂನಲ್ಲಿ ಕೆಲಸವಾಗಿರುವುದಕ್ಕೆ ಖರ್ಚಾಗಿರುವ ಹಣವನ್ನು ಕೊಟ್ಟಿದ್ದೇವೆ. ಅದರಲ್ಲಿ ಹಣ ಅಷ್ಟೊತ್ತೇ ಖರ್ಚಾಗಿರುತ್ತದೆಂದಲ್ಲ. ಡಾಂಬರ್ ಹಾಕುವುದಕ್ಕೆ, ಸಿಮೆಂಟ್, ಸ್ಟೀಲ್ ಇತ್ಯಾದಿಗಳಿಗೆ ಖರ್ಚಾಗಿರುತ್ತದೆ. ಅಲ್ಲದೆ, ನಮ್ಮ ಸ್ಟೋರ್ನಿಂದ ಸಹ ಖರ್ಚಾಗಿದೆ. ಆದುದರಿಂದ, ತಾವು ಕೇಳಿದಷ್ಟು ಪೂರ್ತಿ ಹಣವನ್ನು ನಾವು ಕೊಡಬೇಕಾದ್ದಿಲ್ಲ. ಈಗ ಬೀದರ್ ಜಿಲ್ಲೆಗೆ ಲೋಕೋಪಯೋಗಿ ಕೆಲಸಕ್ಕೆ 303 ಕೋಟಿ 34 ಲಕ್ಷ 87 ಸಾವಿರ ರೂಪಾಯಿಗಳ ಅನುದಾನವಿದ್ದಿದ್ದು 1 ಕೋಟಿ 69 ಲಕ್ಷ 19 ಸಾವಿರ ರೂಪಾಯಿಗಳ ಹಾಸ್ ಬಿಡುಗಡೆಯಾಗಿದೆ ...

88 ಲಕ್ಷ 86 ಸಾವಿರ ರೂಪಾಯಿಗಳಷ್ಟು ಕೆಲಸವಾಗಿದೆ. ಅದರಲ್ಲಿ ಡಾಂಬರ್, ವಗೈರೆಗಳಿಗೆ ಖರ್ಚು ಕೊಟ್ಟಿರುವುದರಿಂದ ಅದನ್ನು ಬುಕ್ ಅಡ್ಜಸ್ಟ್‌ಮೆಂಟ್ ಎಂದು ನಾವು ಮಾಡಿಕೊಳ್ಳುತ್ತೇವೆ. ಆದರೆ, ಕ್ಯಾಷ್ ಎಷ್ಟು ಬೇಕಾಗುತ್ತದೆಂದು ಗೊತ್ತಿಲ್ಲ, ಅದನ್ನು ತರಿಸಿ ನೋಡುತ್ತೇನೆ. ಆದುದರಿಂದ, ಎಲ್ಲಕ್ಕೂ ಕೂಡ ಕ್ಯಾಷ್ ಕೊಡಬೇಕಾಗುತ್ತದೆಂದು ಯಾರೂ ಕೂಡ ಭಾವಿಸಬಾರದು. ಮತ್ತು ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ 75 ಲಕ್ಷ ರೂಪಾಯಿಗಳ ಅನುದಾನವಿರುವುದಕ್ಕೆ 1 ಕೋಟಿ 39 ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಿ ಖರ್ಚು ಮಾಡಲಾಗಿದೆ. ಅಷ್ಟು ದುಡ್ಡು ಬಿಡುಗಡೆಯಾಗಿದೆ. ಏಕೆ ಅಷ್ಟೊಂದು ಹಣ ಕೊಟ್ಟಿರಿ ಎಂದು ಅಧಿಕಾರಿಗಳನ್ನು ಕೇಳುತ್ತಿದ್ದೇನೆ. ಹೀಗೆ ಅಗತ್ಯಕ್ಕಿಂಥ ಹೆಚ್ಚು ಹಣ ಕೊಡುವುದರಿಂದ ಇತರೆಡೆಯ ಕೆಲಸಗಳಿಗೆ ತೊಂದರೆಯಾಗುತ್ತದೆಂದು ನಮ್ಮ ಇಲಾಖಾ ಅಧಿಕಾರಿಗಳನ್ನು ಕೇಳುತ್ತಿದ್ದೇನೆ. ಹಣವನ್ನು ಮಾನ್ಯ ಗುರುಪಾದಪ್ಪನವರ ಜೋರಿಗೆ ಹೆದರಿ ಕೊಟ್ಟು ಬಿಟ್ಟ ಹಾಗೆ ಕಾಣುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ: ಎಲ್ಲಿ ಕೊಟ್ಟಿದ್ದಾರೆ. ಕೊಟ್ಟಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್: ಕೆಲಸ ಹೆಚ್ಚು ಮಾಡಿದ್ದು ಅಲ್ಲದೆ, ಅನುದಾನಕ್ಕಿಂತ ಹೆಚ್ಚು ದುಡ್ಡು ವಸೂಲು ಮಾಡಿಕೊಂಡಿದ್ದಾರೆ. ಅವರು ಈಗ ಹೇಳುತ್ತಾರೆ, ಕಂಟ್ರಾಕ್ಟರರ ಬಿಲ್ ಕೊಟ್ಟಿಲ್ಲ ಎಂದು; ಹೀಗೆಲ್ಲಾ ಆಗಿದೆ. 70 ಲಕ್ಷ ರೂ.ಗಳು ಕೊಡತಕ್ಕದ್ದು ಇದೆ ಎಂದು ಹೇಳುತ್ತಿದ್ದಾರೆ. ಇದನ್ನು ನಾನು ತಿಳಿದುಕೊಳ್ಳುತ್ತೇನೆ. ಅವರ ಕ್ಷೇತ್ರದಲ್ಲಿ ಅನುದಾನವಿರುವುದು 70 ಲಕ್ಷರೂ.ಗಳು ಅದನ್ನು ಕೊಟ್ಟು ಆಗಿದೆ. 139ಲಕ್ಷ ರೂ.ಗಳು ಕೆಲಸವಾಗಿದೆ. ಎಲ್.ಓ.ಸಿ. ಅದನ್ನು ಬಿಡುಗಡೆ ಮಾಡಿಯಾಗಿದೆ. ಆದುದರಿಂದ ಹಾಗೆ ಭಾವನೆ ಮಾಡುವುದು ತಪ್ಪು. ಕೆಲವು ಕಡೆ ತಪ್ಪಾಗಿದೆ. ಒಟ್ಟಿನಲ್ಲಿ 19 ಕೋಟಿ 582 ಲಕ್ಷ ರೂ.ಗಳ ಕೆಲಸ ಏನಿದೆ ಅದರಲ್ಲಿ 5 ಕೋಟಿ 9 ಲಕ್ಷ 53 ರೂ.ಗಳು ಈಗ ಬಿಡುಗಡೆಯಾಗಿದೆ. ಉಳಿದ ಹಣ ಮಾರ್ಚಿ 31ರೊಳಗೆ ಬಿಡುಗಡೆಯಾಗುತ್ತದೆ. ಎಲ್ಲಾ ಕೆಲಸವನ್ನು ಮಾಡಬೇಕಾಗುತ್ತದೆ. ಯಾರಿಗೂ ಪೆಂಡಿಂಗ್ ಬಿಲ್ಸ್, ಕಂಟ್ರಾಕ್ಟರರು ಹಣ ಬರಲಿಲ್ಲ ಎಂದು ಯಾರೂ ಭಾವಿಸಕೂಡದು. ಎಲ್ಲರಿಗೂ ಕೊಟ್ಟಿದ್ದೇವೆ. ಆದುದರಿಂದ ಇನ್ನು 3-4 ದಿನಗಳಲ್ಲಿ ಕಂಟ್ರಾಕ್ಟರರು ಅಷ್ಟು ದುಡ್ಡು ಇಲ್ಲದಿದ್ದರೆ ಏನು ಮಾಡುತ್ತಾರೆ, ನಾವೇ ಮಾಡಿಸಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: 4 ತಿಂಗಳು ಆದರೆ ಹೇಗೆ ಮಾಡಬೇಕು.

ಶ್ರೀ ಕೆ.ಹೆಚ್. ರಂಗನಾಥ್: ನಾಲ್ಕು ತಿಂಗಳು ಯಾರಿಗೂ ಆಗಿಲ್ಲ. ಬರೀ ಕೈ ದಾಸಪ್ಪ ಬಂದು ನಮ್ಮ ಹತ್ತಿರ ಕಂಟ್ರಾಕ್ಟ್ ಮಾಡಿ ದುಡ್ಡು ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವೇ? ಅವರಿಗೂ ಗಡವು ಸಿಗಬೇಕಾಗುತ್ತದೆ. ಒಂದೆರಡು ತಿಂಗಳು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಹೆಚ್. ಬನ್ನಿಕೋಡ್: ದುಡ್ಡು ಇಲ್ಲದೇ ಕಂಟ್ರಾಕ್ಟರರು ಏನು ಮಾಡುತ್ತಾರೆ? ದುಡ್ಡು ಇಲ್ಲದೆ ಸರ್ಕಾರ ಆಯವ್ಯಯ ಹೇಗೆ ಮಾಡಿತು ಎಂಬುದೇ ನನ್ನ ಪ್ರಶ್ನೆ.

ಶ್ರೀ ಕೆ. ಹೆಚ್. ರಂಗನಾಥ್: ಶ್ರೀ ಬನ್ನಿಕೋಡ್ ಅವರು ಏನೂ ಓದುವುದಿಲ್ಲ. ಏನು ಹೊಳೆಯುತ್ತದೊ ಅದನ್ನೇ ಹೇಳಿಬಿಡುತ್ತಾರೆ. ಅದೇ ನಮಗೆ ಬಂದಿರುವ ಕಷ್ಟ. ನಾವು ಕೆಲಸಕ್ಕೆ ಏನು ಗ್ರಾಂಟ್ ಇಟ್ಟಿದ್ದೇವೆ, ಆ ಎಲ್ಲಾ ಕೆಲಸವಾಗುತ್ತದೆ. ಅದಕ್ಕೆ ಎಲ್ಲಾ ಹಣ ಬಿಡುಗಡೆಯಾಗುತ್ತದೆ. ಆದುದರಿಂದ ಯಾವ ವಿಧವಾದಂತಹ ಕೆಲಸವನ್ನು ಮಾಡಬೇಕೆಂದು ಹೇಳಿದ್ದೇವೆ. ಅದಕ್ಕೆ ಹಣ ಬಿಡುಗಡೆಯಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಬೈರೇಗೌಡರೇ ಕುಳಿತುಕೊಳ್ಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಕೇಳಿದರೆ ಏನಾಗುತ್ತದೆ.

ಅಧ್ಯಕ್ಷರು : ಕೇಳಿದರೆ ಏನಾಗುತ್ತದೆಂದರೆ ಟೈಮ್ ಆಗುತ್ತದೆ. ಪ್ರಶ್ನೆಗಳು ಲ್ಯಾಪ್ಸ್ ಆಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ : ಆ ಮಾನ್ಯ ಸದಸ್ಯರಿಗೆ ಇನ್ನು ಎರಡು ಉಪಪ್ರಶ್ನೆಗಳನ್ನು ಕೇಳುವಂತಹ ಅಧಿಕಾರವಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ತಾವೇ ಹೇಳಿದ್ದೀರಿ. ಹಣ ಯಾವುದು ಉಳಿದಿಲ್ಲ. 131 ಕೋಟಿ 20 ಲಕ್ಷ ರೂ.ಗಳು ಉಳಿದಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಇಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಲೋಕೋಪಯೋಗಿ, ಕಾಮಗಾರಿಗೆ ಪಾವತಿ ಮಾಡಬೇಕಾದಂಥ ಒಟ್ಟು 131 ಕೋಟಿ 20 ಲಕ್ಷ ರೂ.ಗಳು ಉಳಿಕೆಯ ಬಿಲ್ ಮಾತ್ರವಿರುತ್ತದೆ ಎಂದು ತಾವು ಹೇಳಿದ್ದೀರಲ್ಲಾ, ಅಂದಮೇಲೆ ಕಂಟ್ರಾಕ್ಟರರ ಗತಿ ಏನಾಗುತ್ತದೆ? ತಾವು ಹೇಳಿದ್ದೀರಿ ಕೊಡುತ್ತೇವೆಂದು; ನೀವು ಇಲ್ಲಿ ಎಂಎಲ್‌ಎಗೆ ಫಂಡ್ ಎಂದು ಕೊಡುವುದಿಲ್ಲ, ರೋಡುಗಳ ಗತಿ ದೇವರೇ ಗತಿ, ತಾವು ಅದರ ಬಗ್ಗೆ ನೀತಿ ನಿರೂಪಣೆ ಮಾಡುವುದಿಲ್ಲ. ಎಂಎಲ್‌ಎಗಳಿಗೆ ಬರೀ 5 ಲಕ್ಷ ರೂಪಾಯಿಗಳು ಕೊಡುತ್ತೀರಿ ಅಂದರೆ ಅದು ಎಂಎಲ್‌ಎ ಮನೆಗಳಿಗೆ ಅಲ್ಲ, ರೋಡ್ ಮತ್ತು ಕಾಮಗಾರಿಗಳಿಗೆ;

ಶ್ರೀ ಸಿ. ಬೈರೇಗೌಡ : ವಿಧಾನಸಭಾ ಕ್ಷೇತ್ರಕ್ಕೆ ಎಂದು ಕೊಡತಕ್ಕದ್ದು ; ಆ ಕ್ಷೇತ್ರದಿಂದ ಯಾರು ರೆಪ್ರೆಸೆಂಟ್ ಮಾಡುತ್ತಾರೆ ಅವರು ಮಾತ್ರ ತೆಗೆದುಕೊಳ್ಳಲಿ.

ಶ್ರೀ ಗುರುಪಾದಪ್ಪ ನಾಗಮಮಾರಪಳ್ಳಿ : ಅವರಿಗೆ ಏಕೆ ಕೊಡಬಾರದು?

ಶ್ರೀ ಕೆ.ಹೆಚ್. ರಂಗನಾಥ್ : 131 ಕೋಟಿ ರೂಪಾಯಿಗಳು ಏನಿದೆ ಅದನ್ನು ನಾನು ಹೇಳಿದೆ. ಯಾವ ಬಿಲ್ ಉಳಿಯುತ್ತದೆ ಅದನ್ನು ಮಾರ್ಚಿ ಒಳಗೆ ಮಾಡುತ್ತೇವೆ. ಬಡ್ಜೆಟ್ಟಿನಲ್ಲಿ ಕೆಲಸವನ್ನು ಸೇರಿಸಿದ್ದೇವೆ. ಪ್ರೋಗ್ರಾಂ ವರ್ಕ್ಸ್‌ಲ್ಲಿ ಏನು ಸೇರಿಸಿದ್ದೇವೆ.ಅದನ್ನು ನಾವು ಪೂರ್ತಿ ಮಾಡುವಂತಹ ಜವಾಬ್ದಾರಿ ಇದೆ. ಅದು ಆಗುತ್ತದೆ ಎನ್ನುವಂತಹ ಮಾತನ್ನು ಹೇಳಿದೆ. ಮಾನ್ಯ ಸದಸ್ಯರು ಬೇರೆ ಏನು ಹಣವನ್ನು ಕೇಳುತ್ತಿದ್ದಾರೆ. ಅದಕ್ಕೆ ಉತ್ತರ ಹೇಳಿದೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಮಾರ್ಚಿ ಒಳಗೆ 13 ಸಾವಿರ ಕಂಪ್ಲೀಟ್ ಮಾಡುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್ : ತಾವು ನಿಧಾನವಾಗಿ ಏಕೆ ಮಾತನಾಡುವುದಿಲ್ಲ?

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಮಾರ್ಚಿ ಒಳಗೆ 13, 626 ರೂಪಾಯಿಗಳನ್ನು ಕಂಪ್ಲೀಟ್ ಆಗಿ ಕೊಡುತ್ತೇವೆಂದು ಹೇಳುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್ : ಮಾಡುತ್ತೇನೆ ಎಂದು ಹೇಳುತ್ತೇನೆ, ಈ ವರ್ಷದ ಬಜೆಟ್ ಗ್ರಾಂಟ್ ನಾನ್ ಪ್ಲಾನ್ ವರ್ಕ್ಸ್‌ಲ್ಲಿ ಏನಿದೆ, ಪ್ರೋಗ್ರಾಂ ಏನೇನಾಗಿದೆ, ಎಷ್ಟು ಹಣ ಇಟ್ಟಿದ್ದೇವೆ. ಅದನ್ನು ಖರ್ಚು ಮಾಡಿ, ಆ ಕೆಲಸವನ್ನು ಪೂರ್ಣ ಮಾಡುತ್ತೇವೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ವಿಶ್ವಬ್ಯಾಂಕಿನಿಂದ ಸಾಲ

65 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ವಿಶ್ವಬ್ಯಾಂಕ್ ಹಾಗೂ ಇತರೆ ಸಂಸ್ಥೆಗಳಿಂದ ಇದುವರೆವಿಗೂ ತೆಗೆದುಕೊಂಡಿರುವ ಸಾಲಗಳ ಮೊತ್ತವೆಷ್ಟು ಹಾಗೂ ಈ ಸಾಲಗಳ ಮರುಪಾವತಿ ಎಷ್ಟು?

ಆ) ಇತ್ತೀಚೆಗೆ ವಿಶ್ವಬ್ಯಾಂಕಿನಿಂದ ವಿದ್ಯುಚ್ಛಕ್ತಿ ಮಂಡಳಿಗೆ ಕೊಡುತ್ತಿರುವ ಸಾಲ ಮತ್ತು ನೆರವನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಈ) ನಿಲ್ಲಿಸಿದ್ದಲ್ಲಿ, ಅದಕ್ಕೆ ಸರ್ಕಾರ ಕಂಡು ಹಿಡಿದಿರುವ ಪರಿಹಾರಗಳೇನು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಿಶ್ವಬ್ಯಾಂಕ್ ಹಾಗೂ ಇತರೇ ಸಂಸ್ಥೆಗಳಿಂದ ಇದುವರೆವಿಗೂ ತೆಗೆದುಕೊಂಡಿರುವ ಸಾಲಗಳ ಒಟ್ಟು ಮೊತ್ತ 149.4 ಕೋಟಿ ರೂಪಾಯಿ ಹಾಗೂ ಈ ಸಾಲಗಳನ್ನು 31-3-93ರವರೆಗೆ, ಕ್ರಮಬದ್ಧವಾಗಿ ಮರುಪಾವತಿ ಮಾಡಲಾಗಿದೆ.

ಆ) ಹೌದು.

ಇ) ವಿಶ್ವಬ್ಯಾಂಕ್ನ ಷರತ್ತುಗಳನ್ನು ಪಾಲಿಸುವಲ್ಲಿ ಉಂಟಾದ ಹಿನ್ನಡೆ ಮತ್ತು ನೀರಾವರಿ ಪಂಪುಸೆಟ್ಟುಗಳಿಗೆ ಉಚಿತವಾಗಿ ವಿದ್ಯುತ್ ಸರಬರಾಜು ಮಾಡುತ್ತಿರುವುದು ಹಾಗೂ ಅನೇಕ ಸರ್ಕಾರಿ ಇಲಾಖೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಂದ ಮಂಡಳಿಗೆ ಹೆಚ್ಚಿನ ಪ್ರಮಾಣದಲ್ಲಿ ಬರಬೇಕಾಗಿರುವ ಬಾಕಿ ಇವುಗಳು ಮುಖ್ಯ ಕಾರಣಗಳಾಗಿವೆ.

ಈ) ವಿಶ್ವಬ್ಯಾಂಕ್ ತಾನು ನೀಡುವ ಸಾಲ ಸೌಲಭ್ಯವನ್ನು ಪೂರ್ಣವಾಗಿ ನಿರಾಕರಿಸಿದಲ್ಲಿ ಮಂಡಳಿಯು ಹಮ್ಮಿಕೊಂಡಿರುವ ಯೋಜನೆಗಳಿಗೆ ಏಷಿಯನ್ ಅಭಿವೃದ್ಧಿಬ್ಯಾಂಕ್, ಪವರ್ ಫೈನಾನ್ಸ್ ಕಾರ್ಪೊರೇಷನ್ ಹಾಗೂ ವಾಣಿಜ್ಯ ಬ್ಯಾಂಕುಗಳು ಈ ಸಂಸ್ಥೆಗಳಿಂದ ಹೆಚ್ಚಿನ ಪ್ರಮಾಣದ ಸಾಲ ಸೌಲಭ್ಯವನ್ನು ಪಡೆಯಲು ಪ್ರಯತ್ನಿಸಲಾಗುವುದು.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ವಿಶ್ವಬ್ಯಾಂಕಿನಿಂದ ಸಾಲ

102 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿದ್ಯುಚ್ಛಕ್ತಿ ಮಂಡಳಿಗೆ ವಿಶ್ವಬ್ಯಾಂಕ್ನಿಂದ ಅಭಿವೃದ್ಧಿಗೋಸ್ಕರ ಕೊಡುತ್ತಿದ್ದ ಸಾಲದ ಹಣವನ್ನು ಇನ್ನು ಮುಂದೆ ಕೊಡಲು ಆಗುವುದಿಲ್ಲವೆಂದು ಸದರಿ ಬ್ಯಾಂಕಿನವರು ತಿಳಿಸಿದ್ದಾರೆಯೇ?

ಆ) ಹಾಗಿದ್ದಲ್ಲಿ ಕಾರಣಗಳೇನು?

ಇ) ಖೋತಾ ಬೀಳುವ ಹಣಕ್ಕೋಸ್ಕರ ಏರ್ಪಾಟು ಮಾಡಲಾಗಿರುವುದೇ (ವಿವರಗಳನ್ನೊದಗಿಸುವುದು)?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯ ಮಂತ್ರಿಗಳು) :

ಅ) ವಿಶ್ವಬ್ಯಾಂಕ್ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ನೀಡುತ್ತಿದ್ದ ಸಾಲ ಸೌಲಭ್ಯವನ್ನು 3-4-93ರಿಂದ ಅಮಾನತ್ತುಗೊಳಿಸಿ, ನಂತರ 26-10-93ರಂದು ರದ್ದುಪಡಿಸಿದೆ.

ಆ) ವಿಶ್ವಬ್ಯಾಂಕ್ನ ಷರತ್ತುಗಳನ್ನು ಪಾಲಿಸುವಲ್ಲಿ ಉಂಟಾದ ಹಿನ್ನಡೆ ಮತ್ತು ನೀರಾವರಿ ಪಂಪು ಸೆಟ್ಟುಗಳಿಗೆ ಉಚಿತವಾಗಿ ವಿದ್ಯುತ್ ಸರಬರಾಜು ಮಾಡುತ್ತಿರುವುದು ಹಾಗೂ ಅನೇಕ ಸರ್ಕಾರಿ ಇಲಾಖೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಂದ ಮಂಡಳಿಗೆ ಹೆಚ್ಚಿನ ಪ್ರಮಾಣದಲ್ಲಿ ಬರಬೇಕಾಗಿರುವ ಬಾಕಿ ಇವುಗಳು ಮುಖ್ಯ ಕಾರಣಗಳಾಗಿವೆ.

ಇ) ವಿಶ್ವಬ್ಯಾಂಕ್ ತಾನು ನೀಡುವ ಸಾಲ ಸೌಲಭ್ಯವನ್ನು ಪೂರ್ಣವಾಗಿ ನಿರಾಕರಿಸಿದಲ್ಲಿ, ಮಂಡಳಿಯು ಹಮ್ಮಿಕೊಂಡಿರುವ ಯೋಜನೆಗಳಿಗೆ ಏಷಿಯನ್ ಅಭಿವೃದ್ಧಿ ಬ್ಯಾಂಕ್, ಪವರ್ ಫೈನಾನ್ಸ್ ಕಾರ್ಪೊರೇಷನ್ ಹಾಗೂ ವಾಣಿಜ್ಯ ಬ್ಯಾಂಕ್ಗಳು ಈ ಸಂಸ್ಥೆಗಳಿಂದ ಹೆಚ್ಚಿನ ಪ್ರಮಾಣದ ಸಾಲ ಸೌಲಭ್ಯವನ್ನು ಪಡೆಯಲು ಪ್ರಯತ್ನಿಸಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಗಳಿಗೆ ನಾನು 3 ಉಪಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ಇದುವರೆಗೆ ಕೆಇಬಿಯವರು ವಿಶ್ವಬ್ಯಾಂಕಿನಿಂದ 149 ಕೋಟಿ ರೂಪಾಯಿ ಸಾಲ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಇನ್ನು ಯಾವುದಾದರೂ ಸಂಸ್ಥೆಯಿಂದ ಇದುವರೆಗೂ ಸಾಲವನ್ನು ತೆಗೆದುಕೊಂಡಿದ್ದೀರಾ? ಇದು ಮೊದಲನೇ ಪ್ರಶ್ನೆ. ಎರಡನೆಯದು ವಿಶ್ವ ಬ್ಯಾಂಕಿನ ಷರತ್ತುಗಳನ್ನು ಪಾಲಿಸುವಲ್ಲಿ ಉಂಟಾದ ಹಿನ್ನಡೆ ಮತ್ತು ನೀರಾವರಿ ಪಂಪ್ಸೆಟ್ಟುಗಳಿಗೆ ಉಚಿವಾಗಿ ವಿದ್ಯುತ್ ಸರಬರಾಜು ಮಾಡುತ್ತಿರುವುದು. ಅಂದರೆ ರೈತರಿಗೆ ಕೊಡುತ್ತಿರತಕ್ಕಂತಹ ಪವರ್ನಿಂದಾಗಿ ಅವರು ಸಾಲ ನಿಲ್ಲಿಸತಕ್ಕಂಥಾದ್ದನ್ನು ಮಾಡಿದ್ದಾರೆ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದೀರಿ. ನನಗೆ ತಿಳಿದು ಬಂದಿರುವ ಹಾಗೆ ಸಿಸ್ಟಂ ಲಾಸಸ್ ಇಂಪ್ರೂವ್ಮೆಂಟ್ ಆಗದೇ ಇರುವುದೇ ಒಂದು ಕಾರಣ ಎಂದು ಕೇಳಿದ್ದೇನೆ. ಮತ್ತು ಸ್ಥಳೀಯ ಸಂಸ್ಥೆಗಳಿಂದ ಬಾಕಿ ಎಂದು ಹೇಳಿದ್ದಾರೆ. ಬಾಕಿ ಎಷ್ಟು ಇದೆ? ಖಾಸಗಿ ವ್ಯಕ್ತಿಗಳಿಂದ ಬಾಕಿ ಇಲ್ಲವೇ? ಬಾಕಿ ಇದ್ದರೆ ವಸೂಲಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಈ ಮೂರು ಪ್ರಶ್ನೆಗಳನ್ನು ನಾನು ಉಪಮುಖ್ಯಮಂತ್ರಿಗಳನ್ನು ಕೇಳಿ, ಇನ್ನು ಈಗ ನಿಮಗೆ ಎಷ್ಟು ಸಾಲ ಬೇಕಾಗಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೇ, ವಿಶ್ವಬ್ಯಾಂಕಿನವರು ಹಾಕಿರತಕ್ಕಂಥ ಷರತ್ತುಗಳನ್ನು ಕರ್ನಾಟಕ ವಿದ್ಯುತ್ಮಂಡಲಿ ಪೂರ್ಣವಾಗಿ ಜಾರಿಗೆ ತರಲಾಗದೇ ಇರುವುದಕ್ಕಾಗಿ ವಿಶ್ವಬ್ಯಾಂಕಿನವರು ತಾವು ಕೊಡಬೇಕಾಗಿರುವುದು ಕೊಡುತ್ತೇವೆ ಎಂದು ಹೇಳಿ ಏನು ಒಪ್ಪಿಕೊಂಡಿದ್ದರು ಆ ಸಾಲವನ್ನು ತಡೆಹಿಡಿದಿದ್ದಾರೆ. ಅದಕ್ಕೆ ಪ್ರಧಾನವಾಗಿರತಕ್ಕಂತಹ ನಾಲ್ಕು ಷರತ್ತುಗಳನ್ನು ನೀವು ಅನುಸರಿಸಲಿಲ್ಲ ಎಂದು ಹೇಳುತ್ತಾರೆ. ಗ್ರಾಹಕರಿಂದ ಬರಬೇಕಾದ ಹಣದ ಬಾಕಿಯನ್ನು 2 ತಿಂಗಳ ಡಿಮ್ಯಾಂಡ್ನ ಮಟ್ಟಕ್ಕೆ ಮೀರದಂತೆ ಕ್ರಮ ತೆಗೆದುಕೊಳ್ಳಬೇಕು. ಇದೇ ಮಟ್ಟವನ್ನು ಮುಂದುವರೆಸಿಕೊಂಡು ಹೋಗತಕ್ಕಂಥಾದ್ದು. 2ನೆಯದು ಕಂಟ್ರಾಕ್ಷ ವಿದ್ಯುತ್ ನಿಗಮಕ್ಕೆ ಮಂಡಲಿಯು ಸಂದಾಯ ಮಾಡಬೇಕಾಗಿರುವ ಬಾಕಿಯನ್ನು ವಿವಾದಿತ ಮೊಬಲಗು ಸೇರಿದಂತೆ ಚುಕ್ತಾ ಮಾಡುವುದು ಮತ್ತು ಕರ್ನಾಟಕ ವಿದ್ಯುತ್ ಮಂಡಲಿ ಹಾಗೂ ಕರ್ನಾಟಕ ವಿದ್ಯುತ್ ನಿಗಮಗಳ ನಡುವೆ ವೆಚ್ಚದ ಕರಾರು ಒಪ್ಪದ ಏರ್ಪಾಡಾಗುವುದು. 3ನೆಯದು ವಿದ್ಯುಚ್ಛಕ್ತಿ ದರದ ಪರಿಷ್ಕರಣೆ ಬಗ್ಗೆ ಕ್ರಮ ತೆಗೆದುಕೊಳ್ಳುವುದು. 4ನೆಯದು ಗ್ರಾಮೀಣ ವಿದ್ಯುದ್ದೀಕರಣದ ಬಗ್ಗೆ ರಾಜ್ಯಸರ್ಕಾರದವರು ಸಹಾಯ ಧನವನ್ನು ಮಂಡಲಿಗೆ ಪಾವತಿ ಮಾಡುವುದು ಶೇಕಡ 3ಕ್ಕಿಂತ ಕಡಿಮೆ ಇರುವಂತೆ ರೇಟ್ ಆಫ್ ರಿಟರ್ನ್ ಅನ್ನು ಹಣವನ್ನು ರಾಜ್ಯಸರ್ಕಾರ ಮಂಡಲಿಗೆ ಸಕಾಲದಲ್ಲಿ ಬಿಡುಗಡೆ ಮಾಡುವುದು. ಈ ಮೇಲಿನ ಷರತ್ತುಗಳನ್ನು ನಾವು ಅನ್ವಯಕ್ಕೆ ತರುವುದಕ್ಕೆ ಸಾಧ್ಯವಾಗದೇ. ಇದ್ದುದ್ದರಿಂದ ಅವರು ನಿಲ್ಲಿಸಿದ್ದಾರೆ. ಅವರು ಒಟ್ಟು ನಮಗೆ ಕೊಡಬೇಕಾಗಿದ್ದಂಥ ಹಣ 261.2 ದಶಲಕ್ಷ ಅಮೇರಿಕನ್ ಡಾಲರ್ಗಳು. ಈಗ ಇದುವರೆಗೆ ಅವರು ನಮಗೆ ಕೊಟ್ಟಿರತಕ್ಕಂಥಾದ್ದು ಸುಮಾರು 120 ಕೋಟಿ ರೂಪಾಯಿ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಮುಖ್ಯಮಂತ್ರಿಗಳು ಸ್ಪಷ್ಟವಾದ ಉತ್ತರ ಕೊಟ್ಟಿಲ್ಲ. ನಾನು ಕೇಳುವುದು ನಿಮಗೆ ಎಷ್ಟು ಸಾಲ ಬೇಕಾಗಿದೆ. ಬೇರೆ ಸಂಸ್ಥೆಗಳಿಂದ ನಿಮಗೆ ಎಷ್ಟು ಸಾಲ ಬೇಕಾಗಿದೆ ಎನ್ನುವುದು. ಬೇರೆ ಖಾಸಗೀ ವ್ಯಕ್ತಿಗಳಿಂದ ಎಷ್ಟು ಬಾಕಿ ಇದೆ. ಬಾಕಿ ವಸೂಲು ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಸಿಸ್ಟಂ ಲಾಸಸ್ ಇಂಪ್ರೂವ್ಮೆಂಟ್ ಆಗಿಲ್ಲ ಎಂದು ಹೇಳಿಬಿಟ್ಟು ಆ ಸಾಲ ನಿಲ್ಲಿಸಿಬಿಟ್ಟಿದ್ದೇವೆ ಎಂದು ಹೇಳಿದ್ದಾರೆ. ಇದರ ಬಗ್ಗೆ ನಿಮ್ಮ ರಿಯಾಕ್ಷನ್ ಏನು ಎಂಬುದನ್ನು ತಿಳಿಸಬೇಕು.

ಶ್ರೀ ಎಂ.ವಿ. ವೆಂಕಟಪ್ಪ: ಈ ರೈತರ ಪಂಪುಸೆಟ್ಟುಗಳ ಮೇಲೆ ವಿದ್ಯುಚ್ಛಕ್ತಿ ದರವನ್ನು ಏರುವುದಕ್ಕೆ ಬದಲಾಗಿ ಆಲ್ ಸೆಕ್ಟರ್ ಇಂಡಸ್ಟ್ರಿಯಲ್ ಅಂಡರ್ಟೇಕಿಂಗ್

ಮತ್ತು ಎಚಹೆಚ್ ಮತ್ತು ಖಾಸಗೀ ಎಲ್ಲಾ ಸೆಕ್ಟರ್ ಮೇಲೆ ಹಾಕಿದರೆ ಎಷ್ಟು ಹಣ ಹೆಚ್ಚಿಗೆ ವಸೂಲಾಗುತ್ತದೆ ಎಂದು ಒಂದು ಅಂದಾಜು ಇದೆ. ಆ ರೀತಿ ಮಾಡಬಾರದು ಎನ್ನುವುದು ಒಂದು. 2ನೆಯದು ಒಟ್ಟು ಸಾಲ ಎಷ್ಟು ಇದೆ. ಖಾಸಗೀಯವರಿಂದ ಎಷ್ಟು ಸಾಲ ಬಾಕಿ ಇದೆ?

ಶ್ರೀ ಎಸ್.ಎಂ. ಕೃಷ್ಣ: ನಮ್ಮ ಕರ್ನಾಟಕ ವಿದ್ಯುತ್ ಮಂಡಳಿಗೆ ಸಾಲ ಬಹಳ ಬೇಕಾಗುತ್ತದೆ. ಏಕೆಂದರೆ, ನಾವು ಈ ಸಿಸ್ಟಮ್ ಇಂಪ್ರೂವ್ಮೆಂಟ್ ಮಾಡಬೇಕೆಂದು ಹೇಳಿ ಕಳೆದ ಎರಡು ವರ್ಷಗಳಿಂದ ತೀವ್ರ ಪ್ರಯತ್ನಗಳು ನಡೆಯುತ್ತಿವೆ. ಆ ತೀವ್ರ ಪ್ರಯತ್ನಗಳು ಇನ್ನಷ್ಟು ತೀವ್ರವಾಗಿ ಮಾಡಬೇಕಾದರೆ, ನಮಗೆ 200-300 ಕೋಟಿ ರೂಪಾಯಿಗಳಷ್ಟು ಸಾಲ ಬೇಕಾಗುತ್ತದೆ. ತಾವು ವರ್ಲ್ಡ್ ಬ್ಯಾಂಕ್ ಅಲ್ಲದೆ, ಬೇರೆ ಯಾವುದಾದರೂ ಇನ್ಸಿಟ್ಯೂಷನ್ನಿಂದ ಸಾಲ ತೆಗೆದುಕೊಂಡಿದ್ದೀರಾ ಎಂದು ಪ್ರಶ್ನೆ ಕೇಳಿದ್ದೀರಿ, ಪವರ್ ಫೈನಾನ್ಸ್ ಕಾರ್ಪೊರೇಷನ್‌ನಿಂದ ಸುಮಾರು 18 ಕೋಟಿ ರೂಪಾಯಿ ಸಾಲ ಪಡೆದುಕೊಂಡಿದ್ದೇವೆ, ಗ್ರಾಮೀಣ ವಿದ್ಯುದ್ದೀಕರಣ ನಿಗಮ ಎಂದು ಇದೆ ಅದರಿಂದ 8 ಕೋಟಿ ರೂಪಾಯಿ ಸಾಲ ಪಡೆದಿದ್ದೇವೆ. ಹಾಗೆ ಐಡಿಬಿಐ ನಿಂದ ಸುಮಾರು 3 ಕೋಟಿ ರೂಪಾಯಿ ಸಾಲ ಪಡೆದಿದ್ದೇವೆ. ಲೈನ್ ಲಾಸ್ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಇದು ಏತಕ್ಕೆ ಆಗುತ್ತದೆಂದು ತಮಗೆ ಗೊತ್ತಿದೆ. ಏಕೆಂದರೆ ನಾವು ಈ ಲೈನ್ ವಿದ್ಯುತ್ ಹರಿಸುತ್ತಿರತಕ್ಕಂಥ ಉದ್ದ ಗಮನದಲ್ಲಿಟ್ಟುಕೊಂಡರೆ, ಲೈನ್ ಲಾಸ್ ಏತಕ್ಕೆ ಆಗುತ್ತದೆಂದು ಗೊತ್ತಾಗುತ್ತದೆ. ಅದನ್ನು ಕಡಿಮೆ ಮಾಡುವ ದೃಷ್ಟಿಯಿಂದ ಮಧ್ಯೆ,ಮಧ್ಯೆ ಹೊಸ ಹೊಸ ಸ್ಟೇಷನ್ನುಗಳನ್ನು ಮಾಡಿ ಲೈನ್ ಲಾಸಸ್ ಕಡಿಮೆ ಮಾಡಬೇಕೆಂದು ಮಾಡುತ್ತಿದ್ದೇವೆ. ನಮ್ಮ ವಿದ್ಯುತ್ ನಿಗಮದವರು ನ್ಯಾಷನಲ್ ಆವರೇಜ್ ಆಫ್ ಲೈನ್ ಲಾಸ್ 23 ಪರ್ಸೆಂಟ್ ಲಾಸ್ ಇದೆ ಎಂದು ಹೇಳುತ್ತಾರೆ. ನಾವು 18.7ಕ್ಕೆ ಮಿತಿ ಮಾಡಿಕೊಂಡಿದ್ದೇವೆಂದು ಅವರು ಹೇಳುತ್ತಾರೆ. ಅದರ ಬಗ್ಗೆ ನಾನಾ ವಿಧವಾದ ವ್ಯಾಖ್ಯಾನಗಳಿಗೆ ಅವಕಾಶ ಇದೆ. ನಾನಾ ವಿಧವಾದಂಥ ರಿಸರ್ವೇಷನ್ ಕೂಡ ಇದೆ. ಸ್ಪಷ್ಟವಾಗಿ ಹೇಳಬಹುದಾದರೆ, ನಾನು ಈ ಸದನವನ್ನು ನಂಬಿಕೆಗೆ ತೆಗೆದುಕೊಂಡು ಬಿಚ್ಚುಮನಸ್ಸಿನಿಂದ ಹೇಳಬೇಕಾಗಿದ್ದರೆ, ಲೈನ್ ಲಾಸಸ್ ಬಗ್ಗೆ ಖಚಿತವಾಗಿ ಈ ದಿವಸ ಮಾಹಿತಿ ನಮಗೆ ಸಿಕ್ಕುತ್ತಿಲ್ಲ ಎನ್ನುತಕ್ಕದ್ದನ್ನು ನಾನು ಒಪ್ಪುತ್ತೇನೆ. ಇನ್ನು ಅರಿಯರ್ಸ್ ಬಗ್ಗೆ ಮಾನ್ಯ ವೆಂಕಟಪ್ಪನವರು ಕೇಳಿದ್ದಾರೆ. ಒಟ್ಟು ಡೊಮೆಸ್ಟಿಕ್ 46 ಕೋಟಿ, ಭಾಗ್ಯಜ್ಯೋತಿ 13 ಕೋಟಿ, ವ್ಯವಸಾಯ 67 ಕೋಟಿ, ಕಮರ್ಷಿಯಲ್ 16 ಕೋಟಿ ವಾಟರ್ಸಪ್ಲೈ 62ಕೋಟಿ, ಅರ್ಬನ್ ವಾಟರ್ಸಪ್ಲೈ, ಮುನಿಸಿಪಾಲಿಟಿ, ಕಾರ್ಪೊರೇಷನ್, ಸ್ಟ್ರೀಟ್ ಲೈಟ್ಸ್ 28 ಕೋಟಿ, ಎಗ್ಗೈನ್ ಮುನಿಸಿಪಾಲಿಟಿ, ಕಾರ್ಪೊರೇಷನ್ ಎಲ್ಲಾ ಸೇರುತ್ತದೆ. ಎಲ್.ಟಿ.ಇಂಡಸ್ಟ್ರಿ 34 ಕೋಟಿ, ಹೆಚ್.ಟಿ. ಇಂಡಸ್ಟ್ರಿ 179 ಕೋಟಿ, ಅದರಲ್ಲಿ ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್, ಹಿಂದಿನದು 30-40 ಕೋಟಿ ರೂಪಾಯಿ ಸೇರುತ್ತದೆ. ಆದ್ದರಿಂದ, ಸರ್ಕಾರದಿಂದ, ವಿದ್ಯುಚ್ಛಕ್ತಿ ನಿಗಮಕ್ಕೆ ಬರಬೇಕಾಗಿರುವುದರಿಂದ, ಒಂದು ಸ್ಥೂಲ ಅಂದಾಜು ಸುಮಾರು 146 ಕೋಟಿ ರೂಪಾಯಿ ಇದೆ. ಆದ್ದರಿಂದ, ಈ ಅರಿಯರ್ಸ್ ಪ್ರಮಾಣ, ಈ ಪ್ರಮಾಣಕ್ಕೆ ಏರಿರತಕ್ಕಂಥಾದ್ದಕ್ಕೆ ಆಗಿದೆ. ಮತ್ತೆ ಕೆಲವರು ಹೆಚ್.ಟಿ. ಇಂಡಸ್ಟ್ರಿ, ಅವರು, ಎಲ್.ಟಿ. ಇಂಡಸ್ಟ್ರಿ ಅವರು ಮತ್ತು ಡೊಮಾಸ್ಟಿಕ್ ಕನ್ಸ್ಯೂಮರ್ಸ್ ಬೇರೆ ಬೇರೆ ಮುನ್ಸಿಫ್ ಕೋರ್ಟ್ಗಳಿಗೆ ಹೋಗಿ ತಡೆಯಾಜ್ಞೆಗಳನ್ನು ತಂದಿದ್ದಾರೆ. ಸುಮಾರು 70-80 ಕೋಟಿ ರೂಪಾಯಿಗಳಷ್ಟು ಮೊತ್ತದ ಮಟ್ಟಿಗೆ ಕೋರ್ಟ್ಗಳಿಂದ ತಡೆಯಾಜ್ಞೆ ಬಂದಿದೆ. ಒಟ್ಟಾರೆ ಪರಿಸ್ಥಿತಿ ಏನೆಂದರೆ ಈ ಪ್ರಮಾಣದಲ್ಲಿ ನಮ್ಮ ಅರಿಯರ್ಸ್ ಏರಿರುತ್ತದೆ.

ಶ್ರೀ ಸಿ. ಬೈರೇಗೌಡ: ಅರಿಯರ್ಸ್ ವಸೂಲಿ ಮಾಡಲಿಕ್ಕೆ ಈಗ ಬೇರೆ ಬೇರೆ

ಬೀಳುತ್ತಿರುವುದರಿಂದ ವರ್ಷಾನುಗಟ್ಟಲೆ ಇದು ಆಗುತ್ತದೆ. ಆದ್ದರಿಂದ, ಇದನ್ನು ತ್ವರಿತವಾಗಿ ವಸೂಲಿ ಮಾಡಲಿಕ್ಕೆ ಒಂದು ಸೆಪರೇಟ್ ಆಗಿರತಕ್ಕ ಟ್ರಿಬ್ಯುನಲ್ ಅಥವಾ ಒಂದು ವ್ಯವಸ್ಥೆಯನ್ನು ನೀವು ಜಾರಿಗೆ ತಂದು ಆದಷ್ಟು ಜಾಗ್ರತೆ ಈ ಬಗ್ಗೆ ವಸೂಲಿ ಮಾಡಲಿಕ್ಕೆ ದಯವಿಟ್ಟು ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ.ವಿ. ವೆಂಕಟಪ್ಪ: ವಿದ್ಯುಚ್ಛಕ್ತಿ ಉತ್ಪಾದನೆಗೋಸ್ಕರ ಪ್ರೈವೇಟ್ ಸೆಕ್ಟಾರ್ಗೆ ಉತ್ತೇಜನ ಕೊಡಲಿಕ್ಕೆ ಸರ್ಕಾರದ ಮುಂದೆ ಆಲೋಚನೆ ಏನಾದರೂ ಇದೆಯೇ?

ಶ್ರೀ ಸಿ. ಬೈರೆಗೌಡ: ಸರ್ಕಾರದಿಂದ ಸಾಕಷ್ಟು ಹಣ ದೊರೆಯಬೇಕಾಗಿದೆ. ಅರ್ಬನ್ ವಾಟರ್ ಸಪ್ಲೈ ಬೋರ್ಡ್ಗೆ ಇಲ್ಲಿ ಸರ್ಕಾರದಿಂದ ಹಣ ಬಿಡುಗಡೆಯಾದಂಥ ಸಂದರ್ಭದಲ್ಲಿ ಕೆ.ಇ.ಬಿ.ಗೆ ಎಷ್ಟು ಹಣ ಕೊಡಬೇಕು ಅದನ್ನು ಕೊಟ್ಟರೆ, ಅದು ಇಲ್ಲಿಯೇ ವಸೂಲಾಗುತ್ತದೆ. ಮುನಿಸಿಪಾಲಿಟಿಯವರಿಗೆ ಗ್ರಾಂಟ್ಇನ್ಎಯಡ್ ಕೊಡುತ್ತಾರೆ ಇವರೇ ಮುರಿದುಕೊಂಡು ಅವರಿಗೆ ಕೊಡತಕ್ಕದ್ದು. ಪಂಚಾಯತ್ಗಳಿಗೂ ಸ್ಟ್ರೀಟ್ ಲೈಟ್ ವಿಚಾರದಲ್ಲಿ ಸರ್ಕಾರದಿಂದಲೇ ಹಣ ಹೋಗುತ್ತದೆ. ಅದನ್ನು ಇಲ್ಲಿಯೇ ಮುರಿದುಕೊಂಡು ಕೆ.ಇ.ಬಿ. ಕೊಟ್ಟರೆ, ಹಣ ವಸೂಲಿಯಾಗುತ್ತದೆ, ಬಾಕಿ ಕಡಿಮೆಯಾಗುತ್ತದೆ, ದಯವಿಟ್ಟು ಇದನ್ನು ಮಾಡುತ್ತೀರಾ?

ಶ್ರೀ ಎಸ್.ಎಂ. ಕೃಷ್ಣ: ತಮ್ಮ ಈ ಒಂದು ಸಲಹೆ ಪರಿಶೀಲನೆಗೆ ಯೋಗ್ಯವಾದುದೆಂದರೆ ಅಟ್ ಸೋರ್ಸ್ ಗೌರ್ನಮೆಂಟ್ ಲೆವೆಲ್ನಲ್ಲಿ ಇದನ್ನೆಲ್ಲಾ ಡಿಡಕ್ಟ್ ಮಾಡಿಕೊಳ್ಳಿ ಎಂಬುದು. ತಮ್ಮ ಸಲಹೆ. ಸರ್ಕಾರದಿಂದ ಏನು ಗ್ರಾಂಟ್ಸ್‌ಬರುತ್ತದೆ, ಮುನಿಸಿಪಾಲಿಟಿಗಳಿಂದ, ಗ್ರಾಮ ಪಂಚಾಯಿತಿಗಳಿಂದ, ಕಾರ್ಪೊರೇಷನ್ಗಳಿಂದ, ಭಾಗ್ಯಜ್ಯೋತಿ ಬಾಬಿನಿಂದ ಏನು ಈ ವಿದ್ಯುಚ್ಛಕ್ತಿ ಬಾಬ್ತು ಬರಬೇಕೋ ಅದನ್ನೆಲ್ಲಾ ಇಲ್ಲೇ ಡಿಡಕ್ಟ್ ಮಾಡಿದರೆ ಬಹುಶಃ ಅರಿಯರ್ಸ್ ಪ್ರಮಾಣ ಬಹಳಷ್ಟು ಕಡಿಮೆಯಾಗುತ್ತದೆ. ಮುಂದಿನ ತಿಂಗಳಿಂದ ಹೊಸ ಆಯವ್ಯಯ ವರ್ಷ ಪ್ರಾರಂಭವಾಗುತ್ತದೆ. ಆಗ ಇದರ ಬಗ್ಗೆ ನಾವು ಪ್ರಯತ್ನ ಮಾಡುತ್ತೇವೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ (ಆರ್ಥಿಕ ಮಂತ್ರಿಗಳು) ಜೊತೆ ಮಾತನಾಡಿ ತಮ್ಮ ಸಲಹೆಗೆ ನಾನು ಹೆಚ್ಚಿನ ಒತ್ತನ್ನು ಕೊಟ್ಟು ಇದು ಆಗುಮಾಡಲು ಪ್ರಯತ್ನ ಮಾಡುತ್ತೇನೆ. ನಮ್ಮಲ್ಲಿ ಸಂಪನ್ಮೂಲಗಳ ಕೊರತೆ ಇರುವುದರಿಂದಾಗಿ ಖಾಸಗಿ ಕ್ಷೇತ್ರದಲ್ಲಿ ಯಾವ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಗೆ ಬಂಡವಾಳವನ್ನು ನಾವು ಪಡೆಯಬಹುದೆಂದು ನಮ್ಮೆಲ್ಲರ ತೀವ್ರವಾದ ಆಲೋಚನೆಗಳು ನಡೆಯುತ್ತಿವೆ. ನಮ್ಮಲ್ಲಿ ಈಗಾಗಲೇ 3-4 ಬಹಳ ಮುಂದುವರಿದ ಯೋಜನೆಗಳಿವೆ. ಅದರಲ್ಲಿ ಮಂಗಳೂರು, ರಾಯಚೂರಿನ 5 ಮತ್ತು 6ನೇ ಘಟಕಗಳು, ಹೊಸಪೇಟೆ ಈ ಯೋಜನೆಗಳಿಗೆ ಮುಂದಿನ ವರ್ಷ ಸಾಕಷ್ಟು ಚಾಲನೆ ಸಿಕ್ಕುತ್ತದೆ, ಮತ್ತು ಇನ್ನೂ ಒಂದು ಮಾತನ್ನು ಹೇಳುವುದಾದರೆ ಕಲ್ಲಿದ್ದಲು ಆಧಾರಿತ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಬೇಕೆಂಬ ಆಲೋಚನೆ ಕೂಡ ನಮ್ಮ ಸರ್ಕಾರಕ್ಕಿದೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ: ಮಾನ್ಯ ಅಧ್ಯಕ್ಷರೇ, ಸರ್ಕಾರದವರ ಪಾಲಿಸಿಯೇ ಬಗ್ಗೆ ಒಂದೇ ಒಂದು ಬಹಳ ಮುಖ್ಯವಾದ ಅಂಶ ಎಂದರೆ, ರಾಜ್ಯಸರ್ಕಾರದ ನೀತಿಗಳ ಬಗ್ಗೆ ರಾಜ್ಯದ ಜನತೆಯಲ್ಲಿ ಒಂದು ತಪ್ಪು ಅಭಿಪ್ರಾಯ ಇದೆ. ಇದು ಮಾನ್ಯ ಮಂತ್ರಿಗಳಿಗೂ ಕೂಡ ಗೊತ್ತಿದೆಯೋ ಇಲ್ಲವೋ ನನಗೆ ಅನುಮಾನವಿದೆ. ಆದ್ದರಿಂದ ಅವರು ಇದರ ಬಗ್ಗೆ ಒಂದು ಸ್ಪಷ್ಟೀಕರಣವನ್ನು ನೀಡಬೇಕು. ನಿಮ್ಮಲ್ಲಿ ಕೆಲವು ಲೋಪದೋಷಗಳಿವೆ ಎಂದ ವಿಶ್ವಬ್ಯಾಂಕ್ನವರು ತಿಳಿದಿದ್ದಾರೆ. ಇವತ್ತು ನೀವು ಪಂಪ್ಸೆಟ್ಗಳಿಂದ ಬಾಕಿ, ಗೃಹಬಳಕೆಯವರಿಂದ ಬಾಕಿ ಎಂದು ಹೇಳುತ್ತಿದ್ದೀರಿ. Free supply of electricity to farmers without supplying power.

ಹೈ ಟೆನ್ಷನ್ ಬಳಕೆದಾರರಿಗೆ ನೀವು ಅಳವಡಿಸಿರತಕ್ಕ ನೀತಿ, ಗೃಹ ಬಳಕೆದಾರರಿಗೆ ಅಳವಡಿಸಿರತಕ್ಕ ನೀತಿಗೆ ಏನಾದರೂ ಜಸ್ಟಿಫಿಕೇಷನ್ ಇದೆಯೇ ಎಂಬುದನ್ನು ತಾವು

ಸ್ವಲ್ಪ ಆಲೋಚನೆ ಮಾಡಬೇಕು. ನಾನು ಗೃಹಬಳಕೆದಾರ. ನನಗೆ ಸ್ಲ್ಯಾಬ್ ಸಿಸ್ಟಂ ಏನು ಮಾಡಿದ್ದೀರಿ. 100 ಯೂನಿಟ್ವರೆಗೆ ಇಷ್ಟು 200 ಯೂನಿಟ್ಸ್‌ವರೆಗೆ ಇಷ್ಟು ಅನಂತರ ಇಷ್ಟು ಅಂತ ಮಾಡಿದ್ದೀರಿ. ಆದರೆ ಹೈ ಟೆನ್ಷನ್ ಬಳಕೆದಾರರಿಗೆ 1 ಲಕ್ಷ ಯೂನಿಟ್ಸ್ ಮೊದಲನೇ ಸ್ಲ್ಯಾಬ್, 2 ಲಕ್ಷ ಯೂನಿಟ್ಸ್ 2 ನೇ ಸ್ಲ್ಯಾಬ್, 2 ರಿಂದ 4 ಲಕ್ಷ ಯೂನಿಟ್ಸ್ 3ನೇ ಸ್ಲ್ಯಾಬ್ ಅಂತ ಮಾಡಿದ್ದೀರಿ, ಈ ಪಾಲಿಸಿಯನ್ನು ಅಡಾಪ್ಟ್ ಮಾಡಿಕೊಂಡಿರುವುದರಿಂದ ನಿಮ್ಮಲ್ಲಿ ಜಸ್ಟಿಫಿಕೇಷನ್ ಇದೆಯೇ? ಈ ನೀತಿಯನ್ನು ಬದಲಾವಣೆ ಮಾಡಿದರೆ ಕೆ.ಇ.ಬಿ.ಗೆ. ನಷ್ಟವಾಗುವುದಕ್ಕೆ ಸಾಧ್ಯವೇ ಇಲ್ಲ. ಇಷ್ಟೊಂದು ಸಬ್ಸಿಡಿಯನ್ನು ನೀವು ಹೈಟೆನ್ಷನ್ ಬಳಕೆದಾರರಿಗೆ ಕೊಡುತ್ತಿದ್ದೀರಲ್ಲಾ. I call it subsidy to H.T. users. What you are giving to I.P. sets i.e., for farmers, it is not subsidy. What justification you have in this kind of slab i.e, 1 lakh, 2 lakh and 3 lakh units?

ಇದನ್ನು ದಯವಿಟ್ಟು ತಾವು ಆಲೋಚನೆ ಮಾಡಿ.

ಶ್ರೀ ಹೆಚ್. ಏಕಾಂತಯ್ಯ: ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಗಳ ಗಮನವನ್ನು ಒಂದು ವಿಚಾರದಲ್ಲಿ ಸೆಳೆಯಬಯಸುತ್ತೇನೆ. ವಿಶ್ವಬ್ಯಾಂಕ್ನ ಷರತ್ತುಗಳನ್ನು ಪಾಲಿಸುವಲ್ಲಿ ಉಂಟಾದ ಹಿನ್ನೆಲೆ ಮತ್ತು ನೀರಾವರಿ ಪಂಪ್ಸೆಟ್ಟುಗಳಿಗೆ ಉಚಿತವಾಗಿ ವಿದ್ಯುತ್ತನ್ನು ಸರಬರಾಜು ಮಾಡುತ್ತಿರುವುದು ವಿಶ್ವಬ್ಯಾಂಕ್ನಿಂದ ಸಾಲದ ನೆರವು ತೆಗೆದುಕೊಳ್ಳುವುದಕ್ಕೆ ಕಾರಣವೆಂದು ಹೇಳುತ್ತಿದ್ದಾರೆ. ನಾನು ಸರ್ಕಾರದ ನೀತಿಯನ್ನು ಕೇಳುತ್ತಿದ್ದೇನೆ. ಈ ರೀತಿ ಅವರು ಅಡ್ಡಿ ಮಾಡಿರುವುದರಿಂದ ತಾವು ಪುಕ್ಕಟೆ ವಿದ್ಯುತ್ತನ್ನು ಸರಬರಾಜು ಮಾಡುತ್ತಿರುವುದನ್ನು ನಿಲ್ಲಿಸುವ ಆಲೋಚನೆ ಸರ್ಕಾರಕ್ಕಿದೆಯೇ?

ಎರಡನೆಯದಾಗಿ ರೈತರು ಶೇಕಡ 33ರಷ್ಟು ವಿದ್ಯುತ್ತನ್ನು ಉಪಯೋಗಿಸುತ್ತಿದ್ದಾರೆಂದು ತಾವು ಹೇಳುತ್ತಿದ್ದೀರಿ. ಇದಕ್ಕೆ ಯಾವುದಾದರೂ ಅಳತೆ ಇದೆಯೆ? ನಿಮ್ಮ ಮಾನದಂಡ ಯಾವುದು? ಅವರಿಗೆ ಮೀಟರ್ ರೀಡಿಂಗ್ ಇಲ್ಲ; ನಾನು ತಮಗೆ ಹೇಳುತ್ತೇನೆ. ಎಲ್ಲೆಲ್ಲಿ ಕಳ್ಳತನ ಆಗುತ್ತಿದೆ, ಎಲ್ಲೆಲ್ಲಿ ಬೇರೆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ ಆ ನಷ್ಟವನ್ನೆಲ್ಲಾ ತಾವು ಈ ರೈತರ ಮೇಲೆ ತಂದು ಹಾಕಿ ಶೇಕಡ 33ರಷ್ಟು ಅವರು ಉಪಯೋಗಿಸುತ್ತಿರುವುದರಿಂದ ಈ ನಷ್ಟ ಆಗುತ್ತಿದೆ ಎಂದು ಹೇಳುತ್ತಿದ್ದೀರಲ್ಲಾ ಇದಕ್ಕೆ ಆಧಾರವಾದರೂ ಏನೆಂದು ಕೇಳಬಯಸುತ್ತೇನೆ.

11.45 ಎ.ಎಂ.

ಶ್ರೀ ಎಸ್.ಎಂ. ಕೃಷ್ಣ: ಒಂಭತ್ತು ಲಕ್ಷ ಪಂಪುಸೆಟ್ಟುಗಳಿಗೆ ನಾವು ಎನರ್ಜೈಸ್ ಮಾಡಿಸುವುದೇ ಇದಕ್ಕೆ ಆಧಾರ. 9 ಲಕ್ಷ ಪಂಪ್ಸೆಟ್ಟುಗಳಿಗೆ ವಿದ್ಯುತ್ ಒದಗಿಸಿರುವುದನ್ನು ಲೆಕ್ಕ ಹಾಕಿದರೆ ಎಷ್ಟು ಪರ್ಸೆಂಟ್ ಆಗಿದೆ ಎಂದು ಗೊತ್ತಾಗುತ್ತದೆ. ಇದಕ್ಕೆ ಬ್ರಹ್ಮನ ಬುದ್ಧಿವಂತಿಕೆ ಬೇಕಾಗಿಲ್ಲ.

ಶ್ರೀ ಹೆಚ್. ಏಕಾಂತಯ್ಯ: ಮೀಟರ್ ರೀಡಿಂಗ್ ಇಲ್ಲದೆ.

ಶ್ರೀ ಎಸ್.ಎಂ. ಕೃಷ್ಣ: ಮೀಟರ್ ರೀಡಿಂಗ್ ಏಕೆ ಸ್ವಾಮಿ? 5 ರಿಂದ 10 ಹೆಚ್ಪಿವರೆಗೆ, ಅದನ್ನು ಗ್ರೆಡೇಷನ್ ಮಾಡಿ ಪರ್ಸೆಂಟೇಜ್ ತೆಗೆಯಿರಿ. ಆಗ ಗೊತ್ತಾಗುತ್ತದೆ ಎಷ್ಟು ಪರ್ಸೆಂಟ್ ಎಂದು. ಮತ್ತೆ ಪ್ರೊ: ನಂಜುಂಡಸ್ವಾಮಿಯವರು ಮೂಲಭೂತ ಪ್ರಶ್ನೆ ಎತ್ತಿದ್ದಾರೆ. ಕೈಗಾರಿಕೆಗಳನ್ನು ಈ ರಾಜ್ಯದಲ್ಲಿ ತೆರೆಯಲು ಅವಕಾಶ ಮಾಡಬೇಕೆ ಎನ್ನತಕ್ಕದ್ದು. ಒಂದು ಕಾಲದಲ್ಲಿ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳು ಬರಬೇಕು, ಆದ್ದರಿಂದ ಆರ್ಥಿಕ ಚಟುವಟಿಕೆಗಳು ಈ ರಾಜ್ಯದಲ್ಲಿ ಜಾಸ್ತಿಯಾಗಬೇಕು ಅದರಿಂದ ಉದ್ಯೋಗಾವಕಾಶಗಳು [illegible] ಎಲಾ ಊರಿನ

ಕೈಗಾರಿಕೋದ್ಯಮಿಗಳು ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಬೆಳಗಾಂ, ಮಂಗಳೂರು, ರಾಯಚೂರಿನಲ್ಲಿ ವಿದ್ಯುತ್ ಕೈಗಾರಿಕೆಗಳನ್ನು ಪ್ರಾರಂಭಮಾಡಲು ಅವಕಾಶ ಕೊಡಲಾಯಿತು.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಅದಕ್ಕೋಸ್ಕರವಾಗಿ We should be honest in our language. You call it subsidy to industries.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ನನ್ನ ಎರಡನೆಯ ಪ್ರಶ್ನೆ ಕೇಳಬಹುದೇ?

ಅಧ್ಯಕ್ಷರು : ಇಲ್ಲ, ಇಲ್ಲ, ಮತ್ತೆ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಒಂದು ಉಪಪ್ರಶ್ನೆ. ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದೀರೆಂಬ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಅದರ ರೆಕಮಂಡೇಷನ್ಸ್ ಏನು? ಆ ಸಬ್ ಕಮಿಟಿ ಸಭೆ ಸೇರಿತ್ತೇ?

ಶ್ರೀ ಎಸ್.ಎಂ. ಕೃಷ್ಣ : ಕ್ಯಾಬಿನೇಟ್ ಸಬ್ ಕಮಿಟಿ ಆಗಿಂದಾಗ್ಯೆ ಸೇರುವುದಕ್ಕೆ ಸಾಧ್ಯ ಆಗದೇ ಈ ವಿಚಾರ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಇದೆ. ತಾವು ಹೇಳಿರತಕ್ಕ ಎಲ್ಲಾ ಸಲಹೆಗಳನ್ನು ಗಮನದಲ್ಲಿ ತೆಗೆದುಕೊಂಡು ಒಟ್ಟಾರೆ ಒಂದು ನಿರ್ಧಾರಕ್ಕೆ ನಾವು ಬರುತ್ತೇವೆ.

ಕೊರಟಗೆರೆ ತಾಲ್ಲೂಕು ಜಂಪೇನಹಳ್ಳಿ ಕೆರೆಯ ಕೆಲಸ

310 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊರಟಗೆರೆ ತಾಲ್ಲೂಕು ಜಂಪೇನಹಳ್ಳಿ ಕೆರೆಯ ಕೆಲಸ ಯಾವ ವರ್ಷದಲ್ಲಿ ಪ್ರಾರಂಭವಾಯಿತು ಮತ್ತು ಈ ತಹಲ್ವರೆವಿಗೂ ಎಷ್ಟು ಹಣ ಖರ್ಚಾಗಿದೆ?

ಆ) ಆ ಕೆಲಸವು ಕಳೆದ 18 ವರ್ಷಗಳಿಂದಲೂ ಅಪೂರ್ಣವಾಗಿ ನಿಲ್ಲಲು ಕಾರಣವೇನು?

ಇ) ಸರ್ಕಾರ ಈ ಕೆರೆಯ ಕೆಲಸ ತ್ವರಿತವಾಗಿ ಮುಂದುವರಿಸಿ, ಮಾರ್ಚ್ 1994ರೊಳಗಾಗಿ ಪೂರೈಸಲು ಕ್ರಮ ಕೈಗೊಳ್ಳುವರೇ?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಜಂಪೇನಹಳ್ಳಿ ಕೆರೆ ಕೆಲಸವನ್ನು 1977ರಲ್ಲಿ ಪ್ರಾರಂಭಿಸಲಾಗಿದೆ. ಇಲ್ಲಿಯವರೆಗೆ ಈ ಕಾಮಗಾರಿಗೆ 36.75 ಲಕ್ಷ ರೂ.ಗಳು ಖರ್ಚಾಗಿರುತ್ತದೆ.

ಆ) ಭೂಸ್ವಾಧೀನತೆಯ ತೊಂದರೆ, ಏರಿಯ ತಳಪಾಯದಲ್ಲಿ ಮರಳಿನ ಪದರಗಳು ತುಂಬಾ ಆಳದವರೆಗೂ ದೊರೆತ ಕಾರಣ ಮತ್ತು ಏರಿ ನಿರ್ಮಾಣಕ್ಕೆ ಬೇಕಾಗುವ ಮಣ್ಣನ್ನು ತೆಗೆದುಕೊಳ್ಳಲು ಭೂಮಾಲೀಕರು ಅಡ್ಡಿ ಮಾಡಿದ್ದರಿಂದ ಕೆರೆ ಕೆಲಸವು ಅಪೂರ್ಣವಾಗಿ ನಿಲ್ಲಲು ಕಾರಣವಾಗಿದೆ.

ಇ) ಈ ಕೆರೆಯ ಕೆಲಸವನ್ನು ತ್ವರಿತವಾಗಿ ಮುಂದುವರೆಸಲು ಕ್ರಮ ಕೈಗೊಳ್ಳಲಾಗಿದೆ. ಆದರೆ ಮಾರ್ಚ್ 94ರೊಳಗೆ ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲ.

ಶ್ರೀ ಸಿ. ವೀರಭದ್ರಯ್ಯ : ಮಾನ್ಯ ಅಧ್ಯಕ್ಷರೇ, 1977ರಲ್ಲಿ ಪ್ರಾರಂಭವಾದ ಈ ಕೆರೆ ಕೆಲಸ ಇತ್ತೀಚಿನವರೆಗೆ 2 ಭಾಗ ಆಗಿದೆ. ಕಳೆದ 18 ವರ್ಷದಲ್ಲಿ ಹಳ್ಳದಪಕ್ಕ ಕೆಲಸ ಮುಗಿದಿಲ್ಲ. ಪ್ರತಿ ವರ್ಷ ಜನವರಿ ಹಾಗೂ ಡಿಸೆಂಬರ್‌ನಲ್ಲಿ ಕೆಲಸ ತೆಗೆದುಕೊಳ್ಳಿ ಎಂದರೆ ಸಣ್ಣ ನೀರಾವರಿ ಇಲಾಖೆಯವರು ಮಾರ್ಚಿ ತಿಂಗಳಲ್ಲಿ ಕೆಲಸಕ್ಕೆ ಕೈ ಹಾಕಿ ಏಪ್ರಿಲ್‌ನಲ್ಲಿ ಕೈ ಬಿಡುತ್ತಾರೆ. 2 ಅಥವಾ 3 ಲಕ್ಷ ರೂಪಾಯಿ ಖರ್ಚು ಮಾಡಿ 5-6 ಲಕ್ಷ ರೂಪಾಯಿಗೆ ಬಿಲ್ ಕೊಡುತ್ತಾರೆ. ಇವತ್ತು ಅಲ್ಲಿನ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ನಿದ್ರೆ ಮಾಡುತ್ತಿದ್ದಾರೆಂದರೆ ತಪ್ಪಾಗಲಾರದು. ಮಂತ್ರಿಗಳನು

ಆಗಿ ಅನೇಕ ಸಲ ಇದರ ಬಗ್ಗೆ ಹೇಳಿದ್ದೇನೆ. 18 ವರ್ಷಗಳ ಹಳೆಯ ಈ ಕೆರೆಯ ಬಗ್ಗೆ ಕಳೆದ 3 ವರ್ಷದಿಂದ ಪ್ರಶ್ನೆ ಕೇಳುತ್ತಿದ್ದೇನೆ. 7 ಅಥವಾ 8 ಲಕ್ಷ ರೂಪಾಯಿ ಅಂದಾಜಿನ ಈ ಕೆರೆ ಇವತ್ತು 34 ಲಕ್ಷ ರೂಪಾಯಿಗೆ ಬಂದು ನಿಂತಿದೆ. ಇವತ್ತು ಕೊರಟಗೆರೆ ತಾಲ್ಲೂಕಿನ ಜನರಿಗೆ ನೀರಿಗೆ ಬಹಳ ತೊಂದರೆ ಇದ್ದು ಈ ಕಾರ್ಯ ಆದಷ್ಟು ಮುಗಿಸಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಡಾ|| ಆರ್.ಬಿ. ಚೌಧರಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವುದು ನಿಜ. ಕಳೆದ 16 ವರ್ಷಗಳ ಹಿಂದೆ ಕೆಲಸ ಪ್ರಾರಂಭ ಆಗಿದೆ. ಆದರೆ ಇದುವರೆಗೂ ಕೂಡ ಪೂರ್ತಿ ಆಗಿಲ್ಲ. ಆದರೆ ಈ ಕೆರೆಯನ್ನು ನಮ್ಮ ಇಲಾಖೆಗೆ 1992ರಲ್ಲಿ ವಹಿಸಲಾಗಿದೆ. 1993-94ರಲ್ಲಿ ನಾನು ಇದಕ್ಕೆ 2 ಲಕ್ಷ ರೂಪಾಯಿ ಅನುದಾನ ಕೊಟ್ಟಿದ್ದೇನೆ. ಈಗ 1994-95ರಲ್ಲಿ ಆದ್ಯತೆ ಮೇರೆಗೆ ಅನುದಾನ ಒದಗಿಸಿ ಆದಷ್ಟು ಜಾಗ್ರತೆ ಪೂರ್ತಿ ಮಾಡಿಕೊಡುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಸಿ. ವೀರಭದ್ರಯ್ಯ : ಕೆರೆ 2 ಕಡೆ ಆಗಿದೆ. ಹಳ್ಳದ ಭಾಗ ಮಾತ್ರ ಆಗಿದೆ. ಅಧಿಕಾರಿಗಳು ಮನಸ್ಸು ಮಾಡಿದರೆ 2 ತಿಂಗಳಲ್ಲಿ ಮುಗಿಸಬಹುದು. ಈ ಬಗ್ಗೆ ಕಳೆದ ಅಧಿವೇಶನದಲ್ಲಿ ಒತ್ತಾಯ ಮಾಡಿದೆ. ಆಗ ಇದೇ ಉತ್ತರ ಬಂತು. ಆ ಜನರಿಗೆ ನೀರಿನ ಅವಶ್ಯಕತೆ ಇದೆ. ಆದ್ದರಿಂದ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ|| ಆರ್.ಬಿ ಚೌಧರಿ : ನಾನು ಇರಕಸಂದ್ರಕ್ಕೆ ಬಂದಿದ್ದಾಗ ತಾವು ಈ ಸಮಸ್ಯೆ ನನಗೆ ತಿಳಿಸಿದ್ದಿರಿ. ಆಗ ಈ ಕೆರೆ ನಮ್ಮ ಇಲಾಖೆಗೆ ವರ್ಗಾಯಿಸಲ್ಪಟ್ಟಿತ್ತು. ಆಗಲೇ ನಮ್ಮ ಅಧಿಕಾರಿಗಳಿಗೆ ಈ ಬಗ್ಗೆ ನೋಡಿಕೊಂಡು ಬರಲು ಆಜ್ಞೆ ಮಾಡಿದೆ. ಈಗಾಗಲೇ ಅವರು ನೋಡಿಕೊಂಡು ಬಂದು ಒಂದು ನಕ್ಷೆ ತಯಾರು ಮಾಡಿದ್ದಾರೆ. ಯಾವ ರೀತಿ ಬೇಗ ಮಾಡಬಹುದೆಂದು. ಈ ದಿಸೆಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಗುಲ್ಬರ್ಗಾ ನಗರದಲ್ಲಿರುವ ನೀರಾವರಿ ಉಪವಿಭಾಗ ಕಾರ್ಯಾಲಯಗಳಲ್ಲಿ ಒಂದನ್ನು ಸೇಡಂ ಕೇಂದ್ರಕ್ಕೆ ಸ್ಥಳಾಂತರ

*205 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ನಗರದಲ್ಲಿರುವ ಮೂರು ಸಣ್ಣ ನೀರಾವರಿ ಉಪವಿಭಾಗ ಕಾರ್ಯಾಲಯಗಳಲ್ಲಿ ಒಂದನ್ನು ಸೇಡಂ ಕೇಂದ್ರ ಸ್ಥಾನಕ್ಕೆ ಶೀಘ್ರವಾಗಿ ಸ್ಥಳಾಂತರಿಸಲು ಕ್ರಮ ತೆಗೆದು ಕೊಳ್ಳಲಾಗುವುದೆಂದು ಉತ್ತರ ನೀಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಗುಲ್ಬರ್ಗಾ ಜಿಲ್ಲೆಯ ಗುಲ್ಬರ್ಗಾ ನಗರದಲ್ಲಿ ಸಣ್ಣ ನೀರಾವರಿ ಉಪವಿಭಾಗದ ಕಾರ್ಯಾಲಯ ಮೂರರಲ್ಲಿ ಒಂದನ್ನು ಸ್ಥಳಾಂತರಿಸಲು ಪರ್ಯಾಯ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿದೆಯೇ ?

ಇ) ಸೇಡಂ ನಗರ ಉಪವಿಭಾಗ, ಸೇಡಂಗೆ ಗುಲ್ಬರ್ಗಾ ನಗರದಲ್ಲಿರುವ ಮೂರು ಸಣ್ಣ ನೀರಾವರಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ (ಉಪವಿಭಾಗ) ಕಾರ್ಯಾಲಯಗಳಲ್ಲಿ ಒಂದು ಉಪವಿಭಾಗವನ್ನು ಸ್ಥಳಾಂತರಿಸಿ ಈ ಭಾಗದ ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳನ್ನು ನಿರ್ವಹಿಸಲು ಅನುಕೂಲ ಮಾಡಿ ರೈತರಿಗೆ ನೀರಾವರಿ ಅನುಕೂಲ ಯಾವಾಗ ಮಾಡಿಕೊಡಲಾಗುವುದು ?

ಅ) ಇಲ್ಲ - ಈ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಾಗಿ ಮಾತ್ರ ಉತ್ತರ ನೀಡಿದೆ.

ಆ) ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ) ಈ ಬಗ್ಗೆ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ನಗರದ ಮೂರು ಉಪವಿಭಾಗ ಕಾರ್ಯಾಲಯಗಳಲ್ಲಿ ಒಂದನ್ನು ಸೇಡಂ ಕೇಂದ್ರ ಸ್ಥಾನಕ್ಕೆ ಶೀಘ್ರ ಸ್ಥಳಾಂತರಿಸಬೇಕೆಂದು ಕೇಳಿದ ಪ್ರಶ್ನೆಗೆ, ಈ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಾಗಿ ಮಾತ್ರ ಉತ್ತರ ನೀಡಲಾಗಿದೆ ಎಂದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು, ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಉತ್ತರ ನೀಡಿದ್ದೀರಿ. ಸೇಡಂ ಕಂದಾಯ ಉಪವಿಭಾಗವಾಗಿ ಮೊದಲು ಸಣ್ಣ ನೀರಾವರಿ ಉಪವಿಭಾಗ ಎಂದು ಇದ್ದು 6-7 ವರ್ಷಗಳ ಮೊದಲು ಇದನ್ನು ಸ್ಥಳಾಂತರಿಸಲಾಯಿತು. ಈ ಭಾಗದಲ್ಲಿ ಹೆಚ್ಚು ಹೆಚ್ಚು ಕೆಲಸ ಇರುವ ಕಾರಣ ಈಗಾಗಲೇ ಕಾರ್ಯನಿರ್ವಾಹಕ ಅಭಿಯಂತರರು, ಗುಲ್ಬರ್ಗ - ಇವರು ಪತ್ರ ಬರೆದು ಮೂರು ಸಣ್ಣನೀರಾವರಿ ಉಪವಿಭಾಗಗಳು ಗುಲ್ಬರ್ಗಾದಲ್ಲಿ ಇದ್ದು ಅದರಲ್ಲಿ ಒಂದನ್ನು ಸೇಡಂಗೆ ಸ್ಥಳಾಂತರಿಸಲು 18.3.93ರಂದೇ ಶಿಫಾರಸ್ಸು ಮಾಡಿರುವುದು ನಿಜವೇ? ಒಂದು ವೇಳೆ ಶಿಫಾರಸ್ಸು ಮಾಡಿದ್ದರೆ ಇಲ್ಲಿಯವರೆಗೆ ವಿಳಂಬ ಮಾಡಿದ್ದು ಏಕೆ?

ಡಾ|| ಆರ್.ಬಿ. ಚೌಧರಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸೇಡಂ ಸಬ್ ಡಿವಿಜನ್ ಬೇಕಾಗಿದೆ ಎಂದಿದ್ದಾರೆ. ಆ ಸಬ್ಡಿವಿಜನ್ನಲ್ಲಿ ಏನಾದರೂ ವರ್ಕ್ ಲೋಡ್ ಹೆಚ್ಚು ಇದ್ದರೆ ನಾನು ಕೊಟ್ಟೇ ಕೊಡುತ್ತೇನೆ ಎಂದು ಭರವಸೆ ಕೊಡುತ್ತೇನೆ. ಹೆಚ್ಚಿನ ಕೆಲಸ ಸೇಡಂ ಸಬ್ಡಿವಿಜನ್ನಲ್ಲಿ ಇದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಒಂದು ವೇಳೆ ನಿಜವಾದರೆ ಪರಿಶೀಲನೆ ಮಾಡಿ ತ್ವರಿತವಾಗಿ ಸಬ್ಡಿವಿಜನ್ ಕೊಡುತ್ತೇನೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಹೆಚ್ಚುಹೆಚ್ಚು ಕೆಲಸ ಈಗಾಗಲೇ ಇದೆ ಎಂದು ಕಾರ್ಯನಿರ್ವಾಹಕ ಅಭಿಯಂತರರು ತನಿಕಾ ವರದಿಯನ್ನು ಕಳುಹಿಸಿದ್ದಾರೆ. ಆ ಭಾಗದ ಜನರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಮಾರ್ಚ್ ತಿಂಗಳ ಒಳಗೆ ಸ್ಥಳಾಂತರಿಸಿ ಅವರಿಗೆ ಅನುಕೂಲ ಮಾಡಿಕೊಡುತ್ತೀರಾ ಎಂದು ಕೇಳುತ್ತೇನೆ.

ಡಾ|| ಆರ್.ಬಿ. ಚೌಧರಿ: ಕೊಡುತ್ತೇವೆಂದು ಹೇಳಿದ್ದರೂ ಸುತ್ತಿ ಬಳಸಿ ಅವರು ಮತ್ತೆ ಅದನ್ನೇ ಕೇಳುತ್ತಿದ್ದಾರೆ.

1993-94ರಲ್ಲಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಕಾಮಗಾರಿ ಕೆಲಸಕ್ಕೆ ಹಣ ಬಿಡುಗಡೆ

152 - ಶ್ರೀ ಜಿ.ಪುಟ್ಟಸ್ವಾಮಿಗೌಡ (ಹೊಳೆನರಸೀಪುರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರಲ್ಲಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖಾವತಿಯಿಂದ ಕೈಗೊಂಡಿರುವ ಕಾಮಗಾರಿಗಳು ಯಾವುವು?

ಆ) ಅವುಗಳಿಗೆ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಹೊಳೆನರಸೀಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

ಕಾಮಗಾರಿ	ಯೋಜನೆ		ಯೋಜನೇತರ		ಒಟ್ಟು	
	ಸಂಖ್ಯೆ	ಮೊತ್ತ (ಲಕ್ಷ ರೂ.)	ಸಂಖ್ಯೆ	ಮೊತ್ತ (ಲಕ್ಷ ರೂ)	ಸಂಖ್ಯೆ	ಮೊತ್ತ (ಲಕ್ಷ ರೂ)
ರಸ್ತೆಗಳು	10	32.00	71	45.23	81	77.23
ಸೇತುವೆಗಳು	2	10.50	13	1.80	15	12.30
ಅಡ್ಡಮೋರಿಗಳು						
ಕಟ್ಟಡಗಳು	5	111.62	11	1.97	16	113.59
ಒಟ್ಟು	17	154.12	95	49.00	122	203.12

ಆ) ಈ ಕಾಮಗಾರಿಗಳಿಗೆ ಅನುದಾನ ಹಾಗೂ ಇಲ್ಲಿಯವರೆಗೆ ಆಗಿರುವ ವೆಚ್ಚ ಕೆಳಕಂಡಂತಿದೆ.

ಕಾಮಗಾರಿ	ಅನುದಾನ	ವೆಚ್ಚ
	(ಲಕ್ಷ	ರೂ.ಗಳಲ್ಲಿ)
ರಸ್ತೆಗಳು	46.20	20.66
ಸೇತುವೆಗಳು	3.13	4.66
ಕಟ್ಟಡಗಳು	16.63	13.98
	65.96	39.30

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರುವ ಅಂಕಿಅಂಶದ ಪ್ರಕಾರ ಹೊಳೇನರಸೀಪುರ ತಾಲ್ಲೂಕಿನಲ್ಲಿ 203 ಲಕ್ಷ ರೂಪಾಯಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಆದರೆ ಕೊಟ್ಟಿರತಕ್ಕ ಅನುದಾನ 65 ಲಕ್ಷ ರೂಪಾಯಿಗಳು. ಮತ್ತು ಇದುವರೆಗೆ ವೆಚ್ಚ ಮಾಡಿರತಕ್ಕ ಹಣ 39ಲಕ್ಷ ರೂಪಾಯಿಗಳು. ಬಹುಶಃ ಮಾನ್ಯ ಮಂತ್ರಿಗಳು ಅತ್ಯಂತ ಹಿರಿಯ ಮಂತ್ರಿಗಳು ಇದ್ದಾರೆ. ಈ ಅಂಕಿಅಂಶ ಅವರಿಗೆ ಸಮಾಧಾನ ತಂದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇದುವರೆಗೆ 39 ಲಕ್ಷ ಖರ್ಚು ಮಾಡಿದ್ದನ್ನು ಸರಾಸರಿ ಲೆಕ್ಕ ಹಾಕಿದರೆ ತಿಂಗಳಿಗೆ 4 ಲಕ್ಷ ಬರುತ್ತದೆ. ಆದರೆ ಅದರಲ್ಲಿ ಸಿಬ್ಬಂದಿ ವೆಚ್ಚ 1 ಲಕ್ಷ ಆಗುತ್ತದೆ. 1 ಲಕ್ಷ ಖರ್ಚು ಮಾಡಿದರೆ 4 ಲಕ್ಷ ಕಾಮಗಾರಿ ಕೆಲಸ ನಡೆದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಕೊಡತಕ್ಕಹಣ ಮೂರನೇ ಒಂದು ಭಾಗ ಇದ್ದು ಅದರಲ್ಲಿ ಖರ್ಚು ಮಾಡಿರತಕ್ಕದ್ದು ಅರ್ಧ ಭಾಗ. ಈ ರೀತಿ ಕೆಲಸದ ವೇಗ ಏನೂ ಆಗಿಲ್ಲ ಎಂದು ಅವರ ಗಮನಕ್ಕೆ ತರುತ್ತಾ, ಕನಿಷ್ಠಪಕ್ಷ ಅನುದಾನ ಕೊಟ್ಟಿರುವುದನ್ನಾದರೂ ಖರ್ಚು ಮಾಡುವುದಕ್ಕೆ ಮಂತ್ರಿಗಳು ಈ ಸಲ ಕ್ರಮ ತೆಗೆದುಕೊಳ್ಳುತ್ತಾರಾ?

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಗೊತ್ತಿದೆ. ಮೂರನೇ ಒಂದು ಭಾಗ ಅಷ್ಟೇ ನಾವು ಇಟ್ಟಿರುತ್ತೇವೆ ಎಂದು. ಹೀಗಾಗಿ 65 ಲಕ್ಷ ರೂಪಾಯಿ ಅನುದಾನ ಇದೆ. ಮತ್ತೆ 39 ಲಕ್ಷ ರೂಪಾಯಿಗಳ ಎಲ್‌ಓಸಿ ಬಿಡುಗಡೆ ಆಗಿದೆ. ಕೊಡತಕ್ಕದ್ದು 11ಲಕ್ಷ ನಾವು ಕೊಡಬೇಕಾಗಿದೆ. 50 ಲಕ್ಷ ರೂಪಾಯಿಗೂ ಹೆಚ್ಚು ಕೆಲಸ ಆಗಿದೆ. ಆದ್ದರಿಂದ ಬಾಕಿ ಇರತಕ್ಕದ್ದು ಸ್ವಲ್ಪ ಹಣ.

ಮೂಡಿಗೆರೆ ತಾಲ್ಲೂಕಿನ ರಸ್ತೆ ಕಾಮಗಾರಿಗಾಗಿ ಮಂಜೂರು ಮಾಡಿರುವ ಹಣ

230 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕಿನ ಕಳಸ ಹೊರನಾಡು ಸೇತುವೆ : ರಸ್ತೆ ಕೆಲಸಕ್ಕೆ ಮಂಜೂರಾದ ಹಣವೆಷ್ಟು?

ಆ) ಈ ಕಾಮಗಾರಿಗೆ ಇದುವರೆವಿಗೂ ಬಿಡುಗಡೆಯಾದ ಹಣವೆಷ್ಟು ಮತ್ತು ಈ ಕೆಲಸವನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಮೂಡಿಗೆರೆ ತಾಲ್ಲೂಕಿನ ಕಳಸ-ಹೊರನಾಡು ರಸ್ತೆಯಲ್ಲಿ ಭದ್ರಾ ನದಿಗೆ ಅಡ್ಡಲಾಗಿ ನಿರ್ಮಿಸುವ ಸೇತುವೆ ಕೆಲಸಕ್ಕಾಗಿ ರೂ. 29.88 ಲಕ್ಷಗಳು ಮತ್ತು ರಸ್ತೆ ಅಭಿವೃದ್ಧಿ ಕೆಲಸಕ್ಕಾಗಿ ರೂ. 12.00 ಲಕ್ಷಗಳು ಮಂಜೂರಾಗಿರುತ್ತದೆ.

ಆ) ಇದುವರೆವಿಗೂ ರೂ. 45.00 ಲಕ್ಷ ವೆಚ್ಚವಾಗಿದೆ. ಈ ಕೆಲಸವನ್ನು ಜೂನ್ 94ರ ಸುಮಾರಿಗೆ ಪೂರ್ಣಗೊಳಿಸುವ ನಿರೀಕ್ಷೆ ಇದೆ.

ಶ್ರೀಮತಿ ಮೋಟಮ್ಮ: ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಮಾನ್ಯ ಮಂತ್ರಿಗಳು ಈ ಸೇತುವೆ ಮತ್ತು ರಸ್ತೆಗೆ ಮಂಜೂರಾದ ಹಣ 41 ಲಕ್ಷ, ಈಗಾಗಲೇ ಬಿಡುಗಡೆಯಾಗಿರುವುದು 45ಲಕ್ಷ ಎಂದು ಹೇಳಿದ್ದಾರೆ. ಆದರೆ ಇದು ಪೂರ್ಣಗೊಳಿಸಬೇಕಾದರೆ ಇನ್ನು ಎಷ್ಟು ಹಾಕಬೇಕಾಗುತ್ತದೆ? ಮತ್ತೆ 'ಯಾವಾಗ ಪೂರ್ಣಗೊಳಿಸುತ್ತೀರಿ ಎನ್ನುವುದು ನನ್ನ ಮುಖ್ಯ ಪ್ರಶ್ನೆ.

ಶ್ರೀ ಕೆ.ಎಚ್. ರಂಗನಾಥ್ : ಈ ಕೆಲಸವನ್ನು 94ರ ಜೂನ್‌ನಲ್ಲಿ ಮುಗಿಸುತ್ತೇವೆ. ಎನ್ನುವುದನ್ನು ನಾನು ಉತ್ತರದಲ್ಲಿ ಹೇಳಿದ್ದೇನೆ.

ಶ್ರೀಮತಿ ಮೋಟಮ್ಮ: ಸನ್ಮಾನ್ಯ ಅಧ್ಯಕ್ಷರೇ, ಅದರ ಜೊತೆಗೆ ಇದನ್ನು ಪೂರ್ಣಗೊಳಿಸಬೇಕಾದರೆ ಎಷ್ಟು ಹಣ ಬೇಕಾಗುತ್ತದೆ ಎನ್ನುವುದು ಮುಖ್ಯವಾದದ್ದು.

ಅಧ್ಯಕ್ಷರು : ಪೂರ್ಣಮಾಡಿ ಕೊಡುತ್ತೇನೆ ಎಂದು ಅವರು ಹೇಳಿದ್ದಾರಲ್ಲಾ?

ಶ್ರೀಮತಿ ಮೋಟಮ್ಮ: ಈಗಾಗಲೇ ಅದು ಪೂರ್ಣಗೊಳ್ಳಬೇಕಾಗಿತ್ತು. ಏಕೆಂದರೆ, ಜವಾಬ್ದಾರಿ ನನ್ನೊಬ್ಬಳ ಮೇಲೆ ಅಲ್ಲ, ಅವರ ಮೇಲೂ ಇದೆ. ಅವರು ನನಗಿಂತಲೂ ಮೊದಲೇ ಈ ಕೆಲಸ ಮಾಡಲಿಕ್ಕೆ ಪ್ರಯತ್ನಪಟ್ಟವರು. ಆದರೆ ಅವರ ಕಾಲದಲ್ಲಿ ಆಗಲಿಲ್ಲ, ಈಗ ಆ ಕೆಲಸಕ್ಕೆ ಕೈ ಹಾಕಿದ್ದಾರೆ. ನೂರಾರು ಯಾತ್ರಿಕರು ಆ ಅನ್ನಪೂರ್ಣೇಶ್ವರಿ ದೇವಸ್ಥಾನಕ್ಕೆ ಹೋಗಿಬರುವುದು ಅವರಿಗೆ ಗೊತ್ತಿರುವ ವಿಷಯ. ಸಾಕಷ್ಟು ಹಣ ಕೊಟ್ಟಿದ್ದರೆ ಈ ವರ್ಷವೇ ಮುಗಿಸಬಹುದಾಗಿತ್ತು. ಈಗ ಅರ್ಧಂಬರ್ಧ ಸೇತುವೆ ಕಟ್ಟಿದರೆ ಮತ್ತೆ ಮಳೆಗಾಲದಲ್ಲಿ ಅದು ಕೊಚ್ಚಿಕೊಂಡು ಹೋಗುವ ಸಾಧ್ಯತೆ ಇದೆ. ಆದಕಾರಣ, ದಯಮಾಡಿ ಇನ್ನು ಎಷ್ಟು ಹಣ ಬೇಕಾಗುತ್ತದೆ, ಅದನ್ನು ಆದಷ್ಟು ಬೇಗ ಒದಗಿಸಿದರೆ ಅದು ಪೂರ್ಣವಾಗುವುದಕ್ಕೆ ಸಾಧ್ಯ ಎಂದು ಅಂದುಕೊಂಡಿದ್ದೇನೆ.

ಶ್ರೀ ಕೆ.ಎಚ್. ರಂಗನಾಥ್ : ಹಣ ಎಷ್ಟೇ ಆಗಲಿ, ಸೇತುವೆ ಜೂನ್ನಲ್ಲಿ ಮುಕ್ತಾಯವಾಗುತ್ತದೆ.

ತುಂಗಭದ್ರಾ ಮೇಲ್ದಂಡೆ ಯೋಜನೆಗೆ ಅನುಮೋದನೆ

277 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯನ್ನು ಕೇಂದ್ರ ಸರ್ಕಾರದ ಮಂಜೂರಾತಿಗೆ ಕಳುಹಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ಕಳುಹಿಸಿದ ದಿನಾಂಕ ಮತ್ತು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಮಾಹಿತಿ ಹಾಗೂ ವಿವರಣೆಗಾಗಿ ವಾಪಸ್ ಕಳುಹಿಸಿರುವ ದಿನಾಂಕ ಹಾಗೂ ಈ ಬಗ್ಗೆ ರಾಜ್ಯ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಇ) ಈ ಯೋಜನೆಯನ್ನು ಕಾರ್ಯಗತ ಗೊಳಿಸಲು ಅವಶ್ಯವಿರುವ ಸಿಬ್ಬಂದಿ ಬಗ್ಗೆ ವಿವರಗಳನ್ನೊದಗಿಸುವುದು ಮತ್ತು ಈವರೆಗೆ ನೇಮಿಸಿರುವ ಸಿಬ್ಬಂದಿ ಎಷ್ಟು ಹಾಗೂ ಇನ್ನೂ ಖಾಲಿಯಿರುವ ಹುದ್ದೆಗಳೆಷ್ಟು, ಸರ್ಕಾರ ಆ ಬಗ್ಗೆ ತೆಗೆದುಕೊಂಡ ಹಾಗೂ ತೆಗೆದುಕೊಳ್ಳುವ ಕ್ರಮಗಳೇನು ?

ಈ) ಆಯವ್ಯಯದಲ್ಲಿ ಈ ಯೋಜನೆಗೆ ಒದಗಿಸಿದ ಹಣವೆಷ್ಟು ಹಾಗೂ ಸಿಬ್ಬಂದಿ ಮತ್ತು ಕಾಮಗಾರಿಗಾಗಿ ಮಾಡಿದ ಖರ್ಚು ಎಷ್ಟು ?

ಉ) ಈ ಯೋಜನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ಪಡೆಯುವ ಬಗ್ಗೆ ಹಾಗೂ ಯೋಜನೆಯನ್ನು ನಿಗದಿತ ವೇಳೆಯಲ್ಲಿ ಕಾರ್ಯಗತ ಮಾಡುವ ಬಗ್ಗೆ ಸರ್ಕಾರದ ನೀತಿ ಮತ್ತು ಗುರಿ ಏನು ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಯವರು) :

ಅ) ಹೌದು.

ಆ) ಮೂಲತಃ ಈ ಯೋಜನೆಯ 271.41 ಕೋಟಿ ರೂ.ಗಳ ಅಂದಾಜನ್ನು ಒಪ್ಪಿಗೆಗಾಗಿ ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿತ್ತು. ಆಗಸ್ಟ್ 91ರಲ್ಲಿ ಕೇಂದ್ರಜಲ ಆಯೋಗವು ತಿಳಿಸಿದ್ದ ಹಲವು ವಿಚಾರಗಳ ಹಿನ್ನೆಲೆಯಲ್ಲಿ ಯೋಜನೆಯೇ 379.87 ಕೋಟಿ ರೂ.ಗಳ ಪರಿಷ್ಕೃತ ಅಂದಾಜನ್ನು ಫೆಬ್ರವರಿ 1992ರಲ್ಲಿ ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿದೆ. ಸದರಿ ಆಯೋಗವು ಆಗಸ್ಟ್ 91ರಿಂದ ಡಿಸೆಂಬರ್ 92 ರವರೆಗೆ ಹಲವಾರು ವಿಚಾರಗಳ ಬಗ್ಗೆ ಸಮಜಾಯಿಷಿ ಮಾಹಿತಿ ಕೋರಿತ್ತು. ನೀರಿನ ಲಭ್ಯತೆ, ಅಚ್ಚುಕಟ್ಟು ಅಭಿವೃದ್ಧಿ ತಳಪಾಯದ ಭದ್ರತೆ, ಯಾಂತ್ರಿಕ ಉಪಕರಣ ಮುಂತಾದ ವಿಷಯಗಳ ಬಗ್ಗೆ ಕೇಳಲಾದ ವಿವರಗಳಿಗೆ ಉತ್ತರವನ್ನು ನವೆಂಬರ್ 93ರಲ್ಲಿ ಕಳುಹಿಸಲಾಗಿದೆ. ಕೃಷಿ ಇಲಾಖೆಗೆ ಸಂಬಂಧಪಟ್ಟ ವಿವರಗಳನ್ನು ಸದ್ಯದಲ್ಲೇ ಒದಗಿಸಲಾಗುವುದು.

ಸದರಿ ಯೋಜನೆಗಾಗಿ ಅವಶ್ಯಕವಾಗಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ಬಗ್ಗೆ ವಿವರಗಳನ್ನು ಲಗತ್ತಿಸಲಾಗಿರುವವ ಅನುಬಂಧ - ದಲ್ಲಿ ನೀಡಲಾಗಿದೆ.

ಈ) ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ಈ ಯೋಜನೆಗೆ 5.00 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದ್ದು ಡಿಸೆಂಬರ್ 1993ರ ಅಂತ್ಯದವರೆಗೆ, ಸಿಬ್ಬಂದಿ ವರ್ಗದ ಮೇಲೆ 36.38 ಲಕ್ಷ ರೂ.ಗಳೂ ಸೇರಿದಂತೆ 93.55 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಉ) ಸದರಿ ಯೋಜನೆಗೆ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯುವ ಸಲುವಾಗಿ ಸಂಬಂಧಪಟ್ಟ ಇಲಾಖೆಗಳಲ್ಲಿ ಕೈಗೊಳ್ಳಬೇಕಾಗಿರುವ ಕಾರ್ಯಕ್ರಮದ ಬಗ್ಗೆ ದಿ : 27-12-93 ರಂದು ಮುಖ್ಯ ಕಾರ್ಯದರ್ಶಿಯವರ ಕೊಠಡಿಯಲ್ಲಿ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳೊಡನೆ ನಡೆಸಿದ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಮುಂದಿನ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಅನುಬಂಧ-2

ವಿಧಾನ ಸಭಾ ಸದಸ್ಯರಾದ ಶ್ರೀ ಬಿ.ಹೆಚ್. ಬನ್ನಿಕೋಡ್ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 277ಕ್ಕೆ ಉತ್ತರ.

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಉದ್ದೇಶಿತ ಸಿಬ್ಬಂದಿಯ ನಮೂನೆ	ಈಗಾಗಲೇ ಮಂಜೂರಾಗಿರುವ ಹುದ್ದೆ	ಮಂಜೂರಾದ ಬೇಕಾಗಿರುವ ಹುದ್ದೆ
1	2	3	4	5
1.	ಮುಖ್ಯ ಇಂಜನಿಯರ್	1	1	-
2.	ಅಧೀಕ್ಷಕ ಅಭಿಯಂತರರು	3	1	2
3.	ಕಾರ್ಯಪಾಲಕ ಅಭಿಯಂತರರು	9	4	5
4.	ಸಹಾಯಕ ಕಾರ್ಯಪಾಲಕ ಅಭಿಯಂತರರು	41	8	33
5.	ಸಹಾಯಕ ಅಭಿಯಂತರರು	153	32	121
6.	ಕಿರಿಯ ಅಭಿಯಂತರರು	84	21	63
7.	ನಕ್ಷೆಗಾರ	45	6	39
8.	ಲೇಖಕ	43	10	33
9.	ನೀಲಿ ನಕ್ಷೆಗಾರ	9	2	7
10.	ರಿಜಿಸ್ಟ್ರಾರ್	3	1	2
11.	ಅಧೀಕ್ಷಕರು	11	1	10
12.	ಲೆಕ್ಕ ಅಧೀಕ್ಷಕ	7	1	6
13.	ಮೊದಲನೇ ದರ್ಜೆ ಸಹಾಯಕರು	50	15	35
14.	ಎರಡನೇ ದರ್ಜೆ ಸಹಾಯಕರು	90	22	68
15.	ಮೊದಲನೇ ದರ್ಜೆ ಲೆಕ್ಕ ಸಹಾಯಕರು	21	5	16
16.	ಎರಡನೇ ದರ್ಜೆ ಲೆಕ್ಕ ಸಹಾಯಕರು	19	6	13
17.	ಮೊದಲನೇ ದರ್ಜೆ ಉಗ್ರಾಣಪಾಲಕರು	6	1	5
18.	ಎರಡನೇ ದರ್ಜೆ ಉಗ್ರಾಣಪಾಲಕರು	6	1	5
19.	ಮೊದಲನೇ ದರ್ಜೆ ರೆವಿನ್ಯೂ ಮೋಜಣಿದಾರರು	30	1	29
20.	ಎರಡನೇ ದರ್ಜೆ ರೆವಿನ್ಯೂ ಮೋಜಣಿದಾರರು	30	1	29
21.	ಶೀಘ್ರಲಿಪಿಗಾರರು	4	1	3
22.	ಬೆರಳಚ್ಚುಗಾರರು	56	14	42
23.	ಅಂಕಿ ಅಂಶದ ಅಧಿಕಾರಿಗಳು	-	-	-
24.	ಅಂಕಿ ಅಂಶದ ಪರಿಶೀಲನಾಧಿಕಾರಿ	1	-	1
25.	ಚಾಲಕ	157	3	154
26.	ಅನುಚರರು	8	1	7
27.	ಗುಡಿಸುವವ	33	1	32
28.	ಜವಾನ	96	29	67
29.	ಕಾವಲುಗಾರ	33	5	28
	ಒಟ್ಟು	1049	194	855

ಶ್ರೀ ಬಿ.ಎಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ತುಂಗಾ ಮೇಲ್ದಂಡೆ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಆಗಸ್ಟ್ 1991ರಲ್ಲಿ ಕೇಂದ್ರದ ಮಂಜೂರಾತಿಗೆ ಕಳಿಸಲಾಗಿದೆ ಎಂಬ ಉತ್ತರವನ್ನು ಮಾನ್ಯ ಉಪಮುಖ್ಯಮಂತ್ರಿಗಳು ಒದಗಿಸಿದ್ದಾರೆ. ಆದರೆ ಇಲ್ಲಿಯವರೆಗೂ ಮಾಹಿತಿಯನ್ನು ಪೂರ್ಣವಾಗಿ ಒದಗಿಸಿಲ್ಲ ಎಂದು ಅವರು ಒಪ್ಪಿಕೊಂಡಿದ್ದಾರೆ. ಇನ್ನೂ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕಾಗಿದೆ. ಎರಡು ಸಾವಿರ ವರ್ಷದೊಳಗೆ ನಾವು ಈ ನೀರನ್ನು ಬಳಕೆ ಮಾಡಿಕೊಳ್ಳಬೇಕು, ಮಾಡಿಕೊಂಡೇ ತೀರುತ್ತೇವೆ ಎಂದು ಸರ್ಕಾರ ಹೇಳುತ್ತಾ ಇದೆ. ಕೇಂದ್ರಸರ್ಕಾರಕ್ಕೆ 91ರಿಂದ 94ರವರೆಗೆ ಮಾಹಿತಿಯನ್ನೇ ಕಳಿಸಿಲ್ಲ, ಅದು ಅಪೂರ್ಣವಾಗಿದೆಯೆಂದು ಮಾನ್ಯ ಉಪಮುಖ್ಯಮಂತ್ರಿಯವರೇ ಹೇಳಿದ್ದಾರೆ. ಹಾಗಿದ್ದಲ್ಲಿ ಇದು ವಿಳಂಬವಾಗಿಲ್ಲವೇ? ಇದನ್ನು ಎರಡು ಸಾವಿರ ಇಸವಿಯೊಳಗೆ ಉಪಯೋಗಿಸಿಕೊಳ್ಳಬೇಕು ಎನ್ನುವುದಕ್ಕೆ ಏನು ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕೆಂದು ಯೋಚಿಸಿದ್ದೀರಿ? ಕೇಂದ್ರದ ಮಂಜೂರಾತಿಗೆ ಮಾಹಿತಿಯನ್ನು ಯಾವಾಗ ನಿರ್ದಿಷ್ಟವಾಗಿ ಕಳಿಸಿಕೊಡುತ್ತೀರಿ? ಇದರ ಬಗ್ಗೆ ಇಲಾಖೆಯಿಂದ ತೀವ್ರಗತಿಯಲ್ಲಿ ಮಾಹಿತಿಯನ್ನು ಕಳಿಸಿಕೊಡುವುದಕ್ಕೆ ನಿರ್ದಿಷ್ಟ ಸಮಯವನ್ನು ನಿಗದಿಪಡಿಸುವ ಬಗ್ಗೆ, ಒಬ್ಬ ಅಧಿಕಾರಿಯನ್ನು ಅಥವಾ ಒಬ್ಬ ಜವಾಬ್ದಾರಿಯುತ ಮನುಷ್ಯನನ್ನು ನಿಗದಿಪಡಿಸುತ್ತೀರಾ? ಯಾವಾಗ ಮಾಹಿತಿಯನ್ನು ಕಳಿಸುತ್ತೀರಿ? ಆನಂತರ ಇದಕ್ಕೆ ಸಿಬ್ಬಂದಿ ಬಗ್ಗೆ ವಿವರಗಳನ್ನು ತಾವು ಕೊಟ್ಟಿದ್ದೀರಿ. ಬೇಕಾಗಿರತಕ್ಕಂಥ ಸಿಬ್ಬಂದಿ 1049. ಇಲ್ಲಿಯವರೆಗೆ ಸರ್ಕಾರ ಹಾಕಿಕೊಂಡಿರತಕ್ಕಂಥಾ ಯೋಜನೆ ಪ್ರಕಾರ ಒದಗಿಸಿರತಕ್ಕಂಥಾ ಸಿಬ್ಬಂದಿ ಕೇವಲ 194 ಮಾತ್ರ. ಇನ್ನೂ ೮೫೫ ಜನ ಸೂಪರಿಂಟೆಂಡೆಂಟ್ ಇಂಜಿನಿಯರುಗಳು ಬೇಕು ಎಕ್ಸಿಕ್ಯೂಟಿವ್ ಇಂಜಿನಿಯರುಗಳು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರುಗಳು ಬೇಕು; ಸ್ಟಾಫ್ ಬೇಕು, ಸರ್ವೇಯರ್ಸ್ ಬೇಕು. ಹೀಗಾದರೆ ಸಿಬ್ಬಂದಿ ಇಲ್ಲದೆ ಅಲ್ಲಿ ಸರ್ವೆ ಕೆಲಸ ನಡೆಯುವುದಿಲ್ಲ. ಎಸ್ಟಿಮೆಂಟ್ ಮಾಡುವುದಕ್ಕೆ ಆಗುವುದಿಲ್ಲ. ಆಮೇಲೆ ಪ್ರಾಜೆಕ್ಟ್ಗೆ ಹಣ ಬೇಕು ಎಂದರೆ, ಹಣ ಯಾಕೆ ಬೇಕು ಎಂದು ಸರ್ಕಾರದವರು ಕೇಳುತ್ತಿದ್ದಾರೆ. ಸಿಬ್ಬಂದಿ ಒದಗಿಸಿದರೆ, ಸರ್ವೆ ಎಲ್ಲ ಮಾಡಿದರೆ ಕೆಲಸ ಆಗುತ್ತದೆ. ಆದರೆ ಕೇವಲ 5 ಕೋಟಿ ಈ ವರ್ಷ ಕೊಟ್ಟಿದ್ದಾರೆ. ಇದರಲ್ಲಿ ಸಿಬ್ಬಂದಿಗೆ 36.38 ಲಕ್ಷ ರೂಪಾಯಿಗಳು ಖರ್ಚುಮಾಡಿದ್ದಾರೆ. 50 ಕೋಟಿಯಾದರೂ ಇಟ್ಟಿದ್ದರೆ ಎರಡು ಸಾವಿರ ಇಸವಿಯೊಳಗೆ ಇದನ್ನು ಮುಗಿಸಬಹುದಾಗಿತ್ತು. ಆದರೆ ಕೇವಲ 5 ಕೋಟಿ ಮಾತ್ರ ಇಟ್ಟು ಅದರಲ್ಲಿ ಎರಡು ಕೋಟಿಯನ್ನು ಬೇರೆ ಕಡೆಗೆ ಡೀವಿಯೇಟ್ ಮಾಡಿದ್ದಾರೆ. ಮಾನ್ಯ ಉಪಮುಖ್ಯಮಂತ್ರಿಗಳು ಇದರಲ್ಲಿ ಹೇಳಿಲ್ಲ. ಆದರೆ ನನಗೆ ಗೊತ್ತಾಗಿದೆ, ಐದು ಕೋಟಿಯಲ್ಲಿ ಎರಡು ಕೋಟಿ ರೂಪಾಯಿಗಳನ್ನು ಬೇರೆ ಕೆಲಸಕ್ಕೆ ಡೀವಿಯೇಟ್ ಮಾಡಿದ್ದಾರೆ. ಇದು ಸತ್ಯವೆ? ಮತ್ತೆ ಎರಡು ಸಾವಿರ ಇಸವಿಯಲ್ಲಿ ಇದನ್ನು ಪೂರ್ಣಗೊಳಿಸುವುದಕ್ಕೆ ಅವಶ್ಯಕ ಇರುವಂಥ ಸಿಬ್ಬಂದಿಯನ್ನು ಇನ್ನು ಸ್ವಲ್ಪವೇ ದಿವಸಗಳಲ್ಲಿ ಭರ್ತಿಮಾಡುತ್ತೀರಾ? ಮಾಹಿತಿಯನ್ನು ಕೇಂದ್ರಕ್ಕೆ ಈ ಕೂಡಲೇ ಕಳುಹಿಸಿಕೊಡುತ್ತೀರಾ? ಈ ವರ್ಷದ ಆಯವ್ಯಯದಲ್ಲಿ ಎರಡು ಸಾವಿರ ಇಸವಿಯೊಳಗೆ ಮುಗಿಸುವುದಕ್ಕೆ ಏನು ಹಣ ಬೇಕು, ಅದನ್ನು ಒದಗಿಸುತ್ತೀರಾ ಎಂದು ತಮ್ಮ ಮೂಲಕ ಮಾನ್ಯ ಉಪಮುಖ್ಯಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೇ 1990ರಿಂದ ಡಿಸೆಂಬರ್ 92ರವರೆಗೆ ಕೇಂದ್ರ ಜಲಾಯೋಗಕ್ಕೆ ನಾವು ಇದರ ಬಗ್ಗೆ ಶಿಫಾರಸ್ಸು ಮಾಡಿದಾಗ ಅವರು ಕಂತುಕಂತುಗಳಲ್ಲಿ ವಿವರಗಳನ್ನು ಕೇಳಿದ್ದಾರೆ. ಕಂತುಕಂತುಗಳಲ್ಲಿ ವಿವರಗಳನ್ನು ಕೇಳಿದ್ದಕ್ಕೆ ನಾವು ಕಂತುಕಂತುಗಳಲ್ಲಿ ಅವರಿಗೆ ವಿವರಗಳನ್ನು ಒದಗಿಸಿಕೊಟ್ಟಿದ್ದೇವೆ. ಇದರ

ಪ್ರಾಮುಖ್ಯತೆಯನ್ನು ಗಮನಿಸಿ 27ಡಿಸೆಂಬರ್ 93ರಂದು ಸರ್ಕಾರದ ಮುಖ್ಯಕಾರ್ಯದರ್ಶಿಗಳು ಒಂದು ಇಂಟರ್ ಡಿಪಾರ್ಟ್‌ಮೆಂಟ್ ಮೀಟಿಂಗ್‌ನ್ನು ಕರೆದು ಆ ಮೀಟಿಂಗ್‌ನಲ್ಲಿ ರೆವಿನ್ಯೂ ಇಂಟರ್‌ಡಿಪಾರ್ಟ್ಮೆಂಟ್‌ನವರು ಉದಾಹರಣೆಗೆ ಪ್ರದೇಶದ ಸಮಗ್ರ ಮಣ್ಣು ಪರೀಕ್ಷೆ ಅದೊಂದು ಮುಖ್ಯವಾದ ಕೆಲಸ, ಅದನ್ನು ಅಗ್ರಿಕಲ್ಚರ್ ಡಿಪಾರ್ಟ್ಮೆಂಟ್‌ನವರು ಮಾಡಬೇಕು. ಮತ್ತು ಕ್ರಾಪ್ ಪ್ಯಾಟ್ರನ್ ಅದೂ ಕೂಡ ಕೃಷಿ ಇಲಾಖೆಯ ವತಿಯಿಂದ ಆಗಬೇಕಾಗಿದೆ. ಅದಕ್ಕೆ ಒಂದು ಡೆಡ್‌ಲೈನ್ ಅನ್ನು ಮಾನ್ಯ ಮುಖ್ಯಕಾರ್ಯದರ್ಶಿಗಳು ಹಾಕಿ ಒಂದು ಕ್ರಿಯಾಯೋಜನೆಯನ್ನು ರೂಪಿಸಿದ್ದಾರೆ. ಆ ಕ್ರಿಯಾಯೋಜನೆಯ ಚೌಕಟ್ಟಿನಲ್ಲಿ ನಾವು ಕೇಂದ್ರಸರ್ಕಾರದ ಜಲ ಆಯೋಗಕ್ಕೆ ಏನು ಸಮಜಾಯಿಶಿ ಕೊಡಬೇಕೋ ಅದನ್ನು ಕೊಟ್ಟು ಆದಷ್ಟು ಬೇಗ ತ್ವರಿತಗತಿಯಲ್ಲಿ ಇದಕ್ಕೆ ನಿರೀಕ್ಷಿತವಾದಂಥ ಕ್ಲಿಯನ್ಸ್‌ನ್ನು ನಾವು ತೆಗೆದುಕೊಳ್ಳುತ್ತೇವೆ. ಇನ್ನು ಕ್ಲಿಯರೆನ್ಸ್ ಬಂದಿಲ್ಲದೇ ಇರುವುದರಿಂದ, ಹೊಸದಾಗಿ ಚೀಫ್ ಇಂಜಿನಿಯರ‍್ಗಳು, ಸೂಪರಿಂಟೆಂಡೆಂಟ್ ಇಂಜಿನಿಯರುಗಳು, ಬೇಕು ಎಂದರೆ ಅವರುಗಳನ್ನು ಕರೆದುಕೊಂಡು ಬಂದು ಏನು ಮಾಡಬೇಕು ಎಂಬ ಉದ್ದೇಶವನ್ನು ನೀವು ಪಟ್ಟಿದ್ದೀರಿ? ಏನು ಮಾಡಲಿಕ್ಕೆ ಉಂಟು ಅವರು? ಇವತ್ತಿನ ಒಟ್ಟು ಆ ಯೋಜನೆ ಯಾವ ಘಟ್ಟದಲ್ಲಿದೆ ಎನ್ನತಕ್ಕಂಥಾದ್ದನ್ನು ಅಳತೆ ಮಾಡಿ ಅದಕ್ಕೆ ಯೋಗ್ಯವಾದಂಥ ಸಿಬ್ಬಂದಿಯನ್ನು 184 ಜನರನ್ನು ನಾವು ಒದಗಿಸಿದ್ದೇವೆ. ಆದ್ದರಿಂದ ಮುಂದೆ ಆಕ್ಚುಯಲ್ ಪ್ಲಾನ್ ಏನು ಮಾಡಿದ್ದೇವೆ ಅದು ಸ್ಯಾಂಕ್ಷನ್ ಆಗಿ ಬಂದತಕ್ಷಣ, ಅದಕ್ಕೆ ಕ್ಲಿಯರೆನ್ಸ್ ಬಂದತಕ್ಷಣ, ಇನ್ನೂ ಹೆಚ್ಚು ಚುರುಕಾಗಿ ನಾವು ಇಲ್ಲಿಗೆ ಆಫೀಸರ್ಸ್ ಅಥವಾ ಇಂಜಿನಿಯರುಗಳನ್ನು ಸಮೀಕ್ಷಕರುಗಳನ್ನು ಅಲ್ಲಿಗೆ ಹಾಕುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಮಾನ್ಯ ಬನ್ನಿಕೋಡ್ ಅವರಿಗೆ ಕೊಡುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು ಅದೇನೆಂದರೆ ಮಂಜೂರಾತಿ ಆಗಿಲ್ಲ. ಮಂಜೂರಾತಿಗೆ ಸರ್ಕಾರ 1990ರಿಂದ ಇಲ್ಲಿಯವರೆಗೆ ಮಾಹಿತಿಯನ್ನು ಕಳುಹಿಸಿಲ್ಲ. ಕಂತುಕಂತು ಆಗಿ ಕಳಿಸುತ್ತಾ ಈ ರೀತಿ ವಿಳಂಬಮಾಡಿದರೆ ಎರಡು ಸಾವಿರ ಇಸವಿಯವರೆಗೆ ಇದೇ ಆಗುತ್ತದೆ. ಪೂರ್ಣ ಮಾಹಿತಿಯನ್ನು ನಿರ್ದಿಷ್ಟರಾಗಿ ಸಂಗ್ರಹಿಸಿ ಯಾವಾಗ ಕಳಿಸುತ್ತೀರಾ? ಇದಕ್ಕೆ ಒಬ್ಬ ಜವಾಬ್ದಾರಿಯುತ ಅಧಿಕಾರಿಯನ್ನು ನೇಮಿಸಿ ಕೇಂದ್ರದಿಂದ ಮಂಜೂರಾತಿ ಪಡೆಯುವುದಕ್ಕೆ ಸರ್ಕಾರ ಏನಾದರೂ ಆಸಕ್ತಿ ವಹಿಸಿದೆಯಾ? ಮತ್ತೆ ಅವರು ಕೇಳಿದರು ಮಂಜೂರಾತಿಯೇ ಸಿಕ್ಕಿಲ್ಲ, ಸಿಬ್ಬಂದಿಯನ್ನು ಏನು ಮಾಡುತ್ತೀರಾ ಅಂತ. ಈ ರಾಜ್ಯದಲ್ಲಿ ಇವತ್ತು ಆಗಿರತಕ್ಕಂಥ ಅನೇಕ ಯೋಜನೆಗಳನ್ನು ಕೇಂದ್ರಸರ್ಕಾರದ ಮಂಜೂರಾತಿ ಇಲ್ಲದೆ ಸರ್ಕಾರ ಬಜೆಟ್ಟಲ್ಲಿ ಹಣವನ್ನು ಒದಗಿಸಿ ಪೂರ್ಣಮಾಡಿದಂಥ ಉದಾಹರಣೆಗಳು ಇವೆ. ಹೇಮಾವತಿ ಇದೆ, ಹಾರಂಗಿ ಇದೆ. ಇವತ್ತಿಗೂ ಅದು ಮಂಜೂರಾತಿ ಸಿಕ್ಕಿಲ್ಲ. ಆ ಕೆಲಸ ಮುಗಿಯುತ್ತಾ ಬಂದಾಗ ಕೊನೆಗೆ ಮಂಜೂರಾತಿ ಬಂದಿದೆ. ಆ ರೀತಿ ಏನಾದರೂ ಇದಕ್ಕೆ ಸರ್ಕಾರ ಗಮನಹರರಿಸಿ ಇದು ಅತ್ಯಂತ ಸುಲಭ ರೀತಿಯಲ್ಲಿ ಕಡಿಮೆ ವೆಚ್ಚದಲ್ಲಿ ಆಗತಕ್ಕಂಥ ಒಂದು ಹರಿಯುವ ನೀರಿನ ಯೋಜನೆ. 2 ಲಕ್ಷದ 34 ಸಾವಿರ ಎಕರೆಯಲ್ಲಿ ಆರೇಳು ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ಇದು ಬರಬೀಳುವಂಥ ಪ್ರದೇಶ. ದಯವಿಟ್ಟು ತಾವು ಏನಾದರೂ ವಿಶೇಷವಾಗಿ ಗಮನಹರಿಸಿ ಮಂಜೂರಾತಿಗೆ ವಿಶೇಷ ಪ್ರಯತ್ನ, ಈ ಕೆಲಸವನ್ನು ತ್ವರಿತ ಮಾಡುವುದಕ್ಕೆ ಅವಶ್ಯ ಸಿಬ್ಬಂದಿಯನ್ನು, ಹಣವನ್ನು ಒದಗಿಸುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ಅಂತ ನಿಮ್ಮಲ್ಲಿ ಕಳಕಳಿಯಿಂದ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ: ಪ್ರಯತ್ನವನ್ನು ಮಾಡುತ್ತೇನೆ ಸ್ವಾಮಿ.

ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿರುವ ಹುದ್ದೆಗಳ ಭರ್ತಿ

43 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ಕ.ವಿ.ಮಂ) ಲೈನ್ಮನ್ಗಳು, ಮೀಟರ್ರೀಡರುಗಳು ಹಾಗೂ ಇತರ ಸಹಾಯಕ ಸಿಬ್ಬಂದಿಗಳು ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ಕ.ವಿ.ಮಂ) ಯಲ್ಲಿ ಖಾಲಿಯಿರುವ ಹುದ್ದೆಗಳ ಸಂಖ್ಯೆ ಮತ್ತು ವಿವರಗಳೇನು?

ಇ) ಮೇಲ್ಕಂಡ ನೌಕರರ ನೇಮಕಾತಿಗಾಗಿ ಕ.ವಿ. ಮಂಡಳಿಯವರು ಯಾವ ಕ್ರಮ ಕೈಗೊಳ್ಳುವರು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು):

ಅ) ಬಂದಿದೆ.

ಆ) ಖಾಲಿ ಇರುವ ಹುದ್ದೆಗಳ ವಿವರ

1) ಗ್ರೂಪ್ 'ಎ' 7
2) ಗ್ರೂಪ್ 'ಬಿ' 29
3) ಗ್ರೂಪ್ 'ಸಿ' 389
4) ಗ್ರೂಪ್ 'ಡಿ' 311

ಒಟ್ಟು 736 ಹುದ್ದೆಗಳು

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ವಿಜಯಕುಮಾರಶೆಟ್ಟಿ: ಮಾನ್ಯ ಅಧ್ಯಕ್ಷರೇ, ಈಗ ಕೆ.ಇ.ಬಿ. ಮಟ್ಟಿಗೆ ಹೇಳುವುದಾದರೆ ಜನಸಾಮಾನ್ಯರಲ್ಲಿ ಬಹುಶಃ ಬಹಳಷ್ಟು ಅತೃಪ್ತಿ ಇರುವ ಒಂದು ಇಲಾಖೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈಗಾಗಲೇ ಮಂಗಳೂರು ಸಿಟಿ ಕಾರ್ಪೊರೇಷನ್ ಮತ್ತೆ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಎಲ್ಲಾ ಮಂಡಲ್ ಪಂಚಾಯತಿಗಳಿಂದ ಹಣ ಕಟ್ಟಿಸಿಕೊಂಡು ಒಂದು ವರ್ಷ, ಎರಡು ವರ್ಷ ಆದರೂ ಕೂಡ ಇನ್ನೂ ಕಂಬಗಳನ್ನು, ಲೈನ್ಗಳನ್ನು ಹಾಕಿಲ್ಲ. ತಮ್ಮ ಉತ್ತರದಲ್ಲಿ ಕೊಟ್ಟಿದ್ದೀರಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಗ್ರೂಪ್ ಸಿ 389 ನೌಕರರ ಹುದ್ದೆಗಳು ಖಾಲಿ ಇವೆಯೆಂದು. ಗ್ರೂಪ್ ಡಿ 311 ಖಾಲಿ ಇದೆ. ದೊಡ್ಡ ದೊಡ್ಡ ಫ್ಯಾಕ್ಟರಿಗಳೆಲ್ಲ ಬರುತ್ತವೆ ಅಂತ ಹೇಳುತ್ತೇವೆ. ಆದರೆ ಈ ತರಸ್ಪರ್ಶದಲ್ಲಿ ಕೆಲಸ ಮಾಡುವಂಥ ನೌಕರರು ಇಲ್ಲದೇ ಇದ್ದು ಬಹು ತೊಂದರೆಯಾಗುತ್ತಿದೆ. ಆದ್ದರಿಂದ ಆದಷ್ಟು ಬೇಗ ಈ ಗ್ರೂಪ್ ಸಿ ಮತ್ತು ಡಿ ನೌಕರರನ್ನು ಅಪಾಯಿಂಟ್ಮೆಂಟ್ ಮಾಡಿಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಾ ಇದ್ದೇನೆ.

ಶ್ರೀ. ಕೆ.ಎ. ನಿಸಾರ್ ಅಹಮದ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪುತ್ತೂರು ಮತ್ತು ಉಡುಪಿ ಹಾಗೂ ಮಂಗಳೂರಿನಲ್ಲಿ ಈ ಲೈನ್ಮನ್ ಮತ್ತು ಮೀಟರ್ರೀಡರ್ಗಳ ಮತ್ತು ಇತರೆ ಸಿಬ್ಬಂದಿಗಳ ಹುದ್ದೆಗಳು ಖಾಲಿ ಇರುವುದರ ಬಗ್ಗೆ ನನಗೆ ತಿಳಿಸಿದ್ದಾರೆ. ಇದು ಆಗಲೇ ನಮ್ಮ ಮಂಡಳಿಯ ಗಮನಕ್ಕೆ ಬಂದಿದೆ. ಖಾಲಿ ಇರುವ ಹುದ್ದೆಗಳು ಗ್ರೂಪ್ ಎ ನಲ್ಲಿ7, ಗ್ರೂಪ್ ಬಿ ನಲ್ಲಿ 29 ಖಾಲಿ ಇವೆ. ಗ್ರೂಪ್ ಸಿ ನಲ್ಲಿ 389 ಮತ್ತು ಗ್ರೂಪ್ ಡಿ ನಲ್ಲಿ 311 ಹುದ್ದೆಗಳು ಖಾಲಿ ಇವೆ. ಮಾನ್ಯ ಸದಸ್ಯರು ಇವುಗಳನ್ನು ಭರ್ತಿ ಮಾಡುವುದಕ್ಕೆ

ಹೇಳಿದ್ದಾರೆ. ಇದನ್ನು ಆದಷ್ಟು ಬೇಗನೆ ಪರಿಶೀಲಿಸಿ ಭರ್ತಿ ಮಾಡುತ್ತೇವೆ ಎಂದು ನಾನು ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಇಷ್ಟು ವೇಕೆನ್ಸಿ ಇದೆ. ಇಡೀ ರಾಜ್ಯದಲ್ಲಿ ಬಹಳಷ್ಟು ವೇಕೆನ್ಸಿ ಇರುವುದರಿಂದ ನೇಮಕಾತಿ ಶೀಘ್ರವಾಗಿ ಮಾಡಬೇಕು. ಕೈಗಾರಿಕೆಯಲ್ಲಿ ನಮ್ಮ ರಾಜ್ಯವನ್ನು 4ನೇ ಹಂತಕ್ಕೆ ತರುತ್ತೇವೆಂದು ನಾವು ಆಶ್ವಾಸನೆ ಕೊಡುತ್ತಿದ್ದೇವೆ. ಈ ಆಶ್ವಾಸನೆ ನೇರವೇರಲಿಕ್ಕಿಲ್ಲ, ಆದ್ದರಿಂದ ಈ ನೇಮಕಾತಿಯಾಗಬೇಕು. ಮತ್ತೊಂದು, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಮಣ್ಣುಗುಡ್ಡೆಯಲ್ಲಿ ಸಬ್‌ಸ್ಟೇಷನ್ಸ್‌ಗೆ ಫೌಂಡೇಷನ್ ಸ್ಟೋನ್ ಹಾಕಿ ಸುಮಾರು ಒಂದು ವರ್ಷವಾಯಿತು. ಇನ್ನೂ ಇದರ ಕಾರ್ಯ ಪ್ರಾರಂಭ ಮಾಡಿಲ್ಲ. ಅದೇ ಪ್ರಕಾರ ನನ್ನ ಮತಕ್ಷೇತ್ರವಾದ ಕಾಟಿಪಾಳ್ಯದಲ್ಲಿ ಪುನರ್ ವಸತಿ ಕೇಂದ್ರ ಕೂಡ ಆಗಿದೆ. ಅದಕ್ಕೆ ಸ್ಯಾಂಕ್ಷನ್ ಆಗಿ, ಜಾಗ ಸಿಗಲಿಲ್ಲವೆಂದು ಹೇಳುತ್ತಾ ಇದ್ದರು. ಇಲ್ಲಿಗೆ ಸಬ್ಸ್ಟೇಷನ್ ಕೊಡುತ್ತೇವೆಂದು ಒಂದೆರಡು ವರ್ಷದಿಂದ ಹೇಳುತ್ತಾ ಬಂದಿದ್ದಾರೆ. ಇಷ್ಟರವರೆಗೆ ಆಗಲಿಲ್ಲ. ಮಣ್ಣುಗುಡ್ಡೆ ಮತ್ತು ಕಾಟಿಪಾಳ್ಯ ಸಬ್ ಸ್ಟೇಷನ್ಗಳನ್ನು ಕೂಡಲೇ ಪ್ರಾರಂಭ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮತ್ತು ಇತ್ತೀಚಿನ ಪತ್ರಿಕಾ ಹೇಳಿಕೆಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರು ಮಂಗಳೂರಿಗೆ ವಾರಾಹಿಯಿಂದ ಇನ್ನೊಂದು ಲೈನನ್ನು ಒದಗಿಸುತ್ತೇವೆಂದು ಹೇಳಿದ್ದಾರೆ. ಅದರ ಬಗ್ಗೆಯೂ ತಾವೇನು ಮಾಡಿದ್ದೀರೆಂಬುದನ್ನು ತಿಳಿಸಿದರೆ ಒಳ್ಳೆಯದು.

ಶ್ರೀ ಕೆ.ಎ. ನಿಸಾರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರು ಖಾಲಿ ಹುದ್ದೆ ಬಗ್ಗೆ ಮಾತನಾಡಿದ್ದಾರೆ. ಅಲ್ಲಿ ತೊಂದರೆಯಾಗುತ್ತಿರುವುದು ವಿದ್ಯುತ್ ಮಂಡಳಿಗೆ ಗೊತ್ತಾಗಿದೆ. ಇದು ಸರ್ಕಾರದ ಮುಂದೆ ಇರುವುದರಿಂದ, ಶೀಘ್ರವಾಗಿ ಕೆಲಸ ತೆಗೆದುಕೊಳ್ಳುತ್ತೇವೆ ಎಂದು ತಮ್ಮ ಮೂಲಕ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ: ಎರಡು ವರ್ಷಗಳಿಂದ ಹಣ ಕಟ್ಟಿ ಬಾಕಿ ಉಳಿದಿದೆ.

ಶ್ರೀ ಎಸ್.ಎಂ. ಕೃಷ್ಣ : ಈ ನೇಮಕಾತಿಗಳ ವಿಚಾರದಲ್ಲಿ ಒಂದು ವಿವರಣೆಯನ್ನು ಕೊಡಬೇಕಾಗಿರುವುದು ಪ್ರಸ್ತುತ ಎಂದು ನಾನು ಭಾವಿಸುತ್ತೇನೆ ಸುಮಾರು ಒಂದು ಸಾವಿರ ಹುದ್ದೆಗಳನ್ನು ನೇಮಕ ಮಾಡಬೇಕೆಂದು ತೀರ್ಮಾನವನ್ನು ವಿದ್ಯುತ ಮಂಡಳಿ ತೆಗೆದುಕೊಂಡಿದೆ. ಆದರೆ, ಸರ್ಕಾರದ ಗಮನಕ್ಕೆ ಒಂದು ವಿಚಾರ ಬಂತು, ಅದೇನೆಂದರೆ, ನಾವು ತಿಳಿದಿದ್ದೆವು. ಸರ್ಕಾರ ಅನುಮತಿಯನ್ನು ಕೊಟ್ಟಾಗ ಹೊಸದಾಗಿ ಅರ್ಜಿಗಳನ್ನು ಕರೆದು ಅನಂತರ ವಿಧಿವತ್ತಾಗಿ, ನೇಮಕಾತಿ ಮಾಡುತ್ತಾರೆ ಎಂದು ತಿಳಿದಿದ್ದೆವು. ಆದರೆ, ಬಹುಶಃ ಕಮ್ಯುನಿಕೇಷನ್ ಗ್ಯಾಪ್ ಎಂದು ಕಾಣುತ್ತದೆ. 199-91ನೇ ಇಸವಿಯಲ್ಲಿ ಅವರು, ಏನು ಅರ್ಜಿಗಳನ್ನು ಕರೆದಿದ್ದರು, ಆ ಅರ್ಜಿಗಳ ಆಧಾರದ ಮೇಲೆ, ಕೆಲವು ಸ್ಥಳಗಳಲ್ಲಿ ಇಂಟರ್‌ವ್ಯೂ ನೋಟೀಸುಗಳನ್ನು ಕಳುಹಿಸಿದ್ದಾರೆ. ಶಿವಮೊಗ್ಗ, ಮೈಸೂರು, ಬೆಳಗಾವಿ ಇಲ್ಲೆಲ್ಲಾ ಮಾಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ಕೆಲವರು ಬಂದಾಗ,

ನಮ್ಮ ಉದ್ದೇಶವೇನೆಂದರೆ, ಈಗ ಯಾರು ಪ್ರಾಪ್ತವಯಸ್ಕರಾಗತಕ್ಕವರು ಕ್ವಾಲಿಫೈ ಆಗುತ್ತಿದ್ದಾರೆ ಅವರಿಗೂ ಕೂಡ ಅವಕಾಶ ಕಲ್ಪಿಸಿಕೊಡಬೇಕೆಂಬ ದೃಷ್ಟಿಯಿಂದ ಈಗ ಆಗಿರತಕ್ಕ ಸಂದರ್ಶನಗಳನ್ನು ರದ್ದು ಮಾಡಿ, ಹೊಸದಾಗಿ ಕರೆದು ನೇಮಕಾತಿ ಮಾಡಿಕೊಳ್ಳಬೇಕೆಂಬ ಸೂಚನೆಯನ್ನು ಕೊಟ್ಟಿದ್ದೇವೆ. ಅತಿ ಶೀಘ್ರದಲ್ಲಿಯೇ ಅವರು ಅರ್ಜಿಗಳನ್ನು ಕರೆಯುತ್ತಾರೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಇದು ಬಹಳ ಅಗತ್ಯವಿದೆ, ಟೈಮಬೌಂಡ್ ಪ್ರೋಗ್ರಾಂ ಹಾಕಿಕೊಂಡು ಮಾಡಿದರೆ ಒಳ್ಳೆಯದು. ಒಂದು ಜಿಲ್ಲೆಯಲ್ಲಿಯೇ 450 ಜನ ಖಾಲಿ ಇರುವಾಗ, ಒಟ್ಟು ರಾಜ್ಯದಲ್ಲಿ ಎಷ್ಟು ಜನ ಇದ್ದಾರೆ.

ಅಧ್ಯಕ್ಷರು : ನೀವು ಬೇರೆ ರೂಪದಲ್ಲಿ ಕೇಳಿ. ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಂ. ಇದಿನಬ್ಬ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಡೀ ಜಿಲ್ಲೆ ಬಂದ್ ಆಗಿದೆ. ದೊಡ್ಡ ಸಮಸ್ಯೆಯಾಗಿದೆ.

ಅಧ್ಯಕ್ಷರು : ನೀವು ಇದರ ಬಗ್ಗೆ ಬೇಕಾದರೆ ಅರ್ಧಗಂಟೆ ಚರ್ಚೆಗೆ ಕಳುಹಿಸಿಕೊಡಿ.

ಹೊಸದಾಗಿ ಮಂಜೂರಾಗಿರುವ ರಾಷ್ಟ್ರೀಯ ಹೆದ್ದಾರಿಗಳು

23 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಕ್ಕೆ ಸುಮಾರು ಇಪ್ಪತ್ತು ವರ್ಷಗಳಿಂದ ಈಚೆಗೆ ಮಂಜೂರಾಗಿರುವ ರಾಷ್ಟ್ರೀಯ ಹೆದ್ದಾರಿಯ ಉದ್ದವೆಷ್ಟು?

ಆ) ಭಾರತ ಸರ್ಕಾರದ ರಸ್ತೆ ಅಭಿವೃದ್ಧಿ ಯೋಜನೆಯನ್ವಯ, ಕರ್ನಾಟಕ ರಾಜ್ಯವು ಹಾಲಿ ಎಷ್ಟು ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿಯನ್ನು ಹೊಂದಿರಬೇಕಾಗಿತ್ತು.

ಇ) ಹೊಂದಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) 20 ವರ್ಷಗಳಿಂದೀಚೆಗೆ ಹೊಸದಾಗಿ ರಾಜ್ಯದ ಯಾವ ಹೆದ್ದಾರಿಯನ್ನೂ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಿರುವುದಿಲ್ಲ.

ಆ) 3215 ಕಿ.ಮೀ. ಇರಬೇಕಾಗಿತ್ತು. ಆದರೆ ರಾಜ್ಯದಲ್ಲಿ ಹಾಲಿ 1997 ಕಿ.ಮೀ.ಗಳ ರಾಷ್ಟ್ರೀಯ ಹೆದ್ದಾರಿ ಮಾತ್ರ ಇದೆ.

ಇ) ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸುವುದು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ. 1972 ರಿಂದೀಚೆಗೆ ಒಟ್ಟು 4400 ಕಿ.ಮೀ. ಉದ್ದದ 13 ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಘೋಷಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಒತ್ತಾಯಿಸಲಾಗುತ್ತಿದೆ. ಆದರೆ, ಕೇಂದ್ರ ಸರ್ಕಾರವು ಈ ಬಗ್ಗೆ ಹಣಕಾಸಿನ ಲಭ್ಯತೆಯನ್ನು ಅನುಸರಿಸಿ 8ನೇ ಪಂಚವಾರ್ಷಿಕ ಯೋಜನೆಯ ಮಧ್ಯಭಾಗದಲ್ಲಿ ಪ್ರಸ್ತಾಪಗಳನ್ನು ಪರಿಶೀಲಿಸಲಾಗುವುದು ಎಂದು ತಿಳಿಸಿದ್ದಾರೆ.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ಭಾರತ ಸರ್ಕಾರದ ಈ ರಸ್ತೆ ಅಭಿವೃದ್ಧಿ ಯೋಜನೆಯನ್ವಯ ನಮ್ಮ ರಾಜ್ಯಕ್ಕೆ ಇಂದಿಗೆ 3215 ಕಿ.ಮೀ. ಇರಬೇಕಾಗಿದ್ದ ಈ ರಾಷ್ಟ್ರೀಯ ಹೆದ್ದಾರಿ ಇಂದು 1997 ಕಿ.ಮೀ. ಇದೆ. 20 ವರ್ಷಗಳಿಂದ ನಮ್ಮ ಕರ್ನಾಟಕ ರಾಜ್ಯಕ್ಕೆ ಹೊಸದಾಗಿ ಒಂದು ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಸೇರ್ಪಡೆ ಆಗಿಲ್ಲ ಎಂದು ಸನ್ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇದರಿಂದ ರಾಜ್ಯಕ್ಕೆ ಮಹದನ್ಯಾಯ ಆಗಿದೆ ಎಂದು ಸರ್ಕಾರಕ್ಕೆ ಅನ್ನಿಸುವುದಿಲ್ಲವೇ? ಬೇರೆ ರಾಜ್ಯಗಳಿಗೂ 20 ವರ್ಷಗಳಿಂದ ಒಂದು ಕಿ.ಮೀ. ರಾಷ್ಟ್ರೀಯ ಹೆದ್ದಾರಿಗೆ ಸೇರ್ಪಡೆ ಆಗಿದೆಯೋ ಇಲ್ಲವೋ ದಯಮಾಡಿ ತಿಳಿಸಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ರಾಜ್ಯಕ್ಕೆ ಅನ್ಯಾಯ ಆಗಿದೆ. ಹೊಸದಾಗಿ ಒಂದು ಕಿ.ಮೀ. ನಮಗೆ ಸೇರಿಲ್ಲ. ನಾವು ಮೇಲಿಂದ ಮೇಲೆ ಒತ್ತಾಯ ಮಾಡುತ್ತಿದ್ದೇವೆ. ನಾನು ಈ ಇಲಾಖೆ ವಹಿಸಿಕೊಂಡ ಮೇಲೆ, ಮುಖ್ಯ ಮಂತ್ರಿಯಿಂದ ಕೂಡ ಪತ್ರ ಬರೆಸಿದೇನೆ. ನಾನೂ ಪತ್ರ ಬರೆದಿದ್ದೇನೆ. ಆದರೆ ಕರ್ನಾಟಕದ ದುರಾದೃಷ್ಟ ನಮಗೆ

ಸ್ಯಾಂಕ್ಷನ್ ಆಗಿಲ್ಲ. 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ರಸ್ತೆಗಳ ಬಗ್ಗೆ ಹಣವನ್ನು ಇಟ್ಟಿರುವುದೇ ಕಡಿಮೆ ಎಂದು ನನಗೆ ತಿಳಿದಿದೆ. ಆರ್ಥಿಕ ಅಭಿವೃದ್ಧಿ ಆಗಬೇಕಾದರೆ ರಸ್ತೆ ಬಹಳ ಪ್ರಮುಖ ರಸ್ತೆ ಚೆನ್ನಾಗಿರಬೇಕು; ಇಂಟರ್ ಸ್ಟೇಟ್ ಕಮ್ಯುನಿಕೇಷನ್ ಕೂಡ ಚೆನ್ನಾಗಿ ಆಗಬೇಕೆಂಬ ಮಾತನ್ನು ಹೇಳುತ್ತೇವೆ. ಆದರೆ ಕಾರ್ಯರೂಪಕ್ಕೆ ತರಬೇಕಾದರೆ ಪ್ರಮುಖರಾಗಿ ಬೇಕಾಗಿರತಕ್ಕದ್ದು ಹಣ. ಹಣ ಒದಗಿಸದೇ ಹೋದರೆ ಹೊಸದಾಗಿ ಅಭಿವೃದ್ಧಿ ಆಗುವುದಿಲ್ಲ. ಕರ್ನಾಟಕಕ್ಕೆ ಅನ್ಯಾಯ ಆಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ದಕ್ಷಿಣ ಅಂದರೆ ಡೆಲ್ಲಿಯವರು ಸ್ವಲ್ಪ ಜಾಸ್ತಿ ನೋಡುವುದು ತಮಿಳುನಾಡು ಮತ್ತು ಕೇರಳ ನಮ್ಮ ಕಡೆಗೆ ಅವರ ದೃಷ್ಟಿ ಬೀಳುತ್ತಿಲ್ಲ. ಮಾನ್ಯ ಸದಸ್ಯರು ಏನು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಅವರ ಕಳಕಳಿಯ ಜೊತೆಗೆ ನಾನು ನನ್ನ ಧ್ವನಿ ಗೂಡಿಸುತ್ತಿದ್ದೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಅಧ್ಯಕ್ಷರೇ, ನಾನು ಕೇಳಿದ್ದುದು ಬೇರೆ ರಾಜ್ಯಕ್ಕೂ ಕೂಡ 20 ವರ್ಷಗಳಲ್ಲಿ ಒಂದು ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಸೇರ್ಪಡೆ ಆಗಿಲ್ಲವೇ ಎಂದು ? ಬರೀ ಕರ್ನಾಟಕ ರಾಜ್ಯಕ್ಕೆ ಮಾತ್ರ ಹಣಕಾಸಿನ ತೊಂದರೆ ಇದೆಯೋ, ಬೇರೆ ರಾಜ್ಯಗಳಿಗೂ ಹಣಕಾಸಿನ ತೊಂದರೆ ಇದೆಯೇ ? ಇದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ ನಿಜ. ಕೇಂದ್ರದಲ್ಲಿ ಇರತಕ್ಕಂಥ ನಮ್ಮ ಪ್ರಜಾಪ್ರತಿನಿಧಿಗಳು ಮತ್ತು ನಮ್ಮ ಸರ್ಕಾರ ರಾಜ್ಯಕ್ಕೆ ದೊರಕಬೇಕಾದ ಈ ಸೌಲಭ್ಯವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿಲ್ಲ ಎಂದು ನಾನು ನೇರವಾಗಿ ಹೇಳಬೇಕಾಗುತ್ತದೆ. ಅದನ್ನು ತಾವು ಕೂಡ ಒಪ್ಪಿಕೊಂಡಿದ್ದೀರಿ, ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಬರಬೇಕಾದ ಸೌಲಭ್ಯವನ್ನು ಪಡೆದುಕೊಳ್ಳುವಲ್ಲಿ ನಮ್ಮ ಕೇಂದ್ರದ ಪ್ರತಿನಿಧಿಗಳೂ ಕೂಡ ಪ್ರಯತ್ನ ಮಾಡಲಿಲ್ಲ. ಒಟ್ಟಿನಲ್ಲಿ ನಮ್ಮ ರಾಜ್ಯಕ್ಕೆ ಬೇಕಾದ ಸೌಲಭ್ಯವನ್ನು ಪಡೆದುಕೊಳ್ಳುವಲ್ಲಿ ಏನು ದೃಢ ನಿರ್ಧಾರವನ್ನು ರಾಜ್ಯ ಸರ್ಕಾರ ಮಾಡುತ್ತದೆ ಎಂಬುದನ್ನು ತಿಳಿಸಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ನನ್ನ ಉತ್ತರವನ್ನು ಮಾನ್ಯ ಸದಸ್ಯರೇ ಹೇಳಿದ್ದಾರೆ.

ಹೇಮಾವತಿ ನೀರಾವರಿ ಯೋಜನೆ

171 - ಶ್ರೀ ಎಸ್. ಷಫಿ ಅಹ್ಮದ್ (ತುಮಕೂರು) : ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೇಮಾವತಿ ಯೋಜನೆಯ ಒಟ್ಟು ಅಂದಾಜು ಮೊತ್ತ ಎಷ್ಟು ಮತ್ತು ಈವರೆಗೆ ವೃತ್ತಾವಾರು ಖರ್ಚಾದ ಮೊತ್ತದ ವಿವರ ?

ಆ) ತುಮಕೂರು ನಾಲೆಯ ಕಾಮಗಾರಿಯ ಈಗಿನ ಹಂತ ಹಾಗೂ ಬುಗುಡನಹಳ್ಳಿ ಕೆರೆಯವರೆಗೆ ಕಾಮಗಾರಿಯನ್ನು ಯಾವಾಗ ಮುಗಿಸಲಾಗುವುದು ?

ಇ) ಅಡ್ಡಮೋರಿ ಮತ್ತು ವಿತರಣಾ ನಾಲೆಗಳ ಕಾಮಗಾರಿಗಳ ಈಗಿನ ಹಂತ: (ವಿಭಾಗಾವಾರುಮಾಹಿತಿಗಳನ್ನು ಹಾಗೂ ವೆಚ್ಚದ ವಿವರಗಳನ್ನು ಕೊಡುವುದು)

ಈ) ಸಮಾನಾಂತರ ಮೇಲ್ಗಾಲುವೆ ಮತ್ತು ವೈ ನಾಲಾ ಪಂಕ್ತಿಯ ಕೆಲಸಗಳನ್ನು ಯಾವಾಗ ಮುಗಿಸಲಾಗುವುದು.

ಉ) ಈವರೆಗಿನ ಖರ್ಚಾದ ಮೊತ್ತ ಹಾಗೂ ಯೋಜನೆಯ ಅಂದಾಜು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ರೂ. 588.00 ಕೋಟಿಗಳು (85-86ರ ದರಪಟ್ಟಿಯ ಪ್ರಕಾರ)

			ಕೋಟಿಗಳು
1)	ಹೇಮಾವತಿ ಯೋಜನಾ ವೃತ್ತ	ರೂ.	163.92
2)	ಹೇಮಾವತಿ ನಾಲಾ ವೃತ್ತ	ರೂ.	160.00
3)	ತುರುವೇಕೆರೆ ವೃತ್ತ	ರೂ.	76.48

4) ಹೇಮಾವತಿ ಎಡದಂಡೆ ನಾಲಾ ವೃತ್ತ ಕೆ.ಆರ್.ಪೇಟೆ. ರೂ. 105.20

5) ಅಧೀಕ್ಷಕ ಅಭಿಯಂತರರು (ವಿನ್ಯಾಸ) ತುಮಕೂರು ವೃತ್ತ ರೂ. 48.40

ಆ) ತುಮಕೂರು ಉಪ ನಾಲೆಯ ಒಟ್ಟು ಉದ್ದ 240 ಕಿ.ಮೀ.ಗಳು 0 ಕಿ.ಮೀ.ನಿಂದ 170 ಕಿ.ಮೀ. ವರೆಗೆ ನಾಲಾ ಪಥವನ್ನು ಅನುಮೋದಿಸಲಾಗಿದೆ. 0 ಕಿ.ಮೀ. ನಿಂದ 131 ವರೆಗಿನ ನಾಲಾ ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿರುತ್ತದೆ. ಬುಗಡನಹಳ್ಳಿ ಕೆರೆಯವರೆಗೆ ಕಾಮಗಾರಿಯನ್ನು ಅಂದರೆ 125ನೇ ಕಿಮೀವರೆಗೆ ಡಿಸೆಂಬರ್ 94ರವೇಳೆಗೆ ಪೂರ್ಣಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಇ) ವಿತರಣಾ ನಾಲೆಯ ವಿವರ :

ತುಮಕೂರು ಉಪನಾಲೆಯ 0 ರಿಂದ 107 ಕಿ.ಮೀ. ವರೆಗೆ 17 ವಿತರಣಾ ನಾಲೆಗಳು ಬರುತ್ತಿದ್ದು, ಈ ಪೈಕಿ... ರಿಂದ 12, 14, 15, 17, 17(ಎ) ವಿತರಣಾ ನಾಲಾ ಪಥಕ್ಕೆ ವಾಟರ್ ಪ್ಲಾನಿಂಗ್ ಮಂಜೂರಾತಿ ನೀಡಿದೆ. ಮೇಲಿನ ವಿತರಣಾ ನಾಲಾ ಕೆಲಸಗಳು ಪ್ರಾರಂಭಗೊಂಡಿದ್ದು ಕೆಲಸಗಳು ಪ್ರಗತಿ ವಿವಿಧ ಹಂತದಲ್ಲಿ ಇರುತ್ತದೆ.

ನಾಗಮಂಗಲ ಉಪನಾಲೆಯ 0 ಯಿಂದ 42 ಕಿ.ಮೀ ವರೆಗೆ 9 ವಿತರಣಾ ನಾಲೆಗಳು ಬರುತ್ತಿದ್ದು 9 ವಿತರಣಾ ನಾಲಾ ಪಥಕ್ಕೆ ವಾಟರ್ ಪ್ಲಾನಿಂಗ್ ಮಂಜೂರಾತಿ ನೀಡಿದ್ದು ಕಾಮಗಾರಿಗಳ ವಿವಿಧ ಪ್ರಗತಿಯಲ್ಲಿದೆ.

ಅಡ್ಡಮೋರಿಗಳ ವಿವರ :

ತುಮಕೂರು ಇಂದ.... 126ನೇ ಕಿ.ಮೀ. ಮತ್ತು ನಾಗಮಂಗಲದಿಂದ 62 ಕಿ.ಮೀ. ಉಪನಾಲೆಗಳ ಅಡಿಯಲ್ಲಿ ಅಡ್ಡ ಮೋರಿಗಳ ಕೆಲಸಗಳಿದ್ದು 12.93ರ ಹಂತಕ್ಕೆ 171 ಕಾಮಗಾರಿಗಳು ಮುಗಿದಿದ್ದು, ಅಡ್ಡ ಮೋರಿಗಳ ಕೆಲಸಗಳು ವಿವಿಧ ಹಂತದಲ್ಲಿರುತ್ತದೆ.

ವಿಭಾಗಾವಾರು ನಾಗಮಂಗಲ ಬ್ರಾಂಚ್ ನಾಲೆ ಮತ್ತು ತುಮಕೂರು ಬ್ರಾಂಚ್ ನಾಲೆಗಳಲ್ಲಿ ಸಿ.ಡಿ. ಕಾಮಗಾರಿಗಳ ಮತ್ತು ವಿತರಣಾ ನಾಲೆಯ್ಗು ವೆಚ್ಚ ಮಾಡಲಾಗಿರುವ ವಿವರಗಳು.

ವಿಭಾಗದ ಹೆಸರು		ಸಿ.ಡಿ. ಕಾಮಗಾರಿಗಳಿಗೆ ವೆಚ್ಚ (ಲಕ್ಷ ರೂ.ಗಳಲ್ಲಿ)	ವಿತರಣಾ ನಾಲೆಯ ವೆಚ್ಚ (ರೂ.ಲಕ್ಷಗಳಲ್ಲಿ)
1.	ನಂ.4 ಹೆಚ್‌ಎಲ್‌ಬಿಸಿ, ವಿಭಾಗ ತುರುವೇಕೆರೆ	871.96	22.02
2.	ಹೇಮಾವತಿ ನಾಲಾ ವಿಭಾಗ, ಯಡಿಯೂರು	271.83	6.06
3.	ನಂ.1ನೇ ಹೇಮಾವತಿ ನಾಲಾ ವಿತರಣಾ ವಿಭಾಗ, ಕಿಬ್ಬನಹಳ್ಳಿ	170.54	16.05
4.	ನಂ.2ನೇ ಹೇಮಾವತಿ ನಾಲಾ ವಿತರಣಾ ವಿಭಾಗ, ಗುಬ್ಬಿ	108.54	136.56
5.	ಹೇಮಾವತಿ ನಾಲಾ ವಿಭಾಗ, ತುಮಕೂರು	303.52	-
6.	ಹೇಮಾವತಿ ನಾಲಾ ತನಿಖಾ ವಿಭಾಗ, [illegible]	303.93	11.11

ಈ) ಜೂನ್ 94ರ ಅಂತ್ಯಕ್ಕೆ ಮುಗಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಉ) 1985-86ನೇ ಸಾಲಿನ ದರಪಟ್ಟಿಯಂತೆ ರೂ 588.00 ಕೋಟಿಗಳು. ಡಿಸೆಂಬರ್ 93ರ ಅಂತ್ಯದವರೆಗೆ ಖರ್ಚಾಗಿರುವ ಮೊತ್ತ ರೂ 615 ಕೋಟಿಗಳು.

ಶ್ರೀ ಷಫಿ ಅಹಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಇವತ್ತು ಹೇಮಾವತಿ ಯೋಜನೆಯಲ್ಲಿ ಸುಮಾರು 588 ಕೋಟಿ ರೂಪಾಯಿ 85-86ರಲ್ಲಿ ಎಸ್ಟಿಮೇಟ್ ಆಗಿತ್ತು ಆದರೆ 93 ಡಿಸೆಂಬರ್ ವರೆಗೆ 615 ಕೋಟಿ ರೂಪಾಯಿ ವೆಚ್ಚವಾಗಿದೆ ಎಂದು ಹೇಳಿದ್ದಾರೆ. ಆದ್ದರಿಂದ ತಾವು 94ರಲ್ಲಿ ತಮ್ಮ ಕೊಟ್ಟಿರುವ ಉತ್ತರದಲ್ಲಿ ತಮ್ಮ ತಮ್ಮ ಕೆಲಸವನ್ನು ಪೂರೈಸಿಕೊಳ್ಳ ಬೇಕಾದರೆ ಇನ್ನು ಎಷ್ಟು ಹಣ ಬೇಕಾಗುತ್ತದೆ ಮತ್ತು ಇವತ್ತು ಹೇಮಾವತಿ ಪೆಂಡಿಂಗ್ ಬಿಲ್ಸ್ ಎಷ್ಟು ಇದೆ ತಮ್ಮ ಅವಧಿಯಲ್ಲಿ ಈ ಕಾರ್ಯವನ್ನು ಮುಗಿಸಬೇಕಾದರೆ ಕನಿಷ್ಟ ಪಕ್ಷ ತಿಂಗಳಿಗೊಮ್ಮೆ 10 ಕೋಟಿ ರೂಪಾಯಿಯಾದರೂ ತಾವು ಮೀಸಲಾಗಿಟ್ಟರೆ ಮಾತ್ರ 94ರಲ್ಲಿ ಈ ಕೆಲಸ ಪೂರ್ತಿಗೊಳಿಸಲು ಸಾಧ್ಯವಾಗುತ್ತದೆ. ಸುಮಾರು 25 ಕೋಟಿ ರೂಪಾಯಿ ಪೆಂಡಿಂಗ್ ಬಿಲ್ಸ್ ಇದೆ. ತಮ್ಮ ಯೋಜನೆಯಂತೆ ತಿಂಗಳಿಗೆ 10 ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಅಷ್ಟು ಹಣವನ್ನು ಒದಗಿಸಿಕೊಟ್ಟು ಈ ಕೆಲಸವನ್ನು 94 ರಲ್ಲಿ ಪೂರ್ತಿಗೊಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಪ್ರಯತ್ನ ಮಾಡುತ್ತೇನೆ.

ಆರಾಧನಾ ಯೋಜನೆಯಡಿಯಲ್ಲಿ ಶಿವಾಜಿನಗರ ಕ್ಷೇತ್ರದಲ್ಲಿ ಕೈಗೊಂಡ ಯೋಜನೆಗಳು

160 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆರಾಧನ ಯೋಜನೆಯು ಆರಂಭವಾದಂದಿನಿಂದ ಬೆಂಗಳೂರು ಶಿವಾಜಿನಗರದ ವಿಧಾನಸಭಾ ಕ್ಷೇತ್ರದಲ್ಲಿ ಆದರಡಿಯಲ್ಲಿ ಕೈಗೊಂಡ ಯೋಜನೆಗಳೆಷ್ಟು ?

ಆ) ಪ್ರತಿ ಯೋಜನೆಯ ಅಂದಾಜು ಮೊಬಲಗು ಮತ್ತು ಖರ್ಚು ಮಾಡಿರುವ ಹಣದ ವಿವರ ?

ಇ) ಕಾಮಗಾರಿಗಳು ಅನುಮೋದಿತವಾಗಿದ್ದು ಹಣವು ಮಂಜೂರಾಗಿದ್ದರೂ ಸಹ ಸದರೀ ಯೋಜನೆಗಳನ್ನು ಪೂರ್ಣವಾಗಿ ಅನುಷ್ಠಾನಗೊಳಿಸಲಿಲ್ಲವೇಕೆ ?

ಈ) ವಸಂತನಗರದ ಬಡಾವಣೆಯಲ್ಲಿರುವ ಶ್ರೀ ಮುನೇಶ್ವರ ದೇವಾಲಯದ ಕಾಮಗಾರಿಗೆ ಸರ್ಕಾರವು ಮಂಜೂರಾತಿ ನೀಡಿದ್ದರೂ ಸಹ ಮತ್ತು 100 ವರ್ಷಗಳ ಹಿಂದೆಯೇ ಸ್ಥಳೀಯ ನಾಗರೀಕರಿಗೆ ದೇವಾಲಯ ನಿರ್ಮಿಸಲು ಸಿ.ಐ.ಟಿ.ಬಿ.ಯವರು ಆವರಣವನ್ನು ಮೀಸಲಾಗಿಟ್ಟು, ಪಕ್ಕದಲ್ಲಿರುವ ಜಾಗದಲ್ಲಿ ವಿದ್ಯಾರ್ಥಿನಿಲಯಕ್ಕೆ ನೀಡಿ ದೇವಸ್ಥಾನ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ವಿಫಲರಾಗಿರುವುದು ಏಕೆ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ಮುಜರಾಯಿ ಸಚಿವರು) :

ಅ) ಒಟ್ಟು 15 ಯೋಜನೆಗಳು.

ಆ) ವಿವರವನ್ನು ಅನುಬಂಧ-ಎ ನಲ್ಲಿ ತಿಳಿಸಿದೆ.

ಇ) ಒಟ್ಟು 15 ಯೋಜನೆಯಲ್ಲಿ 6 ಯೋಜನೆ ಮುಕ್ತಾಯವಾಗಿದೆ. 6 ಯೋಜನೆ ಪ್ರಗತಿಯಲ್ಲಿದೆ 3 ಯೋಜನೆ ಪ್ರಾರಂಭಿಸಬೇಕಾಗಿದೆ.

ಈ) ನಿವೇಶನದ ಬಗ್ಗೆ ವಿವಾದವಿದ್ದು ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಲಾಗಿದೆ

ಅನುಬಂಧ - 'ಎ'

ಕ್ರಮ ಸಂಖ್ಯೆ	ದೇವಾಲಯದ ಹೆಸರು	ಅಂದಾಜು ವೆಚ್ಚ	ಈವರೆಗೆ ಆದ ಖರ್ಚು
		ರೂ. ಪೈ.	ರೂ.ಪೈ.
1)	ಶ್ರೀ ಮುನೇಶ್ವರ ದೇವಾಲಯ ಕಾಬ್ಲರ್ಸ್ ಕಾಲೋನಿ	6,000-00	3,733-00
2)	ಶ್ರೀ ಗಣೇಶ ದೇವಾಲಯ ಶಿವಾಜಿನಗರ	10,500-00	9,7500-00
3)	ಶ್ರೀ ಮಾರಮ್ಮ ದೇವಾಲಯ ಸ್ವೀಪರ್ಸ್ ಕಾಲೋನಿ	13,000-00	7,630-00
4)	ಶ್ರೀ ಮುನೇಶ್ವರ ದೇವಾಲಯ ಕಮರ್ಷಿಯಲ್‌ಸ್ಟ್ರೀಟ್	15,000-00	ಕೆಲಸ ಮುಗಿದಿದೆ.
5)	ಶ್ರೀ ಮುತ್ತು ಮಾರಿಯಮ್ಮ ದೇವಾಲಯ ಸಂಪಂಗಿರಾಮನಗರ	16,400-00	ಕೆಲಸ ಪ್ರಗತಿಯಲ್ಲಿದೆ.
6)	ಶ್ರೀ ಯಲ್ಲಮ್ಮ ದೇವಾಲಯ ಎಸ್.ಆರ್. ನಗರ	11,500-00	9,7000-00
7)	ಶ್ರೀ ಸೊಲ್ಲಾಪುರದಮ್ಮ ದೇವಾಲಯ ಕೋದಂಡರಾಮಪುರ	20,000-00	ಕಾಮಗಾರಿ ಪ್ರಾರಂಭಿಸಬೇಕಾಗಿದೆ.
8)	ಶ್ರೀ ಆಂಜನೇಯ ದೇವಾಲಯ ವಸಂತನಗರ	15,000-00	ಕೆಲಸ ಮುಗಿದಿದೆ.
9)	ಶ್ರೀ ಮುನೇಶ್ವರ ದೇವಾಲಯ ವಸಂತನಗರ	20,000-00	ಕಾಮಗಾರಿ ಪ್ರಾರಂಭಿಸಬೇಕಿದೆ.
10)	ಶ್ರೀ ರಾಮ ದೇವಾಲಯ ಬ್ರಾಡ್ವೇ ಕ್ರಾಸ್	20,000-00	19,600-00
11)	ಶ್ರೀ ದೊಡ್ಡಮ್ಮ ದೇವಾಲಯ ತಿಮ್ಮಯ್ಯ ರಸ್ತೆ	20,000-00	ಕೆಲಸ ಮುಗಿದಿದೆ
12)	ಶ್ರೀ ಮುನೇಶ್ವರ ದೇವಾಲಯ ಕುಮಾರ ಪಾರ್ಕ್	20,000-00	20,000-00
13)	ಶ್ರೀ ಈಶ್ವರ ದೇವಾಲಯ ತಿಮ್ಮಯ್ಯ ರಸ್ತೆ	20,000-00	ಕೆಲಸ ಮುಗಿದಿದೆ.
14)	ಶ್ರೀ ಗಣೇಶ ದೇವಾಲಯ ಬ್ರಾಡ್ವೇ ಕ್ರಾಸ್	20,000-00	ಕೆಲಸ ಮುಗಿದಿದೆ.
15)	ಶ್ರೀ ಮದ್ದೂರಮ್ಮ ದೇವಾಲಯ ಬ್ರಾಡ್ವೇ ಕ್ರಾಸ್	20,000-00	ಕೆಲಸ ಪ್ರಾರಂಭಿಸಬೇಕು.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೇ ಸುಮಾರು 12 ತಿಂಗಳಿಂದ ಈ ಪ್ರಶ್ನೆ ತಮ್ಮ ಮುಂದೆ ಬರುತ್ತಿದೆ, ಆದರೆ ಮಾನ್ಯ ಸಚಿವರು 2-3-93ರಲ್ಲಿ ನಾನು ಕಳುಹಿಸಿದ ಕಾಲ್ ಅಟೆನ್ಷನ್ಗೆ ಅಂದಿನ ರೆವಿನ್ಯೂ ಮಿನಿಸ್ಟರ್ ಪರವಾಗಿ ಉತ್ತರ ಕೊಟ್ಟರು. ಆ ಆಶ್ವಾಸನೆ ಪ್ರಕಾರ ವಸಂತನಗರ ವಿಸ್ತರಣಾ ಬಡಾವಣೆಯಲ್ಲಿರುವ ಮುನೇಶ್ವರ ದೇವಸ್ಥಾನದ ನಿವೇಶನ ಏನು ಇದೆ ಅದು ಸರ್ಕಾರಕ್ಕೆ ಸೇರಿದ್ದು, ಅದನ್ನು ಖಾಸಗಿಯವರು ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿ ನಾನು ಪದೇ ಪದೇ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಖಾಸಗಿಯವರು ನಮ್ಮದು ಎಂದು ಹೇಳಿ ವಶಪಡಿಸಿಕೊಳ್ಳುವ ಹಟ ಹಿಡಿದಿದ್ದಾರೆ. ಸಿ.ಐ.ಡಿ.ಬಿ. ನವರು ಆ ಭಾಗವನ್ನು ಬಿಟ್ಟು ಉಳಿದ ಭಾಗವನ್ನು ಮಾತ್ರ ವಿದ್ಯಾರ್ಥಿ ನಿಲಯಕ್ಕೆ ಕೊಟ್ಟಿದ್ದಾರೆ. ಆರಾಧನಾ ಸ್ಕೀಮಿನಲ್ಲಿ ಇಪ್ಪತ್ತು ಸಾವಿರ ರೂ.ಗಳು ಮಂಜೂರಾಗಿದೆ. ಆದರೆ ದೇವಸ್ಥಾನವನ್ನು ಕಟ್ಟುವುದಕ್ಕೆ ಅಡಚಣೆ ತಂದಿದ್ದಾರೆ. ತಾವು ಉತ್ತರದಲ್ಲಿ ಈ ನಿವೇಶನದ ಬಗ್ಗೆ ಇರತಕ್ಕ ಸಮಸ್ಯೆಗಳನ್ನು ಬಗೆಹರಿಸಿ, ಕ್ರಮಕೈಗೊಳ್ಳುತ್ತೇವೆ ಎಂದು ಹೇಳಿದ್ದೀರಿ, ಏನು ಕ್ರಮ ಕೈಗೊಂಡಿದ್ದೀರಿ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಸದಸ್ಯರು ಹೇಳಿರುವುದೆಲ್ಲಾ ನಿಜ. ಈ ಜಾಗ ದೇವಸ್ಥಾನಕ್ಕೆ ಸೇರಿದ್ದು. ದೇವಸ್ಥಾನ ಕಟ್ಟುವುದಕ್ಕೆ ಹಣ ಒದಗಿಸಿದ್ದಾರೆ. ಕೆಲಸ ಅಲ್ಲಿ ಪ್ರಾರಂಭವಾಗುವಾಗ ಪಕ್ಕದ ನಿವೇಶನದವರು ತೊಂದರೆ ಕೊಡುತ್ತಿದ್ದಾರೆ. ದೇವಸಾನದ ಕೆಲಸ ಕಾರ್ಯಗಳನ್ನು ಮಾಡಲು ಕೋರ್ಟಿಗೂ ಕೂಡ ಹೋಗಿದ್ದಾರೆ.

ಕೋರ್ಟ್ನಲ್ಲಿ ಯಾವ ತಡೆಯಾಜ್ಞೆ ಇಲ್ಲದಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಈ ಕೆಲಸವನ್ನು ಪ್ರಾರಂಭ ಮಾಡಲು ಆದೇಶವನ್ನು ನಾನು ಕೊಡುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ: ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ನಾನು ಇದರ ಬಗ್ಗೆ ಡಿಪಾರ್ಟ್ಮೆಂಟ್ನವರಿಗೆ, ಡೆಪ್ಯೂಟಿ ಕಮೀಷನವರಿಗೆ, ತಹಶೀಲ್ದಾರವರಿಗೆ ಎಲ್ಲರಿಗೂ ಹೇಳಿದ್ದೇನೆ. ಅವರು ಯಾರೂ ಕ್ರಮ ತೆಗದುಕೊಳ್ಳಲಿಲ್ಲ. ಇದು ಸಿ.ಐ.ಡಿ.ಬಿ.ಗೆ ಸೇರಿದ್ದು ಎಂದು ಹೇಳಿದ್ದಾರೆ. ಸಿ.ಐ.ಡಿ.ಬಿ.ಯವರು ರೆಸಲ್ಯೂಷನ್ ಮಾಡಿದ ಹಾಗೆ ಆ ಒಂದು ಭಾಗವನ್ನು ಬಿಟ್ಟು ಉಳಿದ ಭಾಗವನ್ನು ವಿದ್ಯಾರ್ಥಿನಿಲಯಕ್ಕೆ ಕೊಟ್ಟಿದ್ದಾರೆ. ಬಿ.ಡಿ.ಎ. ರವರು ನಮ್ಮದು ಎಂದು ಹೇಳಿದ್ದಾರೆ. ಆದರೂ ಯಾರು ಮುಂದೆ ಬರುವುದಿಲ್ಲ, ಡೆಪ್ಯೂಟಿ ಕಮೀಷನವರಾಗಲೀ, ಮುಜರಾಯಿ ಇಲಾಖೆಯವರಾಗಲೀ, ಇಂಜಿನಿಯರ್ರಾಗಲೀ, ಯಾರು ಈ ಬಗ್ಗೆ ಗಮನಹರಿಸುತ್ತಿಲ್ಲ. ನಮ್ಮ ಮಾನ ಮರ್ಯಾದೆ ಆ ಜನಗಳ ಮಧ್ಯೆ ಹೋಗಿದೆ. ನೀವು ಶಾಸಕರಾಗಿ ಏನೂ ಮಾಡಿದ್ದೀರಿ ಎಂದು ಕೇಳುತ್ತಾರೆ? ಮಾನ್ಯ ಮಂತ್ರಿಗಳು ಕೇವಲ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ ಸಾಕಾಗುವುದಿಲ್ಲ, ಆದೇಶ ಕೊಡುತ್ತೇವೆ ಎಂದು ಹೇಳಿದರೆ ಸಾಕಾಗುವುದಿಲ್ಲ, ಎಷ್ಟು ದಿನಗಳಲ್ಲಿ ಇದನ್ನು ಮಾಡುತ್ತೇವೆ ಎಂದು ಹೇಳಬೇಕು. ಮಾಡದಿದ್ದರೆ ಏನು ಕ್ರಮವನ್ನು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತೆಗೆದುಕೊಳ್ಳುತ್ತೇವೆ ಎಂಬುದನ್ನು ಹೇಳಬೇಕು ಎಂದು ತಮ್ಮಲ್ಲಿ ನಿವೇದಿಸಿಕೊಳ್ಳುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ: ಈ ಬಗ್ಗೆ ಬಿ.ಡಿ.ಎ. ಕೂಡ ಒಪ್ಪಿಕೊಂಡಿದೆ. ಈ ಜಾಗ ದೇವಸ್ಥಾನಕ್ಕೆ ಸೇರಿದೆ. ಇದರ ಬಗ್ಗೆ ಕಾಗದ ಪತ್ರಗಳು ನಡೆದಿದೆ. ಹಿಂದೆ ಸಿ.ಐ.ಡಿ.ಬಿ. ಇದ್ದಾಗ ಇದು ಪೂಜಾ ಸ್ಥಳ ಎಂದು ಉಳಿಸಿಕೊಂಡು ಬಂದಿದ್ದಾರೆ. ಆದುದರಿಂದ ಎಲ್ಲಾ ದೃಷ್ಟಿಯಿಂದಲೂ ಕೂಡ ಇದು ಪೂಜಾ ಸ್ಥಳವಾಗಿ ಮುಂದುವರೆಯುತ್ತದೆ. ಮಧ್ಯೆದಲ್ಲಿ ಪಕ್ಕದ ನಿವೇಶನದವರು ತಕರಾರು ಹಾಕಿದ್ದರಿಂದ ಇದರ ಬಗ್ಗೆ ಸ್ವಲ್ಪ ವಿಚಾರಣೆ ಆಗಿದೆ. ಈ ಎಲ್ಲಾ ಸಮಸ್ಯೆಗಳ ವಿಚಾರಣೆ ನಡೆಯುವುದಕ್ಕೆ ಸ್ವಲ್ಪ ನಿಧಾನವಾಗಿದೆ. ಆದರೆ ಈಗ ಯಾವ ತಡೆಯಾಜ್ಞೆ ಇಲ್ಲದಿರುವುದರಿಂದ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಕೂಡ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದಾರೆ. ಅದು ನಮಗೆ ಗೊತ್ತಾಗಿದೆ. ಆದುದರಿಂದ ಈ ಕೆಲಸವನ್ನು ಮುಂದುವರಿಯುವುದಕ್ಕೆ ಯಾವ ಅಡಚಣೆಯೂ ಇಲ್ಲ. ಇದನ್ನು ಮುಂದುವರೆಸುತ್ತೇವೆ.

ಶ್ರೀ ಎ.ಕೆ. ಅನಂತಕೃಷ್ಣ: ಈಗ ಏನು ಎಸ್ಟಿಮೇಟ್ ಕೊಟ್ಟಿದ್ದಾರೆ. ಇದರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇನ್ನೂ ಬೇರೆ 15 ಕೆಲಸಗಳನ್ನು ತೆಗೆದುಕೊಂಡಿದ್ದೀರಿ ಎಂದು ಹೇಳಿದ್ದೀರಿ. ಒಂದು ವಿಷಯವನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಯಾವುದೇ ಒಂದು ದೇವಸ್ಥಾನಕ್ಕೆ ಸರಿಯಾದ ಎಸ್ಟಿಮೇಟನ್ನು ಮಾಡುವುದಿಲ್ಲ. ಯಾವುದೇ ಪ್ಲಾನ್ ಮಾಡುವುದಿಲ್ಲ. ಯಾವ ಒಂದು ಶಿಸ್ತಿನ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡುವುದಿಲ್ಲ. ಯಾವುದೇ ಉಸ್ತುವಾರಿ ಇರುವುದಿಲ್ಲ, ಅಲ್ಲಿ ಯಥೇಚ್ಛವಾಗಿ ಯಾರು ಬೇಕಾದರೂ, ಏನು ಬೇಕಾದರೂ ಮಾಡಿಕೊಳ್ಳಬಹುದು. ಈ ಹದಿನೈದು ಕೆಲಸಗಳಿಗೆ ಸರಿಯಾಗಿ ಪ್ಲಾನನ್ನು ಇಂಜಿನಿಯರುಗಳು ಮಾಡಿರುವುದಿಲ್ಲ, ಎಕ್ಸಿಕ್ಯೂಟಿವ್ ಇಂಜಿನಿಯರ್ ಮಾಡಿರುವುದಿಲ್ಲ. ತಹಶೀಲ್ದಾರರು ಸರಿಯಾದ ರೀತಿಯಲ್ಲಿ ಮಾಡಿರುವುದಿಲ್ಲ. ಏನು ಕೆಲಸ ಮುಗಿದಿದೆ ನಾನು ಬಂದು ನೋಡಬೇಕು. ಇನ್ಸ್ಪೆಕ್ಷಗೆ ಬನ್ನಿ ಎಂದು ಹೇಳಿದರೆ ಈ ಅಧಿಕಾರಿಗಳು ಬರುವುದಕ್ಕೆ ತಯಾರಿಲ್ಲ. ಅವರಿಗೆ ನನ್ನ ಜೊತೆಯಲ್ಲಿ ಬರುವುದಕ್ಕೆ ಭಯವಾಗುತ್ತದೆ. ನಾನು ಯಾರ ಹತ್ತಿರ ದುಡ್ಡು ಕೇಳುವುದಿಲ್ಲ. ಈ ಅಧಿಕಾರಿಗಳು ನನ್ನ ಮುಂದೆ, ಡೆಪ್ಯೂಟಿ ಕಮೀಷನರವರ ಮುಂದೆ ಬರುವುದಿಲ್ಲ

ಹಣವನ್ನು ತಿಂದು ಹಾಕಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ? ಇದರ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತೀರಾ?

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಏನಾದರೂ ಈ ವಿಷಯದಲ್ಲಿ ತೊಡಕು ಇದ್ದರೆ ಡೆಪ್ಯೂಟಿ ಕಮೀಷನರವರಿಗೆ ಸೂಚನೆ ಕೊಟ್ಟು ತಕ್ಷಣ ಈ ಕ್ಷೇತ್ರದಲ್ಲಿ ಏನು ತೊಂದರೆಯಿಂದ, ಅದನ್ನು ಪರಿಶೀಲನೆ ಮಾಡಿ ಅಲ್ಲಿಯೇ ಬಗೆಹರಿಸಲು ತಿಳಿಸುತ್ತೇವೆ. ಇಲ್ಲದಿದ್ದರೆ ಸರ್ಕಾರಕ್ಕೆ ವರದಿ ಕೊಡಿ ಎಂದು ಕೇಳುತ್ತೇನೆ.

ಕೃಷ್ಣ ಕಾವೇರಿ ಯೋಜನೆಯ ಅನುಷ್ಠಾನ

5 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣ ಕಾವೇರಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಇದುವರೆವಿಗೆ ಸರ್ಕಾರ ಬಿಡುಗಡೆಮಾಡಿರುವ ಹಣವೆಷ್ಟು?

ಆ) ಈ ವರ್ಷದ ಆಯವ್ಯಯದಲ್ಲಿ ಕೃಷ್ಣಾ ಕಾವೇರಿ ಯೋಜನೆಗೆ ಒದಗಿಸಲು ಉದ್ದೇಶಿಸಿರುವ ಹಣದ ಮೊತ್ತವೆಷ್ಟು?

ಇ) ಕೃಷ್ಣ ಯೋಜನೆಯನ್ನು ಎರಡು ಸಾವಿರ ವರ್ಷದೊಳಗೆ ಮುಗಿಸಲು ಸರ್ಕಾರದವರು ಕೈಗೊಂಡಿರುವ ಯೋಜನೆಗಳ ವಿವರಗಳೇನು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):

ಅ) 1993 ಡಿಸೆಂಬರ್ ಅಂತ್ಯದವರೆಗೆ ಕೃಷ್ಣ ಕೊಳದ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಮೇಲೆ 2107 ಕೋಟಿ ರೂಗಳನ್ನು ಮತ್ತು ಕಾವೇರಿ ಕೊಳ್ಳದ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಮೇಲೆ 1305 ಕೋಟಿ ರೂಗಳನ್ನು ವೆಚ್ಚ ಮಾಡಲಾಗಿದೆ.

ಆ) 1993-94ನೇ ಆಯವ್ಯಯದಲ್ಲಿ ಕೃಷ್ಣ ಕೊಳ್ಳದ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ 406.19 ಕೋಟಿ ರೂ.ಗಳ ಮತ್ತು ಕಾವೇರಿ ಕೊಳ್ಳದ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ 278.11 ಕೋಟಿ ರೂ.ಗಳ ಅನುದಾನವನ್ನು ನಿಗದಿಗೊಳಿಸಲಾಗಿದೆ.

ಇ) ಕೃಷ್ಣ ಕೊಳ್ಳದಲ್ಲಿ ಪ್ರಸ್ತುತ ನಿರ್ಮಾಣ ಹಂತದಲ್ಲಿರುವ ಹಾಗೂ ಇನ್ನೂ ಕೈಗೊಳ್ಳಬೇಕಾಗಿರುವ ಎಲ್ಲ ನೀರಾವರಿ ಯೋಜನೆಗಳನ್ನು ಕ್ರಿ.ಶ. 2000 ಇಸವಿ ಒಳಗೆ ಪೂರ್ಣಗೊಳಿಸಲು ಸಮಗ್ರ ಯೋಜನೆಯನ್ನು ತಯಾರಿಸಲಾಗಿದ್ದು ಇದಕ್ಕೆ ಅನುಗುಣವಾಗಿ ಆರ್ಥಿಕ ಮತ್ತು ಭೌತಿಕ ಕಾರ್ಯಕ್ರಮಗಳನ್ನು ರೂಪಿಸಿ ಅದರ ಅನುಸಾರ ಈ ಎಲ್ಲ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು.

12.15 ಪಿ.ಎಂ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಗಳು ಈ ಎರಡೂ ಯೋಜನೆಗಳಿಗಾಗಿ ಇದುವರೆಗೂ 3,412 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ ಎಂದು ಹೇಳಿದ್ದಾರೆ. ಇದರಲ್ಲಿ ಪಾವತಿಯಾಗಿರತಕ್ಕ ಹಣ ಎಷ್ಟು? ಬಾಕಿ ಉಳಿದಿರತಕ್ಕ ಹಣ ಎಷ್ಟು? ಎರಡು ಸಾವಿರ ಇಸವಿಯೊಳಗೆ ಈ ಯೋಜನೆಗಳನ್ನು ಪೂರ್ಣಗೊಳಿಸಲು ಸಮಗ್ರವಾದ ಯೋಜನೆ ತಯಾರಾಗಿದೆ ಎಂದು ಹೇಳಿದ್ದೀರಿ. ಅದಕ್ಕೆ ಅನುಗುಣವಾಗಿ ಆರ್ಥಿಕವಾಗಿ, ಭೌತಿಕವಾಗಿ ಯೋಜನೆಗಳ ವಿವರ ಏನು? ಕೃಷ್ಣ ಬಗ್ಗೆ ಸರ್ವ ವಿರೋಧ ಪಕ್ಷಗಳ ಸಭೆಯನ್ನು ಕರೆಯುತ್ತೇವೆ ಎಂದು ಹೇಳಿ ಏಳೆಂಟು ತಿಂಗಳು ಆಯಿತು; ಇದುವರೆಗೂ ಕರೆಯಲಿಲ್ಲ? ಕೃಷ್ಣ ಕಾವೇರಿ ಕಣ್ಣೀರಿನ ಕಥೆಯನ್ನು ನೀವು ಕೊಟ್ಟಿರತಕ್ಕಂತ ಉತ್ತರವನ್ನು ನೋಡಿದರೆ ಬಗೆಹರಿಸುತ್ತೀರಿ ಎಂದು ನನಗಂತೂ ಅನ್ನಿಸುವುದಿಲ್ಲ. ಇದರ ಬಗ್ಗೆ ವಿಶೇಷವಾದಂಥ

ಚರ್ಚೆಗೆ ಒಂದು ಸಮಗ್ರವಾದ ಅವಕಾಶವನ್ನು ಕೊಡಬೇಕೆಂದು ನಾನು ತಮ್ಮ ಮುಂದೆ ಮೊರೆ ಹೋಗುತ್ತೇನೆ. ಇದರ ಕಣ್ಣೀರಿನ ಕತೆಯನ್ನು ಆ ಕೃಷ್ಣ ಪರಮಾತ್ಮನೇ ಕಾಪಾಡಬೇಕು; ಎರಡು ಮೂರು ಪ್ರಶ್ನೆ ಕೇಳುವುದರಿಂದ ಅದಕ್ಕೆ ಉತ್ತರ ಕೊಡುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ಕೊನೆಯದಾಗಿ ಕೇಂದ್ರದ ಜಲಸಂಪನ್ಮೂಲ ಸಚಿವರಿಗೂ ನಿಮಗೂ ನಡೆದಿರತಕ್ಕಂತ ಪತ್ರವ್ಯವಹಾರಗಳು ಏನು ಅದನ್ನು ಸಭೆಯ ಮುಂದಿಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆಗಳನ್ನು ಸದನದ ಮುಂದಿಟ್ಟಿದ್ದಾರೆ. ಕೃಷ್ಣ ಮತ್ತು ಕಾವೇರಿ ಈ ಎರಡೂ ಜಲಾನಯನ ಪ್ರದೇಶದಲ್ಲಿ ನಾವು ಇದುವರೆಗೂ ಎಷ್ಟು ಹಣವನ್ನು ಖರ್ಚು ಮಾಡಿದ್ದೇನೆ ಮತ್ತು ಎಷ್ಟು ಭೂಮಿಯನ್ನು ಇದರಲ್ಲಿ ನೀರಾವರಿ ಪ್ರದೇಶವನ್ನಾಗಿ ಮಾರ್ಪಾಡು ಮಾಡಿದ್ದೇವೆ ಎನ್ನುವುದರ ಬಗ್ಗೆ ಸ್ಥೂಲವಾದಂತ ವಿವರಗಳನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಏನು ತಮ್ಮಲ್ಲಿ ಮೊರೆ ಇಟ್ಟರು ಇದು ಬಹಳ ಪ್ರಾಮುಖ್ಯವಾದಂತ ವಿಚಾರ. ಈ ವಿಚಾರವನ್ನು ಕೇವಲ ಪ್ರಶ್ನೋತ್ತರ ಕಾಲದಲ್ಲಿ ನಾವು ತೀರ್ಮಾನ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಒಂದು ವಿಶೇಷವಾದಂತ ಚರ್ಚೆಗೆ ತಾವು ಅವಕಾಶ ಮಾಡಿಕೊಡುವುದಾದರೆ ಇದರ ಮೇಲೆ ಹೆಚ್ಚಿನ ಬೆಳಕು ಚೆಲ್ಲಬಹುದು ಅರ್ಥಪೂರ್ಣ ಚರ್ಚೆಯನ್ನು ನಡೆಸಬಹುದು ಎನ್ನುವುದರ ಬಗ್ಗೆ ಕೂಡ ಧ್ವನಿಗೂಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಅರ್ಧಗಂಟೆ ಚರ್ಚೆ ಆದರೆ ಸಾಲದು, ಕೃಷ್ಣ ಕಾವೇರಿ ಬಗ್ಗೆ ವಿಶೇಷವಾದಂಥ ಚರ್ಚೆಗೆ ಅವಕಾಶ ಕೊಡಬೇಕು. 18ನೇ ತಾರೀಖು ಸದನ ಮುಂದೆ ಹೋಗಬಹುದು, ಅಷ್ಟರೊಳಗೆ ಯಾವುದಾದರೂ ಒಂದು ದಿನ ನಿಗಧಿ ಮಾಡಿ ಆಳವಾದ ಚರ್ಚೆಗೆ ಅವಕಾಶ ಕೊಡಬೇಕು. ಸರ್ಕಾರದಿಂದ ಅನೇಕ ಉತ್ತರಗಳನ್ನು ನಾವು ನಿರೀಕ್ಷೆ ಮಾಡಬೇಕಾಗಿದೆ. ಕೇಂದ್ರ ಸರ್ಕಾರದೊಂದಿಗೆ ನಡೆದಿರತಕ್ಕ ಪತ್ರ ವ್ಯವಹಾರ,ಜಲಸಂಪನ್ಮೂಲ ಸಚಿವರೊಂದಿಗೆ ನಡೆದಿರತಕ್ಕ ಪತ್ರ ವ್ಯವಹಾರ, ನ್ಯಾಯಮಂಡಳಿಯಲ್ಲಿ ಏನೇನೂ ನಡೆದಿದೆ ಅದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಬೇಕಾಗಿದೆ....

ಅಧ್ಯಕ್ಷರು: ವಿಶೇಷವಾದಂಥ ಸಮಯವನ್ನು ನಿಗಧಿ ಪಡಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ: ಸ್ವಾಮಿ, 18ನೇ ತಾರೀಖು ಸಭೆ ಮುಗಿಯುತ್ತದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡಲಿಕ್ಕೆ ಕೊಟ್ಟಂಥ ಕಾರ್ಯಕ್ರಮದ ಪಟ್ಟಿ ಪ್ರತಿದಿನ ಪ್ರಿಂಟಾಗಿ ಬರುತ್ತಿತ್ತು. ಆದರೆ ಚರ್ಚೆ ಮಾಡುವುದಕ್ಕೆ ಆಗಲಿಲ್ಲ. ಕೃಷ್ಣ ಕಾವೇರಿ ಕಣ್ಣೀರಿನ ಕತೆ ಹಾಗೆ ಆಗುವುದು ಸರಿಯಲ್ಲ. ನಿರ್ದಿಷ್ಟವಾದ ದಿನವನ್ನು ತಾವು ಹೇಳಬೇಕಾಗುತ್ತದೆ.

ಅಧ್ಯಕ್ಷರು: ಎರಡು ಮೂರು ದಿನ ಕಾರ್ಯಕ್ರಮ ಇದೆ. ಅದನ್ನು ನೋಡಿ ನಾನು ತಮಗೆ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಮಗೆ ತಿಳಿಸುತ್ತೀರಾ?

ಅಧ್ಯಕ್ಷರು: ಹೌದು ತಿಳಿಸುತ್ತೇವೆ;

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ: ಮಾನ್ಯ ಅಧ್ಯಕ್ಷರೇ, ದಿನಾಂಕ 14-2-94ರ ಲಿಖಿತ ಮೂಲಕ ಉತ್ತರಿಸುವ 5ನೇ ಪಟ್ಟಿಯಲ್ಲಿರುವ 40 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 308,200, 232, 185, 184 , 203, 334 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು 33ಚುಕ್ಕೆ ಗುರುತು ಇಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ನೆಲಮಂಗಲ ತಾಲ್ಲೂಕು ಮಣ್ಣೆ-ಬರಗೂರು ರಸ್ತೆ ದುರಸ್ತಿ.

307 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು ಹೋಬಳಿ ಮಣ್ಣೆ-ಬರಗೂರು ರಸ್ತೆಯು ಬಸ್ಸು ಸಂಚಾರಕ್ಕೆ ಮತ್ತು ಸಾರ್ವಜನಿಕರು ಓಡಾಡಲು ಕಳೆದ 5-6 ವರ್ಷಗಳಿಂದ ಯೋಗ್ಯಕರವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ರಸ್ತೆಯನ್ನು ದುರಸ್ತಿ ಪಡಿಸಲು ಸರ್ಕಾರ ತೆಗೆದು ಕೊಂಡು ಕ್ರಮಗಳೇನು;

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಸದರಿ ರಸ್ತೆಯನ್ನು ಕಳೆದ ಸಾಲಿನಲ್ಲಿ ಮುಖ್ಯ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಿಂದ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ತೆಗೆದುಕೊಂಡಿದ್ದು ನಾದರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) 1993-94ರ ಸಾಲಿನಲ್ಲಿ ಈ ರಸ್ತೆಯ 8.0 ಕಿಮೀ. ಉದ್ದದಲ್ಲಿ 3.0 ಕಿಮೀ. ಉದ್ದಕ್ಕೆ ಮರು ಜಲ್ಲಿ ಹಾಕುವ ಕಾರ್ಯಕ್ರಮವಿದೆ. ಅನುದಾನದ ಲಭ್ಯತೆಯನ್ನು ಅನುಸರಿಸಿ ಈ ರಸ್ತೆಯನ್ನು ಸುಸ್ಥಿತಿಯಲ್ಲಿಡಲು ವಾರ್ಷಿಕ ನಿರ್ವಹಣಾ ಅನುದಾನದಲ್ಲಿ ಕ್ರಮ ಕೈಗೊಳ್ಳಲಾಗಿದೆ ಹಾಗೂ ಹಂತ ಹಂತವಾಗಿ ಈ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗುವುದು.

ಮಲೆನಾಡು ಅಭಿವೃದ್ಧಿ ಮಂಡಳಿಯ ಕಾಮಗಾರಿಗಳ ಕುರಿತು

327 - ಶ್ರೀ ಪಿ.ಬಸವರಾಜ್ (ಬ್ರಹ್ಮಾವರ): ಮಾನ್ಯ ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿಗೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಬ್ರಹ್ಮಾವರ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯ ಯಾವ ಯಾವ ಕಾಮಗಾರಿಗಳಿಗೆ ಈಗಾಗಲೇ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ?

ಆ) ದಕ್ಷಿಣ ಕನ್ನಡ ಜಿಲ್ಲೆಯ ಬೇರೆ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿ ಕಾಮಗಾರಿಗಳು ಈಗಾಗಲೇ ಪ್ರಾರಂಭವಾಗಿದ್ದು ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಯಾವುದೇ ಕಾಮಗಾರಿಗಳು ಆರಂಭವಾಗಿಲ್ಲದಿರುವುದಕ್ಕೆ ಕಾರಣಗಳೇನು?

ಇ) ಇನ್ನು 3 ತಿಂಗಳ ನಂತರ ಮಳೆಗಾಲ ಆರಂಭವಾಗುವುದರಿಂದ ಮಲೆನಾಡು ಅಭಿವೃದ್ಧಿ ಮಂಡಳಿಯ ಸದರಿ ಸಾಲಿನ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಲಾಗುವುದೇ?

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):

ಅ) ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಆ) ಮಂಡಳಿಯು ಬ್ರಹ್ಮಾವರ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾತಿ ನೀಡಿದ 11 ಕಾಮಗಾರಿಗಳಲ್ಲಿ 9 ಕಾಮಗಾರಿಗಳಿಗೆ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್ ಉಡುಪಿ ಇವರು ಟೆಂಡರ್ ಕರೆದು ಗುತ್ತಿಗೆದಾರರನ್ನು ನಿಗದಿಪಡಿಸಿರುತ್ತಾರೆ. ಇವುಗಳಲ್ಲಿ 6 ಕಾಮಗಾರಿಗಳು ಪ್ರಾರಂಭವಾಗಿದ್ದು, ಉಳಿದ 3 ಕಾಮಗಾರಿಗಳನ್ನು ಸಧ್ಯದಲ್ಲೇ

ಪ್ರಾರಂಭಿಸಲಾಗುವುದು. ಆಡಳಿತಾತ್ಮಕ ಮಂಜೂರಾತಿ ನೀಡಿದ 11 ಕಾಮಗಾರಿಗಳಲ್ಲಿ ಬಾಕಿ ಉಳಿದ 2 ಕಾಮಗಾರಿಗಳಿಗೆ ಟೆಂಡರ್ ಕರೆದು ಗುತ್ತಿಗೆದಾರರನ್ನು ನಿಗದಿಪಡಿಸ ಬೇಕಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ

ಮಲೆನಾಡು ಅಭಿವೃದ್ಧಿ ಮಂಡಳಿಯಡಿಯಲ್ಲಿ ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಮಂಜೂರಾದ ಕಾಮಗಾರಿಗಳ ವಿವರ

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಕೆಲಸದ ಹೆಸರು	ಅಂದಾಜು ವೆಚ್ಚ
1.	ಕೊಕ್ಕಣೆ ಮಿಯಾರು ರಸ್ತೆ ವಿಶೇಷ ದುರಸ್ತಿ (ಕಿ.ಮಿ. 2 ರಿಂದ 7)	2.00
2.	ಪರ್ದೂರು ಮುನಿಯಾಲು ರಸ್ತೆಯ 1.30 ರಿಂದ 1.65 ಕಿ.ಮಿ. ವರೆಗೆ ಡಾಂಬರು	1.05
3.	ಬಜೆಪೆರ್ಡೂರು (ಪೆರ್ಡೂರು ಬಜೆ) ರಸ್ತೆಯ 0-2.10 ಕಿ.ಮಿ. 5.63-4.63 ಕಿ.ಮಿ. ವರೆಗೆ ಡಾಂಬರು	2.00
4.	ಉಡುಪಿ ತಾ. ಹಾವೆಂಜೆ ಮಂ. ಹಾವೆಂಜೆಬೆಳ್ಳಂಪಳ್ಳಿ ರಸ್ತೆಗೆ ಡಾಂಬರು 0 ದಿಂದ 658 ಕಿ.ಮಿ.	1.50
5.	ಉಡುಪಿ ತಾ. ಹಾವೆಂಜೆ ಮಂ. ಕುಕ್ಕೆಪಳ್ಳಿ ಮಡಿವೇತ್ರಿ 0 ರಿಂದ 1.00 ಕಿ.ಮಿ., ವರೆಗೆ	2.00
6.	ಉಡುಪಿ ಬ್ರಹ್ಮಾವರ ಮಂ. ಜಾಂತಾರು ಅಂಗಡಿವೆಟ್ಟು ರಸ್ತೆ ಅಭಿವೃದ್ಧಿ 0 ರಿಂದ 1.00 ಕಿ.ಮಿ. ವರೆಗೆ	2.00
7.	" ಕೊರ್ಕಣಿ ಮಂ. ನಾಲ್ಕೂರು ಸಂಜಾರು ರಸ್ತೆಗೆ 0 ರಿಂದ 0.50 ಕಿ.ಮಿ. 5.80-6.30ವರೆಗೆ ಹಾಮುರು ಮತ್ತು 1 ರಿಂದ 5.00 ಕಿ.ಮಿ. ವರೆಗೆ ದುರಸ್ತಿ	2.00
8.	" ಸಾಬರಕಟ್ಟೆ ಮಂ. ಅಲ್ತಾರು ಮಂದರ್ತಿ ರಸ್ತೆ ಅಭಿವೃದ್ಧಿ	2.00
9.	ಉಡುಪಿ ತಾ. ಬ್ರಹ್ಮಾವರ ಮಂ. ನಂಜಾರು ಗ್ರಾಮದ ಅಮ್ರಕಲ್ಲು ಹೆಸ್ಕುಂದಲು ಎಂಬಲ್ಲಿ ಕಿರು ಸೇತುವೆ ರಚನೆ.	2.00
10.	ಶಿರೂರು ಕೊಕ್ಕಣೆ-ಸಂತೆಕಟ್ಟೆ ರಸ್ತೆ ಕಿ.ಮಿ.16ರಲ್ಲಿ ಬಲ್ಲಿಬೈಲು ಹಳ್ಳಕ್ಕೆ ಸೇತುವೆ ಮರು ರಚನೆ	5.95
11.	ಮಂಕಿನಜಿಡ್ಡು-ಬಿನಗಲ್-ಕೊಕ್ಕಣೆ ರಸ್ತೆ ಅಭಿವೃದ್ಧಿ ಕಿ.ಮಿ. 1.20 ರಿಂದ 2.50ರ ವರೆಗೆ.	3.50
		26.00

ಹಿರೇಕೆರೂರು ತಾಲ್ಲೂಕು ನೇಸ್ವಿ ಕೆರೆಯಿಂದ ಮಾವಿನ ತೋಪು ಕೆಳಗೆ ಫೀಡರ್ ಛಾನಲ್

288 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಹಿರೇಕೆರೂರು ತಾಲ್ಲೂಕು ನೆಸ್ವಿ ಕೆರೆಯಿಂದ ಮಾವಿನ ತೋಪ್ ಕೆರೆಗೆ ಫೀಡರ್‌ಛಾನಲ್ ನಿರ್ಮಾಣ ಮಾಡಲು ನಕ್ಷೆ ಹಾಗೂ ಅಂದಾಜುಪಟ್ಟಿ ತಯಾರಿಸಲಾಗಿದೆಯೇ ಮತ್ತು ಅದಕ್ಕೆ ಮಂಜೂರಾತಿ ದೊರೆತಿದೆಯೇ:

ಆ) ಈ ಕಾಮಗಾರಿಯ ಅಂದಾಜು ಮೊತ್ತವೆಷ್ಟು ಮತ್ತು 1992-93ರ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು ಹಾಗೂ ಈವರೆಗೆ ಈ ಕಾಮಗಾರಿಗೆ ಆಗಿರುವ ವೆಚ್ಚವೆಷ್ಟು;

ಇ) 1993-94ನೇ ಆಯವ್ಯಯದಲ್ಲಿ ಈ ಯೋಜನೆಗೆ ಒದಗಿಸಿದ ಹಣವೆಷ್ಟು;

ಈ) ಈ ಕಾಮಗಾರಿಯ ಕೆಲಸ ಯಾವ ಹಂತದಲ್ಲಿದೆ;

ಉ) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಸಮಯ ಎಷ್ಟು ಹಾಗೂ ಈ ಕಾಮಗಾರಿಯ ಬಗ್ಗೆ ರಾಜ್ಯ ಸರ್ಕಾರದ ನೀತಿ ಹಾಗೂ ಕ್ರಮವೇನು?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ನಕ್ಷೆ ಹಾಗೂ ಅಂದಾಜು ತಯಾರಾಗಿದ್ದು ಮಾರ್ಚ್ 1993ರಲ್ಲಿ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಡೂರಾತಿ ನೀಡಲಾಗಿದೆ.

ಆ) 1) ಅಂದಾಜು 6.65 ಲಕ್ಷ ರೂ.ಗಳು.

2) ಆಯವ್ಯಯದಲ್ಲಿ ಒದಗಿಸಿದ ಹಣ 2.00 ಲಕ್ಷ ರೂ.ಗಳು.

3) ಕಾಮಗಾರಿಗೆ ಆಗಿರುವ ವೆಚ್ಚ ಏನೂ ಇಲ್ಲ.

ಇ) 3.00 ಲಕ್ಷ ರೂ.ಗಳು.

ಈ) ಇನ್ನು ಕಾಮಗಾರಿಯನ್ನು ಕೈಗೆತ್ತಿಕೊಂಡಿಲ್ಲ.

ಉ) ಅನುದಾನದ ಲಭ್ಯತೆಗೆ ಅನುಗುಣವಾಗಿ ಕೆಲಸವನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಗುವುದು.

ಹಿರೇಕೆರೂರು ತಾಲ್ಲೂಕಿನ ರಟ್ಟೀಹಳ್ಳಿ, ಕುಡಪಲಿ ಬ್ಯಾರೇಜ್ ನಿರ್ಮಾಣ

289 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕಿನ ಕುಮದ್ವತಿ ನದಿಗೆ ರಟ್ಟೀ ಹಳ್ಳಿ ಹಾಗೂ ಕುಡಪಲ್ಲಿ ಹತ್ತಿರ ಬ್ಯಾರೇಜ್ ಕಟ್ಟಲು ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು;

ಆ) ಈ ಕಾಮಗಾರಿಗಳ ಬಗ್ಗೆ ಅಂದಾಜುಗಳನ್ನು ತಯಾರಿಸಲಾಗಿದೆಯೇ; ಹಾಗೂ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆಯಲಾಗಿದೆಯೇ;

ಇ) ಈ ಕಾಮಗಾರಿಗಳನ್ನು ಪ್ರಾರಂಭಿಸಲು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ವಿಳಂಬಕ್ಕೆ ಯಾರು ಕಾರಣರು ಮತ್ತು ಆ ಬಗ್ಗೆ ಸರ್ಕಾರದ ಕ್ರಮವೇನು;

ಉ) ಈ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲು ಮತ್ತು ಪೂರ್ಣಗೊಳಿಸಲು ಸರ್ಕಾರ ಉದ್ದೇಶಿಸಿದೆ?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

1993-94ನೇ ಸಾಲಿನ ಆಯವ್ಯಯದಲ್ಲಿ ರಟ್ಟೀಹಳ್ಳಿ ಬ್ಯಾರೇಜಿಗೆ 9.00 ಲಕ್ಷ ರೂ. ಹಾಗೂ ಕುಡಪಲಿ ಬ್ಯಾರೇಜಿಗೆ ತಿದ್ದುಪಡಿ ಆಯವ್ಯಯದಲ್ಲಿ 18.00 ಲಕ್ಷ ರೂ.ಗಳ ಅನುದಾನ ಒದಗಿಸಲಾಗಿದೆ.

ಆ) ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಲಾಗಿದೆ. ಅಂದಾಜುಗಳು ಸರ್ಕಾರದ ಪರಿಶೀಲನೆ ಹಂತದಲ್ಲಿವೆ.

ರಟ್ಟಿಹಳ್ಳಿ - ರೂ. 96.60 ಲಕ್ಷ ಅಂದಾಜು

ಕುಡಪಲಿ - ರೂ. 80.00 ಲಕ್ಷ ಅಂದಾಜು.

ಇ) ಅಂದಾಜುಗಳಿಗೆ ಸಕ್ಷಮ ಮಂಜೂರಾತಿ ದೊರತಿಲ್ಲವಾದ ಕಾರಣ ಕಾಮಗಾರಿಗಳನ್ನು ಪ್ರಾರಂಭಿಸಲು ವಿಳಂಬವಾಗಿದೆ.

ಈ) ಸರ್ವೆ ಕೆಲಸ, ಸ್ಥಳ ಪರಿಶೀಲನೆ, ವಿನ್ಯಾಸದ ಕೆಲಸಗಳಿಗಾಗಿ ಸಾಕಷ್ಟು ಕಾಲಾವಕಾಶ ಬೇಕಾಗುವುದರಿಂದ ವಿಳಂಬಕ್ಕೆ ಯಾರು ಕಾರಣರಾಗುವುದಿಲ್ಲ.

ಉ) ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಮತ್ತು ಅನುದಾನ ಲಭ್ಯತೆಗನುಸಾರವಾಗಿ ಪೂರ್ಣಗೊಳಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಗುವುದು.

ಧಾರವಾಡ ಜಿಲ್ಲೆ ಹಿರೇಕೆರೂರು ತಾಲ್ಲೂಕು ಹಂಸಭಾವಿ ಗ್ರಾಮದಲ್ಲಿ 33:11 ಕೆ.ವಿ. ಸಬ್ ಸ್ಟೇಷನ್ ಆರಂಭ

291 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕು ಹಂಸಭಾವಿ ಗ್ರಾಮದಲ್ಲಿ 33:11 ಕೆವಿ ಸಬ್-ಸ್ಟೇಷನ್ ನಿರ್ಮಾಣ ಮಾಡುವ ಬಗ್ಗೆ ಮಂಜೂರಾತಿಯನ್ನು ಕೊಡಲಾಗಿದೆಯೇ?

ಆ) ಆ ಬಗ್ಗೆ ತಗಲುವ ಅಂದಾಜು ವೆಚ್ಚ ಎಷ್ಟು? ಹಾಗೂ ಅವಶ್ಯವಿರುವ ಭೂಮಿಗೆ ಎಷ್ಟು ಹಣ ಒದಗಿಸಲಾಗಿದೆ, ಹಾಗೂ ಭೂಮಿಯನ್ನು ಕೆ.ಇ.ಬಿ. ತಾಬಾ ಪಡೆಯಲಾಗಿದೆಯೇ?

ಇ) ಹಾಗಿದ್ದಲ್ಲಿ ಈ ಕಾರ್ಯವನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು ಮತ್ತು ಪೂರ್ಣ ಗೊಳಿಸಲಾಗುವುದು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು) ;

ಅ) ಹೌದು.

ಆ) ಇದಕ್ಕೆ ತಗಲುವ ಅಂದಾಜು ವೆಚ್ಚ ಸುಮಾರು 80 ಲಕ್ಷ ರೂ. ಅವಶ್ಯವಿರುವ ಭೂಮಿಯನ್ನು ಇನ್ನೂ ವಶಪಡಿಸಿಕೊಂಡಿಲ್ಲವಾದ್ದರಿಂದ ಭೂಮಿಯ ಬಗ್ಗೆ ಹಣವನ್ನು ಇದುವರೆಗೆ ಖರ್ಚು ಮಾಡಿಲ್ಲ. ಭೂಮಿಯನ್ನು ಇದುವರೆಗೆ ಕೆ.ಇ.ಬಿ. ತಾಬಾ ಪಡೆದಿಲ್ಲ.

ಇ) ಭೂಮಿಯನ್ನು ಕೆ.ಇ.ಬಿ. ತಾಬಾ ಇದುವರೆಗೆ ಪಡೆದಿಲ್ಲವಾದ್ದರಿಂದ ಸಬ್ ಸ್ಟೇಷನ್ನಿನ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿಲ್ಲ. ಬ್ಯಾಡಗಿಯಿಂದ ಹಂಸಭಾವಿಗೆ ನಿರ್ಮಾಣ ಮಾಡಬೇಕಾಗಿರುವ 33 ಕೆ.ವಿ. ವಿದ್ಯುತ್ ಲೈನಿನ ಸರ್ವೆ ಕಾರ್ಯವನ್ನು ಪ್ರಾರಂಭಿಸಲಾಗಿದೆ. 33 ಕೆ.ವಿ. ಲೈನು ಮತ್ತು ಸಬ್ಸ್ಟೇಷನ್ಗಳ ನಿರ್ಮಾಣ ಕಾರ್ಯಗಳನ್ನು ಡಿಸೆಂಬರ್ 94ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ನಿರೀಕ್ಷೆ ಇದೆ.

ಬಸವ ಕಲ್ಯಾಣದಲ್ಲಿ ಸಣ್ಣ ನೀರಾವರಿ ಉಪವಿಭಾಗ ಪ್ರಾರಂಭ

335 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ಹಲವಾರು ಹಳೆಯ ಕೆರೆಗಳಿದ್ದು ಸಣ್ಣ ನೀರಾವರಿ ಕಾಮಗಾರಿಗಳು ನಡೆಯುತ್ತಿದ್ದು ಅಲ್ಲಿ ಉಪವಿಭಾಗವಿಲ್ಲದೆ, ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಸವಕಲ್ಯಾಣದ ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳಿಗೆ ಬೀದರ್‌ನಲ್ಲಿನ ಸಣ್ಣ ನೀರಾವರಿ ಉಪ ವಿಭಾಗವನ್ನು ಅವಲಂಬಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಬಸವಕಲ್ಯಾಣದಲ್ಲಿ ಸಣ್ಣ ನೀರಾವರಿ ಉಪವಿಭಾಗವನ್ನು ಪ್ರಾರಂಭಿಸಲು ಕ್ರಮಸ ಕೈಗೊಳ್ಳಲಾಗುವುದೇ?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಬಸವಕಲ್ಯಾಣದಲ್ಲಿ ಸಣ್ಣ ನೀರಾವರಿ ಉಪ-ವಿಭಾಗವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಬಂದಿದೆ.

ಇ) ಪರಿಶೀಲಿಸಲಾಗುವುದು.

ಬಸವ ಕಲ್ಯಾಣದ ರಾಜೇಶ್ವರದಲ್ಲಿ 33 ಕೆವಿಎ ಫವರ್ ಸ್ಟೇಷನ್ ಅನ್ನು ಮಂಜೂರು ಮಾಡುವುದು

332 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ): ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವ ಕಲ್ಯಾಣದ ರಾಜೇಶ್ವರದಲ್ಲಿ 33 ಕೆವಿ ಪವರ್ ಸ್ಟೇಷನ್ ಅನ್ನು ಪ್ರಾರಂಭಿಸಲು ಜಾಗಕ್ಕಾಗಿ ಸರ್ವೆ ಮಾಡಲಾಗಿದ್ದು ಇದುವರೆಗೂ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು?

ಆ) ಅಲ್ಲಿ ವಿದ್ಯುತ್ ಸರಬರಾಜು ಸರಿಯಾದ ರೀತಿಯಲ್ಲಿ ಆಗುತ್ತಿಲ್ಲವಾದ್ದರಿಂದ ರೈತರ ಪಂಪ್ಸೆಟ್ಟಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಆ ಪವರ್ ಸ್ಟೇಷನ್ ಅನ್ನು ಪ್ರಾರಂಭಿಸಲು ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಮಂತ್ರಿಗಳು):

ಅ) ಬಸವಕಲ್ಯಾಣದ ರಾಜೇಶ್ವರದಲ್ಲಿ ಉದ್ದೇಶಿತ 33 ಕೆವಿ ವಿದ್ಯುತ್ ಸಬ್-ಸ್ಟೇಷನ್ಗೆ ಮಂಡಳಿಯು ಹುಮ್ನಾಬಾದ್ನಲ್ಲಿ ನಿರ್ಮಾಣ ಮಾಡುತ್ತಿರುವ 220-110 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ವಿದ್ಯುತ್ ಸರಬರಾಜು ಮಾಡಬೇಕಾಗಿದೆ. ಆದ್ದರಿಂದ ಮೊದಲು ಹುಮ್ನಾಬಾದ್ನಲ್ಲಿ ನಿರ್ಮಾಣವಾಗುತ್ತಿರುವ 220-110ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ಚಾಲನೆಗೊಳಿಸುವುದು ಅತ್ಯವಶ್ಯಕವಾಗಿದೆ, ಸದರೀ ವಿದ್ಯುತ್ ಸ್ವೀಕರಣಾ ಕೇಂದ್ರದ ನಿರ್ಮಾಣ ಕಾರ್ಯವು ಭರದಿಂದ ಸಾಗುತ್ತಿದ್ದು ಫೆಬ್ರವರಿ 1994ರ ಅಂತ್ಯದ ವೇಳೆಗೆ ಮೊದಲು 100 ಎಂವಿಎ ಸಾಮರ್ಥ್ಯದ ಪವರ್ ಟ್ರಾನ್ಸ್ಫಾರ್ಮರ್ ಚಾಲನೆಗೊಳ್ಳುವ ನಿರೀಕ್ಷೆ ಇದೆ.

ಆ) ರಾಜೇಶ್ವರ ಗ್ರಾಮ ಮತ್ತು ಅದರ ಸುತ್ತಮುತ್ತಲಿನ ಕೆಲವು ಪ್ರದೇಶಗಳಲ್ಲಿ ಕಡಿಮೆ ವೋಲ್ಟೇಜ್ ಪರಿಸ್ಥಿತಿ ಉಂಟಾಗಿರುವ ವಿಷಯ ಮಂಡಳಿಯ ಗಮನಕ್ಕೆ ಬಂದಿದೆ ಆದರೆ ಇದರಿಂದ ರೈತರ ಪಂಪ್ಸೆಟ್ಟಗಳು ಹಾಳಾಗುತ್ತಿರುವ ನಿರ್ದಿಷ್ಟ ಪ್ರಕರಣಗಳು ಮಂಡಳಿಯ ಗಮನಕ್ಕೆ ಬಂದಿಲ್ಲ.

ಇ) ರಾಜೇಶ್ವರ ಗ್ರಾಮದಲ್ಲಿ ಉದ್ದೇಶಿತ 33-111 ಕೆವಿ ವಿದ್ಯುತ್ ಸಬ್-ಸ್ಟೇಷನ್ನಿನ ನಿರ್ಮಾಣ ಕಾರ್ಯವನ್ನು 1994-95ರ ಸಾಲಿನಲ್ಲಿ ತೆಗೆದುಕೊಳ್ಳಲಾಗುವುದು.

ಬಸವ ಕಲ್ಯಾಣ ತಾಲ್ಲೂಕಿನ ಸಸ್ತಾಪುರ ಗ್ರಾಮದಲ್ಲಿ 110 ಕೆವಿಎ ಪವರ್ ಸ್ಟೇಷನ್‌ಅನ್ನು ಪ್ರಾರಂಭಿಸುವುದು.

334 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ): ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವ ಕಲ್ಯಾಣದ ಸಸ್ತಾಪುರದಲ್ಲಿ 110 ಕೆವಿ ಪವರ್ ಸ್ಟೇಷನ್ ಅನ್ನು ಮಾಡಲು ಭೂಮಿಯನ್ನು ವಶಪಡಿಸಿಕೊಂಡಿದ್ದು, ಇದುವರೆಗೂ ಕ್ರಮ ತೆಗೆದುಕೊಳ್ಳದಿರುವುದು ನಿಜವೆ?

ಆ) ಸಸ್ತಾಪುರ ಗ್ರಾಮದಲ್ಲಿ ವಿದ್ಯುತ್ ಸರಬರಾಜು ಸರಿಯಾದ ರೀತಿಯಲ್ಲಿ ಆಗದೆ ರೈತರ ಪಂಪುಸೆಟ್ಟುಗಳು ಹಾಳಾಗುತ್ತಿರುವುದರಿಂದ ಅಲ್ಲಿ ಪವರ್ ಸ್ಟೇಷನ್ ಅನ್ನು ಪ್ರಾರಂಭಿಸಲು ಸರ್ಕಾರ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು);

ಅ) ಬಸವಕಲ್ಯಾಣದ ಸಸ್ತಾಪುರದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ 110 ಕೆವಿ ಪವರ್ ಸ್ಟೇಷನ್‌ಗೆ ಬೇಕಾಗುವ ಭೂಮಿಯನ್ನು ಇದುವರೆವಿಗೆ ವಶಪಡಿಸಿಕೊಂಡಿಲ್ಲ. ಆದ್ದರಿಂದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿಲ್ಲ.

ಆ) ಭೂಮಿ ಸ್ವಾಧೀನದ ಕಾರ್ಯವು ಪ್ರಗತಿಯಲ್ಲಿದೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ನಂತರ ನಿರ್ಮಾಣ ಕಾರ್ಯವನ್ನು ಆದಷ್ಟು ಜಾಗ್ರತೆ ಪ್ರಾರಂಭಿಸಲಾಗುವುದು. ಅಲ್ಲದೇ ಸಸ್ತಾಪುರದ ಉದ್ದೇಶಿತ 110 ಕೆವಿ ವಿದ್ಯುತ್ ಉಪಕೇಂದ್ರಕ್ಕೆ ವಿದ್ಯುತ್ ಸರಬರಾಜು ಮಾಡಲು ಹುಮ್ನಾಬಾದ್ನಲ್ಲಿ 220:110 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ಚಾಲನೆಗೊಳಿಸುವುದು ಬಹಳ ಅಗತ್ಯವಾಗಿದೆ. ಆದ್ದರಿಂದ ಮಂಡಳಿಯು ಹುಮ್ನಾಬಾದ್ನಲ್ಲಿ 220:110 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ತ್ವರಿತಗತಿಯಲ್ಲಿ ಚಾಲನೆಗೊಳಿಸುವ ಬಗ್ಗೆ ತೀವ್ರ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತಿದೆ.

ಬಸವಕಲ್ಯಾಣದಲ್ಲಿ ಲೋಕೋಪಯೋಗಿ ಇಲಾಖೆಯ ಉಪ ವಿಭಾಗವನ್ನು ಪ್ರಾರಂಭಿಸುವ ಬಗ್ಗೆ

333 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಮಂಜೂರಾಗಿರುವ ಲೋಕೋಪಯೋಗಿ ಉಪ ವಿಭಾಗವು ಯಾವಾಗ ಪ್ರಾರಂಭವಾಗುವುದು?

ಆ) ಬಸವ ಕಲ್ಯಾಣದಲ್ಲಿ ಉಪ ವಿಭಾಗಾಧಿಕಾರಿಗಳ ಕಛೇರಿ ಭೂ ಸೇನಾ ಉಪ ವಿಭಾಗ ಸಿವಿಲ್ ಕೋರ್ಟ್ಗಳಿದ್ದು, ಲೋಕೋಪಯೋಗಿ ಇಲಾಖೆಯ ಉಪ ವಿಭಾಗವು ಇಲ್ಲದೆ ಇಲಾಖೆಗೆ ಸಂಬಂಧಪಟ್ಟ ಕೆಲಸ ಕಾರ್ಯಗಳು ಸಾಗಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಉಪ ವಿಭಾಗವನ್ನು ಈ ವರ್ಷದಲ್ಲಿ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು);

ಅ) ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಲೋಕೋಪಯೋಗಿ ಇಲಾಖೆಯ ಯಾವ ಉಪ ವಿಭಾಗವು ಮಂಜೂರಾಗಿರುವುದಿಲ್ಲ. ಕಾರಣ ಸದರಿ ಉಪ ವಿಭಾಗ ಕಛೇರಿಯನ್ನು ಪ್ರಾರಂಭಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) - ಇಲ್ಲ -

ಇ) - ಉದ್ಭವಿಸುವುದಿಲ್ಲ-

ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ವಿಶೇಷ ಅನುದಾನದ ಬಿಡುಗಡೆ

262 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ವಿಶೇಷ ಅನುದಾನವನ್ನು ಸರ್ಕಾರ ನಿಗಧಿ ಪಡಿಸಿದೆಯೇ;

ಆ) ಹಾಗಿದ್ದಲ್ಲಿ, ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಿದೆ;

ಇ) ಬೆಂಗಳೂರು, ಮೈಸೂರು ರಸ್ತೆಯನ್ನು, ವಾಹನ ಸಂಚಾರದ ಒತ್ತಡಕ್ಕೆ ಅನುಗುಣವಾಗಿ ಹಾಗೂ ಅವಶ್ಯಕತೆಗೆ ತಕ್ಕಂತೆ, ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) ಪ್ರತಿ ವಿಧಾನಸಭಾ ಮತ ಕ್ಷೇತ್ರಕ್ಕೆ ಲೋಕೋಪಯೋಗಿ ಇಲಾಖೆ ರಸ್ತೆ, ಮತ್ತು ಸೇತುವೆಗಳ ಅಭಿವೃದ್ಧಿಗಾಗಿ 10.00 ಲಕ್ಷ ರೂ.ಗಳ ಅನುದಾನ ನಿಗದಿಪಡಿಸಿದ್ದು. ಜನವರಿ 94ರ ವರೆವಿಗೆ ಒಟ್ಟು 300 ಲಕ್ಷ ರೂ. ಹಣ ಬಿಡುಗಡೆ ಮಾಡಿದೆ.

ಇ) ಬೆಂಗಳೂರು-ಮೈಸೂರು ರಸ್ತೆಯಲ್ಲಿ ಹೆಚ್ಚಿರುವ ಸಂಚಾರದಟ್ಟಣೆಯನ್ನು ಅನುಸರಿಸಿ, ಈ ರಸ್ತೆಯಲ್ಲಿ ಅವಶ್ಯವಾಗಿರುವ ಭಾಗಗಳನ್ನು ಅಗಲಪಡಿಸುವುದು, ತಿರುವುಗಳನ್ನು ನೇರ ಪಡಿಸುವುದು, ಮಧ್ಯಂತರ ಮೀಡಿಯನ್ ನಿರ್ಮಿಸುವುದು, ಪ್ರತಿಫಲನ ಎಚ್ಚರಿಕೆ ಸೂಚನಾ ಫಲಕಗಳನ್ನು ಕ್ಯಾಟ್ ಐ ಗಳನ್ನು ಅಳವಡಿಸುವುದು, ಮರು ಡಾಂಬರೀಕರಣ ಮಾಡುವುದು ಮಂತಾದ ಕ್ರಮಸಗಳನ್ನು ತೆಗೆದುಕೊಳ್ಳಲಾಗಿದೆ. 1993-94ರ ಸಾಲಿನಲ್ಲಿ ಸುಮಾರು 150.00 ಲಕ್ಷ ರೂ.ಗಳ ಒಟ್ಟು ವೆಚ್ಚದಲ್ಲಿ ಈ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ರಾಜ್ಯದಲ್ಲಿ ಹೊಸ ಜಲವಿದ್ಯುತ್ ಯೋಜನೆಗಳು

248 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಜಲವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಪ್ರಸ್ತಾವನೆ ಇದೆಯೇ?

ಆ) ರಾಜ್ಯದಲ್ಲಿನ ವಿದ್ಯುತ್ ಪ್ರಮಾಣ ಕೊರತೆ ಇಷ್ಟು?

ಇ) ಹೊಸ ವಿದ್ಯುತ್ ಯೋಜನೆಗಳನ್ನು ನಿರ್ಮಿಸಲು ಯೋಜಿಸಲಾಗಿರುವ ಯೋಜನೆಗಳ ಹೆಸರುಗಳು ಯಾವುವು?

ಈ) ಅಘನಾಶಿನಿ ಯೋಜನೆ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) ;

ಅ) ಇದೆ.

ಆ) ರಾಜ್ಯದಲ್ಲಿ 31-3-1993ರಲ್ಲಿ ವಿದ್ಯುತ್ ಪ್ರಮಾಣ ಕೊರತೆ ಈ ಕೆಳಗಿನಂತಿತ್ತು.

ಕರ್ನಾಟಕ ವಿದ್ಯುತ್ ನಿಗಮ	ಗರಿಷ್ಟ ಬೇಡಿಕೆ ಮೆ.ವ್ಯಾಟ್ಗಳಲ್ಲಿ	ವಿದ್ಯುತ್ ಉತ್ಪಾದನೆ ದಶಲಕ್ಷ ಯೂನಿಟ್ ಗಳಲ್ಲಿ
ವಿದ್ಯುತ್ ಪ್ರಮಾಣದ ಬೇಡಿಕೆ	3300	20950
ವಿದ್ಯುತ್ ಪ್ರಮಾಣದ ಲಭ್ಯತೆ (ಕೇಂದ್ರ ಸರ್ಕಾರದ ಪ್ರಮಾಣ ಸೇರಿ)	2643	17163
ಕೊರತೆ	657	3787
ಶೇಖಡವಾರು ಕೊರತೆ	19.9	18.1

ಕರ್ನಾಟಕ ವಿದ್ಯುತ್ ಮಂಡಳಿ	1993-94ನೇ ಸಾಲಿನಲ್ಲಿ ವಿದ್ಯುತ್ ಕೊರತೆಯ ಪ್ರಮಾಣ 4500 ದಶಲಕ್ಷ ಯೂನಿಟ್‌ಗಳು.

ಇ) ಪ್ರಸ್ತುತ ನಿರ್ಮಾಣಗೊಳ್ಳುತ್ತಿರುವ ವಿದ್ಯುತ್ ಯೋಜನೆಗಳಲ್ಲದೇ ಕರ್ನಾಟಕ ವಿದ್ಯುತ ನಿಗಮವು ಹೊಸದಾಗಿ ಹಮ್ಮಿಕೊಂಡಿರುವ ಯೋಜನೆಗಳ ಹೆಸರುಗಳು ಹಾಗೂ ಅವುಗಳ ಉತ್ಪಾದನಾ ಸಾಮರ್ಥ್ಯ ಈ ಕೆಳಗಿನಂತಿವೆ :

ಅ) ಜಲವಿದ್ಯುತ್ ಯೋಜನೆಗಳು :

1)	ಶಿವನಸಮುದ್ರ ಜಲವಿದ್ಯುತ್ ಯೋಜನೆ	: 270 ಮೆ. ವ್ಯಾಟ್
2)	ಆಲಮಟ್ಟಿ ಅಣೆಕಟ್ಟು ಜಲವಿದ್ಯುತ್ ಯೋಜನೆ	: 268 ಮೆ. ವ್ಯಾಟ್
3)	ತಮಣ್ಕಲ್ ಜಲವಿದ್ಯುತ್ ಯೋಜನೆ	: 800 ಮೆ. ವ್ಯಾಟ್
4)	ಬೇಡ್ತಿ ಜಲವಿದ್ಯುತ್ ಯೋಜನೆ	: 210 ಮೆ. ವ್ಯಾಟ್
5)	ದಾಂಡೇಲಿ ಜಲವಿದ್ಯುತ್ಯೋಜನೆ	: 60 ಮೆ. ವ್ಯಾಟ್
6)	ಮಹಾದಾಯಿ ಜಲವಿದ್ಯುತ್ ಯೋಜನೆ	: 345 ಮೆ. ವ್ಯಾಟ್
7)	ಸರಪಾಡಿ ಜಲವಿದ್ಯುತ್ ಯೋಜನೆ	: 90 ಮೆ. ವ್ಯಾಟ್

ಆ) ಶಾಖೋತ್ಪನ್ನ ವಿದ್ಯುತ್ ಯೋಜನೆಗಳು :

1)	ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ ಮೂರನೆಯ ಹಂತ ಘಟಕ - 5	: 500 ಮೆ. ವ್ಯಾಟ್.
2)	ವಿಜಯನಗರ ಶಾಖೋತ್ಪನ್ನ ವಿದ್ಯುತ್‌ಕೇಂದ್ರ (ಹೊಸಕೋಟೆ) 1 ಮತ್ತು 2ನೇ ಹಂತ	: 1500 ಮೆ. ವ್ಯಾಟ್
3)	ಮೈಸೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ, 1 ಮತ್ತು 2ನೇ ಹಂತ.	: 1500 ಮೆ. ವ್ಯಾಟ್
4)	ಮಂಗಳೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ	: 1300 ಮೆ. ವ್ಯಾಟ್

ಇದಲ್ಲದೇ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಇನ್ನೂ ಕೆಲವು ಜಲ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸುವ ಸ್ಥಳಗಳನ್ನು ಗುರುತಿಸಿದೆ. ಈ ಯೋಜನೆಗಳ ವಿವರವಾದ ಅನ್ವೇಷಣಾ ಕಾರ್ಯವು ಪ್ರಗತಿಯಲ್ಲಿದೆ.

ಈ) ಅಘನಾಶಿನ ಜಲವಿದ್ಯುತ್ ಯೋಜನೆಯು ಇನ್ನೂ ಅನ್ವೇಷಣಾ ಹಂತದಲ್ಲಿರುತ್ತದೆ. ಈ ಯೋಜನಾ ವರದಿ ತಯಾರಿಸಿದ ನಂತರ ಯೋಜನೆಯನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಸರ್ಕಾರ ಪರಿಶೀಲಿಸುವುದು.

ಸೇಡಂ ತಾಲ್ಲೂಕಿನ ಕಾಗೀನ ನದಿಗೆ ಮಿನಾಬಾಳ್ ಸಮೀಪ ಹಾಗೂ ಆಡಕಿ ಸಮೀಪ ಅಡ್ಡಲಾಗಿ ಸೇತುವೆ ನಿರ್ಮಾಣ

206 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಮೊನಬಾಳ ಸಮೀಪ ಕಾಗಿನ ನದಿಗೆ ಹಾಗೂ ಆಡಕಿ ಸಮೀಪ ನದಿಗೆ ಅಡ್ಡಲಾಗಿ ಬ್ಯಾರೇಜ್-ಕಂ-ಸೇತುವೆ ನಿರ್ಮಾಣ ಮಾಡಲು ಕಾರ್ಯದರ್ಶಿ ನೀರಾವರಿ ಇಲಾಖೆಯವರಿಗೆ ಮಾನ್ಯ ಮುಖ್ಯ ಮಂತ್ರಿಯವರ ಪತ್ರ ಸಂಖ್ಯೆ : 1293 :ಎಂಎಲ್‌ಎ : (2) 93 ದಿನಾಂಕ - 8-4-93ರಂದು ಅಂದಾಜು ಪಟ್ಟಿ ತಯಾರಿಸಿ ಕಡತ ಒಪ್ಪಿಸಲು ಆದೇಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಮಾನ್ಯ ಮುಖ್ಯ ಮಂತ್ರಿಯವರ ಆದೇಶದಂತೆ ಕಾರ್ಯನಿರ್ವಾಹಕ ಅಭಿಯಂತರರು ಸಣ್ಣ ನೀರಾವರಿ ಇಲಾಖೆ, ಗುಲ್ಬರ್ಗಾ ಇವರು ತನ್ನ ಪತ್ರ ಸಂಖ್ಯೆ :3193 ದಿನಾಂಕ 6-9-1993ರಂದು ಈ ಎರಡು ಬ್ಯಾರೇಜ್-ಕಂ-ಸೇತುವೆಗಳ ನಿರ್ಮಾಣಕ್ಕಾಗಿ ಪ್ರಥಮ ತನಿಖೆ ವರದಿಗೆ ಅನುಮೋದನೆ ನೀಡಲು ಅಧೀಕ್ಷಕ ಅಭಿಯಂತರರಿಗೆ ಕೋರಿದ್ದಕ್ಕೆ ಅನುಮೋದನೆ ನೀಡಲಾಗಿದೆಯೇ;

ಇ) ಮಾನ್ಯ ಮುಖ್ಯ ಮಂತ್ರಿಯವರ ಆದೇಶದಂತೆ ಅನುಮೋದನೆ ನೀಡಿ ಇದೇ ವರ್ಷ 93-94ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ನೀಡಿರುವ ವಿಶೇಷ ಅನುದಾನದಲ್ಲಿ ಮಂಜೂರು ನೀಡಿ ಆ ಭಾಗದ ನಾಗರೀಕರಿಗೆ ನೀರಾವರಿ ಹಾಗೂ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದೇ?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಇಲ್ಲ.

ಇ) ಈ ಕಾಮಗಾರಿಗಳು 1993-94 ಸಾಲಿನ ಆಯವ್ಯಯದಲ್ಲಿ ಸೇರಿಲ್ಲ ಮತ್ತು ಇದುವರೆವಿಗೂ ಸಣ್ಣ ನೀರಾವರಿಗೆ ಸಾಲಿನಲ್ಲಿ ಯಾವ ವಿಶೇಷ ಅನುದಾನವು ಒದಗಿಸಿಲ್ಲ. ಅದರಿಂದ ಈ ಯೋಜನೆಗಳನ್ನು ಮಂಜೂರು ಮಾಡುವ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಚನ್ನಪಟ್ಟಣ ತಾಲ್ಲೂಕಿನಲ್ಲಿ ನೀರಾವರಿ ಪಂಪ್ ಸೆಟ್ಟುಗಳಿಗೆ ವಿದ್ಯುತ್ ಸರಬರಾಜು

247 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣ ತಾಲ್ಲೂಕಿನಲ್ಲಿ 4 ವರ್ಷಗಳಿಂದ ಎಷ್ಟು ಜನರಿಗೆ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ತನ್ನು ಒದಗಿಸಲಾಗಿದೆ (ವರ್ಷವಾರು ಮಾಹಿತಿಯನ್ನು ನೀಡುವುದು)

ಆ) ಚನ್ನಪಟ್ಟಣ ತಾಲ್ಲೂಕಿನಲ್ಲಿ 4 ವರ್ಷಗಳಿಂದ ಭಾಗ್ಯ ಜ್ಯೋತಿಯಡಿಯಲ್ಲಿ ಮನೆಗಳಿಗೆ ವಿದ್ಯುತ್ ಸಂಪರ್ಕ ಪಡೆದವರ ಒಟ್ಟು ಸಂಖ್ಯೆ ಎಷ್ಟು? (ವರ್ಷವಾರು ಮಾಹಿತಿ ನೀಡುವುದು)

ಇ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ನೀಡಲು ಸರ್ಕಾರದಲ್ಲಿ ಬಾಕಿ ಉಳಿದಿರುವ ಅರ್ಜಿಗಳ ಒಟ್ಟು ಸಂಖ್ಯೆ?

ಈ) ನೀರಾವರಿ ಪಂಪುಸೆಟ್ಟುಗಳ ಮತ್ತು ಭಾಗ್ಯಜ್ಯೋತಿ ಯೋಜನೆಯಡಿ ಮನೆಗಳಿಗೆ ವಿದ್ಯುತ್ ಸಂಪರ್ಕದ ಅನುಕೂಲ ಒದಗಿಸಲು ಇರುವ ಗುರಿಗಳನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಏನು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು) :

ಅ) 4 ವರ್ಷಗಳಲ್ಲಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜುಗೊಳಿಸಿರುವ ನೀರಾವರಿ ಪಂಪು ಸೆಟ್ಟುಗಳ ಒಟ್ಟು ಸಂಖ್ಯೆ 2917 ವರ್ಷವಾರು ಮಾಹಿತಿಯು ಈ ಕೆಳಕಂಡಂತಿದೆ :

1)	1989-90	-	550
2)	1990-91	-	993
3)	1991-92	-	904
4)	1992-93	-	470

ಆ) ನಾಲ್ಕು ವರ್ಷಗಳಲ್ಲಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ಭಾಗ್ಯಜ್ಯೋತಿಯಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆದಿರುವ ಮನೆಗಳ ಸಂಖ್ಯೆ 1783.

ವರ್ಷವಾರು ಮಾಹಿತಿಯು ಈ ಕೆಳಗಿನಂತಿದೆ:

1)	1989-90	-	200
2)	1990-91	-	316
3)	1991-92	-	268
4)	1992-93	-	999

ಇ) ಬಾಕಿ ಉಳಿದಿರುವ ಒಟ್ಟು ಅರ್ಜಿಗಳ ಸಂಖ್ಯೆ 345.

ಈ) ಪ್ರಸಕ್ತ ಸಾಲಾದ 1993-94ರಲ್ಲಿ ಚನ್ನಪಟ್ಟಣ ತಾಲ್ಲೂಕಿನಲ್ಲಿ 350 ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣಕ್ಕೆ ಗುರಿ ನಿಗಧಿ ಪಡಿಸಲಾಗಿದೆ. ಜನವರಿ 94ರ ಅಂತ್ಯದ ವೇಳೆಗೆ 264 ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸಲಾಗಿದೆ. ಮಾರ್ಚ್ 94ರ ಅಂತ್ಯದ ವೇಳೆಗೆ ಗುರಿಯನ್ನು ಸಾಧಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಪ್ರಸಕ್ತ ಸಾಲಾದ 1993-94ರಲ್ಲಿ ಚನ್ನಪಟ್ಟಣ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರದಲ್ಲಿ 1000 ಭಾಗ್ಯಜ್ಯೋತಿ ಇನ್ಸಲೇಷನ್ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಗುರಿ ನಿಗಧಿಪಡಿಸಲಾಗಿದೆ. ಈ ಕಾರ್ಯವು ಪ್ರಗತಿಯಲ್ಲಿದೆ. ಈ ಎಲ್ಲಾ 1000 ಭಾಗ್ಯಜ್ಯೋತಿ ಇನ್ಸಲೇಷನ್ಗಳಿಗೆ ಮಾರ್ಚ್ 94ರ ಅಂತ್ಯದ ವೇಳೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಚನ್ನಪಟ್ಟಣ ತಾಲ್ಲೋಕಿನಲ್ಲಿ ಕೆರೆಗಳ ಹೂಳೆತ್ತುವ ಬಗ್ಗೆ

246 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣದಲ್ಲಿ ಕೆರೆಗಳ ಹೂಳೆತ್ತುವ ಒಟ್ಟು ಎಷ್ಟು ಪ್ರಸ್ತಾವನೆಗಳು ಸರ್ಕಾರದಲ್ಲಿ ಬಾಕಿ ಉಳಿದಿವೆ (ವಿವರಗಳನ್ನು ಒದಗಿಸುವುದು);

ಆ) ಹಾಲಿ ವರ್ಷದಲ್ಲಿ ಎಷ್ಟು ಕೆರೆಗಳ ಹೂಳೆತ್ತುವುದನ್ನು ತೆಗೆದುಕೊಳ್ಳಬೇಕಾಗಿದೆ. (ವಿವರಗಳನ್ನು ಒದಗಿಸುವುದು).

ಇ) ಇಗ್ಗಲೂರು ಯೋಜನೆಯಿಂದ ನೆರಳೂರು ಕೆರೆಗೆ ನೀರೆತ್ತುವ ಪ್ರಸ್ತಾವನೆಯು ಸರ್ಕಾರದಲ್ಲಿ ಕಳೆದ ಮೂರು ವರ್ಷಗಳಿಂದ ಬಾಕಿ ಉಳಿದಿರುವುದು ನಿಜವೇ?

ಈ) ಹಾಗಿದ್ದಲ್ಲಿ, ಸರ್ಕಾರವು ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಉ) ಇದನ್ನು ಯಾವಾಗ ತೆಗೆದುಕೊಳ್ಳಲಾಗುವುದು?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಯಾವುದೂ ಇಲ್ಲ.

ಆ) ಯಾವುದೂ ಇಲ್ಲ.

ಇ) ಇಗ್ಗಲೂರು ಬ್ಯಾರೇಜ್ ಯೋಜನೆಯ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಆಗಿರುವ ಅಂದಾಜಿನಲ್ಲಿ ಇಗ್ಗಲೂರು ಯೋಜನೆಯಿಂದ ನೆರಳೂರು ಕೆರೆಗೆ ಪಂಪು ಮೂಲಕ ನೀರೊದಗಿಸುವ ಬಗ್ಗೆ ಅವಕಾಶ ಕಲ್ಪಿಸಿರುವುದಿಲ್ಲ. ಆದುದರಿಂದ ಈ ಪ್ರಸ್ತಾವನೆಯೂ ಸರ್ಕಾರದಲ್ಲಿ ಬಾಕಿ ಉಳಿದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ವಾಟೆಹೊಳೆ ಅಣೆಕಟ್ಟು ಪ್ರದೇಶದ ಹಿನ್ನೀರಿನಲ್ಲಿ ಮುಳುಗಡೆ ಆಗಿರುವ ಪ್ರದೇಶ

194 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಟೆಹೊಳೆ ಅಣೆಕಟ್ಟು ನಿರ್ಮಾಣದ ಕಾಲದಲ್ಲಿ ಸರ್ವೆ ಸರಿಯಾಗಿ ಮಾಡದಿರುವುದರಿಂದ ಸದರಿ ಅಣೆಕಟ್ಟು 2 ವರ್ಷಗಳಿಂದ ತುಂಬಿದಾಗ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಭೂಮಿ ಎಷ್ಟು?

ಆ) ಹಿನ್ನೀರು ಹೆಚ್ಚು ಪ್ರದೇಶ ಆವರಿಸಿ ರಸ್ತೆ ಮತ್ತು ಸೇತುವೆ ಮೇಲೆ 12 ಅಡಿ ನೀರು ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ನೀರಾವರಿ ಇಲಾಖೆಯು ಅಣೆಕಟ್ಟು ತುಂಬಿ ನಿಂತು ತಿಂಗಳಾನುಗಟ್ಟಲೆ ಮೋಟಾರು ದೋಣಿ ಒದಗಿಸದೆ 3 ಜನರು ನೀರಿನಲ್ಲಿ ಮುಳುಗಿ ಸತ್ತಿದ್ದು, ಅವರ ಕುಟುಂಬದವರಿಗೆ ಪರಿಹಾರ ಕೊಡಲಾಗಿದೆಯೇ;

ಈ) ಮೋಟಾರು ದೋಣಿ ಸಕಾಲಕ್ಕೆ ಒದಗಿಸದೆ ಜನರ ಪ್ರಾಣ ರಕ್ಷಣೆ ಮಾಡದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ;

ಉ) ಅಣೆಕಟ್ಟು ತುಂಬಿದಾಗ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಲು ಅಣೆಕಟ್ಟು ಕೆಳಗೆ ನದಿಗೆ ಸೇತುವೆ ಕಟ್ಟಿ ರಸ್ತೆ ಮಾಡಿ ಕೊಡುವುದು ಅಗತ್ಯವಲ್ಲವೆ;

ಊ) ವಾಟೆಹೊಳೆ ಅಣೆಕಟ್ಟು ಹಿನ್ನೀರು ನಿಲ್ಲುತ್ತದೆಂಬ ಕಾರಣದಿಂದ ಬೈಪಾಸ್ ರಸ್ತೆಗೆ ಇದುವರೆಗೆ ರಸ್ತೆ ದುರಸ್ತಿ ಮಾಡದಿರಲು ಕಾರಣವೇನು;

ಋ) ವಾಟೆಹೊಳೆ ಮುಳುಗಡೆ ಪ್ರದೇಶದ ಎಷ್ಟು ರೈತರಿಗೆ ಪರಿಹಾರ ಧನ ಮತ್ತು ಭೂಮಿ ಕೊಡಬೇಕಾಗಿದೆ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಹೆಚ್ಚುವರಿಯಾಗಿ ಭೂಮಿಯು ಮುಳುಗಡೆಯಾಗಿರುವುದಿಲ್ಲ.

ಆ) ಸೇತುವೆಯ ಮೇಲೆ ಸುಮಾರು 8 ಅಡಿ ನೀರು ನಿಂತಿದ್ದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ.

ಇ) ದಿನಾಂಕ 22-7-92ರಂದೇ ಹಿನ್ನೀರನ್ನು ತೆಪ್ಪದ ಮುಖಾಂತರ ದಾಟಕೂಡದೆಂದು ಪ್ರಕಟಣೆಯನ್ನು ಹೊರಡಿಸಿದ್ದಾಗ್ಯೂ ಸಹ ಅನಧಿಕೃತವಾಗಿ ನಾಡತೆಪ್ಪದಲ್ಲಿ ಪ್ರಯಾಣಿಸುತ್ತಿದ್ದವರಲ್ಲಿ 3 ಜನ ಸತ್ತಿದ್ದು ಅವರ ಕುಟುಂಬಕ್ಕೆ ತಾಲ್ಲೂಕ್ ತಹಶೀಲ್ದಾರ್‌ರವರು ಪರಿಹಾರವನ್ನು ತಲಾ 3 ಸಾವಿರ ರೂ.ಗಳಂತೆ ಕೊಟ್ಟಿರುತ್ತಾರೆ.

ಈ) ಸುತ್ತಮುತ್ತಲಿನ ಗ್ರಾಮಸ್ಥರ ಅನುಕೂಲಕ್ಕಾಗಿ 3 ರಸ್ತೆಗಳನ್ನು ನಿರ್ಮಿಸಿ ಸಾರ್ವಜನಿಕರ ಸಂಪರ್ಕಕ್ಕೆ ಪರ್ಯಾಯ ವ್ಯವಸ್ಥೆ ಮಾಡಲಾಗಿತ್ತು. ಈ ಕಾರಣದಿಂದ ಮೋಟಾರು ಬೋಟನ್ನು ಒದಗಿಸುವ ಯೋಜನೆ ಮಾಡಿರಲಿಲ್ಲ. 1992-93ನೇ ಸಾಲಿನಲ್ಲಿ ಸಮಯ ಹಾಗೂ ದೂರವನ್ನು ಉಳಿಸುವ ದೃಷ್ಟಿಯಿಂದ ಮೋಟಾರು ಬೋಟಿಗೆ ಗ್ರಾಮಸ್ಥರು ಒತ್ತಾಯಿಸಿರುವುದರಿಂದ 11-8-92 ರಂದು ಅದರ ವ್ಯವಸ್ಥೆಯನ್ನು ಮಾಡಲಾಯಿತು. 3 ಜನರ ಸಾವಿನ ಅಪಘಾತಕ್ಕೆ ಯಾವುದೇ ಅಧಿಕಾರಿಗಳೂ ಕಾರಣವಲ್ಲದೇ ಇರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸವುದಿಲ್ಲ.

ಉ) ಈ ಹಿಂದೆಯೇ ಹಿನ್ನೀರಿನಿಂದಾವೃತವಾದ ಗ್ರಾಮಸ್ಥರ ಸಂಚಾರಕ್ಕೆಂದೇ 3 ಬೈಪಾಸ್ ರಸ್ತೆಗಳನ್ನು ಹೊಸದಾಗಿ ನಿರ್ಮಿಸಲಾಗಿರುತ್ತೆ. ಆದ್ದರಿಂದ ಆ ರಸ್ತೆಗಳಿಗೆ ಸದ್ಯದಲ್ಲಿ ರಿಪೇರಿ ಮಾಡಿಸುವ ಅವಶ್ಯಕತೆ ಇರುವುದಿಲ್ಲ.

ಋ) ಬೇಲೂರು ತಾಲ್ಲೂಕಿನಲ್ಲಿ ಬರುವ ಈ ಕೆಳಕಂಡ ಗ್ರಾಮದ ರೈತರುಗಳಿಗೆ ಪರಿಹಾರ ಧನ ಬಾಕಿ ಇರುತ್ತದೆ.

		ಎ.ಗುಂ.
1)	ಬೆಳಗುಲಿ	25.39
2)	ಬಿಕ್ಕೋಡು	10.00
3)	ಹೊನ್ನವಳ್ಳಿ	4.00
4)	ಚಟ್ಟನಹಳ್ಳಿ	1.00
5)	ಮದಘಟ್ಟ	1.28
6)	ಹೊನ್ನೇಮನೆ	12.00
7)	ಹೊನ್ನವಳ್ಳಿ	ಗ್ರಾಮಠಾಣೆ
8)	ನಡುವನಹಳ್ಳಿ	2.10

ಒಟ್ಟು 56 ಎಕರೆ 37 ಗುಂಟೆ ಭೂಮಿಗೆ ಪರಿಹಾರ ಕೊಡಬೇಕಾಗಿರುತ್ತದೆ.

ಯಗಚಿ ಮುಳುಗಡೆ ಪ್ರದೇಶದ ಜನರಿಗೆ ಕಾಲೋನಿಗಳನ್ನು ಕಟ್ಟಿಸುವುದು

196-ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಗಚಿ ಜಲಾಶಯ ಯೋಜನೆಯಿಂದಾಗಿ ಮುಳುಗಡೆಯಾಗಿರುವ ಭೂಮಿ ಎಷ್ಟು ಹಾಗೂ ಎಷ್ಟು ಎಕರೆ ಪ್ರದೇಶಕ್ಕೆ ಈವರೆಗೆ ಪರಿಹಾರ ಕೊಡಲಾಗಿದೆ;

ಆ) ಯಗಚಿ ಅಣೆಕಟ್ಟು ಮುಳುಗಡೆ ಪ್ರದೇಶದ ಜನರಿಗೆ ಪುನರ್ವಸತಿ ಕಾಲೋನಿಗಳನ್ನು ಕಟ್ಟಿರುವಲ್ಲಿ ಅವರಿಗೆ ಭೂಮಂಜೂರಾತಿ ಮಾಡಲಾಗಿದೆಯೇ;

ಇ) ಯಾವ ಯಾವ ಪುನರ್ವಸತಿ ಕಾಲೋನಿಯ ಹತ್ತಿರ ಎಷ್ಟೆಷ್ಟು ಭೂಮಿ ಮೀಸಲಿಟ್ಟಿದೆ. ಹಾಗೂ ಎಷ್ಟು ಜನರಿಗೆ ಎಷ್ಟು ಎಕರೆ ಭೂಮಿ ಈವರೆಗೆ ಮಂಜೂರ್ಮಾಡಲಾಗಿದೆ;

ಈ) ಯಗಚಿ ಅಣೆಕಟ್ಟು ನಾಲಾ ಹೋಗಿ ಆ ಪ್ರದೇಶದ ಜನರು ಎಷ್ಟು ಎಕರೆ ಭೂಮಿ ಕಳೆದುಕೊಂಡಿರುವರು ಹಾಗೂ ಅವರಿಗೆ ಪರಿಹಾರ ಕೊಡಲಾಗಿದೆಯೆ;

ಉ) ಅವರುಗಳಿಗೆ ಭೂಮಿ ಮಂಜೂರಾತಿ ಕೊಡಲಾಗಿದೆಯೆ ;

ಊ) ಹಾಗಿದ್ದಲ್ಲಿ, ಎಷ್ಟು ಎಕರೆ ಕೊಡಲಾಗಿದೆ.

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಯಗಚಿ ಅಣೆಕಟ್ಟು ಪೂರ್ಣಗೊಂಡ ನಂತರ ಜಲಾಶಯದಡಿ 4846 ಎಕರೆಯಷ್ಟು ಪ್ರದೇಶ ಮುಳುಗಡೆಯಾಗುತ್ತದೆ. 1994 ಎ, 33 ಗುಂಟೆ ಪ್ರದೇಶಕ್ಕೆ ರೂ. 308.70 ಲಕ್ಷಗಳ ಪರಿಹಾರ ಧನ ನೀಡಲಾಗಿದೆ.

ಆ) ಯಗಚಿ ಯೋಜನೆ ಅಣೆಕಟ್ಟು ಮುಳುಗಡೆ ಪ್ರದೇಶದ ಜನರಿಗೆ ಪುನರ್ವಸತಿ ಕಾಲೋನಿಗಳನ್ನು ಕಟ್ಟಿರುವಲ್ಲಿ ಅವರಿಗೆ ಭೂಮಂಜೂರಾತಿ ನೀಡುವ ಬಾಬ್ತು 597 ಪ್ರಕರಣಗಳಿಗೆ ಸಂಬಂಧಿಸಿದಂತೆ 2351 ಎಕರೆ ಜಮೀನು ಮಂಜೂರಾತಿ ಮಾಡಲಾಗಿದ್ದು, ಜನವರಿ 1994ರ ಅಂತ್ಯದವರೆಗೆ 525 ಪ್ರಕರಣಗಳಿಗೆ ಸಂಬಂಧಿಸಿದಂತೆ ಎ 2064-19 ಗುಂ. ಪ್ರದೇಶಕ್ಕೆ ಸಾಗುವಳಿ ಚೀಟಿಯನ್ನು ನೀಡಲಾಗಿದೆ.

ಕ್ರ. ಸಂಖ್ಯೆ(1)	ಮುಳುಗಡೆ ಗ್ರಾಮ(2)	ಪುನರ್ವಸತಿ ಕೇಂದ್ರ(3)	ವ್ಯಕ್ತಿಗಳ ಸಂಖ್ಯೆ(4)	ವಿಸ್ತೀರ್ಣ ಎ(6)ಗುಂ.	ಮೀಸಲಿಟ್ಟ ಜಮೀನು ಎ. (7) ಗುಂ.
1)	ಸೂರಾಪುರ	ಹೀರುಗುಪ್ಪೆ	39	156-00	355-00
		ಹಾರೋಹಳ್ಳಿ	62	248-00	337-00
2)	ಶಂಬುಗನಹಳ್ಳಿ	ಚಿಕ್ಕೋಲೆ	41	164-00	514-00
3)	ಮುಂಡಗಟ್ಟ	ಬೆಳ್ಳೂರು	49	196-00	284-00
4)	ಡಣ್ಣಾಯಕನಹಳ್ಳಿ	ಹಾಡ್ಲಗೆರೆ	75	300-00	411-00
5)	ಕನ್ನಾಯಕನಹಳ್ಳಿ	ಮದಗಟ್ಟ	4	16-00	445-00

ಈ) ನಾಲೆಗಾಗಿ ಒಟ್ಟಾರೆ 115 ಎ, 20 ಗುಂಟೆ ಭೂಮಿಯನ್ನು 135 ಜನರು ಕಳೆದುಕೊಂಡಿದ್ದು ಈ ಬಾಬ್ತಿಗೆ ರೂ. 15,32,862ಗಳನ್ನು ಪರಿಹಾರ ಧನ ಪಾವತಿಬೇಕಾಗಿರುತ್ತದೆ.

ಉ) ನಾಲೆಗೆ ಭೂಮಿ ಕಳೆದುಕೊಂಡವರಿಗೆ ಭೂಸ್ವಾಧೀನ ಕಾಯಿದೆಯನ್ವಯ ಬದಲಿ ಜಮೀನು ಮಂಜೂರು ಮಾಡುವುದಕ್ಕೆ ಅವಕಾಶವಿರುವುದಿಲ್ಲ.

ಊ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹಾಸನ ಜಿಲ್ಲೆಯ ರಸ್ತೆಗಳ ದುರಸ್ತಿ

193 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ಹಾಸನ ಜಿಲ್ಲೆಯಲ್ಲಿ ವಾರ್ಷಿಕ ದುರಸ್ತಿಗಾಗಿ ಪ್ರತಿ ತಾಲ್ಲೂಕಿನಲ್ಲಿ ಪ್ರತಿ ವರ್ಷ ಬಿಡುಗಡೆ ಮಾಡಿರುವ ಹಣವೆಷ್ಟು;

ಆ) ಮಲೆನಾಡು ತಾಲ್ಲೋಕಾದ ಬೇಲೂರು ರಸ್ತೆಗಳು ಮಳೆಗಾಲದಲ್ಲಿ ನೀರು ನುಗ್ಗಿ ಮಣ್ಣು ತಾರು ರಸ್ತೆಯ ಎರಡು ಬದಿಯಲ್ಲಿ ಕೊಚ್ಚಿ ಹೋಗುವುದರಿಂದ ಎರಡು ಕಡೆ ಜೆಲ್ಲಿ ಕಲ್ಲು ಹಾಕಿಸಿ ಚರಂಡಿ ಮಾಡಿಸುವುದು ಸೂಕ್ತವಲ್ಲವೆ;

ಇ) ಕಳೆದ 3 ವರ್ಷಗಳಿಂದ ಬೇಲೂರು ತಾಲ್ಲೋಕಿನಲ್ಲಿ ಎಷ್ಟು ಕಿ.ಮೀಟರ್ ಉದ್ದ ರಸ್ತೆ ಬದಿಗೆ ಜೆಲ್ಲಿ ಕಲ್ಲು ಹಾಕಿಸಲಾಗಿದೆ. ಹಾಗೂ ಎಷ್ಟು ಕಿಲೋಮೀಟರ್ ಉದ್ದಕ್ಕೆ ಚರಂಡಿ ತೋಡಿಸಲಾಗಿದೆ?

ಲೋಕೋಪಯೋಗಿ ಇಲಾಖಾ ವ್ಯಾಪ್ತಿಯ ರಸ್ತೆಗಳಿಗೆ ಸಂಬಂಧಿಸಿದಂತೆ ವಿವರಗಳು ಕೆಳಕಂಡಂತಿದೆ :

ತಾಲ್ಲೂಕು	ಪ್ರತಿ ವರ್ಷಕ್ಕೆ ಲಕ್ಷ ರೂ.ಗಳಲ್ಲಿ	90-91, 91-92 ಹಾಗೂ 92-93ರ ಒಟ್ಟು 3 ವರ್ಷಕ್ಕೆ
ಹಾಸನ	12.85	38.55
ಬೇಲೂರು	10.99	32.97
ಚೆನ್ನರಾಯಪಟ್ಟಣ	18.02	54.06
ಅರಸಿಕರೆ	15.84	47.52
ಹೊಳೆನರಸಿಪುರ	15.04	45.12
ಅರಕಲಗೂಡು	9.13	27.39
ಸಕಲೇಶಪುರ	9.86	29.58
ಆಲೂರು	2.73	8.19
ಒಟ್ಟು	94.46	283.35

ಆ) ಹೌದು.

ಇ) ಬೇಲೂರು ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 15.90 ಕಿಮೀ ಉದ್ದಕ್ಕೆ ರಸ್ತೆ ಬದಿಗೆ ಜಲ್ಲಿ ಕಲ್ಲು ಹಾಕಿಸಿದ್ದು ಅವಶ್ಯಕತೆಗೆ ತಕ್ಕಂತೆ ಚರಂಡಿ ಮಾಡಲಾಗಿದೆ. ಅಲ್ಲದೆ ತೋಳು ಚರಂಡಿಯನ್ನೂ ಸಹ ತೆಗೆಯಲಾಗಿದೆ.

ವಾಟೆಹೊಳೆ ಅಣೆಕಟ್ಟು ಎಡದಂಡೆ ನಾಲೆಯ ಕೆಲಸದ ಪ್ರಗತಿ

195 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಾಟೆಹೊಳೆ ಅಣೆಕಟ್ಟು ಎಡದಂಡೆ ನಾಲೆಯ ಸುಮಾರು 2000 ಎಕರೆಗೆ ನೀರು ಕೊಡಲು ಅಂದಾಜು ತಯಾರಿಸಿದ್ದು ಆ ನಾಲೆಯ ಕೆಲಸ ಅಣೆಕಟ್ಟು ನಿರ್ಮಾಣವಾಗಿ 10 ವರ್ಷಗಳಾದರೂ ಪ್ರಾರಂಭಿಸದಿರಲು ಕಾರಣವೇನು;

ಆ) ಅಣೆಕಟ್ಟು ಕೆಲಸದಿಂದಾಗಿ ಈ ಹಿಂದೆ 800 ಎಕರೆಗಳಿಗೆ ನೀರು ಒದಗಿಸುತ್ತಿದ್ದ ಮದಗಟ್ಟ ಕಾಲುವೆಯನ್ನು ಮುಚ್ಚಿ ಹಾಕಿ ಹೊಸನಾಲೆ ಕೆಲಸ ಪ್ರಾರಂಭಿಸದಿರುವುದರಿಂದ ಆ ಭಾಗದ ರೈತರು ನೀರಿಲ್ಲದೆ ನೀರಿನ ತೆರಿಗೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಎಡದಂಡೆ ನಾಲೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಯಾವುದೇ ಅಂದಾಜು ತಯಾರಿಸಿರುವುದಿಲ್ಲ. ವಾಟೆಹೊಳೆ ಎಡದಂಡೆ ನಾಲೆಯು ಮದಗಟ್ಟ ಪಿಕ್‌ಅಪ್ ಚಾನಲ್ಲು ಪರಿವರ್ತಿತ ನಾಲೆಯಾಗಿರುತ್ತದೆ.

ಆ)ಮದಗಟ್ಟ ಪಿಕ್‌ಅಪ್ ಚಾನಲ್‌ಅಡಿಯಲ್ಲಿ 718ಎಕರೆಗೆ ನೀರನ್ನು ಒದಗಿಸಲಾಗಿದ್ದು ಅಷ್ಟೇ ಎಕರೆಗೆ ನೀರಿನ ಕರ ವಿಧಿಸಲಾಗಿದೆ. ನೀರು ಒದಗಿಸದೆ ಇರುವ ಪ್ರದೇಶಕ್ಕೆ ನೀರು ತೆರಿಗೆಯನ್ನು ವಿಧಿಸಿರುವುದಿಲ್ಲ.

ಇ) ಪ್ರಶ್ನೆ (ಅ)ಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ದೇವರ ಹೊನ್ನಾಳಿ ಏತ ನೀರಾವರಿ ಯೋಜನೆ

218 - ಶ್ರೀ ಡಿ.ಬಿ. ಗಂಗಪ್ಪ (ಹೊನ್ನಾಳಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕಿನ ದೇವರ ಹೊನ್ನಾಳಿ ಏತ ನೀರಾವರಿ ಯೋಜನೆಯು ಯಾವ ಹಂತದಲ್ಲಿದೆ;

ಆ) ಈ ವರ್ಷ ಆ ಯೋಜನೆಯನ್ನು ಪ್ರಾರಂಭಿಸಲಾಗುವುದೆ?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಅಂದಾಜು ಪಟ್ಟಿ ತಯಾರಾಗಿದ್ದು, ಪರಿಶೀಲನೆಯಲ್ಲಿದೆ.

ಆ) ಸಾಧ್ಯವಾಗುವುದಿಲ್ಲ.

ಗೋವಿನ ಕೋವಿ ಹತ್ತಿರ ತುಂಗಭದ್ರಾ ನದಿಗೆ ಸೇತುವೆ ನಿರ್ಮಾಣ

216 - ಶ್ರೀ ಡಿ.ಬಿ. ಗಂಗಪ್ಪ (ಹೊನ್ನಾಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕಿನ ಗೋವಿನಕೋವಿ ಹತ್ತಿರ ತುಂಗಭದ್ರಾ ನದಿಗೆ ಸೇತುವೆ ನಿರ್ಮಾಣ ಮಾಡಲು ಸರ್ಕಾರ ಆಲೋಚಿಸಿದೆಯೆ.

ಆ) ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ.

ಇ) ಅದರ ನಿರ್ಮಾಣವನ್ನು ಈ ವರ್ಷ ಪ್ರಾರಂಭಿಸಲಾಗುವುದೇ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) ಈ ಸೇತುವೆ ಕಾಮಗಾರಿಯು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತದೆ. ಇದಕ್ಕೆ ತಗಲುವ ಅಂದಾಜು ವೆಚ್ಚ ರೂ. 2.75 ಕೋಟಿಗಳಾಗಬಹುದೆಂದು ಅಂದಾಜಿಸಲಾಗಿದೆ. ಈ ಬೃಹತ್ ವೆಚ್ಚದ ಕಾಮಗಾರಿಯನ್ನು ಕೇಂದ್ರ ಸರ್ಕಾರದ ಸಿಆರ್‌ಎಫ್ ನಿಧಿಯಡಿಯಲ್ಲಿ ಪ್ರಸ್ತಾಪಿಸದರೂ ಫಲಪ್ರದವಾಗಿರುವುದಿಲ್ಲ. ಕಾರಣ ಈಗಾಗಲೇ ಸುಮಾರು ರೂ. 115ಕೋಟಿ ಸಿಆರ್‌ಎಫ್ ನಿಧಿಯಡಿಯಲ್ಲಿ ಕಾಮಗಾರಿಗಳು ಇನ್ನೂ ಅನುಮೋದನೆಯಾಗದ ಕಾರಣ ಇದನ್ನು ಕಳುಹಿಸುವುದರಿಂದ ಪ್ರಯೋಜನವಾಗಲಾರದು. ಅದರಿಂದ, ಇದನ್ನು ರಾಜ್ಯ ಆಯವ್ಯಯದಲ್ಲಿಯೇ ತೆಗೆದು ಕೊಳ್ಳುವ ಬಗ್ಗೆ ಹೊಸ ಕಾಮಗಾರಿಗಳ ಪಟ್ಟಿಯಲ್ಲಿ ಪ್ರಸ್ತಾಪಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಶ್ವ ಆಹಾರ ಯೋಜನೆಯಡಿಯಲ್ಲಿ ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಸುತ್ತಗಟ್ಟ ಗ್ರಾಮಗಳಿಗೆ ಗೋಡೌನ್

78 - ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಸುತಗಟ್ಟ ಗ್ರಾಮದಲ್ಲಿ ಮುಳುಗಡೆ ಪ್ರದೇಶದ ಜನರ ಅನುಕೂಲತೆಗಾಗಿ ವಿಶ್ವ ಆಹಾರ ಯೋಜನೆಯಡಿಯಲ್ಲಿ ಗೋಡೌನ ಹಾಗೂ ಆಫೀಸ್ ಕಟ್ಟಡ ಕಟ್ಟಲು ಸರ್ಕಾರಕ್ಕೆ ಮನವಿಗಳು ಬಂದಿವೆಯೇ?

ಆ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಇ) ವಿಶ್ವ ಆಹಾರ ಯೋಜನೆಯಡಿಯಲ್ಲಿ ಸುಮಾರು ಒಂದು ಕೋಟಿ ರೂಪಾಯಿ ಹಣ ಲಭ್ಯವಿದ್ದರೂ ಕೂಡಾ ಆ ಹಣದಲ್ಲಿ ಆರು ಲಕ್ಷ ರೂ.ಗಳನ್ನು ಆ ಕೆಲಸಕ್ಕೆ ಬಿಡುಗಡೆ ಮಾಡಲು ಸರ್ಕಾರದವರು ಕ್ರಮಕೈಗೊಳ್ಳುವರೇ?

ಈ) ಆ ಕೆಲಸವನ್ನು ಇದೇ ವರ್ಷದಲ್ಲಿ ಪ್ರಾರಂಭಿಸಲು ಮುಖ್ಯ ಇಂಜನಿಯರ್ ಉತ್ತರ ವಲಯ, ನೀರಾವರಿ ಇಲಾಖೆ, ಬೆಳಗಾಂ ಇವರಿಗೆ ಆದೇಶ ನೀಡಲಾಗುವುದೇ?

ಶ್ರೀ. ಶ್ರೀರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಮಂತ್ರಿಗಳು):

ಅ) ಹೌದು

ಆ) ಸದರಿ ಮನವಿಯಲ್ಲಿನ ಕಾಮಗಾರಿಗಳನ್ನು 1994-95 ರ ವಿಶ್ವ ಆಹಾರ ಯೋಜನೆಯ ಕಾರ್ಯಕ್ರಮದ ಪಟ್ಟಿಯಲ್ಲಿ ಅಳವಡಿಸಿ ಅವುಗಳಿಗೆ ಎಸ್.ಎಲ್.ಎಸ್.ಸಿ.ಯ ಅನುಮೋದನೆ ದೊರಕಿದಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಇ) ಉತ್ತರ (ಆ) ರಡಿಯಲ್ಲಿ ವಿವರಿಸಿದಂತೆ ಸದರಿ ಕಾಮಗಾರಿಗಳಿಗೆ ಎಸ್.ಎಲ್.ಎಸ್.ಸಿ.ಯ ಅನುಮೋದನೆ ದೊರೆತಲ್ಲಿ ಹಣವನ್ನು ಬಿಡುಗಡೆ ಮಾಡಲಾಗುವುದು.

ಈ) 1993-94ನೇ ಸಾಲಿನ ಕಾರ್ಯಕ್ರಮದ ಪಟ್ಟಿಯು ಈಗಾಗಲೇ ಅನುಮೋದಿಸಲ್ಪಟ್ಟಿದ್ದು ಸದರಿ ಕಾಮಗಾರಿಗಳನ್ನು 1994-95ರ ವಿಶ್ವ ಆಹಾರ ಯೋಜನೆಯ ಕಾರ್ಯಕ್ರಮದ ಪಟ್ಟಿಯಲ್ಲಿ ಅಳವಡಿಸಿ ಎಸ್.ಎಲ್.ಎಸ್.ಸಿ.ಯ ಅನುಮೋದನೆ ದೊರತಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಬೈಲಹೊಂಗಲ ತಾಲ್ಲೂಕಿನ ಹೊಸಗರ್ಜೂರ ಗ್ರಾಮದಿಂದ ಹಳೆ ಗರ್ಜೂರ ಗ್ರಾಮಕ್ಕೆ ರಸ್ತೆ

79 - ಶ್ರೀ ಶಿವಾನಂದ ಹೆಚ್. ಕೌಜಲಗಿ, (ಬೈಲಹೊಂಗಲ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಗರ್ಜೂರ ಗ್ರಾಮವು ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಸಂಗತಿ ನಿಜವೇ;

ಆ) ಹಳೆಯ ಗರ್ಜೂರ ಗ್ರಾಮದಿಂದ ಹೊಸ ಗರ್ಜೂರ ಗ್ರಾಮದವರೆಗೆ ಸುಮಾರು 3 ಕಿ.ಮೀ. ರಸ್ತೆ ತಮ್ಮ ಹೊಲಮನೆಗಳಿಗೆ ಹೋಗಲು ನಿರ್ಮಿಸಲು ಆ ಗ್ರಾಮದ ಜನರು ಸರ್ಕಾರಕ್ಕೆ ಮೇಲಿಂದ ಮೇಲೆ ಕೇಳಿಕೊಳ್ಳುತ್ತಾ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಇದುವರೆಗೂ ಆ ಮುಳುಗಡೆ ಪ್ರದೇಶದ ಜನರಿಗೆ ಹೊಲಮನೆಗಳಿಗೆ ಹೋಗಲು ರಸ್ತೆ ಮಾಡದಿರುವುದರಿಂದ ಅವರಿಗೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಕೂಡಲೇ ಸರ್ಕಾರದವರು ಈ ಕೆಲಸಕ್ಕೆ 4701ರಲ್ಲಿ 5 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿ ರಸ್ತೆ ನಿರ್ಮಾಣ ಮಾಡುವ ಕ್ರಮ ಕೈಗೊಳ್ಳುವರೆ, ಹಾಗೂ ಇನ್ನು ಎಷ್ಟು ದಿನಗಳಲ್ಲಿ ಆ ರಸ್ತೆ ಮಾಡಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಹೌದು.

ಆ) ಬಂದಿದೆ.

ಇ) ಬಂದಿದೆ.

ಈ) ಸದರೀ ರಸ್ತೆಯು ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಗೊಳ್ಳಿ ಗ್ರಾಮದಲ್ಲಿ ಮಲಪ್ರಭಾ ಮುಳುಗಡೆ ಪ್ರದೇಶದ ಜನರ ಅನುಕೂಲತೆಗಾಗಿ 7 ಶಾಲಾ ಕೋಣೆಗಳನ್ನು ಕಟ್ಟಿಸುವುದು.

76 - ಶ್ರೀ ಶಿವಾನಂದ ಹೆಚ್. ಕೌಜಲಗಿ, (ಬೈಲಹೊಂಗಲ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ಮಲಪ್ರಭಾ ಮುಳುಗಡೆ ಪ್ರದೇಶದ ಜನರ ಅನುಕೂಲತೆಗಾಗಿ 7 ಶಾಲಾ ಕೋಣೆಗಳನ್ನು ಕಟ್ಟಲು ಆಡಳಿತಾತ್ಮಕ ಮಂಜೂರಾತಿ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಎಂದು ಕೊಡಲಾಯಿತು;

ಆ) ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಗೆ ನೀಡಲಾದ ಮೊತ್ತವೆಷ್ಟು;

ಇ) ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಿದ್ದರೂ ಕೂಡ ಇದುವರೆಗೂ ಶಾಲಾ ಕೋಣೆ ಕಟ್ಟುವ ಕೆಲಸ ಪ್ರಾರಂಭವಾಗದೇ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರದವರು ಸದನದಲ್ಲಿ ಆಶ್ವಾಸನೆ ನೀಡಿದ ಪ್ರಕಾರ ಇನ್ನು ಎಷ್ಟು ದಿವಸಗಳಲ್ಲಿ ಈ ಕೋಣೆ ಕಟ್ಟುವ ಕೆಲಸವನ್ನು ಪ್ರಾರಂಭ ಮಾಡುವರು ಹಾಗೂ ಇನ್ನು ಎಷ್ಟು ದಿವಸಗಳಲ್ಲಿ ಪೂರ್ಣಗೊಳಿಸುವರು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಹಳೆಯ 8 ಶಾಲಾ ಕೋಣೆಗಳ ಕಟ್ಟಡವನ್ನು ಕೆಡವಿ ಅದರ ಸಾಮಗ್ರಿಗಳನ್ನು ಉಪಯೋಗಿಸಿ, ಹೊಸ ಶಾಲಾ ಕಟ್ಟಡವನ್ನು ನಿರ್ಮಾಣ ಮಾಡಲು ಜುಲೈ 93ರಲ್ಲಿ ಅನುಮತಿ ನೀಡಲಾಗಿದೆ ಮತ್ತು ಆಗಸ್ಟ್ 93ರಲ್ಲಿ ತಾಂತ್ರಿಕ ಮಂಜೂರಾತಿ ನೀಡಲಾಗಿದೆ.

ಆ) 9.38 ಲಕ್ಷ ರೂ.ಗಳು.

ಇ) ಬಂದಿದೆ.

ಈ) ಸದರೀ ಕಾಮಗಾರಿಗೆ ಎರಡು ಸಲ ಟೆಂಡರ್ ಕರೆದರೂ ಯಾವ ಗುತ್ತಿಗೆದಾರರು ಟೆಂಡರನ್ನು ಹಾಕಿರುವುದಿಲ್ಲ.

ಸದರೀ ಕಾಮಗಾರಿಯನ್ನು ಇಲಾಖೆಯ ನಿಯಮಾನುಸಾರ ಮಾಡಿ ಮುಗಿಸಲು ಶೀಘ್ರದಲ್ಲಿ ಕ್ರಮ ಕೈಗೊಳ್ಳಲಾಗುವುದು. ಕ್ರಮ ಕೈಗೊಂಡು ಒಂದು ವರ್ಷದ ಅವಧಿ ಒಳಗೆ ಮುಗಿಸಲಾಗುವುದು.

ಬೈಲಹೊಂಗಲ ತಾಲ್ಲೋಕಿನ ವಣ್ಣೂರು, ನೇಸರ್ಗಿ ರಾಜ್ಯ ಹೆದ್ದಾರಿಯನ್ನು ಅಭಿವೃದ್ಧಿ ಪಡಿಸುವುದು.

80 - ಶ್ರೀ ಶಿವಾನಂದ ಹೆಚ್. ಕೌಜಲಗಿ, (ಬೈಲಹೊಂಗಲ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ವಣ್ಣೂರು, ನೇಸರ್ಗಿ ರಸ್ತೆ ರಾಜ್ಯ ಹೆದ್ದಾರಿಯಾಗಿದ್ದರೂ ಕೂಡ, ಇದೂವರೆಗೂ ಆ ರಸ್ತೆ ಮೇಲೆ ಹೆಚ್ಚಿನ ಅಭಿವೃದ್ಧಿ ಮಾಡದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆ ರಸ್ತೆಯಲ್ಲಿ ಮಲಪ್ರಭಾ ಸಕ್ಕರೆ ಕಾರ್ಖಾನೆ ಘಟಪ್ರಭಾ ಸಕ್ಕರೆ ಕಾರ್ಖಾನೆ ಸಂಕೇಶ್ವರ ಸಕ್ಕರೆ ಕಾರ್ಖಾನೆ ಹಾಗೂ ಚಿಕ್ಕೋಡಿ ಸಕ್ಕರೆ ಕಾರ್ಖಾನೆಗಳ ಗಾಡಿಗಳು ಈ ರಸ್ತೆಯ ಮೇಲೆ ಹಾಯುತ್ತಿದ್ದು, ಆ ರಸ್ತೆಯು ಅತಿ ಮೇಲಿಂದ ಮೇಲೆ ನಾದುರಸ್ಥಿ ಆಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಕೇವಲ ತಗ್ಗುಗಳನ್ನು ಮಾತ್ರ ತುಂಬುತ್ತಿದ್ದು, ಇದು ಪೂರ್ಣ ಡಾಂಬರೀಕರಣ ಮಾಡಲು ಕ್ರಮ ಕೈಗೊಳ್ಳುವರೇ;

ಈ) ಈ ರಸ್ತೆ ಎಲ್ಲಮ್ಮನ ದೇವಸ್ಥಾನಕ್ಕೆ ಹೋಗುವ ಹಾಗೂ ಶ್ರೀ ಕ್ಷೇತ್ರ ಸೋಗಲಕ್ಕೆ ಹೋಗುವ ರಸ್ತೆ ಸಹ ಆಗಿದ್ದು, ಇಲ್ಲಿ ಹೆಚ್ಚಿನ ದಟ್ಟಣೆ ಇದ್ದು ಕೂಡಲೇ ಈ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಸರ್ಕಾರದವರು 30 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವರೇ ಹಾಗೂ ಎಷ್ಟು ದಿವಸಗಳಲ್ಲಿ ಈ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಕಾಣುವಂತೆ ಮಾಡಲಾಗುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಬಂದಿದೆ.

ಇ) ಅನುದಾನದ ಲಭ್ಯತೆಯನ್ನು ಅನುಸರಿಸಿ ಮರು ಡಾಂಬರೀಕರಣವನ್ನು ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಈ) ಈ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾಪವನ್ನು ಪರಿಶೀಲಿಸಲಾಗುವುದು. ಈ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ವಿಷಯವು ಪರಿಶೀಲನೆಯಲ್ಲಿರುವುದಿಲ್ಲ.

ಮೂಡಿಗೆರೆ ತಾಲ್ಲೋಕಿನಲ್ಲಿ ಲೋಕೋಪಯೋಗಿ ಮತ್ತು ಜಿಲ್ಲಾ ಪರಿಷತ್ ವ್ಯಾಪ್ತಿಗೊಳಪಡುವ ರಸ್ತೆಗಳು

231 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೋಕಿನಲ್ಲಿ ಲೋಕೋಪಯೋಗಿ ಇಲಾಖೆ ಮತ್ತು ಜಿಲ್ಲಾ ಪರಿಷತ್ ವ್ಯಾಪ್ತಿಗೊಳಪಡುವ ರಸ್ತೆಗಳ ಉದ್ದವೆಷ್ಟು;

ಆ) ಅವುಗಳಲ್ಲಿ ಎಷ್ಟು ಕಿಮೀ ಉದ್ದದ ರಸ್ತೆಗೆ ಡಾಂಬರೀಕರಣ ಮಾಡಲಾಗಿದೆ;

ಇ) ಇನ್ನೂ ಡಾಂಬರೀಕರಣ ಮಾಡದಿರುವ ರಸ್ತೆ ಎಷ್ಟು;

ಈ) ಆ ರಸ್ತೆಗಳ ಅಭಿವೃದ್ಧಿಗೆ ಎಷ್ಟು ಹಣ ಒದಗಿಸಲಾಗುತ್ತಿದೆ. (ಕಿ.ಮೀ. ಒಂದಕ್ಕೆ) ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಮೂಡಿಗೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ರಸ್ತೆಗಳ ವಿವರ ಕೆಳಕಂಡಂತಿದೆ.

ಲೋಕೋಪಯೋಗಿ ಇಲಾಖೆ ವ್ಯಾಪ್ತಿ

ರಾಜ್ಯ ಹೆದ್ದಾರಿ	148.70 ಕಿಮೀ
ಮುಖ್ಯ ಜಿಲ್ಲಾ ರಸ್ತೆ	134.30 ಕಿಮೀ
	283.00 ಕಿಮೀ

ಜಿಲ್ಲಾ ಪಂಚಾಯತ್ ವ್ಯಾಪ್ತಿ

ಹಳ್ಳಿ ದರ್ಜೆ ರಸ್ತೆ ಹಾಗೂ ತಾಲ್ಲೂಕು ಬೋರ್ಡ್‌ರಸ್ತೆಗಳು 593.00 ಕಿಮೀ

ಆ) ಡಾಂಬರೀಕರಣ ಮಾಡಿರುವ ರಸ್ತೆಗಳ ಉದ್ದ ಕೆಳಕಂಡಂತಿದೆ.

ಲೋಕೋಪಯೋಗಿ ಇಲಾಖೆ ವ್ಯಾಪ್ತಿ	:	257.00 ಕಿ.ಮೀ.
ಜಿಲ್ಲಾ ಪಂಚಾಯತ್ ವ್ಯಾಪ್ತಿ	:	96.00 ಕಿ.ಮೀ.

ಇ) ಇನ್ನೂ ಡಾಂಬರೀಕರಣವಾಗದಿರುವ ರಸ್ತೆಗಳ ಉದ್ದ ಕೆಳಕಂಡಂತಿದೆ.

ಲೋಕೋಪಯೋಗಿ ಇಲಾಖೆ ವ್ಯಾಪ್ತಿ	:	26.00 ಕಿಮೀ
ಜಿಲ್ಲಾ ಪಂಚಾಯತ್ ವ್ಯಾಪ್ತಿ	:	947.00 ಕಿಮೀ

ಈ) ಪ್ರತಿ ಕಿ.ಮೀ. ರಸ್ತೆಗಳ ನಿರ್ವಹಣೆ ವಿಶೇಷ ದುರಸ್ತಿ ಹಾಗೂ ನವೀಕರಣಕ್ಕಾಗಿ ಒದಲಿಸಲಾಗುತ್ತಿರುವ ಅನುದಾನ ಕೆಳಕಂಡಂತಿದೆ

ರಾಜ್ಯ ಹೆದ್ದಾರಿ	:	15000.00 ರೂ. ಪ್ರತಿ ಕಿ.ಮೀಗೆ
ಜಿಲ್ಲಾ ಮುಖ್ಯ ರಸ್ತೆ	:	12500.00 ರೂ. ಪ್ರತಿ ಕಿ.ಮೀ ಗೆ
ಹಳ್ಳಿದರ್ಜೆ ರಸ್ತೆಗಳು	:	6450.00 ರೂ. ಪ್ರತಿ ಕಿ.ಮೀ ಗೆ.

ಲೋಕೋಪಯೋಗಿ ಇಲಾಖೆಯಿಂದ ಸಚಿವರ ಮನೆಗಳ ನವೀಕರಣಕ್ಕಾಗಿ ವೆಚ್ಚ ಮಾಡಿರುವ ಹಣ

186 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ನಾಲ್ಕು ವರ್ಷಗಳಲ್ಲಿ ಆಗಿನ ಮತ್ತು ಇಂದಿನ ಮಂತ್ರಿಮಂಡಲದ ಸಚಿವರ ಮನೆಗಳ ದುರಸ್ಥಿ ಹಾಗೂ ನವೀಕರಣಕ್ಕಾಗಿ ಪ್ರತಿ ವರ್ಷ ವೆಚ್ಚ ಮಾಡಲಾದ ಹಣವೆಷ್ಟು (ಮಂತ್ರಿವಾರು ವಿವರಗಳನ್ನು ಒದಗಿಸುವುದು)

ಆ) ಈ ಕೆಲಸಗಳನ್ನು ಇಲಾಖೆಯವರೇ ನಿರ್ವಹಿಸುವರೆ? ಇಲ್ಲವೆ ಗುತ್ತಿಗೆದಾರರು ನಿರ್ವಹಿಸುವರೆ?

ಇ) ಈ ಗುತ್ತಿಗೆ ಕೆಲಸಗಳನ್ನು ಕಳೆದ ನಾಲ್ಕು ವರ್ಷಗಳಲ್ಲಿ ಯಾರು ಯಾರಿಗೆ ನೀಡಲಾಗಿದೆ?

ಈ) ಈ ಕೆಲಸಗಳ ನಿರ್ವಹಣೆಗೆ ಟೆಂಡರ್ ಕರೆಯಲಾಗಿತ್ತೆ ಇಲ್ಲವೆ, ಕೊಟೇಷನ್ಗಳನ್ನು ಪಡೆಯಲಾಗಿತ್ತೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಇಲಾಖೆ):

ಅ) ಕಳೆದ ನಾಲ್ಕು ವರ್ಷಗಳಲ್ಲಿ ಪ್ರತಿ ವರ್ಷ ಖರ್ಚು ಮಾಡಿದ ವಿವರ ಹೀಗಿದೆ.

ವರ್ಷ	ಖರ್ಚು ಮಾಡಿದ ಹಣ. ಲಕ್ಷ ರೂ.ಗಳಲ್ಲಿ
1990-91	37.83
1991-92	19.29
1992-93	48.88
1993-94	26.26
ಒಟ್ಟು	132.26

ಆ) ಗುತ್ತಿಗೆದಾರರ ಮೂಲಕ ನಿರ್ವಹಿಸಲಾಗಿದೆ.

ಇ) ಲಗತ್ತಿಸಿರುವ ಅನುಬಂಧದಲ್ಲಿ ವಿವರ ನೀಡಿದೆ.

ಈ) ಬಹುತೇಕ ಕೆಲಸಗಳನ್ನು ತುಂಡು ಗುತ್ತಿಗೆ ಆಧಾರದ ಮೇಲೆ ಕೈಗೊಳ್ಳಲಾಗಿದೆ. ಕೆಲವು ಕೆಲಸಗಳನ್ನು ಟೆಂಡರ್ ಮೇಲೆ ತೆಗೆದುಕೊಂಡಿದೆ. ವಿವರಗಳನ್ನು ಲಗತ್ತಿಸಿರುವ ಅನುಭಂಧದಲ್ಲಿ ಕೊಟ್ಟಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ಆಗಿನ ಮತ್ತು ಇಂದಿನ ಮಂತ್ರಿಮಂಡಲದ ಸಚಿವರ ಮನೆಗಳ ದುರಸ್ತಿ ಹಾಗೂ ನವೀಕರಣಕ್ಕಾಗಿ ಪ್ರತಿವರ್ಷ ಮಾಡಿದ ವೆಚ್ಚ ಮತ್ತು ಕಾಮಗಾರಿಯನ್ನು ಗುತ್ತಿಗೆದಾರರಿಗೆ ನೀಡಿದ ವಿವರಗಳ ಪಟ್ಟಿ.

ಕ್ರಮ ಸಂಖ್ಯೆ	ಮಂತ್ರಿಗಳ ಮನೆಯ ಹೆಸರು	ಮಂತ್ರಿಗಳ ಹೆಸರು ಮತ್ತು ಖಾತೆ ಶ್ರೀಯುತರು:	ದುರಸ್ಥಿ ಮತ್ತುನವೀಕರಣ ಕ್ಕಾಗಿ ಮಾಡಿರುವ ವೆಚ್ಚಲಕ್ಷಗಳಲ್ಲಿ 90-91	91-92
1	2	3	4	5
1)	ಕುಮಾರ ಕೃಪ ಅನೆಕ್ಸ್ ನಂ.1 ಬೆಂಗಳೂರು (ಕಾವೇರಿ)	1. ವೀರೆಂದ್ರ ಪಾಟೀಲ್ ಮಾಜಿ ಮುಖ್ಯಮಂತ್ರಿಗಳು	1.25	-
		2. ಎಸ್. ಬಂಗಾರಪ್ಪ	0.50	9.93
	ರೇಸ್ಕ್ಯೂ ಕಟ್ಟಡ ಕುಮಾರ ಕೃಪ ಅನೆಕ್ಸ್ ನಂ.1 (ಕಾವೇರಿ)	3. ಎಸ್. ಬಂಗಾರಪ್ಪ ಮಾಜಿ ಮುಖ್ಯ ಮಂತ್ರಿಗಳು	9.67	1.00
		4. ಕೆ.ಹೆಚ್. ರಂಗನಾಥ್ ಲೋಕೋಪಯೋಗಿ ಇಲಾಖೆ ಸಚಿವರು.	-	-
2)	ಕುಮಾರ ಕೃಪ ಅನೆಕ್ಸ್ ನಂ.2 ಬೆಂಗಳೂರು (ಕೃಷ್ಣ)	1. ಎಂ. ವೀರಪ್ಪ ಮೊಯ್ಲಿ ಮುಖ್ಯಮಂತ್ರಿಗಳು	-	-
3)	ಕುಮಾರಕೃಪ ದಕ್ಷಿಣ ವಸತೀ ಗೃಹ ಸಂ.1	1. ಧರ್ಮಸಿಂಗ್ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು	-	0.71
		2. ಕೆ.ಹೆಚ್. ಪಾಟೀಲ್ ಮಾಜಿ ಸಹಕಾರ ಮಂತ್ರಿಗಳು	4.95	-
4)	- ಡಿಟೋ- 2	1. ಪುಟ್ಟಸ್ವಾಮಿಗೌಡ, ಮಾಜಿ ಆರೋಗ್ಯ ಮಂತ್ರಿಗಳು	2.27	1.05
5)	-ಡಿಟೋ- 3	1. ಬಿ. ಬಸವಲಿಂಗಪ್ಪ, ಮಾಜಿ ಪರಿಸರ ಖಾತೆಯ ಸಚಿವರು	4.72	0.33
6)	ಹೌಸಿಂಗ್ ಬೋರ್ಡ್ ವಸತೀಗೃಹ ನಂ.2	1. ಶ್ರೀಮತಿ ಮನೋರಮಾ ಮಧ್ವರಾಜ್, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.	0.50	

6	7	8	9
-	-	1. ಲಿಂಗರಾಜು	ತುಂಡು ಗುತ್ತಿಗೆಯ ಮೇಲೆ
6.25	2.94	1. ಗೋಪಾಲ್	ತುಂಡು ಗುತ್ತಿಗೆ
		2. ಲಿಂಗರಾಜ	
		3. ಕೃಷ್ಣಮನಾಯ್ಡು	ಟೆಂಡರ್
		4. ಗೋಪಾಲನಾಯ್ಡು	
		5. ದಶರಥನ್ನಂದನ್	
-	-	1. ರಮೇಶ್ ಕುಮಾರ್	
		2. ಜಿ. ಸುಬ್ರಮಣ್ಯ	ತುಂಡು ಗುತ್ತಿಗೆ
2.15	1.20	1. ಲಿಂಗರಾಜು	
		ವಿನೋದ್‌ಇಂಜಿನಿಯರಿಂಗ್	ತುಂಡು ಗುತ್ತಿಗೆ
6.51	6.20	1. ಲಿಂಗರಾಜು	
		2. ವಿ. ರಾಜಗೋಪಾಲರೆಡ್ಡಿ	ತುಂಡು ಗುತ್ತಿಗೆ
		3. ಎಲ್ ಹನುಮರೆಡ್ಡಿ	
2.20	-	1. ರಾಜಗೋಪಾಲರೆಡ್ಡಿ	
		2. ವಿಜಯಲಕ್ಷ್ಮಿ ಬೋರ್ವೆಲ್ಸ್	ತುಂಡು ಗುತ್ತಿಗೆ
-	-	1. ಮುನಿರಾಜು	
		2. ಹನುಮಾನ್	
		3. ಮುನಿದೇವ್	ತುಂಡು ಗುತ್ತಿಗೆ
0.25	-	1. ಗೋಪಾಲ ನಾಯ್ಡು	
		2.ಚಮನ್ಸಿಂಗ್	ತುಂಡು ಗುತ್ತಿಗೆ
-	-	1. ಸಿದ್ಧಮಲ್ಲಯ್ಯ	
		2. ಗೋಪಾಲ್	
		3. ಗೋಪಾಲ್ ನಾಯ್ಡು	ತುಂಡು ಗುತ್ತಿಗೆ
0.94	0.23	1. ಮಲ್ಲಿಕಾರ್ಜುನಯ್ಯ	
		2. ಮುನಿರಾಜು	ತುಂಡು ಗುತ್ತಿಗೆ

1	2	3	4	5
7)	ಹೌಸಿಂಗ್ ಬೋರ್ಡ್ ವಸತಿಗೃಹ ನಂ.2 - 3	1. ಎಸ್.ಎಂ. ಕೃಷ್ಣ, ಉಪ ಮುಖ್ಯ ಮಂತ್ರಿಗಳು.	-	-
8)	ಕ್ರೆಸೆಂಟ್ ಹೌಸ್ ವಸತಿಗೃಹ ರೇಸ್ ಕೋರ್ಸ್ ರಸ್ತೆ.	1. ಎಸ್.ರಮೇಶ್, ಮಾಜಿ ಯುವಜನ ಖಾತೆ ಸಚಿವರು.	2.06	0.33
9)	ರೇಸ್‌ವ್ಯೂ ಕಾಟೇಜ್ ರೇಸ್ಕೋರ್ಸ್ ರಸ್ತೆ.	1 ಶಿವಣ್ಣ, ಮಾಜಿ ಸಮಾಜ ಕಲ್ಯಾಣ ಸಚಿವರು.	1.11	1.00
10)	ರೇಸ್‌ವ್ಯೂ ಕಟ್ಟಡ	1. ಮಲ್ಲಿಕಾರ್ಜುನ ಖರ್ಗೆ, ಸಹಕಾರ ಸಚಿವರು-		6.75
		2. ಗೋಪಿನಾಥ ಸಾಂಡ್ರ, ವಸತಿ ಸಚಿವರು -		-
11)	ಕ್ರೆಸೆಂಟ್ ಹೌಸ್ ಅನೆಕ್ಸ್, ಕ್ರೆಸೆಂಟ್ ರಸ್ತೆ	1. ಶ್ರೀಮತಿ ಸುಮಾ ವಸಂತ್, ಮಾಜಿ ಸಣ್ಣ ಕೈಗಾರಿಕೆ ಸಚಿವರು.	1.24	0,60
12)	ಎ1 ಜಯಮಹಲ್	ಶ್ರೀ ಕೆ.ಹೆಚ್ ರಂಗನಾಥ್	1.37	–
13)	- " -	ಶ್ರೀ ಕೆ. ಶಿವಮೂರ್ತಿ	-	1.14
14)	ಎ-2 ಜಯಮಹಲ್	ಮಲ್ಲಾರಿಗೌಡ ಎಸ್.ಪಾಟೀಲ್	3.36	0.16
15)	- "-	ಬಿ.ಎಸ್.ಪಾಟೀಲ್ ಸಾಸನೂರ್	-	-
16)	ಎ-5, ಜಯಮಹಲ್	ಡಾ: ಹೆಚ್.ಆರ್. ರಾಜು	1.71	-
17)	- "-	ನ.ಎಸ್.ನಾಡಗೌಡ	0.20	
18)	ಬಿ-6 ಜಯಮಹಲ್	ಎಂ.ಎಸ್. ಆತ್ಮಾನಂದ	1.49	-
19)	ಎಂ.ಕ್ಯೂ. ಸಂಖ್ಯೆ.3 ಸ್ಯಾಂಕಿ ರಸ್ತೆ	ಶ್ರೀ ಎನ್. ಚಿಕ್ಕೇಗೌಡ	0.19	0.14

ಕರ್ನಾಟಕ ರಾಜ್ಯ ಪತ್ರಾಗಾರ,
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು.
ಪ್ರ.ಸಂ.............ದಿನಾಂಕ..............

6	7	8	9
-	4.16	1. ಎಸ್.ಕೆ.ಜಿ. ಪ್ರಸಾದ್	
		2. ಏಕೋರಾಮ್ ಇಂಜಿನಿಯರಿಂಗ್	ತುಂಡು ಗುತ್ತಿಗೆ
1.32	-	1. ಲಿಂಗರಾಜು	ತುಂಡು ಗುತ್ತಿಗೆ
0.58	-	1. ಸಿದ್ಧಮಲ್ಲಯ್ಯ	
		2. ವೇಲಾಪತಿ	ತುಂಡು ಗುತ್ತಿಗೆ
		3. ಲಕ್ಷ್ಮಣ್, ಪ್ರಕಾಶ್, ನಾಗಭೂಷಣ್	
4.27	6.97	1. ಡಾಲ್ಫಿನ್ ಎಂಟರ್‌ಪ್ರೈಸಸ್	ತುಂಡು ಗುತ್ತಿಗೆ
-	1.95	2. ಮಂಜುನಾಥ್ ಖರ್ಗೆ	ತುಂಡು ಗುತ್ತಿಗೆ
		3. ಆರ್.ಎನ್. ಸ್ವಾಮಿ	ಟೆಂಡರ್ ಮೂಲಕ
-	0.40	1. ಲಿಂಗರಾಜು	ತುಂಡು ಗುತ್ತಿಗೆ
		2. ಎಲ್.ಆರ್. ಎಂಟರ್‌ಪ್ರೈಸಸ್	ತುಂಡು ಗುತ್ತಿಗೆ
-	-	ಬಿ.ಸಿ. ಭಾಸ್ಕರ್	ತುಂಡು ಗುತ್ತಿಗೆ
		ಜಿ.ಎಸ್. ಸುಧೀರ್	
		ಎಸ್. ಗಿರೀಶ್	
		ಮೈಸೂರು ಟೂಲ್ಸ್	
1.17	-	ರುದ್ರಮೂರ್ತಿ	”
		ಸಿ.ಬಿ. ಪಾಟೀಲ್	
2.54	-	ಬಿ.ಪಿ. ಭಾಸ್ಕರ್	”
		ರಾಂ. ಕನಸ್ಟ್ರಕ್ಷನ್	
		ಜಿ.ಎನ್. ಸುಧೀರ್	
1.19	-	ರುದ್ರಮೂರ್ತಿ	
		ಮೈಸೂರ್ ಟೂಲ್ಸ್	
		ಗಿರೀಶ್,	
		ಎಂ. ತಿಮ್ಮಪ್ಪ	”
		ಎಂ. ಶ್ರೀನಿವಾಸಮೂರ್ತಿ	”
		ರಾಜಗೋಪಾಲಶೆಟ್ಟಿ	”
		ಎ. ವರದರಾಜು	”
		ಎ. ಶ್ರೀನಿವಾಸಮೂರ್ತಿ	”
		ಬಿ.ಸಿ. ಭಾಸ್ಕರ್	”
		ಎ.ಸುರೇಶ್	
		ಎ. ಶ್ರೀನಿವಾಸಮೂರ್ತಿ	

1	2	3	4	5
	ಎಂ. ಕ್ಯೂ ಸಂಖ್ಯೆ.3 ಸ್ಯಾಂಕಿ ರಸ್ತೆ	ಬ್ಲೇಸಿಯಸ್ ಡಿಸೋಜ	-	-
20)	ಎಂ. ಕ್ಯೂ ಸಂಖ್ಯೆ.4 ಸ್ಯಾಂಕಿ ರಸ್ತೆ	ಶ್ರೀಮತಿನಾಗಮ್ಮ: ಸಿ. ಕೇಶವಮೂರ್ತಿ	0.23	-
21)	ಎಂ. ಕ್ಯೂ ಸಂಖ್ಯೆ.5 ಸ್ಯಾಂಕಿ ರಸ್ತೆ	ಕೆ.ಜೆ. ಜಾರ್ಜ್	0.09	0.31
22)	ಎಂ. ಕ್ಯೂ ಸಂಖ್ಯೆ.6 ಸ್ಯಾಂಕಿ ರಸ್ತೆ	ಅಜೀಜ್ ಸೇಠ್	0.37	0.85
23)	- " -	ಭೀಮಣ್ಣ ಖಂಡ್ರೆ	-	-
24)	ಎಂ. ಕ್ಯೂ ಸಂಖ್ಯೆ.7	ಟಿ.ಎನ್. ನರಸಿಂಹಮೂರ್ತಿ	0.55	0.19
25)	- "-	ಎಸ್.ಎಂ. ಯಾಹ್ಯ	-	-
26)	ಎಂ. ಕ್ಯೂ ಸಂಖ್ಯೆ.3	ಬ್ಲೇಸಿಯಸ್ ಡಿಸೋಜ	-	-
27)	ಗಾಂಧಿನಗರದಲ್ಲಿ ಬಂಧಿಖಾನೆ ಸೂಪರಿಂಟೆಂಡೆಂಟ್‌ರವರ ವಸತಿಗೃಹವನ್ನು ಮಾನ್ಯ ಬಂಧಿಖಾನೆ ಮತ್ತು ಗೃಹ ರಕ್ಷಕ ದಳ ಸಚಿವರ ನಿವಾಸವಾಗಿ ಪರಿವರ್ತಿಸಲು.	ಶ್ರೀ ಶಿವಕುಮಾರ್	- 37.83	- 19.29

6	7	8	9
		ಶ್ರೀಕಾಂತ್	
-	0.31	,,	
0.23	-	ಕೆ.ಆರ್.ರಾಜು	ತುಂಡು ಗುತ್ತಿಗೆ
0.28	0.30	ಎಂ. ಬಾಬು	,,
1.16	-	,, ,,	
-	0.30	,,	
0.28	-		
-	1.30	ಚಿಕ್ಕರಾಮಯ್ಯ	
-	0.31	ಬಿ. ಶೇಖರಪ್ಪ	
16.12	-	ಶ್ರೀಕಾಂತ್	
		1)ಶ್ರೀ ವೈ.ಎಂ. ರಾಜು	ತುಂಡುಗುತ್ತಿಗೆ ಮೂಲಕ ವಹಿಸಲಾಗಿದೆ.
		2) ಶ್ರೀ ಬಿ.ಎಸ್. ಗುರುಸಿದ್ದಪ್ಪ	,,
		3) ಶ್ರೀ ಟಿ.ಎಂ.ರಾಜಪ್ಪ	ಟೆಂಡರ್ ಮೂಲಕ ವಹಿಸಲಾಗಿದೆ
		4) ಶ್ರೀ ಮುರುಳೀಧರ	ತುಂಡುಗುತ್ತಿಗೆ ಮೂಲಕ ವಹಿಸಲಾಗಿದೆ.
		5) ಶ್ರೀ ಮೇ. ಮಂಜುನಾಥ ಎಲೆಕ್ಟ್ರಿಕಲ್ಸ್	,,
		6) ಮೆ: ಮಂಜುನಾಥ ಎಂಟರ್ ಪ್ರೈಸಸ್	,,
		7) ಮೆ: ಹರ್ಷ ಎಂಟರ್ ಪ್ರೈಸಸ್	,,
48.88	26.26		

ಒಟ್ಟು ಮೊತ್ತ 132.26 ಲಕ್ಷ ರೂ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆ.ಇ.ಬಿ. ಹುದ್ದೆಗಳ ಖಾಲಿ ಕುರಿತು

43 ಎ - ಶ್ರೀ ಕೆ. ವಿಜಯಕುಮಾರ್ ಶೆಟ್ಟಿ (ಸುರತ್ಕಲ್): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬೇಕಾದ ಸಾಮಾಗ್ರಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಪೂರೈಸದಿರಲು ಕಾರಣವೇನು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಾರ್ಯಗಳಿಗಾಗಿ ಬೇಕಾಗುವ ಸಾಮಗ್ರಿಗಳನ್ನು ಅಗತ್ಯಕ್ಕೆ ಅನುಗುಣವಾಗಿ ಕಾಲ ಕಾಲಕ್ಕೆ ಮಂಡಳಿಯು ಪೂರೈಕೆ ಮಾಡುತ್ತಿದೆ. ಈ ಜಿಲ್ಲೆಯಲ್ಲಿರುವ ಮಂಡಳಿಯ ಮಂಗಳೂರು ಪುತ್ತೂರು ಮತ್ತು ಉಡುಪಿ ವಿಭಾಗಗಳು ಸಾಮಗ್ರಿಗಳಿಗಾಗಿ ಸಲ್ಲಿಸುವ ಬೇಡಿಕೆಗಳನ್ನು ಗಮನಿಸಿ, ಸಾಮಗ್ರಿಗಳನ್ನು ಸರಬರಾಜು ಮಾಡಲಾಗುತ್ತಿದೆ.

ಕಾವೇರಿ ಜಲಾನಯನ ಪ್ರದೇಶಗಳಲ್ಲಿನ ಖರ್ಚು ಮಾಡಿರುವ ಹಣ

153 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರಲ್ಲಿ ಕಾವೇರಿ ಜಲಾನಯನ ಪ್ರದೇಶದ ಕಾಮಗಾರಿಗಳಿಗೆ ಎಷ್ಟು ಹಣವನ್ನು ನಿಗದಿ ಪಡಿಸಲಾಗಿದೆ;

ಆ) 1993-94 ರಲ್ಲಿ ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಸರ್ಕಾರ ಖರ್ಚು ಮಾಡಿದ ಹಣವೆಷ್ಟು;

ಇ) ಡಿಸೆಂಬರ್ 1993 ಅಂತ್ಯದವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ;

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) 1993-94 ಸಾಲಿನಲ್ಲಿ ನಿಗದಿಪಡಿಸಿರುವ ಹಣ 278.11 ಕೋಟಿ ರೂ.ಗಳು (ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗಾಗಿ)

ಆ) 134.13 ಕೋಟಿ ರೂ.ಗಳು (ಡಿಸೆಂಬರ್ 93ರ ಅಂತ್ಯದವರೆಗೆ)

ಇ) 122.83 ಕೋಟಿ ರೂ.ಗಳು (ಡಿಸೆಂಬರ್ 93ರ ಅಂತ್ಯದವರೆಗೆ) ಬಿಡುಗಡೆ ಮಾಡಲಾದ ಹಣ ಭರವಸೆ ಪತ್ರ)

ಸೇಡಂ ತಾಲ್ಲೋಕಿನ ಕೆಲವು ಹಳ್ಳಿಗಳಿಗೆ ಏತ ನೀರಾವರಿ ಯೋಜನೆ

202 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕುರುಕುಂಟ ಐಹಾಳ ಹಾಗೂ ಯಡಗ ಗ್ರಾಮದ ಏತ ನೀರಾವರಿ ಯೋಜನೆಗಳು ಸರ್ವೆ ಮಾಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಆ ಯೋಜನೆಗಳು ಕಾಗಿನ ಏತ ನೀರಾವರಿ ಯೋಜನೆ ಅಚ್ಚುಕಟ್ಟು ಪ್ರದೇಶದಲ್ಲಿ ಬರುವುದರಿಂದ ಸಾಧ್ಯವಾಗುವುದಿಲ್ಲವೆಂದು ಮುಖ್ಯ ಅಭಿಯಂತರರು, ಜಲ ಸಂಪನ್ಮೂಲ ಸಂಸ್ಥೆಯವರು ತಿಳಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಜಲ ಸಂಪನ್ಮೂಲ ಸಂಸ್ಥೆಯವರು ತಮ್ಮ ಪತ್ರ ಸಂಖ್ಯ. 292:1, ದಿನಾಂಕ: 30-10-92 ರ ಸಂಗಡ ಕಳುಹಿಸಿರುವ ನಕಾಶೆಯನ್ನು ವೀಕ್ಷಿಸಿದರೆ ಯಡಗ ಗ್ರಾಮ ಹಾಗೂ ಆ ಗ್ರಾಮದ ಭೂಮಿ ಕಾಗಿನ ನೀರಾವರಿ ಪ್ರದೇಶದಲ್ಲಿ ಬರುವುದಿಲ್ಲವೆಂದು ಕಂಡು ಬರುವುದಕ್ಕೆ ತಪ್ಪು ಉತ್ತರವನ್ನು ನೀಡಿ ಸ್ಥಗಿತಗೊಳಿಸಲು ಕಾರಣವೇನು?

ಇ) ಈ ಯಡಗ ಏತ ನೀರಾವರಿ ಯೋಜನೆಯನ್ನು ಕೂಡಲೇ ಮಂಜೂರು ಮಾಡಿ ರೈತರಿಗೆ ನೀರಾವರಿ ಅನುಕೂಲ ಯಾವಾಗ ಮಾಡಿ ಕೊಡಲಾಗುವುದು?

ಈ) 2000, ಇಸವಿಯ ಒಳಗಾಗಿ ಆ ಕಾಗಿನ ನದಿ ಬೃಹತ್ ಪ್ರಮಾಣ ಯೋಜನೆಯನ್ನು ಪೂರ್ತಿ ಮಾಡಬೇಕಾದರೆ ಈಗಾಗಲೇ ಕೆಲಸ ಪ್ರಾರಂಭ ಮಾಡಿದರೆ ಮಾತ್ರ ಕಾರ್ಯರೂಪಕ್ಕೆ ಬರುವುದಿಲ್ಲವೇ?

ಉ) ಒಂದು ವೇಳೆ ಆ ಯೋಜನೆ 2000 ಇಸವಿ ಒಳಗಾಗಿ ನಿರ್ಮಾಣ ಮಾಡದಿದ್ದರೆ ಕುರಕುಂಟ ಐಹಾಳ್‌ತೆಲಕೂರು ಹಾಗೂ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಬರಲಾರದ ಯಡಗ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಂಡು ರೈತರಿಗೆ ನೀರಾವರಿ ಅನುಕೂಲ ಯಾವಾಗ ಮಾಡಿಕೊಡಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಕುರುಕುಂಟ ಮತ್ತು ಐಹಾಳ್ ಏತ ನೀರಾವರಿ ಯೋಜನೆಗಳು ಕಾಗಿನ ನದಿಗೆ ಅಡ್ಡಲಾಗಿ ಉದ್ದೇಶಿಸಿರುವ ಕಾಗಿನ ಮಧ್ಯಮ ನೀರಾವರಿ ಯೋಜನೆಯ ಮುಳುಗಡೆ ಪ್ರದೇಶದಲ್ಲೂ ಮತ್ತು ಯಡಗ ಏತ ನೀರಾವರಿ ಯೋಜನೆಯು ಕಾಗಿನ ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲೂ ಬರುವುದರಿಂದ ಮೂರು ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೇ ಇಲ್ಲವೇ ಎಂಬ ಬಗ್ಗೆ ಸುಧೀರ್ಘವಾಗಿ ಪರಿಶೀಲಿಸಿ ನಂತರ ನಿರ್ಣಯ ತೆಗೆದುಕೊಳ್ಳಲಾಗುವುದು.

ಕಾಗಿನ ಮಧ್ಯಮ ನೀರಾವರಿ ಯೋಜನೆಯನ್ನು ಕ್ರಿ.ಶ. 2000 ಇಸವಿಯೊಳಗೆ ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

ಹೇಮಾವತಿ ಎಡದಂಡೆ ನಾಲೆಯ ದುರಸ್ತಿ

292 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಎಡದಂಡೆ ನಾಲೆಯ ಸರಪಳಿ 46.12 ರ ಕಿ.ಮೀ. ಒಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆ ನಾಲೆ ಯಾವಾಗ ಒಡೆಯಿತು ಹಾಗೂ ಅದರಿಂದ ರೈತರಿಗೆ ಆಗಿರತಕ್ಕ ಅಂದಾಜು ನಷ್ಟವೆಷ್ಟು ;

ಇ) ಆ ನಾಲೆಯ ದುರಸ್ತಿಗಾಗಿ ಇಲ್ಲಿಯವರೆಗೆ ಖರ್ಚು ಮಾಡಲಾದ ಹಣವೆಷ್ಟು;

ಈ) 1993-94 ರ ಡಿಸೆಂಬರ್ ಅಂತ್ಯದವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ.

ಉ) ಆ ನಾಲೆಯ ದುರಸ್ತಿಗಾಗಿ ಒಟ್ಟು ತಗಲುವ ಅಂದಾಜು ವೆಚ್ಚವೆಷ್ಟು;

ಊ) ಆ ದುರಸ್ತಿ ಕೆಲಸವನ್ನು ಯಾವಾಗ ಮುಗಿಸಲಾಗುವುದು ;

ಋ) ರೈತರಿಗೆ ಆಗಿರುವ ನಷ್ಟಕ್ಕೆ ಸರ್ಕಾರದಿಂದ ನೀಡಿರುವ ಪರಿಹಾರದ ಹಣವೆಷ್ಟು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) ದಿನಾಂಕ 13-12-92 ರಂದು. ರೈತರಿಗೆ ಇದರಿಂದ 10.30 ಲಕ್ಷ ರೂ.ಗಳ ನಷ್ಟವಾಗಿರುತ್ತದೆ.

ಇ) ರೂ. 5.53 ಲಕ್ಷಗಳು.

ಈ) ರೂ.5.53 ಲಕ್ಷಗಳು.

ಊ) ಈಗಾಗಲೇ ಪೂರ್ಣಗೊಳಿಸಲಾಗಿದೆ.

ಋ) ಸರ್ಕಾರದ ಪರಿಶೀಲನೆಯಲ್ಲಿದೆ.

ಸೇಡಂ ತಾಲ್ಲೂಕಿನ ಕಾಗೀನ ನದಿಗೆ ಬೃಹತ್ ನೀರಾವರಿ ಯೋಜನೆ

204 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಕಾಗಿನ ನದಿಗೆ ಬೃಹತ್ ನೀರಾವರಿ ಯೋಜನೆಗಳನ್ನು ತೆಗೆದುಕೊಂಡು 2000ಸಾಲಿನ ಒಳಗಾಗಿ ಪೂರ್ತಿಗೊಳಿಸುವುದರಲ್ಲಿ ಕುರಕುಂಟ, ಐಹಾಳ್, ತೆಲಕೂರು ಏತ ನೀರಾವರಿ ಯೋಜನೆಗಳು ಆದರೆ ಅಚ್ಚುಕಟ್ಟು ಪ್ರದೇಶದಲ್ಲಿ ಬರುವುದರಿಂದ ಅವುಗಳನ್ನು ಸ್ಥಗಿತಗೊಳಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಒಂದು ವೇಳೆ ಆ ಯೋಜನೆ ಪ್ರಾರಂಭ ಮಾಡಿದರೆ ಪೂರ್ತಿಗೊಳ್ಳಲು ಕನಿಷ್ಠ 10 ವರ್ಷಗಳಾದರೂ ಬೇಕಾಗುವುದಿಲ್ಲವೇ?

ಇ) ಆ ಯೋಜನೆಯನ್ನು 2000 ಇಸವಿಯ ಒಳಗೆ ಮುಗಿಸಿ ರೈತರಿಗೆ ನೀರಾವರಿ ಅನುಕೂಲ ಮಾಡಿಕೊಡಲಾಗುವುದೇ?

ಈ) ಒಂದು ಕಡೆ ಏತ ನೀರಾವರಿ ಯೋಜನೆಗಳು ರದ್ದು ಮಾಡಿ ರೈತರಿಗೆ ನೀರಾವರಿ ಸೌಲಭ್ಯ ಸಿಗುವುದನ್ನು ತಪ್ಪಿಸಿ ಇನ್ನೊಂದು ಕಡೆ ಬೃಹತ್ ನೀರಾವರಿ ಯೋಜನೆ ಇಲ್ಲದಂತೆ ಮಾಡಿ ಆ ಭಾಗದ ರೈತರಿಗೆ ನೀರಾವರಿ ಸೌಲಭ್ಯ ಸಿಗದಂತೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) 1994-95ನೇ ಸಾಲಿನಲ್ಲಿ ಆ ಕಾಗಿನ ನದಿಯ ಬೃಹತ್ ಯೋಜನೆಯನ್ನು ಪ್ರಾರಂಭ ಮಾಡಿ ರೈತರಿಗೆ ನೀರಾವರಿ ಸೌಲಭ್ಯ ಒದಗಿಸಲಾಗುವುದೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಕುರಕುಂಟ, ಐಹಾಳ್ ಮತ್ತು ತೆಲಕೂರು ಏತ ನೀರಾವರಿ ಯೋಜನೆಗಳಡಿ ಉದ್ದೇಶಿಸಲಾಗಿರುವ ಅಚ್ಚುಕಟ್ಟು ಪ್ರದೇಶವು ಕಾಗಿನ ನದಿಗೆ ಅಡ್ಡಲಾಗಿ ಉದ್ದೇಶಿಸಿರುವ ಕಾಗಿನ ಮಧ್ಯಮ ನೀರಾವರಿ ಯೋಜನೆಯ ಮುಳುಗಡೆ ಪ್ರದೇಶದಲ್ಲಿ ಬರುವುದರಿಂದ ಈ ಮೂರು ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕೇ ಇಲ್ಲವೇ ಎಂಬ ಬಗ್ಗೆ ಸುಧೀರ್ಘವಾಗಿ ಪರಿಶೀಲಿಸಿ ನಂತರ ನಿರ್ಣಯ ತೆಗೆದುಕೊಳ್ಳಲಾಗುವುದು.

ಆ), ಇ) ಮತ್ತು ಈ) ಕಾಗಿನ ಮಧ್ಯಮ ನೀರಾವರಿ ಯೋಜನೆಯನ್ನು ಕ್ರಿ.ಶ. 2000 ಇಸವಿಯೊಳಗೆ ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

ಉ) ಈ ಯೋಜನೆಯ ವರದಿಯನ್ನು ತಯಾರಿಸಿ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆದ ನಂತರವೇ ಅದರ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.

ತುಮಕೂರು ಜಿಲ್ಲಾ ಶಿರಾ ಲೋಕೋಪಯೋಗಿ ಉಪ ವಿಭಾಗಕ್ಕೆ ಅಭಿವೃದ್ಧಿ ಕಾಮಗಾರಿಗೆ ಹಣ ಬಿಡುಗಡೆ

305 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಶಿರಾ ಲೋಕೋಪಯೋಗಿ ಉಪ ವಿಭಾಗಕ್ಕೆ ಎಷ್ಟು ತಾಲ್ಲೂಕುಗಳು ಸೇರಿವೆ;

ಆ) ಆ ತಾಲ್ಲೂಕುಗಳಿಗೆ 1990 ರಿಂದ 1994ರ ಜನವರಿ ಅಂತ್ಯದವರೆಗೆ ಸರ್ಕಾರದಿಂದ ಅಭಿವೃದ್ಧಿ ಕಾಮಗಾರಿಗಳಿಗೆ ತಾಲ್ಲೂಕುವಾರು ಎಷ್ಟೆಷ್ಟು ಹಣ (ಎಲ್‌ಒಸಿ) ಬಿಡುಗಡೆಯಾಗಿದೆ;

ಇ) ಈ ರೀತಿ ಸರ್ಕಾರದ ಹಣ ಸಮವಾಗಿ ಕೊಡದಿರಲು ಕಾರಣವೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಎರಡು ತಾಲ್ಲೂಕುಗಳು. ಶಿರಾ ಮತ್ತು ಕೊರಟಗೆರೆ.

ಆ) ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿಗಳಿಗೆ ಆಗಿರುವ ವೆಚ್ಚ ಕೆಳಕಂಡಂತಿದೆ :

(ಲಕ್ಷ ರೂ.ಗಳಲ್ಲಿ)

ವರ್ಷ	ಶಿರಾ ತಾಲ್ಲೂಕು	ಕೊರಟಗೆರೆ ತಾಲ್ಲೂಕು
1990-91	24.44	9.54
1991-92	58.50	36.71
1992-93	36.52	21.84
1993-94 (ಜನವರಿ 94ವರೆಗೆ)	14.58	16.68

ಇ) ಲೋಕೋಪಯೋಗಿ ಇಲಾಖೆಯಲ್ಲಿ ತಾಲ್ಲೂಕುವಾರು ಹಣ ಭರವಸೆ ಪತ್ರ ನೀಡುವುದಿಲ್ಲ. ಆಯಾ ಲೋಕೋಪಯೋಗಿ ವಿಭಾಗಗಳಲ್ಲಿ ಆಯವ್ಯಯದಲ್ಲಿ ಸೇರಿಸಿದಂತಹ ಕಾಮಗಾರಿಯನ್ನು ಪರಿಗಣಿಸಿ ಅನುದಾನ ನಿಗದಿಪಡಿಸಿರುತ್ತದೆ. ರಸ್ತೆ ನಿರ್ವಹಣೆಗೆ ಅನುದಾನವನ್ನು ರಸ್ತೆಗಳ ಪ್ರತಿ ಕಿ.ಮೀ. ಉದ್ದವನ್ನು ಪರಿಗಣಿಸಿ ನಿಗದಿಪಡಿಸಲಾಗುವುದು. ಪ್ರತಿ ವಿಧಾನ ಸಭಾ ಕ್ಷೇತ್ರದ ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿಗಾಗಿ ಎಲ್ಲಾ ಕ್ಷೇತ್ರಕ್ಕೂ ಸಮನಾಗಿ ಅನುದಾನ ನಿಗದಿಪಡಿಸಲಾಗುತ್ತಿದೆ.

ಕೊರಟಗೆರೆ-ದಾಬಸ್‌ಪೇಟೆ ರಸ್ತೆಯಲ್ಲಿ ರೈಲ್ವೆ ಲೈನ್ ಮೇಲೆ ಓವರ್ ಬ್ರಿಡ್ಜ್

311 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊರಟಗೆರೆ - ದಾಬಸ್ಪೇಟೆ ಪ್ರಧಾನ ರಸ್ತೆಯಲ್ಲಿ ರೈಲ್ವೆ ಲೈನ್ ಮೇಲೆ ಓವರ್ ಬ್ರಿಡ್ಜ್ ಇದ್ದದನ್ನು ರೈಲ್ವೆ ಸಿಬ್ಬಂದಿಯವರು ಕೆಡವಿಹಾಕಿ ಬಸ್ಸು ಸಂಚಾರ ಹಾಗೂ ಜನ ಜಾನುವಾರುಗಳು ಓಡಾಡಲು ತೊಂದರೆಯಾಗಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಈ ಹೈ ಲೆವೆಲ್ ಬ್ರಿಡ್ಜ್ ಕಟ್ಟಲು ಸರ್ಕಾರ ಕೈಗೊಂಡಕ್ರಮಗಳೇನು?

ಇ) ಸದರಿ ಕೆಲಸ ಎಷ್ಟು ದಿನಗಳಲ್ಲಿ ಪ್ರಾರಂಭವಾಗಲಿದೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಈ ವಿಷಯದ ಬಗ್ಗೆ ರೈಲ್ವೆ ಇಲಾಖೆಗೆ ಅಂದಾಜನ್ನು ತಯಾರಿಸಲು ಪತ್ರ ಬರೆಯಲಾಗಿದೆ.

ಇ) ವಿಧಿವಿಧಾನಗಳನ್ನು (ಫಾರ್ಮಾಲಿಟೀಸ್) ಪಾಲಿಸಿ, ಹಣ ಲಭ್ಯತೆಯ ಮೇರೆಗೆ ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಲೋಕೋಪಯೋಗಿ ಇಲಾಖೆ ವಸತಿ ಗೃಹಗಳ ನೀರಿನ ಪೂರೈಕೆ ವೆಚ್ಚವನ್ನು ನೌಕರರ ವೇತನ ಪಟ್ಟಿಯಲ್ಲಿ ಮುರಿದುಕೊಳ್ಳುವ ಬಗ್ಗೆ

331 - ಶ್ರೀ ಮುನಿನರಸಿಂಹಯ್ಯ (ದೇವನಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೀಮಾನಗರ, ತಿಮ್ಮೇನಹಳ್ಳಿ, ಯಲಹಂಕ ಇತರೆ ಪ್ರದೇಶಗಳಲ್ಲಿರುವ ಸರ್ಕಾರಿ ವಸತಿ ಗೃಹಗಳ ನಿವಾಸಿ ನೌಕರರ ವೇತನ ಪಟ್ಟಿಯಲ್ಲಿ ನೀಡಿದ ಬಿಲ್ಲನ್ನು ತಲಾ ರೂ. 10, 9, 8, 12 ಹೀಗೆ ಹಿಡಿದುಕೊಳ್ಳುತ್ತಿರುವುದು ಸರಿಯಷ್ಟೆ.

ಆ) ಆದರೆ ನಂದಿನಿ ಬಡಾವಣೆಯ ಲೋಕೋಪಯೋಗಿ ಇಲಾಖೆಯು ಹಂಚಿಸಿರುವ ವಸತಿ ಗೃಹಗಳ ನೌಕರರಿಗೆ ಈ ರೀತಿ ನೀರಿನ ವೆಚ್ಚವನ್ನು ವೇತನ ಪಟ್ಟಿಯಲ್ಲಿ ಹಿಡಿಯದಿರಲು ಕಾರಣವೇನು?

ಇ) ಈ ರೀತಿ ವೇತನ ಪಟ್ಟಿಯಲ್ಲಿ ಹಿಡಿಯದೆ ಇದ್ದುದರಿಂದ ನೀರು ಸರಬರಾಜು ಇಲಾಖೆಯವರು ವಿಧಿಸುತ್ತಿರುವ ನೀರಿನ ಶುಲ್ಕ ಹೆಚ್ಚಾಗಿದ್ದು ಅದನ್ನು ಭರಿಸಲು ನೌಕರರಿಗೆ ತೊಂದರೆಯಾಗಿದ್ದು ಸರ್ಕಾರವು ಕೂಡಲೇ ಈ ತಾರತಮ್ಯವನ್ನು ಸರಿಪಡಿಸುವುದೇ?

ಈ) ಹಾಗಾದರೆ ಇನ್ನೆಷ್ಟು ದಿನಗಳಲ್ಲಿ ಅದನ್ನು ಸರಿಪಡಿಸಲಾಗುವುದು.

ಉ) ಈ ರೀತಿ ಹೆಚ್ಚಾಗಿ ನೀಡಿದ್ದ ನೀರಿನ ಶುಲ್ಕವನ್ನು ಸಂಬಂಧಪಟ್ಟ ನೌಕರರಿಗೆ ಹಿಂದಿರುಗಿಸಲಾಗುವುದೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬೆಂಗಳೂರು ಜಲ ಮಂಡಳಿಯು ವಸತಿ ಗೃಹಗಳಿಗೆ ಮೀಟರ್ ಅಳವಡಿಸಿರುವ ಕಡೆಗಳಲ್ಲಿ ವಸತಿ ಗೃಹದವರೇ ನೇರವಾಗಿ ನೀರಿನ ಬಿಲ್ಲನ್ನು ಜಲಮಂಡಳಿಗೆ ಪಾವತಿ ಮಾಡುತ್ತಾರೆ.

ವಸತಿ ಗೃಹಗಳಿಗೆ ಬೆಂಗಳೂರು ಜಲ ಮಂಡಳಿಯು ಪ್ರತ್ಯೇಕ ಮೀಟರ್ ಅಳವಡಿಸದೇ ಇರುವ ಕಡೆಗಳಲ್ಲಿ ಲೋಕೋಪಯೋಗಿ ಇಲಾಖೆಯೇ ಜಲ ಮಂಡಳಿಯಿಂದ ಒಟ್ಟಾರೆ ನೀರನ್ನು ಪಡೆದು ಲೋಕೋಪಯೋಗಿ ಇಲಾಖೆಯು ವಸತಿ ಗೃಹಗಳಿಗೆ ನೀರು ಸರಬರಾಜು ಮಾಡುತ್ತದೆ. ಈ ಪ್ರದೇಶಗಳಲ್ಲಿ ಲೋಕೋಪಯೋಗಿ ಇಲಾಖೆ ಸಂಬಂಧಪಟ್ಟ ವಸತಿ ಗೃಹದವರಿಂದ ಸರಾಸರಿ ವೆಚ್ಚವನ್ನು ಅವರ ವೇತನದಲ್ಲಿ ಕಡಿತಗೊಳಿಸಿ ಇಲಾಖೆಯು ಜಲ ಮಂಡಳಿಗೆ ನೀರಿನ ಶುಲ್ಕವನ್ನು ಒಟ್ಟಾರೆಯಾಗಿ ಪಾವತಿ ಮಾಡುತ್ತದೆ.

ವಸತಿ ಗೃಹಗಳಿಗೆ ಪ್ರತ್ಯೇಕ ಮೀಟರ್ ಇರುವ ಪ್ರದೇಶಗಳು ಸಂಬಳದಲಿ:

1) ಜೀವನಭೀಮಾ ನಗರ

2) ಜಯನಗರ

3) ವಸಂತನಗರ

4) ಜಯಮಹಲ್ ವಿಲಾಸ್

ಇಲಾಖೆಯು ನೇರವಾಗಿ ಜಲ ಮಂಡಳಿಗೆ ನೀರಿನ ಬಿಲ್ಲನ್ನು ಪಾವತಿ ಮಾಡುವ ಪ್ರದೇಶಗಳು :

1) ತಿಮ್ಮೇನಹಳ್ಳಿ

2) ವಿಲ್ಸನ್‌ಗಾರ್ಡನ್

3) ರಾಜಾಜಿನಗರ

ಇಲಾಖೆಯು ಜಲ ಮಂಡಳಿಗೆ ನೇರವಾಗಿ ಪಾವತಿ ಮಾಡುವ ಪ್ರದೇಶಗಳಿಗೆ ನೀರು ಸರಬರಾಜಿನ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ಪ್ರದೇಶಗಳಿಂದ ಪ್ರದೇಶಕ್ಕೆ ಸ್ವಲ್ಪ ವ್ಯತ್ಯಾಸವಾಗುತ್ತದೆ.

ಆ) ನಂದಿನಿ ಬಡಾವಣೆಯ ಪ್ರತಿಯೊಂದು ಬ್ಲಾಕ್ ಮನೆಗಳಿಗೆ ಜಲ ಮಂಡಳಿ ಮೀಟರ್ ಅಳವಡಿಸಿರುವುದರಿಂದ ಆ ಬ್ಲಾಕ್ನಲ್ಲಿರುವ ವಸತಿ ಗೃಹದವರೇ ನೇರವಾಗಿ ಬಿಲ್ಲನ್ನು ಜಲ ಮಂಡಳಿಗೆ ಪಾವತಿ ಮಾಡುತ್ತಾರೆ.

ಇ) ಈ ವಿಷಯವು ಬೆಂಗಳೂರು ಜಲ ಮಂಡಳಿಗೆ ಸಂಬಂಧಪಟ್ಟಿರುತ್ತದೆ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುನದೆ ಮಂಡಿಸಲಾಯಿತು.

ಕಾರ್ಯದರ್ಶಿಗಳ ವರದಿ

ಕಾರ್ಯದರ್ಶಿ : (ಶ್ರೀ ಎನ್.ಎಚ್. ಮುತ್ತಲಗೇರಿ) : ಕರ್ನಾಟಕ ವಿಧಾನ ಸಭೆ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 125 (1)ರ ಮೇರೆಗೆ ಸಂಸತ್ತಿನಿಂದ ಸ್ವೀಕರಿಸಿರುವ ಸಂದೇಶದೊಡನೆ 1992ನೇ ಇಸವಿಯ ಸಂವಿಧಾನದ 72ನೇ ತಿದ್ದುಪಡಿ ವಿಧೇಯಕದ ಪ್ರತಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು : ಸಭೆಯ ಮುಂದೆ ಮಂಡಿಸಲಾಯಿತು.

ಪ್ರಸ್ತಾವ

ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಮತ್ತು ಕರ್ನಾಟಕ ವಿದ್ಯುತ್ ನಿಗಮಗಳ ಕಾರ್ಯನಿರ್ವಹಣೆ ಮತ್ತು ಆಡಳಿತ ದಕ್ಷತೆಯನ್ನು ಉತ್ತಮ ಪಡಿಸಲು ವಿಧಾನ ಮಂಡಲ ಜಂಟೀ ಸದನದ ಸಮಿತಿ ವರದಿಯನ್ನು ನೀಡಲು ಕಾಲಾವಧಿ ವಿಸ್ತರಣೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಮತ್ತು ಕರ್ನಾಟಕ ವಿದ್ಯುತ್ ನಿಗಮಗಳ ಕಾರ್ಯನಿರ್ವಹಣೆ ಮತ್ತು ಆಡಳಿತ ದಕ್ಷತೆಯನ್ನು ಉತ್ತಮಪಡಿಸಲು ಸಲುವಾಗಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ನೀಡಲು ರಚಿಸಿರುವ ವಿಧಾನ ಮಂಡಲದ ಜಂಟೀ ಸದನದ ಸಮಿತಿಗೆ ತನ್ನ ವರದಿಯನ್ನು ನೀಡಲು ಮಾರ್ಚಿ 10 1994ರ ವರೆವಿಗೂ ಕಾಲಾವಕಾಶವನ್ನು ನೀಡಬೇಕೆಂದು ನಾನು ಈ ಸದನವನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಮತ್ತು ಕರ್ನಾಟಕ ವಿದ್ಯುತ್ ನಿಗಮಗಳ ಕಾರ್ಯನಿರ್ವಹಣೆ ಮತ್ತು ಆಡಳಿತದಕ್ಷತೆಯನ್ನು ಉತ್ತಮಪಡಿಸುವ ಸಲುವಾಗಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ನೀಡಲು ರಚಿಸಿರುವ ವಿಧಾನ ಮಂಡಲದ ಜಂಟೀ ಸದನದ ಸಮಿತಿಗೆ ತನ್ನ ವರದಿಯನ್ನು ನೀಡಲು ಮಾರ್ಚಿ 10 1994ರ ವರೆವಿಗೂ ಕಾಲಾವಕಾಶವನ್ನು ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಜಂಟಿ ಸದನದಸಮಿತಿಗೆ ಕಾಲಾವಕಾಶವನ್ನು

ನಿಲುವಳಿ ಸೂಚನೆ.

ದಿನಾಂಕ 12.2.1994ರಲ್ಲಿ ಧಾರವಾಡಜಿಲ್ಲೆ ಹಿರೇಕೆರೂರಿನಲ್ಲಿ ವಾಲ್ಮೀಕಿ ಸಮ್ಮೇಳನದಲ್ಲಿ ಮುಖ್ಯಮಂತ್ರಿಗಳು ಭಾಗವಹಿಸಲು ಹೆಲಿಕ್ಯಾಪ್ಟರ್‍ನಲ್ಲಿ ಬಂದಾಗ, ಅದನ್ನು ನೋಡಲು ಕಟ್ಟಡದ ಮೇಲೆ ಮಕ್ಕಳು ಹತ್ತಿದ ಸಮಯದಲ್ಲಿ ಆಗಿರುವ ದುರಂತ.

+ ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ ಈ ದಿವಸ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ನನಗೆ ಬಹಳ ದುಃಖವಾಗುತ್ತದೆ. ಈ ಸದನದಲ್ಲಿ ಮೊನ್ನೆ ತಾನೇ 12-2-94ರ ಶನಿವಾರದ ದಿವಸ ಮಾನ್ಯ ಮುಖ್ಯಮಂತ್ರಿಗಳು ಧಾರವಾಡ ಜಿಲ್ಲೆಯ ನನ್ನ ಕ್ಷೇತ್ರವಾದ ಹಿರೇಕೆರೂರಿಗೆ ಬಂದು ರಾಜ್ಯ ಮಟ್ಟದ ವಾಲ್ಮೀಕಿ ಸಮ್ಮೇಳನದಲ್ಲಿ ಭಾಗವಹಿಸಿ ಮರು ಪ್ರಯಾಣ ಮಾಡುತ್ತಿದ್ದ ಸಮಯದಲ್ಲಿ ಮಕ್ಕಳು ಹೆಲಿಕಾಪ್ಟರ್ ನೋಡಲಿಕ್ಕೆ ಒಂದು ಕಟ್ಟಡದ ಮೇಲ ಹತ್ತಿದಾಗ ಅಲ್ಲಿ ಕಟ್ಟಡ ಕುಸಿದು ಅಲ್ಲಿಂದ ಬಿದ್ದು ಆ ಸ್ಥಳದಲ್ಲೇ 9 ವರ್ಷದ ಬಾಲಕಿ ಮೃತಪಟ್ಟಿದ್ದಾಳೆ. ಮತ್ತೆ ಸುಮಾರು 40 ಶಾಲಾ ಮಕ್ಕಳು ಸುಮಾರು 8 ರಿಂದ 15 ವರ್ಷದ ಮಕ್ಕಳು, ಆ ಹೆಲಿಕಾಪ್ಟರ್ ಮೇಲೆ ಹಾರುವುದು ಹೇಗೆ ಎಂದು ನೋಡಲು ಹೋಗಿದ್ದರು. ಅದು ಕೋರ್ಟ ಬಿಲ್ಡಿಂಗ್; ಅದಕ್ಕೆ ತಾರಸಿ ಹಾಕಿ ಮುಗಿಸಿದ್ದಾರೆ. ಅದು ಇನ್ನೂ ಪ್ಲಾಸ್ಟರ್ ಆಗಿಲ್ಲ. ಅದು 4 ಇಂಚಿನ ಕುಂಬಿ ಮೇಲೆ ಕಟ್ಟಿದ್ದಂಥದ್ದು , ನೂಕಿಸಿದ ಕೂಡಲೇ ಹುಡುಗರು ಎಲ್ಲಾ ಮೇಲಿಂದ ಬಿದ್ದು ಕೈಕಾಲು ಮುರಿದಿದೆ; ತಲೆ ಹೊಡೆದಿದೆ; ಕಣ್ಣು - ಹೋಗಿವೆ; ಹೀಗಾಗಿ ಇದೊಂದು ಚಿಂತಾಜನಕ ಪರಿಸ್ಥಿತಿ ಆಗಿದೆ. ಈ ಬಗ್ಗೆ ವಿಶೇಷ ಗಮನ ಹರಿಸಿ ಮುಖ್ಯಮಂತ್ರಿಗಳೂ ಸಹ ಆ ಕೂಡಲೇ ಬಂದು ಅಲ್ಲಿ ನಡೆದಂತಹ ದೃಶ್ಯವನ್ನು ಕಣ್ಣಿನಿಂದ ನೋಡಿದರು. ಆ ನಂತರ ಅಲ್ಲಿದ್ದಂತಹ ಎಲ್ಲಾ ಡಿ ಸಿ ಯವರು ಎಸ್ಪಿ ಯವರು ಎಲ್ಲಾ ಇಲಾಖಾಧಿಕಾರಿಗಳು ಕೂಡಲೇ ತಕ್ಷಣ ಸಮಯ ಪ್ರಜ್ಞೆಯನ್ನು ಇಟ್ಟುಕೊಂಡು ಆಸ್ಪತ್ರೆಗೆ ಎಲ್ಲಾ ಮಕ್ಕಳನ್ನು ಸಾಗಿಸಿದೆವು. ನಾವು ಆ ಜಾಗದಲ್ಲಿ ಇದ್ದೆವು. ಆ ನಂತರ ತೀವ್ರ ಸ್ವರೂಪದ ಗಾಯಗಳಾದವರನ್ನು ಸರ್ಕಾರಿ ವಾಹನಗಳಲ್ಲಿ ದಾವಣಗೆರೆ ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಯಿತು. ಆ ಸ್ಪಾಟ್ನಲ್ಲೇ 9 ವರ್ಷದ ರಶ್ಮಿ ಎನ್ನತಕ್ಕಂಥ ಒಬ್ಬ ಮುಸ್ಲಿಂ ಮಗು ಸತ್ತುಹೋಯಿತು. ನಿನ್ನೆಯ ದಿವಸ ದಾವಣಗೆರೆಯಲ್ಲಿ ಆಗದೆ 4 ಜನರನ್ನು ಬೆಂಗಳೂರು ಆಸ್ಪತ್ರೆಗೆ ಕಳುಹಿಸಿದರು. ಅದರಲ್ಲಿ ಒಂದು ಮಗು ರುದ್ರಪ್ಪ ಶಾಂತನಗೌಡ ಎನ್ನುವ ಚಿಕ್ಕಕೆರೂರಿನ ಒಬ್ಬ ಹುಡುಗ ಇಲ್ಲಿ ಬೆಂಗಳೂರಿನ ಆಸ್ಪತ್ರೆಯಲ್ಲಿ ಸುಮಾರು ಮಧ್ಯಾಹ್ನ 1-30ಕ್ಕೆ ತೀರಿಕೊಂಡ; ಇನ್ನು 2-3 ಜನ ಬಹಳ ಚಿಂತಾಜನಕ ಪರಿಸ್ಥಿತಿಯಲ್ಲಿದ್ದಾರೆ. ಇದಕ್ಕೆ ಯಾರೂ ಹೊಣೆ ಇಲ್ಲ. ಆದರೆ ಮಕ್ಕಳು ತಮ್ಮ ಒಂದು ಆತುರತೆಯಿಂದ ನೋಡಬೇಕು ಎಂದು ಹೇಳಿ ಅಲ್ಲಿಗೆ ಹೋದರೆ ಅದು ಒಂದು ಸಣ್ಣ ಕಂಬಿ ಅದು ಕಟ್ಟಡದ ಮೇಲೆ ಕಟ್ಟಿತಕ್ಕಂಥ 4 ಇಂಚಿನ ಹಸಿಯಾಗಿದ್ದಂಥ ಒಂದು ಕುಂಬಿ ಗೋಡೆ ಅದು ಇನ್ನೂ ಪ್ಲಾಸ್ಟರ್ ಆಗಿರಲಿಲ್ಲ. ಅಪೂರ್ಣ ಆಗಿತ್ತು. ಅದರ ಮೇಲೆ ಹತ್ತಿದ್ದರು. ಹಿಂದಿನಿಂದ ಹುಡುಗರು ನೂಕಿದ ಕೂಡಲೇ 40-50ಜನ ಹುಡುಗರು ಕುರಿ ಬಿದ್ದಂತೆ ಬಿದ್ದರು; ನಮ್ಮ ಮುಖ್ಯಮಂತ್ರಿಗಳು ನೋಡಿದರು. ನಾನೂ ನೋಡಿದೆ;

ಆ ದೃಶ್ಯವನ್ನು ನೋಡಿ ಎಲ್ಲಾ ಮಕ್ಕಳು ಸತ್ತು ಹೋದರೇನೋ ಎನ್ನುವಷ್ಟರ ಮಟ್ಟಿಗೆ ನಮಗೆ ಭೀಕರ ಅನಿಸಿತು. ಆದರೆ ದೈವದಿಂದ ಏನೋ ಆಗಿದೆ ಎಂದು ತಿಳಿದುಕೊಂಡಿದ್ದೆವು ಅಷ್ಟು ಅನಾಹುತ ಆಗಿಲ್ಲ. ಆದರೂ ಸಹ ಶಾಶ್ವತವಾಗಿ ಅನೇಕ

ಮಕ್ಕಳು ಇವತ್ತು ಕೈಕಾಲು ಮುರಿದುಕೊಂಡು ಕಣ್ಣು ಹೋಗಿ ಅಂಗವಿಕಲರು ಆಗಬಹುದೋ ಏನೋ ಎನ್ನುವ ಭೀತಿ ನಮಗೆ ಇದೆ. ಇದರಲ್ಲಿ ತೀರಿಕೊಂಡಿರತಕ್ಕಂಥವರಿಗೆ ಕನಿಷ್ಟ ಮಾನವೀಯತೆಯನ್ನು ಇಟ್ಟುಕೊಂಡು ಸರ್ಕಾರ ಈಗಾಗಲೇ ಬೇರೆ ಬೇರೆ ವಿಚಾರದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ತೀರಿಕೊಂಡಂತಹ ಮಕ್ಕಳ ಕುಟುಂಬಕ್ಕೆ ಅಮೇಲೆ ಶಾಶ್ವತವಾದಂತಹ ಅಂಗವಿಕಲರಾದ ಮಕ್ಕಳಿಗೆ ಕೈ ಹೋಗಿದ್ದರೆ ಕಾಲು ಹೋಗಿದ್ದರೆ ಕಣ್ಣು ಹೋಗಿದ್ದರೆ ಅಂತಹವರಿಗೆ ಸರ್ಕಾರ ಕನಿಷ್ಟ 50 ಸಾವಿರ ರೂಪಾಯಿಗಳನ್ನು ಕೊಡಬೇಕು ಮತ್ತು ಅವರಿಗೆ ಮುಂದೆ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ ಅಂದರೆ ಪ್ರತಿ ತಿಂಗಳು ಏನಾದರೂ ಅವರಿಗೆ ಧನಸಹಾಯವನ್ನು ಮಾಡುವ ವಿಚಾರ ಅಥವಾ ಸರ್ಕಾರಿ ನೌಕರಿಯಲ್ಲಿ ಅವರು ಏನಾದರೂ ಕೆಲಸ ಮಾಡಲಿಕ್ಕೆ ಸಾಧ್ಯವಿದ್ದರೆ ಅದನ್ನು ನೀಡುವಂಥದ್ದು ಹೀಗೆ ಎಲ್ಲಾ ವಿಧವಾದ ಸಹಾಯ ಮಾಡಬೇಕು ಎಂದು ಅವರಿಗೆ ಸ್ಥಳದಲ್ಲೇ ಹೇಳಿದೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಈ ಒಂದು ಕರುಣಾಜನಕ ಸ್ಥಿತಿಯನ್ನು ನೋಡಿ ಅವರೂ ಸಹ ಈ ಬಗ್ಗೆ ಚಿಂತನೆಯನ್ನು ಮಾಡೋಣ; ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡಿ ಸರ್ಕಾರದಿಂದ ಧನಸಹಾಯ ಕೊಡೋಣ ಎಂದು ಹೇಳಿದ್ದಾರೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಹೇಳಿಕೆಯನ್ನು ಮಾಡಬೇಕು. ಈ ಕೂಡಲೇ ಅವರಿಗೆ ಪರಿಹಾರ ಸಿಗುವ ಹಾಗೆ ಮಾಡಬೇಕು ಎಂದು ಹೇಳಿ ತಮ್ಮ ಮೂಲಕ ಸರ್ಕಾರವನ್ನು ಮುಖ್ಯಮಂತ್ರಿಗಳನ್ನು ಕೇಳಬಯಸುತ್ತೇನೆ. ವಿವರಗಳನ್ನು ನಿಶ್ಚಿತವಾಗಿ ಯಾವ ಗ್ರಾಮದವರು ಯಾರ ಹುಡುಗರು ಏನೇನು ಆಗಿದೆ ಏನು ಅಲ್ಲಿ ನಡೆದಂಥದ್ದು, ಎಲ್ಲಿದ್ದಾರೆ ಅವರು, ಬೆಂಗಳೂರು ಆಸ್ಪತ್ರೆಯಲ್ಲಿ ಎಷ್ಟು ಜನ ಇದ್ದಾರೆ, ದಾವಣಗೆರೆ ಆಸ್ಪತ್ರೆಯಲ್ಲಿ ಎಷ್ಟು ಜನ ಇದ್ದಾರೆ, ಮತ್ತೆ ಸಣ್ಣ ಪುಟ್ಟ ಗಾಯಗಳಾಗಿದ್ದು ತಮ್ಮ ತಮ್ಮ ಮನೆಗಳಿಗೆ ಎಷ್ಟು ಜನ ಹೋಗಿದ್ದಾರೆ ಇವರ ಬಗ್ಗೆ ಸರ್ಕಾರ ಈ ಕೂಡಲೇ ಒಂದು ಹೇಳಿಕೆಯನ್ನು ಕೊಟ್ಟು ಸಾಧ್ಯವಿದ್ದ ಎಲ್ಲಾ ರೀತಿಯ ಸಹಾಯವನ್ನು ಮಾನವೀಯ ದೃಷ್ಟಿಯಿಂದ ಮಾಡಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಂದು ಹೇಳಿಕೆಯನ್ನು ಕೊಡುತ್ತಾರೆ.

ಹಕ್ಕುಚ್ಯುತಿ ನಿರ್ಣಯ

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರ ಮೇಲೆ

+ ಶ್ರೀ ಎಸ್.ಎಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ನಾನು ಇವತ್ತಿನ ದಿವಸ ನಿಯಮ 190, 191 ಹಾಗೂ 195ರ ನಿಯಮಗಳ ಪ್ರಕಾರ ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರ ಮೇಲೆ ಇವತ್ತಿನ ದಿವಸ ಒಂದು ಕ್ರಮ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ನಾನು ಒಂದು ಹಕ್ಕುಚುತಿ ಕಳುಹಿಸಿಕೊಟ್ಟಿದ್ದೇನೆ. ಮುಖ್ಯವಾಗಿ ನಾನು ಈ ವಿಶ್ವ ಅಹಾರ ಯೋಜನೆ ಅಡಿಯಲ್ಲಿ ಎರಡು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಿಯಮ 72ರ ಪ್ರಕಾರ ಅರ್ಜಿ ಸಲ್ಲಿಸಿದ್ದೆ. ಆ ಕಾಲಕ್ಕೆ ಅವರು ನನಗೆ ಲಿಖಿತವಾಗಿ ವಿಶ್ವ ಆಹಾರ ಯೋಜನೆಯ 93-94 ರ ಸಾಲಿನ ಕೆಲಸಗಳ ಕಾರ್ಯಕ್ರಮ ಈಗಾಗಲೇ ಅಂತಿಮಗೊಳಿಸಿ ಅನುಮೋದನೆ ನೀಡಲಾಗಿರುವ ಕಾರಣ ಮೇಲಿನ ಕೆಲಸಗಳನ್ನು 1994-95ನೇ ಸಾಲಿನ ವಿಶ್ವ ಆಹಾರಯೋಜನೆ ಅಡಿಯಲ್ಲಿ ಕಾರ್ಯಕ್ರಮದಲ್ಲಿ ಸೇರಿಸಲು ಪರಿಶೀಲಿಸಲಾಗುವುದೆಂದು ಉತ್ತರ ಕೊಟ್ಟಿದ್ದಾರೆ. ಆ ಉತ್ತರಕ್ಕೆ ಮೊನ್ನೆ ದಿವಸ ಮಾನ್ಯ ಓಂ ಪ್ರಕಾಶ್ ಕಣಗಲಿಯವರು ನಮ್ಮ ಜಿಲ್ಲಾ <u>ಪರಿಷತ್ತಿನ</u> ಸಮಕಮ ಮೀಟಿಂಗ್ನಲ್ಲಿ 93-94ನೇ ಸಾಲಿನ ಯಾವುದೇ

ನಾವು ಮಾಡುತ್ತೇವೆಂದು ಕಾಡಾ, ಮಲಪ್ರಭಾ ಪ್ರಾಜೆಕ್ಟ್ ಉಪ ಕಾರ್ಯದರ್ಶಿಗಳು ಹೇಳಿದರು. ಅಂದರೆ ಇವತ್ತಿನವರೆಗೂ ಈ ಕಾಡಾ ಮತ್ತು ಮಲಪ್ರಭಾ ಪ್ರಾಜೆಕ್ಟ್‌ನವರು ಈ ವಿಶ್ವ ಆಹಾರಯೋಜನೆಯಡಿಯಲ್ಲಿ ತೆಗೆದುಕೊಳ್ಳತಕ್ಕಂಥ ಯಾವುದೇ ಕಾರ್ಯಕ್ರಮಗಳ 93-94ನೇ ಸಾಲಿನ ಅಂತಿಮಗೊಳಿಸಿರುವುದಿಲ್ಲವೆಂದೂ ಅಲ್ಲಿ ಮೀಟಿಂಗ್‌ನಲ್ಲಿ ಹೇಳುತ್ತಾರೆ. ಆದರೆ ಇವತ್ತಿನವರೆಗೂ ಆ ಮೀಟಿಂಗ್ ಸೇರಿರುವುದಿಲ್ಲ. ಆ ಪ್ರಕಾರ ಅವರು ದಾಖಲೆಗಳನ್ನು ಒದಗಿಸಿದ್ದಾರೆ. ಆದರೆ ಇವತ್ತಿನ ದಿವಸ ನಮಗೆ ಮಾನ್ಯ ಅಚ್ಚುಕಟ್ಟು ಅಭಿವೃದ್ಧಿ ಸಚಿವರು ಹೇಳುತ್ತಾರೆ 93-94ನೇ ಸಾಲಿನ ಕಾರ್ಯಕ್ರಮಗಳ ಪಟ್ಟಿಯನ್ನು ಈಗಾಗಲೇ ಅಂತಿಮಗೊಳಿಸಿದ್ದೇವೆಂದು ಹೇಳುತ್ತಾರೆ. ಆದ ಕಾರಣ ಇವತ್ತಿನ ದಿವಸ ಅವರ ಹೇಳಿಕೆಗೂ ಹಾಗೂ ಕಾಡಾ ಅಧಿಕಾರಿಗಳು ಹೇಳುವಂತಹ ಹೇಳಿಕೆಗೂ ವ್ಯತ್ಯಾಸ ಇದ್ದ ಕಾರಣ, ಸದನಕ್ಕೆ ತಪ್ಪು ಮಾಹಿತಿ ಕೊಟ್ಟಂತೆ ಆಗುತ್ತದೆ. ಆದ ಕಾರಣ ಇದರ ಬಗ್ಗೆ ತಾವು ಕೂಲಂಕಷವಾಗಿ ವಿಚಾರಿಸಿ ಇದನ್ನು ಸ್ಟೇಟ್ ಅವೇ ತಾವು ಹಕ್ಕು ಭಾಧ್ಯತಾ ಸಮಿತಿಗೆ ಕಳುಹಿಸಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ. ಈಗಾಗಲೇ ಆ ಮಂತ್ರಿಗಳಿಗೆ ನಾನು ಈ ರೀತಿ ಹಕ್ಕು ಬಾಧ್ಯತಾ ತೆಗೆಯುವಂತಹ ನೋಟೀಸ್ ಸಹ ಜಾರಿ ಮಾಡಿದ್ದೇನೆ. ಅವರಿಗೆ ಜಾರಿ ಮಾಡಿದ ನಂತರ ನಾನು ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ನಿಯಮಗಳ ಪ್ರಕಾರ ಇವತ್ತಿನದಿವಸ ಸದನಕ್ಕೆ ಮುಖ್ಯವಾಗಿ ಮುಳಗಡೆ ಪ್ರದೇಶದ ಆ ಗ್ರಾಮಗಳಿಗೆ ಅದಂತಹ ಸೌದತ್ತಿ ತಾಲ್ಲೂಕಿನ ಹುತ್ತಗಟ್ಟಿ ಹಾಗೂ ಇಂಗಳಗಿ ಈ ಎರಡೂ ಗ್ರಾಮಗಳಲ್ಲಿ ಗೋಡೌನ್ಗಳನ್ನು ಕಟ್ಟುವ ಸಲುವಾಗಿ ಹಾಗೂ ಬೈಲಹೊಂಗಲ ತಾಲ್ಲೂಕಿನ ಹೊಳಲಿ ನಾಗಲಾಪುರ ಗ್ರಾಮದಲ್ಲಿ 4 ಶಾಲಾ ಕೋಣೆಗಳನ್ನು ಕಟ್ಟುವ ಸಲುವಾಗಿ ನಾನು ವಿಶ್ವ ಆಹಾರ ಯೋಜನೆಯಡಿಯಲ್ಲಿ ತೆಗೆದುಕೊಳ್ಳುವ ಸಲುವಾಗಿ ನಾನು ಕೇಳಿಕೊಂಡಿದ್ದೆ.

ಆದರೆ ಅವರು ಈ ಮೂರು ಕೆಲಸಗಳು 1993-94ಕ್ಕೆ ಸೇರಿದೆ ಎಂದು ಹೇಳಿದ್ದಾರೆ. ಆದರೆ 1993-94ರಲ್ಲಿ ಮೀಟಿಂಗ್ ಆಗಲೇ ಇಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳ ಹೇಳಿಕೆಗೂ ಅಚ್ಚುಕಟ್ಟು ಪ್ರಾಧಿಕಾರದ ಉಪ-ಕಾರ್ಯದರ್ಶಿಯವರ ಹೇಳಿಕೆಗೂ ವ್ಯತ್ಯಾಸವಿದ್ದ ಕಾರಣ ಇದನ್ನು ತಾವುಗಳು ನೇರವಾಗಿ ಹಕ್ಕು ಬಾಧ್ಯತಾ ಸಮಿತಿಗೆ ಕಳುಹಿಸಿ ಕೊಡಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಸಚಿವರು ಈ ದಿವಸ ಹಾಜರಿಲ್ಲ, ಅವರ ಹೇಳಿಕೆಯನ್ನು ತೆಗೆದುಕೊಂಡು ಮುಂದೆ ಪರಿಶೀಲನೆ ಮಾಡಬಹುದು. ಎರಡನೇದಾಗಿ ಮಾನ್ಯ ಸದಸ್ಯರು ಮಾತನಾಡುತ್ತಾ, ಮಾನ್ಯ ಸಚಿವರು ವಿಧಾನಸಭೆಯಲ್ಲಿ ಏನೋ ಹೇಳಿದರು, ಯಾರೋ ಒಬ್ಬ ಅಧಿಕಾರಿ ಯಾವುದೋ ಒಂದು ಮೀಟಿಂಗ್‌ನಲ್ಲಿ ಏನೋ ಹೇಳಿದರು ಎಂದು ಹೇಳಿದ್ದಾರೆ. ಆದರೆ ಅಧಿಕಾರಿಗಳು ಹೇಳಿದ್ದು ಸರಿಯೋ, ಮಂತ್ರಿಗಳು ಹೇಳಿದ್ದು ಸರಿಯೋ ಎಂಬ ಬಗ್ಗೆ ತೀರ್ಮಾನಕ್ಕೆ ಬಾರದೇ ಇದನ್ನು ಹಕ್ಕು ಬಾಧ್ಯತಾ ಸಮಿತಿಗೆ ಸಲ್ಲಿಸತಕ್ಕಂಥ ಪ್ರಮೇಯ ಬರುವುದಿಲ್ಲ. ಆದರೂ ಕೂಡ ಮಾನ್ಯ ಸಚಿವರು ಏನು ಹೇಳುತ್ತಾರೆ ಎಂಬುದನ್ನು ನೋಡಿ ಮುಂದೆ ವಿಚಾರ ಮಾಡೋಣ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಇವೊತ್ತಿನ ದಿವಸ ಯಾರೋ ಒಬ್ಬ ಅಧಿಕಾರಿ ಹೇಳಿದ್ದಾನೆ ಎಂಬ ಪ್ರಶ್ನೆ ಬರುವುದಿಲ್ಲ. ಉಪ-ಕಾರ್ಯದರ್ಶಿಗಳು ಮಾನ್ಯ ಜಿಲ್ಲಾ ಮಂತ್ರಿಗಳ ಸಮಕ್ಷಮದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಈಗಾಗಲೇ ಅದನ್ನು ಅಂತಿಮಗೊಳಿಸಲಾಗಿದೆ ಅಂದರೆ ಅವರು ಇದೂವರೆಗೂ ಅಂತಿಮಗೊಳಿಸಲಾಗಿಲ್ಲವೆಂದು ಹೇಳಿದ್ದಾರೆ. ಈ ಮಾತನ್ನು ಜಿಲ್ಲಾ ಸಮೀಕ್ಷೆ ಮೀಟಿಂಗ್‌ನಲ್ಲಿಯೇ ಇದನ್ನು ಹೇಳಿದ್ದಾರೆ.

ಹೀಗಿರುವಾಗ ಮಂತ್ರಿಗಳು ಹೇಳಿದ್ದು ಸರಿಯೇ ಅಥವಾ ಅಧಿಕಾರಿ ಹೇಳಿದ್ದು ಸರಿಯೇ ಅಂದರೆ ಯಾರು ಹೇಳಿದ್ದು ಸರಿ ಎಂದು ತಿಳಿದುಕೊಳ್ಳಲು ಹಕ್ಕುಬಾಧ್ಯತ ಸಮಿತಿಗೆ ಕಳುಹಿಸಿಕೊಡಿ ಎಂದು ಹೇಳುತ್ತಾ ಇದ್ದೇನೆ. ಇವೊತ್ತಿನ ದಿವಸ ಮಂತ್ರಿಗಳು ಹೇಳಿದ್ದು ಸರಿಯೋ, ಅಧಿಕಾರಿಗಳು ಹೇಳಿದ್ದು ಸರಿಯೋ ಎಂದು ನೋಡಲು ಒಂದು ಕಮಿಟಿ ಇದೆ. ಆ ಕಮಿಟಿಗೆ ಕಳುಹಿಸಿಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಮಂತ್ರಿಗಳು ಬರಲಿ. ಆಮೇಲೆ ಅವರು ಏನು ಹೇಳುತ್ತಾರೆ ನೋಡೋಣ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಆಯಿತು. ಅವರು ಬಂದಮೇಲೆ ಏನು ಹೇಳುತ್ತಾರೆ ಕೇಳೋಣ.

(2) ದಿನಾಂಕ 11.2.94 ರಂದು ಮಂಡ್ಯದಲ್ಲಿ ನಡೆದ 63ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶಾಸಕರುಗಳಿಗೆ ವೇದಿಕೆಗೆ ಕರೆಯದೆ ಇರುವುದು ಹಾಗೂ ಪೀಠೋಪಕರಣಗಳನ್ನು ಒದಗಿಸದೆ ಇರುವುದು

ಅಧ್ಯಕ್ಷರು : ಶ್ರೀ ಹಲಗೇಗೌಡರು ತಮ್ಮ ವಿಷಯ ಪ್ರಸ್ತಾಪ ಮಾಡಿ.

+ಶ್ರೀ ಹಲಗೇಗೌಡ (ಪಾಂಡವಪುರ) : ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ: 11-2-1994ನೇ ಶುಕ್ರವಾರದಂದು ಮಂಡ್ಯದಲ್ಲಿ 63ನೇ ಕನ್ನಡ ಸಾಹಿತ್ಯ ಸಮ್ಮೇಳನವು ಅತಿ ವಿಜೃಂಭಣೆಯಿಂದ ಪ್ರಾರಂಭವಾಯಿತು. ಅದಕ್ಕೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು, ಉಪ-ಮುಖ್ಯ ಮಂತ್ರಿಯವರು ಮತ್ತು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರು ಮತ್ತು ಮಾನ್ಯ ಪಶುಸಂಗೋಪನ ಸಚಿವರುಗಳು ಭಾಗವಹಿಸಿದ್ದರು. ಹಾಗೆಯೇ ಜಿಲ್ಲೆಯ ಬಹುತೇಕ ಎಲ್ಲಾ ಶಾಸಕರುಗಳು ಮತ್ತು ಹೊರಗಿನಿಂದ ಕೂಡ ಅನೇಕ ಶಾಸಕರುಗಳು ಬಂದಿದ್ದರು. ಸಭೆಗೆ ಅನೇಕ ದೊಡ್ಡ ದೊಡ್ಡ ವಿದ್ವಾಂಸರುಗಳು, ಘನವೆತ್ತ ಸಾರ್ವಜನಿಕ ಮುಖಂಡರಗಳು, ಹೀಗೆ ಎಲ್ಲರೂ ಕೂಡ ಬಂದಿದ್ದರು. ಆ ಸಮ್ಮೇಳನದಲ್ಲಿ ಕಾರ್ಯಕ್ರಮವು ಪ್ರಾರಂಭವಾಗುವುದಕ್ಕೆ ಮೊದಲು ಇವರು ಯಾರೇ ಹೋದರೂ ಕೂಡ ಅವರನ್ನು ಯಾರೂ ಕೂಡ ಮಾತನಾಡಿಸುವ ರೀತಿಯಲ್ಲಿ ಇರಲಿಲ್ಲ, ಯಾವುದೇ ಆಸನ ವ್ಯವಸ್ಥೆಯು ಕೂಡ ಇರಲಿಲ್ಲ. ಅಲ್ಲಿ ಇದ್ದ ನಾವು ಕೆಲವು ಶಾಸಕರುಗಳು ಹೊರಗಿನಿಂದ ಬಂದ ಶಾಸಕರುಗಳಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಬೇರೆ ಬೇರೆ ಕಡೆಗಳಿಂದ ಆಸನಗಳನ್ನು ತಂದು ಅವರನ್ನು ಕುಳ್ಳಿರಿಸಿ ಅವರಿಗೆ ಸಮಾಧಾನವನ್ನು ಹೇಳಿ ಅವರನ್ನು ಸಂತೈಸುತ್ತಾ ಇದ್ದೆವು. ಆ ಸಂದರ್ಭದಲ್ಲಿ ನಿರೂಪಣಾಕಾರರು ಮೈಕ್ನಿಂದ ದೊಡ್ಡದಾಗಿ ಶಾಸಕರುಗಳಿಗೆ ಯಾರಿಗೂ ಕೂಡ ವೇದಿಕೆಯ ಮೇಲೆ ಆಸನದ ವ್ಯವಸ್ಥೆ ಮಾಡಿಲ್ಲ, ಯಾರೂ ಕೂಡ ವೇದಿಕೆಯ ಮೇಲೆ ಬರಬಾರದು ಎಂದು ಧ್ವನಿವರ್ಧಕದ ಮೂಲಕ ಪ್ರಚಾರ ಮಾಡಿದರು. ಹಾಗಾಗಿ ನಾವು ಸುಮ್ಮನಾಗಿ ಯಾರೂ ಕೂಡ ವೇದಿಕೆಗೆ ಹೋಗಿರಲಿಲ್ಲ, ಶಾಸಕರುಗಳಾದ ನಾವು ಕೆಲವರು ಇದು ನಮ್ಮ ಸಮಾರಂಭ, ನಾವೇನೂ ಅಲ್ಲಿ ಮೇಲೆ ವೇದಿಕೆಗೆ ಹೋಗಬೇಕಾಗಿಲ್ಲ, ಅಲ್ಲಿ ನಮಗೆ ಆಸನದ ವ್ಯವಸ್ಥೆಯನ್ನು ಮಾಡಿ ಎಂದು ನಾವು ಅವರನ್ನು ಕೇಳಿಕೊಂಡಿರಲಿಲ್ಲ, ಬೇಡಿಕೊಂಡೂ ಇರಲಿಲ್ಲ, ನಾವು ವೇದಿಕೆಯ ಮೇಲೆ ಹೋಗುವ ಪ್ರಯತ್ನವನ್ನೂ ಪಟ್ಟಿರಲಿಲ್ಲ. ಆದರೂ ಕೂಡ ಬಂದಂಥ ಗಣ್ಯರನ್ನು ಸಂತೈಸುವುದರಲ್ಲಿ ನಿರತರಾಗಿ ಅವರನ್ನು ಕೂರಿಸಿ ಸಮಾಧಾನವನ್ನು ಹೇಳುತ್ತಾ ಇದ್ದೆವು. ಯಾರಿಗೇ ಇರಲಿ, ಈ ಸ್ವಾಗತ ಸಮಿತಿಯ ಸದಸ್ಯರಿಗೇ ಆಗಲಿ, ಪ್ರತಿಷ್ಠಿತ ಆಹ್ವಾನಿತರಿಗಾಗಲಿ ಅಲ್ಲಿ ಕರೆದು ಕುಳ್ಳಿರಿಸತಕ್ಕಂಥ ವ್ಯವಸ್ಥೆಯೇ ಇರಲಿಲ್ಲ, ಯಾರ್ಯಾರೋ ಬಂದು ಆಸನಗಳನ್ನು ಆಕ್ರಮಿಸಿಕೊಂಡು ಮುಖ್ಯರಾದವರಿಗೆ ವ್ಯವಸ್ಥೆ ಇಲ್ಲದ ಹಾಗೆ ಮಾಡಿದ್ದರು. ಹೀಗೆ ನಾವು ಕೂಡ ಅವ್ಯವಸ್ಥೆಯನ್ನು ಸರಿಪಡಿಸುವ ಕೆಲಸವನ್ನು ಮಾಡುತ್ತಿದ್ದಾಗ ಮೈಕ್ನಲ್ಲಿ ಮತ್ತೊಮ್ಮೆ ಶಾಸಕರಿಗೆಯಾರಿಯೂ ಸ್ಥಳಾವಕಾಶ ಮಾಡಿಲ್ಲ,

ದಯಮಾಡಿ ವೇದಿಕೆಯ ಮೇಲೆ ಶಾಸಕರು ಯಾರೂ ಬರಕೂಡದು ಎಂದು ಪ್ರಚಾರ ಮಾಡಿದರು. ಇದನ್ನು ಹೇಳುವಾಗ ಮುಖ್ಯಮಂತ್ರಿಯವರು, ಉಪಮುಖ್ಯ ಮಂತ್ರಿಯವರು, ಸಚಿವರುಗಳು ಎದರುಗಡೆಯೇ ಇದ್ದರು. ಅದರಲ್ಲಿಯೂ ಮುಖ್ಯವಾಗಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಕೂಡ ಅಲ್ಲಿಯೇ ಇದ್ದರು. ಅವರ ಎದುರಿಗೇ ಈ ಕೆಲಸ ನಡೆಯಿತು. ಇದರ ವ್ಯವಸ್ಥಾಪಕರಾದಂಥವರು ಸ್ವಾಗತ ಸಮಿತಿಯ ಅಧ್ಯಕ್ಷರು. ಅವರು ಈ ಕಾರ್ಯವನ್ನು ನೋಡಿಕೊಳ್ಳಬೇಕಾಗಿತ್ತು. ಅವರು ಹೇಳಬೇಕಾಗಿತ್ತು. ಆದರೂ ಕೂಡ ಅಲ್ಲಿ ಕೆಲವು ಪುರಪಿತೃಗಳು ಮುಂತಾಗಿ ಕುಳಿತಿದ್ದವರು ಎದ್ದು ಶಾಸಕರಲ್ಲಿ ಕೆಲವರಿಗೆ ಜಾಗವನ್ನು ಬಿಟ್ಟುಕೊಟ್ಟರು. ನಾವುಗಳು ಕೂಡ ಅವರ ಜೊತೆಯಲ್ಲಿ ಸೇರಿಕೊಂಡು ಕೆಳಗಡೆಯಲ್ಲಿಯೇ ಕುಳಿತೆವು; ನಮಗೆ ಯಾರಿಗೂ ಮೇಲೆ ಹೋಗತಕ್ಕಂಥ ಆಶೆ, ಅಭಿಲಾಷೆಯು ಇರಲಿಲ್ಲ. ಹೋಗಬೇಕಾದಂಥ ಪ್ರಮೇಯವೂ ಇರಲಿಲ್ಲ. ಅಂಥಾದ್ದರಲ್ಲಿ ನಾವೇ ಉಳಿದ ಅತಿಥಿಗಳನ್ನು ಸಂತೈಸಿ, ಕುಳ್ಳಿರಿಸುತ್ತಾ ಇರುವಾಗ ಮತ್ತೊಮ್ಮೆ ಶಾಸಕರು ಯಾರೂ ಇಲ್ಲಿಗೆ ಬರಕೂಡದು ಎಂದು ಪುನಃ ಪುನಃ ಮೈಕ್ನಲ್ಲಿ ಹೇಳುತ್ತಾ ಇದ್ದರು. ಹೀಗೆ ನಾಲ್ಕೈದು ಬಾರಿ ಇಂಥ ಪ್ರಚಾರ ಮಾಡಿದರು. ಇದನ್ನು ನೋಡಿ ನಮಗೆ ಬೇಸರವಾಯಿತು. ನಾವು ಆಸನ ಕೊಡಿ ಎಂದು ಕೇಳಿಯೂ ಇಲ್ಲ, ಹೇಳಿಯೂ ಇರಲಿಲ್ಲ. ವ್ಯವಸ್ಥಾಪಕರೂ ಕೂಡ ಅದನ್ನು ಕೇಳಿಕೊಂಡು ಸುಮ್ಮನೆ ಕುಳಿತಿರಬೇಕಾದರೆ ಏನೋ ವ್ಯವಸ್ಥಿತವಾದ ರೀತಿಯಲ್ಲಿ ಸಂಚು ಮಾಡಿಕೊಂಡು ಇವರು ಶಾಸಕರನ್ನು ಅವಮಾನಗೊಳಿಸುವ ರೀತಿಯಲ್ಲಿ ಕಾರ್ಯ ಮಾಡಿರಬಹುದೋ ಏನೋ ಎಂಬ ಒಂದು ಅನುಮಾನ ನಮಗೆ ಬಂದು ನಾವು ಕೆಲವು ಶಾಸಕರು ನಾಲ್ಕೈದು ಮಂದಿ ಸದ್ದುಗದ್ದಲವಿಲ್ಲದೆ ಇದ್ದೆವು, ಯಾಕೆಂದರೆ ಅಂಥ ಒಂದು ಸಮ್ಮೇಳನದಲ್ಲಿ ನಾವೇ ಏನಾದರೂ ಮಾಡಿದರೆ ಅದು ಅವಲಕ್ಷಣದ ವರ್ತನೆಯಾದೀತು ಎಂಬ ಒಂದು ಸದ್ಭಾವನೆಯಿಂದ ನಾವು ಗೌರವಯುತವಾಗಿ ಹೊರಗೆ ಹೊರಟೆವು. ನಾವು ಅಲ್ಲಿಗೆ ಹೋಗಿರತಕ್ಕಂಥ ಉದ್ದೇಶ ಬೇರೆ ಯಾವುದೇ ಇಲ್ಲ. ನಾವು ಈ ಘನವೆತ್ತ ಸದನದ ಸದಸ್ಯರಾಗಿ ಅಲ್ಲಿಗೆ ಹೋಗಿದ್ದೇವೆ. ಅಲ್ಲಿ ನಮ್ಮ ಯಾರ ಹೆಸರನ್ನು ಕೂಡ ಹೇಳಲಿಲ್ಲ. ಮೈಕ್ನಲ್ಲಿ ಕೂಡ ಶಾಸಕರು ಎಂದು ಮಾತ್ರ ಹೇಳುತ್ತಾ ಇದ್ದರು. ಹೀಗೆ ಶಾಸಕರಿಗೆ ಮಾಡಿದಂತ ಅಪಮಾನ ನಮ್ಮೆಲ್ಲರಿಗೂ ಮಾಡಿದಂಥ ಅಪಮಾನ. ನಮ್ಮ ಸಭೆಗೆ ಮಾಡಿದಂಥ ಅಪಮಾನ. ನಮ್ಮ ನಾಯಕರಿಗೆ ಮಾಡಿದಂಥ ಅಪಮಾನ, ನಮ್ಮ ಅಧ್ಯಕ್ಷರಿಗೆ ಮಾಡಿದಂಥ ಅಪಮಾನ- ಎಂದು ಹೇಳಿ ನಾವು ಅಲ್ಲಿಂದ ಹೊರಗೆ ಹೊರಟೆವು. ಇಷ್ಟೇ ಅಲ್ಲದೆ ತದನಂತರ ಪತ್ರಿಕಾ ಹೇಳಿಕೆಯನ್ನು ವ್ಯವಸ್ಥಾಪಕರು ಮತ್ತು ಲೋಕಸಭಾ ಸದಸ್ಯರೂ ಆಗಿರತಕ್ಕಂಥ ಮತ್ತು ಈ ಸಭೆಯ ಬಹಳ ಹಿರಿಯ ಸದಸ್ಯರಾಗಿದ್ದಂಥವರು, ಸುಮಾರು 25 ವರ್ಷಗಳ ಕಾಲದ ಅನುಭವ ಇರತಕ್ಕಂಥವರು - ಇದ್ದು ಅವರಾದರೂ ಹೇಳಬಹುದಾಗಿತ್ತು. ಮೈಕ್‌ನಲ್ಲಿ ಆ ರೀತಿಯಲ್ಲಿ ಹೇಳಬೇಡವೆಂದು ಹೇಳಬಹುದಾಗಿತ್ತು. ಜಿಲ್ಲಾ ಅಧಿಕಾರಿಗಳು ಕೂಡ ಕುಳಿತಿದ್ದರು. ಅವರಿಗೂ ಯಾರೋ ಒಂದು ಆಸನವನ್ನು ಕೊಟ್ಟು ಕುಳ್ಳಿರಿಸಿದ್ದರು. ಅವರಿಗೆ ನಾನು ಕರೆದು ಪ್ರಚಾರ ಮಾಡುತ್ತಿದ್ದಂತ ನಿವೇದಕರನ್ನು ಕರೆಸಿ ಹೀಗೆ ಶಾಸಕರನ್ನು ಅಪಪ್ರಚಾರ ಮಾಡುವುದನ್ನು ನಿಲ್ಲಿಸಿ ಎಂದು ಹೇಳಿದೆ. ಅವರು ಹೇಳುತ್ತೇನೆ ಎಂದು ಕುಳಿತುಕೊಂಡವರು ಮಿಸುಕಲಿಲ್ಲ. ಇಷ್ಟೆಲ್ಲಾ ಆದರೂ ಕೂಡ ಅವಮಾನವನ್ನು ಸಹಿಸಿಕೊಂಡು, ವ್ಯವಸ್ಥಾಪಕರ ಎದುರಿಗೇನೇ ಈ ಕೆಲಸ ನಡೆಯುತ್ತಾ ಇರುವಾಗ ನಾವು ಯಾಕೆ ಕುಳಿತಿರಬೇಕು? ಅದರಲ್ಲಿಯೂ ಒಂದು ಪತ್ರಿಕಾ ಹೇಳಿಕೆಯನ್ನು ಕೂಡ ಅವರು ಕೊಟ್ಟಿದ್ದಾರೆ. "ಸಂಯುಕ್ತ ಕರ್ನಾಟಕ : 13-2-1994: ಮಂಡ್ಯದಲ್ಲಿ ನಡೆಯುತ್ತಿರುವ ಸಾಹಿತ್ಯ ಸಮ್ಮೇಳನದಲ್ಲಿ ತಮಗೆ ಅಗೌರವ ತೋರಿಸಲಾಯಿತು ಎಂಬ ನಾಲ್ವರು ಶಾಸಕರ ಹೇಳಿಕೆಯು ತೀರಾ ದುರದೃಷ್ಟಕರವಾದುದು"- ಎಂದು ಸ್ವಾಗತ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಜಿ. ಮಾದೇಗೌಡರು ಹೇಳಿದ್ದಾರೆ.

ಶಾಸಕ ಶ್ರೀ ಎಲ್.ಆರ್. ಶಿವರಾಮೇಗೌಡರು ಸೇರಿದಂತೆ ನಾಲ್ವರು ಶಾಸಕರು ಬೆಂಗಳೂರಿನಲ್ಲಿ ಪತ್ರಿಕೆಗಳಿಗೆ ನೀಡಿರುವ ಹೇಳಿಕೆಯಲ್ಲಿ ಸಮ್ಮೇಳನವನ್ನು ಬಹಿಷ್ಕರಿಸುವ ಮಾತನಾಡಿರುವುದು ತೀರಾ ವಿಷಾದಕರ ಎಂದಿದ್ದಾರೆ. ಇಂದು ಇಲ್ಲಿ ಸುದ್ದಿಗಾರರೊಡನೆ ಮಾತನಾಡುತ್ತಾ ಶಾಸಕರ ಹೇಳಿಕೆ ಕುರಿತಂತೆ ಪ್ರತಿಕ್ರಿಯೆ ವ್ಯಕ್ತಪಡಿಸಿದ ಅವರು ಸಮ್ಮೇಳನದ ಉದ್ಘಾಟನ ಸಂದರ್ಭದಲ್ಲಿ ಶಾಸಕರಿಗಾಗಿಯೇ ಪ್ರತ್ಯೇಕ ಸ್ಥಳಾವಕಾಶ ಕಲ್ಪಿಸಲಾಗಿತ್ತು, ಹಾಗಿದ್ದೂ ಅಲ್ಲಿ ಕುಳಿತುಕೊಳ್ಳದೆ ವೇದಿಕೆಗೆ ಬರುವ ಈ ಶಾಸಕರ ಯತ್ನವು ತೀರಾ ಹಾಸ್ಯಾಸ್ಪದ ಎಂದರು. ಸಾಹಿತ್ಯ ಸಮ್ಮೇಳನವು ನಾಡಿನ ಸಾಹಿತ್ಯ ಸಂಸ್ಕೃತಿಯ ಹಬ್ಬ. ಈ ಸಮ್ಮೇಳನವು ಜಿಲ್ಲೆಯಲ್ಲಿಯೇ ನಡೆಯುತ್ತಿದೆ. ಮಂಡ್ಯ ಜಿಲ್ಲೆಯ ಪ್ರತಿನಿಧಿಗಳು ಜನತೆಯ ಅತಿಥೇಯರೇ ಹೊರತು, ಅತಿಥಿಗಳಲ್ಲ, ಶಾಸಕರ ಹೇಳಿಕೆಯು ಅಸತ್ಯ ಎಂದರು.

ಇಲ್ಲಿ ಹೇಳಿರುವುದು ಮೊದಲನೇ ಸುಳ್ಳು. ಶಾಸಕರಿಗೆ ಎಲ್ಲೂ ಪ್ರತ್ಯೇಕವಾದ ಸ್ಥಳಾವಕಾಶ ಕಲ್ಪಿಸಿಲ್ಲ. ಅದು ಬೇಕೂ ಇರಲಿಲ್ಲ, ನಾವು ಕೇಳೂ ಇರಲಿಲ್ಲ. ತಾವು ಈ ರೀತಿಯಾದಂತಹ ಸುಳ್ಳಿನ ಕಂತೆಯನ್ನು, ಹೇಳಿಕೆಯನ್ನು ನೀಡುವುದು ಸರಿಯಲ್ಲ. ಅಲ್ಲಿ ಆ ವ್ಯವಸ್ಥೆ ಮಾಡದೇ ಅಲ್ಲಿ ಆದಂತಹ ಅವಮಾನ ಸಾಕಾಗದೆ ಪತ್ರಿಕಾ ಹೇಳಿಕೆಗಳನ್ನು ಕೂಡ ಕೊಟ್ಟು ಈ ಸದನದ ಸದಸ್ಯರ ಗೌರವ ತನ್ಮೂಲಕ ಈ ಸಭೆಯ ಗೌರವವನ್ನು ಬೀದಿ ಪಾಲು ಮಾಡಿರತಕ್ಕಂತಹ ಸಂದರ್ಭದಲ್ಲಿ ಈ ಸಭೆಯ ಸದಸ್ಯರ ಹಕ್ಕು ಭಾದ್ಯತೆಗಳು ಮರ್ಯಾದೆ ಗೌರವಗಳನ್ನು ರಕ್ಷಿಸಬೇಕಾದುದು ತಮ್ಮ ಆದ್ಯ ಕರ್ತವ್ಯವೆಂದು ನಿವೇದಿಸಿಕೊಳ್ಳುತ್ತಿದ್ದೇನೆ. ನಮಗೆ ಅನುಚಿತವಾದ ವರ್ತನೆ ಒಂದೇ ಅಲ್ಲದೆ ಇದರ ಜೊತೆಗೆ ಪತ್ರಿಕಾ ಹೇಳಿಕೆಗಳನ್ನು ಕೂಡ ಕೊಡುವುದು ಸರಿಯಲ್ಲ. ನಾವು ಅತಿಥೇಯರು ಅತಿಥಿಗಳನ್ನು ಸತ್ಕರಿಸಬೇಕು ಆದರೆ ಮಾನ್ಯ ಶ್ರೀ ಜಿ ಮಾದೇಗೌಡರಿಂದ ಸಂಸ್ಕೃತಿ ಬಗ್ಗೆ ನಡವಳಿಕೆ ಬಗ್ಗೆ ಅತಿಥ್ಯ ಅಥಿತೇಯರ ಬಗ್ಗೆ ನಾವು ಕಲಿಯಬೇಕಾಗಿಲ್ಲ. ಆ ಅತಿಥ್ಯ, ಅತಿಥೇಯರು, ಅತಿಥಿಗಳು, ಅಭ್ಯಾಗತರು ಎನ್ನುವುದರ ಬಗ್ಗೆ ಅರ್ಥ ಹೇಳಿದರೆ ನಾವು ಅವರನ್ನು ಒಪ್ಪಿಕೊಳ್ಳುತ್ತೇವೆ. ಇಂತಹ ಹೇಳಿಕೆಗಳನ್ನು ಕೊಡುವುದರ ಮೂಲಕ ನಮ್ಮ ತೇಜೋವಧೆ ಮಾಡಿರುವುದು ಸರಿಯಲ್ಲ. ನಮ್ಮ ಮಾನ ಮರ್ಯಾದೆಯನ್ನು ತಾವು ಕಾಪಾಡಬೇಕೆಂದು ತಮ್ಮಲ್ಲಿ ಮೊರೆಯಿಡುತ್ತಿದ್ದೇವೆ. ಈ ಸದನದ ಸದಸ್ಯರ, ಈ ಸಭೆಯ ಗೌರವವನ್ನು ಕಾಪಾಡಬೇಕು. ಇದು ಯಾವ ಒಬ್ಬ ಶಾಸಕರ ಪ್ರಶ್ನೆ ಅಲ್ಲ, ದಮಯಂತಿ ಬೋರೇಗೌಡ, ಮಲ್ಲಾಜಮ್ಮ, ಶಿವರಾಮೇಗೌಡ, ಹಲಗೇಗೌಡ ಬರೀ ಇವರುಗಳ ಪ್ರಶ್ನೆ ಅಲ್ಲ, ಇದು ಇಡೀ ಸದನದ ಸದಸ್ಯರ ಪ್ರಶ್ನೆ ನಮ್ಮ ಗೌರವ ಬೀದಿ ಪಾಲಾಗಿದೆ. ಇದನ್ನು ತಾವು ರಕ್ಷಿಸಬೇಕು. ನಮ್ಮ 4 ಸಚಿವರ ಮುಂದೆ ಈ ಕೆಲಸ ಆಗಿದೆ. ಅವರಾದರೂ ಕೂಡ ಹೇಳಬೇಕಾಗಿತ್ತು. ನಾವ್ಯಾರಾದರೂ ವೇದಿಕೆ ಹತ್ತುವುದಕ್ಕೆ ಹೋಗಿದ್ದರೆ ಹೇಳಲಿ. ಬಲವಂತವಾಗಿ ಹೋಗಿದ್ದವಾ, ಜಾಗ ಆಸನ ಕೇಳಿದ್ದವಾ, ಅಥವಾ ನಾವು ಕಾರ್ಯಕರ್ತ್ಯರ್ಯಾರಾದರೂ ಗಲಾಟೆ ಮಾಡಿದ್ದವಾ? ಕೆಲಸ ಮಾಡುತ್ತಿದ್ದೆವು. ಅದರೂ ಕೂಡ ಹೀಗೆ ಮಾಡುವುದು ಸರಿಯಲ್ಲ. ವೃಥಾ ಆರೋಪವನ್ನು ಮಾಡಿ ನಮ್ಮ ಮರ್ಯಾದೆಯನ್ನು ಕಳೆಯುವುದಕ್ಕೆ ಹೊರಟಿರತಕ್ಕಂತಹ ಈ ಕೆಲಸ ಏನು ಇದೆ ಇದನ್ನು ಹಕ್ಕು ಭಾದ್ಯತಾ ಸಮಿತಿಗೆ ಒಪ್ಪಿಸಬೇಕು. ಸಾಲದ್ದಕ್ಕೆ ಇದೇನೂ ಕೇವಲ ವೈಯಕ್ತಿಕ ಸಮಾರಂಭ ಅಲ್ಲ, ಇಡೀ ಜಿಲ್ಲೆಯಿಂದ ಲಕ್ಷಾಂತರ ರೂಪಾಯಿಗಳು ಸುಮಾರು 40-50 ಲಕ್ಷ ರೂಪಾಯಿಗಳ ಮೇಲೆ ವಂತಿಗೆಯನ್ನು ಕೊಟ್ಟಿದ್ದೇವೆ. ಸ್ವಾಗತ ಸಮಿತಿಯ ಸದಸ್ಯನಾಗಿ ಹಣವನ್ನು ಕೊಟ್ಟಿದ್ದೇನೆ. ವಂತಿಗೆಯನ್ನು ವಸೂಲು ಮಾಡಿಕೊಟ್ಟಿದ್ದೇನೆ. ಲಕ್ಷಾಂತರ ರೂಪಾಯಿ ಕೊಟ್ಟಿರತಕ್ಕಂತಹ ನಾವು ಸ್ವಂತ ಸಮಾರಂಭದಲ್ಲಿ, ಸಾರ್ವಜನಿಕ ಜಾಗಗಳಲ್ಲಿ ಶಾಸಕರ ಮಾನ ಮರ್ಯಾದೆಯನ್ನು ಕಳೆಯತಕ್ಕಂತಹ ಇವರ ಅಟ್ಟಹಾಸವನ್ನು ತಡೆಗಟ್ಟಬೇಕು.

ದುರದೃಷ್ಟವೆನ್ನೋಣವೇ, ದುರಂಕರಾವೇ? ಇದನ್ನೆಲ್ಲಾ ನಾವು ಖಂಡಿಸಬೇಕು ಮತ್ತು ತಾವೂ ಖಂಡಿಸಬೇಕೆಂದು ನಮ್ಮ ವಿನಂತಿಸುತ್ತಾ ಇದರ ಮುಖಾಂತರ ಸದನದ ಗೌರವವನ್ನು ಕಾಪಾಡಬೇಕೆಂದು ತಮ್ಮಲ್ಲಿ ವಿನಂತಿಸುತ್ತಾ ಇದರ ಮುಖಾಂತರ ಸದನದ ಗೌರವವನ್ನು ಕಾಪಾಡಬೇಕೆಂದು ತಮ್ಮಲ್ಲಿ ವಿನಂತಿಸುತ್ತಾ ಇದನ್ನು ವಿಚಾರಣೆಗಾಗಿ ಹಕ್ಕು ಭಾದ್ಯತಾ ಸಮಿತಿಗೆ ಒಪ್ಪಿಸಬೇಕೆಂದು ವಿನಂತಿಸುತ್ತೇನೆ. ಇದರಲ್ಲಿ ಎಷ್ಟು ಹಣ ಖರ್ಚಾಗಿದೆ, ಎಷ್ಟು ವಸೂಲಾಗಿದೆ ಹೇಗೆ ಖರ್ಚಾಗಿದೆ ಮತ್ತು ತಮ್ಮ ಸ್ವಂತ ಪ್ರಲೋಭನೆಯನ್ನು ಬೆಳೆಸಿಕೊಳ್ಳುವುದಕ್ಕೋಸ್ಕರ ತನ್ನ ವೈಯಕ್ತಿಕ ಪ್ರತಿಷ್ಠೆಯನ್ನು ಬೆಳೆಸಿ ಕೊಳ್ಳುವುದಕ್ಕೋಸ್ಕರ ಇದನ್ನು ಮಾಡಿದ್ದಾರೆಯೇ ಆ ರೀತಿ ಏನಾದರೂ ಇದು ಆಗಿದೆಯೇ ಎಂಬ ಬಗ್ಗೆ ಕೂಡ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಪ್ರಪ್ರಥಮವಾಗಿ ನಾನೂ ಕೂಡ ಬರೆದು ಕಳಿಸಿದ್ದೇನೆ. ನನಗೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು : ನನಗೆ ಪತ್ರವನ್ನು ಯಾರೂ ಕಳುಹಿಸಿಲ್ಲ. ಅವರು ಬಂದು ಕೇಳಿಕೊಂಡರು. ಆ ಪತ್ರ ನನಗೆ ಬಂದಿಲ್ಲ.

+ ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಹಲಗೇಗೌಡರು ಸಹಿ ಹಾಕಿರುವುದರಲ್ಲಿ ನನ್ನದೂ ಸಹಿ ಇದೆ. ಆ ಸಮಾರಂಭದಲ್ಲಿ ನನಗೂ ಅಪಮಾನವಾಗಿದೆ. ನಾನೂ ಆ ಸಮಾರಂಭದಲ್ಲಿದ್ದವನು. ಇಲ್ಲಿ ಒಬ್ಬ ಶಾಸಕರ ಅಪಮಾನವಾಗಿಲ್ಲ. ಇಡೀ ರಾಜ್ಯದ ಎಲ್ಲಾ ಶಾಸಕರ ಅಪಮಾನವಾಗಿದೆ. ಅಲ್ಲಿ ಯಾರದೋ ಹೆಸರು ಕೂಗಿ ಇವರಿಗೆ ಅಪಮಾನವಾಗಿದೆಯೆಂದು ಹೇಳುವ ಮಾತಲ್ಲ. ಈ ಸಮಾರಂಭದಲ್ಲಿ ಹತ್ತಾರು ಸಾವಿರ ಜನರ ಪ್ರಜಾಪ್ರತಿನಿಧಿಗಳು ಇದ್ದರು. ವಿದ್ವಾಂಸರುಗಳು ಸೇರಿರತಕ್ಕಂತಹ ಈ ಸಭೆಯಲ್ಲಿ ನಾವು ಸ್ವಾಗತ ಸಮಿತಿಯ ಸದಸ್ಯರು ಆದರೂ ಕೂಡ ನಮಗ್ಯಾರಿಗೂ ಪತ್ರ ಕಳುಹಿಸಿಲ್ಲ. ಸ್ವಾಗತ ಸಮಿತಿಯ ಸದಸ್ಯರು ಈ ಸಮಾರಂಭವನ್ನು ಹೇಗೆ ನಡೆಸಬೇಕುಈ ರೀತಿಯ ಕಾರ್ಯಕ್ರಮವನ್ನು ನಿರೂಪಿಸುವುದಕ್ಕೆ ನೀವು ಬರಬೇಕೆಂದು ನಮಗ್ಯಾರಿಗೂ ಆಹ್ವಾನ ಕಳುಹಿಸಿಲ್ಲ. ಅಥವಾ ಪತ್ರ ಕಳುಹಿಸಿಲ್ಲ. ಅಷ್ಟಾದರೂ ನಾವು ಮಾನ್ಯ ಮುಖ್ಯ ಮಂತ್ರಿಗಳು, ಉಪ ಮುಖ್ಯ ಮಂತ್ರಿಗಳು ನಮ್ಮ ಸರಕಾರದ ಮಂತ್ರಿಗಳು ಭಾಗವಹಿಸುತ್ತಾರೆ, ನಮ್ಮ ಜಿಲ್ಲೆಯ ಗೌರವ ಕಾಪಾಡುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮಲ್ಲಿ 63ನೇ ಸಮ್ಮೇಳನ ನಡೆಯುತ್ತಿದೆ ನಮ್ಮ ಜಿಲ್ಲೆಯ ಗೌರವ ಕಾಪಾಡಬೇಕೆಂದು ಅದನ್ನು ಉಳಿಸಿಕೊಳ್ಳಬೇಕೆಂದು ನಾವು ಆ ಸಮಾರಂಭಕ್ಕೆ ಹೋದರೆ ನಮ್ಮನ್ನು ನಡೆಸಿಕೊಂಡ ರೀತಿ ತುಂಬಾ ಅಗೌರವವನ್ನು ತೋರಿಸಿದಂತಿತ್ತು. ನಮಗನ್ನಿಸುತ್ತದೆ ಬಹುಶಃ ನಮ್ಮ ಹಕ್ಕು, ಮರ್ಯಾದೆಯು ಹೋದರೆ ನೀವು ಇಲ್ಲಿ ಕಾಪಾಡಬೇಕಾಗುತ್ತದೆ. ಆ ಸಮಾರಂಭದಲ್ಲಿ ನಮ್ಮ ಮರ್ಯಾದೆ ಹೋಗುತ್ತಿದ್ದರೆ ಆ ಇಬ್ಬರು ನಾಯಕರಾದರೂ ಕಾಪಾಡಬಹುದಿತ್ತು ಆದರೆ ಅದು ಆಗಲಿಲ್ಲ. ಏನಾದರೂ ಮಾಡೋಣವೇ ಎಂದು ನೆನೆಸಿಕೊಂಡೆವು ಏನು ಆಗಲಿಲ್ಲ. ನಿಜವಾಗಿಯೂ ಎಷ್ಟು ಅವಮಾನಕರವಾಗಿತ್ತು ಎಂದರೆ, ಆಗಲೇ ನಾವು ಪ್ರತಿಭಟನೆ ಮಾಡಿ ಹೊರಗೆ ಬರಬೇಕಾಗಿತ್ತು. ಆದರೆ ಈ ಸಮಾರಂಭ ಯಶಸ್ವಿಯಾಗಿ ನಡೆಯಲಿ. ಇದು ವಿದ್ವಾಂಸರ ಸಮಾರಂಭ ನಾವು ಇಲ್ಲಿ ಏನಾದರೂ ಕೂಗಾಡಿ ಪ್ರತಿಭಟನೆ ಮಾಡಿದರೆ ಸಮಾರಂಭ ನಡೆಯುವುದಕ್ಕೆ ಚ್ಯುತಿ ಬರುತ್ತದೆ ಎಂದು ಗೌರವಯುತವಾಗಿ ಮಾತುಕತೆಯಾಡದೆ ಹೊರಗೆ ಬಂದೆವು. ನಾವು ಯಾವುದಕ್ಕೆ ಅಲ್ಲಿ ಕೂಡಿದ್ದು ಅಂದರೆ ನಮ್ಮ ಶಾಸಕರ್ಯಾರೂ ವೇದಿಕೆ ಮೇಲೆ ಹೋಗಬೇಕೆಂದು ಅಲ್ಲ. ಸರಕಾರ 15 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಮತ್ತೆ ಆ ಸಮಾರಂಭವೇನು ನಡೆಸಿದರು ಅವರು 10 ಲಕ್ಷ ರೂಪಾಯಿ ಬೇಕೆಂದು ಮನವಿ ಸಲ್ಲಿಸಿದ್ದಾರೆ. ಜನರಿಂದ ಲಕ್ಷಾಂತರ ರೂಪಾಯಿಗಳನ್ನು ವಂತಿಗೆ ಪಡೆದು ಇವತ್ತು ಸಮಾರಂಭ ಮಾಡಿರುವುದು. ಆದರೆ ಇದು ವೈಯಕ್ತಿಕ ಸಮಾರಂಭವಲ್ಲ.

12.45 ಪಿ.ಎಂ

ಇವತ್ತು ನಾವು ಹೇಳತಕ್ಕಂಥದ್ದು ನಮ್ಮ ಜಿಲ್ಲೆಯಲ್ಲಿ ನಡೆಯತಕ್ಕಂಥ ಈ ಒಂದು ಸಮಾರಂಭಕ್ಕೆ ನಮಗೆ ಮರ್ಯಾದೆ ಇಲ್ಲದೆ ಹೋದ ಮೇಲೆ ಆ ಸಮಾರಂಭ ಏತಕ್ಕೆ ನಡೆಯಬೇಕು? ಇವತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳು ಅಲ್ಲಿ ಕುಳಿತಿದ್ದರು. ಪಶುಸಂಗೋಪನಾ ಮಂತ್ರಿಗಳು ಅಲ್ಲಿ ಕುಳಿತಿದ್ದರು. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಕುಳಿತಿದ್ದರು. ಅವರ ಸಮಕ್ಷಮದಲ್ಲಿ ಈ ರಾಜ್ಯದ ಶಾಸಕರ ಮರ್ಯಾದೆ ಇವತ್ತು ಹರಾಜು ಆಗಿ ಹೋಗಿದೆ. ನಾನು ಇವತ್ತು ವಿನಂತಿ ಮಾಡುತ್ತಿದ್ದೇನೆ, ನಮ್ಮ ಮರ್ಯಾದೆ ಅಲ್ಲಿ ಹೋದ ಆದ ಮೇಲೆ ನಾವು ಗೌರವಯುತವಾಗಿ ಬಂದು ಕುಳಿತುಕೊಂಡಾಗ ಮಾನ್ಯ ಪತ್ರಕರ್ತರು ಹೇಳಿದರು, ಏನು ನಡೆಯಿತು ಎಂದು ಹೇಳಿದಾಗ ಇದ್ದ ಸತ್ಯಾಂಶವನ್ನು ನಾವು ಹೇಳಿದ್ದೇವೆ. ಅದಾದಮೇಲೆ ಅವರು ಪತ್ರಿಕಾ ಹೇಳಿಕೆಯನ್ನು ಕೊಡುತ್ತಾರೆ, "ಶಾಸಕರು ಹೇಳಿಕೆ ದುರಾದೃಷ್ಟಕರ" ಎಂದು ಹೇಳಿ. ಯಾರದು ಸ್ವಾಮಿ ದುರಾದೃಷ್ಟಕರ? ನಾವು ಮರ್ಯಾದೆಯಿಂದ ಇದ್ದು ಬಂದಿದ್ದು ದುರಾದೃಷ್ಟಕರವೇ? ಇಲ್ಲವೇ ಅಲ್ಲಿಯೇ ಪ್ರತಿಭಟನೆಯನ್ನು ಮಾಡಬೇಕಾಗಿತ್ತಾ? ತಾವು ನಮಗೆ ಈಗ ದಯವಿಟ್ಟು ರಕ್ಷಣೆಯನ್ನು ಕೊಡಬೇಕು. ನಾವು ಬಹಳ ಮರ್ಯಾದೆಯುತವಾಗಿ, ನಮ್ಮ ಜಿಲ್ಲೆಯ ಗೌರವವನ್ನು ಕಾಪಾಡತಕ್ಕಂಥ ದೃಷ್ಟಿಯಿಂದ, ನಮ್ಮ ಜಿಲ್ಲೆಯ ಗೌರವವನ್ನು ಎತ್ತಿ ಹಿಡಿಯತಕ್ಕಂಥ ದೃಷ್ಟಿಯಿಂದ ಮರ್ಯಾದೆಯಿಂದ ಎದ್ದು ನಾವು ಹೊರಗೆ ಬಂದಿದ್ದೇವೆ. ನಾಲ್ಕಾರು ಬಾರಿ ಒಂದು ಸಾರಿ ಯಾರೋ ಬಾಯಿ ತಪ್ಪಿ ಮಾತನಾಡುತ್ತಾರೆ, ನಾವು ಅದನ್ನು ಸಹಿಸುತ್ತೇವೆ. ಎಲ್ಲಾ ಕಾರ್ಯಕ್ರಮಗಳಲ್ಲೂ ಅದು ನಡೆಯುತ್ತದೆ. ಹತ್ತಾರು ಬಾರಿ ನೀವು ಶಾಸಕರು ಯಾರು ವೇದಿಕೆಯ ಮೇಲೆ ಬರಕೂಡದು, ಮಂಡ್ಯ ಜಿಲ್ಲೆಯ ಶಾಸಕರೇ ಅಲ್ಲ, ಮಾನ್ಯ ಲಿಂಗಪ್ಪನವರು ಬಂದಿದ್ದರು ಹೊರಗಡೆಯಿಂದ ನಮ್ಮ ಜೊತೆಯಲ್ಲಿ ಕುಳಿತಿದ್ದವರು, ಬಹಳ ಜನ ಹೊರಗಡೆಯಿಂದ ಬಂದಿರತಕ್ಕಂಥ ಶಾಸಕರುಗಳು ಮುಖ ಮುಚ್ಚಿ ಕೊಂಡು ಹಿಂದಕ್ಕೆ ಹೋಗಿ ಕುಳಿತುಕೊಳ್ಳತಕ್ಕಂಥ ಪರಿಸ್ಥಿತಿ ಅಲ್ಲಿ ನಿರ್ಮಾಣವಾಯಿತು. ಇದಾದ ಮೇಲೆ ಅವರ ಹೇಳಿಕೆ ಏನೋ ನಾವೇ ಬಹಳ ತಪ್ಪು ಮಾಡಿಬಿಟ್ಟಿದ್ದೇವೆ, ನಾವೇ ಬಹಳ ಅನಾಹುತ ಮಾಡಿದ್ದೇವೆ ಆ ಜಿಲ್ಲೆಯಲ್ಲಿ, ನಾವೇನು ತಪ್ಪು ಮಾಡಿಯೇ ಇಲ್ಲ ಎನ್ನತಕ್ಕಂಥ ದೃಷ್ಟಿಯಿಂದ ಹೇಳಿಕೆಯನ್ನು ಕೊಟ್ಟಿರುವುದು ದುರಾದೃಷ್ಟಕರ. ಇನ್ನು ರಾಜ್ಯದ ಜನತೆಗೆ ನಾವೇನೋ ಬಹಳ ಮಾಡಬಾರದ ತಪ್ಪನ್ನು ಮಾಡಿದ್ದೇವೆ ಎನ್ನತಕ್ಕಂಥ ಅನಿಸಿಕೆಯನ್ನು ತೋರಿಸಿದ್ದಾರೆ. ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ, ಇವತ್ತು ಅಲ್ಲಿ ನಡೆದಿರುವಂಥದ್ದನ್ನು ಪತ್ರಿಕೆಗಳಲ್ಲಿ ತಾವೆಲ್ಲರೂ ಓದಿರುತ್ತೀರಿ. ಅಲ್ಲಿ ಲಕ್ಷಾಂತರ ರೂಪಾಯಿಗಳ ವಂತಿಗೆಯನ್ನು ವಸೂಲು ಮಾಡಿ ಇವತ್ತು ಏನಾಗಿದೆ ಎನ್ನತಕ್ಕಂಥದ್ದರ ಬಗ್ಗೆ ಸಾಕಷ್ಟು ವಿಷಯಗಳನ್ನು ಪತ್ರಿಕೆಯ ಮುಖಾಂತರ ತಾವುಗಳೆಲ್ಲರೂ ಓದಿ ತಿಳಿದುಕೊಂಡಿದ್ದೀರಿ. ಲಕ್ಷಾಂತರ ರೂಪಾಯಿಗಳನ್ನು ವಸೂಲು ಮಾಡಿರತಕ್ಕಂಥ ಮಾಹಿತಿ ಇದೆ. ಸರ್ಕಾರ 15 ಲಕ್ಷ ರೂಪಾಯಿಗಳನ್ನು ಕೊಟ್ಟು ಅಲ್ಲಿ ಪ್ರಜಾಪ್ರತಿನಿಧಿಗಳನ್ನು ನಮ್ಮಂಥವರು ಅಲ್ಲಿ ಹೋದಾಗ, ಅವಮಾನ ಮಾಡತಕ್ಕಂಥ ರೀತಿ ಮಾಡುವುದಕ್ಕೆ ಬಹುಶಃ ಇನ್ನು ಮುಂದೆ ಯಾವುದೇ ಸರ್ಕಾರಿ ಸಮಾರಂಭದಲ್ಲಿ ಈ ರೀತಿ ಶಾಸಕರುಗಳಿಗೆ ಅವಮಾನ ಆಗಬಾರದು ಇದರ ಬಗ್ಗೆ ಸರ್ಕಾರ ನಿಗಾ ವಹಿಸಬೇಕು. ಈ ಒಂದು ವಿಚಾರವನ್ನು ತಾವು ಪ್ರಿವಿಲೇಜ್ ಕಮಿಟಿಗೆ ಹಾಕಿ ಕೊಂಡು ನಮಗೆ ರಕ್ಷಣೆಯನ್ನು ಕೊಡಬೇಕು, ಈ ರಾಜ್ಯದಲ್ಲಿ ಶಾಸಕರಿಗೆ ಆಗಿರತಕ್ಕಂಥ ಅವಮಾನವನ್ನು ತಾವು ಯಾವ ರೀತಿ ಖಂಡಿಸುತ್ತೀರಿ ಯಾವ ರೀತಿ ನಮಗೆ ರಕ್ಷಣೆಯನ್ನು ಕೊಡುತ್ತೀರಿ ಎನ್ನುವಂಥದ್ದನ್ನು ತಾವು ತಿಳಿಸಬೇಕು ಎಂದು ಹೇಳಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು): ಮಾನ್ಯ ಅಧ್ಯಕ್ಷರೇ, ಮಂಡ್ಯದಲ್ಲಿ ನಡೆದಂಥ 63ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬಹುಶಃ ಹಿಂದೆಂದೂ ಕಂಡರಿಯದಂಥ ಯಶಸ್ವಿ ಸಮ್ಮೇಳನ. ಅವತ್ತಿನ ದಿವಸ ಶಾಸಕರನ್ನು ಅವಮಾನ ಮಾಡಬೇಕು ಎನ್ನತಕ್ಕಂಥ ಯಾವುದೇ ಉದ್ದೇಶ ಸಂಘಟಿಕರಿಗೆ ಇರಲಿಲ್ಲ. ಆದರೆ ನಿರೂಪಣೆ ಮಾಡತಕ್ಕಂಥ ಆ ವ್ಯಕ್ತಿಯ ಮಾತಿನ ಅಚಾತುರ್ಯದಿಂದ ಶಾಸಕರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳುವುದರ ಬದಲು ನಿರೂಪಕರು ಕೆಳಗೆ ಇಳಿಯಿರಿ, ಕೆಳಗೆ ಇಳಿಯಿರಿ ಎಂದು ಹೇಳಿದ್ದುದು ಅದು....

ಶ್ರೀ ಎಲ್.ಆರ್. ಶಿವರಾಮೇಗೌಡ: ನಾವು ಇದನ್ನು ಒಪ್ಪುವುದಕ್ಕೆ ರೆಡಿ ಇಲ್ಲ. ಮಾನ್ಯ ಸಚಿವರು ಕೂಡ ಅಲ್ಲಿ ಕುಳಿತಿದ್ದರು. ಅದನ್ನು ಅವರು ಒಪ್ಪಿಕೊಳ್ಳಲಿ ಬರೀ ವಿಷಯವನ್ನು ತೇಲಿಸಿ ಹೇಳಿಬಿಟ್ಟರೆ ನಾವು ಒಪ್ಪುವುದಕ್ಕೆ ರೆಡಿ ಇಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಸಹ ಶಾಸಕರಾಗಿ ಸಚಿವರಾಗಿರತಕ್ಕಂಥದ್ದು ಎಂದು ತಾವು ಮರೆಯಬಾರದು.

ಶ್ರೀ ಹೆಚ್. ವಿಶ್ವನಾಥ್: ಆದ್ದರಿಂದ ಯಾರನ್ನೂ ಕೂಡ ಅಪಮಾನ ಮಾಡಬೇಕು ಎನ್ನುವ ಉದ್ದೇಶ ಸಂಘಟಿಕರಿಗೂ ಕೂಡ ಇರಲಿಲ್ಲ. ನಂತರ ಅದರ ಬಗ್ಗೆ ಯಾರು ನಿರೂಪಣೆ ಮಾಡುತ್ತಿದ್ದಂಥ ವ್ಯಕ್ತಿ ಕ್ಷಮೆ ಕೂಡ ಕೇಳಿದ್ದಾರೆ. ಮಂಡ್ಯ ಜಿಲ್ಲೆಯ ಶಾಸಕರಾಗಲಿ, ಪ್ರತಿ ಸಾಮಾನ್ಯನೂ ಕೂಡ, ಅಲ್ಲಿ ಅತಿಥಿಯೇ. ಆದ್ದರಿಂದ ಅವರು ಜನಗಳನ್ನು ಕರೆದು ಗೌರವಿಸಿ ಆದರಣೆ ಮಾಡಬೇಕಾದಂಥ ವಿಚಾರ ಕೂಡ ಇದೆ. ಆದರೆ ಅದು ನಿರೂಪಕನ ಮಾತಿನ ಆಚಾತುರ್ಯವೇ ಹೊರತು ಇನ್ನಾವ ವಿಚಾರವೂ ಅದರಲ್ಲಿ ಇಲ್ಲ. ಆದ್ದರಿಂದ ನನ್ನ ಶಾಸಕ ಮಿತ್ರರಲ್ಲಿ ಮತ್ತೊಮ್ಮೆ ನಾನು ಪ್ರಾರ್ಥನೆ ಮಾಡುತ್ತೇನೆ, ಆ ರೀತಿ ತಮ್ಮ ಮನಸ್ಸಿಗೇನಾದರೂ ಕೂಡ ಭಾವನೆ ಇದ್ದರೆ ಅದಕ್ಕೆ....

ಶ್ರೀ ವಾಟಾಳ್ ನಾಗರಾಜ್: ಶಾಸಕರಿಗೆ ನೀವು ಎಲ್ಲಿ ಕುರ್ಚಿ ಹಾಕಿದ್ದೀರಿ? ಮಂಡ್ಯದಲ್ಲಿ ಸಮ್ಮೇಳನ ನಡೆಯಿತು. ಮದ್ದೂರು ಹತ್ತಿರ ಏನಾದರೂ ಕುರ್ಚಿ ಹಾಕಿದ್ದಿರಾ? ಎಲ್ಲಿ ಹಾಕಿದಿರಿ ಎಂದು ಹೇಳಬೇಕು. ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಮಂಡ್ಯದಲ್ಲಿ, ಸಕ್ಕರೆ ನಗರದಲ್ಲಿ. ನೀವು ಶಾಸಕರಿಗೆ ಕುರ್ಚಿ ಹಾಕಿದ್ದುದು ಮದ್ದೂರಿನಲ್ಲೋ ಎಲ್ಲಿ ಎಂಬುದನ್ನು ಹೇಳಿ. ಅದು ಬೇಕಾಗಿದೆ. ಈಗ ನನಗೂ ನೋವಾಗುತ್ತಿದೆ. ಹಲಗೇಗೌಡರು ಮತ್ತು ಶಿವರಾಮೇಗೌಡರು ಹೇಳಿದ ಮಾತನ್ನು ಕೇಳಿ ನನಗೂ ನೋವಾಗಿದೆ. ಪಾಪ, ಈ ರೀತಿ ಏತಕ್ಕೆ ಆಯಿತು ಎಂದು ಮನಸ್ಸಿನಲ್ಲಿ ನೋವಾಗಿ ನಾನು ಆ ಮಾತನ್ನಾಡುತ್ತಿದ್ದೇನೆ. ಈಗ ಅವರು ವೇದಿಕೆಯ ಮೇಲೆ ಶಾಸಕರುಗಳು ಕುಳಿತುಕೊಳ್ಳತಕ್ಕಂಥ ಕುರ್ಚಿಯೇ ಇರಲಿಲ್ಲ ಎನ್ನುವಂಥ ವಾದವನ್ನು ಮಾಡುತ್ತಿದ್ದಾರಲ್ಲಾ, ಅದರ ಬಗ್ಗೆ ಹೇಳಿ.

ಶ್ರೀ ಹೆಚ್. ವಿಶ್ವನಾಥ್: ವೇದಿಕೆಯ ಮೇಲೆ ಅತಿಥಿಗಳಿಗೆ ಬಿಟ್ಟರೆ ಕೆಳಗಡೆ ಲೋಕಸಭಾ ಸದಸ್ಯರು, ರಾಜ್ಯ ಸಭಾ ಸದಸ್ಯರು ಶಾಸಕರುಗಳಿಗೆ ಕೆಳಗಡೆ ಕುರ್ಚಿಯನ್ನು ವ್ಯವಸ್ಥೆ ಮಾಡಲಾಗಿತ್ತು. ದೊಡ್ಡ ದೊಡ್ಡ ಸಾಹಿತಿಗಳು, ಬೇರೆ ಬೇರೆ ಕಡೆಯಿಂದ ಬಂದಂತಹವರಿಗೂ ಸಹ ಕೆಳಗಡೆ ಆಸನದ ವ್ಯವಸ್ಥೆ ಮಾಡಲಾಗಿತ್ತು. ಕೆಳಗಡೆ ಆಸನದ ವ್ಯವಸ್ಥೆಯನ್ನು ಶಾಸಕರಿಗೆ ಪ್ರತ್ಯೇಕವಾಗಿ ಮಾಡಲಾಗಿದೆ ಎಂದು ಹೇಳುವುದನ್ನು ನಿರೂಪಕ ಶಾಸಕರುಗಳು ಕೆಳಗಡೆ ಇಳಿಯಬೇಕು, ಕೆಳಗಡೆ ಇಳಿಯಬೇಕು ಎಂದು ಹೇಳಿ ಅದು ಮಾತಿನ ಅಚಾತುರ್ಯ ಆಗಿದೆ. ಅದರಲ್ಲಿ ಯಾರನ್ನೂ ತೇಜೋವಧೆ ಮಾಡಬೇಕು ಎನ್ನುವ ಉದ್ದೇಶ ಇರಲಿಲ್ಲ. ಇನ್ನು ಉಳಿದ ವಿಚಾರ ಅದು ಗೌಡರ ಗದ್ದಲಕ್ಕೆ ಸೇರಿದಂತಹುದು.

ಶ್ರೀ ವಾಟಾಳ್ ನಾಗರಾಜ್: ಶಾಸಕರು ಕೆಳಗಡೆ ಇಳಿಯಬೇಕು ಎಂದರೆ ನಿಮ್ಮ ಕತ್ತು ಹಿಡಿದು ನೂಕಿದ ಹಾಗೆ, ಹೊರಗಡೆ ಹೋಗಿ ಎಂದು ಅರ್ಥ.

ಶ್ರೀ ಹೆಚ್. ವಿಶ್ವನಾಥ್: ಒಂದು ನಿಮಿಷ.

ಅಧ್ಯಕ್ಷರು: ಅವರು ಹೇಳಿದ್ದಾರಲ್ಲಾ, ಶಾಸಕರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು ಎಂದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಂತ್ರಿಗಳಾದರೂ ಹೇಳಬೇಕಾಗಿತ್ತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಶಾಸಕರಿಗೆ ಆದಂತಹ ಅಗೌರವ.

(ಗೊಂದಲ)

+ ಡಾ|| ಜೀವರಾಜ್ ಆಳ್ವ: ಒಂದು ಮಾತನ್ನು ತಮ್ಮ ಮುಂದೆ ಸೂಚ್ಯವಾಗಿ ಮಾನ್ಯ ವಿಶ್ವನಾಥ್‌ರವರಿಗೆ ತಿಳಿಸಬಯಸುತ್ತೇನೆ. ಈ ಸಾಹಿತಿಗಳಿಗೆ ಸಮ್ಮೇಳನ ನಡೆಯುವಾಗ ಕಾಣುವುದು ಆಗಿನ ಸರ್ಕಾರ ಮಾತ್ರ. ಆಗಿನ ಸರ್ಕಾರದಲ್ಲಿ ಯಾರು ಮುಖ್ಯಮಂತ್ರಿಗಳು ಆಗಿರುತ್ತಾರೋ, ಯಾರು ಕನ್ನಡ ಸಂಸ್ಕೃತಿ ಮಂತ್ರಿಗಳು ಆಗಿರುತ್ತಾರೋ ಅವರನ್ನು ಕರೆಯುತ್ತಾರೆ ಏಕೆಂದರೆ ಅವರಿಗೆ ಅನುದಾನ ಬೇಕು, ಸರ್ಕಾರದ ರಕ್ಷಣೆಯ ವ್ಯವಸ್ಥೆ ಬೇಕು. ಆದರೆ ಯಾವುದೇ ಸಾಹಿತ್ಯ ಸಮ್ಮೇಳನ, ಕನ್ನಡ ಸಮ್ಮೇಳನ ನಡೆದಾಗ, ಸಾಂಸ್ಕೃತಿಕ ಸಮ್ಮೇಳನ ನಡೆದಾಗ ಜಿಲ್ಲೆಗೆ ಸಂಬಂಧಪಟ್ಟಿದ್ದು, ಕರ್ನಾಟಕದ ಸಮಸ್ತ ಜನರಿಗೆ ಸಂಬಂಧಪಟ್ಟಿದ್ದನ್ನು ಇವರು ಸಾಹಿತಿಗಳು ಆಗಿರಬಹುದು, ಸಾಹಿತ್ಯಕ್ಕೆ ಪೂರಕ ಆಗಿರಬಹುದು. ಕನ್ನಡಕ್ಕೋಸ್ಕರ ಹೋರಾಡಿದಂತಹ ಹಲವಾರು ಜನರು ಇದ್ದಾರೆ. ನಾನು ಅವರನ್ನು ಹೊಗಳಿಕೆಗೆ ಹೇಳುತ್ತಿಲ್ಲ, ಮಾನ್ಯ ವಾಟಾಳ್ ನಾಗರಾಜ್ ಅವರು ಇದ್ದಾರೆ. ಸುಮಾರು ಮೂರು ನಾಲ್ಕು ದಶಕಗಳಿಂದ ಕನ್ನಡಕ್ಕೋಸ್ಕರ ಹೋರಾಡಿದಂತಹ ವ್ಯಕ್ತಿಯನ್ನು ಆಹ್ವಾನ ಮಾಡಿ ರಾಜಕೀಯವಾಗಿ ಚಿಂತನೆ ಮಾಡಬೇಕು. ನಾಡು ಬಗ್ಗೆ ಚಿಂತನೆ ಮಾಡಬೇಕು. ನುಡಿ ಬಗ್ಗೆ ಚಿಂತನೆ ಮಾಡಬೇಕು. ಜಲದ ಬಗ್ಗೆ ಚಿಂತನೆ ಮಾಡಬೇಕು ಎಂದು ಹೇಳಿದರೆ, ಕಾವೇರಿ ಬಗ್ಗೆ ನೀವು ರಾಜಕಾರಣಿಗಳು ಏನು ಮಾಡಿದ್ದೀರಾ ಎಂದು ಹೇಳಿ ಅತ್ಯಂತ ತೀಕ್ಷ್ಣವಾಗಿ ಟೀಕೆ ಮಾಡಲಿಕ್ಕೆ ಆದರೂ ಅವರು ವಿಚಾರ ಸಂಕಿರಣ ಅವರು ನಡೆಸುತ್ತಾರೋ? ಅವರದ್ದೇ ಅವರದ್ದು ಕರ್ನಾಟಕದ ರಾಜಕೀಯ ವಿಚಾರದಲ್ಲಿಯೂ ಅವರದ್ದೇ ಒಂದು ಲೇಪನ. ಅವರದ್ದೇ ಒಂದು ವಿವೇಚನೆ ನಡೆಯುತ್ತಿದೆ. ಆದ್ದರಿಂದ ಮಾನ್ಯ ವಿಶ್ವನಾಥ್ ಅವರೇ, ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳಬೇಡಿ. ಸುಮಾರು ಆರು ವರ್ಷ ಕಾಲ ಈ ರಾಜ್ಯದ ಸಂಸ್ಕೃತಿ ಸಚಿವನಾಗಿ ಬಹಳ ಸಹಾಯ ಮಾಡಿದೆ. ನಿಮಗಿಂತ ಬಹಳ ಸಹಾಯ ಮಾಡಿದೆ. ನಿಮಗಿಂತ ಬಹಳ ಧಾರಾಳ ಮಾಡಿದೆ. ಗೊತ್ತಿದೆ ನನಗೆ. ಆದರೆ ಅವರಿಗೆ ನಾವು ಕಾಣುವುದಿಲ್ಲ, ಜೀವರಾಜ್ ಆಳ್ವರವರ ಮಂತ್ರಿಗಳ ಕಾಲ ಮುಗಿದು ಹೋಯಿತು. ಸಂಸ್ಕೃತಿ ಸಚಿವನಾಗಿ ಸಾಹಿತ್ಯ ಪರಿಷತ್ತು ವಿಶ್ವ ಕನ್ನಡ ಸಮ್ಮೇಳನ, ಹಲವಾರು ಸಾಹಿತ್ಯ ಸಮ್ಮೇಳನಗಳಿಗೆ ಲಕ್ಷೋಪಲಕ್ಷ, ಕೋಟಿಗಟ್ಟಲೆ ಹಣ ಕೊಟ್ಟಿದ್ದೂ ಮರೆತು ಹೋಯಿತು. ಆಹ್ವಾನ ಪತ್ರಿಕೆ ಬರುವುದಿಲ್ಲ, ಆದರೆ ಮಂಡ್ಯದಲ್ಲಿ ಸಮ್ಮೇಳನ ಆದಾಗ ಅಲ್ಲಿ ಕುಳಿತುಕೊಂಡು ಮಾದೇಗೌಡರು ಛೇರ್ಮನ್ ಆಗಿದ್ದಾಗ ಜನತೆಯ ಪ್ರತಿನಿಧಿಗಳು, ಕರ್ನಾಟಕದ ಸಮಸ್ತ ಜನತೆಯ ಪ್ರತಿನಿಧಿಗಳು ಅವರು ಶಾಸಕರನ್ನು ಯಾರೋ ಕಿಂಚಿತ್ ನಿರೂಪಣೆಗಾರ ವೇದಿಕೆಯಲ್ಲಿ ಬರಬೇಡಿ ಕೆಳಗಡೆ ಹೋಗಿ ಎಂದು ಹೇಳಿದರೆ ನೀವು ಕ್ಷಮೆ ಕೇಳಿದ್ದೇವೆ ನೋವಾಗಿದೆ ಎಂದು ಹೇಳಿದರೆ, ಅದನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ, ಹಲಗೇಗೌಡರು ಹೇಳಿದ್ದು ಆಗಲಿ, ಶಿವರಾಮೇಗೌಡರು ಹೇಳಿದ್ದು ಎಂದಲ್ಲ, ಇದನ್ನು ತಾವು ಸ್ವಲ್ಪ ಗಮನದಲ್ಲಿಡಬೇಕು.

ಒಂದು ವೇಳೆ ಆಯಿತು. ಇದು ಸರ್ಕಾರದ, ಜನರ ದುಡ್ಡು. ಸರ್ಕಾರದ ದುಡ್ಡು ಎಂದು ಹೇಳುತ್ತಿಲ್ಲ. ಕರ್ನಾಟಕದ ಸಮಸ್ತ ಜನತೆಯ ದುಡ್ಡು, ಅವದಾನ. ಇವತ್ತು ನಾವು ನಾಲ್ಕು ಕೋಟಿ ಜನರ ಪ್ರತಿನಿಧಿಗಳಿಗೆ ನಮಗೆ ಒಂದು ವ್ಯವಸ್ಥೆ ಇಲ್ಲದಿದ್ದರೆ ನಾವು ಬೇಡಿಕೊಂಡು ಬರಬೇಕೇನು? ಕರ್ನಾಟಕದ ತೀವ್ರ ಸಮಸ್ಯೆಗಳ ಪ್ರಶ್ನೆ ಬಂದಾಗ ಹಲವಾರು ಬೇಡಿಕೆಗಳ ಬಗ್ಗೆ ನಾವು ಮಾತನಾಡುತ್ತೇವೆ, ಅದಕ್ಕೆ ಇವರು ಉತ್ತರ ಕೊಡುತ್ತಾರೆಯೇ? ವಾಟಾಳ್ನಾಗರಾಜ್ ಅವರು ಶಾಸಕರಾಗಿದ್ದಾರೆ. ಅವರಿಗೆ ಒಂದು ಆಹ್ವಾನ ಕೊಡುದಂತಹ ಸಾಹಿತ್ಯ ಸಮ್ಮೇಳನ ನಡೆಯುತ್ತದೆ. ಅವರನ್ನು ಕನ್ನಡಕ್ಕೋಸ್ಕರ ದುಡಿದವರು ಎಂದು ಹೇಳಬೇಕಾಗಿಲ್ಲ. ಕನ್ನಡ ಕನ್ನಡ ಎಂದು 24 ಗಂಟೆ ಕೇಳುವಂತಹ ಒಬ್ಬ ರಾಜಕಾರಣಿ ಇದ್ದಾರೆ, ವಾಟಾಳ್ ನಾಗರಾಜ್ ಇದ್ದಾರೆ. ಇದನ್ನು ನೀವು ಒಪ್ಪುತ್ತೀರಾ? ಆರೇಳು ವರ್ಷಗಳ ಕಾಲ ಜೀವರಾಜ್ ಆಳ್ವ, ನಿಮಗೂ ಗೊತ್ತಿದೆ. ಇಡೀ ಶಾಸನಸಭೆಗೆ ಗೊತ್ತಿದೆ. ಬರೀ 30 ಲಕ್ಷ ಇದ್ದಂತಹ ಅನುದಾನವನ್ನು ಆರು ಕೋಟಿಗೆ ತೆಗೆದುಕೊಂಡು ಹೋಗಿದ್ದೇನೆ. ಜನ ಸ್ವಲ್ಪ ಧಾರಾಳ ಎಂದು ಟೀಕೆ ಮಾಡಿರಬಹುದು. ಅಂದರೆ ಅಲ್ಪ ಸ್ವಲ್ಪ ನಮ್ಮ ಕೊಡುಗೆಯೂ ಇದೇ ತಾನೇ. ಆದರೂ ನಾವೂ ಇವರ ಕಣ್ಣಿಗೆ ಕಾಣುವುದಿಲ್ಲ, ನಾಳೆ ನಿಮ್ಮ ಸರ್ಕಾರ ಮುಗಿಯುತ್ತದೆ, ಇನ್ನೊಂದು ಸರ್ಕಾರ ಬರುತ್ತದೆ. ಆ ಸರ್ಕಾರದ ಮುಖ್ಯಮಂತ್ರಿಗಳ ಹಿಂದೆ ಇನ್ನೊಂದು ಸಂಸ್ಕೃತಿ ಸಚಿವರನ್ನು ಚಾಮರ ಹಾಕಲಿಕ್ಕೆ ಹೋಗುತ್ತಾರೆ. ನಮ್ಮಲ್ಲಿ ಲೋಪದೋಷಗಳು ಇವೆ. ಆದರೆ ರಾಜಕಾರಣಿಗಳು ಅಸ್ಪಶ್ಯರು ಅಲ್ಲ. ನಮ್ಮಲ್ಲೂ ನಾಡು ನುಡಿ ಸಂಸ್ಕೃತಿ ಬಗ್ಗೆ ಅಭಿಮಾನ ಇದೆ.

ಇವರಷ್ಟು ಅತ್ಯಂತ ಸಾಹಿತ್ಯಪೂರ್ಣ ಸಾಂಸ್ಕೃತಿಕ ಜೀವನವನ್ನು ನಡೆಸಿಲ್ಲವಾದರೂ ನಮ್ಮ ಸಂಸ್ಕೃತಿ ಬಗ್ಗೆ, ನಮ್ಮ ನೆಲದ ಬಗ್ಗೆ Deltas, Cultural ethos ಎಂದು ಏನು ಹೇಳುತ್ತಾರೆ, ಅದರ ಬಗ್ಗೆ ನಾವು ಸಾಕಷ್ಟು ತಿಳಿವಳಿಕೆಯುಳ್ಳವರಾಗಿದ್ದೇವೆ. ನಾಟಕ ಮಾಡಿದ್ದೇವೆ, ಸಂಗೀತ ಮಾಡಿದ್ದೇವೆ, ನಮ್ಮ ಕೊಡುಗೆಯೂ ಇದೆ. ಆದುದರಿಂದ, ಮುಖ್ಯಮಂತ್ರಿಗಳು ಬರುತ್ತಾರೆಂದು ರಾಜಕಾರಣಿಗಳು ವೇದಿಕೆಗೆ ಹತ್ತುವುದಿಲ್ಲ, ಸಾಹಿತ್ಯ ಸಮ್ಮೇಳನಗಳಲ್ಲಿ ರಾಜಕೀಯ ಚಿಂತನೆಯೂ ನಡೆಯಬೇಕು. ಹಿಂದಿನ ರಾಜಕಾರಣಿಗಳು ಏನು ತಪ್ಪು ಮಾಡಿದ್ದರು ಎಂಬುದನ್ನಾದರೂ ಹೇಳಲಿ, ಇವರ ಕೊಡುಗೆ ಏನೆಂದು ಹೇಳಲಿ. ಒಬ್ಬ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು ವಯಸ್ಕರ ಶಿಕ್ಷಣವನ್ನು ಪ್ರಸಾರ ಮಾಡುವುದಕ್ಕೆ ಸೀಮೆಎಣ್ಣೆಗಾಗಿ ತಿಂಗಳಿಗೆ 70 ಸಾವಿರ ರೂಪಾಯಿಗಳನ್ನು ತೆಗೆದುಕೊಂಡಂಥ ನಿದರ್ಶನಗಳೂ ಇವೆ. ಇವರು ಕನ್ನಡ ಸೇವೆಯನ್ನು ಮಾಡಿದಂಥವರು! ರಾತ್ರಿ ಹೊತ್ತಿನಲ್ಲಿ ವಯಸ್ಕರಿಗೆ ಕನ್ನಡ ಕಲಿಸುವುದಕ್ಕೋಸ್ಕರ ಸೀಮೆಎಣ್ಣೆಗೆಂದು ಹಣ ಒದಗಿಸಿದರೆ ತಿಂಗಳಿಗೆ 70 ಸಾವಿರ ರೂಪಾಯಿಗಳನ್ನು ತೆಗೆದುಕೊಂಡಂಥ, ಕರ್ನಾಟಕದ ಹಣವನ್ನು ಲಪಟಾಯಿಸಿ, ಕೊಳ್ಳೆ ಹೊಡೆದಂಥ ಸಾಂಸ್ಕೃತಿಕ ಪ್ರತಿನಿಧಿಯನ್ನು ಕಂಡಿದ್ದೇನೆ, ಇದನ್ನು ಅತ್ಯಂತ ವಿಷಾದಪೂರ್ವಕವಾಗಿ ಹೇಳುತ್ತಿದ್ದೇನೆಯೇ ಹೊರತು ವಿಚಾರವಂತರನ್ನು, ಹಿರಿಯರನ್ನು ಕುರಿತು ಅವರ ಮನಸ್ಸನ್ನು ನೋಯಿಸುವುದಕ್ಕೆ ಹೇಳುತ್ತಿಲ್ಲ. ಮಧ್ಯವರ್ತಿಗಳಾದ ಸ್ಟೇಜ್ ಮ್ಯಾನೇಜರ್ ಯಾರಿದ್ದಾರೆ, ಅವರು ಪ್ರತಿ ವ್ಯವಸ್ಥೆಯಲ್ಲೂ ಇರುತ್ತಾರೆ. ಅವರು ನಮ್ಮ ವ್ಯವಸ್ಥೆಯಲ್ಲೂ ಇದ್ದರು, ಈಗ ನಿಮ್ಮ ವ್ಯವಸ್ಥೆಯಲ್ಲೂ ಇದ್ದಾರೆ. ನಾವು ಕೂಡ ಅಧಿಕಾರದಲ್ಲಿರುವಾಗ ಅಂತಹವರನ್ನು ಗುರ್ತಿಸುವಲ್ಲಿ ಲೋಪವೆಸಗಿದ್ದೇವೆ. ಆದುದರಿಂದ, ಆ ತಪ್ಪುಗಳನ್ನು ಡಿಫೆಂಡ್ ಮಾಡುವುದಕ್ಕೆ ಹೋಗಬೇಡಿ. ನಾವು, ನೀವು ಸೇರಿ ಅವರನ್ನು ಸ್ವಲ್ಪ ಎಚ್ಚರಿಸುವಂತೆ ಮಾಡಬೇಕು. ನೀವು ಆ ಹುದ್ದೆಯಲ್ಲಿರುವಾಗ ನಿಮ್ಮಿಂದ ನಾವು ಬಹಳಷ್ಟು ಅಪೇಕ್ಷಿಸುತ್ತೇವೆ. ತಾವು ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿ ಒಳ್ಳೆಯ ಕೆಲಸ ಮಾಡಿ ಅವರನ್ನು ಎಚ್ಚರಿಸಿ ಇಂತಹ ತಪ್ಪುಗಳು, ನ್ಯೂನತೆಗಳು ನುಸುಳದಂತೆ ನೋಡಿಕೊಳ್ಳಬೇಕೆಂದು ಅಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಡಿ. ಹಲಗೇಗೌಡ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಒಂದು ಸ್ಪಷ್ಟೀಕರಣ. ಅವರ ಎದುರಿಗೆ ಅದು ನಡೆಯಲಿಲ್ಲ, ಏನೋ ಪ್ರಮಾದವಶಾತ್ ನಡೆಯಿತೆಂದು ಅಲ್ಲಿ ಹೇಳಿದ್ದಾರಲ್ಲಾ, ಆದರೆ, ಅದೇ ರೀತಿ ನಾಲ್ಕೈದು ಬಾರಿ ಅದೇ ರೀತಿ ಹೇಳುತ್ತಿದ್ದರೆ, ಅದನ್ನು ನೋಡಿಕೊಂಡು ವ್ಯವಸ್ಥಾಪಕರಾದವರು ಸುಮ್ಮನೆ ಕುಳಿತಿದ್ದರೆ ಇದು ವ್ಯವಸ್ಥಿತ ಸಂಚು ಅಲ್ಲದೆ ಬೇರೇನು? ಇದನ್ನು ಯಾರು ಸರಿಪಡಿಸಿಕೊಳ್ಳುತ್ತಾರೆ? ಈ ತರಹ ಏಕೆ ತಾವು ಡಿಫೆಂಡ್ ಮಾಡಿಕೊಳ್ಳಬೇಕು?

ಶ್ರೀ ಬಿ.ಎಂ. ಇದಿನಬ್ಬ: ಮಾನ್ಯ ಅಧ್ಯಕ್ಷರೇ, ಇದೇ ವಿಷಯವಾಗಿ ನಾನು ಮಾತನಾಡುತ್ತೇನೆ. ಈಗ ಶಾಸಕರು ಮತ್ತು ಸಾಹಿತಿಗಳೆಂಬ ಎರಡು ಭೇದಗಳಿವೆ ಶಾಸಕರಾದವರು ಸಾಹಿತಿಗಳಾಗಬಾರದೇ? ಸಾಹಿತಿಗಳಾದವರು ಶಾಸಕರಾಗಬಾರದೇ? ಈ ತರಹದ ಭೇದ-ಭಾವ ನಾನು ಅನೇಕ ಕಡೆ ನೋಡಿದ್ದೇನೆ, ಸಮ್ಮೇಳನದಲ್ಲಿ 'ಕೆಳಗಿಳಿಯಿರಿ' ಎಂದು ಶಾಸಕರ ಸುದ್ದಿಯನ್ನು ಏಕೆ ತೆಗೆಯಬೇಕಾಗಿತ್ತು? ಶಾಸಕರ ಸುದ್ದಿ ತೆಗೆಯುವುದಕ್ಕೆ ಯಾರೂ ಹೇಳಲಿಲ್ಲ. ಆದುದರಿಂದ, ಯಾವುದೇ ಶಾಸಕರಿಗೆ ನೋವಾದರೂ ಕೂಡ ಆ ನೋವು ಇಲ್ಲಿರುವ 224 ಜನ ಸದಸ್ಯರಿಗೆ ತಾಗುತ್ತದೆಂಬುದು ನನ್ನ ಅಭಿಪ್ರಾಯ. ಏಕೆಂದರೆ, ನಾನು ಎಡೆಬಿಡದೆ ಸಾಹಿತ್ಯ ಸಮ್ಮೇಳನಗಳಿಗೆ ಹೋಗುತ್ತಿರುವವನು. ನಿನ್ನೆಯೂ ಕೂಡ ನಾನು ಅಲ್ಲಿಗೆ ಆಹ್ವಾನದ ಮೇರೆಗೆ ಹೋಗಿದ್ದೆ. ಜವರಪ್ಪಗೌಡರು ನನಗೆ ದೂರವಾಣಿ ಕರೆ ಮಾಡಿ ಸಮ್ಮೇಳನಕ್ಕೆ ಬರಬೇಕೆಂದು ಹೇಳಿದ್ದಕ್ಕೆ ನಾನು ಅಲ್ಲಿಗೆ ತೆರಳಿ ಎರಡು ಗಂಟೆಗಳ ಕಾಲ ಕುಳಿತು ಬಂದೆ. ಆಗ ಅಲ್ಲಿ ಕುಳಿತಿದ್ದಾಗ ಕುವೆಂಪು ರಚಿತವಾದ 'ಸಾಯುತಿದೆ ನಿಮ್ಮ ನುಡಿ' ಎಂಬುದನ್ನು ಹಾಡಬೇಕೆಂದು ಹೇಳಿದರು. ಆಗ ನಾನು ಅಲ್ಲಿ ಹಾಡಿದೆ. ಈ ಸಾಹಿತ್ಯ ಸಮ್ಮೇಳನ, ಅಕಾಡೆಮಿಗಳಿಂದ ಕನ್ನಡದ ಯಾವುದೇ ಕೆಲಸ ಕೂಡ ಸರಿಯಾಗಿ ಆಗಿಲ್ಲ. ಕುವೆಂಪುರವರು 60 ವರ್ಷದ ಹಿಂದೆಯೇ ಹೇಳಿದ್ದರು. 'ನಿಮ್ಮ ನುಡಿ ಸಾಯುತಿದೆ, ರಾಜ ನುಡಿಯೊಂದೊಂದು, ರಾಷ್ಟ್ರ ನುಡಿಯೆಂದೊಂದು, ದೇವನುಡಿಯೆಂದೊಂದು ಹತ್ತಿ ಜಗ್ಗಿ ನಿಟಿನಿಟಿಲು ನಿಟಿಲೆಂದು ಮುದಿ ಮೂಳೆ ಮುರಿಯುತಿದೆ. ಕನ್ನಡಮ್ಮನ ಬೆನ್ನು ಬಾಗುತಿದೆ' ಎಂದು ಹಾಡಿದೆ. ಆ ಸಮಯದಲ್ಲಿ ಮಂತ್ರಿಗಳೂ ಸಹ ಅಲ್ಲಿದ್ದರು. ಅವರು ಸಮ್ಮೇಳನವನ್ನು ಬಹಳ ಒಳ್ಳೆಯ ರೀತಿಯಲ್ಲಿ ನಡೆಸುವುದಕ್ಕೆ ಪ್ರಯತ್ನಿಸುತ್ತಿದ್ದರು. ಆದರೆ, ಈ ರೀತಿ 'ಕೆಳಗಿಳಿಯಿರಿ' ಎಂದು ಅನಾವಶ್ಯಕವಾಗಿ ನಿರೂಪಿಸಿದ್ದು ಕೂಡ ಬಹಳ ತಪ್ಪು. ಆ ಬಗ್ಗೆ ಸರಿಯಾದ ಚಿಂತನೆ ನಡೆಸಬೇಕೆಂದು ಹೇಳುತ್ತಿದ್ದೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಿಸಿದಂತೆ ನಾನು ಮಾತನಾಡುತ್ತೇನೆ. ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ನಮ್ಮ ಆಪ್ತ ಮಿತ್ರರು. ಅವರು ಕನ್ನಡದ ಪರವಾದ ಚಳುವಳಿಯಲ್ಲಿ ಅಪಾರವಾಗಿ ಹೋರಾಟ ಮಾಡಿ ನಮ್ಮ ಜೊತೆ ಅನೇಕ ಸಲ ಜೈಲಿಗೂ ಸಹ ಬಂದಿರುವಂಥವರು. ಅವರು ಬದಲಾವಣೆಯಾಗುತ್ತಿದ್ದಾರೇನೋ ಎಂದು ನನ್ನ ಮನಸ್ಸಿಗೆ ನೋವಾಗುತ್ತಿದೆ. ಅವರು ಬದಲಾವಣೆಯಾಗಬಾರದು. ಏಕೆಂದರೆ, ಈ ಶಾಸನ ಸಭೆಯ ಸದಸ್ಯರು ಮಡಿವಂತರು ಎಂದು ಅವರನ್ನು ಯಾರೂ ಕೂಡ ಮುಟ್ಟದಿರತಕ್ಕಂಥ ವಸ್ತುಗಳೇನಲ್ಲ.

ಅವರಿಗೆ ಅವರದೇ ಆದಂಥ ವ್ಯಕ್ತಿತ್ವವಿರುತ್ತದೆ. ಚುನಾವಣೆಯಲ್ಲಿ ಗೆದ್ದು ಈ ಸಭೆಗೆ ಬರಬೇಕಾದರೆ ಈ ರಾಜ್ಯಕ್ಕೆ, ದೇಶಕ್ಕೆ ಏನೂ ಕೆಲಸ ಮಾಡದೆ ಬರತಕ್ಕವರಲ್ಲ, ಆದರೆ ಕನ್ನಡ ಸಾಹಿತ್ಯ ಸಮ್ಮೇಳನ, ಸಮಾರಂಭ ನಡೆಯುವಾಗ ಆ ಜಿಲ್ಲೆಯ ಶಾಸಕರು ಅಲ್ಲಿಗೆ ಹೋದಾಗ ಅವರಿಗೆ ಮಾನ್ಯತೆ, ಗೌರವವನ್ನು ಕೊಟ್ಟು ಕರೆಯಬೇಕಾದುದು ಕರ್ತವ್ಯ. ಅದೇನು ಯಾವುದೋ ಮಠದ ಅಥವಾ ಮಡಿವಂತರ ಸಂಸ್ಥೆಯ ಸಭೆಯೇನಲ್ಲ. ಆ ರೀತಿ ಆಗಬಾರದು. ಕನ್ನಡ ಸಾಹಿತ್ಯ ಸಮ್ಮೇಳನ ಇಡೀ ನಾಡಿನ ನಾಲ್ಕು ಕೋಟಿ ಜನ ಪ್ರತಿನಿಧಿಸತಕ್ಕ ಸಮ್ಮೇಳನವಾಗಬೇಕು. ನಾನಂತು

ಇವತ್ತಿನವರೆಗೂ ಯಾವ ಸಮ್ಮೇಳನಕ್ಕೂ ಹೋಗಿಲ್ಲ. ಕಾರಣವೇನೆಂದರೆ, ಅವರ ಮಡಿವಂತಿಕೆತನವನ್ನು ವಿರೋಧಿಸಿ ನಾನಿದ್ದೇನೆ. ಅವರದ್ದೇ ಆದಂಥ ನಾಲ್ಕು ಚೌಕಟ್ಟಿನಲ್ಲಿ ಅದು ಇರಬೇಕು, ಇನ್ನು ಮಿಕ್ಕವರು ಯಾರು ಆಗಬಾರದೆಂದು ಅವರಿಗೆ ಇದೆ. ನಾನು ಬಹಳ ನೋವಿನಲ್ಲಿ ಹೇಳುತ್ತಿದ್ದೇನೆ. ಹಿಂದಿನ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರು ಆವತ್ತಿನ ದಿನ ಹಣವನ್ನು, ದೇಣಿಗೆಯನ್ನು ಕೇಳುವುದಕ್ಕೆ ಎಷ್ಟು ಸಾರಿ ಸಮ್ಮೇಳನದ ಅಧ್ಯಕ್ಷರು ಬಂದಿದ್ದಾರೆ, ಕೇಳಿದ್ದಾರೆ, ಆವತ್ತು ಅವರನ್ನು ಕೂರಿಸಿ ಹಾರ ತುರಾಯಿಯನ್ನು ಹಾಕಿ ಮೆರವಣಿಗೆ ಮಾಡತಕ್ಕದ್ದು. ಇವತ್ತು ನೀವು ಇದ್ದೀರಿ, ನಾಳೆ ನೀವು ಇರುವುದಿಲ್ಲ, ನೀವು ಸಂಸ್ಕೃತಿ ಇಲಾಖೆಯನ್ನು ಬಿಟ್ಟು ಬೇರೆ ಇಲಾಖೆಗೆ ಹೋದರೆ ನಿಮಗೆ ಆಹ್ವಾನವನ್ನು ಕೊಡತಕ್ಕಂಥ ಸೌಜನ್ಯ ಅವರಲ್ಲಿ ಇಲ್ಲ. ಈ ಪರಿಸ್ಥಿತಿಯಲ್ಲಿ ಹೇಳುವುದೇನೆಂದರೆ, ಮಾನ್ಯ ಹಲಗೇಗೌಡರು ಮತ್ತು ಶಿವರಾಮೇಗೌಡರು ಇದನ್ನು ಪ್ರಸ್ತಾಪ ಮಾಡಲೇ ಬಾರದಾಗಿತ್ತು ಎಂದು ನನ್ನ ಪ್ರಶ್ನೆ. ಏಕೆಂದರೆ ಅವರನ್ನು ಅತ್ತು ಕರೆದು ಒಂದು ಕುರ್ಚಿಯನ್ನು ನಮಗೆ ಹಾಕಿ ಸ್ವಾಮಿ ಎಂದು ಕೇಳಿಕೊಂಡು ಏಕೆ ಹೋಗಬೇಕು? ನಾನಂತೂ ಅವರಿಗಿಂತ ದೊಡ್ಡ ಮನುಷ್ಯನೆಂದು ಹೇಳುವವನು, 35 ವರ್ಷ ಹೋರಾಟ ಮಾಡಿದ್ದೇನೆ, ಸಾವಿರಾರೂ ಬಾರಿ ಜೈಲಿಗೆ ಹೋಗಿದ್ದೇನೆ. ನಾನು ಎಂದೂ ಹೋದವನಲ್ಲ, ನನ್ನದೇ ಆದಂಥ ವ್ಯಕ್ತಿತ್ವವನ್ನು ಇಟ್ಟುಕೊಂಡಿದ್ದೇನೆ. ನನ್ನ ಉಸಿರು ಇರುವವರೆಗೂ ನನಗೆ ತಕ್ಕಂಥ ವ್ಯವಸ್ಥೆಗಳು ಇಲ್ಲವೆಂದರೆ ನಾನು ಯಾವ ಸಮಾರಂಭಕ್ಕೂ ಹೋಗತಕ್ಕವನಲ್ಲ. ನನ್ನದೇ ಆದಂಥ ದುಡಿಮೆಯಲ್ಲಿ ದುಡಿದಿದ್ದೇನೆ, ನಾನು ಈ ರಾಜ್ಯದಲ್ಲಿ ಕೆಲಸ ಮಾಡಿದ್ದೇನೆ, ಹೋರಾಟ ಮಾಡಿದ್ದೇನೆ, ಆದರೆ ನನಗೇ ಅನ್ನಿಸಿದೆ ಕೆಲವು ವ್ಯಕ್ತಿತ್ವವಿರುವುದರಿಂದ ಯಾರೋ ಕರೆದ ತಕ್ಷಣ ಹೋಗಿ ಕುಳಿತುಕೊಳ್ಳತಕ್ಕ ಸ್ವಭಾವ. ನನ್ನ ಜನ್ಮದಲ್ಲೂ ಬಂದಿಲ್ಲ. ಆದ್ದರಿಂದ ಇವತ್ತಿನವರೆಗೆ ನಾನು ಯಾವ ಸಮ್ಮೇಳನಗಳಿಗೂ ಹೋಗಿಲ್ಲ. ಸಮ್ಮೇಳನ ನಡೆದ ದಿವಸ ನಾನು ಇಲ್ಲದ್ದೆ, ಅದು ತಮಗೆ ಗೊತ್ತು. ಇಲ್ಲಿ ಸಮ್ಮೇಳನ ನಡೆಯುತ್ತಿದೆ. ನಮ್ಮ ಮುಖ್ಯಮಂತ್ರಿಗಳು ಅಲ್ಲಿ ಕನ್ನಡದ ಬಗ್ಗೆ ಘೋಷಣೆ ಮಾಡುತ್ತಿದ್ದಾರೆ. ಆದರೆ ಈ ರಾಜ್ಯದಲ್ಲಿ ಕನ್ನಡದ ಬಗ್ಗೆ ಏನೂ ನಡೆದಿಲ್ಲ ಎನ್ನುವ ಬಗ್ಗೆ ತಮ್ಮ ಎದುರಿಗೆ, ತಮ್ಮ ಮುಂದೆ, ಕರ್ನಾಟಕ ಕನ್ನಡ ಸರ್ಕಾರ, ಕನ್ನಡ ಸರ್ಕಾರದ ಆಡಳಿತ ಭಾಷೆ ಬಗ್ಗೆ ಎಷ್ಟು ಬೇಜವಾಬ್ದಾರಿ ಇದೆ ಎನ್ನುವ ಬಗ್ಗೆ ಅಂದು ಒತ್ತಾಯ ಮಾಡಿದ್ದೆ. ಇದು ಬಹಳ ನೋವು, ಇನ್ನು ಮುಂದೆ ಯವುದೇ ಸಮ್ಮೇಳನ ನಡೆಯುವಾಗ ಶಾಸಕರೆಂದರೆ ತೀರಾ ಕೆಲಸಕ್ಕೆ ಬಾರದವರು ಎನ್ನುವ ಭಾವನೆ ಇರಬಾರದೆಂದು ಈ ಸಂದರ್ಭದಲ್ಲಿ ತಮಗೆ ಹೇಳುತ್ತೇನೆ. ಇನ್ನು ಮುಂದೆ ಹೋಗಿ ಹೇಳುವುದಾದರೆ, ಆ ಕ್ಷೇತ್ರದಲ್ಲಿ ಯಾರು ಶಾಸಕರು ಇರುತ್ತಾರೆ, ಅವರು ಯಾವುದೇ ಪಕ್ಷದವರಿರಬಹುದು, ಅವರೇ ಸರ್ವಸ್ವ, ಅವರು ಕಾಂಗ್ರೆಸ್ ಪಕ್ಷದವರಿರಬಹುದು ಬೇರೆ ಪಕ್ಷದವರಿರಬಹುದು. ಆದ್ದರಿಂದ ಕನ್ನಡ ಸಂಸ್ಕೃತಿಯ ಸಚಿವರು, ಶಾಸಕರಿಗೆ ಆಗಿರುವ ಈ ನೋವನ್ನು ಸರಿಯಾದ ರೀತಿಯಲ್ಲಿ ಸರಿಪಡಿಸಲು ನಿಮಗೆ ಸಲಹೆ ಮಾಡುತ್ತೇನೆಯೇ ಹೊರತು, ಬೇರೆ ಯಾವುದೇ ಉದ್ದೇಶದಿಂದಲ್ಲ. ಧ್ವನಿವರ್ಧಕದಲ್ಲಿ ಹೇಳುವಾಗ ಭಾಷೆ ಬದಲಾವಣೆಯಾಯಿತು ಎನ್ನತಕ್ಕಂಥ ಬೇರೆ ರಾಜಕೀಯವಾದ ಉತ್ತರವನ್ನು ಬೇಕಾದರೆ ಮಾಡೋಣ. ಆದರೆ ಈ ಸಂದರ್ಭದಲ್ಲಿ ತಮ್ಮ ಉತ್ತರ ಸ್ಪಷ್ಟವಾಗಿರಬೇಕು. ಆ ಸಮ್ಮೇಳನದಲ್ಲಿ ನಡೆದಿರುವ ಘಟನೆಯ ಬಗ್ಗೆ ನೇರವಾಗಿ ಹೇಳಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಕೇಳುತ್ತೇನೆ.

ಶ್ರೀ ಎ. ನಾಗರಾಜು (ಮಾಲೂರು): ಸನ್ಮಾನ್ಯ ಅಧ್ಯಕ್ಷರೆ, ಏನು ಹಿರಿಯ ಸದಸ್ಯರಾದಂಥ ಜೀವರಾಜ್ ಆಳ್ವರವರು ಮತ್ತು ವಾಟಾಳ್ ನಾಗರಾಜ್‌ರವರು ಮತ್ತು ಅನೇಕ ಸದಸ್ಯರು ಇಲ್ಲಿ ಶಾಸಕರ ಮತ್ತು ಸಾಹಿತ್ಯದ ಸಮ್ಮೇಳನದಲ್ಲಿ ಆದಂಥ

ನಾನೂ ಕೂಡ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ತಾಲ್ಲೂಕಾದ ಶಿವಾರಪಟ್ಟಣದಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನವಾಯಿತು. ಸಾಹಿತಿಗಳು ಬಹುಶಃ ಮರೆತಂತಿದೆ; ಸಾಹಿತ್ಯ ಬೆಳೆದು ಬಂದಿರುವುದೇ ರಾಜಕಾರಣದಲ್ಲಿ. ರಾಜರ ಆಶ್ರಯದಲ್ಲಿ ಹಿಂದಿನಿಂದಲೂ ಸಾಹಿತ್ಯ ಬೆಳೆದು ಬಂದಿದೆ. ಪ್ರಮುಖ ವಾರಪತ್ರಿಕೆಯಾದ ತರಂಗ ವಾರ ಪತ್ರಿಕೆ ಏನಿದೆ ಅದರ ಸಂಪಾದಕರಾದ ಸಂತೋಷ ಕುಮಾರ್ ಗುಲ್ವಾಡಿಯವರು ರಾಜಕಾರಣದ ಬಗ್ಗೆ ಎಷ್ಟು ಕೀಳಾಗಿ ಮಾತನಾಡಿದರೆಂದರೆ ನಾನು ಆ ಸಭೆಯಲ್ಲಿ ಇರಲು ಸಾಧ್ಯವಾಗಲಿಲ್ಲ; ನಾನು ಅದನ್ನು ಪ್ರತಿಭಟನೆ ಮಾಡಿದೆ, ನನಗೆ ಆ ಸ್ಟೇಜ್‌ನಲ್ಲಿ ಇರಲೂ ಆಗಲಿಲ್ಲ. ಇಂಥಹ ಒಂದು ಪ್ರವೃತ್ತಿ ಅನೇಕ ಸಾಹಿತಿಗಳಲ್ಲಿದೆ. ಬಹುಶಃ ಇದು ಕೇವಲ ಶಾಸಕರ ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟಿರತಕ್ಕದಲ್ಲ, ರಾಜಕಾರಣಕ್ಕೂ ಮತ್ತು ಸಾಹಿತ್ಯಕ್ಕೂ ಸಂಬಂಧಪಟ್ಟಂತಹ ಒಂದು ಜಿಜ್ಞಾಸೆ ನಮ್ಮ ಕರ್ನಾಟಕ ರಾಜ್ಯದಲ್ಲಿದೆ. ಆದ್ದರಿಂದ ಇದರ ಬಗ್ಗೆ ಅಮೂಲಾಗ್ರವಾದಂಥ ಚರ್ಚೆಯನ್ನು ಇಲ್ಲಿ ನಡೆಸಿ ಇದಕ್ಕೆ ಕಡಿವಾಣವನ್ನು ಹಾಕಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ: ಅವರು ಇಷ್ಟೊಂದು ಮಾತನಾಡಿದರಲ್ಲಾ, ಅವರಿಗೆ ಏನಾದರೂ ಹೇಳಿ.

(ಗೊಂದಲ)

ಅಧ್ಯಕ್ಷರು: ಅವರು ಹೇಳಿದರಲ್ಲಾ, ಇಲ್ಲ ಎಂದು ಹೇಳಿ. ಅವರು ಉತ್ತರ ಹೇಳಿದ್ದನ್ನು ನೀವು ಕೇಳಲಿಲ್ಲವೇ? ಉತ್ತರದ ಕಡೆ ಸ್ವಲ್ಪ ಲಕ್ಷ್ಯ ಕೊಡಿ.

ಶ್ರೀ ಹೆಚ್. ವಿಶ್ವನಾಥ್: ಮಾನ್ಯ ಅಧ್ಯಕ್ಷರೇ, ಹಿಂದಿನ ಸಂಸ್ಕೃತಿ ಸಚಿವರಾದ ಡಾ|| ಜೀವರಾಜ ಆಳ್ವ ಅವರು ಮತ್ತು ಶ್ರೀ ವಾಟಾಳ್ ನಾಗರಾಜ್ ಅವರು ಸೂಕ್ಷ್ಮವಾದಂತಹ ವಿಚಾರಗಳನ್ನು ಹೇಳಿದ್ದಾರೆ. ನಿಜ, ಇವತ್ತು ರಾಜಕಾರಣಿಗಳು, ರಾಜಕೀಯವೆಂದರೆ ಸಾಹಿತಿಗಳಲ್ಲೂ ಕೂಡ ಒಂದು ಅಸ್ಪೃಶ್ಯತಾ ಮನೋಭಾವವಿದೆ. ಅದು ಯಾರೇ ಆದರೂ ಕೂಡ ಖಂಡಿಸುವಂತಹ ವಿಚಾರ ಹೌದು. ಈಗ ಡಾ. ಜೀವರಾಜಆಳ್ವ ಅವರು ಹೇಳಿದ ಹಾಗೆ ಯಾರು ಅಧಿಕಾರದಲ್ಲಿ ಇರುತ್ತಾರೆ ಅವರನ್ನು ಓಲೈಸುವಂಥಾದ್ದು ಸಹಜ. ಅದು ನಡೆಯುತ್ತದೆ. ಆದರೆ ಯಾರು ರಾಜಕೀಯದಲ್ಲಿ ಇದ್ದುಕೊಂಡು ಈ ನಾಡುನುಡಿಗೆ ಹೆಚ್ಚಿಕೆ ಶ್ರಮಿಸಿರುತ್ತಾರೆ, ಅವರನ್ನು ಗೌರವಿಸುವಂಥಾದ್ದನ್ನು ಕೂಡ ನಮ್ಮ ಪ್ರತಿನಿಧಿ ಸಭೆಯಾದ ಕನ್ನಡ ಸಾಹಿತ್ಯ ಪರಿಷತ್ತು ಮಾಡಬೇಕು. ಅದು ಅದರ ಕರ್ತವ್ಯ ಕೂಡ ಹೌದು ಎನ್ನತಕ್ಕಂಥದ್ದನ್ನು ಹಿರಿಯ ಸದಸ್ಯರು ಜ್ಞಾಪಕ ಮಾಡಿಕೊಟ್ಟಿದ್ದಾರೆ. ಅವರು ಇಲ್ಲಿ ಏನು ಸಲಹೆ ಕೊಟ್ಟಿದ್ದಾರೆ. ಅದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಮತ್ತು ಈ ಪ್ರಾಥಮಿಕ ಸಂಸ್ಥೆಯನ್ನು ತಿದ್ದುವಲ್ಲಿ ನಾವು ತಮ್ಮೆಲ್ಲರ ಸಹಕಾರ ತೆಗೆದುಕೊಂಡು ಮಾಡುತ್ತೇವೆ ಎನ್ನುವಂಥ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

(1) ಚಾಮರಾಜನಗರ ಭೂ ಸ್ವಾಧೀನ ಕಛೇರಿ ಜಪ್ತಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಚಾಮರಾಜನಗರದ ಭೂ ಸ್ವಾಧೀನ ಕಛೇರಿ ಜಪ್ತಿಯಾಗಿದೆ. ಕಾರಣವೇನು ಎಂದರೆ ನ್ಯಾಯಾಲಯದಿಂದ ಜಪ್ತಿಯಾಗಿ ಅಲ್ಲಿದ್ದ ಕುರ್ಚಿ, ಬೆಂಚುಗಳನ್ನು ಎತ್ತುಕೊಂಡು ಹೋಗಿದ್ದಾರೆ. ಚಾಮರಾಜನಗರ, ನಂಜನಗೂಡು, ಎಳಂದೂರು, ಕೊಳ್ಳೆಗಾಲ, ಗುಂಡ್ಲುಪೇಟೆ, ಈ ಪ್ರದೇಶಗಳಲ್ಲಿ ಕಬಿನಿ

ಇವತ್ತಿನವರೆಗೂ ರೈತರಿಗೆ ಕೊಡಬೇಕಾದಂತಹ ಪರಿಹಾರ ಇದುವರೆಗೂ ಕೊಟ್ಟಿಲ್ಲ. ಒಟ್ಟು ಎರಡೂವರೆ ಕೋಟಿ ರೂ. ಇದೆ. ಜಪ್ತಿಯಾಗಿರತಕ್ಕದ್ದು ಎರಡನೆಯ ಬಾರಿ. ಮಾನ್ಯ ಮುಖ್ಯಮಂತ್ರಿಗಳು ಹೋದ ಕಡೆಗಳಲೆಲ್ಲಾ ನಮ್ಮ ಸರ್ಕಾರದ ಆರ್ಥಿಕ ಪರಿಸ್ಥಿತಿ ಭದ್ರವಾಗಿದೆ, ನಾವೆಲ್ಲಾ ಚೆನ್ನಾಗಿದ್ದೇವೆ. ನಮಗೆ ಹಣಕಾಸಿನ ತೊಂದರೆ ಏನು ಇಲ್ಲ ಎಂದು ಹೇಳುತ್ತಿದ್ದಾರೆ. ಇಲ್ಲಿ ಜಪ್ತಿಯಾಗಿರತಕ್ಕದ್ದು ಖಾಸಗಿಯವರ ಮನೆಯಲ್ಲ; ಅಥವಾ ಕಾರ್ಖಾನೆಯಲ್ಲ. ಇಲ್ಲಿ ಜಪ್ತಿಯಾಗಿರುವುದು ಸರ್ಕಾರದ ಭೂ ಸ್ವಾಧೀನ ಅಧಿಕಾರಿಗಳ ಕಛೇರಿ. ಇಷ್ಟು ಆದರೂ ಸಹ ಸರ್ಕಾರ ಒಂದಲ್ಲ ನೂರಾರು ಬಾರಿ ನಾವು ಹೇಳಿಕೆಯನ್ನು ಕೊಟ್ಟು ಒತ್ತಾಯ ಮಾಡಿದರೂ ಆ ರೈತರ ಹಣವನ್ನು ಕೊಡುವಲ್ಲಿ ಸರ್ಕಾರ ಮುಂದಾಗಿಲ್ಲ. ಆದುದರಿಂದ ನೀರಾವರಿ ಇಲಾಖೆಯ ಮಂತ್ರಿಗಳಾದ ಮಾನ್ಯ ಉಪ ಮುಖ್ಯಮಂತ್ರಿಗಳನ್ನು ನಾನು ತಮ್ಮ ಮೂಲಕ ಅತ್ಯಂತ ಕಳಕಳಿಯ ಪ್ರಾರ್ಥನೆ ಮಾಡುತ್ತಿದ್ದೇನೆ. ಎರಡೂವರೆ ಕೋಟಿ ರೂಪಾಯಿಗಳು ಅಲ್ಲಿ ಕಬಿನಿ ಯೋಜನೆಗಾಗಿ ಭೂಮಿಯನ್ನು ವಶಪಡಿಸಿಕೊಂಡ ರೈತರಿಗೆ ಪರಿಹಾರ ಕೊಡಬೇಕಾಗಿದೆ. ಇಲ್ಲಿ ಜಪ್ತಿಯಾಗಿರುವುದು 2ನೇ ಬಾರಿ, ಅಲ್ಲಿರುವಂತಹ ಅಧಿಕಾರಿಗಳು ಜಪ್ತಿಯಿಂದ ತಪ್ಪಿಸಿಕೊಂಡು ಭಯಭೀತಿಯಿಂದ ಹೊರಗೆ ಹೋಗಬೇಕಾದಂಥ ಪರಿಸ್ಥಿತಿಯಾಗಿದೆ. ಕುರ್ಚಿ, ಬೆಂಚುಗಳನ್ನು ಹೊತ್ತುಕೊಂಡು ಹೋಗಿದ್ದಾರೆ. ಆದುದರಿಂದ ಮಾನ್ಯ ಉಪಮುಖ್ಯಮಂತ್ರಿಯವರಲ್ಲಿ ನಮ್ಮ ಕಳಕಳಿಯ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇವೆ. ನೀವು ಏನು ಕ್ರಮ ತೆಗದುಕೊಳ್ಳುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಸರ್ಕಾರದ ಇಲಾಖೆ ಜಪ್ತಿಯಾಗಿರತಕ್ಕದ್ದು ಎಂದರೆ ನಿಜವಾಗಿ ನಾಚಿಕೆ ಪಡುವಂಥಾದ್ದು. ಸರ್ಕಾರದಲ್ಲಿ ಹಣ ಇದೆಯೇ ಇಲ್ಲವೇ ಎಂಬುದರ ಬಗ್ಗೆ ಉತ್ತರವನ್ನು ಕೊಡಬೇಕು. ಕಂದಾಯ ಸಚಿವರು ಮತ್ತು ನೀರಾವರಿ ಸಚಿವರು ಇದ್ದಾರೆ. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ನಾನು ಕಳಕಳಿಯ ಮನವಿಯನ್ನು ಮಾಡುತ್ತೇನೆ.

ಶ್ರೀ ಎಂ. ಮಹದೇವು : ಮಾನ್ಯ ಅಧ್ಯಕ್ಷರೇ, ನಂಜನಗೂಡಿನಲ್ಲಿ....

MR. SPEAKER : I don't allow....,

(ಗೊಂದಲ)

ಶ್ರೀ ಎಂ. ಮಹದೇವು : ಮಾನ್ಯ ಅಧ್ಯಕ್ಷರೆ, ಅಸಿಸ್ಟೆಂಟ್ ಕಮೀಷನ್ ಆಫೀಸ್ ಜಪ್ತಿಯಾಗಿದೆ. ಅಲ್ಲಿ ಲ್ಯಾಂಡ್ ಅಕ್ವೈರ್ ಮಾಡಿಕೊಂಡು ಸುಮಾರು ಹತ್ತಾರು ಲಕ್ಷ ರೂಪಾಯಿಗಳು ಹಾಗೆ....

ಅಧಕ್ಷರು : ಈ ರೀತಿಯಾದರೆ ಎಲ್ಲಾರೂ ಕೇಳುತ್ತಾ ಹೋಗುತ್ತಾರೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ, ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಒಂದು ಆಫೀಸ್ ಜಪ್ತಿಯಾಗಿದೆ ಎಂದು ನನ್ನ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ಅಂಕಿಅಂಶಗಳನ್ನು, ಮಾಹಿತಿಗಳನ್ನು ಪಡೆದು ಒಂದು ಹೇಳಿಕೆಯನ್ನು ನಾನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಯಾವತ್ತು ಕೊಡುತ್ತೀರಿ ?

ಶ್ರೀ ಎಸ್.ಎಂ. ಕೃಷ್ಣ: ನಾಳೆ ಕೊಡುತ್ತೇನೆ.

(2) ತುಮಕೂರಿನಲ್ಲಿ ಹಾಲು ಉತ್ಪಾದನೆ ಮಾಡಿರತಕ್ಕ ರೈತರಿಗೆ ಹಣ ಕೊಡದೆ ಇರುವುದು

+ ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಕಳೆದ ಕೆಲವು ದಿವಸದ ಹಿಂದೆ ತುಮಕೂರಿನಲ್ಲಿ ರೈತರಿಗೆ ಹಾಲು ಉತ್ಪಾದನೆ ಮಾಡಿರತಕ್ಕಂತಹವರ ಹಣ ಕೊಡದೇ ಇರುವುದರ ಬಗ್ಗೆ ನಾವು ತಮ್ಮ ಗಮನಕ್ಕೆ ತಂದಾಗ ಸರ್ಕಾರ ಏನೋ ಒಂದು ವ್ಯವಸ್ಥೆ ಮಾಡಿತು. ಆದಾದನಂತರ ಮಂಡ್ಯ ಜಿಲ್ಲೆಯಲ್ಲಿ ಅದೇ ಪರಿಸ್ಥಿತಿ ಉದ್ಭವವಾಗಿತ್ತು. ಆಗಲೂ ಸಹ ಅದಕ್ಕೆ ಅವಕಾಶ ಕೊಟ್ಟಿರಿ, ಅದೂ ಒಂದೊಂದೇ ಎಲ್ಲಾ ವ್ಯವಸ್ಥೆ

ನಡೆದಿದೆ. ಈ ಎರಡು ಸಂದರ್ಭದಲ್ಲಿ ನಾನು ಬಹಳ ತೀವ್ರವಾದಂತಹ ರೀತಿಯಲ್ಲಿ ನನ್ನ ಭಾವನೆಗಳನ್ನು ವ್ಯಕ್ತಪಡಿಸಿದ್ದೆ. ತುಮಕೂರು ಆಯಿತು, ಮಂಡ್ಯ ಆಯಿತು. ಈಗ ಆ ಸರದಿ ಕೋಲಾರಕ್ಕೆ ಬಂದಿದೆ. ಇದು ಬಹಳ ದುರದೃಷ್ಟಕರ. ಇವತ್ತು ನಮ್ಮ ಜಿಲ್ಲೆಯಲ್ಲಿ ಇಡೀ ನಾಡಿನಲ್ಲಿ ಒಂದನೇ ಸ್ಥಾನದಲ್ಲಿ ಹಾಲಿನ ಉತ್ಪಾದನೆಯಾಗುತ್ತಿದೆ. ಪ್ರತಿ ದಿವಸ 3 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಇಡೀ ಭಾರತ ದೇಶದಲ್ಲಿ ಪ್ರಮುಖ ಹಾಲು ಉತ್ಪಾದನೆ ಆಗುತ್ತಿರತಕ್ಕಂತಹ ಜಿಲ್ಲೆ ಎಂದರೆ ನಮ್ಮ ಕೋಲಾರ ಜಿಲ್ಲೆ. ಈಗ ನಮ್ಮಲ್ಲಿ ದುರಾದೃಷ್ಟ ಏನಾಗಿದೆಯೆಂದರೆ, ನಾವು ಉತ್ಪಾದನೆ ಮಾಡುತ್ತಿದ್ದೇವೆ, ಆದರೆ ಆ ಹಾಲು ಪೂರ್ತಿಯಾಗಿ ಬಳಕೆಯಾಗತಕ್ಕಂಥ ಅವಕಾಶ ನಮ್ಮಲ್ಲಿ ಇಲ್ಲ. ಸುಮಾರು 3 ಲಕ್ಷ ಲೀಟರ್ ಹಾಲಿನಲ್ಲಿ 40-50 ಸಾವಿರ ಲೀಟರ್ ಹಾಲು ಮಾತ್ರ ಅಲ್ಲಿ ಖರ್ಚಾಗುವುದಕ್ಕೆ ಅವಕಾಶ ಇದೆ. ಉಳಿದಂತಹ ಹಾಲನ್ನು ಬೇರೆ ಕಡೆಗೆ ಕಳುಹಿಸಬೇಕಾಗಿತ್ತು. ಮೊದಲಿನಿಂದಲೂ ಸಹ ನಮ್ಮ ಜಿಲ್ಲೆಯಿಂದಲೇ ಬೆಂಗಳೂರಿಗೆ ಹೆಚ್ಚಾಗಿ ಹಾಲು ಸರಬರಾಜು ಆಗುತ್ತಿರತಕ್ಕಂಥಾದ್ದು. ಬೆಂಗಳೂರಿಗೆ ನಾವೇ ಹೆಚ್ಚಿಗೆ ಹಾಲು ಕೊಡತಕ್ಕಂಥವರು. ಅಂತಹವರ ಪರಿಸ್ಥಿತಿ ಇವತ್ತಿನ ದಿವಸ ಏನಾಗಿದೆ ಎಂದರೆ ಇವತ್ತು ನಮ್ಮ ಹಾಲನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿಯಲ್ಲಿ ಇಲ್ಲಿ ಒಂದು ಒಕ್ಕೂಟ ಇದೆ. ಬೆಂಗಳೂರು ಜಿಲ್ಲೆಗೆ ಸಂಬಂಧಪಟ್ಟಿರತಕ್ಕಂತಹ ಒಕ್ಕೂಟ ಇದೆ. ಇಲ್ಲಿ ಬೆಂಗಳೂರು ಡೈರಿ ಸಹ ಇದೆ. ಮಾತ್ರ ಡೈರಿ ಎಂದು ಹೇಳುವಂತಹ ಡೈರಿ ಯಲಹಂಕದಲ್ಲಿ ಇದೆ. ಇವರು ಯಾರೂ ಕೂಡ ನಮ್ಮ ಹಾಲನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಮೊದಲು ನಮಗೆ ಒಂದು ಲೀಟರ್‌ಗೆ 6 ರೂಪಾಯಿಯಂತೆ ಹಣ ಕೊಡುತ್ತಿದ್ದರು. ಈಗ ಅದನ್ನು ಕಡಿಮೆ ಮಾಡಿ 5-20ಕ್ಕೆ ಇಳಿಸಿದ್ದಾರೆ. ಅದರಲ್ಲಿ ಬೇರೆ ಒಂದು ದಿವಸ ಮಿಲ್ಕ್ ಹಾಲಿಡೇ ಎಂದು ಮಾಡಿದ ಮೇಲೆ ಅದು 5-20 ರೂಪಾಯಿಯಿಂದ 4 ರೂಪಾಯಿಗೆ ಹಾಲಿನ ಬೆಲೆ ಇಳಿದಿದೆ. ಬೆಂಗಳೂರು ಒಕ್ಕೂಟದವರು ಈ ಇಂಟರ್ ಡೈರಿ ದರವನ್ನು ಮತ್ತೆ 30 ಪೈಸೆಯಷ್ಟು ಕಡಿಮೆ ಮಾಡಬೇಕು ಎನ್ನುವಂತಹ ವ್ಯವಸ್ಥೆ ನಡೆದಿದೆ. ಹೀಗಾದರೆ 5 ರೂಪಾಯಿ 20 ಪೈಸೆ ಕೊಡುತ್ತಿರತಕ್ಕಂತಹ ಹಾಲು ಮತ್ತೆ 30 ಪೈಸೆ ಕಡಿಮೆ ಆದರೆ ಅದು 4 ರೂ. 90 ಪೈಸೆಗೆ ಹೋಗುತ್ತದೆ. ಇದರಿಂದ ನಾವು ಹಾಲು ಹೆಚ್ಚಿಗೆ ಉತ್ಪಾದನೆ ಮಾಡಿದ್ದೇ ಒಂದು ದೊಡ್ಡ ತಪ್ಪು ಹಾಗೂ ಅಪರಾಧ ಎನ್ನುವಂತಹ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿ ಉದ್ಭವವಾಗಿದೆ. ಆದುದರಿಂದ ಇವತ್ತು ಮಂತ್ರಿಗಳು ಇದ್ದಾರೆ. ಸ್ವಾಮಿ, ಅಲ್ಲಿ ದುರ್ವ್ಯವಹಾರ ಸಾಕಷ್ಟು ನಡೆಯುತ್ತಿದೆ. ಮದರ್ ಡೈರಿಯಲ್ಲಿ ಹೇಳುವವರು, ಕೇಳುವವರು ಯಾರೂ ಇಲ್ಲ.

ಬೆಂಗಳೂರು ಡೈರಿಯಲ್ಲೂ ಕೂಡ ಅದೇ ತರಹ ಆಗುತ್ತಿದೆ. ಅವರು ಮನಸೋ ಇಚ್ಛೆಯಾಗಿ ಏನು ಬೇಕಾದರೂ ಮಾಡುತ್ತಿದ್ದಾರೆ. ಈ ಕೆಎಂಎಫ್ ಅಧ್ಯಕ್ಷರಾಗಿರುವವರೊಬ್ಬರಿದ್ದಾರೆ. ಅವರು ಸರ್ವಾಧಿಕಾರಿಯಾಗಿ ಇವತ್ತಿನ ದಿವಸ ವರ್ತನೆ ಮಾಡುತ್ತಿದ್ದಾರೆ. ಅವರಿಗೆ ಬೆಂಗಳೂರು ಜಿಲ್ಲೆಯಲ್ಲಿ ಇರತಕ್ಕಂತಹ ಹಾಲು ಉತ್ಪಾದಕರ, ಚಿಂತನೆ ಅಷ್ಟೇ ಅವರಿಗೆ ಗೊತ್ತಿರುವುದು. ಇಡೀ ರಾಜ್ಯದ ಒಂದು ಸಂಸ್ಥೆಯ ಅಧ್ಯಕ್ಷರಾಗಿರುವವರು ರಾಜ್ಯದ ರೈತರ ಹಿತವನ್ನು ಕಾಪಾಡಬೇಕು ಎನ್ನುವಂತಹ ಚಿಂತನೆ ಇಲ್ಲ. ಹಾಗಾಗಿ ಈ ಸರ್ವಾಧಿಕಾರಿ ಮನಾ ಧೋರಣೆಯಿಂದ ನಾವು ಹಾಳಾಗುತ್ತಿದ್ದೇವೆ. ನಮಗೆ ಇವತ್ತಿನ ದಿವಸ 2ರೂ. 20 ಪೈಸೆಯಷ್ಟು ಹಾಲಿನ ಬೆಲೆ ಕಡಿಮೆಯಾಗುತ್ತದೆ. ಆದುದರಿಂದ ನಮಗೆ ಮಾರ್ಕೆಟ್ ಇಲ್ಲ. ಬೆಂಗಳೂರಿನಲ್ಲಿ ಕೂಡ ಇವತ್ತು ನಾವು ಸರಬರಾಜು ಮಾಡುವುದಕ್ಕೆ ತಯಾರಾಗಿದ್ದೇವೆ. ಇವತ್ತು ನಮಗೆ ಕೊಡಲಿ, ಬೆಂಗಳೂರಿನ ಹಾಲಿನ ಸರಬರಾಜು ವ್ಯವಸ್ಥೆಯನ್ನು, ನಮ್ಮ ಜಿಲ್ಲೆಯ ಒಕ್ಕೂಟಕ್ಕೆ ಕೊಡಲಿ . ಈ ಸರ್ಕಾರದವರು ಏನು ನಡೆಸುತ್ತಿದ್ದಾರೆ. ಅಥವಾ ಕೆಎಂಎಫ್‌ನವರು ಏನು ನಡೆಸುತ್ತಿದ್ದಾರೆ

ಅದಕ್ಕಿಂತ ಉತ್ತಮವಾದಂತಹ ರೀತಿಯಲ್ಲಿ ನಾವು ಹಾಲಿನ ಸರಬರಾಜು ಮಾಡುವುದಕ್ಕೆ ಇವತ್ತಿನ ದಿವಸ ತಯಾರಿದ್ದೇವೆ. ಇವತ್ತು ನಮ್ಮನ್ನು ಹಾಳು ಮಾಡತಕ್ಕಂತಹ ಪರಿಸ್ಥಿತಿ ಉದ್ಭವವಾಗಿದೆ. ಇವತ್ತು ಸರ್ಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಮದರ್ ಡೈರಿ ಎನ್ನುವಂತಾದ್ದು ಇದೆ. ಅದು ಯಾರ ಸ್ವತ್ತೂ ಅಲ್ಲ. ಅದನ್ನು ನಮ್ಮ ಕೋಲಾರ ಜಿಲ್ಲೆಯ ಒಕ್ಕೂಟಕ್ಕೆ ವಹಿಸಿಕೊಡತಕ್ಕಂತಹ ಒಂದು ವ್ಯವಸ್ಥೆಯನ್ನು ತಕ್ಷಣವೇ ಜಾರಿ ಮಾಡಿಕೊಡಬೇಕು. ಇವತ್ತು ಏನು ಇಂಟರ್ ಡೈರಿ ರೇಟ್ನಲ್ಲಿ 30 ಪೈಸೆ ಕಡತ ಮಾಡತಕ್ಕಂತಹ ಯೋಜನೆ ಏನು ಇದೆ ಅದನ್ನು ಬಿಡಬೇಕು. ನಮ್ಮಲ್ಲಿ ಉತ್ಪಾದನೆ ಆಗುತ್ತಿರತಕ್ಕಂತಹ ಹಾಲನ್ನು ಪೂರ್ತಿಯಾಗಿ ಇಲ್ಲಿ ಸರಬರಾಜು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

1.15 ಪಿ.ಎಂ.

ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : 1966ರಲ್ಲಿ ಇದು ಪ್ರಾರಂಭವಾದಾಗ ನಾವು ಡೈರೆಕ್ಟರ್ ಆಗಿ ಮೊದಲನೆ ಸಾರಿ ಚುನಾಯಿತರಾಗಿದ್ದೆವು. ಬೆಂಗಳೂರು ಮತ್ತು ಕೋಲಾರ ಜಿಲ್ಲೆ ಮಾತ್ರ ಎರಡು ಒಂದು ಯೂನಿಯನ್ ಆಗಿತ್ತು. ಇವತ್ತಿನ ದಿವಸ ನನಗೆ ತಿಳಿದ ಹಾಗೆ ನಮ್ಮ ಕೋಲಾರ ಜಿಲ್ಲೆಯ ಯೂನಿಯನ್ ಒಕ್ಕೂಟದ ಡೈರೆಕ್ಟರುಗಳು ನಮ್ಮ ಕೆ.ಎಂ.ಎಫ್ ಆಫೀಸಿನ ಮುಂದುಗಡೆ ಸತ್ಯಾಗ್ರಹ ಇವತ್ತಿನ ದಿವಸ ಬೆಳಿಗ್ಗಿನಿಂದ ಪ್ರಾರಂಭ ಮಾಡಿದ್ದಾರೆ. ಕಾರಣ 5-60 ಪೈಸೆಯಿಂದ 4-90ಕ್ಕೆ ಇಳಿಸಬೇಕೆಂದರೆ ಯಾವ ರೈತರು ಒಪ್ಪಲಾರರು. ಕೆ.ಎಂ.ಎಫ್‌ನವರು ಅವರಿಗೆ ಇಷ್ಟ ಬಂದ ಹಾಗೆ ಒಂದೊಂದು ದಿವಸ ರಜ ಘೋಷಣೆ ಮಾಡಬೇಕೆಂದು ಹೇಳುತ್ತಾರೆ. ಒಂದು ದಿವಸ, ನಿಮಗೆ ಇಷ್ಟೇ ಕೊಡುವುದು ಹೇಳುತ್ತಾರೆ. ಒಂದೊಂದು ದಿವಸ ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಇದನ್ನು ಮಾನ್ಯ ಮಂತ್ರಿಗಳು ಸಾಧ್ಯವಾದಷ್ಟು ಕಡಿಮೆ ಮಾಡಬೇಕು. ಕೋಲಾರ ಪಕ್ಕದಲ್ಲಿ ಮದರ್ ಡೈರಿಯ ಕಟ್ಟಡ ರೆಡಿ ಆಗಿದೆ. ಬೆಣ್ಣೆ ತಯಾರಿಕೆ, ಅಥವಾ ಹಾಲಿನ ಪೌಡರ್ತಯಾರಿಸುವ ಘಟಕವನ್ನು ಆದಷ್ಟು ಬೇಗ ಪ್ರಾರಂಭ ಮಾಡಿ ನಮ್ಮ ರಕ್ಷಣೆಗೆ ಬರದೇ ಇದ್ದರೆ ಖಂಡಿತ ರೈತರು ಬೀದಿಪಾಲಾಗುತ್ತಾರೆ. ಹೆಚ್ಚು ಹೆಚ್ಚಾಗಿ ಹಾಲನ್ನು ಉತ್ಪತ್ತಿ ಮಾಡಬೇಕೆಂದು ಹೇಳಿದಂತಹ ಮಂತ್ರಿಗಳು ಹಾಲನ್ನು ಉತ್ಪತ್ತಿ ಮಾಡಬೇಕೆಂದು ಹೇಳಿದಂತಹ ಮಂತ್ರಿಗಳು ಹಾಲನ್ನು ಕೊಂಡುಕೊಳ್ಳುವುದಿಲ್ಲ ಎಂದು ಹೇಳಿದರೆ ತೀರ ಅನ್ಯಾಯ. ಇದನ್ನು ಬಂದೋಬಸ್ತು ಮಾಡಿ ಮಾನ್ಯ ಮಂತ್ರಿಗಳು ಹೇಳಿಕೆಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಬೈರೇಗೌಡರು ಏನು ಹೇಳಿದರೂ ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ಖಾತೆ ಸಚಿವರು) : ಮಾನ್ಯ ಭೈರೇಗೌಡರು ಹಾಗೂ ಮಾನ್ಯ ಶ್ರೀ ಎಂ.ವಿ. ವೆಂಕಟಪ್ಪನವರು ಶೂನ್ಯ ವೇಳೆಯಲ್ಲಿ ಎತ್ತಿರತಕ್ಕಂಥ ವಿಚಾರದ ಬಗ್ಗೆ ನಾನು ಹೆಚ್ಚು ವಿವರಣೆಯನ್ನು ಕೊಡುವುದಕ್ಕೆ ಹೋಗುವುದಿಲ್ಲ, ನಮ್ಮ ಕೋಲಾರ ಜಿಲ್ಲೆಯ ಹಾಲು ಉತ್ಪಾದಕರ ಸಹಕಾರಸಂಘದ ಅಧ್ಯಕ್ಷರುಗಳು ಸತ್ಯಾಗ್ರಹ ಮಾಡುತ್ತಿದ್ದಾರೆಂದು ನನಗೆ ಈಗ ಐದು ನಿಮಿಷದ ಹಿಂದೆ ಸುದ್ದಿ ಗೊತ್ತಾಯಿತು. ಮೇಲ್ಮನವಿಯಲ್ಲಿಯೂ ಸಹ ಈ ವಿಚಾರ ಪ್ರಸ್ತಾಪಕ್ಕೆ ಬಂದಿದೆ ಎಂದು ಗೊತ್ತಾಯಿತು. ಆದರೆ ಇದಕ್ಕೆ ಮುಂಚಿತವಾಗಿ ಇದರ ಬಗ್ಗೆ ಮೂರು ಸಭೆಗಳನ್ನು ನನ್ನ ಕೊಠಡಿಯಲ್ಲಿಯೇ, ಲೋಕಸಭಾ ಸದಸ್ಯರುಗಳು ಮತ್ತು ಶಾಸನ ಸಭಾ ಸದಸ್ಯರುಗಳು. ಎರಡೂ ಒಕ್ಕೂಟದ ನಿರ್ದೇಶಕರುಗಳು, ಮತ್ತು ಅದಕ್ಕೆ ಸಂಬಂಧಪಟ್ಟಂಥ ಅಧಿಕಾರಿಗಳ ಸಭೆಯನ್ನು ನಾನು ಮಾಡಿ, ಕೋಲಾರದಿಂದ ಸುಮಾರು 1.70 ಲಕ್ಷ ಲೀಟರ್ ಮದರ್ ಡೈರಿಗೆ 45 ಸಾವಿರ ಲೀಟರ್ ಬೆಂಗಳೂರು ಡೈರಿಗೆ ಮಾರಾಟ ಮಾಡುವುದಕ್ಕೆ ಅಂದರೆ 2.25 ಲಕ್ಷ ಲೀಟರ್ ಹಾಲನು ಕೋಲಾರದಿಂದ

ತೆಗೆದುಕೊಂಡು ಈಗಾಗಲೇ ಮಾರಾಟ ಮಾಡುತ್ತಿದ್ದಾರೆ. 2.25 ಲಕ್ಷದ ಲೀಟರ್ ಅಷ್ಟು ಸುಲಭವಾದಂತಹ ಮಾರಾಟ ಅಲ್ಲವೆಂದು ನಾವು ಭಾವಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಒಂದು ನಿಜಾಂಶ ಏನೆಂದರೆ, ಇಡೀ ರಾಜ್ಯದಲ್ಲಿ ಯಾವ ಜಿಲ್ಲೆಯಲ್ಲಿಯೂ ಇಲ್ಲದಂತೆ ಕೋಲಾರ ಜಿಲ್ಲೆಯಲ್ಲಿ 3 ಲಕ್ಷಕ್ಕಿಂತ ಮಿಗಿಲಾಗಿ ಹಾಲು ಉತ್ಪಾದನೆಯಾಗುತ್ತದೆ. ಆದರೆ ಮಾರುಕಟ್ಟೆಯನ್ನು ಬಹಳಷ್ಟು ಜಾಸ್ತಿ ಮಾಡಿದ್ದೇವೆ. ಆದರೂ ಸಹ ಅವರು ಏನು ಕೇಳುತ್ತಿದ್ದಾರೆಂದರೆ ಬೆಂಗಳೂರು ನಗರವನ್ನು ನಾಲ್ಕು ಭಾಗ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ, ಅವರು ಹೇಳುವುದು ನಿಜ, ಒಂದು ಭಾಗ ತುಮಕೂರಿಗೆ, ಒಂದು ಭಾಗ ಮಂಡ್ಯಕ್ಕೆ, ಒಂದು ಭಾಗ ಬೆಂಗಳೂರಿಗೆ ಕೊಟ್ಟಿದ್ದೇವೆ. ಒಂದು ಭಾಗ ಮದರ್ ಡೈರಿಗೆ ಕೊಟ್ಟಿದ್ದೇವೆ. ಆ ಮದರ್ ಡೈರಿಯ ಭಾಗದಲ್ಲಿಯೇ ಇವತ್ತಿನ ದಿವಸ ಕೋಲಾರ ಜಿಲ್ಲೆಯವರು 1.80 ಲಕ್ಷ ಲೀಟರ್ ಹಾಲನ್ನು ಮಾರುತ್ತಿದ್ದಾರೆ. ಅದೇ ರೀತಿ 45 ಸಾವಿರ ಲೀಟರ್ ಅನ್ನು ಕೋಲಾರದಿಂದ ಬೆಂಗಳೂರು ಡೈರಿಯವರು ಮಾರಾಟ ಮಾಡುತ್ತಿದ್ದಾರೆ. ಒಂದನ್ನು ಮದರ್ ಡೈರಿಗೆ ವಹಿಸಿ ಎಂದು ಹೇಳುತ್ತಾರೆ. ಮದರ್ ಡೈರಿ ಕೆ.ಎಂ.ಎಫ್‌ನ ಪ್ರಾಪರ್ಟಿ ಅಲ್ಲ, ಮದರ್ ಡೈರಿ ನ್ಯಾಷನಲ್ ಡೈರಿ ಡೆಲವಪ್ಮೆಂಟಿನದು; ಅದು ನ್ಯಾಷನಲ್ ಡೈರಿ ಡೆವಲಪ್ಮೆಂಟ್ ಆಗಿರುವುದರಿಂದ ಅದನ್ನು ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದು ಎನ್.ಡಿ.ಡಿ.ಬಿ. ಪ್ರಾಪರ್ಟಿ. ಮದರ್ ಡೈರಿಯ ಉದ್ದೇಶ ಏನೆಂದರೆ ರಾಜ್ಯದಲ್ಲಿ ಎಲ್ಲಾದರೂ ಹೆಚ್ಚು ಹಾಲು ಉತ್ಪಾದನೆಯಾದರೆ ಎಲ್ಲಾ ಒಕ್ಕೂಟಗಳಿಂದ ತೆಗೆದುಕೊಂಡು ಬೆಂಗಳೂರಿನಲ್ಲಿ ಮಾರುವುದಕ್ಕೋಸ್ಕರ ಇರತಕ್ಕಂಥದ್ದು. ಬೆಂಗಳೂರು ನಗರ ಯಾವುದೇ ಒಂದು ಡೈರಿಗೆ ಸಂಬಂಧಪಟ್ಟಂಥ ವಿಚಾರ ಒಕ್ಕೂಟಕ್ಕೆ ಬರುವುದಿಲ್ಲ, ಎರಡನೆಯದು ಮದರ್ ಡೈರಿಯನ್ನು ಯಾವುದೇ ಒಕ್ಕೂಟಕ್ಕೆ ನಾವು ಕೊಡುವುದಕ್ಕೆ ಆಗುವುದಿಲ್ಲ. ಮೂರನೆಯದು ಇಂಟರ್ ಡೈರಿ ರೇಟ್ಸ್ ಏನಿದೆ ಅದರ ಬಗ್ಗೆ ಮತ್ತೊಂದು ಸಾರಿ ಒಂದು ಸಭೆಯನ್ನು ಕರೆದು, ಮಾನ್ಯ ವೆಂಕಟಪ್ಪನವರಿಗೆ, ಮಾನ್ಯ ಬೈರೇಗೌಡರಿಗೆ ಸಭೆಯನ್ನು ಕರೆದು ಇದನ್ನು ಇತ್ಯರ್ಥ್ಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇವತ್ತು ಸಂಜೆ ಅಥವಾ ನಾಳೆ ಮತ್ತೊಂದು ಸಾರಿ ಸಭೆಯನ್ನು ಕರೆಯುತ್ತೇವೆ. ಈ ಎರಡರಲ್ಲಿ ಚುನಾಯಿತ ಸದಸ್ಯರುಗಳು, ಚುನಾಯಿತ ಅಧ್ಯಕ್ಷರುಗಳು, ಚುನಾಯಿತ ಆಡಳಿತ ಮಂಡಳಿಗಳು ಇದ್ದಾವೆ. ಅವೆಲ್ಲವೂ ಸಹಕಾರ ಕ್ಷೇತ್ರದಲ್ಲಿ ನಡೆಯುವುದರಿಂದ ಕೋಲಾರಕ್ಕೆ ಅನ್ಯಾಯವಾಗದ ರೀತಿಯಲ್ಲಿ ಕೋಲಾರದ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಮಾಡುತ್ತೇವೆ. ಕೋಲಾರದಲ್ಲಿ ನಾವು 13 ಕೋಟಿ ರೂಪಾಯಿ ಖರ್ಚು ಮಾಡಿ ಡೈರಿ ಕಟ್ಟುತ್ತಿದ್ದೇವೆ. ಇನ್ನೆರಡು ತಿಂಗಳಲ್ಲಿ ಕೋಲಾರ ಡೈರಿಯನ್ನು ಪ್ರಾರಂಭಮಾಡುತ್ತೇವೆ. 13 ಕೋಟಿ ಖರ್ಚು ಮಾಡಿದ್ದೇವೆ. ಸ್ಪುಪ್ಲಾಂಟ್ ಹಾಕಿದ್ದೇವೆ ಪ್ಯಾಚೀಪ್‌ರೈಸೇಷನ್. ಇನ್ನೊಂದು ಎರಡು ತಿಂಗಳಲ್ಲಿ ಕೋಲಾರ ಡೈರಿ ಪ್ಯಾಕಿಂಗ್ ಸಿಸ್ಟಂ ಬರುತ್ತದೆ. ಬಂದ ಮೇಲೆ ಈ ಸಮಸ್ಯೆ ಬಗೆಹರಿಯುತ್ತದೆ. ನಾಳೆ ಬೆಳಿಗ್ಗೆ ನಾನು ಎರಡೂ ಒಕ್ಕೂಟದವರನ್ನು, ಮತ್ತು ಸಂಬಂಧಪಟ್ಟಂಥ ಶಾಸಕರನ್ನು ಕರೆಯಿಸಿ; ಅವರಿಬ್ಬರಿಗೂ ಇತ್ಯರ್ಥ ಮಾಡುತ್ತೇವೆ. ಕೋಲಾರದ ರೈತರಿಗೆ ಅನ್ಯಾಯ ಆಗದ ಹಾಗೆ ನೋಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅಲ್ಲಿ ಸತ್ಯಾಗ್ರಹ ಕುಳಿತಿರತಕ್ಕಂಥ ಚುನಾಯಿತ ಸದಸ್ಯರು ಎದ್ದೇಳಬೇಕು. ನಾಳೆ ಅವರನ್ನು ಕರೆಯಿಸಿ ನಾನು ಮಾತುಕತೆ ನಡೆಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಸದನವನ್ನು ನಿರ್ಮಾಣ ಮಾಡಿದಂಥ ಸನ್ಮಾನ್ಯ ಕೆಂಗಲ್ ಹನುಮಂತಯ್ಯನವರ ಭಾವಚಿತ್ರವನ್ನು ಅನಾವರಣ ಯಾವತ್ತು ಮಾಡಬೇಕೆಂದಿದ್ದೀರಿ? ಏಕೆಂದರೆ ಈಗಾಗಲೇ ಇದರ ಬಗ್ಗೆ ವ್ಯವಸ್ಥೆ ನಡೆಯುತ್ತಿದೆ. ಯಾವ ದಿವಸ ನಡೆಸಬೇಕೆಂದಿದ್ದೀರಿ? ಒಳ್ಳೆಯ ಒಂದು ಸುಂದರವಾದ

ಸಮಾರಂಭವನ್ನು ಏರ್ಪಡಿಸಬೇಕು. ಈ ಕೀರ್ತಿ ಹಿಂದಿನ ಮಾನ್ಯ ಅಧ್ಯಕ್ಷರು ಮತ್ತು ತಮಗೆ ಸಲ್ಲಬೇಕಾಗಿದೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : 16ನೇ ತಾರೀಖು ಬೆಳಿಗ್ಗೆ 11.00 ಗಂಟೆಗೆ, ಈ ಸಮಾರಂಭ ಏರ್ಪಡಿಸಲಾಗಿದೆ. ಅವತ್ತು ಮಾನ್ಯ ರಾಜ್ಯಪಾಲರು ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಇದರ ಜೊತೆಗೆ ನಾನು ಇನ್ನೊಂದು ಮನವಿಯನ್ನು ತಮ್ಮಲ್ಲಿ ಮಾಡಿಕೊಳ್ಳುತ್ತಿದ್ದೇನೆ. ವಿಧಾನ ಸೌಧದ ಹೊರಗಡೆ ಇರತಕ್ಕ ಪ್ರತಿಮೆ ಏನಿದೆ ಅದನ್ನು ಬದಲಾವಣೆ ಮಾಡಬೇಕು ಅವರದ್ದೇ ಬೇರೆ ಪ್ರತಿಮೆಯನ್ನು ಇಡಬೇಕೆಂದು ನಾನು ಮಾನ್ಯ ಅನಂತಕೃಷ್ಣರವರೂ, ಇನ್ನೂ ಅನೇಕ ಮಾಜಿ ಮೇಯರ್‌ಗಳು ಒಂದು ಸತ್ಯಾಗ್ರಹವನ್ನು ಮಾಡಿ, ಹೋರಾಟ ಮಾಡಿದ್ದೆವು. ಈಗಾಗಲೇ ಇನ್ನೊಂದು ಪ್ರತಿಮೆ ತಯಾರಾಗುತ್ತಿದೆ ಎಂದು ಹೇಳಿದ್ದರು. ಈಗ ಅದು ಯಾವ ಹಂತದಲ್ಲಿದೆ ಎಂಬ ಬಗ್ಗೆ ಮಾನ್ಯ ಸಂಸದೀಯ ಮಂತ್ರಿಗಳು ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

(3) ಮಂಡಲ ಪಂಚಾಯತಿ ಅಧ್ಯಕ್ಷರು ಮತ್ತು ಉಪಧ್ಯಾಕ್ಷರ ಚುನಾವಣೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಂಡಲಿ ಪಂಚಾಯತಿಯ ಪ್ರಧಾನರು ಮತ್ತು ಉಪ ಪ್ರಧಾನರ ಚುನಾವಣೆಗೆ ಸಂಬಂಧಪಟ್ಟಂತೆ ನಾನು ಕಳುಹಿಸಿದಂಥ ಪ್ರಶ್ನೆ ಏನಾಯಿತು? ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸರ್ಕಾರದವರು ಆದೇಶವನ್ನು ಕಳುಹಿಸಿ ನೀವು ಯಾವ ರೀತಿ ಮಾಡಬೇಕು, ಏನು ಮಾಡಬೇಕೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ತಿಳಿಸಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಬಂದ ಮೇಲೆ ಇದರ ಬಗ್ಗೆ ಪ್ರಸ್ತಾಪ ಮಾಡಲು ನನಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ, ಸಕ್ಕರೆ ಮಂತ್ರಿಗಳಾಗಿರತಕ್ಕ ಮಾನ್ಯ ಲಮಾಣಿಯವರು....

ಶ್ರೀ ವಾಟಾಳ್ ನಾಗರಾಜ್ : ಮಂಡಲ ಪಂಚಾಯತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ನೇಮಕಾತಿಯನ್ನು ಜಿಲ್ಲಾಧಿಕಾರಿಯವರಿಗೆ ಕೊಡಬಾರದು. ಅವರಿಗೆ ಅಧಿಕಾರ ಕೊಟ್ಟರೆ ಅವರು ಸರ್ವಾಧಿಕಾರಿಗಳಾಗುತ್ತಾರೆ. ಶಾಸಕರಿಗೆ ಅಧಿಕಾರ ಕೊಡಲಿ, ಇಲ್ಲದಿದ್ದರೆ ಸರ್ಕಾರವೇ ಒಂದು ನಿರ್ದಿಷ್ಟವಾದ ನೀತಿಯನ್ನು ತರಲಿ. ಮೊದಲು ಏನು ತೀರ್ಮಾನವಿತ್ತು ಅದರ ಬಗ್ಗೆ ಬೇಕಾದರೆ ಚರ್ಚೆ ಮಾಡಲಿ, ಅದು ಬಿಟ್ಟು ಜಿಲ್ಲಾಧಿಕಾರಿಗಳೇ ತೀರ್ಮಾನ ಮಾಡಲೆಂದು ಸರ್ಕಾರ ಆದೇಶ ಹೊರಡಿಸಿದರೆ ಕೆಲವು ಜಿಲ್ಲಾಧಿಕಾರಿಗಳು ಸ್ವೇಚ್ಛೆಯಾಗಿ ಏನು ಬೇಕಾದರೂ ಮಾಡುತ್ತಾರೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಯಾವುದಾದರೊಂದು ನೀತಿ ನಿರೂಪಣೆ ಇವತ್ತು ಮಾಡಬೇಕಾಗಿದೆ. ಜಿಲ್ಲಾಧಿಕಾರಿಗಳ ಕೈಯಲ್ಲಿ ಮಂಡಲ ಪಂಚಾಯತಿ ಅಧ್ಯಕ್ಷರ ನೇಮಕಾತಿ, ಗ್ರಾಮ ಪಂಚಾಯತಿ ಪ್ರಧಾನ ನೇಮಕಾತಿಗೆ ಅಧಿಕಾರ ಕೊಡಬೇಡಿ.

ಶ್ರೀ ಸಿ. ಬೈರೇಗೌಡ : ಈಗಾಗಲೇ ಸರ್ಕಾರದವರು ಹೊರಡಿಸಿರುವ ಆಜ್ಞೆಯ ಪ್ರಕಾರ ನಾವೆಲ್ಲಾ ಹೋಗಿ ಜಿಲ್ಲಾಧಿಕಾರಿಯವರಿಗೆ ಸಾಷ್ಟಾಂಗ ನಮಸ್ಕಾರ ಮಾಡಬೇಕಾಗುತ್ತದೆ. ಹೀಗೆ ಮಾಡಿ ಹಾಗೆ ಮಾಡಿ ಎಂದು ನಾವು ಕೇಳಿಕೊಳ್ಳಬೇಕಾಗುತ್ತದೆ. ಆದ್ದರಿಂದ ನಿರ್ದಿಷ್ಟವಾದ ಸೂತ್ರಗಳನ್ನು ರೂಪಿಸಿ ಅದರ ಪ್ರಕಾರ ಮಾಡಲಿ. ಅದನ್ನು ಬಿಟ್ಟು ಜಿಲ್ಲಾಧಿಕಾರಿಗಳೇ ಮಾಡಲಿ ಎಂದು ಅಧಿಕಾರ ಕೊಟ್ಟರೆ ಏನು ಅರ್ಥ? ಈಗಿರತಕ್ಕ ಪಂಚಾಯಿತಿ ಆಕ್ಷನ್ ಬಗ್ಗೆ ನಮ್ಮ ಆರೋಪ ಮೊದಲಿನಿಂದಲೂ ಏನೆಂದರೆ, ಜನರ ಕೈಗೆ ಅಧಿಕಾರವನ್ನು ಸರ್ಕಾರದವರು ಕೊಟ್ಟಿಲ್ಲ, ಅಧಿಕಾರಿಗಳ ಕೈಗೆ ಅಧಿಕಾರವನ್ನು ಕೊಟ್ಟಿದ್ದಾರೆ ಎನ್ನುವುದು. ಅದನ್ನೂ ಇವತ್ತು ಮಾನ್ಯ ಮಂತ್ರಿಗಳು ಸಾಬೀತು ಮಾಡಿದ್ದಾರೆ. ಚುನಾಯಿತ ಪ್ರತಿನಿಧಿಗಳಿಗೆ ಅಧಿಕಾರ ಕೊಡದೆ ಜಿಲ್ಲಾಧಿಕಾರಿಗೆ ಅಧಿಕಾರ

ಕೊಡತಕ್ಕ ವ್ಯವಸ್ಥೆ ಈ ಆಕ್ಟಲ್ಲೂ ಇದೆ, ಸರ್ಕಾರ ನೀಡಿರತಕ್ಕ ನಿರ್ದೇಶನದಲ್ಲೂ ಇದೆ. ಇದು ಆಗಬಾರದು. ಚುನಾಯಿತ ಪ್ರತಿನಿಧಿಗಳಿಗೆ ಅವರು ಮನ್ನಣೆ ಕೊಡುವಂತಿರಬೇಕು.

(ಗೊಂದಲ)

ಅಧ್ಯಕ್ಷರು : ಇವತ್ತು ಮಧ್ಯಾಹ್ನ ಅರ್ಧಗಂಟೆ ಕಾಲದ ಚರ್ಚೆಗೆ ತೆಗೆದುಕೊಳ್ಳುತ್ತೇವಲ್ಲಾ.

ಶ್ರೀ ಸಿ. ಭೈರೇಗೌಡ : ಅದು ಬೇರೆ. ಇವತ್ತು ಬಿಲ್ ಇರತಕ್ಕದ್ದು ಬೇರೆ. ಆದರೆ ಈಗ ಕೇವಲ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಗೆ ಸಂಬಂಧಪಟ್ಟಂತೆ ಮಾತ್ರ ನಾವು ಇಲ್ಲಿ ಪ್ರಸ್ತಾಪ ಮಾಡಿರತಕ್ಕದ್ದು. ಆದ್ದರಿಂದ ಈಗಿರತಕ್ಕ ವ್ಯವಸ್ಥೆಯ ಬದಲಾವಣೆ ಆಗಬೇಕು. ಅಧಿಕಾರಿಗಳ ಕೈಗೆ ಅಧಿಕಾರವನ್ನು ಕೊಡತಕ್ಕ ವ್ಯವಸ್ಥೆ ಸರಿಯಲ್ಲ. ಇದು ಆಗಬಾರದೆಂದು ತಮ್ಮ ಮೂಲಕ ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರ ಕೊಡುವುದಕ್ಕಿಂತ ಮುಂಚೆ ಈಗಾಗಲೇ ಸರ್ಕಾರದ ಆದೇಶ ಹೊರಟು ಹೋಗಿದೆ. ಈ ಸದನದ ಗಮನಕ್ಕೇ ಬರದೆ ಜಿಲ್ಲಾಧಿಕಾರಿಗಳಿಗೆ ಆದೇಶ ಹೋಗಿದೆ. ಮಾನ್ಯ ಮಂತ್ರಿಗಳ ಬಗ್ಗೆ ನಮಗೆ ಗೌರವ ಇದೆ. ಆದರೆ ಅವರು ಈಗಾಗಲೇ ಕಳುಹಿಸಿದ್ದಾರೆಯೇ ಇಲ್ಲವೇ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಪ್ರಜಾಪ್ರಭುತ್ವದಲ್ಲಿ ಸ್ವಾಭಾವಿಕವಾಗಿ ಜನರ ಕೈಗೆ ಆಡಳಿತವನ್ನು ಕೊಡಬೇಕು. ಸರ್ವಾಧಿಕಾರಿಗಳ ಕೈಗೆ ಆಡಳಿತವನ್ನು ಕೊಟ್ಟರೆ ಚುನಾವಣೆ ನಡೆದಿದ್ದೇ ವ್ಯರ್ಥವಾದಂತಾಗುತ್ತದೆ. ಇವತ್ತು ಜಿಲ್ಲಾಧಿಕಾರಿಗಳ ಕೈಗೆ ಏನು ಅಧಿಕಾರವನ್ನು ಕೊಟ್ಟಿದ್ದೀರಿ, ದಯವಿಟ್ಟು ಅದನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳುತ್ತೇನೆ.

ಅಧ್ಯಕ್ಷರು : ಇದನ್ನೇ ಪ್ರಸ್ತಾಪ ಮಾಡೋಣವೇ? ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಂತೆ ಮೊನ್ನೆ ಒಂದು ಪ್ರಶ್ನೆ ಬಂದಿತ್ತು. ಆಗ ಇದಕ್ಕೆ ಅರ್ಧಗಂಟೆಕಾಲದ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದಿರಿ. ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಈ ಸದನದ ಅನೇಕ ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡುವಂಥಾದ್ದು ಇದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳೂ ಇರತಕ್ಕ ಸಂದರ್ಭದಲ್ಲಿ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿ ಸರ್ಕಾರದಿಂದ ನಿರ್ದಿಷ್ಟವಾದ ಉತ್ತರವನ್ನು ಪಡೆದುಕೊಳ್ಳುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿ ಕೊಳ್ಳುತ್ತೇನೆ. ಇದು ಮೊದಲನೆಯದು. ಇನ್ನು ಎರಡನೆಯದಾಗಿ ಹೇಳುವುದಾದರೆ, ಬಹಳ ಮುಖ್ಯವಾದುದು ಎಂದರೆ, ಮೂರು ದಿನಗಳ ಹಿಂದೆ ಮಾನ್ಯ ಸಕ್ಕರೆ ಖಾತೆ ಮಂತ್ರಿಗಳಾಗಿರತಕ್ಕ ಮಾನ್ಯ ಲಮಾಣಿಯವರು.......

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳೂ ಬರಲಿ. ಸಂಬಂಧಪಟ್ಟ ಮಂತ್ರಿಗಳು ಆದೇಶವನ್ನು ಕಳುಹಿಸಿದ್ದಾರೋ, ಇಲ್ಲವೋ ಎಂಬುದು ಆಗ ಗೊತ್ತಾಗಬೇಕು.

+ ಶ್ರೀ ಎಂ. ವೈ ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಅರ್ಧ ಗಂಟೆ ಚರ್ಚೆ ಇದರ ಬಗ್ಗೆ ಆಗಬೇಕೆಂದು ತಾವು ಹೇಳಿದ್ದೀರಿ. ಅದಕ್ಕಾಗಿ ನಾನು ಸುಮ್ಮನೆ ಕುಳಿತಿದ್ದೆ. ಒಂದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಜಿಲ್ಲಾಧಿಕಾರಿಗಳಿಗೆ ನಾವು ಅಧಿಕಾರವನ್ನು ಕೊಟ್ಟಿಲ್ಲ. ಅವರು ಏನು ಬೇಕಾದರೂ ಮಾಡಬಹುದು ಎಂದು ಹೇಳಿಲ್ಲ. ಹಿಂದೆ

ಇಲ್ಲಿ ಚರ್ಚೆ ಆದಾಗ ತಾವೇ ಹೇಳಿದ್ದೀರಿ. ಇದರ ಬಗ್ಗೆ ಯಾವ ಯಾವ ಪಂಚಾಯಿತಿಗೆ ಯಾವ ಯಾವ ಮೀಸಲಾತಿ ಅನ್ವಯವಾಗಬೇಕೆಂದು ನಮಗೇ ಬಿಡಬೇಡಿ, ತಾವು ಗೈಡ್ಲೈನ್ ಕೊಡಿ ಇಲ್ಲದಿದ್ದರೆ ಗೊಂದಲ ಆಗುತ್ತದೆಂದು ತಾವೇ ಹೇಳಿದ್ದೀರಿ. ಆದ್ದರಿಂದ ತಮ್ಮ ಸಲಹೆ ಪ್ರಕಾರ ಸ್ಪಷ್ಟವಾದ ಗೈಡ್ಲೈನ್ಸ್ ಕೊಟ್ಟಿದ್ದೇವೆ. ರೋಸ್ಟರ್ ಪ್ರಕಾರ ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಛೇರ್ಮನ್ ಮೀಸಲಾತಿಗಳು ಬಂದಿವೆ ಅದನ್ನು ಯಾವ ರೀತಿ ಪಂಚಾಯತಿಗೆ ಅನ್ವಯ ಮಾಡಬೇಕೆನ್ನುವ ಬಗ್ಗೆ ಗೈಡ್ಲೈನ್ ಕೊಟ್ಟಿದ್ದೇವೆ. ಅದು ಸ್ಪಷ್ಟವಾಗಿದೆ. ಅದರ ಪ್ರಕಾರ ಯಾವ ಪಂಚಾಯಿತಿಯಲ್ಲಿ ಯಾವ ಮೀಸಲಾತಿ ಮೆಂಬರ್ಸ್ ಸಂಖ್ಯೆ ಜಾಸ್ತಿ ಇರುತ್ತದೋ ಅಂತಹ ಕಡೆ ಆ ಛೇರ್ಮನ್‌ಶಿಪ್ ಆ ಮೀಸಲಾತಿಗೆ ಕೊಡಿ ಎಂದು ಹೇಳಿದ್ದೇವೆ. ಇಲ್ಲಿ ಡಿಸ್ಕ್ರಿಷನ್ಸ್ ಇಲ್ಲ. ಜಿಲ್ಲಾಧಿಕಾರಿಗಳಿಗೆ ಡಿಸ್ಕ್ರಿಷನ್ಸ್ ಬೇಕಾಗಿಲ್ಲ. ಡಿಸ್ಕ್ರಿಷನ್ಸ್ ಕೊಟ್ಟರೆ ಅವರಿಗೂ ತೊಂದರೆ ಆಗುತ್ತದೆ. ಸಂಪೂರ್ಣ ಡಿಸ್ಕ್ರಿಷನ್ಸ್ ತಮಗೇ ಬಿಟ್ಟರೆ ತಮಗೂ ತೊಂದರೆಯಾಗುವುದರಿಂದ ಒಂದು ಗೈಡ್ಲೈನ್ಸ್ ಕೊಡ ಎಂದು ತಾವು ಹೇಳಿದ ಮೇಲೆ ಅದನ್ನು ಕೊಟ್ಟಿದ್ದೇವೆ. ಒಂದೊಂದು ತಾಲ್ಲೂಕಿಗೆ ಏನು ಮೆಂಬರ್ಸ್ ಬಂದಿರುತ್ತಾರೆ ಅದರಲ್ಲಿ ಉದಾಹರಣೆಗೆ 4 ಎಸ್ಸಿ, 2 ಎಸ್ಟಿ, 10 ಜನ ಒಬಿಸಿ ಬಂದಿರುವಾಗ ಅಂತಹ ಪಂಚಾಯತಿಗೆ ಛೇರ್ಮನ್ ಮೀಸಲಾತಿ ಅನ್ವಯ ಆಗಬೇಕು ಎಂದು ಬಂದಾಗ ಯಾವ ಪಂಚಾಯಿತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಎಸ್ಸಿ ಮೆಂಬರ್ಸ್ ಬಂದಿರುತ್ತಾರೋ ಅಂತಹ ಕಡೆ ಕೊಡಿ. ಇದು ಡಿಸ್ಕ್ರಿಷನ್ಸ್ ಅಲ್ಲ; ಸ್ಪಷ್ಟವಾದ ಗೈಡ್ಲೈನ್ಸ್. ಅದೇ ರೀತಿ ಯಾವ ಪಂಚಾಯಿತಿಯಲ್ಲಿ ಯಾವ ಪಂಗಡದವರು ಹೆಚ್ಚು ಸಂಖ್ಯೆಯಲ್ಲಿ ಬಂದಿರುತ್ತಾರೋ ಅಂತಹ ಪಂಚಾಯಿತಿಗೆ ಛೇರ್ಮನ್ ಮೀಸಲಾತಿಯನ್ನು ಅವರಿಗೆ ಲಾಗು ಮಾಡಬೇಕೆಂದು ಇದೆ. ಇದು ಡಿಸ್ಕ್ರಿಷನ್ ಅಲ್ಲ. ಅದೇ ರೀತಿ ಒಬಿಸಿ. ಅದೇ ರೀತಿ ಮಹಿಳೆಯರಿಗೆ ಮೂರನೇ ಒಂದು ಭಾಗ ಕೊಡಬೇಕು. ಅದೂ ಕೂಡಾ ಹೆಚ್ಚಿನ ಸಂಖ್ಯೆಯಲ್ಲಿ ಅವರು ಆರಿಸಿಬಂದಿರುವ ಕಡೆ ಕೊಡಿ ಎಂದು ಹೇಳಿದ್ದೇವೆ. ಇದರಲ್ಲಿ ಒಂದು ಸಣ್ಣ ಪ್ರಶ್ನೆ ಎಂದರೆ, ಕೆಲವು ಕಡೆ ಅಷ್ಟೇ ಜನ ಸದಸ್ಯರು 4-5 ಪಂಚಾಯಿತಿಗಳಲ್ಲಿ ಬಂದಿದ್ದರೆ ಆಗ ಆ 4-5 ಪಂಚಾಯಿತಿಗಳ ಪೈಕಿ ಯಾವ ಪಂಚಾಯಿತಿಗೆ ಈ ಮೀಸಲಾತಿಯನ್ನು ಅನ್ವಯಿಸಬೇಕು ಎನ್ನುವುದು ಒಂದು ಪ್ರಶ್ನೆ ಬರುತ್ತದೆ. ಆ ಪ್ರಶ್ನೆ ಬಂದಾಗ ಆ ಪ್ರಶ್ನೆ ಮಾತ್ರ ಜಿಲ್ಲಾಧಿಕಾರಿಗಳ ಡಿಸ್ಕ್ರಿಷನ್ಗೆ ಸೀಮಿತ ಆಗಿದೆ. ಅದೂ ಮನಸ್ಸಿಗೆ ಬಂದ ಹಾಗೆ ಅಲ್ಲ. ಅಲ್ಲೂ ಕೂಡಾ ಗೈಡ್ಲೈನ್ಸ್ನಲ್ಲಿ ಹೇಳಿದ್ದೇವೆ. "ಸ್ಪೆಷಲ್" ಎಂದರೆ ಒಂದೇ ಕಡೆ 4-5 ಮೀಸಲಾತಿ ಬರಬಾರದು ಎಂದು ನೋಡಿಕೊಳ್ಳುವುದಕ್ಕೆ ಆ ಡಿಸ್ಕ್ರಿಷನ್ ಸೇರಿಸಿದ್ದೇವೆ. ಡಿಸ್ಕ್ರಿಷನ್ ಚಲಾಯಿಸುವಾಗ ವಿರೋಧಪಕ್ಷದವರ, ಶಾಸಕರ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಳ್ಳಬಾರದು ಎಂದು ನಾವು ಹೇಳಿಲ್ಲ. ಮತ್ತೆ ಅಂತಹದ್ದು ಬೇರೆ ಬೇರೆ ಅಭಿಪ್ರಾಯಗಳು ಬಂದರೆ, ಒಂದು ವೇಳೆ ಯಾರಾದರೂ ಲಾಟರಿ ಏಕೆ ಎತ್ತಬಾರದು ಎಂದು ಹೇಳಿದರೆ, ಜಿಲ್ಲಾಧಿಕಾರಿಯವರಿಗೆ ಅಲ್ಲಿರತಕ್ಕ ಎಂಎಲ್‌ಎ ಮತ್ತು ಅಪೋಸಿಷನ್ ಪಾರ್ಟಿಯವರು ಇದರ ಬಗ್ಗೆ ಲಾಟರಿ ಮಾಡಿ ಎಂದರೆ ಅದೂ ಕೂಡ ಮಾಡುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇದೆ. ಡಿಸ್ಕ್ರಿಷನ್ ಎಷ್ಟು ಕಡಿಮೆ ಮಾಡುವುದಕ್ಕೆ ಸಾಧ್ಯವೋ ಅಷ್ಟೂ ಮಾಡಿದ್ದೇವೆ. ಮತ್ತೆ ಫೆಬ್ರವರಿ 25ರಿಂದ ಮಾರ್ಚಿ 7ನೇ ತಾರೀಖಿನ ಒಳಗೆ ಛೇರ್ಮನ್ ಎಲೆಕ್ಷನ್ ನಾವು ಮಾಡಿ ಪೂರೈಸಬೇಕು. ಇದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಅದಕ್ಕೆ ಬೇಕಾದ ಗೈಡ್ಲೈನ್ಸ್ ಕೊಟ್ಟಿದ್ದೇನೆ. ಅದರ ಬಗ್ಗೆ ಭಿನ್ನಾಭಿಪ್ರಾಯ ಬರುವುದಕ್ಕೆ ಆಸ್ಪದ ಇಲ್ಲ. ಒಂದೇ ಒಂದು ಪ್ರಶ್ನೆ ಎಂದರೆ ಸರಿಸಮಾನವಾಗಿ ಎಲ್ಲಿ ಮೆಂಬರ್ಸ್ ಬಂದಿದ್ದಾರೆ ಅಲ್ಲಿ ನಾಲ್ಕೈದು ಪಂಚಾಯಿತಿಗಳ ಪೈಕಿ ಯಾವ ಪಂಚಾಯಿತಿಗೆ ಆ ರೀತಿ ಮೀಸಲಾತಿ ಮಾಡಬೇಕು ಎಂದು ಅನ್ವಯಿಸಬೇಕೆಂದು ಬಂದಾಗ ಈ ಡಿಸ್ಕ್ರಿಷನ್ ಅಧಿಕಾರವನ್ನು ಚಲಾಯಿಸುತ್ತಾರೆ. ನಿಮ್ಮನ್ನು ಕೇಳಿಯೇ ಚಲಾಯಿಸುತ್ತಾರೆ. ನೀವು ಲಾಟರಿ ಮಾಡಬೇಕು. ಹೇಳಿದರೆ ಅದನ್ನೂ ಮಾಡುತ್ತಾರೆ. ಕಾನೂನು ಪ್ರಕಾರ ಅಂತಹ ಸಂದರ್ಭದಲ್ಲಿ ಯಾರೇ ಒಬ್ಬರು ಡಿಸ್ಕ್ರಿಷನ್ ಚಲಾಯಿಸಬೇಕು. ಆ ಅಧಿಕಾರ ಚಲಾಯಿಸುತ್ತಾರೆ.

ಆದ್ದರಿಂದ ಸಂಪೂರ್ಣ ಅಧಿಕಾರ ಅವರಿಗೆ ಕೊಟ್ಟಿದ್ದೇವೆ ಎಂದು ಅಲ್ಲ. ಈ ಗೈಡ್ಲೈನ್ಸ್ ವಿಚಾರ ಹುಟ್ಟಿದ್ದೇ, ಇಲ್ಲಿ ಚರ್ಚೆ ಆದ ನಂತರ. ತಾವೆಲ್ಲರೂ ಕೇಳಿದಮೇಲೆ ಗೈಡ್ಲೈನ್ಸ್ ಕೊಟ್ಟಿದ್ದೇವೆ. ಆದಕಾರಣ ಇದರಲ್ಲಿ ನಾವು ನಮ್ಮ ಜನತೆಯ ಅಧಿಕಾರ ಮೊಟಕು ಮಾಡಿ ಅಧಿಕಾರಸ್ಥರು ಸ್ವೇಚ್ಛೆಯಿಂದ ಏನಾದರೂ ಮಾಡುವುದಕ್ಕೆ ಎಳ್ಳಷ್ಟು ಅಧಿಕಾರ ಇಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

(4) ಮುಧೋಳ್ ಮತ್ತು ಬಿಜಾಪುರದ ಕಬ್ಬು ಬೆಳೆಗಾರರಿಗೆ ಆಗುತ್ತಿರುವ ತೊಂದರೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಯಾವುದಾದರೂ ಒಂದು ಸಮಸ್ಯೆ ಬಗ್ಗೆ ವಿಚಾರ ಪ್ರಸ್ತಾಪ ಮಾಡಿದಮೇಲೆ ಮಂತ್ರಿಗಳು ಉತ್ತರ ಕೊಡುತ್ತಾರೆ. ಮಂತ್ರಿಗಳು ಉತ್ತರ ಕೊಟ್ಟಮೇಲೆ ಆಕ್ಷನ್ನಲ್ಲಿ ಅದು ಬರಬೇಕಲ್ಲವೇ? ಗುರುವಾರದ ದಿವಸ ಮುಧೋಳ್ ಮತ್ತು ಬಿಜಾಪುರದ ರೈತರಿಗೆ ಆಗಿರುವ ತೊಂದರೆ ಬಗ್ಗೆ ಪ್ರಸ್ತಾಪ ಮಾಡಿದೆ. ಅಲ್ಲಿ ಅವರು ಕಬ್ಬನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತಾ ಇಲ್ಲ, ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ಏನಾದರೂ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದಾಗ ಮಾನ್ಯ ಸಚಿವರಾದ ಲಮಾಣಿಯವರು ಒಂದು ಹೇಳಿಕೆ ಕೊಡುತ್ತೇನೆ ಎಂದು ಹೇಳಿದರು. ಇವತ್ತು ಅಲ್ಲಿರತಕ್ಕ ರೈತರು ಒತ್ತಾಯ ಮಾಡುತ್ತಿದ್ದಾರೆ. ಅವರಿಗೆ ಬಹಳ ತೊಂದರೆಯಾಗಿದೆ. ಅವರು ಹೇಳಿಕೆ ಕೊಟ್ಟಮೇಲೆ ಮತ್ತೆ ಅಲ್ಲಿ ತಡೆಹಿಡಿಯೋದು ಜಾಸ್ತಿ ಆಗಿದೆ. ದಯವಿಟ್ಟು ಇವತ್ತು ಉತ್ತರವನ್ನು ತಾವು ಕೊಡಿಸಬೇಕಾಗುತ್ತದೆ. ತಮ್ಮ ರಕ್ಷಣೆಯನ್ನು ನಾನು ಕೇಳುತ್ತಿದ್ದೇನೆ. ದಯವಿಟ್ಟು ಮಂತ್ರಿಗಳನ್ನು ಕರೆಸಿ ಸಂಜೆಯೊಳಗೆ ಉತ್ತರವನ್ನು ಕೊಡಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಸೋಮವಾರ ಉತ್ತರ ಕೊಡುತ್ತೇವೆಂದು ಹೇಳಿದ್ದರೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ, ಆವತ್ತೇ ಜಿಲ್ಲಾಧಿಕಾರಿಗಳು ಹಾಗೂ ಶುಗರ್ ಡೈರೆಕ್ಟರ್ ಜೊತೆ ಮಾತನಾಡಿ ಸಂಜೆಯೊಳಗೆ ಹೇಳಿಕೆ ಕೊಡುತ್ತೇನೆಂದು ಹೇಳಿದ್ದರು. ಈಗ 2-3 ದಿವಸಗಳೇ ಆಗಿವೆ. ಮುಧೋಳದ ಕಬ್ಬು ಬೆಳೆಗಾರರು ತೊಂದರೆ ಅನುಭವಿಸುತ್ತಿರುವುದರ ಬಗ್ಗೆ ಹೇಳುತ್ತಿದ್ದೇನೆ. ಕೇವಲ ಬೇಜವಾಬ್ದಾರಿಯಿಂದ ಹೊರಟು ಹೋದರೆ ನಾವು ಏಕೆ ವಿಚಾರ ಎತ್ತಬೇಕು? ಕೇವಲ ಪತ್ರಿಕೆಗಳಲ್ಲಿ, ದೂರದರ್ಶನದಲ್ಲಿ ಬರಬೇಕೆಂದು ಮಾಡಬೇಕೋ ಅಥವಾ ಸಮಸ್ಯೆ ಪರಿಹರಿಸಬೇಕೋ? ಎಲ್ಲದಕ್ಕೂ ಸಂಸದೀಯ ಸಚಿವರು....

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಆಕ್ಷನ್ ತೆಗೆದುಕೊಂಡಿರುವ ಬಗ್ಗೆ ಸಂಜೆಯೊಳಗೆ ಸ್ಟೇಟ್ಮೆಂಟ್ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದು ನನ್ನ ಗೌರವದ ಪ್ರಶ್ನೆ ಅಲ್ಲ. ಎಂಟೈರ್ ಸಿಸ್ಟಮ್ ಕೊಲ್ಯಾಪ್ಸ್ ಆಗುತ್ತದೆ. ನಿಮ್ಮನ್ನು ಯಾರೂ ಕೇಳುವುದಿಲ್ಲ. ಅಧಿಕಾರಿಗಳು ನಿಮ್ಮನ್ನು ಸೀರಿಯಸ್ಸಾಗಿ ತೆಗೆದುಕೊಳ್ಳುವುದಿಲ್ಲ. ಸುಮ್ಮನೆ ಹೇಳುತ್ತಾರೆ ಅಸೆಂಬ್ಲಿಯಲ್ಲಿ, ಬಿಡ್ರಿ ಎಂದು ಹೇಳುತ್ತಾರೆ. ಜಿಲ್ಲಾಧಿಕಾರಿಗಳನ್ನು ಕರೆಸಿ, ಶುಗರ್ ಡೈರೆಕ್ಟರ್ ಕರೆಸಿ ಏನು ಮಾಡುತ್ತಿದ್ದಾರೆಂದು ಕೇಳುತ್ತಿದ್ದಾರೆಂದು ಕೇಳುವ ಯೋಗ್ಯತೆ ಇಲ್ಲವೇ ಇವರಿಗೆ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಕೇಳಿದ್ದಾರೋ ಇಲ್ಲವೋ, ಅದನ್ನು ಸಂಜೆ ಒಳಗೆ ಹೇಳುತ್ತೇನೆ.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆ.

' ಗಮನ ಸೆಳೆಯುವ ಸೂಚನೆ

ಶಿವಮೊಗ್ಗ- ಭದ್ರಾವತಿ ನಗರ ಪಾಲಿಕೆಯಿಂದ ಆಕ್ಟ್ರಾಯ್ ಗ್ರಾಂಟ್ 5 ಲಕ್ಷ ರೂಪಾಯಿಗಳನ್ನು ಬಡ್ಡಿ ರೂಪದಲ್ಲಿ ವಸೂಲು ಮಾಡಿಕೊಂಡಿರುವುದರಿಂದ ಆಗಿರುವ ಅನ್ಯಾಯ

+ ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ನನ್ನ ಗಮನ ಸೆಳೆಯುವ ಸೂಚನೆಯ ವಿಷಯವೇ ಬದಲಾವಣೆ ಆಗಿದೆ. ನಾನು ಶಿವಮೊಗ್ಗದಲ್ಲಿ 3 ಕೋಟಿ ರೂಪಾಯಿ ಸಾಲ ತೆಗೆದುಕೊಂಡಿದ್ದಕ್ಕೆ ಬಡ್ಡಿ ಹಾಕಿದ್ದಾರೆ. ಆ 3 ಕೋಟಿ ರೂಪಾಯಿ ಹಣ ಬರದೇ ಬಡ್ಡಿ ಹಾಕಿದ್ದಾರೆ. ಆ ಬಡ್ಡಿಯನ್ನು ರದ್ದು ಮಾಡಬೇಕೆಂದು ಸಬ್ಜೆಕ್ಟ್ ಪಟ್ಟಿಯಲ್ಲಿ ಇದ್ದು, ಇಲ್ಲಿ 5 ಲಕ್ಷರೂಪಾಯಿ ಮುರಿದುಕೊಂಡಿದ್ದಾರಲ್ಲಾ ಅದನ್ನು ಮನ್ನಾ ಮಾಡೋ ಬಗ್ಗೆ ಗಮನ ಸೆಳೆದಿದ್ದೆ. ಆದರೆ ಇಲ್ಲಿ ಸಬ್ಜೆಕ್ಟ್ ವ್ಯತ್ಯಾಸ ಆಗಿದೆ.

ಅಧ್ಯಕ್ಷರು: ಈ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರು ಏನು ಹೇಳುತ್ತಾರೆ?

ಶ್ರೀ ಕೆ.ಎಸ್. ಈಶ್ವರಪ್ಪ: ಏನು 3 ಕೋಟಿ ರೂಪಾಯಿ ಸಾಲ ಬಿಡುಗಡೆ ಮಾಡಿದ್ದೀರಿ ಆ ಹಣ ನಮ್ಮ ಕೈಗೆ ಬಾರದೆ 50 ಲಕ್ಷ ರೂಪಾಯಿ ಬಡ್ಡಿಹಾಕಿದ್ದೀರಿ. ಈ 50 ಲಕ್ಷ ರೂಪಾಯಿ ರದ್ದು ಮಾಡುತ್ತೀರಾ ಎಂದು ಕೇಳಲು ಇಷ್ಟಪಟ್ಟಿದ್ದು. ನೀವು 50 ಲಕ್ಷದಲ್ಲಿ ನಮಗೆ ಅಕ್ಟ್ರಾಯ್ ಗ್ರಾಂಟ್ ಕೊಡಬೇಕಾಗಿತ್ತೋ ಅದನ್ನು ಮುರಿದಿದ್ದೀರಿ. ಆ ವಿಷಯ ಬಂದಿದೆ.

ಶ್ರೀ ಚೌಡರೆಡ್ಡಿ: ಇದರಲ್ಲಿ ಫೈನಾನ್ಸ್ ಡಿಪಾರ್ಟ್ಮೆಂಟ್ನವರು ಮುರಿದುಕೊಂಡಿದ್ದಾರೆ. ಇದರಲ್ಲಿ ಮೂರೇ ಮೂರು ತಿಂಗಳು ಡಿಫರೆನ್ಸ್ ಇರೋದು. ಅದನ್ನು ಪುನಃ ರೀ-ಕ್ಯಾಲ್ಕುಲೇಷನ್ ಮಾಡಿ ಅದನ್ನು ಅಡ್ಜಸ್ಟ್ ಮಾಡುತ್ತಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ: ವಿಚಾರ ಏನೆಂದರೆ, ನಮಗೆ 3 ಕೋಟಿ ರೂಪಾಯಿ ಹಣ ಬಂದಿಲ್ಲ, ಹಣ ಬರದೇ 50,52,080 ರೂಫಾಯಿ ಬಡ್ಡಿ ಹಾಕಿದ್ದೀರಿ. ಅದೇ ವಿಷಯ ಇಲ್ಲಿ ಬರಬೇಕಾಗಿತ್ತು. ಬಡ್ಡಿ ರದ್ದು ಮಾಡುವ ಬಗ್ಗೆ ಟಿಪ್ಪಣಿ ಬಂದಿಲ್ಲ. ಅಕ್ಟ್ರಾಯ್ ಗ್ರಾಂಟ್ ಏನು ಬರಬೇಕಾದ್ದು ಮುರಿದುಕೊಂಡಿದ್ದೀರಿ ಅದನ್ನು ವಾಪಸ್ಸು ಕೊಡುವ ಬಗ್ಗೆ ಉತ್ತರ ಇಇದೆ.

ಶ್ರೀ ಚೌಡರೆಡ್ಡಿ: ಇದರಲ್ಲಿ ನಾವು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಇದರಲ್ಲಿ ಹೆಚ್ಚು ಕಡಿಮೆ ಇದ್ದರೆ ನಾವು ಸರಿ ಮಾಡುತ್ತೇವೆ. ಅದರಲ್ಲಿ ಅಭ್ಯಂತರ ಇಲ್ಲ, ಏನಾಗಿದೆ ಎಂದರೆ ಸಾಲ ಮಂಜೂರು ಮಾಡುವಾಗ ಇಷ್ಟು ಬಡ್ಡಿ ಎಂದು ಆಗಿದೆ. ನಾವು ರಿಲೀಸ್ ಮಾಡಿರುವುದು ಫೈನಾನ್ಸ್ನಲ್ಲಿ ಏನಾದರೂ ಹೆಚ್ಚು ಕಡಮೆ ಇದ್ದರೆ ಅದನ್ನು ಸರಿ ಮಾಡುತ್ತೇವೆ. ಅದರಲ್ಲಿ ಏನೂ ಹೆಚ್ಚು ಕಡಿಮೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ನನಗೆ ಶಿವಮೊಗ್ಗ ಜಿಲ್ಲಾಧಿಕಾರಿಗಳ ಮುಖಾಂತರ ಒಂದು ಪತ್ರ ಬಂದಿದೆ. ಅವರಿಗೆ ನಾವು ಕೇಳಿದ್ದೀವಿ. ಈ ರೀತಿ ಮೂರು ಕೋಟಿ ರೂಪಾಯಿ ನಮ್ಮ ಕಾರ್ಪೊರೇಷನ್ನಿಗೆ ಹಣ ಬಿಡುಗಡೆಯಾಗಿಲ್ಲ. ಬಿಡುಗಡೆಯಾದದ್ದು ದಿನಾಂಕ 21.9.92ರಂದು. ಅಲ್ಲಿಂದ ಇವತ್ತಿನ ತನಕ ನಮಗೆ ದುಡ್ಡು ಬಂದಿರಲಿಲ್ಲ. ಅದಕ್ಕೋಸ್ಕರ ದುಡ್ಡು ಬರದೇನೇ 50 ಲಕ್ಷದ 52 ಸಾವಿರದ 80 ರೂಪಾಯಿ ಬಡ್ಡಿ ಹಾಕಿಬಿಟ್ಟಿದ್ದೀರಿ. ಇಷ್ಟು ಹಣಕ್ಕೆ ಅಕ್ಟ್ರಾಯ್ ಗ್ರಾಂಟ್ ನಮಗೆ ಬರಬೇಕಿತ್ತಲ್ಲಾ, ಅದರಲ್ಲಿ 5 ಲಕ್ಷ ರೂಪಾಯಿಗಳನ್ನು ನೀವು ಮುರಿದುಕೊಂಡೇ ಬಿಟ್ಟಿದ್ದೀರಿ. ಇದು ಎಷ್ಟು ವಿಚಿತ್ರವೆಂದರೆ ನಮಗೆ ದುಡ್ಡೇ ಕೊಟ್ಟಿಲ್ಲ, ಮೊದಲು ದುಡ್ಡು ಬರಬೇಕು, ಅದಕೆ ಬಡಿ ಬೆಳೆಯಬೇಕು. ಬಡ್ಡಿ ಬಿದ್ದನಂತರ ನೀವು ಅದನ್ನು ಮುರಿದುಕೊಳ್ಳಬೇಕು.

ಆದರೆ ನಮಗೆ ಕೊಡುವ ದುಡ್ಡಿನಲ್ಲೇ ಬಡ್ಡಿಯನ್ನು ಮುರಿಮಕೊಂಡಿದ್ದೀರಿ. ಅದಕ್ಕೆ ಜಿಲ್ಲಾಧಿಕಾರಿಗಳು ಉತ್ತರ ಕೊಟ್ಟಿದ್ದಾರೆ. ಸಂಬಂಧಪಟ್ಟ ಹೆಚ್.ಯು.ಡಿ. ಸೆಕ್ರೆಟರಿ ಜೊತೆ ನಾನು ದೂರವಾಣಿ ಮುಖಾಂತರ ಮಾತನಾಡಿದ್ದೇನೆ. 50,52,080 ರೂಪಾಯಿ ಏನು ಬಡ್ಡಿಯಾಗಿದೆ. ಅದನ್ನು ರದ್ದು ಮಾಡುತ್ತೇವೆ ಎಂದು ಅವರು ಒಪ್ಪಿಕೊಂಡಿದ್ದಾರೆ. ಇದೇನು ಐದು ಲಕ್ಷ ರೂಪಾಯಿ ಹಣ ನಮ್ಮಿಂದ ಮುರಿದುಕೊಂಡಿದ್ದಾರೋ, ಅದನ್ನು ನಿಮಗೆ ವಾಪಸ್ಸು ಕೊಡುತ್ತೇವೆ ಅಂತ ರೈಟಿಂಗ್ನಲ್ಲೇ ಕೊಟ್ಟಿದ್ದಾರೆ. ಆದರೆ ಇಲ್ಲಿ ನೀವು ಹೇಳುತ್ತಿದ್ದೀರಿ, ನಮಗೆ ಮೂರು ತಿಂಗಳು ಮಾತ್ರ ಲೆಕ್ಕಕ್ಕೆ ಬರುತ್ತದೆ. ಆ ಬಡ್ಡಿ ಮಾತ್ರ ನಾವು ಮನ್ನಾ ಮಾಡುತ್ತೇವೆ, ಇಲ್ಲದಿದ್ದರೆ ನಮಗೆ ಸಂಬಂಧವಿಲ್ಲ ಎಂದು. ಆದ್ದರಿಂದ ಅಧ್ಯಕ್ಷರೇ, ಈ ಸರ್ಕಾರದಿಂದ ಮೂರು ಉತ್ತರಗಳು ಬಂದಿವೆ. ಒಂದು, ಜಿಲ್ಲಾಧಿಕಾರಿಗಳಿಂದ ಬಂದಿರುವುದು 50,52,080 ರೂಪಾಯಿ ಬಡ್ಡಿಯಾಗಿದೆ. ಯಾವುದಕ್ಕೆ? ಮೂರು ಕೋಟಿ ರೂಪಾಯಿ ದುಡ್ಡು ನಮಗೆ ಬರದೇ. ಇದು ವಿಚಿತ್ರವಾಗಿದೆ. ನಾನು ಸರ್ಕಾರದ ನಗರಾಭಿವೃದ್ಧಿ ಕಾರ್ಯದರ್ಶಿಯವರ ಹತ್ತಿರ ಮಾತನಾಡಿದ್ದೇನೆ,ಅವರು ಬಡ್ಡಿ ಮನ್ನಾ ಮಾಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ ಎಂದು ಅವರು ಉತ್ತರವನ್ನು ಬರವಣಿಗೆಯಲ್ಲಿ ಕೊಟ್ಟಿದ್ದಾರೆ. ಜತೆಗೆ 5 ಲಕ್ಷ ರೂಪಾಯಿಗಳನ್ನು ಏನು ವಸೂಲಿ ಮಾಡಿಕೊಂಡಿದ್ದಾರೆ, ಅದನ್ನು ನಿಮಗೆ ವಾಪಸ್ಸು ಕೊಡುತ್ತೇವೆ ಎಂದು ಅವರು ಒಪ್ಪಿಕೊಂಡಿದ್ದಾರೆ. ನಾನು ಹೇಳುವುದು ಇಷ್ಟೇ ಇವರು ಹೇಳುತ್ತಾರೆ ಮೂರು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ ಎಂದು. ತುಂಬಾ ಸಂತೋಷ. ನಮ್ಮ ಪ್ರಶ್ನೆ ಇರುವುದು ಈಗೇನು 50,52,080 ರೂಪಾಯಿ ಬಡ್ಡಿ ಹಾಕಿದ್ದೀರಿ, ಇದನ್ನು ಪೂರ್ಣವಾಗಿ ರದ್ದು ಮಾಡುವುದಕ್ಕೆ ಸರ್ಕಾರ ಒಪ್ಪಿಗೆ ಕೊಟ್ಟಿದೆಯೇ? ಎರಡನೇಯದು ನಮಗೆ ಅಕ್ಟ್ರಾಯ್ ಗ್ರಾಂಟ್ ಐದು ಲಕ್ಷ ರೂಪಾಯಿಗಳನ್ನು ಏನು ಮುರುದಿಕೊಂಡುಬಿಟ್ಟಿದ್ದೀರಲ್ಲಾ? ಆ ಐದು ಲಕ್ಷ ರೂಪಾಯಿಗಳನ್ನು ಮತ್ತೆ ವಾಪಸ್ಸು ಕೊಡುತ್ತೀರಾ? ದಯವಿಟ್ಟು ಇದನ್ನು ನನಗೆ ಸ್ಪಷ್ಟಪಡಿಸಬೇಕು.

ಶ್ರೀ ಚೌಡರೆಡ್ಡಿ: ಅಧ್ಯಕ್ಷರೇ, ಇದರಲ್ಲಿ ಹಣ ಬಿಡುಗಡೆಯಾಗಿದೆ. ಆವತ್ತಿನಿಂದ ಎಷ್ಟು ಬಡ್ಡಿ ಬರಬೇಕು, ಅದನ್ನು ಲೆಕ್ಕ ಹಾಕಿ ಅದರಮೇಲೆ ಏನು ಹೆಚ್ಚುಕಡಿಮೆ ಇದೆ ಅದನ್ನು ಬಿಡುಗಡೆ ಮಾಡುತ್ತೇವೆ ಸ್ವಾಮಿ.

ಶ್ರೀ ಕೆ.ಎಸ್. ಈಶ್ವರಪ್ಪ: ಜಿಲ್ಲಾಧಿಕಾರಿಗಳು ಒಪ್ಪಿಕೊಂಡಿದ್ದಾರೆ. ಇದು 50,52,080 ರೂಪಾಯಿ ಹಾಕಿರುವುದು ತಪ್ಪಾಗಿದೆ, ತಪ್ಪು ಮಾಡಿರುವುದನ್ನು ಪೂರ್ಣವಾಗಿ ನಾವು ರದ್ದು ಮಾಡುತ್ತೇವೆ ಎಂದು ವಸತಿ ಮತ್ತು ನಗರಾಭಿವೃದ್ಧಿ ಕಾರ್ಯದರ್ಶಿಯವರು ಒಪ್ಪಿಕೊಂಡಿದ್ದಾರೆ. ನಾನು ಅವರ ಹತ್ತಿರ ದೂರವಾಣಿ ಮೂಲಕ ಮಾತನಾಡಿದ್ದೇನೆ. ಮಾತನಾಡಿದಮೇಲೆ ಅವರು 50,52,080 ರೂಪಾಯಿಗಳನ್ನು ರದ್ದುಮಾಡುವುದಾಗಿ ತಿಳಿಸಿದ್ದಾರೆ ಎಂದು ತಿಳಿಸಿರುವುದರಿಂದ ಇದು ಸ್ಪಷ್ಟ ಇದೆ. ಅದಕ್ಕೋಸ್ಕರ ನಾನು ಕೇಳುತ್ತಿದ್ದೇನೆ. ಹಾಗಾದರೆ ಈ ಪತ್ರಕ್ಕೆ ನೀವು ಬೆಲೆ ಕೊಡುತ್ತೀರೋ ಇಲ್ಲವೋ? ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು ಏನು ಪತ್ರ ಕೊಟ್ಟಿದ್ದಾರೆ, ಈ ಪತ್ರಕ್ಕೆ ಸರ್ಕಾರ ಬೆಲೆ ಕೊಡುತ್ತದೋ ಇಲ್ಲವೋ?

ಶ್ರೀ ಚೌಡರೆಡ್ಡಿ: ಈಗ ಸ್ಟೇಟ್ಮೆಂಟ್ ಮಾಡಿ ಉತ್ತರ ಕೊಡುವುದೋ ಅಥವಾ ಹಾಗೆ ಹೇಳಲೋ?

ಅಧ್ಯಕ್ಷರು: ತಮ್ಮದು ಏನಿದೆಯೋ ಅದನ್ನು ಹೇಳಿಬಿಡಿ. ಈಗಾಗಲೇ ಸಾಕಷ್ಟು ಪ್ರಶ್ನೋತ್ತರಗಳು ಆಗಿವೆ.

ಶ್ರೀ ಚೌಡರೆಡ್ಡಿ: ಇದು ಏನಾದರೂ ತಾರತಮ್ಯ ಇದ್ದರೆ ನಾನು ಸರಿಮಾಡಿಕೊಡುತ್ತೇನೆ. ಅಷ್ಟು ಮಾತ್ರ ಈಗ ಹೇಳಬಲ್ಲೆ. ಈಗ ಸ್ಟೇಟ್ಮೆಂಟ್ ಮಾಡಬೇಕು ಎಂದರೆ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸ್ಟೇಟ್ಮೆಂಟ್ ಮಾಡಲಿ.

ಅಧ್ಯಕ್ಷರು : ಇಲ್ಲಿ, ಸ್ಟೇಟ್ಮೆಂಟ್ಗಿಂತ ಮೊದಲೇ ಪ್ರಶ್ನೆಗಳನ್ನು ಕೇಳಿಕೊಂಡು ಹೋದಿರಿ.

ಶ್ರೀ ಕೆ.ಎಸ್. ಈಶ್ವರಪ್ಪ : ಶಿವಮೊಗ್ಗ - ಭದ್ರಾವತಿ ನಗರ ಪಾಲಿಕೆಯಿಂದ ಗ್ರಾಂಟ್ 5 ಲಕ್ಷ ರೂ.ಗಳನ್ನು ಬಡ್ಡಿ ರೂಪದಲ್ಲಿ ವಸೂಲಿ ಮಾಡಿಕೊಂಡಿರುವ ಬಗ್ಗೆ ಸನ್ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಚೌಡರೆಡ್ಡಿ : ಇದರ ಬಗ್ಗೆ ಒಂದು ಸ್ಟೇಟ್ಮೆಂಟ್ನ್ನು ನಾನು ಓದುತ್ತೇನೆ.

ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ-ಭದ್ರಾವತಿ ಮಹಾನಗರಪಾಲಿಕೆಗೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು 3 ಕೋಟಿ ರೂ.ಗಳನ್ನು ದಿನಾಂಕ : 27-08-92ರಂದು ಸರ್ಕಾರವು ಮಂಜೂರಾತಿ ನೀಡಿದೆ. ಈ ಸಾಲವನ್ನು ಹತ್ತು ವಾರ್ಷಿಕ ಸಮ ಕಂತುಗಳಲ್ಲಿ ಶೇಕಡಾ $12\frac{1}{2}$ ಯಷ್ಟು ಬಡ್ಡಿ ಮತ್ತು ಶೇಕಡಾ 4 ರಷ್ಟು ಚಕ್ರಬಡ್ಡಿಯೊಡನೆ ಪಾವತಿ ಮಾಡಬೇಕು. ಹೊಸದಾಗಿ ರಚಿತವಾದ ಈ ನಗರಪಾಲಿಕೆಯಲ್ಲಿ ಅಗತ್ಯವಿದ್ದಷ್ಟು ತಾಂತ್ರಿಕ ಹುದ್ದೆಗಳು ಇಲ್ಲದಿದ್ದುದರಿಂದ ಸರ್ಕಾರವು ತನ್ನ ಪತ್ರ ದಿನಾಂಕ : 8-12-92ರಲ್ಲಿ ಈ ಹಣವನ್ನು ತಾಂತ್ರಿಕ ಹುದ್ದೆ ಮಂಜೂರಾಗುವವರೆಗೆ ಉಪಯೋಗಿಸಕೂಡದು ಎಂದು ಆಯುಕ್ತರಿಗೆ ಸೂಚನೆ ನೀಡಿತು. ಆದರೆ ಸರ್ಕಾರವು ದಿನಾಂಕ : 5-3-93 ರಿಂದಲೇ ಮಂಜೂರಾದ ಸಾಲದ ಹಣದಿಂದ ಪಿ.ಡಬ್ಲ್ಯೂ.ಡಿ. ಮುಖಾಂತರ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಮಹಾನಗರಪಾಲಿಕೆಗೆ ಅನುಮತಿ ನೀಡಿತ್ತು. ಶಿವಮೊಗ್ಗ-ಭದ್ರಾವತಿ ಮಹಾನಗರಪಾಲಿಕೆ ಆಡಳಿತಾಧಿಕಾರಿಗಳು (ಜಿಲ್ಲಾಧಿಕಾರಿಗಳು, ಶಿವಮೊಗ್ಗ) ಇವರು, ಪ್ರಸ್ತಾವಿತ ಕಾಮಗಾರಿ ಕೆಲಸಗಳನ್ನು ಪಿ.ಡಬ್ಲ್ಯೂಡಿ ಮೂಖಾಂತರ ಮಾಡಿದಲ್ಲಿ ಮಹಾನಗರಪಾಲಿಕೆಗೆ 40 ಲಕ್ಷ ರೂ.ಗಳ ಹೆಚ್ಚುವರಿ ವೆಚ್ಚ (ಇ.ಟಿ.ಪಿ. ಚಾರ್ಜು) ಉಂಟಾಗುವುದೆಂದೂ, ಈ ಮೇರೆಗೆ ಮಹಾನಗರಪಾಲಿಕೆಯಿಂದಲೇ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಲು ಅನುಮತಿ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ. ಜಿಲ್ಲಾಧಿಕಾರಿಗಳು, ಶಿವಮೊಗ್ಗ (ಆಡಳಿತಾಧಿಕಾರಿಗಳು, ಶಿವಮೊಗ್ಗ-ಭದ್ರಾವತಿ ಮಹಾನಗರಪಾಲಿಕೆ) ಇವರ ಈ ಸಲಹೆಯನ್ನು ಸರ್ಕಾರವು ಪರಿಗಣಿಸಿ, ಅಭಿವೃದ್ಧಿ ಕಾಮಗಾರಿಯನ್ನು ಮಹಾನಗರಪಾಲಿಕೆಯ ಮುಖಾಂತರವೇ ಕೈಗೊಳ್ಳಲು ಅನುಮತಿ ನೀಡಿದೆ. ದಿನಾಂಕ : 8-12-92ರಿಂದ 5-3-1993ರವರೆಗೆ ಮಾತ್ರ ಸರ್ಕಾರವು ಮಂಜೂರಾದ ಸಾಲದ ಹಣವನ್ನು ಉಪಯೋಗಿಸಲು ತಡೆಯಾಜ್ಞೆ ನೀಡಿತ್ತು. ಹಾಗೂ ದಿನಾಂಕ : 5-8-93ರ ಬಳಿಕ ಮಹಾನಗರಪಾಲಿಕೆಯು ಸಾಲದ ಹಣವನ್ನು ಉಪಯೋಗಿಸಲು ಪೂರ್ಣ ಸ್ವತಂತ್ರವಿತ್ತು. ಮತ್ತು ದಿನಾಂಕ : 17-12-93ರಿಂದ 27-1-94ರ ಅವಧಿಯಲ್ಲಿ ಈ ಸಾಲದ ಹಣದಿಂದ ರೂ. 1.00 ಕೋಟಿ ಹಣವನ್ನು ಕಾಮಗಾರಿ ಕೆಲಸಗಳ ನಿಮಿತ್ತ ಶಿವಮೊಗ್ಗ-ಭದ್ರಾವತಿ ಮಹಾನಗರಪಾಲಿಕೆಯು ಪಡೆದಿದೆ.

ಸರ್ಕಾರವು, ಈ ವರ್ಷದಲ್ಲಿ ಕೇವಲ ರೂ. 5.00 ಲಕ್ಷಗಳನ್ನು ಮಾತ್ರ ಆಕ್ಟ್ರಾಯ್ ಅನುದಾನದಿಂದ ಸಾಲ ಬಡ್ಡಿಯೆಂದು ವಸೂಲಿ ಮಾಡಿದೆ. ಅಲ್ಲದೆ, ಸರ್ಕಾರವು ನಗರಪಾಲಿಕೆಯು ಸಾಲದ ಹಣವನ್ನು ಪಡೆದ ದಿನಾಂಕದಿಂದ ಮಾತ್ರ ಬಡ್ಡಿಯನ್ನು ವಿಧಿಸುವ ಬಗ್ಗೆ ಮತ್ತು ಈಗಾಗಲೇ ಮುರಿದುಕೊಂಡಿರುವ ಬಡ್ಡಿ ಹಣವನ್ನು ಮುಂದಿನ ಸಾಲ ಮರುಪಾವತಿ ಕಂತುಗಳಿಗೆ ಹೊಂದಿಸಿಕೊಳ್ಳುವ ಬಗ್ಗೆ ಪರಿಶೀಲಿಸುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, ನನ್ನ ಪ್ರಶ್ನೆಯೂ ಇಷ್ಟೆ. ಕೊಡದೇ ಇರುವ ಸಾಲಕ್ಕೆ ಬಡ್ಡಿ ಹಾಕುವುದು ಈ ಪ್ರಪಂಚದಲ್ಲಿ ಎಲ್ಲಿಯಾದರೂ ಉಂಟೆ? ನಮ್ಮ ಕೈಗೆ ಹಣ ಒಂದು ರೂಪಾಯಿ ಬಂದಿಲ್ಲ. ಒಂದು ರೂಪಾಯಿಯೂ ನಮಗೆ ಬರದೇನೇ 50,52,080 ರೂಪಾಯಿ ಬಡ್ಡಿ ಹಾಕಿದ್ದಾರೆ. ಮೊನ್ನೆ ಶಿವಮೊಗ್ಗದಲ್ಲಿ

ಬಿ.ಜೆ.ಪಿ. ಯವರು ಹೋರಾಟ ಮಾಡುತ್ತೇವೆ ಎಂದು ಹೇಳಿದ ನಂತರ ಸರ್ಕಾರದಿಂದ 50 ಲಕ್ಷ ರೂಪಾಯಿ ಬಿಡುಗಡೆ ಮಾಡುತ್ತೇವೆ ಎಂದು ಹೇಳಿ ಒಪ್ಪಿಕೊಂಡಿದ್ದಾರೆ. ಆನಂತರ ಜಿಲ್ಲಾಧಿಕಾರಿಗಳು ನನ್ನನ್ನು ಫೋನ್ ಮೂಲಕ ಕರೆದು ಸಂಬಂಧಪಟ್ಟ ವಸತಿ ಮತ್ತು ನಗರಾಭಿವೃದ್ಧಿ ಕಾರ್ಯದರ್ಶಿಯವರೊಡನೆ ನಾನು ಮಾತನಾಡಿದ್ದೇನೆ, ಈ 50,52,080 ರೂಪಾಯಿಗಳ ಬಡ್ಡಿಯನ್ನು ರದ್ದು ಮಾಡುತ್ತೇವೆ ಎಂದು ಅವರು ಒಪ್ಪಿಕೊಂಡಿದ್ದಾರೆ. ಜೊತೆಗೆ ಐದು ಲಕ್ಷ ರೂಪಾಯಿಗಳನ್ನು ಏನು ಮುರಿದುಕೊಂಡಿದ್ದಾರೆ. ಅದನ್ನು ವಾಪಸ್ಸು ಕೊಡಲಿಕ್ಕೆ ಒಪ್ಪಿಕೊಂಡಿದ್ದಾರೆ ಎಂದು ಜಿಲ್ಲಾಧಿಕಾರಿಗಳು ರೈಟಿಂಗ್ನಲ್ಲಿ ನನಗೆ ಪತ್ರವನ್ನು ಕೊಟ್ಟಿದ್ದಾರೆ. ಈ ಪತ್ರಕ್ಕೆ ಸರ್ಕಾರ ಬೆಲೆ ಕೊಡುತ್ತದೆಯೇ? ಈ ಮಾತುಕತೆ ಜಿಲ್ಲಾಧಿಕಾರಿಗಳಿಗೆ ಮತ್ತು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರ ನಡುವೆ ದೂರವಾಣಿ ಮೂಲಕ ನಡೆದಿರುವುದು ನಿಜವಲ್ಲವೇ? ಇದು ನನ್ನ ಪ್ರಶ್ನೆ.

ಶ್ರೀ ಚೌಡರೆಡ್ಡಿ : ಅಧ್ಯಕ್ಷರೇ, ಇದರಲ್ಲಿ ಕರಾರುವಾಕ್ಕಾಗಿ ಏನು ಕಾನೂನು ಪ್ರಕಾರವಾಗಿ ಬಡ್ಡಿಯನ್ನು ಮುರಿದುಕೊಳ್ಳಬೇಕೋ, ಅದನ್ನು ಒಂದು ವೇಳೆ ಫೈನಾನ್ಸ್ ಡಿಪಾರ್ಟ್ಮೆಂಟ್ನವರು ಮುರಿದುಕೊಂಡಿದ್ದರೆ, ಅದನ್ನು ನಾವು ಎಷ್ಟು ಚಾರ್ಜ್ ಮಾಡಬೇಕೋ ಅಷ್ಟು ಮಾಡಿ ಮಿಕ್ಕಿದ್ದನ್ನು ಖಂಡಿತವಾಗಿಯೂ ವಾಪಸ್ಸು ಕೊಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಜಿಲ್ಲಾಧಿಕಾರಿಗಳ ಪತ್ರಕ್ಕೆ ನೀವು ಏನು ಹೇಳುತ್ತೀರಿ? ಜಿಲ್ಲಾಧಿಕಾರಿಗಳು ರೈಟಿಂಗ್ನಲ್ಲಿ ನನಗೆ ಪತ್ರ ಕೊಟ್ಟಿದ್ದಾರೆ.

ಶ್ರೀ ಚೌಡರೆಡ್ಡಿ: ನನ್ನ ಗಮನಕ್ಕೆ ಅದು ಬಂದಿಲ್ಲ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು : ಅವರು ಪರಿಶೀಲನೆ ಮಾಡುತ್ತಾರಂತೆ.

ನಿಯಮ 334ರ ಮೇಲೆ ಚರ್ಚೆ

(i) ಪರ್ಮಿಟ್ ಪಡೆದು ಮಂಗಳೂರು – ಬೆಂಗಳೂರು ನಡುವೆ ಓಡಾಡುತ್ತಿರುವ ಸುವಿಹಾರಿ ಬಸ್ಸುಗಳ ಬಗ್ಗೆ

ಶ್ರೀ ಕೆ. ವಿನಯಕುಮಾರ್ ಸೊರಕೆ (ಪುತ್ತೂರು) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಿಂದ ಮಂಗಳೂರು-ಬೆಂಗಳೂರು ನಡುವೆ ಪ್ರತಿದಿನ 50ಕ್ಕೂ ಮಿಕ್ಕಿ ಸುವಿಹಾರಿ ಬಸ್ಸುಗಳು ಸಂಚಾರವಿದ್ದು ಇದರಲ್ಲಿ ಮಂಗಳೂರು ಕೆಎಸ್ಆರ್ಟಿಸಿ ಬಸ್ಸು ನಿಲ್ದಾಣದ ಬಳಿಯಿಂದಲೇ ಬಸ್ಸುಗಳು ಹೊರಡುವುದರಿಂದ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಿಗೆ ನಷ್ಟವಾಗುವುದಿಲ್ಲವೇ? ಮಂಗಳೂರಿನಿಂದ ಹೊರಡುವ ಖಾಸಗಿ ಸುವಿಹಾರ ಬಸ್ಸುಗಳು ಪರ್ಮಿಟ್ ಮುಖಾಂತರ ಸಂಚಾರ ಮಾಡುತ್ತಿವೆಯೇ? ಪರ್ಮಿಟ್ ಮುಖಾಂತರ ಎಷ್ಟು ಬಸ್ಸುಗಳು ಸಂಚಾರ ಮಾಡುತ್ತಿವೆ ಎಂಬುದರ ಬಗ್ಗೆ ತಿಳಿಸುವಂತೆ ಮಾನ್ಯ ಸಾರಿಗೆ ಸಚಿವರನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಇದನ್ನು ಮಾನ್ಯ ಸಾರಿಗೆ ಮಂತ್ರಿಗಳ ಗಮನಕ್ಕೆ ತರುತ್ತೇನೆ.

(ii) ಶಿವಮೊಗ್ಗದಲ್ಲಿ ಗೃಹ ನಿರ್ಮಾಣ ಮಂಡಳಿಯಿಂದ ಮನೆ ಹಂಚಿಕೆ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗದಲ್ಲಿ ಗೃಹ ನಿರ್ಮಾಣ ಮಂಡಳಿಯಿಂದ ಸುಮಾರು 1300 ಜನರಿಗೆ ಮನೆಗಳನ್ನು ಹಂಚಿಕೆಯಾಗಿದ್ದು ಅವರಿಂದ ಸಾಕಷ್ಟು ಹಣ ಕಟ್ಟಿಸಿಕೊಂಡಿದ್ದೀರಿ. ಆ ಮನೆಗಳನ್ನು ನಿರ್ದಿಷ್ಟವಾಗಿ ಪೂರ್ಣಗೊಳಿಸಲು ಇನ್ನು ಎಷ್ಟು ಹಣ ಬೇಕು? ಈಗಾಗಲೇ ಆ ಮನೆಗಳಿಗೆ ಎಷ್ಟು ಹಣ ಖರ್ಚಾಗಿದೆ? ನಿರ್ದಿಷ್ಟವಾಗಿ ಆ ಮನೆಗಳನ್ನು ಯಾವ ದಿನಾಂಕದಂದು ಆ ಹಂಚಿಕೆದಾರರಿಗೆ ಸ್ವಾಧೀನ ನೀಡುವಿರಿ?

ಶ್ರೀ ಚೌಡರೆಡ್ಡಿ : ಮಾನ್ಯ ಸದಸ್ಯರಾದ ಶ್ರೀ ಈಶ್ವರಪ್ಪ ಅವರು ಕೇಳಿದ್ದಕ್ಕೆ ನಾನು ಸಮಯತೆಗೆದುಕೊಂಡು ಉತ್ತರ ಹೇಳುತ್ತೇನೆ.

ಅಧ್ಯಕ್ಷರು : ಇದಕ್ಕೆ ಮಂತ್ರಿಗಳು ಸಮಯ ತೆಗೆದುಕೊಂಡು ಹೇಳುತ್ತಾರಂತೆ.

(iii) ಇಂಡಿ ತಾಲ್ಲೂಕಿನ ಬಳ್ಳೊಳ್ಳಿ ಕ್ಷೇತ್ರದಲ್ಲಿ ಭೂಕಂಪದಿಂದ ಆಗಿರುವ ನಷ್ಟ

ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳಲ್ಲಿ ಹಾಗೂ ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಸೆಪ್ಟೆಂಬರ್ 30ರಂದು ಸಂಭವಿಸಿದ ಭೂಕಂಪಕ್ಕೆ ವಿಶೇಷವಾಗಿ ಇಂಡಿ ತಾಲ್ಲೂಕಿನ ಬಳ್ಳೊಳ್ಳಿ ಕ್ಷೇತ್ರದ ಸುಮಾರು 30 ಗ್ರಾಮಗಳು ತುತ್ತಾಗಿ ಸಾವಿರಾರು ಮನೆಗಳು ನಾಶವಾಗಿ ಜನಜೀವನ ಅಸ್ತವ್ಯಸ್ತವಾಗಿದ್ದನ್ನು ಮಾನ್ಯ ಮುಖ್ಯಮಂತ್ರಿಗಳು ಖುದ್ದಾಗಿ ಪರಿಶೀಲಿಸಿದ್ದಾರೆ. ಮೊದಲ ಹಂತದಲ್ಲಿ ಕೇವಲ ನಾಲ್ಕು ಗ್ರಾಮಗಳನ್ನು ಪುನರ್ವಸತಿ ಕಾರ್ಯಾರಂಭ ಮಾಡಲು ಆದೇಶ ನೀಡಿ ಹಣವನ್ನು ಮಂಜೂರು ಮಾಡಲಾಗಿದೆ. ಆದರೆ ಈ ನಾಲ್ಕುಗ್ರಾಮಗಳಾದ ಹಿಂಗಣಿ, ಉಳಕೇಡ್, ಸಂಖ್, ಹಾಗೂ ಧೂಳಖೇಡ್ ಹಾಗೂ ಉಮರಾಣಿಗಳಲ್ಲಿ ಒಟ್ಟಿಗೆ ಸುಮಾರು ಮೂರುಸಾವಿರಕ್ಕೂ ಹೆಚ್ಚು ಮನೆಗಳು ನಾಶವಾಗಿದ್ದರೂ ಸರ್ಕಾರ ಕೇವಲ 43 ಲಕ್ಷ ರೂಪಾಯಿಗಳನ್ನು ನೀಡಿ, ಗುಲ್ಬರ್ಗಾ ಜಿಲ್ಲೆಯ ಎರಡು ಗ್ರಾಮಗಳಲ್ಲಿ ಕೇವಲ ನಾಲ್ಕೈದು ನೂರು ಮನೆಗಳು ನಾಶವಾಗಿದ್ದರೆ ಅದಕ್ಕೆ 80 ಲಕ್ಷ ರೂಪಾಯಿಗಳಿಗೂ ಹೆಚ್ಚು ಹಣ ಮಂಜೂರಾತಿ ನೀಡಿದ್ದಾರೆ. ಅದೇ ರೀತಿ ನಮ್ಮ ಕ್ಷೇತ್ರದ ಹಳ್ಳಿಗಳಿಗೂ ಹೆಚ್ಚಿನ ಹಣ ಬಿಡುಗಡೆ ಮಾಡಿ ಭೂಕಂಪದಲ್ಲಿ ತೊಂದರೆಗೀಡಾದ ಗ್ರಾಮಗಳಿಗೆ ಸಹಾಯ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಹಾಗೂ ಕಂದಾಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು) : (ಮಾನ್ಯ ಕಂದಾಯ ಹಾಗೂ ಸಮಾಜ ಕಲ್ಯಾಣ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಮಾಜ ಕಲ್ಯಾಣ ಸಚಿವರ ಪರವಾಗಿ, ಈ ಹೇಳಿಕೆಯನ್ನು ಕೊಡುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೆ, ಸೆಪ್ಟೆಂಬರ್ 30, 1993ರಂದು ಮುಂಜಾನೆ ರಾಜ್ಯದಲ್ಲಿ ಸಂಭವಿಸಿದ ಭೂಕಂಪದಿಂದ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಹಾನಿಯುಂಟಾಗಿರುತ್ತದೆ. ಹಾನಿಯ ವಿವರಗಳು ಈ ಕೆಳಕಂಡಂತಿರುತ್ತದೆ-

(1)	ಮೃತಪಟ್ಟವರು	9
(2)	ಗಾಯಗೊಂಡವರು	127
(3)	ಜಾನುವಾರು ಹಾನಿ	26
(4)	ಪೂರ್ಣ ಹಾನಿಗೊಳಗಾದ ಮನೆಗಳು	216
(5)	ಭಾಗಶಃ ಹಾನಿಗೊಳಗಾದ ಮನೆಗಳು ಮತ್ತು ಗುಡಿಸಲುಗಳು	30,527
(6)	ಹಾನಿಗೊಳಗಾದ ನೀರಾವರಿ ಪಂಪ್ ಸೆಟ್ : ಭಾವಿಗಳು	10
	ಖಾಸಗಿ ಆಸ್ತಿಗಾದ ಒಟ್ಟು ಹಾನಿ	595.87 ಲಕ್ಷ ರೂ.
	ಸಾರ್ವಜನಿಕ ಆಸ್ತಿಗಾದ ಒಟ್ಟು ಹಾನಿ	329.50 ಲಕ್ಷ ರೂ.
	ಒಟ್ಟು ಹಾನಿ	925.37 ಲಕ್ಷ ರೂ.

ಸರ್ಕಾರವು ತಕ್ಷಣವೇ ತೊಂದರೆಗೊಳಗಾದ ಜನರಿಗೆ ರಕ್ಷಣೆ, ಆಶ್ರಯ, ನೀಡುವಂತಹ ಕಾರ್ಯಕ್ರಮಗಳಾದ ತಾತ್ಕಾಲಿಕ ಶಿಬಿರಗಳ ನಿರ್ಮಾಣ, ಆಹಾರ ಪೂರೈಕೆ, ಬಟ್ಟೆ:ಉಡುಪುಗಳ ವಿತರಣೆ, ಆರೋಗ್ಯ ರಕ್ಷಣೆ ಇತ್ಯಾದಿ ಕ್ರಮಗಳನ್ನು ಕೈಗೊಂಡಿತು.

ಭೂಕಂಪ ಪೀಡಿತ ಜಿಲ್ಲೆಗಳಲ್ಲಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವ ಸಲುವಾಗಿ ಸರ್ಕಾರವು ತಕ್ಷಣವೇ ಒಟ್ಟು 2.80 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದು, ಈವರೆಗೆ ಒಟ್ಟು 1.61 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. ವಿವರಗಳು ಕೆಳಕಂಡಂತಿವೆ-

(ಲಕ್ಷ ರೂ.ಗಳಲ್ಲಿ)

ಕ್ರ.ಸಂ.	ಜಿಲ್ಲೆಯ ಹೆಸರು	ಬಿಡುಗಡೆ ಮಾಡಿದ ಹಣ	ವೆಚ್ಚ ಮಾಡಲಾದ ಹಣ
1.	ಗುಲ್ಬರ್ಗಾ	125.00	90.25
2.	ರಾಯಚೂರು	10.00	2.10
3.	ಬೆಳಗಾವಿ	10.00	0.81
4.	ಬೀದರ್	10.00	3.13
5.	ಬಿಜಾಪುರ	125.00	64.62
	ಒಟ್ಟು	280.00	160.91

ಸರ್ಕಾರವು ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ 26 ಗ್ರಾಮಗಳ ಮತ್ತು ಗುಲ್ಬರ್ಗಾ ಜಿಲ್ಲೆಯ ಅಫಜಲಪುರ, ಆಳಂದ ಮತ್ತು ಜೇವರ್ಗಿ ತಾಲ್ಲೂಕಿನ 22 ಗ್ರಾಮಗಳು, ಸೆಪ್ಟೆಂಬರ್ 30ನೇ ತಾರೀಖು ಸಂಭವಿಸಿದ ಭೂಕಂಪದಿಂದ ತೀವ್ರವಾದ ಹಾನಿಗೊಳಗಾಗಿದ್ದು, ಅಲ್ಲದೆ, ಈ ಗ್ರಾಮಗಳು ಕೃಷ್ಣ ಮತ್ತು ಭೀಮಾ ನದಿ ಮಹಾಪೂರದಿಂದ ಆಗಿಂದಾಗ್ಗೆ ತೊಂದರೆಗೆ ಒಳಗಾಗುತ್ತಿರುವುದರಿಂದ, ಈ ಗ್ರಾಮಗಳನ್ನು ಸ್ಥಳಾಂತರಿಸಲು ಮತ್ತು ಭೂಕಂಪ ನಿರೋಧಕ ಮನೆಗಳನ್ನು ಕಟ್ಟಲು 93.50 ಕೋಟಿ ರೂ.ಗಳ ವೆಚ್ಚದಲ್ಲಿ ಯೋಜನಾ ಪ್ರಸ್ತಾವನೆಯೊಂದನ್ನು ತಯಾರಿಸಿದ್ದು ವಿಶ್ವ ಬ್ಯಾಂಕಿನ ನೆರವು ಕೋರಿ, ಕೇಂದ್ರ ಸರ್ಕಾರಕ್ಕೆ ದಿನಾಂಕ 3.2.1994ರಂದು ಸಲ್ಲಿಸಿದೆ.

ಬಿಜಾಪುರ ಜಿಲ್ಲಾಧಿಕಾರಿಗಳ ವರದಿಯನ್ವಯ ಇಂಡಿ ತಾಲ್ಲೂಕಿನ ಸಂಕ, ಹಿಂಗಾಣಿ, ಧೂಳ್ಖೇಡ್ ಮತ್ತು ಉಮ್ರಾಣಿ ಹಾಗೂ ಗುಲ್ಬರ್ಗಾ ಜಿಲ್ಲೆಯ ಭೋಸ್ಗಾಕೆ ಮತ್ತು ಸೈದಾಪುರ ಗ್ರಾಮಗಳನ್ನೂ ಸಹ ಕ್ರಮವಾಗಿ 43.00 ಮತ್ತು 80.00 ಲಕ್ಷ ರೂ.ಗಳ ವೆಚ್ಚದಲ್ಲಿ ಸ್ಥಳಾಂತರಿಸಲು ನಿರ್ಧರಿಸಿ ಸರ್ಕಾರವು ದಿನಾಂಕ 4.12.1993ರಂದು ಆದೇಶವನ್ನು ಹೊರಡಿಸಿದೆ.

ಬಿಜಾಪುರ ಜಿಲ್ಲಾಧಿಕಾರಿಯವರ ವರದಿಯನ್ವಯ, ಈ ಮೇಲ್ಕಂಡ ಇಂಡಿ ತಾಲ್ಲೂಕಿನ 4 ಗ್ರಾಮಗಳಲ್ಲಿ ನಿವೇಶನ ಗುರುತಿಸುವಿಕೆ ಕಾರ್ಯವು ಈಗಾಗಲೇ ಪ್ರಗತಿಯಲ್ಲಿದೆ. ಭೂಕಂಪ ನಿರೋಧಕ ಮನೆಗಳನ್ನು ಕಟ್ಟುವ ಕಾರ್ಯವನ್ನು ದಿನಾಂಕ 20.2.1994ರಿಂದ ಪ್ರಾರಂಭಿಸಲಾಗುವುದು. ಅಲ್ಲದೆ, ಈ ಗ್ರಾಮಗಳಲ್ಲಿ ಭೂಕಂಪ ನಿರೋಧಕ ಮನೆಗಳನ್ನು ಕಟ್ಟಲು 67.60 ಲಕ್ಷ ರೂ. ಮತ್ತು ನಾಗರೀಕ ಸೌಲಭ್ಯಗಳನ್ನು ಒದಗಿಸಲು 43.00 ಲಕ್ಷ ರೂ. ಹೀಗೆ ಒಟ್ಟು 110.60 ಲಕ್ಷ ರೂ. ಗಳು ಅಗತ್ಯವಿದೆಯೆಂದು ಅಂದಾಜು ಮಾಡಲಾಗಿದೆ.

ಈ ಪೈಕಿ, 6.15 ಲಕ್ಷ ರೂ.ಗಳನ್ನು ಬಿಜಾಪುರ ಜಿಲ್ಲೆಯ ಈ 4 ಗ್ರಾಮಗಳನೊಂದ ಸಂತ್ರಸ್ಥರಿಗೆ ಪರಿಹಾರ ನೀಡುವ ಸಲುವಾಗಿ ವಿತರಿಸಲಾಗಿದೆ. ಮತ್ತು ಪ್ರತಿ [illegible] 1.00 [illegible] ಗಳಂತೆ 4.00 ಲಕ್ಷ ರೂ.ಗಳನ್ನು ಪ್ರಸ್ತಾಪಿತ ಬಡಾವಣೆಗಳಲ್ಲಿ

ರಸ್ತೆ ನಿರ್ಮಾಣ ಮತ್ತು 55.05 ಲಕ್ಷ ರೂ.ಗಳನ್ನು ಭೂಕಂಪ ನಿರೋಧ ಮನೆಗಳನ್ನು ಕಟ್ಟಲು ತಹಶೀಲ್ದಾರ್‌ರವರಿಗೆ ಮತ್ತು ನಾಗರಿಕ ಸೌಲಭ್ಯಗಳನ್ನು ಒದಗಿಸಲು 8.40 ಲಕ್ಷ ರೂ.ಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಬಿಡುಗಡೆ ಮಾಡಲಾಗಿದೆ. ಅಲ್ಲದೆ, ಉಳಿದಿರುವ ಮನೆಗಳ ನಿರ್ಮಾಣಕ್ಕಾಗಿ 2.00 ಕೋಟಿ ರೂ.ಗಳು ಅಗತ್ಯವಿದೆಯೆಂದು ಅಂದಾಜು ಮಾಡಲಾಗಿದೆ.

ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಭೂಕಂಪದಿಂದ ಹಾನಿಗೊಳಗಾದ ಗ್ರಾಮಗಳಲ್ಲಿ ನೊಂದ ಸಂತ್ರಸ್ಥರಿಗೆ ಪರಿಹಾರ ನೀಡಲು ಮತ್ತು ಭೂಕಂಪ ನಿರೋಧಕ ಮನೆಗಳನ್ನು ಕಟ್ಟಲು ಸರ್ಕಾರವು ಈಗಾಗಲೇ ತ್ವರಿತ ಕ್ರಮಗಳನ್ನು ಕೈಗೊಂಡಿದ್ದು, ಅವಶ್ಯಕ ಹಣವನ್ನು ಸಂಬಂಧಪಟ್ಟ ಇಲಾಖೆಗಳಿಗೆ ಬಿಡುಗಡೆ ಮಾಡಲಾಗಿದೆ. ಭೂಕಂಪದಿಂದ ನೊಂದ ಸಂತ್ರಸ್ಥರಿಗೆ ಪರಿಹಾರ ಮತ್ತು ಪುನರ್ವಸತಿ ಒದಗಿಸಲು ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು ಈ ಬಗ್ಗೆ ಯಾವುದೇ ತಾರತಮ್ಯವನ್ನೂ ಮಾಡುವುದಿಲ್ಲವೆಂದು ಮಾನ್ಯ ಸದಸ್ಯರಿಗೆ ಈ ಮೂಲಕ ತಿಳಿಸಲಿಚ್ಛಿಸುತ್ತೇನೆ.

(4) ಹಾಲಗೇರಿ – ನೀರಲಕೇರಿ ಗ್ರಾಮಗಳ ಹತ್ತಿರ ನೀರಾವರಿ ಟ್ಯಾಂಕ್ ಕಟ್ಟುವುದು

ಶ್ರೀ ಎಂ.ಕೆ. ಪಟ್ಟಣಶೆಟ್ಟಿ : ಮಾನ್ಯ ಅಧ್ಯಕ್ಷರೇ, ಹಾಲಿಗೇರಿ - ನೀರಲಗೇರಿ ಗ್ರಾಮಗಳ ಹತ್ತಿರ ನೀರಾವರಿ ಟ್ಯಾಂಕ್ ಜಿಲ್ಲಾ ಪರಿಷತ್ತಿಂದ ಮಂಜೂರಾಗಿ ನಿಮ್ಮ ಇಲಾಖೆಗೆ ವರ್ಗಾವಣೆಯಾಗಿರುತ್ತದೆ. ಆದರೆ, ಈ ಯೋಜನೆಯನ್ನು ಕೈಬಿಡಲು ಕಾರಣವೇನು ? ಈ ಯೋಜನೆಯನ್ನು 1994-95ರ ಸಾಲಿನ ಆಯ-ವ್ಯಯದಲ್ಲಿ ಸೇರ್ಪಡೆ ಮಾಡಲಾಗುವುದೇ ?

ಡಾ॥ ಆರ್.ಬಿ. ಚೌಧುರಿ (ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆ ಬಾದಾಮಿ ತಾಲ್ಲೂಕಿನ ಹಾಲಿಗೇರಿ-ನೀರಲಗೇರಿ ಗ್ರಾಮಗಳ ಹತ್ತಿರ ಜಿಲ್ಲಾ ಪರಿಷತ್ ವತಿಯಿಂದ 1992-93ನೇ ಸಾಲಿನಲ್ಲಿ ಸಣ್ಣ ನೀರಾವರಿ ಹೊಸಕೆರೆ ನಿರ್ಮಾಣಗೊಳಿಸಲು ಅಂದಾಜು ಮೊತ್ತವಾದ 24.20ಲಕ್ಷ ರೂಪಾಯಿಗಳಿಗೆ ಸರ್ಕಾರದಿಂದ ದಿನಾಂಕ 31.3.92ರಲ್ಲಿ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದೆ. ಇದರ ಅಚ್ಚುಕಟ್ಟು ಪ್ರದೇಶ [illegible] ಹೆಕ್ಟೇರ್ ಇರುವುದರಿಂದ ಸದರಿ ಕಾಮಗಾರಿಯನ್ನು ಅಕ್ಟೋಬರ್, 1992 ರಲ್ಲಿ ಸಣ್ಣ ನೀರಾವರಿ ಇಲಾಖೆಗೆ ವರ್ಗಾಯಿಸಲಾಗಿದೆ. 1993-94ರ ಸಣ್ಣ ನೀರಾವರಿ ಆಯ-ವ್ಯಯದಲ್ಲಿ ಈ ಕಾಮಗಾರಿ ಸೇರಿಲ್ಲವಾದ್ದರಿಂದ 1994-95ರ ಆಯ-ವ್ಯಯದಲ್ಲಿ ಸೂಕ್ತ ಅನುದಾನಕ್ಕೆ ಸದರಿ ಕಾಮಗಾರಿಯನ್ನು ಸೇರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

(5) ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಹಲಕಿಕ್ರಾಸ್ಸಿಂದ ಕುಟರನ ಹಬ್ಬಿವರೆಗೆ ರಸ್ತೆ ದುರಸ್ತಿ.

ಶ್ರೀ ಎಸ್.ಎಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ ಬೆಳಗಾಂ ಜಿಲ್ಲಾ ಸೌದತ್ತಿ ತಾಲ್ಲೂಕಿನ ಹಲಕಿಕ್ರಾಸ್ಸಿಂದ ಕುಟರನ ಹಬ್ಬಿವರೆಗೆ ರಸ್ತೆ ಅಂದರೆ ಬೈಲಹೊಂಗಲ ಗೋಕಾಕ್ ರೋಡ್ ಹಾಗೂ ಬಾಗಲಕೋಟೆ ಗೋಕಾಕ್ ರೋಡ್ ಇದು ರಾಜ್ಯದ ಒಂದು ಮುಖ್ಯ ರಸ್ತೆ ಇರುತ್ತದೆ. ಈ ರಸ್ತೆ ಮಲಪ್ರಭಾ ಸಕ್ಕರೆ ಕಾರ್ಖಾನೆ ಕಮ್ಯಾಂಡ್ ಏರಿಯಾದಲ್ಲಿ ಹಾಗೂ ಗೋಕಾಕ್ ಸಕ್ಕರೆ ಕಮ್ಯಾಂಡ್ ಏರಿಯಾದಲ್ಲಿ ಬರುವ ರಸ್ತೆಯಾಗಿರುತ್ತದೆ. ಅದು ಅಲ್ಲದೆ ಗೋಕಾಕ್ಕಿಂದ ಎಲ್ಲಮ್ಮನಗುಡ್ಡಕ್ಕೆ ಹಾಗೂ ಶ್ರೀಕ್ಷೇತ್ರ ಸೋಗಲಕ್ಕೆ ಹೋಗುವ ರಸ್ತೆಯಾಗಿರುತ್ತದೆ. ಈ ರಸ್ತೆಯ ಮೇಲೆ ಸಕ್ಕರೆಕಾರ್ಖಾನೆ ಗಾಡಿಗಳು ಹಾಗೂ ಎಲ್ಲಮ್ಮನ ಗುಡ್ಡಕ್ಕೆ ಹೋಗುವ ಚಕ್ಕಡಿಗಳು ಹಾಯ್ದಾಡಿ ಸಂಪೂರ್ಣ ನಾಶವಾಗಿರುತ್ತದೆ. ಲೋಕೋಪಯೋಗಿ ಇಲಾಖೆಯವರು ಈ ರಸ್ತೆ ಕಾರ್ಪೆಟಿಂಗ್ ಅಥವಾ ರೀಕಾರ್ಪೆಟಿಂಗ್ ಮಾಡದೇ ಕೇವಲ ತೆಗ್ಗುಗಳನ್ನು ಮಾತ್ರ ತುಂಬಲಿಕ್ಕೆ ಹತ್ತಿರುತ್ತಾರೆ. ಈ ರಸ್ತೆಯನ್ನು ಡಾಂಬರೀಕರಣ 1967ನೇ ಇಸವಿಯಲ್ಲಿ ಶ್ರೀ ಎಂ.ಆರ್.

ಉಜ್ಜನಕೊಪ್ಪ ಕಾರ್ಯಕಾರಿ ಅಭಯಂತರರು ಇದ್ದಾಗ ಡಾಂಬರೀಕರಣ ಮಾಡಲಾಯಿತು. ನಂತರ ಈ ರಸ್ತೆಯ ಮೇಲೆ ಕಾರ್ಪೇಟಿಂಗ್ ಹಾಗೂ ರೀ ಕಾರ್ಪೇಟಿಂಗ್ ಮಾಡಿರುವುದಿಲ್ಲ, ಕಾರ್ಪೇಟಿಂಗ್ ಮೊದಲು ಸ್ಥಳೀಯ ಅಧಿಕಾರಿಗಳನ್ನು ವಿನಂತಿಸಿಕೊಂಡಾಗ ಅವರು ಈ ಕೆಲಸಕ್ಕೆ ಹೆಚ್ಚಿನ ಹಣ ಬೇಕಾಗುವುದು ಇದು ಆಯವ್ಯಯ ಪಟ್ಟಿಯಲ್ಲಿ ಸೇರಿದಾಗ ಮಾತ್ರ ಎನ್ನುತ್ತಾರೆ. ಆದಕಾರಣ ಈ ಕೆಲಸಕ್ಕೆ ಸುಮಾರು 30 ಲಕ್ಷ ರೂ. ಬೇಕಾಗುವುದೆಂದು ಅನ್ನಲಿಕ್ಕೆ ಹತ್ತಿರುವರು. ಆದಕಾರಣ ಈ ರಸ್ತೆಯನ್ನು ಕೂಡಲೇ ದುರಸ್ತಿ ಮಾಡಲು ಕಾರ್ಯಕಾರಿ ಅಭಿಯಂತರರು ಬೆಳಗಾಂ ಇವರಿಗೆ ಆದೇಶ ನೀಡುವುದಾಗಬೇಕು ಎಂದು ನಾನು ಈ ಮೂಲಕ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : (ಮಾನ್ಯ ಲೋಕೋಪಯೋಗಿ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೇ,

ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಹಲಕಿಕಟ್ಟೆ-ಮಕ್ಕಳಗೇರಿ ಕಾಡಂ- ಹಲಕಿ ಕ್ರಾಸ್ಸವರೆಗೆ ಒಟ್ಟು 24 ಕಿ.ಮೀ. ಉದ್ದವಿದ್ದು, ಇದರಲ್ಲಿ 0-13ನೇ ಕಿ.ಮೀ. ವರೆಗೆ ಇತ್ತೀಚೆಗೆ ಮೇಲ್ದರ್ಜೆಗೇರಿಸಿ ಮುಖ್ಯ ಜಿಲ್ಲಾ ರಸ್ತೆಯಾಗಿದೆ. 13 ರಿಂದ 24ನೇ ಕಿ.ಮೀವರೆಗೆ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿದ್ದ ಮುಖ್ಯ ಜಿಲ್ಲಾ ರಸ್ತೆಯಾಗಿತ್ತು. ಈ ರಸ್ತೆಯ 3.75 ಮೀಟರ್ ಅಗಲಕ್ಕೆ ಬಹಳ ಹಿಂದೆ ಡಾಂಬರು ಮಾಡಿದೆ. ಈ ರಸ್ತೆಯ ಆಯ್ದ ಭಾಗಗಳಿಗೆ ಮರು ಜಲ್ಲಿ ಮಾಡಿ ಮರು ಡಾಂಬರೀಕರಣ ಮಾಡುವುದಕ್ಕೆ 18.00 ಲಕ್ಷ ರೂ.ಗಳ ಅಂದಾಜು ಆಗುತ್ತದೆ.

ಈ ರಸ್ತೆಯನ್ನು ಪ್ರತಿವರ್ಷವೂ ಲಭ್ಯವಾಗುವ ನಿರ್ವಹಣಾ ಅನುದಾನದಿಂದ ಸಂಚಾರಕ್ಕೆ ಅಡಚಣೆ ಉಂಟಾಗದಂತೆ, ನಿರ್ವಹಿಸಲಾಗುತ್ತಿದೆ. ಈ ರಸ್ತೆಯ ಮರು ಡಾಂಬರೀಕರಣವನ್ನು ಮುಂದಿನ ಸಾಲುಗಳಲ್ಲಿ ಅನುದಾನದ ಲಭ್ಯತೆಯನ್ನು ಅನುಸರಿಸಿ, ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

(6) ಹಟ್ಟಿ ಲಕ್ಕಮ್ಮ ವಿದ್ಯಾಸಮಿತಿ, ಚನ್ನಪಟ್ಟಣದಲ್ಲಿ ಟಿ.ಸಿ.ಹೆಚ್. ಪ್ರವೇಶದ ಬಗ್ಗೆ

SRI SADATH ALI KHAN (Channapatna) : The Hon'ble Minister for Primary and Secondary Education be pleased to state that the Hatti Lakkamma Vidya Samsthe, Channapatna town, Shree, Munishwra Swamy T.C.H. Training Centre has violated all the rules and Regulations of the Government while taking admission to the T.C.H. Course. The Government accorded permission to admit only thirty students who were eligible to take examination. Whether it has come to the notice of the Government that the above Management has given admission to 124 students for T.C.H. Course by collecting huge donations ranging from Rs. 8,000/- to Rs. 15,000/- Whether it is a fact that the 94 students of the T.C.H. Course have lodged their complaint against the institution to the Governor of Karnataka, Hon'ble Chief Minister, concerned Ministers and to the officers for justice? Whether the Government would constitute an enquiry in this regard?

Secondly whether the Government is considering to regularise the illegal admission of 94 students who have paid donation ranging from Rs. 8,000/- to Rs. 15,000/- to appear for the examination for the year 1993-94? Whether

the Government is considering to take over the Institution as the Institution has violated all the Rules and Regulations of the Government since its inception?

Thirdly whether the Hon'ble Minister for Primary and Secondary Education would take drastic action against the Management of the Institution and the officers who are involved and who have colluded with the Management and they may be suspended immediately till the enquiry into the whole episode is completed?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಶಿಕ್ಷಣಸಚಿವರ ಪರವಾಗಿ, ಮಾನ್ಯ ಅಧ್ಯಕ್ಷರೇ, ಚನ್ನಪಟ್ಟಣದಲ್ಲಿರುವ ಮುನೇಶ್ವರ ಸ್ವಾಮಿ ಉಪಾಧ್ಯಾಯರ ಟ್ರೈನಿಂಗ್ ಇನ್ಸಿಟ್ಯೂಟ್ನಲ್ಲಿ 30 ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವುಳ್ಳವರಾಗಿರುತ್ತಾರೆ. 93-94ನೇ ಸಾಲಿನಲ್ಲಿ ಈ ಸಂಸ್ಥೆಯು 94 ವಿದ್ಯಾರ್ಥಿಗಳನ್ನು ಸೇರಿಸಿಕೊಂಡಿದ್ದರು. ಇದನ್ನು ಅಧಿಕಾರಿ ವರ್ಗದವರು ಭೇಟಿ ಮಾಡಿದಾಗ ಇದನ್ನು ಕಂಡು ಹಿಡಿದು ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನೆಲ್ಲಾ ವಶಪಡಿಸಿಕೊಂಡಿದ್ದಾರೆ. ಅಡ್ಮಿಷನ್ ರಿಜಿಸ್ಟರ್ನಲ್ಲಿ 93-94ಕ್ಕೆ 23-9-93ರವರೆಗೂ ದಾಖಲಾಗಿದೆ. 124 ಜನ ಸೇರಿಸಿದ್ದೇವೆ ಅಂತ ಒಂದೇ ಅಟೆಂಡೆನ್ಸ್ ರಿಜಿಸ್ಟರ್ನಲ್ಲಿ ಬರೆಯಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು 30 ಜನ ವಿದ್ಯಾರ್ಥಿಗಳಿಗೆ ಮಾತ್ರ ಅಡ್ಮಿಷನ್ ಕೊಡಿ, ಬೇರೆಯವರಿಗೆ ಕೊಡಬೇಡಿ ಎನ್ನುವ ಸೂಚನೆಯನ್ನು ಕೊಡಲಾಗಿದೆ. ಡೊನೇಶನ್ ವಸೂಲಿ ಮಾಡಿರುವ ಬಗ್ಗೆ ಯಾರಿಂದಲೂ ಫಿರ್ಯಾದು ಬಂದಿಲ್ಲ. 92-93ನೇ ಸಾಲಿನಲ್ಲೂ ನಿಗಧಿಯಾದುದಕ್ಕಿಂತ 40 ಜನ ಹುಡುಗರನ್ನು ಜಾಸ್ತಿ ತೆಗೆದುಕೊಂಡಿದ್ದರು. ಮಾನ್ಯ ಹೈಕೋರ್ಟ್ ಆಜ್ಞೆಯಂತೆ ಇವರನ್ನು ಪರೀಕ್ಷೆಗೆ ಕೂರಿಸಲಾಗಿದೆ. ಈ ಸಂಸ್ಥೆಗೆ ಏತಕ್ಕೆ ನಿಮ್ಮಮೇಲೆ ಕ್ರಮ ತೆಗೆದುಕೊಳ್ಳಬಾರದು ಎನ್ನುವನೋಟೀಸ್ ಸಹ ಜಾರಿ ಮಾಡಲಾಗಿದೆ. ಬೆಂಗಳೂರಿನ ಡಿಡಿಪಿಐ ರವರಿಗೆ ಆದೇಶವನ್ನು ಕಳುಹಿಸಿ ಇವರಮೇಲೆ ಕ್ರಮತೆಗೆದುಕೊಳ್ಳಿ ಎಂದು ತಿಳಿಸಲಾಗಿದೆ. ನಿಗಧಿಯಾಗಿದ್ದಕ್ಕಿಂತ ಹೆಚ್ಚು ಇರುವ ವಿದ್ಯಾರ್ಥಿಗಳನ್ನು ಅಡ್ಮಿಷನ್ಗೆ ಒಪ್ಪಿಸುವುದಕ್ಕೆ ಸಕ್ರಮಗೊಳಿಸುವುದಕ್ಕೆ ಸಾಧ್ಯ ಇಲ್ಲ. ಈ ಸಂಸ್ಥೆಗೆ ಕೊಟ್ಟಿರತಕ್ಕಂಥ ರೆಕಗ್ನಿಷನ್ ವಾಪಸ್ಸು ತೆಗೆದುಕೊಳ್ಳಬೇಕೆಂದು ತೀರ್ಮಾನ ಆಗಿರುವುದರಿಂದ ಈ ಸಂಸ್ಥೆಯನ್ನು ಸರ್ಕಾರದವರು ತೆಗೆದುಕೊಳ್ಳಬೇಕಾದುದು ಇಲ್ಲ. ಇಲಾಖೆಯವರು ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿರುವುದರಿಂದ ಆ ಪ್ರಕಾರವಾಗಿ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಯಾವ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎನ್ನುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇಲ್ಲ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಮತ್ತೆ ಸಭೆ 3-00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು 2-00 ಗಂಟೆಗೆ ಮುಂದೂಡಿ ಮತ್ತೆ 3-00 ಗಂಟೆಗೆ ಸೇರಲು ನಿರ್ಧರಿಸಿತು)

(ಸದನವು 3-45ಕ್ಕೆ ಮತ್ತೆ ಪ್ರಾರಂಭವಾಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಸಭಾಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿಯವರು) ವಹಿಸಿದ್ದರು.

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ

+ ಶ್ರೀ ವೈ.ಕೆ. ರಾಮಯ್ಯ. (ಕುಣಿಗಲ್) : ಮಾನ್ಯ ಸಭಾಧ್ಯಕ್ಷರೇ [illegible]

ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದಿಸುತ್ತೇನೆ. ಈ ವಂದನಾ ನಿರ್ಣಯವನ್ನು ಮಾಡುವಾಗ ಈ 'ಬೆಗ್' ಎನ್ನುವ ಪದವನ್ನು ಉಪಯೋಗಿಸಲೇ ಬೇಕೇ ಎನ್ನುವುದು ನನ್ನ ಪ್ರಶ್ನೆ. ನಮಗೆ ಸ್ವಾತಂತ್ರ್ಯ ಬಂದು 47 ವರ್ಷವಾದ ಮೇಲೆ ರಾಜ್ಯಪಾಲರೋ ಮಹಾರಾಜರೋ ಮಂತ್ರಿಗಳೋ ನನಗೆ ಗೊತ್ತಿಲ್ಲ. ಯಾರಾದರೂ ಆಗಲೀ 'I beg to move" ಅನ್ನುವ ಪದವನ್ನು ಮುಂದಿನ ವರ್ಷದಿಂದಲಾದರೂ ನಿಲ್ಲಿಸಿ "Beg Leave to thank the Governor" ಗವರ್ನರ್ ಅನ್ನುವುದನ್ನು ಮುಂದಿನ ವರ್ಷದಿಂದಲಾದರೂ ಕೈ ಬಿಡಬೇಕು ಇದರ ಅವಶ್ಯಕತೆಯಿಲ್ಲವೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ರಾಜ್ಯಪಾಲರ ಭಾಷಣ 15ನೇ ಪ್ಯಾರಾದಲ್ಲಿ ನಮೂದಿಸಿರುವ ರೀತಿ ಇದರ ಉದ್ದೇಶ 2. ಒಂದನೆಯ ಉದ್ದೇಶ ಕಳೆದ ಒಂದು ವರ್ಷದ ಅವಧಿಯಲ್ಲಿ ಪ್ರಮುಖ ಸಾಧನೆಗಳ ಬಗ್ಗೆ ಮತ್ತು ಮುಂಬರುವ ವರ್ಷಗಳಲ್ಲಿ ನನ್ನ ಸರಕಾರದ ಕಾರ್ಯ ನಿಯಮಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ತಿಳಿಸಬಯಸುತ್ತೇನೆ ಎಂದು ಇದೆ. ಅಂದರೆ ಕಳೆದ ವರ್ಷ ಏನಾಯಿತು ಎನ್ನುವುದು ಒಂದು, ಮತ್ತೆ ಮುಂದಿನವರ್ಷ ಏನೇನು ಮಾಡುವುದು ಎನ್ನುವುದು ಮತ್ತೊಂದು. ಈ ಎರಡು ವಿಷಯಗಳನ್ನು ಕುರಿತು ರಾಜ್ಯಪಾಲರು ಭಾಷಣ ಮಾಡಬೇಕಾದ್ದು ಕಾರ್ಯಕ್ರಮವೆಂದು ಅವರೇ ಹೇಳಿಕೊಂಡಿದ್ದಾರೆ. ಮತ್ತೊಂದು ಪದ್ಧತಿ ಇದು ಅವಿವೇಕವೋ 'ಅಥವಾ ಏನೋ ಗೊತ್ತಿಲ್ಲ. ನನ್ನ ಪ್ರಕಾರ ಈ ರಾಜ್ಯಪಾಲರ ಭಾಷಣ ಅಂದರೆ ಒಂದು ಶ್ರಾದ್ಧ ಮಾಡಿದ ಹಾಗೆ. ಅಂದರೆ ಪ್ರತಿ ವರ್ಷ ಅದಕ್ಕೇನೂ ಪ್ರಾಮುಖ್ಯತೆ ಇರುವುದಿಲ್ಲ ಯಾವುದೋ ಒಂದು ದಿನಾಂಕವನ್ನು ನಿಗದಿ ಮಾಡಿ ಆ ದಿನಾಂಕದಲ್ಲಿ ಶ್ರಾದ್ಧ ಮಾಡಿ ಬಿಡುತ್ತಾರೆ. ಅದಕ್ಕಿಂತ ಹೆಚ್ಚಿಗೆ ಏನೂ ಪ್ರಯೋಜನ ನನ್ನ ಕಣ್ಣಿಗೆ ಕಾಣುತ್ತಿಲ್ಲ. ಇನ್ನೊಂದು ಅರ್ಥವಾಗದೆ ಇರುವ ವಿಷಯ ಯಾವುದು ಎಂದರೆ ಸರಕಾರವನ್ನು ರಾಜ್ಯಪಾಲರಿಗೆ ಯಾವಾಗ ಮಾರಾಟ ಮಾಡಿದರು, ಈ ಸರಕಾರವೆಂದು ಅವರ ಕೈಯಲ್ಲಿ ಹೇಳಿಸಿ. ಸರಕಾರವನ್ನು ರಾಜ್ಯಪಾಲರಿಗೆ ಯಾವಾಗ ಮಾರಿದಿರಿ ಎಂದು ನಾನು ಸರಕಾರದಲ್ಲಿ ವಿನಯದ ಪ್ರಾರ್ಥನೆ ಮಾಡುತ್ತೇನೆ. ಈ ಸರಕಾರವೆಂದಾದರೂ ಸಂಭೋದನೆ ಮಾಡಲಿ. ರಾಜ್ಯಪಾಲರಿಗೆ ಈ ಸರಕಾರವನ್ನು ಯಾವಾಗ ಮಾರಾಟ ಮಾಡಿದ್ದೇವೆ? ಇದನ್ನು ಬದಲಾವಣೆ ಮಾಡಿಕೊಳ್ಳಬೇಕೆಂದು ನನ್ನ ಪ್ರಾರ್ಥನೆ. ಈಗಾಗಲೇ ಹೇಳಿದ ಹಾಗೆ ರಾಜ್ಯಪಾಲರ ಭಾಷಣದಲ್ಲಿ ಕಳೆದ ವರ್ಷವೇನು ಆಯಿತು ಮುಂದಿನ ವರ್ಷ ಏನೇನು ಕಾರ್ಯಕ್ರಮ ಹಮ್ಮಿಕೊಂಡಿದ್ದೀರಿ ಎನ್ನುವುದರರ ಬಗ್ಗೆ ದಾಖಲೆ ಈ ಭಾಷಣದಲ್ಲಿ ಇರಬೇಕಾಗುತ್ತದೆ. ಕಳೆದ ವರ್ಷ ಆಗಿದ್ದಂತಹ ಒಂದು ಪ್ರಮುಖ ಕಾರ್ಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. 14ನೇ ಪ್ಯಾರದಲ್ಲಿ ಹೀಗಿದೆ "ಭಾರತ ಸಂವಿಧಾನದ 73ನೆಯ ತಿದ್ದುಪಡಿಯ ಎಲ್ಲ ಪ್ರಮುಖ ಅಂಶಗಳನ್ನೊಳಗೊಂಡಂಥ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 93ಎಂಬ ಶಾಸನವನ್ನು ಜಾರಿಗೊಳಿಸುವಲ್ಲಿ ನನ್ನ ಸರಕಾರವು ದೇಶದಲ್ಲೇ ಪ್ರಪ್ರಥಮವೆಂಬುದು ಹೆಮ್ಮೆಯ ವಿಷಯ. ಇಷ್ಟನ್ನು ಹೇಳಿ ಮತ್ತೆ ಮುಂದುವರಿಸುತ್ತಾರೆ ಪಂಚಾಯತ್ ರಾಜ್ ಸಂಸ್ಥೆಗಳ ಎಲ್ಲ ಮೂರು ಹಂತಗಳು ಅಂದರೆ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಹಂತಗಳ ಒಟ್ಟು ಸ್ಥಾನಗಳ ಪೈಕಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ ಶೇಕಡ 23ರ ಮೀಸಲಾತಿಯಲ್ಲದೆ, ಹಿಂದುಳಿದ ವರ್ಗಗಳಿಗೆ ಶೇಕಡ 33 ಮತ್ತು ಮಹಿಳೆಯರಿಗೆ ಶೇಕಡ 33ಕ್ಕೆ ಕಡಿಮೆಯಿಲ್ಲದಂತೆ ಮೀಸಲಾತಿಯನ್ನು ಶಾಸನಬದ್ಧಗೊಳಿಸಿರುವ ಪ್ರಥಮ ರಾಜ್ಯವಾಗಿದೆ." ಎಂದು ತಿಳಿಸಿದ್ದಾರೆ. ಪಂಚಾಯತ್ ರಾಜ್ ಪರಿಕಲ್ಪನೆ ಬಹುಶಃ ನಮಗೇನೂ ಹೊಸದಲ್ಲ, ಅರಳಿ ಕಟ್ಟೆಯ ಮೇಲೆ ಕುಳಿತು ಪಂಚಾಯತಿ ಮಾಡುತ್ತಿದ್ದ ವ್ಯವಸ್ಥೆಯಿತ್ತು. 56 ರಿಂದೀಚೆಗೆ ಈ ಪಂಚಾಯತ್ ರಾಜ್ ವ್ಯವಸ್ಥೆ ಪರಿಕಲ್ಪನೆ ಕಾನೂನಿನ ಚೌಕಟ್ಟಿನಲ್ಲಿ ಬಂದು, ಕಾಲಕಾಲಕ್ಕೆ ಅದನ್ನು ಬದಲಾವಣೆ ಮಾಡಿಕೊಂಡು ಬರುತ್ತಿದ್ದೇವೆ. ಆದರೆ

ಯಾವುದೆಂದರೆ ಯಾರಿಗೆ ಈ ವ್ಯವಸ್ಥೆಯಲ್ಲಿ ಅಧಿಕಾರ ಸಿಕ್ಕಿಲ್ಲವೋ ಅಂಥವರಿಗೆ ಅಧಿಕಾರವನ್ನು ಕೊಡಲಿಕ್ಕೆ ಮೀಸಲಾತಿಯನ್ನು ತಂದಿದ್ದಾರೆ. ಇದು ಅತ್ಯಂತ ಶ್ಲಾಘನೀಯವಾದುದು. ಹಿಂದುಳಿದವರಿಗೆ ಪರಿಶಿಷ್ಟ ವರ್ಗದವರಿಗೆ, ಜಾತಿಯವರಿಗೆ ಯಾರಿಗೆ ಅಧಿಕಾರ ಸಿಕ್ಕಿಲ್ಲವೋ ಅಂತಹವರಿಗೆ ಮೀಸಲಾತಿಯನ್ನು ತರುವುದರ ಮುಖಾಂತರ ಕಾನೂನನ್ನು ತಂದಿರುವುದು ಬಹಳ ಉತ್ತಮವಾದ ಕೆಲಸ ಅದನ್ನು ಈ ಸರಕಾರದವರು ಕಾನೂನನ್ನು ತಂದಿರುವುದು ಬಹಳ ಉತ್ತಮವಾದ ಕೆಲಸ ಅದನ್ನು ಈ ಸರಕಾರದವರು ಮಾಡಿದ್ದಾರೆ. ಈ ಕೆಲಸ ಮಾಡುವಂತಹ ಸಂದರ್ಭದಲ್ಲಿ 72-73ನೇ ಸಂವಿಧಾನ ಸಂವಿಧಾನ ತಿದ್ದುಪಡಿಯಾಗಿದೆ. 72ರ ತಿದ್ದುಪಡಿ ಪ್ರಕಾರ ಗ್ರಾಮಾಂತರ ಪ್ರದೇಶದಲ್ಲಿ ಮೀಸಲಾತಿ, 73ರ ಪ್ರಕಾರ ತುಳಿತಕ್ಕೆ ಒಳಗಾಗಿರುವವರನ್ನು ಅಭಿವೃದ್ಧಿಗೊಳಿಸಲಿಕ್ಕೆ ಮೀಸಲಾತಿಯನ್ನು ಕೊಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ತಮ್ಮ ಮೂಲಕ ಈ ಸರ್ಕಾರಕ್ಕೆ ಒಂದು ಪ್ರಾರ್ಥನೆಯನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರದಲ್ಲೂ ಅವರ ಸರ್ಕಾರ ಇರುವುದರಿಂದ 75ರ ತಿದ್ದುಪಡಿ ಒಂದು ತಂದು ಈ ವ್ಯವಸ್ಥೆಯನ್ನು ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ವಿಸ್ತರಿಸಬೇಕು ಎಂಬುದು ನನ್ನ ಪ್ರಾರ್ಥನೆ. ಮಾನ್ಯ ಖರ್ಗೆಯವರೇ 75ನೇ ತಿದ್ದುಪಡಿಯನ್ನು ಸಂವಿಧಾನಕ್ಕೆ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ತಾವು ಹೇಳುವುದನ್ನು ಕೇಳುತ್ತಿದ್ದೇನೆ. ಸಂವಿಧಾನಕ್ಕೆ 75ನೇ ತಿದ್ದುಪಡಿ ತಂದು ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಅನ್ವಯಿಸಬೇಕು ಎಂದು ತಾವು ಹೇಳುತ್ತಿದ್ದೀರಿ.

ಶ್ರೀ ವೈ.ಕೆ. ರಾಮಯ್ಯ: ಕೇಳುತ್ತಿದ್ದೀರಿ ತಾನೇ? ಅಷ್ಟೇ ಅಲ್ಲ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗುತ್ತೇನೆ. ಆಗ ಈ ರಾಜ್ಯಕ್ಕೆ ಒಬ್ಬ ಪರಿಶಿಷ್ಟ ಜಾತಿಯ ಮುಖ್ಯಮಂತ್ರಿ, ಈ ರಾಷ್ಟ್ರಕ್ಕೆ ಒಬ್ಬ ಹಿಂದುಳಿದ ವರ್ಗದ ಪ್ರಧಾನ ಕೊಡುವಂಥ ಪುಣ್ಯದ ಕೆಲಸ ಈ ಸರ್ಕಾರ ಈ ಪಕ್ಷ ಮಾಡಿದರೆ ಅವತ್ತು ಮಾತ್ರ ಬಹುಶಃ ಇವರ ಪ್ರಾಮಾಣಿಕತನವನ್ನು ಪ್ರಶ್ನೆ ಮಾಡುವ ಪ್ರಯತ್ನವನ್ನು ನಾನು ಮಾಡುವುದಿಲ್ಲ. ಬಹುಶಃ ಅದನ್ನು ಮಾಡುವವರೆಗೆ ಇವರ ಪ್ರಾಮಾಣಿಕತೆ ಪ್ರಶ್ನೆ ಮಾಡಲೇಬೇಕಾಗುತ್ತದೆ. ಈ ಒಂದು ವ್ಯವಸ್ಥೆಯನ್ನು ತುಳಿತಕ್ಕೆ ಒಳಗಾಗಿರುವ ಜನರ ವೋಟಿನ ಆಸೆಗಾಗಿ ಮಾಡಿರುವ ಒಂದು ಕುತಂತ್ರ ಎಂದು ಹೇಳದೇ ವಿಧಿಯಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಯಾವುದೇ ಒಂದು ಒಳ್ಳೆಯ ಕೆಲಸ ಮಾಡಿದರೆ ಅದು ಕುತಂತ್ರ ಎಂದು ಹೇಳಿದರೆ ಹೇಗೆ? ಏಕೆಂದರೆ ನೀವು ನಾವು ಎಲ್ಲರೂ ಹಾಗೆ ಹೇಳುತ್ತೇವೆ. 1983ರಲ್ಲಿ ಮೆಜಾರಿಟಿ ನಿಮ್ಮ ಪಾರ್ಟಿಗೆ ಬಂದಿತ್ತು ಯಾರಿಗೆ ಮುಖ್ಯಮಂತ್ರಿ ಮಾಡಿದಿರಿ? ಪರಿಶಿಷ್ಟ ಜಾತಿಯವರನ್ನು ಅನುಭವ ಇದ್ದವರು ಮಾಡಲಿಕ್ಕೆ ಇರಲಿಲ್ಲವೇ? ಇವು ಬರೇ ಶಾಸ್ತ್ರ ಹೇಳುವುದಕ್ಕೆ ಬದನೆಕಾಯಿ ಉಣ್ಣಲಿಕ್ಕೆ ಎನ್ನುವುದು ಬೇಡ. ಎಲ್ಲರೂ ಹಾಗೆ.

ಶ್ರೀಮತಿ ಮೋಟಮ್ಮ: ಕಾಮಾಲೆ ಕಣ್ಣಿಗೆ ಎಲ್ಲಾ ಹಳದಿಯಾಗಿ ಕಾಣುತ್ತದೆ ಎನ್ನುವ ರೀತಿ.

ಶ್ರೀ ವೈ.ಕೆ. ರಾಮಯ್ಯ: ಸನ್ಮಾನ್ಯ ಅಧ್ಯಕ್ಷರೇ, ತರ್ಕ ಯಾವಾಗಲೂ ತರ್ಕಕ್ಕೆ ಆಗಬಾರದು. ತರ್ಕದಿಂದ ಸತ್ಯದ ಶೋಧನೆ ಆಗಬೇಕು ಎಂದು ನಾನು ನಂಬಿಕೊಂಡಿರುವವನು. ನಾನೇನೂ ಕೇಳಿದರೆ ಅವರೇನೋ ಹೇಳಿದರೆ ನಾನೇನು ಮಾಡಲಿ? 1984ರಲ್ಲಿ ತಂದಂತಹ ಗ್ರಾಮ ಪಂಚಾಯತಿಯ ಶಾಸನದಲ್ಲಿ ಇಂತಹ ಒಂದು ಮೀಸಲಾತಿಯನು ನಾವೂ ತಂದಿದ್ದರೆ ಈ [illegible]

ಆಗುತ್ತಿತ್ತು. ನನ್ನ ಪ್ರಾರ್ಥನೆ ಇಷ್ಟೇನೇ. ಯಾವ ಪ್ರಯೋಗವನ್ನು ನೀವು ಹಳ್ಳಿಗಳಲ್ಲಿ ಮಾಡುವುದಕ್ಕೆ ಹೊರಟಿದ್ದೀರೋ, ಯಾವ ಪ್ರಯೋಗವನ್ನು ಕೇವಲ ಒಂದೇ ಒಂದು ಲಕ್ಷ ರೂಪಾಯಿಗಳು ಆಯವ್ಯಯ ಇರುವ ಕಡೆ ಮಾರುವುದಕ್ಕೆ ಹೊರಟಿದ್ದೀರೋ, ಸಾವಿರಾರು ಕೋಟಿ ರೂಪಾಯಿಗಳನ್ನು ಹಂಚುವಂತಹ ಅಧಿಕಾರವನ್ನು ಆ ಕೆಳದರ್ಜೆಯ ಜನರಿಗೆ ಕೊಡುವಂತಹ ಪ್ರಯತ್ನವನ್ನು ಮಾಡಿ ಎಂದು ನಾನು ಕೇಳುತ್ತಿದ್ದೇನೆ. 1983ರಲ್ಲಿ ಆಯಿತು. ಅದಕ್ಕೂ ಇದಕ್ಕೂ ಹೋಲಿಸಬೇಡಿ. ಆ ಪ್ರಶ್ನೆಗೆ ಆಮೇಲೆ ಬರೋಣ. ನನ್ನ ಪ್ರಶ್ನೆ ಇಷ್ಟೇನೆ. ಈ ಒಂದು ವ್ಯವಸ್ಥೆ ತಂದಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಸ್ವಲ್ಪ ವಿಸ್ತಾರ ಮಾಡಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇದರ ಅವಶ್ಯಕತೆ ಏನು ಇತ್ತು ಎಂಬುದು ನನಗೆ ಗೊತ್ತಿಲ್ಲ. ಪ್ಯಾರಾ 21ರಲ್ಲಿ ಪ್ರಧಾನ ಮಂತ್ರಿಗಳಾದ ಪಿವಿ ನರಸಿಂಹರಾವ್ರವರು ಆರಂಭಿಸಿರುವ ಹೊಸ ಉದಾರ, ಆರ್ಥಿಕ ನೀತಿಗಳು ವಿಭಿನ್ನ ಕ್ಷೇತ್ರಗಳಲ್ಲಿರುವ ಖಾಸಗಿ ಉದ್ದಿಮೆಗಳು, ಸ್ವತಂತ್ರ ಉದ್ಯೋಗ ಮುಂತಾದವುಗಳಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ." ಹೊಸ ಉದಾರ ಆರ್ಥಿಕ ನೀತಿ ! ಒಬ್ಬರು ಪ್ರಧಾನ ಮಂತ್ರಿಗಳು ಇನ್ನೊಬ್ಬರು ಅತ್ಯಂತ ಪ್ರಾಜ್ಞರು, ಅತ್ಯಂತ ಬುದ್ಧಿವಂತರಾದಂತಹ ಆರ್ಥಿಕ ಮಂತ್ರಿಗಳು. ಇವರಿಬ್ಬರೂ ತಂದಿರುವ ಈ ಉದಾರ ಆರ್ಥಿಕ ನೀತಿಯಿಂದ ಈ ರಾಷ್ಟ್ರದ ಸಾಮಾನ್ಯ ಪ್ರಜೆಗೆ ಕಿಂಚಿತ್ತೂ ಅನುಕೂಲ ಆಗಿಲ್ಲ. ಕಾರುಕೊಂಡುಕೊಳ್ಳುವವನಿಗೆ ಆಗಿದೆ. ಫ್ರಿಡ್ಜ್ ಕೊಂಡುಕೊಳ್ಳುವವನಿಗೆ ಆಗಿದೆ.

DR. N.B.NANJAPPA : It is too early to tell that. It is a liberalisation policy.

ಅದು ಇದ್ದರೆ ದೀರ್ಘವಾಗಿ ಅದರ ಮೇಲೆ ಮಾತನಾಡಿ. ಬರೀ ಕಾಮೆಂಟ್ಗೋಸ್ಕರ ಮಾತನಾಡಿದರೆ ಪ್ರಯೋಜನ ಆಗುವುದಿಲ್ಲ.

ಶ್ರೀ ವೈ.ಕೆ. ರಾಮಯ್ಯ: ಈ ರಾಷ್ಟ್ರದ ಜನಸಾಮಾನ್ಯರಿಗೆ ಇಂತಹದೇ ಒಂದು ಅನುಕೂಲ ಆಗಿದೆ ಎಂದು ನನ್ನ ಗಮನಕ್ಕೆ ತಂದರೆ ಆಗ ಮಾತ್ರ ನಾನು ಮಾಡಿರತಕ್ಕ ಟೀಕೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಹೌದು ಅನುಕೂಲ ಆಗಿದೆ, ದೊಡ್ಡ ಮನುಷ್ಯರಿಗೆ ಅನುಕೂಲ ಆಗಿದೆ. ಈ ಆರ್ಥಿಕ ನೀತಿ ಎಂಟು ಸಾವಿರ ಕೋಟಿ ಅಪವ್ಯಯನಡೆಯುವಂತಹ ಪರಿಸ್ಥಿತಿಯನ್ನು ಈ ರಾಷ್ಟ್ರದಲ್ಲಿ ಕಾಣುವಂತಹ ಉದಾರ ನೀತಿಯೆಂದು ನಾನು ಅಂದುಕೊಂಡಿರಲಿಲ್ಲ. ಡಾ॥ ಮನ್ಮೋಹನ್ಸಿಂಗ್ ಅವರು ಇಂತಹದಕ್ಕೆಲ್ಲಾ ನಾನು ನಿದ್ದೆಗೆಡಲಾರೆ. I can not afford to close my sleep for such a small thing.

ಎಂಟು ಸಾವಿರ ಕೋಟಿ ರೂಪಾಯಿಗಳ ಅಪವ್ಯವಹಾರ ಈ ರಾಷ್ಟ್ರದಲ್ಲಿ ನಡೆದಾಗಲೂ ಕೂಡ ನಿದ್ದೆಗೆಡದಿರುವ ಆರ್ಥಿಕ ಮಂತ್ರಿ ತಂದಿರುವಂತಹ ಈ ಆರ್ಥಿಕ ನೀತಿಯಿಂದ ಈ ರಾಷ್ಟ್ರದ ಜನಸಾಮಾನ್ಯರಿಗೆ ಯಾವುದೇ ಕಿಂಚಿತ್ ಅನುಕೂಲ ಆಗಿಲ್ಲ; ದೊಡ್ಡವರಿಗೆ ಆಗಿದೆ. ಅದನ್ನು ಏಕೆ ಇಲ್ಲಿ ಪ್ರಸ್ತಾಪ ಮಾಡಿದರು ಎಂಬುದು ನನಗೆ ಗೊತ್ತಿಲ್ಲ. 24ನೇ ಪ್ಯಾರಾದಲ್ಲಿ ನಿವೇಶನಗಳನ್ನು ಹಂಚುವುದು ಮತ್ತು ಬಡವರಿಗೆ ಮನೆ ಕಟ್ಟುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಬಡವರಿಗೆ ಮನೆ ಕಟ್ಟುವಂತಹ ಒಂದು ಕಾರ್ಯಕ್ರಮ ಎಷ್ಟೊಂದು ಯಶಸ್ವಿಯಾಗಿದೆ ಎಂದು ನೋಡಬೇಕಾದರೆ ದಯಮಾಡಿ ತುಮಕೂರಿನಲ್ಲಿ ಬೆಳ್ಳಾವಿ ಕ್ಷೇತ್ರಕ್ಕೆ ಹೋಗಿ ಬನ್ನಿ.

ಅದು ಕಾಂಗ್ರೆಸ್ ಸದಸ್ಯರಾಗಿರುವ ಆರ್. ನಾರಾಯಣರವರ ಕ್ಷೇತ್ರ. ಅಲ್ಲಿ 120 ಮನೆಗಳನ್ನು ಅರ್ಧಂಬರ್ಧ ಕಟ್ಟಿ ನಿಲ್ಲಿಸಲಾಗಿದೆ. ಅದಕ್ಕೆ ದಾತರೂ ಇಲ್ಲ, ಫಿರ್ಯಾದೂ ಇಲ್ಲ. ಹೆಂಚು, ಕಿಟಕಿ, ಬಾಗಿಲುಗಳನು ಯಾವಾಗ ಹಾಕುತ್ತಾರೆಂದು ಯಾರೂ

ಹೇಳುವವರಿಲ್ಲ. ನನ್ನ ಕ್ಷೇತ್ರವಾದ ಕುಣಿಗಲ್ನಲ್ಲೂ ಕೂಡ ಹಾಗೆ ಅರ್ಧಂಬರ್ಧ ಕಟ್ಟಿ ನಿಲ್ಲಿಸಲಾದ 400 ಮನೆಗಳಿವೆ. ಈ ಕುರಿತು ಹೌಸಿಂಗ್ ಬೋರ್ಡ್ನವರನ್ನು ಕೇಳಿದರೆ ಅದು ನಮಗೆ ಸಂಬಂಧಪಡುವುದಿಲ್ಲ, ನಮಗೆ ದುಡ್ಡು ಬಂದಿಲ್ಲವಾದ್ದರಿಂದ ಕಂಟ್ರಾಕ್ಟರ್ ಕೋರ್ಟಿಗೆ ಹೋಗಿದ್ದಾರೆಂದು ಹೇಳುತ್ತಾರೆ. ಜಿಲ್ಲಾಧಿಕಾರಿಗಳನ್ನು ಕೇಳಿದರೆ ನಮಗೆ ಸಂಬಂಧಿಸಿದ್ದಲ್ಲ, ಇದು ಹೌಸಿಂಗ್ ಬೋರ್ಡಿಗೆ ಸಂಬಂಧಿಸಿದ್ದು ಎಂದು ಹೇಳುತ್ತಾರೆ. ಆದುದರಿಂದ, ಈ ರಾಜ್ಯದಲ್ಲಿ ಸೂರು ಇಲ್ಲದವರಿಗೆ ನಿವೇಶನಗಳನ್ನು ಹಂಚಿ ಮನೆಗಳನ್ನು ಕಟ್ಟಿಕೊಟ್ಟು ಸೂರನ್ನು ಕಲ್ಪಿಸಿಕೊಟ್ಟಿದ್ದೇವೆಂದು ಹೇಳಿಕೊಳ್ಳುವಂಥ ಸರ್ಕಾರ ಅರ್ಧಂಬರ್ಧ ಕಟ್ಟಿರುವ ಮನೆಗಳನ್ನು ಸಂಪೂರ್ಣ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿ ತನ್ನ ಮಾರ್ಯಾದೆ ಉಳಿಸಿಕೊಳ್ಳಲೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಬಹುಶಃ ನಿಮ್ಮ ಕ್ಷೇತ್ರದಲ್ಲೂ ಇದೇ ರೀತಿ ಆಗಿದೆಯೆಂದು ಕಾಣುತ್ತದೆ. ಆಶ್ರಯ ಯೋಜನೆಯಡಿ ಹೌಸಿಂಗ್ ಬೋರ್ಡಿನಿಂದ ಹಿಂದೆ ಆದಂಥ ಕರ್ಮಕಾಂಡ ಇದೆಯೆಲ್ಲಾ, ನಿಮ್ಮದೇನೇ ಕರ್ಮಕಾಂಡವಿರಲಿ, ಎಲ್ಲೆಲ್ಲಿ ಅರ್ಧಂಬರ್ಧ ಕಟ್ಟಿರುವ ಮನೆಗಳಿವೆ, ಅವುಗಳನ್ನು ಪೂರ್ತಿಗೊಳಿಸಬೇಕೆಂದು ನಾನು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಾಥಮಿಕ ಶಿಕ್ಷಣದ ಕುರಿತು ಪ್ರಸ್ತಾಪಿಸಿದ್ದಾರೆ. ಇದರ ಬಗ್ಗೆ ಹೆಚ್ಚಿಗೆ ಭಾಷಣ ಮಾಡುವುದಕ್ಕೆ ನನಗೆ ಅವಶ್ಯಕತೆಯಿಲ್ಲ. ನನ್ನ ಒಂದೇ ತಾಲ್ಲೂಕಿಗೆ ಸಂಬಂಧಿಸಿದಂತೆ ಒಟ್ಟು 250 ಜನ ಪ್ರಾಥಮಿಕ ಶಾಲಾ ಉಪಾಧ್ಯಾಯರ ಹುದ್ದೆಗಳು ಖಾಲಿ ಇವೆ. ಆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಬ್ಬರು ಕ್ಯಾಬಿನೆಟ್ ದರ್ಜೆ ಸಚಿವರೂ ಕೂಡ ಇದ್ದಾರೆ. ಅವರೇ ಅತ್ಯಂತ, ಹಿರಿಯರಾದಂಥ ಶ್ರೀಮಾನ್ ಹುಚ್ಚಮಾಸ್ತಿಗೌಡರು. ಅಲ್ಲಿ 250 ಜನ ಪ್ರಾಥಮಿಕ ಶಾಲಾ ಉಪಾಧ್ಯಾಯರ ಹುದ್ದೆ ಖಾಲಿ ಇದೆ, ಮತ್ತೆ ಯಾವುದಕ್ಕೆ ನಿಮ್ಮ ಆದ್ಯತೆ? ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ರೀಸರ್ಚ್ಗೆ ನೀವು 5 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. I am not worried and I don't object. ಈ ರಾಜ್ಯದ ಜನತೆಗೆ ನೀವು ಯಾವುದೂ ಕೊಡುವುದೂ ಬೇಡ. ಪಾಠ ಹೇಳುವುದಕ್ಕೆ ಒಬ್ಬ ಉಪಾಧ್ಯಾಯರನ್ನು ಕೊಡದಿರುವಂಥ ಪರಿಸ್ಥಿತಿ ಇಟ್ಟುಕೊಂಡು, ರಾಜ್ಯದಲ್ಲಿ ಸುಮಾರು 10-15 ಸಾವಿರ ಶಾಲಾ ಉಪಾಧ್ಯಾಯರ ಕೊರತೆ ಇದೆಯೆಂದು ಅವರೇ ಒಪ್ಪಿಕೊಂಡಿದ್ದಾರೆ. ಈ ರೀತಿ ಖಾಲಿಯಿರುವ ಶಾಲಾ ಉಪಾಧ್ಯಾಯರ ಹುದ್ದೆಗಳನ್ನು ಭರ್ತಿ ಮಾಡದೆ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ನೀವು ಮಾಡುವ ಯಾವುದೆ ಒಂದು ಕೆಲಸ ಸಾರ್ಥಕವಾಗಲಾರದೆಂದು ನಾನು ಸರ್ಕಾರಕ್ಕೆ ಒತ್ತಾಯಿಸುತ್ತಿದ್ದೇನೆ. ಈ ರಾಜ್ಯದ, ರಾಷ್ಟ್ರದ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ನಿಮಗೇನಾದರೂ ಕಿಂಚಿತ್ ಅಭಿಲಾಷೆ, ಆಸೆ-ಆಕಾಂಕ್ಷೆಗಳಿದ್ದರೆ ಮೊದಲು ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳನ್ನು ಎಲ್ಲಾ ಊರುಗಳಲ್ಲೂ ನೇಮಿಸುವಂಥ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ರಾಜ್ಯಪಾಲರು ತಮ್ಮ ಭಾಷಣದ 30ನೇ ಪ್ಯಾರಾದಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ಸಾಕ್ಷರತಾ ಆಂಧೋಲನ ಯಾರ ಚಿಂತನೆಯ " ಕೂಸು ಎಂದು ನನಗಂತೂ ಗೊತ್ತಿಲ್ಲ. ಆದರೆ, ಈ ಕಾರ್ಯಕ್ರಮ ಹಮ್ಮಿಕೊಂಡು ಅಧಿಕಾರಿಗಳು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ತುಮಕೂರು ಜಿಲ್ಲೆಯಲ್ಲೂ ಸುಮಾರು 3 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಆ ಜಿಲ್ಲೆಯನ್ನು 'ಸಾಕ್ಷರತಾ ಜಿಲ್ಲೆ' ಎಂದೂ ಸಾರಿದ್ದಾರೆ. ತುಮಕೂರು ಜಿಲ್ಲೆಯ ಮಂತ್ರಿಗಳು ಸದನದಲ್ಲಿದ್ದಾರೋ? ಇಲ್ಲವೋ ಗೊತ್ತಿಲ್ಲ. ಸಂಪೂರ್ಣ ಸಾಕ್ಷರತಾ ಜಿಲ್ಲೆ ಎಂದು ಘೋಷಿಸಿರುವಂಥ ಜಿಲ್ಲೆಯಲ್ಲಿ ಮಂಡಲ ಪಂಚಾಯತಿಗೆ ಹೆಬ್ಬೆಟ್ಟು ಹಾಕಲ್ಪಟ್ಟ ಎಷ್ಟು ಅರ್ಜಿಗಳು ಬಂದಿದ್ದವು ಎಂಬ ಬಗ್ಗೆ ದಯಮಾಡಿ ನಮಗೆ ಮಾಹಿತಿ ಒದಗಿಸಿಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಜನರನ್ನು ಸಾಕ್ಷರರೆಂದು ಘೋಷಿಸಬೇಕಾದರೆ ಅದಕ್ಕೊಂದು ವಯಸ್ಸಿನ ಮಿತಿ ಇದೆ. 35 ವರ್ಷದೊಳಗೆ ಇರತಕ್ಕಂಥವರಿಗೆ ಮಾತ್ರ ಇದು ಅನ್ವಯಿಸುತ್ತದೆ. ನೀವು ಹೇಳುತ್ತಿರುವಂತೆ 60-70 ವರ್ಷ ವಯಸ್ಸಾಗಿರುವವರು ಇರಬಹುದು. ಇದಕ್ಕೆ ವಯಸ್ಸಿನ ಮಿತಿಯನ್ನು ನಿಗದಿಪಡಿಸಿದ್ದೇವೆ, ಆ ಮಿತಿಯೊಳಗಿರತಕ್ಕಂಥವರು ಸಾಕ್ಷರರಾದರೆ ಅಂದರೆ ಕನಿಷ್ಠ ಪಕ್ಷ ಅವರಿಗೆ ತಮ್ಮ ಸಹಿಯನ್ನಾದರೂ ಮಾಡುವುದಕ್ಕೆ ಬರಬೇಕು. ಒಬ್ಬರು 50 ವರ್ಷದವರಿರಬಹುದು, ಅವರಿಗೆ ಬರೆಯುವುದಕ್ಕೆ ಸಾಧ್ಯವಾಗದಿರಬಹುದು, ಅದೇ ರೀತಿ 60-70 ವರ್ಷದವರೂ ಇರಬಹುದು. ಅದಕ್ಕೋಸ್ಕರ ವಯಸ್ಸಿನ ಮಿತಿಯನ್ನು ಈ ಸಾಕ್ಷರತಾ ಆಂದೋಲನದಲ್ಲಿ ನಿಗದಿಪಡಿಸಿದ್ದೇವೆ.

ಶ್ರೀ ವೈ.ಕೆ. ರಾಮಯ್ಯ: ನಾನು ಅರ್ಥಮಾಡಿಕೊಂಡಿರುವಂತೆ 'ಸಾಕ್ಷರತಾ ಆಂದೋಲನ' ಎಂದರೆ ಶಾಲೆಗೆ ಹೋಗುವಂಥ ಮಕ್ಕಳ ವಯಸ್ಸಿಗೆ ಮೀರಿದಂಥ ಉಳಿದಂಥವರಿಗೆ ಅಕ್ಷರವನ್ನು ಕಲಿಸುವ ಆಂದೋಲನಕ್ಕೆ 'ಸಾಕ್ಷರತಾ ಆಂದೋಲನ' ವೆಂದು ನಾನು ತಿಳಿದುಕೊಂಡಿದ್ದೇನೆ. ಅದು ಸರಿಯೇ ತಪ್ಪೇ ಎಂಬುದನ್ನು ಅವರೇ ಹೇಳಲಿ. ಯಾವ ಮಕ್ಕಳು ಶಾಲೆಗೆ ಹೋಗುವಂಥ ವಯಸ್ಸಿನಲ್ಲಿರುತ್ತಾರೋ, ಅವರನ್ನು ಹೊರತುಪಡಿಸಿ ಉಳಿದಂಥವರಿಗೆ ವಿದ್ಯೆ ಕಲಿಸುವುದಕ್ಕೆ 'ಸಾಕ್ಷರತಾ ಆಂದೋಲನ' ವೆಂದು ನಾನು ತಿಳಿದುಕೊಂಡಿದ್ದೇನೆ. ಅಂದರೆ, ಶಾಲೆಗೆ ಹೋಗುವವರಂತೂ ಬರೆಯುವುದನ್ನು ಕಲಿತಿರುತ್ತಾರೆ, ಹುಡುಗರಿಗೆಲ್ಲಾ ಸಾಕ್ಷರತಾ ಆಂದೋಲನ ಮಾಡಿದನಂತರ ಅವರು ಕಲಿತಿರಲೇಬೇಕು. ಶಾಲೆಗೆ ಹೋಗುವವರು ಸಾಕ್ಷರರಾಗಿದ್ದಲ್ಲಿ ಹೆಬ್ಬೆಟ್ಟು ಒತ್ತಿದ ಒಂದು ಅರ್ಜಿಯೂ ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಸಾಧ್ಯವಿರುತ್ತದೆ. ಆದರೆ, ನಿಗದಿಪಡಿಸಿದ ವಯಸ್ಸಿಗಿಂತ ಮೇಲ್ಪಟ್ಟ ಅನೇಕ ಜನರಿರುತ್ತಾರೆ. ಅವರುಗಳಿಂದ ಹೆಬ್ಬೆಟ್ಟು ಒತ್ತಿದ ಅರ್ಜಿಗಳು ಬಂದರೂ ಬರಬಹುದು, ಬರದಿದ್ದರೆ ಇಲ್ಲ.

ಶ್ರೀ ವೈ.ಕೆ. ರಾಮಯ್ಯ: ಸನ್ಮಾನ್ಯ ಅಧ್ಯಕ್ಷರೇ, ಇನ್ನು ಸಾರ್ವಜನಿಕ ವಿತರಣಾ ಪದ್ಧತಿ ಬಗ್ಗೆ ಆಯವ್ಯಯ ಭಾಷಣದಲ್ಲಿ ಪ್ರಸ್ತಾರಿಸಿದ್ದಾರೆ. ಅವರು ಏನೇನೊ ಸ್ವಲ್ಪ ಚುರುಕಾಗಿ ಕೆಲಸವನ್ನು ಮಾಡುತ್ತಿದ್ದರು. ಅಂಗಡಿಗಳನ್ನು ರೇಡ್ ಮಾಡುತ್ತಿದ್ದರು. ಲೈಸೆನಸ್ಸು ಕ್ಯಾನ್ಸಲ್ ಮಾಡುತ್ತಿದ್ದುದು ಆಗಾಗ್ಗೆ ಪತ್ರಿಕೆಯಲ್ಲಿ ಬರುತ್ತಿತ್ತು. ಇದ್ಯಾವುದೋ ಚಟುವಟಿಕೆ ಎಂತದ್ದೊ ಶುರುವಾದ ಮೇಲೆ ಅವರು ನಿಷ್ಕ್ರಿಯರಾದರು. ಈಗ ಅವರ ಚಟುವಟಿಕೆಗಳೇ ನಮ್ಮ ಗಮನಕ್ಕೆ ಬರುತ್ತಿಲ್ಲ. ಸ್ವಲ್ಪ ಚುರುಕಾಗಿ ಕೆಲಸವನ್ನು ಮಾಡುತ್ತಿದ್ದರು ಅವರು. ಆದರಿಂದ ನಾವ್ಯಾರು ಕೂಡ ಅವರನ್ನು ಅಪ್ರೋಚ್ ಮಾಡುವಂಥ ಅವಶ್ಯಕತೆಯೇ ಬಂದಿರಲಿಲ್ಲ. ಸ್ವಲ್ಪ ನಿಯಮವನ್ನು ನ್ಯಾಯಬೆಲೆ ಅಂಗಡಿಗಳಿಗೆಲ್ಲ ಕೂಡ ತಂದಿದ್ದರು ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಸರ್ಕಾರದಲ್ಲಿ ಕೋರಿಕೆ ಮಾಡಿಕೊಳ್ಳುತ್ತೇನೆ. ಕೆಲವರಿಗೆ ಹಸಿರು ಕಾರ್ಡುಗಳನ್ನು ಹಂಚುವಂಥ ಕೆಲಸವನ್ನು ನೀವು ಮಾಡಿದ್ದೀರಿ. ತುಮಕೂರು ಜಿಲ್ಲೆಯಲ್ಲಿ ಇಪ್ಪತ್ತು ಸಾವಿರ ಕಾರ್ಡುಗಳನ್ನು ಹಂಚಿದ್ದೀರಿ. ಕಾರ್ಡನ್ನು ಹಂಚಿ ಆರು ತಿಂಗಳಾಯಿತು. ನಾವು ಹಳ್ಳಿಗೆಹೋದರೆ ಸ್ವಾಮಿ ಕಾರ್ಡ್ ಕೊಟ್ಟರಲ್ಲಾ, ಅಕ್ಕಿ ಕೊಡಿಸಿ, ಸಕ್ಕರೆ ಕೊಡಿಸಿ ಎಂದು ಕೇಳುತ್ತಾರೆ. ಅದನ್ನು ಕೊಟ್ಟಿಲ್ಲ. ಹೌದಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಹೌದು, ಎಲ್ಲಾ ಕಡೆಯೂ ಇದೆ. ತಮಗೂ ಕೂಡ ಗೊತ್ತಿದೆ. ಅಡಿಷನಲ್ ಕಾರ್ಡುಗಳನ್ನು ನಿಮ್ಮಲ್ಲಿ ಒಬ್ಬರಿಗೇ ಕೊಟ್ಟಿಲ್ಲ. ಇಡೀ ರಾಜ್ಯದಲ್ಲೇ ಕೊಟ್ಟಿರು. ಆದರೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಕೋಟಾ ಅದು ಮಾತ್ರ ಎನ್ಹಾನ್ಸ್ ಆಗಲಿಲ್ಲ. ಉದಾ:ಗೆ ನಿಮ್ಮಲ್ಲಿ ಐವತ್ತು ಸಾವಿರ ಅರವತ್ತು

ಸಾವಿರವೋ ಕ್ವಿಂಟಾಲ್ ಬರುತ್ತಿತ್ತು ಎಂದರೆ ಈಗಲೂ ಅಷ್ಟೆ ಬರುತ್ತಿದೆ. ಅಂದರೆ ಕಾರ್ಡುಗಳು ಜಾಸ್ತಿಯಾದವು, ಕ್ವಾಂಟಿಟಿ ಅಷ್ಟೇ ಆಯಿತು.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಸಚಿವರಿಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಕೇಂದ್ರ ಸರ್ಕಾರದಿಂದ ಬರುವಂಥ ಕೋಟಾಕ್ಕೆ ಇವರು ಹಣವನ್ನು ಕಟ್ಟಿದ್ದಾರಾ? ಅವರು ನಮ್ಮಲ್ಲಿ ಅಕ್ಕಿ, ಗೋಧಿ, ಸಕ್ಕರೆ ಇಲ್ಲ ಎಂದು ಬರೆದು ಕಳುಹಿಸಿದ್ದಾರಾ? ಇದಾವುದೂ ಇಲ್ಲ. ನಾನು ಬರುತ್ತೇನೆ, ಮೂಲಕ್ಕೆ ಬಂದರೆ ಇದೆಲ್ಲಾ ಮುಗಿದುಹೋಗುತ್ತದೆ. ಇವರು ಎಲ್ಲಾ ರೋಗಕ್ಕೂ ಒಂದೇ ಒಂದು ಮೂಲ ಇರುವುದು ಹಣ. ಹಣ ಇಲ್ಲ. ಹಣ ಇಲ್ಲದೇ ಇದ್ದ ಮೇಲೆ ಇವರಿಗೆ ನೀವು ಕಾರ್ಡುಗಳನ್ನು ಹಂಚಬಾರದಾಗಿತ್ತು. ಹಂಚಿದ ಮೇಲೆ ಈ ರೀತಿ ಮಾಡಬಾರದಾಗಿತ್ತು. ಆ ರೀತಿ ಮಾಡಿರುವುದರಿಂದ ನಮಗೆಲ್ಲರಿಗೂ ಕೂಡ ತಲೆನೋವು ಬಂದಿದೆ. ಕಾರ್ಡು ಕೊಟ್ಟ ಮೇಲೆ ಅದಕ್ಕೆ ತಕ್ಕಂಥ ಪಡಿತರ ವ್ಯವಸ್ಥೆಯನ್ನು ಇವತ್ತಿನವರೆಗೂ ಮಾಡಿಲ್ಲ. ದಯಮಾಡಿ ಅದನ್ನು ಮಾಡಿ ಎಂದು ಸರ್ಕಾರಕ್ಕೆ ಕೋರಿಕೆ ಮಾಡಿಕೊಳ್ಳುತ್ತೇನೆ. ನೀವು ದುಡ್ಡು ಕಟ್ಟಿ, ಅದನ್ನು ಏತಕ್ಕೆ ಕೊಡುವುದಿಲ್ಲ, ಕೇಂದ್ರ ಸರ್ಕಾರದವರನ್ನು ನಾವು ಕೇಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೇಂದ್ರ ಸರ್ಕಾರದವರು ಕೊಡುತ್ತಿಲ್ಲ.

ಶ್ರೀ ವೈ.ಕೆ. ರಾಮಯ್ಯ : ಹಾಗೆಂದು ನಿಮ್ಮ ಮಂತ್ರಿಗಳ ಕೈಯಲ್ಲಿ ಹೇಳಿಸಿ. I will take a challenge. ದುಡ್ಡು ಕಟ್ಟಿದ್ದೇವೆ, ಅವರು ಕೊಡುತ್ತಿಲ್ಲ ಎಂದು ಹೇಳಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದೇ ಸದನದಲ್ಲಿ ತಾವು ಇದ್ದಿರಿ ಅಧ್ಯಕ್ಷರೇ, ಮಾನ್ಯ ಶಫಿ ಅಹಮದ್‌ರವರ ಪ್ರಶ್ನೆ ಇತ್ತು. ಬಹುಶಃ ಆ ದಿವಸವೂ ಆಹಾರ ಮಂತ್ರಿಗಳು ಇರಲಿಲ್ಲ, ಉತ್ತರವನ್ನು ನಾನೇ ಹೇಳಿದೆ. ಕೆರೂಸಿನ್ ಕೋಟಾ ಮತ್ತು ಫುಡ್ ಲೈನ್ಸ್ ಕೋಟಾ ಇವರೆಡೂ ಎನ್ಹಾನ್ಸ್ ಮಾಡಿ ಎಂದು ಹೇಳಿ ಫುಡ್ ಮಿನಿಸ್ಟರ್ ಕಾನ್ಫರೆನ್ಸ್‌ನಲ್ಲಿ ನಮ್ಮ ಸರ್ಕಾರದ ವತಿಯಿಂದ ಪ್ರತಿಪಾದನೆ ಮಾಡಿದ್ದಾರೆ ಮತ್ತು ಹೆಚ್ಚಿನ ಕೋಟಾ ಕೊಡಿ ಎಂತಲೂ ಹೇಳಿದ್ದಾರೆ. ಇನ್ನೂ ಬಂದಿಲ್ಲ, ಮಂಜೂರಾತಿ ಆಗಿಲ್ಲ. ಆದರೆ ಬೇಕಾದರೆ ಕೊಡಬಹುದು. ದುಡ್ಡು ಕೊಟ್ಟೇ ಕೊಡುತ್ತಾರೆ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಶಿವನಂಜಪ್ಪನವರು ಹೇಳಿದ ರೀತಿಯಲ್ಲಿ ಈ ಭಾಷಣದಲ್ಲಿರುವುದೆಲ್ಲವನ್ನೂ ಸರ್ಕಾರ ಕಾರ್ಯರೂಪಕ್ಕೆ ತಂದರೆ ಸ್ವರ್ಗವನ್ನು ಭೂಮಿಗೆ ಇಳಿಸಬಹುದು. ಎಲ್ಲವೂ ಇದೆ ಇದರೊಳಗೆ. ಆದರೆ ಯಾವುದು ಬೇಕೋ ಅದಿಲ್ಲ. ಎಲ್ಲಾ ಇದೆ. ಯಾವುದು ಇಲ್ಲ ಎಂದರೆ ಪಡಿತರ ಕಾರ್ಡುಗಳನ್ನು ಹಂಚದೇ ಇರಲಿಕ್ಕೆ ಅರ್ಧಂಬರ್ಧ ಕಟ್ಟಿರುವ ಮನೆಗಳನ್ನು ಸಂಪೂರ್ಣ ಮಾಡದೇ ಇರಲಿಕ್ಕೆ ಒಂದು ವರ್ಷವಾಯಿತು. ನನ್ನ ಕ್ಷೇತ್ರದಲ್ಲಿ 24 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಬೇಕು ಮಂತ್ರಿಗಳೇ. 24 ಲಕ್ಷ ಅಲ್ಲ, 24 ಕೋಟಿಯೂ ಅಲ್ಲ, 88ನೇ ಇಸವಿಯಿಂದ ಒಂದು ಕೆರೆ ಕೆಲಸ ನಿಂತುಹೋಗಿದೆ. ಕಾರಣ ಏನು ಎಂದರೆ ಆ ಜಮೀನು ಸ್ವಾಧೀನಪಡಿಸಿಕೊಂಡಿರುವವರಿಗೆ 24 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಬೇಕು. 24 ಸಾವಿರ ರೂಪಾಯಿಗಳನ್ನು ಕೊಡದೆಯೇ ಕೆಲಸ ನಿಂತುಹೋಗಿದೆ. ಅದನ್ನು ಡಿಸ್ಟ್ರಿಕ್ಟ್ ಟ್ರೆಜರಿಗೆ ತೆಗೆದುಕೊಂಡು ಹೋದರೆ ಅವನು ನಮ್ಮ ಡೈರೆಕ್ಟರ್ ಕೈಯಲ್ಲಿ ಫೋನ್ ಮಾಡಿಸಿ ಎಂದು ಹೇಳುತ್ತಾನೆ, 24 ಸಾವಿರ ರೂಪಾಯಿ. ಇದನ್ನು ನಿಮಗೆ ಕೊಟ್ಟುಬಿಡುತ್ತೇನೆ, ಈ ವಾರವೇ ದುಡ್ಡು ಕೊಡಿಸಿದರೆ ನಾನು ನಿಮಗೆ ಕೃತಜ್ಞನಾಗಿರುತ್ತೇನೆ. ನಿಮ್ಮ ಕೈಯಲ್ಲಿಯೇ ಅದನ್ನು ಕೊಟ್ಟು ಬಿಡುತ್ತೇನೆ. ಏಕೆಂದು ನಾನು ಹೇಳಿದರೆ ಬೊಕ್ಕಸ ತುಂಬಿ ತುಳುಕುತ್ತಿದೆ. ಯಾರು ಹೇಳಿದರು ನಿಮಗೆ? ತುಳುಕಿ ಹೋಗುತ್ತಿದೆ ಎನ್ನುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ರಾಮಯ್ಯನವರೇ, ನಿಮ್ಮ ಕ್ಷೇತ್ರದಲ್ಲಿ 93-94ರ ಬಜೆಟ್ನಲ್ಲಿ ಎಷ್ಟು ಕೆಲಸವಾಗಿದೆ? ಎಷ್ಟು ಕೋಟಿ ಅದು. 24 ಸಾವಿರ ರೂಪಾಯಿದೂ ಇರಬಹುದು. ಕುಣಿಗಲ್ಲು ಟೋಟಲ್ ಕೆಲಸವಾಗಿದ್ದು ಎಷ್ಟು ಎಂದು ಹೇಳಿದೆ. ತಾಲ್ಲೂಕಿನಲ್ಲಿ ಅಥವಾ ನಿಮ್ಮ ಕ್ಷೇತ್ರದಲ್ಲಿ ಎರಡೂ ಇವೆ.

ಶ್ರೀ ವೈ.ಕೆ. ರಾಮಯ್ಯ: ಅಂಕಿ ಅಂಶಗಳನ್ನು ಕೊಡೋಣ. ಈ ಕೆಲಸವಾಗುವುದಿಲ್ಲ ಎಂದು ನಾನು ಹೇಳುತ್ತಿಲ್ಲ, ಸ್ವಾಮಿ, ಇದು ಟ್ರೆಜರಿ ಬಿಲ್. 24 ಸಾವಿರ ರೂಪಾಯಿ. ಈ 24 ಸಾವಿರ ರೂಪಾಯಿಗಳನ್ನು ಸರ್ಕಾರಕ್ಕೆ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಯೋಗ್ಯತೆ ಇಲ್ಲ ಎಂದು ನಾನು ಹೇಳುತ್ತಿಲ್ಲ, ಸಾಧ್ಯವಾಗಿಲ್ಲ. ಬಹುಶಃ ಈ ಪತ್ರ ಈ ಸರ್ಕಾರದ ಆರ್ಥಿಕ ದಿವಾಳಿತನಕ್ಕೆ ಹಿಡಿದಂಥ ಒಂದು ಕೈಗನ್ನಡಿ. ಇಪ್ಪತ್ತು ಸಾವಿರ ಮಾಡುತ್ತೇನೆ ಎಂದು ಹೇಳಿದರು. ನಮ್ಮ ಡೈರೆಕ್ಟರ್ ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರ್ಗೆ ಫೋನ್ ಮಾಡಿಸಿ ಸ್ವಾಮಿ ಉದ್ವೇಗಕ್ಕೆ ಒಳಗಾಗಿ ಬುದ್ಧಿಯನ್ನು ನಾನು ಕೋಪದ ಕೈಯಲ್ಲಿ ಕೊಡುವುದಕ್ಕೆ ಇಷ್ಟಪಡುವುದಿಲ್ಲ, ನನ್ನ ಕ್ಷೇತ್ರದಲ್ಲಿ ಎಷ್ಟು ಕೆಲಸವಾಗಿತ್ತು ಎನ್ನುವುದರ ಬಗ್ಗೆ ನಾನು ಪಟ್ಟಿಯನ್ನು ಕೊಡುತ್ತೇನೆ. ಯಾವುದಾದರೂ ಈ ರಾಜ್ಯಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಯಾವುದಾದರೂ ಕಾಲದಲ್ಲಿ ಡಿಸ್ಟ್ರಿಕ್ಟ್ ಟ್ರೆಜರಿಯೊಳಗೆ ಎರಡು ಕೋಟಿ ರೂಪಾಯಿಗಳ ಬಿಲ್ಲು ಪೆಂಡಿಂಗ್ ಇದ್ದಂಥ ಒಂದು ನಿದರ್ಶನವನ್ನು ತೋರುವುದಾದರೆ ನಾನು ಸಾರ್ವಜನಿಕ ಜೀವನದಿಂದ ನಿವೃತ್ತಿ ಹೊಂದುತ್ತೇನೆ. ಏನಪ್ಪಾ ಎಷ್ಟು ಇದೆ ಸುಮಾರು 10 ಲಕ್ಷ ಇರಬಹುದಾ? 20 ಲಕ್ಷ, 1 ಕೋಟಿ ಅಥವಾ 1 ಮೂಕ್ಕಾಲು ಕೋಟಿ ಇರಬಹುದಾ ಎಂದು ಕೇಳಿದರೆ ಸುಮಾರು 2 ಕೋಟಿ ರೂಪಾಯಿಗಳು ಇದೆ ಎನ್ನುತ್ತಾರೆ. ನಾವು, ನಮ್ಮ ಪಕ್ಷ ಸರ್ವಜ್ಞರು ಎಂದು ಹೇಳುವುದಿಲ್ಲ, ಸರ್ವಗುಣ ಸಂಪನ್ನರು, ಸರ್ವಗುಣ ಸಂಜೀವಿನಿಗಳು ಎಂದು ಹೇಳುವುದಿಲ್ಲ. ಆದರೆ ಒಂದು ಜಿಲ್ಲಾ ಖಜಾನೆಯಲ್ಲಿ ಎರಡು ಕೋಟಿ ರೂಪಾಯಿಗಳು ಬಿಲ್ ಪೆಂಡಿಂಗ್ ಇದ್ದಂತಹ ನಿದರ್ಶನ ಯಾವತ್ತಾದರೂ ಇದೆ ಎಂಬುದನ್ನು ತೋರಿಸುವುದಾದರೆ ಅದು ನಮ್ಮ ಸರ್ಕಾರವೊ, ಮತ್ತೊಂದು ಸರ್ಕಾರವೊ ಎಂಬುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ಎಲ್ಲವೂ ಇದೆ. ಆದರೆ, ಈ ರಾಜ್ಯಕ್ಕೆ ಬಂದಿರುವಂತಹ ಆರ್ಥಿಕ ದುಸ್ಥಿತಿ, ಆರ್ಥಿಕ ಅಶಿಸ್ತು ಆರ್ಥಿಕ ದಿವಾಳಿತನ ಇಂತಹ ಪ್ರಮುಖ ವಿಷಯಗಳನ್ನು ಪ್ರಸ್ತಾಪ ಮಾಡದೇ ಇರುವುದು ಅತ್ಯಂತ ದೊಡ್ಡ ಕೊರತೆ. ಯಾವುದೋ ವಿಷಯಗಳ ಬಗ್ಗೆ ಸಾಕ್ಷರತೆ, ವಿದ್ಯಾಭ್ಯಾಸ, ಇವುಗಳ ಬಗ್ಗೆ ಹೇಳಿದ್ದಾರೆ. ನನ್ನ ಪ್ರಕಾರ ಅತ್ಯಂತ ಕೆಟ್ಟು ಹೋಗಿರುವಂತಹ, ದುಃಸ್ಥಿತಿ ಬಂದಿರುವಂತಹ, ದಿವಾಳಿತನಕ್ಕೆ ಬಂದಿರುವಂತಹ ಆರ್ಥಿಕ ಪರಿಸ್ಥಿತಿಯ ಬಗ್ಗೆ ಒಂದೇ ಒಂದು ಮಾತನ್ನು ಆಡದೇ ಇರುವುದು ಈ ಭಾಷಣದ ಒಂದು ದೊಡ್ಡ ಕೊರತೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಈ ಪರಿಸ್ಥಿತಿ ಇದ್ದರೂ ಕೂಡ ಈ ಯೋಜನಾ ಗಾತ್ರದಲ್ಲಿ ನಾವು ಕಡಿತ ಮಾಡುವುದಿಲ್ಲವೆಂದು ಹೇಳಿದ್ದಾರೆ. ಆರ್ಥಿಕ ಶಿಸ್ತಿಗೆ ಕ್ರಮ ಪ್ರಸಕ್ತ 1993-94ರ ಆರ್ಥಿಕ ಯೋಜನಾ ವೆಚ್ಚದಲ್ಲಿ ಕಡಿತ ಮಾಡಲಾಗಿದೆ ಎಂಬ ಆರೋಪದಲ್ಲಿ ಯಾವುದೇ ಹುರುಳಿಲ್ಲವೆಂದು ಸ್ಪಷ್ಟ ಪಡಿಸಿದ್ದಾರೆ. ವಿಶೇಷವಾಗಿ ನೀರಾವರಿ ಇಲಾಖೆಯ ಯೋಜನಾ ವೆಚ್ಚದಲ್ಲಿ ಶೇ.33ರಷ್ಟು ಕಡಿತ ಮಾಡಲಾಗಿದೆ ಎಂಬ ಸುದ್ದಿಯ ಬಗ್ಗೆ ಸುದ್ದಿಗಾರರು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆದಾಗ ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ಕೇಳಿದಾಗ ಅವರು ಅನಗತ್ಯ ವೆಚ್ಚಕ್ಕೆ ಕಡಿವಾಣ ಹಾಕಿರುವುದು ನಿಜ ಎಂದಿದ್ದಾರೆ. ಅನಗತ್ಯ ವೆಚ್ಚಕ್ಕೆ ಕಡಿವಾಣ ಹಾಕಿದ್ದಾರಾ? ವೇತನ ವೆಚ್ಚಕ್ಕೆ ಕಡಿವಾಣ ಹಾಕಿದ್ದಾರಾ ಎಂಬ ವಿಚಾರವನ್ನು ತಮ್ಮ ಗಮನಕ್ಕೆ

ಯೋಜನಾ ವೆಚ್ಚದಲ್ಲಿ ಕಡಿತಗೊಳಿಸಲಾಗಿದೆ ಎಂಬುದಲ್ಲ ಅವರು ಅಷ್ಟಕ್ಕೆ ನಿಲ್ಲದೆ ಮುಂದುವರೆದು ಯೋಜನಾ ವೆಚ್ಚದಲ್ಲೂ ಸಹ ಅನಗತ್ಯವಾಗಿ ಖರ್ಚಾಗುತ್ತಿರುವುದು ಗಮನಕ್ಕೆ ಬಂದಾಗ ಅದನ್ನು ನಿಯಂತ್ರಿಸಲು ಸರ್ಕಾರ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಆರ್ಥಿಕ ಶಿಸ್ತಿಗೆ ನೀಡಿದ ಸೂಚನೆ ಎಂದು ಪರಿಗಣಿಸಬೇಕೇ ಹೊರತು ಯೋಜನಾ ವೆಚ್ಚದಲ್ಲಿ ಆಗಿರುವಂತಹ ಕಡಿತವೆಂದು ತಿಳಿಯಬಾರದು. ಸರ್ಕಾರ ಯಾವುದೇ ರೀತಿಯ ಆರ್ಥಿಕ ಅಸ್ಥಿರತೆಯಿಂದ ಬಳುತ್ತಿಲ್ಲ. 24 ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ದುಡ್ಡು ಇಲ್ಲ, ಸರ್ಕಾರ ಅಸ್ಥರತೆಯಿಂದ ಬಳಲುತ್ತಿಲ್ಲ, ಯೋಜನಾ ವೆಚ್ಚವನ್ನು ಕಡಿಮೆ ಮಾಡುವಂತಹ ಅಗತ್ಯವಿಲ್ಲವೆಂದು ಹೇಳಿದ್ದಾರೆ. ರಾಜ್ಯದಲ್ಲಿ ಸಂಪನ್ಮೂಲಗಳ ಕ್ರೋಢಿಕರಣವನ್ನು ಎಂದಿನಂತೆ ಬಿರುಸಿನಿಂದ ಸಾಗುತ್ತಿದೆ. 1994-95ರ ಆರ್ಥಿಕ ವರ್ಷದ ಯೋಜನಾ ಗಾತ್ರವನ್ನು ನಾವು ಕಡಿಮೆ ಮಾಡುವುದಿಲ್ಲ ಎಂದು ಎರಡು ಸಾರಿ ಹೇಳಿದ್ದಾರೆ. ಯೋಜನಾ ಗಾತ್ರವನ್ನು ಕಡಿಮೆ ಮಾಡುವ ಪ್ರಶ್ನೆ ಇಲ್ಲ, ಸಂಪತ್ತು ಕ್ರೋಢಿಕರಣಕ್ಕೆ ಎರಡು ಬಾರಿ ಅಧಿಕಾರಿಗಳೊಡನೆ ಚರ್ಚೆ ಮಾಡಿದಾಗ ಅದು ತೃಪ್ತಿಕರವಾಗಿದೆ ಎಂದಿದ್ದಾರೆ. ಇದು ಸರಿಯೇ? ಇದು ಒಂದು ಸಾರಿಯಲ್ಲ, ಅದನ್ನು ದಿನ ಬೆಳಗಾದರೆ ಅದನ್ನೇ ಹೇಳುತ್ತಾರೆ. ಯೋಜನಾ ಗಾತ್ರವನ್ನು ಇಷ್ಟ ಪಡಿ, ಬಿಡಿ, Whether you want it or not, whether you like it or not, it is inevitable. It is not in your hands. It is not within your limits. ಯೋಜನಾ ಗಾತ್ರವನ್ನು ಕಡಿತ ಮಾಡುವುದು ಸರ್ಕಾರಕ್ಕೆ ಅನಿವಾರ್ಯ. They have no other go. ಕಾರಣ ಕೊಡುತ್ತೇನೆ. ಏಕೆಂದು ಮಾನ್ಯ ವೀರಪ್ಪಮೊಯಿಲಿಯವರು ಹೋದ ಕಡೆಗಳಲ್ಲಿ ಯೋಜನಾ ಗಾತ್ರವನ್ನು ಕಡಿಮೆ ಮಾಡುವುದಿಲ್ಲವೆಂದು ಹೇಳಿಕೊಂಡು ಬಂದಿದ್ದಾರೆ.

ಅದು ಮತ್ತೊಂದು ಸುಳ್ಳು ಆಗುತ್ತದೆಯೋ ಹೊರತು ಸತ್ಯಕ್ಕೆ ಹತ್ತಿರವಾದಂತಹ ಮಾತು ಕೂಡ ಆಗಲಾರದು. ಏಕೆಂದರೆ ಯೋಜನಾ ಗಾತ್ರವನ್ನು ಇವರು ನಿರ್ಧಾರ ಮಾಡುವಾಗಲೇ ನಮಗೆ ಮೋಸ ಮಾಡಿದ್ದಾರೆ. ನಮಗೆಲ್ಲರಿಗೂ ಆಡಳಿತ ಮಾಡುವಂತಹವರಿಗೆ ಒಂದು ಹುಚ್ಚು ಇದೆ. ನನಗಂತೂ ಇದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಅದು ಏನೆಂದರೆ ನಾವು ಎಲ್ಲರಿಗಿಂತಲೂ ಜಾಸ್ತಿ ಮಾಡಿದ್ದೆವು, ನಾವು ಎಲ್ಲರಿಗಿಂತಲೂ ಜಾಸ್ತಿ ಹಣ ಖರ್ಚು ಮಾಡಿದ್ದೆವು. ನಾವು ಎಲ್ಲರಿಗಿಂತಲೂ ದೊಡ್ಡ ಸಾಧನೆ ಮಾಡಿದ್ದೆವು ಎಂದು ಅಂಕಿ ಅಂಶಗಳ ಮೂಲಕ ಜನರಿಗೆ ಮಣ್ಣೆರಚುವಂತಹ ಪ್ರವೃತ್ತಿ ಎಲ್ಲಾ ರಾಜಕಾರಣಿಗಳಿಗೆ ಇದೆ. ನಿಮ್ಮ ಯೋಜನಾ ಮಂತ್ರಿಗಳು ಈಗ ಇಲ್ಲಿ ಇಲ್ಲ. 1993-94ಕ್ಕೆ ಯೋಜನಾಗಾತ್ರವನ್ನು ನಿರ್ಧಾರ ಮಾಡುವಂತಹ ಸಂದರ್ಭದಲ್ಲಿ ಈ ರಾಜ್ಯದ ಜನತೆಗೆ ಈ ಸರ್ಕಾರದವರು ಮೋಸವನ್ನು ಮಾಡಿದ್ದಾರೆ. 8ನೇ ಪಂಚವಾರ್ಷಿಕ ಯೋಜನಾ ಗಾತ್ರ 12300 ಕೋಟಿ ರೂಪಾಯಿ. ಈ 12300 ಕೋಟಿ ರೂಪಾಯಿ 5 ವರ್ಷಕ್ಕೆ ನಿಗದಿ ಮಾಡಿದಂತಹ ಗಾತ್ರ. ಪರಿಮಾಣ ಅಲ್ಲದೆ ಇದ್ದರೂ ಕೂಡ ಇದು ಒಂದು ಗಾತ್ರ. ಮೊದಲನೇ ವರ್ಷ ನಿಗದಿ ಮಾಡಿದಂತಹ ಹಣ 1915ಕೋಟಿ ರೂಪಾಯಿ. 2ನೇ ವರ್ಷಕ್ಕೆ ಇವರು ನಿಗದಿ ಮಾಡಿದಂತಹ ಹಣ ಎಂದರೆ ಈ ವರ್ಷದ ನಿಗದಿ ಮಾಡಿದಂತಹ ಗಾತ್ರ 3025ಕೋಟಿ ರೂಪಾಯಿ. ಮುಂದಿನ ವರ್ಷಕ್ಕೆ ಇವರು ಲೆಕ್ಕ ಹಾಕಿಕೊಂಡಿರುವಂತಹ ಗಾತ್ರ 3275ಕೋಟಿ ರೂಪಾಯಿ. ಎಂದರೆ ಈ ಮೂರು ವರ್ಷಕ್ಕೆ 8ನೇ ಪಂಚವಾರ್ಷಿಕ ಯೋಜನೆಯ ಮೊದಲನೇ ಮೂರು ವರ್ಷಕ್ಕೆ ಇವರು ನಿಗದಿ ಮಾಡಿರುವಂತಹ ಹಣ 8215 ಕೋಟಿ ರೂಪಾಯಿ. ಇನ್ನು ಎರಡು ವರ್ಷಗಳಿಗೆ 12,300 ಕೋಟಿ ರೂಪಾಯಿಯಲ್ಲಿ 8215 ಕೋಟಿ ರೂಪಾಯಿ ಕಳೆದರೆ ಇವರಿಗೆ

ಉಳಿಮಕೊಳ್ಳುವಂತಹ ಹಣ 4075 ಕೋಟಿ ರೂಪಾಯಿ. ಸ್ವಲ್ಪ ನಿಮ್ಮ ಅಧಿಕಾರಿಗಳನ್ನು ಕೇಳಿ ಹೇಳಿ. ಹೇಗೆ ಇದನ್ನು ನೀವು ನಿಭಾಯಿಸಿಕೊಳ್ಳುತ್ತೀರಿ? 8ನೇ ಪಂಚವಾರ್ಷಿಕ ಯೋಜನೆಗೆ ನಿಮಗೆ ನಿಗದಿ ಆಗಿರುವುದು 12,300 ಕೋಟಿ ರೂಪಾಯಿ. ಅದರಲ್ಲಿ ಮೂರು ವರ್ಷಕ್ಕೆ ನೀವು ನಿಗದಿ ಮಾಡಿರುವಂತಾದ್ದು 8215 ಕೋಟಿ ರೂಪಾಯಿ. ಇನ್ನು 2,4 ಮತ್ತು 5 ವರ್ಷಗಳಿಗೆ ಉಳಿಯುವಂತಾದ್ದು ಕೇವಲ 4085 ಕೋಟಿ ರೂಪಾಯಿ. ಈ 4085 ಕೋಟಿ ರೂಪಾಯಿಯನ್ನು 2 ವರ್ಷಕ್ಕೆ ಹಂಚಿದರೆ 2042 ಕೋಟಿ ರೂಪಾಯಿ ಆಗುತ್ತದೆ. ನಾನು ಈ ಸರ್ಕಾರಕ್ಕೆ ಒಂದು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ನಾಲ್ಕು ಮತ್ತು ಐದು ವರ್ಷದಲ್ಲಿ ನಿಮ್ಮ ಯೋಜನಾ ವೆಚ್ಚದ ಗಾತ್ರವನ್ನು ಕಡಿಮೆ ಮಾಡುತ್ತೀರಾ? ಈ ಸರ್ಕಾರಕ್ಕೆ ಉತ್ತರ ಕೊಡಬೇಕು ಎನ್ನುವಂತಹ ಪ್ರಾಮಾಣಿಕವಾದಂತಹ, ಆಸಕ್ತಿ ಇದ್ದರೆ ಉತ್ತರ ಕೊಡಲಿ, ಅಷ್ಟು ಮಾತ್ರ ಹೇಳಿದರೆ ಸಾಕು. ಈ ರಾಜ್ಯದ ಆರ್ಥಿಕ ದುಸ್ಥಿತಿಗೆ ಇದಕ್ಕಿಂತ ಮಿಗಿಲಾದ, ಉತ್ತಮವಾದಂತಹ, ಪ್ರಾಮಾಣಿಕವಾದಂತಹ ಅಂಕಿಅಂಶಗಳನ್ನು ನನ್ನ ಕೈಯಲ್ಲಿ ಒದಗಿಸುವುದಕ್ಕೆ ಸಾಧ್ಯವಿಲ್ಲ. ಇವರಿಗೆ ಇನ್ನು 2 ವರ್ಷಗಳಿಗೆ ಉಳಿದಿರುವಂಥಾದ್ದು 4000 ಕೋಟಿ ರೂಪಾಯಿ. ಈ ವರ್ಷಕ್ಕೆ 3025 ಕೋಟಿ ರೂಪಾಯಿ ಇದ್ದಿದ್ದು. ಮುಂದಿನ ವರ್ಷಕ್ಕೆ 2 ಸಾವಿರ ಕೋಟಿ ಇವರು ಮಾಡುವುದಕ್ಕೆ ಆಗುವುದಿಲ್ಲ. It should be always upward. ಡೌನವರ್ಡ್ ಆಗುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ನಾನು ಹೇಳಿದ್ದು ಏಕೆ ಹೀಗೆ ಆಯಿತು? ಎಲ್ಲಿ ತಪ್ಪಿದ್ದೇ ನಾವು. ಏನೂ ಇಲ್ಲ, ನನಗೆ ತಿಳಿದ ಮಟ್ಟಿಗೆ ನಾನು ಮನಮೋಹನ್ ಸಿಂಗ್ ಅವರಷ್ಟು ತಜ್ಞನೂ ಮತ್ತು ನಿಮ್ಮ ಮುಖ್ಯಮಂತ್ರಿಗಳಷ್ಟು ಆರ್ಥಿಕ ಕ್ಷೇತ್ರದಲ್ಲಿ ಅನುಭವಸ್ಥನೂ ಅಲ್ಲ. ನನಗೆ ಕೇಳಿಬಂದಿರುವಂಥ ಒಂದೇ ಒಂದು ಸುದ್ದಿ ಇದೆ. ಆ ಸುದ್ದಿ ಎಂದರೆ ಎಲ್ಲಾ ರಾಜ್ಯಸರ್ಕಾರಗಳು ಹೋಗಿ, ಯೋಜನಾ ಆಯೋಗದ ಕೈಕಾಲು ಕಟ್ಟಿ ಈ ಯೋಜನಾ ಗಾತ್ರವನ್ನು ದೊಡ್ಡದು ಮಾಡಿಸಿಕೊಳ್ಳುವುದು. ಅದಕ್ಕೆ ನನಗೆ ತಿಳಿದವರು ಒಬ್ಬರು ಹೇಳಿದರು, ಅದು ಕನ್ನಡಿಯೊಳಗಿನ ಗಂಟು - ಎಂದು. ಗಂಟನ್ನು ತೋರಿಸಬಹುದು. ನೋಡಯ್ಯ ಮರಿ ಇಲ್ಲಿ ಇದೆ ತೆಗೆದುಕೋ ನಿನ್ನ ಪುಸ್ತಕ, ಸ್ಲೇಟು, ಬಳಪ, ಪೆನ್ಸಿಲ್, ಚಾಕೋಲೇಟ್, ಮಿಠಾಯಿ ಎಲ್ಲಾ ತಂದುಕೊಡುತ್ತೇನೆಂದು ಆ ಗಂಟನ್ನು ತೋರಬಹುದು. ಆದರೆ ಈ ಕನ್ನಡಿಯೊಳಗಿನ ಆ ಗಂಟು ಖರ್ಚುಮಾಡುವುದಕ್ಕೆ ಸಿಗುವುದಿಲ್ಲ. ಇದು ಮೊದಲನೇ ಕಾರಣ. ವಿವೇಚನೆ ಇಲ್ಲದೆ ದೊಡ್ಡದು ಮಾಡುತ್ತೇವೆ, ಎನ್ನುವಂತಹ ಹುಂಬತನ ತೋರಿ ಯೋಜನಾ ಗಾತ್ರವನ್ನು ನಿರ್ಧಾರ ಮಾಡುವಲ್ಲಿ ಎಡವಿದ ಪರಿಣಾಮ, ವಿಧಿ ಇಲ್ಲದೆ ಈ ರಾಜ್ಯಸರ್ಕಾರ ಯೋಜನಾ ಗಾತ್ರವನ್ನು ಕಡತ ಮಾಡಲೇಬೇಕಾಗುತ್ತದೆ.

4.15 ಪಿ.ಎಂ.

ಇನ್ನು ಎರಡನೆಯ ಕಾರಣ ಈ ರಾಜ್ಯದ ಯೋಜನೆಗಳು,.....

ಡಾ॥ ಎನ್.ಬಿ. ನಂಜಪ್ಪ: ಮಾನ್ಯ ರಾಮಯ್ಯನವರು ಯೋಜನಾ ಗಾತ್ರದ ಬಗ್ಗೆ ಬಹಳ ಚೆನ್ನಾಗಿ ವಿವರಣೆಯನ್ನು ಕೊಟ್ಟಿದ್ದಾರೆ. ಆ ರೀತಿ ವಿವರಣೆಯನ್ನು ಕೊಡತಕ್ಕ ಕಾಲದಲ್ಲಿ ಇದು ಬಹಳ ಡಿಫೆಕ್ಟೀವ್ ಆಗಿದೆ, ಇದು ಕನ್ನಡಿಯೊಳಗಿನ ಗಂಟಿನ ತರಹ ಇದೆ ಎಂದು ಹೇಳಿದರು. ಇದನ್ನು ಹೇಗೆ ಸರಿಮಾಡಬೇಕು ಎನ್ನುವ ಬಗ್ಗೆ ಈ ಹೌಸ್ಗೆ ಒಂದು ಸಜೆಷನ್ ಕೊಟ್ಟರೆ ಒಳ್ಳೆಯದು. ಇದು ಸರಿಯಲ್ಲ, ಇದು ಹೀಗೆ ಮಾಡಿ ಎಂದು ನಿಗದಿತವಾಗಿ ಒಂದು ಸಲಹೆಯನ್ನು ಕೊಟ್ಟರೆ ಬಹಳ ಚೆನ್ನಾಗಿ ಇರುತ್ತದೆ, ನಾವು ಸಹ ಆ ದಾರಿಯಲ್ಲಿ ಯೋಚನೆ ಮಾಡಬಹುದು.

ಗ್ರಂಥಾಲಯ, ವಿಧಾನ ಸೌಧ, ಬೆಂಗಳೂರು 20,632

ಶ್ರೀ ವೈ.ಕೆ. ರಾಮಯ್ಯ: ಅಧ್ಯಕ್ಷರೇ, ಸರ್ಕಾರ ನನ್ನನ್ನು ಆರ್ಥಿಕ ತಜ್ಞನನ್ನಾಗಿ ನೇಮಿಸಿ ಕೊಂಡರೆ ಒಳ್ಳೆಯದು. ಪ್ರಸನ್ನರಿಗೂ ಆರ್ಥಿಕ ತೊಂದರೆ ಇದೆ.

ಡಾ|| ಎನ್.ಬಿ. ನಂಜಪ್ಪ: ಜನಗಳ ಉಪಯೋಗಕ್ಕೆ ಮತ್ತು ನಮ್ಮ ಉಪಯೋಗಕ್ಕೆ ಒಂದು ಗೈಡ್ಲೈನ್ ನಿಮ್ಮದೇ ಆದಂಥ ಒಂದು ಸಜೆಷನ್ ಕೊಟ್ಟು ಬಿಟ್ಟರೆ ಬಹಳ ಒಳ್ಳೆಯದಾಗುತ್ತದೆ.

ಶ್ರೀ ವೈ.ಕೆ. ರಾಮಯ್ಯ: ಅಧ್ಯಕ್ಷರೇ, ನನಗೆ ಗೊತ್ತಿದ್ದ ಹಾಗೆ ಓಟಿಗಾಗಿ ಕಾರ್ಯಕ್ರಮಗಳನ್ನು ನಿರೂಪಿಸಿಕೊಳ್ಳುವಂಥ ಪ್ರವೃತ್ತಿ ಕಡಿಮೆಯಾಗಬೇಕು. ಎಲ್ಲಾ ಪಕ್ಷದಲ್ಲೂ ಇದು ಕಡಿಮೆಯಾಗಬೇಕು.

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಆಗಲೇ ಸಹಜತೆಯಿಂದ ಕೂಡಿದಂಥ ಒಂದು ರಿಯಲಿಸ್ಟಿಕ್ ಬಡ್ಜೆಟ್ಟನ್ನು ಮಾಡಿದರೆ, ಒಂದು ಅಂದಾಜನ್ನು ಮಾಡಿದರೆ ಈ ಪರಿಸ್ಥಿತಿ ಒದಗಿ ಬರುವುದಿಲ್ಲ ಎಂಬುದು ನನ್ನ ಭಾವನೆ. ಇನ್ನು ಯೋಜನಾ ಗಾತ್ರವನ್ನು ಕಡಿಮೆ ಮಾಡಲೇಬೇಕು ಈ ಸರ್ಕಾರ ವಿಧಿ ಇಲ್ಲ ಎನ್ನುವುದಕ್ಕೆ ಎರಡನೇ ಕಾರಣ ಎಂದರೆ, ಕರ್ನಾಟಕ ರಾಜ್ಯದ ಯೋಜನೆಯ ಇತಿಹಾಸವನ್ನು ನಾವು ನೋಡಿದಾಗ ಇದರಲ್ಲಿ ಎಷ್ಟರಮಟ್ಟಿಗೆ ಯಾವಾಗ ಹೆಚ್ಚಳವಾಗಿ ಬಂದಿದೆ ಎನ್ನುವುದನ್ನು ನಾವು ಗಮನಿಸಿದಾಗ ಈ ವರ್ಷದ ಹೆಚ್ಚಳ ಯೋಜನಾ ಗಾತ್ರದ ಹೆಚ್ಚಳ 57 ಭಾಗ, ಅಂದರೆ 57 ಪರ್ಸೆಂಟ್ 1986-87 17 ಪರ್ಸೆಂಟ್ 88-89 ಕೇವಲ ಪಾಯಿಂಟ್ 3 ಪರ್ಸೆಂಟ್, 90-91 10 ಪರ್ಸೆಂಟ್, 91-92 36 ಪರ್ಸೆಂಟ್, 92-93 38 ಪರ್ಸೆಂಟ್, ಈ ವರ್ಷ 58 ಪರ್ಸೆಂಟ್. ಬಹುಶಃ ನನಗೆ ತಿಳಿದ ಮಟ್ಟಿಗೆ ಈ ರಾಷ್ಟ್ರದ ಯಾವುದೇ ರಾಜ್ಯ ಕರ್ನಾಟಕ ಅಷ್ಟೇ ಅಲ್ಲ, ಒಂದೇ ಒಂದು ವರ್ಷ ಶೇಕಡ 58 ರಷ್ಟು ಯೋಜನಾ ವೆಚ್ಚವನ್ನು ಹೆಚ್ಚು ಮಾಡಿದಂಥ ದಡ್ಡತನವನ್ನು ಯಾವುದೇ ಸರ್ಕಾರ ಮಾಡಿಲ್ಲ, ಇದಕ್ಕೆ ದಡ್ಡತನ ಎಂದು ಕರೆಯಬೇಕೋ, ಅವಿವೇಕತನ ಎಂದು ಕರೆಯಬೇಕೋ, ಹುನ್ನಾರ ಎಂದು ಕರೆಯಬೇಕೋ ನನಗೆ ಅರ್ಥವಾಗುವುದಿಲ್ಲ. 58% increase in the State Plan is unprecedented according to me. If there is any precedent let them comeforward with such precedent.

ಒಂದೇ ಒಂದು ವರ್ಷ ಶೇಕಡ 58 ರಷ್ಟು ಯೋಜನಾ ವೆಚ್ಚದ ಗಾತ್ರವನ್ನು ದೊಡ್ಡದು ಮಾಡಿದಂಥ ನಿದರ್ಶನ ಕೇವಲ ರಾಜ್ಯಸರ್ಕಾರಕ್ಕೆ ಅಲ್ಲ, ಈ ರಾಷ್ಟ್ರದ ಸರ್ಕಾರದ ಆಯವ್ಯಯದಲ್ಲಿ ನಾವು ಯಾವತ್ತು ಕಂಡರಿಯದಂಥ ಒಂದು ಸಂಗತಿ. ಇದಕ್ಕೆ ಕಾರಣವೂ ಅಷ್ಟೇ, ಏನೋ ನಾನು ದೊಡ್ಡ ಸಾಧನೆ ಮಾಡುತ್ತೇನೆಂದು ಹೇಳತಕ್ಕಂಥ ಹುಚ್ಚುತನದಲ್ಲಿ ಸರ್ಕಾರ, ಶೇಕಡ 57ಭಾಗ ಹೆಚ್ಚಳವನ್ನು ಮಾಡಿರುವುದರಿಂದ, ಅಷ್ಟನ್ನು ಖರ್ಚು ಮಾಡಲಿಕ್ಕೆ ಇವರಲ್ಲಿ ಹಣ ಇಲ್ಲ, ಇದು ಎರಡನೆಯ ಕಾರಣಕ್ಕಾಗಿ ಯೋಜನಾ ಗಾತ್ರವನ್ನು ಕಡಿತ ಮಾಡಲೇಬೇಕಾಗುತ್ತದೆ. ನಮ್ಮ ಮುಖ್ಯ ಮಂತ್ರಿಗಳು ಸರ್ಕಾರದ ವತಿಯಿಂದ, ಇಲ್ಲ ನಾವು ಖರ್ಚು ಮಾಡುತ್ತೇವೆಂದು ಹೇಳುತ್ತಾರೆ. ಅವರು ಅದನ್ನು ಹೇಳುವುದು ಇನ್ನೂ ಬಿಟ್ಟೇ ಇಲ್ಲ, ಅವರು ಈಗ ಬಂದರೂ ಈಗಲೂ ಅದನ್ನೇ ಹೇಳುತ್ತಾರೆ. ಆದರೆ ಇವರು ಎಲ್ಲಿ ತಂದು ಖರ್ಚು ಮಾಡುತ್ತಾರೆ. ಎಲ್ಲಿ ತಂದು ಖರ್ಚು ಮಾಡಲಿಕ್ಕೆ ಸಾಧ್ಯ ಎಲ್ಲಿದೆ. ಖರ್ಚು ಮಾಡಲಿಕ್ಕೆ, ನಮ್ಮ ಹಳ್ಳಿಯ ಗಾದೆಯ ಪ್ರಕಾರ ಹೇಳುವುದಾದರೆ, ಎಷ್ಟು ಜನ ನೆಂಟರು ಬಂದರೂ ಅವಳು ಒಳಗೆ ಇದ್ದರೆ ತಂದು ಇಟ್ಟು ಬಿಡುತ್ತಾಳೆ. ಒಳಗೆ ಇಲ್ಲದೆ ಇದ್ದರೆ, ಅವಳು ಎಲ್ಲಿ ದೋಗದು ಇಕ್ಕುತ್ತಾಳೆಯೇ? ಎಲ್ಲಿಂದ ತಂದು ಇಡಲಿಕ್ಕೆ ಆಗುತ್ತದೆ. ಅವರ ಪ್ರಕಾರವೇ ಹೇಳುತ್ತೇನೆ, ಅವರ ಕೈಯಲ್ಲಿ ಆಗುವುದಿಲ್ಲ ಎಂದು. ಅಭಿವೃದ್ಧಿ ಯೋಜನೆಗಳ ಗುರಿ ಮೀರಿದ ಸಾಧನೆ.

ಗುರಿ ಅಷ್ಟೇ ಅಲ್ಲವಂತೆ, ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ ಎಂದು ಆಪಾದಿಸುತ್ತಿರುವ ವಿರೋಧಪಕ್ಷದ ಹಾಗೂ ಭಿನ್ನಮತೀಯರಿಗೆ ಉತ್ತರ ನೀಡುವ ರೀತಿಯಲ್ಲಿ ಮುಖ್ಯ ಮಂತ್ರಿಯವರು ಅಭಿವೃದ್ಧಿ ಯೋಜನೆಗಳಲ್ಲಿ ಗುರಿಮೀರಿದ ಸಾಧನೆಯಾಗಿದೆ ಎಂದು ಅಂಕಿಅಂಶಗಳನ್ನು ಪ್ರತಿಪಾದಿಸಿದರು ಎಂದು ಬಂದಿದೆ. ಸರ್ಕಾರ 93ರ ಏಪ್ರಿಲ್ನಿಂದ ನವೆಂಬರ್‌ವರೆಗೆ ವಾಣಿಜ್ಯ ತೆರಿಗೆಯಲ್ಲಿ 1581, ಅಬ್ಕಾರಿಯಲ್ಲಿ 386, ವಾಹನ ತೆರಿಗೆಯಲ್ಲಿ 135 ಕೋಟಿ, ಸ್ಟ್ಯಾಂಪ್ ಮತ್ತು ನೋಂದಾಣಿಕೆಯಲ್ಲಿ 156 ಕೋಟಿ, ಇವೆಲ್ಲ ಸೇರಿ ಏಪ್ರಿಲ್ನಿಂದ ನವೆಂಬರ್‌ವರೆಗೆ ಸಂಗ್ರಹವಾಗಿರುವಂಥ ಹಣ ಇವರ ಪ್ರಕಾರ ಕಳೆದ ವರ್ಷ 1910 ಕೋಟಿ, ಈ ವರ್ಷ 2259 ಕೋಟಿ ಅಂದರೆ ಸನ್ಮಾನ್ಯ ಮುಖ್ಯ ಮಂತ್ರಿಗಳು ನಮ್ಮನ್ನೆಲ್ಲಾ ಪ್ರಾಥಮಿಕ ಶಾಲೆಯ ಮಕ್ಕಳೆಂದು ತಿಳಿದುಕೊಂಡರೆ ಅಥವಾ ಇಲ್ಲಿ ಕುಳಿತಿರತಕ್ಕ 224 ಜನರೂ ಗಾಂಪರೆಂದು ತಿಳಿದುಕೊಂಡರೇ? ಅವಿವೇಕಿಗಳೆಂದು ತಿಳಿದುಕೊಂಡರೇ? ಅವರು ಏನು ಹೇಳುತ್ತಿದ್ದಾರೆಂದರೆ, ಕಳೆದ ಸಾರಿ 1910 ಕೋಟಿ ಕಲೆಕ್ಟ್ ಆಗಿತ್ತು. ನಾವು ಈ ಸಾರಿ 2259 ಕೋಟಿ ರೂ.ಗಳನ್ನು ಕ್ರೋಢೀಕರಣ ಮಾಡಿದ್ದೇವೆ ಅಂದರೆ ಕಳೆದ ವರ್ಷಕ್ಕಿಂತ ಈ ವರ್ಷ ಜಾಸ್ತಿ ಕ್ರೋಢೀಕರಣವನ್ನು ಮಾಡಿದ್ದೇವೆ ಎನ್ನತಕ್ಕ ಪ್ರತಿಪಾದನೆಯನ್ನು ತಮ್ಮ ಮುಂದೆ ಮತ್ತು ಈ ರಾಜ್ಯದ ಜನತೆಯ ಮುಂದಿಟ್ಟಿದ್ದಾರೆ. ಇದು ಎಷ್ಟರ ಮಟ್ಟಿಗೆ ಸಮರ್ಥನೀಯ? ಎಷ್ಟು ಮಟ್ಟಿಗೆ ನಾವು ಇದನ್ನು ನಂಬಿಕೊಳ್ಳಬೇಕು? ಎಷ್ಟು ಮಟ್ಟಿಗೆ ನಾವು ಇದನ್ನು ವಿಶ್ಲೇಷಣೆ ಮಾಡಿ ಇದರ ಒಳ ಅರ್ಥವನ್ನು ತಿಳಿದುಕೊಳ್ಳಬೇಕು? ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಒಂದು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ವರ್ಷ ಇದ್ದಂಥ ಯೋಜನೆಯ ಗಾತ್ರ 1915 ಕೋಟಿ ರೂ; ಇಷ್ಟು ಗಾತ್ರದ ಯೋಜನಾ ವೆಚ್ಚವನ್ನು ನಿಭಾಯಿಸುವುದಕ್ಕಾಗಿ ಅವತ್ತು ಸಂಗ್ರಹವಾದುದು 1910 ಕೋಟಿ ರೂ; 1915 ಕೋಟಿ ಇದ್ದಾಗ ನೀವು 1910 ಕೋಟಿ ರೂ.ಗಳನ್ನು ಸಂಪಾದನೆ ಮಾಡಿದ್ದಾರೆ. ಈ ವರ್ಷದ ಯೋಜನಾ ಗಾತ್ರ 3025 ಕೋಟಿ. ನಿಮ್ಮ ಆರ್ಥಿಕ ಇಲಾಖೆಯವರನ್ನು ಕರೆಯಿಸಿಕೊಂಡು ಕೇಳಿ, ಅವರು ಏನು ಹೇಳುತ್ತಾರೆ ನೋಡಿ. 1915 ಕೋಟಿ ಯೋಜನಾ ಗಾತ್ರ ಇದ್ದಾಗ ಸಂಗ್ರಹವಾದುದು 1910 ಕೋಟಿ ರೂ. ಈ ಸಾರಿ ನಮ್ಮ ಯೋಜನಾಗಾತ್ರ ಇರತಕ್ಕದ್ದು 3025 ಕೋಟಿ. ಅಂದರೆ 349 ಕೋಟಿ ರೂ. ಮಾತ್ರ ಇವರು ಜಾಸ್ತಿ ಮಾಡಿದ್ದಾರೆ. ಆದರೆ ಇವರು ಈ ವರ್ಷದ ಯೋಜನಾ ಗಾತ್ರವನ್ನು ಗಮನದಲ್ಲಿ ಇಟ್ಟುಕೊಂಡು ಆಲೋಚನೆ ಮಾಡಿದಾಗ ಇದು ಎಷ್ಟು ಆಗಬೇಕಾಗಿತ್ತು ಎಂದರೆ ಶೇಕಡ 58 ರಷ್ಟು ಯೋಜನಾ ಗಾತ್ರ ಹೇಗೆ ದೊಡ್ಡದಾಯಿತೋ ಅದೇ ರೀತಿ ಸಂಪತ್ತಿನ ಕ್ರೋಢೀಕರಣ ಕೂಡ ಶೇಕಡ 58 ಆಗಬೇಕಾಗಿತ್ತು. ಕಳೆದ ಸಾರಿ 100 ಕೋಟಿ ಆಯಿತು, ಈ ಸಾರಿ 110 ಕೋಟಿ ಮಾಡಿದ್ದೇವೆ, ಎಂದು ಇಲ್ಲಿ ದೊಡ್ಡ ಪಟ್ಟಿಯನ್ನೇ ಕೊಟ್ಟು ಬಿಟ್ಟಿದ್ದೀರಿ. ಕಳೆದ ಸಾರಿ ಅಬ್ಕಾರಿಯಲ್ಲಿ 200 ಕೋಟಿ ಆಗಿತ್ತು ಈ ಸಾರಿ 210 ಕೋಟಿ ಮಾಡಿದ್ದೇವೆ, ಕಳೆದ ಸಾರಿ ವಾಣಿಜ್ಯ ತೆರಿಗೆಯಿಂದ 300 ಕೋಟಿ ಆಗಿದ್ದರೆ ಈ ಸಾರಿ 350 ಕೋಟಿ ಮಾಡಿದ್ದೇವೆಂದು ನೀವು ಹೇಳುವುದರ ಬಗ್ಗೆ ನನಗೆ ಆಸಕ್ತಿ ಇಲ್ಲ. I am not interested in this. What was the size of the State plan last year and proportionate to the augmentation of those taxes, what is the size of this?

SRI M. MALLIKARJUNA KHARGE : It is our target.

ಶ್ರೀ ವೈ.ಕೆ. ರಾಮಯ್ಯ : ಅಂದರೆ ಈ ವರ್ಷ ಯೋಜನಾ ಗಾತ್ರವನ್ನು ಶೇಕಡ 58ಕ್ಕೆ ಏರಿಸಿದಿರಿ. ಇಷ್ಟು ಸಂಪನ್ಮೂಲದ ಕ್ರೋಢೀಕರಣ ಆಗಿದೆಯೆ? ಇದು

ಆಗಿದೆ ಎಂದು ತಾವು ಹೇಳುವುದಾದರೆ ನಾನು ಇವತ್ತೇ ನನ್ನ ರಾಜೀನಾಮೆಯನ್ನು ತಮಗೆ ಬರೆದು ಕಳುಹಿಸುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಆದ್ದರಿಂದ ನೀವು ಹೇಳುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ನಮ್ಮ ಗುರಿ ಇದೆ. ನೋಡಿವವರಿಲ್ಲ.

ಶ್ರೀ ವೈ.ಕೆ. ರಾಮಯ್ಯ : ನನ್ನ ಕಂಠ ಶೋಷಣೆಯ ಪ್ರಯತ್ನ ಇಷ್ಟೆ. ಈ ವರ್ಷದ ಯೋಜನಾಗಾತ್ರವನ್ನು ಇವರು ಸರಿದೂಗಿಸಿಕೊಳ್ಳಬೇಕಾದರೆ ಇವರ ಸಂಪನ್ಮೂಲದ ಕ್ರೋಢೀಕರಣ ಕಳೆದ ವರ್ಷಕ್ಕಿಂತ ಶೇಕಡ 58 ಜಾಸ್ತಿ ಆಗಬೇಕು. ಅದು ಎಷ್ಟಾಗಿದೆ ಎಂಬುದನ್ನೇ ಮಾನ್ಯ ಮುಖ್ಯ ಮಂತ್ರಿಗಳ ಬಾಯಿಂದ ಹೇಳಿಸಬೇಕಾಗಿರುವುದು. ಅದನ್ನು ನಾನು ಹೇಳುವುದಿಲ್ಲ. "ಸಣ್ಣ ಉಳಿತಾಯ ಮಾರುಕಟ್ಟೆ ಕೇಂದ್ರದ ಯೋಜನೆಗಳ ಸಾಮಾನ್ಯ ಸಹಾಯ ಹೊರಗಿನ ಅನುದಾನಿತ ಇತರೆ ಕಾರ್ಯಕ್ರಮಗಳ 7 ತಿಂಗಳಲ್ಲಿ 1316 ಕೋಟಿ ರೂ. ಸಂಗ್ರಹವಾಗಿದ್ದು ಕಳೆದ ಸಾಲಿಗಿಂತ ಈ ವರ್ಷ ಶೇಕಡ 20.96 ರಷ್ಟು ಹೆಚ್ಚಾಗಿದೆ ಎಂದು ವಿವರಿಸಿದರು ಎಂದು ಬಂದಿದೆ. ಅದಕ್ಕೆ ಹೇಳಿದ್ದು; ಈ ಮುಖ್ಯಮಂತ್ರಿಗಳು ನಮ್ಮನ್ನು ಪ್ರೈಮರಿ ಶಾಲೆಯ ಹುಡುಗರು ಎಂದು ತಿಳಿದುಕೊಂಡಿದ್ದಾರೆಯೇ ಎಂದು. ಯಾವ ಯೋಜನಾ ವೆಚ್ಚದ ಗಾತ್ರವನ್ನು ಸರಿದೂಗಿಸುವುದಕ್ಕೆ ಶೇಕಡಾ 58ರಷ್ಟು ಸಂಪನ್ಮೂಲದ ಕ್ರೋಢೀಕರಣ ಆಗಬೇಕಾಗಿತ್ತೋ ಅಂತಹ ಕಡೆಗೆ ಆಗಿರತಕ್ಕ ಕ್ರೋಢೀಕರಣ 25.96 ಶೇಕಡ. ಎಂದರೆ, ನಾವು ಯೋಜನಾ ಗಾತ್ರ ಕಡಿತ ಮಾಡುವುದಿಲ್ಲ, ನಾವು ಯೋಜನಾ ಗಾತ್ರದ ಕಡಿತ ಮಾಡುವುದಿಲ್ಲ ಎಂದು ಊರ ಸುತ್ತ ಟಾಮ್ ಹೊಡೆಯುತ್ತಾ ಹೋದರೆ, ಈ ರಾಜ್ಯದ ಜನತೆ ಇದನ್ನು ನಂಬಬೇಕೇ? ಅದಕ್ಕಾಗಿಯೇ ನಾನು ಹೇಳುತ್ತಿದ್ದೇನೆ, 57 ಭಾಗದಷ್ಟು ಯೋಜನಾ ವೆಚ್ಚದ ಗಾತ್ರವನ್ನು ದೊಡ್ಡದು ಮಾಡಿದ ಅಪರಾಧಕ್ಕಾಗಿ ಈ ರಾಜ್ಯದ ಜನತೆಗೆ ಅವರು ಅತ್ಯಂತ ದ್ರೋಹವನ್ನು ಬಗೆದಿದ್ದಾರೆ. ಮೋಸವನ್ನು ಬಗೆದಿದ್ದಾರೆ. ಅದಕ್ಕಾಗಿ ಅವರು ಯೋಜನಾ ಗಾತ್ರದ ಕಡತವನ್ನು ಅವರು ಮಾಡಲೇಬೇಕಾಯಿತು. ಇದು ಎರಡನೇ ಕಾರಣ. ಮಾನ್ಯ ಅಧ್ಯಕ್ಷಿಣಿಯವರೇ, ಈ ಸಂಪನ್ಮೂಲದ ಕ್ರೋಢೀಕರಣ 57-58ಕ್ಕೆ ಬದಲಾಗಿ 20 ಎಂದು ಮಾನ್ಯ ಮುಖ್ಯಮಂತ್ರಿಯವರೇ ಒಪ್ಪಿಕೊಂಡಿದ್ದಾರೆ. ಇವರ ಪಕ್ಷದ ಅಥವಾ ಆಡಳಿತದ ಆಂತರಿಕ ವಿಷಯದಲ್ಲಿ ಮೂಗು ಹಾಕಲಿಕ್ಕೆ ನನಗೆ ಕಿಂಚಿತ್ತೂ ಆಸೆ ಇಲ್ಲ, ಆದರೆ ಅದರಿಂದ ನನಗೆ ಯಾವ ಲಾಭವೂ ದೊರೆಯುವುದಿಲ್ಲ. ಎಲ್ಲಾ ಪಕ್ಷಗಳೂ ಹಾಗೇ ಆಗಿರುವುದರಿಂದ ಈ ಪಕ್ಷ ಹೀಗೆ ಎಂದು ತೋರುವಾಗ ಒಂದು ಬೆರಳು ನಮ್ಮ ಕಡೆಗೂ ಇರುತ್ತದೆ. ಹಾಗೆ ಒಂದು ಸತ್ಯವನ್ನು ಮರೆಮಾಚದೇ ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಯಾವ ಆಡಳಿತದಲ್ಲಿ ಬಿಗಿ ಇರುವುದಿಲ್ಲವೋ, ಯಾವ ಆಡಳಿತದಲ್ಲಿ ಸ್ಥಿರತೆ ಇರುವುದಿಲ್ಲವೋ, ಯಾವ ಆಡಳಿತದಲ್ಲಿ ಶಿಸ್ತು ಇರುವುದಿಲ್ಲವೋ ಅಂತಹ ಆಡಳಿತದಲ್ಲಿ ಸಾಮಾನ್ಯವಾಗಿ ಸಂಪನ್ಮೂಲದ ಕ್ರೋಢೀಕರಣದ ವಿಫಲತೆ ಆಗೇ ಆಗುತ್ತದೆ. It is again inevitable when there is lose administration; when there is mal-administration; when there is no control over the administration-you are bound to lose tax, you are bound to lose any tax to the exchequer......

ನಾನು ಮುಗುಮ್ಮಾಗ್ಗಿ ಒಂದೇ ಒಂದು ಮಾತನ್ನು ಹೇಳುತ್ತೇನೆ. ಸುಮಾರು ಒಂದು ವರ್ಷದಿಂದ ಶ್ರೀ ವೀರಪ್ಪಮೊಯಿಲಿಯವರು ಅಧಿಕಾರಕ್ಕೆ ಬಂದ ಒಂದೆರಡು ತಿಂಗಳು ಬಿಟ್ಟರೆ ಇನ್ನು ಉಳಿದ ಎಲ್ಲಾ ಕಾಲದಲ್ಲೂ ಕೂಡಾ ಈ ರಾಜ್ಯದ ಆಡಳಿತ ಪಕ್ಷ ಅದರ ಚಟುವಟಿಕೆಗಳಲ್ಲಿ ನನಗೆ ಆಸಕ್ತಿ ಇಲ್ಲದೇ ಇದ್ದರೂ ಕೂಡಾ, ಆ ಆಡಳಿತ ಪಕ್ಷದ ಚಟುವಟಿಕೆಯಿಂದ ಈ ರಾಜ್ಯದ ಆಡಳಿತದ ಮೇಲೆ ಪ್ರಭಾವ ಆದಾಗ ಅದನ್ನು ವಿಧಿ ಇಲ್ಲದೇ ನೋವಿನಿಂದ ಪ್ರಸ್ತಾಪ ಮಾಡಬೇಕಾಗುತ್ತದೆ ...

ಒಳಜಗಳದಲ್ಲಿ ನನಗೆ ಆಸಕ್ತಿ ಇಲ್ಲ. ಆದರೆ ಈ ಒಳಜಗಳದಿಂದ ಆ ಕಿತ್ತಾಟದಿಂದ, ಈ ರಾಜ್ಯದ ಜನರ ಅಭ್ಯುದಯದ ಕಾರ್ಯಕ್ರಮದ ಮೇಲೆ ಪ್ರಭಾವ ಬೀರುವ ಸಂದರ್ಭ ಬಂದಾಗ ನಮಗೆ ಬೇರೆ ಅಲ್ಟರ್ನೇಟಿವ್ ಇಲ್ಲ. ನಾವು ಹೇಳಲೇಬೇಕಾಗುತ್ತದೆ. ಅದಕ್ಕೇ ಹೇಳುತ್ತಿದ್ದೇನೆ, ಈ ಸಂಪನ್ಮೂಲದ ಕ್ರೋಢೀಕರಣದ ಹಿನ್ನೆಲೆ ಅಥವಾ ಹಿನ್ನೋಟಕ್ಕೆ, ಹಿಂದೆ ಬೀಳಲಿಕ್ಕೆ ಟು ಲ್ಯಾಗ್ ಬಿಹೈಂಡ್ ಅತ್ಯಂತ ಪ್ರಮುಖವಾದ ಕಾರಣ ಇದು. ಆಡಳಿತದಲ್ಲಿ ಬಿಗಿ ತಪ್ಪಿದ್ದು, ಆಡಳಿತದಲ್ಲಿ ಅಸ್ಥಿರತೆ ಬಂದಿದ್ದು, ಆಡಳಿತದಲ್ಲಿ ಶಿಸ್ತು ಇಲ್ಲದೇ ಇದ್ದದ್ದು ಸಂಪತ್ತನ್ನು ಕ್ರೋಢೀಕರಣ ಮಾಡುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಈ ಯೋಜನಾ ವೆಚ್ಚಗಳ ಸರಿದೂಗಿಸಿಕೊಂಡು ಹೋಗುವುದಕ್ಕೆ ಒಂದು ಮನೆಯನ್ನೇ ನಾವು ತೆಗೆದುಕೊಳ್ಳೋಣ. ನಮಗೆ ಬರುವ ಆದಾಯ ಕಡಿಮೆಯಾದಾಗ, ನಮ್ಮಲ್ಲಿರುವ ಒಂದು ಕುಟುಂಬದ ಆಯವ್ಯಯ ಏನಾದರೂ ಹೆಚ್ಚು ಕಡಿಮೆ ಆದಾಗ. ಆ ಸ್ಥಾನದಲ್ಲಿ ಕುಳಿತಿರುವ ತಮಗೆ ಗೊತ್ತಿದೆ ಹೇಗೆ ಸರಿದೂಗಿಸಬೇಕೆಂದು. ಯಾವುದಕ್ಕೆ ಖರ್ಚು ಮಾಡಬೇಕು, ಅಥವಾ ಖರ್ಚು ಮಾಡಬಾರದು ಎನ್ನುವುದನ್ನು ನಿಮ್ಮ ಮನೆಯವರು, ನಿಮ್ಮ ಮಕ್ಕಳು ಯಜಮಾನರೆಲ್ಲಾ ಕುಳಿತುಕೊಂಡು ಯೋಚನೆ ಮಾಡುತ್ತೀರಿ. ಈ ವರ್ಷ ಜಮೀನು ತೆಗೆದುಕೊಳ್ಳುವುದು ಬೇಡ, ಮಗಳನ್ನು ಮದುವೆ ಮಾಡೋಣವೆಂದೋ ಅಥವಾ ಈ ವರ್ಷ ಎರಡೂ ಬೇಡ ಆದಾಯ ಕಡಿಮೆ ಇರುವುದರಿಂದ ಎಷ್ಟು ಇದೆ ಅಷ್ಟರಲ್ಲಿ ಸರಿದೂಗಿಸಿಕೊಳ್ಳೋಣ ಎಂದು ಹೊಂದಾಣಿಕೆ ಮಾಡಿಕೊಂಡು ಮಾತನಾಡಿಕೊಂಡು ಹೋಗುವ ಪರಿಸ್ಥಿತಿ ಇರುತ್ತವೆ. ಆದ್ಯತೆಯನ್ನು ಗುರ್ತಿಸಿ ಆದ್ಯತಾ ವಲಯಕ್ಕೆ ಹಣವನ್ನು ಖರ್ಚು ಮಾಡುವುದರಲ್ಲಿಯೂ ಈ ಸರ್ಕಾರ ವಿಫಲವಾಗಿದೆ. ಅದಕ್ಕೆ ಕಾರಣ, ಮತ್ತೆ ನಿಮ್ಮ ಕಿತ್ತಾಟ. ಇವರ ನೀರಾವರಿ ಮಂತ್ರಿಗಳು ಎಷ್ಟು ಸಂಪುಟದ ಸಭೆಗಳಿಗೆ ಹಾಜರಾಗಿದ್ದಾರೆ, ಮಾನ್ಯ ಅಧ್ಯಕ್ಷಿಣಿಯವರೇ? ಆದ್ಯತಾ ವಲಯವಾದ ನೀರಾವರಿಗೆ ಹಣವನ್ನು ಪಡೆಯಲಿಕ್ಕಾಗಿ ಈಗಿರತಕ್ಕ ಆರ್ಥಿಕ ದುಸ್ಥಿತಿಯಲ್ಲೂ ಕೂಡಾ ಅನುಪಯುಕ್ತ ವೆಚ್ಚಗಳನ್ನು ಕಡಿತ ಮಾಡಿ, ಅನವಶ್ಯಕ ವೆಚ್ಚಗಳನ್ನು ಕಡಿತ ಮಾಡಿ, ಆದ್ಯತಾ ವಲಯಕ್ಕೆ ಹಣವನ್ನು ತರುವಂತಹ ಪವಿತ್ರ ಕೆಲಸ ಮಾಡುವುದರಲ್ಲಿ ನಿಮ್ಮ ನೀರಾವರಿ ಮಂತ್ರಿಗಳು ಎಷ್ಟು ಕೆಲಸವನ್ನು ಮಾಡಿದ್ದಾರೆ? ಒಂದು ಉದಾಹರಣೆ ಕೊಡಲೇ? ಕೃಷ್ಣಾ ನದಿ ನೀರಿನ ಹಂಚಿಕೆ ಬಗ್ಗೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಲಿಕ್ಕೆ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರ ಸಭೆಯನ್ನು ಕರೆಯುತ್ತಾರೆ. ನಿಮ್ಮ ನೀರಾವರಿ ಮಂತ್ರಿಗಳು ಅದಕ್ಕೆ ಹಾಜರಾಗುವುದಿಲ್ಲ. ವಿದ್ಯುತ್ ಶಕ್ತಿಗಾಗಿ ಹೊರದೇಶದಿಂದ ನಮಗೆ ಬರುತ್ತಿದ್ದಂತಹ ಆರ್ಥಿಕ ಸಹಾಯ ನಿಂತುಹೋದುದ್ದಕ್ಕೆ ಕಾರಣವನ್ನು ಹುಡುಕುವುದಕ್ಕೆ ಚರ್ಚೆ ಮಾಡಲಿಕ್ಕೆ ವಿರೋಧಪಕ್ಷದ ನಾಯಕರುಗಳ ಸಭೆ ಕರೆಯುತ್ತಾರೆ. ನಮ್ಮ ಮುಖ್ಯಮಂತ್ರಿಗಳು. ಆದರೆ ಇವರ ವಿದ್ಯುಚ್ಛಕ್ತಿ ಮಂತ್ರಿಗಳು ಅದಕ್ಕೆ ಹಾಜರು ಇಲ್ಲ. ತುಮಕೂರು ಜಿಲ್ಲೆಯ 4 ಲಕ್ಷ ಎಕರೆಗೆ ನೀರೆರೆಸುವಂತಹ ಯೋಜನೆಯನ್ನು ಅನುಷ್ಠಾನ ಮಾಡುವ ಸ್ಥಳಕ್ಕೆ ಮುಖ್ಯಮಂತ್ರಿಗಳು ಭೇಟಿ ಕೊಡುತ್ತಾರೆ. ಅವತ್ತು ಮಾರನೇ ದಿವಸ ಇವರ ನೀರಾವರಿ ಮಂತ್ರಿಗಳು ಹೇಳಿಕೆ ಕೊಡುತ್ತಾರೆ, ಅವರು ನನಗೆ ಏನು ಹೇಳಿ ಹೋಗಿಲ್ಲ ಎಂದು. ಏಕೆ ಈ ಮಾತು ಹೇಳುತ್ತಿದ್ದೇನೆ ಎಂದರೆ,.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಸರಿ ಹೋಗಿದ್ದರೂ ಸಹ ನೀವು ಇನ್ನೂ ನಮಗೆ ಬಿಡುವುದಿಲ್ಲ ಏಕೆ?

ಶ್ರೀ ವೈ. ಕೆ. ರಾಮಯ್ಯ : ನನಗೆ ಅದರ ಬಗ್ಗೆ ಆಸಕ್ತಿ ಇಲ್ಲ ಖರ್ಗೆಯವರೇ. ನಾನು ಆಗಲೇ ಹೇಳಿದ್ದೇನೆ. ನಿಮ್ಮ ಆಂತರಿಕ ವಿಷಯದ ಬಗ್ಗೆ ನನಗೆ ಆಸಕ್ತಿ ಇಲ್ಲ. ನಿಮ್ಮ ಆಂತರಿಕ ಕಚ್ಚಾಟದಿಂದ ಅಭಿವೃದ್ಧಿ ಕೆಲಸಗಳ ಮೇಲೆ ಪ್ರಭಾವ ಬೀರುವುದಾದರೆ ಖಂಡಿತಾ ವಿಧಿ ಇಲ್ಲದೇ ಹೇಳಲೇಬೇಕಾಗುತ್ತದೆಂದು ಹೇಳುತ್ತಿದ್ದೇನೆ. ಹಣದ ಕೊರತೆ ಬಂದಾಗ, ಬಿಕ್ಕಟ್ಟು ಬಂದಾಗ ಆದ್ಯತೆಗಳನ್ನು ಗುರ್ತಿಸಿ, ಆದ್ಯತೆ

ನಿಮ್ಮಲ್ಲಿ ಹೊಂದಾಣಿಕೆ ಇದ್ದಾಗ ಮಾತ್ರ ಸಾಧ್ಯ. ನಿಮ್ಮಲ್ಲಿ ಹೊಂದಾಣಿಕೆ ಇಲ್ಲದ ಪರಿಸ್ಥಿತಿಯಿಂದಾಗಿ ಆದ್ಯತಾ ವಲಯಕ್ಕೆ ಹಣವನ್ನು ಒದಗಿಸುವುದರಲ್ಲೂ ಕೂಡಾ ಈ ಸರ್ಕಾರಕ್ಕೆ ಆಗಿಲ್ಲ, ಇದು ನಾಲ್ಕನೆಯದು. ಮತ್ತೊಂದು ಪ್ರಮುಖವಾದ ಕಾರಣ ಎಂದರೆ, ನಮ್ಮ ರಾಜ್ಯದ ಎಲ್ಲಾ ತೆರಿಗೆಗಳ ಜೊತೆಗೆ, ನಮ್ಮ ಎಲ್ಲಾ ಸಂಪತ್ತು ಕ್ರೋಢೀಕರಣದ ಜೊತೆಗೆ, ನಮಗೆ ಬರುವಂತಹ ಮತ್ತೊಂದು ಮೂಲ ಕೇಂದ್ರ ಸರ್ಕಾರದಿಂದ ಬರುವಂತಹ ನಮ್ಮ ಪಾಲು; ನಮಗೆ ಬರಬೇಕಾದಂತಹ ಹಣ. ಬಹುಶಃ ಅದಕ್ಕೇ ಈ ಫೆಡರಲ್ ಸಿಸ್ಟಮ್ ಇರಬೇಕೇ ಬೇಡವೇ ಎನ್ನುವ ಬಗ್ಗೆ ನಾವು ಯೋಚನೆ ಮಾಡಬೇಕು. ಈ ಸರ್ಕಾರಕ್ಕೆ ತನಗೆ ದಕ್ಕಬೇಕಾದ ಪಾಲನ್ನು ಒತ್ತಾಯ ಮಾಡಿ ತರುವ ಶಕ್ತಿ ಇಲ್ಲ, ಅದಕ್ಕೆ ಬೇಕಾದರೆ ಚರ್ಚೆ ಮಾಡೋಣ. ಯಾವ ಆಧಾರದ ಮೇಲೆ ಕೇಂದ್ರ ಸರ್ಕಾರದವರು ಪರ್ಕ್ಯಾಪಿಟಾ ಇನ್ಕಮ್ ತೆಗೆದುಕೊಂಡು ವಿತರಣೆ ಮಾಡುತ್ತಾರೆ, ಎಷ್ಟು ಆಗಿದೆ, ಓದಲೇ ಎಡಿಟೋರಿಯಲ್ಸ್? ಟೈಮ್ ಕೊಡುವುದಾದರೆ ನಾಳೆ ಮತ್ತೆ ನಾನು ಮುಂದುವರಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಅದಕ್ಕಿಂತ ಹೊರತಾಗಿ ಯಾವ ಮೂಲದಿಂದ ತರಲು ಬರುತ್ತದೆಂದು ವಿವರಿಸಿ ಹೇಳಿ.

ಶ್ರೀ ವೈ.ಕೆ. ರಾಮಯ್ಯ : ಹೇಳೋಣ. ನಾನು ಹೋಗುವುದು ಬೇಡ ಎಂದಿದ್ದೆ. ತಾವು ಹೋಗಿ ಎಂದರೆ ಹೋಗುತ್ತೇನೆ. ಡಾ: ಮನಮೋಹನ ಸಿಂಗ್ ಅವರು ಮಂಡಿಸಿದ 1993-94ರ ಬಡ್ಜೆಟ್ ಉದ್ಯಮಿಗಳ ಮನಮೆಚ್ಚಿಸುವಂತಿದೆ. ಅದಕ್ಕೇ ನಾನು ಹೇಳುತ್ತಿದ್ದೇನೆ, ಉದಾರ ನೀತಿಯಿಂದಾಗಿ ನನಗಾಗಲೀ, ನನ್ನ ಶೆಡ್ನಲ್ಲಿ ಇರುವವನಿಗಾಗಲೀ, ನನ್ನ ತೋಟದವನಿಗಾಗಲೀ ಏನೂ ಆಗಲಿಲ್ಲ. "ಕೈಗಾರಿಕೆಗಳಿಗೆ ಉತ್ಸಾಹ ತುಂಬುವಂತಿದೆ. ವಿದೇಶಿ ವಿನಿಮಯ ಲಭ್ಯತೆಯನ್ನು ಹೆಚ್ಚಿಸುವ ಕ್ರಮ ಕೈಗೊಳ್ಳಲಾಗಿದೆ. ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡಲಾಗಿದೆ. ಎಲ್ಲಾ ಸರಿ. ಆದರೆ ಕರ್ನಾಟಕದ ಮಟ್ಟಿಗೆ ಈ ಬಡ್ಜೆಟ್ ಅಷ್ಟು ಉಪಾಯಕಾರಿಯಾಗಿಲ್ಲ ಇದನ್ನು ನಾನು ಹೇಳುತ್ತಿಲ್ಲ. ಪತ್ರಿಕೆಯ ಸಂಪಾದಕರು ಹೇಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಅದು ಅವರ ಅಭಿಪ್ರಾಯ.

ಶ್ರೀ ವೈ.ಕೆ. ರಾಮಯ್ಯ : ಅದೇ ನನ್ನ ಅಭಿಪ್ರಾಯ. ರಾಜ್ಯದಲ್ಲಿರುವಂತಹ ನಮ್ಮ ಆದಾಯದ ಜೊತೆಗೆ ಮತ್ತೊಂದು ನಮಗೆ ಕೂಡಿ ಬರುವ ಪಾಲು ಎಂದರೆ, ಕೇಂದ್ರದಿಂದ ಬರುವ ಸಹಾಯಧನ, ಇತರೆ ಹಣ. ಏಕೆ ಹೇಳುತ್ತಿದ್ದೇನೆ ಎಂದರೆ, ಈ ಹಣವನ್ನು ಕೂಡಾ ಒತ್ತಾಯ ಮಾಡಿ ತರುವಂತಹ ಶಕ್ತಿಯಲ್ಲಿ ಈ ಸರ್ಕಾರ ಇಲ್ಲ, ಈ ಮುಖ್ಯಮಂತ್ರಿಗಳು ಇಲ್ಲ, ಕಾರಣ ಬಹುಶಃ ತಿಂಗಳ ಬೆಳಕಿನಷ್ಟು, ಸೂರ್ಯನ ಬೆಳಕಿನಷ್ಟು ಸ್ಪಷ್ಟ. ಅದೇನೆಂದರೆ, ಈ ಮುಖ್ಯಮಂತ್ರಿಗಳು ಅವರು ಮಾಡಿದಂತಹ ಮುಖ್ಯಮಂತ್ರಿಗಳು ಅವರನ್ನು ವಿರೋಧ ಮಾಡಿಕೊಂಡು ಒತ್ತಾಯ ಮಾಡಿ ನನ್ನ ರಾಜ್ಯಕ್ಕೆ ಸಿಕ್ಕಬೇಕು, ಇಷ್ಟು ದಕ್ಕಬೇಕು ಎನ್ನತಕ್ಕ ದಾಷ್ಟತನವಾಗಲೀ, ಕೆಚ್ಚಾಗಲೀ, ಇವರಲ್ಲಿ ಉಳಿದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಂತಹ ಉದ್ಯಮಗಳು ಯಾವುವು? ಏಕೆಂದರೆ ತಮಗೆಲ್ಲಾ ಗೊತ್ತಿದೆ. ಹಿಂದೆ ತಾವು ಕೂಡ ಸರ್ಕಾರದಲ್ಲಿ ಇದ್ದಿರಿ. ಫೈನಾನ್ಸ್ ಕಮಿಷನ್ನಿಂದ ಅಲೋಕೇಷನ್ ಐಟಮ್ 5ರ ನಮ್ಮ ರೂಲ್ಸ್ ಪ್ರಕಾರ ಆಗಬೇಕು. ಅದನ್ನು ಒತ್ತಾಯ ಮಾಡಿ ಅಥವಾ ನಮ್ಮ ಪ್ರಭಾವ ಬೀರಿ ನಾವು ತಂದಿದ್ದೇವೆ, ನೀವು ತಂದಿಲ್ಲ ಎನ್ನುವುದಾದರೆ, ಅದು ಹೇಗೆ ಬರಬೇಕಾಗಿತ್ತು, ಯಾಕೆ ಬಂದಿಲ್ಲವೆಂದು ಹೇಳಿದರೆ ಕೊನೆಯ ಪಕ್ಷ ನಮಗಾದರೂ ಗೊತ್ತಾಗುತ್ತದೆ ಯಾವ್ಯಾವ ಸೆಕ್ಟರ್‌ಗಳಲ್ಲಿ ಯಾವ್ಯಾವ ಐಟಮ್‌ಗಳು ಎಂದು.

ಶ್ರೀ ವೈ.ಕೆ.ರಾಮಯ್ಯ : ನಾನು ಆಗಲೇ ಹೇಳಿದೆ, ನನಗೆ ಕಾಲಮಿತಿ ಇದೆಯೆಂದು ಒಂದು ನಿಮಿಷ ತಡಕೊಳಿ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಸರ್ಕಾರದಲ್ಲಿ ಹಿಂದೆ ಇದ್ದೀರಿ. ಸರ್ಕಾರ ನಡೆಸ್ತಾ ಇದ್ದಿರಿ. ಅವು ಯಾವ್ಯಾವ ಸೆಕ್ಟರ್‌ಗಳೆಂದು ನಾವು ಕೂಡ ತಿಳಿದುಕೊಳ್ಳೋಣ. ಏಕೆಂದರೆ ನಾವೂ ಕೂಡ ನಮ್ಮ ನಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಬೇಕಾದರೆ ಒತ್ತಾಯ ಮಾಡಿ ಏನಾದರೂ ಮಾಡುವುದಕ್ಕೆ ಬರುವಂತಿದ್ದರೆ ನೋಡೋಣ.

ಶ್ರೀ ವೈ.ಕೆ. ರಾಮಯ್ಯ : ಈ ರಾಜ್ಯಕ್ಕೆ ಅದರಲ್ಲೂ ಕೂಡ ಅನ್ಯಾಯವಾಗಿದೆ ಎಂಬ ಮಾತನ್ನು ಹೇಳಿದೆ. ನನಗೆ ಅದಕ್ಕೆ ಎಲ್ಲಾ ಕಾಲಾವಕಾಶ ಇಲ್ಲದೇ ಇರುವುದರಿಂದ ಹೇಳುವುದಕ್ಕೆ ಆಗುತ್ತಿಲ್ಲ. ಸ್ವಾಮಿ, ಈ ರಾಷ್ಟ್ರದ 22 ರಾಜ್ಯಗಳಲ್ಲಿ ಕರ್ನಾಟಕ ರಾಜ್ಯದ ಯೋಜನಾ ವೆಚ್ಚದ ಶೇಕಡಾವಾರು 5ನೇ ಪಂಚವಾರ್ಷಿಕ ಯೋಜನೆಯಲ್ಲಿ 5.5 ಅದು ತಪ್ಪಿದ್ದರೆ ನಾನು ತಿದ್ದಿಕೊಳ್ಳುತ್ತೇನೆ. 6ನೇ ಪಂಚವಾರ್ಷಿಕ ಯೋಜನೆಯಲ್ಲಿ 4.8 ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಅಂದರೆ 85ರಿಂದ 90ರವರೆಗೆ 4.4 ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ಕೊಟ್ಟಿರುವ 12,300 ಕೋಟಿ, ಅದರ ಪರ್ಸೆಂಟೇಜನ್ನು ಸ್ವಲ್ಪ ಲೆಕ್ಕಹಾಕಬೇಕಾಗುತ್ತದೆ. ಅದಕ್ಕೆ ಟೈಮ್ ತೆಗೆದುಕೊಳ್ಳುತ್ತದೆ. 5ನೇ ಪಂಚವಾರ್ಷಿಕ ಯೋಜನೆಯಲ್ಲಿ 5, 6ನೇ ಪಂಚವಾರ್ಷಿಕ ಯೋಜನೆಯಲ್ಲಿ 4, 7ನೇ ಪಂಚವಾರ್ಷಿಕ ಯೋಜನೆಯಲ್ಲೂ 4. 8ನೇ ಪಂಚವಾರ್ಷಿಕ ಯೋಜನೆಯಲ್ಲೂ ಕೂಡ ನಾವು ಅದಕ್ಕಿಂತ ಭಿನ್ನ ಆಗುತ್ತದೆ ಎಂದು ನಾನು ಭಾವಿಸಿಲ್ಲ. ನಾನು ವಿರೋಧ ಪಕ್ಷದ ಶಾಸಕನಾಗಿ ಇಲ್ಲಿ ಮಾತನಾಡುತ್ತಿಲ್ಲ, ಈ ರಾಜ್ಯದ ಒಬ್ಬ ಪ್ರಜೆಯಾಗಿ ಮಾತನಾಡುತ್ತಾ ಇದ್ದೇನೆ. ಕೇಂದ್ರಸರ್ಕಾರ ರಾಜ್ಯಗಳಿಗೆ ಸಂಪನ್ಮೂಲಗಳನ್ನು ಹಂಚುವಂಥ ಸಂದರ್ಭದಲ್ಲಿ 4-5 ಪರ್ಸೆಂಟ್‌ಗಿಂತ ಜಾಸ್ತಿ ನಮಗೆ ಕೊಡದೇ ಇರುವುದನ್ನು ನೋಡಿದಾಗ ವಿಧಿಯಿಲ್ಲದೇನೇ ಪ್ರಜಾವಾಣಿ ಪತ್ರಿಕೆಯಲ್ಲಿ ಬರೆದಿರುವಂಥ ಸಂಪಾದಕರ ಮಾತನ್ನು ನಾನು ಒಪ್ಪಬೇಕಾಗುತ್ತದೆ, ನೀವು ಕೂಡ ಒಪ್ಪಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ.....

ಶ್ರೀ ವೈ.ಕೆ.ರಾಮಯ್ಯ : ನೀವು ಕೇಳಿದ ಪ್ರಶ್ನೆಗೆ ಉತ್ತರ ಹೇಳಿದ್ದೇನಲ್ಲಾ, ಇನ್ನೇನು ಹೇಳಲಿ?

ಶ್ರೀ ಕಾಗೋಡು ತಿಮ್ಮಪ್ಪ : ನೀವು ಹೇಳುವಾಗ ಕರೆಕ್ಟ್ ಆಗಿ ಹೇಳಿಬಿಟ್ಟರೆ ನಾವು ಕೇಳುವಂಥ ಪ್ರಶ್ನೆ ಬರುವುದಿಲ್ಲ. ಈಗ ತಾವೇನು ವಿವರಿಸಿದ್ದೀರಿ, ಅದರಲ್ಲೇನೂ ಭಿನ್ನಾಭಿಪ್ರಾಯ ಇಲ್ಲ. ನಮಗೆ ಫೈನಾನ್ಸ್ ಕಮಿಷನ್‌ರವರು ಏನು ಅಲೋಕೇಷನ್ ಮಾಡುತ್ತಾರೆ, ಆ ಅಲೋಕೇಷನ್ ಮೇಲೆ ಓವರ್ ಅಂಡ್ ಅಬೋವ್ ದೆಟ್ ಅಲೋಕೇಷನ್ ಯಾವ್ಯಾವ ಸೆಕ್ಟರ್‌ನಿಂದ ತರುವುದಕ್ಕೆ ಸಾಧ್ಯವಿದೆ, ಅದನ್ನು ತರಲಿಲ್ಲ ಎಂದು ನೀವು ಹೇಳಿದಿರಿ. ಯಾಕೆಂದರೆ ನಮ್ಮ ಮುಖ್ಯಮಂತ್ರಿಗಳು ಬೆಂಗಳೂರು ಯೂನಿವರ್ಸಿಟಿಯಿಂದ ಗ್ರಾಜ್ಯುಯೇಟ್ ಆದವರು ಬನಾರ್ಸ್ ಯೂನಿವರ್ಸಿಟಿಯಿಂದ ಗ್ರಾಜ್ಯುಯೇಟ್ ಆದವರು ಮುಖ್ಯಮಂತ್ರಿಗಳಾಗಿದ್ದರು. ಈಗ ಅವರೇನಾದರೂ ಓವರ್ ಅಂಡ್ ಅಬೋವ್ ಅಲೋಕೇಟೆಡ್ ರಿಸೋರ್ಸಸ್ ತಂದಿದ್ದಿದ್ದರೆ, ಅವರು ಮಾಡಿದ್ದನ್ನೂ ನಮಗೆ ಮಾಡುವುದಕ್ಕೆ ಆಗದೇ ಇದ್ದಿದ್ದರೆ ಏನಾದರೂ ಬಾಬು ಉಳಿದಿದ್ದರೆ ಹೇಳಿ. ನಾವು ಸ್ವಲ್ಪ ನೋಡೋಣ, ಬನಾರಸ್‌ಗೆ ಹೋಗಲಿಕ್ಕೆ ಆಗದಿದ್ದರೂ ಕೊನೆಗೆ ಡೆಲ್ಲಿಗಾದರೂ ಹೋಗಿ ಯೂನಿವರ್ಸಿಟಿ ಹತ್ತಿ ಏನಾದರೂ ಜಾಸ್ತಿ ತರುವುದಕ್ಕೆ ಪ್ರಯತ್ನ ಮಾಡೋಣ. ಅದಕ್ಕೇನಂತೆ?

ಶ್ರೀ ಟಿ.ಎಂ. ಮಂಜುನಾಥ್ : ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ರಾಮಯ್ಯನವರು ಪಂಚವಾರ್ಷಿಕ ಯೋಜನೆ ಬಗ್ಗೆ ಪ್ರಸ್ತಾವನೆ ಮಾಡಿದರು. ಕೇಂದ್ರ ಸರ್ಕಾರದಿಂದ

ಬರತಕ್ಕಂಥ ಹಣ ಗಾಡ್ಗೀಳ್ ಫಾರ್ಮುಲಾ ಪ್ರಕಾರ ಇಡೀ ರಾಜ್ಯಗಳಿಗೆ ಅನ್ವಯಿಸುತ್ತದೆ. ನಮ್ಮ ಒಂದು ರಾಜ್ಯಕ್ಕೆ ಅಲ್ಲ ಮತ್ತು ನಮ್ಮ ರಾಜ್ಯ ಎಷ್ಟರ ಮಟ್ಟಿಗೆ ಹಿಂದುಳಿದ, ಮುಂದುಳಿದಿದೆ, ಪಾವರ್ಟಿ ಎಷ್ಟಿದೆ, ಮತ್ತು ಬೇರೆ ಬೇರೆ ಕಾರಣಗಳನ್ನು ರೂಪುಗಳನ್ನು ನೋಡಿ ಅದನ್ನು ಹಂಚುತ್ತಾರೆ. ಅದು ಮಾನ್ಯ ರಾಮಯ್ಯನವರಿಗೆ ಗೊತ್ತಿದೆ. ಈ ದಿಸೆಯಲ್ಲಿ ನಮ್ಮ ಸರ್ಕಾರ 90-91ರಿಂದ ಈಚೆಗೆ ಬಂದಮೇಲೆ ಸಂಪನ್ಮೂಲಗಳನ್ನು ಹೆಚ್ಚಿಗೆ ಕ್ರೋಢೀಕರಿಸಿ, ಇಡೀ ರಾಷ್ಟ್ರದಲ್ಲೇ ಅತ್ಯುತ್ತಮವಾಗಿರತಕ್ಕಂಥ ಸ್ಥಾನದಲ್ಲಿದ್ದೇವೆ ಎಂಬುದು ಅವರಿಗೆ ಗೊತ್ತಿದೆ. ಆದ್ದರಿಂದ ನಮ್ಮ ರಾಜ್ಯಕ್ಕೆ ಮುಖ್ಯಮಂತ್ರಿಗಳು ತಡಬೇಕಾದಂಥಾದ್ದು, ಇನ್ಫ್ಲುಯನ್ಸ್ ಉಪಯೋಗಿಸಬೇಕಾದಂಥಾದ್ದು ಅಂತಹ ಕೆಲಮಿಟೀಸ್ ಆದಾಗ, ಫ್ಲಡ್ ಭೂಕಂಪ ಮುಂತಾದ್ದು ಆದಾಗ, ಮತ್ತು ಇನ್ನಿತರ ಸ್ಕೇರ್‌ಸಿಟೀಸ್ ಬಂದಾಗ ಒತ್ತಾಯ ಮಾಡಬಹುದೇ ವಿನಹ, ಅವರು ನ್ಯಾಯವಾದ ರೀತಿಯಲ್ಲಿ ಹಂಚಿದ್ದಾರೆ ಎಂಬತಕ್ಕಂಥ ಅಂಶವನ್ನು ಅವರ ಗಮನಕ್ಕೆ ತರುತ್ತೇನೆ.

ಶ್ರೀ ವೈ.ಕೆ. ರಾಮಯ್ಯ : ನಮ್ಮ ಪ್ರೊಫೆಸರ್ ಅವರಿಗೆ ವಂದನೆಗಳು. 8ನೇ ಪಂಚವಾರ್ಷಿಕ ಯೋಜನೆಯಲ್ಲಿ 41 ಪರ್ಸೆಂಟ್. ಸನ್ಮಾನ್ಯ ಅಧ್ಯಕ್ಷಿಣಿಯವರೇ, ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂಥ ವಿಷಯ ಬಹುಶಃ ಒಂದು ಮಾತಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಎಲ್ಲೆಲ್ಲಿ ಈ ರಾಜ್ಯಸರ್ಕಾರ ಕೇಂದ್ರಸರ್ಕಾರದ ಹಂಗಿಗೆ ಸಿಕ್ಕಿಕೊಂಡು ತನಗೆ ದಕ್ಕಬೇಕಾದಂಥ ಪಾಲನ್ನು ತೆಗೆದುಕೊಳ್ಳುವುದರಲ್ಲಿ ವಿಫಲವಾಗಿದೆ ಎನ್ನುವುದರ ಬಗ್ಗೆ ನಾನು ಬರೆದು ಕಳುಹಿಸುತ್ತೇನೆ. ಅದರ ಬಗ್ಗೆ ಚರ್ಚೆ ಮಾಡೋಣ. ನಾನು ಆಗಲೇ ಹೇಳಿದ್ದೇನೆ. ಮನಮೋಹನ್‌ಸಿಂಗ್‌ರಷ್ಟು ಅಲ್ಲದೇ ಇದ್ದರೂ ಕೂಡ, ನಿಮ್ಮ ಮುಖ್ಯಮಂತ್ರಿಗಳಷ್ಟು ಅಲ್ಲದೇ ಇದ್ದರೂ ಕೂಡ, ಸರಕು ನನ್ನ ಹತ್ತಿರ ಸುಮಾರಾಗಿದೆ. ಅದಕ್ಕೆ ಕಾಲವನ್ನು ಬೇರೆ ದಿವಸ ನಿಗದಿ ಮಾಡಿ.

ಶ್ರೀ ಟಿ. ಎಂ. ಮಂಜುನಾಥ್ : ಮಾನ್ಯ ರಾಮಯ್ಯನವರೇ, ಇನ್‌ಫ್ಲೇಷನ್ 16 ಪರ್ಸೆಂಟು ಇದ್ದದ್ದು ಹೋದವರ್ಷ ಅದು 5.6 ಪರ್ಸೆಂಟ್‌ಗೆ ಬಂದಿದೆ. ಈ ವರ್ಷ ಸ್ವಲ್ಪ ಜಾಸ್ತಿಯಾಗಿದೆ.

ಶ್ರೀ ವೈ. ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷಣಿಯವರೇ, ಮನುಷ್ಯ ಮನುಷ್ಯನೇ. ಕಾಂಗ್ರೆಸ್ ಪಕ್ಷದಲ್ಲಿದ್ದರೂ ಮನುಷ್ಯನೇ, ದಳದ ಪಕ್ಷದಲ್ಲಿದ್ದರೂ ಮನುಷ್ಯನೇ, ಕಮ್ಯುನಿಸ್ಟ್ ಪಕ್ಷದಲ್ಲಿದ್ದರೂ ಮನುಷ್ಯನೇ. ಯಾರ ಹಂಗಿನಿಂದ ಅಧಿಕಾರಕ್ಕೆ ಬಂದಿರುತ್ತಾನೋ, ಅಂತಹ ವ್ಯಕ್ತಿ ಕೆಚ್ಚೆದೆಯಿಂದ ಹೋರಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬಂದು ನನ್ನ ಅಭಿಪ್ರಾಯ. ಅಷ್ಟು ಮಾತ್ರ ನಾನು ಹೇಳುತ್ತಿದ್ದೇನೆ. ಅದರ ಬಗ್ಗೆ ಚರ್ಚೆ ಬೇಡ.

ಶ್ರೀ ಕಾಗೋಡು ತಿಮ್ಮಪ್ಪ : ಇದು ವ್ಯವಸ್ಥೆ ಏನಿದೆ, ಅದರ ಮೇಲೆ ಬರುತ್ತಾರೆ. ಹಂಗಿನಲ್ಲಿ ಬಂದಿದ್ದಾರೆ ಎಂದು ಹೇಳಿದರೆ, ಅದೇನು ಜೀತದಾಳೇ ಹಂಗಿನಿಂದ ಬರುವುದಕ್ಕೆ?

ಶ್ರೀ ವೈ. ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷಣಿಯವರೇ, ಈ ವಿಫಲತೆಯನ್ನು ಕಡಿಮೆ ಮಾಡುವುದಕ್ಕೆ ಸರ್ಕಾರ ಮತ್ತೊಂದು ಪ್ರಯತ್ನವನ್ನು ಮಾಡಬಹುದಿತ್ತು. ಅದು ಮಿತವ್ಯಯ. ಅದು ಸಾಧ್ಯವಾಗಲಿಲ್ಲ, ಇನ್ನು ಮುಂದೆ ಬರುವಂಥ ಯಾವುದೇ ಸರ್ಕಾರ ಮಿತವ್ಯಯವನ್ನು ಕಾಪಾಡುವುದಕ್ಕೆ ಸಾಧ್ಯವಾಗುವುದಿಲ್ಲ. 1992-93ರಲ್ಲಿ ಇವರ ಯೋಜನೇತರ ವೆಚ್ಚಗಳು 65 ಪರ್ಸೆಂಟ್. ಈ ವರ್ಷ ಅದಕ್ಕೆ 5 ಪರ್ಸೆಂಟ್ ಇನ್‌ಫ್ಲೇಷನ್ ಜಾಸ್ತಿಯಾಗಿದೆ ಅಂತ ನೀವೇ ಹೇಳುತ್ತೀರಿ. ನಾನು ಅದಕ್ಕೆ 5 ಪರ್ಸೆಂಟ್ ಮಾತ್ರ ಸೇರಿಸುತ್ತೇನೆ. ಓಚಿಕ್ಕೆ 5 ಪರ್ಸೆಂಟ್ ಸೇರಿಸಿದರೆ 70 ಪರ್ಸೆಂಟ್ ಆಯಿತು. ಈ ವರ್ಷ 70 ಪರ್ಸೆಂಟ್ ಯೋಜನೇತರ ವೆಚ್ಚಗಳು. 1325 ಕೋಟಿಯಲ್ಲಿ 70

ಉಳಿಯುವಂಥ ಹಣ 1010 ಕೋಟಿಗಳು ಮಾತ್ರ. ಯೋಜನಾ ಮಂತ್ರಿಗಳು ಇದನ್ನು ಒಪ್ಪುತ್ತಾರೋ ಬಿಡುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಟಿ.ಎಂ. ಮಂಜುನಾಥ್ : ಹಾಗಲ್ಲ, ಯೋಜನೆಗೋಸ್ಕರವೇ 3020 ಕೋಟಿ. ಯೋಜನೇತರಗಳಿಗೆ ಬೇರೆ ಇದೆ. ಅದನ್ನು ಮಿಕ್ಸ್ ಮಾಡಬೇಡಿ.

ಶ್ರೀ ವೈ.ಕೆ. ರಾಮಯ್ಯ : ದಯಮಾಡಿ ಕುಳಿತುಕೊಳ್ಳಿ. ನೀವು ಹೇಳುತ್ತೀರಿ. ಎಂದು ನಾನು ರೆಡಿಮಾಡಿಕೊಂಡು ಬಂದಿದ್ದೇನೆ. ಇದು ನಮ್ಮ ಮುಖ್ಯಮಂತ್ರಿಗಳು ಈ ಸದನದಲ್ಲಿ ಮಾಡಿದ ಆಯವ್ಯಯ ಭಾಷಣದ ಮುದ್ರಣವಾದ ಅಥೆಂಟಿಕೇಟೆಡ್ ಡಾಕ್ಯುಮೆಂಟ್ ಪ್ಯಾರಾ 16. ವೇತನ, ನಿವೃತ್ತಿವೇತನ, ಸಾಲ ಮರುಪಾವತಿ, ಬಡ್ಡಿ ಸಂದಾಯ ಹೊರೆ ಹಾಗೂ ಸಹಾಯಧನಗಳ ವೆಚ್ಚದ ಸಂಕ್ಷಿಪ್ತ ವಿವರ ಹೀಗಿದೆ

ಒಟ್ಟು ವೆಚ್ಚದಲ್ಲಿ ಶೇಕಡಾ 53ರಷ್ಟನ್ನು ಈ ಬಾಬುಗಳಿಗೆ ವೆಚ್ಚಮಾಡುವುದನ್ನು ಕಾಣಬಹುದು.

ಇದಾದ ಮೇಲೆ 46.70 ಇಷ್ಟರಲ್ಲಿ ಸಾಮಾನ್ಯ ನಿರ್ವಹಣೆ, ಅಭಿವೃದ್ಧಿಯೇತರ ವೆಚ್ಚಗಳ ಹಣ, ಅಂದರೆ ಸಂಬಳ ಸಾರಿಗೆ, ಟೆಲಿಫೋನ್, ಸಾಯಿಬಾಬಾರವರಿಗೆ ಕಾಣಿಕೆ ಕೊಡುವುದು. ಅಭಿವೃದ್ಧಿ ಕಾರ್ಯಗಳಿಗೆ ಮತ್ತು ಅತ್ಯಂತ ಅಗತ್ಯವಾದ ಬಂಡವಾಳ ಹೂಡುವಿಕೆಗೆ ಉಳಿದಿರುವ ಹಣ ತುಂಬ ಕಡಿಮೆ. ಇದು ನಿಮ್ಮ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದಲ್ಲಿ ಈ ಸದನದಲ್ಲಿ ಒಪ್ಪಿಕೊಂಡಿರುವುದು. ಅದನ್ನೇ ನಾನು 'ಹೇಳುವುದಕ್ಕೆ ಹೊರಟಿರುವುದು.

ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಅನ್ನು ಕಳೆದ ಮೇಲೆ ನಿಮ್ಮಲ್ಲಿ ಉಳಿಯುವುದು1010 ಕೋಟಿ ಮಾತ್ರ ಪ್ಲಾನ್ ಎಕ್ಸ್‌ಪೆಂಡಿಚರ್ ಎಂದು ನಾನು ಹೇಳುವುದಕ್ಕೆ ಬಂದಿರುವುದು. ಇದು ನನ್ನ ಅಂಕಿ ಅಂಶಗಳು ಅಲ್ಲ. ಇವನ್ನೆಲ್ಲಾ ನಾನೆಲ್ಲಿ ಹುಟ್ಟುಹಾಕಲಿ? ನಿಮ್ಮದನ್ನೇ ನಾನು ಹೇಳುತ್ತಿದ್ದೇನೆ. ಈ ರಾಜ್ಯದ ಯೋಜನಾ ವೆಚ್ಚದಲ್ಲಿ ಶೇಕಡಾ 70ರಷ್ಟು ಯೋಜನತೇತರ ವೆಚ್ಚಗಳಿಗೆ ವ್ಯಯ ಮಾಡಬೇಕಾಗುತ್ತದೆ. ಒಪ್ಪುವರು ಒಪ್ಪಬಹುದು. ಬಿಡುವವರು ಬಿಡಬಹುದು. ಒಪ್ಪಿದರೆ ನಿಮ್ಮ ಪುಸ್ತಕವೇ ಸರಿಯಾಗಿಲ್ಲ ಎಂದು ಹೇಳುತ್ತೇನೆ, ಕೇಳಿ. ಅದರಲ್ಲೂ ಒಪ್ಪುವುದಿಲ್ಲವೆಂದರೆ, ಇಲ್ಲಿ ನಿಮ್ಮ ಆರ್ಥಿಕ ಸಮೀಕ್ಷೆ ಇದೆ, ಅದನ್ನು ಓದುತ್ತೇನೆ.

4.45 ಪಿಎಂ

1010 ಕೋಟಿ ಇವರ ಯೋಜನೆಯ ವೆಚ್ಚಗಳಿಗೆ ಹಣ ಉಳಿದುಕೊಂಡಿತು. ಇವರು ಹೇಳುತ್ತಾರೆ. 900 ಕೋಟಿ. ನೀರಾವರಿಗೆ ಕೊಡುತ್ತೇವೆಂದು ಹೇಳುತ್ತಾರೆ. 600 ಕೋಟಿ ವಿದ್ಯುಚ್ಛಕ್ತಿಗೆ ಕೊಡುತ್ತೇವೆಂದು ಹೇಳುತ್ತಾರೆ, ಒಂದು ಕೋಟಿ ರೂಪಾಯಿಗಳನ್ನು ಬೋರ್ ವೆಲ್ಗೆ ಕೊಡುತ್ತೇವೆಂದು ತುಮಕೂರಿನಲ್ಲಿ ಹೇಳಿಬಂದರು. ಯೋಜನೇತರ ವೆಚ್ಚಗಳನ್ನು ಕಳೆದ ಮೇಲೆ ಇವರಿಗೆ ಉಳಿಯುವುದು 1010 ಕೋಟಿಯಾದರೆ, ಈ ಕೋಟಿಗಳಿಗೆ ಏನಾದರೂ ಸೊನ್ನೆ ಇದೆಯೆಂದು ತಿಳಿದುಕೊಂಡಿದ್ದರೆ, ಎಷ್ಟು ಸೊನ್ನೆ ಎಂದು ಇವರು ತಿಳಿದುಕೊಂಡಿದ್ದಾರೆ. ಅದಕ್ಕಾಗಿಯೇ ನಾನು ಹೇಳುತ್ತಾ ಇರುವುದು, ಈ ಸರ್ಕಾರ, ಈ ಯೋಜನೆಗಳ ಗಾತ್ರವನ್ನು ಕಡಿತ ಮಾಡಲೇಬೇಕು ಎಂದು ನಾನು ಏಕೆ ಹೇಳುತ್ತೇನೆಂದರೆ, ಯೋಜನೇತರ ವೆಚ್ಚಗಳನ್ನು ಕಳೆದ ಮೇಲೆ, ಅಭಿವೃದ್ಧಿ ಕೆಲಸಗಳಿಗಾಗಿ ಉಳಿಯುವಂಥ ಹಣ, ಮುಖ್ಯಮಂತ್ರಿಗಳ ಪ್ರಕಾರ ತುಂಬಾ ಕಡಿಮೆ. ನೀವು ಮುಖ್ಯಮಂತ್ರಿಗಳ ಭಾಷಣಕ್ಕೇ ಕತ್ತು ಅಲ್ಲಾಡಿಸಿದರೆ ನಾನೇನು ಮಾಡಲಿ? ಇದು ನನ್ನ ಭಾಷಣವಲ್ಲ, ಯೋಜನೇತರ ವೆಚ್ಚಗಳಿಗೆ ಹಣವನ್ನು ಕಳೆದ ಮೇಲೆ ಯೋಜನೆಗಳ ವೆಚ್ಚಗಳಿಗೆ ಬಂಡವಾಳ ಹೂಡಿಕೆಗಾಗಿ ಉಳಿಯುವ ಹಣ ತುಂಬಾ

ಕಡಿಮೆ. 1993-94ರ ಈ ವರ್ಷದ ಬಜೆಟ್ ಭಾಷಣ. ಇದನ್ನು ತಾವು ಸ್ವಲ್ಪ ಓದಿ. ಈ ವರ್ಷಕ್ಕೆ ಎಂದು ಹೇಳಿದ್ದಾರೆ. ನಮಗೆ ಅಷ್ಟೇ ಗೊತ್ತಾಗುವುದು.

ಶ್ರೀ ಟಿ.ಎಂ. ಮಂಜುನಾಥ್ : ಅದು 1993ರ ಮಾರ್ಚಿಯಲ್ಲಿ ಹೇಳಿರತಕ್ಕಂತಾದ್ದು.

ಶ್ರೀ ವೈ.ಕೆ. ರಾಮಯ್ಯ : ಈ ಕಾರಣಕ್ಕಾಗಿಯೇ ಯೋಜನಾ ವೆಚ್ಚವನ್ನು ಕಡಿಮೆ ಏಕೆ ಮಾಡಬೇಕಾಗಿತ್ತು ಎಂದು ನನ್ನ ಪ್ರತಿಪಾದನೆ. ಈ ಎಲ್ಲಾ ಕಾರಣಗಳಿಗಾಗಿ ವಿಧಿ ಇಲ್ಲದೇ ಯೋಜನಾ ವೆಚ್ಚವನ್ನು ಕಡಿಮೆ ಮಾಡಿತು. ಈ ಯೋಜನಾ ವೆಚ್ಚವನ್ನು ಕಡಿಮೆ ಮಾಡದೇ ಇರುವುದಕ್ಕೆ ಬೇರೆ ಮತ್ತೊಂದು ಮಾರ್ಗ ಇದೆ. ಆ ಮಾರ್ಗ ಯಾವುದೆಂದರೆ, ಆಡಳಿತದಲ್ಲಿ ಬಿಗಿ ತಂದು, ಸೋರುವಿಕೆಯನ್ನು ಕಡಿಮೆ ಮಾಡಬೇಕು. If he can plug the loopholes by strict administration, he can bring the financial discipline. However, he was not done it.

ಅದನ್ನೂ ಕೂಡ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಇದೇ ಸದನದಲ್ಲಿ ಒಂದು ಮಾತನ್ನು ಹೇಳಿದರು. ಆ ಮಾತೇನೆಂದರೆ, ಅದನ್ನು ಓದತ್ತೇನೆ. ಅವರ ಕಡೆಯಿಂದ ಅದನ್ನೂ ಕೂಡ ಮಾಡುವುದಕ್ಕಾಗಲಿಲ್ಲ. ಹಣ ದುರುಪಯೋಗದ ಮೇಲ್ತಡೆಗೆ ಉಗ್ರ ಕ್ರಮ 13-3-93ರಲ್ಲಿ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ವಿಧಾನ ಸಭೆಯಲ್ಲಿ ಹೇಳಿದಂಥ ಹೇಳಿಕೆ. ನೀರಾವರಿ ಇಲಾಖೆಯಲ್ಲಿ ಕಂಟ್ರಾಕ್ಟರುಗಳು ಹಾಗೂ ಅಧಿಕಾರಿಗಳು ಶಾಮೀಲಾಗಿದ್ದ ಹಣ ದುರುಪಯೋಗದ ಮೇಳ ನಡೆಯುತ್ತಿರುವುದು, ತಡೆಯಲು ಉಗ್ರ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರು ಎಚ್ಚರಿಸಿದ್ದಾರೆ. ಕೆಲಸವನ್ನೇ ಕೈಗೊಳ್ಳದೇ, ಪೂರ್ಣಗೊಳಿಸಲಾಗಿದೆ ಎಂದು ತಿಳಿಸಿ. ದುರಸ್ತಿ ಇತ್ಯಾದಿ ಕಾರಣಗಳ ಪಟ್ಟಿ ಮಾಡಿ, ಕೋಟಿಗಟ್ಟಲೆ ಹಣ ಲಪಟಾಯಿಸುವುದು, ನೀರಾವರಿ ಯೋಜನೆಗಳಲ್ಲಿ ನಡೆಯುತ್ತಿದೆ. ಎಂದು ತಿಳಿದು ಬಂದಿದೆ ಎಂದು ಅವರು ಹೇಳಿಲ್ಲ, ನಡೆಯುತ್ತಿದೆ. As a lawyer, I should distinguish it. ಈ ರೀತಿ 1.2 ಕೋಟಿ ದುರುಪಯೋಗ ಪಡಿಸಿಕೊಂಡಿರುವ ದೂರಿನ ಒಂದು ಪ್ರಕರಣದ ಬಗ್ಗೆ ವಿಚಾರಣೆ ನಡೆಸುವಂತೆ ನಿನ್ನೆ ತಾನೆ ತಾವು ಆಜ್ಞೆ ಮಾಡಿರುವುದಾಗಿ ಅವರು ತಿಳಿಸಿದರು. ಅಲ್ಲಿಗೇ ನಿಲ್ಲಲಿಲ್ಲ, ಕಾವೇರಿ ಮುಗಿಯುವುದು ಯಾವಾಗ? ನೀರಾವರಿ ಯೋಜನೆಗಳಲ್ಲಿ ಈ ರೀತಿ ಹಣ ಸೋರಿಕೆ ಮುಂದುವರಿದರೆ, ನಮ್ಮ ರಾಜ್ಯದ ಕೃಷ್ಣಾ ಹಾಗೂ ಕಾವೇರಿ ಯೋಜನೆಗಳು ಮುಗಿಯುವುದೆಂದು? ಕೆಲವು ವಿಶಿಷ್ಟ ಹಿತಾಸಕ್ತಿಗಳು ರಾಜ್ಯದ ಹಿತಕ್ಕೆ ಪೂರಕವಾಗಿ ಕೆಲಸ ಮಾಡುತ್ತಿವೆ ಎಂದು ಕೂಡ ಮೊಯ್ಲಿಯವರು ಪ್ರಸ್ತಾಪ ಮಾಡಿದರು.

ಟೆಂಡರ್ ಕಂಟ್ರಾಕ್ಟರರನ್ನು ದರ ಹೆಚ್ಚಿಸುವ ಉದ್ದೇಶಪೂರ್ವಕವಾಗಿ ನಿರ್ಮಾಣ ಕಾರ್ಯವನ್ನು ಒಂದಲ್ಲ ಒಂದು ಕಾರಣದಿಂದ ವಿಳಂಬಗೊಳಿಸಿದರು. ವಿವಾದಗಳನ್ನು ಪಂಚಾಯತಿಗೆ ಒಪ್ಪಿಸುವುದು ಇತ್ಯಾದಿ ತಂತ್ರಗಳಲ್ಲಿ ಕಂಟ್ರಾತಕ್ದಾರರುಗಳೊಡನೆ ಶಾಮೀಲಾಗುವ ಇಂಜನೀಯರುಗಳು ಹಾಗೂ ಅಧಿಕಾರಿಗಳ ವಿರುದ್ಧ ಉಗ್ರ ಕ್ರಮಗಳನ್ನುಕೈಗೊಳ್ಳುವುದಾಗಿ ಎಚ್ಚರಿಸಿದರು. ಅಂದ್ರೆ ನೀರಾವರಿ ಇಲಾಖೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆಯುತ್ತಿದೆ ಅಪವ್ಯಯ ನಡೆಯುತ್ತಾ ಇದೆ, ಹಣದ ದುರುಪಯೋಗ ನಡೆಯುತ್ತಾ ಇದೆ, ಹಣದ ಮೇಳ ನಡೆಯುತ್ತಾ ಇದೆ. ಇದನ್ನು ತಡೆಯುವ ಬಗ್ಗೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇನೆ. ಎನ್ನುವ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹೇಳಿ ಒಂದು ವರ್ಷ ಆಯಿತು.

1.2 ಕೋಟಿ ರೂಪಾಯಿಗಳು ಅವ್ಯವಹಾರ ಆಗಿರುವುದು ನನ್ನ ಗಮನಕ್ಕೆ ಬಂದಿದೆ. ಹಣ ದುರುಪಯೋಗದ ಈ ಮೇಳವನ್ನು ತಡೆಯಲು ನಾನು ಉಗ್ರಕ್ರಮವನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು. ಅದು ಏನಾಯಿತು ಸ್ವಾಮಿ. ಇದರ ಬಗ್ಗೆ ಮುಖ್ಯಮಂತ್ರಿಗಳು ಏನಾಯಿತು ಹೇಳುತ್ತಾರೇನು ಏನಾಯಿತು ಈ ಮೇಳವನ್ನು

ತಡೆಯುವ ಕ್ರಮ. ಮೊನ್ನೆ ನಮ್ಮ ಯೋಜನಾ ಮಂತ್ರಿಗಳ ಸಮಕ್ಷಮದಲ್ಲಿ ಯಾರಾದರೂ ನೀರಾವರಿ ಇಲಾಖೆಯಲ್ಲಿ ಹಣ ತಿಂದವರು ಸಿಕ್ಕಿದರೆ ನಾಗರಹಾವು ಕಚ್ಚಿದಂತೆ ಕಚ್ಚಿಬಿಡುತ್ತೇನೆ ನಾನು ಎಂದು ಹೇಳಿದರು. ಅದು ಕೈ ತೋರಿಸಿಕೊಂಡು ಹೇಳಿದರು. ನಾಗರಹಾವು ಬುಸುಗುಟ್ಟಿಕೊಂಡು ಕಚ್ಚಿದಂತೆ ಕಚ್ಚಿಬಿಡುತ್ತೇನೆಂದು ಹೇಳಿದರು. ಇವತ್ತಿನವರೆಗೂ ವೀರಪ್ಪಮೊಯ್ಲಿಯವರು ಕಚ್ಚಿ ಸತ್ತಂಥ ನಿದರ್ಶನಗಳು ಒಂದೂ ನಮ್ಮ ಪೇಪರ್ ನಲ್ಲಿ ವರದಿ ಆಗಲಿಲ್ಲ. ಅದೇನೋ ನಾನು ಭೈರೇಗೌಡರು ಇಬ್ಬರೂ ಕುಳಿತುಕೊಂಡು ಸಸ್ಪೆಂಡ್ ಮಾಡಿಸಿದೆವು ಅವರು ಮತ್ತೆ ಈಗ ರೀ ಇನ್‌ಸ್ಟಿಯೇಟ್ ಆದರು ಹಣ ದುರುಪಯೋಗದ ಮೇಳದಲ್ಲಿ ಭಾಗವಹಿಸಿ ಕೋಟ್ಯಾಂತರ ರೂಪಾಯಿಗಳನ್ನು ನುಂಗಿರತಕ್ಕಂಥ ಖದೀಮರನ್ನು ವೀರಪ್ಪಮೊಯ್ಲಿಯವರಂತಹ ನಾಗರಹಾವು ಕಚ್ಚಿ ಸತ್ತಂಥ ನಿದರ್ಶನಗಳು ಪತ್ರಿಕೆಗಳಲ್ಲಿ ಇಲ್ಲಿಯವರೆಗೂ ವರದಿ ಆಗಿಲ್ಲ. ಆ ಮೇಳ ನಡೆದುಕೊಂಡೇ ಹೋಗುತ್ತಿದೆ. ವಿಧಿ ಇಲ್ಲದೆ ಮುಖ್ಯಮಂತ್ರಿಗಳು ಹೊಂದಾಣಿಕೆ ಮಾಡಿಕೊಂಡು ಹೋಗುತ್ತಲೇ ಇದ್ದಾರೆ. ಇಲ್ಲದಿದ್ದರೆ ಕಿತ್ತು ಹೊಗೆಯುತ್ತಿದ್ದರು ಅವರನ್ನು ಅದರ ಫಲವೇ ಈ 12 ಸೂತ್ರಗಳು.

ಚೇರ್ಮನ್ : ಮಾನ್ಯ ರಾಮಯ್ಯನವರೇ, ನಿಮಗೆ ಇನ್ನು ಎಷ್ಟು ಹೊತ್ತು ಬೇಕಾಗಬಹುದು. ಏಕೆಂದರೆ ತಾವು ಈಗಾಗಲೇ ಒಂದು ಗಂಟೆ ಮಾತನಾಡಿದ್ದೀರಿ.

ಶ್ರೀ ವೈ.ಕೆ. ರಾಮಯ್ಯ : ಈ ನೀರಾವರಿ ವಿಷಯವನ್ನು ಪ್ರಸ್ತಾಪ ಮಾಡಿ ಮುಗಿಸುತ್ತೇನೆ. ನಾನು ಅನಾವಶ್ಯಕವಾಗಿ ಏನನ್ನು ಮಾತನಾಡುತ್ತಿಲ್ಲ ಎಂದು ಭಾವಿಸಿದ್ದೇನೆ. ಯೋಜನಾ ವೆಚ್ಚವನ್ನು ಸರಿದೂಗಿಸಿಕೊಂಡು ಹೋಗಬೇಕಾಗಿದ್ದರೆ ಈ ಅಪವ್ಯಯವನ್ನು ಕಡಿಮೆ ಮಾಡಿದಿದ್ದರೆ ಸಾಧ್ಯ ಇತ್ತು. ಅಪವ್ಯಯವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ವೀರಪ್ಪಮೊಯ್ಲಿಯವರು ಅಷ್ಟೇ ಅಲ್ಲ, ಅವರ ಸ್ಥಾನದಲ್ಲಿ ಈಗ ಇರುವಂಥಹ ಪರಿಸ್ಥಿತಿಯಲ್ಲಿ ನಾನು ಕುಳಿತುಕೊಂಡಿದ್ದರೂ ಸಾಧ್ಯವಾಗುತ್ತಿರಲಿಲ್ಲ ಅತ್ಯಂತ ಕೆಟ್ಟ ವ್ಯವಸ್ಥೆಯನ್ನು ಸೃಷ್ಟಿ ಮಾಡಿರುವುದಲ್ಲಿ ನಾವು ಎಲ್ಲರೂ ಭಾಗಿಗಳಾಗಿದ್ದೇವೆ. ಇಲ್ಲದಂತಹ ಯಾರೂ ಸರಿ ಮಾಡುವುದಕ್ಕೆ ಆಗದೇ ಇರುವಂತಹ ಯಾರಿಂದಲೂ ಅದನ್ನು ಹಿಂದಕ್ಕೆ ತರಲು ಸಾಧ್ಯ ಇಲ್ಲದಂತಹ ಒಂದು ಕೆಟ್ಟ ವ್ಯವಸ್ಥೆಯನ್ನು ಸೃಷ್ಟಿ ಮಾಡಿ ಅದರಲ್ಲಿ ಸಿಕ್ಕಿಹಾಕಿಕೊಂಡು ನಾವು ನೀವು ಮೊಯ್ಲಿಯವರು ಈ ರಾಜ್ಯದ ಜನ ಎಲ್ಲರೂ ಬಿದ್ದುಬಿಟ್ಟಿದ್ದೇವೆ. ಇದರಿಂದಾಗಿ ಅಪವ್ಯಯದ ಮೂಲಗಳನ್ನು ಹಿಡಿದು ಅದನ್ನು ತಡೆಗಟ್ಟುವಂತಹ ಶಕ್ತಿ ವೀರಪ್ಪಮೊಯ್ಲಿಯವರಿಗಾಗಲಿ ಮತ್ತೊಬ್ಬರಿಗಾಗಲಿ ಆಡಳಿತ ಪಕ್ಷದಲ್ಲಿ ಇವತ್ತು ಉಳಿದುಕೊಂಡಿಲ್ಲ. ಆದರಿಂದ ಈ ಎಲ್ಲಾ ಕಾರಣಗಳಿಗಾಗಿ ಯೋಜನಾ ಗಾತ್ರವನ್ನು ಕಡಿಮೆ ಮಾಡಲೇ ಬೇಕಾಗುತ್ತೇ. ನಾನು ವಿಧಿ ಇಲ್ಲದೆ ಹೇಳಬೇಕಾಗುತ್ತದೆ. ಇವರ ಹುನ್ನಾರದಿಂದ ಅಂಕಿಅಂಶಗಳ ಮಾಯಾಜಾಲದಲ್ಲಿ 93-94ನೇ ಸಾಲಿನಲ್ಲಿ ಈ ರಾಜ್ಯದ ಜನರನ್ನು ಸ್ವರ್ಗಲೋಕಕ್ಕೆ ಎತ್ತಿಕೊಂಡು ಹೋಗಿ ಆದರ್ಶದ ಬಿಸಿಲುಗುದುರೆಯ ಬೆನ್ನಿನ ಮೇಲಿನಿಂದ ಸಮುದ್ರದ ಮೇಲೋ ಬೆಂಕಿಯ ಮೇಲೋ ನಮ್ಮನ್ನು ಕೆಡವಿ ಹಾಕುತ್ತಾರೆ ಎಂದು ನಾನು ಹೇಳಬೇಕಾಗುತ್ತದೆ. ಇದು ಇವರು ಯೋಜನಾ ಗಾತ್ರದ ವೆಚ್ಚವನ್ನು ಕಡಿಮೆ ಮಾಡಲೇಬೇಕು ಎನ್ನುವುದಕ್ಕೆ ನನ್ನ ಪ್ರತಿಪಾದನೆ. ಅತಿ ಮುಖ್ಯವಾಗಿ ಈ ರಾಜ್ಯಪಾಲರ ಭಾಷಣ ನಾನು ಮೊದಲೇ ಹೇಳಿದ ಹಾಗೆ ಶ್ರಾದ್ಧ ಮಾಡಿದ ಹಾಗೆ. ಇದರಲ್ಲಿ ಮತ್ತೊಂದು ವಿಷಯ ಪ್ರಸ್ತಾಪವಾಗಬೇಕಾಗಿತ್ತು. ಅದು ಏನೆಂದರೆ ಈ ರಾಜ್ಯದ ನೀರಾವರಿ ಬಗ್ಗೆ. ಏಕೆ ನಾನು ಪ್ರತಿ ವರ್ಷ ನಾವು ನೀರಾವರಿ ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲವೇ? ಅಂತಹ ವಿಶೇಷವಾದಂತಹ ಪರಿಸ್ಥಿತಿ ಏನಿತ್ತು. ಅಂತ ನೀವು ಹೇಳುವುದಾದರೆ ಕರ್ನಾಟಕದ ಎರಡು ಪ್ರಮುಖ ಕಣ್ಣುಗಳಾದ ಕೃಷ್ಣಾ ಮತ್ತು ಕಾವೇರಿ. ನನ್ನ ದೃಷ್ಟಿಯಿಂದ ಇವು ಎರಡೂ ಕಾವೇರಿ ಮಾತೆಯ ಎರಡು ಕಣ್ಣುಗಳು. ಈ ಮಾತೆಯ ಎರಡು ಕಣ್ಣಿನಿಂದ ಆನಂದ ಭಾಷ್ಪ ಸುರಿದು ಭೂಮಿ ತೋಯ್ದು ಆ ತೋಯ್ದ ಭೂಮಿಯಿಂದ

ಎಂದು ನಾವು ನಿರೀಕ್ಷೆ ಮಾಡಿದ್ದೆವು. ಆದರೆ ದುರಾದೃಷ್ಟವಶಾತ್ ಈ ಕರ್ನಾಟಕ ತಾಯಿಯ ಎರಡು ಕಣ್ಣುಗಳಿಂದ ಆನಂದದ ಭಾಷ್ಪ ಸುರಿಸುವ ಬದಲು ಕಣ್ಣೀರು ಸುರಿಸುವಂತಹ ವಿಶೇಷ ಪರಿಸ್ಥಿತಿ ಒದಗಿ ಬಂದಿದೆ. ನಿಮ್ಮ ಗಮನಕ್ಕೆ ಇದು ಬರಲಿಲ್ಲವೇನು? ಯಾವ ತಾಯಿಯು ಕಣ್ಣಿನಿಂದ ಆನಂದ ಭಾಷ್ಪಗಳು ಸುರಿದು ಭೂಮಿ ತೋಯ್ದು ಬೆಳೆ ಬರಬೇಕಾಗಿತ್ತೋ ಆ ತಾಯಿಯ ಕಣ್ಣಿನಿಂದ ರಕ್ತದ ಕೋಡಿ ಹರಿಯುತ್ತಾ ಇರುವುದು ನಿಮ್ಮ ಗಮನಕ್ಕೆ ಬರಲಿಲ್ಲವೇನು? ಈ ವಿಷಯಕ್ಕೆ ನೀವು ಕೊಟ್ಟಿರುವಂತಹ ಆದ್ಯತೆ 40ನೇ ಪ್ಯಾರಾ. ನಿಮ್ಮ ರಾಜ್ಯಪಾಲರ ಭಾಷಣದಲ್ಲಿ ನೀವು ಕೊಟ್ಟಿರುವಂತಹ ಆಧ್ಯತೆ 40ನೇ ಪ್ಯಾರಾದಲ್ಲಿ ಅದೂ ಎಷ್ಟು ಎರಡು ಪದ. ಕಟುವಾದ ಪದಗಳನ್ನು ಉಪಯೋಗಿಸುವಷ್ಟು ಶಕ್ತಿ ಕೂಡ ಇವತ್ತು ನಮಗೆ ಉಳಿದಿಲ್ಲ. ನೀವು ಆದ್ಯತೆ ಕೊಟ್ಟಿರುವುದು

55ನೇ ಪ್ಯಾರದಲ್ಲಿ ಅದೂ ಬೇಕೋ ಬೇಡವೋ. ಕಾಟಾಚಾರಕ್ಕೆ ಅದೂ ಮರೆತುಬಿಟ್ಟಿದ್ದರು ಎಂದು ಕಾಣುತ್ತದೆ ಕೊನೆಗೆ ಯಾರೋ ಹೇಳಿರಬೇಕು ಕೃಷ್ಣಾ ಮತ್ತು ಕಾವೇರಿ ಬಗ್ಗೆ ಬಿಟ್ಟುಬಿಟ್ಟಿದ್ದೀರಲ್ಲಾ, ನಾಲ್ಕು ಮಾತು ಸೇರಿಸಿ ಎಂದು. ಅದಕ್ಕೋಸ್ಕರ ಹೇಳಿರಬೇಕು. ನಾಲ್ಕು ಲೈನು ಇಲ್ಲ. ಸನ್ಮಾನ್ಯ ಅಧ್ಯಕ್ಷಣೀಯಹರೇ,ಇದನ್ನು ಮಾತ್ರ ಓದುತ್ತೇನೆ. "ನಾವು ಕೃಷ್ಣಾ ಜಲಾನಯನ ಪ್ರದೇಶದಲ್ಲಿ ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಕಾರ್ಯವನ್ನು ಮುಂದುವರಿಸುತ್ತೇವೆ. ರಾಜ್ಯದ ನೀರಿನ ಪಾಲನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದಕ್ಕೆ ಅದನ್ನು ಖಾತರಿಪಡಿಸಿಕೊಳ್ಳುವುದಕ್ಕೆ ಕ್ರಿ.ಶ. 2000 ಇಸವಿ ಒಳಗೆ ಪೂರ್ಣಗೊಳಿಸುವ ನಮ್ಮ ನಿರ್ಧಾರ ಅಚಲವಾಗಿದೆ. ಅಂತೆಯೇ ಕಾವೇರಿ ನೀರಿನ ನಮ್ಮ ನ್ಯಾಯಯುತವಾದ ಪಾಲು ದೊರಕಿಸುವಂತೆ ಖಚಿತಪಡಿಸಿಕೊಳ್ಳುವುದು." ಯಾವ ವಿಷಯ ಅಗ್ರಸ್ಥಾನ ಪಡೆಯಬೇಕಾಗಿತ್ತೋ....

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ರಾಮಯ್ಯನವರೇ, ಅದಕ್ಕೆ ಆದ್ಯತೆ ಕೊಟ್ಟಿದೆ. ಏತಕ್ಕೆ ಹೇಳಿದ್ದೇವೆಂದರೆ ಆ ವಿಚಾರ ಈಗ ಟ್ರಿಬ್ಯೂನಲ್ ಮುಂದೆ ಇರುವುದರಿಂದ ಹೆಚ್ಚು ಇಲ್ಲಿ ಪ್ರಸ್ತಾವನೇ ಮಾಡುತ್ತಾ ಇರುವುದರಿಂದ ನಮಗೆ ಎಲ್ಲಿ ತೊಂದರೆಯಾಗುತ್ತದೆಯೋ ಎನ್ನುವ ಒಂದೇ ಒಂದು ವಿಶೇಷವಾದ ಸಂದರ್ಭದಲ್ಲಿ ಮಾಡಿದ್ದೇವೆಯೇ ವಿನಹಃ ಬೇರೆ ಯಾವ ತಪ್ಪು ಕಲ್ಪನೆ ಮಾಡಬೇಡಿ.

ಶ್ರೀ ವೈ.ಕೆ. ರಾಮಯ್ಯ : ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು. ಕುಣಿಯಲಾರದ ಸೂಳೆಗೆ ನೆಲ ಡೊಂಕು. ಯಾವ ವಿಷಯಕ್ಕೆ ಅಗ್ರಸ್ಥಾನ ದೊರೆಯಬೇಕಾಗಿತ್ತೋ ಯಾವ ವಿಷಯಕ್ಕೆ ಆದ್ಯತೆ ದೊರೆಯಬೇಕಾಗಿತ್ತೋ ಅಂತಹ ವಿಶೇಷವಾದ ವ್ಯವಸ್ಥೆಗೆ ಆ ವಿಶೇಷವಾದ ವಿಷಯಕ್ಕೆ 55ನೇ ಪ್ಯಾರಾದಲ್ಲಿ ಅದೂ ಬೇಕೋ ಬೇಡವೋ ಎನ್ನುವ ಪರಿಸ್ಥಿತಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನಾನು ಹೇಳಿದ್ದು ಈ ರಾಜ್ಯಪಾಲರ ಭಾಷಣದಲ್ಲಿ ಎಲ್ಲವೂ ಇದೆ ಯಾವುದು ಬೇಕೋ ಅದು ಇಲ್ಲ. ಎರಡೂ ಯೋಜನೆಗಳನ್ನು ಕಾರ್ಯಗತ ಮಾಡುವುದರಲ್ಲಿ ವಿಶೇಷವಾದ ಪರಿಸ್ಥಿತಿ ಇದೆ ಎಂದು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿದ್ದೇನೆ. ಕೃಷ್ಣಾ ನದಿಯ ನೀರಿನ ಪಾಲನ್ನು ಬಳಸಿಕೊಳ್ಳುವಂತಹ ಕೆಲಸವನ್ನು ನಾವು ಎರಡು ಸಾವಿರ ಇಸವಿ ಒಳಗೆ ಮಾಡಲೇಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ಈ ವಿಷಯ ಕುರಿತು ಪ್ರಸ್ತಾಪ ಮಾಡುವುದಕ್ಕೆ ವಿರೋಧಪಕ್ಷದ ನಾಯಕರ ಸಭೆ ಕರೆದರು. ಅಲ್ಲಿ ಒಂದು ನೇರವಾದ ಪ್ರಶ್ನೆಯನ್ನು ಇಲ್ಲಿ ಯಾರಾದರೂ ಕಾನೂನು ಪಂಡಿತರು ಇರಬಹುದು. ಚೀಟಿ ಬರೆದು ಕಳುಹಿಸಿ ಏನು ಹೇಳುತ್ತಾರೋ ಕೇಳೋಣ. ಎರಡು ಸಾವಿರ ಇಸವಿ ಒಳಗೆ ಕೃಷ್ಣಾ ನದಿ ನೀರಿನ ಪಾಲನ್ನು ನಾವು ಉಪಯೋಗಿಸಿಕೊಳ್ಳದಿದ್ದರೆ ಏನಾಗುತ್ತದೆ? What are the consequences if you do not utilise the water as per Bachawat

Award before 2000 AD? This is a simple pertinent question I pose to the Hon.Chief Minister.

ಮುಖ್ಯಮಂತ್ರಿಗಳು ಹೇಳುತ್ತಾರೆ ಏನೂ ಆಗುವುದಿಲ್ಲ ಎಂದು. ನಾವು ರಿವ್ಯೂ ಮಾಡಬಹುದು ರಿವೈಸ್ ಮಾಡಬಹುದು ಏನೇನೋ ಪದಗಳನ್ನು ಹೇಳಿದರು. ಅದು ನನಗೆ ಅರ್ಥವಾಗಲೇ ಇಲ್ಲ. ದುರಾದೃಷ್ಟವಶಾತ್ ಈ ರಾಜ್ಯದ ಸ್ವಲ್ಪ ನಿಯತ್ತಿನ ಮನುಷ್ಯರು ಅಡ್ವೋಕೇಟ್ ಜನರಲ್ ಆದಂತಹ ಬಿ.ವಿ. ಆಚಾರ್ಯರವರು ಅಲ್ಲಿ ಕುಳಿತುಕೊಂಡಿದ್ದರು. I turned the table and asked him the same question, "If the Karnataka do not make use of water before 2000 AD what will happen'.

ಅವರು ಅತ್ಯಂತ ಪ್ರಾಮಾಣಿಕವಾದ ಉತ್ತರ ಕೊಟ್ಟರು. ಸಹಜವಾಗಿ ಕೂಡ ಇತ್ತು. ನಾನು ಮೆಚ್ಚಿಕೊಂಡೆ. ಕರ್ನಾಟಕ ತನ್ನಪಾಲಿನ ಹಕ್ಕನ್ನು ಕಳೆದುಕೊಳ್ಳುತ್ತದೆ. The Karnataka will lose its right to utlise the water. Its right will be extinguished.

ಏನು ಮಾಡುತ್ತೀರಿ? 4 ಜಿಲ್ಲೆಯ ಜನರನ್ನು ಯಾವ ಕೂಪಕ್ಕೆ ತೆಗೆದುಕೊಂಡು ಹೋಗಿ ತಳ್ಳುತ್ತೀರಾ? 2 ಸಾವಿರ ಇಸವಿ ಒಳಗೆ ಹಣ ಖರ್ಚು ಮಾಡಿ ನಮ್ಮ ಪಾಲಿನ ನೀರನ್ನು ಭೂಮಿಗೆ ತಿರುಗಿಸುವಂತಹ ಪುಣ್ಯದ ಕೆಲಸವನ್ನು ನೀವು ಮಾಡದೇ ಇದ್ದರೆ ಎಂತಹ ಪಾಪದ ಕೂಪಕ್ಕೆ ನಾವೆಲ್ಲಾ ಹೋಗುತ್ತೇವೆ. ಈ ಜನಾಂಗದ ಜನರು. 2 ಸಾವಿರ ವರ್ಷದ ಒಳಗಾಗಿ ನಾವು ಉಪಯೋಗಿಸಿಕೊಳ್ಳಬೇಕಾದಂಥ ನೀರನ್ನು ಕುಡಿಯುವ ನೀರನ್ನು ತೆಗೆದುಕೊಂಡು ಹೋಗುವ ನೆಪದಲ್ಲಿ ತೆಲುಗು ಗಂಗಾ ಯೋಜನೆಯಲ್ಲಿ 15 ಸಾವಿರ ಕ್ಯೂಸೆಕ್ಸ್ ಕಾಲುವೆಯನ್ನು 50 ಸಾವಿರ ಕ್ಯೂಸೆಕ್ಸ್ ಕಾಲುವೆಯಾಗಿ ಮಾಡಿಕೊಂಡು ಅವರು ತೆಗೆದುಕೊಂಡು ಹೋಗುತ್ತಿದ್ದಾರೆ.

ತೆಲುಗು ಗಂಗಾ ಯೋಜನೆ ಇರುವುದು ಕೇವಲ 15 ಸಾವಿರ ಕ್ಯೂಸೆಕ್ಸ್ ನೀರನ್ನು ತೆಗೆದುಕೊಂಡು ಹೋಗಲು ಮಾತ್ರ. 50 ಸಾವಿರ ಕ್ಯೂಸೆಕ್ಸ್ ನೀರನ್ನು ತೆಗೆದುಕೊಂಡು ಹೋಗುವಂಥ ಕೆಲಸವನ್ನು ಅವರು ಮಾಡುತ್ತಾ ಇದ್ದಾರೆ. ಕರ್ನಾಟಕವನ್ನು ಆಳಿದಂಥ ನಾವು, ಅಂದರೆ ನನ್ನನ್ನೂ ಸಹ ಸೇರಿಸಿಕೊಂಡು ಹೇಳುತ್ತಾ ಇದ್ದೇನೆ, 2000 ನೇ ಇಸವಿಯಲ್ಲಿ ಕೃಷ್ಣಾ ನದಿಯಿಂದ ಬರತಕ್ಕಂಥ ನೀರಿನ ಪಾಲನ್ನು ಉಪಯೋಗಿಸಿಕೊಳ್ಳಲು ಆಗದೇ ಇರುವಂಥ ಪರಿಸ್ಥಿತಿಯಲ್ಲಿ ನಾವುಗಳು ಇದ್ದೇವೆ. ಆದಕಾರಣ ಇದಕ್ಕೆ ವಿಶೇಷವಾದಂಥ ಪರಿಸ್ಥಿತಿ ಎಂದು ನಾನು ಕರೆದಿದ್ದೇನೆ. ಇದರ ಬಗ್ಗೆ ನಿಮ್ಮ ರಾಜ್ಯಪಾಲರ ಭಾಷಣದಲ್ಲಿ ಆದ್ಯತೆಯು ಇಲ್ಲ, ಪ್ರಸ್ತಾವನೆಯೂ ಇಲ್ಲ, ಪ್ರಾಮುಖ್ಯತೆಯೂ ಇಲ್ಲ. ಇನ್ನು ಕಾವೇರಿಯ ಕಥೆ. ಕಾವೇರಿ ನದಿ ನೀರಿನ ಹಂಚಿಕೆಯ ಬಗ್ಗೆ ನೀಡಿರುವ ಮಧ್ಯಂತರ ತೀರ್ಪು ಏನಾದರೂ ಖಾಯಂ ತೀರ್ಪು ಆದರೆ 205 ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಟ್ಟುಕೊಡಲೇ ಬೇಕೆನ್ನುವ ತೀರ್ಪು ಒಂದು ವೇಳೆ ಖಾಯಂ ತೀರ್ಪು ಆದರೆ ಬಹುಶಃ ಮಂಜುನಾಥ್‌ರವರು, ನಾವು, ನೀವು, ಯಾರೂ ಕ್ಷೇತ್ರಗಳಲ್ಲಿ ಓಡಾಡಲು ಸಾಧ್ಯವಾಗುವುದಿಲ್ಲ. ಕಾವೇರಿ ಕೊಳ್ಳದಲ್ಲಿರತಕ್ಕಂಥ ನಮ್ಮಂಥ ಶಾಸಕರುಗಳಿಗೆಲ್ಲಾ ಕಲ್ಲು ಹೊಡೆಯುತ್ತಾರೆ. ಶಾಶ್ವತವಾಗಿ 205 ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಟ್ಟುಕೊಡುವುದಾದರೆ, ನಾವು ನೀವುಗಳೆಲ್ಲರೂ ಶ್ರಮಪಟ್ಟು ಮಾಡುತ್ತಿರುವಂಥ ಕಾಲುವೆಗಳನ್ನು ಮುಚ್ಚಬೇಕಾಗುತ್ತದೆ. ಬಾಗೂರು ನವಿಲೆ ಟನಲ್ಲು ಬ್ಲಾಸ್ಟ್ ಮಾಡಬೇಕಾಗುತ್ತದೆ.

ಶ್ರೀ ಟಿ.ಎಂ. ಮಂಜುನಾಥ್ : ತಮಗೆ ಗೊತ್ತಿರುವ ಹಾಗೆ ನಮ್ಮ ರಾಜ್ಯಕ್ಕೆ ಕಾವೇರಿನದಿಯಿಂದ ಬರತಕ್ಕಂಥ ನೀರು ನಮಗೆ ಬರುವ ಹಾಗೆ, ನಮಗೆ ಅನ್ಯಾಯವಾಗದ ಹಾಗೆ ನಾವು ನೋಡಿಕೊಳ್ಳುತ್ತೇವೆ. ಟ್ರಿಬ್ಯುನಲ್‌ನ್ನು ನಾವು ಒಪ್ಪಿಲ್ಲ ಎಂದು ಮಾನ್ಯ

ಮುಖ್ಯಮಂತ್ರಿಯವರು ಹೇಳಿದ್ದಾರೆ. ಹಾಗೆಯೇ ಅದಕ್ಕಾಗಿ ಹೆಚ್ಚಿನ ಹಣವನ್ನು ಈಗಾಗಲೇ ತಮಗೆ ವೇದ್ಯವಾಗಿರುವ ಹಾಗೆ ಹಿಂದೆ ಅದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತಾ ಇದ್ದರು, ಈ ವರ್ಷಗಳಲ್ಲಿ ಎಷ್ಟು ತ್ವರಿತವಾಗಿ ಕೆಲಸಗಳು ಆಗುತ್ತಿವೆ ಎಂಬುದು ಕೂಡ ತಮಗೆ ಗೊತ್ತಿದೆ. ಹೀಗೆ ಗೊತ್ತಿದ್ದೂ ಕೂಡ ತಾವುಗಳು ಹೀಗೆ ವಾದವನ್ನು ಮಾಡುತ್ತಿದ್ದೀರಿ. ನಮ್ಮ ಪಾಲಿನ ನೀರನ್ನು ನಾವು ಉಪಯೋಗಿಸಿಕೊಳ್ಳಬೇಕು, ನಮ್ಮ ರೈತರಿಗೆ ನೀರು ಕೊಡಬೇಕೆನ್ನುವ ಕಳಕಳಿ ನಮ್ಮ ಸರಕಾರಕ್ಕೆ ಇದೆ. ನಮ್ಮ ಸರಕಾರವು ಆದ್ಯತೆಯನ್ನು ಕೊಟ್ಟು ಕೆಲಸ ಮಾಡುತ್ತಾ ಇದೆ. ತಾವುಗಳು ಹೇಳಿರತಕ್ಕಂಥಾದ್ದಕ್ಕೆ ಬೇಜಾರು ಮಾಡುವಂತಾದ್ದಿಲ್ಲ. ನಿಮಗೆ ಎಷ್ಟು ಉತ್ಸಾಹ ಇದೆಯೋ ಅಷ್ಟೇ ಉತ್ಸಾಹದಲ್ಲಿ ಸರಕಾರವೂ ಕೂಡ ಕೆಲಸ ಮಾಡುತ್ತಾ ಇದೆ.

ಶ್ರೀ ವೈ.ಕೆ. ರಾಮಯ್ಯ : ಕರ್ನಾಟಕ ರಾಜ್ಯದ ನೀರಾವರಿ ಯೋಜನೆಗಳಿಗಾಗಿ ಈ ಸರಕಾರ ಮಾಡಿರುವಂಥ ಎಲ್ಲಾ ಒಳ್ಳೆಯ ಕೆಲಸಗಳಿಗೆ ನಾನು ವಿನಯಪೂರ್ವಕವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನಾನು ಈಗ ಸರಕಾರದವರು ಮಾಡದೇ ಇರುವಂಥ ಕೆಲಸಗಳ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ನೀವು ಹಣ ಕೊಟ್ಟಿರುವುದಕ್ಕೆ ನಿಮಗೆ ಅಭಿನಂದನೆಗಳು. ನೀವು ಶ್ರಮಪಟ್ಟಿರುವುದಕ್ಕೆ ನಿಮಗೆ ಅಭಿನಂದನೆಗಳು. ಆದರೆ ಯಾವ ಪ್ರಾಶಸ್ತ್ಯವು ಅದಕ್ಕೆ ದೊರೆಯಬೇಕಾಗಿತ್ತೋ ಆ ಪ್ರಾಶಸ್ತ್ಯ ಅದಕ್ಕೆ ದೊರೆಯಲಿಲ್ಲ. ಯಾವ ಆದ್ಯತೆಯು ಅದಕ್ಕೆ ದೊರೆಯಬೇಕಾಗಿತ್ತೋ ಆ ಆದ್ಯತೆಯು ಅದಕ್ಕೆ ದೊರೆಯಲಿಲ್ಲ. ಈ ಆಡಳಿತ ಪಕ್ಷದ ಕಿತ್ತಾಟದಿಂದಾಗಿ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಅಪಚಾರವೆಸಗಿದ್ದಾರೆ. ಇದು ಕಾಕತಾಳಿಯವೇ ಅಥವಾ ರೈತರ ದುರಾದೃಷ್ಟವೇ ಎಂಬುದು ನಮಗೆ ಗೊತ್ತಾಗುವುದಿಲ್ಲ. ಮಾನ್ಯ ದೇವರಾಜ್ ಅರಸರ ಕಾಲದಲ್ಲಿ ನೀರಾವರಿ ಮಂತ್ರಿಗಳು ಮಾನ್ಯ ನಂಜೇಗೌಡರು. ಅವರೂ ಭಿನ್ನಮತೀಯರಾಗಿದ್ದರು. ಇಂತಹ ಭಿನ್ನಮತದ ಹಣೆಬರಹವು ನಮಗೆ ಬರಬೇಕೇ? ಇನ್ನಾವುದೇ ಕ್ಷೇತ್ರಕ್ಕೆ ಬೇಡವೇ? ನಮ್ಮ ಸರಕಾರದ ಆಡಳಿತ ನಡೆಯುವಾಗಲೂ ಕೂಡ ಭಿನ್ನಮತೀಯ ನಾಯಕರು ನೀರಾವರಿ ಸಚಿವರು ದೇವೇಗೌಡರೇ ಆದರು. ಇದೆಲ್ಲಾ ಮುಗಿದು ಒಳ್ಳೆಯ ಕಾಲ ಬರುತ್ತದೆ ಎಂದು ಎದುರು ನೋಡುವಾಗ ನಿಮ್ಮ ಸರಕಾರ ಬಂತು. ಅದರಲ್ಲಿಯೂ ಭಿನ್ನಮತೀಯ ನಾಯಕರೇ ನೀರಾವರಿ ಸಚಿವರಾದರು.

ಶ್ರೀ ಟಿ.ಎಂ.ಮಂಜುನಾಥ್ : ನಮ್ಮಲ್ಲಿ ಭಿನ್ನಮತ ಇದ್ದುದು ಎಲ್ಲಾ ಸರಿಯಾಗಿ ಒಮ್ಮತ ಬಂದಿದೆ. ಅದರ ಬಗ್ಗೆ ನಿಮಗೆ ಸಂಕೋಚ ಬೇಕಾಗಿಲ್ಲ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ಹೀಗೆ ಎಲ್ಲಾ ಕಾಲಕ್ಕೂ ಎಲ್ಲಾ ಸರಕಾರದಲ್ಲಿಯೂ ನಮ್ಮ ನೀರಾವರಿ ಮಂತ್ರಿಗಳೇ ಭಿನ್ನಮತೀಯ ನಾಯಕರುಗಳಾದುದರಿಂದ ಮುಖ್ಯಮಂತ್ರಿಗಳ ಅಸಹಕಾರ ನೀರಾವರಿ ಯೋಜನೆಗಳಿಗೆ ಹೊಡೆತ ಬಿತ್ತು. ಇದನ್ನು ನಾನು ತಮಾಷೆಯಾಗಿ, ಲಘುವಾಗಿ ಹೇಳುತ್ತಾ ಇಲ್ಲ. ಚರಿತ್ರೆಯಲ್ಲಿ ನಡೆದಿರುವ ಘಟನೆಗಳು, ಬಂದಿರುವಂಥ ಸಂದರ್ಭ ಸನ್ನಿವೇಶಗಳು, ನಮಗೆ ಹೇಗೆ ಪ್ರತಿಕೂಲವಾಗಿವೆ ಎಂಬುದನ್ನು ನೋಡಬೇಕಾಗಿದೆ. ತಮಿಳುನಾಡಿನ ಜಯಲಲಿತಾರವರಷ್ಟೇ ನಮಗೆ ಪ್ರತಿಕೂಲವಾಗಿಲ್ಲ, ಸರಕಾರ, ಸನ್ನಿವೇಶ, ಸಂದರ್ಭಗಳು, ಹೀಗೆ ಎಲ್ಲವೂ ನಮಗೆ ಪ್ರತಿಕೂಲವಾಗಿದೆ. ನಮ್ಮ ಹಾಲಿ ನೀರಾವರಿ ಮಂತ್ರಿಗಳು ಆಯವ್ಯಯದ ಭಾಷಣ ಮಾಡುವಾಗ ಒಂದು ಮಾತನ್ನು ಹೇಳಿದರು. ಎಲ್.ಓ.ಸಿ. ಎನ್ನುವಂಥ ಪದ್ಧತಿ ಇದೆಯಲ್ಲಾ, ಇದು ಆಯವ್ಯಯಕ್ಕೆ ಬಗೆದ ಅಪಚಾರ. There is no sanctity for the Budget unless the system of LOC is removed.

ನೀರಾವರಿ ಮಂತ್ರಿಗಳು ಇಲ್ಲಿ ನಿಂತು ಹೇಳಿದ್ದರು. ಇದೇ ಸದನದಲ್ಲಿ ಹೇಳಿದ್ದರು. Unless the LOC system is removed, there is no sanctity for the Budget ಅಂದರೆ ಈ ಹಣದ ಭರವಸೆಯನ್ನು ಕೊಡುವಂಥ L.O.C. ಪತ್ರವನ್ನು ಕೊಡುವಂಥ ವ್ಯವಸ್ಥೆ ಇದೆಯಲ್ಲಾ ಇದು ಆಯವ್ಯಯಕ್ಕೆ ಬಗೆದಂಥ ಅಪಚಾರ ಎಂದರು ...

ವ್ಯವಸ್ಥೆಯನ್ನು ಏತಕ್ಕೆ ಮಾನ್ಯ ಮುಖ್ಯಮಂತ್ರಿಗಳು ಇಟ್ಟುಕೊಂಡಿದ್ದಾರೆ ಎಂಬುದು ಮಾನ್ಯ ಎಸ್.ಎಂ. ಕೃಷ್ಣರವರಿಗೆ ಈಗ ಗೊತ್ತಾಗಿರಬೇಕು. ನಾನು ಇಲ್ಲಿ ಅವಾಸ್ತವಿಕವಾದುದು ಯಾವುದನ್ನೂ ಹೇಳುತ್ತಾ ಇಲ್ಲ, ಇರುವುದನ್ನು ಮಾತ್ರ ಹೇಳುತ್ತಾ ಇದ್ದೇನೆ. ಅದರ ಅನುಭವದ ಫಲವಾಗಿಯೇ ಮಾನ್ಯ ನೀರಾವರಿ ಮಂತ್ರಿಗಳು ಈ ರಾಜ್ಯದ ಜನತೆಗೆ ಒಂದು ಹೇಳಿಕೆಯನ್ನು ಕೊಟ್ಟರು. ಈ ಅನುಭವದ ಹಿನ್ನಲೆಯಲ್ಲಿ, ಅದು ಅವರಿಗೆ ತುಂಬಾ ಕೆಟ್ಟ ಅನುಭವ ಎಂದು ಕಾಣುತ್ತದೆ ಪಾಪ.... LOC system.

ಒಂದು ಅಪಚಾರ ಎಂದು ಹೇಳಿದಂಥ ನೀರಾವರಿ ಸಚಿವರಿಗೆ ಅದರ ಅರಿವು ಆದುದು ಯಾವಾಗ ಅಂದರೆ, ಸೆಪ್ಟೆಂಬರ್ 17ನೇ ತಾರೀಖಿನಂದು ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. "ಕಾಮಗಾರಿ ಗುತ್ತಿಗೆದಾರರಿಗೆ ಕೊಡತಕ್ಕಂಥ ಬಾಕಿ ಹಣದ ಮೊತ್ತ ಆತಂಕ ಪಡುವ ರೀತಿಯಲ್ಲಿ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಹಣಕಾಸಿನ ಖಾತೆಯನ್ನು ವಹಿಸಿಕೊಂಡಿರುವ ಮುಖ್ಯಮಂತ್ರಿ ವೀರಪ್ಪಮೊಯಿಲಿಯವರ ಜೊತೆ ಆದಷ್ಟು ಬೇಗ ಮಾತುಕತೆ ನಡೆಸಲು ಅವಕಾಶ ಕಲ್ಪಿಸಿಕೊಡುವುದಾಗಿ ಉಪಮುಖ್ಯಮಂತ್ರಿಯವರು ತಿಳಿಸಿದರು. ಬಾಕಿ ಹಣ ಉಳಿಸಿಕೊಂಡಿರುವುದುರ ಬಗ್ಗೆ ಮೇಲಿಂದ ಮೇಲೆ ಪ್ರಶ್ನೆಗಳು ಬಂದಾಗ ಅವರು, ಅರ್ಥ ಸಚಿವರ ಬಾಗಿಲನ್ನು ತಟ್ಟಲೆ? ಅದನ್ನು ನೀವು ನಿರೀಕ್ಷಿಸುವುದು ಸರಿಯಲ್ಲ, ನಾನು ಸಚಿವ ಸಂಪುಟದ ಸಭೆಗೆ ಹೋಗಿ ಕಿವಿಯಲ್ಲಿ ಮಾತನಾಡಲೇ ಅಥವಾ ಬಂಡಾಯ ಏಳಲೇ?" -ಬಂಡಾಯ ಎದ್ದರು. ಅಷ್ಟೇ ಅಲ್ಲ, "ಬಾಕಿ ಹಣ 83 ಕೋಟಿ ರೂಪಾಯಿಗಳು ಉಳಿದಿದ್ದು, ಈಗ ಅದು 100ಕೋಟಿ ರೂಪಾಯಿಗಳಿಗೆ ಹೆಚ್ಚಾಗಿದೆ." - ಅಂದರೆ ಅವರು ಸೆಪ್ಟೆಂಬರ್ ತಿಂಗಳಲ್ಲಿ ಇದನ್ನು ಹೇಳಿದರು. ಈ ರಾಜ್ಯ ಸರಕಾರ ಬಿಡುಗಡೆ ಮಾಡಬೇಕಾಗಿದ್ದಂಥ ಹಣ 802 ಕೋಟಿಗಳು. ಅದರಲ್ಲಿ ಬಿಡುಗಡೆಯಾಗಿರುವ ಹಣ ಕೇವಲ 200 ಕೋಟಿಗಳು. ಇದು ನಾನು ಹೇಳಿದ ಹೇಳಿಕೆಯಲ್ಲ, ಅಥವಾ ನಮ್ಮ ವಿರೋಧಪಕ್ಷದ ನಾಯಕರಾದ ದೇಶಪಾಂಡೆಯವರು ಉಪನಾಯಕರಾದಂಥ ಸಿಂಧ್ಯರವರು ಹೇಳಿದಂಥಾದ್ದು ಕೂಡ ಅಲ್ಲ, ಈ ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಿರುವ, ಸರಕಾರದ ಎರಡನೇ ಸ್ಥಾನದಲ್ಲಿ ಕುಳಿತಿರುವ ನೀರಾವರಿ ಸಚಿವರು ಹೇಳಿರುವ ಮಾತು. 800 ಕೋಟಿ ರೂಪಾಯಿ ಬಿಡುಗಡೆಯಾಗಲಿರುವ ಕಡೆಯಲ್ಲಿ ಕೇವಲ 200ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆಯಾಗಿವೆ ಎಂಬ ಈ ಮಾತನ್ನು ಹೇಳುವಾಗ, ಈ ರಾಜ್ಯದ ಜನತೆಗೆ ಮತ್ತು ಈ ಸದನದ ಸದಸ್ಯರಿಗೆ ಅರಿವು ಆಗುತ್ತದೆ. ಎಷ್ಟು ಆದ್ಯತೆಯನ್ನು ನೀವು ಕೊಟ್ಟಿದ್ದೀರಿ ಎಂದು ಗೊತ್ತಾಗುತ್ತದೆ. Water will find its own level but men will find its highest level at a different time.

ಆದರೆ ಮಾನ್ಯ ಕೃಷ್ಣರವರು ನಿನ್ನೆ ವಿಧಾನಪರಿಷತ್ತಿನಲ್ಲಿ ಹೇಳುತ್ತಾರೆ ಏನು..? ಅವರು ಇಲ್ಲಿ ಈಗ ಇಲ್ಲ, ಇದ್ದಿದ್ದರೆ ಚೆನ್ನಾಗಿ ಇರುತ್ತಿತ್ತು.ಹಣದ ಕೊರತೆಯಿಂದಾಗಿ ರಾಜ್ಯದ ನೀರಾವರಿ ಯೋಜನೆಗಳು ಕುಂಠಿತವಾಗಿವೆ. 140 ಕೋಟಿ ರೂಪಾಯಿಗಳ ಬಿಲ್ಲು ಇವೊತ್ತಿಗೂ ಕೂಡ ಪೆಂಡಿಂಗ್ ಇದೆ. ನಾನು ಪುನಃ ಈ ಸರಕಾರಕ್ಕೆ ಹೇಳುತ್ತಾ ಇದ್ದೇನೆ. ಯಾವುದಾದರೂ ಕಾಲದಲ್ಲಿ ಸನ್ಮಾನ್ಯ ಹುಚ್ಚಮಾಸ್ತಿಗೌಡರು ಬಹಳ ವರ್ಷಗಳಿಂದ ಸರಕಾರವನ್ನು ನೋಡಿರುವಂಥವರು ಸರಕಾರದಲ್ಲಿ ಇರುವಂಥವರು. ನೀವುಗಳು ಹಿರಿಯರು. ಹಾಗೆಯೇ ಮಾನ್ಯ ರಾಮಸ್ವಾಮಿಯವರು ಕೂಡ ಇದ್ದಾರೆ. ಅವರೂ ಹೇಳಲಿ. ನಿಮ್ಮ ರಾಜಕೀಯ ಜೀವನದಲ್ಲಿ ಯಾವುದಾದರೂ ಸಂದರ್ಭದಲ್ಲಿ ನೀರಾವರಿಗಾಗಿ 140 ಕೋಟಿ ರೂಪಾಯಿಗಳಷ್ಟು ಪೆಂಡಿಂಗ್ ಬಿಲ್ ಇದ್ದಂಥ ಸರಕಾರ ಸಂದರ್ಭ, ಸನ್ನಿವೇಶ, ನಿಮ್ಮ ಗಮನದಲ್ಲಿದೆಯೇ ಎಂಬುದನ್ನು ಹೇಳಿ.

140 ಕೋಟಿ ರೂಪಾಯಿ ನೀರಾವರಿ ಕೆಲಸ. ಮಾಡಿದವರಿಗೆ ಕೊಡಬೇಕಾದಂತಹ ಬಿಲ್ ಪೆಂಡಿಂಗ್ ಇದ್ದುದು ರಾಜಕೀಯ ಜೀವನದ ಇತಿಹಾಸದಲ್ಲಿ ಯಾವತ್ತಾದರೂ

ಡಾ|| ಎನ್.ಬಿ. ನಂಜಪ್ಪ : ರಾಮಯ್ಯನವರೇ, ನಿಮ್ಮ ಪೀರಿಯಡ್ನಲ್ಲಿ 1050 ಕೋಟಿ ರೂಪಾಯಿ ಇತ್ತು.

Sri. Y.K. Ramaiah : If that is so, I will not enter this House. I don't enter this House. I swear. ಈ ರಾಜ್ಯದ ಚರಿತ್ರೆಯಲ್ಲಿ ನೀರಾವರಿ ಯೋಜನೆಗಳ ಕೆಲಸಕ್ಕಾಗಿ ಉಳಿದಿರುವ ಬಿಲ್ 140 ಕೋಟಿ ರೂಪಾಯಿ ಇರುವ ಯಾವುದೇ ಮತ್ತೊಂದು ಸಂದರ್ಭ ಇರುವುದಾದರೆ, ನನ್ನ ಗಮನಕ್ಕೆ ತರುವುದಾದರೆ ನಾನು ಈ ಸದನವಲ್ಲಿ ಜೀವನದಲ್ಲಿ ಮತ್ತೊಂದು ಸಾರಿ ಹೆಜ್ಜೆ ಇಡುವುದಿಲ್ಲ. ಇದು ನಿಮ್ಮ ಆದ್ಯತೆಯೇ ನೀರಾವರಿಗೆ, ಇದು ನಿಮ್ಮಪ್ರಾಶಸ್ತ್ಯವೇ ನೀರಾವರಿಗೆ ಹೇಳಿ. ನೀವು ಹೇಳುವುದೆಲ್ಲಾ ಹೇಳಿ ಬಿಡಿ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು : ಕಾಗೋಡುರವರೇ, ಈಗ ಒಂದೂವರೆ ಗಂಟೆ ಆಯಿತು.

ಶ್ರೀ ಕಾಗೋಡು ತಿಮ್ಮಪ್ಪ : ರಾಮಯ್ಯನವರ ಭಾಷಣ ಕೇಳುವುದಕ್ಕೆ ನಾವೆಲ್ಲಾ ಏಕೆ ಇಷ್ಟು ಕುತೂಹಲದಿಂದ ಇರುವುದೆಂದರೆ ಅವರಿಗೆ ಅನುಭವ ಇದೆ. ನೀರಾವರಿ ಬಗ್ಗೆ ಅವರಿಗೆ ಇರುವಷ್ಟು ಅನುಭವ ನಮಗೆ ಇಲ್ಲ. ಆದ್ದರಿಂದ ಅವರ ಕಾಲದಲ್ಲಿ...

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಇನ್ನು ಹತ್ತು ಬಿಲ್ಗಳು ಇವೆ. ನಿನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿ ನಿರ್ಣಯ ಆಗಿದೆ. ನಮ್ಮ ಸ್ನೇಹಿತರನ್ನು ಕೋರಿದ್ದೇವೆ. ಐದು ಗಂಟೆಯ ಮೇಲೆ ವಿಧೇಯಕಗಳನ್ನು ತೆಗೆದುಕೊಳ್ಳಬೇಕೆಂದು. ಆದ್ದರಿಂದ ದಯವಿಟ್ಟು ಇವತ್ತು ವಿಧೇಯಕಗಳನ್ನು ತೆಗೆದುಕೊಳ್ಳುವುದಕ್ಕೆ ತಮ್ಮ ಅಪ್ಪಣೆ ಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾಳೆ ತೆಗೆದುಕೊಳ್ಳೋಣ. ಮಾನ್ಯ ಚಂದ್ರೇಗೌಡರು ಬಂದಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಪ್ರತಿದಿವಸ ಇದೇ ರೀತಿ ಆಗುತ್ತಿದೆ; ಬಿಲ್ಲುಗಳನ್ನು ಮೇಲ್ಮನೆಗೆ ಕಳುಹಿಸುವ ಹಾಗೆ ಇಲ್ಲ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಸಚಿವರಿಗೆ ಒಂದು ಸಲಹೆ ಕೊಡುತ್ತೇನೆ. ತಾವು ಸ್ವಲ್ಪ ಗಂಭೀರವಾಗಿ ಆಲೋಚನೆ ಮಾಡಬೇಕು. ರಾಜ್ಯಪಾಲರ ಭಾಷಣ ಮಾಡಲೇಬೇಕು ಎಂದು ಯಾವ ನಿಯಮವೂ ಇಲ್ಲ; ಸಂವಿಧಾನದಲ್ಲಿ, ಎಲ್ಲಿದೆ? ನಾವು ವೃಥಾ ಕಾಲಹರಣ ಮಾಡುತ್ತಿದ್ದೇವೆ. ರಾಜ್ಯಪಾಲರ ಭಾಷಣ ಮಾಡಿಸುವುದು, ಹತ್ತು ದಿವಸ ಅದರ ಮೇಲೆ ಮಾತನಾಡುವುದು ಮತ್ತು ಬಜೆಟ್ನಲ್ಲಿ ಅದೇ ತವಡು ಕುಟ್ಟುವುದು. ಹೌದು ಅದು ತಾನೇ ಮಾಡುತ್ತಿರುವುದು. ಇದಕ್ಕೆ ಯಾವುದೇ ಕಾನೂನು ಇಲ್ಲ, ರಾಜ್ಯಪಾಲರ ಭಾಷಣ ಮಾಡಲೇಬೇಕೆಂದು ಹಾಗೂ ಅದರ ಮೇಲೆ ಚರ್ಚೆ ಮಾಡಬೇಕು ಎಂಬ ಕಾನೂನು ಎಲ್ಲಿದೆ? ಎಲ್ಲೂ ಇಲ್ಲ. ಅದನ್ನು ಏಕೆ ತಾವು ರದ್ದು ಮಾಡಬಾರದು? ಸುಮ್ಮನೇ ಬಜೆಟ್ ಅಧಿವೇಶನ ಕರೆಯಿರಿ. ಮೊದಲನೆಯ ದಿವಸ ಐದು ನಿಮಿಷ ರಾಜ್ಯಪಾಲರ ಕೈಯಲ್ಲಿ ಭಾಷಣ ಮಾಡಿಸಿ. ಅನಂತರ ಬಜೆಟ್ ಮಂಡನೆ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಹೇಳುತ್ತಿರುವುದು....

ಪ್ರೊ. ನಂಜುಂಡಸ್ವಾಮಿ : ನೀವು ತೆಗೆದುಕೊಂಡರೋ ಅವರು ತೆಗೆದುಕೊಂಡರೋ ನನಗೆ ಗೊತ್ತಿಲ್ಲ. ನೀವು ಇಬ್ಬರೂ ನನಗೆ ಸಂಬಂಧ ಇಲ್ಲ, ನಿಮ್ಮಿಬ್ಬರನ್ನೂ ಸಮಾನವಾದ ಸ್ಥಾನದಲ್ಲಿಟ್ಟವವನು ನಾನು. ಆ ಕಾರಣ ಸಂವಿಧಾನದ ಬಗ್ಗೆ ಮಾತನಾಡುತ್ತಿದ್ದೇನೆ. ಸುಮ್ಮನೆ ಕಾಲಹರಣ ಏಕೆ ಮಾಡುತ್ತಿದ್ದೀರಿ ಹತ್ತು ದಿವಸ? ಇದನ್ನು ಸ್ವಲ್ಪ ಆಲೋಚನೆ ಮಾಡಿ. ಮುಂದಿನ ಅಧಿವೇಶನದಿಂದಾದರೂ ಸ್ವಲ್ಪ ತಿದ್ದುಪಡಿ ಮಾಡಿಕೊಳ್ಳಬಹುದು.

ಶ್ರೀ ವೈ.ಕೆ. ರಾಮಯ್ಯ : ಸಂಸದೀಯ ವ್ಯವಹಾರಗಳ ಸಚಿವರಿಂದ ನೀರಾವರಿ ಬಗ್ಗೆ ಆಸಕ್ತಿಯನ್ನು ನಿರೀಕ್ಷೆ ಮಾಡುವಷ್ಟು ದಡ್ಡನಲ್ಲ ನಾನು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ತಾವು ಹೇಳಿರುವಂತಹ ವಿಷಯ ಪ್ರತಿ ಒಬ್ಬರಿಗೂ ಆಸಕ್ತಿ ಅಷ್ಟೇ ಅಲ್ಲ ಶ್ರದ್ಧೆ ಇರತಕ್ಕ ಅಂಶ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ ನೀವು ಮೈಮರೆತರೆ. ನಿಮ್ಮ ಕ್ಷೇತ್ರಕ್ಕೂ ನೀವು ಹೋಗುವುದು ಕಷ್ಟವಾಗುತ್ತದೆ. ನನಗೆ ಟೈಮ್ ಕೊಡದೇ ಹೋದರೆ ನಿಮ್ಮ ಕ್ಷೇತ್ರದಲ್ಲೂ ನೋಡುತ್ತಿದ್ದಾರೆ. ಕೃಷ್ಣಾ ಕಾವೇರಿ ಬಗ್ಗೆ ರಾಮಯ್ಯನವರಿಗೆ ಮಾತನಾಡಲು ಅವಕಾಶ ಕೊಡಲಿಲ್ಲ ಎಂದು. ಅದು ನಿಮಗೂ ಕೂಡ ಪ್ರಭಾವ ಬೀರುತ್ತದೆ. ನಿಮಗೂ ಕೂಡ ಜನ ಕೇಳುತ್ತಾರೆ. ನಾನು ಅತ್ಯಂತ ವಿನಯದಿಂದ ಈ ಸರ್ಕಾರವನ್ನು ಕೈಮುಗಿದು ಕೇಳಿಕೊಳ್ಳುತ್ತೇನೆ. ತಿಮ್ಮಪ್ಪನವರೇ, ನೀವು ಮಾತನಾಡಿ.

ಶ್ರೀ ಕಾಗೋಡು ತಿಮ್ಮಪ್ಪ : ಅವರು ನನ್ನ ಸ್ನೇಹಿತರು. ಅವರಿಂದ ಒಂದು ನೇರವಾದ ವಿಷಯ ಅಪೇಕ್ಷೆ ಪಡುತ್ತೇನೆ. ಅದೇನೆಂದರೆ ಈಗ ನೀರಾವರಿ ಬಾಬಿನಲ್ಲಿ ಬಾಕಿ ಇದೆ, ಬಿಲ್ ಪೆಂಡಿಂಗ್ ಇದೆ ಎಂದು ಕೇಳಿ ಕೇಳಿ ಸಾಕಾಗಿದೆ. ಕಬಿನಿಯಲ್ಲಿ ನೀರು ನಿಂತಿದೆ.

ಹೇಮಾವತಿಯಲ್ಲಿ ನೀರು ನಿಂತಿದೆ. ಹಾರಂಗಿಯಲ್ಲಿ ನೀರು ನಿಂತಿದೆ. ಈ ನಿಂತ ನೀರನ್ನು ಪೂರಾ ಉಪಯೋಗ ಮಾಡುವುದಕ್ಕೆ ಏನಾದರೂ ಉಪಾಯ ಇದ್ದರೆ ಹೇಳಿ. ಅದನ್ನು ನಾವು ಸರ್ಕಾರಕ್ಕೆ ಏನಾದರೂ ಬಿಟ್ಟಿದ್ದರೆ ಹೇಳುತ್ತೇವೆ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ ನಮ್ಮ ಮಾನ್ಯ ಸ್ನೇಹಿತರಿಗೆ ನೀರಾವರಿ ಬಗ್ಗೆ ಸ್ವಲ್ಪ ಓದಿಕೊಳ್ಳುವುದಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಓದಿಕೊಂಡರೆ ನನ್ನ ಎದೆಯಲ್ಲಿರುವ 100ರಷ್ಟು ಬೆಂಕಿ ನಿಮಗೆ ಹತ್ತಿಕೊಳ್ಳುತ್ತದೆ. 12 ದಶಲಕ್ಷ ಎಕರೆಗೆ ಆಗುವಷ್ಟು ನೀರು ಈ ರಾಜ್ಯದ ಅಣೆಕಟ್ಟಿನಲ್ಲಿ ತುಂಬಿದ್ದಾರೆ. 12 ದಶಲಕ್ಷ ಎಕರೆಗೆ ಆಗುವಷ್ಟು ನೀರು ಹೇಮಾವತಿ, ಕಬಿನಿ ಹಾರಂಗಿ ನಾರಾಯಣಪುರ, ಘಟಪ್ರಭ, ಮಲಪ್ರಭದಲ್ಲಿ ತುಂಬಿದೆ.

5.15 ಪಿ.ಎಂ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಪ್ರೊ : ನಂಜುಂಡಸ್ವಾಮಿಯವರು ಒಂದು ವಿಷಯವನ್ನು ಎತ್ತಿದರು, ಎಲ್ಲಿ ಹೇಳಿದೆ, ರಾಜ್ಯಪಾಲರು ಭಾಷಣ ಮಾಡಬೇಕು, ಅದರ ಬಗ್ಗೆ ಚರ್ಚೆ ಮಾಡಬೇಕು ಎಂದು ಕೇಳಿದರು. ಆ ಸಂದರ್ಭದಲ್ಲಿ ನಾನು ನಮ್ಮ ಸಂವಿಧಾನದ 176ನೇ ವಿಧಿಯ ಪ್ರಕಾರ ವಿಧಾನಸಭೆಯ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಮೊದಲನೆಯ ಅಧಿವೇಶನದ ಪ್ರಾರಂಭದಲ್ಲಿ ಮತ್ತು ಪ್ರತಿವರ್ಷದ ಮೊದಲನೆಯ ಅಧಿವೇಶನದ ಪ್ರಾರಂಭದಲ್ಲಿ ರಾಜ್ಯಪಾಲರು ವಿಧಾನಸಭೆಯನ್ನು ಅಥವಾ ರಾಜ್ಯವಿಧಾನಪರಿಷತ್ತನ್ನು ಹೊಂದಿರುವ ಸಂದರ್ಭದಲ್ಲಿ ಒಟ್ಟಿಗೆ ಸಭೆ ಸೇರಿರುವ ಉಭಯ ಸದನಗಳನ್ನು ಸಂಬೋಧಿಸತಕ್ಕದ್ದು ಮತ್ತು ವಿಧಾನಮಂಡಲವನ್ನು ಕರೆದಿರುವುದರ ಕಾರಣಗಳನ್ನು ಅದಕ್ಕೆ ತಿಳಿಸತಕ್ಕದ್ದು

(2) ಅಂಥ ಸಂಬೋಧನೆಯಲ್ಲಿ ಉಲ್ಲೇಖಿಸಿದ ವಿಷಯಗಳ ಚರ್ಚೆಗಾಗಿ ಕಾಲವನ್ನು ಹಂಚಿಕೊಡುವ ಬಗ್ಗೆ ಸದನದ ಅಥವಾ ಎರಡರಲ್ಲಿ ಒಂದು ಸದನದ ಪ್ರಕ್ರಿಯೆಯನ್ನು ವಿನಿಮಯಗೊಳಿಸುವಂಥ ನಿಯಮಗಳ ಮೂಲಕ ಉಪಬಂಧ ಮಾಡತಕ್ಕದ್ದು" ಎಂದು ನಮ್ಮ ಸಂವಿಧಾನದಲ್ಲಿದೆ. ಅದೇ ರೀತಿಯಲ್ಲಿ ನಾವು ನಿಯಯವನ್ನು ರಚಿಸಿಕೊಂಡಿದ್ದೇವೆ. ನಿಯಮ 19:"ರಾಜ್ಯಪಾಲರು ಮಾಡುವ ಭಾಷಣ ಮತ್ತು ನೀಡುವ ಸಂದೇಶ-ರಾಜ್ಯಪಾಲರು ವಿಧಾನಮಂಡಲಗಳನ್ನು ಉದ್ದೇಶಿಸಿ ಮಾಡುತ್ತಾರೆಂದು ಕಾರ್ಯದರ್ಶಿಯವರು ಸದನಕ್ಕೆ

ತಿಳಿಸತಕ್ಕದ್ದು ಹಾಗೂ ಅದರ ಒಂದು ಪ್ರತಿಯನ್ನು ಸದನದ ಮುಂದೆ ಮಂಡಿಸತಕ್ಕದ್ದು. ರಾಜ್ಯಪಾಲರು ಭಾಷಣ ಮಾಡಿದ ದಿನ ಭಾಷಣ ಮಾಡಿದ ಸದನವು ಸ್ವಲ್ಪ ಕಾಲ ಅಧಿವೇಶನದಲ್ಲಿದ್ದು ಕೆಲವೊಂದು ಔಪಚಾರಿಕ ಕಾರ್ಯಗಳ ಬಗ್ಗೆ ಚರ್ಚೆ ನಡೆಸತಕ್ಕದ್ದು. ಯಾವ ರೀತಿ ಚರ್ಚೆ ಮಾಡಬೇಕು, ಕಾಲ ಏತಕ್ಕೆ ನಿಗಧಿ ಮಾಡಬೇಕು ಎಂದು ನಿಯಮಗಳು ಕೂಡ ಇವೆ. ಆದ್ದರಿಂದ ಈ ಸಭೆಯಲ್ಲಿ ರಾಜ್ಯಪಾಲರ ಭಾಷಣ, ಅದರ ಮೇಲೆಚರ್ಚೆ ಸಂವಿಧಾನಾತ್ಮಕವಾಗಿ ಇರತಕ್ಕಂಥ ಒಂದು ಅವಕಾಶ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಕೇಳಿರತಕ್ಕಂಥದ್ದು ಎರಡಕ್ಕೂ ಒಂದೇ ದಿವಸ ಏತಕ್ಕೆ ಮಾಡಬಾರದು ಎಂದು.

ಅಧ್ಯಕ್ಷರು : ತಮಗೆ ಮಾತನಾಡುವುದಕ್ಕೆ ಅವಕಾಶ ಇದೆ. ಮುಂದೆ ಮಾತನಾಡಿ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಎರಡಕ್ಕೂ ಒಂದೇ ದಿವಸ ಏತಕ್ಕೆ ಮಾಡಬಾರದು ಎಂದು ಏನೂ ಅಲ್ಲಿ ಇಲ್ಲ..

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ದಯಮಾಡಿ ಇದೊಂದು ಪ್ರಲಾಪ ಎಂದು ಪರಿಗಣನೆ ಮಾಡಬಾರದು. ಅವರು ಹೇಳಿರುವುದರಿಂದ ಇದನ್ನು ಕೋಟ್ ಮಾಡಬೇಕು. ನಾನು ತೆಗೆದೆ, ಅದು ಸಿಕ್ಕಿದೆ. ನಿಮ್ಮ ಪ್ರಶ್ನೆಗೆ ಉತ್ತರ. ಈ ರಾಜ್ಯದಲ್ಲಿರುವಂಥ ಪೊಟೆನ್ಷಿಯಾಲಿಟಿ 21, 82, 326 ಎಕರೆ. ಈಗ ನಾವು ಮಾಡಿಕೊಂಡಿರುವುದು 9, 37, 390 ಎಕರೆ . ಸನ್ಮಾನ್ಯ ತಿಮ್ಮಪ್ಪನವರೇ, 12, 44, 936 ಎಕರೆಗೆ ನೀರು ಇದೆ. ಕಾಲುವೆ ಇಲ್ಲ, ಇದನ್ನು ಸ್ವಲ್ಪ ಅರ್ಥಮಾಡಿಕೊಂಡರೆ ಎಷ್ಟು ನೋವಾಗುತ್ತದೆ ಎಂದು ನಾನು ಅಂದು ಕೊಳ್ಳಬಲ್ಲೆ. ನೀರಿದೆ, ಕಾಲುವೆ ಇಲ್ಲ, ನಾರಾಯಣಪುರ ಡ್ಯಾಮ್ನಲ್ಲಿದೆ. ಹೇಮಾವತಿಯಲ್ಲಿದೆ, ಹಾರಂಗಿಯಲ್ಲಿದೆ, ಘಟಪ್ರಭಾದಲ್ಲಿದೆ, ಮಲಪ್ರಭಾದಲ್ಲಿದೆ, ಕೋಡಿ ಕಟ್ಟಿದ್ದೇವೆ, ತೂಬು ಕಟ್ಟಿದ್ದೇವೆ, ಏರಿ ಕಟ್ಟಿದ್ದೇವೆ. ಕಾಲುವೆ ತೆಗೆದು ನೀರನ್ನು ಬಿಟ್ಟುಕೊಳ್ಳುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ ತಿಮ್ಮಪ್ಪನವರೇ, ಇದಕ್ಕೆ ನಾನು ಯಾರನ್ನು ಕಾರಣಕರ್ತರು ಎಂದು ಹೇಳುವುದಿಲ್ಲ. ಇದಕ್ಕೆ ಇರುವುದು ಒಂದೇ ಒಂದು. ನೀವು ಇದಕ್ಕೆ ದಾರಿ ಹೇಳುತ್ತೀರಾ? ಈಗ ಇರತಕ್ಕಂಥ ಪರಿಸ್ಥಿತಿಯಲ್ಲಿ ತಾಂತ್ರಿಕವಾದಂಥ ಯಾವ ತೊಂದರೆಯೂ ಇಲ್ಲ. ಈಗ ಇರತಕ್ಕಂಥ only constraint is money. ಹಣವನ್ನು ಒದಗಿಸಿಕೊಟ್ಟರೆ ಈ 12 ಲಕ್ಷ ಎಕರೆಗಾದರೂ ನೀರನ್ನು ಬಿಟ್ಟುಕೊಳ್ಳುವಂಥ ಪರಿಸ್ಥಿತಿಗೆ ನಾವು ಬೇಗ ತಲುಪಬಹುದು. ನಿಮಗೆ ಇವತ್ತಿನಿಂದಲಾದರೂ ಸ್ವಲ್ಪ ನೀರಾವರಿ ಬಗ್ಗೆ ಆಸಕ್ತಿ ವಹಿಸಿಕೊಳ್ಳಿ ಎಂದು ಹೇಳಿ ಇನ್ನೊಂದು ಮಾತನ್ನು ಹೇಳುತ್ತೇನೆ. ಸ್ವಲ್ಪ ತಲೆಗೆ ಹಿಡಿಯಲಿ. ನೀರಾವರಿಯನ್ನು ಆದ್ಯತಾ ವಲಯ ಎಂದು ನಾವೆಲ್ಲರೂ ಹೇಳಿಕೊಳ್ಳಬಹುದು. ಈ ಆದ್ಯತಾ ವಲಯದಲ್ಲಿ ನಮ್ಮ ಸಾಧನೆಯೇನು?

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ಬಜೆಟ್ನಲ್ಲಿ ಹೈಯಸ್ಟ್ ಪ್ರೈಯಾರಿಟಿಯನ್ನು ಅಲೋಕೇಷನ್ ಯಾವುದಕ್ಕೆ ಕೊಡುತ್ತಾರೆ ಎಂದು ಹೇಳಿ.

ಶ್ರೀ ವೈ.ಕೆ. ರಾಮಯ್ಯ : ಈ ಆದ್ಯತಾ ವಲಯದಲ್ಲಿ ನಮ್ಮ ಸಾಧನೆಯೇನು? ನಾನು ಆ ಪಕ್ಷದ ಸರ್ಕಾರ, ಈ ಸರ್ಕಾರ ಎಂದು ಹೇಳುವಂಥ ಸಣ್ಣತನಕ್ಕೆ ಹೋಗುವುದಿಲ್ಲ. ನಾವೆಲ್ಲರೂ ಸೇರಿಕೊಂಡು ಈ ಆದ್ಯತಾ ವಲಯದಲ್ಲಿ ಒಂದು ದಶಕದಲ್ಲಿ ಮಾಡಿರುವ ಸಾಧನೆಯೇನು? ರಾಷ್ಟ್ರದಲ್ಲಿ ಶೇಕಡ ನೀರಾವರಿ ಇರುವುದು 35. ರಾಷ್ಟ್ರದ ಪರ್ಸೆಂಟೇಜ್ 35. ಈ ರಾಜ್ಯದ್ದು ಇವತ್ತಿಗೆ 13 ಪರ್ಸೆಂಟ್.

1985ರಲ್ಲಿ 12.27 ಪರ್ಸೆಂಟ್. 1994ರಲ್ಲಿ 14.36 ಪರ್ಸೆಂಟು. ಇದು ನಿಮ್ಮ ದೊಡ್ಡ ಸಾಧನೆ. ಒಂದು ಪರ್ಸೆಂಟು. ಈ ರಾಜ್ಯದ ಆದ್ಯತಾ ವಲಯವೆಂದು

ಕೂಗಿಕೊಳ್ಳುವ ಈ ಕ್ಷೇತ್ರದಲ್ಲಿ ಒಂದು ದಶಕದ ನಮ್ಮ ಸಾಧನೆ ಒಂದೇ ಒಂದು ಪರ್ಸೆಂಟ್. ನೀರಾವರಿ ಬಗ್ಗೆ ನಿಮಗೆ ಏಕೆ ಉದ್ವೇಗ. ನೀರಾವರಿ ಬಗ್ಗೆ ಏಕೆ ಹುಚ್ಚು ಹಿಡಿಯುತ್ತದೆ ಎಂದರೆ ಹಿಡಿಯದೆ ಏನು ಮಾಡಬೇಕು. ಇಷ್ಟೊಂದು ಹಣ ಖರ್ಚು ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಇಷ್ಟೊಂದು ಪ್ರಾಶಸ್ತ್ಯ ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ಇಷ್ಟೆಲ್ಲಾ ಆದರೂ ಕೂಡ ಈ ರಾಜ್ಯದಲ್ಲಿ ನಾವು ಸಾಧನೆ ಮಾಡಿರುವುದು ಹತ್ತು ವರ್ಷದಲ್ಲಿ ಒಂದೇ ಒಂದು ಪರ್ಸೆಂಟ್. The increase in the creation of the potentiality in irrigation in Karnataka in a decade is only one per cent. ರಕ್ತ ಕುದಿಯುವುದಿಲ್ಲ ನಿಮಗೆ?

ಶ್ರೀ ಕಾಗೋಡು ತಿಮ್ಮಪ್ಪ :ಅದಕ್ಕೆ ನೀವೂ ಕಾರಣರು.

ಶ್ರೀ ವೈ.ಕೆ. ರಾಮಯ್ಯ : ನಾವೆಲ್ಲಾ ಸೇರಿ ಎಂದು ಹೇಳುತ್ತಿದ್ದೇನೆ. ನನ್ನನ್ನೂ ಸೇರಿಕೊಂಡು ಹೇಳುತ್ತಿದ್ದೇನೆ. ದಯಮಾಡಿ ಕ್ಷಮಿಸಬೇಕು, ಉದ್ವೇಗದ ಕೈಯಲ್ಲಿ ಬುದ್ಧಿ ಕೊಡುವುದು ಯಾವಾಗಲೂ ಒಳ್ಳೆಯದಲ್ಲ. ತಮ್ಮ ಕ್ಷಮೆ ಕೇಳಿಕೊಳ್ಳುತ್ತೇನೆ. ನಾನು ಇಲ್ಲಿ ಉದ್ವೇಗದಿಂದ ಅವರಿಗೆ ಉತ್ತರ ಕೊಡಲಿಲ್ಲ. ನಾನು ಏಕೆ ಈ ಮಾತನ್ನು ಹೇಳಬೇಕಾಯಿತು ಎಂದರೆ ಯಾವ ನೀರಾವರಿ ಸಚಿವರು ಸರ್ಕಾರದಿಂದ ಹಣ ಬರುತ್ತಾ ಇಲ್ಲ. ನಾನೇನು ಬಂಡಾಯ ಏಳಲಾ? ನಾನು ಹೋಗಿ ಆರ್ಥಿಕ ಮಂತ್ರಿಗಳ ಮನೆ ಬಾಗಿಲು ತಟ್ಟಲಾ ಎಂದು ಹೇಳಿಕೆ ಕೊಟ್ಟವರು, ಮೊನ್ನೆ ಆಗಲೇ ಅವರ ಧ್ವನಿನೇ ಇದ್ದಕ್ಕಿದ್ದ ಹಾಗೆ ಬದಲಾವಣೆ ಆಗಿ ಹೋಯಿತು. ರಾಜಕೀಯ ಕಾರಣಕ್ಕಾಗಿ ಸ್ವಾರ್ಥಕ್ಕಾಗಿ ಅಥವಾ ಬೇರೆ ಯಾವುದೋ ಒಂದು ಪ್ರಲೋಭನೆಗೆ ಒಬ್ಬ ವ್ಯಕ್ತಿ ಇಷ್ಟೊಂದು ಬದಲಾವಣೆ ಆಗಬಲ್ಲ ಎಂದು ನಾನು ನಿರೀಕ್ಷೆ ಮಾಡುವುದಿಲ್ಲ. ಈಗ ಅವರು ಹೇಳುತ್ತಾರೆ, ನೀರಾವರಿಗೆ ಹಿನ್ನಡೆ ಆಗಿಲ್ಲ ಎಂದು. ಕೃಷ್ಣಾ ಕಾವೇರಿಗೆ ಹಣದ ಕೊರತೆ ಇಲ್ಲ ಎಂದು ಈಗ ಅವರು ಹೇಳುತ್ತಾರೆ. ಅವರು ಇಲ್ಲಿ ಎದುರುಗಡೆ ಇಲ್ಲ, ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸನ್ಮಾನ್ಯ ಕೃಷ್ಣ ಅವರು ಒಬ್ಬ ರೈತನ ಮಗ, ಒಬ್ಬ ಮಂತ್ರಿಯಾಗಿ ಋಣ ತೀರಿಸುವುದಷ್ಟೇ ಅಲ್ಲ ಒಬ್ಬ ಮಣ್ಣಿನ ಮಗನಾಗಿ ಒಬ್ಬ ರೈತನ ಮಗನಾಗಿ ಈ 12 ಲಕ್ಷ ಎಕರೆಗೆ ಬೇಕಾಗುವಂಥ ನೀರು ಕಟ್ಟೆಯಲ್ಲಿ ತುಂಬಿರುವಂತಹ ಪರಿಸ್ಥಿತಿ ಇದೆಯಲ್ಲಾ ಇಂತಹ ಪಾಪದ ಸೃಷ್ಟಿಯನ್ನು ಮಾಡಿರುವ ನಾವು ಎಲ್ಲರಿಗೂ ಕಾಣುತ್ತೇವೆ. ಇದನ್ನು ನಿವಾರಣೆ ಮಾಡಲಿಕ್ಕೆ ಇನ್ನು ಮೇಲಾದರೂ ಪ್ರಾಮಾಣಿಕವಾದ ಪ್ರಯತ್ನ ಮಾಡಲಿ. ಹೇಮಾವತಿ ಕಾಲುವೆ ಒಂದೇ ಒಂದು ಹತ್ತು ತಿಂಗಳಿಂದ ಪೆಂಡಿಂಗ್ ಬಿದ್ದಿದೆ ಐದು ಕೋಟಿ ರೂಪಾಯಿ ಎಸ್ಟಿಮೇಟ್. ಇವರು ಕ್ಯಾಬಿನೆಟ್ ಮೀಟಿಂಗ್‌ಗೆ ಹೋಗುವುದಿಲ್ಲ, ಅದು ಅಪ್ರೂವ್ ಆಗುವುದಿಲ್ಲ. "Deepening of the cut and cover or re-modelling of the CD works.' ಇದೊಂದು ಉದಾಹರಣೆ ಮಾತ್ರ ಕೊಡುತ್ತಿದ್ದೇನೆ. ಇವರು ಕ್ಯಾಬಿನೆಟ್ಗೆ ಹೋಗುವ ಹಾಗೆ ಇಲ್ಲ, ಅದು ಅಪ್ರೂವ್ ಆಗುವ ಹಾಗೆ ಇಲ್ಲ, ನಮಗೆ ನೀರು ಬರುವ ಹಾಗೆ ಇಲ್ಲ. ಆದ್ದರಿಂದ ನನ್ನ ದೃಷ್ಟಿಯಿಂದ ಈ ಒಂದು ರಾಜ್ಯಪಾಲರ ಭಾಷಣದಲ್ಲಿ ಯಾವುದು ಇರಬೇಕಾಗಿತ್ತೋ ಅದು ಇಲ್ಲ ಎಂದು ಹೇಳಿದ್ದು. ಪ್ರಪ್ರಥಮವಾಗಿ ಅಭಿವೃದ್ಧಿ ಕೆಲಸಗಳು ಸಂಪೂರ್ಣವಾಗಿ ಕುಂಠಿತ ಆಗಲಿಕ್ಕೆ ಕಾರಣ ಕರ್ತವಾಗಿರುವಂತಹ ಈ ರಾಜ್ಯದ ಆರ್ಥಿಕ ದಿವಾಳಿತನದ ಪರಿಸ್ಥಿತಿಯ ಚಿತ್ರಣದಿಂದಾಗಿ ವಿಶೇಷ ಪರಿಸ್ಥಿತಿ ಇರುವಂತಹ ಕೃಷ್ಣಾ ಕಾವೇರಿ ನೀರಿನ ಬಳಕೆಯ ಪ್ರಸ್ತಾಪ ಇಲ್ಲ. ಈ ಎರಡೂ ಪ್ರಾಮುಖ್ಯ ವಿಷಯಗಳನ್ನು ಹೊರತಾಗಿರುವ ಈ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸಲು ನಾನು ಸಿದ್ಧನಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಏನೋ ಕಾನೂನು ಮಂತ್ರಿಗಳು ಹೇಳುತ್ತಿದ್ದರು. ಬಿಸಿನೆಸ್ ಅಡ್ವೈಸರಿ ಕಮಿಟಿ ವಿಷಯ.

ಅಧ್ಯಕ್ಷರು : ತಾವು ರಾಜ್ಯಪಾಲರ ಭಾಷಣದ ಮೇಲೆ ತಮ್ಮ ಪ್ರಸ್ತಾವವನ್ನು ಶುರು ಮಾಡಿ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಅವರು ವಿಧೇಯಕಗಳನ್ನು ತೆಗೆದುಕೊಳ್ಳುವುದಾದರೆ, ನನ್ನದೇನೂ ಅಭ್ಯಂತರ ಇಲ್ಲ, ನಾನು ನಾಳೆ ಮಾತನಾಡುತ್ತೇನೆ .

ಅಧ್ಯಕ್ಷರು : ತಾವು ಮಾತನಾಡಿ.

+ಪ್ರೊ : ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಸನ್ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹೇಳಿದ ಹಾಗೆ ಏನು ರಿಚ್ಯುಯಲ್ ತರಹ ನಡೆಯುತ್ತಿದೆ, ರಾಜ್ಯಪಾಲರ ಭಾಷಣ, ಅದರ ಮೇಲೆ ವಂದನಾ ನಿರ್ಣಯ ಮತ್ತು ಅದರ ಮೇಲೆ ಚರ್ಚೆ ಅದನ್ನು ಹೇಗಾದರೂ ಮಾಡಿ ಹೆಚ್ಚಿಗೆ ಕಾಲಹರಣ ಮಾಡದ ರೀತಿ ಚರ್ಚೆ ಮಾಡಿ ಮುಗಿಸುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಅದು ವಿಶೇಷವಾಗಿ ಈ ಮೂರು ವರ್ಷಗಳಿಂದ ಈಚೆಗೆ ಇದರ ಅವಶ್ಯಕತೆ ನನಗೆ ಕಂಡು ಬರುತ್ತಾ ಇಲ್ಲ.

ಇನ್ನು ಮುಂದೆ ಇದರ ಅವಶ್ಯಕತೆಯಂತೂ ಇರುವುದಿಲ್ಲ. ಅದಕ್ಕೆ ಕಾರಣವಿಷ್ಟೆ: ಇದನ್ನು ಓದಿದಂಥ ಯಾರೇ ಆದರೂ ರಾಜ್ಯಶಾಸ್ತ್ರದ ವಿದ್ಯಾರ್ಥಿಯಾಗಬಹುದು ಅಥವಾ ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಬಹುದು. ಅವರಿಗೆ ನಗು ಬರಿಸುವಂತಹ ಒಂದು ದಾಖಲೆ ಇಲ್ಲಿದೆ. ಇದರಲ್ಲಿ ಏನೇನೂ ಅರ್ಥವಿಲ್ಲದ ವಾಕ್ಯಗಳನ್ನು ಸೇರಿಸಿ, ಈ ಸರ್ಕಾರದ ನೀತಿಯನ್ನು ಸದನದ ಮುಂದೆ ಮಂಡಿಸುವಂಥ ಒಂದು ಪ್ರಯತ್ನವಾಗಿದೆ. ಇದನ್ನು ನಾನು ಓದಿದ ಕೂಡಲೇ ಅಥವಾ ಕೇಳಿದ ಕೂಡಲೇ ಈ ಸರ್ಕಾರಕ್ಕೆ ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರದ ಬಗ್ಗೆ ಕನಿಷ್ಠ ಜ್ಞಾನ ಕೂಡ ಇಲ್ಲವೆನ್ನುವಂಥ ಅಭಿಪ್ರಾಯಕ್ಕೆ ಬರಬೇಕಾಗಿದೆ. ಇಲ್ಲವೆ, ಈ ಸದನದಲ್ಲಿರುವವರಿಗೆ ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರದಲ್ಲಿ ಕನಿಷ್ಠ ಜ್ಞಾನ ಕೂಡ ಇಲ್ಲವೆಂದು ತಿಳಿದುಕೊಂಡು ಸರ್ಕಾರ ಇಂತಹ ದಾಖಲೆ ಮಂಡಿಸಿದೆಯೆಂದು ತಿಳಿದುಕೊಳ್ಳಬೇಕಾಗುತ್ತದೆ. One of the two things. Either we have to think that this Government does not have elementary knowledge of politics and economics or We have to think that this Government thinks that this House does not have the elementary knowledge of politics and economics.

Dr. N.B. Nanjappa : I strongly object to these words. Let it be anybody. They should not talk like that.

ಹಾಗಾದರೆ ಪ್ರೊ. ನಂಜುಂಡಸ್ವಾಮಿಯವರು ಸದನದಲ್ಲಿರುವ ಎಲ್ಲರಿಗಿಂತಲೂ ಬುದ್ಧಿವಂತರೇ? ಮಾತನಾಡುವುದಕ್ಕೂ ಒಂದು ನ್ಯಾಯ, ನೀತಿ ಉಂಟು. He has got a very good fluent English and a knowledge about English. He may be even knowing lot of things.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ತಾವು ಮಾನ್ಯ ಸದಸ್ಯರಾದ ಡಾ|| ನಂಜಪ್ಪನವರ ಬಗ್ಗೆ ಒಂದು ರೂಲಿಂಗ್ ಕೊಡಬೇಕಾಗುತ್ತದೆ. ಅವರು ಏನು ಮಾತನಾಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ.

Dr. N.B. Nanjappa : It is not like that. I give all respect but that does not mean you can use whatever you think.

ಪ್ರೊ॥ ಎಂ. ಡಿ ನಂಜುಂಡಸ್ವಾಮಿ : ನಾನು ಏನು ಹೇಳಬೇಕೋ ಅದನ್ನೇ ಹೇಳುತ್ತಿದ್ದೇನೆ.

ಡಾ॥ ಎನ್. ಬಿ. ನಂಜಪ್ಪ : ಇದೆಲ್ಲಾ ಬೇಡ ಎಂದು ನೀವು ಹೇಳುತ್ತಿದ್ದೀರಿ, ಹಾಗಾದರೆ ಇನ್ನೇನುಮಾಡಬೇಕು? ಇದೆಲ್ಲಾ ಮಾಡಬೇಕಾದ್ದಿಲ್ಲ, ಇದೆಲ್ಲಾ ರಿಚ್ಯುಯಲ್ ಎಂದು ಹೇಳುತ್ತಿದ್ದೀರಿ. ಯಾರೋ ಒಬ್ಬರು 'ಶ್ರಾದ್ಧ' ಎಂದರು. ಅಸೆಂಬ್ಲಿಯಲ್ಲಿ ಶ್ರಾದ್ಧ ಮಾಡುತ್ತಾರೆಯೇ? ಏನು ನಿಯಮಗಳಿವೆ. ಅದರಂತೆ ನಡೆದುಕೊಂಡು ಬರಲಾಗುತ್ತಿದೆ. ಅದರ ಪ್ರಕಾರ ಹೋಗಬೇಕು.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ನಾವು ಹೇಳುತ್ತೇವೆ, ನೇಮಕವಾದ ರಾಜ್ಯಪಾಲರ ಹುದ್ದೆ ರದ್ದಾಗಬೇಕೆಂದು. ಎಲ್ಲಿಯವರೆಗೆ ನೇಮಕವಾದ ರಾಜ್ಯಪಾಲರು ಇರುತ್ತಾರೋ, ಅಲ್ಲಿಯವರೆಗೆ ಅವರು ಕೇಂದ್ರದ ಏಜೆಂಟರಾಗಿ ಕೆಲಸ ಮಾಡುತ್ತಾರೆಂದು ಹತ್ತಾರು ವರ್ಷಗಳಿಂದ ಸಂವಿಧಾನ ಬರೆದಾಗಿನಿಂದ ನಾವು ಹೇಳುತ್ತಿದ್ದೇವೆ. ಆಯ್ಕೆಯಾದ ರಾಜ್ಯಪಾಲರು ಬರಬೇಕು. ಇದೆಲ್ಲಾ ಇವರಿಗೆ ಅರ್ಥವಾಗುವುದಿಲ್ಲ.

Dr. N.B. Nanjappa : You cannot go on criticising.

Prof. M.D. Nanjundaswamy : The Elementary knowledge of democracy demands that there should be an elected Governor.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಸರ್ಕಾರವನ್ನು ಇನ್ನು ಯಾವ್ಯಾವ ಭಾಷೆಯಲ್ಲಿ ಬಯ್ಯಬೇಕೆಂಬ ಬಗ್ಗೆ ತಾವು ನಿರೂಪಣೆ ಮಾಡಿ, ಮತ್ತು ಡಾ: ನಂಜಪ್ಪನವರು ಒಂದು ಪುಸ್ತಕ ಬರೆದು ಇಂತಿಂಥ ಭಾಷೆಯಲ್ಲಿ ಸರ್ಕಾರವನ್ನು ಬಯ್ಯಬೇಕೆಂದು ಹೇಳಿದರೆ ಆ ಪದಗಳನ್ನು ಉಪಯೋಗಿಸೋಣ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಪ್ರಜಾಪ್ರಭುತ್ವ ಎಂದರೆ ಏನೆಂದು ನಾನು ಹೇಳುತ್ತಿದ್ದೇನೆ ಅಷ್ಟೆ.

Dr. N.B. Nanjappa : on the Floor of the House, you should have your own limitations and dignity and decorum.

ಶ್ರೀ ವಾಟಾಳ್ ನಾಗರಾಜ್ : ಇದು ಮಿಲಿಟರಿ ಪ್ರಭುತ್ವವಲ್ಲ, ಪ್ರಜಾಪ್ರಭುತ್ವ. ಮಾನ್ಯ ಸದಸ್ಯರಾದ ಡಾ: ನಂಜಪ್ಪನವರು ಮಿಲಿಟರಿ ಪ್ರಭುತ್ವಕ್ಕೆ ಸರಿಯೇ ಹೊರತು ಪ್ರಜಾಪ್ರಭುತ್ವಕ್ಕೆ ಸರಿ ಅಲ್ಲ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆಯಾಗಿದೆ. (ಈ ಹಂತದಲ್ಲಿ ಸದಸ್ಯರಾದ ಶ್ರೀ ಕಾಗೋಡು ತಿಮ್ಮಪ್ಪನವರು ಮಾತನಾಡುವುದಕ್ಕೆ ಎದ್ದು ನಿಂತಾಗ) ಏಕೆ ತಿಮ್ಮಪ್ಪನವರೇ, ನೀವು ಈಗಾಗಲೇ 3-4 ಬಾರಿ ಸದನದ ವಾತಾವರಣವನ್ನು ಕೆಡಿಸಿರುವುದು ಸರಿಯಲ್ಲ.

ಅಧ್ಯಕ್ಷರು : ತಾವು ನನ್ನ ಕಡೆ ನೋಡಿ ಮಾತನಾಡಿ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ನಾನು ತಮ್ಮ ಮೂಲಕ ಹೇಳುತ್ತೇನೆ. ಇದರ ಬಗ್ಗೆ ಚರ್ಚೆಯಾಗಿದೆ. ಈ ಭಾಷಣ ನಮ್ಮ ಸಚಿವಸಂಪುಟದ ಒಪ್ಪಿಗೆ ಪಡೆದ ನಂತರ ಕೊಡುವಂಥ ಭಾಷಣ. ಅದರಲ್ಲಿಯೇ ಅಡಗಿರುವುದು. ಒಬ್ಬ ನೇಮಕ ಆದ ರಾಜ್ಯಪಾಲ, ಅವನ ಅಧಿಕಾರವ್ಯಾಪ್ತಿ ಎಷ್ಟಿದೆ ಎನ್ನುವುದು ಈ ಒಂದು ಕ್ರಮದಲ್ಲೇ ಅಡಗಿರುವುದು. ಆಯ್ಕೆಯಾದ ರಾಜ್ಯಪಾಲ ಆಗಿದ್ದರೆ ಸಂಪುಟದ ಒಪ್ಪಿಗೆ ಬೇಕಾಗಲ್ಲ. ಆ ಕಾರಣಕ್ಕಾಗಿಯೇ ಆಯ್ಕೆಯಾದ ರಾಜ್ಯಪಾಲ ಬೇಕು ನಾವು ಸಂವಿಧಾನ ಬರೆದಾಗಿನಿಂದಲೂ ನಾವು ಒತ್ತಾಯ ಮಾಡುತ್ತಿದ್ದೇವೆ. ಈಗಲೂ ಅಳವಡಿಸಿಕೊಳ್ಳುವುದು

– Presidential form

of Government, but in the existing Parliamentary democracy itself.

ಆಗ ಇದಕ್ಕೆ ಕಿಮ್ಮತ್ತು ಬರುತ್ತದೆ. ಅಲ್ಲಿಯವರೆಗೆ ಇದಕ್ಕೇನು ಕಿಮ್ಮತ್ತು ಇರುವುದಿಲ್ಲ. ಅದಕ್ಕೇ ನಾನು ಹೇಳಿದ್ದು ಇದು ಸುಮ್ಮನೆ ಮಾಡಿದ ಕೆಲಸವನ್ನೇ ಮಾಡುವುದು. My Government ಎಂದು ಅವರು ಬರೆದಿರಬಹುದು. But this is a document placed before this House by the Cabinet.

ಮತ್ತೊಂದು ಡಾಕ್ಯುಮೆಂಟನ್ನು ಇಡುತ್ತೀರಿ ಇನ್ನೊಂದು ಸ್ವಲ್ಪ ದಿವಸ ಬಿಟ್ಟು, ಎರಡರ ಮೇಲೂ ಈಗ ಒಂದು ಸಾರಿ ಚರ್ಚೆ, ಆಗ ಒಂದು ಸಾರಿ ಚರ್ಚೆ, ಅದೇನೇ ಇರಲಿ, ನಾನು ಹೇಳತ್ತಿದ್ದೆ. ಇಲ್ಲ, ಇದನ್ನು ಓದಿದವರಿಗೆ ಅನಿಸುವುದು, ಈ ಸರ್ಕಾರಕ್ಕೆ ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರದ ಬಗ್ಗೆ ಕನಿಷ್ಠ ಜ್ಞಾನ ಇಲ್ಲ ಎನ್ನುವ ಭಾವನೆ ಬಂದೇ ಬರುತ್ತದೆ. ಇಲ್ಲ, ಇದನ್ನು ಸದನದ ಮುಂದೆ ಇಡುವಂಥ ಧೈರ್ಯ ಮಾಡಿರುವ ಸರ್ಕಾರಕ್ಕೆ ಇಲ್ಲಿರುವವರಿಗೆ ಯಾರಿಗೂ ರಾಜ್ಯಶಾಸ್ತ್ರ, ಅರ್ಥಶಾಸ್ತ್ರದ ಬಗ್ಗೆ ಕನಿಷ್ಠ ಜ್ಞಾನ ಇಲ್ಲ ಎನ್ನುವ ಭಾವನೆ ಇದೆ ಎನ್ನುವಂಥ ಅರ್ಥ ನಾವು ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೆ ಕಾರಣವಿಷ್ಟೆ. ಬಹಳ ವಿವರವಾಗಿ ಕಾರ್ಯಕ್ರಮಗಳನ್ನು ಹಾಕಿದ್ದಾರೆ. 17ನೇ ಪ್ಯಾರಾದಿಂದ ಶುರುವಾಗುತ್ತದೆ ಇವರ ಕಾರ್ಯಕ್ರಮ. ಅಲ್ಪಸಂಖ್ಯಾತರಿಂದ ಪ್ರಾರಂಭ. "ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೊಂದು ದೊಡ್ಡ ನ್ಯಾಯೋಚಿತ ಕಾರ್ಯಕ್ರಮ". "ಹಿಂದುಳಿದ ವರ್ಗಗಳ ಯೋಗಕ್ಷೇಮದ ಗುರಿ ಸಾಧನೆ", "ಮಹಿಳಾ ಸಮೃದ್ಧಿ ಯೋಜನೆ", "ಮಹಿಳೆಯರ ಅಭಿವೃದ್ಧಿಗಾಗಿ ಸಮಗ್ರ ಯೋಜನೆ" "ಮಕ್ಕಳ ಅಭಿವೃದ್ಧಿಗೆ ಸಮಗ್ರ ಹಾಗೂ ಬಹುವಲಯ ಯೋಜನೆ", ಆ ನಂತರ ಕೊನೆಗೆ "ರಾಜ್ಯದಲ್ಲಿ ವಿವಿಧ ವಿಷಯಗಳ ಪದವೀಧರರಲ್ಲಿ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆಯ ಬಗ್ಗೆ ಕಳಕಳಿ", ಅದರ ಜೊತೆಗೆ ಬರೆಯುತ್ತಾರೆ, 9ನೇ ಪುಟದಲ್ಲಿ ಬರೆಯುತ್ತಾರೆ. ಕನ್ನಡದ ಆವೃತ್ತಿ.

> "ಪ್ರಧಾನ ಮಂತ್ರಿಗಳಾದ ಶ್ರೀ ಪಿ.ವಿ. ನರಸಿಂಹರಾವ್ರವರು ಆರಂಭಿಸಿರುವ ಹೊಸ ಉದಾರ ಆರ್ಥಿಕ ನೀತಿಗಳು ವಿಭಿನ್ನ ಕ್ಷೇತ್ರಗಳಲ್ಲಿರುವ ಖಾಸಗಿ ಉದ್ಯಮಗಳು, ಸ್ವಂತ ಉದ್ಯೋಗ ಮುಂತಾದವುಗಳಿಗೆ ಅವಕಾಶಗಳನ್ನು ಕಲ್ಪಿಸಿಕೊಟ್ಟಿವೆ."

ಇನ್ನೊಂದುಕಡೆ ಹೇಳುತ್ತಾರೆ. 'ಹೊಸ ಉದಾರ ನೀತಿಗಳನ್ನು ಅಕ್ಷರಶಃ ನಮ್ಮ ಸರ್ಕಾರ ಒಪ್ಪಿದೆ" ಇನ್ನೊಂದು ಕಡೆ ಹೇಳುತ್ತಾರೆ 17ನೇ ಪುಟದಲ್ಲಿ.

> "ಕೇಂದ್ರ ಸರ್ಕಾರವು ಘೋಷಿಸಿದ, ಆರ್ಥಿಕ, ಕೈಗಾರಿಕಾ ಮತ್ತು ವ್ಯಾಪಾರ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಮುಖ ಮೂಲಭೂತ ಸುಧಾರಣಾ ನೀತಿಗಳಿಗನುಸಾರವಾಗಿ ಕರ್ನಾಟಕ ಸರ್ಕಾರವು, 1993ರಲ್ಲಿ ಹೊಸ ಕೈಗಾರಿಕಾ ನೀತಿಯನ್ನು ಮತ್ತು ಕೆಲವು ಉತ್ತೇಜಕ ಹಾಗೂ ರಿಯಾಯಿತಿ ಕ್ರಮಗಳನ್ನು ಘೋಷಿಸಿತು" ಎಂದು ಹೇಳುತ್ತಾರೆ.

ಅಂದರೆ the New Structural Adjustment Policies. ಮಾಜಿ ಹಣಕಾಸು ಮಂತ್ರಿಗಳು ಇಲ್ಲಿ ಕುಳಿತಿದ್ದಾರೆ, ನನಗೆ ಬಹಳ ಸಂತೋಷವಾಗುತ್ತಿದೆ. ಅವರಾದರೂ ಇದ್ದಾರಲ್ಲಾ ಕೇಳುವುದಕ್ಕೆ ಎಂದು. ಸನ್ಮಾನ್ಯ ಘೋಷ್ಪಡೆಯವರು ಇಲ್ಲಿ ಕುಳಿತಿದ್ದಾಗ ನನಗೆ ಸ್ವಲ್ಪ ಸಮಾಧಾನ ಇತ್ತು. ಮಾಜಿ ಹಣಕಾಸು ಮಂತ್ರಿಗಳಾದರೂ ಇದ್ದಾರಲ್ಲಾ, ಹಾಲಿಯವರು ಇಲ್ಲದಿದ್ದರೂ ಎಂದು. ಏಕೆಂದರೆ ನಾನು ಮಾತನಾಡುತ್ತಿರುವುದು ಸಂಪೂರ್ಣ

ಸಾಧ್ಯವೇ? ಹೊಸ ಉದಾರ ನೀತಿ ಮತ್ತೆ ಸ್ಟ್ರಕ್ಚರಲ್ ಅಡ್ಜಸ್ಟ್‌ಮೆಂಟ್ ಪ್ರೋಗ್ರಾಮ್ಸ್. ಇದನ್ನು ಎರಡನ್ನೂ ಇಟ್ಟುಕೊಂಡು ಇವರು ಹೇಳಿರುವಂಥ ಅಲ್ಪ ಸಂಖ್ಯಾತರ ಕಲ್ಯಾಣ, ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿಯ ಕಲ್ಯಾಣ, ಮಹಿಳೆಯರಿಗೆ ಸಮಗ್ರ ಯೋಜನೆ, ಮಕ್ಕಳ ಕಲ್ಯಾಣ ಬೇರೆ ಬೇರೆ ಎಲ್ಲಾ ಕ್ಷೇತ್ರದಲ್ಲಿರುವ ಪದವೀಧರೇ ನಿರುದ್ಯೋಗಿಗಳಿಗೆ ಉದ್ಯೋಗ, ಇದನ್ನೆಲ್ಲಾ ಸಾಧನೆ ಮಾಡುತ್ತೀರಿ ಎಂದು ತಿಳಿದುಕೊಂಡಿದ್ದೀರಿ.

ವಿಶ್ವಬ್ಯಾಂಕ್ Structural Adjustment Programme ಎಂದು ಏನು ಹೇಳುತ್ತದೆ. ಅದರಲ್ಲಿ ನಾವು ನಮ್ಮ ಅರ್ಥ ವ್ಯವಸ್ಥೆಯಲ್ಲಿ ಏನೇನು ಅಳವಡಿಸಿಕೊಳ್ಳಬೇಕು ಎಂದು ಹೇಳಿರುವುದು ನನ್ನ ಹತ್ತಿರ ಇದೆ. ಆದರೆ ನಾನು ಎಲ್ಲವನ್ನೂ ಓದುವುದಿಲ್ಲ. ಯಾವುದು ಈ ಭಾಷಣಕ್ಕೆ ಸಂಬಂಧಿಸಿದಂತೆ ಸುಸಂಬಂಧವಾಗಿದೆಯೋ ಅಷ್ಟನ್ನು ಮಾತ್ರ ಓದುತ್ತೇನೆ. ಮೊದಲನೆಯದು "World Bank conditions for the reorganisation of economic policy.

ಎರಡನೆಯದು, ಅದರ ಪಕ್ಕದಲ್ಲೇ ನಾನು ಓದೋದು. "Conditions accepted by the Government of India shown in the Budget of 1991-92, 1992-93, 1993-94.'StructuralAdjustmentprogrammeಕೇಂದ್ರ ಸರ್ಕಾರ ಏನು ಅಳವಡಿಸಿಕೊಂಡಿದೆ, ಅದರ ಪರಿಣಾಮ ನಮ್ಮ ರಾಜ್ಯದ ಆರ್ಥಿಕ ವ್ಯವಸ್ಥೆಯ ಮೇಲೆ ಯೋಜನಾ ಸ್ವರೂಪದ ಮೇಲೆ ಎಷ್ಟು ಪರಿಣಾಮ ಮಾಡಿದೆ ಇದನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ರಾಜ್ಯಪಾಲರ ಭಾಷಣವನ್ನು ಓದಿದರೆ ಇದರಲ್ಲಿ ಏನೇನೂ ಅರ್ಥವಿಲ್ಲ.

(ಗೊಂದಲ)

ಅವಸರ ಮಾಡಬೇಡಿ. ಇದೊಂದು ಜೆರಾಕ್ಸ್ ಕಾಪಿಯನ್ನು ಮಾಡಿ ಕಳುಹಿಸಿಕೊಡುತ್ತೇನೆ. ಅವರಿಗೆ ಆಸಕ್ತಿ ಇಲ್ಲ. ಕೇಳುತ್ತಿದ್ದಾರೆ, ಆದರೆ ನನ್ನ ಹತ್ತಿರ ಬಂದು ತೆಗೆದುಕೊಳ್ಳುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಅವರಿಗೆ ತಮ್ಮ ಮೇಲೆ ಅಷ್ಟು ಪ್ರೀತಿ.

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ : ನಾನು ಬಂದು ಕೇಳಿದ್ದೆ.

ಪ್ರೊ|| ಎಂ.ಡಿ. ನಂಜುಂಡಸ್ವಾಮಿ : ಸರ್ಕಾರವನ್ನು ಕೈಯಲ್ಲಿ ಇಟ್ಟುಕೊಂಡು.....

ಶ್ರೀ ಬಿ.ಹೆಚ್. ಬನ್ನಿಕೋಡ್ : ಅದು ನೀವು ಏನು ಜನರಿಗೆ ಕೊಡುತ್ತೀರಿ, ಎಂದು ಮಾಡುತ್ತೀರಿ ಅದನ್ನು ಅವರು ಮಾಡಿದ್ದಾರೆ ಅಷ್ಟೆ.

ಪ್ರೊ|| ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಭಾಧ್ಯಕ್ಷರೇ, ಈ ಸಭೆಯಲ್ಲಿ ಹೇಳಬೇಕೋ ಬೇಡವೋ ಆದರೆ ಅಧ್ಯಕ್ಷರೇ, ತಾವು ಅಪ್ಪಣೆ ಕೊಟ್ಟರೆ, ಹೇಳುತ್ತೇನೆ. ಕಳೆದ ವರ್ಷದ ಅಧಿವೇಶನದಲ್ಲಿ ಡಂಕಲ್ ಡ್ರಾಫ್ಟ್ ಪ್ರತಿಗಳನ್ನು ಎಲ್ಲಾ ಸದಸ್ಯರಿಗೂ ಹಂಚಬೇಕೆಂದು ನಾನು ಒತ್ತಾಯ ಮಾಡಿದ ಮೇಲೆ ಕೃಷಿ ಮಂತ್ರಿಗಳು ಹಂಚಿದ್ದಾರೆ. ಆದರೆ ನನಗೆ ಗೊತ್ತಿರುವ ಪ್ರಕಾರ, ನನ್ನದು, ತಪ್ಪಿದ್ದರೆ ಅವರು ಕರೆಕ್ಟ್ ಮಾಡಬಹುದು. ಆ ಪ್ರತಿಯನ್ನು ಕೇಂದ್ರಸರ್ಕಾರದಿಂದ ಅವರು ತರಿಸಿಕೊಳ್ಳಲಿಲ್ಲ. ಇಲ್ಲಿ ಕಾರ್ಗಿಲ್ ಕಂಪನಿಯಿಂದ ತರಿಸಿಕೊಂಡರು. ಇಂಥ ಸರ್ಕಾರ ಇದು! ವಿಶ್ವಬ್ಯಾಂಕ್ ಕಂಡೀಷನಾಲಿಟಿ ಏನು ಎನ್ನುವುದನ್ನು ನಾನು ನಿಮಗೆ ಕೊಡಬೇಕಾ? ಸರ್ಕಾರ ನಿಮ್ಮ ಕೈಯಲ್ಲಿದೆ. ನೀವು ತರಿಸಿಕೊಳ್ಳಬೇಕು. ಇಷ್ಟು ಹೊತ್ತಿಗೆ ನೀವು ತಿಳಿದುಕೊಂಡಿರಬೇಕು. ಅದನ್ನು ತಿಳಿದುಕೊಂಡಿದ್ದರೆ, ಈ ಒಂದು ಭಾಷಣ ಹೊರಗಡೆ ಬರುತ್ತಿರಲಿಲ್ಲ. ಅದು ತಿಳಿದುಕೊಂಡಿದ್ದರೆ ಇದು ಸಾಧ್ಯವಿಲ್ಲವೆನ್ನುವುದು ನಿಮಗೆ ಸ್ಪಷ್ಟವಾಗಿ ಗೊತ್ತಾಗುತ್ತಿತ್ತು.

First Conditionality of the world Bank:

"Directives to amend Trade Rules by abolition of import protection to Indian Industries; import restrictions be totally removed."

ಇದು ವಿಶ್ವ ಬ್ಯಾಂಕ್ ಹೇಳಿದ್ದು. ನಮ್ಮ ಸರ್ಕಾರ 1991ನೇ ಬಡ್ಜೆಟ್ನಲ್ಲಿ ಕೇಂದ್ರ ಸರ್ಕಾರ ಪ್ರಕಟಣೆ ಮಾಡಿದ್ದು.

"In the New Trade Policy declaration of July 4, 1991, Imports were simplified through the EXIM scripts; import facilities and all supplementary licences were abolished.

In the Export-Import Policy in 1992-97, imports were simplified. Licencesing system and restrictions were removed and trade was made free."

Second conditionality;

"The Monopoly of Government's agencies importing canalised goods be cancelled. and they be asked to deal with the imports of samll scale sectors only."

ಸರ್ಕಾರದವರು ಏನು ಮಾಡಬೇಕು ಎನ್ನುವುದನ್ನು ವಿಶ್ವಬ್ಯಾಂಕ್ನವರು ಹೇಳಿದರು. ಆದಕ್ಕೆ ಸರ್ಕಾರ ಮಾಡಿದ್ದು ಇದು:

The Government has done is,

"The Monopoly of agencies like State Trading Corporation, Minerals and Metals trading Corporation, were cancelled on October 6, 1991 and they were brought to the level of private trading Houses."

The State Trading Corporation was brought to the level of private trading house except some exsential goods like Petroleum, Foodgrains, edible oils, and fertilisers, all other items were unlisted. In the New Import Policy, Only eight items were listed. On 17th September, 1992, DAP (Di Ammonium Phosphate) Fortiliser and on 21st September, Vitamin A and its paramix items were unlisted. ಮುಂದಿನ ಕಂಡೀಷಾನಾಲಿಟಿ, ಮೂರನೆಯದು:

"Directives to put customs duty upto 30% only on an average on capital goods and intermediate goods."

ನಮ್ಮ ಸರ್ಕಾರ ಮಾಡಿದ್ದು :

"In 1992-93, all capital goods used in coal mining Petroleum, energy and refineries, 30% customs duty was imposed.

In 1992-93, on planning imports and on general machinery, customs duty was reduced from 85% to 55%, while on electronic goods, it was fixed at 50%. On other capital goods, customs duty was reduced to 10%. The provision of concessional customs duty on intermediate goods was made."

ಈ ಸುಧಾರಣೆಗಳನ್ನು ನಮ್ಮ ಕೇಂದ್ರ ಸರ್ಕಾರ ಮಾಡಿದ್ದು.

Fourth Conditionality :

"For the import of export-oriented machineries, rebate on import duty be given. This rebate can be given in a period of 3 to 5 years."

ಇದು ವಿಶ್ವಬ್ಯಾಂಕ್ ಹೇಳಿದ್ದು; ನಮ್ಮ ಸರ್ಕಾರ ಮಾಡಿದ್ದು

"Import of export promotional capital goods was given concession."

Fifth conditionality : ಇದು ಬಹಳ ಮುಖ್ಯವಾದುದು:

"Industrial Policy be changed and restrictions put on industries be removed."

ವಿಶ್ವಬ್ಯಾಂಕ್ ಹೇಳೋದು ನಮ್ಮ ಸರ್ಕಾರಕ್ಕೆ; ನಮ್ಮ ಸರ್ಕಾರ ಮಾಡೋದು :

"In the new Industrial Policy Declaration in July 1991, licencing procedure was changed. Obtaining licences for 18 industries was only made necessary. Foreign companies can now make cent percent investment in Indian Industries.

Under the New National Mining Policy declared on March 5, 1993, several industries reserved for the public sector will be given to private sector under the new declared Policy."

Sixth conditionality : ವಿಶ್ವ ಬ್ಯಾಂಕ್ ಹೇಳೋದು

"The Public sector be reorganised and units running at a loss be closed down."

ನಮ್ಮ ಸರ್ಕಾರ ಮಾಡಿದ್ದು :

"Restructuring of the public sector was announced in the New Industrial Policy and it was decided to refer the cases of sick industries to the Board of Industrial and Financial Reconstruction."

Seventh conditionality :

"Surplus staff in industries be retrenched. For this an exit-policy be adopted. A fund be created to compensate the affected workers."

ಇದೂ ಬಹಳ ಮುಖ್ಯವಾದುದ್ದೇ :

"In 1991-92 Budget, it was decided to retire additional workers under the Golden Handshake Plan. and voluntary retirement scheme. In 1991-92, For those employees affected by the Exit Policy, a new...."

ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ಸಭಾಧ್ಯಕ್ಷರೇ, ತಮ್ಮ ಮುಖೇನ ನಾನು ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರನ್ನು ಕೇಳುವುದು ಇಷ್ಟೆ. ಇವತ್ತು ನಾವು ರಾಜ್ಯಪಾಲರ ಭಾಷಣದಲ್ಲಿ ಇರತಕ್ಕಂತಹ, ಕರ್ನಾಟಕಕ್ಕೆ ಸಂಬಂಧ ಪಟ್ಟಂತೆ ನಮ್ಮ ರಾಜಕೀಯ, ಸಾಮಾಜಿಕ, ಆರ್ಥಿಕ ಕಾರ್ಯಕ್ರಮಗಳ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಈಗ ನಾವು ನ್ಯೂ ಎಕಾನಾಮಿಕ್ ಪಾಲಿಸಿ, ವರ್ಲ್ಡ್ ಬ್ಯಾಂಕ್ ಕಂಡೀಷನಾಲಿಟೀಸ್ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಅದರ ಪರಿಣಾಮ ಏನಾದರೂ ನಮ್ಮ ಕಾರ್ಯಕ್ರಮದ ಮೇಲೆ ಆಗುತ್ತಿದ್ದರೆ ಅದನ್ನು ಹೇಳಬಹುದು.

ಪ್ರೊ.ಎಂ.ಡಿ. ನಂಜುಂಡಸ್ವಾಮಿ : ನೇರವಾದ ಸಂಬಂಧ ಉಂಟು ಎಂದು ನಾನು ಹೇಳುತ್ತೇನೆ. ಮೊದಲನೇ ಪಂಚವಾರ್ಷಿಕ ಯೋಜನೆಗೂ 7ನೇ ಪಂಚವಾರ್ಷಿಕ

ಯೋಜನೆಗೂ ಯಾವ್ಯಾವ ಕ್ಷೇತ್ರದಲ್ಲಿ ಏನೇನು ಆಗಿದೆ ಎಂದು. ಎಷ್ಟೆಷ್ಟು ಹಣ ಇತ್ಯಾದಿ. ನಾವು ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣ ಕೊಟ್ಟಿದ್ದೇವೆ. ಎಷ್ಟು ಪರ್ಸೆಂಟ್ ಕೊಟ್ಟಿದ್ದೇವೆ ಯಾವ ಕೆಲಸಕ್ಕೆ ಮತ್ತು ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಅದೇ ಕ್ಷೇತ್ರಕ್ಕೆ ಎಷ್ಟೆಷ್ಟು ಕಡಿಮೆ ಮಾಡಿದ್ದೇವೆ. ಅದಕ್ಕೆ ಕಾರಣ ಏನು ಎನ್ನುವುದನ್ನು ಹೇಳುತ್ತೇನೆ. ಅನಂತರ ನೀವು ಅಲ್ಪಸಂಖ್ಯಾತರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ, ಮಹಿಳೆಯರಿಗೆ, ಮಕ್ಕಳಿಗೆ ಸಮಾಜ ಕಾರ್ಯಕ್ರಮಗಳನ್ನು ಎಷ್ಟರ ಮಟ್ಟಿಗೆ ಹಾಕುತ್ತೀರಿ ಎನ್ನುವುದನ್ನು ಹೇಳುತ್ತೇನೆ.

5.45 ಪಿ.ಎಂ.

ನೇರವಾಗಿ ಸಂಬಂಧ ಇದೆ, ಕೊನೆಯದಾಗಿ, ವಿಶ್ವಬ್ಯಾಂಕ್ ಹೇಳಿದ್ದುದು,

"Share of Public Undertakings be sold.

"In 1991-92 shares worth 3.38 crores for 31 undertakings were sold. In 1992-93, it was earmarked to sell shares worth Rs. 3500 crores."

ನೀವು ಇಲ್ಲಿ ಹೇಳಿರುವುದು ಎಲ್ಲಾ ಸಂವಿಧಾನದಲ್ಲಿರುವ Directive Principles of the State Policyಗೆ ಸಂಬಂಧಪಟ್ಟಿದ್ದು ಅಲ್ಲ, ಅಲ್ಪಸಂಖ್ಯಾತರ ಕಲ್ಯಾಣ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕಲ್ಯಾಣ, ಮಹಿಳೆಯರಿಗೆ ಸಮಗ್ರ ಯೋಜನೆ, ಮಕ್ಕಳ ಕಲ್ಯಾಣ, ಎಲ್ಲಾ ನಿರುದ್ಯೋಗಿ ಪದವೀಧರರಿಗೆ ಉದ್ಯೋಗ. ಇವೆಲ್ಲಾ ಸಂವಿಧಾನದಲ್ಲಿ Directive Principles of the State Policy ಯನ್ನು ತಾವು ಜಾರಿಗೆ ತರುವಂಥ ಪ್ರಯತ್ನಗಳ ಕಾರ್ಯಕ್ರಮ. ಈ ಸ್ಟ್ರಕ್ಚರಲ್ ಅಡ್ಜಸ್ಟ್‌ಮೆಂಟ್ ಪ್ರೋಗ್ರಾಮ್ನಲ್ಲಿ, ನಾನು ಓದಿ ಹೇಳಿದ ಕೆಲವೇ ಬದಲಾವಣೆಗಳ ಪಟ್ಟಿಯನ್ನು ತಾವು ನೋಡಿದರೆ, ಎಷ್ಟರಮಟ್ಟಿಗೆ ಖಾಸಗೀಕರಣದಿಂದಾಗಿ means of production ಎಂದು ಏನು ಹೇಳುತ್ತೇವೆ, ಉತ್ಪಾದನಾ ಸಾಧನೆಗಳ ಮಾಲೀಕತ್ವ, ಎಷ್ಟರಮಟ್ಟಿಗೆ ಕೇಂದ್ರೀಕರಣ ಆಗುತ್ತದೆ; ಇದನ್ನು ಮಾಡಲಿಕ್ಕೆ ನಿಮಗೆ ಸಂವಿಧಾನ, ಅವಕಾಶ ಕೊಟ್ಟಿದೆಯೇ? Directive Principles of the State Policy says that the means of Production should not get concentrated in the hands of a few. But it should be decentralised as far as possible so that the maximum number of people in this country get a decent standard of living. ಹೌದಾ, ನೀವು ಮಾಡುತ್ತಿರುವುದು, ಸ್ಟ್ರಕ್ಚರಲ್ ಅಡ್ಜಸ್ಟ್‌ಮೆಂಟ್ ಪ್ರೋಗ್ರಾಮ್ಸ್ ಒಪ್ಪಿದ್ದೀರಿ. ಖಾಸಗೀಕರಣವನ್ನು ಮಾಡುತ್ತಾ ಇದ್ದೀರಿ. ಬರೀ ಕೇಂದ್ರ ಸರ್ಕಾರದವರು ಅಲ್ಲ ಖಾಸಗೀಕರಣ ಮಾಡುತ್ತಿರುವುದು. BIFRಗೆ ಬರೀ ಕೇಂದ್ರ ಸರ್ಕಾರದವರು ಅಲ್ಲ ಖಾಸಗಿ ಉದ್ಯಮಗಳನ್ನು ಕಳುಹಿಸಿಕೊಡುತ್ತಿರುವುದು. ಕರ್ನಾಟಕ ಸರ್ಕಾರವೂ ಕೂಡ ಮಾಡುತ್ತಿದೆ. ಚುನಾವಣೆ ವರ್ಷ ಎಂದು ಈ ವರ್ಷ ತಾವು ತಡೆದಿರಬಹುದು. ಇಲ್ಲದಿದ್ದರೆ ಸಾಬೂನು ಕಾರ್ಖಾನೆ ಮಾರಲಿಕ್ಕೆ ತಯಾರಾಗಿದ್ದೀರಿ. ನಾನು ಹೇಳುವುದು ಸುಳ್ಳೆ? ಗಂಗಾವತಿ ಕಾರ್ಖಾನೆ ಲಾಭ ಮಾಡುತ್ತಿದ್ದಂಥ ಕಾರ್ಖಾನೆಯನ್ನು BIFR ಗೆ ರೆಫರ್ ಮಾಡಿದೆ ಈ ಸರ್ಕಾರ. ಅದು ಲಾಭ ಮಾಡುತ್ತಿದ್ದಂಥ ಕಾರ್ಖಾನೆ. ನಾವು ಈಗ ಹೇಳುತ್ತಿದ್ದೇವೆ, ನಿಮ್ಮ ಕೈಯಲ್ಲಿ ನಡೆಸಲಿಕ್ಕೆ ಆಗದಿದ್ದರೆ ಬಿಡಿ, ನಾವು ಶೇರ್ಹೋಲ್ಡರ್ಸ್, ರೈತರು, ನಾವು ನಡೆಸುತ್ತೇವೆ. ನಮಗೆ ಗೊತ್ತಿದೆ. ತಮ್ಮ ಜಿಲ್ಲೆಯಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ನಡೆಸುತ್ತಿದ್ದೇವೆ ನಿಮ್ಮ ಕೈಯಲ್ಲಿ ನಡೆಸುವುದಕ್ಕೆ ಆಗುವುದಿಲ್ಲ ಎಂದರೆ ಗಂಗಾವತಿ ಸಕ್ಕರೆ ಕಾರ್ಖಾನೆಯನ್ನು ನಾವೇ ನಡೆಸುತ್ತೇವೆ. ಈ 27 ಕಾರ್ಖಾನೆಯನ್ನು ನಾವೇ ನಡೆಸುತ್ತೇವೆ. ಆರೋಗ್ಯವಾಗಿರತಕ್ಕ ಕಾರ್ಖಾನೆಯನ್ನು ಖಾಯಿಲೆ ಎಂದು ಮಾಡಿ, BIFRಗೆ ರೆಫರ್ ಮಾಡಿ ಕಡಿಮೆ ಬೆಲೆಗೆ ಖಾಸಗಿ ಬಂಡವಾಳಶಾಯಿಗೆ ಮಾರುವಂಥ ಒಂದು ಕಾರ್ಯಕ್ರಮ ನಡೆಯುತ್ತಿದೆ. ಜೊತೆಗೆ ನೀವು ಉದ್ಯೋಗ ಸೃಷ್ಟಿ ಮಾಡುತ್ತೀರಿ ಎಂದು. ಅದಕ್ಕೆ ಮೊದಲು ಸಭಾಧ್ಯಕ್ಷರೇ,

ಈ ಸ್ಟ್ರಕ್ಚರಲ್ ಅಡ್ಜಸ್ಟ್‌ಮೆಂಟ್ ಪ್ರೋಗ್ರಾಮ್ನಿಂದ ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ನೀವೇನು ಸಾಮಾಜಿಕ ಕಲ್ಯಾಣ ಕಾರ್ಯಕ್ರಮ, ಗ್ರಾಮೀಣ ವಿಕಾಸ ಅಂತೆಲ್ಲಾ ಮಾತನಾಡುತ್ತಾ ಇದ್ದೀರಿ, ಅದರಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿಶತ ಎಷ್ಟು ಹಣ ಕೊಡುತ್ತಿದ್ದು, 7ನೇ ಪಂಚವಾರ್ಷಿಕ ಯೋಜನೆಗೆ ಎಷ್ಟಕ್ಕೆ ಬಂದಿದ್ದೇವೆ ಎನ್ನುವುದು ಇಲ್ಲೇ ಇದೆ. ಇದು ಸರ್ಕಾರಿ ದಾಖಲೆಯಲ್ಲೇ ಇದೆ. Percentage of Plan Outlay in the First Plan and the Percentage of Plan Outlay in the First Plan for Rural Development and Agriculture:

ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು 14.8 ಪರ್ಸೆಂಟ್ ಕೊಟ್ಟಿದ್ದೆವು. 7ನೇ ಪಂಚವಾರ್ಷಿಕ ಯೋಜನೆಯಲ್ಲಿ it has come down to 10.9%. ಮಾನ್ಯ ರಾಮಯ್ಯನವರು ನೀರಾವರಿ ಬಗ್ಗೆ ಮಾತನಾಡುತ್ತಿದ್ದರು.

ನೀರಾವರಿಗೆ ನಾವು ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ 22.2 ಪರ್ಸೆಂಟ್ ಕೊಟ್ಟಿದ್ದೆವು. 7ನೇ ಯೋಜನೆಯಲ್ಲಿ 9.4 ಪರ್ಸೆಂಟ್ಗೆ ಇಳಿಯಿತು. ಎಜುಕೇಷನ್‌ಗೆ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ 7.6 ಪರ್ಸೆಂಟ್, 7ನೇ ಯೋಜನೆಯಲ್ಲಿ 3.5 ಪರ್ಸೆಂಟ್. ಅರ್ಧಕ್ಕಿಂತ ಕಡಿಮೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಟೋಟಲ್ ಪ್ಲಾನ್ ಔಟ್ಲೇನ್ 5 ಪರ್ಸೆಂಟ್. 7ನೇ ಯೋಜನೆಯಲ್ಲಿ 3.7 ಪರ್ಸೆಂಟ್. ಮಹಿಳೆಯರಿಗೆ ಸಮಗ್ರ ಕಾರ್ಯಕ್ರಮ, ಮಕ್ಕಳ ಕಲ್ಯಾಣ. In the first one year of the implementation of a structural adjustment programme in India, 6.6 million additional people were rendered jobless. I am quoting from Government of India figures. ಇಂಥ ಹಿನ್ನೆಲೆಯಲ್ಲಿ ನೀವು ಏನು ಕಾರ್ಯಕ್ರಮವನ್ನು ಈ ಪುಟಗಳಲ್ಲಿ ಹಾಕಿದ್ದೀರಿ ಇದರಲ್ಲಿ ಒಂದನ್ನೂ ಕೂಡ ನೀವು ಮಾಡುವುದಕ್ಕಾಗುವುದಿಲ್ಲ, ನೀವು ಎಲ್ಲಿಯವರೆಗೆ ವಿಶ್ವಬ್ಯಾಂಕ್ನ ಷರತ್ತುಗಳಿಗೆ ಒಪ್ಪಿಕೊಂಡು ಕೆಲಸಮಾಡುತ್ತೇವೆಂದು ಹೇಳುತ್ತೀರಿ ಅದುವರೆಗೂ ನೀವು ಇಲ್ಲಿ ಹೇಳಿರತಕ್ಕಂಥ ಒಂದೇ ಒಂದು ಕಾರ್ಯಕ್ರಮವನ್ನೂ ನೀವು ಮಾಡುವುದಕ್ಕಾಗುವುದಿಲ್ಲ. ಇದು ನಿಮ್ಮನ್ನು ನೀವೇ ಕೀಟಲೆ ಮಾಡಿಕೊಳ್ಳುವಂಥ ಕೆಲಸವಾಗಿದೆ - kidding yourselves; this government is kidding itself, and nothing more. ಹೊಸ ಆರ್ಥಿಕ ನೀತಿಯನ್ನು ಖಾಸಗೀಕರಣ ಮಾಡುವುದಕ್ಕೆ ನಮ್ಮ ಆಡಳಿತವನ್ನು ನಡೆಸುವವರಿಗೆ ಒಂದು ನೆಪ ಬೇಕಾಗಿತ್ತು. ಉದಾರೀಕರಣ ಅವರಿಗೆ ಒಂದು ಒಳ್ಳೆಯ ನೆಪ ಆಯಿತು. ಉದಾರೀಕರಣದ ನೆಪದಲ್ಲಿ ಜನರ ಆಸ್ತಿಪಾಸ್ತಿ ಏನಿದೆ ಅದನ್ನು ಖಾಸಗೀ ಬಂಡವಾಳ ಶಾಹಿಗಳ ಕೈಗೆ ಕೊಡುವಂಥ ಒಂದು ಕಾರ್ಯಕ್ರಮವಾಯಿತು. ಇದನ್ನೇ ಹೊಸ ಆರ್ಥಿಕ ನೀತಿ ಎಂದು ಹೇಳತಕ್ಕದ್ದು. ಕೇವಲ ಖಾಸಗೀ ಬಂಡವಾಳ ಶಾಹಿಗಳು ಮಾತ್ರವೇ ಅಲ್ಲ ಈ ದೇಶದಲ್ಲಿ ನಿರುದ್ಯೋಗವನ್ನು ಸೃಷ್ಟಿ ಮಾಡುವವರು ನಿಮ್ಮ ಸ್ಟ್ರಕ್ಚರಲ್ ಅಡ್ಜಸ್ಟ್‌ಮೆಂಟ್ ಪ್ರೋಗ್ರಾಂನಲ್ಲಿ ಬೇರೆ ದೇಶದ ಬಂಡವಾಳ ಶಾಹಿಗಳು ಇಲ್ಲಿ ಬಂದು ಪೂರ್ತಿ ಬಂಡವಾಳವನ್ನು ಹೂಡಬಹುದೆಂದು ಹೇಳುತ್ತಿದ್ದಾರೆ. ಕ್ಯಾಪಿಟಲ್ ಗೂಡ್ಸ್ ನಾವು ಎಕ್ಸೈಜ್ನು, ಕಸ್ಟಂಸನ್ನು ತೆಗೆದಿದ್ದೇವೆಂದು ಏನು ಹೇಳುತ್ತಿದ್ದೀರಿ ಅದರಿಂದ ಯಾವುದೇ ರೀತಿಯ ತಾಂತ್ರೀಕತೆಯನ್ನು ಈ ದೇಶದೊಳಗೆ ತರಬಹುದು. ಅವರು ಎಂಥ ತಾಂತ್ರೀಕತೆಯನ್ನು ತರುತ್ತಾರೆ? It will be only capital intensive automated computerised hitech industry. ನಾವು ಇಷ್ಟರಲ್ಲೇ 1000 ಮಿಲಿಯನ್ ಜನ ಆಗುತ್ತೇವೆ. ಈಗ ನೀವು ಉದಾರೀಕರಣದ ಬಾಗಿಲನ್ನು ತೆರೆಯುವ ಕಾರ್ಯಕ್ರಮವನ್ನು ಮಾಡಿದ್ದೀರಿ, ತನ್ಮೂಲಕ ವಿದೇಶೀ ಬಂಡವಾಳ ಶಾಹಿಗಳು ಬರುತ್ತಿದ್ದಾರೆ, ಅವರು ಮನುಷ್ಯರೇ ಬೇಕಿಲ್ಲದಂಥ ಯಂತ್ರಗಳನ್ನು ತರುತ್ತಾರೆ. ಅದರಿಂದ ಯಾವ ಪ್ರಮಾಣದ ನಿರುದ್ಯೋಗ ಸೃಷ್ಟಿಯಾಗುತ್ತದೆ ಎಂಬ ಪ್ರಜ್ಞೆ ಇಲ್ಲದೇ ಮಾಡಿರತಕ್ಕ ಭಾಷಣ ಇದು. ಎಲ್ಲಾ ಕ್ಷೇತ್ರದಲ್ಲೂ ನಿರುದ್ಯೋಗವನ್ನು ಸೃಷ್ಟಿ ಮಾಡುವಂಥ ಹೊಸ ಆರ್ಥಿಕ ನೀತಿ ಒಪ್ಪಿ [illegible] ಕಾರ್ಯಕ್ರಮಗಳ ಬಗ್ಗೆ ಮಾತನಾಡುತ್ತಿದ್ದರೆ, ಈ

ಸದನದಲ್ಲಿರುವವರಿಗೆ ಅರ್ಥ ಶಾಸ್ತ್ರದ ಬಗ್ಗೆ, ರಾಜ್ಯಶಾಸ್ತ್ರದ ಬಗ್ಗೆ ಕನಿಷ್ಠ ಜ್ಞಾನ ಇಲ್ಲವೆಂದು ತಿಳಿದುಕೊಂಡು ಮಾಡಬೇಡಿ. ನೀವು ಅಂದರೆ ಈ ಸರ್ಕಾರ ಕನಿಷ್ಠ ಜ್ಞಾನ ಪಡೆಯುವಂಥ ಕೆಲಸ ಮಾಡಿ. It should try to get atleast elementary knowledge of politics and economics before it places such a document before this House.

6. ಸಂವಿಧಾನ ತಿದ್ದುಪಡಿ ಸ್ಥಿರೀಕರಣ ನಿರ್ಣಯ

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಪ್ರಸ್ತಾವ ಏನೆಂದರೆ,

"ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ಭಾರತ ಸಂವಿಧಾನದ 368ನೇ ಅನುಚ್ಛೇದ ಖಂಡಿಕೆ (ಬಿ) ಕಲಮು(2)ರಲ್ಲಿ ಬರುವ 1992ರ ತಿದ್ದುಪಡಿ (ಎಪ್ಪತ್ತೇಳನೆಯ ತಿದ್ದುಪಡಿ) ವಿಧೇಯಕವನ್ನು ಸಂವಿಧಾನದ ಉದ್ದೇಶಕ್ಕೆಂದು ಈ ಸದನವು ಸ್ಥಿರೀಕರಿಸುತ್ತದೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ಭಾರತ ಸಂವಿಧಾನದ 368ನೇ ಅನುಚ್ಛೇದ ಖಂಡಿಕೆ (ಬಿ) ಕಲಮು(2)ರಲ್ಲಿ ಬರುವ 1992ರ ತಿದ್ದುಪಡಿ (ಎಪ್ಪತ್ತೇಳನೆಯ ತಿದ್ದುಪಡಿ) ವಿಧೇಯಕವನ್ನು ಸಂವಿಧಾನದ ಉದ್ದೇಶಕ್ಕೆಂದು ಈ ಸದನವು ಸ್ಥಿರೀಕರಿಸುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

5. ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(1) ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ, 1993

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

+ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೇ, ಅಕ್ರಮ ಕಟ್ಟಡಗಳನ್ನು ಸಕ್ರಮಗೊಳಿಸುವ ಈ ಕಾಯ್ದೆ 5.2.92ರಲ್ಲಿ ನೋಟಿಫಿಕೇಷನ್ ಆಗಿ ಈ ಕಾಯ್ದೆ 1.8.92ರಲ್ಲಿ ಜಾರಿಗೆ ಬಂದಿದೆ. ಜಾರಿಗೆ ಬಂದಮೇಲೆ ಆ ದಿನಾಂಕದಿಂದ 60 ದಿನಗಳ ಒಳಗೆ ಅಪ್ಲಿಕೇಷನ್ಸ್ ಹಾಕಬೇಕಾಗಿತ್ತು. ಯಾರೇ ಅಕ್ರಮವಾಗಿ 31.3.90ಕ್ಕೆ ಹಿಂದೆ ಮನೆ ಕಟ್ಟಿರತಕ್ಕವರು ಇದು ಜಾರಿಗೆ ಬಂದ 1.8.92ರಿಂದ 60 ದಿವಸಗಳಲ್ಲಿ ಅರ್ಜಿ ಹಾಕಬೇಕಾಗಿತ್ತು.

ಕೇಳಿಕೊಳ್ಳುತ್ತೇನೆ. ಆದ್ದರಿಂದ 1.8.94ರವರೆಗೆ ದಿನಾಂಕ ಕೊಡುತ್ತಿದ್ದೇವೆ. ಇನ್ನು ಇದರಲ್ಲಿ, ಸರ್ಕಾರದ ಜಮೀನು ಹಾಗೂ ರೆವಿನ್ಯೂ ಜಮೀನು ಎಂದು ಇದೆ. ಮೊದಲನೇ ಆಕ್ಷಲ್ಲಿ ಅಕ್ರಮವಾಗಿ ಕಟ್ಟಿರತಕ್ಕ ಮನೆಗಳು ಸರ್ಕಾರಿ ಜಮೀನು ಹಾಗೂ ರೆವಿನ್ಯೂ ಸೈಟ್ನಲ್ಲಿ ಏನಿವೆ ಅವರನ್ನು ಕೂಡ ರೆಗ್ಯುಲರೈಸ್ ಮಾಡಬೇಕೆಂದು ಇದೆ. ಸರ್ಕಾರಿ ಜಮೀನು ಎಂದರೆ ಈ ಆಫೀಸಸ್ ಇರುತ್ತದಲ್ಲಾ, ಅದರ ಎದುರುಗಡೆ excluding unauthorised construction in land appurtenant to government buildings. ಸರ್ಕಾರಿ ಕಟ್ಟಡಗಳು ಇರತಕ್ಕ ಕಡೆ ಸರ್ಕಾರಿ ಜಾಗ ಇದ್ದರೂ ಕೂಡ ಅಲ್ಲಿ ಅಕ್ರಮವಾಗಿ ಕಟ್ಟಿದ್ದರೆ ಸಕ್ರಮ ಮಾಡಬಾರದು ಮತ್ತು ಕಮರ್ಶಿಯಲ್ ಬಿಲ್ಡಿಂಗ್ಸ್ ಎಂದು ಹೇಳಿ ಅದನ್ನು ತೆಗೆದುಹಾಕಬೇಕು. ಎಲ್ಲಿ ಕಮರ್ಶಿಯಲ್ ಬಿಲ್ಡಿಂಗ್ ಕಟ್ಟಿರುತ್ತಾರೋ ಅದನ್ನು ರೆಗ್ಯುಲರೈಸ್ ಮಾಡಬಾರದು ಎಂದು ತಿದ್ದುಪಡಿ ತಂದಿದ್ದೇವೆ. ಸೆಕ್ಷನ್ 6 ರಲ್ಲಿ ಸ್ಕ್ರೀನಿಂಗ್ ಕಮಿಟಿ ಮಾಡಿದ್ದೇವೆ. ಅದರಲ್ಲಿ ಇಬ್ಬರು ಶಾಸಕರು, ಒಬ್ಬರು ಮಹಿಳಾ ಸದಸ್ಯರು ಒಬ್ಬರು ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಸೇರಿದವರು ಹೀಗೆ ನಾಲ್ಕು ಜನರನ್ನು ಮೊದಲು ಇರುವವರ ಜೊತೆ ಸ್ಕ್ರೀನಿಂಗ್ ಕಮಿಟಿಯಲ್ಲಿ ಹಾಕಬೇಕೆಂದು ತಿದ್ದುಪಡಿ ತರುತ್ತಿದ್ದೇವೆ. ಎಲ್ಲಾ ಕಡೆ ಜಿಲ್ಲೆಗೆ ಒಂದರಂತೆ ಸ್ಕ್ರೀನಿಂಗ್ ಕಮಿಟಿ ಮಾಡಿದ್ದೇವೆ. ಆದರೆ ಬೆಂಗಳೂರಿನಲ್ಲಿ ರೂರಲ್ಗೆ ಒಂದು ಕಮಿಟಿ ಹಾಗೂ ಬೆಂಗಳೂರಿನಲ್ಲಿ ಹೆಚ್ಚು ಸಕ್ರಮ ಮಾಡುವ ವಿಚಾರ ಇರುವುದರಿಂದ ಕಾರ್ಪೋರೇಷನ್ ಏರಿಯಾಕ್ಕೆ ಒಂದು ಹಾಗೂ ಬಿಡಿಎ ಅಥಾರಿಟಿ ಏರಿಯಾಕ್ಕೆ ಒಂದು ಸ್ಕ್ರೀನಿಂಗ್ ಕಮಿಟಿ ತರಬೇಕೆಂದು ಸೂಚನೆ ತಂದಿದ್ದೇವೆ. ಮತ್ತು ಸೆಕ್ಷನ್ 8 ರಲ್ಲಿ, ಯಾರು ಸಮಯಕ್ಕೆ ಸರಿಯಾಗಿ ಅರ್ಜಿ ಹಾಕದೇ ಇದ್ದರೆ ಅವರು ಸಕ್ರಮವಾಗಿ ಕಟ್ಟಿದ್ದರೆ ಅದನ್ನು ನೆಲಸಮ ಮಾಡಿ ಬಿಡಿಸಬೇಕೆಂದು ತಂದಿದ್ದೇವೆ. ಅವರು ಏನಾದರೂ ಬೇಗ ಅರ್ಜಿ ಹಾಕಿಕೊಳ್ಳದೇ ಇದ್ದರೆ ಆ ಮನೆಗಳಿಗೆ ವಿದ್ಯುತ್, ನೀರಿನ ಸಂಪರ್ಕ ನಿಲ್ಲಿಸಿದರೆ ಬಹುಶಃ ಅವರು ಅಪ್ಲಿಕೇಷನ್ ಹಾಕಿಕೊಳ್ಳುತ್ತಾರೆ within the date ಎಂದು ಹೇಳಿ ಅದಕ್ಕೆ ತಿದ್ದುಪಡಿ ತಂದಿದ್ದೇವೆ. ಮತ್ತೆ ಬೆಂಗಳೂರಿನಲ್ಲಿ ಸುಮಾರು 2 ಲಕ್ಷಕ್ಕಿಂತ ಹೆಚ್ಚು ಮನೆಗಳನ್ನು ಅಕ್ರಮವಾಗಿ ಕಟ್ಟಿದ್ದಾರೆ. ಬೇರೆ ಬೇರೆ ಏರಿಯಾಗಳಲ್ಲಿ ಬಹಳ ಮನೆಗಳು ಸರ್ಕಾರಿ ಜಾಗ ಹಾಗೂ ರೆವಿನ್ಯೂ ಸೈಟ್ನಲ್ಲಿ ಇರುವುದರಿಂದ ಅದನ್ನು ಸಕ್ರಮ ಮಾಡಬೇಕಾಗಿದೆ. ಜೊತೆಗೆ ಈಗಾಗಲೇ ಎಲ್ಲಿ ನಾವು ರಸ್ತೆ ಮಾಡಿದ್ದೇವೆ, ಅನೇಕ ಕಡೆ ನೀರು ಕೊಟ್ಟಿದ್ದೇವೆ. ಅಲ್ಲೆಲ್ಲಾ ಹೆಚ್ಚಾಗಿ ಮುನಿಸಿಪಾಲಿಟಿಗೆ ಬರ್ಡನ್ ಆಗಿದೆ. ಇದೆಲ್ಲಾ ಮಾಡಿದ್ದು ಸರ್ಕಾರಿ ಜಾಗದಲ್ಲಿ ಕಟ್ಟಿರುವವರಿಗೆ ಸರ್ಕಾರಕ್ಕೆ ಹಣ ಬರುತ್ತದೆ ಮತ್ತು ಎಲ್ಲೆಲ್ಲಿ ಮುನಿಸಿಪಾಲಿಟಿಯವರು ಬೇರೆ ಬೇರೆ ಸೌಲಭ್ಯಗಳನ್ನು ಕೊಟ್ಟಿದ್ದಾರೋ ಅಲ್ಲಿ ಅವರಿಗೆ ಹಣ ಬರುತ್ತದೆ. ಇದರಲ್ಲಿ ನಾವು ಹೆಚ್ಚಾಗಿ ತಿದ್ದುಪಡಿಯನ್ನು ತಂದಿಲ್ಲ. ಆದ್ದರಿಂದ ದಯಮಾಡಿ ಮಾನ್ಯ ಸದಸ್ಯರು ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ತಮ್ಮ ಮುಖಾಂತರ ಅವರಿಗೆ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಇಲ್ಲಿಗೆ ಇವತ್ತಿನ ಸಭೆ ಮುಗಿದು ಮತ್ತೆ ನಾಳೆ ಬೆಳಿಗ್ಗೆ 11 ಗಂಟೆಗೆ ಮತ್ತೆ ಸೇರುವುದು.

(ಸದನವು 6.03 ಕ್ಕೆ ಮುಕ್ತಾಯಗೊಂಡು ಮತ್ತೆ 15.2.94ನೇ ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿರ್ಧರಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

KARNATAKA LEGISLATIVE ASSEMBLY

ಮಂಗಳವಾರ ೧೫ನೇ ಫೆಬ್ರವರಿ ೧೯೯೪, ಮಾಘ ೨೬, ಶಕ ೧೯೧೫

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೨೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ ಪರೀಕ್ಷಾ ಕೇಂದ್ರಗಳು.

154 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ- ವಿಜ್ಞಾನ ಮತ್ತು ಯಂತ್ರಕಲೆ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ ವಾಹನಗಳಿಂದ ಹೊರಸೂಸುವ ಮಾಲಿನ್ಯವನ್ನು ಪರಿಶೀಲಿಸಲು ಎಷ್ಟು ಕೇಂದ್ರಗಳನ್ನು ತೆರೆಯಲಾಗಿದೆ?

ಆ) ಜನವರಿ 1993ರಿಂದ ಡಿಸೆಂಬರ್ ಅಂತ್ಯದವರೆಗೆ ಕರ್ನಾಟಕ ಮಾಲಿನ್ಯ ಇಲಾಖೆ ಎಷ್ಟು ವಾಹನಗಳನ್ನು ಬೆಂಗಳೂರು ನಗರದಲ್ಲಿ ಪರೀಕ್ಷಿಸಿದೆ?

ಇ) ಎಷ್ಟು ವಾಹನ ಮಾಲೀಕರಿಗೆ ದಂಡ ವಿಧಿಸಲಾಗಿದೆ?

ಈ) ಅವುಗಳ ಪೈಕಿ ಎಷ್ಟು, ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು, ದ್ವಿಚಕ್ರ ಹಾಗೂ ತ್ರಿಚಕ್ರ ವಾಹನಗಳು.

ಉ) ದ್ವಿಚಕ್ರ ವಾಹನಗಳನ್ನು ವಾಯು ಮಾಲಿನ್ಯದ ಪರೀಕ್ಷೆಯನ್ನು ಕಡ್ಡಾಯ ಮಾಡಿರುವುದರಿಂದ ವಾಹನ ಚಾಲಕರಿಗೆ ಕಿರುಕುಳವಾಗುತ್ತಿರುವುದು ನಿಜವಲ್ಲವೆ?

ಊ) ಹಾಗಿದ್ದಲ್ಲಿ, ದ್ವಿಚಕ್ರ ವಾಹನ ಚಾಲಕರಿಗೆ ಈ ಪರೀಕ್ಷೆಯಿಂದ ವಿನಾಯತಿ ನೀಡಲು ಸರ್ಕಾರ ಪರಿಶೀಲಿಸುತ್ತಿದೆಯೇ?

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ಮತ್ತು ಜೀವಿಶಾಸ್ತ್ರ ವಿಜ್ಞಾನ ಮತ್ತು ಯಂತ್ರಕಲೆ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು) :

ಅ) ವಾಹನಗಳಿಂದ ಹೊರ ಸೂಸುವ ಮಾಲಿನ್ಯವನ್ನು ಪರೀಕ್ಷಿಸುವ ಕೇಂದ್ರಗಳನ್ನು ಸಾರಿಗೆ ಇಲಾಖೆಯು ತೆರೆಯುವ ಅಧಿಕಾರ ಹೊಂದಿದ್ದು, ಈವರೆಗೆ ಬೆಂಗಳೂರಿನಲ್ಲಿ ಒಟ್ಟಾರೆ 26 ಕೇಂದ್ರಗಳನ್ನು ಸಾರಿಗೆ ಇಲಾಖೆಯು ತೆರೆದಿರುತ್ತದೆ.

ಆ) ವಾಹನಗಳಿಂದ ಉಂಟಾಗುವ ಮಾಲಿನ್ಯವನ್ನು ಪರಿವೀಕ್ಷಣೆ ನಡೆಸುವ ಅಧಿಕಾರವು ಸಾರಿಗೆ ಹಾಗೂ ಪೋಲೀಸ್ ಇಲಾಖೆಗೆ ನೀಡಲ್ಪಟ್ಟಿದ್ದು, ಅನುಕ್ರಮವಾಗಿ 40,018 ಹಾಗೂ 30 ವಾಹನಗಳನ್ನು ಪರೀಕ್ಷಿಸಿದೆ.

ಇ) ವಾಹನ ಮಾಲೀಕರಿಗೆ ದಂಡ ವಿಧಿಸುವ ಪ್ರಾಧಿಕಾರ ಪೋಲೀಸ್ ಹಾಗೂ ಸಾರಿಗೆ ಇಲಾಖೆಗಳು ಹೊಂದಿದ್ದು, ಅನುಕ್ರಮವಾಗಿ 30 ಹಾಗೂ 294 ವಾಹನಗಳ ಮಾಲೀಕರಿಗೆ ದಂಡ ವಿಧಿಸಿದೆ.

ಈ)	ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳು-		1
	ದ್ವಿಚಕ್ರ ವಾಹನಗಳು	-	117
	ತ್ರಿಚಕ್ರ ವಾಹನಗಳು	-	68
	ನಾಲ್ಕು ಚಕ್ರ	-	75
	ಇತರೆ	-	63

ಉ) ಇಲ್ಲ, ಕಾನೂನು ಎಲ್ಲ ಬಗೆಯ ವಾಹನಗಳಿಗೆ ಸಮಾನವಾಗಿ ಅನ್ವಯವಾಗುತ್ತದೆ.

ಊ) ಉದ್ಭವಿಸುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಅವರು ಉತ್ತರದಲ್ಲಿ ಬೆಂಗಳೂರಿನಲ್ಲಿ 26 ಕೇಂದ್ರಗಳನ್ನು ಸಾರಿಗೆ ಇಲಾಖೆಯ ವತಿಯಿಂದ ತೆಗೆದಿದ್ದೇವೆ ಎಂದು ಹೇಳಿದ್ದಾರೆ. ಅದೇ ರೀತಿ ಜಿಲ್ಲಾಮಟ್ಟದಲ್ಲಿ ಏನಾದರೂ ಕೂಡ ಇಂತಹ ಪರಿಶೀಲನೆ ಮಾಡತಕ್ಕಂತಹ ಕೇಂದ್ರಗಳನ್ನು ಆರಂಭ ಮಾಡಿದ್ದಾರೋ ಹೇಗೆ? ಈ 26 ಕೇಂದ್ರಗಳನ್ನು ಯಾವಾಗ ಆರಂಭ ಮಾಡಿದರು ಎನ್ನುವುದನ್ನು ಅವರು ತಿಳಿಸಬೇಕು.

ಶ್ರೀ ಎನ್.ಜಿ. ಹಾಲಪ್ಪ : ಬೇರೆ ಜಿಲ್ಲೆಗಳಲ್ಲಿ ಪ್ರಾರಂಭ ಮಾಡುವುದನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಈ ಕೇಂದ್ರಗಳು ಅವರು ಕೊಟ್ಟಿರತಕ್ಕಂತಹ ಅಂಕಿಅಂಶಗಳ ಪ್ರಕಾರ ದ್ವಿಚಕ್ರ ವಾಹನಗಳಲ್ಲಿ ಮಾತ್ರ ಅವರು ಈ ಪರೀಕ್ಷೆ ಮಾಡಿದ್ದಾರೆ. ಹೆಚ್ಚಿಗೆ ಹೊಗೆ ಬಿಡತಕ್ಕಂತಹ ಕೆಎಸ್‌ಆರ್‌ಟಿಸಿ ಬಸ್ಸಗಳಾಗಲಿ, ಹಳೇ ಲಾರಿಗಳಾಗಲಿ, ಅವುಗಳ ಗೋಜಿಗೆ ಈ ಕೇಂದ್ರಗಳು ಅಥವಾ ಅಧಿಕಾರಿಗಳು ಹೋಗಿಲ್ಲ ಎನ್ನುವುದು ಅವರ ಅಂಕಿ ಸಂಖ್ಯೆಗಳಿಂದ ಗೊತ್ತಾಗುತ್ತದೆ. ನಮ್ಮ ಮಂತ್ರಿಗಳು ಬರೀ ಸ್ಕೂಟರ್ ಓಡಿಸುವವರಿಗೆ ಮಾತ್ರ ಈ ನಿರ್ಬಂಧ ಹಾಕಿದರೆ ಸಾಲದು. ಹೆಚ್ಚು ಹೊಗೆ ಬಿಟ್ಟು ಪರಿಸರ ಹದಗೆಡತಕ್ಕಂಥಾದ್ದು, ದೊಡ್ಡ ದೊಡ್ಡ ವಾಹನಗಳಿಂದ ಆಗುತ್ತದೆ ಎನ್ನುವುದನ್ನು ಎಲ್ಲರೂ ಕೂಡ ತಿಳಿದುಕೊಂಡಿದ್ದಾರೆ. ಈ ಹಂತದಲ್ಲಿ ಮಂತ್ರಿಗಳು ನೇರವಾಗಿ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಹೇಳಿ ಯಾರಿಂದ ಪರಿಸರ ಮಾಲಿನ್ಯ ಹೆಚ್ಚಾಗುತ್ತದೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚನೆ ಕೊಡುತ್ತಾರೆಯೇ?

ಶ್ರೀ ಎನ್.ಜಿ. ಹಾಲಪ್ಪ : ಪರಿಸರ ಮಾಲಿನ್ಯ ಯಾರಿಂದ ಆಗುತ್ತದೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕಾನೂನು ಪ್ರಕಾರ ತೆಗೆದುಕೊಂಡೇ ತೆಗೆದುಕೊಳ್ಳುತ್ತೇವೆ. ಇವರು ಅವರು ಎಂದು ಬೇರೆ ಬೇರೆ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಹಾಗಿದ್ದ ಮೇಲೆ, ಈ ಕೇಂದ್ರದವರು 117 ದ್ವಿಚಕ್ರ ವಾಹನಗಳನ್ನು ಟೆಸ್ಟ್ ಮಾಡಿದ್ದಾರೆ; ಒಂದೇ ಒಂದು ಕೆಎಸ್‌ಆರ್‌ಟಿಸಿ ಬಸ್ ಟೆಸ್ಟ್ ಮಾಡಿದ್ದಾರೆ, 4 ಚಕ್ರಗಳ 75 ವಾಹನಗಳನ್ನು ಟೆಸ್ಟ್ ಮಾಡಿದ್ದಾರೆ. ಬಹುಶಃ ಅವರ ಮಾತು ಕರಾರುವಾಕ್ಕಾಗಿದ್ದರೆ ಈ ಅಂಕಿಸಂಖ್ಯೆಗಳು ಏಕೆ ಬರುತ್ತದೆ ಎಂದು ಅವರು ತಿಳಿದುಕೊಳ್ಳಬೇಕು ಮತ್ತು ದ್ವಿಚಕ್ರ ವಾಹನಗಳಿಂದ ಬರತಕ್ಕಂತಹ ಮಾಲಿನ್ಯಕ್ಕೂ ದೊಡ್ಡ ವಾಹನಗಳಿಂದ ಬರತಕ್ಕಂತಹ ಮಾಲಿನ್ಯಕ್ಕೂ ಹೋಲಿಕೆ ಮಾಡಿದಾಗ ಅದು ನೆಗ್ಲಿಜಬಲ್. ಅಂಥವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳುವುದರ ಬಗ್ಗೆ ತಾವು ಮನಸ್ಸು ಮಾಡುತ್ತೀರಾ?

ಶ್ರೀ ಎನ್.ಜಿ. ಹಾಲಪ್ಪ : ಯಾವ ದ್ವಿಚಕ್ರಗಳಿಂದ ಆಗಲಿ, 4 ಚಕ್ರಗಳಿಂದ ಆಗಲಿ, ಪರಿಸರ ಮಾಲಿನ್ಯಕ್ಕೆ ಯಾವುದಾದರೂ ಸಹ ಒಂದೇ ಆಗುತ್ತದೆ. because all of them emit carbon-monoxide, which is highly dangerous to public life. We cannot distinguish between vehicles ಕೆಎಸ್‌ಆರ್‌ಟಿಸಿ ಒಂದೇ ಎಂದು ಹೇಳಲು

ನಾವು ಎಲ್ಲಾ ಅಂಕಿ ಅಂಶಗಳನ್ನು ಕೊಟ್ಟಿದ್ದೇವೆ. ಅವರ ಮೇಲೆ ಇನ್ನೂ ಸ್ವಲ್ಪ ತೀವ್ರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚನೆ ಕೊಡುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ : ಅಧ್ಯಕ್ಷರೇ, ಇತರೆ 63 ವಾಹನಗಳು ಎಂದರೆ ಯಾವ ವಾಹನಗಳು ?

(ಉತ್ತರವಿಲ್ಲ)

ವಿಚಾರಣೆಯಲ್ಲಿರುವ ಖೈದಿಗಳ ಸಂಖ್ಯೆ

165 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ): ಮಾನ್ಯ ಗೃಹರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದ ಜೈಲುಗಳಲ್ಲಿರುವ ವಿಚಾರಣಾ ಬಂಧಿಗಳ ಸಂಖ್ಯೆ ಎಷ್ಟು ಮತ್ತು ಅವರುಗಳ ವಯಸ್ಸು ಹಾಗೂ ಎಷ್ಟು ದಿನಗಳಿಂದ ಬಂದಿಗಳಾಗಿದ್ದಾರೆ ಎಂಬ ವಿವರ ನೀಡುವುದು.

ಆ) ಅವರುಗಳಲ್ಲಿ ಅಪ್ರಾಪ್ತ ವಯಸ್ಸಿನ ಬಂದಿಗಳೆಷ್ಟು ? ನಿರ್ಧಿಷ್ಟವಾಗಿ 14 ವರ್ಷದೊಳಗಿನವರು ಎಷ್ಟು ಮಂದಿ ಮತ್ತು ಯಾವ ಅಪರಾಧಕ್ಕಾಗಿ ಅವರುಗಳು ಜೈಲಿನಲ್ಲಿದ್ದಾರೆ.

ಇ) ವಿಚಾರಣಾ ಬಂಧಿಗಳ ವಿರುದ್ಧ ಇರುವ ಮೊಕದ್ದಮೆಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ಸರ್ಕಾರವು ಉದ್ದೇಶಿಸಿರುವ ಕ್ರಮಗಳಾವುವು ?

ಶ್ರೀ ಬಿ. ರಮನಾಥ್ ರೈ (ಗೃಹ ರಾಜ್ಯ ಸಚಿವರು.) :

ಅ) ಕರ್ನಾಟಕ ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ದಿನಾಂಕ 15-12-93 ರಂದು ವಿಚಾರಣಾಧೀನ ಬಂಧಿಗಳ ಸಂಖ್ಯೆ ಈ ಕೆಳಗಿನಂತಿದೆ.

ಅ)	ಪುರುಷರು	-	4827
ಆ)	ಮಹಿಳೆಯರು	-	148
	ಒಟ್ಟು	-	4975

ಸದರಿ ವಿಚಾರಣಾಧೀನ ಬಂಧಿಗಳ ವಯಸ್ಸು ಮತ್ತು ಅವಧಿಯ ವಿವರಗಳು ಈ ಕೆಳಕಂಡಂತಿವೆ.

ಅವಧಿ	ಪುರುಷರು	ಮಹಿಳೀಯರು
6 ತಿಂಗಳಿಗಿಂತ ಕಡಿಮೆ	3032	124
6 ರಿಂದ 12 ತಿಂಗಳವರೆಗೆ	795	013
1 ರಿಂದ 2 ವರ್ಷಗಳವರೆಗೆ	627	008
2 ರಿಂದ 3 ವರ್ಷಗಳವರೆಗೆ	310	002
3 ರಿಂದ 4 ವರ್ಷಗಳವರೆಗೆ	54	001
4 ವರ್ಷಗಳಿಗಿಂತ ಮೇಲ್ಪಟ್ಟು	09	-
ಒಟ್ಟು	4827	148

ವಯಸ್ಸು

16 ವರ್ಷಗಳಿಗಿಂತ ಕಡಿಮೆ		
16 ರಿಂದ 18 ವರ್ಷಗಳವರೆಗೆ	224	08
18 ರಿಂದ 21 ವರ್ಷಗಳವರೆಗೆ	891	29
21 ರಿಂದ 50 ವರ್ಷಗಳವರೆಗೆ	3433	102
50 ವರ್ಷಗಳ ಮೇಲ್ಪಟ್ಟು	279	09
ಒಟ್ಟು	4827	148

ಆ) ಇಲ್ಲ.

ಇ) ವಿಚಾರಣಾಧೀನ ಬಂಧಿಗಳ ಸ್ಥಿತಿಗತಿಗಳನ್ನು ಪರಿಶೀಲಿಸುವ ಬಗ್ಗೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಹೆಚ್ಡಿ 60 ಪಿಆರ್ಎ 79 ಬೆಂಗಳೂರು ದಿನಾಂಕ 28-11-79ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

ನ್ಯಾಯಾಲಯಗಳಲ್ಲಿ ಕೇಸುಗಳ ತೀವ್ರ ವಿಲೇವಾರಿಗೆ ಈ ಸಮಿತಿ ಮಾರ್ಗದರ್ಶಕವಾಗಿದೆ.

ದಿನಾಂಕ 18-12-93 ರಂದು ಈ ಸಮಿತಿಯು ತನ್ನ ಕೊನೆಯ ಸಭೆಯನ್ನು ನಡೆಸಿತು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಸದಸ್ಯರಿಗೆ ಉತ್ತರಗಳನ್ನು ಒದಗಿಸಲಾಗಿದೆ. ಆದರೆ ನಮ್ಮ ಗಮನ ಸೆಳೆಯುವವರು ಸಮ್ಮನಿದ್ದಾರೆ. ಆದುದರಿಂದ ಉತ್ತರವನ್ನು ಸ್ವಲ್ಪ ಹೊತ್ತು ತಡೆದು ಹೇಳುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಈಗ ತಾವೆಲ್ಲಾ ವಿವರಗಳನ್ನು ಕೊಟ್ಟಿದ್ದೀರಿ, ಆದರೆ ರಿಮ್ಯಾಂಡ್ ಹೋಮಿನಲ್ಲಿ ಎಷ್ಟು ಜನ ಇದ್ದಾರೆ? 14 ವರ್ಷದ ಕೆಳಗಡೆ ಇರತಕ್ಕಂಥ ಅಂಡರ್ ಟ್ರೈಯಲ್ ಪ್ರಿಸನರ್ಸ್ ಏನು ಇದ್ದಾರೆ ಅವರನ್ನೆಲ್ಲಾ ರಿಮ್ಯಾಂಡ್ ಹೋಮಿನಲ್ಲಿ ಹಾಕುತ್ತಾರೆ. ಆ ರಿಮ್ಯಾಂಡ್ ಹೋಮಿನ ಆಕ್ಟ್ ಬೇರೆ ಇದೆ. ಅದರಲ್ಲಿ ಎಷ್ಟು ಜನ ಇದ್ದಾರೆ ಎನ್ನುವ ಉತ್ತರವನ್ನು ನನಗೆ ಕೊಡಬೇಕು.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ರಿಮ್ಯಾಂಡ್ ಹೋಮಿನಲ್ಲಿ ಎಷ್ಟು ಜನ ಇದ್ದಾರೆ ಎಂಬುದು ವಿವರ ನಮ್ಮ ಹತ್ತಿರ ಇಲ್ಲ. ಆದರೆ ಅಂಡರ್ ಟ್ರಯಲ್ ಪ್ರಿಸನರ್ಸ್ ಬಗ್ಗೆ ಈಗಾಗಲೇ ಲೋಕ ಅದಾಲತ್ ಮಾಡಿ ಅದನ್ನು ತೀರ್ಮಾನ ಮಾಡಿ ಅದನ್ನು ಡಿಸ್ಪೋಸ್ ಮಾಡುವ ಪ್ರಕ್ರಿಯೆಯನ್ನು ನಾವು ತೆಗೆದುಕೊಂಡಿದ್ದೇವೆ. ಅದರ ಮೂಲಕ ನಾನೂ ಕೂಡ ಒಮ್ಮೆ ಜೈಲಿಗೆ ಮುಖ್ಯಮಂತ್ರಿಯಾಗಿ ಭೇಟಿ ಕೊಟ್ಟಿದ್ದೆ. ಖೈದಿಯಾಗಿ ಅಲ್ಲ. ಭೇಟಿ ಕೊಟ್ಟಾಗ ನನಗೆ ದಾರುಣ ಪರಿಸ್ಥಿತಿ ಕಂಡು ಬಂದಿತು. ಸಣ್ಣ ಸಣ್ಣ ಮಕ್ಕಳು ಬಹಳ ವರ್ಷಗಳಿಂದ ಜೈಲಿನಲ್ಲಿದ್ದಾರೆ, ಆದುದರಿಂದ ಈ ಬಗ್ಗೆ ನಾವು ಪರಿಶೀಲನೆ ಮಾಡಿ ಒಂದು ಲೋಕ ಅದಾಲತ್ ಮಾಡಿ ಅಲ್ಲಿ ತೀರ್ಮಾನ ಮಾಡಬೇಕು ಎಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಆದುದರಿಂದ ಅಂಡರ್ ಟ್ರಯಲ್ ಪ್ರಿಸನರ್ಸ್ ಬಗ್ಗೆ ಮುಖ್ಯ ನ್ಯಾಯಾಧೀಶರ ಜೊತೆ ನಾನು ಮಾತನಾಡಿ ಅನೇಕ ಮರ್ಡರ್ ಕೇಸ್ಗಳನ್ನು ಮತ್ತು ಅನೇಕ ಕೇಸ್ಗಳನ್ನು ಅಂಡರ್ ಟ್ರಯಲ್ ಕೇಸ್ ಇದ್ದರೆ ಅದಕ್ಕೆ ಹೆಚ್ಚು ಆದ್ಯತೆ ಕೊಟ್ಟು, ಪ್ರಾಮುಖ್ಯತೆ ಕೊಟ್ಟು ಆದಷ್ಟು ಕಡಿಮೆ ಸಮಯದಲ್ಲಿ, ನಿಗದಿತ ಸಮಯವನ್ನು ಕೊಟ್ಟು ಅಂತಹ ಕೇಸ್ಗಳನ್ನು ಡಿಸ್ಪೋಸ್ ಮಾಡಬೇಕೆಂದು ನಾನು ವಿನಂತಿ ಕೂಡ ಮಾಡುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : 14 ವರ್ಷಗಳಿಂದ ಕೆಳಗೆ ಇರುವವರೆಲ್ಲ ಬಹಳ ಸಾಧಾರಣವಾದ ಕ್ಷಮಾಪಣೆಗೆ ಯೋಗ್ಯವಾದ ಖೈದಿಗಳೇ ಇದ್ದಾರೆ. ಅವರ ಇಡೀ ಜೀವನ ವಿಧಾನ ಆದಷ್ಟು ಹಾಳಾಗಿ ಹೋಗುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಅವರ ತಂದೆತಾಯಿಗಳು ಪದೇ ಪದೇ ಹೇಳುತ್ತಾರೆ ಅನಪರಾಧಿಗಳನ್ನು ಹಿಡಿದು ಒಳಗೆ ಹಾಕಿರುವುದರಿಂದ ಬಹಳ ಕಾಲ ಅವರು ಹೊರಗೆ ಬರುವ ಹಾಗಿಲ್ಲ, ಹಾಗೂ ಒಳಗಡೆ ಇರುವ ಹಾಗಿಲ್ಲ, ಅವರ ಒಂದು ಟ್ರಯಲ್ ಕೂಡ ಮುಕ್ತಾಯ ಆಗುವ ಹಾಗಿಲ್ಲ, ಅವರ ಭವಿಷ್ಯವೇ ನಿರ್ನಾಮ ಆಗುತ್ತಿದೆ ಎಂದು ಸಾಕಷ್ಟು ಆಕ್ಷೇಪಣೆಗಳು ಬರುತ್ತಿವೆ. ಈ ವಿಷಯದಲ್ಲಿ ತಾವು ಸ್ವಲ್ಪ ಗಮನ ಹರಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಎ.ಕೆ. ಅನಂತಕೃಷ್ಣರವರು ಹೇಳಿದಂತಹ ಒಂದು ಅಭಿಪ್ರಾಯಕೆ

ನನ್ನ ಸಹಮತವೂ ಇದೆ. ಅನೇಕ ಬಾರಿ ಬಾಲ ಹಸುಳೆಗಳನ್ನು ನಾವು ರಿಮ್ಯಾಂಡ್ ಹೋಮಿನಲ್ಲಿ ಹಾಕುವುದರಿಂದ ಅವರ ಮನಸ್ಸು ಬಹಳ ಕಠಿಣವಾಗುತ್ತದೆ. They can become hardcore criminals. I do understand, I am thinking of preparing a scheme by which we can think how best we can resolve this. ಈ ಸೆಂಟರ್ಗಳ ಬಗ್ಗೆ ಪ್ರತ್ಯೇಕವಾಗಿ ಕಾರ್ಯಕ್ರಮ ತೆಗೆದುಕೊಳ್ಳುವ ಉದ್ದೇಶ ಇದೆ. ನಾನು ಆದಷ್ಟು ಜಾಗ್ರತೆ ಈ ಬಗ್ಗೆ ಒಂದು ಪರಿಹಾರದ ಸೂತ್ರವನ್ನು ಕಂಡುಕೊಂಡು ಮುಖ್ಯವಾಗಿ 14 ವರ್ಷಗಳ ಕೆಳಗಿನವರು ಅವರ ಮೃದು ಮನಸ್ಸಿಗೆ ಆಘಾತ ಆಗದೆ ಇರುವ ರೀತಿಯಲ್ಲಿ ಅವರನ್ನು ಸರಿಯಾದ ದಾರಿಗೆ ತಂದು ಉತ್ತಮ ನಾಗರೀಕರಾಗಿ ಬೆಳೆಸಲಿಕ್ಕೆ ಯಾವ ರೀತಿಯಲ್ಲಿ ಸಾಧ್ಯ ಇದೆ. ಇದರ ಬಗ್ಗೆ ನಾನು ಸೆಪರೇಟ್ ಆಗಿ ಒಂದು ಯೋಜನೆಯನ್ನು ತರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅನೇಕ ಕಡೆ ತಾವು ಭರವಸೆ ಕೊಟ್ಟಿದ್ದೀರಿ, ಯಾರಿಗೆ ಒಳ್ಳೆಯ ನಡತೆ ಇದೆ ಅಂಥವರಿಗೆ ಆ ಶಿಕ್ಷೆಯ ಅವಧಿಯನ್ನು ಕಡಿಮೆ ಮಾಡಲಿಕ್ಕೆ ಏನಾದರೂ ಅನುಕೂಲ ಮಾಡಿ ಕೊಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಜೀವಾವಧಿ ಶಿಕ್ಷೆಯನ್ನು ಕಡಿಮೆ ಮಾಡುವ ವಿಚಾರದಲ್ಲಿ ನಾವು ಈಗಾಗಲೇ ಒಂದು ಮಸೂದೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಬಹುಶಃ ಅದು ಕೇಂದ್ರದವರು ಒಪ್ಪದೆ ಹಾಗೆ ಬಂದಿದೆ. ನಾವು ಪ್ರಯತ್ನಗಳನ್ನು ನಡೆಸಿದರೂ ಅದು ಹಿಂದೆ ಬಂದಿದೆ. ಇದು ರಾಷ್ಟ್ರಕ್ಕೆ ಸಂಬಂಧಪಟ್ಟ ವಿಚಾರ. ಆದುದರಿಂದ ನಾವೇ ಅದನ್ನು ಸ್ವಂತವಾಗಿ ಕಾನೂನು ಮಾಡುವುದಕ್ಕೆ ಆಗುವುದಿಲ್ಲ. ನಾವು ಶಿಫಾರಸ್ಸು ಮಾಡಬಹುದು ಅಷ್ಟೆ.

ಕೊಳಚೆ ನಿವಾಸಿಗಳಿಗೆ ನಿವೇಶನಗಳ ಹಂಚಿಕೆ ಕುರಿತು.

360 - ಶ್ರೀ ಮನೋಹರ್, ಹ. ತಹಶೀಲ್ದಾರ್. ಡಾ: ಬಿ.ಡಿ. ಗಂಗಪ್ಪ (ಹೊನ್ನಾಳಿ) ನಾರಾಯಣರಾವ್ ಮನಹಳ್ಳಿ (ಬಿದರ್), ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು), ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ), ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ವಿವಿಧ ಸ್ಥಳಗಳಿಂದ ಸುಮಾರು ವರ್ಷಗಳ ಹಿಂದೆಯೇ ಮನೆಗಳನ್ನು ಕಳೆದುಕೊಂಡು ಬೀದಿಪಾಲಾದ ಸುಮಾರು 10058 ಬಡ ಕೊಳಚೆ ನಿವಾಸಿಗಳಿಗೆ 20 x 30 ಅಳತೆಯ ನಿವೇಶನಗಳನ್ನು ವಿತರಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಏನು ಕ್ರಮ ಕೈಗೊಂಡಿದೆ;

ಆ) ನಿರ್ವಸಿತ ಕೊಳಚೆ ನಿವಾಸಿಗಳಿಗೆ ನಿವೇಶನಗಳನ್ನು ಮಂಜೂರು ಮಾಡಲು ಮುಂದಿನ ಕ್ರಮ ಜರುಗಿಸುವಂತೆ ಮುಖ್ಯಮಂತ್ರಿಗಳು ಈಗಾಗಲೇ 8 ಆದೇಶಗಳನ್ನು ಹೊರಡಿಸಿರುವುದು ನಿಜವಲ್ಲವೆ, ವಿವರಗಳನ್ನು ಆವರಣದಲ್ಲಿ ಒದಗಿಸಲಾಗಿದೆ.

1) ಸಿಎಂ. 141 ಎಂಐಎನ್ (2) ಸಿಎಂ 2139 ಎಂಐಎನ್ 93 (3) ಸಿಎಂ 2239 ಎಂಐಎನ್ 93 (4) ಸಿಎಂ 2453 ಎಂಐಎನ್ 93 (5) ಸಿಎಂ 2512 ಎಂಐಎನ್ (6) ಸಿಎಂ. ೨೫೩೪ ಎಐಎನ್ 93 (7) ಸಿಎಂ 2874 ಎಂಐಎನ್ 93 (8) ಸಿಎಂ 2916 ಎಂಐಎನ್ 93.

ಇ) ಈ ಕಡು ಬಡವರಿಗೆ ಪುನರ್ವಸತಿಯನ್ನು ಒದಗಿಸುವಂತೆ ರಾಜ್ಯ ಮುಖ್ಯ ಕಾರ್ಯದರ್ಶಿಯವರು ಅನೇಕ ಬಾರಿ ಅರೆ ಸರ್ಕಾರಿ ಪತ್ರಗಳನ್ನು

ಈ) ಬಿಡಿಎ ಯ ಉನ್ನತ ಅಧಿಕಾರಿಗಳವರ ಸಭೆಯಲ್ಲಿ ದಿನಾಂಕ 29.9.1993 ರಂದು ಈ ಬಡವರಿಗೆ ನಿವೇಶನಗಳನ್ನು ಹಂಚಲು ಸೂಕ್ತ ನಿರ್ಣಯಗಳನ್ನು ಅನುಕಂಪದಿಂದ ಅಂಗೀಕರಿಸಿರುವುದು ನಿಜವಲ್ಲವೇ?

ಉ) ನಿರ್ವಸಿತ ಅರ್ಹರ ಪಟ್ಟಿಯು ಬಿಡಿಎ ಗೆ ತಲುಪಿದೆಯೇ; ಬಾಕಿ ಇದ್ದಲ್ಲಿ ಉಳಿದ ಪಟ್ಟಿಯನ್ನು ಎಂದು ಪಡೆಯಲಾಗುವುದು;

ಊ) ಸಮಿತಿಯನ್ನು ಸಲ್ಲಿಸಿರುವ ಅನೇಕ ದಾಖಲಾತಿಗಳನ್ನು ತಾರೀಖು 26.10.93ರಂದೇ ಬಿಡಿಎ ಆಯುಕ್ತರಿಗೆ ಇವು ನೇರವಾಗಿ ಸೇರಿವೆಯೇ;

ಋ) ಈ ನಿರ್ವಸಿತರ ಪರವಾಗಿ ಕರ್ನಾಟಕ ದಲಿತ ಕ್ರಿಯಾ ಸಮಿತಿಯ ಕೇಂದ್ರ ಕಛೇರಿಯು ಸಂಚಾಲಕರು ಸಲ್ಲಿಸಿರುವ 10 ಬೇಡಿಕೆಗಳ ಅನೇಕ ಮನವಿಗಳು ಮತ್ತು ಮೇಲ್ಮನವಿಗಳು ಸಹ ಬಿ.ಡಿ.ಎ. ಗೆ ಬಂದಿವೆಯೇ?

ೠ) ಈ ನಿರ್ವಸಿತರಾದ ಪರಿಶಿಷ್ಟ ಜಾತಿ, ವರ್ಗ ಹಾಗೂ ಅಲ್ಪ ಸಂಖ್ಯಾತರು ಮತ್ತು ಕಡುಬಡವರಾದ ಇವರುಗಳಿಗೆ 20 x 30 ಅಳತೆಗಳ ನಿವೇಶನಗಳನ್ನು ಮಾನವೀಯ ದೃಷ್ಟಿಯಿಂದ ವಿತರಿಸಲು ಇನ್ನು ಎಷ್ಟು ಕಾಲಾವಧಿ ಬೇಕು;

ಎ) ಎಂದು ಪುನರ್ವಸತಿಯನ್ನು ಕಲ್ಪಿಸಲಾಗುವುದು.

ಏ) ಮುಖ್ಯಮಂತ್ರಿಗಳು ಈ ಬಗ್ಗೆ ಪುನಃ ಸ್ಪಷ್ಟವಾದ ಆದೇಶ ಹೊರಡಿಸಿ ಖಚಿತ ದಿನಾಂಕವನ್ನು ಕೊಡುವುದೇ;

ಐ) ಪುನರ್ವಸತಿ ಕಲ್ಪಿಸುವ ಬಗ್ಗೆ ದಿನಾಂಕ: 31.1.1994 ರಲ್ಲಿ ಬಿ.ಡಿ.ಎ. ಅಧಿಕಾರಿಗಳು ಮರು ಸಭೆ ಸೇರಿ ಸೂಕ್ತ ನಿರ್ಣಯಗಳನ್ನು ಕೈಗೊಂಡಿದ್ದಾರೆಯೇ; ಹಾಗಿಲ್ಲದಿದ್ದಲ್ಲಿ ನಿರ್ಣಯಗಳನ್ನು ಈ ಕುರಿತು ಎಂದು ಕೈಗೊಳ್ಳಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಒದಗಿಸಿರುವ ಮಾಹಿತಿಯ ಪ್ರಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ವತ್ತಿನಲ್ಲಿ ನಿರ್ಮಿಸಲ್ಪಟ್ಟ ಗುಡಿಸಲುಗಳನ್ನು ನೆಲಸಮ ಮಾಡಿದ್ದರಿಂದ ನಿರ್ವಸತಿದಾರರಾದ 5076 ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲಾಗಿದೆ. ಅಲ್ಲದೆ ಈವರೆಗೆ ಬಿ.ಡಿ.ಎ. ಸ್ವತ್ತಿನಲ್ಲಿ ಅಕ್ರಮವಾಗಿ ಕಟ್ಟಿಕೊಂಡಿರುವ 15,017 ಕುಟುಂಬಗಳಿಗೆ ಮನೆ ಗುಡಿಸಲುಗಳನ್ನು ಸಕ್ರಮಗೊಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕ್ರಮ ಕೈಗೊಂಡಿದೆ, ಹಾಗೂ ಫಲಾನುಭವಿಗಳಿಗೆ ನಿವೇಶನಗಳನ್ನು ಸ್ಥಿರೀಕರಿಸಿದೆ, ಈ ಪ್ರಕರಣದಲ್ಲಿ ವಿವಿಧ ಬಡಾವಣೆಗಳಲ್ಲಿ ಅಕ್ರಮವಾಗಿ ಮಾಡಿದ್ದರಿಂದ ನಿರ್ವಸತಿದಾರರ ಪೂರ್ಣ ಮಾಹಿತಿಯು ಪ್ರಶ್ನೆಯಲ್ಲಿ ತಿಳಿಸಿರುವಂತೆ ಕಂಡುಬರುವುದಿಲ್ಲ. ಆದ್ದರಿಂದ ಅರ್ಜಿದಾರರು ಕಂಡುಬರುವುದಿಲ್ಲ. ಆದ್ದರಿಂದ ಅರ್ಜಿದಾರರು ಪೂರ್ಣ ಮಾಹಿತಿಗಳನ್ನು ಒದಗಿಸಿಲ್ಲವಾದ್ದರಿಂದ ಸ್ಪಷ್ಟ ಉತ್ತರವನ್ನು ಒದಗಿಸಲಾಗುತ್ತಿಲ್ಲ.

ಆ) ನಿಯಮನುಸಾರ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆದೇಶಿಸುವ ೮ ಪತ್ರಗಳು ಪ್ರಾಧಿಕಾರಕ್ಕೆ ಬಂದಿವೆ.

ಇ) ಹೌದು, ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳುವಳಿಕೆಯುಳ್ಳ ಪತ್ರಗಳು ಪ್ರಾಧಿಕಾರಕ್ಕೆ ಬಂದಿವೆ.

ಈ) ದಿನಾಂಕ: 29.9.1993ರ ಅಧಿಕಾರಿಗಳ ಸಭೆಯಲ್ಲಿ ನೆಲಸಮ ಮಾಡಿದ ಬಗ್ಗೆ ಪೂರ್ಣ ದಾಖಲೆಗಳು ಹಾಗೂ ಸಾಕ್ಷಾಧಾರಗಳನ್ನು ಒದಗಿಸುವ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ನಿರ್ಣಯ ತೆಗೆದುಕೊಳ್ಳಲಾಗಿದೆ.

ಉ) ಈ ಬಗ್ಗೆ ನಿರ್ವಸಿತರ ಪಟ್ಟಿಯನ್ನು ಸಲ್ಲಿಸಿದ್ದರೂ ಗುಡಿಸಲು ನೆಲಸಮ ಮಾಡಿದ್ದರಿಂದ ನಿರ್ವಸಿತರಾದರೆಂದು ಹೇಳಲು ಪುರಾವೆ ದಾಖಲೆ ಹಾಗೂ

ಸಾಕ್ಷಾಧಾರಗಳನ್ನು ಹೊಂದಿರುವ ಅರ್ಹತಾ ಪಟ್ಟಿಯನ್ನು ಪ್ರಾಧಿಕಾರಕ್ಕೆ ಒದಗಿಸಿರುವುದಿಲ್ಲ. ಅದನ್ನು ಒದಗಿಸಿದ ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಊ) - ಹೌದು -

ಋ) - ಹೌದು -

ೠ) ಅನಧಿಕೃತವಾಗಿ ನೆಲೆಸಿದ್ದರೆನ್ನಲಾದ ಗುಡಿಸಲುಗಳನ್ನು ನೆಲಸಮ ಮಾಡಿದ್ದರ ಬಗ್ಗೆ ಪೂರ್ಣವಾದ ಪುರಾವೆ ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಒದಗಿಸಿಲ್ಲದಿರುವುದರಿಂದ ಈ ಬಗ್ಗೆ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಇಂತಿಷ್ಟೇ ಕಾಲಾವಧಿಯಲ್ಲಿ ವಿತರಿಸಲಾಗುವುದೆಂದು ಹೇಳಲು ಸಾಧ್ಯವಾಗುತ್ತಿಲ್ಲ.

ಎ) ಮತ್ತು ಏ) ಸಂಬಂಧಪಟ್ಟವರು, ಗುಡಿಸಲುಗಳನ್ನು ನೆಲಸಮ ಮಾಡಿರುವ ಬಗ್ಗೆ ಪುರಾವೆ, ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಒದಗಿಸಿದ ನಂತರ ಈ ಬಗ್ಗೆ ಜರೂರು ಕ್ರಮ ಕೈಗೊಳ್ಳಲಾಗುವುದು. ಆದರೆ ಇಂತಿಷ್ಟೇ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ಹೇಳಲು ಸಾಧ್ಯವಾಗುವುದಿಲ್ಲ.

ಐ) ಹೌದು, ಬಿ.ಡಿ.ಎ. ಅಧಿಕಾರಿಗಳು ದಿನಾಂಕ 31.1.94 ರಂದು ಮರುಸಭೆ ಸೇರಿ ದಿನಾಂಕ 29.9.93ರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಮರು ಪರಿಶೀಲಿಸಿದ್ದಾರೆ. ಮೇಲೆ ಹೇಳಿದ ವಿವರಗಳನ್ನು ಒದಗಿಸಿದ್ದಲ್ಲಿ ಈ ಬಗ್ಗೆ ಆದಷ್ಟು ಜಾಗ್ರತೆ ನಿರ್ಧಾರ ಕೈಗೊಳ್ಳಲಾಗುವುದು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಅಧ್ಯಕ್ಷರೇ ಬಿ.ಡಿ.ಎ. ಸುಮಾರು 10 ಸಾವಿರ ಮನೆಗಳು ಕೊಳಚೆ ಪ್ರದೇಶದಲ್ಲಿ ಬೀದಿ ಪಾಲಾಗಿವೆ. ಅನಂತರ ಮುಖ್ಯಮಂತ್ರಿಗಳು ಹಲವಾರು ಸಾರಿ ಬಿ.ಡಿ.ಎ. ನವರಿಗೆ ಆದೇಶ ಕೊಟ್ಟಿದ್ದಾರೆ. ಸ್ಪಷ್ಟ ನಿರ್ದೇಶನಗಳನ್ನು ಕೊಟ್ಟಿದ್ದಾರೆ. ಆದರೆ ಇವತ್ತಿನವರೆಗೆ ಬಿ.ಡಿ.ಎ. ನವರು ತಮ್ಮ ಕಾರ್ಯವನ್ನು ಸಂಪೂರ್ಣವಾಗಿ ಮಾಡಿಲ್ಲ ಎಂದು ಉತ್ತರದಿಂದ ತಿಳಿದು ಬಂದಿದೆ. ಯಾವಾಗ ಈ ಕೆಲಸ ಮಾಡುತ್ತೀರಿ ಎಷ್ಟು ಬೇಗ ಬಡಜನತೆಗೆ ಮನೆ ಸಿಗುತ್ತವೆ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಸಭಾಧ್ಯಕ್ಷರೆ, ಅನೇಕ ಸಾರಿ ಇದರ ಬಗ್ಗೆ ದೂರುಗಳನ್ನು ಸಂಬಂಧಪಟ್ಟವರು ಕೊಟ್ಟಿದ್ದಾರೆ. ನಮಗಿರತಕ್ಕ ಕಷ್ಟ ಎಂದರೆ, ಇದರಲ್ಲಿ ಯಾರ್ಯಾರು ನಿರ್ವಸಿತರಾಗಿದ್ದಾರೆ ಎಂಬ ಬಗ್ಗೆ ನಮ್ಮಲ್ಲಿ ಲೆಕ್ಕ ಇದೆ. ಎಲ್ಲೆಲ್ಲಿ ಯಾವ ಯಾವ ಪ್ರದೇಶಗಳಲ್ಲಿ ಎಷ್ಟೆಷ್ಟು ಜನ ಎಂಬ ಅಂಕಿಅಂಶ ಇದೆ. ಸುಮಾರು 21 ಸ್ಥಳಗಳಲ್ಲಿ ಪುನರ್ ವಸತಿಗಾಗಿ ಗುರ್ತಿಸಿರುವವರ ಸಂಖ್ಯೆ 5076. ಆದರೆ ಬಿ.ಡಿ.ಎ. ವತಿಯಿಂದ ಪುನರ್ ವಸತಿ ಕಲ್ಪಿಸಿರುವ ಕುಟುಂಬಗಳ ಸಂಖ್ಯೆ 5076. ಈ ನಮ್ಮ ಲೆಕ್ಕಾಚಾರ ಸರಿ. ಆದರೆ ಇನ್ನೂ ಅನೇಕ ಕುಟುಂಬಗಳಿಗೆ ಪುನರ್ವಸತಿ ಆಗಬೇಕೆಂದು ಬೇಡಿಕೆಗಳು ಬರುತ್ತಲೇ ಇವೆ. ಅನೇಕ ಸಂದರ್ಭಗಳಲ್ಲಿ ನನಗೆ ದೂರುಗಳನ್ನೂ ಕೊಟ್ಟಿದ್ದಾರೆ. ನಮ್ಮ ಕರ್ನಾಟಕ ದಲಿತ ಕ್ರಿಯಾ ಸಮಿತಿಯವರು ದೂರು ಕೊಟ್ಟಿದ್ದಾರೆ. ನಾನು ಅವರಿಂದ ವಿವರಗಳನ್ನು ಕೇಳಿದ್ದೇನೆ. ಏಕೆಂದರೆ ನಾವು ಗುರ್ತಿಸಿದ್ದು ಇಷ್ಟು; ಕೊಟ್ಟಿರತಕ್ಕದ್ದು ಇಷ್ಟು. ಆದರೆ ಇನ್ನುಳಿದ ಜನರು ಯಾರು? ಅವರು ಎಲ್ಲಿದ್ದಾರೆ? ಅವರ ಹೆಸರು, ಆಯಾಯ ಪ್ರದೇಶದ ಹೆಸರುಗಳನ್ನು ಕೊಟ್ಟರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ನಾನು ಎಷ್ಟು ಸಾರಿ ಕೇಳಿದರೂ ಅವರು ನನಗೆ ಈ ಮಾಹಿತಿಯನ್ನು ಕೊಡುತ್ತಲೇ ಇಲ್ಲ. ಮಾಹಿತಿ ಕೊಟ್ಟರೆ ಅವರನ್ನು ಗುರ್ತಿಸಿ ಪುನರ್ವಸತಿ ಕಲ್ಪಿಸಲು ಸಾಧ್ಯವಾಗುತ್ತದೆ.

ರಾಜ್ಯದಲ್ಲಿ ಪರಿಸರ ಮಾಲಿನ್ಯ ನಿರತ ಕೈಗಾರಿಕೆಗಳ ಸಂಖ್ಯೆ.

44 - ಶ್ರೀ ವಿಜಯಕುಮಾರಶೆಟ್ಟಿ (ಸುರತ್ಕಲ್) : ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ವಿಜ್ಞಾನ ಮತ್ತು ಯಂತ್ರಕಲೆ ಹಾಗೂ ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಪರಿಸರ ಮಾಲಿನ್ಯ ನಿರತ ಕೈಗಾರಿಕೆಗಳ ಸಂಖ್ಯೆ ಎಷ್ಟು (ಹೆಸರು ಮತ್ತು ವಿವರಗಳನ್ನು ನೀಡುವುದು)

ಆ) ಮೇಲ್ಕಂಡ ಪರಿಸರ ಮಾಲಿನ್ಯಗೊಳಿಸುತ್ತಿರುವ ಕೈಗಾರಿಕೆಗಳಿಗೆ ಮಾಲಿನ್ಯ ನಿಯಂತ್ರಣಾ ಕೈಗೊಳ್ಳಲು ಸರ್ಕಾರ ನೋಟೀಸ್ ನೀಡಿರುವುದೇ?

ಇ) ಪರಿಸರ ಮಾಲಿನ್ಯ ತಡೆಗಟ್ಟಲು ಬೇಕಾದ ತಾಂತ್ರಿಕ ಹಾಗೂ ಇತರ ಅಧಿಕಾರಿಗಳು ಸಾಕಷ್ಟು ಸಂಖ್ಯೆಯಲ್ಲಿರುವರೇ?

ಈ) ಮೇಲ್ಕಂಡ ಇಲಾಖೆಯನ್ನು ಹೆಚ್ಚು ಉಪಯುಕ್ತಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ಮತ್ತು. ಜೀವಿಶಾಸ್ತ್ರ ವಿಜ್ಞಾನ ಮತ್ತು ಯಂತ್ರಕಲೆ ಹಾಗೂ ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು.) :

ಅ) ಕೇಂದ್ರ ಸರ್ಕಾರವು 17 ವಿವಿಧ ಬಗೆಯ ಕೈಗಾರಿಕೆಗಳನ್ನು ಅತೀ ಮಾಲಿನ್ಯ ಉಂಟು ಮಾಡುವ ಕಾರ್ಖಾನೆಗಳೆಂದು ವರ್ಗೀಕರಿಸಿದೆ. ಕರ್ನಾಟಕ ರಾಜ್ಯದಲ್ಲಿ ಇಂತಹ 85 ಕಾರ್ಖಾನೆಗಳಿವೆ. (ವಿವರಗಳನ್ನು ಲಗತ್ತಿಸಲಾಗಿದೆ.)

ಆ) ಮೇಲಿನ 85 ಕಾರ್ಖಾನೆಗಳ ಪೈಕಿ 39 ಕಾರ್ಖಾನೆಗಳು ಮಾಲಿನ್ಯ ನಿಯಂತ್ರಣ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅಳವಡಿಸದೇ ಇರುವುದರಿಂದ ನೋಟೀಸ್ ನೀಡಲಾಗಿರುತ್ತದೆ.

ಇ) ಇಲ್ಲ,

ಈ) ಇಲಾಖೆಯು ಪರಿಸರ ಯೋಜನೆ ಮತ್ತು ಧ್ಯೇಯೊದ್ದೇಶಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, ಅದಕ್ಕೆ ಪೂರಕವಾಗಿ ಶಾಸನಬದ್ಧ ನಿಯಮಗಳ ಮೂಲಕ ಪರಿಸರ ಮಾಲಿನ್ಯವನ್ನು ನಿಯಂತ್ರಿಸಲಾಗುತ್ತಿದೆ. ಆದಾಗ್ಯೂ ಮಂಡಳಿ ತಾಂತ್ರಿಕ ಸಿಬ್ಬಂದಿ ವರ್ಗದ ಕೊರತೆ ಇದ್ದು ಖಾಲಿ ಹುದ್ದೆಗಳನ್ನು ಭರ್ತಿಮಾಡಲು ಪರಿಶೀಲಿಸಲಾಗುತ್ತಿದೆ. ಅಲ್ಲದೆ ಅರ್ಥಪೂರ್ಣವಾಗಿ ಯೋಜನೆಯನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಕೇಂದ್ರ ಹಾಗೂ ಅಂತರರಾಷ್ಟ್ರೀಯ ನೆರವನ್ನು ಪಡೆಯಲು ಕೂಡ ಪರಿಶೀಲಿಸಲಾಗುತ್ತಿದೆ.

ಕರ್ನಾಟಕ ರಾಜ್ಯದಲ್ಲಿ 17 ವಿವಿಧ ಅಡಿಯಲ್ಲಿ ಗುರುತಿಸಲಾಗಿರುವ ಕೈಗಾರಿಕೆಗಳ ಪಟ್ಟಿ

ಸಕ್ಕರೆ ಕಾರ್ಖಾನೆಗಳು

1. ಹೇಮಾವತಿ ಎಸ್,ಎಸ್.ಕೆ., ಶ್ರೀನಿವಾಸಪುರ,
   ಚೆನ್ನರಾಯಪಟ್ಟಣ ತಾಲ್ಲೂಕು,
   ಹಾಸನ ಜಿಲ್ಲೆ,
2. ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ್,
   ಆಲಂದ್, ಗುಲ್ಬರ್ಗಾ ಜಿಲ್ಲೆ,
3. ಹಾಲಸಿದ್ಧನಾಥ್ ಎಸ್,ಎಸ್.ಕೆ., ನಿಪ್ಪಾಣಿ
   ಬೆಳಗಾಂ ಜಿಲ್ಲೆ,

4. ಕರ್ನಾಟಕ ಎಸ್,ಎಸ್.ಕೆ., ಹಾವೇರಿ,
ಧಾರವಾಡ ಜಿಲ್ಲೆ.
5. ದಕ್ಷಿಣ ಕನ್ನಡ ಎಸ್,ಎಸ್.ಕೆ., ಬ್ರಹ್ಮಾವರ್,
ಸೌತ್ ಕೆನರಾ ಜಿಲ್ಲೆ.
6. ಶಿರುಗುಪ್ಪಾ ಶುಗರ್ಸ್ ಮತ್ತು ಕೆಮಿಕಲ್ಸ್ ಲಿ.,
ದೇಶನೂರ್, ಬೆಳ್ಳಾರಿ ಜಿಲ್ಲೆ.
7. ಚಾಮುಂಡೇಶ್ವರಿ ಶುಗರ್ಸ್, ಭಾರತಿನಗರ್, ಕೆ.ಎಂ. ದೊಡ್ಡಿ.
ಮಂಡ್ಯ ಜಿಲ್ಲೆ.
8. ದುದಗಂಗಾ ಕೃಷ್ಣ ಎಸ್,ಎಸ್.ಕೆ., ನಿಯಮಿತ್, ಚಿಕ್ಕೋಡಿ,
ಬೆಳಗಾಂ.
9. ಭದ್ರಾ ಎಸ್,ಎಸ್.ಕೆ., ನಿಯಮಿತ್,
ದೊಡ್ಡ ಬತ್ತಿ, ದಾವಣಗೆರೆ,
ಚಿತ್ರದುರ್ಗಾ ಜಿಲ್ಲೆ.
10. ಇಂಡೀಯಾ ಶುಗರ್ಸ್ ಮತ್ತು ರೀಫೈನರೀಸ್ ಲಿಮಿಟೆಡ್,
ಚಿಟ್ವಾಡ್ಗಿ, ಬೆಳ್ಳಾರಿ ಜಿಲ್ಲೆ.
11. ಉಗರ್ ಶುಗರ್ ವರ್ಕ್ಸ್, ಉಗಾರ್ ಕುರ್ದ್,
ಬೆಳಗಾಂ ಜಿಲ್ಲೆ.
12. ಘಟಪ್ರಭಾ ಎಸ್,ಎಸ್.ಕೆ., ನಿಯಮಿತ್,
ಗೋಕಾಕ್, ಬೆಳಗಾಂ ಜಿಲ್ಲೆ.
13. ಮೈಸೂರ್ ಶುಗರ್ ಕಂಪನಿ ಲಿಮಿಟೆಡ್,
ಮಂಡ್ಯ.
14. ಪಾಂಡವಪುರ ಎಸ್,ಎಸ್.ಕೆ., ಲಿಮಿಟೆಡ್,
ಪಾಂಡವಪುರ, ಮೈಸೂರು.
15. ತುಂಗಭದ್ರಾ ಶುಗರ್ ವರ್ಕ್ಸ್,
ಶಿವಮೊಗ್ಗ.
16. ದಾವಣಗೆರೆ ಶುಗರ್ ಕಂಪನಿ ಲಿಮಿಟೆಡ್,
ಕುಕ್ಕವಾಡ, ದಾವಣಗೆರೆ.
17. ಕಂಪ್ಲಿ ಕೋ-ಆಪರೇಟಿವ್ ಶುಗರ್ ಫ್ಯಾಕ್ಟರಿ ಲಿಮಿಟೆಡ್,
ಕಂಪ್ಲಿ, ಬೆಳ್ಳಾರಿ ಜಿಲ್ಲೆ.
18. ಶಿರುಗುಪ್ಪ ಶುಗರ್ ಅಂಡ್ ಕೆಮಿಕಲ್ಸ್,
ಗೌರಿಬಿದನೂರು,
ಕೋಲಾರ ಜಿಲ್ಲೆ.
19. ಬಿದರ್ ಎಸ್,ಎಸ್.ಕೆ., ಲಿಮಿಟೆಡ್,
ಹಲ್ಲಿ ಕೆಡೆ, ಬಿದರ್ ಜಿಲ್ಲೆ.

20. ಹಿರಣ್ಯಕೇಶಿ ಎಸ್.ಎಸ್.ಕೆ., ನಿಯಮಿತ,
ಸಂಕೇಶ್ವರ, ಬೆಳಗಾಂ ಜಿಲ್ಲೆ.
21. ಮಲಪ್ರಭಾ ಕೋ - ಆಪರೇಟಿವ್ ಶುಗರ್ ಫ್ಯಾಕ್ಟರಿ,
ಎಂ.ಕೆ. ಹುಬ್ಬಳ್ಳಿ, ಬೆಳಗಾಂ.
22. ಗಂಗಾವತಿ ಶುಗರ್ ಲಿಮಿಟೆಡ್,
ಪ್ರಗತಿನಗರ, ಗಂಗಾವತಿ,
ರಾಯಚೂರು ಜಿಲ್ಲೆ.
23. ಶ್ರೀರಾಮ ಎಸ್.ಎಸ್.ಕೆ.,
ಚುಂಪನಕಟ್ಟೆ,
ಕೆ.ಆರ್. ನಗರ ತಾಲ್ಲೂಕು,
ಮಂಡ್ಯ ಜಿಲ್ಲೆ.
24. ರಾಯಬಾಗ್ ಎಸ್.ಎಸ್.ಕೆ., ನಿಯಮಿತ,
ರಾಮಬಾಗ್, ಬೆಳಗಾಂ ಜಿಲ್ಲೆ.
25. ಗೋದಾವರಿ ಶುಗರ್ ಕಂಪನಿ ಲಿಮಿಟೆಡ್,
ಸಮೀರವಾಡಿ, ಮುದೋಳ್ ತಾಲ್ಲೂಕು,
ಬಿಜಾಪುರ.
26. ಮಹದೇಶ್ವರ ಷುಗರ್ ಮಿಲ್ಸ್,
ಕೊಳ್ಳೇಗಾಲ,
ಮೈಸೂರು ಜಿಲ್ಲೆ.
27. ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್ (ಶುಗರ್ ಮಿಲ್ಸ್),
ಭದ್ರಾವತಿ, ಶಿವಮೊಗ್ಗ ಜಿಲ್ಲೆ.

<u>ಡಿಸ್ಟಿಲರಿ</u>

1. ಮೆ: ಜೈಮಿನಿ ಡಿಸ್ಟಿಲರೀಸ್,
ಚಾಮರಾಜನಗರ ರೋಡ್,
ನಂಜನಗೂಡು, ಮೈಸೂರು ಜಿಲ್ಲೆ.
2. ಡಿಸ್ಟಿಲರೀಸ್, ಕಂಪನಿ (ಪ್ರೈ) ಲಿಮಿಟೆಡ್,
ಮಾಹೇನಹಳ್ಳಿ, ನಿಡಗಿ ಪೋಸ್ಟ್,
ಶಿವಮೊಗ್ಗ ಜಿಲ್ಲೆ.
3. ಸೋಮಯ ಆರ್ಗ್ಯಾನೋ ಕೆಮಿಕಲ್ಸ್ ಲಿಮಿಟೆಡ್,
ಸಮೀರ್ವಾದಿ, ಬಿಜಾಪುರ ಜಿಲ್ಲೆ.
4. ಕಾಪ್-ಕೆಮ್,
ಬೆಳಗೊಳ ಇಂಡಸ್ಟ್ರಿಯಲ್ ಏರಿಯಾ,
ಮೈಸೂರು.
5. ಪಂಪಸಾರ ಡಿಸ್ಟಿಲರೀಸ್, ಲಿಮಿಟೆಡ್
[illegible] ಬಳ್ಳಾರಿ ಜಿಲ್ಲೆ..

6. ವಾಣಿವಿಲಾಸ, ಕೋ-ಆಪರೇಟಿವ್ ಶುಗರ್ (ಡಿಸ್ಟಿಲರಿ)
ಹಿರಿಯೂರ್, ಚಿತ್ರದುರ್ಗ ಜಿಲ್ಲೆ.
7. ಇಂಡಿಯಾ ಬ್ರಿವರೀಸ್ ಮತ್ತು ಡಿಸ್ಟಿಲರೀಸ್ (ಪ್ರೈ.ಲಿ)
ಹಲ್ಲಿಕೇಡ್, ಬೀದರ್ ಜಿಲ್ಲೆ.
8. ಖೋಡೆ ಡಿಸ್ಟಿಲರೀಸ್ ಲಿಮಿಟೆಡ್
ಕನ್ನಾಯಕನ ಅಗ್ರಹಾರ, ಬೆಂಗಳೂರು.
9. ಮೈಸೂರು ಶುಗರ್ ಕಂಪನಿ ಲಿಮಿಟೆಡ್
ಮಂಡ್ಯ.
10. ಗೌರಿ ಇಂಡಸ್ಟ್ರೀಸ್ ಲಿಮಿಟೆಡ್,
ಗೌರಿಬಿದನೂರ್, ಕೋಲಾರ ಜಿಲ್ಲೆ.
11. ರವೀಂದ್ರ ಮತ್ತು ಕಂಪನಿ, ಮಲ್ಲಿಕ್ ಮಿರ್ಜಾಪುರ್
ಬೀದರ್ ಜಿಲ್ಲೆ.
12. ಹಿರಣ್ಯಕೇಶಿ ಎಸ್ಎಸ್ಕೆ. (ಡಿಸ್ಟಿಲರೀಸ್)
ಸಂಕೇಶ್ವರ್, ಬೆಳಗಾಂ ಜಿಲ್ಲೆ.
13. ಉಗಾರ್ ಶುಗರ್ ವರ್ಕ್ಸ್, (ಡಿಸ್ಟಿಲರಿ)
ಉಗಾರ ಕುರ್ದ್, ಬೆಳಗಾಂ ಜಿಲ್ಲೆ.

ಬೇಸಿಕ್ ಡ್ರಗ್ಸ್ ಮತ್ತು ಫಾರ್ಮಸ್ಯೂಟಿಕಲ್ಸ್

1. ಆಸ್ಟ್ರಾ ಐಡಿಎಲ್, ಬಳ್ಳಾರಿ ರಸ್ತೆ,
ಬೆಂಗಳೂರು,
2. ಆಜಿಪಿ ಕೆಮಿಕಲ್ಸ್, ಪ್ಲಾಟ್ ನಂ. 73,
ಕೊಲ್ಲಾರ್ ಕೈಗಾರಿಕಾ ಪ್ರದೇಶ.
ಬೀದರ್.
3. ಎಸ್ಕೆಫ್,
ಬೆಳಗೊಳ ಕೈಗಾರಿಕಾ ಪ್ರದೇಶ,
ಮೆಟಗಳ್ಳಿ, ಮೈಸೂರು.
4. ರೆಕ್ಕಿಟ್ ಮತ್ತು ಕ್ಯಾಲಮನ್ (ಪ್ರೈ) ಲಿಮಿಟೆಡ್,
ಮೆಟಗಳ್ಳಿ ಕೈಗಾರಿಕಾ ಪ್ರದೇಶ, ಮೈಸೂರು.
5. ಅಮ್ಯೂಲಾನ್ ಕೆಮಿಕಲ್ಸ್, ಹುಮ್ನಾಬಾದ್,
ಬೀದರ್ ಜಿಲ್ಲೆ.
6. ಶಿಲ್ಪ ಆಂಟಿಬಯೋಟಿಕ್ಸ್ (ಪ್ರೈ) ಲಿಮಿಟೆಡ್,
ರಾಯಚೂರು.
7. ಸಿಪ್ಲಾ (ಪ್ರೈ) ಲಿಮಿಟೆಡ್,
ಹಳೆ ಮದ್ರಾಸ್ ರಸ್ತೆ,
ಬೆಂಗಳೂರು.

8. ಎಸ್ಕೆಯೆಫ್,
ಹಳೆ ಮದ್ರಾಸ್ ರಸ್ತೆ,
ಬೆಂಗಳೂರು.
9. ಹಿಮಾಲಯ ಡ್ರಗ್ ಕಂಪನಿ (ಪ್ರೈ) ಲಿಮಿಟೆಡ್,
ನೆಲಮಂಗಲ; ತುಮಕೂರು ರಸ್ತೆ,
ಬೆಂಗಳೂರು ಜಿಲ್ಲೆ.
10. ಬಿ.ಎಲ್.ಕೆಮಿಕಲ್ಸ್,
ಹುಮ್ನಾವಾದ್, ಬೀದರ್.
11. ಫ್ಲೆಮಿಂಗ್ ಇಂಡಿಯಾ, ದಾಸರಹಳ್ಳಿ,
ಬೆಂಗಳೂರು.
12. ಸಿ.ವೆಲ್ ಡ್ರಗ್ಸ್,
ಪ್ಲಾಟ್ ನಂ-50 ಸಿ ಮತ್ತು 51 (ಎ)
ಕೆಲ್ಲೂರ್ ಕೈಗಾರಿಕಾ ಪ್ರದೇಶ, –
ಬೀದರ್.
13. ವಾಣಿ ಆರ್ಗ್ಯಾನಿಕ್ಸ್,
ಕೊಲ್ಲಾರ್ ಕೈಗಾರಿಕಾ ಪ್ರದೇಶ,
ಬೀದರ್.
14. ಶ್ರಿಶ್ಮ ಫೈನ್ ಕೆಮಿಕಲ್ಸ್ ಮತ್ತು ಫಾರ್ಮಸ್ಯೂಟಿಕಲ್ಸ್,
ದೊಡ್ಡ ಬಳ್ಳಾಪುರ,
ಬೆಂಗಳೂರು ಜಿಲ್ಲೆ.
15. ಶರವಾಣಿ ಫಾರಮಾಸ್ಯೂಟಿಕಲ್ಸ್ ಲಿಮಿಟೆಡ್,
ಶಿರಾಲಿ, ಎನ್.ಕೆ. ಜಿಲ್ಲೆ.
16. ಅಸೋಸಿಯೇಟೆಡ್ ಡ್ರಗ್ ಕಂಪನಿ,
ಕುಂಬ್ಳಗೋಡು, ಬೆಂಗಳೂರು.

ಸಿಮೆಂಟ್

1. ರಾಜಶ್ರೀ ಸಿಮೆಂಟ್ಸ್ ಲಿಮಿಟೆಡ್, ಮಲ್ಖೇಡ್,
ಗುಲ್ಬರ್ಗಾ ಜಿಲ್ಲೆ.
2. ವಾಸವದತ್ತಾ ಸಿಮೆಂಟ್ಸ್ ಲಿಮಿಟೆಡ್,
ಸೇಡಂ, ಗುಲ್ಬರ್ಗಾ ಜಿಲ್ಲೆ.
3. ಕರ್ನಾಟಕ ಮಿನರಲ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಲಿ.
ಮಾಥೋಡ್, ಹೊಸದುರ್ಗಾ ತಾಲ್ಲೂಕು;
ಚಿತ್ರದುರ್ಗಾ ಜಿಲ್ಲೆ.
4. ಸೌತ್ ಇಂಡಿಯಾ ಸಿಮೆಂಟ್ಸ್ ಲಿಮಿಟೆಡ್,
ಮಲ್ಖೇಡ್, ಗುಲ್ಬರ್ಗಾ ಜಿಲ್ಲೆ.

5. ಎ.ಸಿ.ಸಿ. ಲಿಮಿಟೆಡ್,
ವಾಡಿ, ಗುಲ್ಬರ್ಗಾ ಜಿಲ್ಲೆ.
6. ಸಿಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ,
ಕುರಕುಂಟ, ಗುಲಬರ್ಗಾ ಜಿಲ್ಲೆ.
7. ಮೈಸೂರು ಸಿಮೆಂಟ್ಸ್ ಲಿಮಿಟೆಡ್,
ಅಮ್ಮಸಂದ್ರ, ತುಮಕೂರು ಜಿಲ್ಲೆ.
8. ಕೊನಾರಿಯಾ ಇಂಡಸ್ಟ್ರೀಸ್,
ಬಾಗಲಕೋಟೆ ಸಿಮೆಂಟ್ ಡಿವಿಜನ್,
ಬಾಗಲಕೋಟೆ, ಬಿಜಾಪುರ ಜಿಲ್ಲೆ.
9. ಹೆಚ್‌ಎಂಪಿ ಸಿಮೆಂಟ್ ಲಿಮಿಟೆಡ್,
ಶಹಾಬಾದ್, ಗುಲ್ಬರ್ಗಾ ಜಿಲ್ಲೆ.

ಪಲ್ಪ್ ಮತ್ತು ಪೇಪರ್

1. ಗ್ರಾಸಿಮ್ ಇಂಡಸ್ಟ್ರೀಸ್ ಲಿಮಿಟೆಡ್
ಕುಮಾರಪಟ್ಟಣ, ಹರಿಹರದ ಹತ್ತಿರ,
ಧಾರವಾಡ ಜಿಲ್ಲೆ.
2. ಹರಿಹರ ಫಾಲಿಫೈಬರ್ಸ್, ಕುಮಾರಪಟ್ಟಣ,
ಹರಿಹರ ಹತ್ತಿರ, ಧಾರವಾಡ ಜಿಲ್ಲೆ.
3. ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್,
ಬೆಳಗೊಳ, ಮಂಡ್ಯ ಜಿಲ್ಲೆ.
4. ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್,
ದಾಂಡೇಲಿ, ಎನ್.ಕೆ. ಜಿಲ್ಲೆ.
5. ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್,
ಭದ್ರಾವತಿ, ಶಿವಮೊಗ್ಗ ಜಿಲ್ಲೆ.

ಡೈಸ್ ಮತ್ತು ಡೈಸ್ ಇಂಟರ್ಮಿಡಿಯೇಟ್ಸ್

1. ಸುರೇಶ್ ಡೈಸ್,
ಮೆಟಗಳ್ಳಿ ಕೈಗಾರಿಕಾ ಪ್ರದೇಶ,
ಮೈಸೂರು.
2. ಎಸ್.ಎಫ್.ಡೈಸ್ ಲಿಮಿಟೆಡ್,
ಹೊಸಕೋಟೆ. ಬೆಂಗಳೂರು ಜಿಲ್ಲೆ.
4. ಬ್ಯಾಕೊ ಫಾರ್ಮ (ಪ್ರೈ) ಲಿಮಿಟೆಡ್,
(ಡೈಸ್ ಮತ್ತು ಟೆಕ್ಸ್ಟೈಲ್ಸ್)
ಹೊಸಕೋಟೆ. ಬೆಂಗಳೂರು ಜಿಲ್ಲೆ.

4. ನಂದಿ ಡೈಸ್ ಮತ್ತು ಕೆಮಿಕಲ್ಸ್
ಹಳೆ ಮದ್ರಾಸ್ ರಸ್ತೆ,
ಬೆಂಗಳೂರು.
5. ಅಮ್ಮು ಡೈ ಕೆಮ್
ಬೆಳಗೊಳ ಕೈಗಾರಿಕಾ ಪ್ರದೇಶ,
ಮೈಸೂರು.

6. ಮೈಸೂರು ಪಿಗ್ಮೆಂಟ್ಸ್ ಮತ್ತು ಕೆಮಿಕಲ್ಸ್,
ನಂಜನಗೂಡು ಕೈಗಾರಿಕಾ ಪ್ರದೇಶ,
ನಂಜನಗೂಡು.

ಆಯೀಲ್ ರಿಫೈನರೀಸ್

ಇಲ್ಲಾ

ಥರ್ಮಲ್ ಪವರ್

1.
ರಾಯಚೂರು ಥರ್ಮಲ್ ಪವರ್ ಪ್ಲಾಂಟ್,
ರಾಯಚೂರು.

ಪೆಟ್ರೋಕೆಮಿಕಲ್ಸ್

1. ಮೈಸೂರು ಪೆಟ್ರೋಕೆಮಿಕಲ್ಸ್ ಲಿಮಿಟೆಡ್,
ರಾಯಚೂರು.

ಅಲ್ಯೂಮಿನಿಯಮ್

1. ಇಂಡಿಯನ್ ಅಲ್ಯೂಮಿನಿಯಮ್ ಲಿಮಿಟೆಡ್,
ಬೆಳಗಾಂ.

ಕಾಸ್ಟಿಕ್ ಸೋಡ,

1. ಬೆಲ್ಹಾರ್ಪುರ್ ಇಂಡಸ್ಟ್ರೀಸ್ ಲಿಮಿಟೆಡ್, ಬಿನಗಾ,
ಕಾರವಾರ್.

ಫರ್ಟಿಲೈಜರ್

1. ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಜರ್ಸ್
ಪನಂಬೂರ್, ಮಂಗಳೂರು.

ಪೆಸ್ಟಿಸೈಡ್ಸ್

1. ಮಾಸಕಾಟ್ ಆಗ್ರೊ ಕೆಮಿಕಲ್ಸ್ (ಪ್ರೈ) ಲಿಮಿಟೆಡ್,
2ನೇ ಹಂತ, ಪೀಣ್ಯ ಕೈಗಾರಿಕಾ ಪ್ರದೇಶ,
ಬೆಂಗಳೂರು.
2. ಕರ್ನಾಟಕ ಆಗ್ರೊ ಕೆಮಿಕಲ್ಸ್, ಹೊಸಕೋಟೆ,
ಬೆಂಗಳೂರು

3. ಬೆಂಗಳೂರು ಪೆಸ್ಟಿಸೈಡ್ಸ್ ಲಿಮಿಟೆಡ್,
ತುಮಕೂರು ರಸ್ತೆ, ಬೆಂಗಳೂರು.
4. ಕರ್ನಾಟಕ ಆಗ್ರೊ ಇಂಡಸ್ಟ್ರೀಸ್, ಕಾರ್ಪೊರೇಶನ್ ಲಿಮಿಟೆಡ್,
ಕೈಗಾರಿಕಾ ಪ್ರದೇಶ, ರಾಯಚೂರು.

ಶ್ರೀ ವಿಜಯಕುಮಾರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಪರಿಸರ ಮಾಲಿನ್ಯದ ಬಗ್ಗೆ ಕ್ರಮ ತೆಗೆದುಕೊಳ್ಳಲು ಜಿಲ್ಲಾ ಮಟ್ಟದಲ್ಲಿ ಇನ್ನೂ ಅನೇಕ ಅಧಿಕಾರಿಗಳನ್ನು ನೇಮಕಾತಿ ಮಾಡಿಲ್ಲ. ಇತ್ತೀಚೆಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಪರಿಸರ ಮಾಲಿನ್ಯವಾದ ಸಂದರ್ಭದಲ್ಲಿ ಸರಿಯಾದ ಕ್ರಮ ತೆಗೆದುಕೊಳ್ಳದೆ ಬಹಳಷ್ಟು ಅಲ್ಲೋಲಕಲ್ಲೋಲವಾಗಿ ಮೀನುಗಳೆಲ್ಲಾ ಸತ್ತಿವೆ. ಅದೇ ರೀತಿ ಗುಲ್ಬರ್ಗಾದಲ್ಲೂ ಸುಮಾರು 15 ಕ್ಕೂ ಮೇಲ್ಪಟ್ಟು ಸಿಮೆಂಟ್ ಫ್ಯಾಕ್ಟರಿಗಳಿದ್ದರೂ ಅಲ್ಲಿ ಕೂಡ ಸರಿಯಾದ ವ್ಯವಸ್ಥೆ ಆಗಿಲ್ಲ. ಅದೇ ರೀತಿ ಹರಿಹರ ಪಾಲಿಫೈಬರ್ಸ್‌ನಲ್ಲೂ ಕೂಡ ವ್ಯವಸ್ಥೆ ಸರಿಯಾಗಿ ಆಗಿಲ್ಲ. ಇಲಾಖೆಯವರೇನೋ ವ್ಯವಸ್ಥೆ ಮಾಡಿದ್ದೀರಿ. ಆದರೆ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಅವಶ್ಯಕತೆ ಇರುವಷ್ಟು ಅಧಿಕಾರಿಗಳನ್ನು ನೇಮಕಾತಿ ಮಾಡಿಲ್ಲ. ಕೆಲವು ಕಡೆ ಅಧಿಕಾರಿಗಳನ್ನು ನೇಮಿಸಿದ್ದರೂ ಅವರಿಗೆ ಕೊಡಬೇಕಾದ ಅಧಿಕಾರವನ್ನು ಕೊಟ್ಟಿಲ್ಲ. ಆದ್ದರಿಂದ ಇದರ ಬಗ್ಗೆ ತಾವು ಮುಂದೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎನ್.ಜಿ. ಹಾಲಪ್ಪ : ನಮ್ಮಲ್ಲಿ 356 ಅಧಿಕಾರಿಗಳ ಹುದ್ದೆಗಳಿವೆ. ಅದರಲ್ಲಿ 203 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿದ್ದೇವೆ. ಇನ್ನುಳಿದವನ್ನು ಭರ್ತಿ ಮಾಡಬೇಕಾಗಿದೆ. ಅವುಗಳನ್ನು ಆದಷ್ಟು ಬೇಗ ಭರ್ತಿ ಮಾಡಲು ಕ್ರಮ ತೆಗೆದುಕೊಂಡು ಜಿಲ್ಲಾಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಎಫಿಷಿಯಂಟ್ ಆಗಿ ಕೆಲಸ ನಿರ್ವಹಿಸಲು ವ್ಯವಸ್ಥೆ ಮಾಡುತ್ತೇವೆ.

ಶ್ರೀ ವಿಜಯಕುಮಾರ್ ಶೆಟ್ಟಿ : ನಮ್ಮ ಮಂಗಳೂರಿನ ಮಹಾ ನಗರಪಾಲಿಕೆಯೊಳಗೆ ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲ, ಸೊಳ್ಳೆಗಳ ಕಾಟ ಜಾಸ್ತಿಯಾಗಿದೆ. ಇದೇ ರೀತಿ ಕರ್ನಾಟಕ ಮಿಲ್ಕ್ ಫೆಡರೇಷನ್ನಿಂದ ಹಾಳಾದ ನೀರು ಹರಿದು ಹೋಗುತ್ತಿದೆ. ಇದರ ಬಗ್ಗೆ ನಾವು ಕಳೆದ 10 ವರ್ಷಗಳಿಂದ ಬರೆದರೂ ಏನೂ ಪ್ರಯೋಜನವಾಗಿಲ್ಲ. ಆದ್ದರಿಂದ ಅಲ್ಲಿ ಒಳಚರಂಡಿ ವ್ಯವಸ್ಥೆ ಆದಷ್ಟು ಬೇಗ ಆಗಬೇಕು, ಇದನ್ನು ಮಾಡಲು ನಮ್ಮ ಮಹಾ ನಗರಪಾಲಿಕೆಗೆ ಆಕ್ಟ್ರಾಯ್ ಗ್ರ್ಯಾಂಟ್ ಸರಿಯಾಗಿ ಬರುತ್ತಿಲ್ಲವೆಂದು ಅವರು ಹೇಳುತ್ತಿದ್ದಾರೆ. ಆದ್ದರಿಂದ ತಾವು ಈ ಆಕ್ಟ್ರಾಯ್ ಗ್ರ್ಯಾಂಟನ್ನು ಸರಿಯಾಗಿ ಕಳುಹಿಸಿಕೊಟ್ಟರೆ ಅಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಆದಷ್ಟು ಬೇಗ ಮುಗಿಸಬಹುದು. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎನ್.ಜಿ. ಹಾಲಪ್ಪ : ತಾವು ಹೇಳಿದ ಸಮಸ್ಯೆಗಳನ್ನು ಅತಿ ಜರೂರಾಗಿ ಪರಿಶೀಲಿಸಿ ಎಷ್ಟು ಜಾಗ್ರತೆ ಇದನ್ನು ಪರಿಹರಿಸಬಹುದೋ ಅಷ್ಟು ಬೇಗ ಪರಿಹರಿಸುತ್ತೇವೆ.

ಕನ್ನಡ ಚಲನ ಚಿತ್ರಗಳಿಗೆ ಆರ್ಥಿಕ ನೆರವು ನೀಡುವ ಬಗ್ಗೆ.

11 - ಶ್ರೀ ಎಸ್. ಚಿಕ್ಕಮಾದು, (ಹುಣಸೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಮ್ಮ ರಾಜ್ಯದಲ್ಲಿ ನಿರ್ಮಿಸುತ್ತಿರುವ ಕನ್ನಡ ಚಲನಚಿತ್ರಗಳಿಗೆ ಸರ್ಕಾರ ಪ್ರೋತ್ಸಾಹ ಧನ ಹಾಗೂ ತೆರಿಗೆ ರಿಯಾಯಿತಿ ಕೊಡುತ್ತಿರುವುದು ಸರಿಯಷ್ಟೆ.

ಆ) ಸರ್ಕಾರದ ಈ ನೀತಿಯಿಂದ ಕಳೆದ ಮೂರು ವರ್ಷಗಳಲ್ಲಿ ಸಂದಾಯವಾಗಿರುವ ಪ್ರೋತ್ಸಾಹಧನ ಹಾಗೂ ತೆರಿಗೆ ವಿನಾಯಿತಿ ಬಾಬ್ತು ಸರ್ಕಾರಕ್ಕೆ ತಗುಲಿರುವ ವೆಚ್ಚವೆಷ್ಟು?

ಇ) ಇತ್ತೀಚಿನ ಚಲನಚಿತ್ರಗಳು ಮನರಂಜನೆ ನೆಪದಿಂದ ಬಹುತೇಕ ಅಶ್ಲೀಲ, ಅನಾಚಾರ ಅತ್ಯಾಚಾರ ಪ್ರದರ್ಶನಗಳಿಗೆ ಹಣದಾಸೆಯಿಂದ ಹೆಚ್ಚು ಪ್ರಚಾರ ಕೊಡುತ್ತಿರುವುದರ ಫಲವಾಗಿ ಸಮಾಜದಲ್ಲಿನ ಬಹುತೇಕ ಘಟನೆಗಳಿಗೆ ಯುವಜನಾಂಗದ ಮನೋವಿಕಾರಗಳಿಗೆ ಕಾರಣವಾಗುತ್ತಿರುವುದರಿಂದ ಅಂತಹ ಚಲನಚಿತ್ರಗಳಿಗೆ ಸರ್ಕಾರದ ಧನಸಹಾಯ ಮತ್ತು ತೆರಿಗೆ ವಿನಾಯಿತಿ ಉಚಿತವೇ?

ಈ) ಕನ್ನಡ ಭಾಷೆಯ ಹೆಸರಿನಲ್ಲಿ ಇಂತಹ ಸಮಾಜಘಾತುಕ ಪ್ರದರ್ಶನಗಳ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲವೇ?

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಸೂಕ್ತ ರೀತಿಯ ಹಾಗೂ ಖಚಿತ ನೀತಿ ನಿಯಮಗಳೇನು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ಕಳೆದ ಮೂರು ವರ್ಷಗಳಲ್ಲಿ ಚಲನಚಿತ್ರಗಳಿಗೆ 432.22 ಲಕ್ಷ ರೂ. ಸಹಾಯಧನ ನೀಡಲಾಗಿದೆ. ಮನರಂಜನಾ ತೆರಿಗೆ ವಿನಾಯ್ತಿ ಪ್ರಕರಣಗಳ ಬಗ್ಗೆ ಸದ್ಯಕ್ಕೆ ಮಾಹಿತಿ ಲಭ್ಯವಿಲ್ಲ.

ಇ) ಕೇಂದ್ರ ಸೆನ್ಸಾರ್ ಮಂಡಳಿ ಅನುಮೋದಿಸಿರುವ ಚಲನಚಿತ್ರಗಳಿಗೆ ಮಾತ್ರ ಸಹಾಯ ಧನ ಇತ್ಯಾದಿ ಪ್ರೋತ್ಸಾಹ ನೀಡಲಾಗುತ್ತಿದೆ.

ಈ) ಅಶ್ಲೀಲ, ಅನಾಚಾರ, ಅತ್ಯಾಚಾರ ಇರುವ ದೃಶ್ಯ ಹಾಗೂ ಸಂಭಾಷಣೆಗಳನ್ನು ನಿಯಂತ್ರಿಸುವ ಅಧಿಕಾರ ಕೇಂದ್ರ ಸರ್ಕಾರದ ಸೆನ್ಸಾರ್ ಮಂಡಳಿಯ ಜವಾಬ್ದಾರಿಯಾಗಿರುವುದರಿಂದ ರಾಜ್ಯ ಸರ್ಕಾರಕ್ಕೆ ನೇರ ಅಧಿಕಾರವಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಎಸ್. ಚಿಕ್ಕಮಾದು : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ವ್ಯಾಪ್ತಿಯಲ್ಲಿ ತಯಾರಿಸತಕ್ಕ ಕನ್ನಡ ಚಿತ್ರಗಳಿಗೆ ಪ್ರೋತ್ಸಾಹಧನ ಮತ್ತು ತೆರಿಗೆ ವಿನಾಯಿತಿಯನ್ನು ಸರ್ಕಾರ ಕೊಡುತ್ತಿರುವುದು ನಿಜ ಎಂದು ಒಪ್ಪಿಕೊಂಡಿದ್ದೀರಿ;- ಮತ್ತು ಕಳೆದ 3 ವರ್ಷಗಳಲ್ಲಿ ಎಷ್ಟು ಕೊಡಲಾಗಿದೆ ಎಂಬ ಪ್ರಶ್ನೆಗೆ 432.2 ಲಕ್ಷ ರೂಪಾಯಿಗಳನ್ನು ಪ್ರೋತ್ಸಾಹ ಧನವಾಗಿ ಕೊಡುತ್ತಿದ್ದೇವೆ; ಹಾಗೂ ಮನರಂಜನಾ ತೆರಿಗೆ ವಿನಾಯಿತಿ ಪ್ರಕರಣಗಳ ಬಗ್ಗೆ ಸದ್ಯಕ್ಕೆ ಮಾಹಿತಿ ಲಭ್ಯವಿಲ್ಲವೆಂದು ಹೇಳಿದ್ದೀರಿ. ಈಗ ಸರ್ಕಾರ ಏನು ಪ್ರೋತ್ಸಾಹಧನವನ್ನು ಕೊಡುತ್ತಿದೆ ಮತ್ತು ಮನರಂಜನಾ ತೆರಿಗೆಯಲ್ಲಿ ಏನು ವಿನಾಯಿತಿ ಮಾಡುತ್ತಿದೆ ಇದನ್ನು ನಾನು ಕನ್ನಡಿಗನಾಗಿ ಸ್ವಾಗತಿಸುತ್ತೇನೆ, ಆದರೆ ತೆಗೆಯತಕ್ಕ ಚಿತ್ರಗಳಲ್ಲಿ ಬರತಕ್ಕ ದೃಶ್ಯಗಳು, ಅಶ್ಲೀಲ ಪದಗಳು, ಅತ್ಯಾಚಾರ, ಅನಾಚಾರ ದೃಶ್ಯಗಳನ್ನು ನೋಡಿದಂಥ ಪ್ರೇಕ್ಷಕರ ಭಾವನೆಗಳು ಅದರಲ್ಲೂ ವಿಶೇಷವಾಗಿ ಯುವಕರಲ್ಲಿ ಯಾವ ಭಾವನೆಗಳು ಮೂಡುತ್ತವೆ, ಆ ಯುವಕರ ಮನಸ್ಸಿನಲ್ಲಿ ಯಾವ ರೀತಿಯ ಪರಿವರ್ತನೆ ಆಗುತ್ತದೆ, ಇದರಿಂದಾಗಿ ಸಮಾಜದ ಮೇಲೆ ಎಷ್ಟರ ಮಟ್ಟಿಗೆ ದುಷ್ಪರಿಣಾಮ ಬೀರುತ್ತದೆ ಹಾಗೂ ಇದರಿಂದ ಸಮಾಜದ ಗತಿ ಏನಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಸರ್ಕಾರ ಕೊಡುತ್ತಿರುವ ಪ್ರೋತ್ಸಾಹಧನ ಮತ್ತು ಮನರಂಜನಾ ತೆರಿಗೆ ವಿನಾಯ್ತಿಯನ್ನು ನಾವು ಸ್ವಾಗತಿಸುತ್ತೇವೆ. ಆದರೆ ತಾವು ಕೊಟ್ಟಂಥ ಹಣದಲ್ಲಿ ಈ ರೀತಿಯ ಚಿತ್ರಗಳನ್ನು ಚಿತ್ರಿಸಿ ಪ್ರದರ್ಶಿಸಿದಾಗ ಯಾವ ಪರಿಸ್ಥಿತಿ ಸಮಾಜದ ಮೇಲಾಗುತ್ತದೆಂಬುದನ್ನು ಸರ್ಕಾರ ಗಮನಿಸಬೇಕು. ಆದರೆ ಇದು ನಮ್ಮ ವ್ಯಾಪ್ತಿಯಲ್ಲಿ ಇಲ್ಲ. ಕೇಂದ್ರ ಸರ್ಕಾರದ ಸೆನ್ಸಾರ್ ಮಂಡಳಿಯವರು ಯಾವ ಚಿತ್ರಕ್ಕೆ ಸಹಾಯಧನ

ಕೊಡಬೇಕೆಂದು ಶಿಫಾರಸ್ಸು ಮಾಡುತ್ತಾರೆ ಅಂಥದಕ್ಕೆ ಮಾತ್ರ ಕೊಡುತ್ತೇವೆಂದು ಹೇಳುತ್ತಾರೆ. ಆದ್ದರಿಂದ ಇಂಥ ಚಿತ್ರಗಳಿಗೆ ಪ್ರೋತ್ಸಾಹಧನ ಮತ್ತು ಮನರಂಜನಾ ತೆರಿಗೆ ವಿನಾಯಿತಿ ಮಾಡಿರುವುದು ಸರಿಯೇ ಎಂದು ತಮ್ಮ ಮೂಲಕ ಸರ್ಕಾರವನ್ನು ಪ್ರಶ್ನೆ ಮಾಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ಒಳ್ಳೆಯ ಗುಣಮಟ್ಟದ ಅಥವಾ ಯಾವ ಚಿತ್ರ ಪ್ರದರ್ಶನ ಮಾಡುವುದಕ್ಕೆ ಯೋಗ್ಯ ಇದೆಯೇ ಇಲ್ಲವೇ ಎಂಬುದನ್ನು ಕಾನೂನು ಪ್ರಕಾರ ನಿರ್ಣಯಿಸತಕ್ಕ ಅಧಿಕಾರ ಇರತಕ್ಕದ್ದು ಸೆನ್ಸಾರ್ ಮಂಡಳಿಗೆ. ಸೆನ್ಸಾರ್ ಮಂಡಲಿಯ ಪ್ರಮಾಣಪತ್ರ ಪಡೆದ ಕನ್ನಡ ಅಥವಾ ಪ್ರಾದೇಶಿಕ ಭಾಷಾ ಚಿತ್ರಗಳಿಗೆ ಸಹಾಯಧನ ಮತ್ತು ಮನರಂಜನಾ ತೆರಿಗೆ ಕೊಡಬೇಕೆಂದು ನಮ್ಮ ನಿಯಮಾವಳಿಗಳು ಇರತಕ್ಕದ್ದು. ಆದರೂ ಕೂಡ ತಾವು ಹೇಳಿದಂತಹ ವಿಚಾರಗಳಲ್ಲಿ ಒಳ್ಳೆಯ ಅರ್ಥ ಇದೆ. ಏಕೆಂದರೆ ಸಹಾಯಧನ ಮತ್ತು ಮನರಂಜನಾ ತೆರಿಗೆ ವಿನಾಯಿತಿ ಕೊಡತಕ್ಕ ಉದ್ದೇಶ ಏನೆಂದರೆ ಒಳ್ಳೆಯ ಗುಣಮಟ್ಟದ ಚಿತ್ರಗಳು ಇರಬೇಕು, ಮನರಂಜನೆಯೇ ಪ್ರಧಾನವಾಗಿರಬಾರದು, ಮನರಂಜನೆ ಅದರ ಭಾಗ ಇರಬಹುದು, ಆದರೆ ಅಶ್ಲೀಲ ಆಗಿರತಕ್ಕದ್ದು, ಅತ್ಯಾಚಾರ, ಅನಾಚಾರಗಳಿಗೆ ಹೆಚ್ಚು ಹೆಚ್ಚು ಗ್ಲೋರಿಫೈ ಮಾಡತಕ್ಕ ವೈಭವೀಕರಣ ಮಾಡತಕ್ಕ ಚಿತ್ರಗಳಿಗೆ ಈ ರಿಯಾಯತಿ ಕೊಡುವುದರಿಂದ ನಾವು ಸರ್ಕಾರದವರು ಇಂಥ ಚಿತ್ರಗಳನ್ನು ವೈಭವೀಕರಣ ಮಾಡಿದಂತಾಗುತ್ತದೆ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಇದು ಆಗಬಾರದು. ಅದಕ್ಕಾಗಿ ನಾವು ವಿ.ಎನ್. ಸುಬ್ಬರಾವ್ ಅವರ ಅಧ್ಯಕ್ಷತೆಯಲ್ಲಿ ಯಾವ ರೀತಿ ಚಲನಚಿತ್ರ ನೀತಿ ಇರಬೇಕೆಂದು ಒಂದು ಸಮಿತಿ ಮಾಡಿದ್ದೇವೆ. ಅವರು ಇದರ ಬಗ್ಗೆ ವರದಿ ಕೊಡಬಹುದು. ಒಂದು ವೇಳೆ ಅವರು ಕೊಡದಿದ್ದರೂ ಚಲನಚಿತ್ರ ನೀತಿಯನ್ನು ಹೊಸದಾಗಿ ಮಾಡುವಾಗ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುತ್ತೇವೆ. ಈಗ ನಾವು ಒಂದು ಅಂದಾಜು ಮಾಡಿದ್ದೇವೆ. ಪೊಲೀಸ್ ಅಧಿಕಾರಿಗಳನ್ನು ಮೊನ್ನೆ ಕರೆಸಿ ಅಶ್ಲೀಲ ಭಿತ್ತಿ ಚಿತ್ರಗಳನ್ನು ನೋಡಿದ ಮಕ್ಕಳ ಮೇಲೆ, ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರುತ್ತದೆಂದು ಸರ್ಕಾರವೇ ಇಂಥದ್ದೆಲ್ಲ ಆದಷ್ಟು ಕಡಿಮೆ ಮಾಡಲಿಕ್ಕೆ, ಕಿತ್ತು ತೆಗೆಯುವುದಕ್ಕೆ ಏತಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬಾರದೆಂದು ಈಗಾಗಲೇ ನಾನು ಕಾರ್ಪೊರೇಷನ್ ಕಮಿಷನರ್ ಮತ್ತು ನಮ್ಮ ಪೊಲೀಸ್ ಕಮಿಷನರನ್ನು ಕರೆಸಿ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಎಲ್ಲಾದರೂ ಇಂಥ ಅಶ್ಲೀಲ ಅನಾಚಾರ, ಅತ್ಯಾಚಾರಗಳನ್ನು ವೈಭವೀಕರಿಸತಕ್ಕ ಭಿತ್ತಿ ಚಿತ್ರಗಳು ಗೋಡೆಯಲ್ಲಿ ಕಾಣಬಾರದೆಂದು ಈ ಬಗ್ಗೆ ಸರ್ಕಾರದ ನಾಯಕತ್ವದಲ್ಲಿ ಏಕೆ ಚಳುವಳಿ ಮಾಡಬಾರದೆಂದು ಈಗಾಗಲೇ ಮಾತುಕತೆ ಮಾಡಿದ್ದೇವೆ. ಈಗಾಗಲೇ ಇದನ್ನು ಕೂಡ ನಾವು ವಿಚಾರ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ರಿಮೇಕ್ ಚಿತ್ರಗಳಿಗೆ ಯಾವುದೇ ರೀತಿಯ ಸಹಾಯ ಧನ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹಿಂದೆ ಈ ಸದನದಲ್ಲಿ ಹೇಳಿದ್ದೀರಿ. ಈಗ ನಿಮ್ಮ ಸರ್ಕಾರ ಏನಾದರೂ ಆ ನೀತಿಯನ್ನು ಬದಲಾವಣೆ ಮಾಡತಕ್ಕ ದಿಕ್ಕಿಗೆ ಹೋಗುತ್ತಿದೆಯೇ? ಏಕೆಂದರೆ ಪತ್ರಿಕೆಗಳಲ್ಲಿ ರಿಮೇಕ್ ಚಿತ್ರಗಳಿಗೆ ಸಹಾಯಧನ ಕೊಡುತ್ತೇವೆ, ಮನರಂಜನಾ ತೆರಿಗೆ ಮನ್ನಾ ಮಾಡುತ್ತೇವೆಂದು ಬಂದಿದೆ. ಅದರ ಬಗ್ಗೆ ತಾವು ಏನು ಕ್ರಮ ಕೈಗೊಳ್ಳುತ್ತೀರಿ? ಕನ್ನಡ ಸಂಸ್ಕೃತಿ, ಸಾಹಿತ್ಯ, ಕಲೆಯೇ ಇಲ್ಲದಿರುವ ಚಿತ್ರಗಳಿಗೆ ತಾವು ಏನು ಹೇಳಿದಿರಿ ಅದಕ್ಕೆ ನಾನು ಧ್ವನಿಗೂಡಿಸುತ್ತೇನೆ. ಅಂಥ ಚಿತ್ರಗಳು ಇವತ್ತು ನೂರಕ್ಕೆ ಎಂಭತ್ತು ಬರುತ್ತಿವೆ. ಅಂಥ ಎಲ್ಲ ಚಿತ್ರಗಳಿಗೆ ನೆರವು ನಿಲ್ಲಿಸುವುದಕ್ಕೆ ಸ್ಪಷ್ಟ ಆದೇಶ ಕೊಡುತ್ತೀರಾ? ಸೆನ್ಸಾರ್ ಮಂಡಲಿಯವರು ತೀರಾ ತಪ್ಪು ಮಾಡುತ್ತಿದ್ದಾರೆ. ನಾವು ಹೇಳಿದ್ದನ್ನು ಒಪ್ಪಬೇಕಾಗುತ್ತದೆ. ಅವರಿಗೆ ನೀವು ಎಚ್ಚರಿಕೆ ಕೊಡಬೇಕಾಗುತ್ತದೆ. ಅವರು ಸೆನ್ಸಾರ್ ಮಂಡಲಿ ಎಂದು ಇಟ್ಟುಕೊಂಡು

ಕೆಲಸಕ್ಕೆ ಬಾರದ ಚಿತ್ರಗಳಿಗೆ ಮುದ್ರೆ ಒತ್ತಿ ಕಳುಹಿಸುತ್ತಿದ್ದಾರೆ. ಇವತ್ತು ಭಯಾನಕ ಭಯಂಕರ ಚಿತ್ರಗಳು ಹೊರಗಡೆ ಬರುತ್ತಿವೆ. ಅದನ್ನು ತಡೆಯುವುದಕ್ಕೆ ಸೆನ್ಸಾರ್ ಮಂಡಲಿಗೆ ತಾವು ಎಚ್ಚರಿಕೆ ಕೊಡಬೇಕು. ಸಹಾಯಧನ ಪಡೆಯುವುದಕ್ಕಾಗಿ ಅರ್ಜಿ ಕೊಟ್ಟಿರತಕ್ಕ ಎಷ್ಟು ಚಿತ್ರಗಳು ತಮ್ಮ ಮುಂದಿವೆ?

ಶ್ರೀ ಎಸ್. ರಮೇಶ್ : ಯಾವ ನೀಲಿ ಚಿತ್ರಕ್ಕೂ ಕರ್ನಾಟಕ ಸರ್ಕಾರದಿಂದ ಸಹಾಯಧನ ಕೊಟ್ಟಿಲ್ಲ, ಕೊಡುತ್ತಿಲ್ಲ. ಒಂದೇ ಒಂದು ಕೊಟ್ಟಿದ್ದು ಎಂದರೆ 50 ಪರ್ಸೆಂಟ್ ಟ್ಯಾಕ್ಸ್ ಎಕ್ಸಮ್‌ಷನ್ ಕೊಟ್ಟಿದ್ದೀರಿ. ಅದನ್ನು ಈಗ ವಾಪಸ್ಸು ತೆಗೆದುಕೊಂಡಿದ್ದೀರಿ. ಅದನ್ನು ವಾಪಸ್ಸು ತೆಗೆದುಕೊಂಡಿರುವುದರಿಂದ ಕನ್ನಡ ಚಿತ್ರಗಳು ಬರುವುದು ಕಡಿಮೆಯಾಗಿವೆ. ಇವತ್ತಿನ ದಿವಸ ಕೆಲಸಗಾರರಿಗೆ ಕೆಲಸ ಇಲ್ಲ. ಯಾವ ಕಾಲದಲ್ಲೂ ರಿಮೇಕ್ ಚಿತ್ರಗಳಿಗೆ ಸರ್ಕಾರದವರು ಸಹಾಯಧನ ಕೊಟ್ಟಿಲ್ಲ ನಾಗರಾಜ್ ಅವರೆ, ನಾನೇ ಪ್ರೊಡ್ಯೂಸರ್.

ಶ್ರೀ ಜೆ.ಸಿ. ಮಧುಸ್ವಾಮಿ : ತಮಿಳು ಚಿತ್ರ ತೆಗೆಯುವುದಕ್ಕೆ ಹೋದಿರಿ, ಅದಕ್ಕೆ ಕೊಟ್ಟಿಲ್ಲ.

ಶ್ರೀ ಎಸ್. ರಮೇಶ್ : ಹೊಟ್ಟೆಪಾಡಿಗೆ ಎಲ್ಲಾ ಭಾಷೆಯಲ್ಲೂ ಚಿತ್ರ ತೆಗೆಯುತ್ತೇನೆ. ಬರೇ ತಮಿಳು ಮಾತ್ರವಲ್ಲ. ಕನ್ನಡದಲ್ಲೂ ತೆಗೆದಿದ್ದೇನೆ. ತೆಲುಗು, ಹಿಂದಿ ಹೀಗೆ ಎಲ್ಲ ಭಾಷೆಗಳಲ್ಲೂ ನಾನು ತೆಗೆಯುತ್ತೇನೆ.

ಶ್ರೀ ಎಸ್. ಚಿಕ್ಕಮಾದು : ಕೇಂದ್ರ ಸೆನ್ಸಾರ್ ಮಂಡಳಿಯವರ ಶಿಫಾರಸ್ಸಿನ ಆಧಾರದ ಮೇಲೆ ನಾವು ಪ್ರೋತ್ಸಾಹ ಧನ ಮತ್ತು ತೆರಿಗೆ ವಿನಾಯಿತಿ ಕೊಡುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿದರು. ಈ ಕೇಂದ್ರ ಸೆನ್ಸಾರ್ ಮಂಡಲಿಯಲ್ಲಿ ಕನ್ನಡ ಭಾಷೆ ಗೊತ್ತಿರತಕ್ಕವರು, ಕನ್ನಡ ವಿಚಾರ ತಿಳಿದುಕೊಂಡಿರತಕ್ಕವರು ಅಧ್ಯಾತ್ಮಿಕ ವಿಚಾರಗಳು ಗೊತ್ತಿರತಕ್ಕವರು ಇದ್ದಾರೆಯೇ ಎಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಪ್ರಶ್ನೆ ಮಾಡುತ್ತೇನೆ.

ಶ್ರೀ ಎಸ್. ರಮೇಶ್ : ಸೆನ್ಸಾರ್ ಮಂಡಳಿಯಲ್ಲಿ ಕನ್ನಡದವರೇ ಇದ್ದಾರೆ.

ಅಧ್ಯಕ್ಷರು : ಮುಖ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ ತಾವು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೆ ಸೆನ್ಸಾರ್ ಮಂಡಳಿ ನೇರವಾಗಿ ಕರ್ನಾಟಕದ ಕಕ್ಷೆಯಲ್ಲಿ ಬರುವುದಿಲ್ಲ, ತಾವು ಹೇಳುವುದನ್ನು ನಾನು ಕೂಡ ಒಪ್ಪುತ್ತೇನೆ. ಸೆನ್ಸಾರ್ ಮಂಡಳಿ ಬಹಳ ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಸೆನ್ಸಾರ್ ಮಂಡಳಿಯ ಮೇಲೆ ಇನ್ನೊಂದು ಸೆನ್ಸಾರ್ ಮಂಡಳಿ ಮಾಡಬೇಕಾಗುತ್ತದೆ. ಈಗ ಬರತಕ್ಕ ಅನೇಕ ಚಿತ್ರಗಳನ್ನು ಸಿನಿಮಾ ಮಂದಿರಗಳಿಗೆ ಹೋಗಿ ನಾನು ನೋಡಿಲ್ಲ. ಚಲನಚಿತ್ರ ನೋಡುವುದನ್ನು ಬಿಟ್ಟು ಬಿಟ್ಟಿದ್ದೇನೆ. ಏನಾದರೂ ಪುರುಸೊತ್ತು ಆದರೆ ಟಿವಿಯಲ್ಲಿ ಯಾವುದಾದರೂ ಚಿತ್ರ ಬಂದರೆ ನಾನು ನೋಡುತ್ತೇನೆ. ಅಧಿಕೃತವಾಗಿ ಈ ಬಗ್ಗೆ ಹೇಳಿಕೆಯನ್ನು ಕೊಡಲಿಕ್ಕೆ ಸ್ವಲ್ಪ ನಮಗೆ ಕಷ್ಟವಾಗುತ್ತದೆ. ಆದರೆ ನಾನು ಒಪ್ಪುತ್ತೇನೆ, ಸೆನ್ಸಾರ್ ಮಂಡಳಿಯಲ್ಲಿ ಅವರು ಸರಿಯಾದ ಗುಣ ಮಟ್ಟವನ್ನು ನೋಡಬೇಕಾಗುತ್ತದೆ. ನಮ್ಮ ಕನ್ನಡ ನಾಡಿನಲ್ಲಿ ನಮ್ಮ ಕನ್ನಡ ಸಾಹಿತ್ಯ ಸಂಸ್ಕೃತಿ ನಾಡ ನುಡಿಗೆ ವಿರುದ್ಧವಾಗಿ ಪ್ರಕ್ರಿಯೆಗಳನ್ನು ಮಾಡತಕ್ಕಂತಹ ಚಿತ್ರಗಳಿಗೆ ಅವರು ಮುಕ್ತ ಮಾರುಕಟ್ಟೆಗಳಲ್ಲಿ ಏನಾದರೂ ಮಾಡಲಿ, ಆದರೆ ನಾವು ಸಹಾಯಧನ ಕೊಡತಕ್ಕ ಮತ್ತು ಮನೋರಂಜನೆ ತೆರಿಗೆ ರಿಯಾಯಿತಿ ಕೊಡುವುದರಲ್ಲಿ ಅರ್ಥವಿಲ್ಲವೆನ್ನುವುದನ್ನು ನಾನು ಕೂಡ ಒಪ್ಪುತ್ತೇನೆ. ಅದಕ್ಕಾಗಿ ಹೊಸ ನೀತಿಯನ್ನು ಮಾಡಿದೇವೆ.

ಶ್ರೀ ವಾಟಾಳ್ ನಾಗರಾಜ್ : ಕೆಟ್ಟ ಸಂಸ್ಕೃತಿಯ ಚಿತ್ರಗಳು ಬರುತ್ತಿವೆ. ಮೊನ್ನೆ ಒಂದು ಚಿತ್ರ ಬಂತು. "ಬಾ ನಲ್ಲೆ ಮಧುಚಂದ್ರಕೆ" ಎಂದು ಏನು ಹೀಗೆಂದರೆ?

ಅಧ್ಯಕ್ಷರು : ತಾವು ಕುಳಿತುಕೊಳ್ಳಿ. ಪ್ರಶ್ನೆಯನ್ನು ಚಿಕ್ಕಮಾದುರವರು ಕೇಳಿದ್ದಾರೆ, ಅದಕ್ಕೆ ಉತ್ತರ ಹೇಳುತ್ತಾರೆ. ಈ ಪ್ರಶ್ನೆಯಲ್ಲಿ ತಮ್ಮದು ಬರುವುದಿಲ್ಲ. ಪ್ರಶ್ನೆಯನ್ನು ಮೂಲತಃ ಕೇಳಿದವರು ಅವರು. ತಾವು ಬೇರೆ ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಈ ಪ್ರಶ್ನೆ ಚಿಕ್ಕಮಾದು ಒಬ್ಬರಿಗೆ ಸೀಮಿತವಲ್ಲ, ಇದು ರಾಜ್ಯಕ್ಕೆ ಸಂಬಂಧಪಟ್ಟಿದ್ದು ಎಂದು ಅವರು ಒಪ್ಪಿಕೊಂಡಿದ್ದಾರೆ. ತಾವು ಬೇರೆ ಕೇಳಿ ಅಂದರೆ ಹೇಗೆ?

ಅಧ್ಯಕ್ಷರು : ತಾವು ಬೇರೆ ಪ್ರಶ್ನೆ ಕೇಳಿ. ಉಪಪ್ರಶ್ನೆ ಕೇಳುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಹಾಗೆ ಹೇಳಿದರೆ ಕಷ್ಟವಾಗುತ್ತದೆ. ತಾವು ಅವಕಾಶ ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ವಾಟಾಳ್ ನಾಗರಾಜ್ ರವರು ಇದೆಲ್ಲ ಹೇಳುತ್ತಾರೆ, ಬಾಲ್ಯಾವಸ್ಥೆ, ಗೃಹಸ್ಥವಸ್ಥೆ ವಾನಪ್ರಸ್ಥಾಶ್ರಮ ಎಂದು ಇದೆ. ನೀವು ವಾನಪ್ರಸ್ಥಾಶ್ರಮಕ್ಕೆ ಬಂದ ಹಾಗೆ ಕಾಣುತ್ತದೆ. ನೀವು ಮಾತನಾಡುವುದನ್ನು ನೋಡಿದರೆ ಹಾಗೆ ಅನಿಸುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಹಾಗೇನೂ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಹಾಗೆ ಕಾಣುತ್ತಿದೆ. ಆ ಚಿತ್ರದಲ್ಲಿ ಏನಿದೆ? (ಬಾ ನಲ್ಲೆ ಮಧುಚಂದ್ರಕ್ಕೆ)

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳಿದ್ದುದು ಚಿತ್ರಗಳ ಹೆಸರು ಇದೆಯಲ್ಲ ಅದಕ್ಕೆ. ಆ ಬಗ್ಗೆ ನಾವು ನೀವು ಗೌಪ್ಯವಾಗಿ ಮಾತನಾಡೋಣ.

ಬೆಳಗಾಂ ತಾಲ್ಲೋಕಿನ ಹುದಲಿ ಮತ್ತು ಬಾಗೇವಾಡಿ ಗ್ರಾಮಗಳಲ್ಲಿ ಬಸ್ ನಿಲ್ದಾಣಗಳ ನಿರ್ಮಾಣ

373 - ಶ್ರೀ ಕೆ. ಸಿ. ಮೊಡಗೇಕರ್ ದೇಸಾಯಿ (ಹಿರೇಬಾಗೇವಾಡಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ತಾಲ್ಲೂಕಿನ ಹುದಲಿ ಮತ್ತು ಬಾಗೇವಾಡಿ ಗ್ರಾಮಗಳಲ್ಲಿ ಬಸ್ ನಿಲ್ದಾಣದ ಅವಶ್ಯಕತೆ ಇರುವುದು ನಿಜವೇ?

ಆ) ಹಾಗಿದ್ದಲ್ಲಿ ಸದರಿ ಗ್ರಾಮಗಳಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲ

ಆ) ಹುದಲಿ ಗ್ರಾಮದಲ್ಲಿ ಬಸ್ ತಂಗುದಾಣದ ಅವಶ್ಯಕತೆ ಇದೆ. ನಿವೇಶನ ದೊರಕಿದ ಮೇಲೆ ತಂಗುದಾಣ ನಿರ್ಮಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಹಿರೇಬಾಗೇವಾಡಿಯಲ್ಲಿ ಈಗಾಗಲೇ ಎರಡು ತಂಗುದಾಣಗಳು ನಿರ್ಮಿಸಲ್ಪಟ್ಟಿವೆ .

SRI K.C. MODGEKAR DESAI : Sir, the reply s given by the Hon. Minister for Transport is surprising and incorrect. The Hon. Minister has ignored the Resolution passed by the Taluka Panchayat and Zilla Panchayat

to this effect and they have sent the Resolution to the Government 4 years back. The demand of the people is for the Bus stand and not for the Bus-shelter. Both these villages have got more than 15,000 population each and they have been now included as Town panchayat Municipality.Considerings all these facts, will the Hon. Minister for Transport take up the work, get the plan and estimates sanstioned and sanction the Bus-stand by making a budgetory provision in the ensuing Budget Session?

ಶ್ರೀ ಭೀಮಣ್ಣಖಂಡ್ರೆ : ಮಾನ್ಯ ಅಧ್ಯಕ್ಷರೆ, ಬೆಳಗಾಂ ತಾಲ್ಲೂಕಿನ ಹುದಲಿಗ್ರಾಮದಲ್ಲಿ ಇರುವ ಜನಸಂಖ್ಯೆ 6 ಸಾವಿರ. ಅಲ್ಲಿ ಓಡಾಡುವ ಬಸ್ಸುಗಳು 30. ಆದಕ್ಕಾಗಿ ಬಸಸ್ಟ್ಯಾಂಡಿನ ಅವಶ್ಯಕತೆ ಇಲ್ಲ. ಬಸಸ್ಟ್ಯಾಂಡ್ ಕಟ್ಟುವುದಕ್ಕೆ ಆಗುವುದಿಲ್ಲ. ಬಸ್ ಶೆಲ್ಟರ್ ಬೇಕಾದರೆ ನಾವು ಕೊಡುವುದಕ್ಕೆ ತಯಾರಿದ್ದೇವೆ. ದಯಮಾಡಿ ಮಾನ್ಯ ಸದಸ್ಯರು ಲೋಕಲ್ ಬಾಡಿಯಿಂದ ಲ್ಯಾಂಡ್ ಕೊಡಿಸಿ, ಕೊಟ್ಟರೆ ನಾವು ಬಸ್ ಶೆಲ್ಟರ್ ಕಟ್ಟಿ ಕೊಡುತ್ತೇವೆ.

Sri. K.C. Modgekar Desai : Sir, the population of Hudli and Bagewadi is more than 15000 each. You very well know Sir that this Hudli village is connected with number of other surrounding villages and weekly bazaar is conducted theree. The demand of the villagers is to construct the Bus-stand and not the Bus shelter. Hudli is located on Belgaum-Gokak main. Sir, you also come from the same area. Will you advise the Minister to take up the said work as desired by the villagers?

ಶ್ರೀ ಭೀಮಣ್ಣಖಂಡ್ರೆ : ಮಾನ್ಯ ಅಧ್ಯಕ್ಷರೆ, ನನ್ನ ರಿಕಾರ್ಡ್ ಪ್ರಕಾರ ಜನಸಂಖ್ಯೆ 6 ಸಾವಿರ ಎಂದು ಇದೆ. ಮಾನ್ಯ ಸದಸ್ಯರು 15 ಸಾವಿರ ಎಂದು ಹೇಳುತ್ತಿದ್ದಾರೆ ಅದು ನನಗೆ ಗೊತ್ತಿಲ್ಲ. ಒಂದು ಸಲಹೆ ಏನೆಂದರೆ, ಜನರು ಸ್ವಲ್ಪ ಬಸ್ಸುಗಳಲ್ಲಿ ಓಡಾಡುವುದನ್ನು ಕಂಟ್ರೋಲ್ ಮಾಡಿ ನಡೆಯುವುದು ಒಳ್ಳೆಯದು. ಬಸ್ಶೆಲ್ಟರ್ ಕೊಡಬಹುದು, ಬಸಸ್ಟ್ಯಾಂಡ್ ಕಟ್ಟುವುದಕ್ಕೆ ಸಾಧ್ಯವಿಲ್ಲ. ಬಾಗೇವಾಡಿಯಲ್ಲಿ 25 ಸಾವಿರ ಜನಸಂಖ್ಯೆ ಇದೆ. ಅಲ್ಲಿಗೆ 90 ಬಸ್ಸುಗಳು ಹೋಗುತ್ತಿವೆ. ಎರಡು ಬಸ್ಶೆಲ್ಟರ್ಗಳು ಈಗ ಅಲ್ಲಿವೆ.

Sri. K.C. Modgekar Desai : The Deputy Commissioner has made the survey. You are ignoring all the facts.

ಶ್ರೀ ಭೀಮಣ್ಣ ಖಂಡ್ರೆ : ಸರ್ವೆ ರಿಪೋರ್ಟ್ ಪ್ರಕಾರ ಎರಡು ಬಸ್ ಶೆಲ್ಟರ್ಗಳಿವೆ. ಬೆಂಗಳೂರು-ಸಂಕೇಶ್ವರ, ಸಂಕೇಶ್ವರ್-ಬೆಳಗಾಂ- ಒಂದೇ ಸ್ಥಳದಲ್ಲಿ ಎರಡು ಇವೆ. ಮತ್ತೆ ಅವಶ್ಯಕತೆ ಅಲ್ಲಿ ಇಲ್ಲ. ಅವಶ್ಯಕತೆ ಇದೆಯೆಂದು ಹೇಳಿದರೆ ತಾವು ಲ್ಯಾಂಡ್ ಪ್ರೊವೈಡ್ ಮಾಡಿದರೆ ನಾವು ಮತ್ತೊಂದು ಬಸ್ಶೆಲ್ಟರ್ ಕೊಡಬಹುದು. ಆ ದೃಷ್ಟಿಯಿಂದ ನಾವು ಆಶ್ವಾಸನೆಯನ್ನು ಕೊಡಬಹುದು.

Sri. K.C. Modgekar Desai : Sir, even the land acquisition process is going on. You have ignored all these things. The Hon. Minister can ask the Deputy Commissioner again.

Sri. Bheemanna Khandre : We will get it examined.

Mr.Speaker : The Minister has assured that he would examine this again.

ಬೆಂಗಳೂರು ನಗರದ ನಂದಿನಿ ಬಡಾವಣೆಯಲ್ಲಿನ ಬಸ್‌ನಿಲ್ದಾಣ ಕುರಿತು.

361 - ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ನಂದಿನಿ ಬಡವಾಣೆಯಲ್ಲಿ ಇತ್ತೀಚೆಗೆ ಸಿಟಿ ಬಸ್ ನಿಲ್ದಾಣ ಮಾಡಲು ಜಾಗವನ್ನು ಸಮ ಮಟ್ಟ ಮಾಡಲಾಗಿದ್ದು ಆ ಜಾಗದಲ್ಲಿ ಬಸ್ ನಿಲ್ಲಲು ಟಾರನ್ನು ಯಾವಾಗ ಹಾಕಲಾಗುವುದು?

ಆ) ಸದರಿ ಬಸ್ ನಿಲ್ದಾಣದಲ್ಲಿ ಜನರು ನಿಂತುಕೊಳ್ಳಲು ಬೇಕಾಗುವಂತಹ ಶಾಶ್ವತವಾದ ಶೆಡ್ಡನ್ನು ಶೆಲ್ಟರನ್ನು ಇನ್ನೆಷ್ಟು ದಿನಗಳಲ್ಲಿ ಕಟ್ಟಿಸಿ ಕೊಡಲಾಗುವುದು ಮತ್ತು ಹೊಸ ಬಸ್ನಿಲ್ದಾಣದಿಂದ ಸಿಟಿ ಬಸ್ ಸಂಚಾರ ಎಂದಿನಿಂದ ಪ್ರಾರಂಭವಾಗುವುದು.

ಇ) ಕಛೇರಿ ವೇಳೆಯಲ್ಲಿ ನೌಕರರಿಗೆ ಕಛೇರಿಗೆ ಹೋಗಿ ಬರಲು ಅನುಕೂಲವಾಗುವಂತೆ ಹೆಚ್ಚು. ಪಿ.ಹೆಚ್.ಎಸ್. ಬಸ್ಸುಗಳನ್ನು ಓಡಿಸಲು ಸರ್ಕಾರ ವ್ಯವಸ್ಥೆ ಮಾಡುವುದೇ?

ಈ) ಅನುಕೂಲಗಳನ್ನು ನಂದಿಸಿ ಬಡಾವಣೆ: ಸುತ್ತ ಮುತ್ತಲಿನ ಪ್ರದೇಶಗಳ ಜನರಿಗೆ ಆದಷ್ಟು ಜಾಗ್ರತೆಯಾಗಿ ಸರ್ಕಾರ ಮಾಡಿಕೊಡುವುದೇ?

ಉ) ಹಾಗಿದ್ದಲ್ಲಿ ಇನ್ನೆಷ್ಟು ದಿನಗಳಲ್ಲಿ ಮಾಡಿ ಕೊಡಲಾಗುವುದು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಆವರಣವನ್ನು ಸಮ ಮಟ್ಟ ಮಾತ್ರ ಮಾಡಲಾಗಿದೆ. ಡಾಂಬರು ಹಾಕುವ ಮುನ್ನ ನೆಲವನ್ನು ಘಟ್ಟನೆ ಮಾಡಬೇಕಾಗುತ್ತದೆ. ಈ ಕೆಲಸ ತೆಗೆದುಕೊಂಡು ಘಟ್ಟನೆ ಜಾಗವನ್ನು ಒಂದು ವರ್ಷ ಉಪಯೋಗಿಸಿದ ನಂತರ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿರಿಸಿ ಟಾರು ಹಾಕಲು ಕ್ರಮ ತೆಗೆದುಕೊಳ್ಳಲಾಗುವುದು.

ಆ) 1994-95ನೇ ಸಾಲಿನಲ್ಲಿ

ಇ) ಪರಿಗಣಿಸಲಾಗುವುದು.

ಈ) ಅನುಕೂಲತೆಗಳನ್ನು ಮಾಡಿ ಕೊಡಲಾಗುವುದು.

ಉ) 19994-95ನೇ ಸಾಲಿನಲ್ಲಿ

ಶ್ರೀ ಎಂ. ಶ್ರೀನಿವಾಸಯ್ಯ : ಮಾನ್ಯ ಅಧ್ಯಕ್ಷರೆ, ನನ್ನ (ಅ) ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನಂದಿನಿ ಬಡಾವಣೆಯಲ್ಲಿ ನೆಲವನ್ನು ಸಮತಟ್ಟುಮಾಡಿ ಒಂದು ವರ್ಷ ಕಾಲ ಆದಮೇಲೆ ಅದರ ಮೇಲೆ ಬಸ್ಸುಗಳು ಓಡಾಡಿದ ಮೇಲೆ ನಾವು ಟಾರು ಹಾಕುತ್ತೇವೆಂದು ಹೇಳಿದ್ದಾರೆ. ಟಾರು ಹಾಕಬೇಕಾದರೆ ಒಂದು ವರ್ಷ ತೆಗೆದುಕೊಳ್ಳಲಿ. ಆದರೆ ಅವರೇನು ಹೇಳಿದ್ದಾರೆಂದರೆ, ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನಾವು ಟಾರು ಹಾಕುತ್ತೇವೆಂದು ಹೇಳಿದ್ದಾರೆ. ಅದನ್ನು ದಯವಿಟ್ಟು ಸಡಿಲಿಸಬೇಕು. ಆದಷ್ಟುಬೇಗ ಟಾರು ಹಾಕಿಸಿಕೊಡಬೇಕೆಂದು ತಮ್ಮಲ್ಲಿ ನಾನುಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಬಿಡಿಎಯಿಂದ ನಾವು 38 ಗುಂಟೆ ಭೂಮಿಯನ್ನು ತೆಗೆದುಕೊಂಡಿದ್ದೇವೆ. ನಾವು ಲೆವಲಿಂಗ್ ಮಾಡಿದ್ದೇವೆ. ಹಾಸ್ಫಾಲ್ಟಿಂಗ್ ಮಾಡಬೇಕಾದರೆ ಒಂದು ಸೀಸನ್ ಹೋಗಬೇಕಾಗುತ್ತದೆ. ಒಂದು ಮಳೆಗಾಲ ಹೋಗದೆ ನಾವು ಮಾಡುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಈ ಮಳೆಗಾಲದ ನಂತರ ನಾವು ತೆಗೆದುಕೊಳ್ಳುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಡುತ್ತಿದ್ದೇನೆ. ಮುಂದಿನ ವರ್ಷ 1994-95ರಲ್ಲಿ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಶ್ರೀನಿವಾಸಯ್ಯ : ಮಾನ್ಯ ಅಧ್ಯಕ್ಷರೆ, ಒಂದು ವರ್ಷ ಟೈಮ್ ತೆಗೆದುಕೊಳ್ಳಲಿ. ಆದರೆ ಆರ್ಥಿಕ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಆ ಆರ್ಥಿಕ ಪರಿಸ್ಥಿತಿಯನ್ನು ಸಡಿಲಗೊಳಿಸಿ ಆದಷ್ಟು ಬೇಗ ಟಾರ್ ಹಾಕಬೇಕೆಂದು ನಾನು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಭೀಮಣ್ಣಖಂಡ್ರೆ : ಬೇಗ ಮಾಡುತ್ತೇವೆ. ಮಾನ್ಯ ಸದಸ್ಯರು ಮತ್ತೊಂದು ಮಾತು ಹೇಳಿದ್ದಾರೆ. ಪಿಹೆಚ್ಎಸ್ ಬಸ್ಗಳನ್ನು ಓಡಿಸುವ ಅವಶ್ಯಕತೆ ಇಲ್ಲ, ಎಲ್ಲ ರೆಗ್ಯುಲರ್ ಬಸ್ಸುಗಳನ್ನು ಕಂಟಿನ್ಯೂ ಮಾಡುತ್ತಿದ್ದೇವೆ. ಶಿವಾಜಿನಗರ-ಬೆಂಗಳೂರು ಬಸಸ್ಟ್ಯಾಂಡ್, ಸಿಟಿಮಾರ್ಕೆಟ್ಗೆ ಬಸ್ಗಳು ಓಡಾಡುತ್ತಿವೆ. ಇವೆಲ್ಲ ಆರ್ಡಿನರಿ ಬಸ್ ಇದ್ದ ಕಾರಣ it is not necessary to introduce the PHS there at present.

ಪೋಲೀಸ್ ಇಲಾಖೆಯನ್ನು ನವೀಕರಣಗೊಳಿಸುವುದರ ಬಗ್ಗೆ

6 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಪೊಲೀಸ್ ಇಲಾಖೆಯನ್ನು ನವೀಕರಣಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಧರ್ಮವೀರ ಸಮಿತಿಯ ವರದಿಯನ್ನು ಜಾರಿಗೆ ತರಲು ಸರ್ಕಾರವು ಒಪ್ಪಿದೆಯೇ?

ಇ) ಪೊಲೀಸ್ ಇಲಾಖೆಯಲ್ಲಿ ದಕ್ಷತೆ ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) ನವೀಕರಣಗೊಳಿಸಲು ಈ ಕೆಳಗಿನ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ.

1) ಕಡಿಮೆ ಸಿಬ್ಬಂದಿ ಬಲವಿರುವ 260 ಪೊಲೀಸ್ ಠಾಣೆಗಳಿಗೆ 4,124 ಹುದ್ದೆಗಳನ್ನು ಈಗಾಗಲೇ ಹಂಚಲಾಗಿದೆ. ಉಳಿದ 302 ಪೊಲೀಸ್ ಠಾಣೆಗಳಿಗೆ ದಿನಾಂಕ : 1-4-1994 ರಿಂದ ಜಾರಿಗೆ ಬರುವಂತೆ 2,218 ಹುದ್ದೆಗಳನ್ನು ಸಹ ಹಂಚಲಾಗಿದೆ.

2) 1992-93ರಲ್ಲಿ ಹಾಗೂ 1993-94ರಲ್ಲಿ ಎರಡೆರಡರಂತೆ ಕೆ.ಎಸ್.ಆರ್.ಪಿ. ಬೆಟಾಲಿಯನ್ಗಳನ್ನು ಮಂಜೂರು ಮಾಡಿದ್ದುಅವುಗಳು ಮಂಗಳೂರು, ಶಿವಮೊಗ್ಗ, ಬೆಂಗಳೂರಿನ ಯಲಹಂಕ ಹಾಗೂ ಧಾರವಾಡ ಶಿಗ್ಗಾವಿಯಲ್ಲಿ ಸ್ಥಾಪಿಸಲಾಗುತ್ತದೆ.

3) 1992-93 ಮತ್ತು 1993-94ನೇ ಸಾಲಿನಲ್ಲಿ ಒಟ್ಟು 32 ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿದೆ. ಇದು ಇಲ್ಲದೆ ಬೆಂಗಳೂರು ನಗರ, ಮೈಸೂರು ನಗರ, ಹುಬ್ಬಳ್ಳಿ-ಧಾರವಾಡ ಮತ್ತು ಮಂಗಳೂರಿನಲ್ಲಿ ತಲಾ ಒಂದರಂತೆ ಮಹಿಳಾ ಪೊಲೀಸ್ ಠಾಣೆಗಳನ್ನು ಸಹ ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ.

4) ರಾಜ್ಯದಲ್ಲಿರುವ ಪೊಲೀಸ್ ಉಪವಿಭಾಗ ಮತ್ತು ಪೊಲೀಸ್ ವೃತ್ತಗಳನ್ನು ಪುನರ್ವಿಂಗಡಣೆ ಮಾಡಲಾಗಿದೆ. ಈ ವಿಂಗಡನೆಗಾಗಿ 51 ಡಿ.ಎಸ್.ಪಿ.ಗಳ ಹಾಗೂ 131 ಪೊಲೀಸ್ ಇನ್ಸ್ಪೆಕ್ಟರ್ ಹುದ್ದೆಗಳನ್ನು ಸಹ ಸೃಜಿಸಲಾಗಿದೆ.

5) ಅಪರಾಧಗಳನ್ನು ವೈಜ್ಞಾನಿಕ ವಿಧಾನದಲ್ಲಿ ಪತ್ತೆ ಹಚ್ಚಲು ಈಗಾಗಲೇ ಇರುವ ವಿಧಿವಿಜ್ಞಾನ ಪ್ರಯೋಗಶಾಲೆಗಳ ಜೊತೆಗೆ ಮಂಗಳೂರು ಹಾಗೂ ದಾವಣಗೆರೆಯಲ್ಲಿ ತಲಾ ಒಂದರಂತೆ ವಿಧಿ ವಿಜ್ಞಾನ ಪ್ರಯೋಗ ಶಾಲೆಗಳನ್ನು ಮಂಜೂರು ಮಾಡಲಾಗಿದೆ.

6)1991-92ನೇ ಸಾಲಿನಲ್ಲಿ ಪೊಲೀಸ್ ಇಲಾಖೆಯ ಆಧುನೀಕರಣ ಯೋಜನೆಯಡಿಯಲ್ಲಿ ಭಾರತ ಸರ್ಕಾರದಿಂದ 1,44,54,294 ರೂ.ಗಳನ್ನು ಸಹಾಯ ಧನ ರೂಪದಲ್ಲಿ (ಈ

ಕರ್ನಾಟಕ ರಾಜ್ಯ ಪತ್ರಾಗಾರ,
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು

ಹಣದಲ್ಲಿ 67,27,147 ರೂಪಾಯಿಗಳನ್ನು ಸಹಾಯ ಧನ ರೂಪದಲ್ಲೂ ಮತ್ತು 67,27,147 ರೂ.ಗಳನ್ನು ಸಾಲದ ರೂಪದಲ್ಲಿ ತೆಗೆದುಕೊಳ್ಳಲಾಗಿದೆ). ಇದು ಅಲ್ಲದೆ 92-93ನೇ ಸಾಲಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದಿಂದ 2,09,94,000 ರೂ.ಗಳನ್ನು ಸಹಾಯಧನವಾಗಿ ಪಡೆದು ನವೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಆ) ತತ್ವಶಃ ಒಪ್ಪಿದೆ.

ಇ) ಪೊಲೀಸ್ ಇಲಾಖೆಯ ಸಿಬ್ಬಂದಿಯ ದಕ್ಷತೆಯನ್ನು ಹೆಚ್ಚಿಸಲು ರೀ ಓರಿಯಂಟೇಷನ್ ಕೋರ್ಸ್‌ಗಳನ್ನು ನಡೆಸುತ್ತಿದ್ದು, ಜನವರಿ 1994ರವರೆಗೆ 1,809 ಪೊಲೀಸ್ ಸಿಬ್ಬಂದಿಗಳಿಗೆ ಈ ರೀತಿಯ ತರಬೇತಿಯನ್ನು ನೀಡಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಧರ್ಮವೀರ ಸಮಿತಿಯ ವರದಿಯಲ್ಲಿ ಪೊಲೀಸ್ನರ್ಜಯವರ ಅನುಕೂಲಕ್ಕೆ ಏನು ಸಲಹೆ ಮಾಡಿದ್ದಾರೆ. ಅದರ ಬಗ್ಗೆ ನೀವು ಕ್ರಮ ಕೈಗೊಂಡಿದ್ದೀರಾ? ಪೊಲೀಸ್ ಕಾನ್ಸೇಬಲ್ಲಗಳು 24 ಗಂಟೆ ದುಡಿಯುತ್ತಿದ್ದಾರೆ. ಪೇದೆಗಳು ಅಂದರೆ ಅದು ಸರಿಯಾಗುವುದಿಲ್ಲ. ಆ ಪದ ಹಿಡಿಸುತ್ತಿಲ್ಲ. ಸರಿಯಾದ ಪದ ಸಿಗುತ್ತಿಲ್ಲ. ಪೇದೆ ಎನ್ನುವ ಪದ ಕನ್ನಡ ಪದವೇ ಎನ್ನುವುದು ನನಗೆ ಸ್ವಲ್ಪ ಅನುಮಾನ ಬಂದಿದೆ ಪೇದೆ ಅಂದರೆ ಏನೋ ಒಂದು ತರಹ ಬೈದ ಹಾಗೆ, ಅದರ ಬಗ್ಗೆ ಜಿಜ್ಞಾಸೆಯಿದೆ. ಆದ್ದರಿಂದ ನಾನು ಹೇಳುತ್ತಿದ್ದೇನೆ. 24ಗಂಟೆಗಳ ಕೆಲಸ ಅವರಿಗೆ ಇದೆ. ಆ ಕೆಲಸದ ಅವಧಿಯನ್ನು ಕಡಿಮೆ ಮಾಡಿ ಆರುಗಂಟೆಗಳ ಕಾಲ ಕೆಲಸ ಮಾಡತಕ್ಕ ವ್ಯವಸ್ಥೆಯನ್ನು ಜಾರಿ ಮಾಡುವ ವಿಚಾರ ಸರ್ಕಾರದಲ್ಲಿ ಇದೆಯೇ? ಹಿಂದೆ ತಮಗೆ ನಾನು ಒಂದು ಸಲಹೆ ಮಾಡಿದ್ದೆ. ಈಗಿರತಕ್ಕ ಪೊಲೀಸ್ ಟೋಪಿಯನ್ನು ನೋಡಿದರೆ ಯಾರೂ ಕೂಡ ಹೆದರಿದ ಹಾಗೆ ಕಾಣುತ್ತಿಲ್ಲ. ಪೊಲೀಸ್ನವರು ಎನ್ನುವ ಹಾಗೆ ಕಾಣಿಸುವುದಿಲ್ಲ. ಅನೇಕ ಕೈಗಾರಿಕೆಗಳವರು ಬೇರೆ ಬೇರೆ ಸಂಸ್ಥೆಗಳವರು ಎಲ್ಲರೂ ಖಾಕಿ ಬಟ್ಟೆಯನ್ನು ಹಾಕಿಕೊಂಡು ನಿಂತಿರುತ್ತಾರೆ. ಆ ಬಟ್ಟೆಯನ್ನು ನೋಡಿದರೆ ಯಾರು ಪೊಲೀಸ್ನವರು ಯಾರು ಪೊಲೀಸ್ನವರು ಅಲ್ಲ ಎನ್ನತಕ್ಕ ಪ್ರಶ್ನೆಯಿದೆ. ಆದ್ದರಿಂದ ನೇರವಾಗಿ ಪೊಲೀಸ್ನವರು ಹಾಕತಕ್ಕ ಉಡುಪನ್ನು ಬೇರೆ ಯಾರೂ ಕೂಡ ಹಾಕಬಾರದು. ಅಪ್ಪೊಂದು ವ್ಯವಸ್ಥೆಯನ್ನು ತಾವು ಮಾಡುತ್ತೀರಾ? ಅವರು ಹಾಕತಕ್ಕ ಟೋಪಿಯನ್ನು ಬದಲಾವಣೆ ಮಾಡಿ ಹೊಸ ಹೊಸ ರೂಪ ಕೊಡತಕ್ಕ ಒಂದು ವ್ಯವಸ್ಥೆ ಸರ್ಕಾರಕ್ಕೆ ಇದೆಯೇ? ಆರಕ್ಷಕಠಾಣೆ, ಆರಕ್ಷಕ ನಿರೀಕ್ಷಕರು ಎಂದು ಏನೇನೋ ಹೇಳುತ್ತಿದ್ದಾರೆ. ಅದೊಂದು ದೊಡ್ಡ ಚಿಂತೆಯಾಗಿದೆ. ಪೊಲೀಸ್ ಎನ್ನತಕ್ಕ ಪದವನ್ನು ನಾವು ಕನ್ನಡ ಪದವೆಂದು ಬಳಕೆ ಮಾಡಿಕೊಂಡು ಅದನ್ನೇ ಜಾರಿಯಲ್ಲಿ ತರುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಮದನಗೋಪಾಲ ನಾಯಕ್ (ಮಾರುಕಟ್ಟೆ ರಾಜ್ಯಮಂತ್ರಿಗಳು) : ಪೇದೆ ಎನ್ನತಕ್ಕ ಪದ ಅಚ್ಚ ಕನ್ನಡ ಅಲ್ಲವೆ?

ಶ್ರೀ ವಾಟಾಳ್ ನಾಗರಾಜ್ : ಈಗ ಅಚ್ಚ ಕನ್ನಡದ ಬಗ್ಗೆ ಮಾತನಾಡುತ್ತಿಲ್ಲ. ಬಳಕೆ ಬಗ್ಗೆ ಮಾತನಾಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ಧರ್ಮವೀರರವರ ಒಂದು ಆಯೋಗ ಏನು ವರದಿ ಕೊಟ್ಟಿದೆ, ಅದರಂತೆ ಬಹುಶಃ ಕರ್ನಾಟಕ ರಾಜ್ಯದಲ್ಲಿ ಬದಲಾವಣೆ ಮಾಡಿ ಆಯಿತು. ಅವರು ಶಿಫಾರಸುಗಳನ್ನು ಅನುಷ್ಠಾನ ಮಾಡುವುದರಲ್ಲಿ ಮುಂದೆ ಇದ್ದೇವೆ. ಇನ್ನೊಂದು ಎರಡು ವರ್ಷಗಳಲ್ಲಿ ಧರ್ಮವೀರವರ ಆಯೋಗದ ಶಿಫಾರಸುಗಳನ್ನು ಅನುಷ್ಠಾನ ಮಾಡತಕ್ಕ ಒಂದು ಹೆಜ್ಜೆಯಲ್ಲಿ ನಾವು ಮುಂದಿದ್ದೇವೆ. ಅವರು ಪೊಲೀಸವರಿಗೆ ಏನೇನು ವಿಶೇಷವಾದ ಸವಲತ್ತುಗಳನ್ನು ಕೊಡಬೇಕೆಂದು ಹೇಳಿದ್ದಾರೆ

11.50 ಎ.ಎಂ

ಅದರ ಪೂರ್ತಿ ವಿವರವನ್ನು ರಾಜ್ಯಪಾಲರ ಭಾಷಣಕ್ಕೆ ನಾಳೆ ಉತ್ತರ ಕೊಡುವಾಗ ಕೊಡುತ್ತೇನೆ. ಆ ವಿವರಗಳು ಸದ್ಯ ನನ್ನ ಹತ್ತಿರ ಇಲ್ಲ; ಆಮೇಲೆ ತಾವು ಪೇದೆ ಎನ್ನುವ ಪದ ತೆಗೆದು, ಬೇರೆ ಹೆಸರು ಕೊಡಿ ಎಂದು ಹೇಳಿದಿರಿ. ಇದರ ಬಗ್ಗೆ ನಾವು, ನೀವು ಕುಳಿತುಕೊಂಡು ಆಲೋಚನೆ ಮಾಡಿ, ಒಂದು ಹೊಸ ಹೆಸರನ್ನು ಇಡೋಣ. ಆಮೇಲೆ, ಬೇರೆ ಕೆಲವು ಸೂಚನೆಗಳನ್ನೂ ತಾವು ಕೊಟ್ಟಿದ್ದೀರಿ. ತಾವು ಹೇಳಿದ್ದು ಸರಿ. ಏಕೆಂದರೆ ಪೊಲೀಸ್ ಸಮವಸ್ತ್ರದ ಆ ಕಲರ್ ಡ್ರೆಸ್ಸು ಮತ್ತೊಬ್ಬರು ಹಾಕುವುದಕ್ಕಾಗುವುದಿಲ್ಲ. ಬೇರೆ ಕೆಲವರು ಇಂತಹ ಬಣ್ಣದ ಬಟ್ಟೆ ಹಾಕಬಹುದು; ಇಂತಹ ಕಲರ್ ಡ್ರೆಸ್ಸು ಮಾಡಲೇಬಾರದು. ಆದರೆ, ಪೊಲೀಸ್ ಯೂನಿಫಾರಂ ಡ್ರೆಸ್ ತರಹ ಮಾಡಲಿಕ್ಕಾಗುವುದಿಲ್ಲ. ಇನ್ನು ಪೊಲೀಸ್ ಠಾಣೆಗಳಿಗೆ ಬಹಳ ಕ್ಲಿಷ್ಟಕರವಾದ ಹೆಸರುಗಳಿವೆ, ಇದರ ಬದಲು ಪೊಲೀಸ್ ಠಾಣೆ ಎಂದು ಹೇಳಿದರೆ ಸಾಕೆಂದು ಹೇಳಿದ್ದೀರಿ. ಈ ಸೂಚನೆ ಬಹಳ ಯೋಗ್ಯವಾದುದು.

ಶ್ರೀ ವಾಟಾಳ್ ನಾಗರಾಜ್ : ಚಳುವಳಿಗಳಲ್ಲಿ ಮತ್ತು ಬೇರೆ ಬೇರೆ ಸಂದರ್ಭಗಳಲ್ಲಿ ಪೊಲೀಸರು ಭಾಗವಹಿಸುತ್ತಾರಲ್ಲ, ಇಂತಹ ಸಂದರ್ಭಗಳಲ್ಲಿ ಏನು ದಿನಭತ್ಯೆ ಕೊಡುತ್ತಿದ್ದೀರಿ, ಅದನ್ನು ಏರಿಕೆ ಮಾಡತಕ್ಕದ್ದು ಒಳ್ಳೆಯದಲ್ಲವೇ. ಈಗ ಏರಿಕೆ ಮಾಡಿರುವುದು ಏನೂ ಜಾಸ್ತಿ ಇಲ್ಲ, ನೀವು ಎಷ್ಟು ಏರಿಕೆ ಮಾಡುತ್ತೀರಿ. ಇವತ್ತಿನ ಬೆಲೆ ಏರಿಕೆ ಮತ್ತು ಇವತ್ತಿನ ಪರಿಸ್ಥಿತಿಗನುಗುಣವಾಗಿ ದಿನಭತ್ಯೆಯನ್ನು ಏರಿಕೆ ಮಾಡಬೇಕೆಂಬುದು ಒಂದು. ಮತ್ತು ಧರ್ಮವೀರ ಸಮಿತಿಯ ಸಂಪೂರ್ಣ ವರದಿಯನ್ನು ತಾವು ಒಪ್ಪಿದರೆ, ಸರ್ಕಾರದ ಮೇಲೆ ಹಣಕಾಸಿನ ಒತ್ತಡ ಎಷ್ಟು ಬರುತ್ತದೆ ಎನ್ನತಕ್ಕಂತಾದ್ದು. ಈ ವಿಚಾರಗಳ ಬಗ್ಗೆ ತಾವು ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೇ, ದಿನಭತ್ಯೆಯನ್ನು ಇತ್ತೀಚೆಗಷ್ಟೇ ಏರಿಕೆ ಮಾಡಿದ್ದೇವೆ. ಬಹಳ ಗಂಟೆಗಳ ಹೊತ್ತು ಕಾಯುವುದು, ಕೆಲಸ ಮಾಡತಕ್ಕಂಥ ದಿನಭತ್ಯದ ಏರಿಕೆಯನ್ನು ಇತ್ತೀಚೆಗೆ ತಾನೆ ಮಾಡಿದ್ದೇವೆ. ಆ ವಿವರ ನನ್ನ ಹತ್ತಿರ ಇಲ್ಲ. ನಾಳೆ ಬೇಕಾದರೆ ಉತ್ತರ ಕೊಡುವಾಗ ಹೇಳುತ್ತೇನೆ. ಆಮೇಲೆ ಧರ್ಮವೀರ ಆಯೋಗದವರು ಕೊಟ್ಟಂಥ ವರದಿ, ತಾವು ಹೇಳಿದ ಪ್ರಕಾರ, ಇದರ ಅನುಷ್ಠಾನ ಇನ್ನೊಂದೆರಡು ವರ್ಷದಲ್ಲಿ ಪೂರ್ತಿಯಾಗುತ್ತದೆ. ಆದರೆ ಹಣಕಾಸಿನ ಸಂಪನ್ಮೂಲ ಎಷ್ಟು ಖರ್ಚುಮಾಡಬೇಕು, ಎಷ್ಟು ಮಾಡಿದ್ದೀರಿ ಎಂಬ ವಿವರ ಕೇಳಿದ್ದೀರಿ; ಈ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿ ಅಥವಾ ನಾಳೆ ಬೇಕಾದರೆ ಉತ್ತರ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇತ್ತೀಚೆಗೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಏನಾದರೂ ಖರೀದಿ ಮಾಡಿದ್ದೀರಾ?

ಶ್ರೀ ಹೆಚ್.ಎಂ. ರೇವಣ್ಣ : ಪೊಲೀಸ್ ನೇಮಕಾತಿ ಆಗತಕ್ಕ ಸಮಯದಲ್ಲಿ, ತಾವು ಕೊನೆಹಂತಕ್ಕೆ ಬಂದು, 33 ವರ್ಷದವರು ಆಯ್ಕೆಯಾಗುವುದನ್ನು ತಪ್ಪಿಸಿ, ಬರೀ 23 ವರ್ಷದವರನ್ನು ಆಯ್ಕೆಮಾಡಿಕೊಳ್ಳಬೇಕೆಂದು ಹೇಳಿರುವುದರಿಂದ, ಯುವಕರಿಗೆ ಬಹಳ ತೊಂದರೆಯಾಗಿದೆ. ಈ ರೀತಿ ವಯೋಮಿತಿಯನ್ನು ಇಳಿಸಿರುವುದರಿಂದ ಎಲ್ಲರಿಗೂ ತೊಂದರೆಯಾಗಿದೆ. ಇದರ ಬಗ್ಗೆ ಮಾನ್ಯಮುಖ್ಯಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಇಡೀ ದೇಶದಲ್ಲಿ ಸಿ.ಆರ್.ಎಫ್. ಸಿ.ಆರ್.ಪಿ.ಎಫ್. ಅಥವಾ ಕೇಂದ್ರದ ಮೀಸಲು ಪಡೆಗಳು ಎಲ್ಲಾ ರಾಜ್ಯಗಳ ಅಂದರೆ ತಮಿಳುನಾಡು, ಆಂಧ್ರಪ್ರದೇಶ ಹೀಗೆ ಎಲ್ಲಾ ರಾಜ್ಯಗಳಲ್ಲಿಯೂ ಕೂಡ ವಯೋಮಿತಿ 33 ವರ್ಷ ಇಲ್ಲವೇ ಇಇಲ್ಲ. ಆದರೆ, ನಮ್ಮ ರಾಜ್ಯದಲ್ಲಿ

ಮೊಮ್ಮಕ್ಕಳಾದರೂ ಕೂಡ ಪೊಲೀಸ್ ಕಾನ್ಸ್ಟೇಬಲ್ ಆಗಿ ಸೇರತಕ್ಕ ಅವಕಾಶ ಬಂದುಬಿಟ್ಟಿದೆ. ಇಂತಹ ಒಂದೆರಡು ಘಟನೆಗಳಾಗಿದೆ. ಇವರಿಗೆ ಕೊನೇ ಪಕ್ಷ ಮೊದಲು ತರಬೇತಿಯನ್ನಾದರೂ ಕೊಡಬೇಕು. ಆದರೆ, ವಯಸ್ಸು ಆದಕೂಡಲೇ ಅವರು ಸರಿಯಾಗಿ ತರಬೇತಿ ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ಮುಖ್ಯವಾಗಿ ಎಂಪ್ಲಾಯ್ಮೆಂಟ್ಗೆ ಬೇರೆ ಅವಕಾಶಗಳಿವೆ. ಇದರಲ್ಲಿಯೂ ಕೂಡ ಯುವಕರಿಗೆ ನೌಕರಿ ಸಿಗುತ್ತದೆ. ಬಹಳ ಸಣ್ಣ ವಯಸ್ಸಿನಲ್ಲಿ ಅವರಿಗೆ ನೌಕರಿ ಸಿಕ್ಕೇಸಿಗುತ್ತದೆ. ಬಾಕಿ ವಯಸ್ಸಾದವರಿಗೆ ಬೇರೆ ಅವಕಾಶಗಳಿವೆ. ಆದರೆ, ಆರ್ಮಿ, ಪೊಲೀಸ್ ಕಾನ್ಸ್ಟೇಬಲ್ ಇಂತಹ ಕಡೆಯಲ್ಲೆಲ್ಲಾ ನಾವು ಆ ಫೋರ್ಸನ್ನು ಬಲಯುತವಾಗಿ ಮತ್ತು ಸರಿಯಾಗಿ ಸಜ್ಜುಗೊಳಿಸಬೇಕಾದರೆ, ನಮ್ಮ ಅನುಭವದ ಪ್ರಕಾರ ಮತ್ತು ಈ ರಾಷ್ಟ್ರದ ಎಲ್ಲಾ ರಾಜ್ಯಗಳ ಹಾಗೂ ರಾಷ್ಟ್ರಮಟ್ಟದ ಅನುಭವದ ಪ್ರಕಾರ, ಕೂಡ ಸಣ್ಣ ವಯಸ್ಸಿನಲ್ಲಿ ಸೇರಿದರೇ ಯೋಗ್ಯವಾದ ಪೊಲೀಸ್ ಪಡೆಯನ್ನು ನಾವು ಸಿದ್ಧಗೊಳಿಸುವುದಕ್ಕೆ ಸಾಧ್ಯವಿದೆ ಎಂಬ ಒಟ್ಟು ಅಭಿಪ್ರಾಯದ ಮೇಲೆ ಈ ರೀತಿ ಮಾಡಿದ್ದೇವೆ.

ರಾಜ್ಯದಲ್ಲಿ ಮದ್ಯದ ಅಂಗಡಿಗಳನ್ನು ಸಂಜೆ 7-30ಕ್ಕೆ ಮುಚ್ಚುವ ಬಗ್ಗೆ

272 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮದ್ಯದಂಗಡಿಗಳನ್ನು ಮತ್ತು ಬಾರ್ಗಳನ್ನು ಸಂಜೆ 7.30 ಗಂಟೆಗೆ ಮುಚ್ಚುವ ಯೋಜನೆ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ, ಅದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಇ) ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಇರುವ ಮದ್ಯದಂಗಡಿಗಳ ಮತ್ತು ಬಾರ್ಗಳ ಪರವಾನಗಿಯನ್ನು ರದ್ದು ಮಾಡುವ ಮುಖ್ಯ ಮಂತ್ರಿಗಳ ಭರವಸೆಯನ್ನು ಕಾರ್ಯಗತ ಮಾಡಲಾಗಿದೆಯೇ?

ಈ) 21 ವರ್ಷದ ಯುವಕರು ಬಾರ್ ಮತ್ತು ಮದ್ಯದಂಗಡಿಗಳಿಗೆ ಪ್ರವೇಶ ಮಾಡುವುದನ್ನು ನಿಷೇಧಗೊಳಿಸುವ ಆಜ್ಞೆ ಜಾರಿಗೊಳಿಸಲಾಗಿದೆಯೇ?

ಉ) ಈ ಆಜ್ಞೆಯನ್ನು ಜಾರಿ ಮಾಡಿದ್ದರೆ ಎಷ್ಟು ಜನರ ಮೇಲೆ ಮೊಕದ್ದಮೆ ದಾಖಲು ಮಾಡಲಾಗಿದೆ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) :

ಅ) ಈ ಬಗೆಯ ಪ್ರಸ್ತಾವನೆಯು ಸರ್ಕಾರದ ಮುಂದೆ ಸದ್ಯಕ್ಕೆ ಇರುವುದಿಲ್ಲ.

ಆ) 'ಅ' ಗೆ ನೀಡಿದ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಇ) ಆಕ್ಷೇಪಣಾ ಸ್ಥಳಗಳಲ್ಲಿರುವ ಮದ್ಯದ ಅಂಗಡಿಗಳು ಮತ್ತು ಬಾರ್ಗಳ ಪರವಾನಗಿಯನ್ನು ಆಕ್ಷೇಪಣಾ ರಹಿತ ಸ್ಥಳಗಳಿಗೆ ಸ್ಥಳಾಂತರಿಸಲು ನೋಟೀಸುಗಳನ್ನು ನೀಡಲಾಗಿತ್ತು. ಆದರೆ ಕೆಲವು ಸನ್ನದುದಾರರು ಉಚ್ಚ ನ್ಯಾಯಾಲಯದಲ್ಲಿ ನೋಟಿಸುಗಳ ವಿರುದ್ಧ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದು ಸದರಿ ಅರ್ಜಿಗಳ ವಿಲೇ ಆಗುವವರೆಗೆ ಅಂಗಡಿಗಳನ್ನು ಸ್ಥಳಾಂತರಿಸದಿರಲು ಅವಕಾಶ ನೀಡಬೇಕೆಂದು ಉಚ್ಚ ನ್ಯಾಯಾಲಯವು ಆದೇಶ ನೀಡಿರುವುದರಿಂದ ಇದನ್ನು ಎಲ್ಲಾ ಕಡೆಗಳಲ್ಲೂ ಪೂರ್ಣವಾಗಿ ಜಾರಿಗೊಳಿಸಲಾಗಿರುವುದಿಲ್ಲ.

ಈ) ಹೌದು.

ಉ) ಅಂತಹ ಪ್ರಕರಣಗಳು ವರದಿಯಾಗಿರುವುದಿಲ್ಲ.

ಶ್ರೀ ಪಿ.ಜಿ.ಆರ್ ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಮದ್ಯದ ಅಂಗಡಿಗಳನ್ನು ಮತ್ತು ಬಾರ್ಗಳನ್ನು ಸಂಜೆ ಏಳೂವರೆ ಗಂಟೆಗೆ ಮುಚ್ಚತಕ್ಕ ಪ್ರಶ್ನೆ ಸರ್ಕಾರದಲ್ಲಿ ಸದ್ಯಕ್ಕಿಲ್ಲ ಎಂದು ಹೇಳಿದ್ದಾರೆ. ನಾನು ಈ ಪ್ರಶ್ನೆ ಹಾಕಿರತಕ್ಕಂಥಾದು

ಇದೇ ಕಾರಣದಿಂದ. ಒಬ್ಬೊಬ್ಬ ಮೇಲಟ್ಟದ ಅಧಿಕಾರಿಗಳು 6 ತಿಂಗಳಿಗೆ, ವರ್ಷಕ್ಕೊಂದು ಸಾರಿ ಏಳೂವರೆಗೆ ಬಂದ್ ಮಾಡುತ್ತೇವೆ, ಕೆಲವರು 10 ಗಂಟೆಗೆ ಬಂದ್ ಮಾಡುತ್ತೇವೆ, ಕೆಲವರು ಹನ್ನೊಂದೂವರೆಗೆ ಬಂದ್ ಮಾಡುತ್ತೇವೆ, ಕಾರ್ಪೊರೇಷನ್ ಲಿಮಿಟ್ನಲ್ಲಿ ಒಂದು ತರಹ ಮಾಡುತ್ತೇವೆ, ಮುನಿಸಿಪಾಲಿಟಿ ಏರಿಯಾದಲ್ಲಿ ಒಂದು ತರಹ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಈ ರೀತಿ ವಿಭಿನ್ನವಾದ ಹೇಳಿಕೆಗಳನ್ನು ಕೊಡುತ್ತಲೇ ಇರುತ್ತಾರೆ. ನಾನು ಮುಖ್ಯಮಂತ್ರಿಗಳನ್ನು ಒತ್ತಾಯಮಾಡುವುದೇನೆಂದರೆ ಎಕ್ಸೈಸ್ದು, ಜೂನ್ ಟು ಜೂನ್ ಲೈಸೆನ್ಸಿಂಗ್ ಇಯರ್. ನೀವು ಲೈಸೆನ್ಸ್ ಕೊಡತಕ್ಕ ಸಂದರ್ಭದಲ್ಲಿ ಸ್ಪೆಸಿಫಿಕ್ ಆಗಿ ಇವತ್ತೇ ಹೀಗೆ ಮಾಡುತ್ತೇವೆಂದು ಹೇಳಿ. ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂದು ಭರವಸೆ ಕೊಡತಕ್ಕ ವಿಚಾರ ನಿಮ್ಮ ಉತ್ತರದಿಂದ ಉದ್ಭವವಾಗುತ್ತದೆ. ಆದ್ದರಿಂದ ದಯಮಾಡಿ, ನೀವು ಖಚಿತವಾಗಿ, 10 ಗಂಟೆಗೋ, 11 ಗಂಟೆಗೋ, ಏಳೂವರೆ ಗಂಟೆಗೋ ಎಂದು ಯಾವುದಾದರೊಂದು ನಿರ್ದಿಷ್ಟವಾದ ಕಾನೂನನ್ನು ಈ ವಿಚಾರದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲವೇ?

ಎರಡನೆಯದಾಗಿ 21 ವರ್ಷದ ಯುವಕರು ಬಾರ್ ಮತ್ತು ಮದ್ಯದಂಗಡಿಗಳಿಗೆ ಪ್ರವೇಶ ಮಾಡದಂತೆ ಆಜ್ಞೆಯನ್ನು ಜಾರಿಗೊಳಿಸಿದ್ದೇವೆ; ಇದರಿಂದಾಗಿ ಯಾರೂ ಬಾರ್ ಮತ್ತು ಮದ್ಯದಂಗಡಿಗಳಿಗೆ ಹೋಗುತ್ತಿಲ್ಲ ಎಂದು ಹೇಳಿದ್ದೀರಿ; ಇದರಲ್ಲಿ ಎಷ್ಟು ನಿಜಾಂಶ ಇದೆ; ದಯವಿಟ್ಟು ಹೇಳಿ?

ಶ್ರೀ ಎಂ. ವೀರಪ್ಪ ಮೊಯಿಲಿ : ರಾಜ್ಯದಲ್ಲಿರುವ ಮದ್ಯದಂಗಡಿಗಳು ಮತ್ತು ಬಾರ್ಗಳನ್ನು ಸಂಜೆ 7.30 ಗಂಟೆಗೆ ಮುಚ್ಚುವ ಬಗ್ಗೆ ಸರ್ಕಾರ ಇದುವರೆಗೆ ಯಾವುದೇ ನಿರ್ಣಯವನ್ನು ತೆಗೆದುಕೊಂಡಿಲ್ಲ. ಬಾರ್ಗಳು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2-30 ಗಂಟೆಯವರೆಗೆ, ಸಂಜೆ 5-30ರಿಂದ 11 ಗಂಟೆಯವರೆಗೆ, ಸಿ.ಎಲ್.-2 ಅಂಗಡಿಗಳು ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 10-30 ಗಂಟೆಯವರೆಗೆ, ಸಾರಾಯಿ ಅಂಗಡಿಗಳು ಬೆಳಿಗ್ಗೆ 9 ರಿಂದ ರಾತ್ರಿ 9-30ರವರಗೆ, ಸೇಂದಿ ಅಂಗಡಿಗಳು ಸಂಜೆ 5 ಗಂಟೆಯಿಂದ ರಾತ್ರಿ 9-30 ಗಂಟೆಯವರೆಗೆ ತೆರೆದಿರುತ್ತದೆ. ರಾತ್ರಿ 7-30 ಗಂಟೆಗೆ ಮುಚ್ಚಬೇಕು ಎಂದು ಪೋಲೀಸ್ ಇಲಾಖೆಯ ಆಯುಕ್ತರಿಂದ ಸೂಚನೆ ಬಂದಿದ್ದು, ಈ ಬಗ್ಗೆ ಅಬಕಾರಿ ಆಯುಕ್ತರು ಮತ್ತು ಬೆಂಗಳೂರು ನಗರದ ಪೋಲೀಸ್ ಆಯುಕ್ತರು ದಿನಾಂಕ 24-1-1991ರಂದು ಸಭೆ ಸೇರಿ ಚರ್ಚೆ ಮಾಡಿದ್ದೇವೆ. ಸಿ.ಎಲ್-2 ಅಂಗಡಿಗಳು ಅಂಗಡಿಗಳು ಸಂಜೆ 7-30ಕ್ಕೆ ಮಾರಾಟ ನಿಲ್ಲಿಸುವಂತೆ ನಿಯಮ ತರಲಿಕ್ಕೆ ಪೋಲೀಸ್ ಆಯುಕ್ತರು ಸೂಚಿಸಿದಾಗ ಅದು ಅವಶ್ಯಕತೆ ಸೂಚಿಸಿದಾಗ ಅದು ಅವಶ್ಯಕತೆ ಇಲ್ಲ, ಅಧ್ಯಯನ ಮಾಡುವಾಗ ಅಬಕಾರಿ ಆಯುಕ್ತರು ತಿಳಿಸಿದ್ದಾರೆ. ಆದುದರಿಂದ ಇದರ ಆಗುಹೋಗುಗಳ, ಸಾಧಕ ಬಾಧಕಗಳ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ. 21 ವರ್ಷದ ಯುವಕರು ಮತ್ತು ಅದಕ್ಕಿಂತ ಕೆಳಗಿನವರು ಬಾರ್ ಮತ್ತು ಮದ್ಯದಂಗಡಿಗಳಿಗೆ ಪ್ರವೇಶಗೊಳಿಸುವ ಆಜ್ಞೆಯನ್ನು ನಾವು ಜಾರಿ ಮಾಡಿದ್ದೇವೆ. ಇದು ಕಟ್ಟುನಿಟ್ಟಾಗಿ ಜಾರಿಗೆ ಬಂದಿಲ್ಲ, ಆದರೆ ಆದಷ್ಟು ಮಟ್ಟಿಗೆ ಭಯ ಹುಟ್ಟಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಂಗಡಿ ಒಳಗಡೆ ಕರೆದುಕೊಂಡು ಹೋಗುತ್ತೀರೋ ಅಥವಾ ಹೊರಗೆ ಕರೆದುಕೊಂಡು ಹೋಗುತ್ತೀರೋ?

ಡಾ|| ಜೀವರಾಜ ಆಳ್ವ : ಇವತ್ತಿನ ಈ ಐತಿಹಾಸಿಕ ಆಜ್ಞೆಯಿಂದ ನನಗೆ ಬಹಳ ಸಂತೋಷವಾಯಿತು. ತಮಗೆ ನೆನಪು ಇದೆ, ಪತ್ರಿಕೆಗಳು ತಮಗೆ ಹೆಡ್ಲೈನ್ಸ್ ಕೊಟ್ಟರು. ಇವತ್ತು ಗೊತ್ತಿದ್ದೂ, ಗೊತ್ತಿದ್ದೂ ಬೆಂಗಳೂರು ನಗರದಲ್ಲಿ ನಿಮ್ಮ ಎಕ್ಸೈಸ್ ಅಧಿಕಾರಿಗಳು ಇಷ್ಟು ದೊಡ್ಡ ಕ್ರಾಂತಿಕಾರಿ ಆಜ್ಞೆ ಮಾಡಿ ಅದು ಜಾರಿ ಆಗದೇ ಇಗಗೆ ಇಗಗ ಪೂರ್ಣ ಜವಾಬ್ದಾರಿ ಮುಖ್ಯ ಮಂತ್ರಿಗಳದ್ದು.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಜವಾಬ್ದಾರಿಯನ್ನು ನಾನು ತೆಗೆದುಕೊಂಡು ಆಮೇಲೆ ಕೆಲವು ದಿವಸಗಳಲ್ಲಿ ಅನಿರೀಕ್ಷಿತವಾಗಿ ವಿಸಿಟ್ ಮಾಡುತ್ತೇನೆ ಇದನ್ನು ಕಟ್ಟುನಿಟ್ಟಿನಿಂದ ಪಾಲಿಸಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಒಳಗೆ ಹೋಗಿ ಕಲೆತು ಬಿಟ್ಟರಿ, ಸಹವಾಸ ದೋಷ ಬಹಳ ಕೆಟ್ಟದ್ದು. ಆದುದರಿಂದ ನಮ್ಮಂಥವರನ್ನು ಕರೆದುಕೊಂಡು ಹೋಗಿ, ನಾವೂ ಬರುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನನ್ನನ್ನು ಕಾಪಾಡಿಕೊಳ್ಳಲು ನಿಮ್ಮಂಥವರನ್ನು ಕರೆದುಕೊಂಡು ಹೋಗುತ್ತೇನೆ. ಜೀವರಾಜ ಆಳ್ವರವರು ತಮ್ಮನ್ನು ಕರೆದುಕೊಂಡು ಹೋಗಬೇಕು.

ಶ್ರೀ ವಾಟಾಳ್ ನಾಗರಾಜ್ : ನಾನು ಇದುವರೆಗೂ ಇದರ ವಾಸನೆಯನ್ನೂ ಸಹ ತೆಗೆದುಕೊಂಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಾನು ಈ ಪ್ರಶ್ನೆಯನ್ನು ಕೇಳಲು ಒಂದು ಕಾರಣ ಇದೆ. ಮುಖ್ಯ ಮಂತ್ರಿಗಳು ಇಷ್ಟೊಂದು ಸರಳವಾಗಿ ಉತ್ತರವನ್ನು ತೆಗೆದುಕೊಂಡು ಹೋಗುವುದಕ್ಕೆ ನಾನು ಪ್ರಶ್ನೆಯನ್ನು ಕೇಳಲಿಲ್ಲ. ನಮ್ಮ ಪೋಲೀಸ್ ಕಮಿಷನರ್ ಶ್ರೀ ಕೋದಂಡರಾಮಯ್ಯನವರು ಸ್ಟ್ರೈಟ್ ಫಾರ್ವರ್ಡ್, ಒಳ್ಳೆಯ ಆಫೀಸರ್, ಅವರೂ ಒಂದು ಹೇಳಿಕೆಯನ್ನು ಕೊಟ್ಟರು. ನಾವು 10-30 ಗಂಟೆಗೋ ಅಥವಾ 10 ಗಂಟೆಗೋ ಮುಚ್ಚಿಸಿ ಬಿಡುತ್ತೇವೆಂದು ಹೇಳಿದರು. ಸರ್ಕಾರದವರು ಇದನ್ನು ಜಾಗ್ರತೆ ಮುಚ್ಚಿ ಬಿಡುತ್ತಾರೆಂದು ಈಗ ಬಾರ್ನವರು ಹಾಗೂ ಸಿ.ಎಲ್. 2 ಹೋಲ್ಡರ್ಸ್ ಚರ್ಚೆನಡೆಸುತ್ತಿದ್ದಾರೆ, ಮುಚ್ಚಬೇಕೆಂದು, ಇದು ನಮ್ಮ ಸರ್ಕಾರ ಇದ್ದಾಗಲೂ ನಡೆದಿತ್ತು. ನಿಮ್ಮ ಸರ್ಕಾರ ಇದ್ದಾಗಲೂ ನಡೆಯುತ್ತಿದೆ. ಪ್ರತಿ 6 ತಿಂಗಳಿಗೆ ಇದನ್ನು ಏತಕ್ಕೆ ರೈಟ್ ಆಫ್ ಮಾಡುತ್ತೀರಿ? ಎಕ್ಸೈಸ್ ಇಯರ್ಗೆ ನೀವು ಲೈಸೆನ್ಸ್ ಕೊಡತಕ್ಕ ಸಂದರ್ಭದಲ್ಲಿ ಖಚಿತವಾಗಿ ಹೇಳಿ. ಮತ್ತೇ ಪರಿಶೀಲನೆ ಮಾಡುತ್ತೇವೆ, ನಮ್ಮ ಅಧಿಕಾರಿಗಳಿಗೆ ಹೇಳುತ್ತೇನೆ, ಡಿಸಕಷನ್ ಮಾಡುತ್ತೇನೆ ಎಂದು ಹೇಳಿದರೆ ಅದು ಸರಿಹೋಗುವುದಿಲ್ಲ. ಪರಿಶೀಲನೆ ಎಂದ ತಕ್ಷಣ ಕೆಳಮಟ್ಟದಲ್ಲಿ ಕಲೆಕ್ಷನ್ ಶುರು ಆಗಿರುತ್ತದೆ. ಇನ್ನು ಎರಡನೆಯದಾಗಿ, ಇಪ್ಪತ್ತೊಂದು ವರ್ಷದ ಒಳಗಿರುವವರು ಹೋಗುತ್ತಾರೆ. ನಿಮ್ಮ ಎಕ್ಸೈಸ್ ಇನ್ಸಪೆಕ್ಟರ್, ಪೋಲೀಸ್ ಇಪೆಕ್ಟರ್ ಕಲೆಕ್ಷನ್ ಮಾಡುವುದು, ಅದರಲ್ಲಿಯೇ ಅವರು ಅಲ್ಲಿಗೆ ಹೋಗುತ್ತಾರೆ, ಕುಳಿತುಕೊಳ್ಳುತ್ತಾರೆ. ಒಂದು ರೌಂಡ್ ಹೋದರೆ ಎರಡುನೂರು ರೂಪಾಯಿ ಕಲೆಕ್ಷನ್ ಮಾಡಿಕೊಂಡು ಹೋಗುತ್ತಾರೆ. ಇದು ಆಗುತ್ತಿದೆ. ಅದಕ್ಕೋಸ್ಕರವಾಗಿಯೇ ನಾನು ಇವತ್ತು ಪ್ರಶ್ನೆ ಕೇಳಿದ್ದು. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ನೀವು ಕಾನೂನು ಮಾಡಿದ ತಕ್ಷಣ ಲಂಚ ಕೆಳಮಟ್ಟದಲ್ಲಿ ಹೆಚ್ಚಾಗುತ್ತದೆ. ಇಪ್ಪತ್ತೊಂದು ವರ್ಷ ಒಳಗಿರುವವರನ್ನು ನಿಷೇಧಿಸುವ ಕಾನೂನನ್ನು ಇಪ್ಲಿಮೆಂಟ್ ಮಾಡುವುದು ಕಷ್ಟ ಇದೆ. ಆದ್ದರಿಂದ ಇಂಪ್ಲಿಮೆಂಟ್ ಮಾಡಲು ಆಗದೇ ಇರತಕ್ಕಂಥ ಈ ಎಕ್ಸೈಜ್ ಆರ್ಡರ್ನಿಂದ ಇನ್ಸಪೆಕ್ಟರ್ಗಳು, ಪೊಲೀಸ್ ಇಪೆಕ್ಟರ್ಗಳು ಕಲಕ್ಷನ್ನು ಹೆಚ್ಚು ಮಾಡಿಕೊಳ್ಳಲು ಅನುಕೂಲ ಮಾಡಿಕೊಟ್ಟಂತಾಗಿದೆ. ಇದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪನಾಯಕರು ಹೇಳಿರುವ ವಿಚಾರವನ್ನು ನಾನು ಒಪ್ಪುತ್ತೇನೆ. ವರ್ಷದ ಮಧ್ಯದಲ್ಲಿ ಮಾಡಬಾರದೆಂದು ಅವರು ಹೇಳಿದ್ದಾರೆ. ಇದು ಉಪಯೋಗವಾಗುವ ರೀತಿಯಲ್ಲಿ ನಡೆಯಲು ನಾನು ಪ್ರಯತ್ನ ಮಾಡುತ್ತೇನೆ. ಈ ವರ್ಷ ಆ ಪ್ರಶ್ನೆ ಇಲ್ಲ; ಎಕ್ಸೈಸ್ ಇಯರ್ ಎಂಡ್ ಆಗುವವರೆಗೂ ಏನೂ ಮಾಡಲು ಆಗುವುದಿಲ್ಲ. ಮುಂದಿನ ಎಕ್ಸೈಸ್ ವರ್ಷದಲ್ಲಿ ಹೊಸ ನೀತಿಯನ್ನು ಯಾವ ರೀತಿ ಮಾಡಬೇಕೋ ಆ ರೀತಿ ಮಾಡುತ್ತೇವೆ.

ಇಪ್ಪತ್ತೊಂದು ವರ್ಷದ ಯುವಕರ ಬಗ್ಗೆ ನಾನು ಕಟ್ಟುನಿಟ್ಟಾಗಿ ಕ್ರಮವನ್ನು ಖಂಡಿತವಾಗಿ ತೆಗೆದುಕೊಳ್ಳುತ್ತೇನೆ. ಇದನ್ನು ಹಗುರವಾಗಿ ಯಾರೂ ತೆಗೆದುಕೊಳ್ಳಬಾರದು. ಇದು ಭ್ರಷ್ಟಾಚಾರಕ್ಕೆ, ಹಣ ವಸೂಲಿಗೆ ಒಂದು ಸಾಧನವಾಗುವ ಪರಿಸ್ಥಿತಿ ಇದ್ದರೆ ನಾವು ಖಡಾಖಂಡಿತವಾಗಿ ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ನೇರವಾಗಿ ಇದರ ಜವಾಬ್ದಾರಿಯನ್ನು ಹೊರಿಸುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹೈಕೋರ್ಟ್ ಆಜ್ಞೆ ಇದೆ. ಅದು ಇದ್ದರೂ ಸಹ ಅದನ್ನು ಜಾರಿ ಮಾಡಿಲ್ಲ, ಅದನ್ನು ನಿಮ್ಮ ಇಲಾಖೆಯವರು ಇಂಪ್ಲಿಮೆಂಟ್ ಮಾಡಿಲ್ಲ. ರೂಲ್ ನಂ. 5ರ ಬಗ್ಗೆ ಹೈಕೋರ್ಟ್ ತೀರ್ಪು ನ್ಯಾಷನಲ್ ಹೈವೇ ಹಾಗೂ ಸ್ಟೇಟ್ ಹೈವೇಯಲ್ಲಿರುವ ಬಾರ್ಗಳ ಲೈಸೆನ್ಸ್‌ಗಳು ತೆಗೆದುಕೊಳ್ಳುವ ಬಗ್ಗೆ ಇದೆ. The High Court has also made an order. why it has not been implemented. ನೀವು ಹೊಸದಾಗಿ ಮುಖ್ಯಮಂತ್ರಿಗಳಾದ ಸಂದರ್ಭದಲ್ಲಿ ಇದನ್ನೆಲ್ಲಾ ಶಿಫ್ಟ್ ಮಾಡುತ್ತೇನೆ ಎಂದು ಹೇಳಿದ್ದೀರಿ. ಕೆಲವರು ಕೋರ್ಟಿಗೆ ಹೋಗಿದ್ದಾರೆ ಎಂದು ಹೇಳಿದರು. The High Court has ordered in favour of the Government. Why your Officers have not implemented it. ಸರ್ಕಾರ ಮಾಡಿರುವುದು ಸರಿಯಾಗಿ ಇದೆ ಎಂದು ಕೋರ್ಟಿನವರು ಹೇಳಿದ್ದಾರೆ. ದಯವಿಟ್ಟು ಈ ಕಡೆ ಗಮನಿಸಿ, ನೀವು ಉತ್ತರ ಕೊಡದಿದ್ದರೂ ಪರವಾಗಿಲ್ಲ. ನೀವು ನಾನು ಹೇಳುವುದನ್ನು ಗಮನಿಸಿದರೆ ಸಾಕು. ಸೆಕೆಂಡ್ಸ್ ಬಿಡಿ, ಬಿಡದೇ ಇರಲಿ. ಪ್ರತಿತಿಂಗಳು ನಿಮ್ಮ ಎಕ್ಸೈಸ್ ಇನ್ಸ್‌ಪೆಕ್ಟರ್ ಮಾಮೂಲಿ ಏನೂ ಕಡಿಮೆ ಆಗಿಲ್ಲ. ಬಾರ್ಗಳಲ್ಲಿ 21 ಅಥವಾ 18 ವರ್ಷದರೆಗಿನವರಿಗೆ ಬಿಡಿ, ಅಥವಾ ಬಿಡದೇ ಇರಿ, ಅವರು ಪ್ರತಿ ತಿಂಗಳು ಕಲೆಕ್ಷನ್ ಐದು ಸಾವಿರದಿಂದ ಹದಿನೈದು ಸಾವಿರ ರೂಪಾಯಿಗಳು ಏನಿದೆ ಅದು ಏನೂ ಕಡಿಮೆ ಆಗಿಲ್ಲ. ಈಗ ಅವರೆಲ್ಲಾ ಅಂಗಡಿ ಬೇಡ ಎಂದು ಹೇಳುತ್ತಿದ್ದಾರೆ. Everyone of them is taking. ಇದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕು.

SRI. K. SHIVAMURTHY : You have to give specific instance. ನೀವು ಸ್ಪೆಸಿಫಿಕ್ಕಾಗಿ ಹೇಳಿ.

(Interruptions)

SRI. P.G.R. SINDIA : I don't want even to talk to him.

SRI K. SHIVAMURTHY : You must tell specifically.

SRI. P.G.R. SINDIA : I repeat it again.

SRI. K. SHIVAMURTHY : I also repeat it. I know what Mr. Sindia knows.

(Interruptions)

ಶ್ರೀ ಎಂ. ವೀರಪ್ಪಮೊಯಿಲಿ : ರಿಟ್ ಪಿಟೀಷನ್ ಸಂಖ್ಯೆ 35297 ರಲ್ಲಿ ಇದನ್ನು ಪ್ರಶ್ನಿಸಿ ತಡೆಯಾಜ್ಞೆ ಇದ್ದು ರಿಟ್ ಪಿಟಿಷನ್ ಸರ್ಕಾರದ ಪರವಾಗಿ ತೀರ್ಮಾನವಾಗಿತ್ತು. ಪುನಃ ಮೇಲ್ಮನವಿ 2688 ಮತ್ತು 2777:93ರಲ್ಲಿ ಸಲ್ಲಿಸಿದ್ದು ಈ ಮೇಲ್ಮನವಿ ತೀರ್ಮಾನವಾಗುವವರೆಗೆ ಅಂಗಡಿಗಳನ್ನು ಈಗ ಇರತಕ್ಕ ಸ್ಥಳಗಳಲ್ಲಿ ಮುಂದುವರೆಸಬೇಕೆಂದು ದಿ: 5-10-93ರಂದು ಆದೇಶ ನೀಡಲಾಗಿತ್ತು. ಆದುದರಿಂದ ಮೊದಲಿನಂತೆ ಹೈಕೋರ್ಟು ತೀರ್ಪು ಏನಿದೆ ಅದನ್ನು ಇಂಪ್ಲಿಮೆಂಟ್ ಮಾಡಲು

ಕಟ್ಟುನಿಟ್ಟಾಗಿ ಈ ನಿಯಮಗಳನ್ನು ಅನುಷ್ಠಾನ ಮಾಡಲು ಮತ್ತು ಬೇರೆ ಬೇರೆಯಾದ ರೀತಿಯಲ್ಲಿ ಅಧಿಕಾರಿಗಳು ಈ ಕಾನೂನುಗಳನ್ನು ದುರುಪಯೋಗ ಮಾಡತಕ್ಕ ಪರಿಸ್ಥಿತಿಯನ್ನು ತಪ್ಪಿಸಲು ನಾವು ಸರಿಯಾದ ಚಕ್ರವ್ಯೂಹ ರಚಿಸಿ ಅದನ್ನು ಹತೋಟಿಗೆ ತರಲು ಪ್ರಾರಂಭ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮ್ಮ ಗೌರವಾನ್ವಿತ ಸದನದ ಸದಸ್ಯರೊಬ್ಬರು ಎಲ್ಲಿ ಯಾರು ತೆಗೆದುಕೊಂಡಿದ್ದಾರೆ ಎಂಬುದನ್ನು ಹೇಳಿ ಎಂದು ಕೇಳಿದ್ದಾರೆ. ಅವರನ್ನು ನನ್ನ ಜೊತೆಯಲ್ಲಿ ಕಳುಹಿಸಿಕೊಡಿ. ಬಾರ್ ಲೈಸೆನ್ಸ್‌ಗಳಿಗೆ ಸಿ.ಎಲ್.-2 ಲೈಸೆನ್ಸ್‌ಗಳಿಗೆ ಇನ್ಸ್‌ಪೆಕ್ಟರ್‌ಗಳಿಗೆ ಎಷ್ಟು ಕೊಟ್ಟಿದ್ದಾರೆ ಎಂಬುದನ್ನು ಅವರಿಗೆ ತೋರಿಸುತ್ತೇನೆ. ಅವರು ನನ್ನ ಜೊತೆಯಲ್ಲಿ ಬರಲಿ.

ಶ್ರೀ ಕೆ. ಶಿವಮೂರ್ತಿ : ಬ್ಲೈಂಡ್ ಆಗಿ ಹೇಳಿದರೆ ಹೇಗೆ, ಅವರು ಯಾರು ಎಂಬುದನ್ನು ಹೇಳಬೇಕು. ನಾನು ಅವರಿಗೆ ಸಹಾಯ ಮಾಡುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) : ಭ್ರಷ್ಟಾಚಾರ ಇಲ್ಲವೆಂದು ನಾನು ಹೇಳುವುದಿಲ್ಲ. ಅದು ಕೇವಲ ಕಾನೂನಿನಿಂದ ಹೋಗಲು ಸಾಧ್ಯವಿಲ್ಲ. ನಾವು ನೀವು ನಾನ್ ಅಫಿಷಿಯಲ್ಸ್‌ಗಳು ಕುಳಿತುಕೊಂಡು ವಿಚಾರ ಮಾಡಬೇಕು. We will call for a meeting, let us sit together and sort out a programme.

ಕೊರಟಗೆರೆ ತಾಲ್ಲೂಕು ಕೋಳಾಲ ಗ್ರಾಮದಲ್ಲಿ ಉಪ-ಆರಕ್ಷಕ ಠಾಣೆಯನ್ನು ತೆರೆಯುವುದರ ಬಗ್ಗೆ.

309 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊರಟಗೆರೆ ತಾಲ್ಲೂಕು ಕೋಳಾಲ ಗ್ರಾಮವು ಕೊರಟಗೆರೆಯಿಂದ ಸುಮಾರು 20ಕಿ.ಮೀ. ದೂರದಲ್ಲಿದ್ದು ಅಲ್ಲಿ ಪೊಲೀಸ್ ಸಬ್ ಸ್ಟೇಷನ್ ಇಲ್ಲದಿರುವುದರಿಂದ ಆ ಭಾಗದ ಗ್ರಾಮಾಂತರ ಜನರಿಗೆ ನೆಮ್ಮದಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಆ ಗ್ರಾಮದಲ್ಲಿ ಪೊಲೀಸ್ ಸಬ್ ಸ್ಟೇಷನ್ ತೆರೆಯಲು ಏನು ಕ್ರಮ ತೆಗೆದುಕೊಂಡಿದೆ?

ಇ) ಹಾಗಿದ್ದಲ್ಲಿ, ಮೇಲ್ಕಂಡ ಪೋಲೀಸ್ ಸ್ಟೇಷನ್ ತೆರೆಯಲು ಎಷ್ಟು ಕಾಲಾವಕಾಶ ಬೇಕು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಕೊರಟಗೆರೆ ತಾಲ್ಲೂಕು ಕೊಳಾಲ ಗ್ರಾಮದಲ್ಲಿ ಸದ್ಯಕ್ಕೆ ಪೋಲೀಸ್ ಹೊರಠಾಣೆ ಅಸ್ತಿತ್ವದಲ್ಲಿಲ್ಲ.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) 1994-95ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ಶ್ರೀ ಸಿ. ವೀರಭದ್ರಯ್ಯ : ಮಾನ್ಯ ಅಧ್ಯಕ್ಷರೆ, ಕಳೆದ 4 ವರ್ಷಗಳಿಂದ ನಾನು ಕೊರಟಗೆರೆ ತಾಲ್ಲೂಕು ಕೋಳಾಲ ಗ್ರಾಮದಲ್ಲಿ ಒಂದು ಪೊಲೀಸ್ ಠಾಣೆಯನ್ನು ತೆರೆಯಬೇಕೆಂದು ಈ ಸದನದಲ್ಲಿ ಕೇಳುತ್ತಾ ಇದ್ದೇನೆ. ಈ ವರ್ಷಗಳಿಂದ ಕೂಡ ಸರ್ಕಾರದವರು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿಕೊಂಡು ಬಂದಿದ್ದಾರೆ. ಈ ಕೋಳಾಲ ಗ್ರಾಮದಲ್ಲಿ ವಿಪರೀತ ಕಳ್ಳತನಗಳು, ಮಾನಭಂಗ ಪ್ರಕರಣಗಳು ನಡೆಯುತ್ತಿವೆ. ದಿನ ಬೆಳಗಾದರೆ ಗಲಾಟೆಯಾಗುತ್ತಿರುತ್ತದೆ, ಹತ್ತಿರದ ಪೊಲೀಸ್ ಠಾಣೆ ಸುಮಾರು

20-30 ಕಿಲೋಮೀಟರ್ ದೂರದಲ್ಲಿದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ವರ್ಷದಲ್ಲಿಯೇ ಕೋಳಾಲ ಗ್ರಾಮದಲ್ಲಿ ಪೊಲೀಸ್ ಠಾಣೆಯನ್ನು ತೆರೆಯುತ್ತೇವೆಂಬ ಆಶ್ವಾಸನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಕೋಳಾಲ ಗ್ರಾಮದಲ್ಲಿ 1994-95ರಲ್ಲಿ ಒಂಟು ಔಟ್‌ಪೋಸ್ಟನ್ನು ತೆರೆಯಲಾಗುವುದು.

ಮತೀಯ ಗಲಭೆಯಲ್ಲಿ ಮೃತರಾದ ಕುಟುಂಬದ ಅವಲಂಬಿತರಿಗೆ ಉದ್ಯೋಗ

249 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮತೀಯ ಗಲಭೆಯಲ್ಲಿ ಮೃತರಾದ ಕುಟುಂಬದ ಅವಲಂಬಿತರಿಗೆ ಉದ್ಯೋಗ ನೀಡಿಕೆಗೆ ಸರ್ಕಾರವು ಬದ್ಧವಾಗಿದೆಯೇ?

ಆ) ಹಾಗಿದ್ದಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಳೆದ 4 ವರ್ಷಗಳಿಂದ ಎಷ್ಟು ಜನರಿಗೆ ಉದ್ಯೋಗ ನೀಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಇ) ಈ ಸಂಬಂಧ ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಬಾಕಿ ಇರುವ ಪ್ರಕರಣಗಳೆಷ್ಟು? (ವಿವರಗಳನ್ನು ಒದಗಿಸುವುದು)

ಈ) ಮೃತರಾದವರ ಕುಟುಂಬದವರಿಗೆ ಉದ್ಯೋಗ ನೀಡಿಕೆಗೆ ತಡವಾಗಲು ಕಾರಣವೇನು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) ಹೌದು.

ಆ) ಇಲ್ಲ.

ಇ) ಚನ್ನಪಟ್ಟಣ ತಾಲ್ಲೂಕಿನಲ್ಲಿ 8 ಪ್ರಕರಣಗಳು ಬಾಕಿ ಇವೆ. (ವಿವರಗಳು ಅನುಬಂಧದಲ್ಲಿವೆ)

ಈ) ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1993ನ್ನು ತಿದ್ದುಪಡಿ ಮಾಡಬೇಕಾಗಿದ್ದ ಕಾರಣ ತಡವಾಗಿದೆ. ದಿನಾಂಕ 2-1-94ರಂದು ತಿದ್ದುಪಡಿ ಪ್ರಕಟಣೆ ಹೊರಡಿಸಲಾಗಿದ್ದು ಶೀಘ್ರದಲ್ಲಿ ಈ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗುತ್ತದೆ.

ಅನುಬಂಧ

ಅರ್ಜಿಗಳ ವಿವರಗಳು ಈ ಕೆಳಕಂಡಂತಿವೆ

ಸಂಖ್ಯೆ : ಹೆಚ್‌ಡಿ : 31 ಸಿಆರ್‌ಆರ್ 94

ಕ್ರಸಃ	ಹೆಸರು ಮತ್ತು ವಿಳಾಸ	ಮತೀಯ ಗಲಭೆಯಲ್ಲಿ ಮೃತಪಟ್ಟವರ ಹೆಸರು	ಮೃತಪಟ್ಟ ದಿನಾಂಕ	ಅರ್ಜಿಸಲ್ಲಿಸಿದ ದಿನಾಂಕ
1.	ಶ್ರೀಮತಿ :ಶ್ರೀ ಗಿರಿಜಮ್ಮ ಕೋಂ ಸಿಂಗರೇಗೌಡ ಚನ್ನಪಟ್ಟಣ	ಸಿಂಗರೇಗೌಡ	03-10-90	21-06-1993
2.	ಅಜೀಜ್ ಅಹ್ಮದ್ ಖಾನ್ ಬಿನ್ ಲೇಟ್ ಸನಾವುಲ್ಲಾಖಾನ್ ಚನ್ನಪಟ್ಟಣ	ಸನಾವುಲ್ಲಾಖಾನ್	03-10-90	08-07-1993

3.	ಎಂ.ಎ. ರುಬ್ಬಾನಿ ಬಿನ್ ಲೇಟ್ ಭಕ್ಷಿ ಚನ್ನಪಟ್ಟಣ	ಭಕ್ಷಿ	03-10-90	13-07-1993
4.	ಗೌಸ್ ಬೇಗ್ ಬಿನ್ ಬೇಗ್ ಹುಸೇನ್ ಚನ್ನಪಟ್ಟಣ	ಮುನಿರಾಬೇಗಂ ಮತ್ತು ಅಫಿಜುಲ್ಲಾ ಷರೀಫ್	03-10-90	07-07-1993
5.	ಮಹಮ್ಮದ್ ಖಲೀಮ್ ಕೇರ್ ಆಫ್‌ಅರಫ್ಖಾನ್ ಚನ್ನಪಟ್ಟಣ	ಮಹಮ್ಮದ್ ಅಮೀರ್	03-10-90	07-07-1993
6.	ಅಲೀಮ್ ಪಾಷಾ ಬಿನ್ ಮಕ್ಬೂಲ್ ಜಾನ್	ಮಹಮ್ಮದ್ ಖಾಸಿಂ	15-10-90	06-07-1993
7.	ಅಬ್ದುಲ್ ಅಜೀಜ್ ಕೇರಾಫ್ ಷರೀಫ್ ಕೋಂ ಲೇಟ್ ಸಿಖಿಂದರ್ ಖಾನ್	ಸಿಕಂದರ್ ಖಾನ್	03-10-90	30-06-1993
8.	ನವಾಬುಲ್ಲಾ ಖಾನ್ ಕೇರಾಫ್ ಬುದಾನ್ ಸಾಬ್	ಖೈರುನ್ ಬೀ	03-10-1990	29-06-1993

ಶ್ರೀ ಸಾದತ್ ಅಲಿ ಖಾನ್ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಕರ್ನಾಟಕ ರಾಜ್ಯದಲ್ಲಿ ನವೆಂಬರ್ ಮತ್ತು ಡಿಸೆಂಬರ್ 90ರಲ್ಲಿ 74 ಜನ ಸತ್ತಿದ್ದಾರೆ ಎಂದು ಹೇಳಿದ್ದಾರೆ. ಇದರಲ್ಲಿ ರಾಮನಗರ ಮತ್ತು ಚನ್ನಪಟ್ಟಣಗಳಲ್ಲಿ 27 ಜನ ಸತ್ತಿದ್ದಾರೆ. ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲ್ ರವರು ಅಕ್ಟೋಬರ್‌ನಲ್ಲಿ ಏನು ಹೇಳಿದರು ಅಂದರೆ 3 ತಿಂಗಳಲ್ಲಿ ಸತ್ತಿರತಕ್ಕ ಕುಟುಂಬವರ್ಗದವರ ಪೈಕಿ ಒಬ್ಬರಿಗೆ ಒಂದು ಕೆಲಸ ಕೊಡುತ್ತೇವೆ ಎಂದು. ಆದರೆ ಅದನ್ನು ಕೊಡಲಿಲ್ಲ. ಅನಂತರ ಶ್ರೀ ಬಂಗಾರಪ್ಪನವರು ಮುಖ್ಯಮಂತ್ರಿಗಳಾದರು. ಅವರೂ ಸಹ ಚನ್ನಪಟ್ಟಣದಲ್ಲಿ ಪೀಸ್ ಕಮಿಟಿ ಮೀಟಿಂಗ್ನಲ್ಲಿ ಒಂದು ತಿಂಗಳಿನಲ್ಲಿ ಮೃತಪಟ್ಟ ಕುಟುಂಬವರ್ಗದವರ ಪೈಕಿ ಒಬ್ಬರಿಗೆ ಕೆಲಸ ಕೊಡುವುದಾಗಿ ಹೇಳಿದೇರು; ಅದು ಸಹ ಜಾರಿ ಆಗಲಿಲ್ಲ. ಈಗ 8 ಜನರ ಅರ್ಜಿಗಳ ಪಟ್ಟಿಯನ್ನು ರಾಮನಗರ ಮತ್ತು ಚನ್ನಪಟ್ಟಣಕ್ಕೆ ಸಂಬಂಧಪಟ್ಟಹಾಗೆ ಕೊಟ್ಟಿದ್ದೀರಿ. ಆದರೆ ಅಲ್ಲಿ ಒಟ್ಟು 27 ಜನ ಸತ್ತು ಹೋಗಿದ್ದಾರೆ. ಈ 27 ಜನರ ಕುಟುಂಬವರ್ಗದವರ ಪೈಕಿ ಒಬ್ಬರಿಗೆ ಒಂದು ಕೆಲಸವನ್ನು ಕೊಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುತ್ತದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ : ಈಗಾಗಲೇ ತಡವಾಗಿದೆ. ಅದನ್ನು ನಾನೂ ಒಪ್ಪುತ್ತೇನೆ. ದಿನಾಂಕ 28-01-94ರಂದು ನಾವು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 93 ಅನ್ನು ತಿದ್ದುಪಡಿ ಮಾಡಿ ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಆದುದರಿಂದ ನಾವು ತಕ್ಷಣ ಇದರ ಬಗ್ಗೆ ಕ್ರಮ ಕೈಗೊಂಡು ವಿಲೇವಾರಿ ಮಾಡುತ್ತೇವೆ.

ಶ್ರೀ ಸಾದತ್ ಅಲಿ ಖಾನ್ : ಈಗಾಗಲೇ 3 ವರ್ಷ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : 28-01-94ರಂದು ಅಂದರೆ ಕಳೆದ ತಿಂಗಳು ನಾವು ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಈಗ ನಿಯಮಗಳು ಯಾವುದೂ ಬಾಧಕ ಬರುವುದಿಲ್ಲ. ಒಂದು ತಿಂಗಳಲ್ಲಿ ಅಥವಾ ಅದರೊಳಗೆ ಇದನ್ನು ತೀರ್ಮಾನ ಮಾಡುತ್ತೇನೆ.

ಶಿಥಿಲಗೊಂಡಿರುವ ಕಟ್ಟಡಗಳ ದುರಸ್ತಿ

325 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ತಾಲ್ಲೂಕು ಕೋಟಾ ಪೋಲೀಸ್ ಠಾಣೆ ಕಟ್ಟಡ ಶಿಥಿಲಗೊಂಡಿರುವುದು ನಿಜವಲ್ಲವೇ? ಶಿಥಿಲವಾಗಿದ್ದು, ಅದನ್ನು ದುರಸ್ತಿಗೊಳಿಸಲು ಪೊಲೀಸ್ ಇಲಾಖೆಯು ಕೈಗೊಂಡ ಕ್ರಮಗಳೇನು?

ಆ) ಗಿಳಿಯೂರು ಗ್ರಾಮದ ಸರ್ವೆ ನಂ. 244:1ಎ ರಲ್ಲಿ ಸದರಿ ಪೊಲೀಸ್ ಠಾಣೆಯ ನವೀಕರಣ ಕುರಿತ ಪ್ರಸ್ತಾವನೆಯು ಗೃಹ ಇಲಾಖೆಗೆ ಬಂದಿದೆಯೇ? (ವಿವರ ನೀಡುವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಕಟ್ಟಡವು ಶಿಥಿಲವಾಗಿಲ್ಲ.

ಆ) ಹೌದು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಪಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ನನ್ನ ಮತದಾರ ಕ್ಷೇತ್ರವಾದ ಕೋಟಾ ಪೊಲೀಸ್ ಠಾಣೆಯ ಕಟ್ಟಡ ಶಿಥಿಲವಾಗಿದೆ. ಅದನ್ನು ದುರಸ್ತಿಗೊಳಿಸಲು ಹಣವನ್ನು ಸರ್ಕಾರ ಖರ್ಚು ಮಾಡಲು ಆಗುವುದಿಲ್ಲ, ಏತಕ್ಕೆಂದರೆ ಅದು ಬಾಡಿಗೆ ಕಟ್ಟಡವಾಗಿದೆ. ಈ ಪೊಲೀಸ್ ಠಾಣೆಗೆ ಸ್ವಂತ ಕಟ್ಟಡವನ್ನು ಕಟ್ಟಲು ಏತಕ್ಕೆ ಕ್ರಮ ಕೈಗೊಳ್ಳಬಾರದು?

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ತಮ್ಮ ಮೊದಲನೆ ಪ್ರಶ್ನೆ ಎಂದರೆ ಈ ಪೊಲೀಸ್ ಠಾಣೆ ಕಟ್ಟಡ ಶಿಥಿಲವಾಗಿದೆ ಎಂದು. ಅದು ಶಿಥಿಲ ಆಗಿಲ್ಲವೆಂದು ಉತ್ತರ ಕೊಟ್ಟಿದ್ದೇನೆ. ಈಗ ಈ ಪೊಲೀಸ್ಠಾಣೆಗೆ ಹೊಸ ಜಾಗ ಸಿಕ್ಕಿದೆ. ಅದು ಪೊಲೀಸ್ ಇಲಾಖೆಯವರ ವಶದಲ್ಲಿ ಇದೆ. ಆದುದರಿಂದ ಹೊಸ ಕಟ್ಟಡ ನಿರ್ಮಾಣವನ್ನು 1994-95ರಲ್ಲಿ ನಾವು ಮಂಜೂರು ಮಾಡುತ್ತೇವೆ.

ಶ್ರೀ ಪಿ. ಬಸವರಾಜು : ಮಾನ್ಯ ಅಧ್ಯಕ್ಷರೇ, ಬಾಡಿಗೆ ಕಟ್ಟಡದ ಓನರ್ ಕಟ್ಟಿಕೊಡಲಿಕ್ಕೆ ರೆಡಿಯಾಗಿದ್ದಾರೆ. ಈಗ ಸ್ವಂತ ಜಾಗ ಪೊಲೀಸ್ ಠಾಣೆಗೆ ಸ್ಯಾಂಕ್ಷನ್ ಆಗಿದೆ. ಅಲ್ಲಿ ಕಟ್ಟಡ ಕಟ್ಟಲಿಕ್ಕೆ ಈಗ ಓನರ್ ಯಾರು ಇದ್ದಾರೆ ಅವರು ಮುಂದೆ ಬಂದಿದ್ದಾರೆ ಆ ಜಾಗದಲ್ಲಿ ಕಟ್ಟಿಸಿ ಕೊಡುತ್ತೇನೆ. ನೀವು ಈ ಕಟ್ಟಡ ಬಿಟ್ಟು ಕೊಡಿ ಎಂದು ಕೇಳುತ್ತಾ ಇದ್ದಾರೆ. ಅದೂ ಅವರು ಕೇಳುತ್ತಿಲ್ಲ, ಈಗ ಪ್ರೊಪೋಜಲ್ ಡಿ.ಐ.ಜಿ. ಆಫೀಸಿಗೆ ಬಂದಿದೆ. ಆದುದರಿಂದ ಏಕೆ ತಾವು ಇದಕ್ಕೆ ಒಪ್ಪಿಗೆ ಕೊಟ್ಟು ಕಟ್ಟಡ ಕಟ್ಟಿಸಿಕೊಳ್ಳಬಾರದು ಎಂದು ನಾನು ಕೇಳುತ್ತೇನೆ.

ಶ್ರೀಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ ಖಾಸಗಿ ಕಟ್ಟಡಕ್ಕೆ ಹೋಗುವ ಬದಲು ಹೊಸದಾಗಿ ನಮ್ಮ ಸರ್ಕಾರವೇ ಕಟ್ಟಡ ಕಟ್ಟಿಸುತ್ತದೆಂದು, ನಾನು ಹೇಳುತ್ತಾ ಇದ್ದೇನೆ.

ಉಚ್ಚನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಪ್ರಕರಣಗಳು

48 - ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1993ನೇ ಡಿಸೆಂಬರ್ ಅಖೈರುವರೆಗೆ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಎಷ್ಟು ಮೊಕದ್ದಮೆಗಳು ಇತ್ಯರ್ಥವಾಗದೆ ಉಳಿದಿರುವುದು.

ಆ) ಅವುಗಳಲ್ಲಿ ಕ್ರಿಮಿನಲ್ ಹಾಗೂ ಸಿವಿಲ್ ಮೊಕದ್ದಮೆಗಳ ಸಂಖ್ಯೆ ಎಷ್ಟು?

ಇ) ಶೀಘ್ರ ನ್ಯಾಯ ದೊರೆಯುವುದಕ್ಕಾಗಿ ಬೇಗನೆ ಇತ್ಯರ್ಥಗೊಳಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) 31-12-1993ಕ್ಕೆ 1,39,274 ಪ್ರಕರಣಗಳು ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತವೆ.

ಆ) ಸಿವಿಲ್ ಪ್ರಕರಣಗಳು 1,36,038
ಕ್ರಿಮಿನಲ್ ಪ್ರಕರಣಗಳು 3,236
ಒಟ್ಟು 1,39,274

ಇ) ಉಚ್ಚ ನ್ಯಾಯಾಲಯದಲ್ಲಿರುವ 28 ಖಾಯಂ, ರೆಗ್ಯೂಲರ್ ಹಾಗೂ 2 ಹೆಚ್ಚುವರಿ ನ್ಯಾಯಾಧೀಶರುಗಳ ಹುದ್ದೆಗಳಲ್ಲಿ 5 ಖಾಯಂ: ರೆಗ್ಯೂಲರ್ ಹಾಗೂ 1 ಹೆಚ್ಚುವರಿ ನ್ಯಾಯಾಧೀಶರುಗಳ ಹುದ್ದೆಗಳು ಖಾಲಿ ಇರುತ್ತವೆ. ಈಗ ಖಾಲಿ ಇರುವ ಹುದ್ದೆಗಳನ್ನು ಆದಷ್ಟು ಬೇಗ ತುಂಬುವಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಕೋರಿದೆ.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಅಧ್ಯಕ್ಷರೇ, 1993 ಡಿಸೆಂಬರ್ ಆಖೈರ್ ವರೆಗೂ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಉಳಿದಿರುವ 1 ಲಕ್ಷದ 39 ಸಾವಿರದ 274 ಪ್ರಕರಣಗಳು. ಇದು ಏಕೆ ಹೀಗೆ ಉಳಿದಿದೆ ಎಂದು ಹೇಳುವಾಗ ಅನೇಕ ನ್ಯಾಯಾಧೀಶರುಗಳ ಹುದ್ದೆ ಅಲ್ಲಿ ಖಾಲಿ ಇವೆ ಎಂದಿದ್ದಾರೆ. ಹಾಗೂ ಅದನ್ನು ತುಂಬಲಿಕ್ಕೆ ಕೇಂದ್ರಕ್ಕೆ ಕೋರಲಾಗಿದೆ ಎಂದು ಹೇಳುತ್ತಾರೆ. ಅದು ಆದಷ್ಟು ಬೇಗ ಮಂಜೂರಾಗಿ ಬಂದು ನ್ಯಾಯಾಧೀಶರ ಹುದ್ದೆಗಳು ತುಂಬಿ ಪ್ರಕರಣಗಳು ಆದಷ್ಟು ಬೇಗ ಇತ್ಯರ್ಥ ಆಗುವ ಹಾಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಸ್ವಾಮಿ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಈ ಹುದ್ದೆಗಳನ್ನು ತುಂಬಿಸಲಿಕ್ಕೆ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ನಮ್ಮ ಸಮಾಲೋಚನೆಯಿಂದ ಮತ್ತು ಕೇಂದ್ರ ಸರ್ಕಾರ ಕೂಡ ಮಂಜೂರು ಮಾಡುತ್ತಾ ಇದೆ. ಆ ಹುದ್ದೆಗಳನ್ನು ತುಂಬಿಸತಕ್ಕಂಥ ಪ್ರಕ್ರಿಯೆ ಬಹಳ ಶೀಘ್ರವಾಗಿ ಆಗುತ್ತಾ ಇದೆ ಎಂಬ ಒಂದು ಸಂತೋಷದ ವರ್ತಮಾನವನ್ನು ತಮಗೆ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ.

ಲೋಕಾಯುಕ್ತದವರಿಂದ ನಡೆದಿರುವ ದಾಳಿಯ ಪ್ರಕರಣಗಳನ್ನು ಕುರಿತು

24 - ಶ್ರೀ ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಕರ್ನಾಟಕ ಲೋಕಾಯುಕ್ತವು ಎಷ್ಟು ಲಂಚಗುಳಿತನ ಪ್ರಕರಣಗಳಲ್ಲಿ ದಾಳಿ ನಡೆಸಿರುತ್ತದೆ?

ಆ) ದಾಳಿ ನಡೆಸಿರುವ ಪ್ರಕರಣಗಳ ಪೈಕಿ ಎಷ್ಟು ಜನರ ಮೇಲೆ ಲಂಚಗುಳಿತನ ಪ್ರಕರಣಗಳು ಸಾಬೀತಾಗಿರುತ್ತದೆ.

ಇ) ಸಾಬೀತಾದ ಪ್ರಕರಣಗಳಲ್ಲಿ, ಎಷ್ಟು ಜನರ ಮೇಲೆ ಕ್ರಮ ಕೈಗೊಳ್ಳಲಾಗಿರುತ್ತದೆ?

ಈ) ಅದಕ್ಷ, ಅಪ್ರಮಾಣಿಕ ಅಧಿಕಾರಿಗಳು ಲೋಕಾಯುಕ್ತದಲ್ಲಿಯೇ ಇರುವುದು ನಿಜವೇ?

ಉ) ಲೋಕಾಯುಕ್ತ ಅಧಿಕಾರಿಗಳೆ ಸುಳ್ಳು ಅರ್ಜಿಗಳನ್ನು ಸೃಷ್ಟಿಸಿ ಅಧಿಕಾರಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) 35 ಪ್ರಕರಣಗಳು

ಆ) 35 ದಾಳಿ ಪ್ರಕರಣಗಳ ಪೈಕಿ, 4 ಪ್ರಕರಣಗಳು ಸಾಬೀತಾಗಿದ್ದು, ಅವುಗಳ ಬಗ್ಗೆ ಅಭಿಯೋಗ ನಡೆಸಲು ಶಿಫಾರಸು ಮಾಡಲಾಗಿದೆ.

ಇ) 3 ದಾಳಿಗಳ ಪ್ರಕರಣಗಳಲ್ಲಿ ಮೊಕದ್ದಮೆ ನ್ಯಾಯಾಲಯದಲ್ಲಿ ಸಲ್ಲಿಸಿದೆ. ಒಂದು ಪ್ರಕರಣದಲ್ಲಿ ಮಾತ್ರ ಅಭಿಯೋಜನೆಗೆ ಕರ್ನಾಟಕ ಲೋಕಾಯುಕ್ತವು ಸರ್ಕಾರದ : ಇಲಾಖಾ ಅನುಮತಿಯನ್ನು ಕೋರಿದೆ.

ಈ) - ಇಲ್ಲ-

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಲೋಕಾಯುಕ್ತ ಕಳೆದ ಮೂರು ವರ್ಷಗಳಲ್ಲಿ 35 ಲಂಚಗುಳಿತನ ಪ್ರಕರಣಗಳಲ್ಲಿ ದಾಳಿ ಮಾಡಿದೆ ಎಂದು ಹೇಳಿದ್ದಾರೆ. 3 ವರ್ಷಗಳ 35 ಪ್ರಕರಣಗಳಲ್ಲಿ ದಾಳಿ ಮಾಡಿದೆ ಅಂದರೆ ಅದು ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿರುತ್ತದೆಯೇ ಇಲ್ಲವೇ ಎನ್ನುವುದಕ್ಕೆ ಸಾಕ್ಷಿ ಅಲ್ಲವೇ ಎಂದು ಕೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮತ್ತೆ 35 ಪ್ರಕರಣಗಳಲ್ಲಿ ಎಷ್ಟು ಅಧಿಕಾರಿಗಳ ಮೇಲೆ ಲಂಚಗುಳಿತನ ಪ್ರಕರಣಗಳಲ್ಲಿ ದಾಳಿ ಆಗಿದೆ ಮತ್ತು ರಾಜಕೀಯದಲ್ಲಿ ಅಧಿಕಾರದಲ್ಲಿರತಕ್ಕಂಥವರ ಮೇಲೆ ದಾಳಿ ನಡೆದಿದೆ ಎನ್ನುವುದನ್ನು ದಯಮಾಡಿ ಮುಖ್ಯಮಂತ್ರಿಗಳು ತಿಳಿಸಬೇಕು. ಹಾಗೆಯೇ 35 ಪ್ರಕರಣಗಳ ಪೈಕಿ 4 ಪ್ರಕರಣಗಳು ಮಾತ್ರ ಸಾಬೀತಾಗಿದೆ ಎಂದು ಹೇಳುತ್ತಾರೆ. ಅಂದರೆ ಅದು 11 ಪರ್ಸೆಂಟ್ ಆಗುತ್ತದೆ. 11 ಪರ್ಸೆಂಟ್ ಅಂದರೆ ಲಂಚ ತೆಗೆದುಕೊಂಡು ಸರಿಯಾಗಿ ಅದನ್ನು ಪ್ರಸೆಂಟ್ ಮಾಡಲಿಕ್ಕೆ ಇವರು ಲೋಕಾಯುಕ್ತ ಅಧಿಕಾರಿಗಳು ಸರಿಯಾಗಿ ದಾಖಲೆ ಒದಗಿಸಿಲ್ಲ. ಆದ್ದರಿಂದ ಅದು ಸಾಬೀತು ಆಗುತ್ತಿಲ್ಲ ಎನ್ನುವುದು ನಿಜವೇ? ಅದನ್ನು ದಯಮಾಡಿ ತಿಳಿಸಬೇಕು. ಮತ್ತೆ ಲಂಚಗುಳಿತನ ಪ್ರಕರಣದ ಮೇಲೆ ದಾಳಿ ನಡೆಸುವವರೇ ಲಂಚ ತೆಗೆದುಕೊಳ್ಳುತ್ತಾರೆ. ಅವರು ಲಂಚ ತೆಗೆದುಕೊಳ್ಳುವುದಿಲ್ಲ ಎನ್ನತಕ್ಕಂಥ ಆತ್ಮ ವಿಶ್ವಾಸ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, 35 ರೈಡುಗಳ ಪೈಕಿ 4 ಕೇಸುಗಳಲ್ಲಿ ಮೊಕದ್ದಮೆಗಳನ್ನು ಸಂಬಂಧಪಟ್ಟಂಥಹ ನ್ಯಾಯಾಲಯದಲ್ಲಿ ಈಗಾಗಲೇ ದಾಖಲು ಮಾಡಲಾಗಿದೆ. ಅದರಲ್ಲಿ 3 ಕೇಸುಗಳಲ್ಲಿ ಚಾರ್ಜ್‌ಶೀಟ್ ಆಗಿದೆ. ಒಂದು ಕೇಸು ಸಂಬಂಧಪಟ್ಟಂತಹ ಅಧಿಕಾರಿಗಳ ಮಂಜೂರಾತಿ ಪಡೆಯಲಿಕ್ಕೆ ಹೋಗಿದೆ. ಮತ್ತೆ ಇನ್ನೊಂದೆರಡು ಕೇಸುಗಳಲ್ಲಿ 'ಬಿ' ರಿಪೋರ್ಟ್ ಕೊಟ್ಟಿದ್ದಾರೆ. ಇನ್ನುಳಿದ 29 ಕೇಸುಗಳು ಬೇರೆ ಬೇರೆ ಹಂತದಲ್ಲಿ ತನಿಖೆಯಲ್ಲಿವೆ. ತಾವು ದಾಳಿ ನಡೆಸುವವರೇ ಲಂಚ ತೆಗೆದುಕೊಳ್ಳುತ್ತಾರೆ ಎಂದು ಹೇಳಿ ಗಂಭೀರವಾದ ಆಪಾದನೆಯನ್ನು ಮಾಡಿದ್ದೀರಿ; ಅದರ ಬಗ್ಗೆ ಮಾಹಿತಿ ಸ್ವಲ್ಪ ಇದ್ದರೆ ನನಗೆ ಒಪ್ಪಿಸಿದರೆ ಅದಕ್ಕೆ ನಾವು ಪ್ರತ್ಯೇಕವಾಗಿ ಲೋಕಾಯುಕ್ತರ ಜೊತೆಯಲ್ಲಿ ಮಾತನಾಡಿಕೊಂಡು ಇದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬಹುದು. ಲೋಕಾಯುಕ್ತ ಇನ್ನೂ ಚುರುಕಾಗಿ ಮಾಡಲಿಕ್ಕೆ ನಾನು ಲೋಕಾಯುಕ್ತರ ಜೊತೆಯಲ್ಲಿ ಸಮಾಲೋಚನೆ ಮಾಡುತ್ತೇನೆ. ಅದು ಸ್ವತಂತ್ರವಾದ ಸಂಸ್ಥೆ ಅದರಲ್ಲಿ ಸ್ವತಂತ್ರವಾದಂತಹ ಅಧಿಕಾರಿಗಳು ಇರುತ್ತಾರೆ. ನಾನು ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಈ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲಿಕ್ಕೆ ಬಹಳ ಕ್ಷಿಪ್ರವಾದಂತಹ ಹಾಗೂ ಪರಿಣಾಮಕಾರಿಯಾದಂತಹ ಜಾಲ ಹೂಡಲಿಕ್ಕೆ ಏನು ಸಾಧ್ಯವಾಗುತ್ತದೆಯೋ ಅದರ ಬಗ್ಗೆ ನಾನು ಸಮಾಲೋಚನೆ ಮಾಡುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಏತಕ್ಕೆ ಗಂಭೀರವಾದ ಆರೋಪ ಮಾಡಿದೆ ಅಂದ್ರೆ ಕೇವಲ 11 ಪರ್ಸೆಂಟ್ ಪ್ರಕರಣಗಳು ಮಾತ್ರ ಸಾಬೀತು ಆಗುತ್ತಾ ಇದೆ. ಅಂದ್ರೆ ಲೋಕಾಯುಕ್ತದವರು ಸರಿಯಾಗಿ ಕೇಸುಗಳನ್ನು ಪ್ರೆಜೆಂಟ್ ಮಾಡುತ್ತಾ ಇಲ್ಲ, ಅದಕ್ಕೋಸ್ಕರ ನಾನು ಅದನ್ನು ಹೇಳಿದ್ದೇನೆ. ಮತ್ತೆ ಎಲ್ಲಿಯೂ ಕೂಡಬೇಡ ಎಂದ ಅಧಿಕಾರಿಗಳನ್ನು ತಾವು ಲೋಕಾಯುಕ್ತಕ್ಕೆ ನೇಮಿಸುತ್ತಾ ಇದ್ದೀರಿ. ಅದರಲ್ಲೂ ಕೂಡ ಅದಕ್ಷ ಅಪ್ರಮಾಣಿಕರನ್ನು ಇಟ್ಟುಕೊಂಡು ಈ ಸಾರ್ವಜನಿಕ ಕ್ಷೇತ್ರವನ್ನು ಅಥವಾ ಸರ್ಕಾರದಲ್ಲಿ ಸ್ವಚ್ಛತೆಯನ್ನು ತರಲಿಕ್ಕೆ ಸಾಧ್ಯ ಇದೆಯೇ ಎನ್ನುವುದನ್ನು

ದಯಮಾಡಿ ತಾವು ತಿಳಿಸಬೇಕು. ಮತ್ತೆ ಅಲ್ಲಿ ಅಪ್ರಾಮಾಣಿಕ ಅಧಿಕಾರಿಗಳು ಏನಿದ್ದಾರೆ ಅವರೇ ಸುಳ್ಳು ಅರ್ಜಿಗಳನ್ನು ಸೃಷ್ಟಿ ಮಾಡಿ ಅಧಿಕಾರಿಗಳಿಂದ ಮತ್ತು ಇತರೆಯವರಿಂದ ಹಣವನ್ನು ಬಹಳ ವಸೂಲಿ ಮಾಡುತ್ತಿದ್ದಾರೆ ಎನ್ನತಕ್ಕಂಥ ಆರೋಪ ಇದೆ. ಇದು ಬಹಳ ಗಂಭೀರವಾದ ಆರೋಪ. ಅವರೇ ಸುಳ್ಳು ಅರ್ಜಿಗಳನ್ನು ಸೃಷ್ಟಿಮಾಡುವುದು. ಅಧಿಕಾರಿಗಳ ಹತ್ತಿರ ಹೋಗಿ ಹಣ ವಸೂಲಿ ಮಾಡತಕ್ಕಂಥಾದ್ದು ಈ ವಿಷಯ ನಿಜವೇ? ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ದಯಮಾಡಿ ತಾವು ತಿಳಿಸಬೇಕೆಂದು ಕೋರುತ್ತೇನೆ. ಮತ್ತೆ ಸ್ವಚ್ಛ ಸರ್ಕಾರ ಕೊಡಬೇಕು ಎನ್ನತಕ್ಕಂಥ ವಿಶ್ವಾಸ ಸರ್ಕಾರಕ್ಕೆ ಇದ್ದರೆ ಕರ್ನಾಟಕ ಲೋಕಾಯುಕ್ತದ ದಕ್ಷತೆಯನ್ನು ಹೆಚ್ಚಿಸಲಿಕ್ಕೆ ಸರ್ಕಾರ ಏನಾದರೂ ಧೃಢನಿರ್ಧಾರಗಳನ್ನು ಕೈಗೊಳ್ಳುತ್ತದೆಯೇ?

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳ ಬಹಳ ಗಂಭೀರವಾದ ವಿಚಾರಗಳನ್ನು ಹೇಳಿದ್ದಾರೆ. ಇದು ಪರಿಶೀಲನೆಗೆ ಯೋಗ್ಯವಾದುದು ಮತ್ತು ಗಂಭೀರವಾಗಿ ವಿಚಾರಮಾಡಬೇಕಾಗುತ್ತದೆ. ಈ ಲೋಕಾಯುಕ್ತವನ್ನು ಬಲಪಡಿಸಲಿಕ್ಕೆ ಏನಾದರೂ ಆಡಳಿತಾತ್ಮಕವಾದಂತಹ ತೊಂದರೆ ಇದ್ದರೆ ಲೋಕಾಯುಕ್ತರ ಜೊತೆಯಲ್ಲಿ ಅಲ್ಲಿರತಕ್ಕಂಥ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಅವರ ಜೊತೆಯಲ್ಲಿಯೂ ಕೂಡ ಮಾತನಾಡುತ್ತೇನೆ. ನಮ್ಮ ಸರ್ಕಾರದ ಉದ್ದೇಶ ಬಹಳ ಸ್ಪಷ್ಟ ಇದೆ. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕು ಮತ್ತು ಸರಿಯಾದಂತಹ ಒಂದು ನಿರ್ಮಲವಾದಂತಹ ಆಡಳಿತವನ್ನು ಜನಗಳಿಗೆ ಕೊಡಬೇಕು ಎನ್ನುವವ ಒಂದು ಉದ್ದೇಶ ನಮಗಿದೆ. ಆ ಉದ್ದೇಶಕ್ಕೆ ನಾವು ಕಟಿಬದ್ಧರಾಗಿದ್ದೇವೆ. ಅದರದೃಷ್ಟಿಯಲ್ಲಿ ಹೋಗಲಿಕ್ಕೆ ಲೋಕಾಯುಕ್ತ ಪೂರಕವಾದಂತಹ ಕೆಲಸ ಬಹಳ ಹೆಚ್ಚಾಗಿ ಮಾಡಬೇಕಾಗಿದೆ. ಜನಗಳಲ್ಲಿ ಭಯ ಇರಬೇಕಾಗುತ್ತದೆ ಮತ್ತು ಅದಕ್ಕೆ ಸರಿಯಾದಂತಹ ಒಂದು ದೃಷ್ಟಿಯಲ್ಲಿ ನಾವು ಹೋಗಬೇಕಾಗುತ್ತದೆ. ಆದ್ದರಿಂದ ತಾವು ಹೇಳಿದಂತಹ ಎಲ್ಲಾ ವಿಚಾರಗಳನ್ನು ಪರಿಗಣನೆಗೆ ತೆಗೆದುಕೊಂಡು ಲೋಕಾಯುಕ್ತವನ್ನು ಬಲಪಡಿಸಲಿಕ್ಕೆ ಅಥವಾ ಅದಕ್ಕೆ ಬೇಕಾಗಿರತಕ್ಕಂಥ ಸ್ಟ್ರಕ್ಚರಲ್ ಚೇಂಜಸ್ ಏನಾದರೂ ಅವಶ್ಯಕತೆ ಇದ್ದರೆ ಅದರ ಬಗ್ಗೆ ಕೂಡ ನಾವು ಪ್ರತ್ಯೇಕವಾಗಿ ಲೋಕಾಯುಕ್ತರ ಜೊತೆಯಲ್ಲಿ ಮಾತನಾಡುತ್ತೇವೆ. ಕಾನೂನು ಪಂಡಿತರ ಜೊತೆಯಲ್ಲಿ ಕೂಡ ಮಾತನಾಡಿಕೊಂಡು ಅನೇಕ ವರ್ಷಗಳ ಒಂದು ಅನುಭವದಿಂದ ಲೋಕಾಯುಕ್ತ ಪರಿಣಾಮಕಾರಿಯಾಗಿ ಕೆಲಸ ಮಾಡಲಿಕ್ಕೆ ಕಾನೂನು ತಡೆ ಅಥವಾ ಅದರ ಸ್ಟ್ರಕ್ಚರಲ್ ಚೇಂಜಸ್ನಲ್ಲಿ ಏನಾದರೂ ಬದಲಾವಣೆಯಾಗಬೇಕಾದಂತಹ ಪರಿಸ್ಥಿತಿ ಬಂದರೆ ಅದನ್ನು ಸರಿ ಮಾಡುತ್ತೇವೆ ಒಟ್ಟು ಅಭಿಪ್ರಾಯದಲ್ಲಿ ಲೋಕಾಯುಕ್ತವನ್ನು ಹೆಚ್ಚುಬಲಪಡಿಸಿ ಭ್ರಷ್ಟಾಚಾರವನ್ನು ಮೂಲೋತ್ಪಾಟನೆ ಮಾಡಲಿಕ್ಕೆ ಬೇಕಾದಂತಹ ಎಲ್ಲಾ ಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ.

ಮಲೆನಾಡು ಅಭಿವೃದ್ಧಿ ಯೋಜನೆಗೆ ಬಿಡುಗಡೆ ಮಾಡಿದ ಹಣದ ವಿವರ

287. - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಪರಿಸರ ಮತ್ತು ಜೀವಪರಿಸರ ಶಾಸ್ತ್ರ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92, 1992-93 ಹಾಗೂ 1993-94ರಲ್ಲಿ ರಾಜ್ಯದ ಆಯವ್ಯಯದಲ್ಲಿ ಮಲೆನಾಡು ಅಭಿವೃದ್ಧಿ ಯೋಜನೆಗಳಿಗೆ ಒದಗಿಸಿದ ಹಣವೆಷ್ಟು? ಹಾಗೂ ಈವರೆಗೆ ಸರ್ಕಾರ ಬಿಡುಗಡೆ ಮಾಡಿದ ಮತ್ತು ಖರ್ಚು ಮಾಡಿದ ಹಣವೆಷ್ಟು ?

ಆ) ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ ಜಿಲ್ಲಾವಾರು ಆಡಳಿತಾತ್ಮಕ ಅನುಮತಿ ನೀಡಿದ ಕಾಮಗಾರಿಗಳು ಯಾವುವು ಮತ್ತು ಅದರ ಅಂದಾಜು ಮೊತ್ತವೆಷ್ಟು ಹಾಗೂ ಸಾಧಿಸಿದ ಪ್ರಗತಿಯೇನು?

ಇ) *ಮಲೆನಾಡು ಅಭಿವೃದ್ಧಿ ಕಾಮಗಾರಿಗಳಿಗೆ 1994ರ ಮಾರ್ಚ್ ಅಂತ್ಯದವರೆಗೆ ಎಷ್ಟು ಹಣ ಬಿಡುಗಡೆ ಮಾಡಲು ಸರ್ಕಾರ ನಿರ್ಣಯಿಸಿರುತ್ತದೆ ಹಾಗೂ ಯಾವಾಗ ಪೂರ್ಣ ಹಣವನ್ನು ಬಿಡುಗಡೆ ಮಾಡಲಾಗುವುದು?*

ಶ್ರೀ ಎನ್. ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು.)

ಅ) ನಿಗದಿಪಡಿಸಿದ ಹಣ

ವರ್ಷ	ಕೋಟಿ ರೂ.ಗಳಲ್ಲಿ
1991-92	10.00 ಕೋಟಿ ರೂ.
1992-93	35.00
1993-94	33.00

ಬಿಡುಗಡೆಯಾದ ಮೊತ್ತ

ವರ್ಷ	ಕೋಟಿ ರೂ.ಗಳಲ್ಲಿ
1991-92	10.00 ಕೋಟಿ ರೂ.
1992-93	-
1993-94	20.00 ಕೋಟಿ ರೂ.

ಮಲೆನಾಡು ಅಭಿವೃದ್ಧಿ ಮಂಡಳಿಯು ಇದುವರೆಗೂ ಜಿಲ್ಲಾಧಿಕಾರಿಗಳಿಗೆ 9.2 ಕೋಟಿ ರೂ.ಗಳನ್ನು, ಕಾಮಗಾರಿಗಳನ್ನು ತೆಗೆದುಕೊಳ್ಳಲು ಬಿಡುಗಡೆ ಮಾಡಿದೆ.

ಆ) 2188 (ವಿವರಗಳನ್ನು ಲಗತ್ತಿಸಿದೆ)

ರಸ್ತೆಗಳು ಸೇತುವೆಗಳು, ಶಾಲಾ ಕಟ್ಟಡಗಳು, ಅಂಗನವಾಡಿ ಕಟ್ಟಡಗಳು, ಕುಡಿಯುವ ನೀರು ಪೂರೈಕೆ ಯೋಜನೆಗಳು ಇತ್ಯಾದಿ ಇದರ ಒಟ್ಟು ಅಂದಾಜು ಮೊತ್ತ 40.00 ಕೋಟಿ ರೂ.ಗಳಿರುತ್ತದೆ. ಮತ್ತು ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿರುತ್ತದೆ.

ಇ) ಈಗಾಗಲೇ ಸರ್ಕಾರವು 20.00 ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದ್ದು ಸಂಪನ್ಮೂಲಗಳನ್ನು ಅವಲಂಬಿಸಿ, ಉಳಿದ ಹಣವನ್ನು 94 ಮಾರ್ಚ್ 31ರ ಒಳಗೆ ಬಿಡುಗಡೆ ಮಾಡಲು ಉದ್ದೇಶಿಸಿದೆ.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ

ಕ್ರಮ ಸಂಖ್ಯೆ	ಜಿಲ್ಲೆ	ಕಾಮಗಾರಿಗಳ ಸಂಖ್ಯೆ
1.	ಶಿವಮೊಗ್ಗ	405
2.	ಬೆಳಗಾಂ	279
3.	ಉತ್ತರ ಕನ್ನಡ	103
4.	ದಕ್ಷಿಣ ಕನ್ನಡ	172
5.	ಮೈಸೂರು	297
6.	ಹಾಸನ	236
7.	ಕೊಡಗು	100
8.	ಚಿಕ್ಕಮಗಳೂರು	205
9.	ಧಾರವಾಡ	391
	ಒಟ್ಟು	2188

ಶ್ರೀ ಬಿ.ಎಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಮಲೆನಾಡು ಅಭಿವೃದ್ಧಿ ಯೋಜನೆಯನ್ನು 1991-92ರಲ್ಲಿ 1992-93 ಹಾಗೂ 1993-94ರಲ್ಲಿ ಪ್ರಾರಂಭಿಸಿ ಆಯವ್ಯಯದಲ್ಲಿ 78 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿತ್ತು ಎಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಆದರೆ ನಾನು ಕೇಳುತ್ತೇನೆ, ಬಿಡುಗಡೆ ಆದ ಹಣ ಎಷ್ಟು? ನಿಗದಿಪಡಿಸಿದ್ದು 78 ಕೋಟಿ 1991-92ರಲ್ಲಿ 10 ಕೋಟಿ 1992-93ರಲ್ಲಿ 35 ಕೋಟಿ, 1993-94ರಲ್ಲಿ 33 ಕೋಟಿ. ಒಟ್ಟು 78 ಕೋಟಿ ನಿಗದಿಪಡಿಸಿದ್ದರೂ 91-92ರಲ್ಲಿ 10ಕೋಟಿ ಮಾತ್ರ ಬಿಡುಗಡೆ ಆಗಿದೆ. 92-93ರಲ್ಲಿ ಬಿಡುಗಡೆ ಆಗಿಲ್ಲ; 93-94ರಲ್ಲಿ 20 ಕೋಟಿ ಮಾತ್ರ ಬಿಡುಗಡೆಯಾಗಿದೆ ಎಂದು ಹೇಳುತ್ತಾರೆ. ಖರ್ಚು ಎಷ್ಟು ಆಗಿದೆ ಎಂದು ಕೇಳಿದರೆ ಇಲ್ಲಿ ಉತ್ತರ ಇಲ್ಲ ಆದ್ದರಿಂದ ಮಾನ್ಯ ಸಚಿವರು ದಯವಿಟ್ಟು 1991ರಿಂದ ಇಲ್ಲಿಯವರೆಗೆ ಮಲೆನಾಡು ಅಭಿವೃದ್ಧಿಯಲ್ಲಿ ಖರ್ಚಾದ ಹಣ ಎಷ್ಟು? ಏನು ಕೆಲಸ ಮಾಡಲಾಗಿದೆ, ನಿರ್ದಿಷ್ಟವಾಗಿ ಎಷ್ಟು ಹಣ ಕೆಲಸಕ್ಕೆ ವೆಚ್ಚವಾಗಿದೆ ಎನ್ನುವುದನ್ನು ದಯವಿಟ್ಟು ಕೊಡಬೇಕು. ಇದಕ್ಕೆ ಉತ್ತರ ಕೊಡಬೇಕು. ಎರಡನೆಯದಾಗಿ ಈ ಹಣದಲ್ಲಿ ಬಿಡುಗಡೆ ಆಗಿದ್ದು 30 ಕೋಟಿ ಎಂದು ಹೇಳಿದ್ದಾರೆ. ಅದರಲ್ಲಿ ಕೇವಲ 9.2 ಕೋಟಿ ಮಾತ್ರ ಜಿಲ್ಲಾಧಿಕಾರಿಗಳಿಗೆ. ಕೊಟ್ಟಿದ್ದೇವೆಂದು ಹೇಳುತ್ತಾರೆ. ಅದರಲ್ಲಿ ಕೇವಲ 9.2 ಕೋಟಿ ಮಾತ್ರ ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಅಂದರೆ ಉಳಿದ ಹಣ ಇನ್ನೂ ಕ್ಯಾಶ್ ಇಲ್ಲ. ಇವರ ಸರ್ಕಾರದಲ್ಲಿ ಎಲ್.ಓ.ಸಿ. ಅಂದ್ರೆ ಕಾಗದದ ಮೇಲೆ ಅನುಮತಿ ಸಿಕ್ಕಿದೆಯೇ ಹೊರತು ಹಣ ಬಿಡುಗಡೆ ಆಗಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಇಲ್ಲಿ 9.2 ಕೋಟಿ ಹಣ ಮಾತ್ರ ಬಿಡುಗಡೆ ಮಾಡಿದ್ದಾರೆ. ಆದರಲ್ಲಿ ಕೆಲಸ ಎಷ್ಟು ಆಗಿದೆ ಅಂದರೆ ಆ ವಿವರ ಕೊಟ್ಟಿಲ್ಲ. 78 ಕೋಟಿಯಲ್ಲಿ ಬಿಡುಗಡೆ ಆಗಿದ್ದು 30 ಕೋಟಿ, ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದು 9.2 ಕೋಟಿ ಅಂದರೆ ಎಷ್ಟು ಹಣ ಈ ದಿವಸಕ್ಕೆ ಅಭಿವೃದ್ಧಿ ಕೆಲಸಕ್ಕೆ ಖರ್ಚಾಗಿದೆ ಎಂದು ನಿರ್ದಿಷ್ಟ ಉತ್ತರ ಕೇಳುತ್ತಿದ್ದೇನೆ. ಆ ನಂತರ ಈ ಒಂದು ಪ್ರೊಸೀಜರ್ ಮಲೆನಾಡು ಅಭಿವೃದ್ಧಿಯಿಂದ ಜಿಲ್ಲಾ ಪರಿಷತ್ತು ಚೀಫ್ ಪ್ಲಾನಿಂಗ್ ಆಫೀಸರ್ ಜಿಲ್ಲಾಧಿಕಾರಿ ಎಕ್ಸಿಕ್ಯೂಟೀವ್ ಇಂಜಿನಿಯರ್, ಈ ಪ್ರೊಸೀಜರ್ ಏನಾದರೂ ಬದಲಾವಣೆ ಮಾಡಿ ನೇರವಾಗಿ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಹಣ ಬಿಡುಗಡೆ ಮಾಡುವ ವ್ಯವಸ್ಥೆ ಮಾಡುತ್ತೀರಾ? ಆ ನಂತರ 20 ಕೋಟಿ ನಿಮ್ಮ ಹತ್ತಿರ ಇದೆ ಎಂದು ಹೇಳಿದಿರಿ. 9.2 ಕೋಟಿ ಜಿಲ್ಲಾಧಿಕಾರಿಗಳಿಗೆ ಕೊಟ್ಟ ನಂತರ ಉಳಿದ ಹಣವನ್ನು ಜಿಲ್ಲಾಧಿಕಾರಿಗಳಿಗೆ ಏತಕ್ಕೆ ಬಿಡುಗಡೆ ಮಾಡಿಲ್ಲವೆಂದು ದಯವಿಟ್ಟು ಈ ವಿವರಗಳನ್ನು ಕೊಡಿ.

12.20 ಪಿ.ಎಂ.

ಶ್ರೀ ಎನ್.ಜಿ. ಹಾಲಪ್ಪ : ಸನ್ಮಾನ್ಯ ಅಧ್ಯಕ್ಷರೇ, 1992-93ಕ್ಕೆ ಬಜೆಟ್ ಪ್ರಾವಿಜನ್ ಇತ್ತು ಹಣವನ್ನು ಬಿಡುಗಡೆ ಮಾಡಿದ್ದೇವೆ. ಆಗ ಬೋರ್ಡ್ ಕಾನ್ಸಿಟ್ಯೂಟ್ ಆಗಿರಲಿಲ್ಲ, ಈಗ 9.2 ಕೋಟಿ ಮತ್ತು 20 ಕೋಟಿ ರೂಪಾಯಿಗಳ ಕೆಲಸಗಳು ನಡೆಯುತ್ತಾ ಇದೆ. ಅದರ ಬಗ್ಗೆ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ವರ್ಕ್ಸ್ ನಡೆಯುತ್ತಾ ಇದೆ ಎಂಬುದನ್ನು ಮತ್ತು ಆಕ್ಷನ್‌ಪ್ಲಾನ್ ಕೂಡ ಕೊಟ್ಟಿದ್ದೇವೆ. ತಾವುಗಳೇ ಆ ಬೋರ್ಡ್ನ ಮೆಂಬರ್ಸ್ ಇದ್ದೀರಿ. ತಾವುಗಳು ಒಳ್ಳೆಯ ಸಲಹೆಗಳನ್ನು ಕಳುಹಿಸಿದರೆ ಅದನ್ನೆಲ್ಲಾ ಕಾರ್ಯಗತ ಮಾಡುತ್ತೇವೆ. ಹಾಗೆಯೇ ಮಾರ್ಚ್ ಒಳಗಾಗಿ ಇನ್ನುಳಿದ ಪೂರ್ತಿ ಹಣವನ್ನು ಬಿಡುಗಡೆ ಮಾಡುತ್ತೀರಾ ಎಂದು ಕೇಳಿದ್ದೀರಿ. ಬಿಡುಗಡೆ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಆದರೆ ಈವರೆವಿಗೆ ಎಷ್ಟು ಹಣ ಅದಕ್ಕೆ ಖರ್ಚಾಗಿದೆ ಎಂಬ ಬಗ್ಗೆ ಉತ್ತರವನ್ನೇ ಕೊಟ್ಟಿಲ್ಲ. ಸಚಿವರು ಹಾರಿಕೆಯ ಉತ್ತರವನ್ನು ಕೊಡುತ್ತಾರೆ. ನಾನು ನಿರ್ದಿಷ್ಟವಾಗಿ ಉತ್ತರವನ್ನು ಕೇಳುತ್ತೇನೆ. 1991ರಿಂದ ಇಲ್ಲಿಯವರೆಗೆ

ಎಷ್ಟು ಹಣ ಇದಕ್ಕೆ ಖರ್ಚಾಗಿದೆ ಎಂಬ ನಿರ್ದಿಷ್ಟ ಪ್ರಶ್ನೆಯನ್ನು ನಾನು ಕೇಳಬಯಸುತ್ತೇನೆ.

ಶ್ರೀ ಎನ್.ಜಿ.ಹಾಲಪ್ಪ : ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ನಾವು ತಿಳಿಸಿದ್ದೇವೆ. 9 ಕೋಟಿ ರೂಪಾಯಿಗಳನ್ನು ಅಲ್ಲಿಯ ಡೆಪ್ಯುಟಿ ಕಮೀಷನರ್ ಕಡೆಗೆ ಕೊಟ್ಟಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಮುಖ್ಯಮಂತ್ರಿಯವರು 1992ರಲ್ಲಿ ಆಯವ್ಯಯದಲ್ಲಿ 35ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ ಎಂದು ಹೇಳುತ್ತಾ ಇದ್ದಾರೆ. ಮಂಡಳಿಯನ್ನು ರಚಿಸದೆ ಇದ್ದ ಕಾರಣ ಹಣವನ್ನು ಬಿಡುಗಡೆ ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಹಾಗಾದರೆ 1991-92ರಲ್ಲಿ 10 ಕೋಟಿ ರೂಪಾಯಿಗಳು ಆಯವ್ಯಯದಲ್ಲಿತ್ತು. ಆಗಲೂ ಮಂಡಳಿ ರಚನೆಯಾಗಿದ್ದಿಲ್ಲ. ಆದರೂ ಸರಕಾರವು ಹಣವನ್ನು ಬಿಡುಗಡೆ ಮಾಡಿದೆ. 1992-93ರಲ್ಲಿ ಮಾತ್ರ ಮಂಡಳಿ ರಚನೆಯಾಗಿಲ್ಲ ಎಂಬ ಕಾರಣಕ್ಕಾಗಿ ಬಿಡುಗಡೆ ಮಾಡಿಲ್ಲ ಎಂದು ಹೇಳುವುದು ಶುದ್ಧ ಸುಳ್ಳು. ಸರಕಾರದಲ್ಲಿ ಹಣ ಇಲ್ಲ, ಹಣ ಕೊಡಲು ಆಗುವುದಿಲ್ಲ ಎಂದು ಹೇಳಿ. ಮಾನ್ಯ ಮುಖ್ಯಮಂತ್ರಿಯವರು ಕೂಡ ಸದನದಲ್ಲಿಯೇ ಇದ್ದಾರೆ. 1991-92ಕ್ಕೆ ಏನು ಹಣ ಕೊಟ್ಟಿದ್ದೀರಿ ಹಾಗೆಯೇ 1992-93ಕ್ಕೆ 35 ಕೋಟಿ ರೂಪಾಯಿಗಳನ್ನು ಕೊಡುತ್ತೀರಾ? ದಯವಿಟ್ಟು ಅದನ್ನು ಹೇಳಬೇಕು. 1992-93ರಲ್ಲಿ 35 ಕೋಟಿ ರೂಪಾಯಿಗಳನ್ನು ದಯವಿಟ್ಟು ಬಿಡುಗಡೆ ಮಾಡುತ್ತೀರಾ? ಮಲೆನಾಡು ಅಭಿವೃದ್ಧಿ ನಿಗಮ ಸ್ಥಾಪನೆ ಆಗದಿದ್ದರೆ ಅದಕ್ಕೆ ಸರಕಾರ ಕಾರಣವೇ ವಿನಹ ಜನರು ಅಲ್ಲ. ದಯವಿಟ್ಟು ತಾವು ಹಣವನ್ನು ಬಿಡುಗಡೆ ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ನಾನು ಪರಿಶೀಲನೆ ಮಾಡುತ್ತೇನೆ. ಅಕಸ್ಮಾತ್ತಾಗಿ ಕೇಳಿದರೆ ನಾನು ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇವರು ಕೈಲಾಸವನ್ನು ತರುತ್ತೇವೆ ಎಂದೆಲ್ಲಾ ಹೇಳುತ್ತಿದ್ದಾರೆ. ಆದರೆ ಅವರು ಹೇಳತಕ್ಕಂಥ ಮಾತುಗಳು ಸತ್ಯವಲ್ಲ...

ಶ್ರೀ ಎಂ. ವೀರಪ್ಪ ಮೊಯಿಲಿ : ಭೂಲೋಕವನ್ನು ಕೈಲಾಸಕ್ಕೆ ಕಳುಹಿಸಲು ಆಗುವುದಿಲ್ಲ ; ಹಾಗೆಯೇ ಕೈಲಾಸವನ್ನು ಭೂಲೋಕಕ್ಕೆ ತರುವುದಕ್ಕೂ ಆಗುವುದಿಲ್ಲ...

ಅಧ್ಯಕ್ಷರು : ಬನ್ನಿಕೋಡ್ರವರೇ, ತಾವು ಮಾತನಾಡಿದ್ದೀರಿ. ಸಾಕು.. ಈಗ ಮುಂದೂಡಲಾಗಿರುವ ಪ್ರಶ್ನೆಗಳು.

ಮಂಡ್ಯ ನಗರದಲ್ಲಿನ ರಂಗಮಂದಿರ ನಿರ್ಮಾಣ ಕಾರ್ಯಕುರಿತು

65 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿ ರಂಗಮಂದಿರ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆಯೇ?

ಆ) ಈ ನಿರ್ಮಾಣ ಕಾರ್ಯ ಸ್ಥಗಿತಗೊಳ್ಳಲು ಕಾರಣಗಳೇನು?

ಇ) ಸದರಿ ರಂಗಮಂದಿರ ಕಾರ್ಯವನ್ನು ಪುನಃ ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ, ಕ್ರೀಡಾ ರಾಜ್ಯ ಸಚಿವರು) :

ಅ) ಹೌದು

ಆ) ಸಾರ್ವಜನಿಕ ವಂತಿಕೆ ಕೊರತೆಯಿಂದ ಹಾಗೂ ಆಡಳಿತಾತ್ಮಕ ತೊಂದರೆಯಿಂದ.

ಇ) ಈ ಕೆಲಸವನ್ನು ಪ್ರಾರಂಭಿಸಲು ಜಿಲ್ಲಾ ರಂಗಮಂದಿರ ಸಮಿತಿಗೆ ತಿಳಿಸಲಾಗಿದೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಮಾನ್ಯ ಸಚಿವರು ಕೆಲಸ ಪ್ರಾರಂಭ ಮಾಡಲು ಜಿಲ್ಲಾ ರಂಗಮಂದಿರ ಸಮಿತಿಗೆ ತಿಳಿಸಲಾಗಿದೆ ಎಂದು ಹೇಳಿದ್ದಾರೆ. ಹಾಗಾದರೆ ಈ ಕಾರ್ಯವನ್ನು ಯಾವಾಗ ಪ್ರಾರಂಭ ಮಾಡುತ್ತಾರೆ? ಅಲ್ಲಿ ಬಹಳ ಕಾಲದಿಂದ ಸ್ಥಗಿತವಾಗಿರತಕ್ಕಂಥ ಇದರ ನಿರ್ಮಾಣ ಕಾರ್ಯವನ್ನು ವಿಶೇಷ ಕಾಳಜಿ ವಹಿಸಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಪ್ರಾರಂಭ ಮಾಡಿದ್ದಾರೆ. ಮುಖ್ಯಮಂತ್ರಿಯವರು ಆಶ್ವಾಸನೆ ಕೊಟ್ಟಿರುವ ರೀತಿಯಲ್ಲಿ 1994-95ನೇ ಸಾಲಿನಲ್ಲಿ ಈ ಕೆಲಸಕ್ಕೆ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ : ಮಾನ್ಯ ಅಧ್ಯಕ್ಷರೇ, ಮಂಡ್ಯ ರಂಗಮಂದಿರದ ಪರವಾಗಿ ಮಾನ್ಯ ಮುಖ್ಯಮಂತ್ರಿಯವರು ಕೊಟ್ಟ ಆಶ್ವಾಸನೆಯ ಪ್ರಕಾರ ಈಗಾಗಲೇ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಸುಮಾರು 50 ಲಕ್ಷ ರೂಪಾಯಿಗಳಿಗೆ ಆಡಳಿತ ಮಂಜೂರಾತಿಯನ್ನು ಕೂಡ ಕೊಟ್ಟು ಅಲ್ಲಿಯ ಸಾರ್ವಜನಿಕರು ಮತ್ತು ಶಾಸಕರುಗಳ ಸಹಕಾರವನ್ನು ತೆಗೆದುಕೊಂಡು ಆದಷ್ಟು ಶೀಘ್ರವಾಗಿ ನಾವು ಅದನ್ನು ಪೂರ್ಣ ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ನಾನು ಕೊಡುತ್ತೇನೆ.

ಯೋಜನಾ ಆಯೋಗದವರು ನಮ್ಮ ರಾಜ್ಯಕ್ಕೆ 1994 -95ನೇ ಸಾಲಿಗೆ ನಿಗದಿ ಪಡಿಸಿರುವ ಹಣದ ಮೊತ್ತ

96 - ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994 - 95ನೇ ಸಾಲಿನಲ್ಲಿ ಯೋಜನಾ ಆಯೋಗದವರು ನಮ್ಮ ರಾಜ್ಯಕ್ಕೆ ನಿಗದಿಪಡಿಸಿರುವ ಯೋಜನಾ ಹಣದ ಮೊತ್ತವೆಷ್ಟು?

ಆ) ಯಾವ ಯಾವ ವಿಭಾಗಗಳಿಗೆ ಎಷ್ಟೆಷ್ಟು ಹಣ ನಿಗದಿಪಡಿಸಲಾಗಿದೆ?

ಇ) ರಾಜ್ಯ ಸರ್ಕಾರದವರು ಕ್ರೋಢೀಕರಿಸಬೇಕೆಂದಿರುವ ಹಣದ ಮೊತ್ತವೆಷ್ಟು?

ಈ) ಕಾವೇರಿ ಮತ್ತು ಕೃಷ್ಣಾ ನದಿಗಳ ನೀರನ್ನು ಸಕಾಲದಲ್ಲಿ ಉಪಯೋಗಿಸಲು ಮೇಲ್ಕಂಡ ಯೋಜನೆಯಲ್ಲಿ ನಿಗದಿಪಡಿಸಿರುವ ಹಣದ ಮೊತ್ತವೆಷ್ಟು?

ಶ್ರೀ ಟಿ.ಎಂ. ಮಂಜುನಾಥ್ (ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ರಾಜ್ಯ ಮಂತ್ರಿಗಳು) :

ಅ) 3275.00 ಕೋಟಿ ರೂಪಾಯಿಗಳು.

ಆ) ವಲಯವಾರು ಮೊತ್ತದ ಹಂಚಿಕೆಯನ್ನು ಅಂತಿಮಗೊಳಿಸಲಾಗುತ್ತಿದೆ.

ಇ) ರಾಜ್ಯದ ಸಂಪನ್ಮೂಲ: 2094.95 ಕೋಟಿ ರೂಪಾಯಿಗಳು

ಕೇಂದ್ರದ ನೆರವು : 1180.05 ಕೋಟಿ ರೂಪಾಯಿಗಳು

ಈ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊತ್ತವು ಯೋಜನೆಯಲ್ಲಿಯೂ ಮತ್ತು ಕಾವೇರಿ ಯೋಜನೆಯ ಮೊತ್ತವು ಯೋಜನೇತರ ಆಯವ್ಯಯದಲ್ಲಿಯೂ ರೂಪುಗೊಳ್ಳುವುವು. ಇದನ್ನು 1994-95ನೇ ಸಾಲಿಗೆ ಆಯವ್ಯಯ ಅಂದಾಜನ್ನು ರೂಪಿಸುವಾಗ ಪರಿಗಣಿಸಲಾಗುವುದು.

ಶ್ರೀ ಎಂ. ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ ತಾವು ಯೋಜನಾ ಆಯೋಗಕ್ಕೆ ಹೋದಾಗ 3275 ಕೋಟಿ ರೂಪಾಯಿ ಬೇಡಿಕೆಯನ್ನು ಸಬ್ಮಿಟ್ ಮಾಡಿದ್ದೀರಾ? ಅಥವಾ ನೀವು ಹೆಚ್ಚು ಮಾಡಿ, ಅವರು ಕಡಿಮೆ ಮಾಡಿದ್ದಾರೆಯೇ?

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ನಾವು 3220 ಕೋಟಿ ರೂಪಾಯಿಗಳಿಗೆ ಎಂದು ಕೊಟ್ಟಿದ್ದೆವು. ಮಾನ್ಯ ಮುಖ್ಯಮಂತ್ರಿಯವರು ಅದರ ಕೂಲಂಕುಷ ಪರಿಶೀಲನೆ ಮಾಡಿ ಯೋಜನಾ ಇಲಾಖೆಯ ಉಪಾಧ್ಯಕ್ಷರು ಏನಿದ್ದಾರೆ ಅವರು ಇನ್ನೂ ಹೆಚ್ಚಿಗೆ ಕೊಡುತ್ತೇವೆ ಎಂದು ಹೇಳಿ, 3275 ಕೋಟಿಗಳಿಗೆ ನಮ್ಮ 1994-95ನೇ ಸಾಲಿನ ಯೋಜನೆ ವೆಚ್ಚವನ್ನು ನಿಗದಿ ಮಾಡಿದ್ದಾರೆ.

ಶ್ರೀ ಎಂ.ವಿ. ವೆಂಕಟಪ್ಪ : ಇದರಲ್ಲಿ ಮೈದಾನ ಏರಿಯ ಡೆವಲಪ್ಮೆಂಟ್ ಬೋರ್ಡ್ ಎಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ತಾವು ಸೇರಿ ಹೇಳಿದ್ದೀರಿ. ಇದರ ಬಗ್ಗೆ ತಾವುಗಳು ಏನಾದರೂ ಆಲೋಚನೆ ಮಾಡಿ ನಾಳೆ ಬಜೆಟ್ನಲ್ಲಾದರೂ ಒಂದಿಷ್ಟು ಹಣವನ್ನು ಇಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಟಿ.ಎಂ. ಮಂಜುನಾಥ್ : ಮುಖ್ಯಮಂತ್ರಿಯವರು ಈಗಾಗಲೇ ಆ ಬಗ್ಗೆ ಭರವಸೆಯನ್ನು ಕೊಟ್ಟಿದ್ದಾರೆ. ಆದ್ಯತೆಯನ್ನೂ ಕೊಟ್ಟಿದ್ದಾರೆ. ಈ ಬೋರ್ಡನ್ನು ಮಾಡುವುದಕ್ಕೋಸ್ಕರ ಮುಂದಿನ ಆಯವ್ಯಯದಲ್ಲಿ ಹಣವನ್ನು ಇಡಲು ಪ್ರಯತ್ನ ಮಾಡುತ್ತೇವೆ.

2. ಸರ್ಕಾರದ ಭಿತ್ತಿ ಪತ್ರಗಳು ಮತ್ತು ಪ್ರಚಾರ ಪತ್ರಗಳನ್ನು ಅಲ್ಪಸಂಖ್ಯಾಂತರ ಭಾಷೆಯಲ್ಲಿಯೇ ಹೊರಡಿಸಲು ಮತ್ತು

3. ಸರ್ಕಾರದಿಂದ ಹೊರಡಿಸುವ ಅಧಿಸೂಚನೆಗಳು ಆದೇಶಗಳು ಇತ್ಯಾದಿ. ರಾಜ್ಯ ಭಾಷೆಯ ಜೊತೆಗೆ ಅಲ್ಪಸಂಖ್ಯಾತರ ಭಾಷೆಯಲ್ಲಿಯೇ ಹೊರಡಿಸಬೇಕೆಂದು ದಿ: 19-3-93ರಂದು ಹೊರಡಿಸಿದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 223 ಕೆಒಎಲ್ 92 ರಲ್ಲಿ ಆದೇಶಿಸಲಾಗಿದೆ.

ಭಾಷಾ ಅಲ್ಪಸಂಖ್ಯಾತರುಗಳು ಇರುವ ಸ್ಥಳಗಳಿಗೆ ಆಯಾ ಭಾಷೆಗಳನ್ನು ಬಲ್ಲ ನೌಕರರನ್ನು/ ಅಧಿಕಾರಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ತೈನಾತಿಸಲಾಗುತ್ತದೆ.

2ನೇ ಉಪ ಪ್ರಶ್ನೆಗೆ ನೀಡಿರುವ ಉತ್ತರ ಇದಕ್ಕೂ ಹೊಂದುತ್ತದೆ.

ಹಸಿರು ಕಾರ್ಡಿನ ಫಲಾನುಭವಿಗಳ ಸಂಖ್ಯೆ

372 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?.

ಅ) ಬೀದರ್ ಜಿಲ್ಲೆಯಲ್ಲಿ ಹಸಿರು ಕಾರ್ಡು ಹೊಂದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಇನ್ನೂ ಎಷ್ಟು ಜನರು ಹಸಿರು ಕಾರ್ಡಿಗಾಗಿ ಅರ್ಜಿ ಸಲ್ಲಿಸಿದ್ದಾರೆ.

ಇ) ಅಲೆಮಾರಿ ಜನಾಂಗವಾದ ವಡ್ಡರು, ಕಾಡು ಕುರುಬರು, ಮುಂತಾದ ಜನರುಗಳಿಗೆ ಹಸಿರು ಕಾರ್ಡುಗಳನ್ನು ವಿತರಣೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

1,81,803 (ತ್ರಿವರ್ಣ)

ತಾಲ್ಲೂಕುವಾರು ಮಾಹಿತಿ ಈ ಕೆಳಗಿನಂತಿದೆ

ಔರಾದ್	35,209
ಬಸವಕಲ್ಯಾಣ	36,114
ಹುಮ್ನಾಬಾದ್	42,407
ಬಾಲ್ಕಿ	33,895
ಬೀದರ್	34,178
ಒಟ್ಟು	**1,81,803**

ಇಲ್ಲ

ಹಸಿರು (ತ್ರಿವರ್ಣ)ಪಡಿತರ ಚೀಟಿಯನ್ನು ವಾರ್ಷಿಕ ಆದಾಯ ಮಿತಿ ರೂ. 6400ಗಳಿಂತ ಕಡಿಮೆ ಇದ್ದು, ಗ್ರಾಮಾಂತರ ಪ್ರದೇಶದಲ್ಲಿ 20,000 ಜನಸಂಖ್ಯೆಗಿಂತ ಕಡಿಮೆ ಇರುವ ಅರೆಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ಘೋಷಿತವಾದ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನಗಳಿಗೆ ನೀಡಲಾಗುವುದು. ಈ ಅರ್ಹತೆ ಹೊಂದಿದ ಎಲ್ಲಾ ವರ್ಗಗಳ ಜನರಿಗೂ ಈ ಕಾರ್ಡುಗಳನ್ನು ನೀಡಲಾಗುವುದು.

ರೋಗಗ್ರಸ್ತ ಕೈಗಾರಿಕೆಗಳಿಗೆ ಕೇಂದ್ರ ಸರ್ಕಾರದಿಂದ ನೆರವು.

371 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರವು ರಾಜ್ಯದಲ್ಲಿ ಎಷ್ಟು ಕೈಗಾರಿಕೆಗಳನ್ನು ರೋಗಗ್ರಸ್ತ ಕೈಗಾರಿಕೆಗಳೆಂದು ಗುರುತಿಸಿದೆ (ಜಿಲ್ಲಾವಾರು ಅಂಕಿಅಂಶಗಳನ್ನು ಒದಗಿಸುವುದು)

ಆ) ಅವುಗಳಿಗೆ ಕೇಂದ್ರ ಸರ್ಕಾರದಿಂದ (ಪುನಃಶ್ಚೇತನಕ್ಕಾಗಿ)ನೆರವನ್ನೇನಾದರೂ ನೀಡಲಾಗಿದೆಯೇ (ಜಿಲ್ಲಾವಾರು ಅಂಕಿಅಂಶಗಳನ್ನು ನೀಡುವುದು).

ಶ್ರೀ ರಾಮಲಿಂಗರೆಡ್ಡಿ

(ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು)

1985ನೇ ರೋಗಗ್ರಸ್ತ ಕೈಗಾರಿಕೆಗಳ ಪುನಃಶ್ಚೇತನ ಕಾಯ್ದೆ (ವಿಶೇಷ ಉಪಬಂಧ)ಪ್ರಕಾರ, ಕೈಗಾರಿಕಾ ಘಟಕವು ಪ್ರಾರಂಭಿಸಿದ ದಿನದಿಂದ ನಿರಂತರವಾಗಿ ಐದು ವರ್ಷಗಳವರೆಗೆ ನಡೆದು, ಈ ಅವಧಿಯಲ್ಲಿ ಅದು ಭರಿಸಿದ ನಷ್ಟದ ಪ್ರಮಾಣವು ತಾನು ಹೊಂದಿರುವ ನಿವ್ವಳ ಆಸ್ತಿಯ ಸರಿಸಮಕ್ಕೆ ಅಥವಾ ಹೆಚ್ಚಾಗಿ ಇದ್ದಲ್ಲಿ ಘಟಕದ ಪುನಃಶ್ಚೇತನಕ್ಕೆ ಬಿ.ಐ.ಎಫ್.ಆರ್.ಸಂಸ್ಥೆಯಲ್ಲಿ ರೋಗಗ್ರಸ್ತ ಘಟಕವೆಂದು ನೊಂದಾಯಿತ ಬೇಕಾಗುತ್ತದೆ. ಈ ಕಾಯ್ದೆಯ ವ್ಯಾಪ್ತಿಗೆ ಒಳಪಟ್ಟು (1985ರಿಂದ ದಿನಾಂಕ 31.01.94ರವರೆಗೆ) 113 ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ರೋಗಗ್ರಸ್ತ ಘಟಕಗಳ ಪುನಃಶ್ಚೇತನಕ್ಕೆ ಯೋಜನೆಯಡಿಯಲ್ಲಿ ಬಿ.ಐ.ಎಫ್.ಆರ್.ಸಂಸ್ಥೆಯಲ್ಲಿ ನೊಂದಾಯಿಸಿದೆ. (ಪಟ್ಟಿ ಲಗತ್ತಿಸಿದೆ).

ಮೇಲೆ ಉಲ್ಲೇಖಿಸಿದ ಕಾಯ್ದೆಯ ಪ್ರಕಾರ ಕೇಂದ್ರ ಸರ್ಕಾರವು: ರಾಜ್ಯ ಸರ್ಕಾರವು : ಹಣಕಾಸು ಸಂಸ್ಥೆಗಳು: ಬ್ಯಾಂಕುಗಳು ಬಿ.ಐ.ಎಫ್.ಆರ್. ಆದೇಶದ ಪ್ರಕಾರ ನೆರವನ್ನು ನೀಡಲು ಅವಕಾಶ ಕಲ್ಪಿಸಿಕೊಡಲಾಗಿದೆ. ಬಿ.ಐ.ಎಫ್.ಆರ್. ಆದೇಶದ ಪ್ರಕಾರ ಈ ಸೌಲಭ್ಯಗಳನ್ನು ನೀಡಲಾಗುತ್ತದೆ.

ANNEXURE

DISTRICTWISE LIST OF SICK INDUSTRIAL UNITS (BIFR CASES)

1.	Bangalore	40
2.	Belgaum	1
3.	Bellary	3
4.	Bijapur	-3
5.	Bidar	1
6.	Chickmagalur	-1
7.	Chitradurga	10
8.	Coorg	-
9.	Dharwad	5
10.	Gulbarga	-5
11.	Hassan	-
12.	Uttara Kannada	1
13.	Dakshina Kannada	5
14.	Kolar	3
15.	Mandya	-
16.	Mysore	27
17.	Raichur	-5

18.	Shimoga	1
19.	Tumkur	2
	Total	113

ಬೀದರ್ ಜಿಲ್ಲೆಯಲ್ಲಿ ನಡೆದ ಕೊಲೆ ದರೋಡೆ ವರದಕ್ಷಿಣೆ ಪ್ರಕರಣಗಳ ಸಂಖ್ಯೆ

370 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಕೊಲೆ ದರೋಡೆ, ವರದಕ್ಷಿಣೆ ಪ್ರಕರಣಗಳು ಹಾಗೂ ಕೊಲೆ ಯತ್ನದ ಪ್ರಕರಣಗಳು ಎಷ್ಟು ನಡೆದಿವೆ? (ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಅವುಗಳನ್ನು ತಡೆಗಟ್ಟಲು ಯಾವವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) 1993ನೇ ಜನವರಿಯಿಂದ ಡಿಸೆಂಬರ್ ಅಂತ್ಯದವರೆಗೆ ಒಟ್ಟು 39 ಕೊಲೆ ಪ್ರಕರಣಗಳು, 10 ದರೋಡೆ ಪ್ರಕರಣಗಳು 6 ವರದಕ್ಷಿಣೆ ಪ್ರಕರಣಗಳು ಮತ್ತು 56 ಕೊಲೆ ಪ್ರಕರಣಗಳು ವರದಿಯಾಗಿರುತ್ತವೆ.

ತಾಲ್ಲೂಕುವಾರು ಅಂಕಿಅಂಶಗಳು ಈ ಕೆಳಕಂಡಂತೆ ಇವೆ. 1-1-93 ರಿಂದ 31-12-93ರವರೆಗೆ

	ತಾಲ್ಲೂಕು	ಕೊಲೆ	ದರೋಡೆ	ವರದಕ್ಷಿಣೆ ಸಾವು	ಕೊಲೆ ಪ್ರಯತ್ನ
1.	ಬೀದರ್	13	3	2	20
2.	ಔರಾದ್	5	4	1	2
3.	ಹುಮನಾಬಾದ್	7	2	-	11
4.	ಭಾಲ್ಕಿ	5	-	1	19
5.	ಬಸವಕಲ್ಯಾಣ	9	1	2	4
	ಒಟ್ಟು	39	10	6	56

ಸಾಮಾನ್ಯವಾಗಿ ಕೊಲೆಯ ಪ್ರಕರಣಗಳು ಆಸ್ತಿವಿವಾದ ಕೋಮುಗಲಭೆ, ಪ್ರೇಮ ಪ್ರಕರಣ, ಹಳೇ ವೈಷಮ್ಯ ಮುಂತಾದ ಕಾರಣಗಳಿಂದ ಕೊಲೆಗಳು ಹೆಚ್ಚಾಗಿ ಸಂಬಂಧಿಸುತ್ತವೆ.ಹಾಗೂ ರೌಡಿಗಳ ವೈಷಮ್ಯದಿಂದಲೂ ಬಹಳಷ್ಟು ಕೊಲೆಯ ಪ್ರಕರಣಗಳು ಕಂಡು ಬರುತ್ತವೆ.

ಭೂ ವಿವಾದಗಳಿರುವ ಪ್ರದೇಶಗಳಲ್ಲಿ ಭಾ.ದಂ.ಸಂ. 145 ಪ್ರಕಾರ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಮುಂಚಿತವಾಗಿಯೇ ವರದಿ ಮಾಡಲಾಗುತ್ತಿದೆ. ಹಳ್ಳಿಗಳಲ್ಲಿ ಗಸ್ತು ಮಾಡುವ ಪೊಲೀಸ್ ಅಧಿಕಾರಿಗಳು ವೈಷಮ್ಯ ಹೆಚ್ಚಾಗುವ ಹಳ್ಳಿಗಳನ್ನು ಗುರುತಿಸಿ ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಆದೇಶಿಸಲಾಗಿದೆ. ಮತೀಯ ಮತ್ತು ಜಾತಿ ವೈಷಮ್ಯಗಳ ಪ್ರಕರಣಗಳಲ್ಲಿ ಕೊಲೆಯಾಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ವಿವಾದಗಳಿರುವ ಸ್ಥಳಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಹಾಗೂ ಶಾಂತಿ ಸಭೆಗಳನ್ನು ನಡೆಸುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗಿದೆ.

ದರೋಡೆ ಪ್ರಕರಣಗಳು ಲಾಭಕ್ಕಾಗಿ ಮತ್ತು ಕೋಮು ಗಲಭೆಗಳಿಂದ ನಡೆಯುವಂತಹ ಪ್ರಕರಣಗಳಾಗಿರುತ್ತವೆ. ದರೋಡೆಗಳನ್ನು ತಡೆಗಟ್ಟಲು ಜಿಲ್ಲಾ ಪೊಲೀಸು ಅಧಿಕಾರಿಗಳು, ವಿಭಾಗೀಯ ಪೊಲೀಸು ಅಧಿಕಾರಿಗಳಿಗೆ ಜಾಗರೂಕರಾಗಿರುವಂತೆ ಮೇಲಿಂದ ಮೇಲೆ ಆದೇಶಗಳನ್ನು ನೀಡಲಾಗುತ್ತಿದೆ. ಅಂತರರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಕಮ್ಮಿಟಿಗಳನ್ನು ಏರ್ಪಡಿಸಿ ದರೋಡೆ ತಡೆ ಮತ್ತು ಪತ್ತೆ ಬಗ್ಗೆ ವಿಚಾರ ವಿನಿಯಮ ನಡೆಸಿ ದರೋಡೆ ನಿಯಂತ್ರಣ ಮತ್ತು ಪತ್ತೆಗೆ ಪ್ರಯತ್ನಿಸಲಾಗಿದೆ.

ಅಂತರ ರಾಜ್ಯ ಸಮಾವೇಶ ಮತ್ತು ದಕ್ಷಿಣ ರಾಜ್ಯಗಳ ಸಿಐಡಿಯ ಪ್ರಧಾನ ಅಧಿಕಾರಿಗಳ ಸಮ್ಮೇಳನವನ್ನು ಏರ್ಪಡಿಸಿದ್ದು ದರೋಡೆಗಳ ಬಗ್ಗೆ ಚರ್ಚಿಸಿ ಅಪರಾಧಿಗಳನ್ನು ಹಿಡಿಯುವ ಬಗ್ಗೆ ಕ್ರಮಕೈಗೊಳ್ಳಲಾಗಿದೆ. ದರೋಡೆ ಕೋರರ ಭಾವಚಿತ್ರಗಳನ್ನು ಮತ್ತು ವಿವರಗಳನ್ನು ಎನ್.ಸಿ.ಆರ್.ಬಿ.ಯಲ್ಲಿ ಶೇಖರಿಸಿ ಅವುಗಳ ಸಹಾಯದಿಂದ ದರೋಡೆಕೋರರನ್ನು ಪತ್ತೆ ಹಚ್ಚಲು ಉಪಯೋಗಿಸಲಾಗುತ್ತಿದೆ.

ಈ ಬಗ್ಗೆ ರಾಜ್ಯದಲ್ಲೂ 3 "ದರೋಡೆ ತಡೆ ದಳ"ಗಳನ್ನು (ಬಳ್ಳಾರಿ, ಗುಲ್ಬರ್ಗಾ ಮತ್ತು ಬೆಂಗಳೂರು) ನಿಯೋಜಿಸಲಾಗಿದ್ದು, ಅವುಗಳು ಕರ್ತವ್ಯ ನಿರ್ವಹಿಸುತ್ತಿವೆ.

ಇನ್ನು ರಾಜ್ಯದಲ್ಲಿ ಹೆಚ್ಚುತ್ತಿರುವ ವರದಕ್ಷಿಣೆ ಸಾವು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ತನಿಖೆ: ವಿಚಾರಣೆ ನಡೆಸಲು ಸಿಓಡಿಯಲ್ಲಿ ಒಂದು ಪ್ರತ್ಯೇಕ ವರದಕ್ಷಿಣೆ ನಿಷೇಧ ದಳವನ್ನು ರಚಿಸಲಾಗಿದೆ ವರದಕ್ಷಿಣೆ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳ ವಿಚಾರಣೆಗಾಗಿ ಬೆಂಗಳೂರಿನಲ್ಲಿ ಒಂದು ವಿಶೇಷ ನ್ಯಾಯಾಲಯವನ್ನು 1990 ಆಗಸ್ಟ್ ತಿಂಗಳಿನಲ್ಲಿ ಸ್ಥಾಪಿಸಲಾಗಿದೆ

ವರದಕ್ಷಿಣೆ ಸಾವಿನ ಪ್ರಕರಣಗಳ ತನಿಖೆಯ ಕಾಲದಲ್ಲಿ ಉಂಟಾಗುವ ಲೋಪದೋಷಗಳ ಹಾಗೂ ಅಪರಾಧಿಗಳ ಮೇಲೆ ಶೀಘ್ರ ಕ್ರಮ ಕೈಗೊಳ್ಳಲು ಇರುವ ಅಡೆತಡೆಗಳನ್ನು ನಿವಾರಿಸಲು ಸಾಧ್ಯವಾಗುವಂತೆ "ವರದಕ್ಷಿಣೆ ನಿಷೇಧ ಕಾಯಿದೆಗೆ" ತಿದ್ದುಪಡಿ ತರುವ ವಿಷಯ ಸರ್ಕಾರ ಪರಿಶೀಲನೆಯಲ್ಲಿದೆ.

ವರದಕ್ಷಿಣೆ ಸಮಸ್ಯೆಗಳ ನಿವಾರಣೆಗಾಗಿ ಪೊಲೀಸ್ ಇಲಾಖೆಯ ಅಧಿಕಾರಿಗಳು, ಅಭಿಯೋಜಕರುಗಳು ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಆಗಾಗ ಸಭೆ ಸೇರಿ ಚರ್ಚಿಸಿ, ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಕನಕಪುರ ತಾಲ್ಲೋಕಿನ ವ್ಯಾಪ್ತಿಯಲ್ಲಿ ಹೊಸ ಬಸ್ಸು ಮಾರ್ಗ.

362 - ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನಕಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆವತಿಯಿಂದ 1991 ರಿಂದ ಇಲ್ಲಿಯವರೆಗೆ ಹೊಸದಾಗಿ ಎಷ್ಟು ಮಾರ್ಗಗಳಲ್ಲಿ ಹೊಸದಾಗಿ ಎಷ್ಟು ಮಾರ್ಗಗಳಲ್ಲಿ ಬಸ್ಸುಗಳ ಸಂಚಾರ ಪ್ರಾರಂಭಿಸಲಾಗಿದೆ ಮತ್ತು ಯಾವ ಯಾವ ಮಾರ್ಗಗಳಲ್ಲಿ ಪ್ರಾರಂಭಿಸಲಾಗಿದೆ;

ಆ) ಹೊಸ ಮಾರ್ಗಗಳಿಗೆ ಸಾರ್ವಜನಿಕರಿಂದ ಮನವಿ ಪತ್ರಗಳು ಬಂದಿದೆಯೇ ಬಂದಿದ್ದಲ್ಲಿ ಸರ್ಕಾರ ಆ ಬಗ್ಗೆ ಕ್ರಮ ಕೈಗೊಂಡಿದೆಯೇ;

ಇ) ಕನಕಪುರ ತಾಲ್ಲೂಕಿನಲ್ಲಿ ಇನ್ನು ಹೊಸದಾಗಿ ಬಸ್ ಸಂಚಾರ ಪ್ರಾರಂಭಿಸಲು ಎಷ್ಟು ಮಾರ್ಗಗಳ ಸಮೀಕ್ಷೆ (ಸರ್ವೆ) ನಡೆಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇದೆ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 1991 ರಿಂದ ಇಲ್ಲಿಯವರೆಗೆ 37 ಹೊಸ ಮಾರ್ಗಗಳಲ್ಲಿ ಬಸ್ಸುಗಳನ್ನು ಪ್ರಾರಂಭಿಸಿದೆ. ಪ್ರತಿ ವರ್ಷದ ವಿವರಗಳು ಕೆಳಕಂಡಂತಿವೆ.

1991	13 ಮಾರ್ಗಗಳು
1992	8 ಮಾರ್ಗಗಳು
1993	16 ಮಾರ್ಗಗಳು

ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,

1994 (ಇಲ್ಲಿವರೆಗೆ) ಯಾವುದೂ ಇಲ್ಲ. ......ದಿನಾಂಕ................
ಮಾರ್ಗಗಳ ವಿವರಗಳನ್ನು ಅನುಬಂಧ 'ಅ'ನಲ್ಲಿ ಒದಗಿಸಲಾಗಿದೆ.

ಆ) ಹೌದು.

ರಾಷ್ಟ್ರೀಕರಣಗೊಂಡಿರುವ ಪ್ರದೇಶದಲ್ಲಿ ಅವಶ್ಯಕತೆ ಕಂಡು ಬಂದಿರುವ ಮಾರ್ಗಗಳಲ್ಲಿ ಸಾರಿಗೆ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರಾಷ್ಟ್ರೀಕೃತ ಮಾರ್ಗಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಬಸ್ಸುಗಳನ್ನು ಓಡಿಸುತ್ತಿದೆ. ರಾಷ್ಟ್ರೀಕೃತವಲ್ಲದ ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿಸುವ ಪ್ರಸ್ತಾವನೆ ಇರುವುದಿಲ್ಲ.

ANNEXURE - 'A'

1991.

1. Kanakapura -Halagurvia, Gerahalli, Venkatarayana doddi.
2. Kanakapura - Heralagallu
3. Kanakapura - Mavathur
4. Kanakapura - Kabbalu via., Venkatarayanadoddi, Kamasagara.
5. Kanakapura - Chunchi Colony
6. " Harihara
7. " Honnaganahalli
8. " Kabbalu via, Gerahalli
9. " Narayanapura
10. " Arakeri.
11. " Kempalanath
12. " Gundanagollahalli
13. " Guddeveerana - Hosahalli.

1992

1. Kanakapura Haralegavimath
2. " Banavasi
3. " Agara
4. " Salabanni
5. " Alakadpeth
6. " Keralalasandra
7. " Kotekoppa
8. " Basavanabinnikup

1993.

1. Kanakapura Sathanur

2.	”		Gulagennahalli
3.	”		T. Bannikuppa
4.	”		T. Hosahalli
5.	”		Tungani
6.	”		Hegganur
7.	”		Belikothanur
8.	”		Kothadebahalli
9.	Harohalli	-	Tattekere
10.	Harohalli	-	Gottigehalli
11.	Horohalli	-	Narayanapura
12.	Kanakapura	-	Gorur
13.	Harohalli	-	Gorur
14.	Kanakapura	-	Kodihalli
15.	Kanakapura	-	Sondaghatta.
16.	Kanakapura	-	Aralalasandre.

ಕನಕಪುರ ತಾಲ್ಲೋಕು ಮತ್ತು ಚನ್ನಪಟ್ಟಣ ತಾಲ್ಲೋಕು ವ್ಯಾಪ್ತಿಯಲ್ಲಿ ಸಂಚರಿಸುತ್ತಿರುವ ಬಸ್ಸುಗಳ ಸಂಖ್ಯೆ ಕುರಿತು.

364 - ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆವತಿಯಿಂದ ಕನಕಪುರ ತಾಲ್ಲೂಕು ಮತ್ತು ಚೆನ್ನಪಟ್ಟಣ ತಾಲ್ಲೂಕು (ವಿರುಪಾಕ್ಷಪುರ ಹೋಬಳಿ ವ್ಯಾಪ್ತಿ ಮಾತ್ರ) ವ್ಯಾಪ್ತಿಯಲ್ಲಿ ಸಂಚರಿಸುತ್ತಿರುವ ಬಸ್ಸುಗಳೆಷ್ಟು?

ಆ) ಆ ಬಸ್ಸುಗಳು ಸಂಚರಿಸುತ್ತಿರುವ ಮಾರ್ಗ ಮತ್ತು ವೇಳೆಗಳೇನು (ವಿವರಗಳನ್ನೊದಗಿಸುವುದು)?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಕನಕಪುರ ತಾಲ್ಲೂಕಿನಲ್ಲಿ 59 ಬಸ್ಸುಗಳನ್ನು ಮತ್ತು ಚನ್ನಪಟ್ಟಣ ತಾಲ್ಲೂಕಿನ ವಿರುಪಾಕ್ಷಪುರ ಹೋಬಳಿಯಲ್ಲಿ 5 ಬಸ್ಸುಗಳನ್ನು ಕಾರ್ಯಾಚರಣೆಗೆ ಒಳಪಡಿಸಲಾಗುತ್ತಿದೆ.

ಆ) ಕನಕಪುರ ತಾಲ್ಲೂಕಿನಲ್ಲಿ ಕಾರ್ಯಾಚರಣೆಗೆ ಒಳಪಡಿಸಲಾಗುತ್ತಿರುವ ಬಸ್ಸುಗಳ ಮಾರ್ಗಗಳು ಮತ್ತು ವೇಳಾಪಟ್ಟಿ ವಿವರಗಳನ್ನು ಅನುಬಂಧ 'ಎ'ನಲ್ಲಿ ಒದಗಿಸಲಾಗಿದೆ ಮತ್ತು ಚನ್ನಪಟ್ಟಣ ತಾಲ್ಲೂಕಿನ ವಿರುಪಾಕ್ಷಪುರ ಹೋಬಳಿಯಲ್ಲಿ ಕಾರ್ಯಾಚರಣೆಗೆ ಒಳಪಡಿಸಲಾಗುತ್ತಿರುವ ಮಾರ್ಗಗಳ ವಿವರಗಳನ್ನು ಅನುಬಂಧ 'ಬಿ'ನಲ್ಲಿ ಒದಗಿಸಲಾಗಿದೆ.

ANNEXURE -A

DETAILS OF BUS OPERATIONS IN KANAKAPURA TALUK

Sl. No.	No. of Trips	Route From	to	Timings From	to
1	2	3	4	5	6
1.	10	Kolliganahalli -	Ramanagara	0600-0650	
		Ramanagara -	Kolliganahalli	0655-0745	

		Kolliganahalli - Bangalore	0900-1030
		Bangalore -Kolliganahalli	1045-1210
		Kolliganahalli - Bangalore	1215-1345
		Bangalore - Kolliganahalli	1630-1800
		Kolliganahalli - Bangalore	1810-1940
		Bangalore - Kolliganahalli	2010-2145
2.	02	Bangalore - Halagur Via Sathnur	1015-1215
		Halagur-Bangalore	1230-1430
3.	04	Bangalore - Kolliganahalli	0745-0945
		Kolliganahalli -Bangalore	0910-1030
		Bangalore - Kolliganahalli	1545-1705
		Kolliganahalli -Bangalore	1710-1830
4.	06	Doddamudavadi -Bidadi	0600-0645
		Bidadi -Doddamudavadi	0700-0745
		Doddamudavadi - Bangalore	0800-1030
		Bangalore - Doddamudavadi	1215-1445
		Doddamudavadi - Bangalore	1500-1730
		Bangalore - Doddamudavadi	1800-2030
5.	06	Doddamaralavadi - Bangalore	0715-0915
		Bangalore - Doddamaralavadi	0930-1130
		Doddamaralavadi - Bangalore	1200-1400
		Bangalore - Doddamara;avadi	1630-1830
		Doddamaralavadi - Bangalore	1835-2045
		Bangalore - Doddamaralavadi	2115-2315
6.	02	Kallanakuppe - Channapatna	0630-0900
		Channapatna - Kallanakuppe	1800-2030
7.	04	Bangalore - Doddamudavadi	0900-1100
		Doddamudavadi - Bangalore	1115-1315
		Bangalore - Doddamudavadi	1445-1645
		Doddamudavadi - Bangalore	1650-1850
8.	06	Kanakapura-Hunasanahalli	1115-1230
		Kanakapura-Hunasanahalli	1515-1630
		Kanakapura-Hunasanahalli	2130-2245
		Hunasanahalli-Kanakapura	0545-0700
		Hunasanahalli-Kanakapura	1245-1400
		Hunasanahalli-Kanakapura	1640-1755
9.	8	Kanakapura- Bannimukudalu	0710-0840

		Kanakapura- Bannimukudalu	1000-1130
		Kanakapura- Bannimukudalu	1400-1530
		Kanakapura- Bannimukudalu	1730-1845
		Bannimukudalu- Kanakapura	0840-1000
		Bannimukudalu - Kanakapura	1145-1315
		Bannimukudalu - Kanakapura	1540-1710
		Bannimukudalu -Kanakapura	1855-2010
10.	08	Kanakapura-Kodihalli	1015-1045
		Kanakapura-Kodihalli	1030-1100
		Kanakapura-Kodihalli	1045-1115
		Kanakapura-Kodihalli	2015-2045
		Kodihalli-Kanakapura	1050-1120
		Kodihalli-Kanakapura	1105-1140
		Kodihalli- Kanakapura	1120-1150
		Kodihalli-Kanakapura	2030-2120
11.	06	Kanakapura- Mugguru	0810-1010
		Kanakapura - Mugguru	1315-1500
		Kanakapura- Mugguru	1900-2100
		Mugguru-Kanakapura	0600-0800
		Mugguru- Kanakapura	1015-1215
		Mugguru- Kanakapura	1510-1700
12.	10	Kanakapura- Harobele	0730-0845
		Kanakapura- Harobele	1020-1135
		Kanakapura- Harobele	1320-1435
		Kanakapura- Harobele	1630-1150
		Kanakapura- Harobele	1945-2105
		Harobele- Kanakapura	0715-0830
		Harobele- Kanakapura	0800-0915
		Harobele- Kanakapura	1145-1300
		Harobele- Kanakapura	1505-1620
		Harobele- Kanakapura	1800-1920
13.	08	Kanakapura-Chunchicolony	0745-0900
		- do -	1300-1415
		- do-	2015-2115
		- do -	1700-1820
		Chinchicolony-Kanakapura	0600-0715
		- do -	0910-1040

		- do -	1425-1540
		- do-	1825-1930
14.	06	Kanakapura- Yedamarahalli	0700-0830
		- do -	1045-1145
		- do -	1750-1850
		Yedamarahalli - Kanakapura	1115-1215
		- do -	1200-1300
		- do -	1900-2000
15.	22	Kanakapura- Doddaaladahalli	0915-1000
		- do -	1015-1100
		- do -	1100-1500
		- do -	1155-1240
		- do -	1445-1530
		- do -	1515-1600
		- do -	1615-1650
		- do -	1600-1645
		- do -	1715-1800
		- do -	1830-1915
		- do -	2030-1915
		Doddaaladahalli-Kanakapura	0630-0715
		- do -	1015-1100
		- do -	1115-1200
		- do -	1205-1250
		- do -	1245-1330
		- do -	1540-1610
		- do -	1610-1655
		- do -	1650-1730
		- do -	1650-1740
		- do -	1805-1855
		- do -	1900-1955
16.	08	Kanakapura- Doddaaladahalli	0830-0915
		- do -	0945-1035
		- do -	1730-1815
		- do -	2130-2215
		- do -	0630-0715
		- do -	0930-1015
		- do -	1045-1130

		- do -	1820-1900
17.	04	Kanakapura- Nallahalli	0730-0830
		- do -	1100-1200
		Nallahalli- Kanakapura	0840-0940
		- do -	1215-1315
18.	02	Kabakapura- Hulibele	0950-1005
		Hulibele - Kanakapura	1015-1030
19.	02	Kanakapura-Harohalli	1615-1645
		Harohalli-Kanakapura	1650-1720
20.	06	Kanakapura- Somanthiyappanahalli	0800-0830
		Somanthiyappanahalli - Kanakapura	1445-1515
		Kanakapura-Somanthiyappanahalli	1730-1800
		Somanthiyappanahalli - Kanakapura	0845-0915
		- do –	1630--1600
		- do –	1815-1845
21.	08	Kanakapura- Sangama	0830-1000
		- do –	1000-1130
		Sangama- Kanakapura	1010-1140
		– do –	1145-1315
		Kanakapura- Sangama	1415-1545
		- do –	1700-1830
		Sangama-Kanakapur	1845-2015
		- do –	1750-1720
22.	06	Kanakapura- Nidagallu	0840-0900
		- do –	1300-1320
		- do –	1730-1750
		Nidagallu- Kanakapura	0910-0945
		- do –	1325-1345
		- do –	1755-1815
23.	02	Kanakapura- Hegganuru	0630-0730
		Hegganuru - Kanakapura	0745-0845
24.	11	Kanakapura - Kabbalu	0830-0915
		- do –	0930-1015
		- do –	1215-1300
		- do –	1715-1800
		- do –	1730-1815
		Kabbalu - Kanakapura	0705-0750

		- do –	0920-1005
		- do –	1030-1115
		- do –	1310-1355
		- do –	1805-1850
		- do –	1830-1915
25.	06	Kanakapura- Terubidhi	1015-1200
		- do –	1430-1600
		- do –	1945-2115
		Terubidhi - Kanakapura	0630-0815
		- do –	1215-1400
		- do –	1615-1745
26.	13	Kanakapura - Thokkasandra	1430-1515
		- do	0730-0800
		- do –	0915-0945
		- do -	1100-1130
		- do -	1540-1610
		- do -	1900-1930
		- do -	1945-2015
		Thokkasandra- Kanakapura	0950-1020
		- do -	1145-1215
		- do -	1530-1615
		- do -	1015-1045
		- do -	1935-2005
		- do -	2020-2050
27.	03	Kanakapura- Venkatarayanadoddi	0930-1000
		- do -	1930-2000
		Venkatarayanadoddi- Kanakapura	1010-1040
28.	01	- do - Kabbalu	0645-0700
29.	03	KanakápuraË Banavasi	1400-1530
		- do -	1945-2115
		Banavasi - Kanakapura	1030-1200
30.	01	Banavasi- Harohalli	1545-1610
31.	02	Harohalli - Tattekere	1645-1715
		Tattekere- Harohalli	1720-1750
32.	03	Harohalli - Gottigehalli	0850-0915
		- do -	1800-1825
		Gottigehalli - Harohalli	0830-0845

33.	06	Kanakapura - Gottigehalli	0725-0825
		- do -	1330-1430
		- do -	2015-2115
		Gottigehalli - Kanakapura	0615-0715
		- do -	0925-1025
		- do -	1830-1930
34.	06	Kanakapura - Bellikothanur	0730-0815
		- do -	1430-1515
		- do -	1730-1815
		Bellikothanur - Kanakapura	0830-0915
		- do -	1580-1620
		- do -	1830-1915
35.	06	Kanakapura - Kebere	0945-1100
		- do -	1430-1545
		- do -	2000-2115
		Kebere-Kanakapura	0600-0715
		- do -	1115-1230
		- do -	1600-1715
36.	06	Kanakapura - Maralegavimath	0800-0830
		- do -	0915-0945
		- do -	1645-1715
		Maralegavimath - Kanakapura	0835-0905
		- do -	1000-1030
		- do -	1720-1750
37:	08	Kanakapura - Sathanur	0730-0830
		- do -	0815-0845
		- do -	1545-1615
		- do -	1600-1630
		Sathanur - Kanakapura	0805-0835
		do	-900-0930
		- do -	1610-1630
		- do -	1620-1650
38.	08	Kanakapura - Harihara	0915-1015
		- do -	1330-1415
		- do -	520-1605
		- do -	1700-1745
		Harihara - Kanakapura	1025-1125

		- do -	1425-1510
		- do -	1610-1655
		- do -	1800-1845
39.	06	Kanakapura - Mullahalli	0730-0830
		- do -	1030-1130
		- do -	1700-1800
		Mullahalli - Kanakapura	0840-0940
		- do -	1145-1300
		- do -	1805-1905
40.	08	Kanakapura - Basavanabannikuppe	0700-0730
		- do -	0945-1015
		- do -	1405-1455
		- do -	1800-1830
		Basavanabannikuppe - Kanakapura	0745-0815
		- do -	1020-1050
		- do -	1500-1530
		- do -	1835-1905
41.	04	Kanakapura - Agara	1100-1130
		- do -	1700-1730
		Agara - Kanakapura	1735-1805
		- do -	1135-1205
42.	08	Kanakapura-Salabanni	0700-0815
		- do -	1515-1630
		- do -	1815-1930
		- do -	2120-2230
		Salabanni - Kanakapura	0530-0645
		- do -	0830-0945
		- do -	1645-1800
		- do -	1945-2100
43.	04	Kanakapura - Tungani	0930-0945
		- do -	1730-1745
		Tungani - Kanakapura	0950-1005
		- do -	1750-1805
44.	06	Kanakapura - Guddeveeranahosahalli	0715-0815
		- do -	1100-1200
		- do -	1830-1930
		Guddeveeranahosahalli - Kanakapura	0820-0920

		- do -	1215-1315
		- do -	1835-2035
45.	10	Kanakapura - Kolagondanahalli	0800-1000
		- do -	1230-1430
		- do -	1900-2045
		- do -	1900-2045
		- do -	1530-1730
		Kolagondanahalli - Kanakapura	0600-0745
		- do -	0600-0800
		- do -	1015-1215
		- do -	1115-1315
		- do -	1500-1700
46.	14	Kanakapura - Narayanapura	0715-0815
		- do -	0800-0900
		- do -	1200-1300
		- do Ë	1330Ë1430
		- do -	1400-1515
		- do -	1500-1700
		- do -	2100-2200
		Narayanapura- kanakapura	0600-0700
		- do -	0930-1045
		- do -	1000-1100
		- do -	1315-1415
		- do -	1445-1545
		- do -	1530-1645
		- do -	1835-1935
47.	08	Kanakapura - Gulaganahalli	0920-1045
		- do -	1345-1500
		- do -	1640-1700
		- do -	2000-2115
		Gulaganahalli - Kanakapura	0545-0700
		- do -	1050-1205
		- do -	1515-1625
		- do -	1800-1930
48.	02	Kanakapura - Herandappanahalli	0705-0805
		Herandappanahalli - Kanakapura	0815-0915

49.	04	Kanakapura- Dunthur	0830-0915
		- do -	1730-1815
		Duntur - Kanakapura	0930-1015
		- do -	1820-1905
50.	02	Kanakapura - Honganahalli	1930-2030
		Honganahalli - Kanakapura	0630-0730
51.	08	Kanakapura - Shivanegowdanadoddi	0830-1015
		- do -	1400-1545
		- do -	1745-1930
		- do -	2130-2320
		Shivanegowdanadoddi - Kanakapura	0615-0800
		- do -	1030-1215
		- do -	1550-1735
		- do -	1955-2120
52.	10	Kanakapura - Thippur	0715-0815
		- do -	0945-1045
		- do -	1500-1600
		- do -	1730-1830
		- do -	2030-2130
		Thippur - Kanakapura	0600-0700
		- do -	0830-0930
		- do -	1100-1200
		- do -	1615-1715
		- do -	1845-1945
53.	06	Kanakapura - Horalagallu	0600-0620
		- do -	0800-0830
		- do -	1915-1945
		Horalagallu - Kanakapura	0635-0705
		- do -	0835-0905
		- do -	1950-2020
54.	06	Kanakapura - Aralalasandra	0910-0930
		- do -	1800-1820
		- do -	1415-1435
		Aralalasandra - Kanakapura	0935-0955
		- do -	1445-1500
		- do -	1825-1845
55.	06	Kanakapura - Sundaghatta	0815-0845

		- do -	1300Ë1330
		- do -	1800-1845
		Sundaghatta - Kanakapura	0850-0920
		- do -	1345-1415
		- do -	1850-1920
56.	08	Kanakapura - Alagadakallu	0830-1000
		- do -	1315-1445
		- do -	1700-1830
		- do -	2030-2200
		Alagadakallu -Kanakapura	0645-0815
		- do -	1015-1145
		- do -	1500-1630
		- do -	1845-2015
57.	06	Kanakapura - Koothaganahalli	0745-0815
		- do -	1200-1230
		- do -	1730-1800
		Koothaganahalli -Kanakapura	0830-0900
		- do -	1235-1305
		- do -	1805-1835
58.	08	Kanakapura - Neraledoddi	0905-1005
		- do -	1300-1400
		- do -	1515-1615
		- do -	1905-2005
		Neraledoddi - Kanakapura	0615-0715
		- do -	1015-1115
		- do -	1405-1505
		- do -	1620-1720
59.	04	Kanakapura - Keralalusandra	1240-1300
		- do -	1730-1800
		Keralalusandra - Kanakapura	1315-1345
		- do -	1805-1835
60.	06	Kanakapura - Varelagalli	0845-0945
		- do -	1330-1430
		- do -	1330-1430
		Varelagalli- Kanakapura	0630-0730
		- do -	0955-1055
		- do -	1455-1545

61.	04	Kanakapura - Mavathur	0800-0815
		- do –	1700-1720
		Mavathur -Kanakapura	0820-0835
		- do –	1725-1740
62.	02	Kanakapura- Narayanapura	1050-1105
		Narayanapura - Kanakapura	1110-1130
63.	02	Kanakapura - Jakkagowdanadoddi	1055-1105
		Jakkagowdanadoddi - Kanakapura	1120-1155
64.	4	Narayanapura- Harohalli	0830-0900
		- do –	1715-1745
		Harohalli - Narayanapura	0915-0945
		— do –	1800-1850
65.	2	Harohalli - Goduru	0905-0930
		Goduru – Kanakapura	0835-0905
66.	2	Kanakapura - Goduru	0730-0830
		Goduru - Kanakapura	0945-1045
67.	2	Kanakapura - Kallanakuppe	0630-0730
		Kallankuppe - Kanakapura	1415-1515
68.	6	Kanakapura - Harohalli (via, Doddasadenahalli)	0815-0900
		– do –	1230-1315
		- do –	1715-1800
		Harohalli - Kanakapura (via, D. Sadenahalli)	0915-1000
		- do Ë	1330Ê1455
		- do –	1815-1900
69.	8	Kanakapura - Iralpodu	0715-0830
		- do –	1330-1445
		- do –	1715-1830
		- do –	2015-2130
		Iralpod - Kanakapura	0545-0700
		- do –	0840-1000
		- do –	1500-1615
		- do –	1840-1955
70.	5	Kanakapura - Gundagollahalli	1130-1230
		- do –	1645-1745
		- do –	2115-2215

		Gundagollahalli - Kanakapura	0630-0730
		- do –	1245-1345
71.	8	Kanakapura - Kotekoppa	0930-1045
		- do –	1330-1445
		- do –	1630-1745
		- do –	1945-2100
		Kotekoppa - Kanakapura	0630-0745
		- do –	1100-1215
		- do –	1500-1615
		- do –	1800-1915
72.	6	Kanakapura - T. Bannikuppe	0800-0830
		- do –	1245-1315
		- do –	1730-1800
		T.Bannikuppe - Kanakapura	0835-0905
		- do –	1835-1400
		- do –	1805-1835
73.	8	Kanakapura - T. Hosahalli	0830-0915
		- do –	1035-1115
		- do –	1830-1915
		- do –	2030-2115
		T. Hosahalli - Kanakapura	0600-0645
		- do –	0930-1015
		- do –	1130-1215
		- do –	1930-2015
74.	2	Kanakapura - Belur	1600-1630
		Belur - Kanakapura	1645-1705
75.	2	Kanakapura - Hanumanahalli	1745-1815
		Hanumanahalli - Kanakapura	1820-1850
76.	4	Kanakapura - Arakere	0930-1030
		- do –	1700-1850
		Arakere - Kanakapura	1045-1115
		– do –	1900-2000

ANNEXURE -B

DETAILS OF BUS OPERATIONS IN CHANNAPATNA TALUK

(VIRUPAKSHAPURA HOBLI ONLY)

Sl.No.	No.of. Trips	Route From To		Timings From To
1.	02	Kanakapura-Channapatna	Via	1500-1700
		Channapatna-Kanakapura	Kodamballi	1100-1300
2.	02	Bangalore-Belathur	- do -	1845-2145
		Belathur-Bangalore		0600-0900
3.	02	Bangalore-Ujjinihalli		1900-2115
		Ujjinihalli-Bangalore		0545-0745
4.	04	Bangalore-Ambadihalli		0845-1045
		Ambadihalli-Bangalore		1215-1430
		Bangalore-Ambadihalli		1700-1900
		Ambadihalli-Bangalore		1215-1430
5.	02	Ramanagara-Ambadihalli		2030Ë2130
		Ambadihalli-Ramanagara		1915-2015
6.	02	Channapatna-Ambadihalli		1125-1155
		Ambadihalli-Channapatna		1050-1120
7.	02	Bangalore-Yelethotadahalli		1930-2115
		Yelethotadahalli-Bangalore		0600-0745
8.	04	Bangalore-Kuligere		0845-1115
		Kuligere-Bangalore		1130-1400
		Bangalore-Kuligere		1600-1830
		Kuligere-Bangalore		0600-0830
9.	02	Channapatna-Kuligere		2015-2115
		Kuligere-Channapatna		1845-1945

1992 ರಿಂದ 1994ನೇ ಸಾಲಿನಲ್ಲಿ ಡಿಸ್ಟಲರಿಗಳಿಂದ ವಸೂಲಿಯಾದ ಅಬಕಾರಿ ಶುಲ್ಕ.

366 - ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1992-93ನೇ ಮತ್ತು 1993-94ನೇ ಸಾಲಿನಲ್ಲಿ ಡಿಸ್ಟಿಲರಿಗಳಿಂದ ವಸೂಲಾದ ಅಬಕಾರಿ ಶುಲ್ಕ (ಎಕ್ಸೈಸ್ ಡ್ಯೂಟಿ) ಎಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

1992-93ನೇ ಸಾಲಿನಲ್ಲಿ ರೂ. 54.70 ಕೋಟಿ

1993-94ನೇ ಸಾಲಿನಲ್ಲಿ (ಏಪ್ರಿಲ್ನಿಂದ ಜನವರಿವರೆಗೆ 10 ತಿಂಗಳಿಗೆ) ರೂ. 61.53 ಕೋಟಿ.

ಹಸಿರು ಪಡಿತರ ಚೀಟಿಗೆ ನೀಡುತ್ತಿರುವ ಪಡಿತರ ವಸ್ತುಗಳನ್ನು ಕಡಿಮೆ ಮಾಡಿರುವುದರ ಬಗ್ಗೆ.

339 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಸಿರು ಪಡಿತರ ಚೀಟಿಯ ಪದ್ಧತಿಯನ್ನು ಯಾವಾಗ ಪ್ರಾರಂಭಿಸಲಾಯಿತು.

ಆ) ಆ ಚೀಟಿಯನ್ನು ಎಂತಹವರಿಗೆ ನೀಡಲಾಗುವುದು ಮತ್ತು ಅದರ ಮೂಲ ಉದ್ದೇಶಗಳೇನು?

ಇ) ಹಸಿರು ಪಡಿತರ ಚೀಟಿಯನ್ನು ಹೊಂದಿರುವವರ ಸಂಖ್ಯೆ ಎಷ್ಟು?

ಈ) ಆರಂಭದಲ್ಲಿ ಹಸಿರು ಪಡಿತರ ಚೀಟಿಗೆ ನೀಡಲಾಗುತ್ತಿದ್ದ ಪಡಿತರ ವಸ್ತುಗಳ ಪ್ರಮಾಣ ಇಂದಿನ ದಿನಗಳಿಗೆ ಹೋಲಿಸಿದಾಗ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಸಿರು ಪಡಿತರ ಚೀಟಿಯ ಪಡಿತರ ವಸ್ತುಗಳಿಗೆ ಆರಂಭದಲ್ಲಿ ಪ್ರತಿ ಕಿಲೋಗೆ ಎಷ್ಟು ಬೆಲೆ ಇತ್ತು ಹಾಗೂ ಈಗ ಆ ವಸ್ತುಗಳ ಬೆಲೆ ಪ್ರತಿ ಕಿಲೋಗೆ ಎಷ್ಟು ಹೆಚ್ಚಿದೆ.

ಊ) ಅದಕ್ಕೆ ಕಾರಣಗಳೇನು?

ಋ) ಕಡುಬಡವರ ಉಪಯೋಗಕ್ಕಾಗಿ ಜಾರಿಗೊಳಿಸಲಾಗಿರುವ ಹಸಿರು ಪಡಿತರ ಚೀಟಿಯಲ್ಲಿನ ಪಡಿತರ ವಸ್ತುಗಳನ್ನು ಹಿಂದಿನ ಬೆಲೆ (ಆರಂಭದಲ್ಲಿ ನೀಡಲಾಗುತ್ತಿದ್ದ) ಮಾರಾಟ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ದಿನಾಂಕ : 1-11-1985 ರಿಂದ

ಆ) ಹಸಿರು/ತ್ರಿವರ್ಣ ಪಡಿತರ ಚೀಟಿಯನ್ನು ವಾರ್ಷಿಕ ಆದಾಯ ಮಿತಿ ರೂ. 6400 ಗಳಿಗಿಂತ ಕಡಿಮೆಯಿದ್ದು, ಗ್ರಾಮಾಂತರ ಪ್ರದೇಶದಲ್ಲಿ 20,000 ಜನಸಂಖ್ಯೆಗಿಂತ ಕಡಿಮೆಯಿರುವ ಅರೆ ಪಟ್ಟಣಗಳಲ್ಲಿ, ಹಾಗೂ ನಗರ ಪ್ರದೇಶಗಳಲ್ಲಿ ಘೋಷಿತವಾದ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನಗಳಿಗೆ ನೀಡಲಾಗುವುದು ಅದರ ಮೂಲ ಉದ್ದೇಶವೇನೆಂದರೆ ಹಸಿರು/ತ್ರಿವರ್ಣ ಕಾರ್ಡುದಾರರಿಗೆ ಪ್ರತಿ ಕಾರ್ಡಿಗೆ ಸಬ್ಸಿಡಿ ದರದಲ್ಲಿ ಕಡ್ಡಾಯವಾಗಿ 10ಕೆ.ಜಿ. ಯಂತೆ ಪ್ರತಿ ತಿಂಗಳಿಗೆ ಆಹಾರ ಧಾನ್ಯಗಳನ್ನು ಒದಗಿಸುವುದು.

ಇ) 46.85 ಲಕ್ಷ. (ತ್ರಿವರ್ಣ).

ಈ) ಕಡಿಮೆ ಮಾಡಿರುವುದಿಲ್ಲ.

ಉ) ವಿವರಗಳು ಈ ಕೆಳಕಂಡಂತಿವೆ :

	ಆರಂಭದ ಬೆಲೆ (1985 ರಲ್ಲಿ) (ರೂ.)	ಪ್ರಸ್ತುತ ಬೆಲೆ (ರೂ.)	ವ್ಯತ್ಯಾಸ (ರೂ.)
ಅಕ್ಕಿ ಅತ್ಯುತ್ತಮ:	2-00	5-45	3-45

ಅಕ್ಕಿ ದಪ್ಪ : 2-00 5-10 3-10
ಗೋಧಿ : 1-25 3-45 2-20

ಉ) ಭಾರತ ಸರ್ಕಾರವು ಆಹಾರ ಧಾನ್ಯಗಳ ಹಂಚಿಕೆ ಬೆಲೆಯನ್ನು ಆಗಿಂದಾಗ್ಗೆ ಹೆಚ್ಚಿಗೆ ಮಾಡುತ್ತಿರುವುದರಿಂದ.

ಋ) ರಾಜ್ಯ ಸರ್ಕಾರವು ಈ ವರ್ಷ 70 ಕೋಟಿ ಸಬ್ಸಿಡಿ ಹಣವನ್ನು ಈ ಯೋಜನೆಯಡಿ ಪೂರೈಸಲಾಗಿದೆ. ಭಾರತ ಸರ್ಕಾರದವರು ಬೆಲೆ ಹೆಚ್ಚು ಮಾಡಿದ್ದರೂ ಸಹ ರಾಜ್ಯ ಸರ್ಕಾರವು ಕೊಡುತ್ತಿದ್ದ ಸಬ್ಸಿಡಿ ಕಡಿಮೆ ಮಾಡಿರುವುದಿಲ್ಲ. ಈಗ ಆರಂಭದಲ್ಲಿದ್ದ ಬೆಲೆಗೆ ಹಸಿರು ಪಡಿತರ ಚೀಟಿದಾರರಿಗೆ ಪಡಿತರ ವಸ್ತುಗಳನ್ನು ಒದಗಿಸುವುದು ಸಾಧ್ಯವಾಗಲಾರದು.

ರಾಜ್ಯ ಸರ್ಕಾರವು ಸಿ.ಬಿ.ಐ.ಗೆ. ವಹಿಸಿರುವ ಪ್ರಕರಣಗಳ ಸಂಖ್ಯೆ.

343 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 2 ವರ್ಷಗಳಲ್ಲಿ ರಾಜ್ಯ ಸರ್ಕಾರವು ಯಾವ ಯಾವ ಪ್ರಕರಣಗಳನ್ನು ತನಿಖೆ ನಡೆಸುವ ಸಲುವಾಗಿ ಸಿಬಿಐ (ಕೇಂದ್ರ ತನಿಖಾದಳ)ಗೆ ವಹಿಸಿಕೊಟ್ಟಿದೆ: (ಪ್ರತಿಯೊಂದು ಪ್ರಕರಣದ ಬಗ್ಗೆ ವಿವರಗಳನ್ನು ನೀಡುವುದು)
ಮಂಜೂರು ಮಾಡುವ ಬಗ್ಗೆ 2,500-00 ರೂ.ಗಳ.

ಆ) ಅವುಗಳ ಪೈಕಿ ಎಷ್ಟು ಪ್ರಕರಣಗಳ ತನಿಖೆಯನ್ನು ಸಿಬಿಐ ಈಗಾಗಲೇ ಮುಕ್ತಾಯ ಗೊಳಿಸಿದೆ ಹಾಗೂ ತನಿಖೆ ಮುಗಿದ ಪ್ರಕರಣಗಳ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೆ :

ಇ) ಆ ವರದಿಯ ಆಧಾರದ ಮೇಲೆ ರಾಜ್ಯ ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ:

ಈ) ರಾಜ್ಯದ ಸಿಓಡಿ ಸಂಸ್ಥೆಯು ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಸಿಓಡಿಯನ್ನು ಬಿಟ್ಟು ಸಿಬಿಐಗೆ ಪ್ರಕರಣಗಳನ್ನು ನೀಡುವುದರಿಂದ ಜನತೆಗೆ ಸಿಓಡಿಯ ಮೇಲೆ ಶಂಕೆ ಉಂಟಾಗುವುದಿಲ್ಲವೇ?

ಉ) ಇನ್ನು ಮುಂದೆ ರಾಜ್ಯ ಸರ್ಕಾರವು ಎಲ್ಲ ಪ್ರಕರಣಗಳನ್ನು ಸಿಓಡಿಗೆ ಮಾತ್ರವೇ ವಹಿಸಿಕೊಡುವ ಬಗ್ಗೆ ತೀರ್ಮಾನ ಕೈಗೊಳ್ಳುವುದೇ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಸ್ವರ್ಣ ಫೈನಾನ್ಸ್ ಕಂಪನಿಯಲ್ಲಿ ನಡೆದ ಅವ್ಯವಹಾರಗಳ ಬಗ್ಗೆ ಕಬ್ಬನಪಾರ್ಕ್ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 27 :89, 305:89, ಮತ್ತು 366:89 ಭಾ.ದಂ.ಸಂಹಿತೆ ಕಲಂ 420ರ ಪ್ರಕಾರ ದಾಖಲಾದ ಪ್ರಕರಣಗಳನ್ನು ದಿನಾಂಕ 7-4-92 ರಂದು ಸಿಬಿಐ ತನಿಖೆಗೆ ವಹಿಸಲಾಗಿದೆ.

2. ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಬದನವಾಳು ಗ್ರಾಮದಲ್ಲಿ ಲಿಂಗಾಯುತ ಮತ್ತು ಪರಿಶಿಷ್ಟ ಜಾತಿಯವರ ನಡುವೆ ನಡೆದ ಘರ್ಷಣೆಗೆ ಸಂಬಂಧ ಪಟ್ಟಂತೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 59:93 ಮತ್ತು 52:93ರ ಭಾ.ದಂ.ಸಂ. ಕಲಂ 143, 144, 147, 148, 324, 341,302 ಮತ್ತು 3(...) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ದೌರ್ಜನ್ಯ ನಿಷೇಧ ಕಾಯಿದೆ 1989ರ ಪ್ರಕಾರ ಮೊಕದ್ದಮೆ ದಾಖಲು ಮಾಡಿಕೊಂಡು ಪ್ರಕರಣವನ್ನು ದಿನಾಂಕ 11-5-93 ರಂದು ಸಿಬಿಐ ತನಿಖೆಗೆ ವಹಿಸಲಾಗಿದೆ.

3. ರಾಯಚೂರು ನಗರ ಸದರ ಬಜಾರ್ ಪೊಲೀಸ್ ಠಾಣೆ ವ್ಯಾಪ್ತಿಯ ಸಿಂಡಿಕೇಟ್ ಬ್ಯಾಂಕ್ನ ಅವ್ಯವಹಾರದ ಬಗ್ಗೆ ಸದರ ಬಜಾರ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ :367:91 ರ ಭಾ.ದಂ.ಸಂ.ಕಲಂ 409, 468ರ ಪ್ರಕಾರ ಮೊಕದ್ದಮೆ ದಾಖಲು ಮಾಡಿಕೊಂಡು ಪ್ರಕರಣವನ್ನು ದಿನಾಂಕ 30-7-93ರಂದು ಸಿಬಿಐಗೆ ತನಿಖೆಗೆ ವಹಿಸಲಾಗಿದೆ.
4. ಬೆಂಗಳೂರು ದೂರದರ್ಶನ ಎಕ್ಸಿಕ್ಯೂಟಿವ್ ಡೈರೆಕ್ಟರ್ ಶ್ರೀಮತಿ ಕಮಲಾ ಹೆಮ್ಮಿಗ್ರೆರವರ ಪ್ರೆಸ್ ಫೋಟೋ ಗ್ರಾಫರ್ರವರಿಂದ 10 ಸಾವಿರ ರೂ. ಲಂಚ ಪಡೆದ ಬಗ್ಗೆ ಸಿಕ್ಕಿಬಿದ್ದು ಈ ಸಂಬಂಧ ಜೆ.ಸಿ.ನಗರ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ : 55:93 ಕಲಂ 7ರ ಪಿಸಿ ಕಾಯಿದೆ ಪ್ರಕಾರ ಮೊಕದ್ದಮೆ ನೊಂದಾಯಿಸಿ ದಿನಾಂಕ 13-4-92 ರಂದು ಸಿಬಿಐ ತನಿಖೆಗೆ ವಹಿಸಲಾಗಿದೆ.
5. ದಿನಾಂಕ 27-2-92 ರಂದು ಕೆ.ವಿ. ಹನುಮಂತಯ್ಯ, ಅಂಚೆ ಕಛೇರಿ ಉಪವಿಭಾಗದ ಇನ್ಸ್ಪೆಕ್ಟರ್ರವರ ಮೇಲೆ ಅಕ್ರಮ ಸಂಭಾವನೆ ತಡೆ ನಿಯಮಾವಳಿ 1988ರ ಪ್ರಕಾರ ಕೆ.ಜಿ.ಎಫ್. ಪೊಲೀಸ್ ಠಾಣೆ ಅಪರಾಧ ಸಂಖ್ಯೆ : 66:92ರಲ್ಲಿ ಪ್ರಕರಣ ದಾಖಲ್ಮಾಡಿಕೊಂಡು ಹೆಚ್ಚಿನ ತನಿಖೆಗಾಗಿ ದಿನಾಂಕ 5-8-92ರಂದು ಸಿಬಿಐಗೆ ವರ್ಗಾಯಿಸಲಾಗಿದೆ.

6

6. ದಿನಾಂಕ 30-8-90 ರಂದು ಶ್ರೀ ಕೆ.ಬಿ. ಬಲ್ಲೂ ಲಾಯ, ಕಂಟ್ರೋಲರ್ಆಫ್ ಫೈನಾನ್ಸ್ ಎಲೆಕ್ಟ್ರಾನಿಕ್ ರೀಸರ್ಚ್ ಲಿಮಿಟೆಡ್ ಇವರು ಕಬ್ಬನ್ ಪಾರ್ಕ್ ಪೊಲೀಸರಿಗೆ ದೂರು ಸಲ್ಲಿಸಿ, ತಮ್ಮ ವಿಭಾಗದ ಪರ್ಚೇಸ್ ಆಫೀಸರ್ ಶ್ರೀ ಎ.ಡಬ್ಲ್ಯೂ ಅಕ್ರಂರವರು ಕಸ್ಟಂ ಇಲಾಖೆಗೆ ಕಟ್ಟಬೇಕಾಗಿದ್ದ 6,64,135 ರೂ.ಗಳನ್ನು ವಂಚಿಸಿರುವುದಾಗಿ ನೀಡಿದ ದೂರಿನನ್ವಯ ಕಬ್ಬನ್ಪಾರ್ಕ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 267:90 ಕಲಂ 408-464-420 ಭಾ.ದಂ.ಸಂ.ಪ್ರಕಾರ ಪ್ರಕರಣ ದಾಖಲು ಮಾಡಿಕೊಂಡು ದಿನಾಂಕ 30-7-93 ರಂದು ಹೆಚ್ಚಿನ ತನಿಖೆಗಾಗಿ ಸಿಬಿಐಗೆ ವರ್ಗಾಯಿಸಲಾಗಿದೆ.
7. ಜೆ. ಅಲೆಗ್ಸಾಂಡರ್, ಐ.ಎ.ಎಸ್.ರವರು ಹಿಂದಿನ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಹಣಕಾಸು ಆಯುಕ್ತರು ಆಗಿದ್ದ ಸಮಯದಲ್ಲಿ ಮೆ:ಕ್ಲಾಸಿಕ್ ಕಂಪ್ಯೂಟರ್ ಸಿಸ್ಟಮ್ಸ್ರವರಿಂದ 92ರ ಮಾರ್ಚ್ ತಿಂಗಳಿನಲ್ಲಿ 100 ಆಪಲ್ ಮೆಷಂತೋಷ್ ಕಂಪ್ಯೂಟರ್ಗಳನ್ನು ಕೊಳ್ಳಲು ಒಟ್ಟು ಬೆಲೆಬಾಳುವ 5.27 ಕೋಟಿ ರೂ.ಗಳ ಪೈಕಿ 1.58 ಕೋಟಿಯನ್ನು ಮುಂಗಡವಾಗಿ ಶ್ರೀ ವಿ. ಗೋಕುಲ್ ಕೃಷ್ಣರವರಿಗೆ, ಯಾವುದೇ ನಿಯಮಗಳನ್ನು ಅನುಸರಿಸದೇ ಹಣ ಬಿಡುಗಡೆ ಮಾಡಿದ್ದಕ್ಕಾಗಿ ಈ ಪ್ರಕರಣವನ್ನು ಕೇಂದ್ರ ತನಿಖಾ ದಳಕ್ಕೆ ದಿನಾಂಕ : 31-3-93 ರಂದು ಮುಂದಿನ ತನಿಖೆಗಾಗಿ ವಹಿಸಲಾಗಿದೆ.
8. ದಿನಾಂಕ 9-4-92 ರಂದು ಶ್ರೀ ವೆಂಕಟೇಶ್ ಇವರು ಜಯನಗರ ಪೊಲೀಸರಿಗೆ ದೂರು ಸಲ್ಲಿಸಿ ಸಿಂಡಿಕೇಟ್ ಬ್ಯಾಂಕ್ ಮೇನೇಜರ್ರವರು 3 ಲಕ್ಷ ರೂ.ಗಳ ಸಾಲ ಮಂಜೂರು ಮಾಡುವ ಬಗ್ಗೆ 2500/- ರೂ.ಗಳ ಲಂಚ ಕೇಳುತ್ತಿರುವರೆಂದು ನೀಡಿದ ದೂರಿನ ಮೇರೆಗೆ ಜಯನಗರ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ : 206:92 ಕಲಂ 7 ಪಿ.ಸಿ. ಕಾಯ್ದೆ ಪ್ರಕಾರ ಮೊಕದ್ದಮೆ ದಾಖಲು ಮಾಡಿಕೊಂಡು, ನಂತರ ಮುಂದಿನ ತನಿಖೆಗಾಗಿ ದಿನಾಂಕ 30-11-92 ರಂದು ಸಿಬಿಐಗೆ ವರ್ಗಾಯಿಸಲಾಗಿದೆ.

9. ದಿನಾಂಕ 6-3-93 ರಂದು ಶ್ರೀ ಎಂ.ಎಸ್. ಮೂರ್ತಿ, ಸಹಾಯಕ ಅಧೀಕ್ಷಕರು, ಆರ್‌ಎಂಎಸ್, ಬೆಂಗಳೂರುರವರು ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ಹಾಜರಾಗಿ ದಿನಾಂಕ 3-9-93 ರಂದು ಮುಂಬೈನಿಂದ ಬೆಂಗಳೂರಿಗೆ ತಾವು ವಿಮೆ ಮಾಡಿ ಕಳುಹಿಸಿದ ಸುಮಾರು 900ರೂ. ಬೆಲೆ ಬಾಳುವ ವಸ್ತು ಕಾಣೆಯಾಗಿರುವುದಾಗಿ ಸಲ್ಲಿಸಿದ ದೂರಿನ ಮೇರೆಗೆ ಹೈಗ್ರೌಂಡ್ಸ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 115:93 ಕಲಂ 381 ಭಾ.ದಂ.ಸಂ. ಪ್ರಕಾರ ಮೊಕದ್ದಮೆ ದಾಖಲು ಮಾಡಿಕೊಂಡು ಹೆಚ್ಚಿನ ತನಿಖೆಗೆ ದಿನಾಂಕ 28-7-93 ರಂದು ಸಿಬಿಐಗೆ ವರ್ಗಾಯಿಸಲಾಗಿದೆ.

ಆ) ಮಾಹಿತಿ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಆಡಳಿತ ಪರಂಪರೆಯ ಹಿತದೃಷ್ಟಿಯಿಂದ ಅಂತರ ರಾಜ್ಯಗಳಿಗೆ ಸಂಬಂಧಿಸಿದ ಪ್ರಕರಣಗಳನ್ನೂ ಅಲ್ಲದೆ ಸಾಮಾನ್ಯವಾಗಿ ವಿಶೇಷ ಮಹತ್ವದ ಪ್ರಕರಣಗಳನ್ನು ಸಿಬಿಐ ತನಿಖೆಗೆ ವಹಿಸಲಾಗಿದೆ. ಸಿಓಡಿ ಕಾರ್ಯ ನಿರ್ವಹಣೆ ಬಗ್ಗೆ ಸಾರ್ವಜನಿಕರಲ್ಲಿ ಅಪನಂಬಿಕೆ ಉಂಟಾಗುತ್ತದೆ ಎಂಬುದನ್ನು ರಾಜ್ಯ ಸರ್ಕಾರವು ಒಪ್ಪುವುದಿಲ್ಲ.

ಉ) - ಇಲ್ಲ -

ರಾಜ್ಯದಲ್ಲಿ ಮಹಿಳಾ ಪೋಲೀಸ್ ಠಾಣೆಗಳ ಪ್ರಾರಂಭ.

342 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿ ಜಿಲ್ಲೆಗೊಂದರಂತೆ ಮಹಿಳಾ ಪೋಲೀಸ್ ಠಾಣೆಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಅದರ ಪ್ರಾರಂಭಿಕ ಹಂತವಾಗಿ ಎಲ್ಲೆಲ್ಲಿ ಮಹಿಳಾ ಪೋಲೀಸ್ ಠಾಣೆಗಳನ್ನು ಪ್ರಾರಂಭಿಸಲಾಗಿದೆ?

ಇ) ಅದಕ್ಕಾಗಿ ಆಯವ್ಯಯದಲ್ಲಿ ಎಷ್ಟು ಹಣವನ್ನು ಮೀಸಲಿಡಲಾಗುವುದು?

ಈ) ಮಹಿಳೆಯರಿಗೆ ಹೆಚ್ಚಿನ ರಕ್ಷಣೆ ನೀಡುವ ಸಲುವಾಗಿ ಅದಷ್ಟು ಬೇಗ ಜಿಲ್ಲೆಗೊಂದರಂತೆ ಮಹಿಳಾ ಪೋಲೀಸ್ ಠಾಣೆಗಳನ್ನು ಪ್ರಾರಂಭಿಸಲಾಗುವುದೇ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು.) :

ಅ) ಹೌದು.

ಆ) ಬೆಂಗಳೂರು ನಗರ, ಮೈಸೂರು, ಹುಬ್ಬಳ್ಳಿ ಧಾರವಾಡ ಮತ್ತು ಮಂಗಳೂರಿನಲ್ಲಿ ಒಂದೊಂದು ಮಹಿಳಾ ಪೋಲೀಸ್ ಠಾಣೆ ಪ್ರಾರಂಭವಾಗಲಿದೆ.

ಇ) ಮೇಲ್ಕಂಡ ಠಾಣೆಗಳ ನಿರ್ವಹಣೆಗೆ ಬೇಕಾಗುವಷ್ಟು ಹಣವನ್ನು ಮೀಸಲಿಡಲಾಗುವುದು.

ಈ) ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಗಡಿ ಪ್ರದೇಶದಲ್ಲಿ ಕನ್ನಡದ ಅಭಿವೃದ್ಧಿ.

340 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಕನ್ನಡ ಜಾಗೃತಿ ವರ್ಷವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ರಾಜ್ಯ ಗಡಿ ಭಾಗಗಳಲ್ಲಿ ಕನ್ನಡದ ಪರಿಸ್ಥಿತಿಯ ಬಗ್ಗೆ ಚಿಂತನೆ ನಡೆಸಲು ಕೈಗೊಂಡ ಕ್ರಮಗಳೇನು?

ಆ) ಆ ಪ್ರದೇಶದಲ್ಲಿ ಕನ್ನಡ ಉಳಿವಿಗಾಗಿ ಸಮಗ್ರ ಯೋಜನೆಯನೇನಾದರು ರೂಪಿಸಲಾಗಿದೆಯೆ?

ಇ) ರೂಪಿಸಿದ್ದಲ್ಲಿ, ಆ ಯೋಜನೆಗಳ ವಿವರಗಳೇನು?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಕನ್ನಡ ಪರ ಕಾರ್ಯಕ್ರಮಗಳನ್ನು ಹೆಚ್ಚಾಗಿ ನಡೆಸಲು ಪ್ರಯತ್ನಿಸಲಾಗುತ್ತಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಶಾಸನಬದ್ಧ ಸ್ಥಾನಮಾನಗಳನ್ನು ನೀಡುವುದರ ಬಗ್ಗೆ.

341 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಯಾವಾಗ ಅಸ್ತಿತ್ವಕ್ಕೆ ಬಂತು.

ಆ) ಕನ್ನಡ ಪ್ರಾಧಿಕಾರದ ಕೆಲಸಗಳೇನು

ಇ) ಆ ಪ್ರಾದಿಕಾರವು ತೃಪ್ತಿ ತರುವ ರೀತಿಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿಕೊಂಡು ಬರುತ್ತಿರುವುದು ನಿಜವಲ್ಲವೆ?

ಈ) ಸರ್ಕಾರದ ಆಡಳಿತದ ಎಲ್ಲಾ ಹಂತಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಆ ಪ್ರಾಧಿಕಾರಕ್ಕೆ ಶಾಸನಬದ್ಧವಾದ ಸ್ಥಾನಮಾನಗಳನ್ನು ನೀಡಲಾಗಿದೆಯೇ?

ಉ) ಇಲ್ಲವಾದಲ್ಲಿ ಅದನ್ನು ಮುಟ್ಟುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆಯೇ?

ಊ) ಇಲ್ಲದಿದ್ದಲ್ಲಿ ಇನ್ನು ಎಷ್ಟು ಸಮಯದಲ್ಲಿ ಅದಕ್ಕೆ ಶಾಸನಬದ್ಧವಾದ ಸ್ಥಾನಮಾನಗಳನ್ನು ನೀಡಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು.) :

ಅ) ದಿನಾಂಕ 6-2-92 ರಿಂದ

ಆ) ಅನುಬಂಧದಲ್ಲಿ ಕೊಟ್ಟಿದೆ.

ಇ) ನಿಜ.

ಈ) ಇಲ್ಲ

ಉ) ಇಲ್ಲ.

ಊ) ಸದ್ಯದಲ್ಲೇ.

ಅನುಬಂಧ

(1) ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಗಳು :

(ಎ) ಸರ್ಕಾರದ ಆಡಳಿತ ಭಾಷಾ ನೀತಿಯ ಅನುಷ್ಠಾನದ ಬಗ್ಗೆ ಬೇರೆ ಬೇರೆ ಇಲಾಖೆಗಳು, ಸಾರ್ವಜನಿಕ ಉದ್ದಿಮೆಗಳು, ಎಲ್ಲ ಸಂಸ್ಥೆಗಳು ಮತ್ತು ಸ್ಥಳೀಯ ನಿಕಾಯಗಳು ಮತ್ತು ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಸಂಸ್ಥೆಗಳು ಕೈಗೊಂಡಿರುವ ಕ್ರಮಗಳ ಪರಿಶೀಲನೆ ಮಾಡುವುದು;

(ಬಿ) ಸರ್ಕಾರ ಅಂಗೀಕರಿಸಿರುವ ಡಾ. ಸರೋಜಿನಿ ಮಹಿಷಿ ವರದಿಯ ಶಿಫಾರಸುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಅಗತ್ಯವಾದ ಕ್ರಮ ಕೈಗೊಳ್ಳುವುದು;

(ಸಿ) ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರುವಲ್ಲಿ ಇರುವ ಅಡಚಣೆಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು;

(ಡಿ) ಕನ್ನಡ ಪರೀಕ್ಷೆಗಳ (ಸೇವಾ ಪರೀಕ್ಷೆ) ಪದ್ಧತಿಯನ್ನು, ಕನ್ನಡ ಜ್ಞಾನವನ್ನು ತಿಳಿಯಲು ನಡೆಸಲಾಗುವ ಪರೀಕ್ಷೆಗಳನ್ನು ಈಗಿರುವ ಅಥವಾ ಮುಂದೆ ರೂಪಿಸಬಹುದಾದ ಸಂಬಂಧಪಟ್ಟ ಪಠ್ಯಕ್ರಮಗಳ ಸಹಿತವಾಗಿ ಕಾಲಕಾಲಕ್ಕೆ ಪರಿಶೀಲಿಸುವುದು ಮತ್ತು ಅಗತ್ಯವೆನಿಸಿದರೆ ಇದನ್ನು ಪರಿಷ್ಕರಿಸಲು, ಮಾರ್ಪಡಿಸಲು ಅಥವಾ ನವೀಕರಿಸಲು ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು, ಕನ್ನಡ ಬೆರಳಚ್ಚುಯಂತ್ರಗಳ ತಯಾರಿಕೆ, ಖರೀದಿ ಮತ್ತು ವಿತರಣೆ ಬಗ್ಗೆ ಕಛೇರಿ ಆಧುನೀಕರಣದಲ್ಲಿ ಬಳಸಲಾಗುವ ಕಂಪ್ಯೂಟರ್, ಟೆಲಿಪ್ರಿಂಟರ್ಸ್, ಟೆಲೆಕ್ಸ್ ಇತ್ಯಾದಿ ಆಧುನಿಕ ಉಪಕರಣಗಳಲ್ಲಿ ಕನ್ನಡವನ್ನು ಬಳಸುವ ಬಗ್ಗೆ ಅಧ್ಯಯನ ಹಾಗೂ ಸಮಾಲೋಚನೆ ನಡೆಸುವುದು ಮತ್ತು ಈ ಸಂಬಂಧದಲ್ಲಿ ಕನ್ನಡವನ್ನೇ ಸಂಪೂರ್ಣವಾಗಿ ಬಳಸುವುದಕ್ಕೆ ಪ್ರೇರಕವಾಗಬಹುದಾದ ನಿರ್ಣಯಗಳನ್ನು ಕೈಗೊಂಡು ಅದನ್ನು ಕಾರ್ಯಗತಗೊಳಿಸುವುದು;

(ಇ) ಅಧಿಕಾರಿಗಳಿಗೆ : ನೌಕರರಿಗೆ ಕನ್ನಡ ಬಳಕೆಗೆ ಅನುಕೂಲವಾದ ತರಬೇತಿ ಕಾರ್ಯಕ್ರಮ, ಶಿಬಿರ, ಪ್ರದರ್ಶನ ಮತ್ತು ವಿಚಾರ ಸಂಕಿರ್ಣಗಳನ್ನು ಏರ್ಪಡಿಸುವುದು ಮತ್ತು ಕನ್ನಡೇತರರಿಗೆ ಕನ್ನಡ ಕಲಿಕೆ ಕಾರ್ಯಕ್ರಮಗಳನ್ನು ಮತ್ತು ಆ ಸಂಬಂಧ ಪಠ್ಯಕ್ರಮ, ಸಾಹಿತ್ಯ ಸಿದ್ಧಪಡಿಸುವುದು ;

(ಎಫ್)ಕನ್ನಡ ಅಭಿವೃದ್ಧಿಗೆ ಉಪಯುಕ್ತ ಪ್ರಕಟಣೆಗಳನ್ನು ಪ್ರಕಟಿಸುವುದು, ಖರೀದಿಸುವುದು ಮತ್ತು ವಿತರಿಸುವುದು;

(ಜಿ) ಕಛೇರಿಗಳಲ್ಲಿ ಬಳಸಲಾಗುವ ಎಲ್ಲಾ ನಮೂನೆಗಳು ಕನ್ನಡದಲ್ಲಿ ಮುದ್ರಣವಾಗುವಂತೆ ನೋಡಿಕೊಳ್ಳುವುದು ಹಾಗೂ ಕನ್ನಡೇತರ ಭಾಷೆಗಳಲ್ಲಿ ಇರಲೇಬೇಕಾದ ನಮೂನೆ, ಪ್ರಕಟಣೆ ಮತ್ತು ರಿಜಿಸ್ಟರುಗಳನ್ನು ಪರಿಶೀಲಿಸಿ, ಮುದ್ರಣಕ್ಕೆ ಅನುಮತಿ ನೀಡುವುದು;

(ಎಚ್)ರಾಜ್ಯದಲ್ಲಿ ಹೆಚ್ಚು ಜನಸಂಪರ್ಕ ಹೊಂದಿರುವ ಕೇಂದ್ರ ಸರ್ಕಾರದ ಕಛೇರಿಗಳು, ಬ್ಯಾಂಕುಗಳು, ಅಂಚೆಕಛೇರಿಗಳು ಮತ್ತು ಮತ್ತಿತರೆ ಕಛೇರಿಗಳು: ಉದ್ದಿಮೆಗಳಲ್ಲಿ ದೈನಂದಿನ ಬಳಕೆಯಲ್ಲಿರುವ ನಮೂನೆ, ನೋಟೀಸು, ನಾಮಫಲಕಗಳಲ್ಲಿ ಕೇಂದ್ರ ಸರ್ಕಾರದ ಭಾಷಾ ನೀತಿಗೆ ಅನುಗುಣವಾಗಿ ಪ್ರಾದೇಶಿಕ ಭಾಷೆಯನ್ನು ಬಳಸಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸುವುದು ಮತ್ತು ಈ ಸಂಬಂಧ ಅಂಥ ಕಛೇರಿಗಳೊಂದಿಗೆ ಪತ್ರವ್ಯವಹಾರ ಕೈಗೊಳ್ಳುವುದು;

(ಐ) ಆಡಳಿತ ಪೂರಕ ಸಾಹಿತ್ಯ ರಚನೆ , ಪರಿಷ್ಕರಣೆ, ಮುದ್ರಣ ಮತ್ತು ವಿತರಣೆ ವಿಷಯಗಳಲ್ಲಿ ತೀರ್ಮಾನ ಕೈಗೊಳ್ಳುವುದು ಮತ್ತು ಈ ಕ್ಷೇತ್ರದಲ್ಲಿನ ಪ್ರಗತಿಯನ್ನು ಆಗಿಂದಾಗ್ಗೆ ಸಮೀಕ್ಷಿಸಿ ಸೂಕ್ತ ಕ್ರಮ ಸೂಚಿಸುವುದು.

ಮೋಟಾರು ವಾಹನ ಸಾರಿಗೆ ಇಲಾಖೆಯಿಂದ ತೆರಿಗೆ ಸಂಗ್ರಹಣೆ ವಿವರ.

322 - ಶ್ರೀ ಪಿ. ಬಸವರಾಜ (ಬ್ರಹ್ಮಾವರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮೋಟಾರು ವಾಹನ ಸಾರಿಗೆ ಉಪಸಾರಿಗೆ ಅಧಿಕಾರಿಗಳವರ ಕಛೇರಿಗಳು ಎಷ್ಟು; ಹಾಗೂ ಈ ಕಛೇರಿಗಳು ಮೋಟಾರು ವಾಹನ ತೆರಿಗೆ ಸಂಗ್ರಹದ ನಿಗದಿತ ಗುರಿಯಲ್ಲಿ ಎಷ್ಟು ಪ್ರತಿಶತ ಮೋಟಾರು ವಾಹನ ತೆರಿಗೆಯನ್ನು ಸಂಗ್ರಹಿಸಿರುತ್ತವೆ. (ಜಿಲ್ಲಾವಾರು ವಿವರ ನೀಡುವುದು.)

ಆ) ಮೋಟಾರು ವಾಹನ ತೆರಿಗೆಯ ನಿಗದಿತ ಗುರಿ ಸಂಗ್ರಹಣೆಯನ್ನು ಸಾಧಿಸುವಲ್ಲಿ ವಿಫಲವಾಗಲು ವಿರಳವಾದ ಸಾರಿಗೆ ಅಧಿಕಾರಿಗಳ ಕಛೇರಿಗಳು ಮತ್ತು ವಿರಳವಾದ ಸಿಬ್ಬಂದಿಗಳು ಮುಖ್ಯ ಕಾರಣವಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ

ಇ) ಕೇರಳ ರಾಜ್ಯದ ಮಾದರಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಮೋಟಾರು ಸಾರಿಗೆ ಅಧಿಕಾರಿಗಳ ಕಛೇರಿಗಳನ್ನು ಹೆಚ್ಚಿಸಿ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಆದಾಯ ಸಂಗ್ರಹವಾಗಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು.) :

ಅ)33 ಸಾರಿಗೆ ಅಧಿಕಾರಿಗಳ ಕಛೇರಿಗಳು 08 ಉಪಸಾರಿಗೆ ಅಧಿಕಾರಿಗಳ ಕಛೇರಿಗಳು 11 ತನಿಖಾ ಠಾಣೆಗಳು.

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

LIST WISE REVENUE COLLECTION FOR THE YEAR 1992-93

Sl. No	District	Target For The Year 1992-93	Actual Collectn.For The Year 92-93	Percentage of Collection
1.	Bangalore	4385.00	4455.05	101.60
2.	Kolar	450.00	446.58	99.24
3.	Tumkur	535.00	492.00	91.96
4.	Mysore	835.00	793.16	94.99
5.	Hassan	240.00	219.02	91.26
6.	Mandya	320.00	293.87	91.83
7.	Madakeri	205.00	198.75	96.95
8.	Shimoga	725.00	627.65	86.57
9.	Dakshina Kannada	1995.00	1904.31	95.45
10.	Chitradurga	605.00	569.28	94.10
11.	Chickmangalore	265.00	251.37	94.86
12.	Gulbarga	295.00	273.92	92.86
13.	Bidar	185.00	198.61	107.36
14.	Bellary	340.00	341.54	100.45
15.	Raichur	225.00	204.65	90.96
16.	Belgaum	955.00	874.87	91.61
17.	Dharwad	655.00	620.27	94.70
18.	Bijapur	420.00	388.03	92.39
19.	Uttara Kannada	275.00	293.00	106.55
	Total	13910.00	13445.93	96.66

Sl. No	District	Target up to No.93	Actual Collection. up to Nov.93	Percentage of Collection
1.	Bangalore	3480.08	3216.40	92.42
2.	Kolar	350.00	277.52	79.29
3.	Tumkur	393.36	312.00	79.32
4.	Mysore	620.00	579.45	93.46
5.	Hassan	173.36	157.54	90.87
6.	Mandya	223.36	210.88	94.41
7.	Madakeri	153.36	118.77	77.45
8.	Shimoga	496.64	423.00	87.19
9.	Dakshina Kannada	1466.64	1292.46	88.12
10.	Chitradurga	443.28	405.76	91.54
11.	Chickmangalore	193.36	174.86	90.43
12.	Gulbarga	213.25	178.12	83.53
13.	Bidar	150.08	124.49	82.95
14.	Bellary	267.44	209.31	78.26
15.	Raichur	160.00	116.66	72.85
16.	Belgaum	686.00	604.77	88.06
17.	Dharwad	476.72	454.46	95.33
18.	Bijapur	300.08	258.27	86.07
19.	Uttara Kannada	223.44	174.09	77.91
	Total	10471.25	9298.71	88.80

Abstract

1.	K.S.R.T.C	6843.12	2750.00	40.19
2.	K.S.T.A.	1400.00	1210.02	86.43
3.	Squad	0.00	4.27	
4.	Dist.Total	10471.25	9298.71	88.80
	Grand Total	18714.37	13262.00	70.87

ಉಡುಪಿ ತಾಲ್ಲೂಕಿನಲ್ಲಿ ಅಡುಗೆ ಅನಿಲ ವಿತರಣಾ ವ್ಯವಸ್ಥೆ.

324 - ಶ್ರೀ ಬಸವರಾಜ್ (ಬ್ರಹ್ಮಾವರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಉಡುಪಿ ತಾಲ್ಲೂಕು ಬ್ರಹ್ಮಾವರ ಅಥವಾ ಸಾಲಿಗ್ರಾಮದಲ್ಲಿ ಮಧ್ಯಮ ವರ್ಗದ ನಾಗರೀಕರಿಗೆ ಅನುಕೂಲವಾಗುವಂತೆ ಗೃಹಬಳಕೆ ಅಡುಗೆ ಅನಿಲ ಸಂಪರ್ಕಗಳ ವಿತರಣೆಯ ಹಂಚಿಕೆದಾರರನ್ನು ನೇಮಿಸುವಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೇಂದ್ರದಲ್ಲಿನ ವಿವಿಧ ತೈಲೋದ್ಯಮ ನಿಗಮದವರನ್ನು ರಾಜ್ಯದ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆ ಕೋರುವುದೇ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಈ ಬಗ್ಗೆ ಕೇಂದ್ರ ಸರ್ಕಾರದ ತೈಲ ಮತ್ತು ನೈಸರ್ಗಿಕ ಅನಿಲ ಇಲಾಖೆಯನ್ನು ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಿ ಪತ್ರ ಸಂಖ್ಯೆ: ಎಫ್ಡಿಎಸ್ 4 ಎಫ್ಪಿಪಿ 94 ದಿನಾಂಕ 10.2.94 ರಲ್ಲಿ ಈಗಾಗಲೇ ಕೋರಲಾಗಿದೆ.

ಕಲ್ಯಾಣ ಮಂಟಪಗಳ ಮೇಲೆ ವೃತ್ತಿ ತೆರಿಗೆ.

320 - ಶ್ರೀ ಬಸವರಾಜ್ (ಬ್ರಹ್ಮಾವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಲ್ಯಾಣ ಮಂಟಪಗಳ ಮೇಲೆ ವೃತ್ತಿ ತೆರಿಗೆಯನ್ನು ವಿಧಿಸಿರುವುದು ನಿಜವೇ; (ವಿವರ ನೀಡುವುದು.)

ಆ) ಈ ವೃತ್ತಿ ತೆರಿಗೆ ನಗರ ಮತ್ತು ಗ್ರಾಮೀಣ ಪ್ರದೇಶಗಳ ಕಲ್ಯಾಣ ಮಂಟಪಗಳಿಗೆ ಏಕ ಪ್ರಕಾರವಾಗಿರುವುದು ನಿಜವೇ;

ಇ) ಗ್ರಾಮೀಣ ಪ್ರದೇಶದ ಕಲ್ಯಾಣ ಮಂಟಪಗಳ ಆದಾಯ ಪಟ್ಟಣ ಪ್ರದೇಶದ ಕಲ್ಯಾಣ ಮಂಟಪಗಳ ಆದಾಯಕ್ಕಿಂತ ಕಡಿಮೆ ಇರುವುದು ನಿಜವಲ್ಲವೇ;

ಈ) ಹಾಗಿದ್ದಲ್ಲಿ ಗ್ರಾಮಾಂತರ ಪ್ರದೇಶದ ಕಲ್ಯಾಣ ಮಂಟಪಗಳ ಮೇಲೆ ವಿಧಿಸಿದ ವೃತ್ತಿ ತೆರಿಗೆಯ ಪುನರ್ ವಿಮರ್ಶೆ ಮಾಡುವುದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು.) :

ಅ) ಹೌದು. 1.4.1992 ರಿಂದ

ಆ) ಹೌದು.

ಇ) ಕಲ್ಯಾಣ ಮಂಟಪಗಳನ್ನು ಹೊಂದಿರುವುದು ವೃತ್ತಿ ಎಂದು ಪರಿಗಣಿಸಿ ವೃತ್ತಿ ತೆರಿಗೆಯನ್ನು ವಿಧಿಸಲಾಗಿದೆಯೇ ಹೊರತು ಆದಾಯವನ್ನು ಪರಿಗಣಿಸಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡುವ ಮಾಸಾಶನ.

227 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ವಾತಂತ್ರ್ಯ ಹೋರಾಟಗಾರರ ಮಾಸಾಶನ ಕೊಡಿಸುವುದಾಗಿ ಅನೇಕ ಏಜೆಂಟರು ಮುಗ್ಧ ಜನರಿಂದ ಹಣ ದೋಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆ ವ್ಯಕ್ತಿ ನನ್ನ ಜೊತೆ ಜೈಲಿನಲ್ಲಿದ್ದ ಎಂದು ಕೆಲವು ಸ್ವಾತಂತ್ರ್ಯ ಹೋರಾಟಗಾರರು ಕೊಡುತ್ತಿರುವ ಸುಳ್ಳು ಸರ್ಟಿಫಿಕೇಟ್ ಆಧಾರದ ಮೇಲೆ ಮಾಸಾಶನ ಮಂಜೂರಾತಿ ಮಾಡುವ ನೀತಿಯನ್ನು ಸರ್ಕಾರ ಒಪ್ಪಿದೆಯೇ;

ಇ) ಆ ರೀತಿ ಮಾಸಾಶನವನ್ನು ಕೊಡುವುದನ್ನು ಇನ್ನೂ ಮುಂದುವರೆಸಿದರೆ ಅನರ್ಹ ವ್ಯಕ್ತಿಗಳೆಲ್ಲ ಆ ಸೌಲಭ್ಯವನ್ನು ತೆಗೆದುಕೊಳ್ಳುತ್ತಾರೆಂಬುದನ್ನು ಸರ್ಕಾರ ಯೋಚಿಸಿದೆಯೇ;

ಈ) ಅಂತಹ ಮಾಸಾಶನವನ್ನು ಕೋರಿ ಇದುವರೆಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು;

ಉ) ಅವರಿಗೆಲ್ಲ ಎಷ್ಟು ದಿನದಲ್ಲಿ ಮಾಸಾಶನ ಮಂಜೂರು ಮಾಡಲಾಗುವುದು;

ಊ) ಅಪ್ರಮಾಣಿಕತನವನ್ನು ತಪ್ಪಿಸಲು ಇನ್ನು ಮುಂದೆ ಈ ಮಾಸಾಶನವನ್ನು ರದ್ದು ಮಾಡಲಾಗುತ್ತದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು.) :

ಅ) ಇಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ಇಲ್ಲಿಯ ತನಕ 446 ಒಟ್ಟು ಅರ್ಜಿಗಳು ಸರ್ಕಾರದ ಗಮನಕ್ಕೆ ಬಂದಿರುತ್ತವೆ.

ಉ) ಸುಳ್ಳು ದಾಖಲಾತಿಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಿದ್ದರೆ ಮಂಜೂರು ಮಾಡಲಾಗುವುದಿಲ್ಲ.

ಊ) ಅನರ್ಹವೆನಿಸಿದ ಪ್ರಕರಣಗಳಲ್ಲಿ ಈಗಾಗಲೇ ಮಾಸಾಶನವನ್ನು ರದ್ದುಗೊಳಿಸಲಾಗಿದೆ.

ಗೋವಾ ವಿಮೋಚನಾ ಚಳುವಳಿ ಹೆಸರಿನಲ್ಲಿ ಹಣದ ಲೂಟಿ.

226 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋವಾ ವಿಮೋಚನಾ ಚಳುವಳಿ ಹೆಸರಿನಲ್ಲಿ ಮಾಸಾಶನ ಕೊಡಿಸುವುದಾಗಿ ಮುಗ್ಧ ಜನರಿಂದ ದಲ್ಲಾಳಿಗಳು ಹಣ ದೋಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆ ವ್ಯಕ್ತಿ ತನ್ನ ಜೊತೆ ಜೈಲಿನಲ್ಲಿದ್ದ ಎಂದು ಕೆಲವು ಜನರು ಕೊಡುತ್ತಿರುವ ಸುಳ್ಳು ಸರ್ಟಿಫಿಕೇಟನ್ನೇ ಆಧರಿಸಿ ಮಾಸಾಶನ ಮಂಜೂರಾತಿ ಮಾಡುವ ಕ್ರಮ ಸರ್ಕಾರದಲ್ಲಿರುವುದೇ;

ಇ) ಮಾಸಾಶನ ಕೊಡಿಸುವ ಆಸೆ ಹುಟ್ಟಿಸಿ ಅನೇಕ ಏಜೆಂಟರು ಮುಗ್ಧ ಜನರಿಂದ ಹಣ ಲೂಟಿ ಮಾಡುತ್ತಿರುವುದನ್ನು ತಪ್ಪಿಸಲು ಸರ್ಕಾರ ಯೋಚಿಸಿದೆಯೇ;

ಈ) ಬಂದಿರುವ ಅಂತಹ ಅರ್ಜಿಗಳನ್ನು ಕೂಲಂಕಶವಾಗಿ ಪರಿಶೀಲಿಸಿ ಕೇವಲ ಅರ್ಹ ವ್ಯಕ್ತಿಗಳಿಗೆ ಮಾತ್ರ ಮಂಜೂರಾತಿ ನೀಡುವಂತೆ ಸರ್ಕಾರ ಆದೇಶ ನೀಡುತ್ತಿದೆಯೇ ;

ಉ) ಈ ಮಾಸಾಶನವನ್ನು ರದ್ದುಮಾಡುವ ಮೂಲಕ ಹಣದ ಲೂಟಿಯನ್ನು ತಪ್ಪಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು.) :

ಅ) ಇಲ್ಲ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ಅರ್ಹ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾತ್ರ ಮಾಸಾಶನ ಮಂಜೂರು ಮಾಡಲಾಗುತ್ತಿದೆ.

ಉ) ಉದ್ಭವಿಸುವುದಿಲ್ಲ.

ವಿಧಾನ ಸೌಧ ಒಳ ಆವರಣದಲ್ಲಿ ಲಕ್ಷಾಂತರ ರೂ ಬೆಲೆ ಬಾಳುವ ಪೀಠೋಪಕರಣ ಬಿದ್ದಿರುವುದರ ಬಗ್ಗೆ

228- ಶ್ರೀ ಕೆ.ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಧಾನ ಸೌಧದ ಒಳ ಆವರಣದಲ್ಲಿ ಲಕ್ಷಾಂತರ ರೂ. ಬೆಲೆಬಾಳುವ ಪೀಠೋಪಕರಣಗಳು ಬಿಸಿಲು ಮಳೆಯಿಂದ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಅವುಗಳನ್ನು ಬಿಸಿಲು ಮಳೆಯಿಂದ ರಕ್ಷಿಸುವ ಕ್ರಮವನ್ನು ಸರ್ಕಾರ ಕೈಗೊಳ್ಳುವುದೇ?

ಇ) ಇನ್ನು ಮುಂದೆ ಹೊಸ ಪೀಠೋಪಕರಣಗಳನ್ನು ಖರೀದಿಸುವ ಬದಲು ಈ ಪೀಠೋಪರಣಗಳನ್ನೇ ದುರಸ್ಥಿಪಡಿಸಿ ಸದುಪಯೋಗಪಡಿಸಿಕೊಳ್ಳುವಂತೆ ಸಂಬಂಧಪಟ್ಟವರಿಗೆ ಸರ್ಕಾರ ಆದೇಶಿಸುವುದೇ.?

ಈ) *ದುರಸ್ತಿ ಮಾಡಲು ಸಾಧ್ಯವಿಲ್ಲದಿದ್ದಲ್ಲಿ ಅವು ಪೂರ್ಣ ಹಾಳಾಗುವುದಕ್ಕೆ ಮುಂಚೆಯೇ ಹರಾಜು ಮಾಡಿದರೆ ಸಾಕಷ್ಟು ಹಣ ಸರ್ಕಾರಕ್ಕೆ ಬರುವುದರಿಂದ ಸರ್ಕಾರ ಆ ಬಗ್ಗೆ ಕ್ರಮ ತೆಗೆದುಕೊಳ್ಳುವುದೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ವಿಧಾನ ಸೌಧದ ಒಳಾಂಗಣದಲ್ಲಿ ಕೆಲವು ಮುರಿದು ಹೋಗಿರುವ ಉಪಯೋಗಿಸಲಾಗದಂತಹ ಪೀಠೋಪಕರಣಗಳು ಇರುವುದು ಸರ್ಕಾರಕ್ಕೆ ತಿಳಿದಿದೆ. ಆದರೆ ಇವು ಬಿಸಿಲು ಮಳೆಯಿಂದ ಹಾಳಾಗುತ್ತಿವೆ ಎಂಬ ಅಭಿಪ್ರಾಯ ಸರಿಯಲ್ಲ. ಏಕೆಂದರೆ ರಿಪೇರಿ ಆಗಬೇಕಿರುವ ಬಹಳಷ್ಟು ಪೀಠೋಪಕರಣಗಳನ್ನು ಉಗ್ರಾಣದಲ್ಲಿರಿಸಿದ್ದು, ಉಗ್ರಾಣವು ಭರ್ತಿ ಆಗಿರುವ ಕಾರಣ, ಕೆಲವನ್ನು ಮಾತ್ರ ಆಚೆ ಇಟ್ಟಿದೆ. ಇವುಗಳಲ್ಲಿ ಯಾವುವನ್ನು ರಿಪೇರಿ ಮಾಡಿಸಿ ಉಪಯೋಗಿಸಬಹುದೋ ಅಂತವುಗಳನ್ನು ರಿಪೇರಿ ಮಾಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಈ ದಿಸೆಯಲ್ಲಿ ಬಂಧೀಖಾನೆ ಇಲಾಖೆಯನ್ನು ಈ ಎಲ್ಲಾ ಪೀಠೋಪಕರಣಗಳನ್ನು ತೆಗೆದುಕೊಂಡು ಹೋಗಿ ರಿಪೇರಿ ಮಾಡುವುದು ಮತ್ತು ಸಾಧ್ಯವಿಲ್ಲದವುಗಳನ್ನು ಹರಾಜು ಹಾಕಲು ಕ್ರಮ ತೆಗೆದುಕೊಳ್ಳುವಂತೆ ಆದೇಶಿಸಲಾಗಿದೆ.

ರಾಜ್ಯದಲ್ಲಿ ಟಾಡಾ ಕಾಯಿದೆ ಅನ್ವಯ ಮೊಕದ್ದಮೆಗಳ ದಾಖಲಾತಿ

225-ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1990-91, 1991-92, 1992-93, 1993-94ನೇ ಸಾಲಿನಲ್ಲಿ ಟಾಡಾ ಕಾಯಿದೆ ಅನ್ವಯ ರಾಜ್ಯದಲ್ಲಿ ಐ.ಎ.ಎಸ್., ಐ.ಪಿ.ಎಸ್. ಕೆ.ಎ.ಎಸ್. ಅಧಿಕಾರಿಗಳು, ಸಂಸತ್ ಸದಸ್ಯರು ಹಾಗೂ ಶಾಸಕರುಗಳ ಮೇಲೆ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆಯೇ.*

ಆ) *ರಾಯಚೂರು ಜಿಲ್ಲೆಯಲ್ಲಿ ಟಾಡಾ ಕಾಯ್ದೆಯನ್ವಯ ಸಿ.ಒ.ಡಿ. ಇಲಾಖೆಯವರು ಸಂಸತ್ ಸದಸ್ಯರು, ಶಾಸಕರು, ಹಾಗೂ ಐ.ಎ.ಎಸ್. ಐ.ಪಿ.ಎಸ್. ಕೆ.ಎ.ಎಸ್. ಹಾಗೂ ಇನ್ನಿತರ ಅಧಿಕಾರಿಗಳ ಮೇಲೆ (ಟಾಡಾ ಕಾಯ್ದೆ) ಮೊಕದ್ದಮೆ ಹೂಡಿರುವರೇ?*

ಇ) *ಹಾಗಿದ್ದಲ್ಲಿ, ಅವರುಗಳ ಮೇಲೆ ಕಾನೂನಿನ ಅನ್ವಯ ತೆಗೆದುಕೊಂಡ ಕ್ರಮಗಳೇನು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) 1990-91, 1991-92, 1992-93ನೇ ಸಾಲಿನಲ್ಲಿ ಟಾಡಾ ಕಾಯಿದೆಯನ್ವಯ ರಾಜ್ಯದಲ್ಲಿನ ಐ.ಎ.ಎಸ್., ಐ.ಪಿ.ಎಸ್., ಕೆ.ಎ.ಎಸ್. ಅಧಿಕಾರಿಗಳು, ಸಂಸತ್ ಸದಸ್ಯರು ಹಾಗೂ ಶಾಸಕರುಗಳ ಮೇಲೆ ಮೊಕದ್ದಮೆಗಳನ್ನು ದಾಖಲು ಮಾಡಿಲ್ಲ.

ಆದರೆ 1993-94ನೇ ಸಾಲಿನಲ್ಲಿ ದಿನಾಂಕ 23-1-1994ರಂದು ರಾಯಚೂರಿನ ಸದರ್ ಬಜಾರ್ಪೊಲೀಸ್ ಠಾಣೆಯಲ್ಲಿ ರಾಜ್ಯದ ಕೆಲವು ಉನ್ನತ ಅಧಿಕಾರಿಗಳು ಹಾಗೂ ಒಬ್ಬರು ರಾಜ್ಯಸಭಾ ಸದಸ್ಯರ ವಿರುದ್ಧ ಐ.ಪಿ.ಸಿ. ಮತ್ತು ಟಾಡಾ ಕಾಯಿದೆಯನ್ವಯ ಪ್ರಥಮ ವರ್ತಮಾನ ವರದಿಯು ದಾಖಲಾಗಿರುತ್ತದೆ.

ಆ) ಈ ಪ್ರಕರಣವನ್ನು ಸತ್ರ ನ್ಯಾಯಾಧೀಶರು, ರಾಯಚೂರು ಅವರ ಸೂಚನೆ ಮೇರೆಗೆ ಆರಕ್ಷಕ ಮಹಾನಿರ್ದೇಶಕರು ಮತ್ತು ಮಹಾನಿರೀಕ್ಷಕರು, ಕರ್ನಾಟಕ ರಾಜ್ಯ ಇವರು ಕಲಂ 158(3) ದಂಡ ಪ್ರಕ್ರಿಯಾ ಸಂಹಿತೆ ಪ್ರಕಾರ ತನಿಖೆ ಕೈಗೊಳ್ಳಲು ಸಿ.ಒ.ಡಿ.ಗೆ ವಹಿಸಿರುತ್ತಾರೆ. ಪ್ರಕರಣವನ್ನು ನೋಂದಾಯಿಸಿ ತನಿಖೆಯನ್ನು ನಡೆಸುತ್ತಿರುತ್ತಾರೆ.

ಇ) ಈ ಎಲ್ಲ ಪ್ರಕರಣಗಳು ಸಿ.ಒ.ಡಿ. ವಿಚಾರಣೆಯಲ್ಲಿರುವುದರಿಂದ, ಸದ್ಯ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ವಿಚಾರಣಾ ವರದಿ ಬಂದಮೇಲೆ ಅದರನ್ವಯ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

Promotion for Graduate Police Constables

252- Sri Sadat Ali Khan (Channapatna) : Will the Chief Minister be pleased to state,

a) *The total number of Graduate and Postgraduate Police Constables working in the State?*

b) *Out of which, the total number of Graduate and Postgraduate Police Constables promoted since 1985?*

c) *The total number of Graduate and Postgraduate Police Constables who have not been promoted in Bangalore Rural District (Talukwise details may be furnished);*

d) *The reasons for not promoting the above category of Police Constables;*

e) *When they will be promoted?*

Sri. M. Veerappa Moily (Chief Minister):

a) Graduates – 2,113

Postgraduates – 69

Total – 2,129

b) 61

c) Nil

d) Police Constables will be promoted on the basis of their seniority list.

e) They will get promotion on the basis of Seniority-cum-merit.

Compensation and Interest Free loans to the deceased families.

250- Sri Sadat Ali Khan (Channapatna) : Will the Chief Minister be pleased to state,

a) *The total number of applications pending with the Government in respect of releasing compensation and interest free loanss to the deceased families during the communal clashes in Channapatna Taluk (Details may be furnished)*

b) *The reasons for delay in releasing the loans and compensation.*

c) *When it will be released?*

Sri. M. Veerappa Moily (Chief Minister):

a) There are no applications pending for compensation and Interest Free Loans.

b) Does not arise

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚೆಕ್‌ಪೋಸ್ಟ್‌ಗಳ ಸಂಖ್ಯೆ

94- ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡದಲ್ಲಿ ಇರುವ ಕಮರ್ಷಿಯಲ್ ಚೆಕ್ಪೋಸ್ಟ್‌ಗಳ ಸಂಖ್ಯೆ ಎಷ್ಟು? ಅವು ಎಲ್ಲೆಲ್ಲಿ ಇವೆ (ವಿವರ ನೀಡುವುದು)

ಆ) ಆ ಚೆಕ್ಪೋಸ್ಟ್‌ನಲ್ಲಿ ಅನೇಕ ಕಡೆ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ದೂರು ಸರ್ಕಾರಕ್ಕೆ ಬಂದಿದೆಯೇ?

ಇ) ಮುಕ್ಕ, ತೊಗೊಟು ಚೆಕ್‌ಪೋಸ್ಟ್‌ಗಳಲ್ಲಿ ಅನ್ಯಾಯ ನಡೆಯುತ್ತಿದ್ದು, ತಪಾಸಣೆ ಇಲ್ಲದೆ ಲಾರಿಗಳನ್ನು, ಸರಕುಗಳನ್ನು, ಚೆಕ್‌ಪೋಸ್ಟ್‌ಗಳಲ್ಲಿ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಇದನ್ನು ನಿಲ್ಲಿಸಲು ಕಠಿಣ ತಪಾಸಣೆ ಮಾಡಲಾಗುವುದೇ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) 8 (ವಿವರಗಳನ್ನು ಲಗತ್ತಿಸಿದೆ)

ಆ) ಯಾವುದೇ ನಿರ್ದಿಷ್ಟ ದೂರು ಬಂದಿಲ್ಲ.

ಇ) ಇಲ್ಲ

ಈ) ಅವಶ್ಯಕವಿರುವ ನಿಗಾವನ್ನು ವಹಿಸಲಾಗುತ್ತಿದೆ.

ರಹದಾರಿ ಇಲ್ಲದೆ ನಡೆಯುವ ಖಾಸಗೀವಾಹನಗಳಿಂದ ಸಾರಿಗೆಸಂಸ್ಥೆಗೆ ನಷ್ಟ.

47-ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಹದಾರಿ ಇಲ್ಲದೆ ಖಾಸಗಿ ವಾಹನಗಳು ರಾಜ್ಯದಲ್ಲಿ ಓಡಾಡುತ್ತಿರುವುದರಿಂದ ಸಾರಿಗೆ ಸಂಸ್ಥೆಯ ಆದಾಯಕ್ಕೆ ಧಕ್ಕೆ ತಗಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ರಹದಾರಿಯಿಲ್ಲದ ವಾಹನಗಳ ಸುಳಿವು ಸಿಕ್ಕಿದರೂ ಸರ್ಕಾರ ಕ್ರಮ ಕೈಗೊಳ್ಳದೆ ಇರುವುದು ನಿಜವಲ್ಲವೆ?

ಇ) ಆದರಿಂದ ಅನಾವಶ್ಯಕವಾಗಿ ಖಾಸಗಿಯವರಿಗೆ ಲಾಭ ಮಾಡಲು ನೆರವು ನೀಡಿದಂತಾಗುವುದಿಲ್ಲವೇ?

ಈ) ರಹದಾರಿ ಇಲ್ಲದ ಖಾಸಗಿ ಬಸ್ಸುಗಳನ್ನು ಮತ್ತು ಅಂತಹ ವಾಹನಗಳನ್ನು ಕೂಡಲೇ ರದ್ದುಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಇಲ್ಲ

ಆ) ಇಲ್ಲ

ಇ) ಇಲ್ಲ

ಈ) ರಹದಾರಿ ಇಲ್ಲದೆ ಓಡಾಡುವ ಖಾಸಗಿ ವಾಹನಗಳ ನೊಂದಣಿ ಪುಸ್ತಕವನ್ನು ಅಮಾನತ್ತುಪಡಿಸುವ ಕ್ರಮವನ್ನು ತೆಗೆದುಕೊಳ್ಳುವುದಲ್ಲದೆ ಅಭಿಯೋಜನೆ ಕ್ರಮವನ್ನೂ ಕೂಡ ತೆಗೆದುಕೊಳ್ಳಲಾಗುತ್ತಿದೆ.

ಶಿವಾಜಿನಗರ ಬ್ರಾಡ್ವೇ ರಸ್ತೆಯಲ್ಲಿರುವ ಸಾರಾಯಿ ಅಂಗಡಿಯನ್ನು ಮುಚ್ಚಿಸುವ ಬಗ್ಗೆ

164-ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಿನಾಂಕ 1.7.93ರಿಂದ ಮುಚ್ಚಿರುವ ಬೆಂಗಳೂರಿನ ಶಿವಾಜಿನಗರದ ಬ್ರಾಡ್ವೇ ರಸ್ತೆಯಲ್ಲಿರುವ ಸಾರಾಯಿ ಅಂಗಡಿಯನ್ನು ಪುನಃ ಸ್ಥಾಪಿಸುವ ಬಗ್ಗೆ ತೀವ್ರ ಪ್ರಯತ್ನ ಮತ್ತು ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಬ್ರಾಡ್ವೇ ರಸ್ತೆ, ಶಿವಾಜಿನಗರ, ಟಾಸ್ಕರ್, ಟೌನ್ ಮತ್ತು ಕಬ್ಬನ್ ಪೇಟೆಯ ವಿಭಾಗಗಳಲ್ಲಿ ಸಾರಾಯಿ ಅಂಗಡಿಯನ್ನು ತೆರೆಯುವ ಬಗ್ಗೆ ಯಾವುದಾದರೂ ಒತ್ತಡಕ್ಕೆ ಮಣಿದು ಸಾರಾಯಿ ಅಂಗಡಿ ತೆರೆಯಲು ಒಪ್ಪಿಗೆ ನೀಡದಿರುವಂತೆ ಸರ್ಕಾರ ಆಶ್ವಾಸನೆ ಕೊಡುವುದೇ?*

ಶ್ರೀ ಎಂ.ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) ಹೌದು.

ಆ) ಬ್ರಾಡ್ವೇ ರಸ್ತೆಯ ಸಾರಾಯಿ ಅಂಗಡಿಯು ದಿನಾಂಕ 1.7.93ರಿಂದ ಮುಚ್ಚಿದೆ. ಈ ಸಾರಾಯಿ ಅಂಗಡಿಯನ್ನು ತೆರೆಯಲು ಯಾವುದೇ ಪ್ರಸ್ತಾವನೆಯು ಇರುವುದಿಲ್ಲ.

Accidents in the State

162-Sri. A.K. Anantha Krishna (Shivaginagar) : Will the Chief Minister be pleased to state

a) *The total number of Traffic accidents occured in the State in 1992-93 (breakup regarding damage to vehicles, personal injury and fatal injuries may please be given separately);*

b) *Out of the above accidents, the number of KSRTC buses, B.T.S. buses, State Government vehicles, public Sector Vehicles of Centre and State involved;*

c) *The total number of persons prosecuted and sentenced and penalties realised in the above accidents and the total compensation paid or payable to the affected parties?*

Sri. M. Veerappa Moily (Chief Minister):

a) The accidents occured in the State during the year 1992-93 is as follows:

Traffic Accidents	Non-fatal accidents	Fatal accidents	Damage to Vehicless
27,865	32,215	4,712	10,392

KSRTC Buses	B.T.S. Buses	State Government Vehicles	Public Sector Vehicles
2,084	786	367	1.982

Persons Prosecuted	Sentenced
19,642	2,467

a) Penalties realised b) Compensation paid; c) Compensation to be paid	Since the affected parties in the accident cases approach the "Accidents Claims Tribunals" directly and get redressal from the Courts/Tribunals, the information reagrding compensation paid and compensation to be paid in respect of he individual cases are not available with the Government. But, in respect of KSRTC, BTS the compensation paid is Rs. 4,04,57,325/-.

ವಾಣಿಜ್ಯ ತೆರಿಗೆ ಇಲಾಖೆಯು ಸಂಗ್ರಹಿಸಿದ ಒಟ್ಟು ತೆರಿಗೆಯ ವಿವರ

173-ಶ್ರೀ ಎಸ್. ಷಫಿ ಅಹ್ಮದ್ (ತುಮಕೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಣಿಜ್ಯ ತೆರಿಗೆ ಇಲಾಖೆಯು ಕಳೆದ ಮೂರು ವರ್ಷಗಳಲ್ಲಿ ಸಂಗ್ರಹಿಸಿದ ಒಟ್ಟು ತೆರಿಗೆ, (ಒಟ್ಟು ತಗಾದೆ ಮತ್ತು ಸಂಗ್ರಹಣೆಯ ಜಿಲ್ಲಾವಾರು ವಿವರ ನೀಡುವುದು).

ಆ) ಒಂದು ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ತೆರಿಗೆ ಬಾಕಿ ಹೊಂದಿರುವ ಸುಸ್ತಿದಾರರ ಪಟ್ಟಿ (ವಿವರಗಳನ್ನು ನೀಡುವುದು):

ಇ) ಇಲಾಖೆಯ ಒಟ್ಟು ಸಂಗ್ರಹಣಾ ವೆಚ್ಚ ಮತ್ತು ಖಾಲಿ ಇರುವ ಹುದ್ದೆಗಳ ವಿವರ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) ಕಳೆದ ಮೂರು ವರ್ಷಗಳ ಸಂಗ್ರಹಣಾ ವಿವರಗಳು ಕೆಳಗಿನಂತಿವೆ:

1990-91	1458.53	ಕೋಟಿ ರೂ.ಗಳು
1991-92	1848.09	-ಅದೇ-
1992-93	2003.70	-ಅದೇ-

ಜಿಲ್ಲಾವಾರು ಮಾಹಿತಿ ಲಭ್ಯವಿಲ್ಲದಿರುವುದರಿಂದ ವಿಭಾಗಾವಾರು ಮಾಹಿತಿಯನ್ನು ಇದಕ್ಕೆ ಲಗತ್ತಿಸಿದೆ.

ಆ) ಮಾಹಿತಿಯನ್ನು ಸದನದ ಮುಂದೆ ಇಡಲಾಗಿದೆ.

ಇ) (1) ಇಲಾಖೆಯ ಸಂಗ್ರಹಣ ವೆಚ್ಚ :

1990-91 19.97 ಕೋಟಿ. ರೂ.ಗಳು

1991-92 23.13 –ಅದೇ-

1992-93 27.00 –ಅದೇ–

(2) ಖಾಲಿ ಹುದ್ದೆಗಳು :

'ಎ' ಮತ್ತು 'ಬಿ' ಗ್ರೂಪ್ ಹುದ್ದೆಗಳು 66

ಸಿ' ಮತ್ತು 'ಡಿ' ಗ್ರೂಪ್ ಹುದ್ದೆಗಳು 682

ದಿನಾಂಕ 31.3.91ರಲ್ಲಿದ್ದಂತೆ (ರೂ. ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ವಿಭಾಗಗಳ ಹೆಸರು	ತಗಾದೆ	ವಸೂಲಿ	ಬಾಕಿ
1.	ಬೆಂಗಳೂರು ನಗರ ವಿಭಾಗ-1	584.85	544.72	40.13
2.	ಬೆಂಗಳೂರು ನಗರ ವಿಭಾಗ-2	320.15	285.26	34.89
3.	ಬೆಂಗಳೂರು ನಗರ ವಿಭಾಗ-3	256.87	186.46	70.41
4.	ಮೈಸೂರು	101.35	77.75	23.50
5.	ಮಂಗಳೂರು	94.24	78.83	15.41
6.	ಧಾರವಾಡ	92.79	76.53	16.26
7.	ಬೆಳಗಾಂ	89.01	75.92	13.09
8.	ಗುಲ್ಬರ್ಗಾ	62.78	44.82	17.96
9.	ದಾವಣಗೆರೆ	102.48	75.53	26.95
10.	ಗುಪ್ತವಾರ್ತೆ ವಲಯಗಳು	12.98	12.71	0.27
	ಒಟ್ಟು	1717.50	1458.53	258.97

ದಿನಾಂಕ 31.3.92 ರಲ್ಲಿದ್ದಂತೆ (ರೂ. ಕೋಟಿಗಳಲ್ಲಿ)

ಕ್ರ.ಸಂ.	ವಿಭಾಗಗಳ ಹೆಸರು	ತಗಾದೆ	ವಸೂಲಿ	ಬಾಕಿ
1.	ಬೆಂಗಳೂರು ನಗರ ವಿಭಾಗ-1	610.05	581.17	48.88
2.	ಬೆಂಗಳೂರು ನಗರ ವಿಭಾಗ-2	376.62	333.30	43.32
3.	ಬೆಂಗಳೂರು ನಗರ ವಿಭಾಗ-3	281.76	259.08	22.68
4.	ಬೆಂಗಳೂರು ನಗರ ವಿಭಾಗ-4	-	-	-
5.	ಬೆಂಗಳೂರು	230.51	168.97	61.54
6.	ಮೈಸೂರು	109.82	88.57	21.25

7.	ಮಂಗಳೂರು	123.41	95.57	27.84
8.	ಧಾರವಾಡ	107.35	88.87	18.48
9.	ಬೆಳಗಾಂ	98.02	84.66	13.36
10.	ಗುಲ್ಬರ್ಗಾ	84.35	63.93	20.42
11.	ದಾವಣಗೆರೆ	121.21	93.12	29.12
	ಗುಪ್ತವಾರ್ತೆ ವಲಯಗಳು	11.11	10.85	0.26
	ಒಟ್ಟು	2954.24	1848.09	306.15

ದಿನಾಂಕ 31.3.92 ರಲ್ಲಿದ್ದಂತೆ (ರೂ. ಕೋಟಿಗಳಲ್ಲಿ)

ಕ್ರ.ಸಂ.	ವಿಭಾಗಗಳ ಹೆಸರು	ತಗಾದೆ	ವಸೂಲಿ	ಬಾಕಿ
1.	ಬೆಂಗಳೂರು ನಗರ ವಿಭಾಗ-1	557.59	402.07	55.52
2.	ಬೆಂಗಳೂರು ನಗರ ವಿಭಾಗ-2	321.07	288.70	32.30
3.	ಬೆಂಗಳೂರು ನಗರ ವಿಭಾಗ-3	294.71	268.51	26.20
4.	ಬೆಂಗಳೂರು ನಗರ ವಿಭಾಗ-4	195.72	179.94	15.78
5.	ಬೆಂಗಳೂರು	199.74	172.93	26.81
6.	ಮೈಸೂರು	93.60	77.54	16.96
7.	ಮಲ್ನಾಡು	76.13	61.83	14.30
8.	ಮಂಗಳೂರು	139.61	107.93	31.68
9.	ಧಾರವಾಡ	124.41	109.47	14.94
10.	ಬೆಳಗಾಂ	116.33	98.62	17.71
11.	ಗುಲ್ಬರ್ಗಾ	84.83	64.22	20.61
12.	ದಾವಣಗೆರೆ	22.15	63.24	21.91
	ಗುಪ್ತವಾರ್ತೆ ವಲಯಗಳು	9.01	8.70	0.31
	ಒಟ್ಟು	2297.83	2003.70	294.13

ದಕ್ಷಿಣ ಕನ್ನಡದಲ್ಲಿ ಮಾಸಾಶನ ಪಡೆಯುವವರ ವಿವರ

46-ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) :ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ, ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1980ರಿಂದ 1993ನೇ ಡಿಸೆಂಬರ್‌ವರೆಗೆ ದಕ್ಷಿಣ ಕನ್ನಡದಲ್ಲಿ 250 ರೂಪಾಯಿ ಮತ್ತು 500 ರೂಪಾಯಿ ಮಾಸಾಶನ ಎಷ್ಟು ಮಂದಿ ಕ್ರೀಡಾಳುಗಳಿಗಾಗಿ, ಸಾಹಿತ್ಯ, ಯಕ್ಷಗಾನ, ಜಾನಪದ ಕಲಾವಿದರಿಗೆ ಕೊಡಲಾಗಿದೆ (ವಿವರ ಬೇಕು);

ಆ) ಈ ಮಾಸಾಶನ ಕೊಡುವುದನ್ನು ಯಾವಾಗಲಾದರೂ ನಿಲ್ಲಿಸಲಾಗಿದೆಯೇ? ವಿವರ ಕೊಡುವುದು.

ಇ) ಮಾಸಾಶನಕ್ಕಾಗಿ ಬಂದಿರುವ ಅರ್ಜಿಗಳು ಎಷ್ಟು? ಹಾಗೂ ಅದನ್ನು ಯಾವಾಗ ಕೊಡಲು ಪ್ರಾರಂಭಿಸಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ, ಕ್ರೀಡಾ ರಾಜ್ಯ ಸಚಿವರು):

ಅ) ರೂ. 250 ಗಳ ಮಾಸಾಶನವನ್ನು 8 ಮಂದಿ ಸಾಹಿತಿಗಳಿಗೆ, 29 ಮಂದಿ ಜಾನಪದ ಮತ್ತು ಯಕ್ಷಗಾನ ಕಲಾವಿದರಿಗೆ ನೀಡಲಾಗಿದೆ. ರೂ. 500 ಮಾಸಾಶನವನ್ನು 3 ಮಂದಿ ಸಾಹಿತಿಗಳಿಗೆ, 12 ಮಂದಿ ಜಾನಪದ ಮತ್ತು ಯಕ್ಷಗಾನ ಕಲಾವಿದರಿಗೆ ನೀಡಲಾಗಿದೆ. ವಿವರ ಪಟ್ಟಿ ಲಗತ್ತಿಸಿದೆ.

ಕ್ರೀಡಾ ಪಟುಗಳಿಗೆ ನೀಡಿಲ್ಲ.

ಆ) ಇಲ್ಲ.

ಇ) 3067 ಅರ್ಜಿಗಳು ಬಂದಿವೆ. ಪರಿಶೀಲಿಸಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೂ 250-00ರ ಗೌರವಧನವನ್ನು ಮಂಜೂರು ಮಾಡಲಾದ ಸಾಹಿತಿ : ಕಲಾವಿದರ ಪಟ್ಟಿ

ಹೆಸರು ಮತ್ತು ವಿಳಾಸ ಸಾಹಿತ್ಯ ಕ್ಷೇತ್ರ ಶ್ರೀ :ಶ್ರೀಮತಿ		ಜಾನಪದ ಯಕ್ಷಗಾನ ಕ್ಷೇತ್ರ ಹೆಸರು ಮತ್ತು ವಿಳಾಸ ಶ್ರೀ: ಶ್ರೀಮತಿ	
1)	ಸೀತಾನದಿ ಗಣಪತಯ್ಯ ಶೆಟ್ಟಿ, ಬೊಮ್ಮರ ಬೆಟ್ಟುಹಳ್ಳಿ, ಉಡುಪಿ ತಾಲ್ಲೂಕು, ಹಿರಿಯಡ್ಕ ಪೋಸ್ಟ್, ದಕ್ಷಿಣ ಕನ್ನಡ ಜಿಲ್ಲೆ.	1)	ಮಹದೇವ ಶೆಟ್ಟಿ, ಕೋಟೆ ಬಾಗಿಲು, ಮೂಡಬಿದ್ರಿ, ಕಾರ್ಕಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
2)	ಕಮ್ಮತ್ತೂರು ದೊಡ್ಡಣ್ಣ ಶೆಟ್ಟಿ, ರಾಜರಾಮ ನಿವಾಸ, ಪೋಸ್ಟ್: ಹಿರ್ಗಾನ 576 117. ಕಾರ್ಕಳ ತಾಲ್ಲೂಕು, ದಕ್ಷಿಣಕನ್ನಡ ಜಿಲ್ಲೆ.	2)	ಪೆರಡೂರು ರಾಮ ಶೆರಿಗಾರ, ಹೆಬ್ಬಾಗಿಲು ಮನೆ, ನೀಲಾವರ ಅಂಚೆ, ಉಡುಪಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
3)	ಕೆ.ಎಸ್. ಪದ್ಮನಾಭಾಚಾರ್ಯ, ನಂ.76, ಸಿಂಡಿಕೇಟ್ ಬ್ಯಾಂಕ್ ಹಿಂಭಾಗ, ಕಿನ್ನಿಗೋಳಿ, ಮಂಗಳೂರು, ದಕ್ಷಿಣಕನ್ನಡ ಜಿಲ್ಲೆ.	3)	ಎಂ. ನಾರಾಯಣ ಉಪ್ಪಾರ, ಹಾಲಾಡಿ-ಚೆರಿಕೆ ಹಾಲಡಿ ಅಂಚೆ, ಕುಂದಾಪುರ ತಾಲ್ಲೂಕು ದಕ್ಷಿಣ ಕನ್ನಡ ಜಿಲ್ಲೆ.
4)	ರಾಮ ಮೊಲಿಯಾರ್, ವಿವೇಕ್ ಸಾಹಿತ್ಯ ಮಾಲೆ, ಎಂ.ಎಂ.ರಸ್ತೆ, ಮಂಗಳೂರು.	4)	ಕಾಳು ಶೆರಿಗಾರ, ನಾಗೇಶ್ವರ ಕಸಬಾ, ಕಾರ್ಕಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
5)	ಎ.ಎಸ್.ರಾಮಕೃಷ್ಣ, ಪರ್ಕಳ, ದಕ್ಷಿಣ ಕನ್ನಡ ಜಿಲ್ಲೆ.	5)	ನೀಲಾವರ ರಾಮಕೃಷ್ಣಯ್ಯ, ಯಕ್ಷಗಾನ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆ.

6) ಕೆ.ಶ್ರೀನಿವಾಸ ಶರ್ಮ, ಬಾಗಂಬೆಲಿ, ದೇರಳಕಟ್ಟೆ ಅಂಚೆ, ಕೋಟೆಕಾರ್, ದಕ್ಷಿಣಕನ್ನಡ ಜಿಲ್ಲೆ.

7) ವೆಂಕಟರಾಜು ಪುಣಿಂಚಿತ್ತಾಯ, 'ಹಿಮಗಿರಿ ನಿವಾಸ', ಪುತ್ತೂರು, ದಕ್ಷಿಣಕನ್ನಡ ಜಿಲ್ಲೆ.

8) ಎಂ. ಶಿವನಾರಾಯಣ ಸರಳಾಯ, ಪಾಂಡೇಶ್ವರ ಹೊಸ ರಸ್ತೆ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

9) ಎಸ್. ದಾಮೋದರರಾವ್ ಮಂಡಚ್ಚ, ವಿಜಯಾ ಬ್ಯಾಂಕ್ ಕಂಪೌಂಡ್, ಜೋಡು ಮಾರ್ಗ ಅಂಚೆ-574 219, ಬಂಟ್ವಾಳ ತಾಲ್ಲೂಕು, ದಕ್ಷಿಣಕನ್ನಡ ಜಿಲ್ಲೆ.

10) ಪಿ. ನಾರಾಯಣ ಭಟ್ಟ, ಸೂಳಿಮನೆ, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ.

11) ನೆಲ್ಲೂಕಾರು ಧರ್ಮರಾಜ ಯಾದವ, ಹಿರಿಯಂಗಡಿ ರಸ್ತೆ, ಕಾರ್ಕಳ ಅಂಚೆ, ದಕ್ಷಿಣ ಕನ್ನಡ ಜಿಲ್ಲೆ.

6) ಹಿರಿಯಡ್ಕ ಗೋಪಾಲರಾವ್, ಹಿರಿಯಡ್ಕ ಅಂಚೆ, ಉಡುಪಿ ತಾಲ್ಲೂಕು, ದಕ್ಷಿಣಕನ್ನಡ ಜಿಲ್ಲೆ.

7) ಕುಲಶೇಷದಾರ್, ಕಾರ್ಕಳ, ದಕ್ಷಿಣಕನ್ನಡ ಜಿಲ್ಲೆ.

8) ನಿಡ್ಲೆನರಸಿಂಹಭಟ್ಟ, ಕಟೀಲು ಶ್ರೀ ದುರ್ಗಾಪರಮೇಶ್ವರಿ, ದೇವಸ್ಥಾನ, ಕಟೀಲು ಅಂಚೆ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

ಜಾಪಪದ ಯಕ್ಷಗಾನ ಕ್ಷೇತ್ರ

12) ಮಧೂರ್ ಗಣಪತಿ ರಾವ್, ಕೇರಾಫ್ ಮಹಾಮಾಯೆ ಯಕ್ಷಗಾನ ಮೇಳ, ಸುರತ್ಕಲ್, ದಕ್ಷಿಣ ಕನ್ನಡ ಜಿಲ್ಲೆ.

13) ಎಂ. ವಿಶ್ವೇಶ್ವರಯ್ಯ, ಮರವಂತೆ, ಕುಂದಾಪುರ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

14) ಸಾ. ಕೋಟ್ಯಾನ್, ಸಸಿಹಿತ್ಲು ಅಂಚೆ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

15) ಎಸ್. ಪುಂಡರೀಕ ಶೆಣೈ, ಮಹಾತ್ಮ ಗಾಂಧೀನಗರ, ಮೂಡಬಿದ್ರೆ, ದಕ್ಷಿಣ ಕನ್ನಡ ಜಿಲ್ಲೆ.

23) ದಿವಾಣ ಭೀಮ ಭಟ್ಟ, ಕೊಡಪದವು, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

24) ತೆಕ್ಕಟ್ಟೆ ಆನಂದ ಮಾಸ್ತರ್, ಸಾಗೂರ್ ಕರಿಮಂಡೇಶ್ವರ, ಕುಂದಾಪುರ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

25) ಸಿ.ಹೆಚ್. ರಾಮಕೃಷ್ಣ ಕಾಮತ್, ಪುತ್ತೂರು, ದಕ್ಷಿಣಕನ್ನಡ ಜಿಲ್ಲೆ.

26) ಕರಾಯ ಸುಬ್ಬರಾಯ, ಧರ್ಮಸ್ಥಳ, ದಕ್ಷಿಣ ಕನ್ನಡ ಜಿಲ್ಲೆ.

16) ಕೆ. ಕಾಂತ ಪೈ
ಕರಂಜಿಗ್ರಾಮ, ಕಾರ್ಕಳ
ತಾಲ್ಲೂಕು, ದಕ್ಷಿಣ
ಕನ್ನಡ ಜಿಲ್ಲೆ.

17) ಕೆ. ವೆಂಕಾಚಲ ಭಟ್ಟ,
ಕುತ್ಯಾದಿ ಅಂಚೆ,
ಉದ್ಯಾವರ ಮಾರ್ಗ, ಉಡುಪಿ, ತಾಲ್ಲೂಕು
ದಕ್ಷಿಣ ಕನ್ನಡ ಜಿಲ್ಲೆ.

18) ದೇಜಪ್ಪ ಶೆಟ್ಟಿ, ಸುಳ್ಯಗ್ರಾಮ,
ಉಡುಪಿ ತಾಲ್ಲೂಕು,
ದಕ್ಷಿಣಕನ್ನಡ ಜಿಲ್ಲೆ.

19) ಕೆ. ಪುರುಷೋತ್ತಮ ಭಟ್ಟ,
ಕಟೀಲ ಅಂಚೆ, ಮಂಗಳೂರು ತಾಲ್ಲೂಕ್,
ದಕ್ಷಿಣಕನ್ನಡ ಜಿಲ್ಲೆ.

20) ಬೆಟ್ಟಂಪಾಡಿ ಬಾಳಪ್ಪ ಶೆಟ್ಟಿ,
ಬೆಟ್ಟಂಪಾಡಿ ಅಂಚೆ.
ದಕ್ಷಿಣ ಕನ್ನಡ ಜಿಲ್ಲೆ.

21) ಕೆ. ಪುಟ್ಟಣ್ಣ ಶೆಟ್ಟಿ ಕುಬೆಪ್ರೂರು,
ಮೂಡುಮನೆ ಪುತ್ತೂರು ಗ್ರಾಮ,
ಕಂಚಿನಕೆರೆ ಅಂಚೆ
ದಕ್ಷಿಣ ಕನ್ನಡ ಜಿಲ್ಲೆ.

22) ಪುರುಷೋತ್ತಮ ಭಟ್,
ಶ್ರೀ ಪೇಜಾವರ ಮಠ,
ಉಡುಪಿ, ದಕ್ಷಿಣ ಕನ್ನಡ ಜಿಲ್ಲೆ.

27) ಎಂ. ಸದಾಶಿವಾಚಾರಿ,
ಸಜೀವಮೂಡ ಗ್ರಾಮ,
ಬಂಟ್ವಾಳ ತಾಲ್ಲೂಕು,
ದಕ್ಷಿಣ ಕನ್ನಡ ಜಿಲ್ಲೆ.

28) ಮಂಜುಪಂಬದ,
ಬೇರಿಕೇ, ಸಜೀಪಮೂಡ ಅಂಚೆ,
ನಗ್ರಿ ಮಾರ್ಗ, ಪಾಣೆ ಮಂಗಳೂರು.
ಬಂಟ್ವಾಳ ತಾಲ್ಲೂಕು,
ದಕ್ಷಿಣ ಕನ್ನಡ ಜಿಲ್ಲೆ.

29) ಹಾರಾಡಿ ನಾರಾಯಣ ಗಾಣಿಗ,
ಹಾರಾಡಿ ಅಂಚೆ
ಸಾಲೇಕೇರಿ, ಬ್ರಹ್ಮಾವರ ತಾಲ್ಲೂಕು,
ದಕ್ಷಿಣ ಕನ್ನಡ ಜಿಲ್ಲೆ.

1980 ರಿಂದ 1993ರ ಡಿಸೆಂಬರ್‌ವರೆಗೆ ದಕ್ಷಿಣ ಕನ್ನಡದಲ್ಲಿ ರೂ. 500-00 ಗಳ ಗೌರವಧನವನ್ನು ಸಾಹಿತಿ:ಕಲಾವಿದರಿಗೆ ನೀಡಲಾದ ವಿವರಣಾ ಪಟ್ಟಿ.

ಸಾಹಿತ್ಯ ಕ್ಷೇತ್ರ ಹೆಸರು ಮತ್ತು ವಿಳಾಸ
ಶ್ರೀ :ಶ್ರೀಮತಿ

1) ಸೇಡಿಯಾಪು ಕೃಷ್ಣಭಟ್ಟ,
ನಂ.ಎ-6, ಕೈಲಾಸ,
ಮಣಿಪಾಲ್- 576 119,
ಉಡುಪಿ ತಾಲ್ಲೂಕು,
ದಕ್ಷಿಣ ಕನ್ನಡ ಜಿಲ್ಲೆ.

2) ಬಿ.ಎಂ. ಇದಿನಬ್ಬ, ಮೇಲಂಗಡಿ,
ಉಲ್ಲಾಳ, ದಕ್ಷಿಣ ಕನ್ನಡ ಜಿಲ್ಲೆ.

3) ಕೆ.ಎನ್.ಭಟ್, ಶಿರಾಡಾಪಾಲ್
ಕಡಿರುದ್ಯಾವರ,
ಬೆಳ್ತಂಗಡಿ ತಾಲ್ಲೂಕು,
ದಕ್ಷಿಣ ಕನ್ನಡ ಜಿಲ್ಲೆ.

ಯಕ್ಷಗಾನ ಮತ್ತು ಜಾನಪದ ಕ್ಷೇತ್ರ

1) ಕೊಗ್ಗ ಕಾಮತ್, ಉಪ್ಪಿನಕುದ್ರು-576 230, ಕುಂದಾಪುರ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

2) ಆಲಿಕೆ ರಾಮರಾಯರಾಯ್ ವಿಠಲ್, ಅಳಕಾ, ಅಂಚೆ ಹಿರೇ ಬಂಡಾಡಿ 574-306, ದಕ್ಷಿಣ ಕನ್ನಡ ಜಿಲ್ಲೆ.

3) ಬೋಳಾರ ನಾರಾಯಣ ಶೆಟ್ಟಿ, ಬೋಳಾರಾ ಹೌಸ್, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

4) ಅಗರಿ ಶ್ರೀನಿವಾಸ ಭಾಗವತರ್, ಶಿಬ್ರಿಕೆರೆ ಅಂಚೆ, ಮಂಗಳೂರು, ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

5) ಬಣ್ಣದ ಮಹಾಲಿಂಗ, ಕಲ್ಲುಗುಂಡಿ ಅಂಚೆ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

6) ಚಿಪ್ಪಾರು ಕೃಷ್ಣಯ್ಯ ಬಲ್ಲಾಳ, ಕೇರಾಫ್ ಶ್ರೀಪತಿ ತುಂಬನರಾಯ್, ಬೆಂದೂರು ಅಡ್ಡರಸ್ತೆ, ಮಂಗಳೂರು-2, ದಕ್ಷಿಣ ಕನ್ನಡ ಜಿಲ್ಲೆ.

7) ವಿಠಲ ಗೋಪಾಲಕೃಷ್ಣ ಜೋಶಿ, "ರಸಿಕ ರತ್ನ" ಯಕ್ಷಗಾನ ಕಲಾವಿದ, ವಿಟ್ಲ-574 243.

8) ಅಣ್ಣಪ್ಪ ಮಿಜಾರ್, ಬೆಡಗ ಎಡಪದವುಗ್ರಾಮ,-ಬೆಡಗ ಎಡಪದವು ಅಂಚೆ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

9) ಎಂ .ಎ. ಹೆಗ್ಗಡೆ, ನ್ಯಾಯವಾದಿಗಳು, ಕುಂದಾಪುರ, ದಕ್ಷಿಣ ಕನ್ನಡಜಿಲ್ಲೆ.

10) ಕುಂಬಳೆ ಸುಂದರರಾವ್, ಶ್ರೀ ಧರ್ಮಸ್ಥಳ ಯಕ್ಷಗಾನ ಮಂಡಳಿ, ಪಡಿಲು ಅಂಚೆ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

11) ಕಿರಿಕ್ಕಾಡಿ ಮಾಸ್ಟರ್‌ವಿಷ್ಣುಭಟ್, ಸುಳ್ಯ, ದಕ್ಷಿಣ ಕನ್ನಡ ಜಿಲ್ಲೆ.

12) ಗೋಪಾಲಕೃಷ್ಣ ಕಾಮತ್, ಮಂದರ್ತಿ, ಉಡುಪಿ ತಾಲ್ಲೂಕು,ದಕ್ಷಿಣ ಕನ್ನಡ ಜಿಲ್ಲೆ.

ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಆಕಾಡೆಮಿಗೆ ಖಾಯಂ ಅಧಿಕಾರಿಯ ನೇಮಕ

219-ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ಆಡಳಿತವನ್ನು ನಿರ್ವಹಿಸಲು ಅಧಿಕಾರಿಯನ್ನು ನೇಮಕ ಮಾಡಲಾಗಿದೆಯೇ?

ಆ) ಆ ಅಧಿಕಾರಿಯನ್ನು ಅಕಾಡೆಮಿಗೆ ಖಾಯಂ ಆಗಿ ನಿಯೋಜಿಸಲಾಗಿದೆಯೇ
ಇ) ಹಾಗಿಲ್ಲದಿದ್ದರೆ ಖಾಯಂ ಆಗಿ ನಿಯೋಜಿಸದಿರಲು ಕಾರಣಗಳೇನು?
ಈ) ಖಾಯಂ ಆಗಿ ಪೂರ್ಣ ಪ್ರಮಾಣದ ಒಬ್ಬ ಅಧಿಕಾರಿಯನ್ನು ಆಡಳಿತ ನಿರ್ವಹಿಸಲು ಏಕೆ ನಿಯೋಜಿಸಬಾರದು.
ಉ) ನಿಯೋಜಿಸಲು ಅಧಿಕಾರಿಗಳ ಕೊರತೆ ಇದ್ದಲ್ಲಿ ಇನ್ನೊಂದು ಇಲಾಖೆಯಿಂದ ನಿಯೋಜನೆ ಮೇರೆಗೆ ಏಕೆ ಪಡೆಯಬಾರದು.

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು):

ಅ) ಅಕಾಡೆಮಿಯ ಕೆಲಸವನ್ನು ನಿರ್ವಹಿಸಲು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿಯೊಬ್ಬರ ಸೇವೆಯನ್ನು ಉಪಯೋಗಿಸಿಕೊಳ್ಳಲಾಗಿದೆ.

ಆ) ಇ) ಈ) ಮತ್ತು ಉ) ಅಕಾಡೆಮಿಯ ಆಡಳಿತ ಮಂಡಳಿಯು ಅಕಾಡೆಮಿಯ ಚಟುವಟಿಕೆಗಳಿಗೆ ಬೇಕಾದ ನಿರ್ದೇಶಕರ ಹುದ್ದೆ ಮತ್ತು ಸಿಬ್ಬಂದಿ ವರ್ಗವನ್ನು ಈಗಾಗಲೇ ಪರಿಶೀಲಿಸುತ್ತಿದೆ. ಅಕಾಡೆಮಿಯಲ್ಲಿ ಒಬ್ಬ ನಿರ್ದೇಶಕರು ಇರುತ್ತಾರೆಂದು ಸರ್ಕಾರಿ ಆದೇಶದಲ್ಲಿ ಷರತ್ತನ್ನು ವಿವರಿಸಿದೆ. ನಿರ್ದೇಶಕರು ಹುದ್ದೆ ಬೇರೆಯಾಗಿ ಸೃಜಿಸುವವರೆಗೆ ಖಾಯಂ ಆಗಿ ನಿಯೋಜಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಬೀದರ್ ನಗರದಲ್ಲಿ ಆಗಿರುವ ಹಲ್ಲೆ ಮತ್ತು ಕೊಲೆ ಪ್ರಕರಣ

351-ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?
ಅ) ದಿನಾಂಕ 2-1-94ರಂದು ಬೀದರ್ ನಗರದಲ್ಲಿ ಹಲ್ಲೆ ಹಾಗೂ ಕೊಲೆ ಪ್ರಕರಣಗಳು ನಡೆದಿದೆಯೇ?
ಆ) ಹಾಗಿದ್ದಲ್ಲಿ, ಒಬ್ಬ ಪೋಲೀಸ್ ಪೇದೆಯನ್ನು ದರೋಡೆಕೋರರು ಕೊಲೆ ಮಾಡಿರುವುದು ನಿಜವೇ?
ಇ) ಅದೇ ದಿವಸ ಶ್ರೀ ಉಮಾಕಾಂತ್ ನಾಗ್ಮಾರ್ಪಲ್ಲಿ ಎಂಬುವವರ ಮೇಲೂ ಸಹ ಹಲ್ಲೆ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಈ) ಮೃತಪಟ್ಟ ಪೋಲೀಸ್ ಪೇದೆಯವರ ಮನೆಯವರಿಗೆ ಸರ್ಕಾರ ನೀಡಿರುವ ಪರಿಹಾರ ಹಣವೆಷ್ಟು?
ಉ) ಶ್ರೀ ಉಮಾಕಾಂತ್‌ರವರ ವೈದ್ಯಕೀಯ ಖರ್ಚನ್ನು ಸರ್ಕಾರ ಭರಿಸುತ್ತದೆಯೇ?
ಊ) ಆ ಪ್ರಕರಣಕ್ಕೆ ಕಾರಣರಾದವರನ್ನು ಹಿಡಿಯಲಾಗಿದೆಯೇ?
ಋ) ಮೃತಪಟ್ಟ ಪೋಲೀಸರ ಪತ್ನಿಗೆ ಸರ್ಕಾರ ಅನುಕಂಪದ ಆಧಾರದ ಮೇಲೆ ನೌಕರಿ ನೀಡುತ್ತಿದೆಯೇ?
ೠ) ಬೀದರ್ ನಗರದಲ್ಲಿ ಹಲ್ಲೆ ಹಾಗೂ ಕೊಲೆ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) ಹೌದು ಇಂಥ ಒಂದು ಪ್ರಕರಣ ನಡೆದಿದೆ.

ಆ) ದಿನಾಂಕ : 2: 3-1-94ರಂದು ರಾತ್ರಿ ಪೋಲೀಸ್ ಪೇದೆಗಳಾದ ಶ್ರೀ ಚಂದ್ರಕಾಂತ್ (ಪಿಸಿ 459) ಮತ್ತು ಶ್ರೀ ಯೇಸುದಾಸ್ (ಪಿಸಿ 1043) ರಾತ್ರಿ ಗಸ್ತು ಮಾಡುತ್ತಿದ್ದಾಗ ಇಬ್ಬರು ಅಪರಿಚಿತ ವ್ಯಕ್ತಿಗಳು ಶ್ರೀ ಚಂದ್ರಕಾಂತ್‌ರನ್ನು ತಿವಿದು ಪರಾರಿಯಾಗಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಸದರೀ ಪೇದೆಯು ಮೃತಪಟ್ಟಿದ್ದಾರೆ. ಈ ಕೃತ್ಯವು ಕಳ್ಳರಿಂದ ನಡೆದಿರಬಹುದೆಂದು ಶಂಕಿಸಲಾಗಿದೆ.

ಇ) ಹೌದು, ಸರ್ಕಾರದ ಗಮನಕ್ಕೆ ಬಂದಿದೆ.

ಈ) ಸರ್ಕಾರದಿಂದ ಮೃತನ ಮನೆಯವರಿಗೆ ಒಟ್ಟು ರೂ. 29,404-00 ಕೊಡಲಾಗಿದೆ. ಅಲ್ಲದೆ ಯುನೈಟೆಡ್ ಇನ್ಸೂರೆನ್ಸ್ ಕಂಪನಿಗೆ 1 ಲಕ್ಷ ರೂ.ಗಳ ಮಂಜೂರಾತಿಗಾಗಿ ಪತ್ರ ವ್ಯವಹಾರ ನಡೆಸಲಾಗಿದೆ ಹಾಗೂ ಮೃತರ ಕುಟುಂಬದವರಿಗೆ ವಿಶೇಷ ಎಕಸ್ಗ್ರೇಷಿಯಾ ಹಣವನ್ನು ನೀಡುವ ಬಗ್ಗೆಯೂ ಪರಿಶೀಲಿಸಲಾಗುತ್ತಿದೆ.

ಉ) ಇಲ್ಲ.

ಊ) ಈ ಪ್ರಕರಣವನ್ನು ಈಗಾಗಲೇ ಸಿ.ಓ.ಡಿ. ವಿಭಾಗಕ್ಕೆ ವಹಿಸಿದ್ದು, ತನಿಖಾ ಕಾರ್ಯ ಹಾಗೂ ಅಪರಾಧಿಗಳನ್ನು ಪತ್ತೆ ಹಚ್ಚುವ ಕಾರ್ಯ ಭರದಿಂದ ನಡೆಯುತ್ತಿದೆ.

ಋ) ನಿಯಮಾನುಸಾರ ಅನುಕಂಪದ ಆಧಾರದ ಮೇಲೆ ಮೃತನ ಪತ್ನಿಗೆ ಸರ್ಕಾರಿ ನೌಕರಿ ಕೊಡುವ ಬಗ್ಗೆ ಪರಿಶೀಲಿಸಲಾಗುವುದು.

ೠ) ಬೀದರ್ ಪಟ್ಟಣದಲ್ಲಿ ಮುಖ್ಯ ಪೇದೆ ಹಾಗೂ ಪೇದಗಳನ್ನೊಳಗೊಂಡಂತೆ ರಾತ್ರಿ ಗಸ್ತನ್ನು ನಿಯೋಜಿಸಲಾಗಿದ್ದು ಇಂತಹ ಘಟನೆಗಳು ನಡೆಯದ ಹಾಗೆ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ. ಇದೇ ರೀತಿಯಾಗಿ ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳಿಗೆ ಸೂಕ್ತ ರೀತಿಯ ತಿಳುವಳಿಕೆ ನೀಡಲಾಗಿದೆ. ಬೀದರ್ ಪಟ್ಟಣವನ್ನು 3 ಭಾಗಗಳನ್ನಾಗಿ ಮಾಡಿ ಪೊಲೀಸ್ ಉಪ ನಿರೀಕ್ಷಕರ ನೇತೃತ್ವದಲ್ಲಿ ಇಡೀ ರಾತ್ರಿ ನಗರದಲ್ಲಿ ಸಂಚರಿಸಿ, ಇಂತಹ ಪ್ರಕರಣಗಳು ನಡೆಯದ ಹಾಗೆ ನೋಡಿಕೊಳ್ಳಲು ನಿಯೋಜಿಸಲಾಗಿದೆ.

ರಾತ್ರಿಯ ವೇಳೆ ಈಗಾಗಲೇ ನಿಯೋಜಿಸಿರುವ ಪಡೆಗಳು ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುತ್ತವೆಯೇ ಎಂಬುದನ್ನು ಪರೀಕ್ಷಿಸಲು ಉಪ ಆರಕ್ಷಕಾಧೀಕ್ಷಕರ ನೇತೃತ್ವದಲ್ಲಿ ಪಡೆಯನ್ನು ನಿಯೋಜಿಸಲಾಗಿದೆ.

ಬಸವಕಲ್ಯಾಣವನ್ನು ಪ್ರವಾಸಿಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದರ ಬಗ್ಗೆ

352 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಪ್ರವಾಸೋದ್ಯಮ ಹಾಗೂ ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರಲ್ಲಿ ಸರ್ಕಾರವು ಬಸವಕಲ್ಯಾಣದಲ್ಲಿ ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿ ಪಡಿಸಲುಕೈಗೊಂಡಿರುವ ಕಾರ್ಯಕ್ರಮಗಳೇನು?

ಆ) 1993-94ರಲ್ಲಿ ಬಸವಕಲ್ಯಾಣದಲ್ಲಿ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗಾಗಿ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು?

ಇ) 1993-4ರಲ್ಲಿ ಕೇಂದ್ರ ಸರ್ಕಾರದಿಂದ ಪ್ರವಾಸಿಸ್ಥಳದ ಅಭಿವೃದ್ಧಿಗಾಗಿ ಮಂಜೂರಾದ ಹಣವೆಷ್ಟು?

ಈ) ಬಸವಕಲ್ಯಾಣದಲ್ಲಿ ಪ್ರವಾಸಿಗರಿಗೆ ಹೆಚ್ಚಿನ ಸೌಲಭ್ಯ ಒದಗಿಸಲು ಸಮಗ್ರ ಯೋಜನೆಯನ್ನು ಸರ್ಕಾರ ತಯಾರಿಸಿ ಕೇಂದ್ರಕ್ಕೆ ಕಳುಹಿಸಿದೆಯೆ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು):

ಅ) ಭಾರತ ಸರ್ಕಾರ 1993-94ನೇ ಸಾಲಿನಲ್ಲಿ ಬಸವಕಲ್ಯಾಣದ ಈ ಕೆಳಕಂಡ ಯೋಜನೆಗಳನ್ನು ಆದ್ಯತಾ ಪಟ್ಟಿಯಲ್ಲಿ ಸೇರಿಸಿದೆ.

		ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)
1)	ಪ್ರವಾಸಿ ಸಂಕೀರ್ಣ	40.00
2)	ದೃಶ್ಯ ಮತ್ತು ಶ್ರವಣ ಯೋಜನೆ	30.00
3)	ಸುಲಭ ಶೌಚಾಲಯ	4.00

ಆ) ಇದುವರೆಗೆ ಹಣ ಬಿಡುಗಡೆ ಮಾಡಿಲ್ಲ.

ಇ) 1993-94ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ರೂ. 45.00 ಲಕ್ಷಗಳನ್ನು ಮಂಜೂರು ಮಾಡಿರುತ್ತದೆ.

ಈ) ಇಲ್ಲ.

ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಆಹಾರ ಧಾನ್ಯ ವಿತರಣೆ ಆಗದಿರುವುದು.

45 - ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಯಾವ ಯಾವ ನ್ಯಾಯ ಬೆಲೆ ಅಂಗಡಿಗಳಲ್ಲಿ ಆಹಾರ ಧಾನ್ಯ ಮತ್ತು ಸೀಮೆಎಣ್ಣೆ ಮತ್ತು ಪಾಮೋಲಿನ್ ಎಣ್ಣೆ ಸರಿಯಾಗಿ ವಿತರಣೆಯಾಗದೇ ತೊಂದರೆಯಾಗಿರುವುದಾಗಿ ದೂರುಗಳೂ ಸರ್ಕಾರಕ್ಕೆ ಬಂದಿವೆಯೇ? (ವಿವರ ಕೊಡುವುದು)

ಆ) ವ್ಯವಸ್ಥಿತವಾಗಿ ಆಹಾರ ಪದಾರ್ಥಗಳು, ಸೀಮೆಎಣ್ಣೆ ವಿತರಣೆ ಮಾಡದೇ ತೊಂದರೆ ಮಾಡಿದ ನ್ಯಾಯ ಬೆಲೆ ಅಂಗಡಿಗಳನ್ನು ಬದಲಾಯಿಸಲಾಗುವುದೇ?

ಇ) ಸರಿಯಾಗಿ ನಡೆಸುವವರಿಗೆ ಲೈಸೆನ್ಸ್ ಕೊಡಲಾಗುವುದೇ?

ಈ) ದೂರುಗಳು ಬಂದಿರುವ ನ್ಯಾಯಬೆಲೆ ಅಂಗಡಿಗಳ ಮಾಲೀಕರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಇಲ್ಲ.

ಆ) ಹೌದು.

ಇ) ಹೊಸ ನ್ಯಾಯ ಬೆಲೆ ಅಂಗಡಿ ಅವಶ್ಯಕತೆ ಕಂಡುಬಂದಲ್ಲಿ, ಕರ್ನಾಟಕ ಅಗತ್ಯ ವಸ್ತುಗಳ (ಪಿಡಿಎಸ್) ಕಂಟ್ರೋಲ್ ಆರ್ಡರ್ 1992 ಮೇರೆಗೆ ಪರಿಶೀಲಿಸಿ ಪ್ರಾಧಿಕಾರ ನೀಡಲಾಗುವುದು.

ಈ) ಯಾವುದೇ ನ್ಯಾಯ ಬೆಲೆ ಅಂಗಡಿಗಳಲ್ಲಿ ಸಮರ್ಪಕವಾಗಿ ವಿತರಣೆ ಮಾಡುತ್ತಿಲ್ಲವೆಂದು ದೂರುಗಳು ಬಂದಲ್ಲಿ, ಕಾನೂನಿನಂತೆ ತನಿಖೆಗೆ ಒಳಪಡಿಸಿ, ಕ್ರಮ ಕೈಗೊಳ್ಳಲಾಗುತ್ತದೆ. ಅಂತಹ ಸಂದರ್ಭದಲ್ಲಿ ವಿತರಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಪರ್ಯಾಯ ವ್ಯವಸ್ಥೆ ಮಾಡಲಾಗುತ್ತದೆ.

ಮೈಸೂರು ಸಕ್ಕರೆ ಕಾರ್ಖಾನೆಯ ಹೊಗೆ ಚಿಮಣಿಯಿಂದ ಬರುವ ಕಾರ್ಬನ್ ಕಣಗಳನ್ನು ತಡೆಗಟ್ಟುವ ಬಗ್ಗೆ

264 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ವಿಜ್ಞಾನ ಮತ್ತು ಯಂತ್ರಕಲಾ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯ ಹೊಗೆಯ ಚಿಮಣಿಯಿಂದ ಕಾರ್ಬನ್ ಕಣಗಳು ಹೊರಬರುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಜನರ ಆರೋಗ್ಯದ ರಕ್ಷಣೆ ಮಾಡಲು ಈ ಕಾರ್ಬನ್ ಕಣಗಳು ಹೊರಬರುವುದನ್ನು ತಡೆಗಟ್ಟಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎನ್. ಜಿ. ಹಾಲಪ್ಪ (ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ಮತ್ತು ಯಂತ್ರಕಲಾ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು.)

ಅ) ಹೌದು, ಮೈಸೂರು ಸಕ್ಕರೆ ಕಾರ್ಖಾನೆಯ ಹೊಗೆ ಚಿಮಣಿಯಿಂದ ಕಪ್ಪು ಬಣ್ಣದ ಧೂಳು (Fly ash) ಹೊರಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮೈಸೂರು ಸಕ್ಕರೆ ಕಂಪನಿ ಲಿ. ಒಟ್ಟು ಆರು ಬಾಯ್ಲರ್ ಗಳನ್ನು ಹೊಂದಿದ್ದು ಇದಕ್ಕೆ ಮೂರು ಚಿಮಣಿಗಳನ್ನು ಅಳವಡಿಸಲಾಗಿದೆ. ಇವುಗಳ ವಿವರ ಕೆಳಕಂಡಂತಿರುತ್ತದೆ.

ಚಿಮಣಿ ಸಂಖ್ಯೆ	ಚಿಮಣಿಗೆ ಅಳವಡಿಸಿರುವ ಬಾಯ್ಲರುಗಳು	ಚಿಮಣಿ ಎತ್ತರ
ಒಂದು	ಗಂಟೆಗೆ 20 ಟನ್ ಸಾಮರ್ಥ್ಯದ ಮೂರು ಬಾಯ್ಲರುಗಳು.	45 ಮೀ.
ಎರಡು	ಗಂಟೆಗೆ 40 ಟನ್ ಸಾಮರ್ಥ್ಯದ ಎರಡು ಬಾಯ್ಲರುಗಳು.	48 ಮೀ.
ಮೂರು	ಗಂಟೆಗೆ 30 ಟನ್ ಸಾಮರ್ಥ್ಯದ ಒಂದು ಬಾಯ್ಲರ್ (ಕಲ್ಲಿದ್ದಲಿನದು).	16 ಮೀ.

ಈ ಉದ್ದಿಮೆಯು ತನ್ನ ಬಾಯ್ಲರ್ಗಳಿಂದ ಹೊರಬರುವ ಧೂಳನ್ನು ನಿಯಂತ್ರಿಸಲು ಫ್ಲೈ ಆಶ್ ಅರೆಸ್ಟರ್ ಎಂಬ ವಾಯು ಮಾಲಿನ್ಯ ನಿಯಂತ್ರಣ ಉಪಕರಣವನ್ನು ಒಂದು 20 ಟಿಪಿಹೆಚ್ ಬಾಯ್ಲರ್ ಹಾಗೂ ಒಂದು 30 ಟನ್ಸ್ ಪರ್ ಅವರ (ಕಲ್ಲಿದ್ದಲಿನ ಬಾಯ್ಲರ್) ಹೊರತುಪಡಿಸಿ ಮಿಕ್ಕೆಲ್ಲ ಬಾಯ್ಲರ್‌ಗಳಿಗೆ ಅಳವಡಿಸಿದೆ. 20 ಟಿಪಿಹೆಚ್ ಬಾಯ್ಲರ್‌ನ್ನು ತೆಗೆದು ಹಾಕುವ ಉದ್ದೇಶವನ್ನು ಉದ್ದಿಮೆಯು ಹೊಂದಿದೆ. 30 ಟಿಪಿಹೆಚ್ ಬಾಯ್ಲರ್‌ನಲ್ಲಿ ಮದ್ಯಸಾರ ಘಟಕದಿಂದ ಬರುವ ಕಲುಷಿತ ನೀರನ್ನು ಶುದ್ಧೀಕರಿಸಲು ಅಳವಡಿಸಿರುವ ಡೈಜೆಸ್ಟರ್ನಿಂದ ಬರುವ ಮಿಥೇನ್ ಅನಿಲವನ್ನು ಬಳಸಲು ಉದ್ದೇಶಿಸಲಾಗಿದೆ. ಇದರಿಂದ ಧೂಳು ಉತ್ಪತ್ತಿ ಆಗುವುದಿಲ್ಲ. ಈಗಿರುವ ವಾಯು ಮಾಲಿನ್ಯ ನಿಯಂತ್ರಣ ಘಟಕವನ್ನು ಉದ್ದಿಮೆಯು ಉತ್ತಮಪಡಿಸಬೇಕಾಗಿದೆ. ವೆಟಸ್ಕ್ರಬರ್ ಎಂಬ ಹೆಚ್ಚುವರಿ ಮಾಲಿನ್ಯ ನಿಯಂತ್ರಣ ಘಟಕವನ್ನು ಈಗಿರುವ ಮಲ್ಟಿ ಸೈಕ್ಲೋನ್ಗಳ ಜೊತೆಗೆ 2-20 ಟಿಪಿಹೆಚ್ ಬಾಯ್ಲರ್ಗೆ ಅಳವಡಿಸಲಾಗಿದೆ. ಈ ಹೊಸ ಉಪಕರಣದ ಸಾಮರ್ಥ್ಯವು ಚೆನ್ನಾಗಿದ್ದಲ್ಲಿ 2-40 ಟಿಪಿಹೆಚ್ ಬಾಯ್ಲರ್‌ಗೂ ಅಳವಡಿಸುವ ಉದ್ದೇಶವನ್ನು ಉದ್ದಿಮೆಯು ಹೊಂದಿದೆ.

ಭಾರತ ಸರ್ಕಾರವು ಪರಿಸರ (ಸಂರಕ್ಷಣಾ) ಕಾಯ್ದೆಯಡಿಯಲ್ಲಿ, ಉದ್ದಮೆಗಳು ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಪೂರ್ಣಗೊಳಿಸಲು ನಿಗದಿಪಡಿಸಿದ್ದ ಕಾಲ ಮಿತಿಯು 31-12-93ರಂದು ಕೊನೆಗೊಂಡಿರುತ್ತದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ವಾಯು ಕಾಯ್ದೆ ಹಾಗೂ ಜಲ ಕಾಯ್ದೆಯ ಕಲಂ 18(1) (ಬಿ) ಅಡಿಯಲ್ಲಿ ಹೊರಡಿಸಿರುವ ಆದೇಶದಂತೆ, ರಾಜ್ಯ ಮಂಡಳಿಯು ಉದ್ದಿಮೆಗಳು ಪ್ರಾಮಾಣಿಕವಾಗಿ ಮಾಲಿನ್ಯ ನಿಯಂತ್ರಣ ಕಾರ್ಯಗಳ ಅನುಷ್ಠಾನವನ್ನು ಕೈಗೊಂಡಿದ್ದಲ್ಲಿ, ಅಂತಹ ಉದ್ದಿಮೆಗಳಿಗೆ ಮಾಲಿನ್ಯ ನಿಯಂತ್ರಣ ಕೆಲಸಗಳನ್ನು ಪೂರ್ಣಗೊಳಿಸಲು ಕಾಲಾವಕಾಶವನ್ನು

6 ತಿಂಗಳಿಗೆ ಮೀರದಂತೆ ಕೊಡಬಹುದೆಂದು ಆದೇಶಿಸಿದೆ. ಹೆಚ್ಚುವರಿ ಕಾಲಾವಕಾಶವನ್ನು ನೀಡುವ ಬಗ್ಗೆ ನಿರ್ಧಾರ ಮಾಡಲು, ಮಂಡಳಿಯು ಮಾಹಿತಿಯನ್ನು ಸಂಗ್ರಹಿಸುತ್ತಿದೆ.

ಮಂಡ್ಯ ಜಿಲ್ಲೆಯಲ್ಲಿನ ಹಸಿರು ಕಾರ್ಡುದಾರರ ಸಂಖ್ಯೆ

263-ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು , ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಹಸಿರು ಕಾರ್ಡು ಹೊಂದಿರುವವರ ಸಂಖ್ಯೆ ಎಷ್ಟು?

ಆ) ಅವರಿಗೆ ಯಾವ ಪ್ರಮಾಣದಲ್ಲಿ ಪಡಿತರ ಪದಾರ್ಥಗಳನ್ನು ವಿತರಿಸಲಾಗುತ್ತಿದೆ.

ಇ) ಮಂಡ್ಯ ಜಿಲ್ಲೆಯಲ್ಲಿ ಪ್ರಸ್ತುತ ಹಂಚಿಕೆಯಾಗುತ್ತಾ ಇರುವ ಸೀಮೆಎಣ್ಣೆ ಪ್ರಮಾಣವೆಷ್ಟು?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) 1.55 ಲಕ್ಷ (ತ್ರಿವರ್ಣ)

ಆ) ಹಸಿರು ಪಡಿತರ ಚೀಟಿದಾರರಿಗೆ (ತ್ರಿವರ್ಣ ಪಡಿತರ ಚೀಟಿ) ಪ್ರತಿ ಕಾರ್ಡಿಗೆ 6 ಕೆ.ಜಿ. ಅಕ್ಕಿ ಮತ್ತು 4 ಕೆ.ಜಿ. ಗೋಧಿಯಂತೆ ಒಟ್ಟು 10 ಕೆ.ಜಿ. ಕಡ್ಡಾಯವಾಗಿ ಆಹಾರಧಾನ್ಯಗಳನ್ನು ಸಬ್ಸಿಡಿ ದರದಲ್ಲಿ ಒದಗಿಸಲಾಗುತ್ತಿದೆ. ಸಕ್ಕರೆ 2 ಕೆ.ಜಿ.ಯಂತೆ ಪ್ರತಿ ಕಾರ್ಡಿಗೆ ತಿಂಗಳಿಗೆ ನೀಡಲಾಗುತ್ತಿದೆ.

ಇ) ಮಂಡ್ಯ ಜಿಲ್ಲೆಗೆ ಪ್ರತಿ ತಿಂಗಳಿಗೆ 1236 ಕೆ.ಎಲ್. ಪಟ್ಟಣ ಪ್ರದೇಶದಲ್ಲಿ ಪ್ರತಿ ಕಾರ್ಡುದಾರರಿಗೆ 6 ಲೀಟರ್ ಸೀಮೆಎಣ್ಣೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ 3 ಲೀಟರ್ನಂತೆ ನೀಡಲಾಗುತ್ತಿದೆ.

ಬೆಂಗಳೂರು ನಗರದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಗೊಳಿಸುವ ಬಗ್ಗೆ

297-ಶ್ರೀ ಆರ್. ವಿ. ದೇವರಾಜ್ (ಚಾಮರಾಜಪೇಟೆ) : ಮಾನ್ಯ ಪ್ರವಾಸೋದ್ಯಮ ಹಾಗೂ ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರು ಯಾವ ಯಾವ ಸ್ಥಳಗಳನ್ನು ಬೆಂಗಳೂರು ನಗರದ ಪ್ರವಾಸಿ ಕಾರ್ಯಕ್ರಮದಲ್ಲಿ ತೋರಿಸುತ್ತಿರುವರು?

ಆ) ಬೆಂಗಳೂರಿನಲ್ಲಿರುವ ದೊಡ್ಡ ಗಣಪತಿ ದೇವಸ್ಥಾನ, ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್ ಹಾಗೂ ನಂದಿಬೆಟ್ಟಗಳನ್ನೂ ಆ ಪ್ರವಾಸಿ ಕಾರ್ಯಕ್ರಮದಲ್ಲಿ ಸೇರಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು):

ಅ) ಬೆಂಗಳೂರು ನಗರದ ಪ್ರವಾಸದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಈ ಕೆಳಕಂಡ ಸ್ಥಳಗಳನ್ನು ಅಳವಡಿಸಿಕೊಂಡಿದೆ.

ವಿಧಾನ ಸೌಧ, ಲಾಲ್ಬಾಗ್, ಬಸವನಗುಡಿ (ದೊಡ್ಡ ಗಣಪತಿ ದೇವಸ್ಥಾನ ಸೇರಿದಂತೆ) ಟಿಪ್ಪು ಅರಮನೆ, ಸರ್ಕಾರಿ ವಸ್ತು ಸಂಗ್ರಹಾಲಯ ಕಾವೇರಿ ಕರಕುಶಲ ಮಳಿಗೆ ಮತ್ತು ಅಲಸೂರು ಕೆರೆ.

ಆ) ಹೌದು.

ಬೆಂಗಳೂರಿನಲ್ಲಿ ಮನೆಗಳನ್ನು ಕಳೆದು ಕೊಂಡವರಿಗೆ ಪುನರ್ವಸತಿ

295 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ವಿವಿಧ ಸ್ಥಳಗಳಿಂದ ಸುಮಾರು ವರ್ಷಗಳ ಹಿಂದೆಯೇ ಮನೆಗಳನ್ನು ಕಳೆಮಕೊಂಡು ಬೀದಿಪಾಲಾದ ಸುಮಾರು 10058 ಬಡ ಕೊಳಚೆ ನಿವಾಸಿಗಳಿಗೆ "ಪುನರ್ವಸತಿ ಯೋಜನೆಯಡಿ 20x30 ಅಳತೆಯ ನಿವೇಶನಗಳನ್ನು ವಿತರಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕ್ರಮ ಕೈಗೊಂಡಿದೆಯೇ?

ಆ) ನಿರ್ವಸಿತ ಕೊಳಚೆ ನಿವಾಸಿಗಳಿಗೆ ನಿವೇಶನಗಳನ್ನು ಮಂಜೂರು ಮಾಡಲು ಮುಂದಿನ ಕ್ರಮ ಜರುಗಿಸುವಂತೆ ಮುಖ್ಯಮಂತ್ರಿಗಳು ಈಗಾಗಲೇ 8 ಆದೇಶಗಳನ್ನು ಹೊರಡಿಸಿರುವುದು ನಿಜವಲ್ಲವೆ? ವಿವರಗಳನ್ನು ಆವರಣದಲ್ಲಿ ಒದಗಿಸಲಾಗಿದೆ.

1) ಸಿಎಂ 141 ಎಂಐಎನ್ (2) ಸಿಎಂ 2139 ಎಂಐಎಸ್ 93, (3) ಸಿಎಂ 2239 ಎಂಐಎಸ್ 93 (4) ಸಿಎಂ 2453 ಎಂಐಎನ್ 93 (5) ಸಿಎಂ 2512 ಎಂಐಎನ್ 93 (6) ಸಿಎಂ 2534 ಎಂಐಎನ್ 93 (7) ಸಿಎಂ 2874 ಎಂಐಎನ್ 93 (8) ಸಿಎಂ 2916 ಎಂಐಎನ್ 93.

ಇ) ಈ ಕಡು ಬಡವರಿಗೆ ಪುನರ್ವಸತಿಯನ್ನು ಒದಗಿಸುವಂತೆ ರಾಜ್ಯ ಮುಖ್ಯ ಕಾರ್ಯದರ್ಶಿಯವರು ಅನೇಕ ಭಾರಿ ಅರೆ ಸರ್ಕಾರಿ ಪತ್ರಗಳನ್ನು ಬರೆದಿರುವುದು ನಿಜವೇ?

ಈ) ಬಿಡಿಎ ಉನ್ನತ ಅಧಿಕಾರಿಗಳವರ ಸಭೆಯಲ್ಲಿ ದಿನಾಂಕ 29.9.1993ರಂದು ಈ ಬಡವರಿಗೆ ನಿವೇಶನಗಳನ್ನು ಹಂಚಲು ಸೂಕ್ತ ನಿರ್ಣಯಗಳನ್ನು ಅನುಕಂಪದಿಂದ ಅಂಗೀಕರಿಸಿರುವುದು ನಿಜವಲ್ಲವೇ?

ಉ) ನಿರ್ವಸಿತ ಅರ್ಹರ ಪಟ್ಟಿಯು ಬಿ.ಡಿ.ಎ.ಗೆ ತಲುಪಿದೆಯೇ ಹಾಗೂ ಬಾಕಿ ಇದ್ದಲ್ಲಿ ಉಳಿದ ಪಟ್ಟಿಯನ್ನು ಎಂದು ಪಡೆಯಲಾಗುವುದು.

ಊ) ಸಮಿತಿಯವರು ಸಲ್ಲಿಸಿರುವ ಅನೇಕ ದಾಖಲಾತಿಗಳನ್ನು ತಾರೀಖು 26.10.93 ರಂದೇ ಬಿಡಿಎ ಆಯುಕ್ತರಿಗೆ ಇವು ನೇರವಾಗಿ ಸೇರಿವೆಯೇ?

ಋ) ಆ ನಿರ್ವಸಿತರ ಪರವಾಗಿ ಕರ್ನಾಟಕ ದಲಿತ ಕ್ರಿಯಾಸಮಿತಿಯ ಕೇಂದ್ರ ಕಛೇರಿಯ ಸಂಚಾಲಕರು ಸಲ್ಲಿಸಿರುವ 10 ಬೇಡಿಕೆಗಳ ಅನೇಕ ಮನವಿಗಳು ಮತ್ತು ಮೇಲ್ಮನವಿಗಳು ಸಹ ಬಿ.ಡಿ.ಎ.ಗೆ ಬಂದಿವೆಯೇ?

ೠ) ಆ ನಿರ್ವಸಿತರಾದ ಪರಿಶಿಷ್ಟ ಜಾತಿ, ವರ್ಗ ಹಾಗೂ ಸಂಖ್ಯಾತರು ಮತ್ತು ಕಡುಬಡವರಾದ ಇವರುಗಳಿಗೆ 20x30 ಅಳತೆಗಳ ನಿವೇಶನಗಳನ್ನು ಮಾನವೀಯ ದೃಷ್ಟಿಯಿಂದ ವಿತರಿಸಲು ಇನ್ನು ಎಷ್ಟು ಕಾಲಾವಧಿ ಬೇಕು?

ಎ) ಅವರಿಗೆ ಎಂದು ಪುನರ್ವಸತಿಯನ್ನು ಕಲ್ಪಿಸಲಾಗುವುದು?

ಏ) ಮುಖ್ಯಮಂತ್ರಿಗಳು ಈ ಬಗ್ಗೆ ಪುನಃ ಸ್ಪಷ್ಟವಾದ ಆದೇಶ ಹೊರಡಿಸಿ ಖಚಿತ ದಿನಾಂಕವನ್ನು ಕೊಡುವರೇ?

ಐ) ಪುನರ್ವಸತಿ ಕಲ್ಪಿಸುವ ಬಗ್ಗೆ ದಿನಾಂಕ 31.1.1994ರಲ್ಲಿ ಬಿ.ಡಿ.ಎ. ಅಧಿಕಾರಿಗಳು ಮರು ಸಭೆ ಸೇರಿ ಸೂಕ್ತ ನಿರ್ಣಯಗಳನ್ನು ಕೈಗೊಂಡಿದ್ದಾರೆಯೇ?

ಒ) ಹಾಗಿಲ್ಲದಿದ್ದಲ್ಲಿ ನಿರ್ಣಯಗಳನ್ನು ಈ ಕುರಿತು ಎಂದು ಕೈಗೊಳ್ಳಲಾಗುವುದು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಒದಗಿಸಿರುವ ಮಾಹಿತಿಯ ಪ್ರಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ವತ್ತಿನಲ್ಲಿ ನಿರ್ಮಿಸಲ್ಪಟ್ಟ ಗುಡಿಸಲುಗಳನ್ನು ನೆಲಸಮ ಮಾಡಿದ್ದರಿಂದ ನಿರ್ವಸತಿದಾರರಾದ 5076 ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲಾಗಿದೆ. ಅಲ್ಲದೆ ಈವರೆಗೆ ಬಿ.ಡಿ.ಎ. ಸ್ವತ್ತಿನಲ್ಲಿ ಅಕ್ರಮವಾಗಿ ಕಟ್ಟಿಕೊಂಡಿರುವ 15,017 ಕುಟುಂಬಗಳಿಗೆ ಮನೆ:ಗುಡಿಸಲುಗಳನ್ನು ಸಕ್ರಮಗೊಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕ್ರಮ ಕೊಗೊಂಡಿದೆ. ಹಾಗೂ ಫಲಾನುಭವಿಗಳಿಗೆ ನಿವೇಶನಗಳನ್ನು ಸ್ಥಿರೀಕರಿಸಿದೆ ಈ ಪ್ರಕರಣದಲ್ಲಿ ವಿವಿಧ ಬಡಾವಣೆಗಳಲ್ಲಿ ಅಕ್ರಮವಾಗಿ ಗುಡಿಸಲು ಕಟ್ಟಿಕೊಂಡಿರುವವರ ಹಾಗೂ ನೆಲಸಮ ಮಾಡಿದ್ದರಿಂದ ನಿರ್ವಸತಿದಾರರ ಪೂರ್ಣಮಾಹಿತಿಯು ಪ್ರಶ್ನೆಯಲ್ಲಿ ತಿಳಿಸಿರುವಂತೆ ಕಂಡುಬರುವುದಿಲ್ಲ. ಅರ್ಜಿದಾರರು ಪೂರ್ಣಮಾಹಿತಿಗಳನ್ನು ಒದಗಿಸಿಲ್ಲವಾದ್ದರಿಂದ ಸ್ಪಷ್ಟ ಉತ್ತರವನ್ನು ಒದಗಿಸಲಾಗುತ್ತಿಲ್ಲ.

ಆ) ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆದೇಶಿಸುವ 8 ಪತ್ರಗಳು ಪ್ರಾಧಿಕಾರಕ್ಕೆ ಬಂದಿವೆ.

ಇ) ಹೌದು, ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳುವಳಿಕೆಯುಳ್ಳ ಪತ್ರಗಳು ಪ್ರಾಧಿಕಾರಕ್ಕೆ ಬಂದಿದೆ.

ಈ) ದಿನಾಂಕ 29.9.93ರ ಅಧಿಕಾರಿಗಳ ಸಭೆಯಲ್ಲಿ ನೆಲಸಮ ಮಾಡಿದ ಬಗ್ಗೆ ಪೂರ್ಣ ದಾಖಲೆಗಳು ಹಾಗೂ ಸಾಕ್ಷಾಧಾರಗಳನ್ನು ಒದಗಿಸುವ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ನಿರ್ಣಯ ತೆಗೆದುಕೊಳ್ಳಲಾಗಿದೆ.

ಉ) ಈ ಬಗ್ಗೆ ನಿರ್ವಸಿತರ ಪಟ್ಟಿಯನ್ನು ಸಲ್ಲಿಸಿದ್ದರೂ ಗುಡಿಸಲು ನೆಲಸಮ ಮಾಡಿದ್ದರಿಂದ ನಿರ್ವಸಿತರಾದರೆಂದು ಹೇಳಲು ಪುರಾವೆ ದಾಖಲೆ ಹಾಗೂ ಸಾಕ್ಷಾಧಾರಗಳನ್ನು ಹೊಂದಿರುವ ಅರ್ಹತಾ ಪಟ್ಟಿಯನ್ನು ಪ್ರಾಧಿಕಾರಕ್ಕೆ ಒದಗಿಸಿರುವುದಿಲ್ಲ. ಅದನ್ನು ಒದಗಿಸಿದ ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಊ) ಹೌದು.

ಋ) ಹೌದು

ೠ) ಅನಧಿಕೃತವಾಗಿ ನೆಲೆಸಿದ್ದರೆನ್ನಲಾದ ಗುಡಿಸಲಾದ ಗುಡಿಸಲುಗಳನ್ನು ನೆಲಸಮ ಮಾಡಿದ್ದರ ಬಗ್ಗೆ ಪೂರ್ಣವಾದ ಪುರಾವೆ ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಒದಗಿಸಿಲ್ಲದಿರುವುದರಿಂದ ಈ ಬಗ್ಗೆ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಇಂತಿಷ್ಟೇ ಕಾಲಾವಧಿಯಲ್ಲಿ ವಿತರಿಸಲಾಗುವುದೆಂದು ಹೇಳಲು ಸಾಧ್ಯವಾಗುತ್ತಿಲ್ಲ.

ಎ) ಮತ್ತು ಏ) ಸಂಬಂಧಪಟ್ಟವರು, ಗುಡಿಸಲುಗಳನ್ನು ನೆಲಸಮ ಮಾಡಿರುವ ಬಗ್ಗೆ ಪುರಾವೆ ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಒದಗಿಸಿದ ನಂತರ ಈ ಬಗ್ಗೆ ಜರೂರು ಕ್ರಮ ಕೈಗೊಳ್ಳಲಾಗುವುದು. ಆದರೆ ಇಂತಿಷ್ಟೇ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ಹೇಳಲು ಸಾಧ್ಯವಾಗುವುದಿಲ್ಲ.

ಐ) ಹೌದು, ಬಿ.ಡಿ.ಎ. ಅಧಿಕಾರಿಗಳು ದಿನಾಂಕ 31.1.94ರಂದು ಮರು ಸಭೆ ಸೇರಿ ದಿನಾಂಕ 29.9.93ರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಮರು ಪರಿಶೀಲಿಸಿದ್ದಾರೆ.

ಒ) ಮೇಲೆ ಹೇಳಿದ ವಿವರಗಳನ್ನು ಒದಗಿಸಿದಲ್ಲಿ ಈ ಬಗ್ಗೆ ಆದಷ್ಟು ಜಾಗ್ರತೆ ನಿರ್ಧಾರ ತೆಗೆದುಕೊಳ್ಳಲಾಗುವುದು.

ಸಚಿವಾಲಯದ ಉಪಹಾರ ಮಂದಿರದ ನೌಕರರುಗಳಿಗೆ ತುಟ್ಟಿ ಭತ್ಯೆ ನೀಡುವ ಬಗ್ಗೆ.

294 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರ ಸಚಿವಾಲಯದ ಉಪಹಾರ ಮಂದಿರದಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು?

ಆ) ಅವರುಗಳ ಪೈಕಿ ಕಳೆದ 10 ವರ್ಷಗಳಿಂದ ಕೆಲಸ ಮಾಡುತ್ತಿರುವ ನೌಕರರುಗಳ ಸಂಖ್ಯೆ ಎಷ್ಟು?

ಇ) ಆ ನೌಕರರುಗಳಿಗೆ ಸರ್ಕಾರ ಇತ್ತೀಚೆಗೆ ವೇತನವನ್ನು ವಿಮರ್ಶಿಸುತ್ತಿದೆಯೇ?

ಈ) ಹಾಗಿದ್ದಲ್ಲಿ ವಿವಿಧ ದರ್ಜೆಯ ಆ ನೌಕರರುಗಳಿಗೆ ಯಾವ ಶ್ರೇಣಿಯಲ್ಲಿ ವೇತನ ನೀಡಲಾಗುತ್ತಿದೆ?

ಉ) ಆ ನೌಕರರುಗಳಿಗೆ ಸರ್ಕಾರದ ನೌಕರರುಗಳಿಗೆ ನೀಡುತ್ತಿರುವ ತುಟ್ಟಿಭತ್ಯೆಯನ್ನು ನೀಡಲಾಗುತ್ತಿದೆಯೆ?

ಊ) ಇಲ್ಲದಿದ್ದಲ್ಲಿ ಆ ನೌಕರರುಗಳಿಗೆ ತುಟ್ಟಿಭತ್ಯೆಯನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೆ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಎಪ್ಪತ್ತು (70)

ಮುವತ್ತೈದು (35)

ಪರಿಶೀಲಿಸುತ್ತಿದೆ.

ಉಪಹಾರ ಮಂದಿರದ ಆಡಳಿತ ಸಮಿತಿಯವರು ಉಪಹಾರ ಮಂದಿರದ ನೌಕರರ ವೇತನ ಪರಿಷ್ಕರಣೆ ಬಗ್ಗೆ ಅಧ್ಯಯನ ಮಾಡಲು ಉಪಸಮಿತಿಯನ್ನು ರಚಿಸಿದ್ದು ಅದರಂತೆ ಆಡಳಿತ ಸಮಿತಿಯವರೆ ಈ ಕೆಳಗಿನಂತೆ ವೇತನ ಶ್ರೇಣಿಯನ್ನು ದಿನಾಂಕ 1-12-93 ರಿಂದ ಪರಿಷ್ಕರಿಸಿ ವೇತನ ನೀಡುತ್ತಿದ್ದಾರೆ.

1. ಮೇಲ್ವಿಚಾರಕರು - 1190-30-1400-40-1800-50-2200.
2. ನಗದು ಗುಮಾಸ್ತರು : ಮುಖ್ಯ ಅಡಿಗೆಯವರು -960-20-1100-30-400-40-1760.
3. ಸಪ್ಲೈಯರ್ಸ್ -810-15-900-20-1100-30-1310
4. ಕ್ಲೀನರ್ಸ್ : -780-15-900-20-1040.

ಇಲ್ಲ

ಆದರೆ ಉಪಹಾರ ಮಂದಿರದ ವೇತನ ಉಪಸಮಿತಿಯ ವರದಿಯ ಪ್ರಕಾರ ದಿನಾಂಕ 1-12-93ರಿಂದ ನಾನಾ ವಿವಿಧ ದರ್ಜೆಯ ನೌಕರರುಗಳಿಗೆ ತುಟ್ಟಿಭತ್ಯೆ ರೂ.200, ರೂ.175, ರೂ.150 ಮತ್ತು ರೂ.100 ರಂತೆ ತುಟ್ಟಿಭತ್ಯೆ ನೀಡುತ್ತಿರುತ್ತಾರೆ.

ಇವರು ಸರ್ಕಾರಿ ನೌಕರರಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪುಷ್ಪಕ ಬಸ್ಸುಗಳನ್ನು ವಿಧಾನ ಸೌಧದ ಮೂಲಕ ಓಡಿಸುವ ವ್ಯವಸ್ಥೆ.

296 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಆರ್. ವೃತ್ತದ ಮೂಲಕ ಎಷ್ಟು ಪುಷ್ಪಕ್ ಬಸ್ಗಳು ಪ್ರತಿದಿನ ಸಂಚರಿಸುತ್ತವೆ.

ಆ) ಅವುಗಳನ್ನು ವಿಧಾನಸೌಧದ ಮೂಲಕ ಓಡಿಸಿದರೆ ಸಾರ್ವಜನಿಕರಿಗೆ ಕಚೇರಿಗಳಿಗೆ ಹೋಗತಕ್ಕವರಿಗೆ ಅನುಕೂಲವಾಗುವುದಿಲ್ಲವೇ?

ಇ) ಈ ಬಸ್ಸಗಳನ್ನು ವಿಧಾನಸೌಧ ಮಾರ್ಗವಾಗಿ ಅರಮನೆ ರಸ್ತೆಯಲ್ಲಿ ಮೈಸೂರು ಬ್ಯಾಂಕಿನ ಮೂಲಕ ಬೆಂಗಳೂರು ಬಸ್ ನಿಲ್ದಾಣವನ್ನು ತಲುಪುವ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ವಿಜಯನಗರ-ಶಿವಾಜಿನಗರ ಮಾರ್ಗದ 4 ಪುಷ್ಪಕ್ ಬಸ್ಸುಗಳನ್ನು ಕೆ.ಆರ್. ವೃತ್ತ ಮಾರ್ಗವಾಗಿ ಓಡಿಸಲಾಗುತ್ತಿದೆ.

ಆ) ಪುಷ್ಪಕ್ ಬಸ್ಸುಗಳನ್ನು ಅತೀ ಹೆಚ್ಚು ಪ್ರಯಾಣಿಕರ ಒತ್ತಡ ಇರುವ ಎರಡು ಸ್ಥಳಗಳ ನಡುವೆ ವೇಗವಾದ ಸಾರಿಗೆ ಸೌಲಭ್ಯ ಒದಗಿಸಲು ಪ್ರಾರಂಭಿಸಲಾಗಿದೆ. ಈ ಬಸ್ಸುಗಳನ್ನು ಹತ್ತಿರದ ಮಾರ್ಗದಲ್ಲಿ ನಿಯಮಿತ ನಿಲುಗಡೆಗಳೊಂದಿಗೆ ಕಾರ್ಯಾಚರಣೆ ಮಾಡಲಾಗುತ್ತಿದೆ ಈ ಬಸ್ಸುಗಳಿಗೆ ಇನ್ನೂ ಹೆಚ್ಚಿನ ನಿಲುಗಡೆಗಳನ್ನು ನೀಡಿದಲ್ಲಿ ವೇಗವಾದ ಸಾರಿಗೆ ಸೌಲಭ್ಯಕ್ಕಾಗಿ ಪುಷ್ಪಕ್ ಬಸ್ಸುಗಳನ್ನು ಓಡಿಸುವ ಉದ್ದೇಶಕ್ಕೆ ಧಕ್ಕೆಯಾಗುವುದು. ಆದಾಗ್ಯೂ ಇತರೆ ನಗರ ಸಾರಿಗೆ ಬಸ್ಸುಗಳು ವಿಧಾನಸೌಧ ಮತ್ತು ಸುತ್ತಮುತ್ತಲಿನ ಕಛೇರಿಗಳಿಗೆ ಹೋಗುವ ಪ್ರಯಾಣಿಕರ ಅವಶ್ಯಕತೆಗಳನ್ನು ಪೂರೈಸುತ್ತಿವೆ.

ಇ) ಪ್ರಸ್ತಾವಿಸಿರುವ ಮಾರ್ಗವು ಪುಷ್ಪಕ್ ಬಸ್ಸುಗಳ ಆಚರಣೆಗೆ ಸುತ್ತುಬಳಸಿನ ಮಾರ್ಗವಾಗಿರುತ್ತದೆ.

ಹೊಸದಾಗಿ ಹಂಚಲ್ಪಟ್ಟ ಹಸಿರು ಕಾರ್ಡುಗಳು

233- ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಹಂಚಲ್ಪಟ್ಟ ಹಸಿರು ಕಾರ್ಡುಗಳೆಷ್ಟು (ಜಿಲ್ಲಾವಾರು ಮಾಹಿತಿ ಕೊಡುವುದು):

ಆ) ಹಿಂದೆ ಇದ್ದ ಹಸಿರು ಕಾರ್ಡುಗಳೆಷ್ಟು ಹಾಗೂ ಹೆಚ್ಚುವರಿ ಹಸಿರು ಕಾರ್ಡುಗಳನ್ನು ಹಂಚಲ್ಪಟ್ಟ ಮೇಲೆ ಪಡಿತರ ಸಾಮಗ್ರಿಗಳ ವಿತರಣೆಯನ್ನು ಹೆಚ್ಚು ಮಾಡದಿರಲು ಕಾರಣವೇನು?

ಇ) ಪಡಿತರ ಸಾಮಗ್ರಿಗಳ ಹಂಚಿಕೆ ಬಹಳ ಕಡಿಮೆ ಪ್ರಮಾಣವಾಗಿ ಸಾಮಾನ್ಯ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ)46.85 ಲಕ್ಷ (ಹಸಿರು ಕಾರ್ಡುಗಳ ಬದಲಾಗಿ ತ್ರಿವರ್ಣ ಕಾರ್ಡುಗಳನ್ನು ಹಂಚಲಾಗಿದೆ).

(ಜಿಲ್ಲಾವಾರು ಮಾಹಿತಿ ತಃಖ್ತೆ ಲಗತ್ತಿಸಿದೆ)

ಆ) 30.83 ಲಕ್ಷ ಕೇಂದ್ರ ಸರ್ಕಾರದವರು 68,500 ಮೆ. ಟನ್ ಅಕ್ಕಿ, 25,000 ಮೆ. ಟನ್ ಗೋಧಿಯನ್ನು ಪ್ರತಿ ತಿಂಗಳು ಬಿಡುಗಡೆ ಮಾಡುತ್ತಿದ್ದಾರೆ. ಆ ಪ್ರಕಾರ ಎಲ್ಲಾ ಕಾರ್ಡುದಾರರಿಗೆ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ. ತಿಂಗಳು ತಿಂಗಳಿಗೆ ಪಡಿತರ ಚೀಟಿಗಳು ಹೆಚ್ಚಾಗುತ್ತಿದ್ದು ಭಾರತ ಸರ್ಕಾರವು ರಾಜ್ಯಕ್ಕೆ ನೀಡುತ್ತಿರುವ ಪ್ರಮಾಣವನ್ನು ಈ ತಿಂಗಳವರೆಗೆ ಹೆಚ್ಚು ಮಾಡಿರುವುದಿಲ್ಲ. ಈ ಕಾರಣಕ್ಕಾಗಿ ಈಗ ನೀಡುತ್ತಿದ್ದ ಪ್ರಮಾಣದಲ್ಲೆ ಎಲ್ಲಾ ಕಾರ್ಡುದಾರರಿಗೆ /ಆಹಾರಧಾನ್ಯ ವಿತರಿಸಲು ವ್ಯವಸ್ಥೆ ಮಾಡಲಾಗುತ್ತಿದೆ.

ಇ) ಬಂದಿದೆ. ಕರ್ನಾಟಕ ರಾಜ್ಯ ಸರ್ಕಾರವು ಪದೇ ಪದೇ ಒತ್ತಡ ತಂದ ಪರಿಣಾಮವಾಗಿ ಕೇಂದ್ರ ಸರ್ಕಾರದವರು 1994ರ ಮಾರ್ಚ್ ತಿಂಗಳಿನಿಂದ ಅನ್ವಯಿಸುವಂತೆ ರಾಜ್ಯಕ್ಕೆ ಅಕ್ಕಿ ಮತ್ತು ಗೋಧಿ ಹಂಚಿಕೆ ಪ್ರಮಾಣವನ್ನು ಹೆಚ್ಚಿಸಿರುತ್ತಾರೆ. ಈವರೆಗೆ

ಪ್ರತಿ ತಿಂಗಳಿಗೆ ಕೇಂದ್ರದಿಂದ ಹಂಚಿಕೆಯಾಗುತ್ತಿದ್ದ ಅಕ್ಕಿಯ ಪ್ರಮಾಣ 68,500 ಮೆ. ಟನ್ನಿಂದ 75,000 ಮೆ.ಟನ್ಗೆ ಹಾಗೂ ಗೋಧಿಯ ಪ್ರಮಾಣ 25,000 ಮೆ. ಟನ್ನಿಂದ 30,000 ಮೆ. ಟನ್ಗೆ ಹೆಚ್ಚಿಸಿದ್ದು ಹೆಚ್ಚುವರಿ ಹಂಚಿಕೆಯನ್ನು ಅಭಾವ ಪೀಡಿತ ಪ್ರದೇಶ ಹಾಗೂ ಹಿಂದುಳಿದ ಗುಡ್ಡಗಾಡು ಪ್ರದೇಶಗಳಿಗೆ ಹಂಚಿಕೆ ಮಾಡಲಾಗುವುದು. ಇದರಿಂದಾಗಿ ಸಾಮಾನ್ಯ ಜನರಿಗೆ ತೊಂದರೆ ಕಡಿಮೆಯಾಗುವುದಲ್ಲದೆ ಇನ್ನೂ ಹೆಚ್ಚಿನ ಪ್ರಮಾಣದ ಹಂಚಿಕೆ ಕೇಂದ್ರವು ನೀಡಿದಲ್ಲಿ ಇತರ ಪಡಿತರ ಚೀಟಿದಾರರಿಗೆ ಸಮರ್ಪಕವಾಗಿ ವಿತರಣೆಯನ್ನು ಹೆಚ್ಚಿಸಲಾಗುವುದು.

STATEMENT OF TRI-COLOUR CARDS IDENTIFIED DURING THE SURVEY AND ACTUALLY DISTRIBUTED AND BALANCE TO BE DISTRIBUTED.

Sl. No.	District	Identified in the survery	Actually distributed	Balance to be distributed
1.	Bangalore IR	35,487	35,487	–
2.	B'lore (Urban)	1,38,750	1,06,427	32,333
3.	B'lore (Rural)	2,86,655	2,86,655	–
4.	Belgaum	3,61,367	3,17,176	34,191
5.	Bellary	2,22,649	2,22,649	–
6.	Bidar	1,79,654	1,68,244	11,410
7.	Bijapur	3,58,500	3,47,427	11,071
8.	Chikmagalore	1,69,550	1,69 550	–
9.	Chitradurga	2,95,051	2,95,051	–
10.	D. Kannada	1,76,726	1,76,726	–
11.	Dharwar	3,77,997	3,77,997	–
12.	Gulbarga	3,54,217	3,15,003	39,214
13.	Hassan	2,02,539	2,02,539	–
14.	Coorg	74,747	74,747	–
15.	Kolar	2,48,450	2,48,450	-
16.	Mandya	2,00,243	1,60,243	40,000
17.	Mysore	4,58,549	3,61,651	98,898
18.	Raichur	2,97,995	2,85,995	12,000
19.	Shimoga	2,65,232	1,60,500	1,04,724
20.	Tumkur	3,25,262	2,31,809	93,453
21.	Uttara Kannada	1,41,007	1,41,007	

ಪ್ರತಿಭಾವಂತ ಪ.ಜಾತಿ ಮತ್ತು ಪ.ವರ್ಗದ ವಿದ್ಯಾರ್ಥಿಗಳಿಗ ಒಂದು ಮತ್ತು ಎರಡನೇ ದರ್ಜೆಗಳಿಗೆ ನೇರ ನೇಮಕಾತಿ

197- ಶ್ರೀ. ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರತಿಭಾವಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಒಂದು ಮತ್ತು ಎರಡನೇ ದರ್ಜೆಗೆ ನೇರ ನೇಮಕಾತಿ 1982 - 1983 ನೇ ಸಾಲಿನಲ್ಲಿ ಮಾಡಿ ನಂತರದ ವರ್ಷಗಳಲ್ಲಿ ನೇರ ನೇಮಕಾತಿ ಮಾಡದಿರುವುದು ನಿಜವೇ?

ಆ) 1983 - 84ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ 40 ಜನ ಅಭ್ಯರ್ಥಿಗಳಿಗೆ ಒಂದು ಮತ್ತು ಎರಡನೇ ದರ್ಜೆ ನೌಕರರಿಗೆ ಸಂದರ್ಶನ ನಡೆಸಿದ ನಂತರ ಫಲಿತಾಂಶ ಪ್ರಕಟವಾಗುವ ಮುನ್ನ ಸಾರ್ವಜನಿಕ ಸೇವಾ ಆಯೋಗಕ್ಕೆ ವಹಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಪ್ರತಿಭಾವಂತ ಅಭ್ಯರ್ಥಿಗಳಿಗೆ ಅನ್ಯಾಯ ಮಾಡಿದಂತಾಗಲಿಲ್ಲವೇ?

ಇ) ಸರ್ಕಾರ ನೀತಿಗನುಗುಣವಾಗಿ ಮೇಲ್ಕಂಡ ಜನಾಂಗದ ಪ್ರತಿಭಾವಂತರಿಗೆ 1983-1984ನೇ ವರ್ಷದಿಂದ ಈ ವರ್ಷದವರೆಗೆ ಒಂದು ಮತ್ತು ಎರಡನೇ ದರ್ಜೆ ನೌಕರಿ ಕೊಡಲು ಸರ್ಕಾರದ ನಿಲುವೇನು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) 1983-84ನೇ ಸಾಲಿನ ಆಯ್ಕೆ ಮಾಡಲಾಗಿದೆ. ಆ ನಂತರದ ವರ್ಷಗಳ ನೇಮಕಾತಿಗಾಗಿ ರಿಕ್ತಸ್ಥಾನಗಳ ಬಗ್ಗೆ ಮಾಹಿತಿ ಕೋರಿ ಎಲ್ಲಾ ಇಲಾಖೆಗಳಿಗೂ ಪತ್ರ ಬರೆದಿದೆ.

ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ವಿಶೇಷ ನೇಮಕಾತಿ ಕರ್ನಾಟಕ ಲೋಕ ಸೇವಾ ಆಯೋಗದ ಪರಿಮಿತಿಯಲ್ಲಿ ಬರುವುದಿಲ್ಲ ಹಾಗೂ 1983-84 ನೇ ಸಾಲಿನ ಆಯ್ಕೆಯು ತಿದ್ದುಪಡಿ ನಿಯಮಗಳನ್ವಯ ಮೌಖಿಕ ಪರೀಕ್ಷೆ ಇಲ್ಲದೆ ಅಭ್ಯರ್ಥಿಗಳನ್ನು ಅವರ ಅರ್ಹತೆ ಆಧಾರದ ಮೇಲೆ ಸರ್ಕಾರದ ವತಿಯಿಂದ ನೇಮಕಾತಿ ಮಾಡಲಾಗಿದೆ.

ಇ) 1983-84ನೇ ಸಾಲಿನ ಆಯ್ಕೆ ಮಾಡಿದೆ. 1984-85ರಿಂದೀಚಿನ ಆಯ್ಕೆ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಬೇಲೂರು ಮತ್ತು ಹಳೇಬೀಡುಗಳಿಗೆ ಪೊಲೀಸ್ ಠಾಣೆ

200 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ಮತ್ತು ಹಳೇಬೀಡುಗಳಿಗೆ ಪ್ರವಾಸಿಗಳ ಒತ್ತಡ ಹೆಚ್ಚಾಗಿರುವುದರಿಂದ ಹಳೇಬಿಡು ಮಾದಿಹಳ್ಳಿ ಹೋಬಳಿಗಳನ್ನು ಸೇರಿಸಿ ಹಳೇಬೀಡಿಗೆ ಸಬ್‌ಇನ್ಸ್‌ಪೆಕ್ಟರ್ ಹೊಂದಿರುವ ಪೊಲೀಸ್ ಠಾಣೆ ಕೊಡುವುದಾಗಿ ಎರಡು ವರ್ಷಗಳ ಹಿಂದೆ ಆಗಿನ ಗೃಹ ಸಚಿವರು ಈ ಸಭೆಯ ಆಯವ್ಯಯ ಅಂದಾಜು ಚರ್ಚೆ ವೇಳೆಯಲ್ಲಿ ಆಶ್ವಾಸನೆ ಕೊಟ್ಟಿದ್ದು ಈವರೆಗೆ ಆಗದಿರಲು ಕಾರಣವೇನು?

ಆ) ಆಶ್ವಾಸನೆ ಈಡೇರುವುದು ಯಾವಾಗ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) :

ಅ) ಆಯವ್ಯಯ ಚರ್ಚೆ ವೇಳೆಯಲ್ಲಿ ನೀಡಿದ್ದ ಆಶ್ವಾಸನೆ ಇಲಾಖೆಯ ಗಮನಕ್ಕೆ ಬಂದಿಲ್ಲ, ಹಾಗೂ ಪ್ರಸ್ತಾವನೆ ಸರ್ಕಾರದಲ್ಲಿ ಬಾಕಿಯಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಭೂಸೇನೆ ನಿಗಮದ ಕಟ್ಟಡಗಳ ಕಳಪೆ ನಿರ್ಮಾಣ

199 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಭೂ ಸೇನೆಗೆ ಸರ್ಕಾರ ವಹಿಸಿರುವ ಕಟ್ಟಡಗಳ ಗುಣಮಟ್ಟ ತೀರಾ ಕಳಪೆಯಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?*

ಆ) *ಭೂ ಸೇನೆಯು ವಹಿಸಿಕೊಂಡಿರುವ ಕಟ್ಟಡಗಳ ಅಂದಾಜು ವೆಚ್ಚ ಲೋಕೋಪಯೋಗಿ ಇಲಾಖಾ ಕಟ್ಟಡಗಳ ಅಂದಾಜಿಗಿಂತ ಹೆಚ್ಚಾಗಿಲ್ಲವೆ?*

ಇ) *ಕರ್ನಾಟಕ ಭೂ ಸೇನೆಯು ತನ್ನ ಇಲಾಖೆ ವತಿಯಿಂದ ಕಟ್ಟಡ ನಿರ್ಮಾಣ ಕೆಲಸ ಕೈಗೊಳ್ಳುತ್ತಿದೆಯೇ ಅಥವಾ ಸಬ್ ಕಂಟ್ರಾಕ್ಟ್ ಕೊಟ್ಟು ಕೆಲಸ ಮಾಡಿಸುತ್ತಿದೆಯೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) ಹೌದು. ಕಾರಣ, ಭೂ ಸೇನಾ ನಿಗಮದ ಅಂದಾಜು ಪಟ್ಟಿಯಲ್ಲಿ ನಿರ್ವಹಣಾ ವೆಚ್ಚವು ಸೇರಿರುವುದರಿಂದ.

ಇ) ಭೂ ಸೇನಾ ನಿಗಮವು ಇಲಾಖಾ ವತಿಯಿಂದ ಮಾತ್ರ ಕಾಮಗಾರಿಗಳನ್ನು ನಿರ್ವಹಿಸುತ್ತಿವೆ.

ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳನ್ನು ಖಾಸಗಿಯವರಿಗೆ ವಹಿಸುವುದರ ಬಗ್ಗೆ

198 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಸರ್ಕಾರ ತನ್ನ ಒಡೆತನದ ಯಾವ ಯಾವ ಕಾರ್ಖಾನೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲು ಯೋಜಿಸಿದೆ.*

ಆ) *ನಷ್ಟದಲ್ಲಿ ನಡೆಯುತ್ತಿರುವ ಕಾರ್ಖಾನೆಗಳೆಷ್ಟು ಮತ್ತು ಪ್ರತಿ ಕಾರ್ಖಾನೆಯ ನಷ್ಟದ ಮೊಬಲಗೆಷ್ಟು?*

ಇ) *ಸರ್ಕಾರಿ ಒಡೆತನದ ಕಾರ್ಖಾನೆಗಳು ಅನೇಕ ವರ್ಷಗಳಿಂದ ನಷ್ಟ ಅನುಭವಿಸುತ್ತಿರುವುದಕ್ಕೆ ಕಾರಣಗಳನ್ನು ಕಂಡುಹಿಡಿಯಲಾಗಿದೆಯೇ ಹಾಗೂ ಅವುಗಳ ಪುನಃಶ್ಚೇತನ ಸಾಧ್ಯವಿಲ್ಲವೇ?*

ಶ್ರೀ ರಾಮಲಿಂಗಾರೆಡ್ಡಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು):

ಅ) ರಾಜ್ಯದ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸಬೇಕೇ ಅಥವಾ ಬೇಡವೇ ಎಂಬ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) 17

ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ನಷ್ಟದಲ್ಲಿ ನಡೆಯುತ್ತಿರುವ ಕಾರ್ಖಾನೆಗಳ ಹೆಸರುಗಳ ಪಟ್ಟಿ ಮತ್ತು [illegible]

			ಲಕ್ಷ ರೂ.	ವರ್ಷ
1)	ನೂತನ ಸರ್ಕಾರಿ ವಿದ್ಯುತ್ ಕಾರ್ಖಾನೆ (ಎನ್.ಜಿ.ಇ.ಎಫ್.	-	92-93	92-93
2)	ಕರ್ನಾಟಕ ಚರ್ಮ ಕೈಗಾರಿಕಾ ನಿಗಮ (ಲಿಡ್ಕರ್)	-	491.02	94-95
3)	ಮೈಷುಗರ್	-	203	92-93
4)	ಮೈಸೂರು ಕಾಗದ ಕಾರ್ಖಾನೆ		5709.82	92-93
5)	ಕರ್ನಾಟಕ ರಾಜ್ಯ ತೆಂಗು ನಾರಿನ ಅಭಿವೃದ್ಧಿ ನಿಗಮ	-	36.53	92-93
6)	ಕರ್ನಾಟಕ ವಿದ್ಯುತ್ ಕಾರ್ಖಾನೆ		113.59	92-93
7)	ಕಿಯೋನಿಕ್ಸ್		926.96	92-93
8)	ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ	-	9189.58	92-93
9)	ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್	-	893.58	92-93
10)	ಕಿಮ್ಕೋ	-	2253.81	92-93
11)	ಕರ್ನಾಟಕ ರಾಜ್ಯ ರೇಷ್ಮೆ ಕೈಗಾರಿಕೆ ನಿಗಮ	-	2266.86	92-93
12)	ಕರ್ನಾಟಕ ರಾಜ್ಯ ಟೆಕ್ಸ್ಟೈಲ್ಸ್ ಲಿ.	-	327.82	92-93
13)	ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್	-	370.11	92-93
14)	ಮೈಸೂರು ಕ್ರೋಂ ಟ್ಯಾನಿಂಗ್ ಲಿಮಿಟೆಡ್	-	746.36	92-93
15)	ಚಾಮುಂಡಿ ಮೆಷಿನ್ ಟೂಲ್ಸ್	-	252.83	92-93
16)	ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ	-	245.30	89-90
17)	ಮೈಸೂರು ಕಾಸ್ಮೆಟಿಕ್ಸ್	-	28.30	90-91

ಬೆಳವಡಿ ಮಲ್ಲಮ್ಮನ ಬೆಳವಡಿಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ

137 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಪ್ರವಾಸೋದ್ಯಮ ಹಾಗೂ ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೆಳವಡಿಯಲ್ಲಿ ಬೆಳವಡಿ ಮಲ್ಲಮ್ಮನ ಅಭಿವೃದ್ಧಿ ಪಡಿಸುವ ಸಲುವಾಗಿ ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಆ) ಬೆಳವಡಿ ಗ್ರಾಮದಲ್ಲಿ ಬೆಳವಡಿ ಮಲ್ಲಮ್ಮನ ಅಭಿವೃದ್ಧಿ ಮಾಡುವುದು ಅತಿ ಅವಶ್ಯವಿದ್ದು, ಸರ್ಕಾರದವರು ಆದ್ಯತೆಯ ಮೇರೆಗೆ ಕಿತ್ತೂರು ಚೆನ್ನಮ್ಮನ ಅಭಿವೃದ್ಧಿ ಕೆಲಸ ಮಾಡಿದಂತೆ ಇಲ್ಲಿಯೂ ಕೂಡ ಎಲ್ಲಾ ರೀತಿಯಲ್ಲಿಯೂ ಅಭಿವೃದ್ಧಿ ಮಾಡುವರೆ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು):

ಅ) ಯಾವ ಕ್ರಮ ಕೈಗೊಂಡಿರುವುದಿಲ್ಲ.

ಆ) ಅಂತಹ ಯಾವ ಯೋಜನೆಯೂ ಸದ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.

ಸಂಗೊಳ್ಳಿ ರಾಯಣ್ಣ ವಂಶಜರಿಗೆ ಸರ್ಕಾರದಿಂದ ಸಹಾಯ

136 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಂಗೊಳ್ಳಿ ರಾಯಣ್ಣನ ವಂಶಜರು ಸರ್ಕಾರದಿಂದ ತಮಗೆ ಸಹಾಯ ಮಾಡಬೇಕೆಂದು ಮನವಿಗಳನ್ನು ಸಲ್ಲಿಸಿರುವ ಸಂಗತಿ ನಿಜವೇ?*

ಆ) *ಹಾಗಿದ್ದಲ್ಲಿ ಅವರಿಗೆ ಸರ್ಕಾರದವರು ಯಾವ್ಯಾವ ಸವಲತ್ತುಗಳನ್ನು ಕೊಡಬೇಕೆಂದು ನಿರ್ಣಯಿಸಿರುವುದು.*

ಇ) *ಒಂದು ವೇಳೆ ಇದುವರೆಗೂ ನಿರ್ಣಯಿಸದೇ ಇದ್ದಲ್ಲಿ ಕಿತ್ತೂರು ಚೆನ್ನಮ್ಮನ ವಂಶಜರಿಗೆ ಯಾವ ಪ್ರಕಾರವಾಗಿ ಸವಲತ್ತುಗಳನ್ನು ಕೊಡಲಾಗುತ್ತಿವೆಯೋ, ಅದೇ ಪ್ರಕಾರವಾಗಿ ಸಂಗೊಳ್ಳಿ ರಾಯಣ್ಣನ ವಂಶಜರಿಗೆ ಕೂಡ ಸರ್ಕಾರದವರು ಸಹಾಯವನ್ನು ಕೊಡುವುದೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಇಲ್ಲ- ಆದರೆ ಅರ್ಜಿ ಸಲ್ಲಿಸಿರುವವರು ಸಂಗೊಳ್ಳಿ ರಾಯಣ್ಣನ ವಂಶಜರಾಗಿರದೆ ಅವರ ತಾತನ ಸಹೋದರನ ಏಳನೇ ತಲೆಮಾರಿನವರಾಗಿದ್ದು, ಅವರ್‍ಯಾರೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠದ ಪ್ರಾರಂಭ

77 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠವನ್ನು ಪ್ರಾರಂಭಿಸಲು ಸರ್ಕಾರಕ್ಕೆ ಸಾರ್ವಜನಿಕರಿಂದ ಮನವಿಗಳು ಬಂದಿವೆಯೇ?*

ಆ) *ಹಾಗಿದ್ದಲ್ಲಿ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠವನ್ನು ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?*

ಇ) *ಹೈಕೋರ್ಟಿನವರು ಹುಬ್ಬಳ್ಳಿ ಧಾರವಾಡ ನಡುವೆ ಹೈಕೋರ್ಟ್ ಪೀಠವನ್ನು ಪ್ರಾರಂಭಿಸಲು ಸಮ್ಮತಿಯನ್ನು ನೀಡಿದ ಸಂಗತಿ ನಿಜವೇ?*

ಈ) *ರಾಜ್ಯ ಸರ್ಕಾರದ ನಿರ್ಲಕ್ಷತನದಿಂದ ಇದುವರೆಗೂ ಹೈಕೋರ್ಟ್ ಪೀಠವನ್ನು ಪ್ರಾರಂಭಿಸಲಾಗದಿರುವ ಸಂಗತಿ ನಿಜವೇ?*

ಉ) *ಒಂದು ವೇಳೆ ಸರ್ಕಾರವು ಆಶ್ವಾಸನೆ ನೀಡಿದ ಪ್ರಕಾರ ಹೈಕೋರ್ಟ್ ಪೀಠವನ್ನು ಬೇಗನೆ ಪ್ರಾರಂಭ ಮಾಡದೇ ಇದ್ದಲ್ಲಿ ಪುನಃ ಹುಬ್ಬಳ್ಳಿ ಧಾರವಾಡ ವಕೀಲ ಸಂಘದವರು ಉಪವಾಸ ಸತ್ಯಾಗ್ರಹ ಮಾಡುವುದಾಗಿ ಸರ್ಕಾರಕ್ಕೆ ಮನವಿಗಳು ಕಳುಹಿಸಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿವೆಯೇ?*

ಊ) *ಹಾಗಿದ್ದಲ್ಲಿ, ಇನ್ನು ಎಷ್ಟು ದಿವಸಗಳಲ್ಲಿ ಹೈಕೋರ್ಟ್ ಪೀಠವನ್ನು ಹುಬ್ಬಳ್ಳಿ ಧಾರವಾಡದ ನಡುವೆ ಪ್ರಾರಂಭಿಸಲಾಗುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಆ) ಕೇಂದ್ರ ಸರ್ಕಾರವು ಸಲಹೆ ಮಾಡಿರುವಂತೆ ಈ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯದ ಸಹಮತಿಯನ್ನು ಕೋರಲಾಗಿದೆ. ಉಚ್ಚ ನ್ಯಾಯಾಲಯವು ಸದರಿ ವಿಷಯವನ್ನು ಉಚ್ಚ ನ್ಯಾಯಾಲಯದ ಪೂರ್ಣ ಪೀಠದ ಮುಂದಿರಿಸಿ ನಿರ್ಣಯವನ್ನು ಸರ್ಕಾರಕ್ಕೆ ತಿಳಿಸುವುದಾಗಿ ತಿಳಿಸಿರುತ್ತಾರೆ. ಪೂರ್ಣ ಪೀಠದ ನಿರ್ಣಯವನ್ನು ಎದುರು ನೋಡಲಾಗುತ್ತಿದೆ.

ಇ) ಇಲ್ಲ

ಈ) ಇಲ್ಲ

ಉ) ಇಲ್ಲ

ಊ) ಈ ವಿಷಯದಲ್ಲಿ ಉಚ್ಚ ನ್ಯಾಯಾಲಯದ ಪೂರ್ಣ ಪೀಠದ ನಿರ್ಣಯವನ್ನು ಎದುರು ನೋಡಲಾಗುತ್ತಿರುವುದರಿಂದ ಇಂತಿಷ್ಟೇ ಸಮಯದಲ್ಲಿ ಪೀಠವನ್ನು ಸ್ಥಾಪಿಸಲಾಗುವುದೆಂದು ಹೇಳಲು ಸಾಧ್ಯವಿಲ್ಲ.

ಬೈಲಹೊಂಗಲ ಕೆ.ಎಸ್.ಆರ್.ಟಿ.ಸಿ. ಬಸ್ಸಿಲ್ದಾಣದಲ್ಲಿ ಮೂತ್ರಾಲಯ ಹಾಗೂ ಶೌಚಾಲಯಗಳನ್ನು ಕಟ್ಟಿಸುವ ಬಗ್ಗೆ

138 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರವಿಜ್ಞಾನ ಮತ್ತು ಯಂತ್ರಕಲೆ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟ್ಯಾಂಡಿನಲ್ಲಿ ಮೂತ್ರಾಲಯ ಹಾಗೂ ಶೌಚಾಲಯಗಳನ್ನು ಹೊಸದಾಗಿ ಕಟ್ಟದೆ ಇದ್ದುದರಿಂದ ಈಗಿರುವ ಅಲ್ಲಿಯ ಮೂತ್ರಾಲಯ ಹಾಗೂ ಶೌಚಾಲಯಗಳಿಂದ ಹವೆ ದೂಷಿತವಾಗುತ್ತಿದ್ದು, ಜನರಿಗೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಡಿವಿಜನಲ್ ಕಂಟ್ರೋಲರ್, ಕೆ.ಎಸ್.ಆರ್.ಟಿ.ಸಿ. ಬೆಳಗಾಂ ಇವರು ಎಂ.ಡಿ. ಕೆ.ಎಸ್.ಆರ್.ಟಿ.ಸಿ. ಬೆಂಗಳೂರು ಇವರಿಗೆ ಅಲ್ಲಿ ಹೊಸದಾಗಿ ಮೂತ್ರಾಲಯ ಹಾಗೂ ಶೌಚಾಲಯಗಳನ್ನು ಕಟ್ಟಬೇಕೆಂದು ಅಂದಾಜು ಪತ್ರಗಳನ್ನು ತಯಾರಿಸಿ ಕಳುಹಿಸಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಅಲ್ಲಿ ಹವೆ ದೂಷಿತವಾಗುತ್ತಿದ್ದರೂ ಪರಿಸರ ಇಲಾಖೆಯ ಅಧಿಕಾರಿಗಳು ಕೆ.ಎಸ್.ಆರ್.ಟಿ.ಸಿ.ಯ ಎಂ.ಡಿ. ಹಾಗೂ ಡಿವಿಜನಲ್ ಕಂಟ್ರೋಲರ್ ಕೆ.ಎಸ್.ಆರ್.ಟಿ.ಸಿ. ಬೆಳಗಾಂ ಇವರ ಮೇಲೆ ಯಾವುದೇ ಕ್ರಮ ಕೈಗೊಳ್ಳದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಕ್ರಮ ಕೈಗೊಳ್ಳದೇ ಇರಲು ಕಾರಣವೇನು?

ಉ) ಹವೆ ದೂಷಿತವಾಗದಂತೆ ತಡೆಗಟ್ಟಲು ಅಲ್ಲಿ ಹೊಸದಾಗಿ ಮೂತ್ರಾಲಯ ಹಾಗೂ ಶೌಚಾಲಯಗಳನ್ನು ಕಟ್ಟಲು ಪರಿಸರ ಇಲಾಖೆಯ ಕಾರ್ಯದರ್ಶಿಗಳು ಕೆ.ಎಸ್.ಆರ್.ಟಿ.ಸಿ. ಯವರಿಗೆ ಸೂಕ್ತ ಆದೇಶ ನೀಡುವರೆ?

ಶ್ರೀ ಎನ್. ಜಿ. ಹಾಲಪ್ಪ (ಪರಿಸರ ಮತ್ತು ಜೀವಿಶಾಸ್ತ್ರ ವಿಜ್ಞಾನ ಯಂತ್ರಕಲೆ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು):

ಅ) ಬಂದಿದೆ.

ಆ) ಬಂದಿದೆ.

ಇ) ಈ ಬಗ್ಗೆ ಈಗಾಗಲೇ ಕ್ರಮ ಜರುಗಿಸಲಾಗಿದ್ದು ಸಂಬಂಧಪಟ್ಟ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳಿಗೆ ಪರಿಸರ ನಿಯಮಾವಳಿಯಲ್ಲಿ ನೋಟೀಸ್

ನೀಡಲಾಗಿದೆ. ಅಲ್ಲದೆ ಸಂಬಂಧಪಟ್ಟ ಪುರಸಭಾ ಅಧಿಕಾರಿಗಳಿಗೆ ಕೂಡ ನೋಟೀಸ್ ನೀಡಲಾಗಿದೆ.

ಈ) ಮೇಲೆ ಸೂಚಿಸಿದಂತೆ ಕ್ರಮ ಜರುಗಿಸಲಾಗಿದೆ.

ಉ) ಈ ಬಗ್ಗೆ ಈಗಾಗಲೇ ನೀಡಲಾದ ನೋಟೀಸ್ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಹೊಸದಾಗಿ ಶೌಚಾಲಯ ಕಟ್ಟುವ ಬಗ್ಗೆ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿದ್ದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ತಿಳಿದುಬಂದಂತೆ 94-95ನೇ ಸಾಲಿನಲ್ಲಿ ಈ ಕಾರ್ಯವನ್ನು ಕೈಗೊಳ್ಳಲಾಗುವುದು. ನಿಗಧಿತ ಕಾಲಾವಧಿಯಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸದಿದ್ದಲ್ಲಿ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು.

ಬೈಲಹೊಂಗಲ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಆಟದ ಮೈದಾನದ ಕೆಲಸ ಪೂರ್ಣಗೊಳಿಸುವ ಬಗ್ಗೆ

139 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಭೂಸೇನಾ ನಿಗಮದವರು ಹೈಸ್ಕೂಲ್ ಹತ್ತಿರ ಆಟದ ಮೈದಾನ ಮಾಡಲು ಎಷ್ಟು ಹಣವನ್ನು ಖರ್ಚು ಮಾಡಿರುವುದು?

ಆ) ಆಟದ ಮೈದಾನವನ್ನು ಪೂರ್ಣಗೊಳಿಸಲು ಇನ್ನು ಎಷ್ಟು ಹಣ ಬೇಕಾಗಿದೆ ಹಾಗೂ ಅದನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಯುವಜನ ಸೇವಾ ಸಚಿವರು):

ಅ) ಈ ಆಟದ ಬಯಲನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯು ಅಭಿವೃದ್ಧಿ ಪಡಿಸುತ್ತಿರುವುದಿಲ್ಲ. ಆದುದರಿಂದ ಮಾಹಿತಿ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ ೧೧೪ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ 1994ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 14-2-94 ರಂದು ಅನುಮೋದಿಸಲಾಗಿದೆ ಎಂದು ತಿಳಿಸುತ್ತೇನೆ.

ಪ್ರಸ್ತಾವನೆ

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಒಂದು ಪ್ರಸ್ತಾವನೆಯನ್ನು ಸಭೆ ಮುಂದೆ ಮಂಡಿಸುತ್ತೇನೆ. "ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪ್ರಯಾಣ ದರವನ್ನು ಮತ್ತು ಸಂಸ್ಥೆಯ ಕಾರ್ಯ ನಿರ್ವಹಣೆ ಮತ್ತು ಆಡಳಿತ ದಕ್ಷತೆಯನ್ನು ಉತ್ತಮಪಡಿಸುವ ಸಲುವಾಗಿ ಸರಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ನೀಡಲು ರಚಿಸಲಾಗಿರುವ ವಿಧಾನ ಮಂಡಲದ ಜಂಟಿ

ಪನ ಸಮಿತಿಯು ತನ್ನ ವರದಿಯನ್ನು ನೀಡಲು 1994ರ ಏಪ್ರಿಲ್ ತಿಂಗಳ ಅಂತ್ಯದವರೆಗೆ ಕಾಲಾವಕಾಶ ನೀಡಬೇಕು."

ಇದಕ್ಕೆ ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಅಂಗೀಕಾರವಾಗಿದೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ನಿನ್ನೆ ದಿವಸ ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡಿದ್ದೆವು. ಇವತ್ತು ಉತ್ತರ ಕೊಡಿಸುತ್ತೇವೆಂದು ಹೇಳಿದ್ದೀರಿ. ಅದರಂತೆ ತಾವು ಉತ್ತರ ಕೊಡಿಸಬೇಕು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

(1) ಮುಧೋಳದಲ್ಲಿ ರೈತರಿಗೆ ಆಗುತ್ತಿರುವ ತೊಂದರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಕಳೆದ ಮೂರು ದಿನದಿಂದ ಮುಧೋಳದಲ್ಲಿ ರೈತರಿಗೆ ಆಗುತ್ತಿರುವ ತೊಂದರೆ ಬಗ್ಗೆ ಕಬ್ಬು ಬೆಳೆಗಾರರ ಬಗ್ಗೆ ಪ್ರಸ್ತಾಪವನ್ನು ಈ ಸದನದಲ್ಲಿ ಮಾಡುತ್ತಿದ್ದೇವೆ. ಸಕ್ಕರೆ ಇಲಾಖಾ ಮಂತ್ರಿಗಳಾದ ಲಮಾಣಿಯವರು ಹೇಳಿಕೆ ಕೊಡುತ್ತೇನೆಂದು ಗುರುವಾರ ಆಶ್ವಾಸನೆ ಕೊಟ್ಟು ಹೋದರು. ಈಗ ಅವರು ನಾಪತ್ತೆ ಆಗಿದ್ದಾರೆ. ರೈತರಿಗೆ ತೊಂದರೆಯಾಗಿದೆ ಎಂದು ನಾವು ಹೇಳಿದ್ದೇವೆ. ಮುಧೋಳ ಮತ್ತು ಅದರ ಸುತ್ತಮುತ್ತ ಇರತಕ್ಕಂತಹ ರೈತರಿಗೆ ಬಹಳ ತೊಂದರೆಯಾಗಿದೆ. ಅಲ್ಲಿ ಕಬ್ಬು ಸಾಗಿಸುವುದಕ್ಕೆ ಪೊಲೀಸರು ಅಡ್ಡಿ ಬಂದು ಅವರನ್ನು ನಿಲ್ಲಿಸಿದ್ದಾರೆ. ಎಷ್ಟೊಂದು ಕಬ್ಬನ್ನು ಸುಟ್ಟು ಹಾಕಿದ್ದಾರೆಂಬುದರ ವಿವರವನ್ನು ತಮಗೆ ಕಳಿಸಿ ಕೊಡುತ್ತೇನೆ. ಲಾರಿ ಗಟ್ಟಲೆ ಕಬ್ಬನ್ನು ಬೆಂಕಿಗೆ ಹಾಕಿದ್ದಾರೆ. ಹೊರರಾಜ್ಯಗಳಿಗೆ ಅದನ್ನು ತೆಗೆದುಕೊಂಡು ಹೋಗುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ ಎಂದು ಒಪ್ಪಿದ್ದರು.

ಆದರೆ ಸೂಚನೆ ಹೋಗದೆ ರೈತರಿಗೆ ಬಹಳ ತೊಂದರೆಯಾಗಿದೆ. ಕಠಾವು ಆಗಿರತಕ್ಕ ಕಬ್ಬು ಬಹಳವಾಗಿ ಬಾಕಿ ಇದೆ. ಇದರ ಬಗ್ಗೆ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇವತ್ತೇ ಸಾಯಂಕಾಲ ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದರು. ಜಿಲ್ಲಾಧಿಕಾರಿಗಳಿಗೆ ಮತ್ತು ಸಕ್ಕರೆ ನಿರ್ದೇಶಕರ ಜೊತೆ ಮಾತನಾಡುತ್ತೇನೆಂದು ಹೇಳಿದ್ದರು. ಆದರೆ ಇದುವರೆಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಅವರೂ ಸಹ ಸಿಗುತ್ತಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿನ್ನೆಯೂ ತಾವು ಇದೇ ಉತ್ತರವನ್ನು ಕೊಟ್ಟಿದ್ದೀರಿ. ತಾವು ಸಂಸದೀಯ ವ್ಯವಹಾರದ ಮಂತ್ರಿಗಳು ಇವತ್ತು ಸಾಯಂಕಾಲದೊಳಗೆ ಉತ್ತರವನ್ನು ಕೊಡಿಸುತ್ತೇನೆಂದು ನಿನ್ನೆ ಹೇಳಿದ್ದಿರಿ. ನಾವು ನಿಮಗೇನು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ನಿಮಗೆ 186 ಜನರ ಬೆಂಬಲವಿದೆ. ನಿನ್ನೆ ತಾವವು ಸಂಜೆ 5 ಗಂಟೆಯೊಳಗೆ ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದಿರಿ, ಇವತ್ತು ಸಹ ಅದನ್ನೇ ಹೇಳುತ್ತೀರಿ; ನಾವು ಸುಮ್ಮನೆ ಕೇಳಿಕೊಂಡು ಹೋಗಬೇಕಾಗಿದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ನಿನ್ನೆ ಸಂಜೆ ಸಭೆಯು ತಕ್ಷಣ ಮುಕ್ತಾಯವಾಯಿತು. ನಿನ್ನೆ ಸಭೆಯು 7-8 ಗಂಟೆಯವರೆಗೆ ನಡೆಯುತ್ತದೆ. ನಮ್ಮ ಎಲ್ಲಾ ವಿಧೇಯಕಗಳನ್ನು ಪಾಸ್ ಮಾಡಬಹುದೆಂದು ತಿಳಿದುಕೊಂಡಿದ್ದೆವು. ಅಷ್ಟೊತ್ತಿಗೆ ಸಭೆ ತಕ್ಷಣವಾಗಿ ಮುಕ್ತಾಯವಾಯಿತು. ಮಾನ್ಯ ಸಕ್ಕರೆ ಸಚಿವರು ಇವತ್ತು ಬಂದಿದ್ದಾರೆ. ಅವರು ಈಗ ಮೇಲ್ಮನೆಯಲ್ಲಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಸಭೆಯನ್ನು ಯಾವಾಗ ಮುಂದಕ್ಕೆ ಹಾಕುತ್ತೀರೆಂದು ನಮಗೆ ಗೊತ್ತೇ ಆಗುವುದಿಲ್ಲ. ಇದ್ದಕ್ಕಿದ್ದಂತೆ ಮುಂದಕ್ಕೆ ಹಾಕುತ್ತೀರಿ. ನಾವು ಅಧ್ಯಕ್ಷರನ್ನೇನು ಮಾಡೋಣ. ಅವರ ಗತಿ ಅಪರಿಸ್ಥಿತಿಯಾಗಿದೆ. ನಾವು ರಾತ್ರಿ ಎಂಟು ಗಂಟೆಯವರೆಗೆ ಬೇಕಾದರೆ ಕುಳಿತುಕೊಳ್ಳಲು ತಯಾರಾಗಿದ್ದೆವು.

ಶ್ರೀ ಹಾರನಹಳ್ಳಿರಾಮಸ್ವಾಮಿ : ಅಷ್ಟಣೆ ಬಹಳ ಸಂತೋಷ. ತಮಗೆ ಧನ್ಯವಾದಗಳು.

(2)ಗುಲ್ಬರ್ಗ ಜಿಲ್ಲೆಯ ಜೇವರ್ಗಿ ತಾಲ್ಲೂಕಿನಲ್ಲಿ ತೊಗರಿ ಬೆಳೆಯು ನಾಶವಾದಂತಹ ರೈತರಿಗೆ ಪರಿಹಾರ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ನಾನು ಶೂನ್ಯ ವೇಳೆಯಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೆ. ಅದೇನೆಂದರೆ ಗುಲ್ಬರ್ಗ ಜಿಲ್ಲೆಯ ಜೇವರ್ಗಿ ರತಾಲ್ಲೂಕಿನಲ್ಲಿ ತೊಗರಿ ಬೆಳೆಯು ನಾಶವಾದಂಥ ರೈತರಿಗೆ ಪರಿಹಾರವನ್ನು ಕೊಟ್ಟಿಲ್ಲವೆಂದು ರೈತರು ಕಳೆದ ಒಂದು ವಾರದಿಂದ ಅಮರಣಾಂತ ಉಪವಾಸವನ್ನು ಮಾಡುತ್ತಿದ್ದಾರೆ. ಈಗಾಗಲೇ 5 ಜನರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ತಾವು ತುಂಬ ಧಾರಾಳದಿಂದ ತೊಗರಿ ಬೆಳೆಯು ನಾಶವಾಗಿದ್ದಕ್ಕೆ ಪರಿಹಾರವನ್ನು ಕೊಟ್ಟಿರಿ. ನಾನೇನು ಪರಿಹಾರವನ್ನು ಕೊಟ್ಟಿಲ್ಲವೆಂದು ಹೇಳುವುದಿಲ್ಲ. ತಾವು ಇನ್ನೂ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆಯೆಂದು ಹೇಳಿದ್ದೀರಿ. ಕೆಲವರಿಗೆ ಚೆಕ್ ಕೊಟ್ಟಿದ್ದಕ್ಕೆ ಆನರ್ ಆಗಿದೆ, ಇನ್ನು ಒಂದು ಕೋಟಿ ರೂಪಾಯಿಗಳಷ್ಟು ಚೆಕ್ ಆನರ್ ಆಗಿಲ್ಲ. ಮಾನ್ಯ ಕೃಷಿ ಸಚಿವರು ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಅದರ ಕಡೆಗೆ ಹಣವನ್ನು ಬಿಡುಗಡೆ ಮಾಡಿ ಅದನ್ನು ಆನರ್ ಆಗುವಂತೆ ನೋಡಿಕೊಳ್ಳುತ್ತೇವೆಂದು ಹೇಳಿದ್ದರು. ಆದರೆ ಗುಲ್ಬರ್ಗ ಜಿಲ್ಲೆಯ ಜೇವರ್ಗಿ ತಾಲ್ಲೂಕಿನಲ್ಲಿ ತೊಗರಿ ಬೆಳೆಯು ನಾಶವಾಗಿರುವಂಥವರಿಗೆ ಶೇಕಡ 5 ರಷ್ಟು ಜನರಿಗೆ ಸಹ ಪರಿಹಾರ ಸಿಗದೇ ಇರುವುದರಿಂದ ಕಳೆದ ಒಂದು ವಾರದಿಂದ ಅಲ್ಲಿ ಅಮರಣಾಂತ ಉಪವಾಸವನ್ನು ಮಾಡುತ್ತಿದ್ದಾರೆ. 5-6 ಜನರು ಈಗಾಗಲೇ ಆಸ್ಪತ್ರೆಗೆ ಸೇರಿದ್ದಾರೆ. ಆದ್ದರಿಂದ ನಾನು ದಯಮಾಡಿ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಅಲ್ಲಿ ಉಪವಾಸ ನಿಲ್ಲುವ ವ್ಯವಸ್ಥೆ ಮಾಡಬೇಕು ಮತ್ತು ತೊಗರಿ ಬೆಳೆ ನಾಶವಾದಂಥವರಿಗೆ ಪರಿಹಾರವನ್ನು ಕೊಡಲು ಇವತ್ತಿನಿಂದಲೇ ಹಣವನ್ನು ಬಿಡುಗಡೆ ಮಾಡಬೇಕು. ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಿ ಚೆಕ್ಕಗಳನ್ನು ಕೊಟ್ಟಿದ್ದಾರೆ. ಆದರೆ ಆ ಚೆಕ್‌ಗಳು ಆನರ್ ಆಗಿಲ್ಲ. ಅದರ ಬಗ್ಗೆ ಸದನದಲ್ಲಿ ಅನೇಕ ಬಾರಿ ಪ್ರಸ್ತಾಪ ಮಾಡಿದ್ದೇವೆ. ಸಂಬಂಧಪಟ್ಟ ಸಚಿವರು ಸಹ ಅದರ ಕಡೆಗೆ ಗಮನಕೊಡುತ್ತೇವೆಂದು ಹೇಳಿದ್ದರು. ತಾವೂ ಕೂಡ ಅದರ ಬಗ್ಗೆ ಗಮನ ಕೊಡುತ್ತೀನೆಂದು ಹೇಳಿದ್ದೀರಿ. ಆದ್ದರಿಂದ ಮೊದಲು ಜೇವರ್ಗಿ ತಾಲ್ಲೂಕಿಗೆ ಹಣವನ್ನು ಬಿಡುಗಡೆ ಮಾಡಿ, ತೊಗರಿ ಬೆಳೆ ನಾಶವಾದಂಥವರಿಗೆ ಪರಿಹಾರವನ್ನು ಒದಗಿಸಿಕೊಡಬೇಕು ಮತ್ತು ಚೆಕ್ ಆನರ್ ಆಗದೇ ಇರತಕ್ಕವರಿಗೆ ತಕ್ಷಣ ಆ ಚೆಕ್‌ನ್ನು ಪ್ರಜೆಂಟ್ ಮಾಡಿಸಿ ಅದು ಆನರ್ ಆಗುವಂತೆ ನೋಡಿಕೊಳ್ಳತಕ್ಕದ್ದು, ಮತ್ತು ತಾವೇ ಆ ಸದನದಲ್ಲಿ ಭರವಸೆಯನ್ನು ಕೊಟ್ಟಿರುವ ಪ್ರಕಾರ ಉಳಿದ ಎರಡು ಕೋಟಿ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಿ ಅಲ್ಲಿ ಅಮರಣಾಂತ ಉಪವಾಸ ನಿಲ್ಲುವಂತಹ ವ್ಯವಸ್ಥೆಯನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ನನ್ನ ಅನುಭವಕ್ಕೆ ಬಂದಾಗ ನಾನು ಕೂಡ ಗುಲ್ಬರ್ಗ ಜಿಲ್ಲೆಯಲ್ಲಿ ಸಮೀಕ್ಷೆಯನ್ನು ನಡೆಸಿದಾಗ, ನಾವು ಈಗಾಗಲೇ ಸುಮಾರು 10ಕೋಟಿ ರೂಪಾಯಿಗಳನ್ನು ತೊಗರಿ ಬೆಳೆಯ ನಾಶಕ್ಕಾಗಿ ಪರಿಹಾರವನ್ನು ಬಿಡುಗಡೆ ಮಾಡಿದ್ದೇವೆ. ಇನ್ನೂ ಸುಮಾರು 40 ಲಕ್ಷ ರೂಪಾಯಿ ಏನು ಅಲ್ಲಿಯ ಚೆಕ್ಕಗಳು ಆನರ್ ಆಗಿಲ್ಲ ಅದನ್ನು ನನ್ನ ನೆನಪಿನ

ಪ್ರಕಾರ ಕೂಡಲೆ ಆದೇಶವನ್ನು ಕೊಟ್ಟು ಅದೂ ಕ್ಯಾಷ್ ಆಗಿದೆ. ಇನ್ನು ಉಳಿದಿರತಕ್ಕದ್ದು ಒಂದು ಕೋಟಿ ರೂಪಾಯಿ ಚೆಕ್ ಇಲ್ಲ. ಇನ್ನು ಉಳಿದಿರತಕ್ಕದ್ದು ಒಟ್ಟು ಎರಡು ಕೋಟಿ ರೂಪಾಯಿಗಳು. ನನಗೆ ಗೊತ್ತಿದ್ದ ಪ್ರಕಾರ ಅದರ ಬಿಲ್ಲನ್ನು ನಾವು ಕೊಟ್ಟೇ ಇಲ್ಲ, ಚೆಕ್ಕು ಕೊಟ್ಟೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು 25-30 ಲಕ್ಷ ರೂಪಾಯಿಗಳ ಚೆಕ್ಗಳನ್ನು ಮೊನ್ನೆ ಕಲೆಕ್ಟ್ ಮಾಡಿಕೊಂಡು ಬಂದಿರುವೆ. ನನ್ನ ಹತ್ತಿರ ಆನರ್ ಆಗದೇ ಇರುವ ಚೆಕ್ಗಳಿವೆ. ಬೇಕಾದರೆ ತಮಗೆ ಒದಗಿಸಿಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನನ್ನ ನೆಪಿನ ಪ್ರಕಾರ ಮೊದಲು 10 ಕೋಟಿ ರೂಪಾಯಿ, ಮತ್ತೊಂದು 40 ಲಕ್ಷ ರೂಪಾಯಿಯ ಚೆಕ್ನ್ನು ಕೊಟ್ಟದ್ದು ಅದು ಖಾಲಿ ಇತ್ತು ಎಂದು ಕಾಣುತ್ತದೆ. ಏನೇ ಆಗಲಿ, ಅದರ ಬಗ್ಗೆ ವಿವರವಾದ ಮಾಹಿತಿಯನ್ನು ಕೊಡುತ್ತೇನೆ.

ಇನ್ನು ಎರಡು ಕೋಟಿ ರೂಪಾಯಿ ಬಾಕಿ ಕೊಡಬೇಕಿತ್ತು. ನಾವು ಕ್ರಮೇಣ ಕೊಡುತ್ತೇವೆಂದು ಕೂಡ ಹೇಳಿದ್ದೇವೆ. ಆದ್ದರಿಂದ ವರದಿ ತರಿಸಿ ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆಯೆಂದು ವಿಚಾರ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮ್ಮಿಂದ ಒಂದೇ ಒಂದು ಆಶ್ವಾಸನೆ ನಾನು ಕೇಳುವುದು ಅಂದರೆ, ಜೇವರಗಿ ತಾಲ್ಲೂಕಿನಲ್ಲಿ ಯಾರು ನೊಂದಿದ್ದಾರೆ, ಯಾರ ಬೆಳೆ ನಾಶವಾಗಿದೆ ಎಂದು ನಿಮ್ಮ ರೆಕಾರ್ಡ್ನಲ್ಲಿದೆ ಅವರಿಗೆ ತಕ್ಷಣ ಪರಿಹಾರ ಒದಗಿಸಿಕೊಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟರೆ ಯಾರು ಒಂದು ವಾರದಿಂದ ಅಮರಣಾಂತ ಉಪವಾಸ ಮಾಡುತ್ತಿದ್ದಾರೆ, ಅವರು ವಾಪಸ್ ಬರುತ್ತಾರೆ. ರೈತರ ಪರ ಹೋರಾಟ ಮಾಡಿದವರು ಉಳಿದುಕೊಳ್ಳುತ್ತಾರೆ. ಆದ್ದರಿಂದ ಆ ಒಂದು ಆಶ್ವಾಸನೆಯನ್ನು ನಾನು ತಮ್ಮಿಂದ ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮಗೆ ಗೊತ್ತಿರಬಹುದು; ಕರ್ನಾಟಕದ ಇತಿಹಾಸದಲ್ಲಿ ಇಂತಹ ಪರಿಹಾರಗಳನ್ನು ಕೊಡುವಂತಹದು ಇದೆ ಪ್ರಥಮ. ಯಾವಾಗಲೂ ಕೊಟ್ಟಿರಲಿಲ್ಲ ಅದೂ ಕೂಡ ನನ್ನ ತಲೆಯಲ್ಲಿ ಏನು ಇತ್ತು ಎಂದರೆ, ಆಗ ಐದು ಕೋಟಿ ರೂಪಾಯಿಯಲ್ಲಿ ಎಲ್ಲ ಸುಧಾರಿಸುತ್ತದೆ ಎಂದು ನೋಡಲಿಕ್ಕೆ ಹೋದರೆ ಹತ್ತು ಕೋಟಿ ರೂಪಾಯಿಗೆ ಬಂದು ಈಗ 12 ಕೋಟಿ ರೂಪಾಯಿಗೆ ಹೋಗಿದೆ. ನಮಗೆ ಗಾಬರಿ ಆಗಿದೆ. ಏಕೆಂದರೆ ತಮಗೆ ಗೊತ್ತಿದೆ. ಅನೇಕ ಆದ್ಯತೆ ಕಾರ್ಯಕ್ರಮಗಳು, ನೀರಾವರಿ ವಿದ್ಯುತ್ ಇವೆಲ್ಲ ಬಿಟ್ಟು ಈ ತರಹ ಎಕಸ್ಟ್ರಾ ಪೇಮೆಂಟ್ 135-140 ಕೋಟಿ ರೂಪಾಯಿಗಳನ್ನು ನಾವು ಅತಿವೃಷ್ಟಿಗೆ ಕೊಡಬೇಕಾಯಿತು, ಭೂಕಂಪದಿಂದ ನೊಂದವರಿಗೆ ನಾವು ಕೊಡಬೇಕಾಯಿತು. ಇದೆಲ್ಲಾ ತಮಗೆ ಗೊತ್ತಿದೆ. 3025 ಕೋಟಿ ರೂಪಾಯಿಗಳಲ್ಲಿ ಇದು ಬರುವುದಿಲ್ಲ, ಇದು ಅಡಿಷನಾಲಿಟಿ ಬರುತ್ತದೆ. ಇದೆಲ್ಲಾ ಒಂದು ವರ್ಷದಲ್ಲಿ ನಮ್ಮ ಸಂಪನ್ಮೂಲ ಇಂತಿಷ್ಟೇ ಆಗುತ್ತದೆ ಎಂದು ಲೆಕ್ಕಾಚಾರ ಹಾಕುತ್ತೇವೆ. ಅದರ ಮೇಲೆ ಇಂತ ಪೇಮೆಂಟ್ಗಳು ಕೂಡ ಬಂದರೆ ಆಯವ್ಯಯಕ್ಕೆ ಮತ್ತು ನಾವು ಕೊಟ್ಟಂತಹ ಪ್ಲಾನಿಗೆ ಕೂಡ ಒಂದು ಆಘಾತ ಬರುತ್ತದೆ. ಅದನ್ನೂ ತಾವು ಅಪ್ರಿಷಿಯೇಟ್ ಮಾಡಬೇಕು. ತಾವು ಹೇಳಿದ್ದೀರಿ. ನಾನು ಆದಷ್ಟು ಬೇಗ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಅವರು ಅಮರಣಾಂತ ಉಪವಾಸ ಕೈಬಿಡಲಿ. ಜೇವರಗಿಯವರಿಗೆ ಪೇಮೆಂಟ್ ಬಾಕಿ ಇದೆ, ಅವರಿಗೆ ಪೇಮೆಂಟ್ ಮಾಡಲು ಆದಷ್ಟು ಜಾಗ್ರತೆ ನಾನು ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಕೃಷ್ಣ ಕಾವೇರಿ ಬಗ್ಗೆ ಚರ್ಚಿಸಲು ಕಾಲನಿಗದಿ, ಹಾಗೂ ಕಬಿನಿ ಭೂಸ್ವಾಧೀನ ಅಧಿಕಾರಿಗಳ ಕಾರ್ಯಾಲಯವನ್ನು ಜಪ್ತಿ ಮಾಡಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಎರಡು ವಿಷಯಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಕೃಷ್ಣಾ - ಕಾವೇರಿ ಬಗ್ಗೆ ಚರ್ಚೆಗೆ ತಾವು ಒಂದು ಕಾಲವನ್ನು ನಿಗದಿ ಮಾಡುತ್ತೇವೆ ಎಂದು ಹೇಳಿದ್ದೀರಿ.

ಅದು ಯಾವಾಗ ಎಂದು ತೀರ್ಮಾನ ಆಗಬೇಕು. ಮತ್ತೊಂದು ಭೂ ಸ್ವಾಧೀನ ಮಂಡಲಿಯನ್ನು ಜಪ್ತಿ ಮಾಡಿರತಕ್ಕ ವಿಚಾರ. ಇವತ್ತು ವರದಿ ಇನ್ನೂ ಕೊಟ್ಟಿಲ್ಲ. ಅದನ್ನು ಯಾವಾಗ ಕೊಡುವುದು ಏನು ಎಂದು ತಿಳಿಸಬೇಕು. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಚಾಮರಾಜ ನಗರ ಕಬಿನಿ ಭೂ ಸ್ವಾಧೀನ ಅಧಿಕಾರಿಗಳ ಕಾರ್ಯಾಲಯವನ್ನು ಜಪ್ತಿ ಮಾಡಿದ್ದಾರೆ. ಅಲ್ಲಿರತಕ್ಕ ರೈತರಿಗೆ ಚಾಮರಾಜ ನಗರ, ಗುಂಡ್ಲುಪೇಟೆ, ನಂಜನಗೂಡು, ಕೊಳ್ಳೇಗಾಲ ಈ ಕಬಿನಿ ಕೆಲಸಕ್ಕೆ ಯಾವ ಪ್ರದೇಶವನ್ನು ತೆಗೆದುಕೊಂಡರು. ಆ ರೈತರಿಗೆ ಪತ್ತಾರು ವರ್ಷಗಳಿಂದ ಹಣ ಕೊಡದೇ ಅವರು ಅಲೆಯುತ್ತಿದ್ದಾರೆ. ಅವರು ಹಣ ಕೊಡದೇ ಇರುವುದರಿಂದ ಕೋರ್ಟಿಗೆ ಹೋಗಿ ನಿಮ್ಮ ಸರ್ಕಾರದ ಕಾರ್ಯಾಲಯವನ್ನು ಜಪ್ತಿ ಮಾಡಿದ್ದಾರೆ. ತಾವು ಹೇಳುತ್ತೀರಿ, ನಮ್ಮ ಸರ್ಕಾರದಲ್ಲಿ ಹಣಕಾಸಿನ ಪರಿಸ್ಥಿತಿ ಸುಭದ್ರವಾಗಿದೆ ಎಂದು. ಅಲ್ಲಿ ಎರಡು ಕೋಟಿ ಐವತ್ತು ಲಕ್ಷ ರೂಪಾಯಿ ಕೊಡಬೇಕಾದ ಪರಿಸ್ಥಿತಿಯಲ್ಲಿ ನಾಲ್ಕು ಸಾರಿ ಜಪ್ತಿ ಆಗಿದೆ. ಮೊನ್ನೆಯೂ ಮೂರು ದಿವಸಗಳ ಹಿಂದೆ ಸಹ ಜಪ್ತಿ ಆಗಿದೆ. ಆದ್ದರಿಂದ ಹಣ ತೀರಿಸುವುದಕ್ಕೆ ತಾವು ಏನು ಮಾಡುತ್ತೀರಿ ಎಂದು ಹೇಳಬೇಕು.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಮತ್ತು ಮಾನ್ಯ ಬನ್ನಿಕೋಡ್ ಅವರ ವಿಚಾರದ ಬಗ್ಗೆ ಒಂದೊಂದಾಗಿ ಹೇಳಿಕೆ ಕೊಡುತ್ತಾರೆ. ಈಗ ಮಾನ್ಯ ಖರ್ಗೆಯವರು ಹೇಳಿಕೆ ಕೊಡುತ್ತಾರೆ.

ಸಚಿವರಿಂದ ಹೇಳಿಕೆ(ಗ್ರಾಮೀಣ ಪ್ರದೇಶದಲ್ಲಿ ಸಹಕಾರಿ ಸಾಲ ವಸೂಲಾತಿ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) : ಮಾನ್ಯ ಯಡಿಯೂರಪ್ಪನವರು ಎತ್ತಿದಂಥ ಒಂದು ಪ್ರಶ್ನೆಗೆ ಆಮೇಲೆ ಒಂದು ಸ್ಟೇಟ್ಮೆಂಟ್ ಮಾಡುತ್ತೇವೆಂದು ಹೇಳಿದ್ದೆ. ಅದರ ಪ್ರಕಾರ ಇವತ್ತು ನಾನು ಆ ಸ್ಟೇಟ್ಮೆಂಟ್ ಮಾಡುತ್ತೇನೆ.

ಮಂತ್ರಿಗಳ ಹೇಳಿಕೆ

ಕರ್ನಾಟಕದ ಗ್ರಾಮಾಂತರ ಪ್ರದೇಶದಲ್ಲಿರುವ ಎಲ್ಲಾ ಹಣಕಾಸು ಸಂಸ್ಥೆಗಳ ವಸೂಲಾತಿ ಪ್ರಗತಿಯು ಕುಂಠಿತವಾಗಿದೆ. ದಿನಾಂಕ 30ನೇ ಜೂನ್ 1992ರಲ್ಲಿರುವಂತೆ ಬಾಕಿ ಇರುವ ವಸೂಲು ಮಾಡಬೇಕಾದ ಮೊತ್ತ ರೂ. 1201.16 ಕೋಟಿಗಳಾಗಿದೆ.

ಹಣಕಾಸು ಸಂಸ್ಥೆಗಳು	ದಿನಾಂಕ 30-6-92ಕ್ಕೆ ಆಗಿರುವ ಶೇಕಡಾವಾರು ವಸೂಲಾತಿ			
	1989	1990	1991	1992
ವಾಣಿಜ್ಯ ಬ್ಯಾಂಕುಗಳು	45	32	48	41.5
ಗ್ರಾಮೀಣ ಬ್ಯಾಂಕುಗಳು	59	40	49	51
ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್	57	17	36.5	48.6
ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್	49.2	46.7	34.2	38

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ಗಳ ಮಟ್ಟದಲ್ಲಿ ಅಲ್ಪಾವಧಿ ಸಾಲಗಳ ಶೇಕಡಾವಾರು ವಸೂಲಾತಿಯ ಬಗ್ಗೆ ಅನುಬಂಧ - 1ರಲ್ಲಿ ನೋಡಬಹುದು.

ದಿನಾಂಕ : 20-6-1993 ರಲ್ಲಿರುವಂತೆ ಒಟ್ಟು ಬಾಕಿ ಇರುವ ಅಲ್ಪಾವಧಿ, ಮಧ್ಯಮಾವಧಿ ಮತ್ತು ಪರಿವರ್ತಿತ ಅಲ್ಪಾವಧಿ ಸಾಲಗಳ ಮೊತ್ತ ರೂ. 205.62 ಕೋಟಿಗಳಾಗಿತ್ತು. ವಿವರಗಳನ್ನು ಅನುಬಂಧ - 2ರಲ್ಲಿ ನೋಡಬಹುದು.

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಅಲ್ಪಾವಧಿ ಸಾಲಗಳನ್ನು ಮುಂಗಡವಾಗಿ ಕೊಡುವ ಮೊತ್ತ ಗಣನೀಯವಾಗಿ ಇಳಿಯುತ್ತಿದೆ. ಇದರ ಅಂಕಿ ಅಂಶಗಳು ಈ ಕೆಳಗಿನಂತಿವೆ.

ವರ್ಷದ ಕೊನೆ 31ನೇ ಮಾರ್ಚ್	ಮೊತ್ತ ಕೋಟಿ ರೂಪಾಯಿಗಳಲ್ಲಿ
87-88	139.06
88-89	229.19
89-90	189.46
90-91	53.22
91-92	82.39
92-93	191.87

ಮುಂಗಡಗಳು ಕುಂಠಿತವಾಗಿದೆ ಏಕೆಂದರೆ ಸಾಲಗಳ ವಸೂಲಾತಿಯು ಕುಂಠಿತವಾಗಿದೆ. ಒಂದು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಶೇ. 40ರಷ್ಟು ವಸೂಲಾತಿಯನ್ನು ಸಾಧಿಸದಿದ್ದರೆ, ಅದು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್)ನಿಂದ ಪುನರ್ ಧನ ಸಾಲ ಸೌಲಭ್ಯ ಪಡೆಯುವುದಕ್ಕೆ ಅರ್ಹವಾಗಿರುವುದಿಲ್ಲ. ದಿನಾಂಕ 1.1.1994ರಲ್ಲಿದ್ದಂತೆ ರಾಯಚೂರು, ಮಂಡ್ಯಾ ಮತ್ತು ಹಾಸನ ಬ್ಯಾಂಕುಗಳು ನಬಾರ್ಡಿನಿಂದ ಪುನರ್ ಧನ ಸಾಲ ಸೌಲಭ್ಯ ಪಡೆಯುವುದಕ್ಕೆ ಅನರ್ಹವಾಗಿರುತ್ತವೆ. ಮೇಲಾಗಿ ಗುಲ್ಬರ್ಗಾ, ರಾಯಚೂರು, ಹಾಸನ, ಕೋಲಾರ, ಚಿತ್ರದುರ್ಗ, ಧಾರವಾಡ, ಬಿಜಾಪುರ ಮತ್ತು ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ದುರ್ಬಲ ಬ್ಯಾಂಕುಗಳೆಂದು ನಬಾರ್ಡಿನಿಂದ ವರ್ಗೀಕರಿಸಿದೆ.

ವಸೂಲಾತಿಯ ಪ್ರಮಾಣ ಅತ್ಯಂತ ಕುಂಠಿತವಾಗಿರುವ ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ಸಮಾಪನೆ ಮಾಡಬೇಕಾಗುವುದೆಂದು ಭಾರತೀಯ ರಿಸರ್ವ ಬ್ಯಾಂಕ್ ಎಚ್ಚರಿಕೆ ನೀಡಿದೆ.

ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಮತ್ತು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳ ದೀರ್ಘಾವಧಿ ಹಣಕಾಸಿನ ಬಗ್ಗೆ ಅನುಬಂಧ - 3ರಲ್ಲಿನ ಪಟ್ಟಿಯನ್ನು ನೋಡಬಹುದು. ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನ ದಿನಾಂಕ 31-3-193ರಲ್ಲಿದ್ದಂತೆ ಕ್ರೋಢೀಕೃತ ನಷ್ಟ ರೂ. 33.89 ಕೋಟಿಗಳಾಗಿದೆ. ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಭಾರತದಲ್ಲಿರುವ ಅತ್ಯಂತ ಕುಂಠಿತವಾಗಿರುವ ವಸೂಲಾತಿ ಪ್ರಮಾಣದ ನಾಲ್ಕು ಬ್ಯಾಂಕುಗಳ ಪೈಕಿ ಒಂದಾಗಿದೆ. ಒಟ್ಟು 177 ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳಲ್ಲಿ 2 ಬ್ಯಾಂಕ್ಗಳು ಮಾತ್ರ ಲಾಭವನ್ನು ಮಾಡಿದ್ದು ಉಳಿದ 175 ಬ್ಯಾಂಕುಗಳು ಅನುಭವಿಸಿರುವ ನಷ್ಟ ರೂ. 53.46 ಕೋಟಿಗಳು. ಒಟ್ಟು 89 ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳು ತಮ್ಮ ಸ್ವಂತ ನಿಧಿಯನ್ನೇ ತೊಡೆದು ಹಾಕಿವೆ.

ಕೃಷಿ ಕ್ಷೇತ್ರದಲ್ಲಿ ಸಾಲ ನೀಡಿಕೆಯಲ್ಲಿ ಇಳಿಮುಖವಾಗಿರುವುದಕ್ಕೆ ಪ್ರಮುಖ ಕಾರಣವೆಂದರೆ, ಸಹಕಾರ ಬ್ಯಾಂಕುಗಳು ಹಾಗೂ ವಾಣಿಜ್ಯ ಬ್ಯಾಂಕ್ಗಳ ವಸೂಲಾತಿ ಪ್ರಮಾಣ ಕುಂಠಿತವಾಗಿರುವುದು. ಕೃಷಿ ಮತ್ತು ಗ್ರಾಮೀಣ ಸಾಲ ಪರಿಹಾರ ಯೋಜನೆಯನ್ನು 1990ರಲ್ಲಿ ಪ್ರಾರಂಭಿಸಲಾಯಿತು, ಇದು ಸಾಲ ವಸೂಲಾತಿಯ ಮೇಲೆ ತೀವ್ರ ಪ್ರತಿಕೂಲ ಪರಿಣಾಮ ಬೀರಿತು. ಗ್ರಾಮೀಣ ಪ್ರದೇಶದಲ್ಲಿ 1982-83ರಿಂದ 1992-93ರವರೆಗೆ ಕರ್ನಾಟಕ ಸರ್ಕಾರ ರೂ. 280.9 ಕೋಟಿಗಳನ್ನು ಸಾಲ ಪರಿಹಾರ ಮತ್ತು ಬಡ್ಡಿಯ ಮೇಲಿನ ಸಹಾಯಧನ ಯೋಜನೆಗಳಿಗಾಗಿ ಖರ್ಚು ಮಾಡಿದೆ. ಈ ಯೋಜನೆಗಳು ರೈತರು ಸಾಲ ಮರುಪಾವತಿ ಮಾಡಲು ಹಿಂಜರಿಯುವಂತೆ ಮಾಡಿದವು. ಏಕೆಂದರೆ ಪ್ರತಿ ವರ್ಷವೂ ಒಂದು ಹೊಸ ಯೋಜನೆಯನ್ನು ಘೋಷಿಸಬಹುದೆಂದು ಅವರು ತಿಳಿದುಕೊಂಡರು.

ಪ್ರಾಥಮಿಕ ಕೃಷಿ ಮತ್ತು ಮತ್ತು ಸಹಕಾರ ಸಂಘಗಳ ಸದಸ್ಯರುಗಳು ಒಟ್ಟು 45.02 ಲಕ್ಷಗಳಿದ್ದರೂ ಸಹ 1991-92ರಲ್ಲಿ 1.96 ಲಕ್ಷ ಸದಸ್ಯರುಗಳು ಅಥವಾ ಶೇ. 4.53 ರಷ್ಟು ಸದಸ್ಯರುಗಳು ಮಾತ್ರ ಸಾಲವನ್ನು ಪಡೆದಿದ್ದಾರೆ. ಆದುದರಿಂದ, ಸಹಕಾರಿ ಸಾಲಗಳ ವಸೂಲಾತಿಯನ್ನು ನಿಲ್ಲಿಸುವುದು ಅಥವಾ ಯಾವುದೇ ಸಾಲ ಮನ್ನಾ ಯೋಜನೆ ಇತ್ಯಾದಿಗಳು ಬಹಳ ಕಡಿಮೇ ಪ್ರಮಾಣದ ರೈತರಿಗೆ ಲಾಭವಾಗುತ್ತದೆ. ಇನ್ನೊಂದು ಕಡೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ಹಾಗೂ ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ದುರ್ಬಲ ಆರ್ಥಿಕ ಪರಿಸ್ಥಿತಿಯಿಂದಾಗಿ ರೈತರು ಸಾಲವನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಇತ್ತೀಚೆಗೆ ನಬಾರ್ಡ್ನ ಅಧ್ಯಕ್ಷರು ಬೆಂಗಳೂರಿಗೆ ಬಂದಾಗ ರಾಜ್ಯ ಸರ್ಕಾರ ಇನ್ನು ಯಾವುದೇ ರಿಯಾಯಿತಿಗಳನ್ನು ಕೊಡಬಾರದೆಂದೂ ಮತ್ತು ನಬಾರ್ಡ್ ಇನ್ನು ಮುಂದೆ ಪುನರ್ ಧನ ಸಾಲ ಸೌಲಭ್ಯದ ಭಗ್ಗೆ ತುಂಬಾ ಕಟ್ಟು ನಿಟ್ಟಾಗಿರುವುದೆಂದು ತಿಳಿಸಿದರು. ಹಾಗೂ ಭಾರತದ ಬಹುತೇಕ ಇತರ ರಾಜ್ಯಗಳಲ್ಲಿ ಸಹಕಾರಿ ಸಾಲಗಳ ವಸೂಲಾತಿ ಪ್ರಮಾಣವು ಉತ್ತಮವಾಗಿದೆಯೆಂದೂ ಸಹ ಹೇಳಿದನು.

ಸರ್ಕಾರ ಸಹಕಾರ ಸಾಲಗಳನ್ನು ವಸೂಲಾತಿ ಮಾಡುವುದನ್ನು ನಿಲ್ಲಿಸಿದರೆ ಅದು ಸಹಕಾರಿ ಚಳುವಳಿಗೆ ಮಾರಕ ಪೆಟ್ಟು ಕೊಟ್ಟಂತಾಗುತ್ತದೆ. ಸಹಕಾರ ಬ್ಯಾಂಕುಗಳೂ ಮತ್ತು ವಾಣಿಜ್ಯ ಬ್ಯಾಂಕುಗಳೂ ಸಾಲ ಕೊಡಲಾಗದಿದ್ದಲ್ಲಿ ರೈತರು ಲೇವಾದೇವಿಗಾರರ ಕೃಪೆಗೆ ಒಳಗಾಗಬೇಕಾಗುತ್ತದೆ. ಆದ್ದರಿಂದ ರೈತರ ಹಿತದೃಷ್ಟಿಯಿಂದ ಸಹಕಾರಿ ಸಾಲಗಳ ವಸೂಲಾತಿ ಪ್ರಮಾಣವನ್ನು ಹೆಚ್ಚಿಸಬೇಕಾಗುತ್ತದೆ.

ಅನುಬಂಧ -

D.C.B. STATEMENT OF SHORT TERM LOANS AT D.C.C. BANK LEVEL

(Rs. in lakhs)

Years	Demand	Collection	% of Collection to demand
1976-77	8613.58	5318.09	61.74
1977-78	9718.39	4924.31	50.67

1978-79	10717.95	5573.03	52.00
1979-80	11334.32	5736.13	50.61
1980-81	12083.37	5489:07	45.43
1981-82	13532.65	7125.21	52.65
1982-83	15375.15	8836.46	57.47
1983-84	17140.63	8446.98	49:28
1984-85	20463.75	11266.33	55:06
1985-86	20306.94	10387.91	51.15
1986-87	22171.12	10970.11	49.48
1987-88	27339.26	19701.99	72.06
1988-89	31802.19	18062.66	56.80
1989-90	33204.88	5756.58	17.33
1990-91	36400.65	13269.95	36.46
1991-92	31749.65	15427.13	48.59
1992-93	34870.40	17437.45	50.04

ಅನುಬಂಧ - 2

TOTAL OVERDUES OF ST, MT, MT(C) LOANS ASON 30-6-1993

(Rs.in Lakhs)

Sl. No.	Name of the DCC Bank	Amount
1.	Bangalore	665.19
2.	Kolar	466.78
3..	Chitradurga	759.44
4.	Shimoga	952.45
5.	Tumkur	713.51
6.	Mysore	446.13
7.	Mandya	1213.05
8.	Hassan	542.18
9.	South Canara	85.78
10.	Kodagu	266.18
11.	Chikmagalore	555.16
12.	Belgaum	2941.29
13.	Bijapur	1532.87

14.	Dharwad	2205.82
15.	North Canara	454.56
16.	Gulbarga	793.62
17.	Bidar	641.43
18.	Raichur	766.67
19.	Bellary	1430.34
	APEX BANK	3129.68
	TOTAL	20562.63

ಅನುಬಂಧ - 3

KSCARD BANKS

Statement showing the Demand, Collection, Balance and Percentage for the past 11 years

(Rs. in Lakhs)

Sl. No.	Year	Demand	Collection	Balance	% of Collection
1.	1983-84	4570.59	2991.61	1578.98	65.45
2.	1984-85	4289.58	2457.09	1832.49	57.28
3.	1985-86	4141.57	2021.67	2119.90	48.81
4.	1986-87	6034.37	3333.19	2701.18	55.00
5.	1987-88	6185.90	4024.73	2161.17	65.00
6.	1988-89	7389.84	3631.90	3757.93	49.15
7.	1989-90	11192.22	2689.25	8502.97	24.03
8.	1990-91	16084.69	5498.85	10595.84	34.19
9.	1991-92	18725.18	7152.53	11573.65	38.20
10.	1992-93	21110.72	6809.37	14301.35	32.36
11.	1993-94 (Up to Nov.93)	16824.64	1264.79	15559.85	7.52

12.50 ಪಿ: ಎಂ.

ಶ್ರೀ ಪಾಟಾಳ್ ನಾಗರಾಜ್ : ಸಾಲ ಮನ್ನಾ ಮಾಡಿ ಎಂದು ನಾವು ಕೇಳುತ್ತಿಲ್ಲ. ಬಡ್ಡಿ, ಸುಸ್ತಿ ಬಡ್ಡಿ ಬಗ್ಗೆ ಕೇಳುತ್ತಿದ್ದೇವೆ. ಸಾಲ ವಸೂಲಾತಿಯನ್ನು

ಸುಸ್ತಿ ಬಡ್ಡಿಯನ್ನು ತಾವು ಮನ್ನಾ ಮಾಡಿದರೆ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಜೊತೆಗೆ ಹೆಚ್ಚಿನ ವಸೂಲಾತಿಯಾಗುತ್ತದೆಂದು ಹೇಳುತ್ತಿದ್ದೇವೆಯೇ ವಿನಾ ಅದನ್ನು ಬಿಟ್ಟು ಸಾಲ ವಸೂಲಾತಿ ಎಂದು ತಾವು ಬೇರೆ ರೂಪ ಕೊಡುತ್ತಿರುವುದು ಸರಿಯಲ್ಲವೆಂದು ಹೇಳುತ್ತಿದ್ದೇನೆ.

+ ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದಲ್ಲಿ ಅತಿವೃಷ್ಟಿ,ನೆರೆ ಹಾವಳಿ, ಭೂಕಂಪದಿಂದ ರೈತನ ಪರಿಸ್ಥಿತಿ ಹಾಳಾಗಿದೆ,. ಅದಕ್ಕೋಸ್ಕರ, ಕೇಂದ್ರ ಸರ್ಕಾರದಿಂದ ಪರಿಹಾರವಾಗಿ ಎರಡು ಕೋಟಿ ರೂಪಾಯಿಗಳನ್ನು ಕೇಳಿದ್ದೇವೆಂದು ಹೇಳಿದ್ದಾರೆ. ತಮ್ಮ ಸಂಪೂರ್ಣ ಬೆಳೆಯನ್ನು ನಾಶಪಡಿಸಿಕೊಂಡ ರೈತರ ಬಗ್ಗೆ ಮುಖ್ಯಮಂತ್ರಿಗಳು ಸಭೆ ಕರೆದು, ವಿರೋಧ ಪಕ್ಷದ ನಾಯಕರ ಜೊತೆ ಚರ್ಚೆ ಮಾಡಿದಾಗ ಸಾಲ ಮನ್ನಾ ಮಾಡುವುದಕ್ಕಾಗುವುದಿಲ್ಲ,ನೀವೆಲ್ಲರೂ ಸಹಕಾರ ಕೊಟ್ಟರೆ ಸಹಕಾರ ಸಂಘ ಅದರಲ್ಲೂ ಬೆಳೆ ಸಾಲದ ಬಗ್ಗೆ ಮತ್ತು ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡುವುದರ ಬಗ್ಗೆ ಪರಿಶೀಲಿಸಬಹುದು ಎಂದು ಭರವಸೆ ಕೊಟ್ಟರು. ಆ ಸಭೆಯಲ್ಲಿ ವಿರೋಧ ಪಕ್ಷದ ನಾಯಕರುಗಳಾದ, ಸಿಂಧ್ಯ, ದೇಶಪಾಂಡೆ, ನಾಣಯ್ಯ, ವಾಟಾಳ್ ನಾಗರಾಜ್ ಮತ್ತು ನಾವೆಲ್ಲಾ ಇದ್ದೆವು. ಆ ಸಭೆಯಲ್ಲಿ ಚರ್ಚೆಯಾಗಿ ಒಂದು ಭರವಸೆಯನ್ನು ಸಹ ಕೊಟ್ಟು ಸದನದಲ್ಲಿ ಇದರ ಬಗ್ಗೆ ಒಂದು ಪ್ರಕಟಣೆ ಮಾಡುತ್ತೇವೆಂದು ಹೇಳಿದರು. ಆದರೆ ಈಗ ಬೇರೆ ಅಂಕೆ - ಅಂಶಗಳನ್ನು ಕೊಡುತ್ತಿದ್ದಾರೆ. ಸಾಲ ವಸೂಲಿ ಆಗಿಲ್ಲವೆಂದು ಅವರೇ ಹೇಳುತ್ತಿದ್ದಾರೆ. ಸಾಲ ವಸೂಲಾತಿ ಆಗಬೇಕೆಂದಿದ್ದರೆ ಜನತಾ ಪಕ್ಷ ಅಧಿಕಾರದಲ್ಲಿದ್ದಾಗ ಯಾವ ರೀತಿ ಪರಿಹಾರ ಕೊಟ್ಟರೋ ಅದೇ ರೀತಿ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಿ ಬೆಳೆ ಸಾಲದ ಅಸಲನ್ನು ಕಟ್ಟಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ಮುಂದೆ ರೈತರಿಗೆ ಹೆಚ್ಚಿನ ಸಾಲ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇವೊತ್ತು ರೈತನ ಬೆಳೆ ಸಂಪೂರ್ಣ ನಾಶವಾಗಿ ಬಿತ್ತನೆ ಬೀಜ ಕೂಡ ಕೈಗೆ ಸಿಗದಿರುವಂಥ ಸಂದರ್ಭದಲ್ಲಿ ಬಲಾತ್ಕಾರವಾಗಿ ಅವರಿಂದ ಸಾಲ ವಸೂಲಿಯಾಗುತ್ತಿದೆ. ಅಸಿಸ್ಟೆಂಟ್ ರಿಜಿಸ್ಟ್ರಾರ್ ರವರು ಕೋರ್ಟಿನಲ್ಲಿ ಕೇಸ್ ಹಾಕಿದ್ದು ಈಗ ರೈತ ತೆಗೆದುಕೊಂಡಿದ್ದಂಥ ಹತ್ತು ಸಾವಿರ ರೂಪಾಯಿಗಳಿಗೆ ಹತ್ತು ಸಾವಿರ ರೂಪಾಯಿ ಬಡ್ಡಿಯಾಗಿದೆ. ಈ ರೀತಿ ಇದು ನೆನೆಗುದಿಗೆ ಬಿದ್ದಿರುವಂಥ ಸಂದರ್ಭದಲ್ಲಿ, ಹಣಕಾಸಿನ ಪರಿಸ್ಥಿತಿ ಹದಗೆಟ್ಟಾಗ ರೈತರ ಸಾಲ ಮನ್ನಾ ಮಾಡಿ ಎಂದು ನಾವು ಕೇಳುತ್ತಿಲ್ಲ. ಇದು ನಿಮ್ಮ ಹೇಳಿಕೆಯಲ್ಲಿದೆ. ನಾವು ಬೆಳೆ ಸಾಲದ ಬಗ್ಗೆ ಕೇಳುತ್ತಿದ್ದೇವೆ. ರೈತನ ಸಂಪೂರ್ಣ ಬೆಳೆ ನಾಶವಾಗಿರುವಂಥ ಸಂದರ್ಭದಲ್ಲಿ ಕೊನೇ ಪಕ್ಷ ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿ ಅಸಲನ್ನು ಸಹಕಾರ ಸಂಘಗಳು ವಾಪಸ್ ಕಟ್ಟಿ ಆತ ಉಳಿಯುವುದಕ್ಕೆ ಅನುಕೂಲ ಮಾಡಿ ಕೊಡಬೇಕೆಂದು ತಮ್ಮಮೂಲಕ ವಿನಂತಿಸಿಕೊಳ್ಳುತ್ತಿದ್ದೇನೆ. ಇದಕ್ಕೆ ಈ ಮೊದಲು ಮುಖ್ಯಮಂತ್ರಿಗಳು ಸಹ ಒಪ್ಪಿಕೊಂಡಿದ್ದರು. ಈಗ ಸಂಬಂಧಪಟ್ಟ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಬಲಾತ್ಕಾರದ ವಸೂಲಾತಿ ಏನು ನಡೆಯುತ್ತಿದೆ, ರೈತನ ಮನೆ-ಮಠವನ್ನು ಜಪ್ತಿ ಮಾಡುತ್ತಿದ್ದಾರೆ. ಬಣವೆಗಳಿಗೆ ಹೋಗಿ ಬಣವೆಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದಾರೆ. ಮತ್ತು ಸರ್ವೇಯರ್ ಡಿಪಾರ್ಟ್ಮೆಂಟ್‌ನಿಂದ ಇವುಗಳನ್ನು ಹರಾಜು ಹಾಕಿಸುತ್ತಿದ್ದಾರೆ. ಇದರಿಂದಾಗಿ ರೈತನ ಪರಿಸ್ಥಿತಿಯಂತೂ ದಯನೀಯವಾಗಿದೆ. ಆದುದರಿಂದ ಈ ತಕ್ಷಣ ಬಲಾತ್ಕಾರದ ಸಾಲ ವಸೂಲಾತಿ ಏನು ನಡೆಯುತ್ತಿದೆ, ಅದಕ್ಕೆ ತಡೆಯಾಜ್ಞೆ ಕೊಡಬೇಕು ಮತ್ತು ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿ ರೈತನ ಉಳಿವಿಗೆ ಅನುಕೂಲ ಮಾಡಿಕೊಡಬೇಕೆಂದು ನನ್ನ ವಿನಂತಿ. ಇದಕ್ಕೆ ಈ ಸದನದಲ್ಲಿರುವಂಥ ಯಾವುದೇ ಸದಸ್ಯರ ವಿರೋಧವಿಲ್ಲ. ನಾವು ಮುಖ್ಯ ಮಂತ್ರಿಗಳ ಕೊಠಡಿಯಲ್ಲಿ ಕ... ಮಾತನಾಡಿದ್ದೇವೆ.ಮಾನ್ಯ ಸಚಿವರು ಇದರ ಬಗ್ಗೆ ತಮ್ಮ ಉತ್ತರದಲ್ಲಿ ಸ್ಪ...ಗಿ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರು ತಮ್ಮ ಹೇಳಿಕೆಯಲ್ಲಿ ಸಾಲ ಎಂದು ಹೇಳುತ್ತಿದ್ದಾರೆಯೇ ವಿನಾ ಬಡ್ಡಿ, ಸುಸ್ತಿ ಬಡ್ಡಿ ಬಗ್ಗೆ ಹೇಳುತ್ತಿಲ್ಲ. ಆದುದರಿಂದ, ನಾನು ನೇರವಾಗಿ ಕೇಳುತ್ತಿದ್ದೇನೆ. ಮುಖ್ಯಮಂತ್ರಿಗಳು ನಮ್ಮನ್ನು ಕರೆದು ಮಾತುಕತೆಯಾಡಿದ್ದು ಏನು? ಅವರು ನಮಗೆ ಕೊಟ್ಟಂಥ ಭರವಸೆ ಏನು? ಅವರು ಕೊಟ್ಟಂಥ ಭರವಸೆ ಇವೊತ್ತು ಹುಸಿಯಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಎರಡು ಬಾರಿ ಸಭೆ ಕರೆದು ಈ ಬಗ್ಗೆ ನಮ್ಮ ಜೊತೆ ಚರ್ಚಿಸಿದ್ದರು. ಆಗ what is the quantum you are going to give? ಎಂದು ಕೇಳಿದೆವು ನೀವು ಎಷ್ಟು ಕೊಡುತ್ತೀರಿ? ಹೇಳಿ ಎಂದೆವು. 5 ಕೋಟಿ, 10 ಕೋಟಿ, 20 ಕೋಟಿ ಎಷ್ಟು ಕೊಡುತ್ತೀರಿ? ಹೇಳಿ, ನಾವು ಸಜೆಸ್ಟ್ ಮಾಡುತ್ತೇವೆ ಮತ್ತು ರಾಜಕೀಯವಾಗಿ ಇದರ ಅನುಕೂಲವನ್ನು ನೀವೇ ತೆಗೆದುಕೊಳ್ಳಿ ಎಂದೆವು, ಆಯಿತು. ಎಂದು ಹೇಳಿದರು. ಅವರು ಎಲ್ಲಾದಕ್ಕೂ ಆಯಿತು ಎಂದು ಹೇಳುತ್ತಾರೆ, ಆದರೆ ಇಲ್ಲಿ ಒಂದೂ ಆಗುವುದಿಲ್ಲ. ಕೊಡುವುದಕ್ಕಾಗುವುದಿಲ್ಲವೆಂದು ನೀವು ಖಚಿತವಾಗಿ ಹೇಳಿದರೆ ನಿಮಗೆ ನಾವೇನು ಮಾಡುವುದಕ್ಕಾಗುತ್ತದೆ? ರೈತರ ಮನೆಗಳನ್ನು ಜಪ್ತಿ ಮಾಡಿಸುತ್ತಿದ್ದೀರಿ. ಇದನ್ನು ಹೊಸದಾಗಿ ಶುರು ಮಾಡಿದ್ದಾರೆ. ರೈತನ ಮನೆಗಳನ್ನು ಜಪ್ತಿಮಾಡುವುದರಲ್ಲಿ ನಿಪುಣರು. ಕಾರವಾರ ಜಿಲ್ಲೆಯಲ್ಲಿ ರೈತರ ಬಣವೆಗಳನ್ನು ಮುಟ್ಟು ಗೋಲು ಹಾಕಿಕೊಳ್ಳುತ್ತಿದ್ದಾರೆ, ನಾಚಿಕೆಯಾಗಬೇಕು. ನೀವು ರೈತರ ಪರವಾಗಿದ್ದೇವೆಂದು ಹೇಳುತ್ತೀರಲ್ಲಾ. ನಿಮಗೆ ನಾಚಿಕೆಯಾಗಬೇಕು. ತಾವು ಸ್ಪಷ್ಟವಾಗಿ ಹೇಳಿ. ನಮ್ಮ ಹತ್ತಿರ ದುಡ್ಡಿಲ್ಲ,ನಾವು ದುಡ್ಡು ಕೊಡುವುದಕ್ಕಾಗುವುದಿಲ್ಲವೆಂದು ಏಕೆ ಹೇಳಬಾರದು? ಅಧ್ಯಕ್ಷರೆ, ನಮ್ಮನ್ನೆಲ್ಲಾ ಇನ್‌ವಾಲ್ವ್ ಮಾಡುವುದಕ್ಕೆ ಇವರು ಹೋಗಿದ್ದರು. ವಿರೋಧ ಪಕ್ಷದವರು ಒಪ್ಪಿಕೊಂಡಿದ್ದಾರೆ, ಆದ್ದರಿಂದ, ನಾವು ಇಷ್ಟೇ ಮಾಡುವುದು ಎಂದು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಕೈಯಲ್ಲಿ ಏನೂ ಆಗುವುದಿಲ್ಲ.. ಪಾಪ ದುಡ್ಡು ಕೊಡದೇ ಇದ್ದರೆ ನೀವೇನು ಮಾಡುತ್ತೀರಿ? ಆದುದರಿಂದ, ಮುಖ್ಯಮಂತ್ರಿಗಳಿಂದ ನಾವು ಅಪೇಕ್ಷಿಸುವಂಥ ಉತ್ತರವೇನೆಂದರೆ, ನೀವು ದುಡ್ಡು ಕೊಡಬೇಕು.

ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ) : ಮಾನ್ಯ ಅಧ್ಯಕ್ಷರೆ ಇದು ನಮ್ಮ ರಾಜಕೀಯ ಭಾಷಣ. 1983ನೇ ಇಸವಿಯಿಂದಲೂ ರೈತರ ಸಾಲ ಮತ್ತು ಬಡ್ಡಿ ಮನ್ನಾ ಮಾಡುವುದಾಗಿ ಎಲ್ಲಾ ಪಕ್ಷದವರೂ ಇದೇ ರೀತಿ ಹೇಳುತ್ತಾರೆ. ಇದು ಎಲ್ಲಾ ಪಕ್ಷಗಳಿಗೂ ಸಂಬಂಧಪಟ್ಟದ್ದಾಗಿದೆ. ಒಂದೊಂದು ವೇಳೆ ನಾವು ಅಸಲನ್ನು ಮನ್ನಾ ಮಾಡುವುದಕ್ಕೆ ಆಗದಿದ್ದರೂ ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ,ಸಿದ್ಧಾಪುರ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಮಳೆ ಬಂದು ಅನಾಹುತವಾಗಿ ರೈತರು ತಮ್ಮ ಹತ್ತಿರ ಭತ್ತದ ಒಂದೊಂದು ಚೀಲ ಇಟ್ಟುಕೊಂಡಿದ್ದರೂ ಅಧಿಕಾರಿಗಳು ಅದಕ್ಕೆ ಸೀಲ್ ಹಾಕಿ ಅವರು ಅದನ್ನು ಮುಟ್ಟದಂತೆ ಮಾಡಿದ್ದಾರೆ. ತಮ್ಮೆಲ್ಲಾ ಬೆಳೆ ನಾಶವಾಗಿ ನೊಂದು ಕುಳಿತ ರೈತನಿಗೆ ಮತ್ತೆ ಗಾಯದ ಮೇಲೆ ಉಪ್ಪು ಹಾಕಿ ಉರಿಯುವಂತೆ ನೋವು ತರುತ್ತಿದ್ದಾರೆ. ಆದುದರಿಂದ, ಸರ್ಕಾರ ಅಸಲನ್ನು ದೀರ್ಘಾವಧಿ ಸಾಲವನ್ನಾಗಿ ಮಾಡಿ ಅವರಿಂದ ವಸೂಲು ಮಾಡಲಿ. ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದರೆ ನಾವು ರೈತರಿಗೆ ಕೊಟ್ಟಂಥ ಭರವಸೆಯನ್ನು ಈಡೇರಿಸಬಹುದೆಂಬ ಭಾವನೆ ನನ್ನದಾಗಿದೆ. ಸರ್ಕಾರ ಯಾವ್ಯಾವುದಕ್ಕೋ ದುಡ್ಡು ಖರ್ಚು ಮಾಡುತ್ತದೆ. ಆದ್ದರಿಂದ ಈ ರೈತರ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡಬೇಕೆಂಬುದರ ಬಗ್ಗೆ ನನ್ನದೂ ಒತ್ತಾಯವಿದೆ.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೇ, ಸುಮಾರು 130 ಕೋಟಿ ರೂಪಾಯಿಗಳ ಬಡ್ಡಿ ಮತ್ತು ಸುಸ್ತಿ ಬಡ್ಡಿಯಾಗುತ್ತದೆ. ರೈತರಿಗೆ ಬಡ್ಡಿ

ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದರೆ ಸುಮಾರು 130 ಕೋಟಿ ರೂಪಾಯಿಗಳಾಗುತ್ತದೆ. ಈಗ ಬಡ್ಡಿ ಮತ್ತು ಸುಸ್ತಿ ಬಡ್ಡಿ ಹಾಕುತ್ತಾರೆ. ಆಮೇಲೆ ರೆಕವರಿಗೆ ಹೋಗುತ್ತಾರೆ. ಹೀಗೆ ನಾನಾ ರೀತಿಯಲ್ಲಿ ಹಣವನ್ನು ಹೆಚ್ಚು ಮಾಡುತ್ತಾ ಲಕ್ಷಾಂತರ ಜನರು ತಮ್ಮ ಆಸ್ತಿಯನ್ನು ಕಳೆದುಕೊಳ್ಳುವಂತಹ ಸಂದರ್ಭ ಬಂದಿದೆ. ಈಗ ಒಂದೊಂದು ಸಾರಿ ಡಿಎ ಹೆಚ್ಚು ಮಾಡಿದಾಗ 180-190ಕೋಟಿ ರೂಪಾಯಿಗಳನ್ನು ಅಧಿಕಾರಿಗಳಿಗೆ ಡಿ.ಎ. ರೂಪದಲ್ಲಿ ಕೊಡುತ್ತಾರೆ. ಅದರ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಯಾರು ಈ ದೇಶಕ್ಕಾಗಿ ಹಗಲು ರಾತ್ರಿ ದುಡಿಯುತ್ತಾರೊ, ಈ ದೇಶಕ್ಕಾಗಿ ತಮ್ಮ ಸರ್ವಸ್ವವನ್ನೂ ಕೊಡುವಂತಹ ಜನರ ಬಗ್ಗೆ ಸರ್ಕಾರ ಏಕೆ ಇಷ್ಟೊಂದು ನಿಕೃಷ್ಟವಾಗಿದೆ ಎಂಬುದು ಅರ್ಥವಾಗುತ್ತಿಲ್ಲ. ತಮ್ಮನ್ನು ಒತ್ತಾಯಪೂರ್ವಕವಾಗಿ ಕೇಳುತ್ತೇನೆ. ಒಂದು ಸಾರಿ 130 ಕೋಟಿ ರೂಪಾಯಿಗಳನ್ನು ಕೊಟ್ಟರೆ ಸುಮಾರು ಶೇ. 80ರಷ್ಟು ರೈತರು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತಾರೆ. ದುಡ್ಡನ್ನು ಯಾವುಯಾವುದಕ್ಕೊ ಖರ್ಚು ಮಾಡಿಕೊಂಡು ಈಗ ಅಸಹಾಯರಾಗಿದ್ದಾರೆ. ನೀವು ಸಾಲ ಮನ್ನಾ ಮಾಡದಿದ್ದರೂ ಚಿಂತೆ ಇಲ್ಲ. ಕೊನೆ ಪಕ್ಷ ಬಡ್ಡಿ ಮನ್ನಾ ಮಾಡಬೇಕೆಂದು ಸರ್ಕಾರವನ್ನು ಅವರು ಕೇಳುವಾಗ ಅವರ ಮಾತಿಗೆ ನೀವು ಕಿವಿ ಕೊಡದಿದ್ದರೆ, ಅವರ ಶಾಪಕ್ಕೆ ನಾವು ಗುರಿಯಾಗಬೇಕಾಗುತ್ತದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬಡವರ ಬಗ್ಗೆ ಅನುಕಂಪ ಹೆಚ್ಚು ವ್ಯಕ್ತ ಮಾಡುತ್ತಾರೆ. ದಯಮಾಡಿ ಕೇವಲ 130 ಕೋಟಿ ರೂಪಾಯಿಗಳ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿ ಇಡೀ ರೈತ ಜನಾಂಗಕ್ಕೆ, ಅವರ ಉಳಿಕೆಗೆ ಸಹಾಯ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ. ಮಾನ್ಯ ಸಹಕಾರ ಮಂತ್ರಿಗಳು ಈ ರೈತ ಸಮುದಾಯವನ್ನು ಉಳಿಸುವ ದೃಷ್ಟಿಯಿಂದ ಇದನ್ನು ಕ್ಯಾಬಿನೆಟ್ನಲ್ಲಿ ತಂದು ಮಾನ್ಯ ಮುಖ್ಯಮಂತ್ರಿಗಳ ಮನಹೊಲಿಸಬೇಕು ಹಾಗೂ ಯಾರ ಮಾತಿಗೂ ಕಿವಿಕೊಡದೆ ತಕ್ಷಣ ಇನ್ನು 8-10 ದಿವಸಗಳಲ್ಲಿ ಇದನ್ನು ಆರ್ಡರ್ ಮಾಡಿಸಿ ತಾವು ಈ ದೇಶದ ರೈತರ ಹಿತೈಷಿಗಳಾಗಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ನಿಲುವಳಿ ಸೂಚನೆ ರೂಪದಲ್ಲಿ ನಾವು ಪ್ರಸ್ತಾಪ ಮಾಡಿದ್ದೆವು. ಸರ್ಕಾರ ಸ್ಟೇಟ್ಮೆಂಟ್ ಮಾಡುತ್ತದೆಂದು ಹೇಳಿದ್ದಕ್ಕೆ ನಾವು ಬಾಯಿಮುಚ್ಚಿಕೊಂಡು ಕುಳಿತೆವು. ಕೊನೆಯ ಪಕ್ಷ ಸದನದ ಅಭಿಪ್ರಾಯ ತೆಗೆದುಕೊಳ್ಳಿ. ರೈತರ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡುವ ಬಗ್ಗೆ ಇಡೀ ಸದನದ ಅಭಿಪ್ರಾಯವನ್ನು ತೆಗೆದುಕೊಂಡು ಚರ್ಚೆಗೆ ಅವಕಾಶ ಮಾಡಿಕೊಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ದೇಶಕ್ಕೆ ಅನ್ನ ಕೊಡುವಂತಹ ರೈತರ ಮನೆಗಳನ್ನು ಜಪ್ತಿ ಮಾಡುವಂತಹುದನ್ನು ನಿಲ್ಲಿಸಬೇಕು. ಅನ್ನ ಕೊಡುವವನ ಬಾಯಿಗೆ ಮಣ್ಣು ಹಾಕುವಂತಹ ಕೆಲಸ ನಿಲ್ಲಬೇಕು. ಒಡೆದ ಕೆರೆಗಳ ರಿಪೇರಿಯಾಗಿಲ್ಲ. ರಸ್ತೆಗಳು ರಿಪೇರಿಯಾಗಿಲ್ಲ, ಭೂಕಂಪವಾಗಿದೆ. ಈ ಬಗ್ಗೆ ಸದನದಲ್ಲಿ ನಿರ್ಣಯವಾಗಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಪಾತ್ರೆಗಳನ್ನು ಹರಾಜು ಹಾಕುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಸಹಕಾರ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿ. ಎಲ್ಲಾ ವಿರೋಧಪಕ್ಷದ ನಾಯಕರ ಅಭಿಪ್ರಾಯವನ್ನು ತೆಗೆದುಕೊಂಡಿದ್ದಾರೆ. ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಿ, ಸಾಲ ಮನ್ನಾ ಮಾಡಿ ಎಂದು ಕೇಳುವುದಿಲ್ಲ. ಸದನದಲ್ಲಿ ಚರ್ಚೆಯಾಗುವುದು ಬೇಡ; ಎಂದು ಹೇಳಿ ತಮ್ಮ ಕೊಠಡಿಯಲ್ಲಿ ಅಧಿಕಾರಿಗಳ

ಜೊತೆಯಲ್ಲಿ ಚರ್ಚೆ ಮಾಡಿಯಾದ ಮೇಲೆ ಘೋಷಣೆ ಮಾಡುತ್ತೇವೆಂದು ಹೇಳಿ ಇನ್ನೂ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ಮನ್ನಾ ಮಾಡುವ ಘೋಷಣೆ ಮಾಡಿಲ್ಲ. ನಾವು ಎಲ್ಲಾ ಸಾಲಗಳನ್ನು ಮನ್ನಾ ಮಾಡಿ ಎಂದು ಕೇಳುತ್ತಾ ಇಲ್ಲ. ರೈತರು ಕಂಗಾಲಾಗಿದ್ದಾರೆ. ಕೊನೆಯ ಪಕ್ಷ ಬಡ್ಡಿ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಈ ಸದನದ ಎಲ್ಲಾ 224 ಜನ ಸದಸ್ಯರು ಹೇಳಿದ್ದಾರೆ. ಇದರಲ್ಲಿ ರಾಜಕಾರಣವಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಮುಖ್ಯಮಂತ್ರಿಗಳು ನಮ್ಮೆಲ್ಲಾ ಕರೆಸಿ ಮಾತನಾಡಿದ್ದಾರೆ. ಅವತ್ತು ತಾವು ಏನು ಭರವಸೆ ಕೊಟ್ಟಿದ್ದಿರಿ ಎಂದರೆ ಬಡ್ಡಿ ಸುಸ್ತಿಬಡ್ಡಿಯನ್ನು ವಜಾ ಮಾಡುವ ಬಗ್ಗೆ ಒಂದು ಚಿಂತನೆ ಮಾಡೋಣ ಎಂದು ಹೇಳಿದಿರಿ. ಅದನ್ನು ಹೇಳಿ ಎಷ್ಟು ದಿವಸವಾಯಿತು. ಈ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ. ಇದಕ್ಕೆ ನೇರವಾಗಿ ನೀವು ಉತ್ತರ ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಭಿವೃದ್ಧಿ ಕಾರ್ಯಕ್ರಮಗಳನ್ನು ಬೇಕಾದರೆ ಸ್ಥಗಿತ ಮಾಡೋಣ. ಕೆಲವು ಅನಧಿಕೃತ ಕಾರ್ಯಕ್ರಮಗಳನ್ನು ರದ್ದು ಮಾಡಿ, ನಮ್ಮೆಲ್ಲರ ವಿಶ್ವಾಸವನ್ನು ತೆಗೆದುಕೊಂಡು ಈ 130 ಕೋಟಿ ರೂಪಾಯಿಗಳ ಬಡ್ಡಿ, ಸುಸ್ತಿಬಡ್ಡಿ ಮನ್ನಾ ಮಾಡಿ. ಅವರಿಗೆ ಪರಿಹಾರ ಕೊಡುವ ವ್ಯವಸ್ಥೆ ಮೊದಲು ಮಾಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಎಕ್ಸೈಜ್ನಲ್ಲಿ ಬರಬೇಕಾದಂತಹ ಹಣವನ್ನು ವಸೂಲು ಮಾಡಿ ಎಂದರೆ ರೈತರ ಬಾಕಿ ವಸೂಲಿಗೆ ಹೊರಟಿದ್ದಾರೆ. ಇವತ್ತು ರೈತರ ಮನೆಗಳು ಜಪ್ತಿಯಾಗುತ್ತಿವೆ. ಅವರು ಅತಿವೃಷ್ಟಿ ಮತ್ತು ಭೂಕಂಪದಿಂದ ನೊಂದಿದ್ದಾರೆ.

ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಆಡಳಿತ ಪಕ್ಷದವರೂ ಸಹ ಇದರ ಬಗ್ಗೆ ಹೇಳಿದ್ದಾರೆ. ಈ ಸದನದಲ್ಲಿ ಇದರ ಬಗ್ಗೆ ಒಂದೇ ಅಭಿಪ್ರಾಯ ವ್ಯಕ್ತವಾಗುತ್ತಿದೆ. ರೈತರು ಕೊಡಬೇಕಾಗಿರತಕ್ಕಂತಹ ಸಾಲ ಏನು ಇದೆ, ಆ ಸಾಲದ ಮನ್ನಾ ಬಗ್ಗೆ ನಾವು ಕೇಳಿದ್ದೇವೆ. ನಾವು ಬೇರೆ ಏನೂ ಕೇಳುತ್ತಿಲ್ಲ. ಅವರು ಇದರ ಬಗ್ಗೆ ಒಪ್ಪಿದ್ದಾರೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಈ ಸದನದ ಅಭಿಪ್ರಾಯಕ್ಕೆ ಮಣಿದು ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಹೇಳಲಿ. ರೈತರಿಂದ ಬರಬೇಕಾಗಿರತಕ್ಕಂತಹ ಸಾಲ ಏನು ಇದೆ ಅದಕ್ಕೆ ತಾವು ಅವರಿಂದ ಹೇಳಿಸಿ. ಸ್ವಾಮಿ, ಯಾರ್ಯಾರನ್ನೋ ನಂಬಿದ್ದು ಆಯಿತು. ಇವತ್ತು ರೈತರು ನಂಬಿ ಮನೆಯಲ್ಲಿ ಇದ್ದಂತಹ ಕುರಿ, ಹಸ ಮಾರಾಟ ಮಾಡಿ ಬೇರೆ ಬೇರೆ ಯಾವ್ಯಾವುದಕ್ಕೋ ಹಣ ತೊಡಗಿಸಿದ್ದಾರೆ. ಇವತ್ತು ಅವರ ಕೈಯಲ್ಲಿ ಹಣವೂ ಕೂಡ ಇಲ್ಲ. ಮತ್ತು ನಿಮ್ಮ ಕೈಯಲ್ಲಿ ವಸೂಲು ಮಾಡುವುದಕ್ಕೂ ಆಗುವುದಿಲ್ಲ. ನೀವು ಅವರ ಸಾಲವನ್ನು ಅಂಕಿಅಂಶಗಳಲ್ಲಿ ತೋರಿಸುತ್ತಿದ್ದೀರಿ. ಮಾನ್ಯ ಸಹಕಾರ ಸಚಿವರು ಓದಿದಂತಹ ಅಂಕಿ ಅಂಶಗಳೇ ತೋರಿಸುತ್ತಿದೆ. ಆ ಹಣ ನಿಮ್ಮಿಂದ ವಸೂಲು ಮಾಡುವುದಕ್ಕೆ ಆಗುವುದಿಲ್ಲ. ಚುನಾವಣೆ ಬೇರೆ ಹತ್ತಿರ ಬರುತ್ತಿದೆ. ಜನರೂ ಕೂಡ ನಮಗಿಂತ ಬುದ್ಧಿವಂತರೂ ಆಗಿದ್ದಾರೆ. ಮುಂದೆ ಹೇಗೆ ಇದ್ದರೂ ಕೂಡ ಚುನಾವಣೆ ಬರುತ್ತಿದೆ, ಮುಂದೆ ಅಧಿಕಾರಕ್ಕೆ ಬರತಕ್ಕಂತಹ ಪಕ್ಷದವರು ಪೂರ್ತಿಯಾಗಿ ಸಾಲವನ್ನೇ ವಜಾ ಮಾಡಿದರೂ ಮಾಡಬಹುದು ಎನ್ನುವಂತಹ ನಂಬಿಕೆ ಇಟ್ಟುಕೊಂಡಿದ್ದಾರೆ. ಅದಕ್ಕೆಲ್ಲಾ ಅವಕಾಶ ಬೇಡ. ಸ್ಪಷ್ಟವಾಗಿ ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ, ಯಾವುದೇ ರೀತಿಯಾದಂತಹ ಸಾಲ ವಜಾ ಮಾಡುವುದಕ್ಕೆ ......

ಶ್ರೀ ಬಿ.ಎಸ್. ಯಡಿಯೂರಪ್ಪ : ಸಹಕಾರ ಸಂಘಗಳು ಉಳಿಯಬೇಕು, ರೈತರೂ ಉಳಿಯಬೇಕು, ಹಣಕಾಸಿನ ಪರಿಸ್ಥಿತಿಯೂ ಅನುಕೂಲವಾಗಬೇಕು. 130 ಕೋಟಿ

ರೂಪಾಯಿ ಇದೆ, ಬಡ್ಡಿ ಸುಸ್ತಿ ಬಡ್ಡಿ ಮನ್ನಾ ಮಾಡುವುದು. ನಾವೆಲ್ಲ ಏತಕ್ಕೆ ಇದ್ದೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :ಒಂದು ಒಳ್ಳೆಯ ಹೆಸರು ನೀವು ತೆಗೆದುಕೊಳ್ಳಿ. ಇಡೀ ರೈತ ಸಮೂಹಕ್ಕೆ ಸಹಾಯ ಮಾಡಿದಂಥ ಒಳ್ಳೆಯ ಹೆಸರು ನೀವು ತೆಗೆದುಕೊಳ್ಳಿ. ಅಜೀರ್ಣ ಆಗುವಷ್ಟು ಬಹುಮತ ಕೊಟ್ಟಿರುವಂತಹವರಿಗೆ ಒಂದು ಸ್ವಲ್ಪ ದಯೆ ತೋರಿಸಿ. ಕೊನೇಪಕ್ಷ ಬಡ್ಡಿ. ಸುಸ್ತಿಬಡ್ಡಿ ಮನ್ನಾ ಮಾಡುವಂತಹ ಒಂದು ಧೈರ್ಯ ತೋರಿಸಿಬಿಡಿ.

ಶ್ರೀ ಸಿ. ಬೈರೇಗೌಡ : ಇವರಿಗೆ ಎಲ್ಲಾ ರೀತಿಯಾದಂತಹ ಮನವಿ ಮಾಡಿದ್ದೇವೆ ಹಾಗೂ ಸಾಕಷ್ಟು ಓಲೈಸಿದ್ದೇವೆ. ಇವರ ಮನಸ್ಸನ್ನು ಒಲಿಸತಕ್ಕಂಥಾದ್ದಕ್ಕೆ ಎಲ್ಲಾ ರೀತಿಯ ಸರ್ವ ಪ್ರಯತ್ನವನ್ನು ಕೂಡ ಮಾಡಿದ್ದೇವೆ. ಸರ್ಕಾರದ ಪರವಾಗಿ ಯಾರದರೂ ಉತ್ತರ ಹೇಳಲಿ.

(ಗೊಂದಲ)

ಶ್ರೀ ವಾಟಾಳ್ನಾಗರಾಜ್ : ಬಡ್ಡಿ ಸುಸ್ತಿ ಬಡ್ಡಿ ವಜಾ ಮಾಡಿದ್ದೇವೆ ಎಂದು ತಾವು ನೇರವಾಗಿ ಹೇಳಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :ಮುಖ್ಯಮಂತ್ರಿಗಳು ಹೇಳಲಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಏನೋ ಒಂದು ಹೇಳುವುದಕ್ಕೆ ಬಂದಿಲ್ಲ. 138 ಕೋಟಿ ರೂಪಾಯಿ ಅವರು ಮಂಜೂರು ಮಾಡುವುದು ಏನು ಇತ್ತು. ಅದು ಸಿಗುವುದಿದ್ದರೆ ನನಗೂ ಸಂತೋಷ, ನಿಮಗೂ ಸಂತೋಷ, ಎಲ್ಲರಿಗೂ ಸಂತೋಷವಾಗುತ್ತದೆ. ಆದರೆ, ನಾವು ಸ್ವಲ್ಪ ವಾಸ್ತವಾಂಶ ತಿಳಿದುಕೊಳ್ಳೋಣ, ತಿಳಿದುಕೊಂಡ ಮೇಲೆ ನೀವು ಏನು ನಿರ್ಣಯ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕೆ ಸ್ವಾಮಿ ಸುಮ್ಮನೆ ಇರಬೇಕು. ಬೆಳೆ ನಷ್ಟವಾಗಿದ್ದರೆ, ಅತಿವೃಷ್ಟಿ ನೆರೆ ಹಾವಳಿ ಆದರೆ ರೈತ ಏನು ಮಾಡಬೇಕು. ಅವರ ಮನೆಮಠ ಹಾಳು ಮಾಡುತ್ತಿದ್ದೀರಿ.

ಶ್ರೀ ಸಿ. ಬೈರೈಗೌಡ : ಸಾಲ ವಜಾ ಮಾಡಿ ಎಂದು ಯಾರೂ ಕೇಳುತ್ತಿಲ್ಲ.

ಶ್ರೀ ವಾಟಾಳ್‌ನಾಗರಾಜ್ : ಸ್ವಾಮಿ ಸಾಲ ವಜಾ ಮಾಡಿ ಎಂದು ಏನು ಕೇಳಲ್ಲ. ಬಡ್ಡಿ ಮತ್ತು ಸುಸ್ತಿ ಬಡ್ಡಿ ವಜಾ ಮಾಡಿ ಎಂದು ಕೇಳುತ್ತಿದ್ದೇವೆ. ಮನೆಗಳು ಹರಾಜು ಆಗುತ್ತಿರುವುದನ್ನು ನಿಲ್ಲಿಸಿ ಎಂದು ಹೇಳಿದ್ದೇವೆ. ಈ ಅಧಿಕಾರಿಗಳು ಮನೆಗಳಿಗೆ ನುಗ್ಗುವುದನ್ನು ನಿಲ್ಲಿಸಿ ಎಂದು ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಈ ರೀತಿ ಕೂಗಾಡುವುದನ್ನು ತಾವು ದಯವಿಟ್ಟು ನಿಲ್ಲಿಸಬೇಕು. ಒಬ್ಬೊಬ್ಬರು ಒಮ್ಮೊಮ್ಮೆ ಮಾತನಾಡಬಹುದು. ಎಲ್ಲಾ ಒಟ್ಟಿಗೆ ಮಾತನಾಡಿದರೆ ಹೇಗೆ?,

(ಗೊಂದಲ)

ಶ್ರೀ ಸಿ. ಬೈರೇಗೌಡ : ನಾವೇನು ಇಲ್ಲಿ ಕೂಗಾಡುತ್ತಾ ಇಲ್ಲ, ಆದರೆ ಇನ್ನು ಮೇಲೆ ಕೂಗಾಡಬೇಕಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹೇಳುತ್ತಿರತಕ್ಕಂತಹ ಮಾತು ಸರಿ ಅಲ್ಲ. ನಾವು ಇಲ್ಲಿ ಬಂದಿರುವುದು ಕೂಗಾಡುವುದಕ್ಕೆ ಅಲ್ಲ, ಈ ಸಭೆ ಇರುವುದು ಕೂಗಾಡುವುದಕ್ಕೆ ಅಲ್ಲ, ಇದು ಇರುವುದು ಮಾತನಾಡುವುದಕ್ಕೆ. ಈ ಸಭೆಯಲ್ಲಿ ನೇರವಾಗಿ ನಾನು ಮುಖ್ಯಮಂತ್ರಿಗಳಲ್ಲಿ ಮನವಿಯನ್ನು ಮಾಡುತ್ತಿದ್ದೇನೆ. ಅವರು ನಮ್ಮನ್ನು ಕರೆಸಿ ಮಾತನಾಡಿ ಏನು ಭರವಸೆ ಕೊಟ್ಟರು, ಅದನ್ನು ಜಾರಿ ಮಾಡಬೇಕು ಎಂದು ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಒಂದು ಸಲಹೆ ಕೊಡುತ್ತೇನೆ.

ಅಧ್ಯಕ್ಷರು : ಸಲಹೆ ಬೇಡ, ಅವರಿಗೆ ಗೊತ್ತಾಗಿದೆ, ತಾವು ಈಗ ಹೇಳಿದ್ದೀರಿ.

ಶ್ರೀ ಕೆ.ಹೆಚ್. ಹನುಮೇಗೌಡ : ನಮ್ಮ ರಾಜ್ಯದಲ್ಲಿ 20 ಜಿಲ್ಲೆಗಳಿವೆ. ನೂರಾರು ಕೋಟಿ ರೂಪಾಯಿ ವೆಚ್ಚದ ಅಭಿವೃದ್ಧಿ ಕೆಲಸ ಒಂದೊಂದು ಜಿಲ್ಲೆಯಲ್ಲಿ ನಡೆಯುತ್ತಿದೆ. ಸ್ವಾಮಿ, ನಾವು ತ್ಯಾಗ ಮಾಡುವುದಕ್ಕೆ ತಯಾರಿದ್ದೇವೆ. ಈ ಎಲ್ಲಾ ಅಭಿವೃದ್ಧಿ ಕೆಲಸವನ್ನೂ ನೀವು ನಿಲ್ಲಿಸಿಬಿಡಿ. ನಮಗೆ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿಕೊಡಿ. ನೀವು ಕೀರ್ತಿಶಾಲಿಗಳಾಗಿರಿ. 80 ಪರ್ಸೆಂಟ್ ಹಳ್ಳಿ ರೈತರು ನಿಮಗೆ ದೇವರು ಒಳ್ಳೆಯದು ಮಾಡಲಿ ಎಂದು ಪ್ರಾರ್ಥನೆ ಮಾಡುತ್ತಾರೆ. ಈ ಒಂದು ಒಳ್ಳೆಯ ಅವಕಾಶವನ್ನು ಉಪಯೋಗಿಸಿಕೊಳ್ಳಿ. ದಯಮಾಡಿ ಯಾರ ಮಾತನ್ನು ಕೇಳಬೇಡಿ. ಮಾನ್ಯ ಮುಖ್ಯಮಂತ್ರಿಗಳು ಈ ನಿರ್ಣಯ ತೆಗೆದುಕೊಂಡು ಕೀರ್ತಿಶಾಲಿಗಳಾಗಲಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೆ, ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಮಾನ್ಯ ಸದಸ್ಯರು ಒತ್ತಾಯ ಮಾಡುತ್ತಿದ್ದಾರೆ. ಹಾಗಾದರೆ ಈ ಸಾಲವನ್ನು ತೀರಿಸುವವರು ಯಾರು? ನಾವು ಸಾಲಗಾರರೇ ಅಲ್ಲ, ನೀವು ಬಾಕಿದಾರರು ಎಂದು ನಾವು ಬಹಳ ದಿನದಿಂದ ಹೇಳುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಸಾಲ ಕೊಟ್ಟರೆ ತಾನೆ ನಾವು ಇನ್ನೊಬ್ಬರಿಗೆ ಕೊಡುವುದು. ಇದು ಎಲ್ಲರಿಗೂ ಗೊತ್ತಿದೆ. ವಾಸ್ತವಾಂಶ ಏನೆಂಬುದನ್ನು ಹೇಳಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ನಾವು ಬೆಳೆದಿದ್ದನ್ನು ನೀವು ಅರ್ಧ ಬೆಲೆಯಲ್ಲಿ ಲೂಟಿ ಮಾಡಿದ್ದೀರಿ. ಮಾರ್ಕೆಟ್ಟಲ್ಲಿ ಶಿಸ್ತು ಇಲ್ಲ. ಅಲ್ಲಿ ನಮಗೆ ಪ್ರತಿದಿನ ಮೋಸ ಆಗುತ್ತಿದೆ. ಈ ಸರ್ಕಾರ ಮಲಗಿದೆ. ಇದರಿಂದಾಗಿ ಸಾಲ ಆಗಿದೆ. ಆದ್ದರಿಂದ ನಾವು ನಿಜವಾಗಿ ಸಾಲಗಾರರಲ್ಲ, ನಾವು ನಿಮಗೆ ಬೆಳೆಯನ್ನು ಬೆಳೆದು ಕೊಟ್ಟಿದ್ದೇವೆ. ಅದನ್ನು ಅರ್ಧ ಬೆಲೆಯಲ್ಲಿ ಕೊಂಡು ಲೂಟಿ ಮಾಡಿದ್ದೀರಿ. ಆದ್ದರಿಂದ ಬಡ್ಡಿ ಸುಸ್ತಿ ಬಡ್ಡಿ ಮನ್ನಾ ಅಲ್ಲ; ರೈತ ಸಾಲಗಾರ ಅಲ್ಲ ಎಂಬುದನ್ನು ನಿಮ್ಮಲ್ಲಿ ಪ್ರಾಮಾಣಿಕತೆ ಇದ್ದರೆ ಘೋಷಣೆ ಮಾಡಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಮಾನ್ಯ ನಂಜುಂಡಸ್ವಾಮಿಯವರು ಹೇಳಿದ್ದು ಒಂದು ನೀತಿಯ ಪ್ರಶ್ನೆ. ಇದು ಕೇವಲ ಒಂದು ರಾಜ್ಯಕ್ಕೆ ಸೀಮಿತವಾದ

ಪ್ರಶ್ನೆ ಅಲ್ಲ. ಇದು ಇಡೀ ರಾಷ್ಟ್ರಕ್ಕೇ ಸೀಮಿತವಾದ ಪ್ರಶ್ನೆ. ಈಗ ರೈತರು ಬಹಳ ಕಷ್ಟದಲ್ಲಿದ್ದಾರೆ. ಇವತ್ತು ಅತಿವೃಷ್ಟಿಯಿಂದ, ಭೂಕಂಪದಿಂದ ಅವರ ಪೀಕು ಹಾಳಾಗಿದೆ. ಸರ್ಕಾರದವರು ಒಡೆದು ಹೋಗಿರತಕ್ಕ ಕೆರೆಗಳನ್ನು ರಿಪೇರಿ ಮಾಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ರಸ್ತೆಗಳನ್ನು ರಿಪೇರಿ ಮಾಡಿಸುವುದಕ್ಕೆ ಆಗುತ್ತಿಲ್ಲ. ಅಂದ ಮೇಲೆ ರೈತರ ಪರಿಸ್ಥಿತಿ ಏನು?

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ನೀವು ಈ ರೀತಿ ಕೂಗಾಡಿದರೆ ನಾನು ಕೇಳುವುದಿಲ್ಲ. ಮಾತನಾಡುವುದಕ್ಕೆ ನಿಮಗೆ ಎಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ನನಗೂ ಇದೆ. ಮಾನ್ಯ ಅಧ್ಯಕ್ಷರಿಗೆ ನಾನು ಏನು ಹೇಳುತ್ತಿದ್ದೆ ಎಂದರೆ, ಮಾನ್ಯ ನಂಜುಂಡಸ್ವಾಮಿಯವರು ನೀತಿಯ ಪ್ರಶ್ನೆಯನ್ನು ಎತ್ತಿ ಮಾತನಾಡುತ್ತಿದ್ದಾರೆ. ಇವತ್ತು ಅಲ್ಲಿ ರೈತರು ಸಾಯುತ್ತಿದ್ದಾರೆ. ಅವರ ಕಷ್ಟವನ್ನು ಸ್ವಲ್ಪ ಮಟ್ಟಿಗಾದರು ಪರಿಹಾರ ಮಾಡಬೇಕು. ಅವರಿಗೆ ಇವತ್ತು ತಿನ್ನುವುದಕ್ಕೆ ಕೂಳಿಲ್ಲ. ಯಾವ ರೈತರು ತಮ್ಮ ಕೈ ಎತ್ತಿ ಕೊಡಬೇಕೋ ಅಂಥ ರೈತರು ಇವತ್ತು ಭಿಕ್ಷೆ ಬೇಡತಕ್ಕ ಪರಿಸ್ಥಿತಿ ಪ್ರಕೃತಿ ವಿಕೋಪದಿಂದ ಬಂದಿದೆ. ಆದ್ದರಿಂದ ಕನಿಷ್ಠ ಸೌಜನ್ಯತೆಯನ್ನು ತೋರಿಸಿ ಅವರ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ.ಹೆಚ್.ಬನ್ನಿಕೋಡ್ : ಇವತ್ತು ತಾವು ಘೋಷಣೆ ಮಾಡಬೇಕು. ಇವತ್ತು ಸದನಗಳಲ್ಲಿ ಯಾವುದೇ ಕಲಾಪ ನಡೆಯುವುದು ಬೇಕಾಗಿಲ್ಲ. ರೈತರ ವಿಚಾರ ಬಿಟ್ಟು ಇಲ್ಲಿ ಬೇರೆ ಕಾರ್ಯಕಲಾಪ ನಡೆಯುವುದು ಬೇಡ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ : ನೀವೊಬ್ಬರೇ ಏನು ರೈತರನ್ನು ಕಟ್ಟಿಕೊಂಡು ಬಂದಿರುವುದು. ನಾವೇನು ಪುಕ್ಕಟೆ ಬಂದಿದ್ದೇವೆಯೇ? ನೀವು ಪ್ರತಿ ಮಾತಿಗೂ ರೈತರು, ರೈತರು ಎಂದು ಹೇಳುತ್ತಿದ್ದೀರಲ್ಲಾ, ಹಾಗಾದರೆ ನಾವೇನು ರೈತರ ವಿರೋಧಿಗಳೇನು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಸದನದಲ್ಲಿ 224 ಜನ ಸದಸ್ಯರೇನಿದ್ದಾರೆ ಅವರೆ ಎಲ್ಲರೆಲ್ಲರಿಗೂ ಒಂದೇ ಅಭಿಪ್ರಾಯ. ಅದಕ್ಕಾಗಿ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇದರಲ್ಲಿ ನಾವು ರಾಜಕಾರಣವನ್ನು ಮಾಡುವುದಕ್ಕೆ ಸಿದ್ಧವಿಲ್ಲ. ಒಂದು ಸಾರಿ 130 ಕೋಟಿ ರೂಪಾಯಿನಷ್ಟು ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದರೆ ರೈತರು ಅಸಲನ್ನೂ ಕಟ್ಟುತ್ತಾರೆ ಮತ್ತು ಅವರು ತಮ್ಮ ಕಾಲಮೇಲೆ ನಿಂತು ಉಳಿದುಕೊಳ್ಳುವುದಕ್ಕೂ ಅವಕಾಶವಾಗುತ್ತದೆ. ಈಗ ಸಾಲ ಮನ್ನಾ ಮಾಡಿ ಎಂದು ಹೇಳುವ ಪರಿಸ್ಥಿತಿ ನಮಗಿಲ್ಲ, ಕಾರಣ ರಾಜ್ಯದ ಹಣಕಾಸಿನ ಪರಿಸ್ಥಿತಿ ನಮಗೆ ಅರ್ಥವಾಗುತ್ತದೆ. ಇಡೀ ರಾಜ್ಯದ ಹಿತದೃಷ್ಟಿಯಿಂದ ಅತಿವೃಷ್ಟಿ, ನೆರೆಹಾವಳಿ, ಭೂಕಂಪಕ್ಕೆ ತುತ್ತಾಗಿರುವುದನ್ನು ನೀವೇ ಒಪ್ಪಿಕೊಂಡಿರುವುದರಿಂದ, ಕಳೆದ 4-5 ವರ್ಷಗಳಿಂದ ಸತತವಾಗಿ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳುತ್ತಾ ಬಂದೆವು. ಆಡಳಿತ ಪಕ್ಷದವರೂ ಹೇಳಿದಿರಿ. ಮಾಜಿ ಮುಖ್ಯ ಮಂತ್ರಿಗಳು ಎಲ್ಲಾ ಸಭೆಗಳಲ್ಲಿಯೂ ಹೇಳುತ್ತಾ ಬಂದರು, ಅವರು ಹೇಳಿದ್ದನ್ನು ನಂಬಿಕೊಂಡು ರೈತರು

ಸಾಲವನ್ನು ಕಟ್ಟಲಿಲ್ಲ. ಇವತ್ತು 10 ಸಾವಿರಕ್ಕೆ 10 ಸಾವಿರ ರೂಪಾಯಿ ಬಡ್ಡಿ ಆಗಿದೆ. ತಮ್ಮ ತಪ್ಪಿನಿಂದಾಗಿ ರೈತ ಇವತ್ತು ಅಡ್ಡದಾರಿಯನ್ನು ಹಿಡಿಯಬೇಕಾದ ಪರಿಸ್ಥಿತಿ ಬಂದಿರುವುದರಿಂದ ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ವಿರೋಧಪಕ್ಷಗಳ ನಾಯಕರ ಸಭೆಯನ್ನು ಕರೆದಿರಿ. ಇವತ್ತು ಆಡಳಿತಪಕ್ಷದ ಮತ್ತು ವಿರೋಧಪಕ್ಷಗಳ ಅಭಿಪ್ರಾಯವೂ ಒಂದೇ ಇದೆ. ಇಡೀ ಸದನವೇ ಒಂದಾಗಿ ಈ ಕೆಲಸಮಾಡೋಣ. ಈ ಕೀರ್ತಿ ಸದನದ ಎಲ್ಲ ಸದಸ್ಯರಿಗೂ ಬರಲಿ. ಇದರಲ್ಲಿ ಯಾವುದೇ ಪಕ್ಷದ ಪ್ರಶ್ನೆ ಇಲ್ಲ, ಇಷ್ಟು ಮಾತ್ರ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಉತ್ತರಕೊಡಲು ನಾನು ತಯಾರಿದ್ದೆ. ಅರ್ಧ ಗಂಟೆ ಹಿಂದೆಯೇ ನಾನು ಎದ್ದು ಕುಳಿತುಕೊಳ್ಳುವುದು ಮಾಡುತ್ತಿದ್ದೆ. ಹೈಕೋರ್ಟ್ನಲ್ಲಿ ಯಾರು ರೈತರ ಪರವಾಗಿದ್ದಾರೆ, ಯಾರು ರೈತರ ವಿರುದ್ಧವಾಗಿದ್ದಾರೆ ಎಂದು ಚರ್ಚೆ ನಡೆದಿದೆ. ಆದುದರಿಂದ ಈ ಸ್ಪರ್ಧೆಯಲ್ಲಿ ನನ್ನ ಸ್ಥಾನ ಎಲ್ಲಿದೆ ಎಂದು ನಾನು ಯೋಚನೆ ಮಾಡುತ್ತಿದ್ದೆ. ಪ್ರೊ: ನಂಜುಂಡಸ್ವಾಮಿಯವರಿಂದಲೇ ಮೂಲ ಪ್ರಾರಂಭವಾಗುವುದು. ಅವರು ಮೂಲಭೂತವಾದ ಪ್ರಶ್ನೆಯನ್ನೇ ಎತ್ತಿದ್ದಾರೆ. ಸಾಲಗಾರರು ಯಾರು? ಸಾಲವನ್ನು ಕೊಟ್ಟವರು ಯಾರು? ಸಾಲವನ್ನು ತೆಗೆದುಕೊಂಡವರು ಯಾರು? ಈ ಪ್ರಶ್ನೆ ಮೊದಲು ಇತ್ಯರ್ಥವಾಗಬೇಕು, ಅನಂತರ ಬಾಕಿ ವಿಚಾರ ಮಾತನಾಡೋಣವೆಂದು ಅವರು ಹೇಳಿದರು. ಇವತ್ತು ಈ ಸಮಸ್ಯೆಯನ್ನು ನಾವು ಯಾವ ರೀತಿ ಬಗೆಹರಿಸಬೇಕೆಂಬುದೇ ಒಂದು ಸಮಸ್ಯೆಯಾಗಿದೆ. ಇದು ಬಹಳ ಗಂಭೀರವಾದ ಪ್ರಶ್ನೆ. ಇವತ್ತು ರಾಜ್ಯದ ಮುಂದೆ, ರಾಷ್ಟ್ರದ ಮುಂದೆ ಇರತಕ್ಕ ಪ್ರಶ್ನೆಗಳು ಬಹಳ ಗಂಭೀರವಾದುವು. ನಮ್ಮ ಕರ್ನಾಟಕ ರಾಜ್ಯದಲ್ಲಿ ಮೊದಲು ಇದರ ಬಗ್ಗೆ ಒಂದು ದಿವಸ ಚರ್ಚೆ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತೇ ಆಗಲಿ, ಇವತ್ತೇ ಪ್ರಾರಂಭ ಮಾಡೋಣ.

ಶ್ರೀ ಎಂ. ವೀರಪ್ಪ ಮೊಯ್ಲಿ : ಇವತ್ತು ಪ್ರಾರಂಭ ಆಗಲಿ, ಒಂದು ದಿವಸ ಕೊನೆ ಆಗುತ್ತದೆ. ನಾವು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಆಲೋಚನೆ ಮಾಡಬೇಕಾಗಿದೆ. ನಾವು ರಾಜಕಾರಣಿಗಳಾಗಿರುವುದರಿಂದ ನಮಗೆ ಈ ತಕ್ಷಣ ಜನರ ಮತ ಬೇಕು. ದೇಶದ ಅಗ್ರಿಕಲ್ಚರಲ್ ಪ್ರೊಡಕ್ಟಿವಿಟಿ, ಇಂಡಸ್ಟ್ರಿಯಲ್ ಪ್ರೊಡಕ್ಟಿವಿಟಿ ನಿಜವಾದಂತಹ ರೈತ ಸಮುದಾಯ ಯಾವ ರೀತಿಯಲ್ಲಿ ಬೆಳೆಯಬೇಕು ಎನ್ನುವುದು ನಮಗೆ ಪ್ರಮುಖವಾದುದಲ್ಲ. ಚುನಾವಣೆ ಬರುತ್ತದೆಂದು, ಸರ್ಕಾರದವರು ಏನಾದರೊಂದನ್ನು ಘೋಷಣೆ ಮಾಡುತ್ತೇವೆ. ನಾವು ಬಾಕಿ ಇರುವುದನ್ನೆಲ್ಲ ಬದಿಗಿಡುತ್ತೇವೆ. ಕಾವೇರಿ-ಕೃಷ್ಣೆ ಎಂದು ಬಾಯಿ ಮಾತಿನಲ್ಲಿ ಹೇಳುತ್ತೇವೆ, ಆಮೇಲೆ ಓಟನ್ನು ತೆಗೆದುಕೊಳ್ಳುತ್ತೇವೆ, ಇನ್ನು 100 ವರ್ಷಗಳಾದರೂ ಕೂಡ ಈ ನದಿ ನೀರಿನ ಬಗ್ಗೆ ವಿಚಾರ ಮಾಡುವುದಿಲ್ಲ. ಕಾವೇರಿ ಯೋಜನೆಯ ಹಣ ಬೇಕಾದರೆ ಸುಸ್ತಿ ಬಡ್ಡಿಗೆ ಕೊಡಿ ಎಂದು ಹೇಳಿದರು....

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಹೇಳಿದ್ದು ಏನೆಂದರೆ, ಪ್ರತಿಯೊಂದು ಜಿಲ್ಲೆಗೂ ನೂರಾರು ಕೋಟಿ ಖರ್ಚಾಗುತ್ತಿದೆ. ಒಂದೊಂದು ಜಿಲ್ಲೆಗೆ 5 ಕೋಟಿ ಕಡಿಮೆಯಾದರೂ ಚಿಂತೆ ಇಲ್ಲ, ಒಂದು ಸಾರಿ ಅವರಿಗೆ ಪರಿಹಾರವನ್ನು ಕೊಟ್ಟುಬಿಡಿ. ಕೊಡದಿದ್ದರೆ ಅವರಿಗೆ ಬಹಳಷ್ಟು ತೊಂದರೆಯಾಗುತ್ತದೆಂದು.

ಶ್ರೀ ಎಂ. ವೀರಪ್ಪ ಮೊಯಿಲಿ : ಬೇಕಾದರೆ ಒಂದು 5 ಪರ್ಸೆಂಟ್ 10 ಪರ್ಸೆಂಟ್ ನೀವು ಅಭಿವೃದ್ಧಿಯ ಕೆಲಸದ ಹಣ ತೆಗೆದಿಟ್ಟು ಇದನ್ನು ಮಾಡಿ ಎಂದು ಹೇಳುತ್ತಾರೆ. ಅಭಿವೃದ್ಧಿ ಅಂದರೆ ನಮಗೆ ಮುಖ್ಯವಾಗಿ ಅಭಿವೃದ್ಧಿ ಇರತಕ್ಕಂಥದ್ದು

ನೀರಾವರಿ ಅಥವಾ ವಿದ್ಯುತ್ತು ಅಥವಾ ಬಡವರ ಅಂಟಿಪಾವರ್ಟಿ ಪ್ರೋಗ್ರಾಂಗಳು. ಅದರಿಂದ ಹಣ ತೆಗೆದು ಯಾರಿಗೆ ಕೊಡಬೇಕು. ಕೊಡುವುದು ಯಾರಿಗೆ ಎಂದು ತಮಗೆ ಗೊತ್ತೇ? ನಮ್ಮಲ್ಲಿ 65 ಲಕ್ಷ ಜನ ರೈತರು ಇದ್ದಾರೆ. ಕೃಷಿ ಕಾರ್ಮಿಕರು ಬೇರೆ, ಬರೀ ನಾನು ರೈತರ ವಿಚಾರವನ್ನು ಮಾತ್ರ ಹೇಳುತ್ತೇನೆ. ಕೃಷಿ ಕಾರ್ಮಿಕರಿಗಂತೂ ಏನೂ ಹೋಗುವುದೇ ಇಲ್ಲ. ಈ 65 ಲಕ್ಷದಲ್ಲಿ ಸಹಕಾರ ಸಂಘಗಳಲ್ಲಿಯೇ ಸುಮಾರು 45.2 ಲಕ್ಷ ರೈತರು ಇದ್ದಾರೆ. ಅದರಲ್ಲಿ ಸಾಲ ಸುಸ್ತಿ ಬಡ್ಡಿ, ಮತ್ತೆ ಬಡ್ಡಿ ಮನ್ನಾವನ್ನು ಯಾರಿಗೆ ಮಾಡಬೇಕೆಂದು ನಮ್ಮ ಸ್ನೇಹಿತರು ಕೇಳುತ್ತಿದ್ದಾರೆ ಅಂದರೆ, 1.96 ಲಕ್ಷ ಮಂದಿಗೆ ಮನ್ನಾ ಮಾಡಬೇಕೆಂದು ಕೇಳುತ್ತಿದ್ದಾರೆ. Your pleading is only for that. ಕೇವಲ 4.53 ಪರ್ಸೆಂಟ್ ಜನರ ಪರವಾಗಿ ವಾದ ನಡೆಯುತ್ತಿವೆ. ಉಳಿದದ್ದು 96 ಪರ್ಸೆಂಟ್ ಜನ ಎಲ್ಲಿ ಹೋಗಬೇಕು ಹೇಳಿ? ಅವರಿಗೆ ಸಾಲವೇ ಇಲ್ಲ. ಏಕೆಂದರೆ ಈ ಸಹಕಾರ ಸಂಘಗಳು ಡಿಫಾಲ್ಟ್ ಆಗಿಬಿಟ್ಟರೆ ಅವರಿಗೆ ಸಾಲ ಕೊಡತಕ್ಕಂಥ ಪರಿಸ್ಥಿತಿಯೇ ಬರುವುದಿಲ್ಲ. ಅವರು ಅಲ್ಲಿಯೇ ಒಂದು ಮೂಲೆಯಲ್ಲಿ ಉಳಿಯುತ್ತಾರೆ. ಅವರನ್ನು ಯಾರು ರಕ್ಷಣೆ ಮಾಡಬೇಕೆಂದು ಹೇಳಿ ನಾವು ಇವತ್ತು ವಿಚಾರ ಮಾಡಬೇಕಾಗುತ್ತದೆ. ಈ 65 ಲಕ್ಷದಲ್ಲಿ ಪರ್ಸೆಂಟೇಜನ್ನು ಲೆಕ್ಕ ಮಾಡಿದರೆ 1 ಅಥವಾ 2 ಪರ್ಸೆಂಟ್ ಜನರ ಪರವಾಗಿ ನಾವು ಇವತ್ತು ಈ ನಮ್ಮ ಯೋಜನೆಗಳನ್ನೆಲ್ಲ ಬದಿಗಿಡಬೇಕು, ಮತ್ತು ನಮ್ಮ ಪ್ರಗತಿ ಎಲ್ಲವನ್ನೂ ನಿಲ್ಲಿಸಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ಅಂಕಿಅಂಶಗಳನ್ನು ಕಳೆದ ಸಾರಿ ಮಾನ್ಯ ಯಡಿಯೂರಪ್ಪನವರು ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ತಾವು ಹೇಳಿದ್ದೀರಿ. ಇದೆಲ್ಲ ಗೊತ್ತಿರತಕ್ಕಂಥ ವಿಚಾರವಾಗಿದೆ. ನಿಮಗೆ ಸ್ಪೆಸಿಫಿಕ್ ಆಗಿ ನಮ್ಮ ವಿರೋಧ ಪಕ್ಷದ ನಾಯಕರನ್ನು ನಮ್ಮೆಲ್ಲರನ್ನು ಕಳೆದ ಸಾರಿ ಅಧಿವೇಶನ ಆದ ನಂತರ ಕರೆದು ಮಾತನಾಡಿದ್ದೀರಿ. ಆ ಸಭೆಯಲ್ಲಿ ನಾವು ಏನನ್ನು ಕೇಳಿದ್ದೆವು ಅಂದರೆ ಏನು ನೀವು ಮಾಡುತ್ತೀರಿ? What is the quantum you want to give? Whether it is Rs. 10 crores, 20 Crores or Rs. 50 Crores? ಎನ್ನುವುದನ್ನು ನಮಗೆ ಹೇಳಿ. ಅದನ್ನು ಹೇಳಿ ಬಿಡಿ ಅಲ್ಲಿಗೆ ಮುಗಿಸಿಬಿಡೋಣ ಅಂತನೇ ನಾವು ಹೇಳಿರುವುದು. ಆದರೆ You are not prepared to mention the quantum . If you mention it, we fully agree with you.

ಶ್ರೀ ಕೆ.ಎಂ. ಪುಟ್ಟು : ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ನಾವು ಜಲಾಶಯದ ಕೆಲಸಗಳನ್ನು ನಿಲ್ಲಿಸಿಬಿಟ್ಟು ಕೊಡೋಣ ಎಂದು ಇದ್ದಾರಾ? ಅದನ್ನು ನಾವು ಸದಸ್ಯರು ಯಾರೂ ಒಪ್ಪುವುದಿಲ್ಲ. ಅನೇಕ ಅಗ್ಗದ ಜನಪ್ರಿಯತೆಯ ಕೆಲಸಗಳಿಗೆ ಸರ್ಕಾರ ಹಣವನ್ನು ದೇಶದಲ್ಲಿ ಖರ್ಚು ಮಾಡುತ್ತಿದೆ. ರೈತರ ಬಗ್ಗೆ ಹೋದ ಸಾರಿ ಅಧಿವೇಶನದಲ್ಲಿಯೂ ಪರಿಹಾರ ಕೊಡುತ್ತೇವೆ ಎನ್ನುವಂತಹ ಆಶ್ವಾಸನೆಯನ್ನು ಕೊಟ್ಟಿದ್ದೀರಿ, ಆದರೆ ಕೊಡಲಿಲ್ಲ. ಈ ಸಾರಿ ಸೇವಾ ಸಹಕಾರ ಸಂಘಗಳಲ್ಲಿ, ನ್ಯಾಷನಲೈಸ್ ಬ್ಯಾಂಕಿನಲ್ಲಿ ವ್ಯವಸಾಯದ ಉದ್ದೇಶವಾಗಿ ಏನು ತೆಗೆದುಕೊಂಡಿದ್ದಾರೆ ಆ ಸಾಲ ಬಡ್ಡಿಗಳನ್ನು ಮನ್ನಾ ಮಾಡಿ ಎಂದು ಹೇಳಿದೆವು. ಮಾನ್ಯ ನಂಜುಂಡಸ್ವಾಮಿಯವರು ಹೇಳಿರುವುದು, ಅವರ ಅಭಿಪ್ರಾಯ ಆಯಿತು. ಇಡೀ ಸದನ ರೈತರ ಸಮುದಾಯಕ್ಕೆ ಏನಾದರೂ ಸಹಾಯ ಮಾಡಿ ಅಂದರೆ ನಾವು ಮಾಡುವುದಕ್ಕೆ ಆಗುವುದಿಲ್ಲ: ಕಾವೇರಿ ನಿಲ್ಲಿಸೋಣ, ಕೃಷ್ಣ ನಿಲ್ಲಿಸೋಣ ಅಂದರೆ ಹೇಗೆ? ಯಾವುದೂ ನಿಲ್ಲಿಸಬೇಡಿ, ಕಾವೇರಿ ಕೃಷ್ಣ ನಿಲ್ಲಿಸಬೇಡಿ. ಬೇಕಾದರೆ ದುರುಪಯೋಗವಾದಂತಹ ಯೋಜನೆಗಳನ್ನು ನಿಲ್ಲಿಸಿಬಿಡಿ. ಅಂತಹ ಯೋಜನೆಗಳನ್ನು ನಿಲ್ಲಿಸಿ, ಏನು ಒಕ್ಕೊರಲಿನಿಂದ ಬೆಂಬಲವನ್ನು ಕೇಳುತ್ತಿದ್ದಾರೆ ಇದಕ್ಕೆ ಕಿವಿಗೊಟ್ಟು ಮಾಡಿ. ಸಹಕಾರ ರಂಗದಲಿ ಎಷ್ಟು ಬಾಕಿ ಇದೆ, ಎಷ್ಟು

ಬಡ್ಡಿ, ಎಷ್ಟು ಸುಸ್ತಿ ಬಡ್ಡಿ ಬಾಕಿ ಇದೆ ಎನ್ನುವ ಅಂಕಿಅಂಶಗಳನ್ನು ತೆಗೆದುಕೊಂಡು ದಯವಿಟ್ಟು ಅನೌನ್ಸ್ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೃಷ್ಣ ಕಾವೇರಿಗೆ ಎಲ್ಲಿ ದುಡ್ಡು ಕೊಟ್ಟಿದ್ದೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ಉತ್ತರ ಬೇಡ ಅಂದರೆ ನನ್ನದೇನೂ ಅಡ್ಡಿ ಇಲ್ಲ. ಸದನದ ಮುಂದೆ, ಕರ್ನಾಟಕ ರಾಜ್ಯದ ಮುಂದೆ ಒಂದು ವಿಚಾರವನ್ನು ಇಟ್ಟಿದ್ದೇನೆ. ಅದು ಇಡೀ ಸದನಕ್ಕೆ ಬಿಟ್ಟಿದ್ದು. ಎಲ್ಲಿ ರಿಯಾಯಿತಿ ಕೊಡಬೇಕು ಬಿಡಬೇಕು ಎಂಬುದೆಲ್ಲ ನಿಮಗೇ ಬಿಟ್ಟಿದ್ದು. ವಿಚಾರವನ್ನು ಸದನದ ಮುಂದಿಡಬೇಕಾದ ಕರ್ತವ್ಯ ನನ್ನದಾಗಿದೆ. ಅದನ್ನು ನಾನು ಮಾಡಿದ್ದೇವೆ. ನಾನು ಎಲ್ಲಿಯೂ ಕೊಡುವುದಿಲ್ಲವೆಂದು ಹೇಳಲಿಲ್ಲ. ಎಲ್ಲಿ ಹೇಳಿದ್ದೇನೆ? ತಾವು ಪೂರ್ತಿ ಆ ತೀರ್ಪಿಗೆ ಏತಕ್ಕೆ ಬರುತ್ತೀರಿ? ನಾನು ಹೇಳುವುದೇನೆಂದರೆ, ಒಟ್ಟು ಅಗ್ರಿಕಲ್ಚರಲ್ ಕ್ರೆಡಿಟ್ಗೆ ನಮಗೆ ಸಿಗಬೇಕಾದುದು 3647 ಕೋಟಿ ರೂಪಾಯಿಗಳು. ಅದರ ಬದಲಿಗೆ ಎಷ್ಟು ಸಿಗುತ್ತಿದೆ ಎಂದರೆ 448 ಕೋಟಿ ರೂಪಾಯಿಗಳು ಮಾತ್ರ ಸಿಗುತ್ತಿದೆ. ಕ್ರೆಡಿಟ್ ಇವತ್ತು ಹೋಗುತ್ತಿಲ್ಲ, ಇನ್ವೆಸ್ಟ್ಮೆಂಟ್ ಇನ್ ಅಗ್ರಿಕಲ್ಚರ್ ಹಣ ಹೋಗುತ್ತಿಲ್ಲ. ಇದನ್ನು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ರೈತರ ಪರವಾಗಿ ಮಾತನಾಡುವುದು ಅಲ್ಲವೇ? ರೈತರ ವಿರೋಧವಾಗಿ ಮಾತನಾಡುತ್ತಿದ್ದೇನೆಯೆ? ಅಗ್ರಿಕಲ್ಚರಲ್ ಇನ್‌ವೆಸ್ಟ್ಮೆಂಟ್ನಿಂದ ಇವತ್ತಿನ ದಿವಸ ರೈತರಿಗೆ ಹಣ ಹೋಗುತ್ತಿಲ್ಲ, ಬಂಡವಾಳ ಹೋಗುತ್ತಿಲ್ಲ. ವಸೂಲಿ ಆಗದೆ ಇದ್ದುದರಿಂದ ಈ ರೀತಿ ಆಗುತ್ತಿದೆ ಎಂದು ರೈತರ ಪರವಾಗಿ ಮಾತನಾಡುತ್ತಿದ್ದೇನೆ. ಇದರ ಬಗ್ಗೆ ಕೂಡ ನೀವು ವಿಚಾರ ಮಾಡಬೇಕಾಗುತ್ತದೆ. ಸುಸ್ತಿ ಬಡ್ಡಿ ವಿಚಾರಕ್ಕೆ ಪ್ರತ್ಯೇಕವಾಗಿ ಬರುತ್ತೇನೆ. ರೆಕವರಿಯಲ್ಲಿ ನಮ್ಮ ಕರ್ನಾಟಕ 4ನೇ ಸ್ಥಾನದಲ್ಲಿದೆ. ಗುಜರಾತ್, ಪಂಜಾಬ್, ಮಹಾರಾಷ್ಟ್ರ ಇಂಥ ರಾಜ್ಯಗಳು ಅಗ್ರಿಕಲ್ಚರ್ನಲ್ಲಿ ಬಹಳ ಮುಂದೆ ಬರುತ್ತಿವೆ. ಏತಕ್ಕೆ ಬರುತ್ತಿವೆ ಎಂದರೆ ರಿಕವರಿ ಚೆನ್ನಾಗಿದೆ. ಅಲ್ಲಿ ಅಗ್ರಿಕಲ್ಚರ್ ಇನ್ವೆಸ್ಟ್ಮೆಂಟಿಗೆ ಹಣ ಹೆಚ್ಚು ಹೋಗುತ್ತಿದೆ. ಅಲ್ಲಿ ಸಾಕಷ್ಟು ಇನ್ವೆಸ್ಟ್ಮೆಂಟ್ ಮಾಡುತ್ತಿದ್ದಾರೆ. ಅಲ್ಲಿ ಸಮೃದ್ಧವಾದಂಥ ರೈತ ಸಮುದಾಯ ಬೆಳೆಯುತ್ತಿದೆ. ಇಲ್ಲಿ ಸಮೃದ್ಧ ಬಿಟ್ಟು ಎಲ್ಲ ಒಣಗಿಸಿಬಿಡುತ್ತಿದ್ದೀರಿ. ಇದರ ಬಗ್ಗೆ ವಿಚಾರ ಮಾಡೋಣ. ತಾವು ಹೇಳಿದಿರಿ ಸುಸ್ತಿ ಬಡ್ಡಿ ಮತ್ತೊಂದು ಎಂದು. ರೈತನ ಕಷ್ಟವನ್ನು ಮನಗಂಡು ನಾವು ಆಗಾಗ ಇದನ್ನು ಮಾಡುತ್ತಾ ಬಂದಿದ್ದೇವೆ. 1992-93ರಲ್ಲಿ 267 ಕೋಟಿ ರೂಪಾಯಿಗಳವರೆಗೆ ನಾವು ರಿಯಾಯಿತಿ ಕೊಟ್ಟಿದ್ದೇವೆ. ಮೊನ್ನೆ ಕೂಡ ತಾವು ಮಾತನಾಡಿದ ಮೇಲೆ ಸುಸ್ತಿ ಬಡ್ಡಿ ಬಗ್ಗೆ ನಿರ್ಣಯ ತೆಗೆದುಕೊಂಡಿದ್ದೇವೆ. ಅದರ ಬಗ್ಗೆ 10-12 ಕೋಟಿ ರೂಪಾಯಿಗಳ ರಿಯಾಯಿತಿ ಕೊಟ್ಟಿದ್ದೇವೆ; ಕೊಟ್ಟಿಲ್ಲವೆಂದು ಅಲ್ಲ. ಆದರೂ ಕೂಡ ರಿಕವರಿ ಬಗ್ಗೆ ಸ್ವಲ್ಪ ಹೇಳಿಕೆ ನನ್ನಿಂದ ತಮ್ಮಿಂದ ಬಂದ ಕೂಡಲೇ ಪರಿಣಾಮ ಏನಾಗುತ್ತದೆಂದರೆ ವಸೂಲಿ ನಿಲ್ಲುತ್ತದೆ. ರಾಯಚೂರಿನಂಥ ಜಿಲ್ಲೆಯಲ್ಲಿ ಮೊನ್ನೆ ಒಂದು ಕೋಟಿ 67 ಲಕ್ಷದವರೆಗೆ ವಸೂಲಾಗಿದೆ; ಅಂದರೆ ರೈತರಿಗೆ ಕೊಡಬೇಕಾಗುತ್ತದೆ ಎಂದು ತಿಳಿವಳಿಕೆ ಬರುತ್ತಿದೆ. For ten years.... In eightees, agricultural productivity in our State is the lowest in the Country. It was on the decline. ವ್ಯವಸಾಯಕ್ಕೆ ನೀರಾವರಿ ಸಾಕಷ್ಟು ಜಾಸ್ತಿ ಆಗುತ್ತಿದೆ, ನೀರಾವರಿ ವಿಸ್ತೀರ್ಣ ಜಾಸ್ತಿಯಾಗುತ್ತಿದೆ. ಇದು ಕಂಡು ಕೂಡ ಅಗ್ರಕಲ್ಚರಲ್ ಪ್ರೊಡಕ್ಟಿವಿಟಿ ಮತ್ತು ಅಗ್ರಿಕಲ್ಚರಲ್ ಪ್ರೊಡಕ್ಷನ್ ಅತ್ಯಂತ ಕಡಿಮೆ. ಇವತ್ತು ಸಮೃದ್ಧ ಕರ್ನಾಟಕ ಕಟ್ಟಬೇಕೆಂದು ಎಲ್ಲ ಭಾಷಣ ಬಿಗಿದು ಸಿಂಧ್ಯ ಅವರೆ, ಈ ಪರಿಸ್ಥಿತಿಗೆ ರೈತನನ್ನು ತಂದು ......

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ಅಧಿಕಾರದಲ್ಲಿದ್ದಾಗ ಮಳೆ ಬೀಳಲಿಲ್ಲ. ಅದನ್ನು ಗಮನದಲ್ಲಿಟ್ಟುಕೊಂಡು ನೀವು ಹೇಳಿದರಲ್ಲಿ ಅರ್ಥವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬರಗಾಲ, ಅತಿವೃಷ್ಟಿ ಬಂದಾಗ ರೈತ ಏನು ಮಾಡಬೇಕು?

ಶ್ರೀ ಎಂ. ವೀರಪ್ಪ ಮೊಯಿಲಿ : ಆದುದರಿಂದ ರೆಕವರಿ ಟ್ರೆಂಡ್ ಒಳ್ಳೆಯದು ಇದೆ. ತಾವು ಹೇಳಿದ್ದೀರಿ, ರೈತರ ಸಾಮಗ್ರಿಗಳನ್ನು ಜಪ್ತಿ ಮಾಡಬಾರದೆಂದು, ಅದೆಲ್ಲಾ ನಾವು ಇನಸ್ಟ್ರಕ್ಷನ್ ಕೊಟ್ಟಿದ್ದೇವೆ. ಆದರೆ ರೆಕವರಿ ನಿಲ್ಲಿಸಬೇಕೆಂದು ಇಲ್ಲ. ಸುಸ್ತಿ ಬಡ್ಡಿ ಬಗ್ಗೆ ವಿಚಾರ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಿ ಎಂದು ಕೇಳುತ್ತಿದ್ದೇವೆ. ಆದರೆ ನೀವು ಏನು ಹೇಳಿದಿರಿ ಎಂದು ಅರ್ಥವಾಗಲಿಲ್ಲ. ನಮ್ಮ ಎಲ್ಲಾ ವಿರೋಧ ಪಕ್ಷದವರನ್ನು ಏತಕ್ಕೆ ಚರ್ಚೆಗೆ ಕರೆದಿರಿ? ಚರ್ಚೆ ಮಾಡಿ ನಾವು ನಮ್ಮ ಅಭಿಪ್ರಾಯಗಳನ್ನು ಕೊಟ್ಟೆವು.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆಗಳು, ಶಿವಾನಂದ ಕೌಜಲಗಿಯವರು......

(ಗೊಂದಲ)

ಅಧ್ಯಕ್ಷರು :ಈಗ ಆ ಪ್ರಸ್ತಾವನೆ ಬೇಡ, ಟೈಂ ಆಯಿತು.

ಶ್ರೀ ವಾಟಾಳ್ ನಾಗರಾಜ್ : ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡುವ ಬಗ್ಗೆ ಸರ್ಕಾರದ ನಿರ್ಧಾರವನ್ನು ಹೇಳಬೇಕು. ರೈತರ ಸಾಲ ವಸೂಲಿ ನಿಲ್ಲಬೇಕು. ರೈತರ ಮೇಲಿನ ದೌರ್ಜನ್ಯ ನಿಲ್ಲಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇವರು ಏನು ಮಾಡುತ್ತಿದ್ದಾರೆಂದು ಗೊತ್ತಾಗುತ್ತಿಲ್ಲ ಅಧ್ಯಕ್ಷರೆ, ಮನೆ ಮಠ ಎಲ್ಲ ಜಪ್ತಿ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಸುಸ್ತಿ ಬಡ್ಡಿ ವಿಚಾರದಲ್ಲಿ ವಿಚಾರ ಮಾಡಬಹುದೆಂದು ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಿದ್ದರೆ, ಅಲ್ಲಿಯವರೆಗೆ ಸಾಲ ವಸೂಲಿ ನಿಲ್ಲಿಸಿ. ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿ; ನಾವು ಎಲ್ಲಾ ರೀತಿಯ ಸಹಕಾರ ಕೊಡುತ್ತೇವೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವರು ಯಾರ ಪರವಾಗಿದ್ದಾರೆಂದು ನಾವು ಕೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಲಕ್ಷಾಂತರ ಮಂದಿ ರೈತರು ಸಾಯುತ್ತಿದ್ದಾರೆ. ಅಂತಹವರನ್ನು ಬದುಕಿಸಿಯೆಂದು ನಾವು ಆ ದೇವರಲ್ಲಿ ಪ್ರಾರ್ಥನೆ ಮಾಡುತ್ತಿದ್ದೇವೆ. ಈ ವಿಚಾರವನ್ನು ತಾವು ನಿಲುವಳಿ ಸೂಚನೆಯ ಮುಖಾಂತರ ಎತ್ತಿದ್ದೀರಿ. ನಿಲುವಳಿ ಸೂಚನೆಯಲ್ಲಿ ಎತ್ತಿದ ಒಂದು ಸೂಚನೆಗೆ ನಾವೇನು ವಿಚಾರ ಮಾಡದೆ ಈಗಲೇ ಮಾಡುತ್ತೇವೆಂದು ಹೇಳಿಕೆಯನ್ನು ಯಾವ ಜವಾಬ್ದಾರಿ ಸರ್ಕಾರ ಕೊಡುವುದಕ್ಕಾಗುತ್ತದೆ? ನಾಳೆ ವಿರೋಧಪಕ್ಷದ ನಾಯಕರುಗಳ ಸಭೆಯನ್ನು ಕರೆಯುತ್ತೇನೆ.

ಗಮನ ಸೆಳೆಯುವ ಸೂಚನೆಗಳು.

1)ಬೆಳಗ್ಗಾಂ ಜಿಲ್ಲೆಯಲ್ಲಿ ಮಲಪ್ರಭಾ, ಕಾಡಾ ಸಿಬ್ಬಂದಿ ವೆಚ್ಚವು ಅಭಿವೃದ್ಧಿ ಕೆಲಸಗಳಿಗಿಂತಲೂ ಹೆಚ್ಚಾಗಿದ್ದು ಅದರ ಕೆಲಸಗಳು ನಿಧಾನವಾಗಿ ಸಾಗಿರುವುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಯಲ್ಲಿ ಮಲಪ್ರಭಾ ಕಾಡಾ ಅವರ ಸಿಬ್ಬಂದಿ ವೆಚ್ಚವು ಅಭಿವೃದ್ಧಿ ಕೆಲಸಗಳಿಗಿಂತಲೂ ಹೆಚ್ಚಾಗಿದ್ದು ಕಾಡಾ ಕೆಲಸಗಳು ನಿಧಾನವಾಗಿ ಸಾಗಿರುವ ಬಗ್ಗೆ ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಗಮನವನ್ನು ಸೆಳೆಯುತ್ತೇನೆ.

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತೇನೆ.

1993-94ನೇ ಸಾಲಿಗೆ ಮಲಪ್ರಭ ಮತ್ತು ಘಟಪ್ರಭಾ ಕಾಡಾಕ್ಕೆ ಒಟ್ಟು 1315.35 ಲಕ್ಷ ರೂ.ಗಳು ಅನುದಾನವಿತ್ತು. ಕೃಷ್ಣಾ ಮೇಲ್ದಂಡೆ ಕಾಮಗಾರಿಗಳಿಗಾಗಿ ಹಾಗೂ ವಿಶೇಷ ಘಟಕ ಯೋಜನೆಯಿಂದ ಪೂಲಿಂಗ್ಗಾಗಿ ಹಣ ಪರಿಷ್ಕೃತಗೊಂಡ ಮೇಲೆ ಸದರಿ ಕಾಡಾಕ್ಕೆ 536.84 ಲಕ್ಷ ರೂಪಾಯಿಗಳು ಅನುದಾನವಾಗಿ ದೊರೆತಿದ್ದು ಕಾಡಾದಲ್ಲಿ ಅಳವಡಿಸಲಾದ ಎಲ್ಲಾ ಕಾರ್ಯಕ್ರಮಗಳನ್ನು ಸೂಕ್ತವಾಗಿ ಪರಿಷ್ಕರಿಸಲಾಯ್ತು. ಅವುಗಳಲ್ಲಿ ಮುಖ್ಯವಾದ ಈ ಕೆಳಕಂಡ ಕಾರ್ಯಕ್ರಮಗಳ ಗುರಿ ಹೀಗಿದೆ.

1)	ಭೂ ಅಭಿವೃದ್ಧಿ ಕೆಲಸ	: 7498 ಹೆ.
2)	ಜಮೀನು ನೀರಾವರಿ ಕಾಲುವೆಗಳು	: 4315 ಹೆ.
3)	ವಾರಾಬಂದಿ	: 5816 ಹೆ.
4)	ಆಯಕಟ್ಟು ರಸ್ತೆಗಳು	: 4 ಕಿ.ಮಿ.
5)	ವಿಶೇಷ ಘಟಕ ಯೋಜನೆ	: 65 ಲಕ್ಷ ರೂ.ಗಳು

ಈ ಮೇಲ್ಕಂಡ ಕಾರ್ಯಕ್ರಮದಲ್ಲಿ ಡಿಸೆಂಬರ್ 93ರ ಅಂತ್ಯಕ್ಕೆ ಸಾಧಿಸಲಾಗಿರುವ ಪ್ರಗತಿ ಈ ರೀತಿ ಇದೆ.

		ಗುರಿ	ಸಾಧನೆ	ಶೇಕಡ
1)	ಭೂ ಅಭಿವೃದ್ಧಿ ಕೆಲಸ	6978 ಹೆ.	6508 ಹೆ.	93
2)	ಜಮೀನು ನೀರಾವರಿ ಕಾಲುವೆಗಳು	3299 ಹೆ.	3200 ಹೆ.	97
3)	ವಾರಾಬಂದಿ	4261 ಹೆ.	4614 ಹೆ.	108
4)	ಆಯಕಟ್ಟು ರಸ್ತೆಗಳು	4 ಕಿ.ಮಿ.	3 ಕಿ.ಮಿ	75
5)	ವಿಶೇಷ ಘಟಕ ಯೋಜನೆ			
	ಆರ್ಥಿಕ	ರೂ.56.60 ಲಕ್ಷ	ರೂ.61.56 ಲಕ್ಷ	109
	ಭೌತಿಕ	687 ಸಂಖ್ಯೆ	639 ಸಂಖ್ಯೆ	93

ಒಟ್ಟಿನಲ್ಲಿ ಸದರಿ ಕಾಡಾದಲ್ಲಿ ಡಿಸೆಂಬರ್ 93ರ ಅಂತ್ಯಕ್ಕೆ 389.20 ಲಕ್ಷ ರೂ.ಗಳ ಗುರಿ ಹೊಂದಿದ್ದು ಅದರಲ್ಲಿ 358.74 ಲಕ್ಷ ರೂ.ಗಳ ಪ್ರಗತಿಯನ್ನು ಸಾಧಿಸಿದೆ. ಅಂದರೆ ಶೇಕಡ 92 ಗುರಿ ಸಾಧಿಸಿದಂತಾಗಿದೆ.

ಸಿಬ್ಬಂದಿಗಾಗಿ 1993-94ಕ್ಕೆ 90.00 ಲಕ್ಷ ರೂ.ಗಳ ಅನುದಾನವಿದ್ದು ಡಿಸೆಂಬರ್ 93 ರ ಅಂತ್ಯಕ್ಕೆ 65.00 ಲಕ್ಷ ರೂ.ಗಳ ಗುರಿ ಹೊಂದಿದ್ದು ವೆಚ್ಚ ರೂ. 50.19 ಲಕ್ಷಗಳಾಗಿವೆ. ಅಂದರೆ ಒಟ್ಟು ವೆಚ್ಚವಾದ 358.74 ಲಕ್ಷಕ್ಕೆ ಹೋಲಿಸಿದಲ್ಲಿ ಸದರಿ ಕಾಡಾದ ಸಿಬ್ಬಂದಿ ವೆಚ್ಚ ಕೇವಲ ಶೇಕಡ 14 ಆಗುತ್ತದೆ. ಭೂ ಅಭಿವೃದ್ಧಿ ಕೆಲಸಕ್ಕೂ ತಗಲುವ ವೆಚ್ಚವನ್ನು ಸಿಬ್ಬಂದಿ ವೆಚ್ಚವೆಂದು ಪರಿಗಣಿಸಿದರೂ ಸಹಾ ಈ ಕಾರ್ಯದಲ್ಲಿ 146.17 ಲಕ್ಷ ರೂ.ಗಳು ವೆಚ್ಚವಾಗಿದ್ದು ಭೌತಿಕ ಸಾಧನೆ 6508 ಹೆ. (ಅಂದರೆ ಶೇಕಡ 93) ಆಗಿರುತ್ತದೆ.

ಆದುದರಿಂದ ಕಾಡಾ ನೌಕರರ ಪಗಾರ ಮತ್ತು ಅಫೀಸ್ ಸಿಬ್ಬಂದಿಗಾಗಿ ಮಾಡಿರುವ ಖರ್ಚು ಅತ್ಯಲ್ಪದ್ದಾಗಿರುತ್ತದೆ.

ವಿಶ್ವ ಆಹಾರ ಯೋಜನೆಯಡಿ 1993-94ನೇ ಸಾಲಿನಲ್ಲಿ 232.84 ಲಕ್ಷ ರೂಪಾಯಿ ಮೊತ್ತದ ಕೆಲಸ ಮಂಜೂರಾಗಿದ್ದು ಬೈಲ ಹೊಂಗಲ ಕ್ಷೇತ್ರದಲ್ಲಿಯೂ, ವಿವಿದೋದ್ದೇಶ ಸಮುದಾಯ ಭವನಗಳು, ಬೈಲಹೊಂಗಲ, ಹೊಸೂರು ಕೆಂಗನೂರು ಹಾಗೂ ಬೇಗಿನಾಳ -ಬೇವಿನಕೊಪ್ಪ ರಸ್ತೆ ಸುಧಾರಣೆ ಕೆಲಸ ಇತ್ಯಾದಿ ಕಾಮಗಾರಿಗಳನ್ನು ತೆಗೆದುಕೊಂಡಿದ್ದು ಅವುಗಳು ಪ್ರಗತಿಯಲ್ಲಿವೆ.

+ ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬೆಳಗಾಂ ಜಿಲ್ಲೆಯ ಮಲಪ್ರಭಾ ಕಾಡಾದಲ್ಲಿ ಎಲ್ಲ ರೀತಿಯಿಂದ ಪ್ರಗತಿಪಥ ರೀತಿಯಲ್ಲಿ ಕೆಲಸ ನಡೆಯುತ್ತಿದೆ ಎಂದು ಹೇಳಿದರು. ಅವರು ಹಾಕಿಕೊಂಡಂತಹ ಕಾರ್ಯಕ್ರಮವನ್ನು ನಾವು ನೋಡಿದಾಗ ತಮಗೂ ಸಹಿತ ತಿಳಿದುಬರುತ್ತದೆ. ತಮಗೊಂದು ಉದಾಹರಣೆಯನ್ನು ಹೇಳುವುದಾದರೆ, ಆಯಕಟ್ಟ ರಸ್ತೆಯನ್ನು 4 ಕಿಲೋಮೀಟರ್ ಹಾಕಿಕೊಳ್ಳುವುದು. ಅದರಲ್ಲಿ 3ಕಿಲೋಮೀಟರ್ ಮಾಡುವುದು, ಸೆಂಟ್ ಪರ್ಸೆಂಟ್ ರಿಸಲ್ಟ್ ಎಂದು ತೋರಿಸುವುದು. ಇವತ್ತಿನ ದಿವಸ ಆಯಕಟ್ಟಿನ ಪ್ರದೇಶಗಳಲ್ಲಿ 70 ಹಳ್ಳಿಗಳು ಬರುತ್ತವೆ. 70 ಹಳ್ಳಿಗಳು ಬಂದರೆ ಅವರು ಮಾಡತಕ್ಕ ಕೆಲಸ ಏನೆಂದರೆ 4 ಕಿಲೋಮೀಟರ್ ರಸ್ತೆ ಕೆಲಸ ಎಂದು ಸ್ಕೀಂ ಹಾಕಿಕೊಳ್ಳುವುದು, ಅದರಲ್ಲಿ 3 ಕಿಲೋಮೀಟರ್ ರಸ್ತೆ ಮಾಡುವುದು, ನಾವು ಸೆಂಟ್ ಪರ್ಸೆಂಟ್ ಮಾಡಿದ್ದೇವೆಂದು ಹೇಳುವುದು, ಇದು ಒಂದು. ಎರಡನೆಯದು 1993-94ನೇ ಸಾಲಿನಲ್ಲಿ ಇವತ್ತಿನವರೆಗೆ ವಿಶ್ವ ಆಹಾರ ಯೋಜನೆಯಲ್ಲಿ ತೆಗೆದುಕೊಳ್ಳಬೇಕಾದ ಕೆಲಸದ ಮೀಟಿಂಗ್ ಆಗಿಲ್ಲ. ಯಾವುದೇ ಕೆಲಸ ತೆಗೆದುಕೊಳ್ಳಬೇಕೆಂದು ತೀರ್ಮಾನ ಆಗಲಿಲ್ಲ. ತಾವು ಏನು ಕೊಟ್ಟಿದ್ದೀರಿ ಅಂದರೆ ಮೊದಲು ಆನ್ ಗೋಯಿಂಗ್ ವರ್ಕ್ಸ್ ಕೊಟ್ಟಿದ್ದೀರಿ. 1993-94ನೇ ಸಾಲಿನಲ್ಲಿ ಯಾವ ಕೆಲಸ ತೆಗೆದುಕೊಳ್ಳಬೇಕೆಂದು ಅಲ್ಲಿಯ ಅಧ್ಯಕ್ಷರು ಪ್ರತಿಯೊಬ್ಬರಿಗೂ ಲೆಟರ್ ಬರೆದಿದ್ದಾರೆ. ಶಾಸಕರು ಹೇಳಿದ 5 ಲಕ್ಷ ರೂಪಾಯಿ ಕೆಲಸ ತೆಗೆದುಕೊಳ್ಳಲಿಕ್ಕೆ ಖುದ್ದಾಗಿ ಆಗಿ ಪತ್ರ ಬರೆದಿದ್ದಾರೆ. ಅಧ್ಯಕ್ಷರು ಸಹಿತ ಪತ್ರ ಬರೆದಿದ್ದಾರೆ. ಒಂದು ತಿಂಗಳ ಹಿಂದೆ ಪತ್ರ ಬರೆದಿದ್ದಾರೆ. ಅವರು ಪತ್ರ ಬರೆದು 11 ತಿಂಗಳಾಯಿತು. ಇವತ್ತಿನತನಕ ಅದು ಆಗಲಿಲ್ಲ. ಸುಮಾರು 2 ಕೋಟಿ ರೂಪಾಯಿ ಇವತ್ತಿನ ದಿವಸ ಹಣ ಹಾಗೆಯೇ ಇದೆಯೆಂದು ತಿಳಿದುಬರುತ್ತದೆ. ಅದೂ ಅಲ್ಲದೆ ಇವತ್ತಿನವರೆಗೆ ಕಾಡಾ ಅಡ್ಮಿನಿಸ್ಟ್ರೇಟರ್ ಒಂದು ಟೂರ್ ಪ್ರೋಗ್ರಾಮ್ ಅನ್ನು ಯಾವ ಎಂಎಲ್‌ಎಗಳಿಗೂ ಕಳುಹಿಸಿದ್ದು ಇಲ್ಲ. ಯಾರಿಗಾದರೂ ಕಳುಹಿಸಿದ್ದಾರೆಯೇ ಕೇಳಿ? ನಮ್ಮ ಕಾಡಾ ಅಭಿವೃದ್ಧಿ ಯೋಜನೆಯಲ್ಲಿ ಬರತಕ್ಕ ಯಾವುದೇ ಕೆಲಸವನ್ನು ಸರ್ಪ್ರೈಸ್ ಇನ್ಸ್‌ಪೆಕ್ಷನ್ ಮಾಡಿದ್ದಾರೆಯೇ? ಒಬ್ಬರು ಡೆಪ್ಯುಟಿ ಸೆಕ್ರೆಟರಿ ಇದ್ದಾರೆ, ಒಬ್ಬರು ಅಧ್ಯಕ್ಷರು ಆಡಳಿತಾಧಿಕಾರಿಗಳು ಬೇಕಾದರೆ ಅವರ ಮನೆಯವರನ್ನು ಕೇಳಿಕೊಳ್. ಅದೂ ಅಲ್ಲದೆ ಡೆಪ್ಯುಟಿ ಅಡ್ಮಿನಿಸ್ಟ್ರೇಟರ್ ಅವರು ಉತ್ತರ ಹಿಂದೂಸ್ಥಾನದಲ್ಲಿ, ದೆಹಲಿಯಲ್ಲಿ ಟೂರ್ ಮಾಡುವುದಕ್ಕೆ ಹೊರಟಿದ್ದಾರೆ. ಅವರು ಅಲ್ಲಿ ಟೂರ್ ಮಾಡಿದ ನಂತರ ಇಲ್ಲಿ ನಮ್ಮ ಜನತೆಗೆ ಹೇಳುವುದು ಏನಿದೆ? ನಮ್ಮ ವಸುಸ್ಥಿತಿನೇ ಬೇರೆ ಇದೆ. ತಾವೇನು ಫಿಗರ್ ಕೊಟ್ಟಿದೀರಿ. ಅದು

ನಿಜವಾಗಿಯೂ ಸರಿಯಾಗಿಲ್ಲ. ತಾವು ಪುನರ್ ಪರಿಶೀಲನೆ ಮಾಡಬೇಕು. ಅದರ ಬಗ್ಗೆ ತಾವೇ ಸ್ವತಃ ಒಂದು ರಿವ್ಯೂ ಮಾಡಿ. ಮತ್ತೊಬ್ಬರ ಮೇಲೆ ನನಗೆ ವಿಶ್ವಾಸವಿಲ್ಲ. ನಿಮ್ಮ ಮೇಲೆ ನನಗೆ ವಿಶ್ವಾಸವಿದೆ. ಆ ಡಿಪಾರ್ಟ್‌ಮೆಂಟ್ ಮೇಲೆ ತಾವು ರಿವ್ಯೂ ಮಾಡಿ. If you are satisfied that the Department is working satisfactorily, then I am happy ಇಲ್ಲದಿದ್ದರೆ ನೀವು ಸ್ವತಃ ನೋಡಿಕೊಳ್ಳಿ. ಇವತ್ತು ಆ ಆಫೀಸಿನಲ್ಲಿ ಮಾತ್ರ ಐನೂರು ಆರುನೂರು ಮಂದಿ ಕಾರಕೂನರು ಇದ್ದಾರೆ. ಅವರಿಗೆ ವರ್ಕ್ ಏನಿದೆ? ಅಲ್ಲಿ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್ ಇದೆ, ಕೋ-ಆಪರೇಷನ್ ಡಿಪಾರ್ಟ್‌ಮೆಂಟ್ ಇದೆ, ಫೈನಾನ್ಸ್ ಡಿಪಾರ್ಟ್‌ಮೆಂಟ್ ಇದೆ, ಚೌಳುಭೂಮಿ ಡಿಪಾರ್ಟ್‌ಮೆಂಟ್ ಇದೆ. 37 ಹಳ್ಳಿಗಳು ಮುಳುಗಡೆಯಾಗಿರುವ ಕಡೆ ಏನು ಕೆಲಸ ಆಗುತ್ತಿದೆ? ತಾವು ಗಂಟೆ ಬಾರಿಸುತ್ತಾ ಇದ್ದೀರಿ?

ಅಧ್ಯಕ್ಷರು : ಮಾನ್ಯ ಸದಸ್ಯರು ಸಂಕ್ಷಿಪ್ತವಾಗಿ ಹೇಳಬೇಕು

ಶ್ರೀ ಶಿವಾನಂದ ಹೆಚ್. ಕೌಜಲಗಿ : ಇದನ್ನು ಸಂಕ್ಷಿಪ್ತವಾಗಿ ಹೇಳುವುದಕ್ಕೆ ಹೇಗೆ ಸಾಧ್ಯ ಕೋಟಿಗಟ್ಟಲೆ ವ್ಯವಹಾರ ನಡೆದಿದೆ, ಸಂಕ್ಷಿಪ್ತವಾಗಿ ಹೇಳಿದರೆ ಹೇಗೆ ಗೊತ್ತಾಗುತ್ತದೆ? ತಾವೇ ಸ್ವತಃ ರಿವ್ಯೂ ಮಾಡಿ. ತಮಗೆ ಸರಿ ಅನಿಸುತ್ತದೆಯೇ ನೋಡಿ. ಒಂದು ಕೆಲಸ ಸಹ ಸರಿಯಾಗಿ ನಡೆದಿಲ್ಲ. ನನ್ನ ಮತದಾರ ಕ್ಷೇತ್ರದಲ್ಲಿ ಎರಡು ರಸ್ತೆಗಳು ಶುರುವಾಗಿವೆ. ಇವತ್ತಿನ ತನಕ ಅವು ಪೂರ್ತಿಯಾಗಿಲ್ಲ. ನಾವು ಊರಿನ ಮಂದಿಗೆ ರೋಡ್ ಮಂಜೂರಿ ಆಗಿದೆ. ನೀವು ಕಾಳಜಿ ಮಾಡಬೇಡಿಯೆಂದು ಹೇಳುತ್ತೇವೆ. ಆದರೆ ಅಲ್ಲಿ ಯಾವುದೇ ಕೆಲಸ ನಡೆದಿಲ್ಲ. ಆದ್ದರಿಂದ ಅದರ ಬಗ್ಗೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ವಿಷಯಗಳು ಪರಿಶೀಲನೆಗೆ ಯೋಗ್ಯವಾಗಿವೆ. ರಸ್ತೆಗಳ ಗುರಿ ಇಟ್ಟುಕೊಂಡಿರುವುದು ಕಡಿಮೆ. ಉದಾಹರಣೆಗೆ 75ಹಳ್ಳಿಗಳ ರಸ್ತೆಯ ಗುರಿಯನ್ನು ಹೆಚ್ಚು ಇಟ್ಟುಕೊಳ್ಳಬೇಕಾಗಿತ್ತು. 1994-95ನೇ ಸಾಲಿಗೆ ಹೆಚ್ಚಿನ ಗುರಿಯನ್ನು ಇಟ್ಟುಕೊಳ್ಳುವುದಕ್ಕೆ ಸೂಕ್ತ ತಿಳುವಳಿಕೆಯನ್ನು ಕೊಡಲಾಗುವುದು. ಶಾಸಕರನ್ನು ಕರೆದು ಸಭೆಯನ್ನು ಮಾಡಿ, ಜಿಲ್ಲಾಮಂತ್ರಿಗಳನ್ನು ಕರೆದು ರಿವ್ಯೂ ಮಾಡುವುದಕ್ಕೆ ಈಗಾಗಲೇ ಸೂಚನೆಯನ್ನು ನಮ್ಮ ಇಲಾಖೆಯ ಮುಖಾಂತರ ಕೊಡುತ್ತಿದ್ದೇವೆ. ತಮ್ಮನ್ನು ಕರೆದು ರಿವ್ಯೂ ಮಾಡಿ ಮುಂದಿನ ವರ್ಷಗಳಲ್ಲಿ ಹೇಗೆ ಮಾಡಬೇಕೆಂದು ಪರಿಶೀಲನೆ ಮಾಡುತ್ತಾರೆ. ವಿಶ್ವ ಆಹಾರ ಯೋಜನೆಯ ಮೀಟಿಂಗ್ ಕರೆದಿಲ್ಲವೆಂದು ಹೇಳಿದ್ದಾರೆ. ಅದು ಪ್ರತ್ಯೇಕವಾದ ಪ್ರಶ್ನೆಯಿದೆ. ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಈಗ ರೊಕ್ಕ ಬಿಡುಗಡೆ ಮಾಡಿದ್ದೀರಾ ಹೇಗೆ? ಕಡೆಗೆ ಎಲ್‌ಓಸಿ ಬಿಡುಗಡೆಯಾಗಿಲ್ಲ. ಬರೀ ದೊಡ್ಡ ಆಫೀಸ್ ಇದೆ. ಅಲ್ಲಿ ವಿಧಾನಸೌಧ ಇದ್ದ ಹಾಗೆ ಇದೆ. ರೊಕ್ಕನಾದರೂ ಬಿಡುಗಡೆ ಮಾಡ್ರಿ. ಅಲ್ಲಿರುವ ಸ್ಟಾಫ್ ಕಡಿಮೆ ಮಾಡ್ರಿ. ನ್ಯಾಷನಲ್ ವೇಸ್ಟ್ ಮಾಡುವುದು ಬೇಡ. ಅಗ್ರಿಕಲ್ಚರಲ್ ಡಿಪಾರ್ಟ್ಮೆಂಟ್, ಫೈನಾನ್ಸಿಪಾರ್ಟ್ಮೆಂಟ್, ಸೋಷಿಯಲ್ ವೆಲ್ಫೇರ್ ಡಿಪಾರ್ಟ್ಮೆಂಟ್ ಹೀಗೆ ತಲೆಗೊಂದು ಸ್ಟಾಫ್ ಇದೆ. ಸ್ಟಾಫನ್ನು ಸುಮ್ಮನೆ ಕೂಡಿಸಿ ಪಗಾರ ಕೊಡುತ್ತಾ ಇದ್ದೀರಿ.

ಅಧ್ಯಕ್ಷರು : ಮಂತ್ರಿಗಳು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ.

(2) ಕ್ಲಾಸಿಕ್ ಕಂಪ್ಯೂಟರ್ ಹಗರಣ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೇ, ಸುಮಾರು ಎರಡು ವರ್ಷಗಳ ಹಿಂದೆ, ರಾಜಕೀಯ ವಲಯದಲ್ಲಿ ಒಂದು ದೊಡ್ಡ ಬಿರುಗಾಳಿ ಎಬ್ಬಿಸಿದಂಥ ಈ ಕ್ಲಾಸಿಕ್ ಕಂಪ್ಯೂಟರ್ ಹಗರಣದ ಬಗ್ಗೆ ಗಮನ ಸೆಳೆಯುವ ಸೂಚನೆಯನು ಕಳುಹಿಸಿಕೊಟ್ಟಿದೇನೆ. ದಿ 8-2-94ರಲಿ ಎಲಾ ಪತ್ರಿಕೆಗಳ ಮುಖಪುಟಗಳಲ್ಲಿ,

ಕಂಪ್ಯೂಟರ್ ಹಗರಣ, ಶೀಘ್ರ ಆರೋಪ ಪಟ್ಟಿ ಸಲ್ಲಿಕೆ, ಅಲೆಗ್ಸಾಂಡರ್ ಪ್ರಮುಖ ಆರೋಪಿ, ಎನ್ನತಕ್ಕಂಥ ಶಿರೋನಾಮೆಯಲ್ಲಿ ವರದಿ ಬಂದಿದೆ. ಇವತ್ತು ಆರು ಜನ, ಪ್ರಮುಖರ ಮೇಲೆ ಅಲೆಗ್ಸಾಂಡರ್ ಸೇರಿದಂತೆ, ಒಂದು ಚಾರ್ಜ್ಶೀಟನ್ನು ಕಂಪ್ಯೂಟರ್ ಹಗರಣದ ಬಗ್ಗೆ ಹಾಕುತ್ತೇವೆಂದು ಪತ್ರಿಕೆಯಲ್ಲಿ ಬಂದಿದೆ. ಪತ್ರಿಕೆಯಲ್ಲಿ ನೋಡಿ ಓಡುವಂತಹ ಸ್ಥಿತಿ ರಾಜ್ಯದ ಜನರಿಗೆ ಬರುವುದೇ ಬೇಡ. ತಾವು ಮುಖ್ಯಮಂತ್ರಿಗಳಾದ ತಕ್ಷಣ ಈ ದೊಡ್ಡ ಹಗರಣದ ಬಗ್ಗೆ ತಾವು ಸಿ.ಬಿ.ಐ. ತನಿಖೆಗೆ ಒಳಪಡಿಸಿದಿರಿ. ನಾನು ತಮ್ಮನ್ನು ಕೇಳುವಂಥಾದ್ದು ಏನೆಂದರೆ ಆ ಸಿ.ಬಿ.ಐ. ತನಿಖಾ ವರದಿ ತಮ್ಮ ಕೈಗೆ ಸಿಕ್ಕಿದೆಯೇ? ಈಗಾಗಲೇ ಪತ್ರಿಕೆಯಲ್ಲಿ ಈ ವರದಿ ಒಂದು ಹಂತಕ್ಕೆ ಬಂದು ಅಲೆಗ್ಸಾಂಡರ್ ಸೇರಿ ಆರು ಜನ ಪ್ರಮುಖ ಆರೋಪಿಗಳ ಮೇಲೆ ಬೆಂಗಳೂರಿನ ನ್ಯಾಯಾಲಯದಲ್ಲಿ ಚಾರ್ಜ್ಶೀಟನ್ನು ಹಾಕುತ್ತೇವೆನ್ನುವುದು ಪತ್ರಿಕೆಯಲ್ಲಿ ಬಂದಿದೆ. ಅದಕ್ಕೋಸ್ಕರ ತಾವು ಆ ವಿವರವನ್ನು ಒದಗಿಸಿಕೊಟ್ಟರೆ ಒಳ್ಳೆಯದು. ಈಗಾಗಲೇ ಎರಡು ವರ್ಷವಾಗಿದೆ. ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಒಂದೇ ದಿವಸ ಸ್ಯಾಂಕ್ಷನ್ ಮಾಡಿ, ಒಂದೇ ದಿವಸ ಅಡ್ವಾನ್ಸ್ ಕೊಟ್ಟಿರುವುದನ್ನೇ ಸರಿಯಲ್ಲ ಎಂದು ಅದರ ತನಿಖೆಯನ್ನು ತಾವು ಸಿ.ಬಿ.ಐ.ಗೆ ವಹಿಸಿದ್ದೀರಿ. ಅದಕ್ಕೋಸ್ಕರ ಈ ವರದಿ ಕೈ ಸೇರಿದೆಯೇ. ಚಾರ್ಜ್ಶೀಟ್ ಹಾಕುತ್ತಿದ್ದಾರೆಯೇ? ಆರೋಪಿಗಳು ಯಾರು ಯಾರು? ಹಣಕಾಸಿನ ಜವಾಬ್ದಾರಿಯನ್ನು ವಹಿಸಿಕೊಂಡಂಥ ಹಿಂದಿನ ಮುಖ್ಯಮಂತ್ರಿ, ಅದರಲ್ಲೇನಾದರೂ ಪಾಲುದಾರರಾಗಿದ್ದಾರೆಯೇ? ಈ ಒಂದು ಆರೋಪಣಾ ಪಟ್ಟಿಯಲ್ಲಿ ಅವರೂ ಸೇರಿದ್ದಾರೆಯೇ? ದಯಮಾಡಿ ಇದರ ವಿವರವನ್ನು ಒದಗಿಸಿಕೊಟ್ಟರೆ, ನಾನು ಉಪ ಪ್ರಶ್ನೆ ಕೇಳುವುದಕ್ಕೆ ಅನುಕೂಲವಾಗುತ್ತದೆ. ಆ ಚಾರ್ಜ್ಶೀಟಿನ ವಿವರವನ್ನು ಮತ್ತು ಸಿ.ಬಿ.ಐ. ತನಿಖಾ ವರದಿಯು ನಿಮ್ಮ ಕೈ ಸೇರಿದ್ದರೆ, ಅದರ ವಿವರವನ್ನು ದಯಮಾಡಿ ಒದಗಿಸಬೇಕೆಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಯವರು) : ಸನ್ಮಾನ್ಯ ಅಧ್ಯಕ್ಷರೇ,

ದಿನಾಂಕ 31.3.1992ರ ಸಿಆಸುಇ 83 ಡಿಎಫ್ಆರ್ 92 ಸಂಖ್ಯೆಯ ಸರ್ಕಾರಿ ಆದೇಶದಲ್ಲಿ ಮೆಸರ್ಸ್ ಕ್ಲಾಸಿಕ್ ಕಂಪ್ಯೂಟರ್ ಸಿಸ್ಟಮ್ಸ್, ಬೆಂಗಳೂರು ಅವರಿಂದ 5.27 ಕೋಟಿ ರೂಪಾಯಿಗಳ ಒಟ್ಟು ವೆಚ್ಚದಲ್ಲಿ 100 ಆಪಲ್ ಮೆಕಿಂಟೋಷ ಕಂಪ್ಯೂಟರುಗಳನ್ನು ಕೊಳ್ಳಲು ಮಂಜೂರಾತಿ ನೀಡಲಾಗಿತ್ತು. ಅದೇ ಆದೇಶದಲ್ಲಿ ಈ ಕಂಪ್ಯೂಟರುಗಳನ್ನು ಕೊಳ್ಳಲು ಒಟ್ಟು ಹಣದ ಶೇಕಡಾ 30ರಷ್ಟನ್ನು ಮುಂಗಡವಾಗಿ ಬಿಡುಗಡೆ ಮಾಡಲು ಮಂಜೂರಾತಿಯನ್ನೂ ಸಹ ನೀಡಲಾಗಿತ್ತು. ಅದರಂತೆ, ಒಟ್ಟು ಹಣದ ಶೇಕಡಾ 30ರಷ್ಟು ಅಂದರೆ, ರೂ. 1,58,10,000ಗಳ ಮೊತ್ತವನ್ನು ದಿನಾಂಕ 31.3.1992ರ ಚೆಕ್ ಮುಖಾಂತರ ಮೆಸರ್ಸ್ ಕ್ಲಾಸಿಕ್ ಕಂಪ್ಯೂಟರ್ ಸಿಸ್ಟಮ್ಸ್ ಬೆಂಗಳೂರು ಅವರಿಗೆ ಮುಂಗಡವಾಗಿ ಪಾವತಿ ಮಾಡಲಾಯಿತು. ದಿನಾಂಕ 3.7.1992ರಂದು ಈ ಪ್ರಸ್ತಾವನೆಯು ಒಟ್ಟು ವೆಚ್ಚದಲ್ಲಿ ಮೆಸರ್ಸ್ ಕ್ಲಾಸಿಕ್ ಕಂಪ್ಯೂಟರ್ ಸಿಸ್ಟಮ್ಸ್ ಅವರಿಂದ 100 ಆಪಲ್ ಮೆಕಿಂಟೋಷ ಕಂಪ್ಯೂಟರುಗಳನ್ನು ಖರೀದಿಸಲು ಹೊರಡಿಸಲಾದ ಆದೇಶವು ಸಚಿವ ಸಂಪುಟದಿಂದ ಅನುಸಮರ್ಥಿಸಲ್ಪಟ್ಟಿತು.

ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಶ್ರೀ.ಎಂ.ಸಿ. ನಾಣಯ್ಯ ಮತ್ತು ಇನ್ನೊಬ್ಬರು ಸಲ್ಲಿಸಿದ 21340:92ಸಂಖ್ಯೆಯ ರಿಟ್ ಅರ್ಜಿಯಲ್ಲಿ ಈ ಕಂಪ್ಯೂಟರುಗಳನ್ನು ಖರೀದಿಸಲು ಮಂಜೂರಾತಿ ನೀಡಿದ ಕಾರ್ಯವಿಧಾನವನ್ನು ಪ್ರಶ್ನಿಸಿದ್ದರು. ದಿನಾಂಕ 3.12.1992ರಂದು ಸದರಿ ರಿಟ್ ಅರ್ಜಿಯ ಮೇಲೆ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನಲ್ಲಿ ದಿನಾಂಕ 31.3.1992ರ ಡಿಪಿಎಆರ್ 83 ಡಿಎಫ್ಆರ್ 92 ಸಂಖ್ಯೆಯ ಸರ್ಕಾರಿ ಆದೇಶವನ್ನು ರದ್ದುಗೊಳಿಸಿ, ದಿನಾಂಕ 31.3.1992ರ ನಂತರ ತತ್ಪರಿಣಾಮವಾಗಿ ಕೈಗೊಂಡ ಕ್ರಮವನ್ನು ಅನೂರ್ಜಿತಗೊಳಿಸಲಾಗಿದೆ. ಉಚ್ಚ ನ್ಯಾಯಾಲಯದ ತೀರ್ಪಿನ

ಹಿನ್ನೆಲೆಯಲ್ಲಿ ಮತ್ತು ಸರ್ಕಾರದ ವಿಶ್ವಾಸಾರ್ಹತೆಯನ್ನು ಖಚಿತಪಡಿಸಲು ಈ ಖರೀದಿ ವ್ಯವಹಾರವನ್ನು ತನಿಖೆ ನಡೆಸಲು ಸಿ.ಬಿ.ಐ. ಅವರಿಗೆ ವಹಿಸಲಾಗಿದೆ. ಸಿ.ಬಿ.ಐ ಅವರು ಕೈಗೊಂಡ ತನಿಖೆಯು ಅಂತಿಮ ಘಟ್ಟದಲ್ಲಿದ್ದು ಇದಾದ ನಂತರ ನ್ಯಾಯಾಲಯದಲ್ಲಿ ಚಾರ್ಜ್ ಶೀಟನ್ನು ದಾಖಲು ಮಾಡಲಾಗುವುದು. ಸಿಬಿಐ ಅವರ ಮುಂದೆ ದೂರನ್ನು ದಾಖಲು ಮಾಡಿರುವುದು ಕ್ರಿಮಿನಲ್ ವ್ಯವಹರಣೆಯನ್ನು ನಡೆಸಿದಂತಾಗಿದೆ. ಮತ್ತು ಸಿಬಿಐ ಅವರು ನ್ಯಾಯಾಲಯದಲ್ಲಿ ಚಾರ್ಜ್‌ಶೀಟನ್ನು ದ್ಧಾಖಲು ಮಾಡುವುದರಿಂದ ಸರ್ಕಾರಕ್ಕೆ ಸಿಬಿಐ ವರದಿ ಸಲ್ಲಿಸುವ ಪ್ರಶ್ನೆ ಇರುವುದಿಲ್ಲ. ಶ್ರೀ.ವಿ. ಗೋಕುಲಕೃಷ್ಣ, ನಿರ್ದೇಶಕರು ಪ್ರೊಪ್ರೈಟರ್ ಮೆಸರ್ಸ್ ಕ್ಲಾಸಿಕ್ ಕಂಪ್ಯೂಟರ್ ಸಿಸ್ಟಮ್ಸ್, ಬೆಂಗಳೂರು ಅವರಿಗೆ ಪಾವತಿ ಮಾಡಲಾದ ಮುಂಗಡ ಹಣವನ್ನು ವಸೂಲು ಮಾಡಲು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಸರ್ಕಾರ ನಿರ್ಧರಿಸಿದ್ದು, ಇದಕ್ಕಾಗಿ ಒಬ್ಬರು ವಕೀಲರನ್ನೂ ಸಹ ನೇಮಕ ಮಾಡಲಾಗಿದೆ. ಮತ್ತು ಮೊಕದ್ದಮೆಯನ್ನು ಅತಿ ಶೀಘ್ರದಲ್ಲಿಯೇ ಹೂಡಲಾಗುವುದು.

+ ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಒಂದೇ ಒಂದು ಬಹಳ ಪ್ರಮುಖವಾಗಿರುವಂಥಾದ್ದು ತಾವು ಹೇಳಿದ್ದೀರಿ. ಸಿ.ಬಿ.ಐ.ನವರ ಮುಂದೆ ದೂರನ್ನು ದಾಖಲ್ಮಾಡಿರುವುದು. ಕ್ರಿಮಿನಲ್ ವ್ಯವಹಾರಣೆಯನ್ನು ನಡೆಸಿದಂತಾಗಿದೆ, ಮತ್ತು ಸಿ.ಬಿ.ಐ.ನವರು ನ್ಯಾಯಾಲಯದಲ್ಲಿ ಚಾರ್ಜ್ಶೀಟನ್ನು ದಾಖಲು ಮಾಡುವುದರಿಂದ, ಸರ್ಕಾರಕ್ಕೆ ಸಿ.ಬಿ.ಐ. ವರದಿ ಸಲ್ಲಿಸುವ ಪ್ರಶ್ನೆ ಬರುವುದಿಲ್ಲ ಎಂದು ಹೇಳಿದ್ದೀರಿ. ಇದನ್ನು ಒಪ್ಪಿಕೊಳ್ಳುತ್ತೇನೆ ಆದರೆ, ಎರಡನೇ ಪ್ರಶ್ನೆ, ಗೋಕುಲಕೃಷ್ಣ ನಿರ್ದೇಶಕರು, ಪ್ರೊಪ್ರೈಟರ್, ಮೆಸರ್ಸ್ ಕ್ಲಾಸಿಕ್ ಕಂಪ್ಯೂಟರ್ ಸಿಸ್ಟಮ್ಸ್, ಬೆಂಗಳೂರು ಇವರಿಗೆ ಪಾವತಿ ಮಾಡಲಾದ ಮುಂಗಡ ಹಣವನ್ನು ವಸೂಲ್ಮಾಡಲು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಸರ್ಕಾರ ನಿರ್ಧರಿಸಿದ್ದು, ಇದಕ್ಕಾಗಿ ಒಬ್ಬರು ವಕೀಲರನ್ನೂ ಸಹ ನೇಮಕ ಮಾಡಲಾಗಿದೆ ಮತ್ತು ಮೊಕದ್ದಮೆಯನ್ನು ಅತಿ ಶೀಘ್ರದಲ್ಲಿಯೇ ಹೂಡಲಾಗುವುದು ಎಂದು ಹೇಳಿದ್ದೀರಿ. ಸ್ವಾಮಿ, ನಾನು ನಿಮ್ಮನ್ನು ಕೇಳುತ್ತೇನೆ, ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳ ಅವ್ಯವಹಾರದ ಬಗ್ಗೆ ತಾವು ಈ ಸದನಕ್ಕೆ ಸ್ಪಷ್ಟ ಮಾಡುವುದಕ್ಕೆ ಇಷ್ಟಪಟ್ಟಿದ್ದೀರಾ. ಗೋಪಾಲಕೃಷ್ಣ ಅವರಿಗೆ, ಅವತ್ತೇ ಚೆಕ್ ಕೊಟ್ಟು, ಅವತ್ತೇ ಹಣವನ್ನು ಡ್ರಾ ಮಾಡಿದರಲ್ಲ. ಅದಕ್ಕೆ ಗೋಪಾಲಕೃಷ್ಣ ಸಹಿ ಮಾಡಿದ್ದಾರಾ? ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳ ಚೆಕ್ಕು ನೀವು ಕೊಟ್ಟಮೇಲೆ ಅದು ಬ್ಯಾಂಕ್ ಅಕೌಂಟಿಗೆ ಜಮಾ ಆಗದೇ, ಅವತ್ತೇ ಡ್ರಾ ಮಾಡಿಕೊಂಡು ತರುವುದಕ್ಕೆ ಹೇಗೆ ಸಾಧ್ಯವಾಯಿತು.

ಮತ್ತು ಇಬ್ಬರು ವಕೀಲನ್ನು ನೇಮಕ ಮಾಡಿದ ಮೇಲೆ ಅವತ್ತಿನಿಂದ ಇವತ್ತಿನವರೆಗೂ ಈ ಗೋಕುಲಕೃಷ್ಣ ಅವರ ವಿರುದ್ಧ ಏತಕ್ಕೆ ಕೇಸನ್ನು ದಾಖಲು ಮಾಡಲಿಲ್ಲ? ತಾವು ಅಧಿಕಾರವಹಿಸಿಕೊಂಡು ಒಂಧೂಕಾಲು ವರ್ಷದಿಂದಲೂ ಸಹ ಕೇವಲ ವಕೀಲರನ್ನು ನೇಮಕ ಮಾಡಿದರೆ ಕೇಸು ದಾಖಲು ಮಾಡಿದಂತಾಯಿತೇನು? ಈ ಗೋಕುಲಕೃಷ್ಣ 1-25 ಕೋಟಿ ರೂಪಾಯಿಗಳನ್ನು ಚೆಕ್ ಮೂಲಕ ಡ್ರಾ ಮಾಡಿದ್ದಾನೆ ಅದು ಕ್ಲಾಸಿಕ್ ಕಂಪ್ಯೂಟರ್ಗೆ ಜಮಾ ಆಗಿದೆ. ಅದನ್ನುವುದಾದರೆ ಅವನ ಮೇಲೆ ಮಂದಿನ ಕ್ರಮ ತೆಗೆದುಕೊಳ್ಳಿ, ಇದು ಒಂದು. ಎರಡನೇಯದು ಕಾನೂನು ಬಾಹಿರವಾಗಿ ಒಂದೇ ದಿವಸ ಬೇರೆಯವರಿಂದ ಟೆಂಡರ್ ಕರೆಯದೆ ಕೊಟೇಶನ್ಸ್ ತೆಗೆದುಕೊಳ್ಳದೆ ಒಂದೇ ದಿವಸದಲ್ಲಿ ತೀರ್ಮಾನ ತೆಗೆದುಕೊಂಡು ಚೆಕ್ಕು ಕೊಟ್ಟು ಈ ಜನರ ತೆರಿಗೆ ಹಣವಾದ 1-25 ಕೋಟಿ ರೂಪಾಯಿಗಳನ್ನು ದುರುಪಯೋಗ ಮಾಡಿಕೊಂಡಿರುವಂಥಾದ್ದು ಸರಿಯೇ? ಈ ಬಗ್ಗೆ ನಿಮ್ಮ ಕಡೆಯಿಂದ ಏನು ಮಾಡಿದ್ದೀರಿ? ಏಕೆ ಕೇಸ್ ಹಾಕಲಿಲ್ಲ, ಇದನ್ನು ಸ್ಪಷ್ಟ ಮಾಡಬೇಕು. ಈ ಚೆಕ್ಕನ್ನು ಯಾರು ಡ್ರಾ ಮಾಡಿದ್ದಾರೆ 1 ಕೋಟಿ 25 ಲಕ್ಷ ರೂಪಾಯಿಗಳ ವಿವರವನ್ನು

ಒದಗಿಸಿಕೊಡಿ. ಆ ಚೆಕ್ಕು ನಂಬರು, ಯಾವ ಬ್ಯಾಂಕಿನಲ್ಲಿ ಡ್ರಾ ಮಾಡಿದ್ದಾದರೆಂಬ ವಿವರ ಒದಗಿಸಿಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಈ ಕೇಸು ಸಿವಿಲ್ ವ್ಯಾಜ್ಯ ಆದುದ್ದರಿಂದ ನಾವು ಮೊಕದ್ದಮೆ ನ್ಯಾಯಾಲಯದಲ್ಲಿ ಹಾಕುವ ಮೊದಲು ಅವರಿಗೆ ನೋಟೀಸ್ ಕೊಡಬೇಕಾಗುತ್ತದೆ. ಆದ್ದರಿಂದ ನೋಟೀಸ್ ನಾವು ಕೊಟ್ಟ ಮೇಲೆ ಅವರು ಉತ್ತರ ಕೊಡಲಿಲ್ಲ. ಉತ್ತರಕೊಡದೇ ಇದುದ್ದರಿಂದ ಈಗ ವಕೀಲರನ್ನು ನೇಮಕ ಮಾಡಿ ಮೊಕದ್ದಮೆ ಹಾಕುತ್ತಿದ್ದೇವೆ. ಏಕೆಂದರೆ ಕೋರ್ಟಿಗೆ ಹಾಕುವಾಗ ಪ್ಲೆಂಟ್ ತಯಾರು ಮಾಡಿಕೊಂಡು ಆಮೇಲೆ ಮಾಡಬೇಕಾಗುತ್ತದೆ. ಆ ಕೆಲಸ ನಾವು ಮಾಡಿದ್ದೇವೆ, ಅದರಲ್ಲಿ ಕ್ರಮ ಬದ್ಧವಾಗಿ ಮಾಡಬೇಕಾಗುತ್ತದೆ ಅವಸರವಾಗಿ ಒಮ್ಮೆಲೆ ನಾವು ಮೊಕದ್ದಮೆ ಹೂಡುವುದಕ್ಕಾಗುವುದಿಲ್ಲ. ಇದು ಸ್ವಲ್ಪ ತಡವಾಗುವುದಕ್ಕೆ ಕಾರಣವೇನೆಂದರೆ ಇದು ಸಿ.ಬಿ.ಐ. ತನಿಖೆಯಲ್ಲಿರುವಾಗ ಅದು ಅಂತಿಮ ಘಟ್ಟಕ್ಕೆ ಬರುವವರೆಗೂ ಮೊಕದ್ದಮೆಯನ್ನು, ಸಿವಿಲ್ ದಾವೆಯನ್ನು ಹಾಕುವುದಕ್ಕೆ ಸ್ವಲ್ಪ ಕಾಯುವುದು ವಿಹಿತ ಎಂದು ಸುಮ್ಮನಿದ್ದೆವು. ಮತ್ತೆ ತಾವು ಎಲ್ಲಾ ವಿವರ ಕೇಳಿದ್ದೀರಿ. ಅವರದ್ದು ದಸ್ಕತ್ ಇಲ್ಲ ಮತ್ತೊಂದು ಇಲ್ಲ ಎಂದು ಹೇಳಿದ್ದೀರಿ. ಇದು ಸಿ.ಬಿ.ಐ. ತನಿಖೆಯಲ್ಲಿರುವುದರಿಂದ ನಾವು ಆ ವಿವರವನ್ನು ಕೊಡುವುದಕ್ಕೆ ಅಪೇಕ್ಷೆ ಪಡುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಗೋಕುಲಕೃಷ್ಣ, ಅಧ್ಯಕ್ಷರು, ಕ್ಲಾಸಿಕ್ ಕಂಪ್ಯೂಟರ್ರವರು ಆ ಚೆಕ್ಕನ್ನು ತೆಗೆದುಕೊಂಡಿದ್ದಾರೆಯೇ? ಅವರು ಅದಕ್ಕೆ ಸಹಿ ಮಾಡಿ ದುಡ್ಡು ತೆಗೆದುಕೊಂಡಿದ್ದಾರೆಯೇ? ಈ ವಿವರ ಒದಗಿಸಿಕೊಡಿ. ಈ ಕೇಸು ಮುಂದುವರಿಯಬೇಕಾದರೆ....

ಶ್ರೀ ಎಂ. ವೀರಪ್ಪ ಮೊಯಿಲಿ : ಸಿವಿಲ್ ಕೋರ್ಟ್ನಲ್ಲಿ ಮೊಕದ್ದಮೆ ಹೂಡುವುದು ಗೋಕುಲಕೃಷ್ಣರ ಮೇಲೆ ಆದ್ದರಿಂದ...

ಶ್ರೀ ಬಿ.ಎಸ್. ಯಡಿಯೂರಪ್ಪ : ಆ 1 ಕೋಟಿ 25 ಲಕ್ಷ ರೂಪಾಯಿಗಳನ್ನು ಗೋಕುಲಕೃಷ್ಣರವರು ಡ್ರಾ ಮಾಡಿದ್ದಾರೆಯೇ? ಅವರು ಸಹಿ ಮಾಡಿದಿದ್ದಾರೆಯೇ ಅಷ್ಟು ಮಾತ್ರ ವಿವರ ಕೊಡಿ ಸಾಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಲೈಯಬಿಲಿಟಿ ಇರತಕ್ಕಂಥಾದ್ದು ಗೋಕುಲಕೃಷ್ಣರ ಮೇಲೆ. ಅದು ಕ್ರಿಮಿನಲ್ ಕೌನ್ಸ್ಪಿರಿಸಿ ಮತ್ತೊಂದು ಇದ್ದರೆ ಅದು ಸಪರೇಟ್ ಆಗಿ ಸಿ.ಬಿ.ಐ.ನವರು ತನಿಖೆ ಮಾಡುತ್ತಾರೆ. ನಮಗೆ ಸಿವಿಲ್ಲೈಯಬಿಲಿಟಿ ಗೋಕುಲಕೃಷ್ಣರ ಮೇಲೆ ಇರುವುದರಿಂದ ಅವರ ಮೇಲೆ ಮೊಕದ್ದಮೆ ಹೂಡಲಾಗುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ ಅವರು ಚೆಕ್ಕು ತೆಗೆದುಕೊಂಡು ಡ್ರಾ ಮಾಡಿದ್ದಾರಾ? ನೀವೇ ಹಣಕಾಸಿನ ಸಚಿವರು ಆಗಿರುವುದರಿಂದ ಈ ವಿವರಗಳನ್ನು ಕೊಡಬಹುದಲ್ಲವೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಇದೆಲ್ಲಾ ಸಿ.ಬಿ.ಐ.ಗೆ ಸಂಬಂಧಪಟ್ಟ ವಿಚಾರಗಳು ಆಗಿರುವುದರಿಂದ ಆ ವಿವರಗಳನ್ನು ಕೊಡುವುದಕ್ಕೆ ನಾನು ಅಪೇಕ್ಷೆ ಪಡುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಾವು ನಮ್ಮ ರಕ್ಷಣೆಗೆ ಬರಬೇಕು. ಇಡೀ ರಾಜ್ಯದ ಜನರಿಗೆ ಸೇರಿದ 1 ಕೋಟಿ 25 ಲಕ್ಷ ರೂಪಾಯಿಗಳನ್ನು 2 ವರ್ಷಗಳ ಹಿಂದೆ ಕೊಟ್ಟು ಆ ಹಣ ರಿಕವರಿಯಾಗದೆ ಕಂಪ್ಯೂಟರ್ ಬಾರದೇ ಇರುವಂತಹ ಒಂದು ಹಗರಣ ಇದಾಗಿದೆ ಸಿ.ಬಿ.ಐ. ತನಿಖೆ ಏನಾದರೂ ಮಾಡಲಿ. ಆ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕಾಗುವುದಿಲ್ಲ. ಅವರು ಅವರ

ಮೇಲೆ ಮೊಕದ್ದಮೆ ಹೂಡುತ್ತಾರೆ. ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ನಾನು ಕೇಳುತ್ತಿರುವಂತಾದ್ದು ಏನೆಂದರೆ ಕ್ಲಾಸಿಕ್ ಕಂಪ್ಯೂಟರ್ ನಿರ್ದೇಶಕರು ಆ 1 ಕೋಟಿ 25ಲಕ್ಷ ರೂಪಾಯಿಗಳನ್ನು ಅವತ್ತೇ ಡ್ರಾ ಮಾಡಿದ್ದಾರಾ? ಅವರು ಸಹಿ ಮಾಡಿದ್ದಾರಾ? ಇಷ್ಟೇ ವಿವರಗಳನ್ನು ನಾನು ಮುಖ್ಯಮಂತ್ರಿಗಳಿಂದ ಕೇಳುತ್ತಿದ್ದೇನೆ, ಬೇರೆ ಏನೂ ವಿವರಗಳನ್ನು ಕೇಳುತ್ತಿಲ್ಲ ಅವರು ಡ್ರಾ ಮಾಡಿದ್ದಾರೆಂದು ಹೇಳಿದರೆ ಸಾಕು, ಮುಂದಿನ ಕಾರ್ಯಕ್ರಮ ತಾವು ತೆಗೆದುಕೊಳ್ಳಿ ಎರಡನೆಯದು ನೀವು ಮುಖ್ಯಮಂತ್ರಿ ಆಗಿ ಒಂದೂಕಾಲು ವರ್ಷ ಆದ ಮೇಲೂ ಸಹ ಕೇವಲ ಲಾಯರ್ ನೇಮಕ ಮಾಡಿದ್ದೇನೆಂದು ಹೇಳುತ್ತಿದ್ದೀರೇ ಹೊರತು ಇದುವರೆಗೂ ಕೇಸ್ ಹಾಕಿಲ್ಲ ಎಂದು ಹೇಳುತ್ತಿದ್ದೀರಿ. ಅವರನ್ನು ಉಳಿಸಬೇಕು ಎನ್ನುವಂತಹ ಪ್ರಯತ್ನ ಏನಾದರೂ ಇದೇ ಏನು? ಅವರನ್ನು ರಕ್ಷಣೆ ಮಾಡುತ್ತಿದ್ದೀರಿ ಎಂದು ನಾನು ಆರೋಪ ಮಾಡುವುದಕ್ಕಾಗುತ್ತದೆ ಏನು? ಹೀಗಾದರೆ ಜನರು ನಾಳೆ ತಪ್ಪು ಅಭಿಪ್ರಾಯಕ್ಕೆ ತಮ್ಮ ಬಗ್ಗೆ ಬರುತ್ತಾರೋ ಇಲ್ಲವೋ? ಹಿಂದೆ ಯಾವ ಕಳಕಳಿಯಲ್ಲಿ ಸಿ.ಬಿ.ಐ. ತನಿಖೆಯನ್ನು ನೀವು ಮಾಡಿದಿರೋ ಅದೇ ಒಂದು ಕಳಕಳಿಯಲ್ಲಿ ಈ ಒಂದು ಕ್ಲಾಸಿಕ್ ಕಂಪ್ಯೂಟರ್ಸ್ ನಿರ್ದೇಶಕನ ಬಗ್ಗೆ ಕ್ರಮ ತೆಗೆದುಕೊಳ್ಳಲು ಹಿಂದು ಮುಂದು ನೋಡುತ್ತಿರುವ ಉದ್ದೇಶ ಏನು?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ನಮ್ಮ ಹಿರಿಯ ಸದಸ್ಯರು ಯಡಿಯೂರಪ್ಪನವರಿಗೆ ಕೋರ್ಟ್ ವ್ಯವಹಾರಗಳೆಲ್ಲಾ ಅಂದರೆ ಸಿವಿಲ್ ಮೊಕದ್ದಮೆಗಳು ಏನಿದೆ, ಕ್ರಿಮಿನಲ್ ಮೊಕದ್ದಮೆಗಳು ಏನಿದೆ ಎಂದು ಗೊತ್ತಿದೆ. ಸಿ.ಬಿ.ಐ. ನವರು ಎಲ್ಲಾ ಕಾಗದ ಪತ್ರಗಳನ್ನು ಸೀಜ್ ಮಾಡಿಕೊಂಡು ಅವರ ಕಸ್ಟಡಿಯಲ್ಲಿಟ್ಟುಕೊಂಡಿದ್ದಾರೆ. ತಾವು ಏನು ವಿವರಗಳನ್ನು ಕೇಳುತ್ತಿದ್ದೀರಿ ಆ ವಿವರಗಳೆಲ್ಲಾ ಸಿಬಿಐನವರು ವಶ ಮಾಡಿಕೊಂಡಂತಹ ಆ ಕಾಗದ ಪತ್ರಗಳಲ್ಲಿ ಇದೆ. ಅದಕ್ಕಾಗಿಯೇ ನಮಗೆ ಕೊಡುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಸಹ ಅವರನ್ನು ಉಳಿಸುವಂತಹ ಪ್ರಯತ್ನ ಮಾಡುತ್ತಿದ್ದೀರಾ? ಕೇವಲ ಜನರಿಗೆ ತೋರಿಕೆಗೋಸ್ಕರ ಈ ಒಂದು ಸಿ.ಬಿ.ಐ. ತನಿಖೆ ನಾಟಕ ಮಾಡಿ ಮುಚ್ಚಿ ಹಾಕುವಂತಹ ಪ್ರಯತ್ನ ಮಾಡುತ್ತಿದ್ದೀರಿ. ನಿಮಗೂ ಸಹ ಇವತ್ತು ಹಣಕಾಸಿನ ಸಚಿವರಾಗಿ ಹಾಗೂ ಮುಖ್ಯಮಂತ್ರಿಗಳಾಗಿ ಉತ್ತರ ಕೊಡಲಿಕ್ಕೆ ಆಗಲಿಲ್ಲ. ಈ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಬಿ.ಜೆ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು)

ನಿಯಮ 334ರ ಮೇರೆಗೆ ಚರ್ಚೆ

(1) ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಹೆಚ್ಚಿನ ಸೌಲಭ್ಯಕ್ಕೆ ಆಡಳಿತಾತ್ಮಕ ಅನುಮೋದನೆ ದೊರಕಿಸಿ ಕೊಡುವುದು.

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರದಲ್ಲಿ ಜಿಲ್ಲಾ ಆಸ್ಪತ್ರೆ ಇದ್ದು ಈ ಜಿಲ್ಲಾ ಆಸ್ಪತ್ರೆಯು ಜಿಲ್ಲೆಯಾದ್ಯಂತ ಇರುವವರಿಗೆ ಸಾರ್ವಜನಿಕರಿಗೆ ಆರೋಗ್ಯ ಸೌಲಭ್ಯವನ್ನು ಒದಗಿಸುತ್ತಾ ಇದೆ. ಈ ಆಸ್ಪತ್ರೆಯಲ್ಲಿ ರೋಗಿಗಳ ಒತ್ತಡಕ್ಕೆ ಅನುಗುಣವಾಗಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಸೌಲಭ್ಯ ಹಾಗೂ ಸಲಕರಣೆಗಳನ್ನೊಳಗೊಂಡ ಅಭಿವೃದ್ಧಿ ಕಾರ್ಯಗಳು ಜರೂರಾಗಿ ಆಗಬೇಕಾಗಿದೆ. ಈ ದಿಶೆಯಲ್ಲಿ 1993-94ನೇ ಸಾಲಿನ ಆಯವ್ಯಯದಲ್ಲಿ ಜಿಲ್ಲಾ ಆಸ್ಪತ್ರೆಯ ಅಭಿವೃದ್ಧಿ ಕಾರ್ಯ ಸುಮಾರು 60 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಸೇರ್ಪಡೆಯಾಗಿದೆ. 1993-94ನೇ ಸಾಲಿನ ಆರ್ಥಿಕ ವರ್ಷದ ಕೊನೆಯಂಚಿನಲ್ಲಿದ್ದರೂ ಸಹ ಇನ್ನೂ ಕೂಡ ಈ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯು ಸರ್ಕಾರದ

ವತಿಯಿಂದ ದೊರಕಿರುವುದಿಲ್ಲ. ಈ ಕಾರಣದಿಂದ ಜಿಲ್ಲಾಆಸ್ಪತ್ರೆಯು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗದೆ ಉತ್ತಮ ಸೌಲಭ್ಯದಿಂದ ಶ್ರೀಸಾಮಾನ್ಯ ವಂಚಿತನಾಗುವ ಪರಿಸ್ಥಿತಿ ಇದೆ. ಈ ಕಾರಣದಿಂದ ಜಿಲ್ಲಾ ಆಸ್ಪತ್ರೆ ಅಭಿವೃದ್ಧಿ ಕಾರ್ಯಕ್ಕೆ ಆಡಳಿತಾತ್ಮಕ ಮಂಜೂರಾತಿ ದೊರಕಿಸಿಕೊಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆ ಮಾಡುತ್ತೇನೆ.

ಮಂಡ್ಯ ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸುವ ದಿಸೆಯಲ್ಲಿ, ಈಗ ಹಾಲಿ ಇರುವ ಒಳರೋಗಿಗಳ ಕಟ್ಟಡ ಮೇಲೆ ಮಹಡಿ ಕಟ್ಟಡದ ಕಾಮಗಾರಿಯ ಸಲುವಾಗಿ, ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸದರಿ ಕಾಮಗಾರಿಗೆ ರೂ. 54.00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿರುವ ಮೇರೆಗೆ, ನಿರ್ದೇಶಕರು, ಆರೋಗ್ಯ ಮತ್ತು ಕು.ಕ. ಸೇವೆಗಳು, ಇವರು ಆಡಳಿತಾತ್ಮಕ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಸದರಿ ಕಾಮಗಾರಿಗೆ 1993-94ನೇ ಸಾಲಿನ ಆಯವ್ಯಯದಲ್ಲಿ 14.00 ಲಕ್ಷ ರೂ.ಗಳ ಅನುದಾನವನ್ನು 4210 ವೈದ್ಯಕೀಯ ಮತ್ತು ಜನಾರೋಗ್ಯದ ಮೇಲಿನ ಬಂಡವಾಳ ವೆಚ್ಚದಡಿಯಲ್ಲಿ ಸೇರಿರುವುದಲ್ಲದೆ, ಈ ಕೆಳಕಂಡ ಎರಡು ಕೈಗೊಳ್ಳಲಾಗದ ಕಾಮಗಾರಿಗಳಿಗೆ ಅನುದಾನ ಸಹ ಆಯವ್ಯಯದಲ್ಲಿ ಸೇರಿರುತ್ತದೆ.

1. ಫಾರ್ಮಸಿ ಕಟ್ಟಡ ನಿರ್ಮಾಣ ಅಂದಾಜು ವೆಚ್ಚ 3 ಲಕ್ಷ ಅನುದಾನ 3 ಲಕ್ಷ
2. 10 ಹಾಸಿಗೆಗಳ ಡಿ. ಅಡಿಕ್ಷನ್ ಅಂದಾಜು ವೆಚ್ಚ 6 ಲಕ್ಷ ಅನುದಾನ 2 ಲಕ್ಷ

ಈ ಮೇಲಿನ ಕಾಮಗಾರಿಗಳ ಒಟ್ಟು ಅನುದಾನವನ್ನು (19.00 ಲಕ್ಷ) ಸದರಿ ಕಾಮಗಾರಿಯ $\frac{1}{3}$ ಭಾಗದ ಅನುದಾನವನ್ನಾಗಿ ಉಪಯೋಗಿಸಿಕೊಳ್ಳಲು ವರ್ಗಾಯಿಸಿ ಜಿಲ್ಲಾ ಆಸ್ಪತ್ರೆಯ ಮೊದಲನೆ ಮಹಡಿಯ ಕಟ್ಟಡ ನಿರ್ಮಾಣದ ಕಾಮಗಾರಿಯ 54.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಯೋಜನಾ ಇಲಾಖೆಗೆ ಸಹಮತಿಗಾಗಿ ಕಳುಹಿಸಿದಾಗ, ಸದರಿ ಇಲಾಖೆಯು ಕೆಲವು ಸ್ಪಷ್ಟೀಕರಣಗಳನ್ನು ಕೇಳಿ ಕಡತವನ್ನು ಹಿಂದಿರುಗಿಸಿದೆ. ಈ ಮಾಹಿತಿಗಳನ್ನು ಯೋಜನಾ ಇಲಾಖೆಗೆ ಕಳುಹಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ನಂತರ ಯೋಜನಾ ಇಲಾಖೆಯ ಸಹಮತಿಯನ್ನು ಪಡೆದು ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಿ, ಆ ಇಲಾಖೆಯ ಸಹಮತಿ ದೊರಕಿದ ಕೂಡಲೇ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

2. ಜಿಲ್ಲೆಯ ವಿಟ್ಲ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡದ ನಿರ್ಮಾಣ

ಶ್ರೀ ಎ. ರುಕ್ಮಯಪೂಜಾರಿ (ವಿಟ್ಲ) : ಮಾನ್ಯ ಅಧ್ಯಕ್ಷರೆ ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ವಿಧಾನಸಭಾ ಕ್ಷೇತ್ರದ ವಿಟ್ಲದಲ್ಲಿ ಒಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು 1993-94ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು ಈಗ ಮಂಡಲ ಪಂಚಾಯತಿಗೆ ಸೇರಿದ ಕಟ್ಟಡದಲ್ಲಿ ತರಗತಿಗಳು ನಡೆಯುತ್ತಾ ಇರುತ್ತವೆ. ಆದರೆ ಇನ್ನು ಮುಂದೆ ಕಾಲೇಜು ವ್ಯವಸ್ಥಿತವಾಗಿ ನಡೆಯಬೇಕಾದರೆ ಸ್ವಂತ ಕಟ್ಟಡ ಅತಿ ಅಗತ್ಯವಾಗಿ ಬೇಕಾಗಿದೆ. ಆದುದರಿಂದ 1994-95ನೇ ಬಜೆಟ್ಟಲ್ಲಿ ಈ ಕಟ್ಟಡಕ್ಕೆ ಬೇಕಾದ ಹಣವನ್ನು ಸರ್ಕಾರ ಒದಗಿಸಬೇಕಾಗಿ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರ ಪರವಾಗಿ ಈ ಹೇಳಿಕೆ ಮಾಡುತ್ತೇನೆ :

ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ವಿಧಾನ ಸಭಾ ಕ್ಷೇತ್ರದ ವಿಟ್ಲದಲ್ಲಿ ಒಂದು ಸರ್ಕಾರಿ ದರ್ಜೆ ಕಾಲೇಜನ್ನು ಪ್ರಾರಂಭಿಸಲು 1993-94ನೇ ಸಾಲಿನಲ್ಲಿ ಮಂಜೂರಾತಿ ನೀಡಲಾಗಿದ್ದು, ಕಾಲೇಜು ನಡೆಯುತ್ತಿದೆ. ಕಾಲೇಜಿಗಾಗಿ ಸ್ವಂತ ಕಟ್ಟಡ ಇಲ್ಲದ ಕಾರಣ ಮಂಡಲ ಪಂಚಾಯತ್ ಕಟ್ಟಡದಲ್ಲಿ ತರಗತಿಗಳನ್ನು ನಡೆಸಲಾಗುತ್ತಿದೆ. ಇದಕ್ಕೆ ಒಂದು ಸ್ವಂತ ಕಾಲೇಜು ಕಟ್ಟಡ ಒದಗಿಸುವುದು ಅಗತ್ಯ. ಆದರೆ ವಿಟ್ಲ ಕಾಲೇಜಿಗೆ ಇನ್ನೂ ನಿವೇಶನ ದೊರಕಿರುವುದಿಲ್ಲ, ನಿವೇಶನ ದೊರೆತ ನಂತರ ಕಟ್ಟಡದ ಬಾಬ್ತು ಆಯವ್ಯಯದಲ್ಲಿ ಒದಗಿಸಲು ಏರ್ಪಾಡು ಮಾಡಲಾಗುವುದು.

3. ಕರ್ನಾಟಕ ರಾಜ್ಯದಲ್ಲಿನ ಕುಮ್ಕಿ, ಕಾನಾ, ಬಾಣೆ ಆರಣ್ಯ ಜಮೀನು ಬಗರ್ ಹುಕುಂ ಮಂಜೂರಾತಿಗೆ ಅರ್ಜಿಸಲ್ಲಿಸಲು ಕಾಲಾವಧಿ ವಿಸ್ತರಣೆ

ಶ್ರೀ ಕೆ. ಕುಶಾಲ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿನ ಬಗರ್ ಹುಕುಂ ಸಾಗುವಳಿದಾರರಾದ ಬಡ ಕೃಷಿ ಕೂಲಿಕಾರ್ಮಿಕ ರೈತರಿಗೆ ಕುಮ್ಕಿ, ಕಾನಾ ಬಾಣೆ ಅರಣ್ಯ ಜಮೀನುಗಳನ್ನು ಮತ್ತು ಅನಾಧೀನ ಪೊರಂಬೋಕ್ ಭೂಮಿಗಳ ದರಕಾಸ್ತು ಮಂಜೂರಾತಿ ನೀಡಲು ಅಕ್ರಮ ಸಕ್ರಮ ಸಮಿತಿಗಳಿಗೆ ಕಾನೂನಿನ ಅವಕಾಶವಿರುವುದಿಲ್ಲ. ಇದರಿಂದ ರೈತರಿಗೆ ತುಂಬಾ ಅನ್ಯಾಯವಾಗಿದೆ. ಆದುದರಿಂದ ಸದ್ರಿ ಮೇಲೆ ಹೇಳಿದ ಸರಕಾರಿ ಭೂಮಿಗಳನ್ನು ಮಂಜೂರಾತಿ ಮಾಡಲು ಈ ತನಕ ಅರ್ಜಿ ಸಲ್ಲಿಸಿದ್ದ ರೈತರಿಗೆ ಅರ್ಜಿಸಲ್ಲಿಸಲು ಹೆಚ್ಚಿನ ಕಾಲಮಿತಿಯನ್ನು ನೀಡಲು ಸರ್ಕಾರ ಕೂಡಲೇ ಕಾನೂನು ಮಾಡುವಂತೆ ಈ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳನ್ನು ಒಂದು ಸಭೆಗೆ ಕರೆಸಿದ್ದೇನೆ. ಅದರಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ವಿಷಯವನ್ನು ಸಹ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

4.ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಡಾ ಪ್ರಾಧಿಕಾರದ ನೌಕರರಿಗೆ ಸೇವಾ ಸೌಲಭ್ಯ

ಶ್ರೀ ಮನೋಹರ ಐನಾಪೂರ (ಬಳ್ಳೊಳ್ಳಿ) : ಮಾನ್ಯ ಅಧ್ಯಕ್ಷರೇ "ಕೃಷ್ಣ ಮೇಲ್ದಂಡೆ ಯೋಜನೆಯ ಕಾಡಾ ಪ್ರಾಧಿಕಾರದಿಂದ ಖಾಯಂ ಆಗಿ ನೇಮಕಾತಿ ಹೊಂದಿ ಹತ್ತು ವರ್ಷಗಳಿಂದಲೂ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಕಾಡಾ ಕಾಯ್ದೆ 1980ರ ನಿಯಮ 5(2)ರ ಪ್ರಕಾರ ಸರ್ಕಾರಿ ನೌಕರರಿಗೆ ಸಿಗಬೇಕಾದ ಯಾವತ್ತು ಸೇವಾ ಸೌಲಭ್ಯಗಳು ಇದೂವರೆವಿಗೂ ದೊರೆಯುತ್ತಿರುವುದಿಲ್ಲ. ಈಗಾಗಲೇ ಸೇವೆಯಲ್ಲಿದ್ದು ಮರಣ ಹೊಂದಿರುವ ನಾಲ್ಕು ಸಿಬ್ಬಂದಿಗಳ ಅವಲಂಬಿತರಿಗೂ ಯಾವುದೇ ಕುಟುಂಬ ಪಿಂಚಣಿ ಮತ್ತಿತರ ಆರ್ಥಿಕ ಸೌಲಭ್ಯಗಳು ದೊರೆಯದೇ ಇರುವುದು ದುರಾದೃಷ್ಟಕರ.

ಆದುದರಿಂದ ಈಗಾಗಲೇ ಮರಣ ಹೊಂದಿರುವ ಕೃಷ್ಣಾ ಕಾಡಾ ನೌಕರರ ಅವಲಂಬಿತರಿಗೆ ಹಾಗೂ ಈ ಸಧ್ಯ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಸರ್ಕಾರಿ ನೌಕರರಿಗೆ ಇರುವ ಎಲ್ಲಾ ಸವಲತ್ತುಗಳನ್ನು ವಿಸ್ತರಿಸುವ ಕ್ರಮ ಯಾವತ್ತು ಕೈಗೊಳ್ಳುವಿರಿ? ಹಾಗಿದ್ದಲ್ಲಿ ನಿರ್ದಿಷ್ಟ ಅವಧಿ ತಿಳಿಸುವಿರಾ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ. ಕಾಡಾ ಕಾಯ್ದೆಗನುಗುಣವಾಗಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಹೊರಡಿಸಬೇಕಾಗಿದ್ದು

ಕಾಡಾದ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ತನ್ನ ವರದಿಯನ್ನು ಈಗ ಸಲ್ಲಿಸಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ. "ವೃಂದ ಮತ್ತು ನೇಮಕಾತಿ ನಿಯಮಗಳ ಮಂಜೂರಾತಿ ನೀಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

5. ಶಿವಮೊಗ್ಗ ಕ್ಷೇತ್ರದ ಮತ್ತೂರು ಗ್ರಾಮದ ಕೆರೆ ದುರಸ್ತಿಗೆ ಹಣ ಬಿಡುಗಡೆ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಕ್ಷೇತ್ರದ ಮತ್ತೂರು ಗ್ರಾಮದ ಕೆರೆ ರಿಪೇರಿ ಹಾಗೂ ಹೂಳೆತ್ತುವ ಬಗ್ಗೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ರೂ. 6 ಲಕ್ಷ ಮಂಜೂರು ಆಗಿದೆ. ಆ ಕೆರೆಯ ಕೆಲಸ ಸಣ್ಣ ನೀರಾವರಿ ಇಲಾಖೆಯ ಮುಖಾಂತರ ಆಗ ಬೇಕಾಗಿದೆ. ಇದುವರೆಗೂ ಕೆಲಸ ಆರಂಭ ಆಗಿಲ್ಲ. ಸಣ್ಣ ನೀರಾವರಿ ಇಲಾಖೆ ಏಕೆ ಇದುವರೆಗೆ ಕೆಲಸ ಆರಂಭ ಮಾಡಿಲ್ಲ? ಯಾವಾಗ ಆರಂಭ ಮಾಡುತ್ತೀರಿ? ಯಾವಾಗ ಕೆಲಸ ಮುಕ್ತಾಯ ಗೊಳಿಸುತ್ತೀರಿ?

ಶ್ರೀ ಓಂ ಪ್ರಕಾಶ್ ಕಣಗಲಿ (ಸಣ್ಣ ನೀರಾವರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಕ್ಷೇತ್ರದ ಮತ್ತೂರು ಗ್ರಾಮದ ಕೆರೆ ರಿಪೇರಿ ಮತ್ತು ಹೂಳೆತ್ತುವ ಬಗ್ಗೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಸಣ್ಣ ನೀರಾವರಿ ಇಲಾಖೆಗೆ ಯಾವ ಪ್ರಸ್ತಾವನೆಯೂ ಬಂದಿಲ್ಲ. ಆದಕಾರಣ ಸಣ್ಣ ನೀರಾವರಿ ಇಲಾಖೆಯಿಂದ ಈ ಕೆಲಸವನ್ನು ಆರಂಭಿಸಲು ಕ್ರಮ ಕೈಗೊಂಡಿಲ್ಲ. ಆದರೆ ಸದರಿ ಕೆರೆಯು ಭದ್ರಾ ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲಿ ಇರುವುದರಿಂದ ಇದರ ದುರಸ್ಥಿ ಮತ್ತು ಹೂಳೆತ್ತುವ ಕಾರ್ಯವನ್ನು ಭದ್ರಾ ಯೋಜನೆಯ ಅಧಿಕಾರಿಗಳೇ ಕೈಗೊಳ್ಳ ಬೇಕಾಗುತ್ತದೆ. ಈ ಬಗ್ಗೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಕೋರಿಕೆ ಬಂದಿದ್ದರೆ ಆದ್ಯತೆಯ ಮೇಲೆ ಕ್ರಮ ಕೈಗೊಳ್ಳಬೇಕೆಂದು ಭದ್ರ ಯೋಜನೆಯ ಇಂಜಿನಿಯರುಗಳಿಗೆ ಆದೇಶ ನೀಡಲಾಗುವುದು.

6. ತುಮಕೂರು ಜಿಲ್ಲೆಗೆ ಕುಡಿಯುವ ನೀರಿನ ಸರಬರಾಜಿಗಾಗಿ ಹಣ ಬಿಡುಗಡೆ

Sri S. Shafi Ahmed : (Tumkur) : Sir, Due to the shortfall of rainfall in Tumkur district, there is an acute shortage of drinking water. No funds have been released under the Scarcity Relief fund to Tumkur district.

Immediately, Rs. 1.50 Crores to Tumkur District and Rs. 25 lakhs exclusively to C.M.C. Tumkur may be released for the salvation of drinking water problem by drilling the Borewells and also to deepen the existing borewells.

ಶ್ರೀ ಧರ್ಮಸಿಂಗ್ : (ಕಂದಾಯ ಹಾಗೂ ಸಮಾಜಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ ರಾಜ್ಯದಲ್ಲಿ 1993ನೇ ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಮುಂಗಾರು ಮಳೆಯ ಕೊರತೆಯಿಂದಾಗಿ 16 ಜಿಲ್ಲೆಗಳ 50 ತಾಲ್ಲೂಕುಗಳು ಅಭಾವಕ್ಕೆ ತುತ್ತಾಗಿದ್ದುವು. ಈ ಪೈಕಿ ತುಮಕೂರು ಜಿಲ್ಲೆಯ 8 ತಾಲ್ಲೂಕುಗಳೂ ತೀವ್ರ ಅಭಾವಕ್ಕೊಳಗಾಗಿದ್ದವು. ತುಮಕೂರು ಜಿಲ್ಲೆಯ ಈ ಅಭಾವ ಪೀಡಿತ ಪ್ರದೇಶಗಳಲ್ಲಿ ಬರ ಪರಿಹಾರ ಕಾರ್ಯಗಳಿಗಾಗಿ ದಿನಾಂಕ 1.4.1993 ರಿಂದ 7.2.1994ರವರೆಗೆ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿದೆ.

ಅ) ಕುಡಿಯುವ ನೀರಿನ ಪೂರೈಕೆಗಾಗಿ	-	ರೂ.	120.00 ಲಕ್ಷ
ಆ) ಉದ್ಯೋಗ ಸೃಜನೆಗಾಗಿ	-	ರೂ.	65.00 ಲಕ್ಷ
ಒಟ್ಟು :		ರೂ.	185.00 ಲಕಗಳು

ಈ ಮೇಲ್ಕಂಡ ಹಣದಲ್ಲಿ ತುಮಕೂರು ಜಿಲ್ಲೆಯಲ್ಲಿ ಕುಡಿಯುವ ನೀರಿನ ಪೂರೈಕೆ ಸಲುವಾಗಿ ಕೊರೆದ ಕೊಳವೆ ಭಾವಿಗಳ ಪ್ರಗತಿಯ ಸ್ಥೂಲ ಚಿತ್ರಣ ಕೆಳಕಂಡಂತಿದೆ

(ರೂ. ಲಕ್ಷಗಳಲ್ಲಿ)

ಕ್ರಂ. ಸಂ.	ಬಾಧಿತ ನಗರಸಭೆ : ಪುರಸಭೆ ತಾಲ್ಲೂಕಿನ ಹೆಸರು	ಕೊರೆದ ಕೊಳವೆ ಭಾವಿಗಳ ಸಂಖ್ಯೆ	ಮಾಡಲಾದ ವೆಚ್ಚ	
1.	ನಗರಸಭೆ, ತುಮಕೂರು	28	12.00	ಮೋಟರ್ ಮತ್ತು ಪಂಪ್
2.	ಪುರಸಭೆ, ಸಿರಾ	13	2.50	ಖರೀದಿಗೆ ರೂ. 4.40ಲಕ್ಷಗಳೂ
3.	ಪುರಸಭೆ, ತಿಪಟೂರು	12	3.00	ಸೇರಿವೆ.
4.	ಪುರಸಭೆ ಕುಣಿಗಲ್ (ಮೋಟರ್ ಖರೀದಿಯ ವೆಚ್ಚ ರೂ. 0.93 ಲಕ್ಷ ಸೇರಿ)	4	2.00	
5.	ಪುರಸಭೆ, ಮಧುಗಿರಿ	ನೀರು ಸರಬರಾಜು ಕಾಮಗಾರಿ	5.00	
6.	ತುಮಕೂರು ಗ್ರಾಮಾಂತರ	45	14.56	
7.	ಗುಬ್ಬಿ	34	11.00	
8.	ಕುಣಿಗಲ್	32	10.36	
9.	ತಿಪಟೂರು	28	9.07	
10.	ತುರುವೇಕೆರೆ	22	7.12	
11.	ಚಿಕ್ಕನಾಯಕನಹಳ್ಳಿ	23	7.44	
12.	ಮಧುಗಿರಿ	31	10.03	
13.	ಸಿರಾ	21	6.80	
14.	ಕೊರಟಗೆರೆ	28	9.60	
15.	ಪಾವಗಡ	20	6.47	
	ಒಟ್ಟು :	341	116.95	

ತುಮಕೂರು ಜಿಲ್ಲಾಧಿಕಾರಿಗಳು, ಈಗಾಗಲೇ ತುಮಕೂರು ನಗರಸಭೆ ವ್ಯಾಪ್ತಿಯ ಕೆಲವು ಬಡಾವಣೆಗಳಲ್ಲಿ, ಕೆಲವು ಪುರಸಭೆಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗಿರುವುದಾಗಿ ಮತ್ತು ಕೆಲವು ಗ್ರಾಮಗಳಲ್ಲಿ ಕೆರೆ-ಕಟ್ಟೆಗಳಲ್ಲಿ ಭಾವಿಗಳಲ್ಲಿ ಸಾಕಷ್ಟು ನೀರಿದ್ದರೂ ಸಹ, ಆ ನೀರು ಕುಡಿಯಲು ಯೋಗ್ಯವಾಗಿಲ್ಲದ ಪ್ರಯುಕ್ತ ಕೊಳವೆ ಭಾವಿಗಳನ್ನು ಕೊರೆಯುವ ಅವಶ್ಯಕತೆ ಇರುವುದಾಗಿ ವರದಿ ಮಾಡಿರುತ್ತಾರೆ. ಆದ್ದರಿಂದ, ಅಭಾವ ಪೀಡಿತ ಪ್ರದೇಶಗಳಲ್ಲಿ ಕೊಳವೆ ಭಾವಿಗಳನ್ನು ಕೊರೆಯಲು ಈ ಕೆಳಕಂಡ ಕ್ರಮಗಳನ್ನು ಹಾಕಿಕೊಂಡಿದ್ದಾರೆ.

ಕ್ರ. ಸಂ.	ಬಾಧಿತ ನಗರಸಭೆ ಪುರಸಭೆ : ತಾಲ್ಲೂಕಿನ ಹೆಸರು	ಕೊಳವೆ ಭಾವಿಗಳು	ಅಂದಾಜು ವೆಚ್ಚ
1.	ತುಮಕೂರು ನಗರಸಭೆ	70	
2.	ಪುರಸಭೆ, ಸಿರಾ	10	
3.	ಪುರಸಭೆ, ಚಿಕ್ಕನಾಯ್ಕನಹಳ್ಳಿ	10	
4.	ಪುರಸಭೆ, ಮಧುಗಿರಿ	10	150.00 ಲಕ್ಷಗಳು
5.	ಪುರಸಭೆ, ಕುಣಿಗಲ್	10	

6.	ಪುರಸಭೆ, ತಿಪಟೂರು	10
7.	ಜಿಲ್ಲೆಯ 10 ತಾಲ್ಲೂಕುಗಳ ಗ್ರಾಮಾಂತರ ಪ್ರದೇಶಗಳಲ್ಲಿ	300
	ಒಟ್ಟು :	420

ಈ ಮೇಲೆ ಹಮ್ಮಿಕೊಂಡ ಕಾರ್ಯಕ್ರಮಗಳನ್ನು ಆಯಾ ಇಲಾಖೆಯಡಿಯಲ್ಲಿ, ಅಂದರೆ - ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಾಮಾನ್ಯ ಯೋಜನೆಯಡಿಯಲ್ಲಿ ಲಭ್ಯವಿರುವ ಹಣವನ್ನು ನಿರ್ಧರಿಸಿ, ಅಗತ್ಯವಿರುವ ಕಡೆ 'ಪ್ರಕೃತಿ ವಿಕೋಪ ಪರಿಹಾರ ನಿಧಿ' ಯಿಂದ ಹಣವನ್ನು ಒದಗಿಸಿ, ಕಾರ್ಯಗತ ಗೊಳಿಸಲು ಯತ್ನಿಸಲಾಗುವುದು.

7. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆರಹಾವಳಿಯಿಂದ ಹಾನಿಗೀಡಾಗಿರುವ ರೈತರಿಗೆ ಪರಿಹಾರ.

ಶ್ರೀ ವಿಜಯಕುಮಾರ್ ಶೆಟ್ಟಿ : (ಸೂರತ್ಕಲ್) ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನವೆಂಬರ್ 8 ರಂದು (1993) ಬಂದ ಭೀಕರ ನೆರೆಯಿಂದಾಗಿ ಹಲವಾರು ಮನೆಗಳು ಬಿದ್ದು ಹೋಗಿವೆ, ಬೆಳೆಗಳು ಹಾಳಾಗಿವೆ ಮತ್ತು ನೀರಾವರಿಗೆ ಬೇಕಾದ ದಂಡೆ, ನಾಲೆಗಳು ಒಡೆದು ಹೋಗಿ ತುಂಬ ನಷ್ಟವಾಗಿದೆ. ಒಟ್ಟು ಅಂದಾಜು ನಷ್ಟ ಸುಮಾರು 8 ಕೋಟಿ ಎಂದು ಜಿಲ್ಲಾಧಿಕಾರಿಯವರ ಮುಖಾಂತರ ತಿಳಿಸಿದೆ ಯಾದರೂ ಈ ತನಕ ಬಿಡುಗಡೆಯಾದ ಹಣ ಮಾತ್ರ ಕೇವಲ 10 ಲಕ್ಷ ರೂಪಾಯಿಗಳು. ಅನಾವೃಷ್ಟಿಯಿಂದ ತೊಂದರೆಗೊಳಗಾದ ಎಲ್ಲಾ ಕಾಮಗಾರಿಗಳನ್ನು ಮತ್ತು ರೈತರ ಬೆಳೆ ಪರಿಹಾರವನ್ನು ಕೂಡಲೇ ಕೊಡುವ ವ್ಯವಸ್ಥೆ ಆಗ ಬೇಕೆಂದು ವಿನಂತಿಸುತ್ತೇನೆ.

ಶ್ರೀ ಧರ್ಮಸಿಂಗ್ (ಕಂದಾಯ ಹಾಗೂ ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಅಕ್ಟೋಬರ್, 1993ರಲ್ಲಿ ಉಂಟಾದ ಅತೀವೃಷ್ಟಿ ನೆರೆ ಹಾವಳಿಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ 8ತಾಲ್ಲೂಕುಗಳ 116ಗ್ರಾಮಗಳು ತೊಂದರೆಗೊಳಗಾಗಿದ್ದವು. ಈ ನೆರೆ ಹಾವಳಿಯಿಂದಾಗಿ ಜಿಲ್ಲೆಯಲ್ಲಿನ ಖಾಸಗಿ ಮತ್ತು ಸಾರ್ವಜನಿಕ ಆಸ್ತಿಗಳಿಗೆ ಉಂಟಾದ ನಷ್ಟದ ವಿವರಗಳು ಈ ಕೆಳಕಂಡಂತಿವೆ.

			ಅಂದಾಜು ಹಾನಿ ಲಕ್ಷ ರೂ.ಗಳಲ್ಲಿ
ಖಾಸಗಿ ಆಸ್ತಿ			
1.	ಮೃತಪಟ್ಟವರು	9	
2.	ಗಾಯಗೊಂಡವರು	10	
3.	ಜಾನುವಾರು ಹಾನಿ	-1	0.05
4.	ಕೃಷಿ ಬೆಳೆಹಾನಿ	456.72ಎಕರೆಗಳು	-
5.	ಪೂರ್ಣ ಹಾನಿಗೊಂಡ ಮನೆಗಳು	15	2:50
6.	ಭಾಗಶಃ ಹಾನಿಗೊಂಡ ಮನೆಗಳು	194	6.78
7.	ನೀರಾವರಿ ಪಂಪ್ ಸೆಟ್ಸ್	-2	0.12
	ಒಟ್ಟು		9.45
ಸಾರ್ವಜನಿಕ ಆಸ್ತಿ			
1	[illegible]	-74	[illegible]

2.	ಸೇತುವೆ ಮತ್ತು ಅಡಿಗಾಲುವೆಗಳು	66	26.35
3.	ರಸ್ತೆ	-539	830.31
4.	ಸಣ್ಣ ನೀರಾವರಿ ಕೆರೆ	-3	1.75
5.	ನೀರಾವರಿ ಕಾಲುವೆ ಮತ್ತು ಇತರೆ	-10	1.10

ಒಟ್ಟು - 876.40

ಒಟ್ಟು ಹಾನಿ - 885.85 ಲಕ್ಷ ರೂ.

ವಿವಿಧ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವ ಸಲುವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಸರ್ಕಾರವು ದಿನಾಂಕ 1.4.1993ರಿಂದ 7.2.1994ರವರೆಗೆ ಈ ಕೆಳಕಂಡಂತೆ ಹಣವನ್ನು 'ಪ್ರಕೃತಿ ವಿಕೋಪ ಪರಿಹಾರ ನಿಧಿ' ಯಿಂದ ಬಿಡುಗಡೆ ಮಾಡಿದೆ.

ಲಕ್ಷ ರೂ.ಗಳಲ್ಲಿ

1.	ಅಕ್ಟೋಬರ್, 1993ರಲ್ಲಿ ಉಂಟಾದ ಅತೀವೃಷ್ಟಿ ನೆರೆ ಹಾವಳಿಯ ಪರಿಹಾರ ಕಾರ್ಯ		
	ಅ) ಸಂತ್ರಸ್ಥರಿಗೆ ಪರಿಹಾರ ನೀಡಲು	10.00	
	ಆ) ಹಾನಿಗೊಂಡ ಸಾರ್ವಜನಿಕ ಆಸ್ತಿಗಳ	25.00	
	ತುರ್ತು ದುರಸ್ಥಿಗಾಗಿ.	35.00	
2.	ನವೆಂಬರ್, 1992ರಲ್ಲಿ ಉಂಟಾದ ಅತೀವೃಷ್ಟಿ ನೆರಹಾವಳಿಯ ಪರಿಹಾರ ಕಾರ್ಯ		
	ಅ) ಹಾನಿಗೊಂಡ ಸಾರ್ವಜನಿಕ ಆಸ್ತಿಗಳ ದುರಸ್ಥಿಗಾಗಿ.	35.00	
	ಆ) ಬೆಳೆ ಪರಿಹಾರಕ್ಕಾಗಿ	20.00	55.00
3.	ಕುಡಿಯುವ ನೀರಿನ ಪೂರೈಕೆಗಾಗಿ		15.00

ಒಟ್ಟು ರೂ.105.00 ಲಕ್ಷ

ರಾಜ್ಯದ ಉತ್ತರ ಒಳನಾಡಿನ ಜಿಲ್ಲೆಗಳಾದ ರಾಯಚೂರು, ಬಿಜಾಪುರ, ಧಾರವಾಡ, ಬಳ್ಳಾರಿ,ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಖಾಸಗಿ ಆಸ್ತಿಗಳಿಗೆ ಅಪಾರವಾದ ಹಾನಿಯುಂಟಾಗಿದ್ದು, ನೊಂದ ಸಂತ್ರಸ್ಥರಿಗೆ ಪರಿಹಾರ ನೀಡುವ ಕಾರ್ಯವನ್ನು ಆಧ್ಯತೆಯ ಮೇಲೆ ಕೈಗೊಂಡಿದ್ದು, ಪರಿಹಾರ ಕಾರ್ಯವು ಪ್ರಗತಿಯಲ್ಲಿದೆ. ಹಾಗೂ ಹಾನಿಗೊಂಡಿರುವ ಸಾರ್ವಜನಿಕ ಆಸ್ತಿಗಳನ್ನು ಆಧ್ಯತೆಯ ಮೇರೆಗೆ ದುರಸ್ಥಿ ಮಾಡಲು ನಿರ್ಧರಿಸಿದ್ದು, ಅತ್ಯಗತ್ಯವಾಗಿ ಕೈಗೊಳ್ಳಬೇಕಾದ ಕಾರ್ಯಗಳಿಗಾಗಿ ಸರ್ಕಾರವು ಹಣವನ್ನು ಬಿಡುಗಡೆ ಮಾಡಿದೆ.

ರಾಜ್ಯದ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ನಿಗದಿಪಡಿಸಿರುವ ವಾರ್ಷಿಕ ವಂತಿಗೆಯಾದ 27.00 ಕೋಟಿ ರೂ.ಗಳಲ್ಲಿ, ಪ್ರವಾಹ, ಭೂಕಂಪ, ಬರ, ಇತ್ಯಾದಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಅತ್ಯಂತ ಕಷ್ಟಕರವಾಗಿರುತ್ತದೆ. ಇದನ್ನು ಮನಗಂಡ ಸರ್ಕಾರವು ಪ್ರಸ್ತುತ ವರ್ಷದಲ್ಲಿ ತನ್ನ ಪಾಲಿನ ವಂತಿಗೆಯಾದ 6.75 ಕೋಟಿ ಗಳಲ್ಲದೆ 32.88 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ, ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ನೀಡಿದೆ.

ಸಾರ್ವಜನಿಕ ಆಸ್ತಿಗಳಿಗುಂಟಾಗಿರುವ ಅಪಾರ ಹಾನಿಯನ್ನು ಮನಗಂಡ ಸರ್ಕಾರವು ಹಾನಿಗೊಂಡ ಕಾಮಗಾರಿಗಳನ್ನು ಎ,ಬಿ ಮತ್ತು ಸಿ ವರ್ಗಗಳೆಂದು ವಿಂಗಡಿಸಿದ್ದು, ಎ ವರ್ಗದಡಿಯಲ್ಲಿ ಗುರುತಿಸಲಾಗಿರುವ ಕಾಮಗಾರಿಗಳನ್ನು ತುರ್ತಾಗಿ ಮತ್ತು ಅವಶ್ಯಕವಾಗಿ ದುರಸಿ ಮಾಡಬೇಕಾದ ಕಾಮಗಾರಿಯೆಂದು ಪರಿಗಣಿಸಿದ್ದು, ಈ

ಕಾಮಗಾರಿಗಳ ದುರಸ್ತಿಗೆ ಅಗತ್ಯವಿರುವ ಹಣವನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಭರಿಸಲು ಮತ್ತು ಇನ್ನುಳಿದ ಎರಡು ವರ್ಗಗಳ ಕಾಮಗಾರಿಗಳನ್ನು ಆಯಾ ಇಲಾಖಾ ಆಯವ್ಯಯದಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಬೇಕೆಂದು ನಿರ್ಧರಿಸಲಾಗಿದ್ದು, ಆರ್ಥಿಕ ಇಲಾಖೆಯ ಮುಖಾಂತರ ಈ ಹಣವನ್ನು ಸಂಬಂಧಪಟ್ಟ ಕಾಮಗಾರಿಗಳ ದುರಸ್ಥಿಗಾಗಿ ಬಿಡುಗಡೆ ಮಾಡಲಾಗುವುದು.

8. ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಲೋ-ವೋಲ್ಟೇಜ್ ಬರುತ್ತಿರುವುದರಿಂದ ಐ.ಪಿ. ಸೆಟ್ಟುಗಳು ಸುಡುತ್ತಿರುವುದರ ಬಗ್ಗೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಮರಕುಂಬಿ, ಇಂಚಲ, ಹಾಗೂ ಹಾರಗೊಪ್ಪ ಮತ್ತು ಚಚ್ಚಡಿ ಗ್ರಾಮಗಳಲ್ಲಿ ಲೋವೋಲ್ಟೇಜ್ ಬರುತ್ತಿರುತ್ತದೆ. ಇದರಿಂದ ಐ.ಪಿ. ಸೆಟ್ಟುಗಳು ಸುಡಲಿಕ್ಕೆ ಹತ್ತಿರುತ್ತವೆ. ಇದಲ್ಲದೆ, ಒಂದೊಂದು ದಿವಸ ಸಂಪೂರ್ಣವಾಗಿ ವಿದ್ಯುತ್ ಇರುವುದಿಲ್ಲ. ಇದೂ ಅಲ್ಲದೆ, ಅಲ್ಲಿ ಎಷ್ಟೋ 63 ಕೆ.ವಿ. ಟ್ರಾನ್ಸ್‌ಫಾರ್ಮರ್ ಗಳು ಬೇಕಾಗಿದ್ದರೂ ಇನ್ನೂವರೆಗೂ ಬೆಂಗಳೂರಿನಿಂದ ಸಪ್ಲೈ ಮಾಡಿರುವುದಿಲ್ಲ. 25 ಕೆ.ವಿ. ಟ್ರಾನ್ಸ್‌ಫಾರ್ಮರಗಳ ಮೇಲೆ ಐ.ಪಿ.ಸೆಟ್ಟುಗಳ ಲೋಡು ಹೆಚ್ಚು ಬಿದ್ದು ಅವುಗಳು ಮೇಲಿಂದ ಮೇಲೆ ಸುಡಲಿಕ್ಕೆ ಹತ್ತಿರುತ್ತವೆ. ಹೀಗಾಗಿ, ರೈತರು ಬೆಳೆದ ಪೀಕಿಗೆ ನೀರು ಇಲ್ಲದಂತಾಗಿ ಲಕ್ಷಾಂತರ ರೂ.ಹಾಳಾಗಿ ಹೋಗಲಿಕ್ಕೆ ಹತ್ತಿರುತ್ತದೆ. ಅದೂ ಅಲ್ಲದೆ ಕುಡಿಯುವ ನೀರಿನ ತೊಂದರೆ ಆಗಲಿಕ್ಕೆ ಹತ್ತಿರುತ್ತದೆ.

ಕೆ.ಇ.ಬಿ. ಅಧ್ಯಕ್ಷರವರು ಜಿಲ್ಲಾ ಮಂತ್ರಿ ಕರೆದ ಮೀಟಿಂಗ್‌ನಲ್ಲಿ ಬೈಲಹೊಂಗಲಕ್ಕೆ ಬೆಂಗಳೂರಿನಿಂದ ಟ್ರಾನ್ಸ್‌ಫಾರ್ಮರ್ ಹಾಗೂ ಉಳಿದ ಸಾಮಾನುಗಳನ್ನು ಕಳಿಸುವುದಾಗಿ ಆಶ್ವಾಸನೆ ನೀಡಿದ್ದರು. ಆದರೆ ಆಶ್ವಾಸನೆಯ ಪ್ರಕಾರ ಇನ್ನೂವರೆಗೂ ಯಾವುದೇ ಟ್ರಾನ್ಸ್‌ಫಾರ್ಮರ್‌ಗಳನ್ನು ಕಳಿಸಿರುವುದಿಲ್ಲ. ಆದಕಾರಣ ಕೂಡಲೇ ಇಲ್ಲಿ ಟ್ರಾನ್ಸ್‌ಫಾರ್ಮರ್ ಒದಗಿಸುವುದಾಗಬೇಕು ಮತ್ತು ರೈತರಿಗೆ ವಿದ್ಯುತ್‌ನ್ನು ಒಳ್ಳೆಯ ಪ್ರಮಾಣದಲ್ಲಿ ಒದಗಿಸುವುದಾಗಿ ಬೇಕೆಂದು ನಾನು ಈ ಮೂಲಕ ಮಾನ್ಯ ಉಪ-ಮುಖ್ಯ ಮಂತ್ರಿಗಳು ಹಾಗೂ ವಿದ್ಯುತ್ ಮಂತ್ರಿಗಳಲ್ಲಿ ಕೋರುತ್ತೇನೆ.

1.50 ಪಿ.ಎಂ

Sri K.A. Nisar Ahmed (Minister of State For Power)

The low voltage condition prevailing in Marakumbi, Inchala, Haragoppa and Chachadi villages of Soundatti Taluk in Belgaum Dist. has came to the notice of the Board. These villages are getting power supply from 33/11 KV sub-station at Mallur and are far away from the above -station. The power supply is fed through lengthy 11 kv feeder and this is the main reason for the low voltage condition.

To improve the voltage condition in the above villages, it is proposed to install a voltage regulator at Marakumbi village. This work will be executed, as early as possible. Further, due to failure of one No. of 100 MVA power transformer at 220/110 KV receiving station in Hubli,there is low voltage condition prevailing in the entire district of Belgaum to some extent. A new 100 MVA power transformer at 220/110 KV receiving station in Hubli is being installed in place of failed 100 MVA poer transformer and this work

is progressing at a faster rate. This power transformer will be commissioned very shortly.

During the period from April 93 to January 1994, seventy six numbers of 25 KVA, fifty four numbers of 63 KVA and twenty eight number of 100 KVA distribution transformers have been supplied to Bailhongal division from Bangalore. During the same period, 72 Kms of Squirrel conductor, 140 Nos. of Veasel conductors were also supplied. Taking into consideration the requirment of this division, action will be taken to supply more numbers of distribution transformers and other essential materials.

ಶ್ರೀ ವಾಟಾಳ್ ನಾಗರಾಜ್ : ಮಂತ್ರಿಗಳು ಇಂಗ್ಲೀಷ್ನಲ್ಲಿ ಮಾತನಾಡುತ್ತಿದ್ದಾರೆ. ಮಂತ್ರಿಗಳೇ ಹೀಗೆ ದಾರಿ ತಪ್ಪಿದರೆ ಹೇಗೆ?

ಅಧ್ಯಕ್ಷರು : ಅವರು ಉತ್ತರವನ್ನು ಕನ್ನಡದಲ್ಲಿ ಒದಗಿಸಿದ್ದಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಅವರು ಯಾವ ಭಾಷೆಯಲ್ಲಿ ಹೇಳುತ್ತಿದ್ದಾರೆಂದು ನನಗೆ ಅರ್ಥವಾಗುತ್ತಾ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರು ಯಾವ ಭಾಷೆಯಲ್ಲಿ ಯಾರಿಗೆ ಹೇಳುತ್ತಿದ್ದಾರೆ. ಮಾನ್ಯ ಕೌಜಲಗಿಯವರು ಕನ್ನಡದಲ್ಲಿ ಸ್ಪಷ್ಟವಾಗಿ ಕೇಳಿದ್ದಾರೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಗವರ್ನರ್ ಓದಿದ ಹಾಗೆ ಓದುತ್ತಿದ್ದಾರೆ.

ಶ್ರೀ ಕೆ. ಎ. ನಿಸಾರ್ ಅಹಮದ್ : ಕನ್ನಡ ಕಲಿಯುತ್ತಿದ್ದೇನೆ. ಕನ್ನಡದಲ್ಲಿ ಓದಲು ಸ್ವಲ್ಪ ನಿಧಾನವಾಗುತ್ತದೆ. ಮುಂದೆ ಕನ್ನಡದಲ್ಲಿ ಓದುತ್ತೇನೆ.

ಅಧ್ಯಕ್ಷರು : ಸಭೆಯು ಈಗ ಎದ್ದು 3 ಗಂಟೆಗೆ ಮತ್ತೆ ಸೇರುತ್ತದೆ.

(ಸಭೆಯು ಪುನಃ 3.30ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಹೆಚ್. ಬನ್ನಿಕೋಡ್ : ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಒಂದು ನಿಲುವಳಿ ಸೂಚನೆ ಕಳಿಸಿದ್ದೆ. ಇಂದು ಉತ್ತರ ಕೊಡುತ್ತೇವೆಂದು ಹೇಳಿದ್ದರು. ಅದರಂತೆ ಇಂದು ಉತ್ತರ ಕೊಡಬೇಕು.

ಮುಖ್ಯಮಂತ್ರಿಗಳ ಹೇಳಿಕೆ

ದಿನಾಂಕ 12-2-94ರಂದು ವಾಲ್ಮೀಕಿ ಜಯಂತಿ ಉತ್ಸವದ ನಿಮಿತ್ತ ಮುಖ್ಯಮಂತ್ರಿಗಳ ಕಾರ್ಯಕ್ರಮದ ಕಾಲಕ್ಕೆ ಕಟ್ಟಡ ಕುಸಿದುದ್ದರಿಂದ ಉಂಟಾದ ಅನಾಹುತದ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ತಾವು ಅನುಮತಿ ಕೊಟ್ಟರೆ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

ಅಧ್ಯಕ್ಷರು : ಆಗಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಹಿರೇಕೆರೂರು ಪಟ್ಟಣದಲ್ಲಿ ದಿನಾಂಕ 12.2.1994 ರಂದು ಮಹರ್ಷಿ ವಾಲ್ಮೀಕಿ ಜಯಂತಿ [illegible] ಕಾರ್ಯಕ್ರಮದಲ್ಲಿ

ನಾನು ಮತ್ತು ಇತರೆ ಗಣ್ಯವ್ಯಕ್ತಿಗಳು ಭಾಗವಹಿಸಿ, ಕಾರ್ಯಕ್ರಮ ಮುಗಿದ ನಂತರ, ಗಂಗಾವತಿಗೆ ಹೊರಡುವ ಸಂದರ್ಭದಲ್ಲಿ ಅನೇಕ ಜನರು ಹಾಗೂ ಮಕ್ಕಳು ಸುತ್ತಲೂ ನಿಂತಿದ್ದರಲ್ಲದೆ ಕೆಲವರು ಸಮಮೀಪದಲ್ಲಿರುವ ಹಿರೇಕೆರೂರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಮುನ್ಸೀಫ್ ಮತ್ತು ಜೆ.ಎಂ.ಎಫ್. ನ್ಯಾಯಾಲಯದ ಕಟ್ಟಡದ ಮೇಲ್ಛಾವಣಿ ಮೇಲೆ ಸುಮಾರು 200 - 300 ಜನ ಮಕ್ಕಳು ನಿಂತಿದ್ದಾಗ, ಜನರ ನೂಕುನುಗ್ಗಲಿನಿಂದಾಗಿ ಕಟ್ಟಡದ ಮೇಲ್ಛಾವಣಿಯ ಮೇಲೆ ಬಲಬದಿಯಲ್ಲಿ ಇರುವ ಫ್ಯಾರಾಫೂಟ ಗೋಡೆ ಜನರ ಮತ್ತು ಮಕ್ಕಳ ನೂಕುನುಗ್ಗಲು ಮತ್ತು ಅತೀಭಾರದಿಂದ ಕುಸಿದು ಬಿದ್ದು ಗಾಯಗೊಂಡಿರುತ್ತಾರೆ. ಇವರನ್ನು ಹಿರೇಕೆರೂರು ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿ, ಪ್ರಥಮ ಚಿಕಿತ್ಸೆ ಕೊಡಿಸಲಾಯಿತು. ಈ ಪೈಕಿ, ಕುಮಾರಿ ರೇಶ್ಮಾ ಎಂಬ ಹೆಣ್ಣು ಮಗು ಮೃತಪಟ್ಟಿದ್ದಾಳೆಂದು ಆಗಲೇ ತಿಳಿಯಿತು. ಉಳಿದ 42 ಜನ ಗಾಯಾಳುಗಳಿಗೆ ವೈದ್ಯಕೀಯ ಚಿಕಿತ್ಸೆ ನೀಡುವ ಸಲುವಾಗಿ ದಾವಣಗೆರೆಯ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಗೆ ಕಳುಹಿಸಲಾಯಿತು. ಇವರಲ್ಲಿ ಏಕನಾಥ ಬಳ್ಳಾರಿ ಎಂಬ ಪೊಲೀಸ್ ಪೇದೆಗೂ ಕೂಡಾ ಗಾಯವಾಗಿದೆ. ಇವರಲ್ಲಿ 5 ಜನ ಗಾಯಾಳುಗಳ ಪರಿಸ್ಥಿತಿ ಗಂಭೀರ ಎಂದು ತಿಳಿದು ಬಂದಿದ್ದರಿಂದ, ಅವರನ್ನು ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕಳುಹಿಸಲಾಯಿತು. ಅವರಲ್ಲಿ ಒಬ್ಬರಾದ ಶ್ರೀ ರುದ್ರಗೌಡ ಎಂಬುವವರು ದಿನಾಂಕ 13.2.1994 ರಂದು ಮಧ್ಯಾಹ್ನ 2.25 ಗಂಟೆಗೆ ಮೃತಪಟ್ಟಿದ್ದಾರೆಂದು ಮಾಹಿತಿ ಬಂದಿದೆ. ಈ ಇಬ್ಬರೂ ಮೃತಪಟ್ಟವರಲ್ಲದೇ 9 ಜನರಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ. ಇದಲ್ಲದೆ 32 ಜನರಿಗೆ ಸಾದಾ ಸ್ವರೂಪದ ಗಾಯಗಳಾಗಿವೆ. ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ.

ಈ ಘಟನೆಯನ್ನು ವಿಶೇಷ ಘಟನೆ ಎಂದು ಪರಿಗಣಿಸಿ, ಮೃತರಾದ ಕುಮಾರಿ ರೇಶ್ಮಾ ಮತ್ತು ಶ್ರೀ ರುದ್ರಗೌಡ ಇವರ ಕುಟುಂಬದ ವಾರಸುದಾರರಿಗೆ ತಲಾ ಒಂದು ಲಕ್ಷ ರೂಪಾಯಿಗಳ ಪರಿಹಾರ ನೀಡಲಾಗುವುದು. ಗಾಯಗೊಂಡವರಿಗೆ ಪ್ರತಿಯೊಬ್ಬರ ಗಾಯದ ತೀವ್ರತೆಯ ಸ್ವರೂಪಕ್ಕನುಗುಣವಾಗಿ ಸೂಕ್ತ ಪರಿಹಾರವನ್ನು ನೀಡುವಂತೆ ಧಾರವಾಡ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಇನ್ನು ಇತರ ಗಾಯಾಳುಗಳಿಗೆ ಕೂಡ ನಾವು ಪರಿಹಾರ ಕೊಡುತ್ತೇನೆ. ಸರಿಯಾದ ಮಾಹಿತಿ ಬಂದ ಕೂಡಲೇ ಕೊಡುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಅನೇಕ ಮಕ್ಕಳ ಕಾಲುಗಳು ಮುರಿದಿವೆ; ಕೈಗಳು ಮುರಿದಿವೆ; ಕಣ್ಣು ಹೋಗಿದೆ. ಅದಕ್ಕಾಗಿ ಯಾರಿಗೆ ಅಂಗವಿಕಲತೆ ಆಗಿದೆ ಅಥವಾ ಡಿಸ್ಲೊಕೇಷನ್ ಆಗಿದೆ, ಅಂತಹವರಿಗೆ ಕನಿಷ್ಠ ತಾವು 60 ಸಾವಿರ ರೂಪಾಯಿಗಳನ್ನಾದರೂ ಸಹಾಯಧನ ಕೊಡಬೇಕು. ಮತ್ತು ಸಾಲಪಕ್ಕು ಪತ್ರ ಸಹಿತ ಉಪಚಾರ ಸಲುವಾಗಿ ಕನಿಷ್ಠ ಮೂರು ಸಾವಿರ ರೂಪಾಯಿಗಳನ್ನಾದರೂ ಕೊಡಲು ತಾವು ಸಹಾನುಭೂತಿ ತೋರಿಸಬೇಕು ಮತ್ತು ಹಿರೇಕೆರೂರು, ತಾಲ್ಲೂಕಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಎಕ್ಸ್ರೇ ಪ್ಲಾಂಟ್ ಸೆಟ್‌ಇಲ್ಲ. ದಯವಿಟ್ಟು ಈ ಕೂಡಲೇ ಒಂದು ಎಕ್ಸ್ರೇ ಪ್ಲಾಂಟ್ ಸೆಟ್‌ಅನ್ನು ಹಿರೇಕೆರೂರ್ ತಾಲ್ಲೂಕಿನ ಮುಖ್ಯ ಆಸ್ಪತ್ರೆಗೆ ಕೊಡಬೇಕು. ಮತ್ತು ಹಿರೇಕೆರೂರಿನಲ್ಲಿರತಕ್ಕ 30 ಹಾಸಿಗೆ ಆಸ್ಪತ್ರೆಯನ್ನು 50 ಸಾವಿರ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸಬೇಕು ಎಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಗಾಯಾಳುಗಳ ಬಗ್ಗೆ ತೀವ್ರ ಸ್ವರೂಪದ ಗಾಯಕ್ಕೆ ಮ್ಯಾಕ್ಸಿಮಮ್ ನಾವು ಪರಿಹಾರ ಕೊಡುತ್ತಿದ್ದೇವೆ. ನಾನು ವರದಿ ತರಿಸುತ್ತೇನೆ. ತರಿಸಿ ತೀವ್ರ ಗಾಯಾಳುಗಳಿಗೆ ಮತ್ತು ಬೇರೆ ರೀತಿಯ ಗಾಯಾಳುಗಳ ದಾಖಲೆ ಕೈಕೊಂಡು ನಾವು ಪರಿಹಾರ ಕೊಡುತ್ತೇವೆ. ಜಿಲ್ಲಾಧಿಕಾರಿಗಳಿಗೆ ಈಗಾಗಲೇ ನಾವು

ಹಾಸಿಗೆಗಳುಳ್ಳ ಆಸ್ಪತ್ರೆಯನ್ನು 50 ಹಾಸಿಗೆಗಳ ಆಸ್ಪತ್ರೆಗೆ ಮೇಲ್ದರ್ಜೆಗೆ ಏರಿಸಬೇಕು ಎಂದು ಹೇಳಿದ್ದೀರಿ. ಅದರ ಬಗ್ಗೆ ಹೇಳುವುದಾದರೆ ಎಕ್ಸ್‌ರೇ ಪ್ಲಾಂಟ್ ತಕ್ಷಣ ಕೊಡಿಸುತ್ತೇವೆ. ಆಸ್ಪತ್ರೆ ಬಗ್ಗೆ 1994-95ನೇ ಸಾಲಿನ ಏಪ್ರಿಲ್ ಮತ್ತು ಮೇನಲ್ಲಿ ಮಂಜೂರು ಮಾಡುತ್ತೇವೆ.

ಶಾಸನ ರಚನಾ ಕಾರ್ಯ ಕಲಾಪಗಳು

ಎ) ಪರ್ಯಾಲೋಚನಾ ಪ್ರಸ್ತಾವ .

ಶ್ರೀ ಚೌಡಾರೆಡ್ಡಿ (ವಸತಿ ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಅಕ್ರಮ ಕಟ್ಟಡಗಳ ಸಕ್ರಮದ ಬಗ್ಗೆ ಮಸೂದೆ ಇದೆ. ಅದನ್ನು ನಿನ್ನೆ ಮುಗಿಸಬೇಕಾಗಿತ್ತು. ಇದ್ದಕ್ಕಿದ್ದ ಹಾಗೆ ಸಭೆ ಅಜರ್ನ್ ಆಯಿತು. ನಿನ್ನೆ ನಾನು ಈ ತಿದ್ದುಪಡಿಯನ್ನು ಪರ್ಯಾಲೋಚಿಸಬೇಕೆಂದು ಸಂಕ್ಷಿಪ್ತವಾಗಿ ತಿಳಿಸಿದ್ದೇನೆ. ಇದನ್ನು ಮತಕ್ಕೆ ಹಾಕಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಇದನ್ನು ಜಾರಿ ಮಾಡಬೇಕೆಂದಿದ್ದೆವು, ನಮ್ಮ ಕೈಯಲ್ಲಿ ಆಗಲಿಲ್ಲ. ಈಗ ನೀವು ಮಾಡಿದ್ದೀರಿ, ಇದನ್ನು ನಾವು ಸ್ವಾಗತಿಸಿದ್ದೇವೆ. ಇದನ್ನು ಮತಕ್ಕೆ ಹಾಕಿ ಎಂದು ಹೇಳುತ್ತಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ತಾವು ಏನು ನಗರ ಪ್ರದೇಶಗಳಲ್ಲಿರುವ ಅಕ್ರಮ ಕಟ್ಟಡಗಳನ್ನು ಸಕ್ರಮಗೊಳಿಸಬೇಕೆಂದು ಕಾನೂನು ತಂದಿದ್ದೀರಿ, ಅದೇ ರೀತಿ ಗ್ರಾಮಾಂತರ ಪ್ರದೇಶಗಳಲ್ಲಿರುವ ಅನೇಕ ಅಕ್ರಮ ಕಟ್ಟಡಗಳನ್ನು ಸಕ್ರಮಗೊಳಿಸುವ ಕಾನೂನನ್ನು ಜಾರಿಗೆ ತಂದರೆ ಬಡವರಿಗೆ ಅನುಕೂಲವಾಗುತ್ತದೆ. ಆದುದರಿಂದ, ಈ ಕಾನೂನಿಗೆ ತಿದ್ದುಪಡಿ ತರಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1993ರ ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 9 ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 9 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 9ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕ್ಕೆ ಸೇರಿಸಲಾಯಿತು)

<u>ಪ್ರಸ್ತಾವದ ಅಂಗೀಕಾರ</u>

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1993ರ ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1993ರ ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

1994ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ

<u>ಮಂಡನೆಗೆ ಅನುಮತಿ ಕೋರಿಕೆ</u>

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, 1994ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇವೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1994ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕತಿ ರಾಜ್ಯ ಮಂತ್ರಿಗಳು) : 1994ರ ಕನ್ನಡ ಅಭಿವೃದ್ಧಿ ಪ್ರಾಧಿಕಾರದ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ - I

1993ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಮೂರನೇ ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೇ, 1993ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಮೂರನೆ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಲ್ಕ್ ಅಲಾಟ್ ಮೆಂಟ್ ವಿಚಾರದಲ್ಲಿ ಹೈಕೋರ್ಟ್ ತೀರ್ಪಿನಿಂದ ಅನೇಕ ಅಲಾಟ್ಮೆಂಟ್ಗಳು ಕ್ಯಾನ್ಸಲ್ ಆಗಿವೆ. ಅನೇಕ ಸರ್ಕಾರಿ ಸಂಸ್ಥೆಗಳಿಗೆ ಕೊಟ್ಟಿದ್ದಂತಹ ಹಾಗೂ ಹೌಸಿಂಗ್ ಸೊಸೈಟಿಗಳಿಗೆ ಕೊಟ್ಟಿದ್ದಂತಹ, ಶಾಸಕರ ಸಂಘಗಳಿಗೆ ಕೊಟ್ಟಿದ್ದಂತಹವು ಇನ್ವಾಲಿಡ್ ಆಗಿದೆ. ಇದನ್ನು ವ್ಯಾಲಿಡೇಷನ್ ಮಾಡಲಿಕ್ಕೆ ಈ ಬಿಲ್ಲನ್ನು ತಂದಿದ್ದೇವೆ. ದಯಮಾಡಿ ಇದಕ್ಕೆ ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ.

+ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ಸ್ವಾಗತಿಸಿ ಒಂದೆರಡು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇದು ಒಂದು ಬಹಳ ಸರಳವಾಗಿರತಕ್ಕಂಥ ಕಾನೂನು, ಬಲ್ಕ್ ಅಲಾಟ್ಮೆಂಟ್ ಅನ್ನುವುದು ಒಟ್ಟಾರೆ ಒಂದೇ ಸಾರಿ ಸಹಕಾರಿ ಸಂಘಗಳಿಗೆ ಅಥವಾ ಸಂಘ ಸಂಸ್ಥೆಗಳಿಗೆ ಭೂಮಿಯನ್ನು ಕೊಟ್ಟು ಅವರು ನಿವೇಶನಗಳಾಗಿ ವಿಂಗಡಿಸಿ ಮಾರಾಟ ಮಾಡತಕ್ಕಂಥಾದ್ದು ಹಾಗೂ ಅಲಾಟ್ಮೆಂಟ್ ಮಾಡತಕ್ಕಂಥಾದ್ದಕ್ಕೆ ಅನುಕೂಲವಾಗುತ್ತದೆ. ಈಗ ಬೆಂಗಳೂರು ನಗರ ಬಹಳ ಬೃಹದಾಕಾರವಾಗಿ ಬೆಳೆಯುತ್ತಿದೆ. ಈಗ ಆಗಿರತಕ್ಕಂಥಾದ್ದು ಸರಿಪಡಿಸುವುದು ಒಂದು ಕೆಲಸ. ಇನ್ನು ಮುಂದೆ ಯಾವ ರೀತಿ ಮಾಡಬೇಕು ಎನ್ನುವುದು ಈಗ ಆಗಬೇಕಾದ ಕೆಲಸ. ಪ್ರಪಂಚದಲ್ಲಿಯೇ, ಏಷ್ಯಾ ಖಂಡದಲ್ಲಿಯೇ ಇದು ಅತೀ ವೇಗದಲ್ಲಿ ಬೆಳೆಯುತ್ತಿರುವ ಒಂದು ನಗರವಾಗಿದೆ. ಇವತ್ತು ಈ ರೀತಿ ಯದ್ವಾ ತದ್ವಾ ಬೆಳೆಯುತ್ತಾ ಹೋಗಿ ಬೆಂಗಳೂರಿನಲ್ಲಿ ಇಂದು ವಾಸ ಮಾಡಲು ಬಹಳ ಕಷ್ಟವಾಗುತ್ತಿದೆ. ಪ್ರತಿಯೊಂದು ವಿಚಾರದಲ್ಲೂ ಸಮಸ್ಯೆ ಆಗುತ್ತಿದೆ. ನೀರಿನ ಸಮಸ್ಯೆ, ವಿದ್ಯುತ್ತಿನ ಸಮಸ್ಯೆ, ರಸ್ತೆಯಲ್ಲಿ ಓಡಾಡುವ ಪರಿಸ್ಥಿತಿಯಿಲ್ಲ. ಇನ್ನು 2-3 ವರ್ಷ ಕಳೆದರೆ ಅನೇಕ ರಸ್ತೆಗಳಲ್ಲಿ ಯಾವ ವಾಹನವೂ ಓಡಾಡುವುದಕ್ಕಾಗುವುದಿಲ್ಲ. ಇದೇ ರೀತಿ ಬೆಂಗಳೂರು ನಗರವನ್ನು ಬೆಳೆಸಿಕೊಂಡು ಹೋಗಬೇಕೇ ಅಥವಾ ಇದಕ್ಕೇ ಯಾವುದೇ ಒಂದು ಮಿತಿ ಹಾಕಬೇಕೇ, ಎನ್ನುವ ವಿಚಾರ ಇದೆ. ಇದಕ್ಕೆ ಬೆಂಗಳೂರಿನ ಮೇಲೆ ಇರುವ ಒತ್ತಡವನ್ನು ತಪ್ಪಿಸುವುದಕ್ಕೆ ನಾವು ಬೇರೆ ಪಟ್ಟಣಗಳನ್ನು ಅಭಿವೃದ್ಧಿ ಪಡಿಸುತ್ತಿದ್ದೇವೆ. ಈ ಕಡೆ ರಾಮನಗರ, ಚನ್ನಪಟ್ಟಣ, ಆಕಡೆ, ದೇವನಹಳ್ಳಿ ಹೊಸಕೋಟೆ, ದೊಡ್ಡಬಳ್ಳಾಪುರ, ಮುಂತಾದವುಗಳನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಹೆಚ್ಚಿನ ಜನ ಬೇರೆ ಕಡೆ ವಾಸ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಅದು ಎಷ್ಟರ ಮಟ್ಟಿಗೆ ಸಫಲ ಆಗುತ್ತವೆ ಎಂದು ನನಗೆ ಗೊತ್ತಿಲ್ಲ. ಏಕೆಂದರೆ ಇಲ್ಲಿ ಸುತ್ತಲೂ ಇರುವ ಪಟ್ಟಣಗಳಲ್ಲಿ ಸಮರ್ಪಕವಾದ ರೀತಿಯಲ್ಲಿ ಮನುಷ್ಯರು ಯೋಗ್ಯವಾದ ರೀತಿಯಲ್ಲಿ ವಾಸ ಮಾಡುವುದಕ್ಕೆ ಅನುಕೂಲಗಳು ಇಲ್ಲ. ಉದಾಹರಣೆಗಾಗಿ ಕನಕಪುರದಲ್ಲಿ ದೊಡ್ಡ ಕೊಳಾಯಿಗಳನ್ನು ಹಾಕಿ ಬೆಂಗಳೂರಿಗೆ ನೀರನ್ನು ತರುತ್ತಿದ್ದೀರಿ. ಆದರೆ ಕನಕಪುರದಲ್ಲಿ ಕುಡಿಯುವ ನೀರಿನ ಅನುಕೂಲ ಇಲ್ಲ. ನೀವು ಹಾಕಿರುವ ಯೋಜನೆ ಒಳ್ಳೆಯದು. ಈ ಯೋಜನೆಯನ್ನು ನಾನನು ಸ್ವಾಗತ ಮಾಡುತ್ತೇನೆ. ಆದರೆ ಇವತ್ತಿನ ದಿವಸ ಅಲ್ಲಿ ಏನೂ ಇಲ್ಲ, ನಾವು ಮೊದಲಿನಿಂದಲೂ ಒತ್ತಾಯಿಸುತ್ತಿದ್ದೇವೆ. ಈಗ ತುಮಕೂರು ಬೃಹದಾಕಾರವಾಗಿ ಬೆಳೆಯುತ್ತಿದೆ. ಅದಕ್ಕೆ ಬೇರೆ ಕಾರಣ ಇದೆ. ತುಮಕೂರು ಬೆಳೆಯಬೇಕಾದರೆ ಅದಕ್ಕೆ ಸೀಮಿತವಾದ ಕಾರಣಗಳು ಇದೆ. ಆದರೆ ನಿಮ್ಮಿಂದ ತುಮಕೂರು ಬೆಳೆಯುವುದಕ್ಕೆ ಬೇಕಾದ ಇನ್ಫ್ರಾಸ್ಟ್ರಕ್ಚರ್ ಇಲ್ಲ, ಅಲ್ಲಿ ಮನುಷ್ಯರು ವಾಸ ಮಾಡುವುದಕ್ಕೆ ಅವಕಾಶ ಅದು ಇಲ್ಲದಿದ್ದ ಸಹ ತುಮಕೂರು ಬೆಳೆಯುವುದಕ್ಕೆ ಬೇರೆ ಕಾರಣಗಳು ಇವೆ. ತುಮಕೂರಿನಂತೆ ಬೇರೆ ಪಟ್ಟಣಗಳು ಬೆಳೆಯುವುದಕ್ಕೆ ಅವಕಾಶ ಇಲ್ಲ. ಕೋಲಾರ ಬೆಳೆಯಬೇಕಾದ ಅವಶ್ಯಕತೆ ಇದೆ. ಆದರೆ ಕೋಲಾರದಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಅಲ್ಲಿ ಉಪ್ಪು ನೀರಿದೆ. ಮುಖ್ಯಮಂತ್ರಿಗಳು ಕೋಲಾರಕ್ಕೆ ಬಂದಾಗ ಅವರ ಗಮನಕ್ಕೆ ಈ ವಿಷಯ ತಂದಿದ್ದೇನೆ. ಕೋಲಾರಕ್ಕೆ ಬೇರೆ ಕಡೆಯಿಂದ ನೀರನ್ನು ಒದಗಿಸತಕ್ಕ ವ್ಯವಸ್ಥೆ ಮಾಡಿ ಎಂದು ಹೇಳಿದೆವು. ಅದಕ್ಕೆ ಹಿಂದೆ ಒಂದು ಯೋಜನೆಯನ್ನು ತಯಾರಿಸಲಾಗಿದೆ. ಕಾವೇರಿ ನದಿಯಿಂದ ನೀರನ್ನು ಒದಗಿಸತಕ್ಕ ಅಂದರೆ 10-12 ಪಟ್ಟಣಗಳಿಗೆ ಕನಕಪುರ, ಆನೇಕಲ್ಲು, ಹೊಸಕೋಟೆ, ಬಂಗಾರಪೇಟೆ, ಕೆ.ಜಿ.ಎಫ್, ಮುಳಬಾಗಿಲು, ಮಾಲೂರು ಇವಕ್ಕೆಲ್ಲಾ ಸಮಗ್ರವಾದ ನೀರನ್ನು ಒದಗಿಸತಕ್ಕ ಯೋಜನೆಯ ಅಂದಾಜನ್ನು ತಯಾರಿಸಲಾಗಿದೆ. ಅದಕ್ಕೆ ಮಂಜೂರಾತಿ ಕೊಡಿ ಎಂಬ ಮಾತನ್ನು ಒತ್ತಿ ಒತ್ತಿ ಹೇಳುತ್ತಿದ್ದೇವೆ. ಮುಖ್ಯಮಂತ್ರಿಗಳು ಕೋಲಾರಕ್ಕೆ ಬಂದಾಗ ನಾವು ಇದನ್ನು ಅವರ

ಗಮನಕ್ಕೆ ತಂದಿದ್ದೇವೆ. ಅವರು ಕೂಡ ಆಶ್ವಾಸನೆಯನ್ನು ಕೊಟ್ಟು ಬಂದರು. ಅದಕ್ಕೆ ಕೊನೆಪಕ್ಷ ಡಿಟೈಲ್ ಎಸ್ಟಿಮೇಟ್ ಆಗಬೇಕಾಗಿದೆ. ಡಿಟೈಲ್ ಎಸ್ಟಿಮೇಟ್ಟಾದರೂ ತಯಾರು ಮಾಡುವುದಕ್ಕೆ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡಿಗೆ ಏನಾದರೂ ಮಾಡಿ ಸಬ್ ಡಿವಿಜನ್ ಕ್ರಿಯೇಟ್ ಮಾಡಿ, ಸರ್ವೆ ಮಾಡಿ ವಿವರವಾದ ಅಂದಾಜು ಪಟ್ಟಿಯನ್ನು ತಯಾರು ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಸೂಚನೆ ಕೊಟ್ಟೆವು; ಮಾಡಿಸುತ್ತೇವೆ ಎಂದು ಹೇಳಿದರೂ ಸಹ ಇವತ್ತಿನವರೆಗೂ ಏನೂ ಕೆಲಸ ಮಾಡಲಿಲ್ಲ. ಇವರ ಯೋಜನೆಗಳೆಲ್ಲಾ ಕಾಗದದ ಮೇಲೆ ಉಳಿದಿವೆಯೇ ವಿನಃ ಸುತ್ತಲೂ ಇರತಕ್ಕ ಪಟ್ಟಣಗಳ ಅಭಿವೃದ್ಧಿ ಆಗುತ್ತಿಲ್ಲ. ಬೆಂಗಳೂರನ್ನು ಯಥೇಚ್ಛವಾಗಿ ಬೆಳೆಸಿದ್ದರಿಂದ ಇಲ್ಲಿ ಮನುಷ್ಯರು ವಾಸ ಮಾಡುವುದಕ್ಕೆ ಯೋಗ್ಯವಾದ ಪರಿಸ್ಥಿತಿ ಉದ್ಭವವಾಗಲಿಲ್ಲ. ವ್ಯವಸ್ಥಿತವಾದ ರೀತಿಯಲ್ಲಿ ಬೆಂಗಳೂರು ನಗರ ಬೆಳೆಯಬೇಕಾಗಿರುವಂಥಾದ್ದು ಅತಿ ಅವಶ್ಯಕತೆ ಇದೆ. ಇಲ್ಲಿ ನಾವು ಮಾಡಿರತಕ್ಕ ರಸ್ತೆಗಳಲ್ಲಿ ಇನ್ನು ಹತ್ತು ವರ್ಷಗಳಾದ ಮೇಲೆ ಓಡಾಡುವುದಕ್ಕೆ ಸಾಧ್ಯವಿಲ್ಲ. ಹೊಸ ಬಡಾವಣೆ ಇರತಕ್ಕ ರಸ್ತೆಗಳಲ್ಲಿ ಇನ್ನೂ ಹತ್ತು ವರ್ಷಗಳಾದ ಮೇಲೆ ಓಡಾಡುವುದಕ್ಕೆ ಸಾಧ್ಯವಿಲ್ಲ, ಏಕೆಂದರೆ ಸಂಚಾರ ದಟ್ಟಣೆ ಹೆಚ್ಚಾಗಿದೆ. ಓಡಾಡುವುದಕ್ಕೆ ಸಾಧ್ಯವಿಲ್ಲದಂಥಹ ಪರಿಸ್ಥಿತಿ ಆಗಿದೆ. ಇದು ನಮ್ಮ ಇಂಜಿನಿಯರ್ಗಳಿಗೆ ಏಕೆ ಗೊತ್ತಾಗಲಿಲ್ಲವೋ ನನಗೆ ಗೊತ್ತಿಲ್ಲ. ಹೊರದೇಶಗಳಲ್ಲಿ ಟೌನ್ ಪ್ಲಾನಿಂಗ್ ಯಾವ ರೀತಿ ಇದೆ ಎನ್ನುವುದನ್ನು ನಮ್ಮ ಇಂಜಿನಿಯರ್ಗಳು ಹೋಗಿ ನೋಡಿಕೊಂಡು ಬಂದು ಬೆಂಗಳೂರು ನಗರದಲ್ಲಿ ಬಡಾವಣೆಗಳನ್ನು ಸರಿಪಡಿಸತಕ್ಕ ಅವಶ್ಯಕತೆ ಇದೆ. ನನಗೆ ಒಂದು ಸಾರಿ ಚೀನಾ ದೇಶದ ಬೀಜಿಂಗ್ ಪಟ್ಟಣವನ್ನು ನೋಡತಕ್ಕ ಅವಕಾಶ ಒದಗಿ ಬಂದಿತ್ತು. ಅದು ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡದಾಂಥ ಪಟ್ಟಣ. ಅಲ್ಲಿ ಒಂದು ಕೋಟಿಗಿಂತ ಹೆಚ್ಚು ಜನ ವಾಸ ಮಾಡುತ್ತಿದ್ದಾರೆ. ಅಲ್ಲಿ ರಸ್ತೆ ವ್ಯವಸ್ಥೆ ಯಾವ ರೀತಿ ಇದೆ. ಲೇ ಔಟ್ ಪ್ಲಾನ್ ಯಾವ ರೀತಿ ಮಾಡಿದ್ದಾರೆ, ಎನ್ನುವಂಥದನ್ನು ಕೆಲವರಾದರೂ ಹೋಗಿ ನೋಡಿಕೊಂಡು ಬಂದು ಇಲ್ಲಿ ಸರಿಪಡಿಸತಕ್ಕ ಅವಶ್ಯಕತೆ ಇದೆ. ಅಲ್ಲಿ ಬೀಜಿಂಗ್ ಪಟ್ಟಣದಲ್ಲಿ ಮೋಟಾರ್ ವಾಹನಗಳು ತುಂಬಾ ಕಡಿಮೆ. ಸೈಕಲ್ ಅಲ್ಲಿನ ವಾಹನ ಮತ್ತು ಬಸ್ಸುಗಳಲ್ಲಿ ಜನರು ಪ್ರಯಾಣ ಮಾಡುತ್ತಾರೆ. ಓಡಾಡುವುದು ತುಂಬಾ ಕಡಿಮೆ ಅಲ್ಲಿ. ಜನ ಸೈಕಲ್ಲು ಎಷ್ಟು ದೂರ ಬೇಕಾದರೂ ತುಳಿಯುತ್ತಾರೆ. ಎಷ್ಟು ದೂರ ತುಳಿದರೂ ಆಯಾಸವಾಗತಕ್ಕ ಪರಿಸ್ಥಿತಿ ಇಲ್ಲ, ಈ ರೀತಿ ಲೇ ಔಟ್ ಪ್ಲಾನ್ನು ಮತ್ತು ರಸ್ತೆಗಳನ್ನು ಚೆನ್ನಾಗಿ ಮಾಡಿದ್ದಾರೆ. ಆ ರೀತಿ ಬೆಂಗಳೂರಿನಲ್ಲಿ ಅಳವಡಿಸಿಕೊಳ್ಳಬೇಕಾಗಿರುವ ಅವಶ್ಯಕತೆ ಇದೆ. ಬೆಂಗಳೂರು ಸುತ್ತಮುತ್ತ ಎಲ್ಲಿಯಾದರೂ ಹೊಸ ಬಡಾವಣೆ ಮಾಡಬೇಕಾದರೆ 15 ಮೈಲಿ ದೂರ ಹೋಗಿ ಮಾಡಬೇಕಾಗುತ್ತದೆ. ಜಯನಗರದಂತ ಸುಂದರವಾದಂತಹ ಬಡಾವಣೆಯನ್ನು ಇಂದಿರಾನಗರದಂತಹ ಸುಂದರವಾದಂತ ಬಡಾವಣೆಯನ್ನು ಮಾಡಬೇಕಾದರೆ 15 ಮೈಲಿ ದೂರ ಹೋಗಿ ಮಾಡಬೇಕಾಗುತ್ತದೆ. ಬೆಂಗಳೂರನಲ್ಲಿ ಹೇಳುವವರು, ಕೇಳುವವರು ಯಾರು ಇಲ್ಲ ಎಂದು ತಿಳಿದುಕೊಂಡು ಸಿಕ್ಕಾಪಟ್ಟೆ ಬೆಳೆಯುತ್ತಿದೆ. ಬೆಂಗಳೂರಿನಲ್ಲಿ ಅನೇಕ ಕಡೆ ಸಕ್ರಮಗೊಳಿಸುವ ಕಾನೂನನ್ನು ತಂದಾಗ ಅದಕ್ಕೆ ಸದನದಲ್ಲಿ ಮಂಜೂರಾತಿಯನ್ನು ಕೊಟ್ಟಿದೆ. ಇದನ್ನು ವ್ಯವಸ್ಥಿತವಾದಂತ ರೀತಿಯಲ್ಲಿ ಮಾಡಿದ್ದರೆ ಇಂತಹ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ. ಬೆಂಗಳೂರು ನಗರದಲ್ಲಿ ಇರತಕ್ಕ ಸಿವಿಕ್ ಅಮೆನಿಟೀಸ್ ಸೈಟುಗಳ ಗತಿ ಏನು ಆಗಿದೆ ಅಂದರೆ ಕಜ್ಜಿ-ನಾಯಿ ಪರಿಸ್ಥಿತಿ ಇವತ್ತಿನ ದಿವಸ ಅದಕ್ಕೆ ಬಂದಿದೆ. ಉದಾಹರಣೆಗೆ ನಮಗೆಲ್ಲಾ ಸೈಟುಗಳನ್ನು ಕೊಟ್ಟಿದ್ದಾರೆ. ಬೆಂಗಳೂರಿಗೆ ಹತ್ತಿರದಲ್ಲಿ ಸೈಟುಗಳನ್ನು ಕೊಟ್ಟಿಲ್ಲ. ಹೊಸೂರು ಹತ್ತಿರ ಸೈಟುಗಳನ್ನು ಕೊಟ್ಟಿದ್ದಾರೆ. ಅದು ತಮಿಳು ನಾಡಿಗೆ ಹತ್ತಿರವಾಗಿದೆ. ಬಡಾವಣೆ ಮಾಡುವಂಥ ಸಂದರ್ಭದಲ್ಲಿ ನಮಗೆ ಕೊಟ್ಟಿರತಕ್ಕಂತ ಸೈಟುಗಳ ಹಿಂಭಾಗದ ಜಾಗದಲ್ಲಿ ಪಾರ್ಕಿಗೋಸ್ಕರ ಜಾಗ

ಬಿಟ್ಟಿದ್ದನ್ನು ನಾನು ಕಣ್ಣಾರೆ ನೋಡಿ ಓದಿದ್ದೇನೆ. ಪಾರ್ಕ್ ಎಂದು ಬೋರ್ಡ್ ಹಾಕಿದ್ದರು. ಆದರೆ ಇವತ್ತು ಪಾರ್ಕ್ ಹೋಗಿ ಗ್ರೂಪ್ ಹೌಸಿಂಗ್ ಆಗಿದೆ. ಎರಡು ನೂರು ಫ್ಲಾಟ್ಗಳು ಇರತಕ್ಕ ಒಂದು ದೊಡ್ಡ ಕಟ್ಟಡ ಬಂದಿದೆ. ಅದು ಸುಮಾರು ಬೆಟ್ಟದ ಹಾಗೆ ಕಾಣುತ್ತದೆ. ಹೊಸೂರು ಸರ್ಜಾಪುರ ರಸ್ತೆಯಲ್ಲಿ ಇದು ಇದೆ. ಇದು ಹೇಗೆ ಆಯಿತು? ಯಕ್ಷಿಣಿ ವಿದ್ಯೆ ತರಹ ಆ ಕಟ್ಟಡ ಬಂದಿದೆ. ನಾವು ಒಂದು ಸೈಟ್ ತೆಗೆದು ಕೊಳ್ಳಬೇಕಾದ ಭೂಮಿ ಆಕಾಶದಷ್ಟು ಪ್ರಯತ್ನ ಮಾಡಬೇಕಾಗುತ್ತದೆ. ಇಷ್ಟೆಲ್ಲಾ ಪ್ರಯತ್ನ ಪಟ್ಟರೂ ಕೂಡ ಹೊಸೂರಿನ ಹತ್ತಿರ ನನಗೆ ಸೈಟ್ ಸಿಕ್ಕಿದೆ. ಆದರೆ ಸಾರ್ವಜನಿಕರ ಉಪಯೋಗಕ್ಕಾಗಿ ಮೀಸಲಿಟ್ಟಿದ್ದ ಪಾರ್ಕುಗಳು, ಶಾಲಾ ಕಟ್ಟಡದ ಜಾಗಗಳು ಮತ್ತಿತರ ಜಾಗಗಳನ್ನು ಬೆಳಗಾಗುವಷ್ಟರಲ್ಲಿ ಯಾರ್ಯಾರಿಗೂ ಕೊಡಲಾಗಿದೆ. ಬೀದಿ ಭಿಕಾರಿಗಳಾಗಿ ಇದ್ದವರು ಇವತ್ತು ಕೋಟ್ಯಾಧಿಪತಿಗಳು ಆಗಿದ್ದಾರೆ; ಇದಕ್ಕೆ ನನ್ನ ಸಂಪೂರ್ಣ ವಿರೋಧ ಇದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ರಾತ್ರೋ ರಾತ್ರಿ ಇಂಥಹ ಕಟ್ಟಡಗಳು ಹೇಗೆ ಬರುವುದಕ್ಕೆ ಸಾಧ್ಯಾ? ಇದರ ಬಗ್ಗೆ ವಿವರಣೆ ಕೊಡಬೇಕು. ಇನ್ನು ಮುಂದಕ್ಕಾದರೂ ಬೆಂಗಳೂರುನಗರ ವ್ಯವಸ್ಥಿತವಾಗಿ ಬೆಳೆಯುವುದಕ್ಕೆ ವ್ಯವಸ್ಥೆ ಮಾಡಬೇಕು. ಒಂದು ಕಾಲದಲ್ಲಿ ಉದ್ಯಾನಗರ ಎಂದು ಏನು ಕರೆಯಲಾಗುತ್ತಿತ್ತು. ಅದನ್ನು ಇವತ್ತು ಕೊಳಚೆ ಪ್ರದೇಶದ ನಗರವೆಂದು ಹೇಳಬೇಕಾಗಿದೆ. ಇಷ್ಟನ್ನು ಹೇಳಿ ಈ ಮಸೂದೆಯನ್ನೂ ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ಒಟ್ಟಾರೆ ಸಗಟು ಹಂಚಿಕೆಗೆ ಸಂಬಂಧಪಟ್ಟಂತೆ ತಂದಿದ್ದಾರೆ. ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ರಚನೆಯ ಉದ್ದೇಶವೇನೆಂದರೆ, ಯಾರಿಗೆ ನಿವೇಶನಗಳು ಇಲ್ಲ ಅಂತಹ ನಿವೇಶನರಹಿತರಿಗೆ ನಿವೇಶನವನ್ನು ಕೊಡತಕ್ಕಂಥದ್ದು. ಆದರೆ ಇವತ್ತು ನಿವೇಶನಗಳನ್ನು ಕೊಡುವುದರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕಿಂತ ಖಾಸಗಿ ಗೃಹ ನಿರ್ಮಾಣ ಸಂಘಗಳು ಯಥೇಚ್ಛವಾಗಿ ಬೆಂಗಳೂರು ಸುತ್ತಮುತ್ತ ಸ್ವಲ್ಪ ಹೆಚ್ಚು ಕಡಿಮೆ ಎಷ್ಟು ಜಾಗ ಇದೆಯೋ ಅಷ್ಟನ್ನು ಹಂಚಿದೆ. ಈ ಸರ್ಕಾರ ಬಂದಮೇಲೆ ನಿವೇಶನಗಳನ್ನು ಕೊಟ್ಟಿದ್ದಾರೋ ಇಲ್ಲವೋ ಎಂಬ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಹಿಂದಿನ ಸರ್ಕಾರಗಳು 350 ಗೃಹ ನಿರ್ಮಾಣ ಮಂಡಲಿಗಳಿಗೆ ಧಾರಾಳವಾಗಿ ಜಮೀನನ್ನು ಕೊಟ್ಟಿದ್ದಾರೆ.

ಬೆಂಗಳೂರಿನ ಈ ಜಾಡ್ಯ ಈಗ ಮೈಸೂರಿಗೂ ಹತ್ತಿದೆ. ಮೈಸೂರಿನ ಕೆಲವು ಪಟ್ಟಣಗಳಿಗೂ ಹತ್ತಿದೆ. ಹಾಗಿದ್ದ ಮೇಲೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವೇಕೆ ಇರಬೇಕು? ಅದು ಬೇಕಾಗಿಲ್ಲ. ಜನರಿಗೆ ನಿವೇಶನವನ್ನು ಕೊಡುವುದಕ್ಕೆ ನಿಮ್ಮ ಅಭಿವೃದ್ಧಿ ಪ್ರಾಧಿಕಾರದಿಂದ ಆಗುವುದಿಲ್ಲವೆಂದರೆ ಅದು ಏಕೆ ಇರಬೇಕು? ಪ್ರಾಧಿಕಾರವನ್ನು ರಚನೆ ಮಾಡತಕ್ಕವರೂ ನೀವೆ? ಮತ್ತೊಂದು ಕಡೆ ಸಹಕಾರಿ ಗೃಹ ನಿರ್ಮಾಣ ಸಂಘಗಳಿಗೆ ಹಂಚತಕ್ಕವರೂ ನೀವೇ ಆಗಿದ್ದೀರಿ. ಗೃಹ ನಿರ್ಮಾಣ ಸಹಕಾರಿ ಸಂಘಗಳಲ್ಲಿ ಮಾಡಿರತಕ್ಕ ಲೂಟಿ, ಅನ್ಯಾಯ, ದರೋಡೆಯ ಬಗ್ಗೆ. ಜಿ.ವಿ.ಕೆ. ರಾವ್ ಸಮಿತಿಯವರು ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಆ ವರದಿ ಏನಾಗಿದೆ? ಅಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಅಕ್ರಮವಾಗಿ ಯಾರು ಸೈಟಿಗಳನ್ನು ಮಾಡಿದ್ದಾರೆ, ಅಕ್ರಮವಾಗಿ ಯಾರು ಬಡಾವಣೆಗಳನ್ನು ಮಾಡಿದ್ದಾರೆ, ಎಷ್ಟು ಲೂಟಿಯನ್ನು ಮಾಡಿದ್ದಾರೆ, ಅಕ್ರಮವಾಗಿ ಯಾರು ಬಡಾವಣೆಗಳನ್ನು ಮಾಡಿದ್ದಾರೆ, ಎಷ್ಟು ಲೂಟಿಯನ್ನು ಮಾಡಿದ್ದಾರೆ, ಯಾರ್ಯಾರು ಮಾಡಿದ್ದಾರೆ. ಏನೇನು ಮಾಡಿದ್ದಾರೆ ಎಂಬ ಬಗ್ಗೆ ಪ್ರತಿಯೊಂದನ್ನು ಜಿ.ವಿ.ಕೆ ರಾವ್ ವರದಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ಆದರೆ ಇವತ್ತಿನವರೆಗೆ ಆ ವರದಿಯ

ಬಗ್ಗೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ ಅಂದರೆ ಈ ಕ್ಷಣದವರೆಗೂ ಇಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳನ್ನು ಕೋರಿ ಸುಮಾರು ಹತ್ತು ಲಕ್ಷ ಜನರು ಅರ್ಜಿಯನ್ನು ಹಾಕಿದ್ದಾರೆ. ಒಂದೆರಡು ಅರ್ಜಿಗಳಲ್ಲ, ಹತ್ತು ಲಕ್ಷ ಅರ್ಜಿಗಳು. ಅದೂ ಕೂಡ ಒಂದು ಬಾರಿಯಲ್ಲ ನೂರಾರು ಬಾರಿ ಅರ್ಜಿಯನ್ನು ಹಾಕಿರುವವರು ಇದ್ದಾರೆ. ಆ ರೀತಿ ಅರ್ಜಿಯನ್ನು ಪಡೆದು ಅದರಿಂದ ಶುಲ್ಕವನ್ನು ವಸೂಲಿ ಮಾಡಿರುವ ಕೋಟ್ಯಾಂತರ ರೂಪಾಯಿಗಳ ಹಣಕ್ಕೆ ಬಡ್ಡಿಯನ್ನು ಕೊಟ್ಟಿಲ್ಲ. ಅವರುಗಳಿಗೆ ನಿವೇಶವನ್ನು ಕೊಡುತ್ತೇನೆಂದು ಹೇಳಲಿಲ್ಲ. ಯಾವಾಗ ನಿವೇಶನವನ್ನು ಕೊಡುತ್ತೇನೆಂದು ಹೇಳಲಿಲ್ಲ. ಯಾವಾಗ ನಿವೇಶನವನ್ನು ಕೊಡುತ್ತೀರಿ ಎನ್ನತಕ್ಕ ಭರವಸೆ ಇಲ್ಲ. ಈ ರೀತಿ ಹಣವನ್ನು ವಸೂಲಿ ಮಾಡಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತನ್ನ ನೌಕರರ ಸಂಬಳ ಸಾರಿಗೆಗಾಗಿ ಉಪಯೋಗ ಮಾಡಿಕೊಂಡು ಜನರಿಗೆ ಒಂದು ರೀತಿಯಲ್ಲಿ ಮೋಸವನ್ನು ಮಾಡಿದೆ. ಇದರ ಜೊತೆಗೆ ಹೊಸದಾದ ಬಡಾವಣೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಈ ಕ್ಷಣದವರೆಗೂ ಮಾಡಿಲ್ಲ. ಹೊಸ ಬಡಾವಣೆಗಳನ್ನು ಮಾಡಬೇಕಾಗುತ್ತದೆ. ಆ ರೀತಿ ಹೊಸ ಬಡಾವಣೆಗಳನ್ನು ಮಾಡಲು ಅವರಿಗೆ ಜಾಗಬೇಕು. ಈ ಜಾಗವನ್ನು ಬಂದಂಥ ಸರ್ಕಾರಗಳು ಏನು ಮಾಡಿವೆ ಎಂದರೆ, ಒಂದು ಕಡೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ತೋರಿಸಿದ್ದಾರೆ, ಮತ್ತೊಂದು ಕಡೆ ಸಹಕಾರಿ ಸಂಘಗಳಿಗೆ ಯಥೇಚ್ಛವಾಗಿ ಕೊಟ್ಟಿದ್ದಾರೆ. ಸರ್ಕಾರದವರು ಹಸಿರುವಲಯವೆಂದು ಮಾಡಿದರು,

ಆದರೆ ಆ ಎಲ್ಲಾ ಹಸಿರು ವಲಯವನ್ನು ಮೀರಿ ದೂರ ಹೋಗಿ. ಬಿಟ್ಟಿದ್ದಾರೆ. ಬೆಂಗಳೂರು ನಗರದ ಸುತ್ತಮುತ್ತ ನೂರಾರು ಪವಿತ್ರವಾದ ಕೆರೆಗಳಿವೆ. ಒಂದು ಕಾಲದಲ್ಲಿ ಕೆರೆಗಳನ್ನು, ಸಾಲು ಮರಗಳನ್ನು, ಧರ್ಮಛತ್ರಗಳನ್ನು ಕಟ್ಟಿಸತಕ್ಕಂಥ ವ್ಯವಸ್ಥೆ ಇತ್ತು. ಆದರೆ ಇವತ್ತು ಆ ಎಲ್ಲಾ ಕೆರೆಗಳನ್ನು ನಿವೇಶನಗಳನ್ನಾಗಿ ಮಾಡಿ ಗೃಹ ನಿರ್ಮಾಣ ಸಹಕಾರಿ ಸಂಘಗಳವರು ಹಂಚಿದ್ದಾರೆ. ಈ ಪ್ರಕಾರ ಹೋಗುವುದು ನಿಜವಾಗಿಯೂ ಅನ್ಯಾಯವೆಂದು ನನಗನ್ನಿಸುತ್ತದೆ. ಇದರ ಬಗ್ಗೆ ಸಮಗ್ರವಾದಂಥ ತನಿಖೆಯಾಗಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾದಿಕಾರದಲ್ಲಿ ಮತ್ತು ಖಾಸಗಿ ಗೃಹ ನಿರ್ಮಾಣ ಸಹಕಾರಿ ಸಂಘಗಳಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಅಲ್ಲಿ ಎಷ್ಟು ನಿವೇಶನಗಳನ್ನು ಹಂಚಿದ್ದಾರೆನ್ನುವ ಬಗ್ಗೆ ಇದೇ ಸದನದಲ್ಲಿ ಆಯವ್ಯಯ ಮಂಡನೆ ಮಾಡುವ ಸಮಯದಲ್ಲಾದರೂ ಒಂದು ಶ್ವೇತಪತ್ರವನ್ನು ಸರ್ಕಾರ ಮಂಡಿಸಬೇಕೆಂದು ಅತ್ಯಂತ ಒತ್ತಾಯದಿಂದ ಹೇಳುತ್ತೇನೆ. ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಾದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಯಾವ ರೀತಿಯಲ್ಲಿ ನಡೆಯುತ್ತಿದೆಯೆಂದರೆ, ಇವರು ಬದುಕಿರುವುದು ಕೇವಲ ಮೂಲೆ ನಿವೇಶನಗಳನ್ನು ಹರಾಜು ಮಾಡುವುದರಿಂದ. ಬೆಂಗಳೂರಿನಲ್ಲಿ ಎಲ್ಲೆಲ್ಲಿ ಇಂಥ ಮೂಲೆ ನಿವೇಶನಗಳಿವೆ, ಅದು ಯಾವುದೇ ಸಾರ್ವಜನಿಕ ಕೆಲಸಕ್ಕೆ ಉಪಯೋಗವಾಗತಕ್ಕಂಥದ್ದು ಇರಲಿ, ಬಹಳ ಒಳ್ಳೆಯ ಸ್ಥಳಗಳು ಇರಲಿ, ತಾವು ಪತ್ರಿಕೆಯಲ್ಲಿ ಪ್ರತಿವಾರವು ನೋಡಿರಬಹುದು, ಮೂಲೆ ನಿವೇಶನಗಳನ್ನು ಹರಾಜು ಹಾಕಲಾಗುವುದೆಂದು ಇರುತ್ತದೆ. ಇಂಥ ಮೂಲೆ ನಿವೇಶನಗಳನ್ನು ಹರಾಜು ಹಾಕುವುದರಿಂದ, ಅವುಗಳನ್ನು ಯಾರು ಪಡೆಯುತ್ತಾರೆಂದರೆ, ಮಾರವಾಡಿಗಳು, ಗುಜರಾತಿಗಳು, ಮುಲ್ತಾನಿಗಳು; ಹೀಗೆ ಯಾರ್ಯಾರ ಹತ್ತಿರ ಭಾರಿ ಹಣವಿದೆಯೋ ಅವರುಗಳು ಬಂದು ಇಂಥ ಮೂಲೆ ನಿವೇಶನಗಳನ್ನು ಪಡೆಯುತಿದ್ದಾರೆ. ಅಲ್ಲಿ ಅವರು ಬಹುಮಹಡಿಯ ಕಟ್ಟಡಗಳನ್ನು ಕಟ್ಟುತ್ತಾರೆ, ಮತ್ತು ಇಲ್ಲೇ ದೊಡ್ಡ ಸಾಮ್ರಾಜ್ಯವನ್ನು ನಿರ್ಮಾಣ ಮಾಡುತ್ತಿದ್ದಾರೆ. ಇವೆಲ್ಲದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಬೇಕು. ಇಲ್ಲದಿದ್ದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಏಕೆ ಬೇಕು ಎಂದು ನನಗನಿಸುತಿದೆ. ಇದು ಯಾವ ಉದ್ದೇಶಕ್ಕಾಗಿ ಬೇಕಾಗಿದೆ

ಎಂದು ನಾವು ಚಿಂತನೆ ಮಾಡಬೇಕಾಗಿದೆ. ಮಾನ್ಯ ಬೈರೇಗೌಡರು ಕೆಲವು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಹೇಳಿದ್ದಾರೆ, ಬೆಂಗಳೂರು ಎಲ್ಲಿಯವರೆಗೆ ಬೆಳೆದಿದೆ ಎಂದರೆ ಸುತ್ತಮುತ್ತ ಇರತಕ್ಕ ಸ್ವಲ್ಪ ಹತ್ತಿರದ ಎಲ್ಲಾ ತಾಲ್ಲೂಕುಗಳು ಸಹ ಬೆಂಗಳೂರಿಗೆ ಹತ್ತಿರವಾಗುತ್ತಿವೆ. ಆದ್ದರಿಂದ ಬೆಂಗಳೂರಿನ ಬೆಳವಣಿಗೆಯನ್ನು ತಡೆಯಲು ನಾವೇನು ಮಾಡಬೇಕು ಎನ್ನುವ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಇವತ್ತು ಬೆಂಗಳೂರಿನ ಜನಸಂಖ್ಯೆ 50 ಲಕ್ಷವಾಗಿದೆ. 50 ಲಕ್ಷ ಜನಸಂಖ್ಯೆಯ ಒತ್ತಡ ಈ ನಗರಕ್ಕಿದೆ. ಒಂದು ದಿನದಲ್ಲಿ ಕನಿಷ್ಟಪಕ್ಷ ಏಳುಲಕ್ಷ ಮೋಟಾರ್ ವಾಹನಗಳು ಓಡಾಡುತ್ತಿವೆ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಾದ ರಾಮಸ್ವಾಮಿಯವರ ಗಮನಕ್ಕೆ ತರುವುದಾದರೆ, ತಾವು ಅನೇಕ ಸಭೆಗಳಲ್ಲಿ ಹೋಗಿ ಭಾಷಣ ಮಾಡುವಾಗ ಬೆಂಗಳೂರಿಗೆ ಬರುತ್ತಿರುವ ವಲಸೆಯನ್ನು ತೀವ್ರವಾಗಿ ತಡೆಗಟ್ಟಬೇಕು ಎನ್ನುವ ಬಗ್ಗೆ ಎರಡುಮೂರು ಕಡೆ ಹೇಳಿದ್ದೀರಿ. ಹಾಗೆಯೇ ಯಾಹ್ಯಾರವರು ಸಹ ಹೇಳಿದ್ದಾರೆ. ಆದರೆ ತಾವು ಇದನ್ನು ತಡೆಗಟ್ಟಲು ಏನು ಕ್ರಮ ತೆಗೆದುಕೊಂಡಿದ್ದೀರಿ? ಬೆಂಗಳೂರಿಗೆ ವಲಸೆ ಬರುವವರು ಯಾರು ಎಂದರೆ ಬೆಂಗಳೂರಿನಲ್ಲಿ ಬಹಳ ಒಳ್ಳೆಯ ವಾತಾವರಣವಿದೆಯೆಂದು ತಮಿಳುನಾಡಿನವರು, ಆಂಧ್ರದವರು ಮತ್ತು ಮಹಾರಾಷ್ಟ್ರದವರು ಮಿಡತೆಯ ದಂಡಿನಂತೆ ವಲಸೆ ಬರುತ್ತಿದ್ದಾರೆ ನುಗ್ಗುತ್ತಿದ್ದಾರೆ. ಈ ವಲಸೆಯನ್ನು ತಾವು ನಿಲ್ಲಿಸದಿದ್ದರೆ ಬೆಂಗಳೂರನ್ನು ಅಭಿವೃದ್ಧಿಪಡಿಸಲು ಸಾಧ್ಯವಿಲ್ಲ. ಬೆಂಗಳೂರಿನ ಬೆಳವಣಿಗೆಗೆ ಅತ್ಯಂತ ಮಾರಕವಾಗಿರುವ ಈ ವಲಸೆಯನ್ನು ತಡೆಯುವುದರ ಬಗ್ಗೆ ಎಲ್ಲರೂ ಸಹ ಪಕ್ಷಾತೀತವಾಗಿ ಯೋಚನೆ ಮಾಡಿ ಈ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

4.00 ಪಿ.ಎಂ.

+ ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಈಗ ಬಿ.ಡಿ.ಎ.ಗೆ ನಮೂದಿಸಿರುವಂತಹ ಈ ಒಂದು ತಿದ್ದುಪಡಿಯನ್ನು ಸ್ವಾಗತ ಮಾಡಿದ್ದಾರೆ. ಮಾನ್ಯ ಸದಸ್ಯರುಗಳ ಶ್ರೀ ಬೈರೇಗೌಡರು, ಶ್ರೀ ವಾಟಾಳ್ ನಾಗರಾಜ್‌ರವರು ಬೆಂಗಳೂರು ನಗರ ಮೂಲಭೂತವಾಗಿ ಎದುರಿಸುತ್ತಿರುವಂತಹ ಕೆಲವು ಪ್ರಶ್ನೆಗಳನ್ನು ಇವತ್ತು ಎತ್ತಿದ್ದಾರೆ. ಬಿ.ಡಿ.ಎ. ಪರಿಸ್ಥಿತಿ ಇಂದು ಬಹಳ ಚಿಂತಾಜನಕವಾಗಿದೆ. ಇದು ಒಳ್ಳೆಯ ಸಂಸ್ಥೆ. ಇದು ಬೆಂಗಳೂರಿನ ನಾಗರೀಕರ ಯೋಗಕ್ಷೇಮವನ್ನು ನೋಡಬೇಕು, ನಿವೇಶನಗಳನ್ನು ಒದಗಿಸುವಂತಹ ಕೆಲಸವನ್ನು ಮಾಡಬೇಕು. ಅದು ಒಳ್ಳೆಯ ಸಂಸ್ಥೆ ಅದಕ್ಕೆ ಶಸ್ತ್ರಚಿಕಿತ್ಸೆ ಮಾಡಬೇಕೆಂದು ಹೇಳಿ ಬಹಳ ಪ್ರಯತ್ನ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಶಸ್ತ್ರಗಳೆಲ್ಲ ಮೊಂಡಾಗಿವೆ. ಆದರೆ ನೀವು ಸಾಣೆ ಹಿಡಿಯುವುದಕ್ಕೆ ಹೋಗುತ್ತೀರೋ ಇಲ್ಲವೋ ನನಗೆ ಗೊತ್ತಿಲ್ಲ. ಸದ್ಯಕ್ಕಂತೂ ಮೊಂಡಾಗಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಆಪರೇಷನ್ ಮಾಡಿದರೆ ಮತ್ತೊಂದು ರೋಗ ಬರುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ : ಬಿ.ಡಿ.ಎ. ಮಾತ್ರ ಬಹಳ ಕಷ್ಟದ ಪೇಷೆಂಟ್. ಅದಕ್ಕಾಗಿ ಅದರ ಅಧ್ಯಕ್ಷರಾಗಿ ಮುದ್ದಪ್ಪನವರನ್ನು ನೇಮಿಸಿದ್ದೇವೆ. ಅವರು ಒಳ್ಳೆಯ ಅಧಿಕಾರಿ. ಆ ಉದ್ದೇಶದಿಂದಲೇ ಅವರನ್ನು ಹಾಕಿದ್ದೇವೆ. ನಾವು ಅದನ್ನು ಸರಿಮಾಡಿಕೊಡಿ ಎಂದು ಅವರಿಗೆ ಹೇಳಿ, ಅವರಿಗೆ ಎಲ್ಲಾ ರೀತಿಯ ಸ್ವಾತಂತ್ರ್ಯವನ್ನು ಕೊಟ್ಟು ಅದನ್ನು ಸರಿಪಡಿಸುವುದಕ್ಕೆ ನೋಡುತ್ತಿದ್ದೇವೆ. ಈಗ ಅದು ಒಳ್ಳೆಯ ದಾರಿಯಲ್ಲಿ ಹೋಗುತ್ತಿದೆ. ಸ್ಕ್ಯಾಂಡಲ್ಸ್ ಅಂತೂ ಇಲ್ಲ. ಬಿ.ಡಿ.ಎ. ನಲ್ಲಿ ಇದ್ದಂತಹ ಹುತ್ತಗಳನ್ನು ಕಿತ್ತಿಸಿದ್ದೇವೆ. ಹುತ್ತಗಳನ್ನು, ಹಾವುಗಳನ್ನು ಸ್ವಲ್ಪ ದೂರದಲ್ಲಿಟ್ಟಿದ್ದೇವೆ. ಇವತ್ತು ಅದನ್ನು ಸರಿಯಾದಂತಹ ದಾರಿಯಲ್ಲಿ ಇಡಬೇಕೆಂದು ಹೇಳಿ ನಾವು ಪ್ರಾಮಾಣಿಕವಾದಂತಹ

...ಮತ್ತ್ವವನ್ನು ಖಂಡಿತವಾಗಿ ಮಾಡುತ್ತಿದ್ದೇವೆ. ಭೂಸ್ವಾಧೀನದಲ್ಲೂ ಬಹಳ ಸಮಸ್ಯೆಗಳು ಬಂದಿದ್ದವು. 1989ರಿಂದ ನಾವು ಸುಮಾರು 15 ಸಾವಿರ ಎಕರೆ ಜಾಗಗಳನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಮತ್ತು 28 ನ್ಯೂ ಲೇ ಔಟ್ಟಗಳನ್ನು ಮಾಡುವುದಕ್ಕೆ ಪ್ರಯತ್ನ ನಡೆದದ್ದು ಇದೆ. ಆದರೆ ಅನೇಕ ಸಮಸ್ಯೆಗಳು, ಕೋರ್ಟ್ ದಾವೆಗಳು, ಅನ್-ಅಥಾರೈಸ್ಡನಸ್ಟ್ರಕ್ಷನ್ಸ್ ಬಹಳ ವಿಸ್ತಾರವಾದಂತಹ ಕ್ಷೇತ್ರದಲ್ಲಿ ಇದ್ದು ಇವೆಲ್ಲಾ ಆತಂಕಗಳು ಬಂದು ಅದನ್ನು ನಾವು ಕೂಡಲೇ ಸರಿಮಾಡುವುದಕ್ಕಾಗಿಲ್ಲ, ಈಗ ಸುಮಾರು 80 ಸಾವಿರ ನಿವೇಶಗಳು ಬೇಕೆಂದು ಜನರು ಕ್ಯೂನಲ್ಲಿದ್ದಾರೆ. ಮತ್ತೆ ನಾವು ಅದನ್ನೆಲ್ಲಾ ಪರಿಗಣಿಸಿ ಈಗ ಏನು ಮಾಡುತ್ತಿದ್ದೇವೆ ಎಂದರೆ ಭೂ ಸ್ವಾಧೀನವಲ್ಲಿ ಕೋರ್ಟ್ ದಾವೆ ಎಂದು We are trying to make them partners in land acquisition. ಅವರನ್ನು ನಾವು ಪಾಲುದಾರರನ್ನಾಗಿ ಮಾಡಿಕೊಂಡು ಈ ಕೇಸನ್ನು ಹಿಂದೆ ತೆಗೆದುಕೊಳ್ಳಬೇಕು. ಅದರ ಬದಲು 20% of the developed land, compensation ಇಲ್ಲದೇ ನಾವು ಕೊಡುತ್ತೇವೆಂದು ಒಂದು ಹೊಸ ಯೋಜನೆ ಹಾಕಿದ್ದೇವೆ. ಇಲ್ಲದಿದ್ದರೆ ಇದು ಅಂತ್ಯವಾಗುವುದಿಲ್ಲ. ಆದುದರಿಂದ ಇತ್ತೀಚೆಗೆ ನಾವು ಸುಮಾರು 200 ಎಕರೆ ಜಾಗವನ್ನು ಎಲ್ಲಾ ತಾಪತ್ರಯಗಳು ಇದ್ದರೂ ಕೂಡ ಸ್ವಾಧೀನಕ್ಕೆ ತೆಗೆದುಕೊಂಡಿದ್ದೇವೆ. ಇದರಿಂದ ಸುಮಾರು 3 ಸಾವಿರ ನಿವೇಶನಗಳನ್ನು ರಚನೆ ಮಾಡುವಂತಹ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ಆದರೆ ಒಂದು ಸಂತೋಷದ ವಿಷಯವನ್ನು ಹೇಳುವುದಾದರೆ 729 ಎಕರೆ 31 ಗುಂಟೆ ಜಾಗಕ್ಕೆ ಸಂಬಂಧಪಟ್ಟಂತೆ ಜ್ಞಾನ ಭಾರತಿ ಲೇಔಟ್ನಲ್ಲಿ ನಾವು ಫೈನಲ್ ನೋಟಿಫಿಕೇಷನ್ ಅನ್ನು ಮಂಜೂರು ಮಾಡಿದ್ದೇವೆ.

ಆದುದರಿಂದ ಇವತ್ತು ಗೆಜೆಟ್ನಲ್ಲಿ ಅದನ್ನು ನೋಟಿಫೈ ಮಾಡಿ, ಒಂದು ಅಂತಿಮ ಅಭಿಪ್ರಾಯವನ್ನು ಈ ಲ್ಯಾಂಡ್ ಅಕ್ವಿಸಿಷನಲ್ಲಿ ತೆಗೆದುಕೊಳ್ಳುತ್ತೇವೆ. ಇದರಲ್ಲಿ ಒಂದು ರೀತಿಯಾಗಿ ಎಲ್ಲಿ ಕೈ ಹಾಕುವುದು, ಎಲ್ಲಿ ಇದನ್ನು ಸರಿಮಾಡುವುದು ಎಂದು ಬಹಳ ಸಮಸ್ಯೆಗಳು ಉದ್ಭವವಾಗಿದೆ. ಇದನ್ನು ಒಂದೊಂದೇ ನಾವು ಇವತ್ತಿನ ದಿವಸ ಬಗೆಹರಿಸಿಕೊಂಡು ಮುಂದೆ ಹೋಗುತ್ತಿದ್ದೇವೆ. ಇದೂ ಅಲ್ಲದೆ ಜೆ.ಪಿ. ನಗರದಲ್ಲಿ ಸೆವನ್ತ್ ಫೇಸ್ನಲ್ಲಿ ಸುಮಾರು 889 ಎಕರೆ 36 ಗುಂಟೆ, ಜೆಪಿ ನಗರ 8ನೇ ಫೇಸ್ನಲ್ಲಿ 1 ಸಾವಿರದ 99 ಎಕರೆ 36 ಗುಂಟೆ, ಬನಶಂಕರಿ 5ನೇ ಫೇಸ್ನಲ್ಲಿ 1851 ಎಕರೆ 36 ಗುಂಟೆ ಎಂದರೆ ಒಟ್ಟು 3579 ಎಕರೆ 36 ಗುಂಟೆ ಜಾಗ ಇವತ್ತು ಬೇರೆ ಬೇರೆ ಹಂತದಲ್ಲಿ ಏನು ನೋಟಿಫಿಕೇಷನ್ನಲ್ಲಿ ನಿಂತುಬಿಟ್ಟಿತ್ತು, ಇದು ಯಾವುದನ್ನು ಮುಂದುವರಿಸುವುದಕ್ಕೆ ನಮಗೆ ಆಗಲಿಲ್ಲ; ಮತ್ತು ಬೇರೆ ಬೇರೆ ಆತಂಕಗಳಿಂದ ಅದು ತಡೆಹಿಡಿದಿತ್ತು. ಅದನ್ನೆಲ್ಲಾ ಇವತ್ತು ನಿವಾರಿಸಿಕೊಂಡು ಸ್ವಾಧೀನ ಪಡಿಸತಕ್ಕಂತಹ ಒಂದು ಹೆಜ್ಜೆಯನ್ನು ನಾವು ಇಟ್ಟುಕೊಂಡಿದ್ದೇವೆ. ಆದುದರಿಂದ ಈಗ ಸ್ವಲ್ಪ ಚೇತರಿಸಿಕೊಳ್ಳುತ್ತಿದೆ. ಅದನ್ನು ನಾವು ಇವತ್ತು ಸರಿ ಮಾಡುತ್ತಿದ್ದೇವೆ. ಮಾನ್ಯ ಬೈರೇಗೌಡರು ಒಂದು ಮಾತು ಹೇಳಿದರು. ಅದು ಕೋಲಾರಕ್ಕೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು. ನಾನು ಅದನ್ನು ಕೂಡ ಗಮನಿಸಿ ಅದರ ಬಗ್ಗೆ ಬಿಡಬ್ಲ್ಯೂಎಸ್ಎಸ್ಬಿ ಅವರನ್ನು ಕರೆದು ಇದರ ಬಗ್ಗೆ ಒಂದು ವ್ಯಾಪಕವಾದಂತಹ ಕಾರ್ಯಕ್ರಮವನ್ನು ಮಾಡಬೇಕು; ಏಕೆಂದರೆ ಬೆಂಗಳೂರು ಮತ್ತು ಬೆಂಗಳೂರು ಸುತ್ತಮುತ್ತ ಇದನ್ನು ಸೆಟಲೈಟ್ ಟೌನ್ ಮಾಡಬೇಕು ಎಂದು ಏನು ನಮಗೆ ಅಪೇಕ್ಷೆ ಇದೆ ಮತ್ತು ಈಗ ಮೆಟ್ರೋ ಪಾಲಿಟನ್ ಮೆಗಾಸಿಟಿ ಆಗತಕ್ಕಂಥಾದ್ದು ಏನಿದೆ, ಇದರಿಂದ ಅನೇಕ ಸಮಸ್ಯೆಗಳು ನಮಗೆ ಪರಿಹಾರವಾಗುತ್ತದೆ. ಕುಡಿಯುವ

ನೀರಿನ ಸಮಸ್ಯೆ ಮತ್ತು ಬೇರೆ ಬೇರೆ ರೀತಿಯಲ್ಲಿ ಬೆಂಗಳೂರನ್ನು ಒಂದು ಉತ್ತಮವಾದಂತಹ ಸುಂದರವಾದಂತಹ ನಗರವನ್ನಾಗಿ ಮಾಡತಕ್ಕಂತಹ ದೃಷ್ಟಿಯಲ್ಲಿ ವಿಶೇಷ ರೀತಿಯ ಬದಲಾವಣೆ ಖಂಡಿತವಾಗಿ ಕೂಡ ಆಗುತ್ತದೆ. ಇಲ್ಲದೆ ಇದ್ದರೆ ನಮ್ಮಲ್ಲಿ ಆ ಇನ್ವೆಸ್ಟ್ಮೆಂಟ್ ಕಾಣುವುದಿಲ್ಲ. ನಾನು ಕೋಲಾರದ ಬಗ್ಗೆ ಮರೆತು ಬಂದಿಲ್ಲ. ಈಗಾಗಲೇ ಅದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಅದನ್ನು ಮಾಡೋಣ. ನಾವು ಸ್ವಲ್ಪ ಹೆಚ್ಚು ಪ್ರಗತಿ ಕಾಣಬೇಕು.

ಶ್ರೀ ಸಿ. ಬೈರೇಗೌಡ : ಅದಕ್ಕೆ ಒಂದು ಡೀಟೈಲ್ ಸರ್ವೆ ಆಗಬೇಕಾಗಿದೆ. ಈಗ ನಾನು ಆ ಮಂಡಲಿ ಅಧ್ಯಕ್ಷನಾಗಿದ್ದಂತಹ ಸಂದರ್ಭದಲ್ಲಿ ಒಂದು ನೂರು ಕೋಟಿ ರೂಪಾಯಿಯ ಯೋಜನೆ ಪ್ರಾರಂಭವಾಗಿತ್ತು. ಈ ಸದನದಲ್ಲಿ ಒಂದು ಪ್ರಶ್ನೆ ಕೇಳಿದಾಗ ಅದಕ್ಕೆ ಸುಮಾರು 2 ನೂರು ಕೋಟಿ ರೂಪಾಯಿ ಆಗುತ್ತದೆ ಎಂದು ಹೇಳುತ್ತಾರೆ. It is line estimate, even today it is line estimate. ಇದಕ್ಕೆ ಡೀಟೈಲ್ ಎಸ್ಟಿಮೇಟ್ ಆಗಬೇಕಾಗುತ್ತದೆ. ಅದಕ್ಕೆ ನೀವು ಸೂಚನೆ ಕೊಡಬೇಕು.

ಶ್ರೀ ಎಂ.ವೀರಪ್ಪ ಮೊಯಿಲಿ : ನಾನು ಆರ್ಡರ್ ಮಾಡುತ್ತೇನೆ; ಅವರಿಗೆ ಸೂಚನೆ ಕೊಡುತ್ತೇನೆ. ಡಿಟೈಲ್ ಎಸ್ಟಿಮೇಟ್ ಮಾಡುವುದ್ಕಕೆ ನಾನು ಸೂಚನೆ ಕೊಡುತ್ತೇನೆ. ಈಗ ತಾವು ಹೇಳಿದ ಹಾಗೆ, ಒಂದು ಸೆಟಲೈಟ್ ಪ್ಲಾನ್ ಇರಬಹುದು ಅಥವಾ ಹತ್ತಿರ ಇರಬಹುದು ಒಂದು ಒಳ್ಳೆಯ ಬಡಾವಣೆ,ಎಂದರೆ ವಿಜಯನಗರದಂತಹ ಬಡಾವಣೆ, ರಾಜಾಜಿನಗರದಂತಹ ಬಡಾವಣೆ, ಇಂದಿರಾ ನಗರದಂತಹ ಬಡಾವಣೆ ನಮ್ಮ ಬೆಂಗಳೂರಿನಲ್ಲಿ ಪುನಃ ಒಂದು ಅಗತ್ಯ ಇದೆ. ಅದು ಹತ್ತಿರ ಇರಬಹುದು ಅಥವಾ ಸ್ವಲ್ಪ ದೂರ ಇರಬಹುದು. ಇದನ್ನು ಕೂಡ ಒಂದು ಮಾಡಬೇಕು ಎಂದು ನಮ್ಮ ಸರ್ಕಾರದ ಅಂದಾಜು. ಜಿವಿಕೆ ರಾವ್ ರಿಪೋರ್ಟ್ ಬಗ್ಗೆ ತಾವು ಕೇಳಿದ್ದೀರಿ. ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ನಾಳೆ ಬಹುಶಃ ರಾಜ್ಯಪಾಲರ ಭಾಷಣದ ಬಗ್ಗೆ ಉತ್ತರ ಕೊಡುವಾಗ ಅದರ ಬಗ್ಗೆ ನಾನು ವಿವರ ಕೊಡುತ್ತೇನೆ. ಆದುದರಿಂದ ಈಗ ತಮ್ಮ ಮುಂದೆ ತಂದಂತಹ ಈ ಮಸೂದೆಗೆ ಮಂಜೂರಾತಿ ಕೊಡಬೇಕು ಎಂದು ತಮ್ಮ ಮುಖೇನ ಮಾನ್ಯ ಸದಸ್ಯರನ್ನು ನಾನು ಬೇಡಿಕೊಳ್ಳುತ್ತೇನೆ.

ಅಧ್ಯಕ್ಷರು : 'ಪ್ರಸ್ತಾವ ಏನೆಂದರೆ "1993ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು ಖಂಡ 2 ರಿಂದ 4 ರವರೆಗೆ :

ಅಧ್ಯಕ್ಷರು: "ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅಧ್ಯಕ್ಷರು : ಮಾನ್ಯ ಸದಸ್ಯರಾದ ಶ್ರೀ ಲಕ್ಕಣ್ಣನವರು ಈಗ ತಿದ್ದುಪಡಿ ಸೂಚನೆಯನ್ನು ಮಂಡಿಸುತ್ತಾರೆ.

ಖಂಡ-5

ಶ್ರೀ ಕೆ. ಲಕ್ಕಣ್ಣ : ಸನ್ಮಾನ್ಯ ಅಧ್ಯಕ್ಷರೇ, 5ನೇ ಖಂಡಕ್ಕೆ ತಿದ್ದುಪಡಿ ಈ ರೀತಿ ಇದೆ:

1. ಉಪವಾಕ್ಯ 5ಕ್ಕೆ ತಿದ್ದುಪಡಿ :

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (3ನೇ ತಿದ್ದುಪಡಿ) ಮಸೂದೆ 1993 (ಎಲ್.ಎ.ಬಿಲ್. ನಂ. 36:1993) (ಇನ್ನು ಮುಂದೆ ಹೇಳಿದ ಬಿಲ್ ಎಂಬುದಾಗಿ ತಿಳಿಯತಕ್ಕದ್ದು) ರ ಉಪವಾಕ್ಯ 5 ರಲ್ಲಿ :

(ಅ) ಶೀರ್ಷಿಕೆಯಲ್ಲಿನ "ಹೊಸ ಅನುಬಂಧ 38:ಬಿ ಯನ್ನು ಅಳವಡಿಸುವಿಕೆ" ಎಂಬ ಪದಗಳಿಗೆ ಬದಲಾಗಿ ಹೊಸ ಅನುಬಂಧ 38:ಬಿ ಮತ್ತು 38:ಸಿ ಎಂಬ ಪದಗಳನ್ನು ಅಳವಡಿಸಿಕೊಳ್ಳಬೇಕು.

(ಆ)ಕೊನೆಯಲ್ಲಿ ಈ ಕೆಳಕಂಡಂತೆ ಅಳವಡಿಸಿಕೊಳ್ಳಬೇಕು :

"38:ಸಿ: ಕೆಲವು ವಿಷಯಗಳಲ್ಲಿ ಹಂಚಿಕೆ ಮಾಡಲು ಪ್ರಾಧಿಕಾರದ ಅಧಿಕಾರ

ಈ ಕಾಯಿದೆ ಅನ್ವಯ ಅಥವಾ ಕಾನೂನಿನ್ವಯ ಅಥವಾ ಈ ಕಾಯ್ದೆಯಡಿ, ಮಂಜೂರಾದ ಯಾವುದೇ ಅಭಿವೃದ್ಧಿ ಯೋಜನೆ, ಅಥವಾ 1945ನೇ ಇಸವಿಯ, ನಗರ ವಿಶ್ವಸ್ಥ ಮಂಡಳಿ, ಬೆಂಗಳೂರು, ಕಾಯ್ದೆಯನ್ವಯ, ಹಿಂದಿನ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಅಥವಾ ಪ್ರಾಧಿಕಾರವು ಅಭಿವೃದ್ಧಿ ಯೋಜನೆಯ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಿರುವ ಅಥವಾ ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿರುವ ಅಥವಾ ಯಾವುದೇ ವ್ಯಕ್ತಿಗೆ ಸಂಬಂಧಪಟ್ಟ ಜಮೀನಿನಲ್ಲಿ ನಿವೇಶನವನ್ನು ರಚಿಸಿದ್ದು, ಅಂತಹ ವ್ಯಕ್ತಿಯ ಪರವಾಗಿ, ಮರುಮಂಜೂರಾತಿ ಮಾಡಲು, ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದಲ್ಲಿ ಮತ್ತು ಅಂತಹ ನಿವೇಶನವು ಅಭಿವೃದ್ಧಿ ಯೋಜನೆಯ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಸಾಧ್ಯವಿಲ್ಲದಿದ್ದಲ್ಲಿ ಅಂತಹ ನಿವೇಶನವನ್ನು ಪ್ರಾಧಿಕಾರವು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು, ಅಂತಹ ವ್ಯಕ್ತಿಗೆ, ಗುತ್ತಿಗೆ ಅಥವಾ ಕ್ರಯದ ಮೂಲಕ ಹಂಚಿಕೆ ಮಾಡಬಹುದು."

(ಅ) ಕಾಲಕಾಲಕ್ಕೆ ಪ್ರಾಧಿಕಾರವು ವಿಧಿಸುವ ದರಗಳನ್ನು ಹಂಚಿಕೆದಾರನು ಪಾವತಿ ಮಾಡಲು ಬದ್ಧನಾಗಿರಬೇಕು.

(ಆ) 1976ರ ನಗರ ಭೂ (ಪರಿಮಿತಿ ಮತ್ತು ಕಾನೂನು) ಅನುಬಂಧ 4ರಲ್ಲಿ ನಿರ್ದಿಷ್ಟಪಡಿಸಿರುವಂತೆ ಹಂಚಿಕೆದಾರನು ಹೊಂದಿರುವ ಜಮೀನಿನ ಜೊತೆಗೆ ಈ ಕಾಯ್ದೆಯಡಿಯಲ್ಲಿ ಹಂಚಿಕೆ ಮಾಡುವ ನಿವೇಶನವು ಸೇರಿದಂತೆ, ಒಟ್ಟು ವಿಸ್ತೀರ್ಣವು ಪರಿಮಿತಿಯನ್ನು ಮೀರಬಾರದು.

ಅಧ್ಯಕ್ಷರು : ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಕೆ. ಲಕ್ಕಣ್ಣ : ಮಾನ್ಯ ಅಧ್ಯಕ್ಷರೆ, ಈ ತಿದ್ದುಪಡಿಯನ್ನು ಈ ಮಹಾಸಭೆಯು ಒಪ್ಪಿದರೆ, ಸುಮಾರು 1960ನೇ ಇಸವಿಯಿಂದ ಅನೇಕ ಬಡವರಿಗೆ ಮತ್ತು ಮಧ್ಯಮವರ್ಗದವರಿಗೆ ಸೇರಿದ 23ಸಾವಿರ ಸೈಟುಗಳನ್ನು ಒಡೆಯರಿಗೆ ಅನುಕೂಲವಾಗುತ್ತದೆ. ಕೆಲವು ನಗರಾಭಿವೃದ್ಧಿ ಸ್ವಾಧೀನದಲ್ಲಿದ್ದರೆ ಸ್ವಾಧೀನ ಆಗದೇ ಇರತಕ್ಕಂಥ ಹಳೆ ಮನೆಗಳು ಕೆಲವು ಇವೆ. ಈಗಾಗಲೇ ಅಭಿವೃದ್ಧಿ ಪ್ರಾಧಿಕಾರದಿಂದ ಸುಮಾರು 8-9 ಸಾವಿರಸೈಟುಗಳು ಹಂಚಿಕೆಯಾಗಿದೆ, ಇನ್ನೂ 13 ಸಾವಿರ ಸೈಟುಗಳನ್ನು ಅವರಿಗೆ ಕೊಡಬೇಕಾಗಿದೆ. ಆ ಬಡಾವಣೆಯಲ್ಲಿ ಈಗಾಗಲೇ ಪ್ರಾಧಿಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ರಸ್ತೆ ಮಾಡಿ, ಸ್ಯಾನಿಟರಿ, ವಾಟರ್, ಎಲ್ಲಾ ಮಾಡಿಕೊಟ್ಟಿದ್ದಾರೆ. ಈ ತಿದ್ದುಪಡಿ ಇಲ್ಲ ಎಂದು ಹೇಳಿ, ಕಳೆದ 8-9 ವರ್ಷದಿಂದ ನಿಲ್ಲಿಸಿದೆ. ಇದರಿಂದ ಪ್ರಾಧಿಕಾರಕ್ಕೂ ನಷ್ಟ. ಅಲ್ಲಿ ಸೈಟುಗಳಲ್ಲಿ ವಾಸಮಾಡತಕ್ಕ ನಾಗರೀಕರಿಗೂ ತೊಂದರೆಯಾಗಿದೆ. ಆದ್ದರಿಂದ, ಇದನ್ನು ಅವರವರಿಗೆ ಮರುಹಂಚಿಕೆ ಮಾಡುವುದರಿಂದ, ಯಾವುದೇ ರೀತಿ ತೊಂದರೆ ಸಂಭವಿಸುವುದಿಲ್ಲ.ಮತ್ತೆ ಪ್ರಾಧಿಕಾರ ಕೂಡ ಸುಮಾರು ಒಂಭತ್ತು ಕೋಟಿ ರೂಪಾಯಿ ಏನು ಖರ್ಚುಮಾಡಿದೆ, ಅದೂ ಸಹ ವಾಪಸ್ಸು ಬರುತ್ತದೆ. ಆದ್ದರಿಂದ, ಈ ತಿದ್ದುಪಡಿಗೆ ಮಹಾಸಭೆ ಒಪ್ಪಿಗೆ ಕೊಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರಾಭಿವೃದ್ಧಿ ಮಂಡಲಿ ಒಂದು ನಿರ್ಣಯವನ್ನು ಏನು ತೆಗೆದುಕೊಂಡಿದೆ ಅದನ್ನು ಜಾರಿಗೆ ಕೊಡುವುದಕ್ಕೆ ಕಾನೂನಿನ ಬಲ ಇಲ್ಲದ್ದರಿಂದ ಸುಮಾರು 20-12-75ರಿಂದ 8-5-86ರವರೆಗೆ ಕಟ್ಟಡಗಳನ್ನು ಕಟ್ಟಿಕೊಂಡು ಅಲ್ಲೇ ವಾಸವಾಗಿರುವವರಿಗೆ ಬಹಳ ತೊಂದರೆಯಾಗಿದೆ. 8-5-86ರವರೆಗೆ ಯಾವುದೇ ರೀತಿಯ ನಿವೇಶನ ಹಂಚಿಕೆ ಮಾಡಿದ್ದಾರೆ ಇದು ಅಂಥ ಹಂಚಿಕೆಯನ್ನು ರದ್ದುಮಾಡಲಾಗಿದೆ ಎಂದು ಈಗಾಗಲೇ ಪ್ರಾಧಿಕಾರವು 8-5-86ರವರೆಗೆ ಕೆಳಗೆ ಕಾಣಿಸಿರುವ ಎಲ್ಲ ಕ್ರಮಗಳೂ, ವಿವರಣೆಗಳೂ ಮತ್ತು ಮಾಡಿದ ಖರ್ಚುಗಳನ್ನು ರೆಗ್ಯುಲರೈಸ್ ಮಾಡಲು, ಒಪ್ಪಿಗೆ ಕೊಡಬಹುದು ಈ ತಿದ್ದುಪಡಿಗೆ ಒಪ್ಪಿಗೆಯನ್ನು ನೀಡಬಹುದು.

ಅಧ್ಯಕ್ಷರು : ಈಗ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"ಖಂಡ 5 ಕ್ಕೆ ತಿದ್ದುಪಡಿ ಸೂಚಿಸಿದಂತೆ ಅಂಗೀಕರಿಸುವುದು."

ಅಧ್ಯಕ್ಷರು : "ಈಗ ಖಂಡ 5ತಿದ್ದುಪಡಿಯಾದಂತೆ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 5 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು) ಖಂಡ 6 ರಿಂದ 8 ರವರೆಗೆ:

ಅಧ್ಯಕ್ಷರು : "ಖಂಡ 6 ರಿಂದ 8ರವರೆಗೆ ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 6 ರಿಂದ 8 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 9

ಅಧ್ಯಕ್ಷರು : ಮಾನ್ಯ ಸದಸ್ಯರಾದ ಶ್ರೀ ಕೆ. ಲಕ್ಕಣ್ಣನವರು ಖಂಡ 9ಕ್ಕೆ ತಿದ್ದುಪಡಿ ಸೂಚನೆಯನ್ನು ಮಂಡಿಸುತ್ತಾರೆ.

ಶ್ರೀ ಕೆ. ಲಕ್ಕಣ್ಣ : ಸನ್ಮಾನ್ಯ ಅಧ್ಯಕ್ಷರೆ, 9ನೇ ಖಂಡಕ್ಕೆ ನನ್ನ ತಿದ್ದುಪಡಿ ಈ ರೀತಿ ಇದೆ.

ಹೊಸ ಪರಿಚ್ಛೇದದ ಅಳವಡಿಸುವಿಕೆ: ಮೇಲೆ ಹೇಳಿದ ಮಸೂದೆಯ ಪರಿಚ್ಛೇದ 8ರ ನಂತರ ಈ ಕೆಳಕಂಡ ಪರಿಚ್ಛೇದವನ್ನು ಅಳವಡಿಸಿಕೊಳ್ಳಬೇಕು.

(9) ಅಂತಹ ಹಂಚಿಕೆಗಳ ಸಿಂಧುತ್ವ : ಪ್ರಾಧಿಕಾರ ಅಥವಾ ನಗರಾಭಿವೃದ್ಧಿ ವಿಶ್ವಸ್ಥಮಂಡಳಿಯು, ಯಾವುದೇ ವ್ಯಕ್ತಿಗೆ, ಯಾವುದೇ ನಿವೇಶನವನ್ನು ಅವನಿಗೆ ಸಂಬಂಧಪಟ್ಟ ಜಮೀನಿನಲ್ಲಾಗಲೀ ಅಥವಾ ಪ್ರಾಧಿಕಾರವು ಯಾವುದೇ ಅಭಿವೃದ್ಧಿ ಯೋಜನೆಗಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನಿನಲ್ಲಿ ಆಗಲೀ ಅಥವಾ ಪ್ರಾಧಿಕಾರದ ವಶದಲ್ಲಿರುವ ಜಮೀನಿನಲ್ಲಾಗಲೀ, ಗುತ್ತಿಗೆ ಅಥವಾ ಕ್ರಯದ ಮೂಲಕ, ಯಾವುದೇ ವ್ಯಕ್ತಿಗೆ 1975 ಡಿಸೆಂಬರ್ 20ನೇ ದಿನಾಂಕದ ನಂತರ ಮತ್ತು ಈ ಮುಂಚಿತವಾಗಿ, ಪ್ರಾಧಿಕಾರವು ಅಥವಾ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯ ಠರಾವಿನಂತೆ, ನಿವೇಶನಗಳ ಹಂಚಿಕೆಯು ಯಾವುದೇ ಕಾನೂನು, ಅಥವಾ ಯಾವುದೇ ನ್ಯಾಯಾಲಯದ ಆದೇಶ, ವಿಚಾರಣೆ ಇದ್ದರೂ ಸಹ, ಅಂತಹ ಠರಾವುಗಳು ಮಾನ್ಯತೆ ಹೊಂದಿರುವುದಾಗಿ ತಿಳಿಯತಕ್ಕದ್ದು ಮತ್ತು ಮೂಲ ಕಾಯ್ದೆಯ ಅನುಬಂಧ 38 ನಂತೆ ತಿದ್ದುಪಡಿ

ಮಾಡಲಾದ ಈ ಕಾಯ್ದೆಯನ್ವಯ ತೆಗೆದುಕೊಂಡ ನಿರ್ಣಯಗಳು ಎಲ್ಲಾ ರೀತಿಯಲ್ಲಿಯೂ ಊರ್ಜಿತವಾಗಿರುತ್ತವೆ.

(ಅ) 8.4.86 ಕ್ಕಿಂತ ಹಿಂದೆ ತೆಗೆದುಕೊಂಡಿರುವ ಎಲ್ಲಾ ನಿರ್ಣಯಗಳು, ನಡವಳಿಗಳು ಮತ್ತು ಇತರ ಕ್ರಮಗಳು ಅಥವಾ ಹಂಚಿಕೆ ಮಾಡಿರುವುದನ್ನು ಕಾನೂನಿನ ಚೌಕಟ್ಟಿನೊಳಗೆ ಮಾಡಿರುವುದಾಗಿ ಪರಿಗಣಿಸತಕ್ಕದ್ದು.

(ಆ) ಪ್ರಾಧಿಕಾರದ ಮೂಲ ಕಾಯ್ದೆಯ ತಿದ್ದುಪಡಿ ಅನುಬಂಧ 38 ಸಿ ನಂತರ ಮಾಡಲಾದ ಹಂಚಿಕೆ ಬಗ್ಗೆ, ಯಾವುದೇ ಮೊಕದ್ದಮೆಯನ್ನಾಗಲೀ ಅಥವಾ ಇತರೆ ಕ್ರಮಗಳನ್ನಾಗಲೀ ಜರುಗಿಸುವಂತಿಲ್ಲ ಅಥವಾ ಅಂತಹ ಹಂಚಿಕೆಗಳನ್ನು ರದ್ದುಪಡಿಸುವುದಕ್ಕಾಗಲೀ, ಅಂತಹ ಹಂಚಿಕೆಯ ಸಿಂಧುತ್ವವನ್ನಾಗಲೀ ಪ್ರಶ್ನಿಸಿ ಯಾವುದೇ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನಾಗಲೀ, ದಾವೆಯನ್ನಾಗಲೀ ಹೂಡುವಂತಿಲ್ಲ ಮತ್ತು ಈ ಕಾಯ್ದೆಯನ್ವಯ ಹಂಚಿಕೆಯಾದ ನಿವೇಶನದ ಹಂಚಿಕೆಯು ಅಸಿಂಧುವೆಂಬುದಾಗಿ ಯಾವುದೇ ನ್ಯಾಯಾಲಯವು ಒಪ್ಪಿಗೆ ನೀಡುವುದಾಗಲೀ ಅಥವಾ ಆದೇಶವನ್ನಾಗಲೀ ನೀಡುವಂತಿಲ್ಲ.

ಅಧ್ಯಕ್ಷರು : ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈ ತಿದ್ದುಪಡಿಯನ್ನು ಅಂಗೀಕರಿಸಬಹುದು.

ಅಧ್ಯಕ್ಷರು : ಈಗ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"ಖಂಡ 9ಕ್ಕೆ ತಿದ್ದುಪಡಿ ಅಂಗೀಕರಿಸುವುದು"

(ಪ್ರಸ್ತಾವ ಸೂಚಿಸಿದಂತೆ ಅಂಗೀಕರಿಸಲ್ಪಟ್ಟಿತು)

ಅಧ್ಯಕ್ಷರು : ಖಂಡ 9 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 9 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "1993ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 3ನೇ ತಿದ್ದುಪಡಿ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1993ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (3ನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

3.ಕರ್ನಾಟಕ ಅಬಕಾರಿ (ಮೂರನೆಯ ತಿದ್ದುಪಡಿ) ವಿಧೇಯಕ, 1993

ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1993ನೇ ಸಾಲಿನ ಕರ್ನಾಟಕ ಅಬಕಾರಿ (ಮೂರನೆಯ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ನಮಗೆ ಏನಾಗಿದೆ ಎಂದರೆ, ಇಲ್ಲಿಯವರೆಗೆ ಅಬ್ಕಾರಿ ಬಾಕಿಯನ್ನು ನಾವು ವಸೂಲ್ಮಾಡುವುದಕ್ಕೆ ಹೋದರೆ even Munsiff is to grant stay ಕೆಲವು ಸಾರಿ 5-10 ಕೋಟಿಗೆ ಮುನ್ಸಿಫ್‌ರು ಸ್ಟೇ ಆರ್ಡರ್ ಕೊಟ್ಟು ನಮಗೆ ವಸೂಲ್ಮಾಡುವುದಕ್ಕೆ ವಿಶೇಷವಾದ ಆತಂಕ ಇಲ್ಲಿಯವರೆಗೆ ಬರುತ್ತಿತ್ತು. ಆದುದರಿಂದ ಆ ಜೂರಿಸ್ಡಿಕ್ಷನ್ ಅನ್ನು ತೆಗೆದುಹಾಕತಕ್ಕ ಮಸೂದೆಯ ಅವಶ್ಯಕತೆ ಇದೆ ಎಂದು ನಾವು ಇದನ್ನು ಮಂಡನೆ ಮಾಡುತ್ತಿದ್ದೇವೆ. ಇದರಿಂದ ಬಹುಶಃ ರೆಕವರಿಗೆ ಬಹಳ ಪ್ರಯೋಜನವಾಗುತ್ತದೆ. ಇಲ್ಲದಿದ್ದರೆ ವರ್ಷ ವರ್ಷ ಹೋದಂತೆ ರೆಕವರಿಯಲ್ಲಿ ನಮಗೆ ಬಹಳ ಸಮಸ್ಯೆಗಳು ಬರುತ್ತದೆ. ಯಾವುದೋ ಕಾರಣ ಕೊಟ್ಟು ಅವರು ಸ್ಟೇ ಮಾಡಿಸಿಕೊಳ್ಳುತ್ತಾರೆ. ನಮಗೆ ರೆಕವರಿ ಮಾಡುವುದಕ್ಕೆ ಬರುವುದಿಲ್ಲ. ಅವರಿಗೆ ಸಾವಿರಾರು ಕಾರಣಗಳು ಸಿಗುತ್ತವೆ. ಒಂದಲ್ಲ ಒಂದು ಲೂಪ್ಹೋಲ್ಸ್ ಹುಡುಕಿಕೊಂಡು ಸ್ಟೇ ಆಗುವ ಪರಿಸ್ಥಿತಿಯನ್ನು ಬದಲಾಯಿಸುವುದಕ್ಕೆ ಈ ತಿದ್ದುಪಡಿಯ ಅವಶ್ಯಕತೆ ಇದೆ. ಅವರು ಏನು ಮಾಡುತ್ತಾರೆಂದರೆ ನಮ್ಮನ್ನು ಸಪ್ರೋಕೇಟ್ ಮಾಡುತ್ತಾರೆ. ಕಾಂಟ್ರಾಕ್ಟ್ ತೆಗೆದುಕೊಂಡು ಬಿಡುತ್ತಾರೆ. next day they will go and obtain stay ಇದನ್ನು ತಡೆಹಿಡಿಯುವುದಕ್ಕೆ ಪ್ರಾಮುಖ್ಯವಾದ ಈ ತಿದ್ದುಪಡಿ . ಮಸೂದೆಯನ್ನು ತಂದಿದ್ದೇವೆ.

+ ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಅಧ್ಯಕ್ಷರೆ, ಮುಖ್ಯ ಮಂತ್ರಿಗಳು ಮಂಡಿಸಿರುವ ಕರ್ನಾಟಕ ಅಬ್ಕಾರಿ 3ನೇ ತಿದ್ದುಪಡಿ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಇದರಲ್ಲಿ ಕೆಲವು ಹೊಸ ಪ್ರಕರಣಗಳನ್ನು ಸೇರಿಸಿದ್ದಾರೆ. ಹೊಸ ಪ್ರಕರಣಗಳನ್ನು ತಡವಾಗಿಯಾದರೂ ತಂದುದಕ್ಕೆ ನಾನು ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಈ ಅಬ್ಕಾರಿ ಮಸೂದೆ ಏನಿದೆ ಇದರಲ್ಲಿರುವ ಅನೇಕ ಪ್ರಕರಣಗಳು ಅಂದರೆ ಸೆಕ್ಷನ್ಸ್ ಎಂದು ಏನು ಹೇಳುತ್ತೇನೆ ಇವು ಬಹಳಷ್ಟು ಮಟ್ಟಿಗೆ ಬಹಳ ಗೊಂದಲ ಉಂಟು ಮಾಡಿವೆ ಎಂದರೆ ತಪ್ಪಾಗುವುದಿಲ್ಲ. ಈ ಪ್ರಕರಣಗಳ ರೀತ್ಯಾ ಏನು ಕಾನೂನು ಇದೆ ಈ ಕಾನೂನಿನಲ್ಲಿರುವಂಥ ಲೋಪದೋಷಗಳನ್ನು ಸಂಬಂಧಪಟ್ಟ ಅಬ್ಕಾರಿ ಗುತ್ತಿಗೆದಾರರು ದುರಪಯೋಗಪಡಿಸಿಕೊಳ್ಳುತ್ತಿದ್ದರು ಎಂದರೆ ತಪ್ಪಾಗಲಾರದು. ಇದಕ್ಕೆ ನಾನು ಕೇವಲ ಗುತ್ತಿಗೆದಾರರನ್ನು ಮಾತ್ರ ದೂರುವುದಿಲ್ಲ. ನಮ್ಮಲ್ಲಿ ಆಡಳಿತ ವ್ಯವಸ್ಥೆ ಏನಿದೆ ಅದನ್ನು ಸರಿಪಡಿಸುವ ಪ್ರಯತ್ನ ಆಗಲಿಲ್ಲ. ಏನು ಕಾನೂನು ತಿದ್ದುಪಡಿ ಮಾಡಬೇಕಾಗಿತ್ತು ಆ ಕಾನೂನು ತಿದ್ದುಪಡಿ ಮಾಡುವುದಕ್ಕೆ ನಾವು ಅನೇಕ ವರ್ಷಗಳಾದರೂ ಸಹ ಇದನ್ನು ಮಾಡುವುದಕ್ಕಾಗಲಿಲ್ಲ. ಇದಕ್ಕೆ ಮುಖ್ಯವಾದ ಕಾರಣವೇನೆಂದರೆ, ಈ ಒಂದು ಅಬ್ಕಾರಿ ಕಾನೂನು ಏನಿದೆ ಆ ಕಾನೂನಿನ 17ನೇ ಪ್ರಕರಣದ ರೀತ್ಯಾ ಗುತ್ತಿಗೆ ಕೊಡುವ ಅಧಿಕಾರ ನಮಗೆ ಇದೆ. ಅದು ಮಧ್ಯದ ತಯಾರಿಕೆ ಆಗಿರಬಹುದು ಅಥವಾ ನಾವು ಮಾರಾಟ ಮಾಡುವಾಗ ವಿಧಿಸುವಂತ ಅನೇಕ ಷರತ್ತುಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ.

ಅನೇಕ ಷರತ್ತುಗಳು ಸಹ ಇವತ್ತಿನ ದಿವಸ ಗುತ್ತಿಗೆದಾರರ ಪರವಾಗಿವೆ ಮತ್ತು ವಿವಾದ ಮಾಡುವುದಕ್ಕೆ ಆಸ್ಪದ ಕೊಡುವಂತ ಷರತ್ತುಗಳಾಗಿವೆ. ನಾನು ಮುಖ್ಯ ಮಂತ್ರಿಗಳನ್ನು ಕೇಳುತ್ತೇನೆ ಮತ್ತು ವಿನಂತಿ ಮಾಡಿಕೊಳ್ಳುತ್ತೇನೆ. ಈ ಒಂದು

ಷರತ್ತುಗಳನ್ನು ಸಹ ಜನಪರವಾದ ರೀತಿಯಲ್ಲಿ ಬದಲಾಯಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಇವತ್ತಿನ ದಿವಸ ಬಾಕಿ ವಸೂಲಿಗೆ ತಡೆಯಾಜ್ಞೆ ಕೊಡದಂತಹ ರೀತಿಯಲ್ಲಿ ತಾವು ಅಧಿಕಾರವನ್ನು ಈ ಶಾಸನದ ಮುಖಾಂತರ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಅಷ್ಟಕ್ಕೆ ಸ್ವಾಗತ ಮಾಡಬಹುದಾದರೂ ಸಹ ಅನೇಕ ನಿಬಂಧನೆಗಳನ್ನು ಇವತ್ತಿನ ದಿವಸ ಬದಲಾವಣೆ ಮಾಡಬೇಕಾದುದು ಅತ್ಯಗತ್ಯ ಇದೆ. ಅದರ ಬಗ್ಗೆ ಆಲೋಚನೆ ಮಾಡಬೇಕು. ಈ ಪರಿಸ್ಥಿತಿ ಏತಕ್ಕೋಸ್ಕರ ಆಯಿತು? ಕಾನೂನು ಮಂತ್ರಿಗಳು ಇದ್ದಾರೆ, ನಾನು ಅವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ತಮ್ಮ ಕಾನೂನು ಇಲಾಖೆ ಏನಿದೆ ಅದು ಜಡ್ಡು ಹಿಡಿದಿದೆ ಎಂದರೆ ತಪ್ಪಾಗುವುದಿಲ್ಲ. ಮುನ್ಸೀಫ್ ಕೋರ್ಟ್ ವಿಚಾರ ಈಗ ಹೇಳಿದರು, ಅದು ನಿಜ ಮುನ್ಸೀಫ್ ಕೋರ್ಟುಗಳಲ್ಲಿ ಯಾರು ಸರ್ಕಾರದ ಪರವಾಗಿ ಬಂದಿರುತ್ತಾರೆ, ಅವರು ತಪ್ಪು ಮಾಡುವುದನ್ನು ನಾವು ಕಂಡಿದ್ದೇವೆ. ಅನೇಕ ಸಂದರ್ಭಗಳಲ್ಲಿ ಅವರು ಶಾಮೀಲಾಗಿದ್ದಾರೆಂದು ಸಂಶಯ ಬರುವ ರೀತಿಯಲ್ಲಿ ಅವರ ನಡವಳಿಕೆಯನ್ನು ನಾವು ನೋಡಿದ್ದೇವೆ. ಇದು ಕೇವಲ ಅಷ್ಟಕ್ಕೆ ಮಾತ್ರ ಸೀಮಿತವಾಗಿಲ್ಲ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಇವತ್ತು ಹೈಕೋರ್ಟಿನಲ್ಲಿ ಏನು ರಾಜ್ಯ ಸರ್ಕಾರವನ್ನು ಪ್ರತಿನಿಧಿಸುವಂತ ಜನರು ಇದ್ದಾರೆ ಅವರು ಸಹ ಶಾಮೀಲಾಗಿದ್ದಾರೆ ಎಂಬ ಭಾವನೆ ಬರುವಂತಹ ರೀತಿಯಲ್ಲಿ ನಡೆಯುತ್ತಿದೆ. ಹಾಗಾದರೆ ಇದಕ್ಕೆ ಆಧಾರ ಇದೆಯೇ ಎಂದು ಕೇಳಬಹುದು. ಆಧಾರ ಕೊಡುತ್ತೇನೆ. ಇವತ್ತಿನ ದಿವಸ ಸರ್ಕಾರದ ಪ್ರಕರಣಗಳಲ್ಲಿ ಹೈಕೋರ್ಟಿನಲ್ಲಿ ಅಡ್ವೋಕೇಟ್ ಜನರಲ್ ಆಫೀಸ್ನಲ್ಲಿರಬಹುದು ಅಥವಾ ಬೇರೆ ನ್ಯಾಯವಾದಿಗಳು ಇರಬಹುದು, ಅನೇಕ ಪ್ರಕರಣಗಳಲ್ಲಿ ಅವರು ಸರ್ಕಾರದ ಪರವಾಗಿ ವಾದ ಮಾಡುವುದಕ್ಕೆ ತಯಾರಿಲ್ಲ, ಅಸಡ್ಡೆಯಿಂದ ವರ್ತಿಸುತ್ತಾರೆ. ಹಾಗಾದರೆ ನಮ್ಮ ಕಾನೂನು ಇಲಾಖೆಯ ಕೆಲಸವೇನು? ಇವತ್ತಿನ ದಿವಸ ಅಬ್ಕಾರಿ ವಿಷಯ ಇರಬಹುದು, ಗ್ರಾನೈಟ್ ವಿಷಯ ಇರಬಹುದು, ಸೇಲ್ಸ್ ಟ್ಯಾಕ್ಸ್ ವಿಷಯ ಇರಬಹುದು, ಈ ಎಲ್ಲಾ ಪ್ರಕರಣಗಳಲ್ಲಿ ಬಾಕಿ ವಸೂಲ್ಮಾಡುವಾಗ ಸಂಬಂಧಪಟ್ಟವರು ಕೋರ್ಟಿಗೆ ಹೋಗಿ ಒಂದಲ್ಲ ಒಂದು ಕಾರಣಕ್ಕೆ ಸ್ಟೇ ತೆಗೆದುಕೊಳ್ಳುತ್ತಾರೆ. ಅದು ರಿಟ್ ಪಿಟಿಷನ್ ಆಗಿರಬಹುದು ಅಥವಾ ಅಪೀಲು ಆಗಿರಬಹುದು ಅಥವಾ ಬೇರೆ ರೀತಿಯಲ್ಲಿ ಅಪೀಲು ಹಾಕಿದ ಸಂದರ್ಭದಲ್ಲಿ ಸರ್ಕಾರದ ಪರವಾಗಿ ವಾದ ಮಾಡತಕ್ಕ ವಕೀಲರು ಏನಿದ್ದಾರೆ, ಅವರು ತಮ್ಮ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ, ಇದಕ್ಕೆ ನಾನು ಒಂದೆರಡು ಉದಾಹರಣೆಗಳನ್ನು ಕೊಡಬಯಸುತ್ತೇನೆ.

4.30 ಪಿ.ಎಂ

ಇವತ್ತಿನ ದಿವಸ ಯಾರಾದರೂ ಒಬ್ಬ ಗುತ್ತಿಗೆದಾರ ಅಥವಾ ವಾದ ಒಬ್ಬ ಅರ್ಜಿದಾರ ಸರ್ಕಾರದ ವಿರುದ್ಧ ಏನಾದರೂ ಕೇಸನ್ನು ಹಾಕಿದರೆ ರಿಟ್ ಪಿಟಿಷನ್ ಕಾಪಿ ಮೂರು ವರ್ಷಗಳಾದರೂ ಇವರ ಆಫೀಸಿಗೆ ಬರುವುದಿಲ್ಲ. ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾದರೆ ಸರ್ಕಾರದ ಪರವಾಗಿ ಹೇಗೆ ಕೇಸುಗಳು ತೀರ್ಮಾನವಾಗುವುದಕ್ಕೆ ಸಾಧ್ಯವಿದೆ? ಅಷ್ಟೇ ಅಲ್ಲ, ಸಂಬಂಧಪಟ್ಟಂತಹ ಅಧಿಕಾರಿಗಳು ನಾನು ಮುಖ್ಯವಾಗಿ ಹೇಳುತ್ತಿದ್ದೇನೆ ಈ ಮೂರು ಇಲಾಖೆಗಳು ಏನಿವೆ, ಅಂದರೆ ಗ್ರಾನೈಟ್ ಬಗ್ಗೆ ಹೋದಾಗ, ಮತ್ತು ಅಬಕಾರಿ ಗುತ್ತಿಗೆದಾರರು ಹೋದಾಗ ಸೇಲಸ್ಟ್ಯಾಕ್ಸ್ನಲ್ಲಿರುವ ಅಸೆಸ್ಸಿ ಏನಾದರೂ ಹೋದರೆ ಈ ಕೇಸಿನ ಪ್ರಕರಣಗಳಲ್ಲಿ ಸಂಬಂಧಪಟ್ಟಂತಹ ಇಲಾಖೆಯವರು ನೋಡಿಕೊಂಡಿರುತ್ತಾರೆ. ಅದಕ್ಕಾಗಿ ಖಂಡಿತವಾಗಿಯೂ ಸಹ ಅವರು ಕಳುಹಿಸುವುದೇ ಇಲ್ಲ. ಕಳುಹಿಸಿದರೂ ಸಹ ಅವರು ತಮ್ಮದೇ ಆದಂತಹ ವೇಳೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ನಾನು ಕೇಳುತ್ತಿದ್ದೇನೆ. ಇವತ್ತಿನ ದಿವಸ ಏನಾದರೂ ಸ್ಟೇ ಆರ್ಡರ್ ಆದರೆ ಒಂದು ನಿಬಂಧನೆಗೆ ಒಳಪಟ್ಟು ಆಗುತ್ತದೆ. ಏನು ಅರ್ಧ ಹಣವನ್ನು ಕೊಡಬೇಕೆನ್ನುವ ಮಾತನ್ನು ಹೇಳಿದ್ದರೂ ಸಹ ಅನೇಕ

ಸಂದರ್ಭಗಳಲ್ಲಿ ನಾನು ಪುರಾವೆಗಳನ್ನು ಕೊಡುತ್ತಿದ್ದೇನೆ. ಅಂತಹ ಸಂದರ್ಭಗಳಲ್ಲೂ ಸಹ ಆ ಅರ್ಧ ಹಣವನ್ನು ಕಟ್ಟಿಸಿಕೊಂಡು ತಡೆಯಾಜ್ಞೆಯನ್ನು ತೆರವು ಮಾಡಿಸುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಇದರ ಅರ್ಥ ಏನೆಂದರೆ, ಸಂಬಂಧಪಟ್ಟ ಅಧಿಕಾರಿಗಳು ಯಾರು ನ್ಯಾಯಾಲಯದಲ್ಲಿ ಸರ್ಕಾರವನ್ನು ಪ್ರತಿನಿಧಿಸತಕ್ಕ ಜನ ಇದ್ದಾರೆ ಅವರು ಶಾಮೀಲಾಗಿದ್ದಾರೆ ಎನ್ನುವ ಭಾವನೆ ಬರುತ್ತಾ ಇದೆ. ಆ ರೀತಿಯಲ್ಲಿ ಈ ಸರ್ಕಾರ ನಡೆಯುತ್ತಿದೆ. ಇದರ ಬಗ್ಗೆ ವಿಚಾರಣೆಯಾಗಬೇಕು. ನಾನೊಂದು ಹೊಸ ಸಲಹೆಯನ್ನು ಕೊಡುತ್ತಿದ್ದೇನೆ, ಮಾರಾಟ ತೆರಿಗೆ ಅಸೆಸ್ಸಿ ಏನಿದ್ದಾರೆ ಅವರು ಅಪೀಲ್ ಹೋಗುವುದಾದರೆ ಕೆಲವು ಸಂದರ್ಭಗಳಲ್ಲಿ ಅರ್ಧ ಹಣವನ್ನು ಕಟ್ಟಬೇಕೆನ್ನುವ ನಿಯಮವಿದೆ. ನಾನು ಇವತ್ತು ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುತ್ತಿದ್ದೇನೆ. ಅದೇ ರೀತಿಯಾಗಿ ಅಬಕಾರಿ ವಿಷಯಗಳಲ್ಲೂ ಸಹ ಗುತ್ತಿಗೆದಾರರು ಏನಾದರೂ ಅಪೀಲ್ ಹೋಗುವುದಾದರೆ ಏನು ಅಸೆಸ್ ಮಾಡಿದ್ದಾರೆ, ಏನು ತೀರ್ಮಾನ ಮಾಡಿದ್ದಾರೆ ಅದನ್ನು ಕೊಡಬೇಕೆನ್ನುವ ಮಾತನ್ನು ಹೇಳಿದ್ದಾರೆ, ಅದರಲ್ಲಿ ಅರ್ಧ ಹಣವನ್ನಾದರೂ ಕಟ್ಟಿ ಅಪೀಲ್ ಹೋಗುವಂತಹ ಕಾನೂನು ಜಾರಿಗೆ ತರಬೇಕೆಂದು ಅದಕ್ಕೆ ಪ್ರಯತ್ನ ಮಾಡಬೇಕೆನ್ನುವ ಮಾತನ್ನು ಹೇಳುತ್ತಿದ್ದೇನೆ. ಏಕೆಂದರೆ ಇಲ್ಲಿ ಕಾನೂನಿನ ದುರುಪಯೋಗವಾಗುತ್ತಿದೆ.

ಅನೇಕ ಸಂದರ್ಭಗಳಲ್ಲಿ ತಪ್ಪಿರಬಹುದು. ಲೋಪದೋಷಗಳು ಆಡಳಿತ ವ್ಯವಸ್ಥೆಯಲ್ಲಿ ಆಗುತ್ತದೆ. ಲೋಪದೋಷಗಳ ಹೆಸರಿನಲ್ಲಿ ಇವತ್ತಿನ ದಿವಸ ವರ್ಷಾನುಗಟ್ಟಲೆ 5-10 ವರ್ಷಗಳಾದರೂ ಸಹ ಈ ಪ್ರಕರಣಗಳು ತೀರ್ಮಾನವಾಗದ ರೀತಿಯಲ್ಲಿವೆ. ಈ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಇವತ್ತಿನ ದಿವಸ 68ಕ್ಕೆ ಬಿ.ಸಿ.ಡಿ ಸೇರಿಸಿದ್ದೀರಿ. ಅದರ ಮುಖಾಂತರ ಈಗ ಇರುವ ಹಾಲಿ ಪ್ರಕರಣವನ್ನು ತಾವು ಇತ್ಯರ್ಥ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ. ಹೊಸ ಪ್ರಕರಣ 3ರಿಂದ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಅದೇ ರೀತಿಯಾಗಿ ಅಬಕಾರಿ ಅಧಿನಿಯಮ ಏನಿದೆ ಅದರಲ್ಲಿ ಮಧ್ಯ ತಯಾರಿಕೆಗೆ ಅಧಿಕಾರಿಗಳು ಗುತ್ತಿಗೆ ಕೊಡುವಾಗ ಏನು ಶರತ್ತುಗಳನ್ನು ಹಾಕುತ್ತಾರೆ, ಆ ಶರತ್ತಿನ ಪ್ರಕಾರ ಅವರು ನಡೆಯದಿದ್ದರೆ ಹಣವನ್ನು ವಸೂಲಿ ಮಾಡುವುದಕ್ಕೆ ತಾವೇನು ಕ್ರಮ ತೆಗೆದುಕೊಳ್ಳುತ್ತಾ ಇದ್ದೀರಿ. ಆ ಶರತ್ತುಗಳನ್ನು ನೀವು ಪುನರ್ ಪರಿಶೀಲನೆ ಮಾಡಬೇಕು. ಮತ್ತು ಜನರ ಪರವಾಗಿ ನೀತಿಗಳನ್ನು ಗುತ್ತಿಗೆದಾರರಿಗೆ ಲಾಭವಾಗಲಾರದ ರೀತಿಯಲ್ಲಿ ಅವರಿಗೆ ತೊಂದರೆ ಕೊಡಿ ಎನ್ನುವ ಮಾತನ್ನು ನಾನು ಹೇಳುತ್ತಿಲ್ಲ. ನಮ್ಮ ಸರ್ಕಾರಕ್ಕೆ ಬಾಕಿ ಬರುವ ರೀತಿಯಲ್ಲಿ ಸರಿಯಾದ ರೀತಿಯಲ್ಲಿ ಜಾರಿ ಮಾಡುವ ರೀತಿಯಲ್ಲಿ ಈ ಶರತ್ತುಗಳನ್ನು ಬದಲಾಯಿಸತಕ್ಕದ್ದು ಅಗತ್ಯವಿದೆ. ಅದರ ಬಗ್ಗೆ ಆಲೋಚನೆ ಮಾಡಬೇಕೆನ್ನುವ ಮಾತನ್ನು ಹೇಳಿ ಈ ಮೂರನೆಯ ತಿದ್ದುಪಡಿಯನ್ನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಈ ಅಬಕಾರಿ ಕಾಯಿದೆಗೆ ಬರತಕ್ಕ ಮೂರನೆಯ ತಿದ್ದುಪಡಿಯನ್ನು ಸ್ವಾಗತಿಸಿ ನಾನು ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛಿಸುತ್ತೇನೆ. ಈಗಾಗಲೇ ಒಂದು ಮತ್ತು ಎರಡನೆಯ ತಿದ್ದುಪಡಿಗಳು ಜಾರಿಯಲ್ಲಿವೆ. ಅವುಗಳನ್ನು ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ನಾನು ಗುರುತರವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೆ. ಅದಕ್ಕೆ ಮುಖ್ಯಮಂತ್ರಿಗಳಿಂದ ಉತ್ತರ ಬಂದಿಲ್ಲ. ಅವರು ಬೇರೆ ಕಾನೂನು ರೀತಿಯಲ್ಲಿ ಹಿಂದಿನ ವರ್ಷ ಈ ಅವಧಿಯಲ್ಲಿ ಎಷ್ಟು ಹಣ ಬಂದಿತ್ತು ಈ ವರ್ಷ ಎಷ್ಟು ಬಾಕಿ ವಸೂಲಿಯಾಗಿ ಆದಾಯ ಬಂದಿದೆಯೆಂದು ಹೇಳಿದರು. ಸುಮಾರು 30-40 ಕೋಟಿ ರೂಪಾಯಿ ಹೆಚ್ಚಿಗೆ ಬಂದಿದೆ ಎಂದು ಒಂದೇ ಮಾತು ಹೇಳಿದರು. ಅವರು ಗುತ್ತಿಗೆದಾರರಿಗೆ ಅನೇಕ ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಸುಮಾರು 25 ರೂಪಾಯಿಗೆ ಒಂದು ಲೀಟರ್ ಮಾರಾಟವಾಗತಕ್ಕ ಸಾರಾಯಿಯನ್ನು 16 ರೂಪಾಯಿಗೆ ಮಾರಾಟ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದಾರೆ.

ಸರ್ಕಾರಕ್ಕೆ ಒಂದು ಲೀಟರ್ಗೆ 8 ರೂಪಾಯಿ ನಷ್ಟವಾಗುತ್ತದೆ. ಅದೇ ರೀತಿಯಲ್ಲಿ ಪ್ರತಿಯೊಂದು ಬಾಬಿನಲ್ಲೂ ಈ ಗುತ್ತಿಗೆದಾರರಿಗೆ ಸಾಕಷ್ಟು ರಿಯಾಯತಿ ಕೊಟ್ಟು ಸುಮಾರು 110 ಕೋಟಿ ರೂಪಾಯಿ ಟ್ಯಾಕ್ಸ್ ಕನ್ಸೀಷನ್ ಅನ್ನು ಗುತ್ತಿಗೆದಾರರಿಗೆ ಕೊಟ್ಟಿರತಕ್ಕದ್ದು ಉಂಟು. ಅದೇ ರೀತಿ ಕಾಕಂಬಿ ಬೆಲೆಯನ್ನು ಕಂಟ್ರೋಲ್ ಮಾಡಿದ ಕಾರಣದಿಂದ ಅದರ ಬೆಲೆ ಜಾಸ್ತಿಯಾಯಿತು. ರೆಕ್ಟಿಫೈಡ್ ಸ್ಪಿರಿಟ್ನ ಬೆಲೆ ಕೂಡ ಜಾಸ್ತಿಯಾಗಿದೆ. ಅದರಿಂದ ಸರ್ಕಾರಕ್ಕೆ 50-60 ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಏಕೆಂದರೆ 16 ರೂಪಾಯಿಗೆ ಒಂದು ಲೀಟರ್ ಸಾರಾಯಿ ಕೊಡುತ್ತೇವೆ ಎನ್ನುವ ಒಪ್ಪಂದ ಮಾಡಿಕೊಂಡಿದ್ದಾರೆ. ಈಗ ಅದನ್ನು 18 ರೂಪಾಯಿಗೆ ಹೆಚ್ಚಿಸಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಸರ್ಕಾರಕ್ಕೆ ಆದಾಯ ಬೇರೆ ಕಾರಣದಿಂದ ಬಂದಿದೆ. ನಾನು ಆದಾಯ ಬಂದಿಲ್ಲವೆಂದು ಹೇಳುತ್ತಿಲ್ಲ. ಅವರು ನಮಗೆ ಹೆಚ್ಚು ಬಂದಿದೆಯೆಂದು ಹೇಳುತ್ತಿದ್ದಾರೆ. ಅದು ಇನ್ನೂ ಹೆಚ್ಚಿಗೆ ಬರಬೇಕಾಗಿತ್ತು. ಪ್ರತಿಯೊಂದನ್ನು ಕರಾರುವಕ್ಕಾಗಿ ಲೆಕ್ಕವನ್ನು ಕೊಟ್ಟು ಅಂಕಿಅಂಶಗಳ ಸಮೇತ ನಾನು ಹೇಳಿದ್ದೇನೆ. ಅದಕ್ಕೆ ಉತ್ತರವನ್ನು ನಾನು ಈಗ ಬಯಸುತ್ತಿಲ್ಲ, ಬರೀ ಕಾಕಂಬಿ ಬೆಲೆಯನ್ನು ಕಂಟ್ರೋಲ್ ಮಾಡಿದ್ದರಿಂದಲೇ ರೆಕ್ಟಿಫೈಡ್ ಸ್ಪಿರಿಟ್ನು ಹೆಚ್ಚಿಗೆ ಮಾಡಿದ್ದರಿಂದ ಅಲ್ಲ ಅನೇಕ ಜಿಲ್ಲೆಗಳಲ್ಲಿ ಇವರು ಹರಾಜು ಮಾಡುವಂತಹ ಸಂದರ್ಭದಲ್ಲಿ ಹರಾಜು ಆಗಲಿಲ್ಲ. 2-3 ತಿಂಗಳು ಸಾರಾಯಿಯನ್ನು ಮಾರಾಟ ಮಾಡಿದ್ದಾರೆ. ಅದರಿಂದ ಸರ್ಕಾರಕ್ಕೆ ಬರಬೇಕಾದ ಸಾಕಷ್ಟು ಆದಾಯ ಸೋರಿ ಹೋಗಿದೆ. ಯಾರೋ ಮಾರಾಟ ಮಾಡಿ ಹೆಚ್ಚು ಆದಾಯ ಬರಲಿಲ್ಲವೆಂದಲ್ಲ ಸರ್ಕಾರದಿಂದ ಮಾರಾಟ ಮಾಡಿದರು. ಈಗಲೂ ಕೂಡ ಅನೇಕ ಕಡೆಗಳಲ್ಲಿ ಹೆಂಡವನ್ನು ರಾಜರೋಷವಾಗಿ ಮಾರಾಟ ಮಾಡುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಹೆಂಡ ನಿಷೇಧವಾಗಿದೆ. ದಕ್ಷಿಣಕನ್ನಡ ಮತ್ತು ಒಂದೆರಡು ಜಿಲ್ಲೆಗಳನ್ನು ಬಿಟ್ಟರೆ ಎಲ್ಲ ಕಡೆ ಹೆಂಡ ನಿಷೇಧವಾಗಿದೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಹೆಂಡ ಮಾರಾಟ ಮಾಡುತ್ತಿದ್ದಾರೆ. ಗುಲ್ಬರ್ಗ ಜಿಲ್ಲೆಯಲ್ಲಿ ಹೆಂಡವನ್ನು ಮಾರಾಟ ಮಾಡುತ್ತಿದ್ದಾರೆ. ಹೀಗೆ ಇವತ್ತು ಅನೇಕ ಜಿಲ್ಲೆಗಳಲ್ಲಿ ಹೆಂಡ ಮಾರಾಟವಾಗುತ್ತಿದೆ. ಅದರಿಂದ ಸರ್ಕಾರಕ್ಕೆ ಬರಬೇಕಾಗಿರತಕ್ಕ ಆದಾಯ ಏನು ಸೋರಿ ಹೋಗುತ್ತಿದೆ ಅದರ ಲೆಕ್ಕ ಕೊಡಬೇಕೆನ್ನುವ ಮಾತನ್ನು ಸಹ ಹೇಳಿದ್ದೇನೆ. ಈಗಲಾದರೂ ಅದರ ಲೆಕ್ಕವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದನ್ನು ಸ್ವಾಗತ ಮಾಡುತ್ತೇನೆಂದು ನಾನು ಆಗಲೇ ಹೇಳಿದ್ದೇನೆ. ಇಲ್ಲಿರತಕ್ಕ ಇಲಾಖೆ ಏನಿದೆ ಅದು ವ್ಯವಸ್ಥಿತವಾದ ರೀತಿಯಲ್ಲಿ ಪುಸ್ತಕದಲ್ಲಿ ಕಾನೂನು ಏನಿದೆ ಆ ಕಾನೂನು ರೀತಿಯಲ್ಲಿ ನಡೆದರೆ ಒಂದು ಪೈಸೆ ಕೂಡ ಬಾಕಿ ಉಳಿಯುವುದಿಲ್ಲ ಉಳಿಯುವುದಕ್ಕೆ ಸಾಧ್ಯವಿಲ್ಲ. ಈ ಇಲಾಖೆಯನ್ನು ನಡೆಸತಕ್ಕವರು ಕಾನೂನು ಮೂಲಕ ಇಲಾಖೆಯನ್ನು ನಡೆಸುತ್ತಿಲ್ಲ. ಅದೆಲ್ಲ

ಮಾಮೂಲಿ ಮೂಲಕ ಇಲಾಖೆ ನಡೆಯುತ್ತಿದೆ. ಕಾನೂನು ಮೂಲಕ ನಡೆಯಬೇಕಾದ ಅಬಕಾರಿ ಇಲಾಖೆ ಮಾಮೂಲಿ ಮೂಲಕ ಕೆಲಸ ಮಾಡುತ್ತಿದೆ. ಆದ್ದರಿಂದ ಇವತ್ತು ಸಾಕಷ್ಟು ಹಣ ವರ್ಷ ವರ್ಷೇ ಬಾಕಿಯಾಗಿ ಉಳಿಯುತ್ತಿದೆ. ಇವತ್ತು ಮುಖ್ಯಮಂತ್ರಿಗಳು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳತಕ್ಕ ಪ್ರಯತ್ನವನ್ನು ಅನೇಕ ಸಂದರ್ಭಗಳಲ್ಲಿ ಮಾಡುತ್ತಾರೆ. ನೋಡಿ ಬೆಂಗಳೂರಿನಲ್ಲಿ ಇವತ್ತಿನ ದಿವಸ ಗುತ್ತಿಗೆದಾರರು ಹಣ ಕಟ್ಟಲಿಲ್ಲ, ಅದಕ್ಕೋಸ್ಕರ ಸರ್ಕಾರದ ಮೂಲಕ ನಾವೇ ನಡೆಸುತ್ತಿದ್ದೇವೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ಏಕೆ ಬಿಟ್ಟಿರಿ? ನಿಮ್ಮ ಕಾನೂನು ಏನು ಹೇಳಿ? ಅವರು ಒಂದು ತಿಂಗಳು ಮೊದಲೇ ಡಿಪಾಸಿಟ್ ಕಟ್ಟಬೇಕೆಂದು ಇದೆ. ತಿಂಗಳ 5-10ನೇ ತಾರೀಖಿನೊಳಗೆ ಹಣ ಕಟ್ಟಬೇಕಾದ್ದನ್ನು ಕಟ್ಟಬೇಕೆಂದು ಕಾನೂನು ಹೇಳುತ್ತದೆ. ಬ್ಯಾಂಕ್ ಗ್ಯಾರಂಟಿ ಕೊಡಬೇಕೆಂದು ಕಾನೂನು ಹೇಳುತ್ತದೆ. ಇದೆಲ್ಲವನ್ನು ಜಾರಿ ಮಾಡಿದರೆ

ಇವತ್ತು ಈ ತಿದ್ದುಪಡಿಯನ್ನು ತರತಕ್ಕ ಅವಶ್ಯಕತೆ ಇರಲಿಲ್ಲ. ಅದನ್ನು ಬಿಟ್ಟು ಕಾನೂನು ಮೂಲಕ ಇಲಾಖೆಯನ್ನು ನಡೆಸದೆ ಮಾಮೂಲಿ ಮೂಲಕ ನೀವು ಇಲಾಖೆಯನ್ನು ನಡೆಸಿ ಇವತ್ತಿನ ದಿವಸ ಈ ತಿದ್ದುಪಡಿಯನ್ನು ತರತಕ್ಕ ಪರಿಸ್ಥಿತಿಗೆ ಬಂದಿದ್ದೇವೆ. ಆದರೂ ಕೂಡ ಇದನ್ನು ಸ್ವಾಗತ ಮಾಡುತ್ತಿದ್ದೇನೆ. ಅನೇಕ ಸಲ ಕೊಟ್ಟಿರತಕ್ಕ ಚೆಕ್ಕುಗಳು ಬೌನ್ಸ್ ಆಗುತ್ತವೆ, ಇದಕ್ಕೆ ಯಾರು ಕಾರಣ? ಅಂತಹ ಅಧಿಕಾರಿಗಳು ನಿಮ್ಮಲ್ಲಿದ್ದಾರೆ. ತಕ್ಷಣ ಹಣವನ್ನು ಪಡೆಯಬೇಕೆನ್ನುವ ಒಂದು ವ್ಯವಹಾರ ಜ್ಞಾನ ಇಲ್ಲದ ಅಧಿಕಾರಿಗಳು ಇದ್ದಾರೆ. ಅಂದರೆ ಅವರು ಚೆಕ್ ಕೊಟ್ಟ ತಕ್ಷಣ ಬ್ಯಾಂಕಿಗೆ ಕಳುಹಿಸಿ ಹ ಣವನ್ನು ಪಡೆಯಬೇಕು. ವ್ಯವಹಾರ ಜ್ಞಾನ ಇಲ್ಲದಿರತಕ್ಕ ಅಧಿಕಾರಿಗಳು ಇದ್ದಾರೆ. ' ವರಿಗೆ ವ್ಯವಹಾರ ಜ್ಞಾನವಿದೆ, ಏಕೆ ವ್ಯವಹಾರ ಜ್ಞಾನವನ್ನು ಉಪಯೋಗಿಸಿಕೊಳ್ಳುವುದಿಲ್ಲ ಎಂದರೆ, ಮಾಮೂಲಿಯಿಂದ ಅವರು ಅದನ್ನು ಮಾಡುವುದಕ್ಕೆ ಹೋಗುವುದಿಲ್ಲ. ಅಷ್ಟೇ ಅಲ್ಲದೆ, ಚೆಕ್ ಬೌನ್ಸ್ ಆಗುವವರೆಗೆ ಬಿಟ್ಟು ಬೌನ್ಸ್ ಆದಮೇಲೆ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿಲ್ಲ. ಮೂರು ತಿಂಗಳೊಳಗಡೆ ಚೆಕ್ಕನ್ನು ಪ್ರೆಸೆಂಟ್ ಮಾಡಬೇಕೆನ್ನುವ ಕಾನೂನು ಇದೆ. ಮೂರು ತಿಂಗಳೊಳಗೆ ಚೆಕ್ಕನ್ನು ಬ್ಯಾಂಕಿಗೆ ಕಳುಹಿಸಿ ಎನ್ಕ್ಯಾಷ್ ಮಾಡುವುದಿಲ್ಲ.

ಆ ರೀತಿ ಅವ್ಯವಹಾರಗಳ ಆಗರ ಈ ಎಕ್ಸೈಜ್ ಇಲಾಖೆಯಲ್ಲಿರುವ ಕಾರಣದಿಂದ ಇವತ್ತಿನ ದಿವಸ ಈ ತಿದ್ದುಪಡಿ ಬಂದಿದೆ. ಮುಖ್ಯಮಂತ್ರಿಗಳು ನಮಗೆ ಹಣ ಜಾಸ್ತಿ ಬಂದಿದೆ ಎಂದು ಹೇಳುವ ಒಂದೇ ಒಂದು ಮಂತ್ರ ಬಿಟ್ಟರೆ ಅಲ್ಲಿರತಕ್ಕ ಉಳುಕಿನ ಬಗ್ಗೆ ಇಲಾಖೆಯಲ್ಲಿ ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ನಾವು ಹೇಳಿದರೂ ಕೂಡ ಅದಕ್ಕೆ ಉತ್ತರವನ್ನು ಕೊಡುವುದಿಲ್ಲ. ಅದನ್ನು ಸರಿಪಡಿಸತಕ್ಕ ಕ್ರಮವನ್ನಾದರೂ ತೆಗೆದುಕೊಂಡರೆ, ಉತ್ತರಕ್ಕಿಂತ ಹೆಚ್ಚಿನ ಕ್ರಮವನ್ನು ತೆಗೆದುಕೊಳ್ಳಬೇಕು, ಅದು ಅತಿ ಅವಶ್ಯಕವಿದೆ. ಅದನ್ನಾದರೂ ಮಾಡುತ್ತಾರೆಂದರೆ ಅದು ಇಲ್ಲಿಯವರೆಗೆ ಕಂಡುಬಂದಿಲ್ಲ. ಯಥಾಪ್ರಕಾರ ಮಾಮೂಲಿನಂತೆ ಮಾಮೂಲಿ ಇಲಾಖೆಯಾಗಿ ನಡೆಯುತ್ತಿದೆ. ಅದನ್ನು ಸರಿಪಡಿಸತಕ್ಕ ಜವಾಬ್ದಾರಿ ನಿಮ್ಮ ಮೇಲೆ ಇದೆ. 701 ಕೋಟಿ ರೂಪಾಯಿ ಹಣ ಬರುತ್ತಿದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. 701 ಕೋಟಿ ರೂಪಾಯಿಯಲ್ಲ, ಸುಮಾರು 1500 ಕೋಟಿ ರೂಪಾಯಿ ಹಣ ಬರುವುದಕ್ಕೆ ಅವಕಾಶವಿದೆ. ಸರಿಯಾಗಿ ವ್ಯವಸ್ಥಿತವಾದ ರೀತಿಯಲ್ಲಿ ಈ ಇಲಾಖೆಯನ್ನು ನಡೆಸಿದರೆ 1500 ಕೋಟಿ ರೂಪಾಯಿ ಹಣ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆ. ಇನ್ನೂ ತೀವ್ರವಾಗಿ ಹೇಳುವುದಕ್ಕೆ ಹೋದರೆ ಇದರ ಬಹುಪಟ್ಟು ಹೆಚ್ಚಿಗೆ ಬರುತ್ತದೆ ನಾನು ಅಲ್ಲಿಯವರೆಗೆ ಹೋಗುವುದಿಲ್ಲ, ಸಾಮಾನ್ಯವಾಗಿ ಬೇರೆ ಬೇರೆ ಇಲಾಖೆಗಳು ನಡೆಯುವಂತಹ ರೀತಿಯಲ್ಲಿ ನಡೆದರೆ 1500 ಕೋಟಿ ರೂಪಾಯಿ ಹಣ ಈ ಇಲಾಖೆಯಿಂದಲೇ ಬರುತ್ತದೆ. ಆದರೆ ಆ ಪರಿಸ್ಥಿತಿ ಇವತ್ತಿನ ದಿವಸ ಈ ಇಲಾಖೆಯಲ್ಲಿ ಇಲ್ಲ.

ಆದ್ದರಿಂದ ನಾನು ಮತ್ತೊಮ್ಮೆ ಎರಡನೇ ಸಾರಿ ಒತ್ತಾಯ ಮಾಡುತ್ತಿದ್ದೇನೆ. ಇಲ್ಲಿ ಏನು ದುರ್ವ್ಯವಹಾರಗಳು ನಡೆಯುತ್ತಿವೆ, ಈ ಬಗ್ಗೆ ನಾನು ಹಿಂದಿನಸಾರಿಯೂ ಕೂಡ ಹೇಳಿದ್ದೇನೆ. ಸುಮಾರು 2 ಕೋಟಿ ಚಿಲ್ಲರೆಯ ಚೆಕ್ ಬೌನ್ಸ್ ಆಗಿದೆ. ಇದರ ಬಗ್ಗೆ ಯಾರ ಮೇಲೆಯೂ ಕ್ರಮ ಇಲ್ಲ. ಈ ವಿಷಯದಲ್ಲಿ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಸರ್ಕಾರ ತಿಳಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಮಾನ್ಯ ಏಕಾಂತಯ್ಯನವರೂ ಕೂಡ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಅದನ್ನೂ ಕೂಡ ಸಮರ್ಥಿಸಿ, ಇವತ್ತು ಈ ಇಲಾಖೆಯು ವ್ಯವಸ್ಥಿತವಾದ ರೀತಿಯಲ್ಲಿ ನಡೆದರೆ, ನಮ್ಮ ಎಲ್ಲಾ ಅಭಿವೃದ್ಧಿ ಯೋಜನೆಗಳು, ಕಾಲಕ್ಕೆ ಸರಿಯಾಗಿ ನಿಗದಿತವಾಗಿ ನಡೆಯುತ್ತವೆ. ಅದು ನೀರಾವರಿ

ಯೋಜನೆ ಇರಬಹುದು, ವಿದ್ಯುತ್ ಯೋಜನೆಗಳು ಇರಬಹುದು. ಎಲ್ಲವನ್ನೂ ಕೂಡ ಕಾಲದ ಮಿತಿಯಲ್ಲಿ ನಡೆಸುವುದಕ್ಕೆ ಸಾಧ್ಯವಿದೆ. ನಾವು ವಿಶ್ವಬ್ಯಾಂಕಿನ ಹತ್ತಿರ ಹೋಗತಕ್ಕ ಅವಶ್ಯಕತೆ ಇಲ್ಲ. ಸರ್ಕಾರ ಹಣಕ್ಕಾಗಿ ಯಾರ ಕಡೆಗೂ ಕೈ ಚಾಚತಕ್ಕ ಅವಶ್ಯಕತೆ ಇಲ್ಲ. ಇದನ್ನೆಲ್ಲಾ ಬಿಟ್ಟು, ಇವತ್ತಿನದಿವಸ ನಾವು ಎಲ್ಲಾ ಕಡೆ ಹೋಗಿ ಭಿಕ್ಷಾಂದೇಹಿ ಎನ್ನತಕ್ಕಂಥ ರೀತಿಯಲ್ಲಿ ಹಣವನ್ನು ಪಡೆಯತಕ್ಕ ಕೆಲಸಕ್ಕೆ ಹೋಗುತ್ತಿದ್ದೇವೆ. ಈ ಹಿಂದೆ, ಎರಡು ಬಿಲ್ಲುಗಳ ಬಗ್ಗೆ ಮಾತನಾಡುವಾಗ ಎಲ್ಲಾ ವಿವರಣೆಯನ್ನೂ ಕೊಟ್ಟಿದ್ದೇನೆ. ಪುನಃ ಆ ವಿವರಣೆಯನ್ನು ಕೊಡುವುದಕ್ಕೆ ಹೋಗುವುದಿಲ್ಲ. ಇವತ್ತು ಈ ಇಲಾಖೆಯನ್ನು ವ್ಯವಸ್ಥಿತವಾದಂಥ ರೀತಿಯಲ್ಲಿ ನಡೆಸಬೇಕು. ಮಾಮೂಲಿನ ಮೂಲಕ ನಡೆಯತಕ್ಕ ಇಲಾಖೆಯನ್ನು, ಕಾನೂನಿನ ಮೂಲಕ ನಡೆಸುವುದಕ್ಕೆ ಸರ್ಕಾರ ಪ್ರಯತ್ನ ಪಡಬೇಕೆಂದು ಹೇಳಿ, ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಈಗ ತಂದಂಥ ಮಸೂದೆ ಮೇಲೆ, ಮೊದಲು ಸನ್ಮಾನ್ಯ ಏಕಾಂತಯ್ಯನವರು ಕೊಟ್ಟಂಥ ಸೂಚನೆ ಬಹಳ ಚೆನ್ನಾಗಿದೆ. ಏಕೆಂದರೆ, ನಿಮ್ಮ ಹಾಗೆ ನನಗೂ ಆಶ್ಚರ್ಯ ಎಂದರೆ, ಇಲ್ಲಿಯವರೆಗೆ ಇಂತಹ ತಿದ್ದುಪಡಿ ಇದನ್ನು ಬಹಳ ಹಿಂದೆಯೇ ತಂದಿದ್ದರೆ, ತಾವು ಹೇಳಿದಂಥ ಆಪಾದನೆಗೆ ಯಾರೂ ಗುರಿಯಾಗಬೇಕಾದ ಅವಶ್ಯಕತೆ ಇರಲಿಲ್ಲ. ಆದರೆ, ಈ ಕಾನೂನಿನ ಬೇರೆ ಬೇರೆ ನಿಬಂಧನೆಗಳಾಗಲೀ, ಕಾನೂನಾಗಲೀ ಬಹುಶಃ ಇದು ಸಮಗ್ರವಾಗಿ ಬದಲಾವಣೆಯಾಗಬೇಕು. ಈಗ ನಾವೇನು ಮಾಡುತ್ತಿದ್ದೇವೆ, ಇನ್ಸ್ಟಾಲ್ಮೆಂಟ್ ಬೈ ಇನ್ಸ್ಟಾಲ್ಮೆಂಟ್ ಎಲ್ಲೆಲ್ಲಿ ನಮಗೆ ಅನುಭವಕ್ಕೆ ಬರುತ್ತದೆ, ಅದನ್ನು ನೋಡಿಕೊಂಡು ಈಗ ತರುತ್ತಾ ಇದ್ದೇವೆ. ಕಳೆದ ಅಧಿವೇಶನದಲ್ಲೂ ಕೂಡ, ಮತ್ತು ನಿಯಮಗಳನ್ನೂ ಕೂಡ ಬದಲಾವಣೆ ಮಾಡುವಾಗ, ಇಂತಹ ದೋಷಗಳನ್ನು ಪರಿಹಾರ ಮಾಡಲಿಕ್ಕೆ ಹಲವಾರು ನಿಯಮಗಳಲ್ಲಿ ಬದಲಾವಣೆ ತಂದಿದ್ದೇವೆ. ಮತ್ತು ಮಸೂದೆಗಳಲ್ಲಿ ಬದಲಾವಣೆ ತಂದಿದ್ದೇವೆ. ಇವತ್ತು ನಾವೇನು ಮಸೂದೆ ತಂದಿದ್ದೇವೆ, ಇದರಿಂದ ಬಹಳ ದೊಡ್ಡ ಪರಿಣಾಮವಾಗಿದೆ. ನಿಮಗೆ ಪಟ್ಟಿ ಕೊಡುವುದಾದರೆ, ಒಟ್ಟು ರೆಂಟಲ್ ಅಮೌಂಟ್ ಕವರ್ಡ್ ಅನ್ ದಿ ಸ್ಟೇಟ್, 71 ಕೋಟಿ 32 ಲಕ್ಷದ 8 ಸಾವಿರ. ಮತ್ತೊಂದು, ಸಿವಿಲ್ ಕೋರ್ಟುಗಳಲ್ಲಿ 8 ಕೋಟಿ 79 ಲಕ್ಷದ 62 ಸಾವಿರ. ಅಂದರೆ, 80 ಕೋಟಿ, 11 ಲಕ್ಷದ 71 ಸಾವಿರದ 697 ಇಮ್ಮೀಡಿಯಟ್ ಆಗಿ ಇದನ್ನು ರಿಕವರ್ ಮಾಡಲಿಕ್ಕಾಗುತ್ತದೆ. ಆಮೇಲೆ ಹೈಕೋರ್ಟಿನಲ್ಲಿ ಸುಮಾರು, ಸಿವಿಲ್ ಕೋರ್ಟ್ ಅಮೌಂಟ್ ಕವರ್ಡ್ ಇನ್ ದಿ ಸ್ಟೇಟ್ ಒಟ್ಟು ಎಷ್ಟು ಎಂದು ಹೇಳಿದರೆ 47 ಕೋಟಿ 89 ಲಕ್ಷ, ಮತ್ತೊಂದು 191.63 ಲಕ್ಷ ಬಾಕಿ ಇವೆ. ಈ ಬಾಕಿಯಲ್ಲಿ 47 ಕೋಟಿ ಮತ್ತೊಂದು 18 ಕೋಟಿ ಬಿಟ್ಟರೆ, ಅಂದರೆ, 63 ಕೋಟಿ ಬಿಟ್ಟರೆ, 191ರಿಂದ 63 ಕೋಟಿ ತೆಗೆದರೆ, ಉಳಿದ ಹಣ ಕವರ್ ಆಗುತ್ತದೆ. ಈ ತಿದ್ದುಪಡಿ ಮಸೂದೆ ತರುವುದರಿಂದ ನಾವು ಇದನ್ನು ವಸೂಲಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ವರ್ಷ ಕರಂಟ್ ಬಿಲ್ಲಿನಲ್ಲಿಯೂ ಕೂಡ ರೆಂಟಲ್ನಲ್ಲಿ 20 ಕೋಟಿ 22 ಲಕ್ಷದ 13 ಸಾವಿರದ 803 ಈಗ ಸ್ಟೇ ಮಾಡಿಸಿಕೊಂಡಿದ್ದಾರೆ. ಇದನ್ನು ನಮಗೆ ವಸೂಲಿ ಮಾಡಲಿಕ್ಕಾಗುತ್ತದೆ. ಲೈಸೆನ್ಸ್ ಫೀನಲ್ಲಿ 29 ಕೋಟಿ 18 ಲಕ್ಷದ 3 ಸಾವಿರದ 212 ರೂಪಾಯಿ, ಅದನ್ನೂ ಬಾಕಿ ಮಾಡಿಕೊಂಡಿದ್ದಾರೆ. ಇದರಿಂದ, ಬಹುಶಃ ನನಗನಿಸುತ್ತದೆ. ಬಹುತೇಕವಾದಂಥ ಪರಿಣಾಮವಾಗಿ ನಾವು ವಸೂಲಿ ಮಾಡುವುದಕ್ಕಾಗುತ್ತದೆ. ಇದು ಒಂದು ಸಿಂಪಲ್ ಬಿಲ್ ಆದರೂ ಕೂಡ ಮುಂದೆ ಬಹಳ ಮಹತ್ತರವಾದಂಥ ಬಿಲ್ ಆಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ಒಂದು ಕಡೆ ವಸೂಲಿ ಮಾಡಲಿಕ್ಕೆ ಹೋಗುವುದು, ಮತ್ತೊಂದು ಕಡೆ ಅವರು ಸ್ಟೇ ಮಾಡತಕ್ಕಂಥಾದ್ದು ಬಹುತೇಕವಾಗಿ ನಮಗೆ ಹೆಚ್ಚಿನ ಪರಿಣಾಮಕಾರಿಯಾಗಿ ಕೆಲಸ ಮಾಡಲಿಕ್ಕೆ ಆಗುತ್ತದೆ. ಇನ್ನು ನಮ್ಮ ಬೈರೇಗೌಡರು ಹೇಳಿದ ಪ್ರಕಾರ, ಕಾಕಂಬಿಯಲ್ಲಿ ಡಿ ಕಂಟ್ರೋಲ್ ಮಾಡಿ, ಹೆಚ್ಚಾಗಲಿಕ್ಕೆ ಈಗಾಗಲೇ ಅದಕ್ಕೆ ಹೆಚ್ಚಿನ ಲೈಸೆನ್ಸ್ ಫೀ ಡ್ಯೂಟಿ ಮತ್ತೊಂದೆಲ್ಲಾ ಹಾಕುತ್ತಿದ್ದೇವೆ.

ಸರ್ಕಾರಕ್ಕೆ ಏನೂ ಕಷ್ಟವಾಗುತ್ತಿಲ್ಲ; ಹಾಗೂ ನಷ್ಟವಾಗುತ್ತಿಲ್ಲ. ಅದನ್ನು ಅವರಿಂದಲೇ ವಸೂಲ್ಮಾಡುತ್ತಿದ್ದೇವೆ.

ಅದೇ ಪ್ರಕಾರ ತಾವು ಈ ವ್ಯತ್ಯಾಸ ಅವರಿಗೆ ಲಾಭ ಆಗುತ್ತದೆಂದು ಹೇಳಿದ್ದೀರಿ. ಏನೂ ಲಾಭ ಆಗುವುದಿಲ್ಲ, ಅದನ್ನೇ ನಾನು ಬಹಳ ವಿಸ್ತಾರವಾಗಿ ವರ್ಣಿಸಿ 12 ಕೋಟಿ ರೂಪಾಯಿಗಳು ಸರ್ಕಾರಕ್ಕೆ ಜಾಸ್ತಿ ಬರುತ್ತದೆಂದು ಹೇಳಿದ್ದೇನೆ. ನಾವು ತೆಗೆದುಕೊಂಡಂತಹ ನಿರ್ಣಯದಿಂದ ಬರುತ್ತದೆ. 25ರೂಪಾಯಿಗಳಿಂದ 16ರೂಪಾಯಿಗಳಿಗೆ ಮಧ್ಯದಲ್ಲಿ ಇಳಿಸಿದ್ದನ್ನು ನಾನು ಹೇಳಿದೆ. ಆ ಹಣ ಅವರಿಗೆ ಹೋಗುವುದಿಲ್ಲ. 12 ಕೋಟಿ ರೂಪಾಯಿಗಳು ವಾರ್ಷಿಕ ಆದಾಯ ಹೆಚ್ಚು ಸರ್ಕಾರಕ್ಕೆ ಬರುತ್ತದೆ. ನಾನು ಬಹಳ ವಿಸ್ತಾರವಾಗಿ ಹೇಳಿದ್ದೇನೆ. ನಾನು ಹೇಳಿದಾಗ ತಾವು ಇಲ್ಲಿ ಇದ್ದಿರೋ ಇಲ್ಲವೋ ಗೊತ್ತಿಲ್ಲ. ನಾನು ವಿಸ್ತಾರವಾಗಿ ವರ್ಣಿಸಿ ಹೇಳಿದ್ದೇನೆ. ಲಾಭ ಹೇಗೆ ಬರುತ್ತದೆಂದು ಹೇಳಿದ್ದೇನೆ. ಆದ್ದರಿಂದ ಇದು ಸರಳವಾದ ಮಸೂದೆ. ಆದರೂ ಕೂಡ ಮಾನ್ಯ ಅಧ್ಯಕ್ಷರೇ, ಅಬಕಾರಿ ಇತಿಹಾಸದಲ್ಲಿ ಒಂದು ಹೊಸ ಕ್ರಾಂತಿಕಾರಕವಾದ ಮತ್ತು ಯಾವುದೇ ರೀತಿಯಲ್ಲಿ ಅಬಕಾರಿ ಕಾಂಟ್ರಾಕ್ಟರ್ಸ್ ನಮ್ಮ ಸರ್ಕಾರದ ಹಿಡಿತದಿಂದ ತಪ್ಪಿಸಿಕೊಂಡು ವಸೂಲಿ ಮಾಡುವುದಕ್ಕೆ ತೊಂದರೆ ಮಾಡದ ರೀತಿಯಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ತಾವೆಲ್ಲರೂ ಬೆಂಬಲ ಕೊಟ್ಟಿದ್ದೀರಿ.....

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರವನ್ನು ತಾವು ವಹಿಸಿಕೊಂಡ ಮೇಲೆ ಎಷ್ಟು ಹಣ ಜಾಸ್ತಿ ಆಗಿದೆ; ಅದನ್ನು ಸ್ವಲ್ಪ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಡುವಾಗ ಸ್ವಲ್ಪ ವಿವರ ಕೊಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳಿಂದ ನಾನು ಒಂದು ಉತ್ತರವನ್ನು ಬಯಸುತ್ತೇನೆ. ಸಮಗ್ರವಾದ ರೀತಿಯಲ್ಲಿ ಅಬಕಾರಿ ಮಸೂದೆಯನ್ನು ಅದರ ನಿಯಮಗಳನ್ನು ತಿದ್ದುಪಡಿ ಮಾಡಲಿಕ್ಕೆ ಸರ್ಕಾರ ಆಲೋಚನೆ ಮಾಡುತ್ತದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ : ಇದರಲ್ಲಿ 68(ಡಿನಲ್ಲಿ) ಏನು ಇದೆ ಅಂದರೆ ಇನ್ನು ಮುಂದೆ ಹೈಕೋರ್ಟಿನಲ್ಲಿ ರಿಟ್ ಹೋಗುವವರು ಹಣ ಡಿಪಾಜಿಟ್ ಮಾಡಿ ಹೋಗಬೇಕು. ಇಲ್ಲದಿದ್ದರೆ ಏನಾಗುತ್ತದೆ. ಎಲ್ಲರೂ ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತೆಗೆದುಕೊಳ್ಳುವುದು ನಡೆಯುತ್ತದೆ. ಇನ್ನು ಮುಂದೆ ಡಿಪಾಜಿಟ್ ಇಡದಿದ್ದರೆ ಆಗುವುದಿಲ್ಲ ಸ್ಟೇ ಆರ್ಡರ್ ಸಿಗುವುದಿಲ್ಲ. ತಾವು ಹೇಳಿದ್ದು ಸರಿಯಾಗಿದೆ. ನಾನು ಒಪ್ಪುತ್ತೇನೆ ನಾನು ಹೇಳುವುದಕ್ಕೆ ಮರೆತಿದ್ದೆ. ಕಾನೂನಿನಲ್ಲಿ ಸಮಗ್ರವಾದ ಬದಲಾವಣೆ ತರುವುದಕ್ಕೆ ನಾನು ಪ್ರತ್ಯೇಕವಾದ ಆಕ್ಷನ್ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 1993ರ ಕರ್ನಾಟಕ ಅಬಕಾರಿ (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು : ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತವೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತವೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಅಬಕಾರಿ (3ನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 1993ರ ಕರ್ನಾಟಕ ಅಬಕಾರಿ (ಮೂರನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

4. 1993ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ)
ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೈ. ಘೋರ್ಪಡೆ : (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) ಮಾನ್ಯ ಅಧ್ಯಕ್ಷರೆ, 1993ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಾಳೆ ಇದನ್ನು ತೆಗೆದುಕೊಳ್ಳಿ. ಅವರು ಬೇಕಾದರೆ ಇವತ್ತು ಮಂಡಿಸಲಿ, ನಾಳೆ ನಮ್ಮ ಪಕ್ಷದವರು ಮಾತನಾಡುವವರಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ : ಇವೆಲ್ಲಾ ಅಗ್ರೀಡ್ ಅಮೆಂಡ್ಮೆಂಟ್ ಇರುವುದರಿಂದ ಇಂದೇ ಮುಗಿಸೋಣ.

ಶ್ರೀ ಬೈರೇಗೌಡ : ನಾವು ಹೇಳಬೇಕಾದ್ದನ್ನು ಹೇಳಬೇಕಾಗುತ್ತದೆ. ಆದ್ದರಿಂದ ನಾಳೆ ತೆಗೆದುಕೊಳ್ಳಿ.

+ ಶ್ರೀ ಎಂ. ವೈ. ಘೋರ್ಪಡೆ : ನಾನು ಇದರ ಬಗ್ಗೆ ಸ್ವಲ್ಪ ವಿವರಣೆ ಕೊಡುತ್ತೇನೆ. ನಾಳೆ ನನಗೆ ಸ್ವಲ್ಪ ತೊಂದರೆ ಇದೆ. ಮಾನ್ಯ ಅಧ್ಯಕ್ಷರೇ, ಈ ನಮ್ಮ ಹೊಸ ಪಂಚಾಯತ್ ರಾಜ್ ಕಾಯ್ದೆ ವಿಧಾನ ಸಭೆಯಲ್ಲಿ ಏಪ್ರಿಲ್ 7ನೇ ತಾರೀಖಿಗೆ ಪಾಸ್ ಆಯಿತು. ಆ ನಂತರ ಕೌನ್ಸಿಲ್ನಲ್ಲಿ ಏಪ್ರಿಲ್ 13ನೇ ತಾರೀಖಿಗೆ ಒಮ್ಮತದಿಂದ ಬಿಲ್ ಪಾಸ್ ಮಾಡಿ ಕೊಟ್ಟರು. ಅದು ಮೇ 10 ನೇ ತಾರೀಖಿಗೆ ಜಾರಿಗೆ ಬಂತು. ಅದೇ ರೀತಿಯಲ್ಲಿ ಸಂವಿಧಾನದ 73ನೇ ತಿದ್ದುಪಡಿ ಏಪ್ರಿಲ್ 24ನೇ ತಾರೀಖಿಗೆ ಜಾರರಿಗೆ ಬಂತು. ಈಗ ತಮ್ಮ ಮುಂದೆ ತಂದಿರತಕ್ಕಂಥ ತಿದ್ದುಪಡಿ 13ನೇ ತಾರೀಖು ಕೌನ್ಸಿಲ್‌ನಲ್ಲಿ ಸರ್ವಾನುಮತದಿಂದ ಏನು ಪಾಸು ಆಯಿತು. ಆ ಕಾಲಕ್ಕೆ ನಾವೆಲ್ಲರೂ ಒಪ್ಪಿರತಕ್ಕಂಥ ತಿದ್ದುಪಡಿ ಇದು ಈ ತಿದ್ದುಪಡಿ ಬಹಳ

ಸರಳವಾಗಿದೆ. ಮತ್ತೆ ಸರ್ಕಾರದ ಅಭಿಪ್ರಾಯ ಏನು ಇದೆ ಅದಕ್ಕೆ ಅನುಗುಣವಾಗಿ ಇದೆ. ಆದಕಾರಣ ಇದರಲ್ಲಿ ಒಂದಕ್ಕೊಂದು ಕಾಂಟ್ರವರ್ಷಿಯಲ್ ಇಲ್ಲ, ಅಗ್ರೀಡ್ ಅಮೆಂಡ್ ಮೆಂಟ್ಸ್, ಅದರ ಬಗ್ಗೆ ನಾನು ಸ್ವಲ್ಪ ಸಂಕ್ಷಿಪ್ತವಾಗಿ ಹೇಳಬೇಕು ಇದರಲ್ಲಿ ಮೊದಲನೇ ತಿದ್ದುಪಡಿ ಏನೆಂದರೆ ಪ್ರಿಯಾಂಬಲ್‌ನಲ್ಲಿ ಲೋಕಲ್ ಸೆಲ್ಫ್ ಗೌರ್ನಮೆಂಟ್ ಎಂಬ ಪದ ಸೇರಿಸಿರತಕ್ಕಂಥಾದ್ದು ಈ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆ ಲೋಕಲ್ ಸೆಲ್ಫ್ ಗೌರ್ನಮೆಂಟ್ ಎನ್ನುವ ಪದ ಜಾರಿಯಲ್ಲಿತ್ತು. ಈಗ ನಾವು ಈ ಸ್ಥಳೀಯ ಸಂಸ್ಥೆಗಳೇ ಕಾರ್ಯವ್ಯಾಪ್ತಿಯನ್ನು ಜಾಸ್ತಿ ಮಾಡಿದ್ದೇವೆ.

ಲೋಕಲ್‌ಸೆಲ್ಫ್ ಗೌರ್ನಮೆಂಟ್ ಎನ್ನುವ ಪದವನ್ನು ಸೇರಿಸಿಕೊಳ್ಳುವುದಕ್ಕೆ ಏನೂ ತೊಂದರೆ ಇಲ್ಲ. ಸೂರ್ಯನ ಬೆಳಕು ಎಷ್ಟು ಸತ್ಯವಾಗಿದೆಯೊ ಅಷ್ಟೇ ಸತ್ಯವಾಗಿದೆ ಈ ಮಾತು ಕೂಡ. ಲೋಕಲ್‌ಸೆಲ್ಫ್ ಗೌರ್ನಮೆಂಟ್ ಎನ್ನುವ ಪದವನ್ನು ಪ್ರಿಯಾಂಬಲ್ ನಲ್ಲಿ ಸೇರಿಸಿಕೊಳ್ಳುವುದಕ್ಕೆ ನಮ್ಮ ಆಕ್ಷೇಪಣೆ ಏನೂ ಇರಲಿಲ್ಲ. ಅದನ್ನು ನಾವು ಸೇರಿಸಿದ್ದೇವೆ. ಆನಂತರ ಸೆಕ್ಷನ್ 2 ರಲ್ಲಿ ಡೆಫ್ನೇಶನ್ ಆಪ್ ಬ್ಯಾಕ್ವರ್ಡ್ ಕ್ಲಾಸೆಸ್ ಏನಿದೆ ಇದನ್ನು ಸ್ವಲ್ಪ ಸ್ಪಷ್ಟವಾಗಿ ಮಾಡಿದ್ದೇವೆ. ಕೌನ್ಸಿಲ್ ನಲ್ಲಿ ಹೇಳಿದರು. ಬ್ಯಾಕ್ವರ್ಡ್ ಕ್ಯಾಸ್ಟ್ ಡೆಫನೇಶನ್ ಪಂಚಾಯತ್ ರಾಜ್ ಬಿಲ್‌ನಲ್ಲಿ ಆರ್ಟಿಕಲ್ 16:4:15 :4 ಅಂದರೆ ಗೌರ್ನಮೆಂಟ್ 1976ನೇ ಇಸವೀಯಲ್ಲಿ ಹೊರಡಿಸಿದ ಆರ್ಡರ್ ನಲ್ಲಿ ಯಾವ ರೀತಿ ಇದೆಯೋ ಅದೇ ಡೆಫನೀಶನ್ ಅನ್ನು ನೀವು ಉಪಯೋಗಿಸಬೇಕು ಇದರಲ್ಲಲಿ ವ್ಯತ್ಯಾಸ ಮಾಡಲಿಕ್ಕೆ ಸ್ವಲ್ಪವೂ ಅವಕಾಶ ಇರಬಾರದು. ಎನ್ನುವ ಮಾತನ್ನು ಹೇಳಿದ್ದರು. ಅದನ್ನು ಗಮನದಲ್ಲಿಟ್ಟು ಕೊಂಡು ಈಬ್ಯಾಕ್‌ವರ್ಡ್ ಡೆಫನೀಶನ್ ಇದೆ.ಅದೇ ರೀತಿಯಲ್ಲಿ ಇದನ್ನು ಉಪಯೋಗಿಸಬೇಕು. ಎರಡು ರೀತಿಯ ಬೇರೆ ಬೇರೆ ಡೆಫನೀಶನ್ಸ್ ಇರುವುದಕ್ಕೆ ಅಸ್ಪದ ಇರಬಾರದು. ಎಂದು ಒತ್ತಾಯ ಪೂರ್ವಕವಾಗಿ ಹೇಳಿದರು. ಆ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ. ಆಮೇಲೆ ಸೆಕ್ಷನ್ 3 ಕ್ಕೂ ಕೂಡ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಇದರ ಚರ್ಚೆಯ ಕಾಲದಲ್ಲಿ ಒಂದು ಮಾತು ಬಂತು. ಫಲಾನುಭವಿಗಳನ್ನು ಗುರುತಿಸುವಾಗ ಗ್ರಾಮಸಭೆ ಗುರುತಿಸಬೇಕು ಎಂದು ಇದೆ. ಅದು ಒಂದು ವೇಳೆ ಗ್ರಾಮಸಭೆ ಮಾಡುವುದಕ್ಕೆ ಆಗದಿದ್ದರೆ ಗ್ರಾಮಪಂಚಾಯತಿ ಈ ಕೆಲಸ ಮಾಡಬೇಕು, ಗ್ರಾಮಪಂಚಾಯತಿ ಸೆಕ್ರೆಟರಿ ಅಲ್ಲ ಎನ್ನುವ ಮಾತನ್ನು ನಾವು ಈ ತಿದ್ದುಪಡಿಯಲ್ಲಿ ಸೇರಿಸಿದ್ದೇವೆ. ಆಮೇಲೆ ಅಧ್ಯಕ್ಷರು ಮತ್ತು ಉಪಾಧ್ಯಾಕ್ಷರ ಆಯ್ಕೆ ಬಗ್ಗೆ ಸೆಕ್ಷನ್ 44 ಅನ್ನು ಸ್ವಲ್ಪ ತಿದ್ದುಪಡಿ ಮಾಡಿದ್ದೇವೆ. ಅದಕ್ಕೆ ಕಾರಣ ಏನೆಂದರೆ ಮೆಂಬರ್ಸ್ ಎಲೆಕ್ಷನ್ಸ್ ಆದ ನಂತರ ಹಲವಾರು ತಿಂಗಳುಗಳಾದರೂ ಕೂಡ ಛೇರ್ಮನ್ ಎಲೆಕ್ಷನ್ ಆಗುತ್ತಿರಲಿಲ್ಲ, ಹಾಗೆ ಆಗಬಾರದು ಮೆಂಬರ್ಸ್ ಎಲೆಕ್ಷನ್ ಆದ ಒಂದು ತಿಂಗಳೊಳಗೆ ಛೇರ್ಮನ್ ಎಲೆಕ್ಷನ್ ಮಾಡಬೇಕು ಎನ್ನುವುದನ್ನೂ ಈ ತಿದ್ದುಪಡಿ ಮೂಲಕ ಈ ಕಾನೂನಿನಲ್ಲಿ ಸೇರಿಸಿದ್ದೇವೆ.

ಸೆಕ್ಷನ್ 49ನ್ನು ಕೂಡ ಸ್ವಲ್ಪ ಅಮೆಂಡ್ ಮಾಡಿದ್ದೇವೆ. ಇದಕ್ಕೆ ಕಾರಣ ಏನೆಂದರೆ, ಒಂದು ಸಲ ನೋ-ಕಾನ್ಫಿಡೆನ್ಸ್ ಮೋಷನ್ ಬಂದು ಅದು ಸೋತು ಹೋಗಿ ಬಿಟ್ಟರೆ, ಪುನಃ ಒಂದು ವರ್ಷ ಅಂಥ ನೋ ಕಾನ್ಫಿಡೆನ್ಸ್ ಮೋಷನ್ ಬಂದು ಅದು ಸೋತು ಹೋಗಿ ಬಿಟ್ಟರೆ, ಪುನಃ ಒಂದು ವರ್ಷ ಅಂಥ ನೋ ಕಾನ್ಫಿಡೆನ್ಸ್ ಮೋಷನ್ ತರುವುದಕ್ಕೆ ಅವಕಾಶ ಇರಬಾರದು ಎಂಬ ವಿಚಾರವನ್ನು ನಾವು ಒಪ್ಪಿ ಆ ರೀತಿಯಲ್ಲಿ ಅಮೆಂಡ್ಮೆಂಟ್ ಮಾಡಿದ್ದೇವೆ. ಹೀಗೆ ಈ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಾಕಷ್ಟು ಅಧಿಕಾರಗಳನ್ನು ಕೊಟ್ಟಿದ್ದೇವೆ. ಅಧಿಕಾರಸ್ಥರು ಅವರ ಸೂಪರ್ ವಿಶನ್ ಮತ್ತು ಕಂಟ್ರೋಲ್ ಕೆಳಗೇನೇ ಕೆಲಸ ಮಾಡಬೇಕು. ಅವರ ಮೇಲ್ವಿಚಾರಣೆ ಮತ್ತು ನಿಯಂತ್ರಣ ಇರಬೇಕೆಂಬ ಮಾತನ್ನು ನಾವು ಮೂರು ಹಂತದಲ್ಲಿ ಈ ಕಾನೂನಿನಲ್ಲಿ ಸೇರಿಸಿದ್ದೇವೆ. ಆದರೆ ಕೆಲವು ಕಡೆ ಈ ಕಂಟ್ರೋಲ್ ಎಂಬ ಶಬ್ದ ಸೇರಿಸಿ ಎಂದಿದ್ದಾರೆ. ಅದನ್ನು ಸುಲಭವಾಗಿ ಒಪ್ಪಿದ್ದೇವೆ. ಸೆಕ್ಷನ್

162,193, ಇವುಗಳು ತಾಲ್ಲೂಕು ಮತ್ತು ಜಿಲ್ಲೆಗೆ ಸಂಬಂಧಪಟ್ಟಿದ್ದು. ಇದರಲ್ಲಿ ಸೂಪರ್ ವಿಶನ್ ಮತ್ತು ಕಂಟ್ರೋಲ್ ಎಂಬ ಶಬ್ದವನ್ನು ಉಪಯೋಗಿಸಿದ್ದೇವೆ. ಚರ್ಚೆಯಲ್ಲಿ ಬಂದಂಥ ವಿಚಾರಗಳನ್ನು ನಾವು ಒಪ್ಪಿ ಅದರ ಪ್ರಕಾರವೇ ಅಮೆಂಡ್ಮೆಂಟ್ ಕೂಡ ಮಾಡುತ್ತಾ ಇದ್ದೇವೆ. ಇನ್ನೊಂದು ವಿಚಾರವನ್ನು ತಾವುಗಳು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಸೂಪರ್‌ವಿಶನ್ ಮತ್ತು ಕಂಟ್ರೋಲ್ ಎನ್ನುವುದನ್ನು ನಾವು ಹೊಸದಾಗಿ ಅಮೆಂಡ್ಮೆಂಟ್ ಮೂಲಕ ಸೇರಿಸುತ್ತಾ ಇಲ್ಲ. ಚುನಾಯಿತ ಸಂಸ್ಥೆಯ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಕೆಳಗೇನೇ ಈ ಅಧಿಕಾರಿಗಳು ಕೆಲಸ ಮಾಡಬೇಕು. ಇದು ಮೂಲಭೂತವಾದ ವಿಷಯವಾಗಿ ನಮ್ಮ ಕಾನೂನಿನಲ್ಲಿದೆ. ಇನ್ನೂ ಕೆಲವು ವಿಚಾರಗಳನ್ನು 'ಸಿ'ನಲ್ಲಿ ಸೇರಿಸಿ, 'ಡಿ' ನಲ್ಲಿ ಸೇರಿಸಿ ಎಂದು ಚರ್ಚೆಯ ಕಾಲದಲ್ಲಿ ಹೇಳಿದರೆ ನಾವು ಸುಲಭವಾಗಿ ಆ ಮಾತುಗಳನ್ನು ಒಪ್ಪಿದ್ದೇವೆ. ನಾವು ಇದನ್ನು ಹೊಸದಾಗಿ ಸೇರಿಸುತ್ತಾ ಇಲ್ಲ. ಆ ಮಾತನ್ನು ಸೆಕ್ಷನ್ 'ಡಿ' ನಲ್ಲಿ ಇನ್ನೂ ಸ್ಪಷ್ಟಪಡಿಸುತ್ತಾ ಇದ್ದೇವೆ. 'ಡಿ' ನಲ್ಲಿ exercise overall supervision over the financial and executive, administration ಎಂದು ಏನಿತ್ತು, ಅದಕ್ಕೆ ಕಂಟ್ರೋಲ್ ಪದ ಸೇರಿಸುತ್ತಾ ಇದ್ದೇವೆ. ಏಕೆಂದರೆ 'ಸಿ'ನಲ್ಲಿಯೂ ಕೂಡ exercise supervision and control over the exective officer. ಅಂತಲೇ ಇದೆ. ಅದೇ ಪದವನ್ನು ಇಲ್ಲಿಯೂ ಕೂಡ ಸೇರಿಸಿ ಎಂದಾಗ ಅದನ್ನು ನಾವು ಮಾಡುತ್ತಾ ಇದ್ದೇವೆ. ಅನಂತರ ಸೆಕ್ಷನ್ 155, ರಲ್ಲಿ ಟ್ರಾನ್ಸ್ಫರ್ ಬಗ್ಗೆ ಒಂದು ಪದವನ್ನು ಸ್ಪಷ್ಟೀಕರಣವನ್ನು ಸೇರಿಸುತ್ತಾ ಇದ್ದೇವೆ. transfer would be in accordance with the transfer policy of the Government from time to time. ಟ್ರಾನ್ಸ್ಫರ ಪ್ರಶ್ನೆ ಬಂದಾಗ, ಟ್ರಾನ್ಸ್ಫರ್ ಪಾಲಿಸಿ ಏನು ಇರುತ್ತದೆ, ಅದರ ಪ್ರಕಾರ ಟ್ರಾನ್ಸ್ಫರ್ ನೀತಿಯನ್ನು ನಾವು ಅನುಸರಿಸಬೇಕು ಎಂಬ ಮಾತನ್ನು ನಾವು ಕಾನೂನಿನಲ್ಲಿಯೇ ಸೇರಿಸುತ್ತಾ ಇದ್ದೇವೆ. ಇದು ಕೂಡ ಚರ್ಚೆಯಲ್ಲಿ ಬಂದಿರತಕ್ಕಂಥ ವಿಷಯ. ಹೀಗಾಗಿ ಏಳು ಆಗ್ರೀಡ್ ಅಮೆಂಡ್ ಮೆಂಟ್ಸ್, ಏಪ್ರಿಲ್ 13 ತಾರೀಖಿಗೆ ನಾವು ಇದನ್ನು ಪಾಸ್ ಮಾಡುವಾಗ ಏಳು ಅಮೆಂಡ್ ಮೆಂಟ್ಸ್‌ನ್ನು ಒಪ್ಪಿದ್ದೇವೆ, ಇಲ್ಲಿ ನಾವು ಅಮೆಂಡ್‌ಮೆಂಟ್ ಮಾಡುವಾಗ ಏಳು, ಹದಿಮೂರು ಆಗುತ್ತದೆ. ಏಕೆಂದರೆ ಕಾನ್ಸಿಕ್ವೆನ್ಶಿಯಲ್ ಅಮೆಂಡ್ಮೆಂಟ್ಸ್ ಇರುವುದರಿಂದ ಅದ 13 ಆಗುತ್ತದೆ. ಆದರೆ ಅದರ ವಿಚಾರಗಳು ಏಳು. ಇದರ ಜೊತೆಗೆ ನಾವು ಸರಕಾರದವರು ಸ್ವಯಂ ಪ್ರೇರಣೆಯಿಂದ ನಾಲ್ಕು ಅಮೆಂಡ್ಮೆಂಟ್ಗಳನ್ನು ಇಲ್ಲಿ ಸೇರಿಸುತ್ತಾ ಇದ್ದೇವೆ. ಇವುಗಳ ಎಲ್ಲರ ಅಭಿಪ್ರಾಯದ ಪ್ರಕಾರವೇ ಇರುವುದರಿಂದ ಏನೂ ತೊಂದರೆಯಾಗುವುದಿಲ್ಲ. ಉದಾಹರಣೆಗಾಗಿ ಯಾವುದಾದರೂ ವಿಷಯ ಕಾನೂನಿಗೆ ವಿರುದ್ಧವಾಗಿ ನಡೆಯುತ್ತಾ ಇದ್ದರೆ, ಆಗ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ಸ್ 15 ದಿವಸಗಳಲ್ಲಿ ಸರಕಾರಕ್ಕೆ ಈ ವಿಷಯವನ್ನು ತಿಳಿಸಬೇಕೆಂದು ಕಾನೂನಿನಲ್ಲಿ ಇದೆ. ಈಗ ಇದಕ್ಕೆ ನಾವು ಒಂದು ಅಮೆಂಡ್ಮೆಂಟನ್ನು ತಂದು ಸರಕಾರಕ್ಕೆ ಈ ಮಾತನ್ನು ತಿಳಿಸಿದ ನಂತರ, ಸರಕಾರ ತನ್ನ ಅಭಿಪ್ರಾಯವನ್ನು ಎರಡು ತಿಂಗಳ ಒಳಗಾಗಿ ಕೊಡಬೇಕೆಂಬುದನ್ನು ನಾವೇ ಸೇರಿಸುತ್ತಾ ಇದ್ದೇವೆ. ಯಾಕೆಂದರೆ ಯಾವುದೋ ಕಾನೂನನ್ನು ವಯೊಲೇಟಿವ್ ಆಫ್ ಆಕ್ಟ್ ಎಂದು ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಸರಕಾರಕ್ಕೆ ತಿಳಿಸಿದಾಗ ಸರಕಾರ ಏನೋ ಮಾಡುತ್ತದೆ ಎಂದು ಸುಮ್ಮನೆ ಕುಳಿತರೆ ಅದರಿಂದ ಸ್ಥಳೀಯ ಸಂಸ್ಥೆಗಳಿಗೆ ತೊಂದರೆಯಾಗುತ್ತದೆ. ಆದಕಾರಣ ಸರಕಾರಕ್ಕೆ ಆ ವಿಚಾರ ಗೊತ್ತಾದ ನಂತರ ಎರಡು ತಿಂಗಳ ಒಳಗಾಗಿ ಅದಕ್ಕೆ ಅವರು ತೀರ್ಮಾನ ಕೊಡಬೇಕೆಂದು ಹೇಳಿ ಈ ಪಂಚಾಯತ್ ರಾಜ್ಯದ ಪರವಾಗಿ ಈ ಒಂದು ತಿದ್ದುಪಡಿಯನ್ನು ಸ್ವಯಂ ಪ್ರೇರಣೆಯಿಂದ ಸರ್ಕಾರ ತರುತ್ತಾ ಇದೆ. ಆ ಮೇಲೆ ಈ ಗ್ರಾಮಪಂಚಾಯಿತಿ ಡಿಸಾಲ್ವ್ ಮಾಡುವ ವಿಷಯ ಏನಾದರೂ ಪರ್‌ಸಿಸ್ಟೆಂಟ್ ಡಿಫಾಲ್ಟ್, ಇದರೆ, ಪದೇ ಪದೇ ತಪ್ಪುಗಳನ್ನು ಮಾಡುತ್ತಾ ಇದರೆ, ಆವಾಗ ಮಾತ್ರ

ಇದನ್ನು ಡಿಸಾಲ್ವ್ ಮಾಡುವ ಪ್ರಶ್ನೆ ಬರುತ್ತದೆ. ಯಾವುದೇ ಕಾನೂನಿನಲ್ಲಿಯಾದರೂ ಕೂಡ ಅದರ ಬಗ್ಗೆ ಪ್ರಸ್ತಾಪ ಇರಲೇ ಬೇಕಾಗುತ್ತದೆ. ಒಂದು ಪಕ್ಷ ಡಿಸಾಲ್ವ್ ಮಾಡುವುದಾದರೆ ಯಾವ ರೀತಿಯಲ್ಲಿ ಡಿಸಾಲ್ವ್ ಮಾಡಬೇಕೆಂದು ಇದೆ. ಹಳೆಯ ಕಾನೂನಿನಲ್ಲಿ ಕೂಡ ಜಿಲ್ಲಾಪರಿಷತ್ತನ್ನು ಡಿಸಾಲ್ವ್ ಮಾಡುವ ಅಧಿಕಾರ ಸರಕಾರಕ್ಕೆ ಇತ್ತು. ಈ ಗ್ರಾಮಪಂಚಾಯತಿಯನ್ನು ಡಿಸಾಲ್ವ್ ಮಾಡುವುದಕ್ಕೆ ನಮ್ಮ ಕಾನೂನಿನಲ್ಲಿ ಡಿವಿಜನಲ್ ಕಮಿಶನರ್‌ಗೆ ಅಧಿಕಾರ ಕೊಟ್ಟಿದ್ದೇವೆ. ಅದು ಹಾಗೆ ಡಿಸಾಲ್ವ್ ಮಾಡಬೇಕಾಗಿ ಬಂದ ಪರಿಸ್ಥಿತಿಗಳಲ್ಲಿ ಮಾತ್ರ. ಆದರೆ ಇದಕ್ಕೂ ಒಂದು ತಿದ್ದುಪಡಿಯನ್ನು ನಾವವು ತರುತ್ತಾ ಇದ್ದೇವೆ. ಡಿವಿಜನಲ್ ಕಮಿಶನರ್‌ಗೆ ಗ್ರಾಮಪಂಚಾಯತಿಗಳನ್ನು ಡಿಸಾಲ್ವ್ ಮಾಡುವ ಅಧಿಕಾರ ಕೊಟ್ಟಿದ್ದರೂ ಕೂಡ ಅದಕ್ಕೆ ಅಪೀಲ್ ಪ್ರೊವಿಶನ್ ಮಾಡುತ್ತಾ ಇದ್ದೇವೆ. ಸರಕಾರಕ್ಕೆ ಅಪೀಲ್ ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡುತ್ತಾ ಇದ್ದೇವೆ. ಡಿವಿಜನಲ್ ಕಮೀಶನರ್ ತೀರ್ಮಾನ ಮಾಡಿದ ತತ್‌ಕ್ಷಣವೇ ಅದೇ ಕೊನೆಯದ್ದಾಗುವುದಿಲ್ಲ. ಏಕೆಂದರೆ ಒಂದು ಗ್ರಾಮಪಂಚಾಯತಿಯನ್ನು ಡಿಸಾಲ್ವ್ ಮಾಡುವುದು ಬಹಳ ಗಂಭೀರವಾದಂಥ ಪ್ರಶ್ನೆ. ಈ ಅಧಿಕಾರ ಯಾವ ಅಕ್ಟಲ್ಲಿದ್ದರೂ ಕೂಡ ಯಾರೂ ಹೆಚ್ಚಿಗೆ ಉಪಯೋಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೂ ಕೂಡ ಇನ್ ಪ್ರಿನ್ಸಿಪಲ್ ಡಿಸಾಲ್ವ್ ಮಾಡುವುದಾದರೆ, ಡಿವಿಜನಲ್ ಕಮಿಶನರ್ ಆ ಮಾತನ್ನು ಎತ್ತಿದ್ದರೂ ಕೂಡ ಅವರು ಸರಕಾರಕ್ಕೆ ಅಪೀಲ್ ಮಾಡುವುದಕ್ಕೆ ಅವಕಾಶವನ್ನು ಮಾಡಿ ಕೊಟ್ಟಿದ್ದೇವೆ. ಕೊನೆಯದಾಗಿ ಈ ಮತಗಟ್ಟೆಗಳ ಕ್ಯಾಪ್ಚರಿಂಗ್ ಮತ್ತು ಗವರ್ನ್ಮೆಂಟ್ ಸರ್ವೆಂಟ್ಸ್ ಚುನಾವಣೆಯಲ್ಲಿ ಏನಾದರೂ ಅಫೆನ್ಸ್ ಮಾಡಿದರೆ, ಗವರ್ನ್ಮೆಂಟ್ ಸರ್ವೆಂಟ್ಸ್ ಎಲೆಕ್ಷನ್ ಏಜೆಂಟ್ಸ್ ಆಗಬಾರದು, ಪೋಲಿಂಗ್ ಏಜೆಂಟ್ಸ್ ಆಗಬಾರದು, ಕೌಂಟಿಂಗ್ ಏಜೆಂಟ್ಸ್ ಆಗಬಾರದು, ಎಂದು ರೆಪ್ರೆಸೆಂಟೇಶನ್ ಆಫ್ ಪೀಪಲ್ಸ್ ಆಕ್ಟಲ್ಲಿ ಏನಿದೆ. ಆ ಅಮೆಂಡ್ಮೆಂಟನ್ನು ಇಲ್ಲಿ ಸೇರಿಸಬೇಕೆಂದು ನಮ್ಮ ಎಲೆಕ್ಷನ್ ಕಮಿಶನರ್ರವರು ಹೇಳಿರುವುದರಿಂದ ಇದನ್ನು ಕೂಡ ಸೇರಿಸಿದ್ದೇವೆ. ಆದ್ದರಿಂದ ಆಗಲೇ ಏಳು ಅಗ್ರೀಡ್ ಅಮೆಂಡ್‌ಮೆಂಟ್ಸ್ ಮತ್ತು ಇಲ್ಲಿ ನಾಲ್ಕು ತಿದ್ದುಪಡಿಗಳನ್ನು ಸೇರಿಸಿದ್ದೇವೆ. ಇದು ಬಹಳ ಸರಳವಾಗಿದೆ. ಇದರ ಬಗ್ಗೆ ನಾವು ಚರ್ಚೆ ಮಾಡುವುದಕ್ಕೂ ಕೂಡ ಆಸ್ಪದವಿಲ್ಲ. ಇದು ಸಾಕಷ್ಟು ಚರ್ಚೆಯಾದ ನಂತರ ಮಾಡಿರತಕ್ಕಂಥ ಅಮೆಂಡ್ಮೆಂಟ್ಸ್. ಇದು ಈಗಾಗಲೇ ಪಾಸ್ ಆಗಬೇಕಾಗಿತ್ತು. ನಾವು ಮಾತು ಕೊಟ್ಟ ಪ್ರಕಾರ ಇದನ್ನು ಮಾಡಬೇಕಾಗುತ್ತದೆ. ಸುದೈವದಿಂದ ಅಸೆಂಬ್ಲಿಯಲ್ಲಿ ಇದು ಪಾಸ್ ಆಗುತ್ತದೆ. ನಮಗೆ ಈ ಅವಕಾಶ ಸಿಕ್ಕದೇ ಹೋದರೆ ಆರ್ಡಿನೆನ್ಸ್ ಮಾಡುತ್ತೇವೆ ಎಂಬ ಮಾತನ್ನು ಕೂಡ ನಾವು ಹೇಳಿದ್ದೇವೆ. ಆರ್ಡಿನೆನ್ಸ್ ಮಾಡುವಂಥಾದ್ದು ಸರಿಯಾದ ಕ್ರಮವಲ್ಲ. ಅಸೆಂಬ್ಲಿಯಲ್ಲಿ ಪಾಸ್ ಮಾಡುವುದಕ್ಕೆ ಸಾಧ್ಯ ಇದ್ದರೆ ಆರ್ಡಿನೆನ್ಸ್ ಮಾಡುವ ಅವಶ್ಯಕತೆ ಇರುವುದಿಲ್ಲ. ಈ ದೃಷ್ಟಿಯಿಂದ ಈ ಅಮೆಂಡ್ಮೆಂಟ್ಸ್ ಹಿಂದೆಯೇ ಬರಬೇಕಾಗಿತ್ತು. ಈಗ ತಮ್ಮ ಮುಂದೆ ಇದೆ. ಇದನ್ನು ತಾವುಗಳು ಸರ್ವಾನುಮತದಿಂದ ಪಾಸ್ ಮಾಡಿ ಈ ವಿಧೇಯಕಕ್ಕೆ ಒಂದು ಪುಷ್ಟಿ ಕೊಟ್ಟಂತೆ ಆಗುತ್ತದೆ. ಹಾಗೂ ಇದರ ಬಗ್ಗೆ ಸರ್ಕಾರ ಟೀಕೆಗಳನ್ನು ನಾವು ಗಮನದಲ್ಲಿಟ್ಟುಕೊಂಡು ತಿದ್ದುಪಡಿಗಳನ್ನು ಮಾಡಿದ ಹಾಗೆ ಆಗುತ್ತದೆಂದು ಹೇಳುತ್ತೇನೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

+ ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ಮಂಡಿಸಿದ ವಂದನಾರ್ಪಣ ಪ್ರಸ್ತಾವದ ಮೇಲೆ ಸನ್ಮಾನ್ಯ ಹಿರಿಯ ಶಾಸಕರಾದಂಥ ಶಿವನಂಜಪ್ಪನವರು ಮಾತನಾಡುತ್ತಾ ಈ ಒಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿರತಕ್ಕಂಥಾದ್ದನ್ನು ಈ ಸರಕಾರದವರು ಕಾರ್ಯಾಚರಣೆಯಲ್ಲಿ ತಂದರೆ ಕೈಲಾಸವನ್ನೇ ಭೂಲೋಕಕ್ಕೆ ಇಳಿಸಿದಂತಾಗುತ್ತದೆ ಎಂದು

ಹೇಳಿ, ಈ ಸದನವನ್ನು ಅಚ್ಚರಿಗೊಳಿಸಿದ್ದಾರೆ. ನಾವು ಕರ್ನಾಟಕದ ಜನರು ಯಾವಾಗ ಕರ್ನಾಟಕ ಕೈಲಾಸವಾಗುತ್ತದೆ ಎಂದು ನೋಡುತ್ತಾ ಇದ್ದೇವೆ. ಅವರು ಹೇಳಿರತಕ್ಕಂಥ ವಿಷಯಗಳು ಅತಿಶಯೋಕ್ತಿಯಾಗಿದೆ. ಇಲ್ಲಿ ನಡೆದಿರತಕ್ಕಂಥ ಕಾರ್ಯಕ್ರಮಗಳನ್ನು ನೋಡಿದರೆ ಜನರಿಗೆ ಇವೊತ್ತು ಆಶ್ವಾಸನೆಗಳನ್ನು ಕೊಟ್ಟು ಜನರನ್ನು ತಪ್ಪು ದಾರಿಗೆ ಎಳೆದು, ಜನರ ಭಾವನೆಗಳನ್ನು ಕೆರಳಿಸಿ, ಸಾರ್ವಜನಿಕರು ಇವೊತ್ತು ಸತ್ಯಾಗ್ರಹ, ಧರಣಿ, ಹಿಂಸೆಯ ಮಾರ್ಗಕ್ಕೆ ಇಳಿಯುವಷ್ಟು ಮಟ್ಟಕ್ಕೆ ಸರಕಾರದ ಕಾರ್ಯಕ್ರಮಗಳು ಸ್ಥಗಿತಗೊಂಡಿವೆ. ಹಾಗೂ ಪರಿಹಾರ ಕಾರ್ಯಗಳೂ ಕೂಡ ನಿಂತು ಹೋಗಿವೆ. ಈ ದಿಶೆಯಲ್ಲಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹಿಂದೆ ಮಾಡಿದ ಸಾಧನೆಗಳು ಏನು ? ಮುಂದೆ ಬರತಕ್ಕಂಥ ಕಾರ್ಯಕ್ರಮಗಳು ಅಥವಾ ಸಾಧನೆಗಳು ಏನು ಎಂಬುದನ್ನು ನೋಡಿದಾಗ ಇದು ಸತ್ಯಕ್ಕೆ ದೂರವಾದುದು ಎಂದು ಹೇಳಬೇಕಾಗುತ್ತದೆ.

5.00 ಪಿ.ಎಂ.

ಈ ರಾಜ್ಯಪಾಲರ ಭಾಷಣವೇನು ಇದೆ, ಸತ್ಯವನ್ನು ಪ್ರತಿಬಿಂಬಿಸುತ್ತಿಲ್ಲ. ಸರಕಾರವೇನೂ ಸಾಧನೆ ಮಾಡದೇ ಹೋದರೂ ಸಹ ಗುರಿಯನ್ನು ಸಾಧಿಸಲಿಕ್ಕೆ ಸಾಕಷ್ಟು ಪ್ರಯತ್ನ ಆಗಿಲ್ಲ. ರೈತರ, ಬಡವರ, ಹಿಂದುಳಿದವರ, ಅಲ್ಪಸಂಖ್ಯಾತರ ಕಾರ್ಯಕ್ರಮಗಳನ್ನು ಜಾರಿ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಹೀಗಿದ್ದರೂ ಸಹತಾನು ಮಾಡಿದಂತಹ ಸಾಧನೆ ಎಂದು ಹೇಳಿ ಈ ವರದಿಯನ್ನು ರಾಜ್ಯಪಾಲರ ಬಾಯಲ್ಲಿ ಹೇಳಿಸಿದ್ದಾರೆ. ಇದು ಕೇವಲ ನೀರು ಕುದುರೆಯಿದ್ದ ಹಾಗೆ ಇದೆ. ಇದರಿಂದ ಹಿಂದುಳಿದ ವರ್ಗದವರಿಗಾಗಲೀ, ಅಲ್ಪಸಂಖ್ಯಾಂತರಿಗಾಗಲೀ, ಪರಿಶಿಷ್ಟ ಜಾತಿಯವರಿಗಾಗಲಿ, ರೈತರಿಗಾಗಲೀ, ಗ್ರಾಮೀಣ ಜನರಿಗಾಗಲೀ ಪ್ರಯೋಜನ ಸಿಕ್ಕಿಲ್ಲ. ಈ ಕಾರ್ಯಕ್ರಮಗಳನ್ನು ಜಾರಿ ಮಾಡಲಿಕ್ಕೆ ಇವರಲ್ಲಿ ಹಣವಿಲ್ಲ ಹಣವಿಲ್ಲದಿದ್ದರೂ ಇದೆ ಎಂದು ಹೇಳುತ್ತಾ ಬಂದಿದ್ದಾರೆ. ಈ ವರ್ಷದ ಆಯವ್ಯಯದಲ್ಲಿ ನೂರಕ್ಕೆ 40 ರಷ್ಟು ಹಣ ಬಿಡುಗಡೆಯಾಗಿಲ್ಲ. ಇದರಿಂದಾಗಿ ನೀರಾವರಿ ಕಾರ್ಯಗಳು ಇರಬಹುದು, ಪರಿಶಿಷ್ಟ ಜಾತಿ ವರ್ಗಗಳ ಯೋಗಕ್ಷೇಮದ ಕಾರ್ಯಕ್ರಮಗಳಿರಬಹುದು.ಇವು ಯಾವುವೂ ಕಾರ್ಯಗತವಾಗಿಲ್ಲ. ಪ್ರಶ್ನೋತ್ತರ ಕಾಲದಲ್ಲಿ ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳನ್ನು ನೋಡಿದರೆ ರಾಜ್ಯಪಾಲರ ಭಾಷಣದಲ್ಲಿ ಸರಕಾರ ಪ್ರತಿ ಪಾದನೆ ಮಾಡಿರತಕ್ಕದ್ದು ಸತ್ಯಕ್ಕೆ ದೂರವಾದುದು. ಇದು ಕೇವಲ ಗಾಳಿ ಗೋಪುರವಾಗಿದೆ. ಜನತೆಯ ಸಂಕಷ್ಟಗಳಿಗೆ ಸ್ಪಂದಿಸತಕ್ಕ ಯಾವುದೇ ಕಾರ್ಯಕ್ರಮವನ್ನು ಸರಕಾರ ನಿರ್ವಹಣೆ ಮಾಡಿಲ್ಲ. ತಮಗೆ ಉದಾಹರಣೆ ಕೊಡುವುದಾದರೆ, ಈ ರಾಜ್ಯಪಾಲರ ಭಾಷಣದ 19 ನೇ ಪ್ಯಾರಾದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಬೇಕಾಗುವ ಸಾಲ ಸೌಲಭ್ಯವನ್ನು ಪಡೆಯಲು ಅನುಕೂಲವಾಗುವಂತೆ ಸರಕಾರ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಮತ್ತು ಅವರ ಉದ್ಧಾರವೇ ಈ ಸರಕಾರದ ಗುರಿ ಎಂದು ಹೇಳಿ ಈ ಪರಿಶಿಷ್ಟ ಜಾತಿಯವರಿಗೆ ಬಹಳ ಉಪಕಾರ ಮಾಡುತ್ತೇವೆಂದು ಹೇಳಿದ್ದಾರೆ. ಇದಕ್ಕೊಂದು ಉದಾಹರಣೆ ಕೊಡುತ್ತೇನೆ. 86 ರಿಂದ 92 ರವರೆಗೆ ಧಾರವಾಡ ಜಿಲ್ಲೆಯಲ್ಲಿ ಹರಿಜನಗಿರಿಜನರಿಗೆ ವೈಯಕ್ತಿಕ ಕೊಳವೆ ಬಾವಿಗಳನ್ನು ಹಾಕಿಕೊಡಬೇಕಾಗಿತ್ತು. ಆದರೆ ಅಲ್ಲಿಂದ ಇಲ್ಲಿಯವರೆಗೆ ಯಾವುದೇ ಸಾಧನೆಯಾಗಿಲ್ಲ. ಇದನ್ನು ನಾನು ಪ್ರಶ್ನೆ ಹಾಕಿ ಉತ್ತರ ಪಡೆದುಕೊಂಡು ಈ ಸದನದಲ್ಲಿ ತಮ್ಮ ಮೂಲಕ ಸರಕಾರಕ್ಕೆ ಹೇಳುತ್ತಿದ್ದೇನೆ. ಇಡೀ ರಾಜ್ಯದಲ್ಲಿ ಹರಿಜನರಿಗೋಸ್ಕರ ವೈಯಕ್ತಿಕ ಕೊಳವೆ ಬಾವಿಗಳನ್ನು ಹಾಕಿಕೊಡಬೇಕು. ಅಂದರೆ ಧಾರವಾಡ ಜಿಲ್ಲೆಯಲ್ಲಿ 86 ರಿಂದ 92 ರವರೆಗೆ ಯಾವುದೇ ಸಾಧನೆಯಾಗಿಲ್ಲಯೆಂದು ಸರಕಾರ ಉತ್ತರ ಕೊಟ್ಟಿದೆ. ಇವರಿಗೆ ಎಷ್ಟರಮಟ್ಟಿಗೆ ವೈಯಕ್ತಿಕ ಕೊಳವೆ ಬಾವಿಗಳ ಬಗ್ಗೆ ಮತ್ತು ಅವರ ಆರ್ಥಿಕ ಅಭಿವೃದ್ಧಿ ಮಾಡಲಿಕ್ಕೆ ಮತ್ತು ಪರಿಶಿಷ್ಟ ಜಾತಿ ವರ್ಗದವರ ಕಲ್ಯಾಣದ ಬಗ್ಗೆ ಕಳಕಳಿ ಇದೆ ಎಂದು ಇದರಿಂದಲೇ ತಿಳಿಯುತ್ತದೆ. ಈ ಜನ ಇವರನ್ನು ನಂಬಬೇಕು ಎಂದು ಹೇಳಿ ನಂಬಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

20 ಕೊಳವೆ ಬಾವಿಗಳನ್ನು ಹಾಕಿಕೊಡುವಂತಹ ವ್ಯವಸ್ಥೆ ಇತ್ತು. ಆದರೆ ಕಳೆದ 6-8 ವರ್ಷಗಳಲ್ಲಿ 1-1 ಕೊಳವೆ ಬಾವಿಯನ್ನು ಸಹ ಇಡೀ ಜಿಲ್ಲೆಯಲ್ಲಿ ಹಾಕಿಲ್ಲ ಎಂದು ಸರಕಾರವೇ ಉತ್ತರದಲ್ಲಿ ಒಪ್ಪಿಕೊಂಡಿದೆ. ಹೀಗಿದ್ದರೂ ಸಹ ನಾವು ಪರಿಶಿಷ್ಟ ಜಾತಿ, ಪಂಗಡದವರ ಪರವಾಗಿದ್ದೇವೆಂದು ಹೇಳುತ್ತಿದ್ದಾರೆ. ಈಗಲೂ ಕೂಡ ಇಲ್ಲಿಯವರೆಗೆ ಏನೂ ಆಗಿದ್ದಿಲ್ಲ, ಅದನ್ನು ನಿಗಮಕ್ಕೆ ಕೊಟ್ಟು ಮಾಡಿಸಬೇಕೆಂದು ಹೇಳುತ್ತಿದ್ದೇವೆ. ಈಗಲಾದರೂ ಈ ಕಾರ್ಯಕ್ರಮವನ್ನು ಸಾಧನೆ ಮಾಡಬೇಕು. ಅತಿವೃಷ್ಟಿ ಮತ್ತು ಭೂಕಂಪದಿಂದ ಸೃಷ್ಟಿ ವಿಕೋಪದಿಂದ ಮನೆಗಳನ್ನು ಕಳೆದುಕೊಂಡವರಿಗೆ ಇವತ್ತಿಗೂ ಪರಿಹಾರ ದೊರೆತಿಲ್ಲ. ರಸ್ತೆಗಳು ಹಾಳಾಗಿವೆ, ಕೆಗಳು ಒಡೆದಿದೆ. ಜಾಗತಿಕ ಬ್ಯಾಂಕಿನಿಂದ ಹಣ ಕೇಳುತ್ತೇವೆಂದು ಹೇಳುತ್ತಿದ್ದಾರೆ. ಜಾಗತಿಕ ಬ್ಯಾಂಕನ್ನು ಹಣ ಕೇಳಲು ರಾಜ್ಯಸರಕಾರದಿಂದ ಕೇಂದ್ರಕ್ಕೆ ಯಾವಾಗ ಕಳಿಸುತ್ತಾರೆ, ಅಲ್ಲಿಂದ ಹಣ ಯಾವಾಗ ಬರುತ್ತದೆ? ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಒಡೆದು ಹೋದ ಕೆರೆಗಳನ್ನು ರಿಪೇರಿ ಮಾಡಲಿಕ್ಕೆ ಸಾಧ್ಯವಿಲ್ಲದಿರುವಂತಹ ಆರ್ಥಿಕ ದುಸ್ಥಿತಿ ಈ ಸರಕಾರಕ್ಕೆ ಬಂದೊದಗಿದೆ.

ಇವತ್ತು ಕೆ.ಎಸ್.ಆರ್.ಟಿ.ಸಿ.ಯವರು ರಸ್ತೆಗಳು ಹಾಳಾಗಿಹೋಗಿವೆ ಎಂದು ಬಸ್ಸುಗಳ ಓಡಾಟವನ್ನು ನಿಲ್ಲಿಸುವುದಾಗಿ ನೋಟೀಸನ್ನು ಕೊಡುತ್ತಿದ್ದಾರೆ. ಇವತ್ತು ರಸ್ತೆಗಳನ್ನು ರಿಪೇರಿ ಮಾಡುವುದಕ್ಕೂ ಸಹಿತ ಸರ್ಕಾರಕ್ಕೆ ಹಣವನ್ನು ಕೊಡಲು ಸಾಧ್ಯವಾಗುತ್ತಿಲ್ಲ. ಸರ್ಕಾರ ಇವತ್ತು ಆರ್ಥಿಕ ದಿವಾಳಿಯ ಅಂಚಿನಲ್ಲಿದೆ ಎಂಬುದು ಸ್ಪಷ್ಟವಾಗಿದೆ. ಇವತ್ತಿನದಿವಸ ಅತಿವೃಷ್ಟಿಯಲ್ಲಿ ಮನೆಗಳನ್ನು ಕಳೆದುಕೊಂಡವರಿಗೆ ಪೂರ್ಣವಾಗಿ ಪರಿಹಾರವನ್ನು ಕೊಟ್ಟಿಲ್ಲ. ನನ್ನ ಕ್ಷೇತ್ರವಾದ ಹಿರೆಕೆರೂರಿನಲ್ಲಿ 72 ನೀರಾವರಿ ಕೆರೆಗಳು ಒಡೆದುಹೋಗಿವೆ. ನನ್ನ ಕ್ಷೇತ್ರದಲ್ಲಿ ಸುಮಾರು 850 ಕೆರೆಗಳಿದ್ದರೆ ಅದರಲ್ಲಿ 72 ಕೆರೆಗಳು ಒಡೆದುಹೋಗಿವೆ. ಸರ್ಕಾರದ ಅಧಿಕಾರಿಗಳ ವರದಿಯ ಪ್ರಕಾರ, ಸರ್ಕಾರದಲ್ಲಿರತಕ್ಕ ಮಾಹಿತಿಯ ಪ್ರಕಾರ ಅವುಗಳನ್ನು ದುರಸ್ಥಿಮಾಡಲು 42 ಲಕ್ಷದ 70 ಸಾವಿರ ರೂಪಾಯಿಗಳು ಬೇಕು.ಒಂದು ವರ್ಷ ಕಳೆದು ಹೋಯಿತು. ಈ ವರ್ಷದ ಮಳೆಗಾಲದ ಅವಧಿಯಲ್ಲಿ ನೀರು ನಿಲ್ಲಲಿಲ್ಲ. ಈಗ ಅದು ಮತ್ತಷ್ಟು ಹಾಳಾಗಿಹೋಗಿದೆ. ಕೋಟ್ಯಾಂತರ ರೂಪಾಯಿಗಳ ನೀರಾವರಿ ಕೆರೆಗಳು, ಸರ್ಕಾರದ ಆಸ್ತಿ ಹಾಳಾಗಿ ಹೋದರೆ, ಅವುಗಳನ್ನು ಪುನರ್ ನಿರ್ಮಾಣ ಮಾಡಲು ಈ ರಾಜ್ಯದಲ್ಲಿ ಸಾಧ್ಯವೇ? ಇಂಥ ಪರಿಸ್ಥಿತಿಯಲ್ಲಿ ರೈತರಿಗೆ ಅವಶ್ಯಕವಾಗಿ ಇರತಕ್ಕ ನೀರಾವರಿಯ ದುರಸ್ತಿ ಕೆಲಸವನ್ನು ಮಾಡಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಹೀಗಿದ್ದರೂ ಸಹ ಸರ್ಕಾರ ಹೇಳಿಕೊಳ್ಳತಕ್ಕಂಥ ಮಾತಿನಲ್ಲಿ ಅರ್ಥವಿಲ್ಲ. ಬಡವರ ಪರವಾಗಿ, ರೈತರ ಪರವಾಗಿ ಏನು ಸರ್ಕಾರ ಹೇಳುತ್ತಿದೆ. ಈ ಮಾತು ಕೇವಲ ಕಣ್ಣೀರನ್ನು ಒರೆಸುವಂಥ ನಾಟಕವನ್ನು ಸರ್ಕಾರ ಮಾಡುತ್ತಿದೆ. ಅವರ ಬಗ್ಗೆ ಸರ್ಕಾರಕ್ಕೆ ಯಾವುದೇ ಕಳಕಳಿ ಇಲ್ಲ. ಇಲ್ಲಿಯವರೆಗೆ ಸಹಿತ ಆ 72 ಕೆರೆಗಳ ದುರಸ್ತಿಗಾಗಿ ಸರ್ಕಾರ ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ನಾನು ಅದರ ಬಗ್ಗೆ ಮುಖ್ಯಮಂತ್ರಿಗಳಿಗೆ ಪತ್ರ ಬರೆದೆ, ನೀರಾವರಿ ಖಾತೆಯ ಮಂತ್ರಿಗಳಿಗೆ ಹೇಳಿದೆ, ಅಧಿಕಾರಿಗಳಿಗೆ ಹೇಳಿದೆ, ಮುಖ್ಯ ಇಂಜಿನಿಯರ್‌ಗೆ ಹೇಳಿದೆ, ಯಾವುದೇ ಇಲಾಖೆಗೆ ಹೇಳಿದರೂ ಸಹ ಕಂದಾಯ ಇಲಾಖೆಗೆ ಕೇಳಿ ಎಂದು ಹೇಳಿದರು. ಕಂದಾಯ ಇಲಾಖೆಯಲ್ಲಿ ಕೇಳಿದರೆ ನಮ್ಮ ಹತ್ತಿರ ಹಣವಿಲ್ಲವೆಂದು ಕಂದಾಯ ಇಲಾಖೆಯ ಮಂತ್ರಿಗಳು ಅಥವಾ ಕಮಿಷನ್‌ರವರು ಹೇಳುತ್ತಿದ್ದಾರೆ. ನೀರಾವರಿ ಇಲಾಖೆಯನ್ನು ಕೇಳಿದೆ. ಒಟ್ಟಿನಲ್ಲಿ ಯಾರಾದರೂ ಮಾಡಲಿ. ನೀರಾವರಿ ಇಲಾಖೆಯವರಾದರೂ ಮಾಡಲಿ ಅಥವಾ ಕಂದಾಯ ಇಲಾಖೆಯವರಾದರೂ ಮಾಡಲಿ. ಕಡೆಗೆ ಇವರು 20 ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಕಾಗದದಲ್ಲಿ ಮಂಜೂರು ಮಾಡಿ ಹಣವನ್ನು ಮಾತ್ರ ಇವತ್ತಿನವರೆಗೂ

ಕೊಟ್ಟಿಲ್ಲ. ಮಾರ್ಚ್ ತಿಂಗಳು ಮುಗಿಯುತ್ತಾ ಬಂದಿದೆ, ಆದರೆ ಇವತ್ತಿನವರೆಗೆ ಒಂದು ಪೈಸೆ ಹಣವನ್ನು ಸರ್ಕಾರ ಬಿಡುಗಡೆ ಮಾಡಿಲ್ಲ. ಈ ಕೆಲಸ ಮಾತ್ರ ಆಗುತ್ತಿಲ್ಲ.

(ಶ್ರೀ ಹೆಚ್. ಶಿವಾನಂದ ಕೌಜಲಗಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಹೀಗೆ ಮನೆಮಠಗಳನ್ನು ಕಳೆದುಕೊಂಡವರಿಗೆ, ನೀರಾವರಿ ಕೆರೆಗಳು ಒಡೆದು ಹೋದಕಡೆ ಅವುಗಳ ರಿಪೇರಿಗೆ ಮತ್ತು ರಸ್ತೆಗಳ ರಿಪೇರಿಗೂ ಸಹಿತ ಈ ಸರ್ಕಾರ ಗಮನಹರಿಸುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ರೈತರು ಇದ್ದಾರೆ. ಗ್ರಾಮೀಣ ಜನರ ಗೋಳು ಇವತ್ತು ಬಹಳ ಚಿಂತಾಜನಕವಾಗಿದೆ. ಅದರಲ್ಲೂ ರೈತರು ಉಪಯೋಗ ಮಾಡತಕ್ಕ ರಸಗೊಬ್ಬರದ ಬೆಲೆಯನ್ನು ಒಂದಕ್ಕೆ ಮೂರುಪಟ್ಟು ಜಾಸ್ತಿ ಮಾಡಿ, ಅಂಥ ದುಬಾರಿ ಬೆಲೆಯ ಗೊಬ್ಬರವನ್ನು ರೈತನು ತಂದು ಸಾಗುವಳಿಯನ್ನು ಮಾಡಿದರೆ ಈ ಒಂದು ಅತಿವೃಷ್ಟಿಯಿಂದ ಅವನ ಬೆಳೆಯಲ್ಲಾ ಕೊಚ್ಚಿಹೋಗಿದೆ. ಅಂಥ ಒಂದು ಪರಿಸ್ಥಿತಿಯಲ್ಲಿ ಅವನಿಂದ ಬಲಾತ್ಕಾರವಾಗಿ ಸಾಲದ ವಸೂಲಿಯನ್ನು ಮಾಡುತ್ತಿದ್ದಾರೆ. ಇವತ್ತು ರೈತನು ಬೆಳೆದಂಥ ಅಲ್ಪಸ್ವಲ್ಪ ಭತ್ತದ ಬಣವೆಗಳನ್ನು ಹೊಲಗಳನ್ನು ಸೀಲ್ ಮಾಡಿ ಅವನು ಅಲ್ಲಿಗೆ ಕಾಲನ್ನು ಇಡದಂತೆ ಅವನಿಂದ ಸಾಲವನ್ನು ವಸೂಲಿ ಮಾಡತಕ್ಕ ಬಲತ್ಕಾರದ ಕ್ರಮವನ್ನು ಸರ್ಕಾರ ಮಾಡುತ್ತಿದೆ. ಈ ಸರ್ಕಾರಕ್ಕೆ ರೈತರ ಬಗ್ಗೆ ಇರುವ ಕಳಕಳಿಯು ಇದರಿಂದಲೇ ವ್ಯಕ್ತವಾಗುತ್ತದೆ. ಅತಿವೃಷ್ಟಿ, ಅನಾವೃಷ್ಟಿಯಿಂದ ಇವತ್ತು ಎಲ್ಲವೂ ಹಾಳಾಗಿದೆ. ಸರ್ಕಾರಕ್ಕೇ ಅದನ್ನು ದುರಸ್ತಿಮಾಡಲು ಹಣವಿಲ್ಲ ಎಂದು ಅವರೇ ಹೇಳುತ್ತಿದ್ದಾರೆ. ಹಾಗಾದರೆ ರೈತ ಸಾಲವನ್ನು ಕಟ್ಟಲು ಎಲ್ಲಿಂದ ಹಣವನ್ನು ತರಬೇಕು, ಸೃಷ್ಟಿಯ ವಿಕೋಪದಿಂದ ರೈತರು ಇವತ್ತು ಕಷ್ಟಪಡುತ್ತಿರುವುದರಿಂದ ಮಾನವೀಯ ದೃಷ್ಟಿಯಿಂದಲಾದರೂ ಅವನಿಗೆ ಸಹಾಯ ಮಾಡತಕ್ಕ ಉದ್ದೇಶ ಸರ್ಕಾರಕ್ಕೆ ಇಲ್ಲ ಸಾಲವನ್ನು ಮನ್ನಾ ಮಾಡಲು ಸರ್ಕಾರದಲ್ಲಿ ಇವತ್ತು ಹಣವಿಲ್ಲ. ಆಗಲಿ ಸಾಲವನ್ನು ಮನ್ನಾ ಮಾಡುವುದು ಬೇಡ. ಕಡೆಯ ಪಕ್ಷ ಬಡ್ಡಿ ಮತ್ತು ದಂಡದ ಬಡ್ಡಿಯನ್ನಾದರೂ ಮನ್ನಾ ಮಾಡಿ ಎಂದರೆ ಇಷ್ಟೊಂದು ಕಠೋರ ನೀತಿಯನ್ನು ಸರ್ಕಾರ ರೈತರ ಬಗ್ಗೆ ತಾಳುತ್ತಿದೆ. ಈ ರೈತರ ಇವರಿಗೆ ಕಣ್ಣಲ್ಲಿ ಕಾಣುತ್ತಿಲ್ಲ, ಈ ದೇಶಕ್ಕೆ ಅನ್ನವನ್ನು ಕೊಡತಕ್ಕ ರೈತ ಇವರ ಕಣ್ಣಲ್ಲಿ ಕಾಣುತ್ತಿಲ್ಲ. ಅಂಥ ರೈತನ ಹೊಟ್ಟೆಯ ಮೇಲೆ ಸರ್ಕಾರ ಹೊಡೆಯುತ್ತಿದೆ ಮತ್ತು ರೈತನ ಕಣ್ಣಲ್ಲಿ ಮಣ್ಣನ್ನು ಎಸೆಯತಕ್ಕ ಪ್ರಯತ್ನವನ್ನು ಮಾಡುತ್ತಿದೆ. ಇದರ ಒಂದು ಪಶ್ಚಾತ್ತಾಪವನ್ನು ಸರ್ಕಾರ ಈ ಕೂಡಲೇ ಅಂದರೆ ಸ್ವಲ್ಪವೇ ದಿನಗಳಲ್ಲಿ ಅನುಭವಿಸಬೇಕಾಗುತ್ತದೆ. ರೈತರನ ಕಣ್ಣೀರಿನ ಶಾಪ ಈ ಸರ್ಕಾರಕ್ಕೆ ತಟ್ಟದೆ ಇರಲಾರದು. ಈ ರೀತಿ ರೈತರ ಬಗ್ಗೆ, ಹಿಂದುಳಿದವರ ಬಗ್ಗೆ, ಬಡವರ ಬಗ್ಗೆ ಸರ್ಕಾರ ಹಾಕಿಕೊಂಡಿರತಕ್ಕ ಕಾರ್ಯಕ್ರಮ ಯಾವುದೂ ಕೂಡ ಕಾರ್ಯರೂಪದಲ್ಲಿಲ್ಲ. ಕನಿಷ್ಠ ಕಾರ್ಯಕ್ರಮಗಳನ್ನು ಜಾರಿ ಮಾಡಲು ಕನಿಷ್ಟ ಅವಶ್ಯಕತೆಗಳನ್ನು ಪೂರೈಸಲು ಸಹ ಸರ್ಕಾರದಲ್ಲಿ ಹಣವಿಲ್ಲ. ಹಣವಿದೆಯೆಂದು ಹೇಳುವ ಮಾತು ನೂರಕ್ಕೆ ನೂರು ಸುಳ್ಳು. ಇವತ್ತು ಇವರು ಬಿಡುಗಡೆ ಮಾಡಿರತಕ್ಕ ಎಲ್.ಓ.ಸಿ.ಗೆ ಹಣವೇ ಇಲ್ಲ. ಹಿಂದೆ ಎಲ್.ಒ.ಸಿ ಯನ್ನು ಬಿಡುಗಡೆ ಮಾಡಿದ್ದರೆ ಹಣವಿರುತ್ತಿತ್ತು.

ಇವತ್ತು ಎಲ್.ಒ.ಸಿ.ಕೇವಲ ಕಾಗದ ಕುದುರೆಯಾಗಿದೆ. ಒಂದು ಕಾಸೂ ಇಲ್ಲ. ಇವತ್ತು ನಿರ್ದೇಶಕರು ಖಜಾನೆಗಳನ್ನು ನಿಯಂತ್ರಣ ಮಾಡುತ್ತಿದ್ದಾರೆ. ಅವರು ಯಾವುದಕ್ಕೆ, ಎಷ್ಟರ ಮಟ್ಟಿಗೆ ಹಣವನ್ನು ಕೊಡಿ ಎಂದು ಹೇಳುತ್ತಾರೆ ಅಷ್ಟೇ ಆದೇಶ ಸರ್ಕಾರದ್ದು. ನಾವೇನಾದರೂ ಇಲ್ಲಿ ಕೇಳಿದರೆ, ಮುಖ್ಯಮಂತ್ರಿಗಳು ಬಿಡುಗಡೆ ಮಾಡಿದ್ದೇವೆಂದು ಇಲ್ಲಿ ಕಾಗದವನ್ನು ತೋರಿಸುತಾರೆ. ಕೋಟ್ಯಾಂತರ ರೂಪಾಯಿ ಹಣವನ್ನು ಬಿಡುಗಡೆ

ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಆ ಹಣವೆಲ್ಲಿದೆ? ನಿಯಂತ್ರಣ ಇರತಕ್ಕದ್ದು ಡೈರೆಕ್ಟರ್ ಆಫ್ ಟ್ರೆಝುರಿ ಅವರಿಗೆ. ಅವರು ಹೇಳಿದರೆ ಮಾತ್ರ ಅಷ್ಟೇ ಹಣ ಬಿಡುಗಡೆಯಾಗುತ್ತದೆ. ಈ ರೀತಿ ಆರ್ಥಿಕ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಹಣಕಾಸನ್ನು ಕ್ರೂಢೀಕರಿಸುವಲ್ಲಿ ಸರ್ಕಾರ ಯಾವ ರೀತಿಯಲ್ಲೂ ಪ್ರಯತ್ನ ಮಾಡುತ್ತಿಲ್ಲ. ಈ ಸರ್ಕಾರ, ಆಡಳಿತ ಪಕ್ಷ ತನ್ನದೇ ಆದಂಥ ಒಳಜಗಳದಿಂದ ಈ ರಾಜ್ಯದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವಲ್ಲ ಸಂಪೂರ್ಣವಾಗಿ ವಿಫಲವಾಗಿ ತನ್ನ ಒಳಜಗಳದಿಂದ, ರಾಜಕೀಯ ಲಾಭಕ್ಕಾಗಿ ಈ ರಾಜ್ಯವನ್ನು ಅಧೋಗತಿಗೆ ತೆಗೆದುಕೊಂಡು ಹೋಗಿದೆಯೇ ವಿನಹಃ ಯಾವುದೇ ರೀತಿಯಲ್ಲಿ ಅಭಿವೃದ್ಧಿಯಾಗಿಲ್ಲ. ಮಾರ್ಚೊಳಗಾಗಿ ಎಲ್ಲಾ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಮಲೆನಾಡು ಅಭಿವೃದ್ಧಿ ಬಗ್ಗೆ ಇವತ್ತು ಪ್ರಶ್ನೆಯನ್ನು ಹಾಕಿದರೆ 78 ಕೋಟಿ ರೂಪಾಯಿಗಳಲ್ಲಿ ಕೇವಲ 9 ಕೋಟಿ ರೂಪಾಯಿಗಳನ್ನು ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದೀರಿ. 31 ನೇ ಮಾರ್ಚೊಳಗೆ ಪೂರ್ಣ ಹಣವನ್ನು ಕೊಡುತ್ತೇವೆಂದು ಹೇಳಿದರೆ, ಅದನ್ನು ಈ ರಾಜ್ಯದ ಜನರು ನಂಬಬೇಕೆ? ಇದನ್ನೆಲ್ಲಿಯಾದರು ನಂಬಲು ಸಾಧ್ಯವೇ? ಒಂದು ಪೈಸೆ ಹಣ ಬಿಡುಗಡೆಯಾಗಿಲ್ಲ. ಇವತ್ತು ನಾವಾಗಲೇ ಫೆಬ್ರವರಿ 15ನೇ ತಾರೀಖಿನಲ್ಲಿದ್ದೇವೆ. ಇನ್ನು ಉಳಿದಿರತಕ್ಕ 45 ದಿನಗಳಲ್ಲಿ ಬಾಕಿ 69 ಕೋಟಿ ಹಣವನ್ನು ಬಿಡುಗಡೆ ಮಾಡುತ್ತೇವೆ, ಅಭಿವೃದ್ಧಿ ಕೆಲಸ ಮಾಡುತ್ತೇವೆಂದು ಹೇಳಿದರೆ ಹೇಗೆ ನಂಬುವುದು? ಇವರಲ್ಲಿ ಬಿಡುಗಡೆ ಮಾಡಲು ಹಣವೇ ಇಲ್ಲ, ಆ ಕಾಮಗಾರಿಯ ಕೆಲಸವನ್ನು ಮಾಡಿ ಮುಗಿಸಲು ಸಾಧ್ಯವೇ ಇಲ್ಲ. ಈ ರೀತಿ ಸರ್ಕಾರದ ಸಂಪೂರ್ಣ ವಿಫಲತೆ, ಅವರ ಆಂತರಿಕ ಜಗಳ ಈ ರಾಜ್ಯದ ಅಭಿವೃದ್ಧಿಯನ್ನು ಸಂಪೂರ್ಣವಾಗಿ ಕುಂಠಿತ ಮಾಡಿದೆ ಎಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ.

ಇನ್ನು ಆಶ್ರಯ ಯೋಜನೆ ಬಗ್ಗೆ ಹೇಳಲು ಇವತ್ತು ನಮ್ಮ ಮಂತ್ರಿಗಳು ಇಲ್ಲ. ಲಕ್ಷಾಂತರ ಮನೆಗಳನ್ನು ಕಟ್ಟಿ ಕೊಡುತ್ತೇವೆಂದು ಹೇಳುತ್ತಾರೆ. ಎಲ್ಲಿದೆ ಈ ಮನೆಗಳು. ಹೌಸಿಂಗ್ ಬೋರ್ಡ್ನವರು ಕಟ್ಟಿರುವ ಮನೆಗಳು ಅಪೂರ್ಣವಾಗಿ ಮಳೆಯ ಕಾರಣದಿಂದ ಅವುಗಳು ಬಿದ್ದು ಹೋಗುತ್ತಿವೆ. ಹೌಸಿಂಗ್ ಬೋರ್ಡ್ನವರು ಕೇಳಿದರೆ ಜವಾಬ್ದಾರರಲ್ಲವೆಂದು ಹೇಳುತ್ತಾರೆ. ಆ ಗುತ್ತಿಗೆದಾರನು ನಾನು ಕಟ್ಟುವುದಿಲ್ಲವೆಂದು ಹೇಳುತ್ತಾನೆ, ಇಲಾಖೆಯವರು ಡಿ.ಸಿ.ಯವರಿಗೆ ಜವಾಬ್ದಾರಿಯನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಅವರನ್ನು ಕೇಳಿದರೆ ಅವರು ನನಗೆ ಸಂಬಂಧವಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ಕ್ರಮವನ್ನು ತೆಗೆದುಕೊಂಡಿದ್ದೀರಿ? ಸಾರ್ವಜನಿಕರ ಹಣ, ಸರ್ಕಾರದ ಹಣ ಇವತ್ತು ಪೋಲಾಗಿ ಹೋಗುತ್ತಿದೆ, ಕೆಲಸವೂ ಆಗುತ್ತಿಲ್ಲ, ಅದು ಹೌಸಿಂಗ್ ಬೋರ್ಡ್ ಇರಲಿ, ಜಿಲ್ಲಾಧಿಕಾರಿಯೇ ಇರಲಿ, ಯಾರೇ ಇರಲಿ, ಇದು ಬಡವರ ಕಾರ್ಯಕ್ರಮ, ಅಪೂರ್ಣವಾದಂಥ ಮನೆಗಳನ್ನು ಪೂರ್ಣಗೊಳಿಸಿ ಸಾರ್ವಜನಿಕರ ಹಣವನ್ನು ಸದುಪಯೋಗ ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತೇನೆ. ಇನ್ನು ನನ್ನ ಕ್ಷೇತ್ರದಲ್ಲಿ ಆಶ್ರಯ ಯೋಜನೆಯಲ್ಲಾದ ಮನೆಗಳ ಬಗ್ಗೆ ಹೇಳುವುದಾದರೆ, ಮೊನ್ನೆ ಗ್ರಾಮೀಣಾಭಿವೃದ್ಧಿ ಸಚಿವರು ಇದರ ಬಗ್ಗೆ ತಿದ್ದುಪಡಿಯನ್ನು ತಂದಿದ್ದೇನೆ. ಅದರಲ್ಲಿ ಅಧಿಕಾರವನ್ನು ಅಧಿಕಾರೇತರರಿಗೆ ಕೊಟ್ಟಿದ್ದೇನೆಂದು ಹೇಳಿದ್ದಾರೆ. ಆದರೆ ತಾವು ತಂದಿರುವ ಗ್ರಾಮ ಪಂಚಾಯಿತಿಯ ಅಥವಾ ತಾಲ್ಲೂಕು ಪಂಚಾಯಿತಿಯ ಕಾನೂನಿನಲ್ಲಿ ಏನಾಗಿದೆ ಎಂದರೆ, ಆ ರೀತಿ ನಿಯಂತ್ರಣ ಇಲ್ಲವೇ ಇಲ್ಲ. ಇವತ್ತು ತಾಲ್ಲೂಕು ಪಂಚಾಯಿತಿಯಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿ ಅವರು ಸರ್ವಾಧಿಕಾರಿಯಾಗಿದ್ದಾರೆ. ಅಲ್ಲಿ ಯಾವುದೇ ಯೋಜನೆಯ ಹಣವಿರಲಿ, ಚೆಕ್‌ಗೆ ಸಹಿಮಾಡತಕ್ಕಂಥ ಬ್ಯಾಂಕ್ನ ವ್ಯವಹಾರವನ್ನು ಮಾಡತಕ್ಕ ಎಲ್ಲಾ ಅಧಿಕಾರವನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಗೆ ಕೊಟ್ಟಿದ್ದಾರೆ. ಅಲ್ಲಿಗೆ ಎಷ್ಟು,

ಬಂತು ಎಷ್ಟು ಹೋಯಿತು ಎಂಬುದು ನಮಗೆ ಗೊತ್ತಾಗುವುದಿಲ್ಲ. ತಾಲ್ಲೂಕು ಪಂಚಾಯಿತಿಯಲ್ಲಿರತಕ್ಕ ಸಮಿತಿಯು ಕೇವಲ ಸಲಹಾ ಸಮಿತಿಯ ರೂಪದಲ್ಲಿದೆ. ಈಗ ತಂದಿರತಕ್ಕ ಕಾನೂನು ಸಹ ಅದೇ ರೀತಿಯಲ್ಲಿದೆ. ಅಲ್ಲಿರತಕ್ಕ ಅಧಿಕಾರಿ ಸರ್ವಾಧಿಕಾರಿ. ಆ ದೃಷ್ಟಿಯಿಂದ ನಮ್ಮ ತಾಲ್ಲೂಕಿಗೆ ಕೊಟ್ಟಿರುವಂಥ 10 ಲಕ್ಷ ರೂಪಾಯಿಗಳಲ್ಲಿ ಯಾವ ಒಂದು ಮನೆಯನ್ನು ಸಹ ಪ್ರಾರಂಭ ಮಾಡಿಲ್ಲ. ಸರ್ಕಾರದ ಹಣವನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿ ತನಗೆ ಬೇಕು ಬೇಕಾದಾಗ ತೆಗೆದುಕೊಂಡು ಖರ್ಚುಮಾಡುತ್ತಿದ್ದಾನೆ. ಹೀಗೆ ಆ ಹತ್ತು ಲಕ್ಷ ರೂಪಾಯಿಯನ್ನೂ ಸಂಪೂರ್ಣವಾಗಿ ತೆಗೆದುಕೊಂಡಿದ್ದಾನೆ. ಒಂದು ವೇಳೆ ಮನೆ ಪ್ರಾರಂಭ ಮಾಡಿದ್ದರೆ ಯಾವ ಹಂತದಲ್ಲಿದೆ, ಎಷ್ಟು ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದು ತಮ್ಮಲ್ಲಿ ಕೇಳಬಹುದು. ಮನೆಯನ್ನು ಪ್ರಾರಂಭ ಮಾಡಿ ಮಾಡಿ ಎಂದು ನಾವು ಹೇಳುತ್ತಿದ್ದೇವೆ. ಮನೆಯನ್ನು ಕಟ್ಟಿಸುತ್ತೇವೆಂದು ಹೇಳತಕ್ಕ ಆ ಅಧಿಕಾರಿ 10 ಲಕ್ಷ ರೂಪಾಯಿಗಳನ್ನು ಸಂಪೂರ್ಣವಾಗಿ ಸ್ವಂತಕ್ಕೆ ಬಳಸಿಕೊಂಡಿದ್ದರೆ ಆ ಅಧಿಕಾರಿಯ ವಿರುದ್ಧ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ನಾನು ಅದರ ಬಗ್ಗೆ ಜಿಲ್ಲಾ ಅಭಿವೃದ್ಧಿ ಸಭೆಯಲ್ಲಿ ಒತ್ತಾಯ ಮಾಡಿದ ಮೇಲೆ ಕಾಟಾಚಾರಕ್ಕೆ ಒಂದು ಕ್ರಿಮಿನಲ್ ಕೇಸನ್ನು ಹಾಕಿದ್ದೇವೆಂದು ಹೇಳುತ್ತಿದ್ದಾರೆ. ಆ ಹಣದ ವಸೂಲಿಯ ಬಗ್ಗೆ ಏನು ಮಾಡಿದ್ದೀರಿ? ಆ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟಿದ್ದೀರಾ? ಅದರ ಬಗ್ಗೆ ಇಲಾಖಾ ವಿಚಾರಣೆಯೇನಾದರು ನಡೆಸಿದ್ದೀರ? ಇದನ್ನು ನೋಡಿದರೆ ಮಂತ್ರಿಗಳು ಇದರ ಬಗ್ಗೆ ಕಾರ್ಯಕ್ರಮವನ್ನೇನು ಹಾಕಿಕೊಂಡಿಲ್ಲವೆಂದು ಕಾಣುತ್ತದೆ. ಅವರಿಗೆ ಅಂಥ ಅಧಿಕಾರಿಗಳು ಮತ್ತೆ ಅಲ್ಲೇ ಇಡಬೇಕೆಂಬಕಾತುರ. ನಾನು ಗ್ರಾಮೀಣಾಭಿವೃದ್ಧಿ ಸಚಿವರನ್ನು ಭೇಟಿ ಮಾಡಿ ಇಂಥ ಅಧಿಕಾರಿಗಳಿಂದ ಗ್ರಾಮೀಣಾಭಿವೃದ್ಧಿ ಕೆಲಸವು ಹಾಳಾಗಿ ಹೋಗುತ್ತದೆಂದು ಹೇಳಿದರೆ, ನಮ್ಮ ಆಶ್ರಯ ಸಚಿವರು ಅಂಥ ಅಧಿಕಾರಿಯನ್ನು ಅಲ್ಲೇ ಇರಬೇಕೆಂದು ಹೇಳಿ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಮಿನಿಟ್ಸನ್ನು ಕೊಡುತ್ತಾರೆ. ಅಂಥ ಅಧಿಕಾರಿಯನ್ನು ಬೇಕಾಗಿದ್ದರೆ ಅವರ ಕ್ಷೇತ್ರಕ್ಕೆ ಕೊಟ್ಟುಬಿಡಿ, ನಮ್ಮ ಕ್ಷೇತ್ರದಲ್ಲಿ ಅಂಥ ಅಧಿಕಾರಿ ಬೇಡವೆಂದು ನಾನು ಹೇಳಿದೆ. ಈ ರೀತಿ ಸರ್ಕಾರವನ್ನು ನಡೆಸತಕ್ಕ ಜನರು, ಯಾರು ರಕ್ಷಣೆ ಮಾಡಬೇಕೋ ಅವರೇ ಈ ರೀತಿ ನಡೆದುಕೊಂಡರೆ ನಡೆಸತಕ್ಕ ಜನರು, ಯಾರು ರಕ್ಷಣೆ ಮಾಡಬೇಕೋ ಅವರೇ ಈ ರೀತಿ ನಡೆದುಕೊಂಡರೆ ಜನರ ಪಾಡು ಏನು? ಹೀಗಾದರೆ ಈ ಆಶ್ರಯ ಯೋಜನೆಯಲ್ಲಿ ಒಂದು ಮನೆಯೂ ಮುಗಿಯಲಿಕ್ಕೆ ಸಾಧ್ಯವಿಲ್ಲ. ಇವತ್ತು plinth ಹಾಕುವುದಕ್ಕೆ ಕೇವಲ 10 ಲಕ್ಷ ಕೊಟ್ಟರೆ 500 ಮನೆಗಳಿಗೆ Plinth ಹಾಕಲು ಸಾಧ್ಯವಿಲ್ಲ. ಅದರ ಬಗ್ಗೆ ಲೆಕ್ಕಪತ್ರಗಳಾವುವೂ ಇಲ್ಲ. ಈಗ ಪ್ರತಿಮನೆಗೆ 15 ಸಾವಿರವಲ್ಲ, 13 ಸಾವಿರ ಕೊಡುತ್ತೇವೆ, ಎರಡು ಸಾವಿರ ಕಡಿಮೆ ಕೊಡುತ್ತೇವೆ, ಆ ಕೆಲಸವನ್ನು ನೀವೇ ಮಾಡಿಕೊಳ್ಳಿ ಎಂದು ಫಲಾನುಭವಿಗಳಿಗೆ ಹೇಳುತ್ತಿದ್ದಾರೆ. ಇದು ಸರ್ಕಾರದ ನೀತಿಯೇ? ಬಡವರ ಪರವಾಗಿ ಸರ್ಕಾರಕ್ಕಿರುವ ಕಳಕಳಿ ಇದೆಯೇ? ನಾನು ತಮ್ಮ ಮೂಲಕ ಈ ಸರ್ಕಾರಕ್ಕೆ ಏನು ಹೇಳುತ್ತಿದ್ದೇನೆಂದರೆ, ಆ ಅಧಿಕಾರಿಯಿಂದ 10 ಲಕ್ಷ ರೂಪಾಯಿಯನ್ನು ವಸೂಲಿ ಮಾಡಬೇಕು. ಬಡವರ ಕಾರ್ಯಕ್ರಮ ನಿಲ್ಲಬಾರದು. ವಿಶೇಷವಾಗಿ ಮತ್ತೆ 10 ರೂಪಾಯಿಗಳನ್ನು ಕೊಟ್ಟು, ಪ್ರತಿಯೊಬ್ಬರಿಗೆ 15 ಸಾವಿರ ರೂಪಾಯಿಗಳನ್ನು ಕೊಟ್ಟು ಆ ಮನೆಗಳ ಕೆಲಸವನ್ನು ಪ್ರಾರಂಭ ಮಾಡಿ ಕೂಡಲೇ ಪೂರ್ಣಗೊಳಿಸಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಇನ್ನು 1986ನೇ ಇಸವಿಯಿಂದ 1991ನೇ ಇಸವಿಯವರೆಗೆ ಕಟ್ಟಿರತಕ್ಕ ಹುಡ್ಕೋ ಯೋಜನೆಯ ಜನತಾ ಮನೆಗಳ ಬಗ್ಗೆ ಹೇಳುವುದಾದರೆ, ಆಗ 4-5 ಸಾವಿರಕ್ಕೆ

ಮನೆಗಳನ್ನು ಕಟ್ಟಿಸಿಕೊಡುತ್ತಿದ್ದರು. ಈಗ ಈ ಯೋಜನೆ ಕೆಳಗಡೆ ಸಾವಿರಾರು ರೂಪಾಯಿಗಳನ್ನು ಕೊಟ್ಟಿದ್ದರೂ ಸಹ ಮನೆಗಳು ಪೂರ್ಣವಾಗಿಲ್ಲ. ಕೆಲವರು ಸಾಲವನ್ನು ಮಾಡಿ ಮನೆಯನ್ನು ಕಟ್ಟಿಕೊಂಡಿದ್ದರೂ ಸಹ ಸರ್ಕಾರ ಹಣವನ್ನು ಕೊಟ್ಟಿಲ್ಲ. ನನ್ನ ತಾಲ್ಲೂಕಿನಲ್ಲಿ 1986ರಿಂದ 91ರವರೆಗಿನ ಈ ಜನತಾ ಮನೆಗಳಿಗೆ ಹುಡ್ಕೋ ಯೋಜನೆಯಲ್ಲಿ ಕಟ್ಟಿದಂಥ ಮನೆಗಳಿಗೆ 14 ಲಕ್ಷ ರೂಪಾಯಿಗಳನ್ನು ಕೊಡಬೇಕು. ಇದರ ಬಗ್ಗೆ ಸರ್ಕಾರದ ಕಾರ್ಯಕ್ರಮವೇನು? ತಾವು ಬಡವರ ಬಗ್ಗೆ ಒಳ್ಳೆಯ ಮಾತನ್ನು ಹೇಳುತ್ತಿದ್ದೀರಿ, ಅವರುಗಳು ಬಡವರಲ್ಲವೆ? ತಾವೇ ಬಡವರು, ಹರಿಜನರು, ಹಿಂದುಳಿದವರು ಕೂಲಿಕಾರರೆಂದು ಆಯ್ಕೆ ಮಾಡಿದ್ದೀರಿ. ಆದರೆ ಅವರುಗಳಿಗೆ ಇವತ್ತಿನವರೆಗೆ ಒಂದು ಪೈಸೆ ಹಣವನ್ನು ಕೊಟ್ಟಿಲ್ಲ. ನನ್ನ ಕ್ಷೇತ್ರಕ್ಕೆ 14 ಲಕ್ಷ ರೂಪಾಯಿಗಳನ್ನು ಕೊಡಬೇಕು. ಇಡೀ ರಾಜ್ಯದಲ್ಲಿ 44 ಕೋಟಿ ಹಣವನ್ನು ಈ ಹುಡ್ಕೋ ಯೋಜನೆಯಲ್ಲಿ ಅಪೂರ್ಣವಾಗಿರತಕ್ಕ ಮನೆಗಳಿಗೆ ಕೊಡಬೇಕು. ಇದಕ್ಕೆಲ್ಲಿದೆ ಹಣ? ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಇದಕ್ಕೆ ಆಯವ್ಯಯದಲ್ಲಿ ಹಣವನ್ನು ಒದಗಿಸಿದ್ದೀರಾ? ಯಾವುದೂ ಇಲ್ಲ. ಬಡವರಪರವಾಗಿ ಹೇಳುವ ತಮ್ಮ ಮಾತು ನಿಮ್ಮ ಮನಸ್ಸಿಗೆ ಹೇಗೆ ಹಿಡಿಸುತ್ತದೋ ನನಗೆ ತಿಳಿಯುತ್ತಿಲ್ಲ. ತಾವು ಹಿಂದುಳಿದವರ, ಬಡವರ, ರೈತರ ವಿರೋಧಿ ಕಾರ್ಯಕ್ರಮವನ್ನು ಮಾಡುತ್ತಿದ್ದೀರಿ. 1986 ರಿಂದ ಜನರು ತಾಲ್ಲೂಕು ಕಛೇರಿಗೆ, ಶಾಸಕರ ಹತ್ತಿರ ಸರ್ಕಾರದ ಹತ್ತಿರ, ನಮ್ಮ ಮನೆಯ ಹತ್ತಿರ ಬಂದು 5-6 ವರ್ಷಗಳಿಂದ ಬರೇ 500 ರೂಪಾಯಿ ಕೊಟ್ಟಿದ್ದೀರಿ, 1000 ರೂಪಾಯಿ ಕೊಟ್ಟಿದ್ದೀರಿ, ನಮಗೆ ಪೂರ್ಣ ಹಣವನ್ನು ಕೊಡಿ ಎಂದು ಓಡಾಡಿ ಕೇಳಿದರೆ ಅದನ್ನು ಕೇಳುವವರೇ ಗತಿ ಇಲ್ಲ. ಅವರು ಪ್ರತಿದಿನ ಬಂದು ಕಣ್ಣೀರನ್ನು ಹಾಕುತ್ತಾರೆ. ಆ ಮನೆಗಳನ್ನು ಪೂರ್ಣ ಮಾಡಲು ಯಾವ ವ್ಯವಸ್ಥೆಯನ್ನು ಮಾಡಿದ್ದೀರಿ? ತಮಗೆ 44 ಕೋಟಿಯನ್ನು ಕೊಡಲು ಸಾಧ್ಯವಾಗದಿದ್ದರೆ ಕೊನೆಯ ಪಕ್ಷ ಅದನ್ನು ಆಶ್ರಯ ಯೋಜನೆಯಡಿಯಲ್ಲಿ ತೆಗೆದುಕೊಂಡು ಪೂರ್ಣ ಮಾಡತಕ್ಕ ಯೋಜನೆಯನ್ನು ಕೂಡ ತಾವು ಮಾಡಲಿಲ್ಲ. 44 ಕೋಟಿ ಹಣವನ್ನು ಕೊಡಲು ಸಾಧ್ಯವಿಲ್ಲದಿದ್ದರೆ ಅದನ್ನು ಆಶ್ರಯ ಯೋಜನೆಯಲ್ಲಿ ತೆಗೆದುಕೊಂಡು ಆ ಮನೆಗಳನ್ನು ಪೂರ್ಣ ಮಾಡಿ ಅವರಿಗೆ ನೆರಳನ್ನು ಮಾಡಿಕೊಡತಕ್ಕ ಚಿಂತನೆ ಸರ್ಕಾರಕ್ಕಿಲ್ಲವೆಂದರೆ ನಾವೇನು ಹೇಳಬೇಕು. ಆದ್ದರಿಂದ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಅವರಿಗೆ ಹಣವನ್ನು ಬಿಡುಗಡೆ ಮಾಡಿ ಇಲ್ಲದಿದ್ದರೆ ಅವೆಲ್ಲವನ್ನೂ ಆಶ್ರಯ ಯೋಜನೆಯಲ್ಲಿ ತೆಗೆದುಕೊಂಡು ಅವರಿಗೆ ಏನಾದರೂ ಒಂದು ನ್ಯಾಯವನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಈಗಾಗಲೇ 5-15ರ ಸಮಯವಾಗಿದೆ. ನಾಳೆ ಮಾತನಾಡಲು ಅವಕಾಶ ಕೊಟ್ಟಿದ್ದರೆ ಚೆನ್ನಾಗಿತ್ತು.ಆದರೂ ಸಹ ಆದಷ್ಟು ಬೇಗ ನನ್ನ ಮಾತುಗಳನ್ನು ಮುಗಿಸಲು ಪ್ರಯತ್ನಿಸುತ್ತೇನೆ.

ಇನ್ನು ಪ್ರಾಥಮಿಕ ಶಾಲೆಯ ತರಗತಿಯ ಕೊಠಡಿಗಳನ್ನು ಕಟ್ಟುವ ಬಗ್ಗೆ ಮುಖ್ಯಮಂತ್ರಿಗಳು ಬಹಳವಾಗಿ ಹೇಳುತ್ತಿದ್ದಾರೆ. ಇಲ್ಲಿಯವರೆಗೆ ಪ್ರಾಥಮಿಕ ಶಾಲೆಯ ಕೊಠಡಿಗಳನ್ನು ಸರ್ಕಾರ ಪೂರ್ಣವಾಗಿ ಹಣವನ್ನು ಕೊಟ್ಟು ಕಟ್ಟಿಸುತ್ತಾ ಇತ್ತು. ಈಗ ಬಹಳಷ್ಟು ಕೊಠಡಿಗಳನ್ನು ಕಟ್ಟಿಸಿ ದೊಡ್ಡ ಬಿರುದನ್ನು ಪಡೆದುಕೊಳ್ಳಬೇಕೆಂದು ಸರ್ಕಾರ ಪ್ರಯತ್ನ ಮಾಡುತ್ತಿದೆ. ಅಲ್ಲಿ ನೂರಕ್ಕೆ ಐವತ್ತರಷ್ಟು ಹಣವನ್ನು ಮಾತ್ರ ಸರ್ಕಾರ ಕೊಡತಕ್ಕ ಯೋಜನೆ ಇದೆ ಇನ್ನು ಐವತ್ತರಷ್ಟು ಹಣವನ್ನು ಮಂಡಲ ಪಂಚಾಯಿತಿಗಳಿಗೆ, ಹಳ್ಳಿಗಳಲ್ಲಿ ರಸ್ತೆ ಮಾಡಿಸಲು ಗಟಾರ ಕಟ್ಟಿಸಲು ಮುಂತಾದ ಹಳ್ಳಿಯ ಅವಶ್ಯಕತೆಗಳನ್ನು ಪೂರೈಕೆ ಮಾಡಲು ಕೊಟ್ಟಂಥ ಹಣವನ್ನು ಶಾಲಾ ಕೊಠಡಿಗಳನ್ನು ಕಟ್ಟಲು ಹಾಕಿ, ಗ್ರಾಮೀಣ ಪ್ರದೇಶದ ಅವಶ್ಯಕತೆಗಾಗಿ ಇರತಕ್ಕ ರಸ್ತೆ, ಗಟಾರ ಮತ್ತೊಂದು ಮಾಡಲು ಹಣವೇನೇನೂ ಖರ್ಚು ಮಾಡದೆ ಅಭಿವೃದ್ಧಿ ಕೆಲಸಗಳೆಲ್ಲಾ ಸಂಪೂರ್ಣವಾಗಿ ಸ್ಥಗಿತವಾಗಿದೆ.

ಇದರ ಹಣವನ್ನು ಶಾಲಾ ಕೊಠಡಿಗೆ ಸರ್ಕಾರ ಕೊಡುತ್ತಿದೆ. ಸರ್ಕಾರ ತನ್ನ ಪಾಲಿನ ಹಣವನ್ನು ಕೊಡುವುದರ ಬದಲು ಗ್ರಾಮೀಣಾಭಿವೃದ್ಧಿಯ ಕೆಲಸದ ಹಣವನ್ನು ಅದಕ್ಕೆ ಉಪಯೋಗ ಮಾಡುತ್ತಿದೆ. ಇದರಿಂದ ಹಳ್ಳಿಗಳಲ್ಲಿರುವ ಪಂಚಾಯಿತಿಯ ಕೆಲಸ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಗ್ರಾಮೀಣಾಭಿವೃದ್ಧಿಯನ್ನು ಮಾಡುವ ಮಾತು ಕನ್ನಡಿಯೊಳಗಿನ ಗಂಟಿನಂತಾಗಿದೆ. ಸರ್ಕಾರ ಈಗಾಲಾದರೂ ಪಂಚಾಯಿತಿಗಳಿಗೆ ಕೊಡತಕ್ಕ ಹಣವನ್ನು ಪೂರ್ಣವಾಗಿ ಗ್ರಾಮೀಣಾಭಿವೃದ್ಧಿಗೆ ಉಪಯೋಗಿಸಿ, ಶಾಲಾ ಕೊಠಡಿಗೆ ಮೊದಲು ಸರ್ಕಾರದವರು ಹೇಗೆ ಪೂರ್ಣವಾದ ಹಣವನ್ನು ಕೊಡುತ್ತಿದ್ದರೋ ಆ ರೀತಿ ಹಣವನ್ನು ಕೊಟ್ಟು ಕೆಲಸವನ್ನು ಮಾಡುವ ಯೋಜನೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಕ್ಷೀರ ಯೋಜನೆಯಂತಹ ಹೊಸ ಹೊಸ ಯೋಜನೆಗಳ ಬಗ್ಗೆ ಯೋಚನೆ ಮಾಡುತ್ತಿದ್ದೀರಿ. ಏಕೆ ಈ ಯೋಚನೆಯನ್ನು ಜಾರಿ ಮಾಡುತ್ತಿದ್ದೀರಿ? ಇದನ್ನು ಸುಮ್ಮನೆ ಬಿಟ್ಟುಬಿಡಿ. ಶಾಲಾ ಮಕ್ಕಳಿಗೆ ಹಾಲು ಕೊಡುತ್ತಿರುವುದು ಒಳ್ಳೆಯ ವಿಚಾರವಾಗಿದೆ. ಒಂದರಿಂದ ನಾಲ್ಕು ತರಗತಿವರೆಗಿ ಮಕ್ಕಳಿಗೆ ಏನು ಹಾಲು ಕೊಡುತ್ತಿದ್ದೀರಿ, ಇದನ್ನು ಏಳನೇ ತರಗತಿವರೆಗಿನ ಓದುವ ಮಕ್ಕಳಿಗೆ ಕೊಟ್ಟರೂ ಸಹ ಯಾರೂ ಬೇಡ ಎನ್ನುವುದಿಲ್ಲ. ಆದರೆ, ಈ ಯೋಜನೆಯನ್ನೂ ಕಾರ್ಯರೂಪಕ್ಕೆ ತರುವುದಕ್ಕೆ ನಿಮ್ಮ ಸರ್ಕಾರಕ್ಕೆ ಯೋಗ್ಯತೆ ಇದೆಯೇ? ಹಣಕಾಸಿನ ಪರಿಸ್ಥಿತಿ ಸುವ್ಯವಸ್ಥಿತವಾಗಿದೆಯೇ? ಕ್ಷೀರ ಯೋಜನೆ ಪ್ರಾರಂಭ ಮಾಡಿದಂದಿನಿಂದ ಹಾಲನ್ನು ಸರಬರಾಜು ಮಾಡಿದಂಥ ಸಹಕಾರ ಸಂಘಗಳಿಗೆ ಸರ್ಕಾರ ಇದುವರೆವವಿಗೂ ಒಂದು ಪೈಸೆಯನ್ನೂ ಕೊಟ್ಟಿಲ್ಲ. ಹಾಲು ಉತ್ಪಾದಕರಿಗೆ ಏನು ಕೊಡಬೇಕು ಮತ್ತು ಸಹಕಾರ ಸಂಘಗಳಿಗೆ ಏನು ಹಣ ಕೊಡಬೇಕು ಅದರ ಬಗ್ಗೆ ನಾವು ಸದನದಲ್ಲಿ ಚರ್ಚೆ ಮಾಡುತ್ತೇವೆ. ಇದಕ್ಕೆ ಸರ್ಕಾರ ಕೂಡ ಕಾರಣವಾಗಿದೆ. ಆದುದರಿಂದ, ನಿಮ್ಮ ಪಾಲಿನ ಹಣವನ್ನು ಹಾಲು ಉತ್ಪಾದಕರಿಗೆ ಮತ್ತು ಸಹಕಾರ ಸಂಘಗಳಿಗೆ ಕೊಡುವ ಬಗ್ಗೆ ಯೋಚನೆ ಮಾಡುತ್ತೀರಾ? ಬ್ಯಾಂಕಿನಿಂದ ಸಾಲ ಕೊಡಿಸುತ್ತೇವೆಂದು ಹೇಳುತ್ತಿದ್ದೀರಿ. ಮಕ್ಕಳಿಗೆ ಹಾಲನ್ನು ಪೂರೈಸುವುದಕ್ಕೋಸ್ಕರ ಹಾಲು ಉತ್ಪಾದಕರಿಂದ ಸಹಕಾರ ಸಂಘದವರು ಹಾಲನ್ನು ಏನು ತೆಗೆದುಕೊಂಡಿದ್ದಾರೆ ಅದಕ್ಕೆ ಹಣ ಕೊಡುವುದಕ್ಕೆ ಸರ್ಕಾರಕ್ಕೆ ಯೋಗತ್ಯ ಇಲ್ಲ, ಆದರೂ ಆ ಸಹಕಾರ ಸಂಘಗಳಿಗೆ ಮತ್ತು ರೈತರಿಗೆ ಸಾಲ ಕೊಡಿಸುತ್ತೇವೆನ್ನುವ ಮಾತನ್ನು ಹೇಳಿದ್ದೀರಿ. ನಿಮ್ಮ ಈ ಕೃತಿ, ನಡತೆ, ನೀತಿ ಎಲ್ಲವನ್ನೂ ಗಮನಿಸಿದರೆ ನೀವು ಒಂದು ಕ್ಷಣವೂ ಸರ್ಕಾರವನ್ನು ನಡೆಸುವುದಕ್ಕೆ ಮತ್ತು ಇಲ್ಲಿ ಕುಳಿತುಕೊಳ್ಳುವುದಕ್ಕೂ ಅರ್ಹತೆ, ಯೋಗ್ಯತೆ ಇಲ್ಲ ಮತ್ತು ನಿಮ್ಮ ಪಕ್ಷದ ಆಂತರಿಕ ಕಲಹದಿಂದ ಜನರ ಮುಂದೆ ಮುಖ ತೋರಿಸುವುದಕ್ಕೆ ಹೋಗದಂಥ ಪರಿಸ್ಥಿತಿಯನ್ನು ನೀವು ತಂದು ಕೊಂಡಿದ್ದೀರಿ. ಇದನ್ನು ರಾಜ್ಯಪಾಲರು ತಮ್ಮ ಭಾಷಣದ 43ನೇ ಪ್ಯಾರಾದಲ್ಲಿ ಕೈಮಗ್ಗ ಹಾಗೂ ಜವಳಿ ನೀತಿ ಕುರಿತು ಪ್ರಸ್ತಾಪಿಸಿದ್ದಾರೆ. ಈ ಜವಳಿ ನೀತಿ ಇದೆಯಲ್ಲಾ, ಇದೊಂದು ಒಳ್ಳೆಯ ಕಾರ್ಯಕ್ರಮವೆಂದು ಹೇಳಿದ್ದಾರೆ? ಈ ಜವಳಿ ನೀತಿ ವಿಚಾರದಲ್ಲಿ, ಈಗಾಗಲೇ ಹೊಸದಾಗಿ ಉದ್ಯೋಗ ಕೊಡುತ್ತಿರುವುದರಿಂದ ಬಡ ನೇಕಾರರ ಆರ್ಥಿಕ ಅಭಿವೃದ್ಧಿಯಾಗುತ್ತದೆಂಬ ಮಾತನ್ನು ಹೇಳಿದ್ದೀರಿ. ಆದರೆ, ರಾಜ್ಯದಲ್ಲಿ ಈಗಿರತಕ್ಕಂಥ ನೇಕಾರರ ಸ್ಥಿತಿ ಏನಾಗಿದೆ? ಇರತಕ್ಕಂಥ ನೇಕಾರರಿಗೆ ನೂಲನ್ನು ಒದಗಿಸುವಂಥ ಸ್ಥಿತಿಯಲ್ಲಿ ಸರ್ಕಾರ ಇಲ್ಲ. ನೂಲನ್ನು ಪೂರೈಸಬೇಕೆಂದು ಇವೊತ್ತು ನೇಕಾರರು ಧರಣಿ ಸತ್ಯಾಗ್ರಹ, ಉಪವಾಸ, ಮಾಡುತ್ತಿದ್ದಾರೆ. 'ನಾವು ದುಡಿಯುತ್ತೇವೆ, ಕೈಮಗ್ಗಗಳನ್ನು ಇಟ್ಟುಕೊಂಡು ಅರಿವೆ ತಯಾರಿಸುತ್ತೇವೆ, ನೂಲನ್ನಾದರೂ ಕೊಡಿ' ಎಂದು ನೇಕಾರರು ಕೇಳಿದರೆ ಇವೊತ್ತಿನವರೆವಿಗೂ ನೂಲನ್ನು ಪೂರೈಸಿಲ್ಲ. ಸುಮಾರು 15-20 ದಿವಸಗಳಿಂದ ತಮ್ಮ ಹೊಟ್ಟೆಗೆ ಅನ್ನವಿಲ್ಲದೆ ಬೀದಿಪಾಲಾಗಿದ್ದಾರೆ. ಮೊನ್ನೆ ಇದರ ಬಗ್ಗೆ ಪ್ರಸ್ತಾಪಿಸಿ, ಚರ್ಚಿಸಿ ಸರ್ಕಾರದ ಗಮನಕ್ಕೆ ತಂದರೆ, ನೂಲನ್ನು

ಕೊಡುವುದಕ್ಕೆ ಯೋಚನೆ ಮಾಡುತ್ತವೆ. ಎಂದು ಹೇಳಿದ್ದು ಇವೊತ್ತಿಗೂ ಕೊಟ್ಟಿಲ್ಲ. ನಿನ್ನೆ ತಾನೆ ನೇಕಾರರು 'ಸ್ವಾಮಿ, ನಮಗೆ ನೂಲು ಕೊಡಿಸಿ, ನಮ್ಮಲ್ಲಿ ದುಡಿಯುವುದಕ್ಕೆ ಶಕ್ತಿ ಇದೆ, ನಮ್ಮ ಹೊಟ್ಟೆಗೆ ಅನ್ನ ಬೀಳುವಷ್ಟರ ಮಟ್ಟಿಗೆ ಅನುಕೂಲ ಮಾಡಿಕೊಡಿ' ಎಂದು ಕೇಳುತ್ತಿದ್ದರು. ಕನಿಷ್ಠ ಪಕ್ಷ ದುಡಿಯುವಂಥ ಜನರಿಗೆ ನೂಲನ್ನು ಕೊಡಿಸುವ ಕೆಲಸ ಮಾಡಿ, ಇಲ್ಲವೇ ಅವರಿಗೆ ಕನಿಷ್ಠ ವೇತನವನ್ನಾದರೂ ಕೊಡಿ. ದುಡಿಯುವ ಜನ ಸತ್ತು ಹೋದರೆ ಈ ಸರ್ಕಾರವೂ ಇರುವುದಿಲ್ಲ, ರಾಜ್ಯವೂ ಇರುವುದಿಲ್ಲ. ಅಲ್ಲಿರುವವರು ಶ್ರಮ ಜೀವಿಗಳು, ರೈತರು, ನೇಕಾರರು,ಕೂಲಿಕಾರರು, ಅರೆ ಹೊಟ್ಟೆ ತಿಂದು ಉತ್ಪಾದನೆ ಮಾಡುವಂಥವರು. ಆದ್ದರಿಂದ, ನೀವೇ ತಂದಿರತಕ್ಕಂಥ ಕಾನೂನು ಪ್ರಕಾರ ಅದನ್ನು ಜಾರಿಗೆ ಕೊಟ್ಟು ನೂಲನ್ನು ಪೂರೈಸಬೇಕು ಇಲ್ಲವೆ ಅವರಿಗೆ ಕನಿಷ್ಠ ವೇತನ ಕೊಡುವುದರ ಮುಖಾಂತರ ಅವರ ಜೀವನೋಪಾಯಕ್ಕೆ ಮಾರ್ಗ ಕಲ್ಪಿಸಿಕೊಡಬೇಕೆಂದು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಸಹಕಾರ ಕ್ಷೇತ್ರದ ಬಗ್ಗೆ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದ 47ನೇ ಪ್ಯಾರಾದಲ್ಲಿ ಪ್ರಸ್ತಾಪಿಸಿದ್ದಾರೆ. ಹಿಂದುಳಿದವರಿಗೆ, ಹರಿಜನ-ಗಿರಿಜನರಿಗೆ ಬಹಳ ಉಪಕಾರ ಮಾಡುವುದಕ್ಕೋಸ್ಕರವಾಗಿ ಕಾಯಿದೆಗೆ ತಿದ್ದುಪಡಿ ತರುತ್ತಿದ್ದೇವೆಂದು ಹೇಳಿದ್ದೀರಿ. ಏನು ಮಾಡಿದಿರಿ? ಚಿಕ್ಕ ಚಿಕ್ಕ ಪ್ರಾಥಮಿಕ ಸೇವಾ ಸಹಕಾರ ಸಂಘಗಳನ್ನೆಲ್ಲಾ ಸಂಯುಕ್ತಗೊಳಿಸಿ ದೊಡ್ಡದು ಮಾಡುತ್ತೇವೆ. ಆರ್ಥಿಕಾಭಿವೃದ್ಧಿ ಮಾಡುತ್ತೇವೆಂದು ಹೇಳಿದಿರಿ. ಇವೊತ್ತು ಏನಾಗಿದೆ? ನಿಮ್ಮ ಪಕ್ಷದವರೇ ಆದಂಥ ರಾಜಕೀಯ ಪುಢಾರಿಗಳನ್ನು ಅಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರನ್ನಾಗಿ ನಾಮಿನೇಷನ್ ಮಾಡಿದ್ದೀರಿ. ಅಲ್ಪಸ್ವಲ್ಪ ಕೆಲಸ ಮಾಡುತ್ತಿದ್ದಂಥ ಸಹಕಾರ ಸಂಘಗಳು ಇವೊತ್ತು ಪೂರ್ಣ ದಿವಾಳಿಯಾಗಿದೆ. ರಾಜ್ಯದಲ್ಲಿ ಉತ್ತಮ ರೀತಿಯಲ್ಲಿದ್ದಂಥ ಸಹಕಾರಿ ಆಂದೋಲನಕ್ಕೇ ಇಂತಹ ವ್ಯಕ್ತಿಗಳನ್ನು ನಾಮ ನಿರ್ದೇಶನ ಮಾಡಿ ನೇಮಿಸುವ ಮುಖಾಂತರ ಸಹಕಾರ ಸಂಘಗಳನ್ನು ದಿವಾಳಿ ಅಂಚಿಗೆ ತಂದಿದ್ದೀರಿ. ಈಗಲಾದರೂ ಇದನ್ನು ಕೈಬಿಟ್ಟು ದೊಡ್ಡ ದೊಡ್ಡ ಸಹಕಾರ ಸಂಘಗಳನ್ನು ತೆಗೆದು ಮೊದಲಿದ್ದಂತೆ ಸಣ್ಣ ಸಣ್ಣ ಸಹಕಾರ ಸಂಘಗಳನ್ನು ಮಾಡಿ ಚುನಾವಣೆ ನಡೆಸಿ. ಇನ್ನು ಗ್ರಾಮ ಪಂಚಾಯಿತಿ ಸೇವಾ ಸಹಕಾರ ಸಂಘಗಳನ್ನು ಮಾಡಿ ಅದರ ಒಂದು ಹಿತಚಿಂತನೆ ಮಾಡುವುದಕ್ಕೆ ಜನ ಬದ್ಧರಿದ್ದಾರೆ. ಆದ ಕಾರಣ ಆ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ತಮ್ಮ ಸನ್ಮಾನ್ಯ ಸಹಕಾರ ಸಚಿವರಿಗೆ ಹೇಳಬಯಸುತ್ತೇನೆ.

ಇನ್ನು ಈ ಒಂದು ನಾಮಿನೇಷನ್ನಲ್ಲಿ ಇವರು ತಿದ್ದುಪಡಿಯನ್ನು ತಂದಿರುವುದು ಜನರ ಹಿತಕ್ಕಾಗಿಯಲ್ಲ. ಮೊನ್ನೆ ಹಾವೇರಿ ಕರ್ನಾಟಕ ಸಕ್ಕರೆ ಕಾರ್ಖಾನೆಯಲ್ಲಿ ನಮ್ಮ ಕಡೆಯಿಂದ ಸರ್ಕಾರದ ವಿರೋಧಿ ಗುಂಪಿನವರು 18 ಕ್ಷೇತ್ರಗಳಲ್ಲಿ 15 ಕ್ಷೇತ್ರಗಳನ್ನು ಗೆದ್ದಿದ್ದಾರೆ. ಇವರ ಕಡೆಯಿಂದ 3 ಜನ ಸದಸ್ಯರು ಸಹ ಆರಿಸಿ ಬಂದಿಲ್ಲ. ಅದರೂ ಸಹ 12 ಜನರನ್ನು ಸಕ್ಕರೆ ಸಚಿವರು ನಾಮ ನಿರ್ದೇಶನ ಮಾಡಿ ತಮ್ಮವರನ್ನೇ ಅಲ್ಲಿ ಅಧ್ಯಕ್ಷರನ್ನಾಗಿ ಮಾಡುವಂತಹ ಹುನ್ನಾರ ನಡೆಸಿದ್ದಾರೆ. ಕುತಂತ್ರ ನಡೆಸಿದ್ದಾರೆ, ಹೀಗಾದರೆ ಸಹಕಾರ ಸಂಘಗಳು ಅವರ ಕೈಯಲ್ಲಿ ಉಳಿಯುತ್ತವೆಯೇ? ಈ ರಾಜ್ಯದಲ್ಲಿ ಇವರಿಂದ ಸಹಕಾರಿ ಕ್ಷೇತ್ರಗಳ ಏಳಿಗೆ ಸಾಧ್ಯವೇ? ಈ ಬಗ್ಗೆ ಅವರು ಏನನ್ನೂ ಕೇಳುವುದಿಲ್ಲ, ಏಕೆಂದರೆ ನನಗೆ ಗೊತ್ತು, ಅವರು ಮೌನವಾಗಿರುತ್ತಾರೆ. ಏಕೆಂದರೆ ತಪ್ಪು ಮಾಡಿದ್ದನ್ನು ಮೌನವಾಗಿ ಮನಸ್ಸಿನಲ್ಲಿ ಒಪ್ಪಿಕೊಳ್ಳುತ್ತಿರುತ್ತಾರೆ. ಚರ್ಚೆ ಮಾಡಿದರೆ ಇನ್ನಷ್ಟು ಸಮಸ್ಯೆಗಳು, ಇನ್ನಷ್ಟು ವಿಚಾರಗಳು ಹೊರಗಡೆ ಬರುತ್ತವೆಂಬ ಅನುಮಾನದಿಂದ ಅವರು ಹಾಗೆ ಕುಳಿತಿದ್ದಾರೆ. ಸಹಕಾರಿ ಸಚಿವರು ಮತ್ತು ಅಲ್ಲಿರುವ ಸಕ್ಕರೆ ಸಚಿವರು ನಮ್ಮ ಜಿಲ್ಲೆಯವರು. ಈಗ ನಾಮಿನೇಷನ್ ತಂದಿರುವುದನ್ನು ದಯಮಾಡಿ ಕೈಬಿಡುತ್ತೀರಾ ಮೊದಲು ಇದ್ದಂತಹ ಮಂಡಲ್ ಪಂಚಾಯತ್, ಜಿಲ್ಲಾ ಪಂಚಾಯತ್ ಕಾನೂನಿನಲ್ಲಿ ನಾಮಿನೇಷನ್ಗೆ ಅವಕಾಶ ಇತ್ತು. ಆದರೆ ಮಾನ್ಯ ಘೋರ್ಪಡೆಯವರು ಈಗ ಚುನಾಯಿತ ಸದಸ್ಯರೇ ಆ ಕೆಲಸವನ್ನು ನಿರ್ವಹಿಸಲಿ ಎಂದು ಈ ನಾಮಿನೇಷನ್ ಅನು ತೆಗೆದುಹಾಕಿದ್ದಾರೆ. ಮಾನ್ಯ ಘೋರ್ಪಡೆಯವರು ಗ್ರಾಮ ಪಂಚಾಯತ್,

ತಾಲ್ಲೂಕ್ ಪಂಚಾಯತ್, ಮತ್ತು ಜಿಲ್ಲಾ ಪಂಚಾಯತ್‌ನ ನಾಮಕರಣವನ್ನು ರದ್ದು ಪಡಿಸಿ ಯಾರು ಚುನಾವಣೆಯಲ್ಲಿ ಆಯ್ಕೆಯಾಗುತ್ತಾರೆ ಅವರು ಆಡಳಿತ ಮಾಡಲಿ ಎನ್ನತಕ್ಕಂತ ವಿಚಾರವನ್ನು ಹೇಳಿರುವಂತೆ ಸಹಕಾರಿ ಕ್ಷೇತ್ರದಲ್ಲಿ, ಸಂಘಸಂಸ್ಥೆಗಳಲ್ಲಿ ನಾಮಕರಣ ಮಾಡುವುದನ್ನು ತೆಗೆದುಹಾಕುವ ಬಗ್ಗೆ ಸಹಕಾರಿ ಸಚಿವರು ಏನಾದರೂ ವಿಚಾರ ಮಾಡುತ್ತಾರೆಯೇ? 53ನೇ ಕಲಂನಲ್ಲಿ ಈಗ ಮೂರನೆ ಒಂದು ಎಂದು ಇದೆಯಲ್ಲಾ, ಅದನ್ನು ತಿದ್ದುಪಡಿ ಮಾಡಿ 12 ಜನರನ್ನು ಮಾಡಿ, ಈಗ ಏನು 3 ಜನರು ಆರಿಸಿ ಬಂದಿದ್ದಾರೆ. ಅದನ್ನು 12ಜನ ಎಂದು ಮಾಡಿಕೊಂಡು ಬಹುಮತದಿಂದ ಛೇರ್‌ಮನ್ ಆಗಿ ಅದು ನಿಮ್ಮ ಆಡಳಿತದಲ್ಲಿ ದಿವಾಳಿಯ ಅಂಚಿಗೆ ಬಂದಿದೆ. ಕಬ್ಬು ಬೆಳೆಯುವಂತಹ ರೈತನನ್ನು ಇವತ್ತು ಹಾಳು ಮಾಡುವಂತಹ ಸ್ಥಿತಿಗೆ ತರುತ್ತಿದ್ದೀರಿ. ಆದುದರಿಂದ ದಯಮಾಡಿ ಮಾನ್ಯ ಹಿರಿಯ ಸಚಿವರಾದಂತಹ ಖರ್ಗೆಯವರು ಏನೇ ಒತ್ತಡ ಇದ್ದರೂ ಈ ನಾಮಕರಣ ಮಾಡುವುದನ್ನು ಬಿಡಬೇಕೆಂದು ಕೇಳುತ್ತೇನೆ. ಕೊನೆಯದಾಗಿ ನಾನು ಪದೇ ಪದೇ ಈ ವಿಚಾರವನ್ನು ಹೇಳಿದರೂ ಸಹಿತ ಸರ್ಕಾರ ಎಷ್ಟರ ಮಟ್ಟಿಗೆ ಈ ಕಡೆ ಗಮನಹರಿಸುತ್ತದೆ. ಎನ್ನುವುದರ ಬಗ್ಗೆ ನನಗೆ ಒಂದು ಸಂಶಯ ಬರುತ್ತಿದೆ. ಈ ತುಂಗಾ ಮೇಲ್ದಂಡೆ ಯೋಜನೆಯ ಬಗ್ಗೆ ಹೇಳುವುದಾದರೆ ಶಿವಮೊಗ್ಗ, ಹೊನ್ನಾಳಿ, ಧಾರವಾಡ ಹಿರೇಕೆರೂರು, ರಾಣೆಬೆನ್ನೂರು, ಹಾವೇರಿ ಮತ್ತು ಹಾನಗಲ್ಲು, ಈ ತಾಲ್ಲೂಕುಗಳಿಗೆ ಸತತವಾಗಿ ಬರಗಾಲ ಇರುವುದರಿಂದ ಈ ತುಂಗಾ ಮೇಲ್ದಂಡೆ ನೀರಾವರಿ ಯೋಜನೆಯಿಂದ ಸುಮಾರು 2 ಲಕ್ಷ 34 ಸಾವಿರ ಎಕರೆಗೆ ನೀರಾವರಿ ಮಾಡಬಹುದಾಗಿದೆ. ಇದು ಹನಿ ನೀರಾವರಿ ಯೋಜನೆ. ಈ ಯೋಜನೆಯ ಬಗ್ಗೆ ಅಲ್ಲಿ ತಜ್ಞರು ವರದಿಯನ್ನು ಕೊಟ್ಟಿದ್ದಾರೆ. ಅಪ್ಪರ್ ತುಂಗ ಯೋಜನೆಯು ಅತ್ಯಲ್ಪ ಖರ್ಚಿನಿಂದ ಅತಿ ಹೆಚ್ಚು ಹನಿ ನೀರಾವರಿ ಯೋಜನೆಯನ್ನು ಮಾಡಬಹುದಾದಂತಹ ಮತ್ತು ಇಡೀ ಭಾರತದಲ್ಲಿ ಇದು ಒಂದು ಮಹತ್ವದ ಯೋಜನೆಯಾಗುವುದೆಂದು ವರದಿ ಕೊಟ್ಟಿದ್ದಾರೆ. ಇಂತಹ ಯೋಜನೆಯನ್ನು ಕೇಂದ್ರಸರ್ಕಾರದ ಮಂಜೂರಾತಿಗಾಗಿ 1990ರಲ್ಲಿ ಕಳುಹಿಸಿದ ಮೇಲೆ ಅಲ್ಲಿ ಅರಣ್ಯ ಇಲಾಖೆಯವರು, ಕೃಷಿಇಲಾಖೆಯವರು, ನೀರಾವರಿ ಇಲಾಖೆಯವರು ಕೇಳಿರುವಂತಹ ವಿವರಗಳನ್ನು ಇವರು ಕೇಂದ್ರಕ್ಕೆ ಕಳುಹಿಸಿಕೊಟ್ಟಿಲ್ಲ. ಇದರ ಬಗ್ಗೆ ಮೊನ್ನೆ ಸರ್ಕಾರದ ಗಮನಕ್ಕೆ ತಂದಮೇಲೆ 27-12-93ರಂದು ಮುಖ್ಯಕಾರ್ಯದರ್ಶಿಗಳು ಎಲ್ಲಾ ಇಲಾಖೆಯ ಕಾರ್ಯದರ್ಶಿಗಳನ್ನು ಕರೆದು ಸಭೆ ನಡೆಸಿ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಅದು ಇನ್ನೂ ಕಾರ್ಯಾಚರಣೆಯಾಗಿಲ್ಲ. ಅದುದರಿಂದ ಅಧಿಕಾರಿಗಳು ಕೂಡಲೇ ಕಾರ್ಯಾಚರಣೆ ಮಾಡಬೇಕು. ಕೇಂದ್ರಸರ್ಕಾರಕ್ಕೆ ಅಗತ್ಯ ಮಾಹಿತಿಗಳನ್ನು ಕಳುಹಿಸಿ ಮಂಜೂರಾತಿ ಪಡೆಯಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನೂ ಈ ಯೋಜನೆಗೆ ಮಂಜೂರಾತಿಯಾಗಿಲ್ಲ. ನಿನ್ನೆ ತಾನೆ ಈ ಪ್ರಶ್ನೆ ಇತ್ತು. ಸಿಬ್ಬಂದಿಗಳು ಸುಮಾರು 800 ಜನರು ಬೇಕು, ತಜ್ಞರು, ಇಂಜನಿಯರುಗಳು ಇವರನ್ನು ನೇಮಿಸಬೇಕೆಂದರೆ ಇನ್ನೂ ಮಂಜೂರಾತಿಯೆ ಆಗಿಲ್ಲ. ಸಿಬ್ಬಂದಿಗಳನ್ನು ನೇಮಕ ಮಾಡಿ ಏನು ಮಾಡುವುದು ಎಂದು ಮಾನ್ಯಉಪಮುಖ್ಯಮಂತ್ರಿಗಳು ಹೇಳಿದರು.

5.30 ಪಿ.ಎಂ

ಆಮೇಲೆ ಬಜೆಟ್‌ನಲ್ಲಿ ಹಣ ಕೇಳಿದರೆ ಅಲ್ಲಿ ಇನ್ನೂ ಸರ್ವೆ ಆಗಿಲ್ಲ, ಎಸ್ಟಿಮೆಂಟ್ ಆಗಿಲ್ಲ, ಎಷ್ಟು ಹಣ ಬೇಕು. ಎಷ್ಟು ಕಾಲುವೆ ತೆಗೆಯಬೇಕು ಎಂದು ಅಂದಾಜಾಗಿಲ್ಲ, ಹಣ ಏಕೆ ಇಡಬೇಕು. ಎಂದರು. ಒಂದು ಕಡೆ ಅಲ್ಲಿ ಕೆಲಸವಾಗಿಲ್ಲ, ಸಿಬ್ಬಂದಿ ಕೊಡಿ ಎಂದರೆ ಮಂಜೂರಾತಿ ಆಗಿಲ್ಲವೆಂದು ಹೇಳುತ್ತಿದ್ದಾರೆ. ಈ ರೀತಿ ಒಂದಲ್ಲ ಒಂದು ರೀತಿಯಲ್ಲಿ ತುಂಗಾ ಮೇಲ್ದಂಡೆ ಯೋಜನೆಯ ಬಗ್ಗೆ ಈ ಸರ್ಕಾರ ಕಳಕಳಿಯಿಂದ ಚಿಂತನೆ ಮಾಡಿ ಕಾರ್ಯರೂಪಕ್ಕೆ ತರಲು ಮನಸ್ಸಿದ್ದಂತೆ ಕಾಣುವುದಿಲ್ಲ. ನಾನು ಕೇಳುತ್ತಿದ್ದೇನೆ. ಹಾಗಿದ್ದರೆ ಹೇಮಾವತಿಗೆ ಕೇಂದ್ರಸರ್ಕಾರ ಮಂಜೂರಾತಿ ಕೊಟ್ಟಿತ್ತೇ? ಹಾರಂಗಿ ಯೋಜನೆಗೆ ಕೇಂದ್ರಸರ್ಕಾರ ಮಂಜೂರಾತಿ ಕೊಟ್ಟಿತ್ತೇ? ಇವತ್ತು

ಕಾವೇರಿಗೆ ಕೇಂದ್ರಸರ್ಕಾರ ಮಂಜೂರಾತಿ ಕೊಟ್ಟಿದೆಯೇ? ಆದರೂ ಈ ಯೋಜನೆಗಳಿಗೆ ಹಣ ನಾವು ಖರ್ಚು ಮಾಡುವುದಿಲ್ಲವೇನು? ಉಪಾಧ್ಯಾಯರು ಪಾಠ ಹೇಳಿದಂತೆ ಇಲ್ಲಿ ಸಚಿವರು ನಮಗೆ ಹೇಳುತ್ತಿದ್ದಾರಲ್ಲ, ಇದು ಸರಿಯಲ್ಲ. ಇದನ್ನು ನಿಲ್ಲಿಸಬೇಕು. ರಾಜ್ಯದ ಎಲ್ಲಾ ಜಿಲ್ಲೆಗಳ ಎಲ್ಲಾ ರೈತರ ಎಲ್ಲಾ ಯೋಜನೆಗಳನ್ನು ಸಮ ದೃಷ್ಟಿಯಿಂದ ಕಾಣಬೇಕು. ಈ ಮಲತಾಯಿ ಧೋರಣೆಯನ್ನು ನಿಲ್ಲಿಸಬೇಕು. ಈ ತುಂಗಾ ಮೇಲ್ದಂಡೆ ಯೋಜನೆಗೆ ಈ ವರ್ಷ ಕನಿಷ್ಟ 80 ಕೋಟಿ ರೂಪಾಯಿಗಳನ್ನು ಇರಬೇಕು. ಇಲ್ಲದೇ ಹೋದರೆ ನೀವು ಉತ್ತರ ಕರ್ನಾಟಕ್ಕೆ ಒಂದು ಅಭಿವೃದ್ಧಿ ಕಾರ್ಯದಲ್ಲಿ ಹಿಂದೆ,ಇಂದು,ಮುಂದು ನೀವು ಮಾಡತಕ್ಕಂತಹ ಯೋಜನೆಗಳು ಏನು ಇವೆ, ಇವುಗಳಿಗೆ ಮಲತಾಯಿ ಧೋರಣೆಯನ್ನು ಏನು ಮಾಡುತ್ತಿದ್ದೀರಿ. ಇದನ್ನು ನಿಲ್ಲಿಸಬೇಕು. ಜನ ತಾಳ್ಮೆಯನ್ನು ಮೀರಿದ್ದಾರೆ. ತಾಳ್ಮೆಯ ಕಟ್ಟು ಒಡೆದಿದೆ. ಜನ ನಿಮ್ಮ ವಿರುದ್ಧ ಒಮ್ಮೆ ಹೋರಾಟ ಪ್ರಾರಂಭಿಸಿದರೆ ಅದು ಎಲ್ಲಿಗೆ ಹೋಗಿ ಮುಟ್ಟುತ್ತದೇ ಗೊತ್ತಿಲ್ಲ. ಮತ್ತೆ ಮತ್ತೆ ಹೇಳಿದರೆ ನೀವು ರಾಜ್ಯವನ್ನು ಒಡೆಯಬೇಕು ಎಂದು ಹೇಳುತ್ತೀರಲ್ಲ ಎಂದು ಕೇಳುತ್ತೀರಿ ಅನಿವಾರ್ಯವಾಗಿ ಜನ ರೋಸಿ ಹೋಗಿದ್ದಾರೆ. ನಿಮ್ಮ ಅಭಿವೃದ್ಧಿ ಕೆಲಸ ಯಾವರೀತಿ ಈ ರಾಜ್ಯದಲ್ಲಿ ನಡೆಯುತ್ತಿದೆ, ಅಂದರೆ ಒಂದು ಕಣ್ಣಲ್ಲಿ ಸುಣ್ಣ, ಇನ್ನೊಂದು ಕಣ್ಣಲ್ಲಿ ಬೆಣ್ಣೆ ಎಂಬಂತೆ ನಡೆಯುತ್ತಿದೆ. ಕಳಕಳಿಯಿಂದ ನಿಷ್ಠೆಯಿಂದ ಈ ಒಂದು ನ್ಯಾಯಸಮ್ಮತವಾದಂತಹ, ಯೋಗ್ಯವಾದಂತಹ ತುಂಗಾಮೇಲ್ದಂಡೆ ಯೋಜನೆಗೆ ಸರ್ಕಾರ ಆದಷ್ಟು ಬೇಗ ಕೇಂದ್ರಕ್ಕೆ ಬೇಕಾದ ಮಾಹಿತಿಯನ್ನು ಕಳಿಸಿ ಕೇಂದ್ರದ ಮಂಜೂರಾತಿ ಪಡೆದು ಈ ನೀರಾವರಿ ಯೋಜನಾ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಬೇಕು ಎಂದು ಒತ್ತಾಯ ಪೂರ್ವಕವಾಗಿ ಸರ್ಕಾರವನ್ನು ಕೇಳುತ್ತೇನೆ. ಇನ್ನು ಹೆಚ್ಚು ವಿಷಯಗಳ ಬಗ್ಗೆ ನಾನು ಮಾತನಾಡಿದರೂ ಪ್ರಯೋಜನವಿಲ್ಲ ಏಕೆಂದರೆ ಈ ಸರ್ಕಾರಕ್ಕೆ ಕಣ್ಣು ಇಲ್ಲ, ಕಿವಿ ಇಲ್ಲ, ಮೂಗು ಇಲ್ಲ. ಇದನ್ನು ಅವರು ಅರಿತುಕೊಂಡಿದ್ದಾರೆ. ಈ ರಾಜ್ಯದಲ್ಲಿ ಏನು ಮಾಡಿದ್ದೇವೆ ಎಂದು ಅವರು ತಮ್ಮನ್ನು ತಾವು ತಿಳಿದುಕೊಂಡಿದ್ದಾರೆ. ಅದಕ್ಕಾಗಿ ಏನೇ ಹೇಳಿದರೂ ಯಾವುದೇ ಪ್ರಯೋಜನ ಇಲ್ಲ ಎಂದು ನಾನು ಭಾವಿಸಿ ಈ ಒಂದು ರಾಜ್ಯಪಾಲರ ಭಾಷಣವನ್ನು ಅಭಿನಂದಿಸತಕ್ಕಂತಹ ಅಥವಾ ಬೆಂಬಲಿಸತಕ್ಕಂತಹ ಯಾವುದೇ ವಿಚಾರ ಇದರಲ್ಲಿ ಇಲ್ಲ. ಈ ಸರ್ಕಾರ ಇಂತಹ ಭಾಷಣಗಳನ್ನು ಮಾಡಿಸುವುದನ್ನು ಬಿಟ್ಟು ಇದನ್ನು ನಿಲ್ಲಿಸಿದರೆ ಒಳ್ಳೆಯದೆಂದು ಹೇಳಿ ನಾನು ರಾಜ್ಯಪಾಲರ ಭಾಷಣ ಮೇಲಿನ ಪ್ರಸ್ತಾಪವನ್ನು ವಿರೋಧಿಸಿ ಈ ಭಾಷಣವನ್ನು ಮುಗಿಸುತ್ತೇನೆ.

+ ಶ್ರೀ ಎಂ. ಎಸ್. ಪಾಟೀಲ್ (ರಾಯಚೂರು) : ಮಾನ್ಯ ಅಧ್ಯಕ್ಷರೇ, ಈ ರಾಜ್ಯಪಾಲರ ಭಾಷಣದ ಮೇಲೆ ಸಾಕಷ್ಟು ಚರ್ಚೆ ಆಗುತ್ತಿದೆ. ನಿನ್ನೆ ತಾನೇ ಮಿತ್ರರಾದಂತಹ ಸನ್ಮಾನ್ಯ ವೈ.ಕೆ.ರಾಮಯ್ಯನವರು, ಹಿರಿಯರಾದಂತಹ ಪ್ರೊ.ನಂಜುಂಡ ಸ್ವಾಮಿಯವರು ಮಾತನಾಡಿದ ಮೇಲೆ ಇದರ ಮೇಲೆ ಮಾತನಾಡುವುದು ವ್ಯರ್ಥ ಎಂದು ಅನಿವಾರ್ಯವಾಗಿ ನಾನು ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಇಲ್ಲಿ ಹೇಳುವುದು ಒಂದು ನಡೆಯುವುದು ಒಂದು. ಇದರಲ್ಲಿ ಒಂದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. 6ನೇ ಪ್ಯಾರಾದಲ್ಲಿ ಸರ್ಕಾರವು ಭೂಕಂಪದಿಂದ ಮತ್ತು ಅತಿವೃಷ್ಟಿಯಿಂದ ನೊಂದವರಿಗೆ ತಕ್ಷಣ ಪರಿಹಾರ ಒದಗಿಸಲು ತುರ್ತುಕ್ರಮ ಕೈಗೊಂಡಿತು. ಮೃತರ ಹತ್ತಿರದ ಸಂಬಂಧಿಕರಿಗೆ ಸಂದಾಯ ಮಾಡುತ್ತಿದ್ದ ನಗದು ಪರಿಹಾರವನ್ನು 20 ಸಾವಿರದಿಂದ ಒಂದು ಲಕ್ಷರೂಪಾಯಿಗಳಿಗೆ ಏರಿಸಲಾಯಿತು. ಪೂರ್ತಿಯಾಗಿ ಕುಸಿದು ಬಿದ್ದ ಮನೆಗಳಿಗಾಗಿ ಸಂದಾಯ ಮಾಡುತ್ತಿದ್ದ ಪರಿಹಾರವನ್ನು 5 ಸಾವಿರದಿಂದ 10 ಸಾವಿರ ರೂಪಾಯಿಗಳಿಗೆ ಏರಿಸಲಾಯಿತು. ಎನ್ನುವುದು ತಿಳಿದು ಬರುತ್ತದೆ. ನಿಜ, ಇದನ್ನು ಏರಿಸಲಾಯಿತು. ಆದರೆ ಅದನ್ನು ಕೊಡತಕ್ಕಂತಹ ವ್ಯವಸ್ಥೆ

ಆಗಿಲ್ಲ. ಇಲ್ಲಿ 5 ಸಾವಿರ 10 ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದು ತೀರ್ಮಾನ ಆಯಿತೇ ವಿನಃ ಅಲ್ಲಿ ಕೊಡತಕ್ಕಂತಹ ವ್ಯವಸ್ಥೆ ಇನ್ನುವರೆಗೂ ಸಹ ಆಗಿಲ್ಲ. ರಾಯಚೂರಿನಲ್ಲಿ ಮಳೆ ಆದ್ದರಿಂದ ಸಾಕಷ್ಟು ಅನಾಹುತವಾದದ್ದನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಹಲವಾರು ಕಡೆ ನಾವು ವಿವರಗಳನ್ನು ಕೊಟ್ಟಿದ್ದೇವೆ. ಕಳೆದ ವರ್ಷ ಮಳೆಯಿಂದ ವಿಕೋಪ ಆದಂಥ ಸಂದರ್ಭದಲ್ಲಿ ಪರಿಹಾರದ ಜವಾಬ್ದಾರಿಯನ್ನು ವಹಿಸಿಕೊಂಡಂಥ ನಮ್ಮ ನಾಯಕರುಗಳ ವರ್ತನೆ ಹಾಗೂ ಮಾಡಿದಂತಹ ರೀತಿಯನ್ನು ಖಂಡಿಸದೆ ವಿಧಿ ಇಲ್ಲ. ಅಂದಿನ ನಮ್ಮ ಜಿಲ್ಲಾ ಮಂತ್ರಿಗಳಾದ ಧರ್ಮಸಿಂಗ್‌ರವರು ಮುಂಜಾನೆ ಬಂದು ಸಾಯಂಕಾಲ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿ 50 ಲಕ್ಷ ರೂಪಾಯಿ ಪರಿಹಾರ ಕೊಡುತ್ತೇವೆ ಎಂದು ಘೋಷಣೆ ಮಾಡಿದರು. ಅನಂತರ ಒಂದು ವಾರ ಕಳೆದ ಮೇಲೆ ಕಂದಾಯ ಮಂತ್ರಿಗಳಾದ ರಾಜಶೇಖರ ಮೂರ್ತಿಯವರು ಬಂದು ಎರಡು ಮೂರು ಕಡೆ ಅಡ್ಡಾಡಿದರು. ಅನಂತರ ಅವರು ಒಂದು ಕೋಟಿ ರೂಪಾಯಿ ಪರಿಹಾರ ಕೊಡುತ್ತೇವೆ ಎಂದು ಹೇಳಿ ಹೋದರು. ಆದಾದನಂತರ ಸನ್ಮಾನ್ಯ ಮುಖ್ಯಮಂತ್ರಿಗಳು ಹೆಲಿಕ್ಯಾಪ್ಟರ್‌ನಲ್ಲಿ ಅಲ್ಲಿಗೆ ಬಂದ ಸಂದರ್ಭದಲ್ಲಿ ನಮ್ಮ ಸ್ನೇಹಿತರಾದಂತ ಹನುಮೇಗೌಡರು ಸಹ ಅವರ ಜೊತೆಯಲ್ಲಿ ಬಂದರು. ಹೆಲಿಕ್ಯಾಪ್ಟರ್‌ನಿಂದ ಇಳಿದು ಎಸ್‌ಪಿ ಅವರ ಆಫೀಸಿನಲ್ಲಿ ಇರತಕ್ಕ ಟೇಬಲ್ಲುವರೆಗೆ ಬಂದು ಮತ್ತೆ 15 ನಿಮಿಷದಲ್ಲಿ ಹೆಲಿಕ್ಯಾಪ್ಟರ್‌ನಲ್ಲಿ ಹೋರಟು ಹೋದರು. ಅವರು ಏನು ಪರಿಶೀಲನೆ ಮಾಡಿ ಯಾವುದನ್ನು ಕಂಡು ಹಿಡಿದ ಹಾಗೆ ಆಯಿತು? ನಮ್ಮ ವಿಚಾರಗಳನ್ನು ಕೇಳತಕ್ಕಂಥದ್ದು ಸಹ ಅಲ್ಲಿ ಆಗಲಿಲ್ಲ. ಅದೇ ಪಕ್ಕದ ರಾಜ್ಯದಲ್ಲಿ ನಿಮ್ಮ ಪಕ್ಷದವರೇ ಆದಂತ ಮುಖ್ಯ ಮಂತ್ರಿ ಶರದ್ ಪವಾರ್ ಅವರು, ಅಲ್ಲಿನ ಜಿಲ್ಲಾ ಮಂತ್ರಿಗಳು ಹಾಗೂ ಅಲ್ಲಿರತಕ್ಕ ಎಲ್ಲಾ ಮಂತ್ರಿಗಳು 15 ದಿವಸದವರೆಗೆ ಅದೇ ಸ್ಥಳದಲ್ಲಿ ಕ್ಯಾಂಪನ್ನು ಮಾಡಿದರು. ಅಲ್ಲಿ ಮಾಡತಕ್ಕಂಥ ಕೆಲಸಗಳನ್ನು ಬಹಳ ನಿಷ್ಠೆಯಿಂದ ಪೂರೈಸತಕ್ಕಂಥ ಕೆಲಸವನ್ನು ಮಾಡಿದರು. ಅವರನ್ನು ನಾವು ಅಭಿನಂದಿಸಬೇಕಾಗಿದೆ. ಅಲ್ಲಿ ಜನರ ಬಗ್ಗೆ ಅವರಿಗೆ ಇರತಕ್ಕಂತ ಕಳಕಳಿ ನೋಡಬಹುದು. ಇಲ್ಲಿ ಇವರು ಬಂದು 15 ನಿಮಿಷದಲ್ಲಿ ವೀಕ್ಷಣೆ ಮಾಡಿದ್ದು ಏನು,ಕೇಳಿದಂತಾದ್ದು ಏನು, ಪಡೆದಿದ್ದು ಏನು? ನಮ್ಮಲ್ಲಿ ಒಂದೇ ಒಂದು ಮೀಟಿಂಗ್ ಮಾಡತಕ್ಕಂಥದ್ದು ಆಗಲಿಲ್ಲ. ಇವರು ಹತ್ತು ಸಾವಿರ ರೂಪಾಯಿ ಕೊಡುತ್ತೇವೆ ಎಂದು ಏನು ಹೇಳುತ್ತಿದ್ದಾರೆ. ಅದರ ಪೈಕಿ 100-150 ರೂಪಾಯಿ ಕೊಟ್ಟಿದ್ದಾರೆಯೇ ವಿನಹ ಬಹಳ ಜಾಸ್ತಿ ಕೊಟ್ಟಿದ್ದು ಅಂದರೆ 500 ರೂಪಾಯಿ ಕೊಟ್ಟಿದ್ದಾರೆ. ಅದಕ್ಕಿಂತಲೂ ಹೆಚ್ಚು ಒಂದು ನಯಾಪೈಸೆ ಕೊಟ್ಟಿಲ್ಲ. ಇವರದು ಕೇವಲ ಬರೀ ಘೋಷಣೆಯಾಗಿದೆ 10 ಸಾವಿರ ರೂಪಾಯಿಗಳನ್ನು ಕೊಡತಕ್ಕಂಥ ಆಶ್ವಾಸನೆಯನ್ನು ಕೊಟ್ಟರೇ ಹೊರತು ಇಲ್ಲಿಯವರೆಗೆ ಆ ಹಣವನ್ನು ಸಹ ಕೊಡತಕ್ಕ ವ್ಯವಸ್ಥೆ ಆಗಲಿಲ್ಲ. ಆ ಬಡ ಜನರ ಮುಖಾಂತರ ಭಾವನೆಗಳನ್ನು ಕೆರಳಿಸಿ ನೀವು ಏತಕ್ಕೆ ಆಟ ಆಡುತ್ತಿದ್ದೀರಿ. ನಮ್ಮಲ್ಲಿ ಹಣ ಇಲ್ಲ ಕೊಡಲಿಕ್ಕೆ ಆಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿ. ಆಗ ನಾವು ಸುಲಭವಾಗಿ ಹೇಳಬಹುದು. ಈಗ ಏನಾಗಿದೆ ಅಂದರೆ ಇಲ್ಲಿಗೆ ಮುಖ್ಯಮಂತ್ರಿಗಳು ಬಂದು ಕೊಡುತ್ತೇವೆ ಎಂದು ಅನೌನ್ಸ್ ಮಾಡಿದರು. ಜನರು ನಮ್ಮ ಹತ್ತಿರ ಬಂದು ಕೇಳಿದಾಗ ನಾವು ಉತ್ತರ ಏನು ಕೊಡಬೇಕು. ಅಲ್ಲಿರತಕ್ಕಂಥ ಜನಪ್ರತಿನಿಧಿಗಳಿಗೆ ಇಕ್ಕಟ್ಟಿಗೆ ಸಿಕ್ಕಿಸತಕ್ಕಂಥ ಪ್ರವೃತ್ತಿಯನ್ನು ತಾವು ಕೈಬಿಡಬೇಕು. ತಾವು ಇದ್ದುದ್ದನ್ನು ಇದ್ದಂತೆ ಹೇಳುವ ವ್ಯವಸ್ಥೆ ಆಗಬೇಕು, ಅಲ್ಲಿ ಮಳೆಯಾದಂತ ಸಂದರ್ಭದಲ್ಲಿ ಸೂರ್ಯಕಾಂತಿ ಬೆಳೆ ಸಂಪೂರ್ಣವಾಗಿ ಹಾಳಾಗಿ ಹೋಯಿತು. ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿಬೆಳೆಗೆ ಪರಿಹಾರವನ್ನು ಎಷ್ಟು ಕೊಟ್ಟಿದ್ದಾರೆ ಎನ್ನುವ ಮಾತು ಬೇರೆ, ಅಲ್ಲಿ ಚರ್ಚೆಯಾಗುತ್ತಿದೆ. ಆದರೆ ಇಲ್ಲಿ ಆದಂತ ನಷ್ಟಕ್ಕೆ ಒಂದು ನಯಾಪೈಸೆ ಇನ್ನೂ ಕೊಟ್ಟಿಲ್ಲ. ಆದರೆ ಅಲ್ಲಿ ಕೊಡತಕ್ಕಂಥ ವ್ಯವಸ್ಥೆಯಾದರೂ ಆಯಿತು. ಈಗ ನಮ್ಮ ವ್ಯವಸಾಯ ಮಂತ್ರಿಗಳು ಇಲ್ಲೇ ಇದ್ದಾರೆ,

ಅವರು ಬೇಕಾದರೆ ಮಾಹಿತಿ ತರಿಸಿಕೊಳ್ಳಬಹುದು. ಕಂದಾಯ ಇಲಾಖೆಯಲ್ಲಿ ಸಂಪೂರ್ಣ ಮಾಹಿತಿ ಸಿಕ್ಕುತ್ತದೆ. ಇನ್ನೂವರೆಗೂ ಸೂರ್ಯಕಾಂತಿ ಬೆಳೆ ನಷ್ಟವನ್ನು ತುಂಬಿಕೊಡುವಂತಾದ್ದು ಆಗಿಲ್ಲ. ಅಲ್ಲಿ ಎಂತಹ ಪರಿಸ್ಥಿತಿ ಬಂದಿದೆ ಎಂದರೆ ನೂರು ಕೆ.ಜಿ. ಸೂರ್ಯಕಾಂತಿ ಬೀಜಕ್ಕೆ ಹನ್ನೊಂದು ರೂಪಾಯಿ ಪ್ರಕಾರ ಮಾರಾಟ ಆಗಿದೆ. ಅವರಲ್ಲಿದ್ದಂತಾದ್ದೆಲ್ಲಾ ಬರೀ ಜೊಳ್ಳು, ಅವರು ಮಾಡಿದಂಥ ಖರ್ಚು, ಕೊಯ್ದುಕೊಂಡು ಬಂದಂಥ ಖರ್ಚು ಅವನಿಗೆ ಸಿಗಲಾರದಂಥ ಪರಿಸ್ಥಿತಿ ಉಂಟಾಗಿ ಬಹಳ ಕಷ್ಟದಲ್ಲಿದ್ದಾನೆ. ಇಷ್ಟೆಲ್ಲಾ ಇರುವಾಗ, ಇದರ ಪರಿಣಾಮ ಏನಾಗುತ್ತಿದೆ. ಅಂದರೆ ಮತ್ತೆ ಸರ್ಕಾರದಿಂದ ಸಾಲದ ವಸೂಲಾತಿ ನಡೆದಿದೆ.

ಅವನಿಗೆ ಇರತಕ್ಕ ಕಷ್ಟವನ್ನು ಪರಿಹಾರ ಮಾಡಬೇಕು. ನೀವು ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿರಿ. ಅದು ಕೊಡುವುದಿಲ್ಲ ಎಂದಾಯಿತು. ಅವತ್ತು ಮಾನ್ಯ ಮುಖ್ಯಮಂತ್ರಿಗಳು ಬಂದಾಗ 1 ಎಕರೆಗೆ 500 ರೂಪಾಯಿನಂತೆ ಪರಿಹಾರವನ್ನು ಕೊಡುತ್ತೇವೆಂದು ಆಶ್ವಾಸನೆಯನ್ನು ಏನು ಕೊಟ್ಟರು. ಆ ಆಶ್ವಾಸನೆ ಆಶ್ವಾಸನೆಯಾಗಿ ಉಳಿಯಿತೇ ಹೊರತು ಅದು ಇದುವರೆಗೂ ಕಾರ್ಯಗತವಾಗಿಲ್ಲ ಇಲ್ಲದಿದ್ದರೆ ಕೊಡುವುದಕ್ಕಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿ. ಜನರನ್ನು ಒಪ್ಪಿಸುವಂಥ ಸ್ಥಿತಿಯನ್ನು ನಿರ್ಮಾಣ ಮಾಡಬೇಕಾಗುತ್ತದೆ. ಜನರನ್ನು ನೀವು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇದು ನಮ್ಮಿಂದಾಗುವುದಿಲ್ಲ ಎಂದು ಹೇಳಿದರೆ ಸಾಕು. ತಮಗೆ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಇಚ್ಛೆ ಪಡುತ್ತೇನೆ.

ಈ ನಾಡಿನ ಪ್ರಧಾನ ಮಂತ್ರಿಗಳಾಗಿದ್ದಂಥ ಮಾನ್ಯ ಶಾಸ್ತ್ರಿಯವರು ಅವತ್ತು ನಮ್ಮ ದೇಶ ಎದುರಿಸುತ್ತಿದ್ದ ಆಹಾರಾಭಾವದ ಪರಿಸ್ಥಿತಿಯಲ್ಲಿ ನಮ್ಮಲ್ಲಿ ಅಕ್ಕಿಯ ಉತ್ಪಾದನೆ ಕಡಿಮೆ ಆದಾಗ ಅವರು ಇಡೀ ದೇಶದ ಜನತೆಗೆ ಒಂದು ಕರೆಕೊಟ್ಟರು. ಅದೇನಂದರೆ, ನಮ್ಮ ದೇಶದಲ್ಲಿ ಅಕ್ಕಿ ಉತ್ಪಾದನೆ ಕಡಿಮೆಯಾಗಿದೆ, ಎಲ್ಲರೂ ಒಪ್ಪೊತ್ತಿನ ಊಟವನ್ನು ಬಿಡಿ ಎಂದು ಮನವಿ ಮಾಡಿಕೊಂಡಾಗ, ಈ ದೇಶದ ಜನರು ಅವರ ಮಾತಿಗೆ ಮರ್ಯಾದೆ ಕೊಟ್ಟು ಉಪವಾಸ ಮಾಡಿದರು. ಇವತ್ತೂ ಕೂಡ ಪ್ರತಿ ಸೋಮವಾರದಂದು ಊಟ ಬಿಟ್ಟಿದ್ದಾರೆ. ಅದೇ ರೀತಿ ನೀವು ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ದೇಶದಲ್ಲಿರುವ ವಾಸ್ತವ ಪರಿಸ್ಥಿತಿಯನ್ನು ಹೇಳಿ. ಸುಳ್ಳು ಹೇಳಿ ಅವರಿಗೆ ಮೋಸ ಮಾಡುವುದಕ್ಕೆ ಹೋಗಬೇಡಿ. ನೀವು ಹೇಳಿದ್ದನ್ನು ನಂಬುವಂಥ ಜನರು ನಮ್ಮವರು. ಅವರನ್ನು ಅಡ್ಡದಾರಿಗೆ ಎಳೆಯುವ ಕೆಲಸ ನಿಲ್ಲಬೇಕು. ನೀವು ಕೊಡತಕ್ಕದ್ದು ಸಾಲುವುದಿಲ್ಲ. ನೀವು ಎಷ್ಟೇ ಹೇಳಿಕೊಂಡರೂ ನಿಮ್ಮ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿಲ್ಲ ಎಂದು ಜನರು ತಿಳಿದುಕೊಂಡಿದ್ದಾರೆ. ಈಗಾಲಾದರೂ ಈ ವಸೂಲಾತಿಯನ್ನು ನಿಲ್ಲಿಸುತ್ತೇವೆಂದು ಹೇಳಿ. ಈಗ ಅವರಿಗಿರತಕ್ಕ ಕಷ್ಟದ ಜೊತೆಗೆ ಇನ್ನೂ ಕಷ್ಟ ಕೊಡತಕ್ಕದ್ದು ಸರಿಯಲ್ಲ. ಸಹಕಾರಿ ಕ್ಷೇತ್ರದಲ್ಲಿರತಕ್ಕ ಸಾಲಗಳ ಕನಿಷ್ಟ ವಸೂಲಾತಿಯನ್ನಾದರೂ ನಿಲ್ಲಿಸುವ ವ್ಯವಸ್ಥೆ ತಕ್ಷಣ ಆಗಬೇಕೆಂದು ಹೇಳಬಯಸುತ್ತೇನೆ.

ಇನ್ನು ಕಾನೂನು ವ್ಯವಸ್ಥೆ ಬಗ್ಗೆ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ, ರಸ್ತೆ ದರೋಡೆಗಳಾಗಿವೆ, ಮನೆಗಳಲ್ಲಿ ಕಳ್ಳತನಗಳಾಗಿವೆ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳದೇ ವಿಧಿ ಇಲ್ಲ. ನಮ್ಮ ರಾಯಚೂರು ಗಡಿನಾಡಿನಲ್ಲಿರತಕ್ಕದ್ದು. ಇಲ್ಲಿ ಒಂದು ವಿಚಿತ್ರ ವಾತಾವರಣ ಇದೆ. ಅದೇನೆಂದರೆ, ಈಗತಾನೆ ಅಬ್ಕಾರಿ ಇಲಾಖೆಯ ಬಗ್ಗೆ ಒಂದು ಚರ್ಚೆ ನಡೆಯಿತು. ನಾನು ಒಂದು ಪ್ರಶ್ನೆಯನ್ನು ಇಲ್ಲಿ ಕೇಳಬಯಸುತ್ತೇನೆ. ನಿಮ್ಮ ಕಾಂಗ್ರೆಸ್ ಪಕ್ಷ ಕೇಂದ್ರದಲ್ಲೂ ಇದೆ. ಆಂಧ್ರದಲ್ಲೂ ನಿಮ್ಮ ಪಕ್ಷವೇ ಅಧಿಕಾರದಲ್ಲಿದೆ, ನಮ್ಮ ಕರ್ನಾಟಕದಲ್ಲೂ ನಿಮ್ಮ ಪಕ್ಷವೇ ಅಧಿಕಾರದಲ್ಲಿದೆ. ಆದರೆ ನಿಮ್ಮ ಅಬ್ಕಾರಿ ನೀತಿ ಒಂದೊಂದು ಕಡೆ ಒಂದೊಂದು ರೀತಿ ಇದೆ. ಅಲ್ಲಿ ಸಾರಾಯಿ ನಿಷೇಧ ಮಾಡುತ್ತಿದ್ದೀರಿ, ನಮ್ಮ ಕರ್ನಾಟಕದಲ್ಲಿ ಹೆಂಡವನ್ನು ನಿಷೇಧ ಮಾಡುತ್ತಿದ್ದೀರಿ. ಅಂದರೆ ಈ ಎರಡೂ ರಾಜ್ಯಗಳಲ್ಲಿ ಏನಾದರೂ ಹೊಂದಾಣಿಕೆ

ಇದೆಯೇ? ನಿಮ್ಮ ನಿಮ್ಮಲ್ಲಿ ಏನಾದರೂ ವ್ಯಾವಹಾರಿಕವಾಗಿ ಆಸ್ಪದ ಮಾಡಿಕೊಂಡಿದ್ದೀರಾ? ಒಂದು ವಿಚಾರವನ್ನು ತಾವು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ನಮ್ಮ ಗಡಿ ಪ್ರದೇಶದ ಎಲ್ಲ ಅಧಿಕಾರಿಗಳೂ ಗಡಿ ಪ್ರದೇಶದಲ್ಲಿ ಹೆಂಡ, ಸಾರಾಯಿ ವ್ಯವಹಾರದಲ್ಲಿ ತೊಡಗಿದ್ದಾರೆಯೇ ಹೊರತು ನಮ್ಮಲ್ಲಿ ನಡೆಯುತ್ತಿರುವ ದರೋಡೆ, ಕಳ್ಳತನಗಳನ್ನು ತಡೆಗಟ್ಟುವ ಕಡೆಗೆ ಗಮನಕೊಡುತ್ತಿಲ್ಲ. ಅಲ್ಲಿಂದ ಇಲ್ಲಿಗೆ ಹೆಂಡ ಬಂದು ಮಾರಾಟವಾಗುತ್ತದೆ. ಇಲ್ಲಿಂದ ಸಾರಾಯಿ ಅಲ್ಲಿಗೆ ಹೋಗಿ ಮಾರಾಟವಾಗುತ್ತದೆ. ಇದು ಪ್ರತಿದಿನ ನಡೆಯುತ್ತಿರುವ ವ್ಯವಹಾರ. ಇದರಿಂದಾಗಿ ನಮ್ಮ ಅಧಿಕಾರಿಗಳೆಲ್ಲಾ ಅಲ್ಲಿ ಹೋಗಿ ಕಾಲಕಳೆಯತಕ್ಕ ಸನ್ನಿವೇಶ ಬಂದಿದೆ. ಆದ್ದರಿಂದ ನೀವು-ಯಾವುದಾದರೂ ಒಂದು ನೀತಿಯನ್ನು ಒಪ್ಪಿಕೊಳ್ಳಿ. ಹೆಂಡ ಕುಡಿಯುವುದು ತಪ್ಪೋ, ಸಾರಾಯಿ ಕುಡಿಯುವುದು ತಪ್ಪೋ, ಇವೆರಡನ್ನೂ ಬಿಟ್ಟು ಕೆಲವು ಜನ ಏನು ಪ್ರಶ್ನೆ ಮಾಡುತ್ತಾರೆಂದರೆ ವಿಸ್ಕಿ, ಬ್ರಾಂದಿ ಕುಡಿಯುವುದಕ್ಕೆ ಮೇಲಿನವರಿಗೆ ಪರ್ಮಿಷನ್ ಇದೆ, ಆದರೆ ಹೆಂಡ ಸಾರಾಯಿ ಕುಡಿಯುವವರಿಗೆ ಏತಕ್ಕೆ ಪರ್ಮಿಷನ್ ಇಲ್ಲ ಎಂದು. ನಾವು ಅವರಿಗೆ ಉತ್ತರವನ್ನು ಕೊಡಬೇಕಾಗುತ್ತದೆ. ನೀವು ಇಡೀ ದೇಶದಲ್ಲಿ ಸಂಪೂರ್ಣವಾಗಿ ಮದ್ಯಪಾನ ನಿಷೇಧ ನೀತಿಯನ್ನು ಜಾರಿಗೆ ತನ್ನಿ. ಕುಡಿಯತಕ್ಕದ್ದು ಒಳ್ಳೆಯದಲ್ಲ, ಅದನ್ನು ಸಂಪೂರ್ಣವಾಗಿ ನಾವು ನಿಲ್ಲಿಸುತ್ತೇವೆ ಎಂಬ ನೀತಿಯನ್ನು ತಾವು ಅಳವಡಿಸಿ. ಒಂದೊಂದು ಕಡೆ ಒಂದೊಂದು ನೀತಿ ಬೇಡ. ಬಡವರಿಗೆ ಒಂದು ನೀತಿ, ಶ್ರೀಮಂತರಿಗೇ ಒಂದು ನೀತಿ ಮಾಡುವುದಾದರೆ ಜನರ ಮನಸ್ಸಿನಲ್ಲಿ ಗೊಂದಲ ಉಂಟಾಗುತ್ತದೆ.

ಇನ್ನು ದಕ್ಷಿಣ ಕನ್ನಡದಲ್ಲಿ ಇನ್ನೊಂದು ನೀತಿ ಇದೆ. ಅಲ್ಲಿ ಈ ಕೆಲಸವನ್ನು ಮಾಡುವವರಿಗೆ ಗುತ್ತೇದಾರರು ಎಂದು ಹೇಳುತ್ತಾರೆ. ಅವರು ತಾವೇ ಸಹಕಾರ ಸಂಘಗಳ ಮೂಲಕ ಹೆಂಡ ಮಾರಾಟ ಮಾಡುವುದಕ್ಕೆ ಅವಕಾಶ ಮಾಡಿದಿರಿ. ಅದೇ ನೀತಿಯನ್ನು ಗುಲ್ಬರ್ಗಾ ರಾಯಚೂರು ಮುಂತಾದ ಜಿಲ್ಲೆಗಳಲ್ಲಿ ಏತಕ್ಕೆ ಮಾಡುವುದಿಲ್ಲ. ಅಲ್ಲಿರತಕ್ಕ ಸಣ್ಣಪುಟ್ಟ ಕಾರ್ಮಿಕರು ಬಹಳ ಹಿಂದಿನಿಂದಲೂ ಏನೂ ಕೆಲಸವನ್ನೂ ಮಾಡುತ್ತಾ ಬಂದಿದ್ದಾರೋ ಅದನ್ನೇ ಮಾಡಬೇಕು. ಅದನ್ನು ಬಿಟ್ಟರೆ ಬೇರೆ ಕೆಲಸ ಮಾಡುವುದಕ್ಕೆ ಅವರಿಗೆ ಬರುವುದಿಲ್ಲ. ಬೇರೆ ಉದ್ಯೋಗ ಗೊತ್ತಿಲ್ಲ. ಗಿಡ ಕೆತ್ತುವುದನ್ನು ಬಿಟ್ಟರೆ ಇನ್ನೊಂದು ಉದ್ಯೋಗ ಬರುವುದಿಲ್ಲ. ಈಗ ಅವರನ್ನು ನಿರುದ್ಯೋಗಿಗಳನ್ನಾಗಿ ಮಾಡಿ, ನಾವು ಅವರಿಗೆ ಉದ್ಯೋಗಗಳನ್ನು ಸೃಷ್ಟಿಮಾಡಿಕೊಡುತ್ತೇವೆಂದು ಹೇಳತಕ್ಕದ್ದು ಒಂದುಕಡೆ. ಹಿಂದಿನಿಂದ ಈ ಉದ್ಯೋಗವನ್ನು ಮಾಡುತ್ತಾ ಬಂದಿದ್ದವರಿಗೆ ಆ ಉದ್ಯೋಗವನ್ನು ತಪ್ಪಿಸಿ ಅವರನ್ನು ನಿರುದ್ಯೋಗಿಗಳನ್ನಾಗಿ ಮಾಡಿದ್ದೀರಿ. ಈಗ ಅವರಿಗೆ ಸೂಕ್ತ ಉದ್ಯೋಗದ ಅವಕಾಶವನ್ನು ತಾವು ಏತಕ್ಕೆ ಮಾಡಿಕೊಡುವುದಿಲ್ಲವೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳಬಯಸುತ್ತೇನೆ.

ಇನ್ನು ಸಾಕ್ಷರತಾ ಆಂದೋಲನದ ಬಗ್ಗೆ ಹೇಳುವುದಾದರೆ, ಈಗ ಇದರ ಬಗ್ಗೆ ಎಷ್ಟೇ ಮಾತನಾಡಿದರೂ ಅದು ವ್ಯರ್ಥವಾಗುತ್ತದೆ. ನಮ್ಮ ರಾಜ್ಯಕ್ಕೆ, ನಮ್ಮ ರಾಷ್ಟ್ರಕ್ಕೆ ವಿದ್ಯೆ ಅತ್ಯವಶ್ಯಕ. ವಿದ್ಯೆ ಇಲ್ಲದೆ ನಮ್ಮ ದೇಶ ಪ್ರಗತಿಯಾಗುವುದಕ್ಕೆ ಸಾಧ್ಯವೇ ಇಲ್ಲ. ದೇಶದ ಉನ್ನತಿಗಾಗಿ ನಾವು ವಿದ್ಯಾವಂತರಾಗಬೇಕಾದುದು ಅವಶ್ಯಕವಿದೆ.

ಈಗ ನಾವು ಯಾವ ಮಟ್ಟದಲ್ಲಿದ್ದೇವೆಂದರೆ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರು ಇಲ್ಲ, ಎಷ್ಟೋ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಕೊಠಡಿಗಳು ಇಲ್ಲ, ಪೀಠೋಪಕರಣಗಳು ಇಲ್ಲ, ಪೀಠೋಪಕರಣಗಳು ಇಲ್ಲ. ಆ ಬೆಳೆಯತಕ್ಕ ಸಸಿಗಳನ್ನು ಮುರಿಯತಕ್ಕ ವ್ಯವಸ್ಥೆ ನಡೆಯುತ್ತಿದೆ. ಅವರಿಗೆ ಅವಕಾಶ ಮಾಡಿಕೊಡಿ. ನಾವು ಬೇರೆಯವರಿಗೂ ಕೊಡಬೇಕು, ಕೊಡಬಾರದೆಂದು ಅಲ್ಲ, ಸಫಲವಾದ ಆರ್ಥಿಕ ಪರಿಸ್ಥಿತಿ ಇದ್ದಾಗ ಆ ಕಾರ್ಯಕ್ರಮ ಮಾಡಿ. ಎಲ್ಲಿ ನೋಡಿದರೂ ಆ ಕಾರ್ಯಕ್ರಮ, ಈ ಕಾರ್ಯಕ್ರಮ ಆದರೆ ಯಾವುದೂ ಸರಿಯಾದ ರೀತಿಯಲ್ಲಿ ಜಾರಿಯಾಗುತ್ತಿಲ್ಲ. ತುಂಬಾ ಅವ್ಯವಹಾರ ನಡೆಯತಕ್ಕ ಕಾರ್ಯಕ್ರಮಗಳಾಗಿವೆ. ಆದ್ದರಿಂದ ಇದನ್ನು ನಿಲ್ಲಿಸಿ, ಶಾಲಾ

ಕಟ್ಟಡಗಳನ್ನು ಕಟ್ಟಿಸತಕ್ಕದ್ದು, ಅದೇ ದುಡ್ಡಿನಿಂದ ಪೀಠೋಪಕರಣಗಳನ್ನು ಶಿಕ್ಷಕರನ್ನು ನೇಮಿಸುವುದರಿಂದ ಹಳ್ಳಿಗಾಡಿನಲ್ಲಿರತಕ್ಕ ಸಮಸ್ಯೆಗಳನ್ನು ನಿವಾರಿಹಬಹುದು. ಈಗ ಯಾವುದೇ ಹಳ್ಳಿಗೆ ಹೋಗಲಿ ನಮ್ಮನ್ನು ಕೇಳತಕ್ಕ ಪ್ರಶ್ನೆ ಒಂದರಿಂದ 7ನೇ ತರಗತಿಯವರೆಗೆ ನಮ್ಮ ಮಕ್ಕಳು ಶಾಲೆಗಳಲ್ಲಿ ಓದುತ್ತಿದ್ದಾರೆ. ಶಿಕ್ಷಕರು ಇಲ್ಲ ಎಂದೂ ಹಾಗೂ ಕೆಲವು ಕಡೆ ಒಬ್ಬಿಬ್ಬರು ಶಿಕ್ಷಕರು ಇದ್ದಾರೆ. ಇಬ್ಬರಿಗಿಂತ ಹೆಚ್ಚು ಮಂದಿ ಯಾವುದೇ ಶಾಲೆಯಲ್ಲಿ ಇರುವುದಿಲ್ಲ ಎಂದು ಹೇಳುತ್ತಾರೆ. ಅಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಈ ಪ್ರಕಾರ ಸರ್ಕಾರದ ರೊಕ್ಕವನ್ನು, ಸಾರ್ವಜನಿಕ ರೊಕ್ಕವನ್ನು ವಿನಾಕಾರಣ ವ್ಯಯ ಮಾಡದೆ ಸದುಪಯೋಗ ಮಾಡಬೇಕೆಂಬ ಮಾತನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಪ್ರಮುಖವಾದ ಸಮಸ್ಯೆ ಅಂದರೆ ಬಲದಂಡೆ ಕೆನಾಲ್. ನಾವು ಎಲ್ಲಾ ಪಕ್ಷದವರು ಪಕ್ಷಭೇದ ಮರೆತು ದೇವದುರ್ಗದಲ್ಲಿ ಒಂದು ಸಮಾವೇಶ ಕರೆದಿದ್ದೆವು. ನಮ್ಮ ಕೆಲವು ಸ್ನೇಹಿತರು ಅದರಲ್ಲಿ ಭಾಗವಹಿಸಲಿಲ್ಲ. ಎಲ್ಲಾ ಪಕ್ಷದವರು ಸೇರಿ ನಡೆಸಿದರು. ಮೂಲಭೂತವಾಗಿ ಇರತಕ್ಕದ್ದು ಅಂದರೆ ನಮ್ಮ ಜಿಲ್ಲೆಯ ನೀರಾವರಿ ಸಮಸ್ಯೆ ಅದಕ್ಕಾಗಿ ಒಂದು ದೊಡ್ಡ ಹೋರಾಟವನ್ನು ಪ್ರಾರಂಭ ಮಾಡಿದೆವು. ಅದಕ್ಕೆ ನಮ್ಮ ನಾಯಕರಾದ ಶ್ರೀ ದೇವೇಗೌಡರು ಬಂದು ಭಾಗವಹಿಸಿದ್ದರು. ನಾವು ಕಾರ್ಯಕ್ರಮ ನಡೆಸುತ್ತೇವೆಂದು ತಿಳಿದು, ನಮ್ಮ ಕಾರ್ಯಕ್ರಮ ನಡೆದಿದೆ ಎಂದು ಭಾವಿಸಿ ಮಾನ್ಯ ಮುಖ್ಯಮಂತ್ರಿಗಳು ಆ ಕೆನಾಲೆಗೆ ಅನುಮತಿ ಕೊಟ್ಟಿದ್ದೇವೆಂದು ಒಂದು ಘೋಷಣೆ ಮಾಡಿದರು. ಸಂತೋಷ. ನಾವು ಮಾಡಿದಂತಹ ಹೋರಾಟಕ್ಕೆ ನಮಗೆ ಬೆಲೆ ಸಿಕ್ಕಿತು, ಸರ್ಕಾರ ಕಣ್ತೆರೆದು ನೋಡಿ ಒಂದು ದಿಟ್ಟ ಕಾರ್ಯಕ್ರಮ ತೆಗೆದುಕೊಂಡಿತು ಎಂದು ಸಂತೋಷದಿಂದ ಸ್ವೀಕಾರ ಮಾಡಿದೆವು. ಆದರೆ ಪರಿಣಾಮ ಆದದ್ದು ಏನೆಂದರೆ ಮಾನ್ಯ ಮುಖ್ಯಮಂತ್ರಿಗಳು ಬಂದು ಅಡಿಗಲ್ಲು ಹಾಕಿ ಪ್ರಾರಂಭ ಮಾಡಿದಂತ ಸಂದರ್ಭದಲ್ಲಿ ಅಲ್ಲಿ ಬೇಬಿ ಕೆನಾಲ್ ಎಂದು ಮಾಡಿದರು. ಅದನ್ನು ಏತಕ್ಕೆ ಮಾಡಿದರು ಯಾವ ದೃಷ್ಟಿಯಿಂದ ಮಾಡಿದರು ಎಂದು ಗೊತ್ತಿಲ್ಲ. ಆದರೆ ಬೇಬಿ ಕೆನಾಲ್ ಕಾರ್ಯಕ್ರಮವಾದರೂ ಕೈಗೊಂಡಿದೆಯೋ ಅಂದರೆ ಅದೂ ಇಲ್ಲ, ಇಲ್ಲಿಯವರೆಗೆ ಒಂದು ಕೆಲಸವೂ ಆಗಿಲ್ಲ. ಘೋಷಣೆ ಮಾತ್ರ ಆಯಿತೇ ಹೊರತು ಆ ಕೆಲಸ ಅಲ್ಲಿಗೇ ನಿಂತಿತು. ಆದುದರಿಂದ ಆ ಭಾಗದ 3 ತಾಲ್ಲೂಕುಗಳಾದ ಲಿಂಗಸೂಗೂರು, ದೇವದುರ್ಗ, ರಾಯಚೂರು ಹಾಗೂ ಇತರ ಕ್ಷೇತ್ರಗಳಲ್ಲಿ ಆಗತಕ್ಕ ದೊಡ್ಡ ಪ್ರಗತಿಯನ್ನು ಕುಂಠಿತಗೊಳಿಸಿದ್ದಾರೆ. ಆ ಕಾರ್ಯಕ್ರಮ ತೆಗೆದುಕೊಳ್ಳುವುದಿಲ್ಲವೆಂದರೆ ಮುಂಬರತಕ್ಕ ದಿನಗಳಲ್ಲಿ ಅನಿವಾರ್ಯವಾಗಿ ಆ ಜನರು ಹೋರಾಟಕ್ಕೆ ಇಳಿಯಬೇಕಾಗುತ್ತದೆ. ಅದಕ್ಕೆ ಈ ಸರ್ಕಾರ ಜವಾಬ್ದಾರಿಯಾಗುತ್ತದೆ ಎಂಬ ಮಾತನ್ನು ಹೇಳಿ, ಆದಷ್ಟು ಜಾಗ್ರತೆ ಅನುಮತಿ ಕೊಟ್ಟು ಆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ನಮ್ಮಲ್ಲಿ ಒಂದು ನೂಲಿನ ಗಿರಣಿ ಇದೆ. ಆ ನೂಲಿನ ಗಿರಣಿಯ ಇತಿಹಾಸವನ್ನು ಹೇಳಿದರೆ ಚೆನ್ನಾಗಿರುತ್ತದೆ. ಸಹಕಾರ ಕ್ಷೇತ್ರದಲ್ಲಿರತಕ್ಕ ಎಲ್ಲಾ ಹಿರಿಯರನ್ನು, ಚೌಡರೆಡ್ಡಿಯವರನ್ನು ನಾವು ನೋಡಿದೆವು. ಯಾವುದೇ ಪಬ್ಲಿಕ್ ಅಂಡರ್ ಟೇಕಿಂಗ್‌ನಲ್ಲಿ ಇರತಕ್ಕ ಗಿರಣಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅದಕ್ಕೆ ಅವರದ್ದೇ ಆದ ಒಂದು ಕಾರಣ ಇದೆ. ಅದೇ ರೀತಿಯಲ್ಲಿರತಕ್ಕದ್ದು ರಾಯಚೂರಿನಲ್ಲಿರತಕ್ಕ ಸಹಕಾರಿ ನೂಲಿನ ಗಿರಣಿ. ಆ ನೂಲಿನ ಗಿರಣಿ ಪ್ರಾರಂಭವಾಯಿತು. ಅದು ನಿಮ್ಮ ಸರ್ಕಾರ ಬಂದಮೇಲೆ ಪ್ರಾರಂಭವಾಯಿತು. ಅದು 3-4 ವರ್ಷಗಳ ಕಾಲ ಮುಚ್ಚಿಹೋಗಿತ್ತು. ಇವತ್ತು ಸಂತೋಷಪಡತಕ್ಕ ವ್ಯಕ್ತಿ ನಮ್ಮ ಜೊತೆಗೆ ಇಲ್ಲ. ಅವರೆಂದರೆ ಶ್ರೀಮಾನ್ ಕೆ.ಹೆಚ್. ಪಾಟೀಲರು. ಆಗಿನ ಸರ್ಕಾರ ಅಥವಾ ನಿಮ್ಮ ಸರ್ಕಾರ ಇದನ್ನು ಮಾರಬೇಕೆಂದು ಅಥವಾ ಇದನ್ನು ಲೀಸ್‌ಗೆ ಕೊಡಬೇಕೆಂಬ ತೀರ್ಮಾನಕ್ಕೆ ಬಂದಿತ್ತು. ಆದರೆ ಸಹಕಾರ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ವಹಿಸಿದಂಥ ಹಾಗೂ ಸಹಕಾರ ಕ್ಷೇತ್ರದಲ್ಲಿ ಆಳವಾಗಿ ವಿಶ್ವಾಸ ಇಟ್ಟುಕೊಂಡಿದ್ದ ಶ್ರೀಮಾನ್ ಕೆ.ಹೆಚ್. ಪಾಟೀಲರು ಒಂದು ದಿಟ್ಟ ನಿಲುವು ತೆಗೆದುಕೊಂಡರು. ರಾಯಚೂರು. ಬಾಗಲಕೋಟೆ ಮತ್ತು ಬಿಜಾಪುರ ಈ ಮೂರು ಕಡೆ ಇರತಕ್ಕ

ನೂಲಿನ ಗಿರಣಿಗಳನ್ನು ಪುನಃ ಪ್ರಾರಂಭ ಮಾಡತಕ್ಕ ವ್ಯವಸ್ಥೆ ಮಾಡಿದರು. ಆದರೆ ಮತ್ತೆ ಇದೇ ಪರಿಸ್ಥಿತಿ ಮುಂದುವರಿದಿದೆ. ಮಹಾರಾಷ್ಟ್ರದವರಿಗಾಗಲಿ ಮತ್ತೆ ಖಾಸಗಿಯವರಿಗೆ ಕೊಡತಕ್ಕ ವ್ಯವಸ್ಥೆ ನಡೆದಿದೆ. 15 ದಿನಗಳಿಂದ ಆ ನೂಲಿನ ಗಿರಣಿ ಸಂಪೂರ್ಣವಾಗಿ ಮುಚ್ಚಿದೆ. ಯಾವ ಸಮಯದಲ್ಲಿ ಆ ಜನರು ರೊಚ್ಚಿಗೆದ್ದು ಹೋರಾಟ ನಡೆಸುತ್ತಾರೋ ಗೊತ್ತಿಲ್ಲ. ಯಾವಾಗ ಕಾನೂನು ಭಂಗವಾಗುತ್ತದೋ ಗೊತ್ತಿಲ್ಲ. ಅಂಥ ಪರಿಸ್ಥಿತಿಯಲ್ಲಿದ್ದೇವೆ. ಇವತ್ತು ಸಹ ಜವಳಿ ಸಚಿವರಾದ ಶ್ರೀ ಹೆಚ್.ಕೆ.ಪಾಟೀಲರನ್ನು ಭೇಟಿಯಾಗಿದ್ದೇವೆ. ಅವರು ಬಹಳ ಉತ್ಸುಕರಾಗಿದ್ದಾರೆ. ಪ್ರಾರಂಭ ಮಾಡಬೇಕೆಂಬುದು ಇದೆ. ಆದರೆ ಹಣಕಾಸಿನ ಪರಿಸ್ಥಿತಿ ಅವರಿಗೆ ಎಷ್ಟರ ಮಟ್ಟಿಗೆ ಸಹಕಾರ ಕೊಡುತ್ತದೋ ಗೊತ್ತಿಲ್ಲ. ಮಾರಾಟ ಮಾಡತಕ್ಕದ್ದು ಮತ್ತು ಬೇರೆಯವರಿಗೆ ಲೀಸಿಗೆ ಕೊಡತಕ್ಕದ್ದನ್ನು ಕೈಬಿಟ್ಟು, ಅಲ್ಲಿ ಸಹಕಾರ ಕ್ಷೇತ್ರದಲ್ಲಿರತಕ್ಕ ಧುರೀಣರನ್ನು ಅದರಲ್ಲಿ ಕೈಗೂಡಿಸಿ ಸಹಕಾರ ಕ್ಷೇತ್ರದಲ್ಲಿರತಕ್ಕ ನೂಲಿನ ಗಿರಣಿಯನ್ನು ಉಳಿಸಿಕೊಳ್ಳಬೇಕೆಂಬ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕೆಂಬ ಮಾತನ್ನು ಹೇಳುತ್ತೇನೆ.

ಇನ್ನೊಂದು ವಿಚಾರ ಅಂದರೆ ಗಡಿಪ್ರದೇಶದಲ್ಲಿರತಕ್ಕ ರಾಯಚೂರು ಜಿಲ್ಲೆಯವರು ನಾವು. ಆಂಧ್ರಪ್ರದೇಶದವರು ಜ್ಯುರೇಲಾ ಪ್ರಾಜೆಕ್ಟನ್ನು ನಮ್ಮ ಬಾರ್ಡರ್‌ನಲ್ಲಿ ಕೃಷ್ಣಾನದಿ ದಂಡೆಯಲ್ಲಿ ಕಟ್ಟಲಿಕ್ಕೆ ಹತ್ತಿದ್ದಾರೆ. ಆ ಪ್ರಾಜೆಕ್ಟ್ ಕಟ್ಟುವುದರಿಂದ ನಮ್ಮಲ್ಲಿ ಈಗಾಗಲೇ ಒಂದೆರಡು ನಡುಗಡ್ಡೆಗಳು ಇವೆ. ಆ ಪ್ರಾಜೆಕ್ಟ್ ಕಟ್ಟುವುದರಿಂದ ನಮ್ಮಲ್ಲಿರತಕ್ಕ ಕೆಲವು ಭೂಮಿ ಮುಳುಗಡೆಯಾಗುತ್ತದೆ ಜೊತೆಗೆ ನಡುಗಡ್ಡೆಗಳಿಗೆ ಹೋಗುವುದಕ್ಕೆ ತೊಂದರೆಯಾಗುತ್ತದೆ. ಏಕೆಂದರೆ ಬ್ಯಾಕ್‌ವಾಟರ್ ಬಂದು ನಿಲ್ಲುತ್ತದೆ. ಒಂದೊಂದು ನಡುಗಡ್ಡೆಯೊಳಗೆಸಹಿತ 1 ಸಾವಿರ 2 ಸಾವಿರ ಎಕರೆ ಫಲವತ್ತಾದ ಭೂಮಿ ಇದೆ. ಅಲ್ಲಿ ವಾಸವಾಗಿರತಕ್ಕ ರೈತರಿಗೆ ತೊಂದೆರಯಾಗುತ್ತದೆ. ಈ ಪ್ರಾಜೆಕ್ಟಿಗೆ 10-15 ವರ್ಷಗಳ ಹಿಂದೆ ಅಡಿಗಲ್ಲು ಹಾಕತಕ್ಕ ಸಂದರ್ಭದಲ್ಲಿ ಅಂದಿನ ಆಂಧ್ರಸರ್ಕಾರದ ಮುಖ್ಯಮಂತ್ರಿಗಳು ಮತ್ತು ಲೋಕೋಪಯೋಗಿ ಸಚಿವರು ವಾಗ್ದಾನ ಮಾಡಿದ್ದರು. ಏನೆಂದರೆ ನಡುಗಡ್ಡೆಗೆ ಹೋಗತಕ್ಕ ಜಾಗದಲ್ಲಿ ಒಂದು ಬ್ರಿಡ್ಜ್ ಕಟ್ಟಿಕೊಡುತ್ತೇವೆ, ಅದಕ್ಕೆ ತಗಲತಕ್ಕ ಸಂಪೂರ್ಣ ವೆಚ್ಚವನ್ನು ಆಂಧ್ರಸರ್ಕಾರವೇ ಭರಿಸಿಕೊಡುತ್ತದೆಂದು ಆದರೆ ಇದುವರೆಗೆ ನಮ್ಮ ಸರ್ಕಾರದಿಂದ ಯಾವುದೇ ಮಾಹಿತಿಯನ್ನು ಪಡೆಯತಕ್ಕ ಮತ್ತು ಅವರಿಗೆ ಸಂಪರ್ಕ ಬೆಳೆಸತಕ್ಕ ವ್ಯವಸ್ಥೆ ಆಗಿಲ್ಲ. ನಮ್ಮ ಜನರು ಅಲ್ಲಿ ಆ ಪ್ರಾಜೆಕ್ಟ ವೀಕ್ಷಣೆಗಾಗಿ ಬರತಕ್ಕ ಆಂಧ್ರಪ್ರದೇಶದ ಮಂತ್ರಿಗಳನ್ನು ಹೋಗಿ ಬೇಡಿದಂತಹ ಸಂದರ್ಭದಲ್ಲಿ ಅವರು ಹೇಳುತ್ತಾರೆ. ನಿಮ್ಮ ಸರ್ಕಾರದ್ದು ಯಾವುದೇ ಬೇಡಿಕೆಯಿಲ್ಲ, ಯಾರು ಕೇಳುವವರೇ ಇಲ್ಲ, ನಾವೇನು ಮಾಡೋಣವೆಂದು ಹೇಳುತ್ತಾರೆ. ಆದ್ದರಿಂದ ಈ ಸಂದರ್ಭವನ್ನು ಉಪಯೋಗ ಮಾಡಿಕೊಂಡು ಅದನ್ನು ಮಾಡಿಸಬೇಕು. ಇದು ಬಹಳ ಪ್ರಮುಖವಾದುದು. ಇನ್ನು ಆರು ತಿಂಗಳು ಅಥವಾ ಒಂದು ವರ್ಷದಲ್ಲಿ ಆ ಪ್ರಾಜೆಕ್ಟ್ ಮುಗಿಯತಕ್ಕ ಸಂದರ್ಭವಿದೆ. ಬ್ಯಾಕ್‌ವಾಕರ್ - ನಿಂತರೆ ನಮ್ಮ ಪರಿಸ್ಥಿತಿ ಏನಾಗುತ್ತದೆ? ಸುಮಾರು 15-20 ಅಡಿ ನೀರು ಅಲ್ಲಿ ನಿಲ್ಲುತ್ತದೆ. 15ರಿಂದ 20 ಅಡಿ ನೀರು ನಿಲ್ಲುವುದರಿಂದ ಮೊಸಳೆ ಮುಂತಾದ ದೊಡ್ಡ ದೊಡ್ಡ ಅಪಾಯಕಾರಿಯಾದ ಪ್ರಾಣಿಗಳು ವಾಸ ಮಾಡುತ್ತವೆ. ಆಗ ನಡುಗಡ್ಡೆಗೆ ಹೋದ ಜನ ನದಿ ದಾಟಿ ಬರತಕ್ಕದ್ದು ಬಹಳ ದುಸ್ತರವಾಗುತ್ತದೆ. ಆದ್ದರಿಂದ ಶೀಘ್ರವಾಗಿ ಆಂಧ್ರಪ್ರದೇಶದಿಂದ ಬರತಕ್ಕ ಅನುಕೂಲತೆಗಳನ್ನು ಪಡೆದುಕೊಂಡು ಅಲ್ಲಿನ ಸೇತುವೆ ಕೆಲಸವನ್ನು ಪೂರೈಸಬೇಕೆನ್ನುವ ಮಾತನ್ನು ತಮ್ಮ ಮುಖಾಂತರ ಇಲ್ಲಿ ಹೇಳುತ್ತೇನೆ.

ಇನ್ನು ನಮ್ಮ ಕೃಷಿ ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮಲ್ಲಿ ಒಂದು ಟಿವಿ ಟ್ರಾನ್ಸ್‌ಮಿಷ್ನ್ ಸೆಂಟರ್ ಸ್ಯಾಂಕ್ಷನ್ ಆಗಿದೆ. ಈ ವಿಷಯದಲ್ಲಿ ತಮ್ಮನ್ನು ನಾನು ವೈಯಕ್ತಿಕವಾಗಿ ಭೇಟಿ ಮಾಡಿದ್ದೇನೆ. ಮುಖ್ಯಮಂತ್ರಿಗಳು ಬಂದಾಗ ಕೇಳಿದ್ದೇವೆ, ಸಾಕಷ್ಟು ಸಲ ಕೇಳಿದ್ದೇವೆ. ರಾಯಚೂರಿನಲ್ಲಿ ಟಿ.ವಿ. ಟ್ರಾನ್ಸ್‌ಮಿಷನ್ ಸೆಂಟರ್

ಆಗಬೇಕಾದಾರೆ, ಅಗ್ರಿಕಲ್ಚರಲ್ ಕಾಲೇಜಿನಲ್ಲಿರತಕ್ಕ ಭೂಮಿ ಅತ್ಯಾವಶ್ಯಕವಾಗಿ ಬೇಕಾಗಿದೆ. ಆ ಒಳ್ಳೆಯ ಭೂಮಿ ಅದನ್ನು ಬಿಟ್ಟರೆ ಬೇರೆ ಎಲ್ಲೂ ಜಾಗ ಇಲ್ಲ, ಆದ್ದರಿಂದ 5 ಎಕರೆ ಭೂಮಿಯನ್ನು ಅಲ್ಲಿ ಕೊಡಿ, ನಾವು ಇಲ್ಲಿ ಎಸ್ಟಾಬ್ಲಿಶ್ ಮಾಡುತ್ತೇವೆ ಎನ್ನುವ ಬೇಡಿಕೆಯನ್ನು ಅವರು ಇಟ್ಟಿದ್ದಾರೆ. ಆದರ ಸಲುವಾಗಿ ಜಿಲ್ಲಾಧಿಕಾರಿಗಳು ನಾವು ನಮ್ಮ ಜಿಲ್ಲೆಯ ಪ್ರಮುಖರು ಸಹ ಈ ವಿಷಯದಲ್ಲಿ ಅನೇಕ ಸಲ ಪ್ರಸ್ತಾವನೆಗಳನ್ನು ಸಲ್ಲಿಸಿದ್ದೇವೆ. ಆದರೆ ಅದು ಇದುವರೆಗೆ ತೀರ್ಮಾನವಾಗಿಲ್ಲ. ಒಂದು ವೇಳೆ ಆ ಭೂಮಿಯನ್ನು ನೀವು ಕೊಡಲಿಲ್ಲವೆಂದರೆ ಅವರು ಟಿ.ವಿ ಟ್ರಾನ್ಸಿಮ್ಶನ್ ಸೆಂಟರನ್ನು ಬಿಜಾಪುರಕ್ಕೋ ಅಥವಾ ಇನ್ನೆಲ್ಲಿಗೋ ಶಿಫ್ಟ್ ಮಾಡತಕ್ಕ ಹಂತದಲ್ಲಿದ್ದಾರೆ. ಆದ್ದರಿಂದ ಸೆಂಟ್ರಲ್ ಗೌರ್ನಮೆಂಟ್ನಿಂದ ಬಂದಂತಹ ಇಂತಹ ಒಂದು ಒಳ್ಳೆಯ ಕಾರ್ಯಕ್ರಮವನ್ನು ಕೇವಲ ಭೂಮಿಯಿಲ್ಲ ಎನ್ನತಕ್ಕ ಆಧಾರದಿಂದ ಈ ರಾಯಚೂರಿನ ಜನರು ವಂಚಿತರಾಗುವುದು ಬೇಡ. ಅದೇ ಭೂಮಿಯನ್ನು ಒದಗಿಸುವುದಕ್ಕೆ ಅತಿ ಶೀಘ್ರದಲ್ಲಿಯೇ ಮಂಜೂರಾತಿಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ತಮಗೆ ಒತ್ತಾಯಪೂರ್ವಕವಾಗಿ ಕೇಳುತ್ತಾ ಇದ್ದೇನೆ. ಇನ್ನು ನಮ್ಮ ಭಾಗದಲ್ಲಿ ವಿದ್ಯುತ್ತಿನ ಕೊರತೆ ಅಷ್ಟೆ ಪ್ರಮುಖವಾದುದು. ನಾವು ಅನೇಕ ಸಲ ನಡೆಯತಕ್ಕ ಮೀಟಿಂಗ್ಗಳಲ್ಲಿ ಕೆಲವೊಂದು ಸೂಚನೆಗಳನ್ನು ಕೊಟ್ಟುಕೊಂಡು ಬಂದಿದ್ದೇವೆ. ನೀವು ವಿರಿಯಾವ್ಹೆಸ್ ಫಿಕ್ಸ್ ಮಾಡಿ, ರೊಟೇಶನ್ ಸಿಸ್ಟಮ್ ಮಾಡಿ ಎಂದೆವು. ಆದರೆ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಎರಡು ಗಂಟೆ, ಮೂರು ಗಂಟೆ ಕರೆಂಟ್ ಕೊಡುತ್ತೀರಿ. ಆ ಟೈಮ್ನೊಳಗೆ ಎಲ್ಲ ರೈತರು ಹೋಗಿ ಕೂಲಿ ಆಳುಗಳನ್ನು ಕರೆದುಕೊಂಡು ಹೋಗಿ ಅಲ್ಲಿ ನಿಂತಿರುತ್ತಾರೆ. ಆಗ ಕರೆಂಟ್ ಬರಲಾರದೆ ಅವರು ವಾಪಸು ಬರತಕ್ಕ ಪರಿಸ್ಥಿತಿ ಇದೆ. ವಿಶೇಷವಾಗಿ ನೀರು ಏನು ರೈತರಿಗೆ ಪುಕ್ಕಟೆ ಕರೆಂಟ್ ಕೊಟ್ಟಿದ್ದೀರಿ, ಅದನ್ನು ತಪ್ಪಿಸಿ ಅವರಿಗೆ ಚಾರ್ಜ್ ಮಾಡಿ, ಪರವಾಗಿಲ್ಲ. ಪುಕ್ಕಟೆ ಕೊಡತಕ್ಕದ್ದು ಬೇಕಾಗಿಲ್ಲ. ಆದರೆ ಕರೆಂಟ್ ಕೊಡತಕ್ಕ ವ್ಯವಸ್ಥೆಯಾಗಬೇಕು. ಸಂಪೂರ್ಣ ಅವರಿಗೆ ಬೇಕಾಗಿರತಕ್ಕ ಕರೆಂಟಿನ ವ್ಯವಸ್ಥೆಯಾದರೆ ಒಳ್ಳೆಯ ಕಾರ್ಯಕ್ರಮವಾಗುತ್ತದೆ. ರೈತರಿಗೆ ಪುಕ್ಕಟೆ ಕರೆಂಟ್ ಕೊಡತಕ್ಕದ್ದನ್ನು ನಿಲ್ಲಿಸಿ ಅವರು ಕರೆಂಟಿನ ಚಾರ್ಜನ್ನು ಕೊಡುವುದಕ್ಕೆ ಸಿದ್ಧರಿದ್ದಾರೆ. ಪುಕ್ಕಟೆ ಅವರಿಗೆ ಬೇಕಾಗಿಲ್ಲ. ಸರಿಯಾದ ರೀತಿಯಲ್ಲಿ ಸರಿಯಾದ ಕ್ರಮದಿಂದ ವಿದ್ಯುತ್ತನ್ನು ಒದಗಿಸಿದರೆ ಒಳ್ಳೆಯ ಒಂದು ಕಾರ್ಯಕ್ರಮವಾಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತಾ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ರಾಜ್ಯಪಾಲರ ಭಾಷಣವನ್ನು ವಿರೋಧಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣವನ್ನು ನಾನು ಬೆಂಬಲಿಸುತ್ತಾ, ಈಗ ನಮ್ಮ ರಾಜ್ಯಪಾಲರ ಭಾಷಣದ ಮೇಲೆ ನಮ್ಮ ವಿರೋಧಪಕ್ಷದ ಹಲವಾರು ಮಿತ್ರರು ಪ್ರಸ್ತಾಪ ಮಾಡಿದ್ದು ಹೆಚ್ಚಿನಂಶಗಳು ಈ ರಾಜ್ಯಪಾಲರ ಭಾಷಣದ ಮೇಲೆ ಪ್ರಶ್ನೆ ಮಾಡಿರುವಂತಹದ್ದು ದುರದೃಷ್ಟಕರವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಾನು ಕೂಡ ಹಲವಾರು ವರ್ಷಗಳಿಂದ ನಮ್ಮ ರಾಜ್ಯಪಾಲರ ಭಾಷಣದ ಬಗ್ಗೆ ಇಲ್ಲಿ ಕೇಳುತ್ತಾ ಇದ್ದೇನೆ. ಆ ಕಡೆ ವಿರೋಧಪಕ್ಷದಲ್ಲಿ ಕುಳಿತು ಕೇಳುವಂತಹ ಸಂದರ್ಭ ನಮ್ಮ ಪಾಲಿಗೆ ಸಿಕ್ಕಿತ್ತು. ಒಂದು ವ್ಯತ್ಯಾಸ ಏನೆಂದರೆ, ವಿರೋಧಪಕ್ಷದ ಮಿತ್ರರು ಈ ಕಡೆ ಕುಳಿತು ರಾಜ್ಯಪಾಲರು ಭಾಷಣ ಮಾಡುವಂತಹ ಸಂದರ್ಭದಲ್ಲಿ ರಾಜ್ಯ ಪಾಲರ ಭಾಷಣವನ್ನು ಸಾಧಾರಣ ಶೇಕಡ 60ರಷ್ಟು ಕೇಂದ್ರ ಸರ್ಕಾರವನ್ನು ದೂಷಣೆ ಮಾಡಲಿಕ್ಕ ಉಪಯೋಗ ಮಾಡುವಂತಹ ಒಂದು ಅವಕಾಶವನ್ನು ನಾವು ಕಂಡಿದ್ದೇವೆ. ಅಂತಹದ್ದು ಈ ಸಲ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಪ್ರಸ್ತಾಪವಾಗಲಿಲ್ಲ. ಇವತ್ತು ನನ್ನ ಹಲವಾರು

ಮಿತ್ರರು ಅನೇಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮೂಲತಃ ಏನೆಂದರೆ, ನಮ್ಮ ಆತಂಕರಿಕ ಗಲಭೆಯಿಂದಾಗಿ ಇದರ ಲಾಭ ಏನಾದರೂ ಸಿಗಬಹುದಾ ಎನ್ನುವ ಒಂದು ರೀತಿಯ ಪ್ರಸ್ತಾಪ ಕೂಡ ಇಲ್ಲಿ ಬಂದಿದೆ. ನನಗೆ ಒಂದು ಕತೆ ನೆನಪು ಬರುತ್ತಾ ಇದೆ. ನಮ್ಮ ಊರುಗಳಲ್ಲಿ ಹೇಳುತ್ತಾರೆ, ಎರಡು ಕತ್ತೆಗಳು ಇದ್ದವಂತೆ. ಒಂದು ಅಗಸನ ಕತ್ತೆ, ಮತ್ತೊಂದು ಸರ್ಕಸ್ ಕತ್ತೆ. ಎರಡೂ ಕತ್ತೆಗಳು ಒಂದು ದಿವಸ ನದಿ ದಡದಲ್ಲಿ ಒಟ್ಟಿಗೆ ಸೇರಿದವಂತೆ. ಅಗಸನ ಕತ್ತೆ ತುಂಬಾ ದಷ್ಟಪುಷ್ಟವಾಗಿತ್ತು. ಆದರೆ ಸರ್ಕಸ್ನ ಕತ್ತೆ ತುಂಬಾ ವೀಕ್ ಆಗಿತ್ತು. ಆ ಸಂದರ್ಭದಲ್ಲಿ ಅಗಸನ ಕತ್ತೆ ಏಕೆ ವೀಕಾಗಿ ಇದ್ದಿ, ನಿನಗೆ ಊಟ ಸಿಗುವುದಿಲ್ಲವೇ ಎಂದು ಕೇಳಿತಂತೆ. ಅದಕ್ಕೆ ಸರ್ಕಸ್ ಕತ್ತೆ ಒಂದು ಹೊತ್ತು ಮಾತ್ರ ಸರ್ಕಸ್ನಲ್ಲಿ ಊಟ ಸಿಗುತ್ತದೆ, ಮಿಕ್ಕ ಸಮಯದಲ್ಲಿ ಸರಿಯಾಗಿ ಸಿಗುವುದಿಲ್ಲವೆಂದು ಹೇಳಿತಂತೆ ಆಗ ಅಗಸನ ಕತ್ತೆ ಹೇಳಿತಂತೆ, ನನ್ನ ಜೊತೆ ಬಾ ಅಗಸನ ಜೊತೆಯಲ್ಲಿ ಒಳ್ಳೆಯ ಆಹಾರ ಸಿಗುತ್ತದೆ ಎಂದಿತಂತೆ. ಅದಕ್ಕೆ ಸರ್ಕಸ್ ಕತ್ತೆ ಒಪ್ಪಲಿಲ್ಲ. ಪುನಃ ಆರು ತಿಂಗಳ ನಂತರ ಪುನಃ ಎರಡೂ ಕತ್ತೆಗಳು ಒಟ್ಟಿಗೆ ಸೇರಿದವಂತೆ. ಆಗ ಕೂಡ ಸರ್ಕಸ್ ಕತ್ತೆ ತುಂಬಾ ವೀಕಾಗಿತ್ತು. ಆಗ ಅಗಸನ ಕತ್ತೆ ಕೇಳಿತು ಏನು ತುಂಬಾ ವೀಕಾಗಿ ಇದ್ದಿಯಲ್ಲ ನನ್ನ ಜೊತೆ ಬಾ ಎಂದು ಕರೆದಾಗ ಅದಕ್ಕೆ ಸರ್ಕಸ್ ಕತ್ತೆ ಒಪ್ಪಲಿಲ್ಲ. ಏಕೆ ಒಪ್ಪಲಿಲ್ಲವೆಂದರೆ ಸರ್ಕಸ್ನಲ್ಲಿ ಇದ್ದ ಕತ್ತೆಗೆ ಸರ್ಕಸ್ನ ಯಜಮಾನ ಒಂದು ಸಲ ಹೇಳಿದನಂತೆ, ಯಜಮಾನನ ಮಗಳು ತುಂಬಾ ಸುಂದರಿಯಾಗಿದ್ದಳಂತೆ. ಅವಳು ಸಪೂರದ ತಂತಿಯಲ್ಲಿ ನಡೆದುಕೊಂಡು ಹೋಗುವಂತಹ ಸಂದರ್ಭದಲ್ಲಿ ಯಜಮಾನ ಒಂದು ವೇಳೆ ನೀನು ಈ ತಂತಿಯಿಂದ ಬಿದ್ದರೆ ನಿನ್ನನ್ನು ಈವೊಂದು ಕತ್ತೆಗೆ ಮದುವೆ ಮಾಡುತ್ತೇನೆ ಅನ್ನುವ ಮಾತನ್ನು ಹೇಳಿದ್ದನಂತೆ. ಆ ದೃಷ್ಟಿಯಿಂದ ಆ ಕತ್ತೆ ಅಲ್ಲೇ ಕಾಯ್ದುಕೊಂಡು ಕೂತಿದೆ. ಎರಡು ಹೊತ್ತು ಊಟ ಸಿಗದಿದ್ದರೂ ಕೂಡ ಅಲ್ಲಿ ಕಾಯ್ದುಕೊಂಡು ಕುಳಿತಿದೆ. ಅದೇ ರೀತಿಯಲ್ಲಿ ನಮ್ಮ ವಿರೋಧ ಪಕ್ಷದ ಮಿತ್ರರು ನಮ್ಮ ಸರ್ಕಾರ ಇವತ್ತು ಬೀಳುತ್ತದೆ ನಾಳೆ ಬೀಳುತ್ತದೆ ಎನ್ನುವ ಆಸೆಯಿಂದ 5 ವರ್ಷ ಕೂಡ ಇದೇ ರೀತಿಯಲ್ಲಿ ಕಳೆದುಕೊಳ್ಳುವ ಅವಕಾಶವಾಯಿತು. ಈ ಹಂತದಲ್ಲಿ ಸರ್ಕಾರ ಮಾಡಿದ ಸಾಧನೆಗಳು.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಸೊರಕೆಯವರೇ, ನೀವು ಸಹ ಕಾಯ್ದುಕೊಂಡು ಕುಳಿತಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಸೊರಕೆಯವರು ಬಹಳ ಉತ್ಸಾಹದಿಂದ ಈಗ ಚೀಫ್ ಮಿನಿಸ್ಟರ್ಗೆ more loyal than the king ಎನ್ನುವುದನ್ನು ತೋರಿಸಬೇಕಾಗುತ್ತದೆ. ಅವರು ಇದುವರೆಗೂ ಸಹಿತ ಭಿನ್ನಮತೀಯರಿದ್ದರು. ಅವರು ಸರ್ಕಾರದ ಬಗ್ಗೆ ಏನೇನು ಮಾತನಾಡುತ್ತಾ ಇದ್ದರು ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಅವರು ಇಲ್ಲಿಗೆ ಬಂದು ಬಾವಿಯೊಳಗೆ ಬಿದ್ದಿದ್ದರು. ಅವರನ್ನು ಎತ್ತುವುದಕ್ಕೆ ಆ ಕತ್ತೆಗಳನ್ನು ಕರೆದುಕೊಂಡು ಬರುವುದು ಒಳ್ಳೆಯದೆಂದು ನನಗನ್ನಿಸುತ್ತಿದೆ.

ಶ್ರೀ ವಿನಯಕುಮಾರ್ ಸೊರಕೆ : ಅದು ನಮ್ಮ ಕುಟುಂಬದ ವಿಚಾರ. ನಮ್ಮ ಕುಟುಂಬದೊಳಗಡೆ ಅಣ್ಣತಮ್ಮಂದಿರೊಳಗಡೆ ಏನೇನೋ ವೈಮನಸ್ಸು ಇರುತ್ತದೆ. ಮನೆಯಲ್ಲಿಯೇ ನಾವು ಅದನ್ನು ತೀರ್ಮಾನ ಮಾಡಿಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಅಂದರೆ ಇವರು ಅಗಸನ ಕತ್ತೆ ಇದ್ದ ಹಾಗೆ.

ಶ್ರೀ ವಿನಯಕುಮಾರ್ ಸೊರಕೆ : ತಾವು ಅದಕ್ಕೆ ಆಸೆ ಮಾಡಿದ್ದರೆ ಹೇಗಾಗುತ್ತದೆಂದು ಹೇಳಿದೆ. ಹೆಚ್ಚಿನ ಅಂಶ ಒಂದು ಆರ್ಥಿಕ ನೀತಿಯ ಮಟ್ಟಿಗೆ ಬಹಳಷ್ಟು ಪ್ರಶ್ನೆ ಮಾಡಿದ್ದಾರೆ. ನಾನು ವಿರೋಧಿಮಿತ್ರರ ಹತ್ತಿರ ಕೇಳುತ್ತೇನೆ, ತಮ್ಮ

ಸರ್ಕಾರ ಇರುವ ಸಂದರ್ಭದಲ್ಲಿ ಸರ್ಕಾರಿ ನೌಕರರಿಗೆ ಸಂಬಳ ಕೊಡದೆ ಇರತಕ್ಕ ಪರಿಸ್ಥಿತಿ ಕೂಡ ಇತ್ತು.

6.00 ಪಿ.ಎಂ

ಇವತ್ತು ಆ ಹಂತದಲ್ಲಿ ನಮ್ಮ ಸರ್ಕಾರ ಇಲ್ಲ. ಈ ಹಂತದಲ್ಲಿ ನಮ್ಮ ಸರ್ಕಾರ ಹಲವಾರು ರೀತಿಯಲ್ಲಿ ಸಾಧನೆಗಳನ್ನು ಮಾಡಿದೆ. ಇವತ್ತು ತಾವು ಇಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಬಿ.ಜೆ.ಪಿ. ಮುಖಂಡರಾದ ಶ್ರೀಮಾನ್ ಯಡಿಯೂರಪ್ಪನವರು ರೈತರ ಸಾಲ ಮನ್ನಾ ಮಾಡಬೇಕೆಂದು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕಳೆದ 5 ವರ್ಷಗಳಿಗಿಂತ ಹಿಂದೆ, ಪ್ರಥಮವಾಗಿ 1989ನೇ ಇಸವಿಯಲ್ಲಿ ಶಾಸಕರಾಗಿ ಬಂದಂಥ ದಿವಸವೇ ಇಲ್ಲಿ ಧರಣಿ ಪ್ರಾರಂಭ ಮಾಡಿದ್ದೀರಿ. ಇದರಿಂದ ಹೆಚ್ಚಿನ ರೀತಿಯ ಪರಿಣಾಮ ಬಡವರ ಮೇಲೆ ಆಯಿತು. ತಾವು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಯಾರೂ ಸಾಲ ಕಟ್ಟಬೇಡಿ, ನಾವು ಸಾಲ ಮನ್ನಾ ಮಾಡಿಸುತ್ತೇವೆ, ನಮಗೆ ಮತ ಕೊಡಿ ಎಂದು ತಾವು ಪ್ರತಿಯೊಂದು ಕಡೆಗಳಲ್ಲೂ ಭಾಷಣ ಮಾಡಿದ್ದೀರಿ. ಜನ ನಿಮ್ಮ ಮಾತನ್ನು ನಂಬಿದ್ದರು. ಇವತ್ತು, ತಮ್ಮ ಕಾರ್ಯಕರ್ತರು ಅಥವಾ ತಮ್ಮ ಮುಖಂಡರುಗಳೆಲ್ಲಾ ಹೋಗಿ ಸಾಲ ಕಟ್ಟಿದ್ದಾರೆ. ಇವತ್ತು ಯಾರ ಮನೆ ಜಪ್ತಿಯಾಗಿದೆ ಎಂದು ಹೇಳಿದರೆ, ಯಾರು ಬಡವ ಇದ್ದಾನೆ, ಯಾರು ಇವರ ಮಾತನ್ನು ನಂಬಿದ್ದಾನೆ, ಅವನ ಮನೆ ಜಪ್ತಿಯಾಗುವಂಥ ಪರಿಸ್ಥಿತಿ ಬಂದಿದೆ. ಈ ರೀತಿಯಾಗಿ ಮನುಷ್ಯನ ಜೀವನದ ಮೇಲೆ, ತಮ್ಮ ರಾಜಕೀಯವಾದಂಥ ಡೋಲಾಯಮಾನವಾದಂಥ ಈ ಪರಿಸ್ಥಿತಿಯನ್ನು ತರುವ ದಿಸೆಯಲ್ಲಿ ನಡೆದುಕೊಂಡಿದ್ದೀರಿ. ಹಲವಾರು ಸಂದರ್ಭದಲ್ಲಿ ಶ್ರೀಮಾನ್ ಯಡಿಯೂರಪ್ಪನವರು ಮಧ್ಯಪ್ರದೇಶದ ನೋಟಿಫಿಕೇಷನ್ ತಂದು ಇಲ್ಲಿ ಎತ್ತಿ ತೋರಿಸಿದರು. ಮೊನ್ನೆ ಮಧ್ಯಪ್ರದೇಶದ ನಿಮ್ಮ ನೋಟಿಫಿಕೇಷನ್ ಏನಾಯಿತು, ಮೊನ್ನೆ ಚುನಾವಣೆಯಲ್ಲಿ ಎಲ್ಲಿ ಹೋಯಿತು ಸಾಲ ಮನ್ನಾ ಮಾಡುವುದು? ಉತ್ತರ ಭಾರತದ ನಿಮ್ಮ ನೋಟಿಫಿಕೇಷನ್ ಎಲ್ಲಿ ಹೋಯಿತು? ಇವತ್ತು ತಾವು ಇಲ್ಲಿ ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಹಲವಾರು ವಿಷಯಗಳ ಬಗ್ಗೆ ತಾವು ಉಗ್ರವಾಗ ಟೀಕೆ ಮಾಡಿದ್ದೀರಿ. ನಾನು ತಮ್ಮ ಹತ್ತಿರ ಪ್ರಶ್ನೆ ಮಾಡುತ್ತೇನೆ, ಕಳೆದ ಒಂದು ಸಂದರ್ಭದಲ್ಲಿ ಅಯೋಧ್ಯೆಯ ಸಮಸ್ಯೆ ಇರುವಂಥ ಸಂದರ್ಭದಲ್ಲಿ ತಾವು, ತಮ್ಮ ಇಟ್ಟಿಗೆಯನ್ನು ಪ್ರತಿ ಮನೆ ಮನೆಗೆ ತೆಗೆದುಕೊಂಡು ಹೋಗಿ, ಹರಕೆ ಹಣವನ್ನು ತೆಗೆದುಕೊಂಡು, ಹೋದಿರಿ. ಇದು ಒಟ್ಟು ಎಷ್ಟು ಕಲೆಕ್ಷನ್ ಆಗಿದೆ, ಈ ಲೆಕ್ಕ ಎಲ್ಲಿ ಹೋಯಿತು. ಈ ಹಣ ಏನಾಯಿತು. ದೇವರ ಹೆಸರಿನಲ್ಲಿಯೇ ಭ್ರಷ್ಟಾಚಾರ ಮಾಡುವಂಥ ಜನರು .....

ಶ್ರೀ ಕೆ.ಎಸ್. ಈಶ್ವರಪ್ಪ : ಈ ವಿಚಾರದಲ್ಲಿ ನಿಮಗೇನು ಸಂಬಂಧವಿದೆ? ನಿಮಗೂ ಅಯೋಧ್ಯೆ ರಾಮನಿಗೂ ಸಂಬಂಧ ಇಲ್ಲ. ನೀವು ದುಡ್ಡು ಕೊಟ್ಟಿಲ್ಲ. ಅದನ್ನು ಹೇಳುವುದಕ್ಕೆ ನೀವಾರು?

ಶ್ರೀ ವಿನಯಕುಮಾರ್ ಸೊರಕೆ : ನಾವೂ ಕೂಡ ಶ್ರೀರಾಮಚಂದ್ರನನ್ನು ನಂಬುವಂಥ ಜನರು. ಶ್ರೀರಾಮಚಂದ್ರನನ್ನು ನಿಮಗೇನೂ ಗುತ್ತಿಗೆಗೆ ಕೊಟ್ಟಿಲ್ಲ. ತಾವು ಹರಕೆ ಹಣ ತೆಗೆದುಕೊಂಡು ಅಲ್ಲಿ ದೇವಸ್ಥಾನ ಕಟ್ಟುತ್ತೇವೆಂದು ಹೇಳಿ, ಪ್ರತಿ ಹಳ್ಳಿಯಲ್ಲಿ ಕಲೆಕ್ಷನ್ ಮಾಡಿದ್ದೀರಿ. ಯಾವ ಹಳ್ಳಿಯಲ್ಲಿ ಎಷ್ಟು ಕಲೆಕ್ಷನ್ ಆಯಿತು, ಆ ಹಣವೆಲ್ಲಾ ಎಲ್ಲಿ ಹೋಯಿತು. ವಿ.ಪಿ. ಸಿಂಗ್ರವರ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಒಂದೇ ಒಂದು ದಿವಸ. ಒಬ್ಬ ಕೇಂದ್ರ ಸರ್ಕಾರದ ಅಧಿಕಾರಿ ಇದನ್ನು ಪ್ರಶ್ನೆ ಮಾಡಿದ್ದಕ್ಕೆ, ರಾತ್ರಿ ಬೆಳಗಾಗುವುದರೊಳಗೆ ಅವರನ್ನು ವರ್ಗಾವಣೆ [illegible]

ಪ್ರಶ್ನೆ ಮಾಡಬೇಕಾಗುತ್ತದೆ. ತಾವು ದೇವರ ಹೆಸರಿನಲ್ಲಿ ಹಣವನ್ನು ಕಲೆಕ್ಷನ್ ಮಾಡಿದ್ದೀರಿ. ತಾವು ಎಷ್ಟು ಹಣವನ್ನು ಕಲೆಕ್ಷನ್ ಮಾಡಿದ್ದೀರಿ, ಆ ಹಣವನ್ನು ಚುನಾವಣೆಗೆ ಉಪಯೋಗ ಮಾಡಿದ್ದೀರಾ, ಅಥವಾ ಯಾವುದಕ್ಕೆ ಆ ಹಣವನ್ನು ಖರ್ಚು ಮಾಡಿದ್ದೀರಿ? ಅದು ಸಾರ್ವಜನಿಕರಿಗೆ ಸೇರಿದಂಥ ಹಣ. ಇವತ್ತು ಆ ದೇವರ ಹಣವನ್ನೇ ಖರ್ಚು ಮಾಡಿದಂಥ ಜನರಿಗೆ ಭ್ರಷ್ಟಾಚಾರದ ಮೇಲೆ.....

ಶ್ರೀ ಕೆ.ಎಸ್. ಈಶ್ವರಪ್ಪ : ಇಡೀ ದೇಶದಲ್ಲಿ ಅಯೋಧ್ಯೆಯ ರಾಮಮಂದಿರದ ಬಗ್ಗೆ ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಇವರು ಒಂದು ಪ್ರಶ್ನೆ ಎತ್ತಿದ್ದಾರೆ. ಅಯೋಧ್ಯೆಯಲ್ಲಿ ರಾಮಮಂದಿರ ಆಗಬೇಕೆಂಬ ಅಪೇಕ್ಷೆಯಿಂದ, ಕೋಟಿ ಕೋಟಿ ಜನ ವಿಶ್ವಹಿಂದೂ ಪರಿಷತ್ತಿಗೆ ಹಣ ಕೊಟ್ಟಿದ್ದಾರೆ, ಅದರ ಬಗ್ಗೆ ಬ್ಯಾಂಕ್ ಪಾಸ್ಬುಕ್ ಸಮೇತ ಬಂದು ನೋಡುವವರಿಗೆ ನಾವು ಅವಕಾಶ ಕೊಡುತ್ತೇವೆ ಎಂದು ವಿಶ್ವಹಿಂದೂ ಪರಿಷತ್ತಿನ ಧರ್ಮಸಂತರು ಘೋಷಣೆ ಕೂಡ ಮಾಡಿದ್ದಾರೆ. ಭಾರತೀಯ ಜನತಾ ಪಕ್ಷ, ಈ ರೀತಿ ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಬೇಕೆಂದು ಹೊರಟಂಥ ಸಾಧುಸಂತರಿಗೆ ಬೆಂಬಲ ಕೊಡುವುದಕ್ಕೆ ನಾವು ಸಂಪೂರ್ಣವಾಗಿ ಒಪ್ಪಿಗೆ ಕೊಟ್ಟಿದ್ದೇವೆ; ಬೆಂಬಲ ಕೊಡುವುದಕ್ಕೆ ಹೊರಟಿದ್ದೇವೆ. ನಿಮಗೆ ಹಣದ ಲೆಕ್ಕ ಬೇಕೆಂದರೆ, ನಾಳೆ ನಿಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವುದಕ್ಕೆ ನಾನು ತಯಾರಿದ್ದೇನೆ. ಎಲ್ಲಾ ಲೆಕ್ಕಪತ್ರ ಸಂಪೂರ್ಣವಾಗಿ ತಾವು ನೋಡಬಹುದು. ಏಕೆಂದರೆ, ಅಯೋಧ್ಯೆಯಲ್ಲಿ ರಾಮ ಮಂದಿರ ಆಗಬೇಕೆಂದು ಅಪೇಕ್ಷೆ ಯಾರಿಟ್ಟಿದ್ದಾರೆ, ಅದಕ್ಕೆ ಯಾರು ಹಣ ಕೊಟ್ಟಿದ್ದಾರೆ, ಅದು ಅವರಿಗೆ ಸಂಬಂಧಪಟ್ಟ ವಿಚಾರ. ಅದಕ್ಕೋಸ್ಕರ, ನಿಮಗೆ ಪ್ರಶ್ನೆ ಕೇಳುವುದೇನೆಂದರೆ, ಅಯೋಧ್ಯೆಯಲ್ಲಿ ರಾಮಮಂದಿರ ಆಗಬೇಕೆಂದು ನಿಮಗೆ ಅಪೇಕ್ಷೆ ಇದ್ದರೆ, ಅದಕ್ಕೆ ನೀವು ಹಣವನ್ನೂ ಕೊಟ್ಟಿದ್ದರೆ, ಲೆಕ್ಕ ಕೇಳಲು ನಿಮಗೂ ಹಕ್ಕು ಇರುತ್ತದೆ. ಅಯೋಧ್ಯೆಯಲ್ಲಿ ರಾಮಮಂದಿರ ಆಗಬೇಕೆಂದು ನೀವು ಅಪೇಕ್ಷೆಪಟ್ಟಿದ್ದರೆ, ನೀವು ಕೂಡ ಹಣ ಕೊಟ್ಟಿದ್ದರೆ ನಿಮ್ಮನ್ನು ಕರೆದುಕೊಂಡು ಹೋಗಿ ಲೆಕ್ಕಪತ್ರ ನೋಡಲು ಈ ಒಂದು ಸಭೆಯ ಮುಖಾಂತರ ನಾನು ಒಪ್ಪಿಗೆ ಕೂಡ ಕೊಡುತ್ತೇನೆ, ಸವಾಲು ಕೂಡ ಎಸೆಯುತ್ತೇನೆ. ಈ ವಿಧಾನ ಸಭೆಯಲ್ಲಿ ಲೆಕ್ಕಪತ್ರ ಅವರು ಕೊಟ್ಟಿದ್ದು ಸರಿ ಇದೆ ಎಂದು ತಾವು ಒಪ್ಪಿಕೊಳ್ಳಬೇಕು ತಾವು ನನ್ನ ಸವಾಲು ಸ್ವೀಕಾರ ಮಾಡಲು ತಯಾರು ಇದ್ದರೆ ಹೇಳಿ.

ಶ್ರೀ ವಿನಯಕುಮಾರ್ ಸೊರಕೆ : ಈಗ ಅಯೋಧ್ಯೆಯಲ್ಲಿ ರಾಮಮಂದಿರ ಆಗಲಿಕ್ಕೆ ಕೂಡದು ಎಂದು ಯಾರೂ ಹೇಳುವುದಿಲ್ಲ ಎಲ್ಲರೂ ಕೂಡ ಅದನ್ನು ಒಪ್ಪುತ್ತಾರೆ. ನಾವೂ ಒಪ್ಪುತ್ತೇವೆ, ಸಿಂಧ್ಯಾರವರು ಕೂಡ ಸೇರಿಕೊಂಡು ಪ್ರತಿಯೊಬ್ಬರೂ ಕೂಡ ಒಪ್ಪುತ್ತಾರೆ. ಮುಸ್ಲಿಂಲೀಗ್ನವರು ಒಪ್ಪುತ್ತಾರೆ. ಅಯೋಧ್ಯಯದಲ್ಲಿ ರಾಮಮಂದಿರ ಆಗಲಿಕ್ಕೆ ಯಾರೂ ಕೂಡ ವಿರೋಧ ಇಲ್ಲ. ಇವತ್ತು ತಾವು ವಿಶ್ವ ಹಿಂದೂ ಪರಿಷತ್ತಿನ ಮೂಲಕ ಲೆಕ್ಕಪತ್ರ ಕೊಡುತ್ತೇವೆಂದು ಹೇಳಿದ್ದೀರಿ. ನಮ್ಮ ಗ್ರಾಮದಿಂದ ಹಣ ಕಲೆಕ್ಷನ್ ಆಗಿದೆ. ಒಂದೊಂದು ಗ್ರಾಮದಲ್ಲಿ ಎಷ್ಟೆಷ್ಟು ಕಲೆಕ್ಷನ್ ಆಗಿದೆ ಎನ್ನುವುದನ್ನು ತಾವು ಇದುವರೆಗೂ ಏನಾದರೂ ಹೇಳಿದ್ದೀರಾ? ಎಷ್ಟು ಕಲೆಕ್ಷನ್ ಆಗಿದೆ, ಆ ಹಣ ಎಲ್ಲಿ ಹೋಯಿತು ಎನ್ನುವುದನ್ನು ತಾವು ಏನಾದರೂ ಹೇಳಿದ್ದೀರಾ? ಈಗ ಪ್ರತಿಯೊಂದು ಗ್ರಾಮದಿಂದ ಎಷ್ಟೆಷ್ಟು ಹಣ ಬಂದಿದೆ ಎಂದು ಅನೌನ್ಸ್ ಮಾಡಿ. ಈ ಗ್ರಾಮದಿಂದ ನಾವು ಇಷ್ಟು ಕಲೆಕ್ಷನ್ ಮಾಡಿದ್ದೇವೆ, ಇದರಲ್ಲಿ ವಿಶ್ವಹಿಂದೂ ಪರಿಷತ್ತಿಗೆ ಇಷ್ಟು ಕಳುಹಿಸಿದ್ದೇವೆ ಎಂದು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ವಿಶ್ವಹಿಂದೂ ಪರಿಷತ್ತಿನ ಲೆಕ್ಕವನ್ನು ಅವರು ಬೇಕೆಂದು ಕೇಳಿದರೆ ನಾವು ಆಮೇಲೆ ಕೊಡುತ್ತೇವೆ ಮೊದಲು

ಹೆಸರಿನಲ್ಲಿ ಲೂಟಿ ಮಾಡಿದ್ದಾರಲ್ಲ ಅದರ ಅಕೌಂಟ್ಸ್ ಕೊಡಿ. ಆ ಗೃಹ ಮಂಡಲಿಯ ಮೂಲಕ ಬಡವರಿಗೆ ಮನೆ ಕಟ್ಟಿಕೊಡುತ್ತೇವೆಂದು ಹೇಳಿ 20 ಕೋಟಿ ರೂಪಾಯಿಗಳನ್ನು ನಿಮಗೆ ಬೇಕಾದವರಿಗೆ ಕೊಟ್ಟು ಮುಗಿಸಿದ್ದೀರಲ್ಲ, ಅದರ ಲೆಕ್ಕ ಕೊಡಿ. ಏಕೆಂದರೆ, ತಾವು ಸ್ವಲ್ಪ ಜವಾಬ್ದಾರಿಯಿಂದ ಮಾತನಾಡಿ. ನಿಮಗೆ ರಾಮನ ಸ್ಮರಣೆ ಬಿಟ್ಟುಬೇರೆ ಇಲ್ಲ. ನೀವು ಒಬ್ಬ ಶಾಸಕರಾಗಿ ಯಾವುದೋ ಒಂದು ಸಂಸ್ಥೆಯ ಬಗ್ಗೆ ಮಾತನಾಡಬೇಕಾದರೆ ಮಾತನಾಡಿ. ಆಯಿತು ಸ್ವಾಮಿ, ಮೊದಲು ನೀವು ಎಲ್ಲದರ ಬಗ್ಗೆ ಲೆಕ್ಕ ಕೊಡಿ. ಮೊದಲು ನೀವು ಯಾವ ಯಾವುದನ್ನು ಲೂಟಿ ಮಾಡಿದ್ದೀರಿ, ಆ ಲೆಕ್ಕ ಎಲ್ಲಾ ಕೊಡಿ, ಇಲ್ಲಿ ಚರ್ಚೆ ಆಗಲಿ. ಬೆಳಿಗ್ಗೆ ನಿಮ್ಮ ಮುಖ್ಯಮಂತ್ರಿಗಳನ್ನು ಕೇಳಿದೆ

1-25 ಕೋಟಿ ರೂಪಾಯಿಗಳನ್ನು ಯಾರು ಡ್ರಾ ಮಾಡಿದ್ದಾರೆ ಅವರ ಹೆಸರು ಹೇಳಿ ಎಂದರೆ ಸಿ.ಬಿ.ಐ. ನಲ್ಲಿದೆ ಯಡಿಯೂರಪ್ಪನವರೇ ನಾನು ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ ಎಂದು ಹೇಳಿದ್ದಾರೆ. ಲಾಯರ್ನ್ನು ನೇಮಕ ಮಾಡಿ ಕೇಸ್ ಹಾಕುವುದಕ್ಕೆ ಒಂದೂ ಕಾಲು ವರ್ಷವಾಯಿತು. ಈ ಬಗ್ಗೆ ಸರಿಯಾದ ಉತ್ತರ ಕೊಡಲಿಲ್ಲ ಸುಮ್ಮನೆ ಇಲ್ಲಿ ಬೇಜವಾಬ್ದಾರಿಯಿಂದ ಏತಕ್ಕೆ ಮಾತನಾಡುತ್ತೀರಿ.

ಶ್ರೀ ವಿನಯಕುಮಾರ ಸೊರಕೆ : ಈಗ ತಾವು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ನಮ್ಮ ಸರ್ಕಾರದ ಮೇಲೆ ಹಲವಾರು ಆರೋಪಗಳನ್ನು ತಾವು ಮಾಡಿದ್ದೀರಿ. ತಾವು ಆರೋಪವನ್ನು ಮಾಡುವಂತಹ ಸಂದರ್ಭದಲ್ಲಿ ತಮಗೂ ಕೂಡ.....

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಸರ್ಕಾರ ಅಂದ್ರೆ ಯಾವುದು? ನಿಮ್ಮ ಸರ್ಕಾರ ಅಂದ್ರೆ ಮೊಯ್ಲಿಯವರನ್ನು ವಿರೋಧ ಮಾಡಿ ಬಾವಿಯಲ್ಲಿ ಬಿದ್ದು ಸತ್ಯಾಗ್ರಹ ಮಾಡಿದ್ದರಲ್ಲ ಮಾನ ಮರ್ಯಾದೆ ಹೋಯಿತು ಎಂದು ಅವರಲ್ಲಿ ಇವರೂ ಒಬ್ಬರು. ಆದ್ದರಿಂದ ಇವರ ಸರ್ಕಾರ ಯಾವುದು ಎಂದು ಗೊತ್ತಾಗಬೇಕು.

ಶ್ರೀ ವಿನಯಕುಮಾರ ಸೊರಕೆ : ತಾವು ತಮ್ಮ ವಿಚಾರವನ್ನು ದೇವರಿಗೆ ಸಂಬಂಧಪಟ್ಟಂತೆ ಇಲ್ಲಿ ಹೇಳುತ್ತಿದ್ದೀರಿ. ಆ ರೀತಿಯಲ್ಲಿ ಹೋರಾಟ ಮಾಡುತ್ತಿದ್ದೀರಿ. ತಮ್ಮ ಭಕ್ತಿ ದೇವರಮೇಲೆ ಎಷ್ಟು ಇದೆ ಎಂದು ನಾನು ಹೇಳಬೇಕಾದರೆ ಕಳೆದ ಸಲ ತಮ್ಮ ದೇವರ ಇಟ್ಟಿಗೆ ಇಟ್ಟುಕೊಂಡು ಪೂಜೆ ಮಾಡಿ ಪ್ರಮಾಣ ಮಾಡಿಸಿದಂತಹ ಒಬ್ಬ ಹುಡುಗ ತಮ್ಮ ಪಕ್ಷದ ಕಾರ್ಯಕರ್ತ ಇವತ್ತು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಸೂಳ್ಯ ತಾಲ್ಲೂಕಿನ ಪಂಚಲಿಂಗೇಶ್ವರ ದೇವಸ್ಥಾನದ ವಿಗ್ರಹವನ್ನು ಕದ್ದು ಪ್ರಥಮ ಆರೋಪಿ ಆಗಿದ್ದಾನೆಂದು ಹೇಳಿದರೆ ತಮಗೆ ದೇವರ ಮೇಲೆ ಎಷ್ಟು ಭಕ್ತಿ ಇದೆ ಎಂದು ತಾವು ಅರ್ಥ ಮಾಡಿಕೊಳ್ಳಬೇಕು. ಇವತ್ತು ಅದರ ಮಟ್ಟಿಗೆ ಇಲ್ಲಿ ಚರ್ಚೆ ಬೇಡ. ಹಲವಾರು ಒಳ್ಳೆಯ ಕಾರ್ಯಕ್ರಮಗಳನ್ನು ಸರ್ಕಾರ ಉತ್ತಮ ರೀತಿಯಲ್ಲಿ ಹಾಕಿಕೊಂಡಿದೆ. ನಮ್ಮ ರಾಜ್ಯದಲ್ಲಿ ಜನಸಂಖ್ಯೆ ಹೆಚ್ಚಾಗಿದ್ದರೂ ಕೂಡ ಅದಕ್ಕೆ ಅನುಗುಣವಾಗುವಂತಹ ರೀತಿಯಲ್ಲಿ ಜನಗಳ ಬೇಡಿಕೆಯನ್ನು ಈಡೇರಿಸುವಂತಹ ದಿಸೆಯಲ್ಲಿ ಕಾರ್ಯಕ್ರಮ ಹಾಕಿಕೊಂಡಿದೆ. ಇವತ್ತು ತಮಗೆ ಗೊತ್ತಿಗೆ, ಪಂಚಾಯತಿ ಚುನಾವಣೆ ಫಲಿತಾಂಶದ ಬಗ್ಗೆ ತಾವು ತೆಗೆದು ನೋಡಬಹುದು. ಜನರು ಯಾವ ರೀತಿಯಲ್ಲಿ ಉತ್ತರ ಕೊಟ್ಟಿದ್ದಾರೆ ಎನ್ನುವುದನ್ನು ನೋಡಬಹುದು. ಮಾನ್ಯ ಸಿಂಧ್ಯಾರವರ ಕ್ಷೇತ್ರದಲ್ಲಿ ಇರಬಹುದು. ಇವತ್ತು ನಾನು ಒಂದೊಂದು ಕ್ಷೇತ್ರಕ್ಕೆ ಸೀಮಿತವಾಗಿ ಹೇಳುತ್ತಿಲ್ಲ, ತಮಗೆ ಗೊತ್ತಿದೆ, ತಮ್ಮ ಪಕ್ಷದ ಅಧ್ಯಕ್ಷರಾಗಿ ಶ್ರೀಮಾನ್ ದೇವೇಗೌಡರು ಇದ್ದಾರೆ ಇವತ್ತು ಪಂಚಾಯತಿ ರಾಜ್ ಮೀಸಲಾತಿಯ ಬಗ್ಗೆ ಅವರು ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಈ ರಾಜ್ಯದಲ್ಲಿ ಹರಿಜನ ಮತ್ತು ಗಿರಿಜನರಿಗೆ ಅವಕಾಶ ಸಿಗುವುದು ಬೇಡವೇ? ಹಿಂದುಳಿದ ವರ್ಗದವರಿಗೆ ಅವಕಾಶ ಸಿಗುವುದು ಬೇಡವೇ? ಮಂಡಲಪಂಚಾಯತಿ ಪ್ರಧಾನರು ಮತ್ತು ಉಪ ಪ್ರಧಾನರು ಅವರು ಆಗಲಿಕ್ಕೆ

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ನಮ್ಮ ಪಕ್ಷದ ಅಧ್ಯಕ್ಷರು ಮತ್ತು ನಮ್ಮ ಪಕ್ಷದ ಪ್ರಣಾಳಿಕೆ ವಿಚಾರ ಇಲ್ಲಿ ಬಂದಿರುವುದರಿಂದ ನಾನು ಇಲ್ಲಿ ಪ್ರಸ್ತಾಪ ಮಾಡುತ್ತಾ ಇದ್ದೇನೆ. ಮಾನ್ಯ ವಿನಯಕುಮಾರ್ ಸೊರಕೆಯವರು ಮೂರನೇ ಸಾಲಿ ವಿಧಾನ ಸಭೆಗೆ ಗೆದ್ದು ಬರುತ್ತಿದ್ದಾರೆ. ಮತ್ತೆ ಅವರು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ನನ್ನದೇನೂ ತಕರಾರು ಇಲ್ಲ. ಅವರು ಮಾತನಾಡಲಿ. ನಮ್ಮ ಪಕ್ಷದ ಸಿದ್ಧಾಂತದ ಪ್ರಶ್ನೆ ಬಂದಾಗ ಅವರು ಒಂದು ವಿಷಯವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಯಾವುದಾದರೂ ಸರ್ಕಾರ ಹಿಂದುಳಿದ ಜಾತಿಯ ಹೆಸರಿನಲ್ಲಿ, ಪರಿಶಿಷ್ಟ ಜಾತಿಯ ಹೆಸರಿನಲ್ಲಿ ಅಧಿಕಾರವನ್ನು ಕಳೆದುಕೊಂಡಿದ್ದರೆ ಅದು ನಮ್ಮ ಸರ್ಕಾರ ಎನ್ನುವುದು ದಯವಿಟ್ಟು ಗೊತ್ತಾಗಬೇಕು. ನಾವು ಎಲ್ಲರೂ ಸಹ ಮಾನ್ಯ ದೇವೇಗೌಡರು ಆಗಲಿ, ನಾವು ಆಗಲಿ, ನಮ್ಮ ನಾಯಕರಾದ ಹೆಗಡೆಯವರು ಆಗಲಿ, ದೇಶಪಾಂಡೆಯವರು ಆಗಲಿ, ನಾವು ಯಾರೂ ಈ ಕಡೆ ಇರತಕ್ಕಂಥ ಸದಸ್ಯರುಗಳು ಅಥವಾ ನಮ್ಮ ಜೊತೆಯಲ್ಲಿರತಕ್ಕಂಥ ವಿರೋಧಪಕ್ಷದ ಮಿತ್ರರುಗಳು ಮಂಡಲ ಪಂಚಾಯತಿಯ ಪ್ರಧಾನರು ಮತ್ತು ಉಪಪ್ರಧಾನರ ಸ್ಥಾನಗಳಿಗೆ ಮೀಸಲಾತಿ ಇಡಬಾರದು ಎಂದು ಹೇಳುವುದಿಲ್ಲ. ಇದರ ಬಗ್ಗೆ ಒಂದು ವಿವರಣೆ ಬರಬೇಕು, ರಾಜ್ಯದ ಜನರಿಗೆ ಇದು ಗೊತ್ತಾಗಬೇಕು ಎನ್ನುವ ದೃಷ್ಟಿಯಿಂದಲೇ ನಾನು ಇದನ್ನು ಹೇಳುತ್ತಿದ್ದೇನೆ. ಸನ್ಮಾನ್ಯ ದೇವೇಗೌಡರು ಹೇಳಿರತಕ್ಕಂಥಾದ್ದು ಇಷ್ಟೇನೇ ನಾವು ಹೇಳತಕ್ಕಂಥಾದ್ದು ಇಷ್ಟೆ. ಪ್ರಧಾನರು ಮತ್ತು ಉಪ ಪ್ರಧಾನರಿಗೆ ಮೀಸಲಾತಿಯನ್ನು ಎಲ್ಲಾ ಜಾತಿಯವರಿಗೂ ಕೊಡಲೇಬೇಕು. ಆದರೆ ಇವತ್ತು ನಿಮ್ಮ ಕಾನೂನು ಏನಾಗಿದೆ ಎಂದರೆ, ಹಿಂದುಳಿದ ವರ್ಗದವರಿಗೆ, ಬೆಸ್ತರಿಗೆ ಕುಂಬಾರರಿಗೆ, ಕುರುಬರಿಗೆ, ಈಡಿಗರಿಗೆ, ನಾಯಿಂದ ಅವರಿಗೆ ಆಚಾರ್ ಇಂತಹ ಜಾತಿಯವರಿಗೆ ಹಿಂದುಳಿದ ವರ್ಗದವರು ಎಂದು ಹೇಳಿ ಪ್ರಧಾನರನ್ನಾಗಿ ಮಾಡಿದ್ದೇವೆಂದು ಹೇಳಿದಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. 10 ಸಾವಿರ ರೂಪಾಯಿಗಳ ಇನ್ಕಮ್ ಸರ್ಟಿಫಿಕೇಟನ್ನು ಯಾರ್ಯಾರು ಬಳ್ಳಾರಿಯಲ್ಲಿ ರಾಯಚೂರಿನಲ್ಲಿ ತೆಗೆದುಕೊಂಡಿದ್ದಾರೆ ಎನ್ನುವ ವಿಶ್ಲೇಷಣೆಯನ್ನು ಈ ಸದನದಲ್ಲಿ ಮಾಡುವ ಅಗತ್ಯ ಇದೆಯೇ ಎಂದು ದಯವಿಟ್ಟು ಯೋಚನೆ ಮಾಡಿ. ಇದು ಒಂದಾಯಿತು, ಎರಡನೆಯದು ನಾನು ಹೇಳುತ್ತಿದ್ದೇನೆ. ನೀವು ಪರಿಶಿಷ್ಟ ಜಾತಿಯವರಿಗೆ ಪರಿಶಿಷ್ಟ ವರ್ಗದವರಿಗೆ ಪ್ರಧಾನರು ಮತ್ತು ಉಪಪ್ರಧಾನರ ಸ್ಥಾನವನ್ನು ಎಲ್ಲಿ ಕೊಡುತ್ತಿದ್ದೀರಾ? ಆತ್ಮವಂಚನೆಯನ್ನು ನಾವು ಮಾಡಿಕೊಳ್ಳತಕ್ಕಂಥಾದ್ದು ಬೇಡ. ಇವತ್ತು ಏನು ನಡೆದಿದೆ. ನಾವು ಶಾಸಕರು ಹೇಳುವ ಕಡೆ ಎಲ್ಲೆಲ್ಲಿ ನಮಗೆ ಅನುಕೂಲ ಆಗುತ್ತದೆ ಅಂತಹ ಸ್ಥಾನಗಳಲ್ಲಿ ಆ ಸ್ಥಾನಮಾನಗಳನ್ನು ಕೊಡಿ ಎಂದು ಹೇಳಿದ್ದಕ್ಕೆ ನಾವೆಲ್ಲ ಇಲ್ಲಿ ಪಿತೂರಿ ಮಾಡುತ್ತಿದ್ದೇವೆ ವಿನಃ ಎಲ್ಲಿ ಆ ವರ್ಗದ ಜನ ಜಾಸ್ತಿ ಇದ್ದಾರೆ ಅಲ್ಲಿ ಮೀಸಲಾತಿಯನ್ನು ಕೊಡಿ ಎಂದು ಹೇಳುತ್ತಿಲ್ಲ. ಆದ್ದರಿಂದ ದಯವಿಟ್ಟು ತಾವು ಈ ಮೀಸಲಾತಿಯ ಬಗ್ಗೆ ಬೇರೆ ಏನು ಬೇಕಾದರೂ ಹೇಳಿಕೊಳ್ಳಿ, ನೀವು ಟೀಕೆ ಮಾಡಿಕೊಳ್ಳಿ, ಆದರೆ ನಮ್ಮ ಪಕ್ಷದ ತತ್ವದ ಬಗ್ಗೆ ತಾವು ಪ್ರಶ್ನೆ ಮಾಡುವುದಕ್ಕೆ ಹೋಗಬೇಡಿ. ನಾವು ಸರ್ಕಾರ ಕಳೆದು ಕೊಂಡಿದ್ದೇವೆ.

ಶ್ರೀ ರಮಾನಾಥ ರೈ (ಗೃಹ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಅವರ ಪಕ್ಷದ ಸಿದ್ಧಾಂತದ ಬಗ್ಗೆ ಬಹಳಷ್ಟು ಉಲ್ಲೇಖ ಮಾಡಿದ್ದಾರೆ. ಅವರ ಕಾಲದಲ್ಲಿ ಮಂಡಲ ಪಂಚಾಯತಿ ಚುನಾವಣೆ ನಡೆಯಿತು. ಆ ಸಿದ್ಧಾಂತದ ಅಡಿಯಲ್ಲೇ ಪಂಚಾಯತಿಯಲ್ಲಿ ಮೀಸಲಾತಿಯನ್ನು ಕೊಡಬಹುದಿತ್ತು, ಅದನ್ನು ಕೊಡಲಿಲ್ಲ ಈಗ ಯಾರು ಕೊಟ್ಟಿದ್ದಾರೆ, ಅದನ್ನು ಟೀಕೆ ಮಾಡುವುದಕ್ಕೆ ಹೊರಟಿದ್ದಾರೆ. ತಾವು ಆ ಸಿದ್ಧಾಂತದ ಬಗ್ಗೆ ಮಾತನಾಡುವುದಕ್ಕಿಂತಲೂ.....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈ ಅಲ್ಪಬುದ್ಧಿಯವರಿಗೆ ಬಹಳ ಕಷ್ಟಸ್ವಾಮಿ ಹೇಳುವುದು, ನಾನು ಹೇಳುತ್ತೇನೆ ಕೇಳಿ, ಅಥವಾ ಪೂರ್ತಿ ತಿಳಿದುಕೊಳ್ಳಬೇಕು.

ನಾವು ಸ್ವಾಗತ ಮಾಡಿದ್ದೇವೆ. ನಾವು ಮಾಡುವುದಕ್ಕೆ ಆಗಿಲ್ಲ, ನೀವು ಮಾಡಿದ್ದೀರಾ ಎಂದು ನಾವು ಸ್ವಾಗತ ಮಾಡಿದ್ದೇವೆ. ನಾವು ಅಮೆಂಡ್ ಮೆಂಟ್ ತರಬೇಕು ಎಂದು ಇದ್ದೆವು. ನೀವು ಒಳ್ಳೆಯ ಕೆಲಸ ಮಾಡಿದ್ದೀರೆಂದು ನಾವು ಬೆನ್ನುತಟ್ಟುತ್ತಿದ್ದರೆ ಇಲ್ಲಾ ನಾವು ಕತ್ತೆ ಕತ್ತೆ ದಾರಿಯಲ್ಲೇ ಹೋಗುತ್ತೇವೆಂದು ಹೇಳಿದರೆ ಹೋಗಿ. ನಾನೇನು ಮಾಡುವುದಕ್ಕೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅವರು ಕತ್ತೆ ಕಥೆ ಹೇಳಿದರು, ಅದರ ಹಿಂದೆ ತಾವು ಹೋಗಬೇಡಿ ಅಷ್ಟೆ.

ಶ್ರೀ ವಿನಯಕುಮಾರ್ ಸೊರಕೆ : ನಾನು ತಮ್ಮ ಪಕ್ಷದ ಅಧ್ಯಕ್ಷರ ಹೇಳಿಕೆ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ರಿಜರ್ವೇಶನ್ನಲ್ಲಿ ತಾವು ಬ್ಯಾಕ್ವರ್ಡ್ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದಿರಿ. ಇವತ್ತು ತಾವೇ ಕೊಟ್ಟಂತಹ ಪಟ್ಟಿಯ ಆಧಾರದ ಮೇಲೆ ಇವತ್ತು ಬ್ಯಾಕ್ವರ್ಡ್ ಕ್ಲಾಸ್ಗೆ ರಿಜರ್ವೇಶನ್ ಕೊಡುವಂತಹ ಅವಕಾಶ ಆಗಿದೆ. ತಮ್ಮ ಸರ್ಕಾರ ಇರುವಾಗ ಮಾಡಿದಂಥ ಪಟ್ಟಿ ಇದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಅದನ್ನು ನೀವು ಚೇಂಜ್ ಮಾಡ್ತಿರಿ.

ಶ್ರೀ ವಿನಯಕುಮಾರ್ ಸೊರಕೆ : ತಾವು ಅದರ ಮಟ್ಟಿಗೆ ತಾವೇ ಅಧಿಕಾರದಲ್ಲಿ ಇರುವಾಗ ಅದನ್ನು ಬದಲಾವಣೆ ಮಾಡಲಿಕ್ಕೆ ಆಗಲಿಲ್ಲ.

ಶ್ರೀ ರಮಾನಾಥ ರೈ : ಮೀಸಲಾತಿ ಕೊಡುವ ಕ್ರಮದಲ್ಲಿ ತಪ್ಪಾಗಿದೆ ಎಂದು ತಾವು ಹೇಳಿದಿರಿ. ಅದಕ್ಕೂ ಕಾರಣ ಇವರೇ. ಏಕೆಂದರೆ ವೆಂಕಟಸ್ವಾಮಿ ಆಯೋಗ ಮಾಡಿ ಹಿಂದುಳಿದ ಪಟ್ಟಿಯಲ್ಲಿ ಎಲ್ಲರನ್ನೂ ಸೇರಿಸಿದ್ದರಿಂದ ಈ ಸಮಸ್ಯೆ ಬಂತು. ಇಲ್ಲದಿದ್ದರೆ ಇಂತಹ ಸಮಸ್ಯೆ ಬರುತ್ತಿರಲಿಲ್ಲ ಅದಕ್ಕೂ ನೀವೇ ಕಾರಣ.

ಶ್ರೀ ವಿನಯಕುಮಾರ್ ಸೊರಕೆ : ನಮ್ಮ ಸರ್ಕಾರ ಹಲವಾರು ರೀತಿಯ ಕಾರ್ಯಕ್ರಮಗಳನ್ನು ಜೋಡಣೆ ಮಾಡುವ ಜೊತೆಯಲ್ಲಿ ಇವತ್ತು ಇಲ್ಲಿ ಟೀಕೆ ಬಂದಿದೆ. ಕ್ಷೀರಯೋಜನೆ ಬಗ್ಗೆ ಕೂಡ ಟೀಕೆ ಬಂದಿದೆ. ನಮ್ಮ ಗ್ರಾಮೀಣ ಪ್ರದೇಶದಲ್ಲಿ ಹಾಲು ಕುಡಿಯುವಂತಹ ಮಕ್ಕಳ ಸಂಖ್ಯೆ ಎಷ್ಟು ಇರಬಹುದು ಎಂದು ತಮಗೆ ಗೊತ್ತಿದೆ. ಪ್ರಾಯೋಗಿಕವಾಗಿ ನಮ್ಮ ಸರ್ಕಾರಕ್ಕೆ ಇದನ್ನು ಪ್ರಾರಂಭ ಮಾಡುವಂತಹ ಅವಕಾಶ ಸಿಕ್ಕಿದೆ. ಇವತ್ತು ಒಂದನೇ ಕ್ಲಾಸಿನ ಮಕ್ಕಳಿಗೆ ಎಷ್ಟೋ ಹಾಲು ಕುಡಿಯದಂತಹ ಮಕ್ಕಳಿಗೆ ಹಾಲು ಕುಡಿಸುವಂತಹ ಕೆಲಸ ಕಾರ್ಯ ಆಗಿದೆ. ನೆರಳು ಭಾಗ್ಯ ಕಾರ್ಯಕ್ರಮ ಇರಬಹುದು ಅಥವಾ ವಿದ್ಯುತ್ ಯೋಜನೆ ಇರಬಹುದು ಅಥವಾ ನೀರಾವರಿ ಇರಬಹುದು, ಹಲವಾರು ನೀತಿಯ ಕಾರ್ಯಕ್ರಮ ಇರಬಹುದು. ಇಲ್ಲಿ ಹಲವಾರು ಸಂದರ್ಭದಲ್ಲಿ ತಮ್ಮ ಪಕ್ಷದ ಸರ್ಕಾರ ಇದ್ದಾಗ ಬಗರ್ ಹುಕುಂ ಬಗ್ಗೆ ಕಾನೂನು ತರುವುದಕ್ಕೆ ಮುಂದೆ ಬರಲಿಲ್ಲ.

ಇವೊತ್ತು ಯಾರು ಎಸ್ಟೇಟ್ ಮಾಲೀಕರು ಕೊಡಗು ಅಥವಾ ಚಿಕ್ಕಮಗಳೂರಿನಲ್ಲಿದ್ದಾರೆ, ಅವರ ಜೊತೆಯಲ್ಲಿ ತಮ್ಮ ಕಂದಾಯ ಸಚಿವರೇ ಆ ಸಂದರ್ಭದಲ್ಲಿ ಅದನ್ನು ಕೂಡ ಒಟ್ಟು ಸೇರಿಸಿಕೊಂಡು ಕಾನೂನು ತರುತ್ತೇವೆಂದು ತಾವು ಪ್ರಯತ್ನ ಮಾಡಿದಿರಿ. ಇವೊತ್ತು ಮನೆ ನಿವೇಶನ ಕೊಡುವಂಥ ಕಾರ್ಯಕ್ರಮ ಇರಬಹುದು, ಮನೆ ಕಟ್ಟುವಂಥ ಕಾರ್ಯಕ್ರಮವೇ ಇರಬಹುದು, ಇದರಲ್ಲಿಯೂ ಕೂಡ ಹಲವಾರು ರೀತಿಯ ನ್ಯೂನ್ಯತೆಗಳು ಇರಬಹುದು. ಯಾವುದೇ ಕೆಲಸವು ನೂರಕ್ಕೆ ನೂರರಷ್ಟು ಒಳ್ಳೆಯ ರೀತಿಯಲ್ಲಿ ಆಗುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇವೊತ್ತು ಐದು ಸೆಂಟ್ಸ್ನ ವರೆಗೆ ಮನೆ ನಿವೇಶನವನ್ನು ಕೊಡುವಂಥದ್ದು ಹಾಗೂ ಬಗರ್ಹುಕುಂ ಬಗ್ಗೆ ಅನೇಕ ಸಮಸ್ಯೆಗಳು ಇದ್ದರೂ ಕೂಡ ಅವರಿಗೆ ಪಟ್ಟಾ ಕೊಡುವಂಥಾದ್ದು ಆಗಿದೆ. ಎಷ್ಟೋ ವರ್ಷಗಳಿಂದ ಸರಕಾರದ ಜಾಗದಲ್ಲಿ ಕುಳಿತಿರುವವರು ಯಾವಾಗ ಹಕ್ಕುಪತ್ರ ಸಿಗುತ್ತದೋ ಎಂದು ಹೇಳಿ 1978ನೇ ಇಸವಿಗಿಂತ ಮೊದಲು ಕುಳಿತವರಿಗೆ ಹಕ್ಕುಪತ್ರ ಕೊಡಬೇಕೆಂದು

ಕಾನೂನು ಇದ್ದರೂ ಕೂಡ ತಮ್ಮ ಕಾಲದಲ್ಲಿ ಅದು ಬರೇ ಪುಸ್ತಕದಲ್ಲಿ ಮಾತ್ರ ಉಳಿಯಿತೇ ಹೊರತು ಅನುಷ್ಠಾನವಾಗುವಂಥ ಅವಕಾಶ ಆಗಲಿಲ್ಲ. ಇವೊತ್ತು ಪ್ರತಿ ಹಳ್ಳಿಗಳಲ್ಲಿಯೂ ಕೂಡ ಯಾರು ಬಡವರು ಆ ಜಾಗದಲ್ಲಿ ಕುಳಿತಿದ್ದಾರೆ ಅವರಿಗೆ ಹಕ್ಕುಪತ್ರವನ್ನು ಕೊಡುವಂಥ ಕಾರ್ಯಕ್ರಮ ನಡೆದಿದೆ. ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆಯೂ ಕೂಡ ತಮ್ಮ ಸರಕಾರವು ಇರುವಂಥ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಆಗಿವೆ, ಈಗ ಯಾವ ರೀತಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತಿದೆ ಎಂಬುದನ್ನು ತುಲನೆ ಮಾಡಿ ನೋಡಿದರೆ ವಾಸ್ತವ ವಿಚಾರ ತಮ್ಮ ಗಮನಕ್ಕೆ ಬರಬಹುದು. ಇವೊತ್ತು ನಾನು ಮಾನ್ಯ ರಾಜ್ಯಪಾಲರ ಭಾಷಣವನ್ನು ಬೆಂಬಲ ಮಾಡುತ್ತಾ ಇದ್ದೇವೆ. ಬರೇ ಟೀಕೆಗೋಸ್ಕರ ರಾಜ್ಯಪಾಲರನ್ನೇ ಗುರುತರವಾಗಿ ಇಟ್ಟುಕೊಂಡು ಟೀಕೆ ಮಾಡುವುದು ಸರಿಯಲ್ಲ. ನಮ್ಮಲ್ಲಿ ಏನೇ ಭಿನ್ನಾಭಿಪ್ರಾಯ ಇದ್ದರೂ ಕೂಡ ನಮ್ಮದ್ದೆಲ್ಲಾ ಒಂದು ಕುಟುಂಬ

ಶ್ರೀ ವಾಟಾಳ್ ನಾಗರಾಜ್ : ಅದು ಯಾವ ಕುಟುಂಬ?

ಶ್ರೀ ವಿನಯಕುಮಾರ್ಸೊರಕೆ : ತಾವು ಕುಟುಂಬ ಇಲ್ಲದವರು. ನಮ್ಮದ್ದು ಕಾಂಗ್ರೆಸ್ ಕುಟುಂಬ. ನೀವು ಏಕಾಂಗಿ

ಶ್ರೀ ವಾಟಾಳ್ ನಾಗರಾಜ್ : ಯಾವ ಕುಟುಂಬ ಎಷ್ಟು ಜನ ಸದಸ್ಯರು. ನಿಮ್ಮ ಕುಟುಂಬ ಬಹುಪತ್ನಿಯರ ಕುಟುಂಬ

ಶ್ರೀ ವಿನಯಕುಮಾರ್ ಸೊರಕೆ : ನಮ್ಮ ಕುಟುಂಬದಲ್ಲಿ ಈ ರಾಷ್ಟ್ರಕ್ಕೋಸ್ಕರ ಮಹಾತ್ಮಾ ಗಾಂಧೀಯವರ ಬಲಿದಾನವಾಗಿದೆ. ದಿವಂಗತ ಇಂದಿರಾ ಗಾಂಧೀಯವರ ಬಲಿದಾನವಾಗಿದೆ. ದಿವಂಗತ ರಾಜೀವ್ ಗಾಂಧೀಯವರ ಬಲಿದಾನವಾಗಿದೆ. ಈ ರಾಷ್ಟ್ರದ ಭದ್ರತೆ, ಐಕ್ಯತೆ ದುರ್ಬಲ ವರ್ಗದವರ ಏಳಿಗೆಗೋಸ್ಕರ ದುಡಿದ ಕುಟುಂಬ ನಮ್ಮದು

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಬಲಿದಾನದ ವಿಚಾರ ಹೇಳಿದ್ದೀರಲ್ಲ? ಅದನ್ನು ನೀವು ಮತ್ತೆ ಹೇಳಲು ಹೋಗಬೇಡಿ ಏಕೆಂದರೆ ಅದನ್ನು ಬಂಗಾರಪ್ಪನವರು ಎತ್ತಿಕೊಂಡು ಹೊರಟು ಹೋಗಿದ್ದಾರೆ.

ಶ್ರೀ ವಿನಯಕುಮಾರ ಸೊರಕೆ : ಆ ಒಂದು ದೃಷ್ಟಿಯಲ್ಲಿ ಮಾನ್ಯ ರಾಜ್ಯಪಾಲರ ಭಾಷಣವನ್ನು ಬೆಂಬಲಮಾಡುತ್ತಾ, ನನಗೆ ಅವಕಾಶ ಕೊಟ್ಟ ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಮಂತ್ರಿಗಳ ಹೇಳಿಕೆ

ಬಿಜಾಪುರ ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿರುವ ಸಮೀರವಾಡಿಯ ಮೆ: ಗೋದಾವರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲಿ ಬೆಳೆಯಲಾದ ಕಬ್ಬನ್ನು ಮಹಾರಾಷ್ಟ್ರ ರಾಜ್ಯಕ್ಕೆ ಸಾಗಾಣಿಕೆ ಮಾಡಲು ಅನುಮತಿ ನೀಡದಿರುವ ಬಗ್ಗೆ

ಡಾ||ಹೆಗ್ಗಪ್ಪ ಡಿ. ಲಮಾಣಿ (ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ಬಿಜಾಪೂರ ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿರುವ ಸಮೀರವಾಡಿಯ ಮೆ: ಗೋದಾವರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲಿ ಬೆಳೆಯಲಾದ ಕಬ್ಬನ್ನು ಮಹಾರಾಷ್ಟ್ರ ರಾಜ್ಯಕ್ಕೆ ಸಾಗಾಣಿಕೆ ಮಾಡಲು ಅನುಮತಿ ನೀಡುತ್ತಿಲ್ಲವೆಂಬ ವಿಚಾರದಬಗ್ಗೆ ಮಾನ್ಯ ಸದಸ್ಯರುಗಳಾದ ಶ್ರೀ ಏಕಾಂತಯ್ಯನವರು ಶ್ರೀ ಬಾಬಾಗೌಡ ಎಸ್. ಪಾಟೀಲ್ರವರು, ಶ್ರೀ ಬೈರೇಗೌಡ ಹಾಗೂ ವಿರೋಧ ಪಕ್ಷದ ಉಪನಾಯಕರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ರವರು ಪ್ರಸ್ತಾಪ ಮಾಡಿದ ವಿಷಯದ ಬಗ್ಗೆ ಈ ಹೇಳಿಕೆಯನ್ನು ನೀಡುತ್ತಿದ್ದೇನೆ.

ಸಕ್ಕರೆ ಕಾರ್ಖಾನೆಗಳ ಮೀಸಲು ಕ್ಷೇತ್ರವನ್ನು ಒಳಪಡಿಸಿದಂತೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕಬ್ಬನ್ನು ಸಾಗಾಣಿಕೆ ಮಾಡುವುದನ್ನು ತಡೆಯುವ ಅಥವಾ ನಿಯಂತ್ರಿಸುವ ಅಧಿಕಾರವು ಕಬ್ಬು ನಿಯಂತ್ರಣಾ ಆದೇಶ 1966ರ ಪ್ರಕಾರ ಕೇಂದ್ರ ಸರ್ಕಾರಕ್ಕೆ ಇರುತ್ತದೆ. ಈ ಅಧಿಕಾರವು ಕೇಂದ್ರರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಪ್ರತಿ ನಿಯೋಜಿಸಲ್ಪಟ್ಟಿದೆ. ಆ ಪ್ರಕಾರ ಕರ್ನಾಟಕ ಸರ್ಕಾರವು ಸಕ್ಕರೆ ಕಾರ್ಖಾನೆಗಳಿಗೆ ಮೀಸಲು ಕ್ಷೇತ್ರವನ್ನು ನಿಗಧಿ ಪಡಿಸಿ ಹೊರಡಿಸುವ ಆದೇಶದಲ್ಲಿ ಕಬ್ಬನ್ನು ಮೀಸಲು ಕ್ಷೇತ್ರದಿಂದ ಹೊರಗೆ ಸಾಗಾಣಿಕೆ ಮಾಡುವುದನ್ನು ನಿಯಂತ್ರಿಸುವ ಅಧಿಕಾರವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ನೀಡಲಾಗಿರುತ್ತದೆ. ಜಿಲ್ಲಾಧಿಕಾರಿಗಳಿಂದ ಪರವಾನಿಗೆ ಪಡೆದ ಕಬ್ಬು ಅಧಿಕೃತ ಸಾಗಾಣಿಕೆಗೆ ಅರ್ಹವಾಗಿರುತ್ತದೆ.

ನಮ್ಮ ರಾಜ್ಯದಿಂದ ಹೊರ ರಾಜ್ಯಗಳಿಗೆ ಕಬ್ಬನ್ನು ಸಾಗಿಸಲು ಅನುಮತಿ ನೀಡುವ ಮುನ್ನ ಕಬ್ಬಿನ ಉತ್ಪಾದನೆ, ಸ್ಥಳೀಯ ಕಾರ್ಖಾನೆಗಳ ಬೇಡಿಕೆ, ಬೆಲ್ಲ ತಯಾರಿಕೆ, ಬೀಜ ಮುಂತಾದ ಅಂಶಗಳನ್ನು ಗಮನದಲ್ಲಿರಿಕೊಂಡು ಹೆಚ್ಚುವರಿ ಕಬ್ಬಿನ ಲಭ್ಯತೆ ಕಂಡು ಬಂದಲ್ಲಿ ಅಂತಹ ಕಬ್ಬನ್ನು ರೈತರ, ಸ್ಥಳೀಯ ಕಾರ್ಖಾನೆಗಳ ಹಾಗೂ ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾಗದಂತೆ ನೋಡಿಕೊಂಡು ಹೊರ ರಾಜ್ಯಕ್ಕೆ ಕಳುಹಿಸಲು ಅನುಮತಿ ನೀಡಲಾಗುವುದು.

ಆದರೆ ಇತ್ತೀಚಿನ ವರ್ಷಗಳಲ್ಲಿ ಮಹಾರಾಷ್ಟ್ರ ರಾಜ್ಯಗಳ ಕೆಲವು ಸಕ್ಕರೆ ಕಾರ್ಖಾನೆಗಳು ಕರ್ನಾಟಕ ಸರ್ಕಾರದಿಂದ ನಿಯಮನುಸಾರ ಪರವಾನಿಗೆ ಪಡೆಯದೇ ಅನಧಿಕೃತವಾಗಿ ಕೆಲವು ಪ್ರದೇಶಗಳಿಂದ ಕಬ್ಬನ್ನು ಸಾಗಾಣಿಕೆ ಮಾಡುತ್ತಿದ್ದಾರೆ. ಇದರಿಂದಾಗಿ ಸರ್ಕಾರಕ್ಕೆ ಸಂದಾಯವಾಗಬೇಕಾಗಿರುವ ಪ್ರತಿ ಟನ್ಗೆ ಶೇಕಡಾ 8ರಷ್ಟು ಖರೀದಿ ತೆರಿಗೆ, ಶೇಕಡ 2.75ರಷ್ಟು ಸುತ್ತು (ಟರ್ನ್‌ಓವರ್) ತೆರಿಗೆ ಜಮಾ ಆಗದೇ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿದೆ. ಜೊತೆಗೆ ಖರೀದಿ ತೆರಿಗೆಯಿಂದ ರೈತರಿಗೆ ನೀಡುವ ರಿಯಾಯ್ತಿ ಟನ್ ಒಂದಕ್ಕೆ 12 ರೂ.ಗಳಷ್ಟು ಹಣದ ಸೌಲಭ್ಯ ಖರೀದಿಸುವ ಕಾರ್ಖಾನೆಗಳಿಂದ ರೈತರಿಗೆ ದೊರೆಯುತ್ತಿಲ್ಲ. ಅಲ್ಲದೆ ನಮ್ಮ ಕಾರ್ಖಾನೆಗಳಿಂದ ರೈತರಿಗೆ ಹೊರೆಯುತ್ತಿಲ್ಲ. ಅಲ್ಲದೆ ನಮ್ಮ ಕಾರ್ಖಾನೆಗಳ ಕಾರ್ಯ ವ್ಯಾಪ್ತಿಯಿಂದ ಅನಧಿಕೃತವಾಗಿ ಸಾಗಾಣಿಕೆಯಾಗುವ ಕಬ್ಬು ಕಾರ್ಖಾನೆಯ ಕಟಾವು ಅನುಸೂಚಿಯನ್ನು ಏರುಪೇರು ಮಾಡುವುದಲ್ಲದೇ ಕಬ್ಬಿನ ಕೊರತೆ ಉಂಟಾಗಿ ಕಾರ್ಖಾನೆಯ ಸಾಮರ್ಥ್ಯದ ಪೂರ್ಣ ಬಳಕೆಯಾಗದೇ ನಷ್ಟಕ್ಕೊಳಗಾಗುವಂತೆ ಮಾಡುತ್ತದೆ.

ಆದ್ದರಿಂದ ಹೊರ ರಾಜ್ಯಗಳಿಗೆ ಅನಧಿಕೃತವಾಗಿ ಸಾಗಾಣಿಕೆ ಆಗುವ ಕಬ್ಬು ರಾಜ್ಯದ ರೈತರಿಗೆ, ಕಾರ್ಖಾನೆಗಳ ಹಾಗೂ ಸರ್ಕಾರದ ಹಿತಾಸಕ್ತಿಗೆ ಮಾರಕವಾಗುತ್ತದೆ. ಈ ಹಿನ್ನಲೆಯಲ್ಲಿ ಕಬ್ಬು ಸಾಗಾಣಿಕೆಯ ಮೇಲಿನ ನಿಯಂತ್ರಣ ಅನಿವಾರ್ಯವಾಗಿದೆ.

ಬಿಜಾಪೂರ ಜಿಲ್ಲೆ ಮುಧೋಳ ತಾಲ್ಲೂಕಿನ ಸಮೀರವಾಡಿ ಎಂಬಲ್ಲಿ ಇರುವ ಮೆ: ಗೋದಾವರಿ ಸಕ್ಕರೆ ಕಾರ್ಖಾನೆಯ ಪ್ರತಿದಿನ ಆರು ಸಾವಿರ ಟನ್ಕಬ್ಬನ್ನು ಅರೆಯುವ ಸಾಮರ್ಥ್ಯ ಹೊಂದಿರುತ್ತದೆ. ಈ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬೆಳೆಯಲಾದ ಕಟಾವಿಗೆ ಬಂದಿರುವ ಎಲ್ಲಾ ಕಬ್ಬನ್ನು ಅರೆಯುವ ಸಾಮರ್ಥ್ಯ ತನಗಿದೆ ಎಂದು ಅಲ್ಲಿಯ ಆಡಳಿತ ಮಂಡಳಿ ಸಕ್ಕರೆ ನಿರ್ದೇಶಕರಿಗೆ ಭರವಸೆ ನೀಡಿರುತ್ತದೆ. ದಿನಾಂಕ: 12-2-1994 ರಂದು ಮುಧೋಳ ತಾಲ್ಲೂಕು ರೂಗೀ ಗ್ರಾಮದ ರೈತರು ಸಕ್ಕರೆ ನಿರ್ದೇಶಕರನ್ನು ಭೇಟಿ ಮಾಡಿ ತಾವು ಬೆಳೆದ ಕಬ್ಬನ್ನು ಸ್ಥಳೀಯ ಕಾರ್ಖಾನೆ ಖರೀದಿಸುವ ಕಾರಣ ಮಹಾರಾಷ್ಟ್ರ ರಾಜ್ಯಕ್ಕೆ ಸಾಗಿಸಲು ಪರವಾನಗಿ ನೀಡುವಂತೆ ಕೇಳಿಕೊಂಡಾಗ ಸಕ್ಕರೆ ನಿರ್ದೇಶಕರು ಮೆ:ಗೋದಾವರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಗೆ ದೂರವಾಣಿಯ ಮೂಲಕ ಸಂಪರ್ಕಿಸಿ ವಿಚಾರಿಸಿದಾಗ ಸದರಿ ಕಾರ್ಖಾನೆಯ

ದಿನಗಳ ಒಳಗಾಗಿ ಖರೀದಿಸಿ ಅರೆಯುವ ವ್ಯವಸ್ಥೆ ಮಾಡುವುದಾಗಿ ತಿಳಿಸಿದ್ದಾರೆ. ಅಲ್ಲದೇ ಅವರ ಕಾರ್ಯ ಕ್ಷೇತ್ರದಿಂದ ಮಹಾರಾಷ್ಟ್ರ ರಾಜ್ಯದ ಕೆಲವು ಕಾರ್ಖಾನೆಗಳು ಅನಧಿಕೃತವಾಗಿ ಕಬ್ಬನ್ನು ಸಾಗಾಣಿಕೆ ಮಾಡುತ್ತಿರುವುದರಿಂದ ಕಾರ್ಖಾನೆಗೆ ಕಬ್ಬಿನ ಕೊರತೆ ಉಂಟಾಗುವ ಭೀತಿ ಇದೆಯೆಂದು ಪದೇಪದೇ ತಂತಿ ಸಂದೇಶವನ್ನು ಸರ್ಕಾರಕ್ಕೆ ಕಳುಹಿಸಿಕೊಡುತ್ತಿದ್ದಾರೆ.

ಬಿಜಾಪೂರ ಜಿಲ್ಲೆಯಿಂದ ಬೆಳಗಾವಿ ಜಿಲ್ಲೆಯ ಮೂಲಕ ಮಹಾರಾಷ್ಟ್ರ ರಾಜ್ಯಕ್ಕೆ ಸಾಗಾಣಿಕೆಯಾಗುತ್ತಿರುವ ಪರವಾನಗಿ ಸಹಿತ ಕಬ್ಬನ್ನು ಎಲ್ಲಿಯೂ ತಡೆದಿರುವುದಿಲ್ಲ. ಆದರೆ ಪರವಾನಗಿ ರಹಿತ ಕಬ್ಬಿನ ಸಾಗಾಣಿಕೆಯನ್ನು ಬೆಳಗಾವಿ ಜಿಲ್ಲೆಯ ಅಧಿಕಾರಿಗಳು ನಿರ್ಬಂಧಿಸುತ್ತಿದ್ದಾರೆ.

ಬಿಜಾಪೂರ ಜಿಲ್ಲೆಯ ಮುಧೋಳ ಮತ್ತು ಇತರೆ ಪ್ರದೇಶಗಳಲ್ಲಿ ರೈತರು ಬೆಳೆದಿರುವ ಕಬ್ಬನ್ನು ಸ್ಥಳೀಯ ಸಕ್ಕರೆ ಕಾರ್ಖಾನೆಗಳ ಮೂಲಕವೇ ಅರೆಯುವ ವ್ಯವಸ್ಥೆ ಮಾಡಲಾಗುವುದು. ಒಂದು ವೇಳೆ ಸ್ಥಳೀಯ ಸಕ್ಕರೆ ಕಾರ್ಖಾನೆಗಳಿಗೆ ರೈತರು ಬೆಳೆದ ಎಲ್ಲಾ ಕಬ್ಬನ್ನು ಅರೆಯುವ ಸಾಮರ್ಥ್ಯ ಇಲ್ಲವೆಂಬುದು ಸರ್ಕಾರಕ್ಕೆ ಮನವರಿಕೆಯಾದ ಕೂಡಲೇ ಹೆಚ್ಚುವರಿ ಕಬ್ಬನ್ನು ಹೊರ ಜಿಲ್ಲೆ ಮತ್ತು ಹೊರ ರಾಜ್ಯಕ್ಕೆ ಸಾಗಾಣಿಕೆ ಮಾಡಲು ಅನುಮತಿ ನೀಡಲಾಗುವುದು. ಈ ಸಂಬಂಧದಲ್ಲಿ ಬೆಳಗಾವಿ ಮತ್ತು ಬಿಜಾಪೂರ ಜಿಲ್ಲೆಗಳ ಜಿಲ್ಲಾಧಿಕಾರಿಗಳನ್ನೊಳಗೊಂಡಂತೆ ಸಂಬಂಧಪಟ್ಟವರೆಲ್ಲರ ಒಂದು ಸಭೆಯನ್ನು ಸದ್ಯದಲ್ಲಿಯೇ ಕರೆದು ಸಮಸ್ಯೆಯ ಪರಿಹಾರಕ್ಕೆ ಅಗತ್ಯ ಕ್ರಮವನ್ನು ಕೈಗೊಳ್ಳಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯ ಆಳವನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಂಡಿಲ್ಲವೆಂದು ನಾನು ತಿಳಿಯುತ್ತೇನೆ. ಈ ಸಮಸ್ಯೆ ಇವೊತ್ತಿನದು ಅಲ್ಲ. ಕಳೆದ ವರ್ಷ ಕೇವಲ ಬೆಳಗಾವಿ, ವಿಜಾಪುರ ಮತ್ತು ಗಡಿನಾಡ ಜಿಲ್ಲೆಗಳಷ್ಟೇ ಅಲ್ಲ, ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ ತಾಲ್ಲೂಕಿನಲ್ಲಿ ಮತ್ತು ಕನಕಪುರದಲ್ಲಿ ಬೆಳೆದಂಥ ಕಬ್ಬನ್ನು ಕೂಡ ನಮ್ಮ ಮಂಡ್ಯ ಸಕ್ಕರೆ ಕಾರ್ಖಾನೆಯವರು ತೆಗೆದುಕೊಳ್ಳುವುದಿಲ್ಲವೆಂದು ಹೇಳಿದೇರು. ಆ ಸಮಯದಲ್ಲಿ ದುಂಬಾಲು ಬಿದ್ದು ಹೊರರಾಜ್ಯಗಳಲ್ಲಿ ಇರತಕ್ಕಂಥ ತಮಿಳುನಾಡಿನ ಖಾಸಗಿ ಕಾರ್ಖಾನೆಯವರ ಕಾಲು ಹಿಡಿದು ನಮ್ಮ ಕಬ್ಬನ್ನು ಸುಟ್ಟು ಹಾಕಬಾರದೆಂದು ನಮ್ಮ ಕಬ್ಬನ್ನು ತೆಗೆದುಕೊಂಡು ಹೋಗಿ ಅವರು ಕೇಳಿದ ಬೆಲೆಗೆ ನಮ್ಮ ರೈತರು ಕೊಟ್ಟು ಬಂದರು. ಈ ವರ್ಷವೂ ಕಬ್ಬನ್ನು ಜಾಸ್ತಿ ಬೆಳೆದಿದ್ದಾರೆ. ನಿಮಗೆ ಕಬ್ಬಿನ ಕಟಾವು ಪ್ರಾರಂಭವಾಗುವುದು ಗೊತ್ತಾಗುವುದಿಲ್ಲವೇ? ನೀವು ಡಿ.ಸಿ.ಗಳ ಸಭೆಯನ್ನು ಯಾವಾಗ ಕರೆಯುವುದು? ನೀವು ಏತಕ್ಕೆ ಮಂತ್ರಿಗಳು ಎಂದು ಇರತಕ್ಕಂಥಾದ್ದು? ಯಾವ್ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಟನ್ ಕಬ್ಬು ಬೆಳೆಯುತ್ತಾರೆ ಎಂಬುದನ್ನು ತಿಳಿದುಕೊಂಡು ಮುಂಚಿತವಾಗಿ ಜಿಲ್ಲಾಧಿಕಾರಿಗಳಿಗೆ ಇಷ್ಟನ್ನು ಇವರು ಪರ್ಚೇಸ್ ಮಾಡಬಹುದು, ಉಳಿದ ಕಬ್ಬನ್ನು ಹೊರಗಡೆ ಸಾಗಿಸಲು ಅನುಮತಿ ನೀಡಬಹುದೆಂದು ತಿಳಿಸಬೇಕು. ಈಗ ಒಂದು ಕಾಂಟ್ರಾಕ್ಟ್ ಏರಿಯಾ ಎಂದು ಇರುತ್ತದೆ. ಅದನ್ನು ಬಿಟ್ಟು ಬಾಕಿ ಇರತಕ್ಕಂಥ ಕಬ್ಬನ್ನು ಹೊರರಾಜ್ಯಗಳಿಗೆ ಕೊಟ್ಟರೆ ಏನು ತೊಂದರೆ? ನಿಮಗೆ ಈ ಕಬ್ಬನ್ನು ಅರೆಯಲು ಆಗುವುದಿಲ್ಲ, ನಿಮ್ಮ ನಿರ್ದೇಶಕರ ತಲೆಯಲ್ಲಿ ಏನಿದೆ ಎಂದು ನಮಗೆ ಅರ್ಥವಾಗುವುದಿಲ್ಲ. ಕಳೆದ ವರ್ಷ ನಮ್ಮ ಕಡೆಗಳಲ್ಲಿ ಕಬ್ಬನ್ನು ಸುಟ್ಟು ಹಾಕಿದ್ದಾರೆ. ಬೇಕಾದರೆ ಫೋಟೋಗಳನ್ನು ತಮಗೆ ಕೊಡುತ್ತೇನೆ. ನೀವು ಈ ವರ್ಷ ಕೂಡ ಅದೇ ಸಮಸ್ಯೆಯನ್ನು ಕ್ರಿಯೇಟ್ ಮಾಡಿದ್ದೀರಿ ಅಂದರೆ ಅದರ ಅರ್ಥ ಏನು? ವೆಸ್ಟೆಡ್ ಇಂಟ್ರೆಸ್ಟ್ ಇದೆ ಎಂಬುದನ್ನು ನಾವು ಊಹಿಸಬೇಕೋ ಬೇಡವೋ ಎಂಬುದನ್ನು ಹೇಳಿ. ಇದಕ್ಕೆ ತಾವುಗಳು ಉತ್ತರವನ್ನು ಕೊಡಬೇಕು. ಮುಂದೆ ಸಭೆ ಕರೆಯುತ್ತೇನೆ ಅಂದರೆ ಹೇಗೆ? ನಾಳೆ ಸಭೆ ಮುಗಿದ ಮೇಲೆ ನಿಮ್ಮನ್ನು ಕೇಳುವವರು ಯಾರು? ನಿಮಗೆ ಇಷ್ಟಬಂದ ಹಾಗೆ ಪ್ರವಾಸ ಹಾಕಿಕೊಂಡು

ಚಕ್ಕಂದ ಆಡಿಕೊಂಡು ಇರುತ್ತೀರಿ? ಈಗ ಮೂರು ದಿನಗಳಾಗಿದೆ. ನೀವು ಸರಿಯಾದ ಸಮರ್ಥವಾದ ಮಂತ್ರಿಯಾಗಿದ್ದಿದ್ದರೆ ಆ ಜಿಲ್ಲಾಧಿಕಾರಿಗಳಿಬ್ಬರಿಗೂ ಕಿವಿ ಹಿಂಡಿ ಅಲ್ಲೆಲ್ಲಾ ಕಬ್ಬನ್ನು ಪೊಲೀಸರು ನಿಲ್ಲಿಸಿದ್ದಾರೆ, ತತ್‌ಕ್ಷಣ ಬಿಡುಗಡೆಗೆ ಕೊಡಿ ಎಂದು ನಿಮ್ಮ ಕೈಯಲ್ಲಿ ಹೇಳುವುದಕ್ಕೆ ಆಗುವುದಿಲ್ಲವೆ? ಈ ಸ್ಟೇಟ್ಮೆಂಟ್ ಕೊಡುವುದಕ್ಕೋಸ್ಕರವಾಗಿ ನಮ್ಮನ್ನು ಮೂರು ದಿನಗಳವರೆಗೆ ಕಾಯಿಸಿದ್ದೀರಾ? ನಿಮ್ಮ ಸರಕಾರ ಇದೆಯೇ ಕಳೆದ ವರ್ಷ ಮಂಡ್ಯದಲ್ಲಿ ಏನೇನು ಆಯಿತು ಎಂಬುದು ನಾಗೇಗೌಡರಿಗೆ ಸರಿಯಾಗಿ ಗೊತ್ತಿದೆ.

+ ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನಾವು ಕೇಳಿದಂಥ ಪ್ರಶ್ನೆ ಬಿಟ್ಟು ಉಳಿದ ಎಲ್ಲಾ ಉತ್ತರವನ್ನು ಹೇಳಿದ್ದಾರೆ. ಸಮೀರವಾಡಿಯಲ್ಲಿ ಗೋದಾವರಿ ಸಕ್ಕರೆ ಕಾರ್ಖಾನೆ ಏನಿದೆ, ಅದರ ಅರೆಯುವ ಸಾಮರ್ಥ್ಯ 6ಸಾವಿರ ಟನ್ನಗಳಷ್ಟು ಎಂಬ ಮಾತನ್ನು ಹೇಳಿದರು. ನಾನು ಕೇಳುವುದೇನೆಂದರೆ, ಆ ಒಂದು ವ್ಯಾಪ್ತಿಯಲ್ಲಿ ಎಷ್ಟು ಕಬ್ಬನ್ನು ಬೆಳೆದಿದ್ದಾರೆ? ಈಗ ಎಷ್ಟು ಎಕರೆಯಲ್ಲಿ ಕಬ್ಬು ಇದೆ ಎನ್ನುವುದನ್ನು ಹೇಳಿ;

ಅಲ್ಲಿಗೇ ಸಾಲದೆ ಬರುತ್ತದೆ ಎಂದು ಏನು ಹೇಳುತ್ತಾರೆ ಅದು ಸುಳ್ಳು. 9-10 ತಿಂಗಳಿಗೆ ಕಟಾವಿಗೆ ಬರುವಂತಹ ಹೊಸ ಹೊಸ ತಳಿಯ ಕಬ್ಬು ಬಂದಿದೆ. ಇದನ್ನು 16 ತಿಂಗಳಾದರೂ ಕಟಾವು ಮಾಡುವುದಿಲ್ಲೇ. ಅವರು ಕೇಳಿದಾಗ ನಾವು ಕೊಡಬೇಕಂತೆ. ಅಲ್ಲಿಯವರೆಗೆ ನಾವು ಕಾದುಕೊಂಡಿರಬೇಕೇ? ಇವತ್ತಿನ ದಿವಸ ಅಲ್ಲಿರುವ ರೈತರಿಗೆ ಬಂದಿರುವ ಗೋಳು ಏನು ಅಂದರೆ ಹೆಚ್ಚಿನ ಪ್ರದೇಶದಲ್ಲಿ ಕಬ್ಬನ್ನು ಬೆಳೆಯುತ್ತಾರೆ. ಆ ಹೆಚ್ಚಿನ ಪ್ರದೇಶದಲ್ಲಿ ಬೆಳೆದ ಕಬ್ಬನ್ನು ಸಮೀರವಾಡಿಯವರು ತೆಗೆದುಕೊಳ್ಳುವುದಿಲ್ಲ. ಹೊರಗಡೆ ಸಾಗಿಸಲು ಪರ್ಮಿಟ್ ಕೂಡ ಕೊಡುವುದಿಲ್ಲ. ಇಲ್ಲಿರತಕ್ಕಂತಹ ಜಿಲ್ಲಾಧಿಕಾರಿಗಳು, ಸಕ್ಕರೆ ಕಾರ್ಖಾನೆಯ ಡೈರೆಕ್ಟರ್ಗಳು ಏನು ಇದ್ದಾರೆ, ಅವರು ಅಲ್ಲಿಯ ಅಂದರೆ ಸಮೀರವಾಡಿಯ ಆಡಳಿತವರ್ಗದೊಂದಿಗೆ ಶಾಮೀಲಾಗಿದ್ದಾರೆ ಎಂಬ ಮಾತನ್ನು ಹೇಳಬೇಕಾಗುತ್ತದೆ. ಈ ಮಾತನ್ನು ಏತಕ್ಕೋಸ್ಕರ ಹೇಳುತ್ತೇವೆಂದರೆ, ಅವರು ಹೋಗಿ ಕೇಳುತ್ತಾರೆ, ಆಗ ಕಬ್ಬನ್ನು ತೆಗೆದುಕೊಳ್ಳುವುದಿಲ್ಲ ಮತ್ತು ಪರ್ಮಿಟ್ ಅನ್ನೂ ಕೂಡ ಕೊಡುವುದಿಲ್ಲ. ಸಮೀರವಾಡಿ ಆಡಳಿತ ಮಂಡಳಿಯವರು ಇಲ್ಲ ನಮಗೆ ಬೇಕೆಂದು ಹೇಳುತ್ತಾರೆ. ಸ್ವಾಮಿ ಬನ್ನಿ ಕಬ್ಬನ್ನು ತೆಗೆದುಕೊಳ್ಳಿ, ನಾವು ಕೊಡಲಿಕ್ಕೆ ತಯಾರಿದ್ದೇವೆ. 9-10 ತಿಂಗಳಾಗಿದೆ ಈ ಕಬ್ಬನ್ನು ತೆಗೆದುಕೊಳ್ಳುತ್ತೀರಾ? ನೀವು ತೆಗೆದುಕೊಳ್ಳಿ, ಇಲ್ಲದೇ ಹೋದರೆ ನಮಗೆ ಪರವಾನಗಿ ಕೊಡಿ ಅಂದರೆ ಅವರೂ ತೆಗೆದುಕೊಳ್ಳುವುದಿಲ್ಲ, ಪರವಾನಗಿಯನ್ನೂ ಕೊಡುವುದಿಲ್ಲ ಅಂದರೆ ಹೇಗೆ? ಸಮೀರವಾಡಿಯ ಆಡಳಿತ ಮಂಡಲಿಯವರಿಗೆ ಯಾವಾಗ ಕಬ್ಬು ಬೇಕೋ ಆಗ ನಾವು ಕಬ್ಬು ಕೊಡಬೇಕೇ? ಇದನ್ನು ಸರಿಪಡಿಸದಿದ್ದರೆ ಖಂಡಿತವಾಗಿ ಪ್ರತಿಭಟನೆಯಾಗುತ್ತದೆ. ರೈತರಿಗೆ ಎಷ್ಟು ನಷ್ಟವಾಗಿದೆಯೆಂದರೆ ಕಳೆದ ವರ್ಷ ಕಬ್ಬನ್ನು ಸುಟ್ಟು ಹಾಕಿದ್ದಾರೆ. ಸಕ್ಕರೆ ಕಾರ್ಖಾನೆಯಿರುವುದು ಕೇವಲ ಆಡಳಿತ ಮಂಡಲಿಗೆ ಲಾಭ ಮಾಡಿಕೊಳ್ಳುವುದಕ್ಕೆ ಅಲ್ಲ. ಯಾರು ಕಬ್ಬು ಬೆಳೆಯುತ್ತಾರೆ ಅವರಿಗೆ ನಷ್ಟವಾಗದೇ ಇರುವ ಹಾಗೆ ನೋಡಿಕೊಳ್ಳುವಂತಹ ಹೊಣೆಗಾರಿಕೆ ತಮಗೆ ಇರಬೇಕು. ಆದರೆ ಅದನ್ನು ಇವತ್ತು ಮಾಡುತ್ತಿಲ್ಲ. ಅದಕ್ಕೆ ಬದಲಾಗಿ ಸಮೀರವಾಡಿಯ ಆಡಳಿತ ಮಂಡಲಿಗೆ ನೆರವಾಗುವ ರೀತಿಯಲ್ಲಿ ನಿಮ್ಮ ಸರಕಾರದ ನೀತಿ ಇದೆ. ಈ ನೀತಿಯನ್ನು ಬದಲಾಯಿಸುತ್ತೀರೋ ಇಲ್ಲವೋ? ಬದಲಾಯಿಸದಿದ್ದರೆ ಏನು ಮಾಡಬೇಕೆಂದು ಹೇಳಿ ನಾವು ಆಮೇಲೆ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೆ, ಈ ಮುಧೋಳ ಸಕ್ಕರೆ ಕಾರ್ಖಾನೆಯವರು ನಾಳೆ 16ನೇ ತಾರೀಖಿನಿಂದ ಕೆನಾಲ್ ನೀರು ಬಂದ್ ಮಾಡುತ್ತಾರೆ, ಇದು ಮಂತ್ರಿಗಳಿಗೂ ಸಹ ಗೊತ್ತಿದೆ. ಕೆನಾಲ್ ನೀರು ಬಂದ್

ಮಾಡುವುದರಿಂದ ಕಬ್ಬು ಬೆಳೆಯುವಂತಹ ಕಡೆ ಅದರ ಇಳುವರಿ ಕೂಡ ಕಡಿಮೆಯಾಗುತ್ತದೆ. ಮತ್ತು ಕಬ್ಬು ಒಣಗಿ ಹೋಗುತ್ತದೆ. ನೀರಿನ ಸೌಕರ್ಯವಿಲ್ಲದೆ ಇರುವುದರಿಂದ ಅದು ಒಣಗುತ್ತದೆ. ಇದರ ಬಗ್ಗೆ ತಾವೇನು ಕ್ರಮ ಕೈಗೊಳ್ಳುತ್ತೀರಿ. ಇದರ ಬಗ್ಗೆ ತಾವು ವಿಚಾರ ಮಾಡಬೇಕು. ಎಕ್ಸಸ್ ಕಬ್ಬು ನಮ್ಮ ಮುಧೋಳ ಭಾಗದಲ್ಲಿದೆ. ಮುಧೋಳ ಭಾಗದಲ್ಲಿ ಎಕ್ಸಸ್ ಕಬ್ಬು ಇರುವುದರಿಂದ ಆ ಕಬ್ಬಿಗೆ ನೀರು ಬೇಕಾಗುತ್ತದೆ. ನಾಳೆಯಿಂದ ಕೆನಾಲ್ ಬಂದ್ ಮಾಡುತ್ತಾರೆ . ಇದರಿಂದ ರೈತರಿಗೆ ತೊಂದರೆಯಾಗುತ್ತದೆ. ಕಬ್ಬು ಒಣಗುತ್ತದೆ. ಅದರಿಂದಾಗಿ ಕಬ್ಬು ಹೊರಗೆ ಹೋಗಲಿಕ್ಕೆ ಪರವಾನಗಿ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

+ ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಕ್ಕರೆ ಮಂತ್ರಿಗಳು ಏನು ಹೇಳಿಕೆ ಕೊಟ್ಟಿದ್ದಾರೆ, ಆ ಬಗ್ಗೆ ಮೂಲಭೂತವಾದ ದೋಷಗಳು ಇವೆ. ಮೀಸಲು ಪ್ರದೇಶವೆಂದು ಹೇಳಿದರು. ಅಂದರೆ ಯಾರು ಆ ಕಾರ್ಖಾನೆಗೆ ಒಪ್ಪಂದ ಮಾಡಿಕೊಂಡಿದ್ದಾರೆ ಆ ಒಪ್ಪಂದವನ್ನು ಮುರಿಯುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆ. ಮೀಸಲು ಪ್ರದೇಶವೆಂದರೆ ವಂಶಪಾರಂಪರ್ಯವಾಗಿ ಆ ಕಾರ್ಖಾನೆಗೆ ಜೀತವನ್ನು ಮಾಡುತ್ತೇವೆಂದು ನಾವೇನೂ ಬರೆದುಕೊಟ್ಟಿಲ್ಲ. ನೀವೇನಾದರೂ ಸಾಗಾಣಿಕೆ ನಿರ್ಬಂಧದ ನೀತಿಯನ್ನು ಮುಂದುವರಿಸುವುದಾದರೆ ಇಡೀ ರಾಜ್ಯದಲ್ಲಿ ಎಲ್ಲ ಕಾರ್ಖಾನೆಗಳ ಸುತ್ತ ಇರುವಂತಹ ಕಬ್ಬು ಬೆಳೆಗಾರರಿಂದ ನಾವು ಒಪ್ಪಂದವನ್ನು ಮುರಿಯುವಂತಹ ಒಂದು ಕೆಲಸ ಮಾಡುತ್ತೇವೆ. ಸಾಗಾಣಿಕೆ ನಿರ್ಬಂಧ ಮಾಡುವುದಕ್ಕೆ ನಿಮಗೆ ಯಾರೂ ಹಕ್ಕು ಕೊಟ್ಟರು. ನಮ್ಮ ದೇಶದಲ್ಲಿ ಹೇಗಾಗಿದೆ ಎಂದರೆ, Right to freedom of Movement ಎಂದು ಇದೆ. ಅದು ವ್ಯಕ್ತಿಗಳಿಗೆ ಮಾತ್ರ. ವ್ಯಾಕ್ತಿಗಳು ಈ ದೇಶದಲ್ಲಿ ಎಲ್ಲಿ ಬೇಕಾದರೂ ಮುಕ್ತವಾಗಿ ಸ್ವತಂತ್ರವಾಗಿ ಓಡಾಡಬಹುದು. ಆದರೆ ಕೆಲವು ವಸ್ತುಗಳು ಮಾತ್ರ ಓಡಾಡುವುದಕ್ಕಾಗುವುದಿಲ್ಲ. ಒಂದು ಕ್ಷೌರದ ಬ್ಲೇಡು ಇಡೀ ದೇಶದಲ್ಲಿ ಎಲ್ಲಿ ಬೇಕಾದರೂ ಕೂಡ ಓಡಾಡಬಹುದು. ಅದಕ್ಕೆ ಗೇಟ್ ಏನೂ ಇಲ್ಲ. ಆದರೆ ನಾವು ಬೆಳೆದ ಕಬ್ಬಿಗೆ ಗೇಟುಗಳು ಇವೆ. ನಾವು ಬೆಳೆದ ಭತ್ತಕ್ಕೆ ಗೇಟುಗಳು ಇವೆ. ಈ ಅವಿವೇಕಿ ನೀತಿಯನ್ನು ನೀವೇನಾದರೂ ಮುಂದುವರಿಸಿದರೆ ಇದರಿಂದ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟ ಹಾಗಾಗುತ್ತದೆ. ಇವತ್ತು ಕಬ್ಬು ಬೇರೆ ರಾಜ್ಯಕ್ಕೆ ಹೋಗುತ್ತಿದೆ. ಮತ್ತೆ ಪರ್ಚೇಸ್ ಟ್ಯಾಕ್ಸ್ ಎಂದು ಬೇರೆ ಮಾತನಾಡುತ್ತೀರಿ. ನಮ್ಮ ಜಿಲ್ಲೆಯಿಂದ ಮಹಾರಾಷ್ಟ್ರಕ್ಕೆ ಕಬ್ಬನ್ನು ದಿನವೂ ಹೊಡೆಯುತ್ತಿದ್ದಾರೆ; ಅದಕ್ಕೂ ನೀವು ಪರ್ಚೇಸ್ ಟ್ಯಾಕ್ಸ್ ಲೆಕ್ಕ ಹಾಕುತ್ತಿದ್ದೀರಿ. ಆದರೆ ಅದು ಎಲ್ಲಿ ಸೇಲ್ ಆಗುವುದು?

6.30 ಪಿ.ಎಂ.

ಎಲ್ಲಿ ಪರ್ಚೇಸ್ ಆಗುತ್ತದೆ. Sale take place in Maharashtra ಅದಕ್ಕೆ ಇವರಿಗೆ ಪರ್ಚೇಸ್ ಟ್ಯಾಕ್ಸ್ ಬೇಕಂತೆ. ಇದಕ್ಕೆ ನಮ್ಮ ಹೈಕೋರ್ಟಿನ ತೀರ್ಪು ಬಂದಿದೆ. because the sale takes place in Maharahtra, purchase tax should not be levied by Government of Karnataka ಎಂದು ಇದೆ. ಆ ತೀರ್ಪು ತಮ್ಮ ಗಮನಕ್ಕೆ ಬಂದಿಲ್ಲ. ದಯವಿಟ್ಟು ತರಿಸಿ ನೋಡಿ. ನೀವು ಮೀಸಲು ಪ್ರದೇಶ ಎನ್ನುವುದನ್ನು ಕೈಬಿಡಬೇಕು. ಮತ್ತು ಸಾಗಾಣಿಕೆ ನಿರ್ಬಂಧದ ನೀತಿ ಏನು ಇದೆ ಅವನ್ನೂ ಕೈಬಿಡಬೇಕು. ಇಲ್ಲದೆ ಇದ್ದರೆ ನೀವು ಎರಡು ಚಳುವಳಿಗಳನ್ನು ಎದುರಿಸಬೇಕಾಗುತ್ತದೆ. ಈಗಾಗಲೇ ಮೈಸೂರು ಜಿಲ್ಲೆಯಲ್ಲಿ ಪ್ರಾರಂಭಮಾಡಿದ್ದೇವೆ. ನೀವು ಏತಕ್ಕೆ ಅದನ್ನು ಮಾಡುತ್ತೀರಿ ಎಂದರೆ ಕಾರ್ಖಾನೆ ಮಾಲೀಕರ ಮಾತನ್ನು ಕೇಳಿಕೊಂಡು ಮಾಡುತ್ತಿದ್ದೀರಿ. ಇಲ್ಲಿ ಬೆಲೆ ಕುಸಿಯುವ ರೀತಿ ಮಾಡಿದಿರಿ ತಮಗೆ ಗೊತ್ತಿದೆ. ಮಹಾರಾಷ್ಟ್ರದಲ್ಲಿ ಕಿಸಾನ್ ಅಹೇರಾ ಎಂಬ ಸಹಕಾರಿ ಕಾರ್ಖಾನೆ ಇದೆ. ಅದು ಎಷ್ಟು ಬೆಲೆ

ಕೊಡುತ್ತಿದೆ ಗೊತ್ತೇನು? ಗೋದಾವರಿ ಸಕ್ಕರೆ ರಿಕವರಿ ಎಷ್ಟು ಇದೆ, 12 ಪರ್ಸೆಂಟ್ ರಿಕವರಿ ಇದೆ. ನಿಮ್ಮ ಪ್ರದೇಶದ ರೈತರಿಗೆ ಎಷ್ಟು ಮೋಸ ಮಾಡುತ್ತಿದ್ದಾನೆ ಎಂದರೆ ಪ್ರತಿ ವರ್ಷ ಸುಮಾರು 30-40 ಕೋಟಿ ರೂಪಾಯಿ ಬೆಳಗಾಂ ಜಿಲ್ಲೆಯ ರೈತರಿಗೆ ಸೇರಬೇಕಾದ್ದು ಸಮೀರ್ವಾಡಿ ಕಾರ್ಖಾನೆ ಮಾಲೀಕನ ಪಾಲಾಗುತ್ತಿದೆ ನಿಮ್ಮ ನೀತಿಯಿಂದ. ಮತ್ತೆ ನಾವು ರೈತರ ಪರ, ರೈತರ ಪರ ಎಂದು ಮಾತನಾಡುತ್ತಿದ್ದಾರೆ. ಎಲ್ಲಿ ಸರಿಯಾದ ಬೆಲೆ ಇದೆಯೋ ಅಲ್ಲಿಗೆ ತೆಗೆದುಕೊಂಡು ಹೋಗುವ ಹಕ್ಕು ರೈತನಿಗೆ ಉಂಟು. ನಾನು ನಂಜನಗೂಡಿನಲ್ಲಿ ಭತ್ತ ಬೆಳೆಯುತ್ತೇನೆ, ಶ್ರೀನಗರದಲ್ಲಿ ಒಳ್ಳೆಯ ಬೆಲೆ ಸಿಗುತ್ತದೆ ಎಂದರೆ ಅಲ್ಲಿಗೆ ತೆಗೆದುಕೊಂಡು ಹೋಗುವ ಸ್ವಾತಂತ್ರ್ಯ ನನಗೆ ಸಂವಿಧಾನದಲ್ಲಿ ಇದೆ. ನೀವು ಗೇಟ್ ಹಾಕಿ, ನಾವು ಗೇಟ್ ಮುರಿಯುತ್ತೇವೆ, ಈಗಾಗಲೇ ಮುರಿದಿದ್ದೇವೆ. ಇನ್ನೂ ಮುರಿಯಬೇಕು ಎಂದು ಆಸೆ ಇದ್ದರೆ ಇದೇ ನೀತಿಯನ್ನು ನೀವು ಮುಂದುವರಿಸಿ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ನಾನು ಸಹ ಬೆಳಗಾಂ ಜಿಲ್ಲೆಯಲ್ಲಿ ಇದ್ದೆ. ಈಗ ನೇರವಾಗಿ ಇಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ನಾನು ಹೇಳುವಂತಹದು ಏನೆಂದರೆ, ಇವತ್ತು ಅಲ್ಲಿರುವಂತಹ ಶುಗರ್ ಫ್ಯಾಕ್ಟರಿಗಳು ನಡೆಯಬೇಕು ಎಂದು ಇದ್ದರೆ ಆ ಪ್ರದೇಶದಲ್ಲಿ ಸೀಮಿತವಾಗಿರುವಂತಹವರು ಕಬ್ಬನ್ನು ಕೊಡಬೇಕು. ಸಮಯಕ್ಕೆ ಸರಿಯಾಗಿ ಕಾರ್ಖಾನೆಯವರು ಕೊಂಡುಕೊಳ್ಳುವ ವ್ಯವಸ್ಥೆ ಇರಬೇಕು. ಎಲ್ಲಾ ಕಡೆ ನಮಗೆ ಕೇಳಿ ಬರುತ್ತಿರುವಂತಹದು

ಏನೆಂದರೆ, ಇವತ್ತು 11 ತಿಂಗಳಲ್ಲಿ ಕೊಯಿಲು ಮಾಡಬೇಕಾದಂತಹ ಕಬ್ಬನ್ನು 15 -16 ತಿಂಗಳಾದರೂ ಕಬ್ಬನ್ನು ಕೊಂಡುಕೊಳ್ಳದೇ ಇರುವುದರಿಂದ ನೀರು ಇಲ್ಲದೆ ಕಬ್ಬು ತೂಕವು ಬರದೆ ರೈತ ಹಾಳಾಗಿ ಹೋಗುತ್ತಿದ್ದಾನೆ. ಇದು ಮೊದಲನೆಯದು. ಈಗ ಪ್ರಸ್ತಾಪ ಆಗಿರುವ ಬಗ್ಗೆ ನೀವು ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳಿದ ಮೇಲೆ, ನೀವು ಯಾವಾಗ ಕೊಂಡುಕೊಳ್ಳುತ್ತೀರಿ ಅಲ್ಲಿಯವರೆಗೆ ರೈತ ಕಾಯ್ದುಕೊಂಡು ಕುಳಿತಿರಲು ಹೇಗೆ ಸಾಧ್ಯ? ಅಂತಹ ವಿಶೇಷ ಪರಿಸ್ಥಿತಿಯಲ್ಲಿಯಾದರೂ ಆತ ಬೇರೆ ಕಡೆ ಹೋಗಿ ಮಾರಿ ಕೊಳ್ಳುವುದಕ್ಕೆ ತಾವು ಅವಕಾಶ ಕೊಡದೆ ಯಾರೋ ಕೊಟ್ಟಂತಹ ಹೇಳಿಕೆಯನ್ನು ತಾವು ಕೊಟ್ಟರೆ, ರೈತ ಸಮೂಹಕ್ಕೆ ದೊಡ್ಡ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಇಲ್ಲಿ ಇದರ ಬಗ್ಗೆ ಬಹಳ ಸಾರಿ ಚರ್ಚೆ ಆಗಿದೆ. ಅದಕ್ಕಾಗಿ ಒಂದು ಸ್ಪಷ್ಟ ನಿಲುವನ್ನು ತಾವು ತೆಗೆದುಕೊಳ್ಳಿ. ಇವತ್ತು ಸಕ್ಕರೆ ಕಾರ್ಖಾನೆಯಲ್ಲಿ ಸೀಮಿತವಾದ ಪ್ರದೇಶದಲ್ಲಿ; ಆ ನಿರ್ದಿಷ್ಟವಾದ ಸಮಯದಲ್ಲಿ ಕಟಾವ್ ಮಾಡಿದಂತಹ ಕಬ್ಬನ್ನು ಆ ಕಾರ್ಖಾನೆಯವರು ತೆಗೆದುಕೊಳ್ಳಬೇಕು. ತೆಗೆದುಕೊಳ್ಳಲಿಲ್ಲ ಎಂದರೆ ಮರುದಿನ ತನಗೆ ಎಲ್ಲಿ ಪಕ್ಕದ ರಾಜ್ಯದಲ್ಲಿ ಮಾರ್ಕೆಟ್ ಸಿಗುತ್ತದೋ ಅಲ್ಲಿ ಮಾರಿ ಕೊಳ್ಳುವುದಕ್ಕೆ ಅವಕಾಶ ಕೊಡದೇ ಇದ್ದರೆ ತೊಂದರೆ ಆಗುತ್ತದೆ. ಆ ರೀತಿ ಒಂದು ನಿಲುವನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಆಗ ಫ್ಯಾಕ್ಟರಿಯವನು ಆಕ್ಟೀವ್ ಆಗುತ್ತಾನೆ. ಅವನ ಫ್ಯಾಕ್ಟರಿ ಉಳಿಯಬೇಕು ಎಂದರೆ ಇಲ್ಲಿ ಟೈಮಿಗೆ ಸರಿಯಾಗಿ ಕಟಾವ್ ಆಗುತ್ತದೆ, ಕೊಂಡುಕೊಳ್ಳುತ್ತಾನೆ, ದುಡ್ಡು ಕೊಡುತ್ತಾನೆ, ವ್ಯವಸ್ಥಿತವಾಗಿ ಸಕ್ಕರೆ ಕಾರ್ಖಾನೆಗಳು ಉಳಿಯುತ್ತವೆ. ನಮ್ಮ ರೈತನೂ ಉಳಿಯುತ್ತಾನೆ. ಎಕ್ಸೆಸ್ ಇದ್ದದ್ದನ್ನು ತಾನು ಹೊರಗಡೆ ಹೋಗಿ ಮಾರಿ ಕೊಳ್ಳುವುದಕ್ಕೆ ಅವಕಾಶ ಆಗುತ್ತದೆ. ಅದು ಆಗದೇ ಇದ್ದರೆ ಬಹುಶಃ ನಂಜುಂಡಸ್ವಾಮಿಯವರು ಹೇಳಿದ ಹಾಗೆ ನಾವು ಇಲ್ಲಿ ಖುಷಿ ಬಂದಾಗ ಕೊಡುತ್ತೇವೆ, ನಮಗೆ ಯಾವಾಗ ಬೇಕಾದರೂ ಹೊರಗಡೆ ಮಾರಾಟಮಾಡಿಕೊಳ್ಳುತ್ತೇವೆ. ನೀವು ಯಾರು ತಡೆಯುವುದಕ್ಕೆ ಎಂದು ಕೇಳುವಂತಹ ಪರಿಸ್ಥಿತಿ ಬರುತ್ತದೆ. ನಿಮ್ಮ ಶುಗರ್ ಫ್ಯಾಕ್ಟರಿಯಿಂದ ನಮಗೆ ಯಾವುದೇ ಅನುಕೂಲ ಬೇಡ. ನೀವು ಬೇಕಾದರೆ ಕಬ್ಬು ತೆಗೆದುಕೊಳ್ಳಿ. ನಿಮಗೆ ಬೇಡ ಎಂದರೆ ನಾವು

ಎಲ್ಲಿ ಬೇಕಾದರೂ ಮಾರುತ್ತೇವೆ; ಈ ಸ್ವಾತಂತ್ರವಾದರೂ ನಮಗೆ ಸಿಗಲಿ. ಅದಿಲ್ಲದೆ ಇದ್ದರೆ ನಮ್ಮ ರೈತಾಪಿ ಜನ ಉಳಿಯುವುದಿಲ್ಲ. ಇದರ ಬಗ್ಗೆ ನೀವು ಸ್ಪಷ್ಟ ನಿಲುವು ಹೇಳದೇ ಇದ್ದರೆ ಬಹುಶಃ ಈ ಕಡೆ ಕುಳಿತವರೆಲ್ಲರೂ ಸಹ ಬೇರೆ ರೀತಿಯ ಒಂದು ಕಾರ್ಯಕ್ರಮವನ್ನು ರೈತರ ಉಳಿವಿನ ದೃಷ್ಟಿಯಿಂದ, ಕಬ್ಬಿನ ಬೆಳೆಗಾರರ ಉಳಿವಿನ ದೃಷ್ಟಿಯಿಂದ ರೂಪಿಸಬೇಕಾಗುತ್ತದೆ. ದಯಮಾಡಿ ಈ ಒಂದು ಹೇಳಿಕೆಯನ್ನು ಸರಿಪಡಿಸಿಕೊಂಡು ಸ್ಪಷ್ಟವಾದಂತಹ ನಮ್ಮೆಲ್ಲರ ಅಭಿಪ್ರಾಯಗಳನ್ನು ಅರ್ಥ ಮಾಡಿಕೊಂಡು ರೈತರ ಉಳಿವಿನ ದೃಷ್ಟಿಯಿಂದ ನೀವು ಒಂದು ಸ್ಪಷ್ಟೀಕರಣ ನೀಡಬೇಕು.

ಶ್ರೀ ಎ.ಬಿ. ಜಕನೂರ್ (ಕಾಗ್ವಾಡ್) : ಮಾನ್ಯ ಅಧ್ಯಕ್ಷರೆ, ಈ ವಿಷಯ ಈ ವರ್ಷದ ಪೂರ್ತಿ ಅಲ್ಲ, ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಬಹಳ ವರ್ಷಗಳಿಂದ ಇದು ನಡೆಯುತ್ತಿದೆ. ಇದಕ್ಕೆ ಕಾರಣ ಏನು? ಎಸೆನ್ಶಿಯಲ್ ಕಮಾಡಿಟೀಸ್ ಆಕ್ಟ್ ಸೆಕ್ಷನ್ 3 ರ ಕೆಳಗಡೆ ರಿಸರ್ವ್ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. ಆ ರಿಸರ್ವ್ ಏಕೆ ಮಾಡುತ್ತಾರೆ ಎಂದರೆ. ಫ್ಯಾಕ್ಟರಿಗೆ ಕಬ್ಬಿನ ಕೊರತೆ ಬೀಳಬಾರದು, ಫ್ಯಾಕ್ಟರಿಯು ನಷ್ಟದಲ್ಲಿ ಬರಬಾರದು ಎಂಬ ದೃಷ್ಟಿಯಿಂದ ಮಾಡುತ್ತಾರೆ. ಕಂಪನಿ ಆಕ್ಟ್ ಕೆಳಗೆ ಪ್ರೈವೇಟ್ ಫ್ಯಾಕ್ಟರಿಗಳೂ ಇದೆ, ಕೆಲವು ರೈತರ ಫ್ಯಾಕ್ಟರಿಗಳೂ ಇವೆ. ಫ್ಯಾಕ್ಟರಿ ಹಿತ ಕಾಪಾಡಬೇಕು, ಅದೇ ಸಮಯಕ್ಕೆ ರೈತರಿಗೆ ಮೋಸ ಆಗಬಾರದು ಅಥವಾ ಅವರಿಗೆ ಬೆಲೆ ಕಡಿಮೆ ಸಿಗಬಾರದು ಎನ್ನುವ ಎಲ್ಲಾ ದೃಷ್ಟಿಯಿಂದಲೇ ಅದರೊಳಗೆ ಇದೆಲ್ಲಾ ಇದೆ. ಅದು ಏನು ಎಂದರೆ ಪ್ರತಿಯೊಂದು ಫ್ಯಾಕ್ಟರಿಗೂ ಒಂದೊಂದು ರಿಸರ್ವ್ಡ್ ಏರಿಯಾ ಎಂದು ಮಾಡಿದ್ದಾರೆ. ಅಷ್ಟು ಹಳ್ಳಿಗಳನ್ನು ಅಲಾಟ್ ಮೆಂಟ್ ಮಾಡಿದ್ದಾರೆ. The factory shall purchase and the grower shall sell to the factory .95% of the cane he shall sell to the factory. This is sum and substance. ಇವರು ಇಬ್ಬರಲ್ಲಿ ಒಬ್ಬರು ಮಾಡಲಿಲ್ಲ ಎಂದರೆ even factories are lieble for prosecution and grower is also liable for prosecution.

ಈಗ ಫ್ಯಾಕ್ಟರಿಯವರು ರೈತರಿಗೆ ಏನು ಹೇಳುತ್ತಿದ್ದಾರೆ ಎಂದರೆ, ತಾಲ್ಲೂಕಿನ ಕಬ್ಬೆಲ್ಲಾ ನಮಗೆ ಬೇಕು, ನಾವು ಒಯ್ಯುತ್ತೇವೆಂದು ಹೇಳುತ್ತಾರೆ. ಒಮ್ಮೊಮ್ಮೆ ಕಬ್ಬು ಕಡಿಮೆ ಇರುತ್ತದೆ, ಆಗ ಪರವಾಗಿಲ್ಲ, ರೈತರಿಗೂ ಅನಾನುಕೂಲ ಆಗುವುದಿಲ್ಲ. ಒಮ್ಮೆಮ್ಮೆ ಕಬ್ಬು ಹೆಚ್ಚಾಗಿರುತ್ತದೆ. ಅವರು ಹೇಳಿದ ಹಾಗೆ ಹೊಸ ಹೊಸ ತಳಿ ಬಂದಾಗ, ಒಂಭತ್ತು ತಿಂಗಳು, ಹತ್ತು ತಿಂಗಳೊಳಗೆ ಕಟಾವಿಗೆ ಬಂದು ಬಿಡುತ್ತದೆ. ಇಮ್ಮಿಡಿಯಟ್ಲಿ ರೈತರು ಅದನ್ನು ಕಣಜದೊಳಗೆ ಒಯ್ಯಲಿಲ್ಲ ಎಂದರೆ ರೈತರಿಗೆ ಭಾರಿ ಲುಕ್ಸಾನು ಆಗುತ್ತದೆ. ಅದರ ಬಗ್ಗೆ ಈ ಅಧಿಕಾರಿಗಳು ಆಗಲೀ ಅಥವಾ ಫ್ಯಾಕ್ಟರಿಯವರಾಗಲಿ ವಿಚಾರ ಮಾಡುವುದಿಲ್ಲ. ಅದಕ್ಕೆ ನಾನು ಮೊನ್ನೆ ಜಿಲ್ಲಾಧಿಕಾರಿಗಳಿಗೆ ಸಜೆಸ್ಟ್ ಮಾಡಿದೆ. ಯಾವ ಫ್ಯಾಕ್ಟರಿಯವರು ತಮ್ಮ ಏರಿಯಾದಲ್ಲಿನ ಕಬ್ಬನ್ನು ಒಯ್ಯುತ್ತೇವೆ ಎಂದು ಹೇಳುತ್ತಾರೆ, ಹಾಗೆ ಒಯ್ಯುವುದಾದರೆ ಅವರು ಅದು ಯಾವಾಗ ಕೊಯಿಲಿಗೆ ಬರುತ್ತದೆ ಅಂದರೆ ರೈಪ್ ಫಾರ್ ಹಾರ್ವೆಸ್ಟಿಂಗ್ ಬರುತ್ತದೆ, ಆಗ ಅವರು ಕಬ್ಬನ್ನು ಒಯ್ಯಲೇಬೇಕು. ಒಂದು ವೇಳೆ ಅವರು ಒಯ್ಯಲಿಲ್ಲ ಎಂದರೆ, ಒಯ್ಯುವುದಕ್ಕೆ ಆಗುವುದಿಲ್ಲ ಎಂದರೆ ಅವರು ಮೊದಲೇ ತಿಳಿಸಬೇಕು ಕಬ್ಬು ಬಂದ ಮೇಲಲ್ಲ, ಇಷ್ಟು ಹಳ್ಳಿ ನಮಗೆ ಬೇಕು ಇಷ್ಟು ಹಳ್ಳಿಕಬ್ಬು ನಮಗೆ ಬೇಡ ಎಂದು ಮೊದಲೇ ತಿಳಿಸಬೇಕು. ಇದನ್ನು ತಿಳಿಸಿದರೆ ಅರು ತಮ್ಮ ಕಬ್ಬನ್ನು ಮಹಾರಾಷ್ಟ್ರ, ಗೋವಾ, ಎಲ್ಲಿಗೆ ಬೇಕಾದರೂ ಸಾಗಿಸಿ ಮಾರಬಹುದು. ಹಾಗೆ ಮಾಡುವುದಿಲ್ಲ. ಇವರು ಏನು ಮಾಡುತ್ತಾರೆಂದರೆ ಎಲ್ಲವನ್ನೂ ಇಟ್ಟುಕೊಂಡು ಕೂಡುತ್ತಾರೆ. ಫೆಬ್ರವರಿ ಮಾರ್ಚ್ನಲ್ಲಿ ಫ್ಯಾಕ್ಟರಿ ಬಂದ್ ಆಗುವ ಕಾಲಕ್ಕೆ ಕಬ್ಬು ಬೇಡವೆಂದರೆ ಆಗ ರೈತರು ಕಬ್ಬನ್ನು ಎಲ್ಲಿಗೆ ಒಯ್ಯಬೇಕು ಎನ್ನುವ ಪ್ರಶ್ನೆ ಬರುತ್ತದೆ. ಅದಕ್ಕೆ ದಯವಿಟ್ಟು ಮಾನ್ಯ ಮಂತ್ರಿಗಳು ಫ್ಯಾಕ್ಟರಿಯವರನ್ನು ಕರೆಸಿ ಅವರಿಗೆ ಎಷ್ಟು ಏರಿಯಾ ಬೇಕು ಅಷ್ಟು

ಹೇಳಿ ಎಂದು ಕೇಳಿ. ಒಂದು ವೇಳೆ ಯಾವುದೇ ಫ್ಯಾಕ್ಟರಿಯವರು ಕಬ್ಬನ್ನು ಒಯ್ಯಲಿಲ್ಲ ಎಂದರೆ ಎಷ್ಟು ಟನ್ ಕಬ್ಬು ಆಗುತ್ತದೆ. ಅದನ್ನು ಒಯ್ಯಲಿ ಬಿಡಲಿ, ಅಷ್ಟು ದುಡ್ಡನ್ನು ಪರಿಹಾರ ಎಂದು ಆ ರೈತರಿಗೆ ಕೊಡಬೇಕು. ಮಹಾರಾಷ್ಟ್ರದಲ್ಲಿ ಇದೇ ರೀತಿ ಮಾಡಿದರು. ಮೂರು ನಾಲ್ಕುವರ್ಷದಿಂದ ಇದೇ ರೀತಿ ಮಾಡಿದ್ದಾರೆ.

Prof M.D. NANJUNDA SWAMY : That should become a part of the agreement. It is an one-sided agreement. ಅವರು ತೆಗೆದುಕೊಳ್ಳಲಿಲ್ಲ ಎಂದರೆ ಆತನಿಗೆ ಜುಲ್ಮಾನೆ ಹಾಕುವುದಕ್ಕೆ ಪ್ರಾವಿಜನ್ ಎಲ್ಲಿದೆ?

ಶ್ರೀ ಎ.ಬಿ. ಜಕನೂರ್ : ಪ್ರೊಫೇಸರ್ ಅವರೆ, There is no agreement.

ಶ್ರೀ ಹೆಚ್. ಏಕಾಂತಯ್ಯ : ಅಲ್ಲಿ ಸರ್ಕಾರ ರೈತರ ಪರ ಇದೆ.

ಶ್ರೀ ಎ.ಬಿ. ಜಕನೂರ್ : ನಾನು ಮಾನ್ಯ ಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಹೇಳುವುದು ಏನೆಂದರೆ, ಫ್ಯಾಕ್ಟರಿಯವರಿಗೆ ಹೇಳಬೇಕು. ಮಹಾರಾಷ್ಟ್ರದಲ್ಲಿ ಮೂರು ವರ್ಷಗಳ ಹಿಂದೆ ಹೀಗೇ ಆಯಿತು. ಕೆಲವು ಕಡೆ ಕಬ್ಬನ್ನು ಅವರು ತೆಗೆದುಕೊಂಡು ಹೋಗುವುದಕ್ಕೆ ಆಗಲಿಲ್ಲ; ಹೆಚ್ಚಾಗಿ ಉಳಿಯಿತು. ಎಷ್ಟು ಟನ್ ಕಬ್ಬು ಆಗುತ್ತಿತ್ತು,ಅಷ್ಟು ಟನ್ ಕಬ್ಬಿನ ಬೆಲೆಯನ್ನು ಫ್ಯಾಕ್ಟರಿಯವರು ಕೊಡಲಿಲ್ಲ ಎಂದರೆ ಅಷ್ಟು ನಷ್ಟವನ್ನು ಸರ್ಕಾರದಿಂದ ರೈತರಿಗೆ ಕೊಟ್ಟರು. ಆ ವ್ಯವಸ್ಥೆಯನ್ನು ಇಲ್ಲಿ ಸಹ ಮಾಡಬೇಕು. ಆಗ ಫ್ಯಾಕ್ಟರಿಯವರು ಏನು ಮಾಡುತ್ತಾರೆ ಎಂದರೆ ತಮಗೆ ಎಷ್ಟು ಬೇಕೋ ಅಷ್ಟನ್ನು ಇಟ್ಟುಕೊಳ್ಳುತ್ತಾರೆ, ಬಾಕಿಯದನ್ನು ಬಿಟ್ಟು ಬಿಡುತ್ತಾರೆ. ಇಲ್ಲದಿದ್ದರೆ ಪ್ರತಿ ವರ್ಷ ಇದರಿಂದ ತೊಂದರೆ ಆಗುತ್ತದೆ. ರೈತರ ಹಿತದೃಷ್ಟಿಯಿಂದ ಇದನ್ನು ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಅವರ ಹೇಳಿಕೆ...

ಅಧ್ಯಕ್ಷರು : ನಾನು ವ್ಯಾಪಕವಾದ ಚರ್ಚೆಗೆ ಆಸ್ಪದ ಮಾಡಿಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಅವರು ಹೇಳಿಕೆ, ಕೊಟ್ಟಿದ್ದಾರೆ. ಅವರ ಹೇಳಿಕೆ ಪ್ರಕಾರವೇ ಇದು ಸ್ಪಷ್ಟ ಆಗಿಲ್ಲ. "ವಿಜಾಪುರ ಜಿಲ್ಲೆಯ ಮುಧೋಳ ಮತ್ತು ಇತರ ಪ್ರದೇಶದಲ್ಲಿ ರೈತರು ಬೆಳೆದಿರುವ ಕಬ್ಬನ್ನು ಸ್ಥಳೀಯ ಸಕ್ಕರೆ ಕಾರ್ಖಾನೆಗಳ ಮೂಲಕವೇ ಅರೆಯುವ ವ್ಯವಸ್ಥೆ ಮಾಡಲಾಗುವುದು." ಎಂದಿದ್ದಾರೆ. ಇದುವರೆವಿಗೂ ಕಬ್ಬು ಅರೆಯಲು ಏನೂ ವ್ಯವಸ್ಥೆ ಇಲ್ಲ. ಮತ್ತು ಜಿಲ್ಲಾಧಿಕಾರಿಗಳಿಗೆ ಕರೆದು ನೀವು ಸಭೆ ಮಾಡಿಲ್ಲ. ಆದ್ದರಿಂದ ಪರಿಸ್ಥಿತಿ ಏನು ಎಂದು ನಿಮಗೆ ಇನ್ನೂ ಅರ್ಥ ಆಗಿಲ್ಲ. ಪರಿಸ್ಥಿತಿ ಬಹಳ ಗಂಭೀರವಾಗಿದೆ ಎಂದು ಹೇಳಿ, ಇಲ್ಲಿಗೆ ಈ ಸಮಸ್ಯೆಯನ್ನು ತಂದರೂ ನೀವು ಇನ್ನು ಮುಂದೆ ಅಧಿಕಾರಿಗಳನ್ನು ಕರೆದು ಸೂಕ್ತ ವ್ಯವಸ್ಥೆ ಮಾಡುತ್ತೇನೆ, ಎನ್ನತಕ್ಕ ಹೇಳಿಕೆಯನ್ನು ಹೇಳುತ್ತಿದ್ದೀರಿ. ಇದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಕಬ್ಬನ್ನು ಬೆಳೆದ ರೈತರು, ಬೆಳೆಗಾರರು ಬೆಲೆ ತಮಗೆ ಎಲ್ಲಿ ಸಿಗುತ್ತದೆ ಅಲ್ಲಿಗೆ ತೆಗೆದುಕೊಂಡು ಹೋಗುವುದಕ್ಕೆ ಅಧಿಕಾರ ಇದೆ ಎಂದು ನೀವು ಈ ಸಭೆಯಲ್ಲಿ ಸ್ಪಷ್ಟ ಪಡಿಸಿ. ನಿಮ್ಮ ಈ ಹೇಳಿಕೆಯಲ್ಲಿ ಏನೂ ಇಲ್ಲ, ಉಪ್ಪು ಇಲ್ಲ, ಹುಳಿ ಇಲ್ಲ. ಸುಮ್ಮನೇ ಸಕ್ಕರೆ ಹೇಳಿಕೆ ಎಂದು ಸಕ್ಕರೆ ಮಂತ್ರಿಗಳು ಹೇಳುತ್ತೀರಿ. ಈ ಹೇಳಿಕೆಗೆ ಸ್ವಲ್ಪವೂ ಬೆಲೆಯೇ ಇಲ್ಲ.

ಡಾ|| ಹೆಚ್.ಡಿ. ಲಮಾಣಿ : ಸಿಹಿ ಆಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾತಿನಲ್ಲಿ ಸಿಹಿ ತೋರಿಸಿದರೆ ಆಗುವುದಿಲ್ಲ. ಇಲ್ಲಿ ಸಿಹಿನೇ ಇಲ್ಲ.

ಡಾ||ಹೆಚ್.ಡಿ. ಲಮಾಣಿ :ಸಿಹಿ ಹೆಚ್ಚಾಗಿದ್ದರೂ ಚೆನ್ನಾಗಿರುವುದಿಲ್ಲ. ಮೊದಲನೆಯದಾಗಿ

ತೊಂದರೆ ಅಥವಾ ಹಾನಿ ಆಗಲಾರದ ಹಾಗೆ ನಾವು ವ್ಯವಸ್ಥೆಯನ್ನು ಮಾಡುತ್ತೇವೆ. ಇದು ಮೊದಲನೆಯದು. ಎರಡನೆಯದಾಗಿ ಈಗ ಏನು ಸಮಸ್ಯೆ ಉದ್ಭವ ಆಗಿದೆ. ಈ ಸಮಸ್ಯೆಗೆ ತಕ್ಕ ಪರಿಹಾರವನ್ನು ನಾವು ಹುಡುಕಲೇಬೇಕಾಗುತ್ತದೆ. ಈಗ ಹೇಳಿದ ಪ್ರಕಾರ ಅದೇನು ಮೀಸಲು ಕ್ಷೇತ್ರ ಇರುತ್ತವೆ. ಆ ಮೀಸಲು ಕ್ಷೇತ್ರ ಏಕೆ ಇರುತ್ತದೆ ಎಂದರೆ, ಆ ಫ್ಯಾಕ್ಟರಿಯವರು ರೈತರಿಗೆ ಹಣ ಕೊಟ್ಟಿರುತ್ತಾರೆ, ಗೊಬ್ಬರಕ್ಕಾಗಿ ಬೀಜಕ್ಕಾಗಿ ಮತ್ತು ಅವರ ಖರ್ಚಿಗಾಗಿ ಅವರು ಹಣವನ್ನು ಮುಂಗಡವಾಗಿ ಕೊಟ್ಟು ಮೀಸಲು ಕ್ಷೇತ್ರವನ್ನು ನಿಗದಿ ಮಾಡಿರುತ್ತಾರೆ. ಹೀಗಾಗಿ ಮೀಸಲು ಕ್ಷೇತ್ರದ ಕಬ್ಬನ್ನುಹೊರಗಡೆ ಸಾಗಿಸುವುದಕ್ಕೆ ಅವರ ತಕರಾರು ಇದ್ದೇ ಇರುವುದು ಸ್ವಾಭಾವಿಕ. ಮೀಸಲು ಕ್ಷೇತ್ರವಲ್ಲದೆ ಬೇರೆ ಕ್ಷೇತ್ರದಿಂದ ಕಬ್ಬನ್ನು ನಾವು ಹೊರ ರಾಜ್ಯಗಳಿಗಾಗಲಿ ಅಥವಾ ಬೇರೆ ಕಾರ್ಖಾನೆಗಳಿಗಾಗಲಿ ಕಳುಹಿಸಿ ಕೊಡುವುದಕ್ಕೆ ರೈತರಿಗೆ ಯಾವುದೇ ತೊಂದರೆ ಇರಬಾರದು, ಇಲ್ಲ, ಏಕೆಂದರೆ, ಈಗಾಗಲೇ ನಾನು ತಿಳಿಸಿರುವಂತೆ, ಜಿಲ್ಲಾಧಿಕಾರಿಗಳಿಗೆ ಆ ಒಂದು ಅಧಿಕಾರ ಕೊಡಲಾಗಿದೆ. ಜಿಲ್ಲಾಧಿಕಾರಿಗಳು ಅವರಿಗೆ ಪರವಾನಗಿ ಕೊಡುತ್ತಾರೆ. ಅದರ ಪ್ರಕಾರ ಅವರು ತಾವು ಬೆಳೆದಂಥ ಕಬ್ಬನ್ನು ಬೇರೆ ರಾಜ್ಯಗಳಿಗೆ, ಬೇರೆ ಕಾರ್ಖಾನೆಗಳಿಗೆ ಸಾಗಿಸುತ್ತಾರೆ. ಇದು ನಡೆದುಕೊಂಡು ಬಂದಿರುವಂಥ ಪದ್ಧತಿಯಾಗಿದೆ; ಈಗಲೂ ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಆ ವಿಧಾನಗಳೆಲ್ಲ ಇಲ್ಲಿಯ ತನಕ ನಡೆದಿರುವಂತಾದ್ದು. ಮುಂದೆ ಇದಕ್ಕೇನು ಪರಿಹಾರ ಎಂಬುದನ್ನು ಹೇಳಿ.

ಡಾ|| ಹೆಚ್.ಡಿ. ಲಮಾಣಿ : ಆಯಾ ಸಕ್ಕರೆ ಕಾರ್ಖಾನಗಳೇನಿವೆ, ಆ ಕಾರ್ಖಾನೆಗಳಿಗೆ ಎಷ್ಟು ಪ್ರಮಾಣದಲ್ಲಿ ಕಬ್ಬನ್ನು ಅರೆಯುವ ಸಾಮರ್ಥವಿದೆಯೋ ಅಷ್ಟು ಪ್ರಮಾಣದ ಕಬ್ಬನ್ನು ಉಳಿಸಿ, ಹೆಚ್ಚಿನ ಕಬ್ಬನ್ನು ಒಂದು ವೇಳೆ ರೈತ ಬೆಳೆದಿದ್ದರೆ, ಅದನ್ನು ಸುಡುವುದಕ್ಕಾಗಲಿ ಅಥವಾ ನಾಶಪಡಿಸುವುದಕ್ಕಾಗಲಿ ಅವರಿಗೆ ಯಾವುದೇ ಅವಕಾಶ ಮಾಡಿಕೊಡದೆ ಬೇರೆ ರಾಜ್ಯಗಳಿಗೆ, ಬೇರೆ ಕಾರ್ಖಾನೆಗಳಿಗೆ ಆ ಕಬ್ಬನ್ನು ಕಳುಹಿಸಿಕೊಡುವಂಥ ಪದ್ಧತಿ ಏನಿದೆ, ಅದನ್ನೂ ಸಹ ಅಳವಡಿಸುತ್ತೇವೆ. ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಎಷ್ಟು ಪ್ರಮಾಣದಲ್ಲಿ ಅರೆಯುವ ಸಾಮರ್ಥ್ಯವಿದೆಯೋ ಅದಕ್ಕಿಂಥ ಹೆಚ್ಚಿಗೆ ರೈತ ಕಬ್ಬನ್ನು ಬೆಳೆದಿದ್ದರೆ ಅದನ್ನು ಬೇರೆ ರಾಜ್ಯಗಳಿಗೆ ಕಳುಹಿಸಿಕೊಡುವುದಕ್ಕೆ ಅನುಮತಿ ಕೊಡುತ್ತಿದ್ದೇವೆ.

ಶ್ರೀ ಎಚ್. ಏಕಾಂತಯ್ಯ : ಇದು ಸರಿಯಲ್ಲ. ಈಗಿನ ಪ್ರಶ್ನೆಯೇನೆಂದರೆ, ತಮಗೆ ಕಡಿಮೆ ಪ್ರಮಾಣದಲ್ಲಿ ಕಬ್ಬನ್ನು ಪೂರೈಸಲಾಗುತ್ತಿದೆಯೆಂದು ಸಕ್ಕರೆ ಕಾರ್ಖಾನೆಯವರು ಹೇಳುತ್ತಿದ್ದಾರೆ, ಆದರೆ, ರೈತರು ತಾವು ಹೆಚ್ಚು ಕಬ್ಬನ್ನು ಬೆಳೆದಿದ್ದೇವೆಂದು ಹೇಳುತ್ತಿದ್ದಾರೆ. ಇವೊತ್ತಿಗೆ 11 ತಿಂಗಳಾಗಿದೆ. ಕಾರ್ಖಾನೆಯವರು ಇನ್ನು 10-15 ದಿವಸಗಳಲ್ಲಿ ಕಬ್ಬನ್ನು ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಆರು ತಿಂಗಳ ನಂತರ ತೆಗೆದುಕೊಳ್ಳುತ್ತೀರಾ? ಅಲ್ಲಿಯತನಕ ನೀರು ಉಣಿಸಿ, ಕೂಲಿ ಕೊಟ್ಟು ರೈತರು ಕಾಯ್ದುಕೊಂಡಿರಬೇಕೆ? ಏನಿದರರ್ಥ? ತಾವು ದಯಮಾಡಿ ನಾಳೆನೇ ಒಂದು ಸಭೆ ಕರೆದು ಸಭೆಗೆ ಜಿಲ್ಲಾಧಿಕಾರಿಗಳು, ಸಕ್ಕರೆ ಕಾರ್ಖಾನೆ ಮಾಲೀಕರು, ಸಂಬಂಧಪಟ್ಟ ಶಾಸಕರುಗಳನ್ನು ಕರೆದು ತೀರ್ಮಾನ ಮಾಡುವುದರಲ್ಲಿ ಅರ್ಥವಿದೆ. ಈ ರೀತಿ ಮಾಡುವುದನ್ನು ಬಿಟ್ಟು ಯಾವತ್ತೋ ಮಾಡುತ್ತೇವೆಂದರೆ ಅಲ್ಲಿಯ ತನಕ ರೈತರು ಕಾಯ್ದುಕೊಂಡಿರುವುದಕ್ಕಾಗುತ್ತದೆಯೆ?

ಶ್ರೀ ಎ.ಬಿ. ಜಕನೂರ್ : ತಾವು ಎಲ್ಲಾ ಸಕ್ಕರೆ ಕಾರ್ಖಾನೆಗಳ ಮಾಲೀಕರುಗಳಿಂದ ಒಂದು ಬಾಂಡ್ ಬರೆಸಿಕೊಳ್ಳಿ. ಯಾರು ಕಬ್ಬು ಒಯ್ಯುವುದಿಲ್ಲ ಅವರ ರೈತರಿಗೆ ಪರಿಹಾರ ಕೊಡಬೇಕೆಂದು ಕ್ರಮ ಕೈಗೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾವು ಮಾನ್ಯ ಸಚಿವರಲ್ಲಿ ಕೇಳಿ ಕೊಳ್ಳುವುದೇನೆಂದರೆ ರೈತರಿಗೆ ಏನೂ ಅನ್ಯಾಯವಾಗದಂತೆ ನೋಡ ಕೊಳ್ಳುತ್ತೇವೆ

ಎಂದು ಏನು ಹೇಳುತ್ತಿದ್ದಾರೆ, ಇದು ಎಲ್ಲರೂ ಕೊಡುವಂಥ ಉತ್ತರವಾಗಿದೆ; ಅದು ನಮಗೆ ಬೇಕಾಗಿಲ್ಲ. ನಾವು ನಿಮಗೆ ಖಚಿತವಾಗಿ ಸಲಹೆ ಮಾಡಿರುವಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ, ಶಾಸಕರುಗಳ, ರೈತ ಮುಖಂಡರುಗಳ ಸಭೆ ಕರೆದು ಒಂದು ತೀರ್ಮಾನಕ್ಕೆ ಬಂದು ನಾಳೆ ಅಥವಾ ನಾಳಿದ್ದು ಇಲ್ಲವೇ ಒಂದು ವಾರದಲ್ಲಿ ಅಲ್ಲಿಗೆ ಬರುತ್ತೇವೆಂದು ಹೇಳಿ. ಈ ವಿಷಯವನ್ನು ನಿಮ್ಮ ಗಮನಕ್ಕೆ ತಂದು ನಾಲ್ಕು ದಿವಸಗಳಾಯಿತು. ಆದರೆ, ತಮ್ಮ ಹೇಳಿಕೆಯಲ್ಲಿ ಅದೇನೂ ಇಲ್ಲವೇ ಇಲ್ಲ.

ಡಾ|| ಹೆಚ್.ಡಿ. ಲಮಾಣಿ : ನಾನು ಮಾನ್ಯ ಸದಸ್ಯರುಗಳಿಗೆ ಈ ಮೂಲಕ ಹೇಳುವುದೇನೆಂದರೆ, ಇನ್ನೊಂದು ವಾರದ ಅವಧಿಯಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳನ್ನು, ಕೃಷಿ ಇಲಾಖೆಯ ಅಧಿಕಾರಿಗಳನ್ನು ಕರೆಸುತ್ತಿದ್ದೇನೆ. ಇದರ ಬಗ್ಗೆ ಈಗಾಗಲೇ ಮೇಲ್ಮನೆಯಲ್ಲಿ ಹೇಳಿಕೆ ಕೊಟ್ಟಿದ್ದೇನೆ. ಆದುದರಿಂದ, ರೈತ ಸಂಘದ ಮುಖಂಡರನ್ನು, ಸಕ್ಕರೆ ಕಾರ್ಖಾನೆ ಮಾಲೀಕರನ್ನು ಅಥವಾ ಅದರ ಆಡಳಿತ ಮಂಡಳಿಯವರನ್ನು ಕರೆಸಿ, ಅವರಿಗೆ ಎಷ್ಟು ಬೇಕು ಎನ್ನುವ ಬಗ್ಗೆ ಚರ್ಚೆ ಮಾಡಿ ನಿರ್ಧಾರ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲಾ ಪಕ್ಷದ ಮುಖಂಡರುಗಳನ್ನು ಸಭೆಗೆ ಕರೆಸಬೇಕು. ಏಕೆಂದರೆ, ನಾವೂ ಕೂಡ ರೈತರ ಪರವಾಗಿ ಹೋರಾಟ ಮಾಡಿದಂಥವರು.

ಡಾ|| ಹೆಚ್.ಡಿ. ಲಮಾಣಿ : ಎಲ್ಲರನ್ನೂ ಕರೆಸಿ ಒಂದು ನಿರ್ದಿಷ್ಟವಾದ ತೀರ್ಮಾನ ತೆಗೆದುಕೊಳ್ಳುವಂಥ ಎಲ್ಲ ವ್ಯವಸ್ಥೆ ನಾನು ಮಾಡುತ್ತೇನೆ.

ಅಧ್ಯಕ್ಷರು : ಈಗ ಸದನದ ಕಾರ್ಯಕಲಾಪಗಳನ್ನು ಮುಂದೂಡಿ ಮತ್ತೆ ನಾಳೆ ಮಧ್ಯಾಹ್ನ 1.00 ಗಂಟೆಗೆ ಸಭೆ ಸೇರುವುದು. ಆದಕ್ಕಿಂತ ಮುಂಚೆ ನಾಳೆ ಬೆಳಿಗ್ಗೆ 11 ಗಂಟೆಗೆ ಈ ಸದನದಲ್ಲಿ ದಿವಂಗತ ಕೆಂಗಲ್ ಹನುಮಂತಯ್ಯನವರ ಭಾವ ಚಿತ್ರ ಅನಾವರಣದ ಕಾರ್ಯಕ್ರಮವಿರುವುದರಿಂದ ತಾವುಗಳೆಲ್ಲರೂ 10.45 ಗಂಟೆಗೆ ಸಭೆಗೆ ಹಾಜರಾಗುವುದು.

(ಸದನವು 6 ಗಂಟೆ 45 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 16ನೇ ಫೆಬ್ರವರಿ ಮಾಹೆ 1994ರ ಬುಧವಾರದಂದು ಮಧ್ಯಾಹ್ನ 1.00 ಗಂಟೆಗೆ ಸೇರಲು ನಿಶ್ಚಯಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅನುಬಂಧ -I

ಕರ್ನಾಟಕ ವಿಧಾನ ಸಭೆ

(ಒಂಭತ್ತನೆಯ ವಿಧಾನಸಭೆ)

(ಹನ್ನೊಂದನೆಯ ಅಧಿವೇಶನ)

ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ- 1994

(1994ರ ವಿಧಾನ ಸಭಾ ವಿಧೇಯಕ ಸಂಖ್ಯೆ 3)

ಕನ್ನಡ ಅಭಿವೃದ್ಧಿಗಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವೊಂದರ ಸ್ಥಾಪನೆಗೆ ಮತದ ಕನ್ನಡ ಅಭಿವೃದ್ಧಿಗೆ ಸಂಬಂಧಪಟ್ಟ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನದ ಉಸ್ತುವಾರಿಗೆ ಮತ್ತು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಅನುಷ್ಠಾನಗೊಳಿಸುವ ಬಗ್ಗೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕೆ ಉಪಬಂಧ ಕಲ್ಪಿಸುವ ಒಂದು ವಿಧೇಯಕ.

ಕನ್ನಡ ಅಭಿವೃದ್ಧಿಗಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರವೊಂದರ ಸ್ಥಾಪನೆಗೆ ಮತ್ತು ಕನ್ನಡ ಅಭಿವೃದ್ಧಿಗೆ ಸಂಬಂಧಪಟ್ಟ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನದ ಉಸ್ತುವಾರಿಗೆ ಮತ್ತು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಅನುಷ್ಠಾನಗೊಳಿಸುವ ಬಗ್ಗೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ,

ಭಾರತ ಗಣರಾಜ್ಯದ ನಲವತ್ತನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕುದ್ದು.

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ : (1) ಈ ಅಧಿನಿಯಮವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1994 ಎಂದು ಕರೆಯತಕ್ಕದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕುದು.

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಪ್ರಾಧಿಕಾರ" ಎಂದರೆ, 3ನೇ ಪ್ರಕರಣದ ಮೇರೆಗೆ ರಚಿಸಲಾದ ಕನ್ನಡ ಅಭಿವೃದ್ಧಿ ಪ್ರಾಧಿಕಾರ:

(ಬಿ) " ಅಧ್ಯಕ್ಷ' ಎಂದರೆ ಪ್ರಾಧಿಕಾರದ ಅಧ್ಯಕ್ಷ;

(ಸಿ) "ಇಲಾಖೆ" ಎಂದರೆ, ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ಯಾವುದೇ ನಿಕಾಯ ಅಥವಾ ನಿಗಮ ಅಥವಾ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವು ಪಡೆಯುತ್ತಿರುವ ಯಾವುದೇ ಸಂಸ್ಥೆ ಅಥವಾ ನಿಕಾಯವೂ ಸೇರಿದಂತೆ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು;

(ಡಿ) "ಸದಸ್ಯ" ಎಂದರೆ, ಪ್ರಾಧಿಕಾರದ ಸದಸ್ಯ ;

(ಇ) "ಯೋಜನೆಗಳು ಮತ್ತು ಕಾರ್ಯಕ್ರಮಗಳು" ಎಂದರೆ, ವಿವಿಧ ಇಲಾಖೆಗಳಲ್ಲಿ ಕನ್ನಡ ಅಭಿವೃದ್ಧಿಗಾಗಿ ಪ್ರಾಧಿಕಾರದಿಂದ ಸಿದ್ಧಪಡಿಸಿದ ವಾರ್ಷಿಕ ಯೋಜನೆಗಳು ಮತ್ತು ಕಾರ್ಯಕ್ರಮಗಳು;

(ಎಫ್)"ಕಾರ್ಯದರ್ಶಿ" ಎಂದರೆ ಪ್ರಾಧಿಕಾರದ ಕಾರ್ಯದರ್ಶಿ;

(ಜಿ) "ವಿನಿಯಮಗಳು"ಎಂದರೆ, ಈ ಅಧಿನಿಯಮದ ಮೇರೆಗೆ ಮಾಡಿದ ವಿನಿಯಮಗಳು.

ಅಧ್ಯಾಯ - II

3.ಪ್ರಾಧಿಕಾರದ ರಚನೆ. (1) ಈ ಅಧಿನಿಯಮವು ಪ್ರಾರಂಭವಾದ ತರುವಾಯ ಸಾಧ್ಯವಾದಷ್ಟು ಬೇಗನೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಎಂದು ಕರೆಯಲಾಗುವ ಪ್ರಾಧಿಕಾರವನ್ನು ರಚಿಸತಕ್ಕುದು ಮತ್ತು ಅದರ ಕೇಂದ್ರ ಸ್ಥಳವು ಬೆಂಗಳೂರಿನಲ್ಲಿ ಇರತಕ್ಕದ್ದು.

2. ಪ್ರಾಧಿಕಾರವು ಕರಾರು ಮಾಡಿಕೊಳ್ಳಲು ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯೇ ಮೊಹರನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗದಿತ ನಿಕಾಯವಾಗಿ ಇರತಕ್ಕುದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕುದ್ದು ಮತ್ತು ದಾವೆಗಳೊಳಗಾಗತಕ್ಕದ್ದು.

(3) ಪ್ರಾಧಿಕಾರವು ಈ ಮುಂದಿನ ಸದಸ್ಯರುಗಳನ್ನು ಹೊಂದಿರತಕ್ಕುದು.-

(ಎ) ಕನ್ನಡಭಾಷೆಯ ಅಭಿವೃದ್ಧಿಗಾಗಿ ಕೆಲಸ ಮಾಡಿರುವ ಸರ್ಕಾರದಿಂದ ನಾಮನಿರ್ದೇಶಿತನಾದ ಒಬ್ಬ ವ್ಯಕ್ತಿಯು ಪ್ರಾಧಿಕಾರದ ಅಧ್ಯಕ್ಷನಾಗಿರತಕ್ಕುದ್ದು.

(ಬಿ) ಸಾಹಿತ್ಯ, ಆಡಳಿತ, ಶಿಕ್ಷಣ ಮತ್ತು ಕಾನೂನು ಕ್ಷೇತ್ರಗಳಲ್ಲಿ ಕನ್ನಡದಲ್ಲಿ ವಿಶೇಷ ಜ್ಞಾನ ಅಥವಾ ಪ್ರಾಯೋಗಿಕ ಅನುಭವ ಹೊಂದಿರುವ ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದ ಏಳು ಮಂದಿ......ಸದಸ್ಯರು

(ಸಿ) ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ..... ಸದಸ್ಯರು

(ಡಿ) ಸರ್ಕಾರದ ಕಾರ್ಯದರ್ಶಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.......ಸದಸ್ಯರು

(ಇ) ಆಯುಕ್ತರು ಮತ್ತು ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ........ಸದಸ್ಯರು

(ಎಫ್) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ........ಸದಸ್ಯರು

(ಜಿ) ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು........ಪದನಿಮಿತ್ತ ಸದಸ್ಯರು

(ಹೆಚ್)ಅಧ್ಯಕ್ಷರು, ಕರ್ನಾಟಕ ಕನ್ನಡ ಸಾಹಿತ್ಯ ಅಕಾಡೆಮಿ....... ಪದನಿಮಿತ್ತ ಸದಸ್ಯರು

(ಐ) ಪ್ರಾಧಿಕಾರದ ಕಾರ್ಯದರ್ಶಿಸದಸ್ಯ ಕಾರ್ಯದರ್ಶಿ

4. ಪದಾವಧಿ ಮತ್ತು ಸೇವಾ ಷರತ್ತುಗಳು. (1) ರಾಜ್ಯ ಸರ್ಕಾರದ ಇಚ್ಛೆಗೆ ಒಳಪಟ್ಟು ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದ ಅಧ್ಯಕ್ಷ ಮತ್ತು ಇತರ ಸದಸ್ಯರುಗಳು ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕುದು. ಸರ್ಕಾರದ ಅಧಿಕಾರಿಸದಸ್ಯರಿಗೆ ಸಂಬಂಧಿಸಿದಂತೆ ಇದು ಅನ್ವಯವಾಗತಕ್ಕುದ್ದಲ್ಲ.

(2) ಅಧ್ಯಕ್ಷರು ಅಥವಾ ಪದನಿಮಿತ್ತ ಸದಸ್ಯರು ಹೊರತಾಗಿ ಒಬ್ಬ ಸದಸ್ಯ ತನ್ನ ಸಹಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ತನ್ನ ಸದಸ್ಯತ್ವಕ್ಕೆ ರಾಜೀನಾಮೆ ನೀಡಬಹುದು ಆದರೆ ಅವರ ರಾಜೀನಾಮೆಯು ಅಂಗೀಕಾರವಾಗುವವರೆಗೆ ಹುದ್ದೆಯಲ್ಲಿ ಮುಂದುವರೆಯತಕ್ಕುದು.

(3) ಅಧ್ಯಕ್ಷ ಅಥವಾ ಯಾವೊಬ್ಬ ಸದಸ್ಯನ ಹುದ್ದೆಗಳಲ್ಲಿ ಉಂಟಾಗುವ ಆಕಸ್ಮಿಕ ರಿಕ್ತತೆಯನ್ನು ರಾಜ್ಯ ಸರ್ಕಾರವು ಒಬ್ಬ ವ್ಯಕ್ತಿಯನ್ನು ಅಧ್ಯಕ್ಷ ಅಥವಾ ಸದಸ್ಯನಾಗಿ ನಾಮ ನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡತಕ್ಕುದು ಮತ್ತು ಹಾಗೆ ನಾಮ ನಿರ್ದೇಶಿತರಾದ ಅಧ್ಯಕ್ಷ ಅಥವಾ ಸದಸ್ಯನು ತನ್ನ ಉತ್ತರಾಧಿಕಾರಿಯ

(4) ಅಧ್ಯಕ್ಷರು ಮತ್ತು ಇತರ ಸದಸ್ಯರು ನಿಯಮಿಸಬಹುದಾದಂಥ ಭತ್ಯೆಗಳನ್ನು ಪಡೆಯತಕ್ಕದ್ದು.

(5) ಅಧ್ಯಕ್ಷರು ಮತ್ತು ಇತರ ಸದಸ್ಯರುಗಳಿಗೆ ಸಂದಾಯ ಮಾಡಬೇಕಾದ ಭತ್ಯೆಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕದು.

(6) ಪ್ರಾಧಿಕಾರದ ಯಾವುದೇ ಕೃತ್ಯ ಅಥವಾ ವ್ಯವಹರಣೆಯ ಪ್ರಾಧಿಕಾರದಲ್ಲಿ ಯಾವುದೇ ರಿಕ್ತಸ್ಥಾನವಿರುವುದರಿಂದ ಅಥವಾ ಪ್ರಾಧಿಕಾರದ ರಚನೆಯಲ್ಲಿ ದೋಷವಿದೆ ಎಂಬ ಕಾರಣ ಮಾತ್ರದಿಂದಲೇ ಅಮಾನ್ಯವಾಗತಕ್ಕುದಲ್ಲ.

5. ಹುದ್ದೆಯ ಸದಸ್ಯತ್ವಕ್ಕೆ ಅನರ್ಹತೆ : (1) ಒಬ್ಬ ವ್ಯಕ್ತಿಯು, ಅವನು

(ಎ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ದೋಷಸಿದ್ದಿಯಾಗಿದ್ದು, ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅಸ್ವಸ್ಥಚಿತ್ತದವನಾಗಿದ್ದು, ಹಾಗೆಂದು ಒಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ; ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಡಿ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಒಂದು ನಿಕಾಯ ಅಥವಾ ನಿಗಮದ ಸೇವೆಯಿಂದ ತೆಗೆದುಹಾಕಲಾದವನಾಗಿದ್ದರೆ ಅಥವಾ ವಜಾ ಆದವನಾಗಿದ್ದರೆ; ಅಥವಾ

(ಇ) ಪ್ರಾಧಿಕಾರದ ಆದೇಶದಿಂದ ಮಾಡಲಾದ ಯಾವುದೇ ಕಾರ್ಯದಲ್ಲಿ ಅಥವಾ ಪ್ರಾಧಿಕಾರದೊಡನೆ ಅಥವಾ ಅದರ ಮೇರೆಗೆ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಸ್ವತಃ ಅವನು ಅಥವಾ ಅವನ ಪಾಲುದಾರನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ ;

(ಎಫ್) ಪ್ರಾಧಿಕಾರದ ಪರವಾಗಿ ವೇತನ ಪಡೆಯುವ ನ್ಯಾಯವಾದಿಯಾಗಿ ನಿಯೋಜಿತನಾದ್ದರೆ ಅಥವಾ ನ್ಯಾಯವಾದಿಯ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ,

ಸದಸ್ಯನಾಗಿ ನೇಮಿತವಾಗುವುದಕ್ಕೆ ಮತ್ತು ಸದಸ್ಯನಾಗುವುದಕ್ಕೆ ಅನರ್ಹನಾಗಿರತಕ್ಕದ್ದು.

(2) ಒಬ್ಬ ವ್ಯಕ್ತಿಯು, ಪ್ರಾಧಿಕಾರದ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಯಾವುದೇ ಜಾಹೀರಾತನ್ನು ಸೇರಿಸುವ ಯಾವುದೇ ವೃತ್ತ ಪತ್ರಿಕೆಯಲ್ಲಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂಬ ಕಾರಣ ಮಾತ್ರದಿಂದಲೇ (1)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ಅನರ್ಹನಾಗತಕ್ಕುದಲ್ಲ ಅಥವಾ ಸದರಿ ಖಂಡದ ಅರ್ಥವ್ಯಾಪ್ತಿಯಲ್ಲಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂದು ಭಾವಿಸತಕ್ಕುದಲ್ಲ.

6. ಸದಸ್ಯನನ್ನು ತೆಗೆದುಹಾಕುವುದು - (1) ರಾಜ್ಯ ಸರ್ಕಾರವು ಅಧ್ಯಕ್ಷ ಅಥವಾ ಇತರ ಸದಸ್ಯನನ್ನು ಅವನು, -

(ಎ) 5ನೇ ಪ್ರಕರಣದಲ್ಲಿ ಹೇಳಲಾದ ಯಾವುದೇ ಅನರ್ಹತೆಗಳಿಗೆ ಒಳಪಟ್ಟರೆ, ಪರಂತು, ಅಧ್ಯಕ್ಷ, ಅಥವಾ ಸದಸ್ಯನನ್ನು ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು

ಉಪ-ಪ್ರಕರಣದ(ಇ) ಖಂಡದಲ್ಲಿ ಹೇಳಲಾದ ಅನರ್ಹತೆಗೆ ಒಳಗಾಗಿದ್ದಾನೆಂಬ ಕಾರಣದ ಮೇಲೆ ತೆಗೆದುಹಾಕತಕ್ಕುದಲ್ಲ; ಅಥವಾ

(ಬಿ) ಅವನು ಕಾರ್ಯವನ್ನು ನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯವನ್ನು ನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಸಿ) ಗೈರು ಹಾಜರಾಗಲು ಪ್ರಾಧಿಕಾರದಿಂದ ಅನುಮತಿ ಪಡೆಯದೆ ಪ್ರಾಧಿಕಾರದ ಮೂರು ನಿರಂತರ ಸಭೆಗಳಿಗೆ ಗೈರು ಹಾಜರಾದರೆ; ಅಥವಾ

(ಡಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ತನ್ನ ಸ್ಥಾನವನ್ನು ಅವನು ದುರುಪಯೋಗಪಡಿಸಿಕೊಂಡಿದ್ದು, ಅವನನ್ನು ಆ ಪದದಲ್ಲಿ ಮುಂದುವರಿಸಿದರೆ ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟಾಗುವುದೆಂದು ಕಂಡುಬಂದರೆ ಸದಸ್ಯತ್ವದಿಂದ ಅವನನ್ನು ತೆಗೆದು ಹಾಕತಕ್ಕುದು.

ಪರಂತು, ಯಾವೊಬ್ಬ ಸದಸ್ಯನನ್ನು ಅವರಿಗೆ ಪ್ರಸ್ತಾಪದ ವಿರುದ್ಧ ತನ್ನ ಮನವಿಯನ್ನು ಸಲ್ಲಿಸಲು ಒಂದು ಅವಕಾಶವನ್ನು ಕೊಟ್ಟ ಹೊರತು ಈ ಖಂಡದ ಮೇರೆಗೆ ತೆಗೆದು ಹಾಕತಕ್ಕುದಲ್ಲ.

೭. **ಕಾರ್ಯದರ್ಶಿ** : (1) ರಾಜ್ಯ ಸರ್ಕಾರವು, ಡೆಪ್ಯುಟಿ ಕಮೀಷನರ್ ದರ್ಜೆಗೆ ಕಡಿಮೆ ಇಲ್ಲದ ಅಧಿಕಾರಿಯನ್ನು ಪ್ರಾಧಿಕಾರದ ಕಾರ್ಯದರ್ಶಿಯಾಗಿ ನೇಮಕ ಮಾಡತಕ್ಕದ್ದು. ಕಾರ್ಯದರ್ಶಿಯು ರಾಜ್ಯ ಸರ್ಕಾರವು ಆಗಿಂದಾಗ್ಗೆ ನಿರ್ಧರಿಸಬಹುದಾದ ಅಂಥ ವೇತನ ಮತ್ತು ಇತರ ಭತ್ಯಗಳನ್ನು ಪಡೆಯತಕ್ಕುದು.

2. ರಾಜ್ಯ ಸರ್ಕಾರವು, ಆಗಿಂದಾಗ್ಗೆ, ಕಾರ್ಯದರ್ಶಿಯವರಿಗೆ ಗೈರುಹಾಜರಿ ರಜೆಗೆ ಅನುಮತಿ ನೀಡಬಹುದು.

(3) ಕಾರ್ಯದರ್ಶಿಯು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕರಾಗಿರತಕ್ಕುದು; ಮತ್ತು

(ಎ) ಪ್ರಾಧಿಕಾರದಿಂದ ಅನುಮೋದಿತವಾದ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಜವಾಬ್ದಾರನಾಗಿರತಕ್ಕುದು,

(ಬಿ) ಪ್ರಾಧಿಕಾರದ ನಿಧಿಯನ್ನು ನಿರ್ವಹಿಸತಕ್ಕುದು;

(ಸಿ) ಪ್ರಾಧಿಕಾರದ ಲೆಕ್ಕಪತ್ರಗಳನ್ನು ಇಡುವಂತೆ ಮಾಡತಕ್ಕುದು; ಮತ್ತು

(ಡಿ) ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಅವನಿಗೆ ಪ್ರದಾನ ಮಾಡಲಾಗಿರುವ ಇತರ ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು; ಮತ್ತು

(ಇ) ಅಧ್ಯಕ್ಷರ ತಪಾಸಣೆಯ ಸಮಯದಲ್ಲಿ, ಕಚೇರಿಯ ದಾಖಲೆಗಳನ್ನು ಹಾಜರು ಪಡಿಸಲು ಜವಾಬ್ದಾರನಾಗಿರಕ್ಕುದು.

8. **ಪ್ರಾಧಿಕಾರದ ಅಧಿಕಾರಿಗಳು ಮತ್ತು ಸೇವಾ ಷರತ್ತುಗಳು** : (1) ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಪ್ರಾಧಿಕಾರವು ಅದರ ಪ್ರಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಅವಶ್ಯವೆಂದು ಭಾವಿಸಬಹುದಾದಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಪ್ರಾಧಿಕೃತಗೊಳಿಸಬಹುದಾದಂಥ ಇತರ ಅಧಿಕಾರಿಯು ನೇಮಕ ಮಾಡಬಹುದು ಅಥವಾ ಪ್ರತಿ ನಿಯೋಜಿಸಬಹುದು.

(2) ಮೇಲೆ ನಿರ್ದಿಷ್ಟಪಡಿಸಲಾದ ಅಧಿಕಾರಿಗಳ ಮತ್ತು ನೌಕರರ ನೇಮಕಾತಿ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂಥವುಗಳಾಗಿರತಕ್ಕುದು.

೯. ಪ್ರಾಧಿಕಾರದ ಸಭೆಗಳು : (1) ಪ್ರಾಧಿಕಾರದ ಸಭೆಗಳನ್ನು ಅಧ್ಯಕ್ಷರು ಅಥವಾ ಅಧ್ಯಕ್ಷರ ಪೂರ್ವಾನುಮತಿ ಪಡೆದು ಕಾರ್ಯದರ್ಶಿಯು ಕರೆಯತಕ್ಕುದು ಮತ್ತು ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ಬರುವ ಯಾವುದೇ ಸ್ಥಳದಲ್ಲಿ ನಡೆಸತಕ್ಕುದು.

(2) ಪ್ರಾಧಿಕಾರವು ಕಡೇ ಪಕ್ಷ ಎರಡು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕುದು.

(3) ಅಧ್ಯಕ್ಷರು ಅಥವಾ ಅಧ್ಯಕ್ಷರ ಪೂರ್ವಾನುಮತಿ ಪಡೆದು ಕಾರ್ಯದರ್ಶಿಯು ವಿಶೇಷ ಸಭೆಯನ್ನು ಕರೆಯುವುದು ಅವಶ್ಯವೆಂದು ಭಾವಿಸಿದರೆ, ಹಾಗೆ ಮಾಡಬಹುದು.

(4)ಪ್ರಾಧಿಕಾರವು ತನ್ನ ಸಭೆಗಳಲ್ಲಿ ಕಾರ್ಯನಿರ್ವಹಣೆಯ ಸಂಬಂಧದಲ್ಲಿ ವಿನಿಯಮಗಳ ಮೂಲಕ ಉಪಬಂಧ ಕಲ್ಪಿಸಬಹುದಾದಂಥ ಕಾರ್ಯವಿಧಾನದ ನಿಯಮಗಳನ್ನು ಅನುಸರಿಸತಕ್ಕದ್ದು.

(5) ಅಧ್ಯಕ್ಷರು ಪ್ರತಿಯೊಂದು ಸಭೆಯ ಅಧ್ಯಕ್ಷತೆ ವಹಿಸತಕ್ಕುದು ಮತ್ತು ಯಾವುದೇ ಕಾರಣದಿಂದ ಅಧ್ಯಕ್ಷರಿಗೆ ಯಾವುದೇ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೆ, ಸಭೆಯಲ್ಲಿ ಹಾಜರಿದ್ದ ಸದಸ್ಯರ ಪೈಕಿ ಆರಿಸಲ್ಪಟ್ಟ ಯಾವನೇ ಇತರ ಸದಸ್ಯನು ಸಭೆಯಲ್ಲಿ ಅಧ್ಯಕ್ಷತೆ ವಹಿಸತಕ್ಕುದು.

(6) ಗಣ ಪೂರ್ತಿ ಆಗಲು ಎಂಟು ಸದಸ್ಯರಿರತಕ್ಕದ್ದು.

10 ಸೂಕ್ತವಾದುದೆಂದು ಮತ್ತು ಮಾನ್ಯವಾದುದೆಂದು ಭಾವಿಸಲಾಗುವ ನಡಾವಳಿಗಳು : ಅಧ್ಯಕ್ಷ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ಯಾವನೇ ವ್ಯಕ್ತಿಯ ನೇಮಕಾತಿಯಲ್ಲಿನ ಯಾವುದೇ ಅನರ್ಹತೆ ಅಥವಾ ದೋಷವು, ಪ್ರಾಧಿಕಾರದ ಯಾವುದೇ ಕೃತ್ಯ ಅಥವಾ ವ್ಯವಹರಣೆಯು ಈ ಅಧಿನಿಯಮದ ನಿಬಂಧನೆಗಳಿಗನುಸಾರವಾಗಿಲ್ಲದ ಹೊರತು, ಅಂಥ ಕೃತ್ಯ ಅಥವಾ ವ್ಯವಹರಣೆಯನ್ನು ದೋಷಯುಕ್ತವೆಂದು ಭಾವಿಸತಕ್ಕದಲ್ಲ.

11. ಉಪ ಸಮಿತಿ : ಪ್ರಾಧಿಕಾರವು ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಅದರ ಸದಸ್ಯರ ಪೈಕಿ ಐದು (5) ಸಂಖ್ಯೆಗೆ ಮೀರದ ಅಂಥ ಸದಸ್ಯರಿರುವ ಒಂದು ಉಪ ಸಮಿತಿಯನ್ನು ರಚಿಸಬಹುದು. ಪ್ರಾಧಿಕಾರದ ಅಧ್ಯಕ್ಷರು ಉಪ ಸಮಿತಿಯ ಅಧ್ಯಕ್ಷರು ಕೂಡ ಆಗಿರತಕ್ಕದ್ದು.

12. ಉಪ ಸಮಿತಿಯ ಅಧಿಕಾರಗಳು ಮತ್ತು ಕರ್ತವ್ಯಗಳು :

(1)ಉಪ ಸಮಿತಿಯು ಪ್ರಾಧಿಕಾರವು ಅದಕ್ಕೆ ಪ್ರತ್ಯಾಯೋಜಿಸಲಾದಂಥ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕುದು.

(2) ಉಪ ಸಮಿತಿಯು ಕಡೇ ಪಕ್ಷ ತಿಂಗಳಿಗೊಂದು ಸಲವಾದರೂ ಸಭೆ ಸೇರತಕ್ಕುದು.

(3) ಉಪ ಸಮಿತಿಯು ತುರ್ತು ಸ್ವರೂಪದ ವಿಷಯಗಳ ಬಗ್ಗೆ ನಿರ್ಧಾರ ಕೈಗೊಳ್ಳತಕ್ಕದು, ಪ್ರಾಧಿಕಾರವು ನಿರ್ಧಾರವನ್ನು ಸೂಕ್ತವಾಗಿ ಕಾರ್ಯಗತಗೊಳಿಸುತ್ತಿದೆಯೇ ಎಂಬ ಬಗ್ಗೆ ಪುನರ್ ಪರಿಶೀಲಿಸತಕ್ಕದು ಮತ್ತು ರಾಜ್ಯ ಸರ್ಕಾರವು ತುರ್ತು ವಿಷಯದ ಬಗ್ಗೆ ಕ್ರಮಕೈಗೊಳ್ಳಲು ಸಲಹೆ ನೀಡತಕ್ಕದು.

(4) ಉಪ ಸಮಿತಿಯು, ತನ್ನ ಸಭೆಗಳಲ್ಲಿ ಕಾರ್ಯನಿರ್ವಹಣೆಯ ಸಂಬಂಧದಲ್ಲಿ, ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಕಾರ್ಯವಿಧಾನದ ನಿಯಮಗಳನ್ನು ಅನುಸರಿಸತಕ್ಕುದು.

13. ತಜ್ಞರ ಸೇವೆಗಳನ್ನು ಪಡೆದುಕೊಳ್ಳುವುದು : (1) ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ, ಪ್ರಾಧಿಕಾರವು ಅವಶ್ಯವಾದರೆ, ತಾನು

ಸೂಕ್ತವೆಂದು ಭಾವಿಸಬಹುದಾದಂಥ ವಿಧಾನದಲ್ಲಿ ತಜ್ಞರ ಸೇವೆಗಳನ್ನು ಅಥವಾ ನೆರವನ್ನು ಪಡೆದುಕೊಳ್ಳಬಹುದು.

(2) ಅಂಥ ತಜ್ಞರು ಸಲ್ಲಿಸಿದ ಸೇವೆ ಅಥವಾ ನೆರವಿನ ಬಗ್ಗೆ ಸಂದಾಯ ಮಾಡತಕ್ಕ ಗೌರವಧನ ಮತ್ತು ಭತ್ಯೆಗಳು, ಗೊತ್ತು ಪಡಿಸಬಹುದಾದಂಥ ಮೊಬಲಗಾರತಕ್ಕುದು.

ಅಧ್ಯಾಯ -III

14. ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಸಿದ್ಧಪಡಿಸುವುದು : (1) ಪ್ರಾಧಿಕಾರವು ಪ್ರತಿವರ್ಷವೂ, ಕನ್ನಡ ಅಭಿವೃದ್ಧಿಗಾಗಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸತಕ್ಕುದು. ರಾಜ್ಯ ಸರ್ಕಾರವು ಯೋಜನೆಗ್ಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಮಾರ್ಪಾಟನ್ನು ಮಾಡಿ ಅಥವಾ ಮಾರ್ಪಾಟಿಲ್ಲದೆ ಅನುಮೋದಿಸಬಹುದು.

15. ಪ್ರಾಧಿಕಾರದ ಪ್ರಕಾರ್ಯಗಳು- ಪ್ರಾಧಿಕಾರವು, -

(ಎ) ರಾಜ್ಯ ಸರ್ಕಾರದ ಆಡಳಿತ ಭಾಷಾ ನೀತಿಯ ಅನುಷ್ಠಾನದಲ್ಲಿ ಬೇರೆ ಬೇರೆ ಇಲಾಖೆಗಳು ಸಾರ್ವಜನಿಕ ಉದ್ದಿಮೆಗಳು, ಎಲ್ಲ ಸಂಸ್ಥೆಗಳು ಮತ್ತು ಸ್ಥಳೀಯ ನಿಕಾಯಗಳು ಮತ್ತು ರಾಜ್ಯ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಸಂಸ್ಥೆಗಳು ಕೈಗೊಂಡಿರುವ ಕ್ರಮಗಳನ್ನು ಪರಿಶೀಲಿಸತಕ್ಕುದ್ದು.

(ಬಿ) ರಾಜ್ಯ ಸರ್ಕಾರ ಅಂಗೀಕರಿಸಿರುವ ಡಾ|| ಸರೋಜಿನಿ ಮಹಿಷಿ ವರದಿಯ ಶಿಫಾರಸುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಕ್ರಮಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.

(ಸಿ) ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರುವಲ್ಲಿ ಅಡಚಣೆಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳತಕ್ಕುದ್ದು.

(ಡಿ) ಕನ್ನಡ ಪರೀಕ್ಷೆಗಳ (ಸೇವಾ ಪರೀಕ್ಷೆ) ಪದ್ಧತಿಯನ್ನು, ಕನ್ನಡ ಜ್ಞಾನವನ್ನು ತಿಳಿಯಲು ನಡೆಸಲಾಗುವ ಪರೀಕ್ಷೆಗಳನ್ನು ಈಗಿರುವ ಅಥವಾ ಮುಂದೆ ರೂಪಿಸಬಹುದಾದ ಸಂಬಂಧಪಟ್ಟ ಪಠ್ಯಕ್ರಮಗಳ ಸಹಿತವಾಗಿ ಕಾಲಕಾಲಕ್ಕೆ ಪರಿಶೀಲಿಸತಕ್ಕುದು ಮತ್ತು ಅಗತ್ಯವೆನಿಸಿದರೆ ಇದನ್ನು ಪರಿಷ್ಕರಿಸಲು ಮಾರ್ಪಡಿಸಲು ಅಥವಾ ನವೀಕರಿಸಲು ರಾಜ್ಯ ಸರ್ಕಾರಕ್ಕೆ ಸೂಚನೆ ನೀಡತಕ್ಕುದು. ಕನ್ನಡ ಬೆರಳಚ್ಚು ಯಂತ್ರಗಳ ತಯಾರಿಕೆ, ಖರೀದಿ ಮತ್ತು ವಿವರಣೆ ಬಗ್ಗೆ, ಕಛೇರಿ ಆಧುನೀಕರಣದಲ್ಲಿ ಬಳಸಲಾಗುವ ಕಂಪ್ಯೂಟರ್ಸ್, ಟೆಲಿಪ್ರಿಂಟರ್ಸ್ ಟೆಲೆಕ್ಸ್ ಇತ್ಯಾದಿ ಆಧುನಿಕ ಉಪಕರಣಗಳಲ್ಲಿ ಕನ್ನಡವನ್ನು ಬಳಸುವ ಬಗ್ಗೆ ಅಧ್ಯಯನ ಹಾಗೂ ಸಮಾಲೋಚನೆ ನಡೆಸತಕ್ಕುದು, ಮತ್ತು ಈ ಸಂಬಂಧದಲ್ಲಿ ಕನ್ನಡವನ್ನೇ ಸಂಪೂರ್ಣವಾಗಿ ಬಳಸುವುದಕ್ಕೆ ಪ್ರೇರಕವಾಗಬಹುದಾದ ನಿರ್ಣಯಗಳನ್ನು ಕೈಗೊಂಡು, ಅದನ್ನು ಕಾರ್ಯಗತಗೊಳಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳತಕ್ಕದ್ದು;

(ಇ) ಅಧಿಕಾರಿಗಳಿಗೆ ಮತ್ತು ನೌಕರರಿಗೆ ಕನ್ನಡ ಬಳಕೆಗೆ ಅನುಕೂಲವಾದ ತರಬೇತಿ ಕಾರ್ಯಕ್ರಮಗಳನ್ನು, ಶಿಬಿರಗಳನ್ನು ಪ್ರದರ್ಶನಗಳನ್ನು ಮತ್ತು ವಿಚಾರ ಸಂಕೀರ್ಣಗಳನ್ನು ಏರ್ಪಡಿಸತಕ್ಕುದು ಮತ್ತು ಕನ್ನಡೇತರರಿಗೆ ಕನ್ನಡ ಕಲಿಕೆ ಕಾರ್ಯಕ್ರಮಗಳನ್ನು ಮತ್ತು ಆ ಸಂಬಂಧ ಪಠ್ಯಕ್ರಮ, ಸಾಹಿತ್ಯ ಸಿದ್ಧಪಡಿಸತಕ್ಕುದು ;

(ಎಫ್) ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದ ಉಪಯುಕ್ತ ಪ್ರಕಟಣೆಗಳನ್ನು ಪ್ರಕಟಿಸತಕ್ಕುದ್ದು, ಖರೀದಿಸತಕ್ಕುದು ಮತ್ತು ವಿತರಿಸತಕ್ಕುದು ;

(ಜಿ) ಕಛೇರಿಗಳಲ್ಲಿ ಬಳಸಲಾಗುವ ಎಲ್ಲ ನಮೂನೆಗಳು ಕನ್ನಡದಲ್ಲಿ ಮುದ್ರಣವಾಗುವಂತೆ ನೋಡಿಕೊಳ್ಳತಕ್ಕುದು ಹಾಗೂ ಕನ್ನಡೇತರ ಭಾಷೆಗಳಲ್ಲಿ ಇರಲೇಬೇಕಾದ ನಮೂನೆ, ಪ್ರಕಟಣೆ ಮತ್ತು ರಿಜಿಸ್ಟರುಗಳನ್ನು ಪರಿಶೀಲಿಸಿ, ಮುದ್ರಣಕ್ಕೆ ಅನುಮತಿ ನೀಡತಕ್ಕುದು;

(ಹೆಚ್) ರಾಜ್ಯದಲ್ಲಿ ಹೆಚ್ಚು ಜನ ಸಂಪರ್ಕ ಹೊಂದಿರುವ ಕೇಂದ್ರ ಸರ್ಕಾರದ ಕಛೇರಿಗಳು, ಬ್ಯಾಂಕುಗಳು, ಅಂಚೆ ಕಛೇರಿಗಳು ಮತ್ತು ಮತ್ತಿತರ ಕಛೇರಿಗಳು ಮತ್ತು ಉದ್ದಿಮೆಗಳಲ್ಲಿ ದೈನಂದಿನ ಬಳಕೆಯಲ್ಲಿರುವ ನಮೂನೆ, ನೋಟೀಸು, ನಾಮಫಲಕಗಳಲ್ಲಿ ಕೇಂದ್ರ ಸರ್ಕಾರದ ಭಾಷಾ ನೀತಿಗೆ ಅನುಗುಣವಾಗಿ ಪ್ರಾದೇಶಿಕ ಭಾಷೆಯನ್ನು ಬಳಸಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸತಕ್ಕುದು ಮತ್ತು ಈ ಸಂಬಂಧವಾಗಿ ಅಂಥ ಕಛೇರಿಗಳೊಂದಿಗೆ ಪತ್ರವ್ಯವಹಾರ ಕೈಗೊಳ್ಳತಕ್ಕುದು.

(ಐ) ಆಡಳಿತ ಪೂರಕ ಸಾಹಿತ್ಯದ ರಚನೆ, ಪರಿಷ್ಕರಣೆ, ಮುದ್ರಣ ಮತ್ತು ವಿತರಣೆ ವಿಷಯಗಳಲ್ಲಿ ತೀರ್ಮಾನ ಕೈಗೊಳ್ಳತಕ್ಕುದು ಮತ್ತು ಈ ಕ್ಷೇತ್ರದಲ್ಲಿನ ಪ್ರಗತಿಯನ್ನು ಆಗಿಂದಾಗ್ಗೆ ಸಮೀಕ್ಷಿಸಿ ಸೂಕ್ತ ಕ್ರಮ ಸೂಚಿಸತಕ್ಕುದು.

(ಜೆ) ಕನ್ನಡ ಪಠ್ಯ ಪುಸ್ತಕಗಳ ಗುಣಮಟ್ಟ ಪರೀಕ್ಷಿಸಿ ಲೋಪದೋಷಗಳೇನಾದರೂ ಇದ್ದರೆ ಇದನ್ನು ಸರಿಪಡಿಸಿಕೊಳ್ಳಲು ಸೂಚನೆ ನೀಡತಕ್ಕುದು.

16. ಪ್ರಾಧಿಕಾರದ ಉದ್ದೇಶಗಳನ್ನು ನೆರವೇರಿಸಲು ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡುವುದು : (1) ರಾಜ್ಯ ಮಟ್ಟದಲ್ಲಿ ಸರ್ಕಾರ ಮುಖ್ಯ ಕಾರ್ಯದರ್ಶಿಗಳು ವಿಭಾಗ ಮಟ್ಟದಲ್ಲಿ ವಿಭಾಗಾಧಿಕಾರಿಗಳು. ಜಿಲಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ, ಉಪವಿಭಾಗ ಮಟ್ಟದಲ್ಲಿ ಉಪ ವಿಭಾಗಾಧಿಕಾರಿ ಮತ್ತು ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರ್ ಇವರನ್ನು ಪ್ರಾಧಿಕಾರದ ಉದ್ದೇಶಗಳನ್ನು ನೆರವೇರಿಸಲು ಜವಾಬ್ದಾರರನ್ನಾಗಿ ಮಾಡತಕ್ಕುದು.

(2) ರಾಜ್ಯ ಸರ್ಕಾರವು ಪ್ರಾಧಿಕಾರದ ಬೇರೆ ಬೇರೆ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಜವಾಬ್ದಾರರನ್ನಾಗಿ ಮಾಡಲಾದ ಅಧಿಕಾರಿಗಳನ್ನು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸತಕ್ಕುದು ಮತ್ತು ಬೇರೆ ಬೇರೆ ಇಲಾಖೆಗಳಿಗಾಗಿ ಬೇರೆ ಬೇರೆ ವರ್ಗಗಳ ಅಧಿಕಾರಿಗಳನ್ನು ನಿರ್ದಿಷ್ಟಪಡಿಸಬಹುದು.

ಮಾಹಿತಿ ಪಡೆದುಕೊಳ್ಳುವುದು : ಪ್ರಾಧಿಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರದ ಯಾವ ಅಧಿಕಾರಿಯಿಂದಲಾದರೂ ಡಾ|| ಸರೋಜಿನಿ ಮಹಿಷಿ ವರದಿಯನ್ನು ಅನುಷ್ಠಾನಕ್ಕೆ ತರುವುದಕ್ಕೆ ಮತ್ತು ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕೋರಬಹುದು ಮತ್ತು ಪಡೆದುಕೊಳ್ಳಬಹುದು ಮತ್ತು ಅಂಥ ಅಧಿಕಾರಿಯು ಪ್ರಾಧಿಕಾರವು ಕೋರಬಹುದಾದ ಮಾಹಿತಿಯನ್ನು ಒದಗಿಸಲು ಬದ್ಧನಾಗಿರತಕ್ಕುದು ;

18. ಪ್ರಾಧಿಕಾರದ ಸಲಹೆಗಳು : ಪ್ರಾಧಿಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ, ತನ್ನ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆಗಳನ್ನು ನೀಡಬಹುದು.

19. ಕರ್ತವ್ಯ ಲೋಪವನ್ನು ದಾಖಲಿಸುವ ಮತ್ತು ನೇಮಕಾತಿ ಪ್ರಾಧಿಕಾರಕ್ಕೆ ತಿಳಿಸುವ ಅಧಿಕಾರ : ಪ್ರಾಧಿಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ, ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಅಥವಾ ಈಗಾಗಲೇ

ಜಾರಿಯಲ್ಲಿರುವ ಯಾವುದೇ ಆದೇಶವನ್ನು ರಾಜ್ಯ ಸರ್ಕಾರ ಮತ್ತು ಸ್ಥಳೀಯ ನಿಕಾಯಗಳ ಅಧಿಕಾರಿಗಳು ಮತ್ತು ನೌಕರರು ಉಲ್ಲಂಘಿಸಿದರೆ, ಅಂಥ ಉಲ್ಲಂಘನೆಯನ್ನು ಕರ್ತವ್ಯ ಲೋಪವೆಂದು ದಾಖಲಿಸತಕ್ಕುದು ಮತ್ತು ಅಂಥ ವ್ಯಕ್ತಿಗಳ ವಿರುದ್ಧ ಅಗತ್ಯ ಕ್ರಮಕ್ಕೆಗೊಳ್ಳುವಂತೆ ನೇಮಕಾತಿ ಪ್ರಾಧಿಕಾರಕ್ಕೆ ಸಲಹೆಗಳನ್ನು ನೀಡತಕ್ಕುದು.

ಅಧ್ಯಾಯ –IV

20. ಪ್ರಾಧಿಕಾರದ ನಿಧಿ : (1) ಪ್ರಾಧಿಕಾರವು ಪ್ರಾಧಿಕಾರದ ನಿಧಿಯೆಂದು ಕರೆಯಲಾಗುವ ಒಂದು ನಿಧಿಯನ್ನು ಹೊಂದಿರತಕ್ಕುದು.

(2) ಈ ಮುಂದಿನವುಗಳು ಪ್ರಾಧಿಕಾರದ ನಿಧಿಯ ಒಂದು ಭಾಗವಾಗಿರತಕ್ಕುದು ಅಥವಾ ಪ್ರಾಧಿಕಾರದ ನಿಧಿಗೆ ಸಂದಾಯವಾಗತಕ್ಕುದು; ಎಂದರೆ:-

(i) ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯಾವುದೇ ಸ್ಥಳೀಯ ಪ್ರಾಧಿಕಾರ, ನಿಗಮಿತವಾದ ಅಥವಾ ನಿಗಮಿತವಾಗಿರದೆ ಯಾವುದೇ ನಿಕಾಯ ಅಥವಾ ಯಾರೇ ವ್ಯಕ್ತಿಗಳು ಮಾಡುವ ಎಲ್ಲ ಅನುದಾನಗಳು, ಧನಸಹಾಯಗಳು, ದಾನಗಳು ಮತ್ತು ಕೊಡುಗೆಗಳು ; ಮತ್ತು

(ii) ಯಾವುದೇ ರೀತಿಯ ಯಾವುದೇ ಮೂಲದಿಂದ ಪ್ರಾಧಿಕಾರದಿಂದ ಅಥವಾ ಅದರ ಪರವಾಗಿ ಸ್ವೀಕರಿಸಲಾದ ಎಲ್ಲ ಇತರ ಮೊತ್ತಗಳು;

(3) ರಾಜ್ಯ ಸರ್ಕಾರವು ಅನ್ಯಥಾ ನಿರ್ದೇಶಿಸಿದ ಹೊರತು, ನಿಧಿಗೆ ಜಮೆ ಮಾಡಲಾದ ಎಲ್ಲ ಹಣವನ್ನು ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ವಿನಿಯೋಗಿಸತಕ್ಕದು.

(4) ಪ್ರಾಧಿಕಾರದ ಕಾರ್ಯದರ್ಶಿ ಮತ್ತು ಅದರ ಅಧಿಕಾರಿಗಳು ಮತ್ತು ನೌಕರರಿಗೆ ಸಂದಾಯವಾಗತಕ್ಕ ವೇತನಗಳು, ಭತ್ಯೆಗಳು ಮತ್ತು ನಿವೃತ್ತಿ ವೇತನಗಳೂ ಸೇರಿದಂತೆ ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕುದು.

21. ಯೋಜನೆ ಮತ್ತು ಕಾರ್ಯಕ್ರಮಗಳಿಗಾಗಿ ಹಂಚಿಕೆ : ರಾಜ್ಯ ಸರ್ಕಾರವು ಪ್ರಾಧಿಕಾರದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ವಾರ್ಷಿಕ ಬಜೆಟ್ಟಿನ ಪ್ರಾಧಿಕಾರಕ್ಕೆ ಹಣಕಾಸಿನ ಹಂಚಿಕೆಗಳನ್ನು ಮಾಡಬಹುದು.

22.ರಾಜ್ಯ ಸರ್ಕಾರದಿಂದ ಅನುದಾನ : ರಾಜ್ಯ ಸರ್ಕಾರವು ಪ್ರತಿ ವರ್ಷ ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳಿಗೆ ಸಮನಾದ ಮೊಬಲಗನ್ನು ಪ್ರಾಧಿಕಾರಕ್ಕೆ ಅನುದಾನವಾಗಿ ನೀಡಬಹುದು.

23. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ : (1) ಪ್ರಾಧಿಕಾರದ ನಿಧಿಯ ವರಮಾನ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ಗೊತ್ತು ಪಡಿಸಬಹುದಾದಂಥ ನಿಯಮಗಳ ಅನುಸಾರವಾಗಿ ಇರತಕ್ಕುದು;

(2) ಪ್ರಾಧಿಕಾರವು ಗೊತ್ತು ಪಡಿಸಬಹುದಾದಂಥ ಪ್ರಪತ್ರದಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪಟ್ಟಿಯನ್ನು ತಯಾರಿಸತಕ್ಕುದು.

(3) ರಾಜ್ಯ ಸರ್ಕಾರವು ನೇಮಕ ಮಾಡಬಹುದಾದಂಥ ಲೆಕ್ಕ ಪರಿಶೋಧಕರಿಂದ ಪ್ರಾಧಿಕಾರದ ಲೆಕ್ಕಪತ್ರಗಳ ವಾರ್ಷಿಕ ಲೆಕ್ಕಪರಿಶೋಧನೆ ಮಾಡಿಸತಕ್ಕುದು ;

(4) ಲೆಕ್ಕಪರಿಶೋಧಕರು ಲೆಕ್ಕ ಪರಿಶೋಧನೆಯ ಉದ್ದೇಶಗಳಿಗಾಗಿ ಪ್ರಾಧಿಕಾರದ ಎಲ್ಲ ಲೆಕ್ಕ ಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ನೋಡುವ ಅಧಿಕಾರ ಹೊಂದಿರತಕ್ಕುದು.

(5) ಪ್ರಾಧಿಕಾರವು ಲೆಕ್ಕಪರಿಶೋಧನೆಗಾಗಿ ಗೊತ್ತುಪಡಿಸಬಹುದಾಂಥ ವೆಚ್ಚಗಳನ್ನು ತನ್ನ ನಿಧಿಯಿಂದ ಸಂದಾಯ ಮಾಡತಕ್ಕುದು.

(6) ಲೆಕ್ಕಪರಿಶೋಧಕರ ವರದಿಯನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗ, ಪ್ರಾಧಿಕಾರವು ಲೆಕ್ಕ ಪರಿಶೋಧಕರ ವರದಿಯ ಒಂದು ಪ್ರತಿಯೊಂದಿಗೆ ಲೆಕ್ಕಪತ್ರಗಳ ವಾರ್ಷಿಕ ವಿವರಣಾಪಟ್ಟಿಯ ಪ್ರತಿಯೊಂದನ್ನು ಸರ್ಕಾರಕ್ಕೆ ಕಳುಹಿಸತಕ್ಕುದು ಮತ್ತು ಗೊತ್ತು ಪಡಿಸಬಹುದಾದಂಥ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣ ಪಟ್ಟಿಯನ್ನು ಪ್ರಕಟಿಸುವಂತೆ ಮಾಡತಕ್ಕುದು.

(7) ರಾಜ್ಯ ಸರ್ಕಾರವು ಲೆಕ್ಕಪರಿಶೋಧಕರ ವರದಿಯನ್ನು ಪರಿಶೀಲಿಸಿದ ತರುವಾಯ ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಪ್ರಾಧಿಕಾರಕ್ಕೆ ನೀಡಬಹುದು ಮತ್ತು ಪ್ರಾಧಿಕಾರವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕುದು.

ಅಧ್ಯಾಯ - V
ಸಂಕೀರ್ಣ

24. ವರದಿ : ಪ್ರಾಧಿಕಾರವು, ಗೊತ್ತುಪಡಿಸಬಹುದಾದಂಥ ದಿನಾಂಕಕ್ಕೆ ಮೊದಲು, ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಗೊತ್ತುಪಡಿಸಬಹುದಾದಂಥ ಅಂತರದೊಳಗೆ ಗೊತ್ತುಪಡಿಸಲಾದ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕುದು.

25. ಪ್ರಾಧಿಕಾರದ ಆಯವ್ಯಯ : ಪ್ರಾಧಿಕಾರವು ಪ್ರತಿವರ್ಷ, ಮುಂದಿನ ಏಪ್ರಿಲ್ ಮೊದಲನೇ ದಿನಾಂಕದಿಂದ ಪ್ರಾರಂಭವಾಗುವ ಹಣಕಾಸು ವರ್ಷಕ್ಕಾಗಿ ತನ್ನ ಆದಾಯ ಮತ್ತು ವೆಚ್ಚದ ಅಂದಾಜನ್ನು ಗೊತ್ತುಪಡಿಸಬಹುದಾದಂಥ ದಿನಾಂಕದಂದು ಮತ್ತು ಅಂಥ ಪ್ರಪತ್ರದಲ್ಲಿ ಸಿದ್ಧಪಡಿಸತಕ್ಕುದು ಮತ್ತು ಅದನ್ನೂ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕುದು.

26. ನಿಯಮಗಳ ರಚನಾಧಿಕಾರ : (1) ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ಪೂರ್ವ ಪ್ರಕಟಣೆಯ ತರುವಾಯ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ, ರಾಜ್ಯ ವಿಧಾನ ಮಂಡಲವು ಅಧಿವೇಶನದಲ್ಲಿದ್ದರೆ ಅದರ ಪ್ರತಿಯೊಂದು ಸದನದ ಮುಂದೆ ಒಂದು ಅಥವಾ ಎರಡು ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯೊಳಗೆ ಮಂಡಿಸತಕ್ಕುದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ಅದರ ನಿಕಟ ತರುವಾಯದ ಅಧಿವೇಶನ ಮುಕ್ತಾಯವಾಗುವ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಒಪ್ಪಿದರೆ ಅಥವಾ ಯಾವುದೇ ನಿಯಮ ರಚಿಸಬಾರದೆಂದು ನಿರ್ಧರಿಸಿದರೆ ಆ ತರುವಾಯ ಸಂದರ್ಭಾನುಸಾರ, ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಯಾವುದೇ ಪರಿಣಾಮ ಹೊಂದಿರತಕ್ಕುದ್ದಲ್ಲ. ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಮೊದಲು ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕುದ್ದಲ್ಲ.

27. ನಿಯಮಗಳನ್ನು ರಚಿಸಲು ಪ್ರಾಧಿಕಾರದ ಅಧಿಕಾರ : ಪ್ರಾಧಿಕಾರವು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು 26ನೇ ಪ್ರಕರಣದ ಮೇರೆಗೆ ಮಾಡಲಾದ ವಿನಿಯಮಗಳಿಗೆ ಒಳಪಟ್ಟು ಮತ್ತು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸಬಹುದು.

ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನದ ಸಲುವಾಗಿ ಮತ್ತು ಕನ್ನಡವನ್ನು ಆಡಳಿತ ಭಾಷೆಯಾಗಿ ಅನುಷ್ಠಾನಕ್ಕೆ ತರುವ ಬಗ್ಗೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನೆ ಸಲುವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಶಾಸನಬದ್ಧ ಸ್ಥಾನಮಾನಕ್ಕೆ ಉಪಬಂಧ ಕಲ್ಪಿಸುವುದು ಅಗತ್ಯವೆಂದು ಪರಿಗಣಿಸಲಾಯಿತು.

ಆದ್ದರಿಂದ ವಿಧೇಯಕ.

ಹೆಚ್. ವಿಶ್ವನಾಥ್
ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು,
ನಿಂ.ಹು. ಮುತ್ತಲಗೇರಿ,
ಕಾರ್ಯದರ್ಶಿ.

ಆರ್ಥಿಕ ಜ್ಞಾಪನ ಪತ್ರ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸ್ಥಾಪನೆಯ ಪ್ರಸ್ತಾವಿತ ಕ್ರಮದಿಂದ ವರ್ಷವೊಂದಕ್ಕೆ ಎರಡು ಕೋಟಿ ರೂ.ಗಳ ಆವರ್ತಕ ವೆಚ್ಚ ತಗಲುತ್ತದೆ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನ

ಖಂಡ 4 - ಈ ಖಂಡದ (4)ನೇ ಉಪ-ಖಂಡವು ಪ್ರಾಧಿಕಾರದ ಅಧ್ಯಕ್ಷರು ಮತ್ತು ಇತರ ಸದಸ್ಯರಿಗೆ ಸಂದಾಯ ಮಾಡಲಾಗುವ ಭತ್ಯೆಗಳ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 8 - ಪ್ರಾಧಿಕಾರದ ಅಧಿಕಾರಿಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ -13 - ಈ ಖಂಡದ (2) ನೇ ಉಪ-ಖಂಡವು ಪ್ರಾಧಿಕಾರವು ಯಾರ ಸೇವೆಗಳು ಮತ್ತು ಸಹಾಯವನ್ನು ಪಡೆಯಿತೋ ಅಂಥ ತಜ್ಞರಿಗೆ ಸಂದಾಯ ಮಾಡಬಹುದಾದ ಗೌರವಧನ ಅಥವಾ ಭತ್ಯಗಳ ಮೊತ್ತದ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 23 - ಪ್ರಾಧಿಕಾರದ ಲೆಕ್ಕಪತ್ರಗಳ ನಿರ್ವಹಣೆಯ, ಸಿದ್ಧಪಡಿಸಲಾಗುವ ವಾರ್ಷಿಕ ಲೆಕ್ಕಪತ್ರಗಳ ಹೇಳಿಕೆಯ, ಪ್ರಾಧಿಕಾರದ ನಿಧಿಗಳಿಂದ ಸಂದಾಯಮಾಡಬೇಕಾಗಿರುವ

ಲೆಕ್ಕಪರಿಶೋಧನೆಯ ವೆಚ್ಚಗಳು - ಇವುಗಳ ವಿಧಾನದ ಮತ್ತು ವಾರ್ಷಿಕ ಲೆಕ್ಕಪತ್ರಗಳ ಪ್ರಕಟಣೆಯನ್ನು ಮಾಡಬೇಕಾಗಿರುವಂಥ ವಿಧಾನದ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 24 - ವಾರ್ಷಿಕ ವರದಿಯನ್ನು ಸಿದ್ಧಪಡಿಸುವ ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸುವ ವಿಧಾನದ ಸಂಬಂಧವಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 25 - ಪ್ರತಿ ವರ್ಷವು ಪ್ರಾಧಿಕಾರದ ಆಯವ್ಯಯವನ್ನು ಸಿದ್ಧಪಡಿಸುವಂಥ ನಮೂನೆಯ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 26 - ಪೂರ್ವ ಪ್ರಕಟನೆಯ ನಂತರ, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 27 - ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ವಿನಿಯಮಗಳನ್ನು ರಚಿಸಲು ಪ್ರಾಧಿಕಾರಕ್ಕೆ ಅಧಿಕಾರ ನೀಡುತ್ತದೆ.

ಉದ್ದೇಶಿತ ಪ್ರತ್ಯಾಯೋಜಿತ ಶಾಸನ ರಚನಾಧಿಕಾರವು ವಾಡಿಕೆಯ ಸ್ವರೂಪದ್ದಾಗಿದೆ.

BLANK PAGE

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ ೧೬ನೇ ಫೆಬ್ರವರಿ ೧೯೯೪, ಮಾಘ ೨೫, ಶಕ ೧೯೧೫

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಮಧ್ಯಾಹ್ನ ೧.೦೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರು : ಸದನವನ್ನು ಈಗ ಮುಂದೂಡುತ್ತಿದ್ದೇನೆ. ಸದನವು ಪುನಃ 2 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು 1 ಗಂಟೆ 7 ನಿಮಿಷಕ್ಕೆ ಮುಂದೂಡಲ್ಪಟ್ಟು 2 ಗಂಟೆಗೆ ಸೇರಲು ನಿಶ್ಚಯಿಸಿತು)

ಸದನವು ಮಧ್ಯಾಹ್ನ 2 ಗಂಟೆ 20 ನಿಮಿಷಕ್ಕೆ ಪುನರಾರಂಭಗೊಂಡಿತು.

ಸನ್ಮಾನ್ಯ ಶ್ರೀ ವಿ.ಎಸ್. ಕೌಜಲಗಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಗುತ್ತಿಗೆ ಆಧಾರದ ಮೇಲೆ ವೈದ್ಯರುಗಳ ನೇಮಕ

318 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿನ ಖಾಲಿ ಇರುವ ವೈದ್ಯರ ಸ್ಥಾನಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆರೋಗ್ಯ ಮತ್ತು ಕುಟುಂಬ ಇಲಾಖೆಯು ಬಹಳ ಸಮಯದ ಹಿಂದೆ ಯೋಚಿಸಿರುವುದು ನಿಜವೇ?*

ಆ) *ಗ್ರಾಮಾಂತರ ಪ್ರದೇಶದಲ್ಲಿ ಮುಖ್ಯವಾಗಿ ವೈದ್ಯರ ಕೊರತೆ ಇದ್ದು ಅಲ್ಲಿನ ಸಾರ್ವಜನಿಕರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಗುತ್ತಿಗೆ ಆಧಾರದಲ್ಲಿ ವೈದ್ಯರ ಆಯ್ಕೆಯ ಪ್ರತಿಕ್ರಿಯೆಯನ್ನು ಸರ್ಕಾರ ಕೂಡಲೇ ಮಾಡುವುದೇ?*

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಹೌದು.

ಇ) ಹೌದು.

ಗ್ರಾಮಾಂತರ ಪ್ರದೇಶದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದ್ದು, ಅರ್ಜಿಗಳನ್ನು ಪರಿಶೀಲಿಸಿ ಆದಷ್ಟು ಜಾಗ್ರತೆಯಾಗಿ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಪಿ. ಬಸವರಾಜ್ : ಅಧ್ಯಕ್ಷರೇ ರಾಜ್ಯದ ಗ್ರಾಮಾಂತರ ಪ್ರದೇಶದ ಆರೋಗ್ಯ ಕೇಂದ್ರಗಳಲ್ಲಿರುವ ವೈದ್ಯಾಧಿಕಾರಿಗಳ ಕೊರತೆ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಖಾಲಿ ಇರುವ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ತುಂಬುತ್ತೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಅದನ್ನು ತುಂಬಲಿಕ್ಕೆ ಒಂದು ಟೈಂಲಿಮಿಟ್ ಇಟ್ಟು ತುಂಬಿದರೆ ಪ್ರಯೋಜನವಾಗುತ್ತದೆ. ಯಾವಾಗ ತುಂಬುತ್ತೀರಿ? ಕಳೆದ ಒಂದು ವರ್ಷದಿಂದಲೂ ಆ ಹುದ್ದೆ ಖಾಲಿ ಇದ್ದು, ಆಸ್ಪತ್ರೆ ಇದ್ದು ವೈದ್ಯರು ಇಲ್ಲದೇ ಇರುವುದರಿಂದ ಯಾವಾಗ ತುಂಬುತ್ತೀರಿ?

ಶ್ರೀ ಬಿ.ಎಸ್. ಪಾಟೀಲ್ : ಅಧ್ಯಕ್ಷರೇ, ಈಗಾಗಲೇ ನಮ್ಮ ನಮ್ಮ ಇಲಾಖೆಯಲ್ಲಿ ಖಾಲಿ ಇರುವಂತಹ ಹುದ್ದೆಗಳನ್ನು ತುಂಬುವ ಸಲುವಾಗಿ ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. 1992 ಅಕ್ಟೋಬರ್‌ನಲ್ಲಿ 380, ಹಾಗೂ 93ರಲ್ಲಿ 374 ಈ ತರಹ 774 ವೈದ್ಯರನ್ನು ನಾವು ತುಂಬಿಕೊಂಡಿದ್ದು ಬಹಳಷ್ಟು ಕಡೆ ವೈದ್ಯರನ್ನು ತುಂಬಲಾಗಿದೆ. ಈಗ ಗ್ರಾಮಾಂತರ ಪ್ರದೇಶದಲ್ಲಿ 336 ಹಾಗೂ ಪಟ್ಟಣ ಪ್ರದೇಶದಲ್ಲಿ 105 ಹುದ್ದೆಗಳು ಮಾತ್ರ ನಮ್ಮಲ್ಲಿ ಖಾಲಿ ಇದ್ದು ಈಗಾಗಲೇ ಅವುಗಳನ್ನು ಭರ್ತಿ ಮಾಡುವ ಸಲುವಾಗಿ ಅರ್ಜಿಗಳನ್ನು ಕರೆದಿದ್ದೇವೆ. ಅತಿ ಹೆಚ್ಚು ಎಂದರೆ ಒಂದೂವರೆ ತಿಂಗಳಲ್ಲಿ ಆ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ಬಸವರಾಜ್ : ನನ್ನ ಮತದಾರ ಕ್ಷೇತ್ರದ ಸಾಲಿಗ್ರಾಮ ಸಾಸ್ತಾನ್‌ನಲ್ಲಿ ಖಾಲಿಯಾಗಿ ಒಂದು ವರ್ಷವಾಯಿತು, ಅದನ್ನು ಕೂಡಲೇ ತುಂಬಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ : ಅಧ್ಯಕ್ಷರೇ, ಹಿಂದೆ ಇದೇ ಸದನದಲ್ಲಿ ನಾನು ಹೇಳಿದ್ದೇನೆ. ಇನ್ನು ಒಂದೂವರೆ ತಿಂಗಳಲ್ಲಿ ನಮ್ಮ ರಾಜ್ಯದಲ್ಲಿ ಯಾವಾವ ಮೂಲೆಯಲ್ಲಿ ಹೋದರೂ ಕೂಡ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯ ಅಥವಾ ಪುರುಷವೈದ್ಯರಾಗಲಿ ಖಾಲಿ ಇಲ್ಲವೆಂಬ ರೀತಿ ಸರ್ಕಾರ ಭರ್ತಿ ಮಾಡುವ ಸಲುವಾಗಿ ಕಾರ್ಯಕ್ರಮ ಹಾಕಿಕೊಂಡಿದೆ. ಅದನ್ನು ತುಂಬುವ ವ್ಯವಸ್ಥೆ ಕೂಡ ಮಾಡಲಾಗುವುದು.

ಶಿವಮೊಗ್ಗ ಜಿಲ್ಲೆಯಲ್ಲಿ ಆರೋಗ್ಯ ಕೇಂದ್ರಗಳು.

222 - ಡಿ.ಬಿ. ಗಂಗಪ್ಪ (ಹೊನ್ನಳ್ಳಿ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.

ಆ) ಹಾಗಿದ್ದಲ್ಲಿ ಅವುಗಳನ್ನು ಯಾವ ಯಾವ ತಾಲ್ಲೂಕಿನಲ್ಲಿ ತೆರೆಯಲಾಗಿದೆ.

ಇ) ಹೊನ್ನಾಳಿ ತಾಲ್ಲೂಕಿನ ಕೊಟೆ ಮಲ್ಲೂರು ಮತ್ತು ಕಂಚಿಕೊಪ್ಪಗಳಲ್ಲಿ ಆರೋಗ್ಯ ಕೇಂದ್ರಗಳನ್ನು ತೆರೆಯಲು ಸರ್ಕಾರ ಕೈಗೊಂಡಿದೆಯೇ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 90-91ನೇ ಸಾಲಿನಿಂದ ಶಿವಮೊಗ್ಗ ಜಿಲ್ಲೆಗೆ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿವರ ಕೆಳಗಿನಂತಿವೆ.

90-91	91-92	92-93	ಎ93-94
1	3	4	2

ಆ) ಶಿವಮೊಗ್ಗ ಕೆಳಕಂಡ ಸ್ಥಳಗಳಿಗೆ 90-91ನೇ ಸಾಲಿನಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ.

90-91			91-92	
ತಾಲ್ಲೂಕು		ಸ್ಥಳ	ತಾಲ್ಲೂಕು	ಸ್ಥಳ
1.	ಶಿಕಾರಿಪುರ	ಚಿಕ್ಕ ಜಂಬೂರು	1. ಸಾಗರ	ಕಾರ್ಗಲ್
			2. ಸೊರಬ	ಶಕುನಹಳ್ಳಿ
			3. ಸೊರಬ	ಎಣ್ಣೆಕೊಪ್ಪ

92-93			93-94		
ತಾಲ್ಲೂಕು		ಸ್ಥಳ		ತಾಲ್ಲೂಕು	ಸ್ಥಳ
1.	ಸೊರಬ	ಓಟೂರು	1.	ಶಿಕಾರಿಪುರ	ತೇಗರ್ಸಿ
2.	ಸೊರಬ	ಹುಲತ್ತಿ ಕೊಪ್ಪ	2.	ಚನ್ನಗಿರಿ	ಪಂಡೋಮಟ್ಟಿ
3.	ಹೊಸನಗರ	ಹುಂಚ			
4.	ಸಾಗರ	ಸಿರುವಂತೆ.			

ಇ) ಇಲ್ಲ.

ಶ್ರೀ ಡಿ.ಬಿ. ಗಂಗಪ್ಪ: ಅಧ್ಯಕ್ಷರೇ, ಕಳೆದ 4 ವರ್ಷದಲ್ಲಿ ಶಿವಮೊಗ್ಗದಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಕೇಳಿದ್ದಕ್ಕೆ ಸುಮಾರು 10 ಎಂದು ಉತ್ತರ ಕೊಟ್ಟಿದ್ದಾರೆ. 90-91ರಲ್ಲಿ 1, 91-92ರಲ್ಲಿ 3, 92-93ರಲ್ಲಿ 4, 93-94ರಲ್ಲಿ 2 ಎಂದು ಕೊಟ್ಟಿದ್ದಾರೆ ಅದೇ ರೀತಿ ಸ್ಥಳಗಳನ್ನು ಸಹ ಕೊಟ್ಟಿದ್ದಾರೆ. ಆದರೆ ಹೊನ್ನಾಳಿ ತಾಲೂಕಿನ ಕೋಟೆಮಲ್ಲೂರು ಮತ್ತು ಕೆಂಚಕೊಪ್ಪದಲ್ಲಿ ಪ್ರಾಥಮಿಕ ಕೇಂದ್ರಗಳನ್ನು ಸ್ಥಾಪನೆ ಮಾಡಲು ಸರ್ಕಾರದ ಕಾರ್ಯಕ್ರಮ ಇಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪನೆ ಮಾಡಬೇಕಾದರೆ ಜಿಲ್ಲೆಯನ್ನು ಯೂನಿಟ್ ಆಗಿ ತೆಗೆದುಕೊಳ್ಳುತ್ತೀರಾ, ತಾಲ್ಲೂಕನ್ನು ಯೂನಿಟ್ಟಾಗಿ ತೆಗೆದುಕೊಳ್ಳುತ್ತೀರಾ ಅಥವಾ ಜನಸಂಖ್ಯೆ ಆಧಾರದ ಮೇಲೆ ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಪಾಟೀಲ್: ಅಧ್ಯಕ್ಷರೇ, ನಾವು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವಾಗ ಜಿಲ್ಲೆ ಹಾಗೂ ತಾಲ್ಲೂಕನ್ನು ಒಂದು ಘಟಕವನ್ನಾಗಿ ತೆಗೆದುಕೊಳ್ಳುವುದಿಲ್ಲ. ಮೊದಲು 30 ಸಾವಿರಕ್ಕೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಮಾಡುವಂತಹ ನಮ್ಮ ಸರ್ಕಾರದ ಯೋಚನೆ ಇತ್ತು. ಈಗ ಜನರ ಬೇಡಿಕೆ ಆಧಾರದ ಮೇಲೆ 20 ಸಾವಿರ ಜನಸಂಖ್ಯೆಗೆ ಒಂದು ಕೇಂದ್ರವನ್ನು ಮಾಡಬೇಕೆಂಬುದು ಸರ್ಕಾರದ ಯೋಜನೆ.

ಶ್ರೀ ಡಿ.ಬಿ. ಗಂಗಪ್ಪ: ಅಧ್ಯಕ್ಷರೇ, ಆದರೆ ಕೆಂಚಕೊಪ್ಪ ಮತ್ತು ಕೋಟೆಮಲ್ಲೂರು ಪ್ರಾಥಮಿಕ ಕೇಂದ್ರ ಸ್ಥಾಪಿಸಬೇಕೆಂದು ಕೇಳಿ, ಕಳೆದ ನಾಲ್ಕು ವರ್ಷದಿಂದ ಸಂಬಂಧಪಟ್ಟ ಇಲಾಖೆ ಮುಖಾಂತರ ಬೇಕಾದ ಎಲ್ಲಾ ಮಾಹಿತಿ ಒದಗಿಸಿದರೂ ಅಲ್ಲಿ ಪ್ರಾರಂಭ ಮಾಡುತ್ತಿಲ್ಲ. ಅಲ್ಲಿನ ಜನರು 20-25 ಕಿಮೀ ವೈದ್ಯಕೀಯ ಸೇವೆ ಪಡೆಯಲು ಹೋಗಬೇಕಾಗುತ್ತದೆ. ಇದರಿಂದ ಕೆಲವರಿಗೆ ತೊಂದರೆಯಾಗುವುದರಿಂದ ಈ ವರ್ಷವಾದರೂ ಅಲ್ಲಿ ಪ್ರಾರಂಭ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ : ಅಧ್ಯಕ್ಷರೇ, ಕೋಟಿಮಲ್ಲೂರು ಹಾಗೂ ಕೆಂಚಕೊಪ್ಪಕ್ಕಿಂತ ಇನ್ನೂ ಹೆಚ್ಚಿನ ಅವಶ್ಯಕತೆ ಇದ್ದ ಗ್ರಾಮಗಳು ಆಭಾಗದಲ್ಲಿದ್ದುದರಿಂದ, ಇದನ್ನು ಈ ಸಲ ಗಣನೆಗೆ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಮುಂದಿನ ಸಲ ಸರ್ಕಾರ ತಮ್ಮ ಬೇಡಿಕೆಯನ್ನು ಪರಿಶೀಲಿಸುವುದು.

ಅಧ್ಯಕ್ಷರು : ಮುಂದಿನ ಪ್ರಶ್ನೆ ಶ್ರೀ ಶಿವಾನಂದ ಕೌಜಲಗಿಯವರದ್ದು; ಇದಕ್ಕೆ ಸರ್ಕಾರ ಸ್ವಲ್ಪ ಟೈಂ ಕೇಳಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ನಾನು ಕೇಳಿದ್ದುದು ಬೆಳಗಾಂ ಜಿಲ್ಲೆಯಲ್ಲಿ ನೀವು ಫಾರಸ್ಟ್‌ಗಾಗಿ ಎಷ್ಟು ಖರ್ಚುಮಾಡಿದ್ದೀರಿ ಎಂದು; ಇಡೀ ರಾಜ್ಯದ್ದೇನೂ ಕೇಳಿರಲಿಲ್ಲ. ದಯವಿಟ್ಟು ನಾಳೆ ತೆಗೆದುಕೊಳ್ಳಿ.

ಪ್ರಾಥಮಿಕ ಶಾಲೆಗಳಿಗೆ ವಂತಿಗೆಯ ಮೂಲಕ ಪ್ರವೇಶಾತಿ ರದ್ದು

273 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ವಂತಿಗೆಯನ್ನು ನಿಲ್ಲಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಆ) ಬೆಂಗಳೂರು ನಗರದಲ್ಲಿ ಪ್ರಾಥಮಿಕ ಶಾಲೆಗಳಿಗೆ ಪ್ರವೇಶಕ್ಕೆ ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಇದನ್ನು ಬಗೆಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ಪೂರ್ವ ಪ್ರಾಥಮಿಕ ಶಿಕ್ಷಣದಿಂದ, ಪ್ರಾರಂಭಿಸಿ ಹನ್ನೆರಡನೇ ತರಗತಿವರೆಗೆ ಶುಲ್ಕ ಸ್ವರೂಪದ ಬಗ್ಗೆ ನಿಗದಿಪಡಿಸಲು ಅಧಿಕಾರಿಗಳ ಮಟ್ಟದಲ್ಲಿ ಸಮಿತಿ ರಚಿಸಲಾಗಿದೆ. ಸದರಿ ಸಮಿತಿಯು ನೀಡುವ ವರದಿಯ ಮೇಲೆ ಸೂಕ್ತ ಕ್ರಮಕೈಗೊಳ್ಳಲಾಗುವುದು.

ಆ) ಹೌದು.

ಇ) ಈ ಬಗ್ಗೆ ನೇಮಿಸಿರುವ ಸಮಿತಿಯು ಸಲ್ಲಿಸುವ ವರದಿಯನ್ವಯ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಕ್ಯಾಪಿಟೇಷನ್ ಶುಲ್ಕ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜಿಗಿಂತ ಹೆಚ್ಚಾಗಿ ಅದರಲ್ಲೂ ಬೆಂಗಳೂರಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಪ್ರಾರಂಭವಾಗಿರತಕ್ಕಂಥಾದ್ದು ಶಾಲೆಗಳು 94-95ರ ಜೂನ್ನಲ್ಲಿ ಪ್ರಾರಂಭವಾದರೂ, ಫೆಬ್ರವರಿಯಲ್ಲೇ ಇಂಟರ್ವ್ಯೂಗೆ ಕರೆಯುತ್ತಿದ್ದಾರೆ. ಕೆಲವು ಶಾಲೆಗಳು ಶಾಲೆಗಳ ಫಾಲ್ಸ್ ಸ್ಟ್ಯಾಂಡರ್ಡ್ ಮೇಲೆ 15-25 ರಿಂದ 50 ಸಾವಿರದವರೆಗೆ ಫಿಕ್ಸ್ ಮಾಡಿಕೊಂಡಿರತಕ್ಕಂಥಾದ್ದು ಸರಕಾರದ ಗಮನಕ್ಕೆ ಬಂದಿದೆಯೇ ? ಅನುದಾನ ತೆಗೆದುಕೊಂಡಿರತಕ್ಕಂತಹ ಸಂಸ್ಥೆಗಳಲ್ಲಿ ಇದನ್ನು ನಿಲ್ಲಿಸಲಿಕ್ಕೇನು ಕ್ರಮ ತೆಗೆದುಕೊಂಡಿದ್ದೀರಿ ? ಮತ್ತು ಸಮಿತಿಯು ಯಾವಾಗ ತನ್ನ ವರದಿ ಕೊಡುತ್ತದೆ ಎಂಬುದನ್ನು ಖಚಿತವಾಗಿ ಸಚಿವರು ಹೇಳಬೇಕು. ಈ ಸರಕಾರದ ಒಂದು ವಿಚಾರವನ್ನು ನಾನು ಸ್ವಾಗತ ಮಾಡುತ್ತೇನೆ. ಇಂಜಿನಿಯರಿಂಗ್ ಮೆಡಿಕಲ್ ಕಾಲೇಜಿನ ವಿಚಾರದಲ್ಲಿ ಸುಪ್ರೀಂಕೋರ್ಟಿನವರು ಒಂದು ಆದೇಶ ಕೊಟ್ಟ ಮೇಲೆ ಅದರ ಪ್ರಕಾರ ನಡೆದುಕೊಳ್ಳಲಿಕ್ಕೆ ಮಾನ್ಯ ಮುಖ್ಯಮಂತ್ರಿಯವರು ಪ್ರಾಮಾಣಿಕ ಪ್ರಯತ್ನ ಮಾಡಿರುವುದೂ ನಿಜ ಮತ್ತು ಸ್ವಲ್ಪ ಫಲ ಸಿಕ್ಕಿರುವುದೂ ನಿಜ. ತಾವು ದಯವಿಟ್ಟು ಇದನ್ನೂ ಕೂಡ ಇದೇ ರೀತಿಯಲ್ಲಿ ಮಾಡಲಿಕ್ಕೆ ಸಾಧ್ಯವೇ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : ಸರಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕದಿಂದ ಹಿಡಿದು 10ನೇ ತರಗತಿಯವರೆಗೆ ಉಚಿತ

ಶಿಕ್ಷಣವನ್ನು ನೀಡಲಾಗುತ್ತಿದೆ. ಸರಕಾರಿ ಮತ್ತು ಅನುದಾನಿತ ಶಾಲೆಗಳು ಇದನ್ನು ನಾನು ಮತ್ತೆ ಹೇಳುತ್ತಿದ್ದೇನೆ. ಆದರೆ ಹೆಚ್ಚೆಚ್ಚು ಪೋಷಕರು ಖಾಸಗಿ ಶಾಲೆಗಳಲ್ಲಿ ಅದರಲ್ಲೂ ಆಂಗ್ಲಮಾಧ್ಯಮವನ್ನು ಇಚ್ಛಿಸುತ್ತಾರೆ. ಇದರಿಂದಾಗಿ ಒತ್ತಡ ಹೆಚ್ಚಾಗುತ್ತಿದೆ. ನಾವು ಈ ಕಡೆ ಇಂಗ್ಲೀಷ್ ಶಾಲೆಗಳನ್ನು ತೆರೆಯುವುದಕ್ಕೆ ನಿರ್ಬಂಧ ಹಾಕಿದ್ದೇವೆ. ಅದು ತಮಗೂ ಗೊತ್ತಿದೆ. 1ನೇ ತರಗತಿಯ ಆಂಗ್ಲ ಶಾಲೆಗಳನ್ನು ತೆರೆಯಲು ಪರವಾನಗಿ ಕೊಡುತ್ತಿಲ್ಲ. 5ನೇ ತರಗತಿಯಿಂದ ಕೊಟ್ಟರೂ ಕೂಡ ರೂಲ್ 10 ರ ಪ್ರಕಾರ ಎಲ್ಲಾ ನಿಬಂಧನೆಗಳನ್ನು ಅವರು ಪೂರೈಸಿದ್ದರೆ ಮಾತ್ರ 5ನೇ ತರಗತಿಯಿಂದ ಕೊಟ್ಟಿದ್ದೇವೆ. ಈಗಿರುವ ಶಾಲೆಗಳಲ್ಲಿ ತಮ್ಮ ಮಕ್ಕಳು ಕಲಿಯಬೇಕೆಂದು ತಂದೆತಾಯಿಯರು ಇಂಗ್ಲೀಷ್ ಮೀಡಿಯಂ ಶಾಲೆಗೆ ಹೋಗಬೇಕಂದು ಇಚ್ಛೆ ಮಾಡುವುದರಿಂದ ಒತ್ತಡ ಹೆಚ್ಚಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆ. ಹಿಂದೆ ವಿಧಾನ ಸಭೆಯಲ್ಲಿಯು ಕೂಡ ಸಾಕಷ್ಟು ಚರ್ಚೆ ನಡೆದಿತ್ತು. ನ್ಯಾಯಾಲಯದ ಆದೇಶದಂತೆ ಸಮಿತಿಯನ್ನು ರಚಿಸಿ ಅದು ಕೊಟ್ಟಂಥ ವರದಿಯ ಮೇಲೆ ಸೂಕ್ತ ನಿರ್ಣಯ ಕೈಗೊಳ್ಳಲು ಆಶ್ವಾಸನೆ ನೀಡಲಾಗಿತ್ತು. ಅದರಂತೆ ಸಿ.ಪಿ.ಐ. ಅವರ ನೇತೃತ್ವದಲ್ಲಿ ಹಣಕಾಸಿನ ಕಾರ್ಯದರ್ಶಿ, ಉಪ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ, ಉಪ ಕಾರ್ಯದರ್ಶಿ, ಪ್ಲಾನಿಂಗ್ ಕಾರ್ಯದರ್ಶಿ, ಉಪಕಾರ್ಯದರ್ಶಿ ಮತ್ತು ನಮ್ಮ ಇಲಾಖೆಯ ಕೆಲವು ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿದೆ. ಆದರೆ ದುಬಾರಿ ದರದಲ್ಲಿ ಮಾಸಿಕ ಶುಲ್ಕ ಹಾಗೂ ಅಡ್ಮಿಷನ್ ಟೈಮಿನಲ್ಲಿ ಹೆಚ್ಚು ಡೊನೇಷನ್ ತೆಗೆದುಕೊಳ್ಳುವುದರ ಬಗ್ಗೆ ಸರಕಾರಕ್ಕೆ ದೂರುಗಳು ಬಂದಿದ್ದರಿಂದ ದಿನಾಂಕ 15-5-85ರಲ್ಲಿ ಆದೇಶವನ್ನು ಕೊಟ್ಟಿದ್ದೇವೆ. ಮಾಸಿಕ ಶುಲ್ಕ ಸಂಗ್ರಹಣೆ ಮಾಡುವುದನ್ನು ಬಿಟ್ಟು ಬೇರೆ ಎಲ್ಲಾ ವಿಧ ವಂತಿಗೆಯನ್ನು ವಸೂಲು ಮಾಡುವುದನ್ನು ನಿಲ್ಲಿಸಬೇಕೆಂದು ಎಲ್ಲಾ ಶಾಲೆಗಳಿಗೂ ಆದೇಶ ಕಳುಹಿಸಿದ್ದೇವೆ. ಈ ಆದೇಶದ ವಿರುದ್ಧ ಕೋರ್ಟಿಗೆ ಹೋಗಿ ಅಲ್ಲಿಂದ ಸ್ಟೇ ತಂದರು. ಇದಾದ ಮೇಲೆ ಕೆಲವಾರು ಸಂಸ್ಥೆಗಳಿಂದ ನಮಗೂ ದೂರುಗಳೂ ಬಂದವು. ನಾವು ಹೆಚ್ಚು ಡೊನೇಷನ್ ತೆಗೆದುಕೊಳ್ಳಬಾರದು ಹೆಚ್ಚು ಫೀಸ್ತೆಗೆದುಕೊಳ್ಳಬಾರದೆಂದು ಎಂದು ಹೇಳಿದ್ದೀರಿ. ಆದರೆ ನಾವು ಕಡಿಮೆ ಹಣದಲ್ಲಿ ಸಂಸ್ಥೆಗಳನ್ನು ನಡೆಸುವುದು ಕಷ್ಟವಾಗುತ್ತದೆ. ಇದನ್ನು ಜಾರಿಗೆ ತಂದರೆ ನಾವು ಈ ಶಾಲೆಗಳನ್ನು ನಡೆಸಲಿಕ್ಕೆ ಆಗುವುದಿಲ್ಲ ಎಂಬ ದೂರನ್ನು ಸಾಕಷ್ಟು ಸಂಸ್ಥೆಗಳು ನಮ್ಮ ಸರಕಾರಕ್ಕೆ ತಲುಪಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ಸರಕಾರದ ಪ್ರತಿನಿಧಿಗಳು ಶಿಕ್ಷಣ ಸಂಸ್ಥೆಗಳು ಆಡಳಿತ ವರ್ಗ ಶಿಕ್ಷಣ ತಜ್ಞರು ಎಲ್ಲಾ ಸೇರಿದಂತೆ ಮತ್ತೊಂದು ಸಮಿತಿಯನ್ನು ರಚಿಸಿದ್ದೇವೆ. ಈ ಸಮಿತಿ ಸಲ್ಲಿಸಿದ ವರದಿ ನಂತರ ವರದಿ ಬಗ್ಗೆ ಸಾರ್ವಜನಿಕ ಶಿಕ್ಷಣ ತಜ್ಞರ ಹಾಗೂ ಶಾಸಕರ ಅಭಿಪ್ರಾಯ ಪಡೆಯಬೇಕೆಂದು ತೀರ್ಮಾನ ಮಾಡಿದ್ದೇವೆ. ಆದರೆ ಉಚ್ಚ ನ್ಯಾಯಾಲಯದ ಮುಂದೆ ಈ ವಿಷಯ ಮತ್ತೆ ಬಾಕಿ ಇರುವುದರಿಂದ ಯಾವ ಆದೇಶವನ್ನೂ ಸಹ ನಾವು ನೀಡಲೂ ಆಗುತ್ತಿಲ್ಲ. ಏತನ್ಮಧ್ಯೆ ಸರ್ಕಾರ ಮತ್ತೊಂದು ಸಮಿತಿಯನ್ನು ರಚಿಸಿ ವರದಿಯನ್ನು ಕೊಟ್ಟ ನಂತರ ಶುಲ್ಕ ಸ್ವರೂಪವನ್ನು ನಿಗದಿಪಡಿಸಿ ಸೂಕ್ತ ಆದೇಶವನ್ನು ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಮತ್ತು ನ್ಯಾಯಾಲಯಕ್ಕೂ ಸಹ ನಾವು ಈ ವಿಷಯವನ್ನು ತಿಳಿಸಿದ್ದೇವೆ. ಈ ವಿಷಯವನ್ನು ನ್ಯಾಯಾಲಯದವರು ಒಪ್ಪಿ ನಮಗೆ ಆದೇಶವನ್ನು ನೀಡಿದ್ದಾರೆ. ಸದರಿ ಸಮಿತಿಗೆ ಪ್ರಾಥಮಿಕ ಪೂರ್ವದಿಂದ ಹಿಡಿದು ಜೂನಿಯರ್ ಕಾಲೇಜಿನ ತನಕ ಶುಲ್ಕ ಯಾವ ಸ್ವರೂಪದಲ್ಲಿರಬೇಕು, ಎಷ್ಟಿರಬೇಕು ಎನ್ನುವುದರ ಬಗ್ಗೆ ಸಮಗ್ರ ವರದಿಯನ್ನು ಕೊಡಬೇಕು ಎಂದು ಈಗ ನಾವು ತೀರ್ಮಾನ ಮಾಡಿ ಈ ಒಂದು ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಇದಕ್ಕೆ ನ್ಯಾಯಾಲಯದವರೂ ಸಹ ಒಪ್ಪಿಕೊಂಡಿರುವುದರಿಂದ ಈ ವರದಿ ಬಂದ ತಕ್ಷಣ ಇದರ ಬಗ್ಗೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಸನ್ಮಾನ್ಯ ಅಧ್ಯಕ್ಷರೇ, ಈ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳ ಬಗ್ಗೆ ಎಂಟ್ರೆನ್ಸ್ ಟೆಸಟ್ನು ಮಾಡಿ ಫೀ ಸ್ಟ್ರಕ್ಚರನ್ನು ಫಿಕ್ಸ್ ಮಾಡಿದ್ದೀರಿ. ಸರ್ಕಾರ

ಮಾಡಿರುವುದನ್ನು ನಾವು ಮೆಚ್ಚಿದ್ದೇವೆ. ಈಗ ನಾನು ಹೇಳತಕ್ಕಂಥದ್ದು ಈ ಪ್ರಾಥಮಿಕ ಶಾಲೆಗಳಲ್ಲಿ ಎಲ್.ಕೆ.ಜಿ., ಯು.ಕೆ.ಜಿ.ಗೂ ಸಹಿತ 5ರಿಂದ 50ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳತಕ್ಕಂಥ ಶಾಲೆಗಳು ಇವೆ, ನಾನು ಒಪ್ಪಿಕೊಳ್ಳುತ್ತೇವೆ, ಕೆಲವು ಶಾಲೆಗಳಲ್ಲಿ ಸ್ಟಾಂಡರ್ಡ್ಸ್ ಚೆನ್ನಾಗಿರಬಹುದು, ಅಲ್ಲಿ ಇರತಕ್ಕಂಥ ಬೆಂಚ್, ಖುರ್ಚಿ ಮತ್ತೊಂದು ಪೀಠೋಪಕಣಗಳು, ಪಾಠೋಪಕರಣಗಳು ಇವುಗಳನ್ನೆಲ್ಲಾ ಉಪಯೋಗಿಸಿಕೊಳ್ಳುವುದಕ್ಕೆ ಅವರಿಗೆ ಹೆಚ್ಚಿಗೆ ಹಣ ಬೇಕಾಗಬಹುದು. ನಾನು ಹೇಳುತ್ತೇನೆ, ನೀವು ಫೀ ಸ್ಟ್ರಕ್ಚರನ್ನು ಫಿಕ್ಸ್ ಮಾಡಿ ಪ್ರಾಕ್ಟಿಕಲ್ ಆಗಿ ಸಾಧ್ಯ ಇರತಕ್ಕಂಥ ಫೀ ಸ್ಟ್ರಕ್ಚರನ್ನು ಮಾಡಿ ಅಡ್ಮಿಷನಲ್ಲಿ ರೋಸ್ಟರನ್ನು ತೆಗೆದುಕೊಂಡು ಬರಬೇಕು. ಕೆಲವು ಕಡೆಗಳಲ್ಲಂತೂ ಯಾರೂ ಕೇಳುವವರು ಇಲ್ಲದೇ ಇರುವುದರಿಂದಾಗಿ ಅವರು ಹೇಳಿದ್ದೇ ರೇಟು ಮತ್ತು ಕೆಲವೇ ವರ್ಗದ ಜನಗಳಿಗೆ ಪ್ರವೇಶ ಸಿಗುತ್ತಿದೆ. ಅದರಿಂದಾಗಿ ಇವೆರಡನ್ನೂ ನೋಡಬೇಕು. ನಿಮಗೆ ಈಗ ಸರಿಯಾದ ಸಮಯ. ಈ ತಿಂಗಳಲ್ಲಿ ಫೆಬ್ರವರಿ ಮತ್ತು ಮಾರ್ಚಿ ತಿಂಗಳೊಳಗೆ ಇದನ್ನು ಮಾಡದಿದ್ದರೆ ಮತ್ತೆ ಈ ಅಕಾಡೆಮಿಕ್ ಇಯರ್ ಪಾಸಾಗುತ್ತದೆ. ಅಡ್ಮಿಷನ್ಸ್ ಎಲ್ಲಾ ಮುಗಿದುಹೋಗುತ್ತದೆ. ಕೋರ್ಟಿಗೆ ಹೋಗಿ ಮುಂಚೆಯೇ ನಾವು ಅಡ್ಮಿಷನ್ ಮಾಡಿದ್ದೇವೆ ಎಂದು ಅವರು ಸ್ಟೇ ತೆಗೆದುಕೊಂಡು ಬರುತ್ತಾರೆ. ಅದರಿಂದ ನಾನು ಕೇಳುವುದು ಏನೆಂದರೆ ನಾಲ್ಕು ಸಮಿತಿಗಳ ಬಗ್ಗೆ ಈಗ ಏನು ರೆಫರ್ ಮಾಡಿದ್ದೀರಿ ಈ ನಾಲ್ಕು ಸಮಿತಿಗಳಿಗಿಂತ ಹೆಚ್ಚಾಗಿ ಗೌರ್ನಮೆಂಟ್ಗೆ ವಿಲ್ ಬೇಕಾಗುತ್ತದೆ. ಪಿಡಬ್ಲ್ಯೂಡಿ ಸೆಕ್ರೆಟರಿ, ಮತ್ತೆ ಫೈನಾನ್ಸ್ ಸೆಕ್ರೆಟರಿ ಬಿಟ್ಟು ಎಜುಕೇಷನ್ ಸೆಕ್ರೆಟರಿ ಬಿಟ್ಟು ಬಾಕಿ ಸೆಕ್ರೆಟರಿಗಳು ಏತಕ್ಕೆ ಬೇಕು? ಫೀ ಸ್ಟ್ರಕ್ಚರನ್ನು ಮಾಡುವುದಕ್ಕೆ ಏತಕ್ಕೆ ಬೇಕು? ಅದು ಅನಗತ್ಯ. ನಾನು ಹೇಳುತ್ತೇನೆ, ತಾವು ದಯವಿಟ್ಟು ಇದನ್ನು ಈ ವರ್ಷ ಇಂಪ್ಲಿಮೆಂಟ್ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಇದರಲ್ಲಿ ಇರತಕ್ಕಂಥ ತೊಂದರೆಯೇನು ಎಂದು ನೀವು ಈ ಸದನಕ್ಕೆ ತಿಳಿಸ ಬೇಕು. ಮತ್ತು ಈ ವರ್ಷವೇ ಫೆಬ್ರವರಿ ಮಾರ್ಚಿಯಲ್ಲಿ ಅಡ್ಮಿಷನ್ ಪ್ರಾರಂಭವಾಗಿದೆ. ಇದನ್ನು ನೀವು ತಡೆಗಟ್ಟಲಿಕ್ಕೆ ಸಾಧ್ಯವಿಲ್ಲವೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಮಾನ್ಯ ಅಧ್ಯಕ್ಷರೇ, ಈ ಪ್ರೊಫೆಷನಲ್ ಕಾಲೇಜುಗಳು ಎಂದರೆ ಬಹಳ ಸೀಮಿತವಾಗಿರುತ್ತದೆ. ನೂರು ಇರಬಹುದು, ಅಥವಾ 150 ಇರಬಹುದು, 200 ಇರಬಹುದು. ಆದರೆ ತಮಗೆ ಗೊತ್ತಿದೆ., ಹಳ್ಳಿ ಹಳ್ಳಿಗಳಲ್ಲಿ ಪ್ರೈಮರಿ ಸ್ಕೂಲುಗಳು ಆಗುತ್ತಿವೆ. ಎಲ್ಲದಕ್ಕೂ ನಾವು ಏಕರೂಪವಾದ ರೂಲನ್ನು ತರುವುದಾದರೆ ಆ ರೀತಿಯಲ್ಲಿ ಎಂಟ್ರನ್ಸ್ ಟೆಸ್ಟ್ ಮಾಡಿ ಅವರಿಗೆ ಕೊಡುವುದು ಪ್ರಾಕ್ಟಿಕಲ್ ಆಗುವುದಿಲ್ಲ ಎಂದು ನನಗನಿಸುತ್ತಿದೆ. ಅದಾದ ಮೇಲೆ ಫೀ ಸ್ಟ್ರಕ್ಚರ್ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಅಡ್ಮಿಷನ್ ಟೈಮ್ನಲ್ಲಿ ಎಷ್ಟು ಹಣವನ್ನು ಕೊಡಬೇಕು ಅಥವಾ ಫೀಜು ಎಷ್ಟು ಕೊಡಬೇಕು ಎನ್ನುವುದರ ಬಗ್ಗೆಯೇ ಈ ಒಂದು ಕಮಿಟಿಯನ್ನು ನಾವು ಫಾರಂ ಮಾಡಿರುವುದು. ಈ ಕಮಿಟಿಯವರಿಗೆ ನಾವು ಟೈಮ್ ಬೌಂಡ್ ಮಾಡುತ್ತೇವೆ. ಆದಷ್ಟು ಜಾಗ್ರತೆ ಈ ಕಮಿಟಿಯವರು ಆ ವರದಿಯನ್ನು ಕೊಟ್ಟತಕ್ಷಣ ಅದನ್ನು ನಾನು ಬರೀ ಕಮಿಟಿಯವರು ಕೊಟ್ಟ ವರದಿಯೇ ಪೂರಾ ಎಂದು ನಾನು ಒಪ್ಪಿಕೊಳ್ಳುವುದಿಲ್ಲ. ನಮ್ಮ ಶಾಸಕರ ಜೊತೆ ಹಾಗೂ ನಮ್ಮ ಮ್ಯಾನೇಜ್ಮೆಂಟ್ಸ್ ಏನಿದ್ದಾರೆ, ಅವರ ಜೊತೆಯಲ್ಲೂ ಚರ್ಚೆ ಮಾಡಬೇಕು. ಮತ್ತು ಪಬ್ಲಿಕ್ ಜೊತೆ ತಂದೆ ತಾಯಿಗಳ ಹತ್ತಿರವೂ ನಾವು ಸ್ವಲ್ಪ ಚರ್ಚೆ ಮಾಡಿ ಇದರ ಬಗ್ಗೆ ಒಂದು ಕಾಂಪ್ರೆಹೆನ್ಸೀವ್ ಡಿಸಿಷನನ್ನು ತೆಗೆದುಕೊಂಡು ಇದನ್ನು ನಾವು ಜಾರಿ ಮಾಡುವುದು ಒಳ್ಳೆಯದು ಎಂದು ನನಗನಿಸುತ್ತಿದೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಇನ್ನು ಮುಂದೆ ಏನು ಮಾಡುತ್ತೇವೆ ಎನ್ನುವ ಬಗ್ಗೆ ಏನೇನೋ ಹೇಳುತ್ತಿದ್ದಾರೆ. ಅದನ್ನು ಯಾವಾಗ ಮಾಡುತ್ತಾರೋ ಏನೋ ಗೊತ್ತಿಲ್ಲ, ಇದು ನಡೆದು ಕೊಂಡೇ ಬಂದಿದೆ. ಪ್ರತಿವರ್ಷ.

ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ ಸದಾಶಿವನಗರದಲ್ಲಿ ಪೂರ್ಣಪ್ರಜ್ಞ ಪ್ರಾಥಮಿಕ ಶಾಲೆ ಎಂದು ಇದೆ, ಅವರು ಪ್ರವೇಶಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಯಾವುದಕ್ಕೆ ಎಂದರೆ ಎಲ್‌ಕೆಬಿ ಮತ್ತು ಯುಕೆಬಿ ಅಡ್ಮಿಷನ್‌ಗೆ ಒಂದು ಲಕ್ಷ ರೂಪಾಯಿಗಳನ್ನು ಕೇಳುತ್ತಿದ್ದಾರೆ. ನಿರ್ದಿಷ್ಟವಾಗಿ ನಾನು ಹೇಳುತ್ತಿದ್ದೇನೆ. ಈ ರೀತಿಯಾಗಿರತಕ್ಕಂಥ ದಾರಿಯಲ್ಲಿ ಜನಗಳನ್ನು ಸುಲಿಗೆ ಮಾಡುತ್ತಿರತಕ್ಕಂಥ ಸಂಸ್ಥೆಗಳನ್ನು ಸರ್ಕಾರದವರು ವಹಿಸಿಕೊಳ್ಳುತ್ತೀರಾ? ಮತ್ತು ಅಂಥ ಶಾಲೆಗಳಲ್ಲಿ ಮೀಸಲಾತಿಯನ್ನು ಕಡ್ಡಾಯವಾಗಿ ಜಾರಿಗೆ ತರುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಅಲ್ಲೇನೂ ಇಲ್ಲ, ಅಲ್ಲಿ ಹೇಳುವವರು ಇಲ್ಲ, ಕೇಳುವವರೂ ಇಲ್ಲ. ಮೀಸಲಾತಿಯೂ ಇಲ್ಲ, ಏನೂ ಇಲ್ಲ.ಅಂಥ ಶಾಲೆಗಳಲ್ಲಿ ಮೀಸಲಾತಿಯನ್ನು ಇಲ್ಲ, ಏನೂ ಇಲ್ಲ. ಅಂಥ ಶಾಲೆಗಳಲ್ಲಿ ಮಿಸಲಾತಿಯನ್ನು ಕಡ್ಡಾಯವಾಗಿ ಜಾರಿಗೆ ತಂದರೆ ಒಂದು ರೀತಿಯಾದಂಥ ಕಡಿವಾಣವನ್ನು ಹಾಕಿದಂತಾಗುತ್ತದೆ. ದಯವಿಟ್ಟು ಈ ಕೆಲಸವನ್ನು ಮಾಡುತ್ತೀರಾ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಈಗ ತಾವು ಹೇಳುವುದು, ಎಲ್ಲಾ ಶಾಲೆಗಳನ್ನು ನಾವೇ ತೆಗೆದುಕೊಂಡುಬಿಡಬೇಕು ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಈ ವರ್ಷ ಪರ್ಟಿಕ್ಯುಲರ್ಲಿ ಬೆಂಗಳೂರು, ಮೈಸೂರು ಹುಬ್ಬಳ್ಳಿಯಂತಹ ಸಿಟಿಗಳಲ್ಲಿ ಅಡ್ಮಿಷನ್ಸ್‌ಗಳನ್ನು ಮುಗಿಸಿಕೊಂಡು ಬಿಡುತ್ತಿದ್ದಾರೆ. ಇಂಜಿನಿಯರಿಂಗ್ ಮೆಡಿಕಲ್ ಕಾಲೇಜುಗಳಿಗಿಂತ ಇದು ಒಳ್ಳೆಯ ವ್ಯಾಪಾರ. ಯಾರದೋ ಒಂದು ಬಿಲ್ಡಿಂಗ್ ತೆಗೆದುಕೊಳ್ಳುವುದು ಬೋರ್ಡ್ ಹಾಕಿಕೊಳ್ಳತಕ್ಕದ್ದು. ಈಗ ಐದನೇ ಸ್ಟ್ಯಾಂಡರ್ಡ್ ಎಂದು ತಾವು ಹೇಳುತ್ತೀರಿ. ಅವರು ನಾಲ್ಕನೇ ಸ್ಟ್ಯಾಂಡರ್ಡ್‌ವರೆಗೂ ಇಂಗ್ಲೀಷ್ ಮೀಡಿಯಂನಲ್ಲಿ ನಡೆಸಿಬಿಡುತ್ತಾರೆ. ಐದನೆಯ ಸ್ಟ್ಯಾಂಡರ್ಡ್ ಇಲ್ಲಿ ಯಾರನ್ನೋ ಹಿಡಿದುಕೊಂಡು ಬರುತ್ತಾರೆ. ಅದರಿಂದಾಗಿ ನೀವು ಏನಾದರೂ ಅಶ್ಯೂರೆನ್ಸ್ ಕೊಡುವುದಾದಲ್ಲಿ ಈಗಲೇ ಕೊಡಬೇಕು. ಈ ವರ್ಷವೇ ಇದನ್ನು ಮಾಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ: ನಿನ್ನೆ ನಡೆದಿರತಕ್ಕ ವಿಚಾರ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಎಲ್.ಕೆ.ಜಿ. ಮತ್ತು ಯು.ಕೆ.ಜಿ. ಅಡ್ಮಿಷನ್ಸ್‌ಗೆ ಒಂದು ಲಕ್ಷ ರೂಪಾಯಿ ಕೇಳುತ್ತಿದ್ದಾರೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಈಗ ಶಾಲೆಗಳನ್ನು ನಾವು ತೆಗೆದುಕೊಳ್ಳತಕ್ಕಂಥ ಯಾವುದೇ ಒಂದು ಯೋಜನೆಯೂ ಸರ್ಕಾರದ ಮುಂದೆ ಇಲ್ಲ. ಮತ್ತು ಈಗ ನೀವು ರಿಸರ್ವೇಷನ್ ಎಂದು ಏನು ಹೇಳುತ್ತೀರಿ. ಅದನ್ನು ನಾವು ಅಪಾಯಿಂಟ್‌ಮೆಂಟ್ಸ್ ಅಪ್ರೂವಲ್ ಮಾಡಬೇಕಾದರೇ ನೋಡುತ್ತೇವೆ. At that time, we will see whether they have followed the roster and reservation system. ಅದು ಇದೆಯೇ ಹೊರತು ಮತ್ತು ಯಾವ ರೀತಿಯಲ್ಲೂ ನಾವು ಶಾಲೆಗಳನ್ನು ತೆಗೆದುಕೊಳ್ಳುವುದಕ್ಕಿಂತೂ ಸರ್ಕಾರದ ಯೋಚನೆ ಇಲ್ಲ. ಆದರೆ ಈ ಕಮಿಟಿಯಿಂದ ರಿಪೋರ್ಟ್ ಬಂದ ಮೇಲೆ ವಿಚಾರ ಮಾಡೋಣ. ನಮಗೆ ಯಾವುದೇ ಒಂದು ತೀರ್ಮಾನ ತೆಗೆದುಕೊಳ್ಳಬೇಕಾದರೂ ಅದು ಮತ್ತೆ ಅವರು ಕೋರ್ಟಿಗೆ ಹೋಗಿ ಸ್ಟೇ ತರುವುದು, ಇದೇ ತರಹ ಮೂರು ವರ್ಷದಿಂದ ಆಗುತ್ತಿದೆ. ಅದರ ಹಿನ್ನೆಲೆಯನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಆ ರೀತಿ ಆಗುತ್ತಿರಬೇಕಾದರೆ ನಾವು ಎಲ್ಲರ ಅಭಿಪ್ರಾಯವನ್ನು ಕ್ರೋಢೀಕರಿಸಿ ಒಂದು ಸರಿಯಾದ ತೀರ್ಮಾನ ತೆಗೆದುಕೊಳ್ಳಬೇಕೆಂದು ಸರ್ಕಾರ ಆಲೋಚನೆ ಮಾಡಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಈ ವರ್ಷ ಮಾಡುತ್ತೀರಾ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಆ ರಿಪೋರ್ಟ್ ಬರಬೇಕು. ರಿಪೋರ್ಟ್ ಬಂದ ತಕ್ಷಣ ಮಾಡುತ್ತೇವೆ.

ಅರಣ್ಯ ಚೆಕ್ ಪೋಸ್ಟ್‌ಗಳ ಸಂಖ್ಯೆ

52 - ಶ್ರೀ ಬಿ.ಎ. ಇದಿನಬ್ಬ (ಉಲ್ಲಾಳ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಅರಣ್ಯ ಚೆಕ್ ಪೋಸ್ಟ್‌ಗಳು ಎಷ್ಟು?

ಆ) ಪ್ರತಿ ಜಿಲ್ಲೆಯಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು? (ವಿವರ ನೀಡುವುದು)

ಇ) ಚೆಕ್‌ಪೋಸ್ಟ್ ಮೂಲಕ ಅರಣ್ಯ ಸಂಪತ್ತು ಕಳ್ಳಾಟಿಕೆಯಲ್ಲಿ ಗಡಿ ರಾಜ್ಯಗಳಿಗೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಅಂತಹ ಎಷ್ಟು ಪ್ರಕರಣಗಳು ಸಿಕ್ಕಿವೆ ಮತ್ತು ಯಾವ ಯಾವ ಚೆಕ್ ಪೋಸ್ಟ್‌ಗಳಲ್ಲಿ ಸಿಕ್ಕಿವೆ?

ಉ) ಅರಣ್ಯ ಸಂಪತ್ತನ್ನು ನಾಶ ಮಾಡುವ ಕಾಡುಗಳ್ಳರನ್ನು ಹಿಡಿಯಲು ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ?

ಊ) ಕಾಡುಗಳ್ಳರ ಜೊತೆಯಲ್ಲಿ ಅಧಿಕಾರಿಗಳು ಶಾಮೀಲು ಆಗದಂತೆ ಜಾಗ್ರತೆ ವಹಿಸಲಾಗಿದೆಯೇ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) 161

ಆ) ಜಿಲ್ಲಾವಾರು ವಿವರ ಕೆಳಗಿನಂತಿದೆ :

	ಜಿಲ್ಲೆಯ ಹೆಸರು	ಚೆಕ್‌ಪೋಸ್ಟ್‌ಗಳ ಸಂಖ್ಯೆ
1)	ಕೊಡಗು	12
2)	ದಕ್ಷಿಣ ಕನ್ನಡ	18
3)	ಮೈಸೂರು	28
4)	ಹಾಸನ	8
5)	ಶಿವಮೊಗ್ಗ	26
6)	ಚಿಕ್ಕಮಗಳೂರು	8
7)	ಉತ್ತರ ಕನ್ನಡ	32
8)	ಧಾರವಾಡ	9
9)	ಬೆಳಗಾವಿ	7
10)	ವಿಜಾಪುರ	1
11)	ಬೆಂಗಳೂರು	8
12)	ಕೋಲಾರ	4
		161

(ಉಳಿದ ಜಿಲ್ಲೆಗಳಲ್ಲಿ ಅರಣ್ಯ ಚೆಕ್ ಪೋಸ್ಟ್ ಇರುವುದಿಲ್ಲ)

ಇ) ಹೌದು.

ಈ) ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು ೫೨ (ಶ್ರೀಗಂಧ 36 ಇತರೇ 16)

ವೃತ್ತದ ಹೆಸರು	ಚೆಕ್‌ಪೋಸ್ಟ್ ಹೆಸರು	ದಾಖಲಾದ ಪ್ರಕರಣಗಳ ಸಂಖ್ಯೆ			
		1990-91	1991-92	1992-93	1993-94
ಕೊಡಗು	1) ಸಾತ್ತತ್ತೂರು				
	2) ಕೊಟೆಕಾರ	1	1	3	-
	3) ಸಂಪಾಜೆ	1	1	-	-
	4) [illegible]		2	-	-

	5) ಮಾಕೂಟ	-	1	-	-
	6) ಭಾಗಮಂಡಲ	-	-	2	-
ಮೈಸೂರು	1) ಮೂಳೆ ಹೊಳೆ	-	-	3	-
ಬೆಂಗಳೂರು	1) ಅತ್ತೀಬೆಲೆ	-	-	14	15
	ಒಟ್ಟು	3	6	28	15::52

ಉ) 23 ಅರಣ್ಯ ಸಂಚಾರಿ ದಳಗಳನ್ನು ಸೃಜಿಸಿ, ಅವುಗಳಿಗೆ ನಿಸ್ತಂತು ಜೋಡಿಸಿದ ವಾಹನ ಒದಗಿಸಲಾಗಿದೆ. ಕಳ್ಳಸಾಗಣಿಕೆ ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು, ನಿರ್ದೇಶನ ನೀಡಲಾಗಿದೆ. ಸಿಬ್ಬಂದಿಗೆ ಆತ್ಮರಕ್ಷಣೆಗೆ ಬಂದೂಕು ಒದಗಿಸಲಾಗಿದೆ.

ಊ) ಹೌದು.

ಶ್ರೀ ಬಿ. ಇದಿನಬ್ಬ: ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಯಲ್ಲಿ ಚೆಕ್ ಪೋಸ್ಟ್ ಮೂಲಕ ಅರಣ್ಯ ಸಂಪತ್ತು ಕಟ್ಟಾಟಿಕೆಯಲ್ಲಿ ಗಡಿ ರಾಜ್ಯಗಳಿಗೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬುದಕ್ಕೆ 'ಹೌದು' ಎಂದು ಉತ್ತರ ನೀಡಿದ್ದಾರೆ. ಅಂತಹ ಎಷ್ಟು ಪ್ರಕರಣಗಳು ಸಿಕ್ಕಿವೆ ಮತ್ತು ಯಾವ್ಯಾವ ಚೆಕ್ ಪೋಸ್ಟ್‌ಗಳಲ್ಲಿ ಸಿಕ್ಕಿವೆ ಎಂಬ ಪ್ರಶ್ನೆಗೆ ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು 52, ಅದರಲ್ಲಿ ಶ್ರೀಗಂಧ 36 ಮತ್ತು ಇತರೇ 16 ಎಂದು ಉತ್ತರ ನೀಡಿದ್ದಾರೆ. ಬರೀ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ತೋಕ್ಕೋಟ್ ಮತ್ತು ವಿಟ್ಲದ ಉಕ್ಕಡದ ಎರಡೇ ಪ್ರದೇಶದಲ್ಲಿ ವರ್ಷಕ್ಕೆ 56 ಕೇಸುಗಳು ನಡೆಯುತ್ತಿರುತ್ತದೆ. ನಾಲ್ಕು ಲಾರಿಗಳನ್ನು ಚೆಕ್ ಪೋಸ್ಟ್‌ನಲ್ಲಿ, ಒಂದೊಂದು ಮಾತ್ರ ಹಿಡಿಯುತ್ತಾರೆ. ಇದು ಸಾಧಾರಣ ಮಾಮೂಲಿ ವಿಷಯ. ಆದ್ದರಿಂದ ನಮ್ಮ ಸರ್ಕಾರದ ಬೊಕ್ಕಸಕ್ಕೆ ಬಹಳ ದೊಡ್ಡ ಹಾನಿ ಆಗುತ್ತಾ ಇದೆ. ಇದನ್ನು ನಿಲ್ಲಿಸುವಂತಹ ಒಂದು ವ್ಯವಸ್ಥೆ ಮಾಡಬೇಕು. 23 ಅರಣ್ಯ ಸಂಚಾರಿ ದಳಗಳನ್ನು ರಚಿಸಿ ವಾಹನ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಅವು ಎಲ್ಲಿ ಸಂಚಾರ ಮಾಡುತ್ತವೆ, ಎಲ್ಲಿ ಹಿಡಿದಿದ್ದಾರೆ. ಆದ್ದರಿಂದ ಪ್ರತಿ ಒಂದು ವಾರಕ್ಕೆ ಮೂರ್‍ನಾಲ್ಕು ಗಂಧದ ಲೋಡ್ ಹೋಗುತ್ತಿದೆ, ವಿಟ್ಲದಲ್ಲಿ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಅರಣ್ಯ ಇಲಾಖೆಯವರು ಹಿಡಿಯುತ್ತಾರೆ ಎಂದಲ್ಲ, ಕಡೆಗೆ ಪೋಲೀಸನವರಾದರೂ ಯಾವಾಗಲಾದರೂ ಹಿಡಿಯುತ್ತಾರೆ ಅಷ್ಟೇ. ಇಂತಹ ಭಯಂಕರವಾದ ಸಾಗಾಟ ಕೇರಳಕ್ಕೆ ಹೋಗುವುದನ್ನು ನಿಲ್ಲಿಸುವುದಕ್ಕೆ ಉಗ್ರವಾದ ಕಾರ್ಯಕ್ರಮ ತಾವು ಏನು ಮಾಡುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಂ.ಪಿ. ಕೇಶವಮೂರ್ತಿ: ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ 161 ಚೆಕ್ ಪೋಸ್ಟ್‌ಗಳು ಇವೆ. ಇದರಲ್ಲಿ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ನಾವು ಈಗಾಗಲೇ 52 ಕೇಸುಗಳನ್ನು ಹಿಡಿದಿದ್ದೇವೆ. ಮತ್ತು ಇದನ್ನು ಹಿಡಿಯಲಿಕ್ಕೆ ಸರ್ಕಾರದ ವತಿಯಿಂದ ಕೂಡ 242 ಲಕ್ಷ ರೂಪಾಯಿಗಳ ಒಂದು ಅಂದಾಜಿನ ಯೋಜನೆಯನ್ನು ಮಾಡಿ ಸರ್ಕಾರ ಮಂಜೂರಾತಿ ಮಾಡಿದೆ. ಅದಕ್ಕೆ ಈಗಾಗಲೇ ಬೇಕಾದಂತಹ ಸಿಬ್ಬಂದಿ 23 ಅರಣ್ಯ ಸಂಚಾರಿ ದಳದ ಜೊತೆಗೆ ಪೋಲೀಸ್ ಇಲಾಖೆಯಲ್ಲಿಯೂ ಸಹ ಅರಣ್ಯ ಸೆಲ್ ಎಂದು ಮಾಡಿ, ಐಜಿಪಿ ಲೆವೆಲ್ನಲ್ಲಿ, ಅವರೂ ಕೆಲಸ ಮಾಡುತ್ತಿದ್ದಾರೆ. ಮತ್ತು ಆ ಒಂದು ಸಿಬ್ಬಂದಿಗೆ ವೇಗವಾಗಿ ಚಲಿಸತಕ್ಕ ವಾಹನವನ್ನು ಮತ್ತು ವೈರ್‌ಲೆಸ್ ಸೆಟ್ ಇರತಕ್ಕ ವಾಹನಗಳನ್ನು ಕೊಟ್ಟಿದ್ದೇವೆ. ಕೆಲವು ಅರಣ್ಯ ಕಳ್ಳಸಾಗಾಣಿಕೆದಾರರೂ ಕೂಡ ನಮ್ಮ ಈ ಸಿಬ್ಬಂದಿಯ ಮೇಲೆ ಬಂದೂಕು ಇತ್ಯಾದಿ ಉಪಕರಣಗಳಿಂದ ಓಡಿಸಬಹುದು ಎಂದು ತಿಳಿದು ಅವರಿಗೂ ಕೂಡ ಬಂದೂಕು, ವಾಹನಗಳನ್ನು ಕೊಡಿಸಿಕೊಟಿದೇವೆ. ಇತ್ತೀಚಿನ

ವರ್ಷಗಳಲ್ಲಿ ಗಂಧದ ಕಳ್ಳ ಸಾಗಾಣಿಕೆ ಸಾಕಷ್ಟು ಕಡಿಮೆ ಆಗಿದೆ. ಮೊದಲು ಅದು ಆಗುತ್ತಿತ್ತು. ಅದೇ ರೀತಿ ದಕ್ಷಿಣ ಕನ್ನಡ ಮತ್ತು ಕೂರ್ಗ್ ಭಾಗದಲ್ಲಿ ಹೆಚ್ಚಿನ ಸಿಬ್ಬಂದಿಯನ್ನು ಕೂಡ ಸೇರಿಸಿ ಅವರಿಗೆ ಎಲ್ಲಾ ಸವಾಲತ್ತುಗಳನ್ನು ಕೊಡಿಸಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಈಗಾಗಲೇ, ಒಂದು ಸೆಂಟ್ರಲ್ ಸ್ಟ್ರೈಕ್ ಫೋರ್ಸ್ ಎಂದು ಮಾಡಿ 9 ಸರ್ಕಲ್ ಸ್ಟ್ರೈಕ್ ಫೋರ್ಸ್ಗಳನ್ನು ಕೂಡ ಕೊಟ್ಟಿದ್ದೇವೆ. ಅವರಿಗೆ ವಾಹನಗಳು ಮತ್ತು ವೈರ್ಲೆಸ್ ಸೆಟ್ಟುಗಳನ್ನು ಅಳವಡಿಸಿಕೊಟ್ಟಿದ್ದೇವೆ. ಅವರ ಆತ್ಮರಕ್ಷಣೆಗಾಗಿ ಬಂದೂಕುಗಳನ್ನು ಕೂಡ ಕೊಟ್ಟಿದ್ದೇವೆ. ಅವರು ಹೆಚ್ಚಿನ ಶ್ರಮವಹಿಸಿ ಈ ಕಳ್ಳ ಸಾಗಾಣಿಕೆಯನ್ನು ತಡೆಯುವ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಬಿ.ಎಂ. ಇದಿನಬ್ಬ: ಕಾಡುಗಳ್ಳರ ಜೊತೆ ಅಧಿಕಾರಿಗಳು ಶಾಮೀಲಾಗದಂತೆ ಜಾಗ್ರತೆ ವಹಿಸಲಾಗಿದೆಯೆ? ಎಂದು ಕೇಳಿದ್ದಕ್ಕೆ 'ಹೌದು' ಎಂದು ಉತ್ತರಿಸಿದ್ದಾರೆ. ಒಬ್ಬ ಬ್ರಿಟಿಷ್ ತಜ್ಞ ಇಡೀ ಹಿಂದೂಸ್ತಾನವನ್ನು ಸುಮಾರು ಐವತ್ತು ವರ್ಷಗಳ ಕಾಲ ಬರೀ ಅರಣ್ಯ ಸಂಪತ್ತಿನಿಂದ ಆಳಬಹುದೆಂದು ತಿಳಿಸಿದ್ದಾನೆ. ಈ ಅರಣ್ಯ ಸಂಪತ್ತು ಕಾಡುಗಳ್ಳರ-ಅಧಿಕಾರಿಗಳ ಶಾಮೀಲಿನಿಂದಾಗಿ ಬರಿದಾಗುತ್ತಿದೆ. ತಾವು ಒಳ್ಳೆಯ ಕೆಲಸ ಮಾಡಿರುವುದಾಗಿ ತಿಳಿಸಿದ್ದೀರಿ, ಬಹಳ ಸಂತೋಷ. ಆದರೆ, ನೀವು ಏನೇ ಕ್ರಮ ಕೈಗೊಂಡರೂ ಅದನ್ನು ಅಧಿಕಾರಿಗಳು ಪಾಲಿಸಬೇಕಲ್ಲ! ಆದುದರಿಂದ, ತಾವು ಮಾರುವೇಷ ಹಾಕಿಕೊಂಡು ಚೆಕ್ಪೋಸ್ಟ್ಗಳು ಎಲ್ಲೆಲ್ಲಿವೆಯೋ ಅಲ್ಲಿಗೆ ಹೋಗಿ ತಿರುಗಾಡಿಕೊಂಡು ಬರಬೇಕು. ತಾವು ಮಂತ್ರಿಗಳಾಗಿ ಹೋದರೆ ಕೂಡಲೇ ಗೊತ್ತಾಗುತ್ತದೆ. ತಾವು ಹೇಳದೆ, ಕೇಳದೆ ಮಾರುವೇಷದಲ್ಲಿ ಅನಿರೀಕ್ಷಿತವಾಗಿ ಚೆಕ್ಪೋಸ್ಟ್ಗಳಿಗೆ ಹೋದರೆ ಅಲ್ಲಿ ಏನು ನಡೆಯುತ್ತಿದೆ ಎಂಬುದರ ಗುಟ್ಟು ತಮಗೆ ತಿಳಿಯುತ್ತದೆ. ಚೆಕ್ಪೋಸ್ಟ್ಗಳಲ್ಲಿ ನಡೆಯುವ ಅವ್ಯವಹಾರ, ಅಕ್ರಮಗಳಿಂದಾಗಿ ಕರ್ನಾಟಕ ರಾಜ್ಯದ ಅರಣ್ಯ ಸಂಪತ್ತು ನಷ್ಟವಾಗುತ್ತಿದೆ. ಅರಣ್ಯ ಸಂಪತ್ತೆಂದರೆ ಬಹಳ ಅದ್ಭುತವಾದುದು. ಅದರಲ್ಲಿ ಬೀಟೆ, ತೇಗ, ಗಂಧ, ಹೊನ್ನೆ ಮುಂತಾದ ಅಮೂಲ್ಯ ಮರಗಳಿರುತ್ತದೆ. ಈಗ ಅವೆಲ್ಲವೂ ಖಾಲಿಯಾಗಿವೆ. ಮರಗಳನ್ನು ಬೆಳೆಸುವುದಕ್ಕಾಗಿ ನಾವು ಕೋಟಿಗಟ್ಟಲೆ ಸಸಿಗಳನ್ನು ನೆಡುತ್ತೇವೆ. ನಮ್ಮ ಮಕ್ಕಳ ಕಾಲಕ್ಕೆ ಇವು ಬೆಳೆದು ದೊಡ್ಡದಾಗುತ್ತವೆ. ಈಗಿರುವ ಮರಗಳನ್ನು ನಾಶಪಡಿಸಿ ಗಿಡಗಳನ್ನು ನೆಡುವುದರಿಂದ ಏನು ಪ್ರಯೋಜನ? ಆದುದರಿಂದ, ತಾವು ಮಾರುವೇಷದಲ್ಲಿ ಚೆಕ್ಪೋಸ್ಟ್ಗಳಿಗೆ ಹೋಗಿ ಅಲ್ಲಿ ನಡೆಯುತ್ತಿರುವ ವ್ಯವಹಾರಗಳನ್ನು ತಿಳಿದುಕೊಂಡು ಬರುವ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ.ಪಿ. ಕೇಶವಮೂರ್ತಿ: ತಮ್ಮ ಸಲಹೆಯನ್ನು ನಾನು ಖಂಡಿತವಾಗಿ ಪರಿಪಾಲಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಅಂದ ಮೇಲೆ ತಾವು ಯಾವ ವೇಷ ಹಾಕಿಕೊಂಡು ಹೋಗುತ್ತೀರಿ? ಮಾನ್ಯ ಸದಸ್ಯರ ಸಲಹೆಯನ್ನು ಒಪ್ಪಿಕೊಂಡ ನಂತರ ಏನಾದರೂ ಒಂದು ವೇಷ ಹಾಕಬೇಕಲ್ಲ!

1994ರಲ್ಲಿ ಶಿಕ್ಷಕರುಗಳ ನೇಮಕಾತಿಗೆ ನಿಯಮ

300 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 1991ರ ನೇಮಕಾತಿಯಲ್ಲಿ ಅಂಕದ ಅರ್ಹತೆ ಆಧಾರದ ಮೇಲೆ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿದ್ದು ನಿಜವೇ;

ಆ. 1994ರ ನೇಮಕಾತಿಯಲ್ಲಿ ಯಾವ ನಿಯಮವನ್ನು ಅನುಸರಿಸಲಾಗುತ್ತದೆ.

ಇ. ನೇಮಕಾತಿಯ ವಯೋಮಿತಿ ಮೀರಿರುವ ನಿರುದ್ಯೋಗಿ (ಶಿಕ್ಷಕರ ತರಬೇತಿ ಪಡೆದವರು) ಭವಿಷ್ಯದ ಬಗ್ಗೆ ಸರ್ಕಾರ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದೆಯೇ

ಈ. 1994ರ ನೇಮಕಾತಿ ಸಂದರ್ಭದಲ್ಲಿ ಶೇಕಡಾ 50 ಹುದ್ದೆಗಳನ್ನು ವಯೋಮಿತಿ ಆಧಾರದ ಮೇಲೆ ಭರ್ತಿ ಮಾಡುವ ಭರವಸೆಯನ್ನು ಸರ್ಕಾರ ನೀಡುತ್ತದೆಯೇ;

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ. 1991ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಮಾತ್ರ ತುಂಬಲಾಗಿದ್ದು ಅಂಕ ಅರ್ಹತೆ ಆಧಾರದ ಮೇಲೆ ಭರ್ತಿ ಮಾಡಿರುವುದು ನಿಜ.

ಆ. 1994ರ ನೇಮಕಾತಿಯಲ್ಲಿ ಸಾಮಾನ್ಯ ನೇಮಕಾತಿಗಳ ಅನುಸಾರ ಅಂಕದ ಅರ್ಹತೆ ಮೇಲೆ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳನ್ನು ತುಂಬಲು ಉದ್ದೇಶಿಸಲಾಗಿದೆ.

ವಯೋಮಿತಿ ಮೀರಿದಂತಹ ನಿರುದ್ಯೋಗ ಅಭ್ಯರ್ಥಿಗಳಿಗೆ ಅನುಕೂಲವಾಗಲೆಂದು ಫೆಬ್ರವರಿ 93ರಲ್ಲಿ ಸರ್ಕಾರವು ವಿಶೇಷ ನೇಮಕಾತಿ ನಿಯಮವನ್ನು ರೂಪಿಸಿದ್ದು ಅದರಡಿಯಲ್ಲಿ 6812 ಪ್ರಾಥಮಿಕ ಶಿಕ್ಷಕರ ಹುದ್ದೆಗಳನ್ನು 29 ವರ್ಷ ವಯೋಮಿತಿ ಮೀರಿದಂತಹ ಅಭ್ಯರ್ಥಿಗಳಿಂದಲೇ ಭರ್ತಿ ಮಾಡಲಾಗಿದೆ.

ಈ. ಇಲ್ಲ.

ಶ್ರೀ ಕೆ. ಲಕ್ಕಣ್ಣ: ಮಾನ್ಯ ಅಧ್ಯಕ್ಷರೆ, ಶಿಕ್ಷಕರ ನೇಮಕಾತಿಯಲ್ಲಿ ಅಂಕದ ಆಧಾರದ ಮೇಲೆ ನೇಮಕಾತಿ ಆಗುತ್ತಿದೆ. ಆದರೆ, 10-12 ವರ್ಷಗಳ ಹಿಂದೆ ಪಾಸಾದಂಥ ಶಿಕ್ಷಕರು ಅಂಕಗಳನ್ನು ಕಡಿಮೆ ತೆಗೆದುಕೊಂಡಿದ್ದು , ಈಗ ಪಾಸಾಗಿರುವಂಥ ಶಿಕ್ಷಕರು ಅಂಕಗಳನ್ನು ಹೆಚ್ಚು ತೆಗೆದುಕೊಳ್ಳುತ್ತಾರೆ. ಆದರೆ, ಅವರು ಆಗ ಪಡೆದ ಶೇಕಡ 50 ಅಂಕಗಳು ಇವೊತ್ತು ನೂರರಷ್ಟುಕ್ಕಿಂತಲೂ ಜಾಸ್ತಿಯಾಗಿದೆ. ಆದುದರಿಂದ, ಶಿಕ್ಷಕರ ನೇಮಕಾತಿಯಲ್ಲಿ ವಯಸ್ಸಾಗಿರುವಂಥ ಶಿಕ್ಷಕರ ಅಂಕಗಳು ಕಡಿಮೆ ಇದ್ದರೂ ಸಹ ಆದ್ಯತೆ ಕೊಟ್ಟು ನೇಮಕ ಮಾಡಿಕೊಳ್ಳಬೇಕೆಂದು ಮಾನ್ಯ ಶಿಕ್ಷಣ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : ಮಾನ್ಯ ಅಧ್ಯಕ್ಷರೆ, 1991ನೇ ಇಸವಿಯಲ್ಲಿ ಜನರಲ್ ರಿಕ್ರೂಟ್ಮೆಂಟ್ ಆದಾಗ ಒಟ್ಟು 6,811 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಮೆರಿಟ್ ಆಧಾರದ ಮೇಲೆ ಅಂದರೆ The general recruitment-regular procedure ಅದರ ಮೇಲೆ ತುಂಬಲಾಯಿತು. ಮತ್ತು 1992-93ನೇ ಸಾಲಿನಲ್ಲಿ ಹುದ್ದೆಗಳನ್ನು ತುಂಬುವಾಗ ಬಹಳಷ್ಟು ಜನರು ಬಂದು 'ನಮಗೆ ವಯಸ್ಸಾಗಿದ್ದು, ನಮಗೂ ಒಂದು ಅವಕಾಶ ಕೊಡಿ' ಎಂದು ರೆಪ್ರಸೆಂಟ್ ಮಾಡಿದ್ದರಿಂದ ಜನರಲ್ ರಿಕ್ರೂಟ್ಮೆಂಟ್ನಲ್ಲಿ ಶೇಕಡ 50 ರಷ್ಟು ಇಟ್ಟು, ವಿಶೇಷ ನೇಮಕಾತಿಯಲ್ಲಿ 50 ಶೇಕಡ ಇಟ್ಟು, ವಿಶೇಷ ನೇಮಕಾತಿ ಎಂದರೆ ವಯಸ್ಸಿನ ಆಧಾರದ ಮೇಲೆ ಅವರಿಗೆ ಕೆಲಸ ಕೊಡುವುದಕ್ಕೆ ರೂಲ್ಸ್ ಮಾಡಿ ಆಗಲೂ ಸಹ ಇದೇ ರೀತಿ 6,812 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ತುಂಬಿದ್ದೇವೆ, ಇದು ಸ್ಪೆಷಲ್ ರಿಕ್ರೂಟ್‌ಮೆಂಟ್ ರೂಲ್ಸ್ ಎಂದು ಹೇಳುತ್ತಿದ್ದೇನೆ, ಈ ವರ್ಷ 1994ರ ಜನರಲ್ ರಿಕ್ರೂಟ್ಮೆಂಟ್ನಲ್ಲಿ ನಾವು ಬೇರೆ ಆದ್ಯತೆಗಳನ್ನು ಒದಗಿಸಿದ್ದೇವೆ. ಅದರಲ್ಲಿ ಮುಖ್ಯವಾಗಿ ಶೇಕಡ 50ರಷ್ಟು ಪ್ರಾಥಮಿಕ ಶಾಲಾ ಶಿಕ್ಷಕರುಗಳನ್ನಾಗಿ ಮಹಿಳೆಯರನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿದ್ದೇವೆ. ಅದೂ ಅಲ್ಲದೆ, ಅವರು ಕಳೆದ 4-5 ವರ್ಷಗಳಿಂದ ಜಿಲ್ಲಾ ಪರಿಷತ್ತಿಂದ ನೇಮಕಗೊಂಡು ಕೆಲಸ ಮಾಡುತ್ತಿದ್ದಾರೆ. ಅವರಿಗೆ ಪ್ರತಿ ವರ್ಷ ಎರಡು ಪರ್ಸೆಂಟ್ ಹೆಚ್ಚಿಗೆ ಮಾರ್ಕ್ಸ್ಕೊಟ್ಟು ಅವರನ್ನೂ ಇದರೊಳಗಡೆ ತರಲು ಪ್ರಯತ್ನಿಸಲಾಗುತ್ತಿದೆ. ಇದಲ್ಲದೆ, ಗ್ರಾಮೀಣ ಅಭ್ಯರ್ಥಿಗಳಿಗೆ ಈ ಸಲ ವೈಟೇಜ್ ಕೊಟ್ಟಿದ್ದು, ಯಾರ್‍ಯಾರು

ಹಳ್ಳಿಗಳಲ್ಲಿ ಎಸ್‌ಎಸ್‌ಎಲ್ಸಿ ಪಾಸ್ ಮಾಡಿಕೊಂಡಿರುತ್ತಾರೋ ಅಂತಹವರಿಗೆ ಐದುದು ಪರ್ಸೆಂಟ್ ಮಾರ್ಕ್ಸ್ ಅನ್ನು ಈ ವರ್ಷ ಕೊಡುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ : 15 ಪರ್ಸೆಂಟ್ ಇದ್ದುದನ್ನು 5 ಪರ್ಸೆಂಟಿಗೆ ಇಳಿಸಿದಿರಿ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : ಈಗ ಇರುವುದನ್ನು ನಾನು ಹೇಳುತ್ತಿದ್ದೇನೆ. 5% weightage for rural candidates ಎಂದು ಈ ವರ್ಷ ನಾವು ಏನು ಮಾಡಿದ್ದೇವೆ ಇದರ ಜೊತೆಗೆ ಮ್ಯೂಸಿಕ್ ಟೀಚರ್‌ಗಳ ಪೋಸ್ಟ್ ಅನ್ನು ಫಿಲಪ್ ಮಾಡಬೇಕೆಂದಿದ್ದೇವೆ. ಇದರಲ್ಲಿ ಬ್ಲೈಂಡ್ ಮ್ಯೂಸಿಕ್ ಟೀಚರ್‌ಗಳೇನಿದ್ದಾರೆ, ಅವರಿಗೆ ಆದ್ಯತೆ ಕೊಟ್ಟು ಇರುವ ಹುದ್ದೆಗಳನ್ನು ತುಂಬಬೇಕೆಂದು ಈಗಾಗಲೇ ತಮಗೆ ಗೊತ್ತಿರುವ ಹಾಗೆ ಜನವರಿ 15ನೇ ತಾರೀಖಿನಿಂದ ಅದರ ಪ್ರೊಸೆಸಿಂಗ್ ಪ್ರಾರಂಭವಾಗಿದೆ. ಇದನ್ನು ವಯೋಮಿತಿ ಮೀರಿದಂಥವರಿಗೆ ಏನು ಮಾಡುತ್ತೀರಿ ಎನ್ನತಕ್ಕ ಪ್ರಶ್ನೆಯನ್ನು ಕೇಳಿದ್ದೀರಿ. ನಾವೂ ಸಹ ಅಂಥ ಅಭ್ಯರ್ಥಿಗಳಿಗೆ ಸಹಾಯವನ್ನು ಮಾಡಬೇಕು ಎನ್ನತಕ್ಕದೃಷ್ಟಿಯಿಂದ ಹಿಂದಿನ ಸಲ ನೇಮಕಾತಿಯಲ್ಲಿ ಅವರಿಗೆ ಅವಕಾಶವನ್ನು ಕೊಟ್ಟಿದ್ದೆವು. 1993ರಲ್ಲಿ ಏನು 6313ಶಿಕ್ಷಕರನ್ನು ನೇಮಕಮಾಡಿಕೊಂಡಿದ್ದೆವೋ ಅದರಲ್ಲಿ ಕಾಲುಭಾಗದಷ್ಟು ವೈಟಿಂಗ್ ಲಿಸ್ಟ್‌ನಲ್ಲಿ ಇರುತ್ತಾರೆ. ಅವರುಗಳಿಗೆ ವಯಸ್ಸು ಆಗಿರುತ್ತದೆ. ಅಂಥವರ ಸಂಖ್ಯೆ 1500 ಆಗುತ್ತದೆ. ಆದರೂ ಸಹ ಈ ವರ್ಷದ ನೇಮಕಾತಿಯಲ್ಲಿ ಅವರಿಗೂ ನೇಮಕಾತಿಯನ್ನು ಮಾಡಿಕೊಳ್ಳುತ್ತಿದ್ದೇವೆ. ಆ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ನಾವು ವಯೋಮಿತಿಯ ಆಧಾರದ ಮೇಲೆಯೇ ನೇಮಕಾತಿಯನ್ನು ಪದೇ ಪದೇ ಮಾಡಿದರೆ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶವನ್ನು ಕಡಿಮೆ ಮಾಡಿದಂತಾಗುತ್ತದೆ. ಎಷ್ಟೋ ಸಲ ಅನೇಕ ಅಭ್ಯರ್ಥಿಗಳು ನನ್ನ ಹತ್ತಿರ ಬಂದು ನಮಗೆ 60-70 ಪರ್‌ಸೆಂಟ್ ಬಂದಿದೆ. ಆದರೂ ಸಹ ಕೆಲಸ ಸಿಕ್ಕಿಲ್ಲವೆನ್ನತಕ್ಕ ಮಾತನ್ನು ಹೇಳಿದ್ದಾರೆ. ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಗುಣಮಟ್ಟವನ್ನು ಸ್ವಲ್ಪವಾದರು ಕಾಪಾಡಬೇಕಾದರೆ ಪ್ರತಿಭಾವಂತ ವಿದ್ಯಾರ್ಥಿಗಳನ್ನು ನೇಮಕ ಮಾಡಿಕೊಂಡರೆ ಮಾತ್ರ ಸಾಧ್ಯವಾಗುತ್ತದೆಂದು ಈ ವರ್ಷ ಈ ರೀತಿಯಾದ ತೀರ್ಮಾನವನ್ನು ಮಾಡಿದ್ದೇವೆ.

ಶ್ರೀ ಕೆ. ಲಕ್ಕಣ್ಣ: ಹತ್ತು ವರ್ಷಗಳ ಹಿಂದೆ ಪಾಸ್ ಕ್ಲಾಸ್ ಆಗಿದ್ದವರು ಇಂದು 50 ಪರ್‌ಸೆಂಟ್ ತೆಗೆದುಕೊಂಡು ಪಾಸ್ ಅದರವರಿಗೆ ನೂರ್ ಪರ್ ಸೆಂಟ್‌ಗೆ ಸಮಾನರಾಗುತ್ತಾರೆ. ಅವರಿಗೂ ಸಹ ಅರ್ಹತೆ ಇದೆಯೆಂದು ನನ್ನ ಭಾವನೆ. ಅವರುಗಳು ಪರ್‌ಸೆಂಟ್‌ನ್ನು ತೆಗೆದುಕೊಂಡಿಲ್ಲವೆಂದು ಕಡೆಗಾಣಿಸಿದರೆ ಅವರಿಗೆ ಬೇರೆ ವೃತ್ತಿ ದೊರೆಯುವುದು ಕಷ್ಟವಾಗುತ್ತದೆ. ಅಂಥ ಜನರು 20-30 ಸಾವಿರ ಇದ್ದಾರೆ. ಅವರುಗಳೂ ಸಹ ಇಂದಿನವರಿಗೆ ಸರಿಸಮಾನರಾಗಿ ಬರುತ್ತಾರೆ.ಅವರ ಗುಣಮಟ್ಟ ಸಹ ಚೆನ್ನಾಗಿ ಇರುತ್ತದೆ. ಇದರ ಬಗ್ಗೆ ತಾವು ಚಿಂತನೆ ಮಾಡಬೇಕಾಗುತ್ತದೆ.

ಶ್ರೀಮತಿ ನಾಗಮ್ಮ ಸಿ ಕೇಶವಮೂರ್ತಿ : ನಾನು ಈ ಮೊದಲೇ ಹೇಳಿದಂತೆ ಸರ್ಕಾರವೇನು ಅವರ ವಿರೋಧವಾಗಿಲ್ಲ, ಅವರುಗಳಿಗೆ ವಯಸ್ಸು ಮೀರಿದ್ದರೂ ಸಹ ಹಿಂದಿನ ಸಲದ ನೇಮಕಾತಿಯಲ್ಲಿ ವೈಟಿಂಗ್ ಲಿಸ್ಟ್‌ನಲ್ಲಿ ಇದ್ದಂಥ 1500-1600 ಜನರಿಗೆ ಈಗ ನೇಮಕಾತಿಯ ಆಜ್ಞೆಯನ್ನು ಇಷ್ಯೂ ಮಾಡುತ್ತಿದ್ದೇನೆ.

ರಾಜ್ಯದಲ್ಲಿ ಶಿಕ್ಷಕರುಗಳು ಕೊರತೆ

7 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಉಪಾಧ್ಯಾಯರುಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಅದನ್ನು ನೀಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ದಿನಾಂಕ 31-5-94ರ ಅತ್ಯಂಕ್ಕೆ ಖಾಲಿ ಇರುವ 18,934 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯು ಈಗಾಗಲೇ ನಡೆಯುತ್ತಿವೆ.

ಖಾಲಿ ಇರುವ 6,046 ಪ್ರೌಢಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯೂ ಸಹ ಈಗಾಗಲೇ ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಅಧ್ಯಕ್ಷರೆ ಉತ್ತರವನ್ನು ನೋಡಿ ನಮಗೆ ಭಯ ಬೀತಿ ಬರುತ್ತಿದೆ. 18,934 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ. ಇಷ್ಟೊಂದು ಶಿಕ್ಷಕರ ಹುದ್ದೆಗಳು ಖಾಲಿ ಇದ್ದರೆ ವಿದ್ಯಾರ್ಥಿಗಳ ಪರಿಸ್ಥಿತಿ ಏನು? ಅವರುಗಳ ಭವಿಷ್ಯವೇನು? ಇಷ್ಟೊಂದು ಶಿಕ್ಷಕರ ಹುದ್ದೆಗಳನ್ನು ಖಾಲಿ ಇಟ್ಟು ಕೊಂಡಿರುವುದರಿಂದ ನಮ್ಮ ಶಿಕ್ಷಣದ ಮಟ್ಟ ಎಷ್ಟರಮಟ್ಟಿಗೆ ಮೇಲೆ ಹೋಗಬಹುದು? ಅವುಗಳೆಲ್ಲವನ್ನು ತಾವು ಆಲೋಚನೆ ಮಾಡಿದ್ದೀರ? ಶಾಲೆಗಳಿವೆ ವಿದ್ಯಾರ್ಥಿಗಳಿದ್ದಾರೆ. ಆದರೆ ಉಪಾಧ್ಯಾಯರುಗಳಿಲ್ಲವೆಂದಮೇಲೆ ಶಿಕ್ಷಣದ ಭವಿಷ್ಯ ಹೇಗೆ? ಆ ವಿದ್ಯಾರ್ಥಿಗಳ ಮುಂದಿನ ಚಿಂತನೆ ಏನು? ಇದರ ಬಗ್ಗೆ ಪ್ರಾಮಾಣಿಕವಾದ ಚಿಂತನೆಯನ್ನು ನಡೆಸಿದ್ದೀರ? ಇದರ ಬಗ್ಗೆ ತಕ್ಷಣಕ್ಕೆ ತೆಗೆದುಕೊಂಡಿರುವ ಕ್ರಮವೇನು? ಇಷ್ಟು ಶಿಕ್ಷಕರ ಹುದ್ದೆಗಳನ್ನು ಎಷ್ಟು ವರ್ಷಗಳಿಂದ ಇಟ್ಟುಕೊಂಡಿದ್ದೀರಿ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : ಈಗ ಇರತಕ್ಕ ಚಿತ್ರವನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಅಷ್ಟು ಶಿಕ್ಷಕರ ಹುದ್ದೆಗಳು ಖಾಲಿ ಇದೆ ಎನ್ನುವುದನ್ನು ಒಪ್ಪಿಕೊಂಡಿದ್ದೇವೆ. ಒಂದೆರಡು ತಿಂಗಳುಗಳ ಹಿಂದೆ ಎಷ್ಟು ಶಿಕ್ಷಕರ ಹುದ್ದೆಗಳು ಖಾಲಿ ಇದೆ ಎನ್ನುವ ಬಗ್ಗೆ ಅಂಕಿ ಅಂಶಗಳನ್ನು ತರಿಸಿದಾಗ 16 ಸಾವಿರವೆಂದು ತಿಳಿದುಬಂದು. ಅನಂತರ 31-5-1994ಕ್ಕೆ ಎಷ್ಟು ಖಾಲಿ ಇರುತ್ತದೆಂದು, ಅವುಗಳನ್ನು ಮುಂದಿನ ಜೂನ್ ತಿಂಗಳಿನಲ್ಲಿ ತುಂಬಬೇಕೆಂದು ಹೇಳಿದ ಮೇಲೆ 18,934 ಹುದ್ದೆಗಳು ಖಾಲಿ ಇವೆ ಎಂದು ತಿಳಿದುಬಂದಿದೆ. ಅಂಥ ಹುದ್ದೆಗಳು ನಿವೃತ್ತಿಯಾಗಿ ಇರಬಹುದು. ಮೃತಿಹೊಂದಿದ್ದರಿಂದ ಖಾಲಿ ಇರಬಹುದು, ಸ್ವಯಿಚ್ಛೆಯಿಂದ ನಿವೃತಿಯಾಗಿರಬಹುದು, ಮತ್ತೆ ಬೇರೆ ಯಾವುದೇ ರೀತಿಯಿಂದ ಖಾಲಿ ಇರಬಹುದು. ಇದರಲ್ಲಿ ಪ್ರತಿ ವರ್ಷ 5 ಸಾವಿರ ಹುದ್ದೆಗಳನ್ನು ಕ್ರಿಯೇಷನ್ ಆಫ್ ಪೋಸ್ಟ್ ಮಾಡುತ್ತಿದ್ದೇವೆ. ಇದನ್ನೂ ಸೇರಿಸಿ 18,934 ಹುದ್ದೆಗಳು ಖಾಲಿ ಇದೆ. ಅದೇ ರೀತಿ, ಪ್ರೌಢ ಶಾಲೆಗಳಲ್ಲಿ 6046 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಆ ಹುದ್ದೆಗಳಲ್ಲಿ ಶೇಕಡ 25 ರಷ್ಟನ್ನು ಬಡ್ತಿಯನ್ನು ಕೊಟ್ಟು ಮತ್ತು ಪ್ರಾಥಮಿಕ ಶಾಲೆಯಲ್ಲಿ ಯಾರ್ಯಾರು ಶಿಕ್ಷಕರಾಗಿದ್ದು ಬಿ.ಎ. ಅಥವಾ ಬಿ.ಎಡ್‌ನ್ನು ಮಾಡಿಕೊಂಡು ಇರುತ್ತಾರೋ ಅವರುಗಳಿಗೆ ಕೊಡುತ್ತೇವೆ. ಈ ಒಂದು ಅಂಶವನ್ನು ಗಮನಿಸಿದಾಗ ಪ್ರೌಢಶಾಲೆಗಳಲ್ಲಿ ಈ ವರ್ಷದಲ್ಲಿ 4235 ಪೋಸ್ಟ್‌ಗಳನ್ನು ಫಿಲ್ ಅಫ್ ಮಾಡಬೇಕಾಗುತ್ತದೆ.

2.50 ಪಿ.ಎಂ.

ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. The main input in education is the teacher.

ಟೀಚರ್ಸ್ ಇಲ್ಲದಿದ್ದರೆ ಅಲ್ಲಿ ಏನೂ ವಿದ್ಯಾಭ್ಯಾಸ ನಡೆಯುವುದಕ್ಕೆ ಸಾಧ್ಯವಿಲ್ಲ. ಅಕಸ್ಮಾತ್ ಕೋಣೆ ಇಲ್ಲದಿದ್ದರೂ ಮರದ ಕೆಳಗೆ ಆದರೂ ಶಾಲೆಯನ್ನು ನಡೆಸಬಹುದು.

ಎಕ್ವಿಪ್‌ಮೆಂಟ್ ಇಲ್ಲದಿದ್ದರೂ ಏನಾದರೂ ಮಾಡಿ ಆ ಟೀಚರ್ ಶಾಲೆಯನ್ನು ನಡೆಸಬಹುದು. ಆದರೆ ಟೀಚರ್ ಇಲ್ಲದೆ ಶಾಲೆ ನಿಜವಾಗಲೂ ಅಸ್ತಿತ್ವದಲ್ಲಿ ಇಲ್ಲ.ಅದರಲ್ಲಿ ಪೂರ್ಣ ನಂಬಿಕೆ ಇರುವವಳು ನಾನು. ಆದುದರಿಂದ ಈ ವರ್ಷ ಇಡೀ ರಾಜ್ಯದಲ್ಲಿ ಎಷ್ಟು ಖಾಲಿ ಜಾಗಗಳು ಇವೆ ಎಂಬುದನ್ನು ಹುಡುಕಿ ಪಟ್ಟಿ ತರಿಸಿ, ಜೂನ್ ಮೊದಲ ವಾರದಲ್ಲಿ ಇದೆಲ್ಲಾ ಪೋಸ್ಟ್‌ಗಳನ್ನು ಭರ್ತಿ ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದನ್ನು ಒಂದು ಕ್ಯಾಲೆಂಡರ್ ರೀತಿಯಲ್ಲಿ ಮಾಡಿದ್ದೇವೆ. ಪ್ರತಿವರ್ಷ ಇದೇ ದಿನಾಂಕದಂದು ಈ ಒಂದು ಪ್ರೊಸೀಜರ್ ಶುರು ಮಾಡಬೇಕೆಂದು ಹಿಂದೆ ಏಪ್ರಿಲ್ ಮೇಯಲ್ಲಿ ಶುರು ಮಾಡುವುದು ಅಕ್ಟೋಬರ್ ನವೆಂಬರ್‌ನಲ್ಲಿ ಟೀಚರ್ ಪೋಸ್ಟ್ ಮಾಡುವುದು ಇದೆಲ್ಲಾ ನಡೆಯುತ್ತಿತ್ತು. ಆದರೆ ಈ ವರ್ಷದಿಂದ ನಾ ್ರ ಜನವರಿಯಿಂದಲೇ ಪ್ರಾರಂಭ ಮಾಡಿ ಮೇ ಕೊನೆಯ ಒಳಗೆ ಎಲ್ಲಾ ಪ್ರೊಸಿಜರ್ ಏನಿದೆ ಅದನ್ನೆಲ್ಲಾ ಮುಗಿಸಿ, ಜೂನ್ ಮೊದಲ ವಾರದಲ್ಲಿ ಎಲ್ಲಾ ಪೋಸ್ಟ್‌ಗಳನ್ನು ಭರ್ತಿ ಮಾಡುತ್ತೇವೆಂದು ನಾನು ಆಶ್ವಾಸನೆಯನ್ನು ಕೊಡಲಿಚ್ಛಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ಬರೀ ಭರವಸೆ ಕೊಟ್ಟರೆ ಆಗುವುದಿಲ್ಲ. ತಾವು ಒಪ್ಪಿಕೊಂಡ ಹಾಗೆ ಶಿಕ್ಷಕರು ಇಲ್ಲದ ಶಾಲೆಗಳನ್ನು ನಡೆಸುವುದು ಒಳ್ಳೆಯದಲ್ಲ ಎಂದಿರಿ. ಇದುವರೆಗೂ ಅವರಿಗೆ ಆಗಿರುವಂತಹ ಅನ್ಯಾಯ, ಅನಾಹುತ, ಇದು ಒಂದು ರೀತಿಯಲ್ಲಿ ಸರ್ಕಾರ ಮೋಸ ಮಾಡುತ್ತಾ ಇದೆ ಎಂದು ನಾವು ನೇರವಾಗಿ ಹೇಳಬೇಕಾಗುತ್ತದೆ. ಈ ಮೋಸದಿಂದ ವಂಚಿಸುವುದಕ್ಕೆ ಸಾಧ್ಯವಿಲ್ಲ, ನನಗೆ ಅನಿಸುತ್ತಿದೆ, ಮತ್ತು ನನಗೆ ಬಹಳ ನೋವಾಗುತ್ತದೆ. ಪ್ರತಿ ಹಳ್ಳಿಯ ಮಕ್ಕಳೂ ಕೂಡ ಶಿಕ್ಷಕರು ಇಲ್ಲದೆ ಅವರ ಹಣೆಬರಹ ಓದುವುದಕ್ಕೂ ಆಗುತ್ತಿಲ್ಲ, ಉತ್ತಮ ಫಲಿತಾಂಶವು ಬರುತ್ತಿಲ್ಲ, ಅವರ ಭವಿಷ್ಯ ತೀರಾ ಹಾಳಾಗಿದೆ. ಇದನ್ನು ಸರಿಪಡಿಸುವುದಕ್ಕೆ ಬರೀ ಭರವಸೆ ಕೊಟ್ಟರೆ ಸಾಧ್ಯವಿಲ್ಲ. ಸರ್ಕಾರದ ನೀತಿ ಮತ್ತು ಶಿಕ್ಷಣದ ನೀತಿ ಸಂಪೂರ್ಣವಾಗಿ ವಿಫಲವಾಗಿದೆ. ಆದುದರಿಂದ ಕೂಡಲೇ ತಕ್ಷಣ ನೀವು ಈ ಒಂದು ತಿಂಗಳೊಳಗೆ 18 ಸಾವಿರ ನೇರವಾಗಿ ತೆಗೆದುಕೊಳ್ಳುತ್ತೇವೆಂದು ತಾವು ಭರವಸೆ ಕೊಡುತ್ತೀರಾ? ಈ ಸಾರಿ ಒಂದು ನೂರು ಬರುವ ಸಾರಿ ಎರಡು ಎಂದು ಹೀಗೆ ಹೇಳಿದರೆ ಆಗುವುದಿಲ್ಲ. ಈ ಕ್ಷೇತ್ರದಲ್ಲಿ ಈ ತಿಂಗಳಲ್ಲಿ ಎಲ್ಲಾ ಖಾಲಿ ಇರುವ ಪೋಸ್ಟಗಳನ್ನು ಭರ್ತಿ ಮಾಡುತ್ತೇವೆಂದು ತಾವು ಭರವಸೆ ಕೊಡುತ್ತೀರಾ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : ಈ ಕ್ಷೇತ್ರದಲ್ಲಿ ಈಗಲೇ ಎಂದು ಹೇಳುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಅದು ತಮಗೂ ಗೊತ್ತಿದೆ. ಸರ್ಕಾರದ ಯಾವ ಕೆಲಸವನ್ನು ತೆಗೆದುಕೊಳ್ಳಬೇಕಾದರೂ ಸಾಕಷ್ಟು ಪ್ರೊಸೀಜರ್ ಫಾಲೊ ಮಾಡಬೇಕಾಗುತ್ತದೆ. ವೆರಿಫಿಕೇಶನ್ ಆಗಬೇಕಾಗಿರುವುದರಿಂದ ಮತ್ತು ಪ್ರತಿಯೊಂದು ಕಾಸ್ಟ್ ವೆರಿಫಿ ಕೇಷನ್ ಇವೆಲ್ಲಾ ಇರುವುದರಿಂದ ಸ್ವಲ್ಪ ತಡವಾಗುತ್ತದೆ. ಅದಕ್ಕೋಸ್ಕರ ಈ ವರ್ಷ ನಾವು ಏನು ಮಾಡಿದ್ದೇವೆ ಎಂದರೆ ಇಡೀ ಪ್ರೊಸೀಜರ್ ಏಪ್ರಿಲ್ - ಮೇ ನಲ್ಲಿ ಏನು ಪ್ರಾರಂಭ ಮಾಡುತ್ತಿದ್ದೆವೋ ಅದನ್ನನು ಈಗ ಜನವರಿಯಿಂದಲೇ ಪ್ರಾರಂಭ ಮಾಡಿ ಜೂನ್ ತಿಂಗಳ ಒಳಗೆ ಎಲ್ಲಾ ಪ್ರೊಸೀಜರ್‌ಗಳನ್ನು ಮುಗಿಸಿ ಮುಂದಿನ ಅಕಾಡೆಮಿಕ್ ವರ್ಷದಲ್ಲಿ ನಾವು ಪ್ರತಿ ಶಾಲೆಗೂ ಟೀಚರ್‌ಗಳನ್ನು ಕೊಡುತ್ತೇವೆ. ನಾವು ಪ್ರಾಕ್ಟಿಕಲ್ಲಾಗಿ ಯೋಚನೆ ಮಾಡೋಣ, ಆವೇಶದಿಂದ ಏನೂ ಆಗುವುದಿಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ : 19 ಸಾವಿರ ಎನ್ನತಕ್ಕದ್ದು ಲೆಕ್ಕ ಸರಿಯಾಗಿಲ್ಲ. ಅದು ಮಂಜೂರು ಮಾಡತಕ್ಕಂಥದ್ದು 1:40 ಆ ತರಹ.....

(ಮೂರು ನಾಲ್ಕು ಜನ ಸದಸ್ಯರು ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು : ಒಬ್ಬೊಬ್ಬರಾಗಿ ಮಾತನಾಡಿದರೆ ಉತ್ತರ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಎಲ್ಲರೂ ಮಾತನಾಡಿದರೆ ನನಗೆ ಏನೂ ಕೇಳಿಸುವುದಿಲ್ಲ. ನಾರಾಯಣಸ್ವಾಮಿಯವರೇ, ಬೈರೇಗೌಡರನ್ನು ಕರೆದಿದ್ದೇನೆ. ಅವರು ಹೇಳಲಿ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೇ, ಅವರು ಕೊಟ್ಟಿರುವಂತಹ ಲೆಕ್ಕ ಸರಿಯಾಗಿಲ್ಲ. ಮಂಜೂರಾತಿ ಪಟ್ಟಿ ಮಾತ್ರ ಕೊಟ್ಟಿರತಕ್ಕದ್ದು. ಅದರ ವಾಸ್ತವಾಂಶವೇ ಬೇರೆ. ಒಂದು ಶಾಲೆಯಲ್ಲಿ 150 ಮಕ್ಕಳು ಇದ್ದಾರೆ. ಆದರೆ ಅಲ್ಲಿ ಒಬ್ಬ ಟೀಚರ್ ಬರುತ್ತಾರೆ. ಅದನ್ನೇ ಅವರು ಕೊಟ್ಟಿದ್ದಾರೆ. ಇಲಾಖೆಯ ನಿಬಂದನೆಯ ಪ್ರಕಾರ 1:40 ಅಥವಾ 1:50 ಪ್ರಕಾರ ಲೆಕ್ಕ ಹಾಕಿ ವೆಕೆನ್ಸಿಯ ಲೆಕ್ಕ ಹೇಳಿ. ಗ್ರಾಮಾಂತರ ಪ್ರದೇಶದಲ್ಲಿ ಎಷ್ಟು ಖಾಲಿ ಇದೆ ಹಾಗೂ ನಗರಪ್ರದೇಶಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇದೆ ಎಂಬುದನ್ನು ದಯಮಾಡಿ ಹೇಳಿ.

ಅಧ್ಯಕ್ಷರು : ಬೈರೇಗೌಡರೇ, ಇದರ ಬಗ್ಗೆ ತಮಗೆ ಚರ್ಚೆ ಬೇಕಾದರೆ ಬರೆದು ಕಳುಹಿಸಿ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಒಳ್ಳೆಯದಲ್ಲ

ಅಧ್ಯಕ್ಷರು : ಇನ್ನೂ ಪ್ರಶ್ನೋತ್ತರ ಕಾಲ ಇದೆ, ತಾವು ಕುಳಿತುಕೊಳ್ಳಿ ಈ ರೀತಿಯಾದರೆ ನಾನು ಮುಂದೆ ಹೋಗಬೇಕಾಗುತ್ತದೆ. ಮಂತ್ರಿಗಳೇ ಒಂದೊಂದು ಪ್ರಶ್ನೆಗೂ 15 ನಿಮಿಷಗಳನ್ನು ತೆಗೆದುಕೊಳ್ಳಲು. ಆಗುವುದಿಲ್ಲ. ತಾವು ಅದಷ್ಟು ಬೇಗ ಅವರಿಗೆ ಏನು ಹೇಳಬೇಕೋ ಅದನ್ನು ಹೇಳಿ. ಈಗ ತಾವೆಲ್ಲಾ ಕುಳಿತುಕೊಳ್ಳಿ, ಅವರು ಹೇಳುತ್ತಾರೆ.

(ಗೊಂದಲ)

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : ಈಗ ಅಧ್ಯಕ್ಷರು ನನಗೆ ಉತ್ತರ ಕೊಡಲಿಕ್ಕೆ ಹೇಳಿದ್ದಾರೆ.

ತಮಗೆ ನಾನು ಒಂದು ವಿಷಯವನ್ನು ತಿಳಿಸಿದೆ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ 8ನೇ ಪಂಚವಾರ್ಷಿಕ ಯೋಜನೆಯಲ್ಲಿ 5,000 posts have been created every year. 5 ಸಾವಿರ ಹುದ್ದೆಗಳನ್ನು ನಾವು ಸೃಷ್ಟಿ ಮಾಡುತ್ತಿದ್ದೇವೆ. ಆದುದರಿಂದ ನೀವು ಏನು ಹೇಳುತ್ತೀರಿ ನಮ್ಮ ರೇಷಿಯೋ ಪ್ರಕಾರ 50:1 ಎಂದು ಏನು ಟೀಚರ್ ಇರಬೇಕಾಗಿತ್ತು. ಇದು ಬಹಳ ವರ್ಷದಿಂದ ಹಾಗೆಯೇ ನೆನೆಗುದಿಗೆ ಬಿದ್ದಿದೆ. ಇದರ ಬಗ್ಗೆ ಗಮನ ಹರಿಸಿರಲಿಲ್ಲ. ಇತ್ತೀಚೆಗೆ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿವರ್ಷ ನಾವು 5 ಸಾವಿರ ಹುದ್ದೆಗಳನ್ನು ಸೃಷ್ಟಿ ಮಾಡಿ, ಈ ಹುದ್ದೆಗಳನ್ನು ನಾವು ತುಂಬುವುದಾದರೆ 8ನೇ ಪಂಚವಾರ್ಷಿಕ ಯೋಜನೆ ಕೊನೆಯ ಹೊತ್ತಿಗೆ ನಮ್ಮದು ಏನು ರೇಷಿಯೋ ಇದೆ 50 :1, 50ಮಕ್ಕಳಿಗೆ ಒಬ್ಬ ಟೀಚರ್ ಮತ್ತು ಒಬ್ಬ ಟೀಚರಿಗೆ ಒಂದು ಸ್ಕೂಲ್ ರೂಂ ಈ ಒಂದು ಗುರಿಯನ್ನು ಇಟ್ಟುಕೊಂಡು ಈಗ ನಾವು ಅದರಲ್ಲಿ ನಡೆಯುತ್ತಿದ್ದೇವೆ. ಅದರ ಬಗ್ಗೆ ಖಂಡಿತ ಈ ವರ್ಷವೂ ಸಹ 5 ಸಾವಿರ ಹೊಸ ಪೋಸ್ಟುಗಳನ್ನು ನಾವು ಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಹಳ್ಳಿಗಾಡಿನ ವಿದ್ಯಾರ್ಥಿಗಳಿಗೆ ಬಹಳ ಅನ್ಯಾಯವಾಗಿದೆ. ಇದರಲ್ಲಿ ನಿಜವಾಗಿಯೂ ಬಹಳ ಮೋಸವಾಗಿದೆ. ಶಾಲೆಗಳು ದನದ ದೊಡ್ಡಿ ಇದ್ದಹಾಗೆ ಇವೆ. ಉಪಾಧ್ಯಾಯರಿಗೆ ಕೊರತೆ ಇದೆ. ಸರ್ಕಾರದ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ. ಎಂತಹ ನೀತಿ ಇದು?

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀಮತಿ ಮೋಟಮ್ಮ: ಇತಿಹಾಸದಲ್ಲಿ ಮಾಡದೇ ಇರುವಷ್ಟು ನೇಮಕಾತಿ ನಾವು ಮಾಡುತ್ತಿದ್ದೇವೆ. ಅದರೂ ನೀವು....

ಹಿರೇಕೇರೂರು ತಾಲ್ಲೂಕಿನಲ್ಲಿ ಪಶುವೈದ್ಯಕೀಯ ಪಾಲಿಕ್ಲಿನಿಕ್ ಆಸ್ಪತ್ರೆ ಪ್ರಾರಂಭಿಸುವುದು

278 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರ್) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಮಿಶ್ರತಳಿ ಹಸುಗಳ ಸಂಖ್ಯೆ ಎಷ್ಟು? ಹಾಗೂ ಪ್ರತಿದಿನ್ನ ಉತ್ಪಾದನೆಯಾಗುತ್ತಿರುವ ಹಾಲಿನ ಪ್ರಮಾಣವೆಷ್ಟು?

ಆ) ಗ್ರಾಮೀಣ ಪಶುಗಳ ಸಂಖ್ಯೆಗೆ ಅನುಗುಣವಾಗಿ ಹಿರೇಕೆರೂರಿಗೆ ಪಾಲಿಕ್ಲಿನಿಕ್ ಪಶು ವೈದ್ಯಕೀಯ ಆಸ್ಪತ್ರೆಯ ಅವಶ್ಯಕತೆ ಇರುವುದನ್ನು ಸರ್ಕಾರ ಗಮನಿಸಿದೆಯೇ?

ಇ) ಹಾಗಿದ್ದಲ್ಲಿ ಹಿರೇಕೆರೂರು ತಾಲ್ಲೂಕಿನ ಕೇಂದ್ರ ಸ್ಥಳದಲ್ಲಿ ಪಾಲಿಕ್ಲಿನಿಕ್ ಪಶು ವೈದ್ಯಕೀಯ ಆಸ್ಪತ್ರೆಯನ್ನು ಯಾವಾಗ ಪ್ರಾರಂಭಿಸಲು ಸರ್ಕಾರ ನಿರ್ಧರಿಸಿದೆ.

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಮಿಶ್ರತಳಿ ಹಸುಗಳ ಸಂಖ್ಯೆ 1595 ಪ್ರತಿ ದಿನ ಉತ್ಪಾದನೆ ಆಗುವ ಹಾಲು 17555 ಕೆ.ಜಿ.

ಆ) ಹೌದು

ಇ) ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಹಿರೇಕೆರೂರು ತಾಲ್ಲೂಕಿನಲ್ಲಿ 1590 ಮಿಶ್ರತಳಿ ಹಸುಗಳು ಇವೆ ಎಂದು ಒಪ್ಪಿದ್ದಾರೆ. ಹಾಗೂ 17,555 ಲೀಟರ್ ಹಾಲು ಉತ್ಪಾದನೆ ಇದೆ ಎಂದು ಒಪ್ಪಿದ್ದಾರೆ. ಮತ್ತೇ ಅಲ್ಲಿ ಪಾಲಿಕ್ಲಿನಿಕ್ ಅವಶ್ಯಕತೆ ಇದೆ ಎಂದೂ ಒಪ್ಪಿದ್ದಾರೆ. ಆದರೆ ಪಾಲಿಕ್ಲಿನಿಕ್ ಮಂಜೂರು ಮಾಡಿ ಎಂದರೆ ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಆದ್ಯತೆಯ ಮೇರೆಗೆ ಪರಿಗಣಿಸಲಾಗುವುದು ಎಂದು ಹೇಳಿದ್ದಾರೆ. ಈ ವರ್ಷ ಸರ್ಕಾರ ಈಗಾಗಲೇ ಕೊಡುವುದಕ್ಕೆ ಅನುಮತಿ ಇದೆ. 20 ಪಾಲಿಕ್ಲಿನಿಕ್ ಕೊಡುವುದಕ್ಕೆ ಇದೆ. ಅವಶ್ಯಕತೆ ಇದ್ದು ಇಷ್ಟೊಂದು ಹಸುಗಳು ಇವೆ ಎಂದಮೇಲೆ ಹಾಲು ಹೆಚ್ಚು ಪ್ರಮಾಣದಲ್ಲಿ ಇದೆ. ಹಾಲು ಉತ್ಪಾದಕರ ಸಹಕಾರ ಸಂಘಗಳು ಇವೆ. ದಯವಿಟ್ಟು ತಮ್ಮ ಮೂಲಕ ಸಚಿವರಿಗೆ ಕೇಳುತ್ತೇನೆ. ಈ ವರ್ಷವೇ 93-94 ರಲ್ಲೇ ಹಿರೇಕೂರಿಗೆ ಆದ್ಯತೆಯ ಮೇಲೆ ಅಲ್ಲಿ ಒಂದು ಪಾಲಿಕ್ಲಿನಿಕ್ ಅವಶ್ಯಕತೆ ಇರುವುದರಿಂದ ಅಲ್ಲಿಗೆ ಕೊಡಬೇಕು ಎಂದು ನಂತರ ಮನುಷ್ಯರನ್ನು ನಾವು ಎಲ್ಲಿಗೆ ಬೇಕಾದರೂ ಸಹ ತೆಗೆದುಕೊಂಡು ಹೋಗಬಹುದು. ಆದರೆ ದನಗಳನ್ನು ನೋಡಲಿಕ್ಕೆ ಇಡೀ ರಾಜ್ಯದಲ್ಲಿ ಪ್ರತಿಯೊಂದು ತಾಲ್ಲೂಕಿಗೆ ಒಂದೊಂದು ಪಾಲಿಕ್ಲಿನಿಕ್ ಮಾಡತಕ್ಕಂತಹ ಒಂದು ಯೋಜನೆಯನ್ನು ಸರ್ಕಾರ ಹಾಕಿಕೊಂಡು ಇದನ್ನು ಮಾಡುವುದಕ್ಕೆ ವಿಚಾರ ಮಾಡಿದ್ದೀರಾ? ಎಷ್ಟು ವರ್ಷದಲ್ಲಿ ತಾವು ಮಾಡುತ್ತೀರಿ? ಇದರ ವಿವರವನ್ನು ಅವರ ಮೂಲಕ ನಾನು ಕೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಈ ಸಾರಿ 93-94ರಲ್ಲಿ 20 ಪಾಲಿಕ್ಲಿನಿಕ್ಗಳನ್ನು ಪ್ರಾರಂಬ ಮಾಡಿ ಐ ಆರ್ ಡಿಪಿನಲ್ಲಿ ಸುಮಾರು 80 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಮತ್ತು ಜಿಲ್ಲಾ ಪರಿಷತ್‌ನಿಂದ ಒಂದೊಂದು ಪಾಲಿಕ್ಲಿನಿಕ್‌ಗಳಿಗೆ 2 ಲಕ್ಷದಿಂದ 30 ಲಕ್ಷದವರೆಗೆ ಅಂದಾಜು ಮಾಡಿ ಕೆಲಸ ಪ್ರಾರಂಭ ಮಾಡಿದ್ದೇವೆ ತಾವು ಹೇಳಿದ ರೀತಿ ಕರ್ನಾಟಕ ರಾಜ್ಯದಲ್ಲಿ 6 ಲಕ್ಷ ಮಿಶ್ರ ತಳಿಗಳು ಇದ್ದಾವೆ. ಪ್ರತಿ ತಾಲ್ಲೂಕಿಗೂ ಪಾಲಿಕ್ಲಿನಿಕ್‌ನ ಅವಶ್ಯಕತೆ ಇದೆ. ಅದಕ್ಕೆ ಒಂದು ಮಾಸ್ಟರ್ ಪ್ಲಾನ್ ಮಾಡಿ, 5 ವರ್ಷಗಳಲ್ಲಿ ಎಲ್ಲಾ ಕ್ಷೇತ್ರದಲ್ಲಿ ಎಂದರೆ ಎಲ್ಲಾ ಆಸೆಂಬ್ಲಿ ಕ್ಷೇತ್ರದಲ್ಲಿ ಅವಶ್ಯಕತೆ

ಇದೆ ಇದು ಎಂದು ಮನಗಂಡು ಒಂದೊಂದು ಪಾಲಿಕ್ಲಿನಿಕ್‌ಗಳನ್ನು ಮಾಡಬೇಕು. ಎನ್ನುವಂತಹ ಒಂದು ಯೋಜನೆಯನ್ನು ಸಿದ್ಧಮಾಡಿದ್ದೇವೆ. ಒಂದು ಪಾಲಿಕ್ಲಿನಿಕ್‌ಗೆ ಸುಮಾರು 25 ಲಕ್ಷ ರೂಪಾಯಿ ಬೇಕಾಗುತ್ತದೆ. ಆ ದೃಷ್ಟಿಯಿಂದ 5 ವರ್ಷಗಳಲ್ಲಿ ಪ್ರತಿ ಅಸೆಂಬ್ಲಿ ಕ್ಷೇತ್ರಕ್ಕೂ ಒಂದು ಪಾಲಿಕ್ಲಿನಿಕ್ ಎಂದರೆ ವಿವಿಧೋದ್ದೇಶವುಳ್ಳಂತರ ದೊಡ್ಡ ಆಸ್ಪತ್ರೆ ರೀತಿಯಲ್ಲೇ ಈ ಪಶುಗಳ ಆಸ್ಪತ್ರೆಯನ್ನು ಮಾಡಲಾಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನನ್ನ ತಾಲ್ಲೂಕಿಗೆ ಈ ಸಾರಿ 93-94ರಲ್ಲಿ ನನಗೆ ಒಂದು ಕೊಡರಿ ಎಂದು ತಮಗೆ ಹೇಳಿದ್ದಕ್ಕೆ ಉತ್ತರ ಹೇಳಲಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಅವರು ಹೇಳಿದ ರೀತಿಯಲ್ಲಿ ಅಲ್ಲಿ ಅವಶ್ಯಕತೆ ಇದೆ. ಅದನ್ನು 94-95ರ ಏಪ್ರಿಲ್‌ನಿಂದ ಪ್ರಾರಂಭ ಮಾಡುತ್ತೇವೆ. ಆಗ ಖಂಡಿತವಾಗಿಯೂ ಸಹ ಅವರ ಬೇಡಿಕೆಯನ್ನು ಪರಿಶೀಲಿಸಲಾಗುವುದು.

ಸರ್ಕಾರಿ ಔಷಧ ಮಳಿಗೆಯಲ್ಲಿ ದರಗುತ್ತಿಗೆ ನಿಯಮಗಳ ಉಲಂಘನೆ

391 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಆರೋಗ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಔಷಧ ಮಳಿಗೆಯ ಮುಖ್ಯ ಮೇಲ್ವಿಚಾರಕರು ಎಲ್ಲಾ ಔಷಧಿ ಮತ್ತು ಇತರೆ ವಸ್ತುಗಳನ್ನು ಪರಿಶೀಲಿಸಿ ದರಗುತ್ತಿಗೆ ನಿಯಮಗಳಿಗನುಸಾರವಾಗಿ ಸ್ವೀಕರಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ದರಗುತ್ತಿಗೆ ನಿಯಮಗಳಿಗನುಸಾರವಾಗಿ ಸ್ವೀಕರಿಸಿಲ್ಲದಿದ್ದಲ್ಲಿ ಕಾರಣವೇನು? ಹಾಗೂ ಅದಕ್ಕೆ ಜವಾಬ್ದಾರರು ಯಾರು?

ಇ) ಆದರಿಂದ ಸರ್ಕಾರಕ್ಕೆ ಆಗಿರುವ ಆರ್ಥಿಕ ನಷ್ಟವೆಷ್ಟು? ಈ ನಷ್ಟವಾಗಿರುವ ಹಣವನ್ನು ಅವರಿಂದ ವಸೂಲಿ ಮಾಡಲಾಗುವುದೇ? ಹಾಗೂ ಅವರ ಮೇಲೆ ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಸರ್ಕಾರಿ ಔಷಧಿ ಮಳಿಗೆಯ ಮುಖ್ಯ ಮೇಲ್ವಿಚಾರಕರು ಔಷಧಿ ಮತ್ತಿತರ ಎಲ್ಲಾ ವಸ್ತುಗಳನ್ನು ದರಗುತ್ತಿಗೆಯ ನಿಯಮಗಳಿಗನುಗುಣವಾಗಿಯೇ ಸ್ವೀಕರಿಸುತ್ತಿದ್ದಾರೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಕೇಳುವುದಕ್ಕೆ ಮೊದಲು ನಾನು ತಮ್ಮನ್ನು ಒಂದು ಕ್ಲಾರಿಫಿಕೇಷನ್ ಕೇಳಿ ಅನಂತರ ಪ್ರಶ್ನೆಯನ್ನು ಕೇಳುತ್ತೇನೆ. ತಾವೂ ಕೂಡ ಸಂಪ್ರದಾಯವಾದಿಗಳು ಎಂದು ನನ್ನ ನಂಬಿಕೆ. ಒಂದು ಸಾರಿ ಮಾತನಾಡತಕ್ಕ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಯೀಲ್ಡ್ ಆದರೆ, ನಮಗೆ ಮಾತನಾಡತಕ್ಕ ಅವಕಾಶ ಇದೆಯೋ ಇಲ್ಲವೋ ತಾವೇ ಹೇಳಿ.

ಅಧ್ಯಕ್ಷರು : ತಾವು ಮೊದಲು ಪ್ರಶ್ನೆ ಕೇಳಿ. ಅನಂತರ ತಾವು ನನ್ನ ಚೇಂಬರ್‌ಗೆ ಬಂದು ಮಾತಾನಾಡಿ.

ಶ್ರೀ ಎಂ. ನಾರಾಯಣಸ್ವಾಮಿ : ಅಧ್ಯಕ್ಷರೇ, ಅದು ಆಗುವುದಿಲ್ಲ, ನಾನು ಪ್ರತಿಭಟನೆ ಮಾಡುತ್ತೇನೆ.

(ಗೊಂದಲ)

ಮಂತ್ರಿಗಳು ಯೀಲ್ಡ್ ಆದರು. ಮಂತ್ರಿಗಳಿಗೆ ಪ್ರಚೋದನೆ ಮಾಡಿ ನೀವು ಮಾತನಾಡಿರಿ ಎಂದು ಅವರಿಗೆ ಹೇಳಿದಿರಿ. ಅವರು ಯೀಲ್ಡ್ ಆದರೂ ನನಗೆ

ಅವಕಾಶ ಮಾಡಿ ಕೊಡಲಿಲ್ಲ, ಆದ್ದರಿಂದ, ನಾನು ಪ್ರಶ್ನೆ ಕೇಳುವುದಿಲ್ಲ, ನಾನು ಪ್ರತಿಭಟಿಸುತ್ತೇನೆ.

ಅಧ್ಯಕ್ಷರು : ಆಯಿತು, ಆಯಿತು.........

ಶ್ರೀ ಎಂ. ನಾರಾಯಣಸ್ವಾಮಿ : ಅಧ್ಯಕ್ಷರೇ, ತಾವು ಮಾಡತಕ್ಕದ್ದು ಸರಿಯಿಲ್ಲ

ಅಧ್ಯಕ್ಷರು : ಆ ರೀತಿ ತಾವು ಮಾತನಾಡುವುದು ಸರಿಯಲ್ಲ, ಈ ರೀತಿ ಮಾತನಾಡಿದರೆ ನಾನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಸದಸ್ಯರು, ಸಭಾಧ್ಯಕ್ಷರ ವಿಚಾರದಲ್ಲಿ ಹಗುರವಾಗಿ ಮಾತನಾಡಬಾರದು.

ಬೀದರ್ ಜಿಲ್ಲಾ ಆಸ್ಪತ್ರೆಯಲ್ಲಿರುವ ವೈದ್ಯರುಗಳ ಹುದ್ದೆಗಳ ಭರ್ತಿ

378 - ಶ್ರೀ ನಾರಾಯಣ ರಾವ್ ಮನವಳ್ಳಿ (ಬೀದರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೀದರ್ ಜಿಲ್ಲಾ ಆಸ್ಪತ್ರೆಯಲ್ಲಿರುವ ವೈದ್ಯರುಗಳ ಸಂಖ್ಯೆ ಹಾಗೂ ಇತರೆ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು ?

ಆ) ಆ ಆಸ್ಪತ್ರೆಗೆ ಮಂಜೂರಾಗಿರುವ ವೈದ್ಯರು ಹಾಗೂ ತಜ್ಞ ವೈದ್ಯರು ಹಾಗೂ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು ?

ಇ) ಈಗ ಆ ಆಸ್ಪತ್ರೆಯಲ್ಲಿ ಯಾವ ಯಾವ ವಿಭಾಗದ ತಜ್ಞ ವೈದ್ಯರ ಹಾಗೂ ಸಿಬ್ಬಂದಿ ವರ್ಗದ ಹುದ್ದೆಗಳು ಖಾಲಿ ಇದೆ.

ಈ) ಎಷ್ಟು ದಿನಗಳಿಂದ ಮೇಲ್ಕಂಡ ಹುದ್ದೆಗಳು ಖಾಲಿ ಇವೆ ಮತ್ತು ಆ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಉ) ತುರ್ತು ಸಂದರ್ಭಗಳಲ್ಲಿ ಆಪರೇಶನ್ ಮಾಡಬೇಕಾದಾಗ ಅರಿವಳಿಕೆ ತಜ್ಞರು ಸಹ ಆ ಆಸ್ಪತ್ರೆಯಲ್ಲಿ ಇಲ್ಲದಿರುವುದು ನಿಜವೆ.

ಊ) ಅಂತಹ ಸಂದರ್ಭಗಳಲ್ಲಿ ಯಾವ ಬದಲಿ ಕ್ರಮಗಳನ್ನು ಅನುಸರಿಲಾಗುತ್ತಿದೆ.

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಜಿಲ್ಲಾ ಆಸ್ಪತ್ರೆ, ಬೀದರ್ ಇಲ್ಲಿ ಕೆಲಸ ಮಾಡುತ್ತಿರುವ ವೈದ್ಯರುಗಳ ಸಂಖ್ಯೆ 20. ಇತರೆ ಸಿಬ್ಬಂದಿ ವರ್ಗದವರ ಸಂಖ್ಯೆ : 164

ಆ) ಈ ಆಸ್ಪತ್ರೆಗೆ ಮಂಜೂರಾಗಿರುವ ವೈದ್ಯರು ಹಾಗೂ ತಜ್ಞ ವೈದ್ಯರ ಸಂಖ್ಯೆ 20 ಮತ್ತು ಸಿಬ್ಬಂದಿ ವರ್ಗದವರ ಸಂಖ್ಯೆ 179

ಇ) ಈ ಆಸ್ಪತ್ರೆಯಲ್ಲಿ ಚರ್ಮರೋಗ ತಜ್ಞರು ಮತ್ತು ರೋಗ ಲಕ್ಷಣಶಾಸ್ತ್ರ ತಜ್ಞರು ಇರುವುದಿಲ್ಲ, ಆದರೆ ಈ ಹುದ್ದೆಗಳಲ್ಲಿ ಬೇರೆ ಬೇರೆ ತಜ್ಞರು ಕಾರ್ಯ ನಿರ್ವಹಿಸುತ್ತಿರುವುದರಿಂದ ವೈದ್ಯರ ಹುದ್ದೆಗಳಾವು ಖಾಲಿ ಇರುವುದಿಲ್ಲ, ಇತರ ಸಿಬ್ಬಂದಿ ವರ್ಗದ ಖಾಲಿ ಹುದ್ದೆಗಳ ಪಟ್ಟಿ ಲಗತ್ತಿಸಿದೆ ಇತರ ಖಾಲಿ ಹುದ್ದೆ 15.

ಈ) ಹುದ್ದೆಗಳು ಸುಮಾರು 1 ವರ್ಷಕ್ಕಿಂತ ಹೆಚ್ಚು ಸಮಯದಿಂದ ಖಾಲಿ ಇರುತ್ತವೆ. ಇವುಗಳನ್ನು ಸಾರ್ವತ್ರಿಕ ವರ್ಗಾವಣೆ ಸಮಯದಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಉ) ಸದರಿ ಆಸ್ಪತ್ರೆಯಲ್ಲಿ ಒಬ್ಬ ಅರಿವಳಿಕೆ ತಜ್ಞರು. ಕೆಲಸ ಮಾಡುತ್ತಿರುವುದರಿಂದ ಆಪರೇಷನ್ ಕೆಲಸಗಳಿಗೆ ತೊಂದರೆಯಾಗಿರುವುದಿಲ್ಲ. ಈ ಆಸ್ಪತ್ರೆಗೆ ಇನ್ನೂ ಒಬ್ಬ ಡಾಕ್ಟರನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದು

ಊ) ಪ್ರಶ್ನೆಯು ಉದ್ಭವಿಸುವುದಿಲ್ಲ.

ಬೀದರ್ ಜಿಲ್ಲಾ ಆಸ್ಪತ್ರೆಗೆ ಮಂಜೂರಾಗಿರುವ ವೈದ್ಯರ ಹುದ್ದೆಗಳ ವಿವರ

ಕ್ರ. ಸಂ.	ವರ್ಗ	ಮಂಜೂರಾಗಿರುವ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಹುದ್ದೆ
1.	ಜಿಲ್ಲಾ ಸರ್ಜನ್ನರು	1	1	-
2.	ಉಪಶಸ್ತ್ರ ಚಿಕಿತ್ಸಕರು	5	5	-
3.	ಉಪದಂತ ಚಿಕಿತ್ಸಕರು	1	1	-
4.	ಸಹಾಯಕ ಶಸ್ತ್ರ ಚಿಕಿತ್ಸಕರು	13	13	-
	ಒಟ್ಟು	20	20	-

ಬೀದರ್ ಜಿಲ್ಲಾ ಆಸ್ಪತ್ರೆಯಲ್ಲಿರುವ ವೈದ್ಯರ ಮತ್ತು ತಜ್ಞವೈದ್ಯರ ಹುದ್ದೆಯ ವಿವರಗಳು

		ಮಂಜೂರಾದ ಹುದ್ದೆ	ಕಾರ್ಯನಿರ್ವಹಿಸುತ್ತಿರುವ ಸಂಖ್ಯೆ
1.	ಶಸ್ತ್ರ ಚಿಕಿತ್ಸಕರು	1	1(ಪ್ರಭಾರ)
2.	ಉಪ ಶಸ್ತ್ರ ಚಿಕಿತ್ಸಕರು (ಉಪಮುಖ್ಯ ವೈದ್ಯಾಧಿಕಾರಿ)	2	2
3.	ಉಪದಂತ ಶಾಸ್ತ್ರ ಚಿಕಿತ್ಸಕರು	1	1
4.	ಶಸ್ತ್ರ ಚಿಕಿತ್ಸಾ ಶಾಸ್ತ್ರ	2	2
5.	ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ	3	5
6.	ಶಿಶುವೈದ್ಯ ಶಾಸ್ತ್ರ	1	2
7.	ಅರಿವಳಿಕೆ ಶಾಸ್ತ್ರ	2	1 (ಡಾ: ಮಲ್ಲಿಕಾರ್ಜುನ
8.	ವಿಕಿರಣ ಶಾಸ್ತ್ರ	1	1 ಸ.ಶ. ಶೆಟ್ಟರ್
9.	ಅಸ್ಥಿ ಚಿಕಿತ್ಸಾ ಶಾಸ್ತ್ರ	1	1 ಇವರು ಉ.ಶ.ಚಿ. ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ)
10.	ನೇತ್ರ ಚಿಕಿತ್ಸಾ ಶಾಸ್ತ್ರ	1	1
11	ಕಿವಿ, ಮೂಗು ಮತ್ತು ಗಂಟಲುಶಾಸ್ತ್ರ	1	1
12.	ಚರ್ಮರೋಗ ಶಾಸ್ತ್ರ	1	-
13.	ರೋಗ ಲಕ್ಷಣ ಶಾಸ್ತ್ರ	1	-
14.	ವೈದ್ಯ ಶಾಸ್ತ್ರ	2	2
	ಒಟ್ಟು	20	20

ಜಿಲ್ಲಾ ಆಸ್ಪತ್ರೆ ಬೀದರ್ - ಹುದ್ದೆಗಳ ವಿವರ

ಕ್ರ. ಸಂ.	ಹುದ್ದೆಗಳ ವಿವರ	ಮಂಜೂರಾದ ಹುದ್ದೆಗಳು	ಕಾರ್ಯ ನಿರತ ಹುದ್ದೆಗಳು	ಖಾಲಿ ಹುದ್ದೆ ಗಳೂ	ಎಂದಿನಿಂದ
1.	ನೇತ್ರ ಸಹಾಯಕ	1	1	0	
2.	ನೇತ್ರ ಸಹಾಯಕ (ಸಂಚಾರಿ ನೇತ್ರ ಚಿಕಿತ್ಸಾ ಘಟಕ, ಜಿಲ್ಲಾ ಆಸ್ಪತ್ರೆ, ಬೀದರ್	1	0	1	ದಿ: 13-8-93 (ಹೊಸದಾಗಿ ಮಂಜೂರಾಗಿದೆ)
3.	ಎಲೆಕ್ಟ್ರೀಷಿಯನ್	1	1	0	
4.	ಕ್ಲಿನಿಕಲ್ ಸೈಕಾಲಜಿಸ್ಟ್	1	0	1	
5.	ಸಮಾಜ ಕಾರ್ಯಕರ್ತ	1	1	0	
6.	ಅಕ್ಯುಪೇಷನಲ್ ಥೆರಪಿಸ್ಟ್	1	0	1	
7.	ಕಿರಿಯ ಪ್ರಯೋಗ ಶಾಲಾ ತಂತ್ರಜ್ಞ	2	2	-	
8.	ಹಿರಿಯ ಪ್ರಯೋಗಶಾಲಾ ತಂತ್ರಜ್ಞ	3	2	1	
9.	ಕ್ಷ -ಕಿರಣ ತಂತ್ರಜ್ಞ	1	1	-	
10.	ವಿಕಿರಣ ಚಿತ್ರಗಾರ	1	1	-	
11.	ಕಿರಿಯ ಫಾರ್ಮಾಸಿಸ್ಟ್	5	5	-	
12.	ಹಿರಿಯ ಫಾರ್ಮಾಸಿಸ್ಟ್	5	5	-	
13.	ಗ್ರೂ 'ಡಿ'	90	90	-	
14.	ಡ್ರೈವರ್	3	3	-	

ಸಿಬ್ಬಂದಿ - 3 ಸಂಕಲನ

1.	ಶುಶ್ರೂಷಕರು	36	36		
2.	ಹಿರಿಯ ಶುಶ್ರೂಷಕರು	9	1	8	ಪದೋನ್ನತಿ ಹುದ್ದೆಗಳು. ಈ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾ
3.	ಶುಶ್ರೂಷಾಧೀಕ್ಷಕರು ದರ್ಜೆ-2	2	1	1	ಪದೋನ್ನತಿ ಹುದ್ದೆಗಳು.
4.	ಶುಶ್ರೂಷಾಧೀಕ್ಷಕರು ದರ್ಜೆ-1				ಈ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗಿದೆ.
5.	ಮುಖ್ಯ ಫಾರ್ಮಾಸಿಸ್ಟ್	1	-	1	
6.	ಪದವೀಧರ ಫಾರ್ಮಾಸಿಸ್ಟ್	2	2	-	
7.	ಲೇ ಸೆಕ್ರೆಟರಿ	1	1		

ಲಿಪಿಕ ವರ್ಗದ ಸಿಬ್ಬಂದಿ

1.	ಕಛೇರಿ ಅಧೀಕ್ಷಕರು	1	1	-
2.	ಪ್ರಥಮ ದರ್ಜೆಯ ಸಹಾಯಕರು	5	5	-
3.	ದ್ವಿತೀಯ ದರ್ಜೆ ಸಹಾಯಕರು	2	2	-
4.	ಬೆರಳಚ್ಚುಗಾರರು	1	1	-
5.	ಸಹಾಯಕ ಹಾಗೂ ಬೆರಳಚ್ಚುಗಾರರು	1	1	-
6.	ಲೇಡಿ ಹೌಸ್ ಕೀಪರ್	1	1	-

ಶ್ರೀ ನಾರಾಯಣರಾವ್ ಮನಹಳ್ಳಿ: ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರದಲ್ಲಿ ಇರುವುದು ಒಂದೇ ಒಂದು ಆಸ್ಪತ್ರೆ. ಈಗ ಸರ್ಕಾರದವರು ಏನು ಮಾಹಿತಿ ಕೊಟ್ಟಿದ್ದಾರೆ, ಅದರಲ್ಲಿ ಕೆಲವೊಂದು ತಪ್ಪು ಮಾಹಿತಿ ಇದೆ ಎಂದು ನಾನು ಭಾವಿಸುತ್ತೇನೆ. ಈಗ ಅಲ್ಲಿ ಡಿಸ್ಟ್ರಿಕ್ಟ್ ಸರ್ಜನ್ನೇ ಇಲ್ಲ, ಅಲ್ಲಿ 6 ತಿಂಗಳಿಂದ ಆ ಹುದ್ದೆ ಖಾಲಿ ಇದೆ. ಮತ್ತೊಂದು ಕಿವಿ, ಗಂಟಲು, ಮೂಗು ಶಸ್ತ್ರ ಚಿಕಿತ್ಸಕರು ಇಲ್ಲ. ಹೀಗಾಗಿ ಅಲ್ಲಿ ಅನೇಕ ಸ್ಪೆಷಲಿಸ್ಟಳು ಬೇಕಾಗಿದೆ. ಆದರೆ ಅಲ್ಲಿ ಇಲ್ಲ, ಮತ್ತೊಂದು ವಿಶೇಷ ಹೇಳಬೇಕೆಂದರೆ, ಅಲ್ಲಿ ಆಪರೇಷನ್ ಮಾಡಬೇಕಾದರೆ ಅನ್ನಿಷಿಯ ಇಲ್ಲ. ಆಪರೇಷನ್ ಮಾಡಬೇಕಾದರೆ ಒಂದು ದೊಡ್ಡ ಸಮಸ್ಯೆಯಾಗಿದ್ದು ಯಾರಿಗಾದರೂ ಹುಡುಕಿಕೊಂಡು ಬರಬೇಕಾಗಿದೆ. ಇಂಥ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಈ ಹುದ್ದೆಯನ್ನು ಯಾವಾಗ ಭರ್ತಿಮಾಡುತ್ತಾರೆ ತಿಳಿಸಬೇಕು. ಮತ್ತೊಂದು ವಿಚಾರ ಅಂದರೆ ಬಹಳ ದಿವಸಗಳಿಂದ ಐ.ವಿ. ಫ್ಲುಯಿಡ್ ಪ್ಲಾಂಟ್ ಇದೆ. ಆದರೆ, ಅದರ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಏಕೆಂದರೆ, ಅದರಲ್ಲಿ ಕೆಲವು ಹುದ್ದೆಗಳು ಖಾಲಿ ಇವೆ. ಸುಮಾರು 400 ಗ್ಲುಕೋಸ್ ಲಿಕ್ವಿಡ್ ತಯಾರಾಗತಕ್ಕ ಪ್ಲಾಂಟ್ ಏನಿದೆ ಅದು ಖಾಲಿ ಬಿದ್ದಿದೆ. ಅದು ಸರಿಯಾಗಿ ನಡೆಯಬೇಕಾದರೆ ಕೆಲವೊಂದು ಸಿಬ್ಬಂದಿಗಳು ಬೇಕಾಗುತ್ತವೆ. ಆ ಬಗ್ಗೆ ಮಾನ್ಯ ಮಂತ್ರಿಗಳು ಯಾವಾಗ ಭರ್ತಿ ಮಾಡುತ್ತಾರೆಂದು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು: ಮಾನ್ಯ ಸದಸ್ಯರು ಇದರಲ್ಲಿ ಸರ್ಕಾರದವರು ತಪ್ಪು ಮಾಹಿತಿ ಕೊಟ್ಟಿದ್ದಾರೆಂದು ಏತಕ್ಕೆ ಹೇಳಿದರೋ ನನಗಂತೂ ಅರ್ಥವಾಗುತ್ತಿಲ್ಲ. ನಾನು ಮಾನ್ಯ ಸದಸ್ಯರ ಜೊತೆಯಲ್ಲಿಯೇ ಆ ಆಸ್ಪತ್ರೆಗೆ ಭೇಟಿ ಕೊಟ್ಟು ಮೂರು ನಾಲ್ಕು ತಾಸು ತಪಾಸಣೆ ಮಾಡಿ ನೋಡಿಕೊಂಡು ಅವರ ಜೊತೆಯಲ್ಲೇ ಬಂದಿದ್ದೇನೆ. ನಾನು ಹೇಳಬೇಕೆಂದರೆ ಮಂಜೂರಾದಂಥ ಹುದ್ದೆಗಳು ಅಲ್ಲಿ ಯಾವುದೂ ಖಾಲಿ ಇಲ್ಲ. ಅವರು ಹೇಳಿದಂಥ ಕಿವಿ, ಮೂಗು ಗಂಟಲು ವೈದ್ಯರು ಬೇಕೆಂದು ಏನು ಹೇಳಿದ್ದಾರೆ, ಆ ಹುದ್ದೆ ಮಂಜೂರಾಗಿಲ್ಲ. ಒಟ್ಟು 20 ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಅಷ್ಟು ಹುದ್ದೆಗಳಲ್ಲೂ ವೈದ್ಯರು ಕೆಲಸ ಮಾಡುತ್ತಿದ್ದಾರೆ. ಒಂದು ಡಿಸ್ಟ್ರಿಕ್ಟ್ ಸರ್ಜನ್ ಹುದ್ದೆ ಖಾಲಿ ಇದೆ ಎಂದು ಹೇಳಿದ್ದಾರೆ, ನಾನು ಎರಡು ದಿವಸದ ಹಿಂದೆಯೇ ಅಲ್ಲಿಗೆ ಡಿಸ್ಟ್ರಿಕ್ಟ್ ಸರ್ಜನ್ ಹಾಕಿದ್ದೇನೆ. ಅವರು ಕೆಲಸಮಾಡುತ್ತಿದ್ದಾರೆ. ಇನ್ನು ಅರಿವಳಿಕೆ ತಜ್ಞರು ಇಲ್ಲ ಎಂದು ಹೇಳಿದ್ದಾರೆ, ಅರಿವಳಿಕೆ ತಜ್ಞರ ಮಂಜೂರಾತಿ ಎರಡು, ಆದರೆ ಈಗಾಗಲೇ ಅರಿವಳಿಕೆ ತಜ್ಞರು ಒಬ್ಬರು ಕೆಲಸ ಮಾಡುತ್ತಿರುವುದರಿಂದ, ತಾವು ಹೇಳಿದ ರೀತಿ ಆಪರೇಷನ್

ಆಗುವಂಥಾದ್ದಕ್ಕೆ ತೊಂದರೆಯಾಗುವಂಥ ಪರಿಸ್ಥಿತಿ ನಿರ್ಮಾಣ ಆಗಿಲ್ಲ. ನಾನು ಆ ಆಸ್ಪತ್ರೆಗೆ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದಾಗ ಬಹಳಷ್ಟು ಸಾರಿ ಭೇಟಿ ಕೊಟ್ಟಿದ್ದೇನೆ. ಆ ಆಸ್ಪತ್ರೆ ಬಗ್ಗೆ ಸಾಕಷ್ಟು ಆಸೆ ವಹಿಸಿ ಕೆಲಸ ಮಾಡಿದ್ದೇನೆ. ಇನ್ನು ಅಲ್ಲಿ ಬಂದ್ ಆಗಿದ್ದ ಐ.ವಿ. ಫ್ಲೂಯಿಡ್ ಪ್ರಾರಂಭ ಮಾಡಿಸಿ, ಕೆಲಸ ಕೂಡ ಪ್ರಾರಂಭವಾಗಿದೆ. ಎಂದು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಇಚ್ಛಿಸುತ್ತೇನೆ.

ಔಷಧಿ ವಿತರಕರ ನೇಮಕ

115 - ಶ್ರೀ ಜಿ.ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಯಲ್ಲಿರುವ ಆಯುರ್ವೇದ, ಯುನಾನಿ ಹಾಗೂ ಹೋಮಿಯೋಪತಿ ಔಷಧಿ ವಿತರಕರ ಹುದ್ದೆಗಳೆಷ್ಟು?

ಆ) ಅವುಗಳ ಪೈಕಿ ಒಟ್ಟು ಎಷ್ಟು ಹುದ್ದೆಗಳು ಖಾಲಿ ಇವೆ?

ಇ) ಆಯುರ್ವೇದ ಔಷಧಿ ವಿತರಕರ ತರಬೇತಿ ಕೋರ್ಸಿನ ಅವಧಿಯನ್ನು ಎರಡು ವರ್ಷಕ್ಕೆ ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆಯೆ?

ಈ) ಹಾಗಿದ್ದಲ್ಲಿ ಆ ಕೋರ್ಸಿನ ಅವಧಿಯನ್ನು ಎರಡು ವರ್ಷಕ್ಕೆ ಹೆಚ್ಚಿಸಿದ ನಂತರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುತ್ತದೆಯೇ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಯಲ್ಲಿ ಈ ಕೆಳಕಂಡಂತೆ ವೈದ್ಯಪದ್ಧತಿಗಳ ಔಷಧ ವಿತರಕರ ಹುದ್ದೆಗಳು ಮಂಜೂರಾಗಿರುತ್ತವೆ.

1.	ಆಯುರ್ವೇದ	-	205	ಹುದ್ದೆಗಳು
2.	ಯುನಾನಿ	-	48	ಹುದ್ದೆಗಳು
3.	ಹೋಮಿಯೋಪತಿ	-	10	ಹುದ್ದೆಗಳು

ಆ) ಅವುಗಳ ಪೈಕಿ ಈ ಕೆಳಕಂಡಂತೆ ವೈದ್ಯಪದ್ಧತಿಗಳ ಔಷಧಿ ವಿತರಕರ ಹುದ್ದೆಗಳು ಖಾಲಿ ಇರುತ್ತವೆ.

1.	ಆಯುರ್ವೇದ	-	105	ಹುದ್ದೆಗಳು
2.	ಯುನಾನಿ	-	16	ಹುದ್ದೆಗಳು
3.	ಹೋಮಿಯೋಪತಿ	-	8	ಹುದ್ದೆಗಳು

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ನಮ್ಮ ಕರ್ನಾಟಕ ರಾಜ್ಯದಲ್ಲಿ ಭಾರತೀಯ ವೈದ್ಯ ಪದ್ಧತಿಗೆ ಹೆಚ್ಚು ಒತ್ತುಕೊಡಬೇಕೆಂಬ ಸರ್ಕಾರದ ಒತ್ತಾಸೆಯ ಹಿನ್ನೆಲೆಯಲ್ಲಿ ಕೇಂದ್ರಸರ್ಕಾರದ ಯೋಜನಾ ಆಯೋಗವೂ ಕೂಡ ರಾಜ್ಯಸರ್ಕಾರಕ್ಕೆ ನಿರ್ದೇಶನ ಕೊಟ್ಟಿದ್ದರೂ ಕೂಡ ರಾಜ್ಯ ಸರ್ಕಾರದಲ್ಲಿ ಔಷಧಿ ವಿತರಕರ ಹುದ್ದೆಗಳು ಶೇಕಡ 30 ರಷ್ಟು ತುಂಬಲ್ಪಟ್ಟಿದ್ದು ಇನ್ನು 70 ಪರ್ಸೆಂಟ್ ಖಾಲಿ ಇಟ್ಟುಕೊಂಡಿರುವುದರಿಂದ ನಮ್ಮ ಭಾರತೀಯ ವೈದ್ಯ ಪದ್ಧತಿಗೆ ಹೆಚ್ಚಿನಮಹತ್ವ ಕೊಡಲು ಸಾಧ್ಯವೇ? ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಹುದ್ದೆಗಳು ಖಾಲಿ ಇರುವಾಗ ಇವುಗಳನ್ನು ತುಂಬಲು ರಾಜ್ಯ ಸರ್ಕಾರಕ್ಕೆ ಏನು ತೊಂದರೆ ಇದೆ? ಅಥವಾ ಹಣಕಾಸಿನ ಕೊರತೆ ಏನಾದರೂ ಇದೆಯೇ?

ಹಾಗೇನಾದರೂ ತೊಂದರೆ ಇದ್ದರೆ, ಈ ಉದ್ದೇಶವನ್ನು ಕೈ ಬಿಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಅಷ್ಟೊಂದು ಹುದ್ದೆಗಳನ್ನು ನಾವು ಖಾಲಿ ಇಟ್ಟಿಲ್ಲ. ಈಗಾಗಲೇ ಯುನಾನಿ ಫಾರ್ಮಾಸಿಸ್ಟ್ ಹುದ್ದೆಗಳು 16 ಖಾಲಿ ಇದ್ದು ಅವುಗಳ ಪೈಕಿ 11 ಹುದ್ದೆಗಳನ್ನು ನಾವು ಭರ್ತಿ ಮಾಡಿದ್ದೇವೆ. ಆಯುರ್ವೇದದಲ್ಲಿ 106 ಹುದ್ದೆಗಳ ಪೈಕಿ 22 ಹುದ್ದೆಗಳನ್ನು ಇನ್ನು 15 ದಿವಸ ಅಥವಾ ಒಂದು ತಿಂಗಳಲ್ಲಿ ಭರ್ತಿ ಮಾಡುವ ವಿಚಾರ ಸರ್ಕಾರದಲ್ಲಿದೆ. ಇನ್ನುಳಿದ ಹುದ್ದೆಗಳನ್ನು ಹಂತ ಹಂತವಾಗಿ ತುಂಬುವ ಯೋಜನೆಯನ್ನು ಸರ್ಕಾರ ಮಾಡುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಹುದ್ದೆಗಳನ್ನು ಖಾಲಿ ಇಟ್ಟಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ಅವರು ಕೊಟ್ಟಿರತಕ್ಕ ಅಂಕಿಅಂಶಗಳನ್ನೇ ತೆಗೆದುಕೊಂಡು ಹೇಳುವುದಾದರೆ 205 ಹುದ್ದೆಗಳ ಪೈಕಿ 105 ಹುದ್ದೆಗಳನ್ನು ಭರ್ತಿ ಮಾಡಿದ್ದಾರೆ. ಅಂದಮೇಲೆ ಇನ್ನೂ 100 ಹುದ್ದೆಗಳು ಖಾಲಿ ಇರೆ. ಯುನಾನಿ 48 ರಲ್ಲಿ ಇನ್ನೂ 16 ಹುದ್ದೆಗಳು ಖಾಲಿ ಇವೆ ಹೋಮಿಯೋಪತಿ 10 ಹುದ್ದೆಗಳ ಪೈಕ 8 ಹುದ್ದೆಗಳು ಖಾಲಿ ಇವೆ. ಆದರೆ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದಷ್ಟು ಹುದ್ದೆಗಳು ಖಾಲಿ ಇಲ್ಲವೆಂದು. ಆದ್ದರಿಂದ ಇದರ ಬಗ್ಗೆ ಅವರು ಸ್ಪಷ್ಟೀಕರಣ ನೀಡಬೇಕು.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು : ಆಯುರ್ವೇದ ಮತ್ತು ಯುನಾನಿಗೆ ಸಂಬಂಧಪಟ್ಟಂತೆ ನಾನು ಹೇಳುತ್ತಿದ್ದೇನೆ. ಹೋಮಿಯೋಪತಿಯಲ್ಲಿ 10 ಹುದ್ದೆಗಳ ಪೈಕಿ 8 ಹುದ್ದೆಗಳನ್ನು ಇಷ್ಟರಲ್ಲೇ ತುಂಬತಕ್ಕ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ನಮ್ಮ ಇಲಾಖೆಯಲ್ಲಿ ಕಳೆದ ನಾಲ್ಕಾರು ವರ್ಷಗಳಿಂದ ಯಾವುದೇ ಹುದ್ದೆಗಳನ್ನೂ ತುಂಬದೇ ಇರುವುದರಿಂದ ಇಷ್ಟೊಂದು ಹುದ್ದೆಗಳು ಖಾಲಿ ಇವೆ ಎಂಬುದನ್ನು ಹೇಳಬಯಸುತ್ತೇನೆ. ಪ್ರಶ್ನೆಯನ್ನು ಕೇಳಿರತಕ್ಕ ಮಾನ್ಯ ಸದಸ್ಯರು ಈ ಹಿಂದೆ ಇದೇ ಖಾತೆಯಲ್ಲಿ ಬಹಳಷ್ಟು ದಿವಸ ಕೆಲಸ ಮಾಡಿರುವುದರಿಂದ ಅವರಿಗೆ ಇದರ ಬಗ್ಗೆ ಹೆಚ್ಚಿನ ಅನುಭವ ಇದೆ. ನಾನು ವಿಶೇಷವಾಗಿ ಏನನ್ನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದಷ್ಟು ಬೇಗ ವೈದ್ಯರ ಹುದ್ದೆ, ಫಾರ್ಮಾಸಿಸ್ಟ್ ಹುದ್ದೆ ಅಥವಾ ಇನ್ನಾವುದೇ ಖಾಲಿ ಇರತಕ್ಕ ಹುದ್ದೆಗಳನ್ನು ತುಂಬುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಹಾಲು ಸಹಕಾರಿ ಸಂಘಗಳ ನೊಂದಣಿ

117 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಳಬಾಗಿಲು ತಾಲ್ಲೂಕು ಶಾಸಕರಿಂದ ಹಾಲು ಉತ್ಪಾದಕರ ಸಂಘಗಳ ನೊಂದಾವಣೆ ಮಾಡಬೇಕೆಂದು 1990 ಜನವರಿಯಿಂದ ಸಂಬಂಧಪಟ್ಟ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟಕ್ಕೆ ಬರೆದ ಪ್ರಕಾರ ಒಟ್ಟು ಗ್ರಾಮಗಳ ಸಂಖ್ಯೆ ಎಷ್ಟು ಮತ್ತು ಅವುಗಳ ಹೆಸರುಗಳೇನು

ಆ) ಅವುಗಳಲ್ಲಿ ಇದುವರೆವಿಗೂ ನೊಂದಾವಣೆ ಮಾಡಿದ ಹಾಲು ಉತ್ಪಾದಕರ ಸಂಘಗಳೆಷ್ಟು ?

ಇ) ಮಿಕ್ಕ ಗ್ರಾಮಗಳಲ್ಲಿ ನೊಂದಾವಣೆ ಮಾಡದಿರಲು ಕಾರಣಗಳೇನು ?

ಈ) ಸಂಬಂಧಪಟ್ಟ ಅಧಿಕಾರಿಗಳು ಸರಿಯಾದ ಕಾರಣ ಕೊಡದೆ ವರ್ಷಾನುಗಟ್ಟಲೆ ತಡೆಹಿಡಿಯಲು ಕಾರಣಗಳೇನು ?

ಉ) ಶಾಸಕರು ಬರೆದ ತಾರೀಖು ನೊಂದಾವಣೆ ಆದ ತಾರೀಖುಗಳನ್ನು ತಿಳಿಸುವುದು.

ಊ) ಈ ಪೂರ್ಣ ಮಹಿಳಾ ಹಾಲು ಉತ್ಪಾದಕರ ಸಂಘವನ್ನು ನೊಂದಾವಣೆ ಮಾಡುವಂತೆ ಶಾಸಕರು ಬರೆದಿದ್ದರೂ ಸಹ ಇದುವರೆಗೂ ಮಾಡದಿರಲು ಕಾರಣವೇನು ?

ಋ) ವಿನಾಕಾರಣ ನೊಂದಾವಣೆ ಮಾಡುವುದನ್ನು ತಡೆ ಹಿಡಿದಿರುವ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಒಟ್ಟು ಏಳು ಗ್ರಾಮಗಳು

1. ದೊಡ್ಡಗುರ್ತಿ
2. ನಲ್ಲಾಂಡಹಳ್ಳಿ
3. ವಮ್ಮಸಂದ್ರ
4. ಕೊತ್ತಮಂಗಲ
5. ನಲ್ಲೂರು
6. ವಿ.ಹೊಸಹಳ್ಳಿ
7. ಕೀಲುಹೊಳಲಿ

ಆ) ಆರು.

ಇ) ವಿ.ಹೊಸಹಳ್ಳಿ ಗ್ರಾಮವು ಗೋಕುಂಟೆ ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯವ್ಯಾಪ್ತಿಯಲ್ಲಿರುತ್ತದೆ. ಗೋಕುಂಟೆ ಹಾಲು ಸಂಘದ ವ್ಯಾಪ್ತಿಯಿಂದ ಸದರಿ ಗ್ರಾಮವನ್ನು ಬಿಡುಗಡೆ ಮಾಡಲು ಕೋರಲಾಗಿದೆ.

ಈ) ಉದ್ಭವಿಸುವುದಿಲ್ಲ.

ಮಾನ್ಯ ಶಾಸಕರು ದಿನಾಂಕ 12-12-904-9-91ಮತ್ತು 14-10-91ರಲ್ಲಿ ಬರೆದಿರುತ್ತಾರೆ. ನೊಂದಾವಣೆಯಾದ ದಿನಾಂಕಗಳು ಈ ಕೆಳಕಂಡಂತಿರುತ್ತದೆ.

ಕ್ರಮ ಸಂಖ್ಯೆ	ಹಾಲು ಉತ್ಪಾದಕರ ಸಹಕಾರ ಸಂಘಗಳ ಹೆಸರು	ನೊಂದಣಿಯಾದ ದಿನಾಂಕ
1.	ದೊಡ್ಡಗುರ್ತಿ	9-10-92
2.	ನಲ್ಲಾಂಡಹಳ್ಳಿ	21-12-92
3.	ವಮ್ಮಸಂದ್ರ	17-9-91
4.	ಕೊತ್ತಮಂಗಲ	14-2-92
5.	ನಲ್ಲೂರು	2-12-93
6.	ಕೀಲುಹೊಳಲಿ	24-12-88

ಊ) ಪ್ರಸ್ತುತ ಪುಣ್ಯಹಳ್ಳಿ ಗ್ರಾಮವು ಭಂಗವಾದಿ ಕ್ರಾಸ್, ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯವ್ಯಾಪ್ತಿಯಲ್ಲಿರುತ್ತದೆ. ಪುಣ್ಯ ಹಳ್ಳಿ ಗ್ರಾಮವನ್ನು ಭಂಗವಾದಿ ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯ ವ್ಯಾಪ್ತಿಯಿಂದ ಬಿಡುಗಡೆ ಮಾಡಿ ಇಲ್ಲಿ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘವನ್ನು ನೊಂದಾಯಿಸಲು ಕ್ರಮ ಕೈಗೊಳ್ಳಲಾಗಿದೆ.

ಖ) ಉದ್ಭವಿಸುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ: ರಾಜ್ಯದಲ್ಲಿ ಒಟ್ಟು ಹಾಲು ಉತ್ಪಾದಕರ ಸಹಕಾರ ಸಂಘಗಳು ಎಷ್ಟಿವೇ? ಪೂರ್ಣವಾಗಿ ಮಹಿಳಾ ಹಾಲು ಉತ್ಪಾದಕರ ಸಂಘಗಳಿಗೆ ಉತ್ತೇಜನ ಕೊಡುವ ಸಲುವಾಗಿ ಸರ್ಕಾರದ ಮುಂದೆ ಏನೇನು ಯೋಜನೆಗಳಿವೆ?

ಶ್ರೀ ಕೆ.ಎನ್. ನಾಗೇಗೌಡ: ಒಟ್ಟು 6000 ಹಾಲು ಉತ್ಪಾದಕರ ಸಹಕಾರ ಸಂಘಗಳ ಪೈಕಿ 214 ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಗಳಿವೆ. 93-94ರಲ್ಲಿನಮ್ಮ ಪಾವರ್ಟಿ ಪ್ರೋಗ್ರಾಂನ ಅಡಿಯಲ್ಲಿ 75 ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಮಾಡಬೇಕೆಂದು ತೀರ್ಮಾನಿಸಿದ್ದೇವೆ. ಇದನ್ನು ಮಾರ್ಚಿ 31ನೇ ತಾರೀಖಿನೊಳಗೆ ಮಾಡಬೇಕೆಂದು ಆದೇಶನೀಡಿದ್ದೇವೆ. ಈ ಸಂಘಗಳ ಉತ್ತೇಜನಕ್ಕಾಗಿ ಸುಮಾರು 19 ಲಕ್ಷ ರೂ.ಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಇದರಲ್ಲಿ 60 ಪರ್ಸೆಂಟ್ ಸಬ್ಸಿಡಿ ಮತ್ತು 40 ಪರ್ಸೆಂಟ್ ಲೋನ್ ಎಂದು ಮಾಡಿದ್ದೇವೆ. ಮಹಿಳೆಯರಿಗೆ ಹೆಚ್ಚು ಆದ್ಯತೆಯನ್ನು ಕೊಡಬೇಕೆಂಬ ಉದ್ದೇಶದಿಂದ ಮುಂದಿನ ವರ್ಷದಿಂದ ಅಂದರೆ 94-95ನೇ ಸಾಲಿನಿಂದ ಯಾರು 50 ಜನ ಮಹಿಳೆಯರಿರುತ್ತಾರೆ. ಎಲ್ಲಿ 100 ಲೀಟರ್ ಹಾಲು ಸಂಗ್ರಹಣ ಶಕ್ತಿ ಇರುತ್ತದೆ ಅಲ್ಲಿ ಆದ್ಯತೆಯ ಮೇರೆಗೆ ಸಹಕಾರ ಸಂಘವನ್ನು ಮಾಡುವುದಕ್ಕೆ ಟಾಪ್ ಪ್ರೆಯಾರಿಟಿ ಕೊಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ: ನಿಮ್ಮ ಅಧಿಕಾರಿಗಳು ತಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಉದಾಹರಣೆಗೆ ಹೇಳುವುದಾದರೆ, 1978ರಲ್ಲಿ ನಾನು ಪತ್ರವನ್ನು ಬರೆದಿದ್ದೇನೆಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಆಗ ನಾನು ಶಾಸಕನೇ ಆಗಿರಲಿಲ್ಲ. ನಾನು ಶಾಸಕನಾದುದ್ದು 1989ರಲ್ಲಿ. ಇದು ಒಂದು ತಪ್ಪು ಮಾಹಿತಿ.

ಇನ್ನು ಎರಡನೆಯದಾಗಿ, ಯಾವುದೋ ದೇವರುತ್ತ ಎನ್ನತಕ್ಕ ಒಂದು ಹಳ್ಳಿಯಲ್ಲಿ ಪೂರ್ಣ ಮಹಿಳಾ ಹಾಲು ಉತ್ಪಾಕರ ಸಹಕಾರ ಸಂಘ ಆಗಬೇಕೆಂದು ನಾನು ಕೇಳಿ 3-4 ತಿಂಗಳಾಯಿತು. ಅದರ ಬಗ್ಗೆ ಸರ್ಕಾರದ ಉತ್ತರವೇ ಇಲ್ಲ. ಆ ಪತ್ರವನ್ನೇ ಅಧಿಕಾರಿಗಳು ಲಪಟಾಯಿಸಿಬಿಟ್ಟಿದ್ದಾರೆ. ಆದ್ದರಿಂದ ತಾವು ಅವರ ಫೈಲುಗಳನ್ನು ತರಿಸಿ ನೋಡಿ ಅವರೇನಾದರೂ ತಪ್ಪು ಮಾಡಿದ್ದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ.ಎನ್. ನಾಗೇಗೌಡ: ಆಗಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ: ಪೂರ್ಣ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘವನ್ನು ಮಾಡುವುದಕ್ಕೆ ಕಾನೂನಿನಲ್ಲಿ ಏನಾದರೂ ಅವಕಾಶವಿದೆಯೆ ಎಂದು ಕೇಳಬಯಸುತ್ತೇನೆ. ಅಲ್ಲಿ ಯಾರಾದರೂ ಗಂಡಸರು ಬಂದು ಸದಸ್ಯರಾಗುತ್ತೇವೆಂದರೆ ಅದನ್ನು ರಿಜೆಕ್ಟ್ ಮಾಡುತ್ತೀರಾ?

ಶ್ರೀ ಕೆ.ಎನ್. ನಾಗೇಗೌಡ: ಹಾಗೆ ಬರುವುದಿಲ್ಲ. ಆದರೆ ನಾವು ಮಹಿಳೆಯರಿಗಾಗಿಯೇ ಪ್ರತ್ಯೇಕವಾಗಿ ರಿಜಿಸ್ಟರ್‌ನಲ್ಲಿ ಒಂದು ವಿಂಗ್‌ನ್ನು ಓಪನ್ ಮಾಡಿ ಮಹಿಳೆಯರೇ ಮಾಡಿಕೊಳ್ಳಬೇಕೆಂದು ಮಾಡಿದ್ದೇವೆ.

(ಗೊಂದಲ)

ತುಮಕೂರು ಮತ್ತು ಕೋಲಾರದಲ್ಲಿ ಸ್ನಾತಕೋತ್ತರ ಕೋರ್ಸ್ ಪ್ರಾರಂಭ

172 - ಶ್ರೀ ಎಸ್. ಷಫಿ. ಅಹಮದ್ (ತುಮಕೂರು): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ತುಮಕೂರು ಮತ್ತು ಕೋಲಾರದಲ್ಲಿ ಸ್ನಾತಕೋತ್ತರ ಕೋರ್ಸುಗಳನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಅದರ ಆರಂಭಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್. ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು):

ತುಮಕೂರು ಮತ್ತು ಕೋಲಾರದಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿಲ್ಲ.

ಶ್ರೀ ಎಸ್.ಷಫಿ ಅಹಮದ್: ಮಾನ್ಯ ಸಚಿವರು ಅವರ ಉತ್ತರದಲ್ಲಿ ತುಮಕೂರು ಕೋಲಾರದಲ್ಲಿ ಪೋಸ್ಟ್ ಗ್ರ್ಯಾಜುಯೇಷನ್ ಕೋರ್ಸಸ್ ತೆಗೆಯಲು ಸಾಧ್ಯವಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಆದರೆ 92-93ರಲ್ಲಿ ಕಮಿಟಿಯ ವರದಿಯಂತೆ ಮಂಡ್ಯ, ಹಾಸನ, ಬೆಂಗಳೂರು ವಿಶ್ವವಿದ್ಯಾನಿಲಯ, ರಾಯಚೂರು, ಬಳ್ಳಾರಿ, ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ ಪೋಸ್ಟ್ ಗ್ರ್ಯಾಜುಯೇಷನ್ ಕೋರ್ಸನ್ನು ಮಂಜೂರ್ಮಾಡಿ 25 ಲಕ್ಷ ರೂಪಾಯಿ ಮಂಜೂರ್ಮಾಡಿಕೊಟ್ಟು ಪೋಸ್ಟ್ ಗ್ರ್ಯಾಜುಯೇಷನ್ ಕೋರ್ಸಸ್ ನಡೆಯುತ್ತಿದೆ. ಆದರೆ ಅದೇ ವರದಿಯಲ್ಲಿ ತುಮಕೂರು, ಕೋಲಾರಕ್ಕೂ ಮಂಜೂರಾಗಿತ್ತು. ಅದನ್ನು ಕೈಬಿಟ್ಟಿದ್ದಾರೆ. ತುಮಕೂರು ಜಿಲ್ಲೆಯಲ್ಲಿ, ಕೋಲಾರ ಜಿಲ್ಲೆಯಲ್ಲಿ 20 ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಅಲ್ಲಿ ಪೋಸ್ಟ್ ಗ್ರ್ಯಾಜುಯೇಷನ್ ಕೋರ್ಸಸ್ ಮಂಜೂರ್ಮಾಡಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಎಸ್.ಎಂ. ಯಾಹ್ಯ: 1991ರಲ್ಲಿ ಡಾ|| ನರಸಿಂಹಯ್ಯ ಕಮಿಟಿಯವರು ಹೋಗಿ ಕೋಲಾರ ಮತ್ತು ತುಮಕೂರಿನಲ್ಲಿ ಪಿ.ಜಿ. ಕೋರ್ಸ್ ಮಾಡಬೇಕೇ ಅಥವಾ ಸಬ್ ಸೆಂಟರ್ ಮಾಡಬೇಕೆ ಎಂದು ವಿಚಾರ ಮಾಡಿ ಒಂದು ವರದಿ ಕೊಟ್ಟಿದ್ದಾರೆ. ಅದರ ಪ್ರಕಾರ ಅಲ್ಲಿ ಸಬ್ ಸೆಂಟರ್ ಅಂದರೆ ಅದು ಅಡ್ಮಿನಿಸ್ಟ್ರೇಟೀವ್‌ಗೆ ಬರುತ್ತದೆ. ಅಕಾಡೆಮಿಕ್ ಅಲ್ಲ. ಆ ಬಗ್ಗೆ ವಿಚಾರ ಮಾಡಿ ಪೋಸ್ಟ್ ಗ್ರ್ಯಾಜುಯೇಟ್ ಎಂದು ಹೇಳುವಾಗ ಅದು ಅಕಾಡೆಮಿಕ್‌ಗೆ ಬರುತ್ತದೆ. ಒಂದು ಕೋರ್ಸ್ ಮಾಡಬೇಕಾದರೆ 50 ಲಕ್ಷ ರೂಪಾಯಿ ಬೇಕಾಗುತ್ತದೆ. ಬೆಂಗಳೂರು ವಿಶ್ವವಿದ್ಯಾನಿಲಯ ಹತ್ತಿರ ಇದೆ. ಇತರ ಪ್ರದೇಶಗಳಿಗೆ ಅದು ಬಹಳಷ್ಟು ದೂರ. ನೂರಾರು ಕಿಲೋಮಿಟರ್ ದೂರ.ಇಲ್ಲಿ 50-60 ಕಿಲೋಮೀಟರ್ ನಲ್ಲಿ ಉತ್ತಮವಾದ ಬೆಂಗಳೂರು ವಿಶ್ವವಿದ್ಯಾನಿಲಯ ಇದೆ. ತುಮಕೂರಾಗಲಿ, ಕೋಲಾರವಾಗಲಿ ಅದಕ್ಕಾಗಿ ಎರಡು ಸೆಂಟರ್ ಮಾಡಬೇಕಾದರೆ ನಮ್ಮ ಫೈನಾನ್ಷಿಯಲ್ ಪೊಸಿಷನ್ ಚೆನ್ನಾಗಿ ಆದಾಗ ಮಾಡಬಹುದೇ ಹೊರತು ಒಂದು ಕೋರ್ಸ್‌ಗೆ 50 ಲಕ್ಷ ರೂಪಾಯಿ ಅಂದರೆ 2-3 ಕೋರ್ಸ್ ಮಾಡಿದಿರೆ ಒಂದೂವರೆ ಕೋಟಿ ರೂಪಾಯಿ ಬೇಕಾಗುತ್ತದೆ. ಈಗ ಫೈನಾನ್ಷಿಯಲ್ ಪೊಸಿಷನ್ ಅಷ್ಟು ಚೆನ್ನಾಗಿಲ್ಲ. ಮತ್ತು ವಿಶ್ವವಿದ್ಯಾನಿಲಯ ತೀರಾ ಹತ್ತಿರ ಇರುವುದರಿಂದ ನಾವು ಹೆಚ್ಚು ಹೆಚ್ಚು ಪೋಸ್ಟ್ ಗ್ರ್ಯಾಜುಯೇಷನ್ ಸೆಂಟರ್ಸ್ ತೆಗೆದು ಅಲ್ಲಿ ಉಪಯುಕ್ತ ಬಿಲ್ಡಿಂಗ್ ಆಗಲಿ, ಲ್ಯಾಬೊರೆಟರೀಸ್ ಆಗಲಿ ಕೊಟ್ಟಿಲ್ಲವೆಂದರೆ ಅಂಥ ಪಿ.ಜಿ. ಕೋರ್ಸ್ ಯೋಗ್ಯವಾಗುವುದಿಲ್ಲ, ಆದುದರಿಂದ ಇದನ್ನು ಮಾಡುವುದಕ್ಕೆ ಬಹಳ ಕಷ್ಟವಾಗಿದೆ.

ಶ್ರೀ ಎಸ್. ಷಫಿ ಅಹಮದ್: ಮಂಡ್ಯ ಮತ್ತು ಹಾಸನ ತುಮಕೂರು, ಕೋಲಾರ, ಬೆಂಗಳೂರಿಗೆ ಬಹಳ ಸಮೀಪದಲ್ಲಿದೆ. ಅಲ್ಲಿ ಮಂಜೂರ್ಮಾಡಿಕೊಟ್ಟಿದೆ, ಸರ್ಕಾರ ಹಣ ಕೂಡ ಒದಗಿಸಿಕೊಟ್ಟಿದೆ. ಅದೇ ಕಮಿಟಿ ರಿಪೋರ್ಟ್ ಪ್ರಕಾರ ತುಮಕೂರು ಮತ್ತು ಕೋಲಾರ ಸೇರಿಸಿದ್ದರೂ ಅದನ್ನು ಕೈಬಿಟ್ಟಿದ್ದೀರಿ. ಇವತ್ತು ಹೆಚ್ಚಿನ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿರುವುದರಿಂದ ಈ ವರ್ಷದ ಆಯವ್ಯಯದಲ್ಲಿ ಅಳವಡಿಸಿಕೊಂಡು ಮಂಡೂರ್ಮಾಡಿ ಕೊಡಬೇಕೆಂದು ಮತ್ತೊಮ್ಮೆ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯ: ಯು.ಜಿ.ಸಿ. ಫಂಡಿಗೆ ಏಜೆನ್ಸಿ ಇದೆ ಅವರೂ ಸಹ ಈ ರೀತಿ ಪಿ.ಜಿ. ಕೋರ್ಸ್ ಹೆಚ್ಚು ಹೆಚ್ಚು ಮಾಡಿದರೆ ದುಡ್ಡು ಕೊಡುವುದಿಲ್ಲವೆಂದು ಹೇಳಿದಾರೆ. ಇದುದನು ಚೆನಾಗಿ ಮಾಡಿಕೊಳ್ಳಿ, ಸ್ಟೆಬಿಲೈಸ್ ಮಾಡಿಕೊಳ್ಳಿ, ಆಮೇಲೆ

ಮುಂದಕ್ಕೆ ಹೋಗಿ ಎಂದು ಹೇಳಿದ್ದಾರೆ. ಒಂದು ಕಿವಿಮಾತು ಶಾಸಕರಿಗೆ ಹೇಳುವುದಕ್ಕೆ ಬಯಸುತ್ತಿದ್ದೇನೆ. ಈಗ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ 274 ಕಾಲೇಜುಗಳಿವೆ, ಅಷ್ಟು ವಿಸ್ತಾರವಾಗಿದೆ. ಕ್ವಾಂಟಿ ಟೇಟೀವ್ವೈಸ್ ಇದೆ. ಅಡ್ಮಿನಿಸ್ಟ್ರೇಷನ್ ಮಾಡುವುದು ಬಹಳ ಕಷ್ಟ ಇದೆ. ಇವತ್ತಲ್ಲ ನಾಳೆ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಇನ್ನೊಂದು ವಿಶ್ವವಿದ್ಯಾನಿಲಯ ಮಾಡುವ ಕಾಲ ಬರಬಹುದು. ಆ ಕಾಲದಲ್ಲಿ ನೀವು ಪಿ.ಜಿ. ಕೋರ್ಸಿಗೆಂದು ಒಂದು ವಿಶ್ವವಿದ್ಯಾನಿಲಯವನ್ನು ಕೇಳಿದರೆ ಸಾಧ್ಯವಾಗುವಂಥ ವಿಚಾರಗಳು ಇವೆ. ಏಕೆಂದರೆ ಬಹಳಷ್ಟು ಕಾಲೇಜುಗಳು ಆಗುವುದರಿಂದ ಇನ್ನೊಂದು ವಿಶ್ವವಿದ್ಯಾನಿಲಯ ಕೇಳುವುದಕ್ಕೆ ನೀವು ಸಹ ಅರ್ಜಿ ಹಾಕಬಹುದು.

ಶ್ರೀ ಸಿ. ಬೈರೇಗೌಡ : ಬೆಂಗಳೂರು ವಿಶ್ವವಿದ್ಯಾನಿಲಯ ಕೇವಲ 50-60 ಕಿಲೋಮೀಟರ್ ಹತ್ತಿರವಿರುವ ಕಾರಣದಿಂದ ಸದ್ಯದಲ್ಲಿ ಕೊಡುವುದಕ್ಕಾಗುವುದಿಲ್ಲವೆಂದು ಮಂತ್ರಿಗಳು ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಒಂದೊಂದು ಬೀದಿಯಲ್ಲಿ ಬೇಕಾದಷ್ಟು ಕಾಲೇಜುಗಳು ಇವೆ. ಅಲ್ಲಿ ಸಾಮಾನ್ಯವಾಗಿ ಇರತಕ್ಕ ಎಲ್ಲಾ ಕಾಲೇಜುಗಳಲ್ಲಿ ಪೋಸ್ಟ್ ಗ್ರಾಜುಯೇಷನ್‌ಗೆ ಅವಕಾಶ ಕೊಟ್ಟಿದ್ದೀರಿ. ಬೆಂಗಳೂರಿನಿಂದ 60-70 ಕಿಲೋಮೀಟರ್ ದೂರ ಇರತಕ್ಕ ತುಮಕೂರಾಗಲಿ, ಕೋಲಾರವಾಗಲಿ ಅಲ್ಲ ಮಾಡುವುದಕ್ಕೆ ಅಡ್ಡಿ ಇರತಕ್ಕದ್ದು ಏನು? ಬೆಂಗಳೂರು, ಕರ್ನಾಟಕದಲ್ಲಿ ಇಲ್ಲರೇ ಬೇರೆ ದೇಶದಲ್ಲಿದೆಯೆ? ಇಲ್ಲಿ ಸಾಧ್ಯವಾಗುತ್ತದೆ, ಅಲ್ಲಿ ಏತಕ್ಕೆ ಸಾಧ್ಯವಾಗುವುದಿಲ್ಲ?

ಶ್ರೀ ಎಸ್.ಎಂ. ಯಾಹ್ಯಾ : ಸನ್ಮಾನ್ಯ ಬೈರೇಗೌಡರು ಪ್ರಶ್ನೆಯನ್ನು ಓದಲಿಲ್ಲ. ಉತ್ತರ ಸಹ ಅವರೇ ಹೇಳಿದ್ದುದು. ಪಿ.ಜಿ. ಸೆಂಟರ್ ಬೆಂಗಳೂರಿನಲ್ಲಿ ಬೀದಿ ಬೀದಿಯಲ್ಲಿ ಇಲ್ಲ. ಬೀದಿ ಬೀದಿಯಲ್ಲಿ ಅದು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಸಿ. ಬೈರೇಗೌಡ : ನ್ಯಾಷನಲ್ ಕಾಲೇಜಿನಲ್ಲಿ ಇದೆ.

SRI. S.M. YAHYA : You have not understood the question. Post graduate course is different. There is lot of differeence between postgraduate course and postgraduate centre. We have given post graduate courses in Tumkur and Kolar also.

You have not understood the question.

ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಕಟ್ಟಡಗಳ ನಿರ್ಮಾಣ

266 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಕೊಠಡಿಗಳನ್ನು ಕಟ್ಟಲು ಯಾವುದಾದರೂ ವಿಶೇಷ ಯೋಜನೆಯನ್ನು ಸರ್ಕಾರ ಹಮ್ಮಿಕೊಂಡಿದೆಯೇ?

ಆ) ಹಾಗಿದ್ದಲ್ಲಿ ಅದರ ವಿವರಗಳೇನು?

ಇ) ರಾಜ್ಯದಲ್ಲಿ ಖಾಲಿಯಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಕ್ರಿ.ಶ. 2000 ದ ವೇಳೆಗೆ ಪ್ರತಿ ತರಗತಿಗೊಂದರಂತೆ ಒಂದು ಕೊಠಡಿ ಮತ್ತು ಒಬ್ಬ ಶಿಕ್ಷಕನನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಅದರಂತೆ 8ನೇ ಪಂಚವಾರ್ಷಿಕ ಯೋಜನೆಯ ಉಳಿದ ಅವಧಿಯಲ್ಲಿ ಪ್ರತಿ ವರ್ಷ 12000 ಶಾಲಾ ಕೊಠಡಿಗಳನ್ನು ನಿರ್ಮಿಸುವ ಯೋಜನೆಯನ್ನು ಹಮ್ಮಿಕೊಂಡಿದೆ.

ಘಟಕ ವೆಚ್ಚವನ್ನು ಕಪ್ಪು ಮಣ್ಣಿನ ಪ್ರದೇಶಗಳಿಗೆ 45,000-00 ರೂ.ಗಳೆಂದು ಮತ್ತು ಉಳಿದೆಲ್ಲಾ ಪ್ರದೇಶಗಳಿಗೆ 40,000-00 ರೂ.ಗಳೆಂದು ನಿಗಧಿಪಡಿಸಿದೆ.

ಇದರಲ್ಲಿ ಶಿಕ್ಷಣ ಇಲಾಖೆಯು ಒದಗಿಸುವ ಮೊತ್ತ ಪ್ರತಿ ಕೊಠಡಿಗೆ 25,000 ರೂ.ಗಳು. ಉಳಿದ ಮೊತ್ತವನ್ನು ಆಯಾ ಜಿಲಲಾ ಪಂಚಾಯತಗಳು, ಜೆ. ಆರ್. ವೈ. ಹಾಗೂ ಸಾರ್ವಜನಿಕ ವಂತಿಕೆ ಮೂಲಕ ಒದಗಿಸಿಕೊಳ್ಳಬೇಕು.

ಈ ಆದೇಶಕ್ಕಾಗಿ 1993-94ನೇ ಸಾಲಿನಲ್ಲಿ ರಾಜ್ಯ ವಲಯದಲ್ಲಿ ರೂ. 1610-00 ಲಕ್ಷಗಳನ್ನು ಜಿಲ್ಲಾ ವಲಯದಲ್ಲಿ ರೂ. 873.00 ಲಕ್ಷಗಳನ್ನು ಒದಗಿಸಿದೆ.

ಇ) ದಿನಾಂಕ 31-5-91ಕ್ಕೆ ಅನ್ವಯವಾಗುವಂತೆ ಒಟ್ಟು, 934 ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಈ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ನಡೆಯುತ್ತಿದೆ.

ಶ್ರೀ ಎಂ.ಎಸ್. ಆತ್ಮಾನಂದ : ಸನ್ಮಾನ್ಯ ಅಧ್ಯಕ್ಷರೇ, ಪ್ರತಿ ವರ್ಷ ಸುಮಾರು 12 ಸಾವಿರ ಶಾಲಾ ಕೊಠಡಿಗಳನ್ನು ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದೇವೆಂದು ತಿಳಿಸಿದ್ದೀರಿ. ಪ್ರಸಕ್ತ ಸಾಲಿನಲ್ಲಿ ಎಷ್ಟು ಕಟ್ಟಡಗಳನ್ನು ನಿರ್ಮಾಣ ಮಾಡಲಿಕ್ಕೆ ಸರ್ಕಾರ ಕಾರ್ಯಕ್ರಮ ಕೈಗೊಂಡಿದೆ ಮತ್ತು ಘಟಕ ವೆಚ್ಚ 45 ಸಾವಿರ ದಿಂದ 40 ಸಾವಿರ, ಕ್ರಮವಾಗಿ ಬಯಲು ಸೀಮೆ, ಕಪ್ಪು ಮಣ್ಣು ಪ್ರದೇಶದಲ್ಲಿ ನಿಗಧಿ ಮಾಡಿದ್ದೇವೆಂದು ಹೇಳಿದ್ದೀರಿ. ಪ್ರಸಕ್ತ ನಿರ್ಮಾಣದ ವೆಚ್ಚ ಹೆಚ್ಚಿರುವಾಗ ಈ ಘಟಕದ ವೆಚ್ಚ ಹೆಚ್ಚು ಮಾಡತಕ್ಕಂಥಾದ್ದು ಸೂಕ್ತ ಅಲ್ಲವೇ ಎನ್ನುವ ಮಾತನ್ನು ಕೇಳುತ್ತಾ ಸುಮಾರು 18 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರು ಕಾಲಿಡತಕ್ಕಂಥದ್ದರಲ್ಲಿ ಜನರಲ್ ಕ್ಯಾಟಗರಿಗೆ ಎಷ್ಟು ಬರುತ್ತದೆ ಮತ್ತು ಸ್ಪೆಷಲ್ ಕ್ಯಾಟಗರಿಗೆ ಎಷ್ಟು ಬರುತ್ತದೆ ಎಂಬುದನ್ನು ತಿಳಿಸಬೇಕು. ಅನೇಕ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ಹುದ್ದೆಗಳು ಕೂಡ ಅನೇಕ ವರ್ಷಗಳಿಂದ ಭರ್ತಿ ಮಾಡದೆ ಖಾಲಿ ಉಳಿದಿವೆ. ಇದನ್ನು ಯಾವಾಗ ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಂದು ಕೇಳಬಯಸುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : ಮಾನ್ಯ ಅಧ್ಯಕ್ಷರೇ, 93-94ನೇ ಇಸವಿಗೆ 16-10 ಕೋಟಿ ಪರ್ಮಿಷನ್ ಇದೆ. ಅದಲ್ಲದೆ ಜಿಲ್ಲಾಪರಿಷತ್ತಿನಿಂದ 8.75 ಕೋಟಿ ಸಹ ಬರಬೇಕಾಗಿತ್ತು. ಈಗ ನಮಗೆ ಬಿಡುಗಡೆ ಆಗಿರುವುದು 90 ಕೋಟಿ ಮಾತ್ರ. 709 ಕಟ್ಟಡಗಳು ಈಗಾಗಲೇ ಪೂರ್ಣ ಆಗಿವೆ. ಬೆಳಗಾಂ ಮತ್ತು ಕಾರವಾರ ಜಿಲ್ಲೆಗಳಲ್ಲಿ ಈ ಪ್ರೋಗ್ರೆಸ್ ಬಹಳ ಚೆನ್ನಾಗಿ ಇದೆ ಎಂದು ನಮಗೆ ವರದಿ ಬಂದಿದೆ. ಇನ್ನು 7607 ಕಟ್ಟಡಗಳು ವಿವಿಧ ಹಂತದಲ್ಲಿವೆ. 13,684 ನಾವು ಪ್ರಾರಂಭಿಸಬೇಕಾಗುತ್ತದೆ. ಇನ್ನು ಶಾಲಾ ಶಿಕ್ಷಕರ ಬಗ್ಗೆ ತಾವು ಏನು ಪ್ರಶ್ನೆ ಹಾಕಿದ್ದೀರಿ ನಾನು ಈಗಾಗಲೇ ಅದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ವೇಳೆಗೆ ನಾವು ಈ ಎಲ್ಲಾ ಶಿಕ್ಷಕರ ಹುದ್ದೆಗಳನ್ನು ತುಂಬುತ್ತೇವೆ. ಮತ್ತು ಮತ್ತೊಂದು ತಾವು ಕೇಳಿರತಕ್ಕಂತಹ ಪ್ರಶ್ನೆ ದೈಹಿಕ ಶಿಕ್ಷಕರ ಹುದ್ದೆಯನ್ನು ಯಾವಾಗ ಭರ್ತಿ ಮಾಡುತ್ತೀರಿ ಎಂದು ನಾನು ಮೇಲಿನ ಮನೆಯಲ್ಲಿ ಈಗಾಗಲೇ ಹೇಳಿಕೆಯನ್ನು ಕೊಟ್ಟಿದ್ದೇನೆ. ನಮ್ಮ ರಾಜ್ಯದಲ್ಲಿ ನಾವು ಏನು ಹೈಯರ್ ಪ್ರೈಮರಿ ಶಾಲೆಗಳಲ್ಲಿ 7 ಶಿಕ್ಷಕರು ಇರುವ ಕಡೆಗೆ ಒಂದು ದೈಹಿಕ ಶಿಕ್ಷಕ ಹುದ್ದೆಯನ್ನು ಕನ್ವರ್ಟ್ ಮಾಡಿ, ಒಂದು ದೈಹಿಕ ಶಿಕ್ಷಕರನ್ನು ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಅದರ ಪ್ರಕಾರ ಸುಮಾರು 1600 ರಷ್ಟು ಹುದ್ದೆಗಳನ್ನು ಈ ಜೂನ್ ಮೊದಲನೇ ವಾರದಲ್ಲಿ ನಾವು ಭರ್ತಿ ಮಾಡುತ್ತೇವೆಂದು ಹೇಳುವುದಕ್ಕೆ ಇಚ್ಛೆ

ಶ್ರೀ ಎಸ್. ಆತ್ಮಾನಂದ: ಅಧ್ಯಕ್ಷರೇ, ಈಗ ಪ್ರಾರಂಭ ಆಗಿರತಕ್ಕಂಥ ಕೊಠಡಿಗಳು ಬರತಕ್ಕಂಥ ಆರ್ಥಿಕ ವರ್ಷ ಅಂದರೆ ಮಾರ್ಚಿ 31ರ ಒಳಗೆ ಪೂರ್ತಿಗೊಳ್ಳಬೇಕಾಗುತ್ತದೆ. ಆದರೂ ಕೂಡ ಅನೇಕ ಕೊಠಡಿಗಳು ಇನ್ನೂ ನಿರ್ಮಾಣದ ಹಂತದಲ್ಲಿವೆ. ಅಕಸ್ಮಾತ್ 31-3-94ರ ಒಳಗೆ ಅದು ಪೂರ್ತಿ ಆಗದಿದ್ದರೆ ಅದಕ್ಕೆ ಸರ್ಕಾರ ಏನಾದರೂ ವಿಶೇಷ ಕ್ರಮ ಕೈಗೊಳ್ಳುತ್ತದೆ? ಅದನ್ನು ಯಾವ ರೀತಿಯಲ್ಲಿ ಬಗೆಹರಿಸುತ್ತದೆ. ಎನ್ನತಕ್ಕಂಥದ್ದನ್ನು ಹೇಳಬೇಕು.

3.20 ಪಿ.ಎಂ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಈಗ ಉತ್ತರ ಕೊಟ್ಟಿರುವುದು ತಮಗೆ ಗೊತ್ತಿದೆ. ಇಪ್ಪತ್ತೈದು ಸಾವಿರ ರೂ.ಗಳು ಒಂದು ಕೊಠಡಿಗೆ ನಮ್ಮ ಇಲಾಖೆಯಿಂದ ಬಿಡುಗಡೆ ಮಾಡುತ್ತೇವೆ. ಮತ್ತು ಜಿಲ್ಲಾ ಪರಿಷತ್ತಿಗೂ ಸಹ ಹಣವನ್ನು ಕೊಡುತ್ತಿದೆ. ಮಿಕ್ಕ ಹಣವನ್ನು ವಂತಿಗೆಯಿಂದ ಲೋಕಲ್ ಕಾಂಟ್ರಿಬ್ಯೂಷನ್ನಿಂದ ತೆಗೆದುಕೊಂಡು ಕೊಠಡಿಯನ್ನು ಪೂರೈಸಬೇಕಾಗುತ್ತದೆ. ಆದರೆ ಕೆಲವಾರು ಕಡೆ ಹೆಚ್ಚು ಕೊಠಡಿಗಳು ಬಂದಿಲ್ಲ. ಇದಕ್ಕೆ ಕಾರಣವೇನೆಂದರೆ ಸ್ವಲ್ಪ ಪಬ್ಲಿಕ್ ಕಾಂಟ್ರಿಬ್ಯೂಷನ್ ಹೆಚ್ಚಿನ ರೀತಿಯಲ್ಲಿ ಬಂದಿರುವುದಿಲ್ಲ. ಅದು ಹೆಚ್ಚಿನ ರೀತಿಯಲ್ಲಿ ಬಂದರೆ ಈ ಕೊಠಡಿಗಳನ್ನು ಪೂರೈಸಲು ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ಮಾನ್ಯ ಶಾಸಕರುಗಳು ಹೆಚ್ಚಿನ ಗಮನವನ್ನು ಕೊಟ್ಟು ಸಹಕಾರ ಮಾಡುತ್ತಾರೆ ಎಂದು ನಂಬಿದ್ದೇನೆ.

ಬಿಜಾಪುರ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ

338 - ಶ್ರೀ ಮನೋಹರ, ಯು. ಐನಾಪುರ (ಬಳ್ಳೊಳ್ಳಿ): ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ರಾಜ್ಯದಲ್ಲಿ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ?

ಆ) ಅವುಗಳಲ್ಲಿ ಬಿಜಾಪುರ ಜಿಲ್ಲೆಗೆ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು?

(ತಾಲ್ಲೂಕುವಾರು ಮತ್ತು ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು?

ಇ) ಜಿಲ್ಲೆಯಲ್ಲೇ ತಾರತಮ್ಯದ ಕಾರಣ ನೀಡುವುದು.

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಒಟ್ಟು 82 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿದೆ ಹಾಗೂ 8 ಪ್ರಾಥಮಿಕ ಆರೋಗ್ಯ ಘಟಕಗಳನ್ನು, ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲಾಗಿದೆ.

ಆ) ಮೇಲಿನ ಸರ್ಕಾರದ ಆದೇಶದಲ್ಲಿ ಬಿಜಾಪುರ ಜಿಲ್ಲೆಯ ತಾಲ್ಲೂಕು ಮತ್ತು ಮತ ಕ್ಷೇತ್ರಗಳ ಅನುಸಾರ ಮಂಜೂರು ಮಾಡಿದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿವರ ಕೆಳಗಿನಂತಿದೆ.

ಕ್ರಮ *ಸಂಖ್ಯೆ*	ತಾಲ್ಲೂಕು	ಸ್ಥಳ	ಮತಕ್ಷೇತ್ರ	ಸ್ಥಳ
1.	ಬಿಳಗಿ	ಕುಂದರಗಿ	ಬಿಳಗಿ	ಕುಂದರಗಿ
2.	ಬಿಜಾಪುರ	ಕನಮಡಿ	ಬಿಜಾಪುರ	ಕನಮಡಿ
3.	ಬಿಜಾಪುರ	ಕಾಖಂಡಕಿ	ಬಿಜಾಪುರ	ಕಾಖಂಡಕಿ
4.	ಬಿ. ಬಾಗೇವಾಡಿ	ಯಳವಾರ	ಬಿ. ಬಾಗೇವಾಡಿ	ಯಳವಾರ

5.	ಬಿ. ಬಾಗೇವಾಡಿ	ಸಾಸನೂರು	ಹೂವಿನ ಹಿಪ್ಪರಗಿ	ಸಾಸನೂರು
6.	ಜಮಖಂಡಿ	ಚಿಮ್ಮಡ	ಜಮಖಂಡಿ	ಚಿಮ್ಮಡ.
7.	ಬಿ. ಬಾಗೇವಾಡಿ	ಹೂವಿನ ಹಿಪ್ಪರಗಿ	ಹೂವಿನ ಹಿಪ್ಪರಗಿ	ಹೂವಿನ ಹಿಪ್ಪರಗಿ.
8.	ಸಿಂಧಗಿ	ಮಲಘಾಣ	ಸಿಂಧಗಿ	ಮಲಘಾಣ
9.	ಮುಧೋಳ	ಉತ್ತೂರು	ಮುಧೋಳ	ಉತ್ತೂರು
10.	ಇಂಡಿ	ಬಿ.ಕೆ.ಲೋಣಿ	ಇಂಡಿ	ಬಿ.ಕೆ.ಲೋಣಿ
11.	ಹುನಗುಂದ್	ಹಾವರಗಿ	ಹುನಗುಂದ್	ಹಾವರಗಿ

ಇ) ಅವಶ್ಯಕತೆಗನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿರುವುದರಿಂದ ತಾರತಮ್ಯದ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಮನೋಹರ ಯು. ಐನಾಪುರ : ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ಹನ್ನೊಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ. ಸಚಿವರು, ತಾಲ್ಲೂಕುವಾರು ಮತ್ತು ಕ್ಷೇತ್ರವಾರು ವಿವರಗಳನ್ನು ಕೊಟ್ಟಿದ್ದಾರೆ. ಆದರೆ ಮತಕ್ಷೇತ್ರಗಳ ವಿವರ ಸರಿಯಾಗಿಲ್ಲ ಎಂದು ಅನ್ನಿಸುತ್ತದೆ. ನನ್ನ ಮತಕ್ಷೇತ್ರ ಬಳ್ಳೊಳ್ಳಿ, ತಾಲ್ಲೂಕು ಇಂಡಿ ಅಲ್ಲಿ ಸಚಿವರು ಬಿ.ಕೆ. ಲೋಣಿದಲ್ಲಿ ಮಂಜೂರು ಮಾಡಿದ್ದಾರೆ. ಅದಕ್ಕೆ ಧನ್ಯವಾದಗಳು. ಈ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ.

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) : ಬೇಗ ಪ್ರಾರಂಭ ಮಾಡುತ್ತೇನೆ.

ಶ್ರೀ ಮನೋಹರ ಯು. ಐನಾಪುರ : ನಿರ್ದಿಷ್ಟವಾಗಿ ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ಹೇಳುತ್ತೀರಾ? ಏಕೆಂದರೆ ಬಳ್ಳೊಳ್ಳಿ ಕ್ಷೇತ್ರದಲ್ಲಿ ಸೆಪ್ಟೆಂಬರ್ 30 ರಂದು ಆದ ಭೂಕಂಪದಿಂದ 30-40 ಹಳ್ಳಿಗಳು ನಾಶವಾಗಿವೆ. ಸಾಕಷ್ಟು ತೊಂದರೆ ನಮ್ಮ ಮತಕ್ಷೇತ್ರದವರಿಗೆ ಆಗಿದೆ. ಅದಕ್ಕೋಸ್ಕರ ಸ್ಪೆಷಲ್ ಕನ್ಸಿಡರೇಷನ್ ಕೊಟ್ಟು 1994-95ರಲ್ಲಿ ಮೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳಾದ ಅಂಜೂಟಿಕಿ, ಬಸವಣಕಿ ಮತ್ತು ಲಚ, ಇವುಗಳಿಗೆ ಮಂಜೂರು ಮಾಡಲು ಆರೋಗ್ಯ ಸಚಿವರು ಕ್ರಮ ಕೈಗೊಳುತ್ತಾರೆಯೇ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) : ಮಾನ್ಯ ಸದಸ್ಯರ ವಿನಂತಿಯನ್ನು ಪರಿಶೀಲಿಸಲಾಗುವುದು.

ಶ್ರೀ ಸಿ.ಎಸ್. ನಾಡಗೌಡ : ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಕೊಟ್ಟಿರುವ ಮಾಹಿತಿ ತಪ್ಪಾಗಿದೆ. ಯಾವ ಮತಕ್ಷೇತ್ರಕ್ಕೆ ಸೇರಿದೆ ಎಂಬುದರಲ್ಲಿ ತಪ್ಪಾಗಿದೆ. ತಮ್ಮ ಸ್ವಂತ ಕ್ಷೇತ್ರವಾದ ಯಳವಾರ, ಬಸವನ ಬಾಗೇವಾಡಿ ಕ್ಷೇತ್ರದಲ್ಲಿ ಬರುತ್ತದೆ ಎಂದು ಮಂತ್ರಿಗಳು ತಿಳಿಸಿದ್ದಾರೆ. ಇಲ್ಲಿ ತಮ್ಮ ಕ್ಷೇತ್ರಕ್ಕೆ ಮೂರು ಪಿ.ಎಚ್.ಇ.ಗಳನ್ನು ತೆಗೆದುಕೊಂಡು ಮುದ್ದೇಬಿಹಾಳದ ಪ್ರಪೋಸಲನ್ನು ರಿಜಕ್ಟ್ ಮಾಡಿದ್ದಾರೆ. ಯಾವ ಕಾರಣದಿಂದ ಇದನ್ನು ಮಾಡಿದ್ದಾರೆ ಎಂದು ಕೇಳುತ್ತಿದ್ದೇನೆ? ಅಧಿಕಾರಿಗಳು ಬೇಕಾದದ್ದನ್ನು ಮಾಡಬಹುದು ಎಂಬ ಅರ್ಥ ಇದರಲ್ಲಿ ಬರುತ್ತದೆ. ಇದರ ಬಗ್ಗೆ ಈ ಸದನದಲ್ಲಿ ಈ ವಿವರಗಳನ್ನು ಕೇಳುವ ಹಕ್ಕು ನನಗೆ ಇದೆ.

ಅಧ್ಯಕ್ಷರು : ತಾವು ಈ ವಿಚಾರವನ್ನು ಬೇರೆ ರೂಪದಲ್ಲಿ ಪ್ರಸ್ತಾವನೆ ಮಾಡಿ.

ಶ್ರೀ ಸಿ.ಎಸ್. ನಾಡಗೌಡ : ಇವುಗಳ ಬಗ್ಗೆ ಕೇಳಲು ಸದಸ್ಯರಿಗೆ ಹಕ್ಕಿದೆ.

ಅಧ್ಯಕ್ಷರು : ನಾನು ಆಗಲೇ ಹೇಳಿದ್ದೇನೆ. ತಾವು ಬೇರೆ ರೂಪದಲ್ಲಿ ಪ್ರಸ್ತಾವನೆಯನ್ನು ತೆಗೆದುಕೊಂಡು ಬನ್ನಿ.

ಸಂಪಂಗಿರಾಮನಗರದಲ್ಲಿರುವ ಸರ್ಕಾರಿ ಪ್ರಾಥಮಿಕ ಮಾದರಿಶಾಲೆಯಲ್ಲಿರುವ ಆಳವಾದ ಬಾವಿ

166 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಾಜಿನಗರ ಕ್ಷೇತ್ರದ ಸಂಪಂಗಿರಾಮನಗರ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ಬಳಿ ಒಂದು ದೊಡ್ಡ ಮತ್ತು ಆಳವಾದ ಬಾವಿ (ಕಲ್ಯಾಣಿ)ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕಲ್ಯಾಣಿ ಮಳೆ ನೀರಿನಿಂದ ತುಂಬಿ ನಿಂತಿದ್ದು, ಶಾಲಾ ಮಕ್ಕಳ ಜೀವನಕ್ಕೆ ಹಾನಿಕರವಾಗಿರುವುದು ಮತ್ತು ಒಂದು ಮಗು ಅದರಲ್ಲಿ ಮುಳುಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸದರಿ ಕೋರಿಕೆಯನ್ನು ಅನೇಕ ಸಲ ಸದನದಲ್ಲಿ ಪ್ರಸ್ತಾಪಿಸಿದ್ದರೂ ಸಹ ಬೇಡವಾದ ಈ ಬಾವಿಯನ್ನು ಮುಚ್ಚಿಸದೆ ಸರ್ಕಾರವು ಉದಾಸೀನದಿಂದ ಇರಲು ಕಾರಣವೇನು?

ಈ) ಕೊನೇ ಪಕ್ಷ ಈಗಲಾದರೂ ಸರ್ಕಾರ ತಡಮಾಡದೇ ಕ್ರಮ ಕೈಗೊಳ್ಳುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಹೌದು

ಇ) ಈ ಬಾವಿಯನ್ನು ಮುಚ್ಚಲು 1989ನೇ ವರ್ಷದಲ್ಲಿಯೇ ಕಾರ್ಯಪಾಲಕ ಅಭಿಯಂತರು ವಿವಿದೋದ್ದೇಶ ತಾಂತ್ರಿಕ ವಿಭಾಗ, ಬೆಂಗಳೂರು ಇವರಿಗೆ ಬರೆಯಲಾಗಿದೆ.

ಈ) ಅನುದಾನ ಬಿಡುಗಡೆಯಾದ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರ ಹೊಸದೇನೂ ಅಲ್ಲ, ಹಿಂದೆಯೂ ನಾನು ಇಲ್ಲಿ ನಾಲ್ಕು ವರ್ಷಗಳಿಂದ ಸತತವಾಗಿ ಪ್ರಯತ್ನ ಮಾಡುತ್ತಿದ್ದೇನೆ. ಈ ದೆಸೆಯಲ್ಲಿ ಪ್ರತಿಯೊಬ್ಬ ಅಧ್ಯಕ್ಷರು ಆಶ್ವಾಸನೆ ಕೊಟ್ಟರು. ಪ್ರತಿಯೊಬ್ಬ ಮಂತ್ರಿಗಳೂ ಆಶ್ವಾಸನೆಯನ್ನು ಕೊಟ್ಟರು. ಅದೇ ತರಹ ಉತ್ತರ ಈಗಲೂ ಬಂದಿದೆ. ಅಲ್ಲಿ ಬಡಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಆ ಬಾವಿ ಬಿದ್ದು ಮಕ್ಕಳು ಸಾಯುವ ಪರಿಸ್ಥಿತಿ ಇದೆ. ಒಂದು ಮಗು ಅದರಲ್ಲಿ ಮುಳುಗಿ ಸತ್ತುಹೋಯಿತು. ಇದನ್ನೆಲ್ಲಾ ಹೇಳಿದಮೇಲೂ ಸಹ ಸ್ವಲ್ಪವು ಕರುಣೆ ಇಲ್ಲವೇ? ಅಧಿಕಾರಿಗಳೂ ಕೂಡ ಇದನ್ನು ಗಮನಿಸಿಲ್ಲ. ಆ ಶಾಲೆಗೆ ಸಂಬಂಧಪಟ್ಟ ಹಾಗೆ ಒಂದು ಕಟ್ಟಡ ಇದೆ. ಅದರಲ್ಲಿ ಬಾವಿ ಅಂದರೆ ಕಲ್ಯಾಣಿ ಎಂದು ಏನು ಹೇಳುತ್ತೇವೆ ಅದು ಇದೆ. ಇದು ಬಹಳ ಪುರಾತನಕಾಲದ್ದು. ಅದನ್ನು ಮುಚ್ಚಬೇಕು. ಇಲ್ಲ ಸರಿಪಡಿಸಿ ನೀರು ಹರಿದುಹೋಗುವಂತೆ ಮಾಡಬೇಕು. ಈಗ ಏನು ಉತ್ತರ ಕೊಟ್ಟಿದ್ದೀರೆಂದರೆ ಈ ಬಾವಿಯನ್ನು ಮುಚ್ಚಲು 1989ನೇ ವರ್ಷದಲ್ಲಿಯೇ ಕಾರ್ಯಪಾಲಕ ಅಭಿಯಂತರು, ವಿವಿದೋದ್ದೇಶ ತಾಂತ್ರಿಕ ವಿಭಾಗ, ಬೆಂಗಳೂರು ಇವರಿಗೆ ಬರೆಯಲಾಗಿದೆ ಎಂದು ಉತ್ತರವನ್ನು ಬರೆದುಬಿಟ್ಟರೆ ಆಗಿಹೋಯಿತೇ?

ಅಧ್ಯಕ್ಷರು : ತಮಗೆ ಏನು ಆಗ ಬೇಕು ಎಂಬುದನ್ನು ಹೇಳಿ?

ಶ್ರೀ ಎ.ಕೆ. ಅನಂತಕೃಷ್ಣ: ನಮ್ಮಲ್ಲಿ ಒಂದು ಸರ್ಕಾರ ಇದೆಯೇ? ಆಡಳಿತ ಇದೆಯೇ? ಒಂದು ಉಸ್ತುವಾರಿ ನಡೆಯುತ್ತಿದೆಯೇ? ಮಕ್ಕಳ ಪ್ರಾಣ ಹೋಗುತ್ತಿದೆ. ಇಂತಹ ಸಂದರ್ಭದಲ್ಲಿ ಬರೆದಿದ್ದೇವೆ ಎಂದರೆ ಏನು ಅರ್ಥ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಈ ಪ್ರಶ್ನೆಯನ್ನು ಮಾನ್ಯ ಸದಸ್ಯರು ನಾಲ್ಕು ವರ್ಷಗಳಿಂದ ಎತ್ತುತ್ತಿರುವುದಾಗಿ ಎಂದು ಹೇಳಿದ್ದಾರೆ. ಈ ವೇಳೆಯಲ್ಲಿ ಈ ಕೆಲಸವಾಗಬೇಕಾಗಿತ್ತು ಎಂದು ನನಗೂ ಅನಿಸುತ್ತದೆ. ಏತಕ್ಕೆಂದರೆ ಒಂದು ಮಗು ಆ ಹೊಂಡದಲ್ಲಿ ಬಿದ್ದು ಪ್ರಾಣ ಕಳೆದುಕೊಂಡಿದೆ ಎಂಬುದನ್ನೂ ಸಹ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈಗಾಗಲೇ ಇದು ಆಗಬೇಕಾಗಿತ್ತು. ನೆಕಸ್ಟ್ ಅಕಾಡಮಿಕ್ ಇಯರ್ ಜೂನ್ ಒಂದರ ಒಳಗೆ, ಒಂದು ಒಂದೂವರೆ ಲಕ್ಷ ರೂ. ಏನು ಬೇಕಾಗುತ್ತದೆ, ಆ ಹೊಂಡವನ್ನು ಮುಚ್ಚಲು,ಅದನ್ನು ನಮ್ಮ ಇಲಾಖೆಯಿಂದಲೇ ಬಿಡುಗಡೆ ಮಾಡಿ ಈ ರೀತಿ ಅಪಘಾತಗಳು ಆಗದಂತೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳಿಲಿಚ್ಚಿಸುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ: ಅವರ ಉತ್ತರ ನಾನು ಒಪ್ಪಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ಒಂದು ಲಕ್ಷ ಎರಡು ಲಕ್ಷ ಎಂದು ಹೇಳುತ್ತಲೇ ಇದ್ದಾರೆ. ನಾಲ್ಕು ವರ್ಷಗಳಿಂದ ಅವರನ್ನು ಕೇಳಿಕೊಳ್ಳುತ್ತಿದ್ದೇನೆ ಇದುವರೆಗೂ ನನಗೆ ಸರಿಯಾದ ಉತ್ತರ ಬಂದಿಲ್ಲ. ಈ ಕ್ಷೇತ್ರದಲ್ಲಿ ನಾನು ತಲೆಎತ್ತಿ ತಿರುಗಾಡಲು ಆಗುತ್ತಿಲ್ಲ ಸಾಧಾರಣವಾದ ಉತ್ತರ ನನಗೆ ಹಿಡಿಸುವುದಿಲ್ಲ. ತಾವುಗಳು ದಯವಿಟ್ಟು ಅದನ್ನು ಸರಿಪಡಿಸಬೇಕು ನೀರು ಹರಿದುಹೋಗುವ ಹಾಗೆ ಮಾಡಿ ಅದರ ಮೇಲೆ ಚಾವಣಿ ತರಹ ಹಾಕಬೇಕು. ಈ ರೀತಿಯ ಯೋಜನೆ ಏನಾದರೂ ನಿಮ್ಮ ಸರ್ಕಾರದಲ್ಲಿ ಮಾಡಿದ್ದೀರಾ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ನಾನು ಹೇಳುವುದನ್ನು ಹೇಳಿದ್ದೇನೆ. ಇದಕ್ಕಿಂತ ಹೆಚ್ಚು ಹೇಳಲಿಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಮಹಾದೇವ್: ತಾವುಗಳು ಸದಸ್ಯರ ಬಗ್ಗೆ ಮಾತನಾಡುವಾಗ ಸೌಜನ್ಯದಿಂದ ಗೌರವಯುತವಾದ ಉತ್ತರ ಕೊಡಬೇಕು, ಏನು ನಿಮ್ಮ ಮನೆಯ ಸ್ವತ್ತು ಎಂದು ತಿಳಿದು ಕೊಂಡಿದ್ದೀರಾ? ಸಚಿವರು ಸಮಾಧಾನದಿಂದ ಉತ್ತರವನ್ನು ಕೊಡಬೇಕು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಈಗ ಈ ಕೆಲಸವನ್ನು ಇದುವರೆಗೂ ಮಾಡಿರಲಿಲ್ಲ ಮಾಡಬೇಕಾಗಿತ್ತು. ಇಷ್ಟರಲ್ಲೇ ಇದನ್ನು ಮಾಡಬೇಕಾಗಿತ್ತು. ನಾಲ್ಕು ವರ್ಷಗಳಿಂದ ಇದನ್ನು ಮುಂದೆ ಹಾಕಿದೆ, ಒಂದು ಮಗೂ ಸಹ ತನ್ನ ಪ್ರಾಣವನ್ನು ಕಳೆದುಕೊಂಡಿದೆ ಎಂಬ ವಿಷಯವನ್ನು ಸಹ ನನ್ನ ಗಮನಕ್ಕೆ ತಂದಿದ್ದಾರೆ. ಆದುದರಿಂದ ಜೂನ್ ಒಳಗಾಗಿ ಈ ಕೆಲಸವನ್ನು ನಮ್ಮ ಇಲಾಖೆಯಿಂದಲೆ ಹಣವನ್ನು ಬಿಡುಗಡೆ ಮಾಡಿ ಅದನ್ನು ಪೂರೈಸಿಕೊಡಲಾಗುವುದು.

ಮೂಡಿಗೆರೆಗೆ ವಿದ್ಯಾಪೀಠ ಮಂಜೂರಾತಿ

235 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆಗೆ ವಿದ್ಯಾಪೀಠ ಯಾವಾಗ ಮಂಜೂರಾಯಿತು?

ಆ) ಅದು ಯಾವ ಉದ್ದೇಶಕ್ಕಾಗಿ ಮಂಜೂರಾಯಿತು ಹಾಗೂ ಅದರ ಉದ್ದೇಶ ಈಡೇರಿದೆಯೇ?

ಇ) ಈ ವಿದ್ಯಾಪೀಠ ನಡೆಸಲು ಸರ್ಕಾರ ಒದಗಿಸಿರುವ ಹಣವೆಷ್ಟು?

ಶ್ರೀ ಪ್ರಭಾಕರ್. ಎಸ್. ರಾಣೆ. (ವಯಸ್ಕರ ಶಿಕ್ಷಣ ಸಚಿವರು):

ಅ) ಮೂಡಿಗೆರೆಗೆ ವಿದ್ಯಾಪೀಠ ಮಂಜೂರಾಗಿಲ್ಲ. ಆದರೆ ಸೋಮವಾರ ಪೇಟೆ ತಾಲ್ಲೂಕಿನ ವಿದ್ಯಾಪೀಠವನ್ನು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕು ಗೋಣಿ ಬೀಡು ಅಗ್ರಹಾರಕ್ಕೆ ವರ್ಗಾಯಿಸಲಾಗಿದೆ.

ಆ) ಗ್ರಾಮೀಣ ಯುವಜನತೆ ಸ್ವಾವಲಂಬಿಯಾಗಿ ಜೀವನ ನಡೆಸುವುದರ ಜೊತೆಗೆ ಸ್ಥಳೀಯ ಮುಖಂಡತ್ವ ವಹಿಸುವಂತಹ ತರಬೇತಿ ನೀಡುವ ಸಲುವಾಗಿ ಮಂಜೂರಾಗಿದ್ದು, ಅದರಂತೆ ಶಿಕ್ಷಣಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ.

ಇ) ಈ ವಿದ್ಯಾಪೀಠಕ್ಕೆ ಪ್ರತ್ಯೇಕವಾಗಿ ಹಣ ಒದಗಿಸಿರುವುದಿಲ್ಲ. ಆದರೆ ಸದರಿ ವಿದ್ಯಾಪೀಠವು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ವ್ಯಾಪ್ತಿಗೆ ಬರುವುದರಿಂದ, ಸಮಿತಿಗೆ ಒಟ್ಟಾರೆಯಾಗಿ ವಿದ್ಯಾಪೀಠಗಳ ತರಬೇತಿ ಹಾಗೂ ಸಿಬ್ಬಂದಿ ವರ್ಗಗಳ ವೇತನಕ್ಕಾಗಿ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ.

ಶ್ರೀಮತಿ ಮೋಟಮ್ಮ: ಸನ್ಮಾನ್ಯ ಅಧ್ಯಕ್ಷರೇ, ಮೂಡಿಗೆರೆಗೆ ವಿದ್ಯಾಪೀಠ ಯಾವಾಗ ಮಂಜೂರಾಯಿತು ಎಂದು ಕೇಳಿದ್ದರೆ, ಉತ್ತರದಲ್ಲಿ ಸುಮ್ಮನೆ ವರ್ಗಾಯಿಸಿದ್ದೇವೆ ಎಂದು ಹೇಳಿದ್ದಾರೆ ಮತ್ತು ಎಷ್ಟು ವಿದ್ಯಾರ್ಥಿಗಳು ಈ ವಿದ್ಯಾಪೀಠದಲ್ಲಿ ತರಬೇತಿ ಹೊಂದುತ್ತಿದ್ದಾರೆ ಹಾಗೂ ಈ ವಿದ್ಯಾಪೀಠಕ್ಕಾಗಿ ಎಷ್ಟು ಹಣವನ್ನು ಒದಗಿಸಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ಹೇಳಿಲ್ಲ. 30 ಎಕರೆ ಭೂಮಿ ಕೊಟ್ಟಿದ್ದಾರೆ. ಫೆನ್ಸ್ ಮಾಡಲಿಕ್ಕೆ ದುಡ್ಡಿಲ್ಲ. ಇದನ್ನು ಏನು ಮಾಡುತ್ತೀರಿ, ಎಷ್ಟು ಕೊಟ್ಟಿದ್ದೀರಿ, ಯಾವರೀತಿ ನಿಭಾಯಿಸುತ್ತೀರಿ ಎನ್ನುವುದರ ಬಗ್ಗೆ ಮಾಹಿತಿ ನೀಡಬೇಕು.

ಶ್ರೀ ಪ್ರಭಾಕರ ಎಸ್. ರಾಣೆ: ಮಾನ್ಯ ಅಧ್ಯಕ್ಷರೇ, 18-11-81ರಲ್ಲಿ ಸರ್ಕಾರ ರಾಜ್ಯದ ವಯಸ್ಕರ ಶಿಕ್ಷಣ ಸಮಿತಿಗೆ ನಾಲ್ಕು ವಿದ್ಯಾಪೀಠಗಳನ್ನು ಪ್ರಾರಂಭಿಸಲು ಆದೇಶ ನೀಡಿತ್ತು. ಅಇದರ ಪ್ರಕಾರ ಕೊಡಗು ಜಿಲ್ಲೆಯ ಸೋಮವಾರ ಪೇಟೆ ತಾಲ್ಲೂಕಿಗೆ ಒಂದು ವಿದ್ಯಾಪೀಠವನ್ನು ಮಂಜೂರು ಮಾಡಲಾಗಿತ್ತು. ಅಲ್ಲಿ ಜಮೀನು ಸಿಗಲಿಲ್ಲ ಎನ್ನುವ ಕಾರಣದಿಂದ ಅದೇ ವಿದ್ಯಾಪೀಠವನ್ನು ಮೂಡಿಗೆರೆಗೆ ಸ್ಥಳಾಂತರಿಸಲಾಯಿತು. ಅಲ್ಲಿ ಸ್ಥಳಾಂತರವಾದ ನಂತರ ಅಲ್ಲಿ ಅದಕ್ಕೆ ಸ್ವಂತ ಕಟ್ಟಡ ಇಲ್ಲ ಎಂದು ಹೇಳಿ ಅದನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದಾರೆ. ಅಲ್ಲಿ 30 ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ. ಅಧ್ಯಕ್ಷರೇ, ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಇದು ಅನುದಾನಕ್ಕೆ ಒಳಪಟ್ಟಂಥ ಒಂದು ಸಂಸ್ಥೆ. ಅದಕ್ಕೆ ನಾವು 93-94ನೇ ವರ್ಷದಲ್ಲಿ 50 ಲಕ್ಷ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ ಮತ್ತು ಹೆಚ್ಚುವರಿಯಾಗಿ 18 ಲಕ್ಷದ 50 ಸಾವಿರ ರೂಪಾಯಿಗಳನ್ನೂ ಸಹ ನಾವು ಬಿಡುಗಡೆ ಮಾಡಿದ್ದೇವೆ. ಪ್ರತಿಯೊಂದು ವಿದ್ಯಾಪೀಠಕ್ಕೂ ವೆಚ್ಚ ಮಾಡುವಂಥ ಜವಾಬ್ದಾರಿ ಅದು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಗೆ ಸೇರಿರುತ್ತದೆ. ಅದು ಅನುದಾನಕ್ಕೆ ಒಳಪಟ್ಟಿರುವುದರಿಂದ ಅಲ್ಲಿ ಅದು ತನ್ನ ಸ್ವಂತ ಮೂಲಗಳಿಂದಲೂ ಸಹ ಈ ಒಂದು ವಿದ್ಯಾಪೀಠಕ್ಕೆ ಹೆಚ್ಚಿನ ಸೌಕರ್ಯವನ್ನು ಒದಗಿಸಿಕೊಡಬಹುದು. ನಾನು ಇಲ್ಲಿ ಮಾನ್ಯ ಸದಸ್ಯರಿಗೆ ಕೇಳಿಕೊಳ್ಳುವುದಿಷ್ಟೆ. ಅವರು ಅಲ್ಲಿ ಮಲೆನಾಡು ಅಭಿವೃದ್ಧಿ ಫಂಡ್ನಿಂದ ಆ ಒಂದು ವಿದ್ಯಾಪೀಠಕ್ಕೆ ಬೇಕಾದಂಥ ಸೌಕರ್ಯಗಳನ್ನು ಕಲ್ಪಿಸಲಿಕ್ಕೆ ಹಣವನ್ನು ಬಿಡುಗಡೆ ಮಾಡಿದರೆ ಸಂಪೂರ್ಣ ವ್ಯವಸ್ಥೆಯನ್ನು ಮಾಡಲಿಕ್ಕೆ ನಮ್ಮ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶವನ್ನು ಕೊಡುತ್ತೇನೆ.

ಶ್ರೀಮತಿ ಮೋಟಮ್ಮ: ನಾನು ಕಟ್ಟಡವನ್ನು ಒದಗಿಸಿಕೊಡಬಹುದು. ಆದರೆ ಸಂಬಳ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ಆ ವಿದ್ಯಾಪೀಠದಲ್ಲಿ ಕೆಲಸ ಮಾಡುತ್ತಿರುವ ಪ್ರಿನ್ಸಿಪಾಲ್ರಿಗೆ, ಸಿಬ್ಬಂದಿಯವರಿಗೆ ಇನ್ನೂ ಸಂಬಳವನ್ನೇ ಕೊಟ್ಟಿಲ್ಲ. ಇದನ್ನು ನಾನು ಹೇಗೆ ಕೊಡುವುದಕ್ಕೆ ಬರುತ್ತದೆ?

ಶ್ರೀ ಪ್ರಭಾಕರ ಎಸ್. ರಾಣೆ: ಈಗಾಗಲೇ ಆ ಒಂದು ವಯಸ್ಕರ ಶಿಕ್ಷಣ ಸಮಿತಿಗೆ 50 ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದ್ದೇವೆ. ಅದರಲ್ಲಿ ಅವರು ತಮ್ಮ ಸಿಬ್ಬಂದಿಗೆ ಸಂಬಳ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಇನ್ನೂ ಹೆಚ್ಚು ಬೇಕು ಎಂದು ಹೇಳಿದಾಗ ಮತ್ತೆ ಹದಿನೆಂಟೂವರೆ ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಆದ್ದರಿಂದ ಅಲ್ಲಿ ಸಂಬಳ ಕೊಡುವ ಜವಾಬ್ದಾರಿ ಆ ಶಿಕ್ಷಣ ಸಂಸ್ಥೆಯದ್ದು. ಅನುದಾನವನ್ನು ಬಿಡುಗಡೆ ಮಾಡುವುದಷ್ಟೇ ಸರ್ಕಾರದ ಜವಾಬ್ದಾರಿ.

ಅಧ್ಯಕ್ಷರು: ಪ್ರಶ್ನೋತ್ತರ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬೆಂಗಳೂರು ನಗರದಲ್ಲಿರುವ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗಳು

299 - ಶ್ರೀ ಆರ್.ವಿ. ದೇವರಾಜ್ (ಚಾಮರಾಜ್): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿರುವ ಒಟ್ಟು ಆಂಗ್ಲ ಮಾಧ್ಯಮದ ಪ್ರೈಮರಿ ಶಾಲೆಗಳ ಸಂಖ್ಯೆ ಎಷ್ಟು?*

ಆ) *ಅವುಗಳ ಪೈಕಿ, ಎಷ್ಟು ಶಾಲೆಗಳು ಅನುದಾನ ಪಡೆಯುತ್ತಿದೆ. ಹಾಗೂ ಎಷ್ಟು ಶಾಲೆಗಳು ಅನುದಾನ ರಹಿತವಾಗಿರುತ್ತವೆ?*

ಇ) *ಎಷ್ಟು ಶಾಲೆಗಳಲ್ಲಿ ಕರ್ನಾಟಕ ಸರ್ಕಾರದ ಶಿಕ್ಷಣ ಪಠ್ಯ ಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ.*

ಈ) *1993-94ನೇ ಸಾಲಿನಲ್ಲಿ ಎಷ್ಟು ಆಂಗ್ಲ ಮಾಧ್ಯಮದ ಶಾಲೆಗಳಿಗೆ ಸರ್ಕಾರ ಅನುಮತಿ ನೀಡಿದೆ.*

ಉ) *ಆ ಶಾಲೆಗಳಲ್ಲಿ ಮಕ್ಕಳನ್ನು ಸೇರಿಸಿಕೊಳ್ಳಲು ದೊಡ್ಡ ಪ್ರಮಾಣದಲ್ಲಿ ವಂತಿಗೆ ತೆಗೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಊ) *ಹಾಗಿದ್ದಲ್ಲಿ, ಅದನ್ನು ನಿಲ್ಲಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) 560

ಆ) ಅನುದಾನಿತ ಶಾಲೆಗಳು 42
ಅನುದಾನರಹಿತ ಶಾಲೆಗಳು 518

ಇ) 528 ಶಾಲೆಗಳಲ್ಲಿ ಈ ಪಠ್ಯ ಕ್ರಮವನ್ನು ಅಳವಡಿಸಲಾಗಿದೆ.

ಈ) 14 ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡಲಾಗಿದೆ.

ಉ) ಇಲ್ಲ.

ಊ) ಈ ಬಗ್ಗೆ ನಿರ್ದಿಷ್ಟವಾದ ದೂರುಗಳು ಬಂದಲ್ಲಿ ಅಂತಹ ಶಾಲೆಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು.

ಪೂರ್ವ ಪ್ರಾಥಮಿಕ ಮಕ್ಕಳ ಪ್ರವೇಶ ಕುರಿತು

345 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯಸರ್ಕಾರವು ಪೂರ್ವ ಪ್ರಾಥಮಿಕ ಪಾಠಶಾಲೆ, ಶಿಶುವಿಹಾರ ಇನ್ನೂ ಮುಂತಾದ ಶಿಕ್ಷಣ ಸಂಸ್ಥೆಗಳಲ್ಲಿ ಪುಟ್ಟ ಮಕ್ಕಳಿಗೆ ಶಾಲೆಗೆ ಪ್ರವೇಶ ನೀಡುವ ಮೊದಲು ನಡೆಸುತ್ತಿರುವ ಸಂದರ್ಶನದ ಪದ್ಧತಿಯನ್ನು ತೊಡೆದು ಹಾಕಲು ತೀರ್ಮಾನಿಸಿರುವುದು ನಿಜವಲ್ಲವೇ?*

ಆ) *ಸರ್ಕಾರದ ಆ ನಿರ್ಧಾರ ಅನುದಾನ ಪಡೆಯದ ಶಾಲೆಗಳಿಗೆ ಅನ್ವಯಿಸುವುದೇ?*

ಇ) *ಹಾಗಿದ್ದಲ್ಲಿ ಆ ನಿಯಮವನ್ನು ಅಂತಹ ಶಾಲೆಗಳಿಗೂ ಅನ್ವಯಿಸುವಂತೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ?*

ಈ) *ಸರ್ಕಾರದ ಆ ನಿರ್ಧಾರ ಎಂತಹ ಶಿಕ್ಷಣ ಸಂಸ್ಥೆಗಳಿಗೆ ಅನ್ವಯಿಸುವುದು?*

ಉ) *ಒಂದು ವೇಳೆ ಅನುದಾನ ಪಡೆಯದ ಶಾಲೆಗಳು ಸರ್ಕಾರದ ಆ ನಿರ್ಧಾರವನ್ನು ಒಪ್ಪದೆ ಇದ್ದಲ್ಲಿ ಅಂತಹ ಶಾಲೆಗಳ ಮಾನ್ಯತೆಯನ್ನು ರದ್ದುಪಡಿಸುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ?*

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಹೌದು.

ಆ) ಹೌದು.

ಇ) ಉದ್ಭವಿಸುವುದಿಲ್ಲ.

ಈ) ಎಲ್ಲಾ ಶಿಕ್ಷಣ ಸಂಸ್ಥೆಗಳಿಗೂ ಅನ್ವಯವಾಗುವುದು.

ಉ) ಹೌದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಏಳನೇ ಪಟ್ಟಿಯಲ್ಲಿರುವ 32 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 380, 350, 365, 321 ಮತ್ತು 51 ಈ ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ 27 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಬೀದರ್‌ನಲ್ಲಿ ಡೈರಿ ಪ್ರಾರಂಭಿಸುವುದು

379 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೀದರ್ ಜಿಲ್ಲೆಯಲ್ಲಿ ಪ್ರತಿದಿನ ಉತ್ಪಾದನೆಯಾಗುತ್ತಿರುವ ಹಾಲಿನ ಪ್ರಮಾಣವೆಷ್ಟು?*

ಆ) *ನೆರೆಯ ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರತಿದಿನ ಉತ್ಪಾದನೆಯಾಗುತ್ತಿರುವ ಹಾಲಿನ ಪ್ರಮಾಣವೆಷ್ಟು?*

ಇ) ಬೀದರ್ ಜಿಲ್ಲೆಯಲ್ಲಿ ಗುಲ್ಬರ್ಗಾ ಜಿಲ್ಲೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಹಾಲಿನ ಉತ್ಪಾದನೆಯಾಗುತ್ತಿರುವುದು ನಿಜವಲ್ಲವೇ?

ಈ) ಈಗ ಬೀದರ್ನಲ್ಲಿ ಉತ್ಪಾದನೆಯಾಗುತ್ತಿರುವ ಹಾಲನ್ನು ಗುಲ್ಬರ್ಗಾಕ್ಕೆ ಸಾಗಿಸುವ ಪರಿಸ್ಥಿತಿ ಇರುವುರಿಂದ ಬೀದರ್ನಲ್ಲಿಯೇ ಡೈರಿಯನ್ನು ಸ್ಥಾಪಿಸುವುದರ ಮೂಲಕ ಹಾಲು ಒಕ್ಕೂಟವನ್ನು ಪ್ರಾರಂಭಿಸಲಾಗುವುದೇ?

ಉ) ಹಾಗಿದ್ದಲ್ಲಿ, ಆ ದಿಸೆಯಲ್ಲಿ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಊ) ಇದಕ್ಕಾಗಿ ಕಳೆದ 3 ವರ್ಷಗಳಿಂದ ಖರ್ಚು ಮಾಡಿರುವ ಹಣವೆಷ್ಟು?

ಋ) ಬೀದರ್ನಲ್ಲಿ ಡೈರಿಯ ಯೋಜನೆಯನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ೠ) ಅದಕ್ಕಾಗಿ ಎನ್.ಡಿ.ಡಿ.ಬಿ.(ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿ) ಯಿಂದ ನೆರವನ್ನೇನಾದರೂ ಕೇಳಲಾಗಿದೆಯೇ, ಅಥವಾ ಅಲ್ಲಿಂದ ನೆರವು ಬಂದಿದೆಯೇ?

ಎ) ಬಂದಿದ್ದಲ್ಲಿ, ಎಷ್ಟು ನೆರವು ಬಂದಿದೆ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ದಿನಂಪ್ರತಿ 225.09 (ಸಾವಿರ ಕೆ.ಜಿ.ಗಳಲ್ಲಿ)

ಆ) ದಿನಂಪ್ರತಿ 305.16 (ಸಾವಿರ ಕೆ.ಜಿ.ಗಳಲ್ಲಿ)

ಇ) ನಿಜವಲ್ಲ

ಈ) ಡೈರಿಯನ್ನು ಪ್ರಾರಂಭಿಸಲಾಗುವುದು. ಒಕ್ಕೂಟವನ್ನು ಸ್ಥಾಪಿಸುವ ಪ್ರಸ್ತಾವನೆ ಸದ್ಯಕ್ಕೆ ಇಲ್ಲ.

ಉ) ಬೀದರ್ನಲ್ಲಿ 30 ಸಾವಿರ ಲೀಟರ್ (ಎಲ್ಎಲ್ಪಿಡಿ) ಸಾಮರ್ಥ್ಯದ ಡೈರಿಯ ಕಟ್ಟಡದ ಕಾಮಗಾರಿ ಕೆಲಸಗಳು ದಿನಾಂಕ : 18-10-93ರಲ್ಲಿ ಪ್ರಾರಂಭಮಾಡಿದ್ದು ಕೆಲಸ ಪ್ರಗತಿಯಲ್ಲಿದೆ.

(ಊ) ---

ಋ) ಡಿಸೆಂಬರ್ 1994ರೊಳಗೆ.

ೠ) ಇಲ್ಲ.

ಎ) ಉದ್ಭವಿಸುವುದಿಲ್ಲ.

ಆಯುರ್ವೇದ ಔಷಧಿ ವಿತರಕರ ತರಬೇತಿ ಕೋರ್ಸಿನ ಅವಧಿಯನ್ನು ಎರಡು ವರ್ಷಕ್ಕೆ ಹೆಚ್ಚಿಸುವುದು

348 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ): ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಲೋಪತಿ ವೈದ್ಯಪದ್ಧತಿಯಲ್ಲಿ ಔಷಧಿ ವಿತರಕರ ತರಬೇತಿ ಅವಧಿ ಎರಡು ವರ್ಷಗಳಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಆಯುರ್ವೇದ ಔಷಧ ವಿತರಕರ ತರಬೇತಿ ಕೋರ್ಸಿನ ಅವಧಿಯನ್ನು 10 ತಿಂಗಳುಗಳಿಗೆ ನಿಗದಿಪಡಿಸಲು ಕಾರಣಗಳೇನು?

ಇ) ಕೇವಲ 10 ತಿಂಗಳು ಸರಿಯಾದ ರೀತಿಯಲ್ಲಿ ಈ ತರಬೇತಿಯನ್ನು ನೀಡುವುದು ಅಸಾಧ್ಯವಲ್ಲವೇ?

ಈ) ಆ ತರಬೇತಿ ಕೋರ್ಸಿನ ಅವಧಿಯನ್ನು ಎರಡು ವರ್ಷಕ್ಕೆ ಹೆಚ್ಚಿಸಬೇಕೆಂದು ಈಗಾಗಲೇ ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದು ನಿಜವಲ್ಲವೆ?

ಉ) 1948ನೇ ಇಸವಿಯ ಫಾರ್ಮಸಿ ಕಾಯ್ದೆ ಪ್ರಕಾರ ಔಷಧಿ ವಿತರಕರಿಗೆ ಎರಡು ವರ್ಷದ ತರಬೇತಿಯನ್ನು ನೀಡುವುದು ಅವಶ್ಯಕವಲ್ಲವೇ?

ಊ) ಹಾಗಿದ್ದಲ್ಲಿ ಮೇಲ್ಕಂಡ ತರಬೇತಿ ಕೋರ್ಸಿನ ಅವಧಿಯನ್ನು ಹೆಚ್ಚಿಸಿ ಈಗ ತರಬೇತಿಗಾಗಿ ಕರೆದಿರುವ ಅರ್ಜಿ ಆಹ್ವಾನವನ್ನು ರದ್ದುಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಆಯುರ್ವೇದ ಔಷಧಿ ವಿತರಕರ ತರಬೇತಿ ಕೋರ್ಸಿನ ಅವಧಿಯು ಈಗ 10 ತಿಂಗಳುಗಳಾಗಿದ್ದು, ಸರ್ಕಾರವು ನಿರ್ದಿಷ್ಟ ಪಡಿಸಿದ ಅವಧಿಯಂತೆ ತರಬೇತಿ ನೀಡಲಾಗುತ್ತಿದೆ.

ಇ) ಇಲ್ಲ.

ಈ) ನಿಜವಲ್ಲ.

ಉ) 1948ನೇ ಇಸವಿಯ ಫಾರ್ಮಸಿ ಕಾಯ್ದೆಯ ಅಲೋಪತಿ ವೈದ್ಯ ಪದ್ಧತಿಗೆ ಮಾತ್ರ ಅನ್ವಯಿಸುತ್ತದೆಯೇ ವಿನಃ ಆಯುರ್ವೇದ ಔಷಧಿ ವಿತರಕರ ತರಬೇತಿಗೆ ಅನ್ವಯಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ರಾಷ್ಟ್ರೀಯ ಸಾಲರೂಪದ ವಿದ್ಯಾರ್ಥಿವೇತನವನ್ನು ವಿದ್ಯಾರ್ಥಿಗಳಿಗೆ ನೀಡುವ ಕುರಿತು

315 - ಶ್ರೀ ಪಿ. ಬಸವರಾಜು (ಬ್ರಹ್ಮವರ್) : ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಸ್.ಎಸ್.ಎಲ್.ಸಿ. ನಂತರದ ಶಿಕ್ಷಣಕ್ಕೆ ಈ ಹಿಂದೆ ನೀಡುತ್ತಿದ್ದ ರಾಷ್ಟ್ರೀಯ ಸಾಲ ರೂಪದ ವಿದ್ಯಾರ್ಥಿ ವೇತನವನ್ನು ಪ್ರಸ್ತುತ ಸ್ಥಗಿತಗೊಳಿಸಿರುವುದು ನಿಜವೇ? ನಿಜವಾದಲ್ಲಿ ಅದಕ್ಕೆ ಕಾರಣವೇನು? (ವಿವರ ನೀಡುವುದು)

ಆ) ವಿದ್ಯಾರ್ಥಿ ವೇತನಕ್ಕೆ ಈ ಹಿಂದೆ ರಾಜ್ಯ ಸರ್ಕಾರ ಎಷ್ಟು ಪಾಲು ಹಣವನ್ನು ಕೇಂದ್ರದೊಂದಿಗೆ ಭರಿಸುತ್ತಿತ್ತು? (ವಿವರ ನೀಡುವುದು)

ಇ) ವಿದ್ಯಾರ್ಥಿ ವೇತನವು ಸ್ಥಗಿತಗೊಂಡಿರುವುದರಿಂದ ಬಡ ವಿದ್ಯಾರ್ಥಿಗಳ ವಿಧ್ಯಾಭ್ಯಾಸಕ್ಕೆ ತೊಂದರೆ ಉಂಟಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಈ) ಆದ್ದರಿಂದ ಪುನಃ ಇಂತಹ ವಿದ್ಯಾರ್ಥಿ ವೇತನಗಳನ್ನು ಅರ್ಹರಿಗೆ ನೀಡಲು ಪ್ರಾರಂಭಿಸಲಾಗುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು) :

ಅ)- ಹೌದು- ರಾಷ್ಟ್ರೀಯ ಸಾಲ ರೂಪದ ವಿದ್ಯಾರ್ಥಿ ವೇತನವು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರವು 1991-92ನೇ ಸಾಲಿನಿಂದ ಈ ಯೋಜನೆಯನ್ನು ಸ್ಥಗಿತಗೊಳಿಸಿದೆ. ಈ ಈ ಬಗ್ಗೆ ಹೆಚ್ಚಿನ ಮಾಹಿತಿ ರಾಜ್ಯಕ್ಕೆ ಬಂದಿರುವುದಿಲ್ಲ.

ಆ) ಇದು ಶೇಕಡಾ 100ರಷ್ಟು ಕೇಂದ್ರ ಸರ್ಕಾರದ ಯೋಜನೆ. ಇದಕ್ಕೆ ಪೂರ್ಣ ಹಣವನ್ನು ಕೇಂದ್ರ ಸರ್ಕಾರವೇ ಭರಿಸುತ್ತಿರುವುದು ರಾಜ್ಯ ಸರ್ಕಾರದ ಪಾಲಿನ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ತಿಳಿದಿದೆ.

ಈ) ಪ್ರಶ್ನೆ (ಅ)ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಪ್ರಾಥಮಿಕ ಆರೋಗ್ಯ ಕೇಂದ್ರಘಟಕಗಳಲ್ಲಿ ಸಿಬ್ಬಂದಿ ಭರ್ತಿಯ ಬಗ್ಗೆ

317 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಬ್ರಹ್ಮಾವರ ವಿಧಾನಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಪ್ರಾಥಮಿಕ ಆರೋಗ್ಯ ಘಟಕಗಳು ಯಾವ ಯಾವ ಸ್ಥಳದಲ್ಲಿ ಇರುವುದು.

ಆ) ಅವುಗಳಲ್ಲಿ ಯಾವ ಯಾವ ಸ್ಥಳಗಳಲ್ಲಿ ಮಂಜೂರಾದ ಸಿಬ್ಬಂದಿ ಮತ್ತು ವೈದ್ಯರ ಕೊರತೆ ಇರುವುದು ಹಾಗೂ ಅದಕ್ಕೆ ಕಾರಣಗಳೇನು? (ಎಲ್ಲಾ ಘಟಕಗಳ: ಕೇಂದ್ರಗಳ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ ಮತ್ತು ಈಗಿರುವ ಕೊರತೆಯ ವಿವರ ನೀಡುವುದು.

ಇ) ಸಾರ್ವಜನಿಕರಿಗೆ ಅವಶ್ಯವಾಗಿ ದೊರೆಯಬೇಕಾದ ಆರೋಗ್ಯ ಇಲಾಖೆಯ ಸೇವೆಯು ಪೂರ್ಣ ಪ್ರಮಾಣದಲ್ಲಿ ದೊರೆಯುವಂತಾಗಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಪ್ರಾಥಮಿಕ ಆರೋಗ್ಯ ಕೇಂದ್ರಗಳು : ಕೋಟ, ಬ್ರಹ್ಮಾವರ, ವೇತ್ರಿ, ಅವರ್ಸೆ, ಬಾರ್ಕೂರು, ಕೊಕ್ಕರ್ಣೆ, ಕೊಳಲಗಿರಿ, ಸಾಲಿಗ್ರಾಮ, ಸ್ಯಾಬರಕಟ್ಟೆ, ಕುಕ್ಕೆಹಳ್ಳಿ, ಸಾಸ್ತಾನ, ಪೆರ್ಡೂರು.

ಸಂಚಾರಿ ಆರೋಗ್ಯ ಘಟಕ:

ಶಿರೂರು (ಆರ್.ಡಿ.)

ಆ) ವಿವರಗಳನ್ನುಳ್ಳ ಪಟ್ಟಿ ಲಗತ್ತಿಸಲಾಗಿದೆ.

ಇ) ಕೈಗೊಳ್ಳಲಾಗುವುದು.

ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿನ ಆಸ್ಪತ್ರೆಗಳಲ್ಲಿ ಸಿಬ್ಬಂದಿ ವಿವರ

ಕ್ರ. ಸಂ.	ಸಂಸ್ಥೆಯ ಹೆಸರು	ಶುಶ್ರೂಷಕರು		ಫಾರ್ಮಾಸಿಸ್ಟ್		ಹಿರಿಯ ಆರೋಗ್ಯ ಸಹಾಯಕರು		ಕಿರಿಯ ಆರೋಗ್ಯ ಸಹಾಯಕರು		ಪ್ರ.ದ.ಸ.		ದ್ವಿ.ದ.ಸ.		ವೈದ್ಯರು		ಗ್ರೂಪ್ ಡಿ	
		S	W	S	W	S	W	S	W	S	W	S	W	S	W	S	W
ಪ್ರಾಥಮಿಕ ಆರೋಗ್ಯ ಕೇಂದ್ರಗಳು																	
1.	ಕೋಟ	-	-	1	1	1	1	2	-	1	1	1	-	2	2	3	2
2.	ಬ್ರಹ್ಮಾವರ	-	-	1	1	1	1	4	3	1	1	1	1	2	2	3	3
3.	ನೇತ್ರಿ	1	1	1	1	1	1	4	1	1	-	-	-	1	1	2	1
4.	ಆವರ್ಸೆ	1	1	1	1	-	1	4	-	1	-	-	-	1	-	3	3
5.	ಬಾರ್ಕೂರು	1	1	1	1	1	1	4	3	1	-	-	-	1	1	4	4
6.	ಕೊಕ್ಕರ್ಣೆ	1	1	1	1	1	1	5	-	1	1	-	-	1	1	2	2
7.	ಕೊಳಲಗಿರಿ	1	1	1	1	1	1	3	1	1	1	-	-	1	1	2	2
8.	ಸಾಲಿಗ್ರಾಮ	-	-	1	1	-	-	3	2	1	-	-	-	1	-	2	2
9.	ಸ್ಯಾಬರಕಟ್ಟೆ	-	-	1	1	-	1	1	1	1	-	-	-	1	1	2	1
10.	ಸಾಸ್ತಾನ	-	-	1	1	1	1	2	1	1	-	-	-	1	1	2	2
11.	ಕಕ್ಕೆಹಳ್ಳಿ	-	-	1	1	-	1	4	2	1	-	-	-	1	-	2	2
12.	ಸಂಚಾರಿ ಗಿರಿಜನ ಆರೋಗ್ಯ ಘಟಕ ಪೆರ್ಡೂರು	-	-	1	1	1	-	1	1	-	-	-	-	1	1	2	2
13.	ಶಿರೂರು (ಆರ್.ಡಿ)	-	-	-	-	-	-	-	-	-	-	-	-	1	1	-	-
	ಜುಮ್ಲಾ	5	5	12	8	8	10	37	15	11	4	2	1	15	12	29	26

ಕ್ರ.ಸಂ.	ವಾಹನ ಚಾಲಕರು		ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು		ಹಿರಿಯ ಮಹಿಳಾ ಆರೋಗ್ಯ ಸಹಾಯಕಿಯರು		ಕ್ಷೇತ್ರ ಆರೋಗ್ಯ ಸಹಾಯಕರು		ಕಿರಿಯ ಪ್ರಯೋಗಶಾಲಾ ತಂತ್ರಜ್ಞರು		ನೇತ್ರ ಸಹಾಯಕರು	
	S	W	S	W	S	W	S	W	S	W	S	W
1.	1	1	4	4	1	1	1	-	1	-	1	1
2.	1	1	7	7	1	1	1	-	1	-	1	-
3.	-	-	7	5	2	2	1	-	1	-	-	-
4.	1	1	7	6	1	1	-	-	1	-	-	-
5.	-	-	7	6	1	1	1	-	1	-	-	-
6.	-	-	5	5	1	1	1	-	1	-	-	-
7.	-	-	2	2	2	2	1	-	1	-	-	-
8.	-	-	3	3	-	-	-	-	1	-	-	-
9.	-	-	5	4	-	-	-	-	1	-	-	-
10.	-	-	5	5	-	-	-	-	1	-	-	-
11.	-	-	7	7	-	-	-	-	1	-	-	-
12.	1	-	1	1	-	-	-	-	-	-	-	-
13.	-	-	-	-	-	-	-	-	-	-	-	-
ಒಟ್ಟು	4	3	62	55	9	9	6	-	11	-	2	1

S : ಮಂಜೂರಾಗಿರುವ ಹುದ್ದೆಗಳು
W : ಕೆಲಸ ಮಾಡುತ್ತಿರುವುದು

ಕಾರಣಗಳು : ಕೆಲವೊಂದು ಹುದ್ದೆಗಳಿಗೆ ನೇರ ನೇಮಕಾತಿ ಮಾಡಬೇಕಾಗಿದ್ದರಿಂದ ತುಂಬಲಾಗಲಿಲ್ಲ. ಈಗ ನೇಮಕಾತಿ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ಸದ್ಯದಲ್ಲೇ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಧಲ:

ಉಡುಪಿ ತಾಲ್ಲೂಕು ಬ್ರಹ್ಮಾವರ ವಿಧಾನಸಭಾಕ್ಷೇತ್ರದಲ್ಲಿ ಗ್ರಂಥಾಲಯ ಸೌಲಭ್ಯ

319 - ಶ್ರೀ ವಿ. ಬಸವರಾಜ್ (ಬ್ರಹ್ಮಾವರ್) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾಗಿ ಆರಂಭಗೊಳ್ಳುವ ಗ್ರಂಥಾಲಯ ಶಾಖೆಗಳು ಎಷ್ಟು?

ಆ) ದಕ್ಷಿಣ ಕನ್ನಡದ ಯಾವ ಯಾವ ಸ್ಥಳಗಳಲ್ಲಿ ಹೊಸ ಗ್ರಂಥಾಲಯ ಶಾಖೆಗಳನ್ನು ತೆರೆಯಲಾಗುವುದು.

ಇ) ಉಡುಪಿ ತಾಲ್ಲೂಕಿನ ಕೋಟಾ, ಸಸ್ತಾನ್, ಬ್ರಹ್ಮಾವರ, ಮಂದರ್ತಿ, ಸೈಬ್ರಕಟ್ಟೆ, ಪೆರದೂರು, ಕರ್ಕೆ, ಈ ಸ್ಥಳಗಳಲ್ಲಿ ಗ್ರಂಥಾಲಯ ಶಾಖಾ ಆರಂಭಿಸುವಲ್ಲಿ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಪ್ರಭಾಕರ್ ಎಸ್. ರಾಣೆ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :

ಅ) 300 ಗ್ರಂಥಾಲಯಗಳು.

ಆ)

	ತಾಲ್ಲೂಕು		ಊರುಗಳು
1.	ಕಾರ್ಕಳ	1.	ಬೆಳ್ಮಣ್ಣು
		2.	ನಂದಳಿಕೆ
2.	ಸೂಳ್ಯ	1.	ಅರಂತೋಡು
3.	ಬೆಳ್ತಂಗಡಿ	2.	ನೆಲೆಯ
4.	ಪುತ್ತೂರು	1.	ನೆಲ್ಯಾಡಿ
		2.	ಕಡಶ
5.	ಉಡುಪಿ	1.	ಸಿರಿಯೂರು
		2.	ಸೈಬ್ರಕಟ್ಟೆ
6.	ಮಂಗಳೂರು	1.	ಕಂದಾವರ
		2.	ಎಕ್ಕಾರು
		3.	ಕಟೀಲು
7.	ಕುಂದಾಪುರ	1.	ನಾವುಂದು
		2.	ಹೆಮ್ಮಾಡಿ
		3.	ಶಿರೂರು

ಇ) 1993-94ನೇ ಸಾಲಿನಲ್ಲಿ ಸೈಬ್ರಕಟ್ಟೆಯಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸಲಾಗುವುದು ಹಾಗೂ ಉಳಿದ ಸ್ಥಳಗಳಲ್ಲಿ ಹಂತ ಹಂತವಾಗಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗುವುದು.

ಚನ್ನಪಟ್ಟಣದಲ್ಲಿ ವೃಕ್ಷ ಸಂರಕ್ಷಣಾ ಕಾಯ್ದೆ

254 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) ; ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವೃಕ್ಷಾ ಸಂರಕ್ಷಣಾ ಕಾಯ್ದೆ 1976ರ ಕಾಯ್ದೆ 3ರಂತೆ ಪ್ರತಿಯೊಂದು ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ವೃಕ್ಷ ಪ್ರಾಧಿಕಾರವನ್ನು ರಚಿಸಲಾಗಿದೆಯೇ

ಆ) ಅಂತಹ ಪ್ರಾಧಿಕಾರವನ್ನು ಚನ್ನಪಟ್ಟಣ ತಾಲ್ಲೂಕಿನಲ್ಲಿ ರಚಿಸಲಾಗಿದೆಯೇ? ಹಾಗಿದ್ದಲ್ಲಿ ಯಾವಾಗ ರಚಿಸಲಾಗಿದೆ. (ಸದಸ್ಯರ ಹೆಸರನ್ನು ತಿಳಿಸುವುದು)

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) ಹೌದು

ಆ) ಚನ್ನಪಟ್ಟಣ ತಾಲ್ಲೂಕಿನಲ್ಲಿಯ ಗ್ರಾಮೀಣ ಪ್ರದೇಶಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಎಫ್ಡಿ 61 ಎಫ್ಡಿಎಸ್ 82: ದಿನಾಂಕ : 11-1-83 ರನ್ವಯ ಈ ಅಧಿಸೂಚನೆಯ ದಿನಾಂಕದಿಂದ ಜಾರಿಗೆ ಬರುವಂತೆ ವೃಕ್ಷ ಪ್ರಾಧಿಕಾರವನ್ನು ರಚಿಸಲಾಗಿದೆ. ಅದರ ಸದಸ್ಯರ ವಿವರ ಹೀಗಿದೆ:-

1)	ಅಧ್ಯಕ್ಷರು, ತಾಲ್ಲೂಕು ಅಭಿವೃದ್ಧಿ ಮಂಡಳಿ, ಚನ್ನಪಟ್ಟಣ.	ಛೇರ್ಮನ್.
2)	ಕ್ಷೇತ್ರಾಭಿವೃದ್ಧಿ ಅಧಿಕಾರಿ ಚನ್ನಪಟ್ಟಣ.	ಸದಸ್ಯರು
3)	ಉಪ ಅರಣ್ಯ ಸಂರಕ್ಷಣಾಧಿಕಾರಿ ಬೆಂಗಳೂರು ಇವರಿಂದ ನಾಮಕರಣ ಮಾಡಲ್ಪಟ್ಟ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ.	ಸದಸ್ಯರು
4)	ಜಿಲ್ಲಾ ತೋಟಗಾರಿಕೆ ಅಧಿಕಾರಿ.	ಸದಸ್ಯರು
5)	ಅಧ್ಯಕ್ಷರು, ತಾಲ್ಲೂಕು ಅಭಿವೃದ್ಧಿ ಮಂಡಳಿ, ಇವರಿಂದ ನಾಮಕರಣ ಮಾಡಲ್ಪಟ್ಟ ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರು.	ಸದಸ್ಯರು

ಚನ್ನಪಟ್ಟಣ ನಗರ ಪ್ರದೇಶಕ್ಕೆ ವೃಕ್ಷ ಪ್ರಾಧಿಕಾರವನ್ನು ರಚಿಸಿರುವುದಿಲ್ಲ.

ದ.ಕನ್ನಡ ಜಿಲ್ಲೆಯ ಶಾಲಾ ವಿದ್ಯಾರ್ಥಿಗಳಿಗೆ ಶೌಚಾಲಯ ಮತ್ತು ಆಟದಮೈದಾನ

50 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡಜಿಲ್ಲೆಯ ಕಿರಿಯ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಶೌಚಾಲಯ ಮತ್ತು ಆಟದ ಮೈದಾನ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಅದು ಎಲ್ಲೆಲ್ಲಿ : (ತಾಲ್ಲೂಕುವಾರು ವಿವರ ಕೊಡುವುದು)

ಇ) ಆ ರೀತಿಯ ಕೊರತೆಯನ್ನು ನೀಗಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಬಂದಿದೆ.

ಆ) ಆಟದ ಮೈದಾನ: ಶೌಚಾಲಯ ಇಲ್ಲದಿರುವುದು ಶಾಲೆಗಳ ಸಂಖ್ಯೆ: ಪಟ್ಟಿ (ತಾಲ್ಲೂಕುವಾರು)

ಕ್ರ: ಸಂ:	ತಾಲ್ಲೂಕು	ಜಿಲ್ಲೆಯಲ್ಲಿ ಇರುವ ಒಟ್ಟು ಪ್ರಾಥಮಿಕ ಶಾಲೆಗಳ ಸಂಖ್ಯೆ	ಶೌಚಾಲಯ ವ್ಯವಸ್ಥೆ ಇಲ್ಲದಿರುವ ಶಾಲೆಗಳ ಸಂಖ್ಯೆ	ಆಟದ ಮೈದಾನ ಇಲ್ಲದಿರುವ ಶಾಲೆಗಳ ಸಂಖ್ಯೆ
1.	ಬಂಟ್ವಾಳ	143	86	80
2.	ಬೆಳ್ತಂಗಡಿ	154	65	43
3.	ಕಾರ್ಕಳ	179	146	90
4.	ಕುಂದಾಪುರ	258	206	41
5.	ಮಂಗಳೂರು	147	15	41
6.	ಪುತ್ತೂರು	171	152	106
7.	ಸುಳ್ಯ	132	55	17
8.	ಉಡುಪಿ	145	71	60
	ಒಟ್ಟು	1329	796	478

ಇ) 'ಅಕ್ಷಯ' ಯೋಜನೆಯಡಿಯಲ್ಲಿ ಆಟದ ಮೈದಾನ ಒದಗಿಸುವುದು ಒಂದು ಕಾರ್ಯಕ್ರಮವಾಗಿದ್ದು. ಹಂತ ಪಂತವಾಗಿ 8ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಪೂರೈಕೆಮಾಡಲಾಗುವುದು. 1993-94ರಲ್ಲಿ 5000 ಶಾಲೆಗಳಿಗೆ ಪೂರೈಕೆ ಮಾಡಲು ರೂ. 3.00 ಕೋಟಿಗಳನ್ನು ಒದಗಿಸಲಾಗಿದೆ. ಹಾಗೂ 1994-95ರಲ್ಲಿ ರೂ. 3.00 ಕೋಟಿಗಳನ್ನು ಒದಗಿಸಿಕೊಳ್ಳಲಾಗಿದೆ.

ಶೌಚಾಲಯಗಳಿಗೆ ನೀರು ಪೂರೈಕೆಗಾಗಿ ಕಾರ್ಯಕ್ರಮ ಹಾಕಿಕೊಂಡು ಪೂರೈಕೆ ಮಾಡುವ ಯೋಜನೆಯನ್ನು ರೂಪಿಸಲಾಗುತ್ತಿದೆ.

ನ್ಯಾಮತಿಯಲ್ಲಿ ಸರ್ಕಾರಿ ಹೆಣ್ಣುಮಕ್ಕಳ ಕಾಲೇಜನ್ನು ಪ್ರಾರಂಭಿಸುವುದು

223 - ಶ್ರೀ ಡಿ.ಬಿ. ಗಂಗಪ್ಪ (ಹೊನ್ನಾಳಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕಿನ ನ್ಯಾಮತಿಯಲ್ಲಿ ಸರ್ಕಾರಿ ಕಾಂಪೋಜಿಟ್ ಹೆಣ್ಣುಮಕ್ಕಳ ಜೂನಿಯರ್ ಕಾಲೇಜು ಯಾವಾಗ ಪ್ರಾರಂಭಿಸಲಾಗುವುದು.

ಆ) 1994-95ರಲ್ಲಿ ಅದನ್ನು ಪ್ರಾರಂಭಿಸಲಾಗುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಆ) ಇಲ್ಲ

ಭದ್ರಾ ಅರಣ್ಯದಲ್ಲಿ ವಾಸಿಸುವ ಜನರ ಸ್ಥಳಾಂತರ

237 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯ ಭದ್ರಾ ಅರಣ್ಯದಲ್ಲಿ ವಾಸಿಸುವ ಜನರನ್ನು ಸ್ಥಳಾಂತರಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಆ) ಅದಕ್ಕಾಗಿ ಒದಗಿಸಲಾದ ಹಣವೆಷ್ಟು?

ಇ) ಎಷ್ಟು ದಿನಗಳಲ್ಲಿ ಆ ಕೆಲಸವು ಪೂರ್ಣವಾಗುವುದು?

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) ಭದ್ರಾ ಅರಣ್ಯದಲ್ಲಿ ವಾಸಿಸುವ ಜನರ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಮತ್ತು ಪುನರ್ವಸತಿ ಕಲ್ಪಿಸಲು 12.76 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಈ ಯೋಜನೆಯನ್ನು ಕೇಂದ್ರ ಸರ್ಕಾರದ ಧನಸಹಾಯವನ್ನು ಕೋರಿ ಸಲ್ಲಿಸಲಾಗಿದೆ.

ಆ) ಕೇಂದ್ರ ಸರ್ಕಾರದಿಂದ ಹಣ ಇನ್ನೂ ಒದಗಿಸಿರುವುದಿಲ್ಲ.

ಇ) ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾದ ಕೂಡಲೇ ಭೂಸ್ವಾಧೀನಕ್ಕೆ ಬೇಕಾದ ಹಣದಲ್ಲಿ $\frac{1}{4}$ ಭಾಗವನ್ನು ಕಂದಾಯ ಇಲಾಖೆಗೆ ಪಾವತಿ ಮಾಡಿ ಭೂಸ್ವಾಧೀನ ಕಾರ್ಯಕ್ರಮವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಹಿರೇಕೆರೂರು ತಾಲ್ಲೂಕಿನಲ್ಲಿ "ಕ್ಷ-ಕಿರಣ ಯಂತ್ರ ಇಲ್ಲದ ಬಗ್ಗೆ

279 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕು ಮಲೆನಾಡಿನ ಗ್ರಾಮೀಣ ಪ್ರದೇಶ ಎನ್ನುವುದನ್ನು ಸರ್ಕಾರ ಗಮನಿಸಿದೆಯೇ?

ಆ) ತಾಲ್ಲೂಕಿನಲ್ಲಿ ಯಾವುದೇ ಆಸ್ಪತ್ರೆಯಲ್ಲಿಯೂ ಕ್ಷ-ಕಿರಣ ಯಂತ್ರ ಇಲ್ಲವೆ ಸಾರ್ವಜನಿಕರಿಗೆ ಅತ್ಯಂತ ತೊಂದರೆ ಹಾಗೂ ಅನ್ಯಾಯವಾಗಿರುವುದನ್ನು ಸರ್ಕಾರ ಗಮನಿಸಿದೆಯೇ?

ಇ) ಈಗಲಾದರೂ ಹಿರೇಕೆರೂರು ತಾಲ್ಲೂಕಿಗೆ ಕ್ಷ-ಕಿರಣ ಯಂತ್ರವನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಈ) ಆ ಬಗ್ಗೆ ಸರ್ಕಾರದ ನೀತಿ ಹಾಗೂ ನಿರ್ದಿಷ್ಟ ನಿರ್ಣಯಗಳೇನು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸರ್ಕಾರವು ಗಮನಿಸಿದೆ.

ಆ) ಸರ್ಕಾರವು ಗಮನಿಸಿದೆ.

ಇ) ಧಾರವಾಡ ಜಿಲ್ಲಾ ಪರಿಷತ್ತು ನಾಲ್ಕು ಕ್ಷ-ಕಿರಣ ಯಂತ್ರಗಳ ಖರೀದಿಗೆ ಅನುಮತಿ ನೀಡಿದ್ದು, ಇವುಗಳಲ್ಲಿ ಒಂದು ಕ್ಷ-ಕಿರಣ ಯಂತ್ರವನ್ನು ಹಿರೇಕೆರೂರು ಸಾರ್ವಜನಿಕ ಆಸ್ಪತ್ರೆಗೆ ಒದಗಿಸುವ ಸಾಧ್ಯತೆ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಧಾರವಾಡ ಜಿಲ್ಲಾ ಪರಿಷತ್ತು ಇವರಿಗೆ ತಿಳಿಸಲಾಗುವುದು.

ಈ) ರಾಜ್ಯ ಸರ್ಕಾರವು 100 ಹಾಸಿಗೆಗಳಿಗಿಂತ ಹೆಚ್ಚಿನ ಹಾಸಿಗೆಗಳುಳ್ಳ ಆಸ್ಪತ್ರೆಗಳನ್ನು ಅಧೀನಕ್ಕೆ ತೆಗೆದುಕೊಂಡಿದ್ದಲ್ಲ ಇವುಗಳಿಗೆ ಕ್ಷ-ಕಿರಣ ಯಂತ್ರಗಳನ್ನು ಸರಬರಾಜು ಮಾಡುವ ಜವಾಬ್ದಾರಿ ರಾಜ್ಯಸರ್ಕಾರದ್ದಾಗಿರುತ್ತದೆ. ಉಳಿದ ಆಸ್ಪತ್ರೆಗಳು ಜಿಲ್ಲಾ ಪರಿಷತ್ನ ವ್ಯಾಪ್ತಿಯಲ್ಲಿ ಬರುವುದರಿಂದ ಈ ಆಸ್ಪತ್ರೆಗಳಿಗೆ ಕ್ಷ-ಕಿರಣ ಯಂತ್ರ ಸರಬರಾಜು ಮಾಡುವ ಹೊಣೆ ಸಂಬಂಧಪಟ್ಟ ಜಿಲ್ಲಾಪರಿಷತ್ನದ್ದಾಗಿರುತ್ತದೆ.

ರಾಜ್ಯದಲ್ಲಿ ಮಂಜೂರಾದ ಪಶುವೈದ್ಯ ಶಾಲೆಗಳ ಸಂಖ್ಯೆ

236 - ಶ್ರೀಮತಿ ಮೋಟಮ್ಮ (ಮೂಡಿಗೆರೆ); ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ರಾಜ್ಯದಲ್ಲಿ ಹೊಸದಾಗಿ ಮಂಜೂರಾದ ಪಶುವೈದ್ಯ ಶಾಲೆಗಳು ಹಾಗೂ ಕೇಂದ್ರಗಳೆಷ್ಟು (ಜಿಲ್ಲಾವಾರು ಮಾಹಿತಿ ಕೊಡುವುದು)

ಆ) ಕೆಲವು ಕಡೆ ಕಟ್ಟಡ ಕಟ್ಟಿದ್ದು, ಆಸ್ಪತ್ರೆ ಅವಶ್ಯಕತೆ ಇದೆಯೆಂದು ಸರ್ಕಾರಕ್ಕೆ ಮನವಿ ಬಂದಿದ್ದರೂ, ಅಂತಹ ಕಡೆ ಪಶುಚಿಕಿತ್ಸಾ ಕೇಂದ್ರ ಮಂಜೂರು ಮಾಡದಿರಲು ಕಾರಣವೇನು? (ಉದಾ: ಮೂಡಿಗೆರೆ ತಾಲ್ಲೂಕು, ಕುಂದೂರು ಗ್ರಾಮ)

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):

1993-94ನೇ ಸಾಲಿನಲ್ಲಿ

ಅ) ಪಶು ಆಸ್ಪತ್ರೆ 9

ಆ) ಪಶು ಚಿಕಿತ್ಸಾಲಯ 14

ಇ) ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ 200

(ಜಿಲ್ಲಾವಾರು ಮಾಹಿತಿ ಲಗತ್ತಿಸಲಾಗಿದೆ.)

ಆ) ಬಂದಿರುವ ಮನವಿಗಳು ಪ್ರಾರಂಭಿಸಬೇಕಾಗಿರುವ ಸಂಸ್ಥೆಗಳ ಸಂಖ್ಯೆಗೆ ಹೆಚ್ಚಾಗಿರುವುದರಿಂದ, ಅವುಗಳೆಲ್ಲವನ್ನು ಈ ವರ್ಷದಲ್ಲಿ ಮಂಜೂರು ಮಾಡಲಾಗಿಲ್ಲ. ಮೂಡಿಗೆರೆ ತಾಲ್ಲೂಕು ಕುಂದೂರು ಗ್ರಾಮಕ್ಕೆ 1994-95ನೇ ಸಾಲಿನಲ್ಲಿ ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ರಾಜ್ಯದಲ್ಲಿ 1993-94ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾದ ಪಶುವೈದ್ಯ ಸಂಸ್ಥೆಗಳ ಜಿಲ್ಲಾವಾರು ವಿವರ

ಕ್ರ. ಸಂಖ್ಯೆ	ಜಿಲ್ಲೆಯ ಹೆಸರು	ಪಶು ಆಸ್ಪತ್ರೆ	ಪಶು ಚಿಕಿತ್ಸಾಲಯ	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ
1)	ಬೆಂಗಳೂರು	3	3	3
2)	ಬೆಂಗಳೂರು (ಗ್ರಾಮಾಂತರ)	-	1	10
3)	ಕೋಲಾರ	-	-	14
4)	ಶಿವಮೊಗ್ಗ	-	-	9
5)	ಚಿತ್ರದುರ್ಗ	-	-	9
6)	ತುಮಕೂರು	-	1	14
7)	ಮಂಡ್ಯ	4	6	26
8)	ಕೊಡಗು	-	-	2
9)	ಚಿಕ್ಕಮಗಳೂರು	-	-	5
10)	ದಕ್ಷಿಣ ಕನ್ನಡ	-	-	11
11)	ಹಾಸನ	1	1	15
12)	ಮೈಸೂರು	1	1	11
13)	ಧಾರವಾಡ	-	-	17
14)	ಬೆಳಗಾವಿ	-	-	12
15)	ಬಿಜಾಪುರ	-	-	10
16)	ಬೀದರ್-	-	-	5

17)	ಗುಲ್ಬರ್ಗ	-	-	10
18)	ರಾಯಚೂರು	-	-	7
19)	ಬಳ್ಳಾರಿ	-	-	4
20)	ಉತ್ತರ ಕನ್ನಡ	-	1	6
	ಒಟ್ಟು	9	14	200

ಒಪ್ಪಂದದ ಆಧಾರದ ಮೇಲೆ ನೇಮಕಾತಿ ಮಾಡಿದ ವೈದ್ಯಾಧಿಕಾರಿಗಳು

253 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 2 ವರ್ಷಗಳಲ್ಲಿ ಒಪ್ಪಂದದ ಆಧಾರದ ಮೇಲೆ ನೇಮಕಾತಿ ಮಾಡಿದ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು?

ಆ) ಕಾಯ್ದಿರಿಸಿದ ಪಟ್ಟಿಗಳಲ್ಲಿ ಎಷ್ಟು ಅಬ್ಯರ್ಥಿಗಳು ನೇಮಕಾತಿ ಆದೇಶಗಳ ನಿರೀಕ್ಷಣೆಯಲ್ಲಿದ್ದಾರೆ?

ಇ) ಕಾಯ್ದಿರಿಸಿದ ಪಟ್ಟಿಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಬ್ಯರ್ಥಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು)

ಈ) ಯಾವ ಸಮಯದಲ್ಲಿ ತೀರ್ಮಾನಿಸಲಾಗುವುದು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 75 ವೈದ್ಯಾಧಿಕಾರಿಗಳು.

ಆ) ಆಯ್ಕೆ ಸಮಿತಿಯು ಕಾಯ್ದಿರಿಸಿದ ಪಟ್ಟಿಯನ್ನು ತಯಾರಿಸಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆ

280 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದಾಗಬೇಕು)

ಆ) ಖಾಲಿಯಿರುವ ಹುದ್ದೆಗಳನ್ನು ತುಂಬಲು ಸರ್ಕಾರ ಉದ್ದೇಶಿಸಿದೆಯೇ?

ಇ) ಎಷ್ಟು ಹುದ್ದೆಗಳನ್ನು ಯಾವ ವಿಧಾನದಿಂದ ಆಯ್ಕೆ ಮಾಡಿ ತುಂಬಲು ಸರ್ಕಾರ ತೀರ್ಮಾನಿಸಿದೆ.

ಈ) ಈ ಬಗ್ಗೆ ಸರ್ಕಾರ ನಿರ್ದಿಷ್ಟ ಹಾಗೂ ನಿಖರವಾದ ಸ್ಪಷ್ಟ ನಿರ್ಣಯ ಮತ್ತು ಕ್ರಮಗಳನ್ನು ತೆಗೆದುಕೊಂಡಿದೆಯೇ?

ಉ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದ ನೀತಿ ಮತ್ತು ನಿಯಮಗಳೇನು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) 18,934 ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತದೆ. ತಾಲ್ಲೂಕುವಾರು ವಿವರ ಲಭ್ಯವಿರುವುದಿಲ್ಲ. ಜಿಲ್ಲಾವಾರು ಹುದ್ದೆಯ ವಿವರಗಳನ್ನು ಇದರೊಂದಿಗೆ ಲಗತ್ತಿಸಿದೆ.

ಆ) ಹೌದು, ಪ್ರಕ್ರಿಯೆಯು ನಡೆಯುತ್ತಿದೆ.

ಇ) ಎಲ್ಲಾ ಖಾಲಿ ಹುದ್ದೆಗಳನ್ನು ಪ್ರಚಲಿತ ನೇಮಕಾತಿ ನಿಯಮಗಳ ಅನುಸಾರ ವಿದ್ಯಾರ್ಹತೆಗೆ ಮತ್ತು ಮೀಸಲಾತಿಗೆ ಅನುಗುಣವಾಗಿ ಆಯ್ಕೆ ಮಾಡಿ ನೇಮಕಾತಿ ಮಾಡಲಾಗುವುದು. ಇದರಲ್ಲಿ ಶೇ. 50ರಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಕಾಯ್ದಿರಿಸಿ ಆಯ್ಕೆ ಮಾಡಲಾಗುವುದು. ಗ್ರಾಮೀಣ ಅಭ್ಯರ್ಥಿಗಳಿಗೆ ಶೇಕಡ 5 ಕೃಪಾಂಕವನ್ನು ಅವರುಗಳು ಪಡೆಯುವ ಎಸ್‌ಎಸ್‌ಎಲ್ಸಿ ಹಾಗೂ ಟಿಸಿಹೆಚ್ ಸರಾಸರಿ ಶೇಕಡವಾರು ಅಂಕಕ್ಕೆ ಸೇರಿಸಲಾಗುವುದು. ಇದೇ ರೀತಿ ಜಿಲ್ಲಾಪರಿಷತ್ ವತಿಯಿಂದ ನೇಮಕಗೊಂಡು ಕಾರ್ಯ ನಿರ್ವಹಿಸುತ್ತಿರುವ ಗೌರವಧನ ಶಿಕ್ಷಕರುಗಳಿಗೆ ಪ್ರತಿ ವರ್ಷದ ಸೇವೆಗೆ ಶೇ 2 ಕೃಪಾಂಕವನ್ನು ಸರಾಸರಿ ಶೇಕಡವಾರು ಅಂಕಕ್ಕೆ ಸೇರಿಸಲಾಗುವುದು.

ಈ) ಹೌದು.

ಉ) ಎಲ್ಲಾ ಹುದ್ದೆಗಳನ್ನು ನಿಯಮಗಳ ಅನುಸಾರ ತುಂಬಬೇಕೆಂಬುದು ಸರ್ಕಾರದ ನಿರ್ಧಾರ.

ಜಿಲ್ಲಾವಾರು ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳ ವಿವರ

ಕ್ರಮಾಂಕ	ಜಿಲ್ಲೆ	ಸಂಖ್ಯೆ
1.	ಬೆಂಗಳೂರು ಉತ್ತರ	150
2.	ಬೆಂಗಳೂರು ದಕ್ಷಿಣ	268
3.	ಬೆಂಗಳೂರು ಗ್ರಾಮಾಂತರ	1,655
4.	ಕೋಲಾರ	850
5.	ತುಮಕೂರು	869
6.	ಶಿವಮೊಗ್ಗ	753
7.	ಚಿತ್ರದುರ್ಗ	744
8.	ಮೈಸೂರು	1,380
9.	ಮಂಡ್ಯ	441
10.	ಹಾಸನ	825
11.	ಚಿಕ್ಕಮಗಳೂರು	1,021
12.	ದಕ್ಷಿಣ ಕನ್ನಡ	709
13.	ಕೊಡಗು	324
14.	ಬಿಜಾಪುರ	1,606
15.	ಧಾರವಾಡ	1,449
16.	ಉತ್ತರ ಕನ್ನಡ	775
17.	ಬೆಳಗಾಂ	1,358
18.	ಗುಲ್ಬರ್ಗ	1,118
19.	ರಾಯಚೂರು	867
20.	ಬೀದರ್	631
21.	ಬಳ್ಳಾರಿ	1,141
	ಒಟ್ಟು	18,934

ವೃತ್ತಿ ಶಿಕ್ಷಣ ನೌಕರರ ಸೇವೆಯನ್ನು ಖಾಯಂಗೊಳಿಸುವುದು

282 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೃತ್ತಿ ಶಿಕ್ಷಣದ ಪೂರ್ಣಾವಧಿ ಹಾಗೂ ಪೂರ್ಣ ವೇತನದ ನೌಕರರ ಸಂಖ್ಯೆ ಎಷ್ಟು? ಹಾಗೂ ಅವರನ್ನು ನೇಮಿಸಿಕೊಂಡು ಎಷ್ಟು ವರ್ಷಗಳಾದವು?

ಆ) ಸದರಿಯವರನ್ನು ಖಾಯಂಗೊಳಿಸಲು ಸರ್ಕಾರಕ್ಕೆ ಹೆಚ್ಚಿನ ಹಣಕಾಸಿನ ಹೊರೆ ಬೀಳುವುದಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ವೃತ್ತಿ ಶಿಕ್ಷಣದ ಪೂರ್ಣಾವಧಿಯ ಹಾಗೂ ಸಂಚಿತ ವೇತನ ನೌಕರರ ಸಂಖ್ಯೆ ಎಷ್ಟು? ಹಾಗೂ ಅವರನ್ನು ನೇಮಕ ಮಾಡಿಕೊಂಡು ಎಷ್ಟು ವರ್ಷಗಳಾದವು.

ಈ) ಸದರಿ ಸಂಚಿತ ವೇತನ ಸಿಬ್ಬಂದಿಯನ್ನು ಖಾಯಂಗೊಳಿಸಲು ಸರ್ಕಾರದಲ್ಲಿ ಯೋಜನೆ ಇದೆಯೇ?

ಉ) ವೃತ್ತಿ ಶಿಕ್ಷಣದ ಎಲ್ಲಾ ನೌಕರರನ್ನು ಖಾಯಂಗೊಳಿಸಲು ಸರ್ಕಾರ ವಿಧಾನಮಂಡಲದಲ್ಲಿ ಈ ಹಿಂದೆ ಭರವಸೆ ನೀಡಿದ್ದನ್ನು ಗಮನಿಸಲಾಗಿದೆಯೇ.

ಊ) ಆ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? ಹಾಗೂ ಈ ವಿಷಯದ ಬಗ್ಗೆ ಸರ್ಕಾರದ ನೀತಿ ಮತ್ತು ನಿರ್ಣಯಗಳೇನು?

ಶ್ರೀ ಪ್ರಭಾಕರ್ ಎಸ್. ರಾಣೆ. (ವಯಸ್ಕರ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ ರಾಜ್ಯ ಸಚಿವರು) :

ಅ) 73

1978-1992ರ ಅವಧಿಯಲ್ಲಿ ನೇಮಿಸಿಕೊಳ್ಳಲಾಯಿತು.

ಆ) ಬಂದಿದೆ. ಹೆಚ್ಚಿನ ಹೊರೆ ಬೀಳುವುದು.

ಇ) ಪೂರ್ಣಾವಧಿ 73, ಸಂಚಿತ 68 1978-1992ರ ಅವಧಿಯಲ್ಲಿ ನೇಮಕ ಮಾಡಿಕೊಳ್ಳಲಾಯಿತು.

ಈ) ಯೋಜನೆ ಇದೆ.

ಉ) ಗಮನಿಸಲಾಗಿದೆ.

ಊ) ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆಯಲ್ಲಿರುವ ನೌಕರರ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ ಸೇವೆಯಲ್ಲಿರುವ ಬಗ್ಗೆ ಅನುದಾನ ಸಂಹಿತೆ ರಚನೆಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಹಿರೇಕೆರೂರು ತಾಲ್ಲೂಕಿನಲ್ಲಿ ಪ್ರಥಮದರ್ಜೆ ಕಾಲೇಜುಗಳ ಪ್ರಾರಂಭ

281 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕು ಪ್ರಥಮ ದರ್ಜೆ ಕಾಲೇಜಿಗೆ ಎಷ್ಟು ಕ್ಷೇತ್ರ ನಿವೇಶನವನ್ನು ಪಡೆದುಕೊಳ್ಳಲಾಗಿದೆ ಹಾಗೂ ಅದಕ್ಕೆ ಸರ್ಕಾರ ಕೊಟ್ಟ ಹಣವೆಷ್ಟು?

ಆ) ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡದ ಕಾರ್ಯ 1994ರಲ್ಲಿ ಪ್ರಾರಂಭಿಸುವ ಬಗ್ಗೆ ಸಚಿವರು ಸದನದಲ್ಲಿ ಭರವಸೆ ಕೊಟ್ಟಿದ್ದು ಆ ಬಗ್ಗೆ 1993-94ರಲ್ಲಿ ಎಷ್ಟು ಹಣ ಒದಗಿಸಲಾಗಿದೆ?

ಇ) ಕಟ್ಟಡ ಕಾರ್ಯ ಪ್ರಾರಂಭಿಸಲು ಅವಶ್ಯವಿರುವ ನಕ್ಷೆ ಅಂದಾಜುಗಳನ್ನು ತಯಾರಿಸಲಾಗಿದೆಯೇ?

ಈ) ಕಾಲೇಜಿನಲ್ಲಿ ಯಾವ ಯಾವ ವರ್ಗ ವಿಷಯಗಳಿಗೆ ಎಷ್ಟು ವಿದ್ಯಾರ್ಥಿಗಳಿದ್ದಾರೆ.

ಉ) ಎಷ್ಟು ವಿದ್ಯಾರ್ಥಿಗಳಿಗೆ ವಿಭಾಗಗಳನ್ನು ಮಾಡಲಾಗಿದೆ ಹಾಗೂ ವಿಶ್ವವಿದ್ಯಾಲಯ ಹಾಗೂ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಿಭಾಗಗಳನ್ನು ಮಾಡದೇ ಇರುವುದನ್ನು ಸರ್ಕಾರ ಗಮನಿಸಿದೆಯೇ?

ಊ) ಈ ಬಗ್ಗೆ ಸರ್ಕಾರ ಕೈಗೊಳ್ಳಲಾಗುವ ಕ್ರಮಗಳೇನು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು):

ಅ) 14 ಎಕರೆ 38 ಗುಂಟೆ ಅಳತೆಯ ನಿವೇಶನವನ್ನು ಪಡೆಮುಕೊಳ್ಳಲು ಉದ್ದೇಶಿಸಲಾಗಿದೆ. 1 ಎಕರೆಗೆ ರೂ. 18,000.00 ಗಳಂತೆ ಒಟ್ಟು ರೂ. 2,68,200.00 ಗಳನ್ನು ಮಂಜೂರು ಮಾಡಿದೆ.

ಆ) 1993-94ರಲ್ಲಿ ಭೂಸ್ವಾಧೀನಕ್ಕಾಗಿ ಕ್ರಮ ತೆಗೆದುಕೊಳ್ಳುತ್ತಿದ್ದ ಕಾರಣ ಹಣವನ್ನು ಒದಗಿಸಿಕೊಂಡಿರಲಿಲ್ಲ. 1994-95ನೇ ಸಾಲಿಗೆ ಹೊಸ ಕಾಮಗಾರಿಗಳ ಅಡಿಯಲ್ಲಿ ಪಟ್ಟಿಯ ಆಧಾರದ ಮೇಲೆ ಆಯವ್ಯಯ ಒದಗಿಸಲಾಗುವುದು.

ಇ) -ಇಲ್ಲ-

ಈ) ಅನುಬಂಧ-1ರಲ್ಲಿ ನೀಡಲಾಗಿದೆ.

ಉ) ವಿಭಾಗಗಳನ್ನು ಮಾಡಿರುವ ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ. ಪ್ರಥಮ ಬಿ.ಎ. ಆಂಗ್ಲ ಭಾಷೆ ಹಾಗೂ ಕನ್ನಡ ಭಾಷೆಗಳಲ್ಲಿ ಮಾತ್ರ ಕಡಿಮೆ ವಿಭಾಗಗಳು ಇದ್ದು ಈ ವಿಷಯಗಳಲ್ಲಿ ಇನ್ನೂ ಎರಡೆರಡು ವಿಭಾಗಗಳನ್ನು ಹೆಚ್ಚಿಗೆ ಮಾಡುವಂತೆ ಸದರಿ ಕಾಲೇಜಿನ ಪ್ರಾಂಶುಪಾಲರಿಗೆ ಸೂಚನೆ ನೀಡಲಾಗಿದೆ.

ಊ) ಮೇಲೆ ನೀಡಿರುವ ಉತ್ತರದಂತೆ.

ಮೂಡಿಗೆರೆ ಕ್ಷೇತ್ರದಲ್ಲಿ ಹೈಸ್ಕೂಲು ಹಾಗೂ ಜೂನಿಯರ್ ಕಾಲೇಜುಗಳ ಸಂಖ್ಯೆ

239 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ವಿಧಾನ ಸಭಾ ಕ್ಷೇತ್ರದಲ್ಲಿ ಬರುವ ಹೈಸ್ಕೂಲು ಹಾಗೂ ಜೂನಿಯರ್ ಕಾಲೇಜುಗಳೆಷ್ಟು?

ಆ) ಈ ಎಲ್ಲಾ ಜ್ಯೂನಿಯರ್ ಕಾಲೇಜುಗಳಿಗೆ ಪ್ರಾಂಶುಪಾಲರುಗಳ ನೇಮಕ ಮಾಡಲಾಗಿದೆಯೇ?

ಇ) ಹಾಗೆಯೇ ಹೈಸ್ಕೂಲು ಹಾಗೂ ಜೂನಿಯರ್ ಕಾಲೇಜಿನ ಎಲ್ಲಾ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆಯೇ?

ಈ) ಉಳಿದಿರುವ ಬೋಧಕರ ಹುದ್ದೆಗಳೆಷ್ಟು ಹಾಗೂ ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ)

	ಹೈಸ್ಕೂಲ್	ಜೂನಿಯರ್ ಕಾಲೇಜು
1. ಸರ್ಕಾರಿ	9	6
2. ಅನುದಾನಿತ	4	-
ಒಟ್ಟು	13	6

6 ಜ್ಯೂನಿಯರ್ ಕಾಲೇಜುಗಳ ಪೈಕಿ 2 ಕಾಲೇಜುಗಳಿಗೆ ಪ್ರಾಂಶುಪಾಲರುಗಳನ್ನು ಭರ್ತಿ ಮಾಡಲಾಗಿದ್ದು, 4 ಪ್ರಾಂಶುಪಾಲರುಗಳ ಹುದ್ದೆಗಳು ಖಾಲಿ ಇವೆ.

ಇ) -ಇಲ್ಲ-

ಪ್ರೌಢಶಾಲೆಗಳು	ಖಾಸಗಿ	ಸರ್ಕಾರಿ
ಮಂಜೂರಾದ ಹುದ್ದೆಗಳು	36	139
ತುಂಬಲಾದ ಹುದ್ದೆಗಳು	32	86
ಖಾಲಿಯಿರುವ ಹುದ್ದೆಗಳು	04	53

ಜೂನಿಯರ್ ಕಾಲೇಜುಗಳ ಉಪನ್ಯಾಸಕರು

ಮಂಜೂರಾದ ಹುದ್ದೆ	29
ತುಂಬಿದ ಹುದ್ದೆ	17
ಖಾಲಿಯಿರುವ ಹುದ್ದೆ	12

ಈ) ಖಾಲಿ ಇರುವ ಬೋಧಕರ ಹುದ್ದೆಗಳ ವಿವರ :

1.	ಸರ್ಕಾರಿ ಪ್ರೌಢಶಾಲಾ ಶಿಕ್ಷಕರು	53
2.	ಖಾಸಗಿ ಅನುದಾನಿತ ಪ್ರೌಢ ಶಾಲಾ ಶಿಕ್ಷಕರು	04
3.	ಸರ್ಕಾರಿ ಜೂನಿಯರ್ ಕಾಲೇಜು ಉಪನ್ಯಾಸಕರು	12
	ಒಟ್ಟು (ಅರವತ್ತೊಂಬತ್ತು)	69

1 .ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 53 ಶಿಕ್ಷಕರ ಹುದ್ದೆಗಳನ್ನು ವಿಭಾಗ ಮಟ್ಟದ ನೇಮಕಾತಿ ಮುಖಾಂತರ ತುಂಬಲು ಕ್ರಮ ಕೈಕೊಳ್ಳಲಾಗುತ್ತಿದೆ.

2. ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 4 ಶಿಕ್ಷಕರ ಹುದ್ದೆಗಳನ್ನು ಸರ್ಕಾರಿ ಆದೇಶದ ಸಂಖ್ಯೆ ಎಷ್ಟಿ 1 ಬಿಇಎಂ 93, ದಿನಾಂಕ 26-3-93ರ ಅನ್ವಯ ತುಂಬಲು ಅವಕಾಶ ಮಾಡಿದೆ.

3. ಸರ್ಕಾರಿ ಜ್ಯೂನಿಯರ್ ಕಾಲೇಜುಗಳಲ್ಲಿರುವ 12 ಉಪನ್ಯಾಸಕರ ಹುದ್ದೆಗಳನ್ನು ಮುಂಬಡ್ತಿಯ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮೂಡಿಗೆರೆ ಪ್ರಥಮ ದರ್ಜೆ ಕಾಲೇಜಿನ ಬಗ್ಗೆ

238 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಮಂಜೂರಾತಿ ಯಾವಾಗ ದೊರೆಯಿತು?

ಆ) ಆ ಕಾಲೇಜಿಗೆ ಡಿ.ಎಸ್. ಬಿಳೀಗೌಡ ಕಾಲೇಜೆಂದು ಯಾವಾಗ ಹೆಸರಿಡಲಾಯಿತು?

ಇ) ಸ್ವಂತ ಕಟ್ಟಡ ಕಟ್ಟದೆ "ಡಿ.ಎಸ್. ಬಿಳೀಗೌಡ" ಪ್ರಥಮ ದರ್ಜೆ ಕಾಲೇಜು ಎಂದು ಹೇಗೆ ಸರ್ಕಾರ ಆದೇಶ ಹೊರಡಿಸಿತು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು) :

ಅ) ಸರ್ಕಾರದ ಆದೇಶ ಸಂಖ್ಯೆ: ಇಡಿ 24 ಎಂಯೂಸ್ 83 ದಿನಾಂಕ 26-6-83ರ ಮೇರೆಗೆ 1993-94ನೇ ಸಾಲಿನಲ್ಲಿ ಮೂಡಿಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲು ಮಂಜೂರಾತಿ ದೊರೆಯಿತು.

ಆ) 8:9-12-87 ರಂದು "ಡಿ.ಎಸ್. ಬಿಳೀಗೌಡ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ" ಎಂದು ನಾಮಕರಣ ಮೂಡಲು ಸರ್ಕಾರ ಅನುಮೋದನೆ ನೀಡಿದೆ.

ಇ) ಸರ್ಕಾರಿ ಆದೇಶ ಸಂಖ್ಯೆ: ಇಡಿ 22 ಬಿಜಿಓ 88 ದಿನಾಂಕ 7-4-88ರ ಪ್ರಕಾರ ಕನಿಷ್ಠ 1 ಲಕ್ಷ ರೂಪಾಯಿಗಳನ್ನು ವಂತಿಗೆ ನೀಡಿದ ದಾನಿಗಳ ಹೆಸರಿನಲ್ಲಿ ದಾನಿಗಳು ಇಷ್ಟಪಟ್ಟ ಹೆಸರಿನಲ್ಲಿ ಸರ್ಕಾರಿ ವಿದ್ಯಾಸಂಸ್ಥೆಗಳನ್ನು ನಾಮಕರಣ ಮಾಡಬಹುದೆಂದು ಆದೇಶ ನೀಡಿರುವ ಹಿನ್ನೆಲೆಯಲ್ಲಿ ಕಾಲೇಜು ಶಿಕ್ಷಣ ನಿರ್ದೇಶಕರು ಕ್ರಮ ಕೈಗೊಂಡಿರುತ್ತಾರೆ.

Introduction of Vocational Courses in Junior Colleges

255 - Sri Sadat Ali Khan (Channapatna): Will the Minister for Adult & Vocational Education be pleased to state?

a) The total number of Vocational Courses introduced in the State (detailss may be furnished):

b) The number of vocational courses sanctioned to Channapatna taluk since last 3 years (details may be furnished)

c) Whether the proposals are pending with the Government (Govt. Junior College for boys and Govt. P.U. College for girls Channapatna) for sanction of Vocational Courses.

d) The Action taken by the Government to sanction the same?

Sri. Prabhakar S. Rane (Minister for Adult & Vocational Education).

a) 1027 courses

(Details enclosed)

b) Total Courses sanctioned-7 Details of courses sanctioned are as under:

Sl.No.	Name of the college	year	No.of sanctiond courses
1)	Govt. Polytechnic Channapatna	1991-92	One Rural Water supply
2)	Kuvempu Comp. PUC Kengal	1992-93	Two 1) X-Ray Technician 2) LaboratoryTechnician
3)	Nehru PUC Honganur, Channapatna	1992-93	One Sericulture
4)	Akkur Hosahally PUC hosally, Channapatna taluk	1993-94	One Sericulture
5)	Smt. Yeshodamma, Borappa PUC Mattikereshetty halli, Channapatna	1993-94	one Sericulture
6)	Govt. PUC for Boys Channapatna	1993-94	One Laboratory Technician

c) No proposal is pending with Government.

d) Question does not arise.

List of Institutions offering Vocational Courses in Karnataka During : 1992-93 & 1993-94

Sl.No.	Name of the Institution	Name of the Course
	Bangalore Urban District	
1.	Sri. Jagadaguru Renukacharya College Race Course Road, Bangalore.9	1. Accountancy & Auditing. 2. Accountancy and Taxation.
2.	MES College of Science Malleshwaram. Bangalore-3.	1. Computer Techniques. 2. Laboratory Technician. 3. Banking 4. Materials Management Technology. 5. Pre-school Education.
3.	V.V. Puram Science college, K.R. Road, Bangalore-4.	1. Computer Techniques. 2. 'X' Ray Technician 3. Laboratory Technician 4. Banking 5. Sericulture
4.	Vivekananda Jr. College, Rajajinagar, Bangalore.55.	1. Electrical Wiring 2. Laboratory Technician. 3. TV & Radio Servicing. 4. Computer Techniques. 5. Accountancy and Taxation.
5.	BES Jr. College Jayanagar, Bangalore-11.	1. Automobile Servicing. 2. Library Science. 3. Laboratory Technician. 4. Computer Techniques.
6.	Bharathiya Samskrithi Vidyapeeta Jr. College, Vijayanagar, Bangalore-40.	1. Accountancy and Taxation. 2. Library Science.
7.	Govt. Jr. College (old Fort) Chamarajpet, Bangalore.18.	1. Eleetircal wiring 2. Library Science.
8.	Vanivilas Govt. Girls Jr.College, Fort, Bangalore-2.	1. Clothing & Embroidery.

9.	Govt. Girls. Jr. college, Malleswarm Bangalore. 3, 13th crosss.	1. Banking
10.	Govt. Jr. College, Anekal.	1. Banking. 2. Accountancy & Auditing.
11.	Sri. Gandhadakavalu Jr. College, Vijayanagar, North Bangalore.	1. Sericulture. 2. Laboratory Technician 3. Automobile Servicing.
12.	Govt. Jr. College. Hessaraghatta Bangalore.	1. Dairying 2. Horticulture
ಎ) ಸರ್ಕಾರಿ ಕಾಲೇಜುಗಳಲ್ಲಿ ಖಾಲಿಯಿರುವ ಉಪನ್ಯಾಸಕರುಗಳು ಹುದ್ದೆಗಳ ವಿವರ; (ಕಾಲೇಜುವಾರು ಮತ್ತು ವಿಷಯವಾರು ವಿವರಗಳನ್ನು ಒದಗಿಸುವಉದು);

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಅನುಬಂಧ-1ರಲ್ಲಿ ವಿವರಗಳನ್ನು ಒದಗಿಸಲಾಗಿದೆ.

ಅನುಬಂಧ - 1

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಖಾಲಿ ಇರುವ ಹುದ್ದೆಗಳ ವಿವರ		
ಜಿಲ್ಲೆ : ಬೆಂಗಳೂರು				
1	ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು	ಸಂಖ್ಯಾಶಾಸ್ತ್ರ	-	02
2	ಮಹಾರಾಣಿ ಕಲಾ ಕಾಲೇಜು, ಬೆಂಗಳೂರು	ತಮಿಳು	-	02
		ಸಂಖ್ಯಾಶಾಸ	-	01
3	ಮಹಾರಾಣಿ ವಿಜ್ಞಾನ ಕಾಲೇಜು, ಬೆಂಗಳೂರು	ಭೌತಶಾಸ್ತ್ರ	-	01
		ರಸಾಯನಶಾಸ್ತ್ರ	-	04
		ಎಲೆಕ್ಟ್ರಾನಿಕ್ಸ್	-	01
		ಸಸ್ಯಶಾಸ್ತ್ರ	-	01
4	ಶ್ರೀಮತಿ ವಿಹೆಚ್ಡಿ ಗೃಹ ವಿಜ್ಞಾನ ಸಂಸ್ಥೆ, ಬೆಂಗಳೂರು	ಗೃಹ ವಿಜ್ಞಾನ	-	11
5	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪುರಂ	ಹಿಂದಿ	-	01
		ಇತಿಹಾಸ	-	01
		ವಾಣಿಜ್ಯಶಾಸ್ತ್ರ	-	01
		ಗಣಿತಶಾಸ್ತ್ರ	-	01
6	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಪಟ್ಟಣ	ಕನ್ನಡ	-	01
7	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಗಡಿ	ಕನ್ನಡ	-	01
8	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೊಡ್ಡಬಳ್ಳಾಪುರ	ಕನ್ನಡ	-	01
		ಸಮಾಜಶಾಸ್ತ್ರ	-	01
9	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೇವನಹಳ್ಳಿ	ಸಮಾಜಶಾಸ್ತ್ರ	-	01
10	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ	ಅರ್ಥಶಾಸ್ತ್ರ	-	01
11	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುದೂರು	ಆಂಗ್ಲಭಾಷೆ	-	01
		ರಾಜ.ಶಾಸ.	-	01

12	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಯಮಹಲ್	ಆಂಗ್ಲಭಾಷೆ	-	02
		ಕನ್ನಡ	-	02
		ಹಿಂದಿ	-	01
		ಉರ್ದು	-	01
		ಇತಿಹಾಸ	-	01
		ಅರ್ಥಶಾಸ್ತ್ರ	-	01
		ಸಮಾಜಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
		ಮನಃಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	03
		ಭೌತಶಾಸ್ತ್ರ	-	03
		ಗಣಿತಶಾಸ್ತ್ರ	-	01
		ಗಣಕವಿಜ್ಞಾನ	-	02
		ಒಟ್ಟು		54

ಜಿಲ್ಲೆ : ಕೋಲಾರ

1.	ಸರ್ಕಾರಿ ಬಾಲಕರ ಕಾಲೇಜು, ಕೋಲಾರ	ಆಂಗ್ಲಭಾಷೆ	-	02
		ಕನ್ನಡ	-	02
		ಅರ್ಥಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ	-	01
		ಭೌತಶಾಸ್ತ್ರ	-	01
		ರಸಾಯನಶಾಸ್ತ್ರ	-	03
2	ಸರ್ಕಾರಿ ಮಹಿಳಾ ಕಾಲೇಜು, ಕೋಲಾರ	ಆಂಗ್ಲಭಾಷೆ	-	02
		ಕನ್ನಡ	-	02
		ಇತಿಹಾಸ	-	01
		ಸಮಾಜಶಾಸ್ತ್ರ	-	02
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	02
		ಭೌತಶಾಸ್ತ್ರ	-	02
		ರಸಾಯನಶಾಸ್ತ್ರ	-	03
		ಸಸ್ಯಶಾಸ್ತ್ರ	-	01
		ಪ್ರಾಣಿಶಾಸ್ತ್ರ	-	01
3	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಗಾರುಪೇಟೆ	ಆಂಗ್ಲಭಾಷೆ	-	01
		ಉರ್ದು	-	01
		ವಾಣಿಜ್ಯಶಾಸ್ತ್ರ	-	01
4	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀನಿವಾಸಪುರ	ಕನ್ನಡ	-	01

		ಇತಿಹಾಸ	-	01
		ಅರ್ಥಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
5	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಂತಾಮಣಿ	ಆಂಗ್ಲಭಾಷೆ	-	01
		ಕನ್ನಡ	-	04
		ಉರ್ದು	-	01
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	02
		ಭೌತಶಾಸ್ತ್ರ	-	04
		ರಸಾಯನಶಾಸ್ತ್ರ	-	02
		ಸಸ್ಯಶಾಸ್ತ್ರ	-	01
		ಪ್ರಾಣಿಶಾಸ್ತ್ರ	-	01
6	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಬಳ್ಳಾಪುರ	ಕನ್ನಡ	-	03
		ಆಂಗ್ಲಭಾಷೆ	-	04
		ಸಂಸ್ಕೃತ	-	01
		ಇತಿಹಾಸ	-	01
		ಸಮಾಜಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	02
		ಭೌತಶಾಸ್ತ್ರ	-	01
		ಪ್ರಾಣಿಶಾಸ್ತ್ರ	-	03
		ರೇಷ್ಮೆ ಕೃಷಿ	-	01
7	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಳಬಾಗಿಲು	ಕನ್ನಡ	-	01
		ಆಂಗ್ಲಭಾಷೆ	-	01
		ಸಮಾಜಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
		ರಸಾಯನಶಾಸ್ತ್ರ	-	01
		ಗಣಿತಶಾಸ್ತ್ರ	-	01
8	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಲೂರು	ಸಮಾಜಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
9	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಡ್ಲಘಟ್ಟ	ಅರ್ಥಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	02
		ಒಟ್ಟು		82

ಜಿಲ್ಲೆ : ತುಮಕೂರು

	ಸರ್ಕಾರಿ ಕಲಾ ಕಾಲೇಜು, ತುಮಕೂರು	ಕನ್ನಡ	-	02
		ಆಂಗ್ಲಭಾಷೆ	-	03

2	ಸರ್ಕಾರಿ ವಿಜ್ಞಾನ ಕಾಲೇಜು, ತುಮಕೂರು	ಕನ್ನಡ	-	02
		ಆಂಗ್ಲಭಾಷೆ	-	02
		ಭೌತಶಾಸ್ತ್ರ	-	02
		ರಸಾಯನಶಾಸ್ತ್ರ	-	04
		ಸಸ್ಯಶಾಸ್ತ್ರ	-	01
3	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್	ಅರ್ಥಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
4	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ	ಇತಿಹಾಸ	-	01
		ಅರ್ಥಶಾಸ್ತ್ರ	-	01
5	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ	ಆಂಗ್ಲಭಾಷೆ	-	01
		ಇತಿಹಾಸ	-	01
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
6	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾ	ಕನ್ನಡ	-	03
		ಆಂಗ್ಲಭಾಷೆ	-	02
		ಇತಿಹಾಸ	-	01
		ಸಮಾಜಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	02
		ಭೌತಶಾಸ್ತ್ರ	-	01
		ರಸಾಯನಶಾಸ್ತ್ರ	-	01
7	ಸರ್ಕಾರಿ ಪ್ರಥಮದರ್ಜೆ ಕಾಲೇಜು, ತುರುವೇಕೆರೆ	ಕನ್ನಡ	-	01
		ಅರ್ಥಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	02
8	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ	ಅರ್ಥಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
9	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕನಾಯಕನಹಳ್ಳಿ	ಆಂಗ್ಲಭಾಷೆ	-	01
		ಇತಿಹಾಸ	-	01
		ವಾಣಿಜ್ಯಶಾಸ್ತ್ರ	-	02
10	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಳಿಯೂರು	ಕನ್ನಡ	-	01
		ಆಂಗ್ಲಭಾಷೆ	-	01
		ಇತಿಹಾಸ	-	01
		ಒಟ್ಟು		50

ಜಿಲ್ಲೆ : ಮಂಡ್ಯ

1	ಸರ್ಕಾರಿ ಬಾಲಕರ ಕಾಲೇಜು, ಮಂಡ್ಯ	ಆಂಗ್ಲಭಾಷೆ	-	01
		ಭೌತಶಾಸ್ತ್ರ	-	01
		ರಸಾಯನಶಾಸ್ತ್ರ	-	02

		ಪ್ರಾಣಿಶಾಸ್ತ್ರ	-	01
		ರೇಷ್ಮೆ ಕೃಷಿ	-	01
2	ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ	ಕನ್ನಡ	-	02
		ಆಂಗ್ಲಭಾಷೆ	-	01
		ಅರ್ಥಶಾಸ್ತ್ರ	-	01
		ಭೌತಶಾಸ್ತ್ರ	-	02
		ಪ್ರಾಣಿಶಾಸ್ತ್ರ	-	01
3.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀರಂಗಪಟ್ಟಣ	ಅರ್ಥಶಾಸ್ತ್ರ	-	01
4.	ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕೆ.ಆರ್.ಪೇಟೆ	ಅರ್ಥಶಾಸ್ತ್ರ	-	02
		ವಾಣಿಜ್ಯಶಾಸ್ತ್ರ	-	01
		ಒಟ್ಟು		17
ಜಿಲ್ಲೆ :	ಮೈಸೂರು			
1	ಮಹಾರಾಣಿ ಕಲಾ ಕಾಲೇಜು, ಮೈಸೂರು	ಅರ್ಥಶಾಸ್ತ್ರ	-	01
2	ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು	ಗಣಿತಶಾಸ್ತ್ರ	-	01
		ಸಂಖ್ಯಾಶಾಸ್ತ್ರ	-	01
		ಸಸ್ಯಶಾಸ್ತ್ರ	-	02
		ರೇಷ್ಮೆ ಕೃಷಿ	-	01
3	ಶ್ರೀ ಮಹಾದೇಶ್ವರ ಕಾಲೇಜು, ಕೊಳ್ಳೆಗಾಲ	ಕನ್ನಡ	-	02
		ಆಂಗ್ಲಭಾಷೆ	-	02
		ಅರ್ಥಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
		ರಸಾಯನಶಾಸ್ತ್ರ	-	01
4	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಗ್ಗಡದೇವನಕೋಟೆ	ಅರ್ಥಶಾಸ್ತ್ರ	-	01
5	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ನಗರ	ಕನ್ನಡ	-	01
		ಅರ್ಥಶಾಸ್ತ್ರ	-	01
		ಪ್ರಾಣಿಶಾಸ್ತ್ರ	-	01
6	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು	ಅರ್ಥಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	02
7	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಿರಿಯಾಪಟ್ಟಣ	ಕನ್ನಡ	-	01
		ಇತಿಹಾಸ	-	01
		ಅರ್ಥಶಾಸ್ತ್ರ	-	02
		ವಾಣಿಜ್ಯಶಾಸ್ತ್ರ	-	01
8	ಸರ್ಕಾರಿ ಪ್ರಥಮದರ್ಜೆ ಕಾಲೇಜು, ಹನೂರು	ಕನ್ನಡ	-	01
		ಆಂಗ್ಲಭಾಷೆ	-	01
		ರಾಜ್ಯಶಾಸ್ತ್ರ	-	01

		ವಾಣಿಜ್ಯಶಾಸ್ತ್ರ	-	01
9	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ	ಕನ್ನಡ	-	01
		ಅರ್ಥಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
		ಒಟ್ಟು		32

ಜಿಲ್ಲೆ : ಹಾಸನ

1	ಸರ್ಕಾರಿ ಕಲಾ ಕಾಲೇಜು, ಹಾಸನ	ಕನ್ನಡ	-	03
		ಆಂಗ್ಲಭಾಷೆ	-	01
		ಅರ್ಥಶಾಸ್ತ್ರ	-	03
		ಸಮಾಜಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
2	ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ	ಆಂಗ್ಲಭಾಷೆ	-	01
		ಸಂಸ್ಕೃತ	-	01
		ಭೌತಶಾಸ್ತ್ರ	-	02
		ರಸಾಯನಶಾಸ್ತ್ರ	-	01
		ಗಣಿತಶಾಸ್ತ್ರ	-	02
		ರೇಷ್ಮೆ ಕೃಷಿ	-	01
3	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ	ಅರ್ಥಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
		ಎಲೆಕ್ಟ್ರಾನಿಕ್ಸ್	-	01
4	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಕಲೇಶಪುರ	ಆಂಗ್ಲಭಾಷೆ	-	01
		ಅರ್ಥಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	02
5	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಕಲಗೂಡು	ಕನ್ನಡ	-	01
		ಆಂಗ್ಲಭಾಷೆ	-	01
		ಇತಿಹಾಸ	-	01
		ವಾಣಿಜ್ಯಶಾಸ್ತ್ರ	-	01
6	ಸರ್ಕಾರಿ ಪ್ರಥಮದರ್ಜೆ ಕಾಲೇಜು ಬೇಲೂರು.	ಕನ್ನಡ	-	01
		ಆಂಗ್ಲಭಾಷೆ	-	01
		ಹಿಂದಿ	-	01
		ಸಂಸ್ಕೃತ	-	01
		ಉರ್ದು	-	01
		ಇತಿಹಾಸ	-	01
		ವಾಣಿಜ್ಯಶಾಸ್ತ್ರ	-	01
7	ಸರ್ಕಾರಿ ಪ್ರಥಮ ದರ್ಜೆ, ಕೊಣನೂರು.	ಕನ್ನಡ	-	02
		ಆಂಗ್ಲಭಾಷೆ	-	01
		ಇತಿಹಾಸ	-	01

		ಅರ್ಥಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	02
8	ಸರ್ಕಾರಿ ಪ್ರಥಮ ದರ್ಜೆ, ಜಾವಗಲ್.	ಅರ್ಥಶಾಸ್ತ್ರ	-	01
9	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಂಡಸಿ.	ಕನ್ನಡ	-	01
		ಅರ್ಥಶಾಸ್ತ್ರ	-	01
		ಒಟ್ಟು		45

ಜಿಲ್ಲೆ : ಧಾರವಾಡ

1.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರೇಕೆರೂರು.	ಕನ್ನಡ	-	01
		ಉರ್ದು	-	01
		ಇತಿಹಾಸ	-	01
		ಅರ್ಥಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
		ಭೂಗೋಳಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
2.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸವಣೂರು	ಹಿಂದಿ	-	01
		ಇತಿಹಾಸ	-	01
		ಅರ್ಥಶಾಸ್ತ್ರ	-	02
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
3.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಜೇಂದ್ರಗಡ.	ಇತಿಹಾಸ	-	01
		ಅರ್ಥಶಾಸ್ತ್ರ	-	02
		ಸಮಾಜಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
4.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ನರಗುಂದ	ಕನ್ನಡ	-	01
		ಇಂಗ್ಲೀಷ್	-	01
		ಹಿಂದಿ	-	01
		ಇತಿಹಾಸ	-	01
		ಅರ್ಥಶಾಸ್ತ್ರ	-	01
		ಭೌತಶಾಸ್ತ್ರ	-	01
		ಗಣಿತಶಾಸ್ತ್ರ	-	01
5.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರೋಣ.	ಇತಿಹಾಸ	-	01
		ಅರ್ಥಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
		ಭೂಗೋಳಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	02
		ಭೌತಶಾಸ್ತ್ರ	-	01

		ಗಣಿತಶಾಸ್ತ್ರ	-	01
		ಎಲೆಕ್ಟ್ರಾನಿಕ್ಸ್	-	01
6.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಕ್ಕಿಆಲೂರು.	ಇತಿಹಾಸ	-	01
		ಅರ್ಥಶಾಸ್ತ್ರ	-	01
		ಸಮಾಜಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
7	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಹಟ್ಟಿ.	ಕನ್ನಡ	-	01
		ಇತಿಹಾಸ	-	01
		ಸಮಾಜಶಾಸ್ತ್ರ	-	01
8	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಳ್ನಾವರ	ಇಂಗ್ಲೀಷ್	-	01
		ರಾಜ್ಯ ಶಾಸ್ತ್ರ	-	01
9.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಗುಡಿಗೇರಿ	ಕನ್ನಡ	-	01
		ರಾಜ್ಯಶಾಸ್ತ್ರ	-	01
10.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಕಾಪುರ	ಕನ್ನಡ	-	02
		ಆಂಗ್ಲಭಾಷೆ	-	02
		ಹಿಂದಿ	-	01
		ಉರ್ದು	-	01
		ಇತಿಹಾಸ	-	02
		ಅರ್ಥಶಾಸ್ತ್ರ	-	02
		ಸಮಾಜಶಾಸ್ತ್ರ	-	02
		ರಾಜ್ಯಶಾಸ್ತ್ರ	-	02
		ವಾಣಿಜ್ಯಶಾಸ್ತ್ರ	-	03
		ಒಟ್ಟು		64

ಜಿಲ್ಲೆ : ಉತ್ತರ ಕನ್ನಡ

1.	ಸರ್ಕಾರಿ ಕಾಲೇಜು, ಕಾರವಾರ	ಕನ್ನಡ	-	01
		ಆಂಗ್ಲಭಾಷೆ	-	01
		ಉರ್ದು	-	01
		ಭೌತಶಾಸ್ತ್ರ	-	01
2.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳಿಯಾಳ	ಅರ್ಥಶಾಸ್ತ್ರ	-	02
3.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಂಡಗೋಡು.	ಕನ್ನಡ	-	01
		ಅರ್ಥಶಾಸ್ತ್ರ	-	01
		ಸಮಾಜಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
4.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಯಲ್ಲಾಪುರ.	ಹಿಂದಿ	-	01
		ಇತಿಹಾಸ	-	01

	ಸಮಾಜಶಾಸ್ತ್ರ	-	01
	ವಾಣಿಜ್ಯಶಾಸ್ತ್ರ	-	01
	ಒಟ್ಟು		14
ಜಿಲ್ಲೆ: ಬಿಜಾಪುರ			
1. ಸರ್ಕಾರಿ ಪ್ರಥಮ ದರ್ಜೆ ಕಾಲೇಜು,	ಬೀಳಗಿ ಹಿಂದಿ	-	01
	ಇತಿಹಾಸ	-	01
	ಅರ್ಥಶಾಸ್ತ್ರ	-	01
	ರಾಜ್ಯಶಾಸ್ತ್ರ	-	01
	ವಾಣಿಜ್ಯಶಾಸ್ತ್ರ	-	01
2 ಸರ್ಕಾರಿ ಮಹಿಳಾ ಕಾಲೇಜು, ಜಮಖಂಡಿ	ಕನ್ನಡ	-	02
	ಆಂಗ್ಲಭಾಷೆ	-	02
	ಹಿಂದಿ	-	01
	ಉರ್ದು	-	01
	ಇತಿಹಾಸ	-	02
	ಅರ್ಥಶಾಸ್ತ್ರ	-	02
	ಸಮಾಜಶಾಸ್ತ್ರ	-	02
	ರಾಜ್ಯಶಾಸ್ತ್ರ	-	02
	ವಾಣಿಜ್ಯಶಾಸ್ತ್ರ	-	03
	ಒಟ್ಟು		22
ಜಿಲ್ಲೆ : ಬೆಳಗಾಂ			
1 ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ನೇಸರ್ಗಿ	ಕನ್ನಡ	-	01
	ಇತಿಹಾಸ	-	01
	ಅರ್ಥಶಾಸ್ತ್ರ	-	01
	ವಾಣಿಜ್ಯಶಾಸ್ತ್ರ	-	01
	ಒಟ್ಟು		04
ಜಿಲ್ಲೆ : ಕೊಡಗು			
1 ಸರ್ಕಾರಿ ಪ್ರಥಮ ದರ್ಜೆ ಕಾಲೇಜು,	ಕನ್ನಡ	-	02
ಕುಶಾಲನಗರ	ಆಂಗ್ಲಭಾಷೆ	-	01
	ಹಿಂದಿ	-	02
	ಅರ್ಥಶಾಸ್ತ್ರ	-	01
	ವಾಣಿಜ್ಯಶಾಸ್ತ್ರ	-	01
	ಒಟ್ಟು		07
ಜಿಲ್ಲೆ: ದಕ್ಷಿಣ ಕನ್ನಡ			
1 ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಬ್ರಿ	ಆಂಗ್ಲಭಾಷೆ	-	01
	ಹಿಂದಿ	-	01
	ವಾಣಿಜ್ಯಶಾಸ್ತ್ರ	-	02

2	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉಪ್ಪಿನಂಗಡಿ	ವಾಣಿಜ್ಯಶಾಸ್ತ್ರ -	01
		ವಾಣಿಜ್ಯಶಾಸ್ತ್ರ -	01
3.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ತಂಗಡಿ	ಇತಿಹಾಸ -	01
		ಸಮಾಜಶಾಸ್ತ್ರ -	01
		ವಾಣಿಜ್ಯಶಾಸ್ತ್ರ -	01
4.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೈಂದೂರು	ಅರ್ಥಶಾಸ್ತ್ರ -	01
		ವಾಣಿಜ್ಯಶಾಸ್ತ್ರ -	02
5.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಂಕರನಾರಾಯಣ	ಆಂಗ್ಲಭಾಷೆ -	01
		ಅರ್ಥಶಾಸ್ತ್ರ -	01
		ರಾಜ್ಯಶಾಸ್ತ್ರ	01
		ವಾಣಿಜ್ಯಶಾಸ್ತ್ರ -	02
6.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಳಾರೆ	ಹಿಂದಿ -	01
		ಅರ್ಥಶಾಸ್ತ್ರ	01
		ವಾಣಿಜ್ಯಶಾಸ್ತ್ರ -	02
7.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾರ್ಕಳ	ಬಿಸಿನೆಸ್ ಮ್ಯಾನೇಜ್‌ಮೆಂಟ್-	03
8.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಟ್ಟಂಪಾಡಿ	ಇತಿಹಾಸ -	01
		ಅರ್ಥಶಾಸ್ತ್ರ -	01
		ರಾಜ್ಯಶಾಸ್ತ್ರ	01
		ವಾಣಿಜ್ಯಶಾಸ್ತ್ರ -	02
9.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳೆಯಂಗಡಿ	ಇತಿಹಾಸ -	01
		ವಾಣಿಜ್ಯಶಾಸ್ತ್ರ -	02
10.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಾಮನಪದವು	ಕನ್ನಡ -	01
		ಆಂಗ್ಲಭಾಷೆ -	01
		ಅರ್ಥಶಾಸ್ತ್ರ	01
		ರಾಜ್ಯಶಾಸ್ತ್ರ	01
		ವಾಣಿಜ್ಯಶಾಸ್ತ್ರ -	01
11.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಪು	ಕನ್ನಡ -	01
		ಆಂಗ್ಲಭಾಷೆ -	01
		ಹಿಂದಿ -	01
		ಅರ್ಥಶಾಸ್ತ್ರ -	01
		ವಾಣಿಜ್ಯಶಾಸ್ತ್ರ -	01
12.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಟ್ಲ	ಕನ್ನಡ -	01
		ಅರ್ಥಶಾಸ್ತ್ರ	01
		ವಾಣಿಜ್ಯಶಾಸ್ತ್ರ -	01
13.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉಡುಪಿ	ಕನ್ನಡ -	02
		ಆಂಗ್ಲಭಾಷೆ -	02

	ಹಿಂದಿ	-	01
	ಉರ್ದು	-	01
	ಇತಿಹಾಸ	-	02
	ಅರ್ಥಶಾಸ್ತ್ರ	-	02
	ಸಮಾಜಶಾಸ್ತ್ರ	-	02
	ರಾಜ್ಯಶಾಸ್ತ್ರ	-	02
	ವಾಣಿಜ್ಯಶಾಸ್ತ್ರ	-	03
	ಒಟ್ಟು	-	61

ಜಿಲ್ಲೆ : ಗುಲ್ಬರ್ಗ

1.	ಸರ್ಕಾರಿ ಕಾಲೇಜು, ಗುಲ್ಬರ್ಗ	ಕನ್ನಡ	-	01
		ಹಿಂದಿ	-	01
		ಉರ್ದು	-	01
		ಇತಿಹಾಸ	-	02
		ಅರ್ಥಶಾಸ್ತ್ರ	-	02
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
		ಭೌತಶಾಸ್ತ್ರ	-	03
		ರಸಾಯನಶಾಸ್ತ್ರ	-	03
		ಎಲೆಕ್ಟ್ರಾನಿಕ್ಸ್	-	01
		ಸಸ್ಯಶಾಸ್ತ್ರ	-	04
		ಪ್ರಾಣಿಶಾಸ್ತ್ರ	-	01
		ರೇಷ್ಮೆ ಕೃಷಿ	-	01
		ಭೂಗರ್ಭಶಾಸ್ತ್ರ	-	01
2	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಯಾದಗಿರಿ	ಆಂಗ್ಲಭಾಷೆ	-	01
		ಹಿಂದಿ	-	01
		ಉರ್ದು	-	01
		ಇತಿಹಾಸ	-	01
		ಅರ್ಥಶಾಸ್ತ್ರ	-	02
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
3	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಜೇವರ್ಗಿ	ಇತಿಹಾಸ	-	01
		ಅರ್ಥಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
4	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಶಹಪುರ	ಅರ್ಥಶಾಸ್ತ್ರ	-	01
		ಇತಿಹಾಸ	-	02
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01

5	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಚಿತ್ತಾಪುರ	ಕನ್ನಡ -	01
		ಇತಿಹಾಸ -	01
6	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಸೇಡಂ	ಕನ್ನಡ -	01
		ಇತಿಹಾಸ -	01
		ಅರ್ಥಶಾಸ್ತ್ರ -	01
		ಸಮಾಜಶಾಸ್ತ್ರ -	01
7	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಫ್ಜಲ್ಪುರ	ಇತಿಹಾಸ -	01
		ಅರ್ಥಶಾಸ್ತ್ರ -	01
		ರಾಜ್ಯಶಾಸ್ತ್ರ -	01
		ವಾಣಿಜ್ಯಶಾಸ್ತ್ರ -	01
8	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುರುಮಿಟ್ಕಲ್	ಕನ್ನಡ -	01
		ಆಂಗ್ಲಭಾಷೆ -	01
		ಉರ್ದು -	01
		ಇತಿಹಾಸ -	01
		ಅರ್ಥಶಾಸ್ತ್ರ -	01
		ರಾಜ್ಯಶಾಸ್ತ್ರ -	01
		ವಾಣಿಜ್ಯಶಾಸ್ತ್ರ -	02
9	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಶೋರಾಪುರ	ಕನ್ನಡ -	01
		ಆಂಗ್ಲಭಾಷೆ -	01
		ಹಿಂದಿ -	01
		ಉರ್ದು -	01
		ಅರ್ಥಶಾಸ್ತ್ರ -	01
		ವಾಣಿಜ್ಯಶಾಸ್ತ್ರ -	01
10	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಕಮಲಾಪುರ	ಕನ್ನಡ -	01
		ಆಂಗ್ಲಭಾಷೆ -	01
		ಹಿಂದಿ -	01
		ಅರ್ಥಶಾಸ್ತ್ರ -	01
		ಸಮಾಜಶಾಸ್ತ್ರ -	01
		ವಾಣಿಜ್ಯಶಾಸ್ತ್ರ -	01
		ಒಟ್ಟು	69

ಜಿಲ್ಲೆ : ಬೀದರ್

1	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಬೀದರ್	ಕನ್ನಡ -	02
		ಹಿಂದಿ -	01
		ಉರ್ದು -	03
		ಇತಿಹಾಸ -	01
		ರಾಜ್ಯಶಾಸ್ತ್ರ -	02
		ಭೌತಶಾಸ್ತ್ರ -	01

		ಗಣಿತಶಾಸ್ತ್ರ	-	01
		ಒಟ್ಟು		11
ಜಿಲ್ಲೆ : ಬಳ್ಳಾರಿ				
1	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಕೂಡ್ಲಿಗಿ	ಆಂಗ್ಲಭಾಷೆ	-	01
		ಅರ್ಥಶಾಸ್ತ್ರ	-	01
		ಸಮಾಜಶಾಸ್ತ್ರ	-	01
2	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಗರಿಬೊಮ್ಮನಹಳ್ಳಿ	ಅರ್ಥಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
3	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಬಳ್ಳಾರಿ	ಕನ್ನಡ	-	02
		ಉರ್ದು	-	01
		ಇತಿಹಾಸ	-	002
		ಅರ್ಥಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
4	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಕಂಪ್ಲಿ	ಆಂಗ್ಲಭಾಷೆ	-	01
		ಅರ್ಥಶಾಸ್ತ್ರ	-	01
5	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಶಿರಗುಪ್ಪ	ಇತಿಹಾಸ	-	01
		ಅರ್ಥಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
		ಒಟ್ಟು		17
ಜಿಲ್ಲೆ : ರಾಯಚೂರು				
1	ಸರ್ಕಾರಿ ಕಾಲೇಜು, ಸಿಂಧನೂರು	ಕನ್ನಡ	-	02
		ಆಂಗ್ಲಭಾಷೆ	-	02
		ಇತಿಹಾಸ	-	02
		ಅರ್ಥಶಾಸ್ತ್ರ	-	02
		ರಾಜ್ಯಶಾಸ್ತ್ರ	-	02
		ವಾಣಿಜ್ಯಶಾಸ್ತ್ರ	-	03
3	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಯಲಬುರ್ಗಾ	ಆಂಗ್ಲಭಾಷೆ	-	01
		ಇತಿಹಾಸ	-	01
		ಅರ್ಥಶಾಸ್ತ್ರ	-	02
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
4	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಕುಷ್ಟಗಿ	ಇತಿಹಾಸ	-	01
		ಅರ್ಥಶಾಸ್ತ್ರ	-	02
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
5	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೇವದುರ್ಗ	ಕನ್ನಡ	-	01
		ಇತಿಹಾಸ	-	01

		ಅರ್ಥಶಾಸ್ತ್ರ	-	02
		ರಾಜ್ಯಶಾಸ್ತ್ರ	-	01
		ಮನಃಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	02
6	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಗಂಗಾವತಿ	ಕನ್ನಡ	-	01
		ಆಂಗ್ಲಭಾಷೆ	-	01
		ಭೌತಶಾಸ್ತ್ರ	-	01
		ರಸಾಯನಶಾಸ್ತ್ರ	-	02
		ಸಸ್ಯಶಾಸ್ತ್ರ	-	01
7	ಸರ್ಕಾರಿ ಪ್ರಥಮದರ್ಜೆ ಕಾಲೇಜು, ರಾಯಚೂರು	ಕನ್ನಡ	-	02
		ಆಂಗ್ಲಭಾಷೆ	-	02
		ಹಿಂದಿ	-	01
		ಉರ್ದು	-	01
		ಇತಿಹಾಸ	-	02
		ಅರ್ಥಶಾಸ್ತ್ರ	-	02
		ಸಮಾಜಶಾಸ್ತ್ರ	-	02
		ರಾಜ್ಯಶಾಸ್ತ್ರ	-	02
		ವಾಣಿಜ್ಯಶಾಸ್ತ್ರ	-	03
		ಭೌತಶಾಸ್ತ್ರ	-	02
		ರಸಾಯನಶಾಸ್ತ್ರ	-	02
		ಗಣಿತಶಾಸ್ತ್ರ	-	01
		ಒಟ್ಟು		65
ಜಿಲ್ಲೆ	: ಶಿವಮೊಗ್ಗ			
1	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಶಿಕಾರಿಪುರ	ವಾಣಿಜ್ಯಶಾಸ್ತ್ರ	-	01
2	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಚನ್ನಗಿರಿ	ಆಂಗ್ಲಭಾಷೆ	-	01
		ಇತಿಹಾಸ	-	01
		ಅರ್ಥಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
		ಭೌತಶಾಸ್ತ್ರ	-	01
		ರಸಾಯನಶಾಸ್ತ್ರ	-	01
3	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಹೊಸನಗರ	ಅರ್ಥಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
4	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಸೊರಬ	ಇತಿಹಾಸ	-	01
		ರಾಜ್ಯಶಾಸ್ತ್ರ	-	01
5	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಆನವಟ್ಟಿ	ಇತಿಹಾಸ	-	01
		ಅರ್ಥಶಾಸ್ತ್ರ	-	01

		ಸಮಾಜಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
6	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ನ್ಯಾಮತಿ	ಅರ್ಥಶಾಸ್ತ್ರ	-	01
		ಸಮಾಜಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
7	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆಹೊನ್ನೂರು	ಇತಿಹಾಸ	-	01
		ಅರ್ಥಶಾಸ್ತ್ರ	-	01
		ಸಮಾಜಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
8	ಸರ್ಕಾರಿ ಮಹಿಳಾ ಕಾಲೇಜು, ಸಾಗರ	ಕನ್ನಡ	-	01
		ಆಂಗ್ಲಭಾಷೆ	-	01
		ಹಿಂದಿ	-	01
		ಇತಿಹಾಸ	-	01
		ಅರ್ಥಶಾಸ್ತ್ರ	-	01
		ರಾಜ್ಯಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
9	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭದ್ರಾವತಿ	ಕನ್ನಡ	-	02
		ಆಂಗ್ಲಭಾಷೆ	-	02
		ಹಿಂದಿ	-	01
		ಉರ್ದು	-	01
		ಇತಿಹಾಸ	-	02
		ಅರ್ಥಶಾಸ್ತ್ರ	-	02
		ಸಮಾಜಶಾಸ್ತ್ರ	-	02
		ರಾಜ್ಯಶಾಸ್ತ್ರ	-	02
		ವಾಣಿಜ್ಯಶಾಸ್ತ್ರ	-	03
		ಒಟ್ಟು		49

ಜಿಲ್ಲೆ : ಚಿತ್ರದುರ್ಗ

1	ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ	ಕನ್ನಡ	-	02
		ಆಂಗ್ಲಭಾಷೆ	-	01
		ಇತಿಹಾಸ	-	03
		ಸಮಾಜಶಾಸ್ತ್ರ	-	02
2	ಸರ್ಕಾರಿ ವಿಜ್ಞಾನ ಕಾಲೇಜು, ಚಿತ್ರದುರ್ಗ,	ಆಂಗ್ಲಭಾಷೆ	-	01
		ಭೌತಶಾಸ್ತ್ರ	-	02
		ರಸಾಯನಶಾಸ್ತ್ರ	-	02
		ಪ್ರಾಣಿಶಾಸ್ತ್ರ	-	01

3	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ	ಕನ್ನಡ	-	01
		ಆಂಗ್ಲಭಾಷೆ	-	01
		ಇತಿಹಾಸ	-	01
		ವಾಣಿಜ್ಯಶಾಸ್ತ್ರ	-	01
		ಭೌತಶಾಸ್ತ್ರ	-	01
		ರಸಾಯನಶಾಸ್ತ್ರ	-	01
4	ಸರ್ಕಾರಿ ಪ್ರಥಮದರ್ಜೆ ಕಾಲೇಜು, ಮೊಳಕಾಲ್ಮೂರು	ರಾಜ್ಯಶಾಸ್ತ್ರ	-	01
5	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ	ಕನ್ನಡ	-	01
		ಆಂಗ್ಲಭಾಷೆ	-	02
		ಇತಿಹಾಸ	-	02
		ಅರ್ಥಶಾಸ್ತ್ರ	-	01
		ವಾಣಿಜ್ಯಶಾಸ್ತ್ರ	-	01
		ಭೌತಶಾಸ್ತ್ರ	-	02
		ರಸಾಯನಶಾಸ್ತ್ರ	-	01
		ಸಸ್ಯಶಾಸ್ತ್ರ	-	01
		ಪ್ರಾಣಿಶಾಸ್ತ್ರ	-	02
6	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಯಕೊಂಡ	ಇತಿಹಾಸ	-	01
		ಸಮಾಜಶಾಸ್ತ್ರ	-	01
7	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ದಾವಣಗೆರೆ	ಕನ್ನಡ	-	01
		ಆಂಗ್ಲಭಾಷೆ	-	01
		ಅರ್ಥಶಾಸ್ತ್ರ	-	01
		ಸಮಾಜಶಾಸ್ತ್ರ	-	01
8	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಯೂರು	ಕನ್ನಡ	-	01
		ಆಂಗ್ಲಭಾಷೆ	-	01
		ಹಿಂದಿ	-	01
		ಭೌತಶಾಸ್ತ್ರ	-	02
		ಗಣಿತಶಾಸ್ತ್ರ	-	01
		ಎಲೆಕ್ಟ್ರಾನಿಕ್ಸ್	-	02
		ಗಣಕವಿಜ್ಞಾನ	-	02
		ಒಟ್ಟು		50

ಜಿಲ್ಲೆ: ಚಿಕ್ಕಮಗಳೂರು

1	ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜು, ಚಿಕ್ಕಮಗಳೂರು	ಕನ್ನಡ	-	03
		ಆಂಗ್ಲಭಾಷೆ	-	02
		ಸಂಸ್ಕೃತ	-	01
		ಭೌತಶಾಸ್ತ್ರ	-	03
		ರಸಾಯನಶಾಸ್ತ್ರ	-	02

		ಸಸ್ಯಶಾಸ್ತ್ರ	- 01
		ಪ್ರಾಣಿಶಾಸ್ತ್ರ	- 01
2	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ	ವಾಣಿಜ್ಯಶಾಸ್ತ್ರ	- 01
3	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಮೂಡಿಗೆರೆ	ಉರ್ದು	- 01
		ವಾಣಿಜ್ಯಶಾಸ್ತ್ರ	- 02
4	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನರಸಿಂಹರಾಜಪುರ	ಆಂಗ್ಲಭಾಷೆ	- 01
		ಅರ್ಥಶಾಸ್ತ್ರ	- 01
5	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಅಜ್ಜಂಪುರ	ಇತಿಹಾಸ	- 01
		ಅರ್ಥಶಾಸ್ತ್ರ	- 02
		ಸಮಾಜಶಾಸ್ತ್ರ	- 01
		ವಾಣಿಜ್ಯಶಾಸ್ತ್ರ	- 01
6	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಪಂಚನಹಳ್ಳಿ	ಕನ್ನಡ	- 01
		ಆಂಗ್ಲಭಾಷೆ	- 01
		ಇತಿಹಾಸ	- 01
		ರಾಜ್ಯಶಾಸ್ತ್ರ	- 01
		ವಾಣಿಜ್ಯಶಾಸ್ತ್ರ	- 01
7	ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಕಡೂರು	ಕನ್ನಡ	- 01
		ಅರ್ಥಶಾಸ್ತ್ರ	- 01
		ಸಮಾಜಶಾಸ್ತ್ರ	- 01
		ರಾಜ್ಯಶಾಸ್ತ್ರ	- 01
		ಒಟ್ಟು	33

ವಿಷಯವಾರು ಖಾಲಿ ಇರುವ ಒಟ್ಟು ಹುದ್ದೆಗಳ ವಿವರ

ಕ್ರಮ ಸಂಖ್ಯೆ	ವಿಷಯ	ಖಾಲಿಹುದ್ದೆಗಳ ಸಂಖ್ಯೆ
1	ಕನ್ನಡ	92
2	ಸಂಸ್ಕೃತ	04
3	ಹಿಂದಿ	24
4	ಆಂಗ್ಲಭಾಷೆ	76
5	ಉರ್ದು	20
6	ತಮಿಳು	01
7	ಇತಿಹಾಸ	71
8	ಅರ್ಥಶಾಸ್ತ್ರ	97
9	ಸಮಾಜಶಾಸ್ತ್ರ	38
10	ರಾಜ್ಯಶಾಸ್ತ್ರ	58
11	ಮನಃಶಾಸ್ತ್ರ	01

12	ಭೂಗೋಳಶಾಸ್ತ್ರ	02
13	ಬಿಸಿನೆಸ್ ಮ್ಯಾನೇಜ್ಮೆಂಟ್	03
14	ವಾಣಿಜ್ಯಶಾಸ್ತ್ರ	114
15	ಭೌತಶಾಸ್ತ್ರ	41
16	ರಸಾಯನಶಾಸ್ತ್ರ	36
17	ಗಣಿತಶಾಸ್ತ್ರ	11
18	ಎಲೆಕ್ಟ್ರಾನಿಕ್ಸ್	06
19	ಗಣಕ ವಿಜ್ಞಾನ	04
20	ಸಂಖ್ಯಾಶಾಸ್ತ್ರ	04
21	ಸಸ್ಯಶಾಸ್ತ್ರ	13
22	ಪ್ರಾಣಿಶಾಸ್ತ್ರ	13
23	ರೇಷ್ಮೆಕೃಷಿ	05
24	ಭೂಗರ್ಭಶಾಸ್ತ್ರ	01
25	ಗೃಹ ವಿಜ್ಞಾನ	11
	ಒಟ್ಟು	746

ಬಲ್ಕ್‌ವೆಂಡಿಂಗ್ ಬೂತ್‌ಗಳಲ್ಲಿ ಕಲಬೆರಕೆಯನ್ನು ತಪ್ಪಿಸುವುದು

346-ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಲ್ಕ್ ವೆಂಡಿಂಗ್ ಬೂತ್ ನಂ. 315, 316, 317 ಮತ್ತು 318 ಗಳನ್ನು ಯಾವಾಗ ಪ್ರಾರಂಭಿಸಲಾಯಿತು. ಹಾಗೂ ಆದರ ರಿಯಾಯಿತಿದಾರರ ಹೆಸರು ವಿಳಾಸಗಳೇನು?

ಆ) ಆ ಬೂತುಗಳಲ್ಲಿ ಇದುವರೆವಿಗೆ ಎಷ್ಟು ಬಾರಿ ಕಲಬೆರಕೆ ಹಾಗೂ ಚೆಕ್ ಬೌನ್ಸಿಂಗ್ ಪ್ರಕರಣಗಳು ಪತ್ತೆಯಾಗಿವೆ; (ಬೂತುವಾರು ವಿವರಗಳನ್ನು ನೀಡುವುದು)

ಇ) ಕಲಬೆರಕೆ ಪ್ರಕರಣಗಳು ಪತ್ತೆಯಾದ ತಕ್ಷಣವೇ ಅಂತಹ ಬೂತುಗಳ ಏಜೆನ್ಸಿಯನ್ನು ರದ್ದುಪಡಿಸುವ ಬಗ್ಗೆ (ಮೊದಲನೇ ಪ್ರಕರಣದಲ್ಲಿಯೇ) ದಿನಾಂಕ 11-1-93ರಂದು ನಡೆದ ಮಾತೃ ಡೈರಿಯ ವ್ಯವಸ್ಥಾಪಕ ಸಮಿತಿ ಸಭೆಯಲ್ಲಿ ತೀರ್ಮಾನ ಕೈಗೊಂಡಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ ನಿರಂತರವಾಗಿ ಕಲಬೆರಕೆ ಪ್ರಕರಣಗಳಲ್ಲಿ ತೊಡಗಿರುವ ಮೇಲ್ಕಂಡ ಬೂತುಗಳ ರಿಯಾಯಿತಿ ದಾರಿಕೆಯನ್ನು ಇದುವರೆವಿಗೂ ರದ್ದುಪಡಿಸದಿರಲು ಕಾರಣಗಳೇನು?

ಉ) ಮೇಲ್ಕಂಡ ಬೂತಿನ ರಿಯಾಯಿತಿದಾರರು ಮದರ್ ಡೈರಿ ನಿರ್ದೇಶಕರ ಹತ್ತಿರದ ಸಂಬಂಧಿಕರೆಂಬ ಒಂದೇ ಕಾರಣದಿಂದ ಈ ಬೂತುಗಳ ಸತತವಾಗಿ ಕಲಬೆರಕೆ ಪ್ರಕರಣಗಳಲ್ಲಿ ಸಿಲುಕಿದ್ದರೂ ಅವುಗಳ ಏಜೆನ್ಸಿಯನ್ನು ರದ್ದುಪಡಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?,

ಊ) ಹಾಗಿದ್ದಲ್ಲಿ ಸರ್ಕಾರ ಕೂಡಲೇ ಕ್ರಮಕೈಗೊಂಡು ನಾಗರೀಕರಿಗೆ ಉತ್ತಮ ಹಾಲನ್ನು ನೀಡುವ ದೃಷ್ಟಿಯಿಂದ ಮೇಲ್ಕಂಡ ಎಲ್ಲಾ ಬೂತುಗಳ ರಿಯಾಯಿತಿದಾರರನ್ನು ಕೂಡಲೇ ಬದಲಾಯಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಅನುಬಂಧದಲ್ಲಿ ತೋರಿಸಲಾಗಿದೆ.

ಆ)

ಕನ್ಸೆಷನರುಗಳ ಹೆಸರು	ಬೂತ್ ಸಂಖ್ಯೆ	ಕಲಬೆರಕೆ	ಚೆಕ್-ಬೌನ್ಸ್
-	315	06	08
ದೇವಪುತ್ರ	316	11	40
ಬಿ.ಆರ್. ಉಮೇಶ್	316	-	-
-	317	03	43
ವಿ. ಗೋವಿಂದರಾಜು	318	10	142
ಎಸ್.ಸಿ. ಧನಂಜಯ	318	02	19
ಕೆ. ನಟರಾಜ	318	-	-

ಇ) ಹೌದು.

ಈ) ಈಗಾಗಲೇ 316 ಮತ್ತು 318ರ ಇಬ್ಬರು ರಿಯಾಯಿತಿದಾರರನ್ನು ವಜಾ ಮಾಡಲಾಗಿದೆ.

ಉ) ಇಲ್ಲ ಈ ಬೂತುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಿಯಾಯಿತಿದಾರರು ನಿರ್ದೇಶಕರ ಸಂಬಂಧಿಕರಲ್ಲ.

ಊ) ಈಗಾಗಲೇ 316 ಮತ್ತು 318ರ ಬೂತುಗಳ ರಿಯಾಯಿತಿದಾರಿಕೆಯನ್ನು ಬದಲಾಯಿಸಲಾಗಿದೆ. ಕಲಬೆರಕೆ ಮತ್ತು ಇತರೆ ಪ್ರಕರಣಗಳು ಖಚಿತವಾದಲ್ಲಿ ನಿಯಮಾವಳಿ ಪ್ರಕಾರ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.

ಅನುಬಂಧ

ಬಲ್ಕ್ ವೆಂಡಿಂಗ್ ಬೂತ್ ಸಂಖ್ಯೆ : 315, 316, 317 ಮತ್ತು 318ರ ಕನ್ಸೇಷನರ್ಗಳ ಹೆಸರು ಮತ್ತು ವಿಳಾಸ

ಹೆಸರು ಮತ್ತು ವಿಳಾಸ ಶ್ರೀಯುತರಾದ	ಬೂತ್ ಸಂಖ್ಯೆ	ಪ್ರಾರಂಭಿಸಿದ ದಿನಾಂಕ	ಷರಾ
1. ಟಿ. ನಾಗರಾಜು ನಂ.ಪಿ.-68, 3ನೇ ಅಡ್ಡರಸ್ತೆ ನಾಗಪ್ಪಬ್ಲಾಕ್, ಬೆಂಗಳೂರು-21.	315	12-3-86	-
2. ದೇವಪುತ್ರ, ನಂ. 48, 2ನೇ ಅಡ್ಡರಸ್ತೆ, ಭಾಷ್ಯಂನಗರ, ಶ್ರೀರಾಮಪುರ, ಬೆಂಗಳೂರು-21.	316	12-3-86	ರಿಯಾಯಿತಿದಾರಿಕೆಯನ್ನು ದಿನಾಂಕ: 9-4-93 ರಂದು ರದ್ದು ಪಡಿಸಲಾಗಿದೆ.
3. ಬಿ.ಆರ್. ಉಮೇಶ ತಂದೆ ಎನ್. ರಾಮು, ನಂ. 70. 2ನೇ ಅಡ್ಡರಸ್ತೆ, ಶ್ರೀರಾಮಪುರ, ಬೆಂಗಳೂರು-21	316		ದಿನಾಂಕ 30-6-93 ರಂದು ಬೂತನ್ನು ಇವರ ವಶಕ್ಕೆ ನೀಡಲಾಗಿದೆ.

4.	ಟಿ.ಆರ್. ಚಂದ್ರಶೇಖರ್ ಜೆ-39, 3ನೇ ಅಡ್ಡರಸ್ತೆ, ಒಂದನೇ ಮುಖ್ಯರಸ್ತೆ, ಲಕ್ಷ್ಮೀನಾರಾಯಣಪುರ, ಬೆಂಗಳೂರು-21.	317	25-5-86	
5.	ವಿ. ಗೋವಿಂದರಾಜು, ನಂ: 41, ಎ.ಡಿ. ಬ್ಲಾಕ್ 4ನೇ ಮುಖ್ಯರಸ್ತೆ ಶ್ರೀರಾಮಪುರ, ಬೆಂಗಳೂರು-21.	318	9-1-87	ಕಲಬೆರಕೆ ಕಾರಣಗಳಿಗೆ ದಿನಾಂಕ 13-3-93 ರಂದು ರಿಯಾಯಿತಿ ದಾರಿಕೆಯನ್ನು ರದ್ದು ಪಡಿಸಲಾಗಿದೆ.
6.	ಎಸ್.ಸಿ. ಧನಂಜಯ, 30:1, 4ನೇ ಕ್ರಾಸ್, ಹೊಸಹಳ್ಳಿ, ಪೈಪ್ಲೈನ್, ಮಾಗಡಿರೋಡ್ (ಅಂಚೆ) ಬೆಂಗಳೂರು-23.	318		ದಿನಾಂಕ 13-3-93 ರಂದು ಬೂತನ್ನು ವಹಿಸಿಕೊಡಲಾಯಿತು. ಕಲಬೆರಕೆ ಕಾರಣ ಗಳಿಗಾಗಿ ದಿನಾಂಕ: 31-1-94ರಂದು ರಿಯಾಯಿತಿದಾರಿಕೆ ಯನ್ನು ರದ್ದು ಪಡಿಸಲಾಗಿದೆ.
7.	ಕೆ. ನಟರಾಜ್, ತಂದೆ, ಬಿ. ಕೆಂಪಯ್ಯ, 1721;8, 3ನೇ ಮುಖ್ಯರಸ್ತೆ ರಾಮಮೋಹನಪುರ, ಶ್ರೀರಾಮಪುರ, ಬೆಂಗಳೂರು-21.	318		ದಿನಾಂಕ:31-1-94 ರಂದು ಬೂತನ್ನು ವಹಿಸಲಾಗಿದೆ.

ಬೆಳಗಾಂ ತಾಲ್ಲೂಕು ಸೂಳೇಭಾವಿ ಮತ್ತು ಬಾಡಾ ಗ್ರಾಮಗಳಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು

375-ಶ್ರೀ ಕೆ. ಮೂಡಗೇಕರ್ ದೇಸಾಯಿ (ಬಾಗೇವಾಡಿ); ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ತಾಲ್ಲೂಕು,ಸೂಳೇಭಾವಿ ಮತ್ತು ಬಾಡಾ ಗ್ರಾಮಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಳಗಾಂ ತಾಲ್ಲೂಕಿನ ಈ ಗ್ರಾಮಗಳಿಗೆ 1994-95ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರವು ತಕ್ಷಣ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು):

ಅ) ಬಂದಿದೆ.

ಆ) ಇಲ್ಲ.

ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಸೇವೆ ನಿರ್ವಹಿಸುತ್ತಿರುವ ನೌಕರರು

388-ಶ್ರೀ ಕೆ.ಸಿ. ಮೊಡಗೇಕರ್ ದೇಸಾಯಿ (ಬಾಗೇವಾಡಿ): ಮಾನ್ಯ ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಸೇವೆ ನಿರ್ವಹಿಸುತ್ತಿರುವ ನೌಕರರನ್ನು ಸರ್ಕಾರಿ ಸೇವೆ ರೀತ್ಯಾ ಸಕ್ರಮಗೊಳಿಸುವುದು ಸರ್ಕಾರದ ನೀತಿಯಲ್ಲವೆ?

ಆ) ಹಾಗಿದ್ದಲ್ಲಿ, ವೃತ್ತಿ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು ರೂಪಿಸಲು ಮತ್ತು ಮಂಜೂರಾತಿ ನೀಡಲು ಎಷ್ಟು ಸಮಯಬೇಕಾಗುವುದು?

ಇ) ಹಾಗಿದ್ದಲ್ಲಿ 82 ಮಂದಿ ಪೂರ್ಣಕಾಲಿಕ ವೇತನ ಶ್ರೇಣಿಯ ಮತ್ತು 108 ಸಂಚಿತ ವೇತನ ಶ್ರೇಣಿಯಲ್ಲಿ ಸಕ್ರಮ ಗೊಳಿಸಲು ಸರ್ಕಾರಕ್ಕೆ ಭರಿಸುವ ಆರ್ಥಿಕ ಹೊರೆ ಎಷ್ಟು?

ಶ್ರೀ ಪ್ರಭಾಕರ ಎಸ್. ರಾಣೆ (ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ಪ್ರಸ್ತಾವನೆ ಬಂದಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ತಕ್ಷಣವೇ ವೃಂದ ಮತ್ತು ನೇಮಕಾತಿ ಪರಿಶೀಲನಾ ಸಮಿತಿ ಸಭೆ ಕರೆದು ಚರ್ಚಿಸಲಾಗುವುದು ಹಾಗೂ ಇತರೆ ಇಲಾಖೆ ಅಂದರೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖಾ (ಸೇವಾ ನಿಯಮಗಳು) ಹಣಕಾಸು ಇಲಾಖೆ; ಕಾನೂನು ಇಲಾಖೆಯೊಂದಿಗೆ ಸಮಾಲೋಚಿಸಲು ಸಮಯಬೇಕಾಗುವುದರಿಂದ ಆದ್ಯತೆ ಮೇರೆಗೆ ಕ್ರಮ ಜರುಗಿಸಲಾಗುವುದು.

	ಸಕ್ರಮಗೊಳಿಸಿದ್ದಲ್ಲಿ ಸರ್ಕಾರಕ್ಕೆ ತಗಲುವ ಹೊರೆ (ಲಕ್ಷ - ರೂ.ಗಳಲ್ಲಿ)
1) ಪೂರ್ಣಕಾಲಿಕ ವೇತನದಲ್ಲಿರುವ ನೌಕರರು-73	34.04
2) ಸಂಚಿತ ವೇತನ ರೂಪದಲ್ಲಿರುವ ನೌಕರರು-68	30.15
ಒಟ್ಟು	64.19

ಬೆಳಗಾಂ ತಾಲ್ಲೂಕಿನ ತಾರಿಹಾಳ ಮತ್ತು ಕಟ್ಟಿ ಗ್ರಾಮಗಳಿಗೆ ಜರೂರಾಗಿ ಪ್ರಾಥಮಿಕ ಪಶು ಚಿಕಿತ್ಸಾಲಯ

376-ಶ್ರೀ ಮೊಡಗೇಕರ್ ದೇಸಾಯಿ (ಬಾಗೇವಾಡಿ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ತಾಲ್ಲೂಕಿನ ತಾರಿಹಾಳ ಮತ್ತು ಕಟ್ಟಿ ಗ್ರಾಮಗಳಿಗೆ ಜರೂರಾಗಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ಅಗತ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ಗ್ರಾಮಗಳಿಗೆ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಕ್ರಮ ತೆಗೆದುಕೊಳ್ಳಲಾಗಿದೆಯೇ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಹೌದು.

ಆ) ಬೆಳಗಾಂ ಜಿಲ್ಲಾ ಪಂಚಾಯತ್ತಿಂದ ಪ್ರಸ್ತಾವನೆಯನ್ನು ಕೋರಲಾಗಿದೆ.

ಕನಕಪುರ ತಾಲ್ಲೂಕಿನಲ್ಲಿ ಹೊಸದಾಗಿ ಕಾಲೇಜನ್ನು ಪ್ರಾರಂಭಿಸುವುದು

368-ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು); ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನಕಪುರ ತಾಲ್ಲೂಕು ಮತ್ತು ಚೆನ್ನಪಟ್ಟಣ ತಾಲ್ಲೂಕು (ವಿರೂಪಾಕ್ಷಿಪುರ ಹೋಬಳಿ ಮಾತ್ರ) ವ್ಯಾಪ್ತಿಯಲ್ಲಿ ಹೊಸದಾಗಿ ಕಾಲೇಜುಗಳನ್ನು ಪ್ರಾರಂಭಿಸುವ ಯೋಜನೆ ಸರ್ಕಾರದ ಪ್ರಯತ್ನದಲ್ಲಿದೆಯೇ?

ಆ) ಇದ್ದಲ್ಲಿ ಅವುಗಳನ್ನು ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಬೆಳಗಾಂ ತಾಲ್ಲೂಕಿನಲ್ಲಿ ಮುಚ್ಚಂಡಿ ಮತ್ತು ತಾರಿಗಾಲ ಗ್ರಾಮಗಳಲ್ಲಿ ಪ್ರಾಥಮಿಕ ಪಶುಚಿಕಿತ್ಸಾಲಯ ಕೇಂದ್ರ.

194-ಶ್ರೀ ಮೊಡಗೇಕರ್ ದೇಸಾಯಿ (ಹಿರೇಬಾಗೇವಾಡಿ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ತಾಲ್ಲೂಕಿನ ಮುಚ್ಚಂಡಿ ಮತ್ತು ತಾರಿಗಾಳ ಗ್ರಾಮಗಳಲ್ಲಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ತೆರೆಯುವ ಪ್ರಸ್ತಾವನೆಯು ಸರ್ಕಾರದಲ್ಲಿ ಬಾಕಿ ಇದೆಯೇ?

ಆ) ಹಾಗಿದ್ದಲ್ಲಿ, ಸದರಿ ಗ್ರಾಮಗಳಿಗೆ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ತೆರೆಯದೇ ಇರಲು ಕಾರಣಗಳೇನು?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಹೌದು

ಆ) 1993-94ನೇ ಸಾಲಿನಲ್ಲಿ ಬೆಳಗಾಂ ಜಿಲ್ಲಾ ಯೋಜನೆಯಲ್ಲಿ ಹಣದ ಅಭಾವದಿಂದಾಗಿ ಪ್ರಾರಂಭ ಮಾಡಲು ಸಾಧ್ಯವಾಗಿರುವುದಿಲ್ಲ.

ಕನಕಪುರ ತಾಲ್ಲೂಕಿನಲ್ಲಿರುವ ಪ್ರೌಢ ಶಾಲೆಗಳು

195-ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನಕಪುರ ತಾಲ್ಲೂಕಿನಲ್ಲಿ ಇರುವ ಪ್ರೌಢಶಾಲೆಗಳ ಸಂಖ್ಯೆ ಎಷ್ಟು ಮತ್ತು ಯಾವ ಯಾವ ಗ್ರಾಮಗಳಲ್ಲಿವೆ.

ಆ) ಕನಕಪುರ ತಾಲ್ಲೂಕು ಮತ್ತು ಚೆನ್ನಪಟ್ಟಣ ತಾಲ್ಲೂಕುಗಳಲ್ಲಿ 1992ರಿಂದ ಈಚೆಗೆ ಎಷ್ಟು ಪ್ರೌಢ ಶಾಲೆಗಳನ್ನು ಹೊಸದಾಗಿ ಪ್ರಾರಂಭಿಸಲಾಗಿದೆ: ಹಾಗೂ ಎಲ್ಲಿ?

ಇ) ಇನ್ನೂ ಎಷ್ಟು ಪ್ರೌಢಶಾಲೆಗಳನ್ನು ಈ ತಾಲ್ಲೂಕಿನಲ್ಲಿ ಪ್ರಾರಂಭಿಸಲು ಸರ್ಕಾರದ ಯೋಜನೆಯಲ್ಲಿದೆ?

ಈ) ಸಾತನೂರು ಕ್ಷೇತ್ರದ ಯಾವ ಯಾವ ಶಾಲೆಗಳಲ್ಲಿ ಎಷ್ಟು ಶಿಕ್ಷಕರಿದ್ದಾರೆ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಸರ್ಕಾರಿ ಖಾಸಗಿ ಒಟ್ಟು
11 18 29
(ಗ್ರಾಮಗಳ ಪಟ್ಟಿ ಲಗತ್ತಿಸಿದೆ)

ಆ)	ಸರ್ಕಾರಿ	ಖಾಸಗಿ	ಒಟ್ಟು
	ಚೆನ್ನಪಟ್ಟಣ		
	ತಾ:1	3	4
	ಕನಕಪುರ		
	ತಾ:4	2	6

(ಪಟ್ಟಿ ಲಗತ್ತಿಸಿದೆ)

ಇ) ಸಂಬಂಧಪಟ್ಟ ಸಂಘ ಸಂಸ್ಥೆಗಳು ಹಾಗೂ ಪ್ರಾಧಿಕಾರದಿಂದ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆಗಳು ಬಂದ ನಂತರ ಸರ್ಕಾರಿ ಹಾಗೂ ಖಾಸಗಿ ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲನಾ ಸಮಿತಿಯಲ್ಲಿ ಪರಿಶೀಲಿಸಲಾಗುವುದು.

ಈ) ಸಾತನೂರು ಕ್ಷೇತ್ರದಲ್ಲಿ 109 ಶಿಕ್ಷಕರಿದ್ದಾರೆ (ಪಟ್ಟಿ ಲಗತ್ತಿಸಿದೆ)

ಕನಕಪುರ ತಾಲ್ಲೂಕಿನಲ್ಲಿರುವ ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆಗಳ ವಿವರ

ಸರ್ಕಾರಿ ಶಾಲೆಗಳು: ಪದವಿ ಪೂರ್ವ ಕಾಲೇಜುಗಳು

1. ಸರ್ಕಾರಿ ಪದವಿ ಪೂರ್ವ ಕಾಲೇಜು, ಹಾರೋಹಳ್ಳಿ
2. ಸರ್ಕಾರಿ ಬಾಲಕಿಯರ ಪ್ರೌಢಶಾಲೆ, ಕನಕಪುರ ಟೌನ್
3. ಸರ್ಕಾರಿ ಪ್ರೌಢಶಾಲೆ, ಚಿಕ್ಕಮುದವಾಡಿ
4. ಸರ್ಕಾರಿ ಪ್ರೌಢಶಾಲೆ, ತಡಸೀಕೊಪ್ಪ
5. ಸರ್ಕಾರಿ ಪ್ರೌಢಶಾಲೆ, ಅತ್ತೀಹಳ್ಳಿ
6. ಸರ್ಕಾರಿ ಪ್ರೌಢಶಾಲೆ, ಶಿವನಹಳ್ಳಿ
7. ಸರ್ಕಾರಿ ಪ್ರೌಢಶಾಲೆ, ಹೂಕುಂದ
8. ಸರ್ಕಾರಿ ಪ್ರೌಢಶಾಲೆ, ದೊಡ್ಡಮರಳವಾಡಿ
9. ಸರ್ಕಾರಿ ಪ್ರೌಢಶಾಲೆ, ಹ್ಯಾರಿಂದ್ಯಾಪನಹಳ್ಳಿ
10. ಸರ್ಕಾರಿ ಪ್ರೌಢಶಾಲೆ, ದೊಡ್ಡಆಲಹಳ್ಳಿ
11. ಸರ್ಕಾರಿ ಪ್ರೌಢಶಾಲೆ, ಬನಮಾಸಿ

ಅನುದಾನ ಸಹಿತ ಶಾಲೆಗಳು : ಪದವಿ ಪೂರ್ವ ಕಾಲೇಜುಗಳು

1. ಪುರಸಭಾ ಪದವಿ ಪೂರ್ವ ಕಾಲೇಜು, ಕನಕಪುರ ಟೌನ್
2. ಗ್ರಾಮಾಂತರ ವಿವಿಧೋದ್ದೇಶ ಪ್ರೌಢಶಾಲೆ, ಕನಕಪುರ ಟೌನ್
3. ಗ್ರಾಮಾಂತರ ಬಾಲಕಿಯರ ಪ್ರೌಢಶಾಲೆ, ಕನಕಪುರ ಟೌನ್
4. ಶ್ರೀ ನಿರ್ವಾಣಸ್ವಾಮಿ ವಸತಿ ಪ್ರೌಢಶಾಲೆ, ಶ್ರೀ ದೇಗುಲಮಠ ಕನಕಪುರ ತಾ:
5. ಶ್ರೀ ಶಾರದಾ ಪದವಿ ಪೂರ್ವ ಕಾಲೇಜು ಕೋಡಿಹಳ್ಳಿ
6. ವಿಶೋದಯ ಪ್ರೌಢಶಾಲೆ, ಕಷಯನದುರೆಡಿ

7. ಶ್ರೀರಾಮ ಪ್ರೌಢಶಾಲೆ, ಹೊಸದುರ್ಗ
8. ಗ್ರಾಮಾಂತರ ವಿದ್ಯಾಸಂಸ್ಥೆ, ಪ್ರೌಢಶಾಲೆ, ಸಾತನೂರು
9. ಮರಳವಾಡಿ ವಿದ್ಯಾಸಂಸ್ಥೆ, ಪ್ರೌಢಶಾಲೆ, ಮರಳವಾಡಿ
10. ಗ್ರಾಮಾಂತರ ಪ್ರೌಢಶಾಲೆ, ಹಾರೋಹಳ್ಳಿ
11. ಶ್ರೀ ಶಿವಯೋಗಿ ಮುನೀಶ್ವರಸ್ವಾಮಿ ಆಸನ ವಸತಿ ಪ್ರೌಢಶಾಲೆ, ಮರಳೇಗವಿಮಠ

ಅನುದಾನ ರಹಿತ ಪ್ರೌಢಶಾಲೆಗಳು : ಪದವಿ ಪೂರ್ವ ಕಾಲೇಜುಗಳು

1. ಶ್ರೀ ಮಹಾಲಿಂಗಸ್ವಾಮಿ ಗ್ರಾಮಾಂತರ ಪದವಿ ಪೂರ್ವ ಕಾಲೇಜು, ಹುಣಸನಹಳ್ಳಿ
2. ಆರ್.ಸಿ. ಶಂಬುಲಿಂಗೇಶ್ವರ ವಿದ್ಯಾಸಂಸ್ಥೆ, ಪ್ರೌಢಶಾಲೆ, ಹಾರೋಬೆಲೆ
3. ಜಿ.ಕೆ. ಎಂ. ವಿದ್ಯಾಸಂಸ್ಥೆ ಪ್ರೌಢಶಾಲೆ, ಐನೋರಗೊಲ್ಲಹಳ್ಳಿ
4. ಜಿ.ಕೆ.ಎಂ. ವಿದ್ಯಾಸಂಸ್ಥೆ ಪ್ರೌಢಶಾಲೆ, ಹಾರೋಹಳ್ಳಿ
5. ಸೆಂಟ್ ಮೈಖೇಲ್ ವಿದ್ಯಾ ಸಂಸ್ಥೆ ಆಂಗ್ಲ ಪ್ರೌಢಶಾಲೆ, ಕನಕಪುರ
6. ಸಂಗಮ ಪ್ರೌಢಶಾಲೆ, ಚಿಕ್ಕಕಬ್ಬಾಳು, ಕನಕಪುರ ತಾ:
7. ಜ್ಞಾನೋದಯ ಎಜುಕೇಷನ್ ಟ್ರಸ್ಟ್ ಪ್ರೌಢಶಾಲೆ, ತೆಂಗನಾಯಕನಹಳ್ಳಿ, ಕನಕಪುರ ತಾ.

ಚನ್ನಪಟ್ಟಣ ಮತ್ತು ಕನಕಪುರ ತಾಲ್ಲೂಕುಗಳಲ್ಲಿ 1992 ರಿಂದ ಈಚೆಗೆ ಮಂಜೂರಾಗಿರುವ ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆಗಳ ವಿವರದ ಪಟ್ಟಿ.

ಚೆನ್ನಪಟ್ಟಣ ತಾಲ್ಲೂಕು

ಸರ್ಕಾರಿ ಪ್ರೌಢಶಾಲೆಗಳು

1. ಸರ್ಕಾರಿ ಪ್ರೌಢಶಾಲೆ, ಬ್ಯಾಡರಹಳ್ಳಿ

ಖಾಸಗಿ ಪ್ರೌಢಶಾಲೆಗಳು

1. ಸೆಂಟ್ ಮೈಖೇಲ್ ಎಜುಕೇಷನ್ ಸೊಸೈಟಿ ಪ್ರೌಢಶಾಲೆ, ಚೆನ್ನಪಟ್ಟಣ
2. ಕುವೆಂಪು ಪ್ರೌಢಶಾಲೆ, ಚಿಳ್ಳಕೆರೆ
3. ಯೋಗ ನರಸಿಂಹ ಸ್ವಾಮಿ ಪ್ರೌಢಶಾಲೆ, ಬೇವೂರು, ಚೆನ್ನಪಟ್ಟಣ ತಾಲ್ಲೂಕು.

ಕನಕಪುರ ತಾಲ್ಲೂಕು

ಸರ್ಕಾರಿ ಪ್ರೌಢಶಾಲೆಗಳು

1. ಸರ್ಕಾರಿ ಪ್ರೌಢಶಾಲೆ, ಹ್ಯಾರಿಂದ್ಯಾವನಹಳ್ಳಿ
2. ಸರ್ಕಾರಿ ಪ್ರೌಢಶಾಲೆ, ದೊಡ್ಡ ಆಲಹಳ್ಳಿ
3. ಸರ್ಕಾರಿ ಪ್ರೌಢಶಾಲೆ, ದೊಡ್ಡಮರಳವಾಡಿ
4. ಸರ್ಕಾರಿ ಪ್ರೌಢಶಾಲೆ, ಬನವಾಸಿ

ಖಾಸಗಿ ಪ್ರೌಢಶಾಲೆಗಳು

1. ಸಂಗಮ ಪ್ರೌಢಶಾಲೆ,ಚಿಕ್ಕ ಕಬ್ಬಾಳು
2. ಜ್ಞಾನೋದಯ ಎಜುಕೇಷನ್ ಸೊಸೈಟಿ ಪ್ರೌಢಶಾಲೆ, ತೆಂಗನಾಯಕನಹಳ್ಳಿ.

ಸಾತನೂರು ಕ್ಷೇತ್ರದಲ್ಲಿರುವ ಶಾಲಾವಾರು ಶಿಕ್ಷಕರುಗಳ ಸಂಖ್ಯೆ

ಶಾಲೆಯ ಹೆಸರು	ಶಿಕ್ಷಕರ ಸಂಖ್ಯೆ
1. ಸರ್ಕಾರಿ ಪ್ರೌಢಶಾಲೆ, ಬ್ಯಾಡರ ಹಳ್ಳಿ, ಚೆನ್ನಪಟ್ಟಣ ತಾಲ್ಲೂಕು	02
2. ಸರ್ಕಾರಿ ಪ್ರೌಢಶಾಲೆ, ಕೋಡಂಬಳ್ಳಿ, ಚೆನ್ನಪಟ್ಟಣ ತಾಲ್ಲೂಕು	07
3. ಸರ್ಕಾರಿ ಪ್ರೌಢಶಾಲೆ, ದೊಡ್ಡಆಲಹಳ್ಳಿ, ಕನಕಪುರ ತಾಲ್ಲೂಕು	02
4. ಸರ್ಕಾರಿ ಪ್ರೌಢಶಾಲೆ, ಹೂಕುಂದ, ಕನಕಪುರ ತಾಲ್ಲೂಕು	04
5. ಸರ್ಕಾರಿ ಪ್ರೌಢಶಾಲೆ, ಅತ್ತಿಹಳ್ಳಿ, ಕನಕಪುರ ತಾಲ್ಲೂಕು	10
6. ಸರ್ಕಾರಿ ಪ್ರೌಢಶಾಲೆ, ಚೇರಿಂದ್ಯಾಪನಹಳ್ಳಿ, ಕನಕಪುರ ತಾಲ್ಲೂಕು	08
7. ಭಾರತ ಮಾತಾ ಪ್ರೌಢಶಾಲೆ, ಸಿಂಗರಾಜಪುರ, ಕನಕಪುರ ತಾಲ್ಲೂಕು	08
8. ಮಹಾಲಿಂಗೇಶ್ವರ ಸ್ವಾಮಿ ಪ್ರೌಢಶಾಲೆ, ಹುಣಸನಹಳ್ಳಿ ಕನಕಪುರ ತಾಲ್ಲೂಕು	08
9. ಶ್ರೀ ರಾಮ ಪ್ರೌಢಶಾಲೆ, ಹೊಸದುರ್ಗ, ಕನಕಪುರ ತಾಲ್ಲೂಕು	08
10. ವಿಶ್ವೋದಯ ಪ್ರೌಢಶಾಲೆ, ಕೃಷ್ಣಯ್ಯನದೊಡ್ಡಿ, ಕನಕಪುರ ತಾಲ್ಲೂಕು	08
11. ಆರ್. ಸಿ. ಪ್ರೌಢಶಾಲೆ, ಹಾರೋಬೆಲೆ ಕನಕಪುರ ತಾಲ್ಲೂಕು	06
12. ಶಾರದಾ ಪ್ರೌಢಶಾಲೆ, ಕೋಡೀಹಳ್ಳಿ, ಕನಕಪುರ ತಾಲ್ಲೂಕು	11
13. ಸ್ವರಾಜ್ಯ ಪ್ರೌಢಶಾಲೆ, ಐನೋರಗೊಲ್ಲಹಳ್ಳಿ, ಕನಕಪುರ ತಾಲ್ಲೂಕು	06
14. ಡಾ. ಬಿ.ಆರ್.ಅಂಬೇಡಕರ್ ಪ್ರೌಢಶಾಲೆ ಹೊಸಕಬ್ಬಾಳು ಕನಕಪುರ ತಾ	07
15. ಗ್ರಾಮಾಂತರ ಪ್ರೌಢಶಾಲೆ, ಸಾತನೂರು, ಕನಕಪುರ ತಾ:	14
ಒಟ್ಟು	109

ಅಧ್ಯಕ್ಷರು : ಮಂಡಿಸಲಾಯಿತು. ಇನ್ನು ವರದಿಯನ್ನು ಒಪ್ಪಿಸುವುದು.

ವರದಿಯನ್ನೊಪ್ಪಿಸುವುದು

ಶ್ರೀ ಆರ್. ಎನ್. ನಾಯ್ಕ (ಅಧ್ಯಕ್ಷರು, ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿ): ಮಾನ್ಯ ಅಧ್ಯಕ್ಷರೇ, ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯ ಪರವಾಗಿ 16ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನು ಮಂಡಿಸಲಾಯಿತು.

ಅಧ್ಯಕ್ಷರು : ಒಂದು ಪ್ರಕಟಣೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಗೋ.ರು. ಚನ್ನಬಸಪ್ಪ ಒಂದು ಪತ್ರ ಬಂದಿದೆ. ಅದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ.

ಪ್ರಕಟಣೆ

ಶ್ರೀ ಎ.ಎಸ್.ಕೌಜಲಗಿ ಅವರಲ್ಲಿ ಪುನಾಮಗಳು

ದಿನಾಂಕ 14-2-94 ರಂದು ವಿಧಾನಸಭೆಯ ಅಧಿವೇಶನದಲ್ಲಿ ಮಂಡ್ಯದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಡೆದಿರುವ ಪ್ರಸ್ತಾಪದ ಬಗ್ಗೆ ದಿನಾಂಕ 15-2-94ರ ದಿನಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಸಂಬಂಧ ತಮ್ಮಲ್ಲಿ ಕೆಳಕಂಡ ಸ್ಪಷ್ಟೀಕರಣ ನೀಡಬಯಸುತ್ತೇನೆ.

ಸಮ್ಮೇಳನದ ಉದ್ಘಾಟನಾ ಸಮಾರಂಭಕ್ಕೆ ಸೇರಿದ್ದ ಭಾರೀ ಪ್ರಮಾಣದ ಜನಸಂದಣಿ ಮಧ್ಯೆ ನಮ್ಮ ಗಮನಕ್ಕೆ ಬಾರದೆ ನಿರೂಪಕರೊಬ್ಬರು ವೇದಿಕೆಯಲ್ಲಿ ಪ್ರಕಟಣೆ ನೀಡಿ ಕೆಲವು ಶಾಸಕರುಗಳಿಗೆ ನೋವುಂಟು ಮಾಡಿರುವುದು ನಿಜ. ಈ ವಿಷಯ ತಿಳಿದು ಸ್ವಾಗತ ಸಮಿತಿಯ ಅಧ್ಯಕ್ಷರು ಪತ್ರಕರ್ತರೊಡನೆ ಮಾತನಾಡಿದಾಗ ಅಂದೇ ಕ್ಷಮೆ ಕೇಳಿದ್ದಾರೆ. ವೇದಿಕೆಯ ಮೇಲೂ ಇದನ್ನು ಪ್ರಕಟಿಸಿದ್ದಾರೆ.

ಸಮಾರಂಭ ಸಕಾಲದಲ್ಲಿ ಆರಂಭವಾಗಬೇಕಾಗಿತ್ತು. ಬೇಸರಗೊಂಡು ಹೋದ ಶಾಸಕರನ್ನು ಮತ್ತೆ ಕರೆಸಬೇಕೆನ್ನುವಷ್ಟರಲ್ಲಿ ಅವರು ಸ್ಥಳ ಬಿಟ್ಟಿದ್ದರಿಂದ ಮುಖತಃ ಅವರ ಕ್ಷಮೆ ಕೋರಲು ಆಗಲಿಲ್ಲ. ಇದರಲ್ಲಿ ಅವರಿಗೆ ಅವಮಾನ ಉಂಟು ಮಾಡಬೇಕೆಂಬ ಉದ್ದೇಶ ಸಾಹಿತ್ಯ ಪರಿಷತ್ತಿಗಾಗಲೀ, ಸ್ವಾಗತ ಸಮಿತಿಗಾಗಲೀ ಇರಲಿಲ್ಲ. ಈ ಘಟನೆ ಆಕಸ್ಮಿಕವಾಗಿ ಜರುಗಿ ಹೋಯಿತು. ಇದಕ್ಕಾಗಿ ಪರಿಷತ್ತಿಗೂ ತುಂಬಾ ವ್ಯಸನವೆನಿಸಿದೆ. ಇದಕ್ಕಾಗಿ ನಾನು ಮತ್ತೊಮ್ಮೆ ಮಾನ್ಯ ಶಾಸಕರಲ್ಲಿ ಕ್ಷಮೆ ಕೋರುತ್ತಿದ್ದೇನೆ.

ಶಾಸಕರು, ಸಾಹಿತಿಗಳು, ಸ್ವಾಗತ ಸಮಿತಿಯವರು ಮತ್ತು ಇತರ ವಿಶೇಷ ಆಹ್ವಾನಿತರಿಗೆ ಪ್ರತ್ಯೇಕ ಆಸನಗಳ ವ್ಯವಸ್ಥೆ ಮಾಡಲಾಗಿತ್ತು. ಆದರೆ ಸಹಸ್ರಾರು ಜನರು ಪ್ರವಾಹದಂತೆ ಸಮ್ಮೇಳನ ಮಂಟಪಕ್ಕೆ ಬಂದ ಕಾರಣ ಆಸನಗಳ ವ್ಯವಸ್ಥೆಯಲ್ಲಿ ಅಸ್ತವ್ಯಸ್ತತೆ ಉಂಟಾಯಿತು. ದೊಡ್ಡ ಪ್ರಮಾಣದ ಕಾರ್ಯಗಳನ್ನು ಮಾಡುವಾಗ ಆಕಸ್ಮಿಕವಾಗಿ ಸಂಭವಿಸುವ ಇಂತಹ ಪ್ರಮಾದವನ್ನು ಎಲ್ಲ ಶಾಸಕರೂ ಉದಾರ ದೃಷ್ಟಿಯಿಂದ ನೋಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಸಾಹಿತ್ಯ ಸಾಹಿತಿಗಳಿಗಷ್ಟೇ ಮೀಸಲಿಲ್ಲ. ಸಾಮಾಜಿಕ ಬದುಕಿಗೆ ರಾಜಕಾರಣಿಗಳು ಬೇಕಾದ ಭೌತಿಕ ಸವಲತ್ತುಗಳನ್ನು ಒದಗಿಸಿದರೆ, ಸಾಹಿತಿಗಳು ನೈತಿಕ ಸತ್ವವನ್ನು ತುಂಬುತ್ತಾರೆ. ಅನೇಕ ಶಾಸಕರು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಕೆಲವು ಸಾಹಿತಿಗಳು ರಾಜಕೀಯ ಕ್ಷೇತ್ರದಲ್ಲೂ ಇರಬಹುದು. ಇದರಲ್ಲಿ ಭಿನ್ನಭಾವ ದೃಷ್ಟಿಗೆ ಅವಕಾಶವಿಲ್ಲ. ರಾಜಕಾರಣಿಗಳು ಮತ್ತು ಸಾಹಿತಿಗಳು ಇಬ್ಬರೂ ಕೂಡಿ ಸಮಷ್ಟಿ ಹಿತದ ರಕ್ಷಣೆ ನೋಡಿಕೊಳ್ಳಬೇಕಾಗುತ್ತದೆ.

ಹೀಗಿರುವಾಗ ರಾಜಕಾರಣಿಗಳನ್ನು ಸಾಹಿತಿಗಳು 'ಅಸ್ಪೃಶ್ಯ' ರಂತೆ ಕಾಣುವ ಪ್ರಶ್ನೆಯೇ ಇಲ್ಲ. ಈ ಘಟನೆ ನಡೆದ ಸಂದರ್ಭದಲ್ಲಿ ವೇದಿಕೆಯ ಮೇಲೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಕನ್ನಡ ಸಂಸ್ಕೃತಿ ಸಚಿವರು, ಪಶುಸಂಗೋಪನಾ ಸಚಿವರು, ಸಮ್ಮೇಳನಾಧ್ಯಕ್ಷರು, ಸ್ವಾಗತ ಸಮಿತಿಯ ಪದಾಧಿಕಾರಿಗಳು ಎಲ್ಲರೂ ಇದ್ದರು. ಆಕಸ್ಮಿಕವಾಗಿ ಆದ ಲೋಪ ಸರಿಪಡಿಸಲು ಅವಕಾಶವೇ ಇರಲಿಲ್ಲ. ಒಬ್ಬ ನಿರೂಪಕರಿಂದಾದ ಅಚಾತುರ್ಯದಿಂದಾಗಿ ಈ ಪ್ರಸಂಗ ನಡೆದುಹೋಯಿತು. ಇದನ್ನು ನೆನೆದಾಗ ತುಂಬಾ ವ್ಯಸನವೆನಿಸುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತು ನಾಡಿನ ಪ್ರಾತಿನಿಧಿಕ ಸಂಸ್ಥೆ. 79 ವರ್ಷಗಳ ಇತಿಹಾಸದಲ್ಲಿ ಅದು ಎಂದೂ ರಾಜಕಾರಣಿಗಳನ್ನು ವೃಥಾ ದೂರಿಲ್ಲ. ರಾಜ್ಯ ಸರ್ಕಾರದ ಬೆಂಬಲ ಮತ್ತು ನೆರವಿನಿಂದಲೇ ಇದು ತನ್ನ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ಆಕಸ್ಮಿಕವಾಗಿ ಆಗಿಹೋದ ಘಟನೆಯನ್ನು ಮುಂದು ಮಾಡಿಕೊಂಡು ಸಾಹಿತಿಗಳೆಲ್ಲರ ಬಗ್ಗೆ ಅಗೌರವ ತೋರಿಸುವಂತಹ ಪರಿಸ್ಥಿತಿ ಉಂಟಾಗಬಾರದು.

ಶಾಸಕರಿಗೆ ಕರೆಯೋಲೆ ಕಳಿಸಿರಲಿಲ್ಲ ಎಂಬ ಮಾತು ಪ್ರಸ್ತಾಪವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸದಸ್ಯರಿಗೇ ಅಲ್ಲದೆ ಎಲ್ಲ ಶಾಸಕರು, ಲೋಕಸಭಾ ಸದಸ್ಯರು, ಸಚಿವರು, ಕೇಂದ್ರದಲ್ಲಿರುವ ಕನ್ನಡ ಸಚಿವರು, ಇಲಾಖೆಗಳ ಮುಖ್ಯರು, ಜಿಲ್ಲಾಧಿಕಾರಿಗಳು, ಸಾಹಿತಿಗಳು, ಪತ್ರಕರ್ತರು ಹೀಗೆ ಸುಮಾರು 16 ಸಾವಿರ ಜನಕ್ಕೆ

ಕರೆಯೋಲೆ ಕಳಿಹಿಸಿದೆ. ಕೆಲವು ಶಾಸಕರು ಮತ್ತು ಪ್ರಮುಖರು ಸಮ್ಮೇಳನದ ಯಶಸ್ಸಿಗೆ ಶುಭಕೋರಿ ಪತ್ರಗಳನ್ನೂ ಬರೆದಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿಗೆ ಸರ್ಕಾರದಿಂದ ಬರುತ್ತಿದ್ದ 30ಲಕ್ಷ ರೂ. ಅನುದಾನವನ್ನು 6 ಕೋಟಿ ರೂ.ಗಳಿಗೆ ಹೆಚ್ಚಿಸಿರುವುದಾಗಿ ಶ್ರೀ ಜೀವರಾಜ್ ಆಳ್ವ ಅವರು ತಿಳಿಸಿದರೆಂದು ವರದಿಯಾಗಿದೆ. ಪರಿಷತ್ತಿಗೆ 30 ಲಕ್ಷ ರೂ. ಸಹಾಯ ಧನ ಯಾವ ವರ್ಷವೂ ದೊರಕಿಲ್ಲ. 30 ಲಕ್ಷ ರೂ.ಗಳೇ ದೊರಕದ ಮೇಲೆ 6 ಕೋಟಿ ರೂ.ಗಳ ಮಾತಂತೂ ದೂರವೇ ಉಳಿಯುತ್ತದೆ.

ನಾಡಿನ ಮೂಲೆ ಮೂಲೆಗೂ ಕನ್ನಡದ ವಾತಾವರಣವನ್ನು ಮೂಡಿಸಲು ಅಹರ್ನಿಶಿ ಶ್ರಮಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ಈಗ ಜಿಲ್ಲಾ ಮತ್ತು ತಾಲ್ಲೂಕು ಹಂತಗಳಲ್ಲಿ ಸಾಹಿತ್ಯ ಸಮ್ಮೇಳನ ನಡೆಸುತ್ತಿದೆ. ಈ ಎಲ್ಲ ಸಮ್ಮೇಳನಗಳಲ್ಲಿ ಆಯಾ ಭಾಗದ ಶಾಸಕರು ಒಂದಲ್ಲ ಒಂದು ಕಾರ್ಯಕ್ರಮದಲ್ಲಿ ಪಾಲುಗೊಳ್ಳುತ್ತಿದ್ದಾರೆ. ಅನೇಕ ಕಡೆ ಸ್ಥಳೀಯ ಶಾಸಕರೇ ಸ್ವಾಗತ ಸಮಿತಿಯ ಅಧ್ಯಕ್ಷರೂ ಆಗಿದ್ದಾರೆ. ಇದನ್ನು ಗಮನಿಸಿದಾಗ ಪರಿಷತ್ತಿನಿಂದ ಶಾಸಕರುಗಳಿಗೆ, ಅವರ ಸ್ಥಾನಮಾನಕ್ಕೆ ಧಕ್ಕೆ ತರುವಂತಹ ಕೆಲಸ ಎಲ್ಲೂ ನಡೆದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಇದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಏನೇ ಇರಲಿ, ಈ ಆಕಸ್ಮಿಕ ಪ್ರಸಂಗಕ್ಕಾಗಿ ನಾನು ಮತ್ತೊಮ್ಮೆ ವಿಷಾದ ವ್ಯಕ್ತಪಡಿಸುತ್ತೇನೆ. ಮಾನ್ಯ ಶಾಸಕರಲ್ಲಿ ಕ್ಷಮೆ ಕೋರುತ್ತೇನೆ.

ಈ ವಿಷಯವನ್ನು ಇಷ್ಟಕ್ಕೆ ಬಿಟ್ಟು ಪರಸ್ಪರ ಸೌಹಾರ್ದದ ವಾತಾವರಣವನ್ನು ಮೂಡಿಸೋಣ.

ಇಂತು ಪ್ರಣಾಮಗಳು

ಗೊ.ರು. ಚನ್ನಬಸಪ್ಪ

ಅಧ್ಯಕ್ಷ

ಶ್ರೀ ಸಿ. ಬೈರೇಗೌಡ : ಮಾನ್ಯ ಸಭಾಧ್ಯಕ್ಷರೇ, ನಿಯಮ 68 ರ ಪ್ರಕಾರ ಎನ್.ಜಿ.ಇ.ಎಫ್. ಕಾರ್ಖಾನೆ ಬಗ್ಗೆ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಅದನ್ನು ಮೊದಲು ತೆಗೆದುಕೊಳ್ಳುವುದು ಸೂಕ್ತವೆಂದು ಹೇಳುತ್ತೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ.

1) ಕೃಷ್ಣ ಮೇಲ್ದಂಡೆ ಯೋಜನೆಯಡಿಯಲ್ಲಿ ಮುಳುಗಡೆಯಾದ ಜಮೀನಿನಿಂದ ಸಾವಿರಾರು ಕುಟುಂಬಗಳಿಗೆ ಅನ್ಯಾಯ.

ಅಧ್ಯಕ್ಷರು : ಪಟ್ಟಣಶೆಟ್ಟಿಯವರೇ, ನೀವು ಎರಡು ನಿಮಿಷಗಳಲ್ಲಿ ಕೇಳಿ.

ಶ್ರೀ ಎಂ.ಕೆ. ಪಟ್ಟಣಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಿಲಗುಂದ ಸ್ವಾಮಿಗಳು ಯು.ಕೆ.ಪಿ.ಯಲ್ಲಿ ಆದ ನೇಮಕಾತಿ ಬಗ್ಗೆ ಸುಮಾರು ಹದಿನೈದು ದಿನಗಳಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಮೂರು-ನಾಲ್ಕು ದಿವಸಗಳಿಂದ ಅವರು ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ. ಯು.ಕೆ.ಪಿ.ಯಲ್ಲಿ ಮುಳುಗಡೆಯಾದ ಜಾಸ್ತಿ ಜಮೀನು ಬಿಜಾಪುರ ಜಿಲ್ಲೆಯದು ಮೂರು-ನಾಲ್ಕು [illegible]

ಇದರಿಂದ ಸುಮಾರು 36 ಸಾವಿರ ಕುಟುಂಬಗಳಿಗೆ ಅನ್ಯಾಯವಾಗಿದೆ. ಮುಖ್ಯವಾಗಿ ಅಲ್ಲಿಯ ಕುಟುಂಬಕ್ಕೆ ಆದ್ಯತೆಯನ್ನು ಕೊಡಬೇಕಾಗಿತ್ತು, ಆದರೆ ಸರ್ಕಾರ ಅದರಲ್ಲಿ ಕೆಲವೊಂದು ನ್ಯೂನತೆಗಳನ್ನು ಮಾಡಿ ನೇಮಕಾತಿಯನ್ನು ಮಾಡಿದೆ. ಅದನ್ನು ಪ್ರತಿಭಟಿಸಿ ನಿಲಗುಂಡ ಸ್ವಾಮಿಗಳು ಮತ್ತು ಆ ಜಿಲ್ಲೆಯ ಇಂಜಿನಿಯರುಗಳು ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಸರ್ಕಾರ ಇದುವರೆಗೂ ಕನಿಕರ ದೃಷ್ಟಿಯಿಂದ ಅವರ ಕಡೆಗೆ ಹೋಗಿ ನೋಡಿಲ್ಲ. ಆದ್ದರಿಂದ ಸರ್ಕಾರ ಅವರ ಕಡೆಗೆ ಹೋಗಿ ವಿಚಾರ ಮಾಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಉಪಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

2) ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಇಂಜಿನಿಯರುಗಳ ನೇಮಕಾತಿ.

+ ಶ್ರೀ ಹೆಚ್. ವೈ. ಮೇಟಿ : ಮಾನ್ಯ ಅಧ್ಯಕ್ಷರೇ, ಅಪ್ಪರ್ ಕೃಷ್ಣಾ ಯೋಜನೆಯಲ್ಲಿ ಈ ಇಂಜಿನಿಯರುಗಳ ನೇಮಕಾತಿಯಲ್ಲಿ ಮುಳುಗಡೆಯಾದ ಪ್ರದೇಶದವರನ್ನು ಹತ್ತು ಪರ್ಸೆಂಟ್ ತೆಗೆದುಕೊಳ್ಳಬೇಕೆಂದು ಸರ್ಕಾರ ಸುತ್ತೋಲೆಯನ್ನು ಹೊರಡಿಸಿತ್ತು. ಆದರೆ ಇದರಲ್ಲಿ ಅನ್ಯಾಯವಾಗಿದೆ. ಅದು ಹೇಗೆ ಎಂದರೆ ಜನರಲ್ ಮೆರಿಟ್ನಲ್ಲಿ ಆಯ್ಕೆಯಾದ ವ್ಯಕ್ತಿಗಳನ್ನು ಮುಳುಗಡೆಯಾದವರಲ್ಲಿ ಸೇರಿಸಿ ಅಲ್ಲಿಯ ಜನರಿಗೆ ಅನ್ಯಾಯವಾಗಿದೆ. ಈ ಎರಡೂ ಅಣೆಕಟ್ಟಿನಲ್ಲಿ ಹೆಚ್ಚು ಭಾಗ ಮುಳುಗಡೆಯಾಗಿರುವುದು ಬಿಜಾಪುರ ಜಿಲ್ಲೆಗೆ ಸೇರಿದ್ದು, ಇಲ್ಲಿಯವರಿಗೆ ಹೆಚ್ಚಿಗೆ ಸ್ಥಾನ ಕೊಡಬೇಕೆಂದು ನಾವು ಕೇಳಿದ್ದೆವು. ಆದರೆ ಹತ್ತು ಪರ್ಸೆಂಟ್ನಲ್ಲಿ ಸಹಿತ, ಒಟ್ಟಿಗೆ ನಲವತ್ತು ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಾದರೆ ಅಲ್ಲಿ ೧೮-೨೦ ಜನ ಜನರಲ್ ಮೆರಿಟ್ನಲ್ಲಿ ಅವರು ಆಯ್ಕೆಯಾಗೇ ಆಗುತ್ತಿದ್ದರು. ಅಂತಹವರನ್ನೂ ಸಹಿತ ಮುಳುಗಡೆಯಲ್ಲಿ ಸೇರಿಸಿರುವುದರಿಂದ ಆ ಜಿಲ್ಲೆಗೆ ಅನ್ಯಾಯವಾಗಿದೆ. ಹಾಗೂ ವಯೋಮಿತಿಯಲ್ಲಿ ೧೯೮೮ ರಿಂದ ೯೩ ರವರೆಗೆ ಏನೊಂದು ಉದ್ಯೋಗ ವಿನಿಮಯ ಕೇಂದ್ರದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿದ್ದಾರೆ, ಅಂತಹವರಿಗೆ ಈ ಅವಧಿಯಲ್ಲಿ ಕೇವಲ ೨೪೪ ಹುದ್ದೆಗಳನ್ನು ಮಾತ್ರ ನೀಡಿದ್ದಾರೆ. ಅದರ ಹಿಂದೆ ಏನು ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರುಗಳನ್ನು ದಾಖಲಿಸಿದ್ದರು ಅಂತಹವರಿಗೆ ಕೇವಲ ೪೨ ಹುದ್ದೆಗಳನ್ನು ನೀಡಿದ್ದಾರೆ. ಆದ್ದರಿಂದ ಮೆರಿಟ್ನಲ್ಲಿಯೂ ಅನ್ಯಾಯವಾಗಿದೆ. ಹಾಗೂ ಇದು ಬೇರೆ ಬೇರೆ ಜಿಲ್ಲೆಗಳಿಗೆ ಸೇರಿದ ಅಭ್ಯರ್ಥಿಗಳ ಹೆಸರುಗಳು ಇದ್ದು, ಅಲ್ಲಿ ತಂದು ಸೇರಿಸಿ, ಕೆಲವು ದಾಖಲೆಗಳಲ್ಲೂ ಕೂಡ ಅನ್ಯಾಯವಾಗಿದೆ. ಅದರ ಸಲುವಾಗಿ ನಮ್ಮ ಜಿಲ್ಲೆಯ ಕೆಲವು ಇಂಜಿನಿಯರಿಂಗ್ ಪದವೀಧರರು ಅವರ ವಯಸ್ಸು ೩೬-೩೭ ಆಗಿದ್ದು ಮುಂದೆ ಅವರ ಜೀವನ ಹಾಳಾಗಿ ಹೋಗುತ್ತದೆ. ಆದ್ದರಿಂದ ಅವರಿಗೂ ಸಹ ಸ್ಥಾನಮಾನ ಕೊಡುವ ಸಲುವಾಗಿ ಅವರು ಈ ಹತ್ತು ಹನ್ನೆರಡು ದಿವಸಗಳಿಂದ ಸರದಿ ಉಪವಾಸ ಸತ್ಯಾಗ್ರಹ ಮಾಡಿ ಈಗ ಮೂರು ದಿವಸಗಳಿಂದ ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿದ್ದಾರೆ.

ಅದಕ್ಕಾಗಿ ಮಾನ್ಯ ಉಪ ಮುಖ್ಯಮಂತ್ರಿಗಳು, ಇದರ ಸಲುವಾಗಿ ಹೆಚ್ಚು ಕಾಳಜಿ ವಹಿಸಿ, ಅವರಿಗೆ ಯೋಗ್ಯವಾದ, ಅರ್ಹತೆಯ ಆಧಾರದ ಮೇಲೆ, ಕೆಲವೊಂದು ಅನುಕೂಲಗಳನ್ನು ಮಾಡಿ ಕೊಡುತ್ತಾರೆಂದು ತಿಳಿದುಕೊಂಡಿದ್ದೇನೆ. ಈಗ ಅವರು ಅಮರಣಾಂತ ಸತ್ಯಾಗ್ರಹ ಕುಳಿತಿದ್ದಾರೆ, ಅವರನ್ನು ಎಬ್ಬಿಸುವ ಸಲುವಾಗಿ ಸರ್ಕಾರ ಏನಾದರೂ ಕ್ರಮ ಕೈಗೊಳ್ಳಲಿ ಎಂದು ತಿಳಿದುಕೊಂಡು ತಮ್ಮ ಮುಖಾಂತರ, ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಆರ್.ಎಂ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಈ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ೪೪೦ ಇಂಜಿನಿಯರುಗಳು ನೇಮಕಾತಿಯಾಗಿದೆ. ಅದರಲ್ಲಿ ೧೨೦ ಅಸಿಸ್ಟೆಂಟ್ ಇಂಜಿನಿಯರ್ಸ್. 120 ಜೂನಿಯರ್ ಇಂಜಿನಿಯರ್ಸ್. ಆದರೆ, ಇದರಲ್ಲಿ

ಯಾವುದೇ ಅವ್ಯವಹಾರ ಅಥವಾ ದುಡ್ಡಿನ ವ್ಯವಹಾರ ನಡೆದಿದೆ ಎಂದು ಆರೋಪ ಮಾಡುವುದಕ್ಕೆ ಸಿದ್ಧನಿಲ್ಲ. ಈ ಬಿಜಾಪುರ ಜಿಲ್ಲೆಯ ೧೬೬ ಹಳ್ಳಿಗಳು ಈ ಯೋಜನೆಯ ಅಡಿಯಲ್ಲಿ ಮುಳುಗಡೆಯಾಗುತ್ತವೆ. ಬಿಜಾಪುರ ಜಿಲ್ಲೆ ಈ ಮುಳುಗಡೆಯಾದಂಥ, ಪ್ರಾಜೆಕ್ಟ್ ಅಫೆಕ್ಟಡ್ ಪರ್ಸನ್ಸ್ ಎಂದು ನಾವೇನು ಹೇಳುತ್ತೇವೆ, ಅವರಿಗೆ ಇದರ ಲಾಭ ಸಿಕ್ಕಿಲ್ಲ. ಉದಾಹರಣೆಗಾಗಿ, ಅಲ್ಲಿ ಏನು ಗೈಡ್ಲೈನ್ಸ್ ಫಾಲೋ ಮಾಡಿದ್ದಾರೋ ನಮಗೆ ಗೊತ್ತಿಲ್ಲ. ಆಲಮಟ್ಟಿಯಲ್ಲಿರತಕ್ಕ ಅಧಿಕಾರಿಗಳನ್ನು, ಕಡತ ಕೇಳಿದಾಗ, ಇದು ಸರ್ಕಾರದ ಕಡತ, ಕೊಡುವುದಕ್ಕಾಗುವುದಿಲ್ಲವೆಂಬ ಮಾತನ್ನು ಹೇಳಿದರು.

ಆದರೆ, ಏನು ಗೈಡ್ಲೈನ್ಸ್ ಮಾಡಿಕೊಂಡಿದ್ದಾರೆಂಬುದನ್ನು ಹೇಳಲಿಕ್ಕೆ ಸರ್ಕಾರಕ್ಕೆ ಏನು ತೊಂದರೆಯಾಗುತ್ತದೆಯೋ ನನಗೆ ಅರ್ಥವಾಗುತ್ತಿಲ್ಲ. ಆಮೇಲೆ, ಅಲ್ಲಿ ಜಿಲ್ಲೆಯ ನಿರ್ಬಂಧ ಹಾಕಿದ್ದಾರೆ. ಈ ಜಿಲ್ಲಾ ನಿರ್ಬಂಧ ಹಾಕುವುದರಿಂದ, ಇದೇ ಪ್ರಾಜೆಕ್ಟಲ್ಲಿ, ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೂಕಿನ 11 ಹಳ್ಳಿಗಳು ಮುಳುಗಡೆಯಾಗುತ್ತವೆ. ಅವರಿಗೆ ಈ ಬೆನಿಫಿಟ್ ಸಿಕ್ಕಿಲ್ಲ. ಪ್ರಾಜೆಕ್ಟ್ ಎಫೆಕ್ಟೆಡ್ ಫ್ಯಾಮಿಲೀಸ್ಗೆ ಏನು 10 ಪರ್ಸೆಂಟ್ ರಿಸರ್ವೇಷನ್ ಮಾಡಿದ್ದೀರಿ, ಅದು ಸಿಕ್ಕಿಲ್ಲ. ಈ ರೀತಿ ನಾನಾ ರೀತಿಯ ಲೋಪದೋಷಗಳು ಈ ನೇಮಕಾತಿಯಲ್ಲಿ ಕಂಡುಬಂದಿವೆ. ಇದನ್ನು ತಮ್ಮ ನಜರಿಗೆ ತಂದಿದ್ದೇವೆ. ದಯವಿಟ್ಟು ಇದನ್ನು ಸರಿಪಡಿಸಿ, ನಿಜವಾಗಿಯೂ ಅಲ್ಲಿ ಪ್ರಾಜೆಕ್ಟ್ ಅಫೆಕ್ಟೆಡ್ ಪರ್ಸನ್ಸ್ ಯಾರಿದ್ದಾರೆ, ಅವರಿಗೆ ಇದರ ಲಾಭ ಸಿಗುವ ಹಾಗೆ ಮಾಡಬೇಕು. ಇನ್ನೊಂದು ಏನಾಗಿದೆ ಎಂದರೆ, ಬಹಳಷ್ಟು ಜನ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಕಂಪ್ಯೂಟರ್ ಫೀಡ್ ಮಾಡುವಾಗ, ತಪ್ಪು ಮಾಹಿತಿ ಫೀಡ್ ಆಗಿದೆ. ಯಾರೋ ಅವರ ಸಂಬಂಧಿಕರು, ಮುಳುಗಡೆಯಲ್ಲಿ ಜಮೀನು ಕಳೆದುಕೊಂಡಿದ್ದಾರೆಂದು ಸರ್ಟಿಫಿಕೇಟ್ ಪ್ರೊಡ್ಯೂಸ್ ಮಾಡಿ, ಈ ಬೆನಿಫಿಟ್ ತೆಗೆದುಕೊಂಡಿದ್ದಾರೆ. ಈ ಎಲ್ಲಾ ಲೋಪದೋಷಗಳನ್ನು ಪರಿಶೀಲಿಸಿ ಬಿಜಾಪುರ ಜಿಲ್ಲೆಯ ಇಂಜಿನಿಯರಿಂಗ್ ಪದವೀಧರರು. ಇಲ್ಲಿಯವರೆಗೆ ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿದ್ದರು. ಕಳೆದ ಮೂರು ದಿವಸಗಳಿಂದ ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿದ್ದಾರೆ. ಆದ್ದರಿಂದ, ಸರ್ಕಾರ ಕರೆಯಿಸಿ, ಅವರ ಜೊತೆಯಲ್ಲಿ ಚರ್ಚೆ ಮಾಡಿ, ಈ ನೇಮಕಾತಿಯಲ್ಲಿ ಏನು ಲೋಪದೋಷಗಳಾಗಿವೆ, ಇವನ್ನು ಸರಿಪಡಿಸಬೇಕೆಂದು ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಈ ಕೃಷ್ಣ ಮೇಲ್ದಂಡೆ ಯೋಜನೆಗೆ ಕೆಲವು ಇಂಜಿನಿಯರುಗಳನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ನೇಮಕ ಮಾಡಿಕೊಳ್ಳಬೇಕೆಂಬ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡ ಮೇಲೆ, ಯಾವ ಕಮಿಟಿಯನ್ನೂ ಮಾಡದೇ, ಕೇವಲ ವಿಶ್ವವಿದ್ಯಾನಿಲಯಗಳಲ್ಲಿ ಪಡೆದಿರತಕ್ಕಂಥ ಮಾರ್ಕ್ಸ್ ಆಧಾರದ ಮೇಲೆ ನೇಮಕ ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡೆವು: ಅದೇ ರೀತಿ ಕೇವಲ 5 ಜಿಲ್ಲೆಗಳಿಗೆ ಮಾತ್ರ ಈ ನೇಮಕಾತಿ ಸೀಮಿತವಾಗಬೇಕೆಂಬ ನಿರ್ಧಾರವನ್ನೂ ತೆಗೆದುಕೊಂಡೆವು. ಇದರಲ್ಲಿ, ಕೆಲವು ವ್ಯತ್ಯಾಸಗಳಾಗಿವೆ ಎನ್ನತಕ್ಕಂಥದ್ದನ್ನು, ಯಾರು ನೇಮಕ ಮಾಡಿದಾರೋ ಅವರೇ ಒಪ್ಪಿಕೊಂಡಿದ್ದಾರೆ. ಅದಕ್ಕೆ, ನಾನು, ನಮ್ಮ ರಾಜ್ಯಸಚಿವರಿಗೆ, ಆ ಭಾಗದಿಂದ ಬಂದಿರತಕ್ಕ ತಮ್ಮನ್ನು ಕರೆದು, ಈ ವಿಚಾರದಲ್ಲಿ ತಮ್ಮ ಜೊತೆಯಲ್ಲಿ ಮಾತುಕತೆ ಮಾಡಿ, ಅನಂತರ ಯೋಗ್ಯವಾದಂಥ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ಅವರಿಗೆ ಸೂಚಿಸಿದ್ದೇನೆ. ಅವರು ಇಂದು ಅಥವಾ ನಾಳೆ, ಬಿಜಾಪುರ ಜಿಲ್ಲೆಯವರು ಹಾಗೂ ಬಾಕಿಯವರನ್ನು ಕರೆದು ಮಾತನಾಡುತ್ತಾರೆ. ಈ ಒಂದು ಆಶ್ವಾಸನೆಯ ಹಿನ್ನೆಲೆಯಲ್ಲಿ ಪೂಜ್ಯ ಸ್ವಾಮೀಜಿಯವರು ಮತ್ತು ಇನ್ನು ಯಾರು ಯುವಕರು ಅಮರಣಾಂತ ಉಪವಾಸಕ್ಕೆ ಕುಳಿತಿದ್ದಾರೆ, ಅವರು ತಮ್ಮ ಅಮರಣಾಂತ ಉಪವಾಸವನ್ನು

ಮುಗಿಸಿ, ಈ ಕೃಷ್ಣ ಮೇಲ್ದಂಡೆ ಯೋಜನೆ ಸರಾಗವಾಗಿ ನಡೆಯುವ ಒಂದು ಭೂಮಿಕೆಗೆ ಸಹಕಾರಿಗಳಾಗಬೇಕೆಂದು ಈ ಸದನದ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಯಾರು ತಪ್ಪು ಮಾಹಿತಿ ಕೊಟ್ಟಿದ್ದಾರೆ, ಅಂತಹ ತಪ್ಪು ಮಾಹಿತಿಯನ್ನು ಒಪ್ಪಿಕೊಂಡಿರತಕ್ಕ ಅಧಿಕಾರಿಗಳು ಯಾರಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥಾದ್ದು ಅವಶ್ಯಕತೆ ಇದೆ. ಏಕೆಂದರೆ, ವಿನಾಕಾರಣ ಸ್ವಾಮೀಜಿಯವರಾಗಲೀ, ಯುವಕರಾಗಲೀ ಈ ರೀತಿಯಾಗಿ ಬೀದಿಗೆ ಇಳಿಯುವ ವ್ಯವಸ್ಥೆ ಮಾಡಿದ್ದಾರೆ. ದಯವಿಟ್ಟು ಇದನ್ನೂ ಪರಿಶೀಲನೆ ಮಾಡಿ, ಅಂತಹವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಸ್.ಎಂ. ಕೃಷ್ಣ : ವಿನಾಕಾರಣ ಬೀದಿಗೆ ಇಳಿಯುವಂಥಾದ್ದು ಹೊಸದೇನೂ ಅಲ್ಲ, ಪ್ರತಿನಿತ್ಯ ಒಂದಲ್ಲ ಒಂದು ಕಾರಣಕ್ಕೋಸ್ಕರ ಸತ್ಯಾಗ್ರಹ ಮಾಡಬಹುದು. ಅವರ ಮಟ್ಟಿಗೆ ಅದು ಜ್ವಲಂತ ಸಮಸ್ಯೆ ಇರಬಹುದು. ಆದ್ದರಿಂದ, ಯಾರಾದರೂ ಇಂಟೆನ್ಷನಲ್ ಆಗಿ ತಪ್ಪು ಮಾಡಿದ್ದರೆ, ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಆದರೆ, ಯಾರಿಗೆ ಈ ಕೆಲಸವನ್ನು ವಹಿಸಿದೆ, ಅವರ ಪ್ರಾಮಾಣಿಕತೆ ಬಗ್ಗೆ ನನಗೆ ಸಂಪೂರ್ಣವಾದ ವಿಶ್ವಾಸವಿದೆ.

3.50 ಪಿ.ಎಂ.

ಈಗ ನಾನು ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾರ್ವಭೌಮ ಅಧಿಕಾರವನ್ನು ಪಡೆದಿರತಕ್ಕಂಥ ಈ ಸದನದಿಂದ ನಾನು ಅವರಿಗೆ ಒಂದು ಅಪೀಲನ್ನು ಮಾಡುತ್ತಾ ಇದ್ದೇನೆ. ದಯವಿಟ್ಟು ತಾವು ಈ ಅಮರಣಾಂತರ ಉಪವಾಸವನ್ನು ಬಿಡಬೇಕು. ನಮ್ಮ ರಾಜ್ಯ ಸಚಿವರು, ಸಂಬಂಧಪಟ್ಟಂಥ ಶಾಸಕರ ಜೊತೆಯಲ್ಲಿ ಮಾತುಕತೆಯಾಡುತ್ತಾರೆ ಹಾಗೂ ಇರತಕ್ಕ ನ್ಯೂನ್ಯತೆಗಳನ್ನು ಸರಿಪಡಿಸುತ್ತಾರೆ ಎನ್ನುವ ಆಶ್ವಾಸನೆಯನ್ನು ನಾನು ಕೊಡುತ್ತಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಉಪಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದೀರಿ, ಧನ್ಯವಾದಗಳು. ಮೇಲ್ಮನೆಯಲ್ಲಿ ಏನಾಗಿದೆ ಎನ್ನುವುದನ್ನು ಚರ್ಚೆ ಮಾಡಲು ನನಗೆ ಇಚ್ಛೆ ಇಲ್ಲ, ಆದರೆ ಮೇಲ್ಮನೆಯಲ್ಲಿ ತಾವು ಇದ್ದಿಲ್ಲ. ತಮ್ಮ ಪರವಾಗಿ ನಮ್ಮ ಓಂಪ್ರಕಾಶ್ ಕಣಗಲಿಯವರು ಮಾನ್ಯ ಸಚಿವರೂ ಸಹ ಇವತ್ತು ಅವರನ್ನು ಕರೆಯಿಸಿ ಮಾತನಾಡಿ. ಆ ಸಮಸ್ಯೆಯನ್ನು ಬಗೆಹರಿಸುತ್ತೇನೆ. ಎನ್ನುವ ಭರವಸೆಯನ್ನೂ ಸಹ ಕೊಟ್ಟಿದ್ದರು. ಏಕೆಂದರೆ ಮುಖ್ಯವಾಗಿ ಅಲ್ಲಿ ಅರ್ಹತೆ ಯಾರಿಗೆ ಇದೆ ಅವರಿಗೆ ಸಿಕ್ಕಿಲ್ಲ ಎನ್ನತಕ್ಕಂಥ ದೂರು ಇದೆ. ಕಂಪ್ಯೂಟರ್‌ಗೆ ಫೀಡ್ ಮಾಡುವಾಗಲೂ ಸಹ ಸರಿಯಾಗಿ ಫೀಡ್ ಮಾಡಿಲ್ಲ ರಾಂಗ್ ಇನ್ಫರ್ಮೇಷನ್ ಫೀಡ್ ಮಾಡಿ, ಯಾರು ಬೇಕಾದವರು ಇದ್ದಾರೆ ಅವರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಐದು ಜಿಲ್ಲೆಯ ಜನರಿಗೆ ಮಾತ್ರ ನಾವು ಅವಕಾಶ ಮಾಡಿಕೊಡಬೇಕು. ಹೊರಗಿನ ಜಿಲ್ಲೆಯವರಿಗೆ ಇಲ್ಲ ಎಂದು ಇತ್ತು. ಅವರಿಗೂ ಇದರಲ್ಲಿ ಅವಕಾಶ ಮಾಡಿದ್ದಾರೆ. ಹೀಗೆ ಸಾಕಷ್ಟು ನ್ಯೂನ್ಯತೆಗಳು ಇವೆ. ಹಾಗಾಗಿ ಅವರು ಇವತ್ತು ಅಮರಣಾಂತರ ಉಪವಾಸ ಸತ್ಯಾಗ್ರಹ ಪ್ರಾರಂಭ ಮಾಡಿದ್ದಾರೆ. ತಮ್ಮಲ್ಲಿ ನಾನು ಏನು ವಿನಂತಿ ಮಾಡುತ್ತೇನೆಂದರೆ ತಾವು ಪ್ರಾಧಾನ್ಯತೆ ಮೇಲೆ ತಕ್ಷಣ ಇವತ್ತೋ ನಾಳೆಯೋ ಅವರನ್ನು ಕರೆಸಿ ಅಧಿಕಾರಿಗಳನ್ನು ಕರೆಸಿ ತಕ್ಷಣ ಏನು 400 ಜನ ಇಂಜನೀಯರ್ಸ್ ತೆಗದುಕೊಳ್ಳಬೇಕೆನ್ನುವ ತಮ್ಮ ನಿರ್ಣಯ ಇದೆಯಲ್ಲಾ ಅದಕ್ಕೆ ತಾವು ತಡೆಯಾಜ್ಞೆ ಕೊಟ್ಟು ಇದರ ಬಗ್ಗೆ ವಿಚಾರಣೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳಬಹುದು. ಅದು ಸರಿ ಇದ್ದರೆ

ಸರಿ ಇದೆ ಎಂದು ಸರ್ಕಾರಕ್ಕೆ ಮನವರಿಕೆ ಆದಾಗ ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದರೆ ತಮಗೆ ಅದು ಸರಿಯಾಗಿಲ್ಲ. ಇಲ್ಲಿ ಅನ್ಯಾಯ ಆಗಿವೆ ಎಂದು ಮನವರಿಕೆಯಾದಾಗ ತಕ್ಷಣ ತಾವು ಅದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಿ. ಆದ್ದರಿಂದ ತಾವು ಇವತ್ತೋ ಅಥವಾ ನಾಳೆಯೋ ಅವರನ್ನು ಕರೆಸಿ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳಬಹುದು.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ರಾಜ್ಯ ಸಚಿವರು ಏನು ಇದ್ದಾರೆ ಅವರಿಗೆ ಸಂಪೂರ್ಣವಾದ ಅಧಿಕಾರವನ್ನು ನಾನು ಈ ವಿಷಯದಲ್ಲಿ ಕೊಟ್ಟಿದ್ದೇನೆ. ಅವರು ಆ ಭಾಗದ ಎರಡೂ ಮನೆಯ ಶಾಸಕರುಗಳನ್ನು ಕರೆಸಿ ನಮ್ಮ ಅಧಿಕಾರಿಗಳನ್ನು ಕರೆಸಿ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ಅವುಗಳನ್ನು ಸರಿಪಡಿಸಬೇಕು ಎನ್ನತಕ್ಕಂಥ ಆದೇಶವನ್ನು ನಾನು ಅವರಿಗೆ ಕೊಟ್ಟಿದ್ದೇನೆ. ಅವರು ಇವತ್ತೋ ನಾಳೆಯೋ ಕರೆಯುತ್ತಾರೆ.

(3) ಬೆಳಗಾಂನ ಶ್ವೇತ ಭವನದಲ್ಲಿ ಬಾರ್ ನಡೆಸುತ್ತಿರುವುದಕ್ಕೆ ವಿರೋಧ

ಶ್ರೀ ಬಾಬಾಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈಗ 4 ವರ್ಷಗಳಿಂದ ಬೆಳಗಾಂ ಜಿಲ್ಲೆಯ ಬಸ್ ಸ್ಟ್ಯಾಂಡ್ ಪಕ್ಕದಲ್ಲಿರುವ ರೈತ ಭವನ ವಿಚಾರಕ್ಕೆ ಸಂಬಂಧಪಟ್ಟಿಹಾಗೆ ಸರ್ಕಾರ ಒಂದು ಭರವಸೆ ಕೊಟ್ಟಿತ್ತು. ಅಲ್ಲಿ ಇವತ್ತು ಬಾರ್ ನಡೆಸುತ್ತಾ ಇದ್ದಾರೆ. ಅಲ್ಲಿ ರೈತರಿಗೆ ಬಸ್ಸು ತಪ್ಪಿದರೆ ಇಳಿದುಕೊಳ್ಳುವುದಕ್ಕೆ ರೈತ ಭವನ ಎಂದು ಕಟ್ಟಿ ಅಲ್ಲಿ ಬಾರ್ ನಡೆಸುತ್ತಾ ಇದ್ದೀರಿ. ಇದು ಸರ್ಕಾರದ ಪರವಾನಿಗೆಯಿಂದ ನಡೆಸುತ್ತಿದೆಯೋ ಇಲ್ಲವೋ ಎನ್ನುವುದು ಅರ್ಥವಾಗುತ್ತಿಲ್ಲ. ಲೀಸ್ಗೆ ಕೊಡುವಾಗ ಅಗ್ರಿಮೆಂಟ್ ಆಗಿದೆ. ಅವರು ಕಂಡೀಷನ್ಸ್ ಏನಾದರೂ ವೈಲೇಟ್ ಮಾಡಿದರೆ ಆ ಕೂಡಲೇ ಸರ್ಕಾರ ಸ್ವಾಧೀನಪಡಿಸಿಕೊಳ್ಳುತ್ತೇವೆ ಎಂದು ಅಗ್ರಿಮೆಂಟಿನಲ್ಲಿ ಹೇಳಿದ್ದೀರಿ. ಈ ತನಕ ಅಲ್ಲಿ ಬಾರ್ ನಡೆಸುತ್ತಾ ಇದ್ದಾರೆ. ರೈತರು ಅಲ್ಲಿ ಏನೋ ಬಸ್ಸು ತಪ್ಪಿದರೆ ಅಲ್ಲಿ ಮಲಗಿಕೊಳ್ಳುವುದಕ್ಕೆ ವಸತಿ ಗೃಹ ಮಾಡುತ್ತೇವೆ; ಸಾಯಿಲ್ ಟೆಸ್ಟಿಂಗ್ ಲ್ಯಾಬೋರೇಟರಿ ಮಾಡುತ್ತೇವೆಂದು ಎನ್ನತಕ್ಕಂಥಾದ್ದು ಇತ್ತು; ಕೋಟ್ಯಾಂತರ ರೂಪಾಯಿ ಕಿಮ್ಮತ್ತಿನ ನಿವೇಶನ ಕೊಟ್ಟು ಆಗಿದೆ. ಇಲ್ಲಿಯವರೆಗೂ ಏಕೆ ಕ್ರಮ ತೆಗೆದುಕೊಂಡಿಲ್ಲ? ಅದಕ್ಕೆ ಒಂದು ರೂಮರ್ ಇದೆ. ಆ ಕಡೆ ಈ ಕಡೆ ಮಾತನಾಡುತ್ತಾರೆ. ದೊಡ್ಡ ಪ್ರಮಾಣದ ಭ್ರಷ್ಟಾಚಾರ ನಡೆಯುತ್ತಿದೆ ಅದನ್ನು ಮುಚ್ಚಿ ಹಾಕುವಂತಹ ಪ್ರಯತ್ನ ಮಾಡುತ್ತಿದ್ದಾರೆ ಎಂದು. ಅದರ ಬಗ್ಗೆ ಮಾನ್ಯ ಅಧ್ಯಕ್ಷರು ಸರ್ಕಾರದಿಂದ ಉತ್ತರ ಕೊಡಿಸಬೇಕು. ಅದು ದೊಡ್ಡ ನಿವೇಶನ 1-16 ಗುಂಟೆ ಸರ್ಕಾರ ಕೊಟ್ಟಿದೆ. ಒಬ್ಬ ಪ್ರೈವೇಟ್ ಪಾರ್ಟಿಗೆ ಕೊಟ್ಟಿದ್ದಾರೆ. ಅದು ಈಗ ಬಾರ್ ಆಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಸರ್ಕಾರ ತೆಪ್ಪಗಾಗಿದೆ. ಇದರ ಬಗ್ಗೆ ಉತ್ತರ ಕೊಡುವವರು ಯಾರು? ಎಂಬುದು ಅರ್ಥವಾಗುತ್ತಿಲ್ಲ. ತಾವು ಸುಮ್ಮನೆ ಕುಳಿತುಕೊಂಡಿದ್ದೀರಿ. ಅವರು ಹೇಳುತ್ತಾ ಇದ್ದಾರೆ.

ಶ್ರೀ ಬಾಬಾಗೌಡಪಾಟೀಲ್ : ಸರ್ಕಾರದ ಆಸ್ತಿ ಅಂದರೆ ಯಾರು ಬೇಕಾದರೂ ಹೇಗೆ ಬೇಕಾದರೂ ಉಪಯೋಗ ಮಾಡಬಹುದೇ ? ಯಾವ ಇಲಾಖೆಗೆ ಇದು ಬರುತ್ತದೆಂದು ಇದುವರೆಗೂ ಗೊತ್ತಿಲ್ಲ. ಒಮ್ಮೆ ನಮ್ಮ ಮಾನ್ಯಚಿಕ್ಕೇಗೌಡರು ಮಂತ್ರಿಗಳಾಗಿದ್ದಾಗ ಹೇಳಿದರು ಇದು ನನ್ನ ಖಾತೆಗೆ ಬರುವುದಿಲ್ಲ ಎಂದು. ಒಮ್ಮೆ ಲೋಕೋಪಯೋಗಿ ಇಲಾಖೆ ಮಂತ್ರಿಗಳು ನನ್ನ ಖಾತೆಗೆ ಬರುವುದಿಲ್ಲ ಎಂದು ಹೇಳಿದರು. ಎಲ್ಲರೂ ಹಾಗೆ ಹೇಳುತ್ತಿದ್ದಾರೆ. ಉದ್ದೇಶಪೂರ್ವಕವಾಗಿಯೇ ಇದನ್ನು ಯಾರೂ ವಹಿಸಿಕೊಳ್ಳುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್: ಇದು ಎರಡು ಸಾರಿ ಚರ್ಚೆ ಆಗಿದೆ. ಮಂತ್ರಿಗಳು ತಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಇದು ನನ್ನದಲ್ಲ ನನ್ನದಲ್ಲ ಎಂದರೆ ಯಾರಿಗೆ ಇದು ಬರುತ್ತದೆ?

ಶ್ರೀ. ಬಾಬಾಗೌಡ ಪಾಟೀಲ್ : ಕಳೆದಸಾರಿ ಉತ್ತರ ಕೊಟ್ಟಿದ್ದರು. ಇಲ್ಲಾ ಕ್ರಮ ಕೈಗೊಳ್ಳುತ್ತೇವೆ. ಧಾರವಾಡ ಚೀಫ್ ಇಂಜಿನೀಯರ್‌ಗೆ ಕ್ರಮ ಕೈಗೊಳ್ಳುತ್ತೇವೆ ಎಂದು ಲಿಖಿತ ಮೂಲಕ ಒಂದು ಉತ್ತರ ಕೊಟ್ಟರು. ನಾಲ್ಕು ವರ್ಷಗಳಿಂದ ಇದುವರೆಗೆ ಇನ್ನೂ ಕ್ರಮ ಕೈಗೊಂಡಿಲ್ಲ, ಇದು ಯಾರ ಖಾತೆಗೆ ಬರುತ್ತದೆಂಬುದನ್ನು ಹೇಳಿಬಿಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇಡೀ ಸರ್ಕಾರ ಗರ ಬಡಿದಂತೆ ಕುಳಿತಿದೆ. ಯಾರಾದರೂ ಒಬ್ಬರು ಹೇಳಿ ಸ್ವಾಮಿ. 2 ಸಾರಿ ಭರವಸೆ ಕೊಟ್ಟಿದ್ದೀರಿ. 4 ವರ್ಷ ಆದರೂ ಕ್ರಮ ಕೈಗೊಂಡಿಲ್ಲ. ಈಗ ಅಲ್ಲಿ ಯಾರು ಬಾರ್ ನಡೆಸುತ್ತಾ ಇದ್ದಾನೆ ಅವನು ನನ್ನದು ಎಂದು ಕುಳಿತಿದ್ದಾನೆ. ಈ ಸರ್ಕಾರ ನಿಮ್ಮದ್ದೋ ಅವನದ್ದೋ ಎಂಬುದು ತೀರ್ಮಾನ ಆಗಲಿ.

ಶ್ರೀ ಬಾಬಾಗೌಡ ಪಾಟೀಲ್ : ಮಾನ್ಯ ಕೃಷಿ ಸಚಿವರು ಇಲ್ಲಿಗೆ ಬಂದಿದ್ದಾರೆ. ಬೆಳಗಾಂ ಬಸ್ಸಿಲ್ದಾಣದ ಪಕ್ಕದಲ್ಲಿರುವುದು ರೈತ ಭವನವೋ ಅಥವಾ ಬಾರೋ ಉತ್ತರ ಕೊಡಿ.

ಶ್ರೀ ಎಸ್.ಎಂ. ಕೃಷ್ಣಾ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ವಿಚಾರವನ್ನು ನಾನು ಅಲ್ಲಿ ಕುಳಿತಿದ್ದಾಗ ಪ್ರಸ್ತಾವನೆ ಮಾಡಿದ್ದರು. ಅದು ಇನ್ನೂ ನನಗೆ ಜ್ಞಾಪಕ ಇದೆ. ಆಗ ನಾನೇ ಸರ್ಕಾರಕ್ಕೆ ನಿರ್ದೇಶನ ಕೊಟ್ಟಿದ್ದೆ ಇದು ಯಾರ ಹದ್ದುಬಸ್ತಿಗೆ ಬರುತ್ತದೆ ಎನ್ನತಕ್ಕಂಥ ತೀರ್ಮಾನ ಮಾಡಿ ಸದನಕ್ಕೆ ಅನಂತರ ಉತ್ತರ ಕೊಡಿ ಎಂದು. ಈಗ ನಾವು ಮತ್ತೆ ಮಾರ್ಚಿ 17ನೇ ತಾರೀಖು ಸೇರುತ್ತಾ ಇದ್ದೇವೆ. ಅಷ್ಟರೊಳಗೆ ಇದು ಯಾರ ಹದ್ದುಬಸ್ತಿಗೆ ಬರುತ್ತದೆ ಎನ್ನುವುದನ್ನು ತಿಳಿದು ಕರಾರುವಾಕ್ಕಾಗಿ ಉತ್ತರವನ್ನು ಇದರ ಬಗ್ಗೆ ಕೊಡುತ್ತೇವೆ.

ಶ್ರೀ ವಾಟಾಳ್ ನಾಗಾರಾಜ್ : ಇದು ತಪ್ಪಿಸಿಕೊಳ್ಳತಕ್ಕಂಥ ಉತ್ತರ. ಇದು ತಮಗೆ ಗೊತ್ತಿದೆ. ತಾವು ಅಧ್ಯಕ್ಷರಾಗಿದ್ದಾಗಲೂ ಬಂತು ಇದು. ಇವರು ಅಧ್ಯಕ್ಷರಾದ ಮೇಲೂ ಬಂದಿದೆ. ಈಗ ಒಂದು ಸರ್ಕಾರ ಎಂದು ಇದೆಯಲ್ಲಾ, ನಿಮ್ಮದು ಸರ್ಕಾರ ಎಂದು ನಾವೆಲ್ಲಾ ನಂಬಿಕೊಂಡಿದ್ದೇವೆ. ಜನ ನಂಬಿದ್ದಾರೆ. ಆ ರೈತ ಭವನ ನಿಮ್ಮದು ಅಲ್ಲ ಅಂತಾದರೂ ಹೇಳಿಬಿಡಿ. ನೀವು ನೇರವಾಗಿ ನಮ್ಮದು ಅಲ್ಲ ಎಂದು ಹೇಳಿದರೆ ನಾವು ಅವನಿಗೆ ಪರವಾನಿಗೆ ಕೊಟ್ಟುಬೇಡೋಣ, ಹೋಗಪ್ಪ ಮಾಡಿಕೊಂಡು ಬದುಕಿಕೋ ಎಂದು ಹೇಳಿಬಿಡೋಣ. ಆದರೆ ಅದು ಯಾವುದೂ ಇಲ್ಲವಲ್ಲಾ, ಏನೋ ಒಂದು ಹೇಳುತ್ತಿದ್ದೀರಿ. 17ನೇ ತಾರೀಖು ಆದ ನಂತರ ಕರಾರುವಕ್ಕಾಗಿ ಉತ್ತರ ಕೊಡುತ್ತೇವೆಂದು ಹೇಳುತ್ತಿದ್ದೀರಲ್ಲಾ, ತಮ್ಮ ಒಂದು ಪ್ರಾಮಾಣಿಕತೆ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ. ಇದುವರೆಗೂ ಇದರ ಬಗ್ಗೆ ಸರ್ಕಾರಕ್ಕೆ ಇರತಕ್ಕಂಥ ಮಾಹಿತಿ ಏನು ಎನ್ನತಕ್ಕಂಥಾದ್ದನ್ನು ಸಂಬಂಧಪಟ್ಟಂತಹ ಸಚಿವರು ತಿಳಿಸಬೇಕು. ಸಂಬಂಧಪಟ್ಟ ಸಚಿವರು ತಮಗೆ ಗೊತ್ತಿಲ್ಲ ಎಂದು ತಲೆ ಅಲ್ಲಾಡಿಸುತ್ತಿದ್ದಾರೆ ಇದು ವ್ಯವಸಾಯ ಇಲಾಖೆಗೆ ಸೇರಿದ್ದೋ ಅಥವಾ ನೀರಾವರಿ ಇಲಾಖೆಗೆ ಸೇರಿದ್ದೋ ಎಂಬುದು ಗೊಂದಲದಲ್ಲಿ ಇದೆ.

(4) ನಾಗಮಂಗಲ ತಾಲ್ಲೂಕಿನಲ್ಲಿ ತೆಂಗಿನ ಮರಗಳಿಗೆ ಕಪ್ಪು ತಲೆಹುಳದ ರೋಗ.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ನಾಗಮಂಗಲ

ನಷ್ಟವನ್ನು ಅನುಭವಿಸುತ್ತಾ ಇರತಕ್ಕಂಥ ಪರಿಸ್ಥಿತಿಯಲ್ಲಿ ನಮ್ಮ ರೈತರು ಇವತ್ತು ಕಂಗಾಲಾಗಿದ್ದಾರೆ. ಕಳೆದ 2-3 ತಿಂಗಳಿಂದ ನಾಗಮಂಗಲತಾಲ್ಲೂಕಿನಲ್ಲಿ ಕಪ್ಪು ತಲೆ ಹುಳದ ರೋಗ ಸ್ವಲ್ಪ ಸ್ವಲ್ಪ ಅಲ್ಲಲ್ಲಿ ಹರಡಿದ್ದನ್ನು ನೋಡಿದ್ದೆವು. ಅದಕ್ಕೆ ಸಂಬಂಧಪಟ್ಟಂತಹ ಜಿಲ್ಲಾ ಪರಿಷತ್ತಿನ ಅಧಿಕಾರಿಗಳನ್ನು ನಾವು ಕೇಳಿಕೊಂಡಾಗ ಜಿಲ್ಲಾ ಪರಿಷತ್ತಿನವರು ಸಂಬಂಧಪಟ್ಟ ತೋಟಗಾರಿಕೆ ಇಲಾಖೆಯವರನ್ನು ಕೃಷಿ ಇಲಾಖೆಯವರನ್ನು ಕರೆಸಿ ಕೇಳಿದಾಗ ಒಂದು ಲಕ್ಷ ರೂಪಾಯಿಗಳ ಔಷಧಿಯನ್ನು ಸಿಂಪಡಿಸಿ ರೋಗ ನಿವಾರಣೆ ಮಾಡುತ್ತೇವೆಂದು ಹೇಳಿದರು ಈಗ ಶರವೇಗದಲ್ಲಿ ಸುಮಾರು 50-60 ಸಾವಿರ ತೆಂಗಿನ ಮರಗಳಿಗೆ ರೋಗ ಬಡಿದು ಲಕ್ಷಾಂತರ ರೂಪಾಯಿಗಳ ಔಷಧಿಯನ್ನು ಸಿಂಪಡಿಸಿದರೂ ಸಾಧ್ಯವಿಲ್ಲದೆ ಇರತಕ್ಕಂಥ ಮಟ್ಟಕ್ಕೆ ಆಗಿದೆ. ಆದ್ದರಿಂದ ಮಾನ್ಯ ಕೃಷಿ ಮಂತ್ರಿಗಳು ಇವರ ಇಲಾಖೆಯಿಂದ ಯಾರನ್ನಾದರೂ ಕಳುಹಿಸಿ, ಸರ್ವೆಮಾಡಿಸಿ ಶೀಘ್ರವಾಗಿ ಆ ರೋಗವನ್ನು ತಡೆಗಟ್ಟುವಂತಹ ಕೆಲಸವನ್ನು ಮಾಡುವುದಕ್ಕೆ ಈ ಸದನದಲ್ಲಿ ತಾವು ಆಶ್ವಾಸನೆ ಕೊಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಇದು ತೋಟಗಾರಿಕಾ ಮಂತ್ರಿಗಳಿಗೆ ಸಂಬಂಧಪಟ್ಟಿದ್ದು; ಅವರು ಬಂದ ಮೇಲೆ ಅವರಿಗೆ ತಿಳಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ಸುಮಾರು 3 ತಿಂಗಳುಗಳಿಂದ ತೆಂಗಿನ ಮರಗಳು ನಾಶವಾಗುತ್ತಿವೆ. ನೀವು ಈಗ ತಿಳಿಸುತ್ತೇವೆಂದು ಹೇಳುತ್ತಿದ್ದೀರಿ; ಹುಳ ನಮ್ಮನ್ನು ನಿಮ್ಮನ್ನು ಕೇಳಿಕೊಂಡು ಇರುತ್ತದೆಯೇ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ತಾವು ನೋಟೀಸ್ ಕೊಟ್ಟು ಪ್ರಸ್ತಾಪ ಮಾಡಿದ್ದರೆ, ಅವರನ್ನು ಇಲ್ಲಿ ಇರುವಂತೆ ಮಾಡಬಹುದಾಗಿತ್ತು.

ಶ್ರೀ ಸಿ. ಬೈರೇಗೌಡ: ಅಧ್ಯಕ್ಷರೇ, ನಾಗಮಂಗಲಕ್ಕೆ ಈ ಹುಳದ ಕಾಟ ಸೀಮಿತವಾಗಿಲ್ಲ, ಇಡೀ ರಾಜ್ಯಾದಂತ ಇದೆ ಇತ್ತೀಚಿನದಲ್ಲ, ನಾಲ್ಕಾರು ವರ್ಷಗಳಿಂದ ಈ ಹುಳದ ಕಾಟ ಇದೆ. ಜೊತೆಗೆ ಈ ವರ್ಷ ವಿಶೇಷ ಏನೆಂದರೆ ತೆಂಗಿನಕಾಯಿ ಬೆಲೆ ನೆಲಕಚ್ಚಿಬಿಟ್ಟಿದೆ. ತೆಂಗಿನ ತೋಟ ಇಟ್ಟುಕೊಂಡಿರುವ ರೈತರ ಹತ್ತಿರ ಔಷಧಿ ಹೊಡಿಸುವುದಕ್ಕೂ ಕೂಡ ಹಣ ಇಲ್ಲ. ಒಂದೂವರೆ ಎರಡೂ ರೂಪಾಯಿಗೆ ತೆಂಗಿನ-ಕಾಯಿ ಕೇಳುವವರಿಲ್ಲ, ಆ ಪರಿಸ್ಥಿತಿ ರಾಜ್ಯದಾದ್ಯಂತ ಇದೆ. ಆದ್ದರಿಂದ ಸರ್ಕಾರ ಒಂದು ವಿಶೇಷವಾದ ಕಾರ್ಯಕ್ರಮ ಹಾಕಿ ಈ ಹುಳ ಹಿಡಿಯದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ. ಇಲ್ಲದಿದ್ದರೆ ಇಡೀ ತೆಂಗಿನ ಮರಗಳೇ ಸರ್ವನಾಶ ಆಗಿಹೋಗುತ್ತವೆ. ಇದರ ಬಗ್ಗೆ ತಾವು ಹೇಳುತ್ತಿದ್ದೀರಿ ಎರಡನೇ ಸಲ ಪ್ರಸ್ತಾಪವಾಗುತ್ತಿದೆ. ಆದರೂ ಸಹ ಇಲ್ಲಿಯವರೆಗೂ ವಿಧ್ಯುಕ್ತವಾದ ಯಾವುದೇ ಕ್ರಮ ತೆಗೆದುಕೊಂಡಿಲ್ಲ, ಇವತ್ತು ನಾಗಮಂಗಲದವರು ಪ್ರಸ್ತಾಪ ಮಾಡುತ್ತಾರೆ. ಮತ್ತೊಂದು ದಿವಸ ಕೋಲಾರದವರು ಪ್ರಸ್ತಾಪ ಮಾಡುತ್ತಾರೆ. ಆದ್ದರಿಂದ ದಯವಿಟ್ಟು ತಾವು ಇದರ ಬಗ್ಗೆ ಸರ್ಕಾರಕ್ಕೆ ತೀವ್ರ ಎಚ್ಚರಿಕೆಯನ್ನು ಕೊಡಬೇಕು. ಏಕೆಂದರೆ ಇಡೀ ಮರವೇ ನಾಶವಾಗಿಬಿಟ್ಟರೆ ಬಹಳ ನಷ್ಟವುಂಟಾಗುತ್ತದೆ. ತೆಂಗಿನ ಮರ ಒಂದು ಎರಡು ದಿವಸದಲ್ಲಿ ಫಸಲಿಗೆ ಬರುವುದಿಲ್ಲ. ಸರಿಯಾದ ಫಸಲಿಗೆ ಬರಬೇಕಾದರೆ 8 ರಿಂದ 10 ವರ್ಷಗಳು ಬೇಕಾಗುತ್ತದೆ. ಆದ್ದರಿಂದ ಬಹಳ ಅಪಾಯದ ಪರಿಸ್ಥಿತಿಯಲ್ಲಿ ತೆಂಗಿನ ಬೆಳೆಗಾರರು, ರೈತರು ಇದ್ದಾರೆ. ದಯವಿಟ್ಟು ಸರ್ಕಾರಕ್ಕೆ ತೀವ್ರ ಎಚ್ಚರಿಕೆ ಕೊಟ್ಟು ತಕ್ಷಣ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ತಾವು ಸೂಚಿಸಬೇಕೆಂದು ಕೋರುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಯಾರಿಗೆ ಎಚ್ಚರಿಕೆ ಕೊಡುತ್ತೀರಿ? ಏನು ಎಚ್ಚರಿಕೆ ಕೊಡುತ್ತೀರಿ. 6 ತಿಂಗಳಿಂದ ಹೇಳುತ್ತಿದ್ದೇವೆ. ತೆಂಗಿನಮರಗಳು ಹಾಳಾಗಿ ಹೋಗಿವೆ

ಎಂದು. ಚಿಕ್ಕನಾಯಕನಹಳ್ಳಿ ಕ್ಷೇತ್ರವೊಂದರಲ್ಲೇ 11 ಸಾವಿರ ತೆಂಗಿನಮರಗಳು ಹೋಗಿವೆ. ಇದರ ಬಗ್ಗೆ ಎಣಿಕೆ ಮಾಡಿಕೊಂಡು ಬಂದು ಸರ್ಕಾರಕ್ಕೆ 11ಸಾವಿರ ತೆಂಗಿನಗಿಡಗಳು ಈ ರೋಗದ ಬಾಧೆಗೆ ಒಳಾಗಾಗಿವೆ ಎಂದು ವರದಿಕೊಟ್ಟಿದ್ದಾರೆ. ಇವತ್ತಿನವರೆಗೂ ಆಕ್ಷನ್ ಇಲ್ಲ. ತಿಪಟೂರು ಹಾಳಾಗಿದೆ. ನಾಗಮಂಗಲ ಹಾಳಾಗಿದೆ, ಮಂಡ್ಯ ಜಿಲ್ಲೆಯಲ್ಲಿ ಹಾಗೂ ಮೈಸೂರು ಜಿಲ್ಲೆಯಲ್ಲಿ ರೋಗ ಬಂದು ಹಾಳಾಗುತ್ತಿದೆ. ಯಾರಿಗೆ ಹೇಳಬೇಕು ನಾವು? ಎಚ್ಚರಿಕೆ ಕೊಟ್ಟು ಕಾಫಿ ಕುಡಿಯೋಣವೇ ನಾವು?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಸದಸ್ಯರು ಹೇಳುವಂತಹ ವಿಷಯ.

ಶ್ರೀ ಜೆ.ಸಿ. ಮಾಧುಸ್ವಾಮಿ :ಸಾರ್, ತೋಟಗಾರಿಕೆ ಸಚಿವರು ಮಾಡಬೇಕಾಗಿರುವ ಕೆಲಸ ಇದು, ಪಾಪ ಹುಚ್ಚಮಾಸ್ತಿಗೌಡರ ಕೆಲಸ ಅಲ್ಲ. ದಯಮಾಡಿ ನೀವು ಯಾರಾದರೂ ಜವಾಬ್ದಾರಿ ತೆಗೆದುಕೊಂಡು ಔಷಧಿ ಕೊಡಿಸುತ್ತೇವೆ ಎಂದು ಹೇಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ : ರೈತರಿಗೆ ನಾವು ಏನು ಉತ್ತರ ಕೊಡಬೇಕು ಅದು ಹೇಳಿ. ಇದರಿಂದ ಕೃಷಿಕರಿಗೆ ತೊಂದರೆ ಆಗಿದೆ.

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹುಚ್ಚಮಾಸ್ತಿಗೌಡರಿಗೆ ನಾವು ಕೈ ಮುಗಿಯುತ್ತೇವೆ. ಅವರ ಕೈಲಿ ನಿಭಾಯಿಸುವುದಕ್ಕೆ ಆಗುವುದಿಲ್ಲ. ಅವರನ್ನು ಬಿಟ್ಟು ಯಾರಿಗಾದರೂ ಹೇಳಿ ಸಾರ್.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಸದಸ್ಯರಿಗೆ ಅಷ್ಟು ವಿಶ್ವಾಸ ಇಲ್ಲದೇ ಇದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಇಲ್ಲಿ ಪರಿಸ್ಥಿತಿ ಏನಿದೆ ಎಂದು ತಿಳಿದು ಹೇಳಬೇಕಾದದ್ದು ಕೃಷಿ ಇಲಾಖೆಗೆ ಸಂಬಂಧಪಟ್ಟಿದ್ದಲ್ಲ.

ಶ್ರೀ ವಾಟಾಳ್ ನಾಗರಾಜ್ : ಕರಿತಲೆ ಹುಳದ ರೋಗ ಇವತ್ತು ನಿನ್ನೆ ಬಂದದ್ದಲ್ಲ. ಆದ್ದರಿಂದ ಇವರು ಪರಿಸ್ಥಿತಿ ತಿಳಿಯುವುದಕ್ಕೆ ಮುಂದಿನ ವರ್ಷಕ್ಕೆ ಹೋಗಬೇಕಾಗಿಲ್ಲ. ಈ ಸರ್ಕಾರಕ್ಕೆ ನಿಜವಾಗೂ ಮಾಹಿತಿ ಇದೆ. ಇಡೀ ರಾಜ್ಯದಲ್ಲಿ ತೆಂಗಿನಬೆಳೆ ಹಾಳಾಗುತ್ತಿದೆ. ಈ ಕೂಡಲೇ ಔಷಧಿ ಕೊಡ್ತೀರಾ ಇಲ್ಲವೋ ಅಷ್ಟು ಹೇಳಿ, ಸುಮ್ಮನೆ ನೀವು ಸುತ್ತಿಬಳಿಸಿ ಎಲ್ಲೆಲ್ಲಿಗೋ ಹೋಗಬೇಡಿ. ಔಷಧಿಯನ್ನು ಕೊಡುತ್ತೇವೆ ಎಂಬ ಸ್ಪಷ್ಟ ಭರವಸೆಯನ್ನು ಕೊಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೆ ಅದಕ್ಕೆ ಸಂಬಂಧಪಟ್ಟ ಸಚಿವರು ಏನು ಮಾಡುವುದಕ್ಕೆ ಸಾಧ್ಯ ಇವತ್ತಿನ ಪರಿಸ್ಥಿತಿಯಲ್ಲಿ ಅದಕ್ಕೆ ಪರಿಹಾರ ಏನು ಎಂದು ಅವರು ಯೋಚನೆ ಮಾಡಿ ತಿಳಿಸಬೇಕಾಗುತ್ತದೆ. ಇದು ನನಗೆ ಸಂಬಂಧಪಟ್ಟ ವಿಚಾರ ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾವು ನಿಮ್ಮನ್ನು ಕೇಳಲೇ ಇಲ್ಲ. ನೀವ್ಯಾಕೆ ಎದ್ದಿರಿ? ನಾವು ಸರ್ಕಾರವನ್ನು ಕೇಳುತ್ತಿದ್ದೇವೆ. ಬುದ್ಧಿವಂತಿಕೆ ಉತ್ತರ ಕೊಡಬೇಡಿ.

(ಗೊಂದಲ)

ಇದರ ಬಗ್ಗೆ ನಾನು ಮೊನ್ನೆ ಒಂದು ಗಮನಸೆಳೆಯುವ ಸೂಚನೆ ತಂದಿದ್ದೆ. ಮಾನ್ಯ ಮಂತ್ರಿಗಳು ತಜ್ಞರನ್ನು ಕಳಿಸುತ್ತಿದ್ದೇನೆ. ನೋಡುವುದಕ್ಕೆ ಕಳುಹಿಸುತ್ತಿದ್ದೇವೆ ಎಂದು ಹೇಳುತ್ತಿದ್ದಾರೆಯೇ ಹೊರತು ಅದರ ಪರಿಣಾಮ ಏನಾಗಿದೆ ಎಂದು ಅವರಿಗೆ ಅರ್ಥವಾಗಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಶ್ರೀ ವಾಟಾಳ್ ನಾಗರಾಜ್‌ರವರು ಹಿಂದೆ ಇದನ್ನು ಸಭೆಯಲ್ಲಿ ಮಂಡನೆ ಮಾಡಿ ಇದಕ್ಕೆ ತೋಟಗಾರಿಕೆ ಸಚಿವರು ವಿವರ

ಕೊಟ್ಟು ಮಾತಾಡಿದ್ದಾರೆ. ಪುನಃ ಇವತ್ತು ವಿಷಯ ಬಂದಿದೆ, ಸ್ವಲ್ಪ ತೀವ್ರವಾಗಿ ಎಂದು ಕಾಣುತ್ತಿದೆ. ತೋಟಗಾರಿಕೆ ಸಚಿವರನ್ನು ಕರೆಯಿಸಿ ನಿಮಗೆ ಉತ್ತರವನ್ನು ನಾಳೆ ಒಳಗೆ ಕೊಡಿಸುತ್ತೇವೆ.

(ಗೊಂದಲ)

ಒಂದು ಮಾತು, ಪ್ರತಿ ವಾಕ್ಯದಲ್ಲೂ ಪ್ರತಿ ವಿಷಯದಲ್ಲೂ, ಸರ್ಕಾರ ಇಲ್ಲ, ಸರ್ಕಾರ ಇಲ್ಲ ಎಂದು ಹೇಳುತ್ತಿದ್ದೀರಿ. ಸರ್ಕಾರ ಇಲ್ಲದ ಮೇಲೆ ನೀವ್ಯಾಕೆ ನಮ್ಮನ್ನು ಕೇಳುತ್ತೀರಿ ?

ಅಧ್ಯಕ್ಷರು : ಆಯಿತು, ಈಗ ಮಾನ್ಯ ಕಂದಾಯ ಸಚಿವರು ತಮ್ಮ ಹೇಳಿಕೆಯನ್ನು ಮಾಡಿ.

ಮಂತ್ರಿಗಳ ಹೇಳಿಕೆ

ಮೈಸೂರು ಜಿಲ್ಲೆ, ಕಬಿನಿ ಜಲಾಶಯ ಯೋಜನೆಯ ಭೂಸ್ವಾಧೀನಕ್ಕೆ ಪರಿಹಾರ ಹಣದ ವಿತರಣೆ ಬಾಕಿ.

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) : ಭೂಸ್ವಾಧೀನ ಕಾಯಿದೆ 1894ರ ಅಡಿಯಲ್ಲಿ ಭಾರಿ ನೀರಾವರಿ ಇಲಾಖೆಯ ಪರವಾಗಿ ಮೈಸೂರು ಜಿಲ್ಲೆಯಲ್ಲಿ ಕಬಿನಿ ಜಲಾಶಯ ಯೋಜನೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸುಮಾರು 21,080 ಎಕರೆ ಜಮೀನುಗಳನ್ನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ. ಈ ಒಟ್ಟು ಭೂಮಿಯ ಮಾಲೀಕರುಗಳಿಗೆ ರೂ. 26,92,796-00 ಗಳನ್ನು ಕರಡು ಐತೀರ್ಪನ್ನು ಸರ್ಕಾರ ಮಂಜೂರು ಮಾಡಿದೆ. ಈ ಒಟ್ಟು ಮೊತ್ತದ ಪೈಕಿ ರೂ. 23,12,66,916-00 ಗಳನ್ನು ಭೂಮಾಲೀಕರುಗಳಿಗೆ ವಿತರಣೆ ಮಾಡಲಾಗಿದೆ. ವಿತರಣೆ ಕಾರ್ಯದ ವಿಚಾರದಲ್ಲಿ ನೀರಾವರಿ ಇಲಾಖೆ ಹಾಗೂ ಆರ್ಥಿಕ ಇಲಾಖೆ ಹಣ ಬಿಡುಗಡೆ ಮಾಡುವ ಸಲುವಾಗಿ ಒತ್ತಾಯ ಕಾರ್ಯ ಮುಂದುವರಿದಿದೆ.

ಈ ಮಧ್ಯೆ ಕೆಲವು ಭೂಮಾಲೀಕರುಗಳು ಭೂಸ್ವಾಧೀನ ಕಾಯಿದೆ 1894ರ ಕಲಂ 18ರಡಿಯಲ್ಲಿ ಹೆಚ್ಚುವರಿ ಪರಿಹಾರ ಹಣಕ್ಕೆ ಸಂಬಂಧಪಟ್ಟ ಸಿವಿಲ್ ನ್ಯಾಯಾಲಯಕ್ಕೆ ಅರ್ಜಿಗಳನ್ನು ಸಲ್ಲಿಸಿದ್ದು, ಸಿವಿಲ್ ನ್ಯಾಯಾಲಯವು ಅರ್ಜಿಗಳನ್ನು ವಿಲೆ ಮಾಡಿ 45 ಲಕ್ಷ ರೂಪಾಯಿಗಳನ್ನು ಭೂಸ್ವಾಧೀನದ ಹೆಚ್ಚುವರಿ ಪರಿಹಾರ ಎಂದು ಆದೇಶ ಹೊರಡಿಸಿದೆ. ಈ 45 ಲಕ್ಷ ಹೆಚ್ಚುವರಿ ಪರಿಹಾರ ವಿತರಣೆಯ ಸಲುವಾಗಿ ಜಿಲ್ಲಾಧಿಕಾರಿಗಳು ಭಾರಿ ನೀರಾವರಿ ಇಲಾಖೆ ಹಾಗೂ ಆರ್ಥಿಕ ಇಲಾಖೆ ಹಾಗೂ ಆರ್ಥಿಕ ಇಲಾಖೆಯೊಡನೆ ಪ್ರಸ್ತಾವನೆ ಮಂಡಿಸಿದ್ದು, ಹಣ ಬಿಡುಗಡೆಗೆ ಮೇಲಿಂದ ಮೇಲೆ ಒತ್ತಾಯ ಮಾಡುತ್ತಿದ್ದಾರೆ.

ಒಟ್ಟಾರೆ ಭೂಮಾಲೀಕರುಗಳಿಗೆ ಸರ್ಕಾರ ಹಣ ವಿತರಣೆ ಮಾಡುವುದು ಸುಮಾರು 3 ಕೋಟಿ 85 ಲಕ್ಷ ರೂಪಾಯಿ ಬಾಕಿ ಇದ್ದು, ಹಣ ವಿತರಣೆ ಮಾಡಬೇಕಾಗಿದೆ. ಹಣ ಬಿಡುಗಡೆಯಾದ ತಕ್ಷಣ ತ್ವರಿತವಾಗಿ ವಿತರಣೆ ಮಾಡಲಾಗುವುದು.

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಭೂಸ್ವಾಧೀನ ಇಲಾಖೆಯ ಅಧಿಕಾರಿಯ ಕಾರ್ಯಾಲಯವನ್ನು ಒಂದು ಸಾರಿ ಅಲ್ಲ ಎರಡು ಸಾರಿ ಜಪ್ತಿ ಮಾಡಿಲಾಗಿದೆ. ಸರ್ಕಾರ ಈಗ 3.85 ಕೋಟಿ ರೂ.ಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳುತ್ತಾರೆ. ಯಾವಾಗ ಬಿಡುಗಡೆ ಮಾಡುತ್ತಾರೆ ಏನು ಎಂದು ಒಂದು ಸ್ಪಷ್ಟ ನಿರ್ದೇಶನವನ್ನು ಕೊಡಬೇಕು. ಇದು ಇವತ್ತಿನದಲ್ಲ, ಎರಡು ಮೂರು ನಾಲ್ಕು ವರ್ಷದಿಂದ ಒಂದೇ ಸಮನೆ ಒತ್ತಾಯದ ಮೇಲೆ ಒತ್ತಾಯ ತರುತ್ತಾ ಇದ್ದಾರೆ. ನ್ಯಾಯಾಲಯಕ್ಕೆ ರೈತರು ಹೋಗಿದ್ದಾರೆ. ಆ ರೈತರ ಪರವಾಗಿ ನ್ಯಾಯಾಲಯ

ಕಾರ್ಯಾಲಯವನ್ನು ಜಪ್ತಿ ಮಾಡಿದ್ದಾರೆ. ಇರತಕ್ಕಂತಹ ಎಲ್ಲಾ ಕುರ್ಚಿಬೆಂಚುಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಈ ಪರಿಸ್ಥಿತಿ ಇರುವಾಗ ರೈತರ ಬವಣೆಯನ್ನು ತಾವು ಪರಿಶೀಲಿಸಿ ಎಷ್ಟು ದಿವಸದಲ್ಲಿ ಸರಿ ಮಾಡುತ್ತೀರಿ? ಚಾಮರಾಜನಗರ ನಂಜನಗೂಡು ಗುಂಡ್ಲುಪೇಟೆ, ಕೊಳ್ಳೇಗಾಲ, ಹೆಗ್ಗಡದೇವನಕೋಟೆ ಪ್ರದೇಶದ ಅನೇಕ ಭೂಮಾಲೀಕರಿಗೆ ಬಹಳ ತೊಂದರೆಯಾಗಿದೆ. ಇದನ್ನು ಕೂಡಲೇ ನೀವು ಒಂದು ನಿರ್ದಿಷ್ಟ ದಿನದಲ್ಲಿ ಕೊಡುತ್ತೇವೆ ಎಂದು ಹೇಳಿ. ಇಲ್ಲದೆ ಇದ್ದರೆ, ಮತ್ತೆ ಜಪ್ತಿ ಮಾಡುತ್ತಾರೆ ಬಹಳ ತೊಂದರೆಯಾಗುತ್ತದೆ, ಸರ್ಕಾರಕ್ಕೆ ಬಹಳ ಅಗೌರವಾಗುತ್ತದೆ. ಸಂಸದೀಯ ಸಚಿವರು ಮಾತೆತ್ತಿದರೆ ನಮ್ಮ ಸರ್ಕಾರ ಬಹಳ ಭದ್ರವಾಗಿದೆ, ನಮ್ಮ ಹಣಕಾಸಿನ ವ್ಯವಸ್ಥೆ ಚೆನ್ನಾಗಿದೆ ನಾವು ಸುಭದ್ರವಾಗಿದ್ದೇವೆ ಎಂದು ಹೇಳುತ್ತಾರೆ. ಇಲ್ಲಿ ಸರ್ಕಾರದ ಕಾರ್ಯಾಲಯವನ್ನು ಜಪ್ತಿ ಮಾಡುವ ಮಟ್ಟಕ್ಕೆ ಬಂದರೆ ನಿಮ್ಮ ಸರ್ಕಾರ ದಿವಾಳಿಯಾಗಿದೆ ಎನ್ನುವುದರಲ್ಲಿ ಬೇರೆ ಮಾತಿಲ್ಲ. ಆದ್ದರಿಂದ ಬಂಡವಾಳ ಇಲ್ಲದ ಬಡಾಯಿ ನೀವು ಹೇಳುವುದಕ್ಕೆ ಹೋಗಬೇಡಿ. ನೇರವಾಗಿ ಹೇಳಿ, ಯಾರದೋ ಖಾಸಗಿಯವರ ಮನೆ ಜಪ್ತಿ ಆಗುತ್ತಿಲ್ಲ. ಸರ್ಕಾರದ ಕಾರ್ಯಾಲಯವನ್ನು ಜಪ್ತಿ ಮಾಡತಕ್ಕಂತಹ ಪರಿಸ್ಥಿತಿ ತೀವ್ರ ಅಗೌರವ. ಆದ್ದರಿಂದ ಸಚಿವರು ಕೂಡಲೇ ಎಷ್ಟು ದಿವಸದೊಳಗಾಗಿ ತೀರಿಸುತ್ತೇವೆಂದು ಸ್ಪಷ್ಟ ಭರವಸೆಯನ್ನು ಕೊಡಬೇಕು.

ಶ್ರೀ ಧರ್ಮಸಿಂಗ್ : ಭೂ ಸ್ವಾಧೀನದ ಬಗ್ಗೆ ಅಲ್ಲಿರತಕ್ಕಂತಹ ರೈತರಿಗೆ ಏನು ಅನಾನುಕೂಲತೆಯಾಗಿದೆ ಅದನ್ನು ಸ್ವಲ್ಪ ಮಟ್ಟಿಗಾದರೂ ಪರಿಹರಿಸಲು ನಾವು ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಹೈಕೋರ್ಟ್, ಸಿವಿಲ್ ಕೋರ್ಟ್ ಕೊಟ್ಟ ತೀರ್ಪಿನ ಪ್ರಕಾರ ಅಲ್ಲಿಂದ ತೀರ್ಪು ಬಂದ ಮೇಲೆ ಸುಮಾರ 7-8 ಪ್ರಕರಣಗಳಲ್ಲಿ 10 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ. 10 ಲಕ್ಷ ರೂಪಾಯಿಗಾಗಿ ಅವರು ಹೋಗಿ ಜಪ್ತಿ ಮಾಡತಕ್ಕಂತಹ ರೀತಿಯಲ್ಲಿ ಹೋಗಿದ್ದಾರೆ. ಆಗ ಜಿಲ್ಲಾಧಿಕಾರಿಗಳು ಮಧ್ಯಸ್ಥಿಕೆ ವಹಿಸಿ ಸರಕಾರದಿಂದ ಹಣವನ್ನು ಕೊಡತಕ್ಕಂತಹ ವ್ಯವಸ್ಥೆ ಮಾಡಿದ್ದಾರೆ. ಒಟ್ಟಾರೆ 3-4 ತಾಲ್ಲೂಕಿನಲ್ಲಿರತಕ್ಕಂತಹ 21,080 ಎಕರೆ ಜಮೀನು ಏನು ಇದೆ ಅದಕ್ಕೆ ಒಟ್ಟಾರೆ 26.52 ಲಕ್ಷ ಕೊಡಬೇಕಾಗಿದೆ. ಇದರಲ್ಲಿ 23.12 ಕೊಟ್ಟಿದ್ದೇವೆ. ಇನ್ನು 3 ಕೋಟಿ 85 ಲಕ್ಷ ರೂಪಾಯಿ ಕೊಡಬೇಕಾಗಿದೆ. ನಿನ್ನೆ ಎಫ್.ಸಿ. ಅವರ ಹತ್ತಿರ ಮತ್ತು ಇರಿಗೇಷನ್ ಕಾರ್ಯದರ್ಶಿ ವೆಂಕಟೇಶ ಪ್ರಸಾದ್ ಅವರ ಜೊತೆಯಲ್ಲಿ ಮಾತನಾಡುತ್ತಿದ್ದೇನೆ. ಅದನ್ನೂ ಕೂಡ ತ್ವರಿತಗತಿಯಲ್ಲಿ ಬಿಡುಗಡೆ ಮಾಡುವ ವ್ಯವಸ್ಥೆ ಮಾಡುತ್ತೇವೆಂದು ತಿಳಿಸಿದ್ದಾರೆ. ಈ 26 ಕೋಟಿಯಲ್ಲಿ 23 ಕೋಟಿಯನ್ನು ಈಗಾಗಲೇ ಸರಕಾರ ನೀಡಿದೆ. ಇನ್ನು 3 ಕೋಟಿ 85 ಲಕ್ಷ ರೂಪಾಯಿಗಳನ್ನು ಕೊಡುವ ವ್ಯವಸ್ಥೆ ಮಾಡಿದ್ದೇವೆ. ಜಪ್ತಿಯಾಗಿರುವುದು ಕೇವಲ 7-8ಪ್ರಕರಣಗಳಲ್ಲಿ 10 ಲಕ್ಷ ರೂಪಾಯಿ ಇತ್ತು; ಅದನ್ನು ಕೂಡ ಕೊಡುವ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಬಗ್ಗೆ ನಂಬಿಕೆ ಇದೆ. ತ್ವರಿತ ಅಂದರೆ ಯಾವಾಗ? ಕಾರ್ಯಾಲಯಕ್ಕೆ ನುಗ್ಗಿ ಲೂಟಿ ಮಾಡತಕ್ಕಂಥಾದ್ದು ಜಪ್ತಿ ಮಾಡತಕ್ಕಂಥಾದ್ದಕ್ಕೆ ಹೋದರೆ ಅದೂ ಸರಕಾರದ ಕಾರ್ಯಾಲಯಕ್ಕೆ ಈ ರೀತಿಯಾದರೆ ಬೇರೆ ಕಡೆ ಹೇಗಾಗುತ್ತದೆ ಎಂಬುದನ್ನು ವಿಚಾರ ಮಾಡಬೇಕು. ತ್ವರಿತ ಅನ್ನುವ ಪದ ಇದೆಯಲ್ಲಾ ಅದಕ್ಕೆ ಇಂತಿಷ್ಟು ದಿನಗಳು ಎಂದು ಇರುವುದಿಲ್ಲ, ನಿಮ್ಮ ಬಗ್ಗೆ ನನಗೆ ವಿಶ್ವಾಸವಿದೆ. ಈ ವಾರದಲ್ಲಿ ಏನಾದರೂ ರೈತರ ಸಮಸ್ಯೆಯನ್ನು ಬಗೆಹರಿಸುತ್ತೀರಾ?

ಶ್ರೀ ಧರ್ಮಸಿಂಗ್ : ಲ್ಯಾಂಡ್ ಅಕ್ವೈರ್ ಮಾಡುವುದು ಕಂದಾಯ ಇಲಾಖೆಯವರು. ನಾನು ಇರಿಗೇಷನ್ ಕಾರ್ಯದರ್ಶಿಯವರ ಜೊತೆ ಮಾತನಾಡಿದ್ದೇನೆ. ಹಣಕಾಸು ಇಲಾಖೆಯ ಜೊತೆಯಲ್ಲಿ ಮಾತನಾಡಿದ್ದೇನೆ. ಸ್ವಲ್ಪ ಸಮಯದಲ್ಲಿ 26ರಲ್ಲಿ 23 ಕೋಟಿ ಹಣವನ್ನು ಕೊಟ್ಟಿದ್ದೇವೆ. ಇನ್ನು 3 ಕೋಟಿ 85 ಲಕ್ಷವನ್ನು ಪ್ರಯತ್ನ ಮಾಡಿ ತಕ್ಷಣ ಕೊಡುವಂತೆ ಹೇಳಿದ್ದೇನೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವ

+ ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣವನ್ನು ನಾನು ಸ್ವಾಗತಿಸುತ್ತಾ ಕೆಲವಾರು ವಿಚಾರಗಳನ್ನು ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ರಾಜ್ಯಪಾಲರ ಭಾಷಣದ ನಂತರ ವಿರೋಧ ಪಕ್ಷದ ಸದಸ್ಯರು, ನಾಯಕರು ಮಾಡಿದ ಟೀಕೆ ನೋಡಿ ಅದರಲ್ಲಿ ಹುರುಳಿಲ್ಲವೆಂದು ಅನ್ನಿಸಿತು. ಹಿರಿಯ ವಿರೋಧ ಪಕ್ಷದ ಮುಖಂಡರು ರಾಜ್ಯಪಾಲರ ಭಾಷಣದಲ್ಲಿ ಏನೂ ಸಾರಾಂಶವಿಲ್ಲ, ಜೊಳ್ಳು, ಸುಳ್ಳಿನ ಕಂತೆ ಎಂದು ಹೇಳಿದರು. ಹೊಸ ಹೊಸ ಯೋಜನೆಗಳನ್ನು ನಾವು ಹೇಳಿದ್ದೇವೆ ಆರಂಭ, ಪುನಶ್ಚೇತನ ಇವುಗಳ ಬಗ್ಗೆ ಬಹಳ ಕಟುವಾಗಿ ಟೀಕೆ ಮಾಡಿದ್ದರು. ಯಾರಿಗೇ ಆಗಲಿ ಒಳ್ಳೆಯ ಕೆಲಸ ಮಾಡಲಿಕ್ಕೆ ಹೊರಟಾಗ ನಮ್ಮ ಶತ್ರುವಾದರೂ ಕೂಡ ಅವರನ್ನು ಶ್ಲಾಘನೆ ಮಾಡಬೇಕಾಗುತ್ತದೆ. ಅದನ್ನು ಸ್ವಾಗತಿಸುವಂತಹ ವಿಶಾಲ ಹೃದಯ ಇರಬೇಕಾಗುತ್ತದೆ. ಕಾಮಾಲೆ ಕಣ್ಣಿಗೆ ಎಲ್ಲಾ ಹಳದಿಯಾಗಿ ಕಾಣುತ್ತದೆ ಎನ್ನುವ ಹಾಗೆ ವಿರೋಧ ಪಕ್ಷದವರು ಅಲ್ಲಿ ಕುಳಿತುಕೊಂಡು ಆಡಳಿತ ಪಕ್ಷದವರು ಏನು ಮಾಡಿದರೂ ಸಹ ಸರಿಯಲ್ಲವೆಂದು ಟೀಕೆ ಮಾಡುವುದೇ ನಮ್ಮ ಚಾಳಿಯೆಂದು ಮಾತನಾಡಿದರೆ ಅದು ಸರಿಯಲ್ಲವೆಂದು ನನಗನ್ನಿಸುತ್ತದೆ. ಹಿಂದೆ ಆಶ್ರಯ ಮತ್ತು ಕೆಲವೊಂದು ಯೋಜನೆಗಳು ಬಂದಾಗ ಕಟುವಾಗಿ ಟೀಕೆ ಮಾಡಿದ್ದರು. ಆಶ್ರಯ, ನೆರಳಿನ ಭಾಗ್ಯ, ಆರಾಧನೆ ಈ ಮೂರು ಯೋಜನೆಗಳಿಂದ ಜನರಿಗೆ ಬಹಳ ಸಹಾಯವಾಗಿದೆ ಮತ್ತು ಸಾಕಷ್ಟು ಜನರ ಬೇಡಿಕೆ ಇದರ ಬಗ್ಗೆ ಇದೆ. ಆಶ್ರಯದಲ್ಲಿ ಮನೆ ಕೊಡಿ ಎಂದು ನಮಗೆ ಸಾವಿರಾರು ಜನರ ಬೇಡಿಕೆ ಇದೆ. ನೆರಳಿನ ಭಾಗ್ಯವನ್ನು ಜನರು ತುಂಬು ಹೃದಯದಿಂದ ಸ್ವಾಗತಿಸುತ್ತಿದ್ದಾರೆ.

(ಮಾನ್ಯ ರಾಜೂಗೌಡರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಎಷ್ಟೋ ಜನ ಬಡವರಿಗೆ ಕಟ್ಟಲಾಗಿದೆ. ಮನೆ ಬಿದ್ದು ಹೋಗುವ ಹಾಗಿದ್ದರೆ ಅದನ್ನು ರಿಪೇರಿ ಮಾಡಲಿಕ್ಕೆ ಅವರಿಗೆ ಶಕ್ತಿಯಿರಲಿಲ್ಲ. 3 ಸಾವಿರ ರೂಪಾಯಿ ಒಂದು ರೀತಿಯ ವರದಾನ ಅವರಿಗಾಗಿದೆ. ಎಷ್ಟೋ ವರ್ಷದಿಂದ ಬಡವರು ಜಮೀನನ್ನು ಒತ್ತುವರಿ ಮಾಡಿಕೊಂಡು ಬಂದಿದ್ದರು ಆದರೂ ಕೂಡ ಅವರಿಗೆ ಹಕ್ಕುಪತ್ರ ಸಿಕ್ಕಿರಲಿಲ್ಲ. ಒತ್ತುವರಿಯನ್ನು ಸಕ್ರಮ ಮಾಡುತ್ತೇವೆಂದು ಹೇಳಿದಾಗ ಸಾವಿರಾರು ಅರ್ಜಿಗಳು ನಮಗೆ ಬಂದವು. ಆ ಅರ್ಜಿಗಳನ್ನು ತೀರ್ಮಾನ ಮಾಡಲಿಕ್ಕೆ ನಮಗೆ ಸಾಕಷ್ಟು ಸಮಯವಾಗುತ್ತಿಲ್ಲ. ಆದರೂ ಸಹ ಆ ಜನರಿಗೆ ಬಹಳ ಧೈರ್ಯಬಂದಿದೆ ಇದು ನಮ್ಮದ್ದೆಂದು ಜಮೀನಿಗೆ ಬೇಲಿ ಹಾಕಿ ಬೆಳೆ ಬೆಳೆಸಿದ್ದಾರೆ. ಇದು ನಮಗೆ ದಕ್ಕುತ್ತದೆಂಬ ನಂಬಿಕೆ ಬಂದಿದೆ. ಒಳ್ಳೆ ಕೆಲಸ ಮಾಡಿದಾಗ ಒಳ್ಳೆ ಕೆಲಸ ಮಾಡಿದ್ದೀರಿ ಎಂದು ಹೇಳುವಂತಹ ಹೃದಯವಂತಿಕೆ ವಿರೋಧಪಕ್ಷದವರಿಗೇ ಆಗಲೀ ಯಾವುದೇ ಪಕ್ಷದ ಜನರಿಗಾಗಲೀ ಇರಬೇಕೆಂದು ನನ್ನ ಮನವಿ. ನಮ್ಮ ಸರಕಾರದ ದುರಂತವೆಂದರೆ ಕಳೆದ ವರ್ಷ ಇಡೀ ರಾಜ್ಯದಲ್ಲಿ ಬರ ಪರಿಹಾರ ಮತ್ತು ಭೂಕಂಪದ ಬೇಗೆಗೆ ನಾವು ಒಳಗಾಗಿ ಬಹಳ ಕಷ್ಟ ನಷ್ಟಗಳನ್ನು ಅನುಭವಿಸಬೇಕಾಯಿತು.

ಅದಕ್ಕಾಗಿ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ವ್ಯಯ ಮಾಡಬೇಕಾಯಿತು. ಬೆಳೆಗೆ ಹಾನಿಯುಂಟಾದಾಗ ಅದಕ್ಕೆ ಪರಿಹಾರವೆಂದು 6.68 ಕೋಟಿ ರೂಪಾಯಿಗಳನ್ನು ಕೊಡಬೇಕಾಯಿತು. ಹಾಗೆಯೇ ದೀರ್ಘಾವಧಿ ಸಾಲವೆಂದು ಸುಮಾರು 200 ಕೋಟಿ ರೂಪಾಯಿಗಳನ್ನು ಸರ್ಕಾರ ಒದಗಿಸಬೇಕಾದಂಥ ಪ್ರಸಂಗ ಬಂತು. ಆದರೂ ಸಹ ಧೃತಿಗೆಡದೆ ಹಲವಾರು ಯೋಜನೆಗಳನ್ನು ಬಡವರಿಗೆ ಏನೇನು ಹಾಕಿದ್ದರೋ ಅದನ್ನು ಮುಂದುವರಿಸಿಕೊಂಡು ಬಂದು ಜನರಿಗೆ ತಲುಪಿಸುವ ಒಂದು ಪ್ರಯತ್ನವನ್ನು ಮಾಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಅದಕ್ಕೆ ನಾವು ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕು.

ಅಷ್ಟೇ ನಂಬಿಕೆ ವಿಶ್ವಾಸ ಜನರಲ್ಲಿ ಬರಬೇಕು ಎನ್ನುವ ದೃಷ್ಟಿಯಿಂದ ದಕ್ಷ ಮತ್ತು ಪ್ರಾಮಾಣಿಕ ಆಡಳಿತ ಕೊಡುವಲ್ಲಿ ನಮ್ಮ ಸರ್ಕಾರ ಇವತ್ತು ಮುಂದಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ಭ್ರಷ್ಟಾಚಾರವನ್ನು ತೊಡೆದು ಹಾಕಲು ಪ್ರಯತ್ನ ಸಾಕಷ್ಟು ಈ ಒಂದು ಸರ್ಕಾರದಲ್ಲಿ ನಡೆದಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬೇಕಾಗಿದೆ. ಇದನ್ನು ವಿರೋಧ ಪಕ್ಷದವರೂ ಸಹ ಮೆಚ್ಚಿಕೊಳ್ಳುತ್ತಾರೆ ಎಂದು ನಾನಂತೂ ನಂಬಿದ್ದೇನೆ. ಯಾವುದೇ ಭ್ರಷ್ಟಾಚಾರದ ಅಪಾದನೆ ಈ ಸರ್ಕಾರಕ್ಕೆ ಇವತ್ತು ಬಂದಿಲ್ಲ. ಆದರೆ ಕೆಲವೊಂದು ಯೋಜನೆಗಳನ್ನು ಜಾರಿ ಕೊಡಬೇಕಾದರೆ ಸಣ್ಣಪುಟ್ಟ ತೊಡಕಾಗಿರಬಹುದು. ಆದರೂ ಸಹ ಸಂಪೂರ್ಣವಾಗಿ ಈ ಯೋಜನೆಗಳನ್ನು ಜಾರಿಗೆ ಕೊಡುವಲ್ಲಿ ವಿಫಲರಾಗಿದ್ದೇವೆ ಎಂದು ಒಪ್ಪಿಕೊಳ್ಳುವುದಕ್ಕೆ ನಾನಂತೂ ತಯಾರಾಗಿಲ್ಲ. ಈ ಆಡಳಿತ ಯಂತ್ರವನ್ನು ಇನ್ನಷ್ಟು ಚುರುಕುಗೊಳಿಸಬೇಕು ಎನ್ನುವ ದೃಷ್ಟಿಯಿಂದ ಸರ್ಕಾರದ ಮಟ್ಟದಲ್ಲಿ, ಕ್ಯಾಬಿನೆಟ್ ಒಂದು ಸಮಿತಿಯನ್ನು ಮಾಡಿ ಪ್ರತಿ ತಿಂಗಳು ರಿವ್ಯೂ ವರ್ಕನ್ನು ಮಾಡುತ್ತಿದ್ದಾರೆ. ಆದರೂ ನಾನು ಕಿವಿ ಮಾತು ಸರ್ಕಾರಕ್ಕೆ ಹೇಳಬೇಕೆಂದರೆ ಯಾವುದೇ ಯೋಜನೆಗಳು ಇವತ್ತು ಜನಸಾಮಾನ್ಯರಿಗೆ ಮುಟ್ಟಬೇಕಾದರೆ ಆಡಳಿತ ಯಂತ್ರ ಬಹಳ ಪ್ರಾಮಾಣಿಕವಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ಸಚಿವಾಲಯದಲ್ಲಿ ಅಧಿಕಾರಿಗಳು ಮತ್ತು ಜಿಲ್ಲಾಮಟ್ಟದ ಆಡಳಿತ ಯಂತ್ರ ಏನಿದೆ, ಅವರು ಪ್ರಾಮಾಣಿಕವಾಗಿ ದಕ್ಷವಾಗಿ ಕೆಲಸಮಾಡಿ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಿದಾಗ ಮಾತ್ರ ಸರ್ಕಾರಕ್ಕೆ ಮತ್ತು ಜನರಿಗೆ ಅನುಕೂಲವಾಗುತ್ತದೆ ಎಂದು ನಾನಂತೂ ನಂಬಿಕೊಂಡಿದ್ದೇನೆ. ಆದರೆ, ಈ ಅಧಿಕಾರಿಗಳ ಧೋರಣೆ ನಮಗೆ ಅರ್ಥವೇ ಆಗುವುದಿಲ್ಲ. ಯಾವ ಸರ್ಕಾರ ಬರಲಿ, ಯಾವ ಸರ್ಕಾರ ಹೋಗಲಿ ಅವರು ಒಂದು ಮನೋಭಾವನೆ ಒಂದೇ ರೀತಿಯಾಗಿರುತ್ತದೆ ಎಂದು ನನಗನಿಸುತ್ತದೆ. ತಾವು ವಿರೋಧ ಪಕ್ಷದಲ್ಲಿ ಕುಳಿತುಕೊಂಡು, ನಿಮ್ಮ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವುದಿಲ್ಲ, ನಿಮ್ಮ ಅಧಿಕಾರಿಗಳು ಭ್ರಷ್ಟರಿದ್ದಾರೆ ಎಂದು ದೂರುವುದು ಒಂದು. ಆದರೆ ಯಾವುದೇ ಸರ್ಕಾರ ಬಂದರೂ ಅದೇ ಅಧಿಕಾರಿಗಳಿರುತ್ತಾರೆ. ಇದು ದೊಡ್ಡ ದುರಂತ ಎಂದು ಹೇಳಿದರೆ ಅವರಿಗೂ ಏನೂ ಭಯವಿಲ್ಲ ಎನಿಸುತ್ತದೆ. ಈ ಸರ್ಕಾರದಲ್ಲಿದ್ದ ಅಥವಾ ಈ ಶಾಸನಸಭೆಯಲ್ಲಿದ್ದ ಶಾಸಕರು ಮುಂದೆ ಬರುತ್ತಾರೋ ಇರುತ್ತಾರೋ ಅಥವಾ ಮಂತ್ರಿಗಳು ಮುಂದೆ ಇರುತ್ತಾರೋ ಇರುವುದಿಲ್ಲವೋ ಆದರೆ ನಾನಂತೂ ಗಟ್ಟಿಯಾಗಿರುತ್ತೇವೆ, ನಮ್ಮದೇ ಆದ ಒಂದು ಹಾದಿಯಲ್ಲಿ ನಾವು ನಡೆಯಬೇಕು, ನಾವು ಏತಕ್ಕೆ ಕೇರೆ ಮಾಡಬೇಕು ಎನ್ನುವ ದೃಷ್ಟಿಯಿಂದ ಕೆಲಸ ಮಾಡಿಕೊಂಡು ಹೋಗುತ್ತಾರೇನೋ ಎಂದು ನನಗಂತೂ ಅನಿಸುತ್ತದೆ. ಎಷ್ಟೋ ಸಾರಿ ಸರ್ಕಾರದ ಆದೇಶ ಜನರಿಗೆ ಮುಟ್ಟಬೇಕಾದರೆ ಬಹಳ ತಡವಾಗುತ್ತದೆ. ವಿಧಾನಸೌಧದಲ್ಲಿ ಯಾವುದೇ ಒಂದು ಆದೇಶವನ್ನು ಹೊರಡಿಸಿದರೆ ಅದು ಕೆಳಹಂತಕ್ಕೆ ತಲುಪಬೇಕಾದರೆ. ಕನಿಷ್ಟ ಎಂದು ಹೇಳಿದರೆ ಎರಡು ತಿಂಗಳು ಒಂದು ತಿಂಗಳಾದರೂ ಸಹ ಜನರಿಗೆ ತಲುಪುವುದಿಲ್ಲ. ಇದು ಬಹಳ ವ್ಯಸನಕರವಾದ ಸಂಗತಿ. ಆದ್ದರಿಂದ ಆಡಳಿತ ಯಂತ್ರ ಬಹಳ ಚುರುಕಾಗಬೇಕಾಗುತ್ತದೆ. ಮೇಲ್ಮಟ್ಟದ ಅಧಿಕಾರಿಗಳಿಂದ ಹಿಡಿದು ಕೆಳಮಟ್ಟದ ಅಧಿಕಾರಿಗಳಿಗೆ ನನ್ನದೊಂದು ಮನವಿ ಎಂದರೆ ತಮಗೆ ಯಾರೂ ಸರ್ಟಿಫಿಕೇಟನ್ನು ಕೊಡುವುದಿಲ್ಲ. ನಮಗೂ ಸಹಾ ಯಾರೂ ಸರ್ಟಿಫಿಕೇಟ್ ಕೊಡುವುದಿಲ್ಲ. ಆದರೆ ನಮ್ಮೆಲ್ಲರಿಗೂ ಜನರ ಸರ್ಟಿಫಿಕೇಟ್ ಬಹಳ ಮುಖ್ಯ. ಅದು ನಮಗೆ ಸಹಾಯಕ್ಕೂ ಬರುವುದಿಲ್ಲ. ನಮಗೆ ಸಮಾಧಾನ ಮಾತ್ರ ತರುತ್ತದೆ. ಅಧಿಕಾರಿಗಳು ಅವರ ಮಟ್ಟದಲ್ಲಿ ಜನರು ಅವರನ್ನು ಬಹಳ ಒಳ್ಳೆಯ ಅಧಿಕಾರಿಗಳು ಎಂದು ವಿಶ್ವಾಸದಿಂದ ಕಾಣುತ್ತಾರೆ. ನಾನು ಉದಾಹರಣೆಗೆ ಹೇಳಬೇಕೆಂದು ಹೇಳಿದರೆ ಜಿಲ್ಲಾಧಿಕಾರಿಗಳನ್ನು ನಮ್ಮ ಜಿಲ್ಲೆಯಲ್ಲಿ ಕೆಲವಾರು ಜನರು ಬಂದು ಹೋದರು. ಆದರೆ ಕೆಲವೇ ಕೆಲವು ಜಿಲ್ಲಾಧಿಕಾರಿಗಳಾಗಿ ಜನರು ಇವತ್ತು ನೆನೆಸುತ್ತಾರೆ. ನಮ್ಮಲ್ಲಿ ಸೆಕ್ರಟರಿಯಾಗಿರುವ ಕೆ.ಪಿ. ಪಾಂಡೆಯವರು

ನಮ್ಮಲ್ಲಿ ಜಿಲ್ಲಾಧಿಕಾರಿಗಳಾಗಿದ್ದರು. ಡಾ|| ಸುಬ್ರಹ್ಮಣ್ಯಂ ಅವರು ಜಿಲ್ಲಾಧಿಕಾರಿಗಳಾಗಿದ್ದರು. ಇವರನ್ನು ಇವತ್ತಿಗೂ ಜನರು ನೆನೆಸುತ್ತಾರೆ. ಒಳ್ಳೆಯ ಜಿಲ್ಲಾಧಿಕಾರಿಗಳಿದ್ದರು. ಇವರ ಕಾಲದಲ್ಲಿ ಒಳ್ಳೆಯ ಕೆಲಸವಾಯಿತು ಎಂದು. ಹಾಗೆಯೆ ನಮ್ಮಲ್ಲಿ ಮುಖ್ಯಕಾರ್ಯದರ್ಶಿಯಾಗಿ ಬಹಳ ಜನರು ಬಂದು ಹೋದರು. ಅದರಲ್ಲಿ ಹೆಣ್ಣು ಮಗಳಾಗಿ ಗೌರಿ ತ್ರಿವೇದಿ ಅವರು ಬಂದರು. ಇವತ್ತು ಆಕೆಯನ್ನು ಜನರು ನೆನೆಸುತ್ತಾರೆ. ಬಹಳಷ್ಟು ಕೆಲಸ ಮಾಡುತ್ತಿದ್ದರು. ಯಾವುದೇ ಒಂದು ತಾರತಮ್ಯವಿಲ್ಲದೆ ಜನರಿಗೆ ಹಗಲಿರುಳು ಕೆಲಸ ಮಾಡುವುದಕ್ಕೆ ಅವರು ಮುಂದಾಗುತ್ತಿದ್ದರು ಎಂದು ಜನರು ನೆನೆಸುತ್ತಾರೆ. ಆ ರೀತಿ ಅಧಿಕಾರಿಗಳು ಕೆಲಸ ಮಾಡಬೇಕೆ ವಿನಹ ಜಿಡ್ಡುಗಟ್ಟಿ ಸರ್ಕಾರ ಬರುತ್ತದೆ, ಹೋಗುತ್ತದೆ, ಆದರೆ ನಮಗೇನು ಆಗುವುದಿಲ್ಲ ಮೊಂಡು ಸ್ವಭಾವ ಇಟ್ಟುಕೊಂಡು ಹೋದರೆ ಜನರಿಗೆ ನಿಜವಾಗಲೂ ಇವರು ಯಾವುದೇ ಯೋಜನೆಗಳನ್ನು ತಲುಪಿಸುವುದಕ್ಕೆ ಸಾಧ್ಯವಿಲ್ಲ.

ಆ ದೃಷ್ಟಿಯಿಂದ ನಾನು ಇಲ್ಲಿರುವ ಅಧಿಕಾರಿಗಳಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಅದರಲ್ಲೂ ಸೆಕ್ರೆಟರಿಯೇಟ್ನಲ್ಲಿ ಕುಳಿತುಕೊಂಡು ಕೆಲವರು ಕೆಲವೊಂದು ಕಾನೂನುಗಳನ್ನು ಮಾಡುತ್ತಾರೆ. ದೇವರು ಅವರಿಗೆ ಯಾವ ರೀತಿ ಮನಸ್ಸು ಕೊಡುತ್ತಾನೇ ನನಗೆ ಅರ್ಥ ಆಗುತ್ತಿಲ್ಲ. ಜನರಿಗೆ ಅನುಕೂಲ ಆಗುವ ರೀತಿ ಕಾನೂನು ಮಾಡಿದರೆ ಬಹಳ ಸಹಾಯ ಆಗುತ್ತದೆ ಏನೋ ಎಂದು ಅನಿಸುತ್ತದೆ. ಆದರೆ ಸುಮ್ಮನೆ ಕಾನೂನು ಮಾಡಿದರೆ ಬಹಳ ಸಹಾಯ ಆಗುತ್ತದೆ ಏನೋ ಎಂದು ಅನಿಸುತ್ತದೆ. ಆದರೆ ಸುಮ್ಮನೇ ಕಾನೂನು ಮಾಡಿದರೆ ಅದು ಮಲೆನಾಡಿಗೆ ಅಷ್ಟೆ ಆದರೆ ಬಯಲು ಸೀಮೆಯವರೆಗೆ ಅಷ್ಟೆ ಆಗುವುದಿಲ್ಲ. ಬಯಲು ಸೀಮೆಗೆ ಈ ಕಾನೂನು ಅನುಕೂಲ ಆದರೆ ಮಲೆನಾಡಿಗೆ ಅಷ್ಟೆ ಆಗುವುದಿಲ್ಲ. ಉದಾಹರಣೆಗೆ ಈ ಒತ್ತುವರಿ ಸಕ್ರಮ ಜನರಿಗೆ ಇವತ್ತು ಬಹಳ ವರದಾನ ಆಗಿದೆ. ಇದರಲ್ಲಿ ಏನು ಮಾಡಿದರು ಎಂದರೆ ಒಂದು ಸಣ್ಣ ರಾಜಕೀಯ ಎಂಬ ಪದ ಬಳಸಬಹುದೋ ಇಲ್ಲವೋ ನನಗೆ ಗೊತ್ತಿಲ್ಲ. ಈಗ ಒತ್ತುವರಿ ಸಕ್ರಮ ಯಾವ ಒಂದು ಜಮೀನನ್ನು ಬಡವರಿಗೆ ನಾವು ಸಕ್ರಮ ಮಾಡಬಹುದು ಎನ್ನುವುದನ್ನು ಆ ಲ್ಯಾಂಡ್ ಕ್ಲಾಸಿಫಿಕೇಶನ್ನಲ್ಲಿ ಹೇಳಿದ್ದಾರೆ. ತರಿ, ಖುಷ್ಕಿ, ಗೋಮಾಳ ಇಂತಹವನ್ನು ಅವರು ಸಕ್ರಮ ಮಾಡಬಹುದು. ಆದರೆ ರಿಸರ್ವ್‌ಲ್ಯಾಂಡ್ ಆದ ಕುಂಕಿ, ಖುಷ್ಕಿ ಮತ್ತು ಕಾಫಿ ಖರಾಫೆ ಇಂತಹ ಭೂಮಿಯನ್ನು ಒತ್ತುವರಿ ಸಕ್ರಮ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿ. ಆದರೆ ದುರಂತ ಎಂದು ಹೇಳಿದರೆ ನಮ್ಮ ಏರಿಯಾದಲ್ಲಿ ಬರೀ ಖುಷ್ಕಿಯಲ್ಲಿ ಜನ ಕಾಫಿ ಬೆಳೆದಿದ್ದಾರೆ. ಏಕೆಂದರೆ ನಮ್ಮಲ್ಲಿ ಕಾಫಿ ಬೆಳೆಯುವುದನ್ನು ಬಿಟ್ಟರೆ ಬೇರೆ ಯಾವುದೇ ಬೆಳೆಯಲಿಕ್ಕೆ ಸಾಧ್ಯ ಇಲ್ಲ. ಗೋಧಿ, ರಾಗಿ, ಜೋಳ ಇತ್ಯಾದಿಗಳನ್ನು ಬೆಳೆಯುವುದಕ್ಕೆ ಸಾಧ್ಯ ಇಲ್ಲ. ನೀವು ತರಿ, ಖುಷ್ಕಿಯಲ್ಲಿ ಕಾಫಿ ಬೆಳೆಯುತ್ತಿದ್ದೀರ. ಈ ಭೂಮಿಯನ್ನು ನೀವು ಸಕ್ರಮ ಮಾಡುವುದಕ್ಕೆ ಆಗುವುದಿಲ್ಲ. ಇದು ಕಾಫಿ ಪ್ಲಾಂಟೇಶನ್ ಆಗುತ್ತದೆ ಎಂದು ಹೇಳಿದರೆ ಇದು ಹೇಗೆ ಸಾಧ್ಯ? ಸಾಮಾನ್ಯ ಜನ ಹೇಳುತ್ತಾರೆ. ನಮಗೆ ಕಾಫಿ ಪ್ಲಾಂಟೇಷನ್ ಎಂದು ಹೇಳಬೇಕಾದರೆ ಅದು ಟೆನ್ಯೂರ್ ಛೇಂಜ್ ಆಗಬೇಕಾಗುತ್ತದೆ. ಜೊತೆಗೆ ತರಿ ಇದ್ದುದ್ದನ್ನು ಅದು ಕಾಫಿ ಎಂದು ಆಗಬೇಕಾದರೆ ಸಿ ಆರ್ ಸಿ ಅಂದರೆ ಕಾಫಿ ರೆಜಿಸ್ಟ್ರೇಷನ್ ಸರ್ಟಿಫಿಕೇಟ್ ತೆಗೆದುಕೊಂಡ ನಂತರ ಅದು ಕಾಫಿ ಪ್ಲಾಂಟೇಷನ್ ಲ್ಯಾಂಡ್ ಆಗುತ್ತದೆ. ಅದಕ್ಕೆ ಮೊದಲು ಇವರು ಪ್ಲಾಂಟೇಷನ್ ಲ್ಯಾಂಡ್ ಎಂದು ಹೇಳಿ ಇದನ್ನು ವಜಾ ಮಾಡುತ್ತಾರಲ್ಲಾ, ಇದು ಯಾವ ನ್ಯಾಯ? ಇದು ಅನ್ಯಾಯ. ಯಾರು ಈ ಕಾನೂನನ್ನು ಮಾಡಿದ್ದುದು ಎಂದು ನಮ್ಮನ್ನು ಪ್ರಶ್ನೆ ಮಾಡುತ್ತಾರೆ. ಅಂದರೆ ಸಾಮಾನ್ಯ ಜನರಿಗೆ ಅರ್ಥ ಆಗುವ ಈ ಒಂದು ಸಮಸ್ಯೆ ಅಥವಾ ಪ್ರಶ್ನೆ ಇಲ್ಲಿ ಸೆಕ್ರಟರಿಯೇಟ್ ನಲ್ಲಿ ಕುಳಿತು ಈ ಕಾನೂನು ಮಾಡಿದವರಿಗೆ ಏಕೆ ಅರ್ಥ ಆಗುವುದಿಲ್ಲ ಎಂದು ನನಗಂತೂ ಅರ್ಥ

ಆಗುವುದಿಲ್ಲ. ಇಂತಹ ಅನಾಹುತಗಳು, ಅನ್ಯಾಯಗಳು ಸಾಕಷ್ಟು ನಡೆಯುತ್ತವೆ. ಅದಕ್ಕೆ ಜನ ಸಾಮಾನ್ಯರ ಬಗ್ಗೆ ಯಾವುದೇ ಕಾನೂನನ್ನು ತಯಾರು ಮಾಡಬೇಕಾದರೆ ನಿರೂಪಣೆ ಮಾಡಬೇಕಾದರೆ ಅಧಿಕಾರಿಗಳು ಸ್ವಲ್ಪ ಮನಸ್ಸು ಬಿಚ್ಚಿ, ಹೃದಯ ಬಿಚ್ಚಿ ಕೆಲಸ ಮಾಡಬೇಕಾಗುತ್ತದೆ. ಸಾಮಾನ್ಯ ಜನರಿಗೆ ಈ ಕಾನೂನು ಎಷ್ಟರಮಟ್ಟಿಗೆ ತಲುಪುತ್ತದೆ, ಸಹಾಯ ಆಗುತ್ತದೆ, ಎನ್ನುವುದನ್ನು ವಿಚಾರ ಮಾಡಿದರೆ ಬಹಳಷ್ಟು ಜನರಿಗೆ ಅನುಕೂಲ ಆಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಜೊತೆಗೆ ಯಾವುದೇ ಅಧಿಕಾರಿ ಯಾವುದೇ ಯೋಜನೆಯನ್ನು ತಲುಪಿಸುವಲ್ಲಿ ಜನರಿಗೆ ಮುಟ್ಟಿಸುವಲ್ಲಿ ಎಲ್ಲಿ ಫೇಲ್ಯೂರ್ ಆಗುತ್ತಾನೆ, ಅಂತಹವರ ಬಗ್ಗೆ ನಾವು ಕಠಿಣವಾಗಿ ನಡೆಸಿಕೊಳ್ಳಬೇಕಾಗುತ್ತದೆ. ಅವರಿಗೆ ಯಾವ ರೀತಿ ಪನಿಷ್ಮೆಂಟ್ ಕೊಡಲಿಕ್ಕೆ ಸಾಧ್ಯ ಆ ರೀತಿ ಪನಿಷ್ಮೆಂಟ್ ಕೊಟ್ಟಾಗ ಬೇರೆ ಅಧಿಕಾರಿಗಳು ಸ್ವಲ್ಪ ಎಚ್ಚೆತ್ತುಕೊಂಡು ಕೆಲಸ ಮಾಡುವುದಕ್ಕೆ ಸಾಧ್ಯ ಆಗುತ್ತದೆ ಏನೋ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಜೊತೆಗೆ ಒಳ್ಳೆಯ ಅಧಿಕಾರಿಗಳಿಗೆ ನಾವು ಪ್ರೋತ್ಸಾಹ ಕೊಡಬೇಕಾಗುತ್ತದೆ. ಯಾವುದೇ ಇಲಾಖೆಯಲ್ಲಿ ಯಾರೇ ಕಮೀಷನರ್ ಆಗಿರಬಹುದು, ಸೆಕ್ರೇಟರಿ ಆಗಿರಬಹುದು, ಅಥವಾ ಪೋಲೀಸ್ ಇಲಾಖೆಯಲ್ಲಿ ಒಳ್ಳೆಯ ಕೆಲಸಗಾರರು ಇದ್ದಾರೆ ಎಂದು ಹೇಳಿದಾಗ ಅವರಿಗೆ ನಾವು ಬೆನ್ನು ತಟ್ಟ ಬೇಕಾಗುತ್ತದೆ. ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಹೇಳಿ ಅವರನ್ನು ನಾವು ಗುರ್ತಿಸಬೇಕಾಗುತ್ತದೆ. ಆಗ ಅವರಿಗೂ ಹುರುಪು ಬರುತ್ತದೆ. ಬೇರೆ ಯಾರು ಸೋಂಬೇರಿಗಳಾಗಿ ಕೆಲಸ ಮಾಡಲಿಕ್ಕೆ ಮನಸ್ಸು ಇಲ್ಲದೆ ಕೇವಲ ಸಂಬಳಕ್ಕೋಸ್ಕರ ಕೆಲಸ ಮಾಡುವ ಅಧಿಕಾರಿಗಳಿಗೆ, ಆ ಅಧಿಕಾರಿಗೆ ಒಳ್ಳೆಯ ಹೆಸರು ಬಂತು, ನಾನು ಮಾಡಬೇಕು ಎನ್ನುವ ಆಲೋಚನೆ ಬರುತ್ತದೆ ಎಂದು ನಾನಂತೂ ಅಂದುಕೊಂಡಿದ್ದೇನೆ. ಕೆಲಸ ಮಾಡಲಿಕ್ಕೆ ನಾವು ಅವಕಾಶ ಮಾಡಿಕೊಡಬೇಕಾಗುತ್ತದೆ. ಇದು ಇಷ್ಟೇ ಅಲ್ಲದೇ ನೀವು ಐದು ನಿಮಿಷಕ್ಕೇ ಬೆಲ್ ಹೊಡೆದರೆ ಮಾತನಾಡಲು ಬಹಳ ಕಷ್ಟ ಆಗುತ್ತದೆ.

ಛೇರ್ಮನ್: ಹದಿನೈದು ನಿಮಿಷ ಆಯಿತು. ದಯಮಾಡಿ ಮುಗಿಸಿ.

ಶ್ರೀಮತಿ ಮೋಟಮ್ಮ : ಆಮೇಲೆ ಬಹಳ ಮುಖ್ಯವಾಗಿ ಹೇಳಬೇಕಾಗಿದೆ. ನಾವು ಮಂಡಲ್ ಪಂಚಾಯತಿ ಚುನಾವಣೆ ನಡೆಸುವುದೇ ಇಲ್ಲ ಎಂದು ವಿರೋಧ ಪಕ್ಷದವರು ಅಂದುಕೊಂಡಿದ್ದರು. ನಾವು ದೇಶದಲ್ಲಿ ಪ್ರಥಮ ಬಾರಿಗೆ ಮಂಡಲ್ ಪಂಚಾಯತಿ ಚುನಾವಣೆ ನಡೆಸಿ ಗ್ರಾಮಾಂತರ ಪ್ರದೇಶದಲ್ಲಿ ಅಧಿಕಾರ ವಿಕೇಂದ್ರೀಕರಣ ಎಂದರೆ ಏನು ಎನ್ನುವುದನ್ನು ತೋರಿಸಿಕೊಟ್ಟಿದ್ದೇವೆ. ಅದರಲ್ಲೂ ಪ್ರಥಮ ಬಾರಿಗೆ ಮಹಿಳೆಯರಿಗೆ 33 ಪರ್ಸೆಂಟ್ ಎಂದು ಸರ್ಕಾರ ಅಥವಾ ಜಿಲ್ಲಾ ಪರಿಷತ್ತಿನ ತಿದ್ದುಪಡಿಯಲ್ಲಿ ಹೇಳಿದ್ದರೂ ಸಹ ಅದಕ್ಕೂ ಜಾಸ್ತಿ ಹೆಣ್ಣು ಮಕ್ಕಳು ಆಯ್ಕೆಯಾಗಿ ಬಂದಿದ್ದಾರೆ. ಅದಕ್ಕೆ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಇನ್ನೂ ಹೆಚ್ಚು ಹೆಣ್ಣುಮಕ್ಕಳು ಆಯ್ಕೆಯಾಗಿ ಬರಬೇಕು ಎಂಬುದು ನನ್ನ ಅಭಿಲಾಷೆ. ಇವತ್ತು 33 ಪರ್ಸೆಂಟ್ನಲ್ಲಿ ಎಲ್ಲಾ ವರ್ಗದ ಹೆಣ್ಣು ಮಕ್ಕಳು ಅಧ್ಯಕ್ಷರಾಗಿ ಬರುತ್ತಾರೆ. ಅವರು ಅಧ್ಯಕ್ಷರಾಗಿ ಬಂದಲ್ಲಿ ಒಳ್ಳೆಯ ದಕ್ಷ ಮತ್ತು ಪ್ರಾಮಾಣಿಕ ಆಡಳಿತ ಕೊಡುವುದಕ್ಕೆ ಸಾಧ್ಯತೆ ಇದೆ ಎನ್ನುವ ಮಾತನ್ನು ಹೇಳುತ್ತೇನೆ. ಇದಲ್ಲದೇ ಮಹಿಳೆಯರಿಗಾಗಿ ಸಮಗ್ರ ಮಹಿಳಾ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಅದರಲ್ಲಿ ಸುಮಾರು ಒನ್ ಥರ್ಡ್ ಗ್ರಾಂಟನ್ನು ಎಲ್ಲಾ ಇಲಾಖೆಯಲ್ಲೂ ಮಹಿಳೆಯರ ಅಭಿವೃದ್ಧಿಗಾಗಿ ಖರ್ಚು ಮಾಡಬೇಕು ಎಂದು ಹೇಳಿ ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿದೆ. ಇದು ಕೇವಲ ಕಾನೂನು ಆಗಿ ಮಾತ್ರ ಉಳಿಯಬಾರದು. ಇದು ತಕ್ಷಣ ಜಾರಿಗೊಳಿಸಬೇಕಾಗುತ್ತದೆ. ಆ ರೀತಿ ಮಾಡಿದರೆ ಮಹಿಳೆಯರ ಅಭಿವೃದ್ಧಿಗೆ ಸಾಕಷ್ಟು ಕೆಲಸ ಮಾಡಿದ ಹಾಗೆ ಆಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

4.20 ಪಿ.ಎಂ.

ಮತ್ತು ಎಲ್ಲಾ ಜಿಲ್ಲೆಗಳಲ್ಲೂ ಪ್ರತ್ಯೇಕವಾಗಿ ಮಹಿಳೆಯರ ಒಂದು ಪೋಲಿಸ್ ಠಾಣೆ ತೆರೆದು ಮಹಿಳೆಯರ ಹಿತರಕ್ಷಣೆ ಮಾಡುತ್ತಿರುವುದು ಬಹಳ ಹೆಮ್ಮೆಯ ವಿಷಯವಾಗಿರುವುದರಿಂದ ನಾನು ಸಮಗ್ರ ಮಹಿಳೆಯರ ಪರವಾಗಿ ಸರ್ಕಾರವನ್ನು ಅಭಿನಂದಿಸಬೇಕಾಗುತ್ತದೆ. ಏಕೆಂದರೆ, ಮಹಿಳೆಯರಿಗೆ ಎಷ್ಟೋ ಸಾರಿ ರಕ್ಷಣೆ ಸಿಗುವುದಿಲ್ಲ. ಈ ಪೋಲಿಸ್ ಠಾಣೆ ಸ್ಥಾಪಿಸುವ ದಿಸೆಯಿಂದಲಾದರೂ ಮಹಿಳೆಯರಿಗೆ ಹೆಚ್ಚಿನ ರಕ್ಷಣೆ ಮತ್ತು ನ್ಯಾಯ ಸಿಗುತ್ತದೆಂಬ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಹಾಗೆಯೇ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಭಡ್ತಿ, ನೌಕರಿ ಮುಂತಾದ ಸೌಲಭ್ಯಗಳನ್ನು ಒದಗಿಸುವಲ್ಲಿ ಬಹಳ ಆದ್ಯತೆ ಕೊಟ್ಟಿದ್ದೇವೆಂದು ಸರ್ಕಾರ ಹೆಮ್ಮೆಯಿಂದ ಹೇಳಿಕೊಂಡಿರುವುದನ್ನು ಒಪ್ಪುತ್ತೇನೆ. ಆದರೆ, ಇದು ಎಷ್ಟರಮಟ್ಟಿಗೆ ಜಾರಿಯಾಗಿದೆ, ಎಷ್ಟರಮಟ್ಟಿಗೆ ಸಹಾಯವಾಗಿದೆ ಎನ್ನುವುದನ್ನು ನಮ್ಮ ಅಧಿಕಾರಿ ವರ್ಗ (ಆಡಳಿತ ಯಂತ್ರ) ಎದೆ ಮುಟ್ಟಿ ನೋಡಿಕೊಳ್ಳಬೇಕಾಗಿದೆ. ಬರೀ ಕಾನೂನು ಇದ್ದರೆ ಸಾಲದು, ಅದು ಕಾರ್ಯಗತವಾಗಬೇಕಾಗುತ್ತದೆ. ಎಷ್ಟೋ ಇಲಾಖೆಗಳಲ್ಲಿ ಇವೊತ್ತು ಬ್ಯಾಕ್ಲಾಗ್ ಹುದ್ದೆಗಳನ್ನು ತುಂಬಬೇಕಾದ್ದು, ಇವೊತ್ತಿನವರೆಗೂ ತುಂಬಿಲ್ಲ. ನಾನು ವಿಧಾನಮಂಡಲದ ಪರಿಶಿಷ್ಟ ಜಾತಿ: ವರ್ಗಗಳ ಕಲ್ಯಾಣ ಸಮಿತಿಯ ಅಧ್ಯಕ್ಷೆಯಾಗಿದ್ದಾಗ ಇಲಾಖೆಗಳಿಗೆ ಹೋಗಿ ಪರಿಶೀಲಿಸಿದ್ದು ಅದರಲ್ಲಿ ಕೆಲವು ಇಲಾಖೆಗಳು ಉದ್ದೇಶಪೂರ್ವಕವಾಗಿ ಈ ವರ್ಗದ ಜನರಿಗೆ ಬಡ್ತಿ, ನೌಕರಿ ಇನ್ನಿತರ ವಿಚಾರಗಳಲ್ಲಿ ನ್ಯಾಯವಾಗಿ ದೊರಕಬೇಕಾದ ಸೌಲಭ್ಯಗಳಿಗೆ ತಡೆಯೊಡ್ಡುತ್ತಿರುವುದು ಕಂಡುಬಂದು, ಇದರ ಬಗ್ಗೆ ಸರ್ಕಾರಕ್ಕೆ ವರದಿ ಮಾಡಿದೆ. ಆದರೆ, ಸರ್ಕಾರ ಇದುವರೆಗೆ ಕ್ರಮ ಕೈಗೊಂಡಿಲ್ಲ. ಉದಾಹರಣೆಗೆ ಹೇಳಬೇಕೆಂದರೆ, ಬೆಂಗಳೂರು ಡೈರಿಯಲ್ಲಿ ಪರಿಶಿಷ್ಟರಿಗೆ ಬಡ್ತಿ ಹಾಗೂ ಬ್ಯಾಕ್ಲಾಗ್ ಹುದ್ದೆಗಳು ತುಂಬುವುದರಲ್ಲಿ ಸಾಕಷ್ಟು ಅನ್ಯಾಯವೆಸಗಿದ್ದಾರೆ. ಹಾಗೆಯೇ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ(ಕೆಐಎಡಿಬಿ), ಕರ್ನಾಟಕ ಅರ್ಬನ್ ವಾಟರ್ ಸಪ್ಲೈ (ಕೆಯುಡಬ್ಲ್ಯೂಎಸ್) ಅಲ್ಲದೆ ಹಲವಾರು ಇಲಾಖೆಗಳಲ್ಲಿ ಪರಿಶಿಷ್ಟರ ವಿಚಾರದಲ್ಲಿ ಅನ್ಯಾಯವಾಗುತ್ತಿದೆ. ಅದೇ ರೀತಿ ಹರಿಜನರಿಗೆ ರಕ್ಷಣೆ ಕೊಡುವ ದೃಷ್ಟಿಯಿಂದ ಇವೊತ್ತು ಪ್ರಿವೆನ್ಷನ್ ಆಫ್ ಅಟ್ರಾಸಿಟಿ ಆಕ್ಟ್ ಇದ್ದರೂ ಸಹ ರಾಜ್ಯದ ಕೆಲವಾರು ಕಡೆಗಳಲ್ಲಿ ಹರಿಜನರ ಮೇಲೆ ದೌರ್ಜನ್ಯಗಳಾಗುತ್ತಿವೆ. ಇದನ್ನು ತಡೆಗಟ್ಟಬೇಕು, ಇಲ್ಲದಿದ್ದರೆ ದೌರ್ಜನ್ಯವೆಸಗುವ ಯಾರಿಗೇ ಆಗಲಿ ಹೆದರಿಕೆಯಾಗುವುದಿಲ್ಲವೆನ್ನುವ ದೃಷ್ಟಿಯಿಂದ ನಾನು ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಅದಿನ್ನೂ ಸರ್ಕಾರ ಜಾರಿಗೆ ಕೊಟ್ಟಿಲ್ಲ. ಆದರೆ, ಮೊನ್ನೆ ದಿವಸ ಕೋಲಾರ ಜಿಲ್ಲೆಯ ಒಂದು ಪ್ರಕರಣ ನೋಡಿದಾಗ ನಮಗೆಲ್ಲರಿಗೂ ದಿಗ್ಭ್ರಮೆಯಾಯಿತು. ಇಂತಹ ಒಂದು ದುಷ್ಕೃತ್ಯ ಕೂಡ ಸಮಾಜದಲ್ಲಿ ನಡೆಯಲು ಸಾಧ್ಯವೆಂದು ನನಗನ್ನಿಸಿತು. ಸಮಿತಿಯ ಪರವಾಗಿ ನಾನು ಅಲ್ಲಿಗೆ ಹೋಗಿ ವಿಚಾರಿಸಿದಾಗ, ಕಂಡುಬಂದುದೇನೆಂದರೆ , ಹರಿಜನರ ಮೇಲೆ ದೌರ್ಜನ್ಯ ನಡೆಸಿ ಆ ಜನಾಂಗದದ ಮೇಲೆ ಕೆಟ್ಟ ಹೆಸರನ್ನು ತರುವುದಕ್ಕೆ ಪ್ರಯತ್ನಿಸಿ ಹಾಗೂ ಇಲ್ಲಸಲ್ಲದ ಅಪಪ್ರಚಾರ ಮಾಡಿ, ದೂಷಿಸಿ ಈ ಜನಾಂಗದವರನ್ನು ಕೆಳಮಟ್ಟದಲ್ಲಿ ನೋಡುವುದಕ್ಕೆ ಸಮಾಜ ಪ್ರಯತ್ನ ಮಾಡುತ್ತಿದೆ ಎಂದು ನನಗನ್ನಿಸಿತು. ಈ ಜನಾಂಗದ ಬಗ್ಗೆ ಅಪಪ್ರಚಾರವಾಗಿದ್ದರೂ ಅದೊಂದು ಪ್ರಮಾದವೆಂದು ನಾನಂತೂ ತಿಳಿದುಕೊಂಡಿದ್ದೇನೆ. ಹಾಗೆಯೇ ಇವೊತ್ತು ಮಹಿಳೆಯರ ಒದಿಗಾಗಿ ಸರ್ಕಾರ ಸಾಕಷ್ಟು ಹಣವನ್ನು.....

ಛೇರ್ಮನ್ : ತಾವು ಬೇಗ ಮುಗಿಸಿ.

ಶ್ರೀಮತಿ ದಮಯಂತಿ ಬೋರೇಗೌಡ : ಅಧ್ಯಕ್ಷರೇ ಇಡೀ ಸದನದಲ್ಲಿ ಆಡಳಿತ ಪಕ್ಷದಲ್ಲಿ ಒಬ್ಬ ಮಹಿಳೆಗೆ ಮಾತ್ರ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಆದರೂ ಬೇಗ ಮುಗಿಸುವುದಕ್ಕೆ ತಾವು ಬೆಲ್ ಬಾರಿಸುತ್ತಿದ್ದೀರಿ.

ಶ್ರೀಮತಿ ಮೋಟಮ್ಮ : ಇಡೀ ಸದನದಲ್ಲಿ ಎಂಟು ಜನ ಮಹಿಳಾ ಸದಸ್ಯರಿದ್ದೇವೆ. ನಮ್ಮ ಪ್ರಶ್ನೆಗಳು ಸದನದಲ್ಲಿ ಬಂದಾಗ ಅದಕ್ಕೆ ಸಪ್ಲಿಮೆಂಟರಿ ಕೇಳುವುದಕ್ಕೂ ನಮಗೆ ಅವಕಾಶ ಕೊಡುವುದಿಲ್ಲ, ಆದುದರಿಂದ, ಎಂಟು ಜನ ಮಹಿಳಾ ಸದಸ್ಯರು ಮಾತನಾಡುವಷ್ಟು ಸಮಯವನ್ನು ನನಗೊಬ್ಬಳಿಗೇ ಕೊಡಬೇಕು.

ಛೇರ್ಮನ್ : ಬೇಕಾದರೆ ಇನ್ನೊಬ್ಬ ಮಹಿಳಾ ಸದಸ್ಯರು ಮಾತನಾಡಬಹುದು. ಆದರೆ, ನಿಮಗೆ 15 ನಿಮಿಷಗಳ ಕಾಲಾವಕಾಶ ಕೊಟ್ಟಿದ್ದು, ಈಗ 20 ನಿಮಿಷಗಳಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ರಾಜ್ಯಾಂಗದಲ್ಲಿ ತಿದ್ದುಪಡಿ ಮಾಡಿ ಮಹಿಳಾ ಶಾಸಕಿಯರಿಗೂ ಶೇಕಡಾ 30ರಷ್ಟು ಅವಕಾಶ ಸಿಗುವಂತೆ ಒತ್ತಾಯಿಸಲಿ.

ಶ್ರೀ ವಾಟಾಳ್ ನಾಗರಾಜ್: ಶ್ರೀಮತಿ ಮೋಟಮ್ಮನವರಿಗೆ ಹೆಚ್ಚು ಹೊತ್ತು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನೂ ಕೂಡ ಒತ್ತಾಯ ಮಾಡುತ್ತಿದ್ದೇನೆ. ನಾವು ಸುಮ್ಮನೆ ಏಕೆ ಮೌನವಾಗಿ ಕುಳಿತಿದ್ದೇವೆಂದರೆ, ಕಾಮಾಲೆ ರೋಗ ಬಂದಿರುವವರ ಕಣ್ಣಿಗೆಲ್ಲಾ ಕಾಣುವುದೆಲ್ಲಾ ಹಳದಿ ಬಣ್ಣ ಎಂದು ಹೇಳುವುದಕ್ಕೆ ನಾವು ಅಪವಾದವಾಗಿ, ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮಹಿಳಾ ಸದಸ್ಯರಿಗೆ ಎಷ್ಟು ಹೊತ್ತು ಮಾತನಾಡಿದರೂ ಅವಕಾಶ ಕೊಡಿ.

ಛೇರ್ಮನ್ : ತಾವು ದಯಮಾಡಿ ಬೇಗ ಮುಗಿಸಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಾವುಗಳು ಮಾತನಾಡುವುದಕ್ಕಿಂತ ಅವರೇ ಮಾತನಾಡಲಿ. ಏಕೆಂದರೆ, ಸರ್ಕಾರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಮೀಸಲಿಟ್ಟ 78 ಕೋಟಿ ರೂಪಾಯಿಗಳಲ್ಲಿ 9 ಕೋಟಿ ರೂಪಾಯಿಗಳ ಕೆಲಸವನ್ನು ಮಾಡಿಲ್ಲ. ನಾವು ಮಾತನಾಡಿ ಸರ್ಕಾರವನ್ನು ಹೊಗಳುವುದಕ್ಕಿಂತ ಅವರೇ ತಮ್ಮ ಸರ್ಕಾರವನ್ನ ಹೊಗಳಲಿ.

ಶ್ರೀಮತಿ ಮೋಟಮ್ಮ : ಇನ್ನು ಶಾಲೆಯನ್ನು ಮಧ್ಯದಲ್ಲೆ ಬಿಟ್ಟು ಮಕ್ಕಳಿಗೋಸ್ಕರ 'ಪುನರಾರಂಭ' ಯೋಜನೆ ಏನಿದೆ, ಆ ರೀತಿ ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳ ಭವಿಷ್ಯ ಹಾಳಾಗುತ್ತದಾದ್ದರಿಂದ ಅವರಿಗೆ ಉತ್ತೇಜನ ಕೊಟ್ಟು ಪುನಃ ಶಾಲೆಗೆ ಹೋಗುವಂತೆ ಅವಕಾಶ ಮಾಡಿಕೊಟ್ಟಿರುವುದು ಇದೊಂದು ಬಹುಮುಖ್ಯವಾದ ಯೋಜನೆಯೆಂದು ಹೇಳಿದರೆ ತಪ್ಪಾಗಲಾರದು. ಇಂತಹ ಯೋಜನೆಗಳು ಬಹಳ ಆಗಬೇಕೆಂದು ನಾನಂತೂ ಬಯಸುತ್ತೇನೆ. ಇವೊತ್ತು ನಿರುದ್ಯೋಗ ಸಮಸ್ಯೆ ನಮ್ಮ ದೇಶದಲ್ಲಿ ಬಹಳವಾಗಿದೆ. ಇವರಿಗಾಗಿ 'ಪುನಶ್ಚೇತನ' ಯೋಜನೆ ಜಾರಿಗೆ ತಂದು ಅವರ ಪ್ರತಿಭೆಗೆ ತಕ್ಕ ತರಬೇತಿ ಕೊಟ್ಟು ಅವರುಗಳು ತಮ್ಮ ಕಾಲ ಮೇಲೆ ನಿಲ್ಲುವಂತೆ ಅವಕಾಶ ಕಲ್ಪಿಸಿಕೊಡುವುದು ಬಹಳ ಮುಖ್ಯ ಎಂದೆನಿಸುತ್ತದೆ. ಇವೊತ್ತು ಜನರಿಗೆ ಸಂಪೂರ್ಣ ಆರೋಗ್ಯ, ಶುಶ್ರೂಷಾ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ದೃಷ್ಟಿಯಿಂದ ಸಾಕಷ್ಟು ಆಸ್ಪತ್ರೆಗಳನ್ನು ಹೊಸದಾಗಿ ಕೊಟ್ಟಿದ್ದು ಮತ್ತು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಆದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಬರೀ ಆಸ್ಪತ್ರೆಗಳನ್ನು ಪ್ರಾರಂಭಿಸಿದರೆ ಸಾಲದು, ವೈದ್ಯರುಗಳು ಅಲ್ಲಿ ಹೋಗಿ ಕೆಲಸ ಮಾಡಬೇಕು. ಅದರಲ್ಲೂ ಮಲೆನಾಡು ಪ್ರದೇಶದ ವಿಷಯದಲ್ಲಿ ದೊಡ್ಡ ದುರಂತ. ಅಲ್ಲಿ ಆಸ್ಪತ್ರೆಗಳಿದ್ದರೆ ವೈದ್ಯರುಗಳಿರುವುದಿಲ್ಲ. ಈ ಕುರಿತು ಎಷ್ಟೋ ಬಾರಿ ನಾವು ಶಾಸನ ಸಭೆಯಲ್ಲಿ ಚರ್ಚಿಸಿದ್ದೇವೆ. ಹೊಟ್ಟೆ ತುಂಬಿದ ಯಾವುದೇ ವೈದ್ಯರನ್ನು ಮಲೆನಾಡು ಪ್ರದೇಶಕ್ಕೆ ನೇಮಿಸಬೇಡಿ. ಯಾರು ಹೊಟ್ಟೆಪಾಡಿಗೋಸ್ಕರ ಕೆಲಸ ಮಾಡಿ, ನನ್ನ ಹುದ್ದೆಯಿಂದ ನಾನು ಅನ್ನ ತಿನ್ನುತ್ತೇನೆಂದು ಕೆಲಸ ಮಾಡುವುದಕ್ಕೆ ತಯಾರಿದ್ದಾರೋ ಅಂತಹ ವೈದ್ಯರುಗಳನ್ನು ಮಲೆನಾಡು ಪ್ರದೇಶಕ್ಕೆ ನೇಮಿಸಿ.

ನಮ್ಮ ಜಿಲ್ಲೆಯಲ್ಲಿಯೇ ಕೆಲಸ ಮಾಡಿದವರು ಇರುತ್ತಾರೆ. ಅವರನ್ನು ಬಿಟ್ಟು ಬೆಂಗಳೂರಿನಿಂದ ಪೋಸ್ಟ್ ಮಾಡುತ್ತಾರೆ. ಲೋಕಲ್ ವೈದ್ಯರುಗಳನ್ನು ಪೋಸ್ಟಿಂಗ್

ಮಾಡುತ್ತೇನೆಂದು ಹೇಳಿದ್ದರು, ಆದರೆ ಇದುವರೆಗೆ ಲೋಕಲ್ ವೈದ್ಯರುಗಳ ಪೋಸ್ಟಿಂಗ್ ಆಗಿಲ್ಲ. ನಮ್ಮ ಜಿಲ್ಲೆಯಲ್ಲೇ ಸುಮಾರು 20 ಆಸ್ಪತ್ರೆಗಳಲ್ಲಿ ವೈದ್ಯರುಗಳಿಲ್ಲವೆಂದರೆ, ಅದು ನಾವೆಲ್ಲರೂ ತಲೆತಗ್ಗಿಸುವಂಥ ವಿಷಯ. ಹಾಗೆಯೇ ಪ್ರಾಥಮಿಕ ಶಾಲೆಗಳಿಗೆ ಈ ರಾಜ್ಯದಲ್ಲೇ ಪ್ರಪ್ರಥಮಬಾರಿ 18 ಸಾವಿರ ಶಿಕ್ಷಕರ ಹುದ್ದೆಗಳನ್ನು ತುಂಬಲು ಸರ್ಕಾರ ಪ್ರಯತ್ನ ಮಾಡಿದೆ. ಅದನ್ನು ನಾನು ಸ್ವಾಗತಿಸುತ್ತೇನೆ ಮತ್ತು ಸಂತೋಷಪಡುತ್ತೇನೆ. ಆದರೆ ದುರಂತವೇನೆಂದರೆ ನಮ್ಮ ಪ್ರದೇಶಗಳಲ್ಲಿ ಶಿಕ್ಷಕರ ಹುದ್ದೆಗಳು ಯಾವಾಗಲೂ ಖಾಲಿ ಇರುತ್ತದೆ. ಮಲೆನಾಡು ಪ್ರದೇಶ ಒಳ್ಳೆಯ ಸುಂದರವಾದ ತಾಣವೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ಮಳೆಗಾಲದಲ್ಲಿ ಇಲ್ಲಿದ್ದರೆ ಹೆಂಡತಿ-ಮಕ್ಕಳಿಗೆ ಚಳಿ, ಜ್ವರ ಬರುತ್ತದೆಂದು ಹೇಳಿ ಬಯಲು ಸೀಮೆಗೆ ವರ್ಗಾವಣೆ ಮಾಡಿಸಿಕೊಳ್ಳುವಲ್ಲಿ ಶಿಕ್ಷಕರು ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಆ ತಾಲ್ಲೂಕಿನಲ್ಲಿ ಯಾರು ನೇಮಕವಾಗುತ್ತಾರೆ ಅವರು ನಿವೃತ್ತಿಯಾಗುವವರೆಗೆ ಆ ತಾಲ್ಲೂಕಿನ ಒಂದಲ್ಲ ಒಂದು ಭಾಗದಲ್ಲೇ ಸೇವೆ ಸಲ್ಲಿಸಬೇಕೆಂದು ಕಡ್ಡಾಯ ಮಾಡಿ ಆದೇಶವನ್ನು ಹೊರಡಿಸಬೇಕಾಗುತ್ತದೆ. ಆಗ ಮಾತ್ರ ನಮ್ಮ ಭಾಗದ ಶಿಕ್ಷಕರ ಕೊರತೆಯನ್ನು ನಿಭಾಯಿಸಲು ಸಾಧ್ಯ. 18 ಸಾವಿರ ಪ್ರಾಥಮಿಕ ಶಾಲೆಗಳ ಶಿಕ್ಷಕರ ಹುದ್ದೆಗಳನ್ನು ತುಂಬುವುದರಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಅವರ ತೀರ್ಮಾನ ಒಳ್ಳೆಯದು. ಆದರೆ ಬೆಳಿಗ್ಗೆ ಅದರ ಬಗ್ಗೆ ಪ್ರಶ್ನೆ ಬಂದಾಗ ನನಗೆ ಬಹಳ ದುಃಖವೆನಿಸಿತು. ಏಕೆಂದರೆ ನಾವು ಏಜ್‌ಬಾರ್ ನವರಿಗೆ ಆದ್ಯತೆಯನ್ನು ಕೊಡಬೇಕಾಗುತ್ತದೆ. ನಮ್ಮ ಮಕ್ಕಳೇ ಎಂ.ಎ., ಬಿ.ಎಡ್. ಟಿ.ಸಿ. ಹೆಚ್. ಮಾಡಿ ಶಿಕ್ಷಕರೇ ಆಗಬೇಕೆಂದು ಕಾದು ಕುಳಿತುಕೊಂಡಿದ್ದರೆ ಅವರಿಗೆ ಮೆರಿಟ್ ಬೇಕು, ನಿಮಗೆ ಏಜ್ ಬಾರ್ ಆಗಿ ಹೋಗಿದ್ದು ನಿಮಗೆ ಕೆಲಸ ಕೊಡುವುದಿಲ್ಲ, ನಿಮಗೆ ಟೀಚಿಂಗ್ ನಾಲೆಡ್ಜ್ ಮರೆತು ಹೋಗಿದೆ ಎಂದು ಹೇಳಿದರೆ ಅದು ಯಾವ ಧರ್ಮ? ಆ ರೀತಿ ಆಗಲಾರದು. ಏಕೆಂದರೆ ರ್‍ಯಾಂಕ್ ಬಂದವರೆಲ್ಲರೂ ಒಳ್ಳೆಯ ಶಿಕ್ಷಕರಲ್ಲ. ಕೆಲವರು ಚಿನ್ನದ ಪದಕವನ್ನು ತೆಗೆದುಕೊಂಡಿದ್ದವರು ನಮಗೆ ಟೀಚರ್, ಲೆಕ್ಚರರ್ ಆಗಿದ್ದರು, ಅವರ ಪಾಠವನ್ನು ಮಾಡುತ್ತಿದ್ದರೆ ನಮಗೆ ನಿದ್ರೆ ಬರುತ್ತಿತ್ತು. ಟೀಚಿಂಗ್ ಎನ್ನುವುದೂ ಸಹ ಒಂದು ಕಲೆ. ಎಲ್ಲರಿಗೂ ಆ ಕಲೆ ಇರುವುದಿಲ್ಲ. ಆದ್ದರಿಂದ ಏಜ್ ಮೆರಿಟನ್ನು ಕನ್ಸಿಡರ್ ಮಾಡಬೇಕೆಂದು ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇದರ ಜೊತೆಗೆ ಗ್ರಾಮಾಂತರ ಪ್ರದೇಶದ ವಿದ್ಯುದ್ದೀಕರಣಕ್ಕೆ ಆದ್ಯತೆಯನ್ನು ಕೊಡಬೇಕು. ನಮ್ಮ ಭಾಗದ ಸುಮಾರು ಇನ್ನೂ 50 ಪರ್ಸೆಂಟ್ ಗ್ರಾಮಗಳಿಗೆ ವಿದ್ಯುದ್ದೀಕರಣವಾಗಿಲ್ಲ. ಸ್ವಾತಂತ್ರ್ಯ ಬಂದು 50 ವರ್ಷಗಳಾಗುತ್ತಾ ಬಂತು ಆದರೆ ನಮಗೆ ಇನ್ನು ವಿದ್ಯುತ್ತನ್ನು ಒದಗಿಸಲು ಆಗಿಲ್ಲವೆಂದು ಜನರು ಮಾತನಾಡಿಕೊಂಡು ನಗುತ್ತಾರೆ. ಆ ಮಾತನ್ನು ತಡೆಯಬೇಕಾದರೆ ನಮ್ಮಲ್ಲಿರುವ ಸಮಸ್ಯೆಗಳೇನಿದೆ ಅದನ್ನು ತೊಡೆದು ಹಾಕಿ ಈ ಉಪಗ್ರಾಮಗಳ ವಿದ್ಯುದ್ದೀಕರಣಕ್ಕೆ ಸಾಕಷ್ಟು ಮುಂದಾಗಬೇಕಾಗುತ್ತದೆ. ಸರ್ಕಾರ ಅದಕ್ಕೆ ಬೇಕಾದ ಮೆನ್ ಅಂಡ್ ಮೆಟೀರಿಯಲ್‌ನ್ನು ಕೊಟ್ಟು ಸಾಕಷ್ಟು ಜಾಗ್ರತೆಯಾಗಿ ಕೆಲಸವನ್ನು ಮುಗಿಸಲು ಹೇಳಿದರೆ ಮಾತ್ರ ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುದ್ದೀಕರಣವನ್ನು ಚೆನ್ನಾಗಿ ಮಾಡಲು ಸಾಧ್ಯ. ಮತ್ತೊಂದು ಕಳಕಳಿಯ ಮನವಿ ಏನೆಂದರೆ ಈ ರಾಜ್ಯದಲ್ಲಿ ಒಳ್ಳೆಯ ಯೋಜನೆಗಳಿದ್ದು ಅದು ಜನರಿಗೆ ತಲುಪಬೇಕು ಎನ್ನತಕ್ಕ ಕೆಲಸವನ್ನು ನಾವು ಮತ್ತು ಆಡಳಿತ ಯಂತ್ರವೇನಿದೆ, ಅಫಿಷಿಯಲ್ ಮೆಷಿನರಿ ಏನಿದೆ ಅದು ಕೆಲಸ ಮಾಡಬೇಕಾಗುತ್ತದೆ. ಅದು ಮಾಡದಿದ್ದರೆ ಜನರಿಗೆ ಈ ಯೋಜನೆಯ ಫಲವನ್ನು ತಲುಪಿಸಲು ಸಾಧ್ಯವಿಲ್ಲ. ಆ ದೃಷ್ಟಿಯಲ್ಲಿ ಅಫಿಷಿಯಲ್ ಮೆಶಿನರಿ ಏನು ಇದೆ, ಅದು ಸಚಿವಾಲಯದ ಮಟ್ಟದಲ್ಲಿರಬಹುದು, ತಾಲ್ಲೂಕು ಮಟ್ಟದ ಅಧಿಕಾರಿಗಳು ಇರಬಹುದು, ಜಿಲ್ಲಾಮಟ್ಟದ ಅಧಿಕಾರಿಗಳು ಇರಬಹುದು, ಅವರನ್ನು ಸರ್ಕಾರ ಚುರುಕುಮಾಡಬೇಕಾಗುತ್ತದೆ. ಯಾರೇ ಅಧಿಕಾರಿಗಳು ತಪ್ಪು

ಜಿಲ್ಲೆಯ ಶೃಂಗೇರಿ ತಾಲ್ಲೂಕಿನಲ್ಲಿ ಜಿಲ್ಲಾ ಅಭಿವೃದ್ಧಿ ಆಂಧೋಳನವನ್ನು ಉದ್ಘಾಟನೆ ಮಾಡಿದೆ. ಆಗ ನಾನು ಅಧಿಕಾರಿಗಳಿಗೆ ನಿಮಗೆ ಯಾರೂ ಸರ್ಟಿಫಿಕೇಟನ್ನು ಒಳ್ಳೆಯ ಕೆಲಸ ಮಾಡಿದ್ದೀರೆಂದು ಕೊಡಬೇಕಾಗಿಲ್ಲ, ನಿಮಗೆ ಆತ್ಮ ಸಂತೋಷ ಒಂದೇ ಬೇಕಾಗಿರುವುದು, ಅದೊಂದೇ ಉಳಿಯುವುದು, ಜನರು ತಮ್ಮ ಬಗ್ಗೆ ಎಲ್ಲಿಯವರೆಗೆ ನೆನಸಿಕೊಳ್ಳುತ್ತಾರೋ ಅಲ್ಲಿಯವರೆಗೆ ಮಾತ್ರ ನಿಮಗೆ ಆತ್ಮಸಂತೋಷ ಸಿಗುತ್ತದೆ. ಆ ದೃಷ್ಟಿಯಲ್ಲಿ ಜನರು ಮೆಚ್ಚುವ ರೀತಿಯಲ್ಲಿ ಕೆಲಸಮಾಡಿ. ಈ ಯೋಜನೆಯ ಫಲಗಳನ್ನು ಜರಿಗೆ ತಲುಪಿಸಿ. ನೀವು ಎಲ್ಲಿದ್ದರೇನು ಕೊನೆಗೆ ನಾನು ಇಂತಹ ಕಡೆ ಜಿಲ್ಲಾಧಿಕಾರಿಯಾಗಿ, ತಹಶೀಲ್ದಾರರಾಗಿ ಬಿ.ಡಿ.ಓ. ಆಗಿದ್ದೆ, ಆ ಜನರು ಎಷ್ಟು ನನ್ನನ್ನು ಗೌರವಿಸುತ್ತಿದ್ದರು, ಎಷ್ಟೊಂದು ವಿಶ್ವಾಸದಿಂದ ಕಾಣುತ್ತಿದ್ದರು ಎನ್ನತಕ್ಕ ಒಂದು ಸಂತೋಷ ತೃಪ್ತಿ ನಿಮಗೆ ಬರಬೇಕಾಗಿದ್ದರೆ ನೀವು ಜನರ ಸಲುವಾಗಿ ಹಗಲು ಇರುಳು ಕೆಲಸವನ್ನು ಮಾಡಬೇಕಾಗುತ್ತದೆಂದು ಹೇಳಿದ್ದೇನೆ. ಇವತ್ತೂ ಸಹ ಆ ಮಾತನ್ನು ಹೇಳುತ್ತಿದ್ದೇನೆ. ಈ ದೃಷ್ಟಿಯಲ್ಲಿ ಸರ್ಕಾರ ಅವರನ್ನು ಚುರುಕುಗೊಳಿಸಿ, ಜನರ ಕೆಲಸವನ್ನು ಮಾಡುವುದಕ್ಕೆ ಮುಂದಾಗಬೇಕೆಂದು ಹೇಳಿ, ಈ ರಾಜ್ಯಪಾಲರ ಭಾಷಣದ ಮೇಲೆ ನಾಲ್ಕು ಮಾತುಗಳನ್ನು ಆಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ವಿಧಾನ ಮಂಡಲದಲ್ಲಿ ರಾಜ್ಯಪಾಲರ ಮುಖಾಂತರ ಮಾಡಿಸಿದಂಥ ಭಾಷಣವನ್ನು ವಿರೋಧಿಸುತ್ತಾ ನನ್ನ ಎರಡು ಮಾತುಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಿಜವಾಗಿಯೂ ರಾಜ್ಯಪಾಲರ ಭಾಷಣವೆಂದರೆ, ಹೋದವರ್ಷ ಸರ್ಕಾರದವರು ಹಾಕಿಕೊಂಡಂಥ ಯಾವಯಾವ ಕಾರ್ಯಕ್ರಮಗಳನ್ನು ಮಾಡಿರುವರು ಮತ್ತು ಮುಂದಿನ ವರ್ಷ ಸರ್ಕಾರದವರು ಯಾವ್ಯಾವ ಕಾರ್ಯಕ್ರಮಗಳನ್ನು ಮಾಡಬೇಕೆಂದು ಇಟ್ಟುಕೊಂಡಿದ್ದಾರೋ ಅದರ ಬಗ್ಗೆ ವಿಶ್ಲೇಷಣೆಯನ್ನು ಕೊಡುತ್ತಿರುತ್ತಾರೆ. ಆದರೆ ನಿಜವಾಗಿಯೂ ಇದನ್ನು ನೋಡಿದಾಗ ಯಾವುದೇ ಹೊಸದಾದ ಕಾರ್ಯಕ್ರಮವನ್ನು ರಾಜ್ಯಪಾಲರ ಮುಖಾಂತರ ಈ ಸರ್ಕಾರದವರು ಹಾಕಿಕೊಂಡಿಲ್ಲವೆಂದು ನಾನು ಹೇಳುತ್ತಿದ್ದೇನೆ. ಮುಖ್ಯವಾಗಿ ನಾನು ನಾಲ್ಕು ವಿಷಯಗಳನ್ನು ಮಾತ್ರ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಉತ್ತರ ಕರ್ನಾಟಕದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಒಂದು ವಿಷಯ ಇಲ್ಲ ಎಂದು ವಿಷಾದದಿಂದ ಹೇಳಬಯಸುತ್ತೇನೆ. ಮೊದಲನೆಯದಾಗಿ ಉತ್ತರ ಕರ್ನಾಟಕದಲ್ಲಿ ಒಂದು ಹೈಕೋರ್ಟ್ ಪೀಠವನ್ನು ಧಾರವಾಡ-ಹುಬ್ಬಳ್ಳಿಯಲ್ಲಾಗಲಿ ಅಥವಾ ಬೆಳಗಾವ್ದಲ್ಲಾಗಲಿ ಸ್ಥಾಪಿಸಬೇಕೆಂದು ಅವರ ಬೇಡಿಕೆ ಇದೆ. ಆ ಬೇಡಿಕೆಯನ್ನು ಪರಿಶೀಲಿಸುವುದಾಗಿ ಹಿಂದಿನ ಮುಖ್ಯ ಮಂತ್ರಿಗಳು ಪದೇ ಪದೇ ಹೇಳಿದ್ದರು. ಆದರೆ ಅದರ ಬಗ್ಗೆ ಯಾವುದೇ ಒಂದು ಚಕಾರ ಶಬ್ದವೂ ಸಹ ಈ ರಾಜ್ಯಪಾಲರ ಭಾಷಣದಲ್ಲಿ ಇರುವುದಿಲ್ಲ. ಇವತ್ತು ನಿಜವಾಗಿಯೂ ನೋಡಿದಾಗ ಉತ್ತರ ಕರ್ನಾಟಕದ ಅತಿ ಮುಖ್ಯವಾದ ಬೇಡಿಕೆಯ ಬಗ್ಗೆ ಸರ್ಕಾರದವರು ಎಷ್ಟೊಂದು ಆಸಕ್ತಿ ವಹಿಸುತ್ತಿದ್ದಾರೆ ಎನ್ನುವುದು ತಿಳಿದು ಬರುತ್ತದೆ. ಎರಡನೆಯದಾಗಿ ಬೆಳಗಾವಿನಲ್ಲಿ ವಿಶ್ವ ವಿದ್ಯಾನಿಲಯವನ್ನು ಆರಂಭಿಸುವುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಭರವಸೆಗಳನ್ನು ಕೊಟ್ಟರು. ಪಿ ಬಿ ಕೋರ್ಸ್ ಬೆಳಗಾಂನಲ್ಲಿರುವುದರಿಂದ ವಿಶ್ವವಿದ್ಯಾನಿಲಯ ಅತಿ ಅವಶ್ಯಕವಾಗಿರತ್ತದೆ. ಬೆಳಗಾವ್ ಜಿಲ್ಲೆ ಹಾಗೂ ಬಿಜಾಪುರ ಜಿಲ್ಲೆ ಕೂಡಿಕೊಂಡು ಇವತ್ತಿನ ದಿವಸ ಬೆಳಗಾನಲ್ಲಿ ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಇದ್ದೇವೆ. ಅದರ ಬಗ್ಗೆ ಯಾವುದೇ ಒಂದು ಪ್ರಸ್ತಾಪ ರಾಜ್ಯಪಾಲರ ಭಾಷಣದಲ್ಲಿರುವುದಿಲ್ಲ. ಅದೂ ಅಲ್ಲದದೆ, ಹೋದ ವರ್ಷ ಬೆಳಗಾವಿ ಜಿಲ್ಲೆಯಲ್ಲಿ ಒಂದು ತಾಂತ್ರಿಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಾಗಿ ರಾಜ್ಯಪಾಲರ ಭಾಷಣದಲ್ಲಿ ತಿಳಿಸಲಾಗಿತ್ತು. ಆದರೆ ಇವತ್ತು ಬೆಳಗಾವಿನಲ್ಲಿ ತಾಂತ್ರಿಕ

ವಿಶ್ವ ವಿದ್ಯಾಲಯ ಪ್ರಾರಂಭ ಮಾಡುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ನಮ್ಮ ಹಿಂದಿನ ಶಿಕ್ಷಣ ಮಂತ್ರಿಗಳು ತುಮಕೂರಿನಲ್ಲಿ ಮಹಿಳಾ ವಿಶ್ವವಿದ್ಯಾಲಯವನ್ನು ಪ್ರಾರಂಭಿಸುವುದಾಗಿ ಹೇಳಿದ್ದರು. ಆಶ್ವಾಸನೆ ಕೊಟ್ಟಿದ್ದರೂ ಸಹ ಇವತ್ತಿನವರೆಗೂ ಅದರ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಹೇಳಲಿಚ್ಚಿಸುತ್ತೇನೆ. ಅದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತಾರೆಂಬುದನ್ನು ತಿಳಿಸಿಕೊಡಬೇಕು. ಮತ್ತೊಂದು ವಿಷಯ ಬೆಳಗಾವಿಯಲ್ಲಿ ಕನ್ನಡಿಗರು ವೃತ್ತಿಗೆ ವಲಸೆ ಹೋಗುವುದನ್ನು ತಪ್ಪಿಸುವುದಕ್ಕಾಗಿ ಹೌಸಿಂಗ್ ಬೋರ್ಡಿನಿಂದ ಹೆಚ್ಚಿನ ಮನೆಗಳನ್ನು ಕಟ್ಟಿಸಿ ಕೊಡಲಾಗುವುದು ಎಂದು ಇದೇ ವಿಧಾನ ಸಭೆಯಲ್ಲಿ ತಿಳಿಸಲಾಗಿತ್ತು. ಅದರ ಬಗ್ಗೆ ಯಾವುದೇ ಒಂದು ಕ್ರಮ ಕೈಗೊಂಡಿಲ್ಲ, ಅವರ ಭಾಷಣದಲ್ಲಿಯೂ ಸಹಿತ ಯಾವುದೇ ಚಕಾರ ಶಬ್ದ ಇರುವುದಿಲ್ಲ. ಇದೂ ಅಲ್ಲದೆ ಬೆಂಗಳೂರಿನಲ್ಲಿ ಆರೋಗ್ಯ ವಿಶ್ವವಿದ್ಯಾನಿಲಯ ಮಾಡುವುದಾಗಿ ಹಿಂದಿನ ವಿಧಾನ ಸಭೆಯ ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿತ್ತು. ಆದರೆ ಅದರ ಬಗ್ಗೆಯೂ ಸಹಿತ ಇವತ್ತಿನ ದಿವಸ ಪ್ರಸ್ತಾಪ ಮಾಡಿಲ್ಲ. ಆರೋಗ್ಯ ವಿಶ್ವವಿದ್ಯಾನಿಲಯವನ್ನು ಏಕೆ ಪ್ರಾರಂಭ ಮಾಡಿಲ್ಲ, ಮುಂದಾದರೂ ಮಾಡುತ್ತೇವೆಂದು ತಿಳಿಸಬೇಕು.

ಸನ್ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಎಂದರೆ ಬರೀ ಭರವಸೆಗಳನ್ನು ಕೊಡುವ ಸರ್ಕಾರ ಎಂದು ನಾನು ತಮ್ಮ ಮುಂದೆ ಹೇಳುತ್ತೇನೆ. ಎಲ್ಲೆಲ್ಲಿ ಹೋಗುತ್ತಾರೆ ಅಲ್ಲಲ್ಲಿ ಭರವಸೆಗಳನ್ನು ಕೊಡುತ್ತಾರೆ ಆ ಭರವಸೆಗಳನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡಿರುವುದಿಲ್ಲ. ಸನ್ಮಾನ್ಯ ವೀರೇಂದ್ರಪಾಟೀಲರಿದ್ದಾಗ, ರಾಜ್ಯದಲ್ಲಿ ಸುಮಾರು 18 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಜೂನ್ ತಿಂಗಳೊಳಗೆ ತುಂಬಲಾಗುವುದು ಎಂದು ಹೇಳಿದ್ದರು. ಇವತ್ತಿನ ದಿವಸ 1:5ರ ಪ್ರಕಾರ 26 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಸ್ಯಾಂಕ್ಷನ್ ಪೋಸ್ಟ್ 18,600 ಇದ್ದಾವೆ, ಆದರೆ ೧-೫೦ರ ಪ್ರಕಾರ ೨೬ ಸಾವಿರ ಜನ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಈ 26 ಸಾವಿರ ಶಿಕ್ಷಕರನ್ನು ತುಂಬುವ ಸರ್ಕಾರ, ಶಾಲೆ ಬಿಟ್ಟ ಮಕ್ಕಳನ್ನೂ ಮರು ಕಳಿಸುವ ಪ್ರಯತ್ನ ಮಾಡುತ್ತೇನೆಂದು ಹೇಳುತ್ತಾರೆ. ಇದ್ದ ಮಕ್ಕಳಿಗೆ ನೀವು ಮೊದಲು ವಿದ್ಯಾಭ್ಯಾಸ ಕೊಡಿ ಆ ನಂತರ ಉಳಿದ ಮಕ್ಕಳನ್ನು ಕರೆದು ಕೊಂಡು ಬನ್ನಿ ನಂತರ ನೀವೇನಾದರೂ ಮಾಡಿ ಎಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ. ಅದೂ ಅಲ್ಲದೆ ಇವತ್ತಿನ ದಿವಸ ಇವರು ಏನು ಅಕ್ಷಯ ಯೋಜನೆ ಎಂಬ ಯೋಜನೆಯನ್ನು ಹೋದ ವರ್ಷ ತೆಗೆದುಕೊಂಡು ಬಂದರು. ಅಕ್ಷಯ ಯೋಜನೆ ತಂದಾಗ ಸುಮಾರು 80ಕೋಟಿ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿಟ್ಟರೂ, ಈ ಯೋಜನೆಗೆ ಖರ್ಚು ಮಾಡಿದ ಹಣ ಎಷ್ಟು ಎನ್ನುವುದನ್ನು ತಾವು ತಿಳಿದುಕೊಳ್ಳಬೇಕು. ಸುಮಾರು ಎರಡು ಕೋಟಿಯಷ್ಟು ಹಣ ಮಾತ್ರ ಈ ಯೋಜನೆಗೆ ಖರ್ಚು ಮಾಡಿದ್ದೀರಿ. 93Ë94ರಲ್ಲಿ ಕೇಳಿದ ಹಣ ಇದುವರೆಗೂ ಬಿಡುಗಡೆ ಆಗಿಲ್ಲ. ಅದನ್ನು ಬೇರೆ ರೂಪದಲ್ಲಿ ಪರಿವರ್ತಿಸಲಾಗುವುದು ಎಂದು ಹೇಳುತ್ತಾರೆ. ನಾನು ಮುಖ್ಯವಾಗಿ ಹೇಳುವುದೇನೆಂದರೆ ಇವತ್ತು ಅವರು ಕೊಟ್ಟಂತಹ ಆಶ್ವಾಸನೆಗಳನ್ನು ಯಾವುದೇ ಒಂದನ್ನೂ ಈಡೇರಿಸಿಲ್ಲ ಎಂದು ಹೇಳಬಹುದು.

ಸನ್ಮಾನ್ಯ ಅಧ್ಯಕ್ಷರೇ, ತಿರುಪತಿಯಲ್ಲಿದ್ದಂತಹ ತಿಮ್ಮಪ್ಪನಮಾದರಿಯಲ್ಲಿ ಯಲ್ಲಮ್ಮನ ಗುಡ್ಡವನ್ನು ಅಭಿವೃದ್ಧಿಪಡಿಸುವುದಾಗಿ ಹಿಂದಿನ ಕಂದಾಯ ಮಂತ್ರಿಗಳಾಗಿದ್ದ ಶ್ರೀಮಾನ್ ರಾಜಶೇಖರ ಮೂರ್ತಿಯವರು ಹೇಳಿದರು.

ಯಲ್ಲಮ್ಮನ ಗುಡ್ಡ ಅದೊಂದು ಎರಡನೇ ತಿರುಪತಿ. ನಮ್ಮ ಕರ್ನಾಟಕ ರಾಜ್ಯದ ತಿರುಪತಿ ಆಗುತ್ತದೆ ಎಂದು ಹೇಳಿದಾಗ ಇಡೀ ಉತ್ತರ ಕರ್ನಾಟಕದ ಜನ ಬಹಳ ಸಂತೋಷ ಪಟ್ಟರು. ರಾಜ್ಯ ಸರ್ಕಾರದವರು ನಮ್ಮ ಯಲ್ಲಮ್ಮನ ಗುಡ್ಡವನ್ನು ಅಭಿವೃದ್ಧಿ ಪಡಿಸುವ ಕೆಲಸಕೆ. ಸರ್ಕಾರದವರು ಹೆಚ್ಚಿನ ...

ಬರುವಂತಹ ಒಂದು ರೂಪಾಯಿ ಎರಡು ರೂಪಾಯಿ ಹಣವನ್ನು ವಸೂಲಿ ಮಾಡಿ ಆ ಟ್ರಸ್ಟ್ ಕಮಿಟಿಯವರು ಕೆಲವು ಕೆಲಸಗಳನ್ನು ಮಾಡುತ್ತಿದ್ದಾರೆ. ಅದು ಎಷ್ಟು ಸಾಧ್ಯ ಇದೆ. ನಿಜವಾಗಿ ಇವತ್ತಿನ ದಿವಸ ಈ ಸರ್ಕಾದವರು ಆದ್ಯತೆಯ ಮೇಲೆ ಆ ಯಲ್ಲಮ್ಮನ ಗುಡ್ಡಕ್ಕೆ ಹೆಚ್ಚಿಗೆ ಸಹಾಯ ಮಾಡಿ ಎಲ್ಲಾ ರೀತಿಯಿಂದ ತಿರುಪತಿಯಲ್ಲಿರುವಂತಹ ಎಲ್ಲಾ ಸಹಾಯ ಸವಲತ್ತುಗಳನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಟೂರಿಸಂ ಇಲಾಖೆ ಮೈಸೂರು, ಬೆಂಗಳೂರು ಇಲ್ಲೇ ಮೂರು ನಾಲ್ಕು ಕಡೆ ಸೀಮಿತವಾಗಿದೆ. ಉತ್ತರ ಕರ್ನಾಟಕ ಅಂದರೆ ಆ ಭಾಗ ಅಭಿವೃದ್ಧಿ ಪಡಿಸಲು ಹಿಂದೆ ಸರಿಯುತ್ತಾರೆ. ತಮಗೆ ಗೊತ್ತಿರುವಂತೆ ಶ್ರೀ ಕ್ಷೇತ್ರ ಸೋಗಲ ಇದೆ. ಎಸ್ಟಿಮೇಟ್ ಕಮಿಟಿಯವರು ಕೆಲವು ಸಲಹೆಗಳನ್ನು ಮಾಡಿದರು. ಅಲ್ಲಿ ರಾಷ್ಟ್ರೀಯ ಉದ್ಯಾನ ಮಾಡಬೇಕು, ಅಲ್ಲಿ ಅರಣ್ಯ ಬೆಳೆಸಬೇಕು. ಪ್ರವಾಸಿಗರ ಅನೂಕೂಲಕ್ಕಾಗಿ ಯಾತ್ರಿಕ ನಿವಾಸಗಳನ್ನು ತೆಗೆಸಬೇಕು ಎಂದು ಸಲಹೆ ಮಾಡಿದರೂ ಸರ್ಕಾರದವರು ಇವತ್ತು ತನಕೇ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

ಒಂದು ಕಮಿಟಿಯಲ್ಲಿ ಸಲಹೆ ಮಾಡಿದಾಗ ಸರ್ಕಾರದವರು ಆ ಸಲಹೆಯನ್ನು ಕ್ಯಾರೀ ಔಟ್ ಮಾಡಬೇಕು. ಅದನ್ನು ಕಾರ್ಯರೂಪಕ್ಕೆ ತರದೆ ಇದ್ದಲ್ಲಿ ಅದು ಉಪಯೋಗ ಇಲ್ಲ, ಇವತ್ತಿನ ದಿವಸ ಕಮಿಟಿ ಇದ್ದರೇನು ಇಲ್ಲದಿದ್ದರೇನು ಎಂಬ ವಿಚಾರ ಬರುತ್ತದೆ. ತಾವು ವಿಚಾರ ಮಾಡಬೇಕು ಉತ್ತರ ಕರ್ನಾಟಕದ ಪ್ರವಾಸಿಗರ ಯಾತ್ರಿಕರ, ಪ್ರವಾಸಿಗರ ಮುಖ್ಯ ಕ್ಷೇತ್ರವಾದಂತಹ ಸೋಗಲವನ್ನು ಹಾಗೂ ಗೋಕಾಕದಲ್ಲಿರುವ ಒಂದು ಕೂಗಿ ಕೊಳವನ್ನು ಅಭಿವೃದ್ಧಿ ಪಡಿಸಬೇಕೆಂದು ನಾವು ಪದೇ ಪದೇ ಪ್ರವಾಸಿ ಇಲಾಖೆಗೆ ಹೇಳುತ್ತಿದ್ದೇವೆ. ಅವರು ನಿಮ್ಮದು ಬಿ ಕ್ಲಾಸಿನಲ್ಲಿ ಕೂಡಿದೆ ಎಂದು ಹೇಳುತ್ತಾರೆ. ಮೈಸೂರು ಬೆಂಗಳೂರು ಎ ಕ್ಲಾಸಿನಲ್ಲಿ ಕೂಡೂತ್ತಾವೆಯೇ ವಿನಹ ನಮ್ಮಲ್ಲಿ ಯಾವುವೂ 'ಎ' ಕ್ಲಾಸಿನಲ್ಲಿರುವ ಕೆಲಸಗಳು ಮುಗಿಯಬೇಕಾದರೆ ಇನ್ನು 10 ವರ್ಷಗಳು ಬೇಕು. ಆ 10 ವರ್ಷದಲ್ಲಿ ಉತ್ತರ ಕರ್ನಾಟಕದ ಯಾವುದೇ ಕೆಲಸಗಳು ಆಗುವುದಿಲ್ಲ ಎಂದು ನಾನು ಹೇಳುತ್ತೇನೆ. ಹೀಗಾಗಿ ಉತ್ತರ ಕರ್ನಾಟಕದ ಜನರು ಈ ಸರ್ಕಾರದ ಬಗ್ಗೆ ಬೇಸರ ಪಡುತ್ತಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಹೊಸ ಸರ್ಕಾರ ಬಂದ ನಂತರ ಹೇಳಿದರು, ಸರ್ಕಾರದ ವಿವಿಧ ಇಲಾಖೆಗಳ ಎಲ್ಲಾ ಕಾರ್ಯಕ್ರಮ ಮತ್ತು ಚಟುವಟಿಕೆಗಳ ಮೇಲೆ ತಾಲ್ಲೂಕು ಮಟ್ಟದವರೆಗೂ ಕಟ್ಟುನಿಟ್ಟಾದ ಮತ್ತು ನಿಯಮಿತವಾದ ಮೇಲ್ವಿಚಾರಣೆ ನಡೆಸುವುದಕ್ಕಾಗಿ ಮುಖ್ಯಮಂತ್ರಿಗಳು ಹಾಗೂ ಸಚಿವರುಗಳು ವ್ಯಾಪಕವಾಗಿ ಪ್ರವಾಸ ಮಾಡುತ್ತಿದ್ದಾರೆ ಹಾಗೂ ನಿಯತಕಾಲಿಕವಾಗಿ ಪರಿಶೀಲಿಸಿ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿದ್ದಾರೆ. ಅಧ್ಯಕ್ಷರೇ, ನಮ್ಮ ಬೆಳಗಾಂ ಜಿಲ್ಲೆಗೆ ನಮ್ಮ ಲೇಬರ್ ಮಿನಿಸ್ಟರ್ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು. ಅವರು ಜಿಲ್ಲಾ ಉಸ್ತುವಾರಿ ಸಚಿವರಿದ್ದರೆ ಅವರನ್ನು ಒಂದು ಗಂಟೆ ಮೀಟಿಂಗ್ ಮಾಡಬೇಕಾದರೆ ಅವರನ್ನು ಹಿಡಿದುಕೊಂಡು ಬರಬೇಕಾಯಿತು. ಅವರನ್ನು ಹಿಡಿದುಕೊಂಡು ಬಂದು ಅವರನ್ನು ಕೂರಿಸಿ ಒಂದು ಮೀಟಿಂಗ್ ಮಾಡುವುದಕ್ಕೆ ಎರಡು ವರ್ಷಬೇಕಾಯಿತು. ಇಂತಹದ್ದರಲ್ಲಿ ಇವತ್ತಿನ ದಿವಸ ಇವರು ಏನಾದರೂ ಕೆಲಸ ಮಾಡುತ್ತಾರಾ ಎಂದು ವಿಚಾರ ಮಾಡಬೇಕಾಯಿತು. ಬೇರೆ ಮಿನಿಸ್ಟರ್ ಬಿಡಿ ನಮ್ಮ ಮುಖ್ಯ ಮಂತ್ರಿಗಳು ನಮ್ಮ ಬೆಳಗಾಮ್ ಜಿಲ್ಲೆಗೆ ಬಂದರು. ನಮ್ಮ ಬೆಳಗಾಮ್ ಜಿಲ್ಲೆಗೆ ಬಂದಾಗ ಎಲ್ಲಾ ಜಿಲ್ಲಾ ಶಾಸಕರನ್ನು ಕರೆದರು. ಕರೆದು ನಿಮ್ಮ ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ವಿಚಾರಿಸಲಾಗುವುದು ಎಂದು ಹೇಳಿ, ಈಗಾಗಲೇ 3 ಗಂಟೆ ಆಯಿತು ನಾನು ಬಿಜಿ ಇದ್ದೇನೆ, ಈಗ ನಾನು ಹೋಗುತ್ತೇನೆ ಎಂದು ಹೇಳಿ ರಾತ್ರಿ 11 ಗಂಟೆಗೆ ಕರೆದರು. 11 ಗಂಟೆಗೆ ಕರೆದು 10 ನಿಮಿಷ ಕೂಡ ಕೂರಲಿಲ್ಲ, ನಮ್ಮ ಜಿಲ್ಲಾಧಿಕಾರಿಗೆ ಹೇಳಿದರು, ನಿಮ್ಮ ಬೆಳಗಾವ್

ಪ್ರಾಬ್ಲಮ್ ಇಲ್ಲ ಎಂದು ಹೇಳಿದರು. ನಮಗೆ ಊಟಕ್ಕೆ ತಡವಾಗುತ್ತದೆ, ಬೆಳಗಾವ್ ಕ್ಲಬ್ನಲ್ಲಿ ಊಟ ಇದೆ ಎಂದು ಹೇಳುತ್ತಾರೆ. ಆ ಬೆಳಗಾವ್ ಕ್ಲಬ್ ಬಗ್ಗೆ ಹೆಚ್ಚಿಗೆ ಒಂದು ಲಕ್ಷ ಇದೆಯೇ ಹೊರತು ಯಾವುದೇ ಅಭಿವೃದ್ಧಿಯನ್ನು ಇವತ್ತಿನ ದಿವಸ ಮಾಡಲಿಲ್ಲ. ಹಾಗಾಗಿ ಅಲ್ಲಿ ಹಾಜರಿದ್ದಂತಹ ಕೆಲವು ಅಧಿಕಾರಿಗಳು ಹೇಳಿದರು ಮುಖ್ಯ ಮಂತ್ರಿಗಳು ಬಂದು ಎಷ್ಟೊಂದು ಸುಧಾರಣೆಗಳನ್ನು ಮಾಡುತ್ತಾರೆಂದು ತಿಳಿದುಕೊಂಡಿದ್ದೆವು. ಯಾವುದೇ ಒಂದು ವಿಷಯದ ಬಗ್ಗೆ ವಿವರವಾಗಿ ಏನೂ ಮಾಡಲಿಲ್ಲ ಎಂದು ಹೇಳಬಹುದು. ಅದಲ್ಲದೆ ಇವತ್ತಿನ ದಿವಸ ನಮ್ಮ ಜಿಲ್ಲೆಯಲ್ಲಿ ಕೇವಲ ಎರಡು ಸಾರಿ ಮಾತ್ರ ಜಿಲ್ಲಾ ಮೀಟಿಂಗ್ಗಳು ನಡೆದವು. ಅದೇ ಪ್ರಕಾರ ಕಾಂಗ್ರೆಸ್ಸಿನ ಒಳಜಗಳದಿಂದ ಯಾವುದೇ ಅಭಿವೃದ್ಧಿ ಕಾರ್ಯಗಳ ಬಗ್ಗೆಯಾಗಲಿ ಬೇರೆ ವಿಷಯಗಳ ಬಗ್ಗೆಯಾಗಲಿ ಜಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಯಾವುದೇ ಮೀಟಿಂಗ್‌ಗಳು ನಡೆದಿಲ್ಲ.

ಅದೂ ಅಲ್ಲದೇ ಇವತ್ತಿನ ದಿವಸ ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಚಿವರಿಗೆ ನೀತಿ ಸಂಹಿತೆ ಕಡ್ಡಾಯ ಎಂದು ಹೇಳಿದ್ದಾರೆ. ಸಚಿವರು ಇತರೇ ಸಿಬ್ಬಂದಿಯಂತೆ ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-30 ರವರೆಗೆ ಕಛೇರಿಗೆ ಹಾಜರಾಗಿ ತಮ್ಮ ಕೆಲಸ ಕಾರ್ಯಗಳನ್ನು ಗಮನಿಸಬೇಕು. ಮಧ್ಯಾಹ್ನ 3-30 ರಿಂದ 5-30 ರವರೆಗೆ ಸಂದರ್ಶಕರುಗಳನ್ನು ಭೇಟಿಯಾಗಬೇಕು. ನಿಗದಿತವಾಗಿ ಕಛೇರಿ ಕೆಲಸಗಳು ಆಗಬೇಕು. ಹಾಗೂ ಸಾರ್ವಜನಿಕರ ಕೆಲಸಗಳನ್ನು ಮಾಡಬೇಕು. ಈ ಬಗ್ಗೆ ಸಚಿವರು ಇತರರಿಗೆ ಮಾದರಿಯಾಗುವಂತೆ ಮಾಡಬೇಕು. ಪ್ರವಾಸ ಕಾಲದಲ್ಲಿ ತಮ್ಮ ವಾಸ್ತವ್ಯ ಮತ್ತಿತರ ವೆಚ್ಚಗಳು ಕಡಿಮೆಯಾಗುವಂತೆ ನೋಡಿಕೊಳ್ಳಬೇಕು. ಅದ್ದೂರಿ ವ್ಯವಸ್ಥೆಗೆ ಉತ್ತೇಜನವನ್ನು ನೀಡಬಾರದು. ಒಬ್ಬರೇ ಒಬ್ಬರು ಸಚಿವರು ಒಂದು ಕಾರ್ಯಕ್ರಮಕ್ಕೆ ಕಡ್ಡಾಯವಾಗಿ ಹೋಗಬೇಕು. ಅಧ್ಯಕ್ಷರೇ, ಈ ಸಚಿವರಿಗೆ ಈ ಪ್ರಕಾರ ನೀತಿ ಸಂಹಿತೆಯನ್ನು ಪಾಲನೆಗೆ ತಂದರು. ಕೆಲವು ಸಚಿವರಿಗೆ ಇವತ್ತಿನ ದಿವಸ ತಮ್ಮ ಚೇಂಬರ್ ಎಲ್ಲಿದೆ ಎಂದು ಗೊತ್ತಿಲ್ಲ. ಈ ನೀತಿ ಸಂಹಿತೆಯನ್ನು ತಮ್ಮ ಚೇಂಬರೇ ಗೊತ್ತಿಲ್ಲದೆ ಇರುವಂತಹ ಸಚಿವರು ಯಾವ ಪ್ರಕಾರ ಅನುಸರಿಸುತ್ತಾರೆ. ಆ ಸಚಿವರು ಯಾರು ಎಂದು ತಮಗೆ ಗೊತ್ತಿದೆ. ಆದರೆ ನಾನು ಅವರ ಹೆಸರು ಹೇಳುವುದಿಲ್ಲ. ಅವರು ಹೋಮ್ ಕೆಲಸ ಬಿಟ್ಟು ಬೇರೆ ಯಾವುದೇ ಕೆಲಸ ಮಾಡುವುದಿಲ್ಲ. ಯಾವುದೇ ಒಬ್ಬ ಮಂತ್ರಿ ಬೆಳಿಗ್ಗೆ 10-30 ರಿಂದ 1-30 ರವರೆಗೆ ಮಧ್ಯಾಹ್ನ 3-30 ರಿಂದ 5-30 ರವರೆಗೆ ತಮ್ಮ ಚೇಂಬರ್‌ನಲ್ಲಿದ್ದರೆ, ಅಥವಾ ಅವರ ಮನೆಯಲ್ಲಿದ್ದಾರೆ ಎಂದು ತಿಳಿದುಕೊಳ್ಳಬೇಕು. 3 ದಿವಸದ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿಗೆ 5 ಜನ ಮಂತ್ರಿಗಳು ಹೋದರು ಆದರೆ ಒಂದು ಸಭೆಗೆ ಒಬ್ಬರೇ ಒಬ್ಬರು ಮಂತ್ರಿಗಳು ಹೋಗಬೇಕೆಂದು ಹೇಳುತ್ತಾರೆ. ಮತ್ತೆ ಆದಷ್ಟು ಯಾವುದೇ ಅಧಿಕಾರಿಗಳು ಮುಖ್ಯ ಮಂತ್ರಿಗಳಾಗಲಿ ಅಥವಾ ಬೇರೆ ಮಂತ್ರಿಗಳ ಬೆನ್ನು ಹತ್ತಬಾರದು ಎಂದು ಹೇಳುತ್ತಾರೆ. ಮೊನ್ನೆ ಬೆಳಗಾಂ ಜಿಲ್ಲೆಗೆ ಮುಖ್ಯ ಮಂತ್ರಿಗಳು ಪ್ರವಾಸ ಬಂದಾಗ ಅವರ ಹಿಂದೆ ಮುಂದೆ 28 ಸರ್ಕಾರಿ ಕಾರುಗಳು ಇದ್ದವು. ಅವು ಯಾವ ಪ್ರಕಾರ ಬಂದಿವೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಅದು ದುಂದುವೆಚ್ಚ ಎಂದು ವಿಚಾರ ಮಾಡಬಹುದು. ಈ ಸರ್ಕಾರ ಯಾವ ಪ್ರಕಾರ ನೀತಿ ಸಂಹಿತೆಯನ್ನು ಹೇಳುತ್ತಾರೆ ಆ ಪ್ರಕಾರ ನಡೆದು ಕೊಳ್ಳುತ್ತಿಲ್ಲ. ವಿಧಾನಸೌಧದ ಮೂರನೇ ಮಹಡಿಯಲ್ಲಿ ನೀತಿ ಸಂಹಿತೆ ಚಾಲೂ ಆದರೆ, ಅದು ಜಿಲ್ಲಾ ಮಟ್ಟದಲ್ಲಿ ಮತ್ತೆ ತಾಲ್ಲೂಕುವಾರು ಮಟ್ಟದಲ್ಲಿ ಅನುಸರಿಸಲಿಕ್ಕೆ ಅನುಕೂಲವಾಗುತ್ತದೆ. ಕಡತ ವಿಲೇವಾರಿ ಬಗ್ಗೆ ನನ್ನ ಸರ್ಕಾರವು 15 ದಿವಸದಲ್ಲಿ ಯಾವುದೇ ಒಂದು ಫೈಲನ್ನು ಇಟ್ಟುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ಆದರೆ, ಸುಮಾರು 3-4 ವರ್ಷದವರೆಗೆ ಯಾವುದೇ ಫೈಲು ವಿಲೇವಾರಿ

ಆಗುತ್ತಿಲ್ಲ. ಈಗ ಒಂದು ಹೊಸ ಸ್ಕೀಮನ್ನು ತಂದಿದ್ದಾರೆ. ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ವಿದೇಶಿ ನೆರವಿನ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಗ್ರಾಮಗಳು ಶುಚಿಯಾಗಿರುವುದು ಅಭಿವೃದ್ಧಿಯ ಒಂದು ಪ್ರಮುಖ ಸಂಕೇತವೆಂದು ನಾವು ಭಾವಿಸುತ್ತೇವೆ. ನಿರ್ಮಲಗ್ರಾಮ ಎಂಬ ಹೊಸ ಯೋಜನೆಯಡಿಯಲ್ಲಿ ಇಡೀ ರಾಜ್ಯಾದ್ಯಾಂತ ಕುಡಿಯುವ ನೀರಿನ ವ್ಯವಸ್ಥೆ, ಗ್ರಾಮ ನೈರ್ಮಲೀಕರಣದ ವ್ಯವಸ್ಥೆಯನ್ನು ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಮುಗಿಸಲು ನನ್ನ ಸರ್ಕಾರ ಉದ್ದೇಶಿಸಿದೆ. ಅಧ್ಯಕ್ಷರೇ, ದಿವಂಗತ ಬಸವಲಿಂಗಪ್ಪನವರನ್ನು ಇವತ್ತಿನ ದಿವಸ ನಾವು ನೆನೆಯಬೇಕಾಗಿದೆ. ನಿಜವಾಗಿಯೂ ಕೂಡ ಯಾರಾದರೂ ಒಬ್ಬರು ಕಳಕಳಿಯಿಂದ ಇದ್ದ ಮಂತ್ರಿಗಳು ಎಂದರೆ ಬಸವಲಿಂಗಪ್ಪನವರು ಎಂದು ನಾನು ಧೈರ್ಯವಾಗಿ ಹೇಳುತ್ತೇನೆ. ಇವತ್ತು ಯಾವ ಪ್ರಕಾರ ಕೆಂಗಲ್ ಹನುಮಂತಯ್ಯನವರ ಫೋಟೋವನ್ನು ಹಾಕಿದ್ದಾರೆ ಅದೇ ಪ್ರಕಾರ ಈ ಒಂದು ಸ್ಥಳದಲ್ಲಿ ಬಸವಲಿಂಗಪ್ಪನವರ ಫೋಟೋವನ್ನು ಅನಾವರಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಅವರಿಗೆ ಯಾವುದೇ ಬಡಬಗ್ಗರ ಬಗ್ಗೆ ಯಾವುದೇ ಕೆಲಸವನ್ನು ಮಾಡಬೇಕೆಂದರೆ, ಹಠವಾದಿಯಾಗಿ ಮಾಡಿಯೇ ತೀರುತ್ತಿದ್ದರು. ಈ ರಾಷ್ಟ್ರದಲ್ಲಿ ರಾಜ್ಯದಲ್ಲಿ ಯಾವುದೇ ಒಂದು ಕೆಲಸವನ್ನು ಮಾಡಿದ್ದಾರೆಯೇ ಎಂದು ನೋಡಿದರೆ, ಮಲ ಹೊರುವಂತಹ ಪದ್ಧತಿಯನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಅದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಪರಿಸರ ಮಂತ್ರಿಗಳಿದ್ದಾಗ ಬೆಳಗಾಂ ಜಿಲ್ಲೆಯ ಮಲಪ್ರಭಾ ವಿಚಾರದಲ್ಲಿ ಅಲ್ಲಿನ ಜನರ ಅನುಕೂಲತೆಗಾಗಿ ಅಂಡರ್ಗ್ರೌಂಡ್ ಯೋಜನೆಯನ್ನು ಕೈಗೊಳ್ಳಬೇಕೆಂದು ಹೇಳಿದರು. ಎರಡು ತಿಂಗಳೊಳಗೆ ನೀರಾವರಿ ಇಲಾಖೆ ಕಾರ್ಯದರ್ಶಿಗಳು ಕ್ರಮ ಕೈಗೊಳ್ಳದೆ ಇದ್ದಾಗ ಅವರ ಮೇಲೆ ಸೆಕ್ಷನ್ 17ರ ಕೆಳಗೆ ಕ್ರಮ ಕೈಗೊಳ್ಳಬೇಕೆಂದು ಆದೇಶ ನೀಡಿದರು.

ಇವರು ಆದೇಶ ನೀಡಿದರೂ ಅವರ ಆಫೀಸಿನಲ್ಲೇ ಅಂದರೆ ನೀರಾವರಿ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು. ಒಂದುಕಡೆ ಕೇಳಿದರೆ ಇಡೀ ರಾಜ್ಯದಲ್ಲಿ ಎಲ್ಲಾ ಕಡೆಯಲ್ಲೂ ಕೇಳುತ್ತಾರೆ, ಇಡೀ ರಾಜ್ಯದಲ್ಲೆಲ್ಲಾ ಅಲೋ ಮಾಡಬೇಕಾಗುತ್ತದೆ. ಇಡೀ ರಾಜ್ಯಕ್ಕೆ ಅಲೋ ಮಾಡಬೇಕಾದರೆ ಸುಮಾರು 100 ಕೋಟಿ ರೂ. ಬೇಕಾಗಬಹುದು. ಆದ್ದರಿಂದ ಈ ಯೋಜನೆಯನ್ನು ಕೈಬಿಡಲು ಯೋಚಿಸುತ್ತಿದ್ದೇವೆಂದು ಹೇಳಿದರು. ಹಳ್ಳಿಗಳಲ್ಲಿ ಮಹಿಳೆಯವರ ಪರಿಸ್ಥಿತಿ ಏನಿದೆ ಎಂಬುದು ನಮಗೆಲ್ಲಾ ಗೊತ್ತಿದೆ. ಹೆಣ್ಣುಮಕ್ಕಳು ಹೊರಗೆ ಹೋಗಬೇಕಾದರೆ ಮುಂಜಾನೆ ರಸ್ತೆ ಬದಿಯಲ್ಲಿ ಮಲಮೂತ್ರ ವಿಸರ್ಜನೆ ಮಾಡುವುದಕ್ಕೆ ಕೂರುತ್ತಾರೆ. ಇಲ್ಲದಿದ್ದರೆ ರಾತ್ರಿ ವೇಳೆ ಹೊರಗೆ ಹೋಗಬೇಕಾಗುತ್ತದೆ. ದಿವಂಗತ ಬಸವಲಿಂಗಪ್ಪನವರ ಯೋಜನೆ ಏನಿತ್ತು ಅದರ ಪ್ರಕಾರ ಪುನರ್ ವಸತಿ ಗ್ರಾಮಗಳಲ್ಲಿ ನೈರ್ಮಲ್ಯ ಯೋಜನೆಯನ್ನು ಸರ್ಕಾರದವರು ಕೈಗೊಳ್ಳಬೇಕು. ಆದರೆ ಇವತ್ತಿನವರೆಗೂ ಸರ್ಕಾರದವರು ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ಇಂಥ ಯೋಜನೆಗಳನ್ನು ಈ ಪುಸ್ತಕದಲ್ಲಿ ನಮೂದಿಸಿ ಯಾವುದೇ ಕ್ರಮವನ್ನು ಕೈಗೊಳ್ಳದೇ ಹೋದರೆ ಅದರಿಂದ ಯಾವುದೇ ಪ್ರಯೋಜನವೂ ಆಗುವುದಿಲ್ಲವೆಂದು ನಾನು ಹೇಳಬಯಸುತ್ತೇನೆ.

ಇನ್ನೊಂದು ವಿಚಾರ ಎಂದರೆ ಆರ್ಥಿಕ ಮುಗ್ಗಟ್ಟಿನಲ್ಲಿ ಕಿತ್ತೂರು ಚೆನ್ನಮ್ಮ ರೆಸಿಡೆನ್ಷಿಯಲ್ ಸ್ಕೂಲ್ ಬಳಲುತ್ತಿದೆ. ಈ ಶಾಲೆಯನ್ನು ದಿವಂಗತ ಮಾನ್ಯ ಎಸ್.ಆರ್. ಕಂಠಿಯವರು ಪ್ರಾರಂಭ ಮಾಡಿದ್ದರು. ಇಡೀ ನಮ್ಮ ರಾಜ್ಯದಲ್ಲಿರತಕ್ಕದ್ದು ಕೇವಲ ಇದೊಂದೇ ಮಹಿಳಾ ಶಾಲೆ. ಅಲ್ಲಿ ಓದಿದ 22 ಹೆಣ್ಣುಮಕ್ಕಳಿಗೆ ಬಿ.ಇ. ಸೀಟ್ಸ್ ಸಿಕ್ಕವೆ, 8 ಮಕ್ಕಳಿಗೆ ಮೆಡಿಕಲ್ ಸೀಟ್ಸ್, 6 ಮಕ್ಕಳಿಗೆ ಡೆಂಟಲ್ ಕಾಲೇಜ್ ನಲ್ಲಿ ಸೀಟುಗಳು ಸಿಕ್ಕಿವೆ. ಇಂಥ ಒಂದು ಸ್ಕೂಲು ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿಕೊಂಡಿದೆ. ತಾವು ಬಿಜಾಪುರ ಸೈನಿಕ ಸ್ಕೂಲಿಗೆ ಏನೇನು ಸೌಲಭ್ಯಗಳನ್ನು ಕೊಡುತ್ತೀರಿ ಅದೇ ಸೌಲಭ್ಯಗಳನ್ನೂ ಈ ಶಾಲೆಗೂ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಆದರೆ ಸರ್ಕಾರ

ಅದನ್ನು ಕೊಡುತ್ತಿಲ್ಲ. ತಾವು ಈ ಶಾಲೆಗೆ ಸಹಾಯ ನೀಡುವ ಕ್ರಮ ತೆಗೆದುಕೊಳ್ಳಬೇಕು. ಬಿಜಾಪುರ ಸೈನಿಕ ಸ್ಕೂಲ್ ಕೂಡ ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿದೆ. ಅಲ್ಲಿ ಕುಡಿಯುವ ನೀರಿಗೂ ತೊಂದರೆ ಇದೆ. ಆದ್ದರಿಂದ ಈ ಶಿಕ್ಷಣದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇಷ್ಟೊಂದು ಹೇಳುತ್ತಿದ್ದಾರೆ ಇದರ ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಬಿಜಾಪುರ ಸೈನಿಕ ಶಾಲೆ ಮತ್ತು ಕಿತ್ತೂರು ಚೆನ್ನಮ್ಮ ರೆಸಿಡೆನ್ಷಿಯಲ್ ಬಗ್ಗೆ ಹೆಚ್ಚಿನ ಆಸ್ತೆ ವಹಿಸಿ ಗ್ರಾಂಡ್‌ನ್ನು ಕೊಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಸಭಾಧ್ಯಕ್ಷರೇ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಬೇಕೆಂಬ ಉತ್ಸಾಹ ನನಗಿಲ್ಲ. ಆದರೂ ರಾಜ್ಯಾಂಗದ ಕೆಲವು ವಿಧಿಬಿಂದುಗಳನ್ನು ಪ್ರಸ್ತಾವ ಮಾಡಬೇಕೆಂಬ ಸದುದ್ದೇಶದಿಂದ ಮಾತನಾಡಬೇಕಾಗಿದೆ. ನಿಜವಾಗಿಯೂ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದುದು ಜನವರಿ 26ನೇ ತಾರೀಖು ಗಣರಾಜ್ಯೋತ್ಸವ ದಿನದಂದು ರಾಜ್ಯವನ್ನುದ್ದೇಶಿಸಿ ಭಾಷಣ ಮಾಡಿದರು. ಆದರೆ ಇಲ್ಲಿ ಅವರು ಬರೆದ ಭಾಷಣವನ್ನು ಓದಿದ್ದಾರೆ. ಮಾನ್ಯ ರಾಜ್ಯಪಾಲರ ಭಾಷಣಕ್ಕೂ ಮತ್ತು ಬರೆದ ಭಾಷಣಕ್ಕೂ ಇರುವ ಸ್ವಲ್ಪ ವ್ಯತ್ಯಾಸವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ರಾಜ್ಯಪಾಲರು 26ನೇ ತಾರೀಖು ಗಣರಾಜ್ಯೋತ್ಸವ ದಿನದಂದು ಮಾತನಾಡುತ್ತಾ ಹೇಳಿದರು, I quote :

" The very existence of the country depends on how we practise our constitutional responsibilities and our Constitutional Bodies function. Honesty will force the admission that we have, especially, over the past few years failed in this regard".

ಈ ಮಾತನ್ನು ಹೇಳುವಾಗ ಅವರ ಮನಸ್ಸಿನಲ್ಲಿದ್ದುದು ಏನು? ಒಂದು ದೇಶದ ಜೀವಂತಿಕೆ, ಅದರ ಬದುಕು ನಮ್ಮ ನಡವಳಿಕೆಯಿಂದ ನಿರ್ಣಯಾಗುತ್ತದೆ. ರಾಜ್ಯಾಂಗದತ್ತವಾದ, ರಾಜ್ಯಾಂಗ ಬದ್ಧವಾಗಿ ಜವಾಬ್ದಾರಿಗಳನ್ನು ಎಷ್ಟು ಮಟ್ಟಿಗೆ ನಿರ್ಹಿಸುತ್ತೇವೆ, ಮತ್ತು ರಾಜ್ಯಾಂಗದ ವಿವಿಧ ಅಂಗಗಳು ಯಾವರೀತಿ ಕೆಲಸಮಾಡುತ್ತವೆ ಅದರ ಮೇಲೆ ಆ ದೇಶದ ಪ್ರಭುತ್ವ ಹೇಗಿರುತ್ತದೆಂಬುದು ಪ್ರತಿಧ್ವನಿಯಾಗುತ್ತದೆ.

4.50 ಪಿ.ಎಂ.

ಅದರ ಜೊತೆಯಲ್ಲಿ ಇತ್ತೀಚಿನ ಕೆಲವು ವರ್ಷಗಳ ನಡವಳಿಕೆಯನ್ನು ನೋಡಿದರೆ ಪ್ರಾಮಾಣಿಕವಾಗಿ ಅನ್ನಿಸುತ್ತದೆ ರಾಜ್ಯಪಾಲರು ಹೇಳತಕ್ಕ ಮಾತು ಸರಿ ಎಂದು. ರಾಜ್ಯಾಂಗದ ಚೌಕಟ್ಟಿನೊಳಗೆ ಕೆಲಸ ಮಾಡತಕ್ಕದ್ದು, ರಾಜ್ಯಾಂಗದತ್ತವಾದ ಸಂಸ್ಥೆಗಳು ಕೆಲಸ ಮಾಡತಕ್ಕದ್ದು ನಿಜಕ್ಕೂ ಇತ್ತೀಚಿನ ದಿನಗಳಲ್ಲಿ ತುಂಬಾ ಶೋಚನೀಯವಾದುದು ಎಂಬ ಸತ್ಯವನ್ನು ಒಪ್ಪಿಕೊಳ್ಳಬೇಕಾಗುತ್ತದೆಂದು ಹೇಳಿದ್ದಾರೆ.ಇದನ್ನು ಹೇಳುವಾಗ ನಮ್ಮ ಶಾಸನಸಭೆಯಲ್ಲಿ ಕಳೆದ ಅಧಿವೇಶನದಲ್ಲಿ ಮತ್ತು ಅದಕ್ಕೆ ಹಿಂದೆ ನಾವು ನಡೆದುಕೊಂಡ ರೀತಿಯ ಪ್ರತಿಧ್ವನಿ ಅದು ಎಂದು ನಾನು ಭಾವಿಸಿದರೆ ತಪ್ಪು ಎಂದು ತಾವು ತಿಳಿಯಬೇಡಿ. ಈ ಅಭಿಪ್ರಾಯವನ್ನು ಹೇಳಿದ ಮಾನ್ಯ ರಾಜ್ಯ ಪಾಲರು ರಾಜ್ಯಾಂಗ ದತ್ತವಾಗಿ ತಮ್ಮ ಜವಾಬ್ದಾರಿಯನ್ನು ಹೇಗೆ ನಿರ್ವಹಿಸಿದ್ದಾರೆಂದು ಹೇಳುವುದಕ್ಕೆ ಹೋಗುವುದಿಲ್ಲ. ರಾಜ್ಯಪಾಲರ ವಿರುದ್ಧ ಮಾತನಾಡತಕ್ಕದ್ದು ಕ್ರಮವಲ್ಲ. ಅವರ ಮನಸ್ಸಿನಲ್ಲಿದ್ದುದ್ದು ನಮ್ಮ ನಡವಳಿಕೆ ಮೇಲೆ ಒಂದು ರೀತಿ ರಿಫ್ಲೆಕ್ಷನ್ ಎಂದು ಭಾವಿಸುತ್ತೇನೆ. ಅದೇ ಶಾಸನಸಭೆಯನ್ನು ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡುತಾರೆ.

ನಾನು ಅವರಿಗೆ ಒಂದು ಪತ್ರ ಬರೆದಿದ್ದೆ. ನಾನು ಬರೆದ ಪತ್ರ, ಡಿಸೆಂಬರ್ 30ನೇ ತಾರೀಖು ಕರೆದಿರತಕ್ಕ ಅಧಿವೇಶನ ರಾಜ್ಯಾಂಗಬಾಹಿರವಾದುದು ಇದನ್ನು ಸರಿಪಡಿಸಿ ಎಂದು ಹೇಳಿದ್ದೆ. ಅದಕ್ಕೆ ಅವರು ಉತ್ತರ ಬರೆದಿದ್ದಾರೆ. ಸಮಯ ಇಲ್ಲದಿರುವುದರಿಂದ ಉತ್ತರವನ್ನು ಅಷ್ಟೇ ಓದುತ್ತೇನೆ.

" I am in receipt of your letter dated 9th December, 1993 regarding convening of a session of the Legislature. I have carefully examined the points raised by you in your letter. As a senior legislator, I am sure, you are aware of the position that in such matters as convening the sessions of the legislature, I am bound by the advise of the Council of Minsisters"

He tries to put the blame on the Council of Ministers.

" I am of the view that convening both the Houses for 10 days session concerning on 30th December, 1993 does not involve any constitutional impropriety. After the ensuing session, the Houses could be prorogued and then summoned to meet again. The session of the prorogation of the session to commence on 30th December would necessarily have to commence with a joint address by the Governor. I draw your attention to the fact that Lok sabha commenced its session on 8th September, 1962 and the House adjourned on 11th December, 1962. Since Lok Sabha was not prorogued, I put a stress on this question, te president did not address the Lok sabha when it met on 26th January, 1963. The President, however, addressed both the Houses of parliament on 18th February, 1963 opening day of the next session"

ಇಲ್ಲಿ ನನ್ನ ಉದ್ದೇಶ ಏನೆಂದರೆ, ಶಾಸನಸಭೆಯ ಅಧಿವೇಶನ ಚುನಾವಣೆ ಮುಗಿದ ತಕ್ಷಣ ಮೊದಲನೆ ಅಧಿವೇಶನ ಜಂಟಿ ಅಧಿವೇಶನ ಆಗಬೇಕು, ಅದು ಕಡ್ಡಾಯ. ಎರಡನೆಯದಾಗಿ ಪ್ರತಿ ವರ್ಷದ ಮೊದಲನೆ ಅಧಿವೇಶನ ಜಂಟಿ ಅಧಿವೇಶನ ಆಗಬೇಕು, ಅದು ರಾಜ್ಯಪಾಲರ ಭಾಷಣದಿಂದ ಪ್ರಾರಂಭವಾಗಬೇಕು. ಈ ರಾಜ್ಯಾಂಗದತ್ತವಾದ ನಿರ್ದೇಶನವನ್ನು ಒಂದು ರೀತಿಯಿಂದ ಭಂಗಗೊಳಿಸುವ ದೃಷ್ಟಿಯಿದ, ದುರುದ್ದೇಶದಿಂದ ಸರ್ಕಾರಗಳು ಅಥವಾ ಆಳುವ ಪಕ್ಷ ಅಧಿವೇಶವನ್ನು ಡಿಸೆಂಬರ್ 30ಕ್ಕೆ ಕರೆಯುವುದು, ಆಮೇಲೆ ಜನವರಿ ಒಂದರಿಂದ ನಡೆಯತಕ್ಕ ಅಧಿವೇಶನವನ್ನು ಹಿಂದಿನ ವರ್ಷದ ಅಧಿವೇಶನ ಎಂದು ಹೇಳುವುದು, ಮುಂದಿನ ವರ್ಷಕ್ಕೆ ರಾಜ್ಯಪಾಲರ ಭಾಷಣಕ್ಕೆ ಜಂಟಿ ಶಾಸಕಾಂಗದ ಸಭೆಗೆ ತಮ್ಮದೇ ಆದೇ ತಾರೀಖಿನ್ನು ನಿಗದಿ ಮಾಡತಕ್ಕದ್ದು. ಇದರ ಬಗ್ಗೆ ನಾನು ' ತಮ್ಮ ಗಮನವನ್ನು ಸೆಳೆಯುತ್ತೇನೆ. ಈ ನಿಬಂಧನೆ 1971ರ ಆಕ್ಟಿಗೆ ಮೊದಲು ಏನಿತ್ತು? the special address by the Governor at the commencement of every session.

ಆಮೇಲೆ ನಾನು ದೀರ್ಘವಾಗಿ ಹೋಗುವುದಿಲ್ಲ. ಅದನ್ನು ಅಮೆಂಡ್ ಮಾಡುತ್ತಾರೆ. ಕಾರಣವೇನು? ಪ್ರತಿಯೊಂದು ಅಧಿವೇಶನ ರಾಜ್ಯಪಾಲರ ಜಂಟಿಅಧಿವೇಶನ ಆದರೆ, ರಾಜ್ಯಪಾಲರ ಭಾಷಣದಿಂದ ಪ್ರಾರಂಭವಾದರೆ ಸಮಯದ ವ್ಯರ್ಥವಾಗುತ್ತದೆ. ವಿಪರೀತವಾದಂಥ ಖರ್ಚುವೆಚ್ಚಗಳು ಬರುತ್ತವೆ ಮತ್ತು ಪ್ರಾಕ್ಟಿಕಲ್ ಆಗಿ ಇರುವುದಿಲ್ಲ. ಆ ದೃಷ್ಟಿಯಿಂದ ಇದನ್ನು 18.6.1951 ಹಿಂದೆ ಏನಿತ್ತು, ಅದನ್ನು ನಂತರ ಆರ್ಟಿಕಲ್

176ರಲ್ಲಿ ಒಂದು ತಿದ್ದುಪಡಿಯನ್ನು ಮಾಡಿದರು. ಅಲ್ಲಿ ಏನು ಹೇಳಿದರು The special address by the Governor at the commencement of every session ಎಂದು ಇರುವುದನ್ನು ತೆಗೆದು at the commencement of every year.

ಪ್ರತಿವರ್ಷ ನಡೆಸಬೇಕು ಎನ್ನತಕ್ಕಂಥಾದ್ದನ್ನು ತಿದ್ದುಪಡಿ ಮಾಡಿದರು. ಈ ತಿದ್ದುಪಡಿ ಮಾಡಿದ್ದುದು ಮೂಲಭೂತವಾಗಿ ರಾಜ್ಯಪಾಲರ ಭಾಷಣ ಅಧಿವೇಶನ ಸೇರದೇ ಇರಬಹುದು, 190 ಜನರ ಸಂಖ್ಯೆ ಇರತಕ್ಕಂಥ ಕಾಂಗ್ರೆಸ್ ಶಾಸಕಾಂಗ ಅಧಿವೇಶನ ಕರೆಯುವುದು ಅಗತ್ಯವಿಲ್ಲ ಎನ್ನುವಂಥ ತೀರ್ಮಾನಕ್ಕೆ ಬಂದರೂ ಬರಬಹುದು. ಅದಕ್ಕೆ ರಾಜ್ಯಾಂಗದಲ್ಲಿ between the two scessions, interval shall not be more tha six months. ಎಂದು ಹೇಳಿದರು.ಅದನ್ನು ಅನಿವಾರ್ಯವಾಗಿ ಕರೆಯಬೇಕಾಗುತ್ತದೆ. ಪ್ರತಿವರ್ಷ ರಾಜ್ಯಪಾಲರ ಭಾಷಣ ಆಗಬೇಕು ಎನ್ನತಕ್ಕಂಥ ಅನಿವಾರ್ಯತೆ ರಾಜ್ಯಾಂಗದಲ್ಲಿರುವ ಕಾರಣ ರಾಜ್ಯಪಾಲರಿಂದ ಭಾಷಣವನ್ನು ಮಾಡಿಸುತ್ತಾರೆ. ಇದಕ್ಕೆ ಏತಕ್ಕೆ ನಾನು ಮಹತ್ವ ಕೊಡುತ್ತಿದ್ದೇನೆ ಎಂದು ಹೇಳಿದರೆ, ರಾಜ್ಯಾಂಗದ 212 ರಲ್ಲಿ ಯಾವುದೇ ಶಾಸನಸಭೆ ಮಾಡತಕ್ಕಂಥ ತೀರ್ಮಾನವನ್ನು ಕೋರ್ಟಿನಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲ. ಇದು ನಮಗೆ ಸಿಕ್ಕಿರತಕ್ಕಂಥ ಅತ್ಯಂತ ದೊಡ್ಡ ಗೌರವ. ಈ ಗೌರವದ ರಕ್ಷಣೆಯನ್ನು ನಾವು ಮಾಡಿಕೊಳ್ಳದೇ ಇದ್ದರೆ, ಯಾರು ಬರುತ್ತಾರೆ ರಕ್ಷಣೆಗೆ? ಅದಕ್ಕಾಗಿ 212 ರಲ್ಲಿ ಏನು ಹೇಳಿದ್ದಾರೆ?

" The Legislature has complete jurisdiction to carry on its proceedings and the validity of the proceedings of such legislature cannot be called in question in court on the allegation that the procedure laid down for the conduct of the business has not been followed".

ಈ ಕಾರಣದಿಂದ ಕೋರ್ಟಿಗೆ ಹೋಗುವುದಕ್ಕೆ ಆಗುವುದಿಲ್ಲ. But " Where the defect is not one relating to the procedure but affects the very constitution of the Legislature or either House there of, owing to nonËcompliance with the provisions of the Constitution or any other law relating to its Censtitutien, the entire proceedings of such legislature is void"

It follows that if the Act passed by such legislature or any other Act done by such legislature affects the legal or constitutional right of the individuals, the Courts are entitled to give appropriate relief.

ಈ ಸಂಬಂಧವಾಗಿ 1966ರಲ್ಲಿ ಕಲ್ಕತ್ತಾ ಹೈಕೋರ್ಟಿನಲ್ಲಿ ಒಂದು ತೀರ್ಪು ಆಯಿತು. ಅದು 1965ರಲ್ಲಿ ಹೋದ ಕೇಸು. ಅದರಲ್ಲಿ ಏನು ಹೇಳಿದ್ದಾರೆ ಎಂದರೆ, ಸೈಯದ್ ಅಬ್ದುಲ್ ಮನ್ಸೂರ್ ಹಬೀಬುಲ್ಲ ವರ್ಸಸ್ ಸ್ಪೀಕರ್ ಆಫ್ ವೆಸ್ಟ್ಬೆಂಗಾಲ್. ಇದೇ ರೀತಿಯಾದಂಥ ಒಂದು ಪ್ರಸಂಗ. ಮೊದಲನೆಯೇ ಅಧಿವೇಶನ ಜಂಟಿ ಅಧಿವೇಶನವನ್ನು ಕರೆಯಲಿಲ್ಲ. ಅದನ್ನು ಕೋರ್ಟಿನಲ್ಲಿ ಪ್ರಸ್ತಾಪ ಮಾಡಿದರು. The observation of the court is,

"the proceeding inside the Legislature chamber, the extent of powers and privileges of the legislators, proceedings not merely irregular but illegal or un-constitutional, the High Court is competent to issue a mandate upon the Legislature. This is reported in AIR 1965 SC.

ಆದಕಾರಣ, ಇಲ್ಲಿ ನನ್ನ ಪ್ರಶ್ನೆ ಏನು ಎಂದರೆ, ನೀವು ಜಂಟಿ ಅಧಿವೇಶನವನ್ನು ಕರೆಯಬೇಕು, ಅದು ಮೊದಲನೆಯ ಅಧಿವೇಶನ ಆದರೆ ಅದನ್ನು ಡಿಸೆಂಬರ್ 30ನೇ ತಾರೀಖು ಏತಕ್ಕೆ ಕರೆಯುತ್ತೀರಿ? ಅದನ್ನೇ ಜಂಟಿ ಅಧಿವೇಶನವಾಗಿ ಒಂದು ಅಥವಾ ಎರಡನೇ ತಾರೀಖಿಗೆ ಕರೆಯಿರಿ. ಈ ಅಧಿವೇಶನ ಕರೆಯುವಾಗ ತಾವು ಅಧ್ಯಕ್ಷರಾಗಿ ಕುಳಿತಿದ್ದೀರಿ, ನಾನೂ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. I have every reason to belive ಈ 30 ನೇ ತಾರೀಖಿನ ಅಧಿವೇಶನವನ್ನು ಕರೆಯುವುದಕ್ಕೆ ಕೌನ್ಸಿಲ್ ಆಫ್ ಮಿನಿಸ್ಟರ್ಸ್ ತೀರ್ಮಾನ ಮಾಡಲಿಲ್ಲ. ಒಂದು ವೇಳೆ ಮಾಡಿದ್ದರೂ ಪಾರ್ಲಿಮೆಂಟರಿ ಆಫೇರ್ಸ್ ಮಂತ್ರಿಗಳು ಆ ಸಭೆಯಲ್ಲಿ ಇರಲಿಲ್ಲ. ನಮಗೆ ರಾಮಸ್ವಾಮಿಯವರು ಮುಖ್ಯರಲ್ಲ. He is the Parliamentary Affairs Minister of this State and he is responsible to this House. I hold him responsible for any faults committed against the Constitution or under the Act. Even he is not consulted, subject to correction, and Legislature is totally ignored.

ಯಾವ ಸ್ಥಿತಿಗೆ ನಾವು ಹೋಗಿದ್ದೇವೆ ಎಂದರೆ ಸ್ವಾಯತ್ತತೆ ಬೇಕು ಎಂದು ಹೇಳಿ ಶಾಸಕಾಂಗಕ್ಕೆ ಮತ್ತು ಅಲ್ಲಿಯ ಪಾರ್ಲಿಮೆಂಟ್‌ಗೆ ಕಳೆದ ನಲವತ್ತು ವರ್ಷಗಳಿಂದ ಹೋರಾಟ ನಡೆಸಿದರು The fight is between the courts, the legislature or the parliament and the administration.

ನಮ್ಮ ನಡವಳಿಕೆ ಇದಕ್ಕೆ ಪೂರಕವಾಗಿ ಇಲ್ಲದೇ ಇದ್ದರೆ, ಯಾವರೀತಿ ಶಾಸನಸಭೆಗೆ ಗೌರವ ಬರುತ್ತದೆ ಎಂದು ನಾನು ತಮ್ಮ ಮೂಲಕ ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಯವರನ್ನು ಕೇಳುವುದಕ್ಕೆ ಬಯಸುತ್ತೇನೆ. So, Legislautre was not consulted. 30ನೇ ತಾರೀಖು ಡಿಸೆಂಬರ್‌ಗೆ ಅಧಿವೇಶವನ್ನು ಕರೆಯುತ್ತಾರೆ. 30 ನೇ ತಾರೀಖಿನ ಅಧಿವೇಶನವನ್ನು ಕರೆಯುವಾಗ, ನಾನು ಹಿಂದಿನ ರಾಜ್ಯಪಾಲರ ಭಾಷಣಕ್ಕೆ ಹೋಗುತ್ತೇನೆ. 62ನೇ ಇಸವಿಯಲ್ಲಿ ಲೋಕಸಭೆ ಅಧಿವೇಶನವನ್ನು ಕರೆದಿದ್ದರು. ಆ ಅಧಿವೇಶನವನ್ನು ಯಾರು ಕರೆದಿದ್ದರು? ಆ ಅಧಿವೇಶನವನ್ನು ಕರೆದವರು ಲೋಕಸಭೆಯ ಸ್ಪೀಕರ್ ಕಾರಣವೇನು? ಪಾರ್ಲಿಮೆಂಟ್ ಪ್ರೊರೋಗ್ ಆಗಿರಲಿಲ್ಲ. ಆದರೆ ಇಲ್ಲಿ ಸ್ಟೇಟ್ ಲೆಜಿಸ್ಲೇಚರ್ ಪ್ರೊರೋಗ ಆಗುತ್ತದೆ. ಅದರ ಮೇಲೆ ನೀವು ಅಧ್ಯಾದೇಶಗಳನ್ನು ತರುತ್ತೀರಿ. ಆ ಅಧ್ಯಾದೇಶಗಳನ್ನು ಸರಿಪಡಿಸಿಕೊಳ್ಳುವುದಕ್ಕಾಗಿ ಶಾಸನಸಭೆಯಲ್ಲಿ ಮಸೂದೆ ಮೂಲಕ ಇಡುತ್ತೀರಿ. ಆ ಅಧ್ಯಾದೇಶಗಳನ್ನು ತರುವುದಕ್ಕೆ ಅಧಿಕಾರ ಸರ್ಕಾರಕ್ಕೆ ಬರಬೇಕು ಎನ್ನುವ ಕಾರಣಕ್ಕಾಗಿ ನೀವು ಹೌಸ್‌ನ್ನು ಪ್ರೊರೋಗ್ ಮಾಡುತ್ತೀರಿ. ಆಗ ರಾಜ್ಯಪಾಲರು ಸದನವನ್ನು ಕರೆಯುತ್ತಾರೆ. ಇಲ್ಲದಿದ್ದರೆ ತಾವು ಸ್ಪೀಕರ್ ಕರೆಯುತ್ತೀರಿ. ಅಲ್ಲಿ ಇವರೇನು 62ರಲ್ಲಿ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಲೋಕಸಭೆ ಪ್ರೊರೋಗ್ ಆಗಿರಲಿಲ್ಲ. ಸ್ಪೀಕರ್ ಅಧಿವೇಶನವನ್ನು ಕರೆದಿದ್ದರು. ಆದ್ದರಿಂದ Conflict under 174 and 176 ನಿಮಗೆ ಬರತಕ್ಕಂಥ ಅಧಿಕಾರವನ್ನು ರಾಜ್ಯಪಾಲರು, ಅದಕ್ಕೆ ಮುಂದಾಗಿ ನಾನು ಬರೆದ. ನವೆಂಬರ್ 9ನೇ ತಾರೀಖು ನಾನು ಪತ್ರ ಬರೆದ ಉದ್ದೇಶ, ಅಧಿವೇಶನವನ್ನು ಡಿಸೆಂಬರ್ 30ಕ್ಕೆ ಹಿಂದಿನವರ್ಷ ಕರೆದಿದ್ದರು. ಈ ಸಾರಿಯೂ ಇಂತಹ ಅಪರಾಧವನ್ನು ಮಾಡುವುದು ಬೇಡ. ಒಂದು ವೇಳೆ ಅಂತಹ ಅಪರಾಧವನ್ನು ಮಾಡಿ, ಇಲ್ಲಿ ನಾವು ಶಾಸನಗಳನ್ನು ಪಾಸ್ ಮಾಡಿದರೆ, ನಾಳೆ ಇದನ್ನು ಕೋರ್ಟಿನಲ್ಲಿ ಪ್ರಸ್ತಾಪ ಮಾಡಿಯಾರು ಎಂದು. ಆದ್ದರಿಂದ ರಾಜ್ಯಪಾಲರು ಏನು ಹೇಳುತ್ತಾರೆ? 62ರಲ್ಲಿ ಕರೆದಂಥ ಲೋಕಸಭೆಯ ಅಧಿವೇಶನ ಲೋಕಸಭೆಯ ಸ್ಪೀಕರ್ ಅವರು ಕರೆದಿದ್ದರು. ಅದಕ್ಕೆ ಅವರು ಒತ್ತು ಕೊಡುತ್ತಾರೆ. ಆದಕಾರಣ,

ಈ 30 ನೇ ತಾರೀಖು ಇಲ್ಲಿ ಕರೆದಿರುವಂಥ ಅಧಿವೇಶನ ರಾಜ್ಯಾಂಗಬಾಹಿರ ಏತಕ್ಕೆ ಆಗಬೇಕು? 30ನೇ ಡಿಸೆಂಬರ್ ನಲ್ಲಿ ನಾವೇನು ಇಲ್ಲಿ ಸೇರಿದ್ದೆವು, ಆ ದಿವಸ ಯಾವ ಗಂಭೀರವಾದ ಪ್ರಶ್ನೆಯೂ ಆಗಲಿಲ್ಲ. ಬರೀ ಕಾಂಡೋಲೆನ್ಸ್ ರೆಸೊಲ್ಯೂಷನ್ ಆಯಿತು. 31ನೇ ತಾರೀಖಿಗೆ ಮುಂದಕ್ಕೆ ಹಾಕಿದಿರಿ. ನಿಜವಾದ ಅಧಿವೇಶನ ಸೇರಿದ್ದುದು ಹೊಸ ವರ್ಷದಲ್ಲಿ. ನಾವು ಹೊಸವರ್ಷದಲ್ಲಿ ಏನಾದರೂ ಶಾಸನಗಳನ್ನು ಮಾಡಿದ್ದರೆ, ಅದರ ಪರಿಣಾಮ ಏನಾಗುತ್ತಿತ್ತು ಎನ್ನುವ ಕಲ್ಪನೆ ರಾಜ್ಯಾಂಗದ ಜವಾಬ್ದಾರಿಯನ್ನು ಹೊತ್ತ ಶಾಸಕಾಂಗಕ್ಕೂ ಇರಬೇಕು. ರಾಜ್ಯಪಾಲರಿಗೂ ಇರಬೇಕು. ಸರ್ಕಾರಕ್ಕೂ ಇರಬೇಕು, ನಮಗೂ ನಿಮಗೂ ವಿಶೇಷವಾಗಿ ಇರಬೇಕು. ಇಂತಹ ಅಗೌರವವಾದರೆ ಕೆಲಸವನ್ನು ಯಾವುದೇ ಸರ್ಕಾರ, ಅದು ಯಾವುದೇ ಪಕ್ಷಕ್ಕೆ ಸೇರಿದ್ದಾಗಿರಲಿ, ಶಾಸನಸಭೆಗೆ ಅವಮಾನ ಆಗಬಾರದು ಎನ್ನುವಂಥ ಸದಿಚ್ಛೆಯಿಂದ ತಮ್ಮ ಮೂಲಕ ಈ ವಿಚಾರವನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಸರಿಪಡಿಸತಕ್ಕಥ ವ್ಯವಸ್ಥೆಯಾದರೂ ಆಗಬೇಕು. ಇಲ್ಲಿ ಬಹಳ ಮುಖ್ಯವಾದ ಮತ್ತೊಂದು ಮಾತನ್ನು ಅವರು ಹೇಳಿದ್ದಾರೆ.

I am bound by the decision of the Council of Ministers ಅಂದರೆ ನೀವು ರಾಜ್ಯಾಂಗ ಬಾಹಿರವಾಗಿ ಮಾಡಿದ್ದರೂ ನಾನು I am bound by the Council of Ministers. This is the greatest respect shown in a parliamentary democracy system and to the cabinet system of Government. It the Cabinet system of the Government takes undue advantage of this highest powers and respect given to it, where do we go?

ಈ ಮೂಲ ಪ್ರಶ್ನೆಗಳಿಗೆ ನನಗೆ ಸರ್ಕಾರದಿಂದ ಮತ್ತು ಸಂಬಂಧಪಟ್ಟವರಿಂದ ಉತ್ತರ ಬೇಕಾಗುತ್ತದೆ. ಆದಾದಮೇಲೆ, ಈ ಅಧಿವೇಶನವನ್ನು ಕರೆಯುತ್ತಾರೆ. ಯಾವಾಗ ಅಧಿವೇಶನ ಇಲ್ಲ ಎಂದು ಹೇಳಿ ಶಾಸನಸಭೆಯನ್ನು ಪ್ರೊರೋಗ್ ಮಾಡಿದ್ದರು. ಆ ಕಾಲದಲ್ಲಿ ತಂದಂಥ ಆಧ್ಯಾದೇಶಗಳಿಗೆ ನಾವು ಮಂಜೂರಾತಿಯನ್ನು ಕೊಡಬೇಕು. ಏಕೆಂದರೆ ಅದಕ್ಕೆ ಸಮಯ ಮುಗಿಯುತ್ತದೆ. 10ನೇ ತಾರೀಖಿನೊಳಗೆ ಸಮಯ ಮುಗಿಯುತ್ತದೆ. ಆದ್ದರಿಂದ ನಾವು ಇಲ್ಲಿ ಬರಬೇಕು. only to rectify the mistakes committed by the Government and the Cabinet, we should come here and put our signatures. Maybe, majority will not decide everything. They cannot make a man a woman or a woman a man.

ಈ ಲಿಮಿಟೇಷನ್ಸ್ ಒಳಗೆ ಕೆಲಸ ಮಾಡತಕ್ಕಂಥಾದ್ದನ್ನು ನಾನು ಬಹಳವಾಗಿ ಒತ್ತಿ ಹೇಳುತ್ತೇನೆ. ಅದಕ್ಕಾಗಿಯೇ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್‌ನಲ್ಲಿ ಕೂಡ ಬಹಳ ಸ್ಪಷ್ಟವಾಗಿ ಹೇಳುತ್ತಾರೆ. ಪ್ರೆಸಿಡೆಂಟ್ ಅಡ್ರೆಸ್ ಯಾವಾಗ ಕರೆಯಬೇಕು ಎಂಬುದನ್ನು ಹೇಳುತ್ತಾರೆ "At the commencement of the first session of the Parliament after each general Election to the Lok Sabha and there after the commencement of the first session every year, the President addresses the Members of both the Houses of parliament assembled together and inform the parliament of the causes of the summons". What is the cause? The cause is,

ಈ ಸರ್ಕಾರ ಹಿಂದಿನ ವರ್ಷಗಳ ತನ್ನ ಸಾಧನೆ ಏನು? ತನ್ನ ರಾಜ್ಯಪಾಲರ ಭಾಷಣದಲ್ಲಿ ಹಿಂದಿನ ವರ್ಷ ಏನು ಹೇಳಿತ್ತು. ಅದರ ಗಭೀರ ಚರ್ಚೆ, ಮುಂದೆ

ಏನು ಮಾಡಬೇಕೆಂದು ಪ್ರೊಜೆಕ್ಷನ್ಸ್ ಇಟ್ಟುಕೊಂಡಿದ್ದೀರಿ. ಇದು ಈ ಶಾಸನ ಸಭೆಗೆ ಗೊತ್ತಾಗಬೇಕು. ಅದರ ಮೇಲೆ ಶಾಸಕರು either on the policy or on the programmes ನಮ್ಮದೇ ಆದಂಥ ಕಾಮೆಂಟ್ಸ್‌ನ್ನು ಕೊಡತಕ್ಕ ಅವಕಾಶ ನಮಗೆ ಇರಬೇಕೆನ್ನುವ ಸದಿಚ್ಛೆಯಿಂದ ಅಧಿವೇಶನವನ್ನು ಕರೆಯುತ್ತೇವೆ. ಇಂತಹ ಒಂದು ಪಾವಿತ್ರ್ಯಕ್ಕೆ ಭಂಗವಾಗತಕ್ಕ ಕೆಲಸ, ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಯಾದ ಎರಡು ವರ್ಷಗಳಲ್ಲಿ ಆಗಿದೆ. ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಗಳಾದ ಕಾಲದಲ್ಲಿ ಎಂದು ಏಕೆ ಒತ್ತಿ ಹೇಳುತ್ತೇನೆಂದರೆ, ಇವರು ಹಳೆಯ ಅನುಭವಿ, ದೀರ್ಘಕಾಲ ಸಂಸದೀಯ ವ್ಯವಹಾರದ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ ಇವರಿಂದ ಈ ಅಪಚಾರ ಆಗಬಾರದು. ಅವರು ಮೊದಲು ಮುಖ್ಯಮಂತ್ರಿಯಾದ ಕಾಲಕ್ಕೆ ಕನಿಷ್ಠ ನೂರು ದಿವಸ ಅಧಿವೇಶನ ಮಾಡುತ್ತೇವೆ ಎಂದು ಹೇಳಿದ್ದರು. ನಮಗೆ ಯಾವುದು ಸಾಧ್ಯವಿಲ್ಲವೋ, ಅದನ್ನು ಸಾಧ್ಯ ಮಾಡುತ್ತೇವೆಂಬ ಅಪಚಾರದ, ಅಸಭ್ಯ ಮಾತುಗಳನ್ನು ಹೇಳಬಾರದು. ಅನೇಕ ಕಾರಣಗಳಿಂದ ಸಾಧ್ಯವಾಗುವುದಿಲ್ಲ. ಇದನ್ನು ಒಪ್ಪಿಕೊಳ್ಳತಕ್ಕ ಸೌಜನ್ಯ ನಾಯಕತ್ವಕ್ಕೆ ಇರಬೇಕು. ಇದನ್ನು ನಾನು ಬಹಳ ಎಳೆದುಕೊಂಡು ಹೋಗುವುದಿಲ್ಲ. ಆದ್ದರಿಂದ ಹಿಂದಿನ ಅಧಿವೇಶನ ಯಾವುದನ್ನು ಸಂವಿಧಾನ ಬಾಹಿರವಾಗಿ ಕರೆದಿದ್ದರು, ಇದನ್ನು ಮುಂದೆ ಸರಿಪಡಿಸತಕ್ಕ ಕೆಲಸವನ್ನಾದರೂ ಮಾಡಲಿ ಎಂದು ನಾನು ತಮ್ಮ ಮುಖೇನ ಸರ್ಕಾರವನ್ನು ಪ್ರಾರ್ಥನೆ ಮಾಡುತ್ತೇನೆ. ರಾಜ್ಯಪಾಲರು 26ನೇ ತಾರೀಖು ಪ್ರಸ್ತಾಪ ಮಾಡಿದ್ದುದು, ಅಧಿವೇಶನದಲ್ಲಿ ಹಿಂದಿನ ಅನುಭವ, ಯಾವುದೇ ಸಂಸದೀಯ ಅನುಭವ ಇರತಕ್ಕಂಥ ತಾವು ಹಳೆಯ ಅನುಭವಿಗಳು ಇದ್ದೀರಿ. ಈ ದೇಶದ ಸ್ವಾತಂತ್ರ್ಯಾನಂತರ ಇತಿಹಾಸದಲ್ಲಿ ತಾವು ಹಳೆಯ ಅನುಭವಿಗಳು ಇದ್ದೀರಿ. ಈ ದೇಶದ ಸ್ವಾಂತ್ರ್ಯಾನಂತರ ಇತಿಹಾಸದಲ್ಲಿ ಶಾಸಕಾಂಗದಲ್ಲಾಗಲೀ, ಸಂಸತ್‌ನಲ್ಲಾಗಲೀ ನಡೆಯದೇ ಇರತಕ್ಕ ಘಟನೆಗಳು ಇಲ್ಲಿ ನಡೆದವು. ಇದಕ್ಕೆ ಕಾರಣವೇನು? ಮುಖ್ಯವಾದ ಕಾರಣ. ಆಡಳಿತ ಪಕ್ಷದಲ್ಲಿ ಒಂದು ಭಿನ್ನಮತದ ಗರ್ಭಧಾರಣೆಯಾಯಿತು. ಇದರ ಹೆರಿಗೆ ಮಾಡಿಸುವುದಕ್ಕೆ ಡಾಕ್ಟರು ಬಿಹಾರ್‌ದಿಂದ ಬಂದರು. ಇಲ್ಲಿ ಯಾರಿಂದಲೂ ಸಾಧ್ಯವಾಗಲಿಲ್ಲ. ವಿಶೇಷವಾದ ವೈದ್ಯರನ್ನು ಅಲ್ಲಿಂದ ಕರೆಯಿಸಿದರು. ಅವರು ಇಲ್ಲಿಗೆ ಬಂದು, ಈ ಭಿನ್ನಮತದ ಪ್ರಿಮೆಚೂರ್, 9 ತಿಂಗಳು ತುಂಬಿರಲಿಲ್ಲ. ಒಟ್ಟು ಲೆಕ್ಕ ಹಾಕಿ ನೋಡಿದೆ ನಾನು ಎಂಟು ಎಂಟೂವರೆ ತಿಂಗಳೂ, ಬಂದು ಸೂಲಗಿತ್ತಿ, ಈ ಗರ್ಭಧಾರಣೆಯಾದಂಥ ಸತ್ತ ಮಗುವಿಗೆ ಜನ್ಮ ಕೊಟ್ಟರು. ಮಗು ಬದುಕಿರಲಿಲ್ಲ. ಈ ಸತ್ತುಹೋದಂಥ ಮಗುವಿಗೆ ಜನ್ಮ ಕೊಟ್ಟರು. ಅದು ನನಗೇನೂ ಸಂಬಂಧ ಇಲ್ಲ, ಇದು ಅವರ ವಿಚಾರ. ಆದರೆ, ನನಗೇನು ಸಂತೋಷ, ಈ ಸತ್ತ ಮಗು ಹುಟ್ಟಿತಲ್ಲಾ, ಇದರ ಪರಿಣಾಮವೇನೆಂದರೆ, ಕಳೆದ ಅಧಿವೇಶನದ ಈ ಸಭೆಯನ್ನು ಭಿನ್ನಮತೀಯ ಉಗ್ರಗಾಮಿಗಳ ಕೈಗೆ ಕೊಟ್ಟಿದ್ದರಲ್ಲಾ, ಆದರಿಂದ ಬಿಡುಗಡೆಯಾಯಿತು. ಭಿನ್ನಮತೀಯರಾದ ಉಗ್ರಗಾಮಿಗಳೇನು ಈ ಸದನವನ್ನು ಆಕ್ರಮಿಸಿಕೊಂಡಿದ್ದರು. ಆದರಿಂದ ಬಿಡುಗಡೆಯಾಯಿತು. ಇದು ನಮಗೆ ಸಂತೋಷ. ಅವರಿಗೇನು ಸಂತೋಷ, ಬಹುಶಃ ಜನಕ್ಕೆ ಅಗೌರವವಾಗಿತ್ತು. ಇಲ್ಲಿ ಏಕೆ ಕುಳಿತಿದ್ದರೆಂದರೆ, ನಮ್ಮ ಗೌರವ ಹೋಗಿದೆ ಎಂದು ಕುಳಿತಿದ್ದರು. ಈ ಡಾಕ್ಟರು ಬಂದು, ಸೂಲಗಿತ್ತಿ ಹೆರಿಗೆ ಮಾಡಿಸಿದ ಮೇಲೆ, ಆ ಗೌರವವೂ ಬಂತು. ನಮಗೆ ಈ ಉಗ್ರಗಾಮಿಗಳಿಂದ ಸದನವನ್ನು ಬಿಡಿಸಿದರು ಎಂದು ಸಂತೋಷ ಸಮಾಧಾನವಾಗಿ ಕೆಲಸ ಮಾಡೋಣ. ಅವರಿಗೆ ಗೌರವ ಬಂತಲ್ಲಾ ಎಂದು ಸ್ವಲ್ಪ ಹೆಚ್ಚು ಕಡಿಮೆ ನಮಗೆಲ್ಲರಿಗೂ ಸಂತೋಷ.

ಅದು ಯಾವ ರೀತಿ ಗೌರವ ಬಂದಿದೆ ಅವರ ಘನತೆಯನ್ನು ಹೇಗೆ ಎತ್ತಿ ಹಿಡಿದರು ಎನ್ನುವುದಕ್ಕೆ ಆ ಡಾಕ್ಟರ್‌ನ್ನೇ ಕೇಳಬೇಕು. ಸೂಲಗಿತ್ತಿ. ಇದು ನಾನು

ಈ ಸತ್ತ ಕೂಸು ಮತ್ತೆ ಎಲ್ಲಾದರೂ ಜೀವಂತವಾದೀತು ನಾಳೆ ರಾಜ್ಯಸಭೆ ಚುನಾವಣೆ ನಂತರ 18ನೇ ತಾರೀಖು ಅಧಿವೇಶನಕ್ಕೆ ಮತ್ತೆ ಎಲ್ಲಾದರೂ ಜೀವ ಬಂದೀತೂ ಎನ್ನುವ ಭೀತಿಯಿಂದ ಈ ಎಚ್ಚರಿಕೆಯ ಮಾತನ್ನು ಹೇಳುವದಕ್ಕೆ ಇಷ್ಟಪಡುತ್ತೇನೆ. ಇದು ಆಗುತ್ತದೆ. ನಾನು ತಿಳಿದಿದ್ದೇನೆ ಇದು ಸತ್ತು ಹೋಗಿದೆ ಎಂದು, ವೈದ್ಯರು ಅಲ್ಲಿಂದ ಬಂದವರು ಇನ್‌ಜಕ್ಷನ್ ಕೊಟ್ಟು ಈ ಮಗು ಸಾಯಿಸಿ ಹುಟ್ಟಿಸಿದ್ದೇನೆಂದು ಹೇಳಿ ಹೋಗಿದ್ದಾರೆ ಇದು ಸತ್ತಿಲ್ಲ. ಮತ್ತೇ ಜಿವಂತವಾದರೆ ಅವರಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ ನೀವು ಜೀವಂತವಾಗಿರುತ್ತೀರೋ ಸತ್ತಂತೆ ಇರುತ್ತೀರೋ ಆ ಶವ ತಂದು ಇಲ್ಲಿ ಹೂಳಬೇಡಿ. ಈ ಬಾವಿಗೆ ಎಸೆಯಬೇಡಿ ಇದು ಹಾಳು ಬಾವಿ ಎಂದು.ಇದು ಹಾಳು ಬಾವಿ ಅಲ್ಲ. ಇದು ಬಹಳ ಪವಿತ್ರವಾದಂತಹ ಬಾವಿ, ಇಲ್ಲಿ ನಾವು ಬರತಕ್ಕಂಥಾದ್ದು ಈ ಬಾವಿಗೆ ತೀರ್ಥ ಕುಡಿಯುವದಕ್ಕಾಗಿ ಇಲ್ಲಿ ಸತ್ತ ಶವಗಳನ್ನು ಹಾಕಿ ಈ ಬಾವಿಯನ್ನು ಹೊಲಸು ಮಾಡಬೇಡಿ ಈ ಬಾವಿಯನ್ನು ಎಂದು ನಾನು ಅತ್ಯಂತ ಕಳಕಳಿಯಿಂದ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನಗೆ ಸಮಯದ ಅಭಾವ ಇರುವುದರಿಂದ ಹೆಚ್ಚು ಸಮಯ ತೆಗೆದುಕೊಳ್ಳುವುದು ಸರಿಯಲ್ಲ ಒಂದೆರಡು ವಿಚಾರಗಳನ್ನು ಮಾತ್ರ ನಾನು ಹೇಳುತ್ತೇನೆ. ನಾನು ಈ ರಾಜ್ಯಪಾಲರ ಭಾಷಣವನ್ನು ಅನೇಕ ವರ್ಷಗಳ ಕಾಲ ಓದಿಕೊಂಡು ಬಂದಿದ್ದೇನೆ. ಬಹುಶಃ ಇಷ್ಟೊಂದು ನಿರುತ್ಸಾಹ ನೀರಸ, ಎಲ್ಲದ್ದಕ್ಕಿಂತ ಹೆಚ್ಚಾಗಿ ಯಾವುದೇ ಒಂದು ಸೀರಿಯಸ್‌ನೆಸ್ ಇಲ್ಲದೆ ಇರತಕ್ಕಂಥ ಒಂದು ಭಾಷಣ ಬಂದದ್ದು ಇದು ಮೊದಲನೇಯ ಸಲ ಆಲೋಚನೆ ಇಲ್ಲ. ನಾನು ಹೇಳಿದಂತೆ ಕಾನ್‌ಸ್ಟಿಟ್ಯೂಷನಲ್ ಮ್ಯಾಂಡೇಟ್ ಇದೆ, ರಾಜ್ಯಪಾಲರ ಭಾಷಣ ಮಾಡಿಸಬೇಕು, ಏನು ತಿಳಿಯುತ್ತದೋ ಅದನ್ನು ಬರೆಯಿರಿ ಅದನ್ನು ಅವರು ಓದುತ್ತಾರೆ. ನಾವು ಕುಳಿತುಕೊಂಡು ಕೇಳಿ ಮನೆಗೆ ಹೋಗಿ ಎಂಬ ರೀತಿಯಲ್ಲಿ ಬರೆದಂತೆ ಇದೆ. ಎಲ್ಲಿಯಾದರೂ ಒಂದು ರೀತಿಯ ಕಳಕಳಿ ಇದೆಯೇ? ಕೆಲವು ಈ ರಾಜ್ಯದಲ್ಲಿ ನಡೆದಂತಹ ಘಟನೆಗಳ ಬಗ್ಗೆ ಪ್ರಸ್ತಾಪ ಅದಕ್ಕೆ ಪರಿಹಾರ ಕಂಡು ಹಿಡಿಯುವುದಕ್ಕೆ ಸರ್ಕಾರ ಕಂಡು ಹಿಡಿದಿರುವಂಥಹ ಆಲೋಚನೆಗಳು ಮುಂದಿನ ವರ್ಷದಲ್ಲಿ ನಾವು ಏನು ಗುರಿಯನ್ನು ಸಾಧಿಸಬೇಕು ಎಂದು ಇಟ್ಟುಕೊಂಡಿದ್ದೇವೆ, ಇವು ಯಾವುದರ ಪ್ರಸ್ತಾಪವೂ ಇಲ್ಲ. ಮುಖ್ಯವಾಗಿ ಈ ದೇಶದಲ್ಲಿ ಇವತ್ತು ಪ್ರತಿನಿತ್ಯ ಪ್ರತಿಯೊಬ್ಬರೂ ನಾನು ಶೇಕಡ 70 ರಷ್ಟು ಜನ ಅನ್ನುತ್ತೇನೆ. ಪ್ರತಿಯೊಬ್ಬರು ಹೊಟ್ಟೆಗೆ ಕೇಂದ್ರ ಸರ್ಕಾರ ಕನ್ನ ಹಾಕಿದೆ. ಪ್ರತಿಯೊಂದು ಮನೆಗೆ ಲೂಟಿ ಮಾಡಿದೆ. ಬೆಲೆ ಏರಿಕೆ ಎಷ್ಟು ಆಗಿದೆ ಎಂದು ಹೇಳಿದರೆ ಇದು ಕೆಲವು ಸಂಸತ್ತಿನ ಅಥವಾ ಆಯುವ್ಯಯದ ವ್ಯಾಪ್ತಿಗೆ ಬರತಕ್ಕಂಥಾ ವಸ್ತುಗಳು ಇದ್ದಾವೆ. ಕೆಲವು ಬಾರದೇ ಇರತಕ್ಕಂಥ ವಸ್ತುಗಳು ಇದ್ದಾವೆ. ಆಯುವ್ಯಯಕ್ಕೆ ಬಾರದೇ ಇರತಕ್ಕಂಥ ವಸ್ತುಗಳನ್ನು ಒಂದೊಂದಾಗಿ ಆಯ್ಕೆ ಮಾಡಿಕೊಳ್ಳುವುದು ಆ ಬಜೆಟ್‌ಗೆ ಮುನ್ನ ಅದರ ಬೆಲೆಏರಿಸುತ್ತ ಹೋಗುವುದು ನಡೆಯುತ್ತಿದೆ. ಮೊದಲು ಅಡುಗೆ ಅನಿಲದ್ದು ಆಯಿತು. ಆಮೇಲೆ ಪಡಿತರ ಸಕ್ಕರೆ ಆಯಿತು. ಅಲ್ಲಿ ಆದ ಬೆಳವಣಿಗೆ ಮುಂದೆ ಏನು ಎನ್ನತಕ್ಕಂಥ ಆಲೋಚನೆ ಮಾಡಿ ಇನ್ನೂ ಆ ಆಲೋಚನೆಯಿಂದ ಇನ್ನೂ ಹೊರಬಿದ್ದಿಲ್ಲ ಆಗಲೇ ಮುಕ್ತ ಪೇಟೆಯ ಹಾಗೂ ಪಡಿತರ ಅಂತರವನ್ನು ಕಡಿಮೆ ಮಾಡಿದರು. ಇವು ಏನಾಗಿದೆ ಅಂತರೆ ಹೊಸ ಆರ್ಥಿಕ ನೀತಿಯಿಂದಾಗಿ ಮುಕ್ತಪೇಟೆಯಲ್ಲಿ ಮಾರಾಟ ಮಾಡತಕ್ಕಂಥ ವಸ್ತುಗಳಿಗೂ ಪಡಿತರ ಮೂಲಕ ಕೊಡತಕ್ಕಂಥ ವಸ್ತುಗಳಿಗೂ ಬಹಳ ವ್ಯತ್ಯಾಸವಿಲ್ಲ ಈಗ. ಅದರ ಉದ್ದೇಶ ಏನು? ಜನ ಏನು ಪಡಿತರ ಪದ್ಧತಿಗೆ ಚೀಟಿ ಹಿಡಿದುಕೊಂಡು ಹೋಗತಕ್ಕಂಥಾದ್ದು ಇದೆಯಲ್ಲಾ ಇದು ಇಲ್ಲದಿದ್ದರೆ ಸಾಕು ಎಂದುಹೇಳಿ ಅವರು ಅಸಹ್ಯ ಪಡುವ ಸ್ಥಿತಿಗೆ ತರಬೇಕು. This is the crux of the politics of economics of Dr. Manmohan singh.

ಅದಕ್ಕೆ ನಾವು ಬಲಿಯಾಗುತ್ತಾ ಇದ್ದೇವೆ ಪ್ರತಿನಿತ್ಯ. ಪಡಿತರ ಅಕ್ಕಿ ಬೆಲೆ ಎಣ್ಣೆ ಬೆಲೆ ಇದನ್ನೆಲ್ಲಾ ಏರಿಸಿ ಮುಂದೆ ಬೇಡಪ್ಪ ನಾವು ಏಕೆ ಇಲ್ಲಿಗೆ ಹೋಗಬೇಕು ಮುಕ್ತಮಾರುಕಟ್ಟೆಗೂ ಪಡಿತರ ವ್ಯವಸ್ಥೆಗೂ ಎಂಟಾಣೆ ಒಂದು ರೂಪಾಯಿ ವ್ಯತ್ಯಾಸ ಇದ್ದಾಗ ಈ ಕಾರ್ಡ್ ಹೊತ್ತುಕೊಂಡು ಈ ಹಿಂಸೆ ಅನುಭವಿಸುವುದಕ್ಕಿಂತ ನೇರವಾಗಿ ಅಲ್ಲೇ ತೆಗೆದುಕೊಳ್ಳೋಣ ಎನ್ನುವಂತಹ ಸ್ಥಿತಿಗೆ ಜನರನ್ನು ತರುವಂತಹ ಒಂದು ಪ್ರಯತ್ನ ಮಾಡುತ್ತಾ ಇದ್ದಾರೆ. ಈ ಪ್ರಯತ್ನದ ಫಲವಾಗಿ ಅಕ್ಕಿ ಬೆಲೆ ಜಾಸ್ತಿ ಆಯಿತು. ಗೋಧಿ ಬೆಲೆ ಜಾಸ್ತಿ ಆಯಿತು ಈ ಜಾಸ್ತಿಯಾದಂತಹ ಬೆಲೆ ಆಮೇಲೆ ಪೆಟ್ರೋಲ್ ಡೀಸೆಲ್ ಹಿಂದೆ ನಾವು ಬಜೆಟ್ ಬರುತ್ತಾ ಇದೆ. ನಾವು ಮೊದಲು ಯಾವುದರ ಬೆಲೆ ಜಾಸ್ತಿ ಆಯಿತು. ಎಂದು ನೋಡುತ್ತಿದ್ದೆವು. ಈಗ ಅದಲ್ಲ ಯಾವುದರ ಬೆಲೆ ಜಾಸ್ತಿ ಆಗಿಲ್ಲ ಎಂದು ಕಣ್ಣಿಗೆ ಭೂತ ಕನ್ನಡಿ ಹಾಕಿಕೊಂಡು ನೋಡಬೇಕಾಗಿದೆ. ದುರ್ದೈವ ಅಂದರೆ ನೋಡಿ, ತೆಂಗಿನಕಾಯಿ ಬೆಲೆ ಈಗ ಎರಡೂ ಎರಡೂವರೆ ರೂಪಾಯಿ. ಅದಕ್ಕೆ ಕಾರಣ ಕೂಡ ಕೇಂದ್ರ ಸರ್ಕಾರದ ನೀತಿ. ರೇಷ್ಮೆ ಬೆಲೆ ಕುಸಿತ ಇದಕ್ಕೂ ಕಾರಣ ಕೇಂದ್ರ ಸರ್ಕಾರದ ನೀತಿ. ನಾನು ವಿವರಕ್ಕೆ ಹೋಗುವುದಿಲ್ಲ.

ಶ್ರೀ ಟಿ.ಎಂ. ಮುಂಜುನಾಥ್ : ತಾವು ತೆಂಗಿನಕಾಯಿ ಬೆಲೆ ಕಡಿಮೆ ಆಗುವುದಕ್ಕೆ ಕೇಂದ್ರ ಸರ್ಕಾರದ ನೀತಿ ಕಾರಣ ಎಂದು ಹೇಳಿದಿರಲ್ಲಾ ಅದು ಏನು ಎಂಬುದನ್ನು ಸ್ವಲ್ಪ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಎಣ್ಣೆ ಕಾಳುಗಳು ಅದು ತೆಂಗಿನಕಾಯಿ ಇರಬಹುದು ಅದಕ್ಕೆ ಸಂಬಂಧಪಟ್ಟಂತದ್ದು ಇರಬಹುದು ಮೊದಲು ನಮ್ಮ ಕೊಬ್ಬರಿ ಮತ್ತು ತೆಂಗಿನ ಕಾಯಿ ಸಾಕಷ್ಟು ಎಕ್ಸ್‌ಪೋರ್ಟ ಆಗುತ್ತಿತ್ತು ಮತ್ತು ಕೊಬ್ಬರಿ ಎಣ್ಣೆ ಬೇರೆ ಬೇರೆ ದೇಶಕ್ಕೆ ಹೋಗುತ್ತಿತ್ತು. ಈಗ ಆ ಎಕ್ಸ್‌ಪೋರ್ಟ್‌ನಲ್ಲೂ.......

ಶ್ರೀ ಟಿ.ಎಂ. ಮಂಜುನಾಥ್ : ಏಕೆಂದರೆ ಅವರು ಸರಿಯಾದ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಿದ್ದಾರೆ. ತೆಂಗಿನ ಕಾಯಿ ಮತ್ತು ತೆಂಗಿನಕಾಯಿ ಎಣ್ಣೆ ಬೆಲೆ ಇಳಿಯುವುದಕ್ಕೆ ಕಾರಣ ಏನೆಂದರೆ ಪ್ರೊಡಕ್ಷನ್ ಜಾಸ್ತಿಯಾಯಿತು. ತಮಿಳುನಾಡಿನಲ್ಲಿ ಕೇರಳದಲ್ಲಿ ಮತ್ತು ನಮ್ಮ ದೇಶದಲ್ಲಿ ಒಂದು ವರ್ಷದ ಹಿಂಭಾಗದಲ್ಲಿ 10 ಸಾವಿರ ತೆಂಗಿನಕಾಯಿ ಇರತಕ್ಕಂಥ ರೈತನಿಗೆ 2 ಸಾವಿರ ಆಯಿತು. ಈ ಎಕ್ಸ್‌ಪೋರ್ಟ್ ನಮ್ಮ ದೇಶದಿಂದ ಮಾಡುತ್ತಿಲ್ಲ, ನಮ್ಮ ಮೇಲೆ ಕಾಂಪಿಟೇಟ್ ಮಾಡತಕ್ಕಂಥಾದ್ದು ಫಿಲಿಫೈನ್ಸ್ ಮತ್ತು ಸಿಲೋನ್ ದೇಶಗಳು ಏನು ಇವೆ ಅವು ನಮಗಿಂತ ಚೀಪ್ ರೇಟ್‌ನಲ್ಲಿ ಎಕ್ಸ್‌ಪೋರ್ಟ್ ಮಾಡುತ್ತಿದ್ದಾರೆ. ಅದರಿಂದ ಎಕ್ಸ್‌ಪೋರ್ಟ್‌ನಿಂದ ಅಲ್ಲ, ಕನ್‌ಸಂಷನ್ ನಮಗೇ ಸಾಲದು. ಭಾರತದೇಶಕ್ಕೆ ಈ ಬೆಳೆಯ ಕನ್‌ಸಂಷನ್ ಸಾಲದು ರೇಟ್ ಆಗಿರತಕ್ಕಂಥಾದ್ದು ಆ ದೃಷ್ಟಿಯಲ್ಲಿ ನನ್ನ ಭಾಷನೆಯಲ್ಲಿ, ಅದು ತಮ್ಮ ಭಾವನೆಯಲ್ಲಿ ಏನಿದೆಯೋ ನನಗೆ ಗೊತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು 6 ರಿಂದ 8 ಸಾವಿರ ಕಾಯಿಯನ್ನು ಹರಿಯುತ್ತಿದ್ದೆವು. ನಾವು ಕಾಯಿ ತುರಿ ಮಾಡಿ ಎಕ್ಸ್‌ಪೋರ್ಟ್ ಮಾಡುತ್ತಿದ್ದೆವು. ಅದು ಅಷ್ಟೂ ರದ್ದಾಗಿದೆ ಎನ್ನುವುದು ಸುಳ್ಳೇ? ಡೆಸಿಕೇಟೆಡ್ ಕೋಕೋನಟ್ ಎಂದು ಏನು ಮಾಡುತ್ತಿದ್ದೆವು ಅದು ಅಷ್ಟೇ ದಿವಸಕ್ಕೆ 8 ಸಾವಿರ ಕಾಯಿ ಕಡಿಮೆ ಆಯಿತಲ್ಲವೇ?

Dr. Y. Nagappa : The recent theory says in the medical science that this coconut contains lot of cholesterol. People have reduced the consumption of this oil. That is why the price has come down.

ಶ್ರೀ ಡಿ.ಬಿ. ಚಂದ್ರೇಗೌಡ : ಅದರ ಬೆಲೆ ಇಳಿದಿದೆ. ಪರಿಹಾರ ಏನು? ಡ್ರಿಫ್ಟ್ ಇರಿಗೇಷನ್‌ಗೆ ಕೊಡತಕ್ಕಂಥ ಸಬ್ಸಿಡಿಯನ್ನು ಜಾಸ್ತಿ ಮಾಡಿ, ಹೆಚ್ಚಾಗಿ ಬಳಕೆ ಮಾಡತಕ್ಕಂಥವರು ತೆಂಗುಬೆಳೆಗಾರರು ಇದರ ಪ್ರಸ್ತಾಪ ಇಲ್ಲಿ ಇರಬೇಕಾಗಿತ್ತು ಎನ್ನತಕ್ಕಂಥಾದ್ದು ಅಷ್ಟೇ.

ಅದಕ್ಕಿಂತ ಹೆಚ್ಚಿನ ವಿವರಕ್ಕೆ ನಾನು ಹೋಗುವುದಿಲ್ಲ. ಮುಕ್ತಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಅಕ್ಕಿ ಗೋಧಿ ಇದೆಯಲ್ಲಾ ಅದು ಅತ್ಯಂತ ಕಡುಬಡವರಿಗೆ ತಲುಪಿದೆಯೇ? ಪ್ರತಿಯೊಬ್ಬ ಶಾಸಕರೂ ತಮ್ಮ ಹೃದಯ ಮುಟ್ಟಿಕೊಂಡು ನೋಡಬೇಕು. ಅತ್ಯಂತ ಕಡುಬಡವರಿಗೆ ಇದು ತಲುಪುತ್ತಾ ಇದೆಯೇ? ನಮ್ಮ ಸರ್ಕಾರ ಬಂದು 3 ವರ್ಷ ಆಯಿತು. ಈಗ ಹಸಿರು ಕಾರ್ಡ್ ತೆಗೆದು ಮೂರು ನಾಮ ಹಾಕಿದ್ದೀರಿ. ತ್ರಿವರ್ಣ ಕಾರ್ಡ್. ಇದು ಇಷ್ಟು ಮಾಡುವುದಕ್ಕೆ 3 ವರ್ಷಬೇಕಾಯಿತು. ಈಗ ಎಲ್ಲಾ ಕಡೆ ಹಂಚುತ್ತಾ ಇದ್ದಾರೆ. ಅದೇ ಮೂರು ನಾಮದ ಕಾರ್ಡ್. ಮೊದಲು ಹಸಿರು ಕಾರ್ಡ್ ಇತ್ತು. ಈಗ ಮೂರು ನಾಮ. ಈ ಮೂರು ನಾಮದ ಕಾರ್ಡ್ ಹಂಚುವುದಕ್ಕೆ 3 ವರ್ಷಬೇಕಾಯಿತು. ನಿಮಗೆ. ಈ ಮೂರುವರ್ಷದ ಅಂತರ.

ಶ್ರೀ ಕರಿಯಣ್ಣ : ಮೂರು ನಾಮದ ಕಾರ್ಡ್ ಅನ್ನು ನಾವು ಎಲ್ಲೂ ಹಂಚಿಲ್ಲ. ತ್ರಿವರ್ಣ ಧ್ವಜದ್ದು ಎನ್ನತಕ್ಕಂಥಾದ್ದನ್ನು ತಾವು ಹಿರಿಯ ಸದಸ್ಯರುಗಳು ತಾವು ಅದರಡಿಯಲ್ಲಿಯೇ ಬೇಕಾದಷ್ಟು

ಶ್ರೀ ಡಿ.ಬಿ.ಚಂದ್ರೇಗೌಡ : ತಾವು ನನಗಿಂತ ಕನ್ನಡ ಚೆನ್ನಾಗಿ ಮಾತನಾಡುತ್ತೀರಿ. ತ್ರಿವರ್ಣ ಅಂತೀರಿ ನನಗೆ ಅಷ್ಟು ಚೆನ್ನಾಗಿ ಹೇಳುವುದಕ್ಕೆ ಬರುವುದಿಲ್ಲ ಅದಕ್ಕೆ ಮೂರು ನಾಮ ಅಂದೆ. ಜನಕ್ಕೆ ಅರ್ಥವಾಗುತ್ತದೆ ಅಂತ. ಅದು ನಿಮ್ಮ ಊರಿಗೆ ಹೋದಾಗ ನೀವು ಅದನ್ನೇ ಹೇಳಿ.ಇದನ್ನು ಬಳಕೆ ಮಾಡುವುದಕ್ಕೆ ಆ ತ್ರಿವರ್ಣ ಬಾವುಟ ಇತ್ತೋ ಇಲ್ಲವೋ ಸೀರೆ ಅಂತು ಇತ್ತು

ಶ್ರೀ ಕರಿಯಣ್ಣ : ತಾವು ಈಗ. ತ್ರಿವರ್ಣ ಧ್ವಜ ಆದರೂ ನೋಡುತ್ತೀರಿ.

ಶ್ರೀ ಡಿ.ಬಿ.ಚಂದ್ರೇಗೌಡ : ನಮ್ಮ ಕಾಲದಲ್ಲಿ ಕನಿಷ್ಠ ಸೀರೆ ಇರುತ್ತಿತ್ತು. ಈಗ ಬೆತ್ತಲೆ ನಿಲ್ಲಿಸಿದ್ದಾರೆ. ಇದು ಆಗಬಾರದು ಅಂತ. ಈ ಸಾರ್ವಜನಿಕ ವಿತರಣಾ ವ್ಯವಸ್ಥೆ ಹದಗೆಟ್ಟಿರುವುದರಿಂದ ನನ್ನ ಅಂಕಿಅಂಶದ ಪ್ರಕಾರ ಬೇಕು ಅಂದ್ರೆ ಅಂಕಿಅಂಶ ಕೊಡುತ್ತೇನೆ ಶೇಕಡ ಅರ್ಧದಷ್ಟು ಭಾಗ ವ್ಯವಸ್ಥೆಯೇ ತಪ್ಪು ಅಂತ ಹೇಳಿದ್ದೇನೆ ನಾನು ಆ ವ್ಯವಸ್ಥೆಯಲ್ಲಿ ಸಿಗತಕ್ಕಂಥಾದ್ದು ಕೂಡ ಮುಕ್ತ ಮಾರುಕಟ್ಟೆಗೆ ಹೋಗುತ್ತಾ ಇದೆ. ನಿಮ್ಮ ಆಹಾರ ಇಲಾಖೆ ಏನು ಕೆಲಸ ಮಾಡುತ್ತದೆ ಕಾರ್ಡ್ ಕೊಡುವುದಕ್ಕೆ ಮೂರು ವರ್ಷ. ಅದು ಜನರಿಗೆ ತಲುಪಿದೆಯ ನನ್ನ ಕ್ಷೇತ್ರದಲ್ಲಿ ಈಗ ಹಂಚುತ್ತಿದ್ದಾರೆ ಅರ್ಧ ಭಾಗ ಹರಿದು ಹೋಗುತ್ತಿದ್ದಾವೆ.

ಶ್ರೀ ಎಂ. ನಾರಾಯಣಸ್ವಾಮಿ : ಹಂಚಿದ್ದರೂ ಕೂಡ ಕಳೆದ 3-4 ತಿಂಗಳಿಂದ ಆಹಾರಧಾನ್ಯಗಳ ಸಪ್ಲೈ ಇಲ್ಲ.

5.20 ಪಿಎಂ

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರೇ, ಏನಾಗಿದೆ ಎಂದರೆ ಅರ್ಧಭಾಗ ಮಾರುಕಟ್ಟೆಗೆ ಉಳಿದರ್ಧ ಭಾಗ ಯಾರಿಗೆ ಅಗತ್ಯವಿಲ್ಲ ಅವರಿಗೆ ಹೋಗುತ್ತದೆ. ಇದನ್ನು ಅಷ್ಟೇ ಜವಾಬ್ದಾರಿಯಿಂದ ಹೇಳಿ ಬಿಡುತ್ತೇನೆ. ದಯವಿಟ್ಟು ಇದನ್ನು ಪರಿಶೀಲನೇ ಮಾಡಿ. ಅಧ್ಯಕ್ಷರೇ, ಕ್ಷೀರ ಯೋಜನೆ. ಅದನ್ನು ತುಂಬಾ ಸ್ವಾಗತಿಸಿದವರಲ್ಲಿ ನಾನೂ ಒಬ್ಬ. ಆದರೆ ಏನಾಗಿದೆ ಎಂದರೆ ಬಾಲಗ್ರಹಪೀಡೆಯಿಂದ ಅದು ನರಳುತ್ತಿದೆ. ಒಂದು ಪ್ರೈಮರಿ ಶಾಲೆಯಲ್ಲಿ ಒಂದು ತರಗತಿ ಮಕ್ಕಳಿಗೆ ಕೊಡುವುದು, ಮೂರು ತರಗತಿ ಮಕ್ಕಳು ಆ ಮಕ್ಕಳು ಕುಡಿಯುವುದನ್ನು ನಿಂತುಕೊಂಡು ನೋಡುವುದು

ಹಿಂಸೆ ಹಿಂದೆಯಲ್ಲಾ, ಅದರ ಅನುಭವ ನಿಮಗೂ ಆಗಿರಬಹುದು. ಆ ಮಕ್ಕಳಿಗೆ ಮಧ್ಯಾಹ್ನ ಕೊಡ್ತಿರ್ತಾರೆ ಬೇರೆ ಮಕ್ಕಳು ನಿಂತುಕೊಂಡು ನೋಡುತ್ತಿರುತ್ತಾರೆ. ಈ ಮಕ್ಕಳು ಏನು ಪಾಪ ಮಾಡಿವೆ? ಕೊಡೋದು ಅಂತಾದರೆ ಒಂದರಿಂದ ನಾಲ್ಕು ವರ್ಷದ ಎಲ್ಲಾ ಮಕ್ಕಳಿಗೂ ಕೊಡುವುದು. ಒಂದನೇ ಕ್ಲಾಸಿನ ಮಕ್ಕಳಿಗೂ ಎರಡನೇ ಕ್ಲಾಸಿನ ಮಕ್ಕಳಿಗೂ ಅಂತರ ಎಷ್ಟು, ಒಂದು ವರ್ಷ. 6 ವರ್ಷದ ಹುಡುಗ ನಿಂತುಕೊಂಡು ನೋಡುತ್ತಿರುತ್ತಾನೆ. 5 ವರ್ಷದ ಹುಡುಗ ಹಾಲನ್ನು ಕುಡಿಯುತ್ತಿರುತ್ತಾನೆ. ಇದು ಅಸಹ್ಯ, ತಾಯಿಯಾಗಿ ನಿಮಗೆ ಇದು ಹೆಚ್ಚು ತಿಳಿಯಬೇಕು.

ಶ್ರೀ ಸಿ. ಬೈರೈಗೌಡ : ಅನೇಕ ಹಳ್ಳಿಗಳಲ್ಲಿರುವ ಶಾಲೆಗಳಲ್ಲಿ ಈವತ್ತು ಇರುವುದು ಒಂದೇ ಕೊಠಡಿ, ಅದರಲ್ಲಿ ನಾಲ್ಕು ತರಗತಿ ಮಕ್ಕಳು ಕುಳಿತು ಪಾಠ ಕಲಿಯುತ್ತವೆ. ಮೊದಲನೇ ತರಗತಿ ಮಕ್ಕಳಿಗೆ ಕೊಟ್ಟರೆ, ಎರಡು ಮೂರು ನಾಲ್ಕು ತರಗತಿ ಮಕ್ಕಳು ಈ ಒಂದನೇ ತರಗತಿ ಮಕ್ಕಳು ಹಾಲು ಕುಡಿಯುವುದನ್ನು ನೋಡಿಕೊಂಡು ಕುಳಿತಿರಬೇಕು. ಅವರಿಗಂತೂ ಹಾಲು ಸಿಕ್ಕುವುದಿಲ್ಲ ಅದನ್ನೇ ಮಾನ್ಯ ಚಂದ್ರೇಗೌಡರು ಹೇಳುತ್ತಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ಕೆಲವು ಕಡೆ ಈಗ, ಸ್ವಲ್ಪ ನೀರು ಬೆರೆಸಿ ಎಲ್ಲಾ ಮಕ್ಕಳಿಗೂ ಸ್ವಲ್ಪ ಸ್ವಲ್ಪ ಕೊಡುತ್ತಿದ್ದಾರೆ. ಇದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ನಾನು ಇಲ್ಲಿ ಒತ್ತಿ ಏನು ಹೇಳುತ್ತೇನೆಂದರೆ ನಿಮ್ಮ ಈ ಕಾರ್ಯಕ್ರಮ ಯಶಸ್ವಿಯಾಗಿ ಜಾರಿಯಾಗಬೇಕಾದರೆ ನೀವು ಏನು ಮಾಡಬೇಕೆಂಬುದನ್ನು ಯೋಚನೆ ಮಾಡಬೇಕು. ಈಗ ಸಕ್ಕರೆ ಸಿಗುವುದಿಲ್ಲ ಹಾಲಿಗೆ, ಕಾಯಿಸುವುದಕ್ಕೆ ಪಾತ್ರೆ ಸಿಗುವುದಿಲ್ಲ, ಸೀಮೆಎಣ್ಣೆ ಸಿಕ್ಕುವುದಿಲ್ಲ.

ಶ್ರೀ ಕೆ.ಎಚ್. ರಂಗನಾಥ್ :ನಾನು ಬಹಳ ದಿವಸದಿಂದ ಬಲ್ಲೆ ಚಂದ್ರೇಗೌಡರನ್ನು, ನಮ್ಮಲ್ಲಿ ಬಹಳ ಚೆನ್ನಾಗಿದ್ದರು ಅವರು. ನನಗೆ ಸರ್ವಜ್ಞನ ಪದ್ಯ ಒಂದು ನೆನಪಾಗುತ್ತದೆ. ಒಳ್ಳೆಯವ ಕಳ್ಳರೊಡನಾಡಿ ಅವ ಶುದ್ಧ ಕಳ್ಳನೇ ಆದ ಸರ್ವಜ್ಞ ಅಂತ. ಅವರು ಆ ರೀತಿ ಆಗಿಬಿಟ್ಟರೇನೋ ನನಗೆ ಗೊತ್ತಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ : ಆದರೆ ನಾನು ಹೇಳುತ್ತಿದ್ದೇನೆ ಎಂದರೆ ಈ ಸಾರ್ವಜನಿಕ ವಿತರಣೆ ವ್ಯವಸ್ಥೆಯಲ್ಲಿ ಕನಿಷ್ಠ ಇಂತಹ ಒಳ್ಳೆಯ ಕಾರ್ಯಕ್ರಮಕ್ಕೆ ಸಕ್ಕರೆ, ಸೀಮೆಯೆಣ್ಣೆ ಇಂತಹ ಅಗತ್ಯವಸ್ತುಗಳನ್ನು ಕೊಡಿ ಎಂಬುದು ನನ್ನ ಸಲಹೆ. ಬೆಲೆ ಏರಿಕೆ ಬಗ್ಗೆ ಪ್ರಸ್ತಾಪ ಮಾಡಿದರು. ಕಾವೇರಿ ಜಲವಿವಾದದಂತಹ ಒಂದು ಸಮಸ್ಯೆ....

ಶ್ರೀ ಎನ್.ಜಿ. ನಾಯಕ್ : ಅಧ್ಯಕ್ಷರೇ, ಒಂದು ತಾಳಿ ಕುಟ್ಟುವುದಕ್ಕೆ ಗಂಡಸಿಗೆ ಯೋಗ್ಯತೆ ಇಲ್ಲ ಎಂದು ಮಾಡಿದ್ದರು, ಅದನ್ನು ನಾವು ತೆಗೆದುಹಾಕಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮಗೆ ಈ ವಯಸ್ಸಿನಲ್ಲಿ ತಾಳಿ ಕಟ್ಟುವ ಯೋಚನೆ ಏತಕ್ಕೆ ಬಂತು?

ಕಾವೇರಿ ಜಲವಿವಾದದಂತಹ ಒಂದು ಜ್ವಲಂತ ಜೀವಂತ ಸಮಸ್ಯೆ ಬಗ್ಗೆ ಒಂದು ಅಕ್ಷರವಾಗಲಿ ಇಲ್ಲ, ಇದನ್ನು ನ್ಯಾಯಮಂಡಲಿಗೆ ಒಪ್ಪಿಸಿದ್ದೇವೆ. ನ್ಯಾಯಮಂಡಲಿಯನ್ನು ಹೊರತುಪಡಿಸಿ ವಿಶೇಷವಾದ ಒಂದು ಸಮಿತಿ ರಚನೆ ಮಾಡಿದ್ದಾರೆ. ಆ ಸಮಿತಿ ಸಭೆಗೆ ನಮ್ಮ ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಹೋಗಿದ್ದಾರೆ. ಏನು ನಡೆಯಿತು, ಅಲ್ಲಿ, ವಿಶೇಷವಾಗಿ ಎಷ್ಟು ನೀರು ಹೋಗಿದೆ ಎಂದು ನೋಡುವುದಕ್ಕೆ ಒಂದು ವಿಶೇಷ ಸಮಿತಿ ಎಲ್ಲಾ ರಾಜ್ಯಗಳ ಮುಖ್ಯಕಾರ್ಯದರ್ಶಿಗಳುಸೇರಿ ಮಾಡಿದ್ದಾರೆ. ಕೇಂದ್ರದವರರೇ ಅಳತೆ ಮಾಡುವಂತಹ ಒಂದು ವ್ಯವಸ್ಥೆ ಇದೆ. ಆ ವ್ಯವಸ್ಥೆಯನ್ನು ಹೊರತುಪಡಿಸಿ ರಾಜ್ಯದವರು ಕೊಟ್ಟಿದ್ದರೆ ತಪ್ಪಾಗುತ್ತದೆ. ಆ ವ್ಯವಸ್ಥೆಗೆ ಹೊರತು ಪಡಿಸಿ ಇಂತಹ ಒಂದು ಸಮಿತಿಯನ್ನು ಮಾಡುವಂತಹ ಅವಶ್ಯಕತೆ ಏನಿತ್ತು ಮತ್ತು

ಅದು ಯಾವ ಸ್ಥಿತಿಯಲ್ಲಿದೆ? ಅದರ ಚಿಂತನೆಯನ್ನು ಮಾಡುವುದು ಬೇಡವೇ ಇಲ್ಲಿ? ಹೇಮಾವತಿ ನೀರು ಬರುತ್ತದೆ ಎಂದು ನಮ್ಮ ತುಮಕೂರಿನ ಶಾಸಕರು ಜನ ಕಣ್ಣು ಬಾಯಿ ಕಿವಿ ತೆರೆದುಕೊಂಡು ಕುಳಿತಿದ್ದಾರೆ. ನಿಮಗೆ ಕೊನೆಯ ಪಕ್ಷ ಕೊನೇ ದಿವಸ ಬಿಡುವುದಕ್ಕೆ ಒಂದು ಚಮಚ ನೀರಾದರೂ ಸಿಗುತ್ತದೆಯೋ ಇದರ ಬಗ್ಗೆ ಸ್ವಲ್ಪ ಆಲೋಚನೆ ಮಾಡಿ ಅಂತ ನಿಮಗೆ ಹೇಳುತ್ತೇನೆ. ನಿಮಗೆ ಕುಡಿಯುವ ನೀರು ಕೊಡಬೇಕು ಅದಕ್ಕಾಗಿ ಹಣ ಎಷ್ಟು ಖರ್ಚಾಗುತ್ತದೆ? ಸ್ವಾಮಿ ಎಲ್ಲಿ ಹೇಳಬೇಕೋ ಅಲ್ಲಿ ಹೊರತುಪಡಿಸಿ ಉಳಿದ ಎಲ್ಲಾ ಕಡೆ ಮುಖ್ಯಮಂತ್ರಿಗಳು ನೀರಾವರಿಗೆ 850 ಕೋಟಿ ಕೊಟ್ಟಿದ್ದೇವೆ ಎನ್ನುತ್ತಾರೆ. ಮೊನ್ನೆ ಕನ್ನಡ ಸಾಹಿತ್ಯ ಪರಿಷತ್ತಿನ ಸಭೆಯಲ್ಲೂ ಕೂಡ ಮಂಡ್ಯದ ಜನರಿಗೆ ಈ ಮಾತನ್ನು ಹೇಳಿದ್ದಾರೆ. ಕೃಷ್ಣ ನೀರನ್ನು 2000 ಇಸವಿಯೊಳಗೆ ನಾವು ಬಳಕೆ ಮಾಡಿಕೊಳ್ಳುತ್ತೇವೆ. ಕಾವೇರಿಯ ನಮ್ಮ ಹಕ್ಕನ್ನು ಉಳಿಸಿಕೊಳ್ಳುತ್ತೇವೆ ಅದಕ್ಕಾಗಿ ವಿಶೇಷವಾದ ಹಣ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ರಹಸ್ಯಪತ್ರ ಏನು ಕಳುಹಿಸುತ್ತಾರೆ? 5-11-93ರಲ್ಲಿ ಸರ್ಕಾರ ಒಂದು ರಹಸ್ಯ ಸುತ್ತೋಲೆ ಹೋಗುತ್ತದೆ. ವಿಷಯ : ನೀರಾವರಿ ಇಲಾಖೆ, ಇಸಿಪಿಸಿ ಅಂದರೆ ಇಂಜಿನಿಯರಿಂಗ್ ಚೀಫ್, ನೀರಾವರಿ ಇಲಾಖೆಯಿಂದ ರಹಸ್ಯಪತ್ರ ಹೋಗುತ್ತದೆ. ಈ ರಹಸ್ಯ ಪತ್ರದ ವಿಚಾರ ಏನು? ಕಾಮಗಾರಿಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಎಚ್ಚರಿಕೆ ವಹಿಸುವ ಬಗ್ಗೆ. ದಿನಾಂಕ 2-11-93ರಂದು ನಡೆದ ಬಹು ಹಂತದ ಮಾಸಿಕ ಸಭೆಯಲ್ಲಿ ಆಯವ್ಯಯಕ್ಕೆ ವಿರುದ್ಧವಾಗಿ ಎಷ್ಟರಮಟ್ಟಿನ ಪಾತ್ರವನ್ನು ನಾವು

(ಶ್ರೀ ಬಿ.ಎಂ. ಇದಿನಬ್ಬ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ನಿರೀಕ್ಷಿಸಬಹುದು ಎಂಬುದರ ಬಗ್ಗೆ ತಿಳಿಸಿರುವುದು ನಿಮಗೆ ತಿಳಿದಿದೆ. ಈ ವಾಸ್ತವಾಂಶವನ್ನು ಗಮನದಲ್ಲಿಟ್ಟುಕೊಂಡು ಈಗ ಉಳಿದಿರುವ ಐದುತಿಂಗಳಲ್ಲಿ ನವೆಂಬರ್ ಡಿಸೆಂಬರ್ ಜನವರಿ ಫೆಬ್ರವರಿ ಮಾರ್ಚಿ ತಿಂಗಳಲ್ಲಿ ತೆಗೆದುಕೊಳ್ಳಲೇಬೇಕಾಗಿರುವ ಕಾಮಗಾರಿಗಳ ಪಟ್ಟಿಯನ್ನು ಪುನಃ ತಯಾರಿಸಿ ಇದರಲ್ಲಿ ನೇರವಾಗಿ ನೀರು ಸರಬರಾಜಿಗೆ ಅನುಕೂಲವಾಗುವ ಹಾಗೂ ಇಷ್ಟವಾದ ಕಾಮಗಾರಿಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲು ಕ್ರಮ ಕೈಗೊಳ್ಳಲು ನಿರ್ದೇಶಿಸಲಾಗಿದೆ. ಕಾರ್ಯಪಾಲಕ ಅಭಿಯಂತರರಿಗೆ ಕಾರ್ಯಕ್ರಮದಲ್ಲಿ ಅನುಮೋದಿತವಾಗಿದೆ ಎಂಬ ನೆಪದಿಂದ ಎಲ್ಲಾ ಕಾಮಗಾರಿಗಳನ್ನೂ ಕಾರ್ಯರೂಪಕ್ಕೆ ತರುವುದಕ್ಕೆ ಬಿಟ್ಟರೆ ಬಿಲ್ಲುಗಳ ರಾಶಿಯೇ ಹರಿದು ಬಾಕಿ ಬಿಲ್ಲುಗಳ ಪ್ರಮಾಣ ಅಧಿಕವಾಗುವುದು.

ಇದು ಸರ್ಕಾರದ ಹಿತದೃಷ್ಟಿಯಿಂದ ಒಳ್ಳೆಯದಲ್ಲ, ಒಂದು ವೇಳೆ ಹೀಗೆ ಆಗಲು ಬಿಟ್ಟರೆ ಅದು ನಿಯಂತ್ರಣಾಧಿಕಾರಿಗಳಾದ ಅಧೀಕ್ಷಕ ಅಭಿಯಂತರರು ಹಾಗೂ ಮುಖ್ಯ ಅಭಿಯಂತರರ ಅದಕ್ಷತೆಯನ್ನು ಎತ್ತಿ ತೋರಿಸುತ್ತದೆ. ಆದ್ದರಿಂದ ಬಿಲ್ಲುಗಳ ಸಂಖ್ಯೆ ಹೆಚ್ಚದಂತೆ ಮತ್ತು ವೆಚ್ಚವನ್ನು ಲಭ್ಯವಿರುವ ಅನುದಾನಕ್ಕೆ ಶೇಕಡ 67ಕ್ಕೆ ಮಿತಿಗೊಳಿಸಿ ಸೂಕ್ತ ನಿರ್ದೇಶನ ನೀಡಲು ತಿಳಿಸಲಾಗಿದೆ. ಇದು ರಹಸ್ಯಪತ್ರ ಆದೇಶ. ಸಾಹಿತ್ಯ ಪರಿಷತ್ತಿನಲ್ಲಿ ಹೊರಗಡೆ ಘೋಷಣೆ 850 ಕೋಟಿ ಕೊಟ್ಟಿದ್ದೇವೆ, ಎಲ್ಲಾ ಹಣ ಖರ್ಚು ಮಾಡುತ್ತೇವೆ. ಈ ಪತ್ರ ಸರ್ಕಾರದ್ದೇ. ಅವರಿಗೆ ಬೇಕಾದರೆ ದಾಖಲೆ ಕೊಡುತ್ತೇನೆ. ಅದಕ್ಕಾಗಿಯೇ ನಾನು ಹೇಳಿದೆ : ಸದನದ ಹೊರಗಡೆ ರಾಜ್ಯದ ಮುಖ್ಯಮಂತ್ರಿಗಳು ಹೇಳತಕ್ಕಂತಹ ಅನೇಕ ಸುಳ್ಳುಗಳನ್ನು ರಾಜ್ಯಪಾಲರ ಭಾಷಣದಲ್ಲಿ ದೃಢೀಕರಣ ಮಾಡುವಂತಹ ಪ್ರಯತ್ನ ನಡೆದಿದೆ ಎಂದು ಇದಕ್ಕೆ ಅನೇಕ ವಿವರಣೆಗಳನ್ನು ನಾನು ಹೆಚ್ಚು ದೀರ್ಘವಾಗಿ ಕೊಡುವುದಕ್ಕೆ ಹೋಗುವುದಿಲ್ಲ.

ಇದೊಂದನ್ನು ಸರಕಾರದ ಗಮನಕ್ಕೆ ತರುತ್ತೇನೆ. ಮತ್ತೊಂದು ಆ ಆದೇಶದಲ್ಲಿ ನಿಯಂತ್ರಣಾಧಿಕಾರಿಗಳು ಅದರಲ್ಲೂ ರಾಜ್ಯ ಮಟ್ಟದ ಅಧಿಕಾರಿಗಳು ಯಾವುದಾದರೂ ಹೆಚ್ಚಿನ ವೆಚ್ಚಕ್ಕೆ ಅವಕಾಶ ನೀಡಿದರೆ ಅದು ನಿಯಂತ್ರಣದ ಕೊರತೆ ಮತ್ತು ಮೇಲಿನ

ಅಧಿಕಾರಿಗಳು ಅನುಭವಿಸುತ್ತಿರುವ ತೊಂದರೆಗಳನ್ನು ಅರ್ಥ ಮಾಡಿಕೊಳ್ಳುವುದರ ಕೊರತೆಯನ್ನು ಎತ್ತಿ ತೋರಿಸುತ್ತದೆ. ಹಾಗೂ ಅವರ ನಿರ್ವಹಣೆ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡುವುದಿಲ್ಲ. ಅದನ್ನು ಮೂಡಿಸುವಲ್ಲಿ ಅಸಫಲವಾಗುತ್ತವೆ ಮತ್ತು ಅದನ್ನು ದಾಖಲೆಯಲ್ಲಿರುವ ಅವಶ್ಯಕತೆ, ಇಲ್ಲಿ ನಾವು ಮೇಲಿನ ಅಂಶಗಳನ್ನು ಗಮನಿಸಿ ಕಾರ್ಯೋನ್ಮುಖವಾಗುವುದು. ಇದು ಸರಕಾರದ ನೀರಾವರಿ ಇಲಾಖೆ ಕಳುಹಿಸಿರತಕ್ಕಂತಹ ಸುತ್ತೋಲೆ. . ಆದ್ದರಿಂದ ಯಾವುದನ್ನು ಸಾಧ್ಯವಿಲ್ಲವೆಂದು ನಿಮ್ಮ ಮನಸ್ಸಿಗೆ ನಾಟುತ್ತದೆ ಅದನ್ನು ಹೇಳಿ. ಶ್ರೀಮಾನ್ ವೈ.ಕೆ. ರಾಮಯ್ಯನವರು ಪ್ರಸ್ತಾಪ ಮಾಡಿದ್ದಾರೆ. ಪ್ಲಾನಿಂಗ್ ವಾರ್ಷಿಕ ಯೋಜನೆಯಲ್ಲಿ ಯಾವ ರೀತಿ ಕಡಿತವಾಗುತ್ತದೆನ್ನುವ ವಿವರಕ್ಕೆ ನಾನು ಹೋಗುವುದಿಲ್ಲ. ಸಾಧ್ಯವಾಗದೇ ಇರತಕ್ಕಂತಹ , ಗುರಿಯನ್ನೇಕೆ ಹಾಕಿಕೊಳ್ಳುತ್ತೀರಿ? ಈ ಸಾರಿಯದ್ದು ಕಳೆದ ವರ್ಷದ 58 ರಷ್ಟು ಹೆಚ್ಚು. ಆ 58 ಹೆಚ್ಚಾದುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬೆನ್ನು ತಟ್ಟಿಕೊಂಡರಲ್ಲಾ, ನಾವು ಮುಂದಿನ ವರ್ಷ ಕೇಳೋಣವೆಂದರೆ ಇವರು ಇರುತ್ತಾರೋ ಇಲ್ಲವೋ ಗೊತ್ತಿಲ್ಲ. ವರ್ಷಕ್ಕೊಬ್ಬಬ್ಬರು ಮುಖ್ಯ ಮಂತ್ರಿ 3 ವರ್ಷಕ್ಕೆ 3 ಜನ ಮುಖ್ಯಮಂತ್ರಿಗಳು. ಒಬ್ಬೊಬ್ಬರು ಒಂದೊಂದು ಆಶ್ವಾಸನೆ ನೀಡುತ್ತಾರೆ. ಒಬ್ಬರು ಬಂದಾಗ ಹೈದರಾಬಾದ್ ಅಭಿವೃದ್ಧಿ ಪ್ರಾಧಿಕಾರ ಮತ್ತೊಬ್ಬರು ಬಂದಾಗ ಮಲೆನಾಡು ಅಭಿವೃದ್ಧಿ ಮಂಡಲಿ ಮೂರನೆಯವರು ಬಂದಾಗ ಬಯಲು ನಾಡಿನ ಅಭಿವೃದ್ಧಿ ಮಂಡಲಿ. ನಾಲ್ಕನೆಯವರು ಯಾವುದಕ್ಕೆ ಯೋಜನೆ ಹಾಕುತ್ತಾರೋ ಗೊತ್ತಿಲ್ಲ. ಇದೊಂದು ಉದಾಹರಣೆ ಅಷ್ಟೆ. ಇಂತಹ ನೂರಾರು ಉದಾಹರಣೆಗಳನ್ನು ನಾವು ಕೊಡಬಹುದು. ಮಕ್ಕಳನ್ನು ಡಿಸೆಕ್ಟಿಂಗ್ ಟೇಬಲ್ ಹಾಕಿ ಪ್ರತಿ ವರ್ಷ ಒಂದೊಂದು ಕಾರ್ಯಕ್ರಮ ಬಟ್ಟೆ ಪುಸ್ತಕ ಕೊಟ್ಟರೆ...

ಒಬ್ಬ ಮಾನ್ಯ ಸದಸ್ಯರು : ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಕೆಲಸ ನಡೆದಿಲ್ಲವೆಂದು ಹೇಳುತ್ತೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಒಬ್ಬೊಬ್ಬ ಮುಖ್ಯಮಂತ್ರಿಗಳು ಕೊಟ್ಟ ಒಂದೊಂದು ಕಾರ್ಯಕ್ರಮ. ಅದಕ್ಕೆ ಹಣವೆಷ್ಟು ಖರ್ಚಾಗಿದೆ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ.

ಈ ಸಾರಿ ಮಲೆನಾಡು ಅಭಿವೃದ್ಧಿ ಮಂಡಲಿಗೆ 85 ಕೋಟಿ ರೂಪಾಯಿ ಖರ್ಚಾಗಬೇಕಾಗಿತ್ತು. ಆದರೆ ಬಿಡುಗಡೆ ಮಾಡಿರತಕ್ಕಂತಹ ಹಣವೆಷ್ಟು? ತುಟಿಗೆ ತುಪ್ಪವನ್ನೇಕೆ ಹಚ್ಚುತ್ತೀರಿ? ನಿರೀಕ್ಷಿತವಾಗಿ ಆಗಲೇ ಈ ವರ್ಷ 45 ಕೋಟಿ ಹಣ ಬಿಡುಗಡೆ ಮಾಡುತ್ತೇವೆಂದು ಬಡ್ಜೆಟ್ಟಿನಲ್ಲಿ ಹೇಳಿದ್ದೀರಿ. ಇನ್ನು ಒಂದು ತಿಂಗಳು ಇದೆ. ಇದುವರೆಗೆ ಬಿಡುಗಡೆಯಾಗಿರುವ ಹಣ 10 ಕೋಟಿ ರೂಪಾಯಿ, ಇದೆಲ್ಲಾ ಶ್ರೀಮತಿ ಮೋಟಮ್ಮನವರಿಗೆ ಕೇಳುವುದಿಲ್ಲ. ಮಲೆನಾಡು ಅಭಿವೃದ್ಧಿ ಮಂಡಲಿಗೆ 45 ಕೋಟಿ ರೂಪಾಯಿ ವೆಚ್ಚವಾಗಬೇಕಾಗಿತ್ತು. ಆಯವ್ಯಯದಲ್ಲಿ ಆಗಬೇಕಾಗಿತ್ತು. ನಾನು ಇದನ್ನು ಸುಳ್ಳಿನ ದೃಢೀಕರಣವೆನ್ನದೆ ಇನ್ನು ಯಾವ ಭಾಷೆಯಿಂದ ಹೇಳಲಿ? ಇಂತಹ ಅನೇಕ ವಿರೋಧಾಭಾಸ ವಾದಂಥ ಕಾರ್ಯಕ್ರಮಗಳನ್ನು ಒಬ್ಬೊಬ್ಬ ಮುಖ್ಯಮಂತ್ರಿಗಳು ಬಂದಾಗ.....

ಶ್ರೀಮತಿ ಮೋಟಮ್ಮ : ಮಲೆನಾಡು ಅಭಿವೃದ್ಧಿ ಮಂಡಲಿ ಬಗ್ಗೆ ಕ್ಲಿಯರ್ ಮಾಡುತ್ತೇನೆ. ಶ್ರೀ ಚಂದ್ರೇಗೌಡರು ನನ್ನ ಗುರುಗಳು. ಅವರಿಗೆ ಸುಳ್ಳನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಅವರಿಗೂ ಗೊತ್ತು. ತಾವು ಸಂತೋಷಪಟ್ಟು ಕೊಳ್ಳಬೇಕು. ಹಣ ಕೊಡದೇ ಬರೀ ಕುರ್ಚಿಗೋಸ್ಕರ, ಕಾರಿಗೋಸ್ಕರ ನನ್ನನ್ನು ಅಧ್ಯಕ್ಷಳನ್ನಾಗಿ ಮಾಡಿದರೆ ನಾನು ಆಗುವುದಿಲ್ಲವೆಂದು ನಾನು ಪ್ರಾರಂಭದಲ್ಲೇ ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿದ್ದೇನೆ. ಹಣ ಕೊಟ್ಟರೆ ಮಾತ್ರ ಕೆಲಸ ಮಾಡುತ್ತೇನೆಂದು ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾವು ಅಭಿನಂದಿಸಬೇಕು. ಮೊದಲೇ ನಮ್ಮ ಹತ್ತಿರ 9 ಕೋಟಿ ಇತ್ತು. ಅದಾದ ನಂತರ 20 ಕೋಟಿ ರಿಲೀಸಾಗಿದೆ ಎಲ್ಲಾ ಜಿಲ್ಲೆಗೆ 2-2 ಕೋಟಿ ಕೊಟ್ಟಿದ್ದೇವೆ. ಶಿವಮೊಗ್ಗಕ್ಕೆ 2 ಕೋಟಿ 25 ಲಕ್ಷ ರಿಲೀಸ್ ಮಾಡಿದ್ದೇವೆ. ವರ್ಕ್

ಪ್ರೋಗ್ರೆಸ್ ಮೇಲೆ ಹಣ ಬಿಡುಗಡೆ ಮಾಡಿದ್ದೇವೆ. ಮಾರ್ಚ್ ಒಳಗೆ ಬಾಕಿ ಹಣ ತೆಗೆದುಕೊಳ್ಳುತ್ತೇವೆ.

ವೈಸ್ ಚೇರ್ಮನ್ : ಈಗ ಒಂದು ಒಳ್ಳೆ ಸುದ್ದಿ ಸಿಕ್ಕಿದಂತಾಯಿತು. ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ಎಂಬುದು ಗೊತ್ತಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ : ನನಗೆ ಬೇಕಾಗಿದ್ದುದ್ದೂ ಅಷ್ಟೇ ಕಳೆದ ವರ್ಷ 45 ಕೋಟಿ ಕೊಟ್ಟಿದ್ದರೂ 45 ರೂಪಾಯಿ ಖರ್ಚಾಗಿಲ್ಲ ಇದು 91-92ರಲ್ಲಿ. 90-91ಕ್ಕೆ 10 ಕೋಟಿ ನಿಗದಿ ಮಾಡಿದ್ದರು 10 ರೂಪಾಯಿ ಖರ್ಚಾಗಿಲ್ಲ. ಈ ವರ್ಷ 45 ಕೋಟಿ ಎಂದು ಇಂಡಿಕೇಷನ್ ಮಾಡಿದ್ದೀರಿ.

ಶ್ರೀಮತಿ ಮೋಟಮ್ಮ : ಹಾಗಾದರೆ ನಿಮ್ಮ ಕ್ಷೇತ್ರಕ್ಕೆ ಕೊಟ್ಟಂತಹ ಹಣವನ್ನೆಲ್ಲಾ ಏನು ಮಾಡಿದಿರಿ? ಶಿವಮೊಗ್ಗಕ್ಕೆ 2 ಕೋಟಿ 25 ಲಕ್ಷ ಕೊಟ್ಟಿದ್ದೇವೆ. ಅಂದರೆ ಆ ಹಣವನ್ನು ಜಿಲ್ಲಾಧಿಕಾರಿಗಳೊಬ್ಬರೇ ಅವರ ಅಕೌಂಟಿನಲ್ಲಿ ಇಟ್ಟುಕೊಂಡಿದ್ದಾರೆಂಬ ಅರ್ಥವೇ? ವರ್ಕ್ ಪ್ರೋಗ್ರೆಸ್ ಮೇಲೆ ಕೊಟ್ಟಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳುತ್ತಿರುವುದು ನಿಮ್ಮ ಪರವಾಗಿ. ಬಡ್ಜೆಟ್ಟಿನಲ್ಲಿ ಹೇಳಿದಂತಹ 45 ಕೋಟಿ ನಿಮಗೆ ಸಿಗಲಿ ಅದರ ಲಾಭ ನಮ್ಮ ಕ್ಷೇತ್ರಗಳಿಗೂ ಆಗಲಿ ಎಂಬ ಸದಿಚ್ಛೆಯಿಂದ ಹೇಳುತ್ತಿದ್ದೇನೆ.

ಕೊನೆಯದಾಗಿ ಒಂದು ಮಾತು. ವಿಕೇಂದ್ರೀಕೃತ ವ್ಯವಸ್ಥೆ ಬಗ್ಗೆ ಮೋಟಮ್ಮನವರು ಮಾತನಾಡುತ್ತಾ, ಮೊದಲಬಾರಿಗೆ ಚುನಾವಣೆ ರಾಜ್ಯಪಾಲರ ಭಾಷಣದಲ್ಲಿ ಮೊದಲಬಾರಿಗೆ ಚುನಾವಣೆ ಮಾಡಿದ್ದೇವೆ ಎಂದು ಹೇಳಿದ್ದೇವೆಂದರು, ಏನು ಚುನಾವಣೆಯನ್ನು ಮೊದಲ ಬಾರಿಗೆ ಮಾಡಿದ್ದೀರಿ? ಈ ಇಡೀ ದೇಶ ಮೆಚ್ಚತಕ್ಕಂಥ ಒಂದು ಶಾಸನವನ್ನು ಜಾರಿಗೆ ಕೊಟ್ಟ ಕೀರ್ತಿ ಶ್ರೀಮಾನ್ ನಜೀರ್‌ಸಾಬ್ರವರಿಗೆ ಸಲ್ಲುತ್ತದೆ. ಅದು ನಿಜವಾದ ಚುನಾವಣೆ. ಅದು ನಿಜವಾದ ಮೀಸಲಾತಿ. ಅದು ನಿಜವಾಗಿ ಗ್ರಾಮೀಣ ವಿಕೇಂದ್ರೀಕೃತ ವ್ಯವಸ್ಥೆಗೆ ಅರ್ಥ ಕೊಟ್ಟಿದ್ದರು. ಇವತ್ತು ನೀವು ಗ್ರಾಮೀಣ ವಿಕೇಂದ್ರೀಕರಣಕ್ಕಲ್ಲ, ಗ್ರಾಮಗಳಲ್ಲಿ ಜಗಳ ಹಚ್ಚಿ......

(ಗೊಂದಲ)

ಶ್ರೀಮತಿ ಮೋಟಮ್ಮ : ಹಿಂದಿನ ಮಂಡಲ ಪಂಚಾಯತಿಗೆ ಕೊಳಕು ಮಂಡಲ ಎಂದು ಹೇಳುತ್ತಿದ್ದರು.

ಶ್ರೀ ಡಿ.ಬಿ. ಚಂದ್ರೇಗೌಡ : ನಾಚಿಕೆಯಾಗಬೇಕು. ಶಾಸನಸಭೆಗೆ ಚುನಾವಣೆಯಾದರೆ 24 ಗಂಟೆ ಕಾಯುವುದಕ್ಕೆ ತಯಾರಾಗಿಲ್ಲ. ರಾಜ್ಯಪಾಲರ ಹತ್ತಿರ ಹೋಗುತ್ತಾರೆ. ಮುಖ್ಯಮಂತ್ರಿಯಾಗಿ ಸ್ಟೇರಿಂಗ್ ತೆಗೆದುಕೊಳ್ಳುವ ರಾಜ್ಯಪಾಲರ ಹತ್ತಿರ ಹೋಗುತ್ತಾರೆ. ಎರಡು ತಿಂಗಳು ಆಗಿದೆ ಚುನಾವಣೆಯಾಗಿ ಇವತ್ತು. ಇದುವರೆಗೆ ಅಧ್ಯಕ್ಷರ ಉಪಾಧ್ಯಕ್ಷರ ಚುನಾವಣೆಯನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀಮತಿ ಮೋಟಮ್ಮ : ಹಿಂದೆ ಮಂಡಲ ಪಂಚಾಯಿತಿ ಚುನಾವಣೆಯಾದಾಗ ಗ್ರಾಮಾಂತರ ಪ್ರದೇಶದವರು ಅದನ್ನು ಕೊಳಕು ಮಂಡಲ ಪಂಚಾಯಿತಿ ಎನ್ನುತ್ತಿದ್ದರು. ಎಲ್ಲ ಗದ್ದಲವಾಗಿ, ಹೊಡೆದಾಟವಾಗಿ, ಮರ್ಡರ್ ಆದಾಗ...

ಶ್ರೀ ಡಿ.ಬಿ. ಚಂದ್ರೇಗೌಡ : ವಿಕೇಂದ್ರೀಕರಣದ ವ್ಯವಸ್ಥೆಯ ಅರ್ಥ ಇದು. ವಿಕೇಂದ್ರೀಕರಣದ ಅರ್ಥ ಮೀಸಲಾತಿ ಅಲ್ಲ. "ಮೂಗಿಗಿಂತ ಮೂಗುತಿ ಭಾರ". ಮೂಗಿಗೆ ನೆಗಡಿ ಬಂದರೆ ಮೂಗುತಿಯಿಂದ ವಾಸಿಯಾಗುವುದಿಲ್ಲ. ಇಲ್ಲಿ ಚರ್ಚೆ ಮೀಸಲಾತಿ. ಯಾರಿಗೆಷ್ಟು ಮೀಸಲಾತಿಸಿಕ್ಕಿತು? ನಾನು ಚರ್ಚೆ ಮಾಡುತ್ತಿರತಕ್ಕಂಥದ್ದು ಎಷ್ಟು ಗ್ರಾಮೀಣ ಅಭಿವೃದ್ಧಿಯಾಯಿತು? ಇದರ ಬಗ್ಗೆ ಎಲ್ಲಿಯಾದರೂ ಚರ್ಚೆಯಾಗಿದೆಯೋ? ಹೆಣ್ಣು ಮಕ್ಕಳಿಗೆ 30 ಪರ್ಸೆಂಟ್ ಇಟ್ಟರು. ಷೆಡ್ಯೂಲ್ಡ್ ಕ್ಯಾಸ್ಟ್ಗೆ 25 ಪರ್ಸೆಂಟ್. ಯಾರೂ ಕೊಡಬೇಕಾದ್ದಿಲ್ಲ, ರಾಜ್ಯಾಂಗದತ್ತವಾದಂಥ ಹಕ್ಕನ್ನು ಕೊಟ್ಟಿದ್ದಾರೆ. 25 ಪರ್ಸೆಂಟ್ ಮೊದಲು

ಕೊಟ್ಟಿದ್ದುದು ಕರ್ನಾಟಕ ರಾಜ್ಯ. ಜನತಾ ಸರ್ಕಾರ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸರ್ಕಾರ. ಅದರ ಮೇಲೆ ಡಿಫೆಂಡ್ ಮಾಡುವುದಕ್ಕೆ ಹೋಗಬೇಡಿ. ಇದನ್ನು ಸಂಸತ್ತನಲ್ಲೂ ಹೇಳಿದ್ದೇನೆ. ನೀವಲ್ಲ, ದಿವಂಗತ ರಾಜೀವ್ ಗಾಂಧಿಯವರು ಮೆಚ್ಚಿ ನನ್ನನ್ನೇ ಬೆನ್ನು ತಟ್ಟಿದರು. ಅದರಿಂದ ಆ ಸಂಬಂಧಗಳನ್ನೆಲ್ಲಾ ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಶಾಸನಸಭೆಗೆ ಚುನಾವಣೆಯಾಗಿ ನೀವು ಒಂದು ದಿವಸ ಕಾಯುವುದಕ್ಕೆ ತಯಾರಾಗಿದ್ದೀರಾ? ಬೆಳಿಗ್ಗೆ ಎದ್ದು ರಾಜ್ಯಪಾಲರ ಹತ್ತಿರ ಸ್ವೇರಿಂಗ್ಗೆ ಹೋಗುತ್ತೀರಿ. ನಾನು ಮಂತ್ರಿಯಾಗಬೇಕು, ನಾನು ಮಂತ್ರಿಯಾಗಬೇಕು ಎಂದು ಹೇಳಿ ಕ್ಯೂ ನಿಂತಿರುತ್ತೀರಿ. ಇವತ್ತು ಎರಡು ತಿಂಗಳಾಗಿದೆ ಚುನಾವಣೆಯಾಗಿ. ಇದುವರೆಗೆ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆ ಮಾಡಲಾರದೆ ಚುನಾವಣೆ ಎಂದು ಹೇಳಿಕೊಳ್ಳುವುದಕ್ಕೆ ನಾಚಿಕೆಯಾಗಬೇಕು. ಇನ್ನು ಒಂದು ಮಾತನ್ನು ಹೇಳುತ್ತೇನೆ. ಇವರು ಜಿಲ್ಲಾ ಪಂಚಾಯಿತಿ ಚುನಾವಣೆ ಮಾಡುವುದಿಲ್ಲ. ತಾಲ್ಲೂಕು ಪಂಚಾಯತಿ ಚುನಾವಣೆಯನ್ನು ಖಂಡಿತ ಮಾಡುವುದಿಲ್ಲ, ಏಕೆಂದರೆ ಇವರ ಅವಧಿ ಮುಗಿಯುವುದರೊಳಗೆ ಸರ್ವೋಚ್ಚ ನ್ಯಾಯಾಲಯದ ಡಿಸೆಂಬರ್ 31 ರೊಳಗೆ ಚುನಾವಣೆ ಮಾಡುತ್ತೇವೆ ಎಂದು ಕೊಟ್ಟ ಮಾತಿಗೆ ಚುನಾವಣೆಯ ಅಣಕ ಈ ರಾಜ್ಯದಲ್ಲಿ ಪಂಚಾಯಿತಿ ಚುನಾವಣೆಯ ಅಣಕ ಈ ಒಂದು ಕೆಟ್ಟ ಶಾಸನದ ಮೂಲಕ ಆಗಿದೆ. ಮೊದಲ ಬಾರಿಗೆ 30 ಪರ್ಸೆಂಟ್ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯವೇ ಮೊದಲಭಾರಿಗೆ ಮಹಿಳೆಯರಿಗೆ ಮೀಸಲಾತಿ ಕೊಟ್ಟಂಥ ಕೀರ್ತಿ. ಆ ಕೀರ್ತಿ ಘೋರ್ಪಡೆಯವರಿಗಲ್ಲ. ನಿಮ್ಮ ಸರ್ಕಾರಕ್ಕಲ್ಲ. ದಿವಂಗತ ನಜೀರ್ ಸಾಹೇಬರಿಗೆ ಸಲ್ಲಬೇಕು. ನ್ಯಾಯವಾಗಿ ಸಲ್ಲತಕ್ಕಂಥ ಗೌರವವನ್ನು ಯಾರ್ಯಾರಿಗೆ ಯಾವ ಯಾವ ಕಾಲದಲ್ಲಿ ಸಲ್ಲಬೇಕೋ ಅವರಿಗೆ ಕೊಡಿ. ಶೇಕಡ 25 ಮೀಸಲಾತಿಯನ್ನು ಇಟ್ಟಿದ್ದರು. 18 ವರ್ಷದ ವಯೋಮಿತಿಗೆ ಚುನಾವಣೆಗೆ ಅವಕಾಶವನ್ನು ಕೊಟ್ಟಂಥ ಕೀರ್ತಿಯೂ ನಮ್ಮದೇ.

ಶ್ರೀ ಕರಿಯಣ್ಣ : 43 ಪರ್ಸೆಂಟ್ ಆಗಿದೆ. ತಾವು ನೋಡಿದ್ದೀರಿ. ತಾವೇ ಚರ್ಚೆ ಮಾಡಿದ್ದೀರಿ. ಒಟ್ಟು ರಾಜ್ಯದಲ್ಲಿ 45 ಪರ್ಸೆಂಟ್ ಆಯಿತು. ತಾವು ನೋಡಿದ್ದೀರಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಕರಿಯಣ್ಣನವರೇ, ಎಲ್ಲಾ ಇಲ್ಲಿ ಇಟ್ಟಿದ್ದೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ : ವಿಕೇಂದ್ರೀಕರಣ ಮಾಡಿ ನೀವು ಆ ಕಡೆಗೆ ಹೋದಿರಿ ಆ ಆಕ್ಟ್ ತೆಗೆದುಕೊಂಡು ಬಂದು. ವಿಕೇಂದ್ರೀಕರಣದ ಆಕ್ಟ್ ಮಾಡಿ ಶಹಭಾಷ್ಗಿರಿ ಮಾಡಿಕೊಳ್ಳುತ್ತಿದ್ದೀರಲ್ಲಾ, ಅದರಿಂದಲೇ ನೀವು ಆ ಕಡೆಗೆ ಹೋಗಿದ್ದು ಈ ಕಡೆಯಿಂದ.

ಶ್ರೀ ಡಿ.ಬಿ. ಚಂದ್ರೇಗೌಡ : ನಮಗೆ ಏನು ಸಂತೋಷ ಎಂದರೆ ......

(ಗೊಂದಲ)

ಶ್ರೀ ಜಿ.ಎಸ್. ಶಿವನಂಜಪ್ಪ : ನೀವು ನಾಮಿನೇಷನ್ ಮಾಡುವುದಕ್ಕೆ ಎರಡು ತಿಂಗಳು ತೆಗೆದುಕೊಂಡಿರಿ. ಅದನ್ನು ತಾವು ಮರೆಯಬಾರದು.

(ಗೊಂದಲ)

ಶ್ರೀ ಎಸ್. ಇಸಾಮಿಯಾ : ಮಾನ್ಯ ಅಧ್ಯಕ್ಷರೇ, ಒಂದು ಮಾತು ನಾವು ಅದಕ್ಕೋಸ್ಕರ ಮಿಸಲಾತಿಯನ್ನು ಇಟ್ಟಿದ್ದೇವೆ. ಸಾಧಿಸಬೇಕಾದರೆ ಯಾರನ್ನು ಬೇಕಾದರೂ ಚುನಾಯಿಸಬೇಕಾಗಿದ್ದರೆ ನಾವು ನಾಳೆಯೇ ಮಾಡಬಹುದಿತ್ತು. ಈವತ್ತೇ ಮಾಡಬಹುದಾಗಿತ್ತು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ತಿಳಿಯುವವರಿಗೆ ಹೇಳಬಹುದು, ತಿಳಿಯದೇ ಇರುವವರಿಗೆ ಹೇಳುವುದಕ್ಕೆ ನನ್ನಿಂದ ಸಾಧ್ಯವಿಲ್ಲ. ನಾನು ಚರ್ಚೆ ಮಾಡುತ್ತಿದ್ದುದ್ದು ವಿಕೇಂದ್ರೀಕರಣದ ಉದ್ದೇಶ ಗ್ರಾಮೀಣ ಸರ್ವಾಂಗೀಣ ಅಭಿವೃದ್ಧಿ; ಆ ಬಗೆ ಚರ್ಚೆ ಮಾಡಿ. ಮೀಸಲಾತಿಯನ್ನಾದರೂ ಕೊಡಿ, ಕೊಡದೇ ಹೋಗಿ,

ಬೇಕಾದಂಥದ್ದು ಕಳೆದ ಇವರ ಸರ್ಕಾರ ಬಂದಾಗಿನಿಂದ ಮೂರು ವರ್ಷ ತೆಗೆದುಕೊಂಡಿದ್ದಾರೆ ಈ ಚುನಾವಣೆಗೆ.

ಶ್ರೀ ಎನ್.ಜಿ. ನಾಯಕ್ : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಕೃಷ್ಣ ಹೆಗಡೆ ಕಾಲದಲ್ಲಿ ದುಡ್ಡು ಕೊಡಲಿಲ್ಲ. ಬರೇ ಹೇಳಿಕೆ ಕೊಟ್ಟರು. ಸುಮಾರು 60-70 ಮನೆಗಳು ಇದ್ದಾವೆ ನನ್ನ ಕ್ಷೇತ್ರದಲ್ಲಿ; ದುಡ್ಡು ಕೊಟ್ಟಿಲ್ಲ, ಬೇಕಾದರೆ ಚಾಲೆಂಜ್ಮಾಡುತ್ತೇನೆ ಮತ್ತು ತೋರಿಸುತ್ತೇನೆ. ನಮ್ಮ ಸರ್ಕಾರವನ್ನು ಹೀಯಾಳಿಸುತ್ತಿದ್ದಾರೆ. ಇದು ಸರಿಯಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಆ ಬಿಲ್ ಬಂದಾಗ ನಾನು ಮಾತನಾಡುತ್ತೇನೆ. ಸಾಕಷ್ಟು ಸಾಹಿತ್ಯ ಇಟ್ಟಿದ್ದೇನೆ ಇಲ್ಲಿ, ನನ್ನ ಒಂದು ಪ್ರಶ್ನೆಗೆ ಉತ್ತರ ಕೊಡಿ ನೀವು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಪಂಚಾಯತಿ (ತಿದ್ದುಪಡಿ) ವಿಧೇಯಕ ಪರಿಶೀಲನೆಗೆ ತೊಗೆದುಕೊಂಡು ಆಗಿದೆ. ಸ್ವಲ್ಪ ಪ್ರಸ್ತಾವಿಕವಾಗಿ ಮಾತನಾಡಿದ್ದಾರೆ. ಅದರ ಮೇಲೆ ಮುಂದುವರಿಸಬಹುದು. ಈಗಾಗಲೇ 5.45 ಆಗಿದೆ. ಎರಡು ಮೂರು ಸಣ್ಣ ಪುಟ್ಟ ವಿಧೇಯಕಗಳು ಇವೆ. ಇವತ್ತು ಅವುಗಳನ್ನು ಮುಗಿಸೋಣ. ನಾಳೆ ಇವರು ಮಾತನ್ನು ಮುಂದುವರಿಸಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಇವರುಗಳು ಮಧ್ಯೆ ಪ್ರವೇಶ ಮಾಡದೇ ಇದ್ದಿದ್ದರೆ ನಾನು ಹೇಳುವುದಕ್ಕೆ ಹೋಗುತ್ತಿರಲಿಲ್ಲ. ಒಂದು ಕಾಯಕ್ರಮವನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಹಮ್ಮಿಕ್ಕೊಂಡಿದ್ದಾರೆ. ಇದು 'ಅಪಾನಾ ದೇಶ್' ಎನ್ನತಕ್ಕ ಒಂದು ಕಾರ್ಯಕ್ರಮ. ಈ 'ಅಪನಾ ದೇಶ' ಕಾರ್ಯಕ್ರಮ ರಾಜ್ಯ ವ್ಯಾಪಿ ಆಗಬೇಕು ಎನ್ನತಕ್ಕದ್ದು ನಿಮ್ಮ ಗಮನಕ್ಕೆ ತರುವ ದೃಷ್ಟಿಯಿಂದ ಹೇಳುತ್ತೇನೆ. ಬೆಳಗಾವಿಯಲ್ಲಿ, ಈಗ ಶಿವಮೊಗ್ಗ ಜಿಲ್ಲೆಯ ಮುಖ್ಯ ಕಾರ್ಯದರ್ಶಿ ಆಗಿದ್ದಂತಹ ಶ್ರೀಮಾನ್ ಭರತ್ ಲಾಲ್ ಮೀನಾ ಅರರು ಬೆಳಗಾವಿ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದರು. ರಾಯಚೂರು ಜಿಲ್ಲೆಯನ್ನು ಸ್ವಲ್ಪ ವಿಸ್ತರಿಸಿ ಮಾಡಿದರು. ಆದರೆ ಶಿವಮೊಗ್ಗ ಜಿಲ್ಲೆಯಲ್ಲಿ ಹೆಚ್ಚು ವ್ಯಾಪಕವಾದಂತಹ ಕೆಲಸ ಇದೆ. ಈ ಕಾರ್ಯಕ್ರಮದಲ್ಲಿ ಬಹಳ ವಿಶೇಷ ಏನೂ ಇಲ್ಲ. ಜನರನ್ನು ಸಾರ್ವಜನಿಕ ಕೆಲಸಗಳಲ್ಲಿ ಇನ್ವಾಲ್ವ್ ಮಾಡತಕ್ಕದ್ದು. ನೀವು 50 ಭಾಗ ಕೊಡಿ, ನಾವು ಜಿಲ್ಲಾ ಪರಿಷತ್ತಿನಿಂದ 50 ಭಾಗ ಕೊಡುತ್ತೇವೆ. ನಮ್ಮ ಊರಿನಲ್ಲಿ ಏಳು ಲಕ್ಷ ಖರ್ಚಿನಲ್ಲಿ ಒಂದು ಸೇತುವೆ ಮಾಡಿಸಿದ್ದೇವೆ. ಮೂರುವರೆ ಲಕ್ಷ ರೂಪಾಯಿಗಳನ್ನು ಜನ ಕೊಟ್ಟಿದ್ದಾರೆ. ಮೂರುವರೆ ಲಕ್ಷ ರೂಪಾಯಿ ಜಿಲ್ಲಾ ಪರಿಷತ್ತಿನವರು ಕೊಟ್ಟಿದ್ದಾರೆ. ಕಾರ್ಯಕ್ರಮ ಎಷ್ಟು ಆಗಿದೆ. ನಾನು ದೀರ್ಘ ಪಟ್ಟಿ ಹೇಳುವುದಕ್ಕೆ ಸಮಯ ತೆಗೆದು ಕೊಳ್ಳುವುದಿಲ್ಲ. ಒಟ್ಟು ಶಿವಮೊಗ್ಗ ಜಿಲ್ಲೆಯಲ್ಲಿ ಇಂತಹ ಕಾರ್ಯಕ್ರಮಗಳಿಗಾಗಿ ನಮ್ಮ ಜಿಲ್ಲೆಯ ಜನ, ಪಬ್ಲಿಕ್ ಪಾರ್ಟಿಸಿಪೇಷನ್ 7 ಕೋಟಿ 89 ಲಕ್ಷ ಅಂದರೆ ಎಂಟು ಕೋಟಿ ರೂಪಾಯಿಗಳನ್ನು ಈ ವರ್ಷದ ಕೆಲಸಕ್ಕೆ ಸಾರ್ವಜನಿಕರು ವಂತಿಗೆ ಕೊಟ್ಟಿದ್ದಾರೆ. ಯಾವ್ಯಾವುದಕ್ಕೆ ಕೊಟ್ಟಿದ್ದಾರೆಂದರೆ ಸ್ಕೂಲ್ಬಿಲ್ಡಿಂಗ್ಸ್, ಅಂಗನವಾಡಿ ಕಟ್ಟಡಗಳು, ಓಪನ್ ಏರ್ ಥಿಯೇಟರ್ಗಳು, ಬಸ್ ಶೆಲ್ಟರ್, ಲೈಬ್ರರಿ, ರೋಡ್ಸ್, ಮಹಿಳಾ ಮಂಡಲಿಗಳು, ಡ್ರಿಂಕಿಂಗ್ ವಾಟರ್, ಮಿನಿ ವಾಟರ್ ಸಪ್ಲೈಸ್, ಕ್ರಾಸ್ ಲೈನ್ಸ್, ಬಿಲ್ಡಿಂಗ್ಗೆ ರಿಪೇರಿಗಳಿಗೆ ಮತ್ತು ಇತರೇ ವೈಟ್ ವಾಷಿಂಗ್ ಆಫ್ ದಿ ಸ್ಕೂಲ್ಸ್ ಡೋನೇಷನ್ ಫಾರ್ ಫರ್ನೀಚರ್ ಅಂಡ್ ಬುಕ್ಸ್; ಮಿಲ್ಕ್ಸೊಸೈಟೀಸ್, ಡೀಸಿಲ್ಟಿಂಗ್ ಆಫ್ ಟ್ಯಾಂಕ್ಸ್, ಹೆಲ್ತ್ ಫಾರ್ ಲರ್ನಿಂಗ್ ಸೆಂಟರ್ಸ್, ಮೆಟೀರಿಯಲ್ ಅಸಿಸ್ಟೆನ್ಸ್ ಹೀಗೆ ಅನೇಕ ವಿಧವಾದಂತಹ ಸುಮಾರು 18 ಕಾರ್ಯಕ್ರಮಗಳನ್ನು ಹಾಕಿಕೊಂಡು ಶಿವಮೊಗ್ಗ ಜಿಲ್ಲೆಯಲ್ಲಿ ಇಂತಹ ಒಂದು ಉತ್ತಮ ಕೆಲಸ ಮಾಡಿದ್ದಾರೆ. ನಾನು ಯಾರನ್ನೂ ಮೆಚ್ಚಿಸತಕ್ಕ ದೃಷ್ಟಿಯಲ್ಲಿ ಈ ಮಾತನ್ನು ಹೇಳುತ್ತಿಲ್ಲ. ಈ ಕಾರ್ಯಕ್ರಮ ಪ್ರತಿ ಜಿಲ್ಲೆಯಲ್ಲಿ ಹಾಕಿದರೆ ಬಹಳ ಒಳ್ಳೆಯದು. ನಮ್ಮ ಜಿಲ್ಲೆಯಲ್ಲಿ ಬಂದಿರತಕ್ಕ ಹಾಗೆ ಎಂಟು ಕೋಟಿ ರೂಪಾಯಿ ಪ್ರತಿ ಜಿಲ್ಲೆಯಿಂದ ಬಂದರೆ ಅಂದರೆ 150 ಕೋಟಿ ರೂಪಾಯಿ ಜನ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಇಂತಹ ಕಾರ್ಯಕ್ರಮಗಳನ್ನು

ಇಡೀ ರಾಜ್ಯದಲ್ಲಿ ಕೈಗೆತ್ತಿಕೊಳ್ಳಬೇಕು. ಬರೀ ಜನ ದುಡ್ಡು ಕೊಡುತ್ತಾರಂತಲ್ಲ, ಈ ಕೆಲಸ ಮಾಡತಕ್ಕಂಥ ಜವಾಬ್ದಾರಿ ಇವರೇ ವಹಿಸಿಕೊಳ್ಳುತ್ತಾರೆ. ಜವಾಬ್ದಾರಿ ಅವರಿಗೆ ಇರುವುದರಿಂದ ಕ್ವಾಲಿಟಿ ಮತ್ತು ಸಮಯ ಚೆನ್ನಾಗಿರುತ್ತದೆ. ಸಮಯವೂ ಬಂತು. ಆ ಕಾರ್ಯಕ್ರಮದಲ್ಲಿ ಜನ ತಮ್ಮನ್ನು ತಾವು ಅರ್ಪಿಸಿಕೊಂಡು ಮಾಡತಕ್ಕ ಕಾರ್ಯ ಆದ್ದರಿಂದ ಯಾವುದೇ ಕೆಟ್ಟ ಕೆಲಸ ಆಗುವುದಿಲ್ಲ. ತಮ್ಮ ಜಿಲ್ಲಾ ಪರಿಷತ್ತಿನ ಕಾರ್ಯಕ್ರಮ ಹೇಳುತ್ತಿದ್ದೇನೆ. ಮುಖ್ಯಕಾರ್ಯದರ್ಶಿ ಭರತ್ ಲಾಲ್ ಮೀನಾ ಅವರು ಶಿವಮೊಗ್ಗ ಜಿಲ್ಲೆಯಲ್ಲಿ 'ಅಪನಾ ದೇಶ್' ಎಂಬ ಒಂದು ಕಾರ್ಯಕ್ರಮ ಮಾಡಿದ್ದಾರೆ. ಆ ಕಾರ್ಯಕ್ರಮದಲ್ಲಿ ಜನ ಏಳು ಕೋಟಿ 89 ಲಕ್ಷ ರೂಪಾಯಿಗಳ ವಂತಿಗೆಯನ್ನು ಸಾರ್ವಜನಿಕ ಕೆಲಸಗಳಿಗಾಗಿ ಕೊಟ್ಟಿದ್ದಾರೆ. ಅವರದ್ದು 50 ಪರ್ಸೆಂಟ್, ತಮ್ಮ ಜಿಲ್ಲಾ ಪರಿಷತ್ತಿನದು 50 ಪರ್ಸೆಂಟ್. ಅರ್ಥಾತ್ ಎಂಟು ಇಂಟು ಎರಡು ಅಂದರೆ ಹದಿನಾರು ಕೋಟಿ ರೂಪಾಯಿ ಕೆಲಸ ಆಗಿದೆ. ನಿಮ್ಮ ಕಾಂಟ್ರಿಬ್ಯೂಷನ್ ಎಂಟು ಕೋಟಿ ರೂಪಾಯಿ; ಜನರ ಕಾಂಟ್ರಿಬ್ಯೂಷನ್ ಎಂಟು ಕೋಟಿ ರೂಪಾಯಿ. ಈ ಕಾರ್ಯಕ್ರಮದಿಂದಾಗಿ ಬಹುಶಃ ಜನ ತಮ್ಮನ್ನು ತಾವು ಕಾರ್ಯಕ್ರಮಕ್ಕೆ ಇನ್ವಾಲ್ವ್ ಮಾಡಿಕೊಳ್ಳುತ್ತಾರೆ. ಅಭಿವೃದ್ಧಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆ. ಒಳ್ಳೆಯ ಕೆಲಸ ಆಗುತ್ತದೆ ಹಾಗೂ ಸಮಯಕ್ಕೆ ಸರಿಯಾಗಿ ಕೆಲಸ ಆಗುತ್ತದೆ. ಆದ್ದರಿಂದ ಇಂತಹ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂತಹ ಪ್ರಯತ್ನವನ್ನು ಮಾಡಿ, ಇಂತಹ ಕಾರ್ಯಕ್ರಮಗಳನ್ನು ಯಾವುದೂ ಹೇಳುವುದಿಲ್ಲ. ಆದ್ದರಿಂದ ನಿಮ್ಮ ರಾಜ್ಯಪಾಲರ ಭಾಷಣದ ಮೇಲೆ ಹೆಚ್ಚು ಚರ್ಚೆಯ ಅಗತ್ಯ ಇಲ್ಲ, ಅವಕಾಶವೂ ಇಲ್ಲ ಎಂದು ಹೇಳುತ್ತೇನೆ.

ಆದುದರಿಂದ, ಅವಶ್ಯಕತೆ ಇಲ್ಲದೇ ಇರತಕ್ಕಂಥ ಮತ್ತು ಅಗತ್ಯವಿಲ್ಲದೆ ಇರತಕ್ಕಂಥ ನೀರಸವಾದ ಭಾಷಣದ ಮೇಲೆ ನಾನು ನನ್ನ ಕಂಠ ಶೋಷಣೆ ಮಾಡಿಕೊಳ್ಳುವುದಕ್ಕೆ ತಯಾರಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ, ಕನಿಷ್ಠ ಪಕ್ಷ ಈ ರಾಜ್ಯಪಾಲರನ್ನು ವಿರೋಧಿಸಿ ಭಾಷಣ ಮಾಡುತ್ತೇನೆ ಎನ್ನುವುದಕ್ಕೂ ಇದು ಯೋಗ್ಯವಾಗಿಲ್ಲ ಎನ್ನುವಂಥ ಮಾತನ್ನು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ : ತಾವು ಸುಮಾರು ಒಂದು ಗಂಟೆಗಳ ಮಾತನಾಡಿ ಇದರಲ್ಲಿ ಏನೂ ಇಲ್ಲವೆಂದು ಹೇಳುತ್ತಿದ್ದೀರಿ.

+ ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡ ಬಳ್ಳಾಪುರ) : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಈಗಾಗಲೇ ಬಹಳಷ್ಟು ಜನ ಸದಸ್ಯರು ಮಾತನಾಡಿದ್ದಾರೆ. ನಾನಾದರೂ 5-10 ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. ರಾಜ್ಯಪಾಲರ ಭಾಷಣವನ್ನು ಭಾಷಣವೆಂದು ಕರೆಯಬೇಕೋ ಗೌರ್ನಮೆಂಟ್ ಪ್ರೆಸ್ ನೋಟ್ ಎಂದು ಕರೆಯಬೇಕೋ ನನಗೆ ಗೊತ್ತಿಲ್ಲ. ಕಳೆದ 2-3 ವರ್ಷಗಳ ರಾಜ್ಯಪಾಲರ ಭಾಷಣದ ಪ್ರತಿಗಳನ್ನು ನಾನು ತಂದಿದ್ದೇನೆ. 2-3 ವರ್ಷಗಳ ಹಿಂದಿನ ರಾಜ್ಯಪಾಲರ ಭಾಷಣಗಳಲ್ಲಿ ಕೆಲವೊಂದು ವಿಷಯಗಳು ಪುನರಾವರ್ತನೆಗೊಂಡಿದೆ. ಆ ಕಡೆಯ ಮಾನ್ಯ ಸದಸ್ಯರು ಮಾತನಾಡುವಾಗ ಹೇಳಿದರು: ಹಣ ಹೇರಳವಾಗಿದೆ, ಸರ್ಕಾರ ಬೇಕಾದಷ್ಟು ಖರ್ಚು ಮಾಡುತ್ತಿದೆ ಎಂದು. ಅದಕ್ಕೆ ಚಂದ್ರೇಗೌಡರು ಹೇಳುತ್ತಾ ಸರ್ಕಾರದ ಹಣಕಾಸಿನ ಸ್ಥಿತಿ ಎಷ್ಟು ಗಂಭೀರವಾಗಿದೆಯೆಂದು ತಿಳಿಸಿದರು. ಇಂದು ಬೆಳಿಗ್ಗೆ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಒಂದು ಪ್ರಶ್ನೆಗೆ ಉತ್ತರಿಸುತ್ತಾ, 2000 ಇಸವಿಯೊಳಗಾಗಿ ಎಲ್ಲಾ ಸರ್ಕಾರಿ ಶಾಲೆಗಳ ಒಂದೊಂದು ಕ್ಲಾಸ್ ರೂಮು ಹಾಗೂ ಉಪಾಧ್ಯಾಯರುಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದು 1994ನೇ ಇಸವಿ, ಇನ್ನು ಬರುವ ಆರು ವರ್ಷದೊಳಗೆ ಈ ರೀತಿ ಮಾಡುತ್ತೇವೆಂದು ಹೇಳಿದ್ದಾರೆ. 'ಮೊನ್ನೆ ತಾನೇ ಅವರು ತಮ್ಮ ಇಲಾಖೆಯಿಂದ ಒಂದು ಸುತ್ತೋಲೆ ಹೊರಡಿಸಿದಾರೆ. ಏನೆಂದರೆ, ಕಪ್ಪು ಹಲಗೆ

ಯೋಜನೆಯಡಿಯಲ್ಲಿ ನಮ್ಮ ತಾಲ್ಲೂಕಿನಲ್ಲಿರುವ ಒಂದೊಂದು ಮಂಡಲ ಪಂಚಾಯತಿಗೂ 4-4 ಶಾಲೆಗಳನ್ನು ತೆಗೆದುಕೊಳ್ಳಿ ಎಂದು ಮೊದಲು ಒಪ್ಪಿ, ಈಗ ಏನು ಸುತ್ತೋಲೆ ಕಳುಹಿಸಿದ್ದಾರೆಂದರೆ, ನಾಲ್ಕು ಶಾಲೆಗಳನ್ನು ತೆರೆಯುವುದಕ್ಕೆ ಸರ್ಕಾರದಲ್ಲಿ ಹಣವಿಲ್ಲ, ಬರೀ ಎರಡು ಶಾಲೆಗಳನ್ನು ತೆಗೆದುಕೊಳ್ಳಿ ಎಂದಿದ್ದಾರೆ. ಹಾಗಾದರೆ, 2000 ಇಸವಿಯೊಳಗಾಗಿ ಕ್ಲಾಸ್ ರೂಮುಗಳನ್ನು ಕೊಡುವುದಕ್ಕೆ ಸಾಧ್ಯವೇ? 2000 ಇಸವಿ ಅಷ್ಟೊತ್ತಿಗೆ ಬೆಳೆಯುವಂಥ ಜನಸಂಖ್ಯೆ ಎಷ್ಟಿರುತ್ತದೆ? ಇದೆಲ್ಲಾ ಗಮನಿಸಿದಾಗ, ಇದು ಸುಮ್ಮನೆ ರಿಚ್ಯುಯಲ್ ಅಷ್ಟೆ. ಸಮಯ ವ್ಯಯವಾಗುತ್ತದಲ್ಲದೆ ಬೇರೇನೂ ಪ್ರಯೋಜನವಾಗುವುದಿಲ್ಲ. ಏನೋ ಮಾತನಾಡಬೇಕು, ಹೋಗಬೇಕು. ನಮ್ಮ ಹೊಟ್ಟೆ ಉರಿಗೆ ಮಾತನಾಡಬೇಕೇ ವಿನಹ ಇದರಿಂದ ಏನೂ ಅನುಕೂಲವಾಗುವುದಿಲ್ಲ. ನಾನು ಎರಡು ವಿಷಯಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ವರ್ಷದ ರಾಜ್ಯಪಾಲರ ಭಾಷಣದ ಪುಟ 2 ರಲ್ಲಿ ಒಂದು ಮಾತನ್ನು ಹೇಳುತ್ತಾರೆ.

"My Government took prompt action to provide immediate relief to the victims of the earthquake and heavy rains. The cash ex-gratia relief payable to the next of kin of the deceased was raised from Rs. 20,000 to Rs. 1.00 lakh; relief payable for fully collapsed houses was increased from Rs. 5,000 to Rs.10,000 and for partially collapsed houses, the maximum relief payable was Rs. 5,000."

1992 Governor's Address - page-2:

"During the last year, the State has experienced heavy rainfall and loss of property in floods in some parts and drought conditions in few other areas. My Government has taken action to provide relief to the flood victims and reconstruct damaged houses belonging to economically weaker sections of the society and has undertaken adequate relief works in the drought affected areas."

What a difference between these two years could be found out here.

ನನ್ನ ಒಂದು ತಾಲ್ಲೂಕಿನ ಬಗ್ಗೆ ಮಾತನಾಡಬೇಕಾದರೆ, 1991ರ ಅಕ್ಟೋಬರ್ -ನವೆಂಬರ್ ತಿಂಗಳಲ್ಲಿ ಹದಿಮೂರುವರೆ ಸಾವಿರ ಮನೆಗಳು ಬಿದ್ದುಹೋದವು. ಮಂತ್ರಿಗಳು ಬಂದು ನೋಡಿದರು, ಅಧಿಕಾರಿಗಳು, ಪತ್ರಿಕೆಯವರು ಬಂದು ನೋಡಿದರು. ಅವುಗಳಲ್ಲಿ ನಾಲ್ಕೂವರೆ ಸಾವಿರ ಮನೆಗಳು ಸಂಪೂರ್ಣವಾಗಿ ನಿರ್ನಾಮವಾದವು. 1992 ಮತ್ತು 1994ರ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರಲ್ಲಾ, ಇದರಿಂದ ನಮ್ಮ ತಾಲ್ಲೂಕಿಗೆ ಒಂದು ಚಿಕ್ಕಾಸಿನಷ್ಟೂ ಅನ್ವಯಿಸುವುದಿಲ್ಲ. ಮನೆಗಳು ನಿರ್ನಾಮವಾಗಿರುವುದಕ್ಕೆ 200 ರೂ., 300 ರೂ., 400 ರೂ. ಹೀಗೆ ಪರಿಹಾರ ಕೊಟ್ಟಿದ್ದಾರೆ. ಈ ವಿಷಯ ಬಂದಾಗ ಮಾತನಾಡುತ್ತೇನೆ. ಆದರೆ, ಮನೆಗಳು ಸಂಪೂರ್ಣವಾಗಿ ನಿರ್ನಾಮವಾಗಿರುವ ಕಡೆ ಮನೆಗಳನ್ನು ಕಟ್ಟಿಸಿಕೊಡಲಿಲ್ಲ.

5.50 ಪಿ.ಎಂ.

ಹತ್ತು ಸಾವಿರ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿದ್ದರು, ಅದನ್ನು ಕೂಡ ಕೊಡಲಿಲ್ಲ. ನಾನು ಸರ್ಕಾರಕ್ಕೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ, ದೊಡ್ಡ ಬಳ್ಳಾಪುರ ತಾಲ್ಲೂಕಿನಲ್ಲಿರುವ ಜನರು ಜನರೋ ಅಥವಾ ದನಗಳೋ ಎಂದು ಕೇಳುತ್ತಿದ್ದೇನೆ. ನಾನು ಆ ಕ್ಷೇತ್ರದ ಪ್ರತಿನಿಧಿಯಾಗಿದ್ದೇನಲ್ಲಾ, ನನಗೇನಾದರೂ ಮಾನ ಮರ್ಯಾದೆ ಇದೆಯೋ ಇಂಥ ಒಂದು ಸಭೆಗೆ ಬಂದು ನಾನು ಜನಗಳು ನೀವು ಹಣಿಗಾಗಿ

ನೋಡಿಕೊಳ್ಳುತ್ತಿಲ್ಲವೆಂದು ಹೇಳುವುದಕ್ಕೆ ನನಗೆ ನಾಚಿಕೆಯಾಗುತ್ತಿದೆ. ಅದರ ಬದಲು ರಾಜೀನಾಮೆಯನ್ನು ಕೊಟ್ಟು ಮನೆಗೆ ಹೋದರೆ ಒಳ್ಳೆಯದೆಂದು ನಾವು ಯೋಚನೆ ಮಾಡುತ್ತಿದ್ದೇನೆ. ಇದಕ್ಕೆ ಉತ್ತರ ತಮ್ಮಿಂದ ಬರಬೇಕು. ಯಾರಿಗೆ ಸಂಕಟವಿದೆಯೋ ಅವರಿಗೆ ಸಂಕಟ ಬರುತ್ತದೆ, ತಾವೆಲ್ಲರೂ ಮಜವಾಗಿದ್ದೀರಿ, ನಿಮಗೇನೂ ಯೋಚನೆ ಇಲ್ಲ. ಆದರೆ ಕಷ್ಟವನ್ನು ಅನುಭವಿಸುವವರು ನಾವು. ಆದರೆ ತಾವು ನಗುತ್ತಾ ಕುಳಿತಿದ್ದೀರಲ್ಲಾ?

ಶ್ರೀ ಕರಿಯಣ್ಣ : ತಾವು ಮಂತ್ರಿಗಳಾಗಿದ್ದವರು ತಮ್ಮ ಕ್ಷೇತ್ರವನ್ನೆಲ್ಲಾ ಬಹಳ ಚೆನ್ನಾಗಿ ಮಾಡಿಕೊಂಡಿದ್ದೀರೆಂಬುದು ನಮ್ಮ ಭಾವನೆ.

ಶ್ರೀ ಆರ್.ಎಲ್. ಜಾಲಪ್ಪ : ತಮ್ಮ ಸರ್ಕಾರದಲ್ಲಿ ಮೋಸ ಮಾಡಿದಂತೆ ನಾವು ಮಾಡಲು ಹೋಗಲಿಲ್ಲ. ನಾವೆಲ್ಲರನ್ನೂ ಸರಿಸಮಾನರಾಗಿ ನೋಡಿಕೊಂಡಿದ್ದೇವೆ. ಅದೇ ತಪ್ಪು ನಮಗೆ ಬಂದಿದ್ದು. ನನಗೆ ಇದಕ್ಕೊಂದಕ್ಕೆ ಉತ್ತರವನ್ನು ಮಂತ್ರಿಗಳಾದರೂ ಕೊಡಿ, ನೀವಾದರೂ ಕೊಡಿ; ಯಾರಾದರೂ ಕೊಡಿ. 13 ಸಾವಿರ ಮನೆಗಳು ಬಿದ್ದು ಹೋದವಲ್ಲಾ, ಒಂದು ಮನೆಯನ್ನಾದರೂ ತಾವು ಕಟ್ಟಿಸಿಕೊಟ್ಟಿದ್ದೀರಾ ಈ ತಾಲ್ಲೂಕಿನಲ್ಲಿ? ಆಶ್ರಯ ಯೋಜನೆಯಲ್ಲಿ 200 ಮನೆಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಅಂಬೇಡ್ಕರ್ ಯೋಜನೆಯಲ್ಲಿ 100 ಮನೆ. ಹಣ ಯಾವುದಕ್ಕೂ ಬಿಡುಗಡೆ ಆಗುತ್ತಿಲ್ಲ. ಈ ಹದಿಮೂರುವರೆ ಸಾವಿರ ಮನೆಗಳನ್ನು ಕಟ್ಟುವುದು ಯಾವಾಗ? ಏಕೆ ಈ ರೀತಿ ಸುಳ್ಳನ್ನು ಹೇಳುತ್ತೀರಿ? ಇದನ್ನು ರಾಜ್ಯಪಾಲರ ಬಾಯಲ್ಲಿ ಏತಕೆ ಹೇಳಿಸುತ್ತೀರಿ? ರಾಜ್ಯಪಾಲರು ಒಳ್ಳೆಯವರು. ಅವರು ಇನ್ನು ಮೇಲಾದರೂ ಭಾಷಣವನ್ನು ಇಲ್ಲಿ ಬಂದು ಓದುವುದಕ್ಕೆ ಮೊದಲು ಹೋದ ವರ್ಷ ನಾನು ಓದಿದ್ದ ಭಾಷಣದ ಪ್ರಕಾರ ತಾವು 'ಏನೇನು ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ ಎಂಬುದನ್ನು ನನಗೆ ತೋರಿಸಿ ಅನಂತರ ನಾನು ತಾವು ಬರೆದು ಕೊಟ್ಟಿರುವುದನ್ನು ಬೇಕಾದರೆ ಓದುತ್ತೇನೆಂದು ಹೇಳಬೇಕೇ ವಿನಹ ಈ ರೀತಿ ಅವರ ಕೈಯಲ್ಲಿ ಸುಮ್ಮನೆ ಹೇಳಿಸಬೇಡಿ ಎಂದು ಹೇಳಿ ಅವರ ಸ್ಥಾನಕ್ಕೆ ಕೆಟ್ಟ ಅಭಿಪ್ರಾಯ, ಅಗೌರವವನ್ನು ತರಬೇಡಿ ಎಂದು ಹೇಳುವುದರ ಜೊತೆಗೆ, ಮಂತ್ರಿಗಳು ಉತ್ತರವನ್ನು ಕೊಡುವಾಗ 'ಈ ಹದಿಮೂರುವರೆ ಸಾವಿರ ಮನೆಗಳನ್ನು ನೀವು ಕಟ್ಟಲು ಏಕೆ ಕಾರ್ಯಕ್ರಮವನ್ನು ಕೈಗೊಳ್ಳಲಿಲ್ಲ ಎಂಬ ಬಗ್ಗೆ ಹೇಳಬೇಕು. ಈಗಾಗಲೇ 27 ತಿಂಗಳಾಗಿದೆ. ಅಕ್ಟೋಬರ್, ನವೆಂಬರ್ ತಿಂಗಳಿನಲ್ಲಿ ಈ ಮನೆಗಳು ಬಿದ್ದು ಹೋಗಿದೆ. ಪರಿಹಾರವನ್ನು ಕೊಟ್ಟಿದ್ದಾರೆ. 95 ಲಕ್ಷದ 65 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಂದರೆ ಒಂದು ಮನೆಗೆ ಸರಾಸರಿ 700 ರೂಪಾಯಿಯಾಗುತ್ತದೆ. ಬಿದ್ದಿರುವ ಮಣ್ಣು ಅದನ್ನೂ ಸಹ ಈ 700 ರೂಪಾಯಿಗಳಲ್ಲಿ ಸಾಗಿಸಲು ಆಗುವುದಿಲ್ಲ. ಈ ವಿಷಯವನ್ನು ಎರಡುಸಲ ವಿಧಾನಸಭೆಯಲ್ಲಿ ಮಾತನಾಡಿದರೂ ಸಹ ಬರೀ ಸುಳ್ಳನ್ನು ಹೇಳಿಕೊಂಡೇ ಕಾಲವನ್ನು ತಳ್ಳುತ್ತಾ ಬಂದಿರಿ. ಒಂದು ಸಾರಿ ಮನೆಯನ್ನು ಕಟ್ಟಿಸಿಕೊಡುತ್ತೇನೆಂದು ಹೇಳಿದಿರಿ. ಕಳೆದ ವರ್ಷ ಮಾನ್ಯಮುಖ್ಯಮಂತ್ರಿಗಳು, 7 ನೇ ತಾರೀಖಿನ ದಿವಸ ಶಾಸಕರ ಸಭೆಯನ್ನು ಕರೆದಾಗಿ ಈ ವಿಷಯವನ್ನು ಅವರ ಗಮನಕ್ಕೆ ತಂದೆ. ಆವತ್ತು ನಾನು ಇದರ ಬಗ್ಗೆ ಏನು ಮಾಡುತ್ತಿದ್ದೀರೆಂದು ಕೇಳಿದೆ; ಅವರು ಅವತ್ತು ಇಲ್ಲ, ಏನಾದರೂ ಮಾಡಿ 10ಸಾವಿರ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಲು ಆಗುತ್ತದೆಯೋ ಎಂಬುದನ್ನು ಡೆಪ್ಯೂಟಿ ಕಮಿಷನರ್‌ರವರೇ ನೋಡಿ ಎಂದು ಹೇಳಿದರು. ಡೆಪ್ಯೂಟಿ ಕಮಿಷನರ್‌ರವರು ಅದನ್ನು ನೋಡುತ್ತೇನೆಂದು ಹೇಳಿದರು. ಅವರು ಅದನ್ನು ನೋಡಲೂ ಇಲ್ಲ, ಇವರು ಅದನ್ನು ಪರ್ಸ್ಯೂ ಮಾಡಲೂ ಇಲ್ಲ. ಇದರ ಬಗ್ಗೆ ತಾವು ತಮ್ಮ ಉತ್ತರದಲ್ಲಿ ಹೇಳಬೇಕೆಂದು ಒತ್ತಾಯ ಮಾಡುತ್ತೇನೆ. ಲಕ್ಷಾಂತರ, ಕೋಟ್ಯಾಂತರ ರೂಪಾಯಿಯ ಬೆಳೆ ಹಾಳಾಗಿ ಹೋಯಿತು. ಒಬ್ಬರಿಗೂ ಒಂದು ಬಿಡಿ ಗಾಸನ್ನು ಪರಿಹಾರವಾಗಿ ಕೊಡಲಿಲ್ಲ. ಅನಂತರ ಪೇಜ್ ನಂಬರ 4 ರಲ್ಲಿ - development of energy ಗೆ ಪ್ರಯಾರಿಟಿಯನ್ನು ಕೊಡುತ್ತೇವೆಂದು ಹೇಳಿದಿರಿ. ಇದನ್ನು ತಾವು ಮೊದಲಿನಿಂದಲೂ ಹೇಳಿಕೊಂಡೇ ಬಂದಿದ್ದೀರಿ. ಈಗ

ಏನು ಆಗಿದೆ ಎಂದರೆ, ಈಗಾಗಲೇ ಜನವರಿ ತಿಂಗಳಿನಿಂದಲೇ ಪವರ್‌ ಶಾರ್ಟೇಜ್ ಪ್ರಾರಂಭವಾಯಿತು. ರೇಡಿಯೋ ಮತ್ತು ಟಿ.ವಿ.ಗಳಲ್ಲಿ ಬೆಳಿಗ್ಗೆ 6 ರಿಂದ 9 ಗಂಟೆಯವರೆಗೆ ಮತ್ತು ಸಂಜೆ 6 ರಿಂದ 9 ಗಂಟೆಯವರೆಗೆ ರೈತರು ಪಂಪುಸೆಂಟ್‌ನ್ನು ಉಪಯೋಗ ಮಾಡಬಾರದೆಂದು ಪ್ರಚಾರ ಮಾಡಿದ್ದಿರಿ. ಈಗಲೇ ಜನವರಿ, ಫೆಬ್ರವರಿಯಲ್ಲಿ ಇದು ಪ್ರಾರಂಭವಾದರೆ ಮುಂದೆ ನಮ್ಮ ಗತಿ ಏನು? ರೈತರು ಇದರಿಂದ ಬದುಕುವ ಸ್ಥಿತಿ ಇದೆಯೋ ಏನೋ ಎಂದು ನನಗೆ ಅರ್ಥವಾಗಲಿಲ್ಲ. ಅದರಲ್ಲಿ ಖಾಸಗಿಯವರಿಗೆ ವಿದ್ಯುತ್ ಉತ್ಪಾದನೆ ಮಾಡುವುದನ್ನು ವಹಿಸಿಕೊಡುತ್ತೇವೆಂದು ಹೇಳಿದ್ದೀರಿ. ಆ ರೀತಿ ಎಷ್ಟು ಜನರಿಗೆ ವಹಿಸಿಕೊಟ್ಟಿದ್ದೀರಿ? ಎಷ್ಟು ಜನರು ವಿದ್ಯುತ್ ಉತ್ಪಾದನೆಯನ್ನು ಮಾಡಲು ಮುಂದೆ ಬಂದಿದ್ದಾರೆ? ಎಷ್ಟು ಮೆಗವ್ಯಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡಿ ಸಪ್ಲೆ ಮಾಡಿಕೊಡುತ್ತಾರೆ ಎಂಬುದನ್ನು ದಯವಿಟ್ಟು ತಿಳಿಸಬೇಕು. ಇದರ ಜೊತೆಗೆ ಗಂಗಾ ಕಲ್ಯಾಣ ಕಾರ್ಯಕ್ರಮವಿಲ್ಲ, ಒಂದೊಂದು ತಾಲ್ಲೂಕಿಗೆ ಒಂದೆರಡೂ ಸಹ ಸಿಗಲಿಲ್ಲ. 2-3 ವರ್ಷದಿಂದ ಗಂಗಾಕಲ್ಯಾಣ ಇಲ್ಲ. ಎಸ್.ಸಿ.ಪಿ.ಯ ಅಡಿಯಲ್ಲಿ ಪರಿಶಿಷ್ಟವರ್ಗದವರಿಗೆ ಬೋರ್‌ವೆಲ್ ಹಾಕಿ ಪಂಪ್ಸೆಟ್ಟನ್ನು ಹಾಕಿಕೊಡುತ್ತಿದ್ದೀರಿ, ಅದರ ಯೋಜನೆಯೂ ಇಲ್ಲ.

ಹೀಗಾಗಿ ಇವತ್ತು ವ್ಯವಸಾಯವೂ ಕುಂಠಿತವಾಗುತ್ತಿವೆ. ರೈತನೂ ಸಹ ಬಹಳ ಕಷ್ಟಪರಿಸ್ಥಿತಿಯಲ್ಲಿದ್ದಾನೆ ಮತ್ತು ರಾಜ್ಯದ ಉತ್ಪಾದನಾ ಶಕ್ತಿ ಇವತ್ತಿನ ದಿವಸ ಕುಗ್ಗುತ್ತಿದೆ. ರಾಜ್ಯದ ರೈತ ಮುಂದೆ ಹೋಗುವ ಬದಲು ಇವತ್ತು ತಿರುಗಿ 10 ವರ್ಷ 20 ವರ್ಷ ಹಿಂದಕ್ಕೆ ಹೋಗುವ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ಏನಾದರೂ ಸ್ವಲ್ಪ ಮಾಡಿ, ಬರೀ ಸುಳ್ಳು ಹೇಳುವುದರಿಂದ ನಾವು ಈ ರಾಜ್ಯ ಕಟ್ಟಬಹುದಾಗಿದ್ದರೆ ಎಷ್ಟು ಬೇಕಾದರೂ ಸುಳ್ಳು ಹೇಳಿ ಕಟ್ಟಬಹುದಾಗಿತ್ತು. ಸುಳ್ಳಿನಿಂದ ರಾಜ್ಯವನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಇದರ ಕಡೆ ಹೆಚ್ಚಿನ ಗಮನ ಕೊಡಬೇಕು ಎಂದು ಒತ್ತಾಯ ಮಾಡುತ್ತೇನೆ. ಇನ್ನೊಂದು ಕಡೆ ಲಾ ಅಂಡ್ ಆರ್ಡರ್ ಬಹಳ ಚೆನ್ನಾಗಿದೆ ಎಂದು ಹೇಳಿದ್ದಾರೆ. ಬಹುಶಃ ಪ್ರೆಸ್ ಸೆಕ್ರೆಟರಿಗಳು ಮುಖ್ಯಮಂತ್ರಿಗಳಿಗೆ ವರದಿ ಕೊಟ್ಟಿದ್ದಾರೋ ಏನೋ ಗೊತ್ತಿಲ್ಲ, ಸ್ವಾಮಿ, ಈಗಾಗಿರುವಷ್ಟು ಡಕಾಯಿತಿಗಳು ಮತ್ತು ರೇಪ್ ಪ್ರಕರಣಗಳು ಯಾವತ್ತು ಆಗಿರಲಿಲ್ಲ. ಆಕ್ಸಿಡೆಂಟ್ಸ್‌ಗಳು, ನೋಡಿ ತಾವು ನಾಲ್ಕು ವರ್ಷದ ಇತಿಹಾಸವನ್ನು ತರಿಸಿ ನೋಡಿ, ಇದು ಅವರಿಗೆ ಪರಿಸ್ಥಿತಿ ಅರಿವಿಲ್ಲದೆ ಸುಮ್ಮನೆ ಸುಳ್ಳು ಹೇಳಿಸುವುದು ಬೇಡ. ಹೋದ ವರ್ಷವೂ ಸಹ ಮಹಿಳೆಯರ ರಕ್ಷಣೆ ಮಾಡುತ್ತೇವೆ ಎಂದು ಹೇಳಿದ್ದೀರಿ; ಮಹಿಳೆಯರದ್ದೇ ಒಂದು ಪೋಲಿಸ್ ಸ್ಟೇಷನ್ ಮಾಡುತ್ತೇವೆ ಎಂದು ಸಹ ಹೇಳಿದ್ದೀರಿ. ಈ ವರ್ಷವೂ ಅದನ್ನೇ ಹೇಳಿದ್ದೀರಿ. ವರ್ಷ ವರ್ಷ ಅವನ್ನು ಹೇಳುವುದರ ಬದಲು 5 ವರ್ಷಕ್ಕೆ ಇದು ಆಗುತ್ತದೆ ಎಂದು ಹೇಳಿದರೆ ನಾವು ಒಂದೇ ಸಾರಿ ಮಾತನಾಡಿಬಿಟ್ಟು ಹೋಗಬಹುದು. ಇದರ ಬಗ್ಗೆ ತಾವು ವಿಚಾರ ಮಾಡಬೇಕು. ಇನ್ನು ಮೈನಾರಿಟೀಸ್ಗೆ ನಾವು ಬಹಳಷ್ಟು ಮಾಡಿದ್ದೇವೆ ಎಂದು ತಾವು ಈ ಸಾರಿ ಹೇಳಿದ್ದೀರಿ. ತಾವು ಹೋದ ಸಲವೂ ಹೇಳಿದ್ದೀರಿ ಬಹುಶಃ ಈ ಬಾಬರಿ ಮಸೀದಿ ನಿರ್ನಾಮ ಆದ ನಂತರ ಅವರ ವಿಶ್ವಾಸಗಳಿಸುವುದಕ್ಕೆ ತಾವು ಬಹಳಷ್ಟು ಈ ಸ್ಕೀಂಗಳನ್ನು ಹಮ್ಮಿಕೊಂಡು ಮಾಡುತ್ತೇವೆ ಎಂದು ಹೇಳಿದ್ದೀರಿ. ಇದರಲ್ಲಿ ಕಾಲುಭಾಗವಾದರೂ ಮಾಡುವಂಥ ಶಕ್ತಿ ಸರ್ಕಾರಕ್ಕೆ ಇದೆಯೇ? ನಿಮ್ಮ ಬಡ್ಜೆಟ್ ಬರಲಿ ಏನು ಬರುತ್ತದೆಯೋ ನೋಡೋಣ. ಬಡ್ಜೆಟ್ ಏನೋ ಬರುತ್ತದೆ; ಚಂದ್ರೇಗೌಡರು ಹೇಳಿದರಲ್ಲಾ 67 ಪರ್ಸೆಂಟ್ ಮಾತ್ರ ಖರ್ಚು ಮಾಡಿ ಇನ್ನು 33 ಪರ್ಸೆಂಟ್ ಖರ್ಚು ಮಾಡಬೇಡಿ ಎಂದು ಹೇಳಿ. ಬಡ್ಜೆಟ್ಟಿನಲ್ಲಿ ಏನು ಬೇಕಾದರೂ ಬರೆಯಬಹುದು. ಆಕ್ಚುಲ್ಲಾಗಿ ಹಣ ಬಿಡುಗಡೆ ಮಾಡಿ ಖರ್ಚಾದರೆ ತಾನೇ; ಆ ಹಣ ಬಿಡುಗಡೆ ಮಾಡಿದ ಶಕ್ತಿ ತಮ್ಮಲ್ಲಿ ಈಗ ಉಳಿದಿಲ್ಲ, ಆಮೇಲೆ

ಹೋದವರ್ಷ ಬಡ್ಜೆಟ್ಭಾಷಣದಲ್ಲಿ ಉತ್ತರ ಕೊಡುವಾಗ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದರು. ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಜೂನ್ ತಿಂಗಳೊಳಗೆ ನಾವು ಜಾರಿಗೆ ಕೊಡುತ್ತೇವೆ ಎಂದು ಇಲ್ಲಿ ಹೇಳಿದರು. ಅದಾದ ಎರಡು ದಿವಸದ ನಂತರ ನಿಮ್ಮ ಶಾಸಕರ ಲೆಜಿಸ್ಲೆಚರ್ ಕಮಿಟಿಯೊಳಗೆ ನಾವು ಜಾರಿಗೆ ಕೊಡುತ್ತೇವೆ ಎಂದು ಇಲ್ಲಿ ಹೇಳಿದರು. ಆದಾದ ಎರಡು ದಿವಸದ ನಂತರ ನಿಮ್ಮ ಶಾಸಕರ ಲೆಜಿಸ್ಲೆಚರ್ ಕಮಿಟಿಯೊಳಗೆ ಮಾತನಾಡುವಾಗ ಜೂನ್ ಒಳಗೆ ಇದನ್ನು ನಾನು ಕನ್ಸಿಡರ್ ಮಾಡುತ್ತೇನೆ ಎಂದು ಹೇಳಿದ್ದೇನೆ; ಜಾರಿಗೆ ತರುತ್ತೇನೆ ಎಂದು ಹೇಳಲಿಲ್ಲ ಎಂದು ಹೇಳಿದರು.

ನಾನು ಮೋಷನ್ ಮೂವ್ ಮಾಡಿದೆ. ಪ್ರಿವಿಲೇಜ್ ಮೋಷನ್ ಹಾಕಿ ನಾನು ಕೇಳಿದೆ ಇದೇನು ಈ ಸದನಕ್ಕೆ ಮೋಸ ಮಾಡುತ್ತಿದ್ದೀರಾ ಅಥವಾ ನಿಮ್ಮ ಸಿಎಲ್ಪಿಗೆ ಮೋಸ ಮಾಡುತ್ತಿದ್ದೀರಾ ಎಂದು ಕೇಳಿದಾಗ ಘಂಟಾಘೋಷವಾಗಿ ಅವರು ಹೇಳಿದರು ಇಲ್ಲ ನಾನು ಸದನದಲ್ಲಿ ಏನು ಮಾತು ಕೊಟ್ಟಿದ್ದೇನೆ ಇದನ್ನು ಜಾರಿಗೆ ಕೊಡುತ್ತೇನೆ ಕಳೆದ ವರ್ಷದ ಜೂನ್ ಒಳಗಾಗಿ ಎಂದು ಅದಕ್ಕೆ ನಾನು ಬದ್ಧನಾಗಿದ್ದೇವೆ; ಇದನ್ನು ಜಾರಿಗೆ ಕೊಡುತ್ತೇನೆ ಎಂದು ಹೇಳಿದರು. ಎಲ್ಲಿ ಹೋಯಿತು ಸ್ವಾಮಿ ಅದು? ಜೂನ್ ಹೋಯಿತು ಇನ್ನೊಂದು ಜೂನ್ ಬರುತ್ತಿದೆ ಮತ್ತೆ ಡಿಸೆಂಬರ್ ಒಳಗಾಗಿ ಕೊಡುತ್ತೇವೆ ಎಂದು ಹೇಳಿದ್ದಾರೆ; ಈ ಡಿಸೆಂಬರ್ಗೆ ಅವರು ಇರುವುದೂ ಇಲ್ಲ; ಆ ವಿಷಯ ಬೇರೆ. ಆದರೆ ನಿಮಗೆ ಕಮಿಟ್ಮೆಂಟ್ ಇಲ್ಲ. ನೀವು ಮಾಡಬೇಕೆನ್ನುವ ಯೋಜನೆ ಇಲ್ಲ. ಸುಮ್ಮನೆ ಏನೋ ಹೇಳಿಕೊಂಡು ಕಾಲ ಕಳೆದುಕೊಂಡು ಹೋಗೋಣ ಎಂದು ಇದ್ದೀರಿಯೇ ವಿನಹ ನಿಮಗೆ ಏನೆ ಆಗಲಿ ಇದನ್ನು ಸಾಧಿಸಬೇಕು ಎಂಬ ಛಲ ಇಲ್ಲ, ಕಮಿಟ್ಮೆಂಟೂ ಇಲ್ಲ ಹಾಗೂ ನಿಮಗೆ ಆ ಧೈರ್ಯವೂ ಇಲ್ಲ ಆದ್ದರಿಂದ ಇದನ್ನು ಸುಮ್ಮಸುಮ್ಮನೆ ಅವರ ಕೈಯಲ್ಲಿ ಹೇಳಿಸುವುದರಿಂದ ಪ್ರಯೋಜನ ಇಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇನ್ನು ಕಡೆಯದಾಗಿ ಒಂದೇ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ.

ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ಸ್ ಸಾವಿರ ಹಾಸಿಗೆಯದ್ದು ಎರಡು ಕಡೆ ಮಾಡುತ್ತೇವೆ ಎಂದು ಹೇಳಿದ್ದೀರಿ. ನಿಮ್ಮದು ನಿಜವಾಗಲೂ ಸುಪರ್ ಸ್ಪೆಷಾಲಿಟಿಲ್ಲೇ. ಅಲ್ಲ ಸ್ವಾಮಿ, ಇರೋ ಹಾಸ್ಪಿಟಲ್ಗೆ ಸುಣ್ಣ ಬಣ್ಣ ಬಳೆಯುವುದಕ್ಕೆ ನಿಮಗೆ ಯೋಗ್ಯತೆ ಇಲ್ಲ. ಆಸ್ಪತ್ರೆಯಲ್ಲಿ ಇರುವ ಡಾಕ್ಟರ್ಗಳನ್ನು ಆ ಊರುಗಳಲ್ಲಿ ನಿಲ್ಲಿಸುವುದಕ್ಕೆ ಆಗಲಿಲ್ಲ. ಆಸ್ಪತ್ರೆಗಳಲ್ಲಿ ಡಾಕ್ಟರ್ ಗತಿ ಇಲ್ಲ. ಲಿನೆನ್ ಸಪ್ಲೈ ಮಾಡುವುದಕ್ಕೆ ಆಗುತ್ತಿಲ್ಲ; ಔಷಧಿಗಳು ಇಲ್ಲ. ಆ ಹಾಸಿಗೆಗಳಲ್ಲಿ ಮಲಗಿಕೊಂಡು ಬಿಟ್ಟರೆ ಇಲ್ಲದಿದ್ದ ಖಾಯಿಲೆಗಳು ಅವನಿಗೆ ಬರುತ್ತದೆ; ಅವನ ಹತ್ತಿರ ಇರುವ ಖಾಯಿಲೆ ಹೋಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಮೊನ್ನೆ ಮೊನ್ನೆ 800 ಡಾಕ್ಟರುಗಳನ್ನು ನೇಮಕ ಮಾಡಿಕೊಂಡು ಮಾಡಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ಆಯಿತು 800 ಡಾಕ್ಟರ್ಗಳನ್ನು ನೇಮಕ ಮಾಡಿಕೊಂಡಿದ್ದೀರಿ. ಬಹಳ ವಂದನೆಗಳು. ಎಲ್ಲೆಲ್ಲಿಗೆ ತಾವು ನೇಮಕ ಮಾಡಿದ್ದೀರಿ ಅಲ್ಲಿ ಅವರು ಇರುವ ಹಾಗೆ ಮಾಡುವುದಕ್ಕೆ ತಾವು ಏನಾದರೂ ಯೋಚನೆ ಮಾಡಿ. ಒಂದೊಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಎಲ್ಲಾ ಸ್ಪೆಷಾಲಿಟಿ ಪ್ರೊವೈಡ್ ಮಾಡಬೇಕಾದರೆ ಕೋನೇಪಕ್ಷ 80 ರಿಂದ 100 ಎಕರೆ ಜಮೀನು ಬೇಕು. ಕಡೆ ಪಕ್ಷ ಎಷ್ಟೇ ಕಡಿಮೆ ಎಂದರೂ 80ಕೋಟಿ ಆದರೂ ಬೇಕು. ಈಗ 2Ë3 ಉದಾಹರಣೆಗಳನ್ನು ನಾನು ಕೊಡುತ್ತೇನೆ ಈ ಜಯದೇವ ಕಾರ್ಡಿಯಾಲಜಿ ಆಸ್ಪತ್ರೆ ಇದೆ. ಅಲ್ಲಿ ಒಳ್ಳೆಯ ಡಾಕ್ಟರುಗಳು ಇದ್ದಾರೆ. ಬಹಳ ಚೆನ್ನಾಗಿ ನೋಡುತ್ತಾರೆ. ರೈಲ್ವೆ ಸ್ಟೇಷನ್ ಪ್ಲಾಟ್ಫಾರಂ ಇದ್ದಂತೆ ಇದೆ ಅಲ್ಲಿ; ಅಲ್ಲಿ ಅಷ್ಟೊಂದು ರಷ್ ಇರುತ್ತದೆ. ಇದನ್ನು ನಾವು ಬೇರೆ ಕಡೆ ಶಿಫ್ಟ್ ಮಾಡುತ್ತೇವೆ ಎಂದು ಹೇಳಿ ಬನ್ನೇರುಘಟ್ಟ ರಸ್ತೆಯಲ್ಲಿ ಒಂದು

ಫೌಂಡೇಷನ್ ಹಾಕಿಸಿದರು. ಅದು 30 ಅಥವಾ 29 ಕೋಟಿಗೋ ಒಂದು ಎಸ್ಟಿಮೇಟ್. ಈಗ ಅದನ್ನು ವಾಪಸ್ಸು ಕಳುಹಿಸಿದ್ದಾರೆ, 28 ಕೋಟಿ ಕೊಡುವುದಕ್ಕೆ ಆಗುವುದಿಲ್ಲ, 13,14 ಕೋಟಿಗೆ ಅದನ್ನು ಕಳಿಸಿ ಎಂದು. ಈ ಕಾಲದಲ್ಲಿ ಹೇಗೆ ಅದನ್ನು ಇಳಿಸುವುದು? ವರ್ಷ ವರ್ಷ ಎಸ್ಕಲೇಷನ್ ಆಗುತ್ತದೆ. ಅದನ್ನು ಇಳಿಸುವುದು ಹೇಗೆ, ಅದನ್ನು ಇಳಿಸುವುದಕ್ಕೆ ಸಾಧ್ಯವೇ? ಆ ಪ್ಲಾನ್ ಕೂಡ ಇನ್ನೂ ಸರಿಯಾಗಿ ಅಪ್ರೂವ್ ಆಗಿಲ್ಲ. ಎರಡನೆಯದಾಗಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮಾನ್ಯ ದೇವರಾಜ್ ಅರಸ್ ಅವರ ಕಾಲದಲ್ಲಿ ಒಂದು ಮಾಸ್ಟರ್ ಪ್ಲಾನ್ ಮಾಡಿದರು. ಫೌಂಡೇಷನ್ ಹಾಕಿದರು. ಸ್ವಾಮಿ, ಇವತ್ತಿನವರೆಗೂ ಅದು ಕಂಪ್ಲೀಟ್ ಆಗಿಲ್ಲ. 50 ಭಾಗ ಮಾತ್ರ ಕೆಲಸವಾಗಿದೆ. ಈಗ ವಿಕ್ಟೋರೀಯಾ ಆಸ್ಪತ್ರೆಯಲ್ಲಿ ಉಳಿದಿರುವಂತಹ ಕೆಲಸ ನೀವು ಯಾವತ್ತು ಮಾಡಿಸುತ್ತೀರಿ? ಮತ್ತು ಇನ್ಫ್ರಂಸಕ್ಚರ್ ಯಾವತ್ತು ಇದಕ್ಕೆ ಪ್ರೊವೈಡ್ ಮಾಡುತ್ತೀರಿ? ಮ್ಯಾನ್ ಪವರ್ ಯಾವಾಗ ಪ್ರೊವೈಡ್ ಮಾಡುತ್ತೀರಿ? ಇದನ್ನೆಲ್ಲಾ ನೀವು ಮೊದಲು ಮಾಡುವುದನ್ನು ಬಿಟ್ಟು ನಾವು ಸೂಪರ್ ಸ್ಪೆಷಲ್ ಆಸ್ಪತ್ರೆ ಮಾಡುತ್ತೇವೆ ಎಂದು ಹೇಳುತ್ತೀರಲ್ಲಾ ಎಷ್ಟು ವರ್ಷ ಇರಬೇಕು ಎಂದು ಮಾಡಿದ್ದೀರಿ ಸ್ವಾಮಿ ನೀವು? ಸಧ್ಯಕ್ಕೆ ಒಂದು ಇಪ್ಪತ್ತು ವರ್ಷ ಹೀಗೆ ಖಾಯಂ ಆಗಿ ಇರುತ್ತೀರಾ ನೀವು? ಇದು ಒಂದು ವರ್ಷದ ಯೋಜನೆ ಅಲ್ಲ. ನಮ್ಮ ರಾಜ್ಯಪಾಲರು ಹೇಳಿರುವುದು ಒಂದು ವರ್ಷದ್ದು ಅಲ್ಲ, 20 ವರ್ಷ ಇದ್ದರೆ ಏನಾದರೂ ಅಲ್ಪ ಸ್ವಲ್ಪ ಆಗಬಹುದು ಬೋರಿಂಗ್ ಹಾಸ್ಪಿಟಲ್ ಇದೆಯಲ್ಲಾ, ಈ ಓಟಿಬ್ಲಾಕ್ ಶುರು ಮಾಡಿ 8 ವರ್ಷವಾಯಿತು. ಇನ್ನೂ ಕಂಪ್ಲೀಟ್ ಆಗಲಿಲ್ಲ. ಮೈಸೂರಿನಲ್ಲಿ ಒಂದು ಕೆಆರ್ ಆಸ್ಪತ್ರೆ ಇದೆಯಲ್ಲಾ. ಈ ಆಸ್ಪತ್ರೆಯ ರೆಕ್ಟಿಫಿಕೇಷನ್ ಪ್ಲಾನ್ ಎಂದು ಏನು ಮಾಡಿದರು, ಅದು 10 ವರ್ಷದಿಂದ ಮುಗಿದಿಲ್ಲ ಸ್ವಾಮಿ. ಅದು ಯಾವತ್ತು ಬಿದ್ದು ಹೋಗುತ್ತದೆಯೋ, ಯಾವತ್ತು ಏನು ಆಗುತ್ತದೆಯೋ ಗೊತ್ತಿಲ್ಲ. ಅದಕ್ಕೆ ಏನೇನೋ ರಿಪೇರಿ ಮಾಡುತ್ತಿದ್ದರು, ಅದು ಇನ್ನೂ ಆಗಲಿಲ್ಲ, ಇದರ ಕಡೆ ಸ್ವಲ್ಪ .....

ಶ್ರೀ ಕೆ.ಹೆಚ್. ರಂಗನಾಥ್ : ನೀವು ದೊಡ್ಡ ಬಳ್ಳಾಪುರ ಬಿಟ್ಟು ಏತಕ್ಕೆ ಮುಂದಿನ ಊರಿಗೆ ಹೋಗುವುದಿಲ್ಲ ನೀವು? ಮೈಸೂರಿಗೆ ಈ ಕಡೆ, ಆ ಕಡೆ ಏತಕ್ಕೆ ಹೋಗುವುದಿಲ್ಲ? ಇಲ್ಲಿಂದ ದೊಡ್ಡ ಬಳ್ಳಾಪುರ, ದೊಡ್ಡ ಬಳ್ಳಾಪುರದಿಂದ ಇಲ್ಲಿಗೆ, ಇಲ್ಲೇ ಓಡಾಡುತ್ತೀರಲ್ಲಾ ನೀವು. ಏಕೆ ನೀವು ಮೈಸೂರಿಗೆ ಹೋಗಿ ಬರಬಾರದು? ನಾಳೆ ಯುಗಾದಿಗೆ ಓಪನ್ ಆಗುತ್ತದೆ ಸ್ವಾಮಿ ಆ ಕಟ್ಟಡ. ತಾವು ಹೋಗಿ ನೋಡಿದರೆ ಸಂತೋಷ ಪಡುತ್ತೀರಿ ಈಗ. ನೀವೇ ಅದನ್ನು ಮಾಡಿ ಇಟ್ಟು, ನಾವು ಅದನ್ನು ಸರಿ ಪಡಿಸಿದರೆ ಅದಕ್ಕೂ ಮನ್ನಿಸುವುದಿಲ್ಲವೇ ನೀವು?

ಆರ್.ಎಲ್. ಜಾಲಪ್ಪ : ನಾವು ಮಾಡಿದ್ದು ಅಲ್ಲ ಸ್ವಾಮಿ ಅದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅದು ಯಾವಾಗ ಆಗಿದ್ದು 1980 ರಲ್ಲಿ.

ಶ್ರೀ ಕೆ.ಹೆಚ್. ರಂಗನಾಥ್ : ನಾವು ಹೇಳುವುದು ನೀವು ಡಿಫೆಕ್ಟ್ ಮಾಡಿದಿರಿ ಎಂದು ಅಲ್ಲ. ಕಂಬ ಗಿಂಬ ಎಲ್ಲಾ ಸೊಟ್ಟಗೆ ಆಗಿತ್ತು ಆ ಕಾಲದಲ್ಲೇ. ಅದನ್ನೆಲ್ಲಾ ನೋಡಿ ನೀವು ಸುಮನಿದ್ದಿರಿ. ಈಗ ಹೊಸ ವರ್ಷ ಬರುತ್ತದೆಯಲ್ಲಾ, ಯುಗಾದಿಗೆ ಅದು ಸರಿಹೋಗುತ್ತದೆ. ಈ ಇಂಗ್ಲೀಷ್ ಸಂವತ್ಸರ ಅಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕಂಬ ಬಂದೋಬಸ್ತು ಆಗುವ ಹಾಗೆ ಮಾಡಿದ್ದುದು ನೀವೇ ಅಲ್ಲಿ.

ಶ್ರೀ ಆರ್.ಎಲ್. ಜಾಲಪ್ಪ : ನಂತರ ಈ ಆಸ್ಪತ್ರೆಗಳ ಸುತ್ತಮುತ್ತ ಯಾರಾದರೂ ಓಡಾಡಿದ್ದೀರೋ ಏನೋ ಗೊತ್ತಿಲ್ಲ. ಉಪಯೋಗಿಸಿರುವ ಬ್ಯಾಂಡೇಜ್ ಬಟ್ಟೆ, ಸಿರೇಂಜ್ ಎಲ್ಲಾ ಸುತ್ತಮುತ್ತ ಬಿದ್ದಿದೆ. ಇನ್ಸಿನೇಟರ್‌ಗಳನ್ನು ಉಪಯೋಗಿಸುವುದಕ್ಕೆ ಏನು ಕಷ್ಟ? ಇದನ್ನೆಲ್ಲಾ ತಾವು ದಯವಿಟ್ಟು ನೋಡಬೇಕು. ಇದೆಲ್ಲಾ ಬಹಳ ಸಿಂಪಲ್ ಥಿಂಗ್ಸ್. ಇನ್ನು ಅಂಬ್ಯುಲೆನ್ಸ್ ಇದೆಯಲ್ಲಾ ಅದರಲ್ಲಿ ಎಷ್ಟು ಅಂಬ್ಯುಲೆನ್ಸ್ ಓಡುತ್ತಿವೆ. ಇವತ್ತು

ನೀವು ಡ್ರೈವರ್‌ಗೆ ಸಂಬಳ ಕೊಡುತ್ತಿದ್ದೀರಿ. ಇದರಿಂದ ಏನು ಪ್ರಯೋಜನವಾಗುತ್ತಿದೆ? ಇದನ್ನೆಲ್ಲಾ ತಾವು ದಯವಿಟ್ಟು ನೋಡಿ. ಇನ್ನು ಈ ಫ್ಲೂಯಿಡ್ ಬ್ಯಾಂಕ್ ಬಗ್ಗೆ ಹೇಳುವುದಾದರೆ ನೀವೇ ಈ ಗ್ಲೂಕೋಸ್‌ನ್ನೆಲ್ಲಾ ಮಾಡಿಕೊಂಡರೆ ಒಂದೊಂದಕ್ಕೆ ನಾಲ್ಕೂವರೆ 5 ರೂಪಾಯಿಗೆ ಒಂದೊಂದು ಬಾಟಲ್ ಬೀಳುತ್ತದೆ. ಶೇಕಡ 80 ಭಾಗ ಇವತ್ತು ಕೆಲಸ ಮಾಡುತ್ತಾ ಇಲ್ಲ. ಇದೆಲ್ಲಾ ನಾನು ಏಕೆ ಹೇಳುತ್ತಿದ್ದೇನೆ ಎಂದರೆ ನಾನೇ ಒಂದು ಆಸ್ಪತ್ರೆಯನ್ನು ಕಟ್ಟುತ್ತಿದ್ದೇನೆ. ನಾನೇ ಹೋಗಿ ನೋಡಿಕೊಂಡು ಬರೋಣ ಎಂದು ಕೆಲವು ಆಸ್ಪತ್ರೆಗಳಿಗೆ ಹೋಗಿದ್ದೆ. ಆಗಲೇ ಇದೆಲ್ಲಾ ನನಗೆ ಗೊತ್ತಾಗಿದ್ದು. ಇದನ್ನು ಯಾರೂ ನನಗೆ ಹೇಳಿಕೊಟ್ಟಿದು ಅಲ್ಲ. ಮೈಸೂರು ಆಸ್ಪತ್ರೆ ಒಂದನ್ನು ನಾನು ನೋಡಿಲ್ಲ. ಐ ಅಗ್ರಿ ವಿತ್ ಯೂ. ನಾನು ಬೇರೆ ಆಸ್ಪತ್ರೆಗಳನ್ನು ಏನು ಹೇಳಿದ್ದೇನೆ ಇವುಗಳನ್ನೆಲ್ಲಾ ಸ್ವತಃ ನಾನೇ ಕಣ್ಣಲ್ಲಿ ನೋಡಿಕೊಂಡು ಬಂದಿದ್ದೇನೆ. ಲಾಂಡ್ರಿ ನೋಡೋಣ ಎಂದು ಹೋಗಿದ್ದೆ. ಮಾರ್ಚ್ಯುಯರಿ ಕಟ್ಟುತ್ತಿದ್ದಾರೆ, ಅದನ್ನು ನೋಡೋಣ ಎಂದು ಹೋಗಿದ್ದೆ.

ಎಲ್ಲಾ ಆಸ್ಪತ್ರೆಗಳನ್ನು ನೋಡಿದ ಮೇಲೆ ತಾವು ಏನು ಸೂಪರ್ ಸ್ಪೆಷಾಲಿಟಿಯ ಬಗ್ಗೆ ಮಾತನಾಡಿದಿರಲ್ಲಾ ಇದರ ಬಗ್ಗೆ ತಿಳುವಳಿಕೆ ಇದ್ದು ಇದನ್ನೆಲ್ಲಾ ಬರೆಯುತ್ತಿದ್ದಾರೋ ಏನೋ ಎಂದು ಆಶ್ಚರ್ಯವಾಗಿ ನಾನು ಕೇಳುತ್ತಿದ್ದೇನೆ. ಇನ್ನು ಬ್ಲಡ್ ಬ್ಯಾಂಕ್‌ನಲ್ಲಿ ಏಯ್ಡ್ಸ್ ಬಗ್ಗೆ ಟೆಸ್ಟ್ ಮಾಡಲು ಎಷ್ಟು ಕಡೆ ಅರೇಂಜ್ ಮಾಡಿದ್ದೀರಿ? ವಿಕ್ಟೋರಿಯಾ ಆಸ್ಪತ್ರೆಯಲ್ಲಿ 5 ಲಾಂಡ್ರಿ ಮೆಷಿನ್ಸ್ ಇವೆ. ಅಲ್ಲಿನ ಬಾಯ್ಲರ್ ಕೆಟ್ಟು ಹೋಗಿ 5 ವರ್ಷವಾಯಿತು. 5 ಲಾಂಡ್ರಿಯ ಪೈಕಿ 3 ಕೆಟ್ಟುಹೋಗಿ ಇನ್ನು 2 ಮಾತ್ರ ಕೆಲಸ ಮಾಡುತ್ತಿವೆ. ಸುಮಾರು ಮೂರುವರೆ ಕೋಟಿ ರೂ. ಖರ್ಚು ಮಾಡಿ 4 ಮೆಷಿನನ್ನು ತರಿಸಿದ್ದೀರಿ. 6 ತಿಂಗಳಾದರೂ ಇನ್ನೂ ಆ ಮೆಷಿನ್ಸ್‌ನ ಪ್ಯಾಕ್ನೂ ಕೂಡ ಒಡೆದಿಲ್ಲ. ಅವುಗಳು ಹಾಗೆಯೇ ಬಿದ್ದಿವೆ. ಇವುಗಳ ಮೇಲ್ವಿಚಾರಣೆ ನೋಡಿಕೊಳ್ಳುವವರಿಲ್ಲವೇ? ನಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಈ ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇಡೀ ರಾಜ್ಯದಲ್ಲಿರತಕ್ಕ ಎಲ್ಲಾ ಆಸ್ಪತ್ರೆಗಳನ್ನು ತೆಗೆದುಕೊಂಡರೂ ಎಲ್ಲೂ ಕೂಡ ಒಂದೇ ಒಂದು ಕ್ಯಾಟ್ಸ್ ಸ್ಕ್ಯಾನ್ ಇಲ್ಲ. ಇಷ್ಟೆಲ್ಲಾ ಲೋಪದೋಷಗಳಿರುವಾಗ ನಾವು ಸೂಪರ್ ಸ್ಪೆಷಾಲಿಟಿ ಮಾಡುತ್ತೇವೆ ಒಂದೊಂದು ಸಾವಿರದ ಬೆಡ್ಡಿನದ್ದು ಎರಡು ಹೇಳಿದರೆ ಇದು ಎಷ್ಟು ಅಭಾಸದ ಮಾತು ಎಂಬುದನ್ನು ಮಾನ್ಯ ರಾಜ್ಯಪಾಲರೂ ಯೋಚನೆ ಮಾಡಲಿಲ್ಲ. ತಾವು ಬರೆದು ಅವರಿಂದ ಓದಿಸಿದಿರಲ್ಲಾ, ತಾವೂ ಕೂಡ ಇದನ್ನು ಯೋಚನೆ ಮಾಡಲಿಲ್ಲ. ಇದರ ಬಗ್ಗೆ ತಾವು ದಯವಿಟ್ಟು ಗಮನಕೊಡಬೇಕು. ಇವತ್ತು ಹಳ್ಳಿ ಡಾಕ್ಟರ್‌ಗಳದ್ದು ಬಹಳ ಹಿಂಸೆಯಾಗಿದೆ. ನಾವು ಎಲ್ಲೇ ಹೋದರೂ ಮೊದಲು ಕೇಳುವುದು ಡಾಕ್ಟರ್‌ಗಳು ಆ ಊರಿನಲ್ಲೇ ಇರುವಂತೆ ಮಾಡಿಸಿ ಎಂದು. ಏಕೆಂದರೆ ಈ ಡಾಕ್ಟರ್‌ಗಳು 2-3 ದಿವಸಕ್ಕೊಂದು ಸಾರಿ 11ಗಂಟೆಗೆ ಬಂದು ಸಾಯಂಕಾಲ 4ಗಂಟೆಗೆ ಹೊರಟುಹೋಗುತ್ತಾರೆ. ಲೇಡಿ ಡಾಕ್ಟರ್‌ಗಳಂತೂ ಅಲ್ಲಿ ವಾಸವೇ ಇರುವುದಿಲ್ಲ. ಇದರಿಂದಾಗಿ ಹಳ್ಳಿಗಳಲ್ಲಿ ಆಸ್ಪತ್ರೆಗಳಿದ್ದರೂ ಏನೇನೂ ಪ್ರಯೋಜನವಾಗುತ್ತಿಲ್ಲ. ಇದರ ಬಗ್ಗೆ ತಾವು ಹೆಚ್ಚಿನ ಗಮನವನ್ನು ಕೊಡಬೇಕಾಗುತ್ತದೆ. ಕೇವಲ ಸುಳ್ಳಿನಿಂದ ಈ ರಾಜ್ಯವನ್ನು ನೀವು ನಡೆಸುವುದಕ್ಕಾಗುವುದಿಲ್ಲ. ನಿಮ್ಮ ನಿಮ್ಮ ಕಿತ್ತಾಟದಲ್ಲಿ ರಾಜ್ಯದ ರಿಸೋರ್ಸಸ್ ಮೊಬಲೈಸೇಷನ್ ಬಗ್ಗೆ ಹೆಚ್ಚು ಗಮನವನ್ನು ಕೊಡುವುದಕ್ಕೆ ಆಗಲಿಲ್ಲ. ಹಳ್ಳಿಗಳ ಕಡೆ ಅಭಿವೃದ್ಧಿ ಕಾರ್ಯಗಳು ಏನೇನೂ ಇಲ್ಲ. ಮಾನ್ಯ ರಂಗನಾಥ್‌ರವರ ಗಮನಕ್ಕೆ ನಾನೇ ಒಂದು ವಿಚಾರವನ್ನು ತಂದಿದ್ದೇನೆ. ನನ್ನ ಕ್ಷೇತ್ರದಲ್ಲಿ ಒಂದು ತಾಲೂಕಿಗೆ ಇಡೀ ವರ್ಷದಲ್ಲಿ ಖರ್ಚಾಗಿರುವುದು ಕೇವಲ 18.5 ಲಕ್ಷ ರೂ. ಮಾತ್ರ. ಇದು ಆಸ್ಪತ್ರೆ ಮತ್ತು ಬ್ರಿಡ್ಜಸ್ಗೆ ಸಂಬಂಧಪಟ್ಟ ಸ್ಪಿಲ್‌ಓವರ್ ವರ್ಕ್ಸ್‌ಗೆ ನಾನು ತಮಗೆ ಒಂದು ಕಾಗದವನ್ನು ಬರೆದು ಕಳುಹಿಸಿದ್ದೆ.

ಶ್ರೀ ಕೆ.ಹೆಚ್. ರಂಗನಾಥ್ : ನಾನು ತರಿಸಿ ನೋಡಿದ್ದೇನೆ. ಅದರ ಬಗ್ಗೆ ಪತ್ರ ಬರುತ್ತದೆ. ಅದು ನನಗೆ ತೃಪ್ತಿಯಾಗಿದೆ ಎಂದು ಹೇಳುವುದಿಲ್ಲ. ಇನ್ನೂ ಸಾಕಷ್ಟು ಕೆಲಸ ಆಗಬೇಕಾಗಿದೆ. ಆದರೆ ಕನಸ್ಟ್ರೈನಟ್ಸ್ ಎಂದು ನಾವು ಏನು ಹೇಳುತ್ತೇವೆ ಅದರಿಂದಾಗಿ ನಾವು .ಸ್ವಲ್ಪ ಹಿಡಿತಮಾಡಬೇಕಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಹಣ ಇಲ್ಲದಿರುವಾಗ ಮಾನ್ಯ ಮುಖ್ಯ ಮಂತ್ರಿಗಳು ಯಾವುದೇ ಸಭೆಗೆ ಹೋದರೂ ಅಲ್ಲಿ ಭರವಸೆಗಳನ್ನು ಕೊಡುತ್ತಿರುತ್ತಾರೆ. ಅದರ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸಿ.

ಶ್ರೀ ಕೆ.ಹೆಚ್. ರಂಗನಾಥ್ : ಇದು ಒಂದು ರೀತಿಯ ರೋಗ. ಇರತಕ್ಕ ವಿಚಾರವನ್ನು ಹೇಳಿದರೆ ಹೀಗೆ ಹೇಳುತ್ತೀರಿ. ಹಾಗಾದರೆ ತಾವು ಅಧಿಕಾರದಲ್ಲಿದ್ದಾಗ ಇತ್ತೇ? ತಾವು ಅಧಿಕಾರದಲ್ಲಿದ್ದಾಗ ನೀರಾವರಿ, ಸಣ್ಣ ನೀರಾವರಿ, ದೊಡ್ಡ ನೀರಾವರಿ ಪಿ.ಡಬ್ಲ್ಯೂ.ಡಿ. ಎಲ್ಲಾ ಖಾತೆಗಳನ್ನೂ ಒಬ್ಬರ ಕೈಯಲ್ಲೇ ಕೊಟ್ಟು ಸಾಕಷ್ಟು ಹಣವನ್ನು ಕೊಟ್ಟಿತ್ತಲ್ಲಾ, ಹಾಗಾದರೆ ಆ ರಸ್ತೆಗಳೆಲ್ಲಾ ಎಲ್ಲಿವೆ? ಎಲ್ಲಿಯವರೆಗೆ ಇದೆ. ಕಳೆದ ಒಂದು ದಶಕದಿಂದ ಇದೆಲ್ಲಾ ಹಾಳಾಗಿದೆ. ಇದಕ್ಕೇನು ಅನ್ನುತ್ತೀರಿ? ತಕ್ಷಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲ ಎಂದು ಹೇಳಿದ ತಕ್ಷಣ ಏನೂ ಇಲ್ಲವೆಂದು ವ್ಯಾಖ್ಯಾನ ಮಾಡುವುದು, ಮಾಡಿದ್ದೇವೆಂದರೆ, ಎಷ್ಟು ಮಾಡಿದ್ದೀರಿ, 2 ಕಿ.ಮೀ. ಮಾಡಿದ್ದೀರಿ, 3 ಕಿ.ಮಿ. ಮಾಡಿದ್ದೀರಿ ಎಂದು ಹೇಳುತ್ತೀರಿ. ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲಿತ್ತು ಎನ್ನುವಂತಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ : ಆ ರೀತಿ ತಾವು ಭಾವನೆ ಇಟ್ಟುಕೊಳ್ಳಬೇಡಿ. ಕೆಲಸ ಆಗಿದ್ದರೆ ಕೆಲಸ ಆಗಿದೆ ಎಂದು ಹೇಳುತ್ತೇವೆ. ನಾವು ಅಷ್ಟೊಂದು ಕೆಳಮಟ್ಟಕ್ಕೆ ಹೋಗುವುದಿಲ್ಲ.

ಶ್ರೀ ಹೆಚ್.ಏಕಾಂತಯ್ಯ : 10 ಲಕ್ಷದಲ್ಲಿ 5 ಲಕ್ಷ ರೂ.ಗಳನ್ನು ತಾವು ಕೊಟ್ಟಿದ್ದೀರಿ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಇನ್ನೂ 5 ಲಕ್ಷ ರೂ. ಕೊಡುತ್ತೇವೆಂದು ನೀವು ಹೇಳಿರುವುದನ್ನೂ ನಾವು ಒಪ್ಪಿಕೊಳ್ಳುತ್ತೇವೆ. ಅದೇ 10 ಲಕ್ಷ ರೂ.ಗಳನ್ನು ಕೊಟ್ಟಿಲ್ಲ ಎಂಬುದನ್ನು ನಾವು ಹೇಳುತ್ತಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ಆ 5 ಲಕ್ಷವನ್ನೂ ಕೂಡ ಇನ್ನೂ ರಿಲೀಸ್ ಮಾಡಿಲ್ಲ. 20 ಲಕ್ಷಗಳ ಪೈಕಿ ಕೇವಲ 5 ಲಕ್ಷ ಮಾತ್ರ ರಿಲೀಸ್ಮಾಡಿರತಕ್ಕದ್ದು. ಇನ್ನು 5 ಲಕ್ಷ ರೂ.ಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ, ಅದು ಇನ್ನೂ ಬಂದಿಲ್ಲ. ಇನ್ನು ಇರುವುದು ಒಂದೂವರೆ ತಿಂಗಳು. ಅಷ್ಟರಲ್ಲಿ ಯಾವಾಗ ಕೆಲಸಮಾಡಿಸುವುದು?

ನನ್ನ ಅನಿಸಿಕೆ ಇಷ್ಟೇ. ಯಾವುದೇ ಜವಾಬ್ದಾರಿ ಸ್ಥಾನದಲ್ಲಿರುವವರ ಕೈಯಿಂದ ಭಾಷಣಗಳನ್ನು ಮಾಡಿಸುವಾಗ ಅದು ವಾಸ್ತವಿಕ ಸಿದ್ಧತೆ ಮೇಲಿರಲಿ. ಇಲ್ಲದಿದ್ದರೆ ಇಲ್ಲ ಎಂದು ಹೇಳಿ. ಅದಕ್ಕೆ ಸುಳ್ಳು ಏತಕ್ಕೆ ಹೇಳಬೇಕು? ಎಲ್ಲಿ ಕೇಳಲಿ. I have reserved Rs. 786 Crores for poverty alleviation. ನಾನು 2 ಕೋಟಿ ಕೊಟ್ಟಿದ್ದೇನೆ, 1 ಕೋಟಿ ಕೊಟ್ಟಿದ್ದೇನೆ ಎಂದು ಹೇಳುತ್ತಿರುತ್ತೀರಿ. ಕಳೆದ ಒಂದು ವರ್ಷದಲ್ಲಿ ನೀವು ಏನೇನು ಭರವಸೆಗಳನ್ನು ಜನರಿಗೆ ಕೊಟ್ಟಿದ್ದೀರಿ ಅದರ ಬಗ್ಗೆ ತಾವು ಒಂದು ಶ್ವೇತ ಪತ್ರವನ್ನು ಹೊರಡಿಸಿ. ನಮ್ಮನ್ನೇ ಮಾಡಿ ಎಂದರೆ ನಾವೇ ಮಾಡುತ್ತೇವೆ. ಏಕೆಂದರೆ ನಾವು ಎಲ್ಲಾ ಪೇಪರ್ ಕಟಿಂಗ್ಸನ್ನೂ ಇಟ್ಟುಕೊಂಡಿದ್ದೇವೆ. ತಮಗೆ ತಂದು ತೋರಿಸುತ್ತೇವೆ; ತಾವು ಏತಕ್ಕೆ ಈ ರೀತಿಯ ಭರವಸೆಗಳನ್ನು ಕೊಡುತ್ತೀರಿ? ಈ ರೀತಿ ಕೊಡುವುದರಿಂದ ತಮ್ಮ ವ್ಯಕ್ತಿತ್ವವೇ ಹಾಳಾಗಿ ಹೋಗುತ್ತದೆ. ಸರ್ಕಾರದ ವ್ಯಕ್ತಿತ್ವ ಹಾಳಾಗಿ ಹೋಗುತ್ತದೆ. ಕ್ರೆಡಿಬಿಲಿಟಿ ಹೋಗುತ್ತದೆ. ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತೇನೆ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಹಿರಿಯ ಮಾನ್ಯ ಸದಸ್ಯರಾದ ಜಾಲಪ್ಪನವರು ಒಂದು ಮಾತನ್ನು ಹೇಳಿದರು. ದುಡ್ಡಿಲ್ಲದಿದ್ದರೆ, ಇಲ್ಲ ಎಂದು ಹೇಳಬೇಕು, ಸುಳ್ಳು ಆಶ್ವಾಸನೆಗಳನ್ನು ಏತಕ್ಕೆ ಕೊಡಬೇಕೆಂದು ಹೇಳಿದರು. ಅವರ ಕಾಲದಲ್ಲಿ ಕೂಡ ಸಾಕಷ್ಟು ಹಣದ ಅಭಾವ ಇತ್ತು. ಆಗ ಅವರು ತಮ್ಮಲ್ಲಿ ಹಣ ಇಲ್ಲವೆಂದು ಹೇಳಿಕೊಂಡಿದ್ದರೆ? ನಮ್ಮಲ್ಲಿ ಹಣವಿಲ್ಲದ್ದರಿಂದ ಇಂಥಿಂಥ ಯೋಜನೆಗಳನ್ನು ಕಾರ್ಯಗತಾ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿಕೊಂಡಿದ್ದರೆ?

ಶ್ರೀ ಹೆಚ್. ಏಕಾಂತಯ್ಯ : ತಾವು ಹಿಂದೆ ಚರ್ಚೆ ಮಾಡುವಾಗಲೆಲ್ಲಾ ಈ ಮಾತನ್ನು ಹೇಳಿದ್ದೀರಿ.

ಶ್ರೀಮತಿ ಮೋಟಮ್ಮ : ನಾವು ಬಸವಣ್ಣನವರನ್ನು ನೆನೆಸಿಕೊಳ್ಳಬೇಕಾಗುತ್ತದೆ. ಇದಿರ ಹಳಿಯಲು ಬೇಡ, ತನ್ನ ಬಣ್ಣಿಸಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ ಎಂಬುದನ್ನು ಅವರು ನೆನಪು ಮಾಡಿಕೊಳ್ಳಬೇಕು. ನಾವು ಸರಿ, ನೀವು ಸರಿ ಎಂದು ಹೇಳುವುದು ಸರಿಯಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಕಾಲದಲ್ಲಿ ಏನು ಬೋರ್‌ವೆಲ್ಲಗಳನ್ನು ಮಾಡಿದ್ದೇವೆ ಅವುಗಳಲ್ಲಿ ಕೆಟ್ಟು ಹೋಗಿರುವುಗಳನ್ನು ಇವರು ಸರಿಯಾಗಿ ರಿಪೇರಿ ಮಾಡಿದ್ದಾರೆಯೇ ಎಂದು ಕೇಳಬಯಸುತ್ತೇನೆ. ತಮಗೆ ಹೇಳುವುದಾದರೆ, ಈ ವಿಚಾರದಲ್ಲಿ ನಾನು ಛಾಲೆಂಜ್ ತೆಗೆದುಕೊಳ್ಳುತ್ತೇನೆ. ನಾನು ಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದೇನೆ. ನಾನು ಇಲ್ಲಿಗೆ ಸುಮ್ಮನೆ ಬಂದು ಗಾಸಿಫ್ ಹೊಡೆಯುತ್ತಿಲ್ಲ. ದಯವಿಟ್ಟು ಕೇಳಿ. ನಾನು ಕಳೆದ 8-10 ದಿನದ ಹಿಂದೆ ನನ್ನ ತಾಲ್ಲೂಕಿಗೆ ಹೋಗಿದ್ದಾಗ ನನಗೆ ಕಂಪ್ಲೇಂಟ್ಸ್ ಬಂತು. ಅಲ್ಲಿ 60 ಬೋರ್‌ವೆಲ್ಸ್ ಕೆಟ್ಟುಹೋಗಿವೆ ಎಂದು. ಏಕೆ ಎಂದು ಕೇಳಿದರೆ ಡೀಸೆಲ್ ಇಲ್ಲ ಎಂದು ಹೇಳಿದರು. ಜಿಲ್ಲಾಪರಿಷತ್ತಿನ ಇಂಜಿನಿಯರ್‌ರವರನ್ನು ಕರೆದು ಕೇಳಿದರೆ, ಅವರು ಏನು ಹೇಳಿದರೆಂಬುದನ್ನು ನಾನು ಈ ತುಂಬಿದ ಸದನದಲ್ಲಿ ಹೇಳುತ್ತಿದ್ದೇನೆ. ಡೀಸಲ್ ಬಿಲ್ ಪಾವತಿ ಮಾಡಿಲ್ಲ ಆದ್ದರಿಂದ ಅವರು ಡೀಸೆಲ್ ಕೊಡುತ್ತಿಲ್ಲ ಎಂದು ಹೇಳಿದರು. ಆಗ ನಾನು ಹೇಳಿದೆ, ನಾನೇ 4-5ಸಾವಿರ ರೂ. ಕೊಡುತ್ತೇನೆ, ನೀವು ಕೊಟ್ಟರೆ ಕೊಡಿ, ಇಲ್ಲದಿದ್ದರೆ ಬೇಡ ಮೊದಲು ಡೀಸೆಲ್ ತೆಗೆದುಕೊಂಡು ಹೋಗಿ ಕೆಲಸಮಾಡಿ ಎಂದು ಹೇಳಿ ಬೋರ್‌ವೆಲನ್ನು ರಿಪೇರಿ ಮಾಡಿಸಿ ಬಂದೆ. ಮಾರನೇ ದಿನ ನಾನು ಇಲ್ಲಿಗೆ ಬಂದು ಕಾರ್ಯದರ್ಶಿಯವರ ಜೊತೆ ಮಾತನಾಡಿದಾಗ ಚೀಫ್ ಸೆಕ್ರೆಟರಿಯವರು ಹೇಳಿದರು, ಏನೋ ವ್ಯತ್ಯಾಸವಾಗಿದೆ, ನಾನು ಇವತ್ತು ಹಣವನ್ನು ರಿಲೀಸ್ ಮಾಡುತ್ತೇನೆಂದು ಹೇಳಿದರು. 60 ಬೋರ್‌ವೆಲ್ಲಗಳು ಏನು ಕೆಟ್ಟಿದ್ದುವು ಅವುಗಳನ್ನು ಮೊನ್ನೆ ತಾನೇ ರಿಪೇರಿಗೆ ತೆಗೆದುಕೊಂಡಿದ್ದಾರೆ. ಇದರಲ್ಲಿ ಏನು ಸುಳ್ಳಿದೆ?

ಶಾಸನ ರಚನಾ ಕಾರ್ಯಕಲಾಪಗಳು.

(ಎ) ವಿಧೇಯಕಗಳ ಮಂಡನೆ.

1994 ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ;

"1994ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ: "1994ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.';

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಸಂಸದೀಯ ಹಾಗೂ ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೇ, ಈಗ ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆಯನ್ನು ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ತೆಗೆದುಕೊಂಡು ಮುಗಿಸಿಬಿಡೋಣ.

ಅಧ್ಯಕ್ಷರು : ಈಗ ತಾನೇ ಮಾನ್ಯ ವಿರೋಧ ಪಕ್ಷದ ನಾಯಕರು ನನ್ನ ಕೊಠಡಿಗೆ ಬಂದು ತಾವು ಇನ್ನೂ ಇದರ ಬಗ್ಗೆ ತಯಾರಿಲ್ಲ ಆದ್ದರಿಂದ ನಾಳೆ ತೆಗೆದುಕೊಳ್ಳೋಣ ಎಂದು ಹೇಳಿ ಹೋದರು.

ಶ್ರೀ ಪಿ.ಜಿ. ಆರ್. ಸಿಂಧ್ಯ : ಆಗಬಹುದು.

ಅಧ್ಯಕ್ಷರು :ಈಗ ಉಚ್ಚ ನ್ಯಾಯಾಲಯಕ್ಕೆ ಸಂಬಂಧಪಟ್ಟ ವಿಧೇಯಕವನ್ನು ತೆಗೆದುಕೊಳ್ಳೋಣ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಇದೊಂದು ಸಣ್ಣ ವಿಧೇಯಕ. ಕರ್ನಾಟಕ ಉಚ್ಛ ನ್ಯಾಯಾಲಯ ವಿಧೇಯಕವನ್ನು ತೆಗೆದುಕೊಳ್ಳೋಣ.

1) 1993ರ ಕರ್ನಾಟಕ ಉಚ್ಛ ನ್ಯಾಯಾಲಯ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ ಮತ್ತು ಸಂಸದೀಯ ವ್ಯವಹಾರಗಳ ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೆ,

"1993ರ ಕರ್ನಾಟಕ ಉಚ್ಛ ನ್ಯಾಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ"

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನ್ಯಾಯಾಸ್ಥಾನಗಳಲ್ಲಿ ನಡೆಯುತ್ತಿರುವ ಮೊಕದ್ದಮೆಗಳನ್ನು ತೀವ್ರವಾಗಿ, ವೇಗವಾಗಿ ತೀರ್ಮಾನ ಮಾಡಬೇಕೆಂಬ ಉದ್ದೇಶದಿಂದ ಈಗಿರತಕ್ಕ ಅನೇಕ ಸ್ಥರಗಳನ್ನು ಕಡಿಮೆ ಮಾಡಿ ಒಂದೇ ಅಪೀಲನ್ನು ಒದಗಿಸಬೇಕೆಂದು ಹೈಕೋರ್ಟ್ನಿಂದ ಸಲಹೆ ಬಂದಿದೆ. ಇದಕ್ಕೆ ಮುಂಚೆ ಅನೇಕ ನಿಗಮಗಳು ಮತ್ತು ಲಾ ಕಮಿಷನ್ ವರದಿಯ ಪ್ರಕಾರ ಆದಷ್ಟು ಬೇಗ ಮತ್ತು ಒಂದೇ ಸ್ಥರದಲ್ಲಿ ತೀರ್ಮಾನ ಆಗುವಂತೆ ಮಾಡಬೇಕೆಂದು ಸಲಹೆಗಳನ್ನು ಕೊಟ್ಟರು. ಆ ಪ್ರಕಾರ ಈ ವಿಧೇಯಕವನ್ನು ತಯಾರು ಮಾಡಿದೆ. ಇದರ ಮುಖ್ಯ ಉದ್ದೇಶ ಕೋರ್ಟುಗಳಿಗೆ ಬಂದಂಥ ಮೊಕದ್ದಮೆಗಳು ಬೇಗ ತೀರ್ಮಾನವಾಗಲಿ ಎಂದು. ಮೊದಲ ಭಾಗ ಏನಿದೆ ಎಂದರೆ 3 ಲಕ್ಷಕ್ಕೂ ಹೆಚ್ಚು ಬೆಲೆ ಇರತಕ್ಕ ಒಂದು ವಿವಾದ ಹೈಕೋರ್ಟಿಗೆ ಬಂದರೆ ಇಬ್ಬರು ನ್ಯಾಯಾಧೀಶರು ಕುಳಿತುಕೊಂಡು ಒಮ್ಮೆಗೆ ತೀರ್ಮಾನ ಮಾಡಬೇಕೆಂದು ಹೇಳಿದ್ದೇವೆ. ಕ್ರಿಮಿನಲ್ ಮೊಕದ್ದಮೆಯಲ್ಲಿ ಮರಣ ದಂಡನೆ ಶಿಕ್ಷೆಯಾಗಿದ್ದರೆ ಅಥವಾ ಮರಣ ದಂಡನೆ ಶಿಕ್ಷೆ ಕೊಡುವಂಥ ಮೊಕದ್ದಮೆ ಇದ್ದರೆ ಅದನ್ನು ಕೂಡ ಹೈಕೋರ್ಟಿನವರು ಒಮ್ಮೆಗೇ ಇಬ್ಬರು ನ್ಯಾಯಾಧೀಶರು ಕುಳಿತುಕೊಂಡು ತೀರ್ಮಾನ ಮಾಡಬೇಕೆಂದು ಇದೆ. ಇದೆಲ್ಲಾ ಪ್ರೊಸೀಜರಲ್ ಮ್ಯಾಟರ್ಸ್. ಬೇರೆ ಬೇರೆ ರಾಜ್ಯಗಳ ಹೈಕೋರ್ಟ್ಗಳಲ್ಲಿ ಮತ್ತು ಸುಪ್ರೀಂ ಕೋರ್ಟಿನಲ್ಲಿ ಇದನ್ನು ಒಪ್ಪಿದ್ದಾರೆ. ಇದಕ್ಕೆ ಈ ಸಭೆ ಒಪ್ಪಿಗೆ ಕೊಡಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1993ರ ಕರ್ನಾಟಕ ಉಚ್ಛ ನ್ಯಾಯಾಲಯದ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ರವರೆಗೆ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ಖಂಡ 2 ರಿಂದ 4 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ಶೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

"1993ರ ಕರ್ನಾಟಕ ಉಚ್ಚ ನ್ಯಾಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1993ರ ಕರ್ನಾಟಕ ಉಚ್ಚ ನ್ಯಾಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(2) 1993ರ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಮಾನ್ಯ ಅಧ್ಯಕ್ಷರೆ, "1993ರ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಈ ವಿಧೇಯಕವನ್ನು ಸಭೆಯು ಒಪ್ಪಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1993ರ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ಎರಡನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

6.20 ಪಿ.ಎಂ

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ, ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): "1993ರ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1993ರ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(3) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ (ತಿದ್ದುಪಡಿ) ವಿಧೇಯಕ, 1993

(ಪರ್ಯಾಲೋಚನಾ ಪ್ರಸ್ತಾವ)

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿ) : ಮಾನ್ಯ ಅಧ್ಯಕ್ಷರೇ, "ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ (ತಿದ್ದುಪಡಿ) ವಿಧೇಯಕ 1993ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿ) : ಸನ್ಮಾನ್ಯ ಅಧ್ಯಕ್ಷರೇ, ಇದು ಕಾಂಪ್ರಹೆನ್ಸೀವ್ ಡೆವಲಪ್ಮೆಂಟ್ ಪ್ಲಾನ್ ಆಗಬೇಕೆಂದು ಹೇಳಿ ಪ್ಲಾನಿಂಗ್ ಅಥಾರಿಟಿಯವರು ಡೈರೆಕ್ಟರ್ ಅವರಿಗೆ ಕಳುಹಿಸಿದ ಮೇಲೆ ಅಲ್ಲಿ ಏನಾದರೂ ಹೆಚ್ಚುಕಡಿಮೆ ಲೋಪಗಳು

ಇದ್ದು ಅವುಗಳನ್ನು ಸರಿಪಡಿಸಿದ ಮೇಲೆ ಪುನಃ ಸರ್ಕಾರಕ್ಕೆ ಬಂದು ಪುನಃ ಪ್ಲಾನಿಂಗ್ ಅಥಾರಿಟಿಯವರಿಗೆ ವಾಪಸ್ಸು ಹೋಗುತ್ತದೆ. ಅಲ್ಲಿಗೆ ವಾಪಸ್ಸು ಹೋದಮೇಲೆ ಮೊದಲು ಸೆಕ್ಷನ್ 22 ಪ್ರಕಾರ ಅಪ್ರೂವಲ್ ಆಫ್ ಕಾಂಪ್ರಹೆನ್ಸೀವ್ ಡೆವಲಪ್ಮೆಂಟ್ ಪ್ಲಾನ್ ಇದರಲ್ಲಿ ಮೂರು ತಿಂಗಳು ಕೊಡಬೇಕು ಎಂದಿದೆ The plan and the report inviting public comments theron within a period of three months ಎಂದು ಇದೆ. ಆದ್ದರಿಂದ ಅದು ಮೂರು ತಿಂಗಳು ಜಾಸ್ತಿ ಇದೆ; ಅದನ್ನು ಒಂದು ತಿಂಗಳು ಎಂದು ಮಾಡಬೇಕೆಂದು ಈ ತಿದ್ದುಪಡಿ ಯನ್ನು ತಂದಿದ್ದೇವೆ. ಇದು ಇಷ್ಟೇ ಹೊರತು ಬೇರೆ ಏನೂ ಇಲ್ಲ. ದಯವಿಟ್ಟು ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಏನು ತಿದ್ದುಪಡಿಯನ್ನು ಹೇಳಿದ್ದಾರೆ, ಅದಕ್ಕೆ ನನ್ನ ಅಥವಾ ನಮ್ಮ ವಿರೋಧ ಇಲ್ಲ. ಆದರೆ ನಿಮ್ಮ ಕಾನೂನು ಏನಿದೆ ಟೌನ್‌ಪ್ಲಾನ್ ಪ್ಲಾನಿಂಗ್ ಆಕ್ಟ್ ಇದನ್ನು ಏತಕ್ಕೋಸ್ಕರ ಇಟ್ಟುಕೊಂಡಿದ್ದೀರಿ? ಆ ನಿಯಮಗಳನ್ನು ಏನಾದರೂ ಸಹ ವ್ಯಾಪಕವಾಗಿ ಎಲ್ಲಾ ಪಟ್ಟಣ ಪ್ರದೇಶಗಳಲ್ಲೂ ಸಹ ಇದನ್ನು ತರುವಂಥ ಮನಸ್ಸು ಇದ್ದರೆ ತಾವು ತರಬೇಕು. ನಿಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಿಮ್ಮ ಈ ಕಾನೂನು ಏನಿದೆ, ಇದನ್ನು ನೀವು ಯಾವಾಗ, ಯಾರಿಗೆ ಬೇಕಾದರೂ ಸಹಾಯ ಮಾಡಲಿಕ್ಕೆ ನಿಮ್ಮ ಇಲಾಖೆ ಉಪಯೋಗ ಮಾಡಿಕೊಳ್ಳುತ್ತಾ ಇದೆ. ಸಹಾಯ ಹೇಗೆ ಮಾಡುತ್ತೀರಿ? ಎಲ್ಲಿ ಓಪನ್ ಸ್ಪೇಸ್ ಇರಬೇಕೋ, ಎಲ್ಲಿ ಪಬ್ಲಿಪ್ರೆಮಿಸಸ್ಗೆ ಜಾಗ ಬಿಡಬೇಕೋ, ಅಂತಹ ಕಡೆ ಬಿಡಬೇಕೆಂಬ ನಿಯಮಗಳನ್ನು ನಾವು ನಗರಾಭಿವೃದ್ಧಿ ಪ್ರಾಧಿಕಾರದವರೇ ಆಗಲಿ, ಅಥವಾ ಟೌನ್ ಪ್ಲಾನಿಂಗ್ ಆಕ್ಟ್ ಪ್ರಕಾರ ಏನಾದರೂ ಮೀಸಲಾತಿ ಇಡಬೇಕೆಂದು ನಾವು ನಿಯಮಗಳನ್ನು ಮಾಡಿಕೊಂಡರೆ ಆ ನಿಯಮಗಳನ್ನು ನೀವು ಮಾಡಬೇಕಾಗಿಲ್ಲ ಎಂದು ನಿಮ್ಮ ಇಲಾಖೆಯವರು ಕಳುಹಿಸುತ್ತಾರೆ. ಸನ್ಮಾನ್ಯ ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತಿದ್ದೇನೆ, ಇದಕ್ಕೋಸ್ಕರ ನಿಮ್ಮ ಇಲಾಖೆ ಇದೆಯೋ? ಇದಕ್ಕೆ ಏನಾದರೂ ಆಧಾರ ಬೇಕಲ್ಲ? ಕೊಡುತ್ತೇನೆ. ಒಂದು ಓದುತ್ತೇನೆ ಕೇಳಿ. ಸರ್ಕಾರಿ ಪತ್ರದ ಸಂಖ್ಯೆ ವನಇ 363 ಡಿಟಿಪಿ 92 ದಿನಾಂಕ 27.9.93 ಇದು - ನಿಮ್ಮದೇ ಸ್ವಾಮಿ ಇಲಾಖೆ. 21.7.93 - ಅದನ್ನಾದರೂ ಒಪ್ಪಿಕೊಳ್ಳುತ್ತೀರಲ್ಲಾ? ಸ್ವಲ್ಪ ಓದುತ್ತೇನೆ ಕೇಳಿ. ನಾವು ನೀವು ನಿಜವಾಗಲೂ ಸಹ ನಾಚಿಕೆಪಟ್ಟುಕೊಳ್ಳಬೇಕಾದ ಸಂಗತಿ. ಏನು? ಅಲ್ಲಿ ಯಾವುದೂ ಕೂಡ ಓಪನ್ ಸ್ಪೇಸ್ ಇಡಬಾರದಂತೆ. ಹಾಗೆಂದು ಯಾರು ಹೇಳುತ್ತಾರೆ? ನಗರಾಭಿವೃದ್ಧಿ ಮಂಡಲಿಯವರು ಇದನ್ನು ಮಾಡುವುದಿಲ್ಲ. ಸ್ವಾಮಿ, ನಿಮ್ಮ ಇಲಾಖೆಯಿಂದ ಪರಿಷ್ಕೃತವಾಗಿ ಸೂಚನೆಯನ್ನು ಕಳುಹಿಸುತ್ತೀರಿ. ಹೀಗೆಲ್ಲಾ ಮಾಡಬೇಡಿ ಅವರ ಬಗ್ಗೆ ಎಂದು, ಯಾರು ನಾಚಿಕೆಪಟ್ಟುಕೊಳ್ಳಬೇಕು? ಓದುತ್ತೇನೆ -

"ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಹಾಗೆ ಉಲ್ಲೇಖ ಪತ್ರ 21.7.93ಕ್ಕೆ ಗಮನ ಸೆಳೆಯುತ್ತಾ ತಿಳಿಸುವುದೇನೆಂದರೆ, ಸದರಿ ಪತ್ರದಲ್ಲಿ ಚಿತ್ರದುರ್ಗ ವ್ಯಾಪಕ ಅಭಿವೃದ್ಧಿ ಯೋಜನೆಯಲ್ಲಿ ಮೇಲ್ಕಂಡ ಸರ್ವೆ ನಂಬರಿನ ವಸತಿ ವಿನ್ಯಾಸದಲ್ಲಿ ಬಯಲು ಜಾಗವನ್ನು ಮನ್ನಾ ಮಾಡಿ ಸರ್ಕಾರವು ಪರಿಷ್ಕೃತಗೊಳಿಸುವ ಭೂ ಉಪಯೋಗ ಬದಲಾವಣೆ ಶುಲ್ಕವನ್ನು ಸದರಿ ಪ್ರಕರಣಕ್ಕೆ ಅನ್ವಯಿಸುವ ಷರತ್ತಿಗೆ ಒಳಪಟ್ಟು ಬಡಾವಣೆ ನಕಾಶೆಯನ್ನು ಮಂಜೂರು ಮಾಡುವಂತೆ ತಿಳಿಸಲಾಗಿತ್ತು."

ಇನ್ನೊಂದು ಹೆಜ್ಜೆ ಮುಂದೆ ಹೋಗುತ್ತಾರೆ.

" ಈ ಬಗೆ ಮತ್ತೆ ಕೂಲಂಕೂಷವಾಗಿ ಪರಿಶೀಲಿಸಿ ಸದರಿ ಪತ್ರದಲ್ಲಿ

ಜಾಗವನ್ನು ಮಾನ್ಯ ಮಾಡಬೇಕೆಂದು, ಮತ್ತು ಅಭಿವೃದ್ಧಿ ಶುಲ್ಕವನ್ನು ಹಳೆಯದರದಲ್ಲಿ ವಸೂಲಿ ಮಾಡಿ ಬಡಾವಣೆಯ ನಕಾಶೆಯನ್ನು ಮಂಜೂರು ಮಾಡುವಂತೆ ಕೋರಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ. "

ಇದಕ್ಕಿಂತ ನಾಚಿಕೆಗೇಡಿನ ಸರ್ಕಾರಿ ಸೂಚನೆ ಬೇರೆ ಯಾವುದಾದರೂ ಇದೆಯೇ? ಏತಕ್ಕೋಸ್ಕರ ನಿಮಗೆ ಈ ಕಾನೂನು ಬೇಕು? ಟೌನಿಂಗ್ ಪ್ಲಾನಿಂಗ್ - ಕಂಟ್ರಿ ಪ್ಲಾನಿಂಗ್ ಆಕ್ಟ್ ಎಂದು ಹೇಳಿದರಲ್ಲ ಏಕೆ ಬೇಕು ಸ್ವಾಮಿ? ಇದರ ವ್ಯವಹಾರ ಏನಾಗಿದೆ? ಏತಕ್ಕೋಸ್ಕರ ಹೀಗೆ ಮಾಡುತ್ತೀರಿ? ನಾನೇ ಅರ್ಜಿಕೊಡುತ್ತೇನೆ. ನಾನು ನಾಲ್ಕು ಎಕರೆಯನ್ನು ಅಥವಾ ಐದು ಎಕರೆಯನ್ನು, ಒಂದು ಎಕರೆಯನ್ನು ನಾನು ಹೊಸ ನಿವೇಶನವನ್ನು ಮಾಡಿಕೊಳ್ಳುವುದಕ್ಕೆ ಜ್ಞಾಪನಮಾಡಿಕೊಳ್ಳುತ್ತೇನೆ. ಹಾಗಾದರೆ ನನಗೇ ಕೊಡಿ. ಹೀಗೆ, ತಮಗೆ ಇಷ್ಟ ಬಂದಂಥ ರೀತಿಯಲ್ಲಿ ತಮ್ಮದೇ ಆದಂಥ ಪ್ರಭಾವದಿಂದಾಗಿ, ಕಾರ್ಯದಿಂದಾಗಿ ಇಂತಹ ಕಾನೂನಿಗೆ ವಿರುದ್ಧವಾದಂಥ ಸೂಚನೆಗಳು ನಿಮ್ಮ ಇಲಾಖೆಯಿಂದ ಇದೊಂದೇ ಅಲ್ಲ, ಇನ್ನೂ ಹಲವಾರು ನೀಡಿದ್ದೀರಿ. ಇದನ್ನೇ ಮಾಡುವುದಕ್ಕೆ ನಿಮ್ಮ ಇಲಾಖೆ ಇರುವುದು? ನಿಮ್ಮ ಇಲಾಖೆ ಯಾತಕ್ಕೆ ಇದೆಯೆಂದರೆ, ಈ ದೇಶದಲ್ಲಿ ಯಾವನಾದರೂ ಬಂಡವಾಳಶಾಹಿ ಇದ್ದಾನೆ, ಆತನಿಗೆ ಕಾನೂನು ಎಲ್ಲಾ ಬಿಟ್ಟು, ಎಂ.ಎಸ್. ರಾಮಯ್ಯನವರಿಂದ ಹಿಡಿದು ನಮ್ಮ ಊರಿನ ಒಬ್ಬ ವ್ಯಕ್ತಿಯವರೆಗೆ ಸಹ ತಾವು ಕಾನೂನನ್ನು ಉಲ್ಲಂಘನೆ ಮಾಡಿ ಅವರಿಗೆ ಸಹಾಯ ಮಾಡುವುದಕ್ಕೆ ನಿಮ್ಮ ಇಲಾಖೆ ಇದೆಯೇ ಹೊರತಾಗಿ ಈ ದೇಶದ ಪಟ್ಟಣಗಳು ಯೋಜನಾಬದ್ಧವಾಗಿ ಸರಿಯಾದ ರೀತಿಯಲ್ಲಿ ನಡೆಯುವುದಕ್ಕೆ ತಮ್ಮ ಕಾನೂನು ಉಪಯೋಗ ಆಗುತ್ತಾ ಇಲ್ಲ. ಇದಕ್ಕಿಂತ ಬೇರೆ ನಿದರ್ಶನ ಬೇಕಾಗಿಲ್ಲ. ನಾನು ನೇರವಾಗಿ ಕೇಳುತ್ತಿದ್ದೇನೆ. ಈ ರೀತಿಯಾದಂಥ ಸೂಚನೆಗಳು ನಿಮ್ಮ ಇಲಾಖೆಯಿಂದ ಹೋದರೆ, ನೀವು ಈ ಕಾನೂನಿನ ಅವಶ್ಯಕತೆ ಮೇಲೆ ತಿದ್ದುಪಡಿಯನ್ನು ಏನು ತಂದಿದ್ದೀರಿ, ಅದರ ಅವಶ್ಯಕತೆ ಏನಿದೆ? ಇವತ್ತು ಸಿಡಿಪಿ ಇರಬಹುದು, ಓಡಿಪಿ ಇರಬಹುದು ಔಟ್ಲೈನ್ ಡೆವಲಪ್ಮೆಂಟ್ ಪ್ಲಾನ್ ಅಥವಾ ಕಾಂಪ್ರಹೆನ್ಸಿವ್ ಡೆವಲಪ್ಮೆಂಟ್ ಪ್ಲಾನ್ ಅನ್ನು ಏನು ಆಕ್ಷೇಪಣೆಗಳನ್ನು ಹಾಕಲಿಕ್ಕೆ ಒಂದು ತಿಂಗಳಾದರೇನು, ಮೂರು ತಿಂಗಳಾದರೇನು? ಇವತ್ತಿನ ದಿವಸ ಗ್ರೀನ್ಬೆಲ್ಟ್ ಏನಿದೆ, ಯಾವುದಕ್ಕೂ ಒಂದು ಪ್ರಸ್ತಾವನೆಯನ್ನು ನಾವು ಕಳುಹಿಸಿದರೆ, ಸ್ವಾಮಿ, ಇಲ್ಲಿ ಒಂದು ಬೋರ್ಡು ಹಾಕಿಬಿಡಿ. ನಿಮ್ಮ ಇಲಾಖೆಯ ಮುಂದೆ ಒಂದು ಬೋರ್ಡು ಹಾಕಿ. ಇಂತಿಂಥ ಪ್ರಸ್ತಾವನೆಗಳಿಗೆ ಇಷ್ಟಿಷ್ಟು ಹಣ ಖರ್ಚುಮಾಡಿದರೆ ಇದು ಆಗುತ್ತದೆ ಎಂದು ಬೋರ್ಡು ಹಾಕಿದರೆ ನಿಜವಾಗಿಯೂ ಸಹ ಅದಕ್ಕಿಂತ ಬೇರೆ ಒಳ್ಳೆಯ ಕೆಲಸ ಯಾವುದೂ ಇಲ್ಲ. ಇವತ್ತಿನ ದಿವಸ ನಿಮ್ಮ ಇಲಾಖೆ ನಡೆಯುತ್ತಿರುವುದೇ ಹಾಗೆ. ನಾನು ನೇರವಾಗಿ ಆರೋಪ ಮಾಡುತ್ತೇನೆ. ಇವೆಲ್ಲಾ ಸಂಶಯಗಳನ್ನು ನಾನು ಹೇಳುತ್ತಿದ್ದೇನೆ. ಈ ಎಲ್ಲಾ ಸಂಶಯಗಳಿಂದ ದೂರ ಆಗಬೇಕಾದರೆ ನಿಮ್ಮ ಇಲಾಖೆ ಕಾನೂನು ಪ್ರಕಾರ ನಡೆಯಬೇಕು. ಇವತ್ತಿನ ದಿವಸ ಕಾನೂನಿಗೆ ವಿರುದ್ಧವಾಗಿ ನಿಮ್ಮ ಇಲಾಖೆ ನಡೆಯುತ್ತಿದೆ ಎಂದು ಹೇಳುವುದಕ್ಕೆ ಇಂತಹ ಅನೇಕ ಸರ್ಕಾರಿ ಸೂಚನೆ, ಆದೇಶಗಳನ್ನು ನಾನು ನೀಡಬಲ್ಲೆ. ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಾನು ಅವರನ್ನು ಕೇಳುತ್ತಿದ್ದೇನೆ, ಈ ರೀತಿಯ ಕಾನೂನು ಮತ್ತು ನಿಯಮಗಳನ್ನು ಏನು ಮಾಡಿಕೊಂಡಿದ್ದಾರೆ, ಬೈಲಾಗಳು ಏನಿವೆ, ಇವೆಲ್ಲದಕ್ಕೂ ವಿರುದ್ಧವಾಗಿ, ನಾವು ಮಾಡುವುದಿಲ್ಲ. ನಾವು ಮಾಡಿದರೆ ನೀವು ಕ್ರಮ ತೆಗೆದುಕೊಳ್ಳಬೇಕು. ನಗರಾಭಿವೃದ್ಧಿ ಮಂಡಳಿಯವರು ಏನಾದರೂ ಮಾಡಿದರೆ ಕ್ರಮ ತೆಗೆದುಕೊಳ್ಳಬೇಕು. ಅದಕ್ಕೆ ಬದಲಾಗಿ ಇಲ್ಲಿಂದ ಸೂಚನೆ, ಈ ರೀತಿಯಾಗಿ ಮಾಡಿ ಎಂದು ಹೋಗುತ್ತದೆ. ಇದಕ್ಕಿಂತ ನಾಚಿಕೆಗೇಡಿತನದ

ಕೆಟ್ಟ ಆಡಳಿತವನ್ನು ನಾವೆಂದಿಗೂ ನೋಡುವುದಕ್ಕೆ ಸಾಧ್ಯವಿಲ್ಲ. ಇದನ್ನು ಏನಾದರೂ ಸರಿಪಡಿಸುವುದಕ್ಕೆ ಮಾನ್ಯ ಮಂತ್ರಿಗಳು ಮನಸ್ಸು ಮಾಡುತ್ತಾರೆಯೇ? ಇದಕ್ಕೆ ಏನು ಹೇಳುತ್ತಾರೆ ಎಂದು ನಾನು ತಿಳಿಯಬಯಸುತ್ತಾ ಇವತ್ತಿನ ದಿವಸ ಏನು ತಾವು ಏನು ಈ ಅವಧಿಯನ್ನು ಕಡಿಮೆ ಮಾಡಿದ್ದೀರಿ, ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತಾ ನನ್ನ ಮಾತನ್ನು ಪೂರೈಸುತ್ತೇನೆ.

+ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಅಧ್ಯಕ್ಷರೇ, ಮಾನ್ಯ ಏಕಾಂತಯ್ಯನವರು ಹೇಳಿದವಿಷಯಕ್ಕೆ ನನ್ನ ಸಹಮತವನ್ನು ವ್ಯಕ್ತಮಾಡುತ್ತೇನೆ. ಬಂಗಾರಪೇಟೆ ಟಿ.ಎಂ.ಸಿ. ಜಮೀನನ್ನು ಸುಮಾರು 50 ಲಕ್ಷ ರೂಪಾಯಿ ಬೆಲೆಬಾಳತಕ್ಕಂಥ ಬಂಗಾರಪೇಟೆ ಮುನಿಸಿಪಾಲಿಟಿಯ ಸ್ವತ್ತು ಏನಿತ್ತು, ಖಾತಾ ಮಾಡಬಾರದು ಎಂದು ನಾನು ಅಬ್ಜೆಕ್ಷನ್ ಕೊಟ್ಟಿದ್ದೆ. ಅದನ್ನು ಹೈಕೋರ್ಟು ರಿಜೆಕ್ಟ್ ಮಾಡಿದೆ. ಹೈಕೋರ್ಟಿನ ಆದೇಶವನ್ನು ಉಲ್ಲಂಘನೆ ಮಾಡಿ, ನಾನು ಕೊಟ್ಟಿರತಕ್ಕಂಥ ಅಬ್ಜೆಕ್ಷನ್ ಅನ್ನು ಉಲ್ಲಂಘನೆ ಮಾಡಿ, ಸುಮಾರು 50 ಲಕ್ಷ ರೂಪಾಯಿ ಬೆಲೆಬಾಳತಕ್ಕಂಥ ಬಂಗಾರುಪೇಟೆಯ ಮುನಿಸಿಪಾಲಿಟಿಗೆ ಸೇರಿದ ಜಮೀನನ್ನು ಖಾತಾ ಮಾಡಿದ್ದಾರೆ. ಆಮೇಲೆ ಸೆಕ್ರೆಟರಿಯವರು ಇದ್ದರು. ಅವರನ್ನು ಭೇಟಿ ಮಾಡಿದೆ. ಅವರು ಅದನ್ನು ಸ್ಟಾಪ್ ಮಾಡಿದರು. ಆದರೆ ಮತ್ತೆ ಮೊನ್ನೆ ಸೆಪ್ಟೆಂಬರ್ನಲ್ಲಿ ಅದೇ ಆದೇಶವನ್ನು ಕೊಟ್ಟು ಮಾಡಿದ್ದಾರೆ. ಈ ವಿಷಯವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೂ ಕೂಡ ತಂದಿದ್ದೇನೆ. ಅವರ ಆದೇಶದಲ್ಲಿ ನಾರಾಯಣಸ್ವಾಮಿಯವರು ಕೊಟ್ಟಿರತಕ್ಕಂಥ ಪತ್ರವನ್ನು ತಿರಸ್ಕಾರ ಮಾಡಿ...

ಶ್ರೀ ಚೌಡರೆಡ್ಡಿ : ಅವರು ಬೇರೆ ಸಂದರ್ಭದಲ್ಲಿ ಮಾತನಾಡಲಿ. ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ್ ಪ್ರಕಾರ ತಿದ್ದುಪಡಿ ಬಗ್ಗೆ ಮಾತನಾಡಬೇಕೇ ಹೊರತು ಮುನಿಸಿಪಾಲಿಟಿ ಬಗ್ಗೆ ಮಾತನಾಡಿದರೆ, ಅದಕ್ಕೂ ಇದಕ್ಕೂ ಸಂಬಂಧ ಬರುವುದಿಲ್ಲ.

ಶ್ರೀ ಎಂ. ನಾರಾಯಣಸ್ವಾಮಿ : ತಿದ್ದುಪಡಿಗೆ ನನ್ನ ಸಲಹೆಯನ್ನು ಕೊಡುವುದರರ ಮೂಲಕ ತಿದ್ದುಪಡಿಗೆ ನನ್ನ ಒಪ್ಪಿಗೆಯನ್ನು ಕೊಡುತ್ತಾ ಇದ್ದೇನೆ. ನೀವು ತಿದ್ದುಪಡಿಯನ್ನು ಮಾಡಿ ಆದರೆ ಇಂತಹ ಅನಾಹುತಗಳನ್ನು....

ಶ್ರೀ ಬಿ.ಎಚ್. ಬನ್ನಿಕೋಡ್ : ಅಧ್ಯಕ್ಷರೇ, ಕಾನೂನನ್ನು ತರತಕ್ಕದ್ದು ನಡೆದುಕೊಳ್ಳುವುದಕ್ಕೆ. ಆ ಪ್ರಕಾರ ನಡೆದುಕೊಂಡಿದ್ದರೆ ತಿದ್ದುಪಡಿಯ ಅವಶ್ಯಕತೆ ಇರುತ್ತಿತ್ತೇ? ಸರ್ಕಾರ ಕಾನೂನು ಪ್ರಕಾರ ನಡೆದುಕೊಂಡಿದ್ದರೆ, ಈ ತಿದ್ದುಪಡಿಯ ಅಗತ್ಯವಿತ್ತೇ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಎಂ. ನಾರಾಯಣಸ್ವಾಮಿ : ಆದ್ದರಿಂದ ನಗರಾಭಿವೃದ್ಧಿ ಪ್ರಾಧಿಕಾರಿಯವರೇ ಅವರಿಗೆ ಆದೇಶ ಕೊಟ್ಟಿರುವುದು. ಟೌನ್ಮುನಿಸಿಪಾಲಿಟಿಗೆ ಸಂಬಂಧಪಟ್ಟರೂ ಕೂಡ ಈ ಇಲಾಖೆಯಿಂದ, ಇಲ್ಲಿಂದ ಖಾತೆ ಮಾಡಿ ಎಂಬ ಆದೇಶ ಹೋಗಿದೆ. ಅದರ ಪ್ರಕಾರ ಒಬ್ಬ ಎಕ್ಸ್ ಮುನಿಸಿಪಾಲಿಟಿ ಪ್ರೆಸಿಡೆಂಟರು ಸತ್ತಿದ್ದಕ್ಕೆ ಸಂತಾಪಸೂಚಕ ಸಭೆಯನ್ನು ಕರೆದಿದ್ದರೆ, ಆ ಸಭೆಯಲ್ಲೇ ಇದನ್ನು ಖಾತಾ ಮಾಡಬಹುದು ಎಂದು ಹೇಳಿ ಅಕ್ಸೆಪ್ಟ್ ಆಗಿದೆ. ಅದರ ಬಗ್ಗೆ ನಾವು ಕೋರ್ಟಿಗೆ ಹೋಗುತ್ತಿದ್ದೇವೆ. ಆದ್ದರಿಂದೇ ಇದರ ಬಗ್ಗೆ ಪರಿಶೀಲನೆ ಮಾಡಿ. ಇದನ್ನು ನಾನು ಹೌಸ್ನಲ್ಲಿ ಬೇರೆ ರೂಪದಲ್ಲಿ ಪ್ರಸ್ತಾಪ ಮಾಡುತ್ತೇನೆ.

ಆದ್ದರಿಂದ, ಇದು ರೆಕಾರ್ಡ್ ಆಗಿರಲಿ ಎನ್ನುವ ದೃಷ್ಟಿಯಿಂದ ನಾನು ಮಾಡಿದ್ದೇನೆ. ತಾವು ತಂದಿರುವ ಈ ತಿದ್ದುಪಡಿಗೆ ನನ್ನ ಒಪ್ಪಿಗೆಯನ್ನು ಕೊಡುತ್ತೇನೆ. ಆದರೆ, ಇದರ ಬಗ್ಗೆ ಸಭೆ ಪರಿಶೀಲನೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಚೌಡರೆಡ್ಡಿ : ಅವರು ಪ್ರತ್ಯೇಕವಾಗಿ ಕೊಡಲಿ. ಕಾನೂನು ಪ್ರಕಾರ ಪರಿಶೀಲನೆ ಮಾಡೋಣ; ಅದಕ್ಕೇನೂ ಅಭ್ಯಂತರವಿಲ್ಲ. ಸನ್ಮಾನ್ಯ ಅಧ್ಯಕ್ಷರೇ ಈಗತಾನೇ ಸನ್ಮಾನ್ಯ ಏಕಾಂತಯ್ಯನವರು ಮಾತನಾಡಿದರು. ಚೇಂಜ್ ಆಫ್ ಲ್ಯಾಂಡ್ ಯೂಸ್ ಬಗ್ಗೆ ಮಾತನಾಡಿದ್ದಾರೆ. ಇದರಲ್ಲಿ ಅವರು ತೋರಿಸುತ್ತಾ ಇದ್ದಾರೆ. ಅದರ ಪ್ರಕಾರ ಇಲ್ಲಿ ಡೆವಲಪ್ಮೆಂಟ್ ಅಥಾರಿಟಿ ಇರುತ್ತದೆ. ಜೋನಲ್ ರೆಗ್ಯುಲೇಷನ್ಸ್ ಏನಿದೆಯೋ ಅದರ ಬಗ್ಗೆ ಡೆವಲಪ್ಮೆಂಟ್ ಅಥಾರಿಟಿಯಲ್ಲಿ ಸಂಬಂಧಪಟ್ಟ ಶಾಸಕರೆಲ್ಲಾ ಪ್ರಸ್ತಾಪ ಮಾಡುತ್ತಾರೆ. ಅವರೇನಾದರೂ ಚೇಂಜ್ ಆಫ್ ಲ್ಯಾಂಡ್ ಯೂಸ್ ಇದ್ದರೆ, ಕಾನೂನು ಪ್ರಕಾರ ಅದನ್ನು ಕಳುಹಿಸುತ್ತಾರೆ. ಕಾನೂನು ಪ್ರಕಾರ ಇದ್ದರೆ, ಚೇಂಜ್ ಆಫ್ ಲ್ಯಾಂಡ್ ಯೂಸ್ಗೆ ಕೊಡುತ್ತೇವೆ. ಅದುಬಿಟ್ಟು, ಇಲ್ಲಿ ಬಂದಿರತಕ್ಕಂತಾದ್ದು....

ಶ್ರೀ ಹೆಚ್. ಏಕಾಂತಯ್ಯ : ಕ್ಷಮಿಸಬೇಕು, ನಾನು ಅದನ್ನು ಹೇಳಲಿಲ್ಲ, ನಾನು ಕೊಟ್ಟಿಲ್ಲ. ನಾನು ಇಲ್ಲಿ ಚೇಂಜ್ ಆಫ್ ಲ್ಯಾಂಡ್ ಯೂಸ್ ಬಗ್ಗೆ ಹೇಳುತ್ತಾ ಇಲ್ಲ. ನಾನು ಮಾನ್ಯ ಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಾನು ಉಪಯೋಗದ ಬದಲಾವಣೆ ಬಗ್ಗೆ ಮಾತನಾಡುತ್ತಿಲ್ಲ. ತಾವು ವಿನ್ಯಾಸಗಳನ್ನು ಅನುಮೋದನೆ ಮಾಡುವಂಥ ಸಂದರ್ಭದಲ್ಲಿ ಪ್ಲಾನ್ಸ್ ಎಂದು ನಾವೇನು ಹೇಳುತ್ತೇನೆ. ಆ ಪ್ಲಾನುಗಳನ್ನು ಅನುಮೋದನೆ ಮಾಡುವಂಥ ಸಂದರ್ಭದಲ್ಲಿ ನಾನು ಜೋನಲ್ ರೆಗ್ಯುಲೇಷನ್ ಮಾಡಿಕೊಂಡಿದ್ದೇನೆ. ಇಂತಿಷ್ಟು ಪ್ರಮಾಣದಲ್ಲಿ ನಮಗೆ ರಸ್ತೆ ಇರಬೇಕು, ಪಾರ್ಕ್ ಇರಬೇಕು, ಓಪನ್ ಪ್ಲೇಸ್ ಬಿಡಬೇಕು, ಪಬ್ಲಿಕ್ ಪರ್ಪೋಸ್ಗೆ ಇದನ್ನು ಕೊಡಬೇಕೆಂದು ಮಾಡಿದ್ದೇನೆ. ಇವರು ಏನು ಹೇಳುತ್ತಾರೆ,ನೀವು ಇಂಥವರ ಹತ್ತಿರ ಪಾರ್ಕಿಗೆ ಜಾಗ ಬಿಡಿಸಬೇಡಿ, ಎಲ್ಲಾ ಸೈಟು ಮಾಡಿಕೊಡಿ ಎಂದು ಹೇಳುತ್ತಾರೆ. ನಾವೇನೂ ರೆಕಮೆಂಡ್ ಮಾಡಿಲ್ಲ, ಸರ್ಕಾರದಿಂದ ಸೂಚನೆ, ಏನು, ಇಲ್ಲಿ ಪಾರ್ಕಿನ ಅವಶ್ಯಕತೆ ಇಲ್ಲ, ಇಲ್ಲಿ ಪಬ್ಲಿಕ್ ಪ್ರೆಮಿಸಸ್ಗೇನೂ ಜಾಗ ಬೇಕಾಗಿಲ್ಲ. ನಾನು ಹೇಳುತ್ತೇನೆ. ನೀವು ಒಬ್ಬರಿಗೇ ಏಕೆ ಕೊಡುತ್ತೀರಿ? ಎಲ್ಲರಿಗೂ ಕೊಡಿ. ಬೆಂಗಳೂರು ನಗರದಿಂದ ಹಿಡಿದು, ಚಿತ್ರದುರ್ಗದವರೆಗೂ ಸಹ ಯಾರು ಯಾರು ಭೂಮಾಲೀಕರು ಇದ್ದಾರೆ, ಯಾರು ಯಾರು ಹೊಸ ಪ್ಲಾನ್ಗಳನ್ನು ಮಾಡುತ್ತಿದ್ದಾರೆ. ಅವರಿಗೆಲ್ಲಾ ಸಹಾಯ ಮಾಡಿ. ಅದನ್ನು ನಾನು ಕೇಳುತ್ತಿರುವುದು. ನೀವು ಈ ರೀತಿ ಒಬ್ಬರಿಗೊಂದು, ಒಬ್ಬರಿಗೊಂದು ಏಕೆ ಮಾಡುತ್ತಿದ್ದೀರಿ? ನೀವು ಹೇಳಿ, ಎಲ್ಲಿಯೂ ಪಾರ್ಕ್ ಬೇಡ, ಎಲ್ಲಿಯೂ ಓಪನ್ ಸ್ಪೇಸ್ ಬೇಡ, ಯಾರು ಬಂಡವಾಳಗಾರರು ಇದ್ದಾರೆ, ಅವರಿಗೆ ಲಾಭ ಮಾಡುವ ಉದ್ದೇಶದಿಂದ ನಾವು ಇಂತಹ ಬದಲಾವಣೆಗಳನ್ನು ಮಾಡುತ್ತೇವೆ. ಇದು ನಮ್ಮ ಸರ್ಕಾರದ ನೀತಿ ಈ ಮಾತನ್ನು ಹೇಳಿ, ನಮ್ಮದೇನೂ ತಕರಾರು ಇಲ್ಲ.

ಶ್ರೀ ಚೌಡರೆಡ್ಡಿ : ಅವರು ಏನು ಹೇಳುತ್ತಾರೆ, ಅದನ್ನು ಸ್ಪೆಸಿಫಿಕ್ ಆಗಿ ತೆಗೆದುಕೊಂಡು ಬಂದರೆ, ಅದನ್ನು ನಾನು ನೋಡುತ್ತೇನೆ. ಇನ್ನು, ಬರೀ ಟೈಮ್ ಬಗ್ಗೆ ಮತ್ತು ತಾವು ತಿಳಿಸಿರತಕ್ಕಂತಾದ್ದು, ಅದನ್ನು ಸ್ಪೆಸಿಫಿಕ್ ಆಗಿ ತೆಗೆದುಕೊಂಡು ಬನ್ನಿ. ಎಕ್ಸಾಮಿನ್ ಮಾಡೋಣ. ಅದರಲ್ಲಿ ಏನು ತಪ್ಪಿದ್ದರೂ ಸರಿಪಡಿಸೋಣ. ಅದರಲ್ಲಿ ಏನಾಗಿದೆ ಎಂಬುದನ್ನು ನನ್ನ ಗಮನಕ್ಕೆ ತರಬೇಕೆಂದು ಹೇಳುತ್ತೇನೆ. ಈಗ ಈ ಸಭೆಯೇ ಮುಂದೆ ತಿಳಿಸುತ್ತಾ, ಮೂರು ತಿಂಗಳಿನದು, ಒಂದು ತಿಂಗಳು ಎಂದು ಹೇಳಿ ಅಂಗೀಕರಿಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ, "1993ನೇ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಅಧ್ಯಕ್ಷರು : 2ನೇ ಖಂಡವು ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(2ನೇ ಖಂಡವು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾಪನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾಪನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, "1993ನೇ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1993ನೇ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಈಗ ಪಂಚಾಯತ್ ರಾಜ್ ಬಿಲ್ ತೆಗೆದುಕೊಳ್ಳೋಣ. ನಾಳೆ ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾಳೆ ಇನ್ನೂ ಮಾತನಾಡುವವರಿದ್ದಾರೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಇನ್ನೂ ಬಿಲ್ಸ್ ಇವೆ. ಎರಡು ಸ್ಯಾಲರಿ ಬಿಲ್ಸ್ ಇವೆ. ಇದೊಂದು ಇವತ್ತು ಮುಗಿಸಿಬಿಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಾಳೆ ತೆಗೆದುಕೊಳ್ಳಿ. ನಮಗೆ ಮೂಡ್ ಇಲ್ಲ. ನಾನು ಇದರ ಬಗ್ಗೆ ಮಾತನಾಡಬೇಕಾಗಿದೆ. ನಾನು ಕೆಲವು ಹೈಕೋರ್ಟ್ ರಿಪೋರ್ಟ್ಗಳನ್ನು ರೆಫರೆನ್ಸ್ ಮಾಡಬೇಕಾಗಿದೆ.

ಅಧ್ಯಕ್ಷರು : ನಾಳೆ ತೆಗೆದುಕೊಳ್ಳೋಣ. ಈಗ ಒಂದು ಅಧಿಕೃತ ನಿರ್ಣಯ ಇದೆ ಅದನ್ನು ತೆಗೆದುಕೊಳ್ಳೋಣ.

ಅಧಿಕೃತ ನಿರ್ಣಯ

ದಾಂಡೇಲಿ ವನ್ಯಮೃಗದ ವ್ಯಾಪ್ತಿಯನ್ನು ಬದಲಾಯಿಸುವ ಬಗ್ಗೆ

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ಸಚಿವರು) :ಮಾನ್ಯ ಅಧ್ಯಕ್ಷರೇ "ದಾಂಡೇಲಿ ವನ್ಯಮೃಗದ ವ್ಯಾಪ್ತಿಯನ್ನು ಬದಲಾಯಿಸುವ ಬಗ್ಗೆ ಈ ಕೆಳಕಂಡ ಅಧಿಕೃತ ನಿರ್ಣಯವನ್ನು ಮಂಡಿಸುತ್ತೇನೆ."

"ಅಧಿಸೂಚನೆ"

"ಕರ್ನಾಟಕ ಸರ್ಕಾರವು ದಿನಾಂಕ 31ನೇ ಆಗಸ್ಟ್ 1ನೇ ಸೆಪ್ಟೆಂಬರ್ 87ರ ಅಧಿಸೂಚನೆ ಸಂಖ್ಯೆ ಎಸ್‌ಎನ್ಡಿ 150 ಎಪ್ಡಬ್ಲ್ಯೂಎಲ್ 81ರಲ್ಲಿ, ಅನುಸೂಚಿಯಲ್ಲಿ 83, 415,712ಹೆಕ್ಟೇರುಗಳು ಅಥವಾ 834,157ಚದರ ಕಿಲೋಮೀಟರುಗಳ ವಿಸ್ತೀರ್ಣವೆಂಬುದಾಗಿ ನಿರ್ದಿಷ್ಟಪಡಿಸಿರುವ ಸ್ಥಳ ಮತ್ತು ಪರಿಮಿತಿಗಳನ್ನು ಹೊಂದಿರುವ ಪ್ರದೇಶವನ್ನು "ದಾಂಡೇಲಿ ವನ್ಯಜೀವಿ ಅಭಯಾರಣ್ಯ" ಎಂಬುದಾಗಿ ಘೋಷಿಸಿರುವುದರಿಂದ. ಮತ್ತು ಕಾಳೀಜಲವಿದ್ಯುತ್ ಯೋಜನೆ, ಗಣಿ, ಕೈಗಾರಿಕೆಗಳು, ಅಂಬಿಕಾನಗರ ಎಂಬ ಹೊಸ ಪಟ್ಟಣ ಮತ್ತು ಪವರ್ ಹೌಸ್ ನಿರ್ಮಾಣಗಳು, ಸೂಪಾ ತಾಲ್ಲೂಕಿನ ಮುಳುಗಡೆ, ಜಾಯಿಪಾನಲ್ಲಿ ಹೊಸ ತಾಲ್ಲೂಕು ಕೇಂದ್ರಸ್ಥಾನದ ಸ್ಥಾಪನೆ ಮತ್ತು ಘೋಷಿತ ಅಭಯಾರಣ್ಯ ಪರಿಮಿತಿಗಳೊಳಗೆ ವಿಸ್ತರಿಸಿರುವ ದೊಡ್ಡ ಪ್ರಮಾಣದ ವಾಸ ಸ್ಥಳ-ಇವುಗಳ ಕಾರಣದಿಂದಾಗಿ ಉಂಟಾದ ತೊಂದರೆಗಳ ದೃಷ್ಟಿಯಿಂದ ದಾಂಡೇಲಿ ವನ್ಯಬೀತಿ ಅಭಯಾರಣ್ಯದ ಪರಿಮಿತಿಗಳನ್ನು ಮತ್ತು ಸರಹದ್ದುಗಳನ್ನು ಬದಲಾಯಿಸುವುದು ಅವಶ್ಯಕವೆಂದು ಕರ್ನಾಟಕ ಸರ್ಕಾರವು ಪರಿಗಣಿಸಿರುವುದರಿಂದ ಮತ್ತು ವನ್ಯಜೀವಿ ಅಥವಾ ಅದರ ಪರಿಸರವನ್ನು ಸಂರಕ್ಷಿಸುವ, ಸಂತಾನಾಭಿವೃದ್ಧಿ ಮಾಡುವ ಅಥವಾ ಬೆಳೆಸುವ ಉದ್ದೇಶಕ್ಕಾಗಿ ಜೀವಿ ಪರಿಸರ ಶಾಸ್ತ್ರ, ಪ್ರಾಣಿವರ್ಗ, ಸಸ್ಯವರ್ಗ, ಭೂ ಆಕೃತಿ ರಚನಾ ಶಾಸ್ತ್ರ, ನೈಸರ್ಗಿಕ ಅಥವಾ ಪ್ರಾಣಿ ಶಾಸ್ತ್ರದ ದೃಷ್ಟಿಯಿಂದ ಸಾಕಷ್ಟು ಮಹತ್ವವುಳ್ಳಂಥ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಸ್ಥಳ ಮತ್ತು ಪರಿಮಿತಿಗಳನ್ನು ಹೊಂದಿರುವ ಪ್ರದೇಶವನ್ನು ಅಭಯಾರಣ್ಯವೆಂದು ಬದಲಾಯಿಸಿ ಘೋಷಿಸಿರುವುದು ಅಪೇಕ್ಷಣೀಯವೆಂದು ಕಂಡುಬಂದಿರುವುದರಿಂದ.

ಈಗ, ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, 1972ರ (1972ರ ಕೇಂದ್ರ ಅಧಿನಿಯಮ 53)- 26ಎ ಪ್ರಕರಣದ (3)ನೇ ಉಪ-ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಸ್ಥಳ ಮತ್ತು ಪರಿಮಿತಿ ವಿಸ್ತೀರ್ಣವನ್ನು ಹೊಂದಿರುವ ಪ್ರದೇಶವನ್ನು "ದಾಂಡೇಲಿ ವನ್ಯಜೀವಿ ಅಭಯಾರಣ್ಯ" ವೆಂದು ಈ ಮೂಲಕ ಬದಲಾಯಿಸಿ ಘೋಷಿಸಿದೆ.

ಅನುಸೂಚಿ

ಜಿಲ್ಲೆಯ ಹೆಸರು	:	ಉತ್ತರ ಕನ್ನಡ
ಪ್ರದೇಶ	:	47501.05 ಹೆಕ್ಟೇರುಗಳು
		ಅಥವಾ
		475.018 ಚದರ ಕಿಲೋ ಮೀಟರುಗಳು.

ಸರಹದ್ದಿನ ವಿವರಣೆ

ಉತ್ತರ **:** ಇತರ ಸರಹದ್ದು, ಅನ್ಮೋಡ್, ಅನ್ಶಿ ಮತ್ತು ಉಳದಿ ಅರಣ್ಯಗಳ ಕಾರ್ಯಯೋಜನೆಯ X ಮತ್ತು XII ವಿಭಾಗ ಸಂಖ್ಯೆಗಳ ಕೂಡು ಜಾಗದಲ್ಲಿ ಗೋವಾ ರಾಜ್ಯ ಸರಹದ್ದಿನಿಂದ ಪ್ರಾರಂಭವಾಗಿ, ಪೂರ್ವದ ಕಡೆಗೆ ತಿರುಗಿ, ಅನ್ಮೋಡ್, ಅನ್ಶಿ ಮತ್ತು ಉಳದಿ ಅರಣ್ಯಗಳ ಸಾಮಾನ್ಯ ವಿಭಾಗ ಸರಹದ್ದಿನ X, XI ಮತ್ತು XII,

XIII ವಿಭಾಗಗಳುದ್ದಕ್ಕೂ ಸಾಗಿ ಸಾಮಾನ್ಯ ಸರಹದ್ದಿನ 17, 18, 14, 13ಎ, 13ಬಿ ಮತ್ತು 19ನೇ ಉಪ-ವಿಭಾಗಗಳುದ್ದಕ್ಕೂ ಹೋಗುತ್ತದೆ. ಅನಂತರ ಹಳಿಯಾಳ ಮಹಾರಣ್ಯಗಳ ವಿಭಾಗ ಸರಹದ್ದಿನ I ವಿಭಾಗದುದ್ದಕ್ಕೂ ಸಾಗಿ, ಮುಂದೆ ಸಾಮಾನ್ಯ ಸರಹದ್ದಿನ 19, 21 ಮತ್ತು 15ನೇ ಭಾಗದುದ್ದಕ್ಕೂ ಹೋಗುತ್ತದೆ. ಇಲ್ಲಿಂದ ಮುಂದೆ ಸರಹದ್ದು ಉತ್ತರ ದಿಕ್ಕಿನೆಡೆ ತಿರುಗಿ ಜಿಲ್ಲಾ-ಹಟೋಳಿ ರಸ್ತೆಯುದ್ದಕ್ಕೂ ಸಾಗಿ, ಪಟೋಳಿ ಸಮೀಪದ ಕೂಡು ರಸ್ತೆಯವರೆಗೆ ಬಂದು, ಮುಂದೆ ವಿಠನೋಳಿ ಮತ್ತು ಕುಳಗಿಯ ಮೂಲಕ ಪಟೋಳಿ-ಬೊಮ್ಮನಹಳ್ಳಿ ರಸ್ತೆಯುದ್ದಕ್ಕೂ ಸಾಗಿ, ಕಾಳೀ ನದಿಯ ಒಡ್ಡುದಾರಿಯವರೆಗೆ ಬಂದು, ಬೊಮ್ಮನಹಳ್ಳಿಯ ಸಮೀಪ . ಕಾಳೀನದಿಯನ್ನು ಹಾದುಹೋಗುತ್ತದೆ.

ಪೂರ್ವ : ಅನಂತರ ಸರಹದ್ದು ಕಾಳೀ ನದಿಯ ಜಲದಂಡೆಯ ಕೆಳ-ಪ್ರವಾದುದ್ದಕ್ಕೂ ಸಾಗಿ, ತಟ್ಟಿಹಳ್ಳ ಸಾಲೆಯು ಕಾಳೀ ನದಿಯನ್ನು ಕೂಡುವ ಜಾಗದವರೆಗೆ ಬಂದು, ಅಲ್ಲಿಂದ ಮುಂದೆ ಉಕ್ಕೈಹಳ್ಳವು ಕಾಳೀ ನದಿಯನ್ನು ಸೇರುವ ಜಾಗದಲ್ಲಿರುವ ಸುಳಗೇರಿ ಗ್ರಾಮದ ಸಮೀಪದ ಥಾನಿಲ್ ಸರಹದ್ದಿನ (ಕಾಳೀ ನದಿಯ ಕೆಳ-ಪ್ರವಾಹದುದ್ದಕ್ಕೂ ಸಹ) ಸಾಗುತ್ತದೆ.

ದಕ್ಷಿಣ : ಉಕ್ಕೈಹಳ್ಳವು ಎಲ್ಲಿ ಕಾಳಿನದಿಯನ್ನು ಸೇರುತ್ತದೋ ಅಲ್ಲಿಂದ ಸರಹದ್ದು ಪ್ರಾರಂಭವಾಗಿ, ಉಕ್ಕೈಹಳ್ಳ ಮೇಲು ಪ್ರವಾಹದುದ್ದಕ್ಕೂ ಸಾಗಿ, ಕಡತಹಳ್ಳಿ ಗ್ರಾಮದ ರಸ್ತೆಯು ಉಕ್ಕೈಹಳ್ಳವನ್ನು ದಾಟುವ ಜಾಗದವರೆಗೆ ಸಾಗಿ, ಸುಳಗೇರಿ ಕಡತಹಳ್ಳಿ ಗ್ರಾಮದ ರಸ್ತೆಯುದ್ದಕ್ಕೂ ಸಾಗಿ ಉಳವಿ ಗ್ರಾಮದವರೆಗೆ ಬರುತ್ತದೆ. ಅನಂತರ ಸರಹದ್ದು ಉಳವಿ-ಕುಂಜಾರವಾದ ರಸ್ತೆಯುದ್ದಕ್ಕೂ ಸಾಗಿ, ಮುಂದೆ ಕನೇರಿ ನದಿ ಹರಿಯುವ ಜಾಗದವರೆಗೆ ಬಂದು, ಕನೇರಿ ನದಿಯ ಮೇಲು ಪ್ರವಾಹದುದ್ದಕ್ಕೂ ಸಾಗುತ್ತದೆ. ಅಲ್ಲಿಂದ ಮುಂದೆ ಇದು ಕುಂಜಾರವಾಡ-ಕಾರವಾರ ರಸ್ತೆಗೆ ಸೇರಿ, ಅಲ್ಲಿಂದ ಮುಂದೆ ಕುಡಾಳ ಗ್ರಾಮದುದ್ದಕ್ಕೂ ಸಾಗಿ ಗೋವಾ ರಾಜ್ಯದ ಸರಹದ್ದಿನವರೆಗೆ ಹೋಗುತ್ತದೆ.

ಪಶ್ಚಿಮ : ಸರಹದ್ದು, ಗೋವಾ ರಾಜ್ಯದ ಸರಹದ್ದನ್ನುದ್ದಕ್ಕೂ ಸಾಗಿ ಪ್ರಾರಂಭದ ಜಾಗದವರೆಗೆ ಸಾಗುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಅನುಸೂಚಿ

ಕ್ರಮ ಸಂಖ್ಯೆ	ಅರಣ್ಯಗಳ ಹೆಸರು	ವಿಭಾಗಸಂಖ್ಯೆ	ಭಾಗಸಂಖ್ಯೆ ಉಪವಿಭಾಗ ಸಂಖ್ಯೆ	ಪ್ರದೇಶ ಹೆಕ್ಟೇರುಗಳಲ್ಲಿ (ಮೀ.ಅ.ಮಾತ್ರ)	ಸೇರಿಸಲಾದವುಗಳ ಹೆಸರು	ಹೆಕ್ಟೇರುಗಳಲ್ಲಿ ಪ್ರದೇಶ	ಅಭಯಾರಣ್ಯ ಸೇರಿಸಲಾದ ಪ್ರದೇಶ ಹೆಕ್ಟೇರುಗಳಲ್ಲಿ
1	2	3	4	5	6	7	8
1.	ಅನ್ಮೋಡ್, ಅನ್ಶಿ ಮತ್ತು ಉಳವಿ ಅರಣ್ಯಗಳು	XII	-	3496.56	-	-	3496.56
		XIII	-	2552.00	-	-	2552.00
		XIX	1, ಎ,ಬಿ,ಸಿ 2, ಎ,ಬಿ	1824.36	-	-	1824.36
		XX	1, ಎ,ಬಿ,ಸಿ 2, ಬಿ(ಅರ್ಧ) 3, ಎ(ಅರ್ಧ) ಬಿ,ಸಿ ಮತ್ತು ಡಿ.	2476.33	-	-	2476.33
2.	ಸೂಪಾ-ಜೋಯಿದಾ ಅರಣ್ಯಗಳು	-	9ಎ (ಅರ್ಧ) 9ಬಿ ೧ಎ 13ಎ ಮತ್ತು ಬಿ 15 (ಅರ್ಧ)ಮತ್ತು 17	9465.95	-	-	9464.95
3.	ಪಳಿಯಾಳ ಮಹಾರಣ್ಯಗಳ ವಿಭಾಗಗಳು	I	(ಉಪವಿಭಾಗ) 1 ರಿಂದ 10,11 (ಅರ್ಧ) 13, 14 ಮತ್ತು 20 ರಿಂದ 24				
		II	1 ರಿಂದ 10	13811.49	ಶಿಲೋಲಿ ಮತ್ತು	226.62	

			15 ರಿಂದ 21		ಸಣ್ಣಮಗ		
			23 ರಿಂದ 24		ವರ್ಣೋಲಿ, ಅಂಬಿಕಾನಗರ	428.85	13078.12
		IV	1 ರಿಂದ 29		ಕಾಲೋನಿ	77.80	
						733.37	
4.	ಗೊಂಡ ಅರಣ್ಯ	X	1 ರಿಂದ 26	8489.11	-	-	8489.11
			1 ರಿಂದ 26				
5.	ನಾಗಜಾರಿ ಅರಣ್ಯಗಳ	XI	1 ರಿಂದ 15	3351.76	ಪವರ್‌ಹೌಸ್ ಮತ್ತು ಸರ್ಜ್ ಟ್ಯಾಂಕ್	28.00	3323.76
6.	ಕಾಳೀನದಿ ಇಳಿಜಾರು ನೆಲ ವಿಭಾಗಗಳು.	XXXI	19 (ಅರ್ಧ) 20 ರಿಂದ 3೩	2796.64	-	-	2796.64
				48,263.20		761.37	47501.83 ಹೆಕ್ಟೇರುಗಳು ಅಥವಾ 475.018 ಚ.ಕಿ.ಮೀ.ಗಳು

(ಪ್ರಸ್ತಾಪ ಮಂಡಿಸಲ್ಪಟ್ಟಿತು)

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಮಂತ್ರಿಗಳು ಒಂದು ಅಧಿಸೂಚನೆಯನ್ನು ಅಧಿಕೃತ ನಿರ್ಣಯದ ಮುಖಾಂತರ ಇಟ್ಟಿದ್ದಾರೆ. ಆ ಒಂದು ಅಧಿಸೂಚನೆಯ ಪ್ರಕಾರ 1987ನೇ ಇಸವಿ ಆಗಸ್ಟ್ ಸೆಪ್ಟೆಂಬರ್ ತಿಂಗಳಲ್ಲಿ ಕರ್ನಾಟಕ ಸರ್ಕಾರ ದಾಂಡೇಲಿ ವನ್ಯಜೀವಿ ಅಭಯಾರಣ್ಯ ಎಂಬುದಾಗಿ ಘೋಷಣೆ ಮಾಡಿ ಕೆಲವು ಪ್ರದೇಶವನ್ನು ಒಂದು ಅನುಬಂಧದಲ್ಲಿ ಹೇಳಿತ್ತು. ಅದರ ಅಧಿಸೂಚನೆಯ ಪ್ರಕಾರ ದಾಂಡೇಲಿ ವನ್ಯ ಜೀವಿ ಅಭಯಾರಣ್ಯ ಇದರ ವ್ಯಾಪ್ತಿ ಸುಮಾರು 834 ಚದರ ಕಿಲೋಮೀಟರ್ ಇತ್ತು. ಅದೇ ರೀತಿ ರಾಷಟ್ರೀಯ ಉದ್ಯಾನ ವನ ಸಹ ಅವತ್ತಿನ ಒಂದು ಅಧಿಸೂಚನೆಯ ಪ್ರಕಾರ ರಾಷ್ಟ್ರೀಯ ಉದ್ಯಾನ ವನ ಅದು ಸುಮಾರರು 250 ಚದರ ಕಿಲೋಮೀಟರ್ ವ್ಯಾಪ್ತಿ ಇತ್ತು. ಈ ಒಂದು ಅಧಿಸೂಚನೆಯನ್ನು ತಾವು ಈಗ ಬದಲು ಮಾಡಿ ಏನು ಸುಮಾರು 834 ಚದರ ಕಿಲೋಮೀಟರ್ ಇತ್ತು ಅದನ್ನು ಕಡಿಮೆ ಮಾಡಲಿಕ್ಕೆ ಈ ಒಂದು ಹೊಸ ಅಧಿಸೂಚನೆಯನ್ನೂ ಈ ಸಭೆಯ ಮುಂದೆ ಇಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ಏತಕೋಸ್ಕರ ಈ 834 ಚದರ ಕಿಲೋ ಮೀಟರ್ ಅದರಲ್ಲಿ ಕೇವಲ 475 ಚದರ ಕಿಲೋಮೀಟರ್‌ಗೆ ಇಳಿಸಿದ್ದೀರಿ?

ಪ್ರೊ.ಎಂ.ಡಿ. ನಂಜುಂಡ ಸ್ವಾಮಿ : ಮಾನ್ಯ ಅಧ್ಯಕ್ಷರೇ, ತಾವು ಎರಡೂ ನೋಟೀಫಿಕೇಷನ್ಸ್ ಗಳನ್ನು ನೋಡಬೇಕು. ಒಂದು ದಾಂಡೇಲಿ ವೈಲ್ಡ್‌ವ್ ಸ್ಯಾಂಚ್ಯುಯರಿ 834 ಚದರ ಕಿಲೋಮೀಟರ್. ಇನ್ನೊಂದು ನೋಟಿಫಿಕೇಷನ್ ಅಣಸಿಯದ್ದು ಅದು inde pendent of that, 250 kms. ಒಟ್ಟು 1084.15 ಚದರ ಕಿಲೋಮೀಟರ್. ಅನ್ನು ಒಟ್ಟಾರರೆ 475 ಚದರ ಕಿಲೋಮೀಟರ್ ಗಳಿಗೆ ರೆಡ್ಯೂಸ್ ಮಾಡುವಂತಹ ಪ್ರಯತ್ನ ಇದು.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ಈಗ ಏನು ಅಣಸಿ ರಾಷ್ಟ್ರೀಯ ಉದ್ಯಾನ ವನಕ್ಕೆ ತಾವು 250 ಕಿಲೋಮೀಟರ್‌ಗಳನ್ನು ಮೀಸಲಾಗಿರಿಸಿದ್ದೀರಿ, ಅದರ ಕ್ಷೇತ್ರವನ್ನು ತಾವು ಏನು ನಿರ್ಧಾರ ಮಾಡಿದ್ದೀರಿ ಅದರ ಜೊತೆಗೆ 834 ಚದರ ಕಿಲೋಮೀಟರ್ ಸೇರಿ ಒಟ್ಟು 1084 ಚದರ ಕಿಲೋಮೀಟರ್ ಇತ್ತು. ಇವತ್ತಿನದಿವಸ ಅದನ್ನು 475 ಚದರ ಕಿಲೋಮೀಟರ್‌ಗೆ ಅದನ್ನು ತಾವು ಇಳಿಸಿದ್ದೀರಿ. ಏನು ಕಾರಣ? ತಮಗೆ ಗೊತ್ತಿರುವವ ಹಾಗೆ ಸನ್ಮಾನ್ಯ ಅಧ್ಯಕ್ಷರೇ, ಈ 1972 ವನ್ಯ ಜೀವಿ ಸಂರಕ್ಷಣೆ ಕಾಯ್ದೆ ಏನು ಇದೆ ಆ ಕಾಯ್ದೆ ಪ್ರಕಾರ ಇಂತಹ ಒಂದು ಅಭಯಾರಣ್ಯಗಳನ್ನು ತಾವು ಘೋಷಣೆ ಮಾಡುವುದು ಅದರ ವ್ಯಾಪ್ತಿಯನ್ನು ತಾವು ನಿರ್ಧಾರ ಮಾಡುವುದಕ್ಕೆ ತಮಗೆ ಅಧಿಕಾರ ಇದೆ. ಹಾಗಾದರೆ ಯಾವ ಸಂದರ್ಭದಲ್ಲಿ ತಾವು ಅದನ್ನು ಕಡಿಮೆ ಮಾಡಬಹುದು? ತಾವು ಹೇಳುತ್ತೀರಿ, ಕಾಳಿ ಜಲವಿದ್ಯುತ್ ಯೋಜನೆ ಎಷ್ಟು ಕಿಲೋಮೀಟರ್ ಇದೆ. ಸ್ವಾಮಿ.ಏನು ಅದು ಒಂದು ನೂರು ಕಿಲೋಮೀಟರ್ ಇದೆಯೇ ಆ ಕಾಳಿ ಜಲವಿದ್ಯುತ್ ಯೋಜನೆ? ಅದೇ ರೀತಿಯಲ್ಲಿ ಗಣಿಕೈಗಾರಿಕೆಗಳು ಏಕೆ ಸ್ವಾಮಿ ಕಾಡಿನಲ್ಲಿ ಗಣಿಕೈಗಾರಿಕೆಗಳಿಗೆ ಕೊಡುತ್ತೀರಿ? ಮೈನ್ ಓನರ್ಸ್ಗೆ ಏತಕ್ಕೆ ಕಾಡಿನಲ್ಲಿ ಕೊಟ್ಟಿದ್ದೀರಿ? ಇವತ್ತು ಏತಕ್ಕೆ ಹೊಸದಾಗಿ ಕೊಟ್ಟಿದ್ದೀರಿ? ಅಂಬಿಕಾ ನಗರ ಎಂಬ ಹೊಸ ಪಟ್ಟಣ ಇದೇನು ಒಂದು 500 ನೂರು ಚದರ ಕಿಲೋಮೀಟರ್ ಇದೆಯೇ? ಈ ರೀತಿಯಲ್ಲಿ ನಿಜವಲ್ಲದ ಕಾರಣಗಳನ್ನು ಹೇಳುವ ಮುಖಾಂತರ ಪಟ್ಟ ಭದ್ರ ಹಿತಾಸಕ್ತಿಗಳು ಯಾರು ಇದ್ದಾರೆ ಅವರಿಗೆ ಸಹಾಯ ಮಾಡುವಂತಹ ನೆಪ ಇದು ಆಗಿದೆ. ಆ ಒಂದು ಕಾರಣಕೋಸ್ಕರ ಈ ಒಂದು ನೆಪಗಳನ್ನು ಒಡ್ಡಿ ತಾವು ಈ ವಿಸ್ತೀರ್ಣವನ್ನು ಕಡಿಮೆ ಮಾಡಿದ್ದೀರಿ ಎನ್ನುವುದು ನಮ್ಮ ಆರೋಪ. ಇವತ್ತಿನದಿವಸ ಅಲ್ಲಿ ಏನು ಮಾಡುತ್ತಿದ್ದಾರೆ? ಈ ದಾಂಡೇಲಿ ಅರಣ್ಯದಲ್ಲಿ ತಮಗೆ ಇದು ಗೊತ್ತಿರಬಹುದು, ತಮಗೆ ಬಹಳ ಹತ್ತಿರ

ಇದೆ. ಈವತ್ತು ದಾಂಡೇಲಿ ಅರಣ್ಯದಲ್ಲಿ ಸಹಕಾರ ಸಂಘಗಳ ಮುಖಾಂತರ ಅಥವಾ ಸಹಕಾರ ಸಂಘಗಳ ಹೆಸರಿನಲ್ಲಿ ಇವತ್ತು ಏನು ಗುತ್ತಿಗೆ ಮಾಡುತ್ತಿದ್ದಾರೆ, ಆ ಗುತ್ತಿಗೆಯನ್ನು ಮಾಡುವಂತಹ ಜನರಿಗೆ ಲೈಸೆನ್ಸ್ ಕೊಡುತ್ತಿದ್ದಾರೆ. ಆ ಲೈಸೆನ್ಸ್ ಕೊಡುವುದು ಏತಕೋಸ್ಕರ? ಯಾವುದು ಮರ ಒಣಗಿ ಹೋಗಿದೆ ಅದನ್ನು ತೆಗೆಯಲಿಕ್ಕೆ ಹೋಗಬೇಕಂತೆ ಮತ್ತು ಯಾವುದು ಒಣಗಿ ಹೋಗಿದೆ ಆ ಮರಗಳನ್ನು ತೆಗೆಯುವ ನೆಪದಲ್ಲಿ ಇವತ್ತಿನದಿವಸ ಸಾವಿರಾರು ಮರಗಳನ್ನು ಇವತ್ತಿನದಿವಸ ಕಳ್ಳತನದಲ್ಲಿ ಮಾರಾಟ ಮಾಡುವುದಕ್ಕೆ ಅನುವು ಆಗುವಂತಹ ರೀತಿಯಲ್ಲಿ ಅಲ್ಲಿ ಈ ಒಂದು ಕೆಲಸವನ್ನು ಮಾಡಿದ್ದಾರೆ ಎನ್ನುವುದು ನನ್ನ ಆರೋಪ ಯಾವುದು, ಒಂದು 1084ಚದರ ಕಿಲೋಮೀಟರ್ ಇತ್ತು ಇವತ್ತು ಡ್ರಾಸ್ಟಿಕ್ ಆಗಿ 475 ಚದರ ಕಿಲೋಮೀಟರ್‌ಗಳಿಗೆ ಇಳಿಸಿದರೆ ಏನು ಕಾರಣ ಇದೆ. ಹೊಸ ಕಟ್ಟಡಗಳು ಏನಾದರೂ ಆಗಿದ್ದಾವೆಯೇ ಅಥವಾ ಕಾಳಿ ಜಲವಿದ್ಯುತ್ ಯೋಜನೆಯ ಅಡಿಯಲ್ಲಿ ಇಷ್ಟೊಂದು ಭೂಮಿ ಏನಾದರೂ ಮುಳಗಿಹೋಗಿದೆಯೇ? ಮಾನ್ಯ ಅಧ್ಯಕ್ಷರೇ, ಅದೆಲ್ಲಾ ಆಗಿಲ್ಲ. ತಮಗೆ ಗೊತ್ತಿರುವ ಪ್ರಕಾರ ವನ್ಯಜೀವಿ ಸಂರಕ್ಷಣೆ ಕಾಯ್ದೆ ಪ್ರಕಾರ ಒಂದು ಸಾರಿ ಅಭಯಾರಣ್ಯ ಅಥವಾ ರಾಷ್ಟ್ರೀಯ ಉದ್ಯಾನ ವನ ಎಂದು ಘೋಷಣೆ ಮಾಡಿದ ಮೇಲೆ ಅಲ್ಲಿ ಇವರು ಯಾರು ಹೋಗುವಂತೆ ಇಲ್ಲ. ಈ ರೀತಿ ಆದರೆ ಅಲ್ಲಿ ಯಾರು ಬೇಕಾದರೂ ಹೋಗಬಹುದು. ಅಲ್ಲಿರುವಂತ ಅರಣ್ಯ ಅಧಿಕಾರಿಗಳು ಅಥವಾ ರಾಜಕೀಯವಾಗಿ ಯಾರು ಪ್ರಭಾವಿಗಳು ಇರುತ್ತಾರೆ ಅವರು ಶಾಮೀಲಾಗಿ ಇವತ್ತಿನದಿವಸ ಅಲ್ಲಿಯ ಗಣಿ ಕೈಗಾರಿಕೆಗಳಿಗೆ ಮತ್ತು ಗಣಿ ಮಾಡುವಂತಹ ಜನಯಾರು ಇದ್ದಾರೆ ಅವರಿಗೆ ಸಹಾಯ ಮಾಡುವಂತಹ ದೃಷ್ಟಿಯಿಂದ ಇದನ್ನು ತಂದಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಈ ಮರಗಳನ್ನು ಯಾರು ಕಳ್ಳಸಾಗಾಣಿಕೆ ಮಾಡುತ್ತಿದ್ದಾರೆ ಯಾರು ಈ ದೇಶದ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ ಅವರಿಗೆ ಸಹಾಯವಾಗುವಂತಹ ರೀತಿಯಲ್ಲಿ ಇವತ್ತಿನ ದಿವಸ ಈ ಒಂದು ಕಟ್ಟಡದಲ್ಲಿ ಈ ಒಂದು ಪ್ರದೇಶದ ವಿಸ್ತೀರ್ಣವನ್ನು ಕಡಿಮೆ ಮಾಡಿದ್ದಾರೆ. ಅದಕ್ಕೆ ಸಕಾರಣಗಳು ಇಲ್ಲ ಆದ್ದರಿಂದ ನಾನು ಈ ಒಂದು ನಿರ್ಣಯ ಏನು ಇದೆ, ಇದನ್ನು ವಿರೋಧ ಮಾಡುತ್ತೇನೆ ಮತ್ತು ಮಾನ್ಯ ಮಂತ್ರಿಗಳು ಏನು ಹೇಳಿದ್ದಾರೆ ಸುಮಾರು 475 ಚದರ ಕಿಲೋಮೀಟರ್‌ಗಳಿಗೆ ಇಳಿಸಿದ್ದೇವೆಂದು ಅದಕ್ಕೆ ಸಕಾರಣವನ್ನು ಅವರು ಕೊಡಬೇಕಾಗುತ್ತದೆ ಅವರು ಹೇಳುತ್ತಾರೆ ಕಾಳಿ ಜಲವಿದ್ಯುತ್ ಯೋಜನೆ ಬಗ್ಗೆ ಹಾಗೂ ಹೊಸ ಪಟ್ಟಣಗಳ ಬಗ್ಗೆ ಹೇಳಿದ್ದಾರೆ. ಮತ್ತು ಗಣಿ ಕೈಗಾರಿಕೆಗಳು ಎಂದು ಹೇಳಿದ್ದಾರೆ ಮತ್ತು ಬೇರೆ ಬೇರೆ ಕಾರಣಗಳು ಏನು ಹೇಳಿದ್ದಾರೆ ಆ ಕಾರಣಗಳು ನಿಜವಾಗಲೂ ಸಹ ನೆಪಗಳು ಆಗಿವೆಯೇ ಹೊರತು ನಿಜವಾದಂತಹ ಕಾರಣಗಳು ಅಲ್ಲ. ಹಾಗೇನಾದರೂ ಆಗಿದ್ದರೆ ಯಾವ ಪ್ರದೇಶಕ್ಕೆ ಯಾವ ಯಾವ ಕೈಗಾರಿಕೆಗಳಿಗೆ ಯಾವಯಾವ ಹೊಸ ಪಟ್ಟಣಕ್ಕೆ ಕಾಳಿ ಜಲವಿದ್ಯುತ್ ಯೋಜನೆಗೆ ಎಷ್ಟು ಜಾಗವನ್ನು ಅವರು ಅಕ್ರಮಿಸಿಕೊಂಡಿದ್ದಾರೆ ಆ ಮಾತನ್ನು ಅವರು ಹೇಳಬೇಕಾಗುತ್ತದೆ ಈ ಒಂದು ಘೋಷಣೆಯ ಮುಖಾಂತರ ಅರಣ್ಯ ಮಂತ್ರಿಗಳು ಅಥವಾ ಈ ಸರ್ಕಾರ ಏನು ಇದೆ ಇದು ಗಣಿ ಮಾಲೀಕರ ಪರವಾಗಿ ಇರತಕ್ಕಂಥ ಸರ್ಕಾರ ಆಗಿದೆ. ಯಾರು ಗಣಿ ಮಾಡುತ್ತಾರೆ ಅವರ ಪರ ಇರತಕ್ಕಂಥ ಸರ್ಕಾರ ಎನ್ನುವುದು ಜನರಲ್ಲಿ ಹಾಗೂ ನಮ್ಮಲ್ಲಿ ಭಾವನೆ ಬಂದರೆ ಅದನ್ನು ನಿವಾರಣೆ ಮಾಡುವಂತಹ ಕೆಲಸ ಸರ್ಕಾರ ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದಂತಹ ವಿವರಣೆಯನ್ನು ಕೊಡಬೇಕೆಂದು ಹೇಳಿ ಇವತ್ತಿನದಿವಸ ಏನು ನಿರ್ಣಯವನ್ನು ಅವರು ತಂದಿದ್ದಾರೆ ಅದಕ್ಕೆ ನನ್ನ ವಿರೋಧವನ್ನು ವ್ಯಕ್ತ ಮಾಡಿ ನನ್ನ ಮಾತನ್ನು ಪೂರೈಸುತ್ತೇನೆ.

ಶ್ರೀ ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಅಧ್ಯಕ್ಷರೇ, ಸರ್ಕಾರ ಈ ನಿರ್ಣಯವನ್ನು ಮರ್ಯಾದೆಯಿಂದ ವಾಪಸ್ ತೆಗೆದುಕೊಳ್ಳಬೇಕು. ಕಾರಣ ಇಷ್ಟೇ ಇದು ಅಧಿಕಾರಿಗಳು ಸಚಿವರನ್ನು ದಾರಿ ತಪ್ಪಿಸಿದ್ದಾರೋ ಏನೋ ನನಗೆ ಗೊತ್ತಿಲ್ಲ. ಇವರು ಹೇಳುವ ಅಧಿಸೂಚನೆ ದಾಂಡೇಲಿ ವನ್ಯಜೀವಿ ಅಭಯಾರಣ್ಯಕ್ಕೆ

ಸಂಬಂಧಪಟ್ಟ ಹಾಗೆ. ಆದರೆ ಅನುಸೂಚಿಯಲ್ಲಿ ಅವರು ಏನು ಕಡಿಮೆ ಮಾಡಬೇಕೆಂದು ಪಟ್ಟಿಮಾಡಿದ್ದಾರೆ ಆದರೆ ಅದರಲ್ಲಿ ಅಣಸಿಯನ್ನೂ ಸೇರಿಸಿದ್ದಾರೆ. ಆದರೆ ಸರ್ಕಾರಿ ದಾಖಲೆಗಳಲ್ಲಿ ಎರಡು ಅಣಸಿ ನ್ಯಾಷನಲ್ ಪಾರ್ಕಿಗೆ ಒಂದು ಪ್ರತ್ಯೇಕ ನೋಟಿಫಿಕೇಷನ್ ಇದೆ. ದಾಂಡೇಲಿವೈಲ್ಡ್ ಲೈಫ್ ಸ್ಯಾಂಕ್ಚುಯರಿಗೆ ಒಂದು ಪ್ರತ್ಯೇಕ ನೋಟಿಫಿಕೇಷನ್ ಇದೆ. ದಾಂಡೇಲಿ ವನ್ಯ ಮೃಗ ಅಭಯಾರಣ್ಯ 834.157 ಚದರ ಕಿಮೀ. ಅಣಸಿ ರಾಷ್ಟ್ರೀಯ ಪಾರ್ಕ್ 250 ಚದರ ಕಿ.ಮೀ. ಎರಡೂ ಒಟ್ಟು ಸೇರಿದರೆ 1084.157 ಆಗುತ್ತದೆ. ಅಧ್ಯಕ್ಷರೇ, ಏನಾದರೂ ಒಂದು ಕರ್ನಾಟಕದಲ್ಲಿ ವರ್ಜಿನ್ ಫಾರೆಸ್ಟ್ ಎಂದು ಉಳಿದಿದ್ದರೆ ಇದು ಒಂದೇನೇ ಇಲ್ಲಿರುವಂತಹ ಜೈವಿಕ ಸಂಪತ್ತು ಎಷ್ಟಿದೆ ಎಂದು ನಮಗೇ ಇನ್ನೂ ಗೊತ್ತಿಲ್ಲ. ತಮಗೆ ನಂತರ ಕಳುಹಿಸಿಕೊಡುತ್ತೇನೆ ಅಲ್ಲಿ ಎಂತೆಂತಹ ಫ್ಲೋರಾ ಮತ್ತು ಫಾನಾ ಇದೆ ಎಂದು. ಉದಾಹರಣೆಗೆ ತಾವೇನು ಅಶೋಕವೃಕ್ಷ ಎಂದು ರಾಮಾಯಣದಲ್ಲಿ ಓದಿದ್ದೀರಲ್ಲಾ, ಆದರೆ ಎಲ್ಲೆಲ್ಲೋ ಯಾವುದನ್ನೋ ಅಶೋಕವೃಕ್ಷ ' ಅನ್ನುತ್ತೇವೆ. ಅಶೋಕವೃಕ್ಷ ಇದೆ ಇಲ್ಲಿ. I will supply to photgraphs of ' Ashoka Vruksha' to the Hon'ble Speaker, may be tomorrow or day after. ಇಂತಹ ಒಂದು ಸಂಪತ್ತು ಇದನ್ನು ನಾವು ಒಂದು ಚೂರೂ ಮುಟ್ಟಬಾರದು. ಇಂತಹ ಅರಣ್ಯದೊಳಗೆ ರಸ್ತೆಗಳನ್ನೂ ಮಾಡಬಾರದು. ಆದರೆ ಈಗ ರಸ್ತೆಗಳು ಆಗುತ್ತಿವೆ ಅಲ್ಲಿ. ಕಾರಣವೇನೆಂದರೆ ನಮ್ಮ ಅರಣ್ಯಇಲಾಖೆಯವರು ಕಾನೂನನ್ನು ಉಲ್ಲಂಘಿಸಿ ಈ ಅಭಯಾರಣ್ಯದಿಂದ ಡೆಡ್‌ವುಡ್ಡನ್ನು ತೆಗೆಯಬಹುದೆಂದು ಒಂದು ನೀತಿಯನ್ನು ರೂಪಿಸಿಕೊಂಡು ಖಾಸಗಿ ವ್ಯಕ್ತಿಗಳಿಗೆ ಮತ್ತು ಥೋಂಗಿ ಸಹಕಾರಿ ಸಂಘಗಳಿಗೆ ಡೆಡ್ವುಡನ್ನು ತೆಗೆಯಬಹುದು ಎನ್ನುವಂತಹ ಪರವಾನಗಿ ಕೊಟ್ಟಿದ್ದಾರೆ. ಡೆಡ್ವುಡನ್ನು ತೆಗೆಯಬೇಕೆಂಬ ನೆಪ ಹಾಕಿಕೊಂಡ ಅವರು, ಅವರು ಸಚಿವರ ಗಮನಕ್ಕೂ ಬಂದಿದೆ. ಇಲ್ಲವೋ ಗೊತ್ತಿಲ್ಲ. ಬಂದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ತಾವು ಪ್ರಾಮಾಣಿಕ ಎಂದು ತಿಳಿದುಕೊಂಡೇ ನಾನು ತಮಗೊಂದು ಹಾಗೂ ಸಭಾಧ್ಯಕ್ಷರಿಗೊಂದು ಈ ಫೋಟೊ ಕಳುಹಿಸಿಕೊಡುತ್ತಿದ್ದೇನೆ. ಇಲ್ಲಿ ಕತ್ತರಿಸಿದ ಸ್ಟ್ಯಾಕ್ಸ್ ಏನಿವೆ ಇವು ಡಡ್‌ವುಡೊ ಅಥವಾ ಡೆಡ್‌ವುಡ್ಡೊ ಎಂಬುದನ್ನು ತಾವೇ ತೀರ್ಮಾನ ಮಾಡಬೇಕು. ಆಮೇಲೆ ಡೆಡ್‌ವುಡ್ ತೆಗೆಯುವುದಕ್ಕೋಸ್ಕರ ಯಾವ ಪ್ರಮಾಣದ ರಸ್ತೆಗಳನ್ನು ಮಾಡಿದ್ದಾರೆ,ಹೇಗೆ ಟ್ರಕ್‌ಗಳಲ್ಲಿ ಲೋಡ್‌ಗಳನ್ನು ಮಾಡುತ್ತಿದ್ದಾರೆ ಎನ್ನುವ ಫೋಟೋಗ್ರಾಫನ್ನು ಕಳುಹಿಸಿಕೊಡುತ್ತಿದ್ದೇನೆ.

ನನಗೆ ಗೊತ್ತಿರುವ ಪ್ರಕಾರ ನಮ್ಮ ಸರ್ಕಾರ ಅಥವಾ ಅರಣ್ಯ ಇಲಾಖೆ ಅದನ್ನು ಇನ್ನೂ ವನ್ಯಜೀವಿ ಇಲಾಖೆಗೆ ವರ್ಗಾವಣೆ ಮಾಡಿಲ್ಲ. ಬರೀ ಪತ್ರಿಕಾ ಹೇಳಿಕೆಯಲ್ಲಿ ವರ್ಗಾವಣೆ ಮಾಡಿದ್ದೇವೆ ಎಂದು ಹೇಳುತ್ತಾರೆ. ದಾಖಲೆಗಳಲ್ಲಿ ಅದು ಇಲ್ಲ. ಏಕೆ ಇನ್ನೂ ಅದು ಮಾಡಿಲ್ಲ. ಇದೆರಡನ್ನು ವನ್ಯಜೀವಿ ಇಲಾಖೆಗೆ ಏಕೆ ವರ್ಗಾವಣೆ ಮಾಡಿಲ್ಲ? ಮಾಡಿದ್ದೇವೆ ಎಂದು ಪತ್ರಿಕೆಯಲ್ಲಿ ಸುಳ್ಳು ಹೇಳುತ್ತಾರೆ, ದಾಖಲೆಗಳಲ್ಲಿ ವರ್ಗಾವಣೆ ಮಾಡಿಲ್ಲ, ಮೊದಲು ಮಾಡಬೇಕಾಗಿರುವುದು ಸರ್ಕಾರ ಈ ಸಾವಿರ ಚಿಲ್ಲರೆ ಏನು ಚದರ ಕಿಮಿ ಇದೆ ಇದನ್ನು ಮೊದಲು ವನ್ಯಜೀವಿ ಇಲಾಖೆಗೆ ವರ್ಗಾವಣೆ ಮಾಡಬೇಕು, ಏನು ಪ್ರಿನ್ಸಿಪಾಲ್ ಚೀಫ್ ಕನಸ್ವೇಟರ್ ಆಫ್ ಫಾರೆಸ್ಟ್ ನೀವು ಡೆಡ್ವುಡನ್ನು ತೆಗೆಯುವುದಕ್ಕೆ ಪರವಾನಗಿ ಕೊಡುವ ಅಧಿಕಾರ ಕೊಟ್ಟಿದ್ದೀರಿ ಅದನ್ನು ಮೊದಲು ವಿಥ್ ಡ್ರಾ ಮಾಡಬೇಕು. Even deadwood is supposed to go as manure.

ಈ ವನ್ಯಜೀವಿಯಲ್ಲಿ ಅದು ಗೊಬ್ಬರವಾಗಬೇಕು. ನೀವೆಲ್ಲೇನಾದರೂ ಅದನ್ನು ತೆಗೆಯಲು ಅವಕಾಶ ಮಾಡಿಕೊಟ್ಟರೆ ಅದರ ಟಾಪ್ ಸಾಯಿಲೆಲ್ಲಾ ಕೊಚ್ಚಿಕೊಂಡು ಹೋಗುತ್ತದೆ. ಅಲ್ಲಿ ಬಹಳ ಜಾಸ್ತಿ ಮಳೆ ಬೀಳುತ್ತದೆ. ಒಂದು ಸಾರಿ ಆ ಟಾಪ್ ಸಾಯಿಲ್ ಹೋಯಿತು ಎಂದರೆ ಆ ಬಯೊಡೈವರ್ಸಿಟಿ ಏನಿದೆ ಆ ಬೈಯೊ ವೆಲ್ತ್

ಏನಿದೆ ಇದು ಒಂದು ಚೂರೂ ಉಳಿಯೋಲ್ಲ. ದೇಶ ಹಾಳು ಮಾಡುವಂತಹ ನಿರ್ಣಯ ಇದು. ಆ ಕಾರಣ ಮರ್ಯಾದೆಯಿಂದ ಇದನ್ನು ನೀವು ವಾಪಸ್ಸ್ ತೆಗೆದುಕೊಳ್ಳಬೇಕು. ನೀವು ತೆಗೆದುಕೊಳ್ಳುವುದಿಲ್ಲ ಎಂದರೂ ನಾನು ದೈಹಿಕವಾಗಿ ಆ ಪ್ರದೇಶದಲ್ಲಿ ಮಾಡುವವನು, ಮತ್ತೆ ಕೆಂಪು ಕಟ್ಟಡ ಇದೆಯಲ್ಲಾ ಎದುರಿಗೆ, ಡೆಹರೂಡೂನ್‌ನಲ್ಲಿ ಏನು ನನ್ನ ಸ್ನೇಹಿತರು ಮಾಡಿದರು ಡೆಹರಾಡೂನನ್ನು ಉಳಿಸುವುದಕ್ಕೋಸ್ಕರ ಆ ಕೆಲಸ ನಾನು ನ್ಯಾಯಾಲಯಕ್ಕೂ ಹೋಗಬೇಕಾಗುತ್ತದೆ. ಇಷ್ಟು ಹೇಳಿದರೂ ನೀವಿದನ್ನು ಮಂಡಿಸುತ್ತೇನೆ ಎನ್ನುವುದಾದರೆ ನಿಮ್ಮ ಮೇಲೆ ಭ್ರಷ್ಟಾಚಾರದ ಆರೋಪವನ್ನೂ ನಾನು ಬಹಿರಂಗವಾಗಿ ಹೊರಗಡೆ ಮಾಡಬೇಕಾಗುತ್ತದೆ ದಯಮಾಡಿ ಇದನ್ನು ವಾಪಸ್ಸ್ ತೆಗೆದುಕೊಳ್ಳಿ. ಉಳಿದಿರುವಂತಹ ಇಷ್ಟೇ ಇಷ್ಟು ವರ್ಜಿನ್ ಫಾರೆಸ್ಟಿದೆ. ಕರ್ನಾಟಕದಲ್ಲಿ ಅದನ್ನು ಸಂರಕ್ಷಣೆ ಮಾಡೋಣ. ಇದು ನನ್ನ ಪ್ರಾರ್ಥನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಬ್ಜೆಕ್ಷನ್ ಬಂದಿವೆ, ನೀವು ನಿಮ್ಮ ಅರಣ್ಯಅಧಿಕಾರಿಗಳನ್ನೆಲ್ಲಾ ಕರೆದು ಚರ್ಚೆ ಮಾಡಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಅಧ್ಯಕ್ಷರೇ, ಈ ಚರ್ಚೆಯನ್ನು ನಾಳೆಗೆ ಮುಂದುವರಿಸೋಣ. ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ನಾಳೆಗೆ ಮುಂದುವರೆಸೋಣ.

PROF E.M.D. NANJUNDASWAMY : Iam even prepared to accompany the Forest Minister and show him how valuable it is.

ಅಧ್ಯಕ್ಷರು: ಆಯಿತು ನಾಳೆಗೆ ತೆಗೆದುಕೊಳ್ಳೋಣ. ಈಗ ಸಭೆಯ ಕಲಾಪವನ್ನು ಮುಂದೂಡುತ್ತೇನೆ. ಸದನವು ನಾಳೆ ಬೆಳಿಗ್ಗೆ 11 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 53 ನಿಮಿಷಕ್ಕೆ ಮುಂದೂಡಲ್ಪಟ್ಟು 17.2.93 ರಿಂದ ಬೆಳಿಗ್ಗೆ 11 ಗಂಟೆಗೆ ಸೇರಲು ತೀರ್ಮಾನಿಸಿತು)

---

*(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಅನುಬಂಧ - I

ಕರ್ನಾಟಕ ವಿಧಾನಸಭೆ

(ಒಂಭತ್ತನೆಯ ವಿಧಾನ ಸಭೆ)

(ಹನ್ನೆರಡನೆಯ ಅಧಿವೇಶನ)

ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ, 1994.

(1994ರ ವಿಧಾನಸಭಾ ವಿಧೇಯಕ ಸಂಖ್ಯೆ 6)

ಕೆಲವು ಅತ್ಯಾವಶ್ಯಕ ಸೇವೆಗಳ ನಿರ್ವಹಣೆಗಾಗಿ ಉಪಬಂಧ ಕಲ್ಪಿಸುವ ಒಂದು ವಿಧೇಯಕ,

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕೆಲವು ಅತ್ಯಾವಶ್ಯಕ ಸೇವೆಗಳ ನಿರ್ವಹಣೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ

ಭಾರತ ಗಣರಾಜ್ಯದ ನಲವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ - (1) ಈ ಅಧಿನಿಯಮವನ್ನು ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ, 1994 ಎಂದು ಕರೆಯತಕ್ಕದ್ದು.

2. ಇದು, ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸತಕ್ಕದ್ದು.

3. ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು ಮತ್ತು ಹತ್ತು ವರ್ಷಗಳ ಅವಧಿಯವರೆಗೆ ಜಾರಿಯಲ್ಲಿ ಇರತಕ್ಕದ್ದು:

2. ಪರಿಭಾಷೆಗಳು – 1. ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು.

ಎ) 'ಅತ್ಯಾವಶ್ಯಕ ಸೇವೆ' ಎಂದರೆ –

i. ಸಂದರ್ಭಾನುಸಾರವಾಗಿ ಜಲ ಅಥವಾ ವಿದ್ಯುಚ್ಛಕ್ತಿಯ ಉತ್ಪಾದನೆ, ಜನರೇಷನ್, ಶೇಖರಣೆ 'ಸಾಗಣೆ ಪೂರೈಕೆ ಅಥವಾ ವಿತರಣೆಗೆ ಸಂಬಂಧಪಟ್ಟ ಯಾವುದೇ ಸೇವೆ.

ii. ಮೋಟಾರು ವಾಹನಗಳಲ್ಲಿ ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಸಾಗಿಸುವುದಕ್ಕಾಗಿ ಇರುವ ಯಾವುದೇ ಸಾರಿಗೆ ಸೇವೆ.
ವಿವರಣೆ. – ಈ ಖಂಡದ ಉದ್ದೇಶಗಳಿಗಾಗಿ, 'ಮೋಟಾರು ವಾಹನ' ಎಂಬ ಅಭಿವ್ಯಕ್ತಿಯು, 1988 ರ ಮೋಟಾರು ವಾಹನಗಳ ಅಧಿನಿಯಮದ (1988 ರ ಕೇಂದ್ರ ಅಧಿನಿಯಮ 59) 2ನೇ ಪ್ರಕರಣದ (28)ನೇ ಖಂಡದಲ್ಲಿ ಅದಕ್ಕೆ ಕೊಟ್ಟ ಅರ್ಥವನ್ನೇ ಹೊಂದಿರತಕ್ಕದ್ದು.

iii. ರಾಜ್ಯ ವಿಧಾನ ಮಂಡಲವು ಸಂವಿಧಾನದ ಏಳನೇ ಅನುಸೂಚಿಯ II ಪಟ್ಟಿಯಡಿಯಲ್ಲಿ ಕಾನೂನುಗಳನ್ನು ರಚಿಸಲು ಅಧಿಕಾರ ಹೊಂದಿರುವಂಥ ಮತ್ತು ಸರ್ಕಾರವು ಹಾಗೆ ಕೆಲಸ ಮಾಡಲು ಮಾಡಿದ ನಿರಾಕರಣೆಯ ಯಾವುದೇ ಸಾರ್ವಜನಿಕ ಉಪಯುಕ್ತ ಸೇವೆಗಳ ಅಥವಾ ಸಾರ್ವಜನಿಕ ರಕ್ಷಣೆಯ ನಿರ್ವಹಣೆ ಅಥವಾ ಸಮುದಾಯದ ಜೀವನಕ್ಕೆ ಅವಶ್ಯಕವಾಗ

ಪೂರೈಕೆ ಹಾಗೂ ಸೇವೆಯ ನಿರ್ವಹಣೆಗೆ ಪ್ರತಿಕೂಲವಾಗಿ ಬಾಧಕವನ್ನುಂಟು ಮಾಡುತ್ತದೆ ಅಥವಾ ಸಮುದಾಯಕ್ಕೆ ತೀವ್ರ ತೊಂದರೆಯನ್ನುಂಟು ಮಾಡುತ್ತದೆ ಎಂದು ಅಭಿಪ್ರಾಯಪಟ್ಟಲ್ಲಿ ಈ ಅಧಿನಿಯಮದ ಉದ್ದೇಶಗಳಿಗಾಗಿ ಅಧಿಸೂಚನೆಯ ಮೂಲಕ ಅತ್ಯಾವಶ್ಯಕ ಸೇವೆಯೆಂದು ಘೋಷಿಸುವಂಥ ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಯಾವುದೇ ಇತರ ಸೇವೆ ಅಥವಾ ಉದ್ಯೋಗ ಅಥವಾ ಅದರ ವರ್ಗ.

ಬಿ "ಸರ್ಕಾರ" ಎಂದರೆ ರಾಜ್ಯ ಸರ್ಕಾರ :

ಸಿ. ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಕೆಲಸ ಮಾಡಲು ನಿರಾಕರಣೆ ಎಂದರೆ, ಸುಸಂಗತ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ ಅನುಮತಿಯನ್ನು ನೀಡಲು ಸಕ್ಷಮನಾದ ಅಧಿಕಾರಿಯಿಂದ ಅನುಮತಿಯನ್ನು ಪಡೆದುಕೊಳ್ಳದೇ, ಯಾವುದೇ ಕೆಲಸದ ದಿನದಂದು ಅಥವಾ ಯಾವುದೇ ಕೆಲಸದ ವೇಳೆಯಲ್ಲಿ ಕೆಲಸದ ಸ್ಥಳಕ್ಕೆ ಅವನು ಅಥವಾ ಅವರು ಹಾಜರಾಗಲು ತಪ್ಪುವುದು ಅಥವಾ ಗೈರು ಹಾಜರಾಗಿರುವುದು ಅಥವಾ ಯಾವುದೇ ಅತ್ಯಾವಶ್ಯಕ ಸೇವೆಯಲ್ಲಿ ಯಾವುದೇ ಕೆಲಸದ ದಿನದಲ್ಲಿ ಅಥವಾ ಕೆಲಸದ ವೇಳೆಯಲ್ಲಿ ಕೆಲಸ ಮಾಡಲು ನಿರಾಕರಿಸುವುದು ಅಥವಾ ಕೆಲಸ ಮಾಡಲು ಒಪ್ಪದಿರುವುದು ಅಥವಾ ಕೆಲಸದ ನಿಲುಗಡೆಗೆ ಅಥವಾ ಕೆಲಸವು ಸಾಕಷ್ಟು ವಿಳಂಬಗತಿಯಲ್ಲಿ ನಡೆಯುವಂತೆ ಪರಿಣಾಮ ಬೀರುವ ಅಥವಾ ಪರಿಣಾಮ ಬೀರುವ ಸಂಭವವಿರುವಂಥ ಅವನ ಅಥವಾ ಅವರ ಯಾವುದೇ ಇತರ ವರ್ತನೆ ಮತ್ತು "ಕೆಲಸ ಮಾಡಲು ನಿರಾಕರಣೆ" ಎಂಬ ಪದಗಳಿಗೆ ಅದರ ವ್ಯಾಕರಣ ವ್ಯತ್ಯಾಸಗಳು ಮತ್ತು ಸಂವಾದಿ ಅಭಿವ್ಯಕ್ತಿಗಳೊಂದಿಗೆ ತದನುಸಾರವಾಗಿ ಅರ್ಥ ನೀಡತಕ್ಕುದು.

(2) (ಎ)(1)ನೇ ಉಪ-ಪ್ರಕರಣದ (ಎ) ಖಂಡದ (iii) ಉಪ-ಖಂಡದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ. ಅದು ಅಧಿವೇಶನದಲ್ಲಿಲ್ಲದ್ದರೆ ಅದನ್ನು ಹೊರಡಿಸಿದ ಪ್ರತಿವಾಯದ ಒಂದು ವಾರದೊಳಗಾಗಿ ಮತ್ತು ಅದು ಅಧಿವೇಶನದಲ್ಲಿಲ್ಲದಿದ್ದರೆ ಸದನಗಳು ಮುಂದಿನ ಅಧಿವೇಶನ ಪ್ರಾರಂಭವಾದ ತರುವಾಯದ ಒಂದು ವಾರದೊಳಗಾಗಿ ಮಂಡಿಸತಕ್ಕದು ಮತ್ತು ಅದನ್ನು ಹಾಗೆ ಮಂಡಿಸಲಾದ ದಿನಾಂಕದಿಂದ ಅಥವಾ ಸಂದರ್ಭಾನುಸಾರ ರಾಜ್ಯ ವಿಧಾನ ಮಂಡಲದ ಮರು ಅಧಿವೇಶನದಿಂದ ಅರವತ್ತು ದಿನಗಳು ಮುಕ್ತಾಯವಾದ ತರುವಾಯ. ಆ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚಿತವಾಗಿ ಅಧಿಸೂಚನೆಯನ್ನು ಹೊರಡಿಸಿದುದನ್ನು ಅನುಮೋದಿಸಿ ಒಂದು ನಿರ್ಣಯವನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳು ಅಂಗೀಕರಿಸಿದ ಹೊರತು, ಅದು ಕಾರ್ಯಾಚರಣೆಯಲ್ಲಿರುವುದು ನಿಂತುಹೋಗತಕ್ಕುದು.

(ಬಿ) ಯಾವುದೇ ಅಧಿಸೂಚನೆಯು ಕಾರ್ಯಾಚರಣೆಯಲ್ಲಿರುವುದು ಈ ಉಪ-ಪ್ರಕರಣದ ಮೂಲಕ ಅಥವಾ ಅದರಡಿಯಲ್ಲಿ ನಿಂತುಹೋದರೆ, ಹಾಗೆ ನಿಂತುಹೋಗುವುದು. ಹಾಗೆ ನಿಂತುಹೋಗುವುದಕ್ಕೆ ಮುಂಚೆ ಮಾಡಿದ ಅಥವಾ ಮಾಡುವುದನ್ನು ಬಿಟ್ಟುಬಿಡಲಾದ ಯಾವುದೇ ಕೃತ್ಯಕ್ಕೆ ಪ್ರತಿಕೂಲವಾಗಿರತಕ್ಕುದಲ್ಲ,

ವಿವರಣೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳನ್ನು ಬೇರೆ ಬೇರೆ ದಿನಾಂಕಗಳಂದು ಮತ್ತೆ ಸಭೆ ಸೇರುವಂತೆ ಸಮನು ಮಾಡಿದ್ದರೆ, ಅರವತ್ತು ದಿನಗಳ ಅವಧಿಯನ್ನು ಈ ದಿನಾಂಕಗಳಲ್ಲಿ ನಂತರದ ದಿನಾಂಕದಿಂದ ಲೆಕ್ಕ ಹಾಕತಕ್ಕುದು.

3. ಕೆಲವು ಅತ್ಯಾವಶ್ಯಕ ಸೇವೆಗಳಲ್ಲಿ ಕೆಲಸ ಮಾಡಲು ಮಾಡಿದ ನಿರಾಕರಣೆಯನ್ನು ನಿಷೇಧಿಸಲು ಅಧಿಕಾರ : 1. ಸಾರ್ವಜನಿಕ ಹಿತಾಸಕ್ತಿಯ ಅಥವಾ ಸಾರ್ವಜನಿಕ

ಸುವ್ಯವಸ್ಥೆಯ ದೃಷ್ಟಿಯಿಂದ ಅಂಥ ಅತ್ಯಾವಶ್ಯಕ ಸೇವೆಗಳಲ್ಲಿ ಕೆಲಸ ಮಾಡಲು ಮಾಡಿದ ನಿರಾಕರಣೆಯನ್ನು ನಿಷೇಧಿಸುವುದು ಅವಶ್ಯವೆಂದು ಅಥವಾ ಯುಕ್ತವೆಂದು ಸರ್ಕಾರಕ್ಕೆ ಮನದಟ್ಟಾದರೆ, ಅದು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಮತ್ತು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಹಾಗೆ ನಿಷೇಧಿಸಬಹುದು.

2.(1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಲಾದ ಆದೇಶವನ್ನು, ಆದೇಶದಿಂದ ಬಾಧಿತರಾಗುವ ವ್ಯಕ್ತಿಗಳ ಗಮನಕ್ಕೆ ತರಲು ಸರ್ಕಾರವು ಅತಿ ಸೂಕ್ತವೆಂದು ಪರಿಗಣಿಸುವ ಅಂಥ ರೀತಿಯಲ್ಲಿ ಪ್ರಕಟಿಸತಕ್ಕುದು.

3.(1) ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಲಾದ ಆದೇಶವು ಅದು ಕಾರ್ಯಾಚರಣೆಯಲ್ಲಿ ಬಂದ ದಿನಾಂಕದಿಂದ ಒಂದು ವರ್ಷ ಮಾತ್ರ ಜಾರಿಯಲ್ಲಿರತಕ್ಕುದು. ಆದರೆ, ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯ ಅಥವಾ ಸಾರ್ವಜನಿಕ ಸುವ್ಯವಸ್ಥೆಯ ದೃಷ್ಟಿಯಿಂದ ಆರು ತಿಂಗಳಿಗೆ ಮೀರದ ಯಾವುದೇ ಅವಧಿಗೆ ಅದನ್ನು ವಿಸ್ತರಿಸುವುದು ಅಗತ್ಯ ಅಥವಾ ಯುಕ್ತವೆಂದು ಭಾವಿಸಿದರೆ ಅದೇ ರೀತಿಯಲ್ಲಿ ಪ್ರಕಟಿಸಿದ ಅದೇ ಬಗೆಯ ಆದೇಶದ ಮೂಲಕ ಹಾಗೆ ಮಾಡಬಹುದು.

4(1) ನೇ ಉಪ-ಪ್ರಕರಣದಡಿಯಲ್ಲಿ ಒಂದು ಆದೇಶವನ್ನು ಹೊರಡಿಸಿದ ನಂತರ,

(ಎ) ಆದೇಶವು ಸಂಬಂಧಪಡುವ ಯಾವುದೇ ಅತ್ಯಾವಶ್ಯಕ ಸೇವೆಯಲ್ಲಿ ನಿಯೋಜಿತನಾದ ಯಾವೊಬ್ಬ ವ್ಯಕ್ತಿಯು ಕೆಲಸ ಮಾಡಲು ನಿರಾಕರಿಸತಕ್ಕದ್ದಲ್ಲ ಅಥವಾ ಕೆಲಸ ಮಾಡಲು ನಿರಾಕರಿಸುವುದನ್ನು ಮುಂದುವರಿಸತಕ್ಕದ್ದಲ್ಲ.

(ಬಿ) ಯಾವುದೇ ಅಂಥ ಸೇವೆಯಲ್ಲಿ ನಿಯೋಜಿತನಾಗಿರುವ ಯಾವೊಬ್ಬ ವ್ಯಕ್ತಿಯು ಆದೇಶವನ್ನು ಹೊರಡಿಸಲಾದ ದಿನಾಂಕಕ್ಕೆ ಮೊದಲು ಅಥವಾ ತರುವಾಯ ಕೆಲಸ ಮಾಡಲು ಮಾಡಿದ ಯಾವುದೇ ನಿರಾಕರಣೆಯನ್ನು ಘೋಷಿಸುವುದು ಅಥವಾ ಆರಂಭಿಸುವುದು ಅಥವಾ ಮುಂದುವರಿಸುವುದು ಕಾನೂನು ಬಾಹಿರವಾಗಿರತಕ್ಕದ್ದು.

5(1)ನೇ ಉಪ-ಪ್ರಕರಣ ಅಥವಾ (3)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ಆದೇಶವನ್ನು, ಯಾವುದೇ ಸಮಯದಲ್ಲಿ, ಸರ್ಕಾರವು ಅದೇ ಬಗೆಯ ಆದೇಶದ ಮೂಲಕ ಹಿಂತೆಗೆದುಕೊಳ್ಳಬಹುದು. ಆದರೆ ಹಾಗೆ ಹಿಂತೆಗೆದುಕೊಂಡುದುದು ಅಂಥ ಆದೇಶದ ಹಿಂದಿನ ಕಾರ್ಯಾಚರಣೆಗೆ ಅಥವಾ ಅದರಡಿಯಲ್ಲಿ ಸೂಕ್ತವಾಗಿ ಮಾಡಲಾದ ಯಾವುದೇ ಕೃತ್ಯಕ್ಕೆ ಅಥವಾ ಉಂಟಾದ ಯಾವುದೇ ತೊಂದರೆಗೆ ಪರಿಣಾಮ ಬೀರತಕ್ಕದ್ದಲ್ಲ ಮತ್ತು ಪ್ರಾಪ್ತವಾದ ಅಥವಾ ಗುರಿಯಾದ ಯಾವುದೇ ಬಾಧ್ಯತೆ ಅಥವಾ ಹೊಣೆಗಾರಿಕೆಗೆ ಅಥವಾ ಹಾಗೆ ಹಿಂತೆಗೆದುಕೊಂಡುದುದಕ್ಕೆ ಮುಂಚೆ ಈ ಅಧಿನಿಯಮಕ್ಕೆ ವಿರುದ್ಧವಾಗಿ ಮಾಡಲಾಗಿದ್ದ ಯಾವುದೇ ಅಪರಾಧಕ್ಕೆ ಸಂಬಂಧಪಟ್ಟಂತೆ ಗುರಿಯಾದ ಯಾವುವೇ ದಂಡ ಅಥವಾ ಶಿಕ್ಷೆಗೆ ಬಾಧಕವಾಗತಕ್ಕದ್ದಲ್ಲ.

4. **ಕೆಲಸಮಾಡಲು ಮಾಡುವ ಕಾನೂನು ಬಾಹಿರ ನಿರಾಕರಣೆಗೆ ದಂಡ.** ಯಾವೊಬ್ಬ ವ್ಯಕ್ತಿಯು, ಯಥೋಚಿತ ಕಾರಣವಿಲ್ಲದೆ, ಯಾವುದೇ ಅತ್ಯಾವಶ್ಯಕ ಸೇವೆಯಲ್ಲಿ ಕೆಲಸ ಮಾಡಲು ನಿರಾಕರಿಸಿದರೆ ಅಥವಾ ನಿರಾಕರಿಸುವುದನ್ನು ಮುಂದುವರಿಸಿದರೆ, ಅಂಥ ನಿರಾಕರಣೆಯು ಈ ಅಧಿನಿಯಮದ ಅಡಿಯಲ್ಲಿ ಕಾನೂನು ಬಾಹಿರವಾಗುವುದರಿಂದ ಅವನನ್ನು ದೋಷಸಿದ್ಧಿಯ ಮೇಲೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅವೆರಡರಿಂದಲೂ ಶಿಕ್ಷಿಸತಕ್ಕದ್ದು.

5. **ಪ್ರಚೋದನೆ ಇತ್ಯಾದಿಗೆ ದಂಡ** – ಯಾವೊಬ್ಬ ವ್ಯಕ್ತಿಯು, ಯಾವುದೇ

ಪ್ರಚೋದಿಸಿದರೆ ಅಥವಾ ಪ್ರೇರೇಪಿಸಿದರೆ ಅಥವಾ ಇತರ ರೀತಿಯಿಂದ ನಿರಾಕರಿಸುವುದನ್ನು ಮುಂದುವರಿಸುವುದರಲ್ಲಿ ತೊಡಗಿದ್ದರೆ, ಹಾಗೆ ನಿರಾಕರಿಸುವುದು ಈ ಅಧಿನಿಯಮದ ಅಡಿಯಲ್ಲಿ ಕಾನೂನು ಬಾಹಿರವಾಗುವುದರಿಂದ ಅವನನ್ನು ದೋಷಸಿದ್ಧಿಯ ಮೇಲೆ ಒಂದು ವರ್ಷದ ಅವಧಿಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ಶಿಕ್ಷಿಸತಕ್ಕದ್ದು.

6. ಕೆಲಸ ಮಾಡಲು ಕಾನೂನು ಬಾಹಿರ ನಿರಾಕರಣೆಗಾಗಿ ಹಣಕಾಸು ನೆರವು ನೀಡಿದ್ದಕ್ಕಾಗಿ ದಂಡ : ಯಾವುದೇ ಅತ್ಯಾವಶ್ಯಕ ಸೇವೆಗಳಲ್ಲಿ ಕೆಲಸ ಮಾಡಲು ಮಾಡುವ ನಿರಾಕರಣೆಯ ಮುಂದುವರಿಕೆ ಅಥವಾ ಅದಕ್ಕೆ ಬೆಂಬಲ ನೀಡಲು ಯಾವನೇ ವ್ಯಕ್ತಿಯು ತಿಳಿದು ಸಹ ಯಾವುದೇ ಹಣ ವೆಚ್ಚ ಮಾಡಿದಲ್ಲಿ ಅಥವಾ ಸರಬರಾಜು ಮಾಡಿದ್ದಲ್ಲಿ ಅಂಥ ನಿರಾಕರಣೆಯು ಈ ಅಧಿನಿಯಮದ ಅಡಿಯಲ್ಲಿ ಕಾನೂನು ಬಾಹಿರವಾಗಿದ್ದಲ್ಲಿ ದೋಷ ಸಿದ್ಧಿಯಾದ ಮೇಲೆ, ಅಂಥ ಕೃತ್ಯಕ್ಕಾಗಿ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರವಾಸ ಶಿಕ್ಷೆ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

7. ಇತರ ಶಿಸ್ತು ಕ್ರಮಗಳ ಜೊತೆಗೆ ಅಧಿಕವಾಗಿ 4,5 ಅಥವಾ 6ನೇ ಪ್ರಕರಣದ ಅಡಿಯಲ್ಲಿ ಕ್ರಮ ಕೈಗೊಳ್ಳುವುದು-4,5 ಅಥವಾ 6ನೇ ಪ್ರಕರಣದ ಅಡಿಯಲ್ಲಿ ಯಾವನೇ ವ್ಯಕ್ತಿಯ ವಿರುದ್ಧ ಕೈಗೊಳ್ಳಲಾದ ಯಾವುದೇ ಕ್ರಮವು ಅವನ ಸೇವೆ ಅಥವಾ ಉದ್ಯೋಗದ ನಿಬಂಧನೆಗಳು ಮತ್ತು ಷರತ್ತುಗಳ ಮೂಲಕ ಅಥವಾ ಅದರ ಅಡಿಯಲ್ಲಿನ ಶಿಸ್ತು ಸ್ವರೂಪದ ಯಾವುದೇ ಇತರ ಕ್ರಮವನ್ನು ಅಥವಾ ಉಂಟಾಗಬಹುದಾದ ಯಾವುದೇ ಪರಿಣಾಮವನ್ನು ಮತ್ತು ಅವನು ಯಾವುದಕ್ಕೆ ಬದ್ಧನಾಗಬಹುದೋ ಅದನ್ನು ಬಾಧಿಸತಕ್ಕದ್ದಲ್ಲ ಮತ್ತು ಅದು ಅದಕ್ಕೆ ಹೆಚ್ಚುವರಿಯಾಗತಕ್ಕುದು.

8. ವಾರೆಂಟಿಲ್ಲದೆ ದಸ್ತಗಿರಿ ಮಾಡಲು ಅಧಿಕಾರ - 1973ರ ದಂಡ ಪ್ರಕ್ರಿಯಾ ಸಂಹಿತೆಯಲ್ಲಿ (1974ರ ಕೇಂದ್ರ ಅಧಿನಿಯಮ ಸಂಖ್ಯೆ 2) ಏನೇ ಇದ್ದರೂ, ಯಾರೇ ಪೊಲೀಸ್ ಅಧಿಕಾರಿಯು ಯಾವೊಬ್ಬ ವ್ಯಕ್ತಿಯು ಈ ಅಧಿನಿಯಮದ ವಿರುದ್ಧ ಯಾವುದೇ ಅಪರಾಧ ಮಾಡಿರುವನೆಂದು ಸಕಾರಣವಾಗಿ ಸಂಶಯಪಟ್ಟಲ್ಲಿ ಅವನನ್ನು ವಾರೆಂಟಿಲ್ಲದೆ ದಸ್ತಗಿರಿ ಮಾಡಬಹುದು.

9. ಅಧಿನಿಯಮವು ಇತರ ಕಾನೂನುಗಳ ಮೇಲೆ ಅಧ್ಯಾರೋಹಿ ಪರಿಣಾಮ ಹೊಂದಿರತಕ್ಕದ್ದು - ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ಹೊರಡಿಸಿದ ಯಾವುದೇ ಆದೇಶವು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅದಕ್ಕೆ ಅಸಂಗತವಾಗಿರುವ ಯಾವುದೇ ವಿಷಯವನ್ನು ಒಳಗೊಂಡಿದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಜಲ ಅಥವಾ ವಿದ್ಯುಚ್ಛಕ್ತಿಯ ಉತ್ಪಾದನೆ. ಜನರೇಷನ್ ಶೇಖರಣೆ ಸಾಗಣೆ, ಪೂರೈಕೆ ಅಥವಾ ವಿತರಣೆಗೆ ಮೋಟಾರು ವಾಹನಗಳಲ್ಲಿ ಪ್ರಯಾಣಿಕರನ್ನು ಅಥವಾ

ರಾಜ್ಯ ವಿಧಾನ ಮಂಡಲವು ಕಾನೂನುಗಳನ್ನು ರಚಿಸಲು ಅಧಿಕಾರ ಹೊಂದಿರುವಂಥ ಯಾವುದೇ ಇತರ ಸೇವೆ ಅಥವಾ ಉದ್ಯೋಗ ಅಥವಾ ಅದರ ವರ್ಗಕ್ಕೆ ಸಂಬಂಧಿಸಿದಂತೆ ಕೆಲವು ಅತ್ಯಾವಶ್ಯಕ ಸೇವೆಗಳಲ್ಲಿ ಕೆಲಸ ಮಾಡುವುದನ್ನು ನಿರಾಕರಿಸುವುದನ್ನು ನಿಷೇಧಿಸುವುದು ಅಗತ್ಯವೆಂದು ಪರಿಗಣಿಸಲಾಯಿತು.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನಪತ್ರ

ಪ್ರಸ್ತಾವಿತ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚ ತಗಲುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನಪತ್ರ

ಖಂಡ -2

2ನೇ ಪ್ರಕರಣದ (i)ನೇ ಉಪ-ಪ್ರಕರಣದ (iii)ನೇ ಖಂಡವು ಈ ಅಧಿನಿಯಮದ ಉದ್ದೇಶಗಳಿಗಾಗಿ ಅತ್ಯಾವಶ್ಯಕ ಸೇವೆಯನ್ನು ಅಧಿಸೂಚನೆಯ ಮೂಲಕ ಘೋಷಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ -3

3ನೇ ಪ್ರಕರಣದ (i) ನೇ ಉಪ-ಪ್ರಕರಣವು ಅಂಥ ಅತ್ಯಾವಶ್ಯಕ ಸೇವೆಗಳಲ್ಲಿ ಕೆಲಸ ಮಾಡುವುದನ್ನು ನಿರಾಕರಿಸುವುದನ್ನು ಆದೇಶದ ಮೂಲಕ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ನಿಷೇಧಿಸಲು. ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. ಪ್ರಸ್ತಾವಿತ ಪ್ರತ್ಯಾಯೋಜಿತ ಶಾಸನರಚನಾಧಿಕಾರವು ವಾಡಿಕೆ ಸ್ವರೂಪದ್ದಾಗಿದೆ.

ಎಂ.ವೀರಪ್ಪಮೊಯಿಲಿ
ಮುಖ್ಯಮಂತ್ರಿ

ನಿಂ.ಹು ಮುತ್ತಲಗೇರಿ
ಕಾರ್ಯದರ್ಶಿ

BLANK PAGE

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ೧೭ನೇ ಫೆಬ್ರವರಿ ೧೯೯೪, ಮಾಘ ೨೮, ಶಕ ೧೯೧೫
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಗ್ಗೆ ೧೧.೨೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

(ಸಂತಾಪ ಸೂಚನೆ)

ಅಧ್ಯಕ್ಷರು : ಗುಜರಾತಿನ ಮುಖ್ಯಮಂತ್ರಿಗಳಾದ ಶ್ರೀ ಚಿಮಣಬಾಯಿ ಜೀವಾಬಾಯಿ ಪಟೇಲ್ ಅವರು ದಿನಾಂಕ 17ನೇ ಫೆಬ್ರವರಿ 1994ರಂದು ಬೆಳಿಗ್ಗೆ ನಿಧನರಾದುದನ್ನು ಈ ಸದನಕ್ಕೆ ವಿಷಾದದಿಂದ ತಿಳಿಸುತ್ತಿದ್ದೇನೆ.

ದಿನಾಂಕ 3ನೇ ಜೂನ್ 1929ರಂದು ಜನಿಸಿದ ಶ್ರೀ ಪಟೇಲ್‌ರವರು ಕಾಲೇಜು ದಿನಗಳಿಂದಲೇ ವಿದ್ಯಾರ್ಥಿ ನಾಯಕರಾಗಿ ರಾಜಕೀಯವನ್ನು ಪ್ರಾರಂಭಿಸಿದರು. ಬರೋಡಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಘಕ್ಕೆ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. ಹಿಂದುಳಿದ ಹಾಗೂ ಬಡವರ ಏಳಿಗೆಗಾಗಿ ಹೋರಾಟ ಮಾಡಿ ಗುಜರಾತಿನ ಮಹಾನ್ ನಾಯಕರಾಗಿ ಪ್ರಖ್ಯಾತಿಗಳಿಸಿದ್ದರು. ದಿನಾಂಕ 29-7-1993ರಂದು ಗುಜರಾತಿನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿ, ಜನಪ್ರಿಯ ಮುಖ್ಯಮಂತ್ರಿಯಾಗಿ ಸಮಾಜದ ಎಲ್ಲಾ ವರ್ಗದ ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು.

+ ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ದಿವಸ ಬೆಳಿಗ್ಗೆ ಅತ್ಯಂತ ಧಾರುಣ, ಹಾಗೂ ಹೃದಯ ವಿದ್ರಾವಕ ವರ್ತಮಾನವನ್ನು ಕೇಳತಕ್ಕ ದೌರ್ಭಾಗ್ಯ ನಮ್ಮೆಲ್ಲರ ಪಾಲಿಗೆ ಬಂದಿದೆ. ನನ್ನ ಅತ್ಯಂತ ಆತ್ಮೀಯ ಸ್ನೇಹಿತರೂ, ಹಿತೈಷಿಗಳೂ, ಮತ್ತು ಈ ರಾಷ್ಟ್ರದ ರಾಜಕಾರಣದಲ್ಲಿ ಅತ್ಯಂತ ಚಾಣಾಕ್ಷಮತಿ, ಉದ್ದಾಮ, ಧೀಮಂತ ಅತ್ಯಂತ ದಕ್ಷ ನಾಯಕ ಹಾಗೂ ಮುಖ್ಯಮಂತ್ರಿಯವರನ್ನು ಇಂದು ಕಳೆದುಕೊಂಡಿದ್ದೇವೆ. ಗುಜರಾತಿನ ಸಮೃದ್ಧಿಗೆ ವಿಶೇಷವಾದ ಒಂದು ಸಂಘರ್ಷದ ರಾಜಕೀಯದಲ್ಲಿ ಕೂಡ ವಿಶೇಷವಾಗಿ ಜಯಿಸಿ ಅತ್ಯುತ್ತಮ ಹಾಗೂ ಸುಭದ್ರವಾದ ಆಡಳಿತವನ್ನು ಅಲ್ಲಿ ಪೂರ್ತಿ ಬಹುಮತ ಇಲ್ಲದ ಸಂದರ್ಭದಲ್ಲೂ ಕೂಡ ನಿಭಾಯಿಸಿಕೊಂಡು ಹೋಗುತ್ತಿದ್ದ ವಿವೇಕಶೀಲ, ಪ್ರಗತಿಶೀಲ ಮನೋಭೂಮಿಕೆಯ ಮಾನ್ಯ ಚಿಮನ್‌ಬಾಯ್ ಪಟೇಲರು ಇವತ್ತು ಇಲ್ಲವಾಗಿದ್ದಾರೆ.

ಅವರ ಆತ್ಮಕ್ಕೆ ಶಾಂತಿಯನ್ನು ನಾವೆಲ್ಲ ಬಯಸುವುದರ ಜೊತೆಯಲ್ಲಿ ಅವರಿಗೆ ಶ್ರದ್ಧಾಂಜಲಿಯನ್ನು ಸಮರ್ಪಿಸತಕ್ಕ ಒಂದು ನಿರ್ಣಯವನ್ನು ನಾನು ಇವತ್ತು ಸೂಚಿಸುತ್ತಿದ್ದೇನೆ. ನಮ್ಮ ಕರ್ನಾಟಕದ ಜನ ನಾವೆಲ್ಲರೂ, ಇಡೀ ಸದನ ಅವವ ಮರಣದಿಂದ ಆದ ದುಃಖವನ್ನು ಭರಿಸಲಿಕ್ಕೆ ಅವರ ಕುಟುಂಬದವರೆಲ್ಲರಿಗೂ ಮತ್ತು ಗುಜರಾತಿನ ಶೋಕತಪ್ತ ಜನತೆಗೆ ಶಕ್ತಿ ಕೊಡಲಿ ಎಂದು ಈ ಸಂದರ್ಭದಲ್ಲಿ ಹಾರೈಸುತ್ತೇವೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಗುಜರಾತಿನ ಮುಖ್ಯ ಮಂತ್ರಿಗಳಾಗಿದ್ದಂತ ಚಿಮ್ಮನಬಾಯ್ ಪಟೇಲರ ಹಠಾತ್ ನಿಧನ ಈ ಸದನದ ನಮ್ಮೆಲ್ಲರಿಗೂ ಸಹ ಬಹಳ ದುಃಖವನ್ನು ಉಂಟು ಮಾಡಿದೆ ಮತ್ತು ನಂಬಲಾರದಂತಹ ಸಂಗತಿಯಾಗಿದೆ. ಚಿಮ್ಮನಬಾಯ್ ಪಟೇಲರು, ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಗುಜರಾತ್ ಸಂಘರ್ಷಕ ರಾಜಕೀಯ ಇರತಕ್ಕ ರಾಜ್ಯ

ಮಹಾತ್ಮ ಗಾಂಧಿಯವರ ನಾಡಾಗಿರತಕ್ಕ ಗುಜರಾತ್‌ನಲ್ಲಿ ಮೀಸಲಾತಿ ಇಡತಕ್ಕ ವಿಚಾರದಲ್ಲಿ ಬಹಳ ದೊಡ್ಡ ಹೋರಾಟ ನಡೆದುಕೊಂಡು ಬಂದಿತ್ತು. ಇತ್ತೀಚೆಗೆ ಚಿಮ್ಮನಬಾಯ್ ಪಟೇಲರು ಹಿಂದುಳಿದ ವರ್ಗದವರಿಗೆ 27ರಷ್ಟು ಮೀಸಲಾತಿ ಇರಬೇಕೆಂಬ ತೀರ್ಮಾನ ಮಾಡಿದ್ದರು ಮತ್ತು ದಕ್ಷ ಆಡಳಿತಗಾರರು ಎಂಬುದರಲ್ಲಿ ಯಾವುದೇ ರೀತಿಯ ಸಂಶಯ ಇಲ್ಲ. ಜೊತೆಗೆ ಗುಜರಾತಿನ ಕೈಗಾರಿಕಾ ಕ್ಷೇತ್ರದಲ್ಲಿ ಇತ್ತೀಚಿನ ದಿನಗಳಲ್ಲಿ ಚಿಮ್ಮನಬಾಯ್ ಪಟೇಲರು ತೆಗೆದುಕೊಂಡಿರತಕ್ಕ ಅನೇಕ ನಿರ್ಣಯಗಳಲ್ಲಿ ಗುಜರಾತನ್ನು ರಾಷ್ಟ್ರದ ಕೈಗಾರಿಕಾ ರಂಗದಲ್ಲಿ ಮೊದಲನೇ ಸ್ಥಾನಕ್ಕೆ ತೆಗೆದುಕೊಂಡು ಹೋಗತಕ್ಕ ಪ್ರಯತ್ನ ಚಿಮ್ಮನಬಾಯ್ ಪಟೇಲರು ಮಾಡಿದ್ದರು. ಅವರು ಈ ಸದನದ ಹಿರಿಯ ಸದಸ್ಯರಾಗಿರತಕ್ಕ ಹೆಗಡೆಯವರಿಗೆ ಬಹಳ ಆಪ್ತರು. ಶ್ರೀಮಾನ್ ಚಂದ್ರೇಗೌಡರು, ಜೀವರಾಜ ಆಳ್ವ ಅವರು, ದೇಶಪಾಂಡೆಯವರು ಹಾಗು ನಾವೆಲ್ಲ ಇತ್ತೀಚೆಗೆ ನಮ್ಮ ಪಾರ್ಟಿಯಿಂದ, ಕಾಂಗ್ರೆಸ್ಸಿಗೆ ಸೇರಿ ಅಲ್ಲಿ ಮುಖ್ಯ ಮಂತ್ರಿಗಳಾಗಿ ಮುಂದುವರಿದ ಮೇಲೆ ಅವರನ್ನು ಭೇಟಿಯಾಗಿದ್ದೆವು. ಇಡೀ ದಕ್ಷಿಣ ಭಾರತದ ಬಗ್ಗೆ ಮತ್ತು ಪಶ್ಚಿಮದಲ್ಲಿ ರಾಜ್ಯಗಳು ಏನಿವೆ ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶ ಇಲ್ಲಿಯವರೆಗೆ, ಕರಾವಳಿ ಪ್ರದೇಶದಲ್ಲಿ ಏನು ಸಿಗುತ್ತದೆ ಆ ಜಾಲವನ್ನು ಇಲ್ಲಿಯವರೆಗೆ ತೆಗೆದುಕೊಂಡು ಹೋಗತಕ್ಕ, ಕೇಂದ್ರ ಸರ್ಕಾರದ ಜೊತೆಯಲ್ಲಿ ದೊಡ್ಡ ಯೋಜನೆ ಮಾಡತಕ್ಕ ವಿಚಾರವನ್ನು ಇಟ್ಟುಕೊಂಡಿದ್ದರು. ವಿಪರ್ಯಾಸ, ರಾಜಕೀಯದಲ್ಲಿ ಅನೇಕ ಸಂದರ್ಭಗಳಲ್ಲಿ ಆಗುತ್ತದೆ. ಅವರು ಮೂಲತಃ ಕಾಂಗ್ರೆಸ್ಸಿನವರು, ಹುಟ್ಟು ಹೋರಾಟಗಾರರು. 1974ರಲ್ಲಿ ಚಿಮ್ಮನಬಾಯ್ ಪಟೇಲರು ಮುಖ್ಯಮಂತ್ರಿಗಳಾಗಿದ್ದರು. ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರ ಚಳುವಳಿ ಪ್ರಾರಂಭವಾಯಿತು. ಚಿಮ್ಮನಬಾಯ್ ಹಠಾವೋ ಎಂದು ನಾವು ಅವರ ವಿರುದ್ಧ ಹೋರಾಟ ಮಾಡಿದೆವು. 1979ರಲ್ಲಿ ಚಿಮ್ಮನಬಾಯ್ ಪಟೇಲರು ಕಾಂಗ್ರೆಸ್ ಬಿಟ್ಟು ನಮ್ಮ ಪಕ್ಷ ಸೇರಿದರು. 1989ರವರೆಗೆ ನಮಗೆ ಜೊತೆಯಲ್ಲಿದ್ದರು.

ತದನಂತರದ ರಾಜಕೀಯದಲ್ಲಿ ಅನೇಕ ಬದಲಾವಣೆಗಳು ಆದವು. ಅವರು ಕಾಂಗ್ರೆಸ್‌ನಲ್ಲಿ ಉಳಿದು ಮುಖ್ಯಮಂತ್ರಿಗಳಾಗಿ ಮುಂದುವರಿದು ನಮ್ಮೆಲ್ಲರ ಪ್ರೀತಿ ವಿಶ್ವಾಸ ಗಳಿಸಿದರು. ಇವತ್ತು ನಮ್ಮಲ್ಲಿ ಈ ಕಡೆ ಇರತಕ್ಕ ಸದಸ್ಯರಿಗೆ ಅವರು ಕಾಂಗ್ರೆಸ್ ಮುಖ್ಯಮಂತ್ರಿ ಅಲ್ಲ, ಒಬ್ಬ ನಿಜವಾದ ದಕ್ಷ ಆಡಳಿತಗಾರರು ಎಂಬ ಭಾವನೆ ಇತ್ತು. ಅವರ ನಿಧನದಿಂದ ತೀವ್ರವಾಗಿ ನಮ್ಮೆಲ್ಲರಿಗೂ ದುಃಖವಾಗಿದೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ. ಅವರಿಗೆ ಕರ್ನಾಟಕದಲ್ಲಿ ಅನೇಕ ಜನ ಸ್ನೇಹಿತರು ಇದ್ದಾರೆ. ಅದು ಚಿಮ್ಮನಬಾಯ್ ಪಟೇಲರ ಒಂದು ವ್ಯಕ್ತಿತ್ವ. ಅವರ ಶ್ರೀಮತಿಯವರು ಇವತ್ತು ರಾಜ್ಯಸಭೆಯ ಸದಸ್ಯರಾಗಿದ್ದಾರೆ. ಅವರು ಒಂದು ಕಾಲೇಜಿನ ಪ್ರೊಫೆಸರ್ ಆಗಿ ಕೆಲಸ ಮಾಡತಕ್ಕವರು. ಅವರಿಗೆ ಮತ್ತು ಅವರ ಕುಟುಂಬದವರಿಗೆ ತುಂಬಲಾರದ ನಷ್ಟವಾಗಿದೆ. ಅವರೆಲ್ಲರಿಗೆ ದುಃಖವನ್ನು ಭರಿಸುವುದಕ್ಕೆ ಭಗವಂತ ಶಕ್ತಿ ಕೊಡಲಿ ಎಂದು ಪ್ರಾರ್ಥಿಸಿ ತಾವು ಏನು ನಿರ್ಣಯ ಮಂಡಿಸಿದ್ದೀರಿ ಅದನ್ನು ಗುಜರಾತಿನ ಜನತೆಗೆ ಮತ್ತು ಅವರ ಕುಟುಂಬದವರಿಗೆ ತಿಳಿಸಬೇಕೆಂದು ಕೋರಿ ತಮ್ಮ ನಿರ್ಣಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಗುಜರಾತಿನ ಹಾಲಿ ಮುಖ್ಯ ಮಂತ್ರಿಗಳು ಚಿಮನಬಾಯಿ ಪಟೇಲ್‌ರು ಹೃದಯಾಘಾತದಿಂದ ನಿಧನರಾಗಿದ್ದಾರೆಂದರೆ ನಾವು ಯಾರೂ ನಂಬಲಿಕ್ಕೆ ಸಾಧ್ಯವಿಲ್ಲದೆ ಇರತಕ್ಕ ಮಾತಾಗಿದೆ. ಗುಜರಾತಿನ ಅಭಿವೃದ್ಧಿಗೆ ಅವರ ಕೊಡುಗೆ ಅಪಾರವಾದುದು. ಅಖಿಲಭಾರತ ಭಾರತೀಯ ಜನತಾಪಾರ್ಟಿ ಅಧಿವೇಶನ ಎರಡು ಭಾರಿ ಆ ಭಾಗದಲ್ಲಿ ಆದಾಗ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ, ಮುಖ್ಯಮಂತ್ರಿಸ್ಥಾನ ಇಲ್ಲದಿದ್ದ ಸಂದರ್ಭದಲ್ಲಿ

ಮನೆಗೆ ಕರೆದು ಒಂದು ಔತಣಕೂಟವನ್ನು ಏರ್ಪಡಿಸಿದಾಗ ಅಷ್ಟು ಸರಳವಾಗಿ ಬೇರೆ ಬೇರೆ ರಾಜ್ಯಗಳ ಕಷ್ಟಸುಖಗಳನ್ನು ವಿಚಾರಿಸುವಂತಹದ್ದು ಈ ಭಾಗದ ಜನರ ಬಗ್ಗೆ ಅವರಿಗೆ ಇದ್ದ ಕಳಕಳಿ ಇದನ್ನು ನೋಡಿದಾಗ ಇಂತಹ ಒಬ್ಬ ಹೋರಾಟಗಾರ ಇವತ್ತು ಇಲ್ಲವಲ್ಲವೆನ್ನುವುದು ನಮಗೆಲ್ಲರಿಗೂ ದುಃಖ ತರುವಂತಹ ಸಂಗತಿಯಾಗಿದೆ. ಬಹುಶಃ ಅವರ ಅನುಯಾಯಿಗಳಿಗೆ ಆ ರಾಜ್ಯದ ಜನರಿಗೆ ಈವೊಂದು ಸುದ್ದಿಯನ್ನು ಕೇಳಿ ಆಘಾತವಾಗಿರಬಹುದು. ಇಂತಹ ಸಂದರ್ಭದಲ್ಲಿ ಅವರ ಕುಟುಂಬ ವರ್ಗದವರಿಗೆ ಆ ರಾಜ್ಯದ ಜನತೆಗೆ ಅವರ ನಿಧನದಿಂದ ಉಂಟಾಗಿರುವ ದುಃಖವನ್ನು ತಡೆದು ಕೊಳ್ಳುವ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ತಾವೇನು ಸಂತಾಪ ಸೂಚಕ ನಿರ್ಣಯ ಇಟ್ಟಿದ್ದೀರಿ ಅದಕ್ಕೆ ಸಂಪೂರ್ಣವಾದ ಬೆಂಬಲವನ್ನು ಸೂಚಿಸಿ ನಮ್ಮ ಭಾರತೀಯ ಜನತಾ ಪಾರ್ಟಿಯ ಪರವಾಗಿ ನಾನು ನಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

+ ಶ್ರೀ ಆರ್.ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಚಿಮನಭಾಯಿ ಪಟೇಲರು ಇವತ್ತು ನಮ್ಮಲ್ಲಿ ಇಲ್ಲ. ಇವತ್ತು ಮುಂಜಾನೆ ನಮ್ಮ ಶಾಸಕಾಂಗ ಪಕ್ಷದ ಸಭೆ ನಡೆದಾಗ ಶ್ರೀ ಅನಂತನಾಗ್‌ರವರು ಈ ವಿಚಾರವನ್ನು ಹೇಳಿದಾಗ ಅದನ್ನು ನಂಬಲಿಕ್ಕೆ ಸಾಧ್ಯವಾಗಲಿಲ್ಲ. ಕಂಡೋಲೆನ್ಸ್ ರೆಸಲೂಷನ್ ಮಾಡಲಿಕ್ಕೆ ನಾನು ಹೆದರಿಬಿಟ್ಟೆ. ಅದು ಹೇಗೆ ಸಾಧ್ಯವಿದೆ? ನಾನು ಮೊನ್ನೆ ಮೊನ್ನೆ ದೆಹಲಿಗೆ ಹೋದಾಗ ಅವರನ್ನು ನೋಡಿದ್ದೆ. ಆರೋಗ್ಯದಿಂದ ಇದ್ದ ಒಬ್ಬ ವ್ಯಕ್ತಿ ಬಹಳ ಕ್ರಿಯಾಶೀಲರು ಮತ್ತು ಧೀಮಂತ ನಾಯಕ ಇಷ್ಟು ಬೇಗನೆ ಅವರು ನಮ್ಮನ್ನು ಬಿಟ್ಟು ಹೋಗುತ್ತಾರೆಂದು ನಂಬಲಿಕ್ಕೂ ಸಾಧ್ಯವಿಲ್ಲ. ಇವತ್ತು ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಕೈಗಾರಿಕಾ ರಂಗದಲ್ಲಿ ಟ್ರೇಡ್ ಇಂಡಸ್ಟ್ರೀ ಎರಡೂ ರಂಗದಲ್ಲಿ ಸಂಪೂರ್ಣವಾದ ಒಂದು ಪರಿವರ್ತನೆಯನ್ನು ಗುಜರಾತಿನಲ್ಲಿ ಮಾಡಿದ್ದಾರೆ. ಇವತ್ತು ಬಹಳಷ್ಟು ಜನ ಕೈಗಾರಿಕೆಗಳನ್ನು ಮಾಡುವರು ಗುಜರಾತಿನ ಕಡೆ ಆಕರ್ಷಕರಾಗಿದ್ದಾರೆ. ಅಷ್ಟೊಂದು ಬೆಂಬಲವನ್ನು ಅವರು ಇವತ್ತು ಕೈಗಾರಿಕೆ ಬೆಳೆಯಬೇಕು, ಈ ದೇಶದಲ್ಲಿ ನಿರುದ್ಯೋಗದ ಸಮಸ್ಯೆ ಇದೆ, ನಿರುದ್ಯೋಗ ಸಮಸ್ಯೆ ದೂರವಾಗಬೇಕಾದರೆ ಕೈಗಾರಿಕೆ ಅದಕ್ಕೆ ಉತ್ತರ ಇದೆಯೆಂದು ಆವೊಂದು ವಿಷಯದಲ್ಲಿ ವಿಶ್ವಾಸವಿಟ್ಟು ಆ ದೃಷ್ಟಿಯಲ್ಲಿ ಕೆಲಸ ಮಾಡಿ ಸಾಕಷ್ಟು ಪ್ರಗತಿ ಗುಜರಾತಿನಲ್ಲಿ ಆಗಬೇಕಾಗಿದೆ ಅದಕ್ಕೆ ಕಾರಣ ಅವರೆಂದು ನಾವು ಹೇಳಬೇಕಾಗಿದೆ. ಅವರೊಬ್ಬರು ಧೀಮಂತ ನಾಯಕರು ಅವರ ನಿಧನದಿಂದ ಕೇವಲ ಗುಜರಾತಿಗೆ ಅಷ್ಟೆ ಅಲ್ಲ, ರಾಷ್ಟ್ರಕ್ಕೆ ಹಾನಿಯಾಗಿದೆ. ಅವರು ಕೇವಲ ಕಾಂಗ್ರೆಸ್ ಪಕ್ಷದ ಆಸ್ತಿ ಇದ್ದಿಲ್ಲ. ನಮ್ಮಲ್ಲಿ ಕೆಲಸ ಮಾಡಿ ಕಾಂಗ್ರೆಸ್ ಪಕ್ಷಕ್ಕೆ ಹೋಗಿರಬಹುದು. ಆದರೆ ನಮ್ಮ ಜೊತೆಯಲ್ಲಿಯೂ ಸಹ ಸಾಕಷ್ಟು ಒಳ್ಳೆಯ ಸಂಬಂಧ ಇಟ್ಟುಕೊಂಡಿದ್ದರು. ಅವರು ಒಳ್ಳೆಯ ಸ್ನೇಹಿತರು. ಅವರ ಬಗ್ಗೆ ನಮಗೆ ಸಾಕಷ್ಟು ಪ್ರೀತಿ, ಅಭಿಮಾನವಿತ್ತು. ಇವತ್ತು ಅವರನ್ನು ಕಳೆದುಕೊಂಡು ನಾವು ಸಹ ಬಹಳ ಬಡವಾಗಿದ್ದೇವೆ. ನಮ್ಮ ಮನಸ್ಸಿಗೆ ಬಹಳ ನೋವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಅವರ ಕುಟುಂಬಕ್ಕೆ ಅವರ ನಿಧನದಿಂದ ಉಂಟಾಗಿರುವ ದುಃಖವನ್ನು ಸಹಿಸುವ ಶಕ್ತಿಯನ್ನು ಕೊಡಲಿ. ಏನೊಂದು ಆಘಾತ ನಮ್ಮೆಲ್ಲರ ಮೇಲೆ ಆಗಿದೆ ಅದನ್ನು ಯಾವ ಶಬ್ದದಿಂದ ನನಗೆ ಹೇಳಲಿಕ್ಕೆ ಸಾಧ್ಯವಿಲ್ಲ. ತಾವು ಮಂಡಿಸಿದ ನಿರ್ಣಯವನ್ನು ನಾನು ಬೆಂಬಲಿಸುತ್ತೇನೆ.

SRI QAMARUL ISLAM (Gulbarga) : Mr. Speaker, Sir, the sudden demise of the Chief Minister of Gujarat, Shri. Chiman Bhai Patel is really a shocking news to all of us. He was a senior leader of the country. The death of Shri. Chiman Bhai Patel is not only a loss to the State of Gujarat but also it is a loss to the country. On my behalf and on behalf of my Party, I pray

Almighty Allah to keep his soul in peace in heaven and give the strength to his wife and children to bear the loss.

\+ ಶ್ರೀ ಡಿ.ಬಿ . ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಸಭಾನಾಯಕರು ಮತ್ತು ಅನೇಕ ಮಿತ್ರರು ಈ ದಿವಸ ಗುಜರಾತಿನ ಮುಖ್ಯಮಂತ್ರಿಯವರ ಹಠಾತ್ ನಿಧನದ ಬಗ್ಗೆ ತಮ್ಮ ಶೋಕವನ್ನು ವ್ಯಕ್ತ ಮಾಡಿದ್ದಾರೆ ನಾನು ತಮ್ಮ ಎಲ್ಲರ ಅಭಿಪ್ರಾಯಕ್ಕೆ ಧ್ವನಿಗೂಡಿಸುತ್ತೇನೆ. ರಾಷ್ಟ್ರದ ರಾಜಕಾರಣದಲ್ಲಿ ಅನೇಕ ಮಜಲುಗಳನ್ನು ಏರಿದಂತಹ ಚಿಮನಬಾಯಿಪಟೇಲರು ಕೊನೆಗೆ ಗುಜರಾತಿನ ಮುಖ್ಯಮಂತ್ರಿಯಾಗಿ ಕಳೆದ ನಾಲ್ಕು ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ. ಹಲವಾರು ವರ್ಷಗಳ ಕಾಲ ಅವರ ಜೊತೆಗೆ ಸಂಬಂಧವಿಟ್ಟುಕೊಂಡಿದ್ದ ನನಗೆ ವೈಯಕ್ತಿಕವಾಗಿ ಒಬ್ಬ ಹಿರಿಯ ಸ್ನೇಹಿತರನ್ನು ಕಳೆದುಕೊಂಡಷ್ಟು ದುಃಖವಾಗಿದೆ. ಇತ್ತೀಚಿನ ದಿನಗಳಲ್ಲಿ ಜಾತ್ಯಾತೀತ ಶಕ್ತಿಗಳನ್ನು ರಾಷ್ಟ್ರದಲ್ಲಿ ಒಗ್ಗೂಡಿಸುವಂತಹ ಒಂದು ಪ್ರಯತ್ನದ ದೀಕ್ಷೆ ಅವರು ಕೈಗೊಂಡಿದ್ದು ಆ ಪ್ರಯತ್ನ ವಿಶೇಷವಾಗಿ ಗುಜರಾತಿನಲ್ಲಿ ಅಭಿವ್ಯಕ್ತವಾಗಬೇಕಾದಂತಹ ಸಂದರ್ಭದಲ್ಲಿ ಅವರು ನಿಧನರಾದದ್ದು ಈವೊಂದು ಸಮಾಜವಾದಿ ಮತ್ತು ಜಾತ್ಯಾತೀತ ಶಕ್ತಿಗಳ ರಾಷ್ಟ್ರೀಯ ಅಭಿಯಾನಕ್ಕೆ ಅವರು ಕೊಡಬೇಕಾಗಿದ್ದ ಕೊಡುಗೆ ಅಪೂರ್ಣವಾಯಿತು ಎಂದು ನಾನು ಅಂದುಕೊಂಡಿದ್ದೇನೆ.

ಅವರ ನಿಧನದಿಂದ ದುಃಖಿತಪ್ತರಾದ ಅವರ ಕುಟುಂಬವರ್ಗದವರಿಗೂ ಮತ್ತು ವಿಶೇಷವಾಗಿ ಗುಜರಾತ್ ರಾಜ್ಯದ ಜನತೆಗೂ ಸದನದ ಮೂಲಕ ಮತ್ತು ತಮ್ಮ ಮೂಲಕ ನನ್ನ ಸಂತಾಪವನ್ನು ವ್ಯಕ್ತಮಾಡುತ್ತಾ, ಸಂತಾಪಸೂಚಕ ನಿರ್ಣಯವನ್ನು ಅವರ ಕುಟುಂಬವರ್ಗದವರಿಗೆ ತಲುಪಿಸಬೇಕೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

\+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ಈ ದಿನ ನಿಧನರಾದಂತಹ ಮುಖ್ಯಮಂತ್ರಿ ಆಗಿರತಕ್ಕಂತಹ ಚಿಮನ್‌ಭಾಯಿ ಪಟೇಲರು ಇಂದು ನಮ್ಮ ಕಣ್ಣು ಮುಂದೆ ಇಲ್ಲ, ಈ ದೇಶದ ಇತ್ತೀಚಿನ ರಾಜಕೀಯಕ್ಕೆ ಮಹತ್ತರವಾದಂತಹ ತಿರುವು ಗುಜರಾತಿನಿಂದ ಪ್ರಾರಂಭವಾಯಿತು. ಚಿಮನ್‌ಭಾಯಿ ಪಟೇಲರು 73-74ರ ಸುಮಾರಿಗೆ ಗುಜರಾತಿನ ಮುಖ್ಯಮಂತ್ರಿ ಆಗಿದ್ದಂತಹ ಸಂದರ್ಭದಲ್ಲಿ ಇಡೀ ದೇಶದಲ್ಲಿ ಮಹತ್ತರವಾದಂತಹ ಆಂದೋಲನ ಇವರ ಆಡಳಿತದ ವಿರುದ್ಧ, ಇವರ ವಿರುದ್ಧ ಪ್ರಾರಂಭವಾಯಿತು. ಅಲ್ಲಿರತಕ್ಕಂತಹ ಗುಜರಾತಿನ ಜನತೆ ಅವರ ವಿರುದ್ಧ ತಿರುಗಿ ಬಿದ್ದರು. ಅದಕ್ಕೆ ನಾಯಕತ್ವವನ್ನು ಜಯಪ್ರಕಾಶ್ ನಾರಾಯಣ್ ಅವರು ಕೊಟ್ಟರು. ಅಲ್ಲಿ ಹೊಸದಾದ ಜನತಾ ಬಂದ್ ಪ್ರಾರಂಭವಾಯಿತು. ಯಾರೂ ಕರೆ ಕೊಡದೆ ಜನಕ್ಕೆ ಜನಾನೇ ಬೀದಿಗೆ ಇಳಿದು ಬಂದು ಚಳುವಳಿ ನಡೆಸತಕ್ಕಂತಹ ವ್ಯವಸ್ಥೆ ಪ್ರಾರಂಭವಾಯಿತು. ಇದರ ನಂತರ ಇಡೀ ದೇಶವನ್ನು ಕತ್ತಲಲ್ಲಿ ಮುಳುಗಿಸತಕ್ಕ ಒಂದು ತುರ್ತುಪರಿಸ್ಥಿತಿಯನ್ನು ರಾಷ್ಟ್ರದಲ್ಲಿ ತಂದರು. ಇದರ ವಿರುದ್ಧ ಬೃಹತ್ ಪ್ರಮಾಣದ ಚಳುವಳಿ ಜಯಪ್ರಕಾಶ್ ನಾರಾಯಣ್ ಅವರ ನಾಯಕತ್ವದಲ್ಲಿ ಪ್ರಾರಂಭವಾಯಿತು. ಆದಾದ ನಂತರ ಅವರು ತಮ್ಮ ದಾರಿಯನ್ನು ಬದಲಾಯಿಸಿ ಜಯಪ್ರಕಾಶ್ ಅವರು ಕೊಟ್ಟಿರತಕ್ಕಂತಹ ಆಂದೋಲನದ ಪರವಾಗಿ ಅವರು ಕೆಲಸ ಮಾಡಿದರು. ಇತ್ತೀಚೆಗೆ ನಾವು ಗುಜರಾತ್ ರಾಜ್ಯಕ್ಕೆ ಹೋಗಿಬರತಕ್ಕಂತಹ ಅವಕಾಶ ಬಂದಿತ್ತು. ನಾನು ಅವರನ್ನು ಬಹಳವಾಗಿ ಮೆಚ್ಚಿದೆ. ಸರದಾರ್ ಸರೋವರ ಪ್ರಾಜೆಕ್ಟ್‌ನ್ನು ಪಡೆದುಕೊಳ್ಳುವಲ್ಲಿ ವಿಶ್ವಬ್ಯಾಂಕಿಗೆ ಎದುರಿಸಿ, ವಿಶ್ವಬ್ಯಾಂಕಿಗೆ ಮೆಟ್ಟಿ ನಿಂತು ನೀವು ಹಣವನ್ನು ಕೊಡಬೇಕಾದ ಅವಶ್ಯಕತೆ ಇಲ್ಲ ಇದು ನಮ್ಮ ದೇಶದ, ನಮ್ಮ ರಾಜ್ಯದ ಸ್ವಾಭಿಮಾನದ ಪ್ರಶ್ನೆ ಅನ್ನತಕ್ಕಂತಹ ನಿಲುವನ್ನು ಗುಜರಾತಿನ ಸರ್ಕಾರ ತನ್ನದೇ ಆದ ರೀತಿಯಲ್ಲಿ ಸರದಾರ್ ಸರೋವರ್ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ

ಹೊಸದಾದ ಸ್ವರೂಪವನ್ನು ಕೊಟ್ಟು ಹಣವನ್ನು ಒದಗಿಸಿ ಆ ಯೋಜನೆಯನ್ನು ಕಾರ್ಯಗತ ಮಾಡತಕ್ಕಂತಹ ಒಂದು ಮಹತ್ ಕಾರ್ಯವನ್ನು ಅವರು ನೆರವೇರಿಸಿದ್ದಾರೆ. ಇದು ದೇಶಕ್ಕೆ ಒಂದು ಮಾದರಿಯಾದ ರೀತಿಯಲ್ಲಿ ಆ ಯೋಜನೆಯನ್ನು ಕಾರ್ಯಗತ ಮಾಡಿದ್ದನ್ನು ನಾನು ಕಣ್ಣಾರೆ ನೋಡಿ ಕೇಳತಕ್ಕಂತಹ ಅವಕಾಶ ಒದಗಿಬಂತು. ನಾನು ಆವತ್ತು ಇವರನ್ನು ಮನಸಾರೆ ಮೆಚ್ಚಿದೆ. ಇಂತಹವರು ಇವತ್ತಿನ ದಿವಸ ನಮ್ಮ ಕಣ್ಣು ಮುಂದೆ ಇಲ್ಲದೆ ಇರತಕ್ಕಂಥಾದ್ದು ಇಡೀ ದೇಶದ ದೌರ್ಭಾಗ್ಯ. ನಮಗೆ ಅವರ ಹಟಾತ್ ನಿಧನದಿಂದ ಈ ದೇಶದ ರೈತರಿಗೆ ಏನಾದರೂ ನೆರವಾಗತಕ್ಕಂತಹ ಒಂದು ಶಕ್ತಿ ಇಲ್ಲದಾಯಿತು. ಎಂದು ಹೇಳಿ, ಸಂತಾಪವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅತ್ಯಂತ ದುರಂತ ವಾರ್ತೆ. ಗುಜರಾತ್ ಮುಖ್ಯಮಂತ್ರಿಗಳಾದ ಶ್ರೀಮಾನ್ ಚಿಮನ್‌ಭಾಯ ಪಟೇಲ್‌ರವರ ನಿಧನ ಕೇಳಿ ಮನಸ್ಸಿಗೆ ನೋವಾಯಿತು. ನಾನು ದೆಹಲಿಗೆ ಹೋದಾಗ ಒಂದು ಸಾರಿ ಅವರನ್ನೂ ಭೇಟಿ ಮಾಡಿದ್ದೇನೆ. ಅತ್ಯಂತ ಸರಳವಾದಂಥ, ಅತ್ಯಂತ ವಿಚಾರಪೂರ್ಣ ಮಾತನ್ನು ಆಡತಕ್ಕ ವ್ಯಕ್ತಿ ಅವರು ಆಗಿದ್ದರು. ಗುಜರಾತ್‌ನಲ್ಲಿ ಬಹಳ ಶಕ್ತಿಯುತವಾದ ಒಂದು ನಾಯಕತ್ವವನ್ನು ಕೊಟ್ಟು, ಗುಜರಾತಿನ ಬೆಳವಣಿಗೆಗೂ, ರಾಷ್ಟ್ರದ ಬೆಳವಣಿಗೆಗೂ ಅಪಾರವಾದ ಸೇವೆಯನ್ನು ಮಾಡಿರತಕ್ಕ ಶ್ರೀಮಾನ್ ಚಿಮನ್‌ಬಾಯ್ ಪಟೇಲ್‌ರವರ ನಿಧನದಿಂದ ಈ ರಾಷ್ಟ್ರಕ್ಕೆ ಅಪಾರವಾದ ನಷ್ಟ ಉಂಟಾಗಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರಲು ತಂದಿರುವ ನಿರ್ಣಯಕ್ಕೆ ನಾನು ಸಂಪೂರ್ಣವಾಗಿ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

ಅಧ್ಯಕ್ಷರು : ಮೃತರ ಗೌರವಾರ್ಥ ಸಭೆಯು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿತು)

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಸಂತಾಪ ಸೂಚಕ ನಿರ್ಣಯವನ್ನು ಕಳುಹಿಸುವುದರ ಜೊತೆಗೆ ಅವರ ಗೌರವಾರ್ಥ ಈ ಸಭೆಯನ್ನು ಅರ್ಧ ಗಂಟೆ ಅಥವಾ ಒಂದು ಗಂಟೆ ಮುಂದೂಡಿ ಮತ್ತೆ ಸೇರುವುದು ಸೂಕ್ತವೆಂದು ಸಲಹೆ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಆಗಬಹುದು, ಅರ್ಧ ಗಂಟೆ ಮುಂದಕ್ಕೆ ಹಾಕಬಹುದು.

ಅಧ್ಯಕ್ಷರು : ಸಭೆಯು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿ ಕೊಡಲಾಗುವುದು. ಮೃತರ ಗೌರವಾರ್ಥ ಈಗ ಸಭೆಯನ್ನು ಅರ್ಧ ಗಂಟೆ ಕಾಲ ಮುಂದೂಡುತ್ತೇನೆ. ಸಭೆಯು ಅರ್ಧ ಗಂಟೆ ನಂತರ ಮತ್ತೆ ಸೇರುವುದು.

(ಸದನವು 12-25ಕ್ಕೆ ಮತ್ತೆ ಸಮಾವೇಶಗೊಂಡಿತು.)

(ಸಭಾಧ್ಯಕ್ಷರಾದ ಶ್ರೀ ವಿ.ಎಸ್. ಕೌಜಲಗಿ ಅವರು ಪೀಠವನ್ನು ಅಲಂಕರಿಸಿದರು.)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಮೂಡಿಗೆರೆ ತಾಲ್ಲೋಕಿನಲ್ಲಿ ಕೊಳವೆ ಬಾವಿಗಳು.

240 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 1993-94ರಲ್ಲಿ ಮೂಡಿಗೆರೆ ತಾಲ್ಲೂಕಿಗೆ ಮಂಜೂರಾದ ಕೊಳವೆ ಬಾವಿಗಳು ಎಷ್ಟು? ಹಾಗೂ ಅವುಗಳಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಯಿತು?

2) ಅವುಗಳಲ್ಲಿ ಫಲಕಾರಿಯಾದ ಕೊಳವೆಬಾವಿಗಳೆಷ್ಟು ಮತ್ತು ಹಾಳಾದ ಕೊಳವೆ ಬಾವಿಗಳು ಎಷ್ಟು?

3) ಮೂಡಿಗೆರೆ ತಾಲ್ಲೂಕಿನಲ್ಲಿ ಕೊಳವೆ ಬಾವಿ ಯೋಜನೆ ಫಲಕಾರಿಯಾಗುವುದಿಲ್ಲವೆಂದು ತಿಳಿದೂ ಸರ್ಕಾರ ಅದನ್ನು ಮಂಜೂರು ಮಾಡಲು ಕಾರಣವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1) 1993-94 ರಲ್ಲಿ ಮಂಜೂರಾದ ಕೊಳವೆಬಾವಿಗಳ ಸಂಖ್ಯೆ	-	34
ಅವುಗಳಲ್ಲಿ, ಇದುವರೆಗೂ ಕೊರೆದ ಕೊಳವೆ ಬಾವಿಗಳ ಸಂಖ್ಯೆ	-	10
2) ಫಲಕಾರಿಯಾದ ಕೊಳವೆಬಾವಿಗಳ ಸಂಖ್ಯೆ	-	7
ಹಾಳಾದ ಕೊಳವೆಬಾವಿಗಳ ಸಂಖ್ಯೆ	-	3

3) ಕ್ರಿಯಾ ಯೋಜನೆಯಲ್ಲಿ ಯಾವ ಗ್ರಾಮಗಳಲ್ಲಿ ಕೊಳವೆ ಬಾವಿಗಳು ಮಂಜೂರಾಗಿದ್ದು, ಕೊಳವೆ ಬಾವಿಗಳನ್ನು ಕೊರೆದರೆ ಪ್ರಯೋಜನ ಇಲ್ಲದಿದ್ದಲ್ಲಿ, ಅಂತಹ ಸ್ಥಳಗಳಲ್ಲಿ ಕೊಳವೆ ಬಾವಿಗಳ ಬದಲು ತೆರೆದ ಬಾವಿಗಳನ್ನು ಮಂಜೂರು ಮಾಡಬಹುದು.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ 34 ಕೊಳವೆ ಬಾವಿಗಳು ಈ ವರ್ಷ ಮಂಜೂರಾಗಿ ಕೇವಲ ಹತ್ತು ಕೊರೆದಿದ್ದೇವೆ ಎಂದು ಹೇಳುತ್ತಾರೆ. ಇದು ಎಷ್ಟರಮಟ್ಟಿಗೆ ಸತ್ಯ ಎನ್ನುವುದನ್ನು ನಾನು ಅವರನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಏಕೆಂದರೆ ಮೊನ್ನೆ ಈ ತಿಂಗಳು ಕೆಡಿಪಿ ಮೀಟಿಂಗ್ ನಡೆದಾಗ ನನ್ನ ತಾಲ್ಲೂಕಿನಲ್ಲಿ ಹೋದ ವರ್ಷ ಬೋರ್‌ವೆಲ್ ಸ್ಯಾಂಕ್ಷನ್ ಆಗಿದ್ದರೂ ಒಂದೇ ಒಂದು ಬೋರ್‌ವಲ್‌ನ್ನು ಕೊರೆದಿಲ್ಲ. ಈ ವರ್ಷ ಸಹಾ ಕೊರೆಯಲಿಲ್ಲ ಏಕೆ ಎಂದು ಹೇಳಿ ಪ್ರಶ್ನೆ ಮಾಡಿದಾಗ ಕೇಸಿಂಗ್ ಪೈಪ್ಸ್ ಇಲ್ಲ, ಹಾಗಾಗಿ ರಿಗ್‌ಗಳು ಈ ತಾಲ್ಲೂಕಿಗೆ ಬಂದವುಗಳು ವಾಪಸ್ ಹೋಗಿವೆ. ಜೊತೆಗೆ ನೀವು ಹೇಳಿದ್ದರಲ್ಲೂ ಹತ್ತು ಕೊರೆದಿದ್ದರೂ ಮೂರು ಫೇಲೂರ್ ಆಗಿದೆ ಎಂದು ಹೇಳುತ್ತೀರಿ. ಈ ಏಳು ಎಲ್ಲೆಲ್ಲಿ ಕೊರೆದಿದೆ ಮತ್ತು ಮೂರು ಬೋರ್‌ವೆಲ್ಸ್ ಎಲ್ಲಿ ಫೇಲೂರ್ ಆಗಿದೆ ಎನ್ನುವುದನ್ನು ಮೊದಲನೆಯದಾಗಿ ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಕೊಳವೆ ಬಾವಿಗಳನ್ನು ಎಲ್ಲಾ ಕಡೆ ಅವಶ್ಯಕತೆಯ ಪ್ರಕಾರ ಕೊಡಬೇಕು. ಇದರಲ್ಲಿ ಸಂದೇಹ ಇಲ್ಲ. ಕೊಳವೆ ಬಾವಿ ಹಾಕಿಸುವುದರಲ್ಲೂ ಕೂಡ ಯಾವುದೇ ತೊಂದರೆ ಇಲ್ಲ. ಆದರೆ ದುರ್ದೈವದಿಂದ ಕೆಲವು ಭಾಗದಲ್ಲಿ ನಾವು ಕೊಳವೆ ಬಾವಿಗಳನ್ನು ಕೊರೆದರೂ ಅಲ್ಲಿ ಸಂಪೂರ್ಣ ಯಶಸ್ವಿಯಾಗಲಿಕ್ಕಿಲ್ಲ. ಅವರ ಭಾಗದಲ್ಲಿಯೂ ಕೂಡ ಒಂದು ತೊಂದರೆ ಇದೆ. ಕೆಲವು ಕಡೆ ಫೇಲ್ಯೂರ್ ಆಗುತ್ತಿದೆ. ಅದಕ್ಕೋಸ್ಕರ ಅವರು ಪ್ರಶ್ನೆಯನ್ನು ಕೇಳಿದ್ದಾರೆ.

ಫೇಲ್ಯೂರ್ ಆದರೆ ಓಪನ್ ಬಾವಿಗಳನ್ನು ಮಾಡಿಸಬೇಕು ಎಲ್ಲಿ ಓಪನ್ ಬಾವಿಗಳನ್ನು ಮಾಡಿಸುವುದಕ್ಕೆ ಸಾಧ್ಯ, ಅದನ್ನು ಮಾಡಿಸುತ್ತೇವೆ. ಕೇಸಿಂಗ್ . ಕೈಪ್ಸ್ ತೊಂದರೆ ಇಲ್ಲ. ಅದಕ್ಕೋಸ್ಕರ ತೊಂದರೆಯಾಗುತ್ತಿಲ್ಲ. ಅಲ್ಲಿ ಭೂಮಿಯ ಒಂದು ಪರಿಸ್ಥಿತಿ ಏನಿದೆ, ಅಂತರಜಲದ ಪರಿಸ್ಥಿತಿ ಆದರ ಮೇಲೆ ಅದು ಅವಲಂಬಸಿದೆ. ಕೆಲವು ಕಡೆ ಕಷ್ಟ ಇದ್ದರೆ ಕೊಳವೆ ಬಾವಿಗಳನ್ನು ಮಾಡುವುದು ಕಷ್ಟವಿದ್ದರೆ ಓಪನ್ ವೆಲ್‌ಗಳನ್ನು ಮಾಡಿಸುತ್ತೇನೆ. ಮತ್ತೆ ಕೊಳವೆ ಬಾವಿಗಳನ್ನು ಎಲ್ಲಿ ಮಾಡಿದರೆ

ಯಶಸ್ವಿಯಾಗುತ್ತದೆ, ಇದನ್ನು ನೋಡಲಿಕ್ಕೂ ಕೂಡ ಸೈಂಟಿಫಿಕ್ ಆಗಿ ಎಷ್ಟರಮಟ್ಟಿಗೆ ಪರೀಕ್ಷೆ ಮಾಡಲಿಕ್ಕೆ ಸಾಧ್ಯ ಅದನ್ನೂ ಮಾಡುತ್ತಿದ್ದೇವೆ.

ಶ್ರೀಮತಿ ಮೋಟಮ್ಮ : ನಾನು ಸ್ಪಷ್ಟವಾಗಿ ಉತ್ತರವನ್ನು ಬಯಸುತ್ತೇನೆ. ಏಕೆಂದರೆ ಈ ತಿಂಗಳ ಮೂರನೇ ತಾರೀಖು ಕೆಡಿಪಿ ಮೀಟಿಂಗ್‌ನಲ್ಲಿ ವಿಚಾರಣೆ ಮಾಡಿದಾಗ ಒಂದೇ ಒಂದು ಬೋರ್‌ವೆಲ್‌ಇನ್ನೂ ಕೊರೆದಿಲ್ಲ. ಇನ್ನು ಮಳೆಗಾಲ ಪ್ರಾರಂಭವಾದರೆ ಬೋರ್‌ವೆಲ್ ಕೊರೆದರೂ ಎಷ್ಟು ಅಡಿ ನೀರು ಸಿಗುತ್ತದೆ ಎಂದು ನಮಗೆ ಗೊತ್ತಾಗುವುದಿಲ್ಲ. ಏಕೆಂದರೆ ನಮ್ಮಲ್ಲಿ 200 ಅಡಿ ಆಳ ತೆಗೆದರೂ ಅದರಲ್ಲಿ ನೀರು ಸಿಗುವುದು ಬಹಳ ಕಷ್ಟ. ಹಾಗಾಗಿ ಇನ್ನೂ ಬೋರ್‌ವೆಲ್ ಕೊರೆಯುವುದಕ್ಕೆ ಪ್ರಾರಂಭ ಮಾಡಿಲ್ಲ. ನಾನು ಪ್ರಶ್ನೆ ಮಾಡಿದಾಗ ಕೇಸಿಂಗ್ ಪೈಪ್ಸ್ ಇಲ್ಲದೆ ವಾಪಸ್ ಬಂದಿದ್ದಾರೆ ಎನ್ನುವ ಮಾತನ್ನು ಹೇಳಿದ್ದರು. ಅದಕ್ಕೆ ಇವರು ಏನು ಹತ್ತು ಕೊರೆದಿದ್ದೇವೆ ಎಂದು ಹೇಳಿದ್ದಾರೆಲ್ಲ, ಅದರಲ್ಲಿ ಏಳು ಎಲ್ಲಿ ಸಕ್ಸಸ್ ಆಗಿದೆ, ಮೂರು ಎಲ್ಲಿ ಫೇಲೂರ್ ಆಗಿದೆ ಎಂದು ಅವರು ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಎರಡನೆಯದು ಎಂದರೆ ಈಗ ಬೋರ್‌ವೆಲ್ ಫೇಲೂರ್ ಆಗುವುದು ಬಹಳ ನಮ್ಮಲ್ಲಿ ಆಗಿದೆ. ಒಂದೊಂದು ಕಡೆ ಆರು-ಏಳು ಬೋರ್‌ವೆಲ್ ತೆಗೆದರೂ ಸಹಾ ಅದು ಫೇಲೂರ್ ಆಗಿದೆ. ಅಂಥ ಕಡೆಗಳಲ್ಲಿ ಅದಕ್ಕೆ ಖರ್ಚಾಗಿ ವೇಸ್ಟ್ ಆದ ಹಣದ ಬದಲಾಗಿ ಬೋರ್‌ವೆಲ್ ನಲ್ಲಿ ಸಕ್ಸಸ್ ಆಗುವುದಿಲ್ಲ, ಅಲ್ಲಿ ಮಿನಿ ವಾಟರ್ ಏತಕ್ಕೆ ಕೊಡಬಾರದು. ನಮ್ಮಲ್ಲಿ ಹಳ್ಳ, ತೊರೆ, ಕೆರೆ ಎಲ್ಲಾ ಇದೆ. ಈ ಭಾಗದಲ್ಲಿ ಅವರು ಹೇಳಿದ ಪ್ರಕಾರ ಓಪನ್ ವೆಲ್ ತೆಗೆದರೆ ಜನರಿಗೆ ನೀರು ಎರಡು-ಮೂರು ಕಿಲೋಮೀಟರ್‌ನಿಂದ ಬಂದು ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಓಪನ್ ವೆಲ್ ತೆಗೆದಮೇಲೆ ಅಲ್ಲಿಗೆ ಮೋಟರನ್ನು ಅಳವಡಿಸಬೇಕಾಗುತ್ತದೆ. ಮತ್ತೆ ಪೈಪ್ ಕೂಡ ಬೇಕಾಗುತ್ತದೆ. ಆ ಕೆಲಸಕ್ಕೆ ನೀವು ಸ್ಪೆಷಲ್ ಆಗಿ ಈ ಮಲೆನಾಡಿನ ಭಾಗಕ್ಕೆ ಹಣವನ್ನು ಒದಗಿಸಬೇಕಾಗುತ್ತದೆ. ಈ ಬೋರ್‌ವೆಲ್ ಸ್ಕೀಮನ್ನು ಬೇಕಾದರೆ ಮಲೆನಾಡಿನ ಭಾಗಕ್ಕೆ ತೆಗೆದುಹಾಕಿಬಿಡಿ. ಅದರ ಬದಲಾಗಿ ಏನು ವಾಟರ್ ಸೋರ್ಸ್ ಇದೆ, ಅದರಲ್ಲಿ ಓಪನ್ ವೆಲ್ ಮಾಡಿ ಮೋಟಾರ್ ಅಳವಡಿಸಿ ಪಂಪ್ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎಂ.ವೈ. ಘೋರ್ಪಡೆ : ಇಲ್ಲಿ ಹತ್ತು ಬೋರ್‌ವೆಲ್‌ಗಳನ್ನು ಕೊರೆದರೂ ಅದರಲ್ಲಿ ಏಳು ಸಕ್ಸಸ್ ಆಗಿದೆ. ಮೂರು ಸಕ್ಸಸ್ ಆಗಿಲ್ಲ. ಎಲ್ಲಿ ಸಕ್ಸಸ್ ಆಗಿಲ್ಲ ಅಂಥ ಕಡೆ ಈ ಮಿನಿ ವಾಟರ್ ಸಪ್ಲೈ ಮಾಡಲಿಕ್ಕೆ ಅವಕಾಶ ಇದ್ದರೆ ಅದನ್ನು ಖಂಡಿತವಾಗಿಯೂ ಮಾಡುತ್ತೇವೆ. ಅದಕ್ಕೋಸ್ಕರವೇ ಮಿನಿವಾಟರ್ ಸಪ್ಲೈ ಇದೆ.

ಶ್ರೀಮತಿ ಮೋಟಮ್ಮ : ಇಲ್ಲ ಅಧ್ಯಕ್ಷರೇ, ಒಂದು ಎರಡು ಮಿನಿ ವಾಟರ್ ಸ್ಕೀಮ್ ಅಲ್ಲಿ ಬರುತ್ತದೆ, ಜಿಲ್ಲಾ ಪರಿಷತ್ತಿನಲ್ಲಿ. ಒಂದು ಎರಡು ಮಿನಿ ವಾಟರ್ ಬರುತ್ತದೆ ಒಂದೊಂದು ಕ್ಷೇತ್ರಕ್ಕೆ. ಈಗ 34 ಬೋರ್‌ವೆಲ್ ಬದಲಾಗಿ ನೀವು ಅಷ್ಟು 34 ಮಿನಿವಾಟರನ್ನು ಕೊಡುತ್ತೀರಾ? ನನ್ನ ತಾಲ್ಲೂಕಿಗೆ 34 ಬೋರ್‌ವೆಲ್ ಸ್ಯಾಂಕ್ಷನ್ ಆಗಿದೆ. ಅಲ್ಲಿ ತೀವ್ರ ನೀರಿನ ಅಭಾವ ಇದೆ. ನಮಗೆ ಮಳೆಗಾಲದಲ್ಲಿ ನೀರು ಬರುತ್ತದೆ. ಬೇಸಿಗೆಯಲ್ಲಿ ಅಷ್ಟೇ ನಮಗೆ ಕುಡಿಯುವ ನೀರಿನ ಅಭಾವ ಇದೆ. ಅಲ್ಲಿ ನೀವು 34 ಮಿನಿ ವಾಟರ್‌ನ್ನು ಈ ಸಾರಿ ಮಂಜೂರು ಮಾಡಿಕೊಡುತ್ತೀರಾ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎಂ. ವೈ. ಘೋರ್ಪಡೆ : 34 ಎಲ್ಲೆಲ್ಲಿ ಫೇಲ್ ಆಗುತ್ತದೆ, ಅಲ್ಲಿ ತಕ್ಷಣ ನಾವು ಮಿನಿ ವಾಟರ್ ಸಪ್ಲೈ ಹಾಕಿಸಿಕೊಡಲಿಕ್ಕೆ ಸಾಧ್ಯ ಎಂದು ನಾನು ಹೇಳಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಒಟ್ಟು ನೀರಿನ ಪರಿಸ್ಥಿತಿ ಏನಿದೆ, ಅದನ್ನು ತಿಳಿದುಕೊಂಡು ಪರ್‌ಕ್ಯಾಪಿಟ ಅವೈಲಬಿಲಿಟಿ ಎಷ್ಟಿದೆ, ಎಷ್ಟು ತೊಂದರೆಯಾಗುತ್ತಿದೆ, ಮತ್ತೆ ಬೋರ್‌ವೆಲ್

ಮೂಲಕ ನಾವು ಸಾಕಷ್ಟು ನೀರನ್ನು ಕೊಡಲಿಕ್ಕೆ ಆಗದಿದ್ದರೆ ಮಿನಿ ವಾಟರ್ ಸಪ್ಲೈಯಿಂದ ಅದಕ್ಕೂ ಒಂದು ಸೋರ್ಸ್ ಹುಡುಕಬೇಕಾಗುತ್ತದೆ. ಅಲ್ಲಿಂದ ನಾವು ನೀರನ್ನು ತರಬೇಕಾಗುತ್ತದೆ. ಒಟ್ಟಿನಲ್ಲಿ ನೀರಿನ ತೊಂದರೆ ಎಲ್ಲಿದೆ, ಅದನ್ನು ನಿವಾರಣೆ ಮಾಡುವುದಕ್ಕೆ ಏನು ಮಾಡಲಿಕ್ಕೆ ಸಾಧ್ಯವೋ ಅದನ್ನು ಮಾಡೋಣ.

ಗ್ರಾಮ ಪಂಚಾಯಿತಿಗಳಿಗೆ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳ ಆಯ್ಕೆ

316 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಬಹುಪಾಲು ಗ್ರಾಮ ಪಂಚಾಯಿತಿ ಚುನಾವಣೆಗಳು ಈಗಾಗಲೇ ಮುಗಿದು ಬಹುಕಾಲವಾಗಿದ್ದು ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಯಾಗದೇ ಇರುವುದು ನಿಜವಲ್ಲವೆ, ಈ ವಿಳಂಬಕ್ಕೆ ವಿವರಗಳನ್ನು ನೀಡುವುದು.

(ಆ) ವಿವಿಧ ಗ್ರಾಮ ಪಂಚಾಯಿತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಮೀಸಲಾತಿ ರೋಸ್ಟರ್ ಬಿಂದುಗಳನ್ನು ಗುರುತಿಸುವಲ್ಲಿ ಸರ್ಕಾರದ ಸಂಬಂಧಿಸಿದ ಶಾಸಕರ ಸಲಹೆ ಪಡೆಯಬಹುದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

ಅ) ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳಿಗೆ ಚುನಾವಣೆ ನಡೆಸಲು ಮೀಸಲಾತಿ ವಿಧಾನಗಳನ್ನು ರೂಪಿಸಿ ಸರ್ಕಾರ ದಿನಾಂಕ 21.12.1993ರಂದು ಹೊರಡಿಸಲಾದ ಆದೇಶವನ್ನು ಕಾರ್ಯಗತಗೊಳಿಸುವಲ್ಲಿ ಕೆಲವೊಂದು ತೊಂದರೆಗಳಿದ್ದುದರಿಂದ ಚುನಾವಣೆ ನಡೆಸಲು ಆಗಲಿಲ್ಲ. ಈ ತೊಂದರೆಗಳ ನಿವಾರಣೆಗಾಗಿ ಪರಿಷ್ಕೃತ ಆದೇಶ ದಿನಾಂಕ 2.2.1994ರಂದು ಹೊರಡಿಸಲಾಗಿದೆ. ಇದರಂತೆ ದಿನಾಂಕ 1.3.94ರೊಳಗೆ ಚುನಾವಣೆಗಳನ್ನು ನಡೆಸಲು ನಿರ್ದೇಶನ ಈಗಾಗಲೇ ನೀಡಲಾಗಿದೆ.

(ಆ) ದಿನಾಂಕ 2.2.1994ರಂದು ಹೊರಡಿಸಲಾದ ಮಾರ್ಗಸೂಚಿಗಳನುಸಾರ ವಿವಿಧ ವರ್ಗಗಳಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಮೀಸಲಾತಿಯು ಆ ತಾಲ್ಲೂಕಿನಲ್ಲಿಯ ಗ್ರಾಮ ಪಂಚಾಯಿತಿಯಲ್ಲಿ ವಿವಿಧ ವರ್ಗಗಳಿಂದ ಚುನಾಯಿತರಾದ ಸದಸ್ಯರ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಆದಾಗ್ಯೂ ಒಂದೇ ವರ್ಗಕ್ಕೆ ಸೇರಿದ ಚುನಾಯಿತ ಸದಸ್ಯರ ಸಂಖ್ಯೆಯು ಒಂದಕ್ಕಿಂತ ಹೆಚ್ಚಿನ ಗ್ರಾಮ ಪಂಚಾಯಿತಿಯಲ್ಲಿ ಇದ್ದ ಪಕ್ಷದಲ್ಲಿ ಜಿಲ್ಲಾಧಿಕಾರಿಯವರು ತಮ್ಮ ವಿವೇಚಾನುಸಾರ ನಿರ್ಧರಿಸುವರು. ಹಾಗೂ ಒಂದೇ ವರ್ಗಕ್ಕೆ ಸೇರಿದ ಸದಸ್ಯರುಗಳು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಗುಂಪಾಗುವುದನ್ನು ತಪ್ಪಿಸಲು ಪ್ರಯತ್ನಿಸುವರು. ಸಂಬಂಧಪಟ್ಟವರೆಲ್ಲರ ಸಲಹೆ ಪಡೆಯುವರು ಅಥವಾ ಸರಿ ಎಂದು ಕಂಡುಬಂದಲ್ಲಿ ಲಾಟರಿ ಎತ್ತುವ ಮೂಲಕ ನಿರ್ಧರಿಸುವರು.

ಶ್ರೀ ಪಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಉಪ ಪ್ರಶ್ನೆ ಇಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯಗಳ ನಿರ್ಮಾಣ

387 - ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯಗಳು ಇಲ್ಲದೇ ಇರುವುದರಿಂದ ಹಳ್ಳಿಯ ಜನರಿಗೆ ತೊಂದರೆಯಾಗುತ್ತಿರುವ ಸಂಗತಿ ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರಕಾರದವರು ಹಳ್ಳಿಯ ಜನರಿಗೆ ಮೂತ್ರಾಲಯ ಹಾಗೂ ಶೌಚಾಲಯಗಳನ್ನು ಕಟ್ಟಿಸಿ ಕೊಡಲು ಯಾವ ಕ್ರಮ ಕೈಗೊಂಡಿರುವರು?

ಇ) ಬೆಳಗಾವಿ ಜಿಲ್ಲೆಯ ಹಳ್ಳಿಗಳಲ್ಲಿ ಮೂತ್ರಾಲಯ, ಮೂತ್ರಾಲಯ ಹಾಗೂ ಶೌಚಾಲಯಗಳನ್ನು ಈ ಮೊದಲು ಕಟ್ಟಲಾಗಿದೆಯೇ. ಹಾಗಿದ್ದಲ್ಲಿ ಯಾವ ಯಾವ ಸ್ಥಳಗಳಲ್ಲಿ ಎಷ್ಟೆಷ್ಟು ಶೌಚಾಲಯಗಳನ್ನು ಕಟ್ಟಲಾಗಿದೆ. (ವಿವರ ನೀಡುವುದು)

ಈ) ಬೆಳಗಾವಿ ಜಿಲ್ಲೆಯಲ್ಲಿ ಇದರ ಸಲುವಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ?

ಉ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನಲ್ಲಿ ಈ ಕೆಲಸದ ಸಲುವಾಗಿ ಎಷ್ಟು ಹಣವನ್ನು ಒದಗಿಸಲಾಗಿದೆ? ಮತ್ತು ಯಾವ ಯಾವ ಸ್ಥಳಗಳಲ್ಲಿ ಶೌಚಾಲಯ ಮತ್ತು ಮೂತ್ರಾಲಯಗಳನ್ನು ಕಟ್ಟಲಾಗಿದೆ?

ಊ) ಪ್ರತಿಯೊಂದು ಪ್ರಾಥಮಿಕ ಶಾಲೆಯ ಹತ್ತಿರ ಮೂತ್ರಾಲಯ ಹಾಗೂ ಶೌಚಾಲಯಗಳನ್ನು ಕಟ್ಟಲು ಬೆಳಗಾವಿ ಜಿಲ್ಲೆಯಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಬಂದಿದೆ.

ಆ) ಮೂತ್ರಾಲಯಗಳನ್ನು ಕಟ್ಟುವ ಯೋಜನೆ ಇಲ್ಲ.

ಇ) ಬೆಳಗಾವಿ ಜಿಲ್ಲೆಯಲ್ಲಿ 1986-87ರಿಂದ ಇದುವರೆಗೂ ವಿವಿಧ ಯೋಜನೆಗಳಡಿಯಲ್ಲಿ 4112 ವೈಯಕ್ತಿಕ ಶೌಚಾಲಯಗಳನ್ನು 207 ಸಾಂಸ್ಥಿಕ ಶೌಚಾಲಯಗಳನ್ನು ಮತ್ತು 4 ಸಮುದಾಯ ಶೌಚಾಲಯಗಳನ್ನು ಮಾತ್ರ ನಿರ್ಮಿಸಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ 49 ವೈಯಕ್ತಿಕ ಶೌಚಾಲಯಗಳನ್ನು ಮತ್ತು 4 ಸಮುದಾಯ ಶೌಚಾಲಯಗಳನ್ನು ಈ ಕೆಳಗಿನ ಸ್ಥಳಗಳಲ್ಲಿ ನಿರ್ಮಿಸಲಾಗಿದೆ.

ತಾಲ್ಲೂಕು	ಗ್ರಾಮ	ವೈಯಕ್ತಿಕ ಶೌಚಾಲಯ	ಸಮುದಾಯ ಶೌಚಾಲಯ
ಬೆಳಗಾವಿ	ಸನೋಲ್ಲಿ	8	-
”	ಬೆನಕನಹಳ್ಳಿ	8	-
”	ಗಣೇಶಪುರ	2	-
ಸೌಂದತ್ತಿ	ಯರವಟ್ಟಿ	12	-
ಖಾನಾಪುರ	ಹಿರೇಮುಕ್ಕಳ್ಳಿ	6	-
	ಘರಿಶ್‌ವಾಡ್	5	-
	ಇಟಗಿ	8	-
ಚಿಕೋಡಿ	ಎಕ್ಸ್‌ಂಬಾ	-	2
”	ಯಡೂರ್	-	2

ಈ) ರೂ. 52.090 ಲಕ್ಷ

ಉ) 1993-94ನೇ ಸಾಲಿಗೆ
ಬೈಲಹೊಂಗಲ ತಾಲ್ಲೂಕಿಗೆ ಅನುದಾನ ರೂ. 1.132 ಲಕ್ಷ.
[illegible] 1.132 ಲಕ್ಷ

ಈ ಕೆಳಗಿನ ಸ್ಥಳಗಳಲ್ಲಿ ವೈಯಕ್ತಿಕ ಶೌಚಾಲಯಗಳನ್ನು ಕಟ್ಟಲಾಗಿದೆ.

ತಾಲ್ಲೂಕು	ಗ್ರಾಮ	ವೈಯಕ್ತಿಕ ಶೌಚಾಲಯಗಳು
ಸೌಂದತ್ತಿ	ಯರಗಟ್ಟಿ	12

ಊ)ಅನುದಾನ ಲಭ್ಯದ ಮೇಲೆ ಅವಲಂಬಿಸಿ ಸಾಂಸ್ಥಿಕ ಶೌಚಾಲಯಗಳನ್ನು ಪ್ರಾಥಮಿಕ ಶಾಲೆಯ ಹತ್ತಿರ ಕಟ್ಟಬಹುದು. ಈ ಬಗ್ಗೆ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಸೂಚನೆ ನೀಡಲಾಗುವುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೆ, ನಾನು ಕೇಳಿದಂತಹ ಪ್ರಶ್ನೆಗಳು ಏನೆಂದರೆ ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯಗಳು ಇಲ್ಲದೇ ಇರುವುದರಿಂದ ಜನರಿಗೆ ತೊಂದರೆ ಆಗುತ್ತಿರುವುದರಿಂದ, ತಮ್ಮ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಶೌಚಾಲಯಗಳನ್ನು ಕಟ್ಟಲಾಗುವುದೇ ಎಂದು ಕೇಳಿದಾಗ ಇಲ್ಲ ಎಂದು ಉತ್ತರ ಹೇಳಿದ್ದಾರೆ. ಬೆಳಗಾಂ ಜಿಲ್ಲೆಯಲ್ಲಿ ಎಷ್ಟು ಶೌಚಾಲಯಗಳನ್ನು ಕಟ್ಟಿದ್ದೀರಿ ಎಂದು ಕೇಳಿದ್ದಕ್ಕೆ 1986ನೇ ಇಸವಿಯಿಂದ ಇಲ್ಲಿಯವರೆಗೆ 4112 ವೈಯಕ್ತಿಕ ಶೌಚಾಲಯಗಳನ್ನು ಹಾಗೂ 207 ಸಾಂಸ್ಥಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ ಎಂದು ಉತ್ತರ ನೀಡಿದ್ದೀರಿ. ಇನ್ನು ಎಷ್ಟು ವರ್ಷದೊಳಗೆ ಉಳಿದ ಊರುಗಳಲ್ಲಿ ಕಟ್ಟಿ ಮುಗಿಸುತ್ತೀರಿ? ಶಾಲೆಯ ಹತ್ತಿರ ಶೌಚಾಲಯಗಳು ವಿದ್ಯಾರ್ಥಿಗಳಿಗೆ ಅತಿ ಜರೂರು ಇದೆ. ಅದನ್ನು ಕಟ್ಟುವ ಕ್ರಮ ಕೈಗೊಳ್ಳುತ್ತೀರಾ ಎಂದು ಕೇಳಿದ್ದಕ್ಕೆ ಅನುದಾನ ಲಭ್ಯದ ಮೇಲೆ ಅವಲಂಬಿಸಿ ಸಾಂಸ್ಥಿಕ ಶೌಚಾಲಯಗಳನ್ನು ಪ್ರಾಥಮಿಕ ಶಾಲೆಯ ಹತ್ತಿರ ಕಟ್ಟಬಹುದು ಎಂದು ಹೇಳಿದ್ದೀರಿ. ಈ ಪ್ರಕಾರ ಆದರೆ ಯಾವ ಪ್ರಕಾರ ನಗರ ನೈರ್ಮಲೀಕರಣ ಆಗುತ್ತದೆ ಎಂದು ಹೇಳಬೇಕು.

ಶ್ರೀ ಎಂ. ವೈ. ಘೋರ್ಪಡೆ : ತಾವು ಯೂರಿನಲ್ಸ್ ಕಾರ್ಯಕ್ರಮದ ಬಗ್ಗೆ ಕೇಳಿದ್ದೀರಿ. ಈ ಪ್ರತ್ಯೇಕವಾಗಿ ಯೂರಿನಲ್ಸ್‌ಗೋಸ್ಕರ ಕಾರ್ಯಕ್ರಮ ಇಲ್ಲ ಎಂದು ಉತ್ತರ ಬರೆದಿದ್ದಾರೆ. ಹಾಗೆಂದ ತಕ್ಷಣ ಲ್ಯಾಟ್ರಿನ್ ಕಟ್ಟಲಿಕ್ಕೆ ಕಾರ್ಯಕ್ರಮ ಇಲ್ಲ ಎಂಬ ಭಾವನೆ ಮಾಡಿಕೊಳ್ಳಕೂಡದು. ಬೆಳಗಾಂ ಜಿಲ್ಲೆಯಲ್ಲಿ 4112 ಇಂಡಿವಿಜುಯಲ್ ಲ್ಯಾಟ್ರಿನ್ಸ್ ಮಾಡಿದ್ದಾರೆ. 207 ಇನ್ಸ್ಟಿಟ್ಯೂಷನ್ಸ್ ಲ್ಯಾಟ್ರಿನ್ಸ್ ಹಾಗೂ 4 ಕಮ್ಯುನಿಟಿ ಲ್ಯಾಟ್ರಿನ್ಸ್ ಮಾಡಿದ್ದಾರೆ. ಕಳೆದ ಎರಡು ವರ್ಷದಲ್ಲಿ 49 ಇಂಡಿವಿಜುಯಲ್ ಲ್ಯಾಟ್ರಿನ್ಸ್, ನಾಲ್ಕು ಕಮ್ಯುನಿಟಿ ಲ್ಯಾಟ್ರಿನ್ಸ್ ಮಾಡಿದ್ದಾರೆ. 50 ಲಕ್ಷ ರೂಪಾಯಿ ಬೆಳಗಾಂ ಜಿಲ್ಲೆಗೆ ಖರ್ಚು ಆಗಿದೆ. ಬೈಲಹೊಂಗಲ ತಾಲ್ಲೂಕಿಗೆ ಒಂದು ಲಕ್ಷ ರೂಪಾಯಿ ಮೇಲ್ಪಟ್ಟು ಹಣ ಬಿಡುಗಡೆ ಆಗಿದೆ. ಸೌವದತ್ತಿ ತಾಲ್ಲೂಕಿನಲ್ಲಿ 1.132 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಇದಲ್ಲದೆ ಪ್ರೈಮರಿ ಸ್ಕೂಲ್ ಇದ್ದರೆ ಅದರ ಹತ್ತಿರ ನೀವು ಲ್ಯಾಟ್ರಿನ್ಸ್ ಮಾಡುವಂತಹ ವ್ಯವಸ್ಥೆ ಮಾಡಬೇಕು ಎಂಬುದೇ ನಿಮ್ಮ ಮುಖ್ಯವಾದ ಪ್ರಶ್ನೆಯ ಅಂಶ. ಇದರಲ್ಲಿ ನನ್ನ ಸಂಪೂರ್ಣ ಸಹಾನುಭೂತಿ ಇದೆ. ಏಕೆಂದರೆ ಎಲ್ಲೆಲ್ಲಿ ಶಾಲೆಗಳು ಇವೆ, ಅದರ ಹತ್ತಿರ ಇನ್ಸ್ಟಿಟ್ಯೂಷನ್ ಲ್ಯಾಟ್ರಿನ್ಸ್ ಮಾಡಲಿಕ್ಕೆ ಸಾಧ್ಯ ಇದ್ದರೆ ಮಾಡಬೇಕು ಎಂದು ನಾವೇ ಹೇಳಿದ್ದೇವೆ. ತಾವು ದಯವಿಟ್ಟು ಅದರಲ್ಲಿ ಆಸಕ್ತಿ ತೋರಿಸಿ ಎಲ್ಲೆಲ್ಲಿ ಅಂತಹ ಅವಕಾಶ ಇದೆ ಮಾಡಿಸಿ. ಏಕೆಂದರೆ ಲ್ಯಾಟ್ರಿನ್ಸ್ ಮಾಡುವಲ್ಲಿ, ಅಥವಾ ಕಮ್ಯುನಿಟಿ ಲ್ಯಾಟ್ರಿನ್ಸ್ ಮಾಡುವಲ್ಲಿ ತೊಂದರೆ ಏನೂ ಇಲ್ಲ. ಅದು ಸ್ಕೂಲಿಗೆ ಅನುಕೂಲ ಆಗುವುದಾದರೆ, ಹತ್ತಿರ ಮಾಡಿಸುವುದಾದರೆ ಅಂತಹ ಅವಕಾಶ ಇದ್ದರೆ ಮಾಡಿಸಿ ನಮ್ಮ ಆಕ್ಷೇಪವೇನೂ ಇಲ್ಲವೆಂದು ನಾವು ಹೇಳಿದ್ದೇವೆ.

ಶ್ರೀ ಎಸ್.ಹೆಚ್. ಕೌಜಲಗಿ : ಮಾನ್ಯ ಮಂತ್ರಿಗಳು ಹೈಸ್ಕೂಲು ಹತ್ತಿರ ಇಂತಹ ಮೂತ್ರಾಲಯ ಮಾಡಬಹುದು ಎಂದು ಹೇಳಿದರು. ಆದರೆ ಅದಕ್ಕೆ ಬಜೆಟ್ ಪ್ರಾವಿಜನ್ನೇ ಇಲ್ಲ. 1986ನೇ ಇಸವಿಯಿಂದ ಇವತ್ತಿನ ವರೆಗೆ ಬೈಲಹೊಂಗಲ ಮತ್ತು

ನಿಮ್ಮ ಕಡೆ ರೊಕ್ಕ ಎಲ್ಲಿರುತ್ತದೆ? ಈ ವರ್ಷ ಆಯವ್ಯಯದಲ್ಲಿ ಎಷ್ಟು ರೊಕ್ಕ ಇಟ್ಟಿದ್ದೀರಿ? ನಮ್ಮ ಬೆಳಗಾಂ ಜಿಲ್ಲೆಗೆ ನೀವು ಎಷ್ಟು ರೊಕ್ಕವನ್ನು ಇಂತಹ ಕಾರ್ಯಕ್ರಮಗಳಿಗೆ ಇಟ್ಟಿದ್ದೀರಿ? ತಾವು ತಿಳಿದುಕೊಳ್ಳಬಹುದು. ಇವತ್ತು ಹೆಣ್ಣುಮಕ್ಕಳು ರಸ್ತೆ ಬದಿಗೆ ಕೂಡುತ್ತಾರೆ. ರಸ್ತೆಯ ಬದಿಯಲ್ಲಿ ಕೂಡುವುದರಿಂದ ಎಷ್ಟು ಅವರಿಗೆ ಅನಾನುಕೂಲತೆ ಆಗುತ್ತದೆ, ಹವ ದೂಷಿತವಾಗುತ್ತದೆ. ಇದರಿಂದ ಜನರಿಗೆ ಎಷ್ಟು ತೊಂದರೆ ಆಗುತ್ತದೆ. ಇದನ್ನು ಮುಖ್ಯವಾಗಿ ಗ್ರಾಮೀಣಾಭಿವೃದ್ಧಿ ಇಲಾಖೆಯವರು ಗಮನ ಹರಿಸಿಕೊಳ್ಳಬೇಕು.

ಅದನ್ನು ಬಿಟ್ಟು ಉಳಿದಿರತಕ್ಕಂಥ ಇದರ ಸಲುವಾಗಿ ನೀವು ಯಾವ ವಿಶೇಷ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ತಾವು ತಮ್ಮ ಆಯವ್ಯಯ ಭಾಷಣದಲ್ಲಿ 'ನೈರ್ಮಲ್ಯ ಗ್ರಾಮ' ಎಂಬ ಹೊಸ ಯೋಜನೆಯಡಿಯಲ್ಲಿ ಇಡೀ ರಾಜ್ಯಾದ್ಯಂತ ಕುಡಿಯುವ ನೀರಿನ ವ್ಯವಸ್ಥೆ ಮಾತ್ರವಲ್ಲದೆ ಗ್ರಾಮೀಣ ನೈರ್ಮಲೀಕರಣ ವ್ಯವಸ್ಥೆಯನ್ನು ನಿರ್ದಿಷ್ಟ ಅವಧಿಯಲ್ಲಿ ಒದಗಿಸಲು ನನ್ನ ಸರ್ಕಾರ ಇಚ್ಛಿಸಿದೆ. ಎಂದು ಹೇಳಿದ್ದೀರಿ. ನಿಮ್ಮ ಸರ್ಕಾರವನ್ನು ಅಭಿನಂದಿಸುತ್ತೇವೆ. ಆದರೆ, ಇದನ್ನು ಎಂದು ಮಾಡುತ್ತೀರಿ? ಈ ಕಾರ್ಯಕ್ರಮದ ಸಲುವಾಗಿ ಇವೊತ್ತು ಬೆಳಗಾಂ ಜಿಲ್ಲೆಗೆ ಎಷ್ಟು ಹಣ ಇಡಲಾಗಿದೆ ಎಂಬುದರ ಬಗ್ಗೆ ಹೇಳಿ. ಇನ್ನು ಎರಡನೆಯದಾಗಿ ನಮ್ಮಲ್ಲಿದ್ದ ಪ್ರಾಜೆಕ್ಟ್ ಫಂಡ್‌ನಿಂದ ತೆಗೆದುಕೊಳ್ಳಲು ಬಸವಪ್ಪನವರು ಆದೇಶಿಸಿದರು. ಪ್ರಾಜೆಕ್ಟ್ ಫಂಡ್‌ನಿಂದ ತೆಗೆದುಕೊಳ್ಳಲು ತಾವು ಆದೇಶಿಸುತ್ತೀರಾ? ಹೇಗೆ?

ಶ್ರೀ ಎಂ.ವೈ. ಘೋರ್ಪಡೆ : ಇದರಲ್ಲಿ ಎರಡು ಪ್ರಶ್ನೆಗಳು ಅಡಕವಾಗಿದೆ. ಮೊದಲನೆಯದಾಗಿ, ಪ್ರಾಜೆಕ್ಟ್ ಫಂಡ್‌ನಲ್ಲಿ ಕೊಡಿಸುವುದಕ್ಕಾಗುತ್ತದೆಯೇ? ಹೇಗೆ? ಎಂಬುದರ ಬಗ್ಗೆ ನಾನು ಪರಿಶೀಲಿಸುತ್ತೇನೆ. ಅದಕ್ಕಿಂತ ಮುಖ್ಯವಾಗಿ ಈಗಾಗಲೇ ರೂರಲ್ ಸ್ಯಾನಿಟೇಶನ್ ಪ್ರೋಗ್ರಾಂಗೋಸ್ಕರ 1 ಕೋಟಿ 57 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡಿಸಬೇಕಾಗುತ್ತದೆ. ಮಹಿಳೆಯರ ಶೌಚಾಲಯ ನಿರ್ಮಾಣಕ್ಕೆ ನಮ್ಮಲ್ಲಿ ಹಣದ ಅಭಾವವಿಲ್ಲ. ಈಗ ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಾವು ಮಹಿಳಾ ಶೌಚಾಲಯಗಳನ್ನು ನಿರ್ಮಾಣ ಮಾಡಿಸುವುದಾದರೆ ಎಷ್ಟು ಸಂಖ್ಯೆಯಲ್ಲಿ ಮಾಡಿಸಿದರೂ ಸರ್ಕಾರದ ಹತ್ತಿರ ಹಣವಿದೆ. ನೀವು ಅದನ್ನು ಮಾಡಿ ತೋರಿಸಿ, ಅದನ್ನು ಸರಿಯಾಗಿ ಸ್ವಚ್ಛವಾಗಿಟ್ಟುಕೊಂಡು ಉಪಯೋಗಿಸಬೇಕು, ಮತ್ತು ನೀರಿನ ಸೌಕರ್ಯ ಅಲ್ಲಿ ಇರಬೇಕಾಗುತ್ತದೆ. ಆ ತರಹ ಮಹಿಳಾ ಶೌಚಾಲಯಗಳನ್ನು ನಿರ್ಮಿಸಿ ಸ್ವಚ್ಛತೆಯಿಂದ ಇಟ್ಟುಕೊಳ್ಳುವುದಾದರೆ ಇದನ್ನು ನಾವು ಚಳುವಳಿ ರೀತ್ಯ ಬೆಳೆಸಬೇಕಾಗಿದೆ. ಮತ್ತೊಮ್ಮೆ ಹೇಳುತ್ತೇನೆ. ಇದರಲ್ಲಿ ಖಂಡಿತ ಹಣದ ಅಭಾವವಿಲ್ಲ. ಕೇಂದ್ರ ಸರ್ಕಾರದಿಂದ ನಮಗೆ ಹಣ ಬರುತ್ತದೆ, ರಾಜ್ಯ ಸರ್ಕಾರದ ಹಣವೂ ಇದೆ. ಇದಲ್ಲದೆ ಹೊಸದಾಗಿ ರಚಿಸಲಾದ ಪಂಚಾಯತಿಗಳಲ್ಲಿ ಸ್ಯಾನಿಟೇಶನ್ ಬೇಸಿಕ್ ಅಮಿನಿಟೀಸ್‌ಗೋಸ್ಕರ ಪ್ರತಿಯೊಂದು ಪಂಚಾಯತಿಗೂ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಇದಲ್ಲದೆ, 4-5 ಲಕ್ಷ ರೂಪಾಯಿಗಳು ಜವಾಹರ್ ರೋಜ್‌ಗಾರ್ ಯೋಜನೆ ಮೂಲಕ ಬರುತ್ತದೆ. ಇನ್ನು ಎನ್.ಜಿ.ಓ ಮತ್ತು ಪಬ್ಲಿಕ್ ಕಾಂಟ್ರಿಬ್ಯೂಷನ್ ಇದೆಯಲ್ಲಾ, ಇದರಿಂದ ಬರತಕ್ಕಂಥ ಸಂಪನ್ಮೂಲವನ್ನು ನಾವು ಸೂಕ್ತ ರೀತಿಯಲ್ಲಿ ಉಪಯೋಗಿಸಿಕೊಂಡರೆ ಬೇಕಾದಷ್ಟು ಶೌಚಾಲಯಗಳನ್ನು ಯಶಸ್ವಿಯಾಗಿ ನಿರ್ಮಿಸುವುದಕ್ಕೆ ಸಾಧ್ಯವಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಹಣದ ಅಭಾವವಿಲ್ಲ. ಆದರೆ, ಇದರ ಬಗ್ಗೆ ಎಲ್ಲಾ ಕಡೆ ನಾವು ಸಾಕಷ್ಟು ಆಸಕ್ತಿ ವಹಿಸುತ್ತಿಲ್ಲವೆಂದು ನನಗನ್ನಿಸುತ್ತದೆ. ಆದುದರಿಂದ, ದಯವಿಟ್ಟು ಎಂಎಲ್‌ಎಗಳು ಮತ್ತು ಅಧಿಕಾರಿಗಳು ಇದರ ಬಗ್ಗೆ ಆಸಕ್ತಿ ವಹಿಸಿ ಎಷ್ಟು ಶೌಚಾಲಯಗಳನ್ನು ನಿರ್ಮಿಸಬೇಕೋ, ಮತ್ತು ಅದಕ್ಕೆ ಎಷ್ಟು ಹಣ ಬೇಕಾಗುತ್ತದೆ ಎಂಬುದರ ಬಗೆ ಮುಂದಿನ ಕ್ರಮ ಕೈಗೊಳ್ಳಬಹುದೆಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಯವರು ನನಗೊಂದು ಪತ್ರ ಬರೆದಿದ್ದಾರೆ. ಏನೆಂದರೆ ಇಂತಿಂಥ ಜಮೀನುಗಳಲ್ಲಿ ಶಾಲೆ ತೆರೆಯುತ್ತೇವೆ, ತಾವು ತೆಗೆದುಕೊಳ್ಳಬೇಕು, ನಾವು ಮಾಡುವುದಕ್ಕೆ ತಯಾರಿದ್ದೇವೆಂದರೆ, ಇದಕ್ಕೆ ಹಣವಿಲ್ಲ, ಅದರ ಸಲುವಾಗಿ ಬಜೆಟ್ ಪ್ರಾವಿಶನ್ ಇಲ್ಲವೆಂದು ಇವರು ಹೇಳುತ್ತಿದ್ದಾರೆ. ಆದರೆ, ಇವರ ಭಾಷಣ ಕೇಳಿಕೊಂಡು ಜನರು ಇವರ ಮಾತಿಗೆ ಮರುಳಾಗುತ್ತಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಸನ್ಮಾನ್ಯ ಅಧ್ಯಕ್ಷರೆ, ನನ್ನ ಮುಂದಿನ ಪ್ರಶ್ನೆ ಸಂಖ್ಯೆ 134(286)ಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಉತ್ತರಿಸಬೇಕಾಗಿದೆ. ಪ್ರಶ್ನೆಯೇನೆಂದರೆ, ಆಯವ್ಯಯದಲ್ಲಿ ಜಿಲ್ಲಾ ಪರಿಷತ್‌ಗಳಿಗೆ ಮತ್ತು ಗ್ರಾಮ ಪಂಚಾಯತ್‌ಗಳಿಗೆ ಎಷ್ಟು ಹಣ ನಿಗದಿಪಡಿಸಲಾಗಿದೆ? ಇಲ್ಲಿಯತನಕ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? ಎಂದು ಕೇಳಿದ್ದಕ್ಕೆ ಇದಕ್ಕೆ ಉತ್ತರಿಸಲು 15 ದಿವಸಗಳ ಕಾಲ ಕಾಯಬೇಕಾಗುತ್ತದೆಂದು ಸರ್ಕಾರ ಹೇಳಿದೆ. ತಾವು ದಯವಿಟ್ಟು ನಮ್ಮ ರಕ್ಷಣೆಗೆ ಬರಬೇಕು. ಇದಕ್ಕೆ ಯಾರಿಂದ ಮಾಹಿತಿ ತರಬೇಕು? ಹಣವನ್ನು ನಿಗದಿಪಡಿಸಿದ್ದುದು ಸರ್ಕಾರ, ಬಿಡುಗಡೆ ಮಾಡಿದ್ದುದು ಸರ್ಕಾರ, ಮಾಹಿತಿ ಸರ್ಕಾರದ ಹತ್ತಿರವಿದೆ. ಇಲ್ಲಿ ಮೂರು ತಿಂಗಳಿನಿಂದ ಅಭಿವೃದ್ಧಿ ಕೆಲಸ-ಕಾರ್ಯಗಳು ಕುಂಠಿತವಾಗಿವೆ. ನಾವು ಇಲ್ಲಿ ಕುಳಿತು ಇನ್ನೇನು ಕೆಲಸ ಮಾಡಬೇಕು? ಆದುದರಿಂದ, ತಾವು ನಮ್ಮ ರಕ್ಷಣೆಗೆ ಬಂದು ಸರ್ಕಾರದಿಂದ ಉತ್ತರ ಕೊಡಿಸಬೇಕೆಂದು ಆಗ್ರಹಪಡಿಸುತ್ತೇವೆ. ಇವೊತ್ತು ಇಡೀ ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ.

ಶ್ರೀ ಎಂ.ವೈ. ಘೋರ್ಪಡೆ : ಹಣದ ಅಭಾವದಿಂದ ಇಲ್ಲಿಯವರೆಗೆ ಶೌಚಾಲಯಗಳನ್ನು ಕಟ್ಟುವುದ್ಕಕಾಗುತ್ತಿಲ್ಲವೆಂದು ಯಾವುದೇ ಡೆಪ್ಯುಟಿ ಕಮಿಷನರ್‌ಗಳು.....

(ಈ ಹಂತದಲ್ಲಿ ಸುಮಾರು ಜನ ಸದಸ್ಯರುಗಳು ಎದ್ದು ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ತಾವೆಲ್ಲರೂ ಕುಳಿತುಕೊಳ್ಳಬೇಕು.

ಅಧ್ಯಕ್ಷರು : ಬನ್ನಿಕೋಡ್‌ರವರ ಪ್ರಶ್ನೆ 286ಕ್ಕೆ 15 ದಿವಸ ಕಾಲಾವಕಾಶ ಬೇಕು ಎಂದು ಕೇಳಿ ನನಗೆ ನಿನ್ನೆ ಪತ್ರ ಬಂದಿದೆ. ಇದರ ಬಗ್ಗೆ ಮಂತ್ರಿಗಳು ಏನು ಹೇಳುತ್ತೀರಿ?

ಶ್ರೀ ಎಂ.ವೈ. ಘೋರ್ಪಡೆ : ಅದಕ್ಕೆ ಕಾಲಾವಕಾಶ ಬೇಕು. ಏಕೆಂದರೆ ಅವರು ಎಲ್ಲಾ ಸ್ಕೀಮ್‌ಗಳ ಕೆಳಗಡೆ ಎಷ್ಟೆಷ್ಟು ಹಣವನ್ನು ನೀವು ಬಿಡುಗಡೆ ಮಾಡಿದ್ದೀರೆಂದು ಕೇಳಿದ್ದಾರೆ. ಒಟ್ಟಾರೆ ಹಣದ ಬಗ್ಗೆ ನಾವು ಸುಲಭವಾಗಿ ಹೇಳಬಹುದಾಗಿತ್ತು. ಅದನ್ನು ನಾನು ಹೇಳಿದ್ದೇನೆ. ಪ್ರತಿಯೊಂದು ಸ್ಕೀಮ್‌ಗೆ ಬಜೆಟ್‌ನಲ್ಲಿ ಎಷ್ಟು ಹಣವಿದೆ, ಅದರಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ಎಂದು ಹೇಳುವುದಕ್ಕೆ ತಕ್ಷಣ ಆಗುವುದಿಲ್ಲ. ಆದ್ದರಿಂದ ನಾನು ಬಹಳ ವಿನಯದಿಂದ ತಮಗೆ ಒಂದು ಮಾತನ್ನು ಹೇಳಬಯಸುತ್ತೇನೆ. ನನಗೆ ನಿನ್ನೆ 4 ಗಂಟೆಗೆ 12 ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕಾಗಿದೆ ಎಂದು ಗೊತ್ತಾಯಿತು. ಅದರಲ್ಲಿ ನಾನು ಇವತ್ತು 8 ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತಿದ್ದೇನೆ. ಯಾವುದೇ ಪ್ರಶ್ನೆಯಾಗಿರಲಿ ಸಂಪೂರ್ಣವಾದ ಮಾಹಿತಿಯನ್ನು ಸಭೆಗೆ ಕೊಡಬೇಕೆಂಬುದೆ ನನ್ನ ಅಪೇಕ್ಷೆ, ಸಭೆಯ ಅಪೇಕ್ಷೆ ಕೂಡ. ಈ ವ್ಯವಸ್ಥೆಯಲ್ಲಿ ಸ್ವಲ್ಪ ಮಾರ್ಪಾಟನ್ನು ಮಾಡಬೇಕೆಂದು ನನಗೆ ಅನ್ನಿಸುತ್ತಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು 15 ದಿನ ಮೊದಲೇ ಪ್ರಶ್ನೆಯನ್ನು

ಶ್ರೀ ಹೆಚ್. ಏಕಾಂತಯ್ಯ : ಅಧ್ಯಕ್ಷರೆ, ನಾನು ಅತ್ಯಂತ ವಿನಯದಿಂದ ಕೇಳಿಕೊಳ್ಳುವುದೇನೆಂದರೆ, ಈ ಸರ್ಕಾರಕ್ಕೆ ಮತ್ತು ಸದನದ ಗೌರವವನ್ನು ಉಳಿಸಿಕೊಳ್ಳಬೇಕಾದರೆ, ಮೊಟ್ಟಮೊದಲನೆಯದಾಗಿ ಶಾಸನ ಸಭೆಯ ನಿಯಮಗಳೇನಿದೆ, ಅದರ ರೀತಿ ಅವಶ್ಯವಾದಂಥ ದಿನಗಳಿರುವಂತೆ ಪ್ರಶ್ನೆಯನ್ನು ಕಳಿಸಲು ಏನಾದರೂ ತೀರ್ಮಾನವನ್ನು ತೆಗೆದುಕೊಂಡು ಶಾಸನ ಸಭೆಯನ್ನು ನಡೆಸಲು ವ್ಯವಸ್ಥೆ ಮಾಡಿದರೆ ಆಗ ತಮ್ಮಲ್ಲಿ ನಾವು ವಿನಂತಿ ಮಾಡಿಕೊಳ್ಳಬಹುದು. ನನಗೆ ನಾಚಿಕೆಯಾಗುತ್ತದೆ. ಪ್ರಶ್ನೆಗಳನ್ನು ಕಳಿಸಲು ಪ್ರಾರಂಭವಾದ ದಿವಸ 28 ನೇ ತಾರೀಖು. ನಮಗೆ 25ನೇ ತಾರೀಖು ಪ್ರಶ್ನೆಗಳನ್ನು ಕಳಿಸುವ ದಿನಾಂಕದ ಬಗ್ಗೆ ಫೋನ್ ಮಾಡುತ್ತೀರಿ. ನಾವೇನು ಕನಸು ಕಾಣಬೇಕೆ? ಇಂಥ ಕೆಟ್ಟ ಪದ್ಧತಿಯಿಂದ ಈ ರೀತಿ ಆಗುತ್ತದೆ. ಅದನ್ನು ನೆಪಮಾಡಿಕೊಂಡು ಸಮಯವಿಲ್ಲವೆಂದು ಹೇಳಿ ಇಂಥ ಮುಖ್ಯವಾದಂಥ ಪ್ರಶ್ನೆಗೆ ಉತ್ತರವನ್ನು ಕೊಡದಿರುವ ಪರಿಸ್ಥಿತಿ ಇದೆ, ಇದು ಸರಿಯಲ್ಲ. ಒಂದು ತಿಂಗಳ ಮೊದಲು ಪ್ರಶ್ನೆಗಳನ್ನು ಕಳಿಸಲು ಇವರು ಏತಕ್ಕಾಗಿ ಹೇಳಬಾರದು? ಈ ಸದನವನ್ನು ನಡೆಸುವ ಉದ್ದೇಶ ಈ ದೇಶದ ಜನರ ಅಭಿವೃದ್ಧಿ ಕಾರ್ಯಗಳನ್ನು ಚರ್ಚೆ ಮಾಡುವುದಕ್ಕೋ ಅಥವಾ ಇವರಿಗೆ ಬೇಕಾದ ಅನುಕೂಲವನ್ನು ಮಾಡಿಕೊಳ್ಳುವುದಕ್ಕೆ ಈ ರೀತಿ ಅವ್ಯವಸ್ಥೆಯಲ್ಲಿ ಸದನವನ್ನು ನಡೆಸಬೇಕೆ?

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ನಾನು ಕಾನೂನು ಬದ್ಧವಾದ ಅವಧಿಯಲ್ಲಿ ಪ್ರಶ್ನೆಯನ್ನು ಕಳಿಸಿಕೊಟ್ಟಿದ್ದೇನೆ. ಸಾಕಷ್ಟು ಸಮಯ ಅವರಿಗೆ ಸಿಕ್ಕಿದೆ. ಅವರು ಯಾವುದೇ ಮಾಹಿತಿಯನ್ನು ತರಿಸಬೇಕಾಗಿಲ್ಲ, ಆಯವ್ಯಯದಲ್ಲಿ ಇದಕ್ಕೆ ಎಷ್ಟು ಹಣವಿದೆ, ಅದರಲ್ಲಿ ಎಷ್ಟನ್ನು ಬಿಡುಗಡೆ ಮಾಡಿದ್ದೀರಿ? ಮಂತ್ರಿಗಳು, ಸರ್ಕಾರ ಮಾಡಿದಂಥ ಕೆಲಸ ಯಾರನ್ನೂ ಕೇಳಬೇಕಾಗಿಲ್ಲ, ಸರ್ಕಾರ ಇವತ್ತು ಬಿಡುಗಡೆ ಮಾಡಿಲ್ಲ. ಆಯವ್ಯಯದಲ್ಲಿದ್ದ 40 ಪರ್‌ಸೆಂಟ್ ಹಣವನ್ನು ಸಹಿತ ಬಿಡುಗಡೆ ಮಾಡಿಲ್ಲ; ಅಭಿವೃದ್ಧಿ ಕೆಲಸ ಕುಂಠಿತವಾಗಿದೆ, ಈ ಸಭೆಯಲ್ಲಿ ಅದರ ಬಗ್ಗೆ ಚರ್ಚೆ ಮಾಡೋಣವೆಂದು ಕೇಳಿದರೆ, ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಅಲ್ಲಿ ಹಣವಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ. ಇದರ ಬಗ್ಗೆ ನಿರ್ಧಿಷ್ಟವಾಗಿ ಖಚಿತಪಡಿಸಿ ಎಂದು ಹೇಳಿದರೆ, ಸತ್ಯವನ್ನು ಮರೆಮಾಡಲು ಸರ್ಕಾರ ಇದಕ್ಕೆ ಉತ್ತರವನ್ನು ಕೊಟ್ಟಿಲ್ಲ. ಇದರ ಬಗ್ಗೆ ಗಂಭೀರ ಸ್ವರೂಪದ ಆರೋಪವನ್ನು ಮಾಡಬೇಕಾಗುತ್ತದೆ. ತಾವು ದಯವಿಟ್ಟು ಇವತ್ತು ಉತ್ತರವನ್ನು ಕೊಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ನಮಗೆ ಹಣ ಬಂದಿಲ್ಲ, ಇದಕ್ಕೆ ನಾವು ಏನು ಮಾಡಬೇಕಾಗುತ್ತದೆ? ಪ್ರಶ್ನೆಗೆ ಉತ್ತರವನ್ನು ಹೇಳಲು 15 ದಿನ ಸಮಯ ಕೇಳುತ್ತಿದ್ದಾರೆ.

ಶ್ರೀ ಎಂ.ವೈ. ಘೋರ್ಪಡೆ : ಕಾನೂನು ಮತ್ತು ಸಂಸದೀಯ ಮಂತ್ರಿಗಳಿಗೂ ಸಹ ಈ ಸಮಸ್ಯೆ ಗೊತ್ತಿದೆ. ಅವರು ತಮ್ಮ ಜೊತೆ ಚರ್ಚೆ ಮಾಡಿ ಇದನ್ನು ಸರಿಪಡಿಸಿದರೆ ಸಂಪೂರ್ಣವಾದ ರೀತಿಯಲ್ಲಿ ಪ್ರಶ್ನೆಗಳಿಗೆ ಉತ್ತರವನ್ನು ಹೇಳಲು ಸಾಧ್ಯವಾಗುತ್ತದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಶಾಸನ ಸಭೆಯ ವಿಭಾಗದಿಂದ ಮಂತ್ರಿಗಳಿಗೆ ಉತ್ತರವನ್ನು ಕೊಡಿ ಎಂದು ಹೋಗುವುದು ಸ್ವಲ್ಪ ತಡವಾಗುತ್ತಿದೆ. ಅದಕ್ಕೆ ಕಾರಣ ಶಾಸನ ಸಭೆಯ ವಿಭಾಗವೂ ಅಲ್ಲ. ಹಿರಿಯ ಸದಸ್ಯರಾದ ಏಕಾಂತಯ್ಯನವರು ಹೇಳಿದಂತೆ ಸದಸ್ಯರಿಗೆ ಕಾಲಾವಕಾಶ ಇಲ್ಲದೇ ಇರುವುದರಿಂದ ಅವರು ಪ್ರಶ್ನೆಯನ್ನು ಕೊಡುವುದೂ ಸಹ ನಿಧಾನವಾಗುತ್ತದೆ. ಅದಕ್ಕೆ ಮಂತ್ರಿಗಳು ಉತ್ತರವನ್ನು ಕೊಡುವುದೂ ಸಹ ನಿಧಾನವಾಗುತ್ತದೆ. ಈ ಪ್ರಶ್ನೆಗೆ ಮಂತ್ರಿಗಳು ಉತ್ತರವನ್ನೇನು ಕೊಡುವುದಿಲ್ಲವೆಂದು ಹೇಳಿಲ್ಲ, ಅದಕ್ಕೆ ಸ್ವಲ್ಪ

ಕಾಲಾವಕಾಶ ಬೇಕಾಗುತ್ತದೆ. ಅವರ ಕಛೇರಿಯಲ್ಲೇ ಎಲ್ಲಾ ಇರುತ್ತದೆ. ಆದರೆ ಸ್ವಲ್ಪ ಹೊಂದಿಸಿಕೊಂಡು ಕೊಡಲು ತಡವಾಗುತ್ತದೆ.

ಅಧ್ಯಕ್ಷರು : ನಾನು ಈ ಪ್ರಶ್ನೆಯನ್ನು 4-2-94ಕ್ಕೆ ಕಳಿಸಿಕೊಟ್ಟಿದ್ದೇನೆ. ಸರ್ಕಾರಕ್ಕೆ ಇರತಕ್ಕ ಎಲ್ಲಾ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಸದನದಲ್ಲಿ ಬರತಕ್ಕ ಪ್ರಶ್ನೆಗಳಿಗೆ ಆದ್ಯತೆಯನ್ನು ಕೊಟ್ಟು, ಆ ಸಮಸ್ಯೆಗೆ ಯೋಗ್ಯವಾದ ಉತ್ತರವನ್ನು ಕೊಡುವುದರ ಬಗ್ಗೆ ವ್ಯವಸ್ಥೆಯನ್ನು ಯೋಚನೆ ಮಾಡಬೇಕೆಂದು ನಿಖರವಾಗಿ ಹೇಳುತ್ತೇನೆ. ಸರ್ಕಾರ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇವತ್ತು ಅವರು ಉತ್ತರವನ್ನು ಕೊಡಲು ಆದೇಶ ಕೊಡಬೇಕು.

ಅಧ್ಯಕ್ಷರು : ಆಗುವುದಿಲ್ಲ. ಅವರು ಏನು ತಪ್ಪು ಮಾಡಿದ್ದಾರೆ ಅದನ್ನು ತಿದ್ದುಕೊಂಡು ಸರಿಯಾಗಿ ನಡೆದುಕೊಳ್ಳಬೇಕೆಂದು ಹೇಳಿದ್ದೇನೆ.

ಡಿಗ್ಗಿ ಭಾವಿ ತಾಂಡಾ ರಸ್ತೆ.

337-ಶ್ರೀ ಮನೋಹರ ಯು. ಐನಾಪುರ (ಬಳ್ಳೊಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಿಗ್ಗಿ ಭಾವಿ ತಾಂಡ ರಸ್ತೆಯ ಕಾಮಗಾರಿಯು ಬಿಜಾಪುರ ಜಿಲ್ಲಾ ಪಂಚಾಯತ್ ಇಂಡಿ ಉಪವಿಭಾಗ, ಇಂಡಿಗೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸುಮಾರು 2 ಲಕ್ಷ ರೂ. ಬೆಲೆಬಾಳುವ ಸ್ಥಳೀಯ ಮುಖ್ಯಸ್ಥರೊಬ್ಬರಿಗೆ ಸೇರಿರುವ ತೋಟದ ಭೂಮಿಯೆಡೆಗೆ ಸಾಗುವಂತೆ ಈ ರಸ್ತೆಯನ್ನು ಮುಖ್ಯ ರಸ್ತೆಯ ಮತ್ತೊಂದು ಬದಿಯಲ್ಲಿ ನಿರ್ಮಿಸಿರುವುದಕ್ಕೆ ಕಾರಣವೇನು?

ಇ) ಈ ಪ್ರಕರಣದಲ್ಲಿ ಬಿಜಾಪುರ ಜಿಲ್ಲಾ ಪಂಚಾಯತನ ಆಡಳಿತಾಧಿಕಾರಿಯವರು ಸರ್ಕಾರಕ್ಕೆ ವರದಿ ಒಪ್ಪಿಸಿದಾಗ್ಯೂ, ಈ ರೀತಿಯ ರಸ್ತೆಯನ್ನು ನಿರ್ಮಿಸಲು ಕಾರಣರಾದ ಇಂಜನಿಯರ್ ರವರ ವಿರುದ್ಧ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹೌದು

ಆ) ಮೊದಲಿಗೆ "ಬರ ಪರಿಹಾರ ಕಾಮಗಾರಿ"ಗಳನ್ವಯ ರೂ.5000 ವೆಚ್ಚದೊಂದಿಗೆ ಪ್ರಾರಂಭಿಸಿದ, ಸುಮಾರು 2 ಲಕ್ಷ ಅಂದಾಜಿನ ಈ ರಸ್ತೆ ಕಾಮಗಾರಿಯನ್ನು ಜಿಲ್ಲಾ ಪರಿಷತ್ ಬಿಜಾಪುರ 1991-92ರ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಹಾಗೂ ಉಳಿಕೆ ಕಾಮಗಾರಿಯೆಂದು 1992-93 ರಲ್ಲಿ ರೂ. 30,000 ಅನುದಾನ ಒದಗಿಸಿ ಮುಂದುವರೆಸಿರುತ್ತೆ. ರಸ್ತೆ ನಿರ್ಮಾಣ ಕಾರ್ಯವು ಮುಖ್ಯ ರಸ್ತೆ ಆಚೆ ಬದಿಗಿದ್ದು, ಮುಖ್ಯಸ್ಥರೊಬ್ಬರ ತೋಟದ ಭೂಮಿಗೆ ಮಾರ್ಗವಾಗಿದೆ ಎನ್ನುವ ಆಪಾದನೆ ವಿಚಾರಣೆಯಲ್ಲಿದೆ.

ಇ) ಈ ವಿಷಯದಲ್ಲಿ ಜಿಲ್ಲಾ ಪಂಚಾಯತ್‌ನ ಆಡಳಿತಾಧಿಕಾರಿ ವತಿಯಿಂದ ಸರ್ಕಾರಕ್ಕೆ ಯಾವುದೇ ವರದಿ ಸಲ್ಲಿಸಿರುವುದಿಲ್ಲ. ಆದಾಗ್ಯೂ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಮಟ್ಟದಲ್ಲಿ ಪೂರ್ವಭಾವಿ ತನಿಖೆ ನಡೆಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾರಣ ಕೇಳುವ ನೋಟೀಸನ್ನು ನೀಡಲಾಗಿ ಮತ್ತು ಅವರಿಂದ ಉತ್ತರ ಪಡೆಯಲಾಗಿದ್ದು ವಿಚಾರಣೆ ಪ್ರಗತಿಯಲ್ಲಿದೆ.

ಶ್ರೀ ಮನೋಹರ್.ಯು.ಐನಾಪುರ : ಮಾನ್ಯ ಅಧ್ಯಕ್ಷರೆ, ಸುಮಾರು 2 ಲಕ್ಷ ರೂಪಾಯಿಗಳ ಬೆಲೆ ಬಾಳುವ ಸ್ಥಳೀಯ ಮುಖ್ಯಸ್ಥರೊಬ್ಬರಿಗೆ ಸೇರಿರುವ ತೋಟದ ಭೂಮಿಯೆಡೆಗೆ ಸಾಗುವಂತೆ ಈ ರಸ್ತೆಯನ್ನು ಮುಖ್ಯ ರಸ್ತೆಯ ಮತ್ತೊಂದು ಬದಿಯಲ್ಲಿ ನಿರ್ಮಿಸಿರುವುದಕ್ಕೆ ಕಾರಣವೇನು? ಎಂದು ಕೇಳಿದಾಗ ಈ ರಸ್ತೆ ಪ್ರಗತಿಯಲ್ಲಿದೆ ಮತ್ತು ಆಪಾದನೆಯ ವಿಚಾರಣೆಯಲ್ಲಿದೆ. ಈ ರಸ್ತೆ ಡಿಗ್ಗಿ ಭಾವಿ ತಾಂಡಕ್ಕೆ 1991-92ನೇ ಸಾಲಿಗೆ ಮಂಜೂರಾದುದ್ದು. ಮೊದಲನೆಯದು ತಪ್ಪು. ಏಕೆಂದರೆ, ಈ ಡಿಗ್ಗಿ ಭಾವಿ ತಾಂಡ ರಸ್ತೆ ಮುನಿಸಿಪಾಲಿಟಿಯ ವ್ಯಾಪ್ತಿಯಲ್ಲಿ ಬರುತ್ತದೆ. ಹೀಗೆ ಇದ್ದರೂ ಮಂಜೂರಾತಿ ಕೊಡಲಾಗಿದೆ. ಕೊಟ್ಟ ಮೇಲೆ ಆ ತಾಂಡಕ್ಕೆ ರಸ್ತೆ ಮಾಡದೇ ಈ ರಸ್ತೆಯನ್ನು ಒಬ್ಬ ಮುಖ್ಯಸ್ಥರ ತೋಟಕ್ಕೆ ಮಾಡಲಾಗಿದೆ. ಅದರ ವಿಚಾರಣೆಯನ್ನು 3 ವರ್ಷದಿಂದ ಮಾಡಲಾಗುತ್ತಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಈ ಸದರಿ ಅಸಿಸ್ಟೆಂಟ್ ಇಂಜಿನಿಯರ್ ಮೇಲೆ ಇದುವರೆಗೂ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿಲ್ಲ. ಒಂದು ರಸ್ತೆಯನ್ನು ಪರಿಶಿಷ್ಟ ಪಾಲನೆಗೆ ಮಾಡುವಂತಹ ರಸ್ತೆಯನ್ನು ಇವರು ಎರಡು ಲಕ್ಷ ರೂಪಾಯಿಗಳಿಗೆ ಮಾಡುವಂತಹ ರಸ್ತೆಯನ್ನು ಒಬ್ಬ ಮುಖ್ಯಸ್ಥರ ತೋಟಕ್ಕೆ ಮಾಡುತ್ತಾರೆ. ಇದು ಎಷ್ಟರಮಟ್ಟಿಗೆ ಸರಿ ಎಂಬುದನ್ನು ಮಾನ್ಯ ಸಚಿವರಿಂದ ಉತ್ತರ ಬಯಸುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಈ ಡಿಗ್ಗಿ ಭಾವಿ ತಾಂಡ ರಸ್ತೆಗೆ ಸ್ವಲ್ಪ ಇತಿಹಾಸ ಇದೆ. ಅವರು ಹೇಳಿದ ಹಾಗೆ 1991-92ರಲ್ಲಿ 5 ಸಾವಿರ ರೂಪಾಯಿಗಳು ಬಿಡುಗಡೆಯಾಯಿತು. ಅನಂತರ ಎರಡು ಲಕ್ಷ ರೂಪಾಯಿಗಳು ಖರ್ಚು ಮಾಡಬೇಕೆಂದು ಎಸ್ಟಿಮೇಟ್ ಮಾಡಿ ಈಗಾಗಲೇ ಒಂದು ಲಕ್ಷ ಮೂವತ್ತು ಸಾವಿರ ರೂಪಾಯಿಗಳು ಖರ್ಚಾಗಿದೆ. ನಂತರ ಸಾರ್ವಜನಿಕರಿಂದ ದೂರುಗಳು ಬಂದವು. ಈ ರಸ್ತೆ ಸ್ವಲ್ಪ ಬದಲಾಯಿಸಿದ್ದಾರೆ. ಬೇರೆ ಕಡೆ ಒಬ್ಬ ವ್ಯಕ್ತಿಯ ಭಾಗದ ಜಮೀನು ಇದೆ. ಅಂಥ ಕಡೆ ಮಾಡಿದ್ದಾರೆ. ಇದನ್ನು ಪರಿಶೀಲಿಸಬೇಕೆಂದು ಪ್ರಶ್ನೆ ಬಂದಾಗ ಸಂಬಂಧಪಟ್ಟ ಅಧಿಕಾರಿಗಳಿಗೆ ಷೋಕಾಸ್ ನೋಟೀಸನ್ನು ಕೊಟ್ಟಿದ್ದೇವೆ. ಮತ್ತು ಚೀಫ್ ಎಕ್ಸಿಕ್ಯೂಟಿವ್ ಇಂಜಿನೀಯರ್‌ರಿಂದ ಒಂದು ವರದಿಯನ್ನು ಕೇಳಿದ್ದೇನೆ. ಆ ವರದಿ ಬಂದ ತಕ್ಷಣ ಇದರ ಬಗ್ಗೆ ಯಾರು ತಪ್ಪು ಮಾಡಿದ್ದಾರೆ ಅದನ್ನು ತಿಳಿದುಕೊಂಡು ಸೂಕ್ತವಾದಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಮನೋಹರ್.ಯು.ಐನಾಪುರ : ಮಾನ್ಯ ಅಧ್ಯಕ್ಷರೇ, ಇದು ಆಗಿ ಮೂರು ವರ್ಷಗಳಾಯಿತು. 2 - 3 ತಿಂಗಳಲ್ಲಿ 91-92ನೇ ಸಾಲಿನಿಂದ ನಡೆಯುತ್ತಿದೆ. ಇದನ್ನು ಅಲ್ಲೆ ಮುಚ್ಚಿ ಹಾಕುತ್ತಿದ್ದಾರೆ. ಆದ್ದರಿಂದ ಅಲ್ಲಿನ ಅಧಿಕಾರಿಯನ್ನು ತಕ್ಷಣ ತೆಗೆಯಬೇಕು ಇಲ್ಲವೇ ಸಸ್‌ಪೆಂಡ್ ಮಾಡಬೇಕು. ಏಕೆಂದರೆ ಮಾರ್ಚ್ ತಿಂಗಳು ಬರುತ್ತಿದೆ. ರಸ್ತೆಗಳ ಖರ್ಚು ಬಿಲ್ಲನ್ನು ಎಲ್ಲಾ ಕಾಗದದಲ್ಲಿ ಮಾಡುತ್ತಾರೆ. ಆದ್ದರಿಂದ ಈ ತಕ್ಷಣ ಅವರನ್ನು ಅಲ್ಲಿಂದ ತೆಗೆಯಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಇದಕ್ಕೆ ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನೀಯರ್ ಮತ್ತು ಜೂನಿಯರ್ ಇಂಜಿನಿಯರ್ ಅವರಿಗೆ ಷೋಕಾಸ್ ನೋಟಿಸನ್ನು ಕೊಟ್ಟಿದ್ದೇವೆ. ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಇದ್ದಾರೆ. ಅವರಿಗೆ ತಕ್ಷಣ ಈ ಬಗ್ಗೆ ಒಂದು ವರದಿಯನ್ನು ಕೊಡಬೇಕೆಂದು ಸೂಚಿಸಿದ್ದೇವೆ. ಆ ರಿಪೋರ್ಟ್ ಬಂದ ತಕ್ಷಣ ನಾವು ಮುಚ್ಚಿಡುವಂತಹ ಪ್ರಯತ್ನ ಮಾಡುವುದಿಲ್ಲ. ಸರಿಯಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಮನೋಹರ್.ಯು.ಐನಾಪುರ : ಆ ಅಧಿಕಾರಿ ಅಲ್ಲಿ ಇರಬಾರದು. ಅವರಿಂದ ಅನಾಹುತ ಆಗುತ್ತದೆ.

ಅಧ್ಯಕ್ಷರು : ತೀವ್ರವಾದ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರಲ್ಲಾ... ಅಧಿಕಾರ ವ್ಯಾಪ್ತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರಲಾ.

ಶ್ರೀ ಮನೋಹರ್.ಯು.ಐನಾಪುರ : ಅಲ್ಲ, ಇದನ್ನು ಮೂರು ವರ್ಷಗಳಿಂದ ಮುಚ್ಚಿ ಹಾಕುತ್ತಿದ್ದಾರೆ.

ರಾಜ್ಯದಲ್ಲಿ ಎ.ಪಿ.ಎಂ.ಸಿ.ಗೆ ಚುನಾವಣೆ.

381 - ಶ್ರೀ ನಾರಾಯಣರಾವ್ ಮನವಳ್ಳಿ (ಬೀದರ್) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಎ.ಪಿ.ಎಂ.ಸಿ.ಗಳಿಗೆ ಯಾವ ವರ್ಷದಲ್ಲಿ ಚುನಾವಣೆಗಳನ್ನು ನಡೆಸಲಾಯಿತು.

ಆ. ಆ ಚುನಾವಣೆಗಳ ಅವಧಿ ಮುಗಿದಿದ್ದರೂ ಸಹ ಇದುವರೆವಿಗೂ ಹೊಸ ಚುನಾವಣೆಗಳನ್ನು ನಡೆಸದಿರಲು ಕಾರಣಗಳೇನು;

ಇ) ಯಾವಾಗ ಅವುಗಳ ಚುನಾವಣೆಗಳನ್ನು ನಡೆಸಲಾಗುವುದು.

ಈ) ಆ ಚುನಾವಣೆಗಳನ್ನು ನಡೆಸುವಲ್ಲಿ ಕಾನೂನಿನ ತೊಡಕೇನಾದರೂ ಇದೆಯೇ?

ಶ್ರೀ ಮದನ ಗೋಪಾಲ್ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) 1983 ರಲ್ಲಿ

ಆ) 1988-89ನೇ ಸಾಲಿನಲ್ಲಿ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆಗಳನ್ನು ನಡೆಸಲು ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು. ಈ ಚುನಾವಣೆಗಳನ್ನು ಮುಂದೂಡಬೇಕೆಂದು ಸಾರ್ವಜನಿಕರು ಹಾಗೂ ಶಾಸಕರು ಒತ್ತಾಯಿಸಿದ್ದರಿಂದ ಚುನಾವಣೆಗಳನ್ನು ಸರಕಾರವು ಮುಂದೂಡಲಾಯಿತು. ಈ ಮಧ್ಯೆ ಮಾಜಿ ಶಾಸಕರಾದ ಶ್ರೀ ಅಜ್ಜಿಬಾಳ್ ಹೆಗಡೆ, ಇವರ ನೇತೃತ್ವದಲ್ಲಿ ಮಾರುಕಟ್ಟೆ ಕಾಯಿದೆಗೆ ಸಮಗ್ರ ತಿದ್ದುಪಡಿಗಳನ್ನು ಸೂಚಿಸಲು ಸರಕಾರವು ನೇಮಿಸಿದ ಸಮಿತಿಯ ಶಿಫಾರಸ್ಸಿನ ಮೇರೆಗೆ, ಮಾರುಕಟ್ಟೆ ಕಾಯಿದೆಗೆ 1991ರಲ್ಲಿ ತಿದ್ದುಪಡಿ ಮಾಡಿ, ಚುನಾವಣೆ ವಿಷಯಗಳು ಮತ್ತು ಮಾರುಕಟ್ಟೆ ಸಮಿತಿಗಳ ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ ತಿದ್ದುಪಡಿ ಮಾಡಿದ ಹಿನ್ನೆಲೆಯಲ್ಲಿ, ಮಾರುಕಟ್ಟೆ ಸಮಿತಿಗಳ ಕ್ಷೇತ್ರ ಬದಲಾವಣೆ, ವಿಭಜನೆ ಹಾಗೂ ಸಂಯೋಜನೆಗಳನ್ನು ಮಾಡಲು ಮತ್ತು ಸಮಿತಿಗಳ ರಚನೆ ಹಾಗೂ ಚುನಾವಣೆ ವಿಷಯಕ್ಕೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ರಚಿಸಲು ಕ್ರಮಕೈಗೊಳ್ಳಬೇಕಾಗಿದ್ದರಿಂದ, ಹೊಸದಾಗಿ ಚುನಾವಣೆಗಳನ್ನು ನಡೆಸಲು ಸಾಧ್ಯವಾಗಿರುವುದಿಲ್ಲ.

ಇ) ಈ ಬಗ್ಗೆ ಸರ್ಕಾರವು ಅಂತಿಮ ತೀರ್ಮಾನ ತೆಗೆದುಕೊಂಡು ಆದಷ್ಟು ಬೇಗ ಚುನಾವಣೆ ನಡೆಸಲು ಕ್ರಮಕೈಗೊಳ್ಳಲಾಗುವುದು.

ಈ) - ಇಲ್ಲ -

ಶ್ರೀ ನಾರಾಯಣರಾವ್ ಮನಹಳ್ಳಿ : ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಅದೇ ಹಳೆಯ ಉತ್ತರವನ್ನು ಕೊಟ್ಟಿದ್ದಾರೆ. ಆಗಬಹುದು, ಹೋಗಬಹುದು, ಮಾಡಬಹುದು, ನೋಡಬಹುದು ಅದೇ ತರಹ ಈಗಲೂ ಅದೇ ತರಹ ಈ ಚುನಾವಣೆಗಳು ಯಾವಾಗ ಆಗಬಹುದು ಎಂದರೆ ಆದಷ್ಟು ಬೇಗ ಎಂದಿದ್ದಾರೆ. ಆದಷ್ಟು ಬೇಗ ಅಂದರೆ ನಿಖರವಾಗಿ ದಿನಾಂಕವನ್ನು ಹೇಳಿದರೆ ಬಹಳ ಒಳ್ಳೆಯದು.

(ಗೊಂದಲ)

ಶ್ರೀ ಮದನಗೋಪಾಲ ನಾಯಕ್ : ಚುನಾವಣೆಯ ಬಗ್ಗೆ ಶ್ರೀ ನಾರಾಯಣ ರಾವ್ ಮನಹಳ್ಳಿಯವರು ಪ್ರಶ್ನೆ ಕೇಳಿದ್ದಾರೆ. ಆಗಬಹುದು, ಹೋಗಬಹುದು ಅಂಥ ಯಾವುದು ಹೇಳಿಲ್ಲ. ನಿರ್ದಿಷ್ಟವಾಗಿ ಎಂದರೆ ನಾನು ಇಂಥ ದಿವಸ ಮಾಡುವುದಕ್ಕಾಗುತ್ತದೆ ಎಂದೂ ಸಹ ಹೇಳಿಲ್ಲ. 1983 ರಲ್ಲಿ ಚುನಾವಣೆ ಆಗಬೇಕಾಗಿತ್ತು. ಆಗ ನೋಟೀಸ್ ಜಾರಿ ಮಾಡಿದ್ದು ಆಗಿನ ಸರ್ಕಾರ ಇದನ್ನು ಮುಂದೂಡಿ ಇದಕ್ಕೆ ಸಮಗ್ರವಾದಂತಹ

ಕಾನೂನು ತಿದ್ದುಪಡಿಯನ್ನು ತರಬೇಕೆಂದು ಶ್ರೀ ಅಜ್ಜಿಬಾಳ್ ಹೆಗಡೆ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿತ್ತು.

ಆ ಸಮಿತಿಯ ರಿಪೋರ್ಟ್ 91ರಲ್ಲಿ ಬಂದಿದೆ. ಅದರ ಪ್ರಕಾರ ಕೆಲವು ಮಾರುಕಟ್ಟೆಗಳನ್ನು ಸಂಯೋಜನೆ ಮತ್ತು ವಿಂಗಡನೆ ಮಾಡತಕ್ಕಂತಹ ಕಾರ್ಯ ಇತ್ತು. ಅದೆಲ್ಲಾ ಈಗ ಮುಗಿದುಹೋಗಿದೆ. ಮತ್ತು ಈಗ ಚುನಾವಣೆ ಕೆಲಸ ಪ್ರಾರಂಭವಾಗಬೇಕಾಗಿದೆ. ಚುನಾವಣೆ ಮಾಡುವುದಕ್ಕೆ ಸುಮಾರು ಕನಿಷ್ಟ 150 ದಿವಸ ಸಮಯ ಬೇಕಾಗುತ್ತದೆ. ಆದುದರಿಂದ ಆ ಕಾರ್ಯವನ್ನು ಆದಷ್ಟು ಬೇಗ ಎಂದು ಹೇಳಿದ್ದೇವೆ ನಿಖರವಾಗಿ ನಿಮಗೆ ಹೇಳಬೇಕೆಂದರೆ ಆಗಸ್ಟ್ ಸೆಪ್ಟೆಂಬರ್‌ನಲ್ಲಿ ಆ ಚುನಾವಣೆಗಳನ್ನು ಮಾಡಬೇಕಾಗುತ್ತದೆ. ನಮ್ಮ ಮುಖ್ಯಮಂತ್ರಿಗಳೂ ಸಹ ಮೇಲ್ಮನೆಯಲ್ಲಿ ಶೀಘ್ರವಾಗಿ ಎಲೆಕ್ಷನ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಏಕೆಂದರೆ ನಾವು ಆ ಚುನಾವಣೆಗಳನ್ನು ಮಾಡಿ ಆ ಎಪಿಎಂಸಿಗಳನ್ನು ರೈತರ ಕೈಯಲ್ಲಿ ಕೊಡಬೇಕು ಎನ್ನುವುದು ನಮ್ಮ ಉದ್ದೇಶ. ಅದನ್ನು ಅಧಿಕಾರಿಗಳ ಕೈಯಲ್ಲಿ ಕೊಟ್ಟು ಹಾಳು ಮಾಡಬೇಕು ಎನ್ನುವ ಉದ್ದೇಶ ಇಲ್ಲ. ಆದಷ್ಟು ಬೇಗ ಎಲೆಕ್ಷನ್ ಮಾಡಿ ರೈತರ ಪ್ರತಿನಿಧಿಗಳ ಕೈಯಲ್ಲಿ ಈ ಎಪಿಎಂಸಿಗಳನ್ನು ಕೊಡಬೇಕು ಎನ್ನುವ ಹಿತದೃಷ್ಟಿಯಿಂದ ಬಹಳಷ್ಟು ಕೆಲಸಗಳನ್ನು ಕೈಗೊಂಡು ಈ ಕೆಲಸವನ್ನು ಮಾಡಿದ್ದೇವೆ. ಆದಷ್ಟು ಬೇಗ ಎಲೆಕ್ಷನ್ ಮಾಡುತ್ತೇವೆ.

ಶ್ರೀ ನಾರಾಯಣ್‌ರಾವ್ ಮನವಳ್ಳಿ : ತಾರೀಖು ಹೇಳುವುದಕ್ಕೆ ತಮಗೆ ಏನು ತೊಡಕಿದೆ? ನಿಶ್ಚಯವಾಗಿ ಇಂತಹ ತಾರೀಖು, 2 ತಿಂಗಳು 3 ತಿಂಗಳು ಎಂದು ಸಮಯ ತೆಗೆದುಕೊಳ್ಳಿ. ನಿಶ್ಚಯವಾಗಿ ತಾರೀಖು ಹೇಳುವುದಕ್ಕೆ ಏನು ತೊಡಕಿದೆ? ನಿಮಗೆ ಏನು ಅಂತಹ ಕಷ್ಟ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಡೀ ರಾಜ್ಯದಲ್ಲಿ ಚುನಾವಣೆ ಗೊಂದಲ ಇದೆ. ಮಾನ್ಯ ಅಧ್ಯಕ್ಷರೇ, ತಾವು ನಮ್ಮ ಸಹಾಯಕ್ಕೆ ಬರಬೇಕಾತ್ತದೆ. ಇಡೀ ರಾಜ್ಯದಲ್ಲಿ ಚುನಾವಣೆ ನಡೆಯದೇ ಇರುವುದರಿಂದ, ನಾವು ನಿರ್ದಿಷ್ಟವಾಗಿ ಇಷ್ಟೇ ತಿಂಗಳಲ್ಲಿ ಮಾಡುತ್ತೇವೆ ಎಂದು ಹೇಳಲಿ. ಇಲ್ಲದಿದ್ದರೆ ಮಾಡುವುದಿಲ್ಲ ಎಂದು ಹೇಳಲಿ, ನಾವು ಚಿಂತೆ ಮಾಡುವುದಿಲ್ಲ.

ಶ್ರೀ ಮದನ್ ಗೋಪಾಲ್ ನಾಯಕ್ : ಮಾಡುವುದಿಲ್ಲ ಎಂದು ಹೇಳುವಂತಹ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ನಾರಾಯಣ್‌ರಾವ್ ಮನವಳ್ಳಿ : ಅವರು ತಾರೀಖು ಹೇಳಲಿ, 1 ತಿಂಗಳು 2, ತಿಂಗಳು 1 ವರ್ಷ 2 ವರ್ಷ ಎಂದು ಹೇಳಲಿ.

ಶ್ರೀ ಆರ್.ಎಲ್. ಜಾಲಪ್ಪ : ಈ ಕಾಯಿದೆಗೆ 1991ರಲ್ಲಿ ತಿದ್ದುಪಡಿ ತಂದಿದ್ದಾರೆ. ಇದು ಆಗಿ 2 ವರ್ಷದ ಮೇಲಾಯಿತು. ಇವತ್ತು ಚುನಾವಣೆ ಮಾಡುವುದಕ್ಕೆ ಇದೆಲ್ಲಾ ಏನು ಸಬೂಬು ಹೇಳಿದ್ದೀರಲ್ಲ ಅದು ಯಾವುವು ರೀಸನ್‌ಬಲ್ ಆಗಿ ಇರುವಂತಹ ಸಬೂಬು ಅಲ್ಲ, ಇದು ಡಿಲಿಮಿಟೇಷನ್ ಆಗಬೇಕು. ಎಷ್ಟು ವರ್ಷ ಬೇಕು. ಪಾರ್ಲಿಮೆಂಟ್ ಡಿಲಿಮಿಟೇಷನ್ ಮಾಡುತ್ತಿದ್ದೀರ? ಅಥವಾ ಸ್ಟೇಟ್ ಡಿಲಿಮಿಟೇಷನ್ ಮಾಡುತ್ತಿದ್ದೀರಾ. ಇರುವ 126 -130 ಮಾರ್ಕೆಟಿಂಗ್ ಸೊಸೈಟಿಗಳಿಗೆ ಎಷ್ಟು ದಿವಸ ಬೇಕು. ಇದರಿಂದ ಏನು ತೊಂದರೆಯಾಗುತ್ತಿದೆ. ತಾವು 2-3 ಕಡೆ ಹೋಗಿ ವಿಸಿಟ್ ಮಾಡಿದ್ದೀರಿ. ತಮಗೂ ಗೊತ್ತಿದೆ, ಇದು ಅರ್ಥವಾಗಿದೆ. ಇವತ್ತು ರೈತರ ಶೋಷಣೆ ಆಗುತ್ತದೆ. ನಾನೇ ಅದರ ಮಂತ್ರಿಯಾಗಿದ್ದಾಗ ಒಂದು ಕಾನೂನು ತಂದೆ. ನಾನು ಪಡಬಾರದ ಹಿಂಸೆ ಪಟ್ಟು ಆ ಕಾನೂನನ್ನು ತೆಗೆದುಕೊಂಡು ಬಂದಿದ್ದೆ.ರೆಗ್ಯೂಲೇಟೆಡ್ ಮಾರ್ಕೆಟ್‌ಗೆ ಆ ಕಾನೂನಿನಲ್ಲಿ ಏನು ಮಾಡಿದ್ದೀವಿ ಎಂದರೆ ರೈತ ತಾನು ಬೆಳೆದ ಮಾಲನ್ನು ಮಾರ್ಕೆಟಿಗೆ ತೆಗೆದುಕೊಂಡು ಬರುತ್ತಾನೆ, ತೆಗೆದುಕೊಂಡು ಬಂದಾಗ ಅವರ

He is liable for 6 months imprisonment ಎಂದು ಮಾಡಿದ್ದೇವೆ. ಮತ್ತು ಯಾರು ಕೊಂಡುಕೊಳ್ಳುತ್ತಾನೆ ಅವನ ಹತ್ತಿರ ಕಮಿಷನ್ ತೆಗೆದುಕೊಳ್ಳಬೇಕು ಎಂದು ಮಾಡಿದ್ದೇವೆ ಆ ಆಕ್ಟ್ ಜಾರಿಗೆಬಂತು. ತಮಗೆ ಗೊತ್ತಿದೆ ಹಿಂದುಗಡೆ ಬರೆದುಕೊಡುತ್ತಾರೆ. ಇವತ್ತು 10 ಪರ್ಸೆಂಟ್ ಅವರ ಹತ್ತಿರ ತೆಗೆದುಕೊಳ್ಳುತ್ತಾರೆ. 2 ಪರ್ಸೆಂಟ್ ಮರ್ಚೆಂಟ್ಸ್ ಹತ್ತಿರ ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು : ತಾವು ಅಧ್ಯಕ್ಷರ ಚುನಾವಣೆ ಯಾವಾಗ ಮಾಡುತ್ತಾರೆ ಎಂದು ಕೇಳಿ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಕಾರಣ ಹೇಳುತ್ತೇನೆ. ನಾನು ಮುಖ್ಯವಾದುದನ್ನು ಹೇಳುತ್ತಿದ್ದೇನೆ. ಇದರಲ್ಲಿ ನಿಮ್ಮ ಭಾಗ ಏನು? ನಿಮ್ಮ ಅಧಿಕಾರಿಗಳ ಭಾಗ ಏನು? ಹೋಗಲಿ 91ರಲ್ಲಿ ಅಮೆಂಡ್‌ಮೆಂಟ್ ತಂದಾಗಲೇ ಅದರಿಂದ ಈಚೆಗೆ ಮಾಡುವುದಕ್ಕೆ ಏನು ತೊಂದರೆಯಾಗಿತ್ತು. ತಾವು ಆಗಸ್ಟ್ ಜುಲೈನಲ್ಲಿ ಮಾಡುತ್ತೀರಾ? ಯಾವಾಗ ಸ್ಪೆಸಿಫಿಕ್ ಆಗಿ ಮಾಡುತ್ತೀರಿ?

ಶ್ರೀ ಮದನ್ ಗೋಪಾಲ್ ನಾಯಕ್ : ಮಾನ್ಯ ಹಿರಿಯರಾದಂತಹ ಜಾಲಪ್ಪನವರು ರೈತರ ಶೋಷಣೆಯಲ್ಲಿ ನಾನು ಭಾಗಿ ಎಂದು ಹೇಳುತ್ತಿದ್ದಾರೆ. ಜವಾಬ್ದಾರಿ ಎಂದು ಹೇಳುತ್ತಿದ್ದಾರೆ. ಆದರೆ ಆ ಜವಾಬ್ದಾರಿಯನ್ನು ಭವಿಷ್ಯದಲ್ಲಿ ತಾವೂ ಸಹ ಹೊರಬೇಕು ಎಂದು ನಾನು ಹೇಳುತ್ತಿದ್ದೇನೆ. ಏಕೆಂದರೆ ತಾವು ಈ ಇಲಾಖೆಯನ್ನು ವಹಿಸಿಕೊಂಡಿರತಕ್ಕಂತಹ ಸಮಯದಲ್ಲಿ, ರೈತರಿಗೆ, ರೈತರ ಒಳಿತಿಗಾಗಿ ಅವರಿಂದ ಯಾವುದೇ ರೀತಿಯ ದುಡ್ಡನ್ನು ತೆಗೆದುಕೊಳ್ಳಬಾರದು ಎಂದು ಒಂದು ಕಾಯಿದೆ ಪ್ರಾರಂಭ ಮಾಡಿದಿರಿ. ಮತ್ತು ಅದನ್ನು ಜಾರಿಗೆ ತಂದಿರಿ. ಆದರೆ ಇವತ್ತು ಆಗುತ್ತಿರತಕ್ಕಂಥಾದ್ದು ಏನು? ತಾವು ಹೇಳುವಂತಾದ್ದೆಲ್ಲಾ ಸತ್ಯನೇ ಇದೆ.

ಶ್ರೀ ಸಿ.ಬೈರೇಗೌಡ : ಅವರು ಕೇಳಿದ್ದು ಬೇರೆ, ಇವರು ಉತ್ತರ ಕೊಡುತ್ತಿರುವುದು ಬೇರೆ. ನಾನು ಚುನಾವಣೆಗೆ ಸೀಮಿತವಾಗಿ ಹೇಳುತ್ತೇನೆ. ನಾವು ಓಟರ್‌ಲಿಸ್ಟ್ ರೆಡಿ ಮಾಡಬೇಕಾಗಿದೆ. ಸಮಿತಿಯ ರಿಪೋರ್ಟ್ ಪ್ರಕಾರ ವಯಸ್ಸು 21 ವರ್ಷದಿಂದ 18 ವರ್ಷಕ್ಕೆ ಇಳಿಸಿದ್ದಾರೆ.

12.55 ಪಿ.ಎಂ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಮಾನ್ಯ ಜಾಲಪ್ಪನವರಿಗೆ ಗೊತ್ತಿದೆ. ಈಗಾಗಲೇ ಅವರು ಹೇಳಿದ್ದ ಹಾಗೆ, ಅಜ್ಜಿಬಾಳ್ ಹೆಗಡೆ ಅವರ ರಿಪೋರ್ಟ್ ಮೇಲೆ, ಅಮೆಂಡ್‌ಮೆಂಟ್ ಮಾಡಿ ರೂಲ್ಸ್ ತಂದು, ಅದಕ್ಕೂ ಕೂಡ ಕೆಲವು ಅಬ್ಜೆಕ್ಷನ್‌ಗೋಸ್ಕರ ಕೆಲವು ಸಮಯ ಬೇಕಾಗಿತ್ತು ಮತ್ತೆ ಕಾನ್‌ಸ್ಟಿಟ್ಯುಯೆನ್ಸಿಸ್ ಕೂಡ, ಡೀ ಲಿಮಿಟೇಷನ್ ಮಾಡತಕ್ಕಂಥ ಕೆಲಸ ನಡೆದಿದೆ. ಅದಕ್ಕಾಗಿ ಅವರು ಏನು ಹೇಳುತ್ತಾರೆಂದರೆ, ಚುನಾವಣೆ ಪೂರ್ತಿಯಾಗಿ ಮಾಡಬೇಕಾದರೆ 150 ದಿವಸ ಬೇಕಾಗುತ್ತದೆ ಎನ್ನುವ ಮಾತನ್ನು ಸ್ಪಷ್ಟಪಡಿಸಿದ್ದಾರೆ. ಅದಕ್ಕೆ ಒಂದು ಸ್ಪೆಸಿಫಿಕ್ ಆದಂಥ ಸಮಯ ಬೇಕಾಗುತ್ತದೆ. ಅದಕ್ಕಾಗಿ 150 ದಿವಸಗಳು ಆದಮೇಲೆ, ಖಂಡಿತವಾಗಿ ಚುನಾವಣೆ ಮಾಡಿಯೇ ಮಾಡುತ್ತಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಈಗಾಗಲೇ ನಾಲ್ಕು ವರ್ಷಗಳು ಕಳೆದವು, ಏತಕ್ಕೆ ಚುನಾವಣೆ ಮಾಡಲಿಲ್ಲ, ಆ ಬಗ್ಗೆ ಹೇಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಐದಾರು ವರ್ಷ ಸಮಯ ಬೇಕಾಗಿಲ್ಲ. ನೋಟಿಫಿಕೇಷನ್ ಆದೆಲ್ಲಾ ಮಾಡಬೇಕಾದರೆ, ಆ ಷೆಡ್ಯೂಲ್ ಏನಿದೆ ಅಂದರೆ, 115 ಡೇಸ್ ಷೆಡ್ಯೂಲ್ ಆಗುತ್ತದೆ. ಆ ಷೆಡ್ಯೂಲ್ ಪ್ರಕಾರ ಯಾವಾಗ ಸಾಧ್ಯವಾಗುತ್ತದೆ ಆಗ ಮಾಡಿಯೇ ಮಾಡುತ್ತಾರೆ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಸಚಿವರು ಹೇಳುವಂಥಾದ್ದು, ಸತ್ಯಕ್ಕೆ ದೂರವಾದಂಥ ಸಂಗತಿ: ಅಜ್ಜಿಬಾಳ್ ಹೆಗಡೆಯವರ ರಿಪೋರ್ಟ್ ಯಾವಾಗ ಬಂತು? ಸರ್ಕಾರ ಯಾವಾಗ ಒಪ್ಪಿಕೊಂಡಿತು? ಅಧ್ಯಕ್ಷರೆ, ಹಾಗಾದರೆ ಸಭೆಯ ಮುಂದೆ ಏನು ಬೇಕಾದರೂ ಹೇಳಬಹುದೇ? ಇದು ಏನಾದರೂ ಮೊನ್ನೆ ಬಂತೇ ಎಂದು ನಾನು ಕೇಳುತ್ತಿದ್ದೇನೆ. ಅದು ಬಂದು 150 ದಿವಸಗಳು ಆಗಲಿಲ್ಲವೇನು? ಈಗ ನಮಗೆ ಏನು ಬೇಕಾಗಿದೆ ಎಂದರೆ, ಕನಿಷ್ಟ ಪಕ್ಷ ರೈತರ ಪ್ರತಿನಿಧಿಗಳನ್ನೊಳಗೊಂಡಂತೆ ಆಡಳಿತ ಸಮಿತಿ ಬರಬೇಕು. ಅದಕ್ಕೆ ತಮ್ಮ ವಿರೋಧ ಇದೆಯೇ ಇದ್ದರೆ. ಹೇಳಿ ನಾವು ಇನ್ನೂ ಮಾಡುವುದಿಲ್ಲ ಎಂದು. ಇವೊತ್ತು ಅಲ್ಲಿ ಅಧಿಕಾರಿಗಳು ರೈತರಿಗೆ ಶೋಷಣೆ ಮಾಡುತ್ತಿದ್ದಾರೆ. ರೈತರಿಗೆ ಯಾವ ಅನ್ಯಾಯವಾಗುತ್ತಿದೆ ಅದು ಮುಂದುವರಿಯುತ್ತಿದೆ.

" Any self -Government is better than good Government; Any self-adminis tration is better than good administration".

ಒಳ್ಳೆಯದು ಬೇಡ ರೈತ ಪ್ರತಿನಿಧಿಗಳು ಕೂಡಿದಂಥ ಒಂದು ಆಡಳಿತ ಬರಲಿ ಎನ್ನುವ ದೃಷ್ಟಿಯಿಂದ ನಿರ್ದಿಷ್ಟವಾಗಿ ತಾವು ಹೇಳಿ. ಇನ್ನು ಆರು ತಿಂಗಳೊಳಗಾಗಿ ನಾವು ಮಾಡುತ್ತೇವೆಂದು ಹೇಳಿ ತಮಗೆ 150 ದಿವಸಗಳು ಬೇಕು. ತಾನೆ, ನಾವು ತಮ್ಮಿಂದ ಖಚಿತವಾದ ಉತ್ತರವನ್ನು ಬಯಸುತ್ತೇವೆ. ಕನಿಷ್ಟ 6 ತಿಂಗಳೊಳಗೆ ನಾವು ಮಾಡುತ್ತೇವೆ. ಎನ್ನುವ ಮಾತನ್ನು ಹೇಳಲಿ. ಅದನ್ನು ಬಿಟ್ಟು150 ದಿವಸಗಳು ಆದಮೇಲೆ ಅಂದರೆ 500 ದಿವಸಗಳು ಆದಮೇಲೆ ಮಾಡುತ್ತೀರಾ. ಅದು ಜವಾಬ್ದಾರಿಯುತವಾದಂಥ ಹೇಳಿಕೆ ಅಲ್ಲ ಅವರು ನಿರ್ದಿಷ್ಟವಾದಂಥ ದಿವಸವನ್ನು ಹೇಳದಿದ್ದರೂ ಇಂಥ ಅವಧಿಯೊಳಗಾಗಿ ನಾವು ಮಾಡುತ್ತೇವೆ, 180 ದಿವಸದಲ್ಲಿ 200 ದಿವಸಗಳಲ್ಲಿ ಮಾಡುತ್ತೇವೆ ಎಂದು ಹೇಳಲಿ. ಇಲ್ಲ ನಾವು ಸರ್ಕಾರ ಹೋಗುವುದರೊಳಗಾಗಿ ಮಾಡುತ್ತೇವೆಂದು ಹೇಳಿ. ತಾವು ಏನಾದರೂ ಒಂದು ಹೇಳಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಾವು, ಹೋದ ಮೇಲೆ ಬಂದು ಮಾಡಿಕೊಳ್ಳಿ ಎಂದು ಹೇಳಿ.

ಶ್ರೀ ಮದನಗೋಪಾಲ ನಾಯಕ್ : ಅಧ್ಯಕ್ಷರೆ, ಮಾನ್ಯ ಸದಸ್ಯರೆಲ್ಲರ ಕಳಕಳಿ, ಮತ್ತು ನನ್ನ ಸ್ವಂತ ಅನುಭವದಲ್ಲಿ ಹೇಳುವುದಾದರೆ, ಈ ರೈತರ ಇನ್‌ಸ್ಟಿಟ್ಯೂಷನ್ಸ್ ಏನಿವೆ, ಅವುಗಳನ್ನು ರೈತರ ಕೈಯಲ್ಲಿ ಕೊಡಬೇಕೆಂಬ ಉದ್ದೇಶದಿಂದ, ನಮಗೂ ಕಾಳಜಿ ಇದೆ. ನಾನು ಒಬ್ಬ ರೈತನ ಮಗನಾಗಿರುವುದರಿಂದ ಎಲ್ಲಾ ನನಗೆ ಗೊತ್ತಿದೆ. ತಮ್ಮೆಲ್ಲರ ಅನಿಸಿಕೆ ಬಗ್ಗೆ ಹೇಳಬೇಕೆಂದರೆ ನಾವು ಇನ್ನು ಆರು ತಿಂಗಳೊಳಗೆ ಎಲೆಕ್ಷನ್ ಮಾಡುತ್ತೇವೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ನಿಮಗೆ ಧೈರ್ಯ ಇಲ್ಲ, ಪಂಚಾಯತ್ ಚುನಾವಣೆಯಲ್ಲಿ ಬಂದಿದ್ದೇವೆ ಹಾಗೆ, ಹೀಗೆ ಎಂದು ಹೇಳುತ್ತಿದ್ದೀರಲ್ಲಾ ಧೈರ್ಯ ಇದ್ದರೆ ನೀವು ಚುನಾವಣೆ ಮಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಇವರಿಗೆ ಚುನಾವಣೆ ಬಗ್ಗೆ ಕಳಕಳಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ ಇದು ಸರ್ಕಾರ ನೀತಿ ಸರಿಯಲ್ಲ. ಆದ್ದರಿಂದ ನಾನು ಸಭಾತ್ಯಾಗ ಮಾಡಿ ಹೊರಗೆ ಹೋಗುತ್ತೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಹೆಚ್. ಬನ್ನಿಕೋಡ್ : ಅಧ್ಯಕ್ಷರೆ, ಇದು ರೈತ ವಿರೋಧಿ ಸರ್ಕಾರ, ರೈತರ ಶೋಷಣೆ ಮಾಡತಕ್ಕಂಥ ಸರ್ಕಾರ, ಇವರಿಗೆ ಚುನಾವಣೆ ಮಾಡಲಿಕ್ಕೆ ಧೈರ್ಯ ಇಲ್ಲ. ಅದಕ್ಕಾಗಿ ಮುಂದೆ ಹಾಕುತ್ತಿದ್ದಾರೆ.

(ಈ ಹಂತದಲ್ಲಿ ಜನತಾದಳದ ಸದಸ್ಯರು, ಬಿ.ಜೆ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಹೆಚ್. ಬನ್ನಿಕೋಡ್ : ಇದು ರೈತ ವಿರೋಧಿ ಸರ್ಕಾರ, ರೈತರನ್ನು ಶೋಷಣೆ ಮಾಡುವ ಸರ್ಕಾರ ಇವರು ಚುನಾವಣೆಯನ್ನು ಮಾಡುವುದಕ್ಕೆ ತಯಾರಿಲ್ಲವಾದ್ದರಿಂದ ಸಭಾತ್ಯಾಗ ಮಾಡುತ್ತೇವೆ. (ಈ ಹಂತದಲ್ಲಿ ವಿರೋಧಪಕ್ಷದ ಎಲ್ಲ ಮಾನ್ಯ ಸದಸ್ಯರೂ ಸಭಾತ್ಯಾಗ ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 150 ದಿನದೊಳಗೇ ಚುನಾವಣೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರೂ ಇವರು ಸಭಾತ್ಯಾಗ ಮಾಡುವುದಾದರೆ ಏನು ಅರ್ಥವಿದೆ?

ಡಂಕೆಲ್ ಪ್ರಸ್ತಾವನೆ

105 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಡಂಕೆಲ್ ಪ್ರಸ್ತಾವನೆ ಬಗ್ಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದ ಅಭಿಪ್ರಾಯ ಕೇಳಿ ಪ್ರಸ್ತಾವವೇ ಏನಾದರೂ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಅದರ ಸಾರಾಂಶವೇನು?*

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೆ, ತಮಗೆ ಬಂದಿರುವ ಪತ್ರದಲ್ಲಿರುವ ಸಾರಾಂಶ ಏನೆಂಬುದನ್ನು ಹೇಳುತ್ತೀರಾ? ಡಂಕಲ್ ಪ್ರಸ್ತಾವನೆಯ ವಿಷಯದಲ್ಲಿ ದೆಹಲಿಯಿಂದ ತಮಗೆ ಏನು ಪತ್ರ ಬಂದಿದೆ ಅದರಲ್ಲಿ ಏನು ಬರೆದಿದ್ದಾರೆ ಎಂಬುದನ್ನು ಹೇಳುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಸದಸ್ಯರು ಹೇಳತಕ್ಕ ರೀತಿಯಲ್ಲಿ ಮೂಲತಃ ನಮಗೆ ಕೇಂದ್ರ ಸರ್ಕಾರದಿಂದ ಇದೇ ರೀತಿ ಮಾಡಬೇಕೆಂಬ ನಿರ್ದೇಶನವಾಗಲಿ, ಅಥವಾ ಈಗಿರತಕ್ಕ ನೀತಿಯನ್ನು ಬದಲಾವಣೆ ಮಾಡತಕ್ಕ ವಿಷಯದಲ್ಲಾಗಲಿ ನಮಗೇನೂ ಪತ್ರ ಬಂದಿಲ್ಲ.

ಪ್ರೊ. ಎಂ.ಡಿ. ನಂಜುಡಸ್ವಾಮಿ : ಮಾನ್ಯ ವೆಂಕಟಪ್ಪನವರು ಬಹಳ ಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಅವರಿಗೆ ಸಮಾಧಾನವಾಗಿರಬಹುದು, ಆದರೆ ನನಗೆ ಸಮಾಧಾನ ಆಗಿಲ್ಲ. He might be satisfied but I am not satisfied.

ಅಧ್ಯಕ್ಷರು : ಇದೇ ವಿಷಯವನ್ನು ಬೇರೆ ಪ್ರಶ್ನೆಯಾಗಿ ಬೇರೆ ರೂಪದಲ್ಲಿ ಕೇಳಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಇದರಲ್ಲಿ ಭಾಗವಹಿಸುವುದಕ್ಕೆ ಅವಕಾಶವಿದೆಯಲ್ಲಾ, ಈ ವಿಚಾರವನ್ನು ಸರ್ಕಾರ ಬಹಳ ಲಘುವಾಗಿ ತೆಗೆದುಕೊಂಡಿದೆ. ಸರ್ಕಾರ ಉತ್ತರ ಕೊಟ್ಟಿರುವ ರೀತಿಯನ್ನು ನೋಡಿದರೆ ಇದು ಸರ್ಕಾರವೋ ಅಥವಾ ಮುನಿಸಿಪಾಲಿಟಿಯೋ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು : ಇದೇ ವಿಚಾರವನ್ನೇ ತಾವು ಬೇರೆ ರೂಪದಲ್ಲಿ ಕೇಳಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ದಯವಿಟ್ಟು ಕೇಳಬೇಕು. ನಾನು ಒಂದೇ ಒಂದು ಪಟ್ಟಿಯನ್ನು ಓದುತ್ತೇನೆ. ಇದರಿಂದ ಈ ರಾಷ್ಟ್ರದ ಎಷ್ಟು ಅಧಿಕಾರಗಳು ಮೊಟಕಾಗುತ್ತವೆ ಎಂಬ ಬಗ್ಗೆ ತಮಗೆ ಯಾವುದೇ ಪ್ರಜ್ಞೆ ಇಲ್ಲದೆ ಕೆಲಸಮಾಡುತ್ತಿದ್ದೀರಲ್ಲಾ. ನೀವು ರಾಜ್ಯಸರ್ಕಾರವೋ ಅಥವಾ ಮುನಿಸಿಪಾಲಿಟಿಯೋ? ಡಂಕಲ್ ಪ್ರೊಪೋಸಲ್‌ಬಗ್ಗೆ ಇವರು ಕೇಳುತ್ತಿದ್ದಾರೆ. ಆದರೆ ಪ್ರೊಪೋಸಲ್ ಆಗಿ ಅದು ಅಲ್ಲಿ ಉಳಿದಿಲ್ಲ. It has become a GATT Treaty now and you are putting your signature- your Government in Delhi.

ನಿಮ್ಮ ಅಧಿಕಾರಗಳು ಎಷ್ಟು ಹೋಗುತ್ತವೆ ಎಂಬ ಬಗ್ಗೆ ಈ ಪಟ್ಟಿಯನ್ನು ಓದಿ ನಿಮಗೆ ಹೇಳಲೇ? ನಿಮ್ಮ ರಾಜ್ಯದ ಅಧಿಕಾರಗಳು ಎಷ್ಟಿವೆ ಅವೆಲ್ಲವೂ ಮೊಟಕಾಗುತ್ತವೆ. ದಯವಿಟ್ಟು ಕೇಳಬೇಕು.

ಅಧ್ಯಕ್ಷರು : ತಾವು ಇದನ್ನು ಬೇರೆ ರೂಪದಲ್ಲಿ ಕೇಳಿ

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಇದು ಸಾಮಾನ್ಯ ವಿಷಯವಲ್ಲ. You should allow me to get at least the list of powers this Government is losing.

ಅಧ್ಯಕ್ಷರು : ಆದ್ದರಿಂದಲೇ ನಾನು ಹೇಳುತ್ತಿದ್ದೇನೆ. ತಾವು ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ನಾನು ಅದಕ್ಕೆ ಅವಕಾಶ ಕೊಡುತ್ತೇನೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಈ ವಿಚಾರದಲ್ಲಿ ಚರ್ಚೆಗೆ ಅವಕಾಶ ಕೊಡುತ್ತೇವೆಂದು 5-6 ದಿನದಿಂದ ಪಟ್ಟಿ ಮಾಡುತ್ತಾ ಬಂದಿರಿ. ಆ ಪಟ್ಟಿಯೂ ಬರುತ್ತಿಲ್ಲ, ಚರ್ಚೆ ಕೂಡ ಪ್ರಾರಂಭ ಆಗಲಿಲ್ಲ. ನಾವು ಹುಡುಗಾಟವನ್ನು ಮಾಡುತ್ತಿದ್ದೇವೆ. ಇದೇನಾದರೂ ಜಾರಿಗೆ ಬಂದರೆ ನಮ್ಮದು ರಾಜ್ಯ ಸರ್ಕಾರವಾಗಿ ಉಳಿಯುವುದಿಲ್ಲ. ಈಗಲೇ ಮುನಿಸಿಪಾಲಿಟಿ ಆಗಿದ್ದೇವೆ, ಆಮೇಲೆ ಇನ್ನೂ ಮುನಿಸಿಪಾಲಿಟಿ ಆಗುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಮೊದಲನೇ ದಿವಸ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಪ್ರಸ್ತಾಪಮಾಡಿದಾಗ, ಈ ಅಧಿವೇಶನದಲ್ಲಿ ಪೂರ್ಣವಾಗಿ ಈ ವಿಚಾರದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಒಂದು ದಿವಸ ಪೂರ್ತಿ ಅವಕಾಶ ಮಾಡಿಕೊಡುತ್ತೇನೆಂದು ತಾವು ಹೇಳಿದ್ದಿರಿ. ಆದರೆ ಡಂಕಲ್ ಪ್ರಸ್ತಾವದ ಬಗ್ಗೆ ಇಲ್ಲಿ ಚರ್ಚೆಯೇ ಆಗಲಿಲ್ಲ.

ಅಧ್ಯಕ್ಷರು : ಕಾರ್ಯಕ್ರಮ ಪಟ್ಟಿಯಲ್ಲಿ ಈ ವಿಷಯ ಬಂದಿತ್ತು. ದಯವಿಟ್ಟು ನೋಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಬರುತ್ತದೆ, ಹೋಗುತ್ತದೆ. ಇಡೀ ರಾಜ್ಯದಲ್ಲಿ ಇಡೀ ದೇಶದಲ್ಲಿ ಗುಲ್ಲಾಗುತ್ತಿ ಬರುತ್ತದೆ ಈ ವಿಚಾರದಲ್ಲಿ ಪ್ರಸ್ತಾಪವೇ ಇಲ್ಲ.

ಸೂಪರ್‌ಸೀಡ್ ಆದ ಡಿ.ಸಿ.ಸಿ. ಬ್ಯಾಂಕುಗಳಿಗೆ ಚುನಾವಣೆ.

384 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳನ್ನು ಸೂಪರ್‌ಸೀಡ್ ಮಾಡಲಾಗಿದೆ?

ಆ) ಆ ಬ್ಯಾಂಕುಗಳನ್ನು ಯಾವ ಯಾವ ಕಾರಣಗಳಿಗಾಗಿ ಸೂಪರ್‌ಸೀಡ್ ಮಾಡಲಾಯಿತು?

ಇ) ಸೂಪರ್‌ಸೀಡ್ ಮಾಡಲಾದ ಬ್ಯಾಂಕುಗಳಿಂದ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿಗೆ ಬರಬೇಕಾದ ಹಣವೆಷ್ಟು? ಹಾಗೂ ಅದರಲ್ಲಿ ಅಪೆಕ್ಸ್ ಬ್ಯಾಂಕಿಗೆ ಬಂದಿರುವ ಹಣವೆಷ್ಟು ಹಾಗೂ ಬರಬೇಕಾದ ಹಣವೆಷ್ಟು?

ಈ) ಸೂಪರ್‌ಸೀಡ್ ಮಾಡಲಾಗಿರುವ ಜಿಲ್ಲಾ ಕೇಂದ್ರ ಸರಕಾರ ಬ್ಯಾಂಕುಗಳಿಗೆ ಇಂತಿಷ್ಟೇ ಅವಧಿಯಲ್ಲಿ ಚುನಾವಣೆ ನಡೆಸಬೇಕೆಂಬ ನಿಯಮವಿದೆಯೇ?

ಉ) ಹಾಗಿದ್ದಲ್ಲಿ ಸೂಪರ್‌ಸೀಡ್ ಆದ ಎಷ್ಟು ಬ್ಯಾಂಕುಗಳು ಆ ಅವಧಿಯನ್ನು ಮೀರಿವೆ?

ಊ) ಅಂತಹ ಬ್ಯಾಂಕುಗಳಿಗೆ ಯಾವಾಗ ಅಧಿಕಾರೇತರರನ್ನು ಆರಿಸಲು ಚುನಾವಣೆ ನಡೆಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ನಾಲ್ಕು

ಆ) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, ನಿಮಯಗಳು, ಬ್ಯಾಂಕುಗಳ ಬೈಲಾ, ಸರ್ಕಾರ ಮತ್ತು ಸಹಕಾರ ಸಂಘಗಳ ನಿಬಂಧಕರು ನೀಡಿರುವ ಆದೇಶ, ನಿರ್ದೇಶನ ಮತ್ತು ಸುತ್ತೋಲೆಗಳ ಪ್ರಕಾರ ಬ್ಯಾಂಕುಗಳು ಕಾರ್ಯ ನಿರ್ವಹಿಸದೇ ಇದ್ದುದರಿಂದ ಸೂಪರ್‌ಸೀಡ್ ಮಾಡಲಾಯಿತು.

ಇ) ಸೂಪರ್‌ಸೀಡ್ ಮಾಡಲಾದ ಬ್ಯಾಂಕುಗಳಿಂದ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿಗೆ ರೂ. 148.17 ಕೋಟಿ ಬರಬೇಕಾಗಿತ್ತು. ಅದರ ಪೈಕಿ ರೂ. 109.34 ಕೋಟಿ ಬಂದಿದ್ದು, ರೂ. 38.83 ಕೋಟಿ ಬರಲು ಬಾಕಿ ಇರುತ್ತದೆ.

ಈ) ಇದೆ. ಆದಾಗ್ಯೂ ಈ ಕಾನೂನಿನಿಂದ ವಿನಾಯಿತಿಯನ್ನು ನೀಡುವ ಅಧಿಕಾರ ಕೂಡ ಸರ್ಕಾರಕ್ಕೆ ಇರುತ್ತದೆ.

ಉ) ಒಂದು ಬ್ಯಾಂಕು ಈ ಅವಧಿಯನ್ನು ಮೀರಿರುತ್ತದೆ.

ಊ) ಪ್ರತಿಯೊಂದು ಪ್ರಕರಣವನ್ನು ಪರಿಶೀಲಿಸಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಸಹಕಾರ ಸಂಘಗಳನ್ನು ರದ್ದು ಪಡಿಸುವ ಪದ್ಧತಿ ಸರಿಯಲ್ಲ. ಈ ಸಂಘಗಳನ್ನು ಸೂಪರ್‌ಸೀಡ್ ಮಾಡುವುದೇ ಒಂದು ವಿಶೇಷವಾಗಿದೆ. ಇನ್ನು ಮುಂದೆ ಇವುಗಳನ್ನು ಸೂಪರ್‌ಸೀಡ್ ಮಾಡುವುದಿಲ್ಲವೇ ಎಂದು ಕೇಳಿರುವುದಕ್ಕೆ, ಕಾನೂನು ಪ್ರಕಾರ ನಾವು ಮಾಡಿಯೇ ಮಾಡುತ್ತೇವೆಂದು ಹೇಳಿದ್ದೀರಿ. ತಾವು 4 ಬ್ಯಾಂಕ್‌ಗಳನ್ನು ಸೂಪರ್‌ಸೀಡ್ ಮಾಡಿದ್ದೀರಿ; ಅದಕ್ಕೆ ಚುನಾವಣೆಯನ್ನೂ ಮಾಡಿಸಿಲ್ಲ, ಅವಧಿ ಮೀರಿದ ಬ್ಯಾಂಕುಗಳ ಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ ಒಂದೇ ಒಂದು ಎಂದು ಉತ್ತರ ಕೊಟ್ಟಿದ್ದೀರಿ. ಈ ರೀತಿ ಆದರೆ ಸಹಕಾರ ಸಂಘಗಳು ಉಳಿಯುತ್ತವೆಯೆ? ಪಕ್ಷ, ಸರ್ಕಾರ ಯಾವುದೇ ಇರಲಿ. ಅದು

ನಿಮ್ಮ ಸರ್ಕಾರ ಇರಲಿ, ನಮ್ಮ ಸರ್ಕಾರ ಇರಲಿ, ಅದರ ಬಗ್ಗೆ ನಾನು ವಾದ ಮಾಡುವುದಿಲ್ಲ.

ಸಹಕಾರ ಸಂಘಗಳು ಮುಕ್ತವಾಗಿ ಕೆಲಸ ಮಾಡುವುದಕ್ಕೆ ಬಿಡುತ್ತೀರೋ ಅಥವಾ ಸೂಪರ್‌ಸೀಡ್ ಮಾಡುವುದರಿಂದ ಏನಾದರೂ ಉದ್ಧಾರವಾಗುತ್ತವೋ ಎಂದು ಮುಖ್ಯವಾದ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಡಳಿತ ಮಂಡಲಿಯವರೇ ನಡೆಸಬೇಕೆಂಬುದು ನಮ್ಮ ಇಚ್ಛೆ. ಚುನಾಯಿತ ಸದಸ್ಯರೇ ಅಧ್ಯಕ್ಷರಾಗಿ, ಸದಸ್ಯರಾಗಿ ಇದನ್ನು ನಡೆಸಬೇಕೆಂಬುದು ನಮ್ಮ ಉದ್ದೇಶ. ಅದಕ್ಕಾಗಿ ಕಾನೂನು ಇರತಕ್ಕದ್ದು. ಆದರೆ ಕಾರಣಾಂತರದಿಂದ ಇವು 4 ಸೂಪರ್‌ಸೀಡ್ ಆಗಿವೆಯೇ ಹೊರತು ಯಾವುದೂ ಕೂಡ ಕಾನೂನು ಮೀರಿ ಆಗಲೇಬೇಕು ಎಂದು ಹಸ್ತಕ್ಷೇಪ ಮಾಡಿದ್ದುದು ಯಾವುದೂ ಇಲ್ಲ. ತಮಗೆ ಗೊತ್ತಿದೆ. ಕೋಲಾರ, ಅದರ ಪರಿಸ್ಥಿತಿ ಬಹಳ ಕೆಟ್ಟದ್ದು ಇತ್ತು. ಕೋಲಾರ ಡಿಸಿಸಿ. ಬ್ಯಾಂಕನ್ನು ಸೂಪರ್‌ಸೀಡ್ ಮಾಡಬೇಕಾದರೆ ಸುಮಾರು 20 ಚಾರ್ಜಸ್ ಅದರ ಮೇಲೆ ಇತ್ತು. ಈಗಾಗಲೇ ಅದರಲ್ಲಿ 16 ಆಪಾದನೆಗಳನ್ನು ಸರಿಪಡಿಸಿದ್ದಾರೆ. ಇನ್ನು 4 ಮಾತ್ರ ಉಳಿದಿವೆ. ಆದರೆ ಅದರ ಅವಧಿ 28-2-94ರವರೆಗೆ ಇದೆ. ಅದೇ ರೀತಿ ಧಾರವಾಡ, 23-8-90ರಲ್ಲಿ ಸೂಪರ್‌ಸೀಡ್ ಆಗಿ 22-8-94ರವರೆಗೆ ಅವಧಿ ಇದೆ. ಧಾರವಾಡದಕ್ಕೂ ಕೂಡ ಸುಮಾರು 6 ಆಪಾದನೆಗಳು ಇವೆ. ಹೀಗೆ ಆಪಾದನೆ ಮೇರೆಗೆ ರಾಯಚೂರಾಗಲಿ, ಧಾರವಾಡವಾಗಲಿ, ಕೋಲಾರವಾಗಲಿ, ಬೆಂಗಳೂರಾಗಲಿ, ಸೂಪರ್‌ಸೀಡ್ ಮಾಡಿರತಕ್ಕದ್ದು. ಇದೇ ಸದನದಲ್ಲಿ ಬೆಂಗಳೂರು ಡಿಸಿಸಿ ಬ್ಯಾಂಕ್ ಬಗ್ಗೆ ಚರ್ಚೆ ನಡೆದದ್ದು ಗೊತ್ತಿದೆ, ಪುನಃ ಅದನ್ನು ಹೇಳಬೇಕಾಗಿಲ್ಲ. ಆ ಕಡೆ ಮತ್ತು ಈ ಕಡೆ ಸದಸ್ಯರು ಸೇರಿ ಕೆಲವು ಚಾರ್ಜಸ್ ಮಾಡಿದ್ದರು. ಕೆಲವು ಚಾರ್ಜಸ್ ಆಧಾರದ ಮೇಲೆ ಸೂಪರ್‌ಸೀಡ್ ಮಾಡಿದ್ದೇ ಹೊರತು ಖುಷಿ ಬಂದ ಹಾಗೆ, ಅಲ್ಲಿನ ಜನರಿಗೆ ತೊಂದರೆ ಕೊಡಬೇಕೆಂದು ಸೂಪರ್‌ಸೀಡ್ ಮಾಡಿಲ್ಲ, ಇನ್ನೊಂದು ಸಂತೋಷದ ಸುದ್ದಿ ಎಂದರೆ, ಇದೇ ಕಂಟಿನ್ಯೂ ಆಗಬೇಕು, ಆಡ್ಮಿನಿಸ್ಟ್ರೇಟರ್ ಮುಂದುವರಿಯಬೇಕೆಂದು ಇಲ್ಲ. ಅಂಕಿ ಅಂಶ ಬೇಕಾದರೆ ನಾನು ಕೊಡುತ್ತೇನೆ. ಬೆಂಗಳೂರು ಡಿಸಿಸಿ ಬ್ಯಾಂಕ್ ಆಡಳಿತ ಮಂಡಲಿಯ ಕೈಯಲ್ಲಿದ್ದಾಗ, ಸೂಪರ್‌ಸೀಡ್ ಆಗುವುದಕ್ಕೆ ಮುಂಚೆ ರಿಕವರಿ ಪರ್ಸೆಂಟೇಜ್ ಹೇಳುತ್ತೇನೆ. ಬೆಂಗಳೂರು 4 ಪರ್ಸೆಂಟ್, ಇವತ್ತು 50 ಪರ್ಸೆಂಟ್ ಇದೆ. ಕೋಲಾರ 90ರಲ್ಲಿ 7 ಪರ್ಸೆಂಟ್ ಇವತ್ತು 45 ಪರ್ಸೆಂಟ್ ಇದೆ. ಧಾರವಾಡ 0.64 ಪರ್ಸೆಂಟ್ ಇತ್ತು, ಇವತ್ತು 48 ಪರ್ಸೆಂಟ್ ಇದೆ. ರಾಯಚೂರು 6 ಪರ್ಸೆಂಟ್ ಇತ್ತು, ಹೋದವರ್ಷ 40 ಪರ್ಸೆಂಟ್ ಇದ್ದರೆ ಇವತ್ತು ಪುನಃ 8 ಪರ್ಸೆಂಟ್‌ಗೆ ನಿಂತಿದೆ. ಅದೇ ರೀತಿ ಅಡ್ವಾನ್ಸಸ್ ಕೂಡ 1990ರಲ್ಲಿ 19 ಲಕ್ಷ ರೂಪಾಯಿಗಳನ್ನು ಬೆಂಗಳೂರಿಗೆ ಕೊಟ್ಟರೆ ಕೋಲಾರಕ್ಕೆ 77 ಲಕ್ಷ, ಧಾರವಾಡಕ್ಕೆ 63 ಲಕ್ಷ, ರಾಯಚೂರಿಗೆ 19 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ.

1992-93ರಲ್ಲಿ ಅಡ್ವಾನ್ಸಸ್ ಮಾಡಿದ್ದು ಬೆಂಗಳೂರಿಗೆ 9 ಕೋಟಿ, ಕೋಲಾರಕ್ಕೆ 6 ಕೋಟಿ, ಧಾರವಾಡಕ್ಕೆ 22 ಕೋಟಿ, ರಾಯಚೂರಿಗೆ 2 ಕೋಟಿ 29 ಲಕ್ಷ ರೂಪಾಯಿಗಳು. ಹೀಗೆ ಸೂಪರ್‌ಸೀಡ್ ಮಾಡಿ ಜಿಲ್ಲಾಧಿಕಾರಿಗಳನ್ನು ಅಲ್ಲಿಗೆ ಆಡಳಿತಾಧಿಕಾರಿಗಳನ್ನಾಗಿ ಹಾಕಿದ್ದೇವೆ. ಅಲ್ಲಿ ಸುಧಾರಣೆಯಾಗಿದೆ. ಸುಧಾರಣೆ ಆಗಿದೆ ಎಂದು ಅವರ ಕೈಯಲ್ಲೇ ಇಡಬೇಕೆಂದು ಇಲ್ಲ. 3-4 ಆಪಾದನೆಗಳು ಸರಿಪಟ್ಟ ಮೇಲೆ ನಾವು ಎಲೆಕ್ಷನ್ ಮಾಡಿಸಿ ಚುನಾಯಿತ ಸದಸ್ಯರ ಕೈಯಲ್ಲಿ ಕೊಡುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ತಾವು ಹೇಳಿದಿರಿ, ಅಧಿಕಾರಿಗಳು ಬಂದ ಮೇಲೆ ಬ್ಯಾಂಕುಗಳು ಬಹಳಷ್ಟು ಸುಧಾರಣೆ ಆಗಿವೆ ಎಂದು. ಮೊದಲು ವಸೂಲಿ

ಸರಿಯಾಗಿ ಆಗುತ್ತಿರಲಿಲ್ಲ. ಹಿಂದಿನ ಅಂಕಿಅಂಶ ನೋಡಿದರೆ ಒಂದು ವರ್ಷ ಕಡಿಮೆ ಆಗಿರಬೇಕು. ಅದಕ್ಕಿಂತ ಮೊದಲು ಚೆನ್ನಾಗಿ ಮಾಡಿದೆ ಅಂದರೆ ಇದರ ಅರ್ಥ ಆಡಳಿತಾಧಿಕಾರಿಗಳನ್ನು ಕೈ ಬಿಟ್ಟರೆ ಚುನಾಯಿತ ಮಂಡಲಿಯವರು ಚೆನ್ನಾಗಿ ಮಾಡುವುದಿಲ್ಲವೆಂಬ ಭಾವನೆ ಉದ್ಭವವಾಗುತ್ತದೆ. ರಾಯಚೂರಿನಲ್ಲಿ ಎಷ್ಟು ವಸೂಲ್ಮಾಡಿದ್ದಾರೆ. ಬೇರೆ ಕಡೆ ಎಷ್ಟು ಮಾಡಿದ್ದಾರೆ? ಕೆಲವು ಕನ್‌ವರ್ಷನ್ ಮಾಡಿದ್ದಾರೆ. ಹಳೇದರವನ್ನು ಕನ್‌ವರ್ಷನ್ ಮಾಡಿದ್ದನ್ನು ಇವರು ವಸೂಲ್ಮಾಡಿ ಶಭಾಶ್‌ಗಿರಿ ಅವರು ತೆಗೆದುಕೊಳ್ಳುವುದಿಲ್ಲ. ಯಾರು ನಿಜವಾಗಿ ವಸೂಲ್ಮಾಡಿದ್ದಾರೆ ಅವರಿಗೆ ಶಭಾಶ್‌ಗಿರಿ ಕೊಡಬೇಕು. ಇಲ್ಲದಿದ್ದರೆ ಈ ಶಭಾಶ್‌ಗಿರಿ ಬರುವುದಿಲ್ಲ. ರೈತರಿಗೆ ಸಾಲ ಕೊಟ್ಟರೆ ತಾನೆ ಅಲ್ಲಿ ಕನ್‌ವರ್ಟ್ ಮಾಡುವುದು ಅಲ್ಲಿ ತೆಗೆದುಕೊಳ್ಳುವುದು. ಸಾಲ ಕೊಡದೆ ವಸೂಲಿ ಎಲ್ಲಿ ಬಂತು? ಅದಕ್ಕೆ ಇದು ಸರಿಯಾದುದಲ್ಲ, ಸೂಪರ್‌ಸೆಷನ್ ಪದ್ಧತಿ ಸರಿಯಾದುದಲ್ಲ. ತಾವು ಚುನಾಯಿತ ಪ್ರತಿನಿಧಿಗಳ ಕೈಯಲ್ಲಿ ಅಧಿಕಾರ ಕೊಡಿ. ಇನ್ನೊಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದೀರಿ, ಅದು ಲಿಖಿತ ಮೂಲಕ ಬಂದಿದೆ. ಕಾನೂನು ತಿದ್ದುಪಡಿ ಮಾಡುತ್ತಿದ್ದೀರಾ ಅಂದರೆ ಇಲ್ಲವೆಂದು ಹೇಳಿಬಿಟ್ಟಿರಿ. ಅದಕ್ಕೆ ಉತ್ತರ ಬಂದಿದೆ, ಅದು ಕೇಳುವುದಲ್ಲ. ಕಾನೂನು ತಿದ್ದುಪಡಿ ಮಾಡುತ್ತೇವೆಂದು ಪತ್ರಿಕೆಗಳಲ್ಲಿ ಕೊಟ್ಟಿದ್ದೀರಿ. ಆದರೆ ಇದರಲ್ಲಿ ಉತ್ತರ ಇದೆ ಉದ್ಭವಿಸುವುದಿಲ್ಲ ಎಂದು. ಅದಕ್ಕೆ 2-2 ನಮೂನೆ ಅಜ್ಞ, ದಯವಿಟ್ಟು ಈ ಸೂಪರ್‌ಸೆಷನ್ ಪದ್ಧತಿ ಬೇಡ. ಇದರಲ್ಲಿ ರಾಜಕೀಯ ಇರಬಾರದು, ಮುಕ್ತವಾಗಿ ಕೆಲಸ ಆಗಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಇವತ್ತು ಹೆಚ್ಚಿಗೆ ರಿಕವರಿ ಆದರೂ ಕೂಡ ಅಡ್ವಾನ್ಸಸ್ ಹೆಚ್ಚಿಗೆಯಾದರೂ ಕೂಡ ನಾವು ಅದನ್ನು ಮುಂದುವರಿಸಬೇಕೆನ್ನತಕ್ಕ ಇಚ್ಛೆಯಿಲ್ಲ. ನಾನು ಅದನ್ನು ಸ್ಪಷ್ಟಪಡಿಸಿದ್ದೇನೆ. ತಾವು ರಾಯಚೂರಿನದು ಹೇಳಿದ್ದೀರ. ರಾಯಚೂರಿನದು ಎಲ್ಲಿ ನಿಲ್ ರಿಕವರಿ ಇತ್ತು ತಾವು ಕೂಡ ಕೇಳಬಹುದು ತಮಗೆ ಅನೇಕ ಫ್ರೆಂಡ್ಸ್ ಇದ್ದಾರೆ. ಒಂದೂವರೆ ಕೋಟಿ ರೂಪಾಯಿಗಳನ್ನು ನಮ್ಮ ಅಧಿಕಾರಿಗಳು ಎರಡು ಮೂರು ತಿಂಗಳಿನಲ್ಲಿ ವಸೂಲಿ ಮಾಡಿದ್ದಾರೆ. ಯಾರು ಇದುವರೆಗೆ ಒಂದು ಪೈಸೆ ಬಿಚ್ಚುತ್ತಿರಲಿಲ್ಲ ಇವತ್ತು ಎಲ್ಲರೂ ಕೂಡ ಕೊಡುತ್ತಿದ್ದಾರೆ. ಒತ್ತಾಯ ಮಾಡಿ ತೆಗೆದುಕೊಳುತ್ತಿದ್ದಾರೆ ಎಂದಲ್ಲ. ಬರೀ 800 ಕುಟುಂಬ ಆರೂವರೆ ಕೋಟಿ ರೂಪಾಯಿ ಸಾಲ ಹೆಚ್ಚು ಕಡಿಮೆಯಾಗಿದೆ. ಇವೆಲ್ಲ ವಿಷಯಗಳಿವೆ, ಅನೇಕ ಸಾರಿ ನಾವು ಸ್ವಲ್ಪ ಹಾರ್ಡ್ ಡಿಸಿಷನ್ ತೆಗೆದುಕೊಳ್ಳಬೇಕಾಗುತ್ತದೆ. ಅನೇಕ ಸಾರಿ ನಾವು ಹಾರ್ಡ್ ಡಿಸಿಷನ್ ತೆಗೆದುಕೊಳ್ಳುವಾಗ ನ್ಯಾಚುರಲಿ ಕೆಲವು ಎಲ್ಲಿ ಆಪಾದನೆಗಳ ಪಟ್ಟಿಯನ್ನು ತಾವು ಕೊಟ್ಟಿದ್ದೀರಿ ನಿಮ್ಮನ್ನು ಹಿಡಿದುಕೊಂಡೆ, ನಿಮ್ಮನ್ನು ಅಂದರೆ ತಾವಲ್ಲ, ಸದಸ್ಯರು ಯಾರೇ ಇರಬಹುದು ಕೊಟ್ಟಾಗ ಅಂತಹ ಆಪಾದನೆಗಳು ಬಂದ ಮೇಲೆ ಅವುಗಳನ್ನು ಸೂಫರ್‌ಸೀಡ್ ಮಾಡಿದ್ದೇವೆಯೇ ಹೊರತಾಗಿ ಖುಷಿಗೋಸ್ಕರ ಅಥವಾ ವಿರೋಧಪಕ್ಷದವರ ಕೈಯಲ್ಲಿದೆ ಬೇರೆ ಪಕ್ಷದವರ ಕೈಯಲ್ಲಿದೆ ಅವರ ಕಡೆಯಿಂದ ತೆಗೆದುಕೊಳ್ಳಬೇಕೆನ್ನುವ ದೃಷ್ಟಿಯಿಂದ ಯಾವುದೂ ಕೂಡ ಮಾಡಲಿಲ್ಲ. ಹಾಗೆ ಮಾಡುವ ಹಾಗೆ ಇಲ್ಲ. ಮತ್ತು ರಾಜ್ಯದ ಹಿತದೃಷ್ಟಿಯಿಂದ ಪರ್ಟಿಕ್ಯುಲರ್‌ಲಿ ನಮ್ಮ ರೈತರ ಹಿತದೃಷ್ಟಿಯಿಂದ ಇದು ಒಳ್ಳೆಯದು ಆಗಬೇಕೆನ್ನುವುದು ನಮ್ಮದು ಇಚ್ಛೆ ಇದೆ. ಚುನಾಯಿತ ಸದಸ್ಯರು ನಿಮ್ಮಲ್ಲಿದ್ದಾರೆ ನಾವು [illegible] ಸೂಪರ್‌ಸೀಡ್ ಮಾಡುವುದಕ್ಕೆ ಹೋಗಿದ್ದೇವೆಯೇ? ಒಳ್ಳೆಯ ಕೆಲಸ ಮಾಡುತ್ತಿದ್ದೀರಿ ನಾವು ನಿಮಗೆ ಶಹಭಾಷ್‌ಗಿರಿ ಕೊಟ್ಟಿದ್ದೇವೆ. ಅನೇಕ ಸಾರಿ ನೀವು ಕೇಳುವಂತಹ ಸಹಕಾರವನ್ನು ಕೊಟ್ಟಿದ್ದೇವೆ. ಎಲ್ಲೆಲ್ಲಿ ಕೆಲಸ ಮಾಡಿಲ್ಲ, ಸಾಮಾನ್ಯವಾಗಿ ಅಲ್ಲಿ ನಾವು ನ್ಯಾಯವಾಗಿ ಕ್ರಮ ತೆಗೆದು ಕೊಳ್ಳಬೇಕಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾಮಿನೇಷನ್ ಮಾಡಿ ನಮ್ಮ ಮೇಲೆ ಹೊರೆ ಏರಿದ್ದೀರಿ. ಷೇರ್ ಹಣವನ್ನು ವಾಪಸು ಕೊಟ್ಟರೆ ಏಕೆ ತೆಗೆದುಕೊಂಡಿದ್ದೀರಿ? ಶಹಭಾಷ್‌ಗಿರಿ ಕೊಟ್ಟ ಮೇಲೆ ಷೇರನು ವಾಪಸು ತೆಗೆದುಕೊಳ್ಳಬಾರದಾಗಿತ್ತು.

ಅಧ್ಯಕ್ಷರು : ತಮಗೆ ಮಂತ್ರಿಗಳು ಶಹಭಾಷ್‌ಗಿರಿ ಕೊಟ್ಟಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಮಾನ್ಯ ಮಂತ್ರಿಗಳು ಹೇಳಿದರು ಬೀದರ್‌ಗೆ ಶಹಭಾಷ್‌ಗಿರಿ ಮಾಡಿದ್ದೇವೆಂದು. ಶಹಭಾಷ್‌ಗಿರಿ ಕೊಟ್ಟ ಮೇಲೆ ಷೇರು ಹಣವನ್ನು ವಾಪಸು ತೆಗೆದುಕೊಳ್ಳಬಾರದಿತ್ತು. ಕಾನೂನು ಪ್ರಕಾರ ನಾಮಿನೇಷನ್ ಮಾಡಿದ್ದೀರಿ. ನಿಮ್ಮ ಸರ್ಕಾರದಲ್ಲಿ ದುಡ್ಡಿಲ್ಲ ದಿವಾಳಿಯಾಗಿದೆ 78 ಲಕ್ಷ ರೂಪಾಯಿ ಕೊಟ್ಟರೆ ವಾಪಸು ಕೊಡಿ ಎಂದು ತೆಗೆದುಕೊಂಡಿದ್ದೀರಿ ಇದು ಯಾವ ನ್ಯಾಯ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಏಕೆ, ಇದನ್ನು ನಾನು ಒಪ್ಪುವುದಿಲ್ಲ, ರಾಜಕೀಯ ಉದ್ದೇಶದಿಂದ 5 ನಾಮಿನೇಷನ್ ಬರುತ್ತವೆಂದು ಹೇಳಿ ಷೇರು ಕ್ಯಾಪಿಟಲ್‌ನ್ನು ರಾತ್ರೋರಾತ್ರಿ ವಾಪಸು ಮಾಡಿದರು. ಒಳ್ಳೆಯ ಉದ್ದೇಶ ಇದ್ದಿದ್ದರೆ ಅವರ ಕಾಲದಲ್ಲಿ ಮಾಡುತ್ತಾ ಇದ್ದರು.

(ಗೊಂದಲ)

ಅಧ್ಯಕ್ಷರು : ಮಾನ್ಯ ಆತ್ಮಾನಂದರವರು ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಎಂ.ಎನ್. ಆತ್ಮಾನಂದ : ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಅಧ್ಯಕ್ಷರು : ಮಾರುಕಟ್ಟೆ ರಾಜ್ಯಮಂತ್ರಿಗಳು ಎಲ್ಲಿ ಹೋದರು? ಅಧಿವೇಶನ ನಡೆಯುತ್ತಿದೆ. ಅವರನ್ನು ಕರೆಯಿಸಿ ಉತ್ತರ ಕೊಡಿಸಲಿಕ್ಕೆ ಎಲ್ಲಿ ಟೈಮ್ ಇದೆ. ಇನ್ನು ಒಂದೆರಡು ಪ್ರಶ್ನೆಗಳು ಬಾಕಿ ಇವೆ.

ಶ್ರೀ ಪಿ.ಸಿ. ಸಿದ್ಧನಗೌಡರ್ : ಪದೇ ಪದೇ ಹೀಗೆ ಆಗುತ್ತಿದೆ. ಮಂತ್ರಿಗಳು ಇರುವುದಿಲ್ಲ.

ಕುಡಿಯುವ ನೀರಿನ ಯೋಜನೆಗಳಿಗೆ ಕೇಂದ್ರದ ನೆರವು

274 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರಕಾರದಿಂದ ರಾಜ್ಯ ಸರ್ಕಾರಕ್ಕೆ 1993-94ನೇ ಸಾಲಿನಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ಬರುತ್ತಿರುವ ಹಣವನ್ನು ಕಡಿಮೆ ಮಾಡಲಾಗಿದೆಯೇ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯಮಂತ್ರಿಗಳು ಕೇಂದ್ರಸರ್ಕಾರದವರು ಈ ರಾಜ್ಯಕ್ಕೆ ಕುಡಿಯುವ ನೀರಿಗೆ ಕೊಡಬೇಕಾಗಿರತಕ್ಕ ಹಣವನ್ನು ಕಡಿಮೆ ಮಾಡಿಲ್ಲವೆಂದು ಹೇಳಿದ್ದಾರೆ. ಹಾಗಾದರೆ ಕಳೆದವರ್ಷ 1992-93ನೇ ಸಾಲಿನಲ್ಲಿ ಎಷ್ಟು ಹಣವನ್ನು ಕೊಟ್ಟಿದ್ದಾರೆ, 1993-94ನೇ ಸಾಲಿನಲ್ಲಿ ಎಷ್ಟು ಹಣವನ್ನು ಕೊಡುತ್ತಿದ್ದಾರೆನ್ನುವುದನ್ನು ನಾನು ಉಪಪ್ರಶ್ನೆಯ ರೂಪದಲ್ಲಿ ಕೇಳುತ್ತಿದ್ದೇನೆ, ಇದು ಮೊದಲನೆಯದು. ಎರಡನೆಯದು ಜಿಲ್ಲಾಪರಿಷತ್‌ನವರು ಸರ್ಕಾರಕ್ಕೆ ಕಳುಹಿಸಿರತಕ್ಕ ಕರಡು ಯೋಜನೆ ಏನಿದೆ ಅದರಲ್ಲಿ ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಗ್ಗೆ ಹೇಳಬೇಕಾದರೆ ಮಿನಿವಾಟರ್ ಸಪ್ಲೈ ಸ್ಕೀಮ್ ಯಾವ್ಯಾವುದು ತೆಗೆದುಕೊಂಡಿದ್ದರು ಅದನ್ನು ತೆಗೆದುಕೊಳ್ಳಬೇಡಿಯೆಂದೂ, ಒಂದೊಂದು ಕ್ಷೇತ್ರದಲ್ಲಿ ಒಂದೊಂದು ಮಾತ್ರ ತೆಗೆದುಕೊಳ್ಳಬೇಕೆಂದೂ ಹೇಳಿದ್ದಾರೆ, ಇದಕ್ಕೆ ಕಾರಣವೇನು?

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಈಗ ಕೇಂದ್ರದಿಂದ ನಮ್ಮ ಕುಡಿಯುವ ನೀರಿನ ಕಾರ್ಯಕ್ರಮಗಳಿಗೆ 40 ಕೋಟಿ ರೂಪಾಯಿ ಬರಬೇಕೆಂದು ನಮ್ಮ ಬಜೆಟ್‌ನಲ್ಲಿ ಸೇರಿಸಿದ್ದೇವೆ. 108 ಕೋಟಿ ರೂಪಾಯಿ ಕಾರ್ಯಕ್ರಮ ಏನಿದೆ ಬಜೆಟ್‌ನಲ್ಲಿ ಅದರಲ್ಲಿ 40 ಕೋಟಿರೂಪಾಯಿಯನ್ನು ಕೇಂದ್ರದಿಂದ ನಿರೀಕ್ಷೆ ಮಾಡಿ ನಾವು ಸೇರಿಸಿರತಕ್ಕ ಹಣ ಅದರಲ್ಲಿ ಈಗಾಗಲೇ 35ಕೋಟಿ ರೂಪಾಯಿ ಬಂದಿದೆ; ಮತ್ತು 23 ಕೋಟಿ ಅನಂತರ 12 ಕೋಟಿ ನಾವು ಕೊಡುತ್ತೇವೆಂದು ಒಪ್ಪಿಕೊಂಡು ಕೊಡುತ್ತಾರೆ ಅಂದರೆ ನಮಗೆ 35 ಕೋಟಿ ರೂಪಾಯಿ ಬರುತ್ತದೆ. ಅದರಲ್ಲಿ ಅನುಮಾನವೇನೂ ಇಲ್ಲ, ಏಕೆಂದರೆ ಈಗಾಗಲೇ 23 ಕೋಟಿ ರೂಪಾಯಿ ಬಂದಿದೆ. ಅನಂತರ 6 ಕೋಟಿ ಅಂದರೆ 5 ಕೋಟಿ 85 ಲಕ್ಷ ರಿಲೀಸ್ ಮಾಡಿ ನಮಗೆ ತಿಳಿಸಿದ್ದಾರೆ. ಅದರಲ್ಲಿ ಅರ್ಧ ದುಡ್ಡು ಖರ್ಚಾದ ಮೇಲೆ ಯುಟಿಲೈಸೇಷನ್ ಸರ್ಟಿಫಿಕೇಟ್ ಕಳುಹಿಸಿದ ಮೇಲೆ ಇನ್ನು 5 ಕೋಟಿ 85 ಲಕ್ಷ ನಾವು ಕೊಡುತ್ತೇವೆಂದು ಕೇಂದ್ರದವರು ಒಪ್ಪಿದ್ದಾರೆ. ಆ ಹಣ ಬರುತ್ತದೆಂದು ನಾವು ಇಟ್ಟುಕೊಳ್ಳಬಹುದು. ಯುಟಿಲೈಸೇಷನ್ ಸರ್ಟಿಫಿಕೇಟನ್ನು ನಾವು ಈಗಾಗಲೇ ಕಳುಹಿಸಿದ್ದೇವೆ. ಆದಕಾರಣ 5 ಕೋಟಿ 85 ಲಕ್ಷ, ಇನ್ನೊಂದು 5 ಕೋಟಿ 85 ಲಕ್ಷ ಹೆಚ್ಚು ಕಡಿಮೆ 12ಕೋಟಿ ರೂಪಾಯಿ ಬರುತ್ತದೆ. ಆಗಲೇ ಬಂದಿರತಕ್ಕದ್ದು 23 ಕೋಟಿ, ಇದಕ್ಕೆ 12ಕೋಟಿ ರೂಪಾಯಿ ಸೇರಿಸಿದರೆ 35 ಕೋಟಿಯಾಗುತ್ತದೆ. ನಮ್ಮ ಬಜೆಟ್‌ನಲ್ಲಿ ನಾವು 40 ಕೋಟಿ ರೂಪಾಯಿ ತೋರಿಸಿದ್ದೇವೆ. ಆದಕಾರಣ ಕುಡಿಯುವ ನೀರಿನ ಕಾರ್ಯಕ್ರಮಕ್ಕೆ ಯಾವುದೇ ಅನಾಹುತ ಅಥವಾ ಧಕ್ಕೆ ಉಂಟಾಗುವುದಿಲ್ಲವೆಂದು ನಾನು ಸ್ಪಷ್ಟಪಡಿಸುತ್ತೇನೆ. ಮಾನ್ಯ ಸಿಂಧ್ಯಾರವರ ಕ್ಷೇತ್ರದಲ್ಲಿ ಎಷ್ಟೋ ಮಿನಿ ವಾಟರ್‌ಸಪ್ಲೈ ಸ್ಕೀಮ್‌ಗಳನ್ನು ನಾವು ಮಾಡಿದ್ದೇವೆ. ಈ ವರ್ಷ 1600ಮಿನಿ ವಾಟರ್‌ಸಪ್ಲೈ ಸ್ಕೀಮ್‌ಗಳನ್ನು ಪೂರೈಸಬೇಕು. ಮತ್ತೆ ಹೊಸದಾಗಿ 1600 ಸ್ಕೀಮ್‌ಗಳನ್ನು ಪ್ರಾರಂಭ ಮಾಡಲಿಕ್ಕೆ ಸಾಧ್ಯವಿದೆ. ನಾನು ಹೇಳುತ್ತಿರುವುದೇನೆಂದರೆ, ಸಾಕಷ್ಟು ಕಾರ್ಯಕ್ರಮವನ್ನು ಮಿನಿವಾಟರ್ ಸಪ್ಲೈ ಸ್ಕೀಮ್‌ಗಳನ್ನು ಮಾರ್ಚಿಯೊಳಗೆ 40 ಕೋಟಿ ರೂಪಾಯಿ ಏನು ಕೇಂದ್ರದಿಂದ ಬರುತ್ತಿದೆ. ನಾವು ಬಜೆಟ್‌ನಲ್ಲಿ ಅಂದಾಜು ಮಾಡಿದ್ದೇವೆ. 108 ಕೋಟಿ ರೂಪಾಯಿ ನೀರಿನ ಕಾರ್ಯಕ್ರಮ ಏನಿದೆ ಅದರಲ್ಲಿ 40 ಕೋಟಿ ರೂಪಾಯಿ ಅವರಿಂದ ಬರುತ್ತದೆಂದು ನಾವು ಅಂದಾಜು ಇಟ್ಟು ಕೊಂಡಿದ್ದೇವೆ. ಅದರಲ್ಲಿ 23 ಕೋಟಿ ರೂಪಾಯಿ ಈಗಾಗಲೇ ಬಂದಿದೆ. ಅದು ಅಲ್ಲದೆ 5 ಕೋಟಿ 85 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. 5 ಕೋಟಿ 85 ಲಕ್ಷಕ್ಕೆ ಯುಟಿಲೈಸೇಷನ್ ಸರ್ಟಿಫಿಕೇಟ್ ಕಳುಹಿಸಿದ ನಂತರ ಇನ್ನು 5 ಕೋಟಿ 85 ಲಕ್ಷ ನಾವು ಕಳುಹಿಸುತ್ತೇವೆಂದು ಹೇಳಿದ್ದಾರೆ. ಅದು ಅಲ್ಲದೆ ನಮ್ಮ ಬಜೆಟ್‌ನಲ್ಲಿ ನಮ್ಮ ಕಾರ್ಯಕ್ರಮದಲ್ಲಿ ವಿಶೇಷವಾಗಿ ಹೆಚ್ಚಿನ ಆದ್ಯತೆಯನ್ನು ಕುಡಿಯುವ ನೀರಿಗೆ ಕೊಟ್ಟಿದ್ದೇವೆ. ನಾನು ಎಷ್ಟೋ ಜಿಲ್ಲೆಗಳಿಗೆ ಹೋಗಿ ಪೈಪ್ಡ್‌ವಾಟರ್‌ಸಪ್ಲೈ ಸ್ಕೀಮ್, ಮಿನಿವಾಟರ್ ಸಪ್ಲೈ ಸ್ಕೀಮ್, ಬೋರ್‌ವೆಲ್ ಸ್ಕೀಮ್ ಎಷ್ಟು ಈ ವರ್ಷ ಮಾಡಿ ಪೂರೈಸಲಿಕ್ಕೆ ಸಾಧ್ಯ? ಪೂರೈಸುವುದಕ್ಕೆ ಸಾಧ್ಯವಾಗದಿದ್ದರೆ ಹೊಸದಾಗಿ ಪ್ರಾರಂಭ ಮಾಡಲಿಕ್ಕೆ ಸಾಧ್ಯವೆನ್ನುವ ಪಟ್ಟಿಯನ್ನು ನಾವು ಮಾಡಿದ್ದೇವೆ. ಇದು ಬಹಳ ದೊಡ್ಡ ಕಾರ್ಯಕ್ರಮ. ಇವತ್ತು ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿದೆ. ನಾವು ಮಾಡಿರತಕ್ಕದ್ದನ್ನು ಹೇಳುವುದು. ಮಾರ್ಚಿ ತಿಂಗಳಿನೊಳಗಡೆ ಮುಗಿಸುವುದಕ್ಕೆ ಆಗುತ್ತದೆಂದು ನಾನು ಹೇಳುತ್ತಿಲ್ಲ. ಆ ಬೃಹತ್ ಪ್ರಯತ್ನ ಏನು ನಡೆದಿದೆ ಅದು ತೃಪ್ತಿಕರವಾಗಿ ನಡೆದಿದೆ. ಕೇಂದ್ರದಿಂದ ನಮಗೆ ಇದರ ಬಗ್ಗೆ ಅಷ್ಟೊಂದು ತೊಂದರೆಯೇನೂ ಉಂಟಾಗಿಲ್ಲ. ನಾವು ನಿರೀಕ್ಷೆ ಮಾಡಿದಷ್ಟು ಹಣ ಅಲ್ಲಿಂದ ಬಂದಿರಲಿಕ್ಕೆ ಇಲ್ಲ. ಆದರೆ ಕಾರ್ಯಕ್ರಮಕ್ಕೆ ಧಕ್ಕೆ ಬರುವುದಿಲ್ಲ.

ಶ್ರೀ ಪಿ.ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಮಟ್ಟಿಗೆ ಮಾನ್ಯ ಮಂತ್ರಿಗಳು ಮಾಡಿರತಕ್ಕ ಕೆಲಸಗಳಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಈ ಪ್ರಶ್ನೆಯನ್ನು ಏಕೆ ಕೇಳಿದ್ದೇನೆಂದರೆ, ನಮ್ಮ ಜಿಲ್ಲಾಪರಿಷತ್‌ನವರು ಸರ್ಕಾರಕ್ಕೆ

ಏನು ಕಳುಹಿಸಿದ್ದಾರೆಂದರೆ ಕ್ಷೇತ್ರವಾರು ಒಂದೊಂದು ಸ್ಕೀಮ್‌ಗಳನ್ನು ತೆಗೆದುಕೊಳ್ಳಬೇಕೆಂದು ಮುಖ್ಯಕಾರ್ಯದರ್ಶಿಯವರು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ ಈ ವರ್ಷ 1600 ಮಿನಿ ವಾಟರ್‌ಸಪ್ಲೈ ಸ್ಕೀಮ್‌ಗಳನ್ನು ಮತ್ತೆ ನಾವು ತೆಗೆದುಕೊಳ್ಳುತ್ತಿದ್ದೇವೆಂದು ಹೇಳಿ ಅದಕ್ಕೆ ಕೇಂದ್ರ ಸರ್ಕಾರದಿಂದ ಹಣ ಬಂದಿದೆಯೇ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ : ಜಿಲ್ಲೆಯಲ್ಲಿ ಡೆವಲಪ್‌ಮೆಂಟ್ ಪ್ರೋಗ್ರಾಮ್‌ಗಳನ್ನು ರಿವ್ಯೂ ಮಾಡಿದಾಗ ಹಣ ಸಂಗ್ರಹಿಸಿ ಎಷ್ಟು ಮಾಡಲಿಕ್ಕೆ ಸಾಧ್ಯವೆಂದು ನಾವು ಚರ್ಚೆ ಮಾಡಿ ಒಂದು ಅಂದಾಜು ಪಟ್ಟಿಯನ್ನು ತಯಾರು ಮಾಡಿ ಇಷ್ಟು ಮಾಡಲಿಕ್ಕೆ ಸಾಧ್ಯವಾಗದೆಂದು ಹೇಳಿ ನಮ್ಮ ಅಧಿಕಾರಿಗಳು ಒಪ್ಪಿರತಕ್ಕ ಸಂಖ್ಯೆ. ಅದರ ಪ್ರಕಾರ ನನಗೆ ಜ್ಞಾಪಕ ಇದ್ದಹಾಗೆ, ಈ ಪ್ರಶ್ನೆ ಈಗ ಸದನದಲ್ಲಿ ಇಲ್ಲ, 1600 ಮಿನಿವಾಟರ್ ಸಪ್ಲೈ ಸ್ಕೀಮ್‌ಗಳನ್ನು ಈ ವರ್ಷ ಪೂರ್ತಿಮಾಡಿ ಇನ್ನೊಂದು 1600ಹೊಸ ಮಿನಿವಾಟರ್ ಸಪ್ಲೈ ಸ್ಕೀಮ್‌ಗಳನ್ನು ಪ್ರಾರಂಭ ಮಾಡಲಿಕ್ಕೆ ಸಾಧ್ಯವಾಗಬಹುದು ಮಾಡುತ್ತೇವೆ ಎನ್ನುವ ಅಂದಾಜು ಮಾಡಿದ್ದಾರೆ. ನಮ್ಮಲ್ಲಿರುವ ಹಣದಲ್ಲಿ 1600 ಸ್ಕೀಮ್‌ಗಳನ್ನು ಇದೇ ವರ್ಷ ಪೂರೈಸುವುದಕ್ಕೆ ಸಾಧ್ಯವಿದೆ. ತಮಗೆ ಗೊತ್ತಿರುವ ಹಾಗೆ ಮಿನಿವಾಟರ್ ಸಪ್ಲೈ ಸ್ಕೀಮ್‌ಗಳನ್ನು ಪೂರೈಸುವುದಕ್ಕೆ ಸಾಮಾನ್ಯವಾಗಿ ಎರಡು ವರ್ಷ ಬೇಕಾಗುತ್ತದೆ. ಹಾಗೆ ಅಂದತಕ್ಷಣ ಅದನ್ನು ಪ್ರಾರಂಭ ಮಾಡಬಾರದೆಂದು ನಾನು ಹೇಳಲಿಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿ 6-7 ಸಾವಿರ ಮಿನಿ ವಾಟರ್‌ಸಪ್ಲೈ ಸ್ಕೀಮ್‌ಗಳು ಈಗಾಗಲೇ ಪೂರ್ತಿಯಾಗಿವೆ.

ಅದಲ್ಲದೆ, ಹೊಸದಾಗಿ 1600 ಸ್ಕೀಮ್ಸ್‌ನ್ನು ಈ ವರ್ಷ ಪೂರೈಸುವುದಾದರೆ, ಹೊಸದಾಗಿ 1600 ಸ್ಕೀಮ್ಸ್‌ನ್ನು ಪ್ರಾರಂಭ ಮಾಡುವುದಾದರೆ, ಇದು ಒಂದು ದೊಡ್ಡ ರಚನಾತ್ಮಕವಾದ ಕಾರ್ಯಕ್ರಮ, ತಾವು ಸಹಕರಿಸಬೇಕು.

ಗ್ರಾಮಗಳಲ್ಲಿ ವಿಶೇಷ ಮಾದರಿಯ ಶೌಚಾಲಯಗಳು.

8 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) *ಗ್ರಾಮೀಣ ಅಭಿವೃದ್ಧಿಗೆ ಸರ್ಕಾರ ಹಾಕಿಕೊಂಡಿರುವ ಯೋಜನೆಗಳೇನು ?*

ಆ) *ಪ್ರತಿ ಹಳ್ಳಿಗಳಲ್ಲಿ ಹೆಂಗಸರಿಗೆ ವಿಶೇಷ ಮಾದರಿ ಶೌಚಾ ಸ್ಥಳವನ್ನು ಕಟ್ಟಲು ಸರ್ಕಾರ ನಿರ್ಧರಿಸಿದೆಯೆ ?*

ಇ) *ಅಂತಹ ಶೌಚ ಸ್ಥಳದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?*

ಶ್ರೀ ಎಂ.ವೈ. ಘೋರ್ಪಡೆ : (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಗ್ರಾಮೀಣಾಭಿವೃದ್ಧಿಗೆ ಸರ್ಕಾರವು ಹಾಕಿಕೊಂಡಿರುವ ಯೋಜನೆಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ಕೊಟ್ಟಿದೆ.

ಆ) ಹೆಂಗಸರಿಗೆ ಮಾತ್ರ ಶೌಚಾಲಯಗಳನ್ನು ಮಂಜೂರು ಮಾಡುವ ಬಗ್ಗೆ ಅನ್ವೇಷಿಸಲು ಜಿಲ್ಲಾಪಂಚಾಯತಿಗಳಿಗೆ ಹೇಳಲಾಗಿದೆ.

ಇ) ಹೌದು.

ಶ್ರೀ ವಾಟಾಳ್ ನಾಗರಾಜ್ ಅವರು ಮಂಡಿಸಿರುವ ವಿಧಾನಸಭೆ ಪ್ರಶ್ನೆ ಸಂಖ್ಯೆ.8ರ ಅನುಬಂಧ. ಗ್ರಾಮೀಣಾಭಿವೃದ್ಧಿ ಯೋಜನೆಯಡಿಯಲ್ಲಿ ಸರ್ಕಾರವು ತೆಗೆದುಕೊಂಡಿರುವ ಕಾರ್ಯಕ್ರಮಗಳು.

1. ಸಾಮಾನ್ಯ ಶಿಕ್ಷಣ
2. ವಯಸ್ಕರ ಶಿಕ್ಷಣ
3. ಕ್ರೀಡಾ ಕಾರ್ಯಕ್ರಮ ಮತ್ತು ಯುವಜನಸೇವೆ.
4. ವೈದ್ಯಕೀಯ ಮತ್ತು ಜನಾರೋಗ್ಯ
5. ಭಾರತೀಯ ವೈದ್ಯ ಪದ್ಧತಿ
6. ಕುಟುಂಬ ಕಲ್ಯಾಣ
7. ನೀರು ಪೂರೈಕೆ ಮತ್ತು ನೈರ್ಮಲ್ಯ
8. ಹರಿಜನ ಮತ್ತು ಗಿರಿಜನ ಕಲ್ಯಾಣ
9. ವಿಶೇಷ ಘಟಕ ಯೋಜನೆ
10. ಹಿಂದುಳಿದ ವರ್ಗಗಳ ಕಲ್ಯಾಣ
11. ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ
12. ಪೌಷ್ಟಿಕ ಆಹಾರ
13. ವ್ಯವಸಾಯ
14. ತೋಟಗಾರಿಕೆ
15. ಭೂಸಾರ ಮತ್ತು ಜಲ ರಕ್ಷಣೆ
16. ಪಶುಸಂಗೋಪನೆ
17. ಮೀನುಗಾರಿಕೆ
18. ಅರಣ್ಯ
19. ಸಹಕಾರ
20. ಕಾರ್ಮಿಕ ಉದ್ಯೋಗ -ಜೀತದಾರರ ಪುನರ್ವಸತಿ
21. ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು
    ಅ) ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ
    ಆ) ಟ್ರೈಸಂ ತರಬೇತಿ
    ಇ) ಗ್ರಾಮೀಣ ಪ್ರದೇಶಗಳ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ
    ಈ) ಬರ ಪೀಡಿತ ಪ್ರದೇಶಗಳ ಯೋಜನೆ
    ಉ) ಗ್ರಾಮಿಣ ಇಂಧನ ಸಮಗ್ರ ಯೋಜನಾ ಕಾರ್ಯಕ್ರಮ
22. ಭೂ ಸುಧಾರಣೆ

ಅ) ಜವಾಹರ್ ರೋಜಗಾರ್ ಯೋಜನೆ (1 ಮತ್ತು 11)

ಆ) ಉದ್ಯೋಗ ಭರವಸೆ ಯೋಜನೆ

24. ಇತರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು
    ಅ) ಕೃಷಿ ಉತ್ಪಾದನೆ ಹೆಚ್ಚಿಸಲು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೆರವು.
    ಆ) ಪಶ್ಚಿಮ ಘಟ್ಟ ಪ್ರದೇಶಗಳ ಸಮಗ್ರ ಅಭಿವೃದ್ಧಿ.
25. ಸಣ್ಣ ನೀರಾವರಿ

26. ಗ್ರಾಮೋದ್ಯಮ ಮತ್ತು ಚಿಕ್ಕಘಟ್ಟ ಉದ್ಯಮ
27. ರೇಷ್ಮೆ
28. ರಸ್ತೆ ಮತ್ತು ಸೇತುವೆಗಳು
29. ಸಚಿವಾಲಯ ಆರ್ಥಿಕ ಸೇವೆಗಳು - ಜಿಲ್ಲಾ ಯೋಜನಾ ಘಟಕಗಳು
30. ಗಿರಿಜನ ಉಪಯೋಜನೆ
31. ಗ್ರಾಮೋದ್ಯೋಗ ಮತ್ತು ಚಿಕ್ಕಪುಟ್ಟ ಉದ್ಯಮ ಶೈಮೊಗ್ಗ
32. ಗೃಹ ನಿರ್ಮಾಣ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದಂಥ ಪ್ರಶ್ನೆ. ಮಹಿಳೆಯರಿಗೆ ಶೌಚಸ್ಥಳಗಳನ್ನು ನಿರ್ಮಾಣ ಮಾಡಲು ಪ್ರತಿ ಹಳ್ಳಿಯಲ್ಲಿ ಒಂದು ವಿಶೇಷವಾದ ಯೋಜನೆಯನ್ನು ಹಾಕಿಕೊಳ್ಳುತ್ತೀರಾ ಎಂದು ನಾನು ಸರ್ಕಾರವನ್ನು ಕೇಳಿದ್ದೇನೆ. ಇದರ ಹಿಂದೆ ಇರತಕ್ಕ ಉದ್ದೇಶವೇನು, ಸ್ವತಂತ್ರ ಬಂದಾಗಿನಿಂದ ಇಲ್ಲಿಯವರೆಗೂ, ಮಹಿಳೆಯರಿಗೆ ವಿಶೇಷವಾದ ಈ ಶೌಚಸ್ಥಳಗಳು ಎಲ್ಲೂ ಇಲ್ಲ. ಈ ವಿಚಾರ ತಮಗೂ ಗೊತ್ತಿದೆ, ಈ ಸದನದ ಎಲ್ಲಾ ಸದಸ್ಯರಿಗೂ ಗೊತ್ತಿದೆ. ಸಂಜೆ 6 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗಿನ ಕತ್ತಲಲ್ಲಿ ಬೇರೆ ಪಕ್ಕದಲ್ಲಿ ಅವರು ಹೋಗಬೇಕು. ಅದನ್ನು ಬಿಟ್ಟರೆ, ಮತ್ತೆ ರಾತ್ರಿ ಬೇಲಿ ಪಕ್ಕದಲ್ಲಿ ಕುಳಿತುಕೊಳ್ಳಬೇಕು. ಅವರಿಗೆ ಮಾತ್ರ ಸ್ವತಂತ್ರ ಎನ್ನತಕ್ಕಂತಾದ್ದು ಇಲ್ಲ. ನಾವು ಧಾರಾಳವಾಗಿ ಸ್ವತಂತ್ರದ ಬಗ್ಗೆ ಮಾತನಾಡುತ್ತಿದ್ದೇವೆ. ಆದ್ದರಿಂದ, ವಿಶೇಷವಾಗಿ ಇಡೀ ರಾಜ್ಯದ, ಪ್ರತಿ ಹಳ್ಳಿಗಳಲ್ಲೂ ಮಹಿಳೆಯರಿಗಾಗಿ ವಿಶೇಷವಾದಂಥ ಶೌಚಸ್ಥಳವನ್ನು ಕಟ್ಟುವುದಕ್ಕೆ ಒಂದು ಹೊಸ ಯೋಜನೆಯನ್ನು ತಾವು ಹಾಕುತ್ತೀರಾ? ಆ ಯೋಜನೆಯನ್ನು ಈ ವರ್ಷದಿಂದಲೇ ಪ್ರಾರಂಭ ಮಾಡುತ್ತೀರಾ? ಇದು ಕೇವಲ ಒಂದು ಹಳ್ಳಿ, ಎರಡು ಹಳ್ಳಿಗೆ ಮಾಡತಕ್ಕಂಥಾದ್ದಲ್ಲ. ಸಮಗ್ರವಾಗಿ ಇದು ಕರ್ನಾಟಕದಲ್ಲೇ ಬರಬೇಕು. ಅಂತಹ ಶೌಚಸ್ಥಳ ಯಾವ ರೀತಿ ಇರಬೇಕೆಂದರೆ, ಮಾದರಿಯಾಗಿರಬೇಕು, ನೀರಿನ ವ್ಯವಸ್ಥೆ ಇರಬೇಕು, ಬಹಳ ಉತ್ತಮವಾದಂಥ ವ್ಯವಸ್ಥೆ ಇರಬೇಕು. ಇದನ್ನು ಮಾಡುವುದಕ್ಕೆ ತಾವೇನು ಕ್ರಮವನ್ನು ಕೈಗೊಂಡಿದ್ದೀರಿ. ಏಕೆಂದರೆ, ಸ್ವತಂತ್ರ ಬಂದಂದಿನಿಂದ, ಈ ವಿಚಾರದಲ್ಲಿ ಮಹಿಳೆಯರನ್ನು ನಾವು ಕಡೆಗಾಣಿಸಿದ್ದೇವೆ. ಆದ್ದರಿಂದ, ನಾನು ತಮಗೆ ಏನನ್ನು ಕೇಳುತ್ತಿದ್ದೇನೆಂದರೆ, ಎಲ್ಲರೂ ನೋಡತಕ್ಕಂಥ ಇದೊಂದು ಕರುಣಾಜನಕವಾದಂಥ, ಚಿಂತಾಜನಕವಾದಂಥ ಪರಿಸ್ಥಿತಿ. ಈ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಸಮಗ್ರವಾದಂಥ ಕಾರ್ಯಕ್ರಮವನ್ನು ನೀವೇನು ಹಾಕಿಕೊಂಡಿದ್ದೀರಿ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಇನ್ನೊಂದು ಇಂಥಾದ್ದೆ ಪ್ರಶ್ನೆಗೆ ಉತ್ತರ ಕೊಡುವಾಗ, ಮಾನ್ಯ ವಾಟಾಳ್ ನಾಗರಾಜರು, ಸಭೆಯಲ್ಲಿ ಇರಲಿಲ್ಲ. ಆಗ ನಾನು ಹೇಳಿದೆ, ಇಂತಹ ಕಾರ್ಯಕ್ರಮಕ್ಕೆ ಹಣದ ಅಭಾವ ಅಷ್ಟೊಂದು ಇಲ್ಲ. ಇದನ್ನು ನಾವು ಆಸಕ್ತಿಯಿಂದ ಮಾಡಬೇಕಾಗುತ್ತದೆ. ಮತ್ತೆ ಕೆಲವು ಕಡೆ ಮನಸ್ಸಿನ ಅಭಾವ, ವಿಲ್ ಪವರ್ ಕಡಿಮೆ ಇರಬಹುದು. ಇದರ ಬಗ್ಗೆ ನನಗೆ ಪೂರ್ತಿ ಸಹಾನುಭೂತಿ ಇದೆ. ನನ್ನ ಅಭಿಪ್ರಾಯ ಕೂಡ ಅದೇ ಇದೆ. ಇವತ್ತು ಹೆಣ್ಣು ಮಕ್ಕಳಿಗೋಸ್ಕರ ಶೌಚಾಲಯಗಳನ್ನು, ಇಡೀ ಕರ್ನಾಟಕದಲ್ಲಿ ಹೆಚ್ಚಿನ ರೀತಿಯಲ್ಲಿ ಮಾಡಬೇಕು. ಇದಕ್ಕೋಸ್ಕರ ಇವತ್ತು ಇಂಡಿವಿಜುಯಲ್ ಶೌಚಾಲಯಗಳಲ್ಲದೇ, ಕಮ್ಯುನಿಟಿ ಶೌಚಾಲಯಗಳನ್ನು ಮಾಡಿ, ಒಂದು ಜಿಲ್ಲಾಪರಿಷತ್ ಇಂಜಿನಿಯರಿಂಗ್ ವಿಭಾಗಕ್ಕೆ, ಒಂದಾದರೂ ಮಾದರಿಯಾದುದನ್ನು ಮಾಡಿ ತೋರಿಸಿ, ನಾವು ಬೇಕಾದಷ್ಟು ಹಣ ಕೊಡುತ್ತೇವೆಂದು ಹೇಳಿದ್ದೇವೆ. ಇದೇ ಪ್ರಕಾರ ಈಗಾಗಲೇ 58 ಶೌಚಾಲಯಗಳನ್ನು ಅವರು ಪ್ರಾರಂಭ ಮಾಡಿದ್ದಾರೆ. ಅದರಲ್ಲಿ 11 ಶೌಚಾಲಯಗಳನ್ನು ಪೂರ್ತಿ ಮಾಡಿದ್ದಾರೆ. ಇದು ಅಂಕಿಸಂಖ್ಯೆಗಳ ಪ್ರಶ್ನೆ ಅಲ್ಲ. ಇದೇನೆಂದರೆ, ಎಲ್ಲೆಲ್ಲಿ ಮಹಿಳೆಯರಿಗೆ ಪ್ರತ್ಯೇಕವಾಗಿ

ಶೌಚಾಲಯಗಳು ಬೇಕೋ ಅಂತಹ ಶೌಚಾಲಯಗಳನ್ನು ಮಾಡಿ, ಅವರು ನೋಡಿಕೊಳ್ಳಬೇಕಾಗುತ್ತದೆ. ನೀರಿನ ವ್ಯವಸ್ಥೆ ಮಾಡಬೇಕಾಗುತ್ತದೆ, ನೀರಿನ ವ್ಯವಸ್ಥೆ ಬಹಳ ಮುಖ್ಯ. ಮತ್ತೆ ಇದರ ಅವಶ್ಯಕತೆ ಅವರ ಮನಸ್ಸಿಗೆ ನಾಟುತ್ತದೆ. ಏಕೆಂದರೆ, ಕಾಲ ಬಹಳ ಬದಲಿಯಾಗಿದೆ. ಹಿಂದೆ, ನಮ್ಮ ಹಳ್ಳಿ ಜನ ಗುಡ್ಡಕ್ಕೆ ಯಾವ ರೀತಿ ಹೋಗುತ್ತಿದ್ದರು, ಆ ರೀತಿ ಹೆಣ್ಣು ಮಕ್ಕಳು, ಗಂಡು ಮಕ್ಕಳು ಇವತ್ತು ಹೋಗುವುದು ಬಹಳ ಕಷ್ಟವಿದೆ. ಅವರ ಮಾನ ಮರ್ಯಾದೆಗೆ ಧಕ್ಕೆ ಬರುವಂತಹ ಪರಿಸ್ಥಿತಿ ಇದ್ದಾಗ, ಮಹಿಳೆಯರ ಶೌಚಾಲಯಗಳೇನಿದೆ ಅದಕ್ಕೆ ಬಹಳಷ್ಟು ಆದ್ಯತೆಯನ್ನು ನಾನಂತೂ ವೈಯಕ್ತಿಕವಾಗಿ, ಮಂತ್ರಿಯಾಗಿ ಕೊಡಲಿಕ್ಕೆ ತಯಾರಿದ್ದೇನೆ. ವಾಟಾಳ್ ನಾಗರಾಜ್‌ರವರು ಅಂತಹ ಒಂದು ಕಾರ್ಯಕ್ರಮ ಹಾಕಿಕೊಂಡು ಅವರದೇ ಕ್ಷೇತ್ರದಲ್ಲಿ ಎಷ್ಟು ಕಡೆ ಇಂತಹ ಶೌಚಾಲಯಗಳನ್ನು ಮಾಡಬೇಕೆಂಬುದನ್ನು ತೋರಿಸಿಕೊಟ್ಟರೆ, ನಾನು ಅವರ ಜೊತೆ ಹೋಗಿ ಮಾದರಿ ಶೌಚಾಲಯಗಳನ್ನು ಮಾಡಿ, ಇಡೀ ಕರ್ನಾಟಕದಲ್ಲಿ ಅದರ ಬಗ್ಗೆ ಪ್ರಚಾರವಾಗಬೇಕಾಗಿದೆ. ಇದು ಬರೀ ವಾಟಾಳ್ ನಾಗರಾಜ್‌ರಿಗೆ ಸಂಬಂಧಪಟ್ಟ ಪ್ರಶ್ನೆ ಅಲ್ಲ, ಈ ರೀತಿ ಯಾವ ಯಾವ ಕ್ಷೇತ್ರದಲ್ಲಿ, ನಮ್ಮ ಶಾಸಕರು ಇದಕ್ಕೆ ಮನಸ್ಸು ಕೊಟ್ಟು, ಶ್ರದ್ಧೆಯಿಂದ ಮಾಡಲಿಕ್ಕೆ ತಯಾರಾಗುತ್ತಾರೆ, ನಾನು ಅವರ ಜೊತೆಯಲ್ಲಿ ಸಂಪೂರ್ಣವಾಗಿರುತ್ತೇನೆ. ಇದರ ಬಗ್ಗೆ ಹಣದ ಅಭಾವ ಇಲ್ಲ, ಒಂದು ಆಸೆ ಏನೆಂದರೆ, ಇದನ್ನು ಎರಡು ವರ್ಷದಿಂದ ಹೇಳಿ, ಹೇಳಿ ನನಗೂ ಸಾಕಾಗಿದೆ. ಇವತ್ತು ಸುದೈವದಿಂದ ಹೊಸ ಪಂಚಾಯತ್ ರಾಜ್‌ವ್ಯವಸ್ಥೆಯಲ್ಲಿ 43 ಪರ್ಸೆಂಟ್ ಮಹಿಳೆಯರು ರಿಸರ್ವೇಷನನಲ್ಲಿ ಇರುತ್ತಾರೆ. ಈಗಾಗಲೇ ಅವರು ಆರಿಸಿ ಬಂದಿದ್ದಾರೆ. ಆದಕಾರಣ, ಈ ಹೊಸ ಪಂಚಾಯ್ತಿಗಳಾದ ನಂತರ, ಅದಕ್ಕೊಂದು ಹೊಸ ಶಕ್ತಿ, ಸ್ಫೂರ್ತಿ ಬರುತ್ತದೆಂದು ನಾನು ನಂಬಿದ್ದೇನೆ.

1.25 ಪಿ.ಎಂ.

ಅದಕ್ಕೆ ಪ್ರತ್ಯೇಕವಾಗಿ ಒಂದೊಂದು ಲಕ್ಷ ರೂಪಾಯಿ ಕೊಡುತ್ತಿದ್ದೇವೆ ಜವಹರ್ ರೋಜ್‌ಗಾರ್ ಯೋಜನೆ ಮೂಲಕ. 4-5ಲಕ್ಷ ರೂಪಾಯಿಗಳನ್ನು ನಾವು ಕೊಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ನಾನು ಕೇಳುತ್ತೇನೆ. ನಿಮ್ಮ ಪ್ರಾಮಾಣಿಕತೆಯ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ತಾವು ಈಗ ಪ್ರಾರಂಭ ಮಾಡಿ ಎಂದು ಹೇಳಿದಿರಿ. ನನ್ನ ತಾಲ್ಲೂಕಿನಿಂದ ನಾವು ಪ್ರಾರಂಭಮಾಡುತ್ತೇವೆ. ನಾಳೆ ಒಂದು ಪತ್ರವನ್ನು ಬರೆಯುತ್ತೇನೆ. ಅದಕ್ಕೆ ನೀವು ಹಣವನ್ನು ಎಷ್ಟು ಒದಗಿಸುತ್ತೀರಿ? ಅದಕ್ಕೆ ತಾವು ಯಾವ ಯಾವ ರೀತಿ ಮಾಡಿಕೊಡಬೇಕೆನ್ನುವ ಬಗ್ಗೆ ಮಾಡಿ ಕೊಡುತ್ತೀರಾ?

ಶ್ರೀ ಎಂ.ವೈ. ಘೋರ್ಪಡೆ : ಖಂಡಿತವಾಗಿ ಮಾಡುತ್ತೇನೆ.

ಎ.ಪಿ.ಎಂ.ಸಿ. ವತಿಯಿಂದ ರಸ್ತೆಗಳ ದುರಸ್ತಿ

268 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವ್ಯವಸಾಯೋತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಬೇಕಾದ ರಸ್ತೆಗಳು ದುಃಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆ ರಸ್ತೆಗಳ ದುರಸ್ತಿಗೆ ಆಯಾಯ ಜಿಲ್ಲೆಯಲ್ಲಿನ ಸಂಬಂಧಪಟ್ಟ ಎಪಿಎಂಸಿ ಸಮಿತಿಗಳು ಏನಾದರೂ ಕ್ರಮಕೈಗೊಂಡಿದೆಯೇ?

ಶ್ರೀ ಮದನಗೋಪಾಲ್ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹೌದು

ಆ) ಮಾರುಕಟ್ಟೆ ಸಮಿತಿಯ ಉಳಿತಾಯ ಹಣದಿಂದ ಆಯಾ ಮಾರುಕಟ್ಟೆ ಪ್ರಾಂಗಣಗಳಿಗೆ ಸಂಪರ್ಕ ರಸ್ತೆಗಳನ್ನು ಕಲ್ಪಿಸುವ ಬಗ್ಗೆ ಈಗಾಗಲೇ ಸರ್ಕಾರವು

ತಿದ್ದುಪಡಿ ಮಾಡಿದ್ದು ಸಂಬಂಧಪಟ್ಟ ಕಲಂಗೆ ಇನ್ನು ಯಾವ ದಿನಾಂಕದಿಂದ ಜಾರಿಗೆ ಬರಬೇಕೆನ್ನುವುದಕ್ಕೆ ಆದೇಶ ಹೊರಡಿಸಬೇಕಾಗಿದ್ದು ಈ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೇ, ಈ ಮಾರುಕಟ್ಟೆ ಸಮಿತಿಯ ಉಳಿತಾಯ ಹಣದಿಂದ ಮಾರ್ಕೆಟ್ ಯಾರ್ಡ್‌ಗಳಿಗೆ ಸಂಪರ್ಕ ರಸ್ತೆಯನ್ನು ನಾವು ವ್ಯವಸ್ಥೆ ಮಾಡುತ್ತೇವೆ, ಅದಕ್ಕೆ ಸೂಕ್ತವಾಗಿರತಕ್ಕಂಥ ನಿಯಮಾವಳಿಗಳಿಗೆ ತಿದ್ದುಪಡಿ ತಂದಿದ್ದೇವೆಂದು ಹೇಳಿದ್ದಾರೆ. ಆ ತಿದ್ದುಪಡಿ ಆದೇಶ ಯಾವಾಗಿನಿಂದ ಜಾರಿಗೆ ಬರುತ್ತದೆ. ಆ ಆದೇಶದ ವಿವರಗಳು ಏನು? ಅದು ಅಲ್ಲದೆ ಈ ರಾಜ್ಯದ ಬೊಕ್ಕಸಕ್ಕೆ ಈ ಒಂದು ವ್ಯವಸಾಯ ಉತ್ಪನ್ನ ಮಾರುಕಟ್ಟೆಯಿಂದ ಎಷ್ಟು ಹಣ ಸಂದಾಯವಾಗುತ್ತದೆಂದು ನಾನು ಕೇಳಬಯಸುತ್ತೇನೆ.

ಶ್ರೀ ಮದನಗೋಪಾಲ ನಾಯಕ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಆತ್ಮಾನಂದರವರು ಕೇಳಿರತಕ್ಕಂಥ ಪ್ರಶ್ನೆ ಬೇರೆ. ಅವರು ಆದಾಯದ ಬಗ್ಗೆ ಕೇಳಿದ್ದಾರೆ. ಆ ಮಾಹಿತಿಯನ್ನು ನಾನುಎರಡು ಮೂರು ದಿವಸಗಳಲ್ಲಿ ಒದಗಿಸಿಕೊಡುತ್ತೇನೆ. ಇನ್ನು ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆ, ಸಂಪರ್ಕ ರಸ್ತೆಗಳನ್ನು ಮಾರುಕಟ್ಟೆ ಸಮಿತಿವತಿಯಿಂದ ಮಾಡಿ ಕೊಡಿ ಎಂದು ಕೇಳಿದ್ದಾರೆ. ಅಂದ್ರೆ ಕಾಯ್ದೆ 16 (63)ಕ್ಕೆ ತಿದ್ದುಪಡಿ ತಂದ ಮೇಲೆ ಮೊದಲು ಈ ರಸ್ತೆಗಳ ಬಗ್ಗೆ ಕೆಲವು ವ್ಯಾಪಾರಸ್ಥರು, ರೈತರು ಏನು ಹೇಳುತ್ತಾರೆ ಎಂದರೆ, ಸರ್ವೋಚ್ಚ ನ್ಯಾಯಾಲಯಕ್ಕೆ ಹೋದಾಗ ಅಲ್ಲಿ ಒಂದು ಡಿಸಿಷನ್ ಆಗಿದೆ.

ಹಳ್ಳಿಗಳಲ್ಲಿ ಬರತಕ್ಕಂಥ ರಸ್ತೆಗಳು ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಿದ್ದು ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟ ರಸ್ತೆಗಳಾಗಿರುವುದರಿಂದ ರೈತರ ಹಣ ವ್ಯಯ ಮಾಡತಕ್ಕಂಥಾದ್ದು ಸರಿ ಅಲ್ಲ ಎಂದು ಹೇಳಿ ಡಿಸಿಷನ್ ಕೊಟ್ಟ ಮೇಲೆ ನಾವು ಆ ರೀತಿಯ ಸಂಪರ್ಕ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವತ್ತು ಸಂಪರ್ಕ ರಸ್ತೆ ಅಂದ್ರೆ ಈಗ ಮಾರ್ಕೆಟ್ ಯಾರ್ಡ್‌ನಿಂದ ಮೈನ್ ರೋಡ್ ಆಗಲಿ ಮಾರ್ಕೆಟ್‌ಗೆ ಬರತಕ್ಕಂಥ ರಸ್ತೆಯಾಗಲಿ ಮೈನ್ ರೋಡ್‌ನಿಂದ ಮಾರುಕಟ್ಟೆಗೆ ಬರತಕ್ಕಂಥ ಸಂಪರ್ಕರಸ್ತೆ ಎಂದು ಏನು ಅಂತಾರೆ ಅದನ್ನು ಒದಗಿಸಿಕೊಡುವುದಕ್ಕೆ ಸಾಧ್ಯ ಇದೆ. ಅದರ ಪ್ರಕಾರ ಒಂದು ಕಿಲೋಮೀಟರ್ ಆಗಲಿ ಎರಡು ಕಿಲೋಮೀಟರ್ ಆಗಲಿ ಎಷ್ಟೇ ರಸ್ತೆ ಮೈನ್ ರೋಡ್‌ನಿದ ಮಾರ್ಕೆಟ್ ಯಾರ್ಡ್‌ಗೆ ಬರಲಿಕ್ಕೆ ಏನು ಅನುಕೂಲತೆ ಬೇಕು ರೈತರಿಗೆ ಅನುಕೂಲತೆ ಮಾಡಿ ಕೊಡಲಿಕ್ಕೆ ಅದಷ್ಟು ಬೇಗ ಮಾಡಿಕೊಡುತ್ತೇವೆ.

ಅಧ್ಯಕ್ಷರು : ಪ್ರಶ್ನೋತ್ತರ ಕಾಲ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬೆಂಗಳೂರು ತೋಟಗಾರಿಕಾ ಅಭಿವೃದ್ಧಿ ಪ್ರಾಧಿಕಾರದ ರಚನೆ.

301- ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ಒಟ್ಟು ಉದ್ಯಾನವನಗಳೆಷ್ಟು ?

ಆ) ಅವುಗಳ ಪೈಕಿ ಎಷ್ಟು ಬೆಂಗಳೂರು ಮಹಾನಗರ ಪಾಲಿಕೆಯ ವಶದಲ್ಲಿದೆ ಎಷ್ಟು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಸರ್ಕಾರದ ವಶದಲ್ಲಿದೆ?

ಇ) ಆ ಎಲ್ಲಾ ಉದ್ಯಾನವನಗಳನ್ನು ಹಾಗೂ ಇನ್ನೂ ಹಲವಾರು ಉದ್ಯಾನವನಗಳನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಬೆಂಗಳೂರು ತೋಟಗಾರಿಕಾ ಅಭಿವೃದ್ಧಿ ಪ್ರಾಧಿಕಾರ ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು)

ಅ) 268

ಆ) ಉದ್ಯಾನ ವನಗಳ ವಿವರ : ಸಂಖ್ಯೆ

ಅ) ಬೆಂಗಳೂರು ಮಹಾನಗರ ಪಾಲಿಕೆ 200

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ 48

ಇ) ಸರ್ಕಾರದ ತೋಟಗಾರಿಕೆ 20

ಇ) ಇಲ್ಲ.

ಬಾಲವಾಡಿ ಶಿಕ್ಷಕರುಗಳ ಸೇವೆಗಳನ್ನು ಖಾಯಂಗೊಳಿಸುವಿಕೆ

257 - ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿರುವ ಬಾಲವಾಡಿ ಶಿಕ್ಷಕಿಯರ ಸೇವೆಯನ್ನು ಸಕ್ರಮಗೊಳಿಸುವ ಪ್ರಸ್ತಾವನೆ ಸರ್ಕಾರದಲ್ಲಿ 9 ವರ್ಷಗಳಿಂದ ಬಾಕಿ ಇದೆಯೇ ?

ಆ) ಇತರ ಜಿಲ್ಲೆಗಳಲ್ಲಿ ಬಾಲವಾಡಿ ಶಿಕ್ಷಕಿಯರ ಸೇವೆಯನ್ನು ಸಕ್ರಮಗೊಳಿಸಿ ಸರ್ಕಾರಿ ಆದೇಶ ಹೊರಡಿಸಲಾಗಿದೆಯೇ ?

ಇ) ಚನ್ನಪಟ್ಟಣ ತಾಲ್ಲೂಕಿಗೆ ಸರ್ಕಾರಿ ಆದೇಶ ಅನ್ವಯವಾಗದೇ ಇರುವ ಕಾರಣಗಳು ?

ಈ) ಅವರ ಸೇವೆಗಳನ್ನು ಯಾವಾಗ ಸಕ್ರಮಗೊಳಿಸಲಾಗುವುದು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಇಲ್ಲ.

ಆ) ಇಲ್ಲ. ಆದರೆ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಬಾಲವಾಡಿ ಶಿಕ್ಷಕಿಯರ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ ಡಿಪಿಎಆರ್ 2 ಎಸ್‌ಎಲ್‌ಸಿ 90 ದಿನಾಂಕ 6.8.90ರನ್ವಯ ಸಕ್ರಮಗೊಳಿಸುವ ಬಗ್ಗೆ ಸ್ಪಷ್ಟೀಕರಣ ನೀಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯೊಂದಿಗೆ ಸಮಾಲೋಚಿಸಿ, ಅಂಗನವಾಡಿಯರ ಸೇವೆಗಳನ್ನು ನಿರ್ವಹಿಸುವಂತೆ ಬಾಲವಾಡಿ ಶಿಕ್ಷಕರಸೇವೆಗಳನ್ನು ಆ ಇಲಾಖೆಗೆ ನೀಡುವಂತೆ ಕ್ರಮ ಜರುಗಿಸಲಾಗುವುದು.

ಕೊಳವೆ ಬಾವಿಗಳ ದುರಸ್ತಿ

306 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಜಿಲ್ಲೆ ನೆಲಮಂಗಲ ತಾಲ್ಲೂಕು ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗಕ್ಕೆ 1990 ರಿಂದ 1994 ಜನವರಿಯವರೆಗೆ ಅಭಿವೃದ್ಧಿ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ಸರ್ಕಾರದಿಂದ ಬಿಡುಗಡೆಯಾಗಿದೆ. (ವರ್ಷಾವಾರು ಮಾಹಿತಿಯನ್ನು ನೀಡುವುದು)

ಆ) ಈ ಪೈಕಿ ಪ್ರತಿ ವರ್ಷ 3 ಹೋಬಳಿಗಳಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ. (ವರ್ಷಾವಾರು ಮಾಹಿತಿಯನ್ನು ನೀಡುವುದು)

ಇ) *ಈ ರೀತಿ ಹಣ ಸಮನಾಗಿ 3 ಹೋಬಳಿಗಳಿಗೆ ಖರ್ಚು ಮಾಡದೆ ವ್ಯತ್ಯಾಸ ಮಾಡಲು ಕಾರಣವೇನು?*

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಸರ್ಕಾರವು ಜಿಲ್ಲಾ ಪಂಚಾಯತ್, ಇಂಜಿನಿಯರಿಂಗ್ ವಿಭಾಗಗಳಿಗೆ ನೇರವಾಗಿ ಹಣವನ್ನು ಬಿಡುಗಡೆ ಮಾಡುವುದಿಲ್ಲ ಮತ್ತು ಈ ಹಣವನ್ನು ಜಿಲ್ಲಾಪಂಚಾಯತಿಗಳ ಮೂಲ ಬಿಡುಗಡೆ ಮಾಡಲಾಗುವುದು.

ಆ) ಬೆಂಗಳೂರು ಜಿಲ್ಲೆ ನೆಲಮಂಗಲ ತಾಲ್ಲೂಕು ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ಉಪ ವಿಭಾಗಕ್ಕೆ ಅಭಿವೃದ್ಧಿ ಕಾರ್ಯಗಳಿಗೆ ಬೆಂಗಳೂರು ಜಿಲ್ಲಾ ಪರಿಷತ್ 90-91 ರಿಂದ 93-94ರವರೆಗೆ ಕೆಳಕಂಡಂತೆ ಬಿಡುಗಡೆ ಮಾಡಿದೆ.

	(ರೂ.ಲಕ್ಷಗಳಲ್ಲಿ)
1990-91	48.51
1991-92	44.97
1992-93	58.66
1993-94	39.28

ಅಭಿವೃದ್ಧಿ ಕಾರ್ಯಗಳಿಗೆ ಹೋಬಳಿವಾರು ಮಾಡಿದ ವೆಚ್ಚವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ನೆಲ ಮಂಗಲ ತಾಲ್ಲೂಕು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿ ಅಗತ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಿಲ್ಲಾಪಂಚಾಯತಿಯು ಅನುಮೋದಿಸಿದ ಕ್ರಿಯಾ ಯೋಜನೆ ಪಟ್ಟಿಯಂತೆ ಕಾಮಗಾರಿಯ ಪ್ರಗತಿಯನ್ನು ಗಮನದಲ್ಲಿರಿಸಿಕೊಂಡು ವೆಚ್ಚ ಮಾಡಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 306

ಅನುಬಂಧ

ಹೋಬಳಿಗಳು	1990-91	1991-92	1992-93	1993-94 (ಜನವರಿ 94ರವರೆಗೆ)
1. ತ್ಯಾಮಗೊಂಡಲು	18.42	13.46	23.78	17.09
2. ಸೋಂಪುರ	15.61	10.64	11.99	7.36
3. ಕಸಬಾ ಹೋಬಳಿ	14.48	20.87	22.89	14.83
	48. 51	44.97	58.66	39.28

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ ದಿನಾಂಕ 17-2-94ರ ಲಿಖಿತ ಮೂಲಕ ಉತ್ತರಿಸುವ 8ನೇ ಪಟ್ಟಿಯಲ್ಲಿರುವ 16 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 134, 267, 2 85, 382 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 8 ಚುಕ್ಕೆ ಗುರುತಿಲ್ಲದ

ರಾಜ್ಯ ಹಾಗೂ ಕೇಂದ್ರ ವಲಯದ ಮೂಲಕ ಮಂಜೂರಾದ ಕುಡಿಯುವ ನೀರಿನ ಯೋಜನೆಗಳು

242 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಒಟ್ಟು ಎಷ್ಟು ರಾಜ್ಯ ಹಾಗೂ ಕೇಂದ್ರ ವಲಯದಲ್ಲಿ ಎಂಡಬ್ಲ್ಯುಎಸ್ ಎಸ್‌ಆರ್‌ಡಬ್ಲ್ಯು ಹಾಗೂ ಎಆರ್ ಡಬ್ಲ್ಯು ಸೇರಿನ ಅನ್ವಯ ಕುಡಿಯುವ ನೀರಿನ ಯೋಜನೆಗಳನ್ನು ಮಂಜೂರು ಮಾಡಿವೆ.

(ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಯೋಜನೆಗಳ ಮಂಜೂರಾತಿಗೆ ಸರ್ಕಾರ ಯಾವ ನಿಯಮ ಅನುಸರಿಸುತ್ತದೆ?

ಇ) ಮಲೆನಾಡು ಪ್ರದೇಶಗಳಲ್ಲಿ ಜನಸಂಖ್ಯೆ ಪರಿಮಿತಿ ಅಡ್ಡ ಬರುತ್ತಿರುವುದರಿಂದ, ಸರ್ಕಾರ ಅಲ್ಲಿ ಯಾವ ರೀತಿ ಮಂಜೂರಾತಿ ನಿಯಮ ಅನುಸರಿಸುತ್ತಿದೆ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯ (ಎನ್‌ಆರ್‌ಡಬ್ಲ್ಯು)ಮತ್ತು ಕೇಂದ್ರ (ಎಆರ್‌ಡಬ್ಲ್ಯು) ವಲಯಗಳಲ್ಲಿ ಮಂಜೂರು ಮಾಡಿರುವ ಕಿರು ನೀರು ಸರಬರಾಜು ಯೋಜನೆಗಳು ಕೆಳಕಂಡಂತಿವೆ.

ವರ್ಷ	ರಾಜ್ಯವಲಯ	ಕೇಂದ್ರವಲಯ	ಒಟ್ಟು
1990-91	583	384	967
1991-92	777	528	1305
1992-93	606	600	1206
ಒಟ್ಟು	1966	1512	3478

(ಜಿಲ್ಲಾವಾರು ಮಾಹಿತಿ ಲಗತ್ತಿಸಲಾಗಿದೆ)

ಈಗ ಜನಸಂಖ್ಯೆ 500ಕ್ಕಿಂತ ಜಾಸ್ತಿ ಇರುವ ಗ್ರಾಮಗಳಿಗೆ ಕಿರು ನೀರು ಸರಬರಾಜು ಯೋಜನೆಗಳನ್ನು ಮಂಜೂರು ಮಾಡಲಾಗುತ್ತಿದೆ.

ಮಲೆನಾಡು ಪ್ರದೇಶದಲ್ಲಿ ಎತ್ತರ ಪ್ರದೇಶದಲ್ಲಿರುವ ಗ್ರಾಮಗಳಿಗೆ ನಿಯಮಾವಳಿಗಳ ಪ್ರಕಾರ ಕೊಳವೆ ಅಥವಾ ಕಿರು ನೀರು ಸರಬರಾಜು ಯೋಜನೆಗಳನ್ನು ಮಂಜೂರು ಮಾಡಲಾಗದಿದ್ದರೆ ಕೊಳವೆಬಾವಿಗಳನ್ನು ತೋಡಬೇಕಾಗುತ್ತದೆ. ಈ ಗ್ರಾಮಗಳಲ್ಲಿ ಕೊಳವೆ ಬಾವಿಗಳು ಸಫಲವಾಗದಿದ್ದಲ್ಲಿ, ಇವುಗಳಿಗೆ ನದಿ: ಝರಿಯ ದಡಗಳೇ ಮೇಲೆ ತೆರೆದ ಬಾವಿಗಳನ್ನು ಅಳವಡಿಸಿ ಪೈಪುಗಳ ಮೂಲಕ ನೀರನ್ನು ಸರಬರಾಜು ಮಾಡುವ ಯೋಜನೆಗಳನ್ನು ಮಂಜೂರು ಮಾಡಬೇಕಾಗುತ್ತದೆ. ಆದುದರಿಂದ, ಈಗಿರುವ ಜನಸಂಖ್ಯೆ ಮಿತಿಯನ್ನು ಸಡಿಲಗೊಳಿಸುವ ಪ್ರಸ್ತಾವನೆಯೊಂದನ್ನು ಸರ್ಕಾರವು ಪರಿಶೀಲಿಸುತ್ತಿದೆ.

ರಾಜ್ಯ ಮತ್ತು ಕೇಂದ್ರ ವಲಯದಲ್ಲಿ 1990-91, 1991-92 ಮತ್ತು 1992-93ರ ಸಾಲಿನಲ್ಲಿ ಮಂಜೂರಾದ ಕಿರು ನೀರು ಸರಬರಾಜು ಯೋಜನೆಗಳು.

ಸಂಖ್ಯೆ	ಜಿಲ್ಲೆಯ ಹೆಸರು	1990-91			1991-92			1992-93		
		ರಾಜ್ಯ	ಕೇಂದ್ರ	ಒಟ್ಟು	ರಾಜ್ಯ	ಕೇಂದ್ರ	ಒಟ್ಟು	ರಾಜ್ಯ	ಕೇಂದ್ರ	ಒಟ್ಟು
1	2	3	4	5	6	7	8	9	10	11
1.	ಬೆಂಗಳೂರು ಗ್ರಾಮಾಂತರ	30	16	46	29	50	79	49	54	108
2.	ಬೆಂಗಳೂರು (ನಗರ)	6	25	3	45	44	89	20	27	47
3.	ಕೋಲಾರ	47	16	63	48	28	76	79	78	157
4.	ತುಮಕೂರು	38	32	70	74	34	108	84	67	148
5.	ಚಿತ್ರದುರ್ಗ	44	26	12	17	18	35	69	48	117
6.	ಶಿವಮೊಗ್ಗ	5	3	44	25	56	81	19	19	38
7.	ಚಿಕ್ಕಮಗಳೂರು	26	1	42	39	34	73	33	35	68
8.	ಮೈಸೂರು	77		83	120	30	150	10	21	31
9.	ಮಂಡ್ಯ	27	13	40	27	10	37	43	29	72
10.	ಹಾಸನ	31	3	66	26	24	40	89	58	147
11.	ದಕ್ಷಿಣ ಕನ್ನಡ	24	7	41	13	8	21	5	3	8
12.	ಕೊಡಗು	5		6	3	14	17	3	8	11

13.	ಬೆಳಗಾಂ	44	2	69	69	13	82	21	39	60
14.	ಧಾರವಾಡ	67	1	86	46	41	87	18	41	59
15.	ಉತ್ತರ ಕನ್ನಡ	16		25	23	9	32	4	10	14
16.	ಬಿಜಾಪುರ	26	1	44	40	48	88	15	37	52
17.	ಗುಲಬರ್ಗಾ	3		11	69	48	117	-	2	2
18.	ಬೀದರ್	17	16	27	30	6	36	-	-	-
19.	ರಾಯಚೂರು	29	3	47	23	-	23	20	15	35
20.	ಬಳ್ಳಾರಿ	41		54	11	13	24	25	12	37
	ಒಟ್ಟು	583	384	967	777	528	1305	606	600	1206

ಚನ್ನಪಟ್ಟಣದಲ್ಲಿ ಹಾಪ್‌ಕಾಮ್ಸ್‌ನ ಮಾರಾಟ ಮಳಿಗೆ

256 - ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚನ್ನಪಟ್ಟಣ ಟೌನ್‌ನಲ್ಲಿ ಇನ್ನು ಮೂರು "ಹಾಪ್‌ಕಾಮ್ಸ್"ನ ಮಾರಾಟ ಮಳಿಗೆ (ಹಣ್ಣು ಮತ್ತು ತರಕಾರಿಗಳ ಮಾರಾಟ ಮಳಿಗೆ)ಗಳನ್ನು ತೆರೆಯುವ ಪ್ರಸ್ತಾವನೆಯು ಸರ್ಕಾರದಲ್ಲಿ ಬಾಕಿ ಇರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು.

ಇ) ಇವುಗಳನ್ನು ಯಾವಾಗ ತೆರೆಯಲಾಗುವುದು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಹೌದು.

ಆ) ಚನ್ನಪಟ್ಟಣ ಟೌನ್‌ನಲ್ಲಿ "ಹಾಪ್‌ಕಾಮ್ಸ್" ವತಿಯಿಂದ ಈಗಾಗಲೇ 2 ಮಾರಾಟ ಮಳಿಗೆಗಳನ್ನು ತೆರೆಯಲಾಗಿದೆ.

ವಿವರ	ಸಂಖ್ಯೆ
ಅ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಆವರಣದಲ್ಲಿ	1
ಆ. ಚನ್ನಪಟ್ಟಣ ಪಶುವೈದ್ಯ ಶಾಲೆಯ ಮುಂಭಾಗದಲ್ಲಿ	1

ಇನ್ನೂ ಒಂದು ಮಾರಾಟ ಮಳಿಗೆಯನ್ನು 6ನೇ ಕ್ರಾಸ್ ಸ್ಪಿನ್ನಿಂಗ್ ಮಿಲ್‌ನ ಬಳಿ ಗುರುತಿಸಲಾಗಿದ್ದು, ಸ್ಥಳ ಒದಗಿಸಲು ಪುರ ಸಭೆಯನ್ನು ಸಂಪರ್ಕಿಸಲಾಗಿದೆ. ಈ ಸ್ಥಳವು ಹಾಪ್‌ಕಾಮ್ಸ್ ಸಂಘಕ್ಕೆ ದೊರೆತ ಕೂಡಲೇ ಮಾರಾಟ ಮಳಿಗೆಯನ್ನು ನಿರ್ಮಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಪುರಸಭೆಯಿಂದ ಸ್ಥಳ ಮಂಜೂರಾದ ನಂತರ ಮೂರು ತಿಂಗಳ ಒಳಗಾಗಿ ಮಳಿಗೆಗಳನ್ನು ನಿರ್ಮಿಸಿ ಉದ್ಘಾಟಿಸಲಾಗುವುದು.

ಡಿ.ಸಿ.ಸಿ. ಬ್ಯಾಂಕಿನಲ್ಲಿರುವ ಎಲ್ಲಾ ದರ್ಜೆಯ ನೌಕರರ ಸಂಖ್ಯೆ.

241 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಮಗಳೂರು ಡಿ.ಸಿ.ಸಿ. ಬ್ಯಾಂಕಿನಲ್ಲಿರುವ ಒಟ್ಟು ಸಿಬ್ಬಂದಿಗಳೆಷ್ಟು?

ಆ) ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಸಿಬ್ಬಂದಿಗಳೆಷ್ಟು?

ಇ) ಸಿಬ್ಬಂದಿ ನೇಮಕ ಮಾಡುವಾಗ ಹಾಗೂ ಬಡ್ತಿ ನೀಡುವಾಗ ಮೊದಲಿನಿಂದ ಇಲ್ಲಿಯ ತನಕ ರೋಸ್ಟರ್ ಪದ್ಧತಿಯನ್ನು ಅನುಸರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) 117 ಮಂದಿ

ಆ) ಪರಿಶಿಷ್ಟ ಜಾತಿ - 12

ಪರಿಶಿಷ್ಟ ವರ್ಗ - 03

ಇ) ಹೌದು

ಈ) ಸಿಬ್ಬಂದಿ ನೇಮಕ ಮಾಡುವಾಗ ಮತ್ತು ಬಡ್ತಿ ನೀಡುವಾಗ ರೋಸ್ಟರ್

ಪಂಚಾಯತಿ ಚುನಾವಣೆಗಳಲ್ಲಿ ಹಿಂದುಳಿದ ಉಮೇದುವಾರರಿಗೆ ಆದಾಯ ಮಿತಿ ಸರ್ಟಿಫಿಕೇಟ್.

100 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಪಂಚಾಯತ್ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳಿಂದ ಸ್ಪರ್ಧಿಸಬೇಕಾದ್ದಲ್ಲಿ ಆದಾಯಮಿತಿ ಸರ್ಟಿಫಿಕೇಟನ್ನು ಕಡ್ಡಾಯಗೊಳಿಸಲು ಕಾರಣಗಳೇನು;

(ಆ) ಮೇಲ್ಕಂಡ ಕಡ್ಡಾಗ.ವನ್ನು ನಿಗಧಿ ಪಡಿಸುವ ಮುನ್ನ ಕಾನೂನು ಇಲಾಖೆಯಿಂದ ಅಭಿಪ್ರಾಯ ಿಡೆಯಲಾಗಿರುವುದೇ;

(ಇ) ಹಾಗಿದ್ದಲ್ಲಿ, ಅದರ ವಿವರಗಳೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

(ಅ) ಹೊಸ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ಹಿಂದುಳಿದ ವರ್ಗಗಳೆಂದರೆ ಸಮಾಜ ಕಲ್ಯಾಣ ಇಲಾಖೆಯ ಆದೇಶ ಸಂಖ್ಯೆ ಎಸ್‌ಡಬ್ಲ್ಯುಎಲ್ 66 ಬಿಎಸಿ 86 ದಿನಾಂಕ 13.10.1986 ರಲ್ಲಿ ಅಥವಾ ಕಾಲ ಕಾಲಕ್ಕೆ ಹೊರಡಿಸಬಹುದಾದಂತಹ ಇತರ ಆದೇಶದಲ್ಲಿ ಸರ್ಕಾರವು ಅಧಿಸೂಚಿಸಬಹುದಾದಂತಹ ಹಿಂದುಳಿದ ವರ್ಗಗಳು. ಆದ್ದರಿಂದ ಸದರಿ ಆದೇಶದಲ್ಲಿ ಆದಾಯ ಮಿತಿ ಸರ್ಟಿಫಿಕೇಟ್ ಅವಶ್ಯಕವಾಗಿರುವುದರಿಂದ ಪಂಚಾಯಿತಿ ಚುನಾವಣೆಗಳಿಗೂ ಅಂತಹ ಸರ್ಟಿಫಿಕೇಟ್ ಕಡ್ಡಾಯವಾಗಿರುತ್ತದೆ.

(ಆ) ಮತ್ತು (ಇ) ಕರ್ನಾಟಕ ಪಂಚಾಯತ್ ರಾಜ್ (ಹಿಂದುಳಿದ ವರ್ಗಗಳ) ನಿಯಮಗಳು 1993ನ್ನು ರಚಿಸುವಾಗ ಕಾನೂನು ಇಲಾಖಾ ಅಭಿಪ್ರಾಯ ಪಡೆಯಲಾಗಿದೆ.

ಗುಲ್ಬರ್ಗಾ ಜಿಲ್ಲೆಯ ಪ್ರಾಥಮಿಕ ಸಹಕಾರಿ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕಿನಿಂದ ಸಾಲ ಪಡೆಯುವ ರೈತರು ತಮ್ಮ ಜಮೀನಿನ ಮಾರ್ಟ್‌ಗೇಜ್ (ಅಡಮಾನ) ಮಾಡುವಾಗ ನೋಂದಣಿಯ ಶುಲ್ಕ ಹೊರೆಯಾಗಿ ಮನ್ನಾ ಮಾಡುವ ಕುರಿತು.

211 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕಂದಾಯ ಹಾಗೂ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಪ್ರಾಥಮಿಕ ಸಹಕಾರ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಲ್ಲಿ ರೈತರು ಹತ್ತು ಸಾವಿರ ಮೇಲ್ಪಟ್ಟು ಸಾಲ ಪಡೆಯಬೇಕಾದರೆ ತಮ್ಮ ಜಮೀನಿನ ಮಾರ್ಟ್‌ಗೇಜ್‌ಗಾಗಿ ನೋಂದಣಿ ಮಾಡುವ ಫೀ ಹಣ ಇತ್ಯಾದಿ ಖರ್ಚುಗಳಾಗಿ ಸಾಲ ಪಡೆಯುವುದು ರೈತರಿಗೆ ಹಣ ಭಾರ ಹೆಚ್ಚಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹತ್ತು ಸಾವಿರಕ್ಕಿಂತ ಮೇಲ್ಪಟ್ಟು ಸಾಲ ಪಡೆಯಲು ರೈತನಿಗೆ ನೋಂದಣಿಯ ಫೀ ಇತ್ಯಾದಿ ಖರ್ಚುಗಳು ಹೆಚ್ಚಾದರೆ ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣ ಬ್ಯಾಂಕಿನಲ್ಲಿ ಸಾಲ ಪಡೆಯುವುದು ಅಥವಾ ಸಾಹುಕಾರರಿಂದ ಸಾಲ ಪಡೆಯುವುದು ಸಮಾನವಾಗುವುದಿಲ್ಲವೇ ;

(ಇ) ಆ ಸಾಲ ಪಡೆಯುವುದಕ್ಕಾಗಿ ನೋಂದಣಿಯ ಫೀ ಮನ್ನಾ ಮಾಡಿ ಬಡ ರೈತರಿಗೆ ಆ ಸಾಲವನ್ನು ಪಡೆದು ತಮ್ಮ ಒಕ್ಕಲುತನ ಸುಧಾರಿಸಲು ಅನುಕೂಲ ಮಾಡಿಕೊಡಲಾಗುವುದೇ ?

(ಈ) ಆ ನೋಂದಣಿ ಫೀ ಮನ್ನಾ ಯಾವಾಗ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಕಂದಾಯ ಹಾಗೂ ಸಮಾಜ ಕಲ್ಯಾಣ ಸಚಿವರು.) :

(ಅ) ರೈತರು ಪಡೆಯುವ ರೂ. 10,00-00 ದವರೆಗಿನ ಸಾಲಕ್ಕೆ ಬರೆದುಕೊಡುವ ದಸ್ತಾವೇಜಿನ ನೋಂದಣಿ ಶುಲ್ಕಕ್ಕೆ ಈಗ ವಿನಾಯ್ತಿ ಇದೆ. ರೂ. 10,000-00 ಮೇಲ್ಪಟ್ಟು ಪಡೆಯುವ ಸಾಲಕ್ಕೆ ಶೇಕಡಾ-50 ರಷ್ಟು ನೋಂದಣಿ ಫೀಸಹಾ ವಿನಾಯ್ತಿ ನೀಡಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಕಲಂ-85 ಎ ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮ, 1965ರ ನಿಯಮ-49-ಬಿ ಅನ್ವಯ ದಸ್ತಾವೇಜುಗಳನ್ನು ನೋಂದಣಿಗೆ ಒತ್ತಾಯಿಸಿದ ಬ್ಯಾಂಕ್ ಮೂಲಕ ಉಪ-ನೋಂದಣಿ ಕಛೇರಿಗೆ ಫೈಲಿಂಗ್ ಮಾಡಲು ಕಳುಹಿಸಿಕೊಟ್ಟರೆ ಅಂಥ ಸಂದರ್ಭದಲ್ಲಿ ನೋಂದಣಿ ಫೀ ಕೊಡಬೇಕಾಗಿಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಉದ್ಭವಿಸುವುದಿಲ್ಲ.

(ಈ) ಉದ್ಭವಿಸುವುದಿಲ್ಲ.

ಗ್ರಾಮ ಪಂಚಾಯತ್ ಚುನಾವಣೆಗಳಲ್ಲಿ ಅವಿರೋಧ ಆಯ್ಕೆಗಳಿಗೆ ಸಂಭಾವನೆ.

314 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) *ಗ್ರಾಮ ಪಂಚಾಯಿತಿಯೊಂದರ ಎಲ್ಲಾ ಆಯ್ಕೆ ಅವಿರೋಧವಾಗಿ ನಡೆದಂತಹ ಪಂಚಾಯಿತಿಗಳಿಗೆ ವಿಶೇಷ ಪ್ರೋತ್ಸಾಹ ನೀಡಲು ಪುರಸ್ಕೃತ ಸಂಭಾವನೆ ಸಹಾಯ ಧನ ನೀಡುವ ಪರಿಪಾಠ ಸರಕಾರ ಇಟ್ಟಿರುತ್ತದೆಯೆ? ಇದ್ದರೆ ಎಷ್ಟು? ಮತ್ತು ಯಾವ ಪ್ರಮಾಣದಲ್ಲಿರುತ್ತದೆ? ವಿವರ ತಿಳಿಸುವುದು.*

ಆ) *ಇಲ್ಲದಿದ್ದಲ್ಲಿ ಪಂಚಾಯತ್ ಸಾಮರಸ್ಯ ಬೆಳೆಸುವಲ್ಲಿ ಅನುಕೂಲವಾಗುವಂತಹ ಇಂತಹ ಒಗ್ಗಟ್ಟಿನ ಎಲ್ಲಾ ಸದಸ್ಯರ ಅವಿರೋಧ ಆಯ್ಕೆಯಾದ ಪಂಚಾಯತಿಗಳಿಗೆ ಪ್ರೋತ್ಸಾಹ ನೀಡುವ ಕುರಿತಂತೆ ಸಂಭಾವನೆ ಸಹಾಯಧನ ನೀಡುವ ಪರಿಪಾಠ ಇರಬೇಕಾದದ್ದು ಸೂಕ್ತವಲ್ಲವೆ? ಈ ಕುರಿತು ಸರ್ಕಾರ ಕ್ರಮ ಕೈಗೊಳ್ಳಬಹುದೆ?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.):

ಅ) ಇಲ್ಲ

ಆ) ಇಲ್ಲ

ಸಹಕಾರಿ ಸಂಸ್ಥೆಗಳಿಗೆ ಸರ್ಕಾರಿ ನಾಮಕರಣದ ಪದ್ಧತಿಯನ್ನು ರದ್ದುಪಡಿಸುವ ಬಗ್ಗೆ.

385 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಸಹಕಾರಿ ತಳಹದಿಯ ಮೇಲೆ ಪ್ರಾರಂಭವಾಗಿರುವ ಸಹಕಾರಿ ಸಂಸ್ಥೆಗಳಿಗೆ ಸರ್ಕಾರಿ ನಾಮಕರಣದ ಸದಸ್ಯರುಗಳನ್ನು ನೇಮಕ ಮಾಡುವ ಸಂಪ್ರದಾಯ ಎಂದಿನಿಂದ ನಡೆದು ಬಂದಿದೆ?*

ಆ) *ಸಹಕಾರ ರಂಗದಲ್ಲಿ ಸರ್ಕಾರದ ಹಸ್ತಕ್ಷೇಪವನ್ನು ತಡೆಗಟ್ಟುವ ದೃಷ್ಟಿಯಿಂದ ಇವನ್ನು ಮುಂದೆ ಯಾವುದೇ ಸಹಕಾರಿ ಸಂಸ್ಥೆಗೆ ಸರ್ಕಾರಿ ನಾಮಕರಣದ*

ಮೂಲಕ ಸದಸ್ಯರುಗಳನ್ನು ನೇಮಕ ಮಾಡುವ ಸಂಪ್ರದಾಯವನ್ನು ಸರ್ಕಾರ ಕೈಬಿಡುವುದೇ ?

ಇ) ಹಾಗಿದ್ದಲ್ಲಿ ಆ ಬಗ್ಗೆ ಸಹಕಾರ ಕಾಯಿದೆಗೆ ಯಾವಾಗ ತಿದ್ದುಪಡಿ ತರಲಾಗುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಸರ್ಕಾರವು ಷೇರು ಬಂಡವಾಳ ನೀಡಿರುವ ಅಥವಾ ಸಾಲಗಳ ಮರು ಪಾವತಿಗೆ ಖಾತರಿ ನೀಡಿರುವಂತಹ ಸಹಕಾರಿ ಸಂಸ್ಥೆಗಳಿಗೆ ನಾಮಕರಣ ಮಾಡಲು ಅವಕಾಶವು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಇದರಲ್ಲಿ ಕಾಯ್ದೆ ಜಾರಿಗೆ ಬಂದಾಗಿನಿಂದಲೂ ಇದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಬೀದರ್ ಜಿಲ್ಲೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಸಿ ಬೆಳೆ ಬೆಳೆಯುವ ರೈತರಿಗೆ ತರಬೇತಿ.

383 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷಿ ಇಲಾಖೆಯಿಂದ ಬೀದರ್ ಜಿಲ್ಲೆಯಲ್ಲಿನ ರೈತರುಗಳಿಗೆ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಬೆಳೆ ಬೆಳೆಯುವ ಬಗ್ಗೆ ತರಬೇತಿಯನ್ನೇನಾದರೂ ನೀಡಲಾಗುತ್ತಿದೆಯೇ ?

ಆ) ನೀಡಲಾಗಿದ್ದಲ್ಲಿ ಇದರ ಪ್ರಯೋಜನವನ್ನು ಜಿಲ್ಲೆಯ ಯಾವ ಯಾವ ಭಾಗದ ರೈತರುಗಳು ಉಪಯೋಗಿಸಿ ಕೊಂಡಿದ್ದಾರೆ.

ಇ) ಅದಕ್ಕಾಗಿ ಕಳೆದ ಒಂದು ವರ್ಷದಲ್ಲಿ ವೆಚ್ಚ ಮಾಡಲಾಗಿರುವ ಹಣವೆಷ್ಟು ?

ಶ್ರೀ ಎಸ್. ಪುಟ್ಟಸ್ವಾಮಿ ಗೌಡ (ಕೃಷಿ ಸಚಿವರು) :

ಅ) ಕೃಷಿ ಇಲಾಖೆಯ ವತಿಯಿಂದ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಒಂದು ಕೃಷಿ ಪಾಠಶಾಲೆ ಸ್ಥಾಪಿಸಲಾಗಿದ್ದು ಆ ಜಿಲ್ಲೆಯ ರೈತ ಮಕ್ಕಳಿಗೆ ಕೃಷಿ ಆಧುನಿಕ ತಂತ್ರಜ್ಞಾನದ ಬಗ್ಗೆ ತರಬೇತಿ ನೀಡಲಾಗುತ್ತಿದೆ.

ಆ) ಇದರ ಪ್ರಯೋಜನವನ್ನು ಜಿಲ್ಲೆಯಲ್ಲಿರುವ ಎಲ್ಲಾ ತಾಲ್ಲೂಕುಗಳ ರೈತರ ಮಕ್ಕಳು ಪಡೆದುಕೊಳ್ಳುತ್ತಿದ್ದಾರೆ.

ಇ) ಈ ತರಬೇತಿಗಾಗಿ 1992-93ನೇ ಸಾಲಿನಲ್ಲಿ ರೂ. 96,315-00 ಖರ್ಚಾಗಿರುತ್ತದೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

(1) ತಾಲ್ಲೂಕುಗಳಲ್ಲಿ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಸಮಿತಿಗಳಿಗೆ ಶಾಸಕರುಗಳನ್ನು ಅಧ್ಯಕ್ಷರನ್ನಾಗಿ ಮಾಡುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ಎಲ್ಲಾ ತಾಲ್ಲೂಕುಗಳಲ್ಲಿ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಸಮಿತಿಗಳನ್ನು ಮಾಡಿದ್ದಾರೆ. ಪ್ರತಿಯೊಂದು ಕ್ಷೇತ್ರದಲ್ಲಿ ಆಯಾಯಾ ತಾಲ್ಲೂಕುಗಳಲ್ಲಿ ಹೆಚ್ಚು ಕ್ಷೇತ್ರವನ್ನು ಯಾರು ಪ್ರತಿನಿಧಿಸುತ್ತಿದ್ದಾರೆ ಅವರು ಅಧ್ಯಕ್ಷರಾಗಿದ್ದಾರೆ. ಆದರೆ ಕರ್ನಾಟಕದಲ್ಲಿ ಒಂದು ವಿಚಿತ್ರ ಕ್ಷೇತ್ರ ಅಂದ್ರೆ ಇವತ್ತು ಬಂಟ್ವಾಳ ತಾಲ್ಲೂಕು ವಿಟ್ಲ ಕ್ಷೇತ್ರದಲ್ಲಿ ಆ ತಾಲ್ಲೂಕಿನಲ್ಲಿ ಹೆಚ್ಚು ಕ್ಷೇತ್ರವನ್ನು ಪ್ರತಿನಿಧಿಸುವಂತಹ ರುಕಯಪೂಜಾರಿಯವರಿಗೆ ಇದುವರೆಗೂ ಅಧ್ಯಕ್ಷರನ್ನಾಗಿ ಮಾಡಿಲ.

ಮತ್ತೆ ಅವರು ತಾಲ್ಲೂಕು ಪಂಚಾಯತಿ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ಹೇಗೋ ಏನೋ ಕಾರಣ ಗೊತ್ತಿಲ್ಲ ರಮಾನಾಥರೈ ಮಂತ್ರಿಗಳಾಗುವುದಕ್ಕಿಂತ ಮುಂಚೆ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು. ಅದು ಸರಿಯಾಗಿರಲಿಲ್ಲ. ಅವರ ಮಂತ್ರಿಸ್ಥಾನಕ್ಕೆ ಹೋದ ಮೇಲಾದರೂ ಸಹ ಆ ಸ್ಥಾನಕ್ಕೆ ಸಹಜವಾಗಿಯೇ ಅವರು ತಪ್ಪನ್ನು ತಿದ್ದಿಕೊಂಡು ಸನ್ಮಾನ್ಯ ರುಕ್ಮಯ ಪೂಜಾರಿಯವರನ್ನು ಅಕ್ರಮ ಸಾಗಮಳಿ ಮಾಡುವವರ ಸಕ್ರಮಗೊಳಿಸುವ ಅಧ್ಯಕ್ಷರನ್ನಾಗಿ ಮಾಡಬೇಕಾಗಿತ್ತು. ಅದನ್ನು ಮಾಡದೆ ಈಗಾಗಲೇ ಅವರು ಶಾಸಕರಾಗಿ. ನಾಲ್ಕೂವರೆ ವರ್ಷಗಳು ಕಳೆದರೂ ಸಹ ಅವರು ಶಾಸಕರಾಗಿ ಅವರ ಕರ್ತವ್ಯವನ್ನು ಅಲ್ಲಿ ನಿರ್ವಹಿಸಲಿಕ್ಕೆ ಸರ್ಕಾರ ಒಂದು ರೀತಿಯಲ್ಲಿ ಅಡ್ಡಿ ಮಾಡಿದೆ. ಬಹುಶಃ ಇಡೀ ರಾಜ್ಯದಲ್ಲಿ ಆ ತಾಲ್ಲೂಕಿನಲ್ಲಿ ಬಹು ಭಾಗವನ್ನು ಪ್ರತಿನಿಧಿಸತಕ್ಕಂಥ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡದೆ ಇರುವಂತಹ ಯಾವುದೇ ಒಂದು ಉದಾಹರಣೆ ಇಲ್ಲ. ಅದಕ್ಕೋಸ್ಕರ ಈ ತರಹ ಸಂದರ್ಭ ಏನು ಇದೆ ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡುವಂತಾದ್ದು ಏನೆಂದರೆ ಅಧ್ಯಕ್ಷರೇ ದಯಮಾಡಿ ಸರ್ಕಾರ ಇವತ್ತು ಈ ಸದನದಲ್ಲಿ ಆ ರೀತಿಯ ಅನ್ಯಾಯವಾಗಿರುವಂತಹ ಕ್ಷೇತ್ರ ಯಾವ ಯಾವುದು ಇದೆ ಅಲ್ಲಿ ಇವತ್ತು ಆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡದೆ ಇವತ್ತು ಏನು ತೊಂದರೆ ಆಗಿದೆ ಈ ಕ್ಷಣದಲ್ಲೇ ಅವರು ಅವರ ಕರ್ತವ್ಯವನ್ನು ನಿರ್ವಹಿಸುವುದಕ್ಕೋಸ್ಕರ ಶ್ರೀ ರುಕ್ಮಯಪೂಜಾರಿಯವರನ್ನು ಈ ಒಂದು ಬಂಟ್ವಾಳ ತಾಲ್ಲೂಕಿನ ವಿಟ್ಲ ಕ್ಷೇತ್ರದ ಶಾಸಕರನ್ನು ಅಕ್ರಮ ಸಾಗುವಳಿ ಮಾಡುವ ಜಮೀನನ್ನು ಸಕ್ರಮಗೊಳಿಸುವ ಸಮಿತಿಯ ಅಧ್ಯಕ್ಷರನ್ನಾಗಿ ಮಾಡುವಂತಾದ್ದನ್ನು ತಾವು ಈ ಸದನದಲ್ಲಿ ಘೋಷಣೆ ಮಾಡಿ ಈಗ ಆಗಿರುವ ತಪ್ಪನ್ನು ತಿದ್ದಿಕೊಳ್ಳಬೇಕು ಅದೇ ರೀತಿ ಇನ್ನು ಎಲ್ಲೆಲ್ಲಿ ಈ ರೀತಿ ಅನ್ಯಾಯವಾಗಿದೆ, ಇದನ್ನು ಸರಿಪಡಿಸುವಂತಾದ್ದು ಸರ್ಕಾರದ ಕರ್ತವ್ಯ ಇದೆ. ಇವತ್ತು ನಾವು ಮಂತ್ರಿಗಳನ್ನು ಹೋಗಿ ಮಾತನಾಡಿ ಸರಿಪಡಿಸಬಹುದಾಗಿತ್ತು. ಅಂದರೆ ಈ ರೀತಿ ಏನೋ ವಿರೋಧಪಕ್ಷದಲ್ಲಿದ್ದೇವೆ ಬೇರೆ ಏನೋ ಕಾರಣಕೋಸ್ಕರ ನಮಗೆ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸಲು ಸರ್ಕಾರಕ್ರಮ ಕೈಗೊಳ್ಳಬೇಕು. ಇನ್ನು ಅನೇಕ ಜನ ಶಾಸಕರು ಆ ರೀತಿ ಇರಬಹುದು. ಅದು ಆಗಬಾರದು ಎನ್ನುವ ದೃಷ್ಟಿಯಿಂದ ಸರ್ಕಾರದ ಒಂದು ಸ್ಪಷ್ಟ ಉತ್ತರ ಬೇಕು ಎನ್ನುವ ದೃಷ್ಟಿಯಿಂದ ಇವತ್ತೇ ಈ ಸದನದಲ್ಲಿ ಈ ತಪ್ಪನ್ನು ಸರಿಪಡಿಸಿ ನಾಳೆಯೇ ಬಹುಭಾಗವನ್ನು ಪ್ರತಿನಿಧಿಸತಕ್ಕಂಥ ಶಾಸಕರನ್ನು ಅಕ್ರಮಸಾಗುವಳಿಯನ್ನು ಸಕ್ರಮಗೊಳಿಸುವ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಮನವಿಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದು ಸರ್ಕಾರದ ನೀತಿ ಮತ್ತು ಸರ್ಕಾರ ತೀರ್ಮಾನ ಮಾಡಿರತಕ್ಕಂಥ ವಿಚಾರ. ಇದು ಯಾರದೋ ಕೃಪೆಯಿಂದ ಕೊಡತಕ್ಕಂಥಾದ್ದಲ್ಲ. ಬಹು ಭಾಗ ಯಾರು ಸೇರಿರುತ್ತಾರೆ ಅವರಿಗೆ ಅಧ್ಯಕ್ಷರನ್ನಾಗಿ ಮಾಡತಕ್ಕಂಥಾದ್ದು ಸರ್ಕಾರದ ಕರ್ತವ್ಯ. ನಾಲ್ಕುವರೆ ವರ್ಷದಿಂದ ಅಧ್ಯಕ್ಷರಾಗಬೇಕಾಗಿದ್ದವರನ್ನು ಕೈಬಿಟ್ಟಿದ್ದಾರೆ. ನನ್ನ ಪಕ್ಕದಲ್ಲಿ ಇರತಕ್ಕಂಥ ಬೈಲಹೊಂಗಲ ಶಾಸಕ ಶ್ರೀ ಬಾಬುಗೌಡರನ್ನು ಕೈಬಿಟ್ಟಿದ್ದಾರೆ. ಮತ್ತು ಏಕಾಂತಯ್ಯನವರು ಮತ್ತು ಈ ರೀತಿ ನಡೆದರೆ ಸರ್ಕಾರದ ನೀತಿ ಏನು ಎನ್ನುವುದನ್ನು ಸ್ಪಷ್ಟಪಡಿಸಬೇಕು.

ಏಕೆಂದರೆ, ತಮಗೆ ಇಚ್ಛೆಬಂದಂತೆ ರಾಜಕೀಯ ಮಾಡುವುದಕ್ಕಾಗುವುದಿಲ್ಲ, ರಾಜಕಾರಣ ಮಾಡಿ ಯಾರನ್ನು ಬೇಕಾದರೂ ಹಾಕಿಕೊಳ್ಳುವುದು, ಯಾರನ್ನು ಬೇಕಾದರೂ ಬಿಡುವುದು ಒಳ್ಳೆಯದಲ್ಲ. ಸರ್ಕಾರದ ನೀತಿಯಲ್ಲಿ ಆಯಾಯಾ ಶಾಸಕರಿಗೆ ಏನೇನು ಗೌರವ ಆ ಕ್ಷೇತ್ರದಲ್ಲಿ ಸಲ್ಲಬೇಕು ಯಾವ ನೀತಿ ಇದೆ ಅದನ್ನು ಮಾಡಬೇಕೆ ಹೊರತು ಈ ರೀತಿಯಲ್ಲ. ಸರ್ಕಾರ ಸರ್ಕಾರದ ನೀತಿ ಏನು ಎನ್ನುವುದನ್ನು ಮೊದಲು ಸ್ಪಷ್ಟಪಡಿಸಿ. ಸರ್ಕಾರದ ನೀತಿ ಪ್ರಕಾರ ನಡೆಯುತ್ತಿಲ್ಲ ಅಂದರೆ ನಾವು ನೇರವಾಗಿ ಸರ್ಕಾರದ

ನೀತಿಯನ್ನು ವಿರೋಧಿಸಿ ಧರಣಿ ಮಾಡಬೇಕಾಗುತ್ತದೆ. ತಮ್ಮ ಮೂಲಕ ಸಂಸದೀಯ ವ್ಯವಹಾರಗಳ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಎಚ್. ಏಕಾಂತಯ್ಯ : ನಾನು ಪ್ರಾಸಂಗಿಕವಾಗಿ ಹೇಳುವುದೇನೆಂದರೆ, ನಾನು ನನ್ನ ಕ್ಷೇತ್ರದಲ್ಲಿ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡಿದ್ದೆ. ಎಲ್ಲಿ ಕೋರ್ಟಿನಿಂದ ವಿವಾದ ಇದೆ ಅದು ಬಿಟ್ಟು ಉಳಿದಿದ್ದನ್ನು ನಾವು ವಿಲೇವಾರಿ ಮಾಡಿದೆವು. ನಾನು ಏತಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆಂದರೆ ನನ್ನನೇ ಅಧ್ಯಕ್ಷರನ್ನಾಗಿ ಮಾಡಿ ಎಂದು ನಾನು ಕೇಳುತ್ತಿಲ್ಲ, ನಾವು ಎಲ್ಲಾ ಕೆಲಸ ಮಾಡಿ ಪಟ್ಟಿ ಕೊಡುವಂತಹ ಸಂದರ್ಭದಲ್ಲಿ ನಮ್ಮನ್ನು ತೆಗೆದು ಹಾಕಿ ಅವರಿಗೆ ಬೇಕಾದವರನ್ನು ಮಾಡುವುದಾದರೆ ಅದಕ್ಕೊಂದು ನೀತಿ ಬೇಡವೇ? ಅವರು ಮಾಡಿಕೊಳ್ಳಲಿ ಪಟ್ಟಿ ಕೊಡುವುದರ ಮುಖಾಂತರ ನಾನೇನು ಲಾಭ ಮಾಡಿಕೊಳ್ಳಬೇಕಾಗಿಲ್ಲ. ಏಕೆ ತೆಗೆದುಹಾಕಿದಿರಿ ಎಂದು ಹೇಳಬಹುದಾಗಿತ್ತು. ಅದೂ ಎರಡು ವರ್ಷ ಆದ ಮೇಲೆ ಕಾರಿಜಂಡಂ ಅಂತೆ. ನಾಚಿಕೆ ಆಗಬೇಕು. ಕಾರಿಜಂಡಂ ಎರಡು ವರ್ಷ ಆದ ಮೇಲೆ ಇವರಿಗೆ ಗೊತ್ತಾಗುತ್ತದೆ.

(ಗೊಂದಲ)

ಅಧ್ಯಕ್ಷರು : ನಾನು ಪದೇಪದೇ ಸದನದಲ್ಲಿ ಸದಸ್ಯರಿಗೆ ಕೇಳಿಕೊಳ್ಳುತ್ತಿದ್ದೇನೆ. ಪ್ರಶ್ನೋತ್ತರ ಕಾಲ ಮಹತ್ವದ ಘಟನೆಗಳ ಚರ್ಚೆ ನಡೆದ ಸಂದರ್ಭದಲ್ಲಿ ಸದಸ್ಯರೆಲ್ಲ ಮಂತ್ರಿ ಹತ್ತಿರ ಹೋಗಿ ಮಾತನಾಡಿಕೊಳ್ಳುತ್ತೇವೆ ಎಂದರೆ .... ಅಧ್ಯಕ್ಷರಾಗಿ ನಾನು ಪುನಃ ಪುನಃ ಇದನ್ನು ಹೇಳುವುದು ಸರಿಯಲ್ಲವೆಂದು ನನಗನ್ನಿಸುತ್ತದೆ. ಯಾವ ಸದಸ್ಯರೂ ಇದನ್ನು ಗಮನದಲ್ಲಿ ತೆಗೆದುಕೊಳ್ಳದೆ ಹೋದರೆ ನಾನು ಬಹಳ ಗಂಭೀರವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಏಕೆಂದರೆ ಸದನದಲ್ಲಿ ನಡೆಯುವ ಕಾರ್ಯಕಲಾಪಕ್ಕೆ ನಾವು ಆದ್ಯತೆ ಕೊಡಬೇಕು. ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಮಂತ್ರಿಗಳು ಸಹಿತ ಗಮನ ಕೊಟ್ಟು ಸರಿಯಾದ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಅವರಿಗೆ ತೊಂದರೆ ಕೊಡಬೇಡಿರಿ. ನಿಮಗೆ ಸಾಕಷ್ಟು ಸಮಯ ಇರುತ್ತದೆ, - ಅವರ ಹತ್ತಿರ ಕೆಲಸ ಮಾಡಿಸಿಕೊಳ್ಳಿ. ಅದಕ್ಕೆ ಮಂತ್ರಿಗಳಿಗೆ ಅವಕಾಶ ಕೊಡಿ. ಅದಕ್ಕೆ ಪುನಃ ನಾನು ಸದಸ್ಯರಲ್ಲಿ ಕೇಳಿಕೊಳ್ಳುವುದೇನೆಂದರೆ ತಮಗೇನು ಕೆಲಸ ಇದ್ದರೂ ನಂತರ ಮಾಡಿಕೊಳ್ಳಿ.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೇ, ಮೊನ್ನೆ ದಕ್ಷಿಣ ಕನ್ನಡದ ಶಾಸಕರ ಸಭೆಯಲ್ಲೂ ಕೂಡ ಪೂಜಾರ್‌ರವರು ಪ್ರಸ್ತಾಪ ಮಾಡಿದ್ದಾರೆ. ಈಗಲೂ ಕೂಡ ನಮ್ಮ ಯಡಿಯೂರಪ್ಪನವರು ಮತ್ತು ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದ್ದಾರೆ. ಲ್ಯಾಂಡ್ ಗ್ರಾಂಟ್ ಸಮಿತಿ ಏನಿದೆ ಅದಕ್ಕೆ ಸಂಬಂಧಪಟ್ಟ ಶಾಸಕರು ಅಧ್ಯಕ್ಷರಾಗಿರಬೇಕು. ಬಂಟ್ವಾಳದ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ ಅದನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಧರ್ಮಸಿಂಗ್‌ರ ಬಗ್ಗೆ ನಮಗೆ ಗೌರವ ಇದೆ. ಅವರ ಗಮನಕ್ಕೆ ಬರದೇ ಇದ್ದರೆ ಈಗ ಮಾಡಿ, ನಮಗೆ ಚಿಂತೆ ಇಲ್ಲ. ಇದುವರೆಗೂ ಇಲ್ಲಿ ಬಂದಿರುವ ಪ್ರತೀತಿ ಎಂದರೆ ಯಾವ ತಾಲ್ಲೂಕನ್ನು ಪ್ರತಿನಿಧಿಸುತ್ತಾನೋ ಆ ಶಾಸಕನನ್ನು ಅನ್‌ಆಥರೈಸ್ಡ್ ಕಲ್ಟಿವೇಶನ್ ಚೇರ್ಮನ್ ಮಾಡುತ್ತಾ ಇದ್ದಾರೆ. ಅಲ್ಲಿ ನಾಲ್ಕೂವರೆ ವರ್ಷದಿಂದ ಭಟ್ಕಳ ತಾಲ್ಲೂಕಿನಲ್ಲಿ ವಿಟ್ಲ ಕ್ಷೇತ್ರ, ದೊಡ್ಡ ಪ್ರಮಾಣದಲ್ಲಿ ಆ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಅವರು 20 ಅಂಶಗಳ ಅಧ್ಯಕ್ಷರು ಇದ್ದಾರೆ. ಇದುವರೆಗೂ ಇದು ಆಗಲಿಲ್ಲ. ಇನ್ನು 6 ತಿಂಗಳಾದರೂ ಅವರು

ಕೆಲಸ ಮಾಡುವುದಕೋಸ್ಕರ ಈಗಲಾದರೂ ವಿನಂತಿ ಮಾಡುತ್ತೇನೆ, ಈ ತಪ್ಪನ್ನು ಸರಿಪಡಿಸಿರಿ. ಸದನದಲ್ಲಿ ಇವತ್ತೇ ನಾಳೆಯೇ ಆಜ್ಞೆ ಹೊರಡಿಸಿ ಅವರನ್ನು ಅಧ್ಯಕ್ಷರನ್ನಾಗಿ ಮಾಡುತ್ತೇನೆಂದು ತಾವು ಘೋಷಣೆ ಮಾಡಿದರೆ ಮತ್ತಿನ್ನೆಲ್ಲಿ ಇಂತಹ ಅನ್ಯಾಯವಾಗಿದ್ದರೆ ಅದನ್ನು ತಪ್ಪಿಸಿದಂತಾಗುತ್ತದೆ. ಅದನ್ನು ದಯಮಾಡಿ ಮಾಡಿ. ಇಷ್ಟೇ ನಾನು ವಿನಂತಿ ಮಾಡುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಗೌರವಾನ್ವಿತ ಸದಸ್ಯರಾಗಿ ಮಾನ್ಯ ಏಕಾಂತಯ್ಯನವರು ಮೂರು ವರ್ಷ ಅಲ್ಲಿ ಕೆಲಸ ಮಾಡಿ ಅಲ್ಲಿ ತಕರಾರಿಲ್ಲದೇ ಇರುವ ಅರ್ಜಿಗಳನ್ನೆಲ್ಲ ವಿಲೇವಾರಿ ಮಾಡಿದ ಮೇಲೆ ಅದರ ಪಟ್ಟ ಹಂಚಬೇಕೆಂಬ ಸಂದರ್ಭದಲ್ಲಿ ಕಾರಿಜಂಡಮನ್ನು ಇಷ್ಯೂ ಮಾಡಿ ಅವರನ್ನು ತೆಗೆಯತಕ್ಕಂಥಹ ಕಾರಣ ಏನಿತ್ತು? ತಾವು ಸದನಕ್ಕೆ ವಿವರಣೆ ಕೊಡಬೇಕಾಗುತ್ತದೆ ಈಗ ನನ್ನ ಕ್ಷೇತ್ರದಲ್ಲಿ ಕನಕಪುರದ ಬಹುಭಾಗ ಇರುವ ಸದಸ್ಯರಾದ ಶಿವಕುಮಾರ್‌ರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ನಾನೇನು ಅದಕ್ಕೆ ತಕರಾರು ಮಾಡಿಲ್ಲ, ಅದರ ಸದಸ್ಯನಾಗಿ ಕೆಲಸ ಮಾಡುತ್ತಿದ್ದೇನೆ. ಆದರೆ ಬಹುಭಾಗ ಇರುವಂತಹ ಪೂಜಾರಿಯವರನ್ನು ಮಾಡದೇ ಇರುವ ಕಾರಣವೇನು? ಹಿರಿಯ ಸದಸ್ಯರಾದ ಏಕಾಂತಯ್ಯನವರನ್ನು ತೆಗೆಯುವುದಕ್ಕೆ ಕಾರಣವೇನು? ಇದು ನಿಮಗೆ ಗೊತ್ತಾಗಬೇಕು.

ಶ್ರೀ ಸಿ. ಭೈರೇಗೌಡ : ಆಪಾದನೆಗಳಿದ್ದರೆ ಅವನ್ನು ಸರ್ಕಾರ ವಿಚಾರಣೆ ಮಾಡಿದ್ದಾರೆ. ಈ ರೀತಿ ಒಬ್ಬ ಸದಸ್ಯರನ್ನು ವಿನಾಕಾರಣ ಅಧ್ಯಕ್ಷ ಸ್ಥಾನದಿಂದ ತೆಗೆದು ಅವರಿಗೆ ಅಪಮಾನ ಮಾಡಿರುವುದಕ್ಕೆ ಸರ್ಕಾರ ಕ್ಷಮಾಯಾಚನೆ ಮಾಡಬೇಕು. ಅವರ ಮೇಲೇನಾದರೂ ಆಪಾದನೆ ಇದ್ದರೆ ವಿಚಾರಣೆ ಮಾಡಲಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಹುಬ್ಬಳ್ಳಿ ತಾಲ್ಲೂಕಿನ ಹೆಚ್ಚಿನ ಭಾಗವನ್ನು ಪ್ರತಿನಿಧಿಸುತ್ತಾರೆ. ಸರ್ಕಾರಕ್ಕೆ ಹೇಳಿದರೆ ಮಾಡಲಿಲ್ಲ. ಹೈಕೋರ್ಟಿನಿಂದ ಅವರನ್ನು ಅಧ್ಯಕ್ಷರನ್ನಾಗಿ ಮಾಡಬೇಕು ಅಂತ ಆದೇಶ ಇದೆ. ಇವತ್ತಿಗೂ ಸರ್ಕಾರ ಮಾಡಲಿಲ್ಲ. ನ್ಯಾಯಾಲಯ ನಿಂದನೆ ಹಾಕಿದ್ದೇವೆ. ಇದನ್ನು ಏತಕ್ಕೆ ಮಾಡುತ್ತಿಲ್ಲ? ತಾವು ಹೇಳಿದಿರಿ ವಿರೋಧಪಕ್ಷದವರನ್ನು ನಾವು ಮಾಡುವುದಿಲ್ಲ ಎಂದಾದರೆ ತಾವೇ ಮಾಡಿಕೊಳ್ಳಿ. ಕಾನೂನುಬಾಹಿರ ಕೆಲಸ ಮಾಡುವುದನ್ನು ಬಿಡಿರಿ.

(ಗದ್ದಲ)

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ, ಕಂದಾಯ ಸಚಿವರೇ ಹೇಳಿ. ಈಗ ಯಡಿಯೂರಪ್ಪನವರು ಹಾಗೂ ಬಂಟ್ವಾಳ ಕ್ಷೇತ್ರದಲ್ಲಿನ ಲ್ಯಾಂಡ್ ಗ್ರಾಂಟ್ ಕಮಿಟಿಗೆ ಅವರು ಬಹುಭಾಗ ಬರುತ್ತಿದ್ದರೂ ಕೂಡ ಆಗಲಿಲ್ಲ. ಶಾಸಕರೇ ಆಗಬೇಕೂಂತ ಹೇಳಿದ್ದಾರೆ. ಬೈಲಹೊಂಗಲದಲ್ಲಿ ಅದೇ ರೀತಿ ಆಗಿದೆ. ಏಕಾಂತಯ್ಯನವರು ಅಲ್ಲಿ ಡಿಸ್ಟ್ರಿಬ್ಯೂಟ್ ಮಾಡುವಂತಹ ಕಾಲದಲ್ಲಿ ಸಿಂಧ್ಯಾ ಅವರು ಏನೂ ತಾಪತ್ರಯ ಇಲ್ಲಾಂತ ಹೇಳಿದ್ದಾರೆ. ಇವತ್ತು ಬಗರ್‌ಹುಕುಂನಲ್ಲಿ ಒಟ್ಟಾರೆ ಕರ್ನಾಟಕ ರಾಜ್ಯದಲ್ಲಿ ಅದಕ್ಕೆ ನಾವು ಸಿಂಪ್ಲಿಫೈ ಮಾಡಿದ್ದೇವೆ. ಆರು ತಿಂಗಳೊಳಗೆ ಬೇಕೆಂದು, ಅದು ಬಹಳ ಮುಖ್ಯ ಸಮಿತಿಗಳಲ್ಲಿ ಒಂದು, ಅದು ಶಾಸಕರನ್ನೊಳಗೊಂಡ ಸಮಿತಿ ಆಗಬೇಕೆಂಬುದು ಸರ್ಕಾರದ ಉದ್ದೇಶ. ಎಲ್ಲಾ ಕಡೆ ಇದನ್ನು ನಾನು ನೋಡುತ್ತೇನೆ.

(ಗದ್ದಲ)

ಶ್ರೀ ಹೆಚ್. ಏಕಾಂತಯ್ಯ : ನಾವು ತಮ್ಮ ಕೃಪೆಯಿಂದ ಬಾಳಬೇಕಾಗಿಲ್ಲ, ಆದರೆ ನಮ್ಮ ನಡವಳಿಕೆ ಏನಿದೆ ಅದನ್ನು ಹೇಳಿ ಇಲ್ಲಿ.

ಶ್ರೀ ಧರ್ಮಸಿಂಗ್ : ತಮ್ಮ ಬಗ್ಗೆ ನಮಗೆ ಗೌರವ ಇದೆ.

ಶ್ರೀ ಹೆಚ್. ಏಕಾಂತಯ್ಯ : ಹಾಗಿದ್ದಿದ್ದರೆ ನನ್ನ ಪತ್ರಕ್ಕೆ ಉತ್ತರ ಕೊಡುತ್ತಿದ್ದಿರಿ.

ಶ್ರೀ ಧರ್ಮಸಿಂಗ್ : ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದು ಈಗ ನೇರವಾಗಿ ನನ್ನ ಗಮನಕ್ಕೆ ಬರುತ್ತಿದೆ. ಈಗ ತೆಗೆದುಕೊಂಡಿದ್ದೇನೆ. ಜೀರೋ ಹವರ್‌ನಲ್ಲಿ ಬರುವುದಕ್ಕೆ ನೇರವಾಗಿ ಹೇಗೆ ನಾನು ಉತ್ತರ ಕೊಡುವುದಕ್ಕೆ ಆಗುತ್ತದೆ.

(ಗದ್ದಲ)

ಸ್ವಾಮಿ ಬಹಳಷ್ಟು ಸದಸ್ಯರು ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಅನ್ಯಾಯವಾಗುತ್ತದೆಂದು ಪ್ರಸ್ತಾಪ ಮಾಡಿದ್ದಾರೆ. ನಾನು ತಮ್ಮ ಮೂಲಕ ವಿನಂತಿಮಾಡಿಕೊಳ್ಳುತ್ತಿದ್ದೇನೆ. ಅದು ನನ್ನ ಗಮನಕ್ಕೆ ಬಂದಿದೆ, ಅದನ್ನು ಸರಿಪಡಿಸುತ್ತೇನೆ.

ಶ್ರೀ ಆರ್.ಎನ್. ನಾಯಕ್ : ಅಧ್ಯಕ್ಷರೇ, ಕರ್ನಾಟಕ ವಿಧಾನಮಂಡಲ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ 17ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ವಾರಾಹಿ ಮುಳುಗಡೆ ರೈತರ ಸಮಸ್ಯೆ ಬಗ್ಗೆ ಈ ಅಧಿವೇಶನದೊಳಗೆ ತೆಗೆದುಕೊಳ್ಳಬೇಕೆಂದು ನಾನು ಕೊಟ್ಟ ಕಾಲಿಂಗ್ ಅಟೆನ್‌ಶನ್‌ಗೆ ತಮ್ಮಿಂದ ಬಂದ ಉತ್ತರ. ಈಗ ಉಪಮುಖ್ಯಮಂತ್ರಿಗಳಿಲ್ಲ. 20 ವರ್ಷವಾಗಿದೆ, 74ರಲ್ಲಿ 4:1 ಅಧಿಸೂಚನೆಯಾಗಿ 20 ವರ್ಷ ಆಗಿದ್ದರೂ ಅವರಿಗೆ ಪರಿಹಾರ ಬಂದಿಲ್ಲ. ಹೇಳಿಕೆ ಆದರೂ ಕೊಡಿ.

ಶ್ರೀ ಹೆಚ್. ಏಕಾಂತಯ್ಯ : ಹಾವೇರಿ ಸಕ್ಕರೆ ಕಾರ್ಖಾನೆ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ಆದರೆ ಉತ್ತರ ಬಂದಿಲ್ಲ.

ಅಧ್ಯಕ್ಷರು : ಅವರು ಉತ್ತರ ಕೊಟ್ಟಿದ್ದಾರಲ್ಲ.

ಶ್ರೀ ಹೆಚ್. ಏಕಾಂತಯ್ಯ : ಇಲ್ಲ ಅವರು ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು : ಹಾಗಾದರೆ ನೀವು ಬರೆದು ಕಳಿಸಿ.

ಶ್ರೀ ಸಿ. ಬೈರೇಗೌಡ : ಎನ್.ಜಿ.ಇ.ಎಫ್. ಕಾರ್ಖಾನೆ ಷೇರು ಮಾರಾಟ ಮಾಡುತ್ತಿರುವುದರ ಬಗ್ಗೆ ಅವಕಾಶ ಕೊಡಬೇಕೆಂದು ನಾನು ಕೇಳಿಕೊಂಡಿದ್ದೆ. ದಯವಿಟ್ಟು ಅವಕಾಶ ಕೊಡಬೇಕು ಆ ಸಂದರ್ಭದಲ್ಲಿ ಆ ಮಂತ್ರಿಗಳು ಸಹ ಇರುವ ರೀತಿಯಲ್ಲಿ ಮಾಡಬೇಕು. ಅವರಿದ್ದಾಗ ನಾನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಆಯಿತು.

(ಗದ್ದಲ)

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಅಧ್ಯಕ್ಷರೇ, ಈ ದಿವಸ ಕಡಿಮೆ ಕಾಲದಲ್ಲಿ ಮಂಜೂರಾಗುವಂತಹ ಮೂರು ಬಿಲ್‌ಗಳಿವೆ ಸ್ಯಾಲರಿ ಬಿಲ್ ಎರಡು ಮತ್ತು ಲೇಬರ್ ಇಲಾಖೆಯದು ಆದಾದನಂತರ ಪಂಚಾಯತಿ ರಾಜ್ ಇಲಾಖೆಯದು. ರಾಜ್ಯಪಾಲರ ಭಾಷಣದ ವಿಷಯ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಇವು ಮೂರನ್ನು ಮಾಡಿದರೆ ನಾಳೆ ಅವು ವಿಧಾನಪರಿಷತ್ತಿಗೆ ಬರಬೇಕಾಗುತ್ತವೆ. ಸಂಜೆಮೇಲೆ ಪಾಸಾದರೆ ಪ್ರಿಂಟಾಗುವುದಿಲ್ಲ, ಬರುವುದು. ಕಷ್ಟವಾಗುತ್ತದೆ. ಆದ್ದರಿಂದ ಈಗಲೇ ಅವನ್ನು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

(2) ತೆಂಗಿನ ಮರಗಳಿಗೆ ಕಪ್ಪುಹುಳು ರೋಗ ಹರಡಿರುವುದು.

ಶ್ರೀ ಎಲ್.ಆರ್. ಶಿವರಾಮೇಗೌಡ : ಅಧ್ಯಕ್ಷರೇ, ನಾವು ಹಳ್ಳಿ ಕಡೆ ಹೋಗುವಂತಿಲ್ಲ, ನಿನ್ನೆ ತೆಂಗಿನರೋಗದ ಬಗ್ಗೆ ಪ್ರಸ್ತಾಪಿಸಿದ್ದೆವು. ಈಗ ತೋಟಗಾರಿಕೆ ಸಚಿವರು ಇದ್ದಾರೆ.

ಶ್ರೀ ಎ. ಕೃಷ್ಣಪ್ಪ : 10ನೇ ತಾರೀಖು ಶ್ರೀ ವಾಟಾಳ್ ನಾಗರಾಜರು ಈ ಮನೆಯಲ್ಲಿ ತೆಂಗಿನ ಗಿಡಗಳಿಗೆ ಕಪ್ಪು ಹುಳು ಏನು ಬಿದ್ದಿದೆ ಅದರ ಬಗ್ಗೆ ಒಂದು ಸಮಿತಿಯನ್ನು ಕಳಿಸಿ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದರು. ಆ ಸಮಿತಿ ನಾಳೆ ಬೆಳಿಗ್ಗೆ 8 ಗಂಟೆಗೆ ಪ್ರವಾಸ ಹೊರಡುತ್ತದೆ. ಮೊದಲು ಅವರು ಚಾಮರಾಜನಗರ, ನಾಗಮಂಗಲ, ಚಿಕ್ಕಮಗಳೂರು ಶಿವಮೊಗ್ಗ ಜಿಲ್ಲೆಗಳಿಗೆ ಹೋಗುತ್ತಿದ್ದಾರೆ. ಎಚ್‌ಆರ್ ರೆಡ್ಡಿ ಪ್ರಾಧ್ಯಾಪಕರು, ಕೃಷಿ ಕಾಲೇಜ್, ಮೆನೌಂಬಾ ಅಧ್ಯಾಪಕರು, ಜಿಕೆವಿಕೆ, ಡಾ: ರಾಜಗೋಪಾಲ್, ಡಿಆರ್, ಪ್ರಾಧ್ಯಾಪಕರು ಕೀಟಶಾಸ್ತ್ರ, ಉದಯಕುಮಾರ್ ಪ್ರಾಧ್ಯಾಪಕರು, ಜಿಕೆವಿಕೆ, ಸಿದ್ಧರಾಮೇಗೌಡರು - ಈ ತಂಡ ನಾಳೆ 8 ಗಂಟೆಗೆ ಹೋಗುತ್ತಿದೆ. ಅವರ ವರದಿ ಬಂದ ತಕ್ಷಣ ಕೀಟನಾಶಕದ ವಿಚಾರದಲ್ಲಿ ಏನೇನು ಅಗತ್ಯ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : ಅಧ್ಯಕ್ಷರೇ, ಒಂದು ಪ್ರೋಟೋಕಾಲ್ ವಿಷಯ. ಮುಖ್ಯಮಂತ್ರಿಗಳು 20ನೇ ತಾರೀಖು ನನ್ನ ಕ್ಷೇತ್ರಕ್ಕೆ ಬರುತ್ತಿದ್ದಾರೆ.

(ಗದ್ದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅವರಿಗೆ ಔಷಧಿಗೆ ಹಣ ಕೊಟ್ಟರೆ ಸಾಕು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಔಷಧಿಗೆ ಹಣ ಕೊಟ್ಟರೆ ಸಾಕು.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಿಂಧ್ಯರವರು ಔಷಧಿಗೆ ಹಣ ಕೊಟ್ಟರೆ ಸಾಕೆಂದು ಹೇಳುತ್ತಿದ್ದಾರೆ. ಹಣದ ಕೊರತೆ ಯಾವುದಾದರೂ ಕ್ಷೇತ್ರದಲ್ಲಿದ್ದರೆ ಹೇಳಿ ನಾನು ತುರ್ತಾಗಿ ಕ್ರಮ ತೆಗೆದುಕೊಳ್ಳುತ್ತೇನೆ. ಹಣ ಕೊಟ್ಟಿದ್ದೇವೆ.

ಅಧ್ಯಕ್ಷರು : ನಿನ್ನೆಯಿಂದ ಅವರು ಪ್ರತಿಪಾದನೆ ಮಾಡುತ್ತಿದ್ದಾರೆ. ತಕ್ಷಣ ಔಷಧಿಯನ್ನು ಬಿಡುಗಡೆ ಮಾಡಿ ರೋಗ ನಿವಾರಣೆ ಮಾಡಿ ಎಂದು ಕೇಳುತ್ತಿದ್ದಾರೆ. ಅದಕ್ಕೇನು ಕ್ರಮ ತೆಗೆದುಕೊಂಡಿದ್ದೀರಿ ಅದನ್ನು ಹೇಳಿ.

ಶ್ರೀ ಎ. ಕೃಷ್ಣಪ್ಪ : ಆಗಲೇ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಔಷಧಿಯಿಂದ ಪ್ರಯೋಜನವಾಗುತ್ತಿಲ್ಲ.

ಶ್ರೀ ಎ. ಕೃಷ್ಣಪ್ಪ : ಒಬ್ಬರು ಔಷಧಿಯತ್ತ ಪ್ರಯೋಜನವಿಲ್ಲವೆಂದು ಹೇಳುತ್ತಾರೆ, ಮತ್ತೊಬ್ಬರು ಹುಳದಿಂದ ಪ್ರಯೋಜನವಿಲ್ಲವೆನ್ನುತ್ತಾರೆ, ಮತ್ತೊಬ್ಬರು ಟೀಮ್ ಕಳಿಸಿ ಎಂದು ಹೇಳುತ್ತಾರೆ.

(3) ಸರಕಾರಿ ಕಾರ್ಯಕ್ರಮಗಳಲ್ಲಿ ಶಾಸಕರುಗಳಿಗೆ ಪ್ರಾಧ್ಯಾನ್ಯತೆ.

ಶ್ರೀ ಎಂ. ನಾರಾಯಣಸ್ವಾಮಿ : 21 ರಂದು ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಭೇಟಿ ಕೊಡುತ್ತಿದ್ದಾರೆ. ಅಲ್ಲಿ ಮುಜರಾಯಿ ಇಲಾಖೆಯವರು ಮತ್ತು ಆಂಧ್ರದವರು ಇಬ್ಬರೂ ಸೇರಿಕೊಂಡು ಒಂದು ಛತ್ರ ಕಟ್ಟಿಸಿದ್ದಾರೆ. ಇದಕ್ಕೆ

ಎನ್.ಟಿ.ಆರ್. ಅವರ ಸರಕಾರ ಕೂಡ ಹಣ ಬಿಡುಗಡೆ ಮಾಡಿತ್ತು. ಆದರೆ ಆ ಸ್ಟೋನ್‌ನಲ್ಲಿ ನನ್ನ ಹೆಸರು ಇಲ್ಲ, ಅಲ್ಲಿ ಪ್ರೊಟೋಕಾಲ್ ಮೈನ್‌ಟೇನ್ ಮಾಡಲಿಲ್ಲ. ಅದನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದೆ. 3 ರೀತಿ ಕಾರ್ಡ್ ಪ್ರಿಂಟಾಗಿದೆ. ನನಗೆ ಅವಮಾನ ಮಾಡುತ್ತಿದ್ದಾರೆ. ಪ್ರೊಟೋಕಾಲ್ ಏನು ಇದೆ ಅದರಲ್ಲಿ ಸಮಿತಿ ಏನು ಇದೆ ಅದಕ್ಕೆ ತಾವು ಆದೇಶ ಕೊಡಬೇಕು.

ಶ್ರೀ ಸಿ. ಬೈರೇಗೌಡ : ಬಹಳ ಸಾರಿ ಇಲ್ಲಿ ಈ ರೀತಿಯ ವಿಷಯಗಳು ಪ್ರಸ್ತಾಪವಾಗಿದೆ.

ಅಧ್ಯಕ್ಷರು : ಸಭೆ ಸಮಾರಂಭಗಳಲ್ಲಿ ಶಾಸಕರಿಗೇನು ಗೌರವ ಕೊಡಬೇಕು ಆ ಗೌರವ ಕೊಡುವುದಕ್ಕೆ ತಾವು ಏರ್ಪಾಡು ಮಾಡಿ. ನಾನು ಅವರಿಗೆ ಆದೇಶ ಕೊಟ್ಟಿದ್ದೇನೆ. ಶಾಸಕರಿಗೆ ಯಾವ ಗೌರವ ಸಿಗಬೇಕು ಯಾವ ಸ್ಥಾನ ಸಿಗಬೇಕು ಅದನ್ನು ಕೊಡುವ ಏರ್ಪಾಡು ಮಾಡಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಅದು ಸರಕಾರ ಹೊರಡಿಸಿದ ನಿಯಮದಲ್ಲೇ ಇದೆ. ಸರಕಾರಿ ಕಾರ್ಯಕ್ರಮಗಳಲ್ಲಿ ಶಾಸಕರಿಗೆ ಪ್ರಾಧಾನ್ಯತೆ ಕೊಡಬೇಕೆಂದಿದೆ ಅದನ್ನು ಅದರಂತೆ ಕೊಡುತ್ತೇವೆ.

ಶಾಸನ ರಚನಾ ಕಾರ್ಯಕಲಾಪಗಳು.

(1) ಕರ್ನಾಟಕ ರೇಷ್ಮೆ ಹುಳುತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನಾ ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ (ತಿದ್ದುಪಡಿ) ವಿಧೇಯಕ, 1994.

ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : (ಮಾನ್ಯ ರೇಷ್ಮೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 1994ರ ಕರ್ನಾಟಕ ರೇಷ್ಮೆ ಹುಳ ತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು ಉತ್ಪಾದನೆ ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವೇನೆಂದರೆ, "1994ರ ಕರ್ನಾಟಕ ರೇಷ್ಮೆ ಹುಳ ತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು ಉತ್ಪಾದನೆ ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ (ತಿದ್ದುಪಡಿ) ವಿಧೇಯಕ"ವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : (ಮಾನ್ಯ ರೇಷ್ಮೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 1994ರ ಕರ್ನಾಟಕ ರೇಷ್ಮೆ ಹುಳ ತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು ಉತ್ಪಾದನೆ ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

1993ರ ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ವಿಧೇಯಕ

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 1993ರ ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ. ವಿವರಗಳನ್ನು ವಿಧೇಯಕದಲ್ಲಿ ನಮೂದಿಸಿದ್ದೇವೆ. ಅದರ ಜೊತೆಯಲ್ಲಿ ಕೆಲವು ತಿದ್ದುಪಡಿಗಳನ್ನು ಸೂಚಿಸುತ್ತಿದ್ದೇವೆ. ಬಹಳ ದಿವಸದಿಂದ ಶಾಸಕರ ಅವಶ್ಯಕತೆಯ ಆಧಾರದ ಮೇಲೆ ಈ ಬೇಡಿಕೆ ಇದ್ದು ಅದನ್ನು ಜಾರಿಗೆ ತರಬೇಕೆಂದು ಇಲ್ಲಿ ಇದನ್ನು ಮಂಡನೆ ಮಾಡಿದೆ. ಮತ್ತು ಇದನ್ನು ಸೆಪ್ಟೆಂಬರ್ 1 ರಿಂದ 93ನೇ ಸಾಲಿನಿಂದ ಜಾರಿಗೆ ತರಬೇಕೆಂದು ತಿದ್ದುಪಡಿಯನ್ನು ಮಂಡಿಸುತ್ತಿದ್ದೇವೆ. ಇದರಿಂದ ಅನಾವಶ್ಯಕ ಹೆಚ್ಚಳವೇನೂ ಆಗಿಲ್ಲ, ಇನ್ನು ಕಡಿಮೆ ಇದೆ. ಮಾನ್ಯ ಸಭೆಯವರು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ವಿನಂತಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1993ರ ಕರ್ನಾಟಕ ವಿಧಾನ ಮಂಡಲದವರ ವೇತನಗಳ ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು

ಖಂಡ 2

ಅಧ್ಯಕ್ಷರು : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 3ಕ್ಕೆ ತಿದ್ದುಪಡಿ :

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಈ ಕೆಳಕಂಡ ತಿದ್ದುಪಡಿಯನ್ನು ಖಂಡ 3 ಕ್ಕೆ ಮಂಡಿಸುತ್ತೇನೆ.

"That for Clause 3 of thd said Bill the following shall be substituted, namely :

"3. Amendment of Section 4 : In Section 4 of the Principal Act, -

(i) in sub-section (1), after the words "city of Bangalore, "the words" or within thirty kilometer from the limits of the city of Bangalore" shall be inserted.

(ii) in sub-section (2), the following shall be inserted at the end namely:

"He shall be entitled for an allowance of five thousand rupees per month for maintenance and upkeep of the residence and for layout and maintenance of gardens included in such residence."

ಅಧ್ಯಕ್ಷರು : ತಿದ್ದುಪಡಿಯನ್ನು ಮಂಡಿಸಲಾಗಿದೆ. ಈಗ ಈ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ :

"That for Clause 3 of the said Bill, the following shall be substituted, namely:

"3. Amendment of Section 4 : In Section 4 of the Principal Act :

(i) in sub-section (1). after the words "city of Bangalore," "the words,"or within thirty kilometer from the limits of the city of Bangalore" shall be inserted.

(ii) in sub-section (2), the following shall be inserted at the end namely:

"He shall be entitled for an allowance of five thousand rupees per month for maintenance and upkeep of the residence and for layout and maintenance of gardens included in such residence."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 3 ತಿದ್ದುಪಡಿಯೊಂದಿಗೆ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : "ಖಂಡ 3 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 3, ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 4 ಮತ್ತು 5 (ಎರಡೂ ಸೇರಿದಂತೆ)

ಅಧ್ಯಕ್ಷರು : "ಖಂಡ 4 ಮತ್ತು 5 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 4 ಮತ್ತು 5 ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

1.55 ಪಿ.ಎಂ.

ಖಂಡ 6ಕ್ಕೆ ತಿದ್ದುಪಡಿ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಆರನೇ ಖಂಡಕ್ಕೆ ತಿದ್ದುಪಡಿ ಈ ರೀತಿ ಇದೆ.

"That clause 6 of the Bill, for the words, "five rupees", the words "six rurpees" shall be substituted".

ಪ್ರಸ್ತಾವ ಮಂಡಿಸಲ್ಪಟ್ಟಿತು.

ಅಧ್ಯಕ್ಷರು : "ಖಂಡ 6ಕ್ಕೆ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ :"That in Clause 6 of the Bill, for the words "Five rupees", the words "Six rupees" shall be substituted".

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ 6 ತಿದ್ದುಪಡಿಯಾದ ರೀತಿಯಲ್ಲಿ :

ಅಧ್ಯಕ್ಷರು : ಖಂಡ 6, ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 6, ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 7 ಮತ್ತು 8

ಅಧ್ಯಕ್ಷರು : "ಖಂಡ 7 ಮತ್ತು 8 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 7 ಮತ್ತು 8 ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 9 ಕ್ಕೆ ತಿದ್ದುಪಡಿ

ಶ್ರೀ ಪಾರ್ವಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಖಂಡ 9ಕ್ಕೆ ಈ ತಿದ್ದುಪಡಿಯನ್ನು ಸೂಚನೆ ಮಾಡುತ್ತಿದ್ದೇನೆ. "That in section 10B of the Principal Act,

in Sub - Section (1), after the words "city of Bangalore", the words "or within thirty kilometer from the limits of the city of Bangalore" shall be inserted"

ಎನ್ನುವುದನ್ನು ಸೇರಿಸಬೇಕು ; ಹೊಸದಾಗಿ

"That in Sub-Section (2) the following shall be inserted at the end namely:

"He shall be entitled for an allowance of five thousand rupees per month for maintenance and up keep of the residence and for layout and maintenance of gardens included in such residence".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"That in section 10 B of the Principal Act, in subs-section (1), after the words "City of Bangalore", the words "or within thirty kilometer from the limits of the City of Bangalore" shall be inserted:

That in Sub-Section (2) the following shall be inserted at the end namely:

"He shall be entitled for an allowance of five thousand rupees per month for maintenance & upkeep of the residence & for the layout and maintenance of gardens included in such residence ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 9 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 9 ತಿದ್ದುಪಡಿಯಾದ ರೀತಿಯಲ್ಲಿ ಈ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(9ನೇ ಖಂಡ ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 10:

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 10 ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(10ನೇ ಖಂಡ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 11ಕ್ಕೆ ತಿದ್ದುಪಡಿ :

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, 11ನೇ ಖಂಡಕ್ಕೆ ಈ ತಿದ್ದುಪಡಿಯನ್ನು ಸೂಚನೆ ಮಾಡುತ್ತಿದ್ದೇನೆ.

"That in Section 10 F of the Principal Act: in sub-section (1), after the words 'City of Bangalore, the words" or within thirty kilometer from the limits of the city of Bangalore" shall be inserted.

ಎನ್ನುವುದನ್ನು ಸೇರಿಸಬೇಕು ಮತ್ತು

"That in sub-section (2) the following shall be inserted at the end namely:-

"He shall be entitled for an allowance of five thousand rupees per month for maintenance and upkeep of the residence and for layout and maintenance of garden included in such residence".

ಅಧ್ಯಕ್ಷರು :"ಪ್ರಸ್ತಾವ ಏನೆಂದರೆ :

"That in Section 10 F of the Principal Act: in subËsection (1), after the words 'City of Bangalore, the words" or within thirty kilometer from the limits of the city of Bangalore" shall be inserted.

"That in sub-section (2) the following shall be inserted at the end namely:-

"He shall be entitled for an allowance of five thousand rupees per month for maintenance and upkeep of the residence and for layout and maintenance of garden included in such residence".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 11 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : "ಪ್ರಸ್ತಾವ ಏನೆಂದರೆ ಖಂಡ 11 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

([illegible]ನೇ ಖಂಡ ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 12

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 12 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 12 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 13ಕ್ಕೆ ತಿದ್ದುಪಡಿ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :ಮಾನ್ಯ ಅಧ್ಯಕ್ಷರೆ, "13ನೇ ಖಂಡದಲ್ಲಿ 'ಬೆಂಗಳೂರು ನಗರ' ಎನ್ನುವುದರ ಬದಲು 'ಬೆಂಗಳೂರು ನಗರದ ಸುತ್ತಮುತ್ತ 30 ಕಿಲೋಮೀಟರ್ ಒಳಗಿರುವ ಭಾಗ' ಎಂದು ಸೇರಿಸುವುದು ಮತ್ತು ಸ್ವಂತ ವಾಸವಾಗಿರತಕ್ಕ ಮನೆಯ ನಿರ್ವಹಣೆಗಾಗಿ 5,000 ರೂಪಾಯಿಗಳನ್ನು ಕೊಡುವ ತಿದ್ದುಪಡಿಯನ್ನು ಸೂಚಿಸುತ್ತಿದ್ದೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"13ನೇ ಖಂಡದಲ್ಲಿ 'ಬೆಂಗಳೂರು ನಗರ' ಎನ್ನುವುದರ ಬದಲು 'ಬೆಂಗಳೂರು ನಗರದ ಸುತ್ತಮುತ್ತ 30 ಕಿಲೋಮೀಟರ್ ಒಳಗಿರುವ ಭಾಗ' ಎಂದು ಸೇರಿಸುವುದು ಮತ್ತು ಸ್ವಂತ ವಾಸವಾಗಿರತಕ್ಕ ಮನೆಯ ನಿರ್ವಹಣೆಗಾಗಿ 5,000 ರೂಪಾಯಿಗಳನ್ನು ಕೊಡುವ ತಿದ್ದುಪಡಿಯನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 13 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : "ಖಂಡ 13 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಗೀಕರಿಸಲ್ಪಟ್ಟಿತು ಹಾಗೂ ಖಂಡ ೧೩ ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 14

ಅಧ್ಯಕ್ಷರು : ' ಖಂಡ 14 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 14 ನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 15ಕ್ಕೆ ತಿದ್ದುಪಡಿ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಖಂಡ 15ರಲ್ಲಿ 'ಒಂದು ಸಾವಿರ ರೂಪಾಯಿಗಳು' ಎನ್ನುವುದರ ಬದಲು 'ಒಂದೂವರೆ ಸಾವಿರ ರೂಪಾಯಿಗಳು' ಎಂದು 'ಐದು ನೂರು ರೂಪಾಯಿಗಳು' ಎನ್ನುವ ಬದಲು 'ಒಂದೂವರೆ ಸಾವಿರ ರೂಪಾಯಿಗಳು' ಎಂದು 'ಒಂದು ಸಾವಿರ ರೂಪಾಯಿಗಳು' ಎನ್ನುವ ಬದಲು 'ಎರಡ ಸಾವಿರ ರೂಪಾಯಿಗಳು' ಎಂದು ಸೇರಿಸುವುದು ಮತ್ತು 5ನೇ ಉಪ ಖಂಡದ ನಂತರ 'provided also that where a member resigns after serving for a period of more than three years, he shall be deemed to have served as member for five years."

ಎನ್ನುವ ಪದವನ್ನು ಸೇರಿಸುವುದು, ಖಂಡ 'ಬಿ'ನಲ್ಲಿ 'ಒಂದು ಸಾವಿರ ರೂಪಾಯಿ' ಎನ್ನುವ ಬದಲು 'ಒಂದು ಸಾವಿರದ ಎರಡು ನೂರು ರೂಪಾಯಿ' ಎಂದು ಮತ್ತು 1(ಎ) ಉಪಖಂಡದಲ್ಲಿ 'ಒಂದು ಸಾವಿರದ ಐದು ನೂರು ರೂಪಾಯಿ' ಬದಲು 'ಎರಡು ಸಾವಿರ ರೂಪಾಯಿ' ಎಂದು ಹಾಗೂ 'ಬೆಂಗಳೂರು' ಎನ್ನುವ ಬದಲಾಗಿ 'ಕರ್ನಾಟಕದ ಯಾವುದೇ ಸ್ಥಳ' ಎನ್ನುವ ತಿದ್ದುಪಡಿಯನ್ನು ಸೂಚಿಸುತ್ತಿದ್ದೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"ಖಂಡ 15ರಲ್ಲಿ 'ಒಂದು ಸಾವಿರ ರೂಪಾಯಿಗಳು' ಎನ್ನುವುದರ ಬದಲು 'ಒಂದೂವರೆ ಸಾವಿರ ರೂಪಾಯಿಗಳು' ಎಂದು 'ಐದು ನೂರು ರೂಪಾಯಿಗಳು' ಎನ್ನುವ ಬದಲು 'ಒಂದೂವರೆ ಸಾವಿರ ರೂಪಾಯಿಗಳು' ಎಂದು 'ಒಂದು ಸಾವಿರ ರೂಪಾಯಿಗಳು' ಎನ್ನುವ ಬದಲು 'ಎರಡು ಸಾವಿರ ರೂಪಾಯಿಗಳು' ಎಂದು ಸೇರಿಸುವುದು ಮತ್ತು 5ನೇ ಉಪ ಖಂಡದ ನಂತರ 'provided also that where a member resigns after serving for a period of more than three years, he shall be deemed to have served as member for five years."

ಎನ್ನುವ ಪದವನ್ನು ಸೇರಿಸುವುದು, ಖಂಡ 'ಬಿ'ನಲ್ಲಿ 'ಒಂದು ಸಾವಿರ ರೂಪಾಯಿ' ಎನ್ನುವ ಬದಲು 'ಒಂದು ಸಾವಿರದ ಎರಡು ನೂರು ರೂಪಾಯಿ' ಎಂದು ಮತ್ತು 1(ಎ) ಉಪಖಂಡದಲ್ಲಿ 'ಒಂದು ಸಾವಿರದ ಐದು ನೂರು ರೂಪಾಯಿ' ಬದಲು 'ಎರಡು ಸಾವಿರ ರೂಪಾಯಿ' ಎಂದು ಹಾಗೂ 'ಬೆಂಗಳೂರು' ಎನ್ನುವ ಬದಲಾಗಿ 'ಕರ್ನಾಟಕದ ಯಾವುದೇ ಸ್ಥಳ' ಎನ್ನುವ ತಿದ್ದುಪಡಿಯನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 15 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : 'ಖಂಡ 15 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 15 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 16

ಅಧ್ಯಕ್ಷರು : 'ಖಂಡ 16 ಈ ವಿಧೇಯಕದ ಅಂಗವಾಗಿರುತ್ತದೆ'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 16ನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 17ಕ್ಕೆ ತಿದ್ದುಪಡಿ

ಅಧ್ಯಕ್ಷರು : ಈಗ ಮಾನ್ಯ ಸದಸ್ಯರುಗಳಾದ ಶ್ರೀ ಬಿ.ಐ. ಪಾಟೀಲ್ ಮತ್ತು ಶಿವಾನಂದ ಹೆಚ್. ಕೌಜಲಗಿಯವರು ಒಂದು ತಿದ್ದುಪಡಿ ಕೊಟ್ಟಿದ್ದಾರೆ. "That I beg to move"

Sri Shivananda H. Koujalagi : after the words "in any part of the State of Karnataka",the words "or outside the State"shall be inserted in 17BB.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಈ ತಿದ್ದುಪಡಿಯನ್ನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ, ಮುಂಬಯಿಗೆ ಬಸ್ಸುಗಳು ಹೋಗುತ್ತವೆ, ಅದರಂತೆ ಬೇರೆ ಕಡೆಗಳಿಗೂ ಬಸ್ಸುಗಳು ಹೋಗುತ್ತವೆ. ಮಾನ್ಯ ಸದಸ್ಯರು ಮಂಡಿಸಿರುವ ತಿದ್ದುಪಡಿಯನ್ನು ಒಪ್ಪುವುದಕ್ಕೆ ಮುಂಚಿತವಾಗಿ ನಾವು ಸಾರಿಗೆ ಇಲಾಖೆಯವರನ್ನು ಕೇಳಬೇಕಾಗುತ್ತದೆ ಮತ್ತು ಹಣಕಾಸಿನ ಪರಿಸ್ಥಿತಿ ಏನೆಂದು ನೋಡಬೇಕಾಗುತ್ತದೆ. ಆದುದರಿಂದ, ಈ ತಿದ್ದುಪಡಿಗೆ ಮಾನ್ಯ ಸದಸ್ಯರುಗಳು ಒತ್ತಾಯಿಸದೆ ಸದ್ಯಕ್ಕೆ ಈ ವಿಷಯವನ್ನು ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಪ್ರತಿಯೊಬ್ಬ ಶಾಸಕರಿಗೂ ಉಚಿತ ಪಾಸ್ ಒದಗಿಸಲಾಗಿದೆ. ಆದರೆ ಆ ಪಾಸ್‌ನಲ್ಲಿ ಏನು ಇದೆ ಎಂದರೆ, ಕರ್ನಾಟಕ ರಾಜ್ಯವೆಂದು ಬರೆದಿಲ್ಲ, ಕೆಲವುಕಡೆ ಹೋದಾಗ ನಿರ್ವಾಹಕರು ತಕರಾರು ಮಾಡುತ್ತಾರೆ. ಆ ಒಂದು ಸಂದಿಗ್ಧ ಸ್ಥಿತಿಯಲ್ಲಿ ಇವತ್ತು ಅಮೆಂಡ್‌ಮೆಂಟ್‌ನ್ನು ತಂದರು. ಕೆಲವು ಕಡೆ ಹೋಗೇ ಹೋಗುತ್ತೇವೆ. ಅನುಮತಿಯನ್ನು ಕೊಡುತ್ತಾರೆ. ಆದರೆ ಕೆಲವು ಕಡೆ ನಿರ್ವಾಹಕರು ಬೇರೆ ರಾಜ್ಯಗಳಿಗೆ ಇಲ್ಲವೆಂದು ಹೇಳುತ್ತಾರೆ. ಆದ್ದರಿಂದ ರಾಜ್ಯ ರಸ್ತೆ ಸಾರಿಗೆ ಬಸ್ಸು ಎಲ್ಲಿಗೆ ಹೋಗುತ್ತದೆ ಅಲ್ಲಿ ನಾವು ಪ್ರಯಾಣ ಮಾಡಲು ಸರಿಯಾದ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು : ತಿದ್ದುಪಡಿಯನ್ನು ಮಂಡಿಸಲಾಗಿದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಅದನ್ನು ಕೆ.ಎಸ್.ಆರ್.ಟಿ.ಸಿ.ಯವರು ಒಪ್ಪುವುದಿಲ್ಲ. ಅದು ಬೇಡ. ಆದ್ದರಿಂದ ಶಿವಾನಂದ ಕೌಜಲಗಿಯವರೇ, ದಯವಿಟ್ಟು ಅದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಒಪ್ಪುವುದಿಲ್ಲವೆಂದು ಹೇಳಿದರೆ ಹೇಗೆ? ತಾವು ಒಪ್ಪಿಸಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ದಯಮಾಡಿ ಶಿವಾನಂದ ಕೌಜಲಗಿಯವರು ಅದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ. ಅಂಥ ಅವಶ್ಯಕತೆ ಬಂದರೆ ಅದರ ಬಗ್ಗೆ ಪಾಲಿಸಿ ಡಿಸಿಷನ್‌ನ್ನು ತೆಗೆದುಕೊಂಡು ಮುಂದೆ ಮಾಡೋಣ.

ಶ್ರೀ ಡಿ.ಕೆ. ಶಿವಕುಮಾರ್ : ಕೆಎಸ್‌ಆರ್‌ಟಿಸಿ ಒಪ್ಪುವುದಿಲ್ಲವೆಂದು ಹೇಳಿದರೆ, ಸರ್ಕಾರವೇನು ಮಾಡುತ್ತದೆ? ಕೆಎಸ್‌ಆರ್‌ಟಿಸಿ ಸರ್ಕಾರಕ್ಕಿಂತ ಮೇಲಿದೆಯೋ, ದೊಡ್ಡದೋ ಅಥವಾ ಕೆಳಗೆ ಇದ್ದೆಯೋ? ಒಪ್ಪಿಸುವ ಜವಾಬ್ದಾರಿ ಸರ್ಕಾರದ್ದು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಇನ್ನೊಂದು ಸಲಹೆ ಇದೆ, ಇದು ಇನ್ನೂ ತೀರ್ಮಾನವಾಗಿಲ್ಲ. ಅದೇನೆಂದರೆ ಮಾಜಿ ಶಾಸಕರಿಗೆ ಮಾಜಿ ಲೋಕಸಭಾ, ರಾಜ್ಯಸಭಾ ಸದಸ್ಯರುಗಳಿಗೆ ಕೊಟ್ಟಂತೆ ಉಚಿತ ಪಾಸ್ ಕೊಡಬೇಕೆಂಬ ಬಗ್ಗೆ ಸಲಹೆ ಇದೆ. ಅವೆಲ್ಲವನ್ನು ಒಟ್ಟಿಗೆ ಪರಿಶೀಲನೆ ಮಾಡಿ ಮಾಡೋಣ.

(ಗೊಂದಲ)

ಈ ವಿಧೇಯಕವನ್ನು ಸುಲಭವಾಗಿ ಪಾಸ್ ಮಾಡಿಕೊಂಡು ಮುಂದೆ ಹೋಗುವುದಾದರೆ ದಯವಿಟ್ಟು ವಾಪಸ್ ತೆಗೆದುಕೊಳ್ಳಿ. ಇಲ್ಲದಿದ್ದರೆ ಇದಕ್ಕೆ ಇನ್ನು ಕೆಲವೊಂದು ತಾಂತ್ರಿಕ ಅಡಚಣೆ ಇದೆ. ಆದ್ದರಿಂದ ದಯವಿಟ್ಟು ಇದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ನಮ್ಮ ಕೆಎಸ್‌ಆರ್‌ಟಿಸಿ ಸರ್ಕಾರಿ ಬಸ್‌ನಲ್ಲಿ ಒಂದು 50-100 ಕಿ.ಮೀ. ದೂರವಿರಬಹುದು. ಅದನ್ನು ಒಪ್ಪಲು ಆಗುವುದಿಲ್ಲವೆಂದರೆ

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಇದು ಮಂತ್ರಿಮಂಡಲ ಸಭೆಗೆ ಹೋಗಿ ಒಪ್ಪಿಗೆಯಾಗಬೇಕು, ಮುಖ್ಯಮಂತ್ರಿಗಳ ಒಪ್ಪಿಗೆಯಾಗಬೇಕು. There is a procedure. We cannot over-rule the procedure.

Sri Qumarul Islam : Sir, actually they are allowing. Some of the Conductors are objecting. For that some clarification is needed, in this amendment. Otherwise you assure in this House that a direction will go from the Hon'ble Minister or from the Government to this effect. This is an interpretation.

Sri Harnahally Ramaswamy : I can only submit and say that the matter will be considered with all seriousness.

ಶ್ರೀ ಶಿವಾನಂದ ಕೌಜಲಗಿ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಒಂದು ಕ್ಲಾರಿಫಿಕೇಷನ್ ಮಾಡಿದರೆ ಸಾಕು. ಅದೇನೆಂದರೆ, ರಾಜ್ಯ ರಸ್ತೆ ಸಾರಿಗೆ ಬಸ್ಸುಗಳಲ್ಲಿ ಒಬ್ಬರು ಸಂಗಡಿಗರೊಂದಿಗೆ ಉಚಿತವಾಗಿ ಪ್ರಯಾಣ ಮಾಡಲು ಅರ್ಹರು ಎಂದು ಇರಬೇಕು. ಇದರಲ್ಲಿ ಏನಿದೆ ಎಂದರೆ, ಕೆಲವು ಮಂದಿ ಕರ್ನಾಟಕ ರಾಜ್ಯದಲ್ಲಿ ಮಾತ್ರ ಪ್ರಯಾಣ ಮಾಡಲು ಅರ್ಹರೆಂದು ಹೇಳುತ್ತಾರೆ. ಆದ್ದರಿಂದ ರಾಜ್ಯದ ರಸ್ತೆ ಸಾರಿಗೆ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಅರ್ಹರು ಎಂದು ತಾವು ಒಂದು ಸ್ಟೇಟ್‌ಮೆಂಟ್ ಕೊಟ್ಟರೆ ಸಾಕು. ಆದ್ದರಿಂದ ತಾವು ರಾಜ್ಯ ರಸ್ತೆ ಸಾರಿಗೆ ಬಸ್ಸುಗಳಲ್ಲಿ ಎಲ್ಲಿಗೆ ಬೇಕಾದರೂ ಪ್ರಯಾಣ ಮಾಡಲು ಅರ್ಹರು ಎಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟರೆ ಸಾಕು. ಅದರ ಬಗ್ಗೆ ಕ್ಲಾರಿಫಿಕೇಷನ್ ಕೊಟ್ಟರೆ I will not question further.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಅಧ್ಯಕ್ಷರೆ, ಇದುವರೆಗೆ ಬೆಂಗಳೂರಿಗೆ 12 ಸಾರಿ ಬಂದು ಹೋಗಲು ಅವಕಾಶವಿದೆ ಎಂದು ನಿಯಮ ಇತ್ತು. ನಾವು ಈಗ ಇದಕ್ಕೆ ತಿದ್ದುಪಡಿಯನ್ನು ತಂದಿದ್ದೇವೆ. ಅದರಲ್ಲಿ ರಾಜ್ಯದ ಯಾವುದೇ ಭಾಗದಲ್ಲಿ ರಾಜ್ಯದೊಳಗೆ 12 ಸಾರಿ ಪ್ರಯಾಣ ಮಾಡಿ ಬರಲು ಅಡ್ಡಿ ಇಲ್ಲವೆಂದು ಮಾಡಿದ್ದೇವೆ.

ಅಧ್ಯಕ್ಷರು : ಅವರು ಏನು ಹೇಳುತ್ತಿದ್ದಾರೆಂದರೆ, ತಾವು ಏನು ಅವರಿಗೆ ಬಸ್ ಪಾಸ್‌ನ್ನು ಕೊಟ್ಟಿದ್ದೀರಿ. ಅದರಲ್ಲಿ ರಾಜ್ಯದ ವ್ಯಾಪ್ತಿ ಏನು ಇದೆ ಅದನ್ನೇ ತಿದ್ದುಪಡಿ ಮಾಡಿ ಬಸ್ಸು ಎಲ್ಲಿಯವರೆಗೆ ಹೋಗುತ್ತದೆ ಅಲ್ಲಿಯವರೆಗೆ ಪ್ರಯಾಣ ಮಾಡಲು ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. –

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಅದರ ಬಗ್ಗೆ ಸಾರಿಗೆ ಇಲಾಖೆಯವರ ಜೊತೆಯಲ್ಲಿ ಚರ್ಚೆ ಮಾಡಿ ಪರಿಶೀಲನೆ ಮಾಡುತ್ತೇನೆ. Let us consider this, but not under this Bill.

ಶ್ರೀ ಶಿವಾನಂದ ಹೆಚ್. ಕೌಜಲಗಿ : ನಾನು ಮಂಡಿಸಿದ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಈ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಭೆಯ ಸಮ್ಮತಿ ಇದೆಯೇ?

ಮಾನ್ಯ ಸದಸ್ಯರು :ಹೌದು.

ಅಧ್ಯಕ್ಷರು : ಮಾನ್ಯ ಸದಸ್ಯರು ಮಂಡಿಸಿದ್ದ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯು ಅನುಮತಿ ನೀಡಿತು.

ಅಧ್ಯಕ್ಷರು : ಸದಸ್ಯರಾದ ಬಿ.ಐ. ಪಾಟೀಲ್ ಮತ್ತು ಎಸ್.ಹೆಚ್. ಕೌಜಲಗಿಯವರು ಮಂಡಿಸಿದ್ದ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳಲಾಗಿದೆ.

Sri Harnahalli Ramaswamy : Thank you.

Amendment to Clause 17 :

Sri Harnalli Ramaswamy : (Minister for Law & Parlimentary Affairs) : I beg to move the following amendments ;

"In Clause 17 of the Bill, in sub-clause (a), for the words "three rupees fifty paise", the words "four rupees and fifty paise" shall be substituted.

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು : ಪ್ರಶ್ನೆ ಏನೆಂದರೆ,

"17ನೇ ಖಂಡದ ಉಪ ಖಂಡ 'ಎ' ನಲ್ಲಿರುವ 'ಮೂರು ರೂಪಾಯಿ ಐವತ್ತು ಪೈಸೆ' ಬದಲು 'ನಾಲ್ಕು ರೂಪಾಯಿ ಐವತ್ತು ಪೈಸೆ' ಎನ್ನುವ ತಿದ್ದುಪಡಿಯನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 17 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : "ಖಂಡ 17 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 17 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1ಕ್ಕೆ ತಿದ್ದುಪಡಿ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಒಂದನೇ ಖಂಡದ ಕಾನೂನು 1993ರ ಸೆಪ್ಟೆಂಬರ್‌ನಿಂದ ಈ ವಿಧೇಯಕದ ಎಲ್ಲಾ ಭಾಗಗಳಲ್ಲೂ ಜಾರಿಗೆ ಬರುತ್ತದೆ. ಮತ್ತು 9ನೇ ಖಂಡದ ಅಂಗಗಳು 1990ನೇ ಜೂನ್ 21ರಿಂದ ಜಾರಿಗೆ ಬರುತ್ತದೆ ಎನ್ನುವ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು : ಪ್ರಶ್ನೆ ಏನೆಂದರೆ :

"ಒಂದನೇ ಖಂಡದ ಕಾನೂನು 1993ರ ಸೆಪ್ಟೆಂಬರ್‌ನಿಂದ ಈ ವಿಧೇಯಕದ ಎಲ್ಲಾ ಭಾಗಗಳಲ್ಲೂ ಜಾರಿಗೆ ಬರುವ ಮತ್ತು 9ನೇ ಖಂಡದ ಅಂಗಗಳು 1990ನೇ ಜೂನ್ 21ರಿಂದ ಜಾರಿಗೆ ಬರುತ್ತದೆ ಎನ್ನುವ ತಿದ್ದುಪಡಿಯನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 1 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : "ಖಂಡ 1 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 1 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ...ರು) : ಮಾನ್ಯ ಅಧ್ಯಕ್ಷರೆ, 1993ರ ಕರ್ನಾಟಕ ವಿಧಾನಮಂಡಲದವರ ವೇತನಗ...

ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೂಪದಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1993ರ ಕರ್ನಾಟಕ ವಿಧಾನಮಂಡಲದವರ ವೇತನಗಳ ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೂಪದಲ್ಲಿ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

2) 1994ರ ಕರ್ನಾಟಕ ಸಚಿವರ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, 1994ರ ಕರ್ನಾಟಕ ಸಚಿವರ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1994ರ ಕರ್ನಾಟಕ ಸಚಿವರ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 3ಕ್ಕೆ ತಿದ್ದುಪಡಿ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, "3ನೇ ಖಂಡಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಸೂಚಿಸುತ್ತಿದ್ದೇನೆ.

"That Section 4 of the principal Act, in sub-section (2), the following shall be inserted at the end, namely :

"He shall be entitled for an allowance of five thousand rupees per month for maintenance and upkeep of residence and for layout and maintenance of gardens included in such residence."

(ಪ್ರಸ್ತಾವ ಮಂಡಿಸಲ್ಪಟ್ಟಿತು)

ಅಧ್ಯಕ್ಷರು : ಪ್ರಶ್ನೆ ಏನೆಂದರೆ "That Section 4 of the principal Act, in sub-section (2), the following shall be inserted at the end, namely:

"He shall be entitled for an allowance of five thousand rupees per month for maintenance and upkeep of residence and for layout and maintenance of gardens included in such residence."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 3, ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : "ಖಂಡ 3, ತಿದ್ದುಪಡಿಯಾದ ರೀತಿಯಲ್ಲಿ, ಈ ವಿಧೇಯಕದ ಅಂಗವಾಗಿರುತ್ತದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 3, ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 4

ಅಧ್ಯಕ್ಷರು : "ಖಂಡ 4 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 4ನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 5ಕ್ಕೆ ತಿದ್ದುಪಡಿ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 5ನೇ ಖಂಡಕ್ಕೆ "ಮನೆ ಬಾಡಿಗೆಗೆ ಐದು ಸಾವಿರ ರೂಪಾಯಿಗಳು ಮತ್ತು ಮನೆ ನಿರ್ವಹಣೆಗೆಂದು ಐದು ಸಾವಿರ ರೂಪಾಯಿಗಳು" ಎನ್ನುವ ತಿದ್ದುಪಡಿಯನ್ನು ಸೂಚಿಸಿ ಮಂಡಿಸುತ್ತಿದ್ದೇನೆ.

(ಪ್ರಸ್ತಾವ ಮಂಡಿಸಲ್ಪಟ್ಟಿತು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮನೆ ಬಾಡಿಗೆಗೆ ಐದು ಸಾವಿರ ರೂಪಾಯಿಗಳು ಮತ್ತು ಮನೆ ನಿರ್ವಹಣೆಗೆಂದು ಐದು ಸಾವಿರ ರೂಪಾಯಿಗಳು" ಎನ್ನುವ ತಿದ್ದುಪಡಿಯನ್ನು 5ನೇ ಖಂಡಕ್ಕೆ ಸೇರಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 5 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : "ತಿದ್ದುಪಡಿಯಾದ 5ನೇ ಖಂಡ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ತಿದ್ದುಪಡಿಯಾದ 5ನೇ ಖಂಡವನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ 6

ಅಧ್ಯಕ್ಷರು : "ಖಂಡ 6 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 6 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 7 ಕ್ಕೆ ತಿದ್ದುಪಡಿ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ೞರು) : ಮಾನ್ಯ ಅಧ್ಯಕ್ಷರೆ, 7ನೇ ಖಂಡಕ್ಕೆ "ಸ್ವಂತ ಮನೆಯಲ್ಲಿ ವಾಸವಿರುವವರಿಗೆ

ಐದು ಸಾವಿರ ರೂಪಾಯಿಗಳು ಮನೆ ಬಾಡಿಗೆಗೆಂದು ಮತ್ತು ಐದು ಸಾವಿರ ರೂಪಾಯಿಗಳು ಮನೆ ನಿರ್ವಹಣೆಗೆ ಕೊಡಬೇಕು" ಎನ್ನುವ ತಿದ್ದುಪಡಿಯನ್ನು ಸೂಚಿಸಿ ಮಂಡಿಸುತ್ತಿದ್ದೇನೆ.

(ಪ್ರಸ್ತಾವ ಮಂಡಿಸಲ್ಪಟ್ಟಿತು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಸ್ವಂತ ಮನೆಯಲ್ಲಿ ವಾಸವಿರುವವರಿಗೆ ಐದು ಸಾವಿರ ರೂಪಾಯಿಗಳು ಮನೆ ಬಾಡಿಗೆಗೆಂದು ಮತ್ತು ಐದು ಸಾವಿರ ರೂಪಾಯಿಗಳು ಮನೆ ನಿರ್ವಹಣೆಗೆ ಕೊಡಬೇಕು" ಎನ್ನುವ ತಿದ್ದುಪಡಿಯನ್ನು 7ನೇ ಖಂಡಕ್ಕೆ ಸೇರಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 7 ತಿದ್ದುಪಡಿಯಾದ ರೀತಿಯಲ್ಲಿ :

ಅಧ್ಯಕ್ಷರು : "ತಿದ್ದುಪಡಿಯಾದ 7ನೇ ಖಂಡ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ತಿದ್ದುಪಡಿಯಾದ 7ನೇ ಖಂಡವನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 8 ಕ್ಕೆ ತಿದ್ದುಪಡಿ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ 8ನೇ ಖಂಡಕ್ಕೆ "ಐದು ಸಾವಿರ ರೂಪಾಯಿಗಳು" ಬದಲಾಗಿ "ಆರು ಸಾವಿರ ರೂಪಾಯಿಗಳು" ಎನ್ನುವ ತಿದ್ದುಪಡಿಯನ್ನು ಸೂಚಿಸಿ ಮಂಡಿಸುತ್ತಿದ್ದೇನೆ.

(ಪ್ರಸ್ತಾವ ಮಂಡಿಸಲ್ಪಟ್ಟಿತು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಐದು ಸಾವಿರ ರೂಪಾಯಿಗಳು" ಎನ್ನುವ ಬದಲು "ಆರು ಸಾವಿರ ರೂಪಾಯಿಗಳು" ಎನ್ನುವ ತಿದ್ದುಪಡಿಯನ್ನು 8ನೇ ಖಂಡಕ್ಕೆ ಸೇರಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 8 ತಿದ್ದುಪಡಿಯಾದ ರೀತಿಯಲ್ಲಿ :

ಅಧ್ಯಕ್ಷರು : "ತಿದ್ದುಪಡಿಯಾದ 8ನೇ ಖಂಡ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ತಿದ್ದುಪಡಿಯಾದ 8ನೇ ಖಂಡವನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಕ್ಕೆ ತಿದ್ದುಪಡಿ :

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 1ನೇ ಖಂಡಕ್ಕೆ "ತಕ್ಷಣ" ಎನ್ನುವ ಬದಲು "1ನೇ ಸೆಪ್ಟೆಂಬರ್, 1993 ರಿಂದ" ಎನ್ನುವ ತಿದ್ದುಪಡಿಯನ್ನು ಸೂಚಿಸಿ ಮಂಡಿಸುತ್ತಿದ್ದೇನೆ.

(ಪ್ರಸ್ತಾವ ಮಂಡಿಸಲ್ಪಟ್ಟಿತು.)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ತಕ್ಷಣ" ಎನ್ನುವ ಬದಲು "1ನೇ ಸೆಪ್ಟೆಂಬರ್, 1993 ರಿಂದ" ಎನ್ನುವ ತಿದ್ದುಪಡಿಯನ್ನು 1ನೇ ಖಂಡಕ್ಕೆ ಸೇರಿಸಲು ಅನುಮತಿ ನೀಡುವುದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.)

ಖಂಡ 1 ತಿದ್ದುಪಡಿಯಾದ ರೀತಿಯಲ್ಲಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ, ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು.

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : (ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, 1994ರ ಕರ್ನಾಟಕ ಸಚಿವರ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾಗಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1994ರ ಕರ್ನಾಟಕ ಸಚಿವರ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾಗಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು : ಈಗ ಸಭೆಯ ಕಾರ್ಯಕಲಾಪಗಳನ್ನು ಮಧ್ಯಾಹ್ನ 3-00 ಗಂಟೆಯವರೆಗೆ ಮುಂದೂಡಿರುತ್ತೇನೆ.

(ಸಭೆಯು ಪುನಃ 3-30ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರಾದ ಶ್ರೀ **ಅಂಜನಾಮೂರ್ತಿಯವರು** ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(1) 1993ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, 1993ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, '1993ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1993ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು :* ವಿಧೇಯಕವನ್ನು ಮಂಡಿಸಲಾಯಿತು. *

* ಅನುಬಂಧ II

1993ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕದ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ, 1993ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಈ ತಿದ್ದುಪಡಿಯನ್ನು ಏಕೆ ತಂದೆವೆಂದರೆ, ನಮಗೆ ಈಗ ಬರುತ್ತಿರುವ ವಂತಿಕೆಯು ಎಲ್ಲಾ ಕಾರ್ಮಿಕರ ಕಲ್ಯಾಣವನ್ನು ಮಾಡುವುದಕ್ಕೆ ಸಾಕಾಗುವುದಿಲ್ಲ. ನಮ್ಮ ಖರ್ಚು ಬಹಳಷ್ಟು ಜಾಸ್ತಿಯಾಗಿದೆ. ಆದರೆ ಆದಾಯ ಕಡಿಮೆ ಇದ್ದು, ಖರ್ಚು ಜಾಸ್ತಿಯಾಗಿರುವ ಕಾರಣ ನಾವು ವಂತಿಕೆಯಲ್ಲಿ ಸ್ವಲ್ಪ ಏರಿಕೆಯನ್ನು ಮಾಡಿದ್ದೇವೆ. ಈ ತಿದ್ದುಪಡಿಯನ್ನು ತರುವ ಮೊದಲು ನಾವು ಕಾರ್ಮಿಕರಿಂದ ಒಂದು ರೂಪಾಯಿ, ಎಂಪ್ಲಾಯರ್‌ನಿಂದ ಎರಡು ರೂಪಾಯಿ, ಸರ್ಕಾರದಿಂದ ಒಂದು ರೂಪಾಯಿಯನ್ನು ವಸೂಲಿ ಮಾಡುತ್ತಿದ್ದೆವು. ಆದರೆ ನಾವು ಈಗ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದು ಎಂಪ್ಲಾಯ್‌ನಿಂದ ಮೂರು ರೂಪಾಯಿ, ಎಂಪ್ಲಾಯರ್‌ನಿಂದ ಆರು ರೂಪಾಯಿ, ಸರ್ಕಾರದಿಂದ ಮೂರು ರೂಪಾಯಿಗಳನ್ನು ವಸೂಲಿ ಮಾಡುತ್ತೇವೆ. ಅದೇ ರೀತಿ ನಾವು ಈ ವಿಧೇಯಕಕ್ಕೆ ಒಂದು ತಿದ್ದುಪಡಿಯನ್ನು ಸಹ ತಂದಿದ್ದೇವೆ. ಅದರಂತೆ 1992 ರಿಂದ ಜಾರಿಗೆ ಬರುವ ಈ ಬಿಲ್ಲನ್ನು 1993ರಿಂದ ಜಾರಿಗೆ ಬರುತ್ತದೆಂದು ತಿದ್ದುಪಡಿ ಮಾಡಿದ್ದೇವೆ. ಏಕೆಂದರೆ 1992 ರಿಂದ ಈ ವಿಧೇಯಕವನ್ನು ಜಾರಿಗೆ ತರಲು ಆಗುವುದಿಲ್ಲ. ಇದನ್ನು 1993ರಲ್ಲಿ ಜಾರಿಗೆ ತಂದಿರತಕ್ಕದ್ದು. ಈಗ ಫೆಬ್ರವರಿ ಆದ ಕಾರಣ 1992ನೇ ವರ್ಷದಿಂದ ಅದನ್ನು ವಸೂಲಿ ಮಾಡುವುದಕ್ಕೆ ಸಾಧ್ಯ ಇಲ್ಲ. ಆ ಕಾರಣ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಅದನ್ನು ಸರ್ವಾನುಮತದಿಂದ ಅಂಗೀಕರಿಸಬೇಕೆಂದು ವಿನಂತಿಸುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, '1993ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು'.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು : "ಖಂಡ ಎರಡು ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1ಕ್ಕೆ ತಿದ್ದುಪಡಿ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :ಸನ್ಮಾನ್ಯ ಉಪಾಧ್ಯಕ್ಷರೇ, "ಒಂದನೇ ಖಂಡದಲ್ಲಿನ ಎರಡನೆ ಪ್ರಕಟಣೆಯಲ್ಲಿರುವ 1992 ಎಂಬ ಅಂಕೆಗಳಿಗೆ ಬದಲಾಗಿ 1993 ಎಂಬ ಅಂಕೆಗಳನ್ನು ಪ್ರಯೋಗಿಸಬೇಕು" - ಎನ್ನತಕ್ಕ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಪ್ರಸ್ತಾವ ಮಂಡಿಸಲ್ಪಟ್ಟಿತು)

ಉಪಾಧ್ಯಕ್ಷರು : ಪ್ರಶ್ನೆ ಏನೆಂದರೆ "ಒಂದನೇ ಖಂಡದಲ್ಲಿನ ಎರಡನೇ ಪ್ರಕಟಣೆಯಲ್ಲಿರುವ 1992 ಎಂಬ ಅಂಕೆಗಳಿಗೆ ಬದಲಾಗಿ 1993 ಎಂಬ ಅಂಕೆಗಳನ್ನು ಪ್ರಯೋಗಿಸುವುದು"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಖಂಡ 1 ತಿದ್ದುಪಡಿಯಾದ ರೀತಿಯಲ್ಲಿ :

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 'ಮೊದಲನೆ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ, 1993ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "1993ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ವಿತ್ತೀಯ ಕಾರ್ಯಕಲಾಪಗಳು

1985-86ನೇ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟ ಹೆಚ್ಚುವರಿ ಅನುದಾನಗಳ ಅಭಿಯಾಚನೆ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು

+ ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1985-86ನೇ ಸಾಲಿನಲ್ಲಿ ತಗುಲಿರತಕ್ಕಂಥ ಖರ್ಚುಗಳ ಬಗ್ಗೆ ಪುರಸ್ಕೃತ ಅನುದಾನಗಳಿಗೆ ಮತ್ತು ಪ್ರವೃತ್ತ ವಿನಿಯೋಗಗಳಿಗೆ ಹೆಚ್ಚಿಗೆ ವ್ಯಯವಾದ ವೆಚ್ಚಗಳನ್ನು ತುಂಬುವುದಕ್ಕಾಗಿ ಅನುದಾನಕ್ಕಾಗಿ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ. ಆ ವರ್ಷದ ರಾಜಸ್ವ ಖಾತೆಯಲ್ಲಿ 5,65,32,672 ಕೋಟಿ ರೂಪಾಯಿಗಳು ಮತ್ತು ಬಂಡವಾಳ ಖಾತೆಯಲ್ಲಿ 5,55,32,533 ಕೋಟಿ ರೂಪಾಯಿಗಳು ಹಾಗೂ ಪ್ರಭೃತ್ತ ಬಾಬಿನ ರಾಜಸ್ವ ಖಾತೆಯಲ್ಲಿ 96,30,57,903 ಕೋಟಿ ರೂಪಾಯಿಗಳನ್ನು ಒಟ್ಟಾರೆ 107,51,23,108 ಕೋಟಿ ರೂಪಾಯಿಗಳ ಹೆಚ್ಚುವರಿ ಮೊಬಲಗಿನ ಅನುದಾನಕ್ಕಾಗಿ ಬೇಡಿಕೆಗಳನ್ನು ವಿಧಾನಸಭೆಯಲ್ಲಿ ಮಂಡಿಸಲಾಗಿದೆ. ಈ ಬೇಡಿಕೆಗಳನ್ನು ಇದಕ್ಕೆ ಜೋಡಿಸಿದ ಪಟ್ಟಿಯಲ್ಲಿ ತೋರಿಸಲಾಗಿದ್ದು ಕೆಲವು ಸೇವೆಗಳಿಗೆ ಮಂಜೂರು ಮಾಡಿದ ಮೊಬಲಗಿಗಿಂಥ ಹೆಚ್ಚಿಗೆ 1985-86ರ ಆರ್ಥಿಕ ವರ್ಷದಲ್ಲಿ ಈ ಸೇವೆಗಳಿಗೆ ವಹಿಸಿದ ವೆಚ್ಚವನ್ನು ಕ್ರಮವಾಗಿಸಲು ಉದ್ದೇಶಿಸಲಾಗಿದೆ. ಈ ಹೆಚ್ಚುವರಿ ಬಾಬ್ತುಗಳ ಸಂಕ್ಷಿಪ್ತ ವಿವರಗಳನ್ನು ಪಟ್ಟಿಯಲ್ಲಿ ತೋರಿಸಲಾಗಿದೆ. 1985-86ರಲ್ಲಿ ಆಯವ್ಯಯಕ್ಕಿಂಥ ಹೆಚ್ಚಿಗೆ ಖರ್ಚಾಗಿರುವುದನ್ನು ಈ ಸದನದ ಅನುಮೋದನೆಗಾಗಿ ತಮ್ಮ ಮುಂದೆ ಮಂಡಿಸುತ್ತಿದ್ದೇನೆ. ಈ ಸದನದ ಅಭಿಪ್ರಾಯ ಕೇಳುತ್ತೇನೆ.

ಉಪಾಧ್ಯಕ್ಷರು : ಇದರ ಮೇಲೆ ಯಾರಾದರೂ ಮಾನ್ಯ ಸದಸ್ಯರುಗಳು ಮಾತನಾಡುವವರಿದ್ದರೆ ಮಾತನಾಡಬಹುದು.

ಉಪಾಧ್ಯಕ್ಷರು : 1985-86ನೇ ವರ್ಷಕ್ಕೆ ಸಂಬಂಧಿಸಿದ ಹೆಚ್ಚುವರಿ ಅನುದಾನದ ಮೇಲಿನ ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು. ಪ್ರಸ್ತಾವ ಏನೆಂದರೆ,

"1985-86ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿದ ಹೆಚ್ಚುವರಿ ಅನುದಾನಗಳ ಅಭಿಯಾಚನೆ ಸಂಖ್ಯೆಗಳಾದ 19,21,22,34,38, 45,46,63 ಮತ್ತು 64ಕ್ಕೆ ಪಟ್ಟಿಯಲ್ಲಿ ಸೂಚಿಸಿದ ಮೊಬಲಗಿಗೆ ಮೀರದಂತಿರುವ ಮೊತ್ತವನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

ಉಪಾಧ್ಯಕ್ಷರು : 1986-87ನೇ ವರ್ಷಕ್ಕೆ ಸಂಬಂಧಿಸಿದ ಹೆಚ್ಚುವರಿ ಅನುದಾನದ ಮೇಲಿನ ಚರ್ಚೆಯು ಸಹ ಇಲ್ಲಿಗೆ ಮುಕ್ತಾಯವಾಯಿತು. ಪ್ರಸ್ತಾವ ಏನೆಂದರೆ,

"1986-87ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿದ ಹೆಚ್ಚುವರಿ ಅನುದಾನಗಳ ಅಭಿಯಾಚನೆ ಸಂಖ್ಯೆಗಳಾದ 5,21,22,33,34, 45,46, ಮತ್ತು 59ಕ್ಕೆ ಪಟ್ಟಿಯಲ್ಲಿ ಸೂಚಿಸಿದ ಮೊಬಲಗಿಗೆ ಮೀರದಂತಿರುವ ಮೊತ್ತವನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆ ಹಾಗೂ ಮುಖ್ಯಮಂತ್ರಿಗಳಿಂದ ಉತ್ತರ.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ಮಾಡಿರುವಂತಹ ಭಾಷಣವನ್ನು ವಿರೋಧಿಸಿ ಅತ್ಯಂತ ಪ್ರಮುಖವಾದಂತಹ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ನಾನು ಇಚ್ಛಿಸುತ್ತೇನೆ. ಹಿಂದೆ ಮೈಸೂರು ರಾಜ್ಯ ಇಡೀ ದೇಶದಲ್ಲೇ ಅಲ್ಲದೇ ಪ್ರಪಂಚದಲ್ಲೇ ಒಂದು ಮಾದರಿಯಾದಂತಹ ರಾಜ್ಯವಾಗಿತ್ತು. ಅಂದು ರಾಜ್ಯದಲ್ಲಿದ್ದಂತಹ ರಾಜರು ಅವರ ಬೆಂಬಲಕ್ಕೆ ನಿಂತಿರುವಂತಹ ಅಧಿಕಾರ ವರ್ಗ ಮೈಸೂರನ್ನು ಒಂದು ಮಾದರಿಯನ್ನಾಗಿ ಮಾಡಿದರು. ಅದಕ್ಕೆ ಅನೇಕ ಇತಿಹಾಸವಿದೆ. ನಾನು ಅದನ್ನೆಲ್ಲಾ ಪ್ರಸ್ತಾಪಿಸುವುದಕ್ಕೆ ಹೋಗುವುದಿಲ್ಲ.

ನೇರವಾಗಿ ವಿಷಯಕ್ಕೆ ಬರುವುದಾದರೇ ಇಡೀ ವಿಶ್ವದಲ್ಲಿ ಸಮಾಜವಾದಿ ಚಳುವಳಿ ಫ್ರಾನ್ಸ್ ದೇಶದಲ್ಲಿ ಪ್ರಾರಂಭವಾಯಿತು. ಇದಕ್ಕೆ ಕಾರ್ಲ್‌ಮಾರ್ಕ್ಸ್‌ರವರು ಒಂದು ಸಿದ್ಧಾಂತವನ್ನು ರಚಿಸಲಿಕ್ಕೆ ಕೊಟ್ಟರು. ಕಾರ್ಲ್‌ಮಾರ್ಕ್ಸ್‌ರ ಸಿದ್ಧಾಂತ ರಷ್ಯಾದೇಶದಲ್ಲಿ ಜಾರಿಗೆ ಬಂದು ಅಲ್ಲಿರುವ ಉತ್ಪಾದನಾ ಸಾಧನಗಳೆಲ್ಲವೂ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟವು. ರಷ್ಯಾದಲ್ಲಿ ಆ ಪದ್ಧತಿ ಜಾರಿಯಾಗುವುದಕ್ಕೆ ಮೊದಲೇ ಮೈಸೂರಿನ ಮಹಾರಾಜರಾದವರು ಅವರು ವಂಶಪಾರಂಪರ್ಯವಾಗಿ ರಾಜಮನೆತನದಿಂದ ಬಂದಿದ್ದರೂ ಸಹಿತ ಈ ರಾಜ್ಯವನ್ನು ರಾಜ್ಯದ ಹಿತವನ್ನು ಕಾಪಾಡುವ ದೃಷ್ಟಿಯಿಂದ ಸರ್ಕಾರೀ ಸ್ವಾಮ್ಯದ ಕಾರ್ಖಾನೆಗಳನ್ನು ಸ್ಥಾಪಿಸುವುದರಲ್ಲಿ ಪ್ರಥಮ. ರಷ್ಯಾದೇಶದಲ್ಲಿಯೂ ಸಹಿತ ಕಮ್ಯುನಿಸಂ ಅನ್ನುವುದು ಪ್ರಾರಂಭ ಆಗುವುದಕ್ಕಿಂತ ಮೊದಲು ಉತ್ಪತ್ತಿ ಸಾಧನಗಳು ಸರ್ಕಾರದ, ರಾಜ್ಯದ ವಶಕ್ಕೆ ಒಳಪಡುವ ಮೊದಲು ಇಲ್ಲಿಯ ಸರ್ಕಾರ ಅಂತಹ ಉದ್ದಿಮೆಗಳನ್ನು ಸ್ಥಾಪಿಸುವ ಕೀರ್ತಿ, ಇವತ್ತು ಮೈಸೂರು ಗಂಧದೆಣ್ಣೆಯ ಕಾರ್ಖಾನೆ, ಮೈಸೂರು ಲ್ಯಾಂಪ್ಸ್, ಮತ್ತು ಐಟಿಐಎಲ್ ಎಂಬ ಒಂದು ಸಂಸ್ಥೆ ಇತ್ತು ಅದು

ಮತ್ತು ರೆಮ್ಕೋ ಎಂಬ ಸಂಸ್ಥೆ ಇತ್ತು. ಇಂತಹ ಅನೇಕ ಕಾರ್ಖಾನೆಗಳನ್ನು ಸ್ಥಾಪಿಸಿ ಸರ್ಕಾರದ ಸ್ವಾಮ್ಯದಲ್ಲಿ ಅತ್ಯಂತ ಪ್ರಮುಖವಾದ ಪಾತ್ರ ವಹಿಸಿ ರಾಜ್ಯಾಂಗದ ಬೊಕ್ಕಸಕ್ಕೆ ಈ ಸರ್ಕಾರೀ ಸ್ವಾಮ್ಯದ ಕಾರ್ಖಾನೆಗಳು ತಮ್ಮದೇ ಆದ ಕೊಡುಗೆಯನ್ನು ಕೊಡುತ್ತಿರುವ ಒಂದು ಪರಂಪರೆ ಈ ರಾಜ್ಯದಲ್ಲಿದೆ. ಆ ದೃಷ್ಟಿಯಿಂದ ಇವತ್ತಿನ ದಿವಸ ಸ್ವಾತಂತ್ರ್ಯ ಬಂದ ಮೇಲೂ ಸಹಿತ ಆ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಿದೆ. ಭದ್ರಾವತಿ ಉಕ್ಕಿನ ಕಾರ್ಖಾನೆ, ಗಂಧದೆಣ್ಣೆಯ ಕಾರ್ಖಾನೆಯ ಬಗ್ಗೆ ನಾನು ಅನೇಕ ಉದಾಹರಣೆಗಳನ್ನು ಹೇಳಿದ್ದೇನೆ. ಅದೇ ರೀತಿಯಲ್ಲಿ ಎನ್.ಜಿ.ಇ.ಎಫ್. ಅಂತಕ್ಕಂತಹ ಕಾರ್ಖಾನೆ ಸಹ ಸ್ವತಂತ್ರ್ಯ ಬಂದ ಮೇಲೆ ಈ ರಾಜ್ಯವನ್ನು ಆಳತಕ್ಕಂತಹ ಮುಖ್ಯಮಂತ್ರಿಗಳಾದ ಮಾನ್ಯ ನಿಜಲಿಂಗಪ್ಪನವರು ಬಹಳ ದೂರದೃಷ್ಟಿಯಿಟ್ಟುಕೊಂಡು ಈ ಕಾರ್ಖಾನೆ ಸ್ಥಾಪಿಸಿದ್ದಾರೆ. ಈ ಕಾರ್ಖಾನೆ ಸ್ಥಾಪನೆ ಆದ ಕಾಲದಲ್ಲಿ ರಾಜ್ಯಗಳವರೇ ಅದರಲ್ಲಿ ಇಂಜನಿಯರ್‌ಗಳಾಗಿದ್ದರು. ರಾಜ್ಯದವರೇ ಇಂಜನಿಯರ್ ಆದ ಕಾರಣ ಜರ್ಮನಿ ದೇಶದ ತಾಂತ್ರಿಕ ಜ್ಞಾನವನ್ನು ಪಡೆದು ಅತ್ಯಂತ ಉತ್ತಮವಾದ ರೀತಿಯಲ್ಲಿ ಕಾರ್ಯ ನಿರ್ವಹಿಸಿಕೊಂಡು ಬಂದಿದೆ. ಅದನ್ನು ನಾವು ಕಂಡಿದ್ದೇವೆ. ಆದರೆ ಇವತ್ತಿನ ದಿವಸ ಕೋತಿ ಕೈಗೆ ಮಲ್ಲಿಗೆ ಹೂವು ಕೊಟ್ಟ ಹಾಗೆ ಆಗಿದೆ ಮಾನ್ಯ ಅಧ್ಯಕ್ಷರೇ, ಯಾವತ್ತು ಇಲ್ಲಿ ಪ್ರಪಂಚಾದ್ಯಂತ ಆಂದೋಳನ ಪ್ರಾರಂಭವಾಯಿತು ಅದು ಮುಂದುವರೆಯಬೇಕಾಗಿದ್ದು, ಇವತ್ತು ಕೋತಿ ಕೈಗೆ ಮಲ್ಲಿಗೆ ಹೂವು ಕೊಟ್ಟಂತೆ ಈ ಪರಿಸ್ಥಿತಿಗೆ ಎನ್.ಜಿ.ಇಎಫ್.ಕಾರ್ಖಾನೆ ಬಂದಿದೆ. ಮಾನ್ಯ ಅಧ್ಯಕ್ಷರೇ, ಇತ್ತೀಚಿನ ಸರ್ಕಾರ ಅಥವಾ ಆಡಳಿತ ಮಂಡಳಿಯ ತೀರ್ಮಾನದಂತೆ ಈ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಿಕೊಡುವಂತಹ ಒಂದು ತೀರ್ಮಾನ ಮಾಡಿಕೊಂಡಿದ್ದಾರೆ. ಆ ಆಡಳಿತ ಮಂಡಳಿಯವರು ಒಂದು ಶಿಫಾರಸ್ಸನ್ನು ಮಾಡಿದ್ದಾರೆ. ಈ ಸಂಸ್ಥೆಯಲ್ಲಿರತಕ್ಕಂಥ ಶೇರು ಬಂಡವಾಳವನ್ನು ಹೆಚ್ಚಿಗೆ ಮಾಡಿ, ಹೆಚ್ಚಿಗೆ ಮಾಡಿದ ಶೇರುಗಳಲ್ಲಿ ಶೇಕಡ 35ರಷ್ಟು ಶೇರನ್ನು ಅಂತರರಾಷ್ಟ್ರೀಯ ಬಹುರಾಷ್ಟ್ರೀಯ ಸಂಸ್ಥೆಯಾದ ಎ.ಬಿ.ಬಿ. ಸಂಸ್ಥೆಗೆ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡು ಈಗ ಅದು ಸರ್ಕಾರದ ಒಪ್ಪಿಗೆಗೆ ಕಳಿಸಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ಕಾರ್ಖಾನೆ ವಿಚಾರದಲ್ಲಿ ಎರಡೂ ಸದನಗಳ ಸಮಿತಿ ಎರಡು ವರದಿಯನ್ನು ಕೊಟ್ಟಿದ್ದಾರೆ. ಅದೆಲ್ಲಾ ನನಗೆ ಗೊತ್ತಿದೆ. ಸಮಯದ ಅಭಾವವಿರುವುದರಿಂದ ನಾನು ಅವೆಲ್ಲವನ್ನೂ ವಿವರವಾಗಿ ಮಾತನಾಡಲು ಹೋಗುವುದಿಲ್ಲ. ಈ ಕಾರ್ಖಾನೆಗೆ ಸೀಮಿತವಾಗಿರುವಂತೆ ಈ ಶಾಸಕಾಂಗದ ವರದಿ ಬಂದಿದೆ. ಇದು 11ನೆಯ ವರದಿಯನ್ನು ಎನ್‌ಜಿಇಎಫ್ ಕಾರ್ಖಾನೆಗೆ ಸಂಬಂಧಪಟ್ಟಂತೆ ಕಳಿಸಿದ್ದಾರೆ. ಈ ವರದಿಯ ಬಗ್ಗೆ ನಾನು ಕಳೆದ ಬಾರಿ ಸುಮಾರು 2 ಗಂಟೆಗಳ ಕಾಲ ಕೇವಲ ಇದೊಂದು ವರದಿಯ ಮೇಲೆ ಮಾಡಿದ್ದೇನೆ. ಅದೆಲ್ಲವನ್ನೂ ಕೂಡ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ಕಾರ್ಖಾನೆಯ ಆಡಳಿತ ವರ್ಗ ಯಾವ ರೀತಿ ನಡೆಸಿಕೊಂಡು ಬರುತ್ತಿದ್ದಾರೆ ಎಂಬ ಬಗ್ಗೆ ಈ 41ನೇ ವರದಿಯಲ್ಲಿರುವ ಕೆಲವು ಉದಾಹರಣೆಗಳನ್ನು ಮಾತ್ರ ನಾನು ಉಲ್ಲೇಖ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಸಾರ್ವಜನಿಕ ಉದ್ಯಮಗಳ ಸಮಿತಿ 41ನೇ ವರದಿಯಲ್ಲಿ ತನ್ನ ರೆಕಮೆಂಡೇಷನ್ಸ್‌ನ ಪ್ಯಾರಾ 2.26ರಲ್ಲಿ ಹೇಳಿದ್ದಾರೆ, ಅದು ಬಹಳ ಉದ್ದವಾಗಿದೆ. ಅವೆಲ್ಲವನ್ನೂ ಓದಲಿಕ್ಕೆ ಹೋಗುವುದಿಲ್ಲ. ಅಲ್ಲಿ ಉಪಯೋಗಿಸಿರತಕ್ಕ ಕೆಲವು ಪದಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ.

"The technology in the Company could not properly diagnose the problem until the foolishness ಈ ಪದವನ್ನು ನಾನು ಒತ್ತಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ವರದಿಯಲ್ಲಿರತಕ್ಕ ಪದಗಳನ್ನು ಮಾತ್ರ ನಾನು ಉಪಯೋಗಿಸುತ್ತಿದ್ದೇನೆ.

Until the foolishness of the decision against the provision of certain essential facilities and the production performance was pointed out by the technologists from Simon.

ಇಲ್ಲಿರತಕ್ಕಂಥ ಆಡಳಿತ ವರ್ಗ ಎಷ್ಟರಮಟ್ಟಿಗೆ ಇದೆ ಎಂದು ಅರ್ಥವಾಗುತ್ತದೆ. ಅವೊತ್ತಿನ ದಿವಸ ಈ ಆಡಳಿತ ವರ್ಗದಲ್ಲಿದ್ದಂತಹವರು ಅಂದರೆ, ಈ ರಾಜ್ಯದ ಒಬ್ಬ ಮುಖ್ಯ ಕಾರ್ಯದರ್ಶಿಗಳಾಗಿರತಕ್ಕಂಥವರು ಛೇರ್‌ಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ, ಆ ಒಂದು ಆಡಳಿತ ವರ್ಗವನ್ನು ವರದಿಯಲ್ಲಿ ಏನಂತ ಕರೆದಿದ್ದಾರೆ ಅಂದರೆ, ಫೂಲ್ಸ್ ಅಂತ ಕರೆದಿದೆ. A fool was made the Chief Secretary of the State.

ನಾನು ಅವರನ್ನು ಫೂಲ್ ಅಂತ ಕರೆಯುತ್ತಿಲ್ಲ ವರದಿಯಲ್ಲಿ ಹೇಳಿದ್ದಾರೆ. A fool was made the chief Secretary of the State. ಅಲ್ಲಿ ಅದನ್ನು ಸರಿಸಮಾಪ್ತಿ ಮಾಡತಕ್ಕ ಕೆಲಸ ಮಾಡಿ, ಫೂಲ್ ಅನ್ನುವುದರ ಬಗ್ಗೆ ಕನ್ನಡದಲ್ಲಿ ಹೇಳಬೇಕಾದರೆ, ಮೂರ್ಖ ಎಂದು ಹೇಳಬಹುದು. ಆ ಮೂರ್ಖರ ಕೈಗೆ ಈ ಕಾರ್ಖಾನೆಯನ್ನು ಕೊಟ್ಟ ಕಾರಣದಿಂದ, ಇವೊತ್ತು ಈ ಕಾರ್ಖಾನೆಯನ್ನು ಬೇರೆಯವರಿಗೆ ಕೊಡತಕ್ಕಂಥಾದ್ದು ಆಗುತ್ತಿದೆ. ಮತ್ತೆ ವರದಿಯನ್ನು ಬೇರೆಯವರಿಗೆ ಕೊಡತಕ್ಕಂಥಾದ್ದು ಆಗುತ್ತಿದೆ. ಮತ್ತೆ ವರದಿಯನ್ನು ಪುನಃ ಉಲ್ಲೇಖ ಮಾಡಿ ಹೇಳುವುದಾದರೆ ಇನ್ನು ವರದಿಯ 2.27ರಲ್ಲಿ ಏನು ಹೇಳುತ್ತಾರೆಂದರೆ, ಅದನ್ನು ಪೂರ್ತಿಯಾಗಿ ಓದುತ್ತೇನೆ.

"The fact that the investment on Crane and pressurisation of the Winding Section was just about Rs. 30 lakhs further fortifies the foolishness of the decisions taken in this behalf against installation of pressurisation Chambers and the Crane."

ಅದಕ್ಕೆ ಹಾರಬೇಕಾಗಿರತಕ್ಕದ್ದು ಕೇವಲ 34 ಲಕ್ಷ ರೂಪಾಯಿ ಮಾತ್ರ. ಇದರಿಂದ ನಷ್ಟವಾಗಿರತಕ್ಕಂಥಾದ್ದು ಸುಮಾರು 4 ಕೋಟಿ ರೂಪಾಯಿ ನಷ್ಟವಾಗಿದೆ. ಇದನ್ನು ವರದಿಯಲ್ಲಿ ಪ್ರಸ್ತಾಪ ಮಾಡಿರುವುದರಿಂದ ನಾನು ಪೂರ್ಣವಾಗಿ ಹೇಳಲಿಕ್ಕೆ ಹೋಗುವುದಿಲ್ಲ. ಇದನ್ನು ಸರಿಪಡಿಸಬೇಕು ಎಂಬುದರ ಬಗ್ಗೆ ಈ ವರದಿಯಲ್ಲಿ ಹೇಳಿದ್ದಾರೆ. ನಾನು ಪೂರ್ಣ ಅಂಶ ಹೇಳುವುದಿಲ್ಲ ಅದೇರ ಭಾಗಾಂಶಗಳನ್ನು ಮಾತ್ರ ಓದಲಿಕ್ಕೆ ಇಷ್ಟಪಡುತ್ತೇನೆ.

"The Committee recommends that the Government should sufficiently caution all their nominee Directors on the Board of public Sector and their duty does not end with merely cautioning, expressing apprehension or Steaching gospel but in ensuring proper implmentation of the decisions taken in their collective wisdom and failure to do so would mean dereliction of their duty. ನಾನು ಈ ಪದವನ್ನು ಹೇಳುತ್ತಿಲ್ಲ. ಡಿರ್ಲಿಕ್ಷನ್ ಆಫ್ ಡ್ಯೂಟಿ ಎಂಬ ಬಗ್ಗೆ ವರದಿಯಲ್ಲಿ ಹೇಳಿಲ್ಲ, ಇದರ ಬಗ್ಗೆ ನಾನು ಹಿಂದೆ ಸುಮಾರು ಎರಡು ಗಂಟೆಗಳ ಕಾಲ ಚರ್ಚೆ ಮಾಡಿದ್ದೇನೆ. ಈ ವರದಿ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರರಕ್ಕೆ ಹೇಳಿದ್ದೇನೆ. ಆದರೆ ಇಲ್ಲಿಯವರೆಗೂ ಕೂಡ ಸರ್ಕಾರ ಚಕಾರ ಎತ್ತಲಿಲ್ಲ. ಇದು ಆದ ನಂತರ ಮತ್ತೊಂದು ವರದಿ ಬಂದಿದೆ. ಇದು ಇಡೀ ರಾಜ್ಯದ ಜನತೆಯ ಮುಂದೆ ಈ ವರದಿ ಇದೆ. ಸಾರ್ವಜನಿಕ ಉದ್ದಿಮೆಗಳ ಸಮಿತಿಯವರು ತನ್ನ 53ನೇ ವರದಿಯನ್ನು ದಿನಾಂಕ 29-4-92 ರಲ್ಲಿ ಈ ಸದನಕ್ಕೆ ಅರ್ಪಿಸಿದ್ದಾರೆ. ಇದರಲ್ಲಿ ಮೊದಲನೇ ಪುಟದಿಂದ ಕೊನೆಯ ಪುಟದವರೆಗೂ ಈ ಆಡಳಿತ ವರ್ಗವನ್ನು ಬರೀ ಬೆತ್ತಲೆಯಾಗಿ ನಿಲ್ಲಿಸಿದ್ದಾರೆ. ಆಗ ಯಾರು, ಆಡಳಿತ ವರ್ಗದಲ್ಲಿದ್ದರೋ ಅವರಿಗೆ ಮಾನ ಮರ್ಯಾದೆ ಇಲ್ಲ, ನನಗೆ ಸಮಯ ಇಲ್ಲದೆ ಇರುವುದರಿಂದ ನಾನು

ಅವಶ್ಯಕತೆ ಇದೆ. ಆದರೆ ಅದನ್ನೆಲ್ಲಾ ಹೇಳಲಿಕ್ಕೆ ಹೋಗುವುದಿಲ್ಲ. ಈ ವರದಿಯಲ್ಲಿ ನಮೂದಾಗಿರತಕ್ಕಂಥಾದ್ದು ಒಂದನೆಯದು ಶೇರು ವರ್ಗಾವಣೆ, ಎರಡನೆಯದಾಗಿ inflation of production figures by advanced crediting of incomplete production, consequent declaration of fictitious profits (c) default in pursusance of claim for commission of Rs. 247.73 lakhs.... in respect of Defence supplies made by M/s. AEG of West Germany to Government of India and repudiation of the claim by AEG ಎನ್ನತಕ್ಕದ್ದರ ಬಗ್ಗೆ ವರದಿ ಕೊಟ್ಟಿದ್ದಾರೆ. ಇದರಲ್ಲಿದ್ದ ನಾಲ್ಕು ಅಂಶಗಳನ್ನು ಹೇಳಿದ್ದಾರೆ. ನಾನು ಒಂದನೆಯ ವಿಚಾರವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ಶೇರಿನ ವರ್ಗಾವಣೆ ಮೊದಲನೆ ದಿಕ್ಕಿನಲ್ಲಿ ಹೇಳಿ ಯಾವ ರೀತಿ ಇದು ಆಗಲೇ ನಡೆಸಿದ್ದಾರೆ ಎನ್ನತಕ್ಕಂಥಾದ್ದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. In respect of defence suppliess made by M/s. A.E.G., of West Germany to Government of India. ಇನ್ನು ಎರಡನೇ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅಬ್ಸರ್ವೇಷನ್ಸ್ ಅಂಡ್ ರೆಕಮೆಂಟೇಷನ್ಸ್ ಆಫ್ ದಿ ಕಮಿಟಿ ಎಂಬುದರ 1.13ರಲ್ಲಿ ಏನಿದೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. - Observation and Recommendations of the Committee:

"In view of the seriousness of the above Developments, the Committee recommends that as the, then Chairman and Managing Director of the Company Sri N.K. Prabhakar Rao was clearly responsible in this regard, stringent action may be taken against him."

ಇದು 1ನೇ ಪ್ಯಾರಾದಲ್ಲಿ, ಇನ್ನು 2ನೇ ಪ್ಯಾರಾದಲ್ಲಿ,

"In its view, the Board of Directors, especially thee Government Nominees have acted as per the line indicated by the then Chairman and Managing Director without exercising their independent judgement. The committee therefore recommends that a thorough enquiry should be ordered in this regard and necessary action taken against them." ಎಂದು ಇದೆ. ಅಂದ ಮೇಲೆ ತಾವು ಏನು ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೀರಿ? ಸಮಿತಿಯಲ್ಲಿ ಇರತಕ್ಕ ಬೇರೆ ಡೈರೆಕ್ಟರ್‌ಗಳ ಮೇಲೂ ಹೇಳಿದ್ದಾರೆ, ಛೇರ್ಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರತಕ್ಕವರ ಮೇಲೂ ಹೇಳಿದ್ದಾರೆ. ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಇದನ್ನು ನಾನು ಕೇಳುತ್ತಿಲ್ಲ. ಸಮಿತಿಯ ವರದಿಯಲ್ಲಿರತಕ್ಕದ್ದರ ಬಗ್ಗೆ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಇದೇ ರೀತಿಯಲ್ಲಿ ಇದು ಇನ್ನೂ ಎಲ್ಲಿಯವರೆಗೆ ನಡೆದಿದೆ ಎಂದರೆ, ಅಧಿಕೃತವಾದ ದಾಖಲೆಗಳನ್ನು ತಿದ್ದುವುದು, ದಾಖಲೆಗಳಲ್ಲಿ ಇಲ್ಲದೇ ಇರುವುದನ್ನು ದಾಖಲೆಗಳಿಗೆ ಸೇರೇಸುವುದು, ಇತ್ಯಾದಿ ಪ್ರಯತ್ನ ಈ ಕಂಪೆನಿಗೆ ಬರಬೇಕಾದ ಸುಮಾರು 5 ಕೋಟಿ ರೂ. ನಷ್ಟು ಎ.ಇ.ಜಿ.ನಿಂದ ಬರಬೇಕಾದ ಕಮಿಷನ್ ನಮ್ಮ ಲೆಕ್ಕದ ಪ್ರಕಾರ. ಆದರೆ ಆ ಕಂಪೆನಿಯಿಂದ ಲೆಕ್ಕದ ಪ್ರಕಾರವೇ ಸುಮಾರು 2.5 ಕೋಟಿ ರೂ. ಬರಬೇಕಾಗಿತ್ತು. ಈ ವಿಚಾರದಲ್ಲಿ ಈ ಸಮಿತಿಯವರು ಬಹಳ ಕೂಲಂಕುಷವಾಗಿ ಪರಿಶೀಲನೆ ಮಾಡಿ ಈ ವರದಿಯನ್ನು ಇವತ್ತು ಕೊಟ್ಟಿದ್ದಾರೆ. ಈ ವರದಿ ಪ್ರಿಂಟ್ ಆಗಿರುವ ಪ್ರತಿ ಪುಟದಲ್ಲೂ ಅಂಡರ್‌ಲೈನ್ ಮಾಡಿದ್ದಾರೆ. ಅಂಡರ್‌ಲೈನ್ ಕೂಡ ಪ್ರಿಂಟ್ ಆಗಿ ಬಂದಿದೆ. ಈ ಸಮಿತಿಯ ವರದಿಯ 3.36 ರಲ್ಲಿ ಏನು ಹೇಳಿದ್ದಾರೆಂದರೆ

"Therefore, the committee strongly in no uncertain terms recommends that Criminal and Civil Proceedings as the case may be, should be initiated

against him without any delay. The Government/Company may also approach A.E.G., to withdrawn G.R.Sharma, from the company's Board and to dis-associate him from the A.E.G.'s dealings with the company."

ಅಲ್ಲಿ ಒಬ್ಬ ಸ್ಪೈನ್ನು ಇಟ್ಟಿದ್ದಾರೆ. ಎ.ಇ.ಜಿ. ಕಂಪನಿಯವರು ಎನ್.ಜಿ.ಇ.ಎಫ್.ನಲ್ಲಿ ಒಬ್ಬ ಸ್ಪೈನ್ನು ಇಟ್ಟಿದ್ದಾರೆ. ಅವರ ಹೆಸರು ಡಿ. ಆರ್. ಶರ್ಮ ಎಂದು. ಅವರು ಈಗ ಇಲ್ಲ. ಅವರು ಕೆಲಸಕ್ಕೆ ಸೇರಿದಾಗಿನಿಂದ ತಮ್ಮ ಕೊನೆಯ ಉಸಿರನ್ನು ಎಳೆಯುವವರೆಗೂ ಸಹ ಅವರು ಎ.ಇ.ಜಿ.ಯ ಸ್ಪೈ ಆಗಿ ಇಲ್ಲಿ ಕೆಲಸ ಮಾಡಿದ್ದಾರೆ.ಈ ಸಮಿತಿಯವವರು ಹಿಂದೆ ಕೂಡ ಹೇಳಿದ್ದಾರೆ. ಈ ಕಂಪೆನಿಯಿಂದ ಇವರನ್ನು ದೂರ ಇಡಬೇಕು, ಮತ್ತು ಇವರಮೇಲೆ ಸಿವಿಲ್ ಮತ್ತು ಕ್ರಿಮಿನಲ್ ಆಕ್ಷನ್ ಕೂಡ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಇವತ್ತಿನ ದಿವಸ ಏನೂ ಮಾಡಿಲ್ಲ. ಇದು ಸಂಬಂಧಪಟ್ಟ ಒಬ್ಬ ಡೈರೆಕ್ಟರ್‌ರವರ ಮೇಲೆ ಹೇಳಿರತಕ್ಕದ್ದು. ಇದಾದಮೇಲೆ ಆ ಎನ್.ಜಿ.ಇ.ಎಫ್. ಕಂಪೆನಿಯ ಅಧಿಕಾರಿಗಳಾಗಿರತಕ್ಕವರ, ಮೇಲೂ ಕೂಡ ಈ ಸಮಿತಿಯ ವರದಿಯಲ್ಲಿದೆ. ಇದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾನು ಇದನ್ನು ಪೂರ್ತಿಯಾಗಿ ಓದುವುದಕ್ಕೆ ಇಷ್ಟಪಡುವುದಿಲ್ಲ. ಇಲ್ಲಿ ಅವಶ್ಯಕವಾಗಿರುವುದನ್ನು ಮಾತ್ರ ಓದುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಯಾರಿಗೆ ತಾವು ಹೇಳುತ್ತಿದ್ದೀರಿ? ಇಲ್ಲಿ ಯಾವ ಸರ್ಕಾರ ಸರ್ಕಾರವೇ ಇಲ್ಲ. ಸರ್ಕಾರ ಗರಬಡಿದುಹೋಗಿದೆ. ಇವರು ಮಾತನಾಡತಕ್ಕ ವಿಚಾರ ಅವರಿಗೇನು ಗೊತ್ತಾಗಿದೆ? ನಾನು ತಮ್ಮನ್ನು ಆಕ್ಷೇಪಣೆ ಮಾಡುತ್ತಿಲ್ಲ.

ಮಾನ್ಯ ಅಧ್ಯಕ್ಷರೆ, ಇವರು ಯಾರಿಗೆ ಹೇಳುತ್ತಿದ್ದಾರೆ ನನಗೆ ಬಹಳ ಆಶ್ಚರ್ಯ ಆಗಿದೆ. ಇವರು ಮಾತನಾಡುತ್ತಿರತಕ್ಕ ವಿಚಾರ ತಮಗೆ ಗೊತ್ತಾಗಿದೆಯಾ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಇಷ್ಟೊಂದು ಗೊತ್ತಿಲ್ಲ ಎಂದರೆ ನಾನು ಇಲ್ಲಿಗೆ ಬರುತ್ತ ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿ ಬರುವುದಕ್ಕೆ ಗೊತ್ತಿರಲೇಬೇಕು ಎಂದೇನು ಇಲ್ಲ. ಇತ್ತೀಚಿನ ದಿನಗಳಲ್ಲಿ ಮಂತ್ರಿಗಳಾಗಬೇಕಾದರೆ, ಅದಕ್ಕೆ ಏನೂ ಪಾಂಡಿತ್ಯ ಬೇಕಾಗಿಲ್ಲ. ನಾವು ನೋಡಿದ್ದೇವೆ. ನಿಮ್ಮ ಲಾಟ್ ಲಾಟ್ ನೋಡುತ್ತೇವಲ್ಲ ನಾವು ಅದಕ್ಕೆ ಏನೂ ತಲೆ ಕೆಡಿಸಿಕೊಳ್ಳೇಬೇಕಾಗಿಲ್ಲ. ಅದಕ್ಕೆ ಒಂದು ವಿಚಾರ ಶಕ್ತಿ ಬೇಕು ಎಂದು ಎಲ್ಲಿದೆ? ಮಂತ್ರಿಯಾದವರಿಗೆ ವಿಚಾರ ಶಕ್ತಿ ಇರಬೇಕು ಎಂದು ಎಲ್ಲಿದೆ ಸ್ವಾಮಿ? ಅದೇನೂ ತಾವು ತಿಳಿದುಕೊಳ್ಳಬೇಡಿ. ನಿಮ್ಮ ಒಬ್ಬರ ಬಗ್ಗೆ ಹೇಳುತ್ತಿಲ್ಲ. ನೇರವಾಗಿ ತಮಗೆ ಹೇಳುತ್ತಿಲ್ಲ. ಇಲ್ಲಿ ಗೊತ್ತಿರತಕ್ಕವರು ಬರಬೇಕು ಎಂದು ಎಲ್ಲೂ ಇಲ್ಲ, ಅಧ್ಯಕ್ಷರೆ, ತಾವು ಹೇಳಿ.

ಉಪಾಧ್ಯಕ್ಷರು : ನಾಲ್ಕು ಜನ ಮಂತ್ರಿಗಳು ಇದ್ದಾರೆ. ಅವರು ಮಾತನಾಡುತ್ತಾರೆ; ಬಿಡಿ.

ಶ್ರೀ ವಾಟಾಳ್ ನಾಗರಾಜ್ : ನಾವೇನೂ ಕೇಳಿಕೊಳ್ಳಲಿಲ್ಲ.

ಶ್ರೀ ಸಿ. ಬೈರೇಗೌಡ : ಇನ್ನೊಂದು ವಿಚಾರ.

ಶ್ರೀ ವಾಟಾಳ್ ನಾಗರಾಜ್ : ಕೋಣನ ಮುಂದೆ ಕಿಂದರಿ ಬಾರಿಸಿದರೆ ಏನೂ ಆಗಬಹುದು. ಅದೇ ಆಗುತ್ತಿದೆ. ನನಗೆ ಅನಿಸುತ್ತದೆ. ಆಳವಾಗಿ ನಮ್ಮ ನೂತನ ವಿದ್ಯುತ್ ಕಾರ್ಖಾನೆ ಬಗ್ಗೆ ಪ್ರಾರಂಭ ಮಾಡಿದಾರೆ. [illegible]

ನಿರಂತರವಾಗಿ ಈ ಸಭೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಯಾರಿಗೆ ಇವರು ಹೇಳುತ್ತಿದ್ದಾರೆ. ಒಂದೇ ಸಮನಾಗಿ ಈ ಶಾಸನಸಭೆಗೆ ಬಂದಂತಹ ನಾಲ್ಕು ವರ್ಷದಿಂದ ಒಂದೇ ಸಮಿತಿಯ ವರದಿಯ ಬಗ್ಗೆ ಹೇಳುತ್ತಿದ್ದಾರೆ. ಯಾರು ಕೇಳುತ್ತಿದ್ದಾರೆ?

ಉಪಾಧ್ಯಕ್ಷರು : ಸರ್ಕಾರದ ಪರವಾಗಿ ಏಳು ಜನ ಮಂತ್ರಿಗಳು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಮೂರು ಜನ ಅಧ್ಯಕ್ಷರುಗಳು ಬಂದರು. ಮೂರು ಜನ ಉಪಾಧ್ಯಕ್ಷರು ಬಂದರು. ಮೂರು ಜನ ಮುಖ್ಯಮಂತ್ರಿಗಳು ಬಂದರು. ನಾಲ್ಕನೇ ಮುಖ್ಯಮಂತ್ರಿ ಬಂದರು, ಒಂದು ಲಾಟ್ ಲಾಟ್ ಮಂತ್ರಿಗಳು ಬಂದರು. ಯಾರ ಮುಂದೆ ಹೇಳುವುದು ಸ್ವಾಮಿ?

ಉಪಾಧ್ಯಕ್ಷರು : ಅವರು ಹೇಳುತ್ತಿರುವುದನ್ನು ನೋಟ್ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಅವರ ಬಗ್ಗೆ ಹೇಳುತ್ತಿಲ್ಲ. ಅವರು ನೋಟ್ ಮಾಡಿಕೊಳ್ಳುತ್ತಿಲ್ಲ ಎಂದು ನಾನು ಹೇಳುತ್ತಿಲ್ಲ. ಅವರ ಬಗ್ಗೆ ನನಗೆ ವೈಯಕ್ತಿಕವಾಗಿ ಗೌರವ ಇದೆ.

ಉಪಾಧ್ಯಕ್ಷರು : ಮಾನ್ಯ ವಾಟಾಳ್ ಅವರೇ, ಅವರಿಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಅವರು ನೋಟ್ ಮಾಡಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಏಕೆಂದರೆ ಪ್ರತಿ ಒಂದು ಸಹ ಬ್ಲಾಕ್ ಅಂಡ್ ವೈಟಿನಲ್ಲಿ ಇದೆ. ಅವರು ನೋಟ್ ಮಾಡಿಕೊಳ್ಳಬೇಕಾದಂತಹ ಅವಶ್ಯಕತೆ ಏನೂ ಉಳಿದಿಲ್ಲ. ಅಲ್ಲಿ ಬಹಳ ಗಹನವಾಗಿರತಕ್ಕ ವಿಚಾರ. ಮತ್ತೊಂದು ವಿಚಾರವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. Again on the Chairman and Managing Director: ಛೇರ್ಮನ್ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರತಕ್ಕವರರ ಬಗ್ಗೆ ಈ ವರದಿಯಲ್ಲಿ ಏನು ಇದೆ ಎಂಬುದನ್ನು ತಮ್ಮ ಮೂಲಕ ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. "The Committee can only conclude that this confirms his own role in the default to pursue the Company's claim for Commission." ಸರ್ಕಾರ ಗಮನಿಸುವುದಿಲ್ಲ. ಏಕೆಂದರೆ ಇದು ಮುಕ್ಕಾಲು ವರ್ಷವಾಗಿದೆ ಸರ್ಕಾರದ ಕೈಸೇರಿ. ನೀವು ಗಮನಿಸುವುದಿಲ್ಲ. ನಮ್ಮ ಜಂಜಾಟದಲ್ಲಿ ನಿಮ್ಮ ಕುರ್ಚಿ ಉಳಿಸಿಕೊಳ್ಳುವಷ್ಟರಲ್ಲಿ ಯಾವ ಸಮಿತಿ ಏನು ವರದಿ ಕೊಟ್ಟಿದೆ ಏನು ಇದೆ ಎಂಬ ವಿಷಯ ಗೊತ್ತಿಲ್ಲ. ಸಮಿತಿಗಳು ಇದ್ದಾವೆ ಎನ್ನುವುದನ್ನು ಸರ್ಕಾರ ಮರೆತಿದೆ. ಅವರಿಗೆ ಅವರ ಕುರ್ಚಿಯನ್ನು ಬಿಟ್ಟರೆ ಬೇರೆ ಏನೂ ಕೂಡ ಇಲ್ಲ ಎಂದು ತಿಳಿದುಕೊಂಡಿದ್ದಾರೆ. ಈ ಸಭೆ ಕೂಡ ಇಲ್ಲವೆಂದು ತಿಳಿದು ಕೊಂಡಿದ್ದಾರೆ. ನಮ್ಮ ಕೆಲಸ ನಾವು ಮಾಡಬೇಕಾಗಿದೆ. ಆದ್ದರಿಂದ ಈ ಕೆಲಸ ಮಾಡುತ್ತಿದ್ದೇವೆ. ಪದ ಉಪಯೋಗಿಸಿರತಕ್ಕದ್ದು. "The committee strongly recomends initiation of the Criminal and Civil Proceedings as the case may be against Sri Prabhakar Rao, former Chairman and Managing Director of the Company in regard to his role in the commission Episode."

ಇವರು ಮುಖ್ಯ ಕಾರ್ಯದರ್ಶಿಗಳು ಆಗಿದ್ದರು. ಹಿಂದಿನ ವರದಿಯಲ್ಲಿ a fool was a chief Secretary. ಈ ವರದಿಯಲ್ಲಿ A Criminal was the Chief Secretary of the State. ಇದನ್ನು ನಾನು ಹೇಳುತ್ತಿಲ್ಲ, ವರದಿ ಹೇಳುತ್ತಿದೆ. ಅದೇ ರೀತಿಯಲ್ಲಿ ಇದು ಕಮೀಷನ್‌ಗೆ ಸಂಬಂಧಪಟ್ಟಿದ್ದು ಆದರೆ ಅಲ್ಲಿ ಏನೂ ತಯಾರಿ ನಡೆಯದಿದ್ದರೂ ಸಹ, ಸಾಮಾನು ತಯಾರಾಗದೇ ಇದ್ದರೂ ಸಹ ತಯಾರಾಗಿದೆ ಎಂದು ಲೆಕ್ಕ ಕೊಟ್ಟಿರು. ಒಂದು ಕಮಿಟಿ ಮಾಡಿ ಜಯರಾಮನ್ ಕಮೀಷನ್ ಎನ್ನತಕ್ಕ ಕಮಿಟಿಯ ವರದಿ ಆಯಿತು. ಆದರಲ್ಲಿ ನಾಲ್ಕು ಅಧಿಕಾರಿಗಳ ಮೇಲೆ ಗುರುತರವಾದಂತಹ

ಒಂದು ಹೊರೆಯನ್ನು ಹೊರಿಸಿದ್ದಾರೆ. ಈ ಸಮಿತಿಯ ವರದಿಯಲ್ಲಿದೆ. ಅವರ ಹೆಸರುಗಳನ್ನು ಸಹ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಬ್ಬರು ಹೀರಾಲಾಲ್ ಎಂದು. ಈಗಲೂ ಕೂಡ ಅದರಲ್ಲಿ ಇದ್ದಾರೆ. ಹೀರಾಲಾಲ್ ಎನ್ನತಕ್ಕವರು ಈಗಲೂ ಕೂಡ ಇದ್ದಾರೆ. ಅವರಿಗೆ ಇವರು ಕೊಟ್ಟಿರತಕ್ಕದ್ದು ಏನು ಅಂದರೆ ರೆಕ್ಮೆಂಡೇಷನ್. ಅವರನ್ನು ಇವತ್ತು ಟೆಕ್ನಿಕಲ್ ಡೈರೆಕ್ಟರ್ ಆಗಿ ಮಾಡಿ ಕೂರಿಸಿದ್ದಾರೆ. ಅವರು ಎಲೆಕ್ಟ್ರಿಕಲ್ ಇಂಜಿನಿಯರ್ ಅಲ್ಲ. ಅದು ಎನ್‌ಜಿಇಎಫ್. ನ್ಯೂ ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ. ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ಒಬ್ಬ ಮೆಕಾನಿಕಲ್ ಇಂಜಿನಿಯರ್ ಆಗಿತಕ್ಕವರನ್ನು ಟೆಕ್ನಿಕಲ್ ಡೈರೆಕ್ಟರ್ ಎಂದು ಮಾಡಿದ್ದಾರೆ. He is not an Electrical Engineer.

4.00 ಪಿ.ಎಂ.

He is the Technical Director now. His basic qualification is Mechanical. But he is the Techinical Director in Electrical matters.

Sri. D.B. Chandregowda : That is the mechanics of Electricals.

ಶ್ರೀ ಸಿ. ಬೈರೇಗೌಡ : ಹೊಸ ಸಬ್ಜೆಕ್ಟ್. ಅಂತಹವರು ರೆಕಮಂಡ್ ಮಾಡಿದ್ದಾರೆ. ಎನ್‌ಜಿಇಎಫ್‌ನ್ನು ಎಬಿಬಿಗೆ ಕೊಡಿಯೆಂದು ಹೇಳಿದ್ದಾರೆ. ಆಮೇಲೆ ಅದಕ್ಕೆ ಬರುತ್ತೇನೆ. ಇದರಲ್ಲಿ ಹೀರಾಲಾಲ್ ಎನ್ನತಕ್ಕವರು ಎಕ್ಸಿಕ್ಯುಟಿವ್ ಡೈರೆಕ್ಟರ್ ಆಗಿದ್ದರು. ಕೆ.ಜಿ. ಷಣ್ಮುಖಪ್ಪ ಬಿ.ಆರ್. ಶಾಂತಕುಮಾರ್ ಇನ್ನೊಬ್ಬರು ಇದ್ದಾರೆ ಒಟ್ಟು 4 ಜನ. ಅವರೆಲ್ಲರಿಗೂ ಬಡ್ತಿ ಕೊಟ್ಟು ಇವತ್ತು ಕಂಪನಿಯೇ ಗತಿ ಏನಾಗಿದೆ? ಇವತ್ತು ಒಂದೇ ವರ್ಷದಲ್ಲಿ 21 ಕೋಟಿ ರೂಪಾಯಿ ನಷ್ಟವಾಗಿದೆ. ಈ ವರ್ಷ ಏನೋ ಮಾರ್ಜಿನಲ್ ಲಾಭ ಬರುತ್ತದೆಂದು ಹೇಳುತ್ತಿದ್ದಾರೆ. ಅದಕ್ಕೆ ಆಮೇಲೆ ಬರುತ್ತೇನೆ. ಈ ವರದಿಯಲ್ಲಿ ಏನು ಹೇಳುತ್ತಿದ್ದಾರೆಂದರೆ, ಈ ಪ್ಯಾರಾ ಪೂರ್ತಿ ಓದುವುದಕ್ಕೆ ಇಷ್ಟಪಡುತ್ತೇನೆ. ಪ್ಯಾರಾ ನಂ. 3.52 ಅದು ಈ ರೀತಿ ಇದೆ.

"In the background of the findings/observations and recommendations of the Committee in Chapters I, II, and III of this report, the Committee is of the view that there is need for revamping the Board of Directors of the Company as the N.G.E.F., Ltd., is a premier manufacturing company in the State Public Sector withs large capacity of technological manufacture, diversions and sophisticated_equipments needed by the key sectors of economy, as the company also has high potential of rapid growth by utilising its well equipped factories, as well as skilled and technically qualified manpower. It is necessary that such a company is headeed by an able person with technical and professional qualifications, experience and competence who can give the much needed technical and operational thrust and direction in a dynamic and authoritative manner. The Committee recommends that these suggestions of the Committee may be examined and implemented by the Government on priority."

This is the recommendation of the committee. Till today, they have not implemented it. ಇವತ್ತಿನವರೆಗೂ ಕೂಡ ಈವೊಂದು ಸಮಿತಿಯ ವರದಿ ಏನಿದೆ ಸಮಿತಿ ಏನನ್ನು ಸಲಹೆ ಮಾಡಿದೆ ಯಾವ ಸಲಹೆಗಳನ್ನು ಕೂಡ ಸರ್ಕಾರ ಜಾರಿಗೆ ತಂದಿಲ್ಲ. ಆದ್ದರಿಂದ ಇವತ್ತು ಈ ಸಂಸ್ಥೆಯನ್ನು ಎಬಿಬಿಗೆ ಕೊಡತಕ್ಕ ಕೆಲಸ

ನಡೆಯುತ್ತಿದೆ. ನಾನು ಮುಖ್ಯಮಂತ್ರಿಗಳಿಗೆ ಮೂರು ಕಾಗದಗಳನ್ನು ಬರೆದಿದ್ದೇನೆ. ಒಂದು ಕಾಗದವನ್ನು ಸವಿಸ್ತಾರವಾಗಿ 11-15 ಪುಟಗಳ ಕಾಗದ ಬರೆದಿದ್ದೇನೆ. ಅದಕ್ಕೆ ಇದುವರೆಗೆ ನನಗೆ ಸ್ವೀಕಾರವಾಗಿದೆ ಎನ್ನುವ ರಿಪ್ಲೈ ಬಂದಿಲ್ಲ. ಅದರಲ್ಲಿ ಈ ಸಮಿತಿಯ ರೆಕಮೆಂಡೇಶನ್ ಏನಿದೆ ಅದನ್ನು ಕೂಡ ಹೇಳಿದ್ದೇನೆ. ಇದಕ್ಕೆ ಯಾರು ಕಾರಣ ಎನ್ನುವುದನ್ನು ಸಮಿತಿಯ ವರದಿಯನ್ನು ಉಲ್ಲೇಖಿಸಿ ನಾನು ಬರೆದಿದ್ದೇನೆ. ಅದರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಕೂಡ ಹೇಳಿದ್ದೇನೆ. ಇದು ಯಾವುದೂ ಇದುವರೆಗೂ ಮಾಡಿಲ್ಲ. ಇದನ್ನು ಮಾರಾಟ ಮಾಡಬೇಕೆನ್ನುವುದು ನಡೆಯುತ್ತಿದೆ. ಇದರ ಚಿತ್ರವನ್ನು ಸ್ವಲ್ಪ ಸೂಕ್ಷ್ಮವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕಳೆದ 10 ವರ್ಷಗಳಿಂದ ಇದು ನಡೆದಿರತಕ್ಕದ್ದು ನಾನು ಎಲ್ಲ ವರ್ಷಗಳದ್ದು ಹೇಳುವುದಕ್ಕೆ ಹೋಗುವುದಿಲ್ಲ. ಪ್ರಾಫಿಟ್ ಆಫ್ಟರ್ ಟ್ಯಾಕ್ 1992-93ರಲ್ಲಿ (-) 2089.05 ಲಕ್ಷ. 1991-92ರಲ್ಲಿ (-) 678.91 1990-91ರಲ್ಲಿ 249.91ನಾನು ಇಷ್ಟಕ್ಕೆ ನಿಲ್ಲಿಸುತ್ತೇನೆ. ಇದು ಏಕೆ ನಷ್ಟ ಅನುಭವಿಸುತ್ತಿತ್ತು? ಸಮಿತಿಯ ಎರಡು ವರದಿಗಳನ್ನು ಸರ್ಕಾರ ಜಾರಿಗೆ ತಂದಿದ್ದರೆ ಈ ನಷ್ಟವಾಗುತ್ತಿರಲಿಲ್ಲ. ಸಮಿತಿ ವರದಿಯನ್ನು ಕೊಟ್ಟಿದ್ದರೂ ಸಹ ಅದಕ್ಕೆ ಇರತಕ್ಕ ಕಾಯಿಲೆ ಏನು ಆ ಕಾಯಿಲೆಗೆ ತಕ್ಕಂತೆ ಔಷಧಿಯನ್ನು ಸಮಿತಿಯ ವರದಿಯಲ್ಲಿ ಕೊಟ್ಟಿದ್ದರೂ ಸಹ ಔಷಧಿಯನ್ನು ಕೊಡುವುದಕ್ಕೆ ಬದಲಾಗಿ ಇವತ್ತು ಸರ್ಕಾರ ಕಂಪನಿಗೆ ವಿಷವನ್ನು ಕೊಡತಕ್ಕ ಒಂದು ಪ್ರಯತ್ನವನ್ನು ನಡೆಸಿದೆ. ಇವತ್ತು ಏನಾಗಿದೆ ಅಂದರೆ, ಎಬಿಬಿ ಸಂಸ್ಥೆಯಿದೆ, ಎಬಿಬಿ ಎನ್ನುವುದು ತಮಗೆ ಗೊತ್ತಿದೆ. ನಮ್ಮ ಭಾರತ ದೇಶದ ರೈಲ್ವೆಗೆ ಲೋಕೋಮೋಟಿವ್ಸ್ ಕೊಡತಕ್ಕ ಬಗ್ಗೆ ರಾಷ್ಟ್ರಾದ್ಯಂತ ದೊಡ್ಡ ಕ್ಯಾಪ್ಟರ್ ಆಗಿದೆ. ಲೋಕಸಭೆಯಲ್ಲಿ ಕೂಡ ಅದರ ಬಗ್ಗೆ ಚರ್ಚೆಯಾಗಿದೆ. ಅದರ ಬಗ್ಗೆ ಒಂದು ಸಮಿತಿಯಾಗಿದೆ. ಪಾರ್ಲಿಮೆಂಟ್ ಸಮಿತಿಗೆ ಇದುವರೆಗೆ ಕಾಗದಪತ್ರಗಳನ್ನು ಕೊಡುವುದಕ್ಕೆ ಇಷ್ಟಪಡುತ್ತಿಲ್ಲ. ರೈಲ್ವೆಮಿನಿಸ್ಟ್ರಿ. ನಾನು ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅಷ್ಟ ಬಲವಾಗಿದೆ ಈ ದೇಶದಲ್ಲಿರತಕ್ಕ ಆಡಳಿತದ ಮೇಲೆ ಅವರ ಬಲ. ಯಾರು ಭಾರತದೇಶದ ಆಡಳಿತ ಸೂತ್ರವನ್ನು ಹಿಡಿದಿದ್ದಾರೆ ಅವರ ಮೇಲೆ ಇವರ ಹಿಡಿತ ಅಷ್ಟು ಬಲವಾಗಿದೆ. ಎಷ್ಟು ಬಲವಾಗಿದೆ ಎನ್ನುವುದಕ್ಕೆ ಇತ್ತೀಚೆಗೆ ಪತ್ರಿಕೆಗಳಲ್ಲಿ ಬಂದಿರತಕ್ಕದ್ದನ್ನು ನೋಡಿದರೆ ಗೊತ್ತಾಗುತ್ತದೆ. ಒಂದು ಸಂಸದೀಯ ಸಮಿತಿಗೆ ತನ್ನ ದಾಖಲೆಗಳನ್ನು

ಕೊಡುವುದಿಲ್ಲವೆನ್ನುವ ಒಂದು ನಿರ್ದಿಷ್ಟವಾದ ನಿಲುವನ್ನು ಕೇಂದ್ರ ರೈಲ್ವೆ ಇಲಾಖೆ ಪಡೆದಿರತಕ್ಕದ್ದು ಅಷ್ಟೆ ಇದಕ್ಕೆ ಒಂದು ನಿದರ್ಶನ. ಅದಕ್ಕೆ ಯಾರು ಕಾರಣಕರ್ತರಾಗಿದ್ದರು ಎಬಿಬಿಗೆ ಕಂಟ್ರಾಕ್ಟನ್ನು ಒದಗಿಸುವುದಕ್ಕೆ ಯಾರು ಕಾರಣಕರ್ತರಾಗಿದ್ದರು ಅವರೇ ಈ ಎನ್‌ಜಿಇಎಫ್‌ನ್ನು ಕೂಡ ಎಬಿಬಿಗೆ ವಹಿಸುವುದಕ್ಕೆ ಪ್ರಯತ್ನ ಇವತ್ತಿನ ದಿವಸ ನಡೆದಿದೆ. ಈ ರಾಜ್ಯದ ಆಡಳಿತದ ಮೇಲೂ ಸಹ ಅವರದು ಬಹಳ ಹಿಡಿತವಿದೆ. ಅಷ್ಟಿಷ್ಟಲ್ಲ ಬಹಳ ಹಿಡಿತವಿದೆ. ಇವತ್ತಿನ ದಿವಸ ನಮ್ಮ ಮುಖ್ಯಮಂತ್ರಿಗಳನ್ನು ಕೈಗೊಂಬೆಯಾಗಿ ಮಾಡಿಕೊಂಡಿದ್ದಾರೆ. ಲೋಕೋಮೋಟಿವ್ಸ್ ಕೊಡಿಸಿದ್ದಾರೆ. ಅವರು ನಿಮ್ಮನ್ನು ಕೈಗೊಂಬೆಯಾಗಿ ನಡೆಸುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ : ಯಾರು?

ಶ್ರೀ ಸಿ. ಬೈರೇಗೌಡ : ನಾನು ಹೆಸರು ಹೇಳಿದರೆ ನಮ್ಮ ಅಧ್ಯಕ್ಷರು ಕಡತದಿಂದ ತೆಗೆದುಹಾಕುತ್ತಾರೆ ನೀವು ಅದಕ್ಕೆ ದೊಡ್ಡದಾಗಿ ಹೇಳುತ್ತೀರಿ, ಇದು ಆಗುತ್ತಾ ಇರುತ್ತದೆ. ಯಾರ್ಯಾರು ಎನ್‌ಜಿಇಎಫ್ ಸಂಸ್ಥೆಯಲ್ಲಿ ಕೆಲಸ ಮಾಡಿದ್ದಾ ಅವರೆಲ್ಲರನ್ನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ನಿಜವಾಗಲೂ ಕೂಡ ಅವ ಹೆಸರನ್ನು ನೆನಸಿಕೊಳ್ಳುವುದಕ್ಕೆ ಅಷ್ಟೆ ಸಂತೋಷವಾಗುತ್ತದೆ.ಈ ಸಮಿತಿಯ ವರದಿಯ

ಸಹ ಅವರ ಹೆಸರುಗಳನ್ನು ಸೇರಿಸಿದ್ದಾರೆ. ಸಮಿತಿಯ ವರದಿಯಲ್ಲಿ ಮೂರು ಹೆಸರುಗಳನ್ನು ಸೇರಿಸಿದ್ದಾರೆ. ಎಸ್.ಕೆ.ದಾಸ್, ಮತ್ತೊಬ್ಬರು ಅಂದಿನ ಸಿಎಂಡಿ ಆಗಿದ್ದವರು ಎಸ್.ಬಿ. ಮುದ್ದಪ್ಪ ಮತ್ತು ಕಾರ್ಖಾನೆಯ ಕೆ.ಆರ್. ಕೃಷ್ಣೇಗೌಡ ಅವರ ಹೆಸರುಗಳನ್ನು ಕೂಡ ಸೇರಿಸಿದ್ದಾರೆ. ಅವರ ಸೇವೆಯನ್ನು ಸ್ಮರಿಸಿದ್ದಾರೆ ಅವರುಗಳ ಹೆಸರುಗಳನ್ನು ಹೇಳುವುದಕ್ಕೆ ನನಗೂ ಕೂಡ ಅಷ್ಟೆ ಸಂತೋಷವಾಗುತ್ತದೆ ಅದು ಬೇರೆ. ಬಿಐಎಫ್ಆರ್ ಎನ್ನತಕ್ಕದ್ದು ಒಂದು ಇದೆ. ನಾನು ಆಗಲೇ ಹೇಳಿದಹಾಗೆ ಎನ್‌ಜಿಇಎಫ್ ಷೇರುಗಳನ್ನು ಶೇಕಡ 35ರಷ್ಟನ್ನು 38ಕೋಟಿ ರೂಪಾಯಿಗಳಿಗೆ ಮಾರಾಟ ಮಾಡುವುದಕ್ಕೆ ಆಡಳಿತ ಮಂಡಳಿಯವರು ಸರ್ಕಾರಕ್ಕೆ ಶಿಫಾರಸು ಕಳುಹಿಸಿದ್ದಾರೆ. 38 ಕೋಟಿ ರೂಪಾಯಿ, ಇವತ್ತು ಎನ್‌ಜಿಇಎಫ್ ಕಾರ್ಖಾನೆಯ ಒಟ್ಟಾರೆ ಆಸ್ತಿಯನ್ನು ಲೆಕ್ಕಹಾಕಿದರೆ ಸುಮಾರು 400 ಕೋಟಿ ರೂಪಾಯಿಯಾಗುತ್ತದೆ. ಮಾರ್ಕೆಟ್ ರೇಟ್ ಪ್ರಕಾರ ಲೆಕ್ಕ ಹಾಕಿದರೆ ಸುಮಾರು 400 ಕೋಟಿ ರೂಪಾಯಿಯಾಗುತ್ತದೆ. 400 ಕೋಟಿ ರೂಪಾಯಿಯಲ್ಲಿ ಶೇಕಡ 35ರಷ್ಟು ಅಂದರೆ 140 ಕೋಟಿ ರೂಪಾಯಿಯಾಗುತ್ತದೆ. 140 ಕೋಟಿ ರೂಪಾಯಿ ಆಸ್ತಿಯನ್ನು ಸರ್ಕಾರ ಕೊಡುವುದಕ್ಕೆ ಅವರು ರೆಕಮಂಡ್ ಮಾಡಿರತಕ್ಕದ್ದು ಇದೆ ಸರ್ಕಾರ ಏನು ಮಾಡುತ್ತದೋ ಏನೋ ಗೊತ್ತಿಲ್ಲ ಅವರು ರೆಕಮಂಡ್ ಮಾಡಿರತಕ್ಕದ್ದು 38 ಕೋಟಿ ರೂಪಾಯಿ. ಮುಖ್ಯಮಂತ್ರಿಗಳು ದಯವಿಟ್ಟು ಗಮನಿಸಬೇಕು ಪತ್ರದಲ್ಲಿ ನಾನು ಬರೆದಿದ್ದೇನೆ. ನಾನು ಬರೆದಿರತಕ್ಕ ಪತ್ರವನ್ನು ತಾವು ಓದಿದ್ದೀರೋ ಏನೋ ಗೊತ್ತಿಲ್ಲ ಅದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. 140 ಕೋಟಿ ರೂಪಾಯಿ ಆಸ್ತಿಯನ್ನು ಕೇವಲ 38 ಕೋಟಿ ರೂಪಾಯಿಗಳಿಗೆ ಮಾರಾಟ ಮಾಡುವುದಕ್ಕೆ ಹೊರಟಿದ್ದಾರೆ. ನಮ್ಮ ಕಡೆ ಹೇಳುತ್ತಾರೆ. ಸೂಜಿ ಹಾಕಿ ದಬ್ಬಳ ಎತ್ತುವುದು ಎಂದು. ಇದು ಅದಲ್ಲ, ಸೂಜಿ ಹಾಕಿ ಬಂಗಾರದ ಬೆಟ್ಟವನ್ನು ಹೊತ್ತುಕೊಂಡು ಹೋಗುವುದು. ನನ್ನ ಪತ್ರದಲ್ಲಿ ತಿಳಿಸಿದ್ದೇನೆ. ಈ ಕೆಲಸಕ್ಕೆ ಕೈ ಹಾಕಬೇಡಿ. ಬೇರೆ ಬೇರೆ ಕಡೆಯಿಂದ ಬರಬಹುದಾದ ಹಣದ ಮೂಲ ಇದೆ. ಇವತ್ತು ಎನ್‌ಜಿಇಎಫ್ ಷೇರು ಬಂಡವಾಳ ಬೇರೆ ಕಾರ್ಖಾನೆಗಳಲ್ಲಿದೆ. ಎಇಜಿಯಲ್ಲಿ ಎನ್‌ಜಿಇಎಫ್ ಕಾರ್ಖಾನೆಯದು ಇದೆ. ಪತ್ರದಲ್ಲಿ ನಾನು ಬರೆದಿದ್ದೇನೆ. ಅದರ ಬಗ್ಗೆ ಸೂಕ್ಷ್ಮವಾಗಿ ಸಭೆಯ ಗಮನಕ್ಕೆ ತರುವುದಾದರೆ,

"NGEF holds about 75% of the equity in Karnataka Telecom Ltd."

ಟೆಲಿಕಾಮ್‌ನಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಹೇಳಬೇಕಾಗಿದೆ. ಹೋದವರ್ಷ ಇದು ಲಾಭದಾಯಕವಾಗಿತ್ತು. ಈಗಾಗಲೇ ಕೆ.ಟಿ.ಎಲ್.ನ ಲಾಭ ಕಡಿಮೆಯಾಗುತ್ತಾ ಇದೆ. ಕಾರಣವೇನೆಂದರೆ, ಈ ಟೆಲಿಕಾಮ್ ವ್ಯವಸ್ಥೆಗೆ ಅಂತರರಾಷ್ಟ್ರೀಯ ಸಮಸ್ಯೆಗಳೆಲ್ಲಾ ಬಂದಿವೆ. ಎ.ಟಿ. ಅಂಟನಿ ಎನ್ನತಕ್ಕಂಥ ಅಮೇರಿಕಾದ ಸಂಸ್ಥೆ ಬಂದಿದೆ. ಜಪಾನ್‌ನಿಂದ ಒಂದು ದೊಡ್ಡ ಕಂಪನಿ ಬಂದಿದೆ. ಅದೇ ರೀತಿ ಫ್ರಾನ್ಸ್‌ನಿಂದ ಒಂದು ದೊಡ್ಡ ಕಂಪನಿ ಬಂದಿದೆ. ಇದು ಯಾವುದರ ಮುಂದೆಯೂ ನಿಮ್ಮ ಕೆ.ಟಿ.ಎಲ್. ನಿಲ್ಲುವುದಕ್ಕೆ ಸಾಧ್ಯವಿಲ್ಲ. ಇವತ್ತು ಭಾರತ ದೇಶದ ಎಲ್ಲಾ ದ್ವಾರಗಳನ್ನು ತೆಗೆದುಹಾಕಿದ್ದೀರಿ. ಬಹುರಾಷ್ಟ್ರೀಯ ಸಂಸ್ಥೆಗಳು ಬಹುರಾಷ್ಟ್ರೀಯ ಕಂಪನಿಗಳು ಇಲ್ಲಿ ಬಂದು ವ್ಯಾಪಾರ ಮಾಡಬಹುದು, ಏನು ಬೇಕಾದರೂ [illegible] ಬಹುದು ಎನ್ನುವುದಕ್ಕೆ ನೀವು ಮುಕ್ತದ್ವಾರಗಳನ್ನು ಕೊಟ್ಟಿದ್ದೀರಿ. ಆದ್ದರಿಂದ, ನಿಮ್ಮ ಈ ಕೆ.ಟಿ.ಎಲ್.ಎನ್ನುವಂತಾದ್ದು ಒಂದು ಸಣ್ಣ it is not even a fry ಇದು ಸುಟ್ಟು ಬೂದಿಯಾಗುತ್ತದೆ. ಆದ್ದರಿಂದಲೇ ನಾನು ಇವತ್ತು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದರಲ್ಲಿರತಕ್ಕ ಎನ್.ಜಿ.ಇ.ಎಫ್. ಷೇರು ಏನಿದೆ, ಅದನ್ನು ಮಾರಾಟ ಮಾಡಿದರೆ, ಸುಮಾರು ನಾಲ್ಕುವರೆಯಿಂದ, ಐದು ಕೋಟಿ ರೂಪಾಯಿಗಳ ಹಣ ಸಿಗುತ್ತದೆ. ಅದೇ ರೀತಿಯಲ್ಲಿ ಇವತ್ತಿನದಿವಸ ಅನಾವಶ್ಯಕವಾದ ಕೆಲವು ಇವೆ. ಮೈಸೂರು ಲ್ಯಾಂಪ್ಸ್ ವರ್ಕ್ಸ್‌ನಲ್ಲೂ ಎನ್‌ಜಿಇಎಫ್

ಷೇರ್ಸ್ ಇದೆ. ಅದನ್ನು ವಾಪಸ್ ತೆಗೆದುಕೊಂಡರೆ, 38.28 ಲಕ್ಷ ರೂಪಾಯಿ ಆಗುತ್ತದೆ. ಅದೇ ರೀತಿಯಲ್ಲಿ ಸ್ಟೆಲ್ ಎನ್ನತಕ್ಕಂಥ ಸಂಸ್ಥೆ ಇದೆ. ಈ ಸ್ಟೆಲ್ ಸಂಸ್ಥೆಗೂ ಸಹ 27.50 ಲಕ್ಷ ರೂಪಾಯಿ ಎನ್‌ಜಿಇಎಫ್ ಷೇರು ಇದೆ. ಅದೇ ರೀತಿಯಲ್ಲಿ ನಾನು ಆಗಲೇ ಹೇಳಿದಹಾಗೆ, ಎನ್‌ಜಿಇಎಫ್, ಎ.ಇ.ಜಿ.ಯಲ್ಲಿ ಶೇಕಡ 50ರಷ್ಟು ಷೇರು ಇದೆ. ಇದನ್ನು ವಾಪಸ್ ತೆಗೆದುಕೊಂಡರೆ, ಅದು ಫೇಸ್ ವ್ಯಾಲ್ಯೂ ಇರತಕ್ಕಂತಾದ್ದು 68 ಲಕ್ಷ ರೂಪಾಯಿ. ಆದರೆ, ಅದನ್ನು ಮಾರಾಟ ಮಾಡಿದರೆ, 6ಕೋಟಿ ರೂಪಾಯಿ ಹಣ ಸಿಗುತ್ತದೆ. ಅದೇ ರೀತಿಯಲ್ಲಿ, ಎ.ಇ.ಜಿ. ಸಂಸ್ಥೆಯೂ ಸಹ,ಇದರಲ್ಲಿ ಹೆಚ್ಚಿನ ಹಣವನ್ನು ಹಾಕುವುದಕ್ಕೂ ಕೂಡ ಉತ್ಸಾಹವಾಗಿದೆ. ನಾನು ಪತ್ರದಲ್ಲಿ ಎಲ್ಲವನ್ನೂ ವಿವರವಾಗಿ ತಿಳಿಸಿದ್ದೇನೆ. ಇಲ್ಲಿಯೂ ಕೂಡ ವಿವರವಾಗಿ ಹೇಳಬೇಕೆಂದಿದ್ದೆ. ಆದರೆ ಮುಖ್ಯಮಂತ್ರಿಗಳು ವಿಮಾನದಲ್ಲಿ ಹಾರುವವರಿದ್ದಾರೆ. ಅವರ ವಿಮಾನದ ವೇಗಕ್ಕೆ ನಾನು ಭಾಷಣ ಮಾಡುವುದಕ್ಕಾಗುವುದಿಲ್ಲ. ವಿಮಾನದ ವೇಗಕ್ಕೆ ಹೊಂದಿಕೊಳ್ಳುವುದಕ್ಕೆ ನನ್ನ ಕೈಲಿ ಸಾಧ್ಯವಾಗುತ್ತಾ ಇಲ್ಲ. ಇದೆಲ್ಲವನ್ನೂ ಕೂಡ ಪತ್ರದ ಮುಖೇನ ತಿಳಿಸಿದ್ದೇನೆ. ಆದ್ದರಿಂದ, ಇದರ ಮೇಲೆ ನಿಮ್ಮ ಗುರುತರವಾದಂಥ ಆರೋಪ ಬರುತ್ತದೆ. ನೀವೇನಾದರೂ ಕೂಡ ಎ.ಡಿ.ಡಿ.ಗೆ ಇದರ ಷೇರನ್ನು ಮಾರಾಟ ಮಾಡತಕ್ಕ ಒಂದು ಸಂಚಿಗೆ ನೀವು ಒಳಪಟ್ಟರೆ, ನೀವು ಬಹಳ ಗುರುತರವಾದಂಥ ಆರೋಪವನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ, ದಯವಿಟ್ಟು ನೀವು ಇದನ್ನು ಮಾಡಬೇಡಿ ಮತ್ತು ನನ್ನ ಸಲಹೆ ಏನಿದೆ. ನಾನು ಪತ್ರದ ಮುಖೇನ ತಿಳಿಸಿದ್ದೇನೆ. ಇದನ್ನು ನೀವು ಯಾವ ಆರ್ಥಿಕ ತಜ್ಞರಿಗಾದರೂ ಕಳುಹಿಸಿಕೊಡಿ. ಅವರ ಮೂಲಕ, ಇದು ಸರಿ ಅಥವಾ ಇಲ್ಲ ಎನ್ನುವುದನ್ನು ಖಾತರಿಪಡಿಸಿಕೊಳ್ಳಿ. ಇಷ್ಟನ್ನು ಹೇಳುತ್ತಾ, ನೀವು ಬಹಳ ಬುದ್ಧಿವಂತರು. ದಕ್ಷಿಣ ಕನ್ನಡದವರು ಬಹಳ ಬುದ್ಧಿವಂತರು. ನಿಮ್ಮ ಬುದ್ಧಿ ಎಲ್ಲವೂ ದಕ್ಷಿಣ ಕನ್ನಡದವರ ಮೇಲೆಯೇ ಇರುತ್ತದೆ. ಈಗ ಕೆ.ಟಿ.ಎಲ್.ಗೆ ಒಬ್ಬರು ಸಿಎಂಡಿ ಮಾಡಿದ್ದೀರಿ. ನನಗೆ ಎಷ್ಟು ಆಶ್ಚರ್ಯವಾಗುತ್ತದೆಂದರೆ, ಇವರು ನಿವೃತ್ತಿಯಾಗುತ್ತಾರೆ, ಯಾವಾಗ ನಿವೃತ್ತಿಯಾಗುತ್ತಿದ್ದಾರೆ, 6-3-94ರಂದು ನಿವೃತ್ತಿಯಾಗುತ್ತಿದ್ದಾರೆ. ಯಾವಾಗ ನಿವೃತ್ತಿಯಾಗುತ್ತಿದ್ದಾರೆ, 6-3-94ರಂದು ನಿವೃತ್ತಿಯಾಗುತ್ತಾರೆ. ಶ್ರೀ ಎಸ್. ನಾರಾಯಣಶೆಟ್ಟಿ ಎನ್ನತಕ್ಕವರು ಹಾಲಿ ಕೆಟಿಎಲ್ ನಲ್ಲಿರತಕ್ಕವರು. ಇವರೂ ಕೂಡ ಎನ್.ಜಿ.ಇ.ಎಫ್.ನಲ್ಲಿದ್ದರು. ಇವರ ಕತೆಯೂ ಕೂಡ ಗೊತ್ತಿದೆ. ಆದರೆ, ನಾನು ಹೇಳುವುದಕ್ಕೆ ಕಾಲದ ಅಭಾವದಿಂದ ಹೋಗಲಿಲ್ಲ. ಇವರು ಇದ್ದಂಥ ಕಾಲದಲ್ಲಿ ಏನೇನು ನಡೆಯಿತು ಎನ್ನುವುದನ್ನು ಹೇಳುವುದಕ್ಕೆ ಹೋಗಲಿಲ್ಲ. ಅವರು, ಅಲ್ಲಿ ನಿವೃತ್ತಿಯಾದ ಮೇಲೆ, ಇಲ್ಲಿ ತಂದು ಮರಿ ಹಾಕಿದರು. ಅಲ್ಲಿ ಸಾಲದು ಎಂದು ಹೇಳಿ, ಕೆಟಿಎಲ್‌ಗೆ ತಂದು ಹಾಕಿದರು. ಇವರನ್ನು ಕಾಂಟ್ರಾಕ್ಟ್‌ಆಧಾರದ ಮೇಲೆ ನೇಮಿಸಿಕೊಂಡಿದ್ದೀರಿ. ಅವರ ಕಾಂಟ್ರಾಕ್ಟ್ ಮುಗಿಯತಕ್ಕ ಅವಧಿ 6-3-94ರಂದು. ಇವರನ್ನು ಪುನರ್ ನೇಮಕ ಮಾಡಲು ಆಜ್ಞೆ, ತಾ: 6-1-94ರಲ್ಲಿ ನೀವು ಪತ್ರ ಬರೆದಿದ್ದೀರಿ. ಕಂಪನಿ ಕಾರ್ಯದರ್ಶಿಗಳು, ಟೆಲಿಕಾಮ್ ನಿಯಮಿತ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು ಇವರಿಗೆ ಪತ್ರ, ಸಿಐ 251 ಸಿಸಿಎಲ್ 93.

ಈ ಪತ್ರದ ಮುಖಾಂತರ ತಾವು ಎಲ್ಲಿಯವರೆಗೂ ಅಂದ್ರೆ ಇನ್ನೂ ಅವರ ಅವಧಿ ಮುಗಿಯುವ ಹಾಗೆ ಇಲ್ಲ ಆಗಲೇ ಇವರಿಗೆ ಅವಧಿಯನ್ನು ವಿಸ್ತಾರ ಮಾಡಿ ನಿಯಮ 118ರ ಮೇರೆಗೆ ಶ್ರೀ ಎಸ್ ನಾರಾಯಣಶೆಟ್ಟಿ ಇವರನ್ನು ಸದರಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರನ್ನಾಗಿ 7-3-94ರಿಂದ ಅಂದ್ರೆ ಅವರ ಕಂಟ್ರಾಕ್ಟ್ ಅವಧಿ ಮುಗಿಯುತ್ತದೆಯಲ್ಲ ಅಲ್ಲಿಂದ 31-3-97ರವರೆಗೆ ಅಂದ್ರೆ 3 ವರ್ಷಗಳ ಕಾಲ ಇವರು ಇಲ್ಲಿ ಇವರ ಬಗ್ಗೆ ಹೇಳುವುದಕ್ಕೆ ಕಾರಣ ಇದೆ ಸ್ವಲ್ಪ ದಯವಿಟ್ಟು ಕೇಳಬೇಕು. ಸ್ವಾಮಿ ನಾನು ಇವರನ್ನು ಆಗಲೇ ಬುದ್ಧಿವಂತರು ಅಂತ ಹೇಳಿದ್ದು. ಕೆಲವು ದಿನಗಳ ಹಿಂದೆ ಇವರ ಕುರ್ಚಿ ಅಲ್ಲಾಡುತ್ತಿತ್ತು. ನನ್ನ ಕುರ್ಚಿ ಅಲ್ಲಾಡಿದರೂ ಕೂಡ ಚಿಂತೆ

ಇಲ್ಲ ನಮ್ಮವರನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಇವರು ನಮ್ಮ ಜಿಲ್ಲೆಯವರು ನಮಗೆ ಸಂಬಂಧ ಇರುವವರು ಬಹುಶಃ ಇವರ ಕ್ಷೇತ್ರಕ್ಕೆ ಅವರ ಸಂಬಂಧ ಇದೆ ಅಂತ ನನಗನಿಸುತ್ತದೆ. ನನಗೆ ಅಲ್ಲಿಯವರೆಗೂ ಕೂಡ ಮಾಹಿತಿ ಇಲ್ಲ. ನಿಮ್ಮ ಜಿಲ್ಲೆಯವರು ಅಲ್ಲವೇ ಇವರು ಹೋಗಲಿ. ನಾನು ಹೇಳ್ತುತ್ತಿರುವುದು ನಿಮ್ಮ ಜಿಲ್ಲೆಯವರು ಅಂತ. ನಾವು ನೀವು ಎಲ್ಲರೂ ಒಂದೇ ರಾಜ್ಯದವರು.

ಶ್ರೀ ಎಂ. ವೀರಪ್ಪಮೊಯ್ಲಿ : ಈಗ ತಾವು ಮಾತನಾಡುವುದಕ್ಕೆ ಏನೂ ಅಡ್ಡಿ ಇಲ್ಲ. ಅಕಸ್ಮಾತ್ತಾಗಿ ಅವರು ನಮ್ಮ ಜಿಲ್ಲೆಯವರು. ಪ್ರಾಮಾಣಿಕವಾಗಿ ಆ ಪ್ರೊಪೋಜಲ್ ಬರುವವರೆಗೂ ಅವರಿಗೆ ಎಕ್ಸ್‌ಟೆಂಷನ್ ಕೊಡುತ್ತಾರೆಂದು ನನನೆ ಗೊತ್ತಿರಲಿಲ್ಲ ಸಾಧಾರಣವಾಗಿ ಈ ಇಲಾಖೆಯನ್ನು ಸನ್ಮಾನ್ಯರಾಜ್ಯಸಚಿವರಾದ ಶ್ರೀ ರಾಮಲಿಂಗರೆಡ್ಡಿಯವರೇ ಮಾಡುತ್ತಾರೆ. ಅವರಿಂದ ಪ್ರೊಪೋಜಲ್ ಬರುವವರೆಗೂ ಕೂಡ ನನಗೆ ಗೊತ್ತಿಲ್ಲ ಈ ಪ್ರೊಪೋಜಲ್ ಕ್ಯಾಬಿನೇಟ್‌ಗೆ ಬಂದಿದೆ ಅಪ್ರೂವಲ್ ಆಗಿದೆ ಮತ್ತೆ ತಮಗೆ ಗೊತ್ತಿದೆ ಒಂದು ವಿಭಾಗದಲ್ಲಿ ಪರಿಣತಿ ಇದ್ದರೆ ಒಂದು ಸಂಸ್ಥೆ ಲಾಭದಾಯಕವಾಗಿ ನಡೆಯುವುದೇ ಕಷ್ಟ. ಒಂದು ಸಂಸ್ಥೆ ಲಾಭದಾಯಕವಾಗಿ ನಡೆಯುತ್ತಾ ಇದೆ ಅಂತ ಹೇಳಿದರೆ ಈಗ ತಾವೇ ಹೇಳುತ್ತೀರಿ ಸರಿಯಾದಂತಹ ಪ್ರೊಫೆಷನಲಿಜಂ ಆಡಳಿತ ಇರಬೇಕು ಅಂತ ಹೇಳಿ ಪ್ರೊಫೆಷನಲಿಜಂ ಅಂತ ಅಧಿಕಾರಿಗಳು ಇದ್ದರೆ ಅಂತಹ ಅಧಿಕಾರಿಗಳನ್ನು ಮುಂದುವರಿಸಿಕೊಂಡು ಹೋಗತಕ್ಕಂಥ ಪ್ರಸ್ತಾವನೆ ಬಂದಿದ್ದರಿಂದ ಮಾಡಿದ್ದೇವೆಯೇ ಹೊರತು ಅದರಲ್ಲಿ ನಮ್ಮ ಜಾತಿ ಅಲ್ಲ ನಮ್ಮ ಸಂಬಂಧ ಅಲ್ಲ ನಮ್ಮಕ್ಷೇತ್ರ ಅಲ್ಲ ಯಾವುದೂ ಅಲ್ಲ ದಯಮಾಡಿ ಇದಕ್ಕೆಲ್ಲ ಬಣ್ಣದ ಲೇಪ ಹಚ್ಚಲಿಕ್ಕೆ ಹೋಗಬೇಡಿ ನನಗೆ ಗೊತ್ತಾಯಿತು ತಾವು ಮೊದಲು ಒಂದು ಹೆಸರು ಪ್ರಸ್ತಾಪ ಮಾಡಿದ್ದೀರಿ. ಅದು ಬಹಳ ರೈವಲ್ ಅವರಿಗೂ ಇವರಿಗೂ ಇದ್ದದ್ದನ್ನು ತಾವು ಪಾಪ ಲಾಭ ಮಾಡಿಕೊಂಡು ಈಗ ಇದನ್ನು ಮೊದಲು ತಾವು ಒಂದು ಹೆಸರು ಹೇಳಿದ್ದಿರಲ್ಲ ನಾನು ಆ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ ಆ ಹೆಸರು ಹೇಳಿದ ಕೂಡಲೇ ಗೊತ್ತಿತ್ತು ನನಗೆ ಇದು ಬಂದೇ ಬರುತ್ತದೆ ಅಂತ ಹೇಳಿ ಏಕೆಂದರೆ ಇದೆಲ್ಲಾ ರೈವಲ್ಲರಿ ಇಂಟರ್‌ಫೈಟ್ ರೈವಲ್ಲರಿ ಇದೆಲ್ಲಾ ಅದನ್ನು ದಯಮಾಡಿ ನಾವು ನೀವು ಹಚ್ಚಿಕೊಳ್ಳುವುದು ಬೇಡ ಅವರವರು ಏನಾದರೂ ಮಾಡಿಕೊಳ್ಳಲಿ ನಾವೇಕೆ ?

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ ನಾನು ಒಂದು ಹೆಸರು ಹೇಳಿಲ್ಲ ಮೂರು ಹೆಸರು ಹೇಳಿದ್ದೇನೆ. ಅವರಲ್ಲಿ ಒಬ್ಬರನ್ನು ತಾವು ಈಗ ಕಾರ್ಯದರ್ಶಿಗಳನ್ನಾಗಿ ಮಾಡಿಕೊಂಡಿದ್ದೇನೆ. ತಾವು ಅವರ ಬಗ್ಗೆ ಬಹಳ ಪ್ರಶಂಸೆ ಮಾಡಿದ್ದೀರಿ ನಾನು ಪ್ರಶಂಸೆ ಮಾಡಿದ್ದೇನೆ ಅವರನ್ನು ದಾಸ್ ಅವರನ್ನು ಕಾರ್ಯದರ್ಶಿಗಳನ್ನಾಗಿ ಮಾಡಿಕೊಂಡಿದ್ದೀರಿ ಅವರನ್ನು ತಾವು ಪ್ರಶಂಸೆ ಮಾಡಿದ್ದೀರಿ ನಾನು ಪ್ರಶಂಸೆ ಮಾಡಿದ್ದೇನೆ. ಆ ವರದಿಯಲ್ಲಿ ಕೂಡ ನಮೂದು ಆಗಿದೆ.

ಶ್ರೀ ಎಂ. ವೀರಪ್ಪಮೊಯ್ಲಿ : ಮಾನ್ಯ ಅಧ್ಯಕ್ಷರೇ ನಾವು ಇಲ್ಲಿ ಮಾತನಾಡುವಾಗ ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ದಯಮಾಡಿ ನಾವು ರಾಜಕಾರಣಿಗಳು ಪರಸ್ಪರದೋಷಾರೋಪಣೆಗಳನ್ನು ಮಾಡಿಕೊಳ್ಳುತ್ತೇವೆ. ಸ್ವಲ್ಪ ನಾವು ಕೆಸ್ಕಿನ್ ಆಗಿಬಿಟ್ಟಿದ್ದೇವೆ. ಆದರೆ ಎಲ್ಲರೂ ಹಾಗೆ ಇದ್ದಾರೆಂದು ತಿಳಿದುಕೊಳ್ಳಬೇಡಿ ಏಕೆಂದರೆ ಅನೇಕ ಪ್ರಾಮಾಣಿಕ ಅಧಿಕಾರಿಗಳು ಇರುತ್ತಾರೆ. ಅವರಿಗೂ ಕೂಡ ಪ್ರಾಮಾಣಿಕವಾಗಿ ಬದುಕಬೇಕು ಎನ್ನತಕ್ಕಂಥ ಆಸೆ ಇದೆ. ನಾವು ಇಲ್ಲಿ ಕುಳಿತುಕೊಂಡು ಮಾತನಾಡುವಾಗ ಅವರು ಯಾರ ವಿಚಾರ ಕೂಡ ಮಾತನಾಡಬೇಕಾದರೆ ಸ್ವಲ್ಪ ವಿಚಾರ ಮಾಡಿ ಮಾತನಾಡಿದರೆ ಒಳ್ಳೆಯದು. ನಮಗೇನು ನಮ್ಮ ಊರಿನಿಂದ ಒಬ್ಬರು ಬಂದರು ನಮ್ಮ ಜಾತಿಯಿಂದ ಒಬ್ಬರು ಬಂದರು. ನಿಮ್ಮ ಜಾತಿಯಿಂದ ಒಬ್ಬರು ಬಂದರು ಅಂತ ಹೇಳಿ ಇವತ್ತು ಜಾತಿ ಇಟ್ಟುಕೊಂಡು ವೈಯುಕ್ತಿಕವಾಗಿ ಆ ಮಟ್ಟಕ್ಕೆ ನಾವು ಇಲ್ಲಿ ಚರ್ಚೆ ಮಾಡಿದರೆ ಹೇಗೆ. ನಿಮ್ಮ ಊರು ಜಾತಿ

ಜಿಲ್ಲೆ ಏನು ನಾವು ನಮ್ಮ ಊರಿನಲ್ಲಿ ಹುಟ್ಟಿದ್ದೇ ನಮ್ಮ ಜಿಲ್ಲೆಯಲ್ಲೇ ಹುಟ್ಟಿದ್ದು ಒಂದು ಪಾಪ ಆಗಿಬಿಟ್ಟಿದೆಯೇ? ಅಥವಾ ಕರ್ನಾಟಕ ರಾಜ್ಯಕ್ಕೆ ದಕ್ಷಿಣ ಕನ್ನಡ ಜಿಲ್ಲೆಯವರು ನಾವು ಬಂದದ್ದೇ ಪಾಪಾನಾ? ದಯಮಾಡಿ ತಾವು ಆ ತರಹ ಎಲ್ಲಾ ಮಾತನಾಡಬೇಡಿ. ಜಿಲ್ಲೆ ಇಟ್ಟುಕೊಂಡು ಮಾತನಾಡಬೇಡಿ. ನಾನು ಏನಾದರೂ ತಪ್ಪು ಮಾಡಿದ್ದರೆ ನನ್ನ ಮೇಲೆ ಏನಾದರೂ ಆಪಾದನೆ ಇದ್ದರೆ ಅದನ್ನು ಎತ್ತಿಕೊಂಡು ಮಾತನಾಡಿ. ಆದರೆ ಒಂದು ಜಿಲ್ಲೆಯಿಂದ ಬಂದವರು ಒಂದು ಭಾಷೆ ಮಾತನಾಡುವವರು ಮತ್ತೊಂದು ಮಾತನಾಡಿದರು ಅಂತ ಅದೇ ಒಂದು ಪಾಪ ಅಂತ ಹೇಳಿ ಈ ಪ್ರಪಂಚದಲ್ಲಿ ಸಮಾಜದಲ್ಲಿ ಇದ್ದರೆ ತಾವು ಈ ಮಾತನಾಡುವುದು ಸರಿ. ಆದರೆ ಒಂದೇ ಜಿಲ್ಲೆಯಿಂದ ಬಂದವರು ಎನ್ನುವ ಮಾತ್ರಕ್ಕೆ ತಾವು ಅದನ್ನು ಎತ್ತಿ ಮಾತನಾಡತಕ್ಕ ಪ್ರವೃತ್ತಿ ಏನು ಇದೆ ಅದು ಅಷ್ಟು ತಮ್ಮಂತಹ ಹಿರಿಯರಿಗೆ ಶೋಭೆ ತರುವುದಿಲ್ಲ.

ಶ್ರೀ ಸಿ. ಬೈರೇಗೌಡ : ಈ ಪ್ರಿನ್ಸಿಪಲ್ ಏನು ಇದೆ ಎಲ್ಲದ್ದಕ್ಕೂ ಕೂಡ ನಾನು ಒಪ್ಪುತ್ತೇನೆ. ದಯವಿಟ್ಟು ಕೇಳಿ ಹಾಗಾದರೆ ಈ ವರದಿಗಳಲ್ಲಿ ಕೂಡ ಏನು ಕ್ರಮ ತೆಗೆದುಕೊಂಡಿದ್ದೀರಿ ಸ್ವಾಮಿ. ಹೇಳಿ ನೋಡೋಣ ಏನು ಕಾರಣ ತೆಗೆದುಕೊಳ್ಳದೆ ಇರುವುದಕ್ಕೆ. ನೀವು ಹೇಳಿದಂತಹ ನೀತಿ ಏನು ಇದೆ ಈ ನೀತಿ ಎಲ್ಲಿಗೆ ಹೋಗಿದೆ ಸ್ವಾಮಿ. ಇದು ಎನ್‌ಜಿಇಎಫ್‌ಗೆ ಸಂಬಂಧಪಟ್ಟ ಹಾಗೆ ನಾನು ಆಗಲೇ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದೆ. 41ನೇ ವರದಿ ಮತ್ತು 53ನೇ ವರದಿಗಳಲ್ಲಿ ಏನು ಹೇಳಿದ್ದಾರೆ ಅದರ ಬಗ್ಗೆ ನಾನು ಈ ಹಿಂದೆ ಪತ್ರ ಕೂಡ ಬರೆದಿದ್ದೇನೆ ನೀವು ಏನು ಹೇಳುತ್ತಿರಲ್ಲ ಇದನ್ನು ಟೆಕ್ಸ್ಟ್ರೈಟ್ಸ್ ಹಾಕಿ ಅಲ್ಲಿಗೆ ಎಕ್ಸಪೀರಿಯನ್ಸ್ ಇರತಕ್ಕಂಥವನ್ನು ಹಾಕಿ ಅಂತ ಹೇಳಿದ್ದೇವೆ. ಇದರಲ್ಲಿ ಕೆಲವರು ಕ್ರಿಮಿನಲ್ ಅಫೆನ್ಸ್ಸ್ ಮಾಡಿದ್ದಾರೆ. ಕೆಲವರು ಕ್ರಿಮಿನಲ್ ಆಕ್ಷನ್ ತೆಗೆದುಕೊಳ್ಳಿ ಎನ್ನತಕ್ಕಂಥಾದ್ದು ಈ ವರದಿಯಲ್ಲಿದೆ. ಫ್ರಾಲ್ ಅಂತ ಕರೆದಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎನ್ನತಕ್ಕಂಥ ಪತ್ರ ಬರೆದಿದ್ದೇನೆ. ಏಕೆ ಈ ನಿಯಮ ಇಷ್ಟುಹೊತ್ತು ಹೇಳಿದ್ದೀರಲ್ಲ ಈ ನೀತಿಯನ್ನು ಏಕೆ ನಾನು ಪತ್ರ ಬರೆದಂತಹ ಸಂದರ್ಭದಲ್ಲಿ ಅನುಸರಿಸಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ತಾವು ಪತ್ರ ಬರೆದಿದ್ದರ ಬಗ್ಗೆ ಇಂತಿಷ್ಟು ಪೇಜು ಅಂತ ಕೂಡ ನಾನು ಹೇಳಿದ್ದೇನೆ. ಆದ್ದರಿಂದ ನಿಮ್ಮ ಪತ್ರಕ್ಕೆ ಸಾಕಷ್ಟು ಗಮನ ಕೊಟ್ಟಿದ್ದೇನೆ. ತಾವು ಈ ಕೆಡಿಬಿ ಬಗ್ಗೆ ಏನು ಹೇಳಿದ್ದೀರಿ ಅದರ ಬಗ್ಗೆ ಕೂಡ ಅಷ್ಟು ಪ್ರಾಮಾಣಿಕವಾಗಿ ಹೇಳುವುದಿದ್ದರೆ ಏನು ಅವರವರ ಸ್ವಾಯತ್ತತೆ ಬಗ್ಗೆ ನಾನು ಅಷ್ಟು ಹೆಚ್ಚಾಗಿ ಇಂಟರ್‌ಫಿಯರ್ ಮಾಡುವುದಿಲ್ಲ. ಆ ಕೈಗಾರಿಕೆ ಏನು ಇದೆ ಅದನ್ನು ಆಡಳಿತ ಮಂಡಲಿಯವರು ತೆಗೆದುಕೊಂಡಿದ್ದಾರೆ. ಆಡಳಿತ ಮಂಡಲಿಯವರು ತೆಗೆದುಕೊಳ್ಳತಕ್ಕಂಥ ನಿರ್ಣಯದ ಬಗ್ಗೆ ನಾವು ಏನಾದರೂ ಹಸ್ತಕ್ಷೇಪ ಎಂದಾದರೂ ಮಾಡಿದ್ದರೆ ಪ್ರಾಮಾಣಿಕವಾಗಿ ಹೇಳುವುದಾದರೆ ನಾನು ಮಾಡೇ ಇಲ್ಲ. ನಿರ್ಣಯ ತೆಗೆದುಕೊಂಡು ಆ ಪ್ರಸ್ತಾವನೆ ನಮ್ಮ ಸರ್ಕಾರಕ್ಕೆ ಬಂದ ಮೇಲೆ ನನಗೆ ಗೊತ್ತಾಯಿತು. ನಾವು ನಮ್ಮ ಪ್ರೊಪೆಷನಲ್ ತೀರ್ಮಾನ ತೆಗೆದುಕೊಂಡಿದ್ದೇವೆ. ಆದರೆ ಅದು ನಮ್ಮ ಕರ್ನಾಟಕ ರಾಜ್ಯದ ಒಟ್ಟಾರೆ ಹಿತದೃಷ್ಟಿಯಿಂದ ಕೈಗಾರಿಕೋದ್ಯಮದ ದೃಷ್ಟಿಯಿಂದ ಸರಿಯಾಗಿದೆಯೇ ಇಲ್ಲವೇ ಎಂದು ನಾವು ಕರ್ನಾಟಕ ಸರ್ಕಾರದಿಂದ ಪರಿಶೀಲನೆ ಮಾಡುತ್ತಿದ್ದೇವೆ. ಸರ್ಕಾರದ ನಿರ್ಣಯ ನಾವು ಇನ್ನೂ ತೆಗೆದುಕೊಂಡಿಲ್ಲ. ಆನಿರ್ಣಯ ಆಡಳಿತ ಮಂಡಳಿ ಮಾಡಿದ್ದು ವಿ ಆರ್ ಟೇಕ್ ಓವರ್. ಅದು ಡಿಸಿಗ್ರೇಟ್ ಮಾಡತಕ್ಕಂಥಾದ್ದು ಅದು ಸರಿಯಾಗಿಯೋ ಇಲ್ಲವೋ ಎನ್ನುವ ವಿಮರ್ಶೆ ಇನ್ನೂ ನಡೆಯುತ್ತಾ ಇದೆ. ಪೊಲಿಟಿಕಲ್ ಅಪೇರ್ಸ್‌ಕಮಿಟಿ ಕೂಡ ಮೊನ್ನೆ ತಾನೇ ಚರ್ಚಿಮಾಡಿದ್ದೇವೆ. ಅದನ್ನು ಡಿಫರ್ ಮಾಡಿದ್ದೇವೆ ಏಕೆಂದರೆ ಅದು ಏಕೆಂದರೆ ಸಾಕಷ್ಟು ಮಾಹಿತಿ ಸಂಗ್ರಹ ಮಾಡಬೇಕಾಗುತ್ತದೆ. ತಾವು ಹೇಳಿದಂತಹ ವಿಚಾರಗಳನ್ನು [illegible] ತೆಗೆದುಕೊಳ್ಳಬೇಕಾಗುತದೆ. ಎಲ್ಲಾ ವಿಚಾರಗಳನ್ನು ಗಮನಕ್ಕೆ

ತೆಗೆದುಕೊಂಡೇ ನಿರ್ಣಯ ತೆಗೆದುಕೊಳ್ಳಬೇಕೆ ಹೊರತು ನಾವು ಇನ್ನೂ ಏನೂ ನಿರ್ಣಯ ತೆಗೆದುಕೊಂಡಿಲ್ಲ ಹಾಗೆ ಇಟ್ಟಿದ್ದೇವೆ. ತಾವು ಈಗ ಏನೆಲ್ಲಾ ಪ್ರಸ್ತಾಪ ಮಾಡಿದ್ದೀರಿ ಅದನ್ನೆಲ್ಲಾ ಸಂಪೂರ್ಣವಾಗಿ ಗಂಭೀರವಾಗಿ ಪರಿಶೀಲನೆ ಮಾಡಿ ನಾವು ಮುಂದುವರೆಯುತ್ತೇವೆಯೇ ಹೊರತು ನಾವು ಯಾವುದೇ ರೀತಿಯಾದಂತಹ ಯಾರ ಪ್ರಭಾವಕ್ಕೆ ಒಳಗಾಗಿ ನಿರ್ಣಯ ತೆಗೆದುಕೊಳ್ಳುವ ಅಪೇಕ್ಷೆ ಇಲ್ಲ. ಇಚ್ಛೆ ಇಲ್ಲ. ಮತ್ತೆ ಯಾರಾದರೂ ಈ ಸಂಸ್ಥೆಯನ್ನು ಕಬಳಿಸಬೇಕು ಎನ್ನುವ ಉದ್ದೇಶದಿಂದ ಮಾಡಬೇಕು ಅಂತ ಹೇಳಿದರೆ ನಾವು ಸರ್ವಥಾ ಅದಕ್ಕೆ ಮನ್ನಣೆ ಕೊಡುವುದಿಲ್ಲ.

ಶ್ರೀ ಸಿ. ಬೈರೇಗೌಡ : ಸ್ವಾಮಿ ತಾವು ಒಂದಕ್ಕೆ ಒಂದೊಂದು ನೀತಿಯನ್ನು ಅನುಸರಿಸಬೇಡಿ. ತಾವು ಏನು ಹೇಳಿದಿರಿ. ಅಲ್ಲಿರತಕ್ಕಂಥ ಆಡಳಿತ ಮಂಡಳಿಯಲ್ಲಿ ನಾವು ಹಸ್ತಕ್ಷೇಪ ಮಾಡತಕ್ಕಂಥಾದ್ದು ಸರಿಯಲ್ಲ ಅಂತೇ ಹೇಳಿದಿರಿ. ಇವತ್ತು ಈ ವರದಿಯಲ್ಲೇ ಹೇಳಿದ್ದಾರೆ ಸ್ವಾಮಿ ಇದು 41 ಮತ್ತು 53ನೇ ವರದಿಗಳಲ್ಲ ಹೇಳಿದ್ದಾರೆ. ನಿಮ್ಮ ಕಾರ್ಯದರ್ಶಿಗಳಾಗಿರತಕ್ಕಂಥವರು ಯಾವ ರೀತಿಯಲ್ಲಿ ಪತ್ರ ಬರೆದಿದ್ದಾರೆ. ತಾವು ಇದನ್ನು ಸ್ವಲ್ಪ ದಯವಿಟ್ಟು ತರಿಸಿ ಓದಿ. ಈಗಲೇ ಕಳುಹಿಸಿ. ತಮ್ಮ ಕಾರ್ಯದರ್ಶಿಗಳಾಗಿರತಕ್ಕಂಥವರು. ಸರ್ಕಾರದ ಕಾರ್ಯದರ್ಶಿಗಳು.

ಶ್ರೀ ಎಂ. ವೀರಪ್ಪಮೊಯಿಲಿ : ಯಾವ ವರ್ಷ?

ಶ್ರೀ ಸಿ. ಬೈರೇಗೌಡ : ನಿಮ್ಮ ಸರ್ಕಾರದಲ್ಲಿ ಕಾರ್ಯದರ್ಶಿಗಳಾಗಿದ್ದವರು. ಅಂದಿನ ಸರ್ಕಾರದಲ್ಲಿ ನೀವು ಮಂತ್ರಿಗಳಾಗಿದ್ದಿರಿ. ನೀವು ಸಹ ಮಂತ್ರಿಮಂಡಲದಲ್ಲಿ ಇದ್ದಿರಿ. ಅಂದು ನಿಮ್ಮ ಕಾರ್ಯದರ್ಶಿ ಅಂದ್ರೆ ಸರ್ಕಾರದ ಕಾರ್ಯದರ್ಶಿಗಳು. ನಾನು ಅವರ ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಅಲೆಗ್ಸಾಂಡರ್‌ರವರು ಮತ್ತೇ ನಿಮ್ಮ ಗೋಪಾಲರೆಡ್ಡಿಯವರು ಏನೇನು ಪತ್ರ ಬರೆದಿದ್ದಾರೆ ಓದುವುದಕ್ಕೆ ಸಾಧ್ಯ ಇದೆಯೇ ಸ್ವಾಮಿ. ಯಾರಾದರೂ ಕಿಂಚಿತ್ತು ಪರಿಜ್ಞಾನ ಇರತಕ್ಕಂಥವರು ಇಂತಹ ಪತ್ರಗಳನ್ನು ಸೆಕ್ರಟರಿಯೇಟ್‌ನಲ್ಲಿ ಕುಳಿತುಕೊಂಡು ಅಲ್ಲಿನ ಸಿಎಂಡಿಯವರಿಗೆ ಬರೆಯುತ್ತಾರಲ್ಲ. ಅದನ್ನು ಓದಿದರೆ ಮೈಯಲ್ಲೆ ಉರಿಯುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ ಅಷ್ಟು ಇಂಟರ್‌ಫಿಯರೆನ್ಸ್ ನಿಮ್ಮ ಸರ್ಕಾರದಿಂದ ಆಗಿದೆ. ನೀವು ಇವತ್ತಿನದಿವಸ ನಾವು ಇಂಟರ್‌ಫಿಯರೆನ್ಸ್ ಆಗುವುದಿಲ್ಲ ಅಂತ ಹೇಳುತ್ತಾ ಇದ್ದೀರಿ. ಅದನ್ನು ನಾನು ಓದಬೇಕಾ? ಸರ್ಕಾರ ಅಂದ್ರೆ ಯಾರು ಸರ್ಕಾರದ ಕಾರ್ಯದರ್ಶಿಗಳು ಅಲ್ಲವೇ?

ಶ್ರೀ ಎಂ. ವೀರಪ್ಪಮೊಯ್ಲಿ : ಯಾವ ವರ್ಷ? ನಾನು ಮುಖ್ಯಮಂತ್ರಿಯಾದ ಮೇಲೆ ಯಾವುದಾದರೂ ಹಸ್ತಕ್ಷೇಪ ಮಾಡಿರತಕ್ಕಂಥಾದ್ದು ಪ್ರಕರಣ ಇದ್ದರೆ ದಾಖಲೆ ಇದ್ದರೆ ಸದನಕ್ಕೆ ಒಪ್ಪಿಸಿ.

ಶ್ರೀ ವಾಟಾಳ್ ನಾಗರಾಜ್ : ಅನೇಕ ಭಾರಿ ನೀವು ಸರ್ಕಾರ ಎಲ್ಲಾ ನಮ್ಮದೇ ಅಂತ ಹೇಳುತ್ತಿದ್ದಿರಿ. ಇವತ್ತು ಏಕೆ ಬೇರೆ ಅಂತ ಹೇಳುತ್ತಿದ್ದೀರಿ.

ಶ್ರೀ ಎಂ.ವೀರಪ್ಪಮೊಯ್ಲಿ : ಅದು ನಮ್ಮ ಸರ್ಕಾರವೇ ಇಲ್ಲ ಅಂತ ಯಾರು ಹೇಳಿದರು.

ಶ್ರೀ ವಾಟಾಳ್ ನಾಗರಾಜ್ : ಬಂಗಾರಪ್ಪ ಸರ್ಕಾರವನ್ನು ನಿಮ್ಮ ಸರ್ಕಾರದೋ ಅಲ್ಲವೋ ವೀರೇಂದ್ರ ಪಾಟೀಲ್ ಸರ್ಕಾರವನ್ನು ನಿಮ್ಮ ಸರ್ಕಾರ ಅಲ್ಲವೋ ಕಾಂಗ್ರೆಸ್ಸು ಸರ್ಕಾರ ನಿಮ್ಮ ಸರ್ಕಾರ ಅಲ್ಲವೋ?

ಶ್ರೀ ಎಂ. ವೀರಪ್ಪಮೊಯಿಲಿ : 3 ಸರ್ಕಾರ ನಮ್ಮ ಸರ್ಕಾರ. ಜನತಾ ದಳ ಇದ್ದ ಸರ್ಕಾರ ಬೈರೇಗೌಡರು ಇದ್ದ ಸರ್ಕಾರ. ನಮ್ಮ ಸರ್ಕಾರ. ನಮ್ಮ ಅಲೆಗ್ಸಾಂಡರ್ ಅವರ ಅಲೆಗ್ಸಾಂಡರ್ ಅವರ ಅಲೆಗ್ಸಾಂಡರ್ ನಮ್ಮ ಅಲೆಗ್ಸಾಂಡರ್ ಅಷ್ಟೇ. ಆದರೆ ಇದರಲ್ಲಿ ಎಲ್ಲ ನಾವು ಆ ವಿಚಾರವಾಗಿ ಏನು ನಿರ್ಣಯ ತೆಗೆದುಕೊಳ್ಳಬೇಕು

ನೀತಿ ವಿಷಯದಲ್ಲಿ ಒಬ್ಬೊಬ್ಬರು ಮುಖ್ಯಮಂತ್ರಿಯಾದ ಮೇಲೆ ಒಂದೊಂದು ಸರ್ಕಾರದಲ್ಲಿ ನಿರ್ಣಯ ತೆಗೆದುಕೊಳ್ಳುತ್ತಾರೆ. ನಿಮ್ಮ ನಿರ್ಣಯದಲ್ಲಿ ಈ ವರ್ಷ ಏಕೆಂದರೆ ತಾವು ಈ ವರ್ಷದ ರಾಜ್ಯಪಾಲರ ನಿರ್ಣಯದ ಬಗ್ಗೆ ಮಾತನಾಡುತ್ತಿದ್ದೀರಿ ರಾಜ್ಯಪಾಲರ ಭಾಷಣದ ಈ ಅವಧಿಯಲ್ಲಿ ನಾವು ಏನಾದರೂ ತಪ್ಪು ಮಾಡಿದ್ದರೆ ದಯಮಾಡಿ ಹೇಳಿ ತಾವು ಹೇಳಿದಿರಿ ಪಬ್ಲಿಕ್ ಸೆಕ್ಟರ್ ಬಗ್ಗೆ ಆ ವರದಿಯಲ್ಲಿ ಏನಾದರೂ ಹೇಳಿದ್ದರೆ ಅದರ ಬಗ್ಗೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ ನಾನು ಓದಿಬಿಡುತ್ತೇನೆ. ಸರ್ಕಾರ ನಾವು ಇಂಟರ್ ಫಿಯರ್ ಆಗುವುದಿಲ್ಲ ಎನ್ನುವುದಕ್ಕೆ ಮಾನ್ಯ ಅಧ್ಯಕ್ಷರೆ ತಾವು ಹೇಳಿದರೆ ಓದೇ ಬಿಡುತ್ತೇನೆ ಎಷ್ಟರಮಟ್ಟಿಗೆ ಹೆಜ್ಜೆ ಹೆಜ್ಜೆಗೂ ಸರ್ಕಾರದ ಇಂಟರ್‌ವೆನ್‌ಷನ್ ಇರತಕ್ಕಂಥಾದ್ದನ್ನು ವರದಿಯಲ್ಲಿದೆ. ಹೆಜ್ಜೆ ಹೆಜ್ಜೆಗೂ ಕೂಡ ಮಾಡಿದ್ದಾರೆ. ಹೆಜ್ಜೆ ಹೆಜ್ಜೆಗೂ ಕೂಡ ಪತ್ರ ಹೋಗುತ್ತದೆ ಇಲ್ಲಿಂದ. ಅದೂ ಒಂದೇ ರೀತಿಯಲ್ಲಿರತಕ್ಕಂಥ ಪತ್ರವನ್ನು ಇಬ್ಬರು ಕಾರ್ಯದರ್ಶಿಗಳು ಬರೆಯುತ್ತಾರೆ.

ಉಪಾಧ್ಯಕ್ಷರು : ತಾವು ಚರ್ಚೆಮುಂದುವರಿಸಿ.

4.30 ಪಿ.ಎಂ.

ಶ್ರೀ ಸಿ. ಬೈರೇಗೌಡ : ಒಂದೊಂದಕ್ಕೆ ಒಂದೊಂದು ನೀತಿಯನ್ನು ನೀವು ಅಳವಡಿಸಬೇಡಿರಿ. ಎಲ್ಲಾದಕ್ಕೂ ಒಂದೇ ನೀತಿ ಇರಲಿ. ಹಾಗಾದರೆ ಈ ಸಮಿತಿ ವರದಿಯಲ್ಲಿ ಈ ಕಾರ್ಯದರ್ಶಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಇದೆ. ತೆಗೆದುಕೊಳ್ಳುತ್ತೀರಾ ಸ್ವಾಮಿ? ನಾನು ಇವತ್ತು ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಇರಲಿಲ್ಲ. ಏಕೆಂದರೆ ಬಿಐಎಫ್‌ಆರ್ ಮುಂದೆ ಇವರು ಹೋಗಬೇಕಾಗಿದೆ 38 ಕೋಟಿ ರೂ. ಎಬಿಬಿ ಇಂದ ಪಡೆದ ಮೇಲೂ ಸಹ

ಶ್ರೀ ವಾಟಾಳ್ ನಾಗರಾಜ್ : ತಾವು ಸುಧೀರ್ಘವಾಗಿ ಆಳವಾಗಿ ಅಭ್ಯಾಸ ಮಾಡಿ ಮಾತನಾಡುತ್ತಿದ್ದೀರಿ. ನನ್ನದು ಎರಡೇ ಪ್ರಶ್ನೆ ಸ್ವಾಮಿ. ಈ ಸರ್ಕಾರಿ ನೂತನ ಕಾರ್ಖಾನೆಯನ್ನು ಖಾಸಗಿಯವರಿಗೆ ಮಾರುತ್ತೀರಾ ಇಲ್ಲವೇ? ಇದು ಸುತ್ತಿಬಳಸಿ ಇಲ್ಲದೆ ನಿಮ್ಮನ್ನೇ ಕೇಳುತ್ತಿದ್ದೇನೆ? ಸರ್ಕಾರಿ ನೂತನ ಕಾರ್ಖಾನೆ ಅದೊಂದು ಒಳ್ಳೆಯ ಕಾರ್ಖಾನೆ, ಬಹಳ ಚೆನ್ನಾಗಿ ಬೆಳೆದಂತಹ ಕಾರ್ಖಾನೆ. ತಾವು ಆ ಶೇರುಗಳನ್ನು ಬೇರೆಯವರಿಗೆ ಮಾರುತ್ತೀರಾ? ಆ ಕಾರ್ಖಾನೆಯನ್ನು ಬೇರೆಯವರಿಗೆ ಮಾರುತ್ತೀರಾ? ಆ ಕಾರ್ಖಾನೆ ತಮ್ಮ ಕೈಯಲ್ಲೇ ನೂರಕ್ಕೆ ನೂರು ಉಳಿಯುತ್ತದಾ ಅಂತ ಹೇಳಿಬಿಟ್ಟರೆ.....

ಉಪಾಧ್ಯಕ್ಷರು : ರಾಜ್ಯಪಾಲರ ಭಾಷಣದ ಮೇಲೆ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಹೇಳುತ್ತಾರೆ ಬೈರೇಗೌಡರೇ ಮುಂದುವರೆಸಿ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೇ ಈ 38 ಕೋಟಿ ರೂ ಹಣ ಪಡೆ ಮೇಲೂ ಸಹ ಎಬಿಬಿ ಸಲಹೆ ಮೇರೆಗೇ ಅದು ಪುನಃ ಬಿಐಎಫ್‌ಆರ್ ಮುಂ ಹೋಗಬೇಕಾಗಿದ . ಬಿಐಎಫ್‌ಆರ್ ಮುಂದೆ ಒಂದು ಸಾರಿ ಹೋದರೆ ಆ ಕಂಪೆ ನಮ್ಮದಾಗುವುದಿಲ್ಲ ಅವರು ಯಾರಿಗೆ ಬೇಕಾದರೂ ಕೊಟ್ಟುಬಿಡಬಹುದು ಇವತ್ ದಾರಿಗೆ ಹೋಗುವವರನ್ನು ಕರೆದು ನೀವು ಇಂತಹ ಕಂಡಿಶನ್ಸ್ ಹಾಕಿ ಕಂಪೆನಿಯನ್ನು ಮ್ಯಾನೇಜ್ ಮಾಡಿಕೊಳ್ಳಿ ಎಂದು ಯಾರಿಗೆ ಬೇಕಾದರೂ ಕೊಡುವಂತ ಅಪಾಯ ಇದೆ. ನನ್ನ ಸಲಹೆಗಳನ್ನು ನೀವು ಜಾರಿಗೆ ಕೊಡುವುದಾದರೆ ಬಿಐಎಫ್‌ಆ ಮುಂದೆ ಹೋಗಬೇಕಾಗಿಲ್ಲ, ಆದ್ದರಿಂದ ಯಾವುದೇ ಪರಿಸ್ಥಿತಿ ಬಂದರೂ ಸ ಇವರು ಪುನಃ ಬಹಳ ಬುದ್ಧಿವಂತಿಕೆ ಮಾಡುತ್ತಾರೆ ಏಕೆಂದರೆ ಶೇಕಡ 51ರ ಶೇರಿದ್ದರೆ ಅದು ಸರ್ಕಾರಿ ಕಂಪೆನಿಯಾಗುತ್ತದೆ. ಅದನ್ನು ಉಳಿಸಿಕೊಳ್ಳುತ್ತಿದ್ದಾರೆ. ಅವರದ

ಕೂಡ ಉಳಿಸಿಕೊಳ್ಳಬೇಕೂಂತ.ಆದರೆ ಅದು ಉಳಿಯಲು ಸಾಧ್ಯವಿಲ್ಲ. ಎಇಜಿದು ಇವತ್ತಾಗಲೇ 22.34 ಇದೆ, ಅದರ ಶೇರ್ ಕ್ಯಾಪಿಟಲ್ ಜಾಸ್ತಿ ಮಾಡಿದರೆ ಅದು 14ಕ್ಕೆ ಬರುತ್ತದೆ. ಅವರಿಗೆ 49 ಆಗುತ್ತದೆ. 49 ಆದರೂ ಸರ್ಕಾರಿ ಸ್ವಾಮ್ಯದ ಕಂಪೆನಿಯಾಗಿಯೇ ಉಳಿಯುತ್ತದೆ ಎಂದು ಇವರು ಹೇಳುತ್ತಾರೆ. ಸ್ವಾಮಿ ಎಬಿಬಿಗೆ ನೀವೇನಾದರೂ ಕೊಟ್ಟರೆ

ಎಇಜಿ ಮತ್ತು ಎಬಿಬಿ ಪ್ರಪಂಚದಲ್ಲೆಲ್ಲ ಕಾಂಪಿಟಿಟರ್ಸ್, ಒಬ್ಬರಿಗೊಬ್ಬರು ಸ್ಪರ್ಧೆ ನಡೆಯುತ್ತದೆ. ಎಇಜಿ ಒಂದು ನಿಮಿಷ ಕಂಪನಿಯಲ್ಲಿರುವುದಿಲ್ಲ ಅವರು ಹೊರಟುಹೋಗುತ್ತಾರೆ. ಬಹುಶಃ ಎಬಿಬಿಗೇ ಆ ಶೇರ್ಸನ್ನು ಮಾರಾಟ ಮಾಡಿ, ಏಕೆಂದರೆ ಟೆಕ್ನಲಾಜಿಕಲಾಗಿ ಪ್ರಪಂಚದಲ್ಲೇ ಆ ವಿಷಯದಲ್ಲಿ ಕಾಂಪೀಟ್ ಮಾಡುತ್ತಿದ್ದಾರೆ. ಆ ಕಾರಣದಿಂದ ಒಬ್ಬರಿಗೊಬ್ಬರು ಕಾಂಪಿಟಿಟರಾಗಿ ಒಂದೇ ಕಡೆ ಕೆಲಸ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಎಇಜಿ ತನ್ನ ಶೇರ್ಸನ್ನು ಮಾರಾಟ ಮಾಡುತ್ತಾರೆ ಪುನಃ ಅದು ಪೂರ್ತಿ ಎಬಿಬಿಗೆ ಹೋಗುತ್ತದೆ ಇವತ್ತು ನೀವು 51 ಎಂದು ಉಳಿಸಿಕೊಂಡಿದ್ದೀರಿ, 49 ಎಬಿಬಿ ಆಗುತ್ತದೆ. ನಮ್ಮ ಅಧಿಕಾರಿಗಳು ಆಗಲೇ ಹೇಳಿದೆನಲ್ಲ ಕೆಲವರದೆಲ್ಲ ಕ್ರಿಮಿನಲ್ಸ್, ಮೈಂಡ್ಸ್. ಅಂತಹವರನ್ನೆಲ್ಲ ಅಲ್ಲಿ ಹಾಕುತ್ತಾರೆ. ಇಲ್ಲಿ ನಡೆಸುವವರೂ ಸರಿಯಾಗಿ ನಡೆಸುತ್ತಾರೆಂಬ ನಂಬಿಕೆ ನನಗೆ ಇಲ್ಲ. ಇವತ್ತಲ್ಲ ನಾಳೆ ಈ ಸರ್ಕಾರಿ ಸ್ವಾಮ್ಯದ ಕಂಪೆನಿ ಖಾಸಗಿಯವರಿಗೆ ಹೋಗುತ್ತದೆ. ಆಗಲೇ ಹೇಳಿದಂತೆ ಸೂಜಿ ಹಾಕಿ ಬಂಗಾರದ ಬೆಟ್ಟವನ್ನೇ ಹೊತ್ತುಕೊಂಡು ಹೋಗುವಂತಹ ಹವಣಿಕೆ ಇವತ್ತು ನಡೆಯುತ್ತಿದೆ. ಹಾಗಾಗಿ ಈ ಕಂಪೆನಿ ಎಬಿಬಿ ವಶಕ್ಕೆ ಹೋಗುತ್ತದೆ. ಅಂತಹ ಕೆಲಸವನ್ನು ಈ ರಾಜ್ಯದ ಹಿತದಿಂದ ದಯವಿಟ್ಟು ಮಾಡುವುದಕ್ಕೆ ಹೋಗಬೇಡಿ. ನೀವು ಕ್ಯಾಟಗರಿಕಲಾಗಿ ಹೇಳಬೇಕಾಗುತ್ತದೆ. ಈಗಿರುವ ನಿಮ್ಮ ಶೇರ್ಸ್ 77.40 ಏನಿದೆ ಅದಕ್ಕಿಂತ ಯಾವುದೇ ಕಾರಣಕ್ಕೂ ನಾವು ಕಡಿಮೆ ಮಾಡುವುದಿಲ್ಲ. ಯಾವುದೇ ಪರಿಸ್ಥಿತಿಯಲ್ಲಿ ಖಾಸಗಿಯವರಿಗೆ ಇದನ್ನು ವಹಿಸಿ ಕೊಡುವಂತಹ ಕೆಲಸಕ್ಕೆ ಸರ್ಕಾರ ತೀರ್ಮಾನ ಮಾಡುವುದಿಲ್ಲ ಎಂದು ಈ ಸದನದ ಮೂಲಕ ರಾಜ್ಯದ ಜನತೆಗೆ ಆಶ್ವಾಸನೆ ಕೊಡಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಇಲ್ಲಿಗೆ ರಾಜ್ಯಪಾಲ ಭಾಷಣದ ಮೇಲಿನ ಚರ್ಚೆ ಮುಕ್ತಾಯವಾಯಿತು. ಈಗ ಮುಖ್ಯಮಂತ್ರಿಗಳಿಂದ ಉತ್ತರ.

+ ಶ್ರೀ ಎಂ. ವೀರಪ್ಪ ಮೊಯ್ಲಿ : ಸನ್ಮಾನ್ಯ ಉಪಾಧ್ಯಕ್ಷರೇ ರಾಜ್ಯಪಾಲರ ಭಾಷಣದ ಮೇಲೆ ಬಹಳ ವ್ಯಾಪಕವಾದ ಚರ್ಚೆ ಇವತ್ತಾಗಿದೆ. ಈ ಚರ್ಚೆಯಲ್ಲಿ ಭಾಗವಹಿಸಿದಂತಹ ವಿರೋಧಪಕ್ಷದ ನಾಯಕರು, ಇತರ ನಾಯಕರು, ಈ ಕಡೆಯ ಸದಸ್ಯರು ಎಲ್ಲರಿಗೂ ವಿಶೇಷವಾದ ವಂದನೆಯನ್ನು ನಾನು ಸಮರ್ಪಿಸುತ್ತಿದ್ದೇನೆ. ಎಲ್ಲರೂ ಅನೇಕ ಹೊಸ ವಿಚಾರ ಆಲೋಚನೆಗಳನ್ನು ಇಲ್ಲಿ ನೀಡಿದ್ದಾರೆ ಅದನ್ನು ಸಂಪೂರ್ಣವಾಗಿ ಸರ್ಕಾರ ಗ್ರಹಿಸಿ ಮುಂದಿನ ವರ್ಷದ ನಮ್ಮ ಆಡಳಿತದ ಪ್ರಕ್ರಿಯೆಯಲ್ಲಿ ಆ ಸಲಹೆಗಳನ್ನು ಉಪಯೋಗ ಮಾಡಿಕೊಂಡು ನಮ್ಮ ಆಡಳಿತವನ್ನು ಸರಿಯಾಗಿ ಸಜ್ಜುಗೊಳಿಸಲಿಕ್ಕೆ ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಮತ್ತು ಯಾವುದೇ ಒಂದು ಟೀಕೆ ರಚನಾತ್ಮಕವಾಗಿದೆ ಆ ಬಗ್ಗೆ ನಾನು ವಿಶೇಷವಾಗಿ ಮೆಚ್ಚುಗೆಯನ್ನು ಸೂಚಿಸುತ್ತೇನೆ. ಸನ್ಮಾನ್ಯ ಬೈರೇಗೌಡರು ಬಹಳ ಅಧ್ಯಯನ ಮಾಡಿದ್ದಾರೆ ಮುಖ್ಯವಾಗಿ ಸಾರ್ವಜನಿಕ ರಂಗದ ಬಗ್ಗೆ ಏಕೆಂದರೆ ಸಾರ್ವಜನಿಕರಲ್ಲಿ ಏನು ಶಂಕೆ ಇದೆ ಅದನ್ನು ತಾವು ಪ್ರತಿನಿಧಿಸಿದ್ದೀರಿ, ಅದರಲ್ಲೇನೂ ತಪ್ಪಲ್ಲ ಏಕೆಂದರೆ ನಿಮ್ಮ ಎಲ್ಲ ಪತ್ರಗಳನ್ನೂ ನಾನು ಕೂಲಂಕಷವಾಗಿ ಓದಿದ್ದೇನೆ ಅದಕ್ಕೆ ನಿಮ್ಮ ಕೊನೆಯ ಪತ್ರದಲ್ಲಿ ಇಷ್ಟು ಪುಟಗಳಿತ್ತು ಎಂದು ಹೇಳಿದೆ. ನಿಮ್ಮ ಪತ್ರಗಳಿಗೆ ಎಷ್ಟು ಪ್ರಾಮುಖ್ಯತೆ ಕೊಟ್ಟಿದ್ದೇನೆ ಎಂದರೆ ಪೊಲಿಟಿಕಲ್ ಅಫೇರ್ಸ್ ಕಮಿಟಿ ನಡೆದಾಗ ಆ ಪತ್ರಗಳನ್ನೇ ನಾನು

ಎದುರಿಟ್ಟು ಅನೇಕ ವಿಚಾರಗಳ ಬಗ್ಗೆ ವಿಶ್ಲೇಷಣೆ ಕೂಡ ಮಾಡಿದ್ದೇನೆ. ಆ ವಿವರಕ್ಕೆ ಆಮೇಲೆ ಬರುತ್ತೇನೆ. ತಮ್ಮ ಯಾವುದೇ ಟೀಕೆಗಳನ್ನು ಪ್ರಾಮಾಣಿಕವಾಗಿ ಗ್ರಹಿಸುತ್ತೇವೆ, ರಚನಾತ್ಮಕ್ರವಾಗಿವೆ, ಒಳ್ಳೆಯ ಸೂಚನೆ ಕೊಟ್ಟಿದ್ದೀರಿ ಅದಕ್ಕೆ ಧನ್ಯವಾದಗಳು. ಈ ವರ್ಷದ ರಾಜ್ಯಪಾಲರ ಭಾಷಣ, ಹೋದವರ್ಷ ಬಹಳ ಚಿಕ್ಕದಾಗಿತ್ತು, ಈ ಸಾರಿ ಬಹಳ ದೊಡ್ಡದಾಯಿತು ಅಂತ, ಹೋದ ವರ್ಷ ನನ್ನ ಮುಖ್ಯಮಂತ್ರಿ ಪದವಿಯಲ್ಲಿ ಬಂದದ್ದು, ಆಗ ಚಿಕ್ಕದಾಗಿರುತ್ತದೆ. ಈಗ ಎರಡನೇ ವರ್ಷದ್ದು ಬಂದಿದೆ ದೊಡ್ಡದಾಗಿರುತ್ತದೆ ಅಷ್ಟೇ ಹೊರತು ಬೇರೆ ಅದಕ್ಕೆ ವಿಶೇಷ ಮಹತ್ವ ಏನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಇವರು ಆ ಕಡೆ ಹೋದರೂ ಇಲ್ಲೇ ಕುಳಿತಿರುತ್ತೇವೆ, ನೀವು ಈ ಕಡೆ ಬಂದರೂ ಇಲ್ಲೇ ಕುಳಿತಿರುತ್ತೇವೆ ನಾವು.

ಶ್ರೀ ಎಂ. ವೀರಪ್ಪ ಮೊಯ್ಲಿ : ತಾವು ಎಲ್ಲಿ ಕೂತುಕೊಂಡರೂ ಸಹ ತಮ್ಮ ಸಲಹೆಸೂಚನೆಗಳು ಇಲ್ಲಿರುವವರಿಗೆ ಬಹಳ ಸೂಚ್ಯವಾಗಿರುತ್ತವೆ ಮತ್ತು ಗಮನಾರ್ಹವಾಗಿರುತ್ತವೆ ಅಷ್ಟು ಹೇಳಬಹುದು. ಈ ಬಾರಿ ಕೆಲವು ವಿಶೇಷ ಪ್ರಯತ್ನಗಳ ಬಗ್ಗೆ ತಿಳಿಸಲಿಕ್ಕೆ ರಾಜ್ಯಪಾಲರು ಪ್ರಯತ್ನ ಪಟ್ಟಿದ್ದರಿಂದ ಭಾಷಣ ದೊಡ್ಡದಾಗಿದೆ ಮತ್ತು ಕಳೆದ ವರ್ಷ ಅನುಷ್ಠಾನ ಮಾಡಿದ್ದ ಕಾರ್ಯಕ್ರಮಗಳ ಬಗ್ಗೆ ಜನತೆಗೆ ಮುಟ್ಟಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದೇವೆ. ಮತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೂಡ ಈ ಒಂದು ಮಾತು ಪೊಳ್ಳು ಭರವಸೆ ಪೊಳ್ಳು ಎಂಬ ಮಾತುಗಳನ್ನಾಡುತ್ತಿದ್ದಾರೆ. ಇದರ ಬಗ್ಗೆ ಒಂದು ಅಸ್ಪಷ್ಟವಾದ ಆರೋಪ ಮಾಡಿದ್ದೀರಿ. ಎಲ್ಲಿ ಪೊಳ್ಳು ಆರೋಪಗಳು ಇದೆ ಆ ಆರೋಪವನ್ನು ಮಾಡತಕ್ಕಂತಹ ಸದಸ್ಯರು ನಿರ್ದಿಷ್ಟವಾದ ವಿಚಾರಗಳನ್ನು ಹೇಳಿಲ್ಲ, ಆದರೂ ಕೂಡ ಪ್ರಾಮಿಸ್ ಅಂಡ್ ಫರ್‌ಫಾರ್ಮೆನ್ಸ್, ಭರವಸೆಗಳು ಸಾಧನೆ ಇದರ ಬಗ್ಗೆ ನಾನು ಅದನ್ನು ಪಟ್ಟಿ ಮಾಡಿ ಸ್ವಲ್ಪ ಆದಷ್ಟು ಪ್ರಾಮಾಣಿಕವಾಗಿ ಈ ಸದನದ ಮುಂದಿಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಇದರ ತೀರ್ಮಾನ ತಮಗೇ ಬಿಟ್ಟದ್ದು. ಪೊಳ್ಳು ಮತ್ತು ನಿಜವಾದ ಭರವಸೆಗಳು, ಸಾಧನೆ ಮಾಡಿದಂತಹ ಭರವಸೆಗಳೇನು ಎಂಬುದನ್ನು ನಿಮ್ಮ ತರ್ಕಕ್ಕೆ ತಮಗೇ ಬಿಟ್ಟಿದ್ದೇನೆ. ಅದರ ಬಗ್ಗೆ ವಿಮರ್ಶೆ ಮತ್ತು ಏನಾದರೂ ಹೇಳುವುದಕ್ಕೆ ಬಯಸುವುದಿಲ್ಲ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಹಿಂದುಳಿದವರ ಬಗ್ಗೆ ನಾವು ಯಾವುದೂ ಕಾರ್ಯಕ್ರಮ ಹಾಕಿಲ್ಲವೆಂದು ತಾವು ಹೇಳಿದ್ದೀರಿ. ಈ ಬಗ್ಗೆ ಸ್ಪಷ್ಟವಾಗಿ ರಾಜ್ಯಪಾಲರ ಭಾಷಣದಲ್ಲಿ ನಾವು ತಿಳಿಸಿದ್ದೇವೆ. ಏನು ಹೇಳಿದ್ದೇವೆ ಇದು ಭರವಸೆ ಅಲ್ಲ, ಸಾಧನೆ. ಎಲ್ಲಾ ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ ವರ್ಗಗಳಿಗೆ ಮೀಸಲಿಟ್ಟಿದ್ದ ಖಾಲಿ ಸ್ಥಾನಗಳ ಬ್ಯಾಕಲಾಗ್‌ಅನ್ನು ಭರ್ತಿ ಮಾಡುವ ಉದ್ದೇಶಕ್ಕೆಂದು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳನ್ನು ನೇಮಕ ಮಾಡುವಾಗ ಇದ್ದಂತಹ ನಿರ್ಬಂಧಗಳನ್ನು ಸಂಪೂರ್ಣವಾಗಿ ತೆಗೆದು ಹಾಕಿದ್ದೇವೆ. ಬಹುಶಃ ಸುಮಾರು 12-13 ವರ್ಷಗಳ ನಂತರ ಒಂದು ದಶಕದ ನಂತರ ಪೂರ್ಣ ನಿರ್ಬಂಧವನ್ನು ತೆಗೆದು ಹಾಕುವಂತಹ ಕೆಲಸವನ್ನು ನಾವು ಮಾಡಿದ್ದೇವೆ. ಇದು ಪೊಳ್ಳು ಭರವಸೆಯೇನು? ಒಂದು ದಶಕದ ಮೇಲೆ ನಿರ್ಬಂಧ ಇತ್ತು. ಬ್ಯಾಕಲಾಗ್ ರೆಕ್ರೂಟ್‌ಮೆಂಟಿಗೆ ಅದನ್ನು ತೆಗೆದು ಹಾಕಿದ್ದೇವೆ.

31-3-94ರ ಒಳಗೆ ಈ ನೇಮಕಗಳನ್ನು ಪೂರ್ಣಗೊಳಿಸಲಿಕ್ಕೆ ಎಲ್ಲ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇದಕ್ಕಿಂತ ದೊಡ್ಡ ಸಾಧನೆ ಯಾವುದು ಇದೆ. ಪರ್ಟಿಕ್ಯುಲರ್‌ಲೀ ರೆಕ್ರೂಟ್‌ಮೆಂಟಿನಲ್ಲಿ ಕೆಲವು ವಿವರ ಕೊಡಲಿಕ್ಕೆ ಸಿದ್ಧನಿದ್ದೇನೆ. ಕೆಲವು ವಿವರಗಳನ್ನು ಮಾತ್ರ ಕೊಡುತ್ತೇನೆ. ಪರಿಶಿಷ್ಟ ಜಾತಿ, ವರ್ಗಗಳ ಪಂಗಡಗಳು ತಮ್ಮ ಅಗತ್ಯಗಳಿಗೆ ಬೇಕಾದ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗುವಂತೆ ಅವರನ್ನು ಸಹಕಾರ ಸಂಘಗಳ ಸದಸ್ಯರನ್ನಾಗಿ ಮಾಡಿಕೊಳ್ಳಲು ಸರಕಾರ ವಿಶೇಷ ಕಾರ್ಯಕ್ರಮ

ಹಾಕಿಕೊಂಡಿದೆ. ಇದು ನಮ್ಮ ಸರಕಾರದ ವಿಶೇಷ ಕಾರ್ಯಕ್ರಮ. ಸರಕಾರವು ಸಧ್ಯದಲ್ಲಿ ಅರ್ಥ ಶಾಸ್ತ್ರಜ್ಞರನ್ನೊಳಗೊಂಡಂತೆ ತಜ್ಞ ಸಮಿತಿಯನ್ನು ರಚಿಸಲಿದ್ದು ಅದು ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳು ಹಿಂದುಳಿದ ವರ್ಗಗಳು ಮತ್ತು ದುರ್ಬಲ ವರ್ಗಗಳಿಗೆ ಸೇರಿದ ಜನರು ಹೊಸ ಉದಾರ ಆರ್ಥಿಕ ನೀತಿಯ ಅಡಿಯಲ್ಲಿ ಕಲ್ಪಿಸಲಾದ ಅವಕಾಶಗಳ ಪ್ರಯೋಜನವನ್ನು ಪಡೆಯಲು ಸಾಧ್ಯವಾಗುವ ಹಾಗೆ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದೇವೆ. ಒಂದು ಕಡೆ ಕೈಗಾರಿಕೆ ಸಮಾಜ ಮುಂದುವರಿದ ಹಾಗೆ, ಕೈಗಾರಿಕೆ ಮುಂದುವರಿದ ಹಾಗೆ ಈ ವರ್ಗದ ಜನ ಕೂಡ ಆ ಮುಖ್ಯ ವಾಹಿನಿಯಲ್ಲಿ ಸೇರಬೇಕೆಂದು ವಿಶೇಷವಾದ ಪ್ರಯತ್ನ ನಾವು ಮಾಡಿದ್ದೇವೆ. ನಾವು ಮುಂದೆ ಹೋದ ಮೇಲೆ ಹಿಂದೆ ನೋಡುವುದು ಅಲ್ಲ. ಅವರು ಹಿಂದೆ ನಡೆಯುವುದಲ್ಲ. ನಾವು ಮುಂದೆ ಹೋಗುವಾಗ ಅವರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುವ ಅವರೂ ಜೊತೆಯಲ್ಲಿರಲಿ ಎನ್ನುವ ಪ್ರಕ್ರಿಯೆಯನ್ನು ರಾಜ್ಯಪಾಲರ ಭಾಷಣದಲ್ಲಿ ಕಾಣಿಸಿದ್ದೇವೆ. ಇದೊಂದು ಮೈಲಿಗಲ್ಲು ಎಂದರೆ ಅದು ಅತಿಶಯೋಕ್ತಿಯಾಗುವುದಿಲ್ಲ. ಸಹಕಾರ ಸಂಘ ಆಡಳಿತ ಸಮಿತಿಗಳಲ್ಲಿ ಪರಿಶಿಷ್ಟ ಜಾತಿ ಪಂಗಡಗಳಿಗೆ, ಹಿಂದುಳಿದ ವರ್ಗದವರಿಗೆ ಮೀಸಲಾತಿ ಸೌಲಭ್ಯವನ್ನು ಮಾಡಲಿಕ್ಕೆ ಇವತ್ತು ಅಧಿನಿಯಮ, ಈ ಪ್ರಕ್ರಿಯೆ ಕೂಡ ಮಾಡುತ್ತಿದ್ದೇವೆ. ಬರೀ ಸದಸ್ಯರನ್ನು ಸೇರಿಸಿದರೆ ಸಾಲದು ಏನು ಸಹಕಾರ ಸಂಘಗಳು ಇವೆ ಅವುಗಳು, ಇವತ್ತು ನಮ್ಮ ಕಾರ್ಯಕ್ರಮವು ಜನರ ಜೀವನದಲ್ಲಿ ಆರ್ಥಿಕವಾಗಿ ಬದಲಾವಣೆಯನ್ನು ತರತಕ್ಕಂತಹ ಉತ್ತಮ ಸಾಧನೆ ಎಂದು ಹೇಳುತ್ತೇವೆ. ಅದರಲ್ಲೂ ದುರ್ಬಲ ವರ್ಗದವರಿಗೆ ಇವತ್ತು ಆಡಳಿತ ಮಾಡತಕ್ಕಂತಹ ಒಂದು ಶಕ್ತಿ ಅವಕಾಶಗಳು ಇಲ್ಲದೇ ಇದ್ದಲ್ಲಿ ಅವು ಕೆಳಸ್ತರದ ಜನರಿಗೆ ಸಹಾಯ ಮಾಡಲಿಕ್ಕಾಗುವುದಿಲ್ಲ. ನಮ್ಮ ಉದ್ದೇಶ ಆಡಳಿತ ಮಂಡಲಿಯ ಬರೀ ಜಾಬ್ ಮೀಸಲಾತಿಯಲ್ಲಿ ಏನು ಮೀಸಲಾತಿ ಮಾಡುತ್ತೇವೆ ಅದು ಬರೀ ಮೇಲಿನ ಪದರಿಗೆ ಮಾತ್ರ ಬದಲಾವಣೆ ಮುಟ್ಟುತ್ತದೆ. ಕೆಳಗಿನ ಪದರಿಗೂ ಅಲ್ಲಿರುವ ಇಂತಹ ವರ್ಗಗಳನ್ನು ಮೇಲಕ್ಕೆ ಎತ್ತಬೇಕಾದರೆ ಇಂತಹ ಪಾರ್ಟಿಸಿಪೇಷನ್ in economic reforms ಅಗತ್ಯ. ಅಥವಾ ಇಂತಹ ಆರ್ಥಿಕ ಸಂಸ್ಥೆಗಳಿಗೆ ಇಲ್ಲದಿದ್ದರೆ ಅದು ಯಾವ ರೀತಿಯ ಮೀಸಲಾತಿ ಇಟ್ಟರೂ ಕೂಡ ಕೆಲವರಿಗೆ ಅಂದರೆ ಸ್ವಲ್ಪ ಕಲಿತವರಿಗೆ ಉದ್ಯೋಗ ಕೊಡಬಹುದೇ ಹೊರತು ಕಲಿಯದೇ ಇರತಕ್ಕಂತಹ ಗ್ರಾಮಾಂತರ ಜನರ ಆತ್ಮ ವಿಶ್ವಾಸವನ್ನು ಅವರಲ್ಲಿ ಹುಟ್ಟಿಸದಿದ್ದರೆ ಯಾವುದೇ ಬದಲಾವಣೆಯಾಗಲೀ ಅದು ಕ್ಷಣಿಕವಾಗುತ್ತದೆ ಅದು ತಾತ್ಕಾಲಿಕವಾಗುತ್ತದೆ, ನೀವು ಸ್ವಲ್ಪ ಕಲಿತವರಿಗೆ ಉದ್ಯೋಗವನ್ನೇ ಕೊಡಬಹುದೇ ಹೊರತು ಕಲಿಯದೇ ಇರತಕ್ಕಂಥ ಗ್ರಾಮಾಂತರ ಜನರಿಗೂ ಕೂಡ ಒಂದು ರೀತಿಯ ಆತ್ಮವಿಶ್ವಾಸ ಅವರಲ್ಲಿ ಹುಟ್ಟಿಸದಿದ್ದರೆ ಯಾವುದೇ ಬದಲಾವಣೆ ಅದು ಕ್ಷಣಿಕವಾಗುತ್ತದೆ. ತಾತ್ಕಾಲಿಕ ಮತ್ತು ಈ ಬದಲಾವಣೆಗಳಿಂದ ಇಡೀ ಸಮಾಜ ಪಾಲುಗೊಳ್ಳುವಿಕೆಗೆ ಅದು ಸಹಕಾರಿಯಾಗುತ್ತದೆ. ಈ ದೃಷ್ಟಿಯಿಂದ ಇವತ್ತು ಪಂಚಾಯತ್ ವ್ಯವಸ್ಥೆಯಲ್ಲಿ ಮಾಡಿದ್ದೇವೆ. ಇವತ್ತು ಪ್ರಧಾನರು, ಉಪಪ್ರಧಾನರು, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಅಥವಾ ಜಿಲ್ಲಾ ಪರಿಷತ್ ಅಧ್ಯಕ್ಷರು ಇಲ್ಲೆಲ್ಲ ಮೀಸಲಾತಿ ಇದ್ದರೆ ಅಲ್ಲಿಗೆ ನಿಲ್ಲಬಾರದು. ಈ ಪ್ರಕ್ರಿಯೆ ಎಲ್ಲ ಹಂತದಲ್ಲಿ ನಡೆಯಬೇಕಾಗುತ್ತದೆ. ಸಹಕಾರ ಸಂಘಗಳಲ್ಲಿ ನಡೆಯಬೇಕಾಗುತ್ತದೆ. ಅಥವಾ ಇವತ್ತು ವಿದ್ಯಾಸಂಸ್ಥೆಗಳಲ್ಲಿ ನಡೆಯಬೇಕಾಗುತ್ತದೆ. ಈ ನಮ್ಮ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಈ ರೀತಿಯ ಪಾರ್ಟಿಸಿಪೇಷನ್ ಇದ್ದಾಗ ಮಾತ್ರ the cycle of democracy will have a full circle. ಇಲ್ಲದಿದ್ದರೆ ಅದು distortion ಆಗುತ್ತದೆ. ವಿಕೃತ ಆಗುತ್ತದೆ. ಸಮಾಜ ಮುಂದೆ ಬರಲಿಕ್ಕೆ ಅದರಿಂದ ಸಾಧ್ಯವಾಗುವುದಿಲ್ಲ. ಇದು ಬಹಳ ಪ್ರಮುಖವಾದಂಥ ಹೆಜ್ಜೆ. ಬಹುಶಃ ಇದು ಪ್ರಥಮವಾಗಿ ಈ ಹೆಜ್ಜೆಯನ್ನು ಇವತ್ತು ನಾವು ತೆಗೆದುಕೊಳ್ಳುತ್ತಿದ್ದೇವೆ, ತೆಗೆದುಕೊಂಡಿದ್ದೇವೆ. ಇನ್ನು ಈ ಶೇಕಡ ಸೀಗಡಿ ಮೀನುಗಾರರ ಸಹಕಾರ ಸಂಘಗಳಿಗೆ

ಗುತ್ತಿಗೆ ನೀಡಲು ಸರ್ಕಾರ ನಾವು ಜಾರಿಗೆ ತಂದಿದ್ದೇವೆ. ಅದರಲ್ಲಿ 18 ರಷ್ಟನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಲಿಕ್ಕೆ ಇವತ್ತು ನಾವು ನಿರ್ಣಯವನ್ನು ಮಾಡಿದ್ದೇವೆ. ಆದ್ದರಿಂದ ಇವತ್ತು ಈ ಪರಿಶಿಷ್ಟ ವರ್ಗ, ಹಿಂದುಳಿದ ವರ್ಗಗಳಿಗೆ ಜಾತಿಗಳಿಗೆ ವಿಶೇಷವಾದ ಆರ್ಥಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳತಕ್ಕಂಥ ರೀತಿಯಲ್ಲಿ ಒಂದು ಹೊಸ ಮಜಲು ಏನು ಪ್ರವೇಶ ಮಾಡಬೇಕು ಎಂದು ಹೇಳಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಒಂದನ್ನು ಹೇಳಿದ್ದಾರೆ, ಇದು ಬಹುಶಃ ಇದೊಂದು ಬಹುಶಃ ಈ ರಾಷ್ಟ್ರದ ಒಂದು ಯಾವುದೇ ರಾಜ್ಯದ ಇತಿಹಾಸದಲ್ಲಿ ಅದು ಪ್ರಥಮ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಿಕ್ಕಿಲ್ಲ. ಇದಕ್ಕೆ ಖಂಡಿತವಾಗಿಯೂ ಮೆಚ್ಚುಗೆ ಸೂಚಿಸುತ್ತಾರೆ, ಅದರ ಬಗ್ಗೆ ಟೀಕೆ ಮಾಡದೇ ಇದ್ದದ್ದರಿಂದ ಅದಕ್ಕೆ ಮೆಚ್ಚುಗೆ ಸೂಚಿಸಿದ್ದಾರೆ ಎಂದು ಹೇಳಿ ನಾನು ವಿಶ್ವಾಸವನ್ನು ಇವತ್ತು ಹೊಂದಿದ್ದೇನೆ. ಇನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಬಗ್ಗೆ ನಾವು ಕೆಲವು ವಿಚಾರಗಳನ್ನು ಈಗಾಗಲೇ ಹೇಳಿದ್ದೇವೆ. ನಾವು ಫಸ್ಟ್ ಟೈಮ್ ಒಂದು ಪರಿಶಿಷ್ಟ ವರ್ಗದವರಿಗೆ ಮತ್ತು ಪಂಗಡದವರ ವಿಚಾರದಲ್ಲಿ ತಮಗೆ ಗೊತ್ತಿದೆ, ನಾನು ಕೂಡ 82ರ ಬಜೆಟ್ ಭಾಷಣದಲ್ಲಿ ಇದನ್ನು ಹೇಳಿದ್ದೇನೆ. ಯಾರು ಯೂನಿವರ್ಸಿಟಿಯಲ್ಲಿ ಮೆರಿಟ್ ಸ್ಟೂಡೆಂಟ್ಸ್ ಎಂದು ಹೇಳಿ ಎಸ್‌ಸಿ ಮತ್ತು ಎಸ್‌ಟಿ ಇದ್ದಾರೆ, ಅವರ ಬಗ್ಗೆ ಅವರನ್ನು ನಾವು ನೇಮಕ ಮಾಡಬೇಕು ಎಂದು ನಿರ್ಣಯವನ್ನು ನಾನು ಘೋಷಣೆ ಮಾಡಿದ್ದೆ. ಆದರೆ ನಮ್ಮ ಸರ್ಕಾರ ಹೋಯಿತು. ತಮ್ಮ ಸರ್ಕಾರ ಬಂತು. ತಮ್ಮ ಸರ್ಕಾರ ಕೂಡ ಕ್ರಮ ತೆಗೆದುಕೊಂಡ್ರಿ. ತೆಗೆದುಕೊಳ್ಳಲಿಲ್ಲ ಎಂದು ನಾನು ಹೇಳುವುದಿಲ್ಲ. 82-83ರಿಂದ ಇದನ್ನು ಮಾಡುತ್ತೇವೆ ಎಂದು ತಾವು ಹೇಳಿದ್ದೀರಿ. ಆದರೆ ಏನಾಯಿತು, ಅದರ ನಿಯಮಾವಳಿ ಬಹಳ ಬಿಗಿ ಇತ್ತು. ಆಯ್ಕೆ ಸಮಿತಿ ಮಾಡಬೇಕು, ಆಯ್ಕೆ ಸಮಿತಿಯಿಂದ ಅದರ ಬಗ್ಗೆ ಚುನಾವಣೆ ಮಾಡಬೇಕು, ಆಯ್ಕೆ ಮಾಡಬೇಕು ಎಂದು ಹೇಳಿ ತಾವು ಹೊರಟಿರಿ. ಅದು ಕೆಎಟಿಯಲ್ಲಿ ಸ್ಟೇ ಆಯಿತು. ಹೈಕೋರ್ಟಿನಲ್ಲಿ ಸ್ಟೇ ಆಯಿತು. ಆದರೆ ಮೊನ್ನೆ ಮೊನ್ನೆವರೆಗೆ ಕೂಡ 82-83ರಿಂದ ಜಾರಿಗೊಳಿಸಬೇಕು ಎಂದು ಹೇಳಿ ಏನು ಹಂಬಲ ತಮಗಿತ್ತು, ಒಂದು ದಶಕದವರೆಗೂ ಕೂಡ ಯಾವುದೇ ಒಂದು ನೇಮಕಾತಿ ಕೂಡ ತಮಗೆ ಮಾಡಲಿಕ್ಕೆ ಆಗಲಿಲ್ಲ. ಯಾರಿಗೂ ಮಾಡಲಿಕ್ಕಾಗಲಿಲ್ಲ. ಇದರ ಬಗ್ಗೆ ನಾವು ನಿಯಮವನ್ನು ಸಡಿಲಿಸಿ ಆಯ್ಕೆ ಸಮಿತಿ ಬೇಕಾಗಿಲ್ಲ, ನೇರವಾಗಿ ನೇಮಕಾತಿ ನೀವು ಮಾಡಬೇಕು ಎಂದು ಈಗಾಗಲೇ ಮಾಡಿ ಸುಮಾರು 82-83ನೇ ಸಾಲಿನ 44 ಜನರಿಗೆ ಇವತ್ತು ನೇರವಾಗಿ ಎ ಮತ್ತು ಬಿ ಕ್ಯಾಟೆಗೊರಿಯಲ್ಲಿ ನೇಮಕಾತಿಯನ್ನು ಕೊಡತಕ್ಕಂಥ ಪ್ರಕ್ರಿಯೆ ಇವತ್ತು ನಾವು ಪ್ರಥಮವಾಗಿ 93ನೇ ಇಸವಿಯಲ್ಲಿ ಮಾಡಿದ್ದೇವೆ. 83-84ರಲ್ಲಿ 7 ಜನರ ನೇಮಕಾತಿ ಏಕೆಂದರೆ ಅದು ರಿಸರ್ವೇಷನ್ ಅಷ್ಟೇ ಇದ್ದದ್ದರಿಂದ ಆಯಿತು. ಇವತ್ತು 84-85 ರಿಂದ 92-93ರವರೆಗೆ ಅದಕ್ಕೆ ಟೈಮ್ ಬೌಂಡ್ ಪ್ರೋಗ್ರಾಮ್ ಇಟ್ಟು ಈ ಪರಿಶಿಷ್ಟ ವರ್ಗ ಮತ್ತು ಪಂಗಡದವರಿಗೆ ನೇರ ನೇಮಕಾತಿಯನ್ನು ಆಯ್ಕೆ ಸಮಿತಿಯಿಲ್ಲದೆ ಅವರ ಮೆರಿಟ್ ಮೇಲೆ ಇವತ್ತು ಮಾಡಬೇಕು ಎಂದು ಹೇಳಿ ನಿರ್ಣಯವನ್ನು ತೆಗೆದುಕೊಂಡು ಆ ನಿಯಮಾವಳಿಗಳನ್ನು ಸಡಿಲಿಸಿ ಅಂತಿಮವಾದಂಥ ಪ್ರಕಟಣೆಯನ್ನು ಕೊಟ್ಟ ಮೇಲೆ 44 ಮತ್ತು 7 ಇವತ್ತು 51 ಜನರ ನೇಮಕಾತಿಯನ್ನು ಮಾಡಿದ್ದು ನಾವು ಪ್ರಥಮ. ಈಗ ನಾನು ಹೇಳಲಾ. ನೀವೆಲ್ಲಾ ಭರವಸೆ ಕೊಟ್ಟೆ ಬಂದಿದ್ದೀರಿ ಒಂದು ದಶಕದಿಂದ. ನಾವು ಸಾಧನೆ ಮಾಡಿದ್ದೇವೆ ಎಂದು ಹೇಳಿದರೆ ಭರವಸೆ ಹತ್ತು ವರ್ಷ ಆ ರೀತಿಯಾಗಿ ಆದರೆ ನೀವು ಏಳೆಂಟು ವರ್ಷ ಎಲ್ಲಿಗೆ ಹೋದ್ರಿ? ಆಮೇಲೆ ಒಂದೆರಡು ವರ್ಷ ನಾವೇ ಇರಬಹುದು. ಆದರೆ ಭರವಸೆ ಕೊಟ್ಟ ಸರ್ಕಾರ ಯಾವುದು? ಇವತ್ತು ಆ ಸಾಧನೆಯನ್ನು ಅನುಷ್ಠಾನ ಮಾಡಿದಂಥ ಸರ್ಕಾರ ಯಾವುದು ಇದನ್ನು ತಮ್ಮ ವಿಮರ್ಶೆಗೆ ಬಿಡುತ್ತೇನೆ

ಇವತ್ತು ಸಾಧನೆ ಅನುಷ್ಠಾನ ಮಾಡಿದ ಸರ್ಕಾರ ಯಾವುದು? ಅದನ್ನು ಇವತ್ತು ನಾನು ತಮ್ಮ ವಿಮರ್ಶೆಗೆ ಬಿಟ್ಟಿದ್ದೇನೆ. ಏಕೆಂದರೆ ವ್ಯವಹರಿಕವಾಗಿ ನಿಯಮಾವಳಿಗಳನ್ನು ಮಾಡಿ, ಇವತ್ತು ಬಹಳ ಸುಲಭವಾಗಿ ನಾವು ಪರಿಶಿಷ್ಟ ವರ್ಗದವರಿಗೆ ಸಹಾಯ ಮಾಡುತ್ತೇವೆ. ಆದರೆ ಎಲ್ಲಿಯವರೆಗೆ ಅನುಷ್ಠಾನ ಆಗಬೇಕು, ಅಲ್ಲಿಯವರೆಗೆ ನಾವು ಯಾವುದೇ ರೀತಿಯ ಮಾತುಗಳನ್ನು ಆಡಿದ್ದರೂ ಕೂಡ ಅದನ್ನು ವಿಶೇಷವಾಗಿ ಗಮನಕ್ಕೆ ತರುವುದಕ್ಕೆ ಆಗುವುದಿಲ್ಲವೆಂದು ಅದಕ್ಕೆ ಸಾಕ್ಷಿ ಎಂದು ಹೇಳುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ. ಆದುದರಿಂದ ಇವತ್ತು ಏನು ಭರವಸೆಗಳನ್ನು ಮಾತ್ರ ಕೊಡುತ್ತಿದ್ದೀರಿ, ಸಾಧನೆಗಳನ್ನು ತಾವು ಮಾಡುತ್ತಿಲ್ಲವೆಂದು ಏನು ಆಪಾದನೆ ಮಾಡಿದ್ದೀರಿ ಅದರಲ್ಲಿ ಪೂರ್ತಿ ಸತ್ಯಾಂಶ ಇಲ್ಲ. ಕೆಲವು ಕಡೆ ಸತ್ಯಾಂಶ ಎಂದು ನಾವು ಹುಡುಕಿದರೂ ತಾವು ಹೇಳಿದಂತ ವಿಷಯದಲ್ಲಿ ಪೂರ್ತಿ ಸತ್ಯಾಂಶ ಇಲ್ಲವೆಂದು ಹೇಳುವುದಕ್ಕೆ ಅಪೇಕ್ಷೆಪಡುತ್ತಿದ್ದೇನೆ. ಪ್ಲಾನ್ ಔಟ್‌ಲೇ ಬಗ್ಗೆ ನಾನು ಹೆಚ್ಚು ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ, ಆದರೆ ಸನ್ಮಾನ್ಯರಾದ ಬನ್ನಿಕೋಡು, ದೇಶಪಾಂಡೆ, ಎಡಿಯೂರಪ್ಪ, ರಾಮಯ್ಯ ಅವರು ಮತ್ತು ಅನೇಕ ಸನ್ಮಾನ್ಯ ಸದಸ್ಯರು ಈ ಬಗ್ಗೆ ಆಕ್ಷೇಪಣೆ ವ್ಯಕ್ತ ಮಾಡಿದ್ದಾರೆ. ಈಗ ಮೇಜರ್ ಪ್ರಾಜೆಕ್ಟ್ ಮತ್ತು ಮೇಜರ್ ಸೆಕ್ಟಾರ್‌ಗಳಿಗೆ ಸರಿಯಾಗಿ ಹಣ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಇದನ್ನು ನಾನು ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಮಾರ್ಚ್ ತಿಂಗಳಲ್ಲಿ ಈ ಬಗ್ಗೆ ಪುನಃ ಚರ್ಚೆ ಬರುವುದರಿಂದ ಇಲ್ಲಿ ಹೇಳುವುದಕ್ಕೆ ಅರ್ಥ ಕೂಡ ಇಲ್ಲ, ತಾವು ವಿವರಗಳನ್ನು ನೋಡಬೇಕು. ಈ ವರ್ಷ ದೊಡ್ಡ ಗಾತ್ರದ ಪ್ಲಾನ್ ಮಾಡಿ ಆರ್ಥಿಕ ವರ್ಷದಲ್ಲಿ ಕಷ್ಟ ನಮಗೆ ಏನು ಬಂತು ಎಂದು ಈ ಬಗ್ಗೆ ಸಾಕಷ್ಟು ವಿವರಗಳನ್ನು ನಾನು ಈಗಾಗಲೇ ಒದಗಿಸಿದ್ದೇನೆ. ಆದರೆ ಇವತ್ತು ಒಂದೇ ವಿವರ ಕೊಡುವುದು ಇದ್ದರೆ ಜಿಲ್ಲಾ ಪರಿಷತ್ತಿಗೆ 92-93ರಲ್ಲಿ 1226 ಕೋಟಿ ರೂಪಾಯಿ ಅಲೋಕೇಷನ್ ಇದ್ದರೆ ಅದು ಜನವರಿ 1993ರವರೆಗೆ, ಅಲೆಕ್ಕ ನೋಡಿದರೆ 961 ಕೋಟಿ ರೂಪಾಯಿ ಮಾತ್ರ ಖರ್ಚಾಗಿದೆ. ಬಡ್ಜೆಟ್ ಎಸ್ಟಿಮೇಟ್ 93-94ರದ್ದು 1114 ಕೋಟಿ ರೂಪಾಯಿ ಇದ್ದರೆ 1085 ಕೋಟಿ ರೂಪಾಯಿ ರಿಲೀಸಸ್ ಆಗಿದೆ. ಅದೇ ಪ್ರಕಾರ ಹೌಸಿಂಗ್ ಕಾರ್ಯಕ್ರಮದಲ್ಲಿ ಕೂಡ 92-93ರಲ್ಲಿ 83 ಕೋಟಿ ರೂಪಾಯಿ ಅಲೋಕೇಷನ್ ಇದೆ. ನಾನು 2-3 ವಿಚಾರ ಮೇಜರ್ ಸೆಕ್ಟಾರ್‌ನಲ್ಲಿ ಹೇಳುತ್ತೇನೆ, ವಿವರವನ್ನು ಬಡ್ಜೆಟ್ ಅಧಿವೇಶನದಲ್ಲಿ ಹೇಳುತ್ತೇನೆ. ಉದಾಹರಣೆಗೆ ಆಶ್ರಯ ಯೋಜನೆ, ಬಡ್ಜೆಟ್ ಎಸ್ಟಿಮೇಟ್ 92-93ಕ್ಕೆ 82 ಕೋಟಿ ರೂಪಾಯಿ ಇದ್ದರೆ ಜನವರಿ 1993ರವರೆಗೆ ಬಿಡುಗಡೆ ಆದದ್ದು 25 ಕೋಟಿ ರೂಪಾಯಿ. 1993-94ರಲ್ಲಿ 201ಕೋಟಿ ರೂಪಾಯಿ ಬಡ್ಜೆಟ್ ಎಸ್ಟಿಮೇಟ್ ಇದ್ದರೆ ನಾವು ರಿಲೀಸ್ ಮಾಡಿದ್ದು 95 ಕೋಟಿ ರೂಪಾಯಿ. ಇಷ್ಟೇ ಆಲೋಚನೆ ಮಾಡಿ, 25 ಕೋಟಿ ಎಲ್ಲಿ 95ಕೋಟಿ ಎಲ್ಲಿ? That includes 37 crores of the SCP. ಆದುದರಿಂದ ಇವತ್ತು ಇದೇ ರೀತಿಯಲ್ಲಿ ಎಲ್ಲ ಐಟಂನಲ್ಲೂ ಕೂಡ ಇದೆ. ಇರಿಗೇಷನ್‌ನಲ್ಲೂ ಸಹ 92-93ರಲ್ಲಿ 557 ಕೋಟಿ ರೂಪಾಯಿ ಎಸ್ಟಿಮೇಟ್ ಇದ್ದರೆ ರಿಲೀಸಸ್ ಜನವರಿ 1993ರವರೆಗೆ 360 ಕೋಟಿ ರೂಪಾಯಿ ಆಗಿದೆ. ಬಡ್ಜೆಟ್ ಎಸ್ಟಿಮೇಟ್ 93-94ಕ್ಕೆ 821 ಕೋಟಿ ರೂಪಾಯಿ ಇದ್ದರೆ ರಿಲೀಸಸ್ ಜನವರಿ 1994ರವರೆಗೆ 427 ಕೋಟಿ ರೂಪಾಯಿ ಆಗಿದೆ. ನೀವು ಹೇಳಬಹುದು, ಇನ್ನು ಒಂದೆರಡು ತಿಂಗಳು ಇದೆ, ಎಲ್ಲಿ ಮಾಡುತ್ತೀರಿ ಎಂದು. ಇದು ಜನವರಿಯವರೆಗೆ ಮಾತ್ರ. ಫೆಬ್ರವರಿ ಮತ್ತು ಮಾರ್ಚ್‌ನಲ್ಲಿ ಹೆಚ್ಚು ಖರ್ಚು ಮಾಡುತ್ತೇವೆ. ನಮ್ಮ ಉದ್ದೇಶ ಏನೆಂದರೆ, ವೈ.ಕೆ. ರಾಮಯ್ಯನವರು ಇಲ್ಲ, ಅವರು ಅಲ್ಲಿ ಚೇಂಬರ್‌ನಲ್ಲಿ ಹೇಳುತ್ತಿದ್ದರು. ನಮ್ಮ ಉದ್ದೇಶ ಏನೆಂದರೆ ಈ ಪ್ಲಾನ್ ಕಂಪ್ಲೀಟ್ ಮಾಡಬೇಕೆಂಬ

ಉದ್ದೇಶ ಇದೆ. ಯಾವಾಗಲೂ ಕೂಡ ಅಷ್ಟೆ. ಡಿಸೆಂಬರ್- ಜನವರಿಯವರೆಗೆ ಹೆಚ್ಚು ಆಗುವುದಿಲ್ಲ, ಇದನ್ನೇ ಕಂಪ್ಲೀಟ್ ಮಾಡಿ, ಇನ್ನೂ ಹೆಚ್ಚಾಗುತ್ತದೆ. ಮುಖ್ಯವಾಗಿ ಇರಿಗೇಷನ್ ಮೇಜರ್ ಸೆಕ್ಟಾರ್‌ನಲ್ಲಿ ಸಂಪೂರ್ಣವಾಗಿ ಇದನ್ನು ಅನುಷ್ಠಾನ ಮಾಡಬೇಕು. ನಮ್ಮ ಟಾರ್ಗೆಟ್ ಕಂಪ್ಲೀಟ್ ಮಾಡಬೇಕೆಂದು ಎಲ್ಲ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ.

SRI D.B. CHANDREGOWDA : There is a secret circular.

SRI M. VEERAPPA MOILY : I have answered it. You have shown it but, we have denied it.

ಶ್ರೀ ಆರ್.ವಿ. ದೇಶಪಾಂಡೆ : In Januaruy 820 crores of rupees, ಈಗ ತಾವು ಹೇಳಿದ್ದೀರಿ: 406 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನು ಬರುವ ಎರಡು ತಿಂಗಳುಗಳಲ್ಲಿ 4 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನು ಬರುವ ಎರಡು ತಿಂಗಳುಗಳಲ್ಲಿ 4 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಾಗಿ ಹೇಳಿದಿರಿ, ತುಂಬಾ ಸಂತೋಷ. ಗುರಿ ಮುಟ್ಟಬೇಕು, ನಮ್ಮದೂ ಅದೇ ಸದಿಚ್ಛೆಯಾಗಿದೆ. ಆದರೆ, ಹಣ ಬಿಡುಗಡೆಯಾದರೆ ಕೆಲಸವಾಗಬೇಕಲ್ಲ. 1 ಲಕ್ಷ 27 ಸಾವಿರ ಹೆಕ್ಟೇರ್ ಭೂಮಿ ಪ್ರದೇಶದಲ್ಲಿ ನೀರಾವರಿಗಾಗಿ ಖರ್ಚು ಮಾಡುತ್ತೇವೆಂದು 1993-94ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಹೇಳಿದ್ದೀರಿ. ಆದರೆ, ಡಿಸೆಂಬರ್ ತನಕ ನೀರಾವರಿಯಾಗಿದ್ದು 30 ಸಾವಿರ ಹೆಕ್ಟೇರ್‌ಗೂ ಮೀರಿಲ್ಲ. ಈಗ ಹಣ ಬಿಡುಗಡೆಯಾಗಿದ್ದರೂ ನೀರಾವರಿಗೆಂದು ಏನು ಗುರಿ ಹಾಕಿಕೊಂಡಿದ್ದೀರಿ, ಅದನ್ನು ಮುಟ್ಟಲು ಸಾಧ್ಯವೇ? ನಾನು ಕೇಳುತ್ತಿದ್ದೇನೆ: ಹಣವನ್ನು ಏನು ಬಿಡುಗಡೆ ಮಾಡುತ್ತೀರಿ, ಅದು ಪೋಲಾಗಬಾರದು, ಅದು ಸದುಪಯೋಗವಾಗಬೇಕು. ಇದರ ಬಗ್ಗೆ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಷ್ಟು ಹೆಕ್ಟೇರ್ ಪ್ರದೇಶದವರೆಗೆ ನೀರಾವರಿ ಮಾಡಬೇಕೆಂಬುದರ ಬಗ್ಗೆ ವಿವರ ಇದೆ. ವಿಷಯವಿಷ್ಟೆ. ಏಕೆಂದರೆ, ಸಾಧನೆ you have to compare to the last year percentage of increase ಅದನ್ನು ಕೂಡ ತಾವು ದಯವಿಟ್ಟು ನೋಡಬೇಕಾಗುತ್ತದೆ. ಸರ್ಕ್ಯುಲರ್ ಬಗ್ಗೆ ಏನು ಹೇಳಿದ್ದೇವೆ, ಅದನ್ನು ನಾವು ಹಣಕಾಸು ಇಲಾಖೆಯಿಂದ ಕೊಟ್ಟಿಲ್ಲ, ಆದರೆ, ಸ್ವಲ್ಪ ಡಿಸಿಪ್ಲಿನ್ ಮಾಡಿದ್ದೇವೆ. ಇವೊತ್ತು ಎಕ್ಸ್‌ಟ್ರಾ ಎಕ್ಸ್‌ಪಂಡಿಚರ್ ಅನ್ನು ಬುಕ್ ಮಾಡತಕ್ಕಂಥ ಅದು ಆಥರೈಸ್ಡ್ ಆಗಲಿ, ಅನ್‌ಆಥರೈಸ್ಡ್ ಆಗಲಿ ಮಾಡತಕ್ಕಂಥ ಪ್ರವೃತ್ತಿಯನ್ನು ನಿಲ್ಲಿಸಿದ್ದೇವೆ. ಅದಕ್ಕಾಗಿ ಅನೇಕ ಕಡೆ ಹಾಹಾಕಾರ ಏಳುತ್ತದೆ. When you want to inject discipline all these things will come. ಡಿಸಿಪ್ಲಿನ್ ಇಲ್ಲದೆ ಮಾಡಿ ಎಂದು ಹೇಳಿದರೆ ಸಂತೋಷವಾಗುತ್ತದೆ. ಅದನ್ನು ಹಾಗೆ ನಾವು ಮಾಡಲಿಲ್ಲ. ಯಾವುದೇ ನಯಾ ಪೈಸೆಯನ್ನು ಕೂಡ ನೀರಾವರಿಯಲ್ಲಿ ಕೊಡುವುದಿದ್ದರೆ ಮುಂದೆ ನೀರು ಹೋಗತಕ್ಕಂಥ ಪ್ರವೃತ್ತಿ ಇರಬೇಕಾಗುತ್ತದೆ. ಯಾವುದೋ ಕೆಲವು ರೀಚ್‌ನಲ್ಲಿ ಖರ್ಚು ಮಾಡುವುದಲ್ಲ. Immediately results should be seen ಈ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೇವೆ. ಆದುದರಿಂದ, ಮಾನ್ಯ ಸದಸ್ಯರಾದ ರಾಮಯ್ಯನವರಿಗೆ ಹೇಳುವುದಾದರೆ ಕಾವೇರಿಗಾಗಲಿ, ಕೃಷ್ಣಾಗಾಗಲಿ ನಾವು ಆರ್ಥಿಕ ಮತ್ತು ಭೌತಿಕ ಗುರಿ ಏನು ಇಟ್ಟುಕೊಂಡಿದ್ದೇವೆ, ಅದನ್ನು ಪೂರ್ಣಗೊಳಿಸುವ ದಿಸೆಯಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಅನಂತರ, ಮೊಬಲೈಜೇಷನ್ ಆಫ್ ರಿಸೌರ್ಸಸ್ ಬಗ್ಗೆ ಸಾಕಷ್ಟು ಹೇಳಿದ್ದೇನೆ. ಎಂಟು ತಿಂಗಳೊಳಗೆ ಏನು ಎಕ್ಸ್‌ಪೆಂಡಿಚರ್ ಆಗಿದೆ. ಅದು ಹಣಕಾಸಿನ ವರ್ಷದಲ್ಲಿ 1,127 ಕೋಟಿ ರೂಪಾಯಿ as against the sum of Rs. 942 crores for the

period during 1992-93. ಅದನ್ನು ನಾವು ಕೊಟ್ಟಿದ್ದೇವೆ. ಮೇಜರ್ ಸೆಕ್ಟರ್‌ನಲ್ಲಿ ಅದರ ಬಗ್ಗೆ ಈಗಾಗಲೇ ವಿವರ ಏನು ಕೊಟ್ಟಿದ್ದೇವೆ, ಈ ಕುರಿತು ಹೆಚ್ಚು ವಿಚಾರ ಹೇಳುವುದಕ್ಕೆ ಅಪೇಕ್ಷಿಸುವುದಿಲ್ಲ, ಹಾಗೆಯೇ ಅಬಕಾರಿ ಮತ್ತು ವಾಣಿಜ್ಯ ತೆರಿಗೆ ಇಲಾಖೆಗಳ ಬಗ್ಗೆ ಈಗಾಗಲೇ ಸಾಕಷ್ಟು ವಿವರಗಳನ್ನು ಕೊಡಲಾಗಿದೆ. ಅಲ್ಲದೆ, ಸಪ್ಲಿಮೆಂಟರಿ ಬಜೆಟ್‌ನಲ್ಲೂ ವಿವರ ಕೊಟ್ಟಿದ್ದೇವೆ. Please wait for the Budget. Wait for another one month. ಇನ್ನೊಂದು ತಿಂಗಳೊಳಗಾಗಿ ಬಜೆಟ್ ಮಂಡಿಸಲಿದ್ದೇವೆ. ಇದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಇನ್ನು ಪೊಲೀಸ್ ಹುದ್ದೆಗಳ ನೇಮಕಾತಿ ಬಗ್ಗೆ ಕೂಡ ಇಲ್ಲಿ ಪ್ರಸ್ತಾಪವಾಗಿ ಚರ್ಚೆಯಾಗಿದೆ. 1993-94ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರ ಒಟ್ಟು 9,000 ವಿವಿಧ ದರ್ಜೆ ಪೊಲೀಸ್ ಅಧಿಕಾರಿಗಳ ಹಾಗೂ ಪೊಲೀಸ್ ಸಿಬ್ಬಂದಿಗಳ ಹುದ್ದೆಗಳಿಗೆ ಮಂಜೂರಾತಿ ನೀಡಿದೆ. ಇಷ್ಟೊಂದು ದೊಡ್ಡ ಗಾತ್ರದಲ್ಲಿ ಹುದ್ದೆಗಳ ಮಂಜೂರಾತಿಯನ್ನು ಯಾವಾಗಲೂ ನೀಡಿಲ್ಲ. You will agree with us on concrete terms. ಇದು ಆಶ್ವಾಸನೆಯಲ್ಲ. ಇದುವರೆಗೆ 4,755 ಪೊಲೀಸ್ ಕಾನ್‌ಸ್ಟೇಬಲ್‌ಗಳನ್ನು ಹಾಗೂ 88ಫಾಲೋವರ್ಸ್‌ಗಳನ್ನು ಕೂಡ ನೇಮಕ ಮಾಡಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇಷ್ಟು ದೊಡ್ಡ ಗಾತ್ರದಲ್ಲಿ ಹುದ್ದೆಗಳ ಮಂಜೂರಾತಿಯಾಗಿರುವುದಿಲ್ಲವೆಂದರೆ ಅದು ಅತಿಶಯೋಕ್ತಿಯಾಗಲಾರದು. ನಮ್ಮಲ್ಲಿ ಬಹಳ ಬಿಕ್ಕಟ್ಟು ಇದೆ, ನಮ್ಮಲ್ಲಿ ಸಂಪನ್ಮೂಲವಿಲ್ಲ, ಖರ್ಚು ಮಾಡುವುದಕ್ಕೆ ಹಣವಿಲ್ಲ, ನೀವು ಭರವಸೆ ಮಾತ್ರ ಕೊಡುತ್ತಿದ್ದೀರಿ, ಸಾಧನೆ ಮಾಡುತ್ತಿಲ್ಲವೆಂದು ನೀವು ಹೇಳಿದಿರಿ. ಹಾಗಾದರೆ, ಈ ನೇಮಕಾತಿಗಳು ಹೇಗೆ ಆಗುತ್ತವೆ? ಮಂಜೂರಾತಿ ಹೇಗೆ ಕೊಡುತ್ತಿದ್ದೇವೆ? ದಿನಾಂಕ 1.1.93 ರಿಂದ 31.1.94ರವರೆಗೆ ಸ್ಟಾಫ್ ಸ್ಯಾಂಕ್ಷನ್ ಮಾಡಿ. ನೇಮಕವಾಗಿರುವ ಎಲ್ಲಾ ವಿವರಗಳಿವೆ. ಹುದ್ದೆಗಳನ್ನು ಮಂಜೂರು ಮಾಡಿರುವುದರಲ್ಲಿ ಎಸ್‌ಪಿ, ಡಿವೈಎಸ್‌ಪಿ, ಸಬ್‌ಇನ್ಸ್‌ಪೆಕ್ಟರ್, ಪಿಎಸ್‌ಐ, ಎಎಸ್‌ಐ, ಹೆಚ್‌ಸಿ, ಪಿಸಿ ಇತರ ಹುದ್ದೆಗಳಿವೆ. ಪೊಲೀಸ್ ಇಲಾಖೆಯ ಸುಧಾರಣೆಗಾಗಿ ನೇಮಿಸಲಾಗಿದ್ದ ಧರ್ಮವೀರ ಆಯೋಗ ಏನಿದೆ, ಮತ್ತು ಅವರು ಏನು ಶಿಫಾರಸ್ಸುಗಳನ್ನು ಮಾಡಿದ್ದಾರೆ, ನಾವು ಇವೊತ್ತಿನವರೆಗೆ ಮಾಡಿರುವ ಸಾಧನೆಗಳಿಂದ ಇಡೀ ರಾಷ್ಟ್ರದಲ್ಲಿಯೇ ಇವೊತ್ತು ಫುಲ್ ಕಾಂಪ್ಲಿಮೆಂಟ್ ಪೊಲೀಸ್ ವ್ಯವಸ್ಥೆ ಮಾಡಿರುವುದರಲ್ಲಿ ನಾವು (ಕರ್ನಾಟಕ ರಾಜ್ಯ) ಪ್ರಥಮರಾಗಿದ್ದೇವೆ. ಎರಡು ವರ್ಷದೊಳಗೆ ಧರ್ಮವೀರ ಆಯೋಗದವರು ಕೊಟ್ಟಂಥ ವರದಿಯ ಅನುಸಾರವಾಗಿ ನೂರಕ್ಕೆ ತೊಂಭತ್ತೊಂಭತ್ತರಷ್ಟು ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತಂದಿದ್ದರಲ್ಲಿ ಪ್ರಪ್ರಥಮ ರಾಜ್ಯ ನಮ್ಮದಾಗುತ್ತದೆ. ಆ ದೃಷ್ಟಿಯಲ್ಲಿ ಎಲ್ಲಾ ರೀತಿಯಲ್ಲು ಪೋಲೀಸ್ ಠಾಣೆಗಳನ್ನು ಸಜ್ಜುಗೊಳಿಸುತ್ತಿದ್ದೇವೆ. ಅನಂತರ ಒಬ್ಬರು ಮಹಿಳಾ ಐ.ಪಿ.ಎಸ್. ಅಧಿಕಾರಿಯನ್ನು ಎಸ್.ಪಿ. ಇನ್ ಚಾರಜ್ Dowry cell ನಲ್ಲಿ ಆ್ಯಂಟಿ ಡೌರಿ ಸೆಲ್‌ನ್ನು ಮಾಡುತ್ತಿದ್ದೇವೆ. ಬೆಂಗಳೂರಿನಲ್ಲಿ ಮಹಿಳೆಯರೇ ಇರುವಂಥ ಪೋಲೀಸ್ ಠಾಣೆಯನ್ನು ತೆರೆಯಲು ಈಗಾಗಲೇ ಮಂಜೂರಾತಿಯನ್ನು ಕೊಟ್ಟಿದ್ದೇವೆ ಅದೇ ರೀತಿಯಲ್ಲಿ, ಹುಬ್ಬಳ್ಳಿ, ಧಾರವಾಡ, ಮೈಸೂರು, ಮಂಗಳೂರು, ದಾವಣಗೆರೆ, ಗುಲ್ಬರ್ಗ, ಬೆಳಗಾಂನಲ್ಲಿ ಸಹ ಮಹಿಳಾ ಪೇದೆಗಳೇ ಇರುವ ಪೋಲೀಸ್ ಠಾಣೆಯನ್ನು ತೆರೆದು ಹೆಣ್ಣುಮಕ್ಕಳಿಗೆ ಆಗುವ ತೊಂದರೆಯನ್ನು ಪ್ರತ್ಯೇಕವಾಗಿ ನೋಡಿಕೊಳ್ಳಲು ಮಾಡುತ್ತಿದ್ದೇವೆ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸಹ ಅಂಥ ಮಹಿಳಾ ಪೋಲೀಸರೆ ಇರುವ ಠಾಣೆಗಳನ್ನು ತೆರೆಯಬೇಕೆಂಬುದು ನಮ್ಮ ಉದ್ದೇಶವಾಗಿದೆ. ಆ ದಿಸೆಯಲ್ಲಿ ಮೇಲೆ ಹೇಳಿದ ಸ್ಥಳಗಳಲ್ಲಿ ಬರುವ ವರ್ಷ ಮಹಿಳಾ ಪೋಲೀಸ್ ಠಾಣೆಯನ್ನು ಪ್ರಾರಂಭ ಮಾಡುತ್ತೇವೆ. ಅನಂತರ ಮಹಿಳೆಯರ ವಿಚಾರದಲ್ಲಿ ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ಗ್ರಿವೆನ್ಸ್ ಸೆಲ್ಸ್‌ನ್ನು ಮಾಡಬೇಕು, ಮತ್ತು ಸಿಟಿ ಪೋಲೀಸ್ ಕಮಿಷನರ್ ಕಛೇರಿಯಲ್ಲಿ ಸಹ ಅದನ್ನು ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಒಂದೊಂದು ಸೆಲ್‌ನಲ್ಲು ಸಹ ಮಹಿಳಾ ಪೋಲೀಸ್‌ಅಧಿಕಾರಿ ಇರುತ್ತಾರೆ, and

there will be councellers from the Social Welfare Department. ಮತ್ತು ಎಲ್ಲೆಲ್ಲಿ ಪೊಲೀಸರ ಸಹಾಯ ಬೇಕೋ ಅಲ್ಲಿ ಪೋಲೀಸರ ಸಹಾಯವನ್ನು ಇಂಥ ಗ್ರಿವೆನ್ಸ್ ಸೆಲ್‌ಗೆ ಒದಗಿಸಲು ಎಲ್ಲಾ ರೀತಿಯಲ್ಲು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಈಗ suffering on women and atrocities against women ಬಗ್ಗೆ ಹೇಳುವುದಾದರೆ ಇದರ ಬಗ್ಗೆ ನಾವು ಪ್ರತ್ಯೇಕವಾಗಿ ಹೆಣ್ಣುಮಕ್ಕಳ, ಮಹಿಳೆಯರ ಸಮಸ್ಯೆ ಮತ್ತು ಅವರ ಮೇಲೆ ಆಗತಕ್ಕ ಅಕ್ರಮ ಮತ್ತು ಅತ್ಯಾಚಾರಗಳ ವಿಚಾರದಲ್ಲಿ ಸೂಕ್ಷ್ಮವಾದಂಥ ರೀತಿಯಲ್ಲಿ ಮತ್ತು ವಿಶೇಷ ಗಮನವನ್ನು ಕೊಟ್ಟು ಪೋಲೀಸ್ ಕಾಂಪೊನೆಂಟ್ಸ್‌ಗಳಿಗೆ, ಮತ್ತು ಪೋಲೀಸ್ ಅಧಿಕಾರಿಗಳಿಗೆ ತರಬೇತಿಯನ್ನು ಕೊಡುವ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ.

ಮತ್ತು ವರದಕ್ಷಣೆ ನಿರೋಧದ ದಳವು ಸಿಓಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ 13 ಇನ್ಸ್‌ಪೆಕ್ಟರ್‌ಗಳ ಮತ್ತು ಅದಕ್ಕೆ ಸಂಬಂಧಪಟ್ಟ ಸಿಬ್ಬಂದಿಗಳು ಇರುತ್ತಾರೆ. ಇದರ ಬಗ್ಗೆ ಈಗಾಗಲೇ ಸಾಕಷ್ಟು ಸುತ್ತೋಲೆಗಳನ್ನು ಇಶ್ಯೂ ಮಾಡಿದ್ದೇವೆ. ಇನ್ನು ಪಂಚಾಯತಿ ರಾಜ್ಯ ವಿಷಯದ ಬಗ್ಗೆ ನಾನು ವಿಶೇಷವಾಗಿ ಹೇಳಬೇಕಾದ ಅವಶ್ಯಕತೆ ಇಲ್ಲ. ಅದರ ಬಗ್ಗೆ ಈಗಾಗಲೇ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿದ್ದಾರೆ. ಬಹುಶಃ ಇಡೀ ರಾಷ್ಟ್ರದಲ್ಲಿ ಸಂವಿಧಾನದ ಬದಲಾವಣೆಗೆ ತಿದ್ದುಪಡಿಯಾದ ನಂತರ ಪ್ರಪ್ರಥಮವಾಗಿ ಪಂಚಾಯಿತಿ ರಾಜ್‌ನ ಆ್ಯಕ್ಟ್‌ನ್ನು ಜಾರಿಗೆ ಮಾಡಿದ ಕೀರ್ತಿ ಮತ್ತು ಪಂಚಾಯಿತಿ ರಾಜ್ಯ ಮಸೂದೆಯನ್ನು ಮಂಜೂರು ಮಾಡಿದ ಕೀರ್ತಿ ನಮಗೆ ಸಲ್ಲುತ್ತದೆ. ಅದಕ್ಕೆ ತಾವೆಲ್ಲರೂ ಸಹ ಸಹಕಾರವನ್ನು ಕೊಟ್ಟಿದ್ದೀರಿ. ಅದರ ಜೊತೆಗೆ, ಈಗಾಗಲೇ ಮಂಡಲದ ಪ್ರಧಾನರನ್ನು ಹಾಗು ಉಪ-ಪ್ರಧಾನರನ್ನು ಆಯ್ಕೆ ಮಾಡುವುದಕ್ಕೆ ಸುತ್ತೋಲೆಯನ್ನು ಹೊರಡಿಸಲಾಗಿದೆ. ಬಹುಶಃ ಮುಂದಿನ ಮಾರ್ಚ್ ಒಂದನೇ ತಾರೀಖಿನಿಂದ 15ನೇ ತಾರೀಖಿನೊಳಗೆ ಆ ಪ್ರಕ್ರಿಯೆ ಆಗುತ್ತದೆ. ಅದರ ಬಗ್ಗೆ ಈಗಾಗಲೇ ಸಾಕಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇನ್ನು ಜವಹರ್ ರೋಜ್‌ಗಾರ ಯೋಜನೆಯ ಬಗ್ಗೆ ಸಹ ಮತ್ತು ಅದನ್ನು ಅನುಷ್ಠಾನ ಮಾಡುವಲ್ಲಿ ನಾವು ಸಾಕಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಆ ಯೋಜನೆಯ ಅಡಿಯಲ್ಲಿ ಇದೇ ಜನವರಿ 31, 1994ಕ್ಕೆ ಆದ ಖರ್ಚು 96.31ಕೋಟಿ ರೂಪಾಯಿಗಳನ್ನು. ಜವಹರ್‌ರೋಜ್‌ಗಾರ್ ಯೋಜನೆಯ ಹಣವು ಲ್ಯಾಪ್ಸ್ ಆಗಬಾರದೆನ್ನುವ ದೃಷ್ಟಿಯಿಂದ, ಕಳೆದ ವರ್ಷದ ಆ ಯೋಜನೆಯ ಸಫಲತೆಯಲ್ಲಿ ಎಲ್ಲೆಲ್ಲಿ ದೋಷವಿತ್ತು. ಎಲ್ಲಿಲ್ಲಿ ಕಾರ್ಯಕ್ರಮವನ್ನು ಮಾಡುವಲ್ಲಿ ಕೊರತೆ ಇತ್ತೋ ಅದನ್ನು ಸರಿಪಡಿಸಿಕೊಂಡು, ಆ ಯೋಜನೆಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಮಾಡಲು ನಾವು ವಿಶೇಷವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಜವಹರ್ ರೋಜ್‌ಗಾರ ಯೋಜನೆಯ ಇಂಟೆನ್‌ಸಿವ್ ಪ್ರೋಗ್ರಾಮ್ ಏನು ಇದೆ ಅದಕ್ಕೆ ಒಟ್ಟಾರೆ ಅಲೋಕೇಷನ್ 47.15 ಕೋಟಿ ರೂಪಾಯಿಗಳು ಅದನ್ನು ಕೇಂದ್ರ ಸರ್ಕಾರ ಕೊಡುತ್ತದೆ. ಅದರ ಪ್ರಥಮ ಕಂತು 16.85 ಕೋಟಿ. ಅದರಲ್ಲಿ ಈಗಾಗಲೆ 9 ಕೋಟಿ ರೂಪಾಯಿಗಳು ಖರ್ಚಾಗಿದೆ. ಅದಲ್ಲದೆ ಉದ್ಯೋಗದ ಭರವಸೆಯ ಕಾರ್ಯಕ್ರಮವನ್ನು ಕೂಡ ಈಗಾಗಲೇ ಅನುಷ್ಠಾನಕ್ಕೆ ತಂದಿದ್ದೇವೆ. ನಮ್ಮ ಅನೇಕ ಯೋಜನೆಗಳಲ್ಲಿ, ಅದರಲ್ಲು ಮುಖ್ಯವಾಗಿ ಗ್ರಾಮೀಣ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಇದುವರೆಗೆ ಸಾಧಿಸಿರತಕ್ಕಂಥ ಸಾಧನೆಯ ಅನೇಕ ಕಾರ್ಯಕ್ರಮಗಳ ಬಗ್ಗೆ ಈಗಾಗಲೇ ಅನೇಕ ಬಾರಿ ಪ್ರಶ್ನೋತ್ತರ ಕಾಲದಲ್ಲಿ ಬಂದಿದೆ. ಮತ್ತು ಆ ಕಾಲದಲ್ಲಿ ಇದರ ಬಗ್ಗೆ ಚರ್ಚೆಯ ಸಹ ಆಗಿದೆ. ಆದ್ದರಿಂದ ಅದರ ಬಗ್ಗೆ ಪುನಃ ಹೇಳಲು ನಾನು ಅಪೇಕ್ಷೆ ಪಡುವುದಿಲ್ಲ.

5.00 ಪಿ.ಎಂ.

ಅದನ್ನು ನಾನು ಪುನಃ ಹೇಳಲಿಕ್ಕೆ ಅಪೇಕ್ಷೆ ಪಡುವುದಿಲ್ಲ. ಆದರೆ ಅದರಲ್ಲಿ 1993-94ರಲ್ಲಿ ಸಮಗ್ರ ಗ್ರಾಮೀಣ ಯೋಜನೆಯ ಆರ್ಥಿಕ ವಾರ್ಷಿಕ ಅನುದಾನ 56.50 ಕೋಟಿ ರೂ.ಗಳು ಇದೆ. ಇವತ್ತು ನಾವು ಈಗಾಗಲೇ ಆ ಹಣವನ್ನು

ಬಿಡುಗಡೆ ಮಾಡುತ್ತಲೇ ಇದ್ದೇವೆ. ಅಲ್ಲಿ ಯಾವುದೇ ರೀತಿಯ ಕೊರತೆ ಬಾರದ ಹಾಗೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಯುಟಿಲೈಸೇಷನ್ ಇನ್ ಕೃಷ್ಣಾ ಮತ್ತು ಕಾವೇರಿ ಜಲಾನಯನದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ನಾವು ಈಗಾಗಲೇ ಬಚಾವತ್ ನ್ಯಾಯಾಧೀಕರಣದ ತೀರ್ಪಿನ ಅನುಸಾರ ಕರ್ನಾಟಕಕ್ಕೆ ಕೃಷ್ಣ ಕೊಳದಲ್ಲಿ ಲಭ್ಯವಿರುವ 734 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ ತಯಾರಿಸುವ ಸಮಗ್ರ ಯೋಜನೆಯ ಅನುಸಾರ ಪ್ರಸ್ತುತ ನಿರ್ಮಾಣದ ವಿವಿಧ ಹಂತದಲ್ಲಿರುವ ಹಾಗೂ ಇನ್ನೂ ಕೈಗೊಳ್ಳಬೇಕಾದ ಎಲ್ಲಾ ಯೋಜನೆಗಳನ್ನು ಕ್ರಿ.ಶ. 2000 ಇಸವಿಯ ವೇಳೆಗೆ ಪೂರ್ಣಗೊಳಿಸುವ ವಿಚಾರದಲ್ಲಿ ......

ಶ್ರೀ ಡಿ.ಬಿ. ಚಂದ್ರೇಗೌಡ : ಸದಸ್ಯರು ಏಕೋ ಒಂದೇ ಸಮನೆ ವಾಕ್‌ಔಟ್ ಮಾಡುತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ಚುನಾವಣೆಯ ಕಾರಣ ಹಾಗೆ ಆಗಿದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಶ್ರೀ ರಾಜಶೇಖರಮೂರ್ತಿಯವರು ರಾಜ್ಯಸಭೆಗೆ ಆಯ್ಕೆ ಆಗಿದ್ದಾರೆ. ನಮಗೆ ಸಂತೋಷ, ಅವರಿಗೆ ಅಭಿನಂದನೆಯನ್ನು ಸಲ್ಲಿಸೋಣ. ಏಕೆಂದರೆ ಅವರು ಮತ್ತೆ ಇಲ್ಲಿ ಕುಳಿತುಕೊಳ್ಳುವುದಿಲ್ಲ. ಅವರು ಎದ್ದು ಹೋಗುವುದಕ್ಕೆ ಮುಂಚೆ ಹೇಳಿಬಿಟ್ಟರೆ ಒಳ್ಳೆಯದು ಎಂದು ಹೇಳುತ್ತಿದ್ದೇನೆ. ನಿಮ್ಮ ದಿಲ್ಲಿಯ ಯಾತ್ರೆ ಮತ್ತು ದಿಲ್ಲಿಯಲ್ಲಿ ನೀವು ಕಳೆಯುವಂತಹ 6 ವರ್ಷಗಳ ಅವಧಿಯಲ್ಲಿ ರಾಜ್ಯಕ್ಕೆ ಅನುಕೂಲವಾಗಲಿ ಎಂದು ಅವರಿಗೆ ಹೇಳುತ್ತೇನೆ. ನನ್ನ ದೃಷ್ಟಿಯಲ್ಲಿ ತಮ್ಮ ಪಕ್ಷದವರು ಒಪ್ಪುತ್ತಾರೋ ಇಲ್ಲವೋ ಗೊತ್ತಿಲ್ಲ. ಒಬ್ಬ ಸಮರ್ತ ಮಂತ್ರಿಗಳು ರಾಜ್ಯಕ್ಕೆ ಇಲ್ಲವಾದರು ಎಂಬ ದುಃಖವನ್ನು ಈ ಮೂಲಕ ವ್ಯಕ್ತಪಡಿಸಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ರಾಜ್ಯದ ಸಮರ್ಥ ವ್ಯಕ್ತಿಯಾಗಿದ್ದರು. ಅಲ್ಲಿ ಹೋದರೂ ಅವರು ಸಮರ್ಥ ಮಂತ್ರಿಯಾಗುತ್ತಾರೆ ಎಂಬ ವಿಶ್ವಾಸ ನಮಗಿದೆ. ಹಾಗೆ ಆಗಲಿ ಎಂಬುದು ನಮ್ಮ ಸದ್ ಇಚ್ಛೆ. ಆದಷ್ಟು ಬೇಗ ಸಮರ್ಥ ಮಂತ್ರಿಯಾಗುತ್ತಾರೆ ಎಂಬ ವಿಶ್ವಾಸ ನಮಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳಿದ ಉದ್ದೇಶವೇನೆಂದರೆ ವಾಕ್‌ಹೌಟ್ ಜೊತೆಗೆ ಅವರು ಆಗಲೇ ಎದಿದ್ದರು. ನಾನು ಹೇಳಿದ್ದ ಸತ್ತ ಶಿಶುವಿಗೆ ಜೀವ ಬರಬಹುದು ಅದು ಏನು ಬರುವುದು ಬೇಡ. ದೆಹಲಿಯಲ್ಲಿ ಕೆಲಸ ಮಾಡಲಿ ಎಂದು ನಾವು ಕೂರಿಸಿದ್ದು, ಆ ಕಾರಣಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ತಾವು ಇಲ್ಲಿ ಗಮನಿಸಬೇಕು. ವಿರೋಧ ಪಕ್ಷದ ನಾಯಕರು ರಾಜ್ಯಪಾಲರ ಭಾಷಣದ ಬಗ್ಗೆ ಭಾಷಣ ಮಾಡುವಾಗ, ಅಧಿಕಾರಿಗಳು ಒಬ್ಬರೂ ಇರಲಿಲ್ಲ; ಕೊನೆಯಲ್ಲಿ ತಾವಿಬ್ಬರೂ ಬಂದಿರಿ. ಬಹುತೇಕ ಶಾಸಕರೂ ಸಹಿತ ಇರಲಿಲ್ಲ, ಇವತ್ತೂ ಸಹ ತಾವು ಭಾಷಣ ಮಾಡುವಾಗ ನಿಮ್ಮ ಭಾಷಣವೇ ಒಂದು ದಿಕ್ಕಿಗೆ ಹೋಗುತ್ತಿತ್ತು, ಅವರ ವ್ಯವಹಾರ ಮಾತುಕತೆಗಳು ಒಂದು ದಿಕ್ಕಿಗೆ ಹೋಗುತ್ತಿದ್ದವು. ಮಾನ್ಯ ರಾಜಶೇಖರ ಮೂರ್ತಿಯವರೇ ದಯವಿಟ್ಟು ಇದ್ಯಾಕೆ ಹೀಗೆ ನೀವು ಹೋಗುತ್ತಿದ್ದೀರಿ ನೀವು ಬನ್ನಿ ಸ್ವಲ್ಪ. ನಾವು ನಿಮ್ಮನ್ನು ಇಲ್ಲಿರಿಸಿಕೊಂಡು ನಾಲ್ಕು ಮಾತುಗಳನ್ನಾಡೋಣ ಎಂದರೆ ನೀವು ನಿಮ್ಮ ಸಹವಾಸ ಬೇಡ ಎಂದು ಹೋಗುತ್ತಿದ್ದೀರಲ್ಲ, ಏನಿದು? ಹೀಗಾದರೆ ಸರಿಯಿಲ್ಲ. ನಿಮಗೂ ಕಾಂಗ್ರೆಸ್‌ನವರಿಗೂ ಜಿಜ್ಞಾಸೆ ಇದ್ದರೂ, ನಾವೇನು ಮಾಡಿದ್ದೇವೆ ನಿಮಗೆ, ನಾವೇನೂ ಮಾಡಿಲ್ಲ, ಆದ್ದರಿಂದ ನಿಮಗೆ ಒಳ್ಳೆಯದಾಗಲಿ, ನೀವು ಕೇಂದ್ರಕ್ಕೆ ಹೋಗುವುದರಿಂದ

ನಮ್ಮ ರಾಜ್ಯಕ್ಕೆ ಅನುಕೂಲವಾಗಲಿ, ನಿಮ್ಮೆಲ್ಲರ ಒತ್ತಡ ಮತ್ತು ಹೆಚ್ಚಿನ ಶ್ರಮದಿಂದ ನಮ್ಮ ರಾಜ್ಯಕ್ಕೆ ಶಕ್ತಿ ಬರಲಿ ಎಂದು ನಾವೆಲ್ಲರೂ ಅಭಿನಂದನೆ ಸಲ್ಲಿಸುತ್ತೇವೆ, ನಿಮ್ಮ ಬಗ್ಗೆ ಒಳ್ಳೆಯ ಅಭಿಪ್ರಾಯ ಇಟ್ಟುಕೊಂಡಿದ್ದೇವೆ. ಅದೇ ರೀತಿ ನಿಮಗೆ ರಾಜ್ಯಸಭೆಗೆ ನೀವು ಮತ್ತು ಮುಖ್ಯ ಮಂತ್ರಿಗಳು ಸೇರಿದರೆ ಬರುವ ದೃಶ್ಯ ಇದೆಯಲ್ಲಾ ಅದು ನಿಜವಾಗಿಯೂ ಬಹಳ ಸಂತೋಷದ ದೃಶ್ಯ ಎಂದು ಹೇಳಿ ನಾನು ಅತ್ಯಂತ ಸಂತೋಷವಾಗಿ ಅಭಿನಂದಿಸುತ್ತೇನೆ. ಏಕೆಂದರೆ ಮೊನ್ನೆ ನಮ್ಮ ಅಧ್ಯಕ್ಷರ ಕೊಠಡಿಯಲ್ಲಿ ಇಬ್ಬರೂ ಕುಳಿತಿರುವುದನ್ನು ನೋಡಿ ನನಗೆ ಬಹಳ ಆನಂದವಾಯಿತು. ಆರು ತಿಂಗಳು ನಿಮ್ಮ ಮುಖ ಅವರು ನೋಡುವುದಿಲ್ಲ, ಅವರ ಮುಖ ನೀವು ನೋಡುವುದಿಲ್ಲ ಅನ್ನುವ ಮಟ್ಟದಲ್ಲಿದ್ದರಲ್ಲಾ ಆ ದೈವ ನಿಮ್ಮಿಬ್ಬರನ್ನೂ ತಂದು ಒಂದು ಕಡೆ ಸೇರಿಸಿತಲ್ಲಾ ಅದು ಈ ರಾಜ್ಯದ ಹಿತ ದೃಷ್ಟಿಯಿಂದ ಒಳ್ಳೆಯದಾಗಲಿ, ಕೇಂದ್ರದಲ್ಲಿ ಏನೋ ಮಂತ್ರಿಮಂಡಲ ರಚನೆಯಾಗುತ್ತೆ ಅನ್ನುವ ಸುದ್ದಿ ಇದೆ. ಆ ಸುದ್ದಿಯ ಪ್ರಕಾರ ನಿಮ್ಮ ಹೆಸರು ಮಂತ್ರಿಮಂಡಲದಲ್ಲಿ ಸೇರಿದರೆ, ನಮಗೆಲ್ಲರಿಗೂ ಅನುಕೂಲ ಮತ್ತು ರಾಜ್ಯಕ್ಕೂ ಅನುಕೂಲ ಅಂತ ಹೇಳಿ ಈಗ ಚುನಾಯಿತರಾಗಿರತಕ್ಕಂಥವರ ನಿಮಗೆ ಮತ್ತು ಇನ್ನುಳಿದ ಮೂವರಿಗೆ ನಾಲ್ಕು ಜನರಿಗೂ ಒಳ್ಳೆಯದಾಗಲಿ ಅಂತ ಹೇಳಿ, ಮುಂದಿನ ಆಯವ್ಯಯದಲ್ಲಿ ತಾವು ಆಗಮಿಸಬೇಕೆಂದು ಹೇಳಿ, ಮತ್ತು ನಮ್ಮ ಮುಖ್ಯ ಮಂತ್ರಿಗಳು ಇನ್ನು 9 ತಿಂಗಳು ಇವರು ರಾಜ್ಯಭಾರ ಆಳಬೇಕಾಗಿದೆ ನವೆಂಬರ್‌ವರೆಗೆ 12 ಕಾಲಿನ ಸೂತ್ರವನ್ನು ಕೊಟ್ಟಿದ್ದೀರಿ ಆ ಸೂತ್ರದಲ್ಲಿ ಏನೂ ತೊಂದರೆ ಆಗದ ರೀತಿ ನಾವೆಲ್ಲರೂ ನೋಡಿಕೊಂಡು ಹೋಗಬೇಕೆಂದು ಹೇಳುತ್ತೇವೆ.

ಆ ಸೂತ್ರದಲ್ಲಿ ಅವರಿಗೆ ಏನೂ ತೊಂದರೆ ಆಗದ ರೀತಿಯಲ್ಲಿ ತಾವು ಎಲ್ಲರೂ ನೋಡಿಕೊಂಡು ಹೋಗಬೇಕು ಎಂದು ನಾವು ಹೇಳುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಈ ಸದನದಲ್ಲಿ ನಾನು ಅತ್ಯಂತ ಗೌರವ ಇಟ್ಟುಕೊಂಡಿರತಕ್ಕಂಥವರಲ್ಲಿ ಮಾನ್ಯ ರಾಜಶೇಖರ ಮೂರ್ತಿಯವರು ಮತ್ತು ಮಾನ್ಯ ಕೆ.ಹೆಚ್. ರಂಗನಾಥ್‌ರವರು. ಇವತ್ತು ನಾನು ಯಾವ ಮೇಲೆ ಹೆಚ್ಚಾಗಿ ಅಪಾರವಾದಂತಹ ಗೌರವ ಇಟ್ಟಿದ್ದೆನೋ ಅವರು ದೆಹಲಿಗೆ ಹೋಗುತ್ತಿದ್ದಾರೆ. ಇಲ್ಲಿ ಅನೇಕ ಸಂದರ್ಭದಲ್ಲಿ ಎಷ್ಟು ನಿಷ್ಠುರವಾಗಿ ರಾಜ್ಯದ ಅಭಿವೃದ್ಧಿ ಬಗ್ಗೆ ತಾವು ಇಲ್ಲಿಯವರೆಗೆ ನಡೆದುಕೊಂಡು ಬಂದಿದ್ದೀರೋ, ಇದ್ದದ್ದನ್ನು ಇದ್ದ ಹಾಗೆ ನೇರವಾಗಿ ನೇರವಾಗಿ ಕೂಡ ತಾವು ಹೇಳಿದ್ದೀರಿ. ಅದೇ ದೃಷ್ಟಿಯಿಂದ ಮುಂದೆ ಕೂಡ ತಾವು ರಾಜ್ಯದ ಹಿತವನ್ನು ಕಾಪಾಡುವುದರಲ್ಲಿ ಇನ್ನು ನಿಷ್ಠುರವಾಗಿ ನಿಮ್ಮಿಂದ ನಮ್ಮ ರಾಜ್ಯಕ್ಕೆ ಯಾರಿಂದಲೂ ಆಗದೇ ಇರುವಂತಹ ಕೆಲಸವಾಗಲಿ ಎನ್ನುವಂತಹ ಸದಾಶಯವನ್ನು ನಾನು ವ್ಯಕ್ತಪಡಿಸಿ ಮತ್ತೊಮ್ಮೆ ತಮಗೆ ಅಭಿನಂದಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷರೇ, ತಾವು, ಮಾನ್ಯ ವಾಟಾಳ್‌ನಾಗರಾಜ್‌ರವರು, ಮಾನ್ಯ ಬೈರೇಗೌಡರವರು ನಮ್ಮ ಪಕ್ಷದವರ ಬಗ್ಗೆ ವ್ಯಕ್ತ ಪಡಿಸಿದಂತಹ ಆ ಒಳ್ಳೆಯ ಭಾವನೆಗಳಿಗೆ ನನ್ನ ಧನ್ಯವಾದಗಳು.

ಶ್ರೀ ವಾಟಾಳ್ ನಾಗರಾಜ್ : ಪಕ್ಷದ ಬಗ್ಗೆ ಅಲ್ಲ ಸ್ವಾಮಿ, ನಿಮ್ಮ ಬಗ್ಗೆ ಮತ್ತು ನಿಮ್ಮ ರಾಜಶೇಖರ್ ಮೂರ್ತಿಯವರ ಬಗ್ಗೆ ಕರುಣೆ.

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ 12 ಸೂತ್ರದ ಬಗ್ಗೆ ಅವರು ಹೇಳುತ್ತಿದ್ದಾರೆ, ಸರಿಯಾಗಿ ನಡೆಸಿಕೊಳ್ಳಿರಿ ಎಂದು.

ಶ್ರೀ ವಾಟಾಳ್ ನಾಗರಾಜ್ : ನಾನು ಏನು ಹೇಳಿದೆ ಎಂದರೆ ನಿಮ್ಮ ಸೂತ್ರದಿಂದ ಇವರಿಗೆ ತೊಂದರೆ ಕೊಡಬೇಡಿ ಎಂದು ಹೇಳಿದ್ದೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ವಾಟಾಳ್ ಅವರು ತಮ್ಮ ಬಗ್ಗೆ ಕನಿಕರದ ಮಾತನು ಹೇಳಿದರು ಅಷ್ಟೇ.

ಶ್ರೀ ಎಂ. ವೀರಪ್ಪ ಮೊಯಿಲಿ : ಏನಾದರೂ ಕಾಂಗ್ರೇಸ್‌ನಲ್ಲಿ ಇರುವಷ್ಟು ಒಗ್ಗಟ್ಟು ಈ ದೇಶದಲ್ಲಿ ಯಾವ ಪಕ್ಷದಲ್ಲೂ ಇಲ್ಲ ಎಂದು ಇವತ್ತು ಸಿದ್ಧಪಡಿಸಿಯಾಗಿದೆ ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ಒಂದು ಗಾದೇನೆ ಇದೆ ಸ್ವಾಮಿ. ಅದನ್ನು ಹೇಳಿದರೆ ಬಹುಶಃ ಸಂಸದೀಯ ಭಾಷೆ ಅಲ್ಲ ಎಂದು ಹೇಳಿ ದೊಡ್ಡ ರಂಪ ಆಗಬಹುದು ಎಂದು ಹೇಳಿ ಇಲ್ಲಿ ಬೇಕಾಗಿಲ್ಲ. ಹಾಗಾದರೆ 6 ತಿಂಗಳಿನಿಂದ ನೀವಿಬ್ಬರೂ ಏನೇನು ಮಾತನಾಡಿದಿರಿ ಅದೆಲ್ಲಾ ಏನು? ಅದು ಏನೂ ಇಲ್ಲವಾ ಹಾಗಾದರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸಂಸಾರ ಎಂದರೆ ಇದೆಲ್ಲಾ ನಡೆಯುತ್ತದೆ. ತಾವು ಏಕೆ ಗಾಬರಿ ಮಾಡಿಕೊಳ್ಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಸಂಸಾರ ಸುಖವಾಗಿ ನಡೆಯಲಿ ಎಂದು ಆಶೀರ್ವಾದ ಮಾಡುತ್ತೇನೆ.

ಶ್ರೀ ಸಿ. ಭೈರೇಗೌಡ : ಇದೆಲ್ಲಾ ನಿಮ್ಮ ದೇವರ ದಯೇ ನೋಡಿ.

ಶ್ರೀ ಎಂ.ವೀರಪ್ಪ ಮೊಯಿಲಿ : ಬಾಲಾಜಿ ಪ್ರಸಾದ್ ಅವರು ಒಂದು ಸ್ಟೇಟಸ್ ಪೇಪರ್‌ನ್ನು ಈಗಾಗಲೇ ತಯಾರಿಸಿದ್ದಾರೆ. ಅವರ ಸ್ಟೇಟಸ ಪತ್ರದ ಅಧ್ಯಯನ ನಡೆಸಿ ಒಂದು ಸಂಕ್ಷೀಪ್ತ ವರದಿಯನ್ನು ತರಿಸುವ ಸಲುವಾಗಿ ಪ್ರಧಾನ ಇಂಜಿನಿಯರ್ ಹಾಗೂ ಯೋಜನಾ ಸಮನ್ವಯದ ಅಧಿಕಾರಿ ಕೃಷ್ಣಾ ಜಲಾನಯನ ಯೋಜನೆ ಅಲಮಟ್ಟಿ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಲಾಗಿದೆ. ಆ ಸಮಿತಿ ತಯಾರಿಸುವ ಈ ಸಂಕ್ಷಿಪ್ತ ವರದಿಯನ್ನು ಸದನದ ಮುಂದೆ ಇಡುತ್ತೇವೆ. ಆದುದರಿಂದ ಈ ಬಗ್ಗೆ ನಾವು ನಿಗದಿತವಾದಂತಹ ಸಮಯದಲ್ಲಿ ಕೃಷ್ಣಾ ಜಲಾನಯದ ನಮ್ಮ ಸೀಮಿತವಾದಂತಹ ಹಕ್ಕಿನ ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ನಾವು ಪ್ರತಿ ವರ್ಷ ಇಂತಿಷ್ಟು ಹಣ ಖರ್ಚುಮಾಡಬೇಕು ಇಂತಿಷ್ಟು ಭೌತಿಕ ಸಾಧನೆ ಮಾಡಬೇಕು ಎಂದು ಹೇಳಿ ಆ ದಿಸೆಯಲ್ಲಿ ನಾವು ಸಾಧನೆ ಮಾಡಿ ತೋರಿಸಿದ್ದೇವೆ. ಅದರ ವಿವರವನ್ನು ನಾವು ಮುಂದೆ ಬರತಕ್ಕಂತಹ ಬಜೆಟ್ ಅಧಿವೇಶನದಲ್ಲಿ ತೋರಿಸುತ್ತೇವೆ.

ಶ್ರೀ ವೈ.ಕೆ. ರಾಮಯ್ಯ : ಈ ಹಂತದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ನನಗೆ ಇಷ್ಟ ಇಲ್ಲ. ನಾವು ಮಾತನಾಡುವಾಗ ನೀವು ಇರುವುದಿಲ್ಲ. ನಿಮ್ಮ ಮನಸ್ಸಿಗೆ ಸ್ವಲ್ಪನೂ ಕಳಕಳಿ ಬರಲಿ, ನೋವು, ಕಣ್ಣೀರು ಬರಲಿ ಎಂದು ಒಂದು ಮಾತು ಹೇಳುತ್ತೇನೆ. ಒಂದು ದಶಕದಲ್ಲಿ ಈ ರಾಜ್ಯದಲ್ಲಿ ಎಲ್ಲಾ ಸರ್ಕಾರಗಳು ಆಡಳಿತ ಮಾಡಿ ನೀರಾವರಿಯಲ್ಲಿ ಹೆಚ್ಚಳ ಮಾಡಿರುವುದು ಕೇವಲ ಶೇಕಡ ಒಂದೇ ಒಂದು ಭಾಗ. ಮುಖ್ಯಮಂತ್ರಿಗಳಿಗೆ ನಾವು ಪ್ರಶ್ನೆ ಕೇಳುತ್ತಿರುತ್ತೇವೆ ನೀವು ಅದನ್ನೇ ಉತ್ತರ ಸೈಕ್ಲೋಸ್ಟೈಲ್ ಮಾಡಿಕೊಂಡು ಪ್ರತಿಸಾರಿ ಓದುತ್ತಿರುತ್ತೀರಿ. ಅಂತಹ ಉತ್ತರಗಳು ನಮಗೆ ಪ್ರಯೋಜನ ಇಲ್ಲ. ಪ್ರಾಮಾಣಿಕವಾದಂತಹ, ಯಾವುದಾದರೂ ವಿಶೇಷವಾದಂತಹ ಪರಿಸ್ಥಿತಿ ಮಾಡಿ, ರಾಜ್ಯದ ಜನರಿಗೆ ನೀರು ಕೊಡುವಂತಹ ಪರಿಸ್ಥಿತಿ ಇದ್ದರೆ ಓದಿ. ಇಷ್ಟೆಲ್ಲಾ ನೀವು ಹೇಳುತ್ತಿದ್ದೀರಲ್ಲ, ನಾವು ಪ್ರತಿ ವರ್ಷ ಮಾಡಿದ್ದೇವೆ, ಮಾಡಿದ್ದೇವೆ ಎಂದು. ನಮ್ಮ ಸರ್ಕಾರನೂ ಸೇರಿಸಿಕೊಂಡು ನಿಮ್ಮ ಸರ್ಕಾರನೂ ಸೇರಿಸಿಕೊಂಡು ಈ ದಶಕದಲ್ಲಿ ನಾವು ಮಾಡಿರುವಂತಹ ಸಾಧನೆ ಒಂದೇ ಒಂದು ಪರ್ಸೆಂಟ್. ಆದುದರಿಂದ ಇದನ್ನು 68 ರ ಕೆಳಗಡೆ ಕೂಡಾ ನಾನು ತಂದಿದ್ದೇನೆ. ನೀವು ಒಂದು ಉತ್ತರ ಓದಿಕೊಂಡು ಹೋಗುತ್ತಿದ್ದೀರಿ. ಇದರಿಂದ ಈ ರಾಜ್ಯದ ಜನರ ನೀರಿನ ಭವಣೆಯನ್ನು ತೀರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಿಮ್ಮ ಕಾಲದಲ್ಲಿ ಏನಾದರೂ ನೀವು ಅದಕ್ಕೆ ವಿಶೇಷ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರೆ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಬಗ್ಗೆ ನಾವು ಈ ಸಂದರ್ಭದಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಅದನ್ನು ವಿವರವಾಗಿ ಬಜೆಟ್ ಭಾಷಣದಲ್ಲಿ ನಾವು ತಿಳಿಸುತ್ತೇವೆ. ನಾವು ಎಷ್ಟು ಎಕರೆ ಮಾಡಿದ್ದೇವೆ, ಎಷ್ಟು ಸಾಧನೆ ಮಾಡಿದ್ದೇವೆ. ಕಳೆದ ನಾಲ್ಕು ವರ್ಷಗಳಲ್ಲಿ ಸರಾಸರಿ ಕೃಷ್ಣಾ ಜಲಾನಯನ ಯೋಜನೆಗೆ 80 ಕೋಟಿ ರೂಪಾಯಿ ಒದಗಿಸಿದ್ದಿದ್ದರೆ, ಈ ಒಂದೇ ವರ್ಷದಲ್ಲಿ ನಾವು ಸುಮಾರು 4 ನೂರು ಕೋಟಿ ರೂಪಾಯಿಯವರೆಗೆ ಕೂಡ ಖರ್ಚು ಮಾಡತಕ್ಕಂತಹ ಒಂದು ವಿವರ. ಅದನ್ನು ನಾನು ಕೊಡುತ್ತೇನೆ. ಈಗ ಒಟ್ಟು ಅನುದಾನ ಇರತಕ್ಕಂಥಾದ್ದು 979 ಕೋಟಿ ರೂಪಾಯಿ. ಇದರ ಬಗ್ಗೆ ತಾವು ಆಲೋಚನೆ ಮಾಡಿ. ಅಷ್ಟು ಅನುದಾನ ಇದ್ದರೆ 516 ಕೋಟಿ ರೂಪಾಯಿ ಜನವರಿಯಿಂದ ಖರ್ಚು ಮಾಡಿದ್ದೇವೆ.

Rs.568 crores we have already spent upto January, 1994. ಇನ್ನು ಆಶ್ರಯ ಮನೆಗಳ ಬಗ್ಗೆ ಕೆಲವು ವಿವರಗಳನ್ನು ನಾನು ಈಗಾಗಲೇ ಕೊಟ್ಟಿದ್ದೇನೆ. ಆಶ್ರಯ ಹೌಸಿಂಗ್ ಸ್ಕೀಂನಲ್ಲಿ ಬೇರೆ ಬೇರೆ ರೀತಿಯಲ್ಲಿ ನಾವು ಈಗಾಗಲೇ ಹಣವನ್ನು ಬಿಡುಗಡೆ ಮಾಡಿದ ವಿಚಾರವನ್ನು ತಿಳಿಸಿದ್ದೇನೆ. ನಾನು ನವೆಂಬರ್ 92ರಲ್ಲಿ ಅಧಿಕಾರಕ್ಕೆ ಬಂದಾಗ ನನಗೆ ಅದು ಒಂದು ಹೊಸ ಪ್ರಯೋಗವಾಗಿತ್ತು. ನಾನೂ ಕೂಡ ಹಿಂದೆ ಸರ್ಕಾರದಲ್ಲಿ ಸಚಿವ ಆಗಿದ್ದುದರಿಂದ ನಾನು ಕೂಡ ಅದರಲ್ಲಿ ಭಾಗಿ. ಆದರೆ ಆ ಪ್ರಯೋಗ ನಡೆಯಲಿಲ್ಲ. ಕಾಂಟ್ರ್ಯಾಕ್ಟರ್ಸ್‌ಗೆ ಕೊಡುವುದರಲ್ಲಿ ಫೇಲ್ ಆಯಿತು. ಒಬ್ಬ ಕಂಟ್ರ್ಯಾಕ್ಟರ್ ಇನ್ನೊಬ್ಬನಿಗೆ ಸಬ್ ಕಂಟ್ರ್ಯಾಕ್ಟ್ ಕೊಟ್ಟ, ಅವನು ಇನ್ನೊಬ್ಬನಿಗೆ ಕೊಟ್ಟ, ಆಮೇಲೆ ಆ ಕಂಟ್ರ್ಯಾಕ್ಟರ್‌ನೂ ಇಲ್ಲ, ಮನೆಯೂ ಇಲ್ಲ, ಕೊನೆಗೆ ಹಣವೂ ಕೂಡ ಇಲ್ಲ. ಆಗ ಈ ಪರಿಸ್ಥಿತಿ ನಮಗೆ ಬಂತು. ಹಿಂದಿನ ಆ ವ್ಯವಸ್ಥೆಯನ್ನು ಬಿಟ್ಟು ಈಗ ಜಿಲ್ಲಾಧಿಕಾರಿಯವರ ಮುಖಾಂತರ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಮಾಡಿ, ಈಗಾಗಲೇ ನಮ್ಮ ಫೈನಾನ್ಷಿಯಲ್ ಟಾರ್ಗೆಟ್‌ನ್ನು ಎಷ್ಟು ಸಾಧನೆ ಮಾಡಿದ್ದೇವೆಂಬುದನ್ನು ನಾನು ಹೇಳಿದ್ದೇನೆ. ಮಾರ್ಚ್ 94ರೊಳಗೆ ಸುಮಾರು 80ಸಾವಿರ ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆಯನ್ನು ಎಲ್ಲ ರೀತಿಯಿಂದಲೂ ಕೈಗೊಂಡಿದ್ದೇವೆ. ಆ ಸಾಧ್ಯತೆ ನಮಗೆ ಕಾಣಿಸುತ್ತಿದೆ. ಆಗಾಗ್ಗೆ ಈ ವಿಚಾರ ನಮ್ಮ ಈ ಸದನದಲ್ಲಿ ಚರ್ಚೆಗೆ ಬಂದಿದೆ. ಭರವಸೆ ಮತ್ತು ಸಾಧನೆಯ ಬಗ್ಗೆ ಹೇಳುವುದಾದರೆ, ಇವತ್ತು ಅಂಬೇಡ್ಕರ್ ಮನೆಗಳಿಗೋಸ್ಕರ ಸುಮಾರು 48 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಆ ಹಣ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಹತ್ತಿರ ಇದೆ. ಅವರು ಸೈಟುಗಳನ್ನು ಗುರ್ತಿಸಿ ಕೆಲವು ಕಡೆ ಮನೆಗಳನ್ನೂ ಕೂಡ ಕಟ್ಟಿಸಿದ್ದಾರೆ. ಡಾ: ಅಂಬೇಡ್ಕರ್ ಮನೆಗಳನ್ನು ಎಸ್.ಸಿ.ಪಿ. ಹಣದಿಂದ ಕಟ್ಟಿಸಿಕೊಡುತ್ತೇವೆಂದು ಕಳೆದ 3-4 ವರ್ಷಗಳಿಂದ ಇಲ್ಲಿ ಭಾಷಣ ಮಾಡುತ್ತಲೇ ಇದ್ದೇವೆ. ಅಂಬೇಡ್ಕರ್ ಭವನಗಳನ್ನು ಕಟ್ಟಿಸುತ್ತೇವೆಂದು ಹೇಳುತ್ತಿದ್ದೇವೆ. ಅಂಬೇಡ್ಕರ್ ಭವನಕ್ಕೆ ಈಗಾಗಲೇ ಸುಮಾರು 58 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ. ಬೆಂಗಳೂರಿನಲ್ಲಿ ಈಗಾಗಲೇ ಈ ಭವನದ ಕೆಲಸ ಪ್ರಗತಿಯಲ್ಲಿದೆ. ಇದಕ್ಕಾಗಿ ಬರುವ ಮಾರ್ಚ್‌ಯೊಳಗೆ 1.25 ಕೋಟಿ ರೂ.ಗಳನ್ನು ಖರ್ಚುಮಾಡುವ ಗುರಿ ಇಟ್ಟುಕೊಂಡಿದ್ದೇವೆ. ಸಾಮಾನ್ಯವಾಗಿ ಮೊದಲೇ ಫೌಂಡೇಷನ್ ಸ್ಟೋನ್‌ಗಳನ್ನು ಹಾಕಿಬಿಡುತ್ತೇವೆ. ಯಾವುದೇ ಕೆಲಸಕ್ಕಾಗಲಿ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಇಲ್ಲದೆ, ಸಾಕಷ್ಟು ಹಣ ಇಲ್ಲದಿದ್ದರೆ ಯಾವುದೇ ಫೌಂಡೇಷನ್ ಸ್ಟೋನನ್ನೂ ಹಾಕಬಾರದೆಂದು ಈಗಾಗಲೇ ನಾವು ಎಲ್ಲರಿಗೂ ತಿಳಿಸಿದ್ದೇವೆ. ಕಾವೇರಿ ಜಲಾನಯನದ ಬಗ್ಗೆ ಪ್ರತ್ಯೇಕವಾಗಿ ನಾನು ಮಾನ್ಯ ರಾಮಯ್ಯನವರನ್ನು ಕರೆದು ಹೇಳಬಹುದು. ಆದರೆ ನಿಜವಾಗಿ ಹೇಳುವುದಾದರೆ ಕಳೆದ 10 ತಿಂಗಳಲ್ಲಿ ಏನೇನು ಅಭಿವೃದ್ಧಿ ಕೆಲಸವಾಗಿದೆ ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಪುನಃ ಅದನ್ನು ಇಲ್ಲಿ ಹೇಳುವುದು ಸರಿಯಲ್ಲ. ಈಗ ನಾನು ಅದನ್ನು ಮತ್ತೆ ಹೇಳಿದರೆ ಅದು ಟ್ರಿಬ್ಯುನಲ್‌ನಲ್ಲಿ ಬಂದುಬಿಡುತ್ತದೆ. ಆದ್ದರಿಂದ ಹೇಳುವುದಕ್ಕೆ ಹೋಗುವುದಿಲ್ಲ. ಪತ್ರಿಕೆಯವರು ಅದನ್ನು ಬರೆಯಬಾರದೆಂದು ನಾನು ಹೇಳಿದ್ದೇನೆ. ಈಗಾಗಲೇ ಸಾಕಷ್ಟು ಪ್ರಗತಿಯಾಗಿದೆ.

ನಾವಿಬ್ಬರೂ ಹೋಗಿ ನೋಡಿದ್ದೇವೆ. ಕೆಲವು ಕಡೆ ಕೆಲವು ಕೋಟಿ ರೂ.ಗಳನ್ನು ಖರ್ಚು ಮಾಡಿದರೆ ಲಕ್ಷಾಂತರ ಎಕರೆ ಜಮೀನು ನೀರಾವರಿಗೆ ಒಳಪಡುವಂಥ ಅನುಕೂಲತೆ ಇದ್ದರೂ ಕೂಡ ನಮ್ಮ ಕೆಲವು ಅಧ್ಯಕ್ಷತೆಯಿಂದ, ನಿರ್ಣಯಗಳನ್ನು ತೆಗೆದುಕೊಳ್ಳದೇ ಇದ್ದುದರಿಂದ, ಎಲ್ಲಿಗೆ ಎಷ್ಟು ಹಣವನ್ನು ಕೊಡಬೇಕೋ ಅಷ್ಟು ಹಣವನ್ನು ಕೊಡದೇ ಇದ್ದುದರಿಂದ ನಮ್ಮ ಅನೇಕ ಕಾರ್ಯಕ್ರಮಗಳು ಸ್ಥಗಿತವಾಗಿವೆ. ಇಂಥ ಗುಣದೋಷಗಳನ್ನು ನಾವು ಗುರ್ತಿಸಿ ಕೆಲಸಮಾಡುತ್ತಿದ್ದೇವೆ. ಇದರಿಂದಾಗಿ ಇವತ್ತು ನಾವು ಕೆಲವು ರಿಸಲಟ್ಸ್‌ನ್ನು ಕಾಣುತ್ತಿದ್ದೇವೆ. ಇಲ್ಲದಿದ್ದರೆ ರಿಸಲ್ಟ್ ಕಾಣುವುದಕ್ಕಾಗುತ್ತಿರಲಿಲ್ಲ.

ಶ್ರೀ ವೈ.ಕೆ. ರಾಮಯ್ಯ : ತಾವು ಅಷ್ಟನ್ನು ಮಾಡಿದರೆ ಸುಮಾರು 12 ದಶಲಕ್ಷ ಎಕರೆ ಜಮೀನಿಗೆ ತಕ್ಷಣ ನೀರನ್ನು ಕೊಡಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಅದಕ್ಕೇ ಹೇಳುತ್ತಿದ್ದೇನೆ. ನಾವು ಇನ್ನು 10 ತಿಂಗಳೊಳಗೆ ಇಡೀ ಕರ್ನಾಟಕ ರಾಜ್ಯದಲ್ಲಿ ಒಂದು ದೊಡ್ಡ ಕ್ರಾಂತಿಯೇ ಆಗುತ್ತದೆಂಬುದರಲ್ಲಿ ಯಾವುದೇ ಅನುಮಾನವೂ ಇಲ್ಲ. ನಾನು ಇವತ್ತು ಇದರ ಬಗ್ಗೆ ವಿವರವನ್ನು ಕೊಡುವುದಕ್ಕೆ ಹೋಗುವುದಿಲ್ಲ. ಬಜೆಟ್ ಬಂದಾಗ ಕೃಷ್ಣಾ ಜಲಾನಯನದ ವಿಚಾರದಲ್ಲಿ ಹೆಚ್ಚಿನ ವಿವರವನ್ನು ಕೊಡುತ್ತೇನೆ. ಕೃಷ್ಣಾ ಜಲಾನಯನದ ಬಗ್ಗೆ ಒಳಗಡೆ ಚರ್ಚೆ ಮಾಡೋಣ, ಆಗ ತಮಗೆ ವಿವರಣೆ ಕೊಡುತ್ತೇನೆ. ನಾವು ಹೇಗೆ ಇದನ್ನು ಸಾಧನೆ ಮಾಡುತ್ತೇವೆ, ಹೆಜ್ಜೆ ಹೆಜ್ಜೆಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎಂದು. ಇವತ್ತು ಹೌಸಿಂಗ್ ಯೋಜನೆಯ ಬಗ್ಗೆ ಕೂಡ ನಾವು ಪ್ರಗತಿ ಪಥದಲ್ಲಿದ್ದೇವೆ. ಆಶ್ರಯ ಯೋಜನೆಯಲ್ಲಿ 90 ಸಾವಿರ ಮನೆಗಳನ್ನು ಮಾಡಿಕೊಟ್ಟಿದ್ದೇವೆ. ಅಂಬೇಡ್ಕರ್ ಮನೆಗಳನ್ನು ಈಗ ಮಾಡಿಕೊಡುತ್ತಿದ್ದೇವೆ. ಇಡೀ ಕರ್ನಾಟಕದ ಇತಿಹಾಸದಲ್ಲೇ ಪರಿಶಿಷ್ಟ ವರ್ಗದ ಮನೆಗಳ ಕಾರ್ಯಕ್ರಮ, ಆಶ್ರಯ ಯೋಜನೆ ಇರಬಹುದು, ಜನತಾ ಮನೆಗಳ ಯೋಜನೆ ಇರಬಹುದು, ಯಾವುದೇ ಇದ್ದರೂ ಕೂಡ ಇದುವರೆಗೂ ಇಷ್ಟು ದೊಡ್ಡ ಗಾತ್ರದ ಮನೆಯನ್ನು ಕಟ್ಟಿಸುವ ಯೋಜನೆಯನ್ನು ತೆಗೆದುಕೊಂಡಿದ್ದೇ ಇಲ್ಲವೆಂದರೆ ಅದು ಅತಿಶಯೋಕ್ತಿ ಆಗಲಾರದು. ಇದಕ್ಕೆ ಬಹಳ ದೊಡ್ಡ ಪ್ರಾಮುಖ್ಯತೆಯನ್ನು ಕೊಟ್ಟು ಮುಂದಕ್ಕೆ ಕೊಂಡೊಯ್ಯುತ್ತಿದ್ದೇವೆ. ಇದೇ ರೀತಿ ಮಾರ್ಚಿ 94ರೊಳಗೆ 2 ಲಕ್ಷ ಸೈಟುಗಳನ್ನು ಕೊಡುತ್ತೇವೆಂದು ಹೇಳಿದ್ದೇವೆ. ತಮಗೇ ಗೊತ್ತಿದೆ, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಇದುವರೆಗೆ ಒಂದು ರೀತಿಯ ಚಿಂತಾಜನಕಪರಿಸ್ಥಿತಿಯಲ್ಲಿ ಇತ್ತು. ಅದರ ಆರ್ಥಿಕ ಸ್ಥಿತಿ, ಅಲ್ಲಿದ್ದ ಅವ್ಯವಸ್ಥೆ ಇದನ್ನೆಲ್ಲಾ ಸರಿಪಡಿಸಿ ಸೈಟುಗಳನ್ನು ಹಂಚತಕ್ಕ ಶಕ್ತಿಯನ್ನು ಇದಕ್ಕೆ ತಂದುಕೊಟ್ಟಿದ್ದೇವೆ. 1978ನೇ ಇಸವಿಯಲ್ಲಿ ಬೇರೆ ಬೇರೆ ಹಂತದಲ್ಲಿದ್ದಂಥ ನೋಟೀಫಿಕೇಷನ್, ಫೈನಲ್ ನೋಟಿಫಿಕೇಷನ್‌ಗಳನ್ನೆಲ್ಲಾ ಒಂದು ಅಂತಿಮ ರೂಪಕ್ಕೆ ತಂದಿದ್ದೇವೆ. ಜಯಪ್ರಕಾಶ್ ನಾರಾಯಣ್ ನಗರದಲ್ಲಿ ಸುಮಾರು 899.36 ಎಕರೆಗಳು, ಜೆ.ಪಿ. ನಗರದ 8ನೇ ಸ್ಟೇಜ್‌ನಲ್ಲಿ 1999.36 ಎಕರೆ, ಬನಶಂಕರಿ 5ನೇ ಸ್ಟೇಜ್‌ನಲ್ಲಿ 1850.36 ಎಕರೆ, ಇಷ್ಟನ್ನೆಲ್ಲಾ ಫೈನಲೈಸ್ ಮಾಡಿಕೊಂಡು ಬಿ.ಡಿ.ಎ. ಅನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಿಲ್ಲಿಸಲು ಲ್ಯಾಂಡ್ ಸ್ಕ್ಯಾಂ ನಮ್ಮ ಸರ್ಕಾರದ ಬಂಡವಾಳವಾಗಿತ್ತು. ಆದರೆ ಇವತ್ತು ಆ ಲ್ಯಾಂಡ್ ಸ್ಕ್ಯಾಂನ ಸುಳಿವೇ ಇಲ್ಲದಂತೆ, ಕನ್‌ಸಾಲಿಡೇಟ್ ಮಾಡಿಕೊಂಡು ಕೆಲಸ ಮಾಡುತ್ತಿದ್ದೇವೆ. ಇವತ್ತು ಲಾಭಕೋರರು ಬೆಂಗಳೂರು ಮತ್ತು ಸುತ್ತಮುತ್ತಲಿನ ಭೂಮಿಯನ್ನು ಕಬಳಿಸದ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಲ್ಯಾಂಡ್ ಸ್ಕ್ಯಾಂ ಆದರೆ ಅದು ಒಂದು ಸುದ್ದಿಯಾಗುತ್ತದೆ. ಈ ಲ್ಯಾಂಡ್ ಸ್ಕ್ಯಾಂನ್ನು ನಿಲ್ಲಿಸಿದರೆ ಅದು ಸುದ್ದಿಯಾಗುವುದಿಲ್ಲ ಅಷ್ಟೆ. ನಾವು ಸುದ್ದಿಯನ್ನು ಮಾಡುತ್ತಿಲ್ಲ. ಆದರೆ ಜನಸಾಮಾನ್ಯರಿಗೆ ವ್ಯವಸ್ಥಿತವಾದ ಆಡಳಿತವನ್ನು ಕೊಡಬೇಕೆಂದಿದ್ದೇವೆ. ರೈಲ್ವೆಗೆ ಸಂಬಂಧಪಟ್ಟಂತೆ ಮಾಸ್ ರಾಪಿಡ್ ಟ್ರಾನ್ಸ್‌ಪೋರ್ಟ್ ಸಿಸ್ಟಂ ಮಂಜೂರಾಗಿದ್ದು

ಅದನ್ನು ಅನುಷ್ಠಾನ ಮಾಡತಕ್ಕ ಹೆಜ್ಜೆ ಇಟ್ಟಿದ್ದೇವೆ. ಇನ್ನೊಂದು ವಿಚಾರ ಎಂದರೆ, ನಮ್ಮ ಬೆಂಗಳೂರನ್ನು ಮೆಗಾಸಿಟಿ ಎಂದು ಮಾಡುತ್ತಿದ್ದೇವೆ. ಇದು ಮೆಗಾಸಿಟಿ ಆದರೆ ಮೆಟ್ರೋ 2ನೇ ಚಾನಲ್ ಕೂಡ ನಮಗೆ ಬರುತ್ತದೆ. ಎಲ್ಲಿಯವರೆಗೆ ಮೆಗಾಸಿಟಿ ಆಗುವುದಿಲ್ಲ ಅದುವರೆಗೂ ನಮಗೆ ಮೆಟ್ರೋಚಾನಲ್ ಬರುವುದಿಲ್ಲ. ಇತ್ತೀಚಿಗೆ ಕಾರವಾರದಲ್ಲಿ ಒಂದು ಸಮಾರಂಭದಲ್ಲಿ ಮಾನ್ಯ ಸಿಂಗ್‌ರವರು ಮಾತನಾಡುತ್ತಾ ನಾವು ಮೆಟ್ರೋ ಚಾನಲ್‌ನ್ನು ನಾವು ಕೊಡುತ್ತೇವೆ. ಕಾರಣ ಈ ಬೆಂಗಳೂರು ಮೆಗಾಸಿಟಿ ಅಂತ ಆಗುತ್ತಿರುವುದರಿಂದ ಎಂದು ಹೇಳಿದ್ದಾರೆ. ಹೈದರಾಬಾದ್‌ನ ಸ್ಥಾನದಲ್ಲಿ ಇವತ್ತು ನಮ್ಮ ಬೆಂಗಳೂರು ಬೆಳೆದು ನಿಂತಿದೆ ಎಂದರೆ ನಮ್ಮ ಸರ್ಕಾರದ ಒಂದು ದೊಡ್ಡ ಸಾಧನೆ ಎಂಬುದನ್ನು ತಾವು ಒಪ್ಪುತ್ತೀರೆಂದು ನಾನು ಅಂದುಕೊಂಡಿದ್ದೇನೆ. ನಮ್ಮ ಕರ್ನಾಟಕಕ್ಕೆ ಅರಿವೇ ಇಲ್ಲದಂತೆ ಮೆಗಾಸಿಟಿಯಾಗಿ, ಮೆಟ್ರೋಚಾನಲ್ ಬರುತ್ತಿದೆ. ಇವತ್ತು ನಮ್ಮಲ್ಲಿ ಬಹಳ ಬದಲಾವಣೆಗಳನ್ನು ನಾವು ಕಾಣುವುದಕ್ಕೆ ಸಾಧ್ಯವಾಗಿದೆ.

ಇನ್ನು ವಿದ್ಯುತ್ ಪೂರೈಕೆ ಬಗ್ಗೆ ಹೇಳುವುದಾದರೆ, ಇವತ್ತು ಅನೇಕ ಮಾನ್ಯ ಸದಸ್ಯರು ಅದರಲ್ಲೂ ಮಾನ್ಯ ಎಂ.ಎಸ್ ಪಾಟೀಲ್‌ರವರು, ಯಡಿಯೂರಪ್ಪನವರು, ದೇಶಪಾಂಡೆಯವರು, ಮೋಟಮ್ಮನವರೂ ವಿದ್ಯುತ್ ಸರಬರಾಜಿನ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಇದರ ಬಗ್ಗೆ ನಾವು ಈಗಾಗಲೇ ವಿವರಣೆಯನ್ನು ಕೊಟ್ಟಿದ್ದೇವೆ. ಅನೇಕ ಪ್ರೈವೇಟ್ ಸೆಕ್ಟಾರ್‌ನವರು ವಿದ್ಯುತ್‌ನ್ನು ಉತ್ಪಾದನೆ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಇದು ಬೇರೆ ಬೇರೆ ಹಂತದಲ್ಲಿ ಟೈ ಅಪ್ ಆಗಿದೆ. ಮಂಗಳೂರಿನಲ್ಲಿ 1ಸಾವಿರ ಮೆಗಾವ್ಯಾಟ್ಸ್, ಅಲ್ಲಿ ಮೆ: ಜಯಪ್ರಕಾಶ್ 360ಮೆಗಾವ್ಯಾಟ್ಸ್, ಹೊಸಪೇಟೆಯಲ್ಲಿ ಹೆಚ್.ಒ.ಕೆ. ಇಂಟರ್‌ನ್ಯಾಷನಲ್ 500ಮೆಗಾವ್ಯಾಟ್ಸ್, ಹೊಸಪೇಟೆಯಲ್ಲಿ ಮೆ: ಜಿಂದಾಲ್ ಫ್ಯಾಕ್ಟಬರ್ 300 ಮೆಗಾವ್ಯಾಟ್ಸ್, ಅಪ್ಪರ್ ಕೃಷ್ಣಾ ಹೈಡಲ್ ಪ್ರಾಜೆಕ್ಟ್, ಕ್ಯಾಪ್ಕೋ 600 ಮೆಗಾವ್ಯಾಟ್ಸ್, ರಾಯಚೂರು ಪಬ್ಲಿಕ್ ಪವರ್, ಎಂ.ಒ.ಯು ಅಂದರೆ ಕನ್ಸಿಡರೇಷನ್ 500 ಮೆಗಾವ್ಯಾಟ್ಸ್, ಮಿನಿ ಹೈದಲ್‌ಗೆ ಸಂಬಂಧಪಟ್ಟಂತೆ 15 ಫರ್ಮ್‌ಗಳು 31 ಸ್ಕೀಂಗಳದ್ದು, ಅದು 151 ಮೆಗಾವ್ಯಾಟ್ಸ್, ಪೀಣ್ಯಾದಲ್ಲಿ 4 ಫರ್ಮ್‌ಗಳು 6 ಸ್ಕೀಂಗಳು 24 ಮೆಗಾವ್ಯಾಟ್ಸ್, ಹೀಗೆ ಒಟ್ಟು 3455 ಮೆಗಾವ್ಯಾಟ್ಸ್‌ನ್ನು ಉತ್ಪಾದನೆ ಮಾಡತಕ್ಕ ರೀತಿಯಲ್ಲಿ ಬೇರೆ ಬೇರೆ ಪ್ರೈವೇಟ್ ಸೆಕ್ಟಾರ್‌ಗಳು ಮುಂದೆ ಬಂದಿವೆ. ಇದರ ಟೋಟಲ್ ಇನ್ವೆಸ್ಟ್‌ಮೆಂಟ್ ಇನ್ ಪವರ್ ಇವತ್ತು ನಮ್ಮ ಮುಂದೆ ಬಂದಿರತಕ್ಕಂಥ 12548 ಕೋಟಿ ರೂ.ನದು. ವಿದ್ಯುತ್ ಕ್ಷೇತ್ರದಲ್ಲಿ ಇಷ್ಟು ಬರುತ್ತಿದೆ. ಇದರಲ್ಲಿ ಥರ್ಮಲ್ ಪ್ರಾಜೆಕ್ಟನಲ್ಲಿ 2660 ಮೆಗವ್ಯಾಟ್ಸ್, 10,640 ಕೋಟಿ ರೂ.ನದು.

ಥರ್ಮಲ್ ಪ್ರಾಜೆಕ್ಟ್‌ನಲ್ಲಿ 2660 ಮೆಗಾವ್ಯಾಟ್, ಅದಕ್ಕೆ 10640 ಕೋಟಿ, ಹೈಡಲ್ ಪ್ರಾಜೆಕ್ಟ್‌ನಲ್ಲಿ 600 ಮೆಗಾವ್ಯಾಟ್, ಅದಕ್ಕೆ 1500 ಕೋಟಿ, ಮಿನಿಹೈಡಲ್ ಸ್ಕೀಂನಲ್ಲಿ 150 ಮೆಗಾವ್ಯಾಟ್, ಅದಕ್ಕೆ 302 ಕೋಟಿ, ವಿಂಡ್ ಎನರ್ಜಿ ಸ್ಕೀಂನಲ್ಲಿ 24 ಮೆಗಾವ್ಯಾಟ್, ಅದಕ್ಕೆ 96 ಕೋಟಿ ರೂಪಾಯಿಗಳು. ಈ ರೀತಿಯಲ್ಲಿ ವಿಶೇಷವಾಗಿ ಕರ್ನಾಟಕ ಇವತ್ತು ಹೆಚ್ಚಿನ ಮಹತ್ವ ಪಡೆದಿದೆ. ಅದು ದೇಶದಲ್ಲಿರತಕ್ಕ ಬಂಡವಾಳಗಾರರು ಇರಬಹುದು, ದೇಶದ ಹೊರಗಿನ ಬಂಡವಾಳ ಅಥವಾ ಕರ್ನಾಟಕ ರಾಜ್ಯದ ಬಂಡವಾಳ; ಎಲ್ಲರೂ ವಿಶೇಷವಾಗಿ ಆಸಕ್ತಿ ತೆಗೆದುಕೊಂಡು ಕರ್ನಾಟಕವನ್ನೇ ತಮ್ಮ ಪ್ರಯೋಗಶಾಲೆಯಾಗಿ ಉಪಯೋಗ ಮಾಡಲಿಕ್ಕೆ ಎಲ್ಲ ರೀತಿಯ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಪವರ್ ಸೆಕ್ಟಾರ್‌ನಲ್ಲಿ ಕೂಡ ವಿಶೇಷವಾಗಿ ಹಣ ಕೊಟ್ಟಿದ್ದೇವೆ. ಒಂದು ಸಂತೋಷದ ವಿಚಾರವನ್ನು ಮರೆಯುವ ಮೊದಲು ಹೇಳಬೇಕು; ನಮ್ಮ ಎಲ್ಲ ರೀತಿಯ ಪ್ರಯತ್ನದಿಂದ ಏನು ವಿಶ್ವಬ್ಯಾಂಕ್ ಹಿಂದೆ ಕೆನಾಲ್ ಮತ್ತು ಡ್ಯಾಂ ಪೋರ್ಷನ್ನಿಗೆ ಏನು ಲೋನ್ ಸಸ್ಪೆಂಡ್ ಮಾಡಿತ್ತು; ಕೆನಾಲ್ ಪೋರ್ಷನ್‌ಗೆ ಜನವರಿ 1993 ರಲ್ಲಿ ಸಸ್ಪೆನ್‌ಷನ್ ಆರ್ಡರ್ ಅನ್ನು ವೆಕೇಟ್ ಮಾಡಿದರು. ನಿನ್ನೆ ತಾನೇ

ವರ್ತಮಾನ ಬಂದಿದೆ; ಕೃಷ್ಣಾ ಡ್ಯಾಂ ಪೋರ್ಷನ್ನಿಗೆ ಇದ್ದಂತ ಸಸ್ಪೆನ್‌ಷನ್ ಆರ್ಡರನ್ನು ಲಿಫ್ಟ್ ಮಾಡಿದ್ದಾರೆ. ನಮಗೆ ವಿಶ್ವಬ್ಯಾಂಕಿನಿಂದ ಲೋನ್ ಬರುವುದರಿಂದ ನಮ್ಮ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗುತ್ತೇವೆ. ಈ ವಿಷಯವನ್ನು ಸಂತೋಷದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಪವರ್ ಜನರೇಷನ್‌ನಲ್ಲಿ ಕೂಡ ತಾವು ಎಲ್ಲ ಈ ಒಂದು ವಿವರಗಳನ್ನು ನೋಡುವುದು ಇದ್ದರೆ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್‌ನಲ್ಲಿ ಪವರ್‌ಜನರೇಷನ್‌ನಲ್ಲಿ 92-93ರಲ್ಲಿ ಅಲೋಕೇಷನ್ 484.77 ಕೋಟಿ ಇದ್ದರೆ, 93-94ರಲ್ಲಿ 672.82 ಕೋಟಿ ರೂಪಾಯಿಗಳನ್ನು ನಾವು ಒದಗಿಸಿದ್ದೇವೆ. ಕೆಇಬಿಯವರು ಪ್ರಮುಖವಾಗಿ ಸಿಸ್ಟಂ ಇಂಪ್ರೂವ್‌ಮೆಂಟ್‌ಗೆ ಗಮನ ಕೊಟ್ಟಿದ್ದಾರೆ. ಏಕೆಂದರೆ ಪವರ್ ಜನರೇಷನ್‌ಗೆ ನಾವು ವಿಶೇಷ ಮಹತ್ವ ಕೊಡುತ್ತೇವೆ. ಆದರೆ ಒಳ್ಳೆಯ ಗುಣಮಟ್ಟದ ಪವರ್ ಕೊಡುವುದಕ್ಕೆ ಯಾವಾಗಲೂ ನಾವು ಪ್ರಯತ್ನ ಮಾಡುತ್ತಿಲ್ಲ. ಇದರ ಬಗ್ಗೆ ನಾವು ಈ ಬಾರಿ ವಿಶೇಷವಾಗಿ ಹಣ ಕೊಡುತ್ತಿದ್ದೇವೆ. ಪ್ಲಾನ್‌ನಲ್ಲಿ ನಾವು 93-94ಕ್ಕೆ ಕೆಇಬಿ ಎಂದು ಮಾಡಿದ್ದೇವೆ. ಟ್ರಾನ್ಸ್‌ಮಿಷನ್ ಲೈನಿಗೆ 92-93ಕ್ಕೆ 4 ಕೋಟಿ 75 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ಈ ಬಾರಿ 7.84 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ ಅಂದರೆ ಒಟ್ಟು 24.88ಕೋಟಿ ರೂಪಾಯಿಗಳು ಕಳೆದ ವರ್ಷ ಇದ್ದರೆ ಈ ವರ್ಷ 42.49 ಕೋಟಿ ರೂಪಾಯಿಗಳನ್ನು ನಾವು ಪ್ಲಾನ್‌ನಲ್ಲಿ ಕೊಡುತ್ತಿದ್ದೇವೆ. ಔಟ್‌ಸೈಡ್ ದಿ ಪ್ಲಾನ್ ಕೂಡ ಅಷ್ಟೇ ದೊಡ್ಡ ಸಮಸ್ಯೆ ಇದೆ; 65.42 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಕೆಇಬಿ.ಯವರು ಕೂಡ ಅವರ ಪ್ರೋಗ್ರಾಂನಲ್ಲಿ 122.82ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಬೇರೆ ಬೇರೆ ರೀತಿಯಲ್ಲಿ ಪವರ್ ಸೆಕ್ಟಾರ್‌ನಲ್ಲಿ ವಿಶೇಷವಾಗಿ ಸಿಸ್ಟಂ ಇಂಪ್ರೂವ್‌ಮೆಂಟ್‌ಗೆ ನಾವು ಹಣ ಜೋಡಿಸುವುದರಿಂದ ಪ್ರತಿ ಜಿಲ್ಲೆಯಲ್ಲಿ ತಾವು ನೋಡಿರಬಹುದು ಸಬ್ ಸ್ಟೇಷನ್‌ಗೆ ಆಗಲಿ ಅಥವಾ ಲೈನ್ ಇಂಪ್ರೂವ್‌ಮೆಂಟಿಗೆ ಆಗಲಿ ವಿಶೇಷವಾದ ರೀತಿಯ ಸೌಕರ್ಯವನ್ನು ಪ್ಲಾನ್ ಮತ್ತು ಔಟ್‌ಸೈಡ್ ದಿ ಪ್ಲಾನ್ ಮತ್ತು ಬ್ಯಾಂಕುಗಳಿಗೆ ಹೋಗಿ ಇದರ ಸಹಾಯ ಪಡೆದು ಪವರ್ ಸಿಸ್ಟಂ ಷಾರ್ಟ್ ಟರ್ಮ್ ಮೆಷರ್ ಮತ್ತು ಲಾಂಗ್ ಟರ್ಮ್ ಮೆಷರ್ ಎರಡು ದೃಷ್ಟಿಯಲ್ಲಿ ವಿಶೇಷವಾದ ರೀತಿಯಲ್ಲಿ ಸಹಾಯ ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಅಕ್ಷಯ ಯೋಜನೆಯನ್ನು ನೀವು ಕೈಬಿಟ್ಟಿದ್ದೀರೆಂದು ಹೇಳುತ್ತಿದ್ದಾರೆ.

ಅಕ್ಷಯ ಕಾರ್ಯಕ್ರಮ ಬಹಳ ಪ್ರಾಮುಖ್ಯವಾಗಿದೆ. ಇದನ್ನು ಏತಕ್ಕೆ ಕೈಬಿಟ್ಟಿರಿ ಎಂದು ಸಾಕಷ್ಟು ಭಾಷಣಗಳು ಈ ಸದನದಲ್ಲಿ ಆದದ್ದುನ್ನು ನಾವು ಕಂಡಿದ್ದೇವೆ. ನಾವು ಅಕ್ಷಯ ಯೋಜನೆಯನ್ನು ಕೈಬಿಟ್ಟಿಲ್ಲ. ಆದರೆ ಒಂದು ರೂಪಾಯಿ ಅಟೆಂಡೆನ್ಸ್‌ಗೆ ಎಂದು ಇದ್ದುದನ್ನು ಕೈಬಿಟ್ಟಿದ್ದೇವೆ. ಏಕೆಂದರೆ ಅದರಿಂದ ಯಾವುದೇ ಲಾಭ ಪೇರೆಂಟ್ಸ್‌ಗೆ ಬರಬಹುದು. ಆದರೆ ಮಕ್ಕಳ ದೃಷ್ಟಿಯಲ್ಲಿ ಇದೊಂದು ಪ್ರಾಮುಖ್ಯವಾದ ಕಾರ್ಯಕ್ರಮವಾಗುವುದಿಲ್ಲ. ಈಗ ನಾವು ನವೆಂಬರ್- ಡಿಸೆಂಬರ್‌ನಲ್ಲಿ ಒಟ್ಟು ಖರ್ಚು ಮಾಡಿದಂತ ಹಣ ಕೂಡ ಏನಾಗಿದೆ ಎಂದರೆ ಬರೀ 92-93ರಲ್ಲಿ ಅಕ್ಷಯ ಯೋಜನೆಯಲ್ಲಿ ಒದಗಿಸಿದ ಹಣ 80 ಕೋಟಿ ರೂಪಾಯಿ, ಹಣ ಒದಗಿಸುವುದು ಮುಖ್ಯವಲ್ಲ, ಖರ್ಚು ಮಾಡುವುದು ಮುಖ್ಯ. ಆದುದರಿಂದ ಬಿಡುಗಡೆಯಾದ ಹಣ, ಖರ್ಚಾದ ಹಣ ಎಷ್ಟೆಂದರೆ 15.22 ಕೋಟಿ ರೂಪಾಯಿ ಮಾತ್ರ ಈ ಅಕ್ಷಯ ಯೋಜನೆಯಲ್ಲಿ, ಅಕ್ಷಯ ಯೋಜನೆ ಕೈಬಿಟ್ಟಿವು ಎಂದು ಹೇಳಿದರಲ್ಲ, ಹಣ ಎಷ್ಟು ಖರ್ಚು ಮಾಡಿದ್ದು 80 ಕೋಟಿ ರೂಪಾಯಿಗಳಲ್ಲಿ ಅಂದರೆ 15.22 ಕೋಟಿ ರೂಪಾಯಿ ಮಾತ್ರ.

ಶ್ರೀ ವಾಟಾಳ್ ನಾಗರಾಜ್ : ಒಂದೊಂದು ಸಾರಿ ನಿಜ ಹೇಳುತ್ತೀರಿ.

5.30 ಪಿ.ಎಂ.

ಶ್ರೀ ಎಂ. ವೀರಪ್ಪ ಮೊಯಿಲಿ : 1993-94ರಲ್ಲಿ ನಾವು ಸುಮಾರು 67 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಇರಲಿ ಇದರಲ್ಲಿ ಮಕ್ಕಳ ಕೇಂದ್ರೀಕೃತ ಕಾರ್ಯಕ್ರಮಗಳಾದ ವಸ್ತ್ರಾಹಾರ, ಪುಸ್ತಕ ವಿತರಣೆ ಪೌಷ್ಟಿಕ ಆಹಾರ ಕೊಡತಕ್ಕದ್ದು. ಆಟದ ಮೈದಾನದ ಅಭಿವೃದ್ಧಿ ಸಾಮಾನ್ಯವಾದ ಚಟುವಟಿಕೆ ಯಾತ್ರೆ, ಮನೋರಂಜನೆ ಇತ್ಯಾದಿಯಾಗಿ ಹಣವನ್ನು ಕೊಟ್ಟು ಎಲ್ಲ ಹಣವನ್ನು ಖರ್ಚು ಮಾಡತಕ್ಕ ಕಾರ್ಯಕ್ರಮವನ್ನು ಈಗಾಗಲೇ ಕೊಡುತ್ತಿದ್ದೇವೆ. ನಾವು ಹಣವನ್ನು ಕೂಡ ಒದಗಿಸುತ್ತಿದ್ದೇವೆ. ಕಾಲೇಜುಗಳಿಗೆ ಹಣವನ್ನು ಕೊಡುತ್ತಿದ್ದೇವೆ. ಅಕ್ಷಯ ಯೋಜನೆಯಲ್ಲಿ ಅದನ್ನು ಅನುಷ್ಠಾನ ಮಾಡುವುದಕ್ಕೆ ಎಲ್ಲ ಹಣವನ್ನು ಉಪಯೋಗ ಮಾಡುತ್ತಿದ್ದೇವೆ. ಖಂಡಿತವಾಗಿಯೂ ನಾವು ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಬಹಳ ವಿವರ ಇದೆ ಅದನ್ನು ಕೊಡಲಿಕ್ಕೆ ಈಗ ಅಪೇಕ್ಷಿಪಡುವುದಿಲ್ಲ. ಬೇಡಿಕೆ ಬಂದಾಗ ಆದರ ಬಗ್ಗೆ ವಿವರವಾಗಿ ವರದಿಯನ್ನು ಕೊಡುತ್ತೇನೆ.

ಇನ್ನು ಪ್ರೈಮರಿ ಹೆಲ್ತ್‌ಸೆಂಟರ್ಸ್ ಇದರ ಬಗ್ಗೆ ನಾವು ಖಂಡಿತವಾಗಿಯೂ ಹೇಳಬಹುದು 1992-93ರಲ್ಲಿ ಪ್ರಾಥಮಿಕ ಆರೋಗ್ಯಕೇಂದ್ರಗಳನ್ನು 50 ಮಂಜೂರಿ ಮಾಡಿದ್ದರು. 1993-94ನೇ ಸಾಲಿನಲ್ಲಿ ಈವರೆಗೆ 90 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರಿ ಮಾಡಿದ್ದೇವೆ. 8 ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೆ ಏರಿಸಿದ್ದೇವೆ. 1-4-1994 ರಿಂದ ಕೆಲವು ಪ್ರಾರಂಭವಾಗುತ್ತವೆ. ಇದೇ ವರ್ಷದಲ್ಲಿ ನಾವು ಮಂಜೂರು ಮಾಡಿದ್ದೇವೆ. ಆಮೇಲೆ ಸಮುದಾಯ ಆರೋಗ್ಯ ಕೇಂದ್ರಗಳನ್ನು ಅಂತಹ 14 ಕೇಂದ್ರಗಳನ್ನು ಈ ವರ್ಷ ಮಾಡಿದ್ದೇವೆ. ಈ ವರ್ಷದಲ್ಲಿ 5 ಆಸ್ಪತ್ರೆಗಳನ್ನು 100 ಹಾಸಿಗೆಯುಳ್ಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೆ ಏರಿಸಿದ್ದೇವೆ. ಅದು ಸಾಧನೆ ಪ್ರಾಮಿಸಸ್ ಅಲ್ಲ. ಈಗ ತಮಗೆ ಗೊತ್ತಿದೆ, 374 ಮಂದಿ ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಮಾಡಲಿಕ್ಕೆ ಕ್ರಮ ಕೈಗೊಳ್ಳಲಾಗುವುದು. 336 ಖಾಲಿಯಿರುವ ಗ್ರಾಮಾಂತರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 336 ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲಾಗುವುದು. ಒಂದು ತಿಂಗಳಿನಲ್ಲಿ ಅವರು ರಿಪೋರ್ಟ್ ಮಾಡಿಕೊಳ್ಳುತ್ತಾರೆ. ಸಚಿವ ಸಂಪುಟದಲ್ಲಿ 419 ವೈದ್ಯರನ್ನು ನೇಮಕ ಮಾಡಲಿಕ್ಕೆ ಈಗಾಗಲೇ ಅನುಮತಿ ಕೊಡಲಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ : ಅವರು ಹಳ್ಳಿಗಳಲ್ಲಿ ಇರುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಆಯಾಯ ಜಿಲ್ಲೆಗಳಲ್ಲಿ ಡಾಕ್ಟರುಗಳನ್ನು ನೇಮಕ ಮಾಡಲಿಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ರಾಜ್ಯಮಟ್ಟದಲ್ಲಿ ನೇಮಕ ಮಾಡಿದರೆ ಡಾಕ್ಟರುಗಳು ಹಳ್ಳಿಗಳಿಗೆ ಹೋಗುವುದಿಲ್ಲ. ಅದಕ್ಕೆ ಆಯಾಯ ಜಿಲ್ಲಾಮಟ್ಟದಲ್ಲಿ ನೇಮಕ ಮಾಡಿದರೆ ಹಳ್ಳಿಗಳಲ್ಲಿ ಕೆಲಸ ಮಾಡತಕ್ಕವರು ಬರುತ್ತಾರೆಂದು ಹೇಳಿ ನಾವು ಆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಆದ್ದರಿಂದ ಖಾಲಿ ಬಿದ್ದಂತಹ ಎಲ್ಲ ವೈದ್ಯರುಗಳ ಸ್ಥಾನವನ್ನು ನಾವು ಭರ್ತಿ ಮಾಡುತ್ತೇವೆ ಮಾರ್ಚಿ ತಿಂಗಳೊಳಗೆ ಮಾಡುತ್ತೇವೆ. ಇದು ಸಾಧನೆಯಲ್ಲವೆ? ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರನ್ನು 1992-93ನೇ ಸಾಲಿನಲ್ಲಿ ಒಂದು ಹುದ್ದೆಯನ್ನು ಫಿಲ್‌ಅಪ್ ಮಾಡಲಿಲ್ಲ. ಈ ವರ್ಷ ಮೇ 1993ರಲ್ಲಿ 550 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರನ್ನು ಖಾಲಿಯಿದ್ದ ಹುದ್ದೆಗಳಿಗೆ ತುಂಬಿಸಿದ್ದೇವೆ. ಈಗ ಅವರು ಕೆಲಸಕ್ಕೆ ಬಂದಿದ್ದಾರೆ. ಔಷಧಿಗಳ ಖರೀದಿಗೆ ಕಳೆದ ವರ್ಷ 20 ಕೋಟಿ ಕೊಟ್ಟಿದ್ದರೆ ಈ ವರ್ಷ ಔಷಧಿಗಳ ಖರೀದಿಗಾಗಿ 50 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಔಷಧಿಗಳ ಬೆಲೆ ಏನೂ ಹೆಚ್ಚಾಗಿಲ್ಲ. ಹೋದವರ್ಷ ಗ್ರೂಪ್ 'ಡಿ' ಹುದ್ದೆಗೆ ಅಪಾಯಿಂಟ್‌ಮೆಂಟ್ ಬೀರೋ. ಒಂದು ಕೂಡ ಭರ್ತಿಯಾಗಿಲ್ಲ. ಹೋದ ವರ್ಷ ಏನಿದೆ, ಈ ವರ್ಷ ಏನಾಗಿದೆ ಬರುವ ವರ್ಷ ಏನು ಮಾಡುತ್ತೇವೆ ಅದನ್ನೆಲ್ಲ ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಮುಖ್ಯಮಂತ್ರಿಗಳೇ, ಕಳೆದ ವರ್ಷದ್ದು ಹೇಳುವುದಕ್ಕಿಂತ 1989ರಿಂದ ಇವತ್ತಿನವರೆಗೆ ಏನೇನು ಆಗಿದೆ ಅದನ್ನು ಹೇಳಿ. ನೀವು ಕಂಪೇರ್ ಮಾಡುವಾಗ ಕೇವಲ ಕಳೆದ ವರ್ಷದ್ದು ಏನಾಯಿತು ಎಂದು ಹೇಳುವುದು ಬೇಡ. 1989ರಿಂದ ಇವತ್ತಿನ ತನಕ ಹೇಳಿ. ಇದರ ಅರ್ಥ ಏನಾಗುತ್ತದೆಂದರೆ ಕಳೆದ ವರ್ಷ ಏನೂ ಕೆಲಸವಾಗಿಲ್ಲ, ನಾನು ಮುಖ್ಯಮಂತ್ರಿಯಾದ ಮೇಲೆ ಕೆಲಸ ಮಾಡಿದ್ದೇನೆ ಎನ್ನುವುದು ಸ್ಪಷ್ಟವಾಗುತ್ತದೆ. ಕಳೆದ ವರ್ಷ ಕೆಲಸ ರಾಜ್ಯದಲ್ಲಿ ಏನೂ ನಡೆದಿಲ್ಲವೆಂದು ತಾವೇ ಒಪ್ಪಿಕೊಂಡ ಹಾಗೆ ಆಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ಸರ್ಕಾರದ ಹಿಂದಿನ ಸಾಧನೆ ಏನು ಎನ್ನುವುದನ್ನು ಅವರೇ ಹೇಳುತ್ತಿದ್ದಾರೆ. ಹೋದವರ್ಷ ಕತ್ತಲೆಯಾಗಿತ್ತು ಅಮವಾಸ್ಯೆಯಾಗಿತ್ತು ಈಗ ಚಿಮಣಿ ಹಚ್ಚಿದ್ದೇನೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಪ್ರಶ್ನೆ ಇಷ್ಟೇ. ಕಳೆದ ವರ್ಷದ ರಾಜ್ಯಪಾಲರ ಭಾಷಣ ಈ ವರ್ಷದ ರಾಜ್ಯಪಾಲರ ಭಾಷಣ ನೋಡಿದರೆ ಈ ವರ್ಷ ಸಾಧನೆ ಏನಾಗಿದೆ ಅದು ಮುಖ್ಯ. ಆ ಲೆಕ್ಕಗಳನ್ನೆಲ್ಲ ಇಟ್ಟು ಕೊಡುತ್ತೇನೆ ನಾವೇನು ಮಾಡಿದ್ದೇವೆ ಅದನ್ನು ಕೊಡುತ್ತೇನೆ. 1983-88ರವರೆಗೆ ಏನಾಗಿದೆ ಆ ಲೆಕ್ಕವನ್ನು ಕೂಡ ಕೊಡುತ್ತೇನೆ. ಆ ಲೆಕ್ಕ ಕೊಡುವುದಕ್ಕೆ ಏನೂ ತೊಂದರೆಯಿಲ್ಲ. ಆಗ ನಿಮಗೆ ಕಷ್ಟವಾಗುತ್ತದೆ. 83 ರಿಂದ 88 ರವರೆಗೆ ಏನಾಗಿದೆ 89 ರಿಂದ ಏನಾಗಿದೆ ಅದನ್ನೆಲ್ಲ ಕೊಡಿಯೆಂದರೆ ನನಗೆ ಕೊಡಲಿಕ್ಕೆ ತೊಂದರೆಯೇನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಒಂದು ಶ್ವೇತಪತ್ರವನ್ನು ತಾವು ಹೊರಡಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಡಿಮಾಂಡ್ ಮಾಡಿದ್ದರಿಂದ ನಾನು ಹೇಳಿದೆ.

ಶ್ರೀ ಆರ್.ಎಲ್. ಜಾಲಪ್ಪ : ಅದರ ಜೊತೆಗೆ ಅವೊತ್ತು ಎಷ್ಟು ಜನ ಕುಡಿಯುವವರು ಇದ್ದರು, ಈವೊತ್ತು ಎಷ್ಟು ಕುಡುಕರು ಇದ್ದಾರೆ ಎಕ್ಸೈಜ್ ಮೊಬಲೈಸೇಷನ್ ಎಷ್ಟಾಗಿದೆ ಅದನ್ನು ಸ್ವಲ್ಪ ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ : ಯಾರು ಜಾಸ್ತಿ ಹಾಲು ಕುಡಿಸಿದರು, ಯಾರು ಜಾಸ್ತಿ ಹೆಂಡ ಕುಡಿಸಿದರು ಯಾರು ಸಾರಾಯಿ ಕುಡಿಸಿದರು ಅದು ಕೊಡೋಣ.

ಶ್ರೀ ಆರ್.ವಿ. ದೇಶಪಾಂಡೆ : ಯಾರು ವಿಧಾನಸಭೆಯಲ್ಲಿ ಕೆಲಸ ನಿಲ್ಲಿಸಿದರು ಅದು ನಿಮ್ಮ ರಿಪೋರ್ಟ್‌ನಲ್ಲಿ ಬರಲಿ.

ಶ್ರೀ ವಾಟಾಳ್ ನಾಗರಾಜ್ : ಯಾರು ಕಳ್ಳಭಟ್ಟಿ ಕುಡಿಸಿದರು, ಯಾರು ಸರ್ಕಾರಿ ಸಾರಾಯಿ ಕುಡಿಸಿದರು ಅದನ್ನು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಯಾರು ಕಳ್ಳಭಟ್ಟಿ ಕುಡಿಸಿದರು, ಯಾರುಸಾರಾಯಿ ಕುಡಿಸಿದರು ಅದೆಲ್ಲ ಹೇಳುತ್ತೇನೆ. 1992-93ರಲ್ಲಿ ಒಂದು ಹುದ್ದೆ ಸಹ ಭರ್ತಿಯಾಗಲಿಲ್ಲ, 1200 ಗ್ರೂಪ್ ಡಿ ಹುದ್ದೆಗಳನ್ನು ಆಯಾಯ ಜಿಲ್ಲೆಗಳಲ್ಲಿ ತುಂಬಲಿಕ್ಕೆ ನಾವು ನಿರ್ಣಯ ತೆಗೆದುಕೊಂಡಿದ್ದು ಜೊತೆಗೆ ದಿನಗೂಲಿಯಲ್ಲಿ ಕೆಲಸ ಮಾಡತಕ್ಕ 500 ಮಂದಿ ಗ್ರೂಪ್ ಡಿ ನೌಕರರನ್ನು ಆರೋಗ್ಯ ಇಲಾಖೆಯಲ್ಲಿ ಖಾಲಿಯಿರುವ 500 ಹುದ್ದೆಗಳಿಗೆ ಭರ್ತಿ ಮಾಡಲಿಕ್ಕೆ ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಖಾಲಿಯಿರುವ ಗ್ರೂಪ್ ಸಿ ಹುದ್ದೆಗಳನ್ನು ತುಂಬಲಲಿಕ್ಕೆ ನೇಮಕಾತಿ ಪ್ರಾಧಿಕಾರವನ್ನು ನೇಮಕ ಮಾಡಲಿಕ್ಕೆ ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಅಂಬುಲೆನ್ಸ್ ವಾಹನಗಳನ್ನು 1992-93ರಲ್ಲಿ ಒಂದೂ ಸಹ ತೆಗೆದುಕೊಳ್ಳಲಿಲ್ಲ, ಈಗ 91 ಅಂಬುಲೆನ್ಸ್ ವಾಹನಗಳನ್ನು ಖರೀದಿಸುವುದಕ್ಕೆ

ನಿರ್ಣಯ ಮಾಡಿ ಅದರಲ್ಲಿ ಈಗಾಗಲೇ 14ಅಂಬುಲೆನ್ಸ್ ವಾಹನಗಳನ್ನು ಖರೀದಿಸುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ನಿಂತಿರುವ ಅಂಬುಲೆನ್ಸ್ ವಾಹನಗಳ ಸಂಖ್ಯೆ ಎಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ : ಆಯಿತು ಕೊಡೋಣ. ನನಗೆ ಏನಾಗಿದೆ ಅಂದರೆ ನೀವು ಖರೀದಿ ಮಾಡಲಾರದ್ದು ನಾನು ಖರೀದಿ ಮಾಡಬೇಕಾಗಿದೆ ನಿಂತು ಹೋದದ್ದು ರಿಪೇರಿ ಮಾಡಬೇಕಾಗಿದೆ ಎಲ್ಲ ಮಾಡುತ್ತೇನೆ ಕಷ್ಟ ಅದು ನಮಗೆ. ನೀವು ನಿಲ್ಲಿಸಿದ ಗಾಡಿಯನ್ನು ನಾನು ಓಡಿಸಬೇಕು. ಓಡಿಸಿದ ಗಾಡಿಯನ್ನು ರಿಪೇರಿ ಮಾಡಿಸಬೇಕು.

ಶ್ರೀ ಆರ್.ಎಲ್. ಜಾಲಪ್ಪ : 45 ವರ್ಷಗಳಿಂದ ನೀವೇ ಅಧಿಕಾರದಲ್ಲಿ ಇದ್ದೀರಿ. ನಾವು ಅಧಿಕಾರದಲ್ಲಿ ಇದ್ದದ್ದು ಕೇವಲ ಮುರ್‍ನಾಲು ವರ್ಷ ಮಾತ್ರ ನಮ್ಮದೇನೂ ಅಲ್ಲ ಅದು.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಜಾಲಪ್ಪನವರೆ, 45 ವರ್ಷ ನಾವೇ ಇರಲಿಲ್ಲ. ಏಕೆ ಈ ಮಾತನ್ನು ಆಡುತ್ತೀರಿ? ಏಕಾಂತಯ್ಯನವರು ಇರಲಿಲ್ಲ, ತಾವು ಚಂದ್ರೇಗೌಡರು ಇರಲಿಲ್ಲವೆ? ತಾವು ಕಾಂಗ್ರೆಸ್ಸಿನಲ್ಲಿ ಇರಲಿಲ್ಲವೆ?

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರೇ, ನಾನು ಅದಕ್ಕೆ ಹೇಳಿದ್ದೆ ಗಾಡಿ ಅದೇ ಕೆಲವರು ರಿಪೇರಿ ಮಾಡಿಸಿ ಕೆಲವು ವರ್ಷ ಓಡಿಸಿದ್ದಾರೆ. ಈಗ ಹೊಸದಾಗಿ ಬಂದವರು ಈಗ ರಿಪೇರಿ ಮಾಡಿಸಿ ಓಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಗಾಡಿ ಅದೇ ಹಳೆಯ ಗಾಡಿ.

ಶ್ರೀ ಕೆ.ಹೆಚ್. ರಂಗನಾಥ್ : ಹರಾಜು ಆಗಿದೆ. ಬರೀ ಗಾಡಿ ಕೊಂಡಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ : ನಮಗೆ ಹಳೆಯದಾದರೂ ಕಳುಹಿಸಿ, ಹೊಸದಾದರೂ ಕಳುಹಿಸಿ.

ಶ್ರೀ ಕೆ.ಹೆಚ್. ರಂಗನಾಥ್: ಇಲ್ಲ, ನಿಮ್ಮದು ಅಲ್ಲೇ ಇರುವ ಗಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಏಕೆಂದರೆ Whether this is a performing Government, or not ಈ ಪ್ರಶ್ನೆ ಆಗಾಗ ಬರುತ್ತಿರುತ್ತದೆ ಅದಕ್ಕೆ ಒಮ್ಮೆ ಉತ್ತರ ಕೊಟ್ಟರೆ ಆಮೇಲೆ ಹೆಚ್ಚು ಬರುವುದಿಲ್ಲ, ನಾವು ಸರ್ಕಾರದಲ್ಲಿ ಸಾಧನೆ ಮಾಡುತ್ತಿದ್ದೇವೆ. 1992-93ರಲ್ಲಿ ಎಕ್ಸ್‌ರೇ ಮಿಷನ್ ಒಂದನ್ನು ತೆಗೆದುಕೊಳ್ಳಲಿಲ್ಲ, ಈ ವರ್ಷ 150-150 ಎಂಎ ಎಕ್ಸ್‌ರೇ ಯಂತ್ರಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಪಕ್ಷದವರು ಇಲ್ಲಿ ಬಾವಿಯಲ್ಲಿ ಬಿದ್ದಿದ್ದರು ಏಕೆ ಸ್ವಾಮಿ? ಒಂದು ಪ್ರಶ್ನೆ ತಮ್ಮ ಪಕ್ಷದವರೇ ಇಲ್ಲಿ ಬಾವಿಯಲ್ಲಿ ಬಿದ್ದಿದ್ದರು ಏಕೆ?

ಶ್ರೀ ಎಸ್. ಇಸಾಮಿಯ : ನೀವು ಬೀಳ್ರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ನಮಗೆ ಬಾವಿಗೆ ಬೀಳುವುದು ಗೊತ್ತು ಬಿದ್ದಮೇಲೆ ಏಳಲಿಕ್ಕೆ ಗೊತ್ತು. ಕೆಲವರಿಗೆ ಬೀಳುವುದಕ್ಕೆ ಆಗುವುದಿಲ್ಲ, ಬಿದ್ದರೆ ಮೇಲೆ ಏಳಲಿಕ್ಕೆ ಆಗುವುದಿಲ್ಲ.

52/6-41

ಶ್ರೀ ಎಸ್. ಇಸಾಮಿಯ : ಮಾನ್ಯ ವಾಟಾಳ್‌ನಾಗರಾಜ್‌ರವರು ಬರೀ ಯಾವಾಗಲೂ ಸಾಯಂಕಾಲದಿಂದ ಬೆಳಿಗ್ಗೆಯವರೆಗೆ ಬೇರೇನೂ ಕೆಲಸವೇ ಇಲ್ಲ. ಯಾರಾದರೂ ಮಾತನಾಡುವಾಗ ಏನೇನೋ ಮಾತನಾಡುವುದು ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಇವರಿಗೇನು ಹುಚ್ಚುಗಿಚ್ಚು ಹಿಡಿದಿದೆಯೇ ನೀವು ಸುಮ್ಮನೆ ಕುಳಿತುಕೊಳ್ಳಿ. ಚರ್ಚೆಯಲ್ಲಿ ಸಾಮರಸ್ಯ ಹಾಸ್ಯ ಇರಲೇಬೇಕು ಇವರಿಗೆ ಏನಾಗಿದೆ?

ಶ್ರೀ ಆರ್.ವಿ. ದೇಶಪಾಂಡೆ : ತಾವು ಎಕ್ಸ್‌ರೇ ಮೆಷಿನ್ ತೆಗೆದುಕೊಂಡಿದ್ದೀರಿ. ಒಂದು ಸಲಹೆ ಮಾಡುತ್ತಿದ್ದೇನೆ, ತಾವೇನು ಮೆಷಿನ್ ತೆಗೆದುಕೊಂಡಿದ್ದೀರಿ ಅವು ಇನ್ನು ಇನ್‌ಸ್ಟಾಲ್ ಆಗಿಲ್ಲ. ನಮ್ಮ ಹಳಿಯಾಳದಲ್ಲಿ ಎಕ್ಸ್‌ರೇ ಮೆಷಿನ್ ಬಂದು ಆರು ತಿಂಗಳಾಯಿತು. ಸಿದ್ದಾಪುರದಲ್ಲಿ ಅದು ಮಾನ್ಯ ಕಾನಡೆಯವರಿಗೆ ಗೊತ್ತಿದೆ ಅಲ್ಲಿಯೂ ಮೆಷಿನ್ ಬಂದು ಆರು ತಿಂಗಳಾಯಿತು ಅವರು ಪತ್ರ ಬರೆಯುತ್ತಿದ್ದಾರೆ. ಮಷಿನ್ ಇನ್ನೂ ಇನ್‌ಸ್ಟಾಲ್ ಆಗಿಲ್ಲ. ತಕ್ಷಣ ಇನ್‌ಸ್ಟಾಲ್ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಮಾಡೋಣ.

ಟಿ.ವಿ. ಎರಡು ಯಂತ್ರ. ಅಲ್ಲದೆ, 60 ಎಂ. ಎ. ಆರು ಯಂತ್ರ, 15 ಎಂ.ಎ. ಮೂರು ಯಂತ್ರ. ಇವುಗಳನ್ನು ಖರೀದಿಸುವುದಕ್ಕೂ ಕೂಡ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಇವಿಷ್ಟು ಸ್ಯಾಂಪಲ್‌ಗಾಗಿ, ಹೆಚ್ಚೇನಲ್ಲ. ಇನ್ನು, ಫ್ಲಡ್ ಮತ್ತು ಭೂಕಂಪದ ಬಗ್ಗೆ, ನಮ್ಮ ಸರ್ಕಾರ ವಿಶೇಷವಾಗಿ ಗಮನ ಕೊಡಬೇಕಾದ ಅವಶ್ಯಕತೆ ಬಂತು. ಬರೀ ನಮ್ಮ ಕಾಲದಲ್ಲಿ ಬಂದಂತಹ ಫ್ಲಡ್‌ಗೆ ಅಲ್ಲ, ಹಿಂದೆ ನಮ್ಮದೇ ಸರ್ಕಾರ, 1991ರ ಫ್ಲಡ್‌ಗೂ ಕೂಡ ನಾವೇ ಹಣ ಬಿಡುಗಡೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳಬೇಕಾದ ಅವಶ್ಯಕತೆ ಬಂತು. ಕೋಲಾರದ ವಿಚಾರವಾಗಿ ನಮ್ಮ ಮಾನ್ಯ ಬೈರೇಗೌಡರಿಗೆ ಗೊತ್ತು. 1991ರಲ್ಲಿ ಫ್ಲಡ್ ಬಂತು, ಹಣ ಬಿಡುಗಡೆಯಾದದ್ದು ನಾನು ಮುಖ್ಯಮಂತ್ರಿಯಾದ ಮೇಲೆ.ಹಾಗೆಯೇ ತುಮಕೂರಿನಲ್ಲೂ ಕೂಡ, 1991ರಲ್ಲಿ ಬಂದ ಫ್ಲಡ್‌ಗೆ, ಪ್ರವಾಹಕ್ಕೆ ನಾವು ಹಣ ಬಿಡುಗಡೆ ಮಾಡಿ, ಕಾರ್ಯಕ್ರಮ ತೆಗೆದುಕೊಂಡಿದ್ದು ಮೊನ್ನೆ. ಗುಲ್ಬರ್ಗಾದಲ್ಲೂ ಕೂಡ 1991ರಲ್ಲಿ ಬಂದಂತಹ ಫ್ಲಡ್‌ಗೆ, ಹಣ ಬಿಡುಗಡೆ ಮಾಡಿ ಕಾರ್ಯಕ್ರಮ ಕೈಗೊಂಡಿದ್ದು ಮೊನ್ನೆ ತಾನೆ ನಾವು ಅಧಿಕಾರಕ್ಕೆ ಬಂದಮೇಲೆ. 1991, 1992 ಮತ್ತು 1993ರ ಫ್ಲಡ್ ಈ ಮೂರು ವರ್ಷಗಳಿಗೂ ಕೂಡ ನಾವು ವಿಶೇಷವಾಗಿ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ : ನಮ್ಮ ತಾಲ್ಲೂಕಿನಲ್ಲಿ ಏನು ಅನಾಹುತವಾಯಿತು ಅದರ ಬಗ್ಗೆ ಹೇಳಿದ್ದೇನೆ. ಬಹುಶಃ ಇದನ್ನು ಯಾರಾದರೂ ತಮ್ಮ ನೋಟೀಸಿಗೆ ತಂದಿದ್ದಾರೋ ಇಲ್ಲವೋ ಗೊತ್ತಿಲ್ಲ. ಹದಿಮೂರುವರೆ ಸಾವಿರ ಮನೆಗಳು ಬಿದ್ದು ಹೋದವು, ಒಂದು ಮನೆಯನ್ನೂ ಇವತ್ತು ಕಟ್ಟಿಸಿಕೊಡಲಿಲ್ಲ. ಸರಾಸರಿ ಒಂದೊಂದು ಮನೆಗೆ 700 ರೂಪಾಯಿ ಪರಿಹಾರ ಕೊಟ್ಟಿದ್ದೀರಿ ಎಂದು ನಾನು ಹೇಳಿದ್ದೇನೆ. ಈ ಹೌಸ್‌ನಲ್ಲಿ ನಾಲ್ಕಾರು ಸಾರಿ ಇದರ ಬಗ್ಗೆ ಮಾತನಾಡಿದ್ದೇನೆ. ಕಳೆದ ವರ್ಷ 7-7-93ರಲ್ಲಿ ನೀವು ಎಲ್ಲಾ ಶಾಸಕರ ಸಭೆ ಕರೆದಿದ್ದಾಗ, ಅವತ್ತು ಕೂಡ ನಾನು ಹೇಳಿದೆ. ಇದರ ಬಗ್ಗೆ ಏನಾದರೊಂದು ಹೇಳಿ. ಆ ಹದಿಮೂರುವರೆ ಸಾವಿರ ಕುಟುಂಬಗಳ ಗತಿ ಏನು, ದಯಮಾಡಿ ಇದರ ಬಗ್ಗೆ ಸ್ವಲ್ಪ ಹೇಳಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ : ಈ ಫ್ಲಡ್ ಬಗ್ಗೆ ಕೂಡ ನಾವು ಸುಮಾರು 130 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ : ನನ್ನ ಗತಿ ಏನು ಎಂಬುದನ್ನೂ ಸ್ವಲ್ಪ ಹೇಳಿ.

ಶ್ರೀ ಆರ್. ವಿ ದೇಶಪಾಂಡೆ : 130 ಕೋಟಿ ಖರ್ಚುಮಾಡಿದ್ದೀರಿ, ಇವರ ಪರಿಸ್ಥಿತಿ ಬಗ್ಗೆಯೂ ಸ್ವಲ್ಪ ಹೇಳಿ.

ಶ್ರೀ ಎಂ. ವೀರಪ್ಪಮೊಯ್ಲಿ : ವರದಿ ತರಿಸಿ, ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳೋಣ.

ಶ್ರೀ ಆರ್.ಎಲ್. ಜಾಲಪ್ಪ : ವರದಿ ಏನು ಸ್ವಾಮಿ ; ಬೇಕಾದಷ್ಟು ಸಾರಿ ನಿಮ್ಮ ಹೌಸಿಂಗ್ ಮಿನಿಸ್ಟರು ಇಲ್ಲಿ ಉತ್ತರ ಕೊಟ್ಟಿದ್ದಾರೆ. ವರದಿ ಎಲ್ಲಾ ಇಲ್ಲಿಯೇ ಇದೆ.

ಶ್ರೀ ಧರ್ಮಸಿಂಗ್ : ಲಾಸ್ಟ್ ಟೈಮ್ ಏನಾಗಿತ್ತು, ಮೂವತ್ತೂರು ಸಾವಿರ ಒಟ್ಟಾರೆ ಕರ್ನಾಟಕ ರಾಜ್ಯದಲ್ಲಿ, ಅದರಲ್ಲಿ ಕೋಲಾರ ಜಿಲ್ಲೆಯೂ ಸೇರಿದೆ. 50 ಕೋಟಿ ರೂಪಾಯಿ.....

ಶ್ರೀ ಹೆಚ್.ಎಂ. ರೇವಣ್ಣ :ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ಜಿಲ್ಲೆಯಲ್ಲಿ ಬಿದ್ದಂತಹ ಮನೆಗಳ ವಿಚಾರವೂ ಹಾಗೆಯೇ ಪೆಂಡಿಂಗ್ ಇದೆ. 400 ಮನೆಗಳು ನನ್ನ ಕ್ಷೇತ್ರದಲ್ಲೂ ಬಿದ್ದಿವೆ, ಆ ಫೈಲ್ ಹಾಗೆಯೇ ಪೆಂಡಿಂಗ್ ಇದೆ.

ಶ್ರೀ ಆರ್. ಎಲ್. ಜಾಲಪ್ಪ : ಎಲ್ಲರದೂ ಅದೇ ಗೋಳೇ. ತಾವು ಏನಾದರೂ ಸ್ವಲ್ಪ ಹೇಳಿ, 2 ಲಕ್ಷ ಜನಸಂಖ್ಯೆ ಇರತಕ್ಕ ಒಂದು ತಾಲ್ಲೂಕು. ಹದಿಮೂರವರೆ ಸಾವಿರ ಮನೆಗಳು ಬಿದ್ದುಹೋಗಿದೆ. ತಮಗೆ ವರದಿ ಕೂಡ ಬಂದಿದೆ.

ಉಪಾಧ್ಯಕ್ಷರು : ತಾವು ಪೂರ್ತಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಗ್ಗೆ ಹೇಳಿ.

ಶ್ರೀ ಆರ್. ಎಲ್. ಜಾಲಪ್ಪ : ನಾನು, ನನ್ನ ತಾಲ್ಲೂಕಿನ ಬಗ್ಗೆ ಹೇಳುತ್ತೇನೆ. ನಿಮ್ಮದು ನೀವು ಹೇಳಿ. ಒಂದು ಕ್ಷೇತ್ರ ಅವರದೂ ನಮಗೆ ಸೇರಿದೆ. ಅದರದೂ ಸೇರಿಸಿ ನಾನು ಹೇಳುತ್ತಿದ್ದೇನೆ. ಇನ್ನು ಮುಕ್ಕಾಲು ಕ್ಷೇತ್ರ ನಿಮ್ಮದು ಇದೆ, ಅದರ ಬಗ್ಗೆ ತಾವು ಹೇಳಿ. Some assurance must be given. This is too much. For the last four sessions, I have been requesting you. Something must come out.

1992ರ ರಾಜ್ಯಪಾಲರ ಭಾಷಣದಲ್ಲಿಯೂ ಇದು ಇದೆ, 1994ರ ರಾಜ್ಯಪಾಲರ ಭಾಷಣದಲ್ಲೂ ಇದು ಇದೆ. ವರ್ಷ ವರ್ಷ ಸುಮ್ಮನೆ ಇದನ್ನು ಹೇಳಿಕೊಂಡು ಹೋಗುತ್ತಿರುವುದೋ ಅಥವಾ ತಾವು ದಯವಿಟ್ಟು ಏನಾದರೂ ಮಾಡುತ್ತೀರೋ. You must tell me something.

ಶ್ರೀ ಎಂ. ವೀರಪ್ಪಮೊಯಿಲಿ : ಕೋಲಾರ ಜಿಲ್ಲೆಗೆ ನಾವು ಈಗಾಗಲೇ ಹಣ ಬಿಡುಗಡೆ ಮಾಡಿದ್ದೇವೆ.

R.L.Jalappa : I am talking about Bangalore district. ಅದರಲ್ಲಿ 13ವರೆ ಸಾವಿರ ಮನೆಗಳು ಹೋಗಿದೆ. ಕೊನೆಗೆ ಕಂಪ್ಲೀಟ್ ಆಗಿ ನಿರ್ನಾಮ ಆಯಿತು, ಇವತ್ತು ಎಲ್ಲರಿಗೂ ಸೇರಿಸಿ ಆವ್ರೇಜ್ 700 ರೂಪಾಯಿ ಚೆಕ್ಕು.

ಶ್ರೀ ಎಂ. ವೀರಪ್ಪಮೊಯಿಲಿ : ಅದರ ವಿವರ ಈಗ ನನ್ನ ಹತ್ತಿರ ಇಲ್ಲ, ಸನ್ಮಾನ್ಯ ಸದಸ್ಯರನ್ನು ಕರೆಸಿ ನಾನು ನಿಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಿ ಅದಕ್ಕೆ ತಕ್ಷಣ ಪರಿಹಾರ ಹುಡುಕುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಕಡೆಯ ಪಕ್ಷ ನಾನು ಇದನ್ನಾದರೂ ನಂಬುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ನಂಬಬಹುದು. ಆದ್ದರಿಂದ ಇವತ್ತು ಹರ್ತ್‌ಕ್ವೈಕ್ ಪ್ರಾವಿಜನ್‌ಗೆ ನಾವು ಈಗಾಗಲೇ ಡಿಜೈನ್ಸ್ ಮಾಡಿದ್ದೇವೆ. ಸದ್ಯದಲ್ಲೇ ನಾವು ಮನೆಗಳನ್ನು ಕಟ್ಟಲಿಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಈಗ ರೆಗ್ಯುಲರೈಜೇಶನ್ ಸ್ಕೀಮ್ ಏನು ಇದೆ ಇದು ಕೂಡ ಬಹಳ ಸಮಯದಿಂದ ಇತ್ತು. ಇದು ಎಲ್ಲಾ ಬಹಳ ಸಮರೋಪಾಧಿಯಲ್ಲಿ ಕೆಲಸವನ್ನು ಮಾಡಬೇಕೆಂದು ನಾವು ಈಗಾಗಲೇ ಹೇಳಿದ್ದೇವೆ. ಮತ್ತು ಅಪ್ಲಿಕೇಷನ್ಸ್ ಇಲ್ಲಿಯವರೆಗೆ ಸ್ವೀಕಾರ ಮಾಡಿದಂತಾದ್ದು ಸುಮಾರು 10 ಲಕ್ಷ 86 ಸಾವಿರ. ಈಗ ಡಿಸ್‌ಪೋಜಲ್ ಎಷ್ಟು ಆಗಿದೆ ಅಂತ ಹೇಳಿದರೆ ಸುಮಾರು 3 ಲಕ್ಷ 19ಸಾವಿರ 942 ಅರ್ಜಿಗಳು ಡಿಸ್‌ಪೋಜ್ ಆಗಿದೆ. ಬ್ಯಾಲೆನ್ಸ್ ಅಪ್ಲಿಕೇಶನ್ 7 ಲಕ್ಷ 66 ಸಾವಿರ 884 ಅರ್ಜಿಗಳು ಬಾಕಿ ಇವೆ. ಒಂದು ನಿಗಧಿತ ಸಮಯದಲ್ಲಿ ವಿಲೇವಾರಿ ಮಾಡಲಿಕ್ಕೆ ಬೇಕಾದಂತಹಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತಾ ಇದ್ದೇವೆ. ಇನ್ನು ನಮ್ಮ ಹೊಸ ಕೈಗಾರಿಕಾ ನೀತಿಯನ್ನು ನಾವು ಮಾಡಿ ಇವತ್ತು ಬೇರೆ ಎಲ್ಲಾ ರಾಜ್ಯಗಳ ಕೈಗಾರಿಕಾ ನೀತಿಗಿಂತಲೂ ಒಂದು ವಿಶೇಷ ರೀತಿಯಲ್ಲಿ ಹೆಚ್ಚು ಆಕರ್ಷಣೆ ಜನತೆಗೆ ಬರುವ ರೀತಿಯಲ್ಲಿ ನಾವು ಈ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ವಿಶ್ವದ ಬಗ್ಗೆ ಸಾಕಷ್ಟು ಚರ್ಚೆಯಾವಾಗಲೂ ಬರುತ್ತದೆ. ವಿಶ್ವದ ಬಗ್ಗೆ ನೀವು ಏನೂ ಮಾಡಿಲ್ಲ ಮರೆತುಬಿಟ್ಟಿದ್ದೀರಿ ಅಂತ ಮಾತು ಆಗಾಗ ಬರುತ್ತದೇ ಇದೆ. ಇದರ ಬಗ್ಗೆ ನಾವು ಸ್ವಲ್ಪ ವಿವರ ಕೊಡಲಿಕ್ಕೆ ಅಪೇಕ್ಷೆ ಪಡುತ್ತಿದ್ದೇವೆ. ವಿಶ್ವದ ಎಕ್ಸ್‌ಪೆಂಡೀಚರ್ 2-10-91ರಿಂದ 31-3-92ರವರೆಗೆ 3 ಕೋಟಿ57 ಲಕ್ಷ ರೂಪಾಯಿಗಳು ಖರ್ಚಾಗಿದ್ದರೆ ನವೆಂಬರ್ 92ರವರೆಗೆ ಎಷ್ಟು ಖರ್ಚಾಗಿತ್ತು. ಅಂದ್ರೆ 11 ಕೋಟಿ 7 ಲಕ್ಷ. ನವೆಂಬರ್ 92ರಿಂದ 31-3-93ರ ಮಧ್ಯದಲ್ಲಿ ನಾನು ಮುಖ್ಯಮಂತ್ರಿಯಾದ ಮೇಲೆ 10ಕೋಟಿ 68ಲಕ್ಷ ರೂಪಾಯಿ ನಾವು ಖರ್ಚುಮಾಡಿದ್ದೇವೆ. ಅಂದ್ರೆ ಆ ಕಾರ್ಯಕ್ರಮ 5 ತಿಂಗಳಲ್ಲಿ. 7 ತಿಂಗಳಲ್ಲಿ 11 ಕೋಟಿ ಆದರೆ 10 ಕೋಟಿ 68 ಲಕ್ಷ ಆ ವರ್ಷದಲ್ಲಿ 1992-93ರಲ್ಲಿ ನಾವು ಖರ್ಚು ಮಾಡಿದ್ದೇವೆ. ಆಮೇಲೆ ಈಗ ಜನವರಿ 94ರ ಅಂತ್ಯ ಒಳಗೆ 848.57 ಲಕ್ಷ ರೂಪಾಯಿ ನಾವು 8 ಕೋಟಿ 48 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಅದರಲ್ಲಿ ಮುಖ್ಯವಾಗಿ ಬೇಕಾದ್ದು ಬರೀ ಅವರಿಗೆ ಟ್ರೈನಿಂಗ್ ಕೊಟ್ಟು ನಾವು ಮನೆಗೆ ಕಳುಹಿಸುವುದು ಅಲ್ಲ ಒಂದು ಔದ್ಯೋಗಿಕ ರಂಗಕ್ಕೆ ಅವರನ್ನು ಸೇರಿಸಿಕೊಳ್ಳಬೇಕು. ತಾವು ಹಿಂದಿನ ಕಾರ್ಯಕ್ರಮದ ಒಂದು ಫ್ರಸ್ಟ್‌ನೋಡಿದರರೆ ಒತ್ತು ನೋಡಿದರೆ ಟ್ರೈನಿಂಗ್‌ಗೆ ಜಾಸ್ತಿ ಪ್ರಾಮುಖ್ಯತೆ ಕೊಟ್ಟಂತಹ ಒಂದು ಪರಿಸ್ಥಿತಿಯನ್ನು ತಾವು ನೋಡುತ್ತೀರಿ. ಆದರೆ ಇವತ್ತು ಡೈರೆಕ್ಟ್ ಪ್ರೊಡಕ್ಷನ್ ಬೆನಫಿಷರೀಸ್ ಇದರ ವಿವರ ನೋಡಿದರೆ ಖಂಡಿತವಾಗಿಯೂ ವಿಶ್ವದಲ್ಲಿ ನಾವು ವಿಶೇಷವಾದಂತಹ ಪ್ರಗತಿಯನ್ನು ನಾವು ಕಂಡಿದ್ದೇವೆ ಏಕೆಂದರೆ ಈಗ ನವೆಂಬರ್ 92 ರವರೆಗೆ 9 ಸಾವಿರದ 651 ಮಂದಿ ಪ್ರೊಡಕ್ಷನ್ ರಂಗಕ್ಕೆ ಬಂದಿದ್ದರೆ 5 ತಿಂಗಳಲ್ಲಿ ನವೆಂಬರ್ 92ರಿಂದ 31-3-92ರವರೆಗೆ 35 ಸಾವಿರ 866 ಮಂದಿಯನ್ನು ನಾವು ಪ್ರೊಡಕ್ಷನ್‌ಗೆ ನಾವು ಕಳುಹಿಸಿದ್ದೇವೆ. ಈ ಭಾರಿ ಜನವರಿ ಕೊನೆ 94ಕ್ಕೆ 20 ಸಾವಿರದ 181 ಮಂದಿಗೆ ಪ್ರೊಡಕ್ಷನ್‌ಗೆ ಕಳುಹಿಸಿದ್ದೇವೆ. ವಿಶ್ವದಲ್ಲಿ, ಪ್ರೊಡಕ್ಷನ್‌ಗೆ ಟ್ರೈನಿಂಗ್ ಬಗ್ಗೆ ಅದು ಟ್ರೈನಿಂಗ್ ಅವರು ಎಲ್ಲಿ ಹೋಗುತ್ತಾರೋ ಗೊತ್ತಾಗುವುದಿಲ್ಲ, ಆದರೆ ಡೈರೆಕ್ಟ್ ಪ್ರೊಡಕ್ಷನ್ ಏನು ಕಾಣತ್ತೇವೆ ಅದರಿಂದ ನಿಜವಾದಂತಹ ವಿಶ್ವದ ಒಂದು ಅಭಿವೃದ್ಧಿಯನ್ನು ಕಾಣಿಸಲಿಕ್ಕೆ ಆಗುತ್ತದೆ. ಸೇಲ್ಸ್ ವಾಲ್ಯು ಕೂಡ ಲ್ಯಾಕ್ಸ್‌ನಲ್ಲಿದೆ. ಈಗ ಅಪ್ ಟು 94 ನವೆಂಬರ್ 13 ಕೋಟಿ 38 ಲಕ್ಷ ರೂಪಾಯಿ ಇವತ್ತು ವಾಲ್ಯು ಪ್ರೊಡಕ್ಷನ್ ಆಗಿದ್ದರೆ ನಾವು ನವೆಂಬರ್ 92ರಿಂದ 31-3-92ರವರೆಗೆ 16 ಕೋಟಿ 76 ಲಕ್ಷ ಆಮೇಲೆ ಈ ವರ್ಷ. ಜನವರಿ 94ರವರೆಗೆ 53 ಕೋಟಿ 85 ಲಕ್ಷ ಆಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದೇ ಒಂದು ನಿಮಿಷ. ರಾಜ್ಯಪಾಲರ ಭಾಷಣದ ಚರ್ಚೆಗೆ ಉತ್ತರ ಕೊಟ್ಟಿದ್ದರೆ ಸಾಕಾಗಿತ್ತು. ಬಂಗಾರಪ್ಪನವರು ಹೊರಗೆ ಮಾಡಿದ ಭಾಷಣಕ್ಕೆ ಉತ್ತರ ಇಲ್ಲಿ ಸೂಕ್ಷ್ಮವಾಗಿದ್ದರೆ ಸಾಕು.

ಶ್ರೀ ಎಂ. ವೀರಪ್ಪಮೊಯ್ಲಿ : ಇಲ್ಲಾ ಇಲ್ಲಿ ಪ್ರಸ್ತಾಪಕ್ಕೆ ಬಂದಿದೆ. ತಾವು ಮಾತನಾಡದೇ ಇರಬಹುದು ವಿಶ್ವದ ಬಗ್ಗೆ ಪ್ರಸ್ತಾಪಕ್ಕೆ ಬಂದಿದೆ. ಈಗ ನಾನು ಹೇಳುವುದು ಬರೀ ಜನವರಿ 94ಕ್ಕೆ 53 ಕೋಟಿ 85 ಲಕ್ಷ ಸೇಲ್ ವಿಶ್ವದಲ್ಲಿ ಆಗಿದ್ದರೆ ಈಗ ಹಿಂದೆ 13 ಕೋಟಿ 38 ಲಕ್ಷ ಆಗಿದೆ. ನಾವು ಕಂಪೇರ್ ಮಾಡುತ್ತಿದ್ದೇವೆ ಬೇರೆ ಏನೂ ಇಲ್ಲ. ಇದು ಯಾರಿಗೂ ಉತ್ತರ ಕೊಡುವುದು ಅಲ್ಲ ಏಕೆಂದರೆ ಪರ್‌ಫಾರ್ಮೆನ್ಸ್ ಸೈಡ್‌ನಲ್ಲಿ. ವಿಶ್ವ ಇವತ್ತು ಬರೀ ಕಾಗದದಲ್ಲಿ ಇಲ್ಲ. ಕಾಗದದಲ್ಲಿ ಇದ್ದಂತಹ ವಿಶ್ವ ಕಾರ್ಯಕ್ರಮವನ್ನು ಇವತ್ತು ನಾವು ಭೂಮಿಗೆ ಇಳಿಸಿದ್ದೇವೆ. ಅದು ಮುಖ್ಯ ಇವತ್ತು. ಇನ್ನು ನಮ್ಮ ಲಿಬರಲೈಜೇಶನ್ ಪಾಲಿಸಿ ಏನು ಇದೆ ಅದರ ಬಗ್ಗೆ ಏನು ಅಭಿವೃದ್ಧಿ ಸಾಧನೆ ಮಾಡಿದ್ದೇವೆ ಎನ್ನುವುದನ್ನು ಬಹುಶಃ ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದರ ಬಗ್ಗೆ ಸಾಕಷ್ಟು ಕಾರ್ಯಕ್ರಮಗಳು ಬಂದಿದೆ.

ಶ್ರೀ ಎನ್.ಜಿ. ನಾಯಕ್ : ಮಾನ್ಯ ಅಧ್ಯಕ್ಷರೇ ವಿರೋಧಪಕ್ಷದ ನಾಯಕರು ವಿಶ್ವದಲ್ಲಿ ಏನೂ ಪ್ರಗತಿ ಆಗಿಲ್ಲ ಅಂತ ಹೇಳಿದರು. ಈಗ ಅಂಕಿಅಂಶಗಳನ್ನು ಕೊಟ್ಟಿದ್ದಾರೆ ಈಗಲಾದರೂ ಒಪ್ಪುತ್ತೀರಾ?

ಶ್ರೀ ಬಿ.ಎಚ್. ಬನ್ನಿಕೋಡ್ : ನಿಮ್ಮ ಹಿಂದಿನ ಮುಖ್ಯಮಂತ್ರಿಯನ್ನು ಕೇಳಿ ಅವರಿಗೆ ಒಪ್ಪಿಸಿ.

ಶ್ರೀ ಎಂ. ವೀರಪ್ಪಮೊಯಿಲಿ : ಇವತ್ತು ಆರ್‌ಬಿಐ ಬಿಲಿಟಿನ್ ಪ್ರಕಾರವೇ ಮಹಾರಾಷ್ಟ್ರ ಗುಜರಾತ್ ಬಿಟ್ಟರೆ ಕಾರ್ಪೋರೇಟ್ ಇನ್‌ವೆಸ್ಟಮೆಂ ಪ್ರೊಫೈಲೋನಲ್ಲಿ ಕರ್ನಾಟಕಕ್ಕೆ 3ನೇ ಸ್ಥಾನ ಇವತ್ತು ಬಂದಿದೆ. ಇನ್‌ವೆಸ್ಟ್‌ಮೆಂಟ್ ಪ್ರೊಫೈಲ್‌ನಲ್ಲಿ ಸುಮಾರು 20 ಸಾವಿರ ಕೋಟಿ ರೂಪಾಯಿಗಳ ಬಂಡವಾಳವನ್ನು ಕೈಗಾರಿಕೆಗಳಲ್ಲಿ ಹೂಡತಕ್ಕಂಥ ಎಲ್ಲಾ ರೀತಿಯ ಕಾರ್ಯಕ್ರಮ ಕಮೀಟ್‌ಮೆಂಟ್ ಇವತ್ತು ಆಗಿದೆ. ಹೊಸಪೇಟೆ ಮತ್ತು ವಿಜಯನಗರ ಸ್ಟೀಲ್ ಪ್ಲಾಂಟ್ 25 ವರ್ಷಗಳಿಂದ ಬಹಳ ನೆನೆಗುದಿಗೆ ಬಿದ್ದಿದ್ದು ಈಗ ಮೆ: ಜಿಂದಾಲ್ ಕಂಪನಿಯವರು ಅಗ್ರಿಮೆಂಟ್ ಮಾಡಿ ಕೆಎಸ್‌ಐಡಿಸಿ ಜೊತೆ ಅದನ್ನು ಇಂಪ್ಲಿಮೆಂಟ್ ಮಾಡತಕ್ಕಂಥಾ ಕಾರ್ಯಕ್ರಮ ಇವತ್ತು ಮಾಡುತ್ತಾ ಇದ್ದೇವೆ ಇದನ್ನು ಲೇಟೆಸ್ಟ್ ಟೆಕ್ನಾಲಜಿ ಇದನ್ನು ಮಾಡಿ ಅಲ್ಲಿ ಪವರ್ ಪ್ಲಾಂಟ್ ಕೂಡ ಮಾಡಬೇಕೆಂದು ಹೇಳಿ ಸುಮಾರು 4200 ಕೋಟಿ ರೂಪಾಯಿಯಲ್ಲಿ ಈ ಯೋಜನೆ ಜಾರಿಗೆ ಬರುತ್ತಾ ಇದೆ. ಇನ್ನೊಂದು ಸ್ಟೀಲ್ ಪ್ಲಾಂಟ್ ಕೂಡ ಅದೇ ಸ್ಥಳದಲ್ಲಿ ವಿಜಯನಗರದಲ್ಲಿ ಬರತಕ್ಕಂಥಾ ಕಾರ್ಯಕ್ರಮ ಕೂಡ ಇವತ್ತು ಬರುತ್ತಾ ಇದೆ. ಮತ್ತೆ ಇನ್‌ಸೆಂಟೀವ್ ಬಗ್ಗೆ ನಾವು ಬಹಳ ಬ್ಯಾಕ್‌ಲಾಗ್ ಇತ್ತು. ಸಬ್ಸಿಡೀಸ್ ಇದೆಲ್ಲಾ ಬಹಳ ಪೆಂಡಿಂಗ್ ಇತ್ತು ಈಗ ನಾವು ಮೊದಲನೇ ಸಲ ಈ 93-94ರಲ್ಲಿ ನಾವು ಏನು ಮಾಡಿದ್ದೇವೆಂದು ಹೇಳಿದರೆ ಡಬ್ಬಲ್ ಅಲೋಕೇಶನ್ಸ್ ಈ ಇನಸೆಂಟೀವ್ಸ್‌ಗೆ ಕೊಟ್ಟಿದ್ದೇವೆ. ಏಕೆಂದರೆ ಈ ಬಗ್ಗೆ ಜನಗಳಲ್ಲಿ ಹತಾಶೆ ಭಾವನೆ ಬರಬಾರದು ಎಂಬ ಕಾರ್ಯಕ್ರಮವನ್ನು ನಾವು ವಿಶೇಷವಾಗಿ ತೆಗೆದುಕೊಂಡಿದ್ದೇವೆ. ನಾನು ತಮಗೆ ಬಹಳ ಸಂತೋಷದಿಂದ ಹೇಳಬೇಕೆಂದರೆ ಮೊದಲನೇ ಸಲ 7 ಸಕ್ಕರೆ ಕಾರ್ಖಾನೆಗಳನ್ನು ಕರ್ನಾಟಕ ರಾಜ್ಯದಲ್ಲಿ ಸ್ಥಾಪನೆ ಮಾಡಲಿಕ್ಕೆ ನಮಗೆ ಕೇಂದ್ರದವರು ಅನುಮತಿ ಕೊಟ್ಟಿದ್ದಾರೆ. ಅದರಲ್ಲಿ 4 ಬಿಜಾಪುರದಲ್ಲಿ 2 ಬೀದರ್‌ನಲ್ಲಿ 1 ಬೆಳಗಾಂನಲ್ಲಿ ಅದರಲ್ಲಿ 6 ಕಾರ್ಖಾನೆಗಳು ಸಹಕಾರಿ ಕ್ಷೇತ್ರದಲ್ಲಿವೆ ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ 7 ಸಕ್ಕರೆ ಕಾರ್ಖಾನೆಗಳನ್ನು ಮಂಜೂರು ಮಾಡಿದ್ದು ಇದೇ ಮೊದಲು. ಯಾವಾಗಲೂ ಒಂದು ಎರಡು ಬಹಳ ಕಷ್ಟಕ್ಕೆ ಮಂಜೂರಾತಿ ಆಗುತ್ತಾ

ಇತ್ತು ಇದು ಒಳ್ಳೆಯ ಸೂಚನೆಗಳು ಇವತ್ತು ಬರುತ್ತಾ ಇವೆ. ಆದ್ದರಿಂದ ಇವತ್ತು ವಿಶೇಷವಾಗಿ ಈ ಕೈಗಾರಿಕಾ ದೃಷ್ಟಿಯಲ್ಲಿ ಒಳ್ಳೆಯ ವಾತಾವರಣ ಇವತ್ತು ಆಗುತ್ತಾ ಇದೆ.

ಮಾನ್ಯ ಸದಸ್ಯರಾದ ಬೈರೇಗೌಡರು ಪಬ್ಲಿಕ್ ಸೆಕ್ಟಾರ್ ಬಗ್ಗೆ ಅದರಲ್ಲೂ ಎನ್‌ಜಿಇಎಫ್ ಬಗ್ಗೆ ಹೇಳಿದ್ದೀರಿ. ಎನ್‌ಜಿಎಫ್‌ನವರು ಒಂದು ನಿರ್ಣಯ ತೆಗೆದುಕೊಂಡಿದ್ದಾರೆ ಅದು ಸರ್ಕಾರದ ಗಮನದಲ್ಲಿ ಇದೆ. ನಾವು ಅದರ ಬಗ್ಗೆ ಇನ್ನು ಕೂಡ ಏನೂ ನಿರ್ಣಯ ತೆಗೆದುಕೊಂಡಿಲ್ಲ ಸರ್ಕಾರ. ಆದರೆ ಒಂದು ವಿಚಾರ ಹೇಳುವುದಕ್ಕೆ ನಾನು ಅಪೇಕ್ಷಿಪಡುತ್ತೇನೆ. ಅದು ಏನೆಂದರೆ ನಾವು ಎನ್‌ಜಿಇಎಫ್‌ನ್ನು ಮಾರತಕ್ಕಂಥ ಒಂದು ಪ್ರಸ್ತಾವನೆ ನಮ್ಮ ಸರ್ಕಾರದ ಮುಂದೆ ಇಲ್ಲ. We are not selling any shares. We are not going to sell the property. Company is raising funds by increasing its equity base. They are not raising any shares. ಆಮೇಲೆ ಈಗ ಪ್ರೆಸೆಂಟ್ ಷೇರು ಹೋಲ್ಡರ್ಸ್ ಏಕೆಂದರೆ ನಮಗೆ ಹಣ ಬೇಕು ಬಂಡವಾಳ ಬೇಕಾಗುತ್ತದೆ ಬಂಡವಾಳ ಇಲ್ಲದೆ ಕೈಗಾರಿಕೆ ನಡೆಸಲಿಕ್ಕೆ it will become sick.

ಮುಂದೆ ತಮಗೆ ಗೊತ್ತಿದೆ. ಬಿಐಫ್‌ಆರ್‌ಗೆ ಹೋದರೆ ಆಮೇಲೆ ನಮ್ಮ ಕೈ ತಪ್ಪಿ ಹೋಗುತ್ತದೆ ಕೈಗಾರಿಕೆ. ಅದನ್ನು ತಪ್ಪಿಸಬೇಕು ಇವತ್ತು.

ಬಿಐಎಫ್‌ಆರ್‌ಗೆ ಹೋಗುವುದನ್ನು ತಪ್ಪಿಸಿ ಕೈಗಾರಿಕೆಯನ್ನು ನಮ್ಮ ಅಧೀನದಲ್ಲಿಟ್ಟುಕೊಳ್ಳಬೇಕು. 51 ಪರ್ಸೆಂಟ್ ನಾವಿಟ್ಟು ಕೊಳ್ಳುತ್ತೇವೆ. ಸರೆಂಡರ್ ಮಾಡುವುದಿಲ್ಲ ಅದನ್ನು. ಯಾರಿಗೆ ಕೊಡಬೇಕು, ಯಾರು ಬಂಡವಾಳ ಹೂಡಿಸಬೇಕು, ಪ್ರೆಸೆಂಟ್ ಶೇರ್ ಹೋಲ್ಡರ್ಸ್ ಬಂಡವಾಳ ಹಾಕುವುದಿದ್ದರೆ ಸರಿ ಹಾಕದಿದ್ದರೆ ನಾವು ಯಾರಿಂದ ಈ ಈಕ್ವಿಟಿಬೇಸನ್ನು ಮಾಡಲಿಕ್ಕೆ ಸಾಧ್ಯವಿದೆ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಎನ್‌ಜಿಇಎಫ್‌ನ ಆಡಳಿತಮಂಡಲಿಯವರು ನಮಗೆ ಸಲಹೆ ಕೊಟ್ಟಿದ್ದಾರೆ, ಬಿಪಿಎಲ್ ಮತ್ತು ಎಬಿಬಿ ಇಬ್ಬರೂ ಪ್ರಪೋಸಲ್ಸ್ ಕೊಟ್ಟಿದ್ದಾರೆ. ಅದು ಇನ್ನೂ ಪೊಲಿಟಿಕಲ್ ಅಫೇರ್ಸ್ ಕಮಿಟಿಯಲ್ಲಿದೆ, ಕ್ಯಾಬಿನೆಟ್‌ಗೆ ಇನ್ನೂ ಬರಬೇಕಾಗಿದೆ. ತಾವು ಕೆಲವು ವಿಚಾರ ಸೂಚನೆ ಮಾಡಿದ್ದೀರಿ. ಇದನ್ನು ಯಾರಿಗಾದರೂ ಮಾರುವಂತಹ ಪ್ರಶ್ನೆ ಉದ್ಭವವಾಗುವುದೇ ಇಲ್ಲ, ಅದು ಪಬ್ಲಿಕ್ ಸೆಕ್ಟಾರಾಗೇ ಉಳಿಯುತ್ತದೆ ಅದನ್ನು ಬಲಪಡಿಸಲು ಏನು ಬೇಕೋ ಅದರ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ : 51ಕ್ಕೆ ಇಳಿಸಿದರೆ ಅದರ ನೇಚರೇ ಚೇಂಜಾಗುತ್ತದೆ. ಮೈನಾರಿಟಿ ಶೇರ್‌ಹೋಲ್ಡಿಂಗ್‌ಗೆ ಬಂದ ತಕ್ಷಣ ನೀವು ಸ್ಟಾಟುಟರಿ ಬದಲಾವಣೆ ಮಾಡಬೇಕಾದರೆ ನೀವು ಜೂನಿಯರ್ ಪಾರ್ಟ್‌ನರ್‌ನ ಇಷ್ಟಕ್ಕೆ ವಿರುದ್ಧವಾಗಿ ಕಂಪನಿ ಲಾ ಪ್ರಕಾರ ಮಾಡುವುದಕ್ಕೆ ಆಗುವುದಿಲ್ಲ. ನಿಮ್ಮ ಹೋಲ್ಡಿಂಗ್‌ನ್ನು 51ಕ್ಕಿಟ್ಟುಕೊಂಡು 49 ಅನ್ನು ಬೇರೆಯವರಿಗೆ ಕೊಟ್ಟರೆ ಇವತ್ತಿನ ಸ್ವಾತಂತ್ರ್ಯ ಉಳಿಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಾನು ಕೊಟ್ಟಿರುವ ಸಲಹೆಯನ್ನು ದಯವಿಟ್ಟು ಒಪ್ಪಿಕೊಂಡರೆ ನೀವು ಬಿಐಎಫ್‌ಆರ್ ಮುಂದೇನೂ ಹೋಗಬೇಕಾಗಿಲ್ಲ ಬೇರೆಯವರಿಗೆ ಶೇರನ್ನು ಮಾರಾಟ ಮಾಡುವ ಅವಶ್ಯತೆ ಕೂಡ ಇಲ್ಲ, ದಯವಿಟ್ಟು ಅದನ್ನು ಆಲೋಚನೆ ಮಾಡಿ.

ಶ್ರೀ ಎಂ.ವೀರಪ್ಪ ಮೊಯ್ಲಿ : ಆಲೋಚನೆ ಮಾಡೋಣ.

ಶ್ರೀ ಸಿ.ಬೈರೇಗೌಡ : ಎರಡೂ ರಿಪೋರ್ಟನ್ನು ತಮಗೆ ಕಳಿಸುತ್ತಿದ್ದೇನೆ. ಇವು ಈ ಸದನದ ಸಮಿತಿಯ ವರದಿ. ಅಂದರೆ ಈ ಸದನದ ವರದಿಯಾಗಿದೆ. ಇದನ್ನು ಸರ್ಕಾರ ಒಪ್ಪಿಕೊಳ್ಳಬೇಕು. ಅಲ್ಲಿ ಅಧಿಕಾರಿಗಳಾಗಿದ್ದವರು ಯಾರ‍್ಯಾರು ಅವ್ಯವಹಾರ ನಡೆಸಿದ್ದಾರೆ ಆ ಕಂಪೆನಿಯ ಅಭಿವೃದ್ಧಿಯನ್ನು ಕಡೆಗಣಿಸಿ ತಮ್ಮ ಸ್ವಾರ್ಥವನ್ನು ಬೇಯಿಸಿ ಕೊಳ್ಳುವಂತಹ ಕೆಲಸ ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ತಾವೇ

ಕೌನ್ಸಿಲ್‌ನಲ್ಲಿ ಹೇಳಿದ್ದೀರಿ. ಕಮಿಶನ್ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ಇದೆಲ್ಲ ಕೂಡ ಕತದಲ್ಲಿದೆ. ದಯವಿಟ್ಟು ಕ್ರಮ ತೆಗೆದುಕೊಳ್ಳಿ ಇವನ್ನು ಕಳಿಸಿಕೊಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ : 20 ಅಂಶದ ಕಾರ್ಯಕ್ರಮ, ಮುಖ್ಯವಾಗಿ ಬಡತನ ನಿರ್ಮೂಲನ ಕಾರ್ಯಕ್ರಮದಲ್ಲಿ ಇಡೀ ರಾಷ್ಟ್ರದಲ್ಲಿ 8ನೇ ಸ್ಥಾನ, 12 ಸ್ಥಾನಕ್ಕಿದ್ದುದು ಈಗ 4ನೇ ಸ್ಥಾನ ಕರ್ನಾಟಕ ರಾಜ್ಯಕ್ಕೆ ಬಂದಿದೆ, ನವೆಂಬರ್ 93ರ ಅಸಸ್‌ಮೆಂಟ್ ಪ್ರಕಾರ.

ಅದು ಪ್ರೋಗ್ರಾಂ ಇಂಪ್ಲಿಮೆಂಟೇಶನ್‌ನ ಅಸಸ್‌ಮೆಂಟ್. ನಾವಿನ್ನೂ ಟಾಪ್‌ಗೆ ಹೋಗುವ ದಿಸೆಯಲ್ಲಿ ಹೋಗುತ್ತಿದ್ದೇವೆ. We are in the fourth place.

ಇದೇ ಪ್ರಕಾರ ಗ್ರಾಮೀಣ ಜೀವನವನ್ನು ಅಭಿವೃದ್ಧಿ ಮಾಡುವ ದೃಷ್ಟಿಯಲ್ಲಿ ತೆಗೆದುಕೊಂಡ ಕಾರ್ಯಕ್ರಮಗಳ ಪಕ್ಷಿನೋಟವನ್ನು ಈ ಸದನದ ಮುಂದೆ ತರಲಿಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. 93-94ರಲ್ಲಿ ಡಿಸೆಂಬರ್ 93ರವರೆಗೆ 2401 ಬೋರ್‌ವೆಲ್‌ಗಳನ್ನು ತೋಡಲಾಗಿದೆ. 431 ಪೈಪ್ಡ್ ವಾಟರ್ ಸಪ್ಲೈ ಸ್ಕೀಂ ಕಂಪ್ಲೀಟಾಗಿದೆ. 765 ಮಿನಿ ವಾಟರ್ ಸಪ್ಲೈ ಸ್ಕೀಮನ್ನು ನಾವು ಪೂರ್ತಿ ಮಾಡಿದ್ದೇವೆ. ಇದು ಮಾತ್ರವಲ್ಲದೆ ವಿಶ್ವಬ್ಯಾಂಕಿನ ಸಹಾಯದಿಂದ ರೂರಲ್ ವಾಟರ್ ಸಪ್ಲೈ ಸ್ಕೀಂ 450 ಕೋಟಿ ರೂನ ಯೋಜನೆಯನ್ನು 1200 ಹಳ್ಳಿಗಳಲ್ಲಿ ಅಂದರೆ 12 ಜಿಲ್ಲೆಗಳಲ್ಲಿ ಇದು ಮಂಜೂರಾಗಿದೆ. ಮಾತ್ರವಲ್ಲದೆ ಡ್ಯಾನಿಡಾ ಡಚ್ ಕಾರ್ಯಕ್ರಮಗಳೂ ಭಾಗಿಯಾಗಿ 93-94ರಿಂದ 2000 ಎಡಿವರೆಗೆ 1200 ಕೋಟಿ ರೂಗಳನ್ನು ಬರೀ ಗ್ರಾಮೀಣ ಜೀವನದ ಅಭಿವೃದ್ಧಿ ಬಗ್ಗೆ ನಾವು ಮೀಸಲಾಗಿಟ್ಟು ಖರ್ಚುಮಾಡುವಂತಹ ವಿಶೇಷ ಕಾರ್ಯಕ್ರಮ ಇವತ್ತು ಆಗುತ್ತಿದೆ. ಇದು ಗ್ರಾಮೀಣ ಜೀವನದಲ್ಲಿ ವಿಶೇಷವಾದ ಪರಿವರ್ತನೆ ಆಗತಕ್ಕಂತಹ ರೀತಿಯಲ್ಲಿ ಖಂಡಿತವಾಗಿ ತನ್ನ ಪಾತ್ರ ವಹಿಸುತ್ತದೆ. ರೂರಲ್ ಕಮ್ಯುನಿಕೇಷನ್ ವಿಚಾರವಾಗಿ ವಿವರವನ್ನು ಕೊಡಲಿಕ್ಕೆ ನಾನು ಅಪೇಕ್ಷೆಪಡುವುದಿಲ್ಲ. ಇನ್ನು ಮಲೆನಾಡು ಬೋರ್ಡ್ ಬಗ್ಗೆ ಸಾಕಷ್ಟು ಮಾತುಗಳನ್ನಾಡುತ್ತಿದ್ದೇವೆ. ಭರವಸೆಗಳಿತ್ತು. ಇವತ್ತು ಅನುಷ್ಠಾನದ ದೃಷ್ಟಿಯಿಂದ 93-94ರ ಬಜೆಟ್‌ನಲ್ಲಿ 34 ಕೋಟಿ ರೂಗಳನ್ನು ಕೊಟ್ಟಿದ್ದೇವೆ ಅದರಲ್ಲಿ 2 ಕೋಟಿ ಎಸ್‌ಸಿಪಿ ಇತ್ತು, ಅದರಲ್ಲಿ 20 ಕೋಟಿ ರೂ ಈಗಾಗಲೇ ಬಿಡುಗಡೆ ಮಾಡುತ್ತಿದ್ದೇವೆ. ಉಳಿದ ಹಣವನ್ನೂ ಸದ್ಯದಲ್ಲೇ ಬಿಡುಗಡೆ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಮುಖ್ಯಮಂತ್ರಿಗಳೇ ಬಡ್ಡಿ ಸುಸ್ತಿಬಡ್ಡಿ ಮನ್ನಾ ಮಾಡುವ ಬಗ್ಗೆ ನಿನ್ನೆ ನಮ್ಮನ್ನೆಲ್ಲ ಒಂದು ಸಭೆ ಕರೆದಿದ್ದೀರಿ. ರೈತರ ಮನೆಮಠ ಹರಾಜು ಹಾಕದ ರೀತಿ ಇವತ್ತು ನಾನೇನಾದರೂ ಭರವಸೆ ಕೊಡುತ್ತೇನೆಂದು ಹೇಳಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ಅಲ್ಲಿಗೆ ಇನ್ನೂ ನಾನು ಬಂದಿಲ್ಲ. ನಾವು ಒಂದು ಹೇಳಿದ್ದೆವು, ಅಥಾರಿಟಿ, ಅಕೌಂಟಬಿಲಿಟಿ ಅಚೀವ್‌ಮೆಂಟ್ ಎಂದು. ಅದರ ಬಗ್ಗೆ ಇಲ್ಲಿ ಕಾಮೆಂಟ್ಸ್ ಬಂದಿದೆ. ಈ ಫೈಲ್ ಡಿಸ್‌ಪೋಸಲ್ ಬಗ್ಗೆ, ಕ್ಯಾಬಿನೆಟ್‌ನಲ್ಲಿ ನಾವು ತಾಲೂಕುಮಟ್ಟದವರೆಗೂ ಕಡತ ಡಿಸ್‌ಪೋಸಲ್‌ಬಗ್ಗೆ ವಿಶೇಷವಾಗಿ ಮಾನಿಟರ್ ಮಾಡುತ್ತಿದ್ದು ಸಮೀಕ್ಷೆಕೂಡ ಮಾಡುತ್ತಿದ್ದೇವೆ. ಇದು ಬಹಳ ಆರೋಗ್ಯಕರವಾದ ವಿಶೇಷ ಬೆಳವಣಿಗೆಯಾಗಿದೆ. ನನ್ನಿಂದ ಸೇರಿ, ಎಲ್ಲ ಇಲಾಖೆಯದು ಮತ್ತು ಆಯಾಯಾ ಮಿನಿಸ್ಟರ್ ಮಟ್ಟದಲ್ಲೂ sample check of developmental activities ಮಾಡುತ್ತಿದ್ದೇನೆ. ಎಲ್ಲಾ ಅಡ್ಮಿನಿಸ್ಟ್ರೇಟಿವ್ ಕಾರ್ಯದರ್ಶಿಗಳು ಪ್ರತಿ ತಿಂಗಳಲ್ಲಿ 4 ದಿವಸ ಅವರು ಬೇರೆಬೇರೆ ಪರಿವೀಕ್ಷಣೆ

ಕೂಡ ಮಾಡಬೇಕೆಂದು ನಾವು ಮಾಡಿದ್ದೇವೆ. ಮತ್ತು ಡಿಪಿಎಆರ್‌ನ team of inspecting officers ಅವರು ಬೇರೆಬೇರೆ ಪರಿವೀಕ್ಷಣೆಗಳನ್ನು ಮಾಡಿದ್ದಾರೆ. 93ರಲ್ಲಿ 51 ಅಂತಹ ಪರಿವೀಕ್ಷಣೆಗಳನ್ನು ಡಿಪಿಎಆರ್ ಮಾಡಿದ್ದರು. ಸುಮಾರು 72 ಸರ್‌ಪ್ರೈಸ್ ಪರಿವೀಕ್ಷಣೆಗಳನ್ನು ಬೇರೆ ಬೇರೆ ಹಂತದಲ್ಲಿ ಮಾಡಿದ್ದಾರೆ. ಮತ್ತು self-assessment, evaluation by officers, ಇತ್ಯಾದಿ ಒಂದು ಹೊಸ ಕಾರ್ಯಕ್ರಮನ್ನು ನಾವು ಕೈಗೊಂಡಿದ್ದರಿಂದ ಫೈಲ್ ಡಿಸ್‌ಪೋಸಲ್‌ನಲ್ಲಿ ಸಮೀಕ್ಷೆಯಿಂದ ಬೇರೆ ಬೇರೆ ರೀತಿಯ ಬದಲಾವಣೆ ಮತ್ತು ಪರಿಣಾಮ ನಮಗೆ ಬಂದಿದೆ. Important Cabinet decision. ನಾವು ತೆಗೆದುಕೊಂಡ ಮೇಲೆ ಅವನ್ನು ಇಂಪ್ಲಿಮೆಂಟ್ ಮಾಡತಕ್ಕದ್ದನ್ನು ಪ್ರತಿ ಕ್ಯಾಬಿನೆಟ್‌ನಲ್ಲಿ ನಾವು ರಿವ್ಯೂ ಮಾಡುತ್ತೇವೆ. ಮುಖ್ಯವಾಗಿ transparency in the administration ಬರಬೇಕು ಮತ್ತು ನಮ್ಮಲ್ಲಿ ಯಾವುದೇ ಲೋಪದೋಷ ಇದ್ದರೆ ಅವುಗಳ ಬಗ್ಗೆ ವಿಚಾರಣೆ ನಡೆಸಲು blanket permission to CBI

6.00 ಪಿ.ಎಂ

ಕೋ ಆರೇಟಿವ್ ಲೋನ್‌ಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಇದು ಬಹುಶಃ ನಮ್ಮ ಸಂಪನ್ಮೂಲದ ಬಗ್ಗೆ ಒಂದು ಪ್ರಶ್ನೆಯಾದರೆ ಮತ್ತೊಂದು ಕಡೆ ಈ ರೆಕವರಿ ಪಾರ್ಟ್ ಏಕೆಂದರೆ ರೆಕವರಿಯಲ್ಲಿ ಇಡೀ ದೇಶದಲ್ಲಿ ನಾವು ನಾಲ್ಕನೇ ಸ್ಥಾನದಲ್ಲಿದ್ದೇವೆ. ಈ ಸಾಲ ಮನ್ನದ ಬಗ್ಗೆ ಯಾವ ರಾಜ್ಯದಲ್ಲಿ ಕೂಡ ಮಾತನಾಡುತ್ತಿಲ್ಲ. ಬಡ್ಡಿ ಮತ್ತೊಂದು ಇರಬಹುದು. ನಾನು ಇದರ ಬಗ್ಗೆ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದೇನೆ. ಆದ್ದರಿಂದ ಈ ಬಡ್ಡಿ ಮನ್ನಾ ಆಗಲೀ ಸಾಲ ಮನ್ನಾ ಆಗಲೀ ಇದನ್ನು ನಮ್ಮ ಸರಕಾರ ಮಾಡುವುದಿಲ್ಲ. 13 ಕೋಟಿ ರೂಪಾಯಿ ಸುಸ್ತಿ ಬಡ್ಡಿ ಇದೆ. 31-3-94 ರ ಒಳಗೆ ಸಾಲ ಔಟ್‌ಸ್ಟ್ಯಾಂಡಿಂಗ್ ಬಡ್ಡಿ ಅದನ್ನು ಕೊಟ್ಟರೆ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡತಕ್ಕಂತಹ ಕಾರ್ಯಕ್ರಮವನ್ನು ಮಾತ್ರ ನಾವು ತೆಗೆದುಕೊಳ್ಳುತ್ತೇವೆ. 13 ಕೋಟಿ ನಮ್ಮ ಸರಕಾರಕ್ಕೆ ಬರುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಇವರು ಸಹಾಯಧನವೇನೂ ಕೊಡುವುದಿಲ್ಲ. ಬ್ಯಾಂಕ್ಸ್‌ಗಳು ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳುತ್ತವೆ. ನಿಮ್ಮ ಕಿಸೆಯಿಂದೇನು ಕೊಡುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಆಗಲೆ ಆದರೆ 13 ಕೋಟಿ ಚಿಲ್ಲರೆ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆ. ಆದರೆ ಬಡ್ಡಿ ವಿಚಾರದಲ್ಲಾಗಲೀ ಅಸಲು ವಿಚಾರದಲ್ಲಾಗಲೀ ರೈತರ ಸಮೃದ್ಧವಾದ ಬೆಳವಣಿಗೆಯ ದೃಷ್ಟಿಯಿಂದ ಅದನ್ನು ಮನ್ನಾ ಮಾಡತಕ್ಕಂತಹ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುವುದಿಲ್ಲ. ಈ ಕೆಲವು ವಿಚಾರಗಳನ್ನು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟುದಕ್ಕಾಗಿ ತಮಗೆ ಅನಂತ ವಂದನೆಗಳನ್ನು ಸಮರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : 13 ಕೋಟಿಯನ್ನು ನೀವು ಸೊಸೈಟಿಗಳಿಗೆ ರೀ ಇಂಬರ್ಸ್ ಮಾಡುತ್ತೀರಾ ಅಥವಾ ಸೊಸೈಟೀಸ್‌ಗಳೇ ಕಳೆದುಕೊಂಡು ಹೋಗುತ್ತವಾ? ಅದನ್ನು ಹೇಳಿ. ಸೊಸೈಟಿಗಳೆಲ್ಲಾ ಹಾಳಾಗಿ ಹೋಗುತ್ತವೆ. if you are reimbursing then you will be paying something... ನೀವು ರೀ ಇಂಬರ್ಸ್ ಮಾಡದೇ ವಜಾ ಮಾಡಿದ್ದೇವೆ ಅಂದರೆ who will suffer? ಸೊಸೈಟಿಗಳನ್ನು ಜಿಲ್ಲಾ ಬ್ಯಾಂಕಿನವರು ತೆಗೆದುಕೊಳ್ಳುತ್ತಾರೆ ಪಿಎಲ್‌ಡಿ ಯಿಂದ ಎಸ್‌ಎಲ್‌ಡಿಬಿ ಯವರು ವಸೂಲು ಮಾಡುತ್ತಾರೆ. ಅವರಿಗೆ ಸುಸ್ತಿ ಬಡ್ಡಿಯನ್ನು ಕೊಡಲೇಬೇಕಾಗುತ್ತದೆ. ಇದನ್ನು ರೀ ಇಂಬರ್ಸ್ ಮಾಡುತ್ತೀರಾ ಅದನ್ನು ಹೇಳಿ. ರೈತರ ಬಗ್ಗೆ ಈ ರೀತಿ ಹೇಳಿದರೆ ರೈತರ ಪ್ರತಿನಿಧಿಗಳು ತಾವುಗಳು ಚಪ್ಪಾಳೆ ತಟ್ಟುತ್ತೀರಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮುಖ್ಯ ಮಂತ್ರಿಗಳು ಎರಡು ವಿಚಾರದಲ್ಲಿ ಸ್ಪಷ್ಟನೆ ನೀಡಬೇಕು. ತಾವು ನಿನ್ನೆ ಎಲ್ಲಾ ವಿರೋಧ ಪಕ್ಷದ ಸದಸ್ಯರ ಸಭೆ ಕರೆದಿದ್ದೀರಿ ಅಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸಹಕಾರ ಸಚಿವರು ಇಬ್ಬರೂ ಇದ್ದರು ನಾವು ಸಲಹೆ ಕೊಟ್ಟೆವು. ಕಳೆದ 3-4 ವರ್ಷದಲ್ಲಿ ರೈತರು ಬಹಳ ಕಷ್ಟದಲ್ಲಿದ್ದಾರೆ. ಬರಗಾಲ ಅತಿವೃಷ್ಟಿ ನೆರೆ ಹಾವಳಿ ಇದೆ ಅದನ್ನು ಮಾನ್ಯ ಮುಖ್ಯ ಮಂತ್ರಿಗಳೂ ಒಪ್ಪಿಕೊಂಡರು ಸಹಕಾರ ಸಚಿವರೂ ಒಪ್ಪಿಕೊಂಡರು. ಅಲ್ಲಿ ಬೆಳೆ ಹಾಳಾಗಿದೆ ಎಂದು ಒಪ್ಪಿಕೊಂಡ ಮೇಲೆ ಕ್ರಾಪ್ ಕಾಂಪನ್‌ಸೇಷನ್ ಕೊಡುತ್ತಿದ್ದೇವೆಂದು ಸರಕಾರ ಹೇಳುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನಿಮ್ಮ ಸರಕಾರದ ಮುಂದೆ ಈ ವರದಿಯಿದ್ದಾಗ ನಾವು ಬಡ್ಡಿ, ಚಕ್ರಬಡ್ಡಿ ಮನ್ನಾ ಮಾಡಬೇಕೆಂದು ಕೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ಸುಸ್ತಿ ಬಡ್ಡಿಯನ್ನು ಅಷ್ಟೇ ಮನ್ನಾ ಮಾಡುತ್ತೇವೆಂದು ಹೇಳಿದರು. ಸುಸ್ತಿ ಬಡ್ಡಿಯನ್ನು ವಜಾ ಮಾಡುತ್ತೀರಿ. ಸರಕಾರದಿಂದ ಈ ಹಣ ಅಪೆಕ್ಸ್ ಬ್ಯಾಂಕ್‌ಗೆ, ಲ್ಯಾಂಡ್ ಬ್ಯಾಂಕ್‌ಗಳಿಗೆ ರೀ ಇಂಬರ್ಸ್ ಮಾಡುತ್ತೀರೋ ಇಲ್ಲವೇ ಅವರೇ ಮಾಡಿಕೊಳ್ಳಲಿ, ಅವರೇ ಅಡ್ಜಸ್ಟ್ ಮಾಡಬೇಕೋ ಈ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕು. ಪುನಃ ನಾನು ರೈತರ ಪರವಾಗಿ ತಮ್ಮಲ್ಲಿ ವಿನಂತಿಸುತ್ತಿದ್ದೇನೆ. ಬಡ್ಡಿ ರಿಯಾಯಾತಿ ಕೊಡುವುದಿಲ್ಲವೆಂದು ಹೇಳುತ್ತಿದ್ದೀರಿ ಇದು ತಪ್ಪು ದಾರಿ. ತಪ್ಪು ಹೆಜ್ಜೆ ಇಟ್ಟಿದ್ದೀರಿ. ರೈತರು ಇದರ ಬಗ್ಗೆ ಕ್ಷಮೆ ಮಾಡುವುದಿಲ್ಲ. ಪುನಃ ಇದರ ಬಗ್ಗೆ ವಿಚಾರ ಮಾಡಿ ಬಡ್ಡಿ ಮನ್ನಾ ಮಾಡಬೇಕೆಂದು ಒತ್ತಾಯಿಸುತ್ತೇನೆ. 1991ರಲ್ಲಿ ಕಾವೇರಿ ನೀರಿನ ಹಂಚಿಕೆ ವಿಚಾರದಲ್ಲಿ ಏನು ಗಲಭೆಯಾಗಿತ್ತು, ಗಲಾಟೆಗಳಾಗಿತ್ತು ಅದರ ಬಗ್ಗೆ ತನಿಖೆ ಮಾಡಲು ಜಸ್ಟೀಸ್ ವೆಂಕಟೇಶ ಕಮಿಷನ್ ಅನ್ನು ನೇಮಕ ಮಾಡಿದಿರಿ ಅವರ ವರದಿ ಬಂದು ಎಷ್ಟೋ ತಿಂಗಳಾಯಿತು ಆದರೆ ಆ ವರದಿಯನ್ನು ಇವತ್ತೂ ಸದನದ ಮುಂದೆ ಇಟ್ಟಿಲ್ಲ. ಅದರ ಬಗ್ಗೆ ಏನಾಯಿತೆಂದು ಗೊತ್ತಾಗಲಿಲ್ಲ. ಉತ್ತರ ಕೊಡ ಕೊಟ್ಟಿಲ್ಲ. ತಮ್ಮ ಸರಕಾರದ ಮೇಲೆ ಟೀಕೆ ಮಾಡಿರಬಹುದು ಅಥವಾ ಸಲಹೆ ಕೊಟ್ಟಿರಬಹುದು ನನಗೆ ಗೊತ್ತಿಲ್ಲ. ಕಾಲಿ ವರದಿಯನ್ನು ನಾಡಿನ ಜನ ಕಾತುರದಿಂದ ಅದರಲ್ಲಿ ಏನು ಇದೆ ಎಂದು ತಿಳಿದುಕೊಳ್ಳುವ ಇಚ್ಛೆಯಿಂದಿದ್ದಾರೆ. ಇದನ್ನು ಯಾವಾಗ ಸದನದ ಮುಂದಿಡುತ್ತೀರಿ ಹಾಗಾಗಿ ಆ ವರದಿಯನ್ನು ಸಹಾ ಯಾವಾಗ ಸದನದ ಮುಂದೆ ಇಡುತ್ತೀರಿ?

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಬರಗಾಲ ಬೆಳೆ ಹಾಳಾದಾಗ ಆಗಿರುವುದರಿಂದ ನಷ್ಟದಿಂದ ಸಾಲ ಬಂದಿದೆ ರೈತರಿಗೆ ಎಂದು ಮಾತನಾಡುತ್ತಿದ್ದರು. ಅದೇನು ಅಂಥ ಮುಖ್ಯ ಕಾರಣವಲ್ಲ. ಬೆಲೆ ಹಾಳಾದಾಗ ಬೆಲೆಯನ್ನು ಸರ್ಕಾರವೇ ಹಾಳು ಮಾಡಿದಾಗ ಆಗುವ ನಷ್ಟವನ್ನು ಯಾರು ತುಂಬುತ್ತಾರೆ ಎನ್ನುವುದು ನಮ್ಮ ಪ್ರಶ್ನೆ. ಬೆಲೆ ಹಾಳಾದಾಗ ಹೋದವಾರ ಹತ್ತಿ ರಫ್ತನ್ನು ಸರ್ಕಾರ ಬಂದ್ ಮಾಡಿದೆ. ಅವಶ್ಯಕತೆ ಇಲ್ಲದಿದ್ದರೂ ಹತ್ತಿಯನ್ನು ಆಮದು ಮಾಡಿಕೊಳ್ಳುತ್ತಿದೆ. ಕಳೆದ 2400 ರೂಪಾಯಿ ಇದ್ದದ್ದು ಈ ವಾರ 1800 ರೂಪಾಯಿ ಆಗಿದೆ. ಈ ಬೆಲೆಯನ್ನು ಹಾಳು ಮಾಡುವುದಕ್ಕೆ ಸರ್ಕಾರವೇ ಕಾರಣ. ಇದರಿಂದಾಗುವ ನಷ್ಟವನ್ನು ಯಾರು ತುಂಬುತ್ತಾರೆ. ಬಡ್ಡಿ ಸುಸ್ತಿ ಬಡ್ಡಿ ಅಲ್ಲ, ಅದು ಬಹಳ ಸಣ್ಣ ಸಮಸ್ಯೆ. ಕಳೆದ ತಿಂಗಳು ಎರಡು ಲಕ್ಷ ಟನ್ ಪಾಮಾಯಿಲ್‌ನ್ನು ನಮ್ಮ ಸರ್ಕಾರ ಆಮದು ಮಾಡಿಕೊಂಡಿದೆ. ಆ ತಕ್ಷಣ ಶೇಂಗಾ ಎಣ್ಣೆ ಬೆಲೆ ಬಿದ್ದುಹೋಗಿದೆ. ಶೇಂಗಾ ಬೆಲೆ ಬಿದ್ದುಹೋಗಿದೆ. ಈ ರೀತಿ ಕೇಂದ್ರ ಸರ್ಕಾರವೇ ಬೆಲೆಯನ್ನು ಹಾಳು ಮಾಡಿದಾಗ ಬೆಲೆ ಹಾಳು ಮಾಡಿ ಆಗಿರುವಂಥ ನಷ್ಟವನ್ನು ಯಾರು ತುಂಬುತ್ತಾರೆ? ಇದು ನಮ್ಮ ಮುಖ್ಯವಾದ ಪ್ರಶ್ನೆ. ಯಾರು ತುಂಬಬೇಕು. ಅದಕ್ಕೆ ನಾನು ಹೇಳಿದ್ದು ರೈತ ಅಲ್ಲ ಸಾಲಗಾರ, ಸರ್ಕಾರದ ನೀತಿಯಿಂದ ಏನು

ಈ ಕೃತಕ ಸಾಲ ಸೃಷ್ಟಿಯಾಗಿದೆ, ಅದನ್ನು ಸರ್ಕಾರವೇ ತೀರಿಸಿಕೊಳ್ಳಬೇಕು. ಇದರ ಬಗ್ಗೆ ಏನು ಹೇಳುತ್ತೀರಿ? ಹೇಳಿ ಇದಕ್ಕೆ ಯಾರು ಜವಾಬ್ದಾರರು? ಯಾರೂ ಕೇಳುತ್ತಿಲ್ಲ, ವಿರೋಧ ಪಕ್ಷದ ನಾಯಕರಿಗೂ ಬೇಕಾಗಿಲ್ಲ, ಸಭಾನಾಯಕರಿಗೂ ಬೇಕಾಗಿಲ್ಲ. What is this? What are you doing both of you-leader of the House and the Leader of the Opposition...

Sri R.V. Deshapande : Mr. Ghorpade is asking me whether Panchayat Raj Bill will be taken up for discussion. I am saying I don't know about it.

Prof M.D. Nanjunda Swamy : You cannot do that when a Member is speaking.

Sri R.V. Deshapande : You need not address me. You tell the Speaker whatever you want to say. You don't show your extra intelligence.

Prof : M.D. Nanjundaswamy : I know, I need not learn from you. I expect discipline not only from the leader of the House but also from the leader of the Opposition. I expect discipline.

Sri R.V. Deshapande : I am disciplined.

Prof : M.D. Nanjundaswamy : You are not...

Sri R.V. Deshapande : Because the Panchayat Raj Minister asking me.

Proj M.D. Najundaswamy : You are not... ಮುಖ್ಯವಾದ ವಿಷಯವನ್ನು ನಾನು ಮಾತನಾಡುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ನೀವು ಮಾತನಾಡಿದಷ್ಟೇ ಮುಖ್ಯವಲ್ಲ, ಎಲ್ಲರೂ ಮಾತನಾಡಿದ್ದು ಮುಖ್ಯ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಹೌದು. ನೀವು ಮಾತನಾಡುವಾಗ ನಾನು ಆ ರೀತಿ ಬಿಹೇವ್ ಮಾಡುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನೀವೇನು ಸರ್ವಜ್ಞರಲ್ಲ, ಎಲ್ಲರೂ ಮಾತನಾಡಿದ್ದು ಮುಖ್ಯ ಇದೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ನೀವು ಮಾತನಾಡುವಾಗ ಅಥವಾ ಯಾರೇ ಮಾತನಾಡುವಾಗ ನಾನು ಆ ರೀತಿ ನಡೆದುಕೊಂಡಿಲ್ಲ. ಯಾವತ್ತಾದರೂ ನಾನು ಅಶಿಸ್ತಿನಿಂದ ನಡೆದುಕೊಂಡಿದ್ದೇನಾ?

Sri R.V. Deshapande : I have not interfered, I never interfered when you are talking. After all when the Senior Minister asked me.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಏನು ಸೀರಿಯಸ್?

ಉಪಾಧ್ಯಕ್ಷರು : ಮಾನ್ಯ ನಂಜುಂಡಸ್ವಾಮಿಯವರೇ, ತಾವು ಮುಂದುವರಿಸಿ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಯಾರೇ ಸದಸ್ಯರು ಮಾತನಾಡುವಾಗಲೂ ಕನಿಷ್ಟ ಸಭಾನಾಯಕರು ಹಾಜರಿದ್ದಾಗ ಗಮನ ಕೊಡಬೇಕು. ವಿರೋಧ ಪಕ್ಷ ಕೂಡ ಅವರ ಮರ್ಯಾದೆ ಉಳಿಸಿಕೊಳ್ಳುವುದಕ್ಕೋಸ್ಕರ ಎಲ್ಲಾ ಸದಸ್ಯರ ಮರ್ಯಾದೆಯನ್ನು ಕಾಪಾಡಬೇಕು. ನಾನು ಮಾತನಾಡುತ್ತಿದ್ದುದು ಬೆಲೆ ಹಾಳಾದಾಗ ಬೆಲೆಯನ್ನು ಸರ್ಕಾರವೇ ಹಾಳು ಮಾಡಿದಾಗ ಆಗುವ ನಷ್ಟವನ್ನು

ಯಾರು ತುಂಬುತ್ತಾರೆ ಎಂದು ಕೇಳಿದೆ. ತಾವು ಕೇಳಿಸಿಕೊಳ್ಳಲಿಲ್ಲ. ನಿಮ್ಮ ಸರ್ಕಾರವೇ ಹೋದವಾರ ಹತ್ತಿ ರಫ್ತನ್ನು ಬಂದ್ ಮಾಡಿದೆ. ಬೇಕಿಲ್ಲದಿದ್ದರೂ ಹತ್ತಿಯನ್ನು ಆಮದು ಮಾಡಿಕೊಳ್ಳುತ್ತಿದೆ. ಹೋದವರ್ಷ ಕೂಡ ಇದೇ ಆಗಿದ್ದು. 17 ಲಕ್ಷ ಟನ್ ಗೋಧಿ ನಮಗೆ ಬೇಕಿರಲಿಲ್ಲ, ಸಾಕಷ್ಟು ಬೆಳೆದಿದ್ದರು ಪಂಜಾಬ್ ರೈತರು. ಕೇಂದ್ರ ಸರ್ಕಾರ ಆದರೂ ಆಮದು ಮಾಡಿಕೊಂಡರು. ಅದರಿಂದ ಅಕ್ಕಿ ಬೆಲೆ ಭತ್ತದ ಬೆಲೆ ಬಿದ್ದುಹೋಯಿತು. ಇದರಿಂದ ಆಗುವ ನಷ್ಟವನ್ನು ಯಾರು ಭರ್ತಿ ಮಾಡುತ್ತಾರೆ? ಆ ಕಾರಣ ಬಡ್ಡಿ ರದ್ದು, ಸುಸ್ತಿ ಬಡ್ಡಿ ರದ್ದು ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಬೆಲೆಯನ್ನು ನೀವು ಏನಾದರೂ ವೈಜ್ಞಾನಿಕವಾಗಿ ರಕ್ಷಣೆ ಮಾಡುವಂಥ ವ್ಯವಸ್ಥೆ ಮಾಡುತ್ತೀರಾ? ಆಲೋಚನೆ ಮಾಡಿ. ಇಲ್ಲದಿದ್ದರೆ ಈ ವರ್ಷವೇ ಇದಾಗಿದೆ, ಇನ್ನು ಮುಂದಿನ ವರ್ಷದಿಂದ 90 ಲಕ್ಷ ಟನ್ ಆಹಾರವನ್ನು ಆಮದು ಮಾಡಿಕೊಳ್ಳುತ್ತದೆ ಕೇಂದ್ರ ಸರ್ಕಾರ. ಇವತ್ತು ಹೇಳುತ್ತಿದ್ದೇನೆ ನಿಮಗೆ, ಎರಡು ಲಕ್ಷ ಟನ್ ಪಾಮಾಯಿಲ್ ಬಂದಿರತಕ್ಕೆ ಕೊಬ್ಬರಿ ಎಣ್ಣೆ ಬೆಲೆ, ಕೊಬ್ಬರಿ ಬೆಲೆ, ತೆಂಗಿನ ಕಾಯಿಯ ಬೆಲೆ, ಶೇಂಗಾ ಬೆಲೆ ಇಳಿದಿದೆ. ಹತ್ತಿ ಆಮದು ಮಾಡಿಕೊಂಡು ಹತ್ತಿ ಬೆಲೆ, ರೇಷ್ಮೆಯನ್ನು ಆಮದು ಮಾಡಿಕೊಂಡು ರೇಷ್ಮೆ ಬೆಲೆ ಇಳಿದಿದೆ. ಇನ್ನು ಈ ವರ್ಷ 90 ಲಕ್ಷ ಟನ್ ಆಮದು ಮಾಡಿಕೊಳ್ಳುತ್ತಾರೆ. ಆಗ ನಿಮಗೆ ಏನು ವಸೂಲಾತಿಯಾಗುತ್ತದೆ ಎಂಬುದರ ಬಗ್ಗೆ ಸಹಕಾರಿ ಮಂತ್ರಿಗಳು ಸ್ವಲ್ಪ ಆಲೋಚನೆ ಮಾಡಿ. ಇನ್ನು ಈ ವರ್ಷ 90 ಲಕ್ಷ ಟನ್ ಆಮದು ಮಾಡಿಕೊಳ್ಳುತ್ತಾರೆ ಆಗ ನಿಮಗೆ ಏನು ವಸೂಲಾತಿ ಆಗುತ್ತದೆ ಎಂದು ಸಹಕಾರ ಮಂತ್ರಿಗಳು ಸ್ವಲ್ಪ ಆಲೋಚನೆ ಮಾಡಿ. ಬಡ್ಡಿ ಸುಸ್ತಿಬಡ್ಡಿ ರದ್ದು ಮಾಡುತ್ತೇವೆ ಎಂದು ಸುಮ್ಮನೆ ಯಾಕೆ ದೊಡ್ಡ ಘೋಷಣೆ ಇದರಿಂದೇನೂ ಸಮಸ್ಯೆ ಪರಿಹಾರ ಆಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ 89ನೇ ಇಸವಿ ಚುನಾವಣೆ ಸಂದರ್ಭದಿಂದಲೂ ಇದು ಸ್ವತಃ ಕಾಂಗ್ರೆಸ್‌ನವರು ಹೇಳಿಕೊಂಡು ಬಂದಿರೋದು. ಆಗ ಸ್ಪಷ್ಟಮಾಡಿದರು ತಾವು ಕೇಂದ್ರಕ್ಕೆ ಕಳಿಸುತ್ತೇವೆ, ಸಾಲ ಮನ್ನಾ ಮಾಡುತ್ತೇವೆಂದು ನಾವು ಹೇಳಲಿಲ್ಲ ಎಂದು ಹೇಳಿದರು. 1989ರಿಂದ ಮೂರು ಮುಖ್ಯಮಂತ್ರಿಗಳಾದರೂ ಕೂಡ ಇದೇ ಫಜೀತಿಯಾಗಿದೆ ರೈತರಿಗೆ. ಈ ಮಧ್ಯೆ ಹಿಂದಿನ ಮುಖ್ಯಮಂತ್ರಿಗಳಾಗುವ ಮುಂಚೆ ಹೇಳಿಕೊಂಡರು. ಮುಖ್ಯ ಮಂತ್ರಿಯಾದಾಗ ಆಗುವುದಿಲ್ಲ ಎಂದು ಹೇಳಿದರು. ಈಗ ಇಡೀ ರಾಜ್ಯದಲ್ಲಿ ಡಂಗೂರ ಸಾರುತ್ತ ಬರುತ್ತಿದ್ದಾರೆ ಸಾಲ ಮನ್ನಾ ಮಾಡಲು ನನಗೆ ಕೊಡಲಿಲ್ಲ ಎಂದು ಹೇಳಿದರು. ನಿನ್ನೆ ವಿರೋಧಪಕ್ಷದವರ ಎಲ್ಲ ನಾಯಕರನ್ನು ಕರೆದಾಗ ಸನ್ಮಾನ್ಯ ಮುಖ್ಯಮಂತ್ರಿಗಳೇ ಸ್ಪಷ್ಟ ಮಾಡಿದ್ದಾರೆ, ತೊಂದರೆ ಇದೆ, ಖಂಡಿತ ಆ ಕಡೆ ನಾನು ಗಮನ ಕೊಡುತ್ತೇನೆಂದು ಹೇಳಿದ್ದಾರೆ. ಈಗ ಹೇಳುತ್ತಿದ್ದಾರೆ ನಾನು ಬರೀ ಸುಸ್ತಿ ಬಡ್ಡಿ ಮಾತ್ರ ಮನ್ನಾ ಮಾಡುತ್ತೇನೆ, ಬೇರೆ ಏನನ್ನೂ ಮಾಡುವುದಕ್ಕಾಗುವುದಿಲ್ಲ ಎಂದು. ನಿನ್ನೆ ವಿರೋಧಪಕ್ಷದ ಸಭೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ, ಬಲಾತ್ಕಾರ ಸಾಲ ವಸೂಲಿಯಾಗುತ್ತಿದೆ, ಪಾತ್ರೆಪಡಗ ಹರಾಜು ಆಗುತ್ತಿದೆ. ಕೆಲವು ಭಾಗದಲ್ಲಿ ಬತ್ತವನ್ನೇ ಸೀಜ್ ಮಾಡಿದ್ದಾರೆ. ಹಾಗೆ ಸೀಜ್ ಮಾಡಿರುವ ಬತ್ತವೆಲ್ಲ ಹಾಳಾಗಿದೆ ಎಂದು, ಇಂತಹ ಸಂಪೂರ್ಣ ರೈತರ ಕಷ್ಟವೆಲ್ಲ ಮುಖ್ಯಮಂತ್ರಿಗಳಿಗೆ ಗೊತ್ತಿದೆ. ನಿನ್ನೆ ವಿರೋಧಪಕ್ಷದವರ ಜೊತೆ ಮಾತನಾಡುವಾಗ ತುಂಬಾ ಕಳಕಳಿಯಿಂದ ಹೇಳಿದ್ದಾರೆ. ಈಗ ನೋಡಿದರೆ ಖಡಾಖಂಡಿತವಾಗಿ ಒಂದು ರೀತಿ ಕಡ್ಡಿಮುರಿದಂತೆ ಹೇಳುತ್ತಿದ್ದಾರೆ. ಸುಸ್ತಿ ಬಡ್ಡಿ ಮನ್ನಾ ಮಾತ್ರ ಮಾಡುತ್ತೇನೆ. ಬೇರೆ ಏನೂ ಮಾಡುವುದಕ್ಕಾಗುವುದಿಲ್ಲ ಎಂದು. ಮುಖ್ಯಮಂತ್ರಿಗಳಿಗೆ ಎಲ್ಲಾ ಸಮಸ್ಯೆ ಗೊತ್ತಿರುವಂಥದೇ. ನೆರೆಹಾವಳಿ ಬಗ್ಗೆ ಭೂಕಂಪದ ಬಗ್ಗೆ ಗೊತ್ತಿದೆ. ನಂಜುಂಡಸ್ವಾಮಿಯವರು ಹೇಳಿದಂತೆ ರೈತರು ಬೆಳೆದ ಬೆಳೆಗೆ ದಿನೇ ದಿನೇ ರೇಟ್ ಇಳಿಯುತ್ತಿದೆಯೇ ವಿನಾ ಬೇರೇನೂ ಇಲ್ಲ, ಅವನು

ಸಾಯುವಂತಹ ಸ್ಥಿತಿಯಲ್ಲಿ ಇರುವಾಗ, ಇಷ್ಟು ಕಠೋರವಾಗಿ ರೈತರ ಕುರಿತು ಅವರ ತೀರ್ಮಾನದಿಂದ ಅವರ ಶಾಪಕ್ಕೆ ಬಲಿಯಾಗಬೇಕಾಗುತ್ತದೆ. ಈ ರಾಜ್ಯದಲ್ಲಿ ರೈತರ ಶಾಪಕ್ಕೆ ಮುಖ್ಯ ಮಂತ್ರಿಗಳು ಬಲಿಯಾಗಬೇಕಾಗುತ್ತದೆ ಅದಕ್ಕಾಗಿ ನಾನು ಮತ್ತೊಮ್ಮೆ ಮುಖ್ಯಮಂತ್ರಿಗಳಿಗೆ ಹೇಳಬಯಸುತ್ತೇನೆ.

ಕೇವಲ ಸುಸ್ತಿ ಬಡ್ಡಿ ಮನ್ನಾ ಮಾಡಿದರೆ ನಿಮ್ಮ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಒಂದು ಪೈಸೆ ಕೂಡ ನಷ್ಟವಾಗುವುದಿಲ್ಲ, ಸಂಬಂಧಪಟ್ಟವರೇ ಆ ಬಡ್ಡಿಯನ್ನು ತುಂಬಿಕೊಡುತ್ತಾರೆ. ನೀವು ಏನು ಮಾಡಿಕೊಟ್ಟ ಹಾಗಾಯಿತು? ಅದಕ್ಕಾಗಿ ಇಡೀ ರಾಜ್ಯದ ರೈತರ ಪರವಾಗಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ, ಮತ್ತೊಮ್ಮೆ ಮರುಪರಿಶೀಲನೆ ಮಾಡಿ, ಕನಿಷ್ಠ ಬಡ್ಡಿ ಸುಸ್ತಿಬಡ್ಡಿಯನ್ನಾದರೂ ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿ ರಾಜ್ಯದ ರೈತರ ಶಹಭಾಶ್‌ಗಿರಿ ತೆಗೆದುಕೊಳ್ಳುವ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕು.

ಶ್ರೀ ವೈ.ಕೆ. ರಾಮಯ್ಯ : ಅಧ್ಯಕ್ಷರೇ, ಈ ಸಭೆಯ ಒಳಗೆ ಹೊರಗಡೆ ಒಂದು ಸಾರಿಯಲ್ಲ 10 ಸಾರಿ ರಾಜ್ಯದ ಮುಖ್ಯಮಂತ್ರಿಗಳು ಕರ್ನಾಟಕದ ಯೋಜನಾ ವೆಚ್ಚವನ್ನು ಈ ವರ್ಷ ಕಡಿತ ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ನಾನು ಮಾತನಾಡುವಾಗ ಪ್ರಸ್ತಾಪ ಮಾಡಿದ, ಮುಖ್ಯಮಂತ್ರಿಗಳೇ ಅದು ನಿಮ್ಮ ಕೈಲಿಲ್ಲ, ಅದು ಅನಿವಾರ್ಯ. ಏಕೆಂದರೆ ಅವರೇ ಕೊಟ್ಟಿರುವ ಅಂಕಿಅಂಶದ ಪ್ರಕಾರ ಅವರು ನಮಗೆ ದಾರಿ ತೋರಬೇಕಾಗುತ್ತದೆ. ಯೋಜನಾ ವೆಚ್ಚದ ಈ ವರ್ಷದ ಹೆಚ್ಚಳ 58 ಭಾಗ, ನೀವೇ ಒಪ್ಪಿಕೊಂಡಿರುವ ಪ್ರಕಾರ ನಿಮ್ಮ ಕ್ರೋಢೀಕರಣದ ಹೆಚ್ಚಳ ಕೇವಲ 21 ಭಾಗ increase in the size of the State Plan is 58%. Increase in the mobilisation is only 21@. I would like to know from the Hon'ble Chief Minister how he is going to manage this?

ಎರಡನೆಯದು, ಪದಪ್ರಯೋಗಗಳಿಂದ ಎಲ್ಲ ಕಾಲಕ್ಕೂ ಅಡ್ಡದಾರಿ ಹಿಡಿಸುವಂತಹ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದೇವೆ ನಾವು. ಇಲ್ಲಿ ಮೂರು ಪದ ಪ್ರಯೋಗಗಳನ್ನು ಮಾಡಿದ್ದಾರೆ. ಉತ್ತರ ಬಂದಾಗ ಪ್ರತಿ ಸಾರಿ ನಿಮ್ಮನ್ನು ಕೇಳುವುದಕ್ಕಾಗುವುದಿಲ್ಲ, ಹಣ ಒದಗಿಸಲಾಗಿದೆ ಒಂದು, ಹಣ ಖರ್ಚು ಮಾಡಲಾಗಿದೆ ಎರಡು, ಹಣ ಬಿಡುಗಡೆ ಮಾಡಲಾಗಿದೆ ಮೂರು, ಹಣ ಒದಗಿಸುವುದು ಯೋಜನೆಯಲ್ಲಿ, ಹಣ ಖರ್ಚು ಮಾಡಲಾಗಿದೆ ಎಂಬ ಉತ್ತರ ಎಲ್ಲಿಗೆ ಬರುತ್ತದೆ ಎಂದು ನಾನು ಮೊನ್ನೆ ಕ್ಲಾರಿಫೈ ಮಾಡಿದ ಬಿಲ್ ಮಾಡುವವರೆಗೆ ಆ ಹಣ ನೀವು ಕೊಟ್ಟಿಲ್ಲ, ಬಿಡುಗಡೆ ಮಾಡಲಾಗಿದೆ ಅನ್ನುವುದು ಒಂದು. ಆದ್ದರಿಂದ ಮುಖ್ಯಮಂತ್ರಿಗಳು ಈ 58 ಭಾಗ ಏನು ಜಾಸ್ತಿಯಾಗಿದೆಯೋ ಇದರಲ್ಲಿ ಹಣ ಖರ್ಚು ಮಾಡಿರುವುದು ಎಷ್ಟು ಅನ್ನುವುದು ಬೇಕಾಗಿಲ್ಲ, ಒದಗಿಸಿರುವುದು ಎಷ್ಟು ಅಂತ ಬೇಕಾಗಿಲ್ಲ, ಹಣ ಬಿಡುಗಡೆ ಮಾಡಿರುವುದೆಷ್ಟು ಎಂದು ತಿಳಿಸಬೇಕು.

ಹಣ ಬಿಡುಗಡೆ ಮಾಡಿರುವುದು ಎಷ್ಟೆಂದು ದಯಮಾಡಿ ತಿಳಿಸಬೇಕು. ಇನ್ನೂ ಒಂದು ವಿಚಾರವಿದೆ. ನಾವು ಬರೀ ಮಾತಿನಲ್ಲಿ ಹೇಳಲಿಲ್ಲ, ನಿಮ್ಮ ಸರ್ಕಾರದ ಲಾಂಛನದಲ್ಲಿ ಹೊರಟಿರತಕ್ಕಂಥ ಪತ್ರವನ್ನು ನಿಮ್ಮ ಕೈಗೆ ಕೊಟ್ಟಿದ್ದೇವೆ. ನೀರಾವರಿ ಇಲಾಖೆಯಲ್ಲಿ 67 ಭಾಗಕ್ಕೆ ನಾವು ಸೀಮಿತಗೊಳಿಸಿ ಪ್ರೋಗ್ರಾಂ ಅನ್ನು ರಿವೈಸ್ ಮಾಡಬೇಕೆಂದು ಬರೆದಿರುವ ಪತ್ರವನ್ನು ನೀವು ಕೊಟ್ಟಿದ್ದೀರಿ. ಅದಕ್ಕೆ ಇವೊತ್ತು ಮುಖ್ಯಮಂತ್ರಿಗಳು ವ್ಯಾಖ್ಯಾನಿಸುತ್ತಾರೆ, ಮತ್ತು ಮೊನ್ನೆ ದಿವಸ ಕೂಡ ಪತ್ರಿಕೆಯಲ್ಲಿ

ಹೇಳಿಕೆ ಕೊಟ್ಟಿದ್ದಾರೆ. ಏನೆಂದರೆ, ನಾವು ಕಡಿತ ಮಾಡುತ್ತಿಲ್ಲ, ಆರ್ಥಿಕ ಶಿಸ್ತನ್ನು ತರುತ್ತಿದ್ದೇವೆ ಎಂದು. ಬಹಳ ಸಂತೋಷ. We congratulate the Chief Minister who is trying to bring discipline in finance.

ಆದರೆ, ಕಡಿತಕ್ಕೂ ಶಿಸ್ತಿಗೂ ವ್ಯತ್ಯಾಸ ಗೊತ್ತಿಲ್ಲದಿರುವಷ್ಟು ನಾವ್ಯಾರು ದಡ್ಡರಲ್ಲರೆಂಬುದು ನನ್ನ ಭಾವನೆ. ಅದಕ್ಕೆ, ನಾವು ಕಡಿತ ಮಾಡಿಲ್ಲ, ಆರ್ಥಿಕ ಶಿಸ್ತನ್ನು ತಂದಿದ್ದೇವೆ ಎಂದು ಇವೊತ್ತು ಹೇಳಿದಿರಿ. ದಯಮಾಡಿ ಪತ್ರಗಳನ್ನು ಓದುತ್ತೀರಾ? ಇಲ್ಲಿರತಕ್ಕಂಥ 224 ಜನ ಸದಸ್ಯರುಗಳು ಅದನ್ನು ಕಡಿತ ಎಂದು ಒಪ್ಪಿಕೊಳ್ಳುತ್ತಾರಾ? ಶಿಸ್ತು ಎಂದು ಒಪ್ಪಿಕೊಳ್ಳುತ್ತಾರಾ? ಈ ವರ್ಷದ ಕಾರ್ಯಕ್ರಮಗಳನ್ನು ಪುನರ್ ಪರಿಶೀಲಿಸಿ 67ರ ಭಾಗಕ್ಕೆ ಸೀಮಿತಗೊಳಿಸಬೇಕು, ಆದರೆ, ರಾಜ್ಯದ ರೈತರ ದೃಷ್ಟಿಯಿಂದಲ್ಲ, ಸರ್ಕಾರದ ಹಿತದೃಷ್ಟಿಯಿಂದ ಎಂದು ಪತ್ರದಲ್ಲಿ ಬರೆದಿದ್ದಾರೆ. ಆದುದರಿಂದ, ಯೋಜನಾ ಗಾತ್ರದಲ್ಲಿ 20 ಪರ್ಸೆಂಟ್ ಮಾತ್ರ ಜಾಸ್ತಿ ವಸೂಲು ಮಾಡಿ 58 ಪರ್ಸೆಂಟ್ ಹೆಚ್ಚಿಗೆ ಮಾಡಿರುವಾಗ ನಿಮ್ಮಷ್ಟು ಅನುಭವ ನನಗಿಲ್ಲ, ಏಕೆಂದರೆ, ನಾನು ಯಾವತ್ತೂ ಹಣಕಾಸು ಮಂತ್ರಿಯಾಗಿಲ್ಲ. ಇದನ್ನು ಹೇಗೆ ಸರಿದೂಗಿಸುತ್ತೀರಿ? ಎಂದು ಹೇಳಬೇಕು. ಎರಡನೆಯದಾಗಿ, ನಿಯಮ 68ರಡಿಯಲ್ಲಿ ಇವೊತ್ತು ವಿಷಯವನ್ನು ಚರ್ಚೆಗೆ ತಂದಿದ್ದೇನೆ. ನೀರಾವರಿ ಬಗ್ಗೆ ಚರ್ಚೆಯಾಗಿದೆ. ಅದರ ಬಗ್ಗೆ ತಾವು ಒಪ್ಪಿಕೊಂಡು, ಇದರ ಬಗ್ಗೆ ಉತ್ತರಿಸುವಾಗ ನಮಗೆ ಭರವಸೆ ಕೊಡಬೇಕಾಗಿದೆ. ನಿರ್ದಿಷ್ಟವಾದ ಭರವಸೆ ಬೇಕಾಗಿದೆ. ನೀವು ಬೇರಾವುದೇ ಕ್ಷೇತ್ರದಲ್ಲಿ ಯೋಜನೆಗೆ ಕೊಟ್ಟಿರುವಷ್ಟು ಅನುದಾನದ ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ, ಆದರೆ, ಕೊನೇ ಪಕ್ಷ ನೀರಾವರಿಗಾಗಿ ಒದಗಿಸಿರುವ ಹಣವನ್ನಾದರೂ ಖರ್ಚು ಮಾಡುತ್ತೇವೆ, ಬಿಡುಗಡೆ ಮಾಡುತ್ತೇವೆಂದು ಭರವಸೆ ಕೊಡಬೇಕು.- ಇದೊಂದು ವಿಷಯದಲ್ಲಿ ನಾನು ಕಾಂಪ್ರಮೈಸ್ ಆಗಿಲ್ಲ. ನನಗೆ ಉತ್ತರ ಕೊಡಬೇಕು. ಕಡೇ ಪಕ್ಷ ನೀರಾವರಿ ಕ್ಷೇತ್ರದ ಯೋಜನೆಯಡಿ ಅಳವಡಿಸಿರುವಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆನ್ನುವಂಥ ಭರವಸೆ ಕೊಡಬೇಕು.

+ ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಪೂರಕವಾಗಿ ನಾನು ಒಂದು ವಿಚಾರ ಹೇಳುತ್ತೇನೆ. ಏನೆಂದರೆ, ಹಣಕಾಸು ಇಲಾಖೆಯಿಂದ ಇಂತಹ ಸುತ್ತೋಲೆ ಹೋಗಿಲ್ಲವೆಂದು ಹೇಳಿದರು. ಮಾನ್ಯ ಸದಸ್ಯರಾದ ರಾಮಯ್ಯನವರು ಹೇಳಿದಂತೆ ಪತ್ರ ಹೋಗಿರತಕ್ಕಂಥಾದ್ದು ನೀರಾವರಿ ಇಲಾಖೆಯಿಂದ. ನನಗೆ ಬೇಕಾಗಿರುವುದು ಸ್ಪಷ್ಟೀಕರಣ ಮಾತ್ರ. ಇದು ಬಹಳ ಮುಖ್ಯವಾದಂಥ ವಿಚಾರ. ಈಗ ಹಣಕಾಸು ಇಲಾಖೆಯಿಂದ ಸುತ್ತೋಲೆ ಹೋಗಿಲ್ಲವೆಂದು ತಾವು ಹೇಳಿದಿರಿ. ಕಡಿತಕ್ಕೆ ಸಂಬಂಧಿಸಿದಂತೆ ನೀರಾವರಿ ಇಲಾಖೆಯಿಂದ ಸುತ್ತೋಲೆ ಹೋಗಿದೆ. ಅದನ್ನು ನಿನ್ನೆ ಸದನದಲ್ಲಿ ಪೂರ್ಣ ಓದಿ ಅದರ ನಕಲನ್ನು ಸಹ ಕೊಟ್ಟಿದ್ದೇನೆ, ಈಗಲೂ ಇನ್ನೊಂದು ಸಾರಿ ಅದರ ನಕಲನ್ನು ಕಳುಹಿಸಿಕೊಡುತ್ತೇನೆ. ಆದುದರಿಂದ, ಸದಸ್ಯರಾದ ರಾಮಯ್ಯನವರಿಗೆ ಇರತಕ್ಕಂಥ ಸಂಶಯ ನನಗೂ ಕೂಡ ಇದೆ. ನೀರಾವರಿ ಕ್ಷೇತ್ರದಲ್ಲಿ ಶೇಕಡ 67ಕ್ಕಿಂಥ ಹೆಚ್ಚು ಹಣವನ್ನು ಖರ್ಚು ಮಾಡುವುದಿಲ್ಲವೆಂಬ ನಿರ್ಧಾರಕ್ಕೆ ನೀವು ಬಂದಿದ್ದೀರಿ. ಅನಂತರ ವಾರ್ಷಿಕ ಯೋಜನಾ ಗಾತ್ರ ಕಡಿಮೆಯಾಗುವುದಿಲ್ಲವೆಂಬ ನಿಮ್ಮ ವಾದಕ್ಕೆ ನೀವು ಹೊಸ ಪ್ಲಾನಿಂಗ್ ಬೋರ್ಡ್ ಮಾಡಿದ್ದೀರಿ. ಅದು ನವೆಂಬರ್ ತಿಂಗಳಿನಲ್ಲಿ ಒಂದು ಸಭೆ ನಡೆಸಿದೆ. ಅದರಲ್ಲಿ ಈ ಸಲದ ಯೋಜನಾಗಾತ್ರವನ್ನು ಕಡಿತ ಮಾಡಲೇಬೇಕಾದಂಥ ಅನಿವಾರ್ಯ ಇದೆಯೆಂಬ ನಿರ್ಣಯವನ್ನು ಪ್ಲಾನಿಂಗ್ ಬೋರ್ಡ್‌ನವರು ತೆಗೆದುಕೊಂಡಿದ್ದು ನಿಮ್ಮ ಗಮನಕ್ಕೆ ಬಂತೇ?

ಮೂರನೆಯದಾಗಿ, ನೀರಾವರಿ ಮತ್ತು ವಿದ್ಯುತ್‌ಗೆ ಸಂಬಂಧಿಸಿದಂತೆ ವಿಶ್ವ ಬ್ಯಾಂಕಿನಿಂದ ಕ್ಲಿಯರೆನ್ಸ್ ಬಂದಿದೆ ಎಂದು ಹೇಳಿದ್ದೀರಿ. ಇದು ಸ್ವಾಗತಾರ್ಹವಾದ ವಿಷಯ. ವಿಶ್ವಬ್ಯಾಂಕಿನಿಂದ ಕ್ಲಿಯರೆನ್ಸ್ ಬರದಿರುವುದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು, ಅರಣ್ಯ ಭೂಮಿಯನ್ನು ಬಿಡುಗಡೆ ಮಾಡಲು ಕೇಂದ್ರ ಸರ್ಕಾರದ ಪರಿಸರ ಹಾಗೂ ಅರಣ್ಯ ಇಲಾಖೆ ಮಂಜೂರಾತಿ ನೀಡದಿರುವುದು ಮತ್ತು ಎರಡನೆಯದು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್‌ದರವನ್ನು ವಿಧಿಸಲಿರುವುದು. ಈ ಎರಡು ಕಾರಣಗಳಿಗಾಗಿ ವಿಶ್ವಬ್ಯಾಂಕಿನ ಹಣ ನಮಗೆ ಸಿಗುವುದಿಲ್ಲವೆನ್ನತಕ್ಕಂಥ ಮಾತನ್ನು ತಾವು ಈ ಶಾಸನ ಸಭೆಯಲ್ಲಿ ಉತ್ತರದ ಮೂಲಕ ಕೊಟ್ಟಿದ್ದೀರಿ. ಹಾಗಿದ್ದರೆ, ಈಗ ಈ ನಿಯಮಗಳನ್ನು ಒಳಪಡಿಸಿಕೊಂಡು ವಿಶ್ವಬ್ಯಾಂಕ್ ಹಣವನ್ನು ಮಂಜೂರು ಮಾಡಿದೆಯೆ? ಇಲ್ಲವೆ ವಿಶ್ವಬ್ಯಾಂಕಿನ ಒಪ್ಪಿಗೆಗೋಸ್ಕರ ನೀವೇನಾದರೂ ನೀರಾವರಿ ಪಂಪುಸೆಟ್ಟುಗಳಿಗೋಸ್ಕರ ವಿದ್ಯುತ್ ದರವನ್ನು ವಿಧಿಸತಕ್ಕಂಥ ತೀರ್ಮಾನ ತೆಗೆದುಕೊಂಡಿದ್ದೀರಾ? ಅನಂತರ, ಒಂದು ಸಣ್ಣ ವಿಷಯ ಪ್ರಸ್ತಾಪಿಸಿದೆ 'ಅಕ್ಷಯ' ವಿಚಾರದಲ್ಲಿ ನಾವೆಲ್ಲರೂ ತಮ್ಮ ಸರ್ಕಾರಕ್ಕೆ ಕೀರ್ತಿ ತಂದುಕೊಟ್ಟೆವು. ಆದರೆ, ತೊಂದರೆ ಇರತಕ್ಕಂಥಾದ್ದು ಅಲ್ಲಿ ಕಾಯಿಸುವುದಕ್ಕೆ ಸೀಮೆಎಣ್ಣೆ ಇಲ್ಲ, ಬೇಕಾದಂಥ ಸಕ್ಕರೆ ಇಲ್ಲ. ಆದುದರಿಂದ, ನೀವು ಯಾವ ಸಾರ್ವಜನಿಕ ವಿತರಣಾ ವ್ಯವಸ್ಥೆ ಮಾಡುತ್ತಿದ್ದೀರಿ, ಅದರ ಮೂಲಕ ಸ್ವಲ್ಪ ಹೆಚ್ಚಿನ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುವುದರ ಬಗ್ಗೆ ತಮ್ಮ ಉತ್ತರದಲ್ಲಿ ಪ್ರಸ್ತಾಪಿಸಿಲ್ಲ, ಬಹಳ ಮುಖ್ಯವಾಗಿ ನಾನು ಅವರಿಂದ ಕೇಳಿದ್ದು ಕಾವೇರಿ ನದಿ ವಿವಾದದ ವಿಚಾರವನ್ನು ಪ್ರಸ್ತಾಪಿಸಲೇ ಇಲ್ಲವೆಂದು. ಬಹುಶಃ ಇವೊತ್ತಿನ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಬಂದ ವರದಿ ನೋಡಿ ಸ್ವಲ್ಪ ಮಟ್ಟಿಗೆ ಸಮಾಧಾನ ಮತ್ತು ಸಂತೋಷವಾಯಿತು. ತಮಿಳುನಾಡು ಸರ್ಕಾರ ಕೇಂದ್ರ ಸರ್ಕಾರಕ್ಕೆ ಒದಗಿಸಿರತಕ್ಕಂಥ ಮಾಹಿತಿಗಳು ಸರಿಯಾಗಿಲ್ಲ ಎನ್ನುವುದರ ಬಗ್ಗೆ If I were to quote Indian express:

"An expert witness from Tamilnadu, A Mohana Krishnan who also heads the Cauvery Technical Cell said during the cross-examination by Karnataka's Counsel, Anil Dhawan that it appeared that the information furnished by the State on the cultivable area in some taluks of Tanjore District was incorrect"

ಇದನ್ನು ರಾಜ್ಯ ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಂಡು ಪರ್‌ಸ್ಯೂ ಮಾಡತಕ್ಕಂಥ ಪ್ರಯತ್ನ ಮಾಡುತ್ತದೆಯೇ? This is a very valid point.

ಶ್ರೀ ಸಿ. ಬೈರೇಗೌಡ: ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣದಲ್ಲಿ ಅತ್ಯಂತ ಪ್ರಮುಖವಾದಂಥ ವಿಚಾರವನ್ನು ಪ್ರಸ್ತಾಪಿಸಿಲ್ಲ. ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಪ್ರಸ್ತಾಪವಾಗದೆ ಇರತಕ್ಕಂಥ ಅನೇಕ ವಿಚಾರಗಳಿಗೂ ಕೂಡ ಉತ್ತರಿಸಿದ್ದಾರೆ. ವಿಚಾರವೇನೆಂದರೆ, 1995ರ ಜನವರಿಯೊಳಗಾಗಿ ದೇಶದ ಮತದಾರರಿಗೆ ಗುರ್ತಿನ ಚೀಟಿಯನ್ನು ಸರ್ಕಾರಗಳು ಕೊಡದಿದ್ದರೆ ಯಾವುದೇ ಚುನಾವಣೆಯನ್ನು ನಡೆಸುವುದಕ್ಕೆ ಅವಕಾಶ ಕೊಡುವುದಿಲ್ಲವೆನ್ನುವ ಒಂದು ನಿರ್ಧಾರವನ್ನು ಚುನಾವಣಾ ಆಯೋಗ ಈಗಾಗಲೇ ತೆಗೆದುಕೊಂಡಿದೆ. ಅದೇ ರೀತಿ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳ ಒಂದು ಸಭೆಯನ್ನು ಈ ಕುರಿತು ಚರ್ಚಿಸಲು ಚುನಾವಣಾ ಆಯುಕ್ತರು ಕರೆದಿದ್ದಾರೆ. ಕೇಂದ್ರ ಸರ್ಕಾರ ದೇಶದ ಪ್ರತಿಯೊಬ್ಬ ಮತದಾರರಿಗೂ ಗುರ್ತಿನ ಚೀಟಿ ಕೊಡುವುದರಲ್ಲಿ ರಾಜ್ಯ ಸರ್ಕಾರದ ನಿಲುವೇನು? ಏಕೆಂದರೆ, ಬರುವ ನವೆಂಬರ್ ತಿಂಗಳಲ್ಲಿ ನಾವು ಚುನಾವಣಾ ಕಣಕ್ಕೆ ಹೋಗಬೇಕಾಗಿದೆ. ಆದರೆ, ಚುನಾವಣಾ ಆಯೋಗ ಕೊಟ್ಟಿರುವ ಗಡುವು ಸನಿಹದಲ್ಲಿರುವುದರಿಂದ ಮುಂಬರತಕ್ಕ ಚುನಾವಣೆಯೊಳಗಾಗಿ ತಮ್ಮ ರಾಜ್ಯದ ಎಲ್ಲಾ ಮತದಾರರಿಗೂ ಗುರ್ತಿನ ಚೀಟಿ ಕೊಡುವುದಕ್ಕೆ ಸರ್ಕಾರವೇನಾದರೂ ತೀರ್ಮಾನಿಸಿದೆಯೆ? ಈಗ ಚುನಾವಣಾ ಆಯುಕರು

ಆ ರೀತಿ ಹೇಳಿರುವುದಕ್ಕೆ ರಾಜ್ಯ ಸರ್ಕಾರದ ನಿಲುವು ಏನು? ಎಂಬುದನ್ನು ತಿಳಿಸಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್: ನಾನು ಪ್ರಸ್ತಾಪಿಸಿದ ವಿಷಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಬರಲಿಲ್ಲ. ಅದಕ್ಕೆ ಮತ್ತೊಮ್ಮೆ ಪ್ರಸ್ತಾಪಿಸುತ್ತಿದ್ದೇನೆ. ಅದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಆಶ್ರಯ ಯೋಜನೆಯಡಿಯಲ್ಲಿ ಮಾರ್ಚಿ ಅಂತ್ಯದೊಳಗಾಗಿ 80 ಸಾವಿರ ಮನೆಗಳನ್ನು ಕಟ್ಟಿ ಪೂರ್ಣಗೊಳಿಸಲಾಗುವುದೆಂದು ಹೇಳಿದರು. ಅದಕ್ಕೆ ನಾನು ನನ್ನ ಭಾಷಣದಲ್ಲಿ ಹೇಳಿದೆ ಬಡವರ, ಹಿಂದುಳಿದವರ ಬಗ್ಗೆ ನಮ್ಮ ಸರ್ಕಾರಕ್ಕೆ ಕಳಕಳಿ ಇದೆಯೆಂದು ಹೇಳುವ ಮುಖ್ಯಮಂತ್ರಿಗಳಿಗೆ ತಿಳಿಸುವುದೇನೆಂದರೆ, 1986ನೇ ಇಸವಿಯಿಂದ 1991ರವರೆಗೆ ನನ್ನ ತಾಲ್ಲೂಕಾದ ಹಿರೇಕೆರೂರಿನಲ್ಲಿ ಸುಮಾರು 14 ಲಕ್ಷ ರೂಪಾಯಿಗಳ ಜನತಾ ಮನೆಗಳನ್ನು ಹುಡ್ಕೋ ಯೋಜನೆಯಡಿ ಕಟ್ಟತಕ್ಕಂಥಾದ್ದು ಬಾಕಿ ಇದೆ, ಕೆಲವು ಮನೆಗಳು ಅಪೂರ್ಣವಾಗಿವೆ. 1986ರಿಂದ 1991ರವರೆಗೆ ಇಡೀ ರಾಜ್ಯದಲ್ಲಿ ಹುಡ್ಕೋ ಯೋಜನೆಯಡಿ ಸುಮಾರು 44 ಕೋಟಿ ರೂಪಾಯಿಗಳ ಜನತಾ ಮನೆಗಳನ್ನು ಪೂರ್ಣಗೊಳಿಸಬೇಕಾಗಿದೆಯೆಂದು ನನ್ನ ಪ್ರಶ್ನೆಗೆ ಉತ್ತರಿಸಿದ್ದೀರಿ. ಆದರೆ, ಮನೆ ಸೌಲಭ್ಯ ಹೊಂದುವ ಫಲಾನುಭವಿಗಳು ದಿನನಿತ್ಯ ಕಛೇರಿಗಳಿಗೆ ಅಲೆಯುತ್ತಿದ್ದಾರೆ. ಈ ಮನೆಗಳನ್ನು ಯಾವಾಗ ಪೂರ್ಣಗೊಳಿಸುತ್ತೀರಿ? ಎಂಬ ಬಗ್ಗೆ ಉತ್ತರಿಸಬೇಕು. ಒಂದು ವೇಳೆ ಹುಡ್ಕೋ ಯೋಜನೆಯಡಿ ಮನೆಗಳನ್ನು ಕಟ್ಟಿಕೊಡಲು ಸಾಧ್ಯವಿಲ್ಲದಿದ್ದರೆ, ಅದನ್ನು ರದ್ದುಪಡಿಸಿ ಆಶ್ರಯ ಯೋಜನೆಯಡಿಯಲ್ಲಾದರೂ ತೆಗೆದುಕೊಳ್ಳುವುದರ ಬಗ್ಗೆ ವಿಚಾರ ಮಾಡುತ್ತೀರಾ, ಎರಡನೆಯದಾಗಿ 'ಅಕ್ಷಯ' ಯೋಜನೆಯಲ್ಲಿ ಇಷ್ಟು ಹಣ ಖರ್ಚು ಮಾಡಿರುವುದಾಗಿ ಹೇಳಿದ್ದೀರಿ. ಹಾಗೆಯೇ, ಶಾಲಾ ಮಕ್ಕಳಿಗೆ ಉಚಿತ ಹಾಲು ಕೊಡುವ ಯೋಜನೆ ಏನು ಹಾಕಿಕೊಂಡಿದ್ದೀರಿ, ಹಾಲು ಸರಬರಾಜು ಮಾಡಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ತಾವು ಇದುವರೆಗೆ ಹಣ ಕೊಟ್ಟಿಲ್ಲ.

ಅಲ್ಲಿರತಕ್ಕಂಥ ಹಣವನ್ನು ಸರ್ಕಾರಕ್ಕೆ ಕೊಡಬೇಕಾದ್ದನ್ನು ಮಕ್ಕಳಿಗೆ ಹಾಲು ಕೊಡುತ್ತಿದ್ದಿರಲ್ಲಾ ಆ ಹಾಲಿನ ಬಿಲ್ ಹಣವನ್ನೆನಾದರೂ ರೈತರಿಗೆ ಮುಟ್ಟುವಂತೆ ಪ್ರಯತ್ನ ಮಾಡುತ್ತಿದ್ದೀರಾ? ಅಪ್ಪರ್ ತುಂಗಾ ಯೋಜನೆಯ ಬಗ್ಗೆ ತಮಗೆ ಪದೇ ಪದೇ ಹೇಳಿದ್ದೇನೆ. ಕೇಂದ್ರ ಸರ್ಕಾರಕ್ಕೆ 1991ನೇ ಇಸವಿಯಿಂದ ಇಲ್ಲಿಯವರೆಗೆ ಅವರು ಕೇಳಿರುವಂತಹ ಮಾಹಿತಿಯನ್ನು, ವಿವರಣೆಯನ್ನು ಕಳುಹಿಸಿಲ್ಲ. ತಮಗೆ ಮೊನ್ನೆ ಹೇಳಿದ ಮೇಲೆ ಮುಖ್ಯ ಕಾರ್ಯದರ್ಶಿಗಳು ಡಿಸೆಂಬರ್ 27ಕ್ಕೆ ಒಂದು ಸಭೆಯನ್ನು ಮಾಡಿ ಮಾಹಿತಿಗಳನ್ನು ಕೊಡುವುದಕ್ಕೆ ಎಲ್ಲಾ ಇಲಾಖೆಗಳಿಗೂ ಹೇಳಿದ್ದಾರೆ. ಕೂಡಲೇ ಕೇಂದ್ರ ಸರ್ಕಾರಕ್ಕೆ ಮಾಹಿತಿಗಳನ್ನು ಕಳುಹಿಸಿ ಮಂಜೂರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ಇನ್ನು ಎರಡನೆಯದಾಗಿ ಈ ವರ್ಷ ಇಟ್ಟಿರತಕ್ಕಂಥ 5 ಕೋಟಿ ರೂ. ಮಾರ್ಚಿ ಒಳಗಾಗಿ ಅದನ್ನು ಕನಿಷ್ಟ 370 ಕೋಟಿ ರೂ.ಗಳು ಇಟ್ಟಿದು. ಈಗ 5 ಕೋಟಿ ರೂ.ಗಳನ್ನಾದರೂ ಈ ಅಪ್ಪರ್ ತುಂಗಾ ಯೋಜನೆಗೆ ಖರ್ಚು ಮಾಡಲು ಈ ಸದನದಲ್ಲಿ ಭರವಸೆಯನ್ನು ಕೊಡುತ್ತೀರಾ? ನಾಲ್ಕನೆಯದಾಗಿ ಮಹಾಪುರ್ ಬಗ್ಗೆ ಹೇಳಿದ್ದೀರಿ. ಬಹಳ ಹಣ ಖರ್ಚು ಮಾಡಿದ್ದೇವೆಂದು ಅದು ಇರಲಿ ಒಡೆದು ಹೋದಂತಹ ಕೆರೆಕಟ್ಟೆಗಳ ದುರಸ್ತಿಗಾಗಿ ತಾವು ಪ್ರಯತ್ನ ಮಾಡುತ್ತೀರಾ? ಒಡೆದ ಕೆರೆಕಟ್ಟೆಗಳ ದುರಸ್ತಿಗೆ ಕೋಟ್ಯಾಂತರ ಹಣ ಖರ್ಚು ಆಗುತ್ತದೆ ಎಂದರೆ ದಯವಿಟ್ಟು ಈ ಮಹಾಪುರ್‌ದಲ್ಲಿ ಒಡೆದು ಹೋದಂತಹ ಕೆರೆಕಟ್ಟೆಗಳನ್ನು ಯಾವ ಹಣದಲ್ಲಿಯಾದರೂ ದುರಸ್ತಿ ಮಾಡಿ. ಇರಿಗೇಷನ್ ಹಣದಲ್ಲೊ ಯಾವುದರಲ್ಲಾದರೂ ಅವುಗಳನ್ನು ರಿಪೇರಿ ಮಾಡುವಂತಹ ಭರವಸೆಯನ್ನು ತಾವು ಕೊಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸದಸ್ಯರು ಅನೇಕ ಸ್ಪಷ್ಟೀಕರಣವನ್ನು ಕೇಳಿದ್ದಾರೆ.

ನ್ಯಾಯಮೂರ್ತಿ ವೆಂಕಟೇಶ್ ಆಯೋಗದ ಬಗ್ಗೆ ವರದಿಯನ್ನು ಏಕೆ ಪ್ರಕಟಣೆ ಮಾಡುವುದಿಲ್ಲ ಎಂದು ಕೇಳಿದ್ದೀರಿ. ತಮಗೆ ಗೊತ್ತಿದೆ ಕೆಲವು ವಿಷಯಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕೆಲವು ಆಯೋಗಗಳ ವರದಿಯನ್ನು ಈ ಸದನದ ಮುಂದೆ ಇಡುವ ಮೊದಲು ಅದನ್ನು ನಾವು ವಿಚಾರ ಮಾಡುತ್ತಿದ್ದೇವೆ. ಅದು ಸರ್ಕಾರದ ಗಮನದಲ್ಲಿದೆ. ಇನ್ನು ಬಡ್ಡಿ ಮನ್ನಾ ಮತ್ತು ಬಡ್ಡಿ ಸಾಲ ಮನ್ನಾ ಈ ವಿಚಾರವನ್ನು ಹೇಳಿದ್ದೀರಿ. ಈಗಾಗಲೇ ಇದರ ಬಗ್ಗೆ ಸಾಕಷ್ಟು ಬಾರಿ ಹೇಳಿಕೆಗಳನ್ನು ಕೊಟ್ಟಿದ್ದೇನೆ. ಈ ಬಗ್ಗೆ ಈಶ್ವರಪ್ಪನವರು ಸಹ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಸಹಕಾರ ಮಂತ್ರಿಗಳು ಹೇಳಿದ್ದಾರೆ. ಇನ್‌ವೆಸ್ಟ್‌ಮೆಂಟ್ ಅಗ್ರಿಕಲ್ಚರ್ ಬಗ್ಗೆ ಕರ್ನಾಟಕ ಬಹಳ ಹೀನ ಸ್ಥಿತಿಯಲ್ಲಿದೆ. ಇನ್‌ವೆಸ್ಟ್‌ಮೆಂಟ್ ಇವತ್ತು ಆಗುತ್ತಾ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ರೈತರಿಗಿಂತ ಹೀನ ಸ್ಥಿತಿಯಲ್ಲಿ ಸರ್ಕಾರ ಇಲ್ಲ. ದಯವಿಟ್ಟು ಹೇಳಿ ಹೌದೊ ಇಲ್ಲವೊ? ಎಂದು....

ಶ್ರೀ ಎಂ. ವೀರಪ್ಪ ಮೊಯಿಲಿ: ರೈತರನ್ನು ಇವತ್ತು ಬೇಡುವಂತಹ ಪರಿಸ್ಥಿತಿಗೆ ತೆಗೆದುಕೊಂಡು ಹೋಗಬಾರದು. ಇದು ತಮ್ಮ ಅಭಿಪ್ರಾಯವಿರಬಹುದು. ಆದರೆ, ನಮಗೆ ಕರ್ನಾಟಕದಲ್ಲಿ ಸಮೃದ್ಧನಾದಂತಹ ರೈತನನ್ನು ಕಟ್ಟಬೇಕು ಎಂಬುದು ನಮ್ಮ ಅಪೇಕ್ಷೆ ಮತ್ತು ಆಸೆ. ಆದರೆ ಪ್ರತಿ ಸಾರಿ ಸರ್ಕಾರವನ್ನು ಬೇಡುವ ಹಾಗೆ ಮಾಡಬಾರದೆಂದು ನಮ್ಮ ಅಪೇಕ್ಷೆ.

(ಗೊಂದಲ)

ಉಪಾಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ, ಅವರು ಉತ್ತರ ಕೊಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಆದರೆ ಇವತ್ತು ದೇಶದಲ್ಲಿ ಸಾಲಮನ್ನಾ ಮಾಡಬೇಕು, ಬಡ್ಡಿ ಮನ್ನಾ ಮಾಡಬೇಕೆಂದು ನಾವು ಒಂದು ಕಾಲದಲ್ಲಿ ಹೇಳಿದ್ದೇವೆ. ಈಗ ಸಾಲ ಮನ್ನಾ ಮಾಡುವ ವಿಷಯ ಕೂಡ ನಿರ್ಣಯವಾಯಿತು. ರಾಷ್ಟ್ರದ ಎಲ್ಲಾ ರಾಜ್ಯದಲ್ಲೂ ಇವತ್ತು ನಿಲ್ಲಿಸಿದ್ದಾರೆ. ಇವತ್ತು ಮಹಾರಾಷ್ಟ್ರ, ಪಂಜಾಬ್, ಗುಜರಾತ್‌ನ ರೈತರು ಇವತ್ತು ಸಮೃದ್ಧರಾಗುತ್ತಿದ್ದಾರೆ. ನಮ್ಮ ರೈತರು ಇನ್ನು ಬಡವರಾಗುತ್ತಿದ್ದಾರೆ ಏಕೆಂದರೆ ಸುಮಾರು 4,600 ಚಿಲ್ಲರೆ ಕೋಟಿ ರೂಪಾಯಿಗಳು ಇವತ್ತು ಇನ್‌ವೆಸ್ಟ್‌ಮೆಂಟ್ ಅಗ್ರಿಕಲ್ಚರ್ ಸೆಕ್ಟರ್‌ನಲ್ಲಿ ಆಗಬೇಕಾದರೆ 400 ಕೋಟಿ ರೂ.ಗಳು ಕೂಡ ಆಗುತ್ತಾ ಇಲ್ಲ ಬಂಡವಾಳ ಇವತ್ತು ಬಂಡವಾಳ ಆಗದೇ ಇದ್ದರೆ ರೈತರ ಹೇಗೆ ಸಮೃದ್ಧಿಯಾಗಬೇಕು. ಸಾಲ ಬರುವುದಿಲ್ಲ. ರಿಕವರಿ ಆಗದೇ ಇವತ್ತು ಬ್ಯಾಂಕ್‌ಗಳು ಮುಚ್ಚುವ ಪರಿಸ್ಥಿತಿಯಲ್ಲಿದೆ. ಇವತ್ತು ನಾವು ರಿಯಾಯಿತಿಯನ್ನು ಘೋಷಣೆ ಮಾಡಿದರೂ ಕೂಡ ಅದು ರೈತರಿಗೆ ಪ್ರಯೋಜನವಾಗುವುದಾದರೆ ಕಾವೇರಿ, ಕೃಷ್ಣ ಇದೆಲ್ಲಾ ರೈತರಿಗಾಗಿಯೇ ಮಾಡುವುದು. ಆ ಯೋಜನೆಯಲ್ಲಿ ಸ್ವಲ್ಪ ಹಣವನ್ನು ತೆಗೆದುಕೊಂಡು ಇದಕ್ಕೆ ಕೊಡೋಣ. ಈ ಉದ್ದೇಶವೇನಾದರೂ ಇದೆಯಾ? ನಾವು ರೈತನನ್ನು 21ನೇ ಶತಮಾನಕ್ಕೆ ಕೊಂಡೊಯ್ಯಬೇಕೆಂದು ನಮ್ಮ ಅಪೇಕ್ಷೆ. ಆದರೆ ಈಶ್ವರಪ್ಪನವರಿಗೆ, ಯಡಿಯೂರಪ್ಪನವರಿಗೆ 21 ಶತಮಾನಕ್ಕೆ ಬದಲಾಗಿ 15ನೇ ಶತಮಾನಕ್ಕೆ ದೂಡೋಣ ಎಂಬ ಅಪೇಕ್ಷೆ. ಸಂಪ್ರದಾಯ ಶಕ್ತಿಗಳ ಒಂದು ಸಂಚು ಇದು. ಈ ರೈತನನ್ನು ಇನ್ನು ಸಾಲದ ದವಡೆಗೆ ತೆಗೆದುಕೊಂಡು ಹೋಗಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : 21ನೇ ಶತಮಾನಕ್ಕೆ ಹೇಗೆ ಹೋಗಬೇಕೆಂಬುದನ್ನು ಧರಣಿ ಮಾಡಿ ತೋರಿಸಿದ್ದಿರಾ? ಒಬ್ಬ ಮುಖ್ಯಮಂತ್ರಿಯಾಗಿ ನಿಮಗೆ ರಕ್ಷಣೆ ಇಲ್ಲ ಎಂದು ಕೂಗಿ 21ನೇ ಶತಮಾನದಲ್ಲಿ ನಿಮ್ಮ ಮಂತ್ರಿಗಳು ನಮ್ಮನ್ನು ಕೊಲೆ ಮಾಡುತ್ತೇವೆನ್ನುವುದನ್ನು ನಿಮ್ಮ ಶಾಸಕರೇ ಕೂಗುತ್ತಿರುವುದನ್ನು ರಾಜ್ಯದ ಜನರು ನೋಡಿದ್ದಾರೆ. ದಯವಿಟ್ಟು ರಾಜಕೀಯ ಮಾಡಬೇಡಿ. ಸ್ಪಷ್ಟವಾಗಿ ಹೇಳಿ ಈ ರಾಜ್ಯದ ರೈತರಿಗೆ ಅನುಕೂಲ ಮಾಡಿಕೊಡುವುದಕ್ಕೆ ಆಗುತ್ತದಾ ಇಲ್ಲವಾ ಎಂಬುದು.

6.30 ಪಿ.ಎಂ

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಬಿಜೆಪಿಯವರಿಗೆ, ಕಾಂಗ್ರೆಸ್ ಆದ ನಮ್ಮ ಪಕ್ಷಕ್ಕೆ, ಜನತಾ ದಳಕ್ಕೆ ಓಟು ಗಳಿಸುವುದಕ್ಕೆ ಇದು ಒಳ್ಳೆಯ ಆಯುಧ. ಆದರೆ ರೈತನಿಗೆ ಇದರಿಂದ ಪ್ರಯೋಜನ ಆಗುವುದಿಲ್ಲ. ನನಗೆ ಓಟು ಬರಬಹುದು. ಆದರೆ ಓಟು ಗಳಿಸುವುದು ಸರ್ಕಾರದಲ್ಲಿ ಅಧಿಕಾರ ಗಳಿಸುವುದಕ್ಕೆ ರೈತನ ಅಸ್ಥಿ ಪಂಜರ ಏಣಿಯಾಗಬಾರದು. ಅದು ನಿಮ್ಮ ರೈತನ ಅಸ್ಥಿಪಂಜರ ಏಣಿಯಾಗಬಾರದು. ಆ ಅಸ್ಥಿಪಂಜರದ ಏಣಿಯನ್ನು ಉಪಯೋಗ ಮಾಡಿಕೊಂಡು ದಯಮಾಡಿ ಅಧಿಕಾರಕ್ಕೆ ಬರತಕ್ಕಂತಹ....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅಂದರೆ ಅಸ್ಥಿಪಂಜರ ಸಾಯಬೇಕು ಎಂದೇ. ನಾನು ಅದನ್ನು ವಿರೋಧ ಮಾಡುತ್ತಾ ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಈಶ್ವರಪ್ಪನವರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಿರುವ ಉತ್ತರ ಕ್ಲಾರಿಫಿಕೇಷನ್ ಅಷ್ಟೇನೆ. ಬಜೆಟ್‌ನಲ್ಲಿ ಪೂರ್ಣ ಮಾಡುತ್ತದೆ...

(ಗೊಂದಲ)

ಉಪಾಧ್ಯಕ್ಷರು : ದಯಮಾಡಿ ಯಾವುದು ರೆಕಾರ್ಡ್‌ಗೆ ಹೋಗುವುದಿಲ್ಲ, ತಾವು ಸೀಟ್ ಮೇಲೆ ಕುಳಿತುಕೊಂಡು ಮಾತನಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮನವಿ, ನಿನ್ನೆ ತಾವು ನಮ್ಮನ್ನೆಲ್ಲಾ ಕರೆದು ಕುಳಿತುಕೊಂಡು, ಬಹಳ ಸುದೀರ್ಘವಾಗಿ ಮಾತನಾಡಿ ಒಳ್ಳೆಯ ಕಾಫಿಯನ್ನು ನಮ್ಮ ಸ್ನೇಹಿತರಿಗೆಲ್ಲಾ ಕುಡಿಸಿ, ನಾನು ಕುಡಿಯುವುದಿಲ್ಲ ಆಗ ನಾವೂ ಒಂದು ಆರೋಪಣೆ ಮಾಡಿದೆವು, ಕೊನೆಗೆ ಮಾನ್ಯ ದೇಶಪಾಂಡೆಯವರ ಮಾತನ್ನಾದರೂ ಒಪ್ಪಿಕೊಳ್ಳಿ ಎಂದು ಹೇಳಿದೆವು. ದೇಶಪಾಂಡೆಯವರ ಮೇಲೆ ನಿಮಗೆ ಏನೋ ಪ್ರೀತಿ ಇದೆ ಎಂದು ಹೇಳಿ ಅವರು ಹೇಳಿದ ಮಾತನ್ನಾದರೂ ಒಪ್ಪಿಕೊಳ್ಳಿ, ನಮ್ಮ ಮಾತು ಒಪ್ಪಿಕೊಳ್ಳದಿದ್ದರೂ ಪರವಾಗಿಲ್ಲ ಎಂದು. ಕೊನೆಗೆ ನೀವು ಏನು ತೀರ್ಮಾನಕ್ಕೆ ಬಂದಿರಿ, ಏನಾದರೂ ಮಾಡೋಣ ನಾವು ನಿಜವಾಗಲೂ ರೈತರ ಬಗ್ಗೆ ಒಂದು ಅನುಕೂಲವಾದಂತಹ ವಾತಾವರಣದಲ್ಲಿ ಭರವಸೆ ಕೊಡುತ್ತೇವೆ ಎಂದು ಹೇಳಿದಿರಿ. ಆದರೆ ನಿಮ್ಮ ಭರವಸೆ ಹುಸಿಯಾಗುತ್ತಿದೆ. ತಾವು ಏಕೆ ಈ ರೀತಿ ರೈತ ವಿರೋಧಿ ಧೋರಣೆಯನ್ನು ತಾಳುತ್ತಿದ್ದೀರಿ. ಈಗ ಹರಾಜು ಆಗುತ್ತಿದೆ, ಬಹಳ ತೊಂದರೆಗಳು ಇವೆ, ಪಾತ್ರೆಗಳು ಹರಾಜಾಗುತ್ತಿವೆ, ದೊಡ್ಡ ದೊಡ್ಡ ತೊಂದರೆಯಾಗುತ್ತಿದೆ. ನಮ್ಮನ್ನು ನೀವು ಮೂರು ಸಲ ಕರೆದಿರಿ. ವಿರೋಧಪಕ್ಷದ ಮುಖಂಡರನ್ನು ಮೂರು ಬಾರಿ ಕರೆದಿರಿ ನೀವು. ನೀವು ಏಕೆ ಈ ರೀತಿ ತಪ್ಪಿಸಿ, ಬಳಸಿ ಹೋಗುತ್ತಿದ್ದೀರಿ, ಏನು ಉದ್ದೇಶ ನಿಮ್ಮದು, ನೇರವಾಗಿ ಹೇಳಿ, ನಾವು ವಸೂಲಿಯನ್ನು ನಿಲ್ಲಿಸುತ್ತೇವೆ. ಈಗ ಅಲ್ಲಿ ಕಡ್ಡಾಯ ವಸೂಲಿಯನ್ನು ನಿಲ್ಲಿಸುತ್ತೇವೆ. ಬಲತ್ಕಾರ ವಸೂಲಿಯನ್ನು ನಿಲ್ಲಿಸುತ್ತೇವೆ, ದಯಪಿಟ್ಟು ತಾವು ಭರವಸೆ ಕೊಡಿ. ಮತ್ತು ಇವತ್ತೇ ಸಭೆಯನ್ನು ಮುಂದಕ್ಕೆ ಹಾಕುತ್ತಿದ್ದೀರಿ ನೀವು. ನಾಳೆ ಸಭೆ ಇಲ್ಲ, ಇನ್ನು ಸೇರಬೇಕು ಎಂದರೆ ಮುಂದಿನ ತಿಂಗಳು ಮಾರ್ಚ್ 7ಕ್ಕೊ, 17ಕ್ಕೊ ಇನ್ನು ನಮಗೆ ಅದು ನಿರ್ಧಾರವಾಗಿಲ್ಲ. ಆದುದರಿಂದ ದಯವಿಟ್ಟು ನೀವು ರೈತರ ಪರವಾಗಿ ಇವತ್ತು ಕೂಡಲೇ ನೇರವಾಗಿ

ನಾವು ಕಡ್ಡಾಯ ವಸೂಲಿ ಮತ್ತು ಬಲತ್ಕಾರ ವಸೂಲಿ, ಮನೆಗೆ ನುಗ್ಗುವಂತಾದ್ದು ಇದನ್ನೆಲ್ಲಾ ನಿಲ್ಲಿಸಿದ್ದೇವೆ ಎನ್ನುವಂತಾದ್ದನ್ನು ಒಂದು ಮಾತು ಹೇಳಿ ನೀವು.

ಶ್ರೀ ಎಂ. ವೀರಪ್ಪ ಮೊಯಿಲಿ : ಆ ಘೋಷಣೆಯನ್ನು ಮಾಡುವುದಕ್ಕಿಂತಲೂ ಎಲ್ಲಾ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಬ್ಯಾಂಕಿನ ಬಾಗಿಲನ್ನು ಮುಚ್ಚುತ್ತೇವೆ, ಎಲ್ಲಾ ಪಿಎಲ್‌ಡಿ ಬ್ಯಾಂಕಿನ ಬಾಗಿಲನ್ನು ನಾವು ಮುಚ್ಚುತ್ತೇವೆ, ಅಪೆಕ್ಸ್ ಬ್ಯಾಂಕಿನ ಬಾಗಿಲನ್ನು ಮುಚ್ಚುತ್ತೇವೆ, ಎಂದು ಆ ಘೋಷಣೆ ಮಾಡಿದರೆ, ಈ ಘೋಷಣೆ ಮಾಡಲೇ ಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಧ್ವನಿ ಇವತ್ತು ನಾಲ್ಕು ಗಂಟೆ ಮೇಲೆ ಪೂರ್ತಿ ಬದಲಾವಣೆಯಾಯಿತು. ಆದ್ದರಿಂದ ಇದು ಏನೋ ನಮಗೆ ಬಹಳ ಆಶ್ಚರ್ಯವಾಯಿತು. ನಿಮ್ಮ ಧ್ವನಿ ಯಾವತ್ತು ಬದಲಾವಣೆಯಾಗುತ್ತಿರಲಿಲ್ಲ. ಆದರೆ ಈ ಧ್ವನಿಯನ್ನು ಕೇಳಿ ಕೇಳಿ ನಮಗೆ ಎಷ್ಟು ನೋವಾಗುತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮದೇ ಆದಂತಹ ಸ್ವಂತ ವ್ಯಕ್ತಿತ್ವವನ್ನು ಹೊಂದಿದಂತಹ ವ್ಯಕ್ತಿ. ಯಾವಾಗಲೂ ಕೂಡ ಮತ್ತೊಬ್ಬರ ಹಿಂಬಾಗಿಲಿಗೆ ಹೋದವರು ಅಲ್ಲ. ಬಿಜೆಪಿಯವರು ಅವರು ಒಂದು ರಾಜಕೀಯ ಉದ್ದೇಶಕ್ಕಾಗಿ ಈ ತರಹ ಮಾಡುತ್ತಿರುತ್ತಾರೆ ಪಾಪ, ಹೇಳಿ, ಹೇಳಿ, ಮಧ್ಯ ಪ್ರದೇಶ ಸರ್ಕಾರ ಹೊರಟೇ ಹೋಯಿತು. ಅವರು ಹೇಳಿದರು ನಾವು ಮಧ್ಯಪ್ರದೇಶದಲ್ಲಿ ಸಾಲ ಮನ್ನಾ ಮಾಡಿದ್ದೇವೆ, ಎಲ್ಲಾ ಮಾಡಿದ್ದೇವೆ ಎಂದು ಹೇಳಿ ಏಕಾಂತಯ್ಯನವರೇ, ಮನೆಗೆ ಹೋಗೆಬಿಟ್ಟರು ಅವರು. ಪಾಪ ಇಲ್ಲಿ ಕೂಡ ಸಾಲ ಮನ್ನಾ ಮಾಡುತ್ತೇವೆ, ಮಾಡುತ್ತೇವೆ ಎಂದು ಹೇಳಿ ಈಗ ಮೂರು ಜನ ಇದ್ದಾರೆ ಆ ಮೂರು ಜನರು ಹೋಗಿಬಿಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಾ ಈಗ ಸಾಲ ಮನ್ನಾದ ಬಗ್ಗೆ ಅಲ್ಲ, ಈಗ ನಾವೆಲ್ಲಾ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ನಾವೆಲ್ಲಾ ಒಂದು ತೀರ್ಮಾನಕ್ಕೆ ಬಂದು ಬಡ್ಡಿ ಮತ್ತು ಸುಸ್ತಿ ಬಡ್ಡಿ ಬಗ್ಗೆ.....

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಹಲವಾರು ಜನ ಕಾಂಗ್ರೆಸ್ ಶಾಸಕರು ಬಂದು ಭೇಟಿ ಆಗಿದ್ದಾರೆ. ದಯಮಾಡಿ ಬಡ್ಡಿ ಮನ್ನಾ ಮಾಡಿಸಿ, ಎಂದು ಅವರೇ ಸ್ವತಃ ಬಂದು ಹೇಳಿದ್ದಾರೆ. ಈ ವಿಷಯದಲ್ಲಿ ಎಲ್ಲಾ ಶಾಸಕರು ಒಂದೇ ಆಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯ ಮಂತ್ರಿಯವರೇ, ಮೊನ್ನೇ ಇಲ್ಲಿ ಚರ್ಚೆ ಆಗುವಾಗ ನಿಮ್ಮ ಕಾನಡೆಯವರು ಏನು ಹೇಳಿದರು, ಅವರು ನಿಮ್ಮ ಪಕ್ಷದವರ್ಗೇ, ಮಾನ್ಯ ಹನುಮೇಗೌಡರು ಹೇಳಿದರು, ಇದರಲ್ಲಿ ಪಕ್ಷಾತೀತವಾದಂತಹ ಒತ್ತಾಯ ಇದೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ವಿವೇಚನಾ ರಹಿತವಾದಂತಹ ಸಾಲ ಮನ್ನಾ ನಮ್ಮ ಬೇಡಿಕೆಯಲ್ಲ. ನೀವು ಸಾಲ ಮೇಳ ಮಾಡುವುದೂ ಬೇಡ, ಸಾಲ ಮನ್ನಾ ಮಾಡುವುದು ಬೇಡ. ಕನಿಷ್ಟ ನಮ್ಮ ಬೇಡಿಕೆ ಈ ರಾಜ್ಯದ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡಿ ರೈತರು ಬೆಳೆದಂತಹ ಬೆಳೆಗೆ ನ್ಯಾಯವಾದ ಬೆಲೆಯನ್ನು ಕೊಡಿ ಆ ಕೆಲಸವನ್ನು ಮಾಡಬೇಕಲ್ಲಾ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಏಕಾಂತಯ್ಯನವರು ಕೊಟ್ಟಂತಹ ಸಲಹೆ ಸೂಚನೆಗೆ ನಾನು ಅಭಾರಿಯಾಗಿದ್ದೇನೆ. ಒಳ್ಳೆಯಸೂಚನೆಯನ್ನು ಕೊಟ್ಟಿದ್ದೀರಿ. ತಾವು ಹೇಳಿದ್ದು ಸರಿ ಏಕೆಂದರೆ ಸಾಲದ ಮೇಲಿನ ಬಡ್ಡಿ ಕಡಿಮೆಯಾಗಬೇಕು.

reduce it to One-tier system. ಇವತ್ತು ನಾವು ಸಾಕಷ್ಟು ಬಡ್ಡಿ ಕಡಿಮೆ ಮಾಡಲಿಕ್ಕೆ ಸಾಧ್ಯ ಇದೆ. ರೀ ಸ್ಟ್ರಕ್ಚರ್ ಮಾಡಲಿಕ್ಕೆ ಸಾಧ್ಯ ಇದೆ.

(ಗೊಂದಲ)

ಮಾನ್ಯ ಏಕಾಂತಯ್ಯನವರು ಹೇಳಿದ್ದು ಕೇಳಿ ನನಗೆ ಬಹಳ ಸಂತೋಷವಾಯಿತು. ರೈತರ ಬಗ್ಗೆ ಪ್ರೊ ನಂಜುಂಡಸ್ವಾಮಿಯವರು ಕೂಡ ಒಳ್ಳೆಯ ಸೂಚನೆ ಕೊಟ್ಟಿದ್ದಾರೆ. ರೈತನ ವಿಚಾರದಲ್ಲಿ ಕರ್ನಾಟಕ ರಾಜ್ಯದಲ್ಲಿ ಇವತ್ತು ಅವಲೋಕನ ಮಾಡತಕ್ಕ ಸಂದರ್ಭ ಬಂದಿದೆ. ಏಕೆಂದರೆ ಒಂದು ದಶಕಗಳ ಕಾಲ ಅಗ್ರಿಕಲ್ಚರ್ ಪ್ರಾಡಕ್ಟಿವಿಟಿ ಕಡಿಮೆಯಾಗಿದೆ. ಅಗ್ರಿಕಲ್ಚರ್ ಸೆಕ್ಟರಿಗೆ ಕೊಡತಕ್ಕ ಬಂಡವಾಳ ಕೂಡ ಕಡಿಮೆಯಾಗಿದೆ. ಅದೇ ಪ್ರಕಾರ ನಾವು ಇವತ್ತು ಸಾಲ, ಬಡ್ಡಿ ಮನ್ನಾ ಮತ್ತೊಂದು, ತೋರಿಕೆಗೆ ಹೇಳುತ್ತಿದ್ದೇವೆ. ಈ ಪೊಲಿಟಿಕಲ್ ಜಿಮಿಕ್ಸ್ ಏನಿದೆ ಅದನ್ನು ರೈತರಿಗೆ ಹೇಳಿ ವಂಚನೆ ಮಾಡುತ್ತಾ ಹೋಗುತ್ತಿದ್ದೇವೆ. ಹೊರತು ರೈತನ ನಿಜವಾದ ಜೀವನ ಪರಿಕ್ರಮ ಬದಲಾವಣೆ ಮಾಡಲಿಕ್ಕೆ ಯಾವ ರೀತಿ ಪ್ರಯತ್ನ ಮಾಡುತ್ತಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ ಶಾಸಕರ ಸಮಿತಿ ಮಾಡೋಣ ತಾವು ಸಲಹೆಗಳನ್ನು ಕೊಡಿ. Let us form a Committee for restructuring the Co-operative credit structure. ಅಗ್ರಿಕಲ್ಚರ್‌ಗೆ ಹೆಚ್ಚು ಬಂಡವಾಳ ಕೊಡುವ ದೃಷ್ಟಿಯಲ್ಲಿ I am prepared to constitute a Committee of the Legislators and then let it come out with their recommendations.

ಇವತ್ತು ನಮ್ಮ ರೈತರು ಸಮೃದ್ಧವಾಗಿ ಬೆಳೆಯಲಿಕ್ಕೆ ನಮ್ಮ ಕೃಷಿ ಕ್ಷೇತ್ರ ನಮ್ಮ ಪ್ರೊಫೆಸರ್ ಹೇಳಿದ ಪ್ರಕಾರ ಕೆಲವು ಅನಾಹುತಗಳಿಂದ ಪಾರಾಗಿ ಹೋಗಲಿಕ್ಕೆ ಬೆಳೆ ನಷ್ಟವಾಗುವುದನ್ನು ನಿಲ್ಲಿಸಿ ರೈತನ ಬೆಳೆಯನ್ನು ಉಳಿಸತಕ್ಕ ಒಂದು ಸಮಗ್ರವಾದ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ವರದಿ ಕೊಡಲಿಕ್ಕೆ let us form an Expert Committee, a Committee of the Progressive Farmers and in addition to that a Committee of Legislators. I am going to form it. ಎರಡು ಮೂರು ತಿಂಗಳಲ್ಲಿ ವರದಿ ಕೊಡಲಿ ನಾವು ಅದರ ಪ್ರಕಾರ ಇಡೀ ಕರ್ನಾಟಕ ರಾಜ್ಯದ ಸಮೃದ್ಧವಾದ ಜೀವನವನ್ನು ನಡೆಸಲಿಕ್ಕೆ ಪೂರಕವಾಗಿ ನಾವು ಹೆಜ್ಜೆಯನ್ನಿಡಲು ಸರ್ಕಾರ ಸಿದ್ಧವಿದೆ. ರೈತರ ಪರವಾದ ಒಂದು ಹೊಸ ಕಾರ್ಯಕ್ರಮ ರಾಜ್ಯದಲ್ಲಿ ಇವತ್ತು ಪ್ರಾರಂಭವಾಗಿದೆ.

ಪ್ರೊ: ಎಂ.ಡಿ. ನಂಜುಂಡ ಸ್ವಾಮಿ : ಅಧ್ಯಕ್ಷರೇ, ನಾನು ಮುಖ್ಯ ಮಂತ್ರಿಗಳಿಗೆ ಸ್ವಲ್ಪ ನೆನಪು ಮಾಡಿಕೊಡಬೇಕು. ಕಮಿಟೀ ಆನ್ ಅಗ್ರಿಕಲ್ಚರಲ್ ಪಾಲಿಸೀಸ್ ಅಂತ ಇದೇ ಸರ್ಕಾರ ಮೂರು ವರ್ಷದ ಹಿಂದೆ ರಚನೆ ಮಾಡಿತ್ತು. There is already a Committee on Agricultural Policies which was constituted 3 years back.

SRI M. VEERAPPA MOILY : I think it has already given a Report.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಅದು ಏನಾಯಿತು ಎಂಬುದೇ ಗೊತ್ತಿಲ್ಲ. ಅದರಲ್ಲಿ ನಾನು ಒಬ್ಬ ಸದಸ್ಯನಾಗಿದ್ದೆ. ಮೂರು ವರ್ಷಗಳಿಂದ ಸಭೆಯನ್ನು ಕರೆದಿಲ್ಲ. ಅದನ್ನು ರದ್ದು ಮಾಡಿದಾರೋ ಏನೋ ಗೊತ್ತಿಲ್ಲ ಅದನ್ನು ತಿಳಿಸಿಲ್ಲ ನಮಗೆ ಈಗ ಮತ್ತೊಂದು ಅದೇ ರೀತಿಯ ಕಮಿಟಿ ರಚನೆ ಮಾಡುತ್ತೀರಿ ಅಷ್ಟೇ. There is already a Committee on Agricultural Policies.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಎರಡು ವರ್ಷದ ಹಿಂದೆ ಒಂದು ಕೇಜಿ ರೇಷ್ಮೆ ಗೂಡಿನ ಬೆಲೆ 220 ರೂಪಾಯಿವರೆಗೂ ಕೂಡ ಇತ್ತು. ಇವತ್ತು 15-20 [illegible]

ಯಾರೂ ಕಾರಣವಲ್ಲ, ನಾವು ಹೇಳಿದೆವು ಸದನದಲ್ಲೂ ಕೂಡ ಚರ್ಚೆ ಆಯಿತು. ನಾವು ಏನು ಹೇಳುತ್ತೇವೆಂದರೆ ಚೈನಾ ದೇಶದಿಂದ ಬರತಕ್ಕ ರೇಶ್ಮೆಯನ್ನು ಇಲ್ಲಿಗೆ ತರಿಸಬೇಡಿ. ಅದು ತರಿಸುವುದರಿಂದ ನಮ್ಮ ರೇಷ್ಮೆ ಗೂಡಿನ ಬೆಲೆ ಬಿದ್ದು ಹೋಗಿದೆ ಎಂದು ಹೇಳಿದ್ದೆ. ಒಂದು ಕೇಜಿ ರೇಷ್ಮೆಗೆ.......

ಪ್ರೊ: ಎಂ.ಡಿ. ನಂಜುಂಡಸ್ವಾಮಿ: ನಿಮ್ಮ ಎಕ್ಸ್‌ಪೋರ್ಟ್, ಇಂಪೋರ್ಟ್ ಪಾಲಿಸಿನಲ್ಲಿ Cocoon has been removed from the Negative List. ಬರೋದು ದಾರ ಅಲ್ಲಾ ಬರೇ ಕಕೂನ್ ಬರುತ್ತೆ.

ಶ್ರೀ ಸಿ. ಬೈರೇಗೌಡ: ಕಳೆದ ಎರಡು ವರ್ಷದಿಂದ ಒಂದು ಕೇಜಿ ರೇಷ್ಮೆಗೆ ಸುಮಾರು 120-140-150 ರೂಪಾಯಿ ಬೆಲೆ ಕಡಿಮೆಯಾಯಿತಲ್ಲಾ ಇದು ಯಾರು ಮಾಡಿದ್ದು ನೀವು ಅಲ್ಲವಾ ಮಾಡಿದ್ದು, ಕೇಂದ್ರದಲ್ಲಿರುವ ನಿಮ್ಮ ಸರ್ಕಾರ ಜವಾಬ್ದಾರಿ ಅಲ್ಲವಾ ಇದನ್ನು ನೀವು ಆಲೋಚನೆ ಮಾಡದೆ ನೀವು ಯಾವ ರೀತಿ ರೈತರನ್ನು ಉದ್ಧಾರ ಮಾಡುತ್ತೀರಿ? ಬೆಳೆದಂತಹ ಉತ್ಪನ್ನಕ್ಕೆ ಸರಿಯಾದ ಬೆಲೆ ಕೊಡದೆ ಇದ್ದರೆ ರೈತರು ಯಾವ ರೀತಿ ಉದ್ಧಾರವಾಗುತ್ತಾರೆ. ಆದುದರಿಂದ ನಾವು ಹೇಳುವುದು ಒಂದು ಸಾರಿ ನೀವು ಬಡ್ಡಿ ಮತ್ತು ಸುಸ್ತಿ ಬಡ್ಡಿ ವಜಾ ಮಾಡಿ ಎಂದು.

ಶ್ರೀ ಎಂ. ವೀರಪ್ಪ ಮೊಯಿಲಿ: ಎಲ್ಲಾ ವಿಚಾರಗಳನ್ನೂ ಅವಲೋಕನ ಮಾಡತಕ್ಕದ್ದು including the credit structure, investment in Agriculture and also about the indebtedness of the Agriculturists. ಈಗಾಗಲೇ ಇದರ ಬಗ್ಗೆ ಒಂದು ಸಮಿತಿಯನ್ನು ಮಾಡಿದರೂ ಅದು ಇದುವರೆಗೂ ಒಂದು ಮೀಟಿಂಗ್‌ನ್ನೂ ಮಾಡಿಲ್ಲವೆಂದು ತಾವು ಹೇಳಿದಿರಿ. I am going to do this. I will constitute a Committee covering all these aspects. Let it give a Report within 3 months. Let us have a study instead of formulating an adhoc policy

ಪ್ರತಿಸಾರಿಯೂ ನಾವು ಅಡ್‌ಹಾಕ್ ಆಗಿ ಪಾಲಿಸಿಗಳನ್ನು ಅನೌನ್ಸ್‌ಮಾಡತಕ್ಕದ್ದು, ಬೇಡಿಕೆಗಳನ್ನು ಮಂಡಿಸತಕ್ಕದ್ದು if it is politically convenient to us, make some announcement. ಮೀಟಿಂಗ್ ಮಾಡುವ ಬದಲು ರಾಜಕಾರಣಿಗಳ ಕೈ ಕೂಸಾಗಿ ರೈತ ಬಲಿಯಾಗುವ ಬದಲು ರೈತನ ನಿಜವಾದ ಪರಿಸ್ಥಿತಿಯನ್ನು ಗಮನಿಸಿ ವರದಿಯನ್ನು ಕೊಡಲಿ. we will involve the Legislators and also Parliament Members.

ಶ್ರೀ ವಾಟಾಳ್ ನಾಗರಾಜ್: ವರದಿಯನ್ನು 3 ತಿಂಗಳೊಳಗೆ ಕೊಡಲೆಂದು ತಾವು ಹೇಳುತ್ತಿದ್ದೀರಿ. ಅದುವರೆಗಾದರೂ ತಾವು ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು.......

ಶ್ರೀ ಎಂ. ವೀರಪ್ಪ ಮೊಯಿಲಿ: ಆದ್ದರಿಂದಲೇ ನಾನು ಹೇಳಿದ್ದು. ಅಸಲು ಮತ್ತು ಬಡ್ಡಿಯನ್ನು ಪಾವತಿ ಮಾಡಿದರೆ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ 31-3-94ರವರೆಗೆ ರಿಯಾಯಿತಿ ಕೊಡುತ್ತೇವೆ. ಮೊದಲು ವರದಿ ಬರಲಿ ಅನಂತರ ಪರಿಶೀಲನೆ ಮಾಡುತ್ತೇವೆ. ಇನ್ನು ಮಾನ್ಯ ಚಂದ್ರೇಗೌಡರು ಇರಿಗೇಷನ್ ಬಗ್ಗೆ ಒಂದು ಸರ್ಕ್ಯುಲರ್‌ನ್ನು ಕೊಟ್ಟರು. ನಾನು ಸ್ಪಷ್ಟವಾಗಿ ಹೇಳಬೇಕೆಂದರೆ, ತಾವು ಹೇಳಿದಂಥ ರಹಸ್ಯ ಪತ್ರ ಏನಿದೆ ಅದು ಸರ್ಕಾರದಿಂದ ಹೋಗಿಲ್ಲ. ಅಥವಾ ಹಣಕಾಸಿನ ಇಲಾಖೆಯಿಂದ ಕೂಡ ಹೋಗಿಲ್ಲ. ಇದರಲ್ಲಿ ಕೂಡ 62 ಪರ್ಸೆಂಟ್ ವರೆಗೆ ಸೀಮಿತಗೊಳಿಸಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ. ಡಿಸೆಂಬರ್ ಕೊನೆಯವರೆಗೂ ಈ ವರ್ಷದ ಯೋಜನೆಗಳನ್ನೆಲ್ಲಾ ಅನುಷ್ಠಾನ ಮಾಡತಕ್ಕ ಶಕ್ತಿ ನಮಗಿದೆ. ನೂರಕ್ಕೆ ನೂರು ಪರ್ಸೆಂಟ್ ನಮ್ಮ ಯೋಜನೆಗಳನ್ನೆಲ್ಲಾ ಅನುಷ್ಠಾನ ಮಾಡತಕ್ಕ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ. ಅದರಲ್ಲೂ ತಾವು ಹೇಳಿದಂಥ

ಇರಿಗೇಷನ್ ಪ್ರಾಜೆಕ್ಟ್ ಬಗ್ಗೆ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ನೂರಕ್ಕೆ ನೂರು ಪಾಲು ಅನುಷ್ಠಾನ ಮಾಡಬೇಕೆಂಬ ಉದ್ದೇಶದಿಂದಲೇ ನಾವು ಬ್ಯಾಂಕ್‌ನವರನ್ನು ಕೇಳಿಕೊಂಡಿದ್ದೇವೆ.

ಶ್ರೀ ವೈ.ಕೆ. ರಾಮಯ್ಯ: ನಿಮ್ಮ ಉದ್ದೇಶ ಇದು ಆಗಬಾರದು, ಅದು ನಿಮ್ಮ ತೀರ್ಮಾನ ಆಗಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ: ನಮ್ಮ ತೀರ್ಮಾನ ಕೂಡ ಆಗಿದೆ. ನಾನು ಈಗಾಗಲೇ ಹೇಳಿಕೆಯನ್ನೂ ಕೂಡ ಕೊಟ್ಟಿದ್ದೇನೆ. ಇನ್ನು ಜನವರಿ 94ರವರೆಗೆ 979 ಕೋಟಿ ರೂ.ಗಳ ಪೈಕಿ 560 ಕೋಟಿ ರೂ. ಖರ್ಚಾಗಿದೆ. ಇನ್ನು 419 ಕೋಟಿ ರೂ. ಖರ್ಚಾಗಬೇಕಾಗಿದೆ. ಎಸ್ಟ್ಯಾಬ್ಲಿಷ್‌ಮೆಂಟ್‌ನಲ್ಲಿ 158 ಕೋಟಿ ರೂ. ಪೈಕಿ 132 ಕೋಟಿ ಖರ್ಚಾಗಿದೆ. ಇನ್ನು 26 ಕೋಟಿ ಖರ್ಚಾಗಬೇಕಾಗಿದೆ. ಕಾಮಗಾರಿಯಲ್ಲಿ 821 ಕೋಟಿಯಲ್ಲಿ 428 ಕೋಟಿ ಖರ್ಚಾಗಿದೆ. 393 ಕೋಟಿ ರೂ. ಖರ್ಚಾಗಬೇಕಾಗಿದೆ. ಇದನ್ನು ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಖರ್ಚು ಮಾಡತಕ್ಕ ಎಲ್ಲ ಪ್ರಯತ್ನಗಳನ್ನೂ ಕೂಡ ನಾವು ಮಾಡಿದ್ದೇವೆ. ಆದರೆ ಅವರು ಕೊಟ್ಟಿರತಕ್ಕ ರಹಸ್ಯಪತ್ರದಲ್ಲಿ ಏನು ಹೇಳಿದ್ದಾರೆಂದರೆ, ಕಾರ್ಯಪಾಲಕ ಅಭಿಯಂತರರು, ಕಾರ್ಯಕ್ರಮದಲ್ಲಿ ಪಟ್ಟಿ ಅನುಮೋದಿತವಾಗಿದೆ ಎಂಬ ನೆಪದಿಂದ ಎಲ್ಲ ಕಾಮಗಾರಿಗಳನ್ನೂ ಕಾರ್ಯರೂಪಕ್ಕೆ ತರಲು ಬಿಟ್ಟರೆ ಬಿಲ್ಲುಗಳ ರಾಶಿಯೇ ಹರಿದು ಬಾಕಿ ಬಿಲ್ಲುಗಳ ಪ್ರಮಾಣ ಅಧಿಕ ಆಗುವುದು. ಇದು ಸರ್ಕಾರದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಇದು ಕ್ರೆಡಿಬಿಲಿಟಿ ಪ್ರಶ್ನೆಯಾಗಿದೆ. ಆದ್ದರಿಂದ ಇಲಾಖೆಯಲ್ಲಿ ಅರಾಜಕತೆ ಬಂದು ಮಂಜಾರಾತಿ ಆಗಿದೆ ಎಂದು ಇವತ್ತು ಖರ್ಚು ಮಾಡಿಕೊಂಡು ಬಿಲ್ಲುಗಳ ರಾಶಿಯನ್ನು ಹಾಕಿಕೊಂಡು ನಮ್ಮ ಎಸ್.ಟಿ. ವ್ಯವಸ್ಥೆಯನ್ನೇ ಅದಲುಬದಲು ಮಾಡತಕ್ಕ ಪ್ರವೃತ್ತಿ ಏನಿದೆ ಅದನ್ನು ನಿಲ್ಲಿಸಬೇಕೆಂಬ ಉದ್ದೇಶದಿಂದ ಇದನ್ನು ಅವರು ಕೊಟ್ಟಿದ್ದಾರೇನೋ ಗೊತ್ತಿಲ್ಲ. ಆದರೆ ಸರ್ಕಾರದಿಂದ ಅಥವಾ ಆರ್ಥಿಕ ಇಲಾಖೆಯ ವತಿಯಿಂದ ನಾವು ಯಾವುದೇ ರಹಸ್ಯ ಪತ್ರವನ್ನೂ ಹೊರಡಿಸಿಲ್ಲ.

ಪ್ಲಾನಿಂಗ್ ಬೋರ್ಡ್ ಬಗ್ಗೆ ಮಾನ್ಯ ಚಂದ್ರೇಗೌಡರು ಹೇಳಿದರು ಆದರೆ ಪ್ಲಾನಿಂಗ್ ಬೋರ್ಡ್ ಏನು ಮಾಡಿದೆ? ಹಣಕಾಸು ಕೊಟ್ಟಂತೆ ಅವರು ಖರ್ಚುಮಾಡಬೇಕಾದ ಅವಶ್ಯಕತೆ ಇಲ್ಲ. ಪ್ಲಾನಿಂಗ್ ಬೋರ್ಡ್ ಹೇಳಿದ್ದನ್ನು ಅನುಷ್ಠಾನ ಮಾಡುವುದಕ್ಕೆ ಪ್ಲಾನಿಂಗ್ ಬೋರ್ಡ್ ಒಂದು ಸಬ್ ಕಮಿಟಿಯನ್ನು ಪಿ.ಆರ್. ನಾಯಕ್ ಅವರ ಅಧ್ಯಕ್ಷತೆಯಲ್ಲಿ ಮಾಡಿ ಸಧ್ಯದಲ್ಲಿ ವರದಿ ಕೊಡುತ್ತಿದೆ. ಆದುದರಿಂದ ರಿಸೋರ್ಸಸ್ ಮೊಬಿಲೈಸೇಷನ್ ಮಾಡುವುದು ಅಥವಾ ಔಟ್‌ಸೈಡ್ ದಿ ಪ್ಲಾನ್ ಹಣ ಜೋಡಿಸುವುದಕ್ಕೆ ಯಾವ ರೀತಿಯಲ್ಲಿ ಸಾಧ್ಯವಿದೆ ಎಂದು ನಾವು ಕಾರ್ಯಕ್ರಮ ಹಾಕುತ್ತಿದ್ದೇವೆಯೇ ಹೊರತು ಇವತ್ತು ಪ್ಲಾನಿಂಗ್ ಬೋರ್ಡಿನಲ್ಲಿ ನಿರ್ಣಯ ಮಾಡಿದ್ದಾರೆಂಬ ವ್ಯಾಖ್ಯೆ ಇದೆ, ಅದು ಸರಿಯಲ್ಲವೆಂದು ಹೇಳುವುದಕ್ಕೆ ಅಪೇಕ್ಷಪಡುತ್ತೇನೆ. ತಾವು ಪವರ್ ಚಾರ್ಜಸ್ ಬಗ್ಗೆ ಹೇಳಿದಿರಿ, ಅದನ್ನು ಕೇಂದ್ರ ಸರ್ಕಾರದವರು ಕ್ಲಿಯರ್ ಮಾಡಿದ್ದಾರೆ. ಆದರೆ ಪ್ರಮುಖವಾಗಿ ಅವರು 10 ಹೆಚ್.ಪಿ.ವರೆಗೆ ಏನು ಫ್ರೀ ಕೊಡುತ್ತಿದ್ದರು ಅದಕ್ಕೆ ನಾವು 610ಕೋಟಿ ರೂಪಾಯಿ ವರ್ಷಕ್ಕೆ ಸಬ್ಸಿಡಿ ಕೊಡುತ್ತಿದ್ದೇವೆ ಕೆಇಬಿ.ಯಲ್ಲಿ ಹತ್ತು ಹೆಚ್.ಪಿ. ವರೆಗೆ ಫ್ರೀ ಕೊಟ್ಟಿದ್ದು 610 ಕೋಟಿ ರೂಪಾಯಿ. ಇವತ್ತು ಸುಮಾರು 260 ಕೋಟಿ ರೂಪಾಯಿಗಳನ್ನು ರೈತರು ಕೊಟ್ಟರೆ ಕೆಇಬಿ. ಯನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಿದೆ. ಆದುದರಿಂದ ವಿಶ್ವ ಬ್ಯಾಂಕಿನವರು ಹೇಳಿದ್ದು ಕೆಇಬಿ.ಯವರು ಕಮರ್ಷಿಯಲ್ ಬೇಸಿಸ್ ಮೇಲೆ ಕೆಲಸ ಮಾಡಬೇಕಾಗುತ್ತದೆ. ವ್ಯವಹಾರಿಕ ದೃಷ್ಟಿಯಿಂದ ಕೆಲಸ ಮಾಡಿದಾಗ ನಾವು ವಿಶ್ವ ಬ್ಯಾಂಕಿನಿಂದ ಸಾಲ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲವೆಂಬ ದೃಷ್ಟಿಯಿಂದ ಸಸ್ಪೆಂಡ್ ಮಾಡಿದ್ದಾರೆಯೇ ಹೊರತು ಅದೇ ಮುಖ್ಯ ಅಲ್ಲ. ಇವತ್ತಿಗೂ ಆ ಬ್ಯಾನ್

ಏನಾಗಿದೆ ಎಂದರೆ ಇರಿಗೇಷನ್ ಪ್ರಾಜೆಕ್ಟಿನದು ಮಾತ್ರ ಲಿಫ್ಟ್ ಮಾಡಿದ್ದಾರೆಂದು ಈಗಾಗಲೇ ಈ ಬಗ್ಗೆ ಹೇಳಿದೆ. ಇನ್ನು ಬೈರೇಗೌಡರು ಒಂದು ವಿಚಾರ ಹೇಳಿದರು, ಚುನಾವಣೆ ಗುರುತಿನ ಚೀಟಿಯ ಬಗ್ಗೆ .ಕರ್ನಾಟಕ ರಾಜ್ಯ ಗುರುತಿನ ಚೀಟಿಯನ್ನು ಅನುಷ್ಠಾನ ಮಾಡಿದರೆ 60 ಕೋಟಿ ರೂಪಾಯಿ ಖರ್ಚು ಮಾಡಬೇಕು. ಹತ್ತು ಕೋಟಿ ರೂಪಾಯಿಗಳನ್ನು ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್‌ಗೆ ಖರ್ಚು ಮಾಡಬೇಕು. ಒಟ್ಟು 70 ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಇದಕ್ಕೆ 70 ಪರ್ಸೆಂಟ್ ಆದರೂ ಕೇಂದ್ರ ಸರ್ಕಾರದವರು ಭರ್ತಿ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಆದರೆ ನಾವು ಇದನ್ನು ಅನುಷ್ಠಾನ ಮಾಡುವುದಕ್ಕೆ ಒಪ್ಪಿದ್ದೇವೆ. ಅದರ ತಯಾರಿಕೆಗೆ ನಾವು ಬೇರೆ ಬೇರೆ ರೀತಿಯಲ್ಲಿ ಸಮಾಲೋಚನೆ ಮಾಡುತ್ತಿದ್ದೇವೆ, ಸಭೆ ಸಮಾರಂಭ ಮಾಡುತ್ತಿದ್ದೇವೆ.

ಮೊನ್ನೆತಾನೇ ಮುಖ್ಯ ಮಂತ್ರಿಗಳ ಸಮಾಲೋಚನಾ ಸಭೆಯನ್ನು ಕೇಂದ್ರದ ಗೃಹ ಮಂತ್ರಿಗಳು ಕೂಡ ಕರೆದಿದ್ದರು. ಈ ಬಗ್ಗೆ ಮಾತುಕತೆ ನಡೆಯುತ್ತಿದೆ. ಆದುದರಿಂದ ಗುರುತಿನ ಚೀಟಿ ಮಾಡುವುದರಲ್ಲಿ ಚುನಾವಣಾ ಆಯೋಗದವರು ನಮಗೆ ಏನು ಒಂದು ಸುತ್ತೋಲೆ ಕಳುಹಿಸಿದ್ದಾರೆ ಅದರ ಪ್ರಕಾರ ನಾವು ಇದನ್ನು ಅನುಷ್ಠಾನ ಮಾಡಬೇಕೆಂದು ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಹಣದ ಪ್ರಶ್ನೆ ಬಂದಾಗ ಕೇಂದ್ರ ಸರ್ಕಾರದವರು 80 ಪರ್ಸೆಂಟ್ ಕೊಡಬೇಕೆಂದು ಈಗಾಗಲೇ ಹೇಳಿದ್ದೇವೆ.

ಶ್ರೀ ಸಿ. ಬೈರೇಗೌಡ : ನವೆಂಬರ್‌ನಲ್ಲಿ ನಡೆಯುವ ಚುನಾವಣೆಯೊಳಗೆ ಗುರುತಿನ ಚೀಟಿಯನ್ನು ರಾಜ್ಯದ ಮತದಾರರಿಗೆ ಕೊಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಕೊಡುವುದು ಸರಿಯೇ ಆದರೆ ಹಣ ಬೇಕು. ಹಣ ಎಲ್ಲಿಂದ ಬರುತ್ತದೆ? ಕೇಂದ್ರ ಸರ್ಕಾರದವರು ಹಣ ಕೊಡಬೇಕು, ಇಲ್ಲದಿದ್ದರೆ ನಮ್ಮ ಯೋಜನೆಯಲ್ಲಿರತಕ್ಕ ಹಣ ತೆಗೆದು ಕೊಡಬೇಕು. ಪ್ರಶ್ನೆ ಇರತಕ್ಕದ್ದು ಇಷ್ಟೆ. ಈ ಬಗ್ಗೆ ಸ್ಪಷ್ಟೀಕರಣ ಕೊಟ್ಟಿದ್ದೇವೆ. ಆದ್ದರಿಂದ ರಾಜ್ಯಪಾಲರ ಭಾಷಣದ ಮೇಲಿನ ನಿರ್ಣಯದ ಬಗ್ಗೆ ಧನ್ಯವಾದದ ಮಂಡನೆ ಏನಿದೆ ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸುಸ್ತಿ ಬಡ್ಡಿ ಬಗ್ಗೆ ಸ್ಪಷ್ಟವಾದ ಭರವಸೆ ಕೊಡಬೇಕು.

ಶ್ರೀ ಸಿ. ಬೈರೇಗೌಡ : ಕಳೆದ 4 ವರ್ಷಗಳಿಂದ ನಾವೆಲ್ಲರೂ ಒಕ್ಕೊರಲಿನಿಂದ ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ನಿಮ್ಮ ಅಭ್ಯಾಸ ಬಲ ಹೋಗುವುದಿಲ್ಲ. ಒಂದು ತಿಳಿದುಕೊಳ್ಳಬೇಕು. ಯಾವಾಗಲೂ ನೀವು ಚುಚ್ಚಿದಾಗ ನಾವು ಎಷ್ಟು ಸಮಾಧಾನದಿಂದ ಇರುತ್ತೇವೆ ಅದನ್ನು ನೀವು ಮೊದಲು ಕಲಿತುಕೊಳ್ಳಿ. ನಿಮಗೆ ಚುಚ್ಚಿದಾಗ ನೀವು ಎಲ್ಲ ಹೀಗೆ ಎದ್ದುನಿಂತುಕೊಳ್ಳತಕ್ಕದ್ದು ಸರಿಯಲ್ಲ.

ಉಪಾಧ್ಯಕ್ಷರು : ಶ್ರೀ ಪಿ.ಜಿ.ಆರ್. ಸಿಂಧ್ಯ ಅವರಿಂದ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಪ್ರಸ್ತಾವಕ್ಕೆ ತಿದ್ದುಪಡಿ. ಮಾನ್ಯ ಸದಸ್ಯರು ಪ್ರಸ್ತಾವನೆಯನ್ನು ಮಂಡಿಸಬೇಕು.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಉಪಾಧ್ಯಕ್ಷರು : ಮಾನ್ಯ ಸದಸ್ಯರು ಇಲ್ಲದಿರುವುದರಿಂದ ತಿದ್ದುಪಡಿಯನ್ನು ತಿರಸ್ಕರಿಸಲಾಗಿದೆ. ಶ್ರೀಮಾನ್ ಏಕಾಂತಯ್ಯನವರಿಂದ ರಾಜ್ಯಪಾಲರ ಭಾಷಣಕ್ಕೆ ತಿದ್ದುಪಡಿ.

ತಿದ್ದುಪಡಿ ಪ್ರಸ್ತಾವ

(ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಪ್ರಸ್ತಾವಕ್ಕೆ ತಿದ್ದುಪಡಿ)

ಶ್ರೀ ಹೆಚ್. ಏಕಾಂತಯ್ಯ: ನನ್ನ ತಿದ್ದುಪಡಿ ಪ್ರಸ್ತಾವ ಈ ರೀತಿ ಇದೆ. ಪ್ರಸ್ತಾವದ ಕೊನೆಯಲ್ಲಿ ಈ ಕೆಳಕಂಡಂತೆ ಸೇರಿಸುವುದು:

"ಆದರೆ ಆಡಳಿತ ಪಕ್ಷದಲ್ಲಿ ನಡೆದ ಯಾದವಿ ಕಲಹ ರಾಜ್ಯದ ಆಡಳಿತದ ಮೇಲೆ ಬೀರಿದ ದುಷ್ಪರಿಣಾಮದ ಬಗ್ಗೆ ಪ್ರಸ್ತಾಪಿಸದೆ ಇರುವುದಕ್ಕೆ ಸದನವು ವಿಷಾದಿಸುತ್ತದೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಆದರೆ ಆಡಳಿತ ಪಕ್ಷದಲ್ಲಿ ನಡೆದ ಯಾದವಿ ಕಲಹ ರಾಜ್ಯದ ಆಡಳಿತದ ಮೇಲೆ ಬೀರಿದ ದುಷ್ಪರಿಣಾಮದ ಬಗ್ಗೆ ಪ್ರಸ್ತಾಪಿಸದೆ ಇರುವುದಕ್ಕೆ ಸದನವು ವಿಷಾದಿಸುತ್ತದೆ"

ಪ್ರಸ್ತಾವ ತಿರಸ್ಕೃತವಾಯಿತು.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ನಾನು ರಾಜ್ಯಪಾಲರ ಭಾಷಣಕ್ಕೆ ಈ ತಿದ್ದುಪಡಿ ನಿರ್ಣಯವನ್ನು ಮಂಡಿಸುತ್ತಿದ್ದೇನೆ.

"At the end of the Motion the following be added : "but regret that the Government have not taken into consideration the negative effects the New Liberal Economic Policies and the major structural reforms in the economic, industrial and trade policies announced by the Government of India would have on the powers of the Government of the State in providing better economic opportunities to minority communities, to provide and ensure fair and adequate representation of SC's and ST's in Civil Services, to ensure the well-being of the Backward Classes, to formulate a comprehensive plan for the development of women, to evolve a multiple sector plan for child development, or to arrest the growing unemployment among the graduates of various disciplines in the State"

ಪ್ರಸ್ತಾವ ಮಂಡಿಸಲ್ಪಟ್ಟಿತು

ಉಪಾಧ್ಯಕ್ಷರು: ಈಗ ತಿದ್ದುಪಡಿ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಶ್ನೆ ಏನೆಂದರೆ: "At the end of the Motion the following be added : "but regret that the Government have not taken into consideration the negative effects the New Liberal Economic Policies and the major structural reforms in the economic, industrial and trade policies announced by the Government of India would have on the powers of the Government of the State in providing better economic opportunities to minority communities, to provide and ensure fair and adequate representation of SC's and ST's in Civil Services, to ensure the well-being of the Backward Classes, to formulate a comprehensive plan for the development of women, to evolve a multiple sector plan for child development, or to arrest the growing unemployment among the graduates of various disciplines in the State"

ಪ್ರಸ್ತಾವ ತಿರಸ್ಕರಿಸಲ್ಪಟ್ಟಿತು

ಶ್ರೀ ಸಿ. ಬೈರೇಗೌಡ: ಮಾನ್ಯ ಉಪಾಧ್ಯಕ್ಷರೆ, ತಾವು ವಂದನಾ ನಿರ್ಣಯ ತೆಗೆದುಕೊಳ್ಳುವುದಕ್ಕೆ ಮುಂಚೆ ಒಂದು ನಿಮಿಷ ಅವಕಾಶ ಕೊಡಿ. ಕಳೆದ ನಾಲ್ಕೂವರೆ ವರ್ಷಗಳಿಂದ ನಾವು ಈ ಕಡೆಯಿರತಕ್ಕವರು ಒಂದೇ ಸಮನೆ ಒಕ್ಕೊರಲಿನಿಂದ ಹೇಳುತ್ತಿದ್ದೇವೆ. ರಾಜ್ಯದ ರೈತರ ಮೇಲೆ ಹೊರೆಯಾಗಿರತಕ್ಕ ಅವರ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ವಜಾಮಾಡಬೇಕೆಂದು. ಇವತ್ತು ಸ್ವಲ್ಪಮಟ್ಟಿಗೆ ಸುಸ್ತಿ ಬಡ್ಡಿಯನ್ನು ವಜಾ ಮಾಡುತ್ತೇನೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದಕ್ಕಾಗಿ ತಮಗೆ ಧನ್ಯವಾದಗಳು. ಆದರೆ ಅತಿಮುಖ್ಯವಾಗಿ ಬಡ್ಡಿಯನ್ನು ವಜಾ ಮಾಡತಕ್ಕದ್ದು ಇದೆ. ಆ ಕಡೆಯವರು ಸಹ ತಮ್ಮ ಪಕ್ಕದಲ್ಲಿ ಕುಳಿತಿರುವವರು ಬಹಳ ಚೆನ್ನಾಗಿ ಮಾತನಾಡಿದರು. ನಮ್ಮ ಕಾನಡೆಯವರು ಬಹಳ ಚೆನ್ನಾಗಿ ಮಾತನಾಡಿದರು.

ಉಪಾಧ್ಯಕ್ಷರು: ಏನಾಗಬೇಕು ಅದನ್ನು ಬೇಗ ಹೇಳಿ.

ಶ್ರೀ ಸಿ. ಬೈರೇಗೌಡ: ದಯವಿಟ್ಟು ತಾವು ಬಡ್ಡಿಯನ್ನು ವಜಾಮಾಡಬೇಕೆಂದೂ ಅದಕ್ಕೆ ಒಪ್ಪಿಕೊಳ್ಳಬೇಕೆಂದು ಉಪಾಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಗಳು ವಿರೋಧಪಕ್ಷದ ನಾಯಕರ ಸಭೆಯನ್ನು ವರ್ಷಕ್ಕೊಂದು ಸಾರಿ ಕರೆದು ರೈತರ ಬಗ್ಗೆ ಚರ್ಚೆ ಮಾಡುತ್ತೇನೆಂದು ಹೇಳಿ ನಮ್ಮನ್ನು ಮೋಸಗೊಳಿಸಿದ್ದಾರೆ ಆ ವಿಚಾರ ಈಗ ಬೇಕಾಗಿಲ್ಲ. ನೇರವಾಗಿ ಈಗ ಹೇಳಲಿ, ಅವರು ಏನು ಹೇಳತಕ್ಕದ್ದು ಇದೆ ಮುಖ್ಯಮಂತ್ರಿಗಳು ನಮಗೆ ಭರವಸೆಯನ್ನು ಕೊಡಲಿ. ರೈತರ ಸಾಲದ ಮೇಲಿನ ಬಡ್ಡಿಯನ್ನು ವಜಾ ಮಾಡಿದ್ದೇನೆಂದು ಆ ಭರವಸೆಯನ್ನು ಕೊಡಲಿ ಅದಕ್ಕೆ ನಾನು ಒತ್ತಾಯ ಮಾಡುತ್ತಿದ್ದೇನೆ. ಬಡ್ಡಿಯ ವಿಚಾರದಲ್ಲಿ ಕೊನೆಯ ಮಾತು ಹೇಳಿ. ನಮ್ಮನ್ನು ಕರೆದು ಏಕೆ ಮಾತನಾಡಿದ್ದೀರಿ? ಯಾವ ಉದ್ದೇಶಕ್ಕೆ ಮಾತನಾಡಿದ್ದೀರಿ?

ಉಪಾಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್ ಮತ್ತು ಬೈರೇಗೌಡರೇ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇನೆಂದೂ ಅದರಿಂದ 13 ಕೋಟಿ ರೂಪಾಯಿ ಖರ್ಚು ಬರುತ್ತದೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ: ನಾಲ್ಕು ವರ್ಷಗಳಿಂದ ನಾವು ಇದರ ಬಗ್ಗೆ ಸತತವಾಗಿ ಮಾತನಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಈ ವಿಚಾರದಲ್ಲಿ ನಾವೆಲ್ಲ ಒಂದಾಗಿ ಒಂದು ತೀರ್ಮಾನಕ್ಕೆ ಬಂದು ಸಾಲ ಮನ್ನಾ ಮಾಡುತ್ತೇವೆಂದು ಹೇಳದಿದ್ದರೂ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ಮನ್ನಾ ಮಾಡಬೇಕೆನ್ನುವ ಒಂದು ತೀರ್ಮಾನಕ್ಕೆ ಬಂದು ಒಂದಲ್ಲ ಎರಡು ಸಾರಿ ಸಭೆ ಕರೆದರು. ನಿನ್ನೆ ಸಭೆ ಕರೆದರು. ನಿನ್ನೆ ಸಹ ಬಹಳ ಆಶಾದಾಯಕವಾಗಿ ನಮಗೆ ಒಂದು ಭರವಸೆಯನ್ನು ಕೊಡುತ್ತಾರೆಂದು ಅರದುಕೊಂಡಿದ್ದೆ. ಆದರೆ ಇವತ್ತು ಇವರ ಮಾತುಕತೆ ನೋಡಿದರೆ ಭರವಸೆ ಹುಸಿಯಾಗುತ್ತಿದೆ. ಆದ್ದರಿಂದ ನಿಮ್ಮ ಸರ್ಕಾರದ ನೀತಿಯನ್ನು ವಿರೋಧಿಸಿ ಹೊರಗೆ ಹೋಗಬೇಕಾಗುತ್ತದೆ. ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಹೇಳಲಿ ನಾವು ಆಮೇಲೆ ಹೊರಗಡೆ ಹೋಗುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ಉತ್ತರಗಳನ್ನು ಅನೇಕ ವಿಚಾರಗಳಲ್ಲಿ ಹೇಳಿದ್ದಾರೆ. ಅವರು 1989ನೇ ಇಸವಿಯಿಂದ ಅವರ ಸರ್ಕಾರದ ಸಾಧನೆಗಳೇನು ಏನೇನು ಮಾಡಿದ್ದಾರೆ ಅದನ್ನು ಹೇಳುವುದನ್ನು ಬಿಟ್ಟು ಕಳೆದ ವರ್ಷ ಇವರು ಮುಖ್ಯಮಂತ್ರಿಗಳಾದ ಒಂದು ವರ್ಷದಲ್ಲಿ ಏನು ಮಾಡಿದ್ದಾರೆ ಅದನ್ನೆಲ್ಲ ಹೇಳಿದ್ದಾರೆ. ಕಳೆದ ವರ್ಷದ ರಾಜ್ಯಪಾಲರ ಭಾಷಣದಲ್ಲಿ

ಏನು ಹೇಳಿದ್ದಾರೆ. ಈ 12 ತಿಂಗಳು ಏನೇನು ಆಗಿದೆ ಅದನ್ನು ಹೇಳಿದ್ದಾರೆ. ಸಮಯ ಸಿಗಲಿಲ್ಲವೆಂದು ನಮ್ಮಲ್ಲಿ ಅನೇಕ ಜನ ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಅನೇಕ ವಿಚಾರಗಳನ್ನು ಕಳೆದ ವರ್ಷದ ರಾಜ್ಯಪಾಲರ ಭಾಷಣಕ್ಕೆ ಇವತ್ತಿನ ರಾಜ್ಯಪಾಲರ ಭಾಷಣಕ್ಕೆ ಇರತಕ್ಕ ವ್ಯತ್ಯಾಸವನ್ನು ಇವರ ಸಾಧನೆಯನ್ನು ಹೇಳತಕ್ಕದ್ದು ಸಮಯ ಸಿಗಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಕಳೆದ ವರ್ಷದ ರಾಜ್ಯಪಾಲರ ಭಾಷಣಕ್ಕೆ ನಾವೇನು ಸಾಧನೆಗಳನ್ನು ಮಾಡಿದ್ದೇವೆ ಅವುಗಳನ್ನು ಹೇಳುವುದಕ್ಕೆ ಸಮಯ ಇರಲಿಲ್ಲ. ಆ ಪಟ್ಟಿಯನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ಅದನ್ನು ಹೇಳುವುದಕ್ಕೆ ಸಮಯ ಇರಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನಗೂ ಅದೇ ಬಂದಿರುವುದು ಸಮಯವಿರಲಿಲ್ಲ. ನಾನೊಂದು ಅಮೆಂಡ್‌ಮೆಂಟ್ ಕಳುಹಿಸಿದ್ದೆ ನಾನು ಅಮೆಂಡ್‌ಮೆಂಟಿಗೋಸ್ಕರ ಬಂದೆ, ಅವರಿಗೆ ಮೆಜಾರಿಟಿ ಇದೆ ಅದು ಬಂದು ಹೊರಟುಹೋಗಿದೆ. ನಾನು ಇರಲಿಲ್ಲ ಹೊರಗೆ ಹೋಗಿದ್ದೆ ಅದು ನನ್ನದೆ ತಪ್ಪು. ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ ರೈತರಿಗೆ ಕಳೆದ ಮೂರ್‍ನಾಲ್ಕು ವರ್ಷಗಳಿಂದ ಸಾಲದ ಮೇಲಿನ ಬಡ್ಡಿಯನ್ನು ರದ್ದುಮಾಡತಕ್ಕ ಸೌಜನ್ಯವನ್ನು ಈ ಸರ್ಕಾರ ತೋರಿಸುತ್ತದೆ ನಾವು ವಿಧಾನಸೌಧದಲ್ಲಿ ಹೋರಾಟ ಮಾಡುತ್ತೇವೆ ಎನ್ನುವ ಭರವಸೆಯನ್ನು ಜನಗಳಿಗೆ ಕೊಟ್ಟಿದ್ದೇವೆ. ನಮ್ಮ ಕಡೆಯಿಂದ ಅನೇಕ ಸದಸ್ಯರು ಈ ವಿಚಾರವನ್ನು ಒತ್ತಾಯ ಮಾಡಿ ಹೇಳಿದ್ದಾರೆ. ಸರ್ಕಾರದ ಮೇಲಿನ ಹೊರೆಯನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ. ಆದರೂ ಸಹಿತ ನಾವು ನಿಮಗೆ ಒತ್ತಾಯ ಮಾಡುತ್ತಿದ್ದೇವೆ. ನೀವು ಯಾವುದಾದರರೂ ಕಾರ್ಯಕ್ರಮವನ್ನು ತೆಗೆದುಕೊಂಡು, ರೈತರ ಸಾಲವನ್ನು ರದ್ದುಮಾಡಿಯೆಂದು ಹೇಳುವುದಿಲ್ಲ, ಕನಿಷ್ಠ ಸಾಲದ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ರದ್ದುಮಾಡಿದ್ದೇವೆ ಎನ್ನತಕ್ಕ ಭರವಸೆಯನ್ನು ಕೊಡಬೇಕೆಂದು ಆ ಬಗ್ಗೆ ಮುಖ್ಯ ಮಂತ್ರಿಗಳಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅವರು ಹೇಳುವುದಿಲ್ಲ, ನಿಮ್ಮ ಸರ್ಕಾರದ ನೀತಿಯನ್ನು ವಿರೋಧಿಸಿ ನಾವು ಸಭೆಯಿಂದ ಹೊರಗಡೆ ಹೋಗುತ್ತೇವೆ ಇದು ಸರಿಯಲ್ಲ.

(ಈ ಹಂತದಲ್ಲಿ ವಿರೋಧಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "ಮಾನ್ಯ ಸದಸ್ಯರಾದ ಶ್ರೀ ಜಿ.ಎಸ್.ಶಿವನಂಜಪ್ಪ ಮಂಡಿಸಿದ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಸಭೆಯು ಅನುಮೋದಿಸಬೇಕು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಉಪಾಧ್ಯಕ್ಷರು : ಈ ಸದನದಲ್ಲಿ ಅಂಗೀಕರಿಸಿದ ವಂದನಾ ನಿರ್ಣಯವನ್ನು ರಾಜ್ಯಪಾಲರಿಗೆ ಕಳುಹಿಸಿ ಕೊಡಲಾಗುವುದು.

ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕಗಳ ಮಂಡನೆ ಹಾಗೂ ಪ್ರಸ್ತಾವ

ಶ್ರೀ ವಾರ್‍ತಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 1985-86 ಮತ್ತು 1986-87ನೇ ಸಾಲಿಗೆ ನಿಗದಿಪಡಿ

ಹಣಕ್ಕಿಂತ ಹೆಚ್ಚು ಹಣ ಖರ್ಚಾಗಿರುವುದರಿಂದ ಬೇಡಿಕೆಗೆ ಸಭೆಯ ಒಪ್ಪಿಗೆಯನ್ನು ತೆಗೆದುಕೊಂಡಿದ್ದೇವೆ. ಅದರ ಆಧಾರದ ಮೇಲೆ ಎರಡು ವಿಧೇಯಕಗಳನ್ನು ಈ ದಿವಸ ಸಭೆಯ ಮುಂದೆ ಮಂಡಿಸುವುದಕ್ಕೆ ಈ ಸಭೆಯ ಒಪ್ಪಿಗೆಯನ್ನು ಕೇಳುತ್ತಿದ್ದೇನೆ.

(1) ಕರ್ನಾಟಕ ಧನ ವಿನಿಯೋಗ ವಿಧೇಯಕ (ಸಂಖ್ಯೆ 5) 1993

ಮಂಡನೆಗೆ ಅನುಮತಿ ಕೋರಿಕೆ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "ಕರ್ನಾಟಕ ಧನ ವಿನಿಯೋಗ ಸಂಖ್ಯೆ 5 1993 ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, "ಕರ್ನಾಟಕ ಧನವಿನಿಯೋಗ ಸಂಖ್ಯೆ 5 1993 ಅದನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಉಪಾಧ್ಯಕ್ಷರು : ಅನುಬಂಧ III ವಿಧೇಯಕವನ್ನು ಮಂಡಿಸಲಾಗಿದೆ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): "1993ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 5) ವಿಧೇಯಕವನ್ನು ಸಭೆಯೂ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ"

ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ವಿಷಯ. ಇಲ್ಲಿ ಪ್ರಿಂಟ್ ಮಿಸ್ಟೇಕ್ / ಆಗಿದೆ ಮಿಸ್ ಅಪ್ರೋಪ್ರಿಯೇಷನ್ ಬಿಲ್ ಎಂದು ಪ್ರಿಂಟ್ ಆಗಬೇಕಾಗಿತ್ತು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಚಂದ್ರೇಗೌಡರೇ, ಇದು 1985-86 1986-87ರಲ್ಲಿ ತಾವು ಮಾಡಿದ ಖರ್ಚು ತಮ್ಮ ಹೇಳಿಕೆಯನ್ನು ನಾನು ಒಪ್ಪುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಧನವಿನಿಯೋಗ ಸಂಖ್ಯೆ 5ನ್ನು ಸಭೆಯ ಪರಿಶೀಲನೆಗೆ ಇಟ್ಟಿದ್ದಾರೆ ಅದೇ ರೀತಿ ಇವತ್ತಿನ ದಿವಸ ಕರ್ನಾಟಕ ಧನವಿನಿಯೋಗ ಸಂಖ್ಯೆ 6ನ್ನು ಸಹ ಪರಿಶೀಲನೆಗೆ ಇಡುವವರು ಇದ್ದಾರೆ. ಎರಡೂ ಧನವಿನಿಯೋಗಗಳ ಮೂಲಕ 1985-86 ಮತ್ತು 1986-87ನೇ ಸಾಲಿನಲ್ಲಿ ಹಣಕಾಸು ವರ್ಷದಲ್ಲಿ ಹೆಚ್ಚಾಗಿ ಖರ್ಚಾಗಿರತಕ್ಕ ವೆಚ್ಚವನ್ನು ಸುಮಾರು 107 ಕೋಟಿ ರೂಪಾಯಿಗಳನ್ನು 1986-87ರಲ್ಲಿ 23 ಕೋಟಿ ರೂಪಾಯಿಗಳನ್ನು ಬೇಡಿಕೆಗಿಂತ ಹೆಚ್ಚು ಹಣವನ್ನು ಖರ್ಚು ಮಾಡಿದ್ದಾರೆ ಅದನ್ನು ಸಂವಿಧಾನದ ಪ್ರಕಾರ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಯ ಮುಂದೆ ಬಂದು ಅವರ ಶಿಫಾರಸ್ಸಿನ ಮುಖಾಂತರ ಇವತ್ತಿನ ದಿವಸ ಮೊಬಲಿನಿಗಿಂತ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗೆ ಸಂದಾಯ ಮಾಡಿ ಉಪಯೋಗಿಸಲಾಗಿದೆಯೆಂದು ಭಾವಿಸತಕ್ಕುದ್ದು ಈವೊಂದು ಕಾರಣದಿಂದ ಮಸೂದೆಯನ್ನು ತಂದಿದ್ದಾರೆ.

7.00 ಪಿ.ಎಂ.

ಒಂದು ಕಾರಣದಿಂದ ಈ ಮಸೂದೆಯನ್ನು ತಂದಿದ್ದಾರೆ. ಈ ಮಸೂದೆಯನ್ನು ಸಾರ್ವಜನಿಕ ಲೆಕ್ಕಸಮಿತಿಯ ಅಧ್ಯಕ್ಷನಾಗಿ ಮತ್ತು ಈ ಸಮಿತಿಯ ಪರವಾಗಿ ಹೇಳುವುದಾದರೆ, ನಾವು ಇದನ್ನು ಶಿಫಾರಸ್ ಮಾಡಿದ್ದೇವೆ. ಶಿಫಾರಸ್ ಮಾಡಿದ್ದರೂ ಸಹ, ಏತಕ್ಕೋಸ್ಕರ ಈ ಸದನದ ಮುಂದೆ ಕೆಲವು ವಿಚಾರಗಳನ್ನು ಇಡುವುದಕ್ಕೆ

ಇಷ್ಟಪಡುತ್ತಿದ್ದೇನೆಂದರೆ, ನನ್ನ ಅನುಭವದಲ್ಲಿ ಬಂದಿರುವಂಥ ಒಂದೆರಡು ಮಹತ್ವದ ಮಾತುಗಳನ್ನು ಮಾತ್ರ ಮಾನ್ಯ ಹಣಕಾಸಿನ ಮಂತ್ರಿಗಳ ಗಮನಕ್ಕೆ ಮತ್ತು ಕಾನೂನು ಇಲಾಖೆಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸರ್ಕಾರಿ ಲೆಕ್ಕ ಏನಿದೆ, ಈ ಲೆಕ್ಕ ನಾವು ರೂಪಿಸಿಕೊಂಡಿರುವಂಥ ಬಜೆಟ್ ಮ್ಯಾನ್ಯುಯಲ್ ಆಗಲೀ, ಅಥವಾ ಫೈನಾನ್ಷಿಯಲ್ ಕೋಡ್ ಆಗಲೀ ಇದರಲ್ಲಿ ನಮೂದಿಸಿರುವಂಥ ನೀತಿ ನಿಯಮಗಳ ಪ್ರಕಾರ ಇಡುತ್ತಾ ಇಲ್ಲವೆಂಬ ಮಾತನ್ನು ಹೇಳವುದಕ್ಕೆ ಹಾಗೂ ಅಂತಹ ಒಂದು ಪ್ರಯತ್ನ ಸರಿಯಾದ ರೀತಿಯಲ್ಲಿ ಆಗುತ್ತಾ ಇಲ್ಲವೆಂದು ಹೇಳುವುದಕ್ಕೆ ನಾನು ಅತ್ಯಂತ ವಿಷಾದವನ್ನು ವ್ಯಕ್ತಮಾಡಲಿಕ್ಕೆ ಇಷ್ಟಪಡುತ್ತೇನೆ. ನಮಗೆ, ನಿಮಗೆ ಗೊತ್ತಿರುವ ಹಾಗೆಯೇ ನಾವು ಯಾವುದೇ ಲೆಕ್ಕವನ್ನು ಕದ್ದು ಮಾಡಿದರೂ ಸಹ, ಆ ಲೆಕ್ಕ ಸಿ ಅಂಡ್ ಎ ಜಿ ಯವರ ಆಫೀಸಿನಲ್ಲಿ, ಅವರ ಲೆಕ್ಕಪುಸ್ತಕಗಳಲ್ಲಿ ಏನು ನಮೂದಾಗುತ್ತದೋ, ಆ ನಮೂದಾಗುವಂಥ ಲೆಕ್ಕವನ್ನು ಆಯಾ ಇಲಾಖೆಯವರು, ಸಂಬಂಧಪಟ್ಟ ಇಲಾಖೆಯವರು ತಮ್ಮ ಪುಸ್ತಕ ಆಧಾರದ ಮೇಲೆ, ಏನು ಖರ್ಚಾಗಿದೆಯೋ ಅದನ್ನು ತಾಳೆ ನೋಡುವಂಥ ಪ್ರವೃತ್ತಿ ಅಷ್ಟೇ ಅಲ್ಲ, ತಾಳೆ ಹೊಂದತಕ್ಕ ರೀತಿಯಲ್ಲಿ ನಾವು ಲೆಕ್ಕ ಪತ್ರಗಳನ್ನು ಸರಿಪಡಿಸಿಕೊಳ್ಳಬೇಕಾಗುತ್ತದೆ. ಕೇವಲ ಒಂದೆರಡು ವರ್ಷದ ಮಾತನ್ನು ನಾನು ಹೇಳುತ್ತಾ ಇಲ್ಲ, ಈ ಸಿ ಅಂಡ್ ಎಜಿ ಯವರ ಲೆಕ್ಕಪತ್ರ ಏನಿದೆ, ಮತ್ತು ಇಲಾಖೆಯವರ ಲೆಕ್ಕಪತ್ರಗಳೇನಿವೆ, ಈ ಎರಡರಲ್ಲಿ ನಮೂದಿಸಿರುವಂಥ ಮೊತ್ತ ಏನಿದೆ, ಅದನ್ನು ಪರಿಶೀಲನೆ ಮಾಡತಕ್ಕದ್ದು; ರೀ ಕನ್ಸಿಲ್ ಮಾಡತಕ್ಕದ್ದು, ಹೊಂದಾಣಿಕೆ ಮಾಡತಕ್ಕದ್ದು ಸಂಬಂಧಪಟ್ಟ ಇಲಾಖೆಯ ಕರ್ತವ್ಯ. ಆ ರೀತಿ ಮಾಡಿಕೊಳ್ಳುವಂತೆ ನೋಡಿಕೊಳ್ಳಬೇಕಾದ್ದು ಹಣಕಾಸಿನ ಇಲಾಖೆಯ ಕರ್ತವ್ಯ. ನಾನು ಸರ್ಕಾರದ ಮೇಲೆ ಗಂಭೀರವಾದ ಆರೋಪವನ್ನು ಮಾಡುತ್ತೇನೆ, ನಮ್ಮ ಹಣಕಾಸಿನ ಇಲಾಖೆಯವರೇ ಆಗಲೀ, ಮತ್ತು ಸಂಬಂಧಪಟ್ಟಂಥ ಆಡಳಿತ ಇಲಾಖೆಯವರೇ ಆಗಲೀ, ಸಿ ಅಂಡ್ ಎ ಜಿ ಯವರ ಲೆಕ್ಕಪತ್ರದಲ್ಲಿ ಆ ಮೊತ್ತ ಏನಿದೆ, ಆ ಲೆಕ್ಕವನ್ನು ತಮ್ಮ ಇಲಾಖೆಯ ಲೆಕ್ಕಪತ್ರಗಳ ಪುಸ್ತಕಕ್ಕೆ ಸರಿ ಮಾಡುವಂಥ ಪ್ರಯತ್ನ, ಹೊಂದಾಣಿಕೆ ಮಾವಂಥ ಪ್ರಯತ್ನ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಸಮಾಧಾನಕರವಾದ ರೀತಿಯಲ್ಲಿ ಆಗುತ್ತಾ ಇಲ್ಲ, ಆದಾಗ್ಯೂ ಸಹ ಇವತ್ತಿನ ದಿವಸ ಅದನ್ನು ಶಿಫಾರಸ್ ಮಾಡಿರುವ ಕಾರಣವೇನೆಂದರೆ, ಒಂದು ಸಂವಿಧಾನಿಕ ಬಿಕ್ಕಟ್ಟು ಆಗಬಾರದು ಎಂಬ ದೃಷ್ಟಿಯಿಂದ.

ಸಂವಿಧಾನಾತ್ಮಕವಾದ ಯಾವುದೇ ಒಂದು ವಿಪರ್ಯಾಸವಾಗಬಾರದು. ಅಡಚಣೆ ಆಗಬಾರದು ಎಂಬ ದೃಷ್ಟಿಯಿಂದ ಇದನ್ನು ಶಿಫಾರಸು ಮಾಡಿದ್ದೇವೆ. ನಮ್ಮ ಒಂದು ಪ್ರವೃತ್ತಿ ಏನಿದೆ, ಸರ್ಕಾರದ ಆಡಳಿತ ಇಲಾಖೆಯಲ್ಲಿರುವ ಲೆಕ್ಕಪತ್ರಗಳನ್ನು, ಸಿ ಅಂಡ್ ಎಜಿಯವರ ಲೆಕ್ಕಪತ್ರಗಳಿಗೆ ಹೊಂದಾಣಿಕೆ ಮಾಡದೇ ಇರುವಂಥ ಪ್ರವೃತ್ತಿ ಇದು ಮುಂದುವರೆದರೆ, ಈ ದೇಶದಲ್ಲಿ ವಂಚನೆಯಾದರೆ, ಮೋಸ ಆದರೆ, ಯಾವ ರೀತಿಯಲ್ಲಿ ಹಣವನ್ನು ಖರ್ಚುಮಾಡಬೇಕಾಗಿತ್ತೋ ಎಷ್ಟು ಹಣ ಖರ್ಚು ಮಾಡಬೇಕಾಗಿತ್ತೋ, ಅಷ್ಟು ಹಣ ಖರ್ಚಾಗಿದೆಯೋ ಇಲ್ಲವೇ ಎಂಬುದನ್ನು ನೋಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ಇದರ ಬಗ್ಗೆ ತಾವು ಎಚ್ಚರಿಕೆ ವಹಿಸಬೇಕಾಗುತ್ತದೆ. ಒಂದು ಪಕ್ಷ ಯಾವುದೇ ಸಾಲಿನ ಲೆಕ್ಕಪತ್ರಸಮಿತಿ, ಇಂತಹ ಹಣ ಸರಿಯಾಗಿಲ್ಲವೆಂಬ ಕಾರಣಕ್ಕೋಸ್ಕರ ಈ ಒಂದು ಶಿಫಾರಸ್ಸನ್ನು ಮಾಡದೇ ಇದ್ದರೆ, ಈ ದೇಶದಲ್ಲಿ, ಈ ರಾಷ್ಟ್ರದಲ್ಲಿ ಈ ಒಂದು ಸಂಸದೀಯ ವ್ಯವಸ್ಥೆ ಇರುವಂಥ ಎಲ್ಲಾ ಪ್ರಜಾಪ್ರಭುತ್ವಗಳಲ್ಲಿ ಅದೇ ಒಂದು ದೊಡ್ಡ ಕ್ರೈಸಿಸ್ ಆಗಬಾರದು ಎನ್ನುವ ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ, 1985-86ನೇ ಇಸವಿಯಿಂದ ಏನಾಯಿತು, ಇಲ್ಲಿಯವರೆಗೆ ನನ್ನ ಗಮನಕ್ಕೆ ಬಂದ ರೀತಿಯಲ್ಲಿ, ನನ್ನ ಅನುಭವ ಇರುವಂಥ ರೀತಿಯಲ್ಲಿ ಹೇಳುವುದಾದರೆ, ಈ ಕೆಲಸ ಸಂಬಂಧಪಟ್ಟ ಆಡಳಿತ ಇಲಾಖೆಯಿಂದಾಗಲೀ ಹಣಕಾಸಿನ ಇಲಾಖೆಯಿಂದಾಗಲೀ, ಯಾವ ರೀತಿಯಲ್ಲಿ ಆಗಬೇಕೋ ಆ ರೀತಿಯಲ್ಲಿ ಆಗಿಲ್ಲ ಎಂಬ ಮಾತನ್ನು ತಮ್ಮ

ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತಿದ್ದೇನೆ. ಮತ್ತು ಇನ್ನು ಮುಂದಾದರೂ ಸಹ ಇದನ್ನು ಸರಿಮಾಡುವಂಥ ರೀತಿಯಲ್ಲಿ, ಹೊಂದಾಣಿಕೆ ಮಾಡುವಂಥ ರೀತಿಯಲ್ಲಿ ಆ ರೀತಿ ಮಾಡುವುದರ ಮುಖಾಂತರ ಈ ದೇಶದ ವಂಚನೆಗಳನ್ನು ತಪ್ಪಿಸಬೇಕು. ಅದೆಲ್ಲವನ್ನೂ ನಾನು ಹೇಳಲಿಕ್ಕೆ ಹೋಗುವುದಿಲ್ಲ, ಸಮಯ ಬಂದಾಗ ಹೇಳುತ್ತೇನೆ. ಈ ರೀತಿ ಮಾಡದೇ ಇರುವುದರಿಂದ, ಲಕ್ಷಾಂತರ ರೂಪಾಯಿಗಳು, ಸರ್ಕಾರದ ಗಮನಕ್ಕೆ ಬಂದಿರುವ ರೀತಿಯಲ್ಲಿ ದುರುಪಯೋಗವಾಗಿದೆ, ದುರ್ವ್ಯವಹಾರವಾಗಿದೆ. ಆದ್ದರಿಂದ, ಇದನ್ನು ತಪ್ಪಿಸಬೇಕಾದರೆ, ಈ ಎಲ್ಲಾ ವ್ಯವಸ್ಥೆಯಾಗಬೇಕು. ಅದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂಬುದನ್ನು ನಾನು ತಿಳಿಯಬಯಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಹಾರನಹಳ್ಳಿ ರಾಮಸ್ವಾಮಿ : ಸಾರ್ವಜನಿಕ ಲೆಕ್ಕಸಮಿತಿಯ ಅಧ್ಯಕ್ಷರಾಗಿ ಶ್ರೀಮಾನ್ ಏಕಾಂತಯ್ಯನವರು, ತಮ್ಮ ಅನುಭವದ ಮೇಲೆ ಈ ಮಾತುಗಳನ್ನು ಹೇಳಿದ್ದಾರೆ. ಬಹಳ ಸೂಕ್ತವಾದಂಥ ಮಾತು. ಆಡಳಿತ ಇಲಾಖೆ, ಮೊದಲನೆಯದಾಗಿ ಹಣಕಾಸಿನ ಇಲಾಖೆ ಇವರು ತಮ್ಮ ಲೆಕ್ಕಪತ್ರಗಳ ಮೇಲೆ, ಖರ್ಚು ಆದಾಯದ ಮೇಲೆ ಆಯಾ ಕಾಲಕ್ಕೆ ಹಿಡಿತವನ್ನು ಇಟ್ಟುಕೊಂಡು, ಇದನ್ನು ಸಮಂಜಸಗೊಳಿಸಬೇಕಾಗಿದೆ ಮತ್ತು ಹೊಂದಾಣಿಕೆ ಮಾಡಿಕೊಳ್ಳಬೇಕಾಗಿತ್ತು ಎಂಬುದು ಅತ್ಯಂತ ಸೂಕ್ತವಾದಂಥ ಸಲಹೆ. ಇದು ಏನೋ ಕಾರಣದಿಂದ, 8-9 ವರ್ಷದಿಂದ ಹಾಗೆಯೇ ನಡೆದುಹೋಗಿದೆ. ನಮ್ಮ ಇಲಾಖೆಯವರು, ಬ್ಯೂರೋಕ್ರಸಿ ಆಡಳಿತ ವರ್ಗದವರು ಈ ಒಂದು ದೋಷ ಏನಾಗಿದೆ. ಇದರಿಂದ ಒಂದು ಪಾಠವನ್ನು ಕಲಿತುಕೊಳ್ಳಬೇಕು. ಮುಂದೆ ಈ ರೀತಿಯಾಗದಂತೆ, ಆಯಾ ವರ್ಷ ಎಷ್ಟು ಹೆಚ್ಚು ಖರ್ಚಾಗುತ್ತದೋ, ಅದನ್ನು ಮುಂದಿನ ವರ್ಷದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ರೀತಿಯಲ್ಲಿ ಪ್ರಯತ್ನ ಮಾಡಬೇಕೇ ವಿನಹ, 8-9 ವರ್ಷ ಬಿಡುವುದು ಸರಿಯಲ್ಲವೆನ್ನುವುದನ್ನು ನಾನೂ ಒಪ್ಪುತ್ತೇನೆ. ಇವತ್ತು ತಮ್ಮ ಸಲಹೆಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆಂಬುದನ್ನು ತಮಗೆ ಹೇಳಿ ಈ ಮಸೂದೆಯನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 1993ರ ಕರ್ನಾಟಕ ಧನವಿನಿಯೋಗ (5ನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವದು.

ಖಂಡ 2 ರಿಂದ 3ರವರೆಗೆ :

ಉಪಾಧ್ಯಕ್ಷರು : ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 3ರವರೆಗೂ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ ದೀರ್ಘಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೇ 1993ರ ಕರ್ನಾಟಕ ಧನವಿನಿಯೋಗ (5ನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 1993ರ ಕರ್ನಾಟಕ ಧನವಿನಿಯೋಗ (5ನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು. ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(2) 1993ರ ಕರ್ನಾಟಕ ಧನವಿನಿಯೋಗ (6ನೇ ತಿದ್ದುಪಡಿ) ವಿಧೇಯಕ

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1993ರ ಕರ್ನಾಟಕ ಧನವಿನಿಯೋಗ (6ನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, 1993ರ ಕರ್ನಾಟಕ ಧನವಿನಿಯೋಗ (6ನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು ಅನುಮತಿ ನೀಡಲಾಯಿತು.)

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಸಚಿವರು) : ಮಾನ್ಯ ಉಪಾಧ್ಯಕ್ಷರೇ 1993 ರ ಕರ್ನಾಟಕ ಧನ ವಿನಿಯೋಗ (6ನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅನುಬಂಧ IV

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಯಿತು.

1993ರ ಕರ್ನಾಟಕ ಧನವಿನಿಯೋಗ (6ನೇ ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೇ 1993ರ ಕರ್ನಾಟಕ ಧನವಿನಿಯೋಗ (6ನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ ಹಿಂದಿನ ವಿಧೇಯಕದ ಮೇಲೆ ಆದಂತಹ ಚರ್ಚೆ ಈ ವಿಷಯಕ್ಕೂ ಅನ್ವಯಿಸುವುದರಿಂದ ಇದನ್ನು ಮಂಜೂರಾತಿ ಮಾಡಿಕೊಡಬೇಕೆಂಮು ನಾನು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 1993ರ ಕರ್ನಾಟಕ ಧನವಿನಿಯೋಗ (6ನೇ ತಿದ್ದುಪಡಿ) ವಿಧೇಯಕವನ್ನು ಪರ್ಯೋಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3ರವರೆಗೆ :

ಉಪಾಧ್ಯಕ್ಷರು : ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 3ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ ಮೊದಲನೇ ಖಂಡ ದೀರ್ಘಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ- ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ ದೀರ್ಘಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೇ 1993ರ ಕರ್ನಾಟಕ ಧನವಿನಿಯೋಗ (6ನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 1993ರ ಕರ್ನಾಟಕ ಧನವಿನಿಯೋಗ (6ನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಪ್ರಕಟಣೆ

ಸಭಾಧ್ಯಕ್ಷರು : ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ: 16ನೇ ಫೆಬ್ರವರಿ 1994ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

1. ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ, 1993.
2. ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಮೂರನೇ ತಿದ್ದುಪಡಿ) ವಿಧೇಯಕ 1993.

ಅಧಿಕೃತ ನಿರ್ಣಯ

ಶ್ರೀ+ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಈ ವಿಷಯದಲ್ಲಿ ಬಹಳ ಸುಧೀರ್ಘವಾದ ಚರ್ಚೆ ಆಗಬೇಕಾಗಿದೆ. ಈ ನಿರ್ಣಯ ಅರಣ್ಯವನ್ನು ನಾಶ ಮಾಡತಕ್ಕಂಥಾದ್ದು. ದಯಮಾಡಿ ಈಗ ತೆಗೆದುಕೊಳ್ಳಬೇಡಿ. ತಾವು ಅಂತಹ ಪಾಪದ ಕೆಲಸಕ್ಕೆ ಕೈ ಹಾಕಬೇಡಿ. ಇದರಿಂದ ಇಡೀ ರಾಜ್ಯದ ಅರಣ್ಯ ಸಂಪತ್ತು ಲೂಟಿಯಾಗುತ್ತದೆ. ಖಂಡಿತ ತಾವು ಇಂತಹ ನಿರ್ಣಯ ತರಬೇಡಿ. ಇವರಿಗೆ ಕಾಡು ಬೆಳೆಸತಕ್ಕಂಥ ಯೋಗ್ಯತೆ ಇಲ್ಲ. ದಯವಿಟ್ಟು ಈ ನಿರ್ಣಯವನ್ನು ಈಗ ವಾಪಸ್ಸ್ ತೆಗೆದುಕೊಳ್ಳಲಿ.

ಉಪಾಧ್ಯಕ್ಷರು : ಅಧಿಕೃತ ನಿರ್ಣಯವನ್ನು ಚರ್ಚೆಗೆ ತೆಗೆದುಕೊಳ್ಳದೆ ಮುಂದೂಡಲಾಗಿದೆ. ಈಗ ನಾನು ಸಭೆಯನ್ನು ಅನಿರ್ದಿಷ್ಟ ಕಾಲದವರೆಗೂ ಮುಂದೂಡುತ್ತೇನೆ.

(ಸಭೆಯು 7-10 ನಿಮಿಷಕ್ಕೆ ಅ ನಿರ್ದಿಷ್ಟ ಕಾಲದವರೆಗೂ ಮುಂದೂಡಲಾಯಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣಗಳನ್ನು ಪರಿಷ್ಕರಿಸಿಲ್ಲ.)

ಅನುಬಂಧ I

ಕರ್ನಾಟಕ ವಿಧಾನಸಭೆ

ಒಂಬತ್ತನೆಯ ವಿಧಾನಸಭೆ

(ಹನ್ನೆರಡನೆಯ ಅಧಿವೇಶನ)

ಕರ್ನಾಟಕ ರೇಷ್ಮೆ ಹುಳುತಳಿ, ರೇಷ್ಮೆ ಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 1994.

(1994ರ ವಿಧಾನ ಸಭಾ ವಿಧೇಯಕ ಸಂಖ್ಯೆ 5)

ಕರ್ನಾಟಕ ರೇಷ್ಮೆ ಹುಳುತಳಿ, ರೇಷ್ಮೆಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ) ಅಧಿನಿಯಮ, 1959ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಕರ್ನಾಟಕ ರೇಷ್ಮೆ ಹುಳುತಳಿ, ರೇಷ್ಮೆಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ) ಅಧಿನಿಯಮ, 1959ನ್ನು (1960ರ ಕರ್ನಾಟಕ ಅಧಿನಿಯಮ 5) ಈ ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಭಾರತ ಗಣರಾಜ್ಯದ ನಲವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :** (1) ಈ ಅಧಿನಿಯಮವನ್ನು ಕರ್ನಾಟಕ ರೇಷ್ಮೆ ಹುಳುತಳಿ, ರೇಷ್ಮೆಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ)(ತಿದ್ದುಪಡಿ) ಅಧಿನಿಯಮ, 1964 ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೊಳ್ಳತಕ್ಕದ್ದು.

2. **2ನೇ ಪ್ರಕರಣದ ತಿದ್ದುಪಡಿ :** (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗುವ) ಕರ್ನಾಟಕ ರೇಷ್ಮೆ ಹುಳುತಳಿ, ರೇಷ್ಮೆಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ) ಅಧಿನಿಯಮ, 1959ರ (1960ರ ಕರ್ನಾಟಕ ಅಧಿನಿಯಮ 5) 2ನೇ ಪ್ರಕರಣದಲ್ಲಿ,-

(i) (ಸಿಎ) ಖಂಡದಲ್ಲಿ "ಜೋಡು ರೇಷ್ಮೆಗೂಡುಗಳು" ಎಂಬ ಪದಗಳ ನಂತರ "ಅಥವಾ ಕೆಳದರ್ಜೆಯ ರೇಷ್ಮೆಗೂಡುಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) *(ಸಿಎ) ಖಂಡದ ನಂತರ, ಈ ಮುಂದಿನದನ್ನು ಸೇರಿಸಸತಕ್ಕದ್ದು, ಎಂದರೆ :*

"(ಸಿಬಿ) ಬಣ್ಣಹಾಕುವವನು" ಎಂದರೆ ರೇಷ್ಮೆನೂಲಿಗೆ ಬಣ್ಣ ಹಾಕುವ ಸ್ಥಾಪನೆಯ ಪ್ರಭಾರ ಹೊತ್ತಿರುವ ಒಬ್ಬವ್ಯಕ್ತಿ;".

(iii) *(ಇ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:*

"(ಇ) ಲೈಸೆನ್ಸ್ ನೀಡಿಕೆ ಪ್ರಾಧಿಕಾರ" ಎಂದರೆ "ಅಧಿಸೂಚನೆಯಲ್ಲಿ ನಿರ್ದಿಷ್ಟ

[illegible]

ಕರ್ನಾಟಕದಲ್ಲಿರುವ ರೇಷ್ಮೆ ನಿರ್ದೇಶಕರಿಂದ ಅಧಿಸೂಚನೆ ಮೂಲಕ ನೇಮಿಸಲಾದ ಅಧಿಕಾರ;"

(iv) (1)ನೇ ಖಂಡದಲ್ಲಿ, ಮುಂದಿನದನ್ನು ಸೇರಿಸತಕ್ಕುದು, ಎಂದರೆ :

ವಿವರಣೆ : ಈ ಖಂಡದ ಉದ್ದೇಶಗಳಿಗಾಗಿ "ಗುಂಜು ರೇಷ್ಮೆನೂಲು" ಎಂದರೆ ರೇಷ್ಮೆನೂಲುಗಾರನ ನಯಗೊಳಿಸುವ ಕಾರ್ಯದಿಂದ ಮಿಕ್ಕಿರುವ ಚಿಕ್ಕ ಎಳೆಗಳುಳ್ಳ ರೇಷ್ಮೆ ಗುಂಜಿನಿಂದ ತೆಗೆದ ರೇಷ್ಮೆ ನೂಲು;"

(v) (ಓ) ಖಂಡದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-
"(ಪಿ) ನೇಯ್ಗೆಗಾರ" ಎಂದರೆ, "ರೇಷ್ಮೆನೂಲುಗಳನ್ನು ಉಪಯೋಗಿಸಿ ಬಟ್ಟೆಯನ್ನು ತಯಾರಿಸುವ ನೇಯ್ಗೆ ಸ್ಥಾಪನೆಯ ಪ್ರಭಾರ ಹೊತ್ತಿರುವ ಒಬ್ಬ ವ್ಯಕ್ತಿ;"

3. 5ಎ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 5ಎ ಪ್ರಕರಣದಲ್ಲಿ (ಸಿ) ಖಂಡದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:
"(ಸಿ1) "ಬಣ್ಣ ಹಾಕುವವನು"

"10 ಬಿ. ಸಂಶೋಧನೆ ಮತ್ತು ಅಭಿವೃದ್ಧಿ- ಕರ್ನಾಟಕದಲ್ಲಿರುವ ರೇಷ್ಮೆ ಇಲಾಖೆಯ ನಿರ್ದೇಶಕರು, ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ರೇಷ್ಮೆ ಹುಳುವಿನ ಸಂತಾನ, ರೇಷ್ಮೆಗೂಡುಗಳ ಉತ್ಪಾದನೆ ಮತ್ತು ನೂಲು ಸುತ್ತುವ ಬಗ್ಗೆ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳುವುದಕ್ಕೆ ಯಾವುದೇ ಖಾಸಗಿ ಸಂಸ್ಥೆ ಅಥವಾ ಸಂಘವನ್ನು ಪ್ರಾಧಿಕೃತಗೊಳಿಸಬಹುದು.

5. 11ನೇ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 11ನೇ ಪ್ರಕರಣದ 1ನೇ ಉಪಪ್ರಕರಣದ (ಡಿ) ಖಂಡದಲ್ಲಿ, "ಯಾವುದೇ ನೌಕೆ" ಎಂಬ ಪದದ ನಂತರ, "ವಾಹನ" ಎಂಬ ಪದವನ್ನು ಸೇರಿಸತಕ್ಕದ್ದು.

6. 12ನೇ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 12ನೇ ಪ್ರಕರಣದಲ್ಲಿ

(i) (2)ನೇ ಉಪಪ್ರಕರಣದಲ್ಲಿ, "ಐವತ್ತು ರೂಪಾಯಿಗಳು" ಎಂಬ ಪದಗಳಿಗೆ, "ಒಂದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (2ಎ) ಉಪ-ಪ್ರಕರಣದಲ್ಲಿ, "ಐವತ್ತು ರೂಪಾಯಿಗಳು" ಎಂಬ ಪದಗಳಿಗೆ, "ಐದು ಸಾವಿರ ರೂಪಾಯಿಗಳು"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii) (2ಬಿ) ಉಪಪ್ರಕರಣದಲ್ಲಿ "ಎರಡು ಸಾವಿರ ರೂಪಾಯಿಗಳು" ಎಂಬ ಪದಗಳಿಗೆ, "ಇಪತ್ತೈದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iv) (4)ನೇ ಪ್ರಕರಣದಲ್ಲಿ "ಎರಡು ನೂರ ಐವತ್ತು ರೂಪಾಯಿಗಳು" ಎಂಬ ಪದಗಳಿಗೆ "ಎರಡು ಸಾವಿರದ ಐದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

7. (3)ನೇ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 13ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ (ಬಿ) ಖಂಡದ (11)ನೇ ಉಪ-ಖಂಡದಲ್ಲಿ "ಐದು ಸಾವಿರ ರೂಪಾಯಿಗಳು" ಎಂಬ ಪದಗಳಿಗೆ "ಇಪ್ಪತ್ತೈದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತ್ತಕದ್ದು.

ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ರೇಷ್ಮೆ ಹುಳು ತಳಿ, ರೇಷ್ಮೆಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ) ಅಧಿನಿಯಮ, 1979ನ್ನು,-

(i) ಬಣ್ಣ ಹಾಕುವುದಕ್ಕೆ ಸಂಬಂಧಪಟ್ಟಂತೆ ಸಹ ರೇಷ್ಮೆ ನೂಲಿನ ಸ್ವಾಧೀನತೆಯ ನಿಯಂತ್ರಣಕ್ಕಾಗಿ ಉಪಬಂಧಿಸಲು;

(ii) ರೇಷ್ಮೆ ಹುಳು ಸಂತಾನ ಮುಂತಾದವುಗಳಿಗೆ ಸಂಬಂಧಪಟ್ಟಂತೆ ಸಂಶೋಧನೆ ನಡೆಸಲು ಮತ್ತು ಅವುಗಳನ್ನು ಅಭಿವೃದ್ಧಿ ಪಡಿಸಲು ಯಾವುದೇ ಖಾಸಗಿ ಸಂಸ್ಥೆಗಳು ಅಥವಾ ಸಂಘಗಳನ್ನು ಪ್ರಾಧಿಕೃತಗೊಳಿಸಲು ;

(iii) ಜುಲ್ಮಾನೆಯನ್ನು ಹೆಚ್ಚಿಸಲು ;

(iv) ದಂಡವನ್ನು ಹೆಚ್ಚಿಸಲು ;

ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನ ಪತ್ರ

ಖಂಡ 4 - ವಿಧೇಯಕದ 4ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾಗಿರುವ 10ಬಿ, ಪ್ರಕರಣವು, ಕರ್ನಾಟಕದಲ್ಲಿರುವ ರೇಷ್ಮೆ ಇಲಾಖೆಯ ನಿರ್ದೇಶಕರು, ರೇಷ್ಮೆ ಹುಳು ಸಂತಾನ, ರೇಷ್ಮೆ ಗೂಡುಗಳ ಉತ್ಪಾದನೆ ಮತ್ತು ನೂಲಿನ ಸುತ್ತುವಿಕೆಗೆ ಸಂಬಂಧಪಟ್ಟಂತೆ ಸಂಶೋಧನೆ ನಡೆಸಲು ಮತ್ತು ಅವುಗಳನ್ನು ಅಭಿವೃದ್ಧಿಪಡಿಸಲು ಯಾವುದೇ ಖಾಸಗಿ ಸಂಸ್ಥೆಗಳು ಅಥವಾ ಸಂಘಗಳನ್ನು ಪ್ರಾಧಿಕೃತಗೊಳಿಸಬಹುದಾದಂಥ ಷರತ್ತುಗಳನ್ನು ವಿಧಿಸುವ ಬಗ್ಗೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಪ್ರಸ್ತಾವಿತ ಪ್ರತ್ಯಾಯೋಜಿತ ಶಾಸನ ರಚನಾಧಿಕಾರವು ವಾಡಿಕೆಯ ಸ್ವರೂಪದ್ದಾಗಿದೆ.

ಡಾ|| ಜಿ. ಪರಮೇಶ್ವರ,
ರೇಷ್ಮೆ ರಾಜ್ಯ ಸಚಿವರು.

ನಿಂ.ಹು. ಮುತ್ತಲಗೇರಿ,
ಕಾರ್ಯದರ್ಶಿ.

ಅನುಬಂಧ

ಕರ್ನಾಟಕ ರೇಷ್ಮೆ ಹುಳು ತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ಮಾರಾಟ ನಿಯಂತ್ರಣ) ಅಧಿನಿಯಮ, 1959ರ (1960ರ ಕರ್ನಾಟಕ ಅಧಿನಿಯಮ 5) ಉದ್ಧೃತ ಭಾಗ.

XX XX XX

2. **ಪರಿಭಾಷೆಗಳು :** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು,

(ಸಿಎ) "ಜೋಡು ರೇಷ್ಮೆ ನೂಲು" ಎಂದರೆ ಜೋಡು ರೇಷ್ಮೆ ಗೂಡುಗಳ ಮೂಲಕ ಸುತ್ತಿದ ರೇಷ್ಮೆ ನೂಲು.

XX XX XX

(ಇ) "ಲೈಸೆನ್ಸ್ ನೀಡಿಕೆ ಪ್ರಾಧಿಕಾರ" ಎಂದರೆ, ಕರ್ನಾಟಕದಲ್ಲಿನ ರೇಷ್ಮೆ ಇಲಾಖೆಯ ನಿರ್ದೇಶಕರು ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರಬಹುದಾದ ಅಂಥ ಪ್ರದೇಶಗಳಿಗಾಗಿ ಮತ್ತು ಅಂಥ ಉದ್ದೇಶಗಳಿಗಾಗಿ ಸರ್ಕಾರವು ಅಧಿಸೂಚನೆ ಹೊರಡಿಸುವ ಮೂಲಕ ನೇಮಕ ಮಾಡಬಹುದಾದಂಥ ಇತರ ಅಧಿಕಾರಿಗಳನ್ನು ಒಳಗೊಂಡಿರುತ್ತದೆ.

XX XX XX

(1) "ರೇಷ್ಮೆ ಗೂಡು" ಎಂದರೆ, ರೇಷ್ಮೆ ಗೂಡುಗಳಿಂದ ಸುತ್ತಿ ತೆಗೆಯಲಾದ ರೇಷ್ಮೆ ಮತ್ತು ಇದರಲ್ಲಿ ಹುರಿ ಮಾಡಿದ ರೇಷ್ಮೆ ನೂಲು, ಡೂಪಿಯನ್ ರೇಷ್ಮೆ ನೂಲು, ಸ್ಪನ್ ರೇಷ್ಮೆ ನೂಲು ಮತ್ತು ಗುಂಜು ರೇಷ್ಮೆ ನೂಲು- ಇವುಗಳು ಸೇರುತ್ತವೆ.

5. ರೇಷ್ಮೆ ನೂಲಿನ ಸ್ವಾಧೀನತೆಯ ನಿಯಂತ್ರಣ : ಯಾವನೇ ವ್ಯಕ್ತಿಯು, ನಿಗದಿ ಪಡಿಸಲಾದ ಪ್ರಮಾಣಕ್ಕಿಂತ ಹೆಚ್ಚು ರೇಷ್ಮೆ ನೂಲನ್ನು ಅವನು,-

(ಸಿ) ಹುರಿ ಮಾಡುವವನು ಆಗಿದ್ದ ಹೊರತು ಹೊಂದಿರತಕ್ಕದ್ದಲ್ಲ.

XX XX XX

11. ಮಾಹಿತಿಯನ್ನು ಪಡೆಯುವುದಕ್ಕೆ ಅಧಿಕಾರ ಮತ್ತು ಪ್ರವೇಶ ಪರೀಶಿಲನೆ ಸ್ವಾಧೀನ ಇತ್ಯಾಧಿಗಳ ಬಗ್ಗೆ ಅಧಿಕಾರಗಳು : ಕರ್ನಾಟಕದಲ್ಲಿರುವ ರೇಷ್ಮೆ ಇಲಾಖೆ ನಿರ್ದೇಶಕರು ಅಥವಾ ಅಧಿಸೂಚನೆಯ ಮೂಲಕ ಸರ್ಕಾರದಿಂದ ಈ ಬಗ್ಗೆ ಪ್ರಾಧಿಕೃತಗೊಳಿಸಲಾದ ಯಾವನೇ ಅಧಿಕಾರಿಯು ಈ ಅಧಿನಿಯಮವನ್ನು ಪಾಲಿಸುವ ದೃಷ್ಟಿಯಿಂದ

(ಎ) XX XX

(ಬಿ) XX XX

(ಸಿ) XX XX

(ಡಿ) ಎಲ್ಲಾ ಯುಕ್ತ ಸಮಯದಲ್ಲಿ ಯಾವುದೇ ಆವರಣ, ಜಮೀನು, ನೌಕೆ, ವಾಹನ ಅಥವಾ ಸ್ಥಳವನ್ನು ಅದರಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ರೇಷ್ಮೆ ಹುಳುಗಳನ್ನು ಸಾಕಿದ್ದರೆ ಅಥವಾ ರೇಷ್ಮೆ ಹುಳು, ರೇಷ್ಮೆ ಹುಳು ತಳಿ, ರೇಷ್ಮೆ ಗೂಡು ಅಥವಾ ರೇಷ್ಮೆ ನೂಲನ್ನು ದಾಸ್ತಾನು ಮಾಡಿದ್ದರೆ ಅಥವಾ ಸಾಗಿಸುತ್ತಿದ್ದರೆ, ಅದರೊಳಗೆ ಪ್ರವೇಶ ಮಾಡಬಹುದು ಮತ್ತು ಶೋಧಿಸಬಹುದು ಮತ್ತು ಯಾವುದೇ ನೌಕೆ, ಪಾತ್ರೆ, ಸಲಕರಣೆ, ಪಾಕೆಟ್ ಅಥವಾ ಕವಚಗಳಲ್ಲಿ ಒಳಗೊಂಡಿರುವ ರೇಷ್ಮೆ ನೂಲು, ರೇಷ್ಮೆ ಹುಳುತಳಿ, ರೇಷ್ಮೆ ಗೂಡು ಅಥವಾ ರೇಷ್ಮೆ ನೂಲೂ ಸೇರಿದಂತೆ ಯಾವುದೇ ರೇಷ್ಮೆ ಹುಳು, ರೇಷ್ಮೆ ಹುಳುತಳಿ ರೇಷ್ಮೆ ಗೂಡು ಅಥವಾ ರೇಷ್ಮೆ ನೂಲನ್ನು ಅವುಗಳಿಗೆ ರೇಷ್ಮೆ ಹುಳುವಿನ ರೋಗ ಸಂಭವಿಸಿದೆ ಎಂದು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಲಾದ ಯಾವುದೇ ನಿಯಮ ಅಥವಾ ಆದೇಶದ ಉಲ್ಲಂಘನೆಯಾಗಿದೆ ಅಥವಾ ಉಲ್ಲಂಘನೆ ಮಾಡಲಾಗಿದೆ ಅಥವಾ ಮಾಡಲಾಗುತ್ತಿದೆ ಎಂದು ವೈಯಕ್ತಿಕವಾಗಿ ಅಥವಾ ಯಾವನೇ ವ್ಯಕ್ತಿಯಿಂದ ಕೊಡಲಾದ ಮಾಹಿತಿಯ ಮೇರೆಗೆ ಮತ್ತು ಅವನಿಂದ ಲಿಖಿತದಲ್ಲಿ ಪಡೆದ ಮೇಲೆ ಅವನಿಗೆ ನಂಬಲು ಕಾರಣಗಳಿದ್ದರೆ, ಅವನು ಅವುಗಳನ್ನು ಜಪ್ತಿ ಮಾಡಬಹುದು ಅಥವಾ ಜಪ್ತಿ ಮಾಡುವುದಕ್ಕೆ ಯಾವನೇ ವ್ಯಕ್ತಿಗೆ ಅಧಿಕಾರ ನೀಡಬಹುದು.

XX XX XX

12. ದಂಡನೆಗಳು :

(2) ಯಾವನೇ ಸಾಕಣೆದಾರನು, 6ನೇ ಪ್ರಕರಣದ ಅಥವಾ 7ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದ ಉಪಬಂಧಗಳನ್ನು ಉಲ್ಲಂಘಿಸಿದರೆ, ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅವನು ದಂಡಿತನಾಗತಕ್ಕದ್ದು.

(2ಎ) ಯಾವನೇ ವ್ಯಕ್ತಿಯು 7ನೇ ಪ್ರಕರಣದ (1)ನೇ ಉಪ-ಪ್ರಕರಣದ (ಬಿ) ಖಂಡದ ಅಥವಾ ಆ ಪ್ರಕರಣದ (2)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಅವನು ಮೂರು ತಿಂಗಳಿಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರೆಡರಿಂದಲೂ ದಂಡಿತನಾಗತಕ್ಕದ್ದು.

(2 ಬಿ) 8 ಎ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದ ಯಾವನೇ ವ್ಯಕ್ತಿಯನ್ನು ಅಪರಾಧ ನಿರ್ಣಯವಾದ ಮೇಲೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು;

ಪರಂತು, ಇದಕ್ಕೆ ವಿರುದ್ಧವಾಗಿ ವಿಶೇಷ ಕಾರಣಗಳು ಇಲ್ಲದಿರುವಲ್ಲಿ ಅಂಥ ಕಾರಾವಾಸ ಶಿಕ್ಷೆಯು ಆರು ತಿಂಗಳಿಗೆ ಕಡಿಮೆ ಇರತಕ್ಕದ್ದಲ್ಲ ಮತ್ತು ಜುಲ್ಮಾನೆಯು ಒಂದು ಸಾವಿರ ರೂಪಾಯಿಗಳಿಗೆ ಕಡಿಮೆಯಾಗಿರತಕ್ಕದ್ದಲ್ಲ.

XX XX XX

(4) (1), (2), (2ಎ), (2ಬಿ) ಮತ್ತು (3)ನೇ ಉಪ-ಪ್ರಕರಣಗಳಲ್ಲಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಅಥವಾ ಯಾವುದೇ ನಿಯಮ, ಆದೇಶ, ಅಥವಾ ಅದರ ಬಗ್ಗೆ ಇರುವ ಅಧಿಸೂಚನೆಯ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಎರಡುನೂರ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

XX XX XX

13. ಲೈಸನ್ಸ್‌ನ ಅಮಾನತ್ತು ಅಥವಾ ರದ್ದಿಯಾತಿ, ಆಸ್ತಿಯ ಮುಟ್ಟುಗೋಲು ಮತ್ತು ದಂಡ ಇತ್ಯಾದಿ: (1) ಕರ್ನಾಟಕದ ರೇಷ್ಮೆ ಇಲಾಖೆಯ ನಿರ್ದೇಶಕರು,-

(ಎ) 12ನೇ ಪ್ರಕರಣದ ಅಡಿಯಲ್ಲಿನ ಯಾವುದೇ ಶಿಕ್ಷೆಗೆ ಪ್ರತಿಕೂಲವಾಗದಂತೆ, ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ತರುವಾಯ 3,7,8 ಅಥವಾ 8ಎ ಪ್ರಕರಣಗಳ ಉಪಬಂಧಗಳನ್ನು ಅಂಥ ವ್ಯಕ್ತಿಯು ಉಲ್ಲಂಘಿಸಿದ್ದಾನೆಂದು ಮನವರಿಕೆಯಾದಲ್ಲಿ, ಅಂಥ ವ್ಯಕ್ತಿಗೆ ನೀಡಲಾದ ಲೈಸೆನ್ಸನ್ನು ಅಮಾನತು ಗೊಳಿಸಬಹುದು ಅಥವಾ ರದ್ದುಪಡಿಸಬಹುದು;

(ಬಿ) ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ತರುವಾಯ,

(i) ಅಂಥ ವ್ಯಕ್ತಿಯು ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ನಿಯಮಗಳ ಉಪಬಂಧಗಳನ್ನು ಯಾವುದರ ಸಂಬಂಧದಲ್ಲಿ ಉಲ್ಲಂಘಿಸಿರುವನೋ ಆ ಯಾವುದೇ ರೇಷ್ಮೆ ಹುಳು ತಳಿ, ರೇಷ್ಮೆಗೂಡು ಅಥವಾ ರೇಷ್ಮೆ ನೂಲು ಅಥವಾ ಅವುಗಳನ್ನು ಒಳಗೊಂಡಿರುವ, ಪಾತ್ರೆ, ಉಪಕರಣ, ಕಟ್ಟು ಅಥವಾ ಹೊದಿಕೆ ಅಥವಾ ಯಾವುದೇ ಇತರ ವಸ್ತುವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದೆಂದು; ಮತ್ತು

(ii) ಅಂಥ ವ್ಯಕ್ತಿಯು ಯಾವ ಸ್ವತ್ತಿನ ಸಂಬಂಧದಲ್ಲಿ ಈ ಅಧಿನಿಯಮದ ಅಥವಾ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಲಾಗಿದೆಯೋ ಆ ಸ್ವತ್ತಿನ ಮೌಲ್ಯವನ್ನು ಮೀರದಂತೆ ಐದು ಸಾವಿರ ರೂಪಾಯಿಗಳವರೆಗಿನ ದಂಡವನ್ನು ಸಂದಾಯ ಮಾಡತಕ್ಕದೆಂದು ನಿರ್ದೇಶಿಸಬಹುದು.

ಅನುಬಂಧ II

ಕರ್ನಾಟಕ ವಿಧಾನಸಭೆ

ಒಂಭತ್ತನೆಯ ವಿಧಾನಸಭೆ

(ಹನ್ನೊಂದನೆಯ ಅಧಿವೇಶನ)

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 1993

(1993ರ ವಿಧಾನ ಸಭಾ ವಿಧೇಯಕ ಸಂಖ್ಯೆ 24)

1965ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ,

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1965ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮವನ್ನು (1965ರ ಕರ್ನಾಟಕ ಅಧಿನಿಯಮ ಸಂಖ್ಯೆ 15) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತ ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ** - (1) ಈ ಅಧಿನಿಯಮವನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 1993 ಎಂದು ಕರೆಯತಕ್ಕದ್ದು.

(2) ಇದು 1992ರ ಡಿಸೆಂಬರ್ 1 ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **7ಎ ಪ್ರಕರಣದ ತಿದ್ದುಪಡಿ.**- 1965ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮದ (1965ರ ಕರ್ನಾಟಕ ಅಧಿನಿಯಮ ಸಂಖ್ಯೆ 15)ರ 7ಎ ಪ್ರಕರಣವಲ್ಲಿ:

(i) (2)ನೇ ಉಪ-ಪ್ರಕರಣದಲ್ಲಿ "ಒಂದು ರೂಪಾಯಿ, ಎರಡು ರೂಪಾಯಿಗಳು ಮತ್ತು ಒಂದು ರೂಪಾಯಿ" ಎಂಬ ಪದಗಳಿಗೆ ಬದಲಾಗಿ "ಮೂರು ರೂಪಾಯಿಗಳು, ಆರು ರೂಪಾಯಿಗಳು ಮತ್ತು ಮೂರು ರೂಪಾಯಿಗಳು" ಎಂಬ ಪದಗಳನ್ನು ಕ್ರಮವಾಗಿ ಪ್ರತಿಯೋಜಿಸತಕ್ಕದ್ದು;

(ii) (3)ನೇ ಉಪ-ಪ್ರಕರಣದಲ್ಲಿ "ಮನಿಯಾರ್ಡರ್ ಅಥವಾ ನಗದು ರೂಪದಲ್ಲಿ" ಎಂಬ ಪದಗಳಿಗೆ ಬದಲಾಗಿ "ಅಥವಾ ಕ್ರಾಸ್ ಮಾಡಿದ ಡಿಮಾಂಡ್ ಡ್ರಾಫ್ಟ್" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಕಾರ್ಮಿಕರ ಕಲ್ಯಾಣಕ್ಕೆ ಪ್ರೋತ್ಸಾಹ ನೀಡುವ ಕಾರ್ಯ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಲುವಾಗಿ, 1965ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮದ 7ಎ ಪ್ರಕರಣವನ್ನು ತಿದ್ದುಪಡಿ ಮಾಡುವ ಮೂಲಕ ಕ್ರಮವಾಗಿ ನೌಕರ ಮತ್ತು ನಿಯೋಜಕ ಹಾಗೂ ಸರ್ಕಾರವು ಸಂದಾಯ ಮಾಡಬೇಕಾದ ವಂತಿಗೆಯನ್ನು ಹೆಚ್ಚಿಸುವುದು ಅಗತ್ಯವೆಂದು ಭಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಈ ಪ್ರಸ್ತಾವದಿಂದ ಸುಮಾರು 14.00 ಲಕ್ಷ ರೂ.ಗಳ ಹೆಚ್ಚಿನ ವೆಚ್ಚ ತಗಲುತ್ತದೆ.

ಬ್ಲೇಷಿಯಸ್ ಎಮ್. ಡಿಸೋಜಾ,
ಕಾರ್ಮಿಕ ಸಚಿವರು,
ನಿಂ.ಪು. ಮುತ್ತಲಗೇರಿ,
ಕಾರ್ಯದರ್ಶಿ.

ಅನುಬಂಧ

ಕರ್ನಾಟಕ ಕಾರ್ಮಿಕ ಕಲ್ಯಾಣನಿಧಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 15) ಉದ್ಧೃತ ಭಾಗ

7ಎ ವಂತಿಗೆ : (1) XX XX XX

(2) ಒಂದು ಸಂಸ್ಥೆಯ ರಿಜಿಸ್ಟರಿನಲ್ಲಿ ಒಂದು ವರ್ಷದ ಡಿಸೆಂಬರ್ 31ರಂದು ಹೆಸರಿರುವ ಪ್ರತಿಯೊಬ್ಬ ನೌಕರನಿಗೆ ಸಂಬಂಧಪಟ್ಟಂತೆ, ಆ ವರ್ಷಕ್ಕೆ ಸಂಬಂಧಪಟ್ಟ ನೌಕರ, ನಿಯೋಜಕ ಮತ್ತು ರಾಜ್ಯ ಸರ್ಕಾರವು ಕ್ರಮವಾಗಿ ಒಂದು ರೂಪಾಯಿ, ಎರಡು ರೂಪಾಯಿ ಮತ್ತು ಒಂದು ರೂಪಾಯಿಯನ್ನು ವಂತಿಗೆಯಾಗಿ ಸಂದಾಯ ಮಾಡತಕ್ಕದ್ದು.

(3) ಒಂದು ವರ್ಷಕ್ಕೆ ಸಂಬಂಧಪಟ್ಟಂತೆ ನಿಯೋಜಕ, ಮತ್ತು ನೌಕರರ ವಂತಿಗೆಯನ್ನು, ನಿಯೋಜಕನು ಮಂಡಲಿಗೆ ಮುಂದಿನ ವರ್ಷದ ಜನವರಿ 15 ರಂದು ಅಥವಾ ಅದಕ್ಕೆ ಮುಂಚೆ ಚೆಕ್ಕು, ಮನಿ ಆರ್ಡರ್ ಅಥವಾ ನಗದು ರೂಪದಲ್ಲಿ ಸಂದಾಯ ಮಾಡತಕ್ಕದ್ದು ಮತ್ತು ವಂತಿಗೆಯನ್ನು ಸಲ್ಲಿಸಲು ತಗಲುವ ವೆಚ್ಚವನ್ನು ನಿಯೋಜಕನೇ ಭರಿಸತಕ್ಕದ್ದು.

ಅನುಬಂಧ III

ಕರ್ನಾಟಕ ವಿಧಾನಸಭೆ

ಒಂಬತ್ತನೆಯ ವಿಧಾನಸಭೆ

(ಹನ್ನೆರಡನೆ ಅಧಿವೇಶನ)

ಕರ್ನಾಟಕ ಧನ ವಿನಿಯೋಗ (ಸಂಖ್ಯೆ 5) ವಿಧೇಯಕ 1993

(ವಿಧಾನಸಭಾ ವಿಧೇಯಕ 1993ರ ಸಂಖ್ಯೆ 39)

1985-86ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ

ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸಲು ಅಧಿಕಾರ ನೀಡಲು ಒಂದು ವಿಧೇಯಕ.

1985-86ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ.

ಇದು ಭಾರತ ಗಣರಾಜ್ಯದ ನಲವತ್ತನಾಲ್ಕನೆಯ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ.-

1. **ಸಂಕ್ಷಿಪ್ತ ಹೆಸರು.-** ಈ ಅಧಿನಿಯಮವನ್ನು ಕರ್ನಾಟಕ ಧನ ವಿನಿಯೋಗ (ಸಂಖ್ಯೆ-5) ಅಧಿನಿಯಮ 1993 ಎಂದು ಕರೆಯತಕ್ಕದ್ದು.

2. **ಕರ್ನಾಟಕ ರಾಜ್ಯದ ಸಂಚಿತ ನಿಧಿಯೊಳಗಿಂದ** 1985-86ನೇ ಹಣಕಾಸು ವರ್ಷದಲ್ಲಿ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ತುಂಬುವುದಕ್ಕಾಗಿ 107.51.23,108 ರೂಪಾಯಿಗಳ ನೀಡಿಕೆ. - ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ 1985-86ನೇ ಹಣಕಾಸು ವರ್ಷದಲ್ಲಿ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ನೂರ ಏಳುಕೋಟಿ ಐವತ್ತೊಂದು ಲಕ್ಷ ಇಪ್ಪತ್ತಮೂರು ಸಾವಿರದ ನೂರಮೂವತ್ತೆಂಟು ರೂಪಾಯಿಗಳ ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯವಾಗಿ ಉಪಯೋಗಿಸಲಾಗಿದೆ ಎಂದು ಭಾವಿಸತಕ್ಕದ್ದು.

3. **ಧನ ವಿನಿಯೋಗ.-** ಈ ಅಧಿನಿಯಮದ ಮೂಲಕ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು 1985-86ನೇ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸಿದೆ ಎಂದು ಭಾವಿಸತಕ್ಕದ್ದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		ಒಟ್ಟು
			ವಿಧಾನಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	
1	2		3	4	5
......	ಋಣವನ್ನು ಇಳಿಸುವ ಅಥವಾ ಪರಿಹರಿಸುವ ಬಗ್ಗೆ ವಿನಿಯೋಗ	ರಾಜಸ್ವ	......	96,00,00,000	96,00,00,000
19	ಸಣ್ಣ ಉಳಿತಾಯಗಳು	ರಾಜಸ್ವ	5,08182	.....	5,08,182
21	ಆಹಾರ ಮತ್ತು ನಾಗರೀತಕ ಸರಬರಾಜು	ಬಂಡವಾಳ ...	1.4672.821	.....	1,46,72,821
22	ಅರಣ್ಯ	ರಾಜಸ್ವ ಬಂಡವಾಳ ..	1,71,27.925 5,35.265	30,42,390	2,01,70,315 5,35,265
34	ಸಣ್ಣ ನೀರಾವರಿ	ರಾಜಸ್ವ ಬಂಡವಾಳ ...	2,24,27,618 3,47,75,800	....	2,24,27618 3,47,75,800
38	ಚುನಾವಣೆಗಳು	ರಾಜಸ್ವ ...	7,61.747	....	7,61.747
45	ಕಟ್ಟಡಗಳು	ರಾಜಸ್ವ ...	65,07,935	15,513	65,23,448
46	ರಸ್ತೆಗಳು ಮತ್ತು ಸೇತುವೆಗಳು	ಬಂಡವಾಳ ...	46,62,632	....	46,62,632
63	ಆದಿವಾಸಿಗಳ ಪ್ರದೇಶದ ಉಪಯೋಜನೆ	ಬಂಡವಾಳ ...	8,86,015	....	8.86,015
64	ಸಮಾಜ ಕಲ್ಯಾಣ	ರಾಜಸ್ವ ...	91,99,265	....	91,99,265
		ಜುಮ್ಲಾ ...	11,20,65,205	96,30,57,903	107,51,23,108

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1985-86ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಲಾದ ಮೊಬಲಗಿಗಿಂತ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಬದ್ಧಗೊಳಿಸಲು ಭಾರತ ಸಂವಿಧಾನದ 205(1) (ಬಿ)ನೇ ಅನುಚ್ಛೇದದ ಉಪಬಂಧಗಳಿನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಎಂ. ವೀರಪ್ಪ ಮೊಯಿಲಿ,
ಮುಖ್ಯ ಮಂತ್ರಿಗಳು.
ನಿಂ.ಹು. ಮುತ್ತಲಗೇರಿ,
ಕಾರ್ಯದರ್ಶಿ.

ಅನುಬಂಧ IV

ಕರ್ನಾಟಕ ವಿಧಾನಸಭೆ

ಒಂಬತ್ತನೆಯ ವಿಧಾನಸಭೆ

(ಹನ್ನೆರಡನೆ ಅಧಿವೇಶನ)

ಕರ್ನಾಟಕ ಧನ ವಿನಿಯೋಗ (ಸಂಖ್ಯೆ 6) ವಿಧೇಯಕ 1993.

(ವಿಧಾನಸಭಾ ವಿಧೇಯಕ 1993ರ ಸಂಖ್ಯೆ 40)

1986-87ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸಲು ಅಧಿಕಾರ ನೀಡಲು ಒಂದು ವಿಧೇಯಕ.

1986-87ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ.

ಇದು ಭಾರತ ಗಣರಾಜ್ಯದ ನಲವತ್ತನಾಲ್ಕನೆಯ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ.-

1. ಸಂಕ್ಷಿಪ್ತ ಹೆಸರು.- ಈ ಅಧಿನಿಯಮವನ್ನು ಕರ್ನಾಟಕ ಧನ ವಿನಿಯೋಗ (ಸಂಖ್ಯೆ-6) ಅಧಿನಿಯಮ 1993 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯೊಳಗಿಂದ 1986-87ನೇ ಹಣಕಾಸು ವರ್ಷದಲ್ಲಿ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ತುಂಬುವುದಕ್ಕಾಗಿ 23,14,58,084 ರೂಪಾಯಿಗಳ ನೀಡಿಕೆ. - ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ

ಸೇವೆಗಳ ಸಂಬಂಧದಲ್ಲಿ 1986-87ನೇ ಹಣಕಾಸು ವರ್ಷದಲ್ಲಿ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಇಪ್ಪತ್ತಮೂರು ಕೋಟಿ ಹದಿನಾಲ್ಕು ಲಕ್ಷ ಐವತ್ತೆಂಟು ಸಾವಿರದ ಎಂಭತ್ತನಾಲ್ಕು ರೂಪಾಯಿಗಳ ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯವಾಗಿ ಉಪಯೋಗಿಸಲಾಗಿದೆ ಎಂದು ಭಾವಿಸತಕ್ಕದ್ದು.

3. ಧನ ವಿನಿಯೋಗ.- ಈ ಅಧಿನಿಯಮದ ಮೂಲಕ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು 1986-87ನೇ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸಿದೆ ಎಂದು ಭಾವಿಸತಕ್ಕದ್ದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		ಒಟ್ಟು
			ವಿಧಾನ ಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	
1		2	3	4	5
5	ಉದ್ಯಮಗಳು (ಚಿಕ್ಕ ಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು)	ರಾಜಸ್ವ ...	41,03,268	...	41,03,268
21	ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು	ಬಂಡವಾಳ	1,41,41,375	...	1,41,41,375
22	ಅರಣ್ಯ	ರಾಜಸ್ವ ...	1,94,26,212	...	1,94,36,212
33	ನಿಗಮ, ನಗರಪಾಲಿಕೆಗಳು ಮತ್ತು ಪಟ್ಟಣ ಪಂಚಾಯಿತಿಗಳ ಅನುದಾನ	ರಾಜಸ್ವ ...	3,29,230	...	3,29,230
34	ಸಣ್ಣ ನೀರಾವರಿ	ರಾಜಸ್ವ ...	4,44,57,057	...	4,44,57,057
44	ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ರಹಿತ)	ರಾಜಸ್ವ ...	...	1,87,238	1,87,238
45	ಕಟ್ಟಡಗಳು	ರಾಜಸ್ವ ...	1,64,82,225	...	1,64,82,225
46	ರಸ್ತೆಗಳು ಮತ್ತು ಸೇತುವೆಗಳು	ರಾಜಸ್ವ ...	11,00,78,968	...	11,00,78,968
49	ಭೂ ಕಂದಾಯ ಇತ್ಯಾದಿ	ಬಂಡವಾಳ ... ರಾಜಸ್ವ ...	45,50,340	5,14,814	45,50,340 5,14,814
50	ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆ	ರಾಜಸ್ವ ...	1,71,87,357	...	1,71,87,357
		ಜುಮ್ಲಾ ...	23,07,56,032	7,02,052	23,14,59,084

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1986-87ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಲಾದ ಮೊಬಲಗಿಗಿಂತ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸಲು ಭಾರತ ಸಂವಿಧಾನದ 205(1)(ಬಿ)ನೇ ಅನುಚ್ಛೇದದ ಉಪಬಂಧಗಳಿನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಎಂ. ವೀರಪ್ಪ ಮೊಯಿಲಿ,
ಮುಖ್ಯ ಮಂತ್ರಿಗಳು.

ನಿಂ.ಹು. ಮುತ್ತಲಗೇರಿ,
ಕಾರ್ಯದರ್ಶಿ.

BLANK PAGE

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ಇಪ್ಪತ್ತೊಂದನೇ ಮಾರ್ಚ್ ೧೯೯೪, ಫಾಲ್ಗುಣ, ಶಕ ೧೯೧೫

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ ಒಂದು ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ.ಎಸ್. ಕೌಜಲಗಿ) ರವರು ಪೀಠವನ್ನು ಅಲಂಕರಿಸಿದ್ದರು.

ವಿತ್ತೀಯ ಕಾರ್ಯಕಲಾಪಗಳು

1994-95ನೇ ಸಾಲಿನ ಆಯವ್ಯಯ ಮಂಡನೆ

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು ಹಾಗೂ ಆರ್ಥಿಕ ಸಚಿವರು): *ಸನ್ಮಾನ್ಯ ಸಭಾಧ್ಯಕ್ಷರೇ,*

ನಾನೀಗ 1994-95ರ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸಬಯಸುತ್ತೇನೆ.

2. ಈ ವರ್ಷ ರಾಜ್ಯದ ಆಯವ್ಯಯಕ್ಕಿಂತ ಮೊದಲೇ ಕೇಂದ್ರದ ಆಯವ್ಯಯ ಮಂಡನೆಯಾಗಿರುವುದು ನಮ್ಮ ಸುದೈವ. ರಾಜ್ಯ ಸರ್ಕಾರದ ಕಾರ್ಯನೀತಿಗಳು ಮತ್ತು ಕಾರ್ಯಕ್ರಮಗಳನ್ನು ಭಾರತ ಸರ್ಕಾರದವುಗಳೊಂದಿಗೆ ಸಮನ್ವಯಗೊಳಿಸುವ ಪ್ರಯತ್ನವನ್ನು ನಾನು ಮಾಡಿದ್ದೇನೆ. ಇದರಿಂದಾಗುವ ಪ್ರಯೋಜನಗಳನ್ನು ರಾಜ್ಯದ ತ್ವರಿತ ಅಭಿವೃದ್ಧಿಗಾಗಿ ಬಳಸಿಕೊಳ್ಳಬೇಕೆಂಬುದು ನನ್ನ ಉದ್ದೇಶ.

3. ಕೇಂದ್ರ ಸರ್ಕಾರವು ಚೈತನ್ಯಶೀಲವೂ, ದಿಟ್ಟವೂ ಆದ ಆರ್ಥಿಕ ಕ್ರಮಗಳನ್ನು ಮೂರು ವರ್ಷಗಳ ಹಿಂದೆಯೇ ಆರಂಭಿಸಿದೆ. ಸಂರಕ್ಷಿತ ಅರ್ಥ ವ್ಯವಸ್ಥೆಯನ್ನು ಮುಕ್ತ ವ್ಯವಸ್ಥೆಯನ್ನಾಗಿ ಪರಿವರ್ತಿಸಿ, ದೇಶವನ್ನು ದಿಟ್ಟ ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ದೀರ್ಘಕಾಲೀನ ಈ ಕ್ರಮಗಳು ನಿಧಾನವಾಗಿ ಫಲ ನೀಡತೊಡಗಿವೆ. ಭಾರತದ ಅರ್ಥ ವ್ಯವಸ್ಥೆಯು ವಿದೇಶಿ ಹಾಗೂ ದೇಶೀಯ ವಲಯಗಳಲ್ಲಿ ಸುಧಾರಣೆಯ ಲಕ್ಷಣಗಳನ್ನು ತೋರತೊಡಗಿದೆ. ರಫ್ತುಗಳಲ್ಲಿ ಅಭೂತಪೂರ್ವ ಬೆಳವಣಿಗೆ ಕಂಡುಬಂದಿದೆ. ವಿದೇಶಿ ವಿನಿಮಯ ಮೀಸಲು ನಿಧಿಯು ದಾಖಲೆಯ ಮಟ್ಟಕ್ಕೆ ಏರಿದೆ. ಹಣದುಬ್ಬರದ ಪ್ರಮಾಣವು 1991ರ ಮಧ್ಯದಲ್ಲಿ ಶೇಕಡಾ 17ರಷ್ಟಿದ್ದುದು ಈಗ ಅದರ ಅರ್ಧದಷ್ಟು ಮಟ್ಟಕ್ಕೆ ಇಳಿದಿದೆ.

4. ಕೇಂದ್ರ ಸರ್ಕಾರವು ಕೈಗಾರಿಕಾ ಬೆಳವಣಿಗೆಗೆ ನೀಡುವಷ್ಟೇ ಪ್ರಾಮುಖ್ಯತೆಯನ್ನು ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಮತ್ತು ಸಾಮಾಜಿಕ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ನೀಡಿದೆ. ಈ ತತ್ವವು ಕೇಂದ್ರ ಸರ್ಕಾರದ 1994-95ರ ಆಯವ್ಯಯದಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆ. ಕೃಷಿ, ಗ್ರಾಮೀಣ ಅಭಿವೃದ್ಧಿ, ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣದಂಥ ಕ್ಷೇತ್ರಗಳಿಗೆ ಹೆಚ್ಚಿನ ಹಣ ಹಂಚಿಕೆ ಮಾಡಲಾಗಿದೆ. ಕರ್ನಾಟಕದಲ್ಲೂ ಇದೇ ರೀತಿಯ ಕಾರ್ಯನೀತಿಯನ್ನು ಅಳವಡಿಸಿಕೊಳ್ಳಲಾಗಿದೆ. ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವುದು; ಜನಜೀವನ, ಮುಖ್ಯವಾಗಿ ಬಡಜನರ ಜೀವನ ಮಟ್ಟವನ್ನು ಸುಧಾರಿಸುವಂಥ ಬಡತನ ನಿವಾರಣೆ ಹಾಗೂ ಇತರ ಅಭಿವೃದ್ಧಿಪರ ಮತ್ತು ಕಲ್ಯಾಣ ಕಾರ್ಯಕ್ರಮಗಳಲ್ಲಿ ಏಕಕಾಲದಲ್ಲಿ ಕೈಗೊಳ್ಳುವುದು ಈ ಕಾರ್ಯನೀತಿಯ ಉದ್ದೇಶ.

ಪ್ರಕೃತಿ ವಿಕೋಪ

5. ಕಳೆದ ವರ್ಷ ನಮ್ಮ ರಾಜ್ಯ ಭೂಕಂಪದ ರೂಪದಲ್ಲಿ ಒಂದು ಅಸಾಮಾನ್ಯ ಪ್ರಕೃತಿ ವಿಕೋಪವನ್ನು ಎದುರಿಸಬೇಕಾಯಿತು. ಇದರಿಂದ ಕರ್ನಾಟಕದ ಉತ್ತರ ಭಾಗಗಳಿಗೆ ತೀವ್ರ ಹಾನಿಯುಂಟಾಯಿತು. ನೂರಾರು ಮನೆಗಳು ಸಂಪೂರ್ಣವಾಗಿ ಕುಸಿದುಬಿದ್ದವು. ಸಾವಿರಾರು ಮನೆಗಳು ಹಾನಿಗೀಡಾದವು. ಇದಲ್ಲದೆ ರಾಜ್ಯದ ಹಲವಾರು ಭಾಗಗಳಲ್ಲಿ ಬರಗಾಲ ಮತ್ತು ನೆರೆ ಹಾವಳಿ ಪರಿಸ್ಥಿತಿಯನ್ನೆದುರಿಸಬೇಕಾಯಿತು. ರಾಜ್ಯಸರ್ಕಾರ ಈ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಿತು. ವಾರ್ಷಿಕ ಪ್ರಕೃತಿ ವಿಕೋಪ ನಿಧಿಯಾಗಿ ಕೇವಲ 27 ಕೋಟಿ ರೂಪಾಯಿಗಳನ್ನು ಒದಗಿಸಿದ್ದರೂ, ಪ್ರಕೃತಿ ವಿಕೋಪಗಳಿಂದ ನೊಂದವರಿಗೆ ಅಗತ್ಯವಿರುವ ಪರಿಹಾರವನ್ನು ಒದಗಿಸುವುದಕ್ಕಾಗಿ ನಾವು 60 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ವೆಚ್ಚ ಮಾಡಿದ್ದೇವೆ.

6. ಭೂಕಂಪದಿಂದ ತೀವ್ರ ಹಾನಿಗೊಳಗಾದ 48 ಗ್ರಾಮಗಳನ್ನು ಬೇರೆಡೆ ನಿರ್ಮಾಣ ಮಾಡುವುದಕ್ಕಾಗಿ ರಾಜ್ಯ ಸರ್ಕಾರ ಒಂದು ಯೋಜನಾ ವರದಿಯನ್ನು ಸಿದ್ಧಪಡಿಸಿದ್ದು ಅಗತ್ಯ ನೆರವಿಗಾಗಿ ವಿಶ್ವಬ್ಯಾಂಕಿಗೆ ಅದನ್ನು ಸಲ್ಲಿಸಿದೆ. ವಿಶ್ವಬ್ಯಾಂಕಿನಿಂದ 94 ಕೋಟಿ ರೂಪಾಯಿಗಳ ಅಗತ್ಯ ನೆರವನ್ನು ಪಡೆಯುವ ಭರವಸೆ ನಮಗಿದೆ.

10ನೇ. ಹಣಕಾಸು ಆಯೋಗ

7. ಹತ್ತನೇ ಹಣಕಾಸು ಆಯೋಗವು ಈ ವರ್ಷ ತನ್ನ ವರದಿಯನ್ನು ಸಲ್ಲಿಸುವ ನಿರೀಕ್ಷೆಯಿದೆ. ಕೇಂದ್ರ ಸರ್ಕಾರವು, ಆರ್ಥಿಕ ಸ್ಥಿರೀಕರಣ ಪ್ರಯತ್ನಗಳನ್ನು ಕೈಗೊಂಡಿದೆ. ಇದರಿಂದ ಆಯೋಗದ ಪಾತ್ರಕ್ಕೆ ವಿಶೇಷ ಮಹತ್ವ ಬಂದಿದೆ. ಈ ಸ್ಥಿರೀಕರಣ ಕ್ರಮಗಳ ಬಹುಪಾಲು ಹೊರೆಯನ್ನು ಕಳೆದ ಮೂರು ವರ್ಷಗಳಿಂದ ರಾಜ್ಯ ಸರ್ಕಾರಗಳೇ ಹೊರುತ್ತಿವೆ. ಉದಾರಣೆಗೆ ರಾಜ್ಯಗಳಿಗೆ ಮಾರುಕಟ್ಟೆ ಸಾಲಗಳ ಹಂಚಿಕೆ ಮತ್ತು ಗಾಡ್ಗೀಲ್ ಸೂತ್ರದ ಪ್ರಕಾರ, ರಾಜ್ಯ ಯೋಜನೆಗಳಿಗೆ ಕೇಂದ್ರ ನೆರವಿನ ಹಂಚಿಕೆ ಪ್ರಮಾಣ ಬಹುತೇಕ ಸ್ಥಿರವಾಗಿ ಉಳಿದಿದ್ದರೂ ಹಣದುಬ್ಬರದ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಹೋಗುತ್ತಿರುವುದರಿಂದ ಆ ನೆರವು ಕಡಿಮೆಯಾಗುತ್ತಲೇ ಹೋಗುತ್ತಿದೆ. ಅಲ್ಲದೆ, ಹಿಂದಿನ ಹಣಕಾಸು ಆಯೋಗವು ತೆರಿಗೆ ಪಾಲುಗಳ ಹಂಚಿಕೆಗೆ ಬಳಸಿದ ಮಾನದಂಡವು, ರಾಜ್ಯಗಳ ತೆರಿಗೆ ಸಂಗ್ರಹಣೆ ಸಾಮರ್ಥ್ಯವನ್ನು ಬಳಸಿಕೊಳ್ಳುವುದಕ್ಕಾಗಲೀ ಅಥವಾ ಅನುತ್ಪಾದಕ ವೆಚ್ಚಗಳನ್ನು ತಗ್ಗಿಸುವುದಕ್ಕಾಗಲೀ ಉತ್ತೇಜನ ನೀಡುವಂಥಾದ್ದಾಗಿರಲಿಲ್ಲ. ಆಯೋಗಕ್ಕೆ ನಾವು ಸಲ್ಲಿಸಿದ ನಮ್ಮ ಮನವಿಯಲ್ಲಿ ಹಾಗೂ ಆಯೋಗವು ಇತ್ತೀಚೆಗೆ ಕರ್ನಾಟಕಕ್ಕೆ ನೀಡಿದ ಭೇಟಿಯ ಸಮಯದಲ್ಲಿ ಆಯೋಗದೊಂದಿಗೆ ನಾವು ನಡೆಸಿದ ಚರ್ಚೆಗಳಲ್ಲಿ ಒಳ್ಳೆಯ ವಿತ್ತೀಯ ಸಾಧನೆಯನ್ನು ಪ್ರಶಂಸಿಸುವ ಅವಶ್ಯಕತೆಯನ್ನು ಹಾಗೂ ಒಟ್ಟು ಸಂಪನ್ಮೂಲಗಳಲ್ಲಿ ನ್ಯಾಯೋಚಿತವಾದ ಪಾಲು ರಾಜ್ಯಗಳಿಗೆ ದೊರಕಬೇಕೆಂಬ ಅಂಶವನ್ನು ಒತ್ತಿ ಹೇಳಿದ್ದೇನೆ. ನಮ್ಮ ಈ ಮನವಿಯನ್ನು ಪರಿಗಣಿಸಲಾಗುವುದೆಂಬ ಹಾಗೂ ಆಯೋಗದ ಅಂತಿಮ ವರದಿಯು ಕೇಂದ್ರ-ರಾಜ್ಯ ಹಣಕಾಸು ಸಂಬಂಧಗಳಿಗೆ ಹೊಸ ಆಯಾಮ ನೀಡುವುದೆಂಬ ನಂಬಿಕೆ ನಮಗಿದೆ.

ವಿಕೇಂದ್ರಿಕರಣ

8. ಪ್ರಜಾಸತ್ತಾತ್ಮಕ ವಿಕೇಂದ್ರಿಕರಣವು ವಿಕೇಂದ್ರಿಕೃತ ಯೋಜನಾ ಪದ್ಧತಿ ಇಲ್ಲದೆ ಎಂದಿಗೂ ಪೂರ್ಣವಾಗಲಾರದು. ಕರ್ನಾಟಕ 1978-79ರಷ್ಟು ಹಿಂದೆಯೇ ಜಿಲ್ಲಾ ಯೋಜನಾ ಪದ್ಧತಿಯಲ್ಲಿ ಭಾರತಲ್ಲಿ ಮೊಟ್ಟ ಮೊದಲಿಗೆ ಪ್ರಯೋಗಗಳನ್ನು ಮಾಡಿದ ರಾಜ್ಯ. ಈಗಲೂ ಕರ್ನಾಟಕವು ಮೂರು ಹಂತಗಳಲ್ಲಿ ಸ್ಥಳೀಯ ಸಂಸ್ಥೆಗಳನ್ನು

ನೆಲೆಗೊಳಿಸುವ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮವನ್ನು ಮಾಡುವ ಮೂಲಕ ಸಂವಿಧಾನದ 73ನೆಯ ತಿದ್ದುಪಡಿಯ ಮುಖ್ಯ ಲಕ್ಷಣಗಳನ್ನು ಜಾರಿಗೊಳಿಸುವುದರಲ್ಲಿಯೂ ಮೊದಲ ಸ್ಥಾನ ಪಡೆದಿದೆ. ಇದು ಎರಡು ಹಂತದ ವ್ಯವಸ್ಥೆಗಿಂತ ನಿಶ್ಚಿತವಾಗಿಯೂ ಸುಧಾರಿತ ವ್ಯವಸ್ಥೆಯಾಗಿದೆ. ಇದರಿಂದಾಗಿ, ಯೋಜನಾ ಪದ್ಧತಿ ಹಾಗೂ ಅನುಷ್ಠಾನ ಪ್ರಕ್ರಿಯೆಯು ಗ್ರಾಮ ಪಂಚಾಯಿತಿಗಳ ಅತ್ಯಂತ ಕೆಳಹಂತದವರೆಗೆ ತಲುಪುತ್ತದೆ. ಗ್ರಾಮ ಪಂಚಾಯತ್ ಪದ್ಧತಿಯನ್ನು ಪರಿಣಾಮಕಾರಿಯಾಗುವಂತೆ ಮಾಡುವ ದೃಷ್ಟಿಯಿಂದ ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಪ್ರತಿಯೊಂದು ಗ್ರಾಮ ಪಂಚಾಯಿತಿಗೂ ಒಂದು ಲಕ್ಷ ರೂ.ಗಳ ಅನುದಾನ ನೀಡಲು ನಾವು ನಿರ್ಧರಿಸಿದ್ದೇವೆ. ಜವಹರ್ ರೋಜ್‌ಗಾರ್ ಯೋಜನೆಯ ಶೇಕಡಾ 80 ರಷ್ಟು ಹಣ ನೇರವಾಗಿ ಗ್ರಾಮ ಪಂಚಾಯಿತಿಗಳಿಗೆ ಹೋಗುತ್ತದೆ. ರಾಜ್ಯ ಸರ್ಕಾರವು ಸ್ಥಳೀಯ ಸಂಸ್ಥೆಗಳಿಗೆ ಹಣ ಹಂಚಿಕೆ ಮಾಡುವ ವಿಷಯವನ್ನು ಪರಿಶೀಲಿಸಲು ಇಷ್ಟರಲ್ಲೇ ರಾಜ್ಯ ಹಣಕಾಸು ಆಯೋಗವನ್ನು ರಚಿಸಲಿದೆ. ಸಂವಿಧಾನದ 74ನೇ ತಿದ್ದುಪಡಿಯ ಮುಖ್ಯ ಲಕ್ಷಣಗಳನ್ನು ಒಳಗೊಳ್ಳುವಂಥ ವಿಧೇಯಕವನ್ನು ವಿಧಾನಮಂಡಲದ ಈ ಅಧಿವೇಶನದಲ್ಲಿ ಮಂಡಿಸಲಿದ್ದೇವೆ.

1993-94ರ ವಾರ್ಷಿಕ ಯೋಜನೆ

9. 1992-93ನೇ ಹಣಕಾಸು ವರ್ಷಕ್ಕಾಗಿ 1915 ಕೋಟಿ ರೂಪಾಯಿಗಳ ವೆಚ್ಚಕ್ಕೆ ಅನುಮೋದನೆ ನೀಡಲಾಗಿತ್ತು. ನಾನು 1992ರ ನವೆಂಬರ್‌ನಲ್ಲಿ ಅಧಿಕಾರ ವಹಿಸಿಕೊಂಡಾಗ, ಯೋಜನಾ ವೆಚ್ಚವು ಕೇವಲ 776.50 ಕೋಟಿ ರೂ.ಗಳಷ್ಟಿತ್ತು. ಆ ಹಣಕಾಸು ವರ್ಷದ ಉಳಿದ ಐದು ತಿಂಗಳಲ್ಲಿ ರಾಜ್ಯ ಸರ್ಕಾರವು ಸಾಕಷ್ಟು ಸಂಪನ್ಮೂಲಗಳನ್ನು ಸಂಗ್ರಹಿಸಿ ಯೋಜನಾ ಗುರಿಯನ್ನೂ ಮೀರಿ ಯೋಜನೆಗಳಿಗೆ 2032.94 ಕೋಟಿ ರೂ.ಗಳನ್ನು ವೆಚ್ಚ ಮಾಡಿದೆ. ರಾಜ್ಯದಲ್ಲಿ ಬೃಹತ್ ಪ್ರಮಾಣದ ಅಭಿವೃದ್ಧಿಯ ಅಗತ್ಯವನ್ನು ಮನಗಂಡು, ರಾಜ್ಯಸರ್ಕಾರವು ಪ್ರಸಕ್ತ ಹಣಕಾಸು ವರ್ಷಕ್ಕಾಗಿ ಅತ್ಯಂತ ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಹಮ್ಮಿಕೊಂಡಿದೆ. ಸರ್ಕಾರವು ಕಳೆದ 11 ತಿಂಗಳುಗಳ ಅವಧಿಯಲ್ಲಿ ವಾರ್ಷಿಕ ಯೋಜನೆಯಲ್ಲಿ ನಿಗದಿಪಡಿಸಿದ ಗುರಿಗಳನ್ನು ಸಾಧಿಸಲು ಅವಿರತವಾಗಿ ಶ್ರಮಿಸಿದೆ. ಕೆಲವು ಪರಿಕಲ್ಪನೆಗಳ ಆಧಾರದ ಮೇಲೆ ರಾಷ್ಟ್ರೀಯ ವಾರ್ಷಿಕ ಯೋಜನೆಯನ್ನು ರೂಪಿಸಿದ್ದರೂ, ಮುಂದಗತಿಯ ಆರ್ಥಿಕ ಬೆಳವಣಿಗೆ ಹಣದುಬ್ಬರದಲ್ಲಿ ಇಳಿತ, ಕಾಕಂಬಿ ಮೇಲಿನ ನಿಯಂತ್ರಣವನ್ನು ತೆಗೆದುಹಾಕಿರುವುದೇ ಮುಂತಾದ ಕಾರಣಗಳಿಂದಾಗಿ ಈ ಪರಿಕಲ್ಪನೆಗಳು ಸಾಕಾರಗೊಳ್ಳಲಿಲ್ಲ. ಈ ಅಂಶಗಳು ಕೇಂದ್ರ ತೆರಿಗೆಗಳ ಮೇಲೆ ಪರಿಣಾಮ ಬೀರಿರುವಂತೆಯೇ ರಾಜ್ಯದ ತೆರಿಗೆ ಆದಾಯದ ಮೇಲೆಯೂ ಪರಿಣಾಮ ಬೀರಿವೆ. ಆದಾಯದಲ್ಲಿ ಕೊರತೆ ಉಂಟಾದ್ದರಿಂದ ಕೇಂದ್ರ ಸರ್ಕಾರ ನಡೆದ ದಾರಿಯಲ್ಲಿಯೇ ನಡೆಯಬೇಕಾಯಿತು. ನಮ್ಮ ಮಂಡಲಿಗಳು, ನಿಗಮಗಳ ಹಾಗೂ ಕಂಪೆನಿಗಳು ತಮ್ಮ ಯೋಜನೆಗಳಿಗೆ ನಿಧಿ ಒದಗಿಸಿಕೊಳ್ಳಲು, ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳು ಅನುಸರಿಸುತ್ತಿರುವ ಪದ್ಧತಿಯಂತೆ ಹಣಕಾಸು ಸಂಸ್ಥೆಗಳು ಹಾಗೂ ಬ್ಯಾಂಕುಗಳಿಂದ ನಿಧಿಗಳನ್ನು ಪಡೆದುಕೊಳ್ಳುವಂತೆ ನಾವು ಅವುಗಳಿಗೆ ಸೂಚಿಸಿದ್ದೇವೆ. ಯೋಜನಾ ಹಣಕಾಸಿನ ಕಾರ್ಯತಂತ್ರದಲ್ಲಿ ಹೀಗೆ ಬದಲಾವಣೆ ಮಾಡುವುದರಿಂದ 1993-94ರ ಯೋಜನೆಯ ಒಟ್ಟಾರೆ ಗುರಿಯನ್ನು ಸಾಧಿಸಲಾಗುವುದೆಂಬ ನಂಬಿಕೆ ನನಗಿದೆ.

ವಾರ್ಷಿಕ ಯೋಜನೆ 1994-95

10. 1993-94ನೇ ಸಾಲಿನ ಪ್ರಯೋಜನಗಳನ್ನು 1994-95ರಲ್ಲಿ ಬಳಸಿಕೊಳ್ಳಲು ನಾನು ಯೋಜಿಸಿದ್ದೇನೆ. 1994-95ನೇ ವರ್ಷದ ಯೋಜನಾ ವೆಚ್ಚವು 3382.71

ಕೋಟಿ ರೂಪಾಯಿಗಳಿಗೆ ಏರಿದ್ದು, ಇದು ಪ್ರಸಕ್ತ ವರ್ಷದ ಯೋಜನಾ ವೆಚ್ಚಕ್ಕಿಂತ ಶೇಕಡ 11.83 ಹೆಚ್ಚಾಗಿದೆ. ನಮ್ಮ ಯೋಜನಾ ವೆಚ್ಚಕ್ಕೆ ನ್ಯಾಯಯುತ ಆದ್ಯತೆಯನ್ನು ನೀಡುವ ಮೂಲಕ ಅಭಿವೃದ್ಧಿ ಕಾರ್ಯವಿಧಾನಗಳಿಗೆ ಹೆಚ್ಚಿನ ಒತ್ತು ನೀಡಲು ನಾವು ಆಶಿಸಿದ್ದೇವೆ. ಈ ಯೋಜನೆಯಲ್ಲಿ ಬಡತನ ನಿವಾರಣಾ ಯೋಜನೆಗಳು, ಸಮಾಜ ಕಲ್ಯಾಣ, ನೀರಾವರಿ ಮತ್ತು ವಿದ್ಯುಚ್ಛಕ್ತಿ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. 1994-95ರ ವಾರ್ಷಿಕ ಯೋಜನೆಯ ವಲಯವಾರು ವಿವರಗಳನ್ನು ಅನುಬಂಧ-1ರಲ್ಲಿ ಕೊಡಲಾಗಿದೆ.

ಖಾಸಗಿ ವಲಯ ಭಾಗವಹಿಸುವಿಕೆ

11. ರಾಜ್ಯದ ಅರ್ಥವ್ಯವಸ್ಥೆಯ ಬೆಳವಣಿಗೆ ಮತ್ತು ಅಭಿವೃದ್ಧಿಯಲ್ಲಿ ಖಾಸಗಿ ವಲಯದ ಪಾತ್ರ ಪ್ರಮುಖವಾದುದು. ಆದರೆ, ಈ ಎಲ್ಲಾ ವರ್ಷಗಳಲ್ಲಿ ನಮ್ಮ ಸಮಗ್ರ ಯೋಜನಾ ಪ್ರಯತ್ನವು, ಸರ್ಕಾರಿ ಬಂಡವಾಳ ಹೂಡಿಕೆಯ ಮೇಲೆ ಮಾತ್ರ ಕೇಂದ್ರಿಕೃತವಾಗಿತ್ತು. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಖಾಸಗಿ ವಲಯ ಭಾಗವಹಿಸುವ ಪ್ರವೃತ್ತಿಗಳನ್ನು ಮತ್ತು ಅದರ ಪರಿಣಾಮವನ್ನು ಸೂಚಿಸುವ ಯಾವುದೇ ಅಂಕಿ ಅಂಶ ಆಧಾರ ನಮ್ಮಲ್ಲಿ ಇಲ್ಲ. ಮುಂಬರುವ ವರ್ಷಗಳಲ್ಲಿ ಸರ್ಕಾರಿ ಬಂಡವಾಳ ಹೂಡಿಕೆಗಳು ಖಾಸಗಿ ಬಂಡವಾಳ ಹೂಡಿಕೆಗಳಿಗೆ ಅನುಕೂಲ ಕಲ್ಪಿಸುವ ಮತ್ತು ಖಾಸಗಿ ಬಂಡವಾಳ ಹೂಡಿಕೆಗಳಿಗೆ ಪೂರಕವಾಗುವ ರೀತಿಯಲ್ಲಿ ಇರಬೇಕು. ಈ ಸಂಬಂಧ, ಅಭಿವೃದ್ಧಿ ಪ್ರಕ್ರಿಯೆಯನ್ನು ತೀವ್ರಗೊಳಿಸುವಲ್ಲಿ ಖಾಸಗಿ ವಲಯದ ಪಾತ್ರ ಕುರಿತು ಅಧ್ಯಯನ ಮಾಡುವಂತೆ ಹಾಗೂ ಈ ಪ್ರಕ್ರಿಯೆಯಲ್ಲಿ ಖಾಸಗಿ ಬಂಡವಾಳವನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ತೊಡಗಿಸುವುದಕ್ಕೆ ಸರ್ಕಾರ ಏನು ಮಾಡಬಹುದು ಎಂಬುದನ್ನು ಸೂಚಿಸುವಂತೆ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯನ್ನು ರಾಜ್ಯ ಸರ್ಕಾರ ಕೇಳಲಿದೆ. ಇಂತಹ ಅಧ್ಯಯನವು ಇಡೀ ರಾಷ್ಟ್ರದಲ್ಲೇ ಮೊಟ್ಟ ಮೊದಲನೆಯದಾಗಿರುತ್ತದೆ.

ಬಡತನ ನಿವಾರಣೆ-ವಿಶೇಷ ಕಾರ್ಯ ಯೋಜನೆ

12. 1993-94ರಲ್ಲಿ ನಮ್ಮ ಸರ್ಕಾರವು ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಹೊಸ ಆಯಾಮ ನೀಡಲು ಒಂದು ವಿಶೇಷ ಕಾರ್ಯಯೋಜನೆಯನ್ನು ರೂಪಿಸಿದ್ದಿತು. ಉದ್ಯೋಗ ಸೃಷ್ಟಿ. ಗೃಹನಿರ್ಮಾಣ, ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು, ದುರ್ಬಲ ವರ್ಗಗಳ ಕಲ್ಯಾಣ, ಶಾಲಾ ಮಕ್ಕಳಿಗೆ ಉಚಿತ ಹಾಲು ಪೂರೈಕೆ ಮುಂತಾದ ಕಾರ್ಯಕ್ರಮಗಳಿಗೆ ವಿಶೇಷ ಒತ್ತು ನೀಡಲಾಗಿತ್ತು. ಈ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 725ಕೋಟಿ ರೂ.ಗಳನ್ನು ಮೀಸಲಾಗಿಡಲಾಗಿತ್ತು. ಕಳೆದ ವರ್ಷ ಭಾರತದ ಮಾಜಿ ಪ್ರಧಾನಮಂತ್ರಿಗಳಾದ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರ ಜನ್ಮದಿನವಾದ ನವೆಂಬರ್ 19ರಂದು ವಿಶೇಷ ಜಾಗೃತಿ ಆಂದೋಲನವನ್ನು ಪ್ರಾರಂಭಿಸಲಾಯಿತು. ಬಡತನ ನಿವಾರಣೆಯ ವಿವಿಧ ಕಾರ್ಯಕ್ರಮಗಳನ್ನು ಒಂದೇ ವ್ಯವಸ್ಥೆಗೆ ಅಳವಡಿಸಿದ್ದರಿಂದಾಗಿ ಅನುಷ್ಠಾನ ಹಾಗೂ ಮೇಲ್ವಿಚಾರಣೆ ಕಾರ್ಯವನ್ನು ಇನ್ನಷ್ಟು ಉತ್ತಮವಾಗಿ ನಿರ್ವಹಿಸಲು ಸಾಧ್ಯವಾಗಿದೆ. ಈ ಕಾರ್ಯಕ್ರಮಕ್ಕೆ ಹಣಕಾಸು ಹಂಚಿಕೆಯನ್ನು 1994-95ರಲ್ಲಿ 998ಕೋಟಿ ರೂ.ಗಳಿಗೆ ಹೆಚ್ಚಿಸಲು ನಾನು ಉದ್ದೇಶಿಸಿದ್ದೇನೆ.

ಸಾರ್ವಜನಿಕ ವಿತರಣಾ ವ್ಯವಸ್ಥೆ

13. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಡಿಯಲ್ಲಿ ನೀಡುವ ಆಹಾರಧಾನ್ಯಗಳ ಬೆಲೆಯಲ್ಲಾಗಿರುವ ಏರಿಕೆಯಿಂದ ಸಮಾಜದ ಬಡಜನರ ಪೌಷ್ಟಿಕತೆಯ ಮಟ್ಟದ ಮೇಲೆ ಪ್ರತಿಕೂಲ ಪರಿಣಾಮವಾಗದಂತೆ ನೋಡಿಕೊಳ್ಳಲಾಗುವುದೆಂದು ನಾನು ಭರವಸೆ

ಕೊಡುತ್ತೇನೆ. ಹಸಿರು ಪಡಿತರ ಚೀಟಿ ಹೊಂದಿದವರಿಗೆ 1.4.1994ರಿಂದ ಜಾರಿಗೆ ಬರುವಂತೆ ಅಕ್ಕಿಯ ಬೆಲೆಯನ್ನು ಕೆ.ಜಿ.ಯೊಂದಕ್ಕೆ ಒಂದು ರೂಪಾಯಿಯಷ್ಟು ಮತ್ತು ಗೋಧಿಯ ಬೆಲೆಯನ್ನು ಕೆ.ಜಿ.ಗೆ 50 ಪೈಸೆಯಷ್ಟು ಇಳಿಸಲು ನಾನು ಉದ್ದೇಶಿಸಿದ್ದೇನೆ. ರಾಜ್ಯದ ಜನಸಂಖ್ಯೆಯಲ್ಲಿ ಸುಮಾರು ಶೇಕಡಾ 50 ರಷ್ಟಿರುವ ಹಸಿರು ಪಡಿತರ ಚೀಟಿಹೊಂದಿದವರಿಗೆ ಈ ಪರಿಹಾರ ಒದಗಿಸುವುದರಿಂದ ಸರ್ಕಾರಕ್ಕೆ ವರ್ಷಕ್ಕೆ 42.50 ಕೋಟಿ ರೂ.ಗಳಷ್ಟು ವೆಚ್ಚ ಆಗಲಿದೆ.

ವಿಶೇಷ ಘಟಕ ಯೋಜನೆಗಳ ನಿಧಿಗಳ ಕ್ರೋಢೀಕರಣ

14. ರಾಜ್ಯ ಸರ್ಕಾರವು, ಹಲವಾರು ವರ್ಷಗಳಿಂದ, ವಿಶೇಷ ಘಟಕ ಯೋಜನೆಯ ಅಡಿಯಲ್ಲಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗಾಗಿ ಇರುವ ಪ್ರತಿಯೊಂದು ಅಭಿವೃದ್ಧಿ ವಲಯಕ್ಕೆ ವಿಶೇಷವಾಗಿ ಹಣ ಹಂಚಿಕೆ ಮಾಡಿಕೊಂಡು ಬಂದಿದೆ. ವಿವಿಧ ಬಗೆಯ ಹಲವಾರು ಕಾರ್ಯಕ್ರಮಗಳು ಹಾಗೂ ಯೋಜನೆಗಳಿಗೆ ಪರಿಮಿತ ಸಂಪನ್ಮೂಲಗಳನ್ನು ಕಡಿಮೆ ಪ್ರಮಾಣದಲ್ಲಿ ಹಂಚಿಕೆ ಮಾಡಿರುವುದರಿಂದಾಗಿ ಆ ಕಾರ್ಯಕ್ರಮಗಳ ಹಾಗೂ ಯೋಜನೆಗಳ ಫಲಶ್ರುತಿ ಏನೆಂಬುದು ತಿಳಿದುಬರುತ್ತಿಲ್ಲವೆಂಬ ಅಂಶವನ್ನು ನಾವು ಮನಗಂಡಿದ್ದೇವೆ. ಆದುದರಿಂದ, ಇದೇ ಮೊದಲ ಬಾರಿಗೆ ವಿಶೇಷ ಘಟಕ ಯೋಜನೆಗಳ ನಿಧಿಗಳನ್ನು ಒಂದೆಡೆ ಒಗ್ಗೂಡಿಸಿ ಅವುಗಳನ್ನು ಮನೆಗಳು, ವಿದ್ಯಾರ್ಥಿ ನಿಲಯಗಳು ಅಂಬೇಡ್ಕರ್ ಭವನಗಳ ನಿರ್ಮಾಣಗಳಂಥ ಕೆಲವೇ ಕೆಲವು ಆಯ್ದ ಹಾಗೂ ಅತ್ಯಂತ ಪ್ರಮುಖ ಕ್ಷೇತ್ರಗಳಿಗೆ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಯೋಜನೆಗಳಿಗಷ್ಟೇ ಖರ್ಚು ಮಾಡಲು ನಾವು ತೀರ್ಮಾನಿಸಿದ್ದೇವೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣ

15.ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನರ ಕಲ್ಯಾಣ ಕಾರ್ಯಗಳಿಗೆ ಸಂಬಂಧಿಸಿದಂತೆ 1993-94ರಲ್ಲಿ ಸಾಧಿಸಿದ ಕೆಲವು ಇತರ ಪ್ರಮುಖ ಸಾಧನೆಗಳು ಹೀಗಿವೆ: ವಿಶೇಷ ಘಟಕ ಯೋಜನೆ ಹಾಗೂ ಬುಡಕಟ್ಟು ಉಪಯೋಜನೆಯ ಅಡಿಯ ಹಣಕಾಸು ಪ್ರಯೋಜನಗಳನ್ನು 1.27ಲಕ್ಷ ಪರಿಶಿಷ್ಟ ಜಾತಿ ಕುಟುಂಬಗಳಿಗೆ 9600 ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ ದೊರಕಿಸಿಕೊಡಲಾಗಿದೆ. ಹಿಂದಿನ ವರ್ಷದಲ್ಲಿ 4.88 ಲಕ್ಷ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ನೀಡಲಾಗಿತ್ತು. ಈ ವರ್ಷ 6.15 ಲಕ್ಷ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ನೀಡಲಾಗಿದೆ. 1,2,3 ಮತ್ತು 4ನೇ ತರಗತಿಯಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿಪರಿಶಿಷ್ಟ ಪಂಗಡಗಳ 13.42 ಲಕ್ಷ ವಿದ್ಯಾರ್ಥಿಗಳಿಗೆ ಉತ್ತೇಜಕ ವಿದ್ಯಾರ್ಥಿ ವೇತನವೆಂಬ ಹೊಸ ಯೋಜನೆಯ ಅಡಿಯಲ್ಲಿ ವಿದ್ಯಾರ್ಥಿ ವೇತನ ನೀಡಲಾಗಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗಾಗಿ 1992-93ರಲ್ಲಿ 39 ಮೆಟ್ರಿಕ್ 'ಪೂರ್ವ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿತ್ತು. 1993-94ರಲ್ಲಿ 79 ಹೊಸ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ಮತ್ತು 16 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಆರಂಭಿಸಲಾಗಿದೆ.

16. ಪರಿಶಿಷ್ಟ ಜಾತಿ/ಪಂಗಡಗಳ ಅಭಿವೃದ್ಧಿ ನಿಗಮವು, 1994-95ನೇ ಸಾಲಿನಲ್ಲಿ 145.40 ಕೋಟಿ ರೂಪಾಯಿ ವೆಚ್ಚದಲ್ಲಿ 70,000 ಫಲಾನುಭವಿಗಳಿಗೆ ನೆರವು ನೀಡಲಿದೆ. 1993-94ರಲ್ಲಿ ನಿಗಮವು 57.48 ಕೋಟಿ ರೂಪಾಯಿ ನೆರವು ನೀಡಲಾಗಿತ್ತು. ಸರ್ಕಾರವು, ಆಯವ್ಯಯದಲ್ಲಿ ಹಣ ಒದಗಿಸುವ ಮತ್ತು ವಿಶೇಷ ಘಟಕ ಯೋಜನೆಯ ನಿಧಿಗಳನ್ನು

ಒಗ್ಗೂಡಿಸುವ ಮೂಲಕ ನಿಗಮಕ್ಕೆ 46.20 ಕೋಟಿ ರೂಪಾಯಿಗಳನ್ನು ಒದಗಿಸಲಿದೆ. 1993-94ರಲ್ಲಿ 7.48 ಕೋಟಿ ರೂಪಾಯಿ ಒದಗಿಸಲಾಗಿತ್ತು. ಇನ್ನುಳಿದ ಮೊತ್ತವನ್ನು ನಿಗಮವು ಬ್ಯಾಂಕುಗಳಿಂದ ಪಡೆಯುತ್ತದೆ. ಹೀಗಾಗಿ, ಕಳೆದ ವರ್ಷಕ್ಕೆ ಹೋಲಿಸಿದರೆ, ಈ ವರ್ಷ ಫಲಾನುಭವಿಗಳ ಸಂಖ್ಯೆಯಲ್ಲಿ ಶೇಕಡಾ 180ರಷ್ಟು ಮತ್ತು ನಿಗಮಕ್ಕೆ ಆಯವ್ಯಯದಲ್ಲಿ ಒದಗಿಸುವ ಹಣದಲ್ಲಿ ಶೇಕಡಾ 500ರಷ್ಟು ಹೆಚ್ಚಳವಾಗುತ್ತದೆ.

ಭೂ ಮಾಲೀಕತ್ವ ಯೋಜನೆ, ನೀರಾವರಿ ಬಾವಿಗಳು ಮತ್ತು ಸ್ವಯಂ ಉದ್ಯೋಗ ಯೋಜನೆಗಳು ನಿಗಮದ ಪ್ರಮುಖ ಕಾರ್ಯಚಟುವಟಿಕೆಗಳಾಗಲಿವೆ.

17. ಸಮಾಜ ಕಲ್ಯಾಣದ ಇತರ ಕ್ಷೇತ್ರಗಳಿಗೆ ಸಂಬಂಧಿಸಿದಂತೆ, ವಸತಿ ಮತ್ತು ಶಿಕ್ಷಣಕ್ಕೆ ವಿಶೇಷ ಗಮನ ನೀಡಲಾಗುವುದು. ಡಾ. ಅಂಬೇಡ್ಕರ್ ಜನ್ಮ ಶತಾಬ್ದಿ ಆಚರಣೆ ಕಾರ್ಯಕ್ರಮದ ಅಡಿಯಲ್ಲಿ ಪರಿಶಿಷ್ಟ ಜಾತಿ/ಪಂಗಡದ ಜನರಿಗೆ 1.4 ಲಕ್ಷ ಮನೆಗಳನ್ನು ಕಟ್ಟಿಸಿಕೊಡಲು ಯೋಜಿಸಲಾಗಿತ್ತು. ಇನ್ನೂ 25,000ಮನೆಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ಉಳಿದ ಮನೆಗಳ ನಿರ್ಮಾಣ ಕಾರ್ಯವನ್ನು 1994-95ರಲ್ಲಿ ಕೈಗೆತ್ತಿಕೊಳ್ಳಲಾಗುವುದು. ಬಜೆಟ್‌ನಲ್ಲಿ ಹಣ ಒದಗಿಸುವುದರೊಂದಿಗೆ, ವಿಶೇಷ ಘಟಕ ಯೋಜನೆ ನಿಧಿಗಳನ್ನು ಒಗ್ಗೂಡಿಸಿ ಮತ್ತು ಹಣಕಾಸು ಸಂಸ್ಥೆಗಳಿಂದ ನೆರವು ಪಡೆದುಕೊಂಡು ಈ ಯೋಜನೆಗೆ ಬೇಕಾದ ಹಣ ಒದಗಿಸಲಾಗುವುದು. ವಿಧಾಸಭೆಯ 37 ಮೀಸಲು ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಒಂದೊಂದು ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣವನ್ನು ಪ್ರಾರಂಭಿಸಲಾಗುವುದು. ಅಲ್ಲದೆ ಹಂತ ಹಂತವಾಗಿ ಇನ್ನೂ 67 ವಿದ್ಯಾರ್ಥಿನಿಲಯಗಳನ್ನು ಕೂಡ ನಿರ್ಮಿಸಲಾಗುವುದು. ಸಿವಿಲ್ ಸೇವಾ ಪರೀಕ್ಷೆಗೆ ಸಿದ್ಧತೆ ನಡೆಸುವ ಪರಿಶಿಷ್ಟ ಜಾತಿ/ಪಂಗಡಗಳ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಅಧ್ಯಯನ ಕೇಂದ್ರವನ್ನು ಬಲಪಡಿಸಲು 2 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುವುದು. ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಡಾ. ಅಂಬೇಡ್ಕರ್ ಹೆಸರಿನಲ್ಲಿ ಒಂದೊಂದು ಪೀಠವನ್ನು ಸ್ಥಾಪಿಸಲಾಗುವುದು. ಬುಡಕಟ್ಟು ಅಭಿವೃದ್ಧಿಗಾಗಿ ಪ್ರತ್ಯಕ ನಿರ್ದೇಶನಾಲಯವೊಂದನ್ನು ಸ್ಥಾಪಿಸಲಾಗುವುದು.

ಹಿಂದುಳಿದ ವರ್ಗಗಳ ಕಲ್ಯಾಣ

18. ಹಿಂದಿನ ವರ್ಷ ಆಶ್ವಾಸನೆ ನೀಡಿದ್ದಂತೆ ಹಿಂದುಳಿದ ವರ್ಗಗಳಿಗಾಗಿ ದಿವಂಗತ ಶ್ರೀ ಡಿ.ದೇವರಾಜ ಅರಸರ ಹೆಸರಿನಲ್ಲಿ ಸಂಶೋಧನಾ ಸಂಸ್ಥೆಯೊಂದನ್ನು ಪ್ರಾರಂಭಿಸಲಾಗಿದೆ. 1994-95ನೇ ಸಾಲಿನಲ್ಲಿ, ಸಂಶೋಧನೆ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಈ ಸಂಸ್ಥೆಗೆ 20 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ 1993-94ರಲ್ಲಿ 7.50 ಕೋಟಿ ರೂಪಾಯಿ ಒದಗಿಸಲಾಗಿತ್ತು. 1994-95ನೇ ಸಾಲಿಗಾಗಿ 10.13 ಕೋಟಿ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಒದಗಿಸಲಾಗಿದೆ. 1994-95ನೇ ಸಾಲಿನ ತನ್ನ ಒಟ್ಟು ವೆಚ್ಚ 35.63 ಕೋಟಿ ರೂಪಾಯಿಗಗಳನ್ನು ಹೊಂದಿಸಿಕೊಳ್ಳಲು ನಿಗಮವು ಬ್ಯಾಂಕುಗಳಿಂದ ಇನ್ನೂ 25.50 ಕೋಟಿ ರೂಪಾಯಿಗಳನ್ನು ಪಡೆಯಲಿದೆ. ಇದರಿಂದ 25,684 ಕುಟುಂಬಗಳಿಗೆ ನೆರವು ನೀಡಲು ನಿಗಮಕ್ಕೆ ಸಾಧ್ಯವಾಗುತ್ತದೆ. 1993-94ರಲ್ಲಿ 15,434 ಕುಟುಂಬಗಳಿಗೆ ನೆರವು ನೀಡಲಾಗಿತ್ತು.

ಬೆಳ್ಳಿ ಬೆಳಕು

19. ಆಧುನಿಕ ಬದುಕಿಗೆ ದೂರವಾದ ಹಾಗೂ ನಾಗರೀಕ ಸೌಲಭ್ಯಗಳಿಂದ ವಂಚಿತವಾದ ಅತಿ ಸಣ್ಣ ಗ್ರಾಮಗಳಲ್ಲಿ ವಾಸಿಸುವ ಹಿಂದುಳಿದ ವರ್ಗಗಳ ವ್ಯಾಪಕ ಸಮಗ್ರ

ಅಭಿವೃದ್ಧಿಗಾಗಿ 2 ಜಿಲ್ಲೆಗಳ 5 ಗ್ರಾಮಗಳಲ್ಲಿ ಹೊಸ ಪ್ರಾಯೋಗಿಕ ಯೋಜನೆಯೊಂದನ್ನು 1993-94ರಲ್ಲಿ ಕೈಗೊಳ್ಳಲಾಗಿತ್ತು. ಈ ಯೋಜನೆಯ ಪರಿಣಾಕಾರಿ ಪ್ರಯೋಜನವನ್ನು ಮನಗಂಡು ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಒಂದೊಂದು 'ಬೆಳ್ಳಿ ಬೆಳಕು' ಯೋಜನೆಯನ್ನು ಕೈಗೊಳ್ಳಲು ಸರ್ಕಾರ ಉದ್ದೇಶಿಸಿದೆ. ಈ ಉದ್ದೇಶಕ್ಕಾಗಿ 4 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

ಮೂರ್ತೆದಾರರ ಕಲ್ಯಾಣ

20. ಮೂರ್ತೆದಾರರ ಕಲ್ಯಾಣದ ಬಗ್ಗೆ ನನಗೆ ತುಂಬಾ ಕಾಳಜಿ ಇದೆ. ಮೂರ್ತೆದಾರರ ಸಾಮಾಜಿಕ ಮತ್ತು ಶೈಕ್ಷಣಿಕ ಉನ್ನತಿಗಾಗಿ ನಾನು ಯೋಜನೆಯೊಂದನ್ನು ಪ್ರಾರಂಭಿಸಬಯಸಿದ್ದೇನೆ. ಈ ಉದ್ದೇಶಕ್ಕಾಗಿ ಮೂರ್ತೆದಾರರ ಕಲ್ಯಾಣ ನಿಧಿಯನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ಈ ನಿಧಿಗೆ 2.00 ಕೋಟಿ ರೂಪಾಯಿ ಪ್ರಾರಂಭಿಕ ವಂತಿಗೆಯನ್ನು ರಾಜ್ಯ ಸರ್ಕಾರವು ನೀಡುತ್ತದೆ. ಅದನ್ನು ಮೂರ್ತೆದಾರರ ಮಕ್ಕಳ ಶಿಕ್ಷಣದ ಉದ್ದೇಶಗಳಿಗಾಗಿ ವಿದ್ಯಾರ್ಥಿವೇತನ ಮಂತಾದವುಗಳನ್ನು ನೀಡಲು ಬಳಸಿಕೊಳ್ಳಲಾಗುವುದು. ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಈಗಾಗಲೇ ಇರುವ ಮೂರ್ತೆದಾರರ ಸಹಕಾರ ಸಂಘಗಳ ರಾಜ್ಯಮಟ್ಟದ ಮಹಾಮಂಡಳಿಯೊಂದನ್ನು ಸ್ಥಾಪಿಸಲು ಸಹ ರಾಜ್ಯ ಸರ್ಕಾರವು ಉದ್ದೇಶಿಸಿದೆ.

ಅಂಗವಿಕಲರ ಕಲ್ಯಾಣ

21. ಬಡವರಾಗಿದ್ದೂ ಅಂಗವಿಕರಾಗಿರುವ ವ್ಯಕ್ತಿಗಳಿಗೆ ನೀಡುವ ಮಾಸಾಶನವನನ್ನು 50 ರೂ.ಗಳಿಂದ 75 ರೂ.ಗಳಿಗೆ ಹೆಚ್ಚಿಸಲು ಸರ್ಕಾರ ಉದ್ದೇಶಿಸಿದೆ. ಇದರಿಂದಾಗಿ ವರ್ಷಕ್ಕೆ 8 ಕೋಟಿ ರೂ.ಗಳ ಹೆಚ್ಚಿನ ವೆಚ್ಚವಾಗಲಿದೆ. ಅಂಗವಿಕಲರ ಅಭಿವೃದ್ಧಿಗಾಗಿ ವ್ಯಾಪಕ ಯೋಜನೆಯೊಂದನ್ನು ಸಿದ್ಧಪಡಿಸುವುದಕ್ಕಾಗಿ ರಾಜೀವ ಗಾಂಧಿ ಸಂಪನ್ಮೂಲ ಕೇಂದ್ರವನ್ನು ಬಲಗೊಳಿಸಲು ಉದ್ದೇಶಿಸಲಾಗಿದೆ. ಅಲ್ಲದೆ ಅಂಗವಿಕಲರ ಪುನರ್ವಸತಿಗಾಗಿ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳಿಗೆ ನೆರವು ನೀಡಲು 40 ಲಕ್ಷ ರೂ.ಗಳ ಹಣದ ಏರ್ಪಾಡು ಮಾಡಲಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣ

22. ರಾಜ್ಯದಲ್ಲಿ ಅಲ್ಪಸಂಖ್ಯಾತರ ಸಾಮಾಜಿಕ-ಆರ್ಥಿಕ ಸಮೀಕ್ಷೆ ನಡೆಸಲು ರಾಜ್ಯ ಅಲ್ಪಸಂಖ್ಯಾತರ ಆಯೋಗಕ್ಕೆ 1993-94ರಲ್ಲಿ 40 ಲಕ್ಷ ರೂಪಾಯಿಗಳನ್ನು ನೀಡಲಾಗಿತ್ತು. ಸಮೀಕ್ಷೆಯನ್ನು ಪೂರ್ಣಗೊಳಿಸಲಾಗಿದ್ದು ಸದ್ಯದಲ್ಲೇ ವರದಿಯನ್ನು ಸಲ್ಲಿಸುವ ನಿರೀಕ್ಷೆ ಇದೆ. ಸಮೀಕ್ಷೆಯನ್ನು ಆಧರಿಸಿ ಅಲ್ಪಸಂಖ್ಯಾತರ ಸಮಗ್ರ ಅಭಿವೃದ್ಧಿಗಾಗಿ ವ್ಯಾಪಕ ಯೋಜನೆಯೊಂದನ್ನು ರೂಪಿಸಲಾಗುವುದು. ಸರ್ಕಾರವು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ 1993-94ರಲ್ಲಿ 2.5 ಕೋಟಿ ರೂಪಾಯಿಗಳನ್ನು ಒದಗಿಸಿತ್ತು. 1994-95ನೇ ಸಾಲಿಗೆ ಬಜೆಟ್ಟಿನಲ್ಲಿ 10.00ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು. 1994-95ರಲ್ಲಿ ನಿಗಮದ ಒಟ್ಟು ವೆಚ್ಚ 26.00 ಕೋಟಿ ರೂಪಾಯಿಗಳಾಗುವುದು. ಇದರಲ್ಲಿ ಬ್ಯಾಂಕುಗಳಿಂದ ಪಡೆಯುವ ಹಣವೂ ಸೇರುತ್ತದೆ. ನಿಗಮವು 1993-94ರಲ್ಲಿ 4500 ಕುಟುಂಬಗಳಿಗೆ ನೆರವು ನೀಡಿದೆ. 1994-95ರಲ್ಲಿ 7800 ಕುಟುಂಬಗಳಿಗೆ ನೆರವು ನೀಡಲಿದೆ.

ವಕ್ಫ್ ವಿಷಯಗಳು

23. ಕರ್ನಾಟಕ ರಾಜ್ಯ ವಕ್ಫ್ ಮಂಡಲಿಯನ್ನು 1993-94ರಲ್ಲಿ ಪುನಃ ರಚಿಸಲಾಗಿದೆ. ವಕ್ಫ್ ಸಂಸ್ಥೆಗಳ ದುರಸ್ತಿ ಮತ್ತು ನವೀಕರಣಕ್ಕಾಗಿ [illegible] 155 [illegible]

ರೂಪಾಯಿಗಳನ್ನು ಖರ್ಚು ಮಾಡಲಾಗುವುದು. 1994-95ನೇ ಸಾಲಿಗೆ ಬಜೆಟ್ಟಿನಲ್ಲಿ ಒದಗಿಸುವ ಹಣವನ್ನು 200 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಸರ್ಕಾರವು ರಾಜ್ಯ ವಕ್ಫ್ ಪರಿಷತ್ತನ್ನು ಸಹ ರಚಿಸಿದೆ. ಅದೇ ರೀತಿ ರಾಜ್ಯ ಹಜ್ ಸಮಿತಿಯನ್ನು ಸಹ ಪುನಃ ರಚಿಸಲಾಗಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ

24. ಮಹಿಳೆಯರಿಗೆ ಹೆಚ್ಚಿನ ಅಧಿಕಾರ ನೀಡುವ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದೆ. ಇತ್ತೀಚೆಗೆ ನಡೆದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ 80631 ಸ್ಥಾನಗಳ ಪೈಕಿ 35334 ಸ್ಥಾನಗಳಿಗೆ ಮಹಿಳೆಯರು ಆಯ್ಕೆ ಆಗಿದ್ದಾರೆ. ಸಂವಿಧಾನದ ಆದೇಶದಂತೆ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಕಲ್ಪಿಸ ಬೇಕಾದ ಮೀಸಲಾತಿ ಶೇಕಡಾ 33 ರಷ್ಟು ಆದರೆ ನಮ್ಮ ರಾಜ್ಯದ ಗ್ರಾಮದ ಪಂಚಾಯತಿಗಳಲ್ಲಿ ಮಹಿಳೆಯರ ವಾಸ್ತವಿಕ ಪ್ರಾತಿನಿಧ್ಯದ ಪ್ರಮಾಣ ಶೇಕಡಾ 43.6ರಷ್ಟನ್ನು ತಲುಪಿದೆ. ಇದು ಇಡೀ ದೇಶದಲ್ಲಿಯೇ ಒಂದು ಅಭೂತಪೂರ್ವ ಸಾಧನೆ.

25. ಗ್ರಾಮೀಣ ಪ್ರದೇಶಗಳಲ್ಲಿನ ಮಹಿಳೆಯರಲ್ಲಿ ಉಳಿತಾಯ ಮನೋಭಾವವನ್ನು ಬೆಳೆಸಲು ಪ್ರಸಕ್ತ ವರ್ಷದಲ್ಲಿ ನಮ್ಮ ನೆಚ್ಚಿನ ಪ್ರಧಾನ ಮಂತ್ರಿಗಳಾದ ಶ್ರೀ ಪಿ.ವಿ. ನರಸಿಂಹರಾವ್‌ಜೀ ಅವರು 'ಮಹಿಳಾ ಸಮೃದ್ಧಿ ಯೋಜನೆ'ಯನ್ನು ಘೋಷಿಸಿದ್ದಾರೆ. ಅಂಚೆ ಕಚೇರಿ ಉಳಿತಾಯ ಖಾತೆಯಲ್ಲಿ ಗ್ರಾಮೀಣ ಮಹಿಳೆಯರು ಒಂದು ವರ್ಷದಲ್ಲಿ ಉಳಿತಾಯ ಮಾಡುವ ಪ್ರತಿ 300ರೂ.ಗಳಿಗೆ ಭಾರತ ಸರ್ಕಾರವು 75ರೂ.ಗಳ ವಂತಿಗೆಯನ್ನು ನೀಡುತ್ತದೆ. ಈ ಕಾರ್ಯಕ್ರಮಕ್ಕೆ ನಾವು ಸಂಪೂರ್ಣವಾಗಿ ಬದ್ಧರಾಗಿದ್ದೇವೆ. ಈ ಕಾರ್ಯಕ್ರಮದ ಅಡಿಯಲ್ಲಿ ಮಾಡುವ ಪ್ರತಿ 300 ರೂ.ಗಳ ಠೇವಣಿಗೆ ರಾಜ್ಯಸರ್ಕಾರವು ಸಹಾ 25ರೂ.ಗಳ ವಂತಿಗೆಯನ್ನು ನೀಡುವುದೆಂದು ಪ್ರಕಟಿಸಲು ನಾನು ಆಶಿಸುತ್ತೇನೆ.

26. ಸಂಕಷ್ಟದಲ್ಲಿರುವ ವಿಧವೆಯರಿಗೆ ಯೋಜನೆಯ ಪ್ರಾರಂಭದಿಂದ ತಿಂಗಳಿಗೆ 50 ರೂ. ಮಾಸಾಶನ ನೀಡಲಾಗುತ್ತಿದೆ. ಈ ಮಾಸಾಶನವನ್ನು ತಿಂಗಳಿಗೆ 75 ರೂ.ಗಳಿಗೆ ಏರಿಸಲು ನಾನು ಉದ್ದೇಶಿಸಿದ್ದೇನೆ. ಇದರಿಂದಾಗಿ ವರ್ಷವೊಂದಕ್ಕೆ 15 ಕೋಟಿ ರೂ.ಗಳ ಹೆಚ್ಚಿನ ವೆಚ್ಚ ಉಂಟಾಗಲಿದೆ.

27. ರಾಜ್ಯದ ಸ್ವಂತ ಸಂಪನ್ಮೂಲಗಳನ್ನು ಬಳಸಿಕೊಂಡು 1994-9 5ರಲ್ಲಿ 1300 ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು. ಚಾಲ್ತಿಯಲ್ಲಿರುವ ಮಕ್ಕಳ ಸಮಗ್ರ ಅಭಿವೃದ್ಧಿ ಯೋಜನೆಗಳ ಮೇರೆಗೆ ಪೌಷ್ಠಿಕ ಆಹಾರವನ್ನು ಒದಗಿಸುವುದಕ್ಕೆ ತಗಲುವ ವೆಚ್ಚವನ್ನು 'ಕೇರ್' ಅಡಿಯಲ್ಲಿ ಬರದ ಯೋಜನೆಗಳಲ್ಲಿ ಪ್ರತಿದಿನಕ್ಕೆ ಪ್ರತಿ ಮಗುವಿಗೆ 75 ಪೈಸೆಯಿಂದ 1 ರೂ. ಗೆ ಮತ್ತು 'ಕೇರ್' ಅಡಿಯಲ್ಲಿ ಬರುವ ಯೋಜನೆಗಳಲ್ಲಿ ಪ್ರತಿದಿನಕ್ಕೆ ಪ್ರತಿ ಮಗುವಿಗೆ 20 ಪೈಸೆಗಳಿಂದ 30 ಪೈಸೆಗಳಿಗೆ ಹೆಚ್ಚಿಸಲಾಗಿದೆ. ಅದೇ ರೀತಿ, ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ನರ್ಸರಿ ಹಾಗೂ ಮಹಿಳಾ ಕಲ್ಯಾಣ ಕೇಂದ್ರಗಳಲ್ಲಿನ ಮಕ್ಕಳಿಗೆ ನೀಡುವ ಆಹಾರ ವೆಚ್ಚಗಳನ್ನು ಪ್ರತಿ ಮಗುವಿಗೆ ಪ್ರತಿ ದಿನಕ್ಕೆ 75 ಪೈಸೆಯಂತೆ 1-00 ರೂಪಾಯಿಗೆ ಹೆಚ್ಚಿಸಲಾಗುವುದು. ನಾವು ಇನ್ನೂ 18ಯೋಜನೆಗಳಿಗೆ ಭಾರತ ಸರ್ಕಾರದಿಂದ ಮಂಜೂರಾತಿ ಪಡೆಯುತ್ತಿದ್ದೇವೆ. ಅಂಗನವಾಡಿ ಕಾರ್ಯಕರ್ತರಿಗೆ ತರಬೇತಿ ಮತ್ತು ಪುನರ್ ತರಬೇತಿ ನೀಡುವ ಕಾರ್ಯಕ್ರಮಗಳ

ಹಾಗೂ ಪೂರಕ ಪಾತ್ರವಹಿಸುವಂತೆ ಸಮುದಾಯವನ್ನು ಬಳಸಿಕೊಳ್ಳುವ ಮೂಲಕ ಸೇವಾ ಗುಣಮಟ್ಟವನ್ನು ಸುಧಾರಿಸಲು ಪ್ರಯತ್ನ ಮಾಡಲಾಗುತ್ತದೆ.

28. ಮಹಿಳೆಯರ ಅಂತರ ಇಲಾಖಾ ಕಾರ್ಯಕ್ರಮದಲ್ಲಿ ಹಾಗೂ ಮಕ್ಕಳ ರಾಜ್ಯ ಕಾರ್ಯ ಯೋಜನೆಯಲ್ಲಿ ಒಳಗೊಂಡ ಧ್ಯೇಯೋದ್ದೇಶಗಳನ್ನು ಸಾಧಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗಾಗಿ ಸಚಿವಾಲಯದಲ್ಲಿ ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಲಾಗುವುದು. ಮಹಿಳೆಯರ ರಾಜ್ಯ ಆಯೋಗವನ್ನು ಸದ್ಯದಲ್ಲೇ ರಚಿಸಲಾಗುವುದು. ಇದು ಕರ್ನಾಟಕ ಮಹಿಳೆಯರ ಸ್ಥಾನಮಾನ ಮತ್ತು ಗೌರವವನ್ನು ಸುಧಾರಿಸಲು ಕಾನೂನುಗಳನ್ನು ಮತ್ತು ನೀತಿಗಳನ್ನು ಬೆಂಬಲಿಸಲು ಹಾಗೂ ಕಾರ್ಯಗತಗೊಳಿಸಲು ನಿರ್ದಿಷ್ಟ ಆಜ್ಞೆಗಳನ್ನು ನೀಡುವ ಅಧಿಕಾರ ಇರುವಂಥ ಒಂದು ಶಾಸನಬದ್ಧ ಸಂಸ್ಥೆಯಾಗಿರುತ್ತದೆ.

ಶಿಕ್ಷಣ

29. ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಸರ್ಕಾರವು ಮೂರು ಅಂಶಗಳಿಗೆ ಆದ್ಯತೆ ಕೊಡುತ್ತದೆ, ಅವುಗಳೆಂದರೆ ಸಾರ್ವತ್ರಿಕ ಪ್ರವೇಶಾವಕಾಶ, ಸಾರ್ವತ್ರಿಕ ದಾಖಲಾತಿ ಮತ್ತು ಸಾರ್ವತ್ರಿಕ ಸಾಧನೆ.

ಸಾರ್ವತ್ರಿಕ ಪ್ರವೇಶಾವಕಾಶ

30. 300 ಅಥವಾ ಅದಕ್ಕಿಂತಲೂ ಹೆಚ್ಚು ಜನಸಂಖ್ಯೆಯಿರುವ ಎಲ್ಲ ಸ್ಥಳಗಳಲ್ಲೂ ಪ್ರಾಥಮಿಕ ಶಾಲಾ ಸೌಲಭ್ಯ ಕಲ್ಪಿಸಲಾಗಿದೆ. 1993-94ರಲ್ಲಿ 700 ಸ್ಥಳಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲಾಯಿತು. 1994-95ರಲ್ಲಿ ಇನ್ನುಳಿದ 189 ಸ್ಥಳಗಳಲ್ಲಿ ಪ್ರಾಥಮಿಕ ಶಾಲಾ ಸೌಲಭ್ಯವನ್ನು ಕಲ್ಪಿಸಲಾಗುವುದು. ಇದರಿಂದ, ಶಾಲಾ ಸೌಲಭ್ಯವಿಲ್ಲದ ಎಲ್ಲಾ ಸ್ಥಳಗಳಿಗೂ ಈ ಸೌಲಭ್ಯ ಕಲ್ಪಿಸಿದಂತಾಗುತ್ತದೆ. 300 ಅಥವಾ ಅದಕ್ಕೂ ಹೆಚ್ಚು ಜನಸಂಖ್ಯೆ ಇರುವ ಪ್ರತಿಯೊಂದು ಸ್ಥಳದಲ್ಲೂ ಶಾಲೆ ಒದಗಿಸಬೇಕೆನ್ನುವುದೇ ಸರ್ಕಾರದ ಆಶಯ.

31. ಸಾರ್ವತ್ರಿಕ ದಾಖಲಾತಿ ಮತ್ತು ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡದಂತೆ ನೋಡಿಕೊಳ್ಳುವುದು :

ಸರ್ಕಾರವು ಹೆಚ್ಚಿನ ಪ್ರಯತ್ನಗಳನ್ನು ಮಾಡಿದ್ದರಿಂದಾಗಿ, 1993-94ರಲ್ಲಿ 1,2, 3 ಮತ್ತು 4ನೇ ತರಗತಿಗಳಲ್ಲಿ ದಾಖಲಾತಿ ಪ್ರಮಾಣ 50,69 ಲಕ್ಷದಿಂದ 52.86 ಲಕ್ಷಕ್ಕೆ ಏರಿದೆ. ಶಾಲೆಯನ್ನು ಮಧ್ಯದಲ್ಲೇ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಸೇರಿಸಲು ವ್ಯಾಪಕ ದಾಖಲಾತಿ ಆಂದೋಲನಗಳನ್ನು ನಿಯತವಾಗಿ ಕೈಗೊಳ್ಳಲಾಗುತ್ತಿದೆ. 1993ರ ಜುಲೈ ತಿಂಗಳಲ್ಲಿ ಹಮ್ಮಿಕೊಂಡಿದ್ದ ದಾಖಲಾತಿ ಆಂದೋಲನದಲ್ಲಿ 4.72 ಲಕ್ಷ ಮಕ್ಕಳನ್ನು ಮತ್ತೆ ಶಾಲೆಗೆ ಬರುವಂತೆ ಮಾಡಲಾಗಿದೆ.

32. ಸಾರ್ವತ್ರಿಕ ಸಾಧನೆ

ಮಕ್ಕಳು ಒಂದು ಕನಿಷ್ಠತಮ ಸಾಮರ್ಥ್ಯವನ್ನಾದರೂ ಸಾಧಿಸಬೇಕೆಂಬುದು ಸರ್ಕಾರದ ಉದ್ದೇಶ. ಆದ್ದರಿಂದ ಯೂನಿಸೆಫ್ ನೆರವಿನೊಂದಿಗೆ 'ಕಲಿಕೆಯ ಕನಿಷ್ಠ ಮಟ್ಟಗಳು' ಕುರಿತು ವ್ಯಾಪಕ ಯೋಜನೆಯೊಂದನ್ನು ಕೈಗೊಳ್ಳಲಾಗಿದೆ. 'ಕಲಿಕೆಯ ಕನಿಷ್ಠ ಮಟ್ಟಗಳು' ಪುಸ್ತಕಗ ಕನ್ನಡ ಆವೃತ್ತಿಯನ್ನು ಎಲ್ಲಾ ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ಒದಗಿಸಲಾಗಿದೆ. ಜೊತೆಗೆ ಭಾಷೆ, ಗಣಿತ, ಮತ್ತು ಪರಿಸರ ವಿಜ್ಞಾನಗಳಲ್ಲಿ ಉಪಾಧ್ಯಾಯರಿಗೆ ನೆರವಾಗುವ ಪಠ್ಯ ಸಾಮಗ್ರಿಗಳನ್ನು ಸಿದ್ಧಪಡಿಸಲಾಗಿದೆ. ಅವುಗಳನ್ನು ಎಲ್ಲಾ ಶಾಲೆಗಳಿಗೂ ವಿತರಣೆ ಮಾಡಲಾಗುತ್ತದೆ. 1994-95ರಲ್ಲಿ ರಾಜ್ಯದ 3000 ಶಾಲೆಗಳಲ್ಲಿ ಪ್ರಾಯೋಗಿಕ ಯೋಜನೆಯೊಂದನ್ನು ಜಾರಿಗೊಳಿಸಲಾಗುವುದು. ಶಿಕ್ಷಕರಿಗೆ

ತರಬೇತಿ, ಪುನರ್‌ತರಬೇತಿ ನೀಡುವುದು ಮಕ್ಕಳ ಸಾಧನೆಯನ್ನು ನಿರಂತರವಾಗಿ ಮೌಲ್ಯ ಮಾಪನ ಮಾಡುವುದು ಈ ಪ್ರಾಯೋಗಿಕ ಯೋಜನೆಯ ಉದ್ದೇಶವಾಗಿರುತ್ತದೆ.

33. ಪ್ರಾಥಮಿಕ ಶಾಲೆಗಳಲ್ಲಿ ಹಾಜರಾತಿಯನ್ನು ಹೆಚ್ಚಿಸುವ ಮತ್ತು ಶಾಲೆಯನ್ನು ಮಧ್ಯದಲ್ಲೇ ಬಿಡುವ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡುವ ಮುಖ್ಯ ಉದ್ದೇಶದಿಂದ ಅಕ್ಷಯ ಕಾರ್ಯಕ್ರಮವನ್ನು 1991ರ ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭಿಸಲಾಗಿತ್ತು. ಮಗುವು ಶಾಲೆಗೆ ಹಾಜರಾಗುವ ಪ್ರತಿದಿನಕ್ಕೂ 1 ರೂಪಾಯಿಯನ್ನು ಆ ಮಗುವಿಗೆ ತಂದೆತಾಯಿಗೆ ಕೊಡುವ ಉದ್ದೇಶವಿತ್ತು. ಭಾರೀ ಸಂಖ್ಯೆಯ ಖಾತೆಗಳನ್ನು ತೆಗೆಯಬೇಕಾಗಿದ್ದುದರಿಂದ ಅದಕ್ಕೆ ಬ್ಯಾಂಕುಗಳು ಒಲವು ತೋರಿಸದಿದ್ದುದೆ ಮುಂತಾದ ಸಮಸ್ಯೆಗಳಿಂದಾಗಿ 1991-92ರಲ್ಲಿ ಈ ಉದ್ದೇಶಕ್ಕಾಗಿ ಕೇವಲ 10.78 ಕೋಟಿ ರೂ. ಮಾತ್ರ ಖರ್ಚು ಮಾಡಲಾಯಿತು. 1992-93ರಲ್ಲೂ ಕೂಡ ಈ ಕಾರ್ಯಕ್ರಮದಿಂದ ಯಾವುದೇ ಪರಿಣಾಮ ಆಗಲಿಲ್ಲ. ಕಳೆದ ಆಯವ್ಯಯ ಭಾಷಣದಲ್ಲಿ, ನಾನು, ಈ ಕಾರ್ಯಕ್ರಮವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡುವ ಸಲುವಾಗಿ ಇದನ್ನು ಪುನರ್ ರೂಪಿಸುವುದಾಗಿ ಹೇಳಿದ್ದೆ. ಪುನರ್ ರೂಪಿಸಿದ ಕಾರ್ಯಕ್ರಮಕ್ಕೆ ಒಳ್ಳೆಯ ಪ್ರತಿಕ್ರಿಯೆ ಬಂದಿದೆ. ಶಾಲೆಯನ್ನು ಮಧ್ಯದಲ್ಲೇ ಬಿಡುವ ಮಕ್ಕಳ ಸಂಖ್ಯೆ ಶೇಕಡಾ 30ರಿಂದ ಶೇಕಡಾ 26.70ಕ್ಕೆ ಇಳಿದಿದೆ. ಇದಕ್ಕಾಗಿ ಈ ಹಣಕಾಸು ವರ್ಷದಲ್ಲಿ 44 ಕೋಟಿ ರೂ. ವೆಚ್ಚವಾಗುವ ನಿರೀಕ್ಷೆ ಇದೆ. ಅಕ್ಷಯ ಕಾರ್ಯಕ್ರಮದ ವ್ಯಾಪ್ತಿಗೆ 42 ಲಕ್ಷ ಶಾಲಾ ಮಕ್ಕಳನ್ನು ತರುವ ಸಲುವಾಗಿ ಇದನ್ನು ಮುಂಬರುವ ವರ್ಷದಲ್ಲಿ ಮುಂದುವರಿಸಲಾಗುವುದು. ಬಡತನ ನಿವಾರಣಾ ಕಾರ್ಯಕ್ರಮ ಕುರಿತ ರಾಜ್ಯ ಕಾರ್ಯಯೋಜನೆಯಲ್ಲಿ ಪ್ರಕಟಿಸಿದ್ದಂತೆ ಇದರಡಿಯಲ್ಲಿ 13.57 ಲಕ್ಷ ಶಾಲಾ ಮಕ್ಕಳಿಗೆ ಉಚಿತ ಹಾಲು ಒದಗಿಸಲು ಕ್ಷೀರ ಯೋಜನೆಯನ್ನು ಮುಂಬರುವ ವರ್ಷದಲ್ಲೂ ಸಹ ಮುಂದುವರಿಸಲಾಗುವುದು. ಈ ಎರಡು ಯೋಜನೆಗಳಿಗೆ ಆಯವ್ಯಯದಲ್ಲಿ 127.25 ಕೋಟಿ ರೂಪಾಯಿ ಒದಗಿಸಲಾಗಿದೆ.

34. ಐದು ವರ್ಷಗಳ ಅವಧಿಯಲ್ಲಿ 174 ಕೋಟಿ ರೂ. ಅಂದಾಜು ವೆಚ್ಚದಲ್ಲಿ ರಾಯಚೂರು, ಬೆಳಗಾಂ, ಕೋಲಾರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿರುವ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಕ್ಕೆ ನೆರವು ನೀಡಲು ವಿಶ್ವಬ್ಯಾಂಕ್ ಮುಂದೆ ಬಂದಿದೆ. ಶಿಕ್ಷಣ ಕ್ಷೇತ್ರದಲ್ಲಿ ಕೊಡಗು, ಬೀದರ್, ಉತ್ತರ ಕನ್ನಡ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ಮಾದರಿ ಜಿಲ್ಲೆಗಳನ್ನಾಗಿ ರೂಪಿಸುವ ಸಲುವಾಗಿ ರಾಜ್ಯ ಸರ್ಕಾರ ತನ್ನದೇ ಆದ ಸಂಪನ್ಮೂಲಗಳಿಂದ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನೊದಗಿಸಲು ಈ ನಾಲ್ಕು ಜಿಲ್ಲೆಗಳಲ್ಲಿ ಪ್ರಾಯೋಗಿಕ ಯೋಜನೆಗಳನ್ನು ಕೈಗೊಳ್ಳುತ್ತದೆ.

35. ಮಾದರಿ ಶಾಲೆಗಳಾಗಿ ಸ್ಥಾಪಿಸಲಾಗಿರುವ ರಾಜ್ಯದ ಎಲ್ಲಾ 224 ಪ್ರಾಥಮಿಕ ಶಾಲೆಗಳಿಗೆ ಒಂದೊಂದು ಪ್ರಾಥಮಿಕ ಪೂರ್ವಶಾಲೆಯನ್ನು ಸೇರಿಸಲಾಗುವುದು. ಇದರಿಂದಾಗಿ ಸಮಾಜದ ಕಡು ಬಡವರ್ಗಗಳಿಗೆ ಪ್ರಾಥಮಿಕ ಪೂರ್ವ ಶಿಕ್ಷಣದ ಸೌಲಭ್ಯವನ್ನು ಒದಗಿಸುವುದು ಸಾಧ್ಯವಾಗುತ್ತದೆ. ಪ್ರಾಥಮಿಕ ಶಾಲೆಗಳಿಗೆ 18954 ಉಪಾಧ್ಯಾಯರನ್ನು ನೇಮಕ ಮಾಡುವ ಹಾಗೂ ಪ್ರೌಢಶಾಲೆಗಳಿಗೆ 5500 ಉಪಾಧ್ಯಾಯರನ್ನು ನೇಮಕ ಮಾಡುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಪ್ರಸ್ತುತ ಹಣಕಾಸು ವರ್ಷದಲ್ಲಿ 10,000 ಶಾಲಾ ಕೊಠಡಿಗಳ ನಿರ್ಮಾಣ ಕಾರ್ಯವನ್ನು ಈಗಾಗಲೇ ಕೈಗೊಳ್ಳಲಾಗಿದೆ. 1994-95 ರಲ್ಲಿ ಇನ್ನೂ 15189 ಶಾಲಾ ಕೊಠಡಿಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

36. ಪ್ರಸ್ತುತ ಕೇಂದ್ರ ಪುರಸ್ಕೃತ ಯೋಜನೆಯಾದ ಕಪ್ಪುಹಲಗೆ ಯೋಜನೆಯ ಅಡಿಯಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳಿಗೆ ಮಾತ್ರ ಬೋಧನಾ ಮತ್ತು ಕಲಿಕೆ ಸಾಮಗ್ರಿಗಳನ್ನು ಒದಗಿಸಲಾಗಿದೆ. ಈಗ ಮೂಲಭೂತ ಬೋಧನಾ ಮತ್ತು ಕಲಿಕೆ ಸಾಮಗ್ರಿಗಳನ್ನು ಒದಗಿಸುವ ಮೂಲಕ ಹಂತ ಹಂತವಾಗಿ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳನ್ನು ಈ ಯೋಜನೆಯ ವ್ಯಾಪ್ತಿಗೆ ತರಲು ಕಾರ್ಯಕ್ರಮವೊಂದನ್ನು ರೂಪಿಸಲಾಗಿದೆ. 1994-95ರಲ್ಲಿ ಸರ್ಕಾರದ ಸಂಪನ್ಮೂಲಗಳಿಂದ ಇಂತಹ 5000 ಶಾಲೆಗಳನ್ನು ಈ ಯೋಜನೆಯ ವ್ಯಾಪ್ತಿಗೆ ತರಲಾಗುತ್ತದೆ. 'ಯೋಗ'ವನ್ನು ಪಠ್ಯ ವಿಷಯದ ಒಂದು ಭಾಗವನ್ನಾಗಿ ಮಾಡಲು 1000 ದೈಹಿಕ ಶಿಕ್ಷಕರಿಗೆ ಯೋಗ ತರಬೇತಿ ನೀಡಲಾಗುವುದು.

37. ಅಲ್ಪಸಂಖ್ಯಾತ ಮಕ್ಕಳ ಜನಸಂಖ್ಯೆಯು ಹೆಚ್ಚಾಗಿರುವ ಮತ್ತು ಅವರಿಗಾಗಿ ಶಾಲೆಗಳಿಲ್ಲದಿರುವ ಪ್ರದೇಶಗಳಲ್ಲಿ ಈ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುವ ದೃಷ್ಟಿಯಿಂದ ಸರ್ಕಾರವು 'ಹೊಸ ಹೆಜ್ಜೆ' ಎಂಬ ಒಂದು ಹೊಸ ಕಾರ್ಯಕ್ರಮವನ್ನು ಪ್ರಾರಂಭಿಸುತ್ತದೆ. ಇದಕ್ಕಾಗಿ ಒಂದು ಕೋಟಿ ರೂಪಾಯಿಗಳ ಮೊತ್ತವನ್ನು ಒದಗಿಸಲಾಗುವುದು.

38. ಮಕ್ಕಳ ಪ್ರಾಥಮಿಕ ಶಿಕ್ಷಣ ಅವರ ಮಾತೃಭಾಷೆಯ ಮೂಲಕವೇ ನಡೆಯಬೇಕೆಂಬುದು ಎಲ್ಲಾ ಶಿಕ್ಷಣ ತಜ್ಞರ ಅಭಿಪ್ರಾಯ. ಈ ಅಭಿಪ್ರಾಯವನ್ನು ರಾಜ್ಯ ಸರ್ಕಾರವು ಸಂಪೂರ್ಣವಾಗಿ ಒಪ್ಪುತ್ತದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಭಾಷಾ ನೀತಿಯನ್ನು ಘೋಷಿಸಿ 1989ರಲ್ಲಿ ಸರ್ಕಾರಿ ಆದೇಶವೊಂದನ್ನು ಹೊರಡಿಸಲಾಗಿತ್ತು. ಈ ಸರ್ಕಾರಿ ಆದೇಶವನ್ನು ಸರ್ವೋಚ್ಚ ನ್ಯಾಯಾಲಯವು ಶ್ಲಾಘಿಸಿರುತ್ತದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಜಾರಿಗೆ ತರಲು ರಾಜ್ಯ ಸರ್ಕಾರವು ಸಂಪೂರ್ಣವಾಗಿ ಬದ್ಧವಾಗಿದೆ.

39. ಡಾ|| ನವನೀತರಾವ್ ಅಧ್ಯಕ್ಷರಾಗಿರುವ ಕರ್ನಾಟಕ ವಿಶ್ವವಿದ್ಯಾನಿಲಯಗಳ ಸಮೀಕ್ಷಾ ಆಯೋಗವು ಇತ್ತೀಚೆಗೆ ಅದರ ವರದಿಯನ್ನು ಸಲ್ಲಿಸಿದೆ. ಅದರ ಶಿಫಾರಸುಗಳನ್ನು ಆಧರಿಸಿ ಉನ್ನತ ಶಿಕ್ಷಣ ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡಲು ಮುಂಬರುವ ವರ್ಷದಲ್ಲಿ ಈ ಕೆಳಕಂಡ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ.

ಎ) ಈಗ ಇರುವ ಉನ್ನತ ಶಿಕ್ಷಣ ಸಂಸ್ಥೆಗಳ ಮೇಲಿನ ಅಗಾಧ ಒತ್ತಡವನ್ನು ಕಡಿಮೆ ಮಾಡಲು ಡಾ| ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾಲಯ.

ಬಿ) ರಾಜ್ಯದ ಎಲ್ಲಾ ವೈದ್ಯಕೀಯ, ದಂತ, ಫಾರ್ಮಸಿ, ಆಯುರ್ವೇದ, ಹೋಮಿಯೋಪತಿ, ಯುನಾನಿ ಮತ್ತು ನರ್ಸಿಂಗ್ ಕಾಲೇಜುಗಳನ್ನು ಒಂದು ಸಂಯೋಜನಾ ವ್ಯಾಪ್ತಿಗೆ ತರಲು ಮತ್ತು ಆರೋಗ್ಯ ಶಿಕ್ಷಣದಲ್ಲಿ ಉನ್ನತ ಗುಣಮಟ್ಟಗಳನ್ನು ಕಾಪಾಡಿಕೊಂಡು ಬರಲು ಶ್ರೀ ರಾಜೀವ್ ಗಾಂಧಿ ಆರೋಗ್ಯ ಮತ್ತು ವೈದ್ಯಕೀಯ ವಿಜ್ಞಾನ ವಿಶ್ವವಿದ್ಯಾಲಯ.

ಸಿ) ಶ್ರೀ ಎಂ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ - ಇದು ರಾಜ್ಯದ ತಾಂತ್ರಿಕ ಶಿಕ್ಷಣದ ಅಗತ್ಯಗಳನ್ನು ಪೂರೈಸುತ್ತದೆ ಮತ್ತು ಇದಕ್ಕೆ ಎಂಜಿನಿಯರಿಂಗ್ ಕಾಲೇಜುಗಳನ್ನು ಸಂಯೋಜಿಸಲಾಗುತ್ತದೆ.

40. 7 ಜಿಲ್ಲೆಗಳಲ್ಲಿ ಚಾಲ್ತಿಯಲ್ಲಿದ್ದ ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ಪ್ರಸಕ್ತ ವರ್ಷದಲ್ಲಿ 18 ಜಿಲ್ಲೆಗಳಲ್ಲಿ ವಿಸ್ತರಿಸಲಾಯಿತು. ಇವರಿಂದಾಗಿ, ಭಾರತದ ಸಾಕ್ಷರತಾ ಆಂದೋಲನದಲ್ಲಿ ಮುಂಚೂಣಿಯಲ್ಲಿರುವ ರಾಜ್ಯಗಳ ಪೈಕಿ ನಮ್ಮ ರಾಜ್ಯವು

ಉದ್ದೇಶಿಸಲಾಗಿದೆ. 1994-95ರ ಅಂತ್ಯದ ವೇಳೆಗೆ 9 ರಿಂದ 35 ವರ್ಷಗಳ ವಯೋಮಿತಿಯೊಳಗಿನ ಸರಿಸುಮಾರು 80 ಲಕ್ಷ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಲಾಗುವುದು.

ಆರೋಗ್ಯ

41. ರಾಜ್ಯದಲ್ಲಿ ಶಿಶು ಮರಣ ಪ್ರಮಾಣವನ್ನು ಕಡಿಮೆ ಮಾಡಲು "ಸುರಕ್ಷಾ" ಎಂಬ ಹೊಸ ಕಾರ್ಯಕ್ರಮವೊಂದನ್ನು ಪ್ರಾರಂಭಿಸಲು ನಾನು ಉದ್ದೇಶಿಸಿದ್ದೇನೆ. 1994-95ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟದಲ್ಲಿ ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಸಂಬಂಧಪಟ್ಟ ವಿಭಾಗವನ್ನು ಬಲಪಡಿಸುವ ಮೂಲಕ ತಾಯಿ ಮತ್ತು ಮಗುವಿನ ಶುಶ್ರೂಷೆಗೆ ವಿಶೇಷವಾದ ಒತ್ತು ನೀಡಲಾಗುವುದು. ರಾಜ್ಯದ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲೂ ಒಂದು ಎ.ಎನ್.ಎಂ. ಉಪಕೇಂದ್ರವನ್ನು ಪ್ರಾರಂಭಿಸಲಾಗುವುದು. ಎ.ಎನ್.ಎಂ. ಉಪಕೇಂದ್ರಗಳ ಮೂಲಕ ಒ.ಆರ್.ಎಸ್. ಪ್ಯಾಕೆಟ್‌ಗಳನ್ನು ಮತ್ತು ಆಂಟಿಬಯೋಟಿಕ್‌ಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸರಬರಾಜು ಮಾಡಲಾಗುವುದು. ಅಲ್ಲದೆ 1994-95ರ ಅವಧಿಯಲ್ಲಿ ಸೋಂಕು ನಿರೋಧಕ ಔಷಧ ನೀಡುವ ಗುರಿಯನ್ನು ಶೇಕಡಾ 100ರಷ್ಟು ಸಾಧಿಸಲು ಉದ್ದೇಶಿಸಲಾಗಿದೆ. ಮುಂದಿನ ವರ್ಷದಲ್ಲಿ ಈ ಕಾರ್ಯಕ್ರಮಕ್ಕೆ 4ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಲು ಉದ್ದೇಶಿಸಲಾಗಿದೆ. ಈ ಕ್ರಮಗಳನ್ನು ಕಟ್ಟುನಿಟ್ಟಾಗಿ ಮುಂದುವರಿಸಿಕೊಂಡು ಹೋಗುವ ಮೂಲಕ, 1994-95ರ ಕೊನೆಯ ವೇಳೆಗೆ ಶಿಶು ಮರಣ ಪ್ರಮಾಣ ಪ್ರತಿ 1000ಕ್ಕೆ 65ರ ಮಟ್ಟಕ್ಕೆ ಹಾಗೂ ಈ ಶತಮಾನದ ಅಂತ್ಯದ ವೇಳೆಗೆ ಪ್ರತಿ ಸಾವಿರಕ್ಕೆ 50ರಷ್ಟಕ್ಕೆ ಇಳಿಯುವುದೆಂಬ ಭರವಸೆ ನನಗಿದೆ.

42. 1992-93ರಲ್ಲಿ 50 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು, 10 ಸಮುದಾಯ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗಿತ್ತು. 3 ಆಸ್ಪತ್ರೆಗಳನ್ನು 100 ಹಾಸಿಗೆಗಳ ಆಸ್ಪತ್ರೆಗಳಾಗಿ ಮೇಲ್ದರ್ಜೆಗೆ ಏರಿಸಲಾಗಿತ್ತು. ಪ್ರಸಕ್ತ ವರ್ಷ 60 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು, 15 ಸಮುದಾಯ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. 5 ಆಸ್ಪತ್ರೆಗಳನ್ನು 100 ಹಾಸಿಗೆಗಳನ್ನು ಆಸ್ಪತ್ರೆಗಳಾಗಿ ಮೇಲ್ದರ್ಜೆಗೇರಿಸಲಾಗಿದೆ. ಬರುವ ವರ್ಷದಲ್ಲಿ ನೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು, 10 ಸಮುದಾಯ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು. ಜೊತೆಗೆ 35 ಸಮುದಾಯ ಕೇಂದ್ರಗಳನ್ನು ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು 100 ಹಾಸಿಗೆಗಳ ಆಸ್ಪತ್ರೆಗಳಾಗಿ ಮೇಲ್ದರ್ಜೆಗೇರಿಸಲಾಗುವುದು.

43. ಆರೋಗ್ಯದ ಮೂಲಭೂತ ಸೌಕರ್ಯಗಳನ್ನು ಬಲಪಡಿಸುವುದಕ್ಕಾಗಿ ಹಮ್ಮಿಕೊಂಡಿರುವ ಯೋಜನೆಗಳನ್ನು ಜಾರಿಗೊಳಿಸಲು 3 ವಿದೇಶಿ ಏಜನ್ಸಿಗಳೊಂದಿಗೆ ಸರ್ಕಾರ ಮಾತುಕತೆ ನಡೆಸುತ್ತಿದೆ. ಪರಿಗಣನೆಯಲ್ಲಿರುವ ಯೋಜನೆಗಳೆಂದರೆ ಆರೋಗ್ಯ ಸಂಬಂಧಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಭಾರತ ಜನಸಂಖ್ಯಾ ಯೋಜನೆ -IX ಇದನ್ನು ರಾಜ್ಯದ 10 ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುವುದು. 108 ಕೋಟಿ ರೂ. ಅಂದಾಜು ವೆಚ್ಚದ ಈ ಯೋಜನೆಗೆ ವಿಶ್ವಬ್ಯಾಂಕ್ ನೆರವು ಪಡೆಯಲಾಗುವುದು. ಜರ್ಮನ್ ಅಭಿವೃದ್ಧಿ ನೆರವು ಏಜೆನ್ಸಿಯ (ಕೆಎಫ್‌ಡಬ್ಲ್ಯೂ) ಸಹಾಯದಿಂದ 300 ಕೋಟಿ ರೂ. ಯೋಜನೆ. ಇದರಡಿಯಲ್ಲಿ ಸೆಕೆಂಡರಿ ತಾಲ್ಲೂಕುಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಲಾಗುವುದು ಹಾಗೂ ಅವುಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು. [illegible] ಮತ್ತು ಚಿಕಿತ್ಸಾ

ಕೇಂದ್ರಗಳಂಥ ಹೊಸ ಸೌಕರ್ಯಗಳನ್ನು ಸ್ಥಾಪಿಸುವುದಕ್ಕಾಗಿ 160 ಕೋಟಿ ರೂ. ಅಂದಾಜು ವೆಚ್ಚದ ಯೋಜನೆ. ಇದಕ್ಕೆ ಡಚ್ ನೆರವು ಪಡೆಯಲಾಗುವುದು.

44. ಕಣ್ಣಿನ ರಕ್ಷಣೆಯ ಡಾನಿಡಾ ಯೋಜನೆಯನ್ನು ಇಡೀ ರಾಜ್ಯಕ್ಕೆ ವಿಸ್ತರಿಸಲಾಗುವುದು. ಸಂಪೂರ್ಣವಾಗಿ ಸುಸಜ್ಜಿತವಾದ ಸಂಚಾರಿ ಘಟಕವನ್ನು ಪ್ರತಿಯೊಂದು ಜಿಲ್ಲೆಗೆ ಒದಗಿಸಲಾಗುವುದು. ಮೇಲ್ದರ್ಜೆಗೇರಿಸುವ ಸಲುವಾಗಿ 46 ರಕ್ತ ಬ್ಯಾಂಕುಗಳನ್ನು ಈಗಾಗಲೇ ಪಟ್ಟಿ ಮಾಡಲಾಗಿದೆ. ಶೀಘ್ರ ಪರೀಕ್ಷಾ ಕಿಟ್‌ಗಳು ಮತ್ತು ಎಲಿಸಾ ರೀಡರುಗಳನ್ನು ಜಿಲ್ಲಾ ಮಟ್ಟದ ಎಲ್ಲಾ ಆಸ್ಪತ್ರೆಗಳಿಗೆ ಒದಗಿಸಲಾಗುವುದು.

ಕೈಗಾರಿಕೆಗಳು

45. ಹಿಂದಿನ ವರ್ಷ ಭರವಸೆ ನೀಡಿದ್ದಂತೆ, ನಮ್ಮ ರಾಜ್ಯಕ್ಕೆ ಚಲನಶೀಲ ಕೈಗಾರಿಕಾ ನೀತಿಯನ್ನು ಪ್ರಕಟಿಸಿದ್ದೇವೆ. ಭಾವಿ ಉದ್ಯಮಿಗಳಿಗೆ ಈ ಯೋಜನೆಯ ಹಲವಾರು ಉತ್ತೇಜನಗಳನ್ನು ನೀಡುತ್ತದೆ. ಬೆಂಗಳೂರು ನಗರ ಜಿಲ್ಲೆಯನ್ನು ಹೊರತುಪಡಿಸಿ, ಇಡೀ ರಾಜ್ಯಕ್ಕೆ ಯೋಜನೆ ಅನ್ವಯವಾಗುತ್ತದೆಂದು ಘೋಷಿಸಲಾಗಿದೆ. ಇದರಿಂದಾಗಿ, ಬೆಂಗಳೂರು ನಗರದಲ್ಲೇ ಕೈಗಾರಿಕೆಗಳನ್ನು ಸ್ಥಾಪಿಸಬೇಕೆನ್ನುವ ಒತ್ತಡ ಕಡಿಮೆಯಾಗಿ ಹಿಂದುಳಿದ ಪ್ರದೇಶಗಳಲ್ಲಿ ಸಹ ಕೈಗಾರಿಕಾ ಅಭಿವೃದ್ಧಿಗೆ ಅವಕಾಶ ದೊರೆಯುತ್ತದೆ. ಆದರೂ ಎಲೆಕ್ಟ್ರಾನಿಕ್ಸ್ ಮತ್ತು ದೂರ ಸಂಪರ್ಕಗಳಂಥ ಮಾಲಿನ್ಯ ಉಂಟುಮಾಡದ ಕೈಗಾರಿಕೆಗಳನ್ನು ಬೆಂಗಳೂರು ನಗರದಲ್ಲಿ ಸ್ಥಾಪಿಸಲು ಪ್ರೋತ್ಸಾಹ ನೀಡಲಾಗುವುದು.

46. ರಾಜ್ಯ ಬಂಡವಾಳ ಹೂಡಿಕೆ ಸಹಾಯಧನವಾಗಿ 1992-93ರಲ್ಲಿ 15 ಕೋಟಿ ರೂಪಾಯಿ ಮತ್ತು 1993-94ರಲ್ಲಿ 30 ಕೋಟಿ ರೂಪಾಯಿ ಒದಗಿಸಲಾಗಿತ್ತು. ಈ ಮೊತ್ತವನ್ನು 1994-95ನೇ ಸಾಲಿನಲ್ಲಿ 45 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗುವುದು. ನೂರಕ್ಕೆ ನೂರರಷ್ಟು ರಫ್ತು ಆಧಾರಿತ ಘಟಕಗಳಿಗೆ ಅಡೆತಡೆಯಿಲ್ಲದೆ ವಿದ್ಯುತ್ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು. ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಮತ್ತು ಸಣ್ಣಪುಟ್ಟ ಕೈಗಾರಿಕೆಗಳಲ್ಲಿ ಗುಣಮಟ್ಟದ ಅರಿವು ಹೆಚ್ಚಿಸುವ ದಿಶೆಯಲ್ಲಿ ಐಎಸ್‌ಓ 9000 ಮಾಲಿಕೆಯ ಗುಣಮಟ್ಟ ಪ್ರಮಾಣಪತ್ರ ಪಡೆಯಲು ಅಂಥ ಘಟಕಗಳಿಗೆ ನೆರವು ನೀಡಲು ಉದ್ದೇಶಿಸಲಾಗಿದೆ.

47. ಕೈಗಾರಿಕಾ ಅಭಿವೃದ್ಧಿ ಕ್ಷೇತ್ರದಲ್ಲಿ 1995ರ ವೇಳೆಗೆ ಕರ್ನಾಟಕವು ಭಾರತದಲ್ಲಿ ನಾಲ್ಕನೇ ಸ್ಥಾನಕ್ಕೆ ಬರುವುದೆಂಬ ಭರವಸೆಯನ್ನು ನಾವು ನೀಡಿದ್ದೆವು. ಹಣಕಾಸು ಸಂಸ್ಥೆಗಳು ಮಂಜೂರು ಮಾಡಿದ ಕೈಗಾರಿಕಾ ಬಂಡವಾಳ ಹೂಡಿಕೆ ನಿಬಂಧನೆಗಳ ಪ್ರಕಾರ ನಮ್ಮ ರಾಜ್ಯ ಈಗಾಗಲೇ ಮೂರನೇ ಸ್ಥಾನವನ್ನು ತಲುಪಿದೆ. ರಾಜ್ಯ ಸರ್ಕಾರವು 1991-92 ಹಾಗೂ 1992-93ರಲ್ಲಿ 6400 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯ ಯೋಜನೆಗಳಿಗೆ ಅನುಮೋದನೆ ನೀಡಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಈಗಾಗಲೇ 10,300 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಬಂಡವಾಳ ಹೂಡಿಕೆಯ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಅಲ್ಲದೆ 9500 ಕೋಟಿ ರೂ. ಅಂದಾಜು ವೆಚ್ಚದ ಯೋಜನೆಗಳಿಗೆ ಸದ್ಯದಲ್ಲೇ ಮಂಜೂರಾತಿ ದೊರೆಯುವ ನಿರೀಕ್ಷೆ ಇದೆ. ಮುಂದಿನ 3-4 ವರ್ಷಗಳಲ್ಲಿ ಯೋಜನೆಗಳಲ್ಲಿ ಸುಮಾರು 26,200 ಕೋಟಿ ರೂ.ಗಳ ಬಂಡವಾಳ ಹೂಡಿಕೆ ಆಗುವುದೆಂದು ನಾನು ನಿರೀಕ್ಷಿಸಿದ್ದೇನೆ.

48. ಈ ವರ್ಷದ ಇತರ ಪ್ರಮುಖ ಸಾಧನೆಗಳೆಂದರೆ:

ಎ) 3200 ಕೋಟಿ ರೂ.ಗಳ ಬಂಡವಾಳ ಹೂಡಿಕೆಯಲ್ಲಿ ಒಂದು ದಶಲಕ್ಷ ಟನ್ ಉತ್ಪಾದನಾ ಸಾಮರ್ಥ್ಯದ ವಿಜಯನಗರ ಜಿಂದಾಲ್ ಉಕ್ಕು ಸ್ಥಾವರದ

ಸ್ಥಾಪನೆಗೆ ಜಿಂದಾಲ್ ಐರನ್ ಅಂಡ್ ಸ್ಟೀಲ್ ಕಂಪನಿ ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ಇವುಗಳ ನಡುವಣ ಒಪ್ಪಂದ.

ಬಿ) ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ 540ಕೋಟಿ ರೂ.ಗಳ ಬಂಡವಾಳ ಹೂಡಿಕೆಯ ಮತ್ತು ವಾರ್ಷಿಕ 2000 ಕೋಟಿ ರೂ.ಗಳ ವಹಿವಾಟು ಸಾಮರ್ಥ್ಯದ ಹೈ ಟೆಕ್ ಇನ್‌ಫರ್ಮೇಷನ್ ಟೆಕ್ನಾಲಜಿ ಪಾರ್ಕ್‌ನ ಸ್ಥಾಪನೆಗೆ ಟಾಟಾ ಗ್ರೂಪ್, ಸಿಂಗಪುರ ಇಂಡಸ್ಟ್ರಿಯಲ್ ಕನ್‌ಸೋರ್ಟಿಯಮ್ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ-ಇವುಗಳ ಸಹಭಾಗಿತ್ವದಲ್ಲಿ ಜಾಯಿಂಟ್‌ಸ್ಟಾಕ್ ಕಂಪನಿಯ ಸ್ಥಾಪನೆ.

ಸಿ) ಐರೋಪ್ಯ ಆರ್ಥಿಕ ಸಮುದಾಯ, ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ "ಸಾಫ್ಟ್‌ವೇರ್ ಸರ್ವೀಸ್ ಸಪೋರ್ಟ್ ಮತ್ತು ಎಜುಕೇಷನ್ ಸೆಂಟರ್ ಲಿಮಿಟೆಡ್" ಸ್ಥಾಪನೆ.

49. ಅನುಷ್ಠಾನದ ಹಂತದಲ್ಲಿರುವ ದೊಡ್ಡ ಯೋಜನೆಗಳೆಂದರೆ :

(ಎ) ವಾರ್ಷಿಕ 6 ದಶಲಕ್ಷ ಟನ್ನುಗಳ ಹೆಚ್ಚಿನ ಸಾಮರ್ಥ್ಯವನ್ನು ಸೃಜಿಸಲು 3250 ಕೋಟಿ ರೂ.ಗಳ ಹೆಚ್ಚಿನ ಬಂಡವಾಳ ಹೂಡಿಕೆಯ ಮಂಗಳೂರು ರಿಫೈನರೀಸ್ ಮತ್ತು ಪೆಟ್ರೋ ಕೆಮಿಕಲ್ಸ್ ಲಿಮಿಟೆಡ್‌ನ ಎರಡನೇ ಹಂತದ ವಿಸ್ತರಣಾ ಯೋಜನೆ. ಇದಕ್ಕೆ ಭಾರತ ಸರ್ಕಾರವು ಈಗಾಗಲೇ ಲೆಟರ್ ಆಫ್ ಇಂಟೆಂಡ್ ನೀಡಿದೆ. ವಾರ್ಷಿಕ 3 ದಶಲಕ್ಷ ಟನ್ನುಗಳ ಸಾಮರ್ಥ್ಯದ ಈ ಯೋಜನೆಯ ಪ್ರಥಮ ಹಂತದ ಕೆಲಸ ಪ್ರಗತಿಯಲ್ಲಿದೆ.

(ಬಿ) ಗುಲ್ಬರ್ಗದಲ್ಲಿ 2000ಕೋಟಿ ರೂ.ಗಳ ಅಂದಾಜು ಬಂಡವಾಳ ಹೂಡಿಕೆಯೊಂದಿಗೆ 6.20 ದಶಲಕ್ಷ ಟನ್ನುಗಳ ಸ್ಥಾಪಿತ ಸಾಮರ್ಥ್ಯದ ನಾಲ್ಕು ಸಿಮೆಂಟ್ ಸ್ಥಾವರಗಳು.

ವಿಶ್ವ

50. ವಿಶ್ವ ಕಾರ್ಯಕ್ರಮವನ್ನು ಆಮೂಲಾಗ್ರವಾಗಿ ಪರಿಶೀಲಿಸಿದಾಗ ಕೆಲವು ಅನುಕೂಲಗಳು ಮತ್ತು ಲೋಪದೋಷಗಳು ಕಂಡುಬಂದಿವೆ. ಇಲ್ಲಿ ನಿರಂತರ ಉತ್ಪಾದಕ ಉದ್ಯೋಗವನ್ನು ಸ್ವಲ್ಪ ಮಟ್ಟಿಗೆ ಸೃಜಿಸಲಾಗಿದೆ. ಅಗರಬತ್ತಿ ಉಜ್ಜುವುದು, ಬಾರ್ದಾನ ನೇಯ್ಗೆ , ಗಂಧದ ಮರದ ಕೆತ್ತನೆ, ಕೃತಕ ವಜ್ರ ಕತ್ತರಿಸುವುದು ಮತ್ತು ನಯಗೊಳಿಸುವುದು ಮುಂತಾದಂಥ ಚಟುವಟಿಕೆಗಳು ಜನಪ್ರಿಯವಾಗಿವೆ. ಅವಾಸ್ತವಿಕ ಗುರಿ, ಸಮರ್ಪಕವಲ್ಲದ ಯೋಜನೆ ಮತ್ತು ಫಲಾನುಭವಿಗಳ ಆಯ್ಕೆ, ಹಿಂದುಳಿದ ಮತ್ತು ಮುಂದುವರಿದವರ ಸಂಪರ್ಕದ ಅಭಾವ ಮತ್ತು ಪರಿಣಾಮಕಾರಿಯಲ್ಲದ ಮಾರುಕಟ್ಟೆ ವ್ಯವಸ್ಥೆ ಮತ್ತು ಸಮನ್ವಯಗಳು ಇಲ್ಲಿನ ಮುಖ್ಯ ಲೋಪದೋಷಗಳಾಗಿವೆ. ವಾಣಿಜ್ಯ ಬ್ಯಾಂಕ್‌ಗಳಿಂದ ದೊರೆತ ಪ್ರತಿಕ್ರಿಯೆ ನಿರೀಕ್ಷಿತ ಮಟ್ಟದಲ್ಲಿಲ್ಲ.

51. ಈ ಅನುಭವದ ಹಿನ್ನೆಲೆಯಲ್ಲಿ ಲೋಪದೋಷಗಳನ್ನು ಸರಿಪಡಿಸುವ ಮತ್ತು ಕುಶಲಕರ್ಮಿಗಳಿಗೆ ನೆರವು ನೀಡುವ ಮತ್ತು ಸಂಘಟಿತ ಚಟುವಟಿಕೆಗಳನ್ನು ಕೈಗೊಳ್ಳುವ ಉದ್ದೇಶ ಹೊಂದಿ ಈ ಕಾರ್ಯಕ್ರಮವನ್ನು ಪುನರ್ ರೂಪಿಸಲು ನಾನು ಉದ್ದೇಶಿಸಿದ್ದೇನೆ. ವಿವಿಧ ಜಿಲ್ಲೆಗಳಲ್ಲಿ ದೊರಕುವ ಕೌಶಲ್ಯ, ಕಚ್ಚಾಸಾಮಗ್ರಿಗಳು ಮತ್ತು ಮಾರುಕಟ್ಟೆ ಸೌಲಭ್ಯಗಳ ಆಧಾರದ ಮೇಲೆ ವಿಶ್ವ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುವುದು ಕೈಮಗ್ಗ, ಕರಕುಶಲ, ಉದ್ಯಮ, ತೆಂಗಿನನಾರು, ಚರ್ಮ, ಗ್ರಾಮೋದ್ಯೋಗ ಮುಂತಾದ

ಜಾರಿಗೊಳಿಸಲಾಗುವುದು.ಪ್ರತಿಯೊಂದು ವಲಯಕ್ಕೆ ಸಿದ್ಧಪಡಿಸಲಾಗುವ ಪ್ರತ್ಯೇಕ ಅಭಿವೃದ್ಧಿ ಕಾರ್ಯಕ್ರಮದಲ್ಲಿ ವಿನ್ಯಾಸಪರಿಕರ, ಉತ್ಪನ್ನ ಸುಧಾರಣೆ, ನೈಪುಣ್ಯ ಮತ್ತು ಉತ್ಪಾದನಾ ವಿಧಾನಗಳ ಸುಧಾರಣೆ, ಸಹಾಯಧನ ನೀಡಿಕೆ, ಕುಶಲಕರ್ಮಿಗಳಿಗೆ ವಾಸಸ್ಥಳ ಹಾಗೂ ವರ್ಕ್‌ಷೆಡ್‌ಗಳ ನಿರ್ಮಾಣವೂ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಬಲಗೊಳಿಸುವುದು ಮತ್ತು ಮಾರುಕಟ್ಟೆ ನೆರವು ಇವು ಒಳಗೊಳ್ಳುತ್ತದೆ. ಈ ವರ್ಷದಲ್ಲಿ 80,000 ಫಲಾನುಭವಿಗಳಿಗೆ ಈ ಸೌಲಭ್ಯಗಳನ್ನು ನೀಡಲು ಉದ್ದೇಶಿಸಿದ್ದೇನೆ.

ಉದ್ಯೋಗ ಜ್ಯೋತಿ

52. ಸಮಾಜದ ಅತ್ಯಂತ ಬಡಜನರಿಗೆ ಹೆಚ್ಚಿನ ಆದಾಯ ತರುವಂತಹ ಪರಿಕರಗಳನ್ನು ದೊರಕಿಸಿಕೊಡುವ ಮೂಲಕ ಅವರ ಆದಾಯವನ್ನು ಹೆಚ್ಚಿಸಲು ತನ್ಮೂಲಕ ಅವರ ಜೀವನಮಟ್ಟವನ್ನು ಸುಧಾರಿಸಲು ನಾನು ನೆರವು ನೀಡಬಯಸುತ್ತೇನೆ. ಈ ದೃಷ್ಟಿಯಿಂದ "ಉದ್ಯೋಗ ಜ್ಯೋತಿ" ಯೋಜನೆಯ ವ್ಯಾಪ್ತಿ ವಿಸ್ತಾರವಾಗುವುದು ಅಗತ್ಯ. ಈ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ನಿರಂತರ ಆದಾಯ ತರಬಲ್ಲ ಸುಮಾರು 1500 ರೂ. ಮೌಲ್ಯದ ಪರಿಕರಗಳನ್ನು ವಿತರಿಸಲು ಉದ್ದೇಶಿಸಲಾಗಿದೆ. 1994-95ರ ಸಾಲಿನಲ್ಲಿ ಈ ಯೋಜನೆಯ ವ್ಯಾಪ್ತಿಗೆ 225 ಲಕ್ಷ ಫಲಾನುಭವಿಗಳನ್ನು ತರಲಾಗುವುದು.

53. ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆಯನ್ನು (ಪಿಎಂಆರ್‌ವೈ) ಪ್ರಸಕ್ತ ಹಣಕಾಸು ವರ್ಷದಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆಯ ಅಡಿಯಲ್ಲಿ, ತಾಂತ್ರಿಕ ಪರಿಕರಗಳು ಮತ್ತು ಸಹಾಯಧನವನ್ನು ಒದಗಿಸಲಾಗುತ್ತದೆ. ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆಯನ್ನು 1994-95ರಿಂದ ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸಲಾಗುತ್ತಿದೆ. ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆಯ ಫಲಾನುಭವಿಗಳಿಗೆ ರಾಜ್ಯಸರ್ಕಾರವು ಉದ್ಯೋಜ್ಯೋತಿ ಯೋಜನೆಯ ಒಂದು ಭಾಗವಾಗಿ ಬಡ್ಡಿ ರಿಯಾಯಿತಿ ಒದಗಿಸಲು ಉದ್ದೇಶಿಸಿದೆ.

54. ವಿಶ್ವ ಮತ್ತು ಉದ್ಯೋಗ ಜ್ಯೋತಿ ಯೋಜನೆಗಳಿಗೆ 1994-95ರಲ್ಲಿ ಒಟ್ಟು 69.50 ಕೋಟಿ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಒದಗಿಸಲು ಉದ್ದೇಶಿಸಲಾಗಿದೆ. ಈ ಯೋಜನೆಗಳನ್ನು ಕೈಗಾರಿಕಾ ಮತ್ತು ವಾಣಿಜ್ಯ ನಿರ್ದೇಶಕರ ಸಮಗ್ರ ಮೇಲ್ವಿಚಾರಣೆಯಲ್ಲಿ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಅನುಷ್ಠಾನಗೊಳಿಸುತ್ತಾರೆ.

ಸಕ್ಕರೆ

55. ರಾಜ್ಯದಲ್ಲಿ ಸಕ್ಕರೆ ಉದ್ಯಮದ ಅಭಿವೃದ್ಧಿಗಾಗಿ 1994-95ನೇ ವರ್ಷದಲ್ಲಿ ಹಲವಾರು ಸ್ಪಷ್ಟ ಕ್ರಮಗಳನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ. ಭಾರತ ಸರ್ಕಾರದಿಂದ ಇತ್ತೀಚೆಗೆ ಮಂಜೂರಾಗಿರುವ 7 ಕಾರ್ಖಾನೆಗಳಿಗೆ ಅವಧಿ ಸಾಲ ನೀಡುವುದಕ್ಕೆ ಸಂಬಂಧಿಸಿದಂತೆ ಹಣಕಾಸು ಸಂಸ್ಥೆಗಳಿಂದ ಶೀಘ್ರ ಅನುಮೋದನೆ ಪಡೆಯುವಲ್ಲಿ ರಾಜ್ಯ ಸರ್ಕಾರ ನೆರವು ನೀಡುವುದು. ರಾಜ್ಯದಲ್ಲಿ ಒಂದು ಸಕ್ಕರೆ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಗುವುದು. ಅಂಬೇಡ್ಕರ್ ಸಕ್ಕರೆ ಗಿರಣಿ ಸ್ಥಾಪಿಸಲು ಸಹಾ ಸರ್ಕಾರ ಉದ್ದೇಶಿಸಿದೆ. ಇದನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನರೇ ನಿರ್ವಹಿಸುವರು. ಈ ಕುರಿತು ಮುಂಬರುವ ವರ್ಷದಲ್ಲಿ ಭಾರತ ಸರ್ಕಾರದ ಅವಶ್ಯಕ ಅನುಮೋದನೆ ಪಡೆಯಲಾಗುವುದು ಹಾಗೂ ಹಣಕಾಸಿನ ವ್ಯವಸ್ಥೆಯನ್ನು ಮಾಡಲಾಗುವುದು.

ರೇಷ್ಮೆ ಉದ್ಯಮ

56. ರೇಷ್ಮೆ ಉದ್ಯಮವು ರಾಜ್ಯದಲ್ಲಿ 2.75 ಲಕ್ಷಕ್ಕೂ ಹೆಚ್ಚು ಜನರಿಗೆ ಲಾಭದಾಯಕ ಉದ್ಯೋಗವನ್ನು ಒದಗಿಸಿದೆ. ಮಾರುಕಟ್ಟೆ ಬೆಲೆಗಳ ಏರುಪೇರಿನ ಪ್ರತಿಕೂಲ ಪರಿಣಾಮ

ನಮ್ಮ ರೇಷ್ಮೆ ಬೆಳೆಗಾರರ ಮೇಲೆ ಆಗಬಾರದೆಂದೂ ಕಚ್ಚಾ ರೇಷ್ಮೆಗೆ ಬೆಂಬಲ ಬೆಲೆಯನ್ನು ನಿಗದಿಪಡಿಸಲು ಸರ್ಕಾರ ನಿರ್ಧರಿಸಿದೆ. ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿಯು ಮಾರುಕಟ್ಟೆ ಮಧ್ಯವರ್ತಿ ಏಜೆನ್ಸಿಯಾಗಿರುತ್ತದೆ.

57. ರೇಷ್ಮೆ ಉದ್ಯಮವು ಮಹಿಳೆಯರಿಗೆ ಗಣನೀಯ ಉದ್ಯೋಗಾವಕಾಶವನ್ನು ಒದಗಿಸಬಲ್ಲದು. 1994ನೇ ವರ್ಷವನ್ನು ರೇಷ್ಮೆ ಉದ್ಯಮ ಮಹಿಳಾ ವರ್ಷವನ್ನಾಗಿ ಘೋಷಿಸಲಾಗಿದೆ. ಮಹಿಳೆಯರಿಗೆ ತಾಂತ್ರಿಕ, ಆರ್ಥಿಕ ಮತ್ತು ಮಾರುಕಟ್ಟೆ ನೆರವು ಒದಗಿಸುವ ಮೂಲಕ ಈ ಕ್ಷೇತ್ರದಲ್ಲಿ ಅವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವರೆಂಬ ಆಶಾಭಾವನೆಯನ್ನು ನಾವು ಹೊಂದಿದ್ದೇವೆ. ಮಹಿಳಾ ರೇಷ್ಮೆ ಬೆಳೆಗಾರರಿಗೆ ತರಬೇತಿ ನೀಡುವ ಸಲುವಾಗಿ 32.70 ಲಕ್ಷ ರೂಪಾಯಿಗಳನ್ನು ಮೀಸಲಿಡಲಾಗಿದೆ.

58. 5532 ಹೆಕ್ಟೇರು ನೀರಾವರಿ ಪ್ರದೇಶದಲ್ಲಿ ಹಿಪ್ಪೇನೇರಳೆಬೆಳೆ ಬೆಳೆಯುವ ಗುರಿಯನ್ನು1993-94ರ ಅವಧಿಯಲ್ಲಿ ಪೂರ್ಣವಾಗಿ ಸಾಧಿಸಲಾಗಿದೆ. 94-95ರ ಅವಧಿಯಲ್ಲಿ 5443 ಹೆಕ್ಟೇರು ಪ್ರದೇಶವನ್ನು ಈ ವ್ಯಾಪ್ತಿಗೆ ತರಲಾಗುವುದು. 71000 ಜನರಿಗೆ ಲಾಭದಾಯಕ ಉದ್ಯೋಗ ಒದಗಿಸುವ ಗುರಿಯನ್ನು ಸಹ ನಾವು ಸಾಧಿಸಿದ್ದೇವೆ. 1994-95ರಲ್ಲಿ ಅಷ್ಟೇ ಜನರಿಗೆ ಉದ್ಯೋಗ ಒದಗಿಸಲಾಗುವುದು. 1993-94ರಲ್ಲಿ 8545 ಮೆಟ್ರಿಕ್ ಟನ್ ಕಚ್ಚಾ ರೇಷ್ಮೆ ಉತ್ಪಾದಿಸುವ ಗುರಿಯನ್ನು ಹಾಕಿಕೊಳ್ಳಲಾಗಿತ್ತು. ಅದನ್ನು ನಾವು ಸಾಧಿಸಿದ್ದೇವೆ. ಮುಂದಿನ ವರ್ಷಕ್ಕೆ ನಮ್ಮ ಗುರಿ 9510 ಮೆಟ್ರಿಕ್ ಟನ್‌ಗಳು.

ಜವಳಿ

59. ಕೈಗಾರಿಕಾ ಅಭಿವೃದ್ಧಿ ಹಾಗೂ ಸಹಕಾರ ಆಂದೋಲನದಲ್ಲಿ ಪ್ರಗತಿಯನ್ನು ಸಾಧಿಸಲು ಜವಳಿ ಉದ್ಯಮ ಉತ್ತಮ ಕ್ಷೇತ್ರ, ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್, ಜವಳಿ ಗಿರಣಿಗಳು, ಕೈಮಗ್ಗಗಳು, ವಿದ್ಯುತ್ ಮಗ್ಗಗಳು, ಹೆಣಿಗೆ ಮತ್ತು ಉಡುಪು ಘಟಕಗಳೂ ಸೇರಿದಂತೆ ಜವಳಿ ವಲಯವನ್ನು ಎಲ್ಲಾ ದೃಷ್ಟಿಯಿಂದ ಪುನಶ್ಚೇತನಗೊಳಿಸಲು 1993-94ರ ಅವಧಿಯಲ್ಲಿ ನಾವು ಒಂದು ವ್ಯಾಪಕ ಜವಳಿ ನೀತಿಯನ್ನು ರೂಪಿಸಿದ್ದೇವೆ.

60. ಸುಧಾರಣಾ ಸಾಧ್ಯ ನೇಕಾರ ಸಹಕಾರ ಸಂಘಗಳನ್ನು ಗುರುತಿಸಿ ಅವುಗಳನ್ನು ಪುನಶ್ಚೇತನಗೊಳಿಸಲು 1994-95ರಲ್ಲಿ ಅಗತ್ಯ ಪರಿಹಾರ ಕ್ರಮಕೈಗೊಳ್ಳಲಾಗುವುದು. ನೇಕಾರರು ಅಧಿಕ ಪ್ರಮಾಣದಲ್ಲಿರುವ ಕೇಂದ್ರಗಳನ್ನು ಗುರುತಿಸಿ ನೇಕಾರರ ಸಮಗ್ರ ಅಭಿವೃದ್ಧಿಗಾಗಿ ಸಂಯೋಜಿತ ಯೋಜನೆಗಳನ್ನು ರೂಪಿಸಲಾಗುವುದು.

61. ಸಹಕಾರ ವಲಯದಲ್ಲಿ ಬರುವ ಮತ್ತು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ ನಿಯೋಜಿತರಾದ ನೇಕಾರರು ತಮ್ಮ ಗಳಿಕೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುವಂತೆ ಮಾಡುವ ಸಲುವಾಗಿ ಹೆಚ್ಚು ಬೆಲೆಯ ವಸ್ತುಗಳ ಉತ್ಪಾದನೆಗೆ ಅವರನ್ನು ತೊಡಗಿಸಲು ಅವರ ಕುಶಲತೆಗಳನ್ನು ಮೇಲ್ದರ್ಜೆಗೇರಿಸುವುದು ಅವಶ್ಯವಿರುವೆಡೆಯಲ್ಲೆಲ್ಲಾ ಅವರಿಗೆ ತರಬೇತಿ ನೀಡಲಾಗುವುದು. ನೇಕಾರರಿಗೆ ನೂಲಿನ ಪೂರೈಕೆ ಮಾಡುವುದರಲ್ಲಿ ಸುಧಾರಣೆ ತರಲು ಪ್ರಯತ್ನಿಸಲಾಗುವುದು, ಕೈಮಗ್ಗಗಳಲ್ಲಿ ಹೊಸ ವಿನ್ಯಾಸಗಳ ಮತ್ತು ಹೊಸಬಗೆಯ ಬಟ್ಟೆಗಳನ್ನು ಉತ್ಪಾದಿಸಲು ಸಿಎಡಿ/ಸಿಎಎಂ ಸಿಸ್ಟಮ್‌ಗಳನ್ನು ಒದಗಿಸಲಾಗುವುದು.

ವಿದ್ಯುಚ್ಛಕ್ತಿ

62. ಈ ವರ್ಷಾವಧಿಯಲ್ಲಿ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಮತ್ತು ವಿತರಣೆ ನಿರ್ವಹಣೆಯಲ್ಲಿ ಗಣನೀಯ ಸುಧಾರಣೆಯಾಗಿದೆ. ಕರ್ನಾಟಕ ವಿದ್ಯುತ್ ನಿಗಮ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಾರ್ಯನಿರ್ವಹಣೆಯ ನಡುವೆ ಉತ್ತಮ ಸಮನ್ವಯದಿಂದಾಗಿ ಮತ್ತು ರಾಜ್ಯದೊಳಗಿನ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು

ಉತ್ತಮವಾಗಿ ಬಳಸಿಕೊಂಡಿದ್ದರಿಂದಾಗಿ ಹಾಗೂ ಕೇಂದ್ರ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ತನಗೆ ದೊರೆಯಬೇಕಾದ ವಿದ್ಯುತ್ತನ್ನು ಪೂರ್ಣವಾಗಿ ಪಡೆಯುವುದಕ್ಕೆ ರಾಜ್ಯ ನಡೆಸಿದ ಪ್ರಯತ್ನಗಳಿಂದಾಗಿ ಈ ಸುಧಾರಣೆ ಸಾಧ್ಯವಾಯಿತು. ಈ ಕ್ರಮಗಳಿಂದಾಗಿ 11 ವರ್ಷಗಳ ತರುವಾಯ 1993ರ ಜೂನ್ ತಿಂಗಳಿನಿಂದ ಎಲ್ಲಾ ವರ್ಗದ ಬಳಕೆದಾರರಿಗೆ ವಿದ್ಯುತ್ ಕಡಿತವನ್ನು ಪೂರ್ಣವಾಗಿ ಸಡಿಲಿಸಲು ಸಾಧ್ಯವಾಯಿತು. ಲೋಡ್‌ಷೆಡ್ಡಿಂಗ್ ಅವಧಿಯನ್ನು ಕಡಿಮೆ ಮಾಡಲಾಗಿದೆ. ಇದರಿಂದ ಕೈಗಾರಿಕಾ ವಲಯ ಮಾತ್ರವಲ್ಲದೆ ಕೃಷಿ, ಗೃಹಬಳಕೆ, ವಾಣಿಜ್ಯ ಮತ್ತು ಇತರ ವಲಯಗಳಿಗೆ ಕೂಡ ಸಹಾಯಕವಾಗಿದೆ:

ವಿದ್ಯುತ್ ಉತ್ಪಾದನೆ

63. ಪ್ರಸ್ತುತ ಹಣಕಾಸು ವರ್ಷದಲ್ಲಿ 148.29 ಮೆ.ವಾ. ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಸ್ಥಾವರವನ್ನು ಸ್ಥಾಪಿಸಲಾಗಿದೆ. ಯಲಹಂಕದಲ್ಲಿ ಸ್ಥಾಪಿಸಲಾದ ತಲಾ 20 ಮೆ.ವಾ. ಸಾಮರ್ಥ್ಯದ 6 ಘಟಕಗಳು ಇದರಲ್ಲಿ ಸೇರಿವೆ. ಇದರಿಂದ ಬೆಂಗಳೂರಿನ ಅಗಾಧ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗಿದೆ. ಮುಂಬರುವ ವರ್ಷದಲ್ಲಿ ಈ ಮುಂದಿನ ಯೋಜನೆಗಳಲ್ಲಿ 241.40 ಮೆ.ವಾ. ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಸ್ಥಾವರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

(i)	ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ ಘಟಕ	210.00 ಮೆ.ವಾ
(ii)	ನಾಗಝರಿ ನವೀಕರಣ	15.00 ಮೆ.ವಾ
(iii)	ಶರಾವತಿ ನವೀಕರಣ	14.40 ಮೆ.ವಾ
(iv)	ವಾಯು ಶಕ್ತಿ	2.00 ಮೆ.ವಾ
		241.40 ಮೆ.ವಾ

64. ವಿಶ್ವಬ್ಯಾಂಕ್ ನೆರವು ರದ್ದಾಗಿರುವುದರಿಂದ ವಿದ್ಯುತ್ ವಲಯ ಯೋಜನೆಗಳ ಪ್ರಗತಿಗೆ ಯಾವುದೇ ತೊಂದರೆ ಉಂಟಾಗದಂತೆ ನೋಡಿಕೊಳ್ಳಲು ನಾವು ನಿರ್ಧರಿಸಿದ್ದೇವೆ. ಖಾಸಗಿ ವಲಯವು ವಿದ್ಯುತ್ ವಲಯದಲ್ಲಿ ಬಂಡವಾಳ ಹೂಡುವುದನ್ನು ನಾವು ಸಕ್ರಿಯವಾಗಿ ನಿರೀಕ್ಷಿಸುತ್ತಿದ್ದೇವೆ. ವಿದೇಶಿ ಬಂಡವಾಳ ಹೂಡಿಕೆದಾರರು ಆಲಮಟ್ಟಿ (600 ಮೆ.ವಾ.) ಹೊಸಪೇಟೆ (500 ಮೆ.ವಾ.) ಹಾಗೂ ಮಂಗಳೂರು (1000 ಮೆ.ವಾ.) ಇಲ್ಲಿನ ವಿದ್ಯುತ್ ಯೋಜನೆಗಳಲ್ಲಿ ಖಾಸಗಿ ಬಂಡವಾಳ ಹೂಡುವುದಕ್ಕೆ ಅನುಮತಿ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಕ.ವಿ.ಮಂ. ಮತ್ತು ಮೆ|| ಕೋಜೆಂಟ್ರಿಕ್ಸ್ ಯುಎಸ್ಎ ಇವುಗಳ ನಡುವೆ 1994ರ ಏಪ್ರಿಲ್‌ನಲ್ಲಿ ವಿದ್ಯುತ್ ಖರೀದಿ ಒಪ್ಪಂದವೊಂದಕ್ಕೆ ಸಹಿ ಹಾಕುವ ನಿರೀಕ್ಷೆ ಇದೆ. ಒಪ್ಪಂದಕ್ಕೆ ಸಹಿ ಹಾಕಿದ ಕೂಡಲೇ ಮಂಗಳೂರು ವಿದ್ಯುತ್ ಯೋಜನೆಯು ಕಾರ್ಯಾರಂಭ ಮಾಡುವುದು. ಈ ಸ್ಥಾವರವು ಉತ್ಪಾದಿಸುವ ವಿದ್ಯುತ್ತನ್ನು ಸಾಗಿಸಲು ಮಂಗಳೂರಿನಿಂದ ಹಾಸನದವರೆಗೆ ಸಾಗಣೆ ಮಾರ್ಗದ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಹಣಕಾಸು ವ್ಯವಸ್ಥೆ ಮಾಡುತ್ತಿದೆ. ಇದರ ಜೊತೆಗೆ ಮಂಗಳೂರು ಮತ್ತು ಹೊಸಪೇಟೆಯಲ್ಲಿನ ಉದ್ದೇಶಿತ ಉಕ್ಕು ಸ್ಥಾವರಗಳ ಭಾಗವಾಗಿ ಮಂಗಳೂರಿನಲ್ಲಿ 660 ಮೆ.ವಾ. ಮತ್ತು ಹೊಸಪೇಟೆಯಲ್ಲಿ 300 ಮೆ.ವಾ. ಸಾಮರ್ಥ್ಯದ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲಾಗುವುದು. ಉಕ್ಕು ಸ್ಥಾವರಗಳಿಗೆ ಬೇಕಾದುದಕ್ಕಿಂತ ಹೆಚ್ಚಿನ ವಿದ್ಯುತ್

ಬೇಡಿಕೆಯನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಖರೀದಿಸುತ್ತದೆ. ಈ ಬೃಹತ್ ಯೋಜನೆಗಳ ಜೊತೆಗೆ 153 ಮೆ.ವಾ. ಸಾಮರ್ಥ್ಯದ 31 ಸಣ್ಣ ಜಲವಿದ್ಯುತ್ ಯೋಜನೆಗಳು ಹಾಗೂ ಒಟ್ಟು 24 ಮೆ.ವಾ. ಸಾಮರ್ಥ್ಯದ 6 ವಾಯುಶಕ್ತಿ ಯೋಜನೆಗಳನ್ನು ಖಾಸಗಿ ವಲಯಕ್ಕೆ ನೀಡಲಾಗಿದೆ.

65. ಸಕ್ಕರೆ ಕಾರ್ಖಾನೆಗಳು ಸಕ್ಕರೆಯ ಉತ್ಪಾದನೆಯ ಜೊತೆಗೆ ಕಬ್ಬಿನ ಹಿಪ್ಪೆಯನ್ನು ಬಳಸಿಕೊಂಡು ವಿದ್ಯುತ್ತನ್ನು ಉತ್ಪಾದಿಸಬಹುದು. ಇದು ಸಾಂಪ್ರದಾಯಿಕವಲ್ಲದ ಇಂಧನ ಮೂಲವನ್ನು ಬಳಸಿಕೊಳ್ಳುವ ಒಂದು ಆಕರ್ಷಕ ವಿಧಾನ. ನಮ್ಮ ರಾಜ್ಯದಲ್ಲಿ 250 ಮೆ.ವಾ. ನಷ್ಟು ವಿದ್ಯುತ್ತನ್ನು ಈ ರೀತಿ ಉತ್ಪಾದಿಸಲಾಗುತ್ತಿದೆ. ಭಾರತ ಸರ್ಕಾರವು ಪ್ರತಿ ಮೆ. ವಾಟ್‌ಗೆ ನೀಡುವ 70 ಲಕ್ಷ ರೂ. ಸಬ್ಸಿಡಿಯೇ ಅಲ್ಲದೆ ಸಕ್ಕರೆ ಘಟಕಗಳು ಸ್ಥಾಪಿಸುವ ಸಹ ಉತ್ಪಾದನಾ ಸ್ಥಾವರಗಳಿಗೆ ಪ್ರತಿ ಮೆ. ವಾಟ್‌ಗೆ 25 ಲಕ್ಷ ರೂಪಾಯಿಗಳ ಬಂಡವಾಳ ಸಹಾಯಧನ ನೀಡಲು ಉದ್ದೇಶಿಸಿದ್ದೇನೆ. ಮುಂಬರುವ ವರ್ಷದಲ್ಲಿ ಇದಕ್ಕಾಗಿ 5 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

ರವಾನೆ ಮತ್ತು ವಿತರಣೆ

66. ಉತ್ತಮ ವೋಲ್ಟೇಜಿನಲ್ಲಿ ತಪ್ಪದೆ ವಿದ್ಯುತ್ ಸರಬರಾಜು ಮಾಡುವ ದೃಷ್ಟಿಯಿಂದ 1993-94ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು 500 ಕಿಲೋಮೀಟರುಗಳಿಗಿಂತಲೂ ಹೆಚ್ಚು ರವಾನೆ ಲೈನುಗಳನ್ನು ನಿರ್ಮಿಸದೆ, 19 ಹೊಸ ಕೇಂದ್ರಗಳು ಕಾರ್ಯವನ್ನು ಆರಂಭಿಸಿದೆ. ಹಾಗೂ ಈಗಿರುವ 38 ಉಪಕೇಂದ್ರಗಳಲ್ಲಿ ಟ್ರಾನ್ಸ್‌ಫಾರ್ಮರುಗಳನ್ನು ಹೆಚ್ಚಿಸಿದೆ. ಇದರ ಜೊತೆಗೆ, ಇತ್ತೀಚೆಗೆ ಅಂತರಸನಹಳ್ಳಿಯಲ್ಲಿ 220 ಕಿ.ವಾ. ಉತ್ಪಾದನಾ ಸಾಮರ್ಥ್ಯದ ಕೇಂದ್ರವೂ ಕಾರ್ಯಾರಂಭ ಮಾಡಿದೆ ಮತ್ತು ಹುಮ್ನಾಬಾದ್‌ನಲ್ಲಿ ಅಂತಹುದೇ ಕೇಂದ್ರವು ಇಷ್ಟರಲ್ಲೇ ಕಾರ್ಯಾರಂಭ ಮಾಡಲಿದೆ.

67. ಪ್ರಸಕ್ತ ವರ್ಷ ವೋಲ್ಟೇಜ್ ಸಾಮರ್ಥ್ಯವನ್ನು ಸುಧಾರಿಸುವುದಕ್ಕಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ರಾಜ್ಯದಲ್ಲಿ ಇನ್ನೂ 250 ಎಮ್‌ವಿ ಎಆರ್ ಕೆಪ್ಯಾಸಿಟರ್ ಬ್ಯಾಂಕುಗಳನ್ನು ಪ್ರಾರಂಭಿಸಿದೆ. ಇನ್ನೂ 150 ಎಮ್‌ವಿಎಆರ್ ಬ್ಯಾಂಕುಗಳನ್ನು ಸ್ಥಾಪಿಸಲಾಗುತ್ತಿದ್ದೆ.

68. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು, ರವಾನೆ ಮತ್ತು ವಿತರಣಾ ಜಾಲದ ಸುಧಾರಣೆಗೆ ಅತ್ಯಂತಹೆಚ್ಚಿನ ಆದ್ಯತೆಯನ್ನು ನೀಡುತ್ತಿದೆ. ಮುಂಬರುವ ವರ್ಷಗಳಲ್ಲಿ 'ವ್ಯವಸ್ಥೆ ಸುಧಾರಣಾ ಕಾರ್ಯಕ್ರಮ'ಗಳಿಗೆ ಮತ್ತಷ್ಟು ಉತ್ತೇಜನ ನೀಡಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮವನ್ನು ಮೂರು ಹಂತಗಳಲ್ಲಿ ಕೈಗೊಳ್ಳಲಾಗುವುದು. I ಮತ್ತು IIನೇ ಹಂತದಲ್ಲಿ 409.83 ಕೋಟಿ ರೂಪಾಯಿಗಳ ವೆಚ್ಚದಲ್ಲಿ 220 ಕಿ.ವಾ. ಸಾಮರ್ಥ್ಯದ 10 ಕೇಂದ್ರಗಳು, 110 ಕಿ.ವಾ. ಸಾಮರ್ಥ್ಯದ 11 ಕೇಂದ್ರಗಳು, 20 ದೊಡ್ಡನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ನಗರ ವಿತರಣಾ ವ್ಯವಸ್ಥೆಯ ಸುಧಾರಣೆ ಮುಂತಾದ ಕಾರ್ಯಗಳನ್ನು ಕೈಗೊಳ್ಳಲಾಗುವುದು. IIIನೇ ಹಂತದಲ್ಲಿ 279.64 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ 220 ಕಿ.ವಾ. ಸಾಮರ್ಥ್ಯದ ಕೇಂದ್ರಗಳ ಜೊತೆಗೆ 400 ಕಿ.ವಾ. ಸಾಮರ್ಥ್ಯದ ರವಾನೆ ಮಾರ್ಗಗಳು ಮತ್ತು ಸ್ಟೇಷನ್‌ಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಈ ಎಲ್ಲ ಮೂರು ಹಂತಗಳನ್ನು ವಿದ್ಯುತ್ ಹಣಕಾಸು ನಿಗಮದಿಂದ ಮತ್ತು ಏಷ್ಯಾ ಅಭಿವೃದ್ಧಿ ಬ್ಯಾಂಕಿನಿಂದ ಹಣಕಾಸು ನೆರವು ಪಡೆದು ಕೈಗೊಳ್ಳಲಾಗುವುದು.

69. ಭಾರತ ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ನೆರವು ಪಡೆದು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಗ್ರಾಮೀಣ ಪ್ರದೇಶಗಳಲ್ಲಿ ರವಾನೆ ಮತ್ತು ವಿತರಣಾ ಜಾಲದ ಸುಧಾರಣೆ ಮಾಡುವುದಕ್ಕಾಗಿ ಮುಂದಿನ ಎರಡು ವರ್ಷಗಳಲ್ಲಿ ಸುಮಾರು 100 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಿದೆ. ಅಲ್ಲದೆ, ಮಂಡಳಿಯು, ಯೋಜನಾ ನಿಧಿಯಿಂದ 1994-95ನೇ ಸಾಲಿನಲ್ಲಿ ಸುಮಾರು 134 ಕೋಟಿ ರೂಪಾಯಿಗಳ ವೆಚ್ಚ ಮಾಡಲು ಹಾಗೂ ರವಾನೆ ಮತ್ತು ವಿತರಣಾ ವ್ಯವಸ್ಥೆಯನ್ನು ಬಲಪಡಿಸಲು ಮುಂದಿನ ವರ್ಷ ಅಷ್ಟೇ ಮೊತ್ತವನ್ನು ವೆಚ್ಚ ಮಾಡಲು ಉದ್ದೇಶಿಸಿದೆ.

ಗ್ರಾಮೀಣ ವಿದ್ಯುದೀಕರಣ ಕಾರ್ಯಕ್ರಮ

70. ನಾನು 1992ರ ನವೆಂಬರ್‌ನಲ್ಲಿ ಅಧಿಕಾರ ವಹಿಸಿಕೊಂಡಾಗ, ನೀರಾವರಿ ಪಂಪ್‌ಸೆಟ್ಟ್‌ಗಳಿಗೆ ವಿದ್ಯುತ್ ಒದಗಿಸುವಂತೆ ಕೋರಿ ಸಲ್ಲಿಸಲಾದ 48000 ಅರ್ಜಿಗಳು ಕ.ವಿ. ಮಂಡಳಿಯ ಮುಂದಿದ್ದವು. ಆಗಿನಿಂದ 1994ರ ಫೆಬ್ರವರಿ ಅಂತ್ಯದವರೆಗೆ ಮಂಡಳಿಯು 65102 ನೀರಾವರಿ ಪಂಪ್ ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಒದಗಿಸಿದೆ. ನೀರಾವರಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಒದಗಿಸುವಂತೆ ಕೋರಿ 31-3-1994ರವರೆಗೆ ಸಲ್ಲಿಸಲಾಗುವ ಎಲ್ಲ ಅರ್ಜಿಗಳನ್ನು ಪರಿಗಣಿಸಿ ಮಂಡಳಿಯು ಆ ಎಲ್ಲಾ ಪಂಪ್ ಸೆಟ್‌ಗಳಿಗೆ 1994-95ರಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುವುದು. ಭಾಗ್ಯಜ್ಯೋತಿ ಯೋಜನೆಯ ಅಡಿಯಲ್ಲಿ ಮುಂದಿನ ವರ್ಷ ಪ್ರತಿಯೊಂದು ಗ್ರಾಮೀಣ ಚುನಾವಣಾ ಕ್ಷೇತ್ರದಲ್ಲಿ 1000 ಮನೆಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಗುರಿಯನ್ನು ಮಂಡಳಿಯು ಇಟ್ಟುಕೊಂಡಿದೆ. ಆಶ್ರಯ ಯೋಜನೆ, ಡಾ. ಅಂಬೇಡ್ಕರ್ ಗೃಹನಿರ್ಮಾಣ ಯೋಜನೆ ಮತ್ತು ಇಂದಿರಾ ಆವಾಸ ಯೋಜನೆಗಳ ಅಡಿಯಲ್ಲಿ ಈಗಾಗಲೇ ನಿರ್ಮಿಸಲಾಗಿರುವ ಅಥವಾ ಮುಂದೆ ನಿರ್ಮಿಸಲಾಗುವ ಪ್ರತಿಯೊಂದು ಮನೆಗೂ ಭಾಗ್ಯಜ್ಯೋತಿ ಯೋಜನೆಯ ಅಡಿಯಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುವುದು. 1994-95ರಲ್ಲಿ ಹರಿಜನ ಬಸ್ತಿ ಮತ್ತು ಜನತಾ ಕಾಲೋನಿಗಳಿಗೆ ಬೀದಿ ದೀಪಗಳನ್ನು ಒದಗಿಸಲಾಗುವುದು.

71. ಅಲ್ಲದೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು, 1994ರ ಮಾರ್ಚ್ ಅಂತ್ಯದ ವೇಳೆಗೆ ಪೂರ್ಣಗೊಂಡಿರುವ ಎಲ್ಲ ಸಣ್ಣ ಮತ್ತು ಕೊಳವೆ ನೀರು ಯೋಜನೆಗಳಿಗೆ ಆರು ತಿಂಗಳೊಳಗಾಗಿ ವಿದ್ಯುಚ್ಛಕ್ತಿ ಒದಗಿಸುವ ಗುರಿ ಇಟ್ಟುಕೊಂಡಿದೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಿಗೆ ಸುರಕ್ಷಿತ ನೀರನ್ನು ಪೂರೈಸಲು ಇದರಿಂದ ಸಹಾಯವಾಗುತ್ತದೆ.

ನೀರಾವರಿ

72. ರಾಜ್ಯದ ಕೃಷಿ ಉತ್ಪಾದನೆ ಹಾಗೂ ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ನೀರಾವರಿ ಮೂಲಾಧಾರವಾಗಿದೆ. ಒಟ್ಟು 55 ಲಕ್ಷ ಹೆಕ್ಟೇರುಗಳ ಸಾಮರ್ಥ್ಯದ ಪೈಕಿ 1994ರ ಮಾರ್ಚ್ ಅಂತ್ಯದವರೆಗೆ ಅಂದಾಜು 31.53 ಲಕ್ಷ ಹೆಕ್ಟೇರುಗಳಷ್ಟು ನೀರಾವರಿ ಸಾಮರ್ಥ್ಯವನ್ನು ಸೃಜಿಸಲಾಗುವುದೆಂದು ನಿರೀಕ್ಷಿಸಲಾಗಿದೆ. ಮುಂಬರುವ ವರ್ಷಗಳಲ್ಲಿ ಸಾಕಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬೇಕಾಗಿದೆ. ನೀರಾವರಿ ಅಭಿವೃದ್ಧಿಗೆ ರಾಜ್ಯ ಸರ್ಕಾರವು ಅತ್ಯಂತ ಹೆಚ್ಚಿನ ಆದ್ಯತೆ ನೀಡುತ್ತಿದೆ. ಇದರ ಪರಿಣಾಮವಾಗಿ, ಪ್ರತಿ ವರ್ಷವೂ ನೀರಾವರಿಯಾಗುವ ಪ್ರದೇಶ ಹೆಚ್ಚುತ್ತಲಿದೆ. 1988-89ರಲ್ಲಿ ಅಂದಾಜು 21000 ಹೆಕ್ಟೇರುಗಳಷ್ಟಿತ್ತು. 1993-94ರಲ್ಲಿ 6000 ಹೆಕ್ಟೇರುಗಳಾಗುತ್ತದೆ. ಹೀಗಾಗಿ ಸರಿ ಸುಮಾರು 3 ಪಟ್ಟು ಹೆಚ್ಚಾದಂತಾಗುತ್ತದೆ. ಕಳೆದ ಆರು ವರ್ಷಗಳ ವಾಸ್ತವಿಕ ಹಾಗೂ ಹಣಕಾಸು ಪ್ರಗತಿ ಹೀಗಿದೆ;

ಹಣಕಾಸು : ಕೋಟಿ ರೂ.ಗಳಲ್ಲಿ ಸೃಜಿಸಿದ ನೀರಾವರಿ ಸಾಮರ್ಥ್ಯ: ಹೆಕ್ಟೇರುಗಳಲ್ಲಿ

	ವರ್ಷ	ಸೃಜಿಸಲಾದ ನೀರಾವರಿ ಸಾಮರ್ಥ್ಯ	ಹಣಕಾಸು ವೆಚ್ಚ
1.	1989-90	22445	238.27
2.	1990-91	30350	265.02
3.	1991-92	47145	373.88
4.	1992-93	50140	519.36
5.	1993-94 (ಪ.ಅ)	60000	696.05
6.	1994-95 (ಬ.ಅ)	1,20,000	987.95

1983ರ ಏಪ್ರಿಲ್ ತಿಂಗಳಿಂದ 1989ರ ಮಾರ್ಚ್‌ವರೆಗಿನ ಅವಧಿಯಲ್ಲಿ 2.43 ಲಕ್ಷ ಹೆಕ್ಟೇರ್ ಪ್ರದೇಶವನ್ನು ನೀರಾವರಿ ವ್ಯಾಪ್ತಿಗೆ ತರಲಾಗಿದ್ದರೆ 1989ರ ಏಪ್ರಿಲ್‌ನಿಂದ 1994ರ ಮಾರ್ಚ್‌ವರೆಗಿನ ಅವಧಿಯಲ್ಲಿ 3.30 ಲಕ್ಷ ಹೆಕ್ಟೇರು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

73. ನಾನು ಅಧಿಕಾರಕ್ಕೆ ಬಂದಂದಿನಿಂದ ನೀರಾವರಿ ಅಭಿವೃದ್ಧಿಗೆ ವಿಶೇಷ ಮಹತ್ವ ನೀಡುತ್ತಾ ಬಂದಿದ್ದೇನೆ. 1992ರ ಡಿಸೆಂಬರ್‌ನಿಂದ 1994 ನವೆಂಬರ್‌ವರೆಗಿನ ಅವಧಿಯಲ್ಲಿ ನೀರಾವರಿಗಾಗಿ ಖರ್ಚು ಮಾಡಲಾಗುವ ಒಟ್ಟು ಹಣ 1500 ಕೋಟಿ ರೂ.ಗಳಾಗಿದ್ದು ವಾಸ್ತವವಾಗಿ 2.37 ಲಕ್ಷ ಹೆಕ್ಟೇರುಗಳಷ್ಟು ಪ್ರದೇಶವನ್ನು ನೀರಾವರಿ ವ್ಯಾಪ್ತಿಗೆ ತರಲಾಗುವುದು. ಇದು ಹಂದಿನ ಐದು ವರ್ಷಗಳ ಅವಧಿಯಲ್ಲಿ ಸಾಧಿಸಿದ ಸಾಧನೆಗೆ ಸಮಾನವೆಂದೇ ಹೇಳಬಹುದು. ಕೇವಲ ಎರಡು ವರ್ಷಗಳ ಅವಧಿಯಲ್ಲಿ ಇಷ್ಟೊಂದು ಬೃಹತ್ ಪ್ರಮಾಣದ ಹಣ ಖರ್ಚು ಮಾಡಿ ಇಷ್ಟು ವಿಶಾಲವಾದ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಿದಂಥ ಸಾಧನೆ ಕರ್ನಾಟಕದಲ್ಲಿ ಹಿಂದೆಂದೂ ಆಗಿರಲಿಲ್ಲ.

74. 1994-95ರಲ್ಲಿ ನೀರಾವರಿ ಮತ್ತು ಪ್ರವಾಹ ನಿಯಂತ್ರಣಕ್ಕಾಗಿ 1028.46 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ಇದರಲ್ಲಿ 920.92 ಕೋಟಿ ರೂ.ಗಳನ್ನು ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ, ಕಾವೇರಿ ಕಣಿವೆ ಕಾಮಗಾರಿಗಳಿಗೆ 300 ಕೋಟಿ ರೂಪಾಯಿಗಳನ್ನು, ಸಣ್ಣ ನೀರಾವರಿಗೆ 67.03 ಕೋಟಿ ರೂ.ಗಳನ್ನು, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿಗೆ 30.40 ಕೋಟಿ ರೂ.ಗಳನ್ನು, ಪ್ರವಾಹ ನಿಯಂತ್ರಣ ಮತ್ತು ಸಮುದ್ರ ಕೊರತ ನಿಯಂತ್ರಣ ಕಾಮಗಾರಿಗಳಿಗೆ 10.10 ಕೋಟಿ ರೂ. ವೆಚ್ಚ ಮಾಡಲಾಗುವುದು.

75. ನೀರಾವರಿ ಸೌಲಭ್ಯ ಕಲ್ಪಿಸಲಾದ ಭೂಮಿಯನ್ನು ಬಳಸಿಕೊಂಡಾಗ ಮಾತ್ರವೆ ಜನರು ನೀರಾವರಿಯ ಮೂಲಭೂತ ಪ್ರಯೋಜನಗಳನ್ನು ಪಡೆಯಲು ಸಾಧ್ಯ. ನನ್ನ ಹಿಂದಿನ ಬಜೆಟ್ ಭಾಷಣದಲ್ಲಿ ಆಶ್ವಾಸನೆ ನೀಡಿದ್ದಂತೆ ನೀರಾವರಿ ಸೌಲಭ್ಯ ಕಲ್ಪಿಸಲಾದ ಪ್ರದೇಶ ಹಾಗೂ ಉಪಯೋಗಿಸಿಕೊಂಡ ಪ್ರದೇಶದ ನಡುವಿನ ಅಂತರವನ್ನು ಒಂದೇ ವರ್ಷದೊಳಗಾಗಿ 2.80 ಲಕ್ಷ ಹೆಕ್ಟೇರುಗಳಿಂದ 1.50 ಲಕ್ಷ ಹೆಕ್ಟೇರುಗಳಿಗೆ ಗಣನೀಯವಾಗಿ ಇಳಿಸಲಾಗಿದೆ. 1994-95ರ ಕೊನೆಯ ವೇಳೆಗೆ ಈ ಅಂತರವನ್ನು 0.50 ಲಕ್ಷ ಹೆಕ್ಟೇರಿಗೆ ಇಳಿಸಲಾಗುವುದು.

76. ಕ್ರಿ.ಶ. 2000ದ ವರೆಗಿನ ಅವಧಿಯ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ವಾಸ್ತವಿಕ ದೃಷ್ಟಿಕೋನದ ಯೋಜನೆಯನ್ನು ಸರ್ಕಾರವು ಸಿದ್ಧಪಡಿಸಿದೆ. ನಿಗದಿತ ಅವಧಿಯೊಳಗಾಗಿ ನಮ್ಮ ಪಾಲಿನ ನೀರನ್ನು ನಾವು ಬಳಸಿಕೊಳ್ಳಬೇಕಾದರೆ ಈ ಯೋಜನೆಗೆ 2675 ಕೋಟಿ ರೂ.ಗಳಷ್ಟು ಹಣವನ್ನು ಖರ್ಚು ಮಾಡುವುದು ಅವಶ್ಯಕ. ಈ ಯೋಜನೆಯ ಎಲ್ಲ ಭಾಗಗಳಿಗೆ ವಿಶ್ವಬ್ಯಾಂಕ್ ನೆರವು ನಿಲ್ಲಿಸಿತ್ತು. ರಾಜ್ಯ ಸರ್ಕಾರದ ನಿರಂತರ ಪ್ರಯತ್ನಗಳಿಂದಾಗಿ ವಿಶ್ವಬ್ಯಾಂಕ್ ನೆರವು ನೀಡಲು ಈಗ ಒಪ್ಪಿಕೊಂಡಿದೆ. ಪ್ರಸ್ತುತ ಹಣಕಾಸು ವರ್ಷದಲ್ಲಿ ಆಯವ್ಯಯದಲ್ಲಿ ಒದಗಿಸಲಾದ ಹಣ 200 ಕೋಟಿ ರೂಪಾಯಿಗಳು ಮಧ್ಯಕಾಲೀನ ಪರಿಶೀಲನೆಯ ನಂತರ ಈ ಯೋಜನೆಗೆ ಹಂಚಿಕೆ ಮಾಡಲಾಗಿದ್ದ ಹಣವನ್ನು ಹೆಚ್ಚಿಸಲಾಗಿದ್ದು ಪ್ರಸ್ತುತ ಹಣಕಾಸು ವರ್ಷದಲ್ಲಿ ವೆಚ್ಚ 245 ಕೋಟಿ ರೂ.ಗಳಾಗುವುದೆಂದು ನಿರೀಕ್ಷಿಸಲಾಗಿದೆ. ಈ ಯೋಜನೆಗೆ 1992-93ರಲ್ಲಿ 118 ಕೋಟಿ ರೂಪಾಯಿ ಒದಗಿಸಲಾಗಿತ್ತು. ಅಲ್ಲದೆ, 1994-95ರಲ್ಲಿ ಈ ಯೋಜನೆಯ ಆಯವ್ಯಯ ವೆಚ್ಚವನ್ನು 346ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಇದು ಒಂದೇ ವರ್ಷದಲ್ಲಿ ಶೇಕಡ 73ರಷ್ಟು ಹೆಚ್ಚಳವಾಗಿರುವುದನ್ನು ತೋರಿಸುತ್ತದೆ. ರಾಯಚೂರು ಜಿಲ್ಲೆಯ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಸಲುವಾಗಿ ನಾರಾಯಣಪುರ ಬಲದಂಡೆ ನಾಲೆಯ ಕಾಮಗಾರಿಯನ್ನು 1994-95ರಲ್ಲಿ ಆರಂಭಿಸಲಾಗುವುದು.

77. ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸುವುದಕ್ಕೆ ಮುಂದಿನ ಆರು ವರ್ಷಗಳಲ್ಲಿ 2675 ಕೋಟಿ ರೂ.ಗಳಷ್ಟು ಭಾರಿ ಮೊತ್ತವನ್ನು ಒದಗಿಸಬೇಕಾದ ಹೊಣೆಯ ಅರಿವು ಸರ್ಕಾರಕ್ಕೆ ಇದೆ. 1994-95ರ ವಾರ್ಷಿಕ ಯೋಜನೆಯನ್ನು ಅಂತಿಮಗೊಳಿಸುವ ಸಮಯದಲ್ಲಿ ನಾನು ಯೋಜನೆ ಆಯೋಗದ ಉಪಾಧ್ಯಕ್ಷರೊಂದಿಗೆ ಚರ್ಚೆ ನಡೆಸಿದಾಗ ಮುಂಬರುವ ವರ್ಷದಲ್ಲಿ ರಾಜ್ಯ ಸರ್ಕಾರ ನೀರಾವರಿ ಬಾಂಡುಗಳನ್ನು ಚಲಾವಣೆಗೆ ತರಲು ಅವರು ಒಪ್ಪಿದ್ದಾರೆ. ಇದಕ್ಕಾಗಿ ನಾವು ಭಾರತ ಸರ್ಕಾರದ ತಾತ್ವಿಕ ಅನುಮೋದನೆಯನ್ನು ಕೂಡ ಪಡೆದಿದ್ದೇವೆ. ಮುಂಬರುವ ವರ್ಷದಲ್ಲಿ ನಾವು "ಕೃಷ್ಣಾ ಭಾಗ್ಯ ಜಲ ನಿಗಮ"ವನ್ನು ಸ್ಥಾಪಿಸಲಿದ್ದೇವೆ. ಈ ನಿಗಮವು ಮಾರುಕಟ್ಟೆಯಿಂದ ನಿಧಿ ಸಂಗ್ರಹಿಸುವ ಹಾಗೂ ಯೋಜನೆಯನ್ನು ನಿರ್ವಹಿಸುವ ಸಂಸ್ಥೆಯಾಗಿರುತ್ತದೆ.

78. ಹೇಮಾವತಿ ನದಿಯಿಂದ 1994ರ ಜೂನ್ ವೇಳೆಗೆ ತಿಪಟೂರು ಮತ್ತು ಅರಸೀಕೆರೆ ಪಟ್ಟಣಗಳಿಗೆ, ಅಕ್ಟೋಬರ್ 1994ರ ವೇಳೆಗೆ ತುಮಕೂರು ನಗರಕ್ಕೆ ಕುಡಿಯುವ ನೀರನ್ನು ಒದಗಿಸಲು ಉದ್ದೇಶಿಸಲಾಗಿದೆ. ಭದ್ರಾ ಬಲದಂಡೆ ನಾಲೆಯಿಂದ ಶಾಂತಿ ಸಾಗರಕ್ಕೆ ನೀರನ್ನು ಹಾಯಿಸುವ ಮೂಲಕ ಹೊಳಲ್ಕೆರೆ ಮತ್ತು ಚಿತ್ರದುರ್ಗ ತಾಲೂಕುಗಳ ಕೆಲವು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆಯನ್ನು ಪರಿಶೀಲಿಸಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಜಲಸಿರಿ

79. ಸಣ್ಣ ನೀರಾವರಿ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳದಿದ್ದರೆ ರಾಜ್ಯದಲ್ಲಿ ನೀರಾವರಿ ಅಭಿವೃದ್ಧಿ ಪೂರ್ಣವಾಗುವುದಿಲ್ಲ. ನಮ್ಮ ಕೆರೆಗಳಲ್ಲಿ ಹೂಳು ತುಂಬಿರುವ ಸಮಸ್ಯೆ ಹಾಗೆಯೇ ಮುಂದುವರೆದಿದೆ. ನಾವು 'ಕೆರೆ ಅಭಿವೃದ್ಧಿ ಪ್ರಾಧಿಕಾರ' ವನ್ನು ರಚಿಸಲು ಉದ್ದೇಶಿಸಿದ್ದೇವೆ. ಅದು ಸಣ್ಣ ನೀರಾವರಿ ಕೆರೆಗಳನ್ನು ಪುನರುಜ್ಜೀವನಗೊಳಿಸುವ ಕಾರ್ಯವನ್ನು ನಿರ್ವಹಿಸುತ್ತದೆ. ತುಂತುರು ಹನಿ ನೀರಾವರಿಗಾಗಿ ಕೆರೆ ನೀರನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಲು ಪ್ರಾಯೋಗಿಕ ಯೋಜನೆಯೊಂದನ್ನು ಕೈಗೊಳ್ಳಲು ಸಹ ನಾನು ಉದ್ದೇಶಿಸಿದೇನೆ.

80. ಮಹಾರಾಷ್ಟ್ರದ ಗಡಿ ಪ್ರದೇಶಗಳಲ್ಲಿನ ನದಿಗಳಿಗೆ ಅಡ್ಡವಾಗಿ ಮಹಾರಾಷ್ಟ್ರ ಸರ್ಕಾರದ ಸಹಕಾರದೊಂದಿಗೆ ಏಳು ಹೊಸ ಬ್ಯಾರೇಜುಗಳನ್ನು ನಿರ್ಮಾಣ ಮಾಡಲು ನಾವು ಯೋಜಿಸಿದ್ದೇವೆ. ಈ ಉದ್ದೇಶಕ್ಕಾಗಿ 25 ಲಕ್ಷ ರೂ.ಗಳ ಪ್ರಾರಂಭಿಕ ವೆಚ್ಚಕ್ಕೆ ಏರ್ಪಾಡು ಮಾಡಲಾಗಿದೆ. ಕಾಮಗಾರಿಗಳ ಪ್ರಗತಿಯ ಆಧಾರದ ಮೇಲೆ ಮೊತ್ತವನ್ನು ಈ ವರ್ಷ ಇನ್ನಷ್ಟು ಹೆಚ್ಚಿಸಲಾಗುವುದು. ರಾಜ್ಯದ ಒಣ ಪ್ರದೇಶಗಳಲ್ಲಿ ನೀರನ್ನು ಸಂಗ್ರಹಿಸಲು ಅಡ್ಡಗಟ್ಟೆಗಳ ನಿರ್ಮಾಣಕ್ಕಾಗಿ ಬೃಹತ್ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲು ರಾಜ್ಯಸರ್ಕಾರ ಯೋಜಿಸಿದೆ. ವಿವಿಧ ಉದ್ಯೋಗಾವಕಾಶ ಕಲ್ಪಿಸುವ ಕಾರ್ಯಕ್ರಮದಲ್ಲಿ ಲಭ್ಯವಿರುವ ಹಣವನ್ನು ಈ ಕಾರ್ಯಕ್ರಮಕ್ಕೆ ಬಳಸಿಕೊಳ್ಳಲಾಗುವುದು.

ಕೃಷಿ

81. ರಾಜ್ಯದ ಅರ್ಥವ್ಯವಸ್ಥೆಯಲ್ಲಿ ಅತ್ಯಂತ ಪ್ರಮುಖ ವಲಯವಾದ ಕೃಷಿ ಕ್ಷೇತ್ರದ ಬಗ್ಗೆ ನಾನೀಗ ಹೇಳಬಯಸುತ್ತೇನೆ. ಕರ್ನಾಟಕ ಅರ್ಥ ವ್ಯವಸ್ಥೆಯಲ್ಲಿ ಕೃಷಿಯು ಪ್ರಮುಖ ಪಾತ್ರ ವಹಿಸುತ್ತದೆಂಬುದು ನಿಮಗೆಲ್ಲಾ ತಿಳಿದ ವಿಷಯ. ಇದು ರಾಜ್ಯಕ್ಕೆ ಬೇಕಾದ ಗೃಹ ಬಳಕೆ ಉತ್ಪನ್ನಗಳನ್ನು ಗಣನೀಯ ಪ್ರಮಾಣದಲ್ಲಿ ಉತ್ಪಾದಿಸುತ್ತಿರುವುದಲ್ಲದೆ ಶೇ 66ರಷ್ಟು ದುಡಿಮೆಗಾರರಿಗೆ ಉದ್ಯೋಗ ನೀಡಿರುವ ಉದ್ಯೋಗದ ಅತಿ ದೊಡ್ಡ ಮೂಲ ಕೂಡ ಆಗಿದೆ. ಆದಾಗ್ಯೂ ಕಳೆದ ದಶಕದಲ್ಲಿ ಕೃಷಿ ಉತ್ಪಾದನೆಯಲ್ಲಿ ಸ್ಥಗಿತತೆ ಉಂಟಾದದ್ದರಿಂದ ಕಳವಳಗೊಂಡ ರಾಜ್ಯ ಸರ್ಕಾರವು ರಾಜ್ಯದ ಹಿಂದಿನ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಸತೀಶ್‌ಚಂದ್ರನ್ ಅವರ ಅಧ್ಯಕ್ಷತೆಯಲ್ಲಿ ಒಂದು ತಜ್ಞ ಸಮಿತಿಯನ್ನು ರಚಿಸಿತ್ತು. ಈ ಸಮಿತಿಯ ಮುಖ್ಯ ಕೆಲಸ ಅಪೇಕ್ಷಿತ ಬೆಳವಣಿಗೆಯನ್ನು ಸಾಧಿಸಲು ಸಾಧ್ಯವಾಗುವಂತೆ ಕರ್ನಾಟಕದ ಕೃಷಿಗೆ ಪುನಶ್ಚೇತನ ನೀಡಲು ಮತ್ತು ಹೊಸ ಕಾರ್ಯನೀತಿಯನ್ನು ರೂಪಿಸಲು ಮಾರ್ಗೋಪಾಯಗಳನ್ನು ಸೂಚಿಸಬಹುದಾಗಿತ್ತು. ಸಮಿತಿಯು ತನ್ನ ವರದಿಯನ್ನು ಇತ್ತೀಚಿಗೆ ಸಲ್ಲಿಸಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತಿದೆ. ಸರ್ಕಾರ ಅಂಗೀಕರಿಸಲು ಉದ್ದೇಶಿಸಿರುವ ಕೆಲವು ಶಿಫಾರಸ್ಸುಗಳು ಈ ಮುಂದಿನಂತಿವೆ :

(ಎ) ರಾಜ್ಯದ ಕೃಷಿ ವಿಸ್ತರಣಾ ವ್ಯವಸ್ಥೆಯನ್ನು ಇನ್ನಷ್ಟು ವಿಶಾಲ ತಳಹದಿಯ ವ್ಯವಸ್ಥೆಯನ್ನಾಗಿ ಮಾಡಲು ಆಮೂಲಾಗ್ರವಾಗಿ ಪರಿಷ್ಕರಿಸಬೇಕು;

(ಬಿ) ಜಲಾನಯನ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಗಳನ್ನು ಇನ್ನಷ್ಟು ಬಲಪಡಿಸಬೇಕು;

(ಸಿ) ಪ್ರಮಾಣೀಕೃತ ಬೀಜಗಳು ಸುಲಭವಾಗಿ ಸಿಗಬೇಕು;

(ಡಿ) ಸಣ್ಣ ಮತ್ತು ಅತಿ ಸಣ್ಣ ರೈತರಿಗಾಗಿ ಇರುವ ಆದ್ಯತಾನೀತಿಗಳನ್ನು ಸರ್ಕಾರ ಮುಂದುವರಿಸಬೇಕು.

82. ಕರ್ನಾಟಕದ ರೈತರು ತಮ್ಮ ಉತ್ಪನ್ನಗಳನ್ನು ಸುಗ್ಗಿ ಕಾಲದಲ್ಲಿ ವಿಧಿಯಿಲ್ಲದೆ ಕಡಿಮೆ ಬೆಲೆಗೆ ಮಾರದಂತೆ ನೋಡಿಕೊಳ್ಳಲು, ನಾವು ರೈತರಿಗೆ ಭಾರತ ಸರ್ಕಾರದ ಬೆಂಬಲ ಬೆಲೆಗಿಂತಲೂ ಹೆಚ್ಚಿನ ಪ್ರೋತ್ಸಾಹಕಗಳನ್ನು ನೀಡುವ ಮೂಲಕ ಬೆಂಬಲ ಬೆಲೆ ಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದೇವೆ.

83. ನಾವು ಸಕಾಲದಲ್ಲಿ 120ಕ್ಕಿಂತಲೂ ಹೆಚ್ಚು ಖರೀದಿ ಕೇಂದ್ರಗಳನ್ನು ತೆರೆದ ಪರಿಣಾಮವಾಗಿ ಕರ್ನಾಟಕದ ರೈತರಿಗೆ 1993-94ನೇ ವರ್ಷಾವಧಿಯಲ್ಲಿ ಉತ್ತಮ ಬೆಲೆ ದೊರೆಯಿತು ಎಂದು ತಿಳಿಸಲು ನನಗೆ ಸಂತೋಷವಾಗುತ್ತಿದೆ. ಈ ಯೋಜನೆಯನ್ನು 1994-95ರಲ್ಲಿ ಕೂಡ ಮುಂದುವರಿಸಲಾಗುವುದು.

84. 1993-94ರಲ್ಲಿ ಸರ್ಕಾರ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿತ್ತು. ಇದಕ್ಕೆ 23 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ಸರ್ಕಾರ ಬೆಳೆ ಪ್ರಾತ್ಯಕ್ಷಿಕೆ, ಕೃಷಿ ಪಂಪುಸೆಟ್‌ಗಳನ್ನು ಒದಗಿಸುವುದು, ಸಸ್ಯಸಂರಕ್ಷಣ ಸಾಧನಗಳ ಪೂರೈಕೆ ಮುಂತಾದ ಹಲವಾರು ಯೋಜನೆಗಳ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರೈತರಿಗೆ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಹಾಯವನ್ನು ಮುಂದುವರಿಸುವುದು.

85. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರು ಹಾಗೂ ಸಣ್ಣ ಮತ್ತು ಅತಿಸಣ್ಣ ರೈತರಿಗಾಗಿ 1994-95ರಲ್ಲಿ ನೀರಾವರಿ ಬಾವಿಗಳ ವ್ಯಾಪಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಹಾ ನಾನು ಉದ್ದೇಶಿಸಿದ್ದೇನೆ.

86. ಖುಷ್ಕಿಭೂಮಿ ಸಾಗುವಳಿಯ ಪ್ರಾಮುಖ್ಯತೆಯನ್ನು ಪರಿಗಣಿಸಿ, ನನ್ನ ಸರ್ಕಾರವು ಜಲಾನಯನ ಅಭಿವೃದ್ಧಿ ಕಾರ್ಯಕ್ರಮವನ್ನು ಇನ್ನಷ್ಟು ಹುರುಪಿನಿಂದ ಮುಂದುವರಿಸುತ್ತದೆ. ಬಾಹ್ಯ ಮೂಲಗಳಿಂದ ನೆರವು ಪಡೆಯುವ ಮೂಲಕ ರಾಜ್ಯದ ಬೆಂಬಲವನ್ನು ಹೆಚ್ಚಿಸಲು ತೀವ್ರ ಪ್ರಯತ್ನಗಳನ್ನು ಮಾಡಲಾಗುವುದು. ಖುಷ್ಕಿ ಭೂಮಿ ಪ್ರದೇಶಗಳು ಸರಿಯಾಗಿ ಅಭಿವೃದ್ಧಿಯಾಗುವಂತೆ ನೋಡಿಕೊಳ್ಳಲು 'ಬಯಲು ಸೀಮೆ ಅಭಿವೃದ್ಧಿ ಪ್ರಾಧಿಕಾರ'ವನ್ನು ರಚಿಸಲು ನಾನು ಉದ್ದೇಶಿಸಿದ್ದೇನೆ.

87. ಉತ್ತಮ ಬಿತ್ತನೆ ಬೀಜಗಳ ಅಭಾವವು ಕರ್ನಾಟಕ ಕೃಷಿ ಕ್ಷೇತ್ರದ ಒಂದು ಮುಖ್ಯ ದೌರ್ಬಲ್ಯವಾಗಿದೆ. ರೈತರು ಪ್ರಮಾಣೀಕೃತ ಬಿತ್ತನೆ ಬೀಜಗಳನ್ನು ಉತ್ಪಾದಿಸುವುದಕ್ಕಾಗಿ ಬೆಂಬಲ ಬೆಲೆ ಯೋಜನೆಯನ್ನು ಪ್ರಾರಂಭಿಸಲು ನಾನು ಉದ್ದೇಶಿಸಿದ್ದೇನೆ. ಇದನ್ನು ಕರ್ನಾಟಕ ರಾಜ್ಯ ಬೀಜ ನಿಗಮದ ಮೂಲಕ ಜಾರಿಗೊಳಿಸಲಾಗುವುದು. ಇದು, ಪ್ರಮಾಣೀಕೃತ ಬಿತ್ತನೆ ಬೀಜಗಳನ್ನು ಒದಗಿಸುವ ಕರ್ನಾಟಕ ರಾಜ್ಯ ಬೀಜ ನಿಗಮದ ಪ್ರಯತ್ನಗಳಿಗೆ ಪೂರಕವಾಗಿರುತ್ತದೆ.

88. ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರಗಳು (ಸಿಎಡಿಎ) ಭಾರಿ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶಗಳಲ್ಲಿನ ಕೃಷಿ ಉತ್ಪಾದನೆಯಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ತರಲು ಉದ್ದೇಶಿಸಿವವೆ. ದುರ್ದೈವವಶಾತ್ ಈ ಉದ್ದೇಶಗಳನ್ನು ನಿರೀಕ್ಷಿತ ಪ್ರಮಾಣದಲ್ಲಿ ಸಾಧಿಸಲಾಗಿಲ್ಲ. ಕೃಷಿ ಉತ್ಪಾದನೆಯನ್ನು ಪರಮಾವಧಿ ಮಟ್ಟಕ್ಕೆ ಹೆಚ್ಚಿಸಲು ನೀರು ಪೂರೈಕೆ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಗಳು ಈಗ ಅನುಸರಿಸುತ್ತಿರುವ ನೀರಾವರಿ ನಿರ್ವಹಣಾ ಪದ್ಧತಿಗಳನ್ನು ಪುನರ್ ರೂಪಿಸುವ ಅವಶ್ಯಕತೆ ಇದೆ.

89. ರಾಜ್ಯದಲ್ಲಿ ಈ ಹಿಂದೆ ಜಾರಿಯಲ್ಲಿದ್ದ ವಿಫಲ ಬಾವಿಗಳಿಗೆ ಸಬ್ಸಿಡಿ ನೀಡುವ ಯೋಜನೆಯಿಂದ ಬಹಳಷ್ಟು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಹಾಯವಾಗಿದೆ. ಆ ಯೋಜನೆಯನ್ನು ಪುನರಾರಂಭಿಸಲು ನಾನು ಉದ್ದೇಶಿಸಿದ್ದೇನೆ. ಯೋಜನೆಯ ವಿಧಿವಿಧಾನಗಳನ್ನು ರೂಪಿಸಲು ಈಗಾಗಲೇ ಒಂದು ಸಮಿತಿಯನ್ನು ರಚಿಸಲಾಗಿದೆ.

ತೋಟಗಾರಿಕೆ

90. ತೋಟಗಾರಿಕೆ ಅಭಿವೃದ್ಧಿಗೆ ನಮ್ಮ ರಾಜ್ಯವು ತುಂಬಾ ಪ್ರಶಸ್ತವಾಗಿದೆ. ಆದುದರಿಂದ, ಕರ್ನಾಟಕ ರಾಜ್ಯವನ್ನು ತೋಟಗಾರಿಕೆ ರಾಜ್ಯವೆಂಬುದಾಗಿ ಘೋಷಿಸಲಾಗುವುದೆಂದು ಕಳೆದ ವರ್ಷ ನಾನು ಪ್ರಕಟಿಸಿದ್ದೆ. ಈ ಧ್ಯೇಯೋದ್ದೇಶವನ್ನು ಸಾಧಿಸುವ ಸಲುವಾಗಿ, ಕರ್ನಾಟಕದಲ್ಲಿ ತೋಟಗಾರಿಕೆಯ ಸಮಗ್ರ ಅಭಿವೃದ್ಧಿಗೆ ಕಾರ್ಯನೀತಿ ಹಾಗೂ ಮಾರ್ಗೋಪಾಯಗಳನ್ನು ಸೂಚಿಸಲು ಮೈಸೂರಿನ ಸಿ.ಎಫ್.ಟಿ.ಆರ್.ಐ.ನ ಮಾಜಿ ನಿರ್ದೇಶಕರಾದ ಡಾ: ಪಾರ್ಸಿಯಾರವರ ಅಧ್ಯಕ್ಷತೆಯಲ್ಲಿ [illegible]

ರಚಿಸಿತ್ತು. ಈ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆ. ಅಗ್ರೋ ಫುಡ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಅಥಾರಿಟಿಯನ್ನು ರಚಿಸಬೇಕೆಂಬುದು ಈ ಸಮಿತಿಯ ಪ್ರಮುಖ ಶಿಫಾರಸ್ಸಾಗಿದೆ. ಈ ಪ್ರಾಧಿಕಾರವನ್ನು ರಚಿಸಲಾಗಿದೆಯೆಂದು ತಿಳಿಸಲು ನನಗೆ ಸಂತೋಷವಾಗುತ್ತಿದೆ.

91. ಹಲವು ರೈತರು ಬಹುಪಾಲು ಜಮೀನನ್ನು ಬಂಜರು ಬಿಟ್ಟಿದ್ದಾರೆ. ರಾಜ್ಯದ ಹಿತಾಸಕ್ತಿಯಿಂದ ಉತ್ಪಾದನಾ ಉದ್ದೇಶಗಳಿಗೆ ಈ ಜಮೀನುಗಳನ್ನು ಬಳಸಿಕೊಳ್ಳಬೇಕಾಗಿದೆ. ಆದ್ದರಿಂದ 6 ವರ್ಷಗಳ ಅವಧಿಯಲ್ಲಿ 50,000 ಹೆಕ್ಟೇರು ಜಮೀನನ್ನು ತೋಟಗಾರಿಕೆಯ ಅಡಿಯಲ್ಲಿ ತರಲು "ಹೊಂಬಳ್ಳಿ" ಎಂಬ ಒಂದು ವಿಶೇಷ ಯೋಜನೆಯನ್ನು ನಾನು ಪ್ರಕಟಿಸುತ್ತಿದ್ದೇನೆ. ಈ ಕಾರ್ಯಕ್ರಮದ ಅಡಿಯಲ್ಲಿ ಮಾವು, ಸಪೋಟ, ದಾಳಿಂಬೆ, ಅಂಟುವುರುಳೆ, ಮರಸೇಬು ಮತ್ತು ಹುಣಸೇ ಗಿಡಗಳನ್ನು ಬೆಳೆಸಲಾಗುವುದು. ಸರ್ಕಾರವು, ಪರಿಶಿಷ್ಟಜಾತಿ/ ಪರಿಶಿಷ್ಟ ಪಂಗಡಗಳ ರೈತರಿಗೆ ಕೂಲಿ ವೆಚ್ಚವನ್ನು ಸಂಪೂರ್ಣವಾಗಿ ಮತ್ತು ಇನ್ನುಳಿದ ರೈತರಿಗೆ ಶೇಕಡಾ 75ರಷ್ಟು ವೆಚ್ಚವನ್ನು ಉದ್ಯೋಗಾವಕಾಶ ಸೃಜಿಸುವಂಥ ಯೋಜನೆಗಳಿಂದ ಒದಗಿಸುತ್ತದೆ. ಇತರ ಪರಿಕರಗಳನ್ನು ಎಲ್ಲ ರೈತರಿಗೂ ಉಚಿತವಾಗಿ ಒದಗಿಸಲಾಗುವುದು. ಸರ್ಕಾರದಿಂದ ದೊರೆಯುವ ಈ ನೆರವು, ಪ್ರತಿಯೊಬ್ಬ ರೈತರಿಗೆ ಒಂದು ಹೆಕ್ಟೇರು ಪ್ರದೇಶಕ್ಕೆ ಮಾತ್ರ ದೊರೆಯುತ್ತದೆ. 1994-95ರಲ್ಲಿ 5000 ಹೆಕ್ಟೇರುಗಳಷ್ಟು ಜಮೀನನ್ನು ಈ ಯೋಜನೆಯ ವ್ಯಾಪ್ತಿಗೆ ತರಲು ಉದ್ದೇಶಿಸಲಾಗಿದೆ.

92. ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳು ವಾಣಿಜ್ಯ ಉದ್ದೇಶದ ಹೂ ಗಿಡಗಳನ್ನು ಬೆಳೆಯಲು ಅತ್ಯಂತ ಪ್ರಶಸ್ತವಾಗಿವೆ. ಬಹುಮಟ್ಟಿಗೆ ಸಣ್ಣ ಹಾಗೂ ಅತಿಸಣ್ಣ ರೈತರು ಹೂ ಗಿಡಗಳನ್ನು ಬೆಳೆಸುತ್ತಿದ್ದಾರೆ. ಹೂಗಳ ಮಾರಾಟಕ್ಕಾಗಿ ವ್ಯವಸ್ಥಿತ ಮಾರುಕಟ್ಟೆಯ ಅಗತ್ಯವಿರುವುದನ್ನು ಮನಗಂಡು ಸರ್ಕಾರವು ಬೆಂಗಳೂರಿನಲ್ಲಿ ಹೂಗಳ ಹರಾಜು ಮಾರಾಟ ಕಟ್ಟೆಯನ್ನು ಸ್ಥಾಪಿಸಲು ನಿರ್ಧರಿಸಿದೆ.

93. ದಕ್ಷಿಣ ಕರ್ನಾಟಕದ ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಮಾರುಕಟ್ಟೆ ಅನುಕೂಲವನ್ನು ಒದಗಿಸುವಲ್ಲಿ ಹಾಪ್‌ಕಾಮ್ ಸಂಸ್ಥೆಯು ಪ್ರಮುಖ ಪಾತ್ರ ವಹಿಸಿದೆ. ಈವರೆಗೆ ದೊರೆತ ಅನುಭವದಿಂದಾಗಿ, ಸಹಕಾರಿ ವಲಯದಲ್ಲಿ ಮುಂಬೈ-ಕರ್ನಾಟಕ ಹಾಗೂ ಹೈದರಾಬಾದ್ - ಕರ್ನಾಟಕ ಪ್ರದೇಶದಲ್ಲೂ ಇದೇ ಬಗೆಯ ಸಂಸ್ಥೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

94. ತೋಟಗಾರಿಕೆಗೆ ಬೇಕಾದ ಮೂಲಭೂತ ಪರಿಕರಗಳನ್ನು ಆದ್ಯತೆಯ ಮೇಲೆ ಒದಗಿಸಬೇಕಾಗಿದೆ. ತೋಟಗಾರಿಕೆ ಉತ್ಪನ್ನಗಳನ್ನು ಉತ್ತಮ ರೀತಿಯಲ್ಲಿ ಸಂರಕ್ಷಿಸಿಡುವುದಕ್ಕಾಗಿ ಅನೇಕ ಶೈತ್ಯಾಗಾರಗಳನ್ನು ಸ್ಥಾಪಿಸಲು ಸರ್ಕಾರವು ನೆರವು ನೀಡುತ್ತದೆ. ಅಲ್ಲದೆ, ಸಂಸ್ಕರಣ ಹಾಗೂ ಮಾರಾಟಕ್ಕೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಜಿಲ್ಲಾ ತೋಟಗಾರಿಕೆ ಸಂಘಗಳಿಗೆ ನೆರವು ನೀಡಲಾಗುವುದು.

95. 1993-94ರ ಅವಧಿಯಲ್ಲಿ ತೋಟಗಾರಿಕೆ ಇಲಾಖೆಯು ರಾಜ್ಯಕ್ಕೆ ಅಗತ್ಯವಿರುವ ಸಸ್ಯ ಸಾಮಗ್ರಿಗಳ ಸುಮಾರು ಶೇಕಡಾ 30ರಷ್ಟನ್ನು ಉತ್ಪಾದಿಸಿತು. ಈ ಪ್ರಮಾಣವನ್ನು 1994-95ರ ಅವಧಿಯಲ್ಲಿ 1.60 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಶೇಕಡಾ 50ಕ್ಕೆ ಗಣನೀಯವಾಗಿ ಹೆಚ್ಚಿಸಲಾಗುವುದು. ಅಲ್ಲದೆ ಮೂಲಭೂತ ಪರಿಕರಗಳ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳಲು ಖಾಸಗಿ ಸಸ್ಯ ಬೆಳೆಗಾರರಿಗೆ ಸಬ್ಸಿಡಿ ಒದಗಿಸುವ ಮೂಲಕ ಅವರ [illegible] ಉತ್ತೇಜನ ನೀಡಲಾಗುವುದು.

96. ತಾಳೆ ಎಣ್ಣೆ ಮರಗಳನ್ನು ಬೆಳೆಸುವ ಕಾರ್ಯಕ್ರಮಕ್ಕೆ ಭಾರಿ ಪ್ರಮಾಣದ ನೆರವು ನೀಡಲು ರಾಜ್ಯ ಸರ್ಕಾರವು ನಿರ್ಧರಿಸಿದೆ. 3 ನೀರಾವರಿ ಅಚ್ಚುಕಟ್ಟು ಪ್ರದೇಶಗಳಲ್ಲಿ ಎಂದರೆ ಕಾವೇರಿ ಅಚ್ಚುಕಟ್ಟು ಪ್ರದೇಶ, ಭದ್ರಾ ಅಚ್ಚುಕಟ್ಟು ಪ್ರದೇಶ ಮತ್ತು ತುಂಗಭದ್ರಾ ಅಚ್ಚುಕಟ್ಟು ಪ್ರದೇಶಗಳಲ್ಲಿ ತಾಳೆ ಎಣ್ಣೆಮರಗಳನ್ನು ಬೆಳೆಸುವುದಕ್ಕಾಗಿ ಒಂದು ವ್ಯಾಪಕ ಕಾರ್ಯಕ್ರಮವನ್ನು ಸಿದ್ಧಪಡಿಸಲಾಗಿದೆ. ತಾಳೆ ಎಣ್ಣೆ ಮರಗಳನ್ನು ಬೆಳೆಯುವ ಕಾರ್ಯಕ್ರಮದಲ್ಲಿ ಖಾಸಗಿ ವಲಯಗಳು ಭಾಗವಹಿಸಲಿವೆ. ಈ ಯೋಜನೆಗಳ ಅಡಿಯಲ್ಲಿ ಸುಮಾರು 45,000 ಹೆಕ್ಟೇರುಗ್ಗಳಷ್ಟು ಭೂಮಿಯನ್ನು ತಾಳೆ ಎಣ್ಣೆ ಮರಗಳನ್ನು ಬೆಳೆಸುವ ಕಾರ್ಯಕ್ರಮದ ವ್ಯಾಪ್ತಿಗೆ ಒಳಪಡಿಸುವ ಸಂಭವವಿದೆ. ಹೀಗೆ ಮಾಡುವುದರಿಂದಾಗಿ ತಾಳೆಎಣ್ಣೆ ಮರಗಳನ್ನು ಬೆಳೆಸುವ ಕಾರ್ಯಕ್ರಮಕ್ಕೆ ಅಗತ್ಯ ಚಾಲನೆ ನೀಡಿದಂತಾಗುತ್ತದೆ.

97. ತೋಟಗಾರಿಕೆ ಉತ್ಪನ್ನಗಳ ತ್ವರಿತ ಸಾಗಣೆಗೆ ಸಂಬಂಧಿಸಿದ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕೆಂಬ ಅಂಶವನ್ನು ಒತ್ತಿ ಹೇಳಬೇಕಾದ ಅಗತ್ಯವಿಲ್ಲ. ತೋಟಗಾರಿಕೆ ಉತ್ಪನ್ನಗಳನ್ನು ವಿಮಾನಗಳ ಮೂಲಕ ಸಾಗಿಸುವುದಕ್ಕಾಗಿ ಕೋಲಾರದಲ್ಲಿನ ಹಳೆಯ ವಿಮಾನ ನಿಲ್ದಾಣವನ್ನು ಪುನಶ್ಚೇತನಗೊಳಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ.

ಅರಣ್ಯ ಮತ್ತು ಪರಿಸರ

98. ಸೌದೆ, ಮೇವು ಮತ್ತು ಮರಮುಟ್ಟುಗಳಿಗಾಗಿ ಅರಣ್ಯಗಳ ಮೇಲೆ ಬೀಳುತ್ತಿರುವ ಒತ್ತಡವು ರಾಜ್ಯದಲ್ಲಿರುವ ಬಹುತೇಕ ಅರಣ್ಯ ಪ್ರದೇಶದ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡಿದೆ. ಇದು ನಮ್ಮೆಲ್ಲರಿಗೂ ತುಂಬಾ ಆತಂಕದ ವಿಷಯ. ಕೆಳದರ್ಜೆಯ ಪ್ರದೇಶದಲ್ಲಿ ಕಾಡು ಬೆಳೆಸಲು ನಾವು ತೀವ್ರ ಪ್ರಯತ್ನ ಮಾಡುತ್ತಿದ್ದೇವೆ. ಈ ದಿಶೆಯಲ್ಲಿ ಮಾಡುತ್ತಿರುವ ಪ್ರಯತ್ನಗಳಿಗೆ ಮತ್ತಷ್ಟು ಚೇತನ ನೀಡಲು ನಾನು ಉದ್ದೇಶಿಸಿದ್ದೇನೆ. ಆರು ಕೋಟಿಗೂ ಹೆಚ್ಚು ಸಸಿಗಳನ್ನು ನೆಡುವ ಮೂಲಕ 1994-95ನೇ ಸಾಲಿನಲ್ಲಿ 50,000 ಹೆಕ್ಟೇರುಗಳಲ್ಲಿ ಕಾಡು ಬೆಳೆಸಲು ಉದ್ದೇಶಿಸಲಾಗಿದೆ. ಹೆಚ್ಚು ಸಂಖ್ಯೆಯ ರೈತರು ತಮ್ಮ ಜಮೀನುಗಳಲ್ಲಿ ಸಸಿ ನೆಡುವಂತೆ ಮಾಡಲು ಸಹ ನಾನು ಉದ್ದೇಶಿಸಿದ್ದೇನೆ. ಈ ಉದ್ದೇಶಕ್ಕಾಗಿ, 1993-94ನೇ ಸಾಲಿನಲ್ಲಿ ಅವರಿಗೆ ಮೂರು ಕೋಟಿ ಸಸಿಗಳನ್ನು ಒದಗಿಸಲಾಗಿತ್ತು. ಈಗ ಆರು ಕೋಟಿ ಸಸಿಗಳನ್ನು ಒದಗಿಸಲಾಗುವುದು. 1995-96ನೇ ಸಾಲಿನ ಹಂಗಾಮಿನಲ್ಲಿ ನೆಡುವ ಉದ್ದೇಶಕ್ಕಾಗಿ 1994-95ನೇ ಸಾಲಿನಲ್ಲಿ 22 ಕೋಟಿ ಸಸಿಗಳನ್ನು ಬೆಳೆಯಲು ಉದ್ದೇಶಿಸಲಾಗಿದೆ.

99. ಮರ ಬೆಳೆಗಾರರ ಸಹಕಾರಿ ಸಂಘಗಳ ನೆರವನ್ನು ಪಡೆದು ಬಂಜರು ಭೂಮಿಯನ್ನು ಹಸಿರಾಗಿಸುವ ಯೋಜನೆಯನ್ನು ಕೋಲಾರ ಜಿಲ್ಲೆಯಲ್ಲಿ ಜಾರಿಗೆ ತರಲಾಗಿತ್ತು. ಪ್ರಾರಂಭಿಕ ತೊಂದರೆಗಳು ಕಂಡುಬಂದಿದ್ದರೂ, ಈ ಯೋಜನೆಯು, ಗ್ರಾಮೀಣ ಜನರಲ್ಲಿ ತುಂಬಾ ಆಸಕ್ತಿ ಮೂಡಿಸಿದೆ. ಮರ ಬೆಳೆಗಾರರ ಸಹಕಾರ ಸಂಘಗಳಿಗೆ ಭೂಮಿಯನ್ನು ಗುತ್ತಿಗೆಗೆ ನೀಡುವುದಕ್ಕೆ ಒಪ್ಪುವ ಮೂಲಕ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಈ ಕಾರ್ಯಕ್ರಮವನ್ನು ವಿಸ್ತರಿಸುವುದಕ್ಕೆ ಬೇಕಾಗುವ ನೆರವು ಮತ್ತು ಬೆಂಬಲವನ್ನು ನೀಡಲು ನಾವು ಉದ್ದೇಶಿಸಿದ್ದೇವೆ.

100. ಅರಣ್ಯ ನಿರ್ಮಾಣ ಕಾರ್ಯವನ್ನು ತ್ವರಿತಗೊಳಿಸಲು ರಾಜ್ಯವು ಮಾಡುತ್ತಿರುವ ಪ್ರಯತ್ನವನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಮೂಲಕ ಮತ್ತಷ್ಟು ಬಲಪಡಿಸಲಾಗುವುದು. 127 ಕೋಟಿ ರೂಪಾಯಿ ಸಾಂಸ್ಥಿಕ ಹಣಕಾಸಿನ ನೆರವು ಇರುವ ಒಟ್ಟು 191 ಕೋಟಿರೂಪಾಯಿ ವೆಚ್ಚದಲ್ಲಿ 43,000 ಹೆಕ್ಟೇರು ಪ್ರದೇಶದಲ್ಲಿ ವನ್ಯನಿರ್ಮಾಣ ಮಾಡುವ ಸಲುವಾಗಿ ನಿಗಮವು ಈಗಾಗಲೇ ಯೋಜನೆಗಳನ್ನು

ಸಿದ್ಧಪಡಿಸಿದೆ. ಈ ಯೋಜನೆಗಳ ಪೈಕಿ, 15 ಕೋಟಿ ರೂಪಾಯಿ ವೆಚ್ಚದಲ್ಲಿ 5000 ಹೆಕ್ಟೇರು ಪ್ರದೇಶದ ಅಭಿವೃದ್ಧಿ ಯೋಜನೆಗೆ ನಬಾರ್ಡ್ ಒಪ್ಪಿಗೆ ನೀಡಿದೆ. 1994-95ನೇ ಸಾಲಿನಲ್ಲಿ ಸಸಿ ನೆಡುವ ಕಾರ್ಯ ಮಾಡಲಾಗುವುದು. ಇನ್ನುಳಿದ ಪ್ರಸ್ತಾವಗಳಿಗೆ 1994-95ರಲ್ಲೇ ನಬಾರ್ಡ್ ಒಪ್ಪಿಗೆ ನೀಡುವ ಸಂಭವವಿದೆ. ಈ ಯೋಜನೆಗಳನ್ನು 5 ರಿಂದ 8 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲಾಗುವುದು. 5 ವರ್ಷಗಳ ಅವಧಿಯಲ್ಲಿ 5000 ಹೆಕ್ಟೇರ್ ಪ್ರದೇಶದಲ್ಲಿ 8.6 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಗೋಡಂಬಿಯನ್ನು ಬೆಳೆಯಲು ಸಹ ಉದ್ದೇಶಿಸಲಾಗಿದೆ. ಈ ಯೋಜನೆಯು ಸಹ 1994-95ರಲ್ಲಿ ಪ್ರಾರಂಭವಾಗಲಿದೆ.

ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು

101. ಸರ್ಕಾರ ರಾಜ್ಯದಲ್ಲಿ ಇರುವ ಜಾನುವಾರುಗಳಿಗೆ ಸಾಕಷ್ಟು ಪಶು ವೈದ್ಯ ಸೇವೆ ಒದಗಿಸಲು ತುಂಬಾ ಪ್ರಾಮುಖ್ಯ ನೀಡುತ್ತಲಿದೆ. 1993-94ರ ಬಜೆಟ್‌ನಲ್ಲಿ ತಿಳಿಸಿದಂತೆ, ನಾವು ಈಗಾಗಲೇ 200 ಪ್ರಾಥಮಿಕ ಪಶು ವೈದ್ಯ ಕೇಂದ್ರಗಳನ್ನು ಪ್ರಾರಂಭಿಸಿದ್ದೇವೆ ಮತ್ತು 80 ಕೇಂದ್ರಗಳನ್ನು ಪಶು ವೈದ್ಯ ಔಷಧಾಲಯ ಮತ್ತು ಆಸ್ಪತ್ರೆಗಳಾಗಿ ಮೇಲ್ದರ್ಜೆಗೇರಿಸಿದ್ದೇವೆ. 1993-94ರಲ್ಲಿ ಈ ಬಾಬಿಗೆ ಒದಗಿಸಿದ್ದ 8.00 ಕೋಟಿ ರೂಪಾಯಿಗಳಿಗೆ ಪ್ರತಿಯಾಗಿ ಈ ವರ್ಷ 11.69 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಒದಗಿಸುವ ಮೂಲಕ ಈ ಪ್ರಯತ್ನವನ್ನು ಮತ್ತಷ್ಟು ಹೆಚ್ಚಿಸಿ 300 ಪ್ರಾಥಮಿಕ ಪಶುವೈದ್ಯ ಕೇಂದ್ರಗಳನ್ನು ಪ್ರಾರಂಭಿಸಲು ಮತ್ತು 100 ಕೇಂದ್ರಗಳನ್ನು ಪಶುವೈದ್ಯ ಔಷಧಾಲಯ ಹಾಗೂ ಆಸ್ಪತ್ರೆಗಳಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಿದ್ದೇನೆ. ಈ ಪ್ರಮಾಣದಲ್ಲಿ ನಾವು ಕಾರ್ಯಪ್ರವೃತ್ತರಾದರೆ ರಾಷ್ಟ್ರೀಯ ಕೃಷಿ ಆಯೋಗವು ಶಿಫಾರಸು ಮಾಡಿರುವ ಸೂತ್ರಗಳ ಪ್ರಕಾರ, 8ನೇ ಯೋಜನಾ ಅವಧಿಯಲ್ಲಿ ಇಡೀ ರಾಜ್ಯಕ್ಕೆ ಸಾಕಷ್ಟು ಪಶುವೈದ್ಯ ಸೇವೆ ಒದಗಿಸಲು ಸಮರ್ಥರಾಗುತ್ತೇವೆ. ಮೂಲಭೂತ ಸೌಲಭ್ಯಗಳನ್ನು ಒದಗಿಸುವುದೇ ಅಲ್ಲದೆ, 1993-94ರಲ್ಲಿ 273 ಪಶುವೈದ್ಯರನ್ನು ನೇಮಕ ಮಾಡುವ ಮೂಲಕ ಮಾನವ ಶಕ್ತಿಯನ್ನು ಬಲಪಡಿಸುವುದಕ್ಕೆ ಸಹ ನಾವು ಪ್ರಯತ್ನಿಸುತ್ತೇವೆ. ಇದರಿಂದ ರಾಜ್ಯದ ಪ್ರತಿಯೊಂದು ಪಶುವೈದ್ಯ ಆಸ್ಪತ್ರೆಗೆ ಮತ್ತು ಔಷಧಾಲಯಗಳಿಗೆ ಪಶು ವೈದ್ಯರನ್ನು ಒದಗಿಸಲು ನಮಗೆ ಸಾಧ್ಯವಾಗುತ್ತದೆ.

ಕುರಿ ಮತ್ತು ಉಣ್ಣೆ ಅಭಿವೃದ್ಧಿ

102. ಕುರಿ ಮತ್ತು ಉಣ್ಣೆ ಅಭಿವೃದ್ಧಿ ವಲಯದಲ್ಲಿ ಇತರ ವಲಯಗಳಂತೆ ಅಭಿವೃದ್ಧಿ ಆಗಿಲ್ಲ, ನಮ್ಮ ಗ್ರಾಮೀಣ ಜನರಲ್ಲಿ ಹೆಚ್ಚಿನವರು ಈ ವೃತ್ತಿಯ ಮೇಲೆ ಅವಲಂಬಿಸಿರುವುದು ದುರದೃಷ್ಟಕರ ಸಂಗತಿ. ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಮಂಡಳಿಯನ್ನು ಬಲಪಡಿಸಲು ಮತ್ತು 1974ರ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿ ತಂದು, ಅಭಿವೃದ್ಧಿ ಚಟುವಟಿಕೆಗಳಿಗೆ ಮಂಡಳಿಯು ಹಣಕಾಸು ಸಂಸ್ಥೆಗಳಿಂದ ಸಂಪನ್ಮೂಲಗಳನ್ನು ಪಡೆಯುವುದು ಸಾಧ್ಯವಾಗುವಂತೆ ಮಾಡಲು ನಾನು ಉದ್ದೇಶಿಸಿದ್ದೇನೆ. ಕುರಿ ಮತ್ತು ಉಣ್ಣೆ ಅಭಿವೃದ್ಧಿ ಮಂಡಳಿಗೆ ಮೂಲಧನವಾಗಿ 5.00 ಕೋಟಿ ರೂಪಾಯಿಗಳನ್ನು ಒದಗಿಸಲು ನಾನು ಉಉದ್ದೇಶಿಸಿದ್ದೇನೆ. ಇದರಿಂದಾಗಿ ರಾಜ್ಯದ ಸುಮಾರು 4 ಲಕ್ಷ ಕುರಿ ಸಾಕಣೆದಾರರಿಗೆ ಪ್ರಯೋಜನವಾಗುವಂತೆ ಸಮಗ್ರ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸುಮಾರು 20.00 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಸಂಪನ್ಮೂಲಗಳನ್ನು ಹಣಕಾಸು ಸಂಸ್ಥೆಗಳಿಂದ ಪಡೆದುಕೊಳ್ಳುವುದು ಮಂಡಳಿಗೆ ಸಾಧ್ಯವಾಗುತ್ತದೆ.

ಕೋಳಿ ಸಾಕಣೆ ಅಭಿವೃದ್ಧಿ

103. ಕೋಳಿ ಸಾಕಣೆ ಅಭಿವೃದ್ಧಿಯು ಬಹುಮಟ್ಟಿಗೆ ರಾಜ್ಯದ ನಗರ ಪ್ರದೇಶಗಳು ಮತ್ತು ನಗರದ ಸುತ್ತಮುತ್ತಲಿನ ಪ್ರದೇಶಗಳಿಗೆ ಸೀಮಿತವಾಗಿತ್ತು. ಗ್ರಾಮೀಣ ಪ್ರದೇಶದಲ್ಲಿ ಕೋಳಿ ಸಾಕಣೆ ಅಭಿವೃದ್ಧಿಗೆ ಈವರೆಗೆ ಸಾಕಷ್ಟು ಗಮನ ಕೊಟ್ಟಿಲ್ಲ. ಸಹಕಾರ ಸಂಘಗಳ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಕೋಳಿ ಸಾಕಣೆ ವಲಯವನ್ನು ಬೃಹತ್ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಲು ನಾನು ಉದ್ದೇಶಿಸಿದ್ದೇನೆ. ಈ ಉದ್ದೇಶಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಮೀಸಲಿಡಲು ಉದ್ದೇಶಿಸಲಾಗಿದೆ. ಈ ಕಾರ್ಯಚಟುವಟಿಕೆಯನ್ನು ಹುಬ್ಬಳ್ಳಿ-ಧಾರವಾಡ, ಗುಲ್ಬರ್ಗ, ಬಳ್ಳಾರಿ, ಮಂಗಳೂರು, ಮೈಸೂರು, ಬೆಂಗಳೂರು ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ 1994-95ನೇ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಇದರ ಮೂಲಕ ವಿದ್ಯಾವಂತ ನಿರುದ್ಯೋಗಿ ಗ್ರಾಮೀಣ ಯುವಕರಿಗೆ ಅವರವರ ಗ್ರಾಮಗಳಲ್ಲಿಯೇ ಉದ್ಯೋಗ ಒದಗಿಸಲು ನಮಗೆ ಸಾಧ್ಯವಾಗುತ್ತದೆ.

ಮೀನುಗಾರಿಕೆ

104. 300 ಕಿ.ಮೀ. ಸುಂದರ ಕರಾವಳಿ ತೀರ, 8000 ಹೆಕ್ಟೇರುಗಳಷ್ಟು ಉಪ್ಪು ನೀರು ಸಂಪನ್ಮೂಲ ಮತ್ತು 4.60 ಲಕ್ಷ ಹೆಕ್ಟೇರುಗಳಷ್ಟು ಪ್ರದೇಶಗಳಲ್ಲಿ ಒಳನಾಡು ಜಲಸಂಪತ್ತು ಇರುವ ಕರ್ನಾಟಕದಲ್ಲಿ ಕಡಲು ಹಾಗೂ ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ವಿಪುಲ ಅವಕಾಶ ಇದೆ. ಮೀನುಗಾರಿಕೆ ಕಾರ್ಯಾಚರಣೆಯ ಪ್ರದೇಶ ಹಾಗೂ ಈ ಉದ್ಯಮದಲ್ಲಿ ತೊಡಗಿರುವ ವ್ಯಕ್ತಿಗಳ ಸಂಖ್ಯೆಯು ಎಷ್ಟೊಂದು ಅಗಾಧ ಪ್ರಮಾಣದ್ದಾಗಿದೆ ಎಂದರೆ ಸಾಧಾರಣ ಪ್ರಮಾಣದ ಯಶಸ್ಸನ್ನು ಸಾಧಿಸಬೇಕಾದರೂ ಕೂಡ ಖಾಸಗಿ ವಲಯವು ಪಾಲ್ಗೊಳ್ಳುವುದು ಅತ್ಯವಶ್ಯಕವೆಂಬಷ್ಟು ಬೃಹತ್ ಪ್ರಮಾಣದ್ದಾಗಿದೆ. ಖಾಸಗಿ ವ್ಯಕ್ತಿಗಳು ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುವ ಸಲುವಾಗಿ ಮೀನು ಉತ್ಪಾದನೆಗೆ ಒಂದು ಹೆಕ್ಟೇರು ಫಾರ್ಮ್‌ನ್ನು ನಿರ್ಮಾಣ ಮಾಡಲು 1 ಲಕ್ಷ ರೂಪಾಯಿ ಸಹಾಯಧನ ನೀಡಲಾಗುವುದು. ಶಾಖ ನಿರೋಧಕ ಪೆಟ್ಟಿಗೆಗಳನ್ನು ಖರೀದಿಸಲು 400 ಮೀನುಗಾರ ಮಹಿಳೆಯರಿಗೆ ಶೇಕಡಾ 30ರಷ್ಟು ಸಹಾಯಧನವನ್ನು ನೀಡುವ ಮೂಲಕ ನೆರವು ನೀಡಲಾಗುವುದು. ಹಾಗೆಯೇ 500 ಮೀನುಗಾರರಿಗೆ ಶಾಖ ನಿರೋಧಕ ಪೆಟ್ಟಿಗೆಯನ್ನು ಮತ್ತು ಸೈಕಲ್ ಖರೀದಿಸಲು ಶೇಕಡಾ 30 ರಷ್ಟು ಸಹಾಯಧನ ನೀಡಲಾಗುವುದು. ಮೀನಿನ ಮರಿ ಉತ್ಪಾದನೆ, ಮೀನು ಸಂಸ್ಕರಣೆ ಮತ್ತು ಕ್ರಯವಿಕ್ರಯದಂಥ ವಿವಿಧ ಚಟುವಟಿಕೆಗಳಲ್ಲಿ 500 ಮಹಿಳಾ ಉದ್ಯಮಿಗಳಿಗೆ 10 ದಿನಗಳ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಮೀನುಗಾರ ಮಹಿಳೆಯರ ಸಹಕಾರ ಸಂಘಗಳಿಗೆ ಹಣಕಾಸು ನೆರವನ್ನು ನೀಡಲಾಗುವುದು.

105. ಪ್ರಸಕ್ತ ಪರ್ಸ್‌ಸೀನ್ ದೋಣಿಗಳನ್ನು ಬಳಸುತ್ತಿದ್ದು, ಆಳವಾದ ಸಮುದ್ರದಲ್ಲಿ ಮೀನು ಹಿಡಿಯಲು ಟ್ರಾಲರ್‌ಗಳನ್ನು ಪಡೆಯಲು ಇಚ್ಛಿಸುವ ಮೀನುಗಾರರ ಸಹಕಾರ ಸಂಘಗಳು ಅಥವಾ ಮೀನುಗಾರರ ಸಮೂಹಕ್ಕೆ ಸರ್ಕಾರವು ಹಣಕಾಸು ನೆರವು ನೀಡುತ್ತದೆ. ನೀಡಲಾಗುವ ನೆರವು, ಮೂಲ ಬಂಡವಾಳ ಹಣದ ರೂಪದಲ್ಲಿರುತ್ತದೆ. ಇದರಿಂದ ಬ್ಯಾಂಕುಗಳು: ಹಣಕಾಸು ಸಂಸ್ಥೆಗಳಿಂದ ಹಣಕಾಸು ಪಡೆಯಲು ಅವರಿಗೆ ಸಾಧ್ಯ ಮಾಡಿಕೊಟ್ಟಂತಾಗುತ್ತದೆ. ಉತ್ತಮ ಕ್ರಯವಿಕ್ರಯ ನಡೆಸಲು ಮಹಿಳಾ ಸಹಕಾರ ಸಂಘಗಳಿಗೆ ನೆರವು ನೀಡುವ ಸಲುವಾಗಿ ಅಂತಹ ಸಂಘಗಳು ವ್ಯಾನುಗಳನ್ನು ಖರೀದಿಸುವುದಕ್ಕೆ ಸರ್ಕಾರವು ಸಬ್ಸಿಡಿ ನೀಡುತ್ತದೆ.

106. ಕಡಲು ಮತ್ತು ಒಳನಾಡು ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ

ಮೂಲಕ ಸಾಗರ ದೀಪ ಯೋಜನೆಯಡಿಯಲ್ಲಿ 6,000 ಮೀನುಗಾರರಿಗೆ ನೆರವು ನೀಡಲಾಗುವುದು. 1994-95ರಲ್ಲಿ, ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳಿಗೆ ಮೋಟಾರು ಅಳವಡಿಸುವ ಯೋಜನೆಯಡಿಯಲ್ಲಿ 200 ಮೀನುಗಾರರಿಗೆ ನೆರವು ನೀಡಲಾಗುವುದು ಮತ್ತು ಉಳಿತಾಯ ಹಾಗೂ ಪರಿಹಾರ ಯೋಜನೆಯ ಅಡಿಯಲ್ಲಿ 5,500 ಮೀನುಗಾರರಿಗೆ ನೆರವು ನೀಡಲಾಗುವುದು. ಈ ಎರಡು ಯೋಜನೆಗಳಿಗೆ ಆ ಬಜೆಟ್‌ನಲ್ಲಿ 60 ಲಕ್ಷ ರೂ.ಗಳನ್ನು ಒದಗಿಸಲಾಗಿದೆ. ಆಳಸಮುದ್ರದಲ್ಲಿ ಮತ್ತು ಕಡಲ ತೀರದಿಂದ ದೂರದಲ್ಲಿ ಮೀನು ಹಿಡಿಯುವುದನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮೀನುಗಾರ ಯುವಕರಿಗೆ ಆಳ ಸಮುದ್ರದಲ್ಲಿ ಮತ್ತು ತೀರದಿಂದ ದೂರದಲ್ಲಿ ಮೀನು ಹಿಡಿಯುವ ಬಗ್ಗೆ ತರಬೇತಿ ನೀಡಲಾಗುವುದು ಅಲ್ಲದೆ ತೀರದಿಂದ ದೂರದ ನಡುಗಡಲಿನಲ್ಲಿ ಮೀನು ಹಿಡಿಯುವುದಕ್ಕೆ ಬಳಸುವ ಎಫ್‌ಆರ್‌ಪಿ ದೋಣಿಗಳನ್ನು ಖರೀದಿಸಲು ಅವರಿಗೆ ಸಬ್ಸಿಡಿ ನೀಡಲಾಗುವುದು. ತೀರದಿಂದ ದೂರದ ಕಡಲಿನಲ್ಲಿ ಮತ್ತು ಆಳ ಸಮುದ್ರದಲ್ಲಿ ಮೀನು ಹೆಚ್ಚಿನ ಪ್ರಮಾಣದಲ್ಲಿ ದೊರೆಯುವ ಪ್ರದೇಶಗಳನ್ನು ಗುರುತಿಸಲು ಫಿಷ್-ಫೈಂಡರ್ಸ್ ಮತ್ತು ರೇಡಿಯೋ-ಟೆಲಿಫೋನ್ ಸಾಧನಗಳನ್ನು ಖರೀದಿಸುವುದಕ್ಕೆ ಶೇಕಡ 25ರಷ್ಟು ಸಬ್ಸಿಡಿ ನೀಡಲಾಗುವುದು. ಸಮುದ್ರದಲ್ಲಿ ಮೀನು ಹೆಚ್ಚಿನ ಪ್ರಮಾಣದಲ್ಲಿ ದೊರೆಯುವಂಥ ಪ್ರದೇಶಗಳ ಬಗ್ಗೆ ಉಪಗ್ರಹ ದೂರ ಸಂವೇದಿ ವ್ಯವಸ್ಥೆ ಮೂಲಕ ಪಡೆದ ಮಾಹಿತಿಯನ್ನು ತ್ವರಿತವಾಗಿ ಮೀನುಗಾರರಿಗೆ ತಿಳಿಸುವುದಕ್ಕಾಗಿ ಮಂಗಳೂರು, ಕಾರವಾರ ಮತ್ತು ತದ್ರಿ ಮೀನುಗಾರಿಕೆ ಬಂದರುಗಳಲ್ಲಿ ಫಾಕ್ಸ್ ಯಂತ್ರಗಳನ್ನು ಸ್ಥಾಪಿಸಲಾಗುವುದು.

107. ಕಾರವಾರದಲ್ಲಿ ಉಪ್ಪು ನೀರು ಮೀನು ಕೃಷಿಕರ ಅಭಿವೃದ್ಧಿ ಏಜೆನ್ಸಿಯ ನಿರ್ಮಾಣ ಬಂಡವಾಳ ವೆಚ್ಚದ ಮೇಲೆ ಶೇಕಡ 25ರಷ್ಟು ಸಬ್ಸಿಡಿ ನೀಡುವ ಮೂಲಕ ಉಪ್ಪು ನೀರು ಸೀಗಡಿ ಮೀನು ಫಾರಂಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡಲಾಗುವುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ ಅಂತಹ ಉಪ್ಪುನೀರು ಮೀನು ಕೃಷಿಕರ ಅಭಿವೃದ್ಧಿ ಏಜೆನ್ಸಿಯನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ಸೀಗಡಿ ವ್ಯವಸಾಯವನ್ನು ಇನ್ನೂ ಹೆಚ್ಚಿನ ಪ್ರದೇಶದಲ್ಲಿ ಕೈಗೊಳ್ಳಲು ಕೂಡ ನಾನು ಉದ್ದೇಶಿಸಿದ್ದೇನೆ. ಕೃಷಿ ಜಮೀನುಗಳಲ್ಲಿ ಈ ಕಾರ್ಯಚಟುವಟಿಕೆಯನ್ನು ಕೈಗೊಳ್ಳಲು ಉದ್ದಿಮೆದಾರರಿಗೆ ಸಾಧ್ಯವಾಗುವಂತೆ ಮಾಡಲು ಭೂ ಸುಧಾರಣಾ ಅಧಿನಿಯಮವನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು ಉದ್ದೇಶಿಸಿದ್ದೇನೆ.

108. ಮೀನಿನ ವ್ಯವಸಾಯಕ್ಕಾಗಿ ನೀರು ನಿಂತ ಪ್ರದೇಶಗಳ ಅಭಿವೃದ್ಧಿಯ ಒಂದು ಹೊಸ ಯೋಜನೆಯನ್ನು ಮುಖ್ಯವಾಗಿ ನೀರು ಪೂರೈಕೆ ಪ್ರದೇಶಗಳಲ್ಲಿ ಪ್ರಾರಂಭಿಸಲು ಕೂಡ ನಾನು ಉದ್ದೇಶಿಸಿದ್ದೇನೆ.

ಸಹಕಾರ

109. ಸಹಕಾರಿ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ : ಪಂಗಡಗಳ ಜನರನ್ನು ಮತ್ತು ಮಹಿಳೆಯರನ್ನು ಹೆಚ್ಚು ಹೆಚ್ಚಾಗಿ ಸದಸ್ಯರನ್ನಾಗಿ ಮಾಡುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳುವುದಕ್ಕಾಗಿ ಕಳೆದ ವರ್ಷ ನಾವು ಆಶ್ವಾಸನೆ ನೀಡಿದ್ದೆವು. 1993-94ನೇ ಸಾಲಿನಲ್ಲಿ 60.97 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಮತ್ತು ಪರಿಶಿಷ್ಟ/ಜಾತಿ: ಪಂಗಡಗಳ 75,000 ವ್ಯಕ್ತಿಗಳನ್ನು ಸಹಕಾರಿ ಸಂಘಗಳ ಸದಸ್ಯರನ್ನಾಗಿ ಮಾಡುವ ಗುರಿ ಹಾಕಿಕೊಳ್ಳಲಾಗಿತ್ತು. ಈ ಗುರಿಯನ್ನು 94ರ ಮಾರ್ಚ್ ಕೊನೆಯ ಹೊತ್ತಿಗೆ ಸಾಧಿಸುವ ನಂಬಿಕೆ ನಮಗಿದೆ. 94-95ರಲ್ಲೂ ಈ ಯೋಜನೆಗೆ ಹೆಚ್ಚು ಒತ್ತು ನೀಡಿ ಮುಂದುವರೆಸಲಾಗುವುದು. ಸಹಕಾರಿ ಸಂಘಗಳಲ್ಲಿ ಪರಿಶಿಷ್ಟ ಜಾತಿಪಂಗಡಗಳ ಜನರನ್ನು ಸದಸ್ಯರನ್ನಾಗಿ ಮಾಡುವುದಕ್ಕೆ 1 ಕೋಟಿ ರೂಪಾಯಿ ಒದಗಿಸಲಾಗಿದೆ. ಮಹಿಳೆಯರನ್ನು ಸಹಕಾರ ಸಂಘಗಳ ಸದಸ್ಯರನ್ನಾಗಿ ಮಾಡಲು 50ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

5 ಹೊಸ ಮಹಿಳಾ ನಗರ ಸಹಕಾರಿ ಬ್ಯಾಂಕುಗಳನ್ನು ಸ್ಥಾಪಿಸಲು ಕೂಡ ಆಲೋಚಿಸಿದ್ದು ಅವುಗಳಿಗೆ ಪ್ರತಿಯೊಂದಕ್ಕೆ 2ಲಕ್ಷ ರೂಪಾಯಿಗಳ ಹಣಕಾಸು ನೆರವು ನೀಡಲು ಉದ್ದೇಶಿಸಲಾಗಿದೆ. ವಿವಿಧ ಮಹಿಳಾ ಸಹಕಾರಿ ಸಂಘಗಳಿಗೆ ನೆರವು ನೀಡುವುದಕ್ಕಾಗಿ 43 ಲಕ್ಷ ರೂಪಾಯಿ ಮೊತ್ತವನ್ನು ಒದಗಿಸಲಾಗಿದೆ.

110. ಹಿಂದಿನ ವರ್ಷ ಆಶ್ವಾಸನೆ ನೀಡಿದ್ದಂತೆ ಸರ್ಕಾರವು, ವಾಣಿಜ್ಯ ಬ್ಯಾಂಕುಗಳು, ಪ್ರಾಥಮಿಕ ಸಹಕಾರಿ ಕೃಷಿ ಗ್ರಾಮೀಣ ಅಭಿವೃದ್ಧಿ (ಪಿಸಿಎಆರ್‌ಡಿ) ಬ್ಯಾಂಕು ಮೊದಲಾದ ಬ್ಯಾಂಕುಗಳಿಂದ ಸಾಲ ಪಡೆದಿರುವ ಎಲ್ಲ ರೈತರಿಗೆ 50,000 ರೂಪಾಯಿಗಳವರೆಗಿನ ಸಾಲದ ಮೇಲೆ ಸ್ಟಾಂಪು ಡ್ಯೂಟಿ ವಿನಾಯಿತಿ ನೀಡಿದೆ.

111. 1959ರ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮಕ್ಕೆ ವ್ಯಾಪಕ ತಿದ್ದುಪಡಿ ತರುವುದಕ್ಕಾಗಿ ಎರಡು ಕರಡು ವಿಧೇಯಕಗಳನ್ನು ಸಿದ್ಧಪಡಿಸಲಾಗಿದೆ. ಈ ವಿಧೇಯಕಗಳ ಕೆಲವು ಮುಖ್ಯ ಲಕ್ಷಣಗಳು ಹೀಗಿವೆ :

ಎ) ಸಹಕಾರಿ ಸಂಘಗಳ ಸದಸ್ಯತ್ವ ಹಾಗೂ ಆಡಳಿತ ಸಮಿತಿಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಶೇ. 18ರಷ್ಟು ಪರಿಶಿಷ್ಟ ಪಂಗಡಗಳಿಗೆ ಶೇ. 3ರಷ್ಟು ಹಿಂದುಳಿದ ವರ್ಗಗಳಿಗೆ ಶೇ. 27 ರಷ್ಟು ಉಳಿದ ಶೇ. 50ರಷ್ಟು ಸಾಮಾನ್ಯ ಪ್ರವರ್ಗಕ್ಕೆ ಮೀಸಲಿಡುವುದು.

ಬಿ) ಈ ಪ್ರತಿಯೊಂದು ವರ್ಗದಲ್ಲೂ ಮಹಿಳೆಯರಿಗೆ ಶೇ. 25ರಷ್ಟು ಮೀಸಲಾತಿ ಕಲ್ಪಿಸಲಾಗಿದೆ.

ಸಿ) ಅಪೆಕ್ಸ್ ಮತ್ತು ಫೆಡರೇಷನ್ ಸೊಸೈಟಿಗಳ ಹೊರತು ಹಾಗೂ ಸರ್ಕಾರವು ಸಾಲ / ಬಂಡವಾಳವಾಗಿ ಕನಿಷ್ಠ ಪಕ್ಷ 50 ಲಕ್ಷ ರೂಪಾಯಿಗಳನ್ನು ನೀಡಿರುವಂಥ ಅಥವಾ ಅಷ್ಟೇ ಸಾಲಕ್ಕೆ ಗ್ಯಾರಂಟಿ ನೀಡಿರುವಂಥ ಇತರ ಸಂಘಗಳ ಹೊರತು ಬೇರೆ ಸಹಕಾರ ಸಂಘಗಳ ಆಡಳಿತ ಸಮಿತಿಗಳಿಗೆ ಸರ್ಕಾರವು ನಾಮನಿರ್ದೇಶನ ಮಾಡುವಂತಿಲ್ಲ; ನಾಮನಿರ್ದೇಶನ ಮಾಡುವುದಿದ್ದರೆ; ಅದು ಸರ್ಕಾರಿ ನೌಕರರ ನಾಮನಿರ್ದೇಶನಕ್ಕೆ ಸೀಮಿತವಾಗಿರುತ್ತದೆ.

ಡಿ) ಸರ್ಕಾರವು 121ನೇ ಪ್ರಕರಣವನ್ನು ಬಳಸಿಕೊಳ್ಳುವುದರ ಮೇಲೆ ನಿರ್ಬಂಧ ವಿಧಿಸಲಾಗಿದೆ.

ಕೃಷಿ ಉತ್ಪನ್ನ ಕ್ರಯವಿಕ್ರಯ

112. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕೃಷಿ ಉತ್ಪನ್ನಗಳ ಕ್ರಯವಿಕ್ರಯಕ್ಕೆ ಅತಿ ಮುಖ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುತ್ತವೆ. ಮುಂಬರುವ ವರ್ಷದಲ್ಲಿ ಈ ಜಾಲವನ್ನು ಮತ್ತಷ್ಟು ಬಲಪಡಿಸಲು ನಾನು ಕೆಲವು ಮುಖ್ಯವಾದ ಕ್ರಮಗಳನ್ನು ಕೈಕೊಳ್ಳಲು ಉದ್ದೇಶಿಸಿದ್ದೇನೆ.

ಎ) ಒಂದೇ ವಸ್ತುವಿನ ಮೇಲೆ ಹಲವು ಹಂತದಲ್ಲಿ ಶುಲ್ಕ ವಿಧಿಸುವುದನ್ನು ತಪ್ಪಿಸಲು ಮಾರುಕಟ್ಟೆ ಶುಲ್ಕ ಪದ್ಧತಿಯನ್ನು ಸರಳಗೊಳಿಸುವುದು;

ಬಿ) 16,000 ಹಮಾಲರು ಮತ್ತು ತೂಕ ಮಾಡುವ ವ್ಯಕ್ತಿಗಳಿಗೆ ಅನ್ವಯವಾಗುವ -ಭಾರತದಲ್ಲಿಯೇ ಪ್ರಪ್ರಥಮವಾದ - ಒಂದು ವಿಶಿಷ್ಟ ವಿಮಾ ಯೋಜನೆ

ಸಿ) ಮುಖ್ಯ ಮಾರುಕಟ್ಟೆ ಅಂಗಳಗಳಲ್ಲಿ 10 ಹಮಾಲ ಅತಿಥಿ ಗೃಹಗಳ ನಿರ್ಮಾಣ

ಡಿ) ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿಯು ರಫ್ತು ಉತ್ತೇಜನಾ ಕಾರ್ಯಕ್ಕೈಗೊಳ್ಳಲು ಅಧಿನಿಯಮಕ್ಕೆ ತಿದ್ದುಪಡಿ ಮಾಡುವುದು

ಇ) 4 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ, ಕಣಗಳು, ಕುಡಿಯುವ ನೀರು, ನೈರ್ಮಲ್ಯ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಮೂಲಕ 100 ಗ್ರಾಮೀಣ ಮಾರುಕಟ್ಟೆಗಳ ಅಭಿವೃದ್ಧಿ

ಎಫ್) 100 ಗ್ರಾಮಾಂತರ ಗೋಡೌನುಗಳ ನಿರ್ಮಾಣ

ಜಿ) ಹಣ್ಣು ಮತ್ತು ತರಕಾರಿಗಳಿಗಾಗಿ ಬೆಂಗಳೂರಿನಲ್ಲಿ ಒಂದು ವಿಶೇಷ ಸರಕು ಮಾರುಕಟ್ಟೆ ಸ್ಥಾಪನೆ

ಹೆಚ್) ಮಂಗಳೂರು, ಹುಬ್ಬಳ್ಳಿ, ಮೈಸೂರು ಮತ್ತು ರಾಯಚೂರಿನಲ್ಲಿ ಹೊಸ ಮಾರುಕಟ್ಟೆ ಅಂಗಳಗಳ ನಿರ್ಮಾಣ.

ಗ್ರಾಮೀಣ ನೀರು ಸರಬರಾಜು

113. ಗ್ರಾಮೀಣ ಪ್ರದೇಶಗಳಿಗೆ ಸುರಕ್ಷಿತ ಕುಡಿಯುವ ನೀರನ್ನು ಪೂರೈಕೆ ಮಾಡುವುದು ಗ್ರಾಮೀಣ ಅಭಿವೃದ್ಧಿಯ ಅತ್ಯಂತ ಆದ್ಯತೆಯ ಉದ್ದೇಶಗಳಲ್ಲಿ ಒಂದು. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ವ್ಯವಸ್ಥೆಗಾಗಿ ಪ್ರಸ್ತುತ ವರ್ಷ ಬಜೆಟ್‌ನಲ್ಲಿ 108.60 ಕೋಟಿ ರೂ. ಹಂಚಿಕೆ ಮಾಡಲಾಗಿತ್ತು. ಇದನ್ನು 1994-95ರಲ್ಲಿ 124 ಕೋಟಿ ರೂ. ಗಳಿಗೆ ಹೆಚ್ಚಿಸಲಾಗಿದೆ. ವಿಶ್ವಬ್ಯಾಂಕ್ ನೆರವಿನೊಂದಿಗೆ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಯ ವ್ಯಾಪ್ತಿಗೆ ಇನ್ನಷ್ಟು ಪ್ರದೇಶಗಳನ್ನು ತರಲಾಗಿದೆ. ಈ ಯೋಜನೆಯನ್ನು ಮುಂದಿನ ಆರು ವರ್ಷಗಳ ಅವಧಿಯಲ್ಲಿ 447.20 ಕೋಟಿ ರೂ.ಗಳ ವೆಚ್ಚದಲ್ಲಿ 12 ಜಿಲ್ಲೆಗಳ 1200 ಗ್ರಾಮಗಳಲ್ಲಿ ಕಾರ್ಯಗತಗೊಳಿಸಲಾಗುವುದು.

114. ಹಿಂದಿನ ವರ್ಷ ತಿಳಿಸಿದ್ದಂತೆ, ನೆದರ್‌ಲ್ಯಾಂಡ್ ಸರ್ಕಾರದ ನೆರವಿನಲ್ಲಿ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ ಎಂಬ ಯೋಜನೆಗೆ ಈ ವರ್ಷ ಈಗಾಗಲೇ ಅನುಮೋದನೆ ನೀಡಲಾಗಿದೆ. ಈ ಯೋಜನೆಯನ್ನು 67.70 ಕೋಟಿ ರೂ.ಗಳ ವೆಚ್ಚದಲ್ಲಿ ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳ 191 ಗ್ರಾಮಗಳಲ್ಲಿ ಕಾರ್ಯಗತಗೊಳಿಸಲಾಗುವುದು.

115. ಡಾನಿಡಾ ನೆರವಿನೊಂದಿಗೆ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯನ್ನು ರಾಜ್ಯದ ಮೂರು ತಾಲ್ಲೂಕುಗಳಲ್ಲಿ ಪ್ರಾಯೋಗಿಕವಾಗಿ ಕಾರ್ಯಗತಗೊಳಿಸಲಾಗುತ್ತಿದೆ. ಅದರ ಎರಡನೇ ಹಂತದಲ್ಲಿ, ಇಡೀ ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳನ್ನು ಈ ಯೋಜನೆಯ ವ್ಯಾಪ್ತಿಗೆ ತರುವ ಪ್ರಸ್ತಾವವು ಪರಿಶೀಲನೆಯಲ್ಲಿದೆ.

ಉದ್ಯೋಗಾವಕಾಶ ಕಲ್ಪಿಸುವುದು

116. ಜವಾಹರ್ ರೋಜ್‌ಗಾರ್ ಯೋಜನೆಯನ್ನು 1994-95ನೇ ಸಾಲಿನಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಮುಂದುವರಿಸಲಾಗುವುದು. ಇದಕ್ಕಾಗಿ 204.15 ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದೆ. ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸುವ ಕಾರ್ಯಚಟುವಟಿಕೆಗಳನ್ನು ತೀವ್ರಗೊಳಿಸುವ ಸಲುವಾಗಿ ಎರಡನೇ ಹಂತದ ನೆರವನ್ನು ನೀಡಲು ಎಂಟು ಜಿಲ್ಲೆಗಳನ್ನು, ಎಂದರೆ ಕೋಲಾರ, ತುಮಕೂರು, ಚಿತ್ರದುರ್ಗ, ಬಿಜಾಪುರ, ಧಾರವಾಡ, ಗುಲ್ಬರ್ಗ, ಬಳ್ಳಾರಿ ಮತ್ತು ಬೀದರ್ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ.

117. ಪ್ರಸ್ತುತ ಹಣಕಾಸು ವರ್ಷದಲ್ಲಿ, ಉದ್ಯೋಗ ಭರವಸೆ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯನ್ವಯ, ಒಂದು ಕುಟುಂಬದಲ್ಲಿನ ಇಬ್ಬರು

ವಯಸ್ಕರಿಗೆ ವರ್ಷದಲ್ಲಿ 100 ದಿನಗಳ ಉದ್ಯೋಗ ದೊರೆಯುತ್ತದೆ. ಇದನ್ನು ರಾಜ್ಯದ 94 ತಾಲ್ಲೂಕುಗಳಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. 1994-95ನೇ ಸಾಲಿಗೆ ಪ್ರಾರಂಭಿಕವಾಗಿ 14.65 ಕೋಟಿ ರೂ.ಗಳಷ್ಟು ಹಣವನ್ನು ಒದಗಿಸಲಾಗಿದೆ. ಈ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರವು ಇನ್ನೂ 50 ಕೋಟಿ ರೂ.ಗಳನ್ನು ಒದಗಿಸುವುದೆಂದು ನಿರೀಕ್ಷಿಸಲಾಗಿದೆ. ಜವಾಹರ್ ರೋಜ್‌ಗಾರ್ ಯೋಜನೆ ಮತ್ತು ಉದ್ಯೋಗ ಭರವಸೆ ಯೋಜನೆಗಳ ಅಡಿಯಲ್ಲಿ ಸುಮಾರು 8.20 ಕೋಟಿ ಮಾನವ ದುಡಿಮೆ ದಿನಗಳನ್ನು ಸೃಜಿಸಲಾಗುತ್ತದೆ.

ನೆಮ್ಮದಿ

118. ಸನ್ಮಾನ್ಯ ಪ್ರಧಾನ ಮಂತ್ರಿಯವರ ಉದ್ಯೋಗ ಭರವಸೆ ಯೋಜನೆಯ ವ್ಯಾಪ್ತಿಗೆ ರಾಜ್ಯದ 94 ತಾಲ್ಲೂಕುಗಳನ್ನು ಮಾತ್ರ ತರಲಾಗಿದೆ. ಇತರ ತಾಲ್ಲೂಕುಗಳ ಜನರಿಗೆ ಪೂರ್ಣಉದ್ಯೋಗ ದೊರೆಯುವಂತೆ ಮಾಡಲು ವಿಶೇಷ ಉದ್ಯೋಗ ಭರವಸೆ ಯೋಜನೆಯನ್ನು ಪ್ರಾರಂಭಿಸಲು ನಾನು ಉದ್ದೇಶಿಸಿದ್ದೇನೆ. ಈ ಯೋಜನೆಗೆ ರಾಜ್ಯ ಸರ್ಕಾರದ ಸಂಪನ್ಮೂಲಗಳಿಂದ 45 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಈ ಯೋಜನೆಯು ಒಂದು ಕುಟುಂಬದ ಇಬ್ಬರು ವಯಸ್ಕ ವ್ಯಕ್ತಿಗಳಿಗೆ ಕನಿಷ್ಠ ಪಕ್ಷ 100 ದಿನಗಳಷ್ಟು ಉದ್ಯೋಗವನ್ನು ಒದಗಿಸುವ ಗುರಿಯನ್ನು ಹೊಂದಿದೆ.

ವಸತಿ

119. ಬಡಜನರಿಗೆ ಸೂರನ್ನು ಒದಗಿಸುವುದು ನಮ್ಮ ಮೊದಲ ಕಾಳಜಿಯಾಗಿದೆ. 1992ಇ ನವೆಂಬರ್ ವರೆಗೆ, ಆಶ್ರಯ, ಅಂಬೇಡ್ಕರ್ ಗೃಹನಿರ್ಮಾಣ ಯೋಜನೆ ಮತ್ತು ಇಂದಿರಾ ಆವಾಸ ಯೋಜನೆಗಳ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗಾಗಿ ಹಾಗೂ ಸಮಾಜದ ಕಡು ಬಡ ವರ್ಗಗಳಿಗಾಗಿ 1.42 ಲಕ್ಷ ಮನೆಗಳನ್ನು ಕಟ್ಟಲಾಗಿದೆ. ಈ ವರ್ಷದ ಅಂತ್ಯದ ವೇಳೆಗೆ ಹಿಂದೆಂದೂ ಆಗದಷ್ಟು ಪ್ರಮಾಣದ ಅಂದರೆ 80,000ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವ ಸಂಭವವಿದೆ. 1994-95ರಲ್ಲಿ ಈ ಯೋಜನೆಗಳ ಅಡಿಯಲ್ಲಿ 2,25,00 ಮನೆಗಳನ್ನು ಕಟ್ಟಲು ಉದ್ದೇಶಿಸಲಾಗಿದೆ. ಅಲ್ಲದೆ " ನೆರಳಿನ ಭಾಗ್ಯ" ಯೋಜನೆಯ ಅಡಿಯಲ್ಲಿ 1ಲಕ್ಷ ಮನೆಗಳ ಸುಧಾರಣೆ ಮಾಡಲಾಗುವುದು. ಬಜೆಟ್‌ನಲ್ಲಿ ಹಣ ಒದಗಿಸುವ ಮೂಲಕ ಮತ್ತು ಇತರ ಯೋಜನೆಗಳ ಅಡಿಯಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಮೂಲಕ ಈ ಕಾರ್ಯ ಕೈಗೊಳ್ಳಲಾಗುವುದು. ಬಜೆಟ್‌ನಲ್ಲಿ 15 ಕೋಟಿ ರೂ.ಗಳನ್ನು ಒದಗಿಸಿ ಮುಂಬರುವ ವರ್ಷದಲ್ಲಿ 2 ಲಕ್ಷ ನಿವೇಶನಗಳನ್ನು ಹಂಚಲಾಗುವುದು.

120. ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯ ಸೌಲಭ್ಯಗಳಿಗಾಗಿ ವಿಶೇಷ ಮಹತ್ವ ನೀಡಲು ಉದ್ದೇಶಿಸಿದ್ದೇವೆ. ಖಾಸಗಿ ಶೌಚಾಲಯಗಳನ್ನು ನಿರ್ಮಿಸುವ ಪ್ರಯತ್ನದಲ್ಲಿ ಗ್ರಾಮೀಣ ಜನರಿಗೆ ನೆರವು ನೀಡಲು ಸರ್ಕಾರವು ಒಂದು ಬೃಹತ್ ಕಾರ್ಯಕ್ರಮಗಳನ್ನು ಆರಂಭಿಸುತ್ತದೆ. ಈ ಕಾರ್ಯಕ್ರಮಕ್ಕೆ ಬಜೆಟ್ಟಿನಲ್ಲಿ 20 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

ನಗರಾಭಿವೃದ್ಧಿ

121. ಯಾವುದೇ ನಗರದ ಜನರಿಗೆ ನೀರು ಸರಬರಾಜು ಅತ್ಯಾವಶ್ಯಕ. 1994-95ರಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಬಜೆಟ್‌ನಲ್ಲಿ ಒದಗಿಸುವ ಹಣವನ್ನು 70.33 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಇದರಿಂದಾಗಿ 1994-95ರಲ್ಲಿ 25 ನೀರು ಸರಬರಾಜು ಯೋಜನೆಗಳನ್ನು ಪೂರ್ಣಗೊಳಿಸಲು

ಸಾಧ್ಯವಾಗುತ್ತದೆ. ಈ ಯೋಜನೆಗಳ ಹೆಸರುಗಳನ್ನು ಅನುಬಂಧ-II ರಲ್ಲಿ ಕೊಡಲಾಗಿದೆ. ಚಾಲ್ತಿಯಲ್ಲಿರುವ ಇತರ 70ಯೋಜನೆಗಳಿಗೆ ಹಣವನ್ನು ಗಣನೀಯವಾಗಿ ಹೆಚ್ಚಿಸಲಾಗುವುದು. ಇದರಿಂದ, ಈ ಪೈಕಿ ಕೊನೇ ಪಕ್ಷ 35 ಯೋಜನೆಗಳನ್ನು 1995-96ರಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುತ್ತದೆ.

122. ಮುನಿಸಿಪಲ್ ಸಂಸ್ಥೆಗಳು ತಮಗೆ ನಿಗದಿಪಡಿಸಿದ ಹಣವನ್ನು ಜಲಮಂಡಳಿಗೆ ಕೊಡದೇ ಇರುವುದು ಮಂಡಳಿ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಲ್ಲಿ ಒಂದು. ಇನ್ನು ಮುಂದೆ ಹೊಸ ನೀರು ಸರಬರಾಜು ಯೋಜನೆಗಳನ್ನು ಕೈಕೊಳ್ಳುವ ಮುನಿಸಿಪಲ್ ಪ್ರದೇಶಗಳಲ್ಲಿ ಸರ್ಕಾರವು ಆಸ್ತಿ ತೆರಿಗೆಯ ಮೇಲೆ ಉಪಕರಣವನ್ನು ವಿಧಿಸುತ್ತದೆ. ಈ ಷರತ್ತಿನ ಪ್ರಕಾರ, 41 ಹೊಸ ಯೋಜನೆಗಳಿಗೆ ಮಂಜೂರಾತಿಯನ್ನು ಕೊಡಲಾಗುತ್ತದೆ. ನೀರು ಸರಬರಾಜು ಮತ್ತು ಒಳಚರಂಡಿ ಸೌಲಭ್ಯಗಳು ಇತರ ಪ್ರದೇಶಗಳಿಗೆ ದೊರೆಯುವುದಕ್ಕೆ ಮುಂಚಿಯೇ ದುರ್ಬಲ ವರ್ಗಗಳ ಜನರ ಕಾಲೋನಿಗಳಿಗೆ ದೊರಕುವಂತಹ ರೀತಿಯಲ್ಲಿ ಮಂಡಳಿಯ ಎಲ್ಲಾ ಯೋಜನೆಗಳನ್ನು ಪುನರ್ ರೂಪಿಸಲಾಗುವುದು.

123. ಕಳೆದ ವರ್ಷ ನೀಡಿದ ಭರವಸೆಯಂತೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ 240 ಕೋಟಿ ರೂ.ಗಳ ವೆಚ್ಚದಲ್ಲಿ ಕಾವೇರಿ ನೀರು ಸರಬರಾಜು ಯೋಜನೆಯ IIIನೇ ಹಂತದ ಕಾರ್ಯವನ್ನು ಆರಂಭಿಸಿದೆ. 1994-95ರಲ್ಲಿ ಕಾವೇರಿ ನೀರು ಸರಬರಾಜು ಯೋಜನೆಯ IVನೇ ಹಂತದ ಒಂದನೇ ಘಟ್ಟವನ್ನು ಕೈಕೊಳ್ಳಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಬಜೆಟ್‌ನಲ್ಲಿ 600 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಬೆಂಗಳೂರು ನಗರದ ವ್ಯಾಪಕ ಅಭಿವೃದ್ಧಿ

124. ರಾಷ್ಟ್ರದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರಗಳ ಪೈಕಿ ಬೆಂಗಳೂರು ಆರನೆಯದಾಗಿದೆ. ಕ್ರಿಸ್ತಶಕ 2001ರ ವೇಳೆಗೆ ಈ ನಗರದ ಜನಸಂಖ್ಯೆಯು ಏಳು ದಶಲಕ್ಷಕ್ಕೂ ಹೆಚ್ಚಾಗಲಿದೆ. ಜನಸಂಖ್ಯೆಯ ತೀವ್ರ ಏರಿಕೆಯಿಂದಾಗಿ ನಗರದಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯ ಮತ್ತು ಮೂಲಭೂತ ಸೌಲಭ್ಯಗಳ ಮೇಲೆ ಭಾರಿ ಒತ್ತಡ ಬೀಳಲಿದೆ. ಬೆಂಗಳೂರು ನಗರದ ಈಗಿನ ಮತ್ತು ಮುಂದಿನ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ಈ ನಗರಕ್ಕೆ ಒಂದು ವ್ಯಾಪಕ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಿದೆ. ಏಷಿಯಾ ಅಭಿವೃದ್ಧಿ ಬ್ಯಾಂಕಿನ ನೆರವಿನಲ್ಲಿ ಬೃಹತ್ ನಗರ ಅಭಿವೃದ್ಧಿ ಕಾರ್ಯಕ್ರಮವನ್ನು ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಯೋಜನೆಯನ್ನು ಹಮ್ಮಿಕೊಳ್ಳುವುದು ಮತ್ತು ಸಮೂಹ ತ್ವರಿತ ಸಾರಿಗೆ ವ್ಯವಸ್ಥೆ ಒದಗಿಸುವುದು ಈ ಯೋಜನೆಯ ಮುಖ್ಯ ಲಕ್ಷಣಗಳಾಗಿವೆ.

ಬೃಹತ್ ನಗರ ಅಭಿವೃದ್ಧಿ ಯೋಜನೆ

125. ಭಾರತ ಸರ್ಕಾರದ ಮತ್ತು ಇತರ ಹಣಕಾಸು ನೀಡಿಕೆ ಸಂಸ್ಥೆಗಳ ನೆರವಿನಿಂದ ರಿಂಗ್ ರಸ್ತೆಗಳು ಫ್ಲೈ ಓವರ್‌ಗಳು, ವಾಹನ ನಿಲುಗಡೆ ಸ್ಥಳ ಮುಂತಾದುವುಗಳನ್ನು ನಿರ್ಮಾಣ ಮಾಡುವ ಮೂಲಕ ಸಾರಿಗೆ, ರಸ್ತೆ ಸುರಕ್ಷೆ, ಕೊಳಚೆ ಪ್ರದೇಶಗಳ ಸುಧಾರಣೆ, ನೀರು ಸರಬರಾಜು ಮುಂತಾದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. 5 ವರ್ಷಗಳ ಅವಧಿಯಲ್ಲಿ ಇದಕ್ಕಾಗಿ 805 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು.

126. ಬೃಹತ್ ನಗರ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಸೇರಿಸಲಾದ ಯೋಜನೆಗಳ ಅನುಷ್ಠಾನಕ್ಕಾಗಿ 1994-95 ರಲ್ಲಿ ರಾಜ್ಯ ಬಜೆಟ್‌ನಲ್ಲಿ 20 ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು. ಭಾರತ ಸರ್ಕಾರವು ಅಷ್ಟೇ ಹಣವನ್ನು ಅಂದರೆ 20 ಕೋಟಿ ರೂಪಾಯಿಗಳನ್ನು ನೀಡುವುದು. ಉಳಿದ 40 ಕೋಟಿ ರೂಪಾಯಿಗಳನ್ನು ಹಣಕಾಸು ಸಂಸ್ಥೆಗಳಿಂದ ಪಡೆಯಲಾಗುವುದು. ಮುಂದಿನ ಎರಡು ವರ್ಷಗಳಲ್ಲಿ ಬೆಂಗಳೂರು ನಗರ ಸಮುಚ್ಚಯ ಪ್ರದೇಶದಲ್ಲಿ 16 ಪ್ರಮುಖ ಯೋಜನೆಗಳನ್ನು ಕೈಗೊಳ್ಳಲು ಯೋಜಿಸಲಾಗಿದೆ. ಈ ಯೋಜನೆಗಳ ವಿವರಗಳನ್ನು ಅನುಬಂಧ 3 ರಲ್ಲಿ ಕೊಡಲಾಗಿದೆ.

ಮೂಲಭೂತ ಸೌಲಭ್ಯ ಅಭಿವೃದ್ಧಿ ಯೋಜನೆ

127. ಏಷಿಯಾ ಅಭಿವೃದ್ಧಿ ಬ್ಯಾಂಕಿನ ನೆರವಿನ ಮೂಲಭೂತ ಸೌಲಭ್ಯ ಅಭಿವೃದ್ಧಿ ಯೋಜನೆಯಲ್ಲಿ ಈ ಅಂಶಗಳು ಸೇರುತ್ತವೆ.

ಎ) ರಾಮನಗರಂ, ಚನ್ನಪಟ್ಟಣ ಮತ್ತು ತುಮಕೂರುಗಳಲ್ಲಿ ಕೌಂಟರ್ ಮ್ಯಾಗ್ನೆಟ್‌ಗಳು. ಈ ಕೌಂಟರ್ ಮ್ಯಾಗ್ನೆಟ್‌ಗಳಲ್ಲಿ 1.5 ಲಕ್ಷದಿಂದ 2 ಲಕ್ಷದವರೆಗಿನ ಜನಸಂಖ್ಯೆಗೆ ವಸತಿ, ಮನೋರಂಜನೆ, ಆರೋಗ್ಯ ಮುಂತಾದ ಆರ್ಥಿಕ ಮತ್ತು ಸಾಮಾಜಿಕ ಸೌಲಭ್ಯಗಳನ್ನು ಉಳ್ಳ ಆಧುನಿಕ ಕೈಗಾರಿಕಾ ಉಪನಗರಗಳು ಒಳಗೊಂಡಿರುತ್ತವೆ.

ಬಿ) ನಾಲ್ಕು ಪಥದ ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್ ಮಾರ್ಗ ಮತ್ತು ನೆಲಮಂಗಲ -ತುಮಕೂರು ಎಕ್ಸ್‌ಪ್ರೆಸ್ ಮಾರ್ಗ.

ಸಿ) ಮೈಸೂರಿನ ಆಸುಪಾಸಿನಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ.

128. ಯೋಜನೆಗೆ ಬೇಕಾದ ತಾಂತ್ರಿಕ ನೆರವಿನ ಹಣ ಒದಗಿಸುವ ಸಂಬಂಧ ಏಷಿಯಾ ಅಭಿವೃದ್ಧಿ ಬ್ಯಾಂಕಿನೊಂದಿಗೆ ಈಗಾಗಲೇ ಒಂದು ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಇಡೀ ಯೋಜನೆಗೆ ಹಣ ಒದಗಿಸುವ ಒಂದು ಒಪ್ಪಂದವನ್ನು 1994ರ ಡಿಸೆಂಬರ್ ಹೊತ್ತಿಗೆ ಮಾಡಿಕೊಳ್ಳುವ ನಿರೀಕ್ಷೆ ಇದೆ.

ಕರ್ನಾಟಕ ನಗರ ಮೂಲಭೂತ ಸೌಲಭ್ಯ ಹಣಕಾಸು ನಿಗಮ

129. ಈ ನಿಗಮವು ಎಲ್ಲಾ ನಗರ ಅಭಿವೃದ್ಧಿ ಯೋಜನೆಗಳಿಗೆ ಸಾಂಸ್ಥಿಕ ಹಣಕಾಸು ದೊರಕಿಸಿಕೊಡುವ ಒಂದು ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತದೆ. ರಾಜ್ಯ ಸರ್ಕಾರದ ಈಕ್ವಿಟಿ ವಂತಿಕೆಗಾಗಿ 1994-95ರಲ್ಲಿ 5.10 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

ಬೆಂಗಳೂರು ಸಮೂಹ ತ್ವರಿತ ಸಾರಿಗೆ ವ್ಯವಸ್ಥೆ

130. ಜಯನಗರದಿಂದ ರಾಜಾಜಿನಗರದವರೆಗಿನ ದೂರವನ್ನು ಒಳಗೊಳ್ಳುವ ಈ ಯೋಜನೆಯ ಮೊದಲನೆಯ ಹಂತಕ್ಕೆ 1500 ಕೋಟಿ ರೂ.ಗಳ ವೆಚ್ಚವಾಗಲಿದೆ. ಖಾಸಗಿಯವರ ಸಹಭಾಗಿತ್ವದಲ್ಲಿ ಅದನ್ನು ಅನುಷ್ಠಾನಗೊಳಿಸುವ ಸಾಧ್ಯತೆಯ ಬಗ್ಗೆ ವಿಚಾರ ಮಾಡಲಾಗುತ್ತಿದೆ.

ಕೊಳಚೆ ಪ್ರದೇಶ ಅಭಿವೃದ್ಧಿ

131. ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ನಾನು ಖುದ್ದು ಗಮನ ನೀಡುತ್ತಿದ್ದೇನೆ. ಸರ್ಕಾರವು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಲಿಗೆ 1994-95ನೇ ಸಾಲಿಗೆ ಬಜೆಟ್‌ನಲ್ಲಿ 8.59 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದೆ. ಮಂಡಳಿಯು, ರಾಜ್ಯಾದ್ಯಂತ ಇರುವ ಕೊಳಚೆ ಪ್ರದೇಶಗಳಿಗೆ ಸಂಬಂಧಿಸಿದಂತೆ ವ್ಯಾಪಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಹಣಕಾಸು ಸಂಸ್ಥೆಗಳಿಂದ ಗಣನೀಯ ಪ್ರಮಾಣದ

ಹಣವನ್ನು ಪಡೆಯಲಿದೆ. ಮುಂದಿನ ವರ್ಷದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯು ಕೈಗೊಳ್ಳುವ ಕೆಲವು ಪ್ರಮುಖ ಯೋಜನೆಗಳು ಹೀಗಿವೆ:

ಎ) ಆಶ್ರಯ, ಇಂದಿರಾ ಆವಾಸ ಯೋಜನೆ ಮತ್ತು ಅಂಬೇಡ್ಕರ್ ಗೃಹ ನಿರ್ಮಾಣ ಕಾರ್ಯಕ್ರಮ ಮುಂತಾದ ನಿಯಮಿತ ವಸತಿ ಯೋಜನೆಗಳ ಅಡಿಯಲ್ಲಿ ನಿರ್ಮಾಣ ಮಾಡುವ ಮನೆಗಳ ಜೊತೆಗೆ 6500 ಮನೆಗಳ ನಿರ್ಮಾಣ. ಕೊಳಚೆ ನಿವಾಸಿಗಳಿಗಾಗಿ ನಿರ್ಮಾಣ ಮಾಡಲಾಗುವ ಮನೆಗಳಿಗೆ ನೀಡುವ ಸಬ್ಸಿಡಿಯನ್ನು 5000ರೂ.ಗಳಿಗೆ ಹೆಚ್ಚಿಸಲಾಗುವುದು. ಇದು ನಿಯಮಿತ ಗೃಹನಿರ್ಮಾಣ ಯೋಜನೆಗಳ ಅಡಿಯಲ್ಲಿ ಒದಗಿಸುವ ಸಬ್ಸಿಡಿಗೆ ಸಮಾನವಾಗಿರುತ್ತದೆ.

ಬಿ) ಬೆಂಕಿ ಅಪಘಾತವನ್ನು ಮತ್ತು ಮಳೆಯಿಂದ ಹಾನಿಯುಂಟಾಗುವುದನ್ನು ತಪ್ಪಿಸಲು ಮನೆಗಳಿಗೆ ಹುಲ್ಲಿನ ಛಾವಣಿಗಳಿಗೆ ಬದಲಾಗಿ ಖಾಯಂ ಛಾವಣಿಗಳನ್ನು ನಿರ್ಮಿಸುವುದು. ನೆಹರು ರೋಜ್‌ಗಾರ್ ಯೋಜನಾ ನಿವಾಸ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ದೊರೆಯುವ ಹಣವನ್ನು ಈ ಉದ್ದೇಶಕ್ಕೆ ಬಳಸಿಕೊಳ್ಳಲಾಗುವುದು. ಈ ಯೋಜನೆಯ ಅಡಿಯಲ್ಲಿ 50,000ಫಲಾನುಭವಿಗಳಿಗೆ ನೆರವು ನೀಡಲು ಉದ್ದೇಶಿಸಲಾಗಿದೆ.

ಸಿ) ದೇವರ ಜೀವನಹಳ್ಳಿಗೆ ರೂಪಿಸಲಾದ ಅಭಿವೃದ್ಧಿ ಯೋಜನೆಗಳಲ್ಲಿ ಅಡಕವಾಗಿರುವ ವಿಧಾನಗಳಲ್ಲಿ ಬೆಂಗಳೂರು ನಗರದ ಆಯ್ದ ಐದು ಕೊಳಚೆ ಪ್ರದೇಶಗಳ ವ್ಯಾಪಕ ಅಭಿವೃದ್ಧಿ.

132. ಸರ್ಕಾರವು ಮಂಜೂರು ಮಾಡಿದ ಕಟ್ಟಡ ಲೈಸೆನ್ಸುಗಳ ಮೇಲೆ ಅನುಮೋದಿಸಿದ ಲೇ-ಔಟ್‌ಗಳ ಮೇಲೆ ಉಪಕರವನ್ನು ವಿಧಿಸಲು ಉದ್ದೇಶಿಸಲಾಗಿದೆ. ಈ ಉಪಕರ ವಿಧಿಸುವುದರಿಂದ 94-95ರಲ್ಲಿ ಅಂದಾಜು 10 ಕೋಟಿ ರೂ.ಗಳ ಆದಾಯ ಬರುವುದೆಂದು ನಿರೀಕ್ಷಿಸಲಾಗಿದೆ. ರಾಜ್ಯದಲ್ಲಿ ಕೊಳಚೆ ಪ್ರದೇಶಗಳ ಸುಧಾರಣಾ ಯೋಜನೆಗಳನ್ನು ಕೈಕೊಳ್ಳಲು ಈ ಹಣವನ್ನು ಪೂರ್ಣವಾಗಿ ಮೀಸಲಿಡಲಾಗುವುದು.

ವಿಶೇಷ ಪ್ರದೇಶ ಕಾರ್ಯಕ್ರಮ

133. ಹೈದರಾಬಾದ್ ಕರ್ನಾಟಕ, ಮಲ್ನಾಡು ಮತ್ತು ಗಡಿ ಪ್ರದೇಶಗಳಂಥ ವಿಶೇಷ ಪ್ರದೇಶ ಕಾರ್ಯಕ್ರಮಗಳನ್ನು ಮುಂಬರುವ ವರ್ಷದಲ್ಲೂ ಮುಂದುವರೆಸಲಾಗುವುದು. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ 66 ಕೋಟಿ ರೂಪಾಯಿ, ಮಲ್ನಾಡು ಪ್ರದೇಶ ಅಭಿವೃದ್ಧಿ ಮಂಡಳಿಗೆ 35 ಕೋಟಿ ರೂಪಾಯಿ ಮತ್ತು ಗಡಿ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಕ್ಕೆ 15 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಒದಗಿಸಲಾಗಿದೆ. ಯುವಜನರ ವಿಪುಲ ಸಾಮರ್ಥ್ಯವನ್ನು ರಚನಾತ್ಮಕವಾಗಿ ಬಳಸಿಕೊಳ್ಳಲು ಸಾಧ್ಯವಾಗುವಂತೆ ಅವರಿಗೆ ಉದ್ಯೋಗ ಒದಗಿಸಲು ವಿಶೇಷ ಮಹತ್ವ ನೀಡಲಾಗುವುದು.

ಲೋಕೋಪಯೋಗಿ ಇಲಾಖೆ

134. ಆಯವ್ಯಯ ವರ್ಷದ ಅವಧಿಯಲ್ಲಿ ಕೈಗೊಳ್ಳಲಾಗದ ಹೊಸ ಕಾಮಗಾರಿಗಳ ಪೂರ್ಣ ಪಟ್ಟಿಯನ್ನು ಸದನದ ಮುಂದೆ ಇಡಲಾಗುವುದೆಂದು ಕಳೆದ ವರ್ಷ ನಾವು ಭರವಸೆ ನೀಡಿದ್ದೆವು. ಈ ಹಣಕಾಸು ವರ್ಷದ ಮೊದಲ ವಾರದಲ್ಲಿಯೇ ಈ ಕಾರ್ಯ ಮಾಡಲಾಗಿದೆ.

135. 94-95 ನೇ ಸಾಲಿಗೆ ರಸ್ತೆಗಳು ಮತ್ತು ಸೇತುವೆಗಳಿಗೆ ಸಂಬಂಧಿಸಿದ ವಾರ್ಷಿಕ ಉದ್ದೇಶಿತ ಯೋಜನಾ ವೆಚ್ಚ 96.58 ಕೋಟಿ ರೂಪಾಯಿಗಳು. ನಿರ್ಮಾಣ ಕಾಮಗಾರಿಗಳಲ್ಲಿ ಭಾಗವಹಿಸಲು ಸ್ಥಳೀಯ ಜನರು ಇಚ್ಛಿಸುವಂಥ ಪ್ರದೇಶಗಳಿಗೆ

ಸರ್ಕಾರವು ಆದ್ಯತೆ ನೀಡುತ್ತದೆ. ಆ ಜನರು ಕಾಮಗಾರಿಕೆಗೆ ತಗಲುವ ಅಂದಾಜು ವೆಚ್ಚದ ಗರಿಷ್ಠ 25 ರಷ್ಟು ಮಣ್ಣು ಕೆಲಸ ಮಾಡಬೇಕಾಗುತ್ತದೆ.

136. ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿರುವ ರಸ್ತೆಗಳಿಗೆ 20 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ವಿಶೇಷ ಸುಧಾರಣೆ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದೂ ಹಿಂದಿನ ಆಯವ್ಯಯ ಅಧಿವೇಶನದಲ್ಲಿ ನಾನು ಪ್ರಕಟಿಸಿದ್ದೆ. ಪ್ರತಿ ಕ್ಷೇತ್ರದಲ್ಲಿ 10 ಲಕ್ಷ ರೂಪಾಯಿಗಳಷ್ಟು ವೆಚ್ಚದ ಕಾಮಗಾರಿಗಳಿಗೆ ಆಡಳಿತ ಅನುಮೋದನೆಯನ್ನು ಈಗಾಗಲೇ ನೀಡಲಾಗಿದೆ. ಉಳಿದ ಕಾಮಗಾರಿಗಳಿಗೆ ಮುಂಬರುವ ವರ್ಷದಲ್ಲಿ 20.00 ಕೋಟಿ ರೂಪಾಯಿಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

137. 1991-92ರಲ್ಲಿ 10,000 ಕಿಲೋಮೀಟರ್ ಜಿಲ್ಲಾ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆ ವಹಿಸಿಕೊಂಡಿತು. ಹಿಂದೆ, ಈ ರಸ್ತೆಗಳ ನಿರ್ವಹಣೆ ಅಷ್ಟೇನೂ ಉತ್ತಮವಾಗಿರಲಿಲ್ಲ. 1994-95ರಿಂದ ಪ್ರಾರಂಭಿಸಿ ಐದು ವರ್ಷಗಳ ಕಾಲಬದ್ಧ ಕಾರ್ಯಕ್ರಮದಲ್ಲಿ ಇವುಗಳನ್ನು ಸುಧಾರಣೆ ಮಾಡಲು ಉದ್ದೇಶಿಸಲಾಗಿದೆ. ಮುಂಬರುವ ವರ್ಷದಲ್ಲಿ ಈ ಪೈಕಿ 1500 ಕಿಲೋಮೀಟರ್ ರಸ್ತೆಯನ್ನು ಸುಧಾರಣೆ ಮಾಡಲಾಗುವುದು. ಅಂತೆಯೇ ಕೆಲವು ರಾಜ್ಯ ಹೆದ್ದಾರಿಗಳು ಸುಸ್ಥಿತಿಯಲ್ಲಿಲ್ಲ. ಮುಂಬವುವ ವರ್ಷದಲ್ಲಿ 17 ಭಾರಿ ರಾಜ್ಯ ಹೆದ್ದಾರಿಗಳಿಗಾಗಿ ಐದು ವರ್ಷಗಳ ಕಾಲಬದ್ಧ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು. ಮೊದಲನೇ ಹಂತವಾಗಿ, ಬೆಂಗಳೂರು - ಮೈಸೂರು ಮತ್ತು ತುಮಕೂರು ಹೊನ್ನಾವರ ಹೆದ್ದಾರಿಗಳ ಕಾರ್ಯವನ್ನು ಕೈಗೊಳ್ಳಲಾಗುವುದು.

138.ಈಗಿರುವ ಮಾನವ ಶಕ್ತಿಯನ್ನು ಇನ್ನೂ ಉತ್ತಮವಾಗಿ ಬಳಸಿಕೊಳ್ಳುವ ದೃಷ್ಟಿಯಿಂದ ಲೋಕೋಪಯೋಗಿ ಇಲಾಖೆಯ ಮತ್ತು ಸಣ್ಣ ನೀರಾವರಿ ಇಲಾಖೆಯ ಉಪವಿಭಾಗಗಳನ್ನು ವಿಲೀನಗೊಳಿಸಲು ಉದ್ದೇಶಿಸಿದ್ದೇನೆ. ಈ ವ್ಯವಸ್ಥೆಯಿಂದಾಗಿ ಲೋಕೋಪಯೋಗಿ ಮತ್ತು ಸಣ್ಣ ನೀರಾವರಿ ಕಾಮಗಾರಿಗಳ ಮೇಲ್ವಿಚಾರಣೆಗೆ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದೇ ಏಜೆನ್ಸಿ ಇರುವಂತಾಗುತ್ತದೆ. ಉಪ ವಿಭಾಗದ ಮೇಲಿನ ಹಂತದಲ್ಲಿ ಎರಡು ಇಲಾಖೆಗಳ ಪ್ರತ್ಯೇಕ ಅಸ್ತಿತ್ವ ಮುಂದುವರಿಯುತ್ತದೆ.

139. ಹಡಗು ಕಟ್ಟೆಗಳನ್ನು ಮತ್ತು ನೌಕಾ ಸಂಚಾರದ ಕಡಲುಗಾಲುವೆಗಳನ್ನು ಆಳ ಮಾಡಬೇಕೆಂದು ನೌಕೋದ್ಯಮ ಮತ್ತು ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿಸುವ ಜನ ಬಹು ದಿನಗಳಿಂದ ಕೇಳುತ್ತಿದ್ದಾರೆ. ಕಾರವಾರ ಬಂದರಿನಲ್ಲಿ ಹೂಳೆತ್ತುವ ಕೆಲಸವನ್ನು ಪ್ರಸಕ್ತ ಹಣಕಾಸು ವರ್ಷದಲ್ಲಿ ಪೂರ್ಣಗೊಳಿಸಲಾಗಿದೆ. ಮಂಗಳೂರು ಬಂದರಿನಲ್ಲಿ ಕಾರ್ಯ ಆರಂಭಿಸಲಾಗಿದೆ. 1994-95ರಲ್ಲಿ ಹೂಳೆತ್ತುವ ಕೆಲಸಕ್ಕಾಗಿ 4.84 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಒದಗಿಸಲಾಗಿದೆ.

ಆರಾಧನಾ

140. ಕಳೆದ ವರ್ಷ ಆಶ್ವಾಸನೆ ನೀಡಿದ್ದಂತೆ, ಆರಾಧನಾ ಯೋಜನೆಯನ್ನು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಜನರ ಪ್ರಾರ್ಥನಾ ಸ್ಥಳಗಳಿಗೂ ಅನ್ವಯಿಸಲಾಗಿದೆ. ಇದಕ್ಕಾಗಿ 93-94ನೇ ಸಾಲಿಗೆ ಆಯವ್ಯದಲ್ಲಿ ಆರು ಕೋಟಿ ರೂಪಾಯಿ ಒದಗಿಸಲಾಗಿತ್ತು. ಇದನ್ನು 10 ಕೋಟಿ ರೂ.ಗಳಿಗೆ ಹೆಚ್ಚಿಸಲಾಯಿತು. ಈ ಯೋಜನೆಯನ್ನು ಅಷ್ಟೇ ಹಣ ಒದಗಿಸಿ 1994-95ರಲ್ಲೂ ಮುಂದುವರಿಸಲಾಗುವುದು.

141. ಶ್ರವಣ ಬೆಳಗೊಳದಲ್ಲಿ ನಡೆದ ಮಹಾ ಮಸ್ತಕಾಭಿಷೇಕದ ಸಂದರ್ಭದಲ್ಲಿ ಸರ್ಕಾರವು ಶ್ರವಣಬೆಳಗೊಳದಲ್ಲಿ ಮತ್ತು ಸುತ್ತಮುತ್ತಲ ಸ್ಥಳಗಳಲ್ಲಿ ಕುಡಿಯುವ ನೀರು,

ಒಳಚರಂಡಿ, ರಸ್ತೆಗಳು ಮತ್ತು ವಿದ್ಯುಚ್ಛಕ್ತಿ ಪೂರೈಕೆ ಮುಂತಾದುದನ್ನು ಒದಗಿಸಲು 10.74 ಕೋಟಿ ರೂ.ಗಳ ವೆಚ್ಚದಲ್ಲಿ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸಿದೆ. ಅಂತೆಯೇ 1993ರ ಡಿಸೆಂಬರ್ ತಿಂಗಳಲ್ಲಿ ತಲಕಾಡಿನಲ್ಲಿ ಪಂಚಲಿಂಗ ದರ್ಶನದ ವ್ಯವಸ್ಥೆಗಾಗಿ ಸರ್ಕಾರ 94.57 ಲಕ್ಷ ರೂ.ಗಳನ್ನು ವೆಚ್ಚ ಮಾಡಿದೆ.

ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವುದು

142. ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಬೇಕೆಂದು ಸಲ್ಲಿಸಿದ್ದ 10.86 ಲಕ್ಷ ಅರ್ಜಿಗಳಲ್ಲಿ 93ರ ಡಿಸೆಂಬರ್ ಅಂತ್ಯದ ಹೊತ್ತಿಗೆ 3.19 ಲಕ್ಷ ಅರ್ಜಿಗಳನ್ನು ವಿಲೇ ಮಾಡಲಾಗಿದೆ. ಇತರರಂತೆಯೇ, 41, 143 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನರ ಹೆಸರಿಗೆ 785.92 ಎಕರೆ ಜಮೀನನ್ನು ಸಕ್ರಮಗೊಳಿಸಲಾಯಿತು. ಸಕ್ರಮಗೊಳಿಸುವ ಈ ಕಾರ್ಯವು 1994ರ ಸೆಪ್ಟೆಂಬರ್ 15 ರ ಹೊತ್ತಿಗೆ ಮುಗಿಯಲಿದೆ.

ಕನ್ನಡ ಮತ್ತು ಸಂಸ್ಕೃತಿ

143. ರಾಜ್ಯ ಅಕಾಡೆಮಿಗಳ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿಗಳಿಗೆ ಸ್ಥಳಾವಕಾಶ ಕಲ್ಪಿಸುವ ಸಲುವಾಗಿ ಆರು ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಕಟ್ಟಡವೊಂದನ್ನು ಕಟ್ಟಲು ಉದ್ದೇಶಿಸಿದ್ದೇನೆ. 1994-95ರಲ್ಲಿ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು. ಕನ್ನಡ ಪುಸ್ತಕಗಳನ್ನು ಪ್ರಕಟಿಸುವುದಕ್ಕೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನು ಸಮನ್ವಯಗೊಳಿಸಲು ರಾಜ್ಯ ಸರ್ಕಾರವು ಕನ್ನಡ ಪುಸ್ತಕ ಪ್ರಾಧಿಕಾರವನ್ನು ರಚಿಸಿದೆ. ಈ ಉದ್ದೇಶಕ್ಕಾಗಿ 94-95ನೇ ಸಾಲಿನಲ್ಲಿ 1 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

144. 1994-95ರಲ್ಲಿ ಜಿಲ್ಲೆಗಳಲ್ಲಿ ರಂಗಮಂದಿರಗಳನ್ನು ಕಟ್ಟುವ ಸಲುವಾಗಿ 124 ಲಕ್ಷ ರೂಪಾಯಿ ಮೀಸಲಿಡಲಾಗಿದೆ. ಅದೇ ರೀತಿ ಕನ್ನಡ ಮತ್ತು ಸಂಸ್ಕೃತಿ ಅಭಿವೃದ್ಧಿ ಕಾರ್ಯಗಳಲ್ಲಿ ನಿರತರಾಗಿರುವ ಕಲಾವಿದರು, ಬರಹಗಾರರು ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ ಹಣಕಾಸು ನೆರವು ನೀಡಲು 125 ಲಕ್ಷ ರೂಪಾಯಿಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ನನ್ನ ಹಿಂದಿನ ಆಯವ್ಯಯ ಭಾಷಣದಲ್ಲಿ ಒಂದು ತುಳು-ಕೊಂಕಣಿ-ಕೊಡವ ಅಕಾಡೆಮಿ ರಚಿಸಲು ನಾನು ಪ್ರಸ್ತಾವಿಸಿದ್ದೆ. ಜನರ ಪ್ರಬಲವಾದ ಬೇಡಿಕೆಯನ್ನು ಪರಿಗಣಿಸಿ ಮುಂದಿನ ವರ್ಷದಲ್ಲಿ ಮೂರು ಬೇರೆ ಬೇರೆ ಆಕಾಡೆಮಿಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ಪ್ರತಿಯೊಂದು ಆಕಾಡೆಮಿಗೆ 10 ಲಕ್ಷ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಕೊಂಕಣಿ ಮತ್ತು ತುಳು ಅಕಾಡೆಮಿಗಳ ಕೇಂದ್ರ ಕಾರ್ಯಸ್ಥಾನ ಮಂಗಳೂರು. ಕೊಡವ ಅಕಾಡೆಮಿಯನ್ನು ಮಡಿಕೇರಿಯಲ್ಲಿ ರಚಿಸಲಾಗುವುದು.

ಶ್ರೀ ಕ್ಷೇತ್ರ ಕೂಡಲ ಸಂಗಮ ಅಭಿವೃದ್ಧಿ ಕಾರ್ಯಕ್ರಮ

145. ಜಗಜ್ಯೋತಿ ಬಸವಣ್ಣನವರು ಅಗ್ರಮಾನ್ಯ ಸಮಾಜ ಸುಧಾರಕರಾಗಿದ್ದರು ಹಾಗೂ ಸರ್ವ ಸಮತಾಭಾವ ಮತ್ತು ಜಾತಿ ರಹಿತ ಸಮಾಜ ನಿರ್ಮಾಣದಂಥ ಉದಾತ್ತ ಧ್ಯೇಯದ ಹರಿಕಾರರಾಗಿದ್ದರು. ಅವರ ನೀತಿ ಬೋಧನೆಗಳನ್ನು ಅನೇಕ ವಚನಕಾರರು ಶ್ರೀಮಂತಗೊಳಿಸಿ ನಮಗೆ ಬಳುವಳಿಯಾಗಿ ನೀಡಿದ್ದಾರೆ. ಈ ಮಹನೀಯರ ದಿವ್ಯ ಸನ್ನಿಧಿಯಿಂದ ಪವಿತ್ರವಾದ ಸ್ಥಳಗಳನ್ನು, ಅದರಲ್ಲೂ ಮುಖ್ಯವಾಗಿ ಬಸವಣ್ಣನವರ ಜನ್ಮಸ್ಥಳವಾದ ಬಸವ ಕಲ್ಯಾಣವನ್ನು ಹಾಗೂ ಅವರು ಲಿಂಗೈಕ್ಯರಾದ ಕೂಡಲಸಂಗಮವನ್ನು ಅಭಿವೃದ್ಧಿಪಡಿಸಲು ನಾನು ಉದ್ದೇಶಿಸಿದ್ದೇನೆ. ಈ ಉದ್ದೇಶಕ್ಕಾಗಿ, ಯಾತ್ರಾರ್ಥಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಹಾಗೂ ಸೌಕರ್ಯಗಳನ್ನು ಒದಗಿಸಲು ಅಭಿವೃದ್ಧಿ

ಪ್ರಾಧಿಕಾರವೊಂದನ್ನು ರಚಿಸಲಾಗುವುದು. ಶಿವಶರಣರ ಕೃತಿಗಳ 15 ಸಂಪುಟಗಳನ್ನು ಕಳೆದ ವರ್ಷ ರಾಜ್ಯ ಸರ್ಕಾರವು ಪ್ರಕಟಿಸಿದೆ ಎಂಬುದನ್ನು ತಿಳಿಸಲು ನನಗೆ ಸಂತೋಷವಾಗುತ್ತಿದೆ.

ಮೈಸೂರು ಟಿ. ಚೌಡಯ್ಯನವರ ಜನ್ಮಶತಾಬ್ದಿ

146. ಈ ವರ್ಷ ಮೈಸೂರಿನ ಪಿಟೀಲು ಚೌಡಯ್ಯನವರ ಜನ್ಮಶತಾಬ್ದಿಯ ವರ್ಷ. ಕರ್ನಾಟಕದ ಈ ಹೆಮ್ಮೆಯ ಪುತ್ರ ಪಿಟೀಲು ವಾದನದಲ್ಲಿ "ನಾದಬ್ರಹ್ಮ" ಪಿಟೀಲಿಗೆ ಇನ್ನೊಂದು ಹೆಸರೇ ಚೌಡಯ್ಯ ಎನಿಸುವಷ್ಟು ಅವರು ಜನಪ್ರಿಯರಾಗಿದ್ದರು. ಈ ವರ್ಷ ಈ ಮಹಾನ್ ಪಿಟೀಲು ವಿದ್ವನ್ಮಣಿಯ ಜನ್ಮಶತಾಬ್ದಿಯನ್ನು ಅರ್ಥಪೂರ್ಣವಾಗಿ ಮತ್ತು ವೈಭವಯುತವಾಗಿ ಆಚರಿಸಲಾಗುವುದು. ಈ ಸಂಗೀತ ವಿದ್ವನ್ಮಣಿ ಬೆಳೆಸಿದ ಕಲಾ ಪರಂಪರೆಯನ್ನು ಮುಂದುವರೆಸುವ ದೃಷ್ಟಿಯಿಂದ, ಯುವ ಕಲಾವಿದರನ್ನು ಪ್ರೋತ್ಸಾಹಿಸಲು ಸರ್ಕಾರವು ಎಲ್ಲ ಕ್ರಮಗಳನ್ನು ಕೈಗೊಳ್ಳಲಿದೆ.

ಕನಕ ಸಾಹಿತ್ಯ ಪ್ರಕಟಣೆ

147. 16ನೇ ಶತಮಾನದ ಕನ್ನಡ ಕವಿ ಕನಕದಾಸರು ನಮ್ಮ ರಾಜ್ಯದ ಸಾಮಾಜಿಕ ಜೀವನದಲ್ಲಿ ಮಹಾಕ್ರಾಂತಿಯನ್ನು ಮಾಡಿದ್ದಾರೆ. ಕೆಳವರ್ಗದ ಜನರ ಧ್ವನಿಯಾಗಿದ್ದ ಈ ಮಹಾಕವಿ ಬೆಲೆಕಟ್ಟಲಾಗದ ಸಾಹಿತ್ಯವನ್ನು ರಚಿಸಿದ್ದಾರೆ. ಅವರು ರಚಿಸಿರುವ ಸಾಹಿತ್ಯವನ್ನು ಪ್ರಕಟಿಸಲು ಈಗಾಗಲೇ ಕ್ರಮಕೈಗೊಂಡಿದ್ದರೂ, ಈ ಬಗ್ಗೆ ಇನ್ನೂ ಹೆಚ್ಚಿನ ಕೆಲಸ ಆಗಬೇಕಾಗಿದೆ. ಈ ವರ್ಷ ಕನಕ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಗುವುದು ಮತ್ತು ಅವರ ಕೃತಿಗಳನ್ನು ಪ್ರಕಟಿಸಲಾಗುವುದು. ಇದು, ರಾಜ್ಯದ ಜನತೆಗೆ ಕನಕದಾಸರ ಸಂದೇಶವನ್ನು ತಲುಪಿಸುವ ನಮ್ಮ ನಮ್ರ ಪ್ರಯತ್ನವಾಗಿದೆ.

ಚಲನಚಿತ್ರ ಕಾರ್ಯನೀತಿ

148. ಸರ್ಕಾರವು ಕಾಲಕಾಲಕ್ಕೆ ಹಲವಾರು ಪ್ರೋತ್ಸಾಹಕ ಯೋಜನೆಗಳನ್ನು ರೂಪಿಸಿದ್ದರೂ ಕರ್ನಾಟಕ ಚಲನಚಿತ್ರೋದ್ಯಮದಲ್ಲಿ ಎಲ್ಲವೂ ಸರಿಯಾಗಿಲ್ಲ. ಅನ್ಯ ಭಾಷಾ ಚಿತ್ರಗಳು ಮತ್ತು ಉಪಗ್ರಹ ಹಾಗೂ ಕೇಬಲ್ ತಂತ್ರಜ್ಞಾನಗಳ ಬೆಳವಣಿಗೆಯ ಪರಿಣಾಮವಾಗಿ ತಲೆದೋರಿದ ಸವಾಲುಗಳನ್ನು ಎದುರಿಸುವಲ್ಲಿ ಕನ್ನಡ ಸಿನಿಮಾ ತತ್ತರಿಸುತ್ತಿದೆ. ಯಾವ ಕ್ಷೇತ್ರಗಳಲ್ಲಿ ಪ್ರಮುಖ ಕಾರ್ಯನೀತಿಗಳ ಮತ್ತು ಹಣಕಾಸು ನೆರವಿನ ಅಗತ್ಯವಿದೆಯೋ ಆ ಕ್ಷೇತ್ರಗಳನ್ನು ಗುರುತಿಸುವ ಮತ್ತು ಸಮಗ್ರ ಚಲನಚಿತ್ರ ನೀತಿಯನ್ನು ರೂಪಿಸುವ ದೃಷ್ಟಿಯಿಂದ, ಶ್ರೀ ವಿ.ಎನ್. ಸುಬ್ಬರಾವ್ ಅವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯೊಂದನ್ನು ರಚಿಸಿದ್ದೆ. ಆ ಸಮಿತಿಯು ತನ್ನ ವರದಿಯನ್ನು ಇತ್ತೀಚೆಗೆ ಸಲ್ಲಿಸಿದ್ದು, ಅದು ಪರಿಶೀಲನೆಯಲ್ಲಿದೆ. ಸರ್ಕಾರವು ಒಂದು ಸಮಗ್ರ ಚಲನಚಿತ್ರ ನೀತಿಯನ್ನು ರೂಪಿಸಲಿದೆ.

149. ಚಲನಚಿತ್ರ ನಗರಿ ಯೋಜನೆ ಬಹುಕಾಲದಿಂದಲೂ ನನೆಗುದಿಯಲ್ಲಿದೆ. ಚಲನಚಿತ್ರ ಉದ್ಯಮ ಅಭಿವೃದ್ಧಿ ನಿಗಮದ ಜೊತೆ ಸೇರಿ ಚಿತ್ರೋದ್ಯಮವು ಚಿತ್ರನಗರಿಯನ್ನು ನಿರ್ಮಿಸಲು ಮುಂದೆ ಬರುವಂತೆ ಮತ್ತು ಅದನ್ನು ಜನರ ಆಂದೋಲನವನ್ನಾಗಿ ಮಾಡುವಂತೆ ನಾನು ಚಲನಚಿತ್ರ ಉದ್ಯಮದವರಿಗೆ ಆಹ್ವಾನ ನೀಡಿದ್ದೆ. ಮೊದಲ ಕ್ರಮವಾಗಿ, ಚಿತ್ರನಗರಿ ಯೋಜನೆಗೆ ಹೆಸರುಘಟ್ಟದ ಬಳಿ ಗೊತ್ತು ಪಡಿಸಿರುವ 347.12 ಎಕರೆಗಳ ಪೈಕಿ 40 ಎಕರೆ ಪ್ರದೇಶದಲ್ಲಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆಯನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ವಿಶ್ವಬ್ಯಾಂಕ್ ನೆರವಿನೊಂದಿಗೆ, ಆರಂಭದಲ್ಲಿ, ಮೋಷನ್ ಪಿಕ್ಚರ್ ಫೋಟೋಗ್ರಫಿ ಸೌಂಡ್ ರೆಕಾರ್ಡಿಂಗ್ ಇಂಜಿನಿಯರಿಂಗ್, ಟೆಲಿವಿಷನ್ ಪ್ರೊಡಕ್ಷನ್ ಟೆಕ್ನಾಲಜಿ ಸಿನಿಮಟೋಗ್ರಫಿ ಮತ್ತು ಟೆಲಿ ಕಮ್ಯೂನಿಕೇಷನ್

150. ಸಿನಿಮಾ ತಯಾರಿಕೆ ಮತ್ತು ಪ್ರೊಸೆಸಿಂಗ್ ಹಂತಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಸೃಜಿಸುವಂಥ ನಾನ್ ಸ್ಪೆಕ್ಯೂಲೇಟಿವ್ ಸಿನಿಮಾ ಚಟುವಟಿಕೆಗಳನ್ನು "ಉದ್ಯಮ" ವೆಂದು ಘೋಷಿಸುವ ಇನ್ನೊಂದು ಮುಖ್ಯವಾದ ಕ್ರಮಕೈಗೊಳ್ಳಲು ನಾನು ಉದ್ದೇಶಿಸಿದ್ದೇನೆ. ಇದರಿಂದ, ರಾಜ್ಯದಲ್ಲಿ ಇತರ ಕೈಗಾರಿಕೆಗಳಿಗೆ ಸಾಮಾನ್ಯವಾಗಿ ದೊರೆಯುವ ರಿಯಾಯಿತಿಗಳು ಮತ್ತು ಪ್ರೋತ್ಸಾಹಗಳು ಈ ಬಗೆಯ ಚಟುವಟಿಕೆಗಳಿಗೂ ದೊರೆಯುವಂತಾಗುತ್ತದೆ.

ಪ್ರವಾಸೋದ್ಯಮ

151. ಸರ್ಕಾರವು, ಕರ್ನಾಟಕದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಒಂದು ಮಾಸ್ಟರ್ ಪ್ಲಾನನ್ನು ಸಿದ್ಧಪಡಿಸಿದೆ. ಇದಕ್ಕೆ 155 ಕೋಟಿ ರೂಪಾಯಿಗಳ ಬಂಡವಾಳ ಬೇಕಾಗುತ್ತದೆ. ಈ ಪೈಕಿ ಸರ್ಕಾರವು 80 ಕೋಟಿ ರೂಪಾಯಿಗಳನ್ನು ಒದಗಿಸುತ್ತದೆ. ಉಳಿದ ಮೊಬಲಗನ್ನು ತೊಡಗಿಸಲು ಖಾಸಗಿ ಉದ್ಯಮಗಳನ್ನು ಪ್ರೋತ್ಸಾಹಿಸುತ್ತದೆ. ಕರಾವಳಿ ಪ್ರದೇಶದಲ್ಲಿ ಪ್ರವಾಸ ಅಭಿವೃದ್ಧಿಗೆ ಚಾರ್ಟರ್ಡ್ ವಿಮಾನಗಳು ಬಂದು ಹೋಗಲು ಬಜ್ಪೆ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವುದು ಸಮುದ್ರ ತೀರಗಳ ಅಭಿವೃದ್ಧಿ ಜಲ ಮತ್ತು ಸಾಹಸ ಕ್ರೀಡೆಗಳಿಗೆ ಉತ್ತೇಜನ ಮತ್ತು ಪ್ರಮುಖ ಯಾತ್ರಾ ಕೇಂದ್ರಗಳಲ್ಲಿ ಉತ್ತಮ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕೆ ವಿಶೇಷ ಒತ್ತು ನೀಡಲಾಗುವುದು.

152. ಪ್ರವಾಸೋದ್ಯಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಭಾರೀ ಪ್ರಮಾಣದಲ್ಲಿ ಬಂಡವಾಳ ಹೂಡುವುದು ಹಾಗೂ ಜನತೆ ಸಕ್ರಿಯವಾಗಿ ಭಾಗವಹಿಸುವುದು ಅತ್ಯಾವಶ್ಯಕ. ಈ ಎರಡು ಉದ್ದೇಶಗಳನ್ನು ಸಾಧಿಸುವ ಸಲುವಾಗಿ ಖಾಸಗಿ ವಲಯವನ್ನು ಆಕರ್ಷಿಸಲು ನಾವು ಪ್ರಯತ್ನಿಸಬೇಕು. ಪ್ರವಾಸೋದ್ಯಮ ಪ್ರಚಾರಕ್ಕಾಗಿ ಆಯವ್ಯಯದಲ್ಲಿ ಒದಗಿಸುವ ಹಣವನ್ನು 100 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ಪ್ರವಾಸೋದ್ಯಮ ಸಂಬಂಧಿ ಉದ್ಯಮಗಳನ್ನು ಪ್ರಾರಂಭಿಸಲು ಖಾಸಗಿ ಉದ್ಯಮಿಗಳಿಗೆ ಸಹಾಯಧನ ನೀಡುವ ಸಲುವಾಗಿ 140 ಲಕ್ಷ ರೂಪಾಯಿಗಳನ್ನು ಒದಗಿಸಲಾಗುತ್ತಿದೆ. ಅನಿವಾಸಿ ಭಾರತೀಯರು ಹಾಗೂ ಖಾಸಗಿ ಬಂಡವಾಳ ಹೂಡಿಕೆದಾರರು ಮಂಗಳೂರಿನ ಬಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವೊಂದನ್ನು ಅಭಿವೃದ್ಧಿಪಡಿಸಲು ಆಸಕ್ತಿ ತೋರಿಸುತ್ತಿದ್ದಾರೆ. ಇದು, ಇತರ ವಿಷಯಗಳ ಜೊತೆಗೆ, ಅಂತರ ರಾಷ್ಟ್ರೀಯ ಪ್ರವಾಸಿಗಳ ಅಗತ್ಯತೆಗಳನ್ನು ಪೂರೈಸುತ್ತದೆ. ಅಂತರ ರಾಷ್ಟ್ರೀಯ ಮಟ್ಟದ ಸಮುದ್ರತೀರದ ವಿಹಾರ ಸ್ಥಳಗಳ ಅಭಿವೃದ್ಧಿಯನ್ನು ಸಹ ಈ ಯೋಜನೆ ಅಡಿಯಲ್ಲಿ ಕೈಗೊಳ್ಳಲಾಗುವುದು. ಈ ಯೋಜನೆಗಳನ್ನು ಜಾರಿಗೆ ತರಲು ಸರ್ಕಾರವು ಬೆಂಬಲ ಹಾಗೂ ನೆರವು ನೀಡುತ್ತದೆ.

ಯುವಜನಸೇವೆ

153. 1995-96ರಲ್ಲಿ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸಲು ಬೆಂಗಳೂರನ್ನು ಆಯ್ಕೆ ಮಾಡಲಾಗಿದೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಲು ನನಗೆ ಸಂತೋಷವಾಗುತ್ತಿದೆ. ಈ ಉದ್ದೇಶಕ್ಕಾಗಿ ಕಂಠೀರವ ಕ್ರೀಡಾಂಗಣವನ್ನು ಮೇಲ್ದರ್ಜೆಗೇರಿಸಲಾಗುವುದು. ಫುಟ್‌ಬಾಲ್ ಸ್ಟೇಡಿಯಂನ್ನು ಪೂರ್ಣಗೊಳಿಸಲಾಗುವುದು ಹಾಗೂ ಮೂರು ಒಳಾಂಗಣ ಕ್ರೀಡಾಂಗಣಗಳನ್ನು ನಿರ್ಮಿಸಲಾಗುವುದು. ಈ ಕ್ರೀಡೆಗಳನ್ನು ವ್ಯವಸ್ಥೆ ಮಾಡುವುದಕ್ಕೆ ಅವಶ್ಯವಿರುವ ಕ್ರೀಡಾ ಸವಲತ್ತುಗಳ ಅಭಿವೃದ್ಧಿಗೆ 35 ಕೋಟಿ ರೂಪಾಯಿಗಳು ವೆಚ್ಚ ಆಗಲಿದೆ. ಇದರಲ್ಲಿ 10 ಕೋಟಿ ರೂಪಾಯಿಗಳನ್ನು ಭಾರತ ಸರ್ಕಾರ ನೀಡಲಿದೆ. ಸರ್ಕಾರವು ಕ್ರೀಡೆಗಳಿಗೆ

ಪ್ರಾಯೋಜಿಸುವ ಮೂಲಕ ಗಣನೀಯ ಪ್ರಮಾಣದಲ್ಲಿ ಹಣ ದೊರಕಿಸಿಕೊಳ್ಳಲು ಉದ್ದೇಶಿಸಿದೆ.

ಮಾದಕ ವ್ಯಸನ ನಿರೋಧಿ ಆಂದೋಲನ

154. ಯುವಕರು ಮದ್ಯ ಹಾಗೂ ಮಾದಕ ವಸ್ತುಗಳ ಸೇವನೆಯ ಚಟಕ್ಕೆ ಬಲಿಯಾಗುತ್ತಿರುವ ಪ್ರವೃತ್ತಿ ಹೆಚ್ಚುತ್ತಿರುವುದು ಸಮಾಜಕ್ಕೆ ಕಳವಳವುನ್ನುಂಟುಮಾಡಿದೆ. ಇವರ ನಿರ್ಮೂಲನೆಗಾಗಿ ಈ ಮುಂದಿನ ಕ್ರಮಗಳನ್ನೊಳಗೊಂಡ ಮಾದಕ ವ್ಯಸನ ನಿರೋಧಿ ಆಂದೋಲನವನ್ನು ಹಮ್ಮಿಕ್ಕೊಳ್ಳಲು ನಾನು ಉದ್ದೇಶಿಸಿದ್ದೇನೆ.

ಎ) ಸ್ವಯಂ ಸೇವಾ ಸಂಸ್ಥೆಗಳ ನೆರವಿನೊಡನೆ ರಾಜ್ಯದ ಪ್ರಮುಖ ನಗರಗಳಲ್ಲಿ ಮಾದಕ ವ್ಯಸನ, ನಿರೋಧಿ ಹಾಗೂ ಪರಿಹಾರ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು. ಈ ಉದ್ದೇಶಕ್ಕೆ 5 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ಬಿ) ಪೊಲೀಸ್ ಸೂಪರಿಂಟೆಂಡೆಂಟರ ನಿರ್ದೇಶನ ಹಾಗೂ ಮೇಲ್ವಿಚಾರಣೆಯಲ್ಲಿ ಪ್ರತಿಯೊಂದು ಪೊಲೀಸ್ ಠಾಣೆಯಲ್ಲಿ ಮಾದಕ ವಸ್ತು ನಿರೋಧ ಘಟಕವನ್ನು ಪ್ರಾರಂಭಿಸುವುದು.

ಸಿ) ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಮಾದಕ ವ್ಯಸನ ನಿರೋಧ ಸಮಿತಿಯನ್ನು ರಚಿಸುವುದು.

ಡಿ) 21 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಜನರು ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಸೇವನೆ ಮಾಡುವುದನ್ನು ತಡೆಗಟ್ಟುವುದಕ್ಕಾಗಿ ಶಾಸನವೊಂದನ್ನು ತರುವುದು.

ಸೈನಿಕ ಕಲ್ಯಾಣ ಮತ್ತು ಪುನರ್ವಸತಿ

155. ಮಾಜಿ ಸೈನಿಕರ ಕಲ್ಯಾಣ ನಿಗಮವನ್ನು ರಚಿಸಲು ಉದ್ದೇಶಿಸಲಾಗಿದೆ. ಸೂಕ್ತವಾದ ಸ್ವಯಂ ಉದ್ಯೋಗ ಯೋಜನೆಗಳನ್ನು ಕೈಗೊಳ್ಳಲು ಮಾಜಿ ಸೈನಿಕರಿಗೆ ನೆರವನ್ನು ನೀಡುವುದಲ್ಲದೇ ಈ ನಿಗಮವು ಕೈಗಾರಿಕಾ ಘಟಕಗಳಲ್ಲಿ ಭದ್ರತೆ ಒದಗಿಸುವುದು. ಬಸ್‌ಗಳನ್ನು, ಟ್ಯಾಕ್ಸಿ ಕ್ಯಾಬ್‌ಗಳನ್ನು ಓಡಿಸುವುದು, ರೆಫ್ರಿಜರೇಷನ್ ಮತ್ತು ಏರ್ ಕಂಡೀಷನ್ ಯಂತ್ರಗಳ ದುರಸ್ತಿ ಮುಂತಾದ ಕಾರ್ಯಗಳನ್ನು ಕೈಗೊಳ್ಳುತ್ತದೆ. ಮಾಜಿ ಸೈನಿಕರ ಪುನರ್ವಸತಿಯ ಒಂದು ಭಾಗವಾಗಿ ಬಹಳಷ್ಟು ಜನ ನಿಪುಣರಾದ ಮಾಜಿ ಸೈನಿಕರನ್ನು ಲಾಭದಾಯಕ ಉದ್ಯೋಗದಲ್ಲಿ ತೊಡಗಿಸಲು ಇದು ಅವಕಾಶ ಕಲ್ಪಿಸುತ್ತದೆ.

156. ಕೊಡಗು ಜಿಲ್ಲೆಯಲ್ಲಿ ಫೀಲ್ಡ್ ಮಾರ್ಷಲ್ ಕಾರಿಯಪ್ಪ ಸ್ಮಾರಕ ಸಾಹಸ ಕ್ರೀಡಾ ಮತ್ತು ಪರಿಸರ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಸರ್ಕಾರವು ಈ ಸಂಸ್ಥೆಗೆ ಅಗತ್ಯವಾದ ಹಣಕಾಸು ನೆರವನ್ನು ಹಾಗೂ ಭೂಮಿಯನ್ನು ಒದಗಿಸುತ್ತದೆ.

ಸರ್ಕಾರಿ ನೌಕರರು

157. 4ನೆಯ ವೇತನ ಆಯೋಗದ ಪ್ರಮುಖ ಶಿಫಾರಸ್ಸುಗಳನ್ನು ಸರ್ಕಾರ ಈ ವರ್ಷ ಒಪ್ಪಿಕೊಂಡಿದೆ. ಇದರಿಂದ ಸರ್ಕಾರಕ್ಕೆ 137.83 ಕೋಟಿ ರೂಪಾಯಿಗಳ ಹೆಚ್ಚುವರಿ ವೆಚ್ಚ ಆಗಲಿದೆ. ಅಧಿಕಾರಿ ಮಟ್ಟದ ಸಮಿತಿಯು ಪರಿಶೀಲಿಸುತ್ತಿರುವ ಉಳಿದ ಶಿಫಾರಸ್ಸುಗಳ ಬಗ್ಗೆ ಸರ್ಕಾರ ಆದಷ್ಟು ಬೇಗನೇ ನಿರ್ಧಾರ ತೆಗೆದುಕೊಳ್ಳುತ್ತದೆ. ಬಹಳ ಹಿಂದೆಯೇ ನಿವೃತ್ತಿಯಾಗಿರುವ ಮತ್ತು ಅಲ್ಪಮೊತ್ತದ ನಿವೃತ್ತಿ ವೇತನ ಪಡೆಯುತ್ತಿರುವ ನಿವೃತ್ತಿ ವೇತನದಾರರ ಸಂಕಷ್ಟವನ್ನು ಗಮನಿಸಿ ನಿವೃತ್ತಿ ವೇತನಗಳನ್ನು ಆಮೂಲಾಗ್ರವಾಗಿ ಪರಿಷ್ಕರಿಸಬೇಕೆಂದು ಮತ್ತು 1982ಕ್ಕಿಂತ ಮೊದಲೇ ನಿವೃತ್ತಿಯಾದ ವಿವಿಧ ವರ್ಗಗಳ ನಿವೃತ್ತಿ ವೇತನದಾರರ [illegible]

ನಿವೃತ್ತಿವೇತನದ ಶೇಕಡಾ 5 ರಿಂದ ಶೇಕಡಾ 25ರಷ್ಟು ಹೆಚ್ಚಿಸಬೇಕೆಂದು ಆಯೋಗದ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳಲು ನಾನು ಉದ್ದೇಶಿಸಿದ್ದೇನೆ.

158. ಸರ್ಕಾರಿ ನೌಕರರಿಗೆ ಸಾಕಷ್ಟು ಸಂಖ್ಯೆಯ ವಸತಿಗೃಹಗಳನ್ನು ನಿರ್ಮಾಣ ಮಾಡುವುದು ನಮಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಈ ಸಮಸ್ಯೆ ನಿವಾರಣೆಗಾಗಿ ಸರ್ಕಾರಿ ನೌಕರರ ಗೃಹ ನಿರ್ಮಾಣ ನಿಗಮವನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ಇದಕ್ಕಾಗಿ 1994-95ರಲ್ಲಿ 1 ಕೋಟಿ ರೂಪಾಯಿಗಳ ಮೂಲಬಂಡವಾಳವನ್ನು ಒದಗಿಸಲಾಗುವುದು.

ಮಾಜಿ ಪಟೇಲರಿಗೆ ಪಿಂಚಣಿ

159. ಮಾಜಿ ಶಾನುಭೋಗರಿಗೆ ನೀಡಲಾಗುತ್ತಿರುವ ತಾತ್ಕಾಲಿಕ ಪಿಂಚಣಿಯ ರೀತಿಯಲ್ಲಿಯೇ, ಈಗ, ಮಾಜಿ ಪಟೇಲರಿಗೆ ಪ್ರತಿ ತಿಂಗಳು ನೀಡುತ್ತಿರುವ 100 ರೂ.ಗಳ ಅನುಕಂಪ ಭತ್ಯೆಗೆ ಬದಲು 500 ರೂ.ಗಳ ತಾತ್ಕಾಲಿಕ ಪಿಂಚಣಿ ಮಂಜೂರು ಮಾಡಲು ನಾನು ಉದ್ದೇಶಿಸಿದ್ದೇನೆ.

ಕಾನೂನು ಮತ್ತು ಸುವ್ಯವಸ್ಥೆ

160. ಪ್ರಶಾಂತ ಪರಿಸರ ಇದ್ದರೆ ಮಾತ್ರ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ. ಸರ್ಕಾರವು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡಿದ್ದರಿಂದ 1993-94ರಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಬಹುತೇಕ ಶಾಂತಿಯುತವಾಗಿತ್ತು.

ಪೊಲೀಸು ದಳವನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡುವ ಸಲುವಾಗಿ ಆ ಇಲಾಖೆಯನ್ನು ಬಲಪಡಿಸಿ ಆಧುನೀಕರಣಗೊಳಿಸಲು ಸರ್ಕಾರ ದೃಢಸಂಕಲ್ಪ ಮಾಡಿದೆ. ರಾಷ್ಟ್ರೀಯ ಪೊಲೀಸ್ ಆಯೋಗವು ವಿಧಿಸಿರುವ ನಿಬಂಧನೆಗಳನ್ನು ಪಾಲಿಸಲು ನಾವು ಕಾರ್ಯಪ್ರವೃತ್ತರಾಗಿದ್ದೇವೆ. ಪೊಲೀಸು ದಳದ ನೈತಿಕತೆಯನ್ನು ಸುಧಾರಿಸುವ ಸಲುವಾಗಿ ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರ್‌ಗಳ ಮಟ್ಟದವರೆಗಿನ ಪೊಲೀಸ್ ಸಿಬ್ಬಂದಿಗೆ ಸಬ್ಸಿಡಿ ದರದಲ್ಲಿ ಪಡಿತರ ವಸ್ತುಗಳನ್ನು ನೀಡುವುದಕ್ಕೆ ಏರ್ಪಾಡು ಮಾಡಿರುವುದು ಈ ದಿಸೆಯಲ್ಲಿ ಒಂದು ಪ್ರಮುಖ ಹೆಜ್ಜೆ.

161. ರಾಜ್ಯದ ಗಡಿ ಜಿಲ್ಲೆಗಳಲ್ಲಿ ಉಗ್ರಗಾಮ ಚಟುವಟಿಕೆಗಳನ್ನು ಹತ್ತಿಕ್ಕಲು ಭಯೋತ್ಪಾದಕ ದಮನ ದಳದ 3 ಕಂಪನಿಗಳನ್ನು ರಚಿಸಲು ಉದ್ದೇಶಿಸಲಾಗಿದೆ. ಭಯೋತ್ಪಾದಕ ಚಟುವಟಿಕೆಗಳ ಸವಾಲುಗಳನ್ನು ಎದುರಿಸಲು ಈ ದಳವನ್ನು ತರಬೇತಿಗೊಳಿಸಲಾಗುವುದು. ಮತ್ತು ಸಜ್ಜುಗೊಳಿಸಲಾಗುವುದು ಹಾಗೂ ಬಹು ಮುಖ್ಯವಾದ ಸ್ಥಾವರಗಳನ್ನು ಸಂರಕ್ಷಿಸಲಾಗುವುದು.

162. ವಿಶೇಷ ಕಾರ್ಯದಳದ 3 ಕಂಪನಿಗಳು ಕರ್ನಾಟಕ ವಿಶೇಷ ಮೀಸಲು ಪೊಲೀಸ್ ದಳದಲ್ಲಿ ಪ್ರಾಥಮಿಕ ತರಬೇತಿ ಪಡೆಯುತ್ತಿವೆ. ತೀವ್ರ ಕೋಮು ಗಲಭೆಗಳನ್ನು ನಿಭಾಯಿಸಲು ಈ ಪಡೆಗೆ ಸಿಆರ್‌ಪಿ/ಬಿಎಸ್‌ಎಫ್ ನಿಂದ ಮತ್ತಷ್ಟು ತರಬೇತಿ ನೀಡಲಾಗುವುದು. ಆಧುನಿಕ ಸಲಕರಣೆಗಳೊಂದಿಗೆ ಸಜ್ಜಾಗಿರುವ, ವಿಶೇಷ ಕಾರ್ಯದಳವು ಗಲಭೆ ಪ್ರದೇಶಗಳಿಗೆ ಶೀಘ್ರವಾಗಿ ತಲುಪುವ ಅತ್ಯಂತ ಪ್ರೇರಕ ಸಂಚಾರಿ ಪಡೆಯಾಗಿರುತ್ತದೆ.

163. ರಾಜ್ಯದ ಕೈಗಾರಿಕಾ ಪ್ರದೇಶದಲ್ಲಿ ಪೊಲೀಸ್ ಗಸ್ತು ಕಾರ್ಯವನ್ನು ಪುನರ್

ಹಾಗೂ ಶಾಂತಿಯನ್ನು ಕಾಪಾಡಲು ಸಾಕಷ್ಟು ಪೊಲೀಸ್ ಬಂದೋಬಸ್ತಿಗೆ ವ್ಯವಸ್ಥೆ ಮಾಡಲಾಗುವುದು.

164. ಮಹಿಳೆಯರ ಮತ್ತು ಮಕ್ಕಳ ಮೇಲೆ ನಡೆಯುವ ಅಪರಾಧಗಳನ್ನು ತಡೆಗಟ್ಟುವ ಸಲುವಾಗಿ ವಿಶೇಷ ಶಾಸನವೊಂದನ್ನು ರಚಿಸಲು ಉದ್ದೇಶಿಸಲಾಗಿದೆ. ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯವು ಇನ್ನು ಮುಂದೆ ಅಂಥ ಅಪರಾಧಗಳ ಬಗ್ಗೆ ಸಹ ತನಿಖೆ ಮಾಡುತ್ತದೆ ಮತ್ತು ಮೊಕದ್ದಮೆಗಳನ್ನು ತ್ವರಿತವಾಗಿ ವಿಲೇ ಮಾಡುವ ನಿಟ್ಟಿನಲ್ಲಿ ಶ್ರಮಿಸುತ್ತದೆ. 1993-94ರಲ್ಲಿ ಈಗಾಗಲೇ ಬೆಂಗಳೂರು, ಮೈಸೂರು ಮತ್ತು ಮಂಗಳೂರು ನಗರಗಳಿಗೆ ಮೂರು "ಸಂಪೂರ್ಣ ಮಹಿಳಾ ಪೊಲೀಸ್ ಠಾಣೆಗಳನ್ನು" ಮಂಜೂರು ಮಾಡಲಾಗಿದೆ. ಈಗ ಬೆಳಗಾಂ, ಹುಬ್ಬಳ್ಳಿ, ಧಾರವಾಡ, ಗುಲ್ಬರ್ಗಾ ಮತ್ತು ದಾವಣಗೆರೆಗಳಲ್ಲಿ "ಸಂಪೂರ್ಣ ಮಹಿಳಾ ಪೊಲೀಸ್ ಠಾಣೆ"ಗಳನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ಅಲ್ಲದೆ, ಪ್ರತಿಯೊಂದು ಜಿಲ್ಲೆಯ ಜಿಲ್ಲಾ ಪೊಲೀಸ್ ಕಚೇರಿಗಳಿಗೆ ಮಹಿಳಾ ಕುಂದುಕೊರತೆಗಳ ಘಟಕವನ್ನು ರಚಿಸಲಾಗುವುದು.

165. ಪ್ರತಿ ವರ್ಷ ರಸ್ತೆ ಅಪಘಾತದಲ್ಲಿ ಅಸಂಖ್ಯಾತ ಜನರು ಸಾಯುತ್ತಿದ್ದಾರೆ. ಅಪಘಾತದ ಪ್ರಮಾಣವನ್ನು ಕಡಿಮೆ ಮಾಡಲು ಈ ಮುಂದಿನ ವ್ಯಾಪಕ ಅಪಘಾತ ನಿವಾರಣಾ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಉದ್ದೇಶಿಸಿದೆ.

ಎ) ಹೆಚ್ಚು ಸಂಚಾರ ಒತ್ತಡವಿರುವ ರಾಷ್ಟ್ರೀಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವುದು;

ಬಿ) ಸಾರಿಗೆ ವಾಹನಗಳ ಚಾಲಕರು ವೇಗಮಿತಿಯನ್ನು ಪಾಲಿಸುವಂತೆ ಕಟ್ಟುನಿಟ್ಟಾದ ಕ್ರಮಗಳನ್ನು ಜಾರಿಗೊಳಿಸುವುದು;

ಸಿ) ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4 ಮತ್ತು 17 ರಲ್ಲಿ ಸೂಕ್ತ ಸ್ಥಳಗಳಲ್ಲಿ ಸಂಚಾರಿ ನೆರವು ಕೇಂದ್ರಗಳ ಸ್ಥಾಪನೆ ;

ಡಿ) ಬೈಪಾಸ್ ಮಾರ್ಗಗಳನ್ನು ಕಾಲುದಾರಿಯಾಗಿ ಉಪಯೋಗಿಸದಂತೆ ತಡೆಯುವುದು;

ಇ) ಅಪಘಾತಕ್ಕೊಳಗಾದ ಮೋಟಾರು ವಾಹನಗಳನ್ನು ತೆಗೆಯಲು ರಾಷ್ಟ್ರೀಯ ಹೆದ್ದಾರಿಗಳಿರುವ ಜಿಲ್ಲೆಗಳಿಗೆ ರೆಕರ್‌ಗಳನ್ನು ಒದಗಿಸುವುದು;

ಎಫ್) ರಸ್ತೆ ಅಪಘಾತಕ್ಕೊಳಗಾಗುವ ಅಸಹಾಯಕರನ್ನು ಹತ್ತಿರದ ಆಸ್ಪತ್ರೆಗಳಿಗೆ ಸಾಗಿಸುವ ಆಂಬುಲೆನ್ಸ್‌ಗಳನ್ನು ಪೊಲೀಸ್ ಸೂಪರಿಂಟೆಂಡೆಂಟರ ವಶದಲ್ಲಿ ಇರಿಸುವುದು.

ಜಿ) ರಾಷ್ಟ್ರೀಯ ಹೆದ್ದಾರಿಗಳು ಮತ್ತು ಭಾರಿ ರಾಜ್ಯ ಹೆದ್ದಾರಿಗಳಲ್ಲಿರುವ ನರ್ಸಿಂಗ್ ಹೋಂಗಳನ್ನು ಗುರುತಿಸುವುದು.

ಹೆಚ್) ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಪ್ರಮುಖ ನಗರಗಳಲ್ಲಿ ಗಾಯ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸುವುದು.

166. ಸನ್ಮಾನ್ಯ ಸಭಾಧ್ಯಕ್ಷರೆ, ನಾನು, ಈಗ ತೆರಿಗೆ ವಿಷಯಗಳ ಬಗ್ಗೆ ತಿಳಿಸಬಯಸುತ್ತೇನೆ.

ವಾಣಿಜ್ಯ ತೆರಿಗೆಗಳು

167. ವಾಣಿಜ್ಯ ತೆರಿಗೆ ಇಲಾಖೆಯು ಒಟ್ಟು ತೆರಿಗೆ ಆದಾಯದ ಶೇ. 67 ಕ್ಕಿಂತ ಹೆಚ್ಚು ಆದಾಯವನ್ನು ವಸೂಲಿ ಮಾಡುವ ರಾಜ್ಯ ಪ್ರಮುಖ ಆದಾಯ ತರುವ ಇಲಾಖೆಯಾಗಿರುತ್ತದೆ. ಕರ್ನಾಟಕ ಮಾರಾಟ ತೆರಿಗೆ ಮತ್ತು ಕೇಂದ್ರ ಮಾರಾಟ ತೆರಿಗೆ ಕಾಯ್ದೆಗಳಡಿಯಲ್ಲಿ 3 ಲಕ್ಷಕ್ಕೂ ಹೆಚ್ಚು ವ್ಯಾಪಾರಿಗಳು ನೊಂದಾಯಿತರಾಗಿದ್ದು ಈ ಇಲಾಖೆಯು ವ್ಯಾಪಕ ಸಾರ್ವಜನಿಕ ಸಂಪರ್ಕ ಹೊಂದಿರುತ್ತದೆ ಮತ್ತು ಇದರ ಕಾರ್ಯವು ಬಹಳ ಒಳ್ಳೆಯ ಮಟ್ಟದಾಗಿರಬೇಕಾಗುತ್ತದೆ. ವಿಶೇಷವಾಗಿ ಅದರ

ಆಡಳಿತದಲ್ಲಿ, ದಕ್ಷತೆಯನ್ನು ಮತ್ತು ಸಾಮರ್ಥ್ಯವನ್ನು ಸುಧಾರಣೆ ಮಾಡಲು, ಇಲಾಖೆಯಲ್ಲಿ ಕೆಲವು ಪ್ರಮುಖ ಬದಲಾವಣೆಗಳನ್ನು ತರಲು ಉದ್ದೇಶಿಸಿರುತ್ತೇನೆ.

168. ಗಣಕೀಕರಣ (ಕಂಪ್ಯೂಟರೈಸೇಷನ್)

ಮೊದಲನೆಯದಾಗಿ, 3 ವರ್ಷದ ಅವಧಿಯಲ್ಲಿ ಇಲಾಖೆಯ ಕಾರ್ಯವನ್ನು ಗಣಕೀಕರಿಸಲು ನಾನು ಉದ್ದೇಶಿಸಿರುತ್ತೇನೆ. 1994-95ರಲ್ಲಿ ನಾಲ್ಕು ಆಡಳಿತ ವಿಭಾಗಗಳನ್ನು ಗಣಕೀಕರಿಸಲಾಗುವುದು ಮತ್ತು 1997ಕ್ಕೆ ಈ ಕಾರ್ಯಕ್ರಮವು ಸಂಪೂರ್ಣವಾಗುವುದು. ಸಂಪೂರ್ಣ ಗಣಕೀಕರಣವು ಇಲಾಖೆಯ ಆಂತರಿಕ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸುವುದು.

169. ನಿಷ್ಠಾವಂತ ಕರದಾತರಿಗೆ ಕ್ಷಿಪ್ರ ಪಥ

ಶಾಸನಬದ್ಧ ನಮೂನೆಗಳ ಶೀಘ್ರ ನೀಡಿಕೆ, ಕರನಿರ್ಧರಣೆಯನ್ನು 15 ದಿನಗಳಲ್ಲಿ ಮುಗಿಸುವ ಮತ್ತು ಇತರೆ ವಿಷಯಗಳ ಮೂಲಕ ನಿಷ್ಠಾವಂತ ಪಾವತಿಗಾರರಿಗೆ ಮಾನ್ಯತೆ ನೀಡಲು ನಾನು ಉದ್ದೇಶಿಸಿರುತ್ತೇನೆ. ಇದಕ್ಕಾಗಿ ತೆರಿಗೆ ಪಾವತಿಯ ದಾಖಲೆಯ ಮತ್ತು ತೆರಿಗೆ ಕಾನೂನುಗಳ ಪಾಲನೆಯ ಆಧಾರದ ಮೇಲೆ ವ್ಯಾಪಾರಿಗಳನ್ನು ಆಯ್ಕೆ ಮಾಡಲಾಗುವುದು. ಇದರಿಂದಾಗಿ ಕಾನೂನುಗಳನ್ನು ಪಾಲನೆ ಮಾಡುವ ವ್ಯಾಪಾರಿಗಳಿಗೆ ನಾವು ಪ್ರೋತ್ಸಾಹ ನೀಡುತ್ತೇವೆ ಮತ್ತು ಸ್ವಯಂ ಕಾನೂನು ಪಾಲನೆ ಮಾಡುವ ವಾತಾವರಣ ಸೃಷ್ಟಿ ಮಾಡುತ್ತೇವೆ.

170. ಸಣ್ಣ ವ್ಯಾಪಾರಿಗಳಿಗೆ ಕ್ಷಿಪ್ರ (ಸಮ್ಮರಿ) ಕರನಿರ್ಧರಣಾ ಸೌಲಭ್ಯ

ವಾರ್ಷಿಕ ವಹಿವಾಟು 10 ಲಕ್ಷ ರೂಪಾಯಿಗಳು ಮೀರದಿರುವ ಎಲ್ಲಾ ವ್ಯಾಪಾರಿಗಳಿಗೆ ಕ್ಷಿಪ್ರ ಕರನಿರ್ಧರಣಾ ಸೌಲಭ್ಯವನ್ನು ನೀಡಲು ನಾನು ಉದ್ದೇಶಿಸಿರುತ್ತೇನೆ. ಇದರಿಂದಾಗಿ ಕರನಿರ್ಧರಣಾ ವಿಲೇವಾರಿಗೆ ಹೆಚ್ಚು ಸಮಯ ತಗಲುವುದಿಲ್ಲ ಹಾಗೂ ವ್ಯಾಪಾರಿಗಳ ಮೇಲೆ ಯಾವುದೇ ಹೆಚ್ಚಿನ ಹೊರೆ ಬೀಳುವುದಿಲ್ಲ. ಇದಲ್ಲದೆ 5 ಲಕ್ಷ ರೂಪಾಯಿಗಳ ವಾರ್ಷಿಕ ವಹಿವಾಟು ಮೀರದಿರುವ ವ್ಯಾಪಾರಿಗಳ ಕರನಿರ್ಧರಣೆಯನ್ನು ಅವರ ಹಾಜರಿಯನ್ನು ಕಾಯದೇ ಸ್ವಯಂ ಕರನಿರ್ಧರಣೆ (ಸೆಲ್ಫ್ ಅಸೆಸ್‌ಮೆಂಟ್) ಆಧಾರದ ಮೇಲೆ ವಿಲೇವಾರಿ ಮಾಡಲು ಉದ್ದೇಶಿಸಲಾಗಿದೆ.

171. ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ವಿಶೇಷ ಗಮನ

ದೇಶದ ಆರ್ಥಿಕ ವ್ಯವಸ್ಥೆಯು ಮುಕ್ತವಾದ ಪರಿಣಾಮವಾಗಿ ಸಣ್ಣ ಪ್ರಮಾಣದ ಕೈಗಾರಿಕೆಗಳು ದುರ್ಬಲ ಪರಿಸ್ಥಿತಿಯಲ್ಲಿರುವುದನ್ನು ನಾನು ಗ್ರಹಿಸಿದ್ದೇನೆ. ಅವರ ಪರಿಸ್ಥಿತಿಯನ್ನು ಸುಧಾರಿಸಲು, ನಾನು ಮುಂದೆ ಸೂಚಿಸಿದ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದ್ದೇನೆ.

1. ಪ್ರತಿ ತಿಂಗಳಿಗೆ ಬದಲಾಗಿ ತ್ರೈಮಾಸಿಕ ನಿರೂಪಣೆಯನ್ನು ಸಲ್ಲಿಸುವುದು. ಇದು ಅವರ ಲೆಕ್ಕದ ಕೆಲಸವನ್ನು ಕಡಿಮೆಗೊಳಿಸುವುದು.
2. ವಾರ್ಷಿಕ ವಹಿವಾಟು 25 ಲಕ್ಷ ರೂಪಾಯಿಗಳು ಮತ್ತು ಅದಕ್ಕಿಂತ ಕಡಿಮೆಯಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಕ್ಷಿಪ್ರ ಕರನಿರ್ಧರಣಾ ಸೌಲಭ್ಯ (ಸಮ್ಮರಿ ಅಸೆಸ್‌ಮೆಂಟ್)
3. ಪ್ರಮುಖ ಕೈಗಾರಿಕಾ ಪ್ರದೇಶಗಳಲ್ಲಿ ಇಲಾಖೆಯ ಕರನಿರ್ಧರಣಾಧಿಕಾರಿಗಳ ಕಛೇರಿಗಳ ಸ್ಥಾಪನೆ.

172. ಚೆಕ್‌ಪೋಸ್ಟ್‌ಗಳ ಆಧುನೀಕರಣ

ಇಲಾಖೆಯ ಚೆಕ್‌ಪೋಸ್ಟ್‌ಗಳಲ್ಲಿನ ಸೌಲಭ್ಯಗಳನ್ನು 1994-95ರಿಂದ 3 ವರ್ಷಗಳ ಅವಧಿಯಲ್ಲಿ ಆಧುನೀಕರಿಸಲು ಮತ್ತು ಸುಧಾರಿಸಲು ನಾನು ಉದ್ದೇಶಿಸಿದ್ದೇನೆ. ಮುಖ್ಯ

ಪಟ್ಟಣಗಳ ಸುತ್ತಮುತ್ತ ಮತ್ತು ರಾಜ್ಯದ ಗಡಿಗಳಲ್ಲಿರುವ ಪ್ರಮುಖ ಚೆಕ್‌ಪೋಸ್ಟ್‌ಗಳನ್ನು ಬಿಟ್ಟು ಮಿಕ್ಕವುಗಳನ್ನು ಹಂತ ಹಂತವಾಗಿ ತೆಗೆದು ಹಾಕಲಾಗುವುದು.

173. ಮಾರಾಟ ತೆರಿಗೆ ಬಾಕಿ

ಇಲಾಖೆಯಲ್ಲಿನ ತೆರಿಗೆ ಬಾಕಿಯು ನನಗೆ ತೀವ್ರ ಕಾಳಜಿಯ ವಿಷಯವಾಗಿದೆ. ಬೆಂಗಳೂರಿನಲ್ಲಿ ಈಗಾಗಲೇ ಸ್ಥಾಪಿತವಾಗಿರುವಂತೆ ರಾಜ್ಯದ ಇತರೆ ಎಲ್ಲಾ ಆಡಳಿತ ವಿಭಾಗಗಳಲ್ಲೂ ಮಾರಾಟ ತೆರಿಗೆ ಬಾಕಿ ವಸೂಲಿಗೆ ವಿಶೇಷವಾಗಿ ನೇಮಿತವಾದ ನ್ಯಾಯ ದಂಡಾಧಿಕಾರಿಗಳ ಕೋರ್ಟ್‌ಗಳನ್ನು (Judicial Magistrate Courts) ಸ್ಥಾಪಿಸಲು, ನಾನು ಉದ್ದೇಶಿಸಿದ್ದೇನೆ.

174. ಮಾರಾಟ ತೆರಿಗೆ

ವಿನಾಯಿತಿ ಮತ್ತು ರಿಯಾಯಿತಿಗಳು

ಸನ್ಮಾನ್ಯ ಸಭಾಧ್ಯಕ್ಷರೇ, ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಅಭಿವೃದ್ಧಿ ವಾತಾವರಣವನ್ನು ಸೃಷ್ಟಿ ಮಾಡುವುದೇ ನಮ್ಮ ಉದ್ದೇಶವಾಗಿರುತ್ತದೆ. ವಾಣಿಜ್ಯ ಮತ್ತು ಕೈಗಾರಿಕಾ ಸಂಘ ಸಂಸ್ಥೆಗಳಿಂದ ಬಂದ ಮನವಿಗಳ ಜಾಗರೂಕತೆಯ ಪರಿಶೀಲನೆಯ ನಂತರ, ನಾನು ಮುಂದೆ ಸೂಚಿಸಿರುವ ವಿನಾಯಿತಿ ಮತ್ತು ರಿಯಾಯಿತಿಗಳನ್ನು ನೀಡಲು ಉದ್ದೇಶಿಸಿದ್ದೇನೆ.

ಅ. ವಿನಾಯಿತಿಗಳು

175. ಅ. ಈ ಮುಂದೆ ಸೂಚಿಸಿರುವ ವಸ್ತುಗಳ ಮೇಲೆ ಮಾರಾಟ ತೆರಿಗೆ ವಿನಾಯಿತಿ ನೀಡಲು ಉದ್ದೇಶಿಸಲಾಗಿದೆ.

(1) ತುಂತುರು ಹನಿ ನೀರಾವರಿ ಉಪಕರಣಗಳಲ್ಲಿ ಉಪಯೋಗಿಸುವ ಕೊಳವೆಗಳು.

(2) ಡೀಸಲ್ ಕ್ಯಾಪ್ಟೀವ್ ಜನರೇಟರ್ ಸೆಟ್ಟುಗಳು

(3) ಐದು ಸಾವಿರ ರೂಪಾಯಿವರೆಗಿನ ಬೆಲೆಯ ಮಂಗಳಸೂತ್ರಗಳು

(4) ತೊಟ್ಟಿಲುಗಳು

(5) ಮಕ್ಕಳಿಗೆ ಹಾಲುಣಿಸುವ ಶೀಷೆಗಳು

(6) ರಾಗಿ ಹಿಟ್ಟು

(7) ಅಕ್ಕಿಯ ರವೆ

ಆ. ಮಾನ್ಯ ಸದಸ್ಯರುಗಳಿಗೆ ತಿಳಿದಿರುವ ಹಾಗೆ 1994-95ರ ರಾಷ್ಟ್ರೀಯ ಕ್ರೀಡಾ ಕೂಟವನ್ನು ನಮ್ಮ ರಾಜ್ಯದಲ್ಲಿ ನಡೆಸಲು ತೀರ್ಮಾನಿಸಿರುತ್ತೇವೆ. ಈ ಹಿನ್ನೆಲೆಯಲ್ಲಿ ನಮ್ಮ ಕ್ರೀಡಾಪಟುಗಳಿಗೆ ಉತ್ತೇಜನ ನೀಡಲು, ಕ್ರೀಡಾ ಸಾಮಗ್ರಿಗಳಿಗೆ ಮಾರಾಟ ತೆರಿಗೆ ವಿನಾಯಿತಿ ನೀಡಲು ಉದ್ದೇಶಿಸಿದ್ದೇನೆ.

ಇ. ಈ ಮೇಲೆ ಸೂಚಿಸಿದ ವಸ್ತುಗಳಲ್ಲದೆ, ಗ್ರಾಹಕರಿಗೆ ಕೂಡ ಪರಿಹಾರ ನೀಡುವ ಕ್ರಮವಾಗಿ ಅನುಬಂಧ - IV ರಲ್ಲಿ ಸೂಚಿಸಿರುವ ಹಲವಾರು ವಸ್ತುಗಳ ಮೇಲೆ ಮಾರಾಟ ತೆರಿಗೆ ವಿನಾಯಿತಿ ನೀಡಲು ಉದ್ದೇಶಿಸಿದ್ದೇನೆ.

176. ನಾನು ಮುಂದೆ ಸೂಚಿಸಿರುವ ಕರಾರು ಕಾಮಗಾರಿಗಳನ್ನು ತೆರಿಗೆಯಿಂದ ವಿನಾಯಿತಿಗೊಳಿಸಲು ಉದ್ದೇಶಿಸಿದ್ದೇನೆ.

(1) ಬಟ್ಟೆಗಳಿಗೆ ಬಣ್ಣ ಹಾಕುವುದು ಮತ್ತು ಮುದ್ರಣ ಮಾಡುವುದು.

(2) ಓದುವ ಪುಸ್ತಕಗಳನ್ನು ಮುದ್ರಣ ಮಾಡುವುದು ಮತ್ತು ಸರಬರಾಜು ಮಾಡುವುದು.

177. ಹೊರ ರಾಷ್ಟ್ರಗಳಿಗೆ ರಫ್ತು ಮಾಡಿದ ಮರದ ಕರಕುಶಲ ವಸ್ತುಗಳ ಮೇಲೆ ತೆರಬೇಕಾದ ಖರೀದಿ ತೆರಿಗೆಯನ್ನು 31-3-89ರವರೆಗೆ ವಿನಾಯಿತಿ ಮಾಡಲು ನಾನು ಉದ್ದೇಶಿಸಿದ್ದೇನೆ.

178. ಮುಂದೆ ಸೂಚಿಸಿದ ವಹಿವಾಟುಗಳನ್ನು ವಹಿವಾಟು ತೆರಿಗೆಯಿಂದ ವಿನಾಯಿತಿ ಮಾಡಲು ನಾನು ಉದ್ದೇಶಿಸಿದ್ದೇನೆ.

(1) 1-4-89ರಿಂದ ಎರಡನೆ ಮತ್ತು ನಂತರದ ಕಾಫಿ ಬೀಜದ ಖರೀದಿ ವಹಿವಾಟು

(2) 31-8-93 ರವರೆಗೆ ಎರಕ ಹೊಯ್ದ ಕಬ್ಬಿಣ (ಕ್ಯಾಸ್ಟ್ ಐರನ್ ಕ್ಯಾಸ್ಟಿಂಗ್‌ಗಳು)

(3) ತಯಾರಕರು ಹೊರತು ಪಡಿಸಿ ಮಿಕ್ಕವರು ಮಾರಾಟ ಮಾಡುವ ಔಷಧಿಗಳು

(4) 24-6-91ರಿಂದ 1-9-93ರವರೆಗೆ ಕಡ್ಲೆ ಹಿಟ್ಟು.

179. ರಾಜ್ಯ ಸರ್ಕಾರದ ಕೃಷಿ ಇಲಾಖೆ ನಡೆಸುವ ತರಬೇತಿ ಕೇಂದ್ರಗಳಿಗೆ ಸರಬರಾಜು ಮಾಡಲು ಡ್ಯಾನಿಶ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ ಅಸಿಸ್ಟೆನ್ಸ್ (Danida) (ಡ್ಯಾನಿಡಾ) ಸಂಸ್ಥೆಗೆ ಮಾರಾಟ ಮಾಡುವ ವಸ್ತುಗಳನ್ನು ತೆರಿಗೆಯಿಂದ ವಿನಾಯಿತಿ ಮಾಡಲು ನಾನು ಉದ್ದೇಶಿಸಿದ್ದೇನೆ.

180. ಮುಂದೆ ಸೂಚಿಸಿದ ವಸ್ತುಗಳನ್ನು ಕೇಂದ್ರ ಮಾರಾಟ ತೆರಿಗೆಯಿಂದ ವಿನಾಯಿತಿ ಮಾಡಲು ನಾನು ಉದ್ದೇಶಿಸಿದ್ದೇನೆ.

(1) ಕಸಪೊರಕೆಗಳು

(2) ಕತ್ತಾಳೆ ನಾರಿನ ಹಗ್ಗಗಳು

(3) ಕರ್ನಾಟಕ ಮಾರಾಟ ತೆರಿಗೆ ಬಾಧ್ಯವಾದ ಹುಣಿಸೆಬೀಜ.

ರಿಯಾಯಿತಿಗಳು

181. ಸನ್ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರವು ಇತ್ತೀಚೆಗೆ ಕಾಫಿ ಆಕ್ಟ್‌ಗೆ ಕೆಲವು ಮಾರ್ಪಾಡು ಮಾಡಿ ಬೆಳೆಗಾರರು ತಮ್ಮ ಅರ್ಧ ಕಾಫಿ ಬೆಳೆಯನ್ನು ಮುಕ್ತವಾಗಿ ಮಾರಾಟ ಮಾಡಲು ಹಾಗೂ ಅವರು ಮತ್ತು ಇತರೆಯವರು ಹೊರದೇಶಗಳಿಗೆ ಕಾಫಿಯನ್ನು ರಫ್ತು ಮಾಡಲು ಅನುಮತಿ ನೀಡಿ ಕಾಫಿ ವ್ಯಾಪಾರದ ಮೇಲೆ ಕಾಫಿ ಬೋರ್ಡಿನ ಸ್ವಾಮ್ಯವನ್ನು ಮುರಿದಿದ್ದು ಅದರಿಂದ ಈಗಿನ ವ್ಯಾಪಾರದ ವಿಧಾನದ ಮೇಲೆ ತೀವ್ರ ಪರಿಣಾಮ ಬೀರಿದ ಹಾಗೂ ಹೊಸ ವ್ಯಾಪಾರ ವಿಧಾನ ವಿಕಾಸದ ಅಗತ್ಯತೆಯ ಪರಿಸ್ಥಿತಿಯನ್ನು ಉಂಟು ಮಾಡಿದೆ. ಈ ಪರಿಸ್ಥಿತಿಯ ಜಾಗರೂಕತೆಯ ಪರಿಶೀಲನೆಯ ನಂತರ ಬಳಕೆ ಕೇಂದ್ರಗಳಾಗಿರುವ ಹಾಗೂ ಕಡಿಮೆ ತೆರಿಗೆ ದರಗಳನ್ನೊಳಗೊಂಡಿರುವ ನೆರೆ ರಾಜ್ಯಗಳಿಗೆ ಕಾಫಿ ವ್ಯಾಪಾರ ಪಲ್ಲಟವಾಗುವುದನ್ನು ತಡೆಯಲು ತೆರಿಗೆ ದರದ ಸೂಕ್ತ ಇಳಿತ, ತೆರಿಗೆ ಹಂತವನ್ನು ಬದಲಾಯಿಸುವ ಮತ್ತು ಕರ್ನಾಟಕ ಮಾರಾಟ ತೆರಿಗೆಗೇ ಬಾಧ್ಯವಾದ ಕಾಫಿಯ ಅಂತರ ರಾಜ್ಯ ಮಾರಾಟದ ಮೇಲೆ ರಿಯಾಯಿತಿಗಳನ್ನೊಳಗೊಂಡ ಕೆಲವು ಪರಿಷ್ಕರಣ ಕ್ರಮಗಳನ್ನು ಕೈಗೊಳ್ಳುವ ಅವಶ್ಯಕತೆ ಕಂಡು ಬಂದಿದೆ. ಆದುದರಿಂದ ನಾನು,

(1) ಕಾಫಿ ಬೀಜದ ಪ್ರಸ್ತುತ ತೆರಿಗೆ ದರವನ್ನು ಶೇಕಡ 8 ರಿಂದ ವಹಿವಾಟು ತೆರಿಗೆಯನ್ನೊಳಗೊಂಡ ಶೇಕಡ 5ಕ್ಕೆ ಇಳಿಸಲು,

(2) ಕಾಫಿ ಬೀಜದ ಮೇಲಿನ ತೆರಿಗೆ ಹಂತವನ್ನು ಪ್ರಸ್ತುತ ಮೊದಲ ಖರೀದಿ ಹಂತದಿಂದ ಮೊದಲ ಮಾರಾಟ ಹಂತಕ್ಕೆ ಬದಲಾಯಿಸಲು, ಮತ್ತು

(3) ಕರ್ನಾಟಕ ಮಾರಾಟ ತೆರಿಗೆಗೆ ಒಳಪಟ್ಟ ಕಾಫಿ ಬೀಜದ ಅಂತರ ರಾಜ್ಯ ವ್ಯಾಪಾರವನ್ನು, ಕೇಂದ್ರ ಮಾರಾಟ ತೆರಿಗೆಯಿಂದ ವಿನಾಯಿತಿಗೊಳಿಸಲು ಉದ್ದೇಶಿಸಿದ್ದೇನೆ.

182. ರಾಜ್ಯದ ಯಂತ್ರ ತಯಾರಿಕೆ ಉದ್ಯಮವನ್ನು ಪ್ರೋತ್ಸಾಹಿಸಲು ನಾನು

(1) ಅವುಗಳು ರಾಜ್ಯದ ಕೈಗಾರಿಕೆಗಳಿಗೆ ಅವರು ಮಾರಾಟ ಮಾಡುವ ವಸ್ತುಗಳ ತಯಾರಿಕೆಯಲ್ಲಿ ಹಾಗೂ ಸಂಸ್ಕರಣೆಯಲ್ಲಿ ಉಪಯೋಗಿಸಲು ಯಂತ್ರಗಳನ್ನು ನಮೂನೆ-37ರ ಧೃಢ ಪತ್ರಿಕೆಯ ಆಧಾರದ ಮೇಲೆ ಶೇಕಡ 4ರ ರಿಯಾಯಿತಿ ದರದಲ್ಲಿ ಮಾರಾಟ ಮಾಡುವ ಸೌಲಭ್ಯ ನೀಡಲು, ಮತ್ತು

(2) ಯಂತ್ರಗಳು ಮತ್ತು ಅವುಗಳ ಬಿಡಿ ಭಾಗಗಳು ಮತ್ತು ಸಾಧನ ಸಾಮಗ್ರಿಗಳ ಮೇಲಿನ ಪ್ರಸ್ತುತ ತೆರಿಗೆ ದರವನ್ನು ಶೇಕಡ 13ರಿಂದ ಶೇಕಡ 10ಕ್ಕೆ ಇಳಿಸಲು ಉದ್ದೇಶಿಸಿರುತ್ತೇನೆ.

183. ಕ್ಯಾಪ್ಟೀವ್ ಜನರೇಟರ್ ಸೆಟ್‌ಗಳಲ್ಲಿ ಉಪಯೋಗಿಸಲು ನಮೂನೆ- 37ರ ಧೃಢ ಪತ್ರಿಕೆಗಳನ್ನು ನೀಡಿ ಶೇಕಡ ೪ರ ರಿಯಾಯಿತಿ ದರದಲ್ಲಿ ಫರ್ನೇಸ್ ಆಯಿಲ್ ಮತ್ತು ಡೀಸಲ್‌ನ್ನು ಖರೀದಿಸುವ ಸೌಲಭ್ಯವನ್ನು ಸ್ಥಳೀಯ ಕೈಗಾರಿಕೆಗಳಿಗೆ ಒಂದು ವರ್ಷದ ಅವಧಿಗೆ ನೀಡಲು ನಾನು ಉದ್ದೇಶಿಸಿರುತ್ತೇನೆ.

184. ಅಡಿಕೆಯ ಮೇಲಿನ ಪ್ರಸ್ತುತ ಶೇಕಡ 8ರ ತೆರಿಗೆಯನ್ನು ಒಂದು ವರ್ಷದ ಅವಧಿಗೆ ಶೇಕಡ 5ಕ್ಕೆ ಇಳಿಸಲು ನಾನು ಉದ್ದೇಶಿಸಿರುತ್ತೇನೆ ಹಾಗೂ ಸದ್ರಿ ವ್ಯಾಪಾರವು ಈ ಪರಿಹಾರಕ್ಕೆ ಒಳ್ಳೆಯ ಪ್ರತಿಕ್ರಿಯೆ ನೀಡಿದಲ್ಲಿ ಅದನ್ನು ಮುಂದುವರೆಸಲಾಗುವುದು

185. ನಾನು ಕಬ್ಬಿನ ಮೇಲಿನ ಪ್ರಸ್ತುತ ಶೇಕಡ 8ರ ಖರೀದಿ ತೆರಿಗೆಯನ್ನು ಶೇಕಡ 7ಕ್ಕೆ ಇಳಿಸಲು ಹಾಗೂ ಶೇಕಡ 1ರ ಸೆಸ್‌ನ್ನು (Cess) ವಿಧಿಸಲು ಉದ್ದೇಶಿಸಿರುತ್ತೇನೆ. ಸದರಿ ಸೆಸ್‌ನಿಂದ ಬಂದ ಹಣವನ್ನು ಸಕ್ಕರೆ ಕಾರ್ಖಾನೆಗಳ ಕಬ್ಬು ಬೆಳೆಯುವ ಕ್ಷೇತ್ರಗಳ ರಸ್ತೆಗಳ ಸುಧಾರಣೆ ಮಾಡಲು ಉಪಯೋಗ ಮಾಡಲಾಗುತ್ತದೆ.

186. ನ್ಯಾಯಾಲಯಗಳ ಕೆಲವು ತೀರ್ಪುಗಳಿಂದ ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಉಂಟಾದ ತೊಂದರೆಗಳನ್ನು ನಿವಾರಿಸಲು,

(1) 31-8-93ರವರೆಗೆ ಕ್ಯಾಸ್ಟ್ ಐರನ್ ಕ್ಯಾಸ್ಟಿಂಗ್‌ಗಳನ್ನು ಶೇಕಡ 4ರ ತೆರಿಗೆಗೆ ಒಳಪಡಿಸಲು ಮತ್ತು ಕೇಂದ್ರ ಮಾರಾಟ ತೆರಿಗೆ ಕಾಯ್ದೆಯಲ್ಲಿ ನಿರ್ದಿಷ್ಟ ಪಡಿಸಿದ ವಸ್ತುಗಳಿಗೆ ದೊರೆಯುವ ತೆರಿಗೆ ಸೌಲಭ್ಯಗಳನ್ನು ನೀಡಲು ಮತ್ತು

(2) 4-1-91ರವರೆಗೆ ಪ್ಯಾಕಿಂಗ್ ಪುಕ್‌ಗಳ ಮೇಲೆ ನಮೂನೆ 37ರ ವಿರುದ್ಧ ಶೇಕಡ 4ರ ತೆರಿಗೆ ಹಾಕಲು, ನಾನು ಉದ್ದೇಶಿಸಿರುತ್ತೇನೆ.

187. ಖಾದ್ಯೇತರ ತೆಂಗಿನೆಣ್ಣೆ ಮೇಲೆ 1-4-88 ರಿಂದ 31-3-94ರವರೆಗಿನ ಅವಧಿಯಲ್ಲಿ ತಗಲುವ ತೆರಿಗೆ ದರದ ಅನಿಶ್ಚಿತೆಯಿಂದಾಗಿ ತೆಂಗಿನೆಣ್ಣೆ ತಯಾರಿಕೆ ಉದ್ಯಮಕ್ಕೆ ಉಂಟಾದ ತೊಂದರೆಯನ್ನು ಪರಿಗಣಿಸಿ ಈ ಅವಧಿಯಲ್ಲಿ ಖಾದ್ಯೇತರ ತೆಂಗಿನೆಣ್ಣೆಗೆ ಖಾದ್ಯ ತೆಂಗಿನೆಣ್ಣೆಗೆ ತಗಲುವ ತೆರಿಗೆ ದರವನ್ನೇ ವಿಧಿಸಲು ನಾನು ಉದ್ದೇಶಿಸಿರುತ್ತೇನೆ.

188. ಪ್ರಸ್ತುತ ವಾರ್ಷಿಕ ವಹಿವಾಟು 25 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿರದ ಕೈಯಿಂದ ಮಾಡಿದ ಬಟ್ಟೆ ಒಗೆಯುವ ಸೋಪಿನ ತಯಾರಕರು ಶೇಕಡ 5ರ ತೆರಿಗೆಗೆ ಬಾಧ್ಯರಾಗಿರುತ್ತಾರೆ. ಈ ಉದ್ಯಮಕ್ಕೆ ರಿಯಾಯಿತಿಯಾಗಿ ತೆರಿಗೆ ದರವನ್ನು ಶೇಕಡ

3ಕ್ಕೆ ಇಳಿಸಲು ಮತ್ತು ವಹಿವಾಟಿನ ಮಿತಿಯನ್ನು 50 ಲಕ್ಷ ರೂಪಾಯಿಗಳಿಗೆ ಏರಿಸಲು ನಾನು ಉದ್ದೇಶಿಸಿರುತ್ತೇನೆ.

189. ಅಂತರ ರಾಜ್ಯ ವ್ಯಾಪಾರಕ್ಕೆ ಉತ್ತೇಜನ ನೀಡಲು ಸಾಂಬ್ರಾಣಿಯ ಮತ್ತು ಒಣಗಿದ ತೆಂಗಿನ ಕಾಯಿ ಪುಡಿಯ ಮೇಲಿನ ಕೇಂದ್ರ ಮಾರಾಟ ತೆರಿಗೆಯನ್ನು ಶೇಕಡ 4ಕ್ಕೂ ಹಾಗೂ ಖಂಡಸಾರಿ ಸಕ್ಕರೆಯ ಮೇಲೆ ಕೂಡ ಕೇಂದ್ರ ಮಾರಾಟ ತೆರಿಗೆಯನ್ನು ಶೇಕಡ 1ಕ್ಕೆ ಇಳಿಸಲು, ನಾನು ಉದ್ದೇಶಿಸಿರುತ್ತೇನೆ.

190. ವ್ಯಾಪಾರ ಮತ್ತು ಕೈಗಾರಿಕೆಗೆ ಅಲ್ಲದೆ ಗ್ರಾಹಕರಿಗೆ ಕೂಡ ಪರಿಹಾರ ನೀಡುವ ಕ್ರಮವಾಗಿ, ಈ ಮೇಲೆ ಸೂಚಿಸಿದ ವಸ್ತುಗಲ್ಲದೆ, ಅನುಬಂಧ-V ರಲ್ಲಿ ಸೂಚಿಸಿರುವ ಮಿಕ್ಕ ಹಲವಾರು ವಸ್ತುಗಳ ಮೇಲಿನ ತೆರಿಗೆ ದರವನ್ನು ಅದರಲ್ಲಿ ಸೂಚಿಸಿದ ದರಗಳಿಗೆ ಇಳಿಸಲು ನಾನು ಉದ್ದೇಶಿಸಿರುತ್ತೇನೆ.

ಬಿ. ಸುಧಾರಣಾ ಕ್ರಮಗಳು

191. ನೆರೆ ರಾಜ್ಯಗಳಲ್ಲಿರುವ ತೆರಿಗೆ ದರಗಳ ತೀವ್ರ ಪರಿಶೀಲನೆಯ ನಂತರ, ನೆರೆ ರಾಜ್ಯಗಳ ಜೊತೆ ತೆರಿಗೆ ಹೊಂದಾಣಿಕೆ ಉಳಿಸಿಕೊಳ್ಳಲು ಮತ್ತು ರಾಜ್ಯದ ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲು ಹಾಗೂ ವ್ಯಾಪಾರ ಪಲ್ಲಟವನ್ನು ತಡೆಯಲು ಕೆಲವು ವಸ್ತುಗಳ ಮೇಲಿನ ತೆರಿಗೆ ದರಗಳನ್ನು ಮಾರ್ಪಾಡು ಮಾಡಲು ನಾನು ಉದ್ದೇಶಿಸಿರುತ್ತೇನೆ. ಅಂತಹ ವಸ್ತುಗಳನ್ನು ಮತ್ತು ಉದ್ದೇಶಿಸಿದ ದರಗಳನ್ನು ಅನುಬಂಧ -VIರಲ್ಲಿ ಸೂಚಿಸಲಾಗಿದೆ.

192. ಈಗಾಗಲೇ ಹೇಳಿದ ಕಾರಣಗಳಿಗಾಗಿ, ಹತ್ತಿಯ ಮೇಲಿನ ಪ್ರಸ್ತುತ ತೆರಿಗೆ ಹಂತವನ್ನು, ಅಂತಿಮ ಖರೀದಿ ಹಂತದಿಂದ ಮೊದಲ ಮಾರಾಟ ಹಂತಕ್ಕೆ ಬದಲಾಯಿಸಲು ನಾನು ಉದ್ದೇಶಿಸಿದ್ದೇನೆ.

193. ಅದರಂತೆಯೇ ವಿದ್ಯುತ್ ಜೇಡಿಮಣ್ಣಿನ ಮತ್ತು ಪಿಂಗಾಣಿ ಸಾಧನಗಳನ್ನು ಈಗಿನ ಮೊದಲ ಮಾರಟ ಹಂತದಲ್ಲಿನ ಶೇಕಡ 13ರ ತೆರಿಗೆಗೆ ಬದಲಾಗಿ ಮೊದಲ ಮಾರಾಟ ಹಂತದಲ್ಲಿ ಶೇಕಡ 10ರ ತೆರಿಗೆಗೆ ಮತ್ತು ಅಂತಿಮ ಮಾರಾಟ ಹಂತದಲ್ಲಿ ಶೇಕಡ 3ರ ತೆರಿಗೆಗೆ ಒಳಪಡಿಸಲು ನಾನು ಉದ್ದೇಶಿಸಿದ್ದೇನೆ.

194. ಈಗಿನ ದ್ವಂದ್ವಾರ್ಥತೆಯನ್ನು ತೆಗೆದು ಹಾಕಲು ತೆರಿಗೆ ಅನುಬಂಧದಲ್ಲಿ ನಿರ್ದಿಷ್ಟ ನಮೂದುಗಳನ್ನು ತರುವ ಮೂಲಕ, ಎಲ್ಲಾ ವಿಧದ ಫರ್ನೇಸ್ ಆಯಿಲ್, ಟ್ರಾನ್ಸ್‌ಫಾರ್ಮರ್ ಆಯಿಲ್ ಮತ್ತು ಕೂಲೆಂಟ್‌ಗಳನ್ನು ಶೇಕಡ 13ರ ತೆರಿಗೆಗೆ ಹಾಗೂ ಫೈಬರ್ ಗ್ಲಾಸ್, ಪ್ಲಾಸ್ಟಿಕ್ ಅಥವಾ ಕೃತಕ ಪದಾರ್ಥಗಳಿಂದ ನಿರ್ಮಿತವಾದ ನೀರಿನ ತೊಟ್ಟಿಗಳನ್ನು ಶೇಕಡ 10ರ ತೆರಿಗೆಗೆ ಒಳಪಡಿಸಲು ನಾನು ಉದ್ದೇಶಿಸಿದ್ದೇನೆ.

195. ಸಿಮೆಂಟ್ ಶೀಟ್‌ಗಳು, ಆಸ್‌ಬೆಸ್ಟಾಸ್ ಶೀಟ್‌ಗಳು, ಸ್ಟ್ರಾಬೋರ್ಡ್‌ಗಳು, ಹಾರ್ಡ್ ಮತ್ತು ಸಾಫ್ಟ್ ಬೋರ್ಡ್‌ಗಳು, ಪ್ಲೈವುಡ್ ಮತ್ತು ವೆನೀಯರ್ಡ್ ಬೋರ್ಡ್‌ಗಳು, ಪ್ಯಾನಲ್ ಮತ್ತು ಲ್ಯಾಮಿನೇಟೆಡ್ ಶೀಟುಗಳ ಮೇಲಿನ ಅಂತಿಮ ಮಾರಾಟ ಹಂತದ ತೆರಿಗೆಯನ್ನು ರದ್ದು ಮಾಡಲು ನಾನು ಉದ್ದೇಶಿಸಿದ್ದೇನೆ.

196. ರಾಜ್ಯದ ರೇಷ್ಮೆ ಉದ್ಯಮವನ್ನು ರಕ್ಷಿಸಲು ಹೊರದೇಶಗಳಿಂದ ಆಮದು ಮಾಡಿಕೊಳ್ಳಲಾದ ಕಚ್ಚಾ ರೇಷ್ಮೆ ಮತ್ತು ರೇಷ್ಮೆ ನೂಲಿನ ಮೇಲೆ ಶೇಕಡ 4ರ ತೆರಿಗೆ ವಿಧಿಸಲು ನಾನು ಉದ್ದೇಶಿಸಿದ್ದೇನೆ.

197. ಕರ್ನಾಟಕ ನಗರ ಜಲ ಪೂರೈಕೆ ಮತ್ತು ಒಳ ಚರಂಡಿ ಮಂಡಳಿ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ಗೃಹ ಮಂಡಳಿ ಮತ್ತು ಕರ್ನಾಟಕ ಪವರ್ ಕಾರ್ಪೊರೇಷನ್‌ಗಳು ಸ್ಥಳೀಯ ಶೇಕಡ 4ರ ರಿಯಾಯಿತಿ ದರದಲ್ಲಿ ಸಿಮೆಂಟ್ ಖರೀದಿ ಮಾಡಲು ಅನುಮತಿ ನೀಡಲು ನಾನು ಉದ್ದೇಶಿಸಿದ್ದೇನೆ. ಮತ್ತು ಇದರ ಜೊತೆಗೆ ಹೊರ ರಾಜ್ಯಗಳಿಂದ ಖರೀದಿ ಮಾಡುವುದನ್ನು ನಿರುತ್ತೇಜಿಸಲು ಹಾಗೂ ಸ್ಥಳೀಯ ಉದ್ಯಮಗಳಿಗೆ ಪ್ರೋತ್ಸಾಹ ನೀಡಲು ಈ ಸಂಸ್ಥೆಗಳು ಮತ್ತು ಸರ್ಕಾರಿ ಇಲಾಖೆಗಳು ತಮ್ಮ ಕಂಟ್ರಾಕ್ಟರ್‌ಗಳಿಗೆ ಸರಬರಾಜು ಮಾಡುವ ಸಿಮೆಂಟ್ ಮೇಲೆ ನೀಡಬೇಕಾದ ಪ್ರಸ್ತುತ ಶೇಕಡ 4ರ ರಿಯಾಯಿತಿ ತೆರಿಗೆಯನ್ನು ಹಿಂತೆಗೆದುಕೊಳ್ಳಲು ನಾನು ಉದ್ದೇಶಿಸಿದ್ದೇನೆ.

198. ತೆರಿಗೆ ವಸೂಲಿ ಚುರುಕುಗೊಳಿಸಲು ಮತ್ತು ಆಡಳಿತವನ್ನು ಪರಿಣಾಮಕಾರಿಯಾಗಿ ಮಾಡಲು ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಗೆ ಕೆಲವು ತಿದ್ದುಪಡಿಗಳನ್ನು ತಂದು ಕೆಲವು ನಿಯಮಗಳನ್ನು ಸುಧಾರಣೆ ಮಾಡಲು ಮತ್ತು ಸರಳೀಕರಿಸಲು ಕೂಡ ನಾನು ಉದ್ದೇಶಿಸಿದ್ದೇನೆ. ಉದ್ದೇಶಿಸಿರುವ ಕೆಲವು ಪ್ರಮುಖ ಬದಲಾವಣೆಗಳು ಮುಂದಿನಂತಿವೆ.

(1) ಸರಕು ಸಾಗಾಣಿಕೆದಾರರು ತಮ್ಮ ಗೋಡೌನ್‌ಗಳನ್ನು ತಿಳಿಯಪಡಿಸಬೇಕಾಗುವುದು.
(2) ವಾಣಿಜ್ಯ ತೆರಿಗೆ ಇಲಾಖೆಯು ಮೂಲದಲ್ಲಿಯೇ ತೆರಿಗೆ ಮುರಿದುಕೊಂಡ ಬಗ್ಗೆ ಕೊಡಬೇಕಾದ ದೃಢೀಕರಣ ಪತ್ರಗಳನ್ನು (Certificates of deduction of tax at source) ಸರಬರಾಜು ಮಾಡುವುದು.
(3) ಕೆಲವು ವಸ್ತುಗಳ ಸಾಗಾಣಿಕೆ ಡೆಲಿವರಿ ನೋಟ್‌ಗಳನ್ನು ಕಡ್ಡಾಯ ಮಾಡುವುದು.
(4) ಕಂಪನಿಯ ಪ್ರತಿ ಶಾಖೆಗೆ ಬೇರೆ ಬೇರೆ ನೋಂದಣಿ ಮತ್ತು ಕರನಿರ್ಧರಣೆ ಸೌಲಭ್ಯ ನೀಡುವುದು.
(5) ಕಾಫಿ ಬೆಳೆಯುವ ಕಂಪನಿಗಳನ್ನು ವ್ಯಾಪಾರಿಗಳೆಂದು ಪರಿಗಣಿಸುವುದು.
(6) ಅಪೆಲೇಟ್ ಟ್ರಿಬ್ಯೂನಲ್‌ನ ಮುಂದೆ ಮನವಿಗಳನ್ನು ಸಲ್ಲಿಸಲು ತೆರಬೇಕಾದ ಶುಲ್ಕವನ್ನು ಕನಿಷ್ಠ 200 ರೂಪಾಯಿಗಳಿಗೆ ಮತ್ತು ಗರಿಷ್ಠ 1000 ರೂಪಾಯಿಗಳಿಗೆ ಪರಿಷ್ಕರಿಸುವುದು.
(7) 50 ಲಕ್ಷಕ್ಕೂ ಹೆಚ್ಚಿನ ವಹಿವಾಟುವಿರುವ ವ್ಯಾಪಾರಿಗಳು ಹಾಜರು ಪಡಿಸಬೇಕಾದ ಲೆಕ್ಕ ಪುಸ್ತಕಗಳನ್ನು ಚಾರ್ಟೆಡ್ ಅಕೌಂಟೆಂಟುಗಳಿಂದ ಕಡ್ಡಾಯವಾಗಿ ಪರಿಶೀಲನೆಗೆ ಒಳಪಡಿಸಬೇಕೆಂದು ಮಾಡುವುದು.

199. ವೃತ್ತಿ ತೆರಿಗೆ

(ಎ) (1) ಗ್ರಾಮೀಣ ಪ್ರದೇಶದಲ್ಲಿರುವ ವಿದ್ಯುತ್ ಗುತ್ತಿಗೆದಾರರ ಮೇಲಿನ ವೃತ್ತಿ ತೆರಿಗೆಯನ್ನು ವಾರ್ಷಿಕ 550 ರೂಪಾಯಿಗಳಿಂದ 250 ರೂಪಾಯಿಗಳಿಗೆ ಇಳಿಸಲು ಉದ್ದೇಶಿಸಲಾಗಿದೆ.
(2) ಹದಿನೈದು ಎಕರೆವರೆವಿಗೆ ಜಮೀನು ಹೊಂದಿರುವ ಹಾಗೂ ಪ್ಲಾಂಟೇಷನ್ ಬೆಳೆಯುವ ವ್ಯಕ್ತಿಗಳಿಗೆ ವೃತ್ತಿ ತೆರಿಗೆ ವಿನಾಯಿತಿ ನೀಡಲು ಉದ್ದೇಶಿಸಲಾಗಿದೆ.
(3) ಒಂದೇ ಮಗು ಇದ್ದು ಮತ್ತು ಕುಟುಂಬ ಯೋಜನೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ವ್ಯಕ್ತಿಗಳಿಗೆ ವೃತ್ತಿ ತೆರಿಗೆ ವಿನಾಯಿತಿ ನೀಡಲು ಉದ್ದೇಶಿಸಲಾಗಿದೆ.
(4) ಸ್ವಯಂ ಉದ್ಯೋಗಗಳಲ್ಲಿ ತೊಡಗಿರುವ ಮಾಜಿ ಸೈನಿಕರಿಗೆ ವೃತ್ತಿ ತೆರಿಗೆ ವಿನಾಯಿತಿ ನೀಡಲು ಉದ್ದೇಶಿಸಲಾಗಿದೆ.

(ಬಿ) ರಾಜ್ಯದ ಆದಾಯ ಹೆಚ್ಚಿಸಲು ಅನುಬಂಧ - VII ರಲ್ಲಿ ತೋರಿಸಿರುವಂತೆ ಕೆಲವು ವರ್ಗದ ವ್ಯಕ್ತಿಗಳು ನೀಡಬೇಕಾದ ವೃತ್ತಿ ತೆರಿಗೆಯನ್ನು ಹೆಚ್ಚಿಸಲು ಉದ್ದೇಶಿಸಿದ್ದೇನೆ.

(2) ಅನುಬಂಧ - VIII ರಲ್ಲಿ ತೋರಿಸಿರುವಂತೆ ಕೆಲವು ಪ್ರವರ್ಗಗಳ ಮೇಲೆ ವೃತ್ತಿ ತೆರಿಗೆಯನ್ನು ವಿಧಿಸಲು ಸಹ ಉದ್ದೇಶಿಸಿದ್ದೇನೆ.

200. ಪ್ರವೇಶ ತೆರಿಗೆ

(1) ತಂಬಾಕು ಉತ್ಪನ್ನವಾದ 'ಗುಟಕ' ಇದರ ಮೇಲೆ ಇರುವ ಪ್ರವೇಶ ತೆರಿಗೆಯನ್ನು ಶೇಕಡ 5ರಿಂದ 2 1/2 ಕ್ಕೆ ಇಳಿಸಲು ಉದ್ದೇಶಿಸಿದ್ದೇನೆ.

(2) ಮಾರಾಟ ತೆರಿಗೆಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಎರಕ ಕಬ್ಬಿಣದ ಎರಕಗಳಿಗೆ ದಿನಾಂಕ 27-11-84 ರಿಂದ 31-8-93ರ ವರೆಗೆ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಲು ಉದ್ದೇಶಿಸಿದ್ದೇನೆ.

(3) ರಾಜ್ಯದ ಆದಾಯ ಹೆಚ್ಚಿಸಲು ವಿಮಾನ ಇಂಧನದ ಮೇಲೆ ಶೇಕಡ 2ರ ದರದಲ್ಲಿ ಪ್ರವೇಶ ತೆರಿಗೆ ವಿಧಿಸಲು ಉದ್ದೇಶಿಸಿದೆ.

201. ನಮ್ಮ ನೆರೆಯ ಕೆಲವು ಪ್ರದೇಶಗಳಲ್ಲಿ "ಟ್ಯಾಕ್ಸ್ ಹಾಲಿಡೇ" ಅಥವಾ ಕಡಿಮೆ ತೆರಿಗೆ ದರ ಇರುವುದರಿಂದ ಅಧಿಕ ಮೌಲ್ಯದ ಮೋಟಾರು ವಾಹನಗಳಿಂದ ನಮ್ಮ ರಾಜ್ಯಕ್ಕೆ ಅವುಗಳಿಂದ ಬರಬೇಕಾದ ಮಾರಾಟ ತೆರಿಗೆಯ ಸಂಗ್ರಹಣೆ ಕಡಿಮೆಯಾಗಿದೆ. ಈ ಪ್ರವೃತ್ತಿಯನ್ನು ನಿಯಂತ್ರಿಸಲು ನಮ್ಮ ರಾಜ್ಯಕ್ಕೆ ತರುವ ಮೋಟಾರು ವಾಹನಗಳ ಮೇಲೆ ಪ್ರವೇಶ ತೆರಿಗೆಯನ್ನು ವಿಧಿಸಲು ಉದ್ದೇಶಿಸಿದ್ದೇನೆ ಹಾಗೂ ಪ್ರವೇಶ ತೆರಿಗೆ ದರವನ್ನು ಮೋಟಾರು ವಾಹನಗಳ ಮೇಲೆ ವಿಧಿಸಲಾಗುವ ಕರ್ನಾಟಕ ಮಾರಾಟ ತೆರಿಗೆ ದರದಷ್ಟೆ ನಿಗದಿಪಡಿಸಲು ಉದ್ದೇಶಿಸಿದ್ದೇನೆ. ತಮಿಳುನಾಡು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಇಂತಹ ಕ್ರಮವನ್ನು ಯಶಸ್ವಿಯಾಗಿ ಜಾರಿಗೆ ತರಲಾಗಿದೆ.

202. ಕೃಷಿ ವರಮಾನ ತೆರಿಗೆ

(1) ಈಗಿರುವ ಪರಿಸ್ಥಿತಿಗೆ ಅನುಗುಣವಾಗಿ ಕೃಷಿ ವರಮಾನ ತೆರಿಗೆ ವಿನಾಯಿತಿ ಮಿತಿಯನ್ನು 20,000 ರೂಪಾಯಿಗಳಿಂದ 30,000 ರೂಪಾಯಿಗಳಿಗೆ ಏರಿಸಲು ಉದ್ದೇಶಿಸಿದ್ದೇನೆ. ಆದರೆ, ಫರ್ಮ್ ಮತ್ತು ಕಂಪನಿಗಳಿಗೆ ಯಾವುದೇ ಆದಾಯ ಮಿತಿಯ ರಿಯಾಯತಿ ಇಲ್ಲದೇ ತೆರಿಗೆ ವಿಧಿಸಲು ಉದ್ದೇಶಿಸಿದ್ದೇನೆ.

(2) ವ್ಯವಸಾಯ ಕ್ಷೇತ್ರದಲ್ಲಿ ಆಗಿರುವ ವಿರ್ಚನ ವೆಚ್ಚಳವನ್ನು ಗಮನಿಸುತ್ತಾ, ಒಂದು ಟನ್ ಬೆಳೆದು ಮತ್ತು ಮಾರುವ ಕಾಫಿಗೆ ಈಗಿರುವ 500 ರೂಪಾಯಿಗಳ ಮರು ಸಸಿ ನೆಡುವ ಭತ್ಯವನ್ನು 900 ರೂಪಾಯಿಗಳಿಗೆ ಏರಿಸಲು ಉದ್ದೇಶಿಸಿದ್ದೇನೆ.

203. (1) 25 ಎಕರೆ ಮೀರದಂತೆ ಜಮೀನು ಹೊಂದಿರುವ ಕಾಫಿ ಬೆಳೆಗಾರರಿಗೆ ಈಗ ಲಭ್ಯವಿರುವ ಕಾಂಪೋಸಿಷನ್‌ನ ಸೌಲಭ್ಯವನ್ನು 50ಎಕರೆವರೆವಿಗೆ ವಿಸ್ತರಿಸಲು ಉದ್ದೇಶಿಸಿದ್ದೇನೆ. ಈ ಕ್ರಮದಿಂದ ಅವರ ಕರನಿರ್ಧರಣ ವಿಧಾನವು ಸರಳವಾಗುವುದು. ಉದ್ದೇಶಿತ ಕಾಂಪೋಸಿಷನ್ ತೆರಿಗೆ ದರಗಳನ್ನು ಅನುಬಂಧ - IX ರಲ್ಲಿ ತೋರಿಸಿದೆ.

(2) ಈಗ ಫರ್ಮ್‌ಗಳಿನ ಕೃಷಿ ಆದಾಯದ ಮೇಲೆ, ಫರ್ಮ್‌ನ ಮೇಲೂ ಮತ್ತು ಅದರ ಪಾಲುದಾರರಿಗೆ ಬರುವ ಆದಾಯದ ಭಾಗದ ಮೇಲೂ ತೆರಿಗೆ ವಿಧಿಸಲಾಗುತ್ತಿದೆ. ಫರ್ಮ್ ಗಳಿಸುವ ಆದಾಯದ ಮೇಲೆ ಶೇಕಡ

40ರ ಫ್ಲಾಟ್‌ಸ್ಲಾಬ್ ದರದಲ್ಲಿ ತೆರಿಗೆ ವಿಧಿಸಿ, ಪಾಲುದಾರರನ್ನು ತೆರಿಗೆ ಹೊರೆಯಿಂದ ವಿಮುಕ್ತಿಗೊಳಿಸಲು ಉದ್ದೇಶಿಸಿದ್ದೇನೆ.

(3) ಕೃಷಿ ವರಮಾನ ತೆರಿಗೆ ಕಾಯ್ದೆ ಅಡಿಯಲ್ಲಿರುವ ಸವಕಳಿ ಭತ್ಯದ ವ್ಯವಸ್ಥೆಯಲ್ಲಿ ಸುಧಾರಣ ಕ್ರಮಗಳನ್ನು ತರಲು ಉದ್ದೇಶಿಸಿದ್ದೇನೆ.

204. **ಜೂಜು ತೆರಿಗೆ**

(ಅ) ರಾಜ್ಯದ ಆದಾಯ ಹೆಚ್ಚಿಸಲು ಆನ್-ಕೋರ್ಸ್ ಮೇಲೆ ಇರುವ ಜೂಜು ತೆರಿಗೆಯನ್ನು ಶೇಕಡ 15 ರಿಂದ 20 ಕ್ಕೆ ಹಾಗೂ ಆಫ್-ಕೋರ್ಸ್ ಮೇಲೆ ಇರುವ ಜೂಜು ತೆರಿಗೆಯನ್ನು ಶೇಕಡ 10 ರಿಂದ 15ಕ್ಕೆ ಏರಿಸಲು ಉದ್ದೇಶಿಸಿದ್ದೇನೆ.

(ಆ) ಕುದುರೆ ಜೂಜು ಕ್ಷೇತ್ರದಲ್ಲಿ ಟೋಟಲೈಸೇಟರ್ ಜೂಜಿನ ಪದ್ಧತಿ ಆಡಳಿತಾತ್ಮಕವಾಗಿ ಸರಳ, ತೆರಿಗೆ ಸಂಗ್ರಹಣೆ ಸುರಕ್ಷಿತ ಮತ್ತು ಅವ್ಯವಹಾರಗಳಿಗೆ ಎಡೆಮಾಡ ಕೊಡದ ವಿಧಾನವಾಗಿರುವುದರಿಂದ ಈಗ ಬರುತ್ತಿರುವ ಆದಾಯವು ಕಡಿಮೆಯಾಗದಂತೆ ಗಮನದಲ್ಲಿಟ್ಟುಕೊಂಡು ಟೋಟಲೈಸೇಟರ್ ತೆರಿಗೆಯನ್ನು ಐಚ್ಛಿಕವಾಗಿ ಕಾಂಪೋಸಿಷನ್ ರೀತ್ಯ ಪಾವತಿ ಮಾಡುವ ಸೌಲಭ್ಯ ನೀಡಲು ಉದ್ದೇಶಿಸಿದ್ದೇನೆ.

205. ಮೇಲೆ ಹೇಳಿದ ಪ್ರಸ್ತಾವನೆಗಳನ್ನು ಜಾರಿಗೆ ತರಲು ವಿವಿಧ ಕಾಯ್ದೆಗಳಿಗೆ ಸೂಕ್ತ ತಿದ್ದುಪಡಿಯ ಅವಶ್ಯಕತೆ ಇರುತ್ತದೆ. ಈ ತಿದ್ದುಪಡಿಗಳ ಜೊತೆಗೆ ಹಲವು ಸುಧಾರಣಾ ಕ್ರಮಗಳನ್ನು ಜಾರಿಗೆ ತರಲು ಬೇಕಾದ ತಿದ್ದುಪಡಿಗಳನ್ನೊಳಗೊಂಡ, ತಿದ್ದುಪಡಿ ವಿಧೇಯಕಗಳನ್ನು ಈ ಸಭೆಯ ಪರಿಶೀಲನೆ ಹಾಗೂ ಅಂಗೀಕಾರಕ್ಕಾಗಿ ಸಧ್ಯದಲ್ಲೇ ಮಂಡಿಸಲಾಗುವುದು.

206. ಮೇಲೆ ಪ್ರಸ್ತಾಪಿಸಿರುವ ವಿನಾಯಿತಿ ಮತ್ತು ರಿಯಾಯಿತಿಗಳಿಂದಾಗುವ ರಾಜಸ್ವ ನಷ್ಟ ಗಣನೀಯ ಪ್ರಮಾಣದ್ದಾಗಿರುತ್ತದೆ. ಈ ನಷ್ಟವನ್ನು ದಕ್ಷ ಕರ ವಸೂಲಿ, ದಕ್ಷ ಆಡಳಿತ ಹಾಗೂ ವ್ಯಾಪಾರ ಮತ್ತು ಉದ್ಯಮಗಳಲ್ಲಿ ಉಂಟಾಗುವ ಪುನಶ್ಚೇತನ್ಯದಿಂದ ತುಂಬುವ ಭರವಸೆ ಹೊಂದಿರುತ್ತೇನೆ. ವ್ಯಾಪಾರ ಮತ್ತು ವಾಣಿಜ್ಯ ಸಂಸ್ಥೆಗಳೂ ಸಹ ಪ್ರಸ್ತಾಪಿಸಿರುವ ವಿನಾಯಿತಿ ಮತ್ತು ರಿಯಾಯಿತಿಗಳ ಲಾಭ ಪಡೆದು ಹೆಚ್ಚು ತೆರಿಗೆ ಪಾವತಿ ಮಾಡುವಲ್ಲಿ ಸಹಕರಿಸುತ್ತಾರೆ ಎಂದು ನಂಬಿರುತ್ತೇನೆ.

ಅಬಕಾರಿ ಆದಾಯ

207. ಕಳೆದ 2 ಹಣಕಾಸು ವರ್ಷಗಳಲ್ಲಿ ರಾಜ್ಯ ಅಬಕಾರಿ ಬಾಬಿನಿಂದ ಬಂದ ಆದಾಯವು ಹೆಚ್ಚಾಗಿ ಏರಿಳಿತವಿಲ್ಲದೇ ರೂ. 500 ಕೋಟಿಗಳಿಗಿಂತ ಸ್ವಲ್ಪ ಹೆಚ್ಚಿಗೆ ಇತ್ತು. ಅಂದರೆ 1991-92ರಲ್ಲಿ 510.32 ಕೋಟಿ ರೂ.ಗಳು ಹಾಗೂ 1992-93ರಲ್ಲಿ 515.26 ಕೋಟಿ ರೂ.ಗಳಾಗಿತ್ತು. 1993-94ನೇ ಸಾಲಿನಲ್ಲಿ ಸುಮಾರು 676.67 ಕೋಟಿ ರೂ.ಗಳಷ್ಟು ಆದಾಯ ಬರುವ ನಿರೀಕ್ಷೆ ಇದೆ. ಹಿಂದಿನ ವರ್ಷಕ್ಕಿಂತ ಅಂದರೆ ಸುಮಾರು 161.41 ಕೋಟಿ ರೂ.ಗಳಷ್ಟು ಹೆಚ್ಚು. ಇದು ಶೇಕಡ 31ರಷ್ಟು ಹೆಚ್ಚು. ಭಾರತ ಸರ್ಕಾರವು ಕಾಕಂಬಿ ಮತ್ತು ಈಥೈಲ್ ಆಲ್ಕೋಹಾಲ್ ನಿಯಂತ್ರಣವನ್ನು ರದ್ದು ಮಾಡಿದ್ದರಿಂದ ಸಾಕಷ್ಟು ತೊಂದರೆಗಳು ಎದುರಾದರೂ ಈಗಾಗಿರುವ ಆದಾಯದ ಹೆಚ್ಚಳವು ಒಂದು ಮೆಚ್ಚಕ್ಕ ಸಾಧನೆಯಾಗಿದೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಸದರಿ ಕಾಕಂಬಿ ಮತ್ತು ಈಥೈಲ್ ಆಲ್ಕೋಹಾಲ್ ನಿಯಂತ್ರಣ ರದ್ದಾದ ನಂತರ ಈ ಕಚ್ಚಾ ಸಾಮಗ್ರಿಗಳ ಬೆಲೆಯಲ್ಲಿ ಹಲವು ಪಟ್ಟು ಏರಿಕೆಯಾಗಿದ್ದು, ತತ್ಪರಿಣಾಮವಾಗಿ ಸಾರಾಯಿ ಸರಬರಾಜನ್ನು ಅಪೇಕ್ಷಿಸಿದ ಮಟ್ಟದಲ್ಲಿ ಸರಬರಾಜು ಮಾಡಲು ಸರ್ಕಾರವು

1993ರ ನವೆಂಬರ್ ವೇಳೆಗೆ ಯಶಸ್ವಿಯಾಗಿ ಎದುರಿಸಲಾಯಿತು. ಅಂದರೆ 1992-93ರ ಸಾಲಿನಲ್ಲಿ ಏಪ್ರಿಲ್‌ನಿಂದ ಫೆಬ್ರವರಿ ತನಕ 576 ಲಕ್ಷ ಲೀಟರ್ ಸಾರಾಯಿ ಮಾರಾಟವಾಗಿದ್ದು, 1993-94ನೇ ಸಾಲಿನ ಇದೇ ಅವಧಿಯಲ್ಲಿ 704 ಲಕ್ಷ ಲೀಟರ್ ಸಾರಾಯಿ ಮಾರಾಟವಾಗಿದೆ. ಇದು ಶೇಕಡ 22ರಷ್ಟು ಹೆಚ್ಚು.

208. ಸಾರಾಯಿ ಮೂಲದಿಂದ ಹೆಚ್ಚುವರಿ ವರಮಾನ ಬಂದಿರುವುದಕ್ಕೆ 1993-94ನೇ ಸಾಲಿಗೆ ಸಂಬಂಧಿಸಿದ ಅಬ್ಕಾರಿ ಹೊಸ ನೀತಿ ನಿಯಮಗಳು ಮುಖ್ಯ ಕಾರಣವೆಂದು ಹೇಳಬಹುದು. ಏಕೆಂದರೆ ಹಿಂದಿನ ವರ್ಷಗಳಲ್ಲಿ ಖಾಸಗಿ ಕಂಟ್ರಾಕ್ಟರುಗಳು ಸಾರಾಯಿಯನ್ನು ಬಾಟಲಿಗೆ ತುಂಬುತ್ತಿದ್ದ ಪದ್ಧತಿಯನ್ನು ಬದಲಿಸಿ ಸಾರಾಯಿಯನ್ನು ಪಾಲಿಥಿನ್ ಸ್ಯಾಚೆಟ್ಟುಗಳಲ್ಲಿ ತುಂಬಿ ಸರಬರಾಜು ಮಾಡುವ ಕೆಲಸವನ್ನು ಸರ್ಕಾರಿ ಸ್ವಾಮ್ಯದ ಎರಡು ಕಂಪನಿಗಳಿಗೆ ವಹಿಸಿ ಕೊಡಲಾಯಿತು. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ 1993-94ನೇ ಸಾಲಿನ ಹೊಸ ಅಬ್ಕಾರಿ ನೀತಿನಿಯಮಗಳನ್ನು ಜಾರಿಗೆ ತರುವ ಪ್ರಾರಂಭಿಕ ಹಂತದಲ್ಲಿ ಹಲವಾರು ಅಡಚಣೆಗಳನ್ನು ಎದುರಿಸಬೇಕಾಯಿತು. ಉಚ್ಚ ನ್ಯಾಯಾಲಯದಲ್ಲಿ ಸದರಿ ಖಾಸಗಿ ಬಾಟ್ಲಿಂಗ್ ಕಂಟ್ರಾಕ್ಟ್‌ದಾರರು ರಿಟ್ ಅರ್ಜಿಗಳನ್ನು ಸಲ್ಲಿಸಿದ್ದರು. ಈ ಅರ್ಜಿಗಳು ನ್ಯಾಯಾಲಯದಲ್ಲಿ ದಿನಾಂಕ 30-6-93ರಂದು ಅಂದರೆ 93-94ನೇ ಅಬ್ಕಾರಿ ಸಾಲಿನ ಪ್ರಾರಂಭಕ್ಕೆ ಒಂದು ದಿನ ಮುಂಚೆ ಮಾತ್ರ ಇತ್ಯರ್ಥವಾದುವು.

209. ಇಂತಹ ಕ್ಲಿಷ್ಟ ಸಮಸ್ಯೆಗಳು ಎದುರಾಗದೇ ಇದ್ದ ಪಕ್ಷದಲ್ಲಿ 1993-94ನೇ ಸಾಲಿನಲ್ಲಿ ಅಬ್ಕಾರಿ ಬಾಬಿನಿಂದ ಬರುವ ಆದಾಯವು ಇನ್ನೂ ಉತ್ತಮಗೊಂಡು ಬಜೆಟ್ ಅಂದಾಜಿನ ಗುರಿಯಾದ ರೂ. 701.67 ಕೋಟಿ ರೂ.ಗಳಿಗೆ ಸನಿಹವಾಗುತ್ತಿತ್ತು. ಅಬ್ಕಾರಿ ಬಾಬಿನಿಂದ ರಾಜ್ಯದ ಬೊಕ್ಕಸಕ್ಕೆ ಬರುವ ಆದಾಯದ ಸಂಗ್ರಹಣೆಯನ್ನು ಇನ್ನಷ್ಟು ಉತ್ತಮಪಡಿಸುವುದರಿಂದ 1994-95ನೇ ಸಾಲಿನಲ್ಲಿ ಇದು 806.92 ಕೋಟಿ ರೂಪಾಯಿ ಮುಟ್ಟುವ ನಂಬಿಕೆ ನನಗಿದೆ.

ಮೋಟಾರು ವಾಹನ ತೆರಿಗೆ

210. ಸರಕು ಸಾಗಣೆ ವಾಹನಗಳ ತೆರಿಗೆಯನ್ನು ಪುನರ್‌ರಚಿಸಲು ಹಾಗೂ ದರಗಳನ್ನು ಯುಕ್ತ ರೀತಿಯಲ್ಲಿ ವ್ಯವಸ್ಥೆಗೊಳಿಸಲು ಉದ್ದೇಶಿಸಲಾಗಿದೆ. ಮತ್ತು 13500 ಕೆ.ಜಿ.ಗಳಿಗಿಂತ ಹೆಚ್ಚಿನ ನೋಂದಾಯಿತ ಭರ್ತಿ ತೂಕ ಹೊಂದಿರುವ ಸರಕು ಸಾಗಣೆ ವಾಹನಗಳಿಗೆ ದಿನಾಂಕ : 1-6-1989ರಿಂದ ನೀಡಲಾಗಿರುವ ತೆರಿಗೆ ಕಡಿತ ಪ್ರತಿ ತ್ರೈಮಾಸಿಕಕ್ಕೆ ರೂ. 100-00ನ್ನು ದಿನಾಂಕ 1-4-1994ರಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಳ್ಳಲಾಗಿದೆ. ಎರಡನೆಯದಾಗಿ, ಮೋಟಾರು ಕಾರುಗಳು ಮತ್ತು ಇತರೆ ಸರಿಸಮಾನ ವಾಹನಗಳ ತೆರಿಗೆಯನ್ನು ವರ್ಷಕ್ಕೆ ರೂ. 100-00 ರಂತೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ಈ ಮೇಲೆ ಉದ್ದೇಶಿಸಿರುವ ಕ್ರಮಗಳಿಂದಾಗಿ ಸರ್ಕಾರಕ್ಕೆ ರೂ. 5.22 ಕೋಟಿ ಹೆಚ್ಚುವರಿ ರಾಜಸ್ವ ನಿರೀಕ್ಷಿಸಲಾಗಿದೆ.

211. ಪ್ರವಾಸೋದ್ಯಮವನ್ನು ಉತ್ತೇಜಿಸಲು ಮತ್ತು ಕೇಂದ್ರ ಸರ್ಕಾರವು ಜಾರಿಗೊಳಿಸಿರುವ "ಮೋಟಾರು ವಾಹನಗಳ (ಅಖಿಲ ಭಾರತ ಪರವಾನಗಿ ಹೊಂದಿರುವ ಪ್ರವಾಸೀ ಸಾಲಿಗೆ ಉದ್ಯಮಿಗಳ) ನಿಯಮಗಳು 1993"ರ ಹಿನ್ನೆಲೆಯಲ್ಲಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆ 1957ನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ ಕರ್ನಾಟಕದಲ್ಲೇ ನೋಂದಣಿಯಾಗಿರುವ ವಾಹನಗಳಿಗೆ ಪ್ರತ್ಯೇಕ ತೆರಿಗೆ ದರವನ್ನು ವಿಧಿಸಲೂ ಮತ್ತು ಬೇರೆ ರಾಜ್ಯಗಳಲ್ಲಿ ನೋಂದಣಿಯಾಗಿ ನಮ್ಮ ರಾಜ್ಯದಲ್ಲಿ ಸಂಚರಿಸಲು ಪರವಾನಗಿ ಹೊಂದಿರುವ ವಾಹನಗಳಿಗೆ "ಸಂಮಿಶ್ರ ತೆರಿಗೆ"(ಕಾಂಪೊಸಿಟ್ ತೆರಿಗೆ) ವಿಧಿಸಲು ಉದ್ದೇಶಿಸಿದೆ.

212. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಬಹುಕಾಲದಿಂದಲೂ ತೆರಿಗೆ ದರವನ್ನು ಇಳಿಸಿ, ಖಾಸಗೀ ಮಾಲೀಕರು ಪಾವತಿಸುತ್ತಿರುವ ತೆರಿಗೆಗೆ ಸಮನಾಗಿ ವಿಧಿಸಲು ಬೇಡಿಕೆಯನ್ನು ಮಂಡಿಸಿರುತ್ತಾರೆ. ಇದನ್ನು ಪರಿಗಣಿಸಿ, ಸಂಸ್ಥೆಯ ಪ್ರಯಾಣ ದರ, ಮತ್ತು ಸಾಗಾಣಿಕೆ ಶುಲ್ಕದ ಒಟ್ಟು ಆದಾಯದ ಮೇಲೆ ಈಗ ವಿಧಿಸುತ್ತಿರುವ ತೆರಿಗೆ ದರವನ್ನು ಶೇಕಡಾ 17 ರಿಂದ 15 ಕ್ಕೆ ಇಳಿಸಲು ಉದ್ದೇಶಿಸಲಾಗಿದೆ.

213. ಮೇಲಿನ ಕ್ರಮಗಳ ವಿವರಗಳನ್ನು ಅನುಬಂಧ - X ರಲ್ಲಿ ಒದಗಿಸಲಾಗಿದೆ.

ಸ್ಟಾಂಪು ಮತ್ತು ನೋಂದಣಿ

214. ವಿಶೇಷವಾಗಿ ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ ಮತ್ತು ಬೆಳಗಾಂನಲ್ಲಿ ಬಹು ಮಹಡಿ ಕಟ್ಟಡಗಳು ಅಗಾಧ ಪ್ರಮಾಣದಲ್ಲಿ ನಿರ್ಮಾಣಗೊಳ್ಳುತ್ತಲಿವೆ. ತ್ವರಿತವಾಗಿ ಬೆಳೆಯುತ್ತಲಿರುವ ನಗರಗಳಲ್ಲಿ ನಗರ ಭೂಮಿಯ ಕೊರತೆಯಿರುವಂಥ ಈ ಸಮಯದಲ್ಲಿ ಇದು ಒಂದು ಅನುಕೂಲಕರವಾದ ಪ್ರವೃತ್ತಿಯಾಗಿದೆ.

215. 1957ರ ಕರ್ನಾಟಕ ಸ್ಟಾಂಪು ಅಧಿನಿಯಮದ ಅನುಸೂಚಿಯಲ್ಲಿ ಜಮೀನುಗಳು ಬಹುಮಹಡಿ ಕಟ್ಟಡಗಳಲ್ಲಿನ ಅಪಾರ್ಟ್‌ಮೆಂಟುಗಳು, ಆವರಣಗಳು ಅಥವಾ ಭಾಗಗಳ ಮಾರುಕಟ್ಟೆ ಮೌಲ್ಯದ ಮೇಲೆ ಸಂದಾಯ ಮಾಡಬೇಕಾಗುವ ಸ್ಟಾಂಪು ಶುಲ್ಕ ದರವನ್ನು ಸೂಚಿಸುವ ಯಾವುದೇ ನಿರ್ದಿಷ್ಟ ನಮೂದುಗಳಿಲ್ಲ. ತತ್ಪರಿಣಾಮವಾಗಿ, ಬಹುಮಹಡಿ ಕಟ್ಟಡಗಳ ಮಾಲೀಕರು ಅಥವಾ ಅವುಗಳನ್ನು ನಿರ್ಮಿಸುವವರು ವಾಸದ ಮತ್ತು ವಾಸಕ್ಕಲ್ಲದ ಉದ್ದೇಶಗಳಿಗಾಗಿ ಬಹು ಮಹಡಿಗಳ ಮಾರಾಟ ಮಾಡುವ ಫ್ಲಾಟ್ ಅಥವಾ ಅಪಾರ್ಟ್‌ಮೆಂಟಿನ ಮಾರುಕಟ್ಟೆ ಮೇಲೆ ಸ್ಟಾಂಪು ಶುಲ್ಕ ಸಂದಾಯ ಮಾಡುವುದರಿಂದ ತಪ್ಪಿಸಿಕೊಳ್ಳುವ ಸಾಧ್ಯತೆ ಇದೆ.

216. 1957ರ ಕರ್ನಾಟಕ ಸ್ಟಾಂಪು ಅಧಿನಿಯಮದ ಅನುಸೂಚಿಯನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ. ಕರ್ನಾಟಕ ಫ್ಲಾಟುಗಳ ಒಡೆತನ (ನಿರ್ಮಾಣ, ಮಾರಾಟ, ನಿರ್ವಹಣೆ ಮತ್ತು ವರ್ಗಾವಣೆಗೆ ಉತ್ತೇಜಿಸುವ ನಿಯಮ) ಅಧಿನಿಯಮ, 1972ರ 2(ಎ) ಪ್ರಕರಣದ ಅಡಿಯಲ್ಲಿ ಅಥವಾ ಕರ್ನಾಟಕ ಅಪಾರ್ಟ್‌ಮೆಂಟುಗಳ ಒಡೆತನ ಅಧಿನಿಯಮ, 1972ರ 3 (ಎ) ಪ್ರಕರಣದ ಅಡಿಯಲ್ಲಿ ವಿವರಿಸಿರುವಂತೆ ಬಹು ಮಹಡಿ ಕಟ್ಟಡಗಳಲ್ಲಿನ ಫ್ಲಾಟುಗಳು, ಅಪಾರ್ಟ್‌ಮೆಂಟುಗಳು, ಆವರಣಗಳು ಅಥವಾ ಭಾಗಗಳಿಗೆ 1957ರ ಕರ್ನಾಟಕ ಸ್ಟಾಂಪು ಅಧಿನಿಯಮದ ಅನುಸೂಚಿಯ 20ನೇ ಅನುಚ್ಛೇದದಲ್ಲಿ ಒಂದು ಹೊಸ ನಮೂದನ್ನು ಸೇರಿಸಲು ಉದ್ದೇಶಿಸಲಾಗಿದೆ.

217. ಬಹುಮಹಡಿ ಕಟ್ಟಡಗಳಲ್ಲಿನ ಫ್ಲಾಟುಗಳು ಅಪಾರ್ಟ್‌ಮೆಂಟುಗಳು, ಆವರಣಗಳ ಅಥವಾ ಭಾಗಗಳ ಒಡೆಯ ಮತ್ತು / ಅಥವಾ ಅವುಗಳ ನಿರ್ಮಾಣಕಾರ ಮತ್ತು ಖರೀದಿದಾರನ ನಡುವಿನ ಮೊದಲ ವ್ಯವಹಾರಕ್ಕೆ ಮಾತ್ರ ಮಾರುಕಟ್ಟೆ ಮೌಲ್ಯದ ಶೇ. 6ರಷ್ಟು ಸ್ಟಾಂಪು ಶುಲ್ಕವನ್ನು ವಿಧಿಸಲಾಗುವುದು. ಇದನ್ನು ಈಗ ಸ್ಥಿರ ಆಸ್ತಿಗಳ ಹಸ್ತಾಂತರಣಕ್ಕೆ ಮಾರುಕಟ್ಟೆ ಮೌಲ್ಯದ ಮೇಲೆ ವಿಧಿಸುತ್ತಿರುವ ಶೇಕಡಾ 10ರಷ್ಟು ಸ್ಟಾಂಪು ಶುಲ್ಕಕ್ಕಿಂತ ಕಡಿಮೆಯಾಗಿದೆ. ಇದರಿಂದ ಬಹುಮಹಡಿಗಳ ಕಟ್ಟಡಗಳಲ್ಲಿನ ಫ್ಲಾಟುಗಳು ಮತ್ತು ಅಪಾರ್ಟ್‌ಮೆಂಟುಗಳಿಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳನ್ನು ನೋಂದಾಯಿಸಲು ಪ್ರೋತ್ಸಾಹ ದೊರೆಯುತ್ತದೆಂದು ಆಶಿಸಲಾಗಿದೆ. 1957ರ ಕರ್ನಾಟಕ ಸ್ಟಾಂಪು ಅಧಿನಿಯಮದ ಅನುಸೂಚಿಯ ಈ ಸುಧಾರಣೆಯಿಂದಾಗಿ, ಪೂರ್ಣ ವರ್ಷದಲ್ಲಿ ಸ್ಟಾಂಪು ಶುಲ್ಕದ ಮೂಲಕವೇ 30 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಆದಾಯ ಬರುವ ಸಾಧ್ಯತೆ ಇದೆ.

ಕೃಷಿ ಭೂಮಿಯನ್ನು ಕೃಷಿಯೇತರ ಬಳಕೆಗೆ ಪರಿವರ್ತಿಸುವುದು

218. ನಗರ ಕಾರ್ಪೋರೇಷನ್ ಪ್ರದೇಶದಲ್ಲಿರುವ ಭೂಮಿಗಳಿಗೆ ಪರಿವರ್ತನೆ ಶುಲ್ಕವನ್ನು ಶೇಕಡ 50 ರಷ್ಟು ಮತ್ತು ಇತರ ಪ್ರದೇಶಗಳಲ್ಲಿರುವ ಜಮೀನುಗಳಿಗೆ ಪರಿವರ್ತನೆ ಶುಲ್ಕವನ್ನು ಶೇಕಡ 25ರಷ್ಟು ಹೆಚ್ಚಿಸಲು ನಾನು ಉದ್ದೇಶಿಸಿದ್ದೇನೆ.

1993-94ರ ಪರಿಷ್ಕೃತ ಅಂದಾಜುಗಳು

219. 395.14 ಕೋಟಿ ರೂಪಾಯಿಗಳ ಬಜೆಟ್ ಅಂದಾಜಿಗೆ ಹೋಲಿಸಿದರೆ ರೆವಿನ್ಯೂ ಲೆಕ್ಕದಲ್ಲಿ ಈ ವರ್ಷ 212.61 ಕೋಟಿ ರೂಪಾಯಿಗಳ ಹೆಚ್ಚುವರಿಯನ್ನು ನಿರೀಕ್ಷಿಸಲಾಗಿದೆ. ಆದರೂ, ಬಂಡವಾಳ ಲೆಕ್ಕದಲ್ಲಿನ ಕೊರತೆಯು 492.05 ಕೋಟಿ ರೂಪಾಯಿಗಳಿಂದ 215.24 ಕೋಟಿ ರೂಪಾಯಿಗಳಿಗೆ ಇಳಿದಿದೆ. ತತ್ಪರಿಣಾಮವಾಗಿ, ಈ ವರ್ಷದ 95.66 ಕೋಟಿ ರೂಪಾಯಿಗಳ ಅಂತಿಮ ಕೊರತೆಯು, ಬಜೆಟ್ಟಿನಲ್ಲಿ ತೋರಿಸಿದ್ದ 96.10 ಕೋಟಿ ರೂಪಾಯಿಗಳ ಕೊರತೆಗಿಂತ ಹೆಚ್ಚೇನೂ ಆಗುವುದಿಲ್ಲ.

ಆಯವ್ಯಯ ಅಂದಾಜುಗಳು 1994-95

220. ರಾಜ್ಯ ತೆರಿಗೆಗಳು 4882.13 ಕೋಟಿ ರೂಪಾಯಿಗಳಿಗೆ ಹೆಚ್ಚಾಗುವ ನಿರೀಕ್ಷೆ ಇದೆ. ಈ ಪೈಕಿ, ವಾಣಿಜ್ಯ ತೆರಿಗೆಗಳ ಬಾಬಿನಿಂದ 3,300 ಕೋಟಿ ರೂಪಾಯಿಗಳಷ್ಟು ಜಮೆ ಆಗಲಿದೆ. ಕೇಂದ್ರ ತೆರಿಗೆಗಳಲ್ಲಿ ನಮ್ಮ ಪಾಲು 1115.07ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಮುಕ್ತ ಮಾರುಕಟ್ಟೆ ಸಾಲಗಳು ಮತ್ತು ಭಾರತ ಸರ್ಕಾರದ ಸಾಲಗಳಿಂದ ಹೆಚ್ಚು ಹಣ ಬಂದರೂ ಅಧಿಕ ಬಂಡವಾಳಕ್ಕೆ ಏರ್ಪಾಟು ಮಾಡಿರುವುದರಿಂದಾಗಿ ಬಂಡವಾಳ ಲೆಕ್ಕದಲ್ಲಿ 422.02 ಕೋಟಿ ರೂಪಾಯಿಗಳಷ್ಟು ಕೊರತೆ ಉಂಟಾಗುವುದೆಂದು ನಿರೀಕ್ಷಿಸಲಾಗಿದೆ. ಈ ವರ್ಷ, 297.74 ಕೋಟಿ ರೂಪಾಯಿಗಳ ಕೊರತೆ ಆಗುವುದೆಂದು ಅಂದಾಜು ಮಾಡಲಾಗಿದೆ. ಈ ಕೊರತೆಯನ್ನು, 60.13 ಕೋಟಿ ರೂಪಾಯಿಗಳ ಹೆಚ್ಚುವರಿ ಸಂಪನ್ಮೂಲಗಳನ್ನು ಸಂಗ್ರಹಿಸಿ ಭಾಗಶಃ ಸರಿದೂಗಿಸಿಕೊಳ್ಳಲಾಗುವ ನಿರೀಕ್ಷೆ ಇದೆ. ಹೆಚ್ಚುವರಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಕ್ರಮಗಳ ವಿವರಗಳನ್ನು XI ಅನುಬಂಧದಲ್ಲಿ ಕೊಡಲಾಗಿದೆ. ನಿವ್ವಳ ಕೊರತೆ ರೂ. 237.61 ಕೋಟಿ ಆಗುವ ಅಂದಾಜನ್ನು ಹೀಗೆ ಲೆಕ್ಕಹಾಕಲಾಗಿದೆ.

221. ತೆರಿಗೆ ಆಡಳಿತವನ್ನು ಏಕರೂಪಗೊಳಿಸುವ ಪ್ರಯತ್ನ ಮಾಡಲಾಗುತ್ತಿದೆ. ಇದರಿಂದ ತೆರಿಗೆ ಸಂಗ್ರಹಣೆ ಸಾಕಷ್ಟು ಹೆಚ್ಚುತ್ತದೆ ಎಂದು ಭಾವಿಸಿದ್ದೇನೆ ಹಾಗೂ ವರ್ಷಾವಧಿಯಲ್ಲಿ ವ್ಯರ್ಥ ವೆಚ್ಚ ಆಗುವ ಬಾಬುಗಳನ್ನು ಗುರುತಿಸುವುದರಿಂದ ಹಾಗೂ ಆ ವ್ಯರ್ಥ ವೆಚ್ಚವನ್ನು ತಪ್ಪಿಸುವುದರಿಂದ ಶಿಲ್ಕಿನ ಅಂತರವನ್ನು ಸರಿದೂಗಿಸಲು ಸಾಧ್ಯವಾಗುತ್ತದೆಂದು ನಂಬಿದ್ದೇನೆ.

222. ನಾನು ಈಗ 1994-95ರ ಆಯವ್ಯಯದ ಅಂದಾಜುಗಳನ್ನು ಈ ಸದನದ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸುತ್ತೇನೆ. ಹಾಗೂ ಆಯವ್ಯಯವನ್ನು ಪರಿಶೀಲಿಸುವ ಸಲುವಾಗಿ ಸಮಿತಿ ಪದ್ಧತಿಯನ್ನು ಆಚರಣೆಗೆ ತರುವುದರಿಂದ, 1994ರ ಸೆಪ್ಟೆಂಬರ್ 30ಕ್ಕೆ ಕೊನೆಗೊಳ್ಳುವ ಆರು ತಿಂಗಳ ಅವಧಿಗೆ ಲೇಖಾನುದಾನ ನೀಡಬೇಕಾಗಿ ವಿನಂತಿಸುತ್ತೇನೆ.

ಬಜೆಟ್ ವಿಹಂಗಮ

(ಕೋಟಿ ರೂಪಾಯಿಗಳಲ್ಲಿ)

ಕ್ರ. ಸಂ.	ಬಾಬ್ತು		ಬಜೆಟ್ ಅಂದಾಜು 1993-94	ಪರಿಷ್ಕೃತ ಅಂದಾಜು 1993-94	ಬಜೆಟ್ ಅಂದಾಜು 1994-95
	ಪ್ರಾರಂಭದ ಶಿಲ್ಕು	...	(-) 42.80	(-) 93.03	(-) 95.66
	ಎ. ರಾಜಸ್ವ ಲೆಕ್ಕ				
1.	ಜಮೆ :				
	ರಾಜ್ಯ ತೆರಿಗೆ	...	4268.27	3957.27	4882.13
	ಕೇಂದ್ರ ತೆರಿಗೆಯಲ್ಲಿ ಪಾಲು	...	1033.93	1017.40	1115.07
	ಕೇಂದ್ರ ಸರ್ಕಾರದ ಅನುದಾನಗಳು	...	781.57	840.60	1103.42
	ತೆರಿಗೆಯೇತರ ರಾಜಸ್ವ	...	899.84	857.05	1067.74
	ಒಟ್ಟು-ಎ.1	...	**6983.61**	**6672.32**	**8168.36**
II.	ವೆಚ್ಚ :				
	ಸಾಮಾಜಿಕ ಸೇವೆ	...	2577.19	2545.91	3053.86
	ಆರ್ಥಿಕ ಸೇವೆ	...	1978.47	1841.38	2400.14
	ಸಾಮಾನ್ಯ ಸೇವೆ	...	1883.51	1926.02	2328.59
	ಸಹಾಯಾನುದಾನ ಮತ್ತು ಅಂಶದಾನ	...	149.30	146.40	165.83
	ಒಟ್ಟು-ಎ.II	...	**6588.47**	**6459.71**	**7948.42**
ಎ.	ರಾಜಸ್ವ ಲೆಕ್ಕ ಹೆಚ್ಚುವರಿ/ಕೊರತೆ	...	395.14	212.61	219.94
	ಬಿ. ಬಂಡವಾಳ ಲೆಕ್ಕ				
I.	ಜಮೆ :				
	ಭಾರತ ಸರ್ಕಾರದಿಂದ ಸಾಲ	...	951.29	743.55	1093.81
	ಬಹಿರಂಗ ಮಾರುಕಟ್ಟೆ ಸಾಲ ಇತ್ಯಾದಿ	...	156.09	156.06	181.62
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ	...	32.38	55.22	40.85

ಸಾಲಗಳು ಮತ್ತು ಮುಂಗಡಗಳಿಂದ ವಸೂಲಿ ...	111.99	251.85	136.85
ಸಾರ್ವಜನಿಕ ಲೆಕ್ಕ (ನಿವ್ವಳ) ಇತ್ಯಾದಿ ...	402.38	449.22	275.20
ಒಟ್ಟು-ಬಿ. I ...	**1654.13**	**1655.90**	**1728.33**
II. ಬಟವಾಡೆ :			
ಬಂಡವಾಳ ವೆಚ್ಚ (ನಿವ್ವಳ)	1125.47	1180.63	1358.05
ಕೇಂದ್ರ ಸಾಲಗಳ ಮರುಸಂದಾಯ	194.78	184.70	218.46
ಎಲ್ಐಸಿ, ಆರ್ಬಿಐ, ಜಿಐಸಿ ಮತ್ತು ಎನ್ಸಿಡಿಸಿ ಇವುಗಳಿಗೆ ಸಾಲಗಳ ಮರುಸಂದಾಯ	14.18	14.09	15.99
ಸಾಲಗಳ ಮತ್ತು ಮುಂಗಡಗಳ ಬಟವಾಡೆ	811.75	491.72	557.85
ಒಟ್ಟು - ಬಿ. II	**2146.18**	**1871.14**	**2150.35**
ಬಿ. ಬಂಡವಾಳ ಲೆಕ್ಕ ಹೆಚ್ಚಳ/ಕೊರತೆ(-)	(-)492.05	(-)215.24	(-)422.02
ಸಿ. ವರ್ಷದ ಒಟ್ಟು ಹೆಚ್ಚಳ ಕೊರತೆ	(-) 96.91	(-) 2.63	(-)202.08
ಡಿ. ಮುಕ್ತಾಯದ ಶಿಲ್ಕು	(-) 139.71	(-) 95.66	(-)297.74
ಎಆರ್ಎಮ್.	43.61	0.00*	60.13
ಒಟ್ಟು ಹೆಚ್ಚುವರಿ/ಕೊರತೆ	(-)96.16	(-)95.66	(-)237.61

*** ಪರಿಷ್ಕೃತ ಅಂದಾಜುಗಳಲ್ಲಿ ಹೆಚ್ಚುವರಿ ಸಂಪನ್ಮೂಲ ಸೇರಿದೆ.**

ಅನುಬಂಧ - 1

(ಪ್ಯಾರ 10)

1994-95ನೇ ಸಾಲಿಗೆ ವಿಭಾಗವಾರು ರಾಜ್ಯ ಯೋಜನಾ ಹಂಚಿಕೆ

ವಿಭಾಗ	(ಕೋಟಿ ರೂ.ಗಳಲ್ಲಿ)	ಒಟ್ಟು ಮೊತ್ತದಲ್ಲಿ ಶೇಕಡಾ ಪ್ರಮಾಣ
ಎ. ಆರ್ಥಿಕ ಸೇವೆಗಳು		
ಕೃಷಿ ಮತ್ತು ಸಂಬಂಧಪಟ್ಟ ಸೇವೆ	234.78	6.94
ಗ್ರಾಮೀಣ ಅಭಿವೃದ್ಧಿ	226.79	6.70
ವಿಶೇಷ ಪ್ರದೇಶ ಯೋಜನೆ (ಹೈದರಾಬಾದ್ -ಕರ್ನಾಟಕ ಮತ್ತು ಗಡಿ ಪ್ರದೇಶ ಅಭಿವೃದ್ಧಿ)	116.00	3.43
ನೀರಾವರಿ ಮತ್ತು ಪ್ರವಾಹ ನಿಯಂತ್ರಣ	728.46	21.53
ಶಕ್ತಿ ಮೂಲಗಳು	600.63	17.76
ಕೈಗಾರಿಕೆ ಮತ್ತು ಖನಿಜಗಳು	240.02	7.10
ಸಾರಿಗೆ	169.96	5.02
ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ	5.59	0.17
ಸಾಮಾನ್ಯ ಆರ್ಥಿಕ ಸೇವೆಗಳು	8.59	0.25
ಬಿ. ಸಮಾಜ ಸೇವೆಗಳು		
ಶಿಕ್ಷಣ, ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿ	324.34	9.59
ಆರೋಗ್ಯ	112.76	3.33
ನೀರು ಸರಬರಾಜು, ವಸತಿ ಮತ್ತು ನಗರಾಭಿವೃದ್ಧಿ	390.25	11.54
ವಾರ್ತಾ ಮತ್ತು ಪ್ರಚಾರ	3.25	0.10
ಪರಿಶಿಷ್ಟ ಜಾತಿಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ	120.69	3.57
ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ	50.10	1.48
ಕಾರ್ಮಿಕ ಮತ್ತು ಕಾರ್ಮಿಕ ಕಲ್ಯಾಣ	6.88	0.20
ಸಿ. ಸಾಮಾನ್ಯ ಸೇವೆಗಳು	43.62	1.29
ಒಟ್ಟು	**3382.71**	**100.00**

ಅನುಬಂಧ - II

(ಪ್ಯಾರ - 121)

1994-95ರಲ್ಲಿ ಪೂರ್ಣಗೊಳಿಸಲು ಯೋಜಿಸಲಾದ ನೀರು ಸರಬರಾಜು ಯೋಜನೆಗಳ ಪಟ್ಟಿ

(ಲಕ್ಷ ರೂ.ಗಳಲ್ಲಿ)

	ಜಿಲ್ಲೆ	ಯೋಜನೆಯ ಹೆಸರು	ಅಂದಾಜು ವೆಚ್ಚ
1.	ಬೆಂಗಳೂರು	ರಾಮನಗರಂ	65.00
2.	ಕೋಲಾರ	ಮಾಲೂರು	94.25
3.	ಕೋಲಾರ	ಚಿಂತಾಮಣಿ	80.00
4.	ತುಮಕೂರು	ತಿಪಟೂರು	710.00
5.	ಶಿವಮೊಗ್ಗ	ಶಿವಮೊಗ್ಗ II ಹಂತ	650.00
6.	ಮೈಸೂರು	ನಂಜನಗೂಡು	194.50
7.	ಮೈಸೂರು	ಮೈಸೂರು ರೀಮಾಡೆಲಿಂಗ್	800.00
8.	ಮೈಸೂರು	ಹುಣಸೂರು	129.00
9.	ಹಾಸನ	ಹಾಸನ	850.00
10.	ಹಾಸನ	ಅರಸೀಕೆರೆ	965.00
11.	ದಕ್ಷಿಣ ಕನ್ನಡ	ಬಂಟ್ವಾಳ	196.00
12.	ದಕ್ಷಿಣ ಕನ್ನಡ	ಕಾರ್ಕಳ	220.00
13.	ಧಾರವಾಡ	ನರಗುಂದ	380.00
14.	ಬಿಜಾಪುರ	ಗುಳೇದಗುಡ್ಡ	150.00
15.	ಬಿಜಾಪುರ	ಬಿಜಾಪುರ	2000.00
16.	ಬೆಳಗಾವಿ	ಸದಲಗ	65.00
17.	ಬೆಳಗಾವಿ	ನಿಪ್ಪಾಣಿ	150.00
18.	ಉತ್ತರ ಕನ್ನಡ	ಕುಮ್ಟ	121.50
19.	ರಾಯಚೂರು	ಮಾನ್ವಿ	160.00
20.	ರಾಯಚೂರು	ಸಿಂಧನೂರು	600.00
21.	ರಾಯಚೂರು	ಗಂಗಾವತಿ	152.00
22.	ರಾಯಚೂರು	ರಾಯಚೂರಿನಲ್ಲಿ ಜಿಎಲ್ಎಸ್ಆರ್ ನಿರ್ಮಾಣ	120.00
23.	ಗುಲ್ಬರ್ಗ	ಸೇಡಂ	140.00
24.	ಗುಲ್ಬರ್ಗ	ಷಹಾಪುರ	320.00
25.	ಗುಲ್ಬರ್ಗ	ಆಳಂದ	170.00

ಅನುಬಂಧ - III

(ಪ್ಯಾರ 126)

ಬೃಹತ್ ನಗರ ಯೋಜನೆಯ ಅಡಿಯಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳ ಪಟ್ಟಿ

(ಕೋಟಿ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಹೆಸರು	ಅಂದಾಜು ವೆಚ್ಚ
1.	ಜಯಚಾಮರಾಜೇಂದ್ರ ರಸ್ತೆಯಲ್ಲಿ ಬಹುಮಹಡಿ ಕಾರ್‌ಪಾರ್ಕಿಂಗ್	4.00
2.	ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಮತ್ತು ಸಂಗಂ ಚಿತ್ರಮಂದಿರಕ್ಕೆ ಸಂಪರ್ಕ ಕಲ್ಪಿಸುವ ಸುರಂಗ ಮಾರ್ಗ	3.00
3.	ಬಸವೇಶ್ವರ ವೃತ್ತದ ಬಳಿ ಸಣ್ಣ ಫ್ಲೈ ಓವರ್ ಮಾರ್ಗ	10.00
4.	ಶಾಂತಲಾ ಸಿಲ್ಕ್‌ಹೌಸ್ ಬಳಿ ಬಹುಮಹಡಿ ಕಾರ್ ಪಾರ್ಕಿಂಗ್	6.00
5.	ಗಾಂಧೀನಗರದಲ್ಲಿ ಬಹುಮಹಡಿ ಕಾರ್ ಪಾರ್ಕಿಂಗ್	2.00
6.	ಹೊಸೂರು ರಸ್ತೆಯಿಂದ ಮೈಸೂರು ರಸ್ತೆಯವರೆಗೆ ವರ್ತುಲ ರಸ್ತೆಯನ್ನು ಪೂರ್ಣಗೊಳಿಸುವುದು	2.50
7.	ಕಬ್ಬಿಣ ಮತ್ತು ಉಕ್ಕು ಮಾರುಕಟ್ಟೆಯನ್ನು ಕಲಾಸಿಪಾಳ್ಯದಿಂದ ವೈಟ್‌ಫೀಲ್ಡ್‌ಗೆ ಸ್ಥಳಾಂತರಿಸುವುದು	20.00
8.	ಹೊಸೂರು ರಸ್ತೆ ಮತ್ತು ಹಳೆಯ ಮದ್ರಾಸ್‌ರಸ್ತೆಯಲ್ಲಿ ಟ್ರಕ್ ಟರ್ಮಿನಲ್‌ಗಳು	12.00
9.	ತುಕ್ಕುಹಿಡಿದ ಕೊಳವೆಗಳನ್ನು ಬದಲಾಯಿಸುವುದು	10.00
10.	ಫ್ಲೋ ಮೀಟರ್‌ಗಳ ಸ್ಥಾಪನೆ	10.00
11.	ಆರ್.ಎಮ್.ವಿ ಬಡಾವಣೆ II ಮತ್ತು ನಂದಿನಿ ಲೇಔಟ್‌ಗಳಲ್ಲಿ ಬಿ.ಡಿ.ಎ. ದಿಂದ ಎರಡು ವಾಣಿಜ್ಯ ಸಂಕೀರ್ಣಗಳು	4.00
12.	ಅಕ್ಕಿತಿಮ್ಮನ ಹಳ್ಳಿ ಕೆರೆಯ ಅಂಗಳದಲ್ಲಿ ಬಹುಮಹಡಿ ಅಂಗಡಿ ಹಾಗೂ ಕಚೇರಿ ಸಂಕೀರ್ಣ	10.00
13.	ಜಯನಗರ IIನೇ ಹಂತದಲ್ಲಿ ಬಹುಮಹಡಿ ಅಂಗಡಿ ಹಾಗೂ ಕಚೇರಿ ಸಂಕೀರ್ಣ	5.00
14.	ಮೇಕ್ರಿ ವೃತ್ತದಿಂದ ನಗರ ಪರಿಮಿತಿಗಳವರೆಗೆ ಬಳ್ಳಾರಿ ರಸ್ತೆಯನ್ನು ಅಗಲಗೊಳಿಸುವುದು	8.00

15.	ಪ್ಯಾಲೇಸ್ ಗೇಟ್‌ನಿಂದ ಬಿ.ಡಿ.ಎ. ವೃತ್ತದ ನಡುವೆ ರಸ್ತೆ ಸಂಪರ್ಕ ಕಲ್ಪಿಸುವುದು	3.00
16.	ಮಲ್ಲೇಶ್ವರ ಕಡೆಯಿಂದ ಪ್ಲ್ಯಾಟ್‌ಫಾರ್ಮ್ ರಸ್ತೆಯನ್ನು ಅಗಲಗೊಳಿಸುವುದು	6.00
	ಒಟ್ಟು	115.00

ಅನುಬಂಧ - IV

(ಪ್ಯಾರಾ 175 (ಇ)

ಮಾರಾಟ ತೆರಿಗೆ ವಿನಾಯಿತಿ ನೀಡಲು ಉದ್ದೇಶಿಸಿರುವ ಸರಕುಗಳು

ಕ್ರಮ ಸಂಖ್ಯೆ	ಸರಕುಗಳು
1)	ಸೀಮೆಸುಣ್ಣ
2)	ಜೇನಿನ ಪೆಟ್ಟಿಗೆಗಳು
3)	ಕತ್ತಾಳೆ ನಾರಿನ ಹಗ್ಗ
4)	ಕೈಮಗ್ಗದಲ್ಲಿ ನೇಯ್ದ ರತ್ನಗಂಬಳಿಗಳು
5)	ಐವತ್ತು ರೂಪಾಯಿಗಳ ಬೆಲೆ ಮೀರದ ಪಿ.ವಿ.ಸಿ. ಮತ್ತು ರಬ್ಬರ್‌ನಿಂದ ತಯಾರಿಸಿದ ಪಾದರಕ್ಷೆಗಳು
6)	ಹಸಿ ಖರ್ಜೂರ
7)	ಜಾನುವಾರುಗಳ ಲಾಳದ ಮೊಳೆಗಳು
8)	ರೇಷ್ಮೆ ಹೊರೆ ಹುಳುಗಳು (1.4.75 ರಿಂದ)

ಅನುಬಂಧ - V

(ಪ್ಯಾರಾ 190)

ಮಾರಾಟ ತೆರಿಗೆ ದರ ಇಳಿಸಲು ಉದ್ದೇಶಿಸಿರುವ ಸರಕುಗಳು

ಕ್ರಮ ಸಂಖ್ಯೆ	ಸರಕು	ಪ್ರಸ್ತುತ ತೆರಿಗೆ ದರ (ಶೇಕಡ)	ಪ್ರಸ್ತಾವಿತ ತೆರಿಗೆ ದರ (ಶೇಕಡ)
1	2	3	4
1.	ಕೈ ಪಂಪುಗಳು	13	4
2.	ಹಂದಿ ಮೇವು	8	2
3.	ಗೋಣಿ ದಾರ	8	4

4.	ಬಜೆ	8	4
5.	ಕೈಯಿಂದ ಮಾಡಿದ ಮೈ ಸಾಬೂನು	8	4
6.	ಟೆಕ್ಸ್‌ಟೈಲ್ ಮೆಷಿನರಿ	13	4
7.	ಕಾಸ್ಟ್‌ಐರನ್ ಕ್ಯಾಸ್ಟಿಂಗ್‌ಗಳು	8	4
8.	ಪ್ಯಾಕಿಂಗ್ ಬಕ್‌ಗಳು	13	4
9.	ಬೆಲ್ಲ	2.5	1.5
10.	ಸೋಯಾ ಬೀನ್ಸ್	4	3
11.	ಕಾಟನ್ ವೇಸ್ಟ್	8	4
12.	ರಬ್ಬರೀಕೃತ ತೆಂಗಿನ ನಾರಿನ ವಸ್ತುಗಳು	8	6
13.	ಬರೆಯುವ ಮಸಿ (ಫೌಂಟನ್ ಪೆನ್ನುಗಳಲ್ಲಿ ಉಪಯೋಗಿಸುವ)	10	4
14.	ಸಣ್ಣ ಕೈಗಾರಿಕಾ ಘಟಕಗಳಲ್ಲಿ ತಯಾರಿಸಿದ ಹಲ್ಲಿನ ಪುಡಿ	15	8
15.	ಧಾರಕಗಳಲ್ಲಿ ಮಾರುವ ಉಪ್ಪು ಹಾಕಿದ ಮತ್ತು ಖಾರದ ತಿಂಡಿ ತಿನಿಸುಗಳು	12	6
16.	ಅರಿಶಿನ	[illegible]	3

ಅನುಬಂಧ VI

(ಪ್ಯಾರಾ 191)

ಮಾರಾಟ ತೆರಿಗೆ ದರದಲ್ಲಿ ಮಾರ್ಪಾಟು ಮಾಡಲು ಉದ್ದೇಶಿಸಿರುವ ಸರಕುಗಳು

ಕ್ರಮ ಸಂಖ್ಯೆ	ಸರಕು	ಪ್ರಸ್ತುತ ತೆರಿಗೆ ದರ (ಶೇಕಡ)	ಪ್ರಸ್ತಾವಿತ ತೆರಿಗೆ ದರ) (ಶೇಕಡ)
1	2	3	4
1.	ತ್ರಿಚಕ್ರ ವಾಹನಗಳು (ಆಟೋ ರಿಕ್ಷಾಗಳು)	10	5 (ವಹಿವಾಟು ತೆರಿಗೆ ಸೇರಿ)

2.	ವನಸ್ಪತಿ	4	3 (ವಹಿವಾಟು ತೆರಿಗೆ ಸೇರಿ)
3.	ಹುಣಿಸೆ ಹಣ್ಣು	6	4
4.	ಹುಣಸೆ ಬೀಜ	8	4
5.	ಖಂಡಸಾರಿ ಸಕ್ಕರೆ	4	1
6.	ಮೆಷಿನರಿ ಮತ್ತು ಆದರ ಬಿಡಿಭಾಗಗಳು ಮತ್ತು ಸಾಧನ ಸಾಮಗ್ರಿಗಳು	13	10
7.	ವಾಷಿಂಗ್ ಮೆಷಿನ್‌ಗಳು ಮತ್ತು ಡಿಶ್‌ವಾಷರ್‌ಗಳು	12	8 (ವಹಿವಾಟು ತೆರಿಗೆಸೇರಿ)
8.	ನಯ ಮಾಡಿದ ಗ್ರಾನೈಟ್ ಕಲ್ಲುಗಳು	15	10
9.	ನಮೂನೆ 37ರ ಆಧಾರದ ಮೇಲೆ ಶುದ್ಧೀಕರಿಸಿದ ಖಾದ್ಯ ತೈಲ ತಯಾರಕರಿಗೆ ಮಾರಾಟ ಮಾಡುವ ಕಚ್ಚಾ ಖಾದ್ಯ ತೈಲ	3	2
10.	ಟ್ರಾಕ್ಟರ್‌ಗಳ ಮತ್ತು ಪವರ್ ಟಿಲ್ಲರ್‌ಗಳ ಟ್ರೈಲರ್‌ಗಳು	10	4
11.	ಟಂಗ್‌ಸ್ಟನ್ ಕಾರ್ಬೈಡ್‌ವೇರ್ ಬಿಡಿ ಭಾಗಗಳು ಮತ್ತು ಸೆರಾಮಿಕ್ ಇಂಡಸ್ಟ್ರೀಯಲ್ ವೇರ್ ಬಿಡಿ ಭಾಗಗಳು	13	5
12.	ಫ್ಯಾಕ್ಸ್ ಮೆಷಿನ್‌ಗಳು	10 (+ 3 ಕೊ. ಹಂ.ಮಾ.ತೆ)	6
13.	ಲಿಫ್ಟ್‌ಗಳು		
	1) ಕರ್ನಾಟಕ ಮಾರಾಟ ತೆರಿಗೆ	18	10
	2) ರಾಜಿ ತೆರಿಗೆ ದರ	12	8
14.	ಡಿಶ್ ಆ್ಯಂಟೆನ	10 (+ 3 ಕೊ. ಹಂ.ಮಾ.ತೆ)	6
15.	ಪೀಠೋಪಕರಣಗಳು		
	1) ಉಕ್ಕಿನ ಆಲ್ಮೈರಾಗಳು	15	10

	2) ಉಕ್ಕು ಮತ್ತು ಕಬ್ಬಿಣದಿಂದ ಮಾಡಿದ ಮೇಜುಗಳು ಮತ್ತು ಮಂಚಗಳು	8	10
	3) ಉಕ್ಕಿನ ತಿಜೋರಿಗಳು ಮತ್ತು ಪೆಟಾರಿಗಳು ಬಿಟ್ಟು ಮಿಕ್ಕ ಪೀಠೋಪಕರಣಗಳು	12	10
16.	ನೀರಿನ ಭಾವಿ ಕೊರೆಯುವ ರಿಗ್‌ಗಳು	13	6
17.	ಬೆಂಕಿ ಪೊಟ್ಟಣಗಳು	8	5
18.	ಒಣ ದ್ರಾಕ್ಷಿ	10	3
19.	ಸಾರಾಯಿ	20	25 (ವಹಿವಾಟು ತೆರಿಗೆ ಸೇರಿ)
20.	ರೆಕ್ಟಿಫೈಡ್ ಸ್ಪಿರಿಟ್	15	20
21.	ಕಾಕಂಬಿ	40	25
22.	ಸಿಮೆಂಟ್	15	14
23.	ಕಂಪ್ಯೂಟರ್‌ಗಳು ಮತ್ತು ಅವುಗಳ ಪೆರಿಫೆರಲ್‌ಗಳು	6	4
24.	ಅಕ್ರಿಲಿಕ್ ಮತ್ತು ಪ್ಲಾಸ್ಟಿಕ್ ಎಮಲ್‌ಷನ್ ಪೇಂಟ್‌ಗಳು ಮತ್ತು ಬಣ್ಣಗಳು ಹಾಗೂ ಎಲ್ಲಾ ವಿಧವಾದ ಲ್ಯಾಕರ್‌ಗಳು	12	15
26.	ಮದ್ಯಗಳು (ಬೀರನ್ನು ಹೊರತು ಪಡಿಸಿ)	45	50

ಅನುಬಂಧ - VII

(ಪ್ಯಾರ 199 (ಬಿ) (ಐ)

ಏರಿದ ದರದಲ್ಲಿ ವೃತ್ತಿತೆರಿಗೆಯನ್ನು ವಿಧಿಸಲು ಉದ್ದೇಶಿಸಿರುವ ವ್ಯಕ್ತಿ ವರ್ಗಗಳು

ಕ್ರಮ ಸಂಖ್ಯೆ	ವ್ಯಕ್ತಿಗಳ ವರ್ಗಗಳು	ಈಗಿರುವ ದರ	ಪ್ರಸ್ತಾವಿತ ದರ
1	2	3	4
			(ರೂ. ವರ್ಷಕ್ಕೆ)
1)	ಪಾಲುದಾರಿಕೆ ಸಂಸ್ಥೆಯ ಪ್ರತಿ ಪಾಲುದಾರ	275-00	500-00
2.	ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ	1100-00	2500-00

	ಅಡಿಯಲ್ಲಿ ನೋಂದಾಯಿತರಾದ ಮತ್ತು ವಾರ್ಷಿಕ 50 ಲಕ್ಷ ರೂ. ಮತ್ತು ಹೆಚ್ಚು ವಹಿವಾಟು ಇರುವ ವ್ಯಾಪಾರಿಗಳು		
3.	ಸಿನಿಮಾ ಮಂದಿರಗಳ ಮಾಲೀಕರು (ಸಂಚಾರಿ ಚಿತ್ರಮಂದಿರಗಳನ್ನು ಹೊರತುಪಡಿಸಿ)	1500-00	2500-00
4.	ಕ್ಲಿಯರಿಂಗ್ ಮತ್ತು ಫಾರ್ವಾಡಿಂಗ್ ಏಜೆಂಟರನ್ನು ಒಳಗೊಂಡಂತೆ ಸಾಗಾಣಿಕೆ ಗುತ್ತಿಗೆದಾರರು	550-00	2500-00
5.	ಕೃಷಿ ವರಮಾನ ತೆರಿಗೆ ಕಾಯ್ದೆಯನ್ವಯ ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುವ ಮತ್ತು ;		
	ಅ) ಹದಿನೈದು ಎಕರೆಗಳಿಗಿಂತ ಕಡಿಮೆ ಇಲ್ಲದ ಮತ್ತು 50 ಎಕರೆಗಳಿಗೆ ಕಡಿಮೆ ಇರುವ	550-00	1000-00
	ಆ) 50 ಎಕರೆ ಮತ್ತು ಹೆಚ್ಚಿನ ಭೂಮಿ ಹೊಂದಿರುವ ವ್ಯಕ್ತಿಗಳು	550-00	2500-00

ಅನುಬಂಧ - VIII

(ಪ್ಯಾರ (199) (ಬಿ) (ii)

ವೃತ್ತಿ ತೆರಿಗೆ ದರ ವಿಧಿಸಲು ಉದ್ದೇಶಿಸಿರುವ ವ್ಯಕ್ತಿ ವರ್ಗಗಳು

ಕ್ರಮ ಸಂಖ್ಯೆ	ವ್ಯಕ್ತಿಗಳ ವರ್ಗ	ಪ್ರಸ್ತಾವಿತ ದರ
		(ರೂ. ವರ್ಷಕ್ಕೆ)
1)	ಸ್ಟಾಕ್ ಎಕ್ಸ್‌ಚೇಂಜ್‌ನಿಂದ ಮನ್ನಣೆ ಪಡೆದ ಆಥರೈಸ್ಡ್ ಅಸಿಸ್ಟೆಂಟುಗಳು	550-00
2)	ಎಸ್.ಇ.ಬಿ.ಐ. ಯಿಂದ ಮಾನ್ಯತೆ ಪಡೆದ ಉಪ ಷೇರು ದಳ್ಳಾಳಿಗಳು	1000-00
3)	ವೈ ಬ್ರಿಡ್ಜ್ ಮಾಲೀಕರು	500-00
4)	ಕುರಿಯರ್ ಸರ್ವೀಸ್ ಮಾಲೀಕರು	500-00

ಅನುಬಂಧ - IX

(ಪ್ಯಾರ 203 (1)

ಪ್ರಸ್ತಾವಿತ ಕಾಂಪೋಸಿಷನ್ ಪದ್ಧತಿಯಲ್ಲಿನ ಕೃಷಿ ವರಮಾನ ತೆರಿಗೆ ದರ

ಜಮೀನಿನ ವ್ಯಾಪ್ತಿ	ಪ್ರತಿ ಎಕರೆಗೆ ತೆರಿಗೆ ದರ
ಹದಿನೈದು ಎಕರೆಗಳವರೆವಿಗೆ	ಏನೂ ಇಲ್ಲಾ
ಮುಂದಿನ 16 ರಿಂದ 20 ಎಕರೆವರೆವಿಗೆ	250-00 ರೂಪಾಯಿಗಳು
ಮುಂದಿನ 21 ರಿಂದ 25 ಎಕರೆವರೆವಿಗೆ	300-00 ರೂಪಾಯಿಗಳು
ಮುಂದಿನ 26 ರಿಂದ 30 ಎಕರೆವರೆವಿಗೆ	400-00 ರೂಪಾಯಿಗಳು
ಮುಂದಿನ 31 ರಿಂದ 40 ಎಕರೆವರೆವಿಗೆ	500-00 ರೂಪಾಯಿಗಳು
ಮುಂದಿನ 41 ರಿಂದ 50 ಎಕರೆವರೆವಿಗೆ	600-00 ರೂಪಾಯಿಗಳು

ಅನುಬಂಧ - X

ಪ್ಯಾರಾ - 213

ಮೋಟಾರು ವಾಹನ ತೆರಿಗೆ

1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮದ ಭಾಗ 'ಎ'ಯ ಅನುಸೂಚಿಯ ಬಾಬ್ತುಗಳು

ಕ್ರಮ ಸಂಖ್ಯೆ	ವಾಹನಗಳ ವರ್ಗ	ಈಗಿರುವತೆರಿಗೆ ದರ ಪ್ರತಿ ಮೂರು ತಿಂಗಳಿಗೆ ರೂ.ಗಳಲ್ಲಿ	ಕ್ರಮ ಸಂಖ್ಯೆ	ವಾಹನಗಳ ವರ್ಗ	ಉದ್ದೇಶಿತ ತೆರಿಗೆ ದರ ಪ್ರತಿ ಮೂರು ತಿಂಗಳಿಗೆ ರೂ.ಗಳಲ್ಲಿ
1	2	3	4	5	6
1.	ಇ. (೧) ಸರಕು ವಾಹನಗಳು ಸೇರಿಕೊಂಡು ಸಂಚಾರಿ ಫಲಹಾರ ವಾಹನ, ಸಂಚಾರಿ ಗ್ರಂಥಾಲಯ ವಾಹನ, ಸಂಚಾರಿ ಕಾರ್ಯಾಗಾರ, ಸಂಚಾರಿ ಆಸ್ಪತ್ರೆ, ಕಿರಣ ವಾಹನಗಳು, ಕ್ಯಾಶ್ ವಾಹನ, ಕ್ಯಾಂಪರ್ಸ್ ವಾಹನ (ಕ್ಯಾಂಪರ್ಸ್ ವಾಹನಗಳನ್ನು ಬಾಡಿಗೆಗೆ ಉಪಯೋಗಿಸಿದರೆ ಮಾತ್ರ)		1	ಇ (೧) ಸರಕು ವಾಹನಗಳುಸೇರಿಕೊಂಡು ಸಂಚಾರಿ ಫಲಹಾರ ವಾಹನ, ಸಂಚಾರಿ' ಗ್ರಂಥಾಲಯ ವಾಹನ, ಸಂಚಾರಿ ಕಾರ್ಯಾಗಾರ, ಸಂಚಾರಿ ಆಸ್ಪತ್ರೆ, ಕಿರಣ ವಾಹನಗಳು, ಕ್ಯಾಶ್ ವಾಹನ, ಕ್ಯಾಂಪರ್ಸ್ ವಾಹನ (ಕ್ಯಾಂಪರ್ಸ್ ವಾಹನಗಳನ್ನು ಬಾಡಿಗೆಗೆ ಉಪಯೋಗಿಸಿದರೆ ಮಾತ್ರ)	
	೧. ವಾಹನಗಳ ಸರಕು ಸಹಿತ ತೂಕ			೧) ವಾಹನಗಳ ಸರಕು ಸಹಿತ ತೂಕ	
	ಅ) 1000 ಕಿ.ಗ್ರಾಂ. ಮೀರದ ವಾಹನಗಳು	150-00		ಅ)1000 ಕಿ.ಗ್ರಾಂ ಮೀರದ ವಾಹನಗಳು	200-00
	ಆ) 1000 ಕಿ.ಗ್ರಾಂ.ಮೀರದ ಆದರೆ 2000 ಕಿ.ಗ್ರಾಂ ಮೀರದ ವಾಹನಗಳು	300-00		ಆ) 1000 ಕಿ.ಗ್ರಾಂ.ಮೀರಿದ ಆದರೆ 3000 ಕಿ.ಗ್ರಾಂ. ಮೀರದ ವಾಹನಗಳು	400-00
	ಇ) 2000 ಕಿ.ಗ್ರಾಂ. ಮೀರದ ಆದರೆ 4000 ಕಿ.ಗ್ರಾಂ ಮೀರದ ವಾಹನಗಳು	600-00		ಇ) 3000 ಕಿ.ಗ್ರಾಂ ಮೀರದ ಆದರೆ 5500 ಕಿ.ಗ್ರಾಂ ಮೀರದ ವಾಹನಗಳು	800-00
	ಈ) ೪೦೦೦ ಕ್ರಿ.ಗ್ರಾಂ ಮೀರಿದ ಆದತೆ ೭೦೦೦ ಕಿ.ಗ್ರಾಂ ಮೀರಿದ ವಾಹನಗಳು	1000-00		ಈ)೫೫೦೦ ಕಿ.ಗ್ರಾಂ. ಮೀರಿದ ಆದರೆ 9000 ಕಿ.ಗ್ರಾಂ. ಮೀರದ ವಾಹನಗಳು	

	ಉ) 7000 ಕಿ.ಗ್ರಾಂ. ಮೀರಿದ ಆದರೆ 9500 ಕಿ.ಗ್ರಾಂ.ಮೀರದ ವಾಹನಗಳು	1200-00		ಉ) 9000 ಕಿ.ಗ್ರಾಂ ಮೀರಿದ ಆದರೆ 12000 ಕಿ.ಗ್ರಾಂ ಮೀರದ ವಾಹನಗಳು	1600-00
	ಊ)9500ಕಿ.ಗ್ರಾಂ. ಮೀರಿದ ಆದರೆ 10500 ಕಿ.ಗ್ರಾಂ. ಮೀರದ ವಾಹನಗಳು	1300-00		ಊ)12,000ಕಿ.ಗ್ರಾಂಮೀರಿದ ಆದರೆ 15,000 ಕಿ.ಗ್ರಾಂ. ಮೀರದ ವಾಹನಗಳು	1800-00
	ಋ)10500ಕಿ.ಗ್ರಾಂ.ಮೀರಿದ ಆದರೆ 12000 ಕಿ.ಗ್ರಾಂ. ಮೀರದ ವಾಹನಗಳು	1500-00		ಋ) 15,000 ಕಿ.ಗ್ರಾಂ ಮೀರಿದ ವಾಹನಗಳು	1800-00
	ೠ) 1200 ಕಿ.ಗ್ರಾಂ ಮೀರಿದ ಆದರೆ 13500 ಕಿ.ಗ್ರಾಂ. ಮೀರದ ವಾಹನಗಳು	1600-00			
	ಎ) 13500 ಕಿ.ಗ್ರಾಂ ಮೀರಿದ ಆದರೆ 1500 ಕಿ.ಗ್ರಾಂ ಮೀರಿದ ವಾಹನಗಳು	1800-00 ಹೆಚ್ಚಿನ ಪ್ರತಿ 250 ಕಿ.ಗ್ರಾಂ ಅಥವಾ ಅದರ ಭಾಗಕ್ಕೆ			ಹೆಚ್ಚಿನ ಪ್ರತಿ 250 ಕಿ.ಗ್ರಾಂ. ಅಥವಾ ಅದರ ಭಾಗಕ್ಕೆ ರೂ. 75-00
	ಏ) 15000 ಕಿ.ಗ್ರಾಂ ಮೀರಿದ ವಾಹನಗಳು.	ರೂ. 75-00			
2	ಅಧಿಸೂಚನೆ ಸಂಖ್ಯೆ : ಎಫ್‌ಟಿಡಿ. 99: ಟಿಎಂಟಿ 88 ದಿನಾಂಕ :1:3 ಜೂನ್ 89 ರಲ್ಲಿ 13500 ಕೆ.ಜಿ.ಗಳಿಗಿಂತ ಹೆಚ್ಚಿನ ತೂಕ ಹೊಂದಿರುವ ಸರಕು ಸಾಗಾಣಿಕೆ ವಾಹನಗಳಿಗೆ ತೆರಿಗೆ ಕಡಿತ ಪ್ರತಿ ತ್ರೈಮಾಸಿಕಕ್ಕೆ ರೂ. 100--00 ಸೌಲಭ್ಯ ನೀಡಲಾಗಿತ್ತು.		2.	ಈ ಸೌಲಭ್ಯವನ್ನು ದಿನಾಂಕ : 1-4-94 ರಿಂದ ರದ್ದು ಗೊಳಿಸಲಾಗಿದೆ.	
3.	15(1) 1980ನೇ ಇಸವಿಗಿಂತ ಹಿಂದೆ ವಿದೇಶದಲ್ಲಿ ತಯಾರಿಸಲ್ಪಟ್ಟ ಅಥವಾ ಜೋಡಿಸಲ್ಪಟ್ಟ ಕಂಪೆನಿ ಹೊಂದಿರುವ ವಾಹನಗಳನ್ನು ಹೊರತು ಪಡಿಸಿ ವ್ಯಕ್ತಿಗತ ಮೋಟಾರು ಕಾರುಗಳಿಗೆ ವಾಹನ ತೂಕದ ಮೇಲೆ		3.	15(1) 1980 ನೇ ಇಸವಿಗಿಂತ ಹಿಂದೆ ವಿದೇಶದಲ್ಲಿ ತಯಾರಿಸಲ್ಪಟ್ಟ ಅಥವಾ ಜೋಡಿಸಲ್ಪಟ್ಟ ಕಂಪೆನಿ ಹೊಂದಿರುವ ವಾಹನಗಳನ್ನು ಹೊರತು ಪಡಿಸಿ ವ್ಯಕ್ತಿಗತ ಮೋಟಾರು ಕಾರುಗಳಿಗೆ ಖಾಲಿ ವಾಹನ ತೂಕದಮೇಲೆ	

	ಅ) 1500 ಕೆ.ಜಿ.ಗಿಂತಲೂ ಮೀರದ ಖಾಲಿ ತೂಕ	125-00		ಅ) 1500 ಕೆ.ಜಿ.ಗಿಂತಲೂ ಮೀರದ ಖಾಲಿ ತೂಕ	15[illegible]
	ಆ) 1500 ಕೆ.ಜಿ.ಗಿಂತಲೂ ಮೀರದ ಖಾಲಿ ತೂಕ ಆದರೆ 2000 ಕೆ.ಜಿಗಳಿಗಿಂತಲೂ ಮೀರದ ಖಾಲಿ ತೂಕ	150-00		ಆ) 1500 ಕೆ.ಜಿ. ಗಿಂತಲೂ ಮೀರದ ಖಾಲಿ ತೂಕ ಆದರೆ 2000 ಕೆ.ಜಿ.ಗಿಂತಲೂ ಮೀರದ ಖಾಲಿ ತೂಕ	175-00
	ಇ) 2000 ಕೆ.ಜಿ.ಗಳಿಗಿಂತಲೂ ಮೀರದ ಖಾಲಿ ತೂಕ ಆದರೆ 3000 ಕೆ.ಜಿ.ಗಿಂತಲೂ ಮೀರಿದ ಖಾಲಿ ತೂಕ	250-00		ಇ) 2000 ಕೆ.ಜಿ.ಗಳಿಗಿಂತಲೂ ಮೀರದ ಖಾಲಿ ತೂಕ ಆದರೆ 3000 ಕೆ.ಜಿಗಳಿಂತಲೂ ಮೀರದ ಖಾಲಿ ತೂಕ	275-00
	ಈ) 3000 ಕೆಜಿಗಳಿಂತಲೂ ಮೀರದ ಖಾಲಿ ತೂಕ ಆದರೆ 4000 ಕೆ.ಜಿ.ಗಳಿಂತಲೂ ಖಾಲಿ ತೂಕ ಮೀರದ ಖಾಲಿ ತೂಕ	350-00		ಈ) 3000 ಕೆಜಿಗಳಿಂತಲೂ ಮೀರದ ಖಾಲಿ ತೂಕ ಆದರೆ 4000 ಕೆ.ಜಿ.ಗಳಿಂತಲೂ ಖಾಲಿ ತೂಕ ಮೀರಿದ ಖಾಲಿ ತೂಕ	375-00
	ಉ) 4000 ಕೆ.ಜಿ.ಗಳಿಂತಲೂ ಮೀರದ ಖಾಲಿ ತೂಕ ಆದರೆ 5000 ಕೆ.ಜಿ.ಗಳಿಗಿಂತ ಮೀರದ ಖಾಲಿ ತೂಕ	450-00		ಉ) 4000 ಕೆ.ಜಿ.ಗಳಿಂತಲೂ ಮೀರದ ಖಾಲಿ ತೂಕ ಆದರೆ 5000 ಕೆ.ಜಿ.ಗಳಿಗಿಂತ ಮೀರದ ಖಾಲಿ ತೂಕ	475-00
	ಊ) 50000 ಕೆ.ಜಿ.ಗಳಿಗಿಂತ ಮೀರದ ಖಾಲಿ ತೂಕ	550-00		ಊ) 50000 ಕೆ.ಜಿ.ಗಳಿಗಿಂತ ಮೀರದ ಖಾಲಿ ತೂಕ	575-00
	ಋ) ಮೇಲ್ಕಂಡ ವಾಹನಗಳಿಗೆ ಟ್ರ್ಯಾಲಿಯನ್ನು ಜೋಡಿಸಿದಾಗ ಕಟ್ಟಬೇಕಾದ ಹೆಚ್ಚುವರಿ ತೆರಿಗೆ	75-00		ಋ) ಮೇಲ್ಕಂಡ ವಾಹನಗಳಿಗೆ ಟ್ರ್ಯಾಲಿಯನ್ನು ಜೋಡಿಸಿದಾಗ ಕಟ್ಟಬೇಕಾದ ಹೆಚ್ಚುವರಿ ತೆರಿಗೆ	75-00
	16(1) ಈ ಷೆಡ್ಯೂಲ್ ನಲ್ಲಿ ಮೇಲೆ ಸೂಚಿಸಿರುವ ಐಟಂಗಳ ಪ್ರಕಾರ ತೆರಿಗೆ ವಿಧಿಸಬಹುದಾದ ವಾಹನಗಳನ್ನು ಹೊರತುಪಡಿಸಿ ಮೋಟಾರು ಕಾರು, ಕ್ಯಾಂಪರ್ಸ್ ವ್ಯಾನ್ ಹಾಗೂ ಇತರೆ ವಾಹನಗಳಿಗೆ ಖಾಲಿ ತೂಕದ ಮೇಲೆ			16(1) ಈ ಷೆಡ್ಯೂಲ್‌ನಲ್ಲಿ ಮೇಲೆ ಸೂಚಿಸಿರುವ ಐಟಂಗಳ ಪ್ರಕಾರ ತೆರಿಗೆ ವಿಧಿಸಬಹುದಾದ ವಾಹನಗಳನ್ನು ಹೊರತುಪಡಿಸಿ ಮೋಟಾರು ಕಾರು, ಕ್ಯಾಂಪರ್ಸ್ ವ್ಯಾನ್ ಹಾಗೂ ಇತರೆ ವಾಹನಗಳಿಗೆ ಖಾಲಿ ತೂಕದ ಮೇಲೆ	
	ಅ) 1500 ಕೆ.ಜಿ.ಗಿಂತಲೂ ಮೀರಿದ ಖಾಲಿ ತೂಕ	125-00		ಅ) 1500 ಕೆ.ಜಿ.ಗಿಂತಲೂ ಮೀರದ ಖಾಲಿ ತೂಕ	150-00
	ಆ) 1500 ಕೆ.ಜಿ.ಗಳಿಂತಲೂ ಮೀರದ ಖಾಲಿ ತೂಕ ಆದರೆ 2000 ಕೆ.ಜಿಗಳಿಂತಲೂ ಮೀರಿದ ಖಾಲಿ ತೂಕ	150-00		ಆ) 1500 ಕೆ.ಜಿ.ಗಳಿಂತಲೂ ಮೀರಿದ ಖಾಲಿ ತೂಕ ಆದರೆ ೨೦೦೦ ಕೆ.ಜಿಗಳಿಂತಲೂ ಮೀರಿದ ಖಾಲಿ ತೂಕ	

	ಇ) 2000 ಕೆ.ಜಿ. ಗಳಿಂತಲೂ ಮೀರಿದ ಖಾಲಿ ತೂಕ ಆದರೆ 3000 ಕೆ.ಜಿ.ಗಳಿಗಿಂತಲೂ ಮೀರಿದ ಖಾಲಿ ತೂಕ	250-00		ಇ) 2000 ಕೆ.ಜಿ. ಗಳಿಂತಲೂ ಮೀರಿದ ಖಾಲಿ ತೂಕ ಆದರೆ ೩೦೦೦ ಕೆ.ಜಿ.ಗಳಿಗಿಂತಲೂ ಮೀರದ ಖಾಲಿ ತೂಕ	275-00
	ಈ) 3000 ಕೆ.ಜಿಗಳಿಂತಲೂ ಮೀರಿದ ಖಾಲಿ ತೂಕ ಆದರೆ 4000 ಕೆ.ಜಿ.ಗಳಿಗಿಂತಲೂ ಮೀರದ ಖಾಲಿ ತೂಕ	350-00		ಈ) 3000 ಕೆ.ಜಿಗಳಿಂತಲೂ ಮೀರಿದ ಖಾಲಿ ತೂಕ ಆದರೆ 4000 ಕೆ.ಜಿ.ಗಳಿಗಿಂತಲೂ ಮೀರದ ಖಾಲಿ ತೂಕ	375-00
	ಉ) 4000 ಕೆ.ಜಿ.ಗಳಿಗಿಂತ ಮೀರಿದ ಖಾಲಿ ತೂಕ ಆದರೆ 5000 ಕೆ.ಜಿ.ಗಳಿಗಿಂತ ಮೀರದ ಖಾಲಿ ತೂಕ	550-00		ಉ) 4000 ಕೆ.ಜಿ.ಗಳಿಗಿಂತ ಮೀರಿದ ಖಾಲಿ ತೂಕ ಆದರೆ 5000 ಕೆ.ಜಿ.ಗಳಿಗಿಂತ ಮೀರದ ಖಾಲಿ ತೂಕ	575-00
	ಊ) 5000 ಕೆ.ಜಿ.ಗಳಿಗಿಂತ ಮೀರಿದ ಖಾಲಿ ತೂಕ ಆದರೆ 6000 ಕೆ.ಜಿ.ಗಳಿಗಿಂತ ಮೀರದ ಖಾಲಿ ತೂಕ	850-00		ಊ) 5000 ಕೆ.ಜಿ.ಗಳಿಗಿಂತ ಮೀರಿದ ಖಾಲಿ ತೂಕ ಆದರೆ 6000 ಕೆ.ಜಿ.ಗಳಿಗಿಂತ ಮೀರದ ಖಾಲಿ ತೂಕ	875-00
	ಋ) 6000 ಕೆ.ಜಿಗಳಿಗಿಂತ ಮೀರಿದ ಖಾಲಿ ತೂಕ ಆದರೆ 7000 ಕೆ.ಜಿ.ಗಳಿಗಿಂತ ಮೀರದ ಖಾಲಿ ತೂಕ	950-00		ಋ) 6000 ಕೆ.ಜಿಗಳಿಗಿಂತ ಮೀರಿದ ಖಾಲಿ ತೂಕ ಆದರೆ 7000 ಕೆ.ಜಿ.ಗಳಿಗಿಂತ ಮೀರದ ಖಾಲಿ ತೂಕ	975-00
	ೠ) 7000 ಕೆ.ಜಿ.ಗಳಿಗಿಂತ ಮೀರಿದ ಖಾಲಿ ತೂಕ	1050-00		ೠ) 7000 ಕೆ.ಜಿ.ಗಳಿಗಿಂತ ಮೀರಿದ ಖಾಲಿ ತೂಕ	1075-00
4.	ಹೊಸ ಐಟಂ :		4.	7 (ಬಿ) ಮೋಟಾರು ವಾಹನಗಳ (ಅಖಿಲ ಭಾರತ ಪರವಾನಗಿ ಹೊಂದಿರುವ ಪ್ರವಾಸೀ ಸಾರಿಗೆ ಉದ್ಯಮಿಗಳ) ನಿಯಮಗಳು 1993ರ ಅಡಿಯಲ್ಲಿ ಪ್ರಯಾಣಿಕರನ್ನು ಒಯ್ಯಲು ಉಪಯೋಗಿಸಲಾದ (ಚಾಲಕ ಮತ್ತು ನಿರ್ವಾಹಕ ಅಟೆಂಡೆಂಟ್‌ನ್ನು ಬಿಟ್ಟು) ಹನ್ನೆರಡು ಪ್ರಯಾಣಿಕರಿಗಿಂತ ಹೆಚ್ಚು ಪ್ರಯಾಣಿಕರನ್ನು ಒಯ್ಯಲು ಅನುಮತಿಸಲಾದ ಬಾಡಿಗೆಗಾಗಿ ಅಥವಾ ಸಂಭಾವನೆಗಾಗಿ ಓಡಿಸುವ ಮೋಟಾರು ವಾಹನಗಳಿಗೆ, ಪ್ರತಿಯೊಬ್ಬ ಪ್ರಯಾಣಿಕನಿಗೆ	500-00

				ಮೋಟಾರು ವಾಹನಗಳ (ಅಖಿಲ ಭಾರತ ಪರವಾನಗಿ ಹೊಂದಿರುವ ಪ್ರವಾಸೀ ಸಾರಿಗೆ ಉದ್ಯಮಗಳ) ನಿಯಮ ೧೯೯೩, ಈ ಯೋಜನೆಯಲ್ಲಿ ಬೇರೆ ರಾಜ್ಯಗಳಲ್ಲಿ ನೋಂದಣಿಯಾಗಿ ನಮ್ಮ ರಾಜ್ಯದಲ್ಲಿ ಸಂಚರಿಸಲು ಪರವಾನಗಿ ಹೊಂದಿರುವ ವಾಹನಗಳಿಗೆ ಈ ಕೆಳಕಂಡಂತೆ "ಸಂಮಿಶ್ರ ತೆರಿಗೆ" (ಕಾಂಪ್ರೋಜಿಟ್ ಟ್ಯಾಕ್ಸ್) ನಿರ್ಧರಿಸಲಾಗಿದೆ.	
				ಪ್ರತೀ ತ್ರೈಮಾಸಿಕಕ್ಕೆ	
				ಅ) ಮೋಟಾರು ಕ್ಯಾಬ್ ಆಸನ : 6 ರವರೆಗೆ	ರೂ. 300-00
				ಆ) ಮ್ಯಾಕ್ಸಿ ಕ್ಯಾಬ್ ಆಸನ : 7 ರಿಂದ 13	ರೂ.3000-00
				ಇ) ಪ್ರವಾಸಿ ಆಮ್ನಿಬಸ್ ಆಸನ : 14 ರಿಂದ 35	ರೂ.12,000-0

ಅನುಬಂಧ - XI

(ಪ್ಯಾರಾ 220)

1994-95 ರಲ್ಲಿ ಕೈಗೊಳ್ಳಲಿರುವ ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು

(ರೂ. ಲಕ್ಷಗಳಲ್ಲಿ)

ಕ್ರ.ಸಂ	ಬಾಬು	ಹೆ.ಸಂ.ಸಂ
1.	ಮಾರಾಟ ತೆರಿಗೆ	720
2.	ವೃತ್ತಿ ತೆರಿಗೆ	211
3.	ಜೂಜು ತೆರಿಗೆ	300
4.	ಪ್ರವೇಶ ತೆರಿಗೆ	160
5.	ಮೋಟಾರು ವಾಹನ ತೆರಿಗೆ	522
6.	ಸ್ಟಾಂಪು ಮತ್ತು ನೋಂದಣಿ	3000
7.	ಕೊಳಚೆ ಪ್ರದೇಶ ಅಭಿವೃದ್ಧಿ ಉಪಕರ	1000
8.	ಪರಿವರ್ತನೆ ಶುಲ್ಕ	100
	ಒಟ್ಟು	6013

ಮಾನ್ಯ ಮುಖ್ಯಮಂತ್ರಿಯವರು ಮಾಡಿದ ಆಯವ್ಯಯ ಭಾಷಣದ ಆಂಗ್ಲ ಭಾಷಾಂತರ

Hon'ble Speaker,

I rise to present the budget estimates for the year 1994-95.

2) This year, we are fortunate to have had the presentation of the Union Budget before that of the State Budget. It has been my endeavour in this budget to dovetail the policies and the programmes of the State Government with that of the Government of India so that the resultant synergies can be used for the faster development of the State.

3) The Union Government's imaginative and bold economic measures initiated three years ago, with the long-term objective of freeing a protected economy and taking the country on the path of sustained growth, have slowly started paying dividends. The Indian economy has shown signs of improvement in the external as well as the domestic sectors. There has been an unprecedented surge in exports, foreign exchange reserves have risen to record level and the rate of inflation has come down from 17% in mid-1991 to half that level.

4) While emphasising industrial growth, the Union Government has given equal importance to poverty alleviation programmes and the development of social infrastructure. This philosophy has been clearly enunciated in the Union Budget for 1994-95, as seen from the increased allocation for agriculture, rural development, education, health and family welfare. In Karnataka also, we have adopted a similar policy in order to accelerate growth and simultaneously address ourselves to poverty alleviation and other developmental and welfare programmes aimed at improving the quality of life of the people of our State, especially the poor.

NATURAL CALAMITY

5) During the last year our State had to face a rather unusual natural calamity in the form of an earthquake which badly affected parts of northern Karnataka. Hundreds of houses completely collapsed and thousands suffered damage. In addition, we had drought as well as floods in many parts of the State. This State Government rose to the occasion and, although the annual calamity Relief Fund provided only Rs. 27 crores. we spent more than Rs.60 crores on providing necessary relief to the victims of natural calamities.

6) The State Government has prepared a project report and posed it to the World Bank for necessary assistance to relocate 48 villages which suffered extensive damage in the earthquake. We are hopeful of getting the required assistance of Rs.94 crores from the World Bank.

10TH FINANCE COMMISSION

7) The Tenth Finance Commission is expected to submit its report this year. Its role is of special significance in view of the macro-economic stabilisation efforts undertaken by the Union Government. In the past three years, a substantial portion of the burden of these stabilisation measures has been borne by the State Governments. For instance, allocation of market borrowings to the States and Central Assistance for State Plans under the Gadgil formula have remained virtually stagnant in nominal terms, thus resulting in a decline in real terms. Besides, the criteria for devolution of tax shares used by previous Finance Commissions have not been such as to encourage exploitation of the tax potential of the State or to curb unproductive expenditure. Both in our memorandum submitted to the Commission as well as in our discussions with the Commission during their recent visit to Karnataka, we have emphasised the need to reward good fiscal performance and to ensure that the States get a fair share of the total resources. We are hopeful that these representations will be considered and that the Commission's final report will break new ground in Centre-State financial relations.

DECENTRALISATION

8) Democratic decentralisation is never complete without decentralised planning. Karnataka was the first State in India to begin experiments in District Planning in 1978-79. Now again, Karnataka stands way ahead of other States in implementing the essential features of the 73rd Amendment to the Constitution by enacting the Karnataka Panchayat Raj Act that envisages extablishment of a three-tier system. This is a definite improvement over the previous twoËtier system in as much as the planning and implementation process has been taken to the grass-root level of the Gram Panchayat. In order to make the Gram panchayat really effective, we have decided to give a grant of Rs. one lakh to every single Gram Panchayat for implementing programmes of development and welfare. Besides, 80% of JRY funds will directly go to the Gram Panchayats. The State Government is soon going to set up a State Finance Commission which will look into the issues of devolution of funds to the local bodies. A bill containing the essential features of the 74th Amendment to the Constitution will be brought before the Legislature in this session.

ANNUAL PLAN 1993-94

9) The approved outlay for the financial year 1992-93 was Rs. 1915 crores. When I assumed office in November 1992, the Plan expenditure was Rs. 776.50 crores only. In the remaining five months of that financial year. the State Government mobilised enough resources to exceed the Plan target and achieved Plan expenditure of Rs. 2032.94 crores. Considering the large development needs of the State. the State Government had chosen to embark upon an ambitious Plan for the current financial year.

During the last 11 months, the Government has striven ceaselessly to achieve the goals set out in the Annual Plan. Certain assumptions on which the Annual Plan was based have not come true, especially in view of the sluggish growth of the economy, fall in the rate of inflation, decontrol of molasses etc. These factors have affected the growth of tax revenues as has been the case with the Central taxes also. The shortfall in the revenues prompted the State Government to take a leaf out of the Centre's book. We have asked our boards/corporations and companies to raise funds from financial institutions and banks to fund their own Plans as has been the practice with the Central Public Sector Undertakings in recent years. With this shift in the strategy for Plan finance, I am confident of achieving the overall target of 1993-94 Plan.

ANNUAL PLAN 1994-95

10) During 1994-95, I plan to consolidate the gains of 1993-94. The Plan outlay for the year has been increased to Rs. 3382.71 crores registering an increase of 11.83% over the outlay of the current year. We hope to give a further boost to the development process through a judicious prioritization of our Plan expenditure. The Plan gives the highest priority to poverty alleviation schemes, social welfare, irrigation and power. The sectorwise details of the Annual Plan 1994-95 are at Annexe I.

PRIVATE SECTOR PARTICIPATION

11) The private sector is a major contributor to the growth of the economy and the development of the State. However, our entire planning exercise in all these years has concentrated on government investments alone. There is no database to indicate the trends and the impact of private sector participation in the development process. In the coming years, public investments have to be directed in such a manner as to facilitate and complement private investment. In this direction, the State Government is asking the Institute for Social and Economic Change to conduct a study on the role of the private sector and suggest how the Government can catalyse higher level of private investment for accelerating the development process. This study would be the first of its kind in the entire country.

SPECIAL ACTION PLAN FOR POVERTY ALLEVIATION

12) During 1993-94, our Government formulated a Special Action Plan to give a new direction to the various programmes for poverty alleviation. Special stress was given to employment generation, construction of houses, rural infrastructure, welfare of the weaker sections, supply of milk to the school children etc. An allocation of Rs.725 crores was earmarked for the implementation of all these programmes. A special awareness campaign was launched on 19th November 1993, the birthday of the late Prime Minister, Smt. Indira Gandhi. The process of bringing various poverty alleviation programmes under one umbrella has helped in better implementation and monitoring. I propose to increase the allocation for this programme to Rs. 998 crores in 1994-95.

PUBLIC DISTRIBUTION SYSTEM

13) I would like to ensure that the nutrition level of the poorer sections of the society is not adversely affected by the rise in the cost of the PDS food grains. I intend to reduce the end price of rice and wheat to green card holders by Re. 1 and Re. 0.50 per kg respectively

of the population of the State, will cost the Government Rs. 42.50 crores per annum.

POOLING OF SCP FUNDS

14) Over the years the State Government has been making a special allocation in every development sector for Scheduled Castes and Tribes under the Special Component Plan. We have, however, realised that the end result was not perceptible because the limited resources got distributed very thinly over a vast area of multifarious programmes and schemes. Therefor, as an experiment, we have decided to pool the SCP funds and spend them, for the first time, entirely in a few selected and crucial areas such as construction of houses, hostels, Ambedkar Bhavans and on the schemes of the SC/ST Development Corporation.

SC/ST Welfare

15) Some other major achievements during 1993-94 for the welfare of SC/ST people are as follows. As many as 1.27 lakh SC families & 9600 ST families will be covered for giving economic benefits under Special Component Plan and Tribal Sub Plan. Prematric Scholarship has been given to 6.15 lakh SC/ST students as compared to 4.88 lakh students during the previous year. Under the new scheme of incentive scholarship to SC/ST students in class I to IV, 13.42 lakh students have been covered. For SC/ST students, 79 new preËmatric hostels and 16 post-matric hostels have been started as compared to 39 pre-matric hostels in 1992-93.

16) The SC/ST Development Corporation will assist 70000 beneficiaries during 1994-95 at an outlay of Rs. 145.40 crores as compared to the outlay of Rs. 57.48 crores in 1993-94. The Government will provide Rs. 46.20 crores as compared with Rs. 7.48 crores in 1993-94 to the Corporation through regular budgetary support and pooling of SCP funds. The balance will be raised by the Corporation from the banks. It would mean an increase of 180% in number of the beneficiaries and 500% in the budgetary support of the Corporation as compared to the same in the current year. The main activities of the Corporation would be land ownership scheme, irigation wells and self-employment schemes.

17) In other areas of social welfare, special stress will be given to housing and education. Under Dr. Ambedkar Birth Centenary Celebration Programme, it was planned to construct 1.4 lakh houses for SC/ST people. As against this target, 20000 houses have already been completed. Another 25000 houses are in an advanced stage of completion. The remaining houses will be taken

regular budgetary support, pooling SCP funds and assistance from financial institutions. In each of the 37 reserved Assembly Constituencies, construction of one SC/ST hostel building will be started. Besides, 67 more hostels will be constructed in a phased manner. An amount of Rs. 2 crore will be spent to strengthen the study centre for SC/ST students preparing for Civil Service Examinations. In all the universities of State, a chair will be established in the name of Dr. Ambedkar. A separate directorate will be established for tribal development.

WELFARE OF BACKWARD CLASSES

18. As promised last year, a research institute for the Backward Classes has been started in the name of the late Shri D. Deveraj Urs. An amount of Rs. 20 lakh will be provided to this Institute in 1994-95 for undertaking research and training programmes. The budgetary support to the Karnataka Backward Classes Development Corporation has been fixed at Rs. 10.13 crore during 1994Ë95 as compared to Rs.7.50 crore in 1993-94. The Corporation will further arrange Rs. 25.50 crore from the Banks to bring its total outlay for 1994-95 to Rs.35.63 crore. It will help the Corporation to assist 25,684 families, as compared to 15,434 families in 1993-94.

BELLI BELAKU

19) During 1993-94, a novel pilot project for the comprehensive integrated development of backward classes living in remote and inaccessible hamlet was taken up in 5 villages in two districts. Considering its effectiveness, Government proposes to have one "Bellli Belaku" project in each district of the State. An outlay of Rs. 4 crore has been provided for this purpose.

WELFARE OF TODDY TAPPERS

20) The welfare of the toddy tappers has always been uppermost in my mind. I would like to introduce a scheme for the social and educational advancement of the toddy tappers, and for this purpose I intend establishing a Toddy Tappers' Welfare Fund. The State Government will make an initial contribution of Rs.2 crore to the corpus of the fund which will be used for providing scholarship etc. to the children of the toddy tappers for educational purposes. The State Government also intends establishing a State level federation of toddy tappers' co-opeative societies that are already in existence in the districts of Dakshina Kannada, Uttar Kannada and Shimoga.

WELFARE OF THE DISABLED

21) I propose to increase the monthly pension for the poor disable persons from Rs.50 to Rs. 75. It would mean an additional expenditure of Rs. 8 crore every year. It is proposed to strengthen Rajiv Gandhi Resource Centre for preparing comprehensive development plans for the disabled. Further, an outlay of Rs. 40 lakh has been provided to assist the non-Government organisations which are working for the rehabilitation of the disabled.

WELFARE OF MINORITIES

22) During 1993-94, an amount of Rs. 40 lakh was granted to the State Minority Commission to conduct a socio-economic survey of the minorities in the State. The survey has been completed and the report is expected very soon. Based upon the findings of the survey, a comprehesive plan would be prepared for all round development of the minorities. The Government will provide a budgetary support of Rs. 10.00 crore in 1994-95 as compared to Rs. 2.5 crore in 1993-94 to the Karnataka Minorities Development Corporation. The total outlay of the Corporation, inclusive of resources mobilised from Banks will be Rs. 26.00 crore in 1994-95 as compared to Rs. 10.00 crores in 1993-94. The Corporation will be assisting 7800 families in 1994-95 as compared to as compared to Rs. 10.00 crores in 1993-94. The Corporation will be assisting 7800 families in 1994-95as compared to 4500 families in 1993-94.

WAKF MATTERS

23) The Karnataka State Wakf Board has been reconstituted during 1993-94. An increased amount of Rs. 155 lakh will be utilised for repairs and renovation of Wakf Institutions. The budget provision for 1994-95 has been increased it Rs. 200 lakh. The Government has also constituted a State Wakf Council. Similarly State Haj Committee has also been reconstituted.

WOMEN & CHILD WELFARE

24) The process of empowerment of women has started. In the recent Gram Panchayat election, women have been elected on 3533 seats out of total 80631 seats. As against the Constitutional mandate for provision of 33% reservation to women in local bodies, the actual represntation of women in the Gram Panchayats or our State has reached 43.6%. This is an unprecedented achievement in the entire country.

25) Our beloved Prime Minister Sri Narasimha Raoji has announced the Mahila Samridhi Yojana during the current year to promote thrift among women in rural areas. For every Rs. 300 saved annually by a rural woman

in Post Office Savings account, the Government of India provides a contribution of Rs. 75. We stand fully committed to this programme. I wish to announce a further contribution of Rs. 25 for every deposit of Rs.300 under this programme from the State Government.

26) The pension to destitute widows has remained fixed at Rs.50 per month since inception of the scheme. I propose to increase the pension to Rs. 75 per month. It would mean an additional expenditure of Rs. 15 crore per annum.

27) 1300 Anganwadi Centres will be opened in 1994-95 out of the Stat's own resources. In respect of ongoing ICDS projects, the cost of providing nutrition has been enhanced from 75 paise to Re.1.00 per child per day in Non-CARE projects and from 20 paise per child per day to 30 paise in CARE projects. A similar increase in feeding charges from 75 paise to Re 1.00 per child per day in Nursery-cum-Women Welfare Centres being run by the Social Welfare Department will be given. We are getting 18 more projects sanctioned from the Government of India. Effots will be made to improve the quality of services through training and re-orientation programmes for Anganwadi workers and through mobilisation of the community to play a more constructive and supportive role in the functioning of the Anganwadi Centres.

28) In order to ensure that that goals and objectives contained in the interdepartmental programme for women and the State Programme of Action for the Child are realised, a separate Secretariat Department for Women and Child Development will be set up. The State Commission for Women will be constituted shortly. It will be a statutory body with a specific mandate to support and implement laws and policies to improve the status and dignity of women in Karnataka.

EDUCATION

29) The emphasis of the Government in primary education is on three aspects - universal access, universal enrolment and universal attainment.

30) Universal Access : Primary schooling facilities have been provided to almost all habitations. The remaining 189 habitations having a population of 300 and above. During 1993-94. Primary schools were started 700 habitations. The remaining 189 habitations will be provided with primary schooling facilities during 1994-95, thereby covering all the unserved areas. It is the

intention of the Government to ensure that no habitation with a population of 300 and more is left without a school.

UNIVERSAL ENROLMENT AND RETENTION:

31) Due to extra efforts taken by the Government, the enrolment in classes I to IV has increased from 50.69 lakhs to 52.86 lakhs during 1993-94. Intensive enrolment drives have become a regular exercise to bring the dropouts back to the schools. The Enrolment Drive of July 1993 brought back 4.72 lakh children to the school fold.

UNIVERSAL ACHIEVEMENT :

